ನಿಮ್ಮ ಯಾವತ್ತೂ
ದ್ರಣ ಕೆಲಸಗಳಿಗೆ
ಯಮಾಡಿ ವಿಚಾರಿಸಿರಿ;
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೧೭ | ಉಡುಪಿ 4—1—1962 ಗುರುವಾರ | Vol. 41 No. 17

ಸಾಂತ್ವನದ ಮರೆಯಲ್ಲಿ
ಪಾಶ್ಚಾತ್ಯರ ಕುರುಡು ಮಾರ್ಗದರ್ಶನ

ಶತ್ರುರಾಜನನ್ನು ಎದುರಿಸಿ ಕಾದಾಡಲು ಅಶಕ್ತನಾದವನು ಆತನ ದೂತರನ್ನು ಹಿಡಿದು ಅಪಮಾನಗೊಳಿಸುವ ಪ್ರವೃತ್ತಿ ಇಂದು ನಿನ್ನೆಯದಲ್ಲ. ಆಲಂಕಾರಿಕರು ನಿರ್ದೇಶಿಸುವ ಪ್ರತ್ಯನೀಕಾಲಂಕಾರದ ಜೀವಾಳವೇ ಇದು. ರಾವಣನು ರಾಮದೂತನಾಗಿ ತನ್ನಲ್ಲಿಗೆ ಬಂದಿದ್ದ ಹನುಮಂತನನ್ನು ಭಂಗಿಸಿದಂತೆ, ಅಂಗದನನ್ನು ಅವಮಾನಿಸಿದಂತೆ, ಕೌರವನ ಆಸ್ಥಾನದಲ್ಲಿ ದುರ್ಯೋಧನನು ಸಂಧಾನಕಾರ್ಯಕ್ಕೆ ಸಮಾಗಮಿಸಿದ ಶ್ರೀ ಕೃಷ್ಣನನ್ನು ಸೆರೆಹಿಡಿಯ ಬಯಸಿದಂತೆ ಇಂದು ಪೋರ್ಚುಗೀಸ ಆಳರಸರು ದುಷ್ಟವರ್ತನೆಗೆ ಮುಂದಾಗಿದ್ದಾರೆ. ಗೋವೆಯಲ್ಲಿ ಹದಿನೈದು ದಿನ ಭಾರತೀಯ ಸೇನೆಯನ್ನು ತಡೆದು ನಿಲ್ಲಿಸಬಹುದೆಂಬ ವಿಶ್ವಾಸವಿತ್ತು ಅವರಿಗೆ. ತಮ್ಮ ಹಳೆಯ ಮಿತ್ರ, ನಾಟೋ ಒಡಂಬಡಿಕೆಯ ಹಿರಿಯಣ್ಣ ಬ್ರಿಟನ್ನು ಕಷ್ಟಕಾಲದಲ್ಲಿ ತಮಗೆ ಸಹಾಯ ಮಾಡದಿರನೆಂದು ಅವರು ನಂಬಿದ್ದರು. ಆದರೆ, ತಮ್ಮ ಆಸೆಯು ಈಡೇರದೆ ಇರಲು ರೊಚ್ಚಿಗೇಳುವುದು ಸಹಜವೇ ಕೋಪದಿಂದ ಕೂಡಿದವನು ಎಂತಹ ಪಾಪ ಕಾರ್ಯವನ್ನು ಮಾಡುವುದಕ್ಕೂ ಹೇಸುವುದಿಲ್ಲ. ಅಂತೆಯೇ ಪೋರ್ಚುಗೀಸರಾದರೂ ಪಾಪಕೃತ್ಯಕ್ಕೆ ತೊಡಗಿದ್ದಾರೆ.

ಅನಿಷ್ಟ ಸಂಪ್ರದಾಯ

ಗೋವೆಯ ಸಂಪನ್ನ ಪ್ರದೇಶದಿಂದ ತಾವು ಕಾಲು ಕೀಳಲೇಬೇಕಾಗಿ ಬಂದಾಗ, ಅವರು ದಿಕ್ಕುಕಾಣದೆ ಹೋದರು. ಇದರ ಪ್ರತೀಕಾರ (?) ಮಾಡುವ ತಹತಹ ಅವರಲ್ಲಿ ಹುಟ್ಟಿತು. ತಮ್ಮ ಆಧಿಪತ್ಯದಲ್ಲಿರುವ ಎಲ್ಲ ಭಾರತೀಯರ ಆಸ್ತಿಪಾಸ್ತಿಗಳನ್ನು ಜಪ್ತುಗೊಳಿಸಲು ಹಾಗೂ ಅವರನ್ನು ಬಂಧಿಸಲು ಸುಗ್ರೀವಾಜ್ಞೆಯನ್ನು ಸಾಲಝಾರ ಸರಕಾರವು ಇತ್ತಿತು. ಈ ಆಜ್ಞೆಯ ಬಲದಿಂದ ಮೊಜಾಂಬಿಕ್‌ನಲ್ಲಿ ಒಂದು ಸಾವಿರ ಭಾರತೀಯರ ಆಸ್ತಿಯನ್ನು ಅಲ್ಲಿನ ಪೋರ್ಚುಗೀಸ ವಸಾಹತು ಸರಕಾರವು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆಯೆಂಬ ವರದಿ ಬಂದಿದೆ. ಇದರ ಒಡೆಯರನ್ನು ಇನ್ನೂ ಬಂಧಿಸಲಾಗಿಲ್ಲವಾದರೂ ಆ ಕಾರ್ಯಕ್ಕೂ ಹೆಚ್ಚು ದಿನ ತಡೆಯಲಾರದು. ಅಮೇರಿಕೆಯಿಂದ ಮುಂಬಯಿಗೆ ವಿಮಾನವೊಂದರಲ್ಲಿ ಬರುತಿದ್ದ ಡಾಕ್ಟರರೊಬ್ಬರನ್ನು, ವಿಮಾನವು ಲಿಸ್ಬನಿನಲ್ಲಿ ಇಳಿದಾಗ, ನಿಲ್ದಾಣದಲ್ಲಿಯೇ ಬಂಧಿಸಿ ಒಯ್ಯುವಂತಹ ನೀಚ ಪ್ರವೃತ್ತಿಯನ್ನು ಪೋರ್ಚುಗೀಸ ಪ್ರಭುಗಳು ಅನುಸರಿಸಿದರು; ದುಷ್ಟ ಪ್ರವರ್ತನೆಯಲ್ಲಿ ತೊಡಗಿದರು. ಇದು ಅನಿಷ್ಟ ಸಂಪ್ರದಾಯವಲ್ಲವೆ?

ಪ್ರತೀಕಾರ ಭಾವನೆ

ಗೋವೆಯ ವಸಾಹತು ತಮ್ಮ ಕೈಬಿಟ್ಟುಹೋದ ಬಳಿಕವಾದರೂ ಸಾಲಝಾರ ದೊರೆ ತಮ್ಮ ಗರ್ನೆಯ ಶತಮಾನದ ಕುರುಡು ನೀತಿಯನ್ನು ಬಿಟ್ಟುಕೊಟ್ಟು ತಮ್ಮ ವಶವಿರುವ ಎಲ್ಲ ವಸಾಹತುಗಳನ್ನೂ ನೇರವಾದ, ಸಮರ್ಪಕವಾದ ವಿಧಾನದಲ್ಲಿಯೇ ಬಿಟ್ಟುಕೊಡಬೇಕಿತ್ತು. ಅದಕ್ಕೆ ಬದಲಾಗಿ, ತನ್ನದಾದ ಗೋವೆಯನ್ನು ಭಾರತವು ಸ್ವಾಧೀನಪಡಿಸಿ, ತನ್ನ ಭೂಮಿಯಲ್ಲಿದ್ದ ವಸಾಹತುವಾದದ ಕಳಂಕವನ್ನು ತೊಡೆದುಹಾಕಿದ ಪವಿತ್ರ ಕಾರ್ಯವನ್ನು ಅಪಮಾನವೆಂದು ಬಗೆದು ಮುಯ್ಯಿ ತೀರಿಸುವ ಪಣತೊಟ್ಟುದು ಅವಿವೇಕತನದ ಪರಮಾವಧಿಯೇ ಸರಿ. ಜಾಗತಿಕ ಬೆಂಬಲಗಳಿಸಿದ ಗೋವಾ ವಿಮೋಚನೆಯು ಸಾಲಝಾರರಿಗೆ ಮಾಡಿದ ಅಪಮಾನವಲ್ಲ; ಅವರಿಗೆ ಭಾರತವಿತ್ತ ಶಾಂತಿಯ ಉಪದೇಶದ ಪಾಠವೆಂದು ಹೇಳಬೇಕು.

ಸಹನಾಶಕ್ತಿಗೂ ಮಿತಿಯಿದೆ.

ಭಾರತವು ಬಯಸಿದ್ದರೆ, ಗೋವೆಯಿಂದ ಅವರನ್ನು ಓಡಿಸಲು ಇಷ್ಟು ಸಮಯ ಕಾಯಬೇಕಾಗಿರಲಿಲ್ಲ. ಆದರೂ ಶಾಂತ ವಿಧಾನದಲ್ಲಿ ಬ್ರಿಟಿಷ-ಫ್ರೆಂಚರಂತೆ ಕಂಬಿಕಿತ್ತಾರು, ಅವರ ಮಿತ್ರರಾಷ್ಟ್ರಗಳು ಬುದ್ಧಿವಾದವನ್ನು ಹೇಳಿಯಾದರೂ ಮನವೊಲಿಸಿಯಾರು ಎಂಬ ಸದಾಶೆಯಿಂದ ಭಾರತವು ೧೪ ವರ್ಷಗಳ ದೀರ್ಘಕಾಲ ಕಾದಿತ್ತು. ಆದರೂ ಅವರು ತಮ್ಮ ಪ್ರಭುತ್ವವನ್ನು ಸ್ಥಿರಗೊಳಿಸುವ ಪ್ರಯತ್ನವನ್ನೇ ಮತ್ತೂ ಮುಂದುವರಿಸುತ್ತ ಬಂದರು ಅಲ್ಲದೆ ಗೋವೆಯೊಳಗೆ ದಮನ ನೀತಿಯನ್ನೂ ಕೈಗೊಂಡರು. ಭಾರತೀಯರಾದ ಗೊಮಾಂತಕರ ರಕ್ಷಣೆಯ ಭಾರ ತನ್ನದಲ್ಲವೆಂದು ಭಾರತ ಸುಮ್ಮನುಳಿಯುವುದೂ ಅನ್ಯಾಯ. ಪೋರ್ಚುಗೀಸ ಸೈನ್ಯ ಪಡೆಗಳು ಗೋವೆಯಲ್ಲಿ ಜಮೆಯಾದ ನಂತರವೇ ಭಾರತವೂ ತನ್ನ ಸೈನ್ಯವನ್ನು ಅಲ್ಲಿ ಕೂಡಿಸಿತೆಂಬುದನ್ನು ಮರೆಯುವಂತಿಲ್ಲ. ಅಂತಾರಾಷ್ಟ್ರೀಯ ನೀತಿಯನ್ನು ಮುರಿದು ವಸಾಹತು ವಾದವನ್ನು ಪುರಸ್ಕರಿಸುತಿದ್ದ ಪೋರ್ಚುಗೀಸರನ್ನು ಓಡಿಸಿ, ಗೋವಾ ವಿಮೋಚನೆಗಾಗಿ ವಿಜಯಯಾತ್ರೆ ಕೈಗೊಳ್ಳುವುದಕ್ಕೆ ಕೊನೆಯ ಗಳಿಗೆಯಲ್ಲಾದರೂ ಭಾರತವು ಉತ್ಸಾಹವನ್ನು ತೋರಿಸಲಿಲ್ಲ; ಈ ಕಾರಣದಿಂದಲೇ ಬ್ರೆಜಿಲ್-ಅಮೇರಿಕೆಗಳು ಸಂಧಾನದ ಯತ್ನವನ್ನು ಮಾಡಲು ಮುಂದೆ ಬಂದಂತನಿಸಿದುದರಿಂದ ತನ್ನ ಯಾತ್ರೆಯ ದಿನವನ್ನು ಎರಡು ಬಾರಿ ಮುಂದುವರಿಸಿದುದು ಭಾರತದ ಶಾಂತಿ ಮತ್ತು ಅಹಿಂಸೆ ಹಾಗೂ ಸಹನೆಯ ದ್ಯೋತಕವೇ ಸರಿ. ನಿಯೋಜಿತ ವಿಜಯ ಯಾತ್ರೆಯನ್ನು ಆರು ತಿಂಗಳುಗಳ ವರೆಗೆ ಮುಂದುವರಿಸಬೇಕು, ಈ ಅವಧಿಯಲ್ಲಿ ತಾನು ಪೋರ್ಚುಗಲಿನ ಮನವೊಲಿಸಲು ಪ್ರಯತ್ನಿಸುವೆನೆಂದ ಅಮೇರಿಕೆಗೆ ಕೂಡ, ಪೋರ್ಚುಗಲ್ಲು ತನ್ನ ವಸಾಹತು ವಾದಕ್ಕೆ ಅಂಟಿಕೊಂಡಿರುವ ನೀತಿಯನ್ನು ಬಿಟ್ಟುಕೊಡುವುದೆಂಬ ನಂಬಿಕೆಯಿಲ್ಲದಾಗ, ಭಾರತವಾದರೂ ಕೈಕಟ್ಟಿ ತನ್ನವರ ಬವಣೆಯನ್ನು ಕಂಡೂ ಕಂಡೂ ಕುರುಡರಂತೆ ವರ್ತಿಸುವುದು ಸಾಧ್ಯವಿಲ್ಲ. ಅಸಹಾಯಕ ಮತ್ತು ಅನಿಶ್ಚಿತ ಪರಿಸ್ಥಿತಿಯೊದಗಿ ಬಂದ ದೆಸೆಯಿಂದ ವಿಜಯ ಯಾತ್ರೆಯನ್ನು ಕೈಗೊಳ್ಳಲೇಬೇಕಾಯಿತು.

ಅಹಿಂಸೆಯ ಪ್ರಯೋಗ

ಭಾರತದ ಸಹನಾಶಕ್ತಿಗೆ ಇದೊಂದು ಜ್ವಲಂತ ನಿದರ್ಶನವಾದರೆ, ವಿಜಯಯಾತ್ರೆಯಲ್ಲಿ ಅನುಸರಿಸಿದ ಕ್ರಮ-ನೀತಿಗಳು ಅಹಿಂಸೆಯ ಪ್ರತೀಕವಾಗಿವೆ. ಯಾವನೇ ಒಬ್ಬ ಗೋಮಾಂತಕನಿಗೆ ಹಾನಿಯೊದಗದಂತೆ, ಶತ್ರುಸೇನೆಯಲ್ಲಿಯಾದರೂ ಶಕ್ಯವಿದ್ದಷ್ಟು ಕಡಿಮೆ ಪ್ರಾಣಹಾನಿಯಾಗುವಂತೆ ಮುಂದುವರಿದ ಈ ಯಾತ್ರೆ ಇತಿಹಾಸದಲ್ಲಿ ಚಿರಸ್ಥಾಯಿಯಾಗಿರುವುದು. ಮಾತ್ರವಲ್ಲ ಅಹಿಂಸೆಯ ಧೋರಣೆಯೂ ಆಗಿದೆ. ಭಾರತೀಯ ಸೇನೆಯಲ್ಲಿ ಸುಮಾರು ೨೦ ಜನರು ಪೋರ್ಚುಗೀಸರ ಕುತಂತ್ರ ಹಾಗೂ ಮೋಸದಿಂದ ಸಾವಿಗೀಡಾಗಿದ್ದರೆ, ಶತ್ರುಸೇನೆಯಲ್ಲಿ ಮಡಿದವರ ಸಂಖ್ಯೆ ಹತ್ತಕ್ಕೂ ಕಡಿಮೆಯೆಂಬುದು ಗಮನೀಯವಿದೆ.

ಅತಿ ಉದಾರ ನೀತಿ

ವಿಜಯ ಯಾತ್ರೆಯು ವಿಜಯದಲ್ಲಿ ಅಂತ್ಯಗೊಂಡ ಮೇಲೆ, ಶರಣುಬಂದ ಪೋರ್ಚುಗೀಸ ಸೈನಿಕರನ್ನು ನಡೆಸಿಕೊಂಡ ನೀತಿಯು ಪ್ರಶಂಸಾರ್ಹವಿದೆ. ಅಡಗಿ ಕುಳಿತ ಗವರ್ನರ್ ಜನರಲ್ಲರ ಬಗ್ಗೆ ಭಾರತವು ತೋರಿದ ಉದಾರ ನೀತಿಯು ಭಾರತೀಯ ಸಂಸ್ಕೃತಿಗೆ ತಕ್ಕುದಾಗಿದೆ. ಅವರಿಗೆ ಆಶ್ರಯವಿತ್ತ ಉನ್ನತಾಧಿಕಾರಿಯು ಭಾರತದ ಅಧ್ಯಕ್ಷರಿಗೆ ನಿಷ್ಠೆಯನ್ನು ವ್ಯಕ್ತಪಡಿಸಿ ತನ್ನ ಅಪರಾಧಕ್ಕೆ ಕ್ಷಮಾಯಾಚನೆ ಮಾಡಿದೊಡನೆಯೇ ಮರಳಿ ನೌಕರಿಗೆ ತೆಗೆದುಕೊಂಡಂತಹ ನಿದರ್ಶನ ಪ್ರಪಂಚದ ಇತಿಹಾಸದಲ್ಲಿಯೂ ಇರಲಾರದು. ಗವರ್ನರ ಜನರಲ್ಲರ ಅಸ್ವಸ್ಥ ಪತ್ನಿಗೆ ಸ್ವದೇಶಕ್ಕೆ ಮರಳಲು ಪರವಾನಿಗೆ ಇತ್ತುದು ಭಾರತದ ಘನತೆಗೆ—ತೂಕಕ್ಕೆ ಸರಿಯಾಗಿದೆ. ಪೋರ್ಚುಗಲ್ ಸರಕಾರವು ತನ್ನ ವಸಾಹತುಗಳಲ್ಲಿರುವ ಭಾರತೀಯರನ್ನು ದಿಕ್ಕುಗೆಡಿಸುತ್ತಿರುವುದಾದರೂ ಅದರ ಪ್ರತೀಕಾರಕ್ಕೆ ಇಲ್ಲಿರುವ ಪೋರ್ಚುಗೀಸ ಕೈದಿಗಳ ಕೂದಲನ್ನೂ ಕೊಂಕಿಸದ ಅತಿ ಉದಾರ ನೀತಿಯನ್ನು ಭಾರತ ಸರಕಾರ ವಹಿಸಿರುವಾಗ, ಈ ವಿಜಯ ಯಾತ್ರೆಯ ವಿಷಯದಲ್ಲಿ ಕೆಲವು ಪಾಶ್ಚಾತ್ಯ ರಾಷ್ಟ್ರಗಳು ಭಿನ್ನಾಭಿಪ್ರಾಯ ಪ್ರಕಟಿಸುತ್ತಿರುವುದರ ಔಚಿತ್ಯ ಕಾಣುವುದಿಲ್ಲ.

ಅರ್ಥಹೀನ ಆಲಾಪ

ಗೋವೆಯ ವಿಮೋಚನೆಯ ಪ್ರಶ್ನೆಯನ್ನು ಪಾಶ್ಚಾತ್ಯ ಬಣದ ರಾಷ್ಟ್ರಗಳು ಬಹಳ ಉಗ್ರವೆಂದು ಭಾವಿಸುವುದು ಮತ್ತು ಅದರ ಬಗ್ಗೆ ಭಾರತದ ನೀತಿಯನ್ನು ಖಂಡಿಸುವುದು ಪೋರ್ಚುಗಾಲದ ಮೆಚ್ಚುಗೆಯನ್ನು ಪಡೆಯುವುದಕ್ಕೆ ಮಾತ್ರವೆಂದಾದರೆ, ವಿಶೇಷ ಚಿಂತಿಸಬೇಕಾಗಿಲ್ಲ. ಕಠೋರವಾದ ಶಬ್ದಗಳಿಂದ ಭಾರತವನ್ನವು ಟೀಕಿಸುತ್ತಿರುವುದು ಮತ್ತು ಈ ವರ್ತನೆಯಿಂದ ಸಂಯುಕ್ತರಾಷ್ಟ್ರ ಸಂಘವೇ ಪತಿತವಾಯಿತೆಂದು ಕೂಗಾಡುವುದು ಹಿರಿಯ ರಾಷ್ಟ್ರಗಳಿಗೆ ಶೋಭಾಯಮಾನವೆನ್ನುವಂತಿಲ್ಲ. ಗೋವೆಯಲ್ಲಿಯೂ ಪಾಲು ಕೇಳಿದ ಪಾಕಿಸ್ತಾನದ ಅಧ್ಯಕ್ಷ ಅಯೂಬ ಖಾನರ ಕೇಳಿಕೆಯಂತೆಯೇ ಹುರುಳಿಲ್ಲದ ಇಂತಹ ಹೇಳಿಕೆಗಳಿಂದ ಸತ್ಯವನ್ನು ಮುಚ್ಚಿಡುವುದು ಸಾಧ್ಯವಿಲ್ಲ. ನೂರು ಸುಳ್ಳುಗಳ ಕತ್ತಲೆಯೊಳದಲ್ಲಿ ಹುದುಗಿದ್ದರೂ ಸತ್ಯವು ತನ್ನ ಸ್ಥಿರ ತೇಜೋಮಯ ಪ್ರಕಾಶದಿಂದ ಎದ್ದು ತೋರಿಯೇ ತೋರುವುದು. ವಸಾಹತು ವಾದವನ್ನು ಕೊನೆಗೊಳಿಸುವುದನ್ನು ಒಪ್ಪಿಕೊಂಡ ಯುಕ್ತರಾಷ್ಟ್ರ ಸಂಘವು ತನ್ನ ಗೊತ್ತುವಳಿಯನ್ನು ಉಲ್ಲಂಘಿಸುತ್ತ ಬಂದ ಪೋರ್ಚುಗಲ್ಲಿನ ವಸಾಹತುವೊಂದನ್ನು ಬಿಡಿಸಹೊರಟ ಭಾರತದ ವಿಜಯ ಯಾತ್ರೆಯಿಂದ ನಿರ್ನಾಮವಾಯಿತೆಂಬುದು ಬರೀ ವ್ಯರ್ಥಾಲಾಪ ಬರೀ ಗುಲ್ಲು; ಸಿದ್ದೆಗೇಡುವೆಂಬಂತೆ ಸಾಂತ್ವನದ ಸ್ವರೂಪ.

ಭಾರತವು ವಶಪಡಿಸಿಕೊಂಡಿರುವ ಆದಗ ಭೂಭಾಗ ಗೋವೆಯನ್ನು ಮರಳಿ

(೨ನೇ ಪುಟ ನೋಡಿರಿ)

ಮುಚ್ಚಿದ ಹುಚ್ಚು

ಶ್ರೀ ಎಚ್. ರಾಮಕೃಷ್ಣ ಅಡಿಗ

ಮಂದವಾದ ಗಾಳಿಗೆ ಎದುರಿನ ದೀಪ ಆಚೆ ಈಚೆ ಬಳುಕುತಿತ್ತು. ಸ್ವಲ್ಪ ಬತ್ತಿಯನ್ನು ಮೇಲಕ್ಕೆ ಮಾಡಿ ಶಾಮು ಕವರನ್ನು ಒಡೆದು ಆತುರದಿಂದ ಓದತೊಡಗಿದ.

"ಶಾಮೂ,

ಈ ತನಕ ಬಾರದೆ ಈಗ ಇದ್ದಕ್ಕಿದ್ದಂತೆ ನನ್ನ ಪತ್ರ ಬಂದುದನ್ನು ಕಂಡು ನೀನು ಬೆಚ್ಚಿ ಬೀಳಬಹುದು. ಆದರೆ ಪತ್ರದ ಆಗಮನಕ್ಕಾಗಿ ಭಯಪಡದಿದ್ದರೂ, ವಿಷಯಕ್ಕಾಗಿ ಬೆದರಬಹುದು. ಗಾಬರಿಯಾಗಿ ಓಡಿಸಿ ಓದಬೇಡ. ಮೆಲ್ಲನೆ ಪ್ರತಿ ವಾಕ್ಯದ ಎಳೆ ಎಳೆಯನ್ನೂ ಸೆಳೆದು ಪರೀಕ್ಷಿಸಿ ವಿಮರ್ಶಿಸಿ ಓದು.

ಶಾಮೂ ಆಫೀಸಿಗೆ ಇಂದು ರಜೆ ಬರೆದು ನಿನಗೆ ಪತ್ರ ಬರೆಯಲೆಂದು ಕುಳಿತಿದ್ದೇನೆ. ಯಾಕೆ ಹಾಗೆ ಮಾಡಿದಿರೆಂದು ನೀನು ಕುತೂಹಲಿಯಾಗಬಹುದು. ಆದರೆ ಇತ್ತೀಚಿನ ಕೆಲವು ಘಟನೆಗಳು ನನ್ನ ನಿಮ್ಮ ಹಿಂದಿನ ಜೀವನವನ್ನೇ ಮರೆತು, ಹೊಸ ಅಧ್ಯಾಯದ ಉದ್ಘಾಟನೆಯನ್ನು ಮಾಡುವಂತಿದೆ. ಆದಕ್ಕಾಗಿ ನಿನಗೂ ಈ ವಿಷಯ ಕೊಂಚ ತಿಳಿಯಲೆಂದು ಬರೆಯುತ್ತೇನೆ. ನೀನೂ ನನ್ನನ್ನು ಅನುಮಾನಿಸುವಂತಿದ್ದರೆ ಈ ಪತ್ರ ಓದಬೇಡ. ಹರಿದು ಕಿಟಕಿಯಿಂದ ಹೊರಗೆ ಗಾಳಿಯಲ್ಲಿ ತೂರಿ ಬಿಡು. ಆದರೆ ಅಂತಹ ಕಾರ್ಯ ಮಾಡುವವ ನೀನಲ್ಲ ಎಂದು ನನಗೆ ಗೊತ್ತು. ಅದಕ್ಕಾಗಿ ಬರವಣಿಗೆಯನ್ನು ಮುಂದರಿಸುತ್ತೇನೆ.

ನೀನು ಮೇ ರಜೆಗೆ ಮನೆಗೆ ಬಂದಾಗ ನಿನ್ನಣ್ಣನ ಮದುವೆಯಾಗಿದ್ದು ನಿನಗೆ ಗೊತ್ತಿದೆಯಲ್ಲ? ಆಗಲೇ ಆತ ಬದಲಾಯಿಸಿದ್ದಾನೆಂದು ನಾನೂ ನಿನ್ನ ತಾಯಿಯೂ ಅನ್ನುತ್ತಿದ್ದೆವು. ಆದರೆ ಆ ಮಾತುಗಳೆಲ್ಲ ಈಗ ಅಕ್ಷರಶಃ ನಿಜವಾಗುತ್ತ ಬಂದಿದೆ. ನಿನ್ನಣ್ಣನ ವರ್ತನೆ ತುಂಬಾ ಬದಲಾಗಿದೆ. ಅದೇನೆಂದು ಓದು.

ಮೊನ್ನೆ ನನ್ನ ಹೆಂಡತಿ, ನಿನ್ನ ಅತ್ತಿಗೆ, ನಿಮ್ಮ ಮನೆಗೆ ಹೋಗಿದ್ದಳು. ಆಗ ನಿನ್ನಣ್ಣ ಮನೆಯಲ್ಲಿ ಇದ್ದರಂತೆ. 'ಇವಳು ಹೋದವಳು ನಿನ್ನ ತಾಯಿಯ ಹತ್ತಿರ ಏನೋ ಮಾತನಾಡತೊಡಗಿದಳಂತೆ. ನಿನ್ನಣ್ಣ ಅದನ್ನು ಕೇಳುತ್ತಾ ಮರೆಯಲ್ಲಿದ್ದನಂತೆ. ಆದರೆ ಸ್ವಲ್ಪ ಹೊತ್ತಿನಲ್ಲಿ ಆತ ಎದಿರು ಬಂದು, "ಅತ್ತಿಗೆ, ನಿನಗೇನು ಕೆಲಸ ಇಲ್ಲಿ? ಸುಮ್ಮನೆ ಮನೆಗೆ ಹೋಗಬಾರದೆ? ಇಲ್ಲಿ ಬಂದು ಹರಟೆ ಹೊಡೆಯುವುದಕ್ಕಿಂತ ಏನಾದರೂ ಕೆಲಸ ಮಾಡಿದರಾಗದೆ? ಹೆಂಗಸರಿಗೆ ಅಲ್ಲಿ ಇಲ್ಲಿ ಎಂತ ಎಲ್ಲ ಕಡೆ ಪುರಾಣ ಸಿಕ್ಕುತ್ತೆ. ಹೋಗು ಮನೆಗೆ. ಇನ್ನು ನಮ್ಮ ಮನೆಗೆ ಬಂದರೆ ಕಾಲು ಮುರಿದು ಹಾಕ್ತೀನಿ" ಎಂದನಂತೆ. ಹಿಂದೆ ಅವನ ಹೆಂಡತಿಯೂ ಏನೋ ಗೊಣಗುಟ್ಟುತ್ತಿದ್ದಳಂತೆ. ನಮ್ಮಾಕೆ 'ಗೋಳೋ' ಎಂದತ್ತುಕೊಂಡು ಮನೆಗೆ ಬಂದು ನನ್ನೊಡನೆ ಹೇಳಿದಳು.

ಮೊನ್ನೆ ನಾನು ಆಫೀಸಿಗೆ ಹೋಗುತ್ತಿದ್ದೆ. ನಿನ್ನಣ್ಣ ಅಂಗಡಿಗೆಂದು ಪೇಟೆಗೆ ಬರುತ್ತಿದ್ದ. ಹಿಂದೆ ನಾವೆಲ್ಲ ಒಟ್ಟಿನಿಂದ ಬರುವಾಗ ದಾರಿಯಲ್ಲಿ ಮಾತನಾಡುತ್ತ ಬರುತಿದ್ದ. 'ಅಂಗಡಿಗೆ ಈ ವರ್ಷ ಹೊಸ ಹೊಸ ಸಾಮಾನು ತರಿಸ್ತೇನೆ. ವ್ಯಾಪಾರವೂ ಉತ್ತಮವಾಗುತ್ತ ಬರುತ್ತಿದೆ, ಮಾವ" ಎಂದ. ಆದರೆ ಅದರ ಸತ್ಯಾಸತ್ಯತೆ ತಿಳಿದ ನಾನು ಅವನ ಆ ಮಾತನ್ನು ಕೇಳಲಿಲ್ಲವೆನ್ನುವಂತೂ ಮೌನವಾಗಿಯೇ ಆಫೀಸಿಗೆ ಬಂದೆ.

ನೋಡು ಶಾಮು, ಅವನಿಗೆ ಮದುವೆಯಾಗುವ ಮೊದಲು, ಅಂಗಡಿಯನ್ನು ಹೇಗೆ ಕಂಡುಕೊಳ್ಳುತ್ತಿದ್ದ. ಚೂರು ಚೋಕುಗಳನ್ನು ಒಟ್ಟುಮಾಡಿ ಮಾವಾಣೆಗೆ ಮಾರುತ್ತಿದ್ದ. ಈಗ? ಅಲ್ಲಿಂದ ಸ್ನೋ ಪೌಡರ್ ಕಂಡಿಗೆಗಳೇ ಮನೆಯಲ್ಲಿ ಬಂದಿವೆಯಂತೆ. ಶಾಮೂ, ನಾನೂ ನೀವೂ ಯಾರ್‍ಯಾದರೂ ಈಗ ಕೂಡ ಸ್ನೋ ಪೌಡರ್ ಉಪಯೋಗಿಸುತ್ತೇವೆಯೇ? ನಮ್ಮ ಮನೆಯಲ್ಲಿ ಅದರ ಸುದ್ದಿಯಿದೆಯೇ? ಈಗ ಹೆಂಗಸರ ಬಳೆ, ರಿಬ್ಬನ್, ಸ್ನೋ ಪೌಡರ್‌ಗೆ ಎಲ್ಲ ನಿಮ್ಮ ಮನೆಯೇ ಅಂಗಡಿಯಾಗಿದೆಯಂತೆ.

ನಾನಂದೇ ಆ ಪೇಟೆ ಹೆಣ್ಣು ಬೇಡ ಬೇರೆ ಹಳ್ಳಿದ್ದು ಎಲ್ಲಾದರೂ ಇದ್ದರೆ ಮದುವೆ ಮಾಡ್ಕೊಳ್ಳೋ ಎಂದೆ. ಆದರೆ ಆಗ ನನ್ನ ಮಾತನ್ನು ಕೇಳುವುದಿರಲಿ, 'ಹೂಂ ಹಾಂ' ಎನ್ನದೆ ಆ ಹುಡುಗೀನೇ ಮದುವೆಯಾದ. ಸೌಂದರ್ಯ ರತಿಯ ಪೂಜೆಗೆ ಅಣಿಯಾಗತೊಡಗಿದ. ಜೊತೆಗೆ ನಮ್ಮೆಲ್ಲರನ್ನು ಮರೆತ, ನನ್ನನ್ನು ಮರೆತ ನಿನ್ನನ್ನು ಪೂರ್ತಿ ಏನೋ, ನಾನು ಬರೆಯಲಾರೆ.

ಮತ್ತೊಂದು ವಿಚಾರ. ನವನವೀನವಾದದ್ದು. ಮೊನ್ನೆ ಮೊನ್ನೆ ಅವನ ಹೆಂಡತಿ ನಿನ್ನ ತಾಯನ್ನು ಕೆರೆಗೆ ದೂಡಲಿಕ್ಕೆ ತಯಾರಾಗಿದ್ದಳಂತೆ. ಇಬ್ಬರೂ ಕೆರೇ ದಂಡೇಲಿ ಹೋಗುವಾಗ ಹಿಂದಿನಿಂದ ಹಾವು ಬಂತೇಂತ ಓಡಿ, ನಿನ್ನ ತಾಯಿ ಮೈಮೇಲೆ ಹಾರಿ, ಕೆರೆಗೆ ಕೆಡೆಯುತ್ತಿದ್ದಳಂತೆ. ಆದರೆ ತಾಯಿಗೆ ಅದೃಷ್ಟವಶಾತ್ ಜೀವ ಉಳಿಯಿತು.

ಅವನ ಬುದ್ಧಿಯೇ ಭ್ರಮೆಯಾಗಿದೆ ಎಂಬುದಕ್ಕೆ ಮತ್ತೊಂದು ದೃಷ್ಟಾಂತ ನೋಡು. ಆದಿತ್ಯವಾರವೂ ಮೊದಲು ಹೆಚ್ಚಾಗಿ ಅಂಗಡಿ ಬಾಗಿಲು ತೆರೆಯುತ್ತಿದ್ದನಲ್ಲ ಈಗ ಆದಿತ್ಯವಾರ ಅಂಗಡಿ ಮುಚ್ಚಿಕೊಂಡಿರುತ್ತೆ. ಆತ ಮನೆಯಲ್ಲಿರುತ್ತಾನೆ. ತಾನು ದನ ಎಮ್ಮೆಯನ್ನು ಗುಡ್ಡಕ್ಕೆ ಹೊಡೆದುಕೊಂಡು ಹೋಗುವ ಬದಲು ನಿನ್ನ ತಾಯನ್ನು ಕಳಿಸುತ್ತಾನೆ ಆಕೆ ಕಾಡೆಲ್ಲಾ ಸುತ್ತಿ, ಸುತ್ತಿ ಕತ್ತಲಾಗುವಾಗ ಮನೆಗೆ ಬರುತ್ತಾಳೆ. ನನಗೆ ಇದನ್ನೆಲ್ಲಾ ಕೇಳಿ ಕಣ್ಣೀರು ಉಕ್ಕಿಬರುತ್ತೆ ಶಾಮೂ. ಅವನ ಹೆಂಡತಿ 'ನಾನು ಹೋಗುತ್ತೇನೆ' ಎಂದರೆ ಈತನೇ ಮುಂದೆ ಬಂದು 'ಅಲ್ಲಿ ಹುಲಿ ಚಿರತೆಗಳಿವೆ ಗೊತ್ತಿದೆಯೇ ಕೊನೆಗೆ ಎಮ್ಮೆಗಳ ಜೊತೆಗೆ ನೀನೂ ಪರಾರಿಯಾದರೆ' ಎಂತಾನಂತೆ.

ಶಾಮೂ, ಇದನ್ನೆಲ್ಲ ಓದಿ ನಿನಗೆ ಬೇಸರಬರಬಹುದು. ಅಣ್ಣನ ಬಗ್ಗೆ ತಿರಸ್ಕಾರ ಬರಬಹುದು. ಆದರೆ ಅಣ್ಣನಿಗೆ ಭ್ರಮೆ ಆಕೆಯ ಹೆಂಡತಿಯಿಂದ ಬಂದದ್ದು. ಪೇಟೆಯ ಹುಡುಗಿಯರನ್ನು ಹಟ ಕಟ್ಟಿ ಮದುವೆಯಾದುದಕ್ಕೆ ಈಗ ನೀನು ನಿನ್ನ ತಾಯಿ ದುಃಖಸಾಗರದಲ್ಲಿ ಮುಳುಗಬೇಕಾಗಿದೆ. ಒಂದೆರಡು ವರ್ಷದಲ್ಲಿ ಅವನಿಗೂ ನಿಮ್ಮಂತೆ ದುಃಖದ ಕಡಲೇ ಗತಿಯೆನ್ನು.

ನನ್ನ ಮಾತನ್ನು ಮೀರುವ ಮಕ್ಕಳಲ್ಲ ಎಂದು ತಿಳಿದಿದ್ದೆ ಅಂದು, ನೀವು ಚಿಕ್ಕವರಿರುವಾಗ. ಆದರೆ ಈಗ ಒಬ್ಬನ ಗುಣ ಸಂಪೂರ್ಣ ಅರಿತಂತಾಯಿತು. ನೀನೊಬ್ಬ ಉಳಿದಿದ್ದಿ. ನನ್ನನ್ನು ನೀನೂ ಹಾಗೆ ಮಾಡಿದರೆ ಆಯಿತು ನಾವು ಊರನ್ನೇ ಬಿಟ್ಟುಹೋಗಬೇಕಾಗುತ್ತದೆ. ಆದರೆ ಮೊದಲಿನಿಂದಲೂ ನಿನಗೆ ನನ್ನಲ್ಲಿ, ನಿನ್ನ ತಾಯಲ್ಲಿ ತುಂಬಾ ಪ್ರೇಮ. ಅದನ್ನು ಕೊನೆಯ ತನಕವೂ ಉಳಿಸಿಕೊಳ್ಳಬೇಕಾದರೆ ನೀನೂ ನಿನ್ನ ಅಣ್ಣನಂತಾಗಬೇಡ. ಈಗಲೇ ಪಟ್ಟಣದ ಹುಡುಗಿಯರ ಬೆಡಗಿಗೆ ಬೆನ್ನು ಹತ್ತಿ ಸುತ್ತಾಡಬೇಡ. ಗಿಡವಾಗಿರುವಾಗಲೇ ಕೆಲಸ ಮುಗಿಸಬೇಕೆಂಬ ಲೋಕೋಕ್ತಿಯಂತೆ ನಾನೀಗಲೇ ನಿನ್ನ ಭವಿಷ್ಯದ ಚಿಂತನೆಗೆ ತೊಡಗಿ, ಬುದ್ಧಿ ಹೇಳುತ್ತಿದ್ದೇನೆ. ನಿನ್ನ ತಾಯಿಯ ಜೀವವನ್ನು ಪೀಡಿಸದೆ ನೀವು ಬಾಳಬೇಕಾದರೆ ನನ್ನ ಮಾತಿನಂತೆ ನಡೆಯಲು ಪ್ರಯತ್ನಿಸಬೇಕು.

ಏನೋ, ಹುಚ್ಚು ಹುಚ್ಚಾಟದ ಮಾತುಗಳನ್ನು ಬರೆದೆ. ಲೇಖನಿಯನ್ನು ಎತ್ತಿದಾಗ, ಆಫೀಸಿನ ಲೆಕ್ಕಗಳು ವಿನಃ ಪೆನ್ನು ಬೇರೆ ಕೆಲಸಕ್ಕೆ ಆಗುತ್ತಿದೆ. ಸ್ವಾಭಾವಿಕವಾಗಿ ಹೊರಸೂಸಿದ ಬೆಂದ ಹೃದಯದ ನುಡಿಗಳೆಂದು ಬಗೆದು, ಓದು.

ಬೇರೇನೂ ಬರೆಯಲಾರೆ. ಆದರೆ ಕೆಲ ದಿನಗಳಲ್ಲೇ ನಿನ್ನುತ್ತರ ಕಂಡು ಬರೆಯುವೆ.

ಇಂತಿ ಮಾಡುವಾಶೀರ್ವಾದ,
ಮಾಧಪ್ಪ.

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ರವೀಂದ್ರವಾಣಿ—ಲೇಖಾಂಕ ೩೦. ವಿಶ್ವಕವಿ ರವೀಂದ್ರನಾಥ ಟಾಗೋರ್

ಅನಂತದ ಸಾಧನೆ

ಅನುವಾದಕರು: ಕೆ ಎನ್. ಭಟ್, ಶಿರಾಡಿಪಾಲ್.

ಉಪನಿಷತ್ತುಗಳಲ್ಲಿ—"ಈ ಮನುಷ್ಯನು ತನ್ನ ಜೀವಿತ ಕಾಲದಲ್ಲಿಯೇ ಈಶ್ವರನನ್ನು ಪಡೆಯುವುದು-ಉತ್ತಮವಾಗಿದೆ. ಎಂದು ವೇಳೆ ಇದು ಸಾಧ್ಯವಾಗದಿದ್ದರೆ, ಅಂಥವನಿಗೆ ವಿನಾಶವಲ್ಲದೆ, ಬೇರೆ ಗತಿಯಿಲ್ಲ!" ಎಂಬುದಾಗಿ ಹೇಳಿದೆ. ಈಶ್ವರನನ್ನು ಪಡೆಯುವುದೆಂದರೆ ಅದರ ಅರ್ಥವೇನು? ಈಶ್ವರನು, ಇತರ ವಸ್ತುಗಳಂತೆ, ಅಧಿಕೃತವಾಗಿ ಪಡೆಯುವ ವಸ್ತುವಾಗಿಲ್ಲ! ಮತ್ತು—ಸಂಗ್ರಹಿಸಿ ಇಡುವ ಒಂದು ವಸ್ತುವೂ ಆಗಿಲ್ಲ! ರಾಜನೀತಿ, ಯುದ್ಧ ಮೊದಲಾದ ಅನೇಕ ವ್ಯವಹಾರಗಳಲ್ಲಿ ಯಾವುದರಲ್ಲಿಯೂ, ಈಶ್ವರ, ಎಂಬ ವಸ್ತು ಉಪಯೋಗಿಸ್ಪಡುವಂಥಹುದಾಗಿಲ್ಲ! ನಾವು ಈಶ್ವರನ ಹೆಸರನ್ನು, ನಮ್ಮ ಇತರ ಸಂಪತ್ತು—ಕಾರು, ಆಸ್ತಿ, ಮನೆಮೊದಲಾದುವುಗಳ ಸೂಚೀ ಪತ್ರದೊಡನೆ, ಬರೆಯಲಾರೆವು. ಹಾಗಾದರೆ, ಈಶ್ವರನನ್ನು ಪಡೆಯುವುದು? ಹೊಂದುವುದು ಎಂದರೆ, ಇದರ ಅರ್ಥವೇನು? ಅಭಿಪ್ರಾಯವೇನು?

ಮನುಷ್ಯನ ಆತ್ಮವು ಈಶ್ವರನನ್ನು ಪಡೆಯಲು ವ್ಯಾಕುಲಗೊಂಡಾಗ, ಅದು—ತನ್ನ ಯಾವ ಪ್ರಬಲವಾದ ಇಚ್ಛೆಯಿಂದ ಹಾಗೆ ಮಾಡುವುದು? ಎಂಬುದನ್ನು ನಾವು ತಿಳಿದುಕೊಳ್ಳಲು, ಪ್ರಯತ್ನಿಸಬೇಕು. ಆತ್ಮವು ತನ್ನ ಸಂಪತ್ತನ್ನು, ಅರ್ಥಾತ್ ಸ್ವತ್ವವನ್ನು—ವೃದ್ಧಿಪಡಿಸಿಕೊಳ್ಳುವುದಕ್ಕಾಗಿ ಹೀಗೆ ಇಚ್ಛಿಪಡುವುದೋ? ಇಲ್ಲ. ಅದೆಂದಿಗೂ ಇಲ್ಲ. ತನ್ನ ಸ್ವತ್ವದಲ್ಲಿ ವೃದ್ಧಿಯನ್ನು ಹೊಂದುವ ಅಪೇಕ್ಷೆಯು ಬಹಳ ಬಳಲಿಕೆಯನ್ನುಂಟುಮಾಡುವ ಅಪೇಕ್ಷೆಯಾಗಿದೆ. ಅಲ್ಲದೆ, ಈ ಅಪೇಕ್ಷೆಗೆ ಅಂತ್ಯವೆಂಬುದೇ ಇಂಬಾರದು. ನಿಜವಾಗಿ ನೋಡಿದರೆ, ಈಶ್ವರನನ್ನು ಪಡೆಯಲು ಇಚ್ಛಿಸಿದ ಮನುಷ್ಯನು, ಈ ಸಂಸಾರದಿಂದ ಎಂದೂ ಶಾಂತವಾಗದ ಸಂಗ್ರಹದ ಇಚ್ಛೆಯನ್ನು ತ್ಯಜಿಸಿ, ಅದರಿಂದ ದೂರ ಉಳಿದು, ಬಹು ದೂರ ಹೋಗಲು, ಅಪೇಕ್ಷಿಸುತ್ತಾನೆ. ಆತನು, ಬೇರೆ ಯಾವ ವಸ್ತುಗಳಲ್ಲಿಯೂ, ಇಚ್ಛಿಸುನ್ನಿಡದೆ— "ನಿತ್ಯೋ ನಿತ್ಯಾನಾಂ" ಅನಿತ್ಯ ವಸ್ತುಗಳಲ್ಲಿ ನಿತ್ಯದ, ಮತ್ತು—"ರಸಾನಾಂ ರಸತಮಃ" ಬೇರೆ ಬೇರೆಯಾಗಿರುವ, ರಸಗಳಲ್ಲಿ ಸರ್ವಶ್ರೇಷ್ಠವಾದ ರಸವನ್ನೇ ಅಪೇಕ್ಷಿಸುತ್ತಾನೆ. ಈ ಕಾರಣದಿಂದ ಉಪನಿಷತ್ತುಗಳು, ಎಲ್ಲವನ್ನೂ ಬ್ರಹ್ಮನಿಂದಲೇ ಪಡೆಯುವ ಉಪದೇಶವನ್ನು ಕೊಡುತ್ತಿವೆಯೇ ಹೊರತು, ನಮ್ಮ ಸಂಗ್ರಹಾಲಯದಲ್ಲಿ ಬೇರೊಂದು ವಸ್ತುವನ್ನು ಬೇರೊಂದು ಕಡೆಯಿಂದ, ಸೇರಿಸಿ, ವೃದ್ಧಿ ಮಾಡಿಕೊಳ್ಳಲು, ಸಂಕೇತವನ್ನು ಕೊಡುವುದಿಲ್ಲ.

ಜಗತ್ತಿನಲ್ಲಿ ಇರುವದೆಲ್ಲವೂ ಈಶ್ವರನಿಂದ ಆಚ್ಛಾದಿತವಾಗಿರುವುದು. ಈಶ್ವರನಿಂದ ಕೊಡಲ್ಪಟ್ಟ ಧನವನ್ನು ಮಾತ್ರ ಉಪಯೋಗಿಸು! ಪರರ ಧನಕ್ಕಾಗಿ ಆಸೆಪಡಬೇಡ!" ಎಂಬುದಾಗಿ ಉಪನಿಷತ್ತುಗಳು ಹೇಳಿವೆ.

ಈ ಜಗತ್ತಿನಲ್ಲಿ ಎಲ್ಲವೂ ಈಶ್ವರನಿಂದ ವ್ಯಾಪ್ತವಾಗಿದೆಯೆಂದು ತಿಳಿದುಕೊಂಡ ಮೇಲೆ, ನಾವು, ಈ ಸೀಮಿತವಾದ ವಿಶ್ವದಲ್ಲಿ ಅಸೀಮಿತದ ಕಲ್ಪನೆಯನ್ನು ಮತ್ತು ದಾನದಲ್ಲಿಯೇ ದಾನ ಮೀಯುವವನ ಕಲ್ಪನೆಯನ್ನೂ ಮಾಡಿಕೊಳ್ಳಬಲ್ಲೆವು. ಇದಿಷ್ಟನ್ನು ತಿಳಿದುಕೊಂಡ ಮೇಲೆ ವಸ್ತುಗಳ ನಿಜ ಸ್ವರೂಪವು, ಆ ಒಂದೇ ಒಂದಾದ ಸತ್ಯದ ಪ್ರಕಟಿತ ರೂಪದಲ್ಲಿ ಮತ್ತು ತಮ್ಮ ಸಂಗ್ರಹದ ವಸ್ತುಗಳ ಉಪಯೋಗವು ಅವುಗಳ ನಿಜ ಸ್ವರೂಪದ ಅಸೀಮದೊಡನೆ, ಸ್ಥಾಪಿತವಾದ ಸಂಬಂಧದ ಮೂಲಕ, ಇರುವುದೇ ಹೊರತು, ಸ್ವಯಂ ಅವುಗಳಲ್ಲೇ ಅಲ್ಲ; ಎಂಬ ಅನುಭವ ಉಂಟಾಗುವುದು. ವಸ್ತುಗಳ ಸಂಬಂಧವು ಎಷ್ಟರ ಮಟ್ಟಿಗೆ ಅಸೀಮದೊಡನೆ ಇರುವುದೋ, ಅಷ್ಟು ಅಂಶವನ್ನು ಮಾತ್ರ, ಅವುಗಳಿಂದ ನಾವು ಉಪಯೋಗ ಹೊಂದಬಲ್ಲೆವು.

ಇತರ ವಸ್ತುಗಳು ಲಭಿಸುವಂತೆ, ಬ್ರಹ್ಮನೂ, ಲಭಿಸುವನು; ಎಂದು ನಾವು ಹೇಳಲಾರೆವು. ಬ್ರಹ್ಮನನ್ನು ಈ ಸ್ಥಾನದಲ್ಲಿದ್ದುಕೊಂಡ, ದೊರಕಿಸಿಕೊಳ್ಳುವುದಕ್ಕಿಂತ, ಆ ಮತ್ತೊಂದು ಸ್ಥಾನದಿಂದ, ದೊರಕಿಸಿಕೊಳ್ಳಬಹುದು; ಎಂಬ ಭಾವನೆ ಕೂಡಾ ಅರ್ಥಹೀನವಾದುದಾಗಿದೆ. ಬ್ರಹ್ಮನು ಒಂದು ವಸ್ತುವಿನಲ್ಲಿ ಇದ್ದಾನೆ; ಮತ್ತೊಂದರಲ್ಲಿ ಇಲ್ಲ! ಎನ್ನುವುದೂ ಕೂಡಾ ಸರಿಯಲ್ಲ! ಹಗಲಿನ ಪ್ರಕಾಶವನ್ನು ನೋಡಲು, ನಾವು ಶೆಟ್ಟರ ಅಂಗಡಿಗೆ ಹೋಗಬೇಕಾಗಿಲ್ಲ! ಎಲ್ಲೆಂದರಲ್ಲಿ ಕಣ್ಣು ತೆರೆದರೆ, ಸಾಕು! ಆ ಪ್ರಕಾಶ ನಮ್ಮ ಕಣ್ಣ ಮುಂದೆ, ಕಾಣುವುದು. ಇದೇ ರೀತಿ ನಾವು ಬ್ರಹ್ಮನನ್ನು ಕಾಣಬೇಕಾದರೂ, ಸಹ, ನಮ್ಮ ಆತ್ಮದ ದ್ವಾರವನ್ನು ತೆರೆಯಬೇಕಾಗುತ್ತದೆ. ಮತ್ತು ಆತ್ಮಾರ್ಪಣವನ್ನು ಮಾಡಬೇಕಾಗುತ್ತದೆ.

"ಜೀವನದ ಬಂಧನಮಯವಾದ ಸಂಕಲೆಗಳಿಂದ ಬಿಡುಗಡೆ ಹೊಂದಿರಿ!" ಎಂಬ ಉಪದೇಶವನ್ನು ಬುದ್ಧನು ಈ ಕಾರಣದಿಂದಲೇ ಕೊಟ್ಟಿದ್ದನು. ಒಂದು ವೇಳೆ ಬಿಡುಗಡೆ ಹೊಂದಿಯೂ, ಬೇರೆ ಯಾವುದೂ, ಲಭ್ಯವಾಗಲಿಲ್ಲವೆಂದಾದರೆ, ಈ ಮುಕ್ತಿಗೆ ಏನೂ, ಅರ್ಥವೇ ಇರುತ್ತಿರಲಿಲ್ಲ. ಯಾವ ಮಾನುಷ್ಯನೇ ಆಗಲಿ, "ಎಲ್ಲವನ್ನೂ ಬಿಟ್ಟು "ಏನೂ ಇಲ್ಲ"ವನ್ನು ಹೊಂದಲು, ಎಂದಿಗೂ ಉತ್ಸಾಹಪಡಲಾರನು."

ಶ್ರೀ ಜವಾಹರಲಾಲ ನೆಹರು ಅಮೆರಿಕ ಸಂಚಾರ ಕಾಲದಲ್ಲಿ ನ್ಯೂಯೋರ್ಕಿನಲ್ಲಿ ಯುಕ್ತರಾಷ್ಟ್ರ ಸಂಘದ ಅಮೆರಿಕೆಯ ಪ್ರತಿನಿಧಿ ಶ್ರೀ ಎಡ್ಲಾಯ್ ಸ್ಟೀವನ್ಸನ್ ರೊಡನೆ ಮಾತಾಡುತ್ತಿರುವುದು.

ಉಪನಿಷತ್ತುಗಳು— "ತಾನು ಗುರಿಯಿಟ್ಟ ವಸ್ತುವಿನಲ್ಲಿ ಬಾಣವು ಹೋಗಿ ಚುಚ್ಚಿ ಹೇಗೆ ಅದರೊಳಗೆ ಪ್ರವೇಶಿಸುವುದೋ? ಅದೇ ರೀತಿಯಲ್ಲಿ ಬ್ರಹ್ಮನಲ್ಲಿ ಲೀನವಾಗಬೇಕು!" ಎಂದು ಹೇಳುತ್ತಿವೆ ಈ ಪರಿಯಿಂದ ಬ್ರಹ್ಮನಲ್ಲಿ ಲೀನವಾಗುವುದು, ಕೇವಲ ಮನಸ್ಸಿನ ಏಕಾಗ್ರತೆಯಿಂದಲೇ—ಸಾಧ್ಯವಲ್ಲ; ಈ ಉದ್ದೇಶವನ್ನು ಸಾಧಿಸಿ, ಸಫಲತೆಹೊಂದಲು, ಜೀವನದ ಸರ್ವಶಕ್ತಿಗಳನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾಗುವುದು. ನಮ್ಮ ಪ್ರತಿಯೊಂದು, ವಿಚಾರ, ಯಾ ಕಾರ್ಯಗಳಲ್ಲಿಯೂ, ಅಸೀಮದ ಈ ಧ್ಯೇಯವನ್ನು ಸದಾ ನಾವು ನಮ್ಮ ಮುಂದಿಟ್ಟುಕೊಳ್ಳಬೇಕು. ಈ ಸತ್ಯವು ನಮ್ಮ ನಿತ್ಯ ಜೀವನದಲ್ಲಿ - "ವ್ಯಾಪಕನಾದ ಆನಂದಮಯನಾದ-ಆ ಪರಮಾತ್ಮನ ಆನಂದವು ಆಕಾಶದಲ್ಲಿ ವ್ಯಾಪ್ತವಾಗಿ ಇಲ್ಲದಿರುತಿದ್ದರೆ, ಯಾರು ತಾನೆ ಜೀವಿಸಲು ಸಾಧ್ಯವಿರುತಿತ್ತು? ಎಂಬ ಈ ವಿಚಾರದಿಂದ ಸ್ಪಷ್ಟವಾಗುತ್ತಿರಬೇಕು. "ಕೋಹ್ಯೇವಾನ್ಯಾತ್! ಕಃ ಪ್ರಾಣ್ಯಾತ್, ಯದೇಶ ಆಕಾಶ ಆನಂದೋ ನಸ್ಯಾತ್" ನಮ್ಮ ಎಲ್ಲಾ ಕಾರ್ಯಗಳಲ್ಲಿಯೂ, ನಾವು ಈ ಅಸೀಮಶಕ್ತಿಯ ಪ್ರೇರಣೆಯನ್ನು ಅನುಭವ ಮಾಡಿಕೊಂಡೇ ಆನಂದಿತರಾಗಬೇಕು.

ಕೆಲವರು:—"ಬ್ರಹ್ಮನನ್ನು ಹೊಂದುವುದು, ನಮ್ಮ ಶಕ್ತಿಗೆ ಸಾಧ್ಯವಿಲ್ಲದ ಮಾತಾಗಿದೆ! ಆದುದರಿಂದ ಬ್ರಹ್ಮನು ಲಭಿಸುವುದು—ಲಭಿಸದಿರುವುದು, ನಮ್ಮ ಪಾಲಿಗೆ ಅವೆರಡೂ ಒಂದೇ ಆಗಿದೆ." ಎನ್ನುತ್ತಾರೆ. ಬ್ರಹ್ಮನನ್ನು ಪಡೆಯುವುದೆಂಬುದರ ಅರ್ಥವು ಬ್ರಹ್ಮನ ಮೇಲೆ ಅಧಿಕಾರವನ್ನು ಸ್ಥಾಪಿಸುವುದು, ಎಂದಾದರೆ, ಖಂಡಿತವಾಗಿಯೂ, ಬ್ರಹ್ಮನನ್ನು ಪಡೆಯುವುದು ಸಾಧ್ಯವಿಲ್ಲ. ಬ್ರಹ್ಮನನ್ನು ಪಡೆಯುವ ಆನಂದವು, ಆತನನ್ನು ಪಡೆಯುವಲ್ಲಿಯ ವರೆಗೆ ಮಾತ್ರವೇ ಇರುತ್ತದೆ; ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ನಾವು ಅನ್ನವನ್ನುಂಡು ಹಸಿವನ್ನು ನೀಗಿಸಿಕೊಳ್ಳುವ ತನಕ ಮಾತ್ರವೇ ನಮಗೆ ಅನ್ನವನ್ನು ದೊರಕಿಸಿಕೊಳ್ಳುವ ಆನಂದ, ಇರುವುದು. ಹೊಟ್ಟೆಯ ಹಸಿವು ಅಡಗುವ ವರೆಗೆ ಮಾತ್ರ ಅನ್ನವು ಆನಂದದಾಯಕವಾಗಿರುತ್ತದೆ. ಎಲ್ಲಾ ಬಗೆಯ ಭೌತಿಕ ಆನಂದದ ರೀತಿಯೂ, ಇದೇ ರೀತಿ ಕ್ಷಣಿಕವಾಗಿ. ಅದರ ಪರಿಸರ ಚಿಕ್ಕದಾಗಿಯೂ ಇರುವುದು.

—(ಸಶೇಷ)

ಉಳಿತಾಯದ ಬಲವೊಂದಿದ್ದರೆ....

ಜೀವನದ ಜಡತ್ವ-ಜಿಗುಪ್ಸೆಗಳು ತಂತಾನೆ ಮಾಯವಾಗುವುವು; ಬದಲು, ಶರೀರದಲ್ಲಿನ ಸುಪ್ತ ಕ್ರಿಯಾಶಕ್ತಿಗಳಿಗೆ ಚೈತನ್ಯ-ಪ್ರೇರಣೆಗಳು ಸಿಕ್ಕಿ, ಜೀವನವು ಸಂಜೀವನವಾಗಿ, ಸುಖದ ಸುಪ್ತಿಗೆಯಾಗಿ ಮೆಲ್ಲನೆ ಮಾರ್ಪಡುವುದು.

— ಉಳಿತಾಯಕ್ಕಾಗಿ —

ಇಂದೇ........ಈ ಕ್ಷಣವೇ........ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು. ಮಂಗಳೂರು

ಮಂಗಳೂರು ಸ್ಪೆಶ್ಯಲ್ ಅಸಿಸ್ಟಾಂಟ್ ಕಮಿಶನರ್‌ರ ಕೋರ್ಟಿನಲ್ಲಿ

O. P. No 619/61.

K. ಉಗ್ಗಪ್ಪ ಶೆಟ್ಟಿ (As Receiver) —ಅರ್ಜಿದಾರ.

ಮತ್ತು

ದೂಜಿ ಪೂಜಾರಿ — ಎದ್ರಿ.

ಇವರೊಳಗೆ

ದೂಜಿ ಪೂಜಾರಿ, ಚಂದು ಪೂಜಾರಿ ಬಳಿಯ, ಉಡುಪಿ ತಾಲ್ಲೂಕು ಉಳಿಯಾರಗೋಳಿ ಗ್ರಾಮದಲ್ಲಿರುವುದು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ —

ಅರ್ಜಿದಾರರು ನಿಮ್ಮ ಮೇಲೆ ಗೇಣಿ ಬಾಕಿ ಕೇಳಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾರೀಕು 10-1-62ಕ್ಕೆ ಇಟ್ಟಿರುವುದರಿಂದ ನೀವು ಆ ದಿನ್ನ ಸ್ವತಹಾ ವ ವಕೀಲ್ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಸದ್ರಿ ಸಂಬ್ರವನ್ನು ತೀರ್ಮಾನಿಸಲಾಗುವುದು.

(By order of the Court.)

Parody Vittal Shetty,
B. A. LL. B.
Advocate for Petitioner.

Udipi, Date 26—12—61.

ಸಾಹಿತ್ಯ ಸಮ್ಮೇಳನಾಧ್ಯಕ್ಷರ ಆಶಯ

ಸತ್ವಪೂರ್ಣ ಸಾಹಿತ್ಯ ಬೆಳೆಯಲಿ

ಪ್ರೊ|| ಕೆ. ಜಿ. ಕುಂದಣಗಾರ, ಎಂ. ಎ.

೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡ ಸಾರಸ್ವತ ಪ್ರಪಂಚದ ಪುಣ್ಯಕ್ಷೇತ್ರ ಕ್ರತುಪುರ (ಗದಗ)ದಲ್ಲಿ ನೆರವೇರುತ್ತಿರುವುದು ಅತ್ಯಂತ ಮಂಗಲಕರವಿದೆ. ಭಾರತದ ಗಣ್ಯ ಭಾಷೆ ಕನ್ನಡಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ; ಉಜ್ವಲ ಸಾಹಿತ್ಯ ಪರಂಪರೆಯಿದೆ; ಉನ್ನತವಾದ ಸಂಸ್ಕೃತಿಯಿದೆ, ಕನ್ನಡ ನಾಡು ನುಡಿಗಳ ಅಸ್ತಿತ್ವವನ್ನು ಎತ್ತಿಹೇಳುವ ಉಲ್ಲೇಖಗಳು ಕ್ರಿ. ಪೂ. ಮೂರನೆಯ ಶತಮಾನದಿಂದ ಗೋಚರವಾಗುತ್ತವೆ. ಮೌರ್ಯ ಚಕ್ರವರ್ತಿ ಅಶೋಕ, ಶಾತವಾಹನರ ಆಳಿಕೆಯಲ್ಲಿ ಕನ್ನಡ ನಾಡು ಸುವ್ಯವಸ್ಥಿತವಾಗಿತ್ತೆಂದು ತಿಳಿಯುತ್ತದೆ. ಕವಿರಾಜ ಮಾರ್ಗದಿಂದ ನಾಗಾರ್ಜುನನೆಂಬ ಕವಿಯಿದ್ದನೆಂದು ತಿಳಿಯುವುದರಿಂದ ಬೌದ್ಧರೂ ಕನ್ನಡ ಸಾಹಿತ್ಯ ರಚನೆಯ ಕಾರ್ಯಕ್ಕೆ ಕೈಹಾಕಿರಬಹುದೇ ಎಂದು ಊಹಿಸಲು ಅವಕಾಶವಿದೆ.

ಕದಂಬರಿಂದ ತೊಡಗಿ ಮೈಸೂರು ರಾಜಮನೆತನಗಳು ಆಳಿದ ರಾಜ್ಯಗಳು ಕರ್ನಾಟಕದ ಇತಿಹಾಸದಲ್ಲಿ ದೇದೀಪ್ಯಮಾನವಾಗಿ ಬೆಳಗುತ್ತಿವೆ. ಚಾಲುಕ್ಯರು, ರಾಷ್ಟ್ರಕೂಟರು, ಹಾಗೂ ವಿಜಯನಗರ ದೊರೆಗಳು ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟರು. ಸಾಹಿತ್ಯದ ಪ್ರಾಚೀನತೆಯ ದೃಷ್ಟಿಯಿಂದ ಕನ್ನಡವು ಭಾರತದಲ್ಲಿ ಮೂರನೆಯದಾಗಿದೆ. ಈ ಸಾಹಿತ್ಯ ಕ್ರಿ. ಶ. ಐದನೆಯ ಶತಮಾನದಿಂದ ಅವ್ಯಾಹತವಾಗಿ ಹರಿದುಬಂದಿದೆ.

ಕನ್ನಡದಲ್ಲಿ ಬೌದ್ಧ ಸಾಹಿತ್ಯದ ವಿಷಯು ಕೇವಲ ಊಹನೆ ಮಾತ್ರ. ಜೈನಧರ್ಮ ಹೊರಗಣಿಂದ ಬಂದರೂ ಇಲ್ಲಿಯ ಮನೆಮಾತನ್ನು ಮತ ಪ್ರಚಾರಕ್ಕೆ ತೊಡಗಿಸಿ ಭಾಷೆಗೆ ಗ್ರಂಥಸ್ವರೂಪವನ್ನು ಕೊಟ್ಟಿತು; ಕನ್ನಡ ಸಾಹಿತ್ಯದ ಉಗಮಕ್ಕೂ ವಿಕಾಸಕ್ಕೂ ಕಾರಣವಾಯಿತು. ಜೈನಕವಿಗಳು ಶರೀರ, ಮನಸ್ಸು, ಬುದ್ಧಿಗಳಿಗೆ ಪೋಷಕವಾಗುವ ಸಾಹಿತ್ಯ ನಿರ್ಮಿಸಿದರು. ಶರೀರ ಶಾಸ್ತ್ರವನ್ನು ವಿವರಿಸುವ ಲೋಕೋಪಕಾರ, ಹಯಶಾಸ್ತ್ರ, ಗಜಶಾಸ್ತ್ರ, ಗೋಶಾಸ್ತ್ರ ಮೊದಲಾದ ಗ್ರಂಥಗಳನ್ನು ಜೈನರು ಕಾಲ ಕಾಲಕ್ಕೆ ಕನ್ನಡದಲ್ಲಿ ಬರೆಯುತ್ತ ಬಂದಿರುವರು. ಪಂಪ, ರನ್ನ, ಜನ್ನ, ನಾಗಚಂದ್ರ, ರತ್ನಾಕರ ವರ್ಣಿಗಳಂಥ ಉದ್ದಾಮ ಕವಿಗಳು ಅಖಂಡ ಕನ್ನಡ ಸಾಹಿತ್ಯಕ್ಕೆ ಮುಕುಟಮಣಿಯಾಗಿದ್ದಾರೆ.

ವೀರಶೈವ ಧರ್ಮ ಕನ್ನಡನಾಡಿನಲ್ಲಿಯೇ ಹುಟ್ಟಿ ಕನ್ನಡಿಗರ ಜೀವನೋದ್ಧಾರಕ್ಕೆ ಪಣತೊಟ್ಟು ನಿಂತ ಧರ್ಮ. ಗಾತ್ರದಲ್ಲಿಯೂ ಸತ್ವದಲ್ಲಿಯೂ ಕನ್ನಡ ಸಾಹಿತ್ಯ ಹಿರಿದಾಗುವಂತೆ ಮಾಡಿದ ಶ್ರೇಯಸ್ಸು ವೀರಶೈವ ಶರಣರಿಗೂ ಕವಿಗಳಿಗೂ ಸಲ್ಲುತ್ತದೆ. ಬಸವಣ್ಣ, ಪ್ರಭುದೇವ, ಮಹಾದೇವಿಯಕ್ಕ ಮೊದಲಾದ ಶಿವಶರಣರ ಹೆಸರು ಚಿರಸ್ಥಾಯಿಯಾಗಿವೆ. ವಿಶ್ವಸಾಹಿತ್ಯದಲ್ಲಿಯೇ ವಿಶಿಷ್ಟ ಸ್ಥಾನ ಪಡೆಯಲರ್ಹವಾದ ವಚನ ಸಾಹಿತ್ಯ ಉದಯವಾದುದು ಶಿವಶರಣರ ಹಸ್ತದಲ್ಲಿ. ಜೀವನವನ್ನು ಅರಿದು ನೋಡಿ, ಒರೆದು ನೋಡಿ ಇವರು ಅದರ ಹೊಸ ಮೌಲ್ಯವನ್ನು ಕಂಡರು. ನೂತನ ಸಮಾಜವನ್ನು ನಿರ್ಮಿಸಿದರು. ಜಾತಿಮತ ಕುಲಗೋತ್ರಗಳ ಸೂತ್ರವನ್ನು ಕಡಿದರು. ಸಮತೆ, ಸತ್ಯ, ದಯೆ ಇಂತಹ ತತ್ವಗಳನ್ನು ಆಧಾರವಾಗಿಟ್ಟುಕೊಂಡ ಈ ಶರಣ ಸಾಹಿತ್ಯ ವಿಶ್ವಮಾನ್ಯವಾಗಿದೆ. ಹರಿಹರ, ರಾಘವಾಂಕ, ಚಾಮರಸ, ನಿಜಗುಣ ಶಿವಯೋಗಿ ಮೊದಲಾದವರು ರಗಳೆ, ಷಟ್ಪದಿ, ತ್ರಿಪದಿಗಳಲ್ಲಿ ಕಾವ್ಯಗಳನ್ನು ಬರೆದರು. ಇದರಿಂದ, ಕನ್ನಡ, ಸಾಹಿತ್ಯ ದೇವಿ ಬೀದಿ ಮರಿವ ಬೀರರ ಹೃದಯ ವರೆಗೂ ಬರುವಂತಾಯಿತು. ಷಡಕ್ಷರ ದೇವನ ಕಾವ್ಯದ ಔನ್ನತ್ಯ, ಆಳ ಕನ್ನಡ ಸಾಹಿತ್ಯದ ನಿಜವಾದ ಅಗ್ಗಳಿಕೆಗಳು.

ವೈದಿಕ ಧರ್ಮವು ಭಾರತದ ಪ್ರಾಚೀನ ಧರ್ಮವಾಗಿದ್ದು ಕರ್ನಾಟಕವು ಇದರ ಶ್ರೇಯಸ್ಸಿಗೆ ಕಾರಣವಾಗಿದೆ. ಶಂಕರ, ರಾಮಾನುಜ, ಮಧ್ವ ಆಚಾರ್ಯತ್ರಯರು ಇಲ್ಲಿಯೇ ಬೆಳೆದು ಬಾಳಿದರು. ಇವರ ತತ್ವಗಳಿಗೆ ಇದೇ ಆದಿಪೀಠ. ನಮ್ಮ ನಾಡಿನ ಮೇಲೆ ಬಂದ ನಾಸ್ತಿಕ ಮತಗಳೊಡನೆ ಹೋರಾಡಿ, ಜನತೆಯಲ್ಲಿ ಆಸ್ತಿಕ ಭಾವವನ್ನೂ ಭಕ್ತಿಯನ್ನೂ ಚಿಮ್ಮಿಸಿದ ಶ್ರೇಯಸ್ಸು ವೈದಿಕ ಧರ್ಮಕ್ಕಿದೆ. ಪುರಂದರದಾಸ, ಕನಕದಾಸ, 'ಜಗನ್ನಾಥದಾಸ ಮೊದಲಾದವರ ಕೀರ್ತನೆಗಳಲ್ಲಿ ಸಮಾಜವನ್ನು ಮೇಲೆತ್ತಬೇಕೆಂಬ ಪವಿತ್ರ ಭಾವನೆ ತುಂಬಿ ತುಳುಕಾಡುತ್ತದೆ. ಸಂಸಾರ ತ್ಯಜಿಸಿ ತಂಬೂರಿ ಹಿಡಿದು, ಬೀದಿ ಬೀದಿ ಸಂಚರಿಸಿ ಮನೆ ಮನೆಗೆ ವಿಷ್ಣುನಾಮದ ಪವಿತ್ರ ಸಂದೇಶವನ್ನು ಮುಟ್ಟಿಸಿದ ಶ್ರೇಯಸ್ಸು ಹರಿದಾಸರಿಗೆ ಸಲ್ಲುತ್ತದೆ. ದುರ್ಗಸಿಂಹ, ರುದ್ರ ಭಟ್ಟ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ ಮೊದಲಾದವರು ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಮೆರಗು ತಂದಿದ್ದಾರೆ.

೧೯-೨೦ನೆಯ ಶತಮಾನಗಳಲ್ಲಿ ಕನ್ನಡ ಸಾಹಿತ್ಯಕ್ಕೆ— ಒಂದು ದೃಷ್ಟಿಯಿಂದ ಸಮಸ್ತ ಭಾರತೀಯ ಸಾಹಿತ್ಯಕ್ಕೆ – ಕಗ್ಗತ್ತಲೆಯ ಕಾಲ ಬಂದಿತು. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಅದು ಮತ್ತೆ ಚೇತರಿಸಿತು. ಶಾಕುಂತಲ, ಚಂಡಕೌಶಿಕ ಮೊದಲಾದ ನಾಟಕಗಳನ್ನು ಕನ್ನಡಕ್ಕೆ ಪರಿವರ್ತಿಸಿದ ಬಸವಪ್ಪ ಶಾಸ್ತ್ರಿ, ರಾಮಾಶ್ವಮೇಧ—ಅದ್ಭುತ ರಾಮಾಯಣಗಳ ನಂದಳಿಕೆ ಲಕ್ಷ್ಮೀನಾರಾಯಣಪ್ಪ, ಮುದ್ರಾ ಮಂಜೂಷದ ಕೆಂಪುನಾರಾಯಣ ಈ ಕವಿಗಳ ಕಾಲದಲ್ಲಿ ಸಂಸ್ಕೃತ ಸಾಹಿತ್ಯದ ಪ್ರಭಾವದಿಂದ ಮತ್ತೆ ಕನ್ನಡ ಜಾಗೃತವಾಯಿತು.

ಭಾವಗೀತೆ ಕನ್ನಡಕ್ಕೆ ಹೊಸತಲ್ಲವಾದರೂ ಅದರ ವಸ್ತು, ವ್ಯಾಪ್ತಿ, ನಿರೂಪಣಾ ರೀತಿ ನಮಗೆ ಹೊಸದೆನಿಸಿವೆ. ಭಕ್ತಿ, ತತ್ವಜ್ಞಾನಗಳಿಗೆ ಮಾತ್ರ ಅನ್ವಯಿಸಿದ್ದ ಭಾವಗೀತೆ ಇಂದು ಜೀವನದ ಎಲ್ಲ ಕ್ಷೇತ್ರಗಳನ್ನು ವ್ಯಾಪಿಸಬಹುದಾಗಿದೆ; ವ್ಯಾಪಿಸಿಕೊಂಡಿದೆ. ಪಂಜೆ ಮಂಗೇಶರಾಯರು, ಬಿ. ಎಂ. ಶ್ರೀಯವರಿಂದ ಆಧುನಿಕ ಕನ್ನಡ ಸಾಹಿತ್ಯದ ಹೊಸ ಯುಗ ಆರಂಭವಾಯಿತೆನ್ನಬಹುದು. ಕಳೆದ ಕಾಲು ಶತಮಾನದಲ್ಲಿ ಕನ್ನಡದ ಭಾವಗೀತೆ ವಸ್ತು, ವಿನ್ಯಾಸ, ಜೀವನದೃಷ್ಟಿ, ಭಾವಪರಿಪಾಕ— ಈ ದೃಷ್ಟಿಯಿಂದ ಒಂದು ಸಿದ್ಧಿಯನ್ನೇ ಪಡೆದಿದೆಯೆನ್ನಬಹುದು. ಕನ್ನಡ ಭಾವಗೀತೆ ಜನಸಾಮಾನ್ಯರ ಎದೆ ತಟ್ಟಿತು; ಮನ ಮುಟ್ಟಿತು. ಬೇಂದ್ರೆ, ಕು.ವೆಂ.ಪು. ವಿ.ಸೀ., ಡಿ.ವಿ.ಜಿ. ಮೊದಲಾದವರು ಕನ್ನಡಿಗರ ಮನ ಮಾತಾದರು.

ಭಾವಗೀತೆಯಲ್ಲಿ ಅರ್ಥದ ಔಚಿತ್ಯಕ್ಕಿಂತಲೂ ರಾಗದ ವೈಖರಿಯೇ ಹೆಚ್ಚಾಗಿ ಕಾವ್ಯದೃಷ್ಟಿ–ಸೃಷ್ಟಿ ಕಡಿಮೆಯಾದಂತೆ ಕಂಡುಬರುತ್ತದೆ ಪಾಶ್ಚಾತ್ಯರು ಸಂಕೀರ್ಣ ಸ್ಥಿತಿಯಲ್ಲಿದ್ದಾರೆ. ಅಲ್ಲಿ ಹುಟ್ಟಿಬರುವ ಕೃತಿಗಳೂ ಸಂಕೀರ್ಣವಿರುವುದು ಸ್ವಾಭಾವಿಕ. ಶಾಶ್ವತವಾದ ಮೌಲ್ಯಗಳ ಕಡೆಗೆ ವಿಶೇಷವಾದ ಗಮನವಿತ್ತ ಭಾರತೀಯರ ಜೀವನದಲ್ಲಿ ಶಾಂತಿ ಮನೆಮಾಡಿಕೊಂಡಿದೆ. ಅಲ್ಲಿನ ಸಂಕೀರ್ಣತೆ ಇಲ್ಲಿಗೆ ಹೊಂದಿಕೊಳ್ಳದು ನವ್ಯ ಕಾವ್ಯದ ಪುರಸ್ಕರ್ತರು 'ಇಂದಿನ ಪರಿಸ್ಥಿತಿಯಲ್ಲಿ ಸರಿಯಾಗಿ ಹೊಂದಿಕೊಳ್ಳುವ ಕಾವ್ಯಮಾರ್ಗವನ್ನು ಕಂಡುಹಿಡಿಯುವುದು ಅವಶ್ಯವಾಗಿದೆ. ಸಮಗ್ರತೆ ಬರಬೇಕಾದರೆ ನಮ್ಮ ಕವಿಗಳ ದೃಷ್ಟಿ ಸಮಗ್ರವಾಗಬೇಕು; ಸಹೃದಯರಿಗೆ ಮನಮುಟ್ಟುವಂತಾಗಬೇಕು. ಬೌದ್ಧಿಕ ಅಂಶ ಕಡಿಮೆಯಾಗಿ ಭಾವನೆ, ಚಿಂತನೆ, ಆಲೋಚನೆ—ಇವುಗಳ ಮುಪ್ಪುರಿಯಾಗಬೇಕು, ನವ್ಯಕಾವ್ಯ.

ವಡ್ಡಾರಾಧನೆ, ಧರ್ಮಾಮೃತ, ಪಂಚತಂತ್ರಗಳ ಕಥೆಗಳು, ರಾಮಾಯಣಾದಿಗಳ ಉಪಕಥೆಗಳು, ವೀರಶೈವ ಪುರಾಣಗಳ ಶರಣರ ಕಥೆಗಳು—ಒಂದು ದೃಷ್ಟಿಯಿಂದ ಕಥನ ಸಾಹಿತ್ಯ. ಆಧುನಿಕ ಸಣ್ಣ ಕಥೆ ತಂತ್ರ ದೃಷ್ಟಿಯಿಂದ, ಜೀವನ ವ್ಯಾಪ್ತಿಯ ದೃಷ್ಟಿಯಿಂದ ಹೊಸತಾಗಿದೆ. ಮಾಸ್ತಿಯವರು ಈ ಸಾಹಿತ್ಯಕ್ಕೆ ಪಿತಾಮಹರೆನಿಸಿಕೊಂಡರು. ಜೀವನದ ನಿಜವಾದ ಅನುಭೂತಿ, ಸಮಾಜದ ಬಗೆಗೆ ಅನುಕಂಪ ನಮ್ಮ ಕಥೆಗಳಲ್ಲಿ ಕಂಡು ಬರುತ್ತವೆ. ಇತ್ತೀಚೆಗೆ ಜನರಂಜನೆಯ, ಮನರಂಜನೆಯ ಕೆಲವು ಕಾದಂಬರಿಗಳು ಲೇಖಕರಿಗೆ ಹಣ ಒದಗಿಸಿಕೊಟ್ಟರೂ ಅಂಥ ಕೃತಿಗಳಿಂದ ನಿಜವಾಗಿಯೂ ಲೋಕ ಕಲ್ಯಾಣವಾಗಲಾರದು. ನಮ್ಮ ಕತೆಗಾರರು ಸಣ್ಣ ಕಥೆಗಳನ್ನೇ ಬರೆದರೂ ಚಿಂತೆಯಿಲ್ಲ, ಮೂರನೆಯ ತರಗತಿಯ ಕಾದಂಬರಿ ಬರೆಯುವುದು ಲೇಸಲ್ಲ.

ಕನ್ನಡಕ್ಕೆ ಪ್ರಾಚೀನ ಸಾಹಿತ್ಯ ಬೇಕಾದಷ್ಟಿದ್ದರೂ ನಮ್ಮಲ್ಲಿ ನಾಟಕ ಸಾಹಿತ್ಯದ ಅಭಾವವಿತ್ತೆಂಬುದನ್ನು ಒಪ್ಪಿಕೊಳ್ಳಬೇಕು. ರನ್ನ, ರಾಘವಾಂಕರಲ್ಲಿ ನಾಟ್ಯ ಪ್ರತಿಭೆಯಿತ್ತು. ನಮ್ಮ ಜನರು ಯಕ್ಷಗಾನ ಬಯಲಾಟಗಳನ್ನು ಕಂಡು ಆನಂದಿಸುತ್ತಿದ್ದರು. ವಿಜಯನಗರದ ಅರಸರ ಕಾಲದಲ್ಲಿ ಈ ಯಕ್ಷಗಾನಗಳು ದೊರೆಯ ಮೆಚ್ಚುಗೆಯನ್ನೂ ಗಳಿಸಿದ್ದುವು. ಕೃಷ್ಣದೇವರಾಯನು ಅರಮನೆಗೆ ಹೊಂದಿ ಒಂದು ನಾಟ್ಯಗೃಹವನ್ನು ಯಕ್ಷಗಾನ ಆಡಲು ನಿರ್ಮಿಸಿದ್ದನಂತೆ. ಉತ್ತರ ದಕ್ಷಿಣಕನ್ನಡದ ಸಜೀವ ಕಲೆಯಾಗಿ ಉಳಿದು ಬಂದಿರುವ ಯಕ್ಷಗಾನ ಭಾರತೀಯ ಕಲಾವಿದರ ದೃಷ್ಟಿಯನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ.

ಟಿ. ಪಿ. ಕೈಲಾಸಂರವರು ನಮ್ಮ ಸಾಮಾಜಿಕ ಸಮಸ್ಯೆಗಳತ್ತ ದೃಷ್ಟಿಹಾಯಿಸಿ ನಾಟಕ ರಚಿಸಿದರು. ಶ್ರೀ ರಂಗರೂ ಇದಕ್ಕೆ ಕೈ ಹಾಕಿದರು—ನಮ್ಮ ಆಧುನಿಕ ನಾಟಕ ಸಾಹಿತ್ಯ ನಿರ್ಮಾಣವಾಯಿತು. ಕಾರಂತ, ಅಶ್ವತ್ಥ ಮೊದಲಾದವರಿದನ್ನು ಬೆಳೆಸಿದರು. ಆದರೆ ಬೆಳೆದು ಬಂದ ನಮ್ಮ ಈ ನಾಟಕ ಸಾಹಿತ್ಯವನ್ನು ಪರಿಶೀಲಿಸಿದಲ್ಲಿ, ನಾಟಕ ಮತ್ತು ರಂಗಭೂಮಿಗಳ ನಡುವೆ ಸಂಬಂಧ ಕಂಡುಬರುವುದಿಲ್ಲ. ನಮ್ಮ ರಂಗಭೂಮಿಯೇ ಇಂದು ನಿರ್ಜೀವವಾಗಿದೆ. ಈಗ ಜೀವನ ವಿಶಾಲವಾಗಿದೆ; ಸಾಹಿತ್ಯ ತತ್ವಗಳು ಬೇರೆಯಾಗಿವೆ. ವಿನೋದ ಮಾತ್ರ

(೯ನೇ ಪುಟ ನೋಡಿರಿ)

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಜಿಸ್ಟರ್ಡ ಚಿತ್ರಕೋಟ ಅಸ್ತಮಾ ನಿವಾರಕಚೂರ್ಣವನ್ನು ತಾ. 20-1-62ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೆಗಡಿ, ಕೆಮ್ಮು, ಸೈಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Managei, Shri Mahatma Naga
Ba..a Ayurvedashiam,
P. O. Chitrakot U. P.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

ಶಿಕ್ಷಣದ ಪುನರ್ಘಟನೆ

ಶಿಕ್ಷಣದ ಕ್ಷೇತ್ರವು ವಿಶಾಲವಾಗುತ್ತ ಬಂದಂತೆ, ಅದರ ಉದ್ದೇಶವೂ ಹಿಂದಿನ ಕಾಲಕ್ಕಿಂತ ಪ್ರತ್ಯೇಕವಾಗಿದೆ. ದೇಶದಾದ್ಯಂತ ಕಡ್ಡಾಯ ಶಿಕ್ಷಣವು ವ್ಯವಸ್ಥಿತವಾಗುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರವು ಬಹಳಷ್ಟು ಕಲುಷಿತಗೊಂಡಿರುವುದು ಕಂಡು ಬರುತ್ತದೆ. ಪ್ರಾಥಮಿಕ ಶಿಕ್ಷಣದ ಅವಧಿಯಲ್ಲಿ ಕಲಿಸಬೇಕಾದ ವಿಷಯಗಳು, ಇಂಗ್ಲಿಷ್ ಭಾಷೆಯ ಅಧ್ಯಯನ, ತ್ರಿಭಾಷಾಸೂತ್ರ, ವಿಶ್ವವಿದ್ಯಾಲಯಗಳ ಮಟ್ಟವು ಇಳಿಮುಖವಾಗುತ್ತಿರುವುದು, ವಿದ್ಯಾರ್ಥಿಗಳಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅಶಿಸ್ತು, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮಾಧ್ಯಮ—ಇವು ಶಿಕ್ಷಣ ತಜ್ಞರ ತಲೆತಿನ್ನುವ ವಿಷಯಗಳಾಗಿ ಪರಿಣಮಿಸಿವೆ.

ತಿರುವನಂತಪುರದಲ್ಲಿ ಅಖಿಲ ಭಾರತೀಯ ಶೈಕ್ಷಣಿಕ ಅಧಿವೇಶನದ ಪ್ರಾಥಮಿಕ ಶಿಕ್ಷಣದ ಸಮ್ಮೇಳನವು ನಡೆದಾಗ, ಪ್ರಾಜ್ಞರಾದವರು ಈ ಸಂಬಂಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾದ ಮಾತುಗಳಲ್ಲಿ ವ್ಯಕ್ತಪಡಿಸಿದರು:

“ಮಾತೃಭಾಷೆ, ಗಣಿತ, ಸಾಮಾಜಿಕ ಅಧ್ಯಯನ, ಸಾಮಾನ್ಯ ವಿಜ್ಞಾನ ಮತ್ತು ಚಿತ್ರಕಲೆಗಳು ಪ್ರಾಥಮಿಕ ಶಿಕ್ಷಣಾವಧಿಯಲ್ಲಿ ಅಧ್ಯಯನ ಮಾಡಬೇಕಾದ ವಿಷಯಗಳಾಗಬೇಕು. ಶಾರೀರಿಕ ಶಿಕ್ಷಣಕ್ಕೂ ಅವಕಾಶವನ್ನು ಕಲ್ಪಿಸಿಕೊಡಬೇಕು. ಭಾರತದಲ್ಲಿ ಇಂದಿಗೂ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯ ಮೂಲಕ ನೀಡುವ ಬದಲು ವಿದೇಶೀ ಭಾಷೆಗಳ ಮೂಲಕ ಕೊಡುವ ಹಲವು ಶಾಲೆಗಳಿವೆಯೆಂಬುದು ದಯನೀಯವಿದೆ. ಇಂತಹ ಶಾಲೆಗಳ ಬಗ್ಗೆ ಕೆಲವೊಂದು ರಾಜ್ಯ ಸರಕಾರಗಳು ಅತಿ ಉದಾರ ನೀತಿಯನ್ನು ತಾಳಿ, ಪ್ರೋತ್ಸಾಹಿಸುತ್ತಿರುವುದು ಅಭಾಸವೆನಿಸುವುದಿಲ್ಲವೆ? ರಾಷ್ಟ್ರೀಯ ಐಕ್ಯಸಾಧನೆಯಲ್ಲಿ ಇಂತಹ ನೀತಿಯು ಭಂಗ ತರಲಾರದೆ? ಪ್ರಾಥಮಿಕ ೧ರಿಂದ ೪ನೆಯ ತರಗತಿಯ ವರೆಗೆ ಇಂಗ್ಲಿಷನ್ನು ಕಲಿಸುವುದು ಕೆಟ್ಟದಲ್ಲವಾದರೂ ಅನುಚಿತ. ಇದರ ಬದಲು ತರಗತಿ ೫ರಿಂದ ೭ರ ವರೆಗೆ ಐಚ್ಛಿಕವಾಗಿ ಇದನ್ನು ಕಲಿಸಬಹುದು.

“ಪ್ರಾಥಮಿಕ ತರಗತಿಯ ೫ರಿಂದ ೭ನೆ ದರ್ಜೆಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ದ್ವಿತೀಯ ಭಾಷೆಯೆಂದು ಕಲಿಸಬೇಕಾಗಿದೆ. ಆದರೆ, ಈ ಅವಧಿಯಲ್ಲಿ ಇಂಗ್ಲಿಷನ್ನೂ ಕಲಿಸುವುದು ಅನಿವಾರ್ಯವೆಂದಾದರೆ, ಇದರಿಂದ ವಿದ್ಯಾರ್ಥಿಗಳ ತಲೆಯ ಮೇಲೆ ಹೊರಲಾರದ ಚಕ್ಕಡಿಯನ್ನು ಹೇರಿದಂತಾಗುತ್ತದೆ. ಕೇಂದ್ರ ಸರಕಾರವು ಮಾಧ್ಯಮಿಕ ಶಾಲೆಗಳಿಗಾಗಿ ರೂಪಿಸಿದ ಮತ್ತು ರಾಜ್ಯಗಳ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಸ್ವೀಕರಿಸಲಾದ ತ್ರಿಭಾಷಾ ಸೂತ್ರವನ್ನು ಈ ತರಗತಿಗಳಲ್ಲಿ ಪ್ರಯೋಗಕ್ಕೆ ತರಲು ಪ್ರಯತ್ನಿಸಬಹುದಾದರೂ ಈ ಎರಡೂ ಭಾಷೆಗಳಲ್ಲಿ ಗಳಿಸಬಹುದಾದ ಮಟ್ಟವು ಏಕಸಮವಾಗಿರುವುದು ಸಾಧ್ಯವಿಲ್ಲ.” ಎಂದು ಶ್ರೀ ಎಸ್. ಎಸ್. ಐಯರರು ಹೇಳಿದರು.

“ಶಿಕ್ಷಣವು ಭೇದಭಾವಗಳನ್ನು ಹೊಡೆದೋಡಿಸುವ ಮಾಧ್ಯಮ. ಪರಿಶಿಷ್ಟ ವರ್ಗಗಳ ಮಕ್ಕಳಿಗೆ ೧ರಿಂದ ೩ನೆಯ ವರ್ಗಗಳ ವರೆಗೆ ಅವರ ಭಾಷೆಯಲ್ಲಿಯೇ ಶಿಕ್ಷಣ ದೊರೆಯಬೇಕು; ಮುಂದೆ ಈ ಮಾಧ್ಯಮವನ್ನು ರಾಜ್ಯ ಭಾಷೆಗೆ ಸ್ಥಾನಾಂತರಿಸಬಹುದು. ಪರಿಶಿಷ್ಟ ವರ್ಗಗಳ ಮತ್ತು ರಾಜ್ಯ ಭಾಷೆಯನ್ನು ಬಲ್ಲ ಮಹಿಳಾ ಅಧ್ಯಾಪಿಕೆಯರನ್ನೇ ಸಾಧ್ಯವಾದಷ್ಟು ಮಟ್ಟಿಗೆ ನೇಮಿಸಿಕೊಳ್ಳುವುದು ಸೂಕ್ತ. ಅಧ್ಯಾಪಕರಾಗಿ ದಂಪತಿಗಳಿರುವುದಾದರೆ, ಅಂತಹರಿಗೆ ಸರಕಾರವು ಪ್ರೋತ್ಸಾಹ ಅವಶ್ಯ ನೀಡಬೇಕು. ಪರ್ಯಾಪ್ತ ಶಿಕ್ಷಣ ಗಳಿಸಿದ ನಿಷ್ಠಾವಂತ ಶಿಕ್ಷಕರು ದೊರೆತರೆಂದರೆ, ಅವರಿಗೆ ಸೂಕ್ತ ವೇತನವನ್ನು ನೀಡಬೇಕು; ಶಿಕ್ಷಣದ ಗಂಧ ಗಾಳಿಯೂ ಸೋಕದ ಗುಡ್ಡಕಾಡುಗಳ ಪ್ರದೇಶದಲ್ಲಿ ‘ಆಶ್ರಮ ಶಾಲೆ’ಗಳನ್ನು ತೆರೆಯಲು ಸೇವಾ ಸಂಸ್ಥೆಗಳಲ್ಲಿ ಉತ್ಸಾಹ ಹುಟ್ಟಿಸಬೇಕು. ಜಿಲ್ಲೆಯ ಕೇಂದ್ರಗಳಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕೂತುಕೊಳ್ಳಲು ಅನುಕೂಲವಾಗುವ ಸಂಕ್ಷಿಪ್ತ ಶಿಕ್ಷಣದ ಕೇಂದ್ರಗಳನ್ನು ತೆರೆಯಬೇಕು. ಇದರಿಂದ ಉದ್ಯೋಗ ಗಳಿಸುವ ಸದವಕಾಶ ಅವರಿಗೆ ಲಭಿಸುವುದು” ಎಂದು ಶ್ರೀ ಎಸ್. ಆರ್. ವೆಂಕಟರಮಣ್ಣರು ಹೇಳಿದರು.

“ವಿದ್ಯಾರ್ಥಿಗಳ ಮನಸ್ಸಿನಲ್ಲಿ ಭವಿಷ್ಯದ ಅಭದ್ರತೆಯ ಭಾವನೆಯು ಹುಟ್ಟಿದುದರಿಂದಲೇ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಅಶಿಸ್ತು ಹೆಚ್ಚಿದೆ. ದೇಶಕ್ಕೆ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ ಗಳಿಸಿದವರು ಹೆಚ್ಚು ಹೆಚ್ಚಾಗಿ ಬೇಕಾಗುತ್ತಿರುವಂತೆಯೇ ಕಲಾಪದವೀಧರರು ಇಲ್ಲವೇ ಸ್ನಾತಕೋತ್ತರರು ಪದವಿ ಪಡೆದು ಉದ್ಯೋಗ ಅರಸುವವರು ಹೆಚ್ಚುತ್ತಿರುತ್ತಿದ್ದಾರೆ. ವಿಜ್ಞಾನ ಮತ್ತು ಕಲಾ ಶಿಕ್ಷಣದಲ್ಲಿರುವ ಸಮತೋಲವನ್ನು ನೀಗಿಸಿಕೊಳ್ಳಬೇಕು. ವಿಶ್ವವಿದ್ಯಾಲಯಗಳಲ್ಲಿ ಅಶಿಸ್ತನ್ನು ಹೋಗಲಾಡಿಸಲು ವರ್ಷಕ್ಕೆ ಎರಡು ಪರೀಕ್ಷೆಗಳನ್ನಿಡಬೇಕು. ಇದರಿಂದ ವಿದ್ಯಾರ್ಥಿಗಳು ಅಧ್ಯಯನದ ಕಡೆಗೇನೇ ಹೆಚ್ಚಿನ ಆಸಕ್ತಿ ತಳೆಯುವುದು ಸಾಧ್ಯವಿದೆ.

“ವಿಶ್ವವಿದ್ಯಾಲಯಗಳಲ್ಲಿ ಮಟ್ಟವು ಕುಸಿಯುತ್ತಿದೆ ಮತ್ತು ಅಶಿಸ್ತು ಹೆಚ್ಚುತ್ತಿವೆಯೆಂಬ ವೇಗ ಸಾಮಾನ್ಯ ದೂರುಗಳು. ಉತ್ತಮವಾದ ವೇತನ ದೊರೆಯದ ಕಾರಣದಿಂದ ಸಮರ್ಥರನ್ನು ಅಧ್ಯಾಪನ ವೃತ್ತಿಗೆ ಸೇರಿಸಿಕೊಳ್ಳುವುದು ಕಷ್ಟವಾಗಿದೆ. ಮಿತಿಮೀರಿದ ದಟ್ಟಣೆಯಿಂದಾಗಿ ವಿದ್ಯಾರ್ಥಿ—ಅಧ್ಯಾಪಕ ದಾಮಾಶಯವು ತೋಲ ತಪ್ಪಿದೆ; ಪರ್ಯಾಪ್ತ ಪ್ರಮಾಣದ ಬೋಧನೋಪಕರಣಗಳು, ಹೊರಗಣಿಂದ ಬರುವವರಿಗೆ ವಿದ್ಯಾರ್ಥಿನಿಲಯದ ಅಭಾವ ಅಶಿಸ್ತು ಬೆಳೆಯುವುದಕ್ಕೆ ಕಾರಣಗಳಾಗುತ್ತವೆ. ವಿಶ್ವವಿದ್ಯಾಲಯ ಮತ್ತು ಕಾಲೇಜು ಮಟ್ಟದಲ್ಲಿ ಹಿಂದಿನ ಗೌರವವನ್ನೇ ಮುಂದೂ ಇಟ್ಟುಕೊಳ್ಳಬೇಕೆಂದಿದ್ದರೆ ನಿಯುಕ್ತರಾಗುವ ಲೆಕ್ಚರರ್, ಪ್ರೊಫೆಸರ್, ರೀಡರ್ ಮೊದಲಾದವರು ಸಮರ್ಥರಿರಬೇಕಾಗುತ್ತದೆ. ಇದಕ್ಕಾಗಿ ಕೇಂದ್ರವಿಲ್ಲವೇ ರಾಜ್ಯ ಸರಕಾರದ ಸೇವೆಯಲ್ಲಿರುವಂತೆಯೇ ವೇತನವೂ ಅವರಿಗೆ ದೊರೆಯಬೇಕಾಗಿದೆ. ವಿವಿಧ ವಿಭಾಗಗಳಲ್ಲಿ ಸಂಶೋಧನೆ ನಡೆಸುವತ್ತ ಹೆಚ್ಚಿನ ಬಲಕೊಡಬೇಕು. ವಿಶ್ವವಿದ್ಯಾಲಯಗಳು ಸಂಶೋಧನಾ ಕೇಂದ್ರಗಳಾಗಿ ಬೆಳೆದು ಬರಬೇಕು. ಈ ಬಗ್ಗೆ ಖಾಸಗಿ ಸೆಕೆಂಡರಿ ಶಾಲೆ ಮತ್ತು ಕಾಲೇಜುಗಳ ಸ್ಥಿತಿಗತಿಗಳು ಉನ್ನತವಾಗಬೇಕು. ರಾಜ್ಯ ಸರಕಾರಗಳು ಉದಾರವಾದ ಸಹಾಯಧನನಿಯಮಗಳನ್ನು ರೂಪಿಸಬೇಕು.

“ಕಾಲೇಜು ಅಧ್ಯಾಪಕರ ತರಬೇತಿಯ ಪ್ರಶ್ನೆಯನ್ನು ತೀವ್ರವಾಗಿ ಗಮನಿಸಬೇಕು. ಕಾಲೇಜು ಅಧ್ಯಾಪನ ವಿಧಾನ ಮತ್ತು ಸಂಶೋಧನಾ ತಂತ್ರಗಳಿಗೆ ಸಂಬಂಧಿಸಿದ ತರಬೇತಿಯಿಂದ ಕಾಲೇಜುಗಳ ಶಿಕ್ಷಣ ಮಟ್ಟವು ಉತ್ತಮಗೊಳ್ಳಬಹುದು. ಕಾಲೇಜುಗಳಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿ ಸಂಖ್ಯೆಯನ್ನು ಕೃತಕ ವಿಧಾನದಲ್ಲಿ ತಡೆಯದೆ, ತಾಂತ್ರಿಕ ಸಂಸ್ಥೆಗಳೇ ಮೊದಲಾದುವನ್ನು ಅಧಿಕ ಸಂಖ್ಯೆಯಲ್ಲಿ ಸ್ಥಾಪಿಸಿ ತಾನಾಗಿಯೇ ದಟ್ಟಣೆ ಕಡಿಮೆಯಾಗುವಂತೆ ನೋಡಬೇಕು.

“ಉಚ್ಚ ಶಿಕ್ಷಣವು ರಾಜ್ಯ ಭಾಷೆಯಲ್ಲಿಯೇ ದೊರೆಯಬೇಕೆಂಬ ಉದ್ದೇಶವು ಸ್ಪಷ್ಟವಾಗಬೇಕು. ವಿಶ್ವ ವಿದ್ಯಾಲಯಗಳು ಅಧ್ಯಯನ ಕೇಂದ್ರಗಳಾಗಿ ಬೆಳೆದರೆ ಸಾಲದು, ಜ್ಞಾನ ಪ್ರಸಾರಕ್ಕೂ ಇವು ತೊಡಗಬೇಕು. ರಾಜ್ಯಭಾಷೆಯಲ್ಲಿ ವಿಶ್ವವಿದ್ಯಾಲಯ ಶಿಕ್ಷಣವನ್ನು ನೀಡುವುದರಿಂದ ಶಿಕ್ಷಣದ ಮೌಲ್ಯವು ಇಳಿಮುಖವಾಗುವುದಿಲ್ಲ; ರಾಷ್ಟ್ರದ ಐಕ್ಯ ಭಾವನೆಯು ಶಿಥಿಲವಾಗದೆ ಅದು ಬಲಗೊಳ್ಳುವುದು” ಎಂದು ಮಧ್ಯಪ್ರದೇಶದ ವಿದ್ಯಾಮಂತ್ರಿ ಡಾ ಶರ್ಮಾರು ಅಭಿಪ್ರಾಯಪಟ್ಟರು.

“ಸುಸಂಬದ್ಧ ಪ್ರಜಾ ಸತ್ತಾತ್ಮಕ ಸರಕಾರವಿರುವಲ್ಲಿ ಉದ್ಯೋಗಸ್ಥರ ಸಂಘಸಂಸ್ಥೆಗಳು ತನ್ನ ಸದಸ್ಯರ ಸಾಮಾನ್ಯ ನಡವಳಿಕೆಯ ಬಗ್ಗೆ ನಿಯಮಗಳನ್ನು ಮಾಡಿ ಸರಕಾರಗಳ ಜವಾಬ್ದಾರಿಯನ್ನು ಕಡಿಮೆ ಮಾಡಿವೆ. ಯಾವುದೇ ಒಂದು ಉದ್ಯೋಗಸ್ಥ ಸಂಘದ ಸದಸ್ಯರು ಅಧಿಕ ಪ್ರತಿಫಲವನ್ನೂ ಉತ್ತಮ ಸೇವಾನಿಯಮಗಳನ್ನೂ ಕೇಳಿಕೊಳ್ಳುತ್ತಿರುವಂತೆಯೇ ಸಮಾಜದ ಸೇವೆಯನ್ನು ಇನ್ನೂ ಚೆನ್ನಾಗಿ ಹೇಗೆ ಮಾಡಬಹುದು ಮತ್ತು ಸಾರ್ವಜನಿಕರ ಸಹಕಾರ ಮತ್ತು ಗೌರವಭಾವನೆಯನ್ನು ಯಾವ ರೀತಿ ಗಳಿಸಬಹುದು ಎಂಬುದನ್ನು ಪರ್ಯಾಲೋಚಿಸುತ್ತದೆ.

“ಅಧ್ಯಾಪಕರಿಗಾದರೊ ಮರ್ಯಾದೆಯ ಜೀವನವನ್ನು ಬದುಕಲು ಆವಶ್ಯವೆನಿಸುವಷ್ಟು ವೇತನವನ್ನು ಕೊಡಬೇಕು; ಅವರು, ಅವರ ಕುಟುಂಬ ಮತ್ತು ಪರಿವಾರ ಸಂತೋಷದಿಂದಿರಲು ಸಾಧ್ಯವಾಗುವಂತೆ ವೇತನ ನೀಡಬೇಕು. ಅಧ್ಯಾಪಕರು ಇದಕ್ಕಾಗಿ ಆಂದೋಲನ ಹೂಡುವುದಕ್ಕೆ ಮೊದಲೇ ಸಮಾಜವು ಈ ಪ್ರಶ್ನೆಯನ್ನು ತಮ್ಮದೆಂದು ಬಗೆದು ಪರ್ಯಾಲೋಚಿಸಬೇಕು” ಎಂದು ಶ್ರೀ ರಂಗನಾಥ ಐಯ್ಯಂಗಾರರು ವಿನಂತಿಸಿಕೊಂಡರು.

ಇಡಿಯ ಭಾರತದಲ್ಲಿ ಅಧ್ಯಾಪಕರಿಗೆ ಸಮಾನ ವೇತನ ಮತ್ತು ಸಮಾನ ಸೇವಾ ನಿಯಮಗಳನ್ನು ಅನ್ವಯಿಸಬೇಕೆಂಬ ಆಶಯವನ್ನು ಸಮ್ಮೇಳನವು ಹೊರಗೆಡಹಿದೆ. ಆದರೆ, ಇದು ಎಷ್ಟರ ಮಟ್ಟಿಗೆ ಸಾಧನೀಯವೆಂಬುದನ್ನು ಆಲೋಚಿಸಬೇಕಾಗಿದೆ.

ಅಸ್ತಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 20—1—62 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh)

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಸೂಚನೆ

“ನವಯುಗ”ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ನವಯುಗ

ವರುಷ	ಉಡುಪಿ	ವಾರ
೪೧	-೪-೧-'೬೨	೧೭

ಕಳೆದ ದಿನಗಳು

ಜನವರಿ ಒಂದರಂದು ಇಡಿಯ ಜಗತ್ತಿಗೆ ಹೊಸ ವರ್ಷ ಆರಂಭವಾಗಿದೆ. ೧೯೬೧ನೆಯ ವರ್ಷವು ಗತಿಸಿ ಸುಖ-ದುಃಖಗಳ ಸಿಹಿ-ಕಹಿಗಳು ಬೆರೆತ ಬದುಕನ್ನು ಹೊಸ ವರ್ಷದ ಹೊಸ್ತಿಲಲ್ಲಿ ನಾವೆಲ್ಲರೂ ತಂದು ನಿಲ್ಲಿಸಿದ್ದೇವೆ. ಇಂತಹ ಸಂದರ್ಭದಲ್ಲಿ ಗತ ವರ್ಷದ ಮುಖ್ಯ ಮುಖ್ಯ ಘಟನೆಗಳನ್ನು ನಾವು ಸ್ಮರಿಸಿಕೊಂಡು, ಅವುಗಳ ಅನುಭವಗಳಿಂದ, ಲಾಭ ನಷ್ಟಗಳಿಂದ ಮುಂದಿನ ವರ್ಷದ ಬಗ್ಗೆ ನೀತಿಯನ್ನು ನಿರ್ಧರಿಸುವುದು ಅನುಚಿತವಾಗಲಾರದು. ನಮ್ಮ ದೇಶದ ಮಟ್ಟಿಗೆ ಹೇಳುವುದಾದರೆ, ಸುಖ ಸಮಾಚಾರದಿಂದಲೇ ಪ್ರಾರಂಭವಾದ ೧೯೬೧ ಸಂತೋಷದ ಸುದ್ದಿಯೊಡನೆಯೇ ಪರ್ಯವಸಾನಗೊಂಡಿತ್ತು. ತಲೆ ಕೆಳಗೆ ಮಾಡಿ ಓದಿದರೂ ಏಕಸಮವಾಗಿ ಅನುಭವಕ್ಕೆ ಬರುವ 1961 ನೆ ವರ್ಷವು ಪಾಶ್ಚಾತ್ಯ ಜನರಿಗೆ ಮಾತ್ರ ವಿಚಿತ್ರವಾದ ಮತ್ತು ಚಿಂತೆಗೆ ಕಾರಣವಾದ ಘಟನೆಗಳಿಂದಲೇ ತುಂಬಿಕೊಂಡಿತ್ತೆನ್ನಬಹುದು.

ರುದ್ರ ಸಾಗರದಲ್ಲಿ ತೈಲದ ಸಂಶೋಧನೆಯಿಂದ ತೊಡಗಿ ಗೋವಾ ವಿಮೋಚನೆಯ ವರೆಗೆ ಒಂದಲ್ಲ ಹಲವಾರು ಶುಭ ಸಂವಾದಗಳು ಭಾರತದಲ್ಲಿ ಪ್ರತಿಧ್ವನಿಸಿದುವು. ಚಿತ್ತರಂಜನದಲ್ಲಿ ವಿದ್ಯುಚ್ಚಾಲಿತ ರೇಲುಗಾಡಿ, ಹಿಂದುಸ್ತಾನ್ ಮೆಶಿನ್ ಟೂಲ್ಸ್‌ನಲ್ಲಿ ಭಾರತೀಯ ಗಡಿಯಾರಗಳು ನಮ್ಮ ಮಹತ್ವದ ಸಾಧನೆಗಳು. ಮೂರನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭವಾದ, ಅನಿವಾರ್ಯ ಶಿಕ್ಷಣಕ್ಕೆ ಉತ್ತೇಜಕವೆನಿಸಿದ ಅನ್ವೃತ ವರ್ಷವಿದು. ಪಂಜಾಬೀ ಸುಬಾದ ಬೇಡಿಕೆಯನ್ನು ದೃಢವಾಗಿ ನಿರೋಧಿಸಿ, ದೇಶದಲ್ಲಿ ಹೆಚ್ಚು ಬಹುದಾಗಿದ್ದ ಪ್ರಾಂತೀಯತೆ ಮತ್ತು ಭಾಷೀಯತೆಯ ಪ್ರಶ್ನೆಯನ್ನು ತಲೆಯೆತ್ತದಂತೆ ಮಾಡುವ ದೇಶದ ಜನರಲ್ಲಿ ಭಾವೈಕ್ಯವಾಗಬೇಕೆಂಬ ಆವಶ್ಯಕ ವಿಚಾರವು ಪ್ರಾಶಸ್ತ್ಯ ಗಳಿಸಿದ ಅಮರ ವರ್ಷ. ಮೂವರು ದೇಶ ಮಾತೆಯ ಅಮರ ಪುತ್ರರ ಶತಸಾಂವತ್ಸರಿಕೋತ್ಸವದ ವರ್ಷವಿರುವಂತೆಯೇ ಕೇಂದ್ರ ಗೃಹ ಮಂತ್ರಿಯಾಗಿದ್ದ ಪಂಡಿತ ಗೋವಿಂದ ವಲ್ಲಭ ಪಂತ ಮತ್ತು ನ್ಯಾಯಮೂರ್ತಿಯಾಗಿದ್ದ ಕೃಷ್ಣ ಸಿಂಹರಂತಹ ಅನರ್ಘ್ಯ ರತ್ನಗಳನ್ನೂ ಕಳೆದುಕೊಂಡ ವರ್ಷ. ದೇಶದ ಎಲ್ಲೆಡೆಗಳಲ್ಲಿಯೂ ವರ್ಷದ ಪ್ರಕೋಪದ ದೆಸೆಯಿಂದ ವಿತ್ತಧಾನ್ಯಗಳಿಗೆ ಹಿಂದೆಂದೂ ಇಲ್ಲದಷ್ಟು ಗಂಡಾಂತರ ಬಂದೊದಗಿದುದು ಈ ವರ್ಷದಲ್ಲಿ. ಬ್ರಿಟನ್ನದ ಮಹಾರಾಣಿ ಎಲಿಜಬೆಥ್ ಮತ್ತು ಅವರ ಪತಿ ಡ್ಯೂಕ್ ಆಫ್ ಎಡಿನ್‌ಬರೋರವರು ವರ್ಷದ ಆರಂಭದಲ್ಲಿ ಮತ್ತು ರಶ್ಯದ ರಾಷ್ಟ್ರಾಧ್ಯಕ್ಷರಾದ ಬ್ರೆಜ್ನೇವರು ಅಂತ್ಯದಲ್ಲಿ ನಮ್ಮ ದೇಶವನ್ನು ಸಂದರ್ಶಿಸಿದ ವಿದೇಶೀಯ ಮಹಾಪುರುಷರು. ಭಾರತದ ರಾಷ್ಟ್ರಪತಿ ಡಾ| ಬಾಬೂರಾಜೇಂದ್ರ ಪ್ರಸಾದರು ತೀವ್ರ ಅಸ್ವಸ್ಥತೆಗೆ ಒಳಗಾಗಿದ್ದರೂ ನಮ್ಮೆಲ್ಲರ ಪುಣ್ಯವಶದಿಂದ ಜಾಗ್ರತೆಯಾಗಿ ಗುಣಮುಖ ಹೊಂದಿ, ಮರಳಿ ತನ್ನ ಅಧಿಕಾರವನ್ನು ನಿರ್ವಹಿಸ ತೊಡಗಿದರು. ಪ್ರಧಾನಿ ನೆಹರು ಬ್ರಿಟನ್—ಅಮೆರಿಕೆ—ರಶ್ಯಗಳ ಯಾತ್ರೆಗೈದು ಅಂತಾರಾಷ್ಟ್ರೀಯ ದ್ವೇಷ ಶಮನ ಕಾರ್ಯದಲ್ಲಿ ಶ್ರಮಿಸಿದರು. ಚೀನವು ಭಾರತದ ಗಡಿಯನ್ನು ಉಲ್ಲಂಘಿಸುತ್ತ ಪಾಕಿಸ್ತಾನವು ನಿರುಪಯುಕ್ತ ವಿಷಯಗಳನ್ನು ಎತ್ತಿ ಭಾರತದೊಡನೆ ಜಗಳ ಕೆರೆಯುತ್ತ ಇರುವುದು, ಗೋವಾ ವಿಮೋಚನೆಯ ಘಟನೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಶಾಂತತೆ ಹರಡಿಸಿದುದು ದುರ್ದೈವದ ಸಂಗತಿಗಳು. ಪ್ರಚಲಿತ ವರ್ಷದಲ್ಲಿ ಈ ದುರ್ಭಾವನೆಗಳು ದೂರವಾಗುವುವೆಂದು ನಿರೀಕ್ಷಿಸಬಹುದು.

ಜಗತ್ತಿನ ದೃಷ್ಟಿಯಿಂದ ಹೇಳುವುದಾದರೆ, ೧೯೬೧ನೆ ವರ್ಷವು ಯಾವುದೇ ಶುಭಸೂಚಕವೆನ್ನುವಂತಿಲ್ಲ. ಉಲ್ಬಣಾವಸ್ಥೆಗೇರಿದ್ದ ಬರ್ಲಿನ್ ಪ್ರಶ್ನೆಯು ಪಂಹಾರಗೊಳ್ಳದೆ ಹೋದರೂ ಅದರ ಕಾವು ಮಾತ್ರ ತುಸು ಇಳಿದಿದೆಯೆಂಬ ಸಮಾಧಾನ, ತಟಸ್ಥ ರಾಷ್ಟ್ರಗಳು ಬೆಲ್‌ಗ್ರೇಡಿನಲ್ಲಿ ಸಭೆ ಸೇರಿ ಜಾಗತಿಕ ಶಾಂತಿಯ ಬಗ್ಗೆ ಮಾಡಿದ ಪರ್ಯಾಲೋಚನೆಗಳನ್ನು ಬಿಟ್ಟರೆ ಇನ್ನೇನೂ ಶುಭ ಘಟನೆ ನಡೆದೇ ಇಲ್ಲವೆನ್ನಬಹುದು. ಕೋಂಗೊದಿಂದ ಸಿಡಿದು ವಿಶ್ವಪ್ರಶ್ನೆಯಾದ ಕಟಾಂಗದ ಹೋರಾಟ, ಮತ್ತು ತತ್ಕಾರಣವಾಗಿ ಕಾಂಗೋ ಪ್ರಧಾನಿ ಲುಮುಂಬಾ ಮತ್ತು ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿ ಡಾಗ್ ಹೆಮ್ಮರ್‌ಶೆಲ್ಲರ ದುರಂತ ಮೃತ್ಯು, ಅಲ್ಲಿ ಇಂದಿಗೂ ಕೊನೆಗೊಳ್ಳದ ವಾದವಿವಾದಗಳು ಮಾನ ತರುವಂತಹುದಲ್ಲ. ರಶ್ಯವು ಅಣ್ವಸ್ತ್ರ ಸ್ಫೋಟವನ್ನು ಏಕಪಕ್ಷೀಯವಾಗಿ ಮರಳಿ ತೊಡಗಿದುದು ಮತ್ತದನ್ನು ಅಮೆರಿಕೆಯು ಅನುಕರಿಸಿದುದು ಆಶಾದಾಯಕವಲ್ಲ. ಆಫ್ರಿಕದಲ್ಲಿ ಕೆಲವೊಂದು ರಾಷ್ಟ್ರಗಳು ಸ್ವತಂತ್ರವಾದುವು; ದ. ಆಫ್ರಿಕೆಯು ಕಾಮನ್‌ವೆಲ್ತಿನಿಂದ ದೂರ ಸರಿಯಿತು; ಸಿರಿಯಾ ಸಂಯುಕ್ತ ಅರಬ ರಾಷ್ಟ್ರದಿಂದ ಸಿಡಿದು ಬೇರ್ಪಟ್ಟಿತು—ಅಂಗೋಲಾ—ಟ್ಯುನೀಸಿಯಾ—ಲಾವೋಸಗಳಲ್ಲಿ ವಸಾಹತುವಾದದ ಪ್ರತಿಧ್ವನಿಯಿನ್ನೂ ಇಳಿಯಲಿಲ್ಲ. ಹೀಗಿದ್ದರೂ ನಿಶ್ಶಸ್ತ್ರೀಕರಣದ ಪ್ರಶ್ನೆ ಬಂದಾಗ, ಎಲ್ಲರೂ ಮುಂದೆ ಬರುತ್ತಾರೆ; ಯಾವುದೇ ನಿರ್ಣಯಕ್ಕೆ ಬರುವುದು ಮಾತ್ರ ಸಾಧ್ಯವಿಲ್ಲವಾಗಿದೆ. ಹೀಗೆಯೇ ಶುಭಕ್ಕಿಂತಲೂ ಅಶುಭ ಘಟನೆಗಳೇ ನಡೆದ ಈ ೧೯೬೧ರ ಕಹಿಯನ್ನು ನುಂಗಿಕೊಡು ೬೨ರಲ್ಲಿಯಾದರೂ ನಮ್ಮ ಶಾಂತತೆಯ ಸೌಭಾಗ್ಯ ಮರಳಿ ವಿಕಾಸಗೊಳ್ಳಲಿಯೆಂದು ಆಶಿಸುವುದು ತಪ್ಪಲ್ಲ. ಹೊಸ ವರ್ಷಕ್ಕೆ ಪಾದಾರ್ಪಣ ಮಾಡುವ ಮೊದಲು, ಗತವರ್ಷದ ಸಿಹಿಕಹಿಗಳನ್ನು ನೆನಪಿಸಿಕೊಳ್ಳುವುದು ಅತ್ಯಗತ್ಯ.

ಅಭಿನಂದನೆಗಳು

ದೇಶದ ಆರ್ಥಿಕ ಕ್ಷೇತ್ರದಲ್ಲಿ ಜೀವವಿಮೆ, ಉದ್ಯಮ, ವಾಣಿಜ್ಯ ಮೊದಲಾದ ವ್ಯವಹಾರಗಳು ಮಹತ್ವದ ಪಾತ್ರ ವಹಿಸುತ್ತವೆ. ರಾಷ್ಟ್ರ ಪುನಾರಚನೆಯಲ್ಲಿ ಇವುಗಳೊಂದಿಗೆ ವೃತ್ತಿಪರ ಕಾಲೇಜುಗಳೂ ಗಣನೀಯವಾಗಿವೆ ಬೇಂಕಿಂಗ್‌ನ ಅಭ್ಯಾಸ ಯಾವ ದೇಶದಲ್ಲಿರುವುದೋ ಅಲ್ಲಿ ಆರ್ಥಿಕಾಭಿವೃದ್ಧಿಯು ಮುಗ್ಗರಿಸುವುದಿಲ್ಲ. ಇಂತಹ ಹತ್ತು ಹಲವಾರು ಸಂಸ್ಥೆಗಳಿಗೆ ಕಾರಣೀಭೂತರಾದ ದೈವೀಶಕ್ತಿ ಸಂಪನ್ನರಾದ ಡಾ| ಟಿ. ಮಾಧವ ಪೈ ಅವರು ಸಿಂಡಿಕೇಟ್ ಬೇಂಕಿನ ಮೆನೇಜಿಂಗ್ ಡೈರೆಕ್ಟರರ ಪದವಿಯಿಂದ ಮೊನ್ನೆ ತಾ, ೩೧ರಂದು ನಿವೃತ್ತರಾದರು. ಮಾನವನ ಭೌತಿಕ ರೋಗಗಳ ಚಿಕಿತ್ಸೆಯಲ್ಲಿ ಪದವೀಧರರಾದ ಇವರು ಅಷ್ಟರಿಂದಲೇ ತೃಪ್ತರಾಗದೆ ಆತನ ಬೌದ್ಧಿಕ, ಆರ್ಥಿಕ, ಸಾಮಾಜಿಕ ರೋಗರುಜಿನಗಳೆಲ್ಲವುಗಳಿಗೂ ಸೂಕ್ತ ಚಿಕಿತ್ಸಾಕ್ರಮವನ್ನು ಅನುಸರಿಸಿದರು. ದೇಶದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬೇಂಕಿಂಗ್ ಅಭ್ಯಾಸ ಬೆಳೆಯುವಂತೆ ಅಲ್ಲಿ ಶಾಖೆಗಳನ್ನು ಸ್ಥಾಪಿಸಬೇಕೆಂಬ ಕೂಗು ಎಲ್ಲೆಲ್ಲಿಯೂ ಪ್ರತಿಧ್ವನಿಸುತ್ತಿದ್ದರೂ ಅಂತಹ ಗ್ರಾಮಾಂತರ ಶಾಖೆಗಳನ್ನು ತೆರೆಯಲು ಯಾವ ಬೇಂಕೂ ಮುಂದುವರಿಯಲು ಅಂಜಿ ಹಿಂಜರಿಯುತ್ತಿರುವಾಗ ಡಾ| ಪೈ ಕೆಚ್ಚೆದೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಆದ್ಯಂತ ಇಂತಹ ಹಲವಾರು ಶಾಖೆಗಳನ್ನು ತೆರೆಯಲು ಮುಂದೆ ಬಂದರು. ಇವರ ಮಾರ್ಗದರ್ಶನದಲ್ಲಿ ಇಂದು ಭಾರತದ ಗಣ್ಯ ಬೇಂಕುಗಳಲ್ಲಿ ಸಿಂಡಿಕೇಟ್ ಬೇಂಕು ಒಂದಾಗಿದೆ. ತನ್ನ ಗ್ರಾಹಕರಿಗೆ ಸರ್ವ ವಿಧದ ಸಮರ್ಪಕ ಬೇಂಕಿಂಗ್ ಸೇವೆಯನ್ನು ಒದಗಿಸುತ್ತ ಬಂದಿದೆ. ಡಾ| ಪೈಯವರು ನಿವೃತ್ತಿ ಹೊಂದಿದ ಈ ಸಮಯದಲ್ಲಿ ಜನತೆಯು ಅವರಿಗೆ ತನ್ನ ಕೃತಜ್ಞತೆಗಳನ್ನು ಸಮರ್ಪಿಸುವುದಲ್ಲದೆ, ಅವರ ಭಾವೀ ಜೀವನವು ಸುಖಪ್ರದವಾಗಲಿ, ಅವರು ಮತ್ತುಳಿದ ಕ್ಷೇತ್ರಗಳಲ್ಲಿಯೇ ಕೇಂದ್ರೀಕೃತ ಮನಸ್ಸಿನಿಂದ ದುಡಿದು ಜನಹಿತಚಿಂತಕರೆಂಬ ಹೆಸರನ್ನು ಸಾರ್ಥಕಗೊಳಿಸಲಿ ಎಂದು ಪ್ರಾರ್ಥಿಸುತ್ತದೆ.

ಶ್ರೀ ಟಿ. ಎ. ಪೈಯವರು ಡಾ| ಪೈಯವರ ಗರಡಿಯಲ್ಲಿ ಪಳಗಿದವರು; ಜನರ ಗೌರವಾದರಗಳಿಗೆ ಪಾತ್ರರಾದವರು; ಅವರ ಕಷ್ಟಕಾರ್ಪಣ್ಯಗಳನ್ನೂ ಬನ್ನಬವಣೆಗಳನ್ನೂ ಅರಿತುಕೊಂಡವರು ರಾಜಕೀಯ ಬರಡೆಮ್ಮೆಯನ್ನು ಕರೆಯಲು ಇವರು ನಿಂತಾಗಲೂ ಹಾಲನ್ನೇ ಕರೆದರು; ಬರಡನ್ನೂ ಹಯನಾಗಿಸುವ ಮಂತ್ರವಿದ್ಯೆಯಿರುವವರು. ಡಾ| ಪೈಯರ ಪ್ರತಿ ಕ್ಷೇತ್ರದಲ್ಲಿ ಶ್ರೀ ಪೈಯವರೂ ಅನುಭವ ಪಡೆದಿದ್ದಾರೆ ಡಾ| ಪೈಯವರು ನಿವೃತ್ತರಾದ ಸಿಂಡಿಕೇಟ್ ಬೇಂಕಿನ ಮೆನೇಜಿಂಗ್ ಡೈರೆಕ್ಟರ್ ಹುದ್ದೆಗೆ ಶ್ರೀ ಪೈ ಕ್ರಮಾನುಗತವಾಗಿ ತಾ. ೧ ರಂದು ಏರಿದ್ದಾರೆ. ಡಾ| ಪೈಯವರು ಹಾಕಿಕೊಟ್ಟ ಭದ್ರ ಬುನಾದಿಯಲ್ಲಿ ಸತ್ಪರಂಪರೆಯನ್ನು ಮುಂದುವರಿಸಿ, ಜನತೆಯ ಆಶೆ—ಆಕಾಂಕ್ಷೆಗಳನ್ನು ಪೂರೈಸುವುದರಲ್ಲಿ ಸಂದೇಹವಿಲ್ಲ. ಉಭಯ ಪೈಗಳನ್ನೂ ಈ ಸಂದರ್ಭದಲ್ಲಿ ಅಭಿನಂದಿಸುವುದರೊಡನೆ ಅವರ ಬಾಳು ಸಮಾಜ ದೇಶಸೇವೆಯಲ್ಲಿ ಸಾರ್ಥಕವಾಗಲೆಂದು ಹಾರೈಸುತ್ತೇವೆ.

ಜಗತ್ಪರ್ಯಟನ

ಪರಿಶ್ರಮ ಶೀಲ ನೆಹರು

ರಾಕೆಟ್ ವೇಗದಿಂದ ಮುಂದುವ
ಯುವ ಪ್ರಪಂಚದಲ್ಲಿ ಭಾರತವಿನ್ನೂ
ತ್ತಿನ ಗಾಡಿಯಲ್ಲಿ ಸವಾರಿಮಾಡ ಬಾರ
ಎಂದು ಎಲ್ಲಭಾರತೀಯರೂ ಹೇಳುತ್ತಾ
ಆದರೆ, ಅದನ್ನು ಬಿಟ್ಟು ಬಿಡಲು ಮಾ
ಯಾರೂ ಸಿದ್ಧರಿಲ್ಲ. ಎತ್ತಿನ ಗಾಡಿಯ
ತ್ಯಜಿಸಿ ಇತರ ಶೀಘ್ರಗಾಮಿ ವಾಹನ
ನ್ನು ಏರಬೇಕೆಂಬ ಕಳಕಳಿ ರಾಷ್ಟ್ರ
ಯಕ ನೆಹರುರವರಲ್ಲಿದೆ ಇದಕ್ಕೆ ಅವ
ನೀಡುವ ಸೂಚನೆಯೂ ಸುಲಭ, ಸರ
'ಕಠಿಣ ಪರಿಶ್ರಮ'. ಪರಿಶ್ರಮ ಪಡಬಲ್ಲ
ನು ತತ್ತರಿಸಬೇಕಾಗಿಲ್ಲ, ಆಳಿನಂತೆ ದ
ದು ಅರಸಾಗಿ ಉಣ್ಣಬಲ್ಲನು.

ಸಾಲಝಾರರ ಕಂಪನ

ವಸಾಹತು ವಾದವನ್ನು ತನ್ನ ಆಧ
ವಾಗಿಟ್ಟುಕೊಂಡ ಪೋರ್ಚುಗೀಸರ ಸ
ಲಝಾರರ ಪ್ರಭು ಸಮುದ್ರದಲ್ಲಿ ಮುಳು
ತ್ತಿರುವ ಹುಲ್ಲುಕಡ್ಡಿಯನ್ನು ಆಧರಿಸಿ
ದುಕಲು ಹವಣಿಸುತ್ತಾರೆ. ಗೋವೆ
ನ್ನು ಕಳೆದುಕೊಂಡ ಅವ
ತಮ್ಮ ಜನತೆಯ ಬೆಂಬಲವನ್ನೂ ಕಳ
ಕೊಂಡಿದ್ದಾರೆ. ಪೋರ್ಚುಗಲ್ಲಿನ ಅಲ್ಲಿ
ಸಶಸ್ತ್ರಕ್ರಾಂತಿ ನಡೆದುದು ಗೋವಾ
ನ್ನು ರಕ್ಷಿಸಿಕೊಳ್ಳಲಾರದ ಸಾಲಝಾ
ಸರಕಾರದ ವಿರುದ್ಧವೆಂಬುದಕ್ಕಿಂತಲ
ಮಾನವತೆಯ ದಮನ ಕಾರ್ಯದಲ್ಲಿ ತೆ
ಡಗಿದ ಸಾಲಝಾರರ ಎದುರಾಗಿ ಎಂ
ಹೇಳುವುದು ಔಚಿತ್ಯಪೂರ್ಣವಿದೆ.

ಅಯೂಬಖಾನ್

ಗೋವಾ ವಿಜಯ ಯಾತ್ರೆಯಿಂ
ಭಾರತೀಯರಲ್ಲಿ ಮೂಡಿದ ಆತ್ಮವಿಶ್ವಾ
ಕ್ಕಿಂತಲೂ ಭಾರತದ ಹಿತಶತ್ರುಗಳ
ಹುಟ್ಟಿದ ಭಯದ ಪ್ರಮಾಣವೇ ಹೆ
ಸಂರಕ್ಷಣಾ ಮಂತ್ರಿ ಮೆನನ್ನರು ಹೇ
ವಂತೆ ಪಾಕಿಸ್ತಾನವು ಕಾಶ್ಮೀರದಲ್ಲಿ
ನು ಮಾಡಿದ ಆಕ್ರಮಣವನ್ನು ಮನ
ಕೆ ಮಾಡಿಕೊಂಡಿರುವುದು ಹೌದೆಂದಾ
ರೆ, ಗೋವಾ ಕಾರ್ಯಕ್ರಮದಿಂದ
ಯಾಬ್‌ಖಾನರು ನಡುಗ ತೊಡಗಿದ
ರೆಂದೇ ಹೇಳಬೇಕು.

ಶ್ರೀಮಾಲಿ

ಭಾವೈಕ್ಯದ ಹೆಸರಿನಲ್ಲಿ ಶಾಲೆಗಳ
ರ ಪುಸ್ತಕಗಳ ಮಟ್ಟವು ಇಳಿಯುವು
ಇದರಿಂದವಿದ್ಯಾರ್ಥಿಯಜ್ಞಾನತೃಷೆಹಿಂ
ಲಾರದು—ವಿದ್ಯಾಭ್ಯಾಸವಾದರೂ ನಿ
ಸವಾಗುವುದು—ಎಂಬ ಟೀಕೆ ಟಿಪ್ಪಣಿ
ಳು ಕೇಂದ್ರದ ಶಿಕ್ಷಣ ಮಂತ್ರಿ ಶ್ರೀಮಾ
ಯವರ ಮನ ಮುಟ್ಟಿದಂತೆ ತೋರು
ದೆ. ಪಠ್ಯ ಪುಸ್ತಕಗಳ ಪ್ರಕಾಶ
ವು ಸರಕಾರದ ಸೊತ್ತಾಗಬೇಕೆಂ
ದು ಅದರ ಆಶಯವಿಲ್ಲವೆಂ
ವರು ಹೇಳಿ ಎಲ್ಲ ಪ್ರಕಾಶಕರಂತೆ ಸರ
ರವೂ ಅವನ್ನು ಪ್ರಕಟಿಸುವುದು. ಉ
ಮ ಪುಸ್ತಕಗಳು ದೊರಕಬಹುದಾದಂ
ಹ ಸ್ಪರ್ಧಾತ್ಮಕ ಕ್ರಮವ ನ
ಮಯಾರ್ದಿತಗೊಳಿಸುವುದಿ
ಎಂದು ಭರವಸೆಯಿತ್ತು ವೇಟಿಯ
ದೊರೆಯುವ ಉತ್ತಮ ಪುಸ್ತಕಗಳನ
ಆರಿಸುವುದು ಶಿಕ್ಷಣಾಧಿಕಾರಿಗಳನ
ಹೊಂದಿಕೊಂಡಿದೆಯೆಂದಿದ್ದಾರೆ.

ಅಲ್ಲಲ್ಲಿಯ ಸುದ್ದಿ ಸಾರ

ಡಾ. ಟಿ. ಎಂ. ಎ. ಪೈಯವರಿಗೆ ವಿದಾಯ ಸಮಾರಂಭ— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರರಾಗಿ 36 ವರ್ಷ ಸತತ ಪರಿಶ್ರಮ ಪೂರ್ಣ ದಕ್ಷ ಸೇವೆ ಸಲ್ಲಿಸಿ ಬ್ಯಾಂಕಿನ ಸರ್ವತೋಮುಖ ಪ್ರಗತಿಗೆ ಕಾರಣೀಭೂತರಾದ ಡಾ ಟಿ. ಎಂ. ಎ. ಪೈಯವರು ತಮ್ಮ ಹುದ್ದೆಗೆ ರಾಜಿಯಿತ್ತು ನಿವೃತ್ತರಾದುದರಿಂದ ಕಳೆದ ತಾ. 30ರಂದು ಬ್ಯಾಂಕಿನ ಆಡಳಿತ ವರ್ಗ ಮತ್ತು ನೌಕರರ ಸಮುದಾಯದವರು ಅವರಿಗೆ ವಿದಾಯವನ್ನೀಯುವ ಸಮಾರಂಭವನ್ನು ಮುಕುಂದ ನಿವಾಸದಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಉಪಾಹಾರ, ಪ್ರಾರ್ಥನೆ, ಅತಿಥಿಗಳಿಗೆ ಹಾರಾರ್ಪಣೆಗಳಾದ ಮೇಲೆ ಸಂದೇಶಗಳನ್ನು ಶ್ರೀ ಟಿ. ಎ. ಪೈಯವರು ಓದಿದರು. ಆಡಳಿತ ಹಾಗೂ ನೌಕರೀವರ್ಗದ ವತಿಯಿಂದ ಸನ್ಮಾನ ಪತ್ರವನ್ನು ಶ್ರೀ ಕೆ. ಕೆ. ಪೈಗಳು ಅರ್ಪಿಸಿದರು. ಡಾ. ಪೈಗಳು ಈ ಬ್ಯಾಂಕನ್ನು ಸ್ಥಾಪಿಸಿ, ವಿಸ್ತರಿಸಿ, ಬೇರೆಬೇರೆ ಶೈಕ್ಷಣಿಕ ಸಂಸ್ಥೆಗಳನ್ನು ನಿರ್ಮಿಸಿ ಮಾಡಿರುವ ಸೇವಾದರ್ಶಗಳನ್ನು ಅದರಲ್ಲಿ ವಿವರಿಸಲಾಗಿತ್ತು. ಡಾ| ಟಿ. ಎಂ. ಎ. ಪೈಯವರು ಉತ್ತರಿಸುತ್ತ ಸಿಂಡಿಕೇಟಿನ ವಿಶಾಲ ಬೆಳವಣಿಗೆಗೆ ಸಾರ್ವಜನಿಕರ ವಿಶ್ವಾಸವೇ ಕಾರಣವೆಂದೂ ಇಲ್ಲಿಯ ವಿದ್ಯಾಸಂಸ್ಥೆಗಳ ಸ್ಥಾಪನೆಗೆ ಈ ಬ್ಯಾಂಕೇ ಹೆಚ್ಚಿನಂಶ ಕಾರಣವಾಗಿದೆ ಎಂದೂ ಹೇಳಿ ಬ್ಯಾಂಕಿನ ವಿಶಿಷ್ಟತೆಗಳನ್ನು ವಿವರಿಸಿದರು. ಉಡುಪಿಯು ಬೃಹದಾಕಾರ ಹೊಂದಿ ಬಹು ಬೇಗನೇ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆಯಾಗುವುದು ಅಪೇಕ್ಷಣೀಯವೆಂದರು. ಬ್ಯಾಂಕಿನ ಬೆಳವಣಿಗೆಗೆ ಕಾರಣರಾದ ಸರ್ವರನ್ನೂ ಅಭಿನಂದಿಸಿದರು. ಅಧ್ಯಕ್ಷ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಡಾ| ಪೈಗಳ ಕಾರ್ಯ ನೈಪುಣ್ಯತೆಯನ್ನು ಕೊಂಡಾಡಿ ಅವರು ಬೇರೆ ಬೇರೆ ಕ್ಷೇತ್ರಗಳಲ್ಲಿ ಮಾಡಿದ ಸಮರ್ಥ ಸೇವೆಯು ಸ್ಮರಣೀಯವೆಂದರು. ಕೊನೆಯದಾಗಿ ಶ್ರೀ ಟಿ. ಎ. ಪೈಯವರು ಧನ್ಯವಾದಗಳನ್ನರ್ಪಿಸುತ್ತ ಸಿಂಡಿಕೇಟು ದೇಶದ ಸ್ವತ್ತೆಂದು ಡಾ. ಪೈಗಳ ಸತ್ಪ್ರಯತ್ನ, ಮತ್ತು ತ್ಯಾಗದಿಂದ ಮಾಡಿರುವ ಕಾರ್ಯಗಳು ಆದರ್ಶನೀಯವೆಂದೂ ಹೇಳಿದರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

R. E. P. 593/1960 O.S. 453/55.

ದೆಯ್ಯಕ್ಕ ಹೆಂಗ್ಸು ಸಹಾ— ವಾದಿರು.

ಅರ್ಜಿದಾರ್ರು.

ಕೊರಗಪ್ಪ ಸಹಾ —ಎದ್ರಿರು.

1. ಕೊರಗಪ್ಪ—ಅಂಗರೆ ಹೆಂಗ್ಸಿನ ಮಗ.
2. ಮಂಜಕ್ಕ 3. ಚನ್ನಪ್ಪ— ತಿಮ್ಮಲು ಹೆಂಗ್ಸಿನ ಮಕ್ಕಳು.
4. ಸಂಕಪ್ಪ 5. ಸಾಂತಪ್ಪ 6. ಉಂಮಕ್ಕ— ಮಂಜಕ್ಕ ಹೆಂಗ್ಸಿನ ಮಕ್ಕಳು.

ಎಲ್ಲರೂ ಪುತ್ತೂರು ತಾಲ್ಲೂಕು, ನರಿಮೊಗ್ರು ಗ್ರಾಮದ ಬಿಟ್ಟಿ ಮುಂಡೂರಲ್ಲಿ.

ಇವರೀಗೆ ಕೋರ್ಟು ಹುಕ್ಕುಂ ಪ್ರಕಾರ ತಿಳಿಸುವುದೇನೆಂದ್ರೆ, ಅರ್ಜಿದಾರ್ರು ಮೇಲ್ಕಂಡ ಡಿಕ್ರಿ ಮೇಲೆ ಮಾಡಿದ ಮೇಲಿನ ಅಮ್ಲುಜ್ಯಾರಿಯಲ್ಲಿ ಎದ್ರಿರ ಬಾಬ್ತು ಸ್ಥಿರಾಸ್ತಿ ಏಲಂಗೆ ಅಪೇಕ್ಷಿಸಿರುವುದರಿಂದ ಯಸ್ತಿಹಾರಿ ಶರತುಗಳನ್ನು ನಿರ್ಣಯಿಸುವ ಬಗ್ಗೆ ವಗೈರೆ ಸದ್ರಿ ಅಮ್ಲುಜ್ಯಾರಿಯು ತಾರೀಕು 12—1—62ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮಜ್ಕೂರು ಕೋರ್ಟಿನ ಮುಂದೆ ನೀವು ಸ್ವತಹ ವ ವಕೀಲರ ದ್ವಾರಾ ಹಾಜಿರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು, ಎಂತ ಈ ಮೂಲ್ಕ ತಿಳಿಸಿಯದೆ.

(*Sd*) C. S. Shastry,
Vakil for Petitioner.

ಪುತ್ತೂರ್ರು, 21—12—61.

ಶಾಲಾ ವರ್ಧಂತ್ಯುತ್ಸವ—ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 23—12—61ರಂದು ಕರ್ನಾಟಕ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ ಡಾ| ಎ. ಎಸ್. ಆಚಾರ್ಯ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶಾಲಾ ಮುಖ್ಯೋಪಾಧ್ಯಾಯರು ಶಾಲಾ ಪ್ರಗತಿಪರ ವರದಿಯನ್ನೋದಿದರು. ಹಳೆ ವಿದ್ಯಾರ್ಥಿ ಶ್ರೀ ಪಿ. ಸಿ. ಯೋಗಿರಾವ್ ಇವರು ಸ್ವಸ್ತಿ ವಾಚನ ಗೈದರು. ಅಧ್ಯಕ್ಷರು ಶಾಲಾ ಕಾರ್ಯಗಳ ಕುರಿತು ಮೆಚ್ಚಿಗೆಯನ್ನು ಸೂಚಿಸಿ ಇಂದಿನ ದಿನಗಳಲ್ಲಿ ತಾಂತ್ರಿಕ ಶಿಕ್ಷಣದ ಮಹತ್ವವನ್ನು ವಿವರಿಸಿ ಭಾಷಣ ಮಾಡಿದರು. ಶಾಲಾ ಮಕ್ಕಳಿಂದ ನೃತ್ಯ, ನಾಟಕ ಪ್ರಹಸನ ಇತ್ಯಾದಿ ಮನರಂಜನೆಯ ಕಾರ್ಯಕ್ರಮಗಳಾದುವು.

ತಾ. 24—12—61ರಂದು ಈ ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಯಚ್. ದಾಮೋದರರಾವ್ ಇವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಸಂಘದ ಮತ್ತು ರಜತ ಮಹೋತ್ಸವ ಸಮಿತಿಗಳ ವರದಿ ವಾಚನಗಳಾದ ಮೇಲೆ, ಅಧ್ಯಕ್ಷರು ಸಂಘದ ಏಳಿಗೆಯ ಕುರಿತು ಹಿತೋಕ್ತಿಗಳನ್ನಿತ್ತರು. ಸಂಘದ ಸದಸ್ಯರು ಅಭಿನಯಿಸಿದ ಸಾಮಾಜಿಕ ನಾಟಕದೊಂದಿಗೆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

ಅಂದು ಬೆಳಿಗ್ಗೆ ಆಟ ಪಂದ್ಯಾಟಗಳು ಮತ್ತು ಸಂಘದ ಮಹಾ ಸಭೆಯು ಜರಗಿ ರಜತ ಮಹೋತ್ಸವವನ್ನು 1962ನೇ ಏಪ್ರಿಲಿನಲ್ಲಿ ವೈಭವದಿಂದ ಆಚರಿಸುವದೆಂದು ನಿರ್ಣಯ ಮಾಡಲಾಯಿತು.

ಅ. ಕ. ನಿರುದ್ಯೋಗೀ ಶಿಕ್ಷಕರ ಸಮ್ಮೇಲನಕ್ಕೆ ತಯಾರಿ— ಕಳೆದ ತಾ. 24ರಂದು ಬೆಳಗಾವಿ ಜಿಲ್ಲಾ ಸಂಘದ ಕಾರ್ಯಕಾರೀ ಸಮಿತಿ ಕೂಡಿ ಜನೇವರಿ ತಿಂಗಳಲ್ಲಿ ಅಖಿಲ ಕರ್ನಾಟಕ ನಿರುದ್ಯೋಗೀ ಶಿಕ್ಷಕರ ಸಮ್ಮೇಲನವನ್ನು ನೇಗಿನ ಹಾಳದಲ್ಲಿ ಕರೆಯಬೇಕೆಂದು ನಿರ್ಣಯವಿತ್ತಿತು. ಜನೇವರಿ 15 ರೊಳಗೆ ರಿಟ್ ಅರ್ಜಿ ಕೊಡುವ ನಿರ್ಣಯವನ್ನು ಮಾಡಿತು. ಸಂಘಕ್ಕೆ ಕೂಲಂಕುಶ ತಿಳಿಸಿ ನೌಕರಿ ಸ್ವೀಕರಿಸಬೇಕೆಂದೂ ಸಂಘದ ಶಿಸ್ತು ಶೀಲಗಳನ್ನು ಕಾಯ್ದುಕೊಳ್ಳಬೇಕೆಂದೂ ವಿನಂತಿಸಿ ಕೊಳ್ಳಲಾಯಿತು. ನಿರುದ್ಯೋಗ ಸಮಸ್ಯೆಯನ್ನು ಬಿಡಿಸಲು ಮೀನಮೇಷ ಮಾಡುತ್ತಿರುವ ಮೇಲಾಧಿಕಾರಿಗಳ ಧೋರಣೆಯ ಬಗ್ಗೆ ವಿಷಾದ ವ್ಯಕ್ತಪಡಿಸಿತು. ನಾಟಕಗಳನ್ನು ಆಡಿಸಿ ನಿಧಿಸಂಗ್ರಹಿಸಬೇಕೆಂದು ನಿರ್ಣಯಿಸಿತು.

ದಿ| ಎ. ಬಿ. ಶೆಟ್ಟರ ಪ್ರತಿಮೆಯ ಅನಾವರಣ— ಸಮಾರಂಭವು ಮಂಗಳೂರಿನ ಎಸ್. ಆರ್. ಎಸ್. ಹೋಮಿನಲ್ಲಿ ತಾ. 6—1—62ನೇ ಶನಿವಾರ ಸಂಜೆ 5.45ಕ್ಕೆ ಮದ್ರಾಸು ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್ ಸರ್. ಎ ಲಕ್ಷ್ಮಣ ಸ್ವಾಮಿಮುದಲಿಯಾರರಿಂದ ನೆರವೇರಿಸಲ್ಪಡುವುದು.

ಮೂಲ್ಕಿ ಎಲ್. ಎಫ್. ಆಸ್ಪತ್ರೆಯ ದಿನಾಚರಣೆಯು— ತಾ. 6—1—62 ರಂದು ಡಾ. ಎಸ್. ಚಂಪಾ, ಎಂ. ಎಲ್. ಸಿ. ಯವರಿಂದ ಉದ್ಘಾಟಿಸಲ್ಪಟ್ಟು ಶಿಶುಪ್ರದರ್ಶನ ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯದ ಕುರಿತು ಪ್ರದರ್ಶನ, ಭಾಷಣ, ಚಲಚಿತ್ರ ಪ್ರದರ್ಶನ, ನಡೆಯಲಿರುವುದು ತಾ 7 ರಂದು ಬೆಳಿಗ್ಗೆ ವೈದ್ಯಕೀಯ ಪರೀಕ್ಷೆಯ ವ್ಯವಸ್ಥೆ ಮಾಡಲಾಗಿರುವುದು. ಮಧ್ಯಾಹ್ನ ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣ, ಜಿಲ್ಲಾ ಕ್ಷಯರೋಗ ನಿವಾರಣಾ ಕಮಿಟಿಯ ಮುಲ್ಕಿ ಶಾಖೆಯ ಉದ್ಘಾಟನೆ, ರಾತ್ರಿ ಯಕ್ಷಗಾನ ಕೂಟ ಜರಗಲಿರುವುದೆಂದೂ ಸಾರ್ವಜನಿಕರು ಪ್ರೋತ್ಸಾಹಿಸ ಬೇಕೆಂದೂ ಕೇಳಿಕೊಳ್ಳಲಾಗಿದೆ.

ಭುವನೇಂದ್ರ—ಸಿಂಡಿಕೇಟ್ ಟೂರ್ನಮೆಂಟಿನ— ಬಹುಮಾನ ವಿತರಣ ಸಮಾರಂಭವು ಕಳೆದ ತಾ. 31ರಂದು ಡಾ| ಸುಂದರರಾವ ಪೈ ಸ್ಮಾರಕ ರಂಗಮಂಟಪದಲ್ಲಿ ಬೊಂಬಾಯಿ ಮುನಿಸಿಪಲ್ ಕೋರ್ಪೊರೇಶನಿನ ಮೇಯರ್ ಶ್ರೀ ವಿ. ಬಿ. ವರ್ಲಿಕರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡುತ್ತ ಭುವನೇಂದ್ರ ಪ್ರೊಡಕ್ಟ್ಸ್‌ನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಪಿ ಜನಾರ್ಧನ ನಾಯಕರು ಮತ್ತು ವರ ಇಬ್ಬರು ಪುತ್ರರು ಪ್ರಾರಂಭಿಸಿದ ಈ ಟೂರ್ನಮೆಂಟು ಕಳೆದ ವರ್ಷದಿಂದ ಸಿಂಡಿಕೇಟ್ ಬ್ಯಾಂಕ್‌ನ ಸ್ಪರ್ಧೆಯಾಗಿ ಜನಪ್ರಿಯವಾಗಿ ಈ ವರ್ಷ ರಾಜ್ಯಮಟ್ಟದಲ್ಲಿ ಟೂರ್ನಮೆಂಟು ಜರಗಿರುವುದಾಗಿಯೂ, ಈ ವರ್ಷ ಇನ್ನೂ ಕೆಲವು ಸಂಸ್ಥೆಗಳು ಸೇರಿರುವುದಾಗಿಯೂ, ಮುಂದಕ್ಕೆ ಇದನ್ನು ಅಂತರರಾಜ್ಯ ಮಟ್ಟದಲ್ಲಿ ವಿಸ್ತರಿಸಿ ಜನಪ್ರಿಯಗೊಳಿಸುವುದಾಗಿಯೂ ಹೇಳಿ ಟೂರ್ನಮೆಂಟಿನ ಆವಶ್ಯಕತೆಯನ್ನು ವಿವರಿಸಿದರು.

ಮದ್ರಾಸಿನ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಶ್ರೀ ಎಸ್. ಬಾಲಕೃಷ್ಣ ಶೆಟ್ಟರ ಪತ್ನಿ ಶ್ರೀಮತಿ ಲಲಿತ ಬಿ. ಶೆಟ್ಟಿಯವರು ಪಾರಿತೋಷಕ ವಿತರಣೆ ಮಾಡಿದರು. ಶ್ರೀ ಯು. ಎಲ್. ಆಚಾರ್ಯರು ಸ್ಪೋರ್ಟ್ಸ್ ಪೆವಿಲಿಯನನ್ನು ಉದ್ಘಾಟಿಸುವಂತೆ ಕೇಳಿಕೊಂಡರು ಶ್ರೀ ವರ್ಲೀಕರರು ಸ್ಪೋರ್ಟ್ಸ್ ಪೆವಿಲಿಯನನ್ನು ಉದ್ಘಾಟಿಸಿ ಭಾಷಣ ಮಾಡುತ್ತ ದಕ್ಷಿಣ ಕನ್ನಡಿಗರ ಮುಖ್ಯವಾಗಿ ಉಡುಪಿ ಮತ್ತು ಆಸುಪಾಸಿನ ಜನರ ಚಟುವಟಿಕೆ, ಇಲ್ಲಿಯ ಪ್ರಮುಖರು ಸ್ಥಾಪಿಸಿರುವ ಸಂಘ, ವಿದ್ಯಾಸಂಸ್ಥೆ, ಮೊದಲಾದವುಗಳನ್ನು ಪ್ರಸ್ತಾಪಿಸಿ ಅವುಗಳ ಪ್ರಗತಿಗೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಈ ಟೂರ್ನಮೆಂಟು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ಬರುವಂತಾಗಲೆಂದು ಆಶಿಸಿದರು. ಶ್ರೀ ಕೆ. ಕೆ. ಪೈಗಳು ನೆರವಾದವರೆಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಕುಂದಾಪುರದ ರೂಪರಂಗದವರಿಂದ 'ಟಿಪ್ಪುಸುಲ್ತಾನ್', ನಾಟಕಾಭಿನಯ ನಡೆಯಿತು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಹೊಸ ವರ್ಷದ ಅಭಿನಂದನೆ— ದಿ ಜನರಲ್ ಇನ್ವೆಸ್ಟ್‌ಮೆಂಟ್ & ಕಮರ್ಶಿಯಲ್ ಕೋರ್ಪೊರೇಶನ್ ಮೊದಲಾದ ಸಂಸ್ಥೆಗಳವರು ಪ್ರತಿ ವರ್ಷ ನೂತನ ವರ್ಷಾರಂಭದಲ್ಲಿ ಹಿರಿಯ ಪ್ರಮುಖರೊಬ್ಬರನ್ನು ಸತ್ಕರಿಸುವಂತೆ ತಾ. 1 ರಂದು ಮುಕುಂದ ನಿವಾಸದಲ್ಲಿ ವಿದ್ಯಾಕ್ಷೇತ್ರದಲ್ಲಿ ಅನವರತ ದುಡಿದು ಹೆಚ್ಚಿನ ಸೇವೆ ಸಲ್ಲಿಸಿರುವ ಶ್ರೀ ಯು. ಪುಂಡಲೀಕ ಶೆಣೈ ಅವರನ್ನು ಮೇಯರ್ ಶ್ರೀ ವಿ. ಬಿ. ವರ್ಲೀಕರರ ಅಧ್ಯಕ್ಷತೆಯಲ್ಲಿ ಸತ್ಕರಿಸಿದರು. ಉಪಾಹಾರವಾದ ಬಳಿಕ ಶ್ರೀ ಟಿ ರಮೇಶ ಪೈಗಳು ಸ್ವಾಗತ ಭಾಷಣ ಮಾಡುತ್ತ ಮುಖ್ಯ ಅತಿಥಿಗಳ ಗುಣ ವೈಶಿಷ್ಟ್ಯ ನೈಪುಣ್ಯತೆಗಳನ್ನು ವಿವರಿಸಿದರು. ಡಾ. ಟಿ. ಎಂ. ಎ. ಪೈ ಶ್ರೀ ಬಿ. ಶ್ಯಾಮರಾಯ ಶೆಟ್ಟಿ ಶ್ರೀ ಟಿ ಎ. ಪೈಯವರು ಶ್ರೀ ಶೆಣೆಯವರು ವಿದ್ಯಾಕ್ಷೇತ್ರಕ್ಕೆ ಸಲ್ಲಿಸಿದ ಸೇವೆ, ವಿದ್ಯಾರ್ಥಿಗಳಿಗೆ ನೀಡಿದ ನೆರವು, ಮೊದಲಾದುವನ್ನು ವಿವರಿಸಿ ಭಾಷಣವಿತ್ತರು ಶ್ರೀ ಶೆಣೈಯವರು ತನಗೇ ಗೌರವ ಅಸಮ್ಮತವಾದುದೆಂದೂ ತಾನು ಅಂತಹ ದೊಡ್ಡ ಕೆಲಸವನ್ನೇನೂ ಮಾಡಿದವನಲ್ಲವೆಂದೂ ಹೇಳಿದರು. ಅಧ್ಯಕ್ಷರು ಉಪಾಧ್ಯಾಯರೊಬ್ಬರನ್ನು ಸತ್ಕರಿಸಿದ್ದರಿಂದ ಉಪಾಧ್ಯಾಯ ಸಮುದಾಯಕ್ಕೇ ಗೌರವ ಸಲ್ಲಿಸಿದಂತಾಯಿತೆಂದೂ ಶ್ರೀ ಶೆಣೈಯವರ ಸೇವೆಯು ದೇಶಕ್ಕೆ ಸಲ್ಲುವ ರೀತಿಯಲ್ಲಿ ಕಾರ್ಯ ಮಾಡುವಂತಾಗಲೆಂದೂ ವಿದ್ಯಾಕ್ಷೇತ್ರದಲ್ಲಿ ಬಹಳ ಮುಂದುವರಿದ ಇಲ್ಲಿ ಬೇಗನೇ ಯುನಿವರ್ಸಿಟಿಯೊಂದು ಸ್ಥಾಪನೆಯಾಗಲೆಂದೂ ಹೇಳಿದರು. ಶ್ರೀ ಎ. ಜೆ. ಆಲ್ವೆಯವರು ಧನ್ಯವಾದಗಳನ್ನರ್ಪಿಸಿದರು.

ಉದ್ಘಾಟನೆ— ಪಟ್ಲ ಲೋಕಮಾನ್ಯ ತಿಲಕ ಹಾ. ಎ. ಶಾಲೆಯ ಬಾಲವಾಣಿ ಹಸ್ತಲಿಖಿತ ಪತ್ರಿಕೆಯ ಉದ್ಘಾಟನಾ ಸಮಾರಂಭವು ವಿದ್ವಾನ್ ಮುಕುಂದ ಪುರಾಣಿಕರಿಂದ ಶ್ರೀ ಎಚ್ ನಾರಾಯಣ ನ್ಯಾಕರ ಅಧ್ಯಕ್ಷತೆಯಲ್ಲಿ ತಾ. 15ರಂದು ನೆರವೇರಿತು. ಶಾಲಾ ಲೇಖಕ ಶ್ರೀ ಎಮ್. ಗೋವಿಂದ ಸೆಟ್ಟರು ಸಭಿಕರ ಪರವಾಗಿ ಮಾತನಾಡಿದರು ಮುಖ್ಯೋಪಾಧ್ಯಾಯ ಶ್ರೀ ಬಿ. ರಮಾನಂದರಾಯರು ಆರಂಭದಲ್ಲಿ ಸ್ವಾಗತಿಸಿ, ಕೊನೆಯಲ್ಲಿ ಧನ್ಯವಾದವನ್ನಿತ್ತರು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. 469/61.

ವೆಂಕಪ್ಪ ಬಂಡಾರಿ— ವಾದಿ.

ಮತ್ತು

K. A. Rahaman-Son of K. Abdul Khader, Employee of Mysore State Fire Service by Serial No. F. M. 640-Udipi.— ಪ್ರತಿವಾದಿ.

ಇವರೊಳಗೆ

ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ—

ವಾದಿಗೆ ಪ್ರತಿವಾದಿಯು ತಾ. 1—9—58 ರಲ್ಲಿ ರೂ. 60- ಕ್ಕೆ ಬರ್‍ಸಿಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಬಗ್ಗೆ ವಾದಿರು ಮಾಡಿದ ಮೇಲಿನ ದಾವೆಯು ತಾ. 15—1—62 ಕ್ಕೆ ಈ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉಪಾಪರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Y. C. S. Hegde,
Advocate for Plaintiff.

ಉಡ್ಪಿ, 2—1—62.

ಚಂದಾ ಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯಮಾಡಿರಿ

ಸಾಂಸ್ಕೃತಿಕ ಏಕತೆಯ ಸಾಧನೆ

"ಭಾರತದಲ್ಲಿ ಸಾಂಸ್ಕೃತಿಕ ಕ್ರಾಂತಿಯ ಆವಶ್ಯಕತೆ" ಎಂಬ ವಿಷಯದ ಕುರಿತು ಕೆಲವು ವರ್ಷಗಳ ಮೊದಲು ತಮ್ಮ ವಿಚಾರವನ್ನು ಡಾ| ಸಂಪೂರ್ಣಾನಂದರು ಹೀಗೆ ವ್ಯಕ್ತಪಡಿಸಿದ್ದರು: ನಾವು ರಾಜನೀತಿಕ ಕ್ರಾಂತಿಯನ್ನು ಸಾಧಿಸಿದ್ದೇವೆ; ಆದರೆ, ಈಗ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಯೊಸಗಬೇಕಾದ ಆವಶ್ಯಕತೆಯಿದೆ. ಕ್ರಾಂತಿಯಿಂದ ಹಳೆಯವೆಲ್ಲವೂ ಒಮ್ಮಿಂದೊಮ್ಮೆಗೆ ನಷ್ಟವಾಗಿ ಹೋಗುವದಿಲ್ಲ;ಹಾಗೆಯೇ ಹೊಚ್ಚಹೊಸತುಗಳು ಬರುವುದೂ ಸಾಧ್ಯವಿಲ್ಲ. ವಸ್ತುತಃ ಈ ಕ್ರಾಂತಿಯ ಮೂಲಕ ಪ್ರಾಚೀನ ಮತ್ತು ನವೀನಗಳು ಭೂತ ಮತ್ತು ಭವಿಷ್ಯಗಳೊಡನೆ ಸಮನ್ವಯಗೊಳ್ಳುವುದು" ಭಾವನಾತ್ಮಕ ಐಕ್ಯವನ್ನು ಸಾಧಿಸುವ ಉದ್ದೇಶದಿಂದ ಡಾ| ಸಂಪೂರ್ಣಾನಂದರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ರಚಿತವಾಗಿದ್ದು ಈ ಸಮಿತಿಯು ನೀಡಿದ ಸಲಹೆಗಳು ಈ ಅಭಿಪ್ರಾಯವನ್ನೇ ಬಹಳಷ್ಟು ಹೋಲುತ್ತವೆ.

ನಮ್ಮ ದೇಶವು ಸ್ವತಂತ್ರವಾಗಿ ೧೪ ವರ್ಷಗಳು ಗತಿಸಿದುವು. ಈ ವರ್ಷಗಳನ್ನು ನಾವು ಹೇಗೆ ಉಪಯೋಗಿಸಿಕೊಂಡೆವು ಎಂಬುದನ್ನು ಆಲೋಚಿಸತೊಡಗಿದರೆ, ನಮ್ಮ ಮೆದುಳಲ್ಲಿ ಪರಸ್ಪರ ವಿರೋಧೀ ಭಾವನೆಯು ಎದ್ದು ನಿಲ್ಲುವುದು. ಭೌತಿಕ ಅಭ್ಯುದಯದ ಕಾರ್ಯದಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆ ಎಂಬುದು ನಿಸ್ಸಂದೇಹ. ಆದರೆ, ಸಾಂಸ್ಕೃತಿಕ ಮಟ್ಟದಲ್ಲಿ ನಾವು ಎಷ್ಟೆತ್ತರಕ್ಕೆ ಏರಿದ್ದೇವೆ, ಅಥವಾ ನಮ್ಮ ಸಾಂಸ್ಕೃತಿಕ ಮಟ್ಟವು ಯಾವುದು—ಎಂಬುದನ್ನು ಹೇಳುವುದು ಅತಿ ಕಠಿನವಾಗಿದೆ.

ರಾಜ್ಯಕ್ರಾಂತಿಯೊಡನೆ ಸಾಂಸ್ಕೃತಿಕ ಕ್ರಾಂತಿಯೂ ಆವಶ್ಯಕ ಮತ್ತು ದೇಶದಲ್ಲಿ ಭಾವನಾತ್ಮಕ ಐಕ್ಯಸ್ಥಾಪನೆಯೇ ಇದಕ್ಕೆ ಪ್ರಥಮ ಸೋಪಾನವೆಂದು ನಿಶ್ಚಿತವಾಗಿ ಒಪ್ಪಿಕೊಳ್ಳುವ ಕೆಲವೇ ಮಂದಿ ನಾಯಕರಲ್ಲಿ ಡಾ| ಸಂಪೂರ್ಣಾನಂದರು ಒಬ್ಬರು.

ಕೆಲವು ವರ್ಷಗಳಿಗೆ ಪೂರ್ವದಲ್ಲಿ ಆಕಾಶವಾಣಿಯ ಲಖನವು ಕೇಂದ್ರದಿಂದ 'ಭಾರತೀಯ ಸಂಸ್ಕೃತಿಯ ವಿಧಾನ ಆಧ್ಯಾತ್ಮಿಕ ಅಂತರ್ದರ್ಶನ'ವೆಂಬ ಕುರಿತಾಗಿ ವಿಚಾರ ಪರಿಪ್ಲುತ ಭಾಷಣವನ್ನು ಮಾಡುತ್ತ ಡಾ. ಸಂಪೂರ್ಣಾನಂದರು 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬ ಉಪದೇಶವನ್ನು ಭಾರತ ಮಾತ್ರ ನೀಡಬಲ್ಲುದು." ಎಂದು ಉದ್ಘೋಷಿಸಿ ಎಲ್ಲರ ಪೂಜೆಗೂ ಪಾತ್ರವಾಗುವ ಪದಾರ್ಥವು ಒಂದೇ ಎಂದು ಹೇಳಲು ಭಾರತಕ್ಕೆ ಮಾತ್ರ ಸಂಪೂರ್ಣ ಅಧಿಕಾರವಿದೆ ಎಂದು ವಿವರಿಸಿದ್ದರು. ವಾಸ್ತವಿಕ ಅಂತರ್ದರ್ಶನದ ಬಾಗಿಲು ತೆರೆದಾಗ, ಅಭೇದಾನುಭೂತಿಯು ನಡೆದಾಗ, ಆ ಅವಸ್ಥೆಯಲ್ಲಿ ಧರ್ಮವು ಅದೇ ಪ್ರಕಾರ ಅನಾಯಾಸವಾಗಿ ಆಚರಿಸಲ್ಪಡುತ್ತದೆ-ಮೋಡದಿಂದ ನೀರು ಸುರಿಯುವಂತೆ" ಎಂಬುದು ಇವರ [illegible]

ಅಧ್ಯಕ್ಷತೆಯಲ್ಲಿ ನಿಯುಕ್ತವಾದ ಭಾವನಾತ್ಮಕ ಐಕ್ಯ ಸಲಹಾ ಸಮಿತಿಯು ನೀಡಿದ ಸಲಹೆಗಳು ಮತ್ತವುಗಳ ಅಂತಿಮ ಲಕ್ಷ್ಯವು ಈ ವಿಚಾರಗಳಿಂದ ಪ್ರಸ್ಫುಟಿತವಾಗಿದೆಯೆಂದು ತಿಳಿಯುವುದಿಲ್ಲವೆ?

ಭೂಮಂಡಲದಿಂದ ಸಪ್ತರ್ಷಿಮಂಡಳದ ವರೆಗೆ ಹಾರಾಡಬಲ್ಲ ಡಾಕ್ಟರ್ ಸಂಪೂರ್ಣಾನಂದರು ರಾಜನೀತಿಕ ಮತ್ತು ದಾರ್ಶನಿಕ ವಿಷಯಗಳ ಮೇಲೆಸಮಾನರೂಪವಾಗಿ ಅಧಿಕಾರ ಜಮಾಯಿಸಿಕೊಂಡವರು. ಸಂಯಮ ಮತ್ತು ವ್ಯವಸ್ಥೆಯ ಉನ್ನತ ಸಮರ್ಥಕರು. ವಿದ್ಯಾರ್ಥಿಯಿರಲಿ, ಅಧ್ಯಾಪಕನಿರಲಿ; ಸೇವಕನಿರಲಿ ಸ್ವಾಮಿಯಿರಲಿ ಎಲ್ಲರಲ್ಲಿಯೂ ಸಚ್ಚರಿತ್ರತೆ, ದೃಢಸಂಕಲ್ಪ, ಪರಿಶ್ರಮ ಪ್ರಿಯತೆ ಮತ್ತು ಕರ್ತವ್ಯ ಪರಾಯಣತೆಗಳು ಅವಶ್ಯವಿರಲೇಬೇಕು ಎನ್ನುವವರಿವರು. ವಿದ್ಯಾರ್ಥಿಗಳ ಬಗೆಗೆ ಇವರ ಹೃದಯದಲ್ಲಿ ಯಥೇಷ್ಟ ಅನುರಾಗವಿದೆ; ಆದರೂ ವಿದ್ಯಾರ್ಥಿಗಳು ವಿನಯ ಮತ್ತು ವಿದ್ಯಾಸಂಪನ್ನರಾಗಿರಬೇಕೆಂದು ಬಯಸುತ್ತಾರೆ. ಜ್ಯೋತಿಷ್ಯ, ವಿಜ್ಞಾನ, ಗಣಿತ, ದರ್ಶನಶಾಸ್ತ್ರ, ಶಿಕ್ಷಣ ಶಾಸ್ತ್ರ, ಮತ್ತು ಸಮಾಜ ಶಾಸ್ತ್ರಗಳಲ್ಲಿ ಏಕಸಮವಾದ ಆಳವಾದ ಅಭಿರುಚಿಯಿರುವ ಸಂಪೂರ್ಣಾನಂದರು ಒಂದೊಮ್ಮೆ ಸಾಧುವಾಗಿಯೂ ಇದ್ದರು. ಪ್ರಾಯಃ ಈ ಸಂಗತಿಯು ಹೆಚ್ಚಿನವರಿಗೆ ತಿಳಿದಿರಲಾರದು. ಮನೆಮಾರನ್ನು ತ್ಯಜಿಸಿ ಓಡಿ ಹೋಗಿದ್ದ ಸಂಪೂರ್ಣಾನಂದರನ್ನು ಇವರ ತಂದೆಯವರು ಒಲಿಸಿ ಮರಳಿ ಕರೆತರಬೇಕಾದರೆ, ಭಗೀರಥ ಪ್ರಯತ್ನವೇ ಬೇಕಾಗಿತ್ತು. ಅನಂತರ ಸಂಪೂರ್ಣಾನಂದರು ಮನೆಬಿಟ್ಟು ಓಡಲಿಲ್ಲ; ಆದರೆ, ಅವರ ಸಾಧು ವೃತ್ತಿ ಮಾತ್ರ ಸ್ಥಿರವಾಗಿ ಉಳಿಯಿತು.

ಜನವರಿ ಒಂದನೆಯ ದಿನ ಡಾ| ಸಂಪೂರ್ಣಾನಂದರ ಜನ್ಮದಿನ. ಅವರ ಅನುಭವದ ಆಳದಲ್ಲಿ ಭಾರತಕ್ಕೆ ಸೂಕ್ತ ಮಾರ್ಗದರ್ಶನ ದೊರೆಯಬೇಕಾದುದು ಅನಿವಾರ್ಯವಾದುದರಿಂದ ಆರೋಗ್ಯವಂತರಾಗಿ ಸಫಲ ಜೀವನವನ್ನು ಇನ್ನೂ ಬಹುಕಾಲ ಬದುಕಲಿ ಎಂದು ದೇಶಕ್ಕೆ ದೇಶವೇ ಹಾರೈಸುತ್ತದೆ.

ಅಮೇರಿಕೆಯ ದ್ವಿತೀಯ ಗಗನಯಾತ್ರಿ ಲೆಫ್ಟಿನೆಂಟ್ ಗ್ರಿಸಂರವರು ಅಧ್ಯಕ್ಷ ಕೆನ್ನೆಡಿಯವರೊಡನೆ ರೇಡಿಯೋ ಟೆಲಿಫೋನಿನಲ್ಲಿ ಮಾತಾಡುತ್ತಿರುವುದನ್ನು ತೋರಿಸುವ ಚಿತ್ರವಿದು.

ಅಮೃತ ಬಿಂದು

ಪಾತ್ರೆಗೆ ಯಾವುದಾದರೂ ವಸ್ತು ತುಂಬಿದ್ದಾಗ ಅದರ ಜೀವನ ಸಾರ್ಥಕ, ಮನುಷ್ಯನಿಗೆ ಪ್ರೇಮ ತುಂಬಿದ್ದಾಗ ಮಾತ್ರ ಆತನ ಪುರುಷಾರ್ಥ.

○ ○ ○

ತಾನು ರಚಿಸಿದ ದೇವಾಲಯ, ಸೃಜಿಸಿದ ವಿಗ್ರಹದ ಮುಂದೆ ಮನುಷ್ಯನು ಹಾಡಿ ಪ್ರಾರ್ಥಿಸಿದರೆ, ಭಗವಂತನ ರಚನೆಯಾದ ಪ್ರಕೃತಿಯು ಮಡಿಲಲ್ಲಿ ಹಕ್ಕಿ ಹಾಡುತ್ತದೆ!

○ ○ ○

ನಮ್ಮ ಅಹಂಭಾವ, ಹೆಗ್ಗಳಿಕೆ, ಸ್ವಾರ್ಥಬಯಕೆಗಳು ಪಟಾಕಿ, ಬಾಣ ಬಿರುಸುಗಳಂತೆ ಭಕ್ತಿ, ಅನನ್ಯತೆ, ಸದ್ಭಾವಗಳು ಆಕಾಶದ ನಕ್ಷತ್ರಗಳಂತೆ!

○ ○ ○

ಶರೀರದ ಗಾಯ, ನೋವುಗಳು ಗೌರವಾರ್ಹ. ಏಕೆಂದರೆ ಜೀವನದಲ್ಲಿ ಇದು ಎದೆಕೊಟ್ಟು ಎದುರಿಸಿದ ಜೀವವಲ್ಲದೆ ತಲೆ ಮರೆಸಿ ಅಳುಕಿದುದಲ್ಲವೆಂಬುದನ್ನು ಅವು ಹೇಳುತ್ತವೆ.

○ ○ ○

ಯೌವನ ಕಾಲದ ಕೆಲಸ ಮಳೆಗಾಲದ ಮೋಡದಂತೆ. ಅಲ್ಲಿ ರಾಗವೇಗಗಳಿಂಬ ಸಿಡಿಲು, ಮಿಂಚು, ಮಳೆ ತುಂಬಿರುತ್ತದೆ. ವೃದ್ಧಾಪ್ಯದ ಕೆಲಸ ಸಂಜೆಯ ಮೋಡದಂತೆ, ಅದು ರಾಗವೇಗಗಳಿಲ್ಲದೆ ರಮ್ಯ ರಮಣೀಯವಾಗಿ ಮೆರೆದಿರುತ್ತದೆ!

○ ○ ○

ಅವನ ಯೋಗ್ಯತೆ, ಹಾಗೂ ನೈಜತೆಯನ್ನು ಮೀರಿ ಹಬ್ಬಿರದ ಕೀರ್ತಿಯುಳ್ಳವನು ಅದೃಷ್ಟಶಾಲಿ.

○ ○ ○

ಮಗುವಿನ ಪಾವಿತ್ರ್ಯ, ನಿಸ್ವಾರ್ಥ ಹಾಗೂ ನಿಷ್ಕಲಂಕತೆಯನ್ನು ಸಂಪಾದಿಸಲೆಂದು ಮಾನವನಿಗಾಗಿ ಭಗವಂತನು ಆತನ ವೃದ್ಧಾಪ್ಯದ ವರೆಗೆ ಕಾಯುತ್ತಾನೆ

○ ○ ○

ಆತ್ಮ ಸಂಪಾದಿಸಿದ ಅಮೂಲ್ಯ ಗುಣಗಳನ್ನು ಮೃತ್ಯು ಅಪಹರಿಸಲಾರದು.

○ ○ ○

ಖ್ಯಾತಿಯ ಶಿಖರಕ್ಕೇರಿದವನಿಗೆ ಯಾರ ಆಶ್ರಯವೂ ದೊರೆಯದು.

○ ○ ○

ಅಜ್ಞಾನದ ಕತ್ತಲೆ ಕವಿದಾಗ ಮರದ ಕೊರಡೂ ಭೂತವಾಗಿ ತೋರುತ್ತದೆ ಜ್ಞಾನಸೂರ್ಯನ ಬೆಳಕಿನಲ್ಲಿ ಎಲ್ಲವೂ ಸ್ಪಷ್ಟ.

○ ○ ○

ಸಂದರ್ಭ ಬಂದಾಗ ಅದನ್ನು ಉಪಯೋಗಿಸಿಕೊಳ್ಳುವ ಜಾಣ್ಮೆಯೇ ಜಯಕ್ಕಿರುವ ಹೆದ್ದಾರಿ.

○ ○ ○

ದಕ್ಷತೆಯು ಮನುಷ್ಯನನ್ನು ಕೀರ್ತಿಯ ಶಿಖರಕ್ಕೇರಿಸಬಹುದು. ಆದರೆ ಯೋಗ್ಯತೆ ಮಾತ್ರ ಆತನನ್ನು ಅಲ್ಲಿಂದ ಬೀಳ [illegible]

ಉದಯೋನ್ಮುಖ ಲೇಖಕ ಶ್ರೀ. ಪಿ ಎಸ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ,ಎಂ.ಬಿ.,ಬಿ.ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ನೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ. 2=00

ರೂ. ೨=೨೫ ನ. ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು

ನವಭಾರತ ಪುಸ್ತಕ ಭಂಡಾರ. ಉಡುಪಿ.

ಸತ್ವಪೂರ್ಣ ಸಾಹಿತ್ಯ ಬೆಳೆಯಲಿ

(೪ನೇ ಪುಟದಿಂದ)

ನಾಟಕದ ಗುರಿಯಾಗಲಾರದು ಉತ್ತಮೋತ್ತಮ ನಾಟಕಗಳನ್ನು ಬರೆಯಬೇಕು.

ಪ್ರಾಚೀನ ಕಾವ್ಯಗಳು ಮಾಡುತ್ತಿದ್ದ ಕಾರ್ಯವನ್ನು ಕಾದಂಬರಿಗಳು ಮಾಡಬಲ್ಲುವು. ಆದರ ವಸ್ತುವಿನ್ಯಾಸ, ವಿಷಯ ನಿರೂಪಣೆ, ಪಾತ್ರನಿರ್ಮಿತಿ ಎಲ್ಲವೂ ಹೊಸದು. ಕೆಂಪು ನಾರಾಯಣರ ಮುದ್ರಾ ಮಂಜೂಷ ಮತ್ತು ವೆಂಕಟಾಚಾರ್ಯರ ಕಾದಂಬರಿಗಳಿಂದ ನಮ್ಮ ಕಾದಂಬರಿ ಸಾಹಿತ್ಯದ ಪ್ರಥಮ ಘಟ್ಟ ಪ್ರಾರಂಭವಾಯ್ತು. ಅಲ್ಲಿ ತಂತ್ರ ಹಳೆಯದು; ಪಾತ್ರ ಸೃಷ್ಟಿಗೆ ಮಹತ್ವವಿಲ್ಲ; ರೋಮಾಂಚಕ ಕಥೆ ಮಾತ್ರವಿದೆ ನಡುನಡುವೆ ಉಪದೇಶವೂ ಇದೆ. ಮುಂದೆ, ಎಂ. ಎಸ್. ಪುಟ್ಟಣ್ಣ, ಕೆರೂರ ವಾಸುದೇವಾಚಾರ್ಯರ ಕಾದಂಬರಿಗಳು ಬೆಳಕಿಗೆ ಬಂದುವು. ಕಾರಂತ, ಅನಕೃ, ಕುವೆಂಪು, ತರಾಸು, ಕೃಷ್ಣಮೂರ್ತಿ ಪುರಾಣಿಕ, ನಿರಂಜನ ಮೊದಲಾದವರು ಉತ್ತಮೋತ್ತಮ ಕಾದಂಬರಿಗಳನ್ನು ನಮಗೆ ನೀಡಿದರು.

ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ಕನ್ನಡ ಸಾಹಿತ್ಯದ ಗಾತ್ರ ಹಿರಿದಾಗಿದೆ ಸತ್ವ ಕಡಿಮೆಯಾಗಿದೆ. ಕಾದಂಬರಿ ಲೇಖಕರು ಕೇವಲ ಮನರಂಜನೆಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು ತೀರ ಕಳದರ್ಜೆಯ ಕಾದಂಬರಿಗಳನ್ನು ಬರೆಯುತ್ತಿರುವುದು ಅತ್ಯಂತ ಶೋಚನೀಯ. ಎಲ್ಲ ಕೃತಿಗಳಲ್ಲಿಯೂ ಆದರ್ಶವಿರಬೇಕೆಂದಲ್ಲ, ವಾಸ್ತವಿಕವಾದ, ಸತ್ಯವಾದ, ಕಲಾಪೂರ್ಣವಾದ ನಿರೂಪಣೆಯ ಅಂತರಾಳದಿಂದಲೇ ಆದರ್ಶ ಧ್ವನಿತವಾಗಬೇಕು. ಇದನ್ನು ಮರೆತು ವಾಸ್ತವಿಕತೆಯ ನೆವದಲ್ಲಿ ಅಶ್ಲೀಲವಾದುದೆಲ್ಲವನ್ನೂ ಹೇಳ ಹೊರಟರೆ, ಸಾಹಿತ್ಯ ಹದಗೆಟ್ಟು ಹೋಗುತ್ತದೆ ಇಂತಹವುಗಳನ್ನು ಓದಿ ನಮ್ಮ ಜನತೆಗೆ ನಾಡು-ನುಡಿಗಳ ಬಗೆಗೆ ಆದರ ಅಭಿಮಾನ ಹುಟ್ಟಿ ಅವರು ಅಂದಿನ ಮಹಾ ಜೀವಿಗಳ ಪರಿಚಯ ಮಾಡಿಕೊಳ್ಳುತ್ತಾರೆ. ಆದರೆ, ಐತಿಹಾಸಿಕ ಕಾದಂಬರಿಗಳನ್ನು ಬರೆವ ವ್ಯಕ್ತಿಯ ಹೊಣೆಗಾರಿಕೆ ಹೆಚ್ಚು.

ಸಮಾಜದಲ್ಲಿ ಒಡಕನ್ನು ಹುಟ್ಟಿಸುವ, ಅದರ ಸ್ವಾಸ್ಥ್ಯವನ್ನು ಇಲ್ಲದಂತೆ ಮಾಡುವ, ಕ್ಷೋಭೆಯೆಬ್ಬಿಸುವ ಕೃತಿಗಳನ್ನೇ ರಚಿಸಿ ಅದನ್ನೇ ಸಮರ್ಥಿಸುವ ಸಾಹಸಕಾರ್ಯ ಮಾಡುವವರೂ ಇದ್ದಾರೆ. ಇವರಿಂದ ಸಾಹಿತ್ಯಕ್ಕೂ ಕಲ್ಯಾಣವಿಲ್ಲ; ಸಮಾಜಕ್ಕೂ ಇಲ್ಲ. ಇಂತಹ ಕೃತಿಗಳಿಗೆ ಪ್ರೋತ್ಸಾಹ ಕೊಡಬಾರದು

ಹರಟೆ—ಪ್ರಬಂಧ ಎಂಬುದು ಕನ್ನಡಕ್ಕೆ ಹೊಸದು. ಇದು ತಿಳಿ ಹಾಸ್ಯ ಝರಿಯಾಗಿ ಹರಿದು, ಸಹೃದಯನನ್ನು ಆನಂದಸಾಗರದಲ್ಲಿ ತೇಲಿಸುತ್ತದೆ ಇದರ ಗರ್ಭದಲ್ಲಿ ಸಮಾಜದ ಗುಣ ದೋಷಗಳ ಚಿತ್ರಣವಿರುತ್ತದೆ. ಹಾಸ್ಯ, ವಿಡಂಬನೆ, ಗಂಭೀರ ಆಲೋಚನೆ ಯಾವ ಮಾರ್ಗವನ್ನೇ ಹಿಡಿದರೂ ಸಮಾಜದ ಕಲ್ಯಾಣ ಅದರ ಗುರಿಯಾಗಿರುತ್ತದೆ ಹರಟೆ ಪ್ರಬಂಧಗಳು ಕನ್ನಡದಲ್ಲಿ ಸಾಕಷ್ಟು ಬಂದಿಲ್ಲ ನಾ. ಕಸ್ತೂರಿ, ಗೋರೂರು, ಶಿವರಾಂ, ಲಾಂಗೂಲಾಚಾರ್ಯ, ಮುಂತಾದವರು ಅತ್ಯುತ್ತಮ ಹರಟೆ ಪ್ರಬಂಧ ಸಾಹಿತ್ಯವನ್ನು ಒದಗಿಸಿ ಕೊಟ್ಟಿದ್ದಾರೆ

ವೃತ್ತಪತ್ರಗಳು ನಾಡಿನ ನಾಡಿ, ಸಮಾಜದ ಜೀವಾಳ; ಸರಕಾರಕ್ಕೆ ಅಂಕುಶ ಕನ್ನಡ ವೃತ್ತ ಪತ್ರಿಕೆಗಳು ಭಾರತೀಯ ಪತ್ರಿಕಾ ವ್ಯವಸಾಯದಲ್ಲಿ ಗಣ್ಯವಾದ ಸ್ಥಾನವನ್ನು ಪಡೆದಿವೆ, ಕನ್ನಡ ನಾಡಿನ ಸರ್ವಾಂಗೀಣ ಉನ್ನತಿಗೆ ಕಾರಣವಾಗಿವೆ

ಉತ್ತಮ ವಿಮರ್ಶೆಯಿಲ್ಲದೆ ಉತ್ತಮ ಸಾಹಿತ್ಯ ನಿರ್ಮಾಣವಾಗಲಾರದು. ಸಾಹಿತ್ಯ ವಿಮರ್ಶಕನು ಸಹೃದಯನಿಗೆ ಕೃತಿಯ ರಸಾಸ್ವಾದನೆ ಮಾಡಲು ಅನುಕೂಲವಾಗುವಂತೆ ಕಾವ್ಯದ ಇಂಗಿತವನ್ನೆಲ್ಲ ಬಿಚ್ಚಿ ಬಿಚ್ಚಿ ಹಂಚಿ ತೋರಿಸುತ್ತಾನೆ. ಕವಿ ಮತ್ತು ವಿಮರ್ಶಕರು ನಾಣ್ಯದ ಎರಡು ಮುಖಗಳಿದ್ದಂತೆ ವಿಮರ್ಶನ ಶಕ್ತಿಯಿಲ್ಲದ ಕವಿ, ಕಾವ್ಯಶಕ್ತಿಯಿಲ್ಲದ ವಿಮರ್ಶಕ—ಘನತೆಯನ್ನು ಪಡೆಯಲಾರರು. ನಮ್ಮ ಸಾಹಿತ್ಯದಲ್ಲಿ ಸ್ವಲ್ಪ ಮಟ್ಟಿಗೆ ವಿಮರ್ಶೆಯ ಕಾರ್ಯ ನಡೆದಿದೆ

ಇದು ಜ್ಞಾನ ಪ್ರಧಾನವಾದ ಯುಗ. ಮಾನವನ ಜಿಜ್ಞಾಸೆ ನಾನಾ ಬಗೆಯಾಗಿ ಬೆಳೆಯುತ್ತಲಿದೆ. ಕನ್ನಡವು ಈಗ ತಾನೇ ಜ್ಞಾನ ಸಾಹಿತ್ಯದ ಕಡೆಗೆ ಕಣ್ದೆರೆದಿದೆ. ಇದ್ದ ಕೆಲವು ಪುಸ್ತಕಗಳು ಭಾಷಾಂತರ—ಪಠ್ಯ ಪುಸ್ತಕಗಳ ರೂಪದಲ್ಲಿರುವವುಗಳು. ನಮ್ಮಲ್ಲಿ ವೈಜ್ಞಾನಿಕ ವಿಚಾರವನ್ನು ಮಾಡುವ ಬುದ್ಧಿ ಬೆಳೆಯಬೇಕು. ವೈಜ್ಞಾನಿಕ ಸಂಶೋಧಕರ ಸಂಖ್ಯೆ ಹೆಚ್ಚಾಗಿ ಅವರು ಕನ್ನಡದಲ್ಲಿಯೇ ವಿಚಾರಿಸಲು ಪ್ರಯತ್ನಮಾಡಬೇಕು. ನಮ್ಮಲ್ಲೀಗ ನಾಡಿನ ಬಗೆಗೇನೋ ಅಭಿಮಾನ ಬಲವಾಗಿದೆ. ಆದರೆ, ನುಡಿಯ ಬಗೆಗೂ ಅಭಿಮಾನ ಜಾಗೃತವಾಗುತ್ತ ಬಂದಂತೆ ಕಂಡು ಬರುವುದಿಲ್ಲ. ಆಂಗ್ಲ ಭಾಷೆಯಿಂದಲೇ ನಮಗೆ ವೈಜ್ಞಾನಿಕ ಜ್ಞಾನ ಬರಬೇಕಾಗಿಲ್ಲ. ಆ ಭಾಷೆಯಿಂದಲೇ ಮೋಕ್ಷವೆಂದು ತಿಳಿಯಬಾರದು. ಭಾರತೀಯ ಭಾಷೆಗಳನ್ನು ಕಡೆಗಣಿಸಬಾರದು. ಕನ್ನಡ-ಇಂಗ್ಲಿಷ್‌ಗಳು ನಮ್ಮ ನಾಡಿನಲ್ಲಿ ಒಂದಕ್ಕೊಂದು ಪೂರಕವಾಗಿರಬೇಕು. ಅಂತಾರಾಷ್ಟ್ರೀಯ ಪಾರಿಭಾಷಿಕ ಕೋಶವನ್ನು ಮುಂದಿಟ್ಟುಕೊಂಡು ಭಾರತೀಯ ಭಾಷೆಗಳಿಗೂ ಸಮಗ್ರವಾದ ಪಾರಿಭಾಷಿಕ ಶಬ್ದಗಳನ್ನು ನಾವು ನಿರ್ಮಿಸಿಕೊಳ್ಳುವುದು ಅಪೇಕ್ಷಣೀಯ.

ಭಾರತ ಹಿಂದು ಎಂದಿಲ್ಲದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದೆ. ಚೀನ-ಪಾಕಿಸ್ತಾನಗಳು ಭಾರತವನ್ನು ಅರ್ಥಮಾಡಿಕೊಳ್ಳದೆ ಪ್ರಕ್ಷುಬ್ಧ ವಾತಾವರಣ ಹುಟ್ಟಿಸುತ್ತಿವೆ. ಭಾರತವು ಈಗ ಮುಕ್ಕಣ್ಣವಿಂಟ ಪುರುಷನ ಸ್ವರೂಪವನ್ನು ತಳೆಯಬೇಕಾಗಿದೆ. ಇಂತಹ ಸಮಯದಲ್ಲಿ ನಾವೆಲ್ಲರೂ ಐಕ್ಯ ಭಾವನೆಯಿಂದಿರುವುದು ಅವಶ್ಯ. ನಮ್ಮ ರಾಜ್ಯದಲ್ಲಿಯೂ ತೊಡಕುಗಳಿವೆ. ಹಳೆ ಮೈಸೂರು, ಹೊಸ ಮೈಸೂರು, ಉತ್ತರ ದಕ್ಷಿಣ ಎಲ್ಲವೂ ಕನ್ನಡವೇ. ಇಂತಹ ಪ್ರಾಂಜಲ ಮನಸ್ಸಿನಿಂದ ಪರಿಶುದ್ಧ ಭಾವನೆಯಿಂದ ವಿಚಾರಿಸಿದರೆ, ನಾಡಿನ ಹೆಸರು ಕರ್ನಾಟಕವೆಂದು ಏಕೆ ಆಗಬಾರದು!

ನವ ರಾಜ್ಯೋದಯವಾದ ನಂತರ ಹಲಕೆಲವು ಕನ್ನಡ ಪ್ರದೇಶಗಳು ಇನ್ನೂ ಹೊರಗುಳಿದಿವೆ ಸೊಲ್ಲಾಪುರ, ಜತ್ತ, ಅಕ್ಕಲಕೋಟೆ, ಮೀರಜ, ಸಾಂಗ್ಲಿ, ಕಾಸರಗೋಡು, ನೀಲಗಿರಿ, ಅನಂತಪುರ, ಕರ್ನೂಲ ಮೊದಲಾದ ಗಡಿಪ್ರದೇಶದ ಕನ್ನಡಿಗರು ನಮ್ಮ ರಾಜ್ಯದಲ್ಲಿ ಸೇರಿಕೊಳ್ಳಲು ಕಾತರರಾಗಿದ್ದಾರೆ. ಇವರೆಲ್ಲರಿಗೂ ನ್ಯಾಯ ದೊರಕುವಂತೆ ಸಮದೃಷ್ಟಿಯಿಂದ, ಸಮ್ಯಕ್ ದೃಷ್ಟಿಯಿಂದ ನಾವು ಪ್ರಯತ್ನಿಸಬೇಕು.

ಪಂಡಿತ ನೆಹರುಗಳನ್ನು ಅವರ ೭೨ನೆಯ ಜನ್ಮದಿನದಂದು ಅಮೆರಿಕೆಯ ಡಿಸ್ನಿಲೇಂಡಿನಲ್ಲಿ ಮಕ್ಕಳು ಸಂಗೀತದೊಡನೆ ಸ್ವಾಗತಿಸಿದರು.

ನಮ್ಮ ಸರಕಾರದ ಅಂಗವಾಗಿರುವ ಸಂಸ್ಕೃತಿ ಸಂವರ್ಧನ ಶಾಖೆಯು ಅತ್ಯಂತ ಪ್ರಶಂಸನೀಯವಾಗಿ ಕೆಲಸ ಮಾಡುತ್ತಿದೆ. ಸರಕಾರವು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಕನ್ನಡ ವಿಶ್ವಕೋಶವೊಂದನ್ನು ೨೫ ಲಕ್ಷ ರೂಪಾಯಿ ವೆಚ್ಚದಿಂದ ತೃತೀಯ ಯೋಜನಾವಧಿಯಲ್ಲಿ ನಿರ್ಮಿಸಲು ಸಿದ್ಧತೆ ಮಾಡಿದೆ. Karnatak through the Ages ಎಂಬ ಗ್ರಂಥ ರಚನೆಯನ್ನೂ ಮತ್ತಿತರ ಕೆಲವು ಪ್ರಕಟಣೆಗಳನ್ನೂ ಸಂಸ್ಕೃತಿ ಪ್ರಕಾಶನ ಶಾಖೆಯು ಮಾಡಿದೆ; ಮಾಡುತ್ತಿದೆ

ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಸಾಹಿತ್ಯ—ಸಂಸ್ಕೃತಿಗಳ ಸಂವರ್ಧನೆಗೆ ವ್ಯವಸ್ಥಿತ ಸಂಸ್ಥೆಗಳಲ್ಲಿ ಹಿರಿಯ ಸಂಸ್ಥೆ. ರಾಜ್ಯೋದಯವಾದ ಮೇಲೆ ಪರಿಷತ್ತು ತನ್ನ ಕರ್ತವ್ಯವನ್ನು ಇನ್ನೂ ಹೆಚ್ಚು ದಕ್ಷತೆಯಿಂದ ನೆರವೇರಿಸುತ್ತಿದೆ ಕನ್ನಡ ವಾಙ್ಮಯದ ಅಭ್ಯಾಸಕ್ಕೆ ಸಮರ್ಪಕವಾದ ಕನ್ನಡ ಕನ್ನಡ ಕೋಶವೊಂದನ್ನು ಪರಿಷತ್ತು ವಿಶ್ವ ಪ್ರಯತ್ನ ಮಾಡಿ, ಸರಕಾರದಿಂದ ೧೫ ಲಕ್ಷ ರೂಪಾಯಿಗಳ ಸಹಾಯದಿಂದ ತಯಾರಿಸುತ್ತಿದೆ. ಕವಿ ಚರಿತೆಯ ಪ್ರಥಮ ಸಂಪುಟವು ಅಚ್ಚಾಗಿದೆ. ದ್ವಿತೀಯ ಸಂಪುಟವೂ ಅಚ್ಚಿನಲ್ಲಿದೆ. ವಿವೇಕ ಚಿಂತಾಮಣಿ, ಸೂಕ್ತಿ ಸುಧಾರ್ಣವದಂತಹ ಉದ್ಗ್ರಂಥಗಳನ್ನೂ ಪರಿಷತ್ತು ಪ್ರಕಟಿಸುವ ಯೋಜನೆಯನ್ನಿಟ್ಟುಕೊಂಡಿರುವುದು ಸ್ತುತ್ಯ. ಸಾಹಿತ್ಯ ಸಮ್ಮೇಳನಗಳು ೪೩ನೆಯ ಬಾರಿಗೆ ನಡೆಯುತ್ತಿದೆ. ಈ ಸಮ್ಮೇಳನಗಳ ಫಲ ಶ್ರುತಿಯೇನೆಂದು ವಿಚಾರಿಸುವ ಕಾಲವೀಗ ಸಂಪ್ರಾಪ್ತವಾಗಿದೆ. ಇದು ಬುದ್ಧಿಮತ್ತೆಯ ಯುಗ. ಭಾವನಾ ಪ್ರಧಾನವಾದ ಉತ್ಸವ ಈಗ ನಿಂತುಹೋಗಿದೆ ಇನ್ನು ಮುಂದೆ ನಮ್ಮ ಸಮ್ಮೇಳನಗಳ ಬೌದ್ಧಿಕ ಮಟ್ಟ ಮೇಲಕ್ಕೇರಬೇಕು. ನಮ್ಮ ನಾಡಿನಲ್ಲಿ ಸಂಶೋಧನೆ ಲಲಿತವಾಙ್ಮಯ- ಇವು ಯಾವ ಯಾವ ದಿಸೆಯಲ್ಲಿ ನಡೆದಿವೆ

(೧೨ನೇ ಪುಟ ನೋಡಿರಿ)

Tel. 'BLUEYAGAR'. —— ಚಿನ್ನ ಮುತ್ತು ವಜ್ರಗಳ ಆಧುನಿಕ ತವರುಮನೆ —— Phone. 374

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ.1919] ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಮಾತುಗಾರ್ತಿ ಮಹಿಳೆಯರು

ಶ್ರೀ 'ಸಿರಿಪತಿ'

ನಮ್ಮಲ್ಲಿ ನಡೆಯುವ ವಿನೋದ ಕೂಟ, ಸಾರ್ವಜನಿಕ ಸಮಾರಂಭಗಳಲ್ಲಿ ಇತ್ತಿತ್ತಲಾಗಿ ಮಹಿಳೆಯರ ಸಂಖ್ಯೆಯೇ ಹೆಚ್ಚುತೊಡಗಿದೆ. ಯಕ್ಷಗಾನ, ಕೀರ್ತನೆಯ ಸಾಂಪ್ರದಾಯಿಕ ಕಾರ್ಯಗಳಲ್ಲಂತೂ ಹೆಂಗಸರೇ ಹೆಚ್ಚು. ಅದರಲ್ಲಿಯೂ ಗದ್ದಲದ ಪ್ರಮಾಣವನ್ನು ಪರಿಶೀಲಿಸಿದರೆ ಮಹಿಳಾ ವಿಭಾಗದಿಂದಲೇ ಹೆಚ್ಚು ಗದ್ದಲವೇಳುವುದೆಂದು ಸಹಜವಾಗಿ ಹೇಳಬಹುದು.

ಹತ್ತು ಜನ ಮಹಿಳೆಯರೊಂದು ಸ್ಥಳದಲ್ಲಿ ಸೇರಿದರೆ ಸರಿ. ನೂರು ಜನ ಗಂಡಸರಿಂದಲಸಾಧ್ಯವಾದ ಗುಲ್ಲು ಎಬ್ಬಿಸುವರು. ಇದು ಅವರ ಸ್ವಭಾವ ಅನ್ಯಥಾ ಭಾವಿಸಿಕೊಳ್ಳಬೇಡಿ. ಈ ಗದ್ದಲಕ್ಕೆ ಯಾವದೆ ವಿಶಿಷ್ಟ ಕಾರಣವಾಗಲಿ, ವ್ಯಕ್ತಿಗುರಿಯಾಗಲಿ ಇರುವದಿಲ್ಲವಷ್ಟೆ ಅಲ್ಲದೆ ಇದರಿಂದ ಯಾರಿಗೂ ಅನರ್ಥವಾಗುವ ಪ್ರಮೇಯವಿಲ್ಲ ಕೇವಲ ಚರ್ಚೆ ವಿತರ್ಕ ಬುದ್ಧಿ, ವಿಚಾರ ವಿನಿಮಯ-ಗ್ರಾಮದಿಂದ ದೇಶದುನ್ನತಿಯನ್ನು ಹಿಡಿದು-ಮನೆಯಿಂದ ಮಠದ ವರೆಗೆ-ಹಿರಿಸಂಬಂಧ ಸಂಬಂಧಿಕರಿಂದ ಹಿಡಿದು—ಮರಿಸಂತಾನದ ವಿಷಯವನ್ನೊಳಗೊಂಡ ಅವರ ಪರಸ್ಪರ ಚರ್ಚೆಯಲ್ಲಿ ಮಧ್ಯೆ ನಗೆ-ಅಳು-ಸೀನು-ಕೆಮ್ಮುಗಳಿಂದ-ಇಡೀ ವಿಭಾಗವೇ ಗದ್ದಲಕ್ಕಾಗಿ ಏರ್ಪಾಡಾಗಿದ್ದ ಕೂಟದ ಕಣವಾಗಿ ಪರಿಣಮಿಸುವದು.

ಸ್ವಭಾವತಃ ಹೆಂಗಸರು ಬಹು ಮಾತುಗಾರರಲ್ಲದೆ ಅವರಲ್ಲಿ ಮಾತಾಡುವ ಬಗ್ಗೆ ಆಸಕ್ತಿಯೂ ಬಹಳ, ಕಾರಣವಿಷ್ಟೆ. ಸ್ತ್ರೀಯರಲ್ಲಿ ಯಾವ ಗೌಪ್ಯವೂ ಬಹಳ ವೇಳೆ ನಿಲ್ಲಲಾರದು. ಹೀಗಾಗಿ ಅವರಲ್ಲಿ ಪರರಿಗೆ—ಹೇಳಲಿರುವ ವಿಷಯಗಳು ಹಲವು ದಾಸ್ತಾನಾಗಿಯೇ ಇರುವವು. ಮನೆಯಲ್ಲಿ ಹಿರಿಯರು ಗಂಡಸರುಗಳ ಮುಂದೆ ಮಾತಾಡಲು ಅವರಿಗೆ ಸಂಕೋಚ!! ಹೀಗಾಗಿ ಮದುವೆ ಉಪನಯನಗಳಂಥ ಕಾರ್ಯದಲ್ಲಿ ಬಿಚ್ಚು ಮನಸ್ಸಿನಿಂದ ಪರಿಚಿತರಲ್ಲಿ ಹಾಗೂ ಗೆಳತಿಯರಲ್ಲಿ ತಮ್ಮ ಮನದಿಂಗಿತ ಹಾಗೂ—ತಮ್ಮ ಮನದಲ್ಲಿದ್ದ' ದಾಸ್ತಾನ್' ಆಗಿರುವ ವಿಷಯಗಳನ್ನು ಹೇಳಲು ಅವಕಾಶವನ್ನು ಕಂಡುಕೊಳ್ಳುವರು.

ನವರಾತ್ರಿಯಲ್ಲಿ ನಾನು ನನ್ನಕ್ಕನೊಡನೆ ಕೀರ್ತನೆಗೆ ಹೋಗಿದ್ದೆ. ಕೀರ್ತನೆ ಪ್ರಾರಂಭವಾದಾಗಿನಿಂದ ಮಾತಿಗಾರಂಭಿಸಿ ಕೀರ್ತನೆ ಮುಗಿಯುವಾಗ ನನ್ನಕ್ಕ ಗೆಳತಿಯೊಡನೆ "ಸೀತೂ, ಇಂದು ಕೀರ್ತನೆ ಬೇಗ ಮುಗಿಯಿತು! ನಾಳೆ ಬೇಗ ಬರಬೇಕು. ನಮ್ಮ ಮಾತು—ಅರ್ಧದಲ್ಲಿಯೇ ಉಳಿಯಿತು"—ಎಂದು ಪರಿತಪಿಸಿ ಒಂಬತ್ತನೇ ದಿನದ ವರೆಗೂ ಅವರು ಹಾಗೇ ಮಾತಾಡಿ ಕೊನೆಗೆ ಒಂಬತ್ತನೇ ದಿನವೂ ಅವರ ಮಾತು ಮುಗಿಯದೆ ಮುಂದಿನ ವಾರ ಸೇರಲಿರುವ ಮಹಿಳಾ ಸಮಾಜದ ವಾರ್ಷಿಕೋತ್ಸವದ ದಿನ ಮಾತಾಡೋಣ ಎಂದಿದ್ದರು.!

ಕೆಲ ಮಹಿಳೆಯರಿಗೆ ತಮ್ಮ ತಮ್ಮ ಮನೆಯಲ್ಲಿ ಸರಿಯಾದ ಮಾತುಗಾರರು ಸಿಗದೆ, ನೆರಮನೆಯ ಗೆಳತಿಯರಲ್ಲೋ—ಅಥವಾ ನೆಂಟರ ಮನೆಗೋ ಹೋಗಿ ತಮ್ಮ ಮಾತನಾಡುವ 'ತಲಬು' ತೀರಿಸಿಕೊಂಡು ಬರುವರು. ಕೆಲವರು ತಮ್ಮ ಕೈಕೆಲಸ ಮಾಡುವಾಗಲೇ ನೂರಾರು ವಿಷಯಗಳ ಮೇಲೆ ಮಾತಾಡುತ್ತಾರೆ. ಮನೆಯಲ್ಲಿ ಮಾತಾಡಲು ಸಂಕೋಚವಾದಲ್ಲಿ ಬಾವಿಕಟ್ಟೆಯಲ್ಲಿಯೋ ದನದ ಹಟ್ಟಿಯಲ್ಲಿಯೋ ನೆರಮನೆಯವರ ಜೊತೆಗೆ ಯಾ ಕೆಲಸ ಮಾಡುವವರ ಜೊತೆಗೆ ಮಾತಾಡುತ್ತಾ ತಮ್ಮ ಕೆಲಸವನ್ನೆಲ್ಲಾ ಮರೆತು ನಿಂತು ಬಿಡುತ್ತಾರೆ.

ಹಾಲು ಕಾಯಿಸಲು ಒಲೆಯ ಮೇಲಿಟ್ಟು ಆಚೆಗೆ ಮಾತು ಪ್ರಾರಂಭಿಸಿ ತಿರುಗಿ ಬಂದು ಬರಿ ಪಾತ್ರೆಯನ್ನು ಕಂಡು ಹಾಹಾರಿ ಎಚ್ಚತ್ತು. ಯಜ್ಞೇಶ್ವರನನ್ನು ಶಪಿಸುವ ಮಹಿಳೆಯರೆಷ್ಟು? ಹಾಲನ್ನು ಮುಚ್ಚಿಡಲು ಮರೆತು ಮಾತಿನಲ್ಲಿ ತೊಡಗಿ ಬೆಕ್ಕು ಬಂದು ಹಾಲು ಕುಡಿದು ಹೋದ ನಂತರ ತಿರುಗಿ ಬಂದು ಇಂದಿನ ಹಾಲು ಕೆಟ್ಟು ಹೋಯಿತೆಂದು ಮನೆಯವರನ್ನು ಬೇರೆ ಹಾಲು ತರಲು ಅಟ್ಟುವ ಗೃಹಿಣಿಯರೆಷ್ಟು! ತೆಂಗಿನ ಗರಿಗಳನ್ನೊದರಕುಗಳನ್ನೊ ಬಚ್ಚಲಲ್ಲಿ ತುರುಬಿಮಾತಿಗೆ ಆರಂಭಿಸಿ—ಎಲ್ಲವನ್ನು ಮರೆತಾಗ—ಇತ್ತ ಬಚ್ಚಲು ಕೊಟ್ಟಿಗೆಗೆ ಬೆಂಕಿ ಹಿಡಿದು ಬೂದಿಯಾಗಿ ನೂರಾರು ರೂಪಾಯಿಗಳ ನಷ್ಟಗೊಂಡ ಉದಾಹರಣೆಗಳಿಗೂ ಕಡಿಮೆಯಿಲ್ಲ! ಅಕ್ಕಿಯನ್ನು ಒಲೆಯ ಮೇಲೆ ಬೇಯಿಸಲಿಟ್ಟು ಹೊರಗೆ ಮಾತಾಡಲು ಕುಳಿತು ಒಲೆಯ ಮೇಲಿಟ್ಟ! ಅಕ್ಕಿ ಬೆಂದು ಅನ್ನ ಕರಗಿ ಮಡ್ಡಿಯಾದಾಗಲೂ ಮುಗಿಯದ ಮಾತು ಬುಡ ಹೊತ್ತಿ ವಾಸನೆ ಹೊರ ಬಂದು ಮಾತು ತಡೆಯಲು ಮನೆಯವರಿಂದ ಕಂಠ ತುಂಬ ಬೈಸಿಕೊಂಡ ಮಾತುಗಾರ್ತಿಯರ ಉದಾಹರಣೆಯೆಷ್ಟು ಬೇಕು.

ಮೂರು ನಾಲ್ಕು ಹುಡುಗರನ್ನು ಜಾತ್ರೆಗೆ ಕರೆದುಕೊಂಡು ಹೋಗಿದ್ದ ನಮ್ಮ ನೆರಮನೆಯ ಹಳ್ಳಿಯ ಹೆಂಗುಸೊಬ್ಬಳು ತನ್ನ ಪೂರ್ವಪರಿಚಿತಳೊಬ್ಬಳೊಡನೆ ಸುದೀರ್ಘ ಮಾತು ಪ್ರಾರಂಭಿಸಿ ಜಾತ್ರೆಯ ಗಚ್ಚಿನಲ್ಲಿ ಒಬ್ಬ ಮಗನನ್ನು ಕಳಕೊಂಡುದು ಒಂದು ನೈಜ ಘಟನೆ. ಆದರೋ ಆ ಮಗುವನ್ನು ತಿಳಿದು ಮರುಗುತ್ತಿದ್ದ ಅವನನ್ನು ಹಳ್ಳಿಗೆ ತಂದೊಪ್ಪಿಸದಿದ್ದರೆ ತಾಯಿ ಮಗುವಿನ ಋಣವೇ ಅಳಿದು ಹೋಗುತ್ತಿತ್ತೋ ಏನೋ!

ಇಂತಿದೆ ನಮ್ಮಲ್ಲಿಯ ಮಹಿಳೆಯರ ಜೀವನ !!

ಆರೋಗ್ಯವೇ ಮಹಾಭಾಗ್ಯ

ಶ್ರೀ ಅಚ್ಯುತ ಶ್ರೀನಿವಾಸ ಶೆಣೈ

ಪುನರ್ಮಿತ್ರಂ ಪುನರ್ವಿತ್ತಂ |
ಪುನರ್ಭಾರ್ಯಾ ಪುನರ್ಮಹೀ |
ಏತತ್ಸರ್ವಂ ಪುನರ್ಲಭ್ಯಂ |
ನ ಶರೀರಂ ಪುನಃ ಪುನಃ ||

—ಸುಭಾಷಿತ.

ಸ್ನೇಹಿತರು, ಧನ ಕನಕ, ಐಶ್ವರ್ಯ ಸಂಪತ್ತು, ಭೂಮಿ ಇವೆಲ್ಲ ಕಳಕೊಂಡರೆ ಪುನಃ ಸಂಪಾದಿಸಬಹುದು, ಪಡೆಯಬಹುದು. ಆದರೆ ಶರೀರವು ನಶಿಸಿದರೆ ಪುನಃ ಪಡೆಯಲಾಗದು. ಇದು ನಿಶ್ಚಯ. ಶರೀರದ ರಕ್ಷಣೆಯನ್ನು ನಶಿಸುವ ತನಕ ಆರೋಗ್ಯದಿಂದಿರಿಸಿ ಕಾಪಾಡುವುದೇ ನಮ್ಮ ಆದ್ಯ ಕರ್ತವ್ಯ.

ಧರ್ಮಾರ್ಥ ಕಾಮಮೋಕ್ಷಾಣಾಂ |
ಆರೋಗ್ಯಂ ಮೂಲಮುತ್ತಮಮ್ |
ತದ್ರಕ್ಷಣಾಯ ಕರ್ತವ್ಯಂ |
ವಿಧಿಶಾಸ್ತ್ರೋಕ್ತ ಸೇವನಮ್.

—ಆಯುರ್ವೇದ.

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳಿಗೆ ಆರೋಗ್ಯವು, ಮೂಲವೂ, ಸಾಧನವೂ ಆಗಿರುತ್ತದೆ. ಅದರ ರಕ್ಷಣೆಗಾಗಿ ಶಾಸ್ತ್ರಗಳಲ್ಲಿ ಉಲ್ಲೇಖಿಸಿರುವ ನಿಯಮಗಳನ್ನು ಚಾಚೂ ತಪ್ಪದಂತೆ ನಿತ್ಯವೂ ಆಚರಿಸತಕ್ಕದ್ದು, ಪಾಲಿಸತಕ್ಕದ್ದು.

ಆರೋಗಾದ್ಬಲ ಮಾಯುಷಂ |
ಸುಖಂಚಲಭತೇ ಮಹತ್ |
ಇಷ್ಟಾಂಶ್ಚಾಪ್ಯಪರಾನ್ ಭಾವಾನ್ |
ಪುರುಷ ಶುಭಲಕ್ಷಣಃ ||

—ಚರಕ ಸಂಹಿತಾಂ

ಮಾನವನಿಗೆ ಆರೋಗ್ಯವೆಂಬ ಭಾಗ್ಯ ಇದ್ದದ್ದಾದರೆ ಅತ್ಯಧಿಕವಾದ ಬಲವೂ ಆಯುಷ್ಯವೂ, ಶಾರೀರಿಕ, ಮಾನಸಿಕ ಸುಖವೂ, ಸೌಖ್ಯವೂ ಪಾರಮಾರ್ಥಿಕ ಸ್ವಾರ್ಥವೂ ಸಿಗುವುದು ಸಂಶಯವಿಲ್ಲ.

ಯಃ ಶಾಸ್ತ್ರವಿಧಿ ಮುತ್ಸೃಜ್ಯ |
ವರ್ತತೇಕಾಮ ಕಾರತಃ |
ನಸಸಿದ್ಧಿ ಮವಾಪ್ನೋತಿ |
ನಸುಖಂ ನಪರಾಂ ಗತಿಮ್ ||

ಭ. ಗೀತೆ 16—23.

ಯಾವಾತನು ಶಾಸ್ತ್ರಗಳ ವಿಧಿ ನಿಯಮಗಳನ್ನು ಉಲ್ಲಂಘಿಸಿ ತನ್ನ ಆಶೆ ಆಕಾಂಕ್ಷೆಗಳ ಪ್ರೇರಣೆಗಳಿಗೆ ಅನುಗುಣವಾಗಿ ವರ್ತಿಸುತ್ತಾನೋ ಆತನು ಸುಖ ಸೌಖ್ಯವನ್ನಾಗಲೀ ಮೋಕ್ಷವನ್ನಾಗಲೀ ಪ್ರಾಪ್ತಿಸಿಕೊಳ್ಳಲಾರನು ಚತುರ್ವಿಧ ಪುರುಷಾರ್ಥಗಳಿಗೆ ಸಾಧನವಾದ ಶರೀರಕ್ಕೆ ಮೃತ್ಯುವು ತಪ್ಪಿದ್ದಲ್ಲವಾದರೂ ಮೃತ್ಯುಕಾರಕ ರೋಗವು ದಿನನಿತ್ಯದ ಆಚಾರ ವಿಚಾರ, ಆಹಾರ, ವಿಹಾರಗಳಿಂದಲೂ ಆಯುರ್ವೇದೀಯ ಔಷಧೋಪಚಾರಗಳಿಂದಲೂ ಸರ್ವಸಾಮಾನ್ಯವಾಗಿ ನಿವಾರಿಸಬಹುದು ಸಂಪೂರ್ಣ ಗುಣಪಡಿಸಲೂ ಬಹುದು. ದಿನ ನಿತ್ಯದ ಆಚಾರ ವಿಚಾರ, ಆಹಾರ ವಿಹಾರಗಳಿಂದ ರೋಗಬಾರದಂತೆಯೂ ಮಾಡಬಹುದು.

'ಪ್ರಕ್ಷಾಲನಾದ್ಧಿ ಪಂಕಸ್ಯ |
ದೂರಾದ ಸ್ಪರ್ಶನಂ ವರಂ'

ಕೊಳೆತಾಗಿದ ನಂತರ ತೊಳೆಯುವುದಕ್ಕಿಂತ, ಮುಂಜಾಗ್ರತೆಯಿಂದ ಕೊಳೆಯಿಂದ ದೂರ ಸರಿದು, ತಾಗದಂತೆ ನೋಡಿಕೊಳುವುದೇ ಲೇಸು ಎಬಂ ಹಿರಿಯರಾದ ನುಡಿಯಂತೆ ಹಿರಿ ರೋಗ ಬಂದ ನಂತರ ಔಷಧೋಪಚಾರ ಮಾಡುವುದಕ್ಕಿಂತ ರೋಗಬಾರದಂತೆ ನೋಡಿಕೊಳ್ಳುವುದೇ ಮೇಲು. ಮಹಾ ಯೋಗಿಗಳಾದ, ಲೋಕದ ಉದ್ಧಾರಕ್ಕಾಗಿ ಜನ್ಮತಾಳಿದ ವಿಭೂತಿ ಪುರುಷರಾದ, ಯೋಗೀಶ್ವರರಾದ, ಚರಕ, ಸುಶ್ರುತ, ವಾಗ್ಭಟ ಋಷಿವರ್ಯರ ಗ್ರಂಥಾವಲೋಕನದಿಂದ ಆರೋಗ್ಯಾಭಿಲಾಷಿಯಾದ ಪ್ರತೀ ಯೋರ್ವ ಭಾರತೀಯನು ಮಹತ್ತಾದ ಭಾಗ್ಯವೇ ಆರೋಗ್ಯ ಐಶ್ವರ್ಯವೇ ಆರೋಗ್ಯ, ಸುಖ ಸಂಪತ್ತೇ ಆರೋಗ್ಯ, ಸರ್ವಸ್ವವೇ ಆರೋಗ್ಯ. ಇಂಥ ಪರಮ ಶ್ರೇಷ್ಠವಾದ ಆರೋಗ್ಯ ಭಾಗ್ಯವನ್ನು ಶ್ರೀ ಧನ್ವಂತರಿ ಅನುಗ್ರಹದಿಂದ ಆಯುರ್ವೇದೀಯ ನಿಯಮ, ವಿಧಿಗಳಿಂದ ನಾವು ಲಭಿಸೋಣ! ಮತ್ತಿತರರಿಗೂ ಲಭಿಸುವಂತೆ ಸಹಕರಿಸಿ ಪ್ರಾಚೀನ ಋಷಿವರ್ಯರ ಆಜ್ಞೆಯಂತೇ ನಡೆಯೋಣ. ಆರೋಗ್ಯವೇ ಭಾಗ್ಯವೆಂದರಿಯೋಣ!

ಮೆಚ್ಚಿದ ಹುಚ್ಚು

(೨ನೇ ಪುಟದಿಂದ)

ಶಾಮೂ ಒಂದು ಅಕ್ಷರವನ್ನು ಬಿಡದೆ ಓದಿದ. ನಾಲ್ಕೈದು ಬಾರಿ ಓದಿದ. ಆದರೆ ಮನದಾಳದಲ್ಲಿದ್ದ ಅಶಾಂತಿಯ ಅಲೆಗಳನ್ನು ಅದುಮಿಹಿಡಿಯಲು ಅವನು ಅಸಮರ್ಥನಾದ. ಅದಕ್ಕಾಗಿ ಮತ್ತೂ ಓದಿದ.

ಎಣ್ಣೆಯಿಲ್ಲದ ದೀಪ ಆರಿಹೋಗಲೆಂದು ಪ್ರಕಾಶವನ್ನು ಕುಂದಿಸುತ್ತಾ ಬಂತು. ಶಾಮೂ ಚಿಂತನಾಲೋಕನ್ನು ತೊರೆದು ಮತ್ತೆ ಇಹಲೋಕಕ್ಕೆ ಬಂದ. ಗಂಟೆ ಹನ್ನೆರಡಕ್ಕೂ ಮೀರಿಹೋಗಿರಬಹುದು. ಪಟ್ಟಣದಲ್ಲಿ ಸದ್ದಡಗಿ, ನಿಶ್ಚಲನೀರವ ಮನೆ ಮಾಡಿತ್ತು. ಚಾಪೆಯನ್ನು ಬಿಡಿಸಿದ. ಅಸ್ತವ್ಯಸ್ತವಾಗಿದ್ದುದನ್ನು ಸರಿಮಾಡಲು ಮನಸ್ಸು ಬಯಸಲಿಲ್ಲ. ಹಾಗೆ ಮಲಗಿಕೊಂಡ

ದೀಪ ಚಿಕ್ಕ ಚಿಕ್ಕದಾಗಿ ಆರಿಹೋಯಿತು. ಕತ್ತಲಿನ ಆವರಣ ಸರ್ವಕಡೆಗಳನ್ನು ಪಸರಿಸಿತು, ಶಾಮೂವಿನ ಹೃದಯವನ್ನೂ ಕೂಡಾ.

ಮೈ 'ಜುಂ' ಎಂದು ಬೆವರಿತು. ಆದಾವುದೋ ಹಾವನ್ನು ತುಳಿದವನಂತೆಯೂ, ಗುಡಿಸಲ್ಲಿ ಹುಲಿಗಿದುರಾದವನಂತೆಯೂ ಅವನ ಸ್ಥಿತಿ ಉಂಟಾಯ್ತು. ಏನು ಮಾಡಬೇಕೆಂಬುದು ಹೊಳೆಯಲು ಮುಸುಕೆಳೆದು ಮಲಗಿದ.

ಮುಸುಕೆಳೆದ?

ಹೌದು. ಮುಸುಕೆಳೆದು ಮಲಗಿದ ಅವನನ್ನು ಅಂದು ಆತನಣ್ಣ ಅವನಿಗೆ ತಿಳಿಸಿದ್ದ.

ಅಂದು?

ಹೌದು ಅದೆಂದರೆ ಆ ದಿನ, ಅವನ ತಂದೆ ಇಹಲೋಕ ವ್ಯಾಪಾರವನ್ನು ಮುಗಿಸಿ ನಡೆದ ಹದಿನಾಲ್ಕನೇ ದಿನ! ಭವಿಷ್ಯತ್ತಿನ ಭೀಕರ ಪ್ರಶ್ನಾರ್ಥಕ ಚಿಹ್ನೆ ಇಬ್ಬರನ್ನೂ ಬಂಡಾವರಿಸಿದ ದಿನ. ಅಂದು ಅಣ್ಣ ತಮ್ಮನಿಗೆ ಅಂದಿದ್ದ-ನೀನು ಮುಸುಕೆಳೆದು ಮಲಗಿಕೋ. 'ನೀನಿನ್ನೂ ಚಿಕ್ಕವನು. ನಿನ್ನ ಎಲ್ಲಾ ಕೆಲಸ ನನ್ನ ಮೇಲೆ ಎಂದು ತಿಳಿ. ತಂದೆ ಮಕ್ಕಳನ್ನು ಯಾವ ಸ್ಥಾನಕ್ಕೆ ತಂದಿಡಬೇಕೆಂದು ಬಯಸಿದ್ದರೋ, ಅದನ್ನು ನೆರವೇರಿಸಲು ನಾನು ಮನಸಾರೆ ದುಡಿಯುತ್ತೇನೆ. ನೀನು ಅದನ್ನೆಲ್ಲಾ ಆಲೋಚಿಸಿ, ಮನಸ್ಸು ಕೆಡಿಸಿಕೊಳ್ಳಬೇಡ" ಎಂದು ಜೋರು ಮಾಡಿ ಮುಸುಕು ಹೊದಿಸಿ ಮಲಗಿದ್ದ.

ಆ ದಿನ ಅಣ್ಣ! ನಿಜವಾಗಿಯೂ ಅಂತಹನು ಹೀಗೆ ತಾಯಿಯನ್ನು ಪೀಡಿಸಲು ಮುಂದಾದಾನೇ? ಅಂದು ಊರಿಗೆ ಊರೇ ನಮ್ಮಿಬ್ಬರ ವಾತ್ಸಲ್ಯವನ್ನು ಕಂಡು ಹೊಗಳುತಿತ್ತು, ಕೊರಗುತಿತ್ತು ಶಂಕರರಾಯರು ಸತ್ತರೂ, ಮಕ್ಕಳು ಮನೆಯನ್ನು ಉಳಿಸಿಕೊಂಡು ಹೋದಾವು. ಎಲ್ಲರ ಬಾಯಲ್ಲೂ ಅದೇ ನುಡಿ ಪ್ರತಿಧ್ವನಿಸುತಿತ್ತು.

ತಂದೆ ತೀರುವಾಗ ಶಾಮೂಗೆ ೧೫ ವರ್ಷ. ಆಗ ತಾನೇ ಲೋವರ್ ಸೆಕೆಂಡರಿಯನ್ನು ಮುಗಿಸಿದ್ದ. ಆದರೆ ಅವನ ವಿದ್ಯಾಭ್ಯಾಸದ ಮುಂದಿನ ಪ್ರಶ್ನೆ ತಂದೆಯ ತಲೆಯಲ್ಲಿ ಸುಳಿದು, ಹೈಸ್ಕೂಲಿಗೆ ಸೇರಿಸುವುದೇ ಸರಿಯೆಂದು ತಂದೆ ತೀರ್ಪಿಗೆ ಬಂದು ಆ ಕಾರ್ಯ ನೆರವೇರಬೇಕಾದರೆ ಇದಕ್ಕಿದ್ದಂತೆ ಯಾರೂ ಎಣಿಸದಂತೆ ಅವರು ಅಂದು ಕಾಳೋರಗದ ಬಾಯಿಗೆ ತುತ್ತಾದರು. ಆಸ್ಪತ್ರೆಯ ಮುಖ ಕಂಡು ಔಷಧಿಯನ್ನು ತರುವಾಗ ಅರ್ಧದಾರಿಯಲ್ಲೇ ಮರಣದ ವಾರ್ತೆ ಎದುರು ಬಂತು. ಆಗ ಕಳ್ಳಿಯ ಕೊರತೆಗಳ ಹೊರೆ ಅವನೆದುರು ಸುಳಿಯಿತು.

ಆಗ....ಆಗ! ಶಾಮೂ ಮತ್ತೊಬ್ಬ ಚಿಕ್ಕ ಹುಡುಗನ ಜೊತೆಗೆ ಮಡಲ ಸೂಡಿ ಹಿಡಿದು ಮೂರು ಮೈಲು ದೂರದ ಆಸ್ಪತ್ರೆಗೆ ಹೋಗಿ ಔಷಧಿಯ ಹೊರೆ ಹೊತ್ತು ಓಡೋಡಿ ಬರುತ್ತಿದ್ದ ಆದರೆ ಎಳೆಯ ಬಳ್ಳಿಗೆ ಬಂದೆರಗಿದ ಕಾಳ್ಗಿಚ್ಚಿನ ಉರಿಗೆ ಬಳ್ಳಿ ಬಾಡಿ ಬಸವಳಿದು ಬಿದ್ದಿತು. ಅವನನ್ನು ಹೊತ್ತುಕೊಂಡು ವರ್ತಮಾನ ತಂದವರು ಮನೆಗೆ ನಡೆದರು.

ಆದರ ಮೇಲೆ...ಕತ್ತಲು....ಕತ್ತಲು, ಮಳೆಗಾಲಕ್ಕೆ ತುಂಬಿ ಬಂದ ತೊರೆಯಂತೆ ಎಲ್ಲೆಡೆಗಳನ್ನು ಬಿಡದೆ ಆವರಿಸಿಕೊಂಡ ಕತ್ತಲು. ಶಾಮೂ ಒಂದು ಕಿರು ಎಳೆಯಂತಹ ದಾರಿಯಲ್ಲಿ ಹೋಗುತ್ತಿದ್ದಾನೆ.... ಆಚೆ ಈಚೆಂದ ಕೆಲವು ವಸ್ತುಗಳು, ಪ್ರಾಣಿಗಳು, ಅಣ್ಣ ತಮ್ಮಂದಿರು, ಅಕ್ಕ ತಂಗೆಂದಿರು ಎಲ್ಲರ ದನಿಯ ಕರೆಯೂ ಅಸ್ಪಷ್ಟವಾಗಿ ಕೇಳಬರುತ್ತಿತ್ತು. ಆದರೆ ಶಾಮೂ ಆದಾವುದಕ್ಕೂ ಬಲಿಯಾಗದೆ ಮುಂದೆ ನಡೆದ. ಮಬ್ಬು ಮಬ್ಬಾದ ಆ ಬಿಳಿ ಗೆರೆಯಲ್ಲೇ ನಡೆದ. ನಡೆನಡೆದು ಕೇಂದ್ರಸ್ಥಾನವನ್ನು ಮುಟ್ಟಿದ. ಅಲ್ಲಿ....

ಅಲ್ಲಿ ಯಾವುದೊ ಒಂದು ದಿವ್ಯ ತೇಜಸ್ಸು ಇತ್ತು. ಅದರ ಪ್ರಭೆಯಿಂದಾಗಿ ಅದೆಂತಹದೆಂದು ತಿಳಿಯುತ್ತಿರಲಿಲ್ಲ. ಶಾಮು ಅದರೆದುರು ಕೈ ಮುಗಿದು ನಿಂತ.

"ಏನು ಏಕೆ ಬಂದಿ ಇಲ್ಲಿಗೆ?" ಪ್ರಶ್ನೆ.

"ಅಷ್ಟೂ ತಿಳಿಯದೆ?" ಉತ್ತರ.

"ಯಾರೂ ಬಾರದ ದಾರಿಯಲ್ಲಿ ಬರಲು ಪ್ರಯತ್ನ ಮಾಡಿದೆ. ಅಲ್ಲವೆ?" ಪುನಃ ಪ್ರಶ್ನೆ. ಉತ್ತರ ಕೊಡಲಾಗಲಿಲ್ಲ.

ಬಲವಾದ ಬಿರುಗಾಳಿ ಬೀಸ ತೊಡಗಿತು. ಬಿಳಿಯ ಸಪೂರವಾದ ದಾರಿ ನಡುಗತೊಡಗಿತು. ಶಾಮೂ ಆಚೆ ಈಚೆ ಓಲಾಡಿದ, ಸರ್‍ರನೆ ಕೆಳಗೆ ಬಿದ್ದ. ಸರ್‍ರನೆ...

ಅಷ್ಟೊತ್ತಿಗೆ ಕತ್ತಲು ನಶಿಸಿ ಬೆಳಗಿನ ಒಸರು ಹರಿದಿತ್ತು.

"ಯಾಕೆ ಶಾಮೂ ಹೀಗೆಲ್ಲ ಮಾಡುತ್ತಿರಿ ಯಾರಿಂದ ಏನು ಮಾಡಲಿಕ್ಕೆ ಬರುತ್ತೆ. ಎಲ್ಲವೂ ದೈವೀದತ್ತ. ಅತ್ತು ಏನು ಇನ್ನು ಜೀವ ತರಲಿಕ್ಕೆ ಸಾಧ್ಯವಿದೆಯೇ" ಊರವರೊಬ್ಬರು ಶಾಮೂಗೆ ಧೈರ್ಯವಿತ್ತರು. ಎದುರು ತಂದೆಯ ಶವ. ಅದಕ್ಕೂ ದೂರ ತಾಯಿಯ ಜೀವವಿದ್ದ ಶವ. ತಾಯಿಯ ಕೂಗಿಗೆ ಸಮಾಜವೇ ಕಣ್ಣೆರೆದು ನೀರು ಸುರಿಸ ಬೇಕು. ಅಂತಹ ರೋದನ ತಾಯಿಗಿಂತ ತನ್ನದೆ ಹೆಚ್ಚೇ...ಅಲ್ಲ ಹೆಂಡತಿಗೆ ಗಂಡ ಮುಖ್ಯ, ಮಗನಿಗೆ ತಂದೆಯಲ್ಲ....ಶಾಮೂ ಅದಾವುದೊ ನಿಶ್ಚಯಕ್ಕೆ ಬಂದು, ಅಳುವುದನ್ನು ನಿಲ್ಲಿಸಿದ.

ಹದಿನಾಲ್ಕು ದಿನಗಳು ಉದುರಿದುವು ಈ ಹಿಂದೆ ಅವನಿಗೂ ಅಣ್ಣನಿಗೂ ಕಿರುಜಗಳ ಏನಾದರೂ ಆಗುತ್ತಲೇ ಇದ್ದಿತ್ತು. ಆದರೆ ಈಗ ಜಗಳದ ಸುದ್ದಿಯ ಸುಳಿಯ ಎಳೆಯೂ ಕಂಡುಬರಲಿಲ್ಲ. 'ನಾನು ಸಾಯಬೇಕು. ಆಗ ನಿಮ್ಮ ಜಗಳ ತನ್ನಿಂದ ತಾನೇ ಶಾಂತಿಗೊಳ್ಳುತ್ತೆ'' ತಂದೆ ತಮ್ಮಿಬ್ಬರ ಜಗಳ ಕಂಡು ಹಿಂದೊಮ್ಮೆ ಅಂದಿದ್ದರು. ಅದೆಲ್ಲ ಸಂಪೂರ್ಣ ಸತ್ಯವಾಯಿತು. ತಾತನ ಶವದಿಂದ ಹೊರಟ ಬೆಂಕಿಯಿಂದ ಆ ಎರಡು ಹೃದಯಗಳು ಬೆಸುಗೆಗೊಂಡಂತಾದುವು. ಅದಕ್ಕೆ ಅಣ್ಣ ಶಾಮೂಗೆ ಹಾಗೆ ಹೇಳಿದ್ದ—

"ನೀನು ತಂದೆಯವರ ಆಶೆ ನೆರವೇರಿಸು. ಯಾವ ಕ್ಲಾಸಿನಲ್ಲೂ ಫೈಲಾಗದೆ ವಿದ್ಯಾಭ್ಯಾಸ ಮುಂದುವರಿಸು. ನಾನು ಒಂದು ಚಿಕ್ಕ ಅಂಗಡಿಯಿಟ್ಟು ವ್ಯಾಪಾರ ಮಾಡ್ತೇನೆ ಅದರಿಂದ ಆದ ಲಾಭ ನನ್ನ ಖರ್ಚಿಗೆ ಸಾಕು"....ತಂದೆಯ ಬೋಧನೆಗಳನುಸಾರವಾಗಿಯೇ ಆತ ರಾತ್ರಿ ಇಡೀ ಗೊಣಗುಟ್ಟುತ್ತಿದ್ದ. ಶಾಮೂಗೆ ಅಂದು ಅವನೊಡನೆ ಮಲಗಿದ ಅಣ್ಣನನ್ನು 'ಅಣ್ಣ'ನೆಂದು ಕರೆಯುವ ಧೈರ್ಯ ಬರಲಿಲ್ಲ. ಯಾವುದೋ ದೇವತಾ ಸ್ವರೂಪಿ ವ್ಯಕ್ತಿಯೆಂದು ಭಾವಿಸಿದ.

ಇದಾದ ಮೇಲೆ ದಿನಗಳ ಮೇಲೆ ದಿನಗಳು, ವರ್ಷಗಳ ಮೇಲೆ ವರ್ಷಗಳು ಉರುಳಿದುವು. ಅಣ್ಣ ಪ್ರಬುದ್ಧನಾದ. ಮದುಮಗನಾಗುವ ಪ್ರಾಯಕ್ಕೆ ಬಂದ. ಶಾಮೂ ಹೈಸ್ಕೂಲು ಮುಗಿಸಿ ಮದ್ರಾಸಿನ ಯಾವುದೋ ಒಂದು ಹೋಟೆಲಿನಲ್ಲಿ ಧರ್ಮಾರ್ಥ ಊಟಪಡೆದು ವಿವೇಕಾನಂದ ಕಾಲೇಜಿಗೆ ಸೇರಿದ್ದ.

ಮದುವೆಯಾಯ್ತು. ಶಾಮೂಗೆ ವರ್ಷ ಇನ್ನೆರಡು ವರ್ಷ ಕಳೆದರೆ. ಕಾಲೇಜಿನಿಂದ ಬಿಡುಗಡೆ. ಕೆಲಸದ ಹುಡುಕಾಟ. ಒಂದು ಉದ್ಯೋಗ ದೊರಕಿತೆಂದರೆ ಆ ಹಳೇ ಮನೆಗೆ ಪುನಃ ಹೊಸ ನಾಗರಿಕತನದ ಸಂಪೂರ್ಣ ಬೆಳಕು. ಆಶೆಯ ಲತೆಯು ಆಧಾರ ಕಂಬದ ಮೇಲೆ ಉದ್ಬುದ್ಧವಾಗಿ ಸಾಗಿತ್ತು. ಆದರೆ ಈಗ........ಈಗ... ...

ಈಗ ಮಾವನ ಪುತ್ರದ ಕೊಡಲಿಯೇಟು, ಸ್ತಂಭದ ಬುಡವನ್ನೇ ಕಡಿದಿದೆ. ಲತೆ ಕುಡಿ ಮುರುಟಿ ಬಿದ್ದು ನೆಲಸಮವಾಯ್ತು...ತಾನೆ, ಯಾರಿಗೆಂದು ನೆನಸಿ ಈ ವರೆಗೆ ಒಮ್ಮನಸ್ಸಿಂದ ಕಲಿಯುತ್ತ ಬಂದಿದ್ದೆನೋ, ಆ ಅಣ್ಣ ಬದಲಾಗುವ ಸಂದರ್ಭ ಕಾದು ನಿಂತಿತ್ತು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 397/1961.

A R ರಘುಪತಿ ರಾವ್ — ವಾದಿರು

ಮತ್ತು

ದಿ ವಿಜಯಾ ಬೇಂಕ್ Ltd-ಪ್ರತಿವಾದಿ

1ನೇ ಪ್ರತಿವಾದಿ. The Vijaya Construction and Commarcial Ltd Kallayanpoor by its manager

A. ಬೋಜರಾಜ ಹೆಗ್ಗಡೆ-ಮೂಡುತೋಟ ಗ್ರಾಮದ ಕಲ್ಯಾಣಪುರದಲ್ಲಿರುವವರು,

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾರೀಕು 22—1—1962ಕ್ಕೆ ಇಟ್ಟಿರುವದರಿಂದ ಆ ದಿನ ಸದ್ರಿ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao

Vakil for Plaintiff.

Udipi, Dated, 27--12—61.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು. ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA, UDIPI.
REGD. NO.BG. 176

4-1-1962

LICENSE NO. 31
Licensed to Post without Prepayment

(೯ನೇ ಪುಟದಿಂದ)

ಯೆಂಬುದರ ಮೂಪನವಾಗಿ ಅವುಗಳಿಗೆ ಸರಿಯಾದ ಮಾರ್ಗದರ್ಶನವನ್ನು ಮಾಡುವ ಯೋಜನೆ ಸಮ್ಮೇಳನಗಳ ಕಾಲ ನಡೆಯ ಬೇಕು. ನಮ್ಮ ಜ್ಞಾನದ ಪ್ರತಿಯೊಂದು ಕ್ಷೇತ್ರದ ಸಮೀಕ್ಷೆಯನ್ನು ಮಾಡಿಕೊಳ್ಳಬೇಕು.

ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯಗಳೆರಡು ಕನ್ನಡ ನಾಡಿನ ಎರಡು ಕಣ್ಣುಗಳಿದ್ದಂತೆ. ಇವೆರಡೂ ವಿಶ್ವವಿದ್ಯಾಲಯಗಳು ಉತ್ತಮವಾದ ಗ್ರಂಥಗಳನ್ನು ಪ್ರಕಟಿಸಿವೆ; ಮುಂದಕ್ಕೂ ಪ್ರಕಟಿಸುವ ನಿರ್ಧಾರ ಮಾಡಿವೆ.

ಕರ್ನಾಟಕದಲ್ಲಿ ಸಂಶೋಧನೆ ಇನ್ನೂ ನಾನಾ ಮುಖವಾಗಿ ನಡೆಯ ಬೇಕಾಗಿದೆ. ಸಾವಿರಾರು ವರ್ಷಗಳ ಅಪಾರವಾದ ಸಾಹಿತ್ಯದ ಬಹುಭಾಗ ಇನ್ನೂ ಕಣ್ಮರೆಯಾಗಿ ನಿಂತಿದೆ. ಬಹು ಬೆಲೆಯುಳ್ಳ ತಾಳೆಯೋಲೆ ಗ್ರಂಥಗಳು ಮನೆ ಮಠಗಳ ಗದ್ದುಗೆಯ ಮೇಲೆ ಕುಳಿತು ಹುಳಗಳಿಗೆ ತುತ್ತಾಗ ತೊಡಗಿವೆ. ಆ ಗ್ರಂಥಗಳನ್ನು ಒಂದೆಡೆ ಸೇರಿಸಿ ಸರಿಯಾದ ಜೋಪಾನ ಮಾಡದೆ ಹೋದರೆ, ನಾವು ಬಹು ಬೆಲೆಯುಳ್ಳ ಆಸ್ತಿಯನ್ನು ಕಳೆದುಕೊಂಡಂತಾಗುತ್ತದೆ. ಒಂದು ಕೇಂದ್ರ ಸಂಶೋಧನಾ ಸಂಸ್ಥೆಯ ಆಶ್ರಯದಲ್ಲಿ ನಾಡಿನ ನಾನಾ ಮೂಲೆಗಳಲ್ಲಿರುವ ಓಲೆಗಳನ್ನು ಶೇಖರಿಸಿಟ್ಟರೆ, ಸಂಶೋಧನೆಗೆ ತುಂಬ ಸಹಾಯವಾಗುತ್ತದೆ.

ನಮ್ಮ ನಾಡಿನ ಇತಿಹಾಸ ಸಾಹಿತ್ಯ ಸಂಸ್ಕೃತಿಗಳ ಸಂಶೋಧನೆಗಳಿಗೆ ಸಹಾಯಕವಾಗುವ ಅನೇಕ ಸಾಧನಗಳೂ ಲೇಖನಗಳೂ ದೇಶವಿದೇಶಗಳ ಬೇರೆ ಬೇರೆ ಗ್ರಂಥಭಂಡಾರಗಳಲ್ಲಿ ದೊರೆಯುತ್ತವೆ. ಇಂಡಿಯಾ ಹೌಸ್, ಬ್ರಿಟಿಷ ಮ್ಯೂಜಿಯಂ, ಲಂಡನ್ ವಿಶ್ವವಿದ್ಯಾಲಯದ ವಾಚನಾಲಯಗಳೇ ಮೊದಲಾದ ವಿದೇಶೀಯ ಗ್ರಂಥಭಂಡಾರಗಳಲ್ಲಿ ಕನ್ನಡ ನಾಡಿಗೆ ಸಂಬಂಧಿಸಿದ ಮಹತ್ವದ ಉಲ್ಲೇಖಗಳಿವೆ. ಆ ಉಲ್ಲೇಖಗಳ ಪುನರ್ಮುದ್ರಣ ಪ್ರತಿಯನ್ನೋ ಮೈಕ್ರೊ ಫಿಲ್ಮ ಪ್ರತಿಗಳನ್ನೋ ಕೇಂದ್ರ ಸಂಶೋಧನಾ ಸಂಸ್ಥೆಯ ಆಶ್ರಯದಲ್ಲಿ ಸಂಗ್ರಹಿಸುವುದು ಆವಶ್ಯಕ. ಇಂತಹ ಮಹತ್ವದ ಆಧಾರಗ್ರಂಥಗಳನ್ನು ಒಂದೆಡೆ ಕೂಡಿಸದೆ ಹೋದರೆ, ಸಂಶೋಧಕರಿಗೆ ತುಂಬ ತೊಂದರೆಯಾಗುತ್ತದೆ. ನಮ್ಮ ಸರಕಾರದ ಅವಗಾಹನೆಗೆ ಇಂತಹ ಸಂಸ್ಥೆಯೊಂದರ ವಿಚಾರ ಬಂದು ಅದಕ್ಕಾಗಿ ಅದು ಈಗಾಗಲೇ ಒಂದು ಸಮಿತಿಯನ್ನು ಏರ್ಪಡಿಸಿರುವದು. ಇಂತಹ ಕೇಂದ್ರ ಸಂಶೋಧನಾ ಸಂಸ್ಥೆ ಕನ್ನಡನಾಡಿಗೆ ಅತ್ಯವಶ್ಯವಾಗಿದೆಯೆಂದು ಆ ಸಮಿತಿಯವರಿಗೂ ಸರಕಾರಕ್ಕೂ ಸೂಚಿಸ ಬಯಸುತ್ತೇನೆ.

ಜೈ ಹಿಂದ್! ಜೈ ಭುವನೇಶ್ವರಿ!

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಚಿತ್ತರಂಜನ ರೇಲುಗಾಡಿ ಕಾರಖಾನೆಯಲ್ಲಿ ತಯಾರಾದ ಮೊತ್ತಮೊದಲ ವಿದ್ಯುಚ್ಚಾಲಿತ ಗಾಡಿಯ ಮಾದರಿಯೊಂದನ್ನು ಕೆಲಸಗಾರನೊಬ್ಬನು ಪ್ರಧಾನ ಮಂತ್ರಿ ನೆಹರುಗಳಿಗೆ ಅರ್ಪಿಸುತ್ತಿರುವುದನ್ನು ಇಲ್ಲಿ ಕಾಣಬಹುದು.

(೧ನೇ ಪುಟದಿಂದ)

ಪೋರ್ಚುಗಲ್ಲಿಗೆ ಕೊಡಿಸುವ ದುರಾಲೋಚನೆಯೊಂದು ಒಂದೆರಡು ರಾಷ್ಟ್ರಗಳಲ್ಲಿ ಮೂಡಿದೆಯೆಂಬ ಕಿಂವದಂತಿ ಇದೆ. ಇದು ಅದೆಷ್ಟು ವಿಶ್ವಾಸಾರ್ಹವೋ ಹೇಳುವಂತಿಲ್ಲ. ಆದರೆ, ನಿಜವೇ ಎಂದಾದಲ್ಲಿ, ಪ್ರಧಾನಿ ನೆಹರು ಹೇಳಿದಂತೆ ಪರಿಸ್ಥಿತಿ ಪ್ರಕೋಪಕ್ಕೆ ಹೋಗುವುದು; ಜಾಗತಿಕ ದ್ವೇಷ ಕಡಿಮೆಯಾಗುವುದರ ಬದಲು ಹೆಚ್ಚಾಗುವುದು. ಪೋರ್ಚುಗಲ್ಲಿನ ನೊಂದ ಹೃದಯಕ್ಕೆ ಈ ರೀತಿಯ ಸಾಂತ್ವನದ ಶೇಕಕೊಡುವುದಕ್ಕಿಂತ, ಅವರು ತಪ್ಪುದಾರಿಯಿಂದ ಸರಿದಾರಿಗೆ ಬರುವಂತೆ ಸೂಕ್ತ ಮಾರ್ಗದರ್ಶನ ಮಾಡುವುದೇ ಸದ್ಯದ ಆವಶ್ಯಕತೆಯಿದೆ; ಇದರಿಂದ ಉಳಿದೆಡೆಯಲ್ಲಿಉಳಿದಿರುವ ವಸಾಹತುಗಳಾದರೂ ಸೌಹಾರ್ದಮಯ ವಾತಾವರಣದಲ್ಲಿ ಹಸ್ತಾಂತರಗೊಳ್ಳುವ ಸಾಧ್ಯತೆಯಿದೆ.

ಸಮರ್ಥ ಸೇವೆ

ಗೋವೆಯನ್ನು ತಮ್ಮಿಂದ ಸಾಧ್ಯವಾದಷ್ಟು ರೀತಿಯಲ್ಲಿ ಕೆಡಿಸುವಲ್ಲಿ ಪೋರ್ಚುಗೀಸರು ಹಿಂದೆ ಬಿದ್ದಿಲ್ಲ. ಆದರೂ ನಮ್ಮ ಸೇನೆಯ ಕಾರ್ಯದಕ್ಷತೆಯಿಂದ ಅಲ್ಲಿ ಈಗ ಎಲ್ಲವೂ ಸಮರ್ಪಕವಾಗಿ ನಡೆದಿದೆ. ಕೆಟ್ಟು ಹೋದ ಎಲ್ಲ ಸೌಕರ್ಯಗಳೂ ಪುನಃ ಒದಗ ತೊಡಗಿವೆ. ನಾಗರಿಕ ಆಡಳಿತೆಯ ಪುನಸ್ಸ್ಥಾಪನೆಯ ಕಾರ್ಯ ಪ್ರಗತಿ ಪಥದಲ್ಲಿ ನಡೆಯುತ್ತಿದೆ. ಗೋವಾ ನಾಗರಿಕರು ತೃಪ್ತಿಯ ಸ್ವಾತಂತ್ರ್ಯದ ಗಾಳಿಯನ್ನು ಸೇದ ತೊಡಗಿರುವರು ಅಲ್ಲಿನ ಪೋರ್ಚುಗೀಸ ಆಡಳಿತೆಯ ವ್ಯವಹಾರದ ಭಾರತೀಕರಣದ ಕಾರ್ಯ ಕೆಲವೇ ದಿನಗಳಲ್ಲಿ ಪೂರ್ತಿಗೊಳ್ಳುವುದು. ಭಾರತ ಸರಕಾರವು ಸ್ವಾತಂತ್ರ್ಯೋತ್ತರದಲ್ಲಿ ಕೈಗೊಂಡ ಮಹಾ ಸಾಹಸದ ಕಾರ್ಯ ಸಾರ್ಥಕವಾಗುವುದು.

— ಗೋರಾ.

ಇನ್ವೆಸ್ಟರ್ಸ್ ಏಜನ್ಸಿ

- ಭಾರತೀಯ ಬ್ಯಾಂಕಿಂಗ್ ಕ್ಷೇತ್ರದಲ್ಲೊಂದು ಹೊಸ ಅಧ್ಯಾಯ
- ಸಿಂಡಿಕೇಟ್ ಬ್ಯಾಂಕಿನ ಅತ್ಯುತ್ತಮ ಸೇವೆಗೆ ಮತ್ತೊಂದು ಹೊಸ ಸಾಧನ
- ನಮ್ಮ ಆರ್ಥಿಕ ತಜ್ಞರ ಮತ್ತು ೧೫೦ರ ಶಾಖೆಗಳ ಸೇವೆಗೆ ಇನ್ನೊಂದು ಸದವಕಾಶ

ಸಾವಿರ ವಿನಿಯೋಗಿಸಿ ಲಕ್ಷ ಉಳಿಸಿರಿ

ವಿವರಗಳಿಗೆ ಬರೆಯಿರಿ:

ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ

ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದ

ವ್ಯಾಪಾರಿಗಳಿಗೆ ಧಾರಾಳ ಕಮಿಷನ

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೧೮ | ಉಡುಪಿ 11—1—1962 ಗುರುವಾರ | Vol. 41 No. 18

ನಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಚುನಾವಣೆಯ ನಿಟ್ಟಿನಲ್ಲಿ

ಕಾಂಗ್ರೆಸ್‌ನ ಕೃಷ್ಣಪುರಿ ಅಧಿವೇಶನ

ಬಿಹಾರ ರಾಜ್ಯದಲ್ಲಿ ಸ್ವಾತಂತ್ರ್ಯಾನಂತರ ಸೇರಿದ ಮೊತ್ತಮೊದಲ ಕಾಂಗ್ರೆಸ್ ಅಧಿವೇಶನವು ಕೆಲವೊಂದು ದೃಷ್ಟಿಯಿಂದ ಮಹತ್ವಪೂರ್ಣವಾದುದು. ಅಧಿವೇಶನಕ್ಕಾಗಿ ರಚಿತವಾದ ಶ್ರೀ ಕೃಷ್ಣ ಪುರಿಯು ಆರು ಲಕ್ಷ ಜನರಿಂದ ಕಿಕ್ಕಿರಿದಿತ್ತು. ವಸಾಹತುವಾದದ ಕೊನೆಯ ಕಲಂಕ ಗೋವೆಯನ್ನು ಮುಕ್ತಗೊಳಿಸಿ ತನ್ನಲ್ಲಿ ವಿಲೀನಗೊಳಿಸಿದ ನಂತರ, ಮೂರನೆಯ ಬಾರಿಗೆ ಸಾರ್ವತ್ರಿಕ ಚುನಾವಣೆಗಳು ನಡೆಯಲಿರುವ ಸದವಸರದಲ್ಲಿ ನಡೆದ ಈ ಅಧಿವೇಶನವು ಗಣನೀಯವೆಂಬುದರಲ್ಲಿ ಸಂದೇಹವುಳಿದಿಲ್ಲ. ರಾಷ್ಟ್ರದ ನಾಯಕರನ್ನು ಕಾಣುವ ಉತ್ಸಾಹದಿಂದಲೋ ಅಥವಾ ವ್ಯರ್ಥ ಗುಲ್ಲೆಬ್ಬಿಸುವ ಅಭಿಲಾಷೆಯಿಂದ ಕೂಡಿದ ಪುಂಡರಿಂದಾಗಿಯೋ ನಡೆದ ಕೋಲಾಹಲ ಮತ್ತು ಈ ಕಾರಣದಿಂದಾಗಿ ಕಾರ್ಯಕ್ರಮವು ಸ್ಥಗಿತಗೊಂಡುದು, ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆ ನಿಂತು ಹೋದುದು ವಿಷಾದಿಸಬೇಕಾದ ದುರ್ಘಟನೆಯಾದರೂ ಅಲ್ಲಿ ಚರ್ಚೆ ನಡೆದು ಸ್ವೀಕೃತವಾದ ಗೊತ್ತುವಳಿಗಳು ಪ್ರಶಂಸನೀಯವಿವೆ.

ಏಕಮೇವಾ ದ್ವಿತೀಯ

ಶ್ರೀ ಕೃಷ್ಣಪುರಿಯ ಈ ಅಧಿವೇಶನದ ಮುಖ್ಯ ಲಕ್ಷ್ಯವು ಚುನಾವಣಾ ಘೋಷಣೆಯನ್ನು ಸ್ವೀಕರಿಸುವುದಿತ್ತು. ದೇಶದಲ್ಲಿ ಪ್ರಜಾಪ್ರಭುತ್ವವು ಸ್ಥಾಪನೆಗೊಂಡ ನಂತರ ಮೂರನೆಯ ಬಾರಿಗೆ ಈ ಚುನಾವಣೆಗಳು, ಇನ್ನೊಂದು ತಿಂಗಳಲ್ಲಿ ನಡೆಯಲಿರುವುದು. ಸ್ವಾತಂತ್ರ್ಯಪೂರ್ವದಲ್ಲಿ ದೇಶವನ್ನು ಗುಲಾಮತನದಿಂದ ಬಿಡುಗಡೆಗೊಳಿಸಲು ಹೋರಾಡುತಿದ್ದ ಕಾಂಗ್ರೆಸ್ಸು ಸ್ವಾತಂತ್ರ್ಯೋತ್ತರಾವಧಿಯಲ್ಲಿ ಸರಕಾರದ ಸೂತ್ರವನ್ನು ಹಿಡಿದು ದೇಶದ ಸಮೃದ್ಧಿಗಾಗಿ, ಸುಭದ್ರತೆಗಾಗಿ ಶಕ್ತಿಮೀರಿ ದುಡಿಯುತ್ತಿದೆ; ದೇಶದ ಏಕಮೇವ ಶಕ್ತಿಶಾಲಿ ಪಕ್ಷವಾಗಿದೆ. ಇದರಷ್ಟು ವಿಶಾಲವಾದ ಕಾರ್ಯಕ್ಷೇತ್ರವಿರುವ ರಾಜಕೀಯ ಪಕ್ಷ ಭಾರತದಲ್ಲಿ ಮತ್ತೊಂದಿಲ್ಲವೆಂಬುದನ್ನು ಎಲ್ಲರೂ ತಿಳಿದಿದ್ದಾರೆ. ನಮ್ಮಲ್ಲಿರುವ ವಿರೋಧೀ ಪಕ್ಷಗಳಲ್ಲಿ ಯಾವುದೇ ಆದರೂ ಅಧಿಕಾರಗ್ರಹಣ ಮಾಡುವ ಶಕ್ತಿಯನ್ನು ಪಡೆದಿಲ್ಲ. ಈ ಸತ್ಯವನ್ನು ಸ್ವಯಂ ಲೋಹಿಯಾ ಒಪ್ಪಿಕೊಂಡಿದ್ದಾರೆ.

ಕಾಂಗ್ರೆಸ್ಸಿನ ಸಾಧನೆ

ಕಳೆದ ವರ್ಷಗಳಲ್ಲಿ ಕಾಂಗ್ರೆಸ್ಸು ದೇಶದ ಹಿತದೃಷ್ಟಿಯಿಂದ ಮಾಡಿದ ಕಾರ್ಯಕ್ರಮಗಳು ಜನತೆಯಿಂದ ಮರೆಯಾಗಿಲ್ಲ. ಬಹುಮತಗಳಿಸಿ ಅಧಿಕಾರದ ಗದ್ದುಗೆಗೇರಿದ ಕಾಂಗ್ರೆಸ್ಸು ಆಡಳಿತವನ್ನು ಪ್ರಜಾತಂತ್ರದ ತಳಹದಿಯಲ್ಲಿ ಭದ್ರಗೊಳಿಸಿದೆ; ಜನಸೇವೆಯನ್ನೇ ತನ್ನ ಮಹೋದ್ದೇಶವನ್ನಾಗಿಟ್ಟುಕೊಂಡಿದೆ. ಪ್ರತಿಯೊಂದು ರಾಜಕೀಯ ಪಕ್ಷವೂ ಅಧಿಕಾರವನ್ನು ತನ್ನ ಕೈಯಲ್ಲಿ ಹಿಡಿಯಲು ಉತ್ಸುಕತೆ ತೋರಿಸುವುದು ನಿಜ; ಆದರೆ, ರಾಷ್ಟ್ರವ್ಯಾಪೀ ಕಾರ್ಯಕ್ರಮವಿಲ್ಲದ ಇತರ ಪಕ್ಷಗಳು ರಾಷ್ಟ್ರದಲ್ಲಿ ಸತ್ವವನ್ನು ಉಳಿಸಿಕೊಳ್ಳುದರಲ್ಲಿ ಅಸಮರ್ಥನಾಗಿವೆ ಮೊದಲೇ ಕ್ಷೀಣವಾಗಿದ್ದ ಈ ಪಕ್ಷಗಳು ದಿನದಿಂದ ದಿನಕ್ಕೆ ಹರಿಹಂಚಾಗಿ ಹೋಗುತ್ತಿವೆಯೆಂಬುದಕ್ಕೆ ಪ್ರತ್ಯಕ್ಷವೇ ನಿದರ್ಶನ. ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ, ಪ್ರಬಲ ವಿರೋಧೀ ಪಕ್ಷವು ಬೇಕೆಂಬುದು ಸರ್ವಸಮ್ಮತ. ಆದರೆ, ನಮ್ಮಲ್ಲಿ ಇಂತಹ ಪಕ್ಷಗಳ ಸಂಖ್ಯೆಗಳು ಬೆಳೆಯುತ್ತ ಹೋಗುತ್ತಿವೆಯಲ್ಲದೆ, ಅವುಗಳ ಬಲವಿಲ್ಲವೆಂಬುದು ಶೋಚನೀಯ. ಕಾಂಗ್ರೆಸ್ಸು ಈ ಬಾರಿಯೂ ಬಹುಮತ ಪಡೆದು ಅಧಿಕಾರ ಗಳಿಸುವುದು ಖಂಡಿತವಾದರೂ ಅದು ತನ್ನ ಸೇವಾ ನೀತಿಯನ್ನು ಬಿಟ್ಟುಕೊಡಬಾರದು. ಗಾಂಧೀಜಿಯವರು ಕಾಂಗ್ರೆಸ್ಸಿನ ಮೂಲಕ ರಾಷ್ಟ್ರದಲ್ಲಿ ಐಕ್ಯ ಸ್ಥಾಪನೆ ಮಾಡಬಯಸಿದ್ದರು. ಅವರು ಜಾತೀಯತೆ ಮತ್ತು ಸಂಪ್ರದಾಯಿಕತೆಯ ಪ್ರಬಲ ವಿರೋಧಿಗಳಾಗಿದ್ದರು. ಕಾಂಗ್ರೆಸ್ಸು ಇಂದು ಅನುಸರಿಸಬೇಕಾದ, ಅನುಸರಿಸುತ್ತಿರುವ ನೀತಿಯಾದರೂ ಇದಕ್ಕಿಂತ ಭಿನ್ನವಾಗಬಾರದು.

ಕಣ್ಣಿದ್ದೂ ಕುರುಡುತನ

ಕಾಂಗ್ರೆಸ್ಸಿನ ಸಮಾಜವಾದ ಮಾದರಿಯ ಸಮಾಜರಚನೆಯ ಧೋರಣೆಯು ಕೆಲವರ ಎದೆಗೆಡಿಸಿದೆ. ಸ್ವತಂತ್ರ ಪಕ್ಷದ ರಚನೆಯಾದುದಾದರೂ ಈ ನೀತಿಯಿಂದ ಹೆದರಿದವರಿಂದ. ಆದರೆ, ಕಾಂಗ್ರೆಸ್ಸು ಸ್ವಾತಂತ್ರ್ಯೋತ್ತರದಲ್ಲಿ ಇಂತಹ ಉಗ್ರನೀತಿಯನ್ನು ಒಪ್ಪಿದೆಯೆಂಬುದು ತಪ್ಪು. ತನ್ನ ಅಧಿಕಾರವನ್ನು ಬಿಗಿಗೊಳಿಸಲು ಇದನ್ನು ಆಧರಿಸಿದೆಯೆನ್ನುವುದೂ ಅನುಚಿತ. ೧೯೫೫ರಲ್ಲಿ ನಡೆದ ಆವಡಿ ಅಧಿವೇಶನದಲ್ಲಿಯೇ ಕಾಂಗ್ರೆಸ್ಸು ಸಮಾಜವಾದದ ಆದರ್ಶವನ್ನು ಒಪ್ಪಿಕೊಂಡಿದೆ. ತನ್ನ ಕೈಯಲ್ಲಿ ಅಧಿಕಾರ ಸೂತ್ರ ಸಿಕ್ಕಾಗ, ಅದನ್ನು ಕಾರ್ಯರೂಪಕ್ಕೆ ಇಳಿಸುವ ಪ್ರಯತ್ನ ಮಾಡತೊಡಗಿದೆ. ದೇಶದಲ್ಲಿ ಸಮಾಜವಾದ ಸ್ಥಾಪನೆಯನ್ನು ಮಾಡಬಯಸುವುದಾದರೆ, ದಾರಿದ್ರ್ಯ ಭೂತವನ್ನು ಹೊರದಬ್ಬಬೇಕು. ಶಕ್ತಿ, ಶ್ರಮ, ಕೃಷಿ ಮತ್ತು ಪ್ರಧಾನಿ ನೆಹರು—ಈ ನಾಲ್ಕು ಸ್ತಂಭಗಳ ಆಧಾರದಲ್ಲಿ ನಿಂತಿರುವ ನಮ್ಮ ಪಂಚವಾರ್ಷಿಕಯೋಜನೆಗಳನ್ನು ಪೂರ್ಣತಯಾರಿಸಿ ಕಾರ್ಯಾನ್ವಿತಗೊಳಿಸುವುದರಿಂದ ಮಾತ್ರ ಈ ಗುರಿ ಸಿದ್ಧಿಸುವುದು ಸಾಧ್ಯ. ಪಂಚವಾರ್ಷಿಕ ಯೋಜನೆಗಳ ಬಗ್ಗೆ ಹೆಚ್ಚಿನ ಭಾರತೀಯರು ಸದಭಿಪ್ರಾಯ ತಾಳಿದ್ದಾರೆ. ದೇಶವು ವಿವಿಧ ಕ್ಷೇತ್ರಗಳಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕಂಡೂ ಕುರುಡರಂತೆ ಸುಮ್ಮನಿರುವುದು ಸಾಧ್ಯವಿಲ್ಲ, ಸ್ವತಂತ್ರ ಪಕ್ಷವು ಕೂಡ ತನ್ನ ಜನನದ ಮೊದಲ ದಿನಗಳಲ್ಲಿ ಈ ಯೋಜನೆಗಳು ನಿಷ್ಪ್ರಯೋಜಕವೆಂದು ಉದ್ಗರಿಸುತಿದ್ದರೂ, ಇಂದು ಮಾತ್ರ ಯೋಜನೆಬೇಕೆಂಬುದನ್ನು ಒಪ್ಪಿಕೊಳ್ಳುತ್ತದೆ. ಯೋಜನೆಯು ಅವಶ್ಯವಾದರೂ ಕಾಂಗ್ರೆಸ್ ಸರಕಾರದ ಯೋಜನೆಗಳು ನಿರರ್ಥಕವೆಂಬ ಅಪಲಾಪವನ್ನೀಗ ಎಬ್ಬಿಸುತ್ತಿದೆ

ಸಾಧನೆಯ ಫಲ

ಕಳೆದ ಸುಮಾರು ಹದಿನೈದು ವರ್ಷಗಳಲ್ಲಿ ನಮ್ಮ ಭಾರತದಲ್ಲಿ ಕಾಂಗ್ರೆಸ್ಸು ಆಡಳಿತೆ ನಡೆಸುತ್ತಿದೆ. ಈ ಅವಧಿಯಲ್ಲಿ ಸರಕಾರವು ಹಲವಾರು ಸಾಧನೆಗಳಲ್ಲಿ ತೊಡಗಿ ಯಶಸ್ವಿಯಾಗಿದೆ. ದೇಶದ ಕೃಷಿ-ಉದ್ಯಮಗಳಲ್ಲಿ ಶಾಂತರೂಪದ ಕ್ರಾಂತಿಯನ್ನೆಬ್ಬಿಸಿ ದೇಶದ ಆದಾಯ ಹೆಚ್ಚುವಂತೆ ಮಾಡಿದೆ. ವ್ಯಕ್ತಿಗತ ಆದಾಯವೂ ಅಧಿಕವಾಗಿದೆ. ಜನರ ಜೀವನ, ಆರೋಗ್ಯ ಪರಿಸ್ಥಿತಿಯು ಸುಧಾರಿಸಿದೆ. ಯಾವುದೇ ವಿಭಾಗವನ್ನು ತೆಗೆದುಕೊಂಡರೂ, ನಾವು ಸಾಧಿಸಿದ್ದೇವೆ. ನಮ್ಮಲ್ಲಿಗೆ ಬಂದಿರುವ ಎಲ್ಲ ವಿದೇಶೀಯರೂ ಈ ಅಲ್ಪಾವಧಿಯಲ್ಲಿಯೇ ನಾವು ಸಾಧಿಸಿದ ಗುರಿಯನ್ನು ಕಂಡು ಆನಂದಾತಿರೇಕದಿಂದ ಹೊಗಳಿದ್ದಾರೆ. ಇದು ಕೇವಲ ಮುಖಸ್ತುತಿಯಲ್ಲ; ವಾಸ್ತವಿಕತೆಯು ಕುರುಹು. ಆರ್ಥಿಕ ದುಸ್ಥಿತಿಯಲ್ಲಿದ್ದ ಭಾರತ ಇಂದು ಸುಧಾರಿಸಿಕೊಂಡಿದೆ. ಬೃಹತ್ ಪರಿಮಾಣದ ಯೋಜನೆಗಳನ್ನು ಪುನಾರಚನಾ ಕಾರ್ಯಕ್ಕಾಗಿ ಕೈಗೊಳ್ಳುವಾಗ ತೊಂದರೆ ಅಡಚಣೆಯಂತೆ ಕಂಡುಬಂದರೂ ಅದು ಸ್ವಾಭಾವಿಕವೇ. ಆಫ್ರೇಷ್ಯಾದ ಸ್ವತಂತ್ರ ರಾಷ್ಟ್ರಗಳಲ್ಲಿ ಭಾರತದ ರೂಪಾಯಿಯ ಬೆಲೆ ಭದ್ರವಾಗಿದೆಯೆಂಬುದು ನಿರ್ವಿವಾದವಿದೆ.

ಸಂದೇಶ ರವಾನೆ

ಕಾಂಗ್ರೆಸ್ಸನ್ನು ಬಿಟ್ಟರೆ, ಉಳಿದ ಯಾವ ಪಕ್ಷಕ್ಕೇ ತಗಲಿ ಎಲ್ಲಾ ಸ್ಥಾನಗಳಿಗೆ ತಮ್ಮ ಉಮೇದ್ವಾರರನ್ನು ನಿಲ್ಲಿಸುವ ಧೈರ್ಯವಿಲ್ಲ; ಶಕ್ತಿಯೂ ಇಲ್ಲ. ಹಾಗಾಗಿ, ಅವುಗಳೆಲ್ಲವೂ ಒಟ್ಟಿಗಾದರೂ ಬಹುಮತ ಪಡೆಯುವ ನಿರೀಕ್ಷೆಯಿಟ್ಟುಕೊಳ್ಳುವುದೂ ಅಸಾಧ್ಯ. ಇದರಿಂದ ಕೇಂದ್ರದಲ್ಲಿ ಮಾತ್ರವಲ್ಲ, ಎಲ್ಲಾ ರಾಜ್ಯಗಳಲ್ಲಿಯೂ ಕಾಂಗ್ರೆಸ್ಸು ತನ್ನ ಪರಂಪರೆಗನುವಾಗಿ ಬಹುಮತ ಗಳಿಸಿ ಸರಕಾರ ರಚಿಸುವುದೆಂದು ವ್ಯಕ್ತವಾಗುತ್ತದೆ. ತಮ್ಮ ಮೇಲೆ ಜನತೆ ಅಸಹಾಯರಾಗಿ ಹೊರಿಸಿದ ಜವಾಬ್ದಾರಿಯನ್ನು ಪ್ರತಿನಿಧಿಗಳಾಗುವವರು ಮರೆಯಬಾರದು; ಚುನಾವಣೆಯಲ್ಲಿ ಗೆಲ್ಲುವುದೊಂದೇ ಕಾಂಗ್ರೆಸ್ಸಿನ ಗುರಿಯಲ್ಲ; ಅದರೊಂದಿಗೆ ಕಾಂಗ್ರೆಸ್ ತತ್ವಗಳನ್ನು ಮೊದಲಾಗಿ ಕಲಿತು, ಅವುಗಳ ಪ್ರಚಾರ ಕಾರ್ಯದಲ್ಲಿ ದುಡಿಯಬೇಕು. ಮನೆ ಮನೆಯಲ್ಲಿ ಕಾಂಗ್ರೆಸ್ ನೀತಿಯ ಸ್ಪಷ್ಟ ಕಲ್ಪನೆಯ ಚಿತ್ರ ಮೂಡಿ ಬರುವಂತೆ ಮಾಡಬೇಕು. ಕಾಂಗ್ರೆಸ್ ಕಾರ್ಯಕರ್ತರು, ಪ್ರತಿನಿಧಿಗಳು ಈ ಕೆಲಸದಲ್ಲಿ ಅವಶ್ಯ ತೊಡಗಬೇಕು. ಕೇವಲ ಪ್ರಚಾರ ಬಲದಿಂದ, ವಶೀಲಿಯಿಂದ ಬಲೆಗೆ ಬೀಳುವಷ್ಟು ಸ್ವತಂತ್ರ ಭಾರತೀಯನಿಂದು ಪಾಮರನಾಗಿಲ್ಲ. ಆತನಿಗೂ ಮತದ ಬೆಲೆ ಗೊತ್ತು; ಅದನ್ನು ಹೇಗೆ ಚಲಾಯಿಸ ಬೇಕು ಎಂಬುದೂ ತಿಳಿಯದಿಲ್ಲ. ಹೀಗಾಗಿ ಯಾವುದೇ ಬಗೆಯ ಆಶೆ—ಆಮಿಷಗಳ ಬಲದಿಂದ ಮತಗಿಟ್ಟಿಸಿಕೊಳ್ಳುವ ಪರಿಸ್ಥಿತಿ ಉಳಿದಿಲ್ಲ. ಇದಕ್ಕಾಗಿ ಕಾಂಗ್ರೆಸ್ ಕಾರ್ಯಕರ್ತರು ಏಕಮನಸ್ಸಿನಿಂದ ಕಾಂಗ್ರೆಸ್ ಸಂದೇಶವನ್ನು ಜನಜನಕ್ಕೆ ತಿಳಿಸಿ ಹೇಳುವ ಅಗತ್ಯವಿದೆ.

ಸಮಗ್ರತಾ ರಕ್ಷಣೆ

ಗೋವಾ ವಿಮೋಚನೆಯನ್ನು ಭಾರತವೇನೋ ಮಾಡಿತು. ಆದರೆ, ಈ ಬಗ್ಗೆ ಕೈಗೊಂಡ ಕ್ರಮವು ಮಾತ್ರ ಪಾಶ್ಚಾತ್ಯರ ಕೆಂಗಣ್ಣ ನೋಟವನ್ನು ಎದುರಿಸಬೇಕಾಯ್ತು. ಅಸಹಾಯಕವಾದ ಕೆಲವು ರಾಷ್ಟ್ರಗಳು ಸಂಸ್ಥೆಯಲ್ಲಿ ಒಂದೆರಡಿರುವುವಾದರೂ ಗೋವೆಯನ್ನು ಮರಳಿ ಪೋರ್ಚುಗಲ್ಲಿನ ವಸಾಹತುವನ್ನಾಗಿ ಮಾಡುವಲ್ಲಿ, ಭಾರತದ ಪ್ರತಿಷ್ಠೆಯನ್ನು ಕುಗ್ಗಿಸುವಲ್ಲಿ ಕಾರ್ಯ ಪ್ರವೃತ್ತವಾಗುತ್ತಿವೆ. ಯುಕ್ತರಾಷ್ಟ್ರದಲ್ಲಿರುವ ಕಾಶ್ಮೀರದ ಪ್ರಶ್ನೆಯನ್ನು ಪಾಕಿಸ್ತಾನವು ಮರಳಿ ಕೆದಕುವಂತೆ ಅದರ ಹಿತ್ತಾಳೆ ಕಿವಿಗಳನ್ನಿವು ಊದಿ

(೧೨ನೇ ಪುಟ ನೋಡಿರಿ)

ಸತ್ತು ಬದುಕಿದವಳು

ಶ್ರೀ ಜಯವರ್ಮ ಮುದ್ಯ

ಅಂದು ಕಾಲೇಜಿನ ವಾರ್ಷಿಕೋತ್ಸವದ ದಿನವಾಗಿತ್ತು. ಅಂದಿನ ಮನೋರಂಜನೆಯ ಕಾರ್ಯಕ್ರಮದಲ್ಲಿ "ಅನಾರ್ಕಲಿ" ನಾಟಕವೇ ಮುಖ್ಯವಾಗಿತ್ತು. ಅಮರ ಸಲೀಮನಾಗಿ ನಟಿಸುವವನಿದ್ದ. ಕಾಲೇಜು ಹಾಲಿನಲ್ಲಿ ಗದ್ದಲವೇ ಗದ್ದಲ. ಅಮರ ಹೆಸರಾಂತ ನಟನಾಗಿದ್ದ. ಆತನದು ನೈಜ ನಟನೆಯಾಗಿತ್ತು. ಮೊದಲನೆ ದೃಶ್ಯವೇ ಅನಾರ್ಕಲಿ ಸಲೀಮರ ಸಮಾಗಮ. ಸಲೀಮನಾಗಿ ನಟಿಸಿದ ಅಮರನ ನಟನೆ ಅದ್ಭುತವಾಗಿತ್ತು. ಅಲ್ಲಿ ಕೃತ್ರಿಮತೆಗೆ ಎಡೆಯಿಲ್ಲ. ಆತನ ಪ್ರೇಮ ಎಲ್ಲೆ ಇಲ್ಲದೆ ಹರಿಯುತ್ತಿತ್ತು. ಆತ ಅಗಾಧ ಪ್ರೇಮಿಯಾಗಿದ್ದ. ಎರಡನೆಯ ದೃಶ್ಯವೇ ಅಕ್ಬರನ ಆಸ್ಥಾನ. ಸಾಮ್ರಾಟ್ ಅಕ್ಬರ ತಂದೆಯಾಗಿ ಮಗನಿಗೆ ಛೀಮಾರಿ ಹಾಕುತ್ತಿದ್ದ. ಸಲೀಮನ ಆ ಧೈರ್ಯವೆತ್ತ ಮುಖ ಪ್ರೇಕ್ಷಕರಿಗೆ ಮರುಕವನ್ನೆ ಹುಟ್ಟಿಸುತ್ತಿತ್ತು "ತಂದೆಯೇ ನನಗೆ ಅನಾರ್ಕಲಿ ಅಲ್ಲದೆ ಈ ಪ್ರಪಂಚದಲ್ಲಿ ಮತ್ತೇನೂ ಇಲ್ಲ. ಸಿರಿತನ ಬೇಡ, ರಾಜ್ಯ ಬೇಡ, ಯಾವುದೂ ಬೇಡ. ನನಗೆ ಅನಾರ್ಕಲಿ ಬೇಕು. ಅವಳು ನನ್ನ ಜೀವವೇ ಆಗಿದ್ದಾಳೆ. ನನ್ನ ಕ್ಷಮಿಸಿಬಿಡು ತಂದೆಯೇ." ಮೂರನೆಯ ದೃಶ್ಯವೇ ಸಾಮ್ರಾಟ ಸಾಮ್ರಾಟನಾಗಿ ಅನಾರ್ಕಲಿಗೆ ಎಚ್ಚರಿಕೆ ಈಯುತ್ತಿದ್ದ— "ನನ್ನ ಉತ್ತರಾಧಿಕಾರಿಯನ್ನು ಮರೆತು ಬಿಡು—ಯಕಶ್ಚಿತ್—ಹೆಣ್ಣು ರಾಜಪಟ್ಟದಲ್ಲಿ ಶೋಭಿಸಲಾರಳು. ಇದು ಅವಮಾನ, ರಾಜಸಿಂಹಾಸನಕ್ಕೆ ಅವಮಾನ" ಎಂದು ಗದರಿಸುತ್ತಿದ್ದ. ಇದನ್ನು ತಿಳಿದ ಸಲೀಮ ರಾಜಸ್ಥಾನದಿಂದ ತಪ್ಪಿಸಿಕೊಂಡು, ಮೊಗಲ ಸಾಮ್ರಾಟನನ್ನೆ ಯುದ್ಧಕ್ಕೆ ಆಹ್ವಾನವಿತ್ತಿದ್ದ — ವೀರಾಧಿವೀರನಂತೆ ಗರ್ಜಿಸುತ್ತಿದ್ದ, ಅಂತಿಮ ಘಟ್ಟದಲ್ಲಿ ಅನಾರ್ಕಲಿ ಪೂರ್ಣವಾಗಿ ಗೋರಿಯಲ್ಲಿ ಮುಚ್ಚಲ್ಪಟ್ಟಿದ್ದಾಳೆ. ಸಲೀಮ ಓಡಿ ಬಂದು ನೀನಿಲ್ಲದೆ ನಾನು ಬದುಕಲಾರೆ ಎಂದು ಗೋರಿಗೆ ಒರಗಿದ. ಅದು ಅಮರನಲ್ಲ ಸಲೀಮ.

ಸುರೇಖಾ ನೋಡುತ್ತಲೇ ಇದ್ದಳು. ಅವಳಿಗೆ ತಿಳಿಯದಂತೆಯೇ ಕಣ್ಣುಗಳು ಅಡೆತಡೆಯಿಲ್ಲದೆ ನೀರನ್ನು ಹರಿಸುತ್ತಿದ್ದುವು. ಅಮರ ಅವಳ ಹೃದಯವನ್ನು ಸಂಪೂರ್ಣವಾಗಿ ಗೆದ್ದಿದ್ದ. ಅಮರನಿಗೆ ಉತ್ತಮ ಭವಿಷ್ಯ ಕಾದಿದೆಯೆಂದು ಅವಳು ಎಂದೋ ತಿಳಿದಿದ್ದಳು. ತಾನು ಅನಾರ್ಕಲಿಯಾಗಿ ಅಮರ ಸಲೀಮನಾಗಿ ತನ್ನ ಭವಿಷ್ಯವನ್ನು ತೂಗಿದ್ದಳು. ಆದರೆ ಅಮರನಲ್ಲಿರುವ ಕೊರತೆಯನ್ನು ಅವಳು ಬಲ್ಲಳು. ರಂಗದಿಂದ ಬಂದನಂತರ ಆ ಭಾವಾವೇಶ ಉಳಿಯುವುದಿಲ್ಲ. ಆತನ ಪ್ರೇಮ ಪ್ರಪಂಚ ಎಂಗೋ ಮುರಿದು ಬೀಳುತ್ತದೆ. ಪ್ರೇಮಿಸಿದ ಹೃದಯ ನಾಚಿ ಮುರುಟಿ ಹೋಗುತ್ತದೆ— ನಾಚಿಕೆಯ ಮುಳ್ಳಿನಂತೆ. ಹೆಣ್ಣಿನೊಡನೆ ಮಾತಾಡುವ ಶಕ್ತಿ ಅವನಿಗಿಲ್ಲವೆಂದು ಅವಳಿಗೆ ಗೊತ್ತು. ಹೆಣ್ಣುಗಳೇ ಮುಂದೆ ಹೋಗಿ ಮಾತಾಡಿದರೂ ಅಮರ ಮಾತಾಡಲಾರ. ಧ್ವನಿ ಕಂಪಿಸುತ್ತದೆ, ತುಟಿ ನಡುಗುತ್ತದೆ— ಹಾವು ಕಂಡಂತೆ.

ಅಮರ ನಟ ಮಾತ್ರನಲ್ಲದೆ ಅದ್ವಿತೀಯ ವಾಗ್ಮಿಯೂ ಆಗಿದ್ದ. ಆತನ ವಾಗ್ಝರಿಗೆ ಸಭೆ ಬೆಕ್ಕಸಬೆರಗಾಗಿ ಬಾಯಿ ಆಗಲಿಸಿ ಕೇಳುತ್ತಿತ್ತು. ಅಮರನ ಈ ಭಾವನಾತ್ಮಕವಾದ ಕಾವ್ಯ ಜೀವನಕ್ಕೆ ಅಧಿಕಾರಿಣಿಯಾಗಿ ಬಾಳುವ ಮಹದಾಶೆ ಸುರೇಖಳದು. ಆದರೆ ಆದರೆ ಅಮರ ತನ್ನನ್ನು ಸ್ವೀಕರಿಸಬಲ್ಲನೇ? ಅದೇನೂ ಸುಲಭವಾದುದಲ್ಲವೆಂದು ಅವಳಿಗೆ ತಿಳಿಯದುದಲ್ಲ. ಹೆಣ್ಣ ಕಂಡು ನಾಚುವ ಈ ಅಮರ ಜೀವಿಯನ್ನು ಒಲಿಸುವುದೇನೂ ಸಾಧಾರಣ ವಿಷಯವಲ್ಲ— ಎಂದೆಂದೂ ಹೇಗಾದರೂ ಈಸಿ ಜೈಸ ಬೇಕು ಎಂದೆಣಿಸುತ್ತಾಳೆ ಇವಳು. ಹಾಗೆ ಆಲೋಚಿಸುತ್ತಿರುವಂತೆ ಅಮರ ಪ್ರೇಕ್ಷಕವೃಂದದ ಸಹಪಾಠಿಗಳ ಅಭಿನಂದನೆಗಳನ್ನು ಸ್ವೀಕರಿಸುತ್ತಿದ್ದನು. ಸುರೇಖ ಯಂತ್ರವತ್ತಾಗಿ ಸಾಗಿ, ಅವನ ಕೈ ಕುಲುಕಿಸಿ "Your acting was wonderful Amar, congratulations" ಎಂದಳು. "Thank you miss……" ಕಂಠ ನಡುಗಿತು. ದೇಹ ನಡಗಿತು. ಆತ ಬೆವರಿ ಒದ್ದೆಯಾಗಿದ್ದ. ಸುರೇಖಾ ಮುಗುಳು ನಕ್ಕಳು. ಅಲ್ಲಿ ಕನಿಕರವೂ ಇತ್ತು. ಮಮತೆಯ ಛಾಯೆಯೂ ಇತ್ತು.

ಅಮರನಿಗೆ ಸುರೇಖಳ ಬಯಕೆ ಅರ್ಥವಾಗಿರುತ್ತದೆ. ಅವಳ ಹೃದಯದ ಕರೆಗೆ ಓಗೊಡುತ್ತಾನೆ. ಅವಳು ತನ್ನವಳಾದರೆ ....ಆದರೆ ಏನು ಅವಳು ಆಗುವವಳೇ? ಆಗುವಳೆಂದು ಆತ ಬಲ್ಲ...ಹೇಗೆ? ತಾನು ಮಾತಾಡಲಾರ. ಅವಳಾಗಿಯೇ ಹತ್ತಿರ ಬಂದರೆ ದೂರ ಸರಿಯುತ್ತಾನೆ. ಅಳಿದುಳಿದ ಮಾತುಗಳು ಕೂಡಾ ಬಾಯಿಗೆ ಬರಲಾರವು ಅಮರ ಜೋತಾಡುತ್ತಿದ್ದ ಜೋಕಾಲಿಯ ಮೇಲೆ. ಎಲ್ಲಾ ನಾಚಿಗೆ ಬಿಟ್ಟು ಮುಂದೆ ಹೋಗಬೇಕೆಂದರೆ ಸಮಾಜದ ಹೆದರಿಕೆ. ಆತನಿಗೆ ಇದೆಲ್ಲಾ ಪರಿಹಾರವಾಗದ ಸಮಸ್ಯೆಯಾಗಿತ್ತು. ಅವಳು ಒಂದು ಮಾತನಾಡಿದರೆ ಹತ್ತು ಮಾತನಾಡಬೇಕೆಂಬ ಬಯಕೆ—ಆದರೆ ಮಾತನಾಡಲಾರೆನಲ್ಲಾ……

ಸುರೇಖಾ ಅವಳೊಂದು ಕನಸು. ಅವಳ ಕಣ್ಣುಗಳ ಅಂದವೇ ಅಂದ. ಯಾವುದೋ ತಿಳಿಯಲಾರದ ಲೋಕದಲ್ಲಿ ವಿಹರಿಸುತ್ತಿರುವಂತೆ ತೋರುತ್ತದೆ ಅಮರನಿಗೆ. ಅವಳ ನಡಗೆಯೇ ಅವಳ ವ್ಯಕ್ತಿತ್ವವನ್ನು ಸಾರಿ ಹೇಳುತ್ತದೆ. ಅವಳ ನೇರವಾದ ಮೂಗಿನ ತುದಿ ಮೇಲೇರಿ ಕಲಾ ಕನ್ನಿಕೆಯಂತೆ ಕಾಣುತ್ತಿದ್ದಳು. ಅಮರ ಕೆಲವೊಮ್ಮೆ ತನ್ನನ್ನು ಘಾಸು ಮರೆತು ಕದ್ದು ನೋಡುತ್ತಾನೆ. ಅಲ್ಲಿ ಕಾಮದ ಛಾಯೆಯಿಲ್ಲ; ನಿಷ್ಕಲ್ಮಷ ನೋಟವದು. ಅಮರ ನಗುತ್ತಾನೆ ಯಾವಾಗಲಾದರೂ ತನ್ನ ಕೊರತೆಯನ್ನು ಕಂಡು. ಸುರೇಖಾ ಇದನ್ನು ಕಂಡು ನಗುತ್ತಾಳೆ. ಅಲ್ಲಿಯೂ ಆಕರ್ಷಣೆಗೆ ಸಿಕ್ಕು ತೊಳಲಾಡುತ್ತಾಳೆ. ಆತನ ನಗುವಿನಲ್ಲಿ ತಾನೂ ನಕ್ಕು ನಲಿಯಬೇಕೆಂದು ತೋರುತ್ತದೆ ಅವಳಿಗೆ. ಆತನ ಆ ಆಳತೆಯ ಮಾತಿನಲ್ಲಿಯೂ ಸೊಗಸಿದೆ, ಯೋಗ್ಯತೆಯನ್ನು ಸಾರಿ ಹೇಳುತ್ತದೆ. ಯಾವುದೋ ಭವಿಷ್ಯತ್ತಿನ ಕನಸಿನಲ್ಲಿ ತೊಡಗುತ್ತಾಳೆ ಮನಸ್ಸಿನಲ್ಲಿ ಆನಂದದ ಹುಚ್ಚು ಹೊಳೆ ಹರಿಯುತ್ತದೆ. ನಿರರ್ಗಳವಾದ ಆ ಹರಿಯುವಿಕೆಗೆ ಎಲ್ಲಿಂದಲೋ ಅಡ್ಡಿಯುಂಟಾಗುತ್ತದೆ. ಎಷ್ಟು ಕಾಯಲಿ ಆತನಿಗೆ? ಹೇಗೆ ಒಲಿಸಲಿ! ನಿರಾಶೆ ಕತ್ತಲೆಯಂತೆ ಹರಿದು ಬರುತ್ತದೆ. ಶೂನ್ಯ ದೃಷ್ಟಿಯಿಂದ ನೀಲಾಕಾಶವನ್ನು ತಲೆಯೆತ್ತಿ ನೋಡುತ್ತಾಳೆ ಸುರೇಖಾ; ಅಲ್ಲಿ ಬಿಳಿ ಮೋಡಗಳು ದಟ್ಟವಾಗಿ ಹಬ್ಬಿದ್ದುವು. ಎಲ್ಲಿ ದಾರಿ? ಕಾಣುವುದೇ ಇಲ್ಲವಲ್ಲ? ತಾನೆ ಮುಂದುವರಿದು ಬಿಡಲೇ? ಅಲ್ಲ ಅವಳ ಸ್ವಾಭಿಮಾನ ಅಡ್ಡ ಬರುತ್ತದೆ. ಅಮರನ ತಪಸ್ಸಿನಲ್ಲಿ ವರ್ಷಗಳು ಉರುಳಿ, ಕಾಲೇಜಿನ ವ್ಯಾಸಂಗದ ಕೊನೆಯ ವರುಷವೂ ಕಾಲಿರಿಸಿತು. ಅವರ ಎರಡು ಹೃದಯಗಳು ಪರಸ್ಪರ ತಿಳಿದುಕೊಂಡಿದ್ದರೂ, ಅಲ್ಲಿ ಹೆಚ್ಚಿನ ವ್ಯತ್ಯಾಸವುಂಟಾಗಲಿಲ್ಲ. ತನ್ನ ಪವಿತ್ರ ಪ್ರೇಮಕ್ಕಾಗಿ ಸುರೇಖ ಎಷ್ಟು ವರ್ಷವೂ ಕಾಯಲು ಸಿದ್ಧಳಿದ್ದಳು. ಹೃದಯ ಸದಾ ಅಮರನಿಗಾಗಿ ಕಾತರಿಸುತ್ತಿತ್ತು. ಆದರೆ ದೇಹ ಯಾವುದೋ ಅವ್ಯಕ್ತವೇದನೆ, ಯಾವುದೋ ಅಸಹ್ಯವಾದುದನ್ನು ಬೇಡುತ್ತಿತ್ತು. ಆಗ ಯಾವುದೋ ಬೇಡವಾದ ವ್ಯಕ್ತಿಯ ಮಸುಕು ಛಾಯೆ ಅವಳ ದೃಷ್ಟಿಗೆ ಗೋಚರಿಸುತ್ತಿತ್ತು. ಆತ "ಆನಂದ". ಅಮರನಲ್ಲಿರುವ ಯಾವ ಗುಣಗಳು ಅವನಲ್ಲಿಲ್ಲದಿದ್ದರೂ, ಕಲೆಯ ಗಂಧಗಾಳಿ, ಇಲ್ಲದಿದ್ದರೂ, ಹೆಣ್ಣುಗಳನ್ನು ಬಲೆ ಬೀಸುವ ಕಲೆ ಆತನಿಗೆ ಜನ್ಮದಿಂದ ಗಂಟು ಬಿದ್ದಿತ್ತು. ಹೆಣ್ಣಿನ ಹಿಂದೆ ಕುಣಿದು ಜಿಗಳೆಯಂತೆ ಅಂಟಿ ಬಿಡುತ್ತಿದ್ದ. ಹುಚ್ಚು ಹುಚ್ಚಾಗಿ ಮಾತನಾಡಿ ನಗಿಸುತ್ತಿದ್ದ. ಸುರೇಖಾ ಮೊದ ಮೊದಲು ಪ್ರತಿಭಟಿಸುವ ಸಾಹಸ ಮಾಡುತ್ತಿದ್ದಳು, ಸಮಯ ಕಳೆದಂತೆ ಆತನ ಮಾತುಗಳು ಅವಳಿಗೆ ನಗೆಯನ್ನೇ ತರುತ್ತಿತ್ತು. ಇದು ಆನಂದನಿಗೆ ಪ್ರೋತ್ಸಾಹವಾಗುತ್ತಿತ್ತು. ಅಮರ ಅವಳಿಗೆ ಎಂದು ಗಗನಕುಸುಮ ಎಂದು ಭಾವಿಸಿದ್ದಳೋ ಅಂದೇ ಅವಳ ದೇಹದಲ್ಲಿ ಅವಳಿಗೆ ಅರಿವಾಗದಂತೆಯೇ ಆನಂದ ತನ್ನ ಸ್ಥಾನವನ್ನು ಭದ್ರಪಡಿಸಿದ್ದ. ರಾಜರಸ್ತೆಯಿರುವಾಗ ಕಡಿದಾದ ಗುಡ್ಡದ ಹಾದಿಯನ್ನೇಕೆ ಹಿಡಿಯಬೇಕು ಎಂಬ ಭಾವನೆ ಅವಳಲ್ಲಿ ಮೂಡಿತ್ತು.

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ರವೀಂದ್ರವಾಣಿ—ಲೇಖಾಂಕ ೩೧. ವಿಶ್ವಕವಿ ರವೀಂದ್ರನಾಥ ಟಾಗೋರ್

ಅನಂತದ ಸಾಧನೆ

ಅನುವಾದಕರು: ಕೆ ಎನ್. ಭಟ್, ಶಿರಾಡಿಪಾಲ್.

ಆದರೆ, ಬೌಧಿಕ ಆನಂದವು ಇದಕ್ಕಿಂ ಭಿನ್ನವಾಗಿ ವಿಶಾಲವಾಗಿರುವುದು. ಪ್ರೇಮಾನಂದದ ಕ್ಷೇತ್ರವು ಬಹು ವಿಸ್ತಾರ, ಅಕ್ಷಯವೂ ಆಗಿರುತ್ತದೆ, ಇಲ್ಲಿ ಪ್ರಾಪ್ತಿ, ಅಥವಾ ಅಪ್ರಾಪ್ತಿ, ಇವುಗಳಲ್ಲಿ ಭೇದವಿಲ್ಲದೆ, ಸಮಾನ ಭಾವನೆ ಇರುವುದು.

ವೈಷ್ಣವ ಭಕ್ತಿಯ ಒಂದು ಗೀತದಲ್ಲಿ—ಭಕ್ತನೊಬ್ಬನು—ತನ್ನ ಪ್ರಿಯ ಪರಮಾತ್ಮನಲ್ಲಿ ಹೇಳುತ್ತಾನೆ—'ನನ್ನ ತೃಷಿತ ನಯನಗಳು, ನಿನ್ನ ಸೌಂದರ್ಯವನ್ನು ಬಹುಕಾಲದಿಂದಲೇ ನೋಡುತ್ತಿವೆ! ಆದರೂ ಇವುಗಳ ತೃಷೆ, ಕಡಿಮೆಯಾಗಿಲ್ಲ. ನನ್ನ ಹೃದಯದ ಆವರಣಗಳಿಂದ ನಿನ್ನನ್ನು ನಾನು ಲಕ್ಷಗಟ್ಟಲೆ ವರುಷಗಳಿಂದ ಅಪ್ಪಿ—ಮುಚ್ಚಿ ಇಟ್ಟುಕೊಂಡಿದ್ದೇನೆ, ಇಷ್ಟಾದರೂ ನನಗೆ ಸಂತೋಷವಾಗುವುದಿಲ್ಲ!"

ಈ ಗೀತದಿಂದ ಸ್ಪಷ್ಟವಾಗುವುದೇನೆಂದರೆ—ನಾವು ನಮ್ಮ ಆನಂದದ ಮೂಲದ, ಅಸೀಮವನ್ನೇ ಹುಡುಕುತ್ತೇವೆ. ಧನವಂತರಾಗುವ ನಮ್ಮ ಇಚ್ಛೆಯೂ ಕೂಡ, ಸ್ವಲ್ಪದಾದರೂ, ವಿಶೇಷವಾದ ಧನವನ್ನು ಹೊಂದುವ ಇಚ್ಛೆಯಾಗಿರದೆ, ಅದು, ಅನಿಶ್ಚಿತ ಹಾಗೂ ಅಸ್ಪಷ್ಟ ರೂಪದಂತೆ ಇರುವುದು. ಆದರಲ್ಲೂ ಸಹ ಅಸೀಮದ ಛಾಯೆ ಇರುವುದು. ವಿಶಾಲ ಹೊಂದಿಯೂ ಕೂಡ ಅಸೀಮವೆನಿಸಲಾರದ ವಸ್ತುಗಳ ಪರಿಸರವನ್ನು ನಾವು ವಿಶಾಲಗೊಳಿಸುತ್ತಿರುವುದಿದು, ಮನುಷ್ಯ ಜೀವನದ ಎಲ್ಲಕ್ಕಿಂತಲೂ ದೊಡ್ಡದಾದ ದೌರ್ಭಾಗ್ಯವಾಗಿದೆ. ಅಲ್ಲದೆ, ನಾವು ಅಸೀಮವನ್ನು ಸೀಮಿತ, ಹಾಗೂ ವಿಸ್ತಾರಗೊಳ್ಳಲು ಅಯೋಗ್ಯವಾದ ವಸ್ತುಗಳಿಂದ ಪಡೆಯಲು ಇಚ್ಛಿಸುತ್ತೇವೆ.

ಇಂತಹ ಸೀಮಿತ ವಸ್ತುಗಳನ್ನು ಒಂದಕ್ಕೊಂದು ಜೋಡಿಸುತ್ತ ನಾವು ಅದನ್ನೆ ಅಸೀಮಿತವನ್ನಾಗಿ ಪರಿವರ್ತಿಸುವ ವ್ಯರ್ಥ ಪ್ರಯತ್ನ ಮಾಡುತ್ತೇವೆ. ನಮ್ಮ ಆತ್ಮವು ಅನಧಿಕೃತ ವಸ್ತುಗಳ ಪ್ರಾಪ್ತಿಗಾಗಿ ವ್ಯಾಕುಲವಾಗುತ್ತದೆ. ಆದರೆ ಎಷ್ಟು ಪ್ರಯತ್ನಪಟ್ಟರೂ, ಆ ಬಳಿಕವೂ ಕೂಡ, ಅಪ್ರಾಪ್ತವಾಗಿರುವ ವಸ್ತುಗಳ ಮುಕ್ತಿಗೆ ದಿಂದ, ಅದು ಹೊರಲಾರದಾದಾಗ—"ನಾನು ಪ್ರಾಪ್ತ ವಸ್ತುಗಳಿಂದ ಚಿಂತಿತನಾಗಿದ್ದೇನೆ! ಅಪ್ರಾಪ್ತವಾಗಿರುವ ಆ ವಸ್ತು ಎಲ್ಲಿದೆ?" ಎಂಬುದಾಗಿ ಬೊಬ್ಬಿಡುವುದು.

ವೈರಾಗ್ಯವು ಮನುಷ್ಯನ ಆತ್ಮದಲ್ಲಿ ಬಹಳ ಆಳವಾಗಿ ಅಡಗಿರುವುದೆಂಬುದಕ್ಕೆ ಮಾನವೇತಿಹಾಸವು ಸಾಕ್ಷಿಯಾಗಿರುವುದು—ಮನುಷ್ಯನು—'ನನಗೆ ಏನೂ ಬೇಕಾಗಿಲ್ಲ! ನಾನು ಎಲ್ಲದಕ್ಕಿಂತಲೂ ಮೇಲಾಗಿದ್ದೇನೆ!" ಎಂಬುದಾಗಿ ಯಾವಾಗ ಹೇಳುವನೋ, ಆಗ ಅವನು ಹೇಳುವ ಆ ಮಾತು, ನಿಜವಾಗಿಯೂ ಹೃದಯದ ಮಾತಾಗಿರುತ್ತದೆ. ಓರ್ವ ಚಿಕ್ಕ ಹುಡುಗಿಯು, ತನ್ನ ಬಟ್ಟೆಯ ಗೊಂಬೆಯೊಡನೆ ಮಾತನಾಡುತ್ತಿರುವಾಗ, ತಾನು ಅದಕ್ಕಿಂತ ಹೆಚ್ಚು ಮಾತನಾಡಬಲ್ಲೆನೆಂದು, ಯಾವಾಗ ತಿಳಿದುಕೊಳ್ಳುವಳೋ, ಆಗ ಆ ಗೊಂಬೆಯನ್ನು ದೂರಕ್ಕೆ ಎಸೆದು ಬಿಡುತ್ತಾಳೆ! ಯಾವ ವಸ್ತುವಿನ ಮೇಲೆಯೂ, ಸಹ ಅಧಿಕಾರವನ್ನು ಹೊಂದುವುದು, ನಾವು ಅದಕ್ಕಿಂತ ಹೆಚ್ಚಿನ ಸಮರ್ಥರೆಂಬುದನ್ನು ತೋರಿಸಿ ಕೊಡುತ್ತದೆ. ಮತ್ತು ಆ ವಸ್ತುಗಳು, ನಮಗಿಂತ ಹೀನವೆಂಬುದನ್ನೂ ತೋರಿಸಿ ಕೊಡುತ್ತದೆ. ಇಂತಹ ಹೀನ ವಸ್ತುಗಳ ಸಹವಾಸದಲ್ಲಿರುವುದು, ಯಾರಿಗೂ ಒಪ್ಪಿಗೆಯಾಗಲಾರದು.

ಯಾಜ್ಞವಲ್ಕ್ಯನು ತನ್ನ ಎಲ್ಲಾ ಸಂಪತ್ತನ್ನೂ ಪತ್ನಿಯಾದ ಮೈತ್ರೇಯಿಗೆ—ಒಪ್ಪಿಸಿ ಹೋದಾಗ—ಆಕೆಯೂ ಇದೇ ಮಾತನ್ನು ಹೇಳಿದ್ದಳು,—"ಈ ಭೌತಿಕ ವಸ್ತುಗಳು, ನನಗೆ, ಅಸೀಮ ಪಥದಲ್ಲಿ ಮುಂದುವರಿಯಲು ಸಹಾಯಕವಾಗಬಲ್ಲುವೇ? ಸ್ವಾಮಿ!" ಎಂದು ಆಕೆ ಕೇಳಿದಳು. ಅಥವಾ ಬೇರೆ ಶಬ್ದಗಳಲ್ಲಿ ಹೇಳುವುದಾದರೆ—'ಈ ವಸ್ತುಗಳು ನನ್ನ ಆತ್ಮಕ್ಕಿಂತ ಶ್ರೇಷ್ಠವಾಗಿವೆಯೆ?' ಎಂಬುದೇ ಅವಳ ಪ್ರಶ್ನೆಯಾಗಿತ್ತು. ಆಗ, ಅವಳ ಪತಿ-"ಈ ಸಂಪತ್ತು ಸಾಂಸಾರಿಕ ದೃಷ್ಟಿಯಲ್ಲಿ ಸಂಪೃದ್ಧಿಯನ್ನು ನೀಡಬಲ್ಲುದು.' ಎಂದು ಹೇಳಿದಾಗ ಆಕೆ ಪುನಃ 'ಹಾಗಾದರೆ, ನಾನು ಈ ಸಂಪತ್ತನ್ನು ಪಡೆದು ಏನು ಮಾಡಲಿ?' ಎಂದು, ತಕ್ಷಣ ಹೇಳಿದ್ದಳು. ಹೀಗೆಯೇ ಮನುಷ್ಯನು—ಸಾಂಸಾರಿಕ ವಸ್ತುಗಳ ವಾಸ್ತವಿಕ ರೂಪವನ್ನು ಯಾವಾಗ ತಿಳಿದುಕೊಳ್ಳುವನೋ, ಆಗ, ಅವುಗಳ ಬಂಧನದಿಂದ ಬಿಡುಗಡೆ ಹೊಂದುತ್ತಾನೆ. ಮತ್ತು ತನ್ನ ಅಧಿಕೃತ ವೈಭವದಿಂದ ಮೇಲ್ಮಟ್ಟಕ್ಕೆ—ಏರಿದ ಬಳಿಕವೇ ಮನುಷ್ಯನು ತನ್ನ ಆತ್ಮವನ್ನು ಗುರುತಿಸುತ್ತಾನೆ. ಈ ಪರಿಯಿಂದ ಅನಂತ ಯಾತ್ರೆಯ ಪಥದ ಮೂಲಕ ಮುಂದುವರಿಯುತ್ತಿರುವ, ಮನುಷ್ಯನಿಗೆ, ಅನೇಕ ಸಲ ವೈರಾಗ್ಯದ ಸಮ್ಮುಖದಿಂದಾಗಿ ಹೋಗಬೇಕಾಗುತ್ತದೆ

'ನಾವು ಅಸೀಮ ಬ್ರಹ್ಮನನ್ನು ಹೊಂದಲಾರೆವು, ಎಂಬ ಈ ನಿಶ್ವಾಸವು ಕೇವಲ ತರ್ಕಸಮ್ಮತವೇ ಆಗಿಲ್ಲವೆಂಬುದನ್ನು ದೃಶ್ಯದ ಮೂಲಕ ಅನುಭವ ಮಾಡಿಕೊಳ್ಳಲಾಗುವುದು; ಮತ್ತು, ಈ ಅನುಭವದಲ್ಲಿಯೇ ಆತ್ಮಿಕ ಆನಂದವು ಅಡಗಿರುವುದು. ಒಂದು ಪಕ್ಷಿಯು ರೆಕ್ಕೆಗಳನ್ನು ಅಗಲಿಸಿಕೊಂಡು, ಅಂತರಿಕ್ಷದಲ್ಲಿ ಹಾರಾಡುತ್ತಿರುವಾಗ—ಅದು ತಾನು—ಈ ರೆಕ್ಕೆಗಳಿಂದಲೇ ಆಕಾಶದ ಇನ್ನೊಂದು ಬದಿಗೆ ತಲುಪಲಾರೆ!, ಎಂದು ತಿಳಿದುಕೊಳ್ಳುತ್ತದೆ ಈ ತಿಳುವಳಿಕೆಯಿಂದಲೇ ಅದಕ್ಕೆ ಆನಂದವು ಲಭಿಸುವುದು. ಗೂಡಿನ ರೂಪದ ಆಕಾಶವು ಅದಕ್ಕೆ ಬಹು ಚಿಕ್ಕದಾಗಿದ್ದು ಆ ಪಕ್ಕಿಯ ಆವಶ್ಯಕತೆಗೆ ಅದು ಸಾಕಾಗದಷ್ಟೇ ಇರುತ್ತದೆ. ಆದರೆ, ತನ್ನ ಆವಶ್ಯಕತೆಗಳೇ ಒಂದು ಹದ್ದಿನಲ್ಲಿರಲಿ, ಎಂದು, ಒಂದು ಪಕ್ಷಿ ಕೂಡ ಅಪೇಕ್ಷಿಸುವುದಿಲ್ಲ. ಅದರ ಆವಶ್ಯಕತೆಗಳನ್ನು ಪೂರೈಸುವಷ್ಟು ಸೌಕರ್ಯ-ಅದರೊಡನೆ ಇರುತ್ತಿದ್ದರೂ, ಅದಕ್ಕಿಂತ ಹೆಚ್ಚಿಗೆ ಇರುತ್ತಿದ್ದರೂ, ಕೂಡ ಆ ಪಕ್ಷಿಯೂ ಸಹ ಅಸೀಮದ ಕಲ್ಪನೆಯನ್ನೇ ಮಾಡುವುದು. ನಮ್ಮ ಆತ್ಮವೂ ಕೂಡ, ಅಸೀಮವಾದ ರೆಕ್ಕೆಗಳಿಂದ ಹಾರಲು ಅಪೇಕ್ಷಿಸುವುದು. ಹೀಗೆ ಮಾಡುವ ಹಾರಾಟದಲ್ಲಿ ಆಕಾಶವನ್ನು ಸ್ಪರ್ಶಿಸಲು, ಸಾಧ್ಯವಿಲ್ಲದಿದ್ದರೂ ಈ ಹಾರಾಟದಲ್ಲಿ—ಈ ಕಲ್ಪನೆಯಲ್ಲಿಯೇ ಆನಂದವಿರುವುದು. ಆದುದರಿಂದ, ಅದು, ಈ ಪ್ರವೃತ್ತಿಯಿಂದಲೇ ಇರಲು, ಅಪೇಕ್ಷಿಸುವುದು.

ಮನುಷ್ಯನ ಶಾಶ್ವತವಾದ ಆನಂದವು, ಅತನು ಇಚ್ಛಿಸಿದ ವಸ್ತು ಲಭಿಸುವುದರಲ್ಲಿ ಇರುತ್ತಿರದೆ, ತನಗಿಂತಲೂ ಮಹತ್ತಾದ ವಸ್ತುವಿಗಾಗಿ, ಆತ್ಮ ಸಮರ್ಪಣೆ ಮಾಡುವುದರಲ್ಲೇ ಇರುವುದು. ಅದು ಮಹತ್ವಪೂರ್ಣ ವಿಚಾರಗಳಲ್ಲಿ—ಮಹಾವ್ಯಕ್ತಿಗಳಲ್ಲಿ—ದೇಶದಲ್ಲಿ— ಮನುಷ್ಯ ಮಾತ್ರನಲ್ಲಿ, ಪರಮಾತ್ಮನಲ್ಲಿಯೂ ಸಹ ಇರಬಲ್ಲುದು. ಮನುಷ್ಯನು ತನ್ನ ಸರ್ವಸ್ವವನ್ನು ಯಾವುದಾದರೂ, ಮಹಾ ಉದ್ದೇಶ, ಯಾ ಕಾರ್ಯ ಸಾಧನೆಗಾಗಿ ಸಮರ್ಪಿಸಿ, ಸಾಂಸಾರಿಕ ಬಂಧನಗಳಿಂದ, ಮುಕ್ತನಾಗುವ ವರೆಗೆ, ದುಃಖಿಯಾಗಿಯೇ ಇರುತ್ತಾನೆ. ಬುದ್ಧ—ಈಸಾ—ಮೊದಲಾದ ಮಹಾತ್ಮರೆಲ್ಲರೂ, ಈ ಸತ್ಯವನ್ನೇ ಹೊರಗೆಡಹಿದ್ದಾರೆ. ಮತ್ತು ಆ ಮೂಲಕ, ಅವರು ನಮಗೆ, ಸರ್ವಸ್ವ ದಾನದ ಪ್ರೇರಣೆಯನ್ನು ಕೊಡುತ್ತಾರೆ. ದಾನಪಾತ್ರವನ್ನು ಹಿಡಿದುಕೊಂಡು, ನಮ್ಮ ಸರ್ವಸ್ವದ ಭಿಕ್ಷೆಯನ್ನು ಪಡೆಯಲು, ಮಹಾತ್ಮರು ನಮ್ಮ ಸಮ್ಮುಖ ಬಂದು, ನಾವು ಆತ್ಮಿಕ ದಾನ ಮಾಡುವ ಸುವರ್ಣಾವಕಾಶವನ್ನು ಕಲ್ಪಿಸುವರು. ನಾವು ಆ ಪಾತ್ರಕ್ಕೆ ಎಷ್ಟರ ಮಟ್ಟಿಗೆ ಆತ್ಮ ದಾನವನ್ನು ನೀಡುವೆವೋ ಅಷ್ಟರ ಮಟ್ಟಿಗೆ, ನಮಗೆ ನಿಜವಾದ ಆತ್ಮಿಕ ಆನಂದವು ಲಭಿಸುವುದು. (ಸಶೇಷ)

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅನಾಯಾ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕಗಳ ಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.



ಮನಸ್ಸಿದ್ದಲ್ಲಿ ಮಹಾದೇವ

ಎ ಧ ೮

ಪ್ರಬಲ ಇಚ್ಛಾಶಕ್ತಿಯ ಮುಂದೆ ಅದೃಷ್ಟವಾದರೂ ಸೋಲೊಪ್ಪಿಕೊಳ್ಳಬೇಕಾಗುವುದು ಎಂಬುದರಲ್ಲಿ ಮತಭೇದವಿರಬಹುದು. ಆದರೆ, ಪ್ರಬಲ ಇಚ್ಛಾಶಕ್ತಿಯಿರುವುದರಿಂದ ಸಾಮಾನ್ಯವಾಗಿ ಅಸಂಭವವೆಂದು ಕಂಡುಬಂದ ಹಲವಾರು ವಿಷಯಗಳು ಸಂಭವವೆನಿಸಿದುದನ್ನು ನಾವು ಪ್ರತ್ಯಕ್ಷ ಕಾಣುತ್ತೇವೆ. ಇಟೆಲಿಯ ನಿವಾಸಿಯಾದ ಕೊಟೇಡೋ ಮೆಕೇಗಿಯ ಶಬ್ದಚಿತ್ರವು ಇದಕ್ಕೊಂದು ಚಮತ್ಕಾರಿ ಉದಾಹರಣೆಯಾಗಿದೆ.

ಕೊಟೇಡೋ ಮೆಕೇಗಿಯು ಚತುರ ಅದ್ಭುತ ನಟನೆಗೆ ಹೆಸರು ಪಡೆದವನು. ತನ್ನ ಶರೀರವನ್ನು ಗಾಳಿಗೆದುರಾಗಿ ಕೇವಲ ಬಲಗೈಯ ತರ್ಜನಿಯಿಂದ ಆಧರಿಸಿ ನಿಲ್ಲುವ ಶಕ್ತಿಯಿರುವವನು. ಇದು ವಾಸ್ತವಿಕವಾಗಿ ಒಂದು ಅದ್ಭುತ ಕಾರ್ಯ. ಆದರೆ, ಇದಕ್ಕೂ ಅದ್ಭುತವಾದುದು ಇನ್ನೂ ಇದೆ. ಎಳೆತನದಲ್ಲಿ ಬಾಲಪಕ್ಷಾಘಾತದಿಂದ ಆತನ ಎಡಗಾಲು ನಿರ್ಜೀವವಾಗಿದೆ ಮಾತ್ರವಲ್ಲ, ತನ್ನ ಇಡೀ ಶರೀರದ ಭಾರವನ್ನು ಹೊರುವ ಆವನ ತರ್ಜನಿಯಾದರೂ ಮುರಿದಿದೆ! ಇಂತಹ ಚಮತ್ಕಾರವನ್ನು ಗಳಿಸಿಕೊಳ್ಳಲು ಕೋಟೇಡೋವು ತನ್ನ ಪ್ರಬಲ ಇಚ್ಛಾಶಕ್ತಿಯ ಸಹಾಯದಿಂದ, ತನ್ನೆಲ್ಲ ಶಾರೀರಕ ದುರ್ಬಲತೆಗಳನ್ನು ತುಳಿದು ವಿಜಯ ಭೇರಿಯನ್ನು ಬಾರಿಸಿದನು; ಈ ಕಾರಣದಿಂದಲೇ ಇಂದು ಆತನು ಯುರೋಪಿನ ನಟ ಶ್ರೇಷ್ಠರ ಸಾಲಿನಲ್ಲಿ ನಿಲ್ಲುವಂತಾಗಿದ್ದಾನೆ.

ಹಾರುವ 'ಮೆಕೇಗಿ" ಎಂಬ ಒಂದು ನಟರ ಪರಿವಾರ ಇಟೆಲಿಯಲ್ಲಿದೆ. ಇಡಿಯ ಯುರೋಪಿನಲ್ಲಿ ಸುತ್ತಾಡಿ ತನ್ನ ಕಲೆಯನ್ನು ಪ್ರದರ್ಶಿಸಿ ಜೀವನ ನಡೆಸುವ ಕೊಟೇಡೊವೂ ಇದೇ ಕುಟುಂಬದಲ್ಲಿ ಜನಿಸಿದನು. ದುರ್ಭಾಗ್ಯವಶದಿಂದ ಮೂರನೆಯ ವಯಸ್ಸಿನಲ್ಲೇ ಬಾಲ ಪಕ್ಷಘಾತಕ್ಕೆ ಬಲಿಯಾಗಿ ತನ್ನೊಂದು ಪಾದವನ್ನು ಕಳೆದುಕೊಂಡನು. ಆವನ ಎಡಪಾದ ನಿರ್ಜೀವ ಮತ್ತು ನಿರುಪಯುಕ್ತ. ಇಂತಹ ದುರವಸ್ಥೆಗೆ ಈಡಾದ ಈ ಬಾಲಕ ತನ್ನ ಕುಲವೃತ್ತಿಯನ್ನು ಕೈಗೊಳ್ಳಲು ಸರ್ವಥಾ ಅಸಮರ್ಥನೆಂದವನ ಹಿರಿಯರು ಸಿದ್ಧಾಂತಿಸಿಬಿಟ್ಟರು. ಆದರೂ ಅಂಗಹೀನನಾದ ಕೊಟೇಡೋ ಧೈರ್ಯವನ್ನು ಕಳೆದುಕೊಳ್ಳಲಿಲ್ಲ. ಹನ್ನೆರಡನೆ ವರ್ಷಕ್ಕೆ ಕಾಲಿಡುತ್ತಿರುವಾಗ, ತಾನು ನಟನಾಗಿಯೇ ದಿನಗಳೆಯಬೇಕೆಂಬ ದೃಢನಿಶ್ಚಯವನ್ನು ಮಾಡಿದನು. ಆದರೆ, ಈ ನಿಶ್ಚಯವನ್ನು ಕಾರ್ಯರೂಪಕ್ಕಿಳಿಸುವುದು ಹೇಗೆ ಎಂಬ ಪ್ರಶ್ನೆ ಮಾತ್ರ ಭೂತಾಕಾರವೆಂಬಂತೆ ಕಾಡುತ್ತಿತ್ತು. ಒಂದು ಪಾದವಿಲ್ಲದ ಈತ ಚಮತ್ಕಾರ ಕಾರ್ಯಗಳನ್ನು ಕಲಿಯುವುದಾದರೂ ಎಂತು? ಅದ್ಭುತ ಚಮತ್ಕಾರಪೂರ್ಣ ಕಾರ್ಯಗಳನ್ನು ಮಾಡಲು ಎರಡೂ ಪಾದಗಳು ಅವಶ್ಯ ಬೇಕಾಗುವುವು. ಆದರೂ ಧೈರ್ಯಗೆಡದೆ ಆತ ಮನೆಯಲ್ಲಿ, ಯಾರಿಗೂ ಸುಳಿವುದೊರೆಯದಂತೆ ಚತುರ ವಿದ್ಯೆ ಕಲಿಯುವೆನೆಂದೂ ಅದರಲ್ಲಿ ಪಾರಂಗತನಾದ ನಂತರವೇ ಬಹಿರಂಗಗೊಳಿಸುವೆನೆಂದೂ ನಿರ್ಧಾರಕ್ಕೆ ಬಂದನು.

ತನ್ನ ಅವಯವಗಳನ್ನು, ವಿಶೇಷವಾಗಿ ಮುಂಡ, ಬೆನ್ನು ಮತ್ತು ಬಾಹುಗಳ ಮಾಂಸ ಪೇಶಿಗಳನ್ನು ಸುದೃಢಗೊಳಿಸಬೇಕಿತ್ತು, ಅವನ್ನು ನಿಯಂತ್ರಣದಲ್ಲಿಡಬೇಕಾಗಿತ್ತು. ಕೊಟೇಡೊ ಈ ಉದ್ದೇಶ ಸಾಧನೆಯಲ್ಲಿ ತನ್ಮಯನಾದನು. ಮರೆಯಲ್ಲಿಯೇ ವ್ಯಾಯಾಮದ ವಿಭಿನ್ನ ಸಾಧನೆಗಳನ್ನು ಉಪಯೋಗಿಸಿಕೊಳ್ಳುತ್ತಿದ್ದನು ಮತ್ತು ಯಾರಾದರೂ ತನ್ನ ನಿಕಟಬಂದಾಗ ಆಡುತ್ತಿದ್ದೆನೆಂದು ಸುಳ್ಳು ಹಾರಿಸಿಬಿಡುತ್ತಿದ್ದನು. ನೋಟಕರು ದಯಾಭಾವದಿಂದ ಕಂಡು ಅಗಲಿಹೋಗುತ್ತಿದ್ದರು. ಕೋಟೇಡೋ ಇತರ ನಟರ ಕ್ರಿಯಾಕಲಾಪಗಳನ್ನು ನೋಡುತ್ತಲಿದ್ದನು. ಬೇರೆಯವರನ್ನು ಕಂಡು ಕಂಡು, ಅವರನ್ನು ಅನುಕರಿಸುತ್ತ ನಟಕಲಾ ಚತುರತೆಯನ್ನು ಕರಗತ ಮಾಡಿಕೊಂಡನು; ಸ್ವಾಭ್ಯಾಸದಿಂದಲೇ ಆತನು ಬಹಿರಂಗಕ್ಕೆ ನೆಗೆಯಲು ಕಲಿತುಕೊಂಡನು. ಒಂದು ಪಾದದ ಮೇಲೆ ಸಂತುಲನೆ ಕಾಪಾಡುವುದು ಅತಿ ಪ್ರಯಾಸವೆನಿಸುತ್ತಿತ್ತು. ಆದರೆ, ಘೋರ ಪರಿಶ್ರಮ, ಮತ್ತು ಏಕ ನಿಷ್ಠೆಗಳಿಂದಾಗಿ ಈತನು ಇನ್ನಿತರ ನಟರಂತೆಯೇ ಒಂದು ಪಾದದ ಮೇಲೆ ಸಂತುಲನೆಯನ್ನಿಟ್ಟುಕೊಳ್ಳುವುದನ್ನೂ ಅಭ್ಯಾಸಮಾಡಿಕೊಂಡನು. ಇಷ್ಟೆಲ್ಲವನ್ನೂ ಗುಪ್ತ ಸಾಧನೆಯಿಂದಲೇ ಸಾಧಿಸಿಕೊಂಡ ನಂತರ ತನ್ನ ೧೬ನೆಯ ವಯಸ್ಸಿನಲ್ಲಿ ಕೋಟೇಡೊ ಕುಟುಂಬದವರ ಮುಂದೆ ತಾನು ಕಲಿತುದನ್ನು ಪ್ರದರ್ಶಿಸಿದಾಗ, ಅವರೆಲ್ಲರಿಗೂ ಆಶ್ಚರ್ಯದಲ್ಲಿ ಆಶ್ಚರ್ಯವಾಯಿತು. ಆವನ ತಂದೆಯು ಮಗನ ಅಸೀಮ ಇಚ್ಛಾಶಕ್ತಿಯಿಂದ ಸಂತಸಪಟ್ಟು ಮತ್ತಿತರ ಆಟಗಳಲ್ಲಿಯೂ ಭಾಗವಹಿಸುವಂತೆ ಆತನನ್ನು ಪ್ರೋತ್ಸಾಹಿಸತೊಡಗಿದನು. ಹೀಗೆ ಕೊಟೇಡೋ ತನ್ನ ವಿಜಯಭೇರಿಯನ್ನು ಮೊತ್ತಮೊದಲಿಗೆ ಬಾರಿಸಿದನು.

ಸರ್ಕಸ್ಸಿನ ಮೈದಾನಕ್ಕೆ ಪಾದಾರ್ಪಣ ಮಾಡಿದಾಗ ಆತನ ಎದೆ ಢಡಢಡಿಸುತ್ತಿತ್ತು. ಒಬ್ಬ ಅಂಗವಿಕಲನಾಗಿ ದಂಟಿಯ ಆಧಾರದಿಂದ ನಡೆಯುವ ನಟನನ್ನು ಪ್ರೇಕ್ಷಕರು ಸ್ವಾಗತಿಸಿದರು. ಕೊಟೇಡೋ ಒಂದೊಮ್ಮೆ ಸುತ್ತಲೂ ನೋಡಿದನು; ಆಟವನ್ನು ಕಾಣುವ ತಹತಹದಿಂದ ತನ್ನನ್ನವರು ಸ್ವಾಗತಿಸುತ್ತಿಲ್ಲ. ಆದರೆ ಆರ್ದ್ರ ಹೃದಯದ ದಯಾಭಾವದಿಂದ ತನ್ನ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತ ಅವರು ಎದುರುಗೊಳ್ಳಲು ಸಿದ್ಧರಾಗಿದ್ದಾರೆ ಎಂಬುದವನಿಗೆ ಹೊಳೆಯದಿರಲಿಲ್ಲ. ದರ್ಶಕರ ಭಾವವನ್ನರ್ಥವಿಸಿಕೊಂಡ ಕೊಟೇಡೊಗೆ ಇದು ಅಲಗಿನಂತೆ ನಾಟಿತು. ಜನತೆ ಆಶ್ಚರ್ಯದಿಂದ ಮೈಮರೆಯುವಂತಹ ಆಟಗಳನ್ನು ತೋರಿಸಬೇಕೆಂದು ಆವನು ಮನಸ್ಸಿನಲ್ಲೇ ಪಣತೊಟ್ಟನು. ಆತನ ಪ್ರಥಮ ಪ್ರದರ್ಶನವು ಅಪೂರ್ವವೆಂಬಂತಾಗಿತ್ತು. ಆಟಗಳು ಸಮಾಪ್ತವಾದುದೇ ತಡ, ಜನರ ಹರ್ಷೋದ್ಗಾರದಿಂದ ಆಕಾಶ ಪ್ರತಿಧ್ವನಿಸಿತು. ಅವರವನನ್ನು ತಮ್ಮ ಭುಜಗಳ ಮೇಲೆ ಹೊತ್ತುಕೊಂಡರು. ಆದರೆ, ಕೊಟೇಡೋ ಇಷ್ಟರಿಂದಲೇ ತೃಪ್ತನಾಗಲಿಲ್ಲ. ಜನರು ತನ್ನ ಪ್ರದರ್ಶನವನ್ನು ಪ್ರಶಂಸಿಸಬೇಕು ಎಂಬುದವನ ಆಸೆಯಿತ್ತು. ಇದರಿಂದಾಗಿ ಇನ್ನೂ ಚಿತ್ರವಿಚಿತ್ರವಾದ ಆಟಗಳನ್ನು ಆಡಿತೋರಿಸಬೇಕು ಎಂಬ ಮಹತ್ವಾಕಾಂಕ್ಷೆ ಅವನಲ್ಲಿ ಉದಿಸಿತು.

ದಿನಗಳೆದಂತೆ ಅವನ ಪರಿಶ್ರಮ ಸಾರ್ಥಕವಾಯ್ತು. ಹಲವಾರು ಕಠಿನ ಆಟಗಳನ್ನು ಆತ ಕಲಿತುಕೊಂಡನು. ಕೈಗಳ ಬಲದಿಂದ ಮೇಲೆ ನಿಲ್ಲುವುದು, ಯಾವ ಆಧಾರವೂ ಇಲ್ಲದೆ ಭೂಮಿಯನ್ನು ಮುಟ್ಟದೆ ಶರೀರವನ್ನು ಮೇಜಿನ ಕೆಳಗೆ ಒಯ್ಯುವುದು ಮೊದಲಾದ ಕಲೆಯನ್ನೂ ಹಸ್ತಗತ ಮಾಡಿಕೊಂಡನು. ತಿರುಗಿ ಮಲಗಿ ಮೇಜಿನ ಮೇಲೆ ಕೈಗಳ ಬಲದಿಂದ ನಿಂತು, ಹಾರಿ ಮರಳಿ ಮೇಜಿನ ಮೇಲೆ ಬರುವುದು ಅತೀವ ಕಠಿನವೆನಿಸುತಿತ್ತು. ಇಂತಹ ಅತ್ಯಂತ ಜಟಿಲ ಶಾರೀರಿಕ ಕ್ರಿಯೆಗಳನ್ನು ಆತ ಸಿದ್ಧಿಸಿಕೊಂಡನು. ಇದಕ್ಕೂ ಮಿಗಿಲಾಗಿ, ಕೈಗಳ ಆಧಾರದಿಂದ ಶರೀರವನ್ನು ನೆಟ್ಟಗೆ ನಿಲ್ಲಿಸುವುದನ್ನೂ ಈತ ಅಭ್ಯಸಿದುದು ಅತಿ ಮಹತ್ವಪೂರ್ಣವಾದುದು. ಗುರುತ್ವಾಕರ್ಷಣದ ಸಿದ್ಧಾಂತವೆಲ್ಲವೂ ಈತನ ಈ ಪ್ರಯೋಗದಿಂದ ತುಸು ಕಂಪಿಸುವಂತಾಯ್ತು.

ದಿನಗಳೆದಂತೆ ಅವನ ಆತ್ಮವಿಶ್ವಾಸ ಬೆಳೆಯಿತು. ೧೯೫೪ರಲ್ಲಿ ತನ್ನ ಕುಟುಂಬದಿಂದ ಆತ ಪ್ರತ್ಯೇಕನಾದನು. ಈ ನಡುವೆ ರೇಲ್ವೆ ಮಜೂರನೊಬ್ಬನ ಮಗಳನ್ನು ಆತ ಮದುವೆಯಾಗಿದ್ದನು. ಇಟೆಲಿಯ ಪ್ರಖ್ಯಾತ ಸರ್ಕಸ್ ಕಂಪೆನಿಯೊಂದರಲ್ಲಿ ಅವನು ಸೇರಿಕೊಂಡನು; ಗೌರವ ಪ್ರಸಿದ್ಧಿಯ ಶಿಖರವನ್ನೇರಲು ಇದುವೇ ನಾಂದಿಯಾಯಿತು. ಆದರೆ ದುರ್ಭಾಗ್ಯವು ಆತನ ಬೆನ್ನು ಬಿಡಲಿಲ್ಲ.

೧೯೫೭ರಲ್ಲಿ ಭಯಂಕರ ಶಾರೀರಿಕ ದುರ್ಘಟನೆಗೆ ಅವನು ಗುರಿಯಾದನು. ತನ್ನ ಕಾರ್ಯವನ್ನು ಈತ ಬಿಟ್ಟುಕೊಡಬೇಕು ಎಂಬ ನಿರಾಸೆಯು ಇದರಿಂದ ಎಲ್ಲರಲ್ಲಿಯೂ ಮೂಡಿತು. ಎಂದಿನಂತೆ ಕೊಟೇಡೊವು ಸರ್ಕಸ್ಸಿನ ಹೊರಗೆ ನಿಂತು ತನ್ನ ಕಾರ್ಯಕ್ರಮ ಪ್ರಾರಂಭಿಸಲು ಸೂಚಿಸುವ ಸಂಜ್ಞೆಯನ್ನೇ ನಿರೀಕ್ಷಿಸುತಿದ್ದನು. ಆತನ ಪ್ರಿಯ ಸಂಗೀತವು ಬಾಜಿಸತೊಡಗಿತು. ಆವನು ದಂಟಿಯಾಧಾರದಿಂದ ಮುಂದುವರಿಯಲಾರಂಭಿಸಿದನು. ದಾರಿ ನಡುವೆ ಬಚ್ಚಿಟ್ಟಿದ್ದ ಒಂದು ಹೊಂಡದಲ್ಲಿ ಅವನ ದಂಟಿ ಊರಿತು. ಈ ಬಾಯುಬಲಿ ಅಲ್ಲಿಯೇ ಮುಗ್ಗರಿಸಿದನು. ಪ್ರಾಣರಕ್ಷಣೆಯ ಪ್ರಯತ್ನದಲ್ಲಿ ಅವನ ಬಲಗೈಯೂ ಮುರಿಯಿತು. ಎರಡು ತಿಂಗಳ ಕಾಲ ಕೊಟೇಡೋ ಆಸ್ಪತ್ರೆಯಲ್ಲಿರಬೇಕಾಯಿತು. ಮುರಿದ ಕೈಯ ಒಂದಿಂಚು ಎಲುಬನ್ನು ವೈದ್ಯರು ಕಿತ್ತು ಹೊರಹಾಕಿದರು. ಕೊಟೇಡೋವಿನ ಶಾರೀರಿಕ ಭಾರವನ್ನು ಆ ಕೈ ಎತ್ತಲಾರದು ಎಂದು ಎಲ್ಲರ ಅಂಬೋಣವಾಯ್ತು. ಆಸ್ಪತ್ರೆಯಿಂದ ಬಿಡುಗಡೆಯಾಗುವ ಸಂದರ್ಭದಲ್ಲಿ, ಬಲಗೈಯಲ್ಲಿ ಕೆಲಸ ಮಾಡಬಾರದು; ಇನ್ನು ಮೀರಿದರೆ ಮರಳಿ ಆಸ್ಪತ್ರೆಗೆ ಶರಣುಹೋಗಬೇಕಾಗುವುದು ಎಂದು ಎಚ್ಚರಿಸಿದ್ದರು. ಕೊಟೇಡೋ ಸಂಪೂರ್ಣ ನಿರಾಶನಾದನು. "ಮೊದಲೇ ಕಾಲು ಕಳೆಕೊಂಡೆ; ಈಗ ಕೈಯೂ ಹೋಯಿತು; ಇನ್ನು ಸರ್ಕಸ್ಸಿನಲ್ಲಿ ನಾನು ಮಾಡಬಹುದಾದ ಕೆಲಸವಾದರೂ ಯಾವುದು?" ಎಂದಾತ ಚಿಂತಿತನಾದನು. ಅವನ ಮುಂದೆ ಅನ್ನದ ಪ್ರಶ್ನೆ ಬೃಹತ್ತಾಗಿ ನಿಂತಿತ್ತು.

೧೯೫೭ನೆಯ ಜನವರಿ ೬ನೆಯ ದಿನ ಆತನ ಜೀವನದಲ್ಲಿ ಚಿರಸ್ಮರಣೀಯವಾಗಿದೆ. ಆ ದಿನ ಆತನ ನಿರಾಶೆ ಅಳಿಯಲ್ಲಿ ಕೊನೆಗೊಂಡಿತು. ಆ ದಿನ ಕ್ರೈಸ್ತರ ದೊಡ್ಡ ಹಬ್ಬವಾಗಿತ್ತು. ಕೆಲವರು ರೋಗಿಗಳಿಗೆ ಸುಖ ಕೊಡುವುದಕ್ಕಾಗಿ ಬೇಂಡುವಾದ್ಯಗಳನ್ನು ಬಾರಿಸುತ್ತ ಆಸ್ಪತ್ರೆಯತ್ತ ತೆರಳಿದರು. ಈ ಶಬ್ದ ಕೇಳಿದ ಕೋಟೇಡೊ ತಾನೆಲ್ಲಿರುವೆನೆಂಬುದನ್ನೇ ಮರೆತುಬಿಟ್ಟನು. ಆತ ತನ್ನ ಕಲ್ಪನಾ ಸರ್ಕಸ್ಸಿನಲ್ಲಿ ವಿಹರಿಸತೊಡಗಿದನು. ಚಾಪೆಯಿಂದ ಜಾರಿ ಆವನು ತನ್ನ ವಾರ್ಡಿಗೆ ಬಂದನು; ಮೇಜಿನ ಮೇಲೆ ಕೈಗಳ ಬಲದಿಂದ ಆಧರಿಸಿ ನಿಂತು ಬಿಟ್ಟನು. ಅಸಹನೀಯ ವೇದನೆಯೆನಿಸುತಿದ್ದರೂ ಕೋಟೇಡೋವಿನ ಮುಖದಲ್ಲಿ ಪ್ರಸನ್ನತೆಯಿತ್ತು; ಕೈ ಮುರಿದಿದ್ದರೂ ತನ್ನ ಕೆಲಸವನ್ನವ ಮಾಡುವುದರಲ್ಲಿ ಸಮರ್ಥನಾಗಿದ್ದನು. ಇದನ್ನು ದ್ವಿತೀಯ ವಿಜಯವೆನ್ನದೆ ಮತ್ತೇನೆನ್ನಬೇಕು? ಡಾಕ್ಟರರ ಸಲಹೆಯಂತೆ ಮತ್ತು ಪತ್ನಿಯ ತೀವ್ರ ನೋಟದ ಬಯಕೆಯಂತೆ ಕೈಯ ಬಲದಲ್ಲಿಯೇ ನಿಂತು ತನ್ನ ಚಮತ್ಕಾರಗಳನ್ನು ಮರೆಯಲ್ಲಿಯೇ ತೋರಿಸಬೇಕಾಯಿತು. ಮೊದಮೊದಲು ಆ

(೯ನೇ ಪುಟ ನೋಡಿರಿ)

ಉಳಿತಾಯದ ಬಲವೊಂದಿದ್ದರೆ....

ಜೀವನದ ಜಡತ್ವ-ಜಿಗುಪ್ಸೆಗಳು ತಂತಾನೆ ಮಾಯವಾಗುವುವು; ಬದಲು, ಶರೀರದಲ್ಲಿನ ಸುಪ್ತ ಕ್ರಿಯಾಶಕ್ತಿಗಳಿಗೆ ಚೈತನ್ಯ-ಪ್ರೇರೇಪಣೆಗಳು ಸಿಕ್ಕಿ, ಜೀವನವು ಸಂಜೀವನವಾಗಿ, ಸುಖದ ಸುಪ್ಪತ್ತಿಗೆಯಾಗಿ ಮೆಲ್ಲನೆ ಮಾರ್ಪಡುವುದು.

— ಉಳಿತಾಯಕ್ಕಾಗಿ —

ಇಂದೇ........ಈ ಕ್ಷಣವೇ........ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: **ಉಡುಪಿ** | ಆಡಳಿತ ಆಫೀಸು: **ಮಂಗಳೂರು**

ಬಂಗಾರದಂತಹ ಮನುಷ್ಯ

ಆದರ್ಶ ಮಂತ್ರಿ ದಿ| ಎ. ಬಿ. ಶೆಟ್ಟರು

ದಿ ಎ. ಬಿ ಶೆಟ್ಟರು

* * * *

"ದಿವಂಗತ ಎ. ಬಿ. ಶೆಟ್ಟಿ ಇವರನ್ನು ನಾನು ಸುಮಾರು ಮೂವತ್ತು ವರ್ಷಗಳಿಂದ ತಿಳಿದವನಿದ್ದೇನೆ. ಈ ಅವಧಿಯಲ್ಲಿ ನಾವಿಬ್ಬರೂ ಆಪ್ತಮಿತ್ರರಾಗಿದ್ದೆವು. ಶಾಸನ ಸಭೆಗಳಲ್ಲಿ ಅವರು ಸರಕಾರಿ ಪಕ್ಷದಲ್ಲಿದ್ದರು, ನಾನು ವಿರೋಧೀ ಗುಂಪಿನಲ್ಲಿ ಕುಳಿತಿರುತ್ತಿದ್ದೆನು. ಹಾಗಿದ್ದರೂ ದಿವಂಗತ ಶೆಟ್ಟರು ನನ್ನಿಂದ ನಾನಾ ಬಗೆಯ ಸಲಹೆಗಳನ್ನು ಪಡೆಯುತ್ತಿದ್ದರು. ಅವರಿಗೆ ಗುಪ್ತ ಸಲಹೆಗಾರನೆನಿಸಲು ನನಗೆ ಅಪೂರ್ವ ಆನಂದವೆನಿಸುತ್ತಿತ್ತು. ಅವರು ಉತ್ತಮರು ಹಾಗೂ ಉದಾತ್ತನಾದ ನಡತೆಯುಳ್ಳವರಾಗಿದ್ದು ಅವರಂತಹ ಯೋಗ್ಯ ವ್ಯಕ್ತಿಗಳು ದೊರೆಯುವುದೇ ದುರ್ಲಭ. ಅವರಂತಹ ಪರಿಶ್ರಮಿ ಸಮರ್ಥ ವ್ಯಕ್ತಿ ಮಂತ್ರಿ ಮಂಡಳಿಯಲ್ಲಿಯಂತೂ ನೋಡಸಿಗುವುದು ಬಹಳ ಅಪರೂಪ. ಹೀಗಾಗಿ ಮಂತ್ರಿ ಮಂಡಳಿಗೆ ಆದರ್ಶಪ್ರಾಯರಾಗಿದ್ದ ಮಂತ್ರಿ ದಿವಂಗತ ಎ. ಬಿ. ಶೆಟ್ಟರು ಎಂದರೆ ಅತಿಶಯೋಕ್ತಿಯಲ್ಲ.

"ನಾವಿಬ್ಬರೂ ನಿಕಟ ಗೆಳೆಯರಾಗಿದ್ದೆವು. ಹಾಗಿದ್ದರೂ ನಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯವಿರಲೇ ಇಲ್ಲ ಎಂದರ್ಥವಲ್ಲ. ನಮ್ಮಲ್ಲಿ ಒಂದೆರಡು ವಿಷಯಗಳ ಬಗ್ಗೆ ಅಭಿಪ್ರಾಯದಲ್ಲಿ ಹೊಂದಾಣಿಕೆ ಇರಲಿಲ್ಲ. ನಿಜ. ಆದರೂ ಹೆಚ್ಚಿನ ವಿಷಯಗಳಲ್ಲಿ ನಮ್ಮ ಮತಗಳು ಒಂದಾಗಿರುತ್ತಿದ್ದವು. ದಿವಂಗತ ಶೆಟ್ಟರು ನಮ್ಮ ಸಮಿತ್ರನಂತೆ, ಉಪದೇಶಕನಂತೆ ಅಥವಾ ಮಾರ್ಗದರ್ಶಕನಂತೆ ನಮ್ಮ ನಡುವೆ ಇರುತ್ತಿದ್ದರು. ಇಂತಹ ಮಹಾನುಭಾವರ ಪ್ರತಿಮೆಯನ್ನು ಅನಾವರಣ ಮಾಡುವುದು ನನ್ನ ಮಟ್ಟಿಗೆ ಸಂತೋಷದ ವಿಷಯ ಮಾತ್ರವಲ್ಲ ಇದಕ್ಕಾಗಿ ನಾನು ಅಭಿಮಾನ ಪಡುತ್ತೇನೆ.

"ದಿವಂಗತ ಎ. ಬಿ. ಶೆಟ್ಟಿ ಅವರು ಮದರಾಸು ಸರಕಾರದಲ್ಲಿ ಆರೋಗ್ಯ ಮಂತ್ರಿಯಾಗಿದ್ದರು. ಸಾಮಾನ್ಯವಾಗಿ ವೈದ್ಯಕೀಯ ವೃತ್ತಿಯಲ್ಲಿದ್ದವರೇ ಈ ಪಟ್ಟವನ್ನು ಏರುತ್ತಿರುವುದು ರೂಢಿ. ಆದರೆ, ಎ. ಬಿ. ಶೆಟ್ಟರು ಡಾಕ್ಟರರಲ್ಲ; ಹಾಗಿದ್ದರೂ ಯಾವನೇ ಡಾಕ್ಟರನಿಗಿಂತ ಕಡಿಮೆಯವರಲ್ಲ. ಸತ್ಯ ಹೇಳುವುದಾದರೆ, ಅವರು ವೈದ್ಯಕೀಯ ವಿಚಾರದಲ್ಲಿ ಸಾಮಾನ್ಯ ಡಾಕ್ಟರರಿಗಿಂತಲೂ ಹೆಚ್ಚಿನದನ್ನು ತಿಳಿದುಕೊಂಡ ವ್ಯಕ್ತಿ. ತನಗೆ ಗೊತ್ತಿಲ್ಲದ ಯಾವುದೇ ವಿಚಾರವನ್ನು ಕಾರ್ಯರೂಪಕ್ಕಿಳಿಸುವ ಮೊದಲು ವೈದ್ಯಕೀಯ ವೃತ್ತಿಯಲ್ಲಿ ನುರಿತವರೊಡನೆ ಪರಾಮರ್ಶಿಸಿ, ಸರಿಯಾದುದನ್ನೇ ಮಾಡುತ್ತಿದ್ದರು. ತನ್ನ ಆಳವಾದ ಅಧ್ಯಯನದ ಪರಿಣಾಮವಾಗಿ ಅವರು ವೈದ್ಯಕೀಯದಲ್ಲಿ ಸಾಕಷ್ಟು ಅನುಭವವನ್ನು ಗಳಿಸಿದ್ದರು. ವಿಧಾನ ಸಭೆಗಳಲ್ಲಿ ಕೇಳಲಾದ ಪ್ರಶ್ನೆಗಳಿಗೆ ಅವರು ಸರಿಯಾದ ಉತ್ತರವನ್ನೇ ಸಂಗ್ರಹಿಸಿ ಹೇಳುತ್ತಿದ್ದರು. ನಿಷ್ಕಪಟವಾಗಿ ತನ್ನ ಉದ್ಯೋಗದಲ್ಲಿ ಯಶಸ್ವಿ ಪಡೆದವರಲ್ಲಿ ಆರೋಗ್ಯ ಮಂತ್ರಿ ದಿ| ಶೆಟ್ಟರೂ ಒಬ್ಬರು. ಈ ಕಾರಣದಿಂದೇ ಅವರನ್ನು ಡಾ| ಶೆಟ್ಟಿ ಎಂದೇ ಸಂಬೋಧಿಸುತ್ತಿದ್ದೆವು.

"ತನ್ನ ವಿಭಾಗದಲ್ಲಿ ಎದ್ದು ಬರುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ, ಹೊಸತಾಗಿ ಡಾಕ್ಟರರಾಗಿ ಸೇರಿದ ಯುವಕರ ಸಂಕಷ್ಟಗಳೇನೆಂಬುದನ್ನು ವಿಚಾರಿಸಿ, ಅವುಗಳನ್ನು ಬಗೆಹರಿಸುವಲ್ಲಿ ಸರಿಯಾದ ಮಾರ್ಗವನ್ನು ಹಿಡಿದು ಕಳಕಳಿ ವಹಿಸುತ್ತಿದ್ದರು. ಇದರಿಂದಾಗಿಯೇ ಅವರು ಎಲ್ಲರ ಮೆಚ್ಚುಗೆಯನ್ನು ಪಡೆಯುತ್ತಿದ್ದರು. ತಮ್ಮ ಮಂತ್ರಿ ಕಾರ್ಯವನ್ನು ಸುಯೋಗ್ಯ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗುತ್ತಿದ್ದರು.

"ದಿವಂಗತ ಎ. ಬಿ. ಶೆಟ್ಟರು ನನ್ನಂತೆಯೇ ಭಾಷಾವಾರು ಪ್ರಾಂತಗಳನ್ನಾಗಿ ದೇಶವನ್ನು ವಿಭಜಿಸುವುದು ಮಹಾ ಪ್ರಮಾದವೆಂದು ಹೇಳುತ್ತಿದ್ದರು. ನಾನು ಇಂದಿಗೂ ಇದೇ ಅಭಿಪ್ರಾಯವುಳ್ಳವನಾಗಿದ್ದೇನೆ. ಭಾಷಾ ತಳಹದಿಯಲ್ಲಿ ರಾಜ್ಯಗಳನ್ನು ಪುನಾರಚಿಸುವುದೆಂದರೆ, ರಾಜ್ಯಗಳ ಭೌಗೋಲಿಕ ಸೀಮೆಗಳನ್ನು ಪ್ರತ್ಯೇಕಿಸಿದಂತೆ ಮಾತ್ರವಾಗಿಲ್ಲದೆ, ನಾಗರಿಕರ ಮನೋಭಾವನೆಯನ್ನು ಬೇರ್ಪಡಿಸಿದಂತೆ ಆಯಿತು. ನಾವು ಭಾಷಾ ರಾಜ್ಯಗಳೊಡನೆ ಜನತೆಯ ಭಾವನೆಯನ್ನೂ ವಿಂಗಡಿಸಿ ಇಂದು ಭಾವೈಕ್ಯದ ಚಿಂತೆಯಲ್ಲಿ ತೊಡಗಿದ್ದೇವೆ. ರಾಷ್ಟ್ರದ ಸಮಗ್ರತೆಯ ದೃಷ್ಟಿಯಿಂದ ಈ ಭಾಷಾವಾರು ರಾಜ್ಯಗಳು ಉದಯವಾದಂದೇ ಅಹಿತದ ಬೇರು ಬಿಟ್ಟಂತಾಗಿದೆ. ರಾಷ್ಟ್ರದ ದೃಷ್ಟಿಯಿಂದ ಇದು ಕ್ಷೇಮಕರವಲ್ಲ. ದಿ| ಶೆಟ್ಟರ ಅಭಿಪ್ರಾಯವಾದರೂ ಭಾಷಾವಾರು ರಾಜ್ಯ ರಚನೆಗೆ ತೀವ್ರ ಪ್ರತಿಕೂಲವಿತ್ತು.

"ದಿ| ಶೆಟ್ಟರಂತೆ ನಾನು ಕೂಡ ವೈಜ್ಞಾನಿಕ ವ ತಾಂತ್ರಿಕ ಶಿಕ್ಷಣವು ಇಂಗ್ಲಿಷ್ ಮಾಧ್ಯಮದಲ್ಲಿಯೇ ಕೊಡಲ್ಪಡಬೇಕೆಂದು ಅಪೇಕ್ಷಿಸುವವನು. ಮತ್ತು ಈ ವ್ಯವಸ್ಥೆ ಅತ್ಯವಶ್ಯವೆಂದು ಹೇಳಬಯಸುತ್ತೇನೆ. ಮಂತ್ರಿಗಳು ರಾತ್ರಿ ಬೆಳಗಾಗುವುದರೊಳಗೆ ರಾಜ್ಯಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದು ಶಿಕ್ಷಣದ ಪ್ರಗತಿಯ ದೃಷ್ಟಿಯಿಂದ ಹಿತವಲ್ಲ. ಎಲ್ಲಾ ವಿಷಯಗಳನ್ನು ಅರಿತು ನಾವು ಬುದ್ಧಿವಂತರಾಗಲು ಅಂತಾರಾಷ್ಟ್ರೀಯ ಭಾಷಾ ಇಂಗ್ಲಿಷ್ ಭಾಷೆಯ ಅಗತ್ಯವಿದೆ. ದಿ| ಶೆಟ್ಟರ ಈ ಅಭಿಪ್ರಾಯವನ್ನು ನಾನು ಸಮರ್ಥಿಸುತ್ತೇನೆ.

"ನಮ್ಮ ದೇಶದ ಯುವಕ-ಯುವತಿಯರು ಇನ್ನಿತರ ದೇಶದವರಂತೆ ಚತುರರೂ ಸಾಹಸಿಗಳೂ ಆಗಬೇಕು. ಅವರು ತಮ್ಮ ಶಕ್ತಿಯನ್ನು ಸತ್ಕಾರ್ಯಗಳಿಗಾಗಿ ಉಪಯೋಗಿಸುವಂತೆ ಅವರನ್ನು ಉಚ್ಚ ಶಿಕ್ಷಣದ ಬಗ್ಗೆ ವಿದೇಶಗಳಿಗೆ ಕಳುಹಿಸುವ ವ್ಯವಸ್ಥೆ ಅತ್ಯಗತ್ಯವೆಂದು ದಿ| ಶೆಟ್ಟರು ಹೇಳುತ್ತಿದ್ದರು. ಈ ಅಭಿಪ್ರಾಯವನ್ನು ನಾನು ಅಕ್ಷರಶಃ ಒಪ್ಪುತ್ತೇನೆ.

"ತಮ್ಮ ಸಮ್ಮುಖದಲ್ಲಿ ಯಾವುದೇ ಪ್ರಶ್ನೆಯು ಬರಲಿ, ಎಷ್ಟೇ ಕಾರ್ಯಭಾರಗಳ ಹೊರೆಯೇ ಬೀಳಲಿ ದಿ| ಶೆಟ್ಟರು ವಿವಶರಾಗುತ್ತಿರಲಿಲ್ಲ. ಸದಾ ಸರಳ ಸ್ವಭಾವದವರಾದ ಇವರು ದಿನದ ಎಲ್ಲಾ ತಾಸುಗಳಲ್ಲಿಯೂ ಸಮಾಧಾನಚಿತ್ತರಾಗಿರುತ್ತಿದ್ದರು. ಅವರ ಯಶಸ್ಸಿನ ಗುಟ್ಟು ಇರುವುದಾದರೂ ಇಲ್ಲಿಯೇ ಎಂದು ಹೇಳಬಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ, ದಿವಂಗತ ಎ. ಬಿ. ಶೆಟ್ಟರು 'ಬಂಗಾರದಂತಹ ಮನುಷ್ಯ!' ಅವರಂತಹ ಜನರು ನೋಡಸಿಗುವುದು ದುರ್ಲಭ" ಎಂದು ಮದ್ರಾಸು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ಎ. ಲಕ್ಷ್ಮಣಸ್ವಾಮಿ ಮುದಲಿಯಾರರು ದಿವಂಗತ ಎ. ಬಿ. ಶೆಟ್ಟರ ಮಾರ್ಬಲ್ ಶಿಲೆಯ ಶಿರಃಪ್ರತಿಮೆಯನ್ನು ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಪ್ರಾಂಗಣದಲ್ಲಿ ತಾ. ೬ರಂದು ಅನಾವರಣ ಮಾಡಿದ ಸಂದರ್ಭದಲ್ಲಿ ಭಾಷಣ ಮಾಡುತ್ತ ಹೇಳಿದರು.

ವಿದ್ಯಾರ್ಥಿ ಭವನದ ಡಾ| ಎಚ್. ವಿ. ಅಡಪ್ಪ ಸ್ಮಾರಕ ರಂಗಮಂಟಪದಲ್ಲಿ ಸಭಾ ಕಾರ್ಯಕ್ರಮವು ನಡೆಯಿತು. ಆರಂಭದಲ್ಲಿ ನಗರ ಸಭಾ ಸದಸ್ಯೆ ಶ್ರೀಮತಿ ಲೀಲಾ ಬಾಯಿ ಬಾಳಿಗರಿಂದ ಪ್ರಾರ್ಥನೆಯಾದ ತರುವಾಯ ಡಾ| ಮುದಲಿಯಾರರು ಅನಾವರಣ ಕಾರ್ಯವನ್ನು ಮಾಡಿದರು. ಸಮಾರಂಭದಲ್ಲಿ ಎ. ಬಿ. ಶೆಟ್ಟಿ ಸ್ಮಾರಕ ನಿಧಿಯ ಅಧ್ಯಕ್ಷ ರಾವ್ ಬಹದ್ದೂರ್ ಕೆ. ಟಿ. ಆಳ್ವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಸಿ. ಎಸ್. ತಿಮ್ಮಪ್ಪ ಶೆಟ್ಟರು ದೇಶದಾದ್ಯಂತದಿಂದ ಸಮಾರಂಭಕ್ಕೆ ಶುಭಕೋರಿ ಬಂದ ಹಲವಾರು ಸಂದೇಶಗಳನ್ನು ಓದಿದರು. ಕೊನೆಯಲ್ಲಿ ಶ್ರೀ ಆಳ್ವರು ವಂದನಾರ್ಪಣೆಗೈದರು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಜನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ

ಆಕರ್ಷಕ ಮುಖಪತ್ರ ಬಿಳಿ ಕಾಗದ

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುವುದು

ಪ್ರಕಾಶಕರು. ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ

ಮಾರಾಟಗಾರರು: ನವಭಾರತ ಬುಕ್ ಡಿಪೋ, ಉಡುಪಿ

ಡಿ. ಕೆ. ಭಾರದ್ವಾಜರ

ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನರಿ

ಬೆಲೆ. ರೂ ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದವರಿಗೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ
ಉಡುಪಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

ನವಯುಗ

ವರುಷ ೪೧	ಉಡುಪಿ ೧೧-೧-'೬೨	ವಾರ ೧೮

ಬದಲಾದ ವಾತಾವರಣ

ಇಂಡೋನೇಶ್ಯದ ಅಧ್ಯಕ್ಷ ಸುಕರ್ಣರು ಡಚ್ಚರ ವಸಾಹತುವಾಗಿರುವ ಪಶ್ಚಿಮ ನ್ಯೂಗಿನಿಯವನ್ನು ಶಾಂತ ವಿಧಾನದಲ್ಲಿ ಹಾಲೆಂಡು ತಮ್ಮ ವಶಕ್ಕೆ ಮರಳಿ ಕೊಡುವುದಕ್ಕೆ ತಪ್ಪಿದರೆ, ಬಲಪ್ರಯೋಗವನ್ನು ಮಾಡಿಯಾದರೂ ತಮ್ಮದಾದ ಈ ಭೂಭಾಗವನ್ನು ವಿಮೋಚನೆಗೊಳಿಸುವೆವೆಂದು ಬಹಳವಾಗಿ ಮಾತಾಡುತ್ತ ಬರುತಿದ್ದಾರೆ. ಭಾರತವು ಗೋವಾ ವಿಜಯ ಯಾತ್ರೆಯನ್ನು ಕೈಗೊಂಡುದರಿಂದ ಅಧ್ಯಕ್ಷ ಸುಕರ್ಣರು ಪ್ರಭಾವಿತರಾಗಿ ಇಂತಹ ಉಗ್ರಕಾರ್ಯಕ್ರಮಕ್ಕೆ ಇಳಿಯಲು ದೃಢ ನಿರ್ಧಾರ ಮಾಡಿದ್ದಾರೆ ಎಂಬುದು ಸ್ವಲ್ಪ ಮಟ್ಟಿಗೆ ನಿಜವಿರಬಹುದು. ಗೋವೆಯ ವಿಮೋಚನೆಯಿಂದಾಗಿ ವಸಾಹತುವಾದಕ್ಕೆ ಕೊನೆಯುಸಿರು ಬಿಡುವ ಸಂದರ್ಭ ನಿಕಟವಾಗ ತೊಡಗಿದೆಯೆಂಬುದನ್ನು ಪಾಶ್ಚಾತ್ಯ ರಾಷ್ಟ್ರಗಳು ಕಂಡುಕೊಂಡಂತಾಗಿದೆ, ಎಂತಲೇ ಪೋರ್ಚುಗಲ್ಲಿನ ಸಾಲಝಾರ ದೊರೆಯಂತೆ ಹಾಲೆಂಡು ವಸಾಹತು ವಾದಕ್ಕೆ ಬಲವಾಗಿ ಅಂಟಿಕೊಳ್ಳುವ ಹವಣಿಕೆಯಲ್ಲಿಲ್ಲ. ಸದ್ಯಕ್ಕೆ ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಅದರ ಆಡಳಿತೆಯನ್ನು ಒಪ್ಪಿಸುವುದೆಂದೂ ಈ ಮಧ್ಯ ಕಾಲಾವಧಿಯಲ್ಲಿ ಹಸ್ತಾಂತರದ ಸಂಬಂಧ ಮಾತುಕತೆ ನಡೆಸಬಹುದೆಂದೂ ಅದರ ಅಭಿಪ್ರಾಯ. ಇಂಡೋನೇಶ್ಯದ ಅಂಗವೆಂದು ಹೇಳುವ ಪಶ್ಚಿಮ ನ್ಯೂಗಿನಿಯ ಆಡಳಿತವನ್ನು ಸಂ. ರಾ. ಸಂಸ್ಥೆಗೆ ಅಲ್ಪ ಸಮಯದ ವರೆಗೆ ಒಪ್ಪಿಸಿ ಕೊಡುವ ಅಗತ್ಯವೇನಿದೆಯೋ ಗೊತ್ತಿಲ್ಲ; ಅಂತೂ ಹಾಲೆಂಡು ತನ್ನ ವಸಾಹತು ಅದು ಎಂಬುದನ್ನು ಒಪ್ಪಿಕೊಂಡಂತಾಗಿದೆ, ಅದನ್ನು ಬಿಟ್ಟುಕೊಡುವುದಕ್ಕೂ ಅದು ಸಿದ್ಧವಿದೆಯೆಂಬುದು ವ್ಯಕ್ತವಾಗಿದೆ.

ಗೋವಾ ವಿಮೋಚನೆಯು ನಡೆದು ವಾರಗಳು ಗತಿಸಿದುವು. ನಿರೀಕ್ಷಿಸಿದಂತೆ, ವಿಮೋಚನೆಯ ಪ್ರಾರಂಭದಲ್ಲಿದ್ದ ಕಲುಷಿತ ವಾತಾವರಣವು ಇದೀಗ ತಿಳಿಗೊಳ್ಳುತ್ತ ಬರುತ್ತಿದೆಯೆನ್ನಬಹುದು. ತನ್ನ ಹಳೆಯ ಮಿತ್ರ ಬ್ರಿಟನ್ನು ತನ್ನ ನೆರವಿಗೆ ಬಾರದಿದ್ದುದರಿಂದ ನೊಂದ ಸಾಲಝಾರರು ಈಗ ತುಸು ಮೆತ್ತಗೆ ಮಾತಾಡ ತೊಡಗಿದ್ದಾರೆ. 'ಭಾರತದ ಮೇಲೆ ಆಕ್ರಮಣ ಮಾಡುವಂತೆ ನಾನು ಬ್ರಿಟನ್ನನ್ನು ಕೇಳಿಕೊಳ್ಳಲಾರೆ' ಎಂದು ಸ್ಪಷ್ಟವಾಗಿ ನುಡಿದು, ಗೋವೆಯೀಗ ಭಾರತದ ವಸಾಹತುವಾಗಿದೆಯೆಂಬ ಆರೋಪವನ್ನು ಹೊರಿಸಿದ್ದಾರೆ. ವಸಾಹತು ವಾದದ ಬಗ್ಗೆ ಪರಿಜ್ಞಾನವಿರುವವರು ಈ ಅರ್ಥಹೀನವಾದ ಹೇಳಿಕೆಗೆ ತಾವೇ ವ್ಯಾಖ್ಯೆ ಬರೆಯಬಲ್ಲರು. ಗೋವೆಯು ನವಜೀವ ತಮ್ಮ ಕಪಿಮುಷ್ಟಿಯಿಂದ ವಿಮೋಚನೆಗೊಂಡಿತೆಂದು ಸಾಲಝಾರರೂ ಒಪ್ಪಿಕೊಂಡಂತಾಯ್ತು. ತನ್ನ ನಾಟೊ ಮಿತ್ರರ ಮೂಲಕ ಹೆದರಿಸಿ ಬೆದರಿಸಿ ಭಾರತದ ಮೇಲೆ ಆರೋಪ ಹೊರಿಸಿ, ಅದನ್ನು ತಲೆತಗ್ಗಿಸುವಂತೆ ಮಾಡುವ ದುರಾಗ್ರಹವನ್ನು ತೊಟ್ಟ ಸಾಲಝಾರ ಪ್ರಭುವೀಗ ಬಾಲ ಮಡಚಿಟ್ಟುಕೊಳ್ಳಬಯಸುತ್ತಿರುವಂತೆ ತೋರುತ್ತದೆ.

ಸಂಯುಕ್ತ ರಾಷ್ಟ್ರಸಂಘದಲ್ಲಿ ಅಮೆರಿಕೆಯು ಗೋವಾ ವಿಜಯ ಯಾತ್ರೆಯನ್ನು ಕಂಠೋಕ್ತವಾಗಿ ವಿರೋಧಿಸಿದ್ದರೂ ವಿಮೋಚನಾ ಸಂಬಂಧದಲ್ಲಿ ದುರಭಿಪ್ರಾಯ ತಾಳಿದ್ದರೂ ವಿಕ್ಷುಬ್ಧತೆ ತುಸು ಶಾಂತವಾಗುತ್ತ ಬಂದಿದೆ. ಈಗ ಅದರ ಧೋರಣೆಯೂ ಬದಲಾದಂತೆ ಭಾಸವಾಗುತ್ತದೆ. ಗೋವೆಯು ಭಾರತದ ಅವಿಭಾಜ್ಯ ಅಂಗ, ಅದು ಒಂದಲ್ಲ ಒಂದು ದಿನ ಭಾರತದೊಡನೆ ಸೇರಿಕೊಳ್ಳುವುದು ನ್ಯಾಯವೆಂದರೂ ಅದಕ್ಕಾಗಿ ಬಲಪ್ರಯೋಗ ಮಾತ್ರ ಸಲ್ಲದು ಎಂದು ಅಮೆರಿಕೆ ಬಯಸುತ್ತಿತ್ತು. ಆದರೆ, ಅದರ ಆಶೆ ಈಡೇರಲಿಲ್ಲ. ನಯದ ಮಾರ್ಗವನ್ನು ಸ್ವೀಕರಿಸಲು ಪೋರ್ಚುಗಲ್ಲು ಒಪ್ಪುವುದೇ ಸಾಧ್ಯವಿಲ್ಲವೆಂಬುವನ್ನದು ತಿಳಿದಿತ್ತು; ದಿನಗಳೆಯುವ ವಿಧಾನವೆಂದು ಸಂಧಾನದ ಸೋಗು ಹಾಕಿಕೊಂಡಿತು. ಇದರಿಂದ ಅಂಜದ ಭಾರತವನ್ನು ತಲೆ ತಗ್ಗಿಸುವಂತೆ ಮಾಡುವುದರಲ್ಲಿ ಅಸಮರ್ಥರಾಗಲು ತಮ್ಮ ಮಾತಿನ ಸರಣಿಯನ್ನೇ ಬದಲಾಯಿಸಿದರೆ, ಆಶ್ಚರ್ಯಪಡಬೇಕಾಗಿಲ್ಲ. ಅಧ್ಯಕ್ಷ ಕೆನ್ನೆಡಿ ಮತ್ತು ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕರು ಭಾರತದ ಬಗ್ಗೆ ಇತ್ತ ಹೇಳಿಕೆಯಿಂದ ಇವು ತಿಳಿಯುತ್ತದೆ. ಗೋವೆಯಲ್ಲಿ ಕೈಗೊಂಡ ಕಾರ್ಯಾಚರಣೆಯಿಂದ ಭಾರತದ ವಿದೇಶ ನೀತಿಯು ಬದಲಾದಂತಾಗಲಿಲ್ಲ; ಅದು ಕಮ್ಯೂನಿಸ್ಟೇತರ ರಾಷ್ಟ್ರವಾಗಿದ್ದು ಅದರ ಆರ್ಥಿಕ ಅಭಿವೃದ್ಧಿ ಯೋಜನೆಯಲ್ಲಿ ನಮಗೆ ವಿಶೇಷ ಆಸಕ್ತಿಯಿದೆ. ಆದುದರಿಂದ ಅಮೆರಿಕೆಯು ಭಾರತಕ್ಕೆ ನೀಡುತ್ತಿರುವ ಸರ್ವ ಪ್ರಕಾರದ ಸಹಾಯವನ್ನು ಮುಂದುವರಿಸುವುದು ಎಂಬ ರಸ್ಕರ ಹೇಳಿಕೆಯಲ್ಲಿ ಸ್ಟಿವನ್ಸನರ ಮಾತಿನ ಕಠೋರತೆಯಾಗಲಿ ವ್ಯಂಗ್ಯವಾಗಲಿ ಇಲ್ಲವೆಂಬುದು ವಿದಿತವಿದೆ.

ಗೋವೆಯ ವಿಮೋಚನಾನಂತರ, ಅದರ ಈ ಕೃತ್ಯದಿಂದ ನಷ್ಟಕ್ಕೊಳಗಾದವರೆ ಹಿಂದೆ ನಿಂತು ಭಾರತವನ್ನು ಟೀಕಿಸುವ ಪ್ರಯತ್ನ ನಡೆಯಿತು. ಭಾರತದ ನಾಗರಿಕರೆಲ್ಲರೂ ಸರಕಾರದ ಗೋವಾನೀತಿಯನ್ನು ಸ್ವಾಗತಿಸಿದರು; ಬೆಂಬಲಿಸಿದರು. ಇದಕ್ಕೆ ವ್ಯತಿರಿಕ್ತ ನಿಂತ ಬ್ರಿಟನ್—ಅಮೆರಿಕೆಗಳ ಬಗ್ಗೆ ತೀವ್ರ ಬಾಣಗಳೂ ಸುರಿದುವು. ದಿನದಿಂದ ದಿನಕ್ಕೆ ಗೋವೆಯು ಭಾರತದಲ್ಲಿ ವಿಲೀನಗೊಂಡಿತೆಂಬ ಭಾವನೆ ದೃಢವಾಗಿ ಬೇರುಬಿಟ್ಟಿತು. ಇನ್ನೀಗ ಅಧ್ಯಕ್ಷ ಸುಕರ್ಣರ ಆಕ್ರೋಶ, ಸಿಂಹಳದ ಬಯಕೆ—ಇವೆಲ್ಲವೂ ಒಂದರ ಮೇಲೊಂದೆಂಬಂತೆ ಮುಂದೆ ಬಂದು ವಸಾಹತು ಶಾಹಿಯ ಪತನಕ್ಕೆ ಕಾರಣವಾಗತೊಡಗಿವೆ. ವಸಾಹತು ವಾದವನ್ನು ವಿರೋಧಿಸುವವರಲ್ಲಿ ಅಗ್ರಗಣ್ಯವಾದ ಅಮೆರಿಕೆ ಪತ್ಯಾಂತರವನ್ನು ಕಂಡುಕೊಂಡುದರಲ್ಲಿ ಆಶ್ಚರ್ಯವಿಲ್ಲ. ಹೇಗೆಯೇ ಉಳಿದಿರುವ ಅಸಮಾಧಾನವನ್ನೂ ಅದು ಬಿಟ್ಟುಕೊಟ್ಟು ಸ್ನೇಹವನ್ನು ದೃಢಪಡಿಸಿಕೊಳ್ಳುವುದೆಂದು ಆಶಿಸಬಹುದು.

ಕೇಂದ್ರ ಸಂಸ್ಕೃತ ಸಂಸ್ಥೆ

ಭಾಷಾಧ್ಯಯನದ ಗೊಂದಲವು ನೆಮ್ಮದಿ ತಾಳುವಂತೆ ಕಾಣುವುದಿಲ್ಲ. ನವದೆಹಲಿಯಲ್ಲಿ ರಾಜ್ಯದ ಮುಖ್ಯಮಂತ್ರಿಗಳು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡು ಬಂದನಂತರ ಸಂಸ್ಕೃತದ ಸ್ಥಾನಮಾನಗಳ ಸಂಬಂಧದಲ್ಲಿ ವಿವಂಚನೆ ಹುಟ್ಟಿದೆ. ಹೊಸ ಸೂತ್ರದಲ್ಲಿ ಸಂಸ್ಕೃತ ಭಾಷೆಯ ಅಧ್ಯಯನಕ್ಕೆ ಆಸ್ಪದವು ಅತೀವ ವಿರಳ. ಇಂತಹ ಅಲ್ಪ ಅವಕಾಶದಲ್ಲಿ ನಮ್ಮ ಭಾರತೀಯ ಸಂಸ್ಕೃತಿಯ ಅಭ್ಯಾಸಕ್ಕೆ ನೆರವಾಗುವ ಸಂಸ್ಕೃತದಂತಹ ಭಾಷೆಯನ್ನು ಕಲಿಯುವುದು ಅದನ್ನು ಅಭಿವೃದ್ಧಿಗೊಳಿಸುವುದು ಕನಸಿನ ಗಂಟು. ಭಾರತೀಯ ಭಾಷೆಗಳೆಲ್ಲವುಗಳ ಉನ್ನತಿಗೂ ಅಧ್ಯಯನಕ್ಕೂ ಸಹಾಯಕವೆನಿಸುವ ಸಂಸ್ಕೃತ ಭಾಷೆಯಿಂದಲೇ ಭಾವೈಕ್ಯವೂ ರಾಷ್ಟ್ರೀಯ ಭಾವವೂ ಹುಟ್ಟುವುದು ಖಂಡಿತವೆಂದು ವಿಜ್ಞರ ಅಂಬೋಣವಿದೆ. ದಿನದಿಂದ ದಿನಕ್ಕೆ ಶಿಥಿಲಗೊಳ್ಳುತ್ತಿರುವ ಸಂಸ್ಕೃತಾಧ್ಯಯನಕ್ಕೆ ಅವಕಾಶವೊದಗಿಸಲು ಸಂಸ್ಕೃತ ಆಯೋಗದ ಸಲಹೆಯಂತೆ ಕೇಂದ್ರ ಸಂಸ್ಕೃತ ಸಂಸ್ಥೆಯೊಂದು ತಿರುಪತಿಯಲ್ಲಿ ಪ್ರಾರಂಭವಾಗುವುದು. ಇದರ ಅಡಿಗಲ್ಲನ್ನು ಹಾಕುತ್ತ ಡಾ| ರಾಧಾಕೃಷ್ಣನರು ಸಂಸ್ಕೃತಾಧ್ಯಯನದ ಸಂಬಂಧಗಲ್ಲಿ ಎತ್ತಿದ ಉದ್ಗಾರಗಳು ವಾಸ್ತವಿಕವಿವೆ. ಸಂಸ್ಕೃತವೆಂದೊಡನೆ ಪುರಾಣಗಳ ಕಂತೆಯೆಂಬ ದುರ್ಭಾವನೆ ನಮ್ಮಲ್ಲಿ ಮೂಡಿದೆ. ಆಧುನಿಕ ಶಿಕ್ಷಣ ಪ್ರಣಾಳಿಯಂತೆ ಅದರ ಅಧ್ಯಯನ ವ್ಯವಸ್ಥೆಯಾಗಬೇಕು, ಅಧ್ಯಯನದ ರೀತಿಯನ್ನು ಕುಟಿಲವಿರಿಸದೆ ಸರಳಗೊಳಿಸಬೇಕು. ವೈಜ್ಞಾನಿಕ ವಿಧಾನವನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಬೇಕು.

ಸಂಸ್ಕೃತ ಸಂಸ್ಥೆಯು ವಿಶ್ವವಿದ್ಯಾಲಯದ ಮಟ್ಟದಲ್ಲಿಯೇ ಅವುಗಳಂತೆಯೇ ಕಾರ್ಯಪ್ರವೃತ್ತವಾಗುವುದು. ಕೇಂದ್ರ ಸರಕಾರವು ಸಂಸ್ಕೃತ ಆಯೋಗದ ಸೂಚನೆಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿ ಸಂಸ್ಕೃತ ವಿಶ್ವವಿದ್ಯಾಲಯವನ್ನೇ ಸ್ಥಾಪಿಸುತಿದ್ದರೆ, ಸಂಸ್ಕೃತದ ಸ್ಥಾನಮಾನಗಳು ಉನ್ನತವಾಗುತಿದ್ದುವು. ಕೇಂದ್ರವು ಮುಂದೆ, ಸದವಸರದಲ್ಲಿ ಈಗ ಸ್ಥಾಪಿತವಾದ ಸಂಸ್ಥೆಯನ್ನು ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಲು ಆಲೋಚಿಸಬೇಕು. ಸಂಸ್ಥೆಯ ಬಗ್ಗೆ ಒಂದೆರಡು ಮಾತುಗಳನ್ನು ಬರೆಯಬೇಕೆನ್ನುತ್ತದೆ. ಸಂಸ್ಕೃತ ಭಾಷೆಯ ಅಧ್ಯಯನ ಮತ್ತು ಸಾಹಿತ್ಯ ಸಂಶೋಧನೆಗಳನ್ನು ಇದು ಅವಶ್ಯ ಕೈಗೊಳ್ಳುವುದು. ಇಂದಿನ ನವೀನ ಜಗತ್ತಿನಲ್ಲಿ ನಾವಿರುವುದರಿಂದ ಹಿಂದಿನ ಕಾಲದ ಸಂಸ್ಕೃತ ಶಾಲೆ–ಕಾಲೇಜುಗಳಂತೆ ಪ್ರಾಪಂಚಿಕ ಜ್ಞಾನದಿಂದ ವಿದ್ಯಾರ್ಥಿಗಳು ಅನಭಿಜ್ಞರಾಗದಂತೆ ಅವಶ್ಯ ನೋಡಿಕೊಳ್ಳಬೇಕು. ಸಂಸ್ಕೃತದ ಹೆಸರಿನಲ್ಲಿ ಮಡಿವಂತಿಕೆಯನ್ನು ಬೆಳೆಸುತ್ತ ಹೋಗಬಾರದು. ಅತಿ ಉದಾರ ಪ್ರಾಚೀನ ಭಾರತೀಯ ಸಂಸ್ಕೃತಿಯೊಡನೆ ಆಧುನಿಕತೆಯ ಅಧ್ಯಯನವೂ ನಡೆಯಬೇಕು. ಈ ದಿಶೆಯಲ್ಲಿ ಕೇಂದ್ರ ಸಂಸ್ಕೃತ ಸಂಸ್ಥೆಯು ಹಿಂದುಳಿಯಲಾರದೆಂದು ನಿರೀಕ್ಷಿಸುತ್ತೇವೆ.

ಜಗತ್ಪರ್ಯಟನ

ಕುಹಕಿಗಳ ನಡುವೆ ನೆಹರು

ನಾಗರಿಕರ ಮತ್ತು ಪಕ್ಷಗಳೆಲ್ಲರ ಗೌರವಾದರಗಳನ್ನು ಪಡೆಯುವುದು ಎಲ್ಲರಿಂದಲೂ ಅಸಾಧ್ಯ. ಆದರೆ, ಪ್ರಧಾನಿ ನೆಹರು ಇದಕ್ಕೆ ಅಪವಾದ. ಅವರನ್ನು ಕಾಂಗ್ರೆಸಿಗರಂತೆಯೇ ಕಮ್ಯೂನಿಸ್ಟರೂ ಪ್ರೀತಿಸುತ್ತಾರೆ. ಭಾರತೀಯರಂತೆಯೇ ಬ್ರೆಜೀಲಿಯನರೂ ಗೌರವಿಸುತ್ತಾರೆ. ಶ್ರೀಕೃಷ್ಣಪುರಿಯಲ್ಲಿ ನಡೆಯುತಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಯಾರೋ ಕೆಲವು ಕುಹಕಿಗಳು ಗೊಂದಲವನ್ನೆಬ್ಬಿಸಿದರು. ನಾಯಕಾಗ್ರಣಿಗಳನ್ನು ಕಾಣುವ ಅಪೇಕ್ಷೆಯಿಂದ ಕಿಕ್ಕಿರಿದು ಬರುತಿದ್ದವರ ನಡುವೆ ತಾವೂ ಸೇರಿ ಉತ್ಪಾತ ಮಾಡಿದೆವೆಂದು ಹಿಗ್ಗಿದರು. ಆದರೆ, ಬಹಿರಂಗ ಅಧಿವೇಶನ ಕೆಲವು ತಾಸು ಮುಂದೆ ಹೋದುದಲ್ಲದೆ ಮತ್ತೇನೂ ಅದರಿಂದ ನಡೆಯಲಿಲ್ಲ.

ಭವಿಷ್ಯವಿಲ್ಲದ ರೆಡ್ಡಿ

ಸಂಜೀವ ರೆಡ್ಡಿಯವರ ಭವಿಷ್ಯದ ಕುರಿತು ಸಂಶಯಚಿತ್ತರಾದವರು ಇನ್ನು ಕೆಲವುಕಾಲ ಸುಮ್ಮನುಳಿಯಬಹುದು. ಕಾಂಗ್ರೆಸ್ ಅಧ್ಯಕ್ಷಪದವಿಯನ್ನು ಬಿಟ್ಟು ಅವರು ಆಂಧ್ರದ ರಾಜಕಾರಣಕ್ಕೆ ಮರಳುವರೆಂಬ ವಾರ್ತೆಯು ಇನ್ನೂ ಸತ್ಯವಾಗದಿದ್ದರೂ ಸುಳ್ಳಾಗಲಿಲ್ಲ. ಅವರು ಅಧ್ಯಕ್ಷಪದವಿಯಲ್ಲಿಯೇ ಮುಂದುವರಿಯಬೇಕೋ ಬೇಡವೋ ಎಂಬುದು ಸಾರ್ವತ್ರಿಕ ಚುನಾವಣೆಗಳ ಪರಿಣಾಮ ಬಂದು ಅಲ್ಲಿ ಆಗ ಕಾಂಗ್ರೆಸ್ಸಿನ ಒಳರಾಜಕಾರಣದ ಪರಿಣಾಮವನ್ನು ಹೊಂದಿಕೊಂಡಿದೆಯೆಂಬುದು ನಿಶ್ಚಯ. ರೆಡ್ಡಿಯವರು ನಿವೃತ್ತರಾದರೆ ಆ ಸ್ಥಾನಕ್ಕೆ ಶ್ರೀಮತಿ ಇಂದಿರಾ ಗಾಂಧಿಯವರು ಬರುವುದೂ ಈಗ ಅಷ್ಟೇ ನಿಶ್ಚಯವಾಗಿ ಗೊತ್ತಾಗಿದೆ.

ಕತ್ತರಿಯಲ್ಲಿ ಅಯೂಬ್

ಚೀನದೊಡನೆ ಸೀಮಾ ಒಡಂಬಡಿಕೆಯನ್ನು ಮಾಡಿಕೊಳ್ಳುವ ಅಭಿಲಾಷೆಯಿಂದಿದ್ದ ಪಾಕಿಸ್ತಾನದ ಅಧ್ಯಕ್ಷ ಅಯೂಬಖಾನರು ಕಂಗಾಲಾಗುವಂತಹ ಸುದ್ದಿಯೊಂದು ಬಂದಿದೆ. ಭಾರತದ ಭೂಭಾಗವನ್ನು ಅಪಹರಿಸುತ್ತಿರುವ ಚೀನದ ಬೆದರಿಕೆ ಅವರಿಗಿರಲಿಲ್ಲವೆಂದಲ್ಲ; ಈ ಕಾರಣದಿಂದಲೇ ಅವರು ಸಂಯುಕ್ತ ಸಂರಕ್ಷಣಾ ಒಡಂಬಡಿಕೆಯ ಮಾತನ್ನು ಭಾರತದ ಮುಂದಿಟ್ಟಿದ್ದರು. ತಾನು ಆಕ್ರಮಿಸಿಕೊಂಡಿರುವ ಭಾರತದ ಅಂಗವಾದ ಜಮ್ಮೂ ಕಾಶ್ಮೀರದ ಭಾಗದಲ್ಲಿ (ಆಜಾದ ಕಾಶ್ಮೀರ) ನಾಲ್ಕು ಸಾವಿರ ಚದರ ಮೈಲು ಭೂಮಿಯನ್ನು ಚೀನಾ ಬೇಡಿಪತ್ರ ಕಳಿಸಿದೆಯಂತೆ. ಮಿತ್ರತ್ವವನ್ನು ಉಳಿಸಿಕೊಂಡು ಭಾರತ ದ್ವೇಷಿ ನೀತಿಯನ್ನದು ಮುಂದುವರಿಸಿಕೊಳ್ಳಬೇಕಾದರೆ, ಚೀನ ಬೇಡಿದ ಭೂಭಾಗವನ್ನು ಕೊಡಬೇಕೇ ಬೇಡವೇ ಎಂಬುದು ಅದಕ್ಕೆ ನುಂಗದ ತುತ್ತಾಗಿ ಪರಿಣಮಿಸಿದೆ

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ಅಲ್ಲಲ್ಲಿಯ ಸುದ್ದಿ ಸಾರ

ಶಾಲಾ ಪುರೋಭಿವೃದ್ಧಿ ಅಧಿವೇಶನ— ಇದೇ ತಾ. 2ರಂದು ಉಡುಪಿ ತಾಲೂಕು ಶಾಲಾ ಪುರೋಭಿವೃದ್ಧಿ ಅಧಿವೇಶನವು ಆರೋಗ್ಯ ಸಚಿವ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಅದಮಾರು ಹೈಸ್ಕೂಲಿನಲ್ಲಿ ನಡೆಯಿತು. ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಅಧಿವೇಶನವನ್ನು ಉದ್ಘಾಟಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಅದಮಾರು ಮಠದ ಶ್ರೀಗಳವರು ಶೈಕ್ಷಣಿಕ ಪ್ರಗತಿಗೆ ನೆರವಾಗುವ ಈ ಅಧಿವೇಶನಕ್ಕೆ ಆಶೀರ್ವಾದ ರೂಪದ ಭಾಷಣ ಮಾಡಿದರು. ಶ್ರೀ ನರಸಿಂಹಯ್ಯನವರು ಸಂದೇಶಗಳನ್ನು ವಾಚಿಸಿದ ನಂತರ, ಶ್ರೀ ಶಾಂತಿರಾಜ ಅರಸರು ಸ್ವಾಗತಿಸಿದರು. ಶ್ರೀ ಪೈ. ಗೋಪಾಲರು ವರದಿಯನ್ನು ಓದುತ್ತ ಜಿಲ್ಲೆಯಲ್ಲಿ ೪ ಲಕ್ಷಕ್ಕೂ ಮಿಕ್ಕಿ ಸಹಾಯ ಧನವು ಸಂಗ್ರಹವಾಗಿದ್ದು, ನಮ್ಮ ಜಿಲ್ಲೆಯು ಪ್ರಥಮ ಸ್ಥಾನವನ್ನು ಗಳಿಸಿದೆಯೆಂದರು. ಶ್ರೀ ಎ. ಜಿ ಆಲ್ವೆಯವರು ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾತಾಡಿ ಅಲ್ಲಿ ಬರುವ ಸಮಸ್ಯೆಗಳನ್ನು ವಿವರಿಸಿದರು. ಡಿ. ಇ. ಒ. ಶ್ರೀ ಕೆ. ವಿಟ್ಠಲ ಶೆಣೈ, ಕೃಷ್ಣಮೂರ್ತಿರಾವ್, ಕುರುಕಾಲು ಗಣಪಯ್ಯ ಶೆಟ್ಟಿ ಮತ್ತು ಎಸ್. ಗೋಪೀಚಂದರಾವ್ ಇವರು ಶಿಕ್ಷಣ ಕ್ಷೇತ್ರದ ಕುರಿತಾಗಿ ಮಾತಾಡಿದ ನಂತರ ಅಧ್ಯಕ್ಷರು ಜಿಲ್ಲೆಯಲ್ಲಾದ ಶಿಕ್ಷಣದ ಪ್ರಗತಿಯನ್ನು ವಿವರಿಸಿ, ಸರಕಾರವು ಉತ್ಸುಕವಿದ್ದರೂ ಕೆಲವೊಂದು ಆರ್ಥಿಕ ತೊಂದರೆಗಳಿಂದ ಈ ದಿಸೆಯಲ್ಲಿ ತೊಂದರೆಯಾಗುತ್ತಿದೆಯೆಂದರು. ಶ್ರೀ ನರಸಿಂಹರವರು ಧನ್ಯವಾದಗಳನ್ನಿತ್ತರು. ಅಧಿವೇಶನಕ್ಕೆ ಸಮಾಗಮಿಸಿದವರಿಗೆ ಅದಮಾರು ಶ್ರೀಗಳವರು ಭೋಜನ ವ್ಯವಸ್ಥೆಯನ್ನು ಮಾಡಿದ್ದರು.

ಆಸ್ಪತ್ರೆಯ ದಿನಾಚರಣೆ— ಮೂಲ್ಕಿಯ ಎಲ್. ಎಫ್. ಆಸ್ಪತ್ರೆಯ ದಿನಾಚರಣೆಯು ಆಸ್ಪತ್ರೆಯ ಪರಿಸರದಲ್ಲಿ ತಾ. 6 ಮತ್ತು 7ರಂದು ಮಂಗಳೂರು ತಾಲೂಕು ಬೋರ್ಡು ಮತ್ತು ಮೂಲ್ಕಿ ಎಲ್. ಎಫ್. ಆಸ್ಪತ್ರೆಯ ನಿರಾಶ್ರಿತ ಫಂಡು ಸಮಿತಿಯ ವತಿಯಿಂದ ವೈಭವದಿಂದ ನೆರವೇರಿತು. ಸಮಾರಂಭದ ಉದ್ಘಾಟನೆಯನ್ನು ಮೊದಲ ದಿನ ಡಾ| ಎಸ್. ಚಂಪಾ ಎಂ.ಎಲ್. ಸಿ. ಯವರು ನೆರವೇರಿಸಿದರು. ತಾ. 7ನೇ ಸಂಜೆ ಮೈಸೂರು ರಾಜ್ಯದ ಆರೋಗ್ಯ ಸಚಿವ ಡಾ. ಕೆ. ಕೆ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನೆರವೇರಿತಲ್ಲದೆ ಜಿಲ್ಲಾ ಕ್ಷಯರೋಗ ನಿವಾರಣಾ ಕಮಿಟಿಯ ಮೂಲ್ಕಿ ಶಾಖೆಯು ಉದ್ಘಾಟಿಸಲ್ಪಟ್ಟಿತು. ಡಾ ಎಂ. ಆರ್. ಕಾಮತರು ಪರಿಚಯ ಭಾಷಣ ಮಾಡಿದ ಮೇಲೆ ಮಂಗಳೂರು ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿಯವರು ಸ್ವಾಗತ ಭಾಷಣ ಮಾಡಿದರು ಶ್ರೀ ಎಂ. ಆರ್. ಎಚ್. ಪೂಜರು ಆಸ್ಪತ್ರೆ ನಿರಾಶ್ರಿತ ಫಂಡಿನ ವರದಿ ವಾಚಿಸಿದರು. ಶ್ರೀ ಬಿ ಎಸ್ ಎಂ ಹೆಗ್ಡೆಯವರು ಸಂದೇಶಗಳನ್ನೋದಿದರು.

ಬೆಳಿಗ್ಗೆ ವೈದ್ಯಕೀಯ ಪರೀಕ್ಷೆ ನಡೆಸಿದ ಡಾಕ್ಟರುಗಳಿಗೆ ಹೂ ಮಾಲೆ ಹಾಕಿ ಗೌರವಿಸಲಾಯಿತು. ಶ್ರೀಮತಿ ಎಚ್. ಎಸ್. ನಾಯಕರು ಶಿಶು ಪ್ರದರ್ಶನದಲ್ಲಿ ಗೆದ್ದವರಿಗೆ ಬಹುಮಾನ ಹಂಚಿದರು.

ಡಾ. ಪಿ. ಪಿ. ಚೌಡಯ್ಯ, ಡಾ. ವಿ. ಆರ್. ಭಟ್, ಡಾ. ಎಸ್. ಮೋಹನದಾಸ್ ನಾಯಕ್ ಇವರು ಬೇರೆ ಬೇರೆ ವಿಷಯಗಳ ಕುರಿತು ಭಾಷಣವಿತ್ತರು. ಸುಮಾರು 3 ದಶಕಗಳಿಂದ ಗೌರವ ವೈದ್ಯರಾಗಿ ಸೇವೆ ಸಲ್ಲಿಸಿದ ಡಾ ಕೆ. ರಾಮ ಶೆಟ್ಟಿಯವರಿಗೂ ಎರಡು ದಶಕಗಳಿಂದ ಕಂಪೌಂಡರರಾಗಿದ್ದ ಶ್ರೀ ಕೆ. ಮಂಗೇಶರಾಯರಿಗೂ ನಿರಾಶ್ರಿತ ಫಂಡಿನವರು ಸನ್ಮಾನ ಪತ್ರಗಳನ್ನರ್ಪಿಸಿದರು.

ಮಂತ್ರಿ ಡಾ. ಕೆ. ಕೆ. ಹೆಗ್ಡೆಯವರು ತಮ್ಮ ಭಾಷಣದಲ್ಲಿ ಆಸ್ಪತ್ರೆ ದಿನಾಚರಣೆ ಆಚರಿಸುವುದರಲ್ಲಿ ಮೂಲ್ಕಿಗೆ ಮೊದಲ ಸ್ಥಾನವೆಂದೂ ಇಂತಹ ಆಚರಣೆಗಳಿಂದ ಆಸ್ಪತ್ರೆಗಳ ಕುಂದುಕೊರತೆಗಳನ್ನು ತಿಳಿದು ಪರಿಹಾರವಾಗಿಸಲು ಸಂಬಂಧಪಟ್ಟವರಿಗೆ ಅನುಕೂಲವಾಗುವುದೆಂದೂ ಹೇಳಿ ನಿರಾಶ್ರಿತ ಫಂಡಿಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು ಮತ್ತು ಸರಕಾರವು ವೈದ್ಯಕೀಯ ಸವಲತ್ತಿಗಾಗಿ ಮಾಡುತ್ತಿರುವ ಪ್ರಯತ್ನಗಳನ್ನು ವಿವರಿಸಿ ಸಾರ್ವಜನಿಕರ ಸಹಕಾರವನ್ನು ಕೋರಿದರು. ಅಂತ್ಯದಲ್ಲಿ ಡಾ. ಪಿ. ಬಾಬು ಸೆಟ್ಟರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಶ್ರೀ ದೇವಸರಾಮಣ್ಣ ಸೆಟ್ರ ಹಾಸ್ಯ ಪ್ರದರ್ಶನ, ಯಕ್ಷಗಾನ ಕಲಾಕೂಟ ಜರಗಿತು.

—: ಜಾಹೀರು ನೋಟೀಸು :—

ಪೀಲಾವರ ಹೆಬ್ಬಾರ ಬೆಟ್ಟಿನಲ್ಲಿರುವ ಆರೂರು ಮಂಜುನಾಥ ಭಟ್ಟರ ವಿಧವೆ ಲೀಲಾವತಿ ಯಾನೆ ಸರಸ್ವತಿ ಅಮ್ಮನು ಈ ಮೂಲಕ ಎಲ್ಲಾ ಜನರಿಗೆ ತಿಳ್ಸವದೇನೆಂದ್ರೆ—

ಉಡುಪಿ ತಾಲೂಕು ಆರೂರು ಗ್ರಾಮದ ಕುಂಜಾಲು ಪೇಟೆಯಲ್ಲಿರುವ ಶೀತಾರಾಮ ಭಟ್ರ ಮಗ ಶ್ರೀನಿವಾಸ ಭಟ್ರು ಈಗ ಸುಮಾರು 75 ವರುಷಕ್ಕೆ ಮಿಕ್ಕಿದ ವಯೋವೃದ್ಧರಾಗಿರುತ್ತಾರೆ. ಅವರ ಖಾಸ ತಮ್ಮನ ನನ್ನ ಗಂಡ ಮೃತ ಮಂಜುನಾಥ ಭಟ್ಟರು ಸ್ವಾರ್ಜಿತ ಸಂಪಾದಿಸಿದ ಹಣದಿಂದ ಸದ್ರಿ ಶ್ರೀನಿವಾಸ ಭಟ್ಟರು ಕುಟುಂಬದ ಹಿರೀ ಮಂಬರ ಅನ್ನುವ ಅಭಿಮಾನದಿಂದ ಕೆಲವು ಸ್ಥಿರಚರ ಸೊತ್ತುಗಳನ್ನೂ ಸದ್ರಿ ಶ್ರೀನಿವಾಸ ಭಟ್ರ ಹೆಸರಿಗೆ ಮಾಡಿಸಿರುತ್ತಾರೆ. ಇನ್ನು ನನ್ನ ದ್ವೇಷಿಕರು ಯಾರಾದರೂ ಆ ವೃದ್ಧ ಮತ್ತು ತಲೆ ಕೂಡಾ ಸರಿಯಿಲ್ಲದ ನಿಸ್ಸಂತತಿಯವರಾದ ಸದ್ರಿ ಶ್ರೀನಿವಾಸ ಭಟ್ರಿಂದ ಸದ್ರಿ ಸ್ಥಿರಚರ ಸೊತ್ತುಗಳ ಮೇಲಣ ಈಡು ವಗೈರೆ ಪರಾಭಾರೆಗಳು ಮತ್ತು ಸಾಲಗೇಣಿ ವ್ಯಾದೆ ಗೇಣಿ ಅಥವಾ ಪಿ. ನೋಟು ಮುಂತಾದ ಯಾವ ರಿಕಾರ್ಡು ಮಾಡಲಿಕ್ಕೂ ಹಕ್ಕಿಲ್ಲ. ಇದಕ್ಕೆ ವಿರೋಧವಾಗಿ ಮಾಡಿದರೆ ಅಂಥಾ ಪರಾಭಾರೆಗಳು ವ ಸಾಲಗಳು ಅವರ ವಾರೀಸ್ದಾರರಾದ ನನ್ನ ಮೈನರ್ ಮಕ್ಕಳಿಗೂ ನನಗೂ ಬಾಧಿಸತಕ್ಕವುಗಳಲ್ಲ ಅಲ್ಲದೆ ಸಿಂಧುವಾಗ ತಕ್ಕವಲ್ಲ. ಮತ್ತು ಅವರಿಗೆ ಸಾಲ ವಗೈರೆ ಮಾಡುವ ಅಗತ್ಯ ಕೂಡಾ ಇಲ್ಲ ಎಂಬದು ಈ ಮೂಲಕ ಜಾಹೀರು ಪಡಿಸುತ್ತೇನೆ.

● ಈ ಹೆಬ್ಬೆಟ್ಟಿನ ಗುರ್ತು ಲೀಲಾವತಿ ಯಾನೆ ಸರಸ್ವತಿ ಅಮ್ಮನ ರುಜು.

ತಾರೀಕು 9—1—1962

ಪರಿಯೊಳಿ ಸಮಾಜ ಸುಧಾರಕ ಸಂಘ— ಉಡುಪಿಯ ಈ ಸಂಘದ ಮಹಾ ಸಭೆಯು ಇದೇ ತಾ 27ರಂದು ಉಡುಪಿ ನಾಯಕ್ ಆಯುರ್ವೇದಾಶ್ರಮದ ಮಾಳಿಗೆಯಲ್ಲಿ ಶ್ರೀ ಟಿ ಎ ವಾಸುದೇವನ್‌ರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಸದಸ್ಯರೂ ಸಮಾಜಾಭಿಮಾನಿಗಳೂ ಬಂದು ಸಹಕರಿಸಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಂದಾಡಿ ಪ್ರಾಕ್ತನ ವಿದ್ಯಾರ್ಥಿ ಸಂಘದ— ವಾರ್ಷಿಕೋತ್ಸವವು ಕಳೆದ ತಾ. 31ರಂದು ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ನೆರವೇರಿತು ಶ್ರೀ ಎನ್. ಅಂತಯ್ಯ ಸೆಟ್ರ ಹಿರಿತನದಲ್ಲಿ ಆಟೋಟಗಳ ಸ್ಪರ್ಧೆ, ಡಾ ಕೆ. ಕೆ. ಕಲ್ಕೂರರ ಅಧ್ಯಕ್ಷತೆಯಲ್ಲಿ ಶ್ರೀ ಎಚ್ ಮಹಾಬಲ ಸೆಟ್ಟರಿಂದ ಜನತಾ ವಾಚನಾಲಯದ ಉದ್ಘಾಟನೆ, ಶ್ರೀ ಕೆ. ಮಹಾಬಲೇಶ್ವರ ಅಡಿಗರ ಅಧ್ಯಕ್ಷತೆಯಲ್ಲಿ ಮಹಾ ಸಭೆ ಜರಗಿ, ಭಾಷಣಗಳಾದುವು ಮನರಂಜನೆಯ ಕಾರ್ಯಕ್ರಮವಾಗಿ ಯಕ್ಷಗಾನ ಕೂಟ ಜರಗಿತು.

ಯಕ್ಷಗಾನ— ಕಡಿಯಾಳಿ ಮಹಿಷಮರ್ದಿನಿ ಯಕ್ಷಗಾನ ಕಲಾಮಂಡಲಿ ಸಗ್ರಿಯವರು ಸ್ಥಳೀಯ ಮಹಿಷಮರ್ದಿನಿ ದೇವರ ಸನ್ನಿಧಿಯಲ್ಲಿ ಎಳ್ಳಮಾವಾಸ್ಯೆಯ ಕಾರ್ಯಕ್ರಮದ ಅಂಗವಾಗಿ ಯಕ್ಷಗಾನ ಕೂಟವೊಂದನ್ನು ಜರಗಿಸಿದರು. ಆರಂಭದಲ್ಲಿ ಯಕ್ಷಗಾನ ಕಲಾವಿದರಾದ ಪಡುಬೆಟ್ಟು ಸೀನ ಸೆಟ್ಟಿ, ಭಾಗವತ, ಕುಂಜಾಲು ಶೇಷಗಿರಿ ಕಿಣಿಯವರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು. ಯಕ್ಷಗಾನ ಕೂಟದಲ್ಲಿ ಶ್ರೀಗಳಾದ ಕೆ. ನಾರಾಯಣ ಸೆಟ್ಟಿ, ಎಂ. ಗೋವರ್ಧನರಾವ್, ಕೋಟೆ ಸುಬ್ಬರಾವ್, ಸೀತಾನದಿ ಗಣಪಯ್ಯ ಸೆಟ್ಟಿ ಮೊದಲಾದವರು ಭಾಗವಹಿಸಿದ್ದರು.

ಅಷ್ಟಗ್ರಹ ಯೋಗ— ದೋಷ ನಿವಾರಣಕ್ಕಾಗಿ ಕರ್ಕಳದ ಶ್ರೀ ಮಹಾಲಿಂಗೇಶ್ವರ ಮತ್ತು ಗಣಪತಿ ದೇವರ ಸನ್ನಿಧಿಯಲ್ಲಿ ಇದೇ ತಾ. 18ರಿಂದ 19ರ ತನಕ ಭಜನೆ, ಪೂಜಾದಿ ಕಾರ್ಯಕ್ರಮಗಳು ಜರಗಲಿರುವವೆಂದೂ ಸರ್ವರೂ ಸಹಕರಿಸಬೇಕೆಂದೂ ಕೇಳಿಕೊಳ್ಳಲಾಗಿದೆ.

ಅದಮಾರು ಹೈಸ್ಕೂಲಿನ ವಾರ್ಷಿಕೋತ್ಸವ—ವು ಇದೇ 2ರಂದು ಆರೋಗ್ಯ ಮಂತ್ರಿ ಡಾ. ಕೆ. ಕೆ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎ. ಎಸ್. ಭಟ್ಟರು ವರದಿಯನ್ನೋದಿದ ಮೇಲೆ ಶ್ರೀ ಯಸ್ ಕೃಷ್ಣಮೂರ್ತಿ ಭಟ್ಟರು ಸ್ವಸ್ತಿವಾಚನ ಗೈದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಗಳಾದ ಬಳಿಕ ನಾಟಕಾದಿ ವಿವಿಧ ವಿನೋದಾವಳಿಗಳಾದುವು.

ಕಳೆದ ತಾ. 28ರಂದು ಅದಮಾರು ಮಠದ ಶ್ರೀ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರ ಜನ್ಮದಿನೋತ್ಸವವು ಸೋದೆ ಮಠದ ಶ್ರೀ ಶ್ರೀ ವಿಶೋತ್ತಮ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿಯೂ, ಹೈಸ್ಕೂಲು ಹಳೆ ವಿದ್ಯಾರ್ಥಿ ಸಂಘ ಮತ್ತು ಶಿಕ್ಷಕ-ರಕ್ಷಕ ಸಂಘಗಳ ವಾರ್ಷಿಕೋತ್ಸವವು ಕಳೆದ ತಾ. 31ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿಯೂ ಇದೇ ತಾ. 1ರಂದು ಕ್ರೀಡೋತ್ಸವ ಸಮಾರಂಭವು ಡಾ| ಎಂ. ಜಿ. ಆರ್ ಸಂಪಿಗೆತ್ತಾಯ ಇವರ ಅಧ್ಯಕ್ಷತೆಯಲ್ಲಿಯೂ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ನೆರವೇರಿದವು.

ಅಕ್ಕಿ ವಿತರಣೆ:— ಗೋವಾ ವಿಮೋಚನೆಯ ಸವಿನೆನಪಿಗಾಗಿ ಇದೇ ತಾ. 7ರಂದು ಉಡುಪಿ ಪಾಂಗಾಳ ನಾಯಕ್ ಬೆಂಕಿನ ವಠಾರದಲ್ಲಿ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯಕರು ದೊಡ್ಡವರಿಗೆ 2 ಪಾವು ಮತ್ತು 2 ಆಣೆ, ಸಣ್ಣವರಿಗೆ 1 ಪಾವು ಮತ್ತು 1 ಆಣೆಯಂತೆ ಧರ್ಮಾರ್ಥ ಅಕ್ಕಿ ಮತ್ತು ಮೊಬಲಗನ್ನು ಹಂಚಿದರು.

ಸತ್ಕಾರ ಸಮಾರಂಭ— ಮುಂಬೈಯ ಕರ್ನಾಟಕ ಧರ್ಮಾರ್ಥ ರಾತ್ರಿ ಪ್ರೌಢ ಶಾಲಾ ಹಳೇ ವಿದ್ಯಾರ್ಥಿ ಸಂಘವು ತಾ. -.1.'62 ರಂದು ಉತ್ತರೋಕ್ತ ಶಾಲಾ ಎಸ್ ಎಸ್ ಸಿ ವಿದ್ಯಾರ್ಥಿಗಳಿಗೆ ಸತ್ಕಾರ ಸಮಾರಂಭವನ್ನು ಶಾಲಾ ಹಾಲಿನಲ್ಲಿ ಜರಗಿಸಿತು. ಸಂಘದ ಅಧ್ಯಕ್ಷರಾದ ಶ್ರೀ ಆರ್. ಎಸ್. ಮುಚ್ಚೂರು ಅವರು ಶಾಲಾಂತ್ಯ ಪರೀಕ್ಷೆಗೆ ಹೋಗಲಿರುವ ವಿದ್ಯಾರ್ಥಿಗಳನ್ನು ಹಳೇ ವಿದ್ಯಾರ್ಥಿ ಸಂಘಕ್ಕೆ ಸೇರಿ ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಅದರ ಔನ್ನತ್ಯಕ್ಕೆ ಕಾರಣೀಭೂತರಾಗಲು ಸ್ವಾಗತಿಸಿದರು. ಮತ್ತು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಟಾಟಾ ಆಯಿಲ್ ಕಂಪೆನಿಯ ಮೆನೆಜರರಾದ ಶ್ರೀ ಕೆ. ಕೆ. ಅಜಿಲರ ಸಂಕ್ಷಿಪ್ತ ಪರಿಚಯವನ್ನಿತ್ತರು ಆ ಬಳಿಕ ಹಳೇ ವಿದ್ಯಾರ್ಥಿ ಸಂಘದ ಪರವಾಗಿ ಸರ್ವಶ್ರೀ ಕಳವಾರು ರಾಮ ಶೆಟ್ಟರು ಮಾತಾಡುತ್ತಾ ಸಂಘದ ಉದ್ದೇಶ ಹಾಗೂ ಸಾಧನೆಗಳನ್ನು ವಿವರಿಸಿದರು. ಶ್ರೀ ಕೆ. ಎಸ್. ಸಾಲಿಯಾನ್ ಅವರು ಹಳೇ ವಿದ್ಯಾರ್ಥಿ ಸಂಘ ಹೇಗೆ ನಿರೂಪಿಸಲ್ಪಟ್ಟಿತು, ಅದು ನಮಗೆ ಏಕೆ ಬೇಕು ಎಂಬುದನ್ನು ತರ್ಕಬದ್ಧವಾಗಿ ನಿರೂಪಿಸಿದರು. ಶಾಲಾ ಕಾರ್ಯದರ್ಶಿ ಶ್ರೀ ಜಗನ್ನಾಥ ಎ ಶೆಟ್ಟಿಯವರು ಹಳೇ ವಿದ್ಯಾರ್ಥಿಗಳ ಕಾರ್ಯಕೌಶಲ್ಯ, ಶಾಲೆಗೆ ಅವರಿಂದಾಗುವ ಅಮೂಲ್ಯ ಸಹಾಯವನ್ನು ಸೂಚಿಸಿ ಕೃತಜ್ಞತೆಯನ್ನು ಸಲ್ಲಿಸಿದರು. ಶಾಲಾ ವಿದ್ಯಾರ್ಥಿಗಳ ಪರವಾಗಿ ಸುಂದರ ಶೆಟ್ಟಿಯವರು ಮಾತಾಡಿದ ಬಳಿಕ ಸಭಾಧ್ಯಕ್ಷರಾದ ಶ್ರೀ ಕೆ. ಕೆ. ಅಜಿಲರು ತಮ್ಮ ವಿದ್ಯಾರ್ಥಿ ಜೀವನದ ಕಾಲವನ್ನು ಸ್ಮರಿಸಿ ಬಹು ಮನೋರಂಜಕವಾಗಿ ಭಾಷಣಗೈದರು ಲಘು ಉಪಹಾರದ ಬಳಿಕ ಸಂಘದ ಕಾರ್ಯದರ್ಶಿ ಶ್ರೀ ಬಿ ಸುಂದರ ಶೆಟ್ಟಿಯವರು ಧನ್ಯವಾದ ಸಮರ್ಪಣೆ ಗೈದರು.

ಲೋಕ ಸೇವಾ ಸೈನ್ಯ ಶಿಬಿರದ- ಉದ್ಘಾಟನಾ ಸಮಾರಂಭವು ಇದೇ ತಾ 3ರಲ್ಲಿ ಡಾ. ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಮಣಿಪಾಲದಲ್ಲಿ ನೆರವೇರಿತು. ತಾ. ಬೋ. ಅಧ್ಯಕ್ಷ ಶ್ರೀ ಎಂ ಮಧ್ವರಾಜರು ಸ್ವಾಗತ ಭಾಷಣ ಮಾಡಿದರು. ಕೇಪ್ಟನ್ ರಾಮಚಂದ್ರನ್ ಅವರು ಶಿಕ್ಷಣ ಶಿಬಿರದ ಉದ್ದೇಶ ಪ್ರಯೋಜನಗಳನ್ನು ವಿವರಿಸಿದರು. ಶ್ರೀ ಟಿ. ರಮೇಶ ಪೈಗಳು ಶಿಕ್ಷಣ ಶಿಬಿರವನ್ನು ಉದ್ಘಾಟಿಸುತ್ತ ರೂ. 50,000 ವ್ಯಯಮಾಡಿ ನಡೆಸುವ ಈ ಶಿಬಿರಕ್ಕೆ 525 ಅಭ್ಯರ್ಥಿಗಳು ಬರುವಲ್ಲಿ ಬರೇ 230 ಬಂದುದು ವಿಷಾದಕರವೆಂದೂ, ಶಿಬಿರವು ಜಯಪ್ರದವಾಗಲೆಂದೂ ಹಾರೈಸಿದರು. ಅಧ್ಯಕ್ಷ ಡಾ ಪೈಗಳು ಮಾತನಾಡುತ್ತ ಸರಕಾರವು ಈ ಶಿಬಿರದ ಶಿಕ್ಷಣವನ್ನು ಧರ್ಮಾರ್ಥ ಕೊಡುವ ಉದಾರತೆ ತೋರಿಸಿದರೂ ಅದರ ಉಪಯೋಗ ಪಡೆವ ಆಸಕ್ತಿ ಜನರಲ್ಲಿ ತೋರಿಬರುತ್ತಿಲ್ಲವೆಂದೂ, ಉತ್ತಮ ರಾಷ್ಟ್ರ ನಿರ್ಮಾಣಕ್ಕೆ ಇಂತಹ ತರಬೇತಿ ಕೇಂದ್ರವು ಅಗತ್ಯವೆಂದೂ ಹೇಳಿದರು.

ಡಾ| ಮುದಲಿಯಾರರ ಭಾಷಣ- ಇದೇ ತಾ. 7ರಂದು ಮಂಗಳೂರು ಸರಕಾರಿ ಕಾಲೇಜಿನಲ್ಲಿ ಕಾಲೇಜು ಯೂನಿಯನ್ ಮತ್ತು ಲಾಯನ್ಸ್ ಕ್ಲಬ್ಬಿನ ಆಶ್ರಯದಲ್ಲಿ ಮದ್ರಾಸು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ| ಎ ಲಕ್ಷ್ಮಣ ಸ್ವಾಮಿ ಮುದಲಿಯಾರರು ಸಾರ್ವಜನಿಕ ಭಾಷಣ ಮಾಡುತ್ತ ಇಂದಿನ ನಮ್ಮ ಯುವಕ ಯುವತಿಯರಲ್ಲಿ ಶಿಸ್ತು ಬೆಳೆಯಬೇಕಾದರೆ ಹಿರಿಯರಾದ ನಾವು ಶಿಸ್ತಿನ ಉತ್ತಮ ಜೀವನ ನಡೆಸಬೇಕು, ಭಾಷಾವಾರು ಪ್ರಾಂತ್ಯರಚನೆಯಿಂದ ಪ್ರಯೋಜನಕ್ಕಿಂತ ತೊಂದರೆಗಳೇ ಹೆಚ್ಚಾಗಿವೆ. ಅಂತಾರಾಷ್ಟ್ರೀಯ ಸ್ಥಾನವಿರುವ ಇಂಗ್ಲಿಷ್ ಭಾಷೆಗೆ ಕಾಲೇಜು ಶಿಕ್ಷಣದಲ್ಲಾದರೂ ಸ್ಥಾನ ಕೊಡಬೇಕಾಗಿದೆ ಇಂದು ರಾಜಕೀಯ ಹಸ್ತಕ್ಷೇಪದಿಂದ ವಿದ್ಯಾರಂಗವು ಗೊಂದಲಮಯವಾಗಿದೆ. ವಿದ್ಯಾರಂಗದಲ್ಲಿ ಎಂದೂ ರಾಜಕೀಯ ಪ್ರವೇಶಿಸುವುದು ಅಪೇಕ್ಷಣೀಯವಲ್ಲ ಎಂದು ಮೊದಲಾಗಿ ಹೇಳಿದರು. ಆರಂಭದಲ್ಲಿ ಶ್ರೀ ಜಿ. ಸೋಮಶೇಖರ ರಾಯರೂ ಪ್ರೊ|. ಆರ್. ಆರ್. ಉಮರ್ಜಿಯವರೂ ಸ್ವಾಗತಿಸಿದರು. ಅಂತ್ಯದಲ್ಲಿ ಕುನೂರಿ ಪ್ರೇಮಾ ಹಂದೆಯವರು ಧನ್ಯವಾದಗಳನ್ನರ್ಪಿಸಿದರು.

ಉಚ್ಚಿಲ:— ಮೊಗವೀರ ಮಹಾಜನ ಸಂಘದವರು ಮುಂಬಾಯಿ ಮೇಯರ್ ಶ್ರೀ ವಿ. ಬಿ. ವರ್ಲೀಕರ ಮತ್ತು ಕೊರ್ಪರೇಶನ್ ಸದಸ್ಯ ಟಿ ಕೆ. ಉಪ್ಪೂರು ಇವರಿಗೆ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು ಶ್ರೀ ಎಸ್. ಕೆ. ಅಮೀನರು ಸ್ವಾಗತಿಸಿದ ಮೇಲೆ ಶ್ರೀಗಳಾದ ಎ. ಜೆ ಅಲ್ವೆ, ಮೊನಪ್ಪ ತಿಂಗಳಾಯ, ಬಿ. ಆರ್ ಕರ್ಕೇರರು ಭಾಷಣವಿತ್ತರು.

ಬಂಟ್ವಾಳ:— ಸ್ಥಳೀಯ ಮಂಡಲ ಕಾಂಗ್ರೆಸ್ ಚುನಾವಣಾ ಕಚೇರಿಯ ಉದ್ಘಾಟನಾ ಸಮಾರಂಭವು ತಾ. 7ರಂದು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಟಿ. ಎ ಪೈ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಕಾಂಗ್ರೆಸ್ಸಿಗರು ಜಾತ್ಯಾತೀತ ಮತ್ತು ವಿಶಾಲ ಭಾವನೆಯಿಂದ ದುಡಿದು ರಾಷ್ಟ್ರಕಲ್ಯಾಣ ಕಾರ್ಯಕ್ಕೆ ನೆರವಾಗಬೇಕೆಂದೂ ಚುನಾವಣೆಯಲ್ಲಿ ಜಯಿಸಲು ಸದ್ಭಾವನೆ ಅವಶ್ಯಕವೆಂದೂ ಶ್ರೀ ಪೈಗಳು ಹೇಳಿದರು.

ಕೆಲೆಂಡರ್ ಸ್ವೀಕಾರ:— ಉಡುಪಿಯ ಶ್ರೀ ರಾಘವೇಂದ್ರ ಭಟ್ಟರ ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್, ಕಲ್ಪಂಜೆ ವ್ಯಾಸರಾಯರ ಸ್ಟೇಶನರೀ ಎಂಪೋರಿಯಂ, ಮದ್ರಾಸಿನ ಯುನೈಟೆಡ್ ಸ್ಟೇಟ್ಸ್ ಇನ್‌ಫೋರ್ಮೇಶನ್ ಸರ್ವಿಸ್, ಮಂಗಳೂರಿನ ಮೆಸ್ಸ್ರ್ಸ್ ಕೊಚ್ಚಿಕಾರ್ ನರಸಿಂಹ ಪೈ ಇವರ ಹೊಸ ವರ್ಷದ ಸುಂದರವಾದ ಕೆಲೆಂಡರುಗಳನ್ನು ಆದರಪೂರ್ವಕವಾಗಿ ಸ್ವೀಕರಿಸಿದ್ದೇವೆ.

CAR FOR SALE

1960 Model Standard ten excellent condition, owner driven. Apply in person to

Dr. Mohandas Pai K.,
B. Sc., M B, B. S.,
Udipi.

ಅಸ್ಸಾಂ ರಾಜ್ಯದಲ್ಲಿ

ಕೈಮಗ್ಗದ ಅಭಿವೃದ್ಧಿ ಯೋಜನೆಗಳು

ಅಸ್ಸಾಂನಲ್ಲಿ ಕೈಮಗ್ಗದ ಉದ್ಯಮವು ಅತ್ಯಂತ ಮುಖ್ಯವಾದ ಗೃಹೋದ್ಯಮಗಳಲ್ಲೊಂದಾಗಿದ್ದು, ಅಸ್ಸಾಂ ಜನತೆಯ ಆರ್ಥಿಕ ಜೀವನದಲ್ಲಿ ಒಂದು ಹೆಮ್ಮೆಯ ಸ್ಥಾನವನ್ನು ಆಕ್ರಮಿಸಿದೆ. ಈ ಉದ್ಯಮವು ಜನತೆಯ ಆರ್ಥಿಕ ವ್ಯವಸ್ಥೆಗೆ ನೆರವಾಗಿರುವುದೇ ಅಲ್ಲದೆ, ಅಸ್ಸಾಂ ಜನತೆಯ ಸಾಂಸ್ಕೃತಿಕ ಪರಂಪರೆಗೆ ಗಮನಾರ್ಹವಾದ ಕಾಣಿಕೆಯನ್ನಿತ್ತಿದೆ.

ರಾಜ್ಯದ ನೇಕಾರರಲ್ಲಿ ಬಹುಮಂದಿ ಮಹಿಳೆಯರೇ ಆಗಿರುವರು. ವರ್ಣ ಸಂಯೋಜನೆ, ನಮೂನೆಗಳು, ನೇಯ್ಗೆಯ ರಚನೆ ಮತ್ತು ಬಾಳಿಕೆಯಲ್ಲಿ ಕೈಮಗ್ಗ ಉದ್ಯಮವು ಅಸ್ಸಾಮಿ ನೇಕಾರನ ಕಲಾನೈಪುಣ್ಯವನ್ನು ವಿಕಾಸಗೊಳಿಸುವುದು.

ಆಕೆಯು ನೂಲಿನಿಂದ ನೇಯುವುದು ಸಂವೇದನೆ ಹಾಗೂ ಅನುಕಂಪದೊಡಗೂಡಿದ್ದು, ಆಕೆಯು ಒಂದು ಕಲಾ ಸೃಷ್ಟಿಯೇ ಆಗಿರುತ್ತದೆ. ನೇಯ್ಗೆಯ ಕೆಲಸದಲ್ಲಿ, ತನಗೆ ಅಥವಾ ಇತರರಿಗೆ ಬಟ್ಟೆಯನ್ನೊದಗಿಸುವುದಕ್ಕಿಂತ ಹೆಚ್ಚಾಗಿ, ಆಕೆಯು ಸೊಬಗಿನ ಸೃಷ್ಟಿಗೆ ಹೆಚ್ಚು ಗಮನವೀಯುತ್ತಾಳೆ. ಆಕೆ ಮೊದಲಾರ್ವ ಕಲಾನಿಪುಣೆ, ಅನಂತರ, ತಂತ್ರಕೌಶಲಳು. ಈ ರೀತಿಯ ಕಲಾಭಿರುಚಿಗೆ, ಒಂದು ಬಾರಿ ಗಾಂಧೀಜಿಯವರು, "ಅಸ್ಸಾಮಿನ ಪ್ರತಿಯೊರ್ವ ಮಹಿಳೆಯೂ ಹುಟ್ಟು ನೇಕಾರಳೇ ಆಗಿರುವಳು. .... ಆಕೆಯು ಬಟ್ಟೆಯಲ್ಲಿ ಕಟ್ಟು ಕಥೆಯನ್ನೇ ನೇಯುವಳು", ಎಂದು ಹೇಳಿದ್ದರು.

ನಗರ ಪ್ರದೇಶ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ಕುಟುಂಬಗಳು ಮಗ್ಗಗಳನ್ನು ಹೊಂದಿವೆ. ಆದರಿಂದಾಗಿ, ಮಹಿಳೆಯರು ನೇಯ್ಗೆಯ ಕಲೆಯನ್ನರಿಯಲು ಆಸಕ್ತರಾಗಿರುವರು. ಭಾರತದ ರಾಜ್ಯಗಳಲ್ಲೆಲ್ಲಾ ಅಸ್ಸಾಂ ರಾಜ್ಯವು ಅತ್ಯಂತ ಹೆಚ್ಚಿನ ಸಂಖ್ಯೆಯ ಮಗ್ಗಗಳನ್ನು ಪಡೆದಿದೆ. ಅಸ್ಸಾಂನಲ್ಲಿ ದಾಖಲಾತಿ ಪಡೆದ ಮಗ್ಗಗಳ ಸಂಖ್ಯೆ ೫ ಲಕ್ಷಕ್ಕೂ ಕೊಂಚ ಹೆಚ್ಚಾಗಿದ್ದರೂ ಸಹ, ಅಲ್ಲಿ ಸುಮಾರು ೧೦ ಲಕ್ಷ ಮಗ್ಗಗಳಿರಬಹುದೆಂದು ಅಂದಾಜು ಮಾಡಲಾಗಿದೆ.

ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಈ ಉದ್ಯಮವು ಪ್ರಾಚೀನ ಪದ್ಧತಿಯಲ್ಲೇ ಉಳಿದಿದ್ದು, ಸರ್ಕಾರದಿಂದ ಹೆಚ್ಚು ಉತ್ತೇಜನ ಪಡೆಯಲಿಲ್ಲ. ನೇಕಾರರು ಸರಿಯಾದ ಆರ್ಥಿಕತೆ ಹಾಗೂ ವ್ಯವಸ್ಥಾ ವಿಧಾನವಿಲ್ಲದ ಸ್ಥಿತಿಯಲ್ಲಿ, ಅತ್ಯಲ್ಪ ಸಂಪನ್ಮೂಲಗಳಿಂದಲೇ ತಮ್ಮ ಕೆಲಸವನ್ನು ನಿರ್ವಹಿಸಬೇಕಾಗಿತ್ತು. ಇದರಿಂದಾಗಿ ಕಚ್ಚಾ ವಸ್ತುಗಳನ್ನು ಪಡೆಯುವುದು, ಸುಧಾರಿಸಿದ ಉಪಕರಣಗಳು ಹಾಗೂ ಸಿದ್ಧಗೊಂಡ ವಸ್ತುಗಳ ಮಾರಾಟ ವ್ಯವಸ್ಥೆ ಈ ವಿಚಾರಗಳಲ್ಲಿ ಅವರು ತೊಂದರೆಗೊಳಗಾಗಿದ್ದರು. ಇದೆಲ್ಲಕ್ಕೂ ಮಿಗಿಲಾಗಿ, ಹತ್ತಿ ಗಿರಣಿಗಳಿಂದ ಉತ್ಪನ್ನವಾದ ಕಡಿಮೆ ಬೆಲೆಯ ವಸ್ತ್ರಗಳೊಡನೆ ಸ್ಪರ್ಧಿಸಲು ಕೈಮಗ್ಗದ ಉದ್ಯಮವು ಅಸಹಾಯಕತೆಯಿಂದ ಕೂಡಿತ್ತು. ಜನತೆಯ ಆರ್ಥಿಕ ಮಟ್ಟವನ್ನು ಸುಧಾರಿಸುವುದೇ ಈಗ ನಮ್ಮ ಭಾರತ ಸರ್ಕಾರದ ಮುಖ್ಯ ಧ್ಯೇಯವಾಗಿರುವುದರಿಂದ, ಹಾಗೂ ಗೃಹೋದ್ಯಮವು ಈ ದಿಶೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುವುದರಿಂದ, ಕೈಮಗ್ಗದ ಉದ್ಯಮವು ನಮ್ಮ ಸರ್ಕಾರದ ಗಮನವನ್ನು ಸೆಳೆದಿದೆ.

ಅಸ್ಸಾಂನಲ್ಲಿ ಕಳೆದ ಕೆಲವು ವರ್ಷಗಳಿಂದ ಅಖಿಲ ಭಾರತ ಕೈಮಗ್ಗ ಮಂಡಳಿಯು ಶಿಫಾರಸು ಮಾಡಿದ ಕೆಲವು ಆರಿಸಿದ ಕಾರ್ಯ ಯೋಜನೆಗಳು ಆಚರಣೆಯಲ್ಲಿವೆ. ಅಸ್ಸಾಮಿನ ನೇಕಾರರು ಈ ಎಲ್ಲಾ ಕಾರ್ಯಯೋಜನೆಗಳ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯವಾಗಿಲ್ಲ. ಈ ಹಿಂದೆ ಗಳಿಸಿದ ಸಾಧನೆ ಅತ್ಯಲ್ಪವಾಗಿದ್ದರೂ ಅನು ಉತ್ತೇಜನದಾಯಕವಾಗಿದ್ದು, ರಾಜ್ಯದಲ್ಲಿ ಈ ಉದ್ಯಮದ ಅಭಿವೃದ್ಧಿಗಾಗಿ ತೀವ್ರ ರೀತಿಯ ಚಳವಳಿಯನ್ನು ಕೈಗೊಳ್ಳಲು ಅವಕಾಶ ಮಾಡಿಕೊಟ್ಟಂತಾಗಿದೆ.

ನೇಕಾರರನ್ನು ಸಹಕಾರೀ ವ್ಯಾಪ್ತಿಗೆ ಒಳಪಡಿಸಲು ಕೈಮಗ್ಗ ಮಂಡಲಿಯು ಒದಗಿಸಿದ ಹಣಕಾಸಿನ ನೆರವಿನ ಫಲವಾಗಿ, ಅಸ್ಸಾಂನಲ್ಲಿ ಈಗ ಒಟ್ಟು ೧೩,೦೦೦ ನೇಕಾರರ ಸಂಘಗಳಿರುವುವು. ಈ ಸಂಘಗಳ ಸದಸ್ಯರ ಸಂಖ್ಯೆ ೪೫,೦೦೦. ಮಗ್ಗಗಳ ಸಂಖ್ಯೆ ಸಹ ೫ ಲಕ್ಷಕ್ಕೂ ಕೊಂಚ ಹೆಚ್ಚಾಗಿರುವುದು. ಆ ರಾಜ್ಯದಲ್ಲಿ ಕೈಗೊಂಡ ಪ್ರಚಾರ ಹಾಗೂ ಪತ್ರಿಕಾ ಪ್ರಕಟಣೆಗಳಂತಹ ಮಾರಾಟದ ಅಭಿವೃದ್ಧಿ ಚಟುವಟಿಕೆಗಳಿಂದ ಕೈಮಗ್ಗ ಬಟ್ಟೆಗಳಿಗೆ ಬೇಡಿಕೆ ಹೆಚ್ಚಿದೆ. ಈ ಬೇಡಿಕೆಯು ನೇಕಾರರಿಗೆ ಲಾಭದಾಯಕವಾಗಿರುವುದೇ ಅಲ್ಲದೆ, ಈ ಉದ್ಯಮದಲ್ಲಿ ನಿರತರಾಗಿರುವವರಿಗೂ ನೆರವಾಗಿದೆ. ತತ್ಫಲವಾಗಿ, ಸಹಕಾರೀ ಸಂಘಗಳು ತಮ್ಮ ನೇಕಾರರಿಗೆ ಪೂರ್ಣ ವೇಳೆಯ ಕೆಲಸವನ್ನು ಒದಗಿಸುತಿದ್ದು, ನೇಕಾರರ ವರಮಾನವು ಗಮನಾರ್ಹವಾಗಿ ಹೆಚ್ಚಿದೆ.

ಉತ್ಪಾದನೆಯನ್ನು ಹೆಚ್ಚಿಸಲು, ಬಟ್ಟೆಗಳ ನಮೂನೆ ಮತ್ತು ಗುಣಾಂಶವನ್ನು ಸುಧಾರಿಸಲು ಸರ್ಕಾರವು ಅನೇಕ ಕ್ರಮಗಳನ್ನು ಕೈಗೊಂಡಿದೆ. ತತ್ಫಲವಾಗಿ, ಗಮನಾರ್ಹವಾದ ಪ್ರಗತಿಯನ್ನು ಸಾಧಿಸಲಾಗಿದೆ.

ಕೈಮಗ್ಗದ ಅಭಿವೃದ್ಧಿಯು ಸುಧಾರಿತ ಸಾಧನಗಳನ್ನು ಆಚರಣೆಗೆ ತರುವುದರಿಂದಲೇ ಅಲ್ಲದೆ, ಈ ವಿಧಾನಗಳ ಬಳಕೆಯಲ್ಲಿ ನೇಕಾರರಿಗೆ ಸೂಕ್ತವಾದ ತರಬೇತಿ ಒದಗಿಸುವುದನ್ನೂ ಅವಲಂಬಿಸಿದೆ. ಅಸ್ಸಾಂ ರಾಜ್ಯ ಸರ್ಕಾರದ ರೇಷ್ಮೆ ಬೇಸಾಯ ಹಾಗೂ ನೇಯ್ಗೆ ಇಲಾಖೆಯು ಈ ಬಗ್ಗೆ ತರಬೇತಿಯನ್ನೀಯುತ್ತಿದೆ. ಅನೇಕ ಮಂದಿ ನೇಕಾರರು ಈ ತರಬೇತಿಯ ಸೌಲಭ್ಯ ಪಡೆದಿದ್ದಾರೆ.

ಹೆಚ್ಚು ಶ್ರಮವಿಲ್ಲದೆ ಹಾಗೂ ಕಡಿಮೆ ಕಾಲದಲ್ಲಿ ಹೆಚ್ಚು ಉತ್ಪಾದನೆಯನ್ನು ಸಾಧಿಸಲು ವಿದ್ಯುತ್ ಚಾಲಿತ ಮಗ್ಗಗಳ ಸ್ಥಾಪನೆಯ ಸಂಬಂಧ ಕಾರ್ಯಯೋಜನೆಯೊಂದನ್ನು ಜಾರಿಗೆ ತರಲಾಯಿತು. ವಿದ್ಯುತ್ ಚಾಲಿತ ಮಗ್ಗಗಳಲ್ಲಿ ನೇಯಲು ನೇಕಾರರಿಗೆ ತರಬೇತಿ ನೀಡುವುದಕ್ಕಾಗಿ ಗೌಹತಿಯ ಕೈಗಾರಿಕಾ ಎಸ್ಟೇಟ್‌ನಲ್ಲಿ ತರಬೇತಿ ಮತ್ತು ಪ್ರತ್ಯಕ್ಷ ಪ್ರದರ್ಶನ ಕೇಂದ್ರವೊಂದನ್ನು ತೆರೆಯಲಾಯಿತು. ಅನೇಕ ಮಂದಿ ನೇಕಾರರು ಈ ಕೇಂದ್ರದಲ್ಲಿ ತರಬೇತಿ ಪಡೆದರು.

ಕೈಮಗ್ಗ ವಸ್ತ್ರಗಳಲ್ಲಿ ಮೂಲನಮೂನೆಗಳನ್ನು ತಯಾರಿಸಿದ ನೇಕಾರರಿಗೆ ಬಹುಮಾನಗಳನ್ನೀಯುವ ಕಾರ್ಯಯೋಜನೆಯೊಂದನ್ನು ಜಾರಿಗೆ ತರಲಾಯಿತು. ಇದು, ನೇಕಾರರು ಕೈಮಗ್ಗದ ಉದ್ಯಮದಲ್ಲಿ ಹೊಸ ನಮೂನೆಗಳು ಮತ್ತು ವಿಧಾನಗಳನ್ನು ಬಳಕೆಗೆ ತರಲು ಉತ್ತೇಜನವಿತ್ತು ಅವರಲ್ಲಿ ಸ್ಪರ್ಧಾ ಮನೋಭಾವ ಮೂಡುವಂತೆ ಮಾಡಿದೆ. ಕಳೆದ ವರ್ಷ ಅನೇಕ ಸಭೆಗಳನ್ನು ನಡೆಸಿ ನೇಕಾರರಿಗೆ ಬಹುಮಾನಗಳನ್ನು ಹಂಚಲಾಯಿತು.

ಅಲ್ಲಿ ಮಾದರಿ ಕೈಮಗ್ಗ ವಸ್ತ್ರಗಳನ್ನು ಕೊಳ್ಳುವ ಕಾರ್ಯಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆ ಪ್ರಕಾರ ಮಾದರಿ ವಸ್ತ್ರಗಳನ್ನು ಕೊಂಡು, ಅಸ್ಸಾಂ ಕೈಮಗ್ಗ ವಸ್ತ್ರಗಳ ಬಗ್ಗೆ ಆಸಕ್ತಿ ಕೆರಳಿಸಲು ರಾಜ್ಯದೊಳಗೆ ಹಾಗೂ ರಾಜ್ಯದ ಹೊರಗೆ ಬಳಕೆದಾರರಿಗೆ ಮಾರಾಟ ಮಾಡಲಾಯಿತು. ಈ ಯೋಜನೆಯ ಆಚರಣೆಯಿಂದಾಗಿ ಬೇಡಿಕೆ ಗಮನಾರ್ಹವಾಗಿ ಹೆಚ್ಚಿತು.

ಕೈಮಗ್ಗದ ವಸ್ತ್ರಗಳಿಗೆ ಹಾಲಿ ಇರುವ ಮಾರುಕಟ್ಟೆಗಳನ್ನು ವಿಸ್ತರಿಸುವ ಸಂಬಂಧ ಕ್ರಮಗಳನ್ನು ಕೈಗೊಂಡ ಹಾಗೆಲ್ಲಾ ಕೈಮಗ್ಗದ ವಸ್ತ್ರಗಳ ಉತ್ಪಾದನೆ ಹಾಗೂ ಅವುಗಳ ಗುಣಾಂಶವನ್ನು ಹೆಚ್ಚಿಸುವ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಈಗಾಗಲೇ ಅನೇಕ ಕೈಮಗ್ಗದ ವಸ್ತ್ರಗಳ ಮಾರಾಟದ ಎಂಪೋರಿಯಂಗಳು ಮತ್ತು ಡಿಪೋಗಳು ಇರುವುವು. ಹೆಚ್ಚು ಹೆಚ್ಚು ಮಾರಾಟವನ್ನು ಸಾಧಿಸಲು ಅಸ್ಸಾಂನಲ್ಲಿ ಮತ್ತೆ ನಾಲ್ಕು ಮಾರಾಟದ ಡಿಪೋಗಳನ್ನು ತೆರೆಯುವ ನಿರೀಕ್ಷೆಯಿದೆ

ನೇಕಾರರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸದೆ, ಉದ್ಯಮದ ಪ್ರಗತಿಯನ್ನು ಸಾಧಿಸಲಾಗುವುದಿಲ್ಲವೆಂಬ ಅಂಶವನ್ನು ಸರ್ಕಾರವು ಮನಗಂಡಿದೆ. ನೇಕಾರರು ಹಿತಕರವಾದ ಹಾಗೂ ಆರೋಗ್ಯಕರವಾದ ವಾತಾವರಣದಲ್ಲಿ ಜೀವಿಸಬೇಕು ಮತ್ತು ಅವರಿಗೆ ಕೆಲಸ ಮಾಡಲು ಒಳ್ಳೆಯ ಸ್ಥಳಾವಕಾಶವಿರಬೇಕು. ಈ ವಿಷಯದ ಪ್ರಾಮುಖ್ಯವನ್ನು ಮನಗಂಡು ಸರ್ಕಾರದವರು ಅಸ್ಸಾಂನಲ್ಲಿ ನೇಕಾರರಿಗಾಗಿ ವಸತಿ ಕಾಲೋನಿಗಳ ಕಾರ್ಯಯೋಜನೆಯೊಂದನ್ನು ಕೈಗೊಳ್ಳಲು ನಿರ್ಧರಿಸಿರುವರು. ಈ ಕಾರ್ಯ ಯೋಜನೆಯು ಚರಂಡಿ ವ್ಯವಸ್ಥೆ, ನೀರು, ಆಟದ ಮೈದಾನ ಇತ್ಯಾದಿ ಸೌಲಭ್ಯಗಳನ್ನು ನೇಕಾರರಿಗೆ ಒದಗಿಸುವುದು ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳಿಂದ ತಯಾರಾದ ವಸ್ತ್ರಗಳು ಹೆಣಿಕೆ ಹಾಗೂ ಅಳತೆಯಲ್ಲಿ ಒಂದೇ ಸಮವಾಗಿರುವುದಿಲ್ಲ. ಆದರಿಂದಾಗಿ ಅವುಗಳು ಹೆಚ್ಚಾಗಿ ಹಾಗೂ ಶೀಘ್ರವಾಗಿ ಮಾರಾಟವಾಗುವುದಿಲ್ಲ. ಆದಕ್ಕಾಗಿಯೇ ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳಿಂದ ತಯಾರಾದ ವಸ್ತ್ರಗಳಿಗೆ ಒಳ್ಳೆಯ ಬೆಲೆಗಳನ್ನು ಪಡೆಯುವ ಉದ್ದೇಶದಿಂದ, ಅವುಗಳ ಸಂಸ್ಕರಣಕ್ಕಾಗಿ ಗೌಹಾತಿಯಲ್ಲಿ ಒಂದು ಬಟ್ಟೆನಯ ಮಾಡುವ ಯಂತ್ರವನ್ನು ಸ್ಥಾಪಿಸುವ ನಿರೀಕ್ಷೆಯಿದೆ. ಹೀಗೆ ಬಟ್ಟೆಗಳನ್ನು ಯಂತ್ರದಿಂದ ಸಂಸ್ಕರಿಸುವುದರಿಂದ ಅವುಗಳಿಗೆ ಉತ್ತಮ ಬೆಲೆಗಳು ದೊರೆಯುವ ನಿರೀಕ್ಷೆಯಿದೆ.

ಅಸ್ಸಾಂನಲ್ಲಿ ಈ ಉದ್ಯಮದ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯ ಯೋಜನೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಈ ಕಾರ್ಯ ಯೋಜನೆಗಳನ್ನು ಕೈಗೊಂಡುದುದರ ಫಲವಾಗಿ, ಅವುಗಳ ಸೌಲಭ್ಯಗಳನ್ನು ಪಡೆದುಕೊಳ್ಳಲು ನಮ್ಮ ನೇಕಾರರು ಮುಂದೆ ಬಂದಿರುವರು. ತೃತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ವೇಳೆಗೆ, ಅಸ್ಸಾಂ ರಾಜ್ಯದಲ್ಲಿ ಕೈಮಗ್ಗದ ಉದ್ಯಮವು ಗಮನಾರ್ಹವಾದ ಪ್ರಗತಿಯನ್ನು ಸಾಧಿಸುವ ನಿರೀಕ್ಷೆಯಿದೆ, ಇದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಕೈಮಗ್ಗಗಳ ಉದ್ಯಮ ಬೆಳೆದು ಬರಬೇಕಾಗಿದೆ.

— —

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳು ಹಿಸುವವರು ಎರಡೆರಡು ಪ್ರತಿಗಳನ್ನು ಕಳು ಹಿಸಬೇಕಾಗಿ ವಿನಂತಿ —ಸಂ. ನ]

ಚಿತ್ರಾಂಗದೆ: ಮೂಲ: ಡಾ| ರವೀಂದ್ರನಾಥ ಟಾಗೋರ ಅನುವಾದ: ಶ್ರೀ ಕೆ. ಕೆ. ಶೆಟ್ಟಿ, ಎಂ ಎಲ್. ಸಿ ಪ್ರಕಾಶಕರು: ನವಯುಗ ಎಂಟರ್ ಪ್ರೈಸ್, ಲಿಮಿಟೆಡ್, ಉಡುಪಿ. ಪುಟಗಳು: ೩೬. ಬೆಲೆ. ೬೦ ನಯೇ ಪೈಸೆ.

ವಿಶ್ವಕವಿ ಟಾಗೋರರ ಚಿತ್ರಾ ನಾಟಕವು ಜನಪ್ರಿಯವಾಗಿದೆ. ಹೆಂಗಸಿನ ಬದುಕಿನ ಉದ್ದೇಶ ಕೇವಲ ಭೋಗ ಸುಖ ಸವಿಯುವುದು ಮಾತ್ರ ಸಾಲದು. ಆಕೆಯು ಉತ್ತಮ ಮಾತೆಯಾಗುವಂತೆ ಪ್ರಯತ್ನಿಸುವುದೂ ಆತ್ಯಗತ್ಯ ಮತ್ತು ಈ ಎರಡನೆಯ ಉದ್ದೇಶವೇ ವಿಶ್ವದಲ್ಲಿ ಆಕೆಯ ಗೌರವಾದರಗಳಿಗೆ ಕಾರಣವಾಗುತ್ತದೆ. ಕುರೂಪಿಯಾದ ಚಿತ್ರಾಂಗದೆ ಕ್ಷತ್ರಿಯ ವೀರ ಅರ್ಜುನನನ್ನು ಕಂಡು ಮದನನ ವರ ಗಳಿಸಿ, ಅರ್ಜುನನ ಮೆಚ್ಚುಗೆಗೆ ಕಾರಣಳಾಗಿ ಪುತ್ರರತ್ನವನ್ನು ಪಡೆಯಲು ಶಕ್ತಳಾದ ವೃತ್ತಾಂತವನ್ನು ಈ ನಾಟಕ ನಮಗೆ ಮುಂದಟ್ಟು ಮಾಡುತ್ತದೆ. ನಾರೀ ಜೀವನದ ಆದರ್ಶವನ್ನು ಪ್ರತಿಬಿಂಬಿಸುವ 'ಚಿತ್ರಾ' ನಾಟಕದ ಅನುವಾದ 'ಚಿತ್ರಾಂಗದೆ'ಯು ಮೂಲದ ಗುಣ, ಭಾವಗಳನ್ನು ಉಳಿಸಿಕೊಂಡೇ ಕನ್ನಡಕ್ಕೆ ಅನುವಾದವಾಗಿದೆ. ಶ್ರೀ ಟಿ. ಎ. ಪೈಗಳು ಮನ್ನುಡಿಯಲ್ಲಿ ಹಾರೈಸಿದಂತೆ ಈ ನಾಟಕನ್ನು ಕನ್ನಡಿಗರು ಆದರಾಭಿಮಾನಗಳಿಂದ ಸ್ವಾಗತಿಸಿ ರವೀಂದ್ರ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುವುದು ಅವಶ್ಯ.

ತಾರಾಬಲ: ಲೇಖಕರು ಶ್ರೀ ಚಂದ್ರಶೇಖರ ಗ. ಹುರುಳಿ. ಪ್ರಕಾಶಕರು: ಇಂದೂ ಪ್ರಕಾಶನ, ಧಾರವಾಡ. ಪುಟಗಳು: ೮೩ ಬೆಲೆ: ರೂ ೧-೦೦

'ಕರ್ನಾಟಕ ವೈಭವ', 'ನವಯುಗ' ಮತ್ತು ಜಯ ಕರ್ನಾಟಕ'ಗಳಲ್ಲಿ ಅಚ್ಚಾಗಿರುವ ತಮ್ಮ ಎಂಟು ಕಥೆಗಳನ್ನು ಶ್ರೀ ಹುರುಳಿಯವರು 'ತಾರಾಬಲ'ವೆಂಬ ಸಂಕಲನದಲ್ಲಿ ಕೋದಿದ್ದಾರೆ. 'ನೀಲಾಕಾಶದ ಬುಟ್ಟಿ' ಅಕ್ಕ ತಮ್ಮ, 'ತಾರಾಬಲ, 'ಭಾಗ್ಯಯೊರದು!' ಎಲ್ಲವೂಗೇಣು ಹೊಟ್ಟೆಗಾಗಿ, 'ಡ್ರಾಮಾ ಬಿಟ್ಟು ಹೋದಳು', 'ಇಂದೂವಿನ ಕಣ್ಣೀರು, 'ಅಮರ ಮಧುರ ಪ್ರೇಮವಿದು' ಎಂಬಿವೇ ಈ ಕಥೆಗಳು.

ಎಲ್ಲ ಕಥೆಗಳ ನಾಯಕ-ನಾಯಿಕೆಯರು ಸಾಮಾನ್ಯವಾಗಿ ಶೇಖರ—ಇಂದೂವೆಂದೇ ಇರುವುದರಿಂದ ಕಥೆಗಳನ್ನು ಓದುವಾಗ ಒಂದೇ 'ಇಂದೂ'ವನ್ನು ಕಂಡ ಒಬ್ಬನೇ ಶೇಖರನ ವಿವಿಧ ಭಾವ ವ್ಯಂಜಕ ಚಿತ್ರಗಳಿವು ಎಂಬುದರ ಮನವರಿಕೆಯಾಗುವುದು. ಕಥೆಯ ತಂತ್ರದಲ್ಲಾಗಲೀ ವಸ್ತುವಿನಲ್ಲಾಗಲೀ ವೈಶಿಷ್ಟ್ಯವು ದೃಗ್ಗೋಚರವಾದಂತಿಲ್ಲವಾದರೂ ಲೇಖಕರು ಒಂದೇ ವಸ್ತುವನ್ನು ವಿವಿಧ ದೃಷ್ಟಿಕೋಣಗಳಿಂದ ತೂಗಿನೋಡುವ ಪ್ರಯತ್ನ ಮಾಡಿದ್ದಾರೆ; ಈ ಪ್ರಯತ್ನ ಹಸನಾಗಿ ಸಾಗಿದೆ. ತರುಣ ಲೇಖಕರಾದ ಹುರಳಿಯವರಿನ್ನೂ ೨೧ ವರ್ಷ ಪ್ರಾಯದವರು. ಅನುಭವ ಪಕ್ವವಾಗುತ್ತ ಬಂದಂತೆ ಅವರು ಉತ್ತಮ ಕಥೆಗಳನ್ನು ಬರೆಯಬಲ್ಲರು ಎಂಬುದಕ್ಕೆ 'ತಾರಾಬಲ'ವೊಂದು ನಿದರ್ಶನ. ಶ್ರೀ ಜಿ. ಕೆ ಮೂರ್ತಿಯವರು ಚಿತ್ರಿಸಿದ ಮುಖಚಿತ್ರ ಸುಂದರವಿದ್ದರೂ ಪುಸ್ತಕದ ಮುದ್ರಣದತ್ತ ಹೆಚ್ಚಿನ ಗಮನ ಹರಿಸಬೇಕಿತ್ತೆನಿಸುತ್ತದೆ.

Memoirs of Dr U. Sunder Rama Pai – Published by Sri N. V. Kamath, advocate, Udipi.

ಉಡುಪಿಯ ಸುಪ್ರಸಿದ್ಧ ಡಾಕ್ಟರರೂ ಸಮಾಜ ಸೇವಾಕಾಂಕ್ಷಿಗಳೂ ಆಗಿದ್ದ ಡಾ. ಸುಂದರರಾಮ ಪೈಯವರ ಸಂಸ್ಮರಣಾ ಲೇಖಗಳ ಸಂಗ್ರಹವಿದು. ಡಾ. ಪೈಯವರ ನಿಕಟ ಸಂಪರ್ಕದಲ್ಲಿದ್ದ ಮಹನೀಯರನೇಕರು ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ತಮ್ಮ ಸಂಸ್ಮರಣೆಗಳನ್ನು ಇದರಲ್ಲಿ ಬರೆದಿದ್ದಾರೆ. ಧರ್ಮಾರ್ಥವಾಗಿ ವಿತರಣೆ ಮಾಡುವ ಸಲುವಾಗಿಯೇ ಈ ನೆನಪೊತ್ತಿಗೆ ಪ್ರಕಟವಾಗಿದೆ, ಉಡುಪಿಯಲ್ಲಿ ಡಾ.ಪೈಯವರ ಸ್ಮಾರಕವಾಗಿ ಒಂದು ಬಯಲುರಂಗ ಭೂಮಿಯನ್ನು ಕಟ್ಟಿಸಲಾಗಿದ್ದು ಅದರ ಉನ್ನತಿಗಾಗಿ ಸಹಾಯಧನವನ್ನು ಕಳಿಸಬಯಸುವವರು ಪ್ರಕಾಶಕರಿಗೆ ಮುಟ್ಟಿಸಬಹುದು.

ಚೇತನಾ:— ಹಂಗಾರಕಟ್ಟೆಯ ಕರ್ನಾಟಕ ಸಂಘದವರು ಶಾ. ಶಕ ೧೮೮೩ರ ವಿದ್ಯಾದಶಮಿಯಂದು ಪ್ರಕಟಿಸಿದ ನಾಡಹಬ್ಬದ ಈ ನೆನೆಪೊತ್ತಿಗೆಯನ್ನು ಹೃತ್ಪೂರ್ವಕ ಸ್ವಾಗತಿಸುತ್ತೇವೆ ವಿದ್ವಾಂಸರಾದ ಬರೆಹಗಾರರಾದ ವಿಚಾರಪೂರ್ಣ ಕೃತಿಗಳಿಂದ ಕೂಡಿದ 'ಚೇತನಾ' ಕನ್ನಡಿಗರನ್ನು ಜಡತ್ವದಿಂದ ತನ್ನೆಡೆಗೆ ಆಕರ್ಷಿಸಲು ಸಶಕ್ತವಿದೆ. ಸಂಘದ ಕಾರ್ಯಕಲಾಪ ಮತ್ತು ಚಟುವಟಿಕೆಗಳು ಪ್ರಶಂಸನೀಯವಿವೆ.

ಕನ್ನಡಿಗ—ಹುಬ್ಬಳ್ಳಿಯ ಶ್ರೀ ಎಚ್. ಎ. ವೇದಿಯವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ೨೧ ವರ್ಷ ಪ್ರಾಯದ 'ಕನ್ನಡಿಗ'ಗದ ದೀಪಾವಳಿ ಸಂಚಿಕೆಯು ನಮ್ಮ ಕೈಸೇರಿದೆ. ಡಾ| ಕರ್ಕಿ, ಸಿಂಪಿ ಲಿಂಗಣ್ಣನವರಂತಹ ಉದ್ದಾಮ ಲೇಖಕರ ಕೃತಿಗಳು ಇದರಲ್ಲಿದ್ದು ವಾಚನೀಯವಿವೆ.

— ಗೋರಾ.

ಅತ್ಯಂತ ದೊಡ್ಡ ಆಸಪುರ್ ನಗರದಲ್ಲಿರುವ ಶ್ರಮರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸೇರಿದ ಹಾರಂಗಳಲ್ಲಿ ಕಬ್ಬನ್ನು ಕತ್ತರಿಸುತ್ತಿರುವುದನ್ನು ಚಿತ್ರವು ತೋರಿಸುತ್ತದೆ.

ಮನಸ್ಸಿದ್ದಲ್ಲಿ ಮಹಾದೇವ

(೪ನೇ ಪುಟದಿಂದ)

ಕಲಾಪ್ರದರ್ಶನವು ತುಟಿಪೂರ್ಣವಾಗಿತ್ತು; ಇದರಿಂದವನ ಮನ ನೊಂದಿತು. ಆದರೆ, ಅಂತ್ಯದಲ್ಲಿ ತಾನು ಮುರಿದ ಬಲಗೈಯಿಂದಲೇ ಕಲಾ ಚಮತ್ಕಾರಗಳನ್ನು ಮಾಡಿ ತೋರಿಸಬಲ್ಲೆನೆಂಬ ಆತ್ಮ ವಿಶ್ವಾಸವು ಅವನಲ್ಲಿ ಮೂಡಿತು

ಕೈಕಾಲುಗಳಿಂದ ವಂಚಿತನಾದ ಅಸಹಾಯಕನಿಗೆ ಈ ಸಮಯವು ಜೀವನದ ಅತೀವ ಪೀಡಾಮಯ ಇಲ್ಲವೇ ದುಃಖಮಯ ವೆನಿಸಿತ್ತು. ಆದರೆ, ಈತ ಎದೆಗೆಡಲಿಲ್ಲ; ತನ್ನ ಕಲೆಯಲ್ಲೇ ವ್ಯಾಮರೆತು ತಲ್ಲೀನನಾದನು. ಒಕ್ಕುಪ್ರಮಾನಂತರ ಮರಳಿ ಆತ ತನ್ನ ಕಾರ್ಯವನ್ನು ಹಿಂದಿನಂತೆಯೇ ಮಾಡಿ ಪ್ರದರ್ಶಿಸಲು ಸಮರ್ಥನಾದನು.

ಹಿಂದೊಂದು ದಿನ ತನ್ನ ಪ್ರಶಂಸೆ ಬರೆದಿದ್ದ ಹಳೆಯ ಪತ್ರಿಕೆಗಳನ್ನು ಓದಿದಾಗ ಅಳು ಬಂದಿತ್ತು. ಈಗ ಮರಳಿ ಅಂತೇ ಮಾಡಲು ಸಮರ್ಥನಾದುದರಿಂದ ಅವನ ಆನಂದಕ್ಕೆ ಪಾರವೇ ಉಳಿಯಲಿಲ್ಲ. ಪತ್ನಿಯ ಮರೆಯಲ್ಲಿ ಡಾಕ್ಟರರಿಗೆ ತಿಳಿವು ದೊರೆಯದಂತೆ ಅಭ್ಯಾಸ ಬೆಳೆಸುತ್ತ ಬಂದಂತೆ, ದೃಢ ಆತ್ಮವಿಶ್ವಾಸದ ಕಾರಣದಿಂದ, ಅವನು ಮೊದಲಿನಂತೆಯೇ ಜಾಣಾಕ್ಷ ಕಲಾ ಪ್ರದರ್ಶಕನಾದನು.

ಅವನೊಂದು ದಿನ ಸರ್ಕಸ್ಸಿನಲ್ಲಿ ತನ್ನ ಕಲಾ ಪ್ರದರ್ಶನ ಮಾಡುತಿದ್ದನು. ಯಾವ ಪೂರ್ವ ಸೂಚನೆಯಿಲ್ಲದೇನೇ ಆಕಸ್ಮಾತ್ತಾಗಿ, ತನ್ನ ಹಳೆಯ ಮತ್ತು ಕಠಿಣವಾದ ಕಲಾಪ್ರದರ್ಶನಕ್ಕೆ ತೊಡಗಿದನು ರಿಂಗ್ ಮಾಸ್ತರರು ಇದನ್ನು ಕಂಡ ತಕ್ಷಣವೇ ಸಂಗೀತವನ್ನು ತಡೆದು, ಉಚ್ಚಕಂಠದಿಂದ ಕೊಟೇಡೋವಿನ ಕಲೆಯ ಕುರಿತಾಗಿ ದರ್ಶಕರಿಗೆ ಹೇಳತೊಡಗಿದನು. ಆ ಕಲೆಯ ಹಿಂದಿರುವ ರೋಮಾಂಚಕ ಇತಿಹಾಸವನ್ನು ವಿವರಿಸಿದರು. ದರ್ಶಕರು ತುಮುಲ ಹರ್ಷಧ್ವನಿಯೊಡನೆ ಕೊಟೇಡೋವನ್ನು ಸ್ವಾಗತಿಸಿದರು; ಇದರಿಂದ ಕೊಟೇಡೋ ಮುಖ ಅಭಿಮಾನದಿಂದ ಅರಳಿತು.

ಆಸ್ಟ್ರೇಲಿಯಾದ ಓರ್ವ ನಟ ಒಂಟಿ ಬೆರಳಿನ ಆಧಾರದಲ್ಲಿ ನಿಂತು, ನೆಗೆಯಬಲ್ಲನೆಂಬ ವರ್ತಮಾನವನ್ನು ಕೊಟೇಡೋ ಸಮಾಚಾರ ಪತ್ರದಲ್ಲಿ ಓದಿದನು. ವಿಶ್ವದಲ್ಲಿ ಇಂತಹ ಅತ್ಯದ್ಭುತ ಚಮತ್ಕಾರ ಪ್ರದರ್ಶಕನು ಆತನೊಬ್ಬನೇ ಎಂದೂ ವಿವರಿಸಲಾಗಿತ್ತು. ತಾನೂ ಹೀಗೆ ಮಾಡಬೇಕೆಂಬ ಆಸೆ ಅವನಲ್ಲಿ ಮೂಡಿತು; ಧ್ಯೇಯ ಸಾಧನೆಯಲ್ಲಿ ಮರಳಿ ತನ್ಮಯನಾದನು.

ಎರಡು ವರ್ಷಗಳ ಅಚಲ ಪರಿಶ್ರಮದಿಂದ ಕೊಟೇಡೋವಿನ ಸಾಧನೆ ಜಯಪ್ರದವಾಯಿತು. ಒಂದು ದಿನ ಆತನ ಉಗುರೂ ತುಂಡಾಗಿ ಕೆಲದಿನ ಚಿಕಿತ್ಸೆ ಪಡೆಯಬೇಕಾಗಿ ಬಂತು; ಆದರೆ, ಅಂತಪರ್ಯಂತ ಈ ಚಮತ್ಕಾರಾಧ್ಯಯನವನ್ನು ಮುಂದುವರಿಸಿದನು. ಈಗ ಅವನು ಬಲಗೈಯ ತರ್ಜನಿಯ ಬಲದಿಂದ ಶರೀರವನ್ನು ಅಧಿರಿಸಬಲ್ಲವನೆನಿಸಿದ್ದನು. ಈ ಸಮಯದಲ್ಲಿ ಕೇವಲ ೩೦ ಸೆಕೆಂಡುಗಳವರೆಗೆ ಮಾತ್ರ ಹೀಗೆ ನಿಲಬಲ್ಲೆನೆಂಬ ಚಿಂತೆ ಆತನಿಗಿತ್ತು. ಆದರೂ ಮುಂದಕ್ಕೆ ಬಹು ಸಮಯದ ಸಾಧನೆಯಿಂದ ಇನ್ನೂ ಹೆಚ್ಚುಕಾಲ ತಾನು ನಿಂತುಕೊಳ್ಳಬಲ್ಲೆನೆಂಬ ಆಸೆ ಅವನಿಗಿದೆ. ಇಂದಿಗೂ ಕೊಟೇಡೋವಿನ ನಿರಂತರ ಅಭ್ಯಾಸ ನಡೆಯುತ್ತಿದೆ; ಆತನ ಜೀವಮಾನದಲ್ಲಿದು ನಾಲ್ಕನೆಯ ವಿಜಯ ಪ್ರಾಪ್ತಿ!

TO
GROW
WITH THE NATION
Advertise
in the 'NAVAYUGA'
Illustrated Kannada Weekly, Udipi,
Founded 41 years ago.

The vast reading public behind 'NAVAYUGA' makes it worthwhile to insert your advertisements regularly in the Navayuga and its Special supplements issued from time to time.

One such issue of 26th January, 1962 is the REPUBLIC DAY SUPPLEMENT supported by many reputed writers and columnists of Mysore.

For best advertisement value
advertise in
NAVAYUGA

ಸುಖಪ್ರಾಪ್ತಿಯ ಏಕಮಾತ್ರ ಸಾಧನ

ನಾವು ಶರೀರ ಮತ್ತು ಆತ್ಮಗಳಲ್ಲ ಯಾವುದಾದರೊಂದರ ಪ್ರೇರಣೆಯಂತೆ ನಡೆಯುತ್ತೇವೆಯೆಂದರೆ ಅದು ನಂಬತಕ್ಕ ಮಾತಲ್ಲ. ಹಾಗೆಯೇ ಧರ್ಮ ಮತ್ತು ದರ್ಶನಗಳಲ್ಲಿ ವರ್ಣಿತವಾಗಿರುವ ಆದರ್ಶ ತತ್ವಗಳನ್ನೇ ಕಣ್ಣು ಮುಚ್ಚಿ ಅನುಕರಣೆ ಮಾಡುವುದೂ ಸರಿಯಲ್ಲ. ಸ್ವಹಿತವನ್ನು ತಿಳಿದುಕೊಳ್ಳುವ ಸಹಜ ಶಕ್ತಿ, ಬುದ್ಧಿ ಬಲದಿಂದ ಸುಮಾರ್ಗದರ್ಶನ ಶಕ್ತಿಗಳು ಮಾನವನಲ್ಲಿವೆ. ಕೆಲವೊಂದು ಏರುಗಳನ್ನು ಮಾನವ ಏರಿದ್ದಾನೆ; ನಡುನಡುವೆ ಆತ ದಿಕ್ಕುಗೇಡಿಯೂ ಆಗಿದ್ದಾನೆ; ರಾಷ್ಟ್ರಕ್ಕೆ ರಾಷ್ಟ್ರವೇ ಪಾತಾಳಕ್ಕೆ ಕುಸಿದಿದೆ.

ಇಂದಿಗಾದರೂ ಯಾವುದೇ ಒಂದು ನೀತಿಯು ಸಫಲವಾಗಿಲ್ಲ. ಯೂನಾನ್ ಮತ್ತು ರೋಮ್‌ಗಳ ನಾಗರಿಕತೆಯಿರಲಿ, ಮಧ್ಯಯುಗದ ಸಂಸ್ಕೃತಿಯಿರಲಿ, ಉದಾರ ಪಂಥ, ಮಾರ್ಕ್ಸ್ ವಾದಗಳೇ ಇರಲಿ ಅಥವಾ ರಾಷ್ಟ್ರೀಯ ಸಮಾಜವಾದದ ಮಾತೇ ಇರಲಿ, ಎಲ್ಲವೂ ಅಸಫಲತೆಯನ್ನೇ ಗಳಿಸಿವೆ.

ದಾರ್ಶನಿಕ ಸಿದ್ಧಾಂತಗಳು ಯಾವಾಗಲೂ ಅರ್ಧಂಬರ್ಧವಾಗಿಯೇ ಉಳಿಯುತ್ತವೆ; ಮುಂದೆಯೂ ಹಾಗೆಯೇ ಉಳಿಯುವುವು. ಯಾಕೆಂದರೆ, ಅವು ನಿರ್ದಿಷ್ಟ ವ್ಯಕ್ತಿಯ ಪೂರ್ವಗ್ರಹ ಪ್ರೇರಿತವಿರುತ್ತವೆ; ಅವನ್ನೇ ಅಭಿವ್ಯಕ್ತಗೊಳಿಸುತ್ತವೆ. ಆಧ್ಯಾತ್ಮವಾದ ಮತ್ತು ಭೌತಿಕವಾದಗಳು ಒಂದಿನ್ನೊಂದರಂತೆ ಸುಳ್ಳು; ಆದುದರಿಂದಲೇ ಅವು ವಿಫಲಗೊಂಡುವು. ಓರ್ವ ವ್ಯಕ್ತಿಯು ಆಧ್ಯಾತ್ಮಿಕತೆ, ಬೌದ್ಧಿಕತೆ ಮತ್ತು ಭೌತಿಕತೆಗಳಲ್ಲಿ ಒಂದನ್ನು ಮಾತ್ರ ಅನುಸರಿಸಿದರೆ, ಆತನು ಸೋಲುವುದು ಖಂಡಿತ. ಪುರೋಹಿತ, ಶಿಕ್ಷಕ ಮತ್ತು ವೈದ್ಯರು ತಮ್ಮ ನಾಲ್ಕು ಪಾವಲಿಯ ಗಂಜಿ ಬೇಯಿಸಿದೊಡನೆಯೇ ಸಫಲ ಜೀವನವನ್ನು ಬದುಕುವುದು ಸಾಧ್ಯವಿಲ್ಲ. ತಮ್ಮ ಜ್ಞಾನ ಇಲ್ಲವೇ ಅನುಭವಗಳನ್ನು ಒಂದೆಡೆ ನೇರಿಸಿದರೆ ಮಾತ್ರ ಅವರು ಕೃತಕಾರ್ಯರಾಗುತ್ತಾರೆ.

ಸಫಲ ಜೀವನವನ್ನು ಬದುಕಬೇಕಾದರೆ, ವಿಘ್ನ ಪರಂಪರೆಗಳು ಮುಂದೆ ಬರುತ್ತವೆ. ಮಿಥ್ಯ, ಕಪಟ, ಅಸಹಾನುಭೂತಿ ಮತ್ತು ನಿಷ್ಕ್ರಿಯತೆಗಳು ಇದರ ಕಡು ಶತ್ರುಗಳು. ಆದಿಮ, ಅವಿಕಸಿತ ಜೀವಗಳಲ್ಲಿ ಇದ್ದ ನಿಷ್ಕ್ರಿಯತೆ ಮತ್ತು ನಿರ್ಬಲತೆಗಳಿಗೆ ಮೃತ್ಯು ಅಚಲ ದಂಡನೆಯೆನಿಸುತಿತ್ತು. ಮಿಥ್ಯ ಮತ್ತು ವಿಶ್ವಾಸ ಘಾತಗಳು ಮಾನವನ ಆವಿಷ್ಕಾರಗಳು. ಕವಿ ದಾಂತೆಯು ನರಕದ ವರ್ಣನೆಯನ್ನು ಮಾಡುತ್ತ ವಿಶ್ವಾಸಘಾತುಕರಿಗೆ ನರಕದ ಅತಿ ಆಳ ಭಾಗವನ್ನು ತೋರಿಸಿದ್ದಾನೆ. ಅಲ್ಲಿ ಅತಿಶೀತಲವಾದ ಕತ್ತಲೆಯ ಗುಹೆಗಳಿವೆ. ಈ ಗುಹೆಗಳಲ್ಲಿ ಸಾಕ್ಷಾತ್ ಸೈತಾನನು ಮನೆ ಮಾಡಿದ್ದಾನೆ.

ಉದಾರ ಪಂಥ ಮತ್ತು ಮಾರ್ಕ್ಸ್ ವಾದಗಳು ಮಾನವನ ಪರಿಪೂರ್ಣ ವಿಕಾಸಕ್ಕೆ ಆವಶ್ಯಕವಾದ ನಿಯಮಗಳನ್ನು ಮನ್ನಿಸುವುದಿಲ್ಲ. ಸಂಪತ್ತಿರುವ ವರ್ಗದವರಿಗಾಗಿ ಉದಾರ ಪಂಥದ ಸೃಷ್ಟಿಯಾಯಿತು. ಮಾನವನಿಗೆ ಏನಾದರೂ ದುಡಿದು ದಿನ ತೆಗೆಯುವಂತೆ ಮಾಡುವ ಆವೇಗ ಇದರಲ್ಲಿಲ್ಲ. ಇದರ ದರ್ಶನ ಸಂಕುಚಿತ. ಯಥಾರ್ಥವನ್ನಿದು ಅರ್ಧದಲ್ಲಿಯೇ ಕೈ ಬಿಡುತ್ತದೆ. ಆತ್ಮವನ್ನು ಅಸ್ತವ್ಯಸ್ತಗೊಳಿಸುತ್ತದೆ. ಇದರಿಂದಾಗಿಯೇ ಸೋತು ಹೋಗಿದೆ. ಉದಾರ ಪಂಥವು ಸಾಮ್ಯವಾದದ ಹಿರಿಯಣ್ಣನಷ್ಟೆ.

ಮಾರ್ಕ್ಸ್‌ವಾದದಲ್ಲಿ ಭಾವನಾ ತತ್ವವಿದೆ. ಉತ್ಪೀಡಿತರ ಉದ್ಧಾರದ ಆದರ್ಶವಿದೆ. ಆದರೆ, ಅದೊಂದು ದಾರ್ಶನಿಕ ಮಾನ್ಯತೆಯನ್ನು ಆಧರಿಸಿಕೊಂಡಿದೆ. ಇದಕ್ಕೆ ಸ್ವಂತ ಸಂತ-ಮಹಾತ್ಮರಿದ್ದಾರೆ. ತನ್ನ ಭೀಷಣ ಧರ್ಮ್ಯತೆಯೂ ಇದೆ. ಮಾರ್ಕ್ಸ್ ವಾದದಲ್ಲಿ ಭಾವಾವೇಶವು ಕ್ರೋಧವನ್ನು ಜನಿಸುವಂತೆ ಮಾಡುತ್ತದೆ. ಸಂಪತ್ತಿಶಾಲಿಗಳ ಎದುರು ಸಂಪತ್ತಿಹೀನರು, ಶ್ರೀಮಂತರ ಮೇಲೆ ದರಿದ್ರರು ಕತ್ತಿ ಹಿರಿಯುವಂತೆ ಮಾಡುವ ಶಕ್ತಿಯಿದೆ; ಅತ್ಯಾಚಾರವೆಸಗುವ ಮೂಢತೆಯಿದೆ.

ಈ ವಾದಗಳ ಅಸಫಲತೆ, ಧರ್ಮ ಮತ್ತು ದರ್ಶನಗಳ ಅಪರಿಪೂರ್ಣತೆಗಳಿಂದಾಗಿಯೇ ಪಾಶ್ಚಾತ್ಯ ಸಂಸ್ಕೃತಿಯ ವಿಘಟನವಾಗಿದೆ. ಜೀವನವನ್ನು ಸಫಲ ಮತ್ತು ವಿಜಯಿಗೊಳಿಸಬೇಕಾದರೆ, ಒಂದು ಕ್ರಾಂತಿ ಆವಶ್ಯವಿದೆ. ನಾವು ಪ್ರತಿ ಪ್ರಶ್ನೆಯನ್ನೂ ಪುನರ್ಪರಿಶೀಲಿಸಬೇಕು ಮತ್ತು ಆತ್ಮದ ಶಕ್ತಿಯ ಮೇಲೆ ಜೀವಂತ ಆಸ್ಥೆಯನ್ನಿಡಬೇಕು.

ಈ ಮಹಾ ಪ್ರಯತ್ನವನ್ನು ನಾವೇಕೆ ಕೈಗೊಳ್ಳಬಾರದು? ಈ ಭೂಲೋಕದಲ್ಲಿ ನಮ್ಮ ಅಸ್ತಿತ್ವವು ಜೀವನ ರೂಪಿಯಾಗಿರುವುದರಿಂದ, ನಮ್ಮೆಲ್ಲ ವೇಳೆಯನ್ನು ಬದುಕುವುದಕ್ಕೇನೇ ಕಳೆಯಬೇಕು.

ಜೀವನವನ್ನು ಸಫಲ-ಸಾರ್ಥಕಗೊಳಿಸಲು ಕೃತನಿಶ್ಚಯರಾದವರು ಸಂಘಟಿತರಾಗಬೇಕು. ಪ್ರಾಣಿಗಳಂತೆ ಸಹಜಪ್ರೇರಣೆಯ ಬಲದಿಂದಲೇ ನಾವು ಬದುಕಬಲ್ಲೆವೆಂಬ ಭ್ರಮೆಯನ್ನು ದೂರಗೊಳಿಸಬೇಕು. ಜೀವನ ಸಫಲಗೊಳಿಸಲು ಬುದ್ಧಿ ಮತ್ತು ಸಂಕಲ್ಪಶಕ್ತಿಗಳ ಪ್ರಯೋಗ ಅಗತ್ಯವೆಂಬುದು ಸತ್ಯ. ಬುದ್ಧಿಯು ಸಹಜ ಪ್ರೇರಣೆಯ ಸ್ಥಾನವನ್ನು ಪಡೆಯಲಾರದಾದುದರಿಂದ ನಾವು ಅದನ್ನು ಜೀವನದ ಮಾರ್ಗದರ್ಶಕನಾಗಿಸುವುದು ಆವಶ್ಯ.

ಮಾನವನು ಇದುವರೆಗೆ ಸಂಪಾದಿಸಿದ ಯಾವುದನ್ನಾದರೂ ದೂರವೆಸೆಯಬಾರದು. ಬುದ್ಧಿ ಮತ್ತು ಶ್ರದ್ಧೆ, ವಿಜ್ಞಾನ ಮತ್ತು ಧರ್ಮ, ಗಣಿತ ಹಾಗೂ ಪ್ರೇಮ ಎಲ್ಲವನ್ನೂ ಒಂದರೊಡನೊಂದನ್ನು ಉಪಯೋಗಿಸುವುದರಿಂದ, ಅವು ಬೇರೆ ಬೇರೆಯಾಗಿದ್ದು ಮಾಡಲಾಗದ ಕೆಲಸಗಳನ್ನು ಕೈಗೂಡಿಸಬಹುದು.

ಜೀವನ ಸಾಫಲ್ಯದ ಮಾರ್ಗ ರಾಜಮಾರ್ಗ. ಸುಖದ ಹಿಂದೋಡುವ ದಾರಿಯದಲ್ಲ. ತಿಳಿದೋ ತಿಳಿಯದೆಯೋ ತನ್ನ ಜೀವನವನ್ನು ಸುಖವನ್ನರಸುವುದರಲ್ಲಿಯೇ ಕಳೆಯುವಂತೆ ಮಾನವನ ನಿರ್ಮಾಣವಾಗಿದೆ. ಹೀಗಿದ್ದರೂ ಆತನ ಶೋಧನೆಯು ಇದುವರೆಗೂ ಸಿದ್ಧಿಪಡೆದಿಲ್ಲ. ಸುಖ ಮತ್ತು ಉಪಯೋಗಿತೆಯು ಪರುಷದಲ್ಲಿ ನೈತಿಕತೆಯು ಗೌಡಬಂಗಾಳಿಯೆಂದು ತೋರಪಟ್ಟಿದೆ.

ಪ್ರತ್ಯಕ್ಷನಾಗಿ ಸುಖಪ್ರಾಪ್ತವಾಗುವುದು ಸಂಭವ. ಸುಖವೆಂದು ನಾವು ಏನನ್ನು ತಿಳಿದುಕೊಂಡಿರುವೆವೋ ಅದು ಸುಖವೂ ಅಲ್ಲ ಮನುಷ್ಯನ ಕೈಗಳಿಗೆ ನಿಲುಕಬಹುದಾದಂತಹ ಸುಖವಿರುವುದು ಒಂದೇ ಒಂದು. ಶರೀರ ಮತ್ತು ಆತ್ಮಗಳ ಪೂರ್ಣತೆಯು ಮತ್ತು ನಿರ್ದೋಷ ಕ್ರಿಯಾಶೀಲತೆ ಹಾಗೂ ಸೃಷ್ಟಿ ವ್ಯವಸ್ಥೆಯಲ್ಲಿ ಮಾನವನ ನಿರ್ಧರಿತ ಭಾಗ—ಇವು ಮಾತ್ರ ಸುಖವನ್ನು ದೊರಕಿಸಿಕೊಡಬಲ್ಲುವು.

ಆದುದರಿಂದ ಜೀವನವನ್ನು ಅಧಿಕಾಧಿಕ ಪೂರ್ಣಗೊಳಿಸುವುದೇ ಸುಖ ಪ್ರಾಪ್ತಿಯ ಏಕ ಮಾತ್ರ ಉಪಾಯ. ಸುಖದ ಗುರಿಯನ್ನಿಟ್ಟು ಅದರ ಬೆನ್ನಟ್ಟುವುದು ವ್ಯರ್ಥಸಾಹಸ. ಸಮಗ್ರಜೀವನವು ಸಫಲಗೊಂಡಾಗ, ಸುಖವು ಉಪವಸ್ತುವಿನಂತೆ ಆನುಷಂಗಿಕವಾಗಿ ತಾನಾಗಿಯೇ ಪ್ರಾಪ್ತವಾಗುವುದು.

ಆದುದರಿಂದ, ನಾವು ಮೊತ್ತಮೊದಲು ನಮ್ಮನ್ನೇ ಸುಧಾರಿಸಲು ಪ್ರಾರಂಭಿಸೋಣ. ಏಕಿಲ್ಲವೆಂದರೂ ನಮ್ಮ ಸುಧಾರಣೆ ನಮ್ಮ ಕೈಯಲ್ಲಿದೆ. ಆಗ, ನಾವೆಲ್ಲರೂ ಒಂದೇ ದಾರಿಯಲ್ಲಿ ಪಥಿಕರಾಗುವೆವು. ಎಲ್ಲರ ಶಕ್ತಿ ಮತ್ತು ಎಲ್ಲರ ಸುಖದಲ್ಲಿ ಯೋಗದಾನ ಮಾಡಬಲ್ಲೆವು.

—(ಆಧಾರದಿಂದ)

ಪ್ರಧಾನಿ ನೆಹರು ದಕ್ಷಿಣ ಕೆಲಿಫೋರ್ನಿಯಾದ ವಿವಿಧ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವ ಭಾರತೀಯ ವಿದ್ಯಾರ್ಥಿಗಳೊಡನೆ ತಮ್ಮ ೭೩ನೆಯ ಜನ್ಮದಿನವನ್ನು ಆಚರಿಸಿದ ಸಂದರ್ಭದಲ್ಲಿ ತೆಗೆದ ಚಿತ್ರವಿದು.

ಆಸ್ಥಮಾ ರೋಗಿಗಳ ತಿಳುವಳಿಕೆಗೆ

ರಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕಬೂಟಿಯನ್ನು ತಾ. 20-1-62ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayurvedashram,
P. O. Chitrakot U. P.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

ಉಡ್ಪಿ ಡಿ. ಮು. ಕೋರ್ಟಿನಲ್ಲಿ
O. S. No. 324/61.

ಕೊರಗ ಶೆರೆಗಾರ —ವಾದಿ.
ಮತ್ತು
ಯಮುನಮ್ಮ ಕೂಡಾ —ಪ್ರತಿವಾದಿರು

ಇವರೊಳಗೆ

4ನೇ ಪ್ರತಿವಾದಿ ಶೀತಾರಾಮ ಮಧ್ಯಸ್ತ—ಉಪ್ಪೂರು ಪರಮೇಶ್ವರ ಮಧ್ಯಸ್ತರ ಮಗ, residing in Keshava Vilas Station Road, Hubli.

ಮೇಲ್ಕಂಡ ವ್ಯಾಜ್ಯದಲ್ಲಿ ಸದ್ರಿ ಪ್ರತಿವಾದಿಗೆ ಅಗತಕ್ಕ ವ್ಯಾಜ್ಯದ ನೋಟೀಸು ತಾರೀಕು 29-1-62ಕ್ಕೆ ಇಟ್ಟಿರುವದ್ರಿಂದ ಸದರಿ ಪ್ರತಿವಾದಿಯು ತನ್ನ ಆಕ್ಷೇಪ ಹೇಳವದನ್ನು ಆ ದಿನ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳ ತಕ್ಕದ್ದು.

P. Padmanabha Rao,
Vakil for Petitioner Plaintiff.
Udipi, Date, 6-1-1962.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಸತ್ತು ಬದುಕಿದವಳು

(೨ನೇ ಪುಟದಿಂದ)

ದಿನಗಳೆಂದಂತೆ ಆನಂದನ ಸಾನ್ನಿಧ್ಯದಲ್ಲಿ ಅವಳಿಗೆ ಸುಖವಾಗುತ್ತಿತ್ತು. ಆಗ ಕಂಠಾಳ ಕ್ಕೆಯೊಂದು "ತಪ್ಪುದಾರಿಯಲ್ಲಿ ನಡೆಯುತ್ತಿದ್ದೀಯಾ ಸುರೇಖಾ, ತಡೆದು ನಿಲ್ಲು" ಎಂದು ಎಚ್ಚರಿಸುತ್ತಿತ್ತು. ಯಾವಾಗಲೋ ಕೆಟ್ಟಗಳಿಗೆಯಲ್ಲಿ—ದೇಹದ ಬೇಗೆ ತಡೆಯಲಾರದ ಹೊತ್ತಿನಲ್ಲಿ ಸುರೇಖಾ ಆನಂದನ ಮಡಿಹೊಕ್ಕಳು. ಹೃದಯ ಜೀವನನ್ನು ನಿರಾಕರಿಸಿದ್ದರೂ ದೇಹ ಅವನನ್ನು ಬಯಸಿ ಅವಳು ದಾರಿತಪ್ಪಿದಳು.

ಅದೊಂದು ಚಳಿಗಾಲದ ರಾತ್ರಿ, ಅಮರ ಸುರೇಖಳಿಗಾಗಿ ಕಾಯುತ್ತಿದ್ದ. ಮೂರೋ ನಾಲ್ಕೋ ಗಂಟೆಯಾಗಿರಬಹುದು ಆಗ. ಅವಳ ಬರವು ಎಂದಿನಂತಿರದೆ ಅವನೇ ಕಾಯಬೇಕಿತ್ತು. ಸುಗಂಧ ಪುಷ್ಪಗಳು ತಮ್ಮ ಕಂಪನ್ನು ಎಲ್ಲೆಲ್ಲ ಚೆಲ್ಲಿ ಬಿಟ್ಟಿದ್ದುವು. ಚಂದಿರ, ಈ ಸುವಾಸನೆಯನ್ನು ಆಘ್ರಾಣಿಸುತ್ತ ಸಂತಸದಿಂದ ತನ್ನನ್ನು ತಾನೆ ಮರೆತು ತೇಲುತ್ತಿದ್ದ ಅವಂಗಾಗಿ ಈ ಬೆಳದಿಂಗಳು. ಆದರೆ ಸುರೇಖಾ ಏಕೆ ಬರಲಿಲ್ಲ? ಹತ್ತಿರದ ಹೊಳೆಯು ಭೋರ್ಗರೆಯುತ್ತಾ ಹರಿಯುತ್ತಿತ್ತು. ಈ ಪ್ರೇಮಿಗಳು ಸ್ವಚ್ಛಂದ ಹಕ್ಕಿಗಳಂತೆ ತೇಲಾಡಬಹುದಿತ್ತು. ಆದರೆ ಎಲ್ಲಿ ಸುರೇಖಾ? ಒಂದೆಡೆ ತುಂಬಿ ಬರುತ್ತಿರುವ ಉದ್ವೇಗ, ಮತ್ತೊಂದೆಡೆ ಏನಾದಳು ಸುರೇಖಾ ಎಂಬ ಹೆದರಿಕೆ! ಹತ್ತಿರದ ಗುಡಿಸಲಿನಿಂದ ಕೋಳಿಯೊಂದು ಕೂಗಿ ಬೆಳಗಾಗಲು ಹೆಚ್ಚು ಹೊತ್ತಿಲ್ಲ ಎಂದಿತು. ನಾಯಿಯೊಂದು ಕೋಳಿಗುತ್ತರವಾಗಿ ಕರ್ಕಶವಾಗಿ ಸುಯ್ಯಲಿಟ್ಟು ನಿನಗಿಂತಲೂ ಮೊದಲೇ ಎಚ್ಚತ್ತಿದ್ದೇನೆ ಎಂದು ಸೂಚಿಸಿತು. ಅಮರ ಹುಚ್ಚು ಹಿಡಿದವನಂತೆ ಆಚೆ ಈಚೆ ಅಲೆದಾಡುತ್ತಿದ್ದ. ಏನಿದು ಕೂಗು—ಹೆಣ್ಣಿನ ಕೂಗು ತಾನೇ? ಆ ಕಡೆಗೆ ಓಡ ಪ್ರಯತ್ನಿಸಿದ. ಅಯ್ಯೋ ಕಾಲೇ ಬರೋದಿಲ್ಲವಲ್ಲಾ? ಅಮರ ಚಲಿಸಲಾರದೆ ಚಲಿಸಿ ಹೇಗೋ ಹೊಳೆಯ ಬದಿ ಸೇರಿದ "ನನ್ನ ಕಾಪಾಡು ಅಮರಾ, ಹೊಯಿಲು ಏರಿ ಬಂದು ಸೆಳೆತಕ್ಕೆ ಸಿಕ್ಕಿದ್ದೇನೆ ಕಾಪಾಡು" ಚಂದಿರ ಒಮ್ಮೆಲೆ ಮರೆಯಾಗಿ ಕಂಠಾಳ ಕತ್ತಲೆ ಹಬ್ಬಿತು. ಮಳೆ ಭೋರ್ಗರೆಯುತ್ತಾ ಸುರಿಯಿತು. ಸಿಡಿಲು ಸಿಡಿಯಿತು. 'ಎಲ್ಲಿದ್ದೀಯಾ ಸುರೇಖಾ—ನಿನ್ನನ್ನು ನಾನು ಕಾಪಾಡಲಾರೆನಲ್ಲಾ..."ಅಮರ ಒಡನೆಯೇ ಎಚ್ಚತ್ತ. ಈ ಕನಸಿನ ಅರ್ಥವೇನಿರಬಹುದು ಎಂದು ಆಲೋಚಿಸಿದ.

ಸುರೇಖಾ ಎಚ್ಚೆತ್ತಳು. ಅವಳು ಎಚ್ಚತ್ತಾಗ ಕಾರ್ಯ ಮೀರಿಹೋಗಿತ್ತು. ದೇಹದ ಬಯಕೆ ಸಂದು ನಿಂತಾಗ ಮಮ್ಮಲ ಮರುಗಿದಳು 'ಏನು ಮಾಡಿದೆ ನಾನು! ಪವಿತ್ರವಾದ ಪ್ರೇಮವನ್ನು ಬದಿಗೊತ್ತಿ, ಕೀಳು ಅಸಹ್ಯವಾದುದನ್ನು ಸ್ವೀಕರಿಸಿದೆನಲ್ಲಾ! ಅಯ್ಯೋ ನನ್ನ ಬಾಳೇ, ಇದರ ಕೊನೆಯೆಲ್ಲಿ? ಬೆಳಕಿಗಾಗಿ ಕಾತರಿಸಿ ಕತ್ತಲೆಯನ್ನು ಪಡೆದೆನಲ್ಲಾ!

ಕಾಲೇಜಿನಲ್ಲಿ ಗಲಾಟೆಯೋ ಗಲಾಟೆ; ಅವರು ಎಲ್ಲಿಯೋ ಆನಂದ ಸುರೇಖಾರನ್ನು ಕಂಡರಂತೆ. ಕಾಲೇಜು ಗೋಡೆಗಳು ಅವರ ಹೆಸರನ್ನು ಹೊತ್ತು ನಿಂತಿದ್ದುವು. ಕಂಹಲಗೆ ಅವರಿಬ್ಬರ ಸಂಬಂಧವನ್ನು ಹೇಳಿದುವು ಅಮರನಿಗೆ ತನ್ನ ಕನಸಿನ ಅರ್ಥ ತಿಳಿಯಿತು. ತನ್ನಲ್ಲಿರುವ ಕೊರತೆಯಿಂದಾಗಿ ಒಬ್ಬ ಹೆಣ್ಣು ಹಾಳಾದಳು. ಅವಳ ಬದುಕು ಎಲ್ಲಿಗೆ ಹರಿಯಬಹುದು ಎಂದು ಕೊರಗಿದ. ಆನಂದನ ಜೀವನ ಅವನಿಗೆ ತಿಳಿಯದ್ದೇನೂ ಅಲ್ಲ. ಎಲ್ಲಿ ಆನಂದ ಎಲ್ಲಿ ಸುರೇಖಾ! ಗೌರವಾನ್ವಿತ ಹೆಣ್ಣು ಕೀಳು ಸಂಬಂಧಕ್ಕೆ ಬಿದ್ದು ಸತ್ತುಹೋದಂತೆಯೇ ಆಯಿತು. ಯಾರಿಂದಾಗಿ? ತನ್ನಿಂದಾಗಿ. ಅಮರ ದಾರಿ ಕಾಣದೆ ತತ್ತರಿಸಿದ.

ಕಾಲ ಮೀರಿದ ನಂತರ ಮಾನವತೆಗೆ ಎಲ್ಲಿಸ್ಥಾನ! ಅಂತೆಯೇ ಸುರೇಖಾಳ ದೇಹ ಮಾನವತೆಯನ್ನು ಮರೆತು, ಆನಂದನ ಅಸಹ್ಯ ತೆಕ್ಕೆಯಲ್ಲಿ ಬಿದ್ದ ಇದೇ ಸುಖ ಎಂದುಕೊಂಡು ಅಲ್ಲಾಡಿದ್ದರೂ, ನಡೆದ ತಪ್ಪು ದಾರಿಯನ್ನು ಮರೆಯಲಿಕ್ಕಾಗಿ ಆನಂದನ ಜೀವನದಲ್ಲಿ ಬೆರೆತು ಬಿಟ್ಟಳು.

ಸುರೇಖಾಳ ಬಾಳು ಮನೆಮಾತಾಗಿ ಹೋಯಿತು. "ಏನಾಯಿತು ಇವಳಿಗೆ. ಇವನೇ ನರಕದ ನಾಯಿ ಇವಳಿಗೆ ಬೇಕಾಯಿತೇ" ಎಂದರು. ಅವಳ ಬಾಳು ಮುಗಿಯಿತು ಅಂದರು. ಹೌದು! ಅವಳ ಬಾಳು ಮುಗಿಯುವ ಸ್ಥಿತಿಗೆ ಬಂದಿತ್ತು, ಸುರೇಖಾ ಅತ್ತು ಕೊರಗಿದಳು. ಅವಳ ಹೊಟ್ಟೆ ಕೊರೆಯಂತಾಗುತ್ತದೆ ಸುಖ ಲೋಲುಪತೆಯ ನಡುವೆ ಯಾವುದೋ ಕೆಟ್ಟ ಭವಿಷ್ಯತ್ತನ್ನು ಮರೆತಿದ್ದಳು.

ಅವಳು ಆನಂದನನ್ನು ಕೇಳಿದಳು "ಆನಂದ ನೀನು ನನ್ನ ಕೈ ಬಿಡಬಾರದು ನನಗೆ ಇಂದು ನೀನಲ್ಲದೆ ಲೋಕವೇ ಇಲ್ಲದಾಗಿದೆ."

"ಹುಟ್ಟಿ ಆ ಪ್ರಶ್ನೆಗೆ ಎಡೆಯಿಲ್ಲ."

"ಇದು ಖಂಡಿತವೇ ಆನಂದ, ಹಾಗಾದರೆ ನನ್ನನ್ನು ಮದುವೆಯಾಗು. ಇಂದೇ ಆನಂದ. ಈಗಲೇ ಕೈ ಹಿಡಿದು ನನ್ನ ಹಿಡಿದೆತ್ತು."

"ನಮ್ಮ ಪರೀಕ್ಷೆ ಮುಗಿಯಲಿ, ಅವಸರವೇಕೆ?"

"ನಮ್ಮ ಪರೀಕ್ಷೆ ಮುಗಿದಿದೆ. ನಾನಿಂದು ನಿನ್ನ ಕೆಟ್ಟ ಫಲವನ್ನು ಹೊತ್ತಿದ್ದೇನೆ" ಅವಳು ಕಣ್ಣೀರು ಸುರಿಸಿ ಬೇಡಿದಳು "ನನ್ನ ಕೈ ಬಿಡಬೇಡ."

ಆನಂದ ಯಾವ ಭಾವನೆಗೂ ಆಸ್ಪದ ಕೊಡದೆ ಹೇಳಿದ—"ನಿನ್ನನ್ನು ಮದುವೆಯಾಗಲಾರೆ. ಅದು ನನ್ನ ಫಲವೆಂಬ ನಂಬುಗೆಯೇ ನನಗಿಲ್ಲ ನಿನಗೆ ಮದುವೆಯಾಗುವೆನೆಂದು ಕೊಟ್ಟ ಮಾತು ಕೂಡಾ ನೆನಪಿಲ್ಲ. ಕೈ ಹಿಡಿಯುವ ಮಾತು ಬಿಟ್ಟು ಬೇರೇನು ಬೇಕಾದರೂ ಕೇಳು."

ಸುರೇಖಾ ಬಂಡೆಕಲ್ಲಿನಂತೆ ನಿಂತಿದ್ದಳು. ಹರಿಯುವ ಕಣ್ಣೀರು ಒಮ್ಮೆಲೇ ತಡೆದು ನಿಂತಿತು. "ಹೋಗು, ನನ್ನ ಕಣ್ಣೆದುರಿನಿಂದ ಹೊರಟುಹೋಗು, ನನ್ನ ಬಾಳು ಮುಗಿದೇ ಹೋಗಲಿ........"ಫಕ್ಕನೆ ಆನನತ್ತ ಉಗುಳಿದಳು.

ಆನಂದ ಹೋಗುತ್ತಾ ಹೇಳಿದ "ಮೂರ್ಖಳೇ ನೀನು ನೂರ ಒಂದನೆಯ ಬಲಿ."

ಅವಳು ಬಿಕ್ಕಿ ಬಿಕ್ಕಿ ಅತ್ತಳು. ಇಂದು ನನ್ನ ಬಾಳಿನ ಸಂಜೆಯಾಯಿತು. ಬೆಳಕಿಲ್ಲ ಗಾಡಾಂಧಕಾರ. ಪ್ರಕಾಶ ಎಲ್ಲಿದೆ? ಎಂದು ನೆಲದಲ್ಲಿ ಬಿದ್ದು ಮಂಕು ಬಡಿದವರಂತೆ, ಹುಚ್ಚಳಂತೆ ಕುಳಿತುಬಿಟ್ಟಳು.

ಅಮರನ ಮುಖ ನೋಡುವುದೂ ಸುರೇಖಾಳಿಗೆ ನಾಚಿಕೆಯೆನಿಸಿತು. ಅತ್ತಳು ಕೊರಗಿದಳು. ಅಮರ ನನಗೆ ಬೆಳಕನ್ನು ತೋರಿಸಬಲ್ಲನೇ? ಛೆ! ಆತನ ಪವಿತ್ರವಾದ ಹೃದಯಕ್ಕೆ ಈ ಕೀಳು ಹೃದಯವನ್ನು ಒಪ್ಪಿಸಲೆ?" ಎಂದು ಮರುಗಿಳು.

ಒಂದು ದಿನ ಅವಳ ಬಾಳಿನಲ್ಲಿ ಹೊಸ ಬೆಳಕು ಮೂಡಿತು. ಅಮರ ಅವಳೆಲ್ಲಿಗೆ ಬಂದು ಕೈಕೊಡು ಎಂದು ಕೇಳಿಕೊಂಡ

"ನನ್ನ ಬಾಳು, ಕೆಟ್ಟ ನಡತೆ ತಿಳಿದೂ ನೀವು ನನ್ನನ್ನು ಬಯಸಿದಿರಿ—ನೀವು ಹುಚ್ಚರಿರುವಿರಿ.'

"ಹೌದು ನಾನು ಹುಚ್ಚನಿದ್ದೇನೆ. ನಿನ್ನ ಕೈ ಹಿಡಿದೆತ್ತಲೆಂದೇ ನಾನು ಬಂದಿದ್ದೇನೆ.'

"ನಾನು ಇನ್ನೊಂದು ದೇಹವನ್ನು ಹೊತ್ತು ನಿಂತಿದ್ದೇನೆ ಅದು ಕೆಟ್ಟ ಫಲವಾಗಿದೆ."

"ಸುರೇಖಾ ಇದು ನಿನ್ನ ತಪ್ಪಲ್ಲ. ಇದು ಇಂದು ಸಮಾಜದ ಒಂದು ಕೊರತೆಯಾಗಿದೆ. ನೂರಾರೋ ಸೆಳೆತಕ್ಕೆ ಸಿಕ್ಕಿಬಿದ್ದು—ಮತ್ತೆ ಕೊರಗುತ್ತಾರೆ. ಅದಕ್ಕೆ ನೀನೂ ಹೊರತಾಗಿಲ್ಲ. ನೀನು ಹೊತ್ತಿರುವ ಜೀವ ಕೆಟ್ಟ ಫಲವಾಗಬಾರದು. ಯಾರ ತಪ್ಪಿಗೆ ಯಾರು ಅನುಭವಿಸಬೇಕು ಆ ಪಾಪದ ಫಲ! ಆ ಪಾಪದ ಫಲ ಪುಣ್ಯಫಲವಾಗಬೇಕೆಂದೇ ನನ್ನ ಬಯಕೆ."

"ದುಡುಕಬೇಡಿ ಅಮರಾ, ದೇವರ ಸಾನ್ನಿಧ್ಯದಲ್ಲಿ ಕುಸುಮ ಇಲ್ಲದ ಪುಷ್ಪಕ್ಕೆ ಬೆಲೆ ಇಲ್ಲ.'

"ಆತ ಸೃಜಿಸಿದ ಹೂವನ್ನು ಆತ ಸ್ವೀಕರಿಸಲಾರನೆಂದರೆ, ಅದು ನನ್ನ ನಿನ್ನಂಥವರ ತಪ್ಪು ಅಭಿಪ್ರಾಯ. ಹಳೆಯದನ್ನು ಮರೆತು ಹೊಸದನ್ನು ಆರಂಭಿಸೋಣ.'

"ನನ್ನ ಜೀವನ ಹೊಸದು ಆಗುವುದೇ ಅಮರಾ?"

"ಆಗಿಯೇ ಆಗುತ್ತದೆ ಸುರೇಖಾ. ನನಗೆ ನಿನ್ನ ಪರಿಪೂರ್ಣ ಪ್ರೇಮ ದೊರಕುತ್ತದೆ. ನೀನು ಇನ್ನು ತಪ್ಪಿ ಬೀಳುವುದೇ ಇಲ್ಲ. ಇಲ್ಲಿ ನನ್ನ ಸ್ವಾರ್ಥವೂ ಇದೆ. ಒಂದೇ ಕಲ್ಲಲ್ಲಿ ಎರಡನ್ನು ಪಡೆಯುತ್ತೇನೆ ಒಂದು ನಿನ್ನನ್ನು, ಮತ್ತೊಂದು ನಿನ್ನ ಪ್ರೇಮ."

ಸುರೇಖಾ ಅಳುತ್ತಿದ್ದಳು. ಅದು ಆನಂದದ ಸಂಕೇತವಾಗಿತ್ತು. ತನ್ನ ಭಾಗ್ಯದಾತನಾಗಿ ಬಂದ ಅಮರನ ಕಾಲನ್ನು ತಪ್ಪಿ ಕಣ್ಣೀರ ಕಾಲುವೆಯನ್ನೇ ಹರಿಸಿದಳು. "ನೀವು ದೇವರು ಸ್ವಾಮಿ" ಎಂದಳು. ಅಮರ ಅವಳನ್ನು ಹಿಡಿದೆತ್ತಿ ಕಣ್ಣೀರನ್ನು ಒರಸಿದ.

ಆ ನೋಟ ಅಪೂರ್ವವಾಗಿತ್ತು.

In the Court of the District Munsif Karkala

O. S. No. 545/1961.

James Miranda — Plaintiff.
Babu Poojari — Defendant.

To the defendant

Babu Poojari — nephew of Thukra Poojari, residing at Gummadabettu of Kashipatna village of Belthangadi Taluk.

Please take notice that the above suit filed by the plaintiff for recovery of Rs. 615-24 due in respect of a pronote and further interest and costs of suit etc. stands posted to 15—1—1962 for your appearance and you are at liberty to appear before the said Court at 10 A. M. on the said date and plead your defence if any failing which the suit will be heard and decided exparte.

P Ramachandra Rao,
Pleader for plaintiff.

Karkala. Dated 3—1—1962.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S 249/1961

T. ಗೋಪಾಲ M. ಪೈ ಕೂಡಾ—ವಾದಿಯು

ಮತ್ತು

ಬ್ರಿಜಿತ್ ಲುವಿಸ್ ಬಾಯಿ ಕೂಡಾ — ಪ್ರತಿವಾದಿಯು

ಇವರೊಳಗೆ

1ನೇ ಪ್ರತಿವಾದಿ ಬ್ರಿಜಿತ್ ಲುವಿಸ್ ಬ್ಯಾಸಂತಾನ ಲುವಿಸರ ಮಗಳು, ಸೀಲುವರಗ್ರಾಮದ ನಂದನ ಕುದ್ರು, 2ನೇ ಪ್ರತಿವಾದಿ ಜೋಜೆಫ್ ಲುವಿಸ್, 3ನೇ ಪ್ರತಿವಾದಿ ಮಕ್ಸಿಂ ಲುವಿಸ್ —ಸಂತಾನ ಲುವಿಸರ ಮಕ್ಕಳು—ವಾರಂಬಳ್ಳಿ ಗ್ರಾಮದ ಶಾಸನ ಹಿತ್ಲು.

ಸದರಿ 1ರಿಂದ 3ನೇ ಪ್ರತಿವಾದಿರಿಗೆ—

ಪಾವತಿ ಆಸ್ತಿಯ ಬಂಬ್ತು ಪ್ರತಿವಾದಿರಿಂದ ವಾದಿರಿಗೆ ಬರಾ ಕಳೆದ ವಿಚಾರ ಮತ್ತು ಖರ್ಚು ಸಂ|ರಗಳ ಮೂಲಗೇಣಿ ಬಗ್ಗೆ ರೂ 73–09ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 15—1—62ಕ್ಕೆ ತನಿಖೆ ಬಗ್ಗೆ ಇಡಲಾಗಿಯದೆ. ಆ ದಿನ್ನ ಸದರಿ ಪ್ರತಿವಾದಿರು ಸ್ವತ ಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆಯಿದ್ರೆ ಅವರ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿದೆ.

M Damodar Kamath,
Advocote for Plaintiff.

ಉಡುಪಿ, ತಾರೀಕು 1—1—62.

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA, UDIPI.
REGD. NO.BG. 176 11-1-1962 LICENSE NO. 31
Licensed to Post without Prepayment

ಮಕರ ಸಂಕ್ರಾಂತಿಯ ಪುಣ್ಯಕಾಲ

ಜ್ಯೋತಿರ್ಗಣಿತಕ್ಕನುಸಾರ ಶನಿವಾರ ತಾ. ೧೩ರ ರಾತ್ರಿಯ ಸಂಧ್ಯಾಕಾಲದಲ್ಲಿ ಭಗವಾನ್ ಭಾಸ್ಕರನು ಮಕರ ರಾಶಿಯಲ್ಲಿ ಪಾದಾರ್ಪಣ ಮಾಡುತ್ತಾನೆ. ಆದುದರಿಂದ ಶ್ರದ್ಧಾಳು ಧರ್ಮನಿಷ್ಠ ಹಿಂದೂ ಜನರು ೧೪ನೆ ರವಿವಾರ ಸೂರ್ಯೋದಯಕ್ಕೆ ಮೊದಲು ಬ್ರಾಹ್ಮೀ ಮುಹೂರ್ತದಲ್ಲಿ ಸಂಕ್ರಾಂತಿ ಸಂಬಂಧದ ತೀರ್ಥಸ್ನಾನವನ್ನು ಮಾಡಿ ಪುಣ್ಯ ಸಂಪಾದಿಸುತ್ತಾರೆ.

ಧರ್ಮಗ್ರಂಥ ಹೇಮಾದ್ರಿಯಲ್ಲಿ ಮಕರ ಸಂಕ್ರಾಂತಿಯ ಪುಣ್ಯಕಾಲ ಸಂಕ್ರಮಣ ಕಾಲದಿಂದ ೪೦ ಘಟಿಯ ವರೆಗೆಂದು ಬರೆದಿದೆ. ಆದುದರಿಂದ ರವಿವಾರ ಸೂರ್ಯಾಸ್ತದ ವರೆಗೆ ಪುಣ್ಯಕಾಲ ಉಳಿಯುವುದು; ಪರ್ವದಿನದ ಈ ಪುಣ್ಯಕಾಲದಲ್ಲಿ ಹಿಂದೂ ಜನರು ಯಥಾಶಕ್ತಿ ದಾನಮಾಡುವರು.

ಉತ್ತರಾಯಣದ ಆಯನ ಸಂಕ್ರಾಂತಿ ಮತ್ತು ರಾಶಿಗಳ ಸ್ಥಿರ ಸಂಕ್ರಾಂತಿಗಳಲ್ಲಿ ಅಯನವು ಚಲಾಯಮಾನವಾಗುವುದರಿಂದ ಪೂರ್ವಾಪರ ಅಯನಾಂಶಗಳ ನಡುವೆ ಅಂತರ ಕಾಣುವುದು. ಇಂದಿಗೆ ಐದು ಸಾವಿರ ವರ್ಷಗಳಿಗೆ ಮೊದಲು ಮಕರ ರಾಶಿ ಸಂಕ್ರಾಂತಿ ಮೊದಲಾಗುತಿತ್ತು, ಉತ್ತರಾಣ ಆ ನಂತರ ಪ್ರಾರಂಭವಾಗುತಿತ್ತು. ಆದರೆ, ಈಗ ಉತ್ತರಾಯಣವು ಮೊದಲು ತೊಡಗಿ ಕೊನೆಗೆ ಮಕರ ಸಂಕ್ರಮಣವಾಗುವುದು. ಗಣಿತದ ನಿಯಮಾನುಸಾರ ೧೯೬೧ರ ದಶಂಬರ ೨೨ರಂದು ಉತ್ತರಾಯಣವು ಮೊದಲಾಗಿದೆ. ಮಕರ ಸಂಕ್ರಾಂತಿಯು ೬೨ನೇ ಜನವರಿ ೧೪ಕ್ಕಾಗುವುದು. ಎಂದರೆ, ಆಯನ ಸಂಕ್ರಾಂತಿಯ ಪುಣ್ಯಕಾಲ ದಶಂಬರ ೨೨ರಂದು ಆಚರಿಸಲಾಯಿತು; ಮಕರ ಸಂಕ್ರಮಣದ ಪುಣ್ಯಕಾಲ ಜನವರಿ ೧೪ರಂದು ಆಚರಿಸಲ್ಪಡುವುದು.

ಧರ್ಮಶಾಸ್ತ್ರದಲ್ಲಿ ಆಯನ ಸಂಕ್ರಾಂತಿ ಮತ್ತು ಮಕರ ಸಂಕ್ರಾಂತಿಗಳೆರಡನ್ನೂ ಉತ್ತರೋತ್ತರ ವಿಶೇಷ ಪರ್ವಕಾಲವೆಂದು ಒಪ್ಪಿಕೊಂಡಿದ್ದಾರೆ. ಆಯನ ಸಂಕ್ರಾಂತಿಯು ಕಾಲಬೋಧಕ ಮತ್ತು ಮಕರ ಸಂಕ್ರಾಂತಿಯು ಮಾಂಗಲ್ಯ ಪ್ರಬೋಧಕವೆಂದು ತಿಳಿದಿರುವುದೇ ಇದಕ್ಕೆ ಕಾರಣ. ಆದುದರಿಂದ ಸೂರ್ಯನು ಉತ್ತರಾಯಣದಲ್ಲಿ ತೊಡಗಿದ್ದರೂ ಮಕರದ ರಾಶಿ ಸಂಕ್ರಾಂತಿಯ ವರೆಗೆ ಧನುರ್ಮಾಸದಲ್ಲಿ ಹಿಂದುಗಳಲ್ಲಿ ವಿವಾಹಾದಿ ಮಂಗಲ ವೈದಿಕ ಸಂಸ್ಕಾರಗಳು ನಡೆಯುವುದಿಲ್ಲ.

ವೇದದಲ್ಲಿ ನಕ್ಷತ್ರಾತ್ಮಕ ಕಾಲಚಕ್ರದ ಹನ್ನೆರಡು ಪರಿಧಿಗಳನ್ನು ಒಪ್ಪಿಕೊಳ್ಳಲಾಗಿದೆ. ಇದರ ಸಂಸ್ಕಾರದಿಂದಲೇ ಆರ್ಯ ಮಹರ್ಷಿಗಳು ಹನ್ನೆರಡು ರಾಶಿಗಳ ಚಕ್ರವನ್ನು ನಿರ್ಣಯಿಸಿದರು. ಸೂರ್ಯ ದೇವನು ಉತ್ತರಾಷಾಢ ನಕ್ಷತ್ರದ ಎರಡನೆಯ ಚರಣಕ್ಕೆ ಪಾದಾರ್ಪಣ ಮಾಡಿದಾಗ, ಮಕರ ಸಂಕ್ರಾಂತಿಯು ಆರಂಭವಾಗುವುದು. ಆ ಸಮಯದ ಪಂಚಾಂಗಾನುಸಾರವಾಗಿ ಜ್ಯೋತಿಶಾಸ್ತ್ರಪದ್ಧತಿಯಿಂದ ಸಂಕ್ರಾಂತಿಯ ಸ್ವರೂಪವನ್ನು ಅರಿತುಕೊಳ್ಳಬಹುದು.

ಪದ್ಧತ್ಯನುಸಾರ ಕುಮಾರಿಕಾ ರೂಪದ ಸಂಕ್ರಾಂತಿ ಕೇಸರ ತಿಲಕವನ್ನಿಟ್ಟು ಮುಕ್ತಾ ಮಾಲೆಯನ್ನು ತೊಟ್ಟು ಹಳದಿ ವಸ್ತ್ರಭೂಷಣಗಳಿಂದ ಸುಸಜ್ಜಿತವಾಗಿ, ಸಿಂಹದ ಮೇಲೆ ಸವಾರಿ ಮಾಡುತ್ತವೆ. ಸಂಕ್ರಾಂತಿಗೆ ಕುದುರೆ ಉಪವಾಹನ. ಮೂವತ್ತು ಮುಖಗಳಿರುವ ಘೋರಾ ನಾಮದ ಧ್ವಾಂಕ್ಷೀ ಸಂಕ್ರಾಂತಿ ರಾಕ್ಷಸರ ನಾಶಮಾಡುವುದು. ದಕ್ಷಿಣ ದಿಕ್ಕಿನಿಂದ ಸಂಕ್ರಾಂತಿಯ ಆಗಮನವಾಗುವುದು ಈಶಾನ್ಯ ದಿಕ್ಕಿಗೆ ನೋಡುತ್ತ ಉತ್ತರದ ಕಡೆಗೆ ಪ್ರಯಾಣ ಬೆಳೆಸುವುದು.

ಫಲಿತ ಜ್ಯೋತಿಷ್ಯದಲ್ಲಿ ಈ ಸ್ವರೂಪದ ಫಲಗಳನ್ನು ಬರೆಯಲಾಗಿದೆ. ಸಂಕ್ರಾಂತಿಯು ಸ್ವೀಕರಿಸುವ ವಸ್ತುಗಳು ದುಷ್ಪ್ರಾಪ್ಯವಾಗುವುವು; ಎಂದರೆ, ಅವುಗಳ ಬೆಲೆ ಹೆಚ್ಚುವುದು. ಕುದುರೆಗಳು ತುಟ್ಟಿಯಾಗುವುವೆಂದು ತಿಳಿಯಬಹುದು ಕೇಸರ ಮತ್ತಿತರ ರಸ ಪದಾರ್ಥಗಳ ಬೆಲೆಯೇರುವುದು. ಫಸಲಿನಲ್ಲಿ ಕ್ರಿಮಿಗಳು ಹುಟ್ಟಿಕೊಳ್ಳುವ ಭಯವಿರುವುದು. ಅಕ್ಕಿ-ಭತ್ತವು ಬಹಳ ತೇಜಿಯಾಗುವುದು. ೩೦ ಮುಖವಿರುವುದರಿಂದ ಕೃಷಿಕರಿಗೆ ಸಂಕ್ರಾಂತಿಯು ಶುಭಫಲವನ್ನೀಯುವುದು. ವ್ಯಾಪಾರಿಗಳ ಸಂಪತ್ತು ಅಭಿವೃದ್ಧಿಗೊಳ್ಳುವುದು. ಆದರೆ, ಸಂಕ್ರಾಂತಿಯ ಹೆಸರು ಘೋರಾ ಎಂದಿರುವುದರಿಂದ ನವಯುವಕರು ತ್ರಾಸಪಡಬೇಕಾಗುವುದು.

ಸಂಕ್ರಾಂತಿಯು ಆಗಮಿಸುವ ದಿಕ್ಕಿನಲ್ಲಿ ಫಲಸಮೃದ್ಧಿಯಾಗುವುದೆಂದೂ ಅದು ಗಮಿಸುವ ದಿಕ್ಕಿನಲ್ಲಿ ದುಃಖ ದಾರಿದ್ರ್ಯಗಳು ತಾಂಡವವಾಡುವುವೆಂದೂ ಫಲಿತ ಜ್ಯೋತಿಷದ ಆಚಾರ್ಯರು ಪಂಚಾಂಗ ಪದ್ಧತಿಯಲ್ಲಿ ಹೇಳಿದ್ದಾರೆ. ಆದುದರಿಂದ ಮಕರ ಸಂಕ್ರಾಂತಿಯು ದಕ್ಷಿಣ ದಿಕ್ಕಿಗೆ ಸುಖಪ್ರದಾಯಕವಾಗಿಯೂ ಉತ್ತರದ ಕಡೆಗೆ ದುಃಖಕಾರಕವಾಗಿಯೂ ಇದೆ.

ಪೃಥ್ವೀ ಚಂದ್ರೋದಯ ಹೆಸರಿನ ಧರ್ಮಗ್ರಂಥದಲ್ಲಿ ಸಂಕ್ರಾಂತಿಯ ದಿನ ಮಾಡಬೇಕಾದ ಧಾರ್ಮಿಕ ಕೃತ್ಯಗಳನ್ನು ವಿವರಿಸಲಾಗಿದೆ. ಮಕರ ಸಂಕ್ರಾಂತಿಯ ಪರ್ವಕಾಲದಲ್ಲಿ ಧರ್ಮನಿಷ್ಠ ಹಿಂದುಗಳು ಎಳ್ಳು ಬೆರಸಿದ ನೀರಿನಲ್ಲಿ ಸ್ನಾನ ಮಾಡಬೇಕು. ಎಳ್ಳನ್ನೇ ತಿನ್ನಬೇಕು. ಯಥಾಶಕ್ತಿ ಎಳ್ಳನ್ನು ದಾನಮಾಡಬೇಕು. ಅಂಗವಿಕಲರಿಗೆ ಉಣ್ಣೆಯ ವಸ್ತ್ರಗಳನ್ನು ದಾನಮಾಡಬೇಕು ದನಕರುಗಳಿಗೆ ಹೊಸ ಹುಲ್ಲನ್ನು ತಿನ್ನಿಸಬೇಕು. ಸದ್ಗೃಹಸ್ಥರು ತಂತಮ್ಮ ಮನೆಗಳಲ್ಲಿ ಕುಟುಂಬದ ಜನರೊಡನೆ ಮಿಷ್ಟಾನ್ನ ಭೋಜನ ಮಾಡಬೇಕು.

ಧರ್ಮಶಾಸ್ತ್ರದ ಆಜ್ಞೆಯಂತೆ ರವಿವಾರ ಹಿಂದೂಸಮಾಜವಲ್ಲಿ ಮಕರಸಂಕ್ರಾಂತಿಯ ಹಬ್ಬವನ್ನು ಆಚರಿಸುತ್ತಾರೆ. ಹಿಂದೂ ನವಯುವಕರು ನಿರಂತರ ಸೂರ್ಯಾಭಿಮುಖರಾಗಿರಲು ಅನುಕೂಲವಾಗುವಂತೆ ಗಾಳಿಪಟ ಹಾರಿಸುತ್ತ ಇರುತ್ತಾರೆ.

ಕಾಂಗ್ರೆಸ್‌ನ ಕೃಷ್ಣಪುರಿ ಅಧಿವೇಶನ

(೧ನೇ ಪುಟದಿಂದ)

ಬಿಟ್ಟಿವೆ; ಪಾಕ್ ಅಧ್ಯಕ್ಷ ಅಯೂಬಖಾನರು ಕಟ್ಟಿಕೊಟ್ಟ ಬುತ್ತಿಯನ್ನು ಭಾರತವನ್ನು ಹಂಗಿಸುತ್ತ ಉಣ ತೊಡಗಿದ್ದಾರೆ. ಆದರೆ, ಭಾರತದ ಮಟ್ಟಿಗೆ ಕಾಶ್ಮೀರವು ಭಾರತದಲ್ಲಿ ಸೇರ್ಪಡೆಯಾಗಿ ಹೋಗಿದೆ. ಜಮ್ಮೂ ಕಾಶ್ಮೀರದ ಒಂದಂಶವನ್ನು ಪಾಕ್ ಆಕ್ರಮಿಸಿ, ಅದನ್ನು ಆಝಾದ ಕಾಶ್ಮೀರವೆಂದು ಕರೆಯುತ್ತಿದ್ದರೂ ಅಂತತಃ ಅದು ಭಾರತದ ಭೂಭಾಗವೇ. ಯಾರಿಗೇ ಆಗಲಿ, ಭಾರತದ ಸಾರ್ವಭೌಮ ಅಧಿಕಾರವನ್ನು ಮೀರಿ ನಡೆಯಲು ಸಾಧ್ಯವಿಲ್ಲ. ಹಾಗೆಯೇ ಸತ್ತಂತಿರುವ ಕಾಶ್ಮೀರದ ಮಾತನ್ನು ಮರಳೆತ್ತಲು ಸಮರ್ಥಿಸುತ್ತಿರುವರೂ ತಾವು ಅನ್ಯಾಯ ಕಾರ್ಯವನ್ನು ಮಾಡುತ್ತಿರುವೆವು ಎಂಬುದರ ವಿಶುದ್ಧ ಕಲ್ಪನೆ ಅವರಿಗೆ ಬಾರದುಳಿಯದು. ವಿಶ್ವದ ಯಾವ ಪ್ರಚಂಡ ಶಕ್ತಿಯೇ ಎದುರಾಗಲಿ, ಇಂತಹ ಅಸಹನೀಯ ಘಟನೆಗಳನ್ನು ನಡೆಯಗೊಡೆವೆಂದು ಸಾರಿದ ನೆಹರು, ಮೆನನ್ನರು ಆಕ್ರಮಣಕಾರಿ ಮನೋವೃತ್ತಿಯ ನಿರ್ಮೂಲನೆಯನ್ನೇ ಮಾಡಲು ಹಿಂಜರಿಯಲಾರರೆಂದು ನಂಬಬಹುದು. ಇದನ್ನೇ ಚೀನೀಯ ಸಾಮ್ರಾಜ್ಯವಾದಿಗಳಿಗೂ ಅನ್ವಯಿಸಬೇಕು.

ಕಾಂಗ್ರೆಸ್ಸಿಗೆ ಬೆಂಬಲ

ದೇಶದ ಸರ್ವಾಂಗೀಣ ಪ್ರಗತಿಸಾಧನೆಗೆ, ಗೌರವ ಪ್ರತಿಷ್ಠೆಗಳ ಸಂರಕ್ಷಣೆ, ದೇಶವಾಸಿಗಳ ಸಾಮೂಹಿಕ ಹಿತ ಚಿಂತನೆಗೆ ತಕ್ಕಂತೆ ಕಾರ್ಯಕ್ರಮಗಳನ್ನು ಯೋಜಿಸಿ ಮುನ್ನಡೆಯುವ ಶಕ್ತಿಯಿರುವುದು ಇಂದು ಕೇವಲ ಕಾಂಗ್ರೆಸಿಗೆ ಮಾತ್ರ. ಅಲ್ಲಲ್ಲಿ ಕಾಂಗ್ರೆಸ್ಸು ಶಿಥಿಲಗೊಳ್ಳುತ್ತಿದೆಯೆಂದು ಭಾಸವಾಗುವುದಾದರೂ, ಕಾಂಗ್ರೆಸ್ಸಿಗರೇ ತಮ್ಮವರ ನಾಶಕ್ಕೆ ಬೀಜಾರೋಪಣ ಮಾಡುತ್ತಿರುವರೆಂದು ತೋರಿಬರುವುದಾದರೂ ಸಮಗ್ರ ಪಕ್ಷ—ದೇಶದ ಹಿತದೃಷ್ಟಿಯಿಂದ ಒಂದಾಗಿ, ಕಾಂಗ್ರೆಸ್ ಸಂಸ್ಥೆಯನ್ನು ಬೆಳೆಸಿಕೊಡಬೇಕು; ಕಾಂಗ್ರೆಸ್ ಸಂದೇಶವನ್ನು ತಿಳಿದ ವ್ಯಕ್ತಿ ಕಾಂಗ್ರೆಸ್ಸನ್ನು ಎಂದಿಗೂ ಮರೆಯಲಾರನು. ಚುನಾವಣೆಯ ಗಡಿಬಿಡಿಯಲ್ಲಿ ಸಮುಚಿತ ವಿಚಾರ ನಡೆಸಿ ಕಾಂಗ್ರೆಸ್ಸನ್ನೇ ಗೆಲ್ಲಿಸಲು ಇದನ್ನು ತಿಳಿದ ಮತದಾರರು ಹಿಂದೆಮುಂದೆ ನೋಡಲಾರರು.

— ಗೋರಾ

ಸೂಚನೆ

“ನವಯುಗ”ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)
ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ —

ನವ ವರುಷದ ಹೊಸ ಕಾಣಿಕೆ

ಉಚಿತ ಹಣರವಾನಾ ಸೌಕರ್ಯ

ನಮ್ಮ ಸೇವಿಂಗ್ಸ್ ಬ್ಯಾಂಕ್ ಠೇವಣಾತಿದಾರರಿಗೆ

ನಿಮಗೆ
ಸಿಂಡಿಕೇಟ್ ಬ್ಯಾಂಕಿನಲ್ಲಿ
ಸೇವಿಂಗ್ಸ್ ಬ್ಯಾಂಕ್
ಖಾತೆ ಇದೆಯೆ? ....
.... “ಹೌದು”

ಹಾಗಾದರೆ ನೀವು ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಿಂದ ದಿನ ಒಂದಕ್ಕೆ ರೂ. ೧೫೦೦ರ ವರೆಗಿನ ಮೊತ್ತವನ್ನು ಈ ಬ್ಯಾಂಕಿನ ಯಾವುದೇ ಸೇವಿಂಗ್ಸ್ ಬ್ಯಾಂಕ್ ಠೇವಣಾತಿದಾರರ ಖಾತೆಗೆ ಜಮೆಯಾಗುವಂತೆ ಅಂಚೆ ವರ್ಗಾವಣೆ ಮೂಲಕ ಉಚಿತವಾಗಿ ರವಾನಿಸಬಹುದು

ಮತ್ತು ಸಿಂಡಿಕೇಟ್ ಬ್ಯಾಂಕಿನ ೧೫೮ ಶಾಖೆಗಳ ಸೇವೆಯು
ನಿಮಗೆ ಸಿದ್ಧವಾಗಿರುವುದು.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, ದ. ಕ.

Edited Printed & Published by K. H. Shetty, at the Navayuga Press, Udipi, S. India.

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೧೯ | ಉಡುಪಿ 18—1—1962 ಗುರುವಾರ | Vol. 41 No. 19

ಕಾಶ್ಮೀರದ ಮೇಲೆ ವಕ್ರದೃಷ್ಟಿ

ಗೋವೆಯು ಇನ್ನೂ ಪೋರ್ಚುಗೀಸರ ಅಧೀನದಲ್ಲಿದ್ದಾಗ, ಭಾರತವು ಅದರ ಮೇಲೆ ಕಾರ್ಯಾಚರಣೆ ಕೈಗೊಳ್ಳುವುದೆಂದು ತಿಳಿದ ಪಾಕ್ ಅಧ್ಯಕ್ಷ ಆಯೂಬಖಾನರು ಗೋವೆಯಲ್ಲಿಯೂ ತನಗೆ ಪಾಲು ಕೊಡಬೇಕು ಎಂದು ಉದ್ಗರಿಸಿದ್ದರು. ಉಚಿತಾನುಚಿತತೆಯನ್ನರಿಯದೆ ಮಾತನಾಡುವುದು ಹಾಗೂ ಕಾರ್ಯಪ್ರವೃತ್ತರಾಗುವುದು ದಂಡನಾಯಕ ಅಯೂಬಖಾನರ ಪ್ರಕೃತಿಗುಣ. ಗೋವೆಯ ಸಂಬಂಧದಲ್ಲಿ ಭಾರತವು ಕೈಗೊಂಡ ವಿಜಯ ಯಾತ್ರೆಯಿಂದ ಭಯಭೀತರಾದ ಅಯೂಬಖಾನರು ಮನಸ್ಸಿನೊಳಗೇನೇ ಕಳವಳಿಸಿ, ಕಾಶ್ಮೀರದ ಪ್ರಶ್ನೆಯನ್ನು ಮತ್ತೆ ಬೇಗನೇ ಎತ್ತಿ ಇತ್ಯರ್ಥವನ್ನಿಸಿಕೊಳ್ಳಲು ಆಶಿಸುತ್ತಿದ್ದಾರೆ. ಅಹಿಂಸಕ ರಾಷ್ಟ್ರವೆಂದು ಮನ್ನಣೆ ಪಡೆದ, ಶಾಂತಿಪ್ರಿಯವಾದ ಭಾರತವೇ ಗೋವೆಯ ಸ್ವಾಧೀನತೆಗಾಗಿ ಸೈನಿಕ ಕಾರ್ಯಾಚರಣೆಗೆ ತೊಡಗಿದುದು ವಿಶ್ವದ ಹೆಚ್ಚಿನ ರಾಷ್ಟ್ರಗಳಿಗೆ ವಿಸ್ಮಯಕಾರಕವೆನಿಸಿದರೆ, ಪಾಕಿಸ್ತಾನವನ್ನು ದಿಕ್ಕುಗೆಡಿಸಿದೆ.

ಪಾಕಿಸ್ತಾನಕ್ಕೆ ಭಯ—

ಶಾಂತ ವಿಧಾನದಿಂದಲೇ ಗೋವೆಯನ್ನು ಪೋರ್ಚುಗೀಸರಿಂದ ಪಡೆಯಬೇಕೆಂದು ಬಯಸುತಿದ್ದ ಭಾರತವು ಬಲಪ್ರಯೋಗಗೊಳಿಸಬೇಕಾಗಿ ಬಂದುದು ವಿಶೇಷ ಘಟನೆ. ಈ ಘಟನೆಯು ತೀವ್ರವಾಗಿ ನಡೆಯಬೇಕಾಗಿ ಬಂದುದಕ್ಕೆ ಕಾರಣವು ಬೆಳಕಿಗೆ ಬಂದಿದೆ. ಪೋರ್ಚುಗೀಸರು ದಿವೂ ಮತ್ತು ದಮನಗಳನ್ನು ಪಾಕಿಸ್ತಾನಕ್ಕೆ ಕೊಟ್ಟು ಗೋವೆಯಲ್ಲಿ ತಮ್ಮ ಪ್ರಭುತ್ವವನ್ನು ಸ್ಥಿರವಾಗಿ ಜಮಾಯಿಸುವ ಆಲೋಚನೆ ನಡೆಯುತಿತ್ತು. ಇದೇ ಮುಂದುವರಿದು ಸೈನಿಕ ಠಾಣ್ಯೆಗಳಾಗಿ ರೂಪಾಂತರಹೊಂದುವ ಸಾಧ್ಯತೆಯಿದ್ದು ಈ ಬಗ್ಗೆ ನಿರ್ಧಾರವೂ ಪೋರ್ಚುಗಲ್-ಪಾಕಿಸ್ತಾನಗಳ ನಡುವೆ ಆಗಿತ್ತು. ಇದನ್ನು ಭಾರತ ಸರಕಾರವು ಭೇದಿಸಿ, ತನ್ನ ಕಾರ್ಯಾಚರಣೆಯನ್ನು ಇಷ್ಟೊಂದು ತ್ವರಿತಗತಿಯಲ್ಲಿ ಕೈಗೊಂಡಿತು. ಪರಿಸ್ಥಿತಿಯ ಒತ್ತಡದಿಂದ ಭಾರತವು ಸೈನಿಕ ಕ್ರಮಕ್ಕೆ ಕೊಂಡು, ಪೋರ್ಚುಗಲ್ಲಿನ ಭ್ರಮನಿರಸನಗೊಳಿಸಿತು. ಮುಖ್ಯವಾಗಿ ಪಾಕಿಸ್ತಾನದ ಆಶೆ ಮಣ್ಣುಗೂಡಿತು; ಇದು ಕಣ್ಣೀರನ್ನಲ್ಲದೆ ಮತ್ತೇನನ್ನು ಸುರಿಸಬೇಕು?

ಒಣಪ್ರತಿಷ್ಠೆಗೆ ದಕ್ಕೆ

ಗೋವೆಯ ಬಗ್ಗೆ ತಾನು ಕಾಣುತಿದ್ದ ಸುಂದರ ಸ್ವಪ್ನವು ಭಗ್ನಗೊಳ್ಳುವಂತಾದುದು ಪಾಕಿಸ್ತಾನಕ್ಕೆ ನುಂಗಲಾರದ ತುತ್ತಾಯಿತು. ಭಾರತವು ಶಾಂತಿಮಂತ್ರ ಪಠನೆಯಲ್ಲೇ ಕಾಲ ತಳ್ಳುವುದೆಂದೂ ಅದು ಎಂದಿಗೂ ಹೋರಾಟಕ್ಕೆ ಇಳಿಯುವುದಿಲ್ಲವೆಂದೂ ಅದರ ಅಹಿಂಸೆಗೆ ಅರ್ಥಕಟ್ಟಿದ್ದ ರಾಷ್ಟ್ರಗಳಲ್ಲಿ ಪಾಕಿಸ್ತಾನವೂ ಒಂದು ಆದರೆ, ಗೋವಾದ ಮೇಲೆ ಅದರ ವಿಮೋಚನೆಗಾಗಿ ದಾಳಿಮಾಡಿದ ನಂತರ, ಇಂತಹ ದೃಢನಿಲುವಿಗೆ ಅಂಟಿಕುಳಿತುಕೊಳ್ಳುವುದಕ್ಕೆ ಯಾರೊಬ್ಬರಿಗೂ ಧೈರ್ಯ ಸಾಲದು. ಕಾಶ್ಮೀರದ ಭಾಗವನ್ನು ತಾನು ಆಕ್ರಮಿಸಿರುವುದೆಂದು ವಿಶ್ವಸಂಸ್ಥೆಯಲ್ಲಿಯೇ ಒಪ್ಪಿಕೊಂಡಂತಾಗಿರುವಾಗ, ಅದರ ಮುಕ್ತಿಗೂ ಭಾರತ ಸೈನ್ಯವನ್ನು ಕಳಿಸಿದರೆ, ತಮ್ಮ ಗತಿಯೇನು ಎಂಬ ವಿವಂಚನೆಗೆ ಆಯೂಬಖಾನರು ತುತ್ತಾದುದು ವಾಸ್ತವಿಕವೇ. ಪೋರ್ಚುಗೀಸರು ಗೋವೆಯಿಂದ ಸ್ವದೇಶಕ್ಕಾದರೂ ಓಡಬಹುದ; ಆಜಾದ ಕಾಶ್ಮೀರವನ್ನು ಭಾರತವು ನ್ಯಾಯವಾಗಿ ಸ್ವಾಧೀನಪಡಿಸಿಕೊಂಡರೆ, ಪಾಕಿಸ್ತಾನದ ಘನತೆಗೆ ದಕ್ಕೆ ತಗಲಿದಂತೆ.

ಶವಕ್ಕೆ ಜೀವದಾನ

ಅತ್ತ ಆಯೂಬಖಾನರು ವಿಚಿಂತಿತರಾದಾಗ, ಇತ್ತ ಭಾರತದಲ್ಲಿ ಅದಕ್ಕೆ ತುಪ್ಪಸೆರೆಯುವ ಕೆಲಸ ನಡೆಯು ತೊಡಗಿತು. ಭಾರತದ ಸೈನ್ಯ ಶಕ್ತಿಯ ಮೇಲೆ ವಿಶ್ವಾಸವಿದ್ದ ಭಾರತೀಯರು ಅತ್ಯಲ್ಪ. ಗೋವಾ ವಿಮೋಚನೆಯಿಂದ ಸೈನ್ಯದ ನಿಜ ಬಲವು ಮನವರಿಕೆಯಾಯಿತು. ಅಷ್ಟುಮಾತ್ರವಲ್ಲದೆ, ಗೋವೆಯಂತೆಯೇ ಸರ್ವಭಾರತೀಯರೂ ಕಾಶ್ಮೀರದ ಪ್ರಶ್ನೆಯಲ್ಲಿ ಸಹಮತರಾಗಿದ್ದಾರೆ. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ, ಅದರ ಒಂದು ಭಾಗವನ್ನು ಪಾಕಿಸ್ತಾನ ಅಕ್ರಮವಾಗಿ ಆಕ್ರಮಿಸಿಕೊಂಡಿರುವುದರಿಂದ ಪಾಕ್ ಆಕ್ರಮಿತ ಕಾಶ್ಮೀರ ಭೂಮಿಯನ್ನು ವಿಮೋಚನೆಗೊಳಿಸಲು ದಂಡಿನ ಬಲವನ್ನು ಉಪಯೋಗಿಸಬೇಕೆಂಬ ಬೇಡಿಕೆ ಬರತೊಡಗಿದೆ. ನಮ್ಮ ನಾಯಕರಾದರೂ ಆಗತ್ಯವೆನಿಸಿದರೆ, ಇದಕ್ಕೂ ಸಿದ್ಧವೆನ್ನತೊಡಗಿದ್ದಾರೆ. ಇದರಿಂದ ಆಯೂಬಖಾನರು ಎಗಿಲುಗೊಂಡಿರುವುದರಲ್ಲಿ ಆಶ್ಚರ್ಯವಿಲ್ಲ. ಆಜಾದ ಕಾಶ್ಮೀರವನ್ನು ತನ್ನ ಕೈಯಲ್ಲಿಟ್ಟುಕೊಳ್ಳುವ ಆಸೆಯಿಂದಿರುವ ಆಯೂಬಖಾನರು ಯುಕ್ತರಾಷ್ಟ್ರ ಸಂಘದಲ್ಲಿ ನಾಲ್ಕು ವರ್ಷಗಳಿಂದ ನಿದ್ರಿಸುತ್ತಿರುವ ಗ್ರಹಾಮುವರದಿಯನ್ನು ಮತ್ತೆ ಎತ್ತಿ ಮೂವಲಿಗೆ ಜೀವದಾನ ನೀಡುವ ಉತ್ಸಾಹವನ್ನು ತೋರಿಸುತಿದ್ದಾರೆ.

ಪಾಕ್ ಅಪಪ್ರಚಾರ

ಆಯೂಬಖಾನರ ವರ್ತನೆಯಿಂದ ಒಂದು ಮಾತು ಸತ್ಯವಾಗುತ್ತದೆ. ಆಜಾದ ಕಾಶ್ಮೀರವು ನ್ಯಾಯವಾಗಿ ಪಾಕಿಸ್ಥಾನಕ್ಕೆ ಸೇರಿದುದಲ್ಲ. ತಾನು ಅಲ್ಲಿ ಆಕ್ರಮಣ ಮಾಡಿದ್ದೇನೆಂಬುದು ಅದರ ವರ್ತನೆಯಿಂದ ಸಿದ್ಧವಾಗುತ್ತದೆ. ಅಲ್ಲಿ ತನ್ನ ಅಧಿಕಾರವನ್ನು ಬಿಟ್ಟುಕೊಡಲು ಮನಸ್ಸಿಲ್ಲದ ಕಾರಣ, ಭಾರತವು ಯಾರ ಮಾತಿಗೂ ಕಿವಿಗೊಡದೆ ಸೈನಿಕಬಲದಿಂದ ಅದನ್ನು ವಶಪಡಿಸಿಕೊಳ್ಳಬಹುದಾದುದರಿಂದ ವಿಶ್ವಸಂಸ್ಥೆಯಲ್ಲಿ ಈ ಪ್ರಶ್ನೆಯನ್ನು ಕೆದಕಿ ಭಾರತದ ಬಗ್ಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಗೋವಾ ಕಾರ್ಯಾಚರಣೆಯಿಂದ ತಾಕಿದೆಂದೆನಿಸಿದ ಕಲಂಕ ಮಾಯುವುದಕ್ಕೆ ಮೊದಲೇ ಮತ್ತಷ್ಟು ಕಲಂಕಿತಗೊಳಿಸುವ ಹವಣಿಕೆಯದರದು. ಮತ್ತು ಇದರಿಂದ, ಭಾರತದ ಧಾಳಿಯನ್ನೂ ಕೆಲ ಕಾಲ ತಡೆದಂತಾಗಬಹುದು. ಅಯೂಬಖಾನರ ಈ ವಿಚಾರ ಭಾರತಕ್ಕೆ ಗೊತ್ತಿಲ್ಲದಿಲ್ಲ. ಭಾರತವಿರೋಧಿ ಪ್ರಚಾರ ಸಾಧನಗಳ ದುರುಪಯೋಗ ಪಡಿಸಿಕೊಳ್ಳುವುದರಲ್ಲಿ ಅಗ್ರಸ್ಥಾನಗಳಿಸಿದ ಪಾಕಿಸ್ತಾನದ ಇಂತಹ ಪ್ರವೃತ್ತಿ ವಿಚಿತ್ರದ್ದೆಂದು ಭಾರತವು ಹೇಳುವುದಿಲ್ಲ.

ಪಾಕ್ ಪತ್ರ

ಆದರೆ, ಪಾಶ್ಚಾತ್ಯ ರಾಷ್ಟ್ರಗಳು ಈ ಬಗ್ಗೆ ಹೆಚ್ಚಿನ ಆಸ್ಥೆ ವಹಿಸಿದಂತೆ ತೋರುವುದಿಲ್ಲ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪಾಕಿಸ್ತಾನದ ಪ್ರತಿನಿಧಿಯಾಗಿರುವ ಜಫರುಲ್ಲಾಖಾನರು ಜನವರಿ ೨೨ರ ಸುಮಾರಿಗೆ ತಮ್ಮ ಪ್ರಶ್ನೆಯನ್ನು ಎತ್ತಬೇಕೆಂದು ಬಯಸಿದರೆ, ಭಾರತದಲ್ಲಿ ಚುನಾವಣೆಗಳು ಮುಗಿಯುವ ವರೆಗೆ ಈ ಪ್ರಶ್ನೆಯನ್ನು ಅನೂನತಾಗಿಡಲು ಅವು ಬಯಸಿದಂತಿವೆ. ಪಾಕಿಸ್ತಾನದ ಈ ಬೇಡಿಕೆಯು ಯಾವುದೇ ಮಹತ್ವಪೂರ್ಣವಲ್ಲವೆಂಬುದರಿಂದ ಇದರ ಬೇಡಿಕೆಯು ನಿರ್ಬಲವಾಗಿದೆ. ತಾನು ಅಕ್ರಮವಾಗಿ ಆಕ್ರಮಿಸಿದ ಕಾಶ್ಮೀರಭಾಗದಿಂದ ಹೊರಬೀಳ ಬಯಸದ ಪಾಕಿಸ್ತಾನ ಯುಕ್ತರಾಷ್ಟ್ರಸಂಘದ ಮೂಲಕ ಭಾರತವನ್ನು ಶಾಂತಿಪೂರ್ಣ ವಿಧಾನವನ್ನೇ ನೆಮ್ಮುವಂತೆ ಮಾಡಿ ತಾನ ದೂರವಿರಲು ಹವಣಿಸುತ್ತದೆ. ಜಫರಲ್ಲಾ ಖಾನರ ಪತ್ರದ ಮುಖ್ಯಾಂಶವಿಂತಿವೆ. ಕಾಶ್ಮೀರದ ಸ್ಥಿತಿಯು ಅತ್ಯಂತ ಗಂಭೀರವಾಗಿದೆ. ಈ ಪ್ರಶ್ನೆಯನ್ನು ಸಂತೋಷಜನಕವಾಗಿ ಪರಿಹರಿಸಿಕೊಳ್ಳಲು ನಡೆದ ಪ್ರತ್ಯಕ್ಷ ವಾರ್ತಾಲಾಪವೆಲ್ಲ ನಿಷ್ಫಲವೆನಿಸಿವೆ. ಆದುದರಿಂದ ಸಂಯುಕ್ತರಾಷ್ಟ್ರ ಸಂಘದ ೧೯೪೮ ಮತ್ತು ೪೯ರ ಗೊತ್ತುವಳಿಗಳ ಆಧಾರದ ಮೇಲೆ ಭದ್ರತಾ ಸಮಿತಿಯು ಇಡಿಯ ಪ್ರಶ್ನೆಯನ್ನು ತ್ವರಿತವಾಗಿ ವಿಚಾರಿಸಬೇಕು.

ಶ್ರೀ ಕೃಷ್ಣಪುರಿಯ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿ ಮತ್ತು ಸಂರಕ್ಷಣಾ ಮಂತ್ರಿ ಶ್ರೀ ಕೃಷ್ಣ ಮೆನನ್ನರು ಕಾಶ್ಮೀರದ ಸಂಬಂಧದಲ್ಲಿ ಉಗ್ರನೀತಿಯನ್ನನುಸರಿಸುವುದಕ್ಕೂ ಭಾರತ ಸರಕಾರ ಹಿಂಜರಿಯಲಾರದೆಂದು ಉದ್ಘೋಷಿಸಿದುದನ್ನೂ ಜಫರಲ್ಲಾ ಖಾನರ ಪತ್ರದಲ್ಲಿ ಉಲ್ಲೇಖಿಸಿ ಇಂತಹ ಘೋಷಣೆಯಿಂದ ಕಾಶ್ಮೀ ಶಾಂತಿಗೆ ಗಂಭೀರ ಅಪಾಯವು ತಲೆದೋರಿದೆ ಎಂದು ದೂರಲಾಗಿದೆ.

ಕುಹಕದ ಕ್ರಮ

ಆಜಾದ ಕಾಶ್ಮೀರದ ಭಾಗದಲ್ಲಿ ಭಾರತವಿರೋಧಿ ಪ್ರಚಾರಗಳನ್ನು ಮಾಡಲು ಪಾಕಿಸ್ತಾನ ಪ್ರೇರೇಪಣೆಯಿತ್ತಿದೆ. ೧೯೪೮ರ ಸಂದಿಗ್ಧ ಪರಿಸ್ಥಿತಿಯಲ್ಲಿ ನಡೆಸಿದಂತೆಯೇ ಒಂದು ವಿಧದ ಆಂದೋಲನವನ್ನು ಸಂಘಟಿಸಲಾಗುತ್ತಿದೆ. ಪಾಕಿಸ್ತಾನದಲ್ಲಿ ಭಾರತೀಯ ಚಲಚ್ಚಿತ್ರಗಳ ಮೇಲೆ ನಿರ್ಬಂಧವನ್ನು ಹೇರಿದ್ದಾರೆ. ಮುಂದೆ ನಿರ್ಯಾತ

(೮ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.
THE VIJAYA BANK LTD.

ಮರವು ಮಾತಾಡಿಸಿದಾಗ....

ಶ್ರೀ ಎ. ರವಿಶಂಕರ

ಆ ದಿನ ಮಂಗಳವಾರ. ಮುಂಜಾನೆಯಿಂದ ಸಂಜೆಯ ತನಕ ದುಡಿದ ದೇಹಕ್ಕೆ ನೆಮ್ಮದಿ ಸಿಗಬಹುದೋ ಎಂದೆಣಿಸಿದ ನಾನು ರೂಮಿನಿಂದ ಹೊರಬಿದ್ದೆ. ಶಾಲೆ ಳೆದುಕೊಂಡು ಹೋಗುತ್ತಿದ್ದಾಗ ಕೈಯಲ್ಲೊಂದು 'ಟಾರ್ಚ್' ಹಿಡಿದುಕೊಂಡು ನನ್ನಂತೆಯೇ 'ವಾಕ್' ಹೊರಟ ಗೆಳೆಯರ ಭೇಟಿಯೂಯಿತು. ಸರಿ, ಇಬ್ಬರೂ ಜತೆಯಲ್ಲೇ ಮುನ್ನಡೆದೆವು. ಊರ ರಸ್ತೆಯನ್ನು ದಾಡು ಪ್ರಕೃತಿ ಸೌಂದರ್ಯದ ನೆಲೆವೀಡಿನಂತಿದ್ದ ಕಾಡಿನತ್ತ ಹೆಜ್ಜೆ ಹಾಕಿದೆವು. ಆ ವಿಚಾರ, ಈ ವಿಚಾರ ಮಾತನಾಡುತ್ತ ಬಹುದೂರ ಬಂದ ನಾವು ವಿಶ್ರಮಿಸಿಕೊಳ್ಳಲು ಯೋಗ್ಯ ಸ್ಥಳವನ್ನು ಆರಿಸಿ ಕುಳಿತುಕೊಂಡೆವು. ಸಮೀಪದಲ್ಲಿ ಹಲವಾರು ವೃಕ್ಷಗಳು. ಅಲ್ಲಲ್ಲಿ ವೃಕ್ಷಗಳ ಹಿಂದಿನ ಪೀಳಿಗೆಯ ಕುರುಹುಗಳಂತಿರುವ ಕಡಿದು ಉಳಿದ ಮರಗಳ ಅವಶೇಷಗಳು. ಮೆಲು ನಡೆಯಿಂದ ರವಿಯು ಪಡುಗಡಲಿಗೆ ಜಾರುವ ಸಡಗರದಲ್ಲಿ ಆಗಸದಲ್ಲಿ ಹರಡಿರುವ ಬಣ್ಣದ ಪರದೆಗಳು. ದೂರದಲ್ಲಿ ಕಂಗೊಳಿಸುತ್ತಿರುವ ಬೆಟ್ಟಗಳು. ಈ ಸೌಂದರ್ಯವನ್ನು ಮನಸಾರೆ ಸವಿಯುತ್ತ ಆನಂದ ಗಡಲಲ್ಲಿ ತೇಲುತ್ತಿರುವಾಗ ವೃಕ್ಷದ ಮರ್ಮರ ಸ್ವರವು ನಮ್ಮನ್ನು ಬಾಹ್ಯ ಪ್ರಪಂಚಕ್ಕೆಳೆಯಿತು. ಅರೆ! ಇದೇನು! ಭೂತಚೇಷ್ಟೆ ಇರಬಹುದೋ ಅಂತ ಅತ್ತಿತ್ತ ತಿರುಗಿ ನೋಡುವಾಗ ಪಕ್ಕದಲ್ಲಿರುವ ಮರವೊಂದು ಕಳಕಳಿಯಿಂದ ಮಾತಾಡಲು ಪ್ರಾರಂಭಿಸಿತು.

ಅಂದು ಗಂಭೀರವಾದ ಕರಾಳ ರಾತ್ರಿ. ಸುತ್ತಲೂ ಗಾಢವಾದ ಅಂಧಕಾರ. ಕತ್ತಲೆಯ ಭೀಕರತೆಯನ್ನು ಮತ್ತಷ್ಟು ಹೆಚ್ಚಿಸುವಂತೆ ಕತ್ತಲೆಯಲ್ಲಿ ಕರಗಿ ಕಪ್ಪಾಗಿ ವಿವಿಧಾ ಕೃತಿಗಳಿಂದ ತಲೆಯೆತ್ತಿನಿಂತ ವೃಕ್ಷಗಳು. ಅತ್ಯಂತ ವಿಶಾಲವಾದ ಈ ಅರಣ್ಯದಲ್ಲಿ ನಿಶಾಚರ ಪ್ರಾಣಿಗಳ ಧ್ವನಿ ಹೊರತು ಮತ್ತಾವ ಶಬ್ದವೂ ಇಲ್ಲ. ಆಗೊಮ್ಮೆ ಈಗೊಮ್ಮೆ ಮರಗಳ ಮೇಲಿಂದ ಉದುರುತ್ತಿರುವ ನೀರ ಹನಿಗಳ ಟಪ್, ಟಪ್ ಶಬ್ದ. ಸುಮಾರು ಅರ್ಧ ರಾತ್ರಿಯ ಸಮಯ. ಊರಲ್ಲೆಲ್ಲರೂ ನಿಶಾದೇವಿಯ ಮಡಿಲಲ್ಲಿ ಗಾಢವಾಗಿ ನಿದ್ರಿಸಿದ್ದರು. ಅತಿಶಯವಾದ ಅಂಧಕಾರವು ಎಲ್ಲೆಲ್ಲೂ ವ್ಯಾಪಿಸಿತ್ತು. ಹೆಚ್ಚುತ್ತಿರುವ ಅಂಧಕಾರಮಯವಾದ ನೀರವ ಕಾನನದಲ್ಲಿ ತನ್ನೆರಡು ಕಣ್ಣುಗಳಿಂದ ಬೆಳಕನ್ನು ಚೆಲ್ಲುತ್ತಾ ರಾತ್ರಿಯ ನೀರವತೆಯನ್ನು ಭೇದಿಸಿಕೊಂಡು 'ಲೋರಿ'ಯೊಂದು ಘರ್ಜಿಸುತ್ತಾ ಓಡಿಕೊಂಡು ಇಲ್ಲಿಗೆ ಬಂತು.

ಈ ಕಾಡು ಸರಕಾರದ ಕಾಡು. ಕಾಡನ್ನು ಅಲ್ಲೋಲಕಲ್ಲೋಲ ಮಾಡಿದ ಲೋರಿಯು ಸ್ತಬ್ಧವಾಯಿತು. ಪುನಃ ನೀರವತೆಯು ಕಾಡನ್ನು ಆವರಿಸಿತು. ಕೈದೀಪದ ಸಹಾಯದಿಂದ ಕಲವರು 'ಲೋರಿ'ಯಿಂದ ದುಮ್ಮಿಕ್ಕಿದರು. ಕೈಯಲ್ಲಿ ಮರಕಡಿಯಲು ಬೇಕಾದ ಆಯುಧಗಳಿದ್ದವು. ಕಟ್, ಕಟ್, ಎಂಬ ಶಬ್ದವು ದೂರದ ಬೆಟ್ಟಕ್ಕೆ ಬಡಿದು ಅಂಧಕಾರದಲ್ಲಿ ಅಡಗಿತು. ಪಟಾರ್, ಎಂದು ಮೊರೆಯಿಡುತ್ತಾ ಉರುಳುತ್ತಿದ್ದ ಮರಗಳ ನಿನಾದ. ಈ ಮಧ್ಯೆ ಏನಾಯಿತೋ! ಏನೋ ...! ನಿಶಾದೇವಿಯೇ ಬಲ್ಲಳು. ಸಾಕಷ್ಟು ವೃಕ್ಷಗಳನ್ನು ಬಲಿ ತೆಗೆದುಕೊಂಡ ಬಳಿಕ, 'ನೆಂಜ', ಓ ನೆಂಜ' ಎಂದು ಯಾರನ್ನೋ ಕೂಗಿದ ಧ್ವನಿ. ಆದರೆ ...ನೆಂಜನ ಸ್ವರವೇ ಇಲ್ಲ. ಕಾಡಿನ ಅಂಧಕಾರದಲ್ಲಿ ಲೀನವಾಗಿತ್ತು ನೆಂಜನ ಧ್ವನಿ. 'ಏಯ್, ನೆಂಜ, ಹಾಳು ಮುಂಡೇ ಮಗನೆ ಏನು ಧಿಮಾಕು! ಎಲ್ಲಿ ಗ್ಹೋದ್ಯೋ?' ನಿಶ್ಶಬ್ದವೇ ಉತ್ತರವಾಯಿತು. ಏನಾಯಿತೋ ಎಂಬುದನ್ನು ತಿಳಿಯದೆ ನೆಂಜನ ಶೋಧನೆಗೆ ತೊಡಗಿದರು. ಕಾಡಿನ ಕಾರಿರುಳಲ್ಲಿ ಉರುಳಿದ ಮರಗಳ ಎಡೆಯಲ್ಲಿ ಅಸುವನ್ನು ತೊರೆದು ನಿಶ್ಚಿಂತನಾಗಿ ಒರಗಿದ್ದ ನೆಂಜ. ಊರ ಅಧ್ಯಮಹನೀಯರು, ಸಮಾಜ ಸುಧಾರಕರು ಎಂಬ ಕೀರ್ತಿಗೆ ಅಂಟಿಕೊಂಡಿದ್ದು ಹೊರಲಾರದಷ್ಟು ಬಿರುದು ಪಡೆದವರು ಇಂತಹ ಹೀನ ಕೃತ್ಯಕ್ಕೆಳಿಯುವುದು ದೇಶದ್ರೋಹದ ಕೆಲಸ. ಇದನ್ನು ಕಣ್ಣಾರೆ ಕಾಣಲಾರೆ ಎಂದು'ಕಣ್ಣು ಮುಚ್ಚಿಕೊಂಡಿದ್ದ ನೆಂಜ. ಹೊಟ್ಟೆಯ ಪಾಡಿಗಾಗಿ ಧನಿಗಳ ಮಾತನ್ನು ನಂಬಿ ಬಂದಿದ್ದ ನೆಂಜ ಆದರೆ ಧನಿಗಳು ಕರೆದೊಯ್ದುದೆಲ್ಲಿಗೆ? ಕಾನನಕ್ಕೆ. ನೆಂಜನ ಶವವನ್ನು ಮರಗಳ ಮಧ್ಯದಿಂದ ತೆಗೆಯಲಾಯಿತು.

ಎಲ್ಲರು ದಿಕ್ಕೇ ತೋಚದೆ ಕಂಗಾಲಾಗಿ ನೆಂಜನ ನಿರ್ಜೀವ ದೇಹದ ಸುತ್ತಲೂ ನಿಂತಿದ್ದರು. ಮಂದ ಪ್ರಕಾಶದ ಮಿಣುಕು ಬತ್ತಿಯ ಕುಣಿಯುತ್ತಾ ಕೇಕೆ ಹಾಕಿ ನಕ್ಕಂತಾಯ್ತು. ಮಿಣುಕು ಬತ್ತಿಯುತ್ತ ನೆಂಜನ ದೇಹದ ಭೀಕರತೆಯನ್ನು ಹೆಚ್ಚಿಸುತ್ತಿತ್ತು. ಅಷ್ಟರಲ್ಲೇ ಯಜಮಾನನ ಸ್ವರವು ಕೇಳಿಸಿತು, "ಏನು ನೋಡ್ತೀರಿ? ಹೀಗೆ ಬಿಟ್ಟು ಹೋದರೆ ಗಂಡಾಂತರವಾದೀತು. ಕೊಲೆಯ ಅಪವಾದಕ್ಕೆ ಒಳಗಾಗ ಬೇಕಾದೀತು. ಇತ್ತ ತಿರುಗಿದ ಲೋರಿಯನ್ನು ಊರ ಸಮೀಪ ಕೆಲವರು ಕಂಡಿರುವರು. ಶವವನ್ನು ಎಲ್ಲಾದರೂ ಕೆರೆಗೆ ಎಸೆಯಬೇಕು. ಆತ್ಮಹತ್ಯೆಯ ಅಪವಾದ ಈತನ ಮೇಲೆ ಹೊರಿಸಿ ನಾವು ಪಾರಾಗ ಬಹುದು. ಉಳಿದ ವಿಚಾರ ನನಗಿರಲಿ. ಹೊರಡಿ."

ಒಬ್ಬನು ಆ ನಿರ್ಜೀವವಾದ ದೇಹವನ್ನು ಕಾಲು ಹಿಡಿದೆಳೆದು ಕೊಂಡು ಒಂದು ಲೋರಿಯೊಳಗೆಸೆದನು. ಲೋರಿಯು ಮತ್ತೊಮ್ಮೆ ಕತ್ತಲನ್ನು ಭೇದಿಸಿಕೊಂಡು ಹೊರಟಿತು. ಊರ ಹತ್ತಿರದ ಕೆರೆಯ ಸಮೀಪ 'ಲೋರಿ'ಯನ್ನು ನಿಲ್ಲಿಸಿದರು. ಸದ್ದಾಗದಂತೆ ಆ ನಿರ್ಜೀವ ಶವವನ್ನು ಕೆರೆಗೆ ಎಸೆದರು. ಅತನ ಒಟ್ಟೆ ಬರೆಗಳನ್ನು ದಡದ ಪಕ್ಕದಲ್ಲಿಟ್ಟರು. ದೂರದಲ್ಲಿ ನಾಯಿಯು, "ನಾನೇ ಇದಕ್ಕೆ ಸಾಕ್ಷಿ" ಎಂಬಂತೆ ಬೊಗಳಿತು. ಈ ಭೀಕರ ದೃಶ್ಯವನ್ನು, ಅಮಾನುಷ ಕೃತ್ಯವನ್ನು, ದೇಶದ್ರೋಹದ ಕೆಲಸವನ್ನು ಕಣ್ಣಾರೆ ಕಂಡು ಅಸಹಾಯಕ ಪರಿಸ್ಥಿತಿಯಲ್ಲಿರಬೇಕಾಯಿತಲ್ಲಾ ಎಂದು ಬಾಂದಳದ ನಕ್ಷತ್ರಗಳೂ ವ್ಯಥೆ ಪಟ್ಟವು.

ಯಜಮಾನನ ಕರ್ಕಶ ಸ್ವರವು ಮತ್ತೊಮ್ಮೆ ಎಚ್ಚರಿಸಿತು, "ಎಲ್ಲರೂ ಈ ವಿಚಾರ ತಿಳಿದರೆ, ನಿಮ್ಮ ತಲೆ ಉರುಳೀತು ಜೋಕೆ. ಗುಟ್ಟಾಗಿರಲಿ" ಭಾರವಾದ ಹೃದಯವನ್ನು ಹೊತ್ತುಕೊಂಡ ಅವರು ತಮ್ಮ ತಮ್ಮ ಮನೆಯನ್ನು ಸೇರಿದರು.

ಬೆಳಕು ಚೆಲ್ಲಿತು. ಹಕ್ಕಿಗಳ ಚಿಲಿ ಪಿಲಿ ನಿನಾದ. ಜಗತ್ತೇ ಎಚ್ಚತ್ತು ಕಾರ್ಯೋನ್ಮುಖವಾಯಿತು. ಮೋಡ ಮುಸುಕಿದ ಗಗನ. ಮೋಡಗಳ ಮರೆಯಲ್ಲಿ ಆಗೊಮ್ಮೆ ಈಗೊಮ್ಮೆ ಇಣಿಕಿ ಕರೆಯುತ್ತ ನೋಡಿ ಭಯಗೊಂಡ ರವಿಯು ಮರೆಯಾಗುತ್ತಿದ್ದ. ಹಳ್ಳಿಯ ಹೆಂಗಸರು ಬಟ್ಟೆ ತೊಳೆಯಲು ಕೆರೆಯತ್ತ ಹೆಜ್ಜೆ ಹಾಕಿದರು. ಕೆರೆಯಲ್ಲಿ ತೇಲುತ್ತಿದ್ದ ನೆಂಜ. ನಿರ್ಜೀವವಾದ ನೆಂಜನ ದೇಹವು ಊದಿಕೊಂಡು ಭಯಂಕರವಾಗಿ ಕಾಣುತ್ತಿತ್ತು. ಬೆದರಿದ ಹೆಂಗಸರು ತಮ್ಮ ಹೊರೆಯನ್ನು ಅಲ್ಲೇ ಬಿಸುಟು ಓಡಿದರು. ಊರಲ್ಲೆಲ್ಲಾ ಮಿಂಚಿನಂತೆ ವರ್ತಮಾನವು ಹರಡಿತು ನೆಂಜನ ಮನೆಯಲ್ಲಿ ಗೋಳೋ, ಎಂದು ಅಳುವ ಶಬ್ದದ ಹೊರತು ಎಲ್ಲವೂ ಸ್ತಬ್ಧ.

'ಡಾಕ್ಟರ್'ರು ಬಂದರು ಲೋಕವನ್ನು ಮರೆಮಾಡಲೋ ಏನೋ ತನ್ನ ಕೆಲಸವನ್ನು ಪೂರೈಸಿ "ಇದು ಆತ್ಮಹತ್ಯೆಯೇ ಆಗಿದೆ. ರಾತ್ರಿ ಸಾಧಾರಣ ಒಂದು ಗಂಟೆಗೆ ಆಗಿರಬೇಕು"-ಎಂಬುದಾಗಿ ಪೋಲೀಸ್ ಅಧಿಕಾರಿಗೂ ತನ್ನ ನಲ್ಮೆಯ ಗೆಳೆಯರಾದ ನೆಂಜನ ಒಡೆಯರಿಗೂ ತಿಳಿಸಿದರು ಅವರೂ ಅದನ್ನೊ ಸಮರ್ಥಿಸಿಯೇ ಮಾತನಾಡಿದರು.

ಮರ ಕಡಿಯಲು ಸಹಾಯ ಮಾಡಿದ ಚೇಂಕ್ರ ಮತ್ತು ದೂಮ ಮಾತನಾಡಿಕೊಳ್ಳುತ್ತಿದ್ದರು "ನೋಡಿದ್ಯಾ ಚೇಂಕ್ರ ದೊ

(೭ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು.
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920



ರವೀಂದ್ರವಾಣಿ—ಲೇಖಾಂಕ ೩೨. ವಿಶ್ವಕವಿ ರವೀಂದ್ರನಾಥ ಟಾಗೋರ್

ಅನಂತದ ಸಾಧನೆ

ಅನುವಾದಕರು: ಕೆ. ಎನ್. ಭಟ್, ಶಿರಾಡಿಪಾಲ್.

ಮನುಷ್ಯನು ಪೂರ್ಣನಾಗಲಿರುವನೇ ಹೊರತು, ಪೂರ್ಣನಾಗಿಲ್ಲ. ಈ "ಇರುವನು." ಎಂಬ ಗೂಡಿನೊಳಗೆ ಒಂದು ವೇಳೆ ನಾವು ಆತನನ್ನು ಬಂಧಿಯಾಗಿ ಮಾಡಿದ್ದೇ ಆದರೇ, ಆ ಸ್ಥಿತಿ ಆತನಿಗೆ ನರಕ ಸಮಾನವಾದೀತು. ಆತನ ಭವಿಷ್ಯವೇ ಆತನ ಸ್ವರ್ಗ ಮತ್ತು-ಮುಕ್ತಿಯೂ ಆಗಿರುವುದು. ತನ್ನ ಸಂಭಾವನೆಗಳಿಂದ ಆತನ ಮನಸ್ಸು ಸದಾ ಉದಯೋನ್ಮುಖವಾಗಿರುವುದು. ಮತ್ತು ಭವಿಷ್ಯವು ತನ್ನ ಮಹತ್ವದ ಸ್ವಪ್ನಗಳನ್ನು ಕಾಣುವುದು. ಆತನು ಆ ಮಹತ್ವದ ಸ್ಥಾನಕ್ಕೆ ತಲಪುವ ಇಚ್ಛೆಯುಳ್ಳವನಾಗಿರುತ್ತಾನೆ. ಈ ಇಚ್ಛೆಯನ್ನು ಅವನೆಂದಿಗೂ ಕಸಿದುಕೊಳ್ಳಲಾರನು. ಏಕೆಂದರೆ ಅವನು ಕಲ್ಪಿಸಿಕೊಂಡ, ಭವಿಷ್ಯದ ಕಲ್ಪನೆಗಳ ಕೊನೆಯ ತನಕ ಆತನು ತಲುಪಲಾರನಾದುದರಿಂದ ಆ ಇಚ್ಛೆ-ಆತನಲ್ಲಿ ಪ್ರಬಲವಾಗಿ ಇರುತ್ತಿರುವುದು.

ನಮ್ಮ ಸೀಮಿತವಾದ ವ್ಯಕ್ತಿತ್ವದ ಸ್ಥಾನವು ಆವಶ್ಯಕತೆಗಳ ವ್ಯವಹಾರಿಕ ಕ್ಷೇತ್ರದಲ್ಲೇ ಇರುವುದು, ಮತ್ತು ಅದಕ್ಕೆ ತನಗೆ ಅನ್ನ ವಸ್ತ್ರಗಳನ್ನು ದೊರಕಿಸಿಕೊಳ್ಳುವುದರಲ್ಲೇ ಮುಂದುವರಿದು, ಅವುಗಳನ್ನು ದೊರಕಿಸಿಕೊಳ್ಳುವುದು. ಇದು ಅದರ ಲೌಕಿಕ ಧರ್ಮವಾಗಿದೆ.

ಆದರೆ, ಈ ಧರ್ಮವು ಒಂದು ಅಂಶ ಮಾತ್ರವಾಗಿರುವುದು. ಅಲ್ಲದೆ ಮನುಷ್ಯನ ಉಪಯೋಗದ ಕ್ಷೇತ್ರದ ವರೆಗೆ ಮಾತ್ರ ಇದು ವಿಸ್ತರಿಸಿರುವುದು. ನಮ್ಮ ಆವಶ್ಯಕತೆಗಳ ಕ್ಷೇತ್ರದಲ್ಲಿಯೇ ನಾವೀ ಧರ್ಮವನ್ನು ಪೂರೈಸಿಕೊಳ್ಳಬಲ್ಲೆವು. ಪಾತ್ರೆ ಎಷ್ಟು ದೊಡ್ಡದಿದೆಯೋ, ಅಷ್ಟು ಮಾತ್ರ ನೀರು ಅದರಲ್ಲಿ ತುಂಬುವಂತೆಯೇ, ಈ ಧರ್ಮವೂ ಆಗಿರುವುದು. ಇದು ಸದಾ ಹೀಗೆಯೇ ಆಗುತ್ತಿರುವುದು.

ಇನ್ನೊಂದು ಕಡೆಯಿಂದ ನೋಡುವಾಗ ಆತ್ಮಿಕ ಜಗತ್ತಿನಲ್ಲಿ ಈ ಉಪಯೋಗೀ ಕ್ಷೇತ್ರದ ಚಟುವಟಿಕೆಗಳು ಪೂರ್ಣ ಸಮಾಪ್ತವಾಗಿರುತ್ತವೆ. ಇಲ್ಲಿ ನಮ್ಮ ಧರ್ಮ ಪ್ರಾಪ್ತಿಯೂ ಅಲ್ಲ; ಕೇವಲ ಬ್ರಹ್ಮನೊಡನೆ, ತಾದಾತ್ಮ್ಯ ಹೊಂದುವ, ಇಚ್ಛೆಯೇ ಪ್ರಬಲವಾಗಿರುತ್ತದೆ. ಅಸೀಮ ದ ಕ್ಷೇತ್ರವೇ ಐಕ್ಯದ ಕ್ಷೇತ್ರವಾಗಿರುವುದು ಉಪನಿಷತ್ತಿನಲ್ಲಿ—"ಬ್ರಹ್ಮನಲ್ಲಿ ತಾದಾತ್ಮ್ಯ ಹೊಂದಿದ ಮನುಷ್ಯನು, ಸತ್ಯಸ್ವರೂಪನಾಗುತ್ತಾನೆ." ಎಂದು ಮೊದಲೇ ಹೇಳಿದೆ. ಅರ್ಥವನ್ನು ಹೊಂದಿದ ಶಬ್ದವು ತೋಕದ ಮಾನದಿಂದ ಹೇಗೆ ಹೆಚ್ಚು—ತೂಕ ಬರುವುದಿಲ್ಲವೋ ಮತ್ತು ಅರ್ಥಮಯವಾಗಿ, ಶಬ್ದವು ಹೇಗೆ ಅರ್ಥಮಯವಾಗಿರುವುದೋ ಹಾಗೆಯೇ ಬ್ರಹ್ಮನಲ್ಲಿ ಲೀನನಾದ ಮನುಷ್ಯನು, ಸತ್ಯಸ್ವರೂಪನಾಗುವನು. ಯಾವುದಾದರೂ ಒಂದು ಶಬ್ದದ ಅರ್ಥ ತಿಳಿದ ಮೇಲೆ, ನಾವು ಮತ್ತೆ ಆ ಶಬ್ದವನ್ನು ವಿಸ್ತಾರಗೊಳಿಸಲು, ಅಪೇಕ್ಷಿಸದೆ, ಅದರ ಅರ್ಥಜ್ಞಾನವನು ತಿಳಿದು ಆನಂದಪಡುವಂತೆಯೇ ನಾವು ಬ್ರಹ್ಮನನ್ನು ಹೊಂದಿದ ಮೇಲೆ—ನಮ್ಮ ವೃದ್ಧಿಯನು ಅಪೇಕ್ಷಿಸದೆ, ಬ್ರಹ್ಮನಲ್ಲಿಯೇ ತಾದಾತ್ಮ್ಯ ಹೊಂದುತ್ತೇವೆ. ಬ್ರಹ್ಮನನ್ನು ಹೊಂದುವುದೆಂದರೆ, ಆತನಲ್ಲಿ ಐಕ್ಯಗೊಳ್ಳುವುದೇ ಆಗಿದೆ. ಪಾರ್ಥಿವ ಜಗತ್ತಿನಲ್ಲಿ ಪ್ರಾಪ್ತಿಯೇ ಧ್ಯೇಯವಾಗಿರುತ್ತದೆ. ಆದರೆ ಆತ್ಮಸಾಮ್ರಾಜ್ಯದಲ್ಲಿ ಪ್ರದಾನವೇ ಧ್ಯೇಯವಾಗುವುದು. ಪ್ರದಾನದ ಮಾರ್ಗವೇ ಐಕ್ಯದ ಮಾರ್ಗವಾಗಿದೆ.

ನಿಶ್ಚಯವಾಗಿಯೂ ನಾವು ಬ್ರಹ್ಮತ್ವವನ್ನು ಹೊಂದಲೇಬೇಕು —

ನಾವು ಪೂರ್ಣತೆಯು, ಈ ನಮ್ಮ ಧ್ಯೇಯವನ್ನು ಸಾಧಿಸದಿದ್ದರೆ ನಮ್ಮ ಜೀವನವು ವ್ಯರ್ಥವಾಗುತ್ತದೆ. ನಮ್ಮ ಧ್ಯೇಯವನ್ನು ನಾವು ಸಾಧಿಸಿ, ಅಕ್ಷಯ ತನಕ ತಲಪದಿದ್ದರೆ, ಆ ಧ್ಯೇಯವಾದರೂ ಏಕೆ? ಹಾಗಾದರೆ, ಬ್ರಹ್ಮ ಮತ್ತು ಆತ್ಮನಲ್ಲಿ ಭೇದವಿಲ್ಲ, ವೆಂದು ಹೇಳಲ್ಪಡಬಹುದೇ? ಎಂದಿಗೂ ಸಾಧ್ಯವಿಲ್ಲ. ಈ ಭೇದವು ಸ್ಪಷ್ಟವಾಗಿಯೇ ಇದೆ. ಈ ಭೇದವನ್ನು ಬೇಕಾದರೆ, ಮಾಯೆ ಅಥವಾ ಭ್ರಾಂತಿ, ಎಂದೇ ಹೇಳಿರಿ! ಆದರೆ ಭೇದವು ಇದ್ದೇ ಇರುವುದು. ಮಾಯೆಯೂ ಕೂಡ ಮಾಯಾರೂಪದ ಸತ್ಯವೇ ಆಗಿದೆ.

ಬ್ರಹ್ಮನು ಬ್ರಹ್ಮನೇ ಆಗಿದ್ದು ಅವನು ಪೂರ್ಣನಾಗಿದ್ದಾನೆ. ಆದರೆ ನಾವು ಈಗ ನಮ್ಮ ನಿಜವಾದ ರೂಪದಿಂದ ಇಲ್ಲ! ನಾವು ಈ ಮೇಲೆ ಉಲ್ಲೇಖಿಸಿದ ಆದರ್ಶವನ್ನು ಸಾಧಿಸಿ ಬ್ರಹ್ಮತ್ವವನ್ನು ಹೊಂದಬೇಕಾಗಿದೆ. ಈ ರಹಸ್ಯಮಯವಾದ ಪ್ರಕ್ರಿಯೆಯು ಮೂಲದಲ್ಲಿಯೇ ಸೃಷ್ಟಿಯ ಅನಂತಪ್ರವಾಹವನ್ನು ಧಾರಣೆ ಮಾಡುತ್ತಿರುವ ಆ ಸತ್ಯ ಮತ್ತು ಆನಂದವು ಅಡಗಿರುವುದು.

ಪ್ರವಹಿಸುತ್ತಿರುವ ಜಲಧಾರೆಯಲ್ಲಿ ಸಂಗೀತದಲ್ಲಿ ಪ್ರತಿಕ್ಷಣವೂ—"ನಾನು ಸಮುದ್ರ ಸಮಾನನಾಗುತ್ತೇನೆ' ಎಂಬ ಪ್ರತಿಧ್ವನಿಯು ಆನಂದ ತುಂಬಿದ ಸ್ವರದೊಡನೆ ಕೇಳಿಸುತ್ತಿರುವುದು, ಇದು ಎಂದಿಗೂ ಅಸತ್ಯವಲ್ಲ; ಸ್ವಪ್ನವೂ ಅಲ್ಲ ನದಿಯ ಧ್ಯೇಯವು ಇದೇ ಆಗಿದೆ. ನದಿಯ ಎರಡೂ ಪಾರ್ಶ್ವಗಳಲ್ಲಿ ಗ್ರಾಮಗಳು, ಬತ್ತ ಮೊದಲಾದ ಪೈರುಗಳು ಮತ್ತು ಕಾಡು ಬೆಟ್ಟ ಇತ್ಯಾದಿಗಳು ಇರುತ್ತವೆ. ನದಿಯು ಅವುಗಳನ್ನು ತನ್ನ ನೀರಿನಿಂದ ಸಾಕುತ್ತದೆ ಬತ್ತದ ಬೆಳೆಗಾಗಿ ಆ ನೀರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರವಹಿಸುವುದು. ಆದರೆ ಆ ಬೆಳೆ ಈ ನದಿಯ ಒಂದು ಅಂಗವಾಗಲಾರದು. ಈ ಬೆಳೆಯೊಡನೆ ನದಿಯ ಸಂಬಂಧವು ಒಂದು ಅಂಶ ಮಾತ್ರವಾಗಿರುವುದು. ಮತ್ತು ಇದು ಅಸ್ಥಾಯೀ ರೂಪದಿಂದಿರುವುದು. ಈ ಗದ್ದೆ ಅಥವಾ ಪೈರು, ಬೆಳೆವ ಭೂಮಿಯಲ್ಲಿ ನದಿಯ ನೀರು ಎಷ್ಟೇ ಹೊತ್ತು ಇದ್ದರೂ, ಅದು ಆ ಬೆಳೆಯ ಒಂದು ಅಂಶವೆಂದು ಎಂದೂ ಆಗಲಾರದು. ಆ ನೀರು, ಬೆಳೆಯಾಗಲಾರದು

(೩ನೇ ಪುಟ ನೋಡಿರಿ)

ಗುಣಹೊಂದಿದ ಕ್ಷಯರೋಗಿಗಳ ನೆರವಿಗಾಗಿ ಹೊಸ ವ್ಯಾಪಾರ, ಹೊಸ ಉದ್ಯೋಗ.

ಪುನರ್ನಿವೇಶನದಷ್ಟು ದೊಡ್ಡ ಬಂಡವಾಳ ಯಾವುದಿದೆ? ಈ ಬಂಡವಾಳಕ್ಕೆ ದೊರೆಯುವ ಲಾಭಾಂಶದ ಮೊತ್ತವನ್ನು ಗಮನಿಸಿದಾಗಲೂ, ಇದರ ನೆರವಿನಿಂದಾಗಿ ಹೊಸ ಹೊಸ ವ್ಯಾಪಾರೋದ್ಯೋಗಗಳನ್ನು ಕಲಿತ ದೀನ ಜನರ ಸುಮೋಲ್ಲಾಸವನ್ನು ಪರಿಶೀಲಿಸಿದಾಗಲೂ, ಆಗುವ ಆನಂದಲಾಭವೇ ಲಾಭ. ಕ್ಷಯರೋಗದಿಂದ ಮುಕ್ತರಾದ ಜನರು ಜೀವನವನ್ನು ಅರಳಿಸಿಕೊಂಡು ಉಪಯುಕ್ತ ಜೀವನವನ್ನು ಪುನಃ ಸ್ಥಾಪಿಸಲು ನೆರವಾಗುವುದಕ್ಕಿಂತ ಹಿರಿಯ ಸೇವೆ ಬೇರೆ ಕಾಣದು.

ಇಂಥವರ ಸಲುವಾಗಿ ನಿಮ್ಮ ರಾಜ್ಯದ ಕ್ಷಯರೋಗ ಸಂಘಕ್ಕೆ ಹಣಕಾಸು ಬೇಕಾಗುತ್ತದೆ. ಕ್ಷಯರೋಗದ ಮುದ್ರೆಗಳನ್ನು ಮಾರುವುದರ ಮೂಲಕ ಇವರು ಚಂದಾ ಎತ್ತಲು ಬಂದಾಗ ತ್ವರೆಯಿಂದ ನೀವು ಅವುಗಳನ್ನು ಕೊಳ್ಳಬೇಕು.

ಒಂದು ಕ್ಷಯಮುದ್ರೆಗೆ ಕೇವಲ ಹತ್ತು ನಯೇಪೈಸೆ

ಕ್ಷಯಮುದ್ರೆಗಳು ಬೇಕಾದಲ್ಲಿ ಇವರನ್ನು ವಿಚಾರಿಸಿರಿ:

ಮೈಸೂರು ರಾಜ್ಯದ ಕ್ಷಯರೋಗ ಸಂಘ, ಸರ್ಕಾರಿ ಟಿ. ಬಿ. ಸೆನಟೋರಿಯಮ್, ಓಲ್ಡ್ ಮದ್ರಾಸ್ ರೋಡ, ಬೆಂಗಳೂರು-೮ ಮತ್ತು ಇವರ ಏಜನ್ಸಿ ಪಡೆದುಕೊಂಡವರು.

ಕ್ಷಯರೋಗ ಮುದ್ರೆಗಳ ಮಾರಾಟದ ಹನ್ನೆರಡನೆ ಚಳವಳಿ

(ಭಾರತೀಯ ಕ್ಷಯರೋಗ ಸಂಸ್ಥೆಯ ಆಶ್ರಯದಲ್ಲಿ ನಡೆಯುವುದು)

ಸ್ಥಳದಾನ:

ನ್ಯೂ ಇಂಡಿಯ ಲೈಫ್ ಎಶ್ಯೂರೆನ್ಸ್ ಕೊ. ಲಿ., ಮುಂಬಾಯಿ.

ನವಯುಗ

ವರುಷ	ಉಡುಪಿ	ವಾರ
೪೧	೧೮-೧-'೩೭	೧೯

ಶ್ರೀ ಹುಕ್ಕೇರಿಕರರು

ಕರ್ನಾಟಕದಲ್ಲಿ ನೈಜ ಗಾಂಧಿವಾದಿ ಯೆನಿಸಿ ಯಾವುದೇ ಪದವಿಯ ಆಸೆಯಿಲ್ಲದೆ ಕರ್ತವ್ಯನಿಷ್ಠರಾಗಿ ಶ್ರದ್ಧಾವಂತರಾಗಿ ದುಡಿಯುತ್ತಿರುವ ಶ್ರೀ ರಾಮರಾವ್ ಹುಕ್ಕೇರಿಕರರನ್ನು ಸಮಕಟ್ಟುವವರು ನಮ್ಮ ನಡುವೆ ಯಾರೂ ಇಲ್ಲವೆನ್ನಬಹುದು. ಮುಂಬಯಿ ಪ್ರಾಂತದ ವಿಧಾನ ಪರಿಷತ್ತಿನ ಅಧ್ಯಕ್ಷಸ್ಥಾನವೊಂದನ್ನು ಬಿಟ್ಟರೆ ಮತ್ತಾವ ಹಿರಿಯ ರಾಜಕೀಯ ಪದವಿಗೇರದ ಅವರು ಸರಳ ಮಾನವತಾವಾದಿಗಳು ಸತ್ಕಾರ್ಯಗಳನ್ನು ಕೈಗೊಳ್ಳುವಾಗ ಸಾರ್ವಜನಿಕರ ಸಹಾಯ ತಾನಾಗಿಯೇ ಲಭಿಸುವುದು ಎಂಬ ದೃಢ ವಿಶ್ವಾಸದಿಂದ ಕಾರ್ಯಪ್ರವೃತ್ತರಾದ ಶ್ರೀ ರಾಮರಾಯರು ತಮ್ಮೆಲ್ಲ ಕಾರ್ಯಗಳಲ್ಲಿಯೂ ಕೊನೆಗೆ ಯಶಸ್ಸನ್ನೇ ಗಳಿಸಿದ್ದಾರೆ. ಧಾರವಾಡದ ಸಮೀಪವಿರುವ ವಿದ್ಯಾಗಿರಿಯು ಶ್ರೀ ಹುಕ್ಕೇರಿಕರರ ಏಕನಿಷ್ಠತೆಯ ಕಾರ್ಯಕ್ರಮಗಳಿಗೆ, ನಿರಂತರ ಪರಿಶ್ರಮಕ್ಕೆ, ಅದ್ವಿತೀಯ ಸಾಹಸಕ್ಕೆ ನಿದರ್ಶನವಾಗಿದೆ. ಓರ್ವ ಮಾನವ ಏನನ್ನು ಸಾಧಿಸಬಲ್ಲನೆಂಬುದರ ಜ್ವಲಂತ ಉದಾಹರಣೆಯೆನಿಸಿದೆ.

ಲೋಕಮಾನ್ಯರೆಂದು ಗೌರವಾನ್ವಿತರಾದ ಬಾಲಗಂಗಾಧರ ತಿಲಕರಿಂದ ಬಾಲ್ಯಾವಸ್ಥೆಯಲ್ಲಿಯೇ ಪ್ರಭಾವಿತರಾದ ಹುಕ್ಕೇರಿಕರರು ದೇಶ ಸೇವೆಯ ದೀಕ್ಷೆಯನ್ನು ಗ್ರಹಿಸಿಕೊಂಡರು. ದೇಶ ಸೇವಕನಲ್ಲಿರಬೇಕಾದ ಏಕನಿಷ್ಠತೆ, ಪರಿಶ್ರಮ ಪ್ರಿಯತೆ, ಕರ್ತವ್ಯತತ್ಪರತೆ ಮತ್ತು ನಿಸ್ವಾರ್ಥತೆ ಮೊದಲಾದ ಉಚ್ಚಗುಣಗಳಿಗೆ ಕಲಶಪ್ರಾಯರಾಗಿ ಇವರು ತಮ್ಮ ಜೀವನದ ಮಾರ್ಗವನ್ನು ಹಿಡಿದರು. ಆಜೀವ ದೇಶಕ್ಕಾಗಿ ನಿಸ್ವಾರ್ಥ ಮನೋಭಾವನೆಯಿಂದ ದುಡಿಯುವ ದೃಢ ನಿರ್ಧಾರದಿಂದ ಕಾರ್ಯಪ್ರವೃತ್ತರಾದ ಇವರು 'ಸ್ವಾರ್ಥವನ್ನು ನನ್ನ ಬಳಿಗೆ ಎಂದಿಗೂ ಸುಳಿಯಗೊಡಲಿಲ್ಲ'ವೆಂದು ಪ್ರಮಾಣಮಾಡಿ ಹೇಳುವಷ್ಟು ನಿಷ್ಕಲ್ಮಷ ಜೀವಿಯಿರುವರು. ಜನತಾ ಶಿಕ್ಷಣ ಸಮಿತಿಯ ಕಾರ್ಯಕರ್ತರಾದ ಇವರ ದೆಸೆಯಿಂದಲೇ ಹಲವಾರು ಶೈಕ್ಷಣಿಕ ಸಂಸ್ಥೆಗಳು ನಿರ್ಮಾಣಗೊಂಡು ಹಾಳು ಹಕ್ಕಿಗಳು ಹಾಡುವ ಗಿರಿಯೊಂದು ಇಂದು ವಿದ್ಯಾಗಿರಿಯಾಗಿ ಸಾವಿರಾರು ಬಾಲಕ ಬಾಲಿಕೆಯರ ಕಲರವದಿಂದ ಪ್ರತಿಧ್ವನಿತವಾಗುತ್ತಿದೆ. ಜ್ಞಾನನಿಧಿಯೂ ಅನುಭವದ ಮೂರ್ತಿಯೂ ಆದ ಇವರು ಕುಟೀರೋದ್ಯೋಗಗಳ ಬೆಳವಣಿಗೆಗೂ ಕಾರಣಪುರುಷರಾಗಿದ್ದಾರೆ. ಹುಕ್ಕೇರಿಕರರು ಇಂದು ದೇಶಸೇವಕರಿಗೆಲ್ಲ ಮಾಸ್ತರರಾಗಿದ್ದಾರೆ. ಖಾದಿ ಗ್ರಾಮೋದ್ಯೋಗ ಗ್ರಾಮಸೇವೆ, ಸಹಕಾರ ಸಂಘ ಮೊದಲಾದ ರಚನಾತ್ಮಕ ಕಾರ್ಯಗಳಲ್ಲಿ ಸಾಕಷ್ಟು ದುಡಿದ ಸರ್ವಕ್ಷೇತ್ರಗಳಲ್ಲೂ ಕೈಹಿಡಿದ ಇವರು ಗಾಂಧೀ ಸಾಹಿತ್ಯ ಪ್ರಕಟಣೆಗೂ ನೆರವಾಗಿದ್ದಾರೆ. ನಿಸ್ವಾರ್ಥತೆಯ ಬೀಜಾರೋಪಣ ಮಾಡಿದಂದೇ ಶ್ರೀ ಹುಕ್ಕೇರಿಕರರು ತ್ಯಾಗಮಯ ಜೀವನವನ್ನು ಬದುಕ ತೊಡಗಿದ್ದಾರೆ. ಶ್ರೀಯುತರು ತನ್ನ ಶಿಕ್ಷಣವನ್ನು ಮುಗಿಸಿದ ಬಳಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯಲಾರಂಭಿಸಿದರೂ ಮಹಾತ್ಮಾ ಗಾಂಧಿಯವರು ರಾಷ್ಟ್ರ ಸ್ವಾತಂತ್ರ್ಯಕ್ಕೆಂದು ಯುವಕರಿಗಿತ್ತ ಕರೆಯನ್ನು ಕೇಳಿ ಆರಂಗಕ್ಕೆ ಧುಮುಕಿದರು. ಅವರು ಉಜ್ವಲ ದೇಶಭಕ್ತರಾಗಿ, ರಾಷ್ಟ್ರಪ್ರೇಮಿಗಳಾಗಿ ದೇಶಕ್ಕಾಗಿ ದುಡಿದು ದೇಶದ ಬಿಡುಗಡೆಯಾದ ಕೆಲವೇ ಸಮಯದಲ್ಲಿ ರಾಜಕಾರಣವನ್ನು ಬಿಟ್ಟು ಮರಳಿ ಶಿಕ್ಷಣಕ್ಷೇತ್ರದತ್ತ ಹೊರಳಿದರು. ಜನತಾ ಶಿಕ್ಷಣ ಸಮಿತಿಯ ಮೂಲಕ ಹಲವಾರು ಪ್ರೌಢ ಶಾಲೆಗಳನ್ನೂ ಕಾಲೇಜುಗಳನ್ನೂ ಕಟ್ಟಿ ಅವನ್ನು ನಡೆಸಿಕೊಂಡು ಬರುವಲ್ಲಿ ಶ್ರೀ ರಾಮರಾಯರ ನಾಯಕತ್ವ ಆದರ್ಶಣೀಯವಿದೆ. ದೈನಂದಿನ ಜೀವನದಲ್ಲಿಯೂ ಇವರು ಸರಳಸುಂದರರು ಮಾತ್ರವಲ್ಲ, ನಿಯಮಬದ್ಧರು.

ಮಹಾತ್ಮಾ ಗಾಂಧಿಯವರು ಮಾತಿಗೆ ಹೆಚ್ಚು ಮನ್ನಣೆ ನೀಡದೆ ಕೃತಿಯನ್ನು ಮೆಚ್ಚುತ್ತಿದ್ದರು. ಅವರ ಗರಡಿಯಲ್ಲೇ ನುರಿತ ಹುಕ್ಕೇರಿಯವರಾದರೂ ಯಾವುದೇ ರೀತಿಯ ಆಡಂಬರಕ್ಕೆ ಮನಸೋಲುವುದಿಲ್ಲ. 'ನುಡಿದಂತೆ ನಡೆಯೆಂಬುದಕ್ಕಿಂತಲೂ ನಡೆದಂತೆ ನುಡಿ" ಎಂಬುದೇ ಇವರ ಜೀವನದ ಆದರ್ಶ. ಶ್ರೀ ಮದ್ಭಗವದ್ಗೀತೆಯಲ್ಲಿ 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬ ಕರ್ಮಫಲ ತ್ಯಾಗದ ಪಾಠವು ದೊರೆಯುತ್ತದೆ. ಶ್ರೀ ಹುಕ್ಕೇರಿಕರರಾದರೂ ಯಾವುದೇ ಫಲದಾಸೆಯಿಟ್ಟು ದುಡಿದವರಲ್ಲ; ಕರ್ತವ್ಯಭಾವನೆಯಿಂದ ದುಡಿದರು. ಅಂತೆಯೇ "ನಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ" ಎಂಬಂತೆ ಇವರು ಕೈಗೊಂಡ ಪ್ರತಿಯೊಂದು ಕಾರ್ಯಕ್ರಮವೂ ಕಲ್ಯಾಣಕಾರಕವಾದುದರಿಂದಲೇ ಅವರ ಸಾಧನೆಗಳೆಲ್ಲವೂ ಯಶಸ್ವಿಯಾದುವು. ಶ್ರೀ ಹುಕ್ಕೇರಿಕರರು ಇಂದು ೭೫ ವರ್ಷ ಪ್ರಾಯದವರು. ಆದರೂ ಇವರ ಉತ್ಸಾಹದ ರಸಗಂಗೆ ಬತ್ತಿಲ್ಲ. ನಿಸ್ವಾರ್ಥ ಕಾರ್ಯಕರ್ತರ ಒಂದು ತಂಡವನ್ನೂ ಇವರು ನಿರ್ಮಿಸುತ್ತಿದ್ದಾರೆ; ಇವರ ಶಿಷ್ಯಕೋಟಿಯು ಇವರ ಆದರ್ಶಗಳನ್ನು ಚಾಚೂ ತಪ್ಪದೆ ಅನುಸರಿಸುತ್ತಿರುವಂತೆಯೇ ಇನ್ನಿತರರೂ ಅನುಕರಿಸಬೇಕು. ಶ್ರೀ ಹುಕ್ಕೇರಿಯವರ ತ್ಯಾಗಮಯ ಜೀವನದಿಂದ ಎಲ್ಲರೂ ಸ್ಫೂರ್ತಿಗೊಳ್ಳಬೇಕು. ದೇಶ-ದೇಶ ಬಾಂಧವರ ಕಡೆಗಿರುವ ತನ್ನ ಕರ್ತವ್ಯವನ್ನು ಮರೆಯದೆ, ಅದನ್ನು ಪೂರೈಸಬೇಕು. ಸ್ವಾರ್ಥ ಮತ್ಸರ, ದ್ವೇಷ ವಂಚನೆ, ನಿಷ್ಕರ್ಮತೆ ಮೊದಲಾದುವನ್ನು ದೂರೀಕರಿಸಬೇಕು. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವಕ್ಕು" ಎಂಬಂತೆ ಸರ್ವಜ್ಞ ಕವಿಯ ಹೇಳಿಕೆಯನ್ನು ನನ್ನಿ ಮಾಡಿಕೊಟ್ಟ ಶ್ರೀ ಹುಕ್ಕೇರಿಕರರು ತನಗರ್ಪಿಸಿದ ಒಂದು ಲಕ್ಷ ರೂಪಾಯಿಗಳ ನಿಧಿಯನ್ನೂ ಜನತಾ ಶಿಕ್ಷಣ ಸಮಿತಿಗೆ ದಾನವಾಗಿ ನೀಡಿ ಉನ್ನತ ಆದರ್ಶವನ್ನು ಹಾಕಿಕೊಟ್ಟಿದ್ದಾರೆ. "ಶತಂ ಜೀವ ಶರದಂ ಶತಂ" ಎಂಬಂತೆ ಶ್ರೀಯವರು ನೂರು ವರ್ಷ ಬಾಳಬೇಕೆಂದು ನಾವು ಆಸೆಪಡುವುದು ಸಹಜವೇ. ಆದರೆ ಶ್ರೀ ಹುಕ್ಕೇರಿಯವರು 'ಕೆಲಸ ಮಾಡಲು ಶಕ್ಯವಿರುವ ವರೆಗೆ ಮಾತ್ರ ಬದುಕಬೇಕೆಂ'ದು ಇಚ್ಛಿಸುವವರು. ನಮ್ಮ ಆಸೆಯೊಡನೆ ಅವರ ಇಚ್ಛೆಯನ್ನೂ ಶ್ರೀ ಪರಮಾತ್ಮನು ಪೂರೈಸಿಕೊಡಲೆಂದು ಹಾರೈಸುತ್ತೇವೆ. ನಮ್ಮ ಯುವಜನಾಂಗವು ಶ್ರೀಯುತರು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುಂದುವರಿದರೆ, ನಮ್ಮ ಕರ್ನಾಟಕದ ಚಿತ್ರವೇ ಬದಲಾಗುವುದು. ಹಾಗಾಗಲು ನಾವು ಶ್ರಮಪಡುವಂತಾಗಲಿ.

ಶ್ರೀ ಲಕ್ಷ್ಮೀಂದ್ರ ತೀರ್ಥರು

ದಕ್ಷಿಣ ಭಾರತದ ಸುಪ್ರಸಿದ್ಧ ತೀರ್ಥಕ್ಷೇತ್ರವೆನಿಸಿದ, ದ್ವೈತ ಸಂಪ್ರದಾಯ ಪ್ರವರ್ತಕ ಶ್ರೀ ಮನ್ಮಧ್ವಾಚಾರ್ಯರ ಕಾರ್ಯಕ್ಷೇತ್ರವಾದ ಉಡುಪಿಯ ಪರ್ಯಾಯ ಮಹೋತ್ಸವವು ಸಾಂಪ್ರದಾಯಿಕ ಸಮಾರಂಭವಾದರೂ ಅದು ಆಕರ್ಷಣೀಯವಿದೆ. ದಿನಂಪ್ರತಿ ಸಹಸ್ರಾರು ಜನರಿಗೆ ಅನ್ನಸಂತರ್ಪಣೆ ನಡೆಯುವ ಏಕಮೇವ ಸ್ಥಾನವೆನಿಸಿದ ಉಡುಪಿಯಲ್ಲಿ ಶ್ರೀ ಮಧ್ವಾಚಾರ್ಯರು ಸ್ಥಾಪಿಸಿದ್ದ ಅಷ್ಟಮಠಗಳಿದ್ದು ಇವುಗಳ ಯತಿವರ್ಯರು ಶ್ರೀ ಕೃಷ್ಣನ ಪೂಜಾ ಸೇವೆಯನ್ನು ಮಾಡುತ್ತ ಶ್ರೀಕೃಷ್ಣ ಮಠದ ಸಕಲ ಜವಾಬ್ದಾರಿಯೊಡನೆ ಖರ್ಚುವೆಚ್ಚಗಳನ್ನೂ ಎರಡು ವರ್ಷ ಕಾಲ ನಡೆಸುವಂತೆ ಅಧಿಕಾರ ಪೀಠವೇರುವ ಸಮಾರಂಭವೇ ಪರ್ಯಾಯ ಮಹೋತ್ಸವ. ಇದೇ ತಾ. ೧೭ನೆ ಬುಧವಾರ ದಿನ ಪೂರ್ವಾಹ್ನ ತಾಸು ಒಕ್ಕೆ ಈ ಮೊದಲು ಪರ್ಯಾಯ ಪೀಠಾರೂಢರಾಗಿದ್ದ ಶ್ರೀ ಪುತ್ತಿಗೆ ಮಠಾಧೀಶರಾದ ಶ್ರೀ ಸುಜ್ಞಾನೇಂದ್ರ ವಿದ್ಯಾವಲ್ಲಭ ಶ್ರೀ ಪಾದಂಗಳವರು ತನ್ನ ಪರ್ಯಾಯಾವಧಿಯಲ್ಲಿ ಶ್ರೀ ಕೃಷ್ಣನ ಸೇವೆಯನ್ನು ಯಥಾಸಾಧ್ಯ ಸಾಂಗವಾಗಿ ಪೂರೈಸಿ, ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರಿಗೆ ಅಧಿಕಾರವನ್ನು ಒಪ್ಪಿಸಿಕೊಟ್ಟರು. ಶ್ರೀ ಸುಜ್ಞಾನೇಂದ್ರ ತೀರ್ಥರು ಘನವಿದ್ವಾಂಸರಾಗಿದ್ದು ನ್ಯೂನಾತಿರೇಕಕ್ಕೆ ಆಸ್ಪದಕೊಡದೆ ತನ್ನ ಪರ್ಯಾಯವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಶ್ರೀ ಶೀರೂರು ಶ್ರೀ ಪಾದಂಗಳವರು ದ್ವೈತಮತದ ಆದರ್ಶ ತತ್ವಜ್ಞಾನಿಗಳಾಗಿದ್ದು ಸ್ವಯಂ ವಾಗ್ಮಿಗಳೂ ಲೇಖಕರೂ ಆಗಿದ್ದಾರೆ. ಇದಕ್ಕೆ ಮೊದಲು ಇವರು ಎರಡು ಪರ್ಯಾಯಗಳನ್ನು ಆದರ್ಶ ರೀತಿಯಲ್ಲಿ ಪೂರೈಸಿ ಮೂರನೆಯ ಬಾರಿಗೆ ತನ್ನ ಕರ್ತವನ್ನು ನಿರ್ವಹಿಸಲು ಬದ್ಧಕಂಕಣರಾಗಿದ್ದಾರೆ. ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ಪರ್ಯಾಯ ಪೀಠವನ್ನೇರಿದ ಈ ಸಂದರ್ಭದಲ್ಲಿ ಧರ್ಮಪೀಠಗಳ ಕರ್ತವ್ಯಗಳನ್ನವರು ಸಮುಚಿತವಾಗಿ ನಿರ್ವಹಿಸುವಂತೆ ಶಕ್ತಿಯನ್ನು ಶ್ರೀ ಕೃಷ್ಣನು ಕರುಣಿಸಲಿ; ಶ್ರೀ ಶ್ರೀಗಳವರ ಆಳವಾದ ದ್ವೈತ ಸಂಪ್ರದಾಯ ಜ್ಞಾನ ಮತ್ತು ಧಾರ್ಮಿಕ ಸದ್ಭಾವನೆಗಳಿಂದ ಅವರ ಶಿಷ್ಯಕೋಟಿಯು ಅನುಗೃಹೀತವಾಗುವಂತಾಗಲಿ. ಧಾರ್ಮಿಕ ಮಠ ಸಂಸ್ಥೆಗಳು ದೇವರ ಪೂಜಾಸೇವೆಯನ್ನು ಮಾತ್ರ ಮಾಡಿಕೊಂಡಿದ್ದರೆ ಸಾಲದು. ನಮ್ಮ ಧಾರ್ಮಿಕ ಸಂಸ್ಥೆಗಳು ಹಿಂದಿನಂತೆ ಸಂಸ್ಕೃತಿಯ ಕೇಂದ್ರಗಳಾಗಬೇಕು. ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ ಅವು ಪ್ರವೃತ್ತವಾಗಬೇಕು. ಈ ದಿಸೆಯಲ್ಲಿ ನಮ್ಮ ಅಷ್ಟಮಠಗಳೂ ಮುಂದುವರಿದು, ಆಸ್ತಿಕತೆಯನ್ನೂ ತಮ್ಮ ಸಂಪ್ರದಾಯವನ್ನೂ ಜತೆಗೆ ಭಾರತೀಯ ಸಂಸ್ಕೃತಿಯನ್ನೂ ಪ್ರಚಾರಪಡಿಸುವಲ್ಲಿ ಹಿಂದುಳಿಯಬಾರದು. ವರುಷಕ್ಕೆ ವೆಂಕಟರಮಣ ದೇವಾಲಯದ ಸಹಾಯದಿಂದಲೇ ಅಲ್ಲಿ ವಿಶ್ವವಿದ್ಯಾನಿಲಯವೊಂದು ರಚಿತವಾಗಿರುವುದನ್ನು ನಾವು ಸ್ಮರಿಸಿಕೊಳ್ಳಬಹುದು.

ಅಲ್ಲಲ್ಲಿಯ ಸುದ್ದಿ ಸಾರ

ಧರ್ಮ ಸುಬ್ರಹ್ಮಣ್ಯ ಪ್ರಯಾಣಿಕರ ದುರವಸ್ಥೆ ಪುತ್ತೂರಿಂದ ನಿಂತಿಕಲ್ಲುತನಕ ಧರ್ಮ ಸುಬ್ರಹ್ಮಣ್ಯ ರಸ್ತೆಯ ಇಕ್ಕೆಲಗಳಲ್ಲಿರುವ ಹತ್ತೆಂಟು ಗ್ರಾಮಗಳ ಕಾಲು ಲಕ್ಷಕ್ಕೂ ಮಿಕ್ಕಿದ ಜನರ ತುರ್ತಿನ ಪ್ರಯಾಣಕ್ಕಾಗಿ ಇರುವುದು ಒಂದು ಬಸ್ಸು ಮಾತ್ರ. ಬೆಳಿಗ್ಗೆ ಸುಬ್ರಹ್ಮಣ್ಯದಿಂದ ಹೊರಟ ಈ ಬಸ್ಸು ಪುತ್ತೂರಿಗೆ ಬಂದು ಮರಳಿ ನಿಂತಿಕಲ್ಲಿಗೂ, ಅಲ್ಲಿಂದ ತಿರುಗಿ ಪುತ್ತೂರಿಗೂ, ಅಲ್ಲಿಂದ ಮರಳಿ ಪಂಜಕ್ಕೂ ಅಲ್ಲಿಂದ ತಿರುಗಿ ಪುತ್ತೂರಿಗೂ, ಪುತ್ತೂರಿಂದ ಕಡೇದಾಗಿ ಸುಬ್ರಹ್ಮಣ್ಯಕ್ಕೂ ಓಡಾಡುತ್ತದೆ. ಈ ಅವಿಶ್ರಾಂತ ಓಡಾಟದಿಂದ ಇದು ಆಗಾಗ್ಗೆ ಹಾಳಾಗುವುದೂ ಇದೆ. ಕಾಲಕ್ಕೆ ಸರಿಯಾಗಿ ಬಾರದಿರುವುದು ವಾಡಿಕೆ ಇದರಿಂದಾಗಿ ಪ್ರಯಾಣಿಕರಿಗೆ ಯಾವ ಪ್ರಯಾಣ ಸೌಕರ್ಯವೂ ಇಲ್ಲದಂತಾಗಿದೆ. ಆದುದರಿಂದ ಸಂಬಂಧಪಟ್ಟವರು ಈ ವಿಚಾರ ಪರ್ಯಾಲೋಚಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಇನ್ನಿತರ ಕಂಪೆನಿಗಳ ಬಸ್ಸುಗಳನ್ನಾದರೂ ಒದಗಿಸಿಕೊಡಬೇಕಾಗಿ ಸವಣೂರು ಪಂಚಾಯತ ಚೇರ್‌ಮೆನ್ ಶ್ರೀ ಎಸ್. ವೆಂಕಪ್ಪ ರೈಯವರು ಬರೆಯುತ್ತಾರೆ.

ಮುಂಬಾಯಿಯಲ್ಲಿ ಇನ್ನೊಂದು ಕರ್ನಾಟಕ ಸಂಘವು — ಕಳೆದ ತಾ. 31 ರಂದು ಪಂತ್ ನಗರದಲ್ಲಿ ಶ್ರೀ ಜಿ. ಎಸ್. ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾಯಿತು. ಶ್ರೀ ಬಿ. ವಿ. ಸೆಟ್ಟಿ ಪಣಿಯೂರು ೧ ವರು ಸ್ವಾಗತಿಸಿ ಸಂಘದ ಆವಶ್ಯಕತೆಯನ್ನು ವಿವರಿಸಿದರು. ಶ್ರೀ ಎನ್. ಎಸ್. ಸುವರ್ಣರು ವರದಿಯನ್ನು ಓದಿದ ಮೇಲೆ ಅಧ್ಯಕ್ಷರು ಈ ಪರಿಸರದಲ್ಲಿ ತುಂಬಾ ಉತ್ಸಾಹಿ ಕನ್ನಡಿಗರು ಇರುವುದರಿಂದ ಈ ಹೊಸ ಸಂಘವು ಯಶಸ್ವಿಯಾಗುವುದೆಂದರು. ಬಳಿಕ ಶ್ರೀ ಬಿ. ವಿ. ಸೆಟ್ಟಿ ಪಣಿಯೂರು ಅಧ್ಯಕ್ಷರಾಗಿರುವ ಹಲವರು ಸದಸ್ಯರ ಕಾರ್ಯಕಾರಿ ಸಮಿತಿ ರಚಿಸಲ್ಪಟ್ಟಿತು.

ಮುಂಬಾಯಿ — ಕಾಪು ಕನ್ಯಾನಗುತ್ತು ಕಾಂತಪ್ಪ ಸೆಟ್ರ ಅಳಿಯ, ಮ, ಉಡುಪಿ ಮೂಡನಿಡಂಬೂರು ದಿ| ಕೃಷ್ಣಯ್ಯ ಸೆಟ್ರ ಪುತ್ರ ಸದಾಶಿವ ಸೆಟ್ರ ವಿವಾಹವು ಪಂಜಬಾಕಿ ಹಾರುಗುತ್ತು ಸುಬ್ಬಣ್ಣ ಸೆಟ್ರ ಸೊಸೆ, ಮ, ಹೊಗ್ರ ಸೆಟ್ರ ಪುತ್ರಿ ಕುಮಾರಿ ಸುಲೋಚನ ಸೆಟ್ಟಿಯವರೊಂದಿಗೆ ಮುಂಬಾಯಿಯ ಕಾಮಾ ಹಾಲ್‌ನಲ್ಲಿ ವಿಜೃಂಭಣೆಯಿಂದ ನೆರವೇರಿತು. ನಗರದ ಹಲವಾರು ಅಧ್ಯ ಮಹನೀಯರು ಈ ಕಲ್ಯಾಣ ಕಾರ್ಯದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ಬರುವ ವಾರದ ಸಂಚಿಕೆಯು ಪ್ರಜಾರಾಜ್ಯ ವಿಶೇಷಾಂಕವಾಗಿ ಕನ್ನಡದ ಹಲವಾರು ಪ್ರಸಿದ್ಧ ಲೇಖಕರ ಲೇಖನ, ಕವನಗಳೊಂದಿಗೆ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು ಈ ವಿಶೇಷ ಸಂಚಿಕೆಯ [illegible] ಈ ವಾರ ಬರೇ ಎಂಟು ಪುಟಗಳನ್ನು ಮಾತ್ರ ಕೊಡುವಂತಾದುದಕ್ಕೆ ವಿಷಾದಿಸುತ್ತೇವೆ.

ಮೆನೇಜರ್

ಉದ್ಘಾಟನೆ— ಆದಿವುಡುಪಿ ಕಿರಿಯ ಬುನಾದಿ ಮತ್ತು ಹಾ| ಪ್ರಾ| ಶಾಲೆಯ ಅಭಿವೃದ್ಧಿ ಸಮಿತಿಯ ವತಿಯಿಂದ ಆರಂಭಿಸಲ್ಪಟ್ಟ ಗಂಜಿ ವಿತರಣಾ ಕಾರ್ಯಕ್ರಮದ ಆರಂಭವು ತಾ 8ರಂದು ಶ್ರೀಮತಿ ಸುಸಂಬಾ ಬಾಯಿ ಇವರ ಆಧ್ಯಕ್ಷತೆಯಲ್ಲಿ ನೆರವೇರಿತು. ಡಾ. ವ್ಯಾಸರಾಯರು ಈ ಬಗ್ಗೆ 100ರೂ.ಗಳ ಉದಾರ ದಾನವನ್ನಿತ್ತರು. ಶ್ರೀಮತಿ ರಾಜಮ್ಮ ಇವರು ಗಂಜಿ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಾಲಾ ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನು ಸಮರ್ಪಿಸಿದರು.

ಆಡಳಿತ ಮಂಡಳಿ ಸಭೆ— ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರ ಸಂಘದ ಆಡಳಿತ ಮಂಡಳಿಯ ಸಭೆಯು ಉಡುಪಿ ಮುಕುಂದ ನಿವಾಸದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಟಿ. ಎ ಪೈಗಳವರ ಅಧ್ಯಕ್ಷತೆಯಲ್ಲಿ ತಾ 9—1—62ರಲ್ಲು ಜರಗಿತು. ಸಂಘದ ಕಾರ್ಯದರ್ಶಿ ಶ್ರೀ ಕೆ. ಕಾರ್ಲು ಗಣಪಯ್ಯ ಸೆಟ್ಟರು ತಾ. 16–12–61ರಲ್ಲಿ ಜರಗಿದ ಮಹಾ ಸಭೆಯ ನಿರ್ಣಯಗಳ ಸ್ತು ಸಂಘದ ಹಿಂದಿನ ನಿರ್ಣಯಗಳನ್ನು ವಿದ್ಯಾಮಂತ್ರಿಗಳಿಗೂ, ಜಿಲ್ಲಾ ಉಭಯ ಮಂತ್ರಿಗಳಿಗೂ, ಬೆಂಗಳೂರು ಮತ್ತು ಮೈಸೂರಿನ ವಿದ್ಯಾಧಿಕಾರಿಗಳಿಗೂ ಕಳುಹಿಸಿದ ವಿಚಾರಗಳನ್ನು ಸಭೆಯ ಮುಂದಿಟ್ಟರು. ಇಂದಿನ ಸಭೆಗೆ ಶ್ರೀ ಎಫ್. ಎಕ್ಸ್. ಡಿ. ಪಿಂಟೊ, ಎಂ. ಎಲ್ ಎ. ಅವರೂ ಶ್ರೀ ಎಸ್. ಧರ್ಮಸಾಮ್ರಾಜ್ಯನವರೂ ಹಾಜರಿದ್ದರು. ಸರಕಾರವು ಅನಿರೀಕ್ಷಿತವಾಗಿ ತಾ. 19—6—61ರಲ್ಲು ಮದ್ರಾಸು ವಿದ್ಯಾಮಸೂದೆಯ ಕೆಲವಂಶ ತಿದ್ದುಪಡಿ ಮಾಡಿ ದೆಸೆಯಿಂದ, ದ. ಕ ಜಿಲ್ಲೆಯ ಖಾಸಗಿ ಶಾಲೆಗಳಿಗುಂಟಾದ ಕಳವಳದ ವಿಚಾರದಲ್ಲಿ ಸದ್ರಿ ಸರಕಾರದ ತಿದ್ದುಪಡಿಯನ್ನು ಮೈಸೂರು ಪ್ರಾಂತ್ಯಕ್ಕೆ ಏಕರೂಪವಾದ ವಿದ್ಯಾಮಸೂದೆಯು ಜಾರಿಗೆ ಬರುವ ವರೆಗೆ ತಡೆಹಿಡಿಯ ಬೇಕಾಗಿಯೂ ಮೈಂಟನೆನ್ಸ್ ಗ್ರಾಂಟು ಸಂಪೂರ್ಣ ಕೊಡಬೇಕಾಗಿಯೂ, ತಾ. 1—4—57ರಿಂದ ಏರಿದ ಸ್ಕೇಲಿನ ಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಮೈಂಟನೆನ್ಸ್ ಗ್ರಾಂಟು ಕೊಟ್ಟಂತೆ ಈ ಜಿಲ್ಲೆಯಲ್ಲಿಯೂ ಕೊಡಬೇಕಾಗಿಯೂ ವಗೈರೆ ಮಾಡಿದ ನಿರ್ಣಯಗಳಿಗೆ ನ್ಯಾಯವು ದೊರೆಯುವಂತೆಯೂ, ಸದ್ರಿ ತಿದ್ದುಪಡಿ ರೂಲನ್ನು ತಡೆಹಿಡಿಯುವಂತೆಯೂ ತಾನು ಪ್ರಯತ್ನಿಸುವೆನಾಗಿ ಶ್ರೀ ಪಿಂಟೊರವರು ಆಶ್ವಾಸನೆಯನ್ನಿತ್ತರು ಮಾತ್ರವಲ್ಲದೆ ಈ ಸಂಬಂಧವಾಗಿ ರಿಟ್ ಪಿಟಿಶನ್ ಮಾಡುವರೆ ಕಾನೂನು ತಜ್ಞರ ಸಲಹೆ ಕೇಳುವ ಬಗ್ಗೆ ಶ್ರೀ ಎ ಜೆ. ಆಳ್ವ, ಕುಕ್ಕಿಲು ಗಣಪಯ್ಯ ಸೆಟ್ಟಿ, ಬನ್ನಾಡಿ ಸುಬ್ಬಣ್ಣ ಹೆಗ್ಡೆ ಮೊದಲಾದವರ ಒಂದು ಸಮಿತಿಯನ್ನು ರಚಿಸಲಾಯಿತು.

ವಿದೇಶ ಪ್ರಯಾಣ— ಸರಕಾರದ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟಿರುವ ಬೊಂಬಾಯಿಯ ಪ್ಲೇಸ್ಟಿಕ್ಸ್ ಮತ್ತು ಲಿನೋಲಿಯಮ್ಸ್ ರಫ್ತು ಅಭಿವೃದ್ಧಿ ಕೌನ್ಸಿಲಿನ ಪಬ್ಲಿಸಿಟಿ ಆಫೀಸರರಾದ ಶ್ರೀ ಜಯನ್, ಫೆರ್ನಾಂಡಿಸರು ರಫ್ತು ಅಭಿವೃದ್ಧಿ ಯೋಜನಾ ನಿಯೋಗಿಯಾಗಿ ಇತಿಯೋಪಿಯ ಮತ್ತು ಸೌದಿ ಅರೇಬಿಯಾಗಳಿಗೆ ಇದೇ ತಾ. 7ರಂದು ವಿಮಾನ ಮೂಲಕ ತೆರಳಿರುವರು. ಶ್ರೀ ಫೆರ್ನಾಂಡಿಸರು ಉಡುಪಿಯ ಶ್ರೀಮತಿ ಮತ್ತು ಶ್ರೀಯುತ ರೋಕ್ ಫೆರ್ನಾಂಡಿಸರ ಪುತ್ರರಾಗಿದ್ದಾರೆ.

ಉಡುಪಿಯ ಲಾ ಕಾಲೇಜಿನಲ್ಲಿ- ಇದೇ ತಾ 12ರಂದು ಮೈಸೂರು ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ವಿದ್ಯಾರ್ಥಿಗಳನ್ನು ದ್ದೇಶಿಸಿ ಮಾತನಾಡುತ್ತಾ ನ್ಯಾಯಪರಿಪಾಲನೆ ಮತ್ತು ದಾನ ಇವು ಭಾರತದ ಹಿರಿಮೆಯೆಂದೂ ಭಾರತದ ವಕೀಲರು ವಿದೇಶಿಯ ಬ್ಯಾರಿಸ್ಟರ್‌ಗಳನ್ನು ಕೂಡಾ ಹಿಂದೆ ಹಾಕುವ ಪ್ರವೀಣತೆಯಿಂದ ಪೂರ್ವ ಸಿದ್ಧರೆಂದೂ ಇಂದಿನ ವಿದ್ಯಾರ್ಥಿಗಳು ಈ ಪರಂಪರೆಯನ್ನು ಕಾಯ್ದುಕೊಳ್ಳುವಂತಾಗಬೇಕೆಂದೂ ಮುಂತಾಗಿ ಹೇಳಿದರು. ಆರಂಭದಲ್ಲಿ ಯೂನಿಯನ್ ಅಧ್ಯಕ್ಷ ಎಲ್. ಜೆ. ಸುವಾರಿಸರು ಸ್ವಾಗತಿಸಿದರು. ಡಾ| ಟಿ. ಎಂ ಎ. ಪೈಗಳು ಶ್ರೀ ನಿಟ್ಟೂರರ ಪರಿಚಯ ಮಾಡಿಕೊಡುತ್ತಾ ಹಿರಿಯರೂ ಅನುಭವಶಾಲಿಗಳೂ ಆದ ಶ್ರೀ ರಾಯರ ಮಾತುಗಳು ಲಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕ ಹಾಗೂ ಲಾಭದಾಯಕವಾಗಲೆಂದರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಎ ಶಂಕರ ನಾರಾಯಣ ಹೆಬ್ಬಾರರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ— ವಾರ್ಷಿಕೋತ್ಸವವು ಇದೇ ತಾ. 30ನೇ ಶನಿವಾರ ಸಂಜೆ 5–30ಕ್ಕೆ ಸಬ್ ಜಡ್ಜ್ ಶ್ರೀ ಜಿ. ಬಿ. ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ನೆರವೇರಲಿದೆ.

ಉಡುಪಿ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ— ಶ್ರೀ ರಾಘವೇಂದ್ರ ಕೃಷ್ಣ ಭಟ್ಟರ ನೇತೃತ್ವದಲ್ಲಿ ತಾ. 3–2–1962ರಿಂದ ತಾ 5–2–62ರ ವರೆಗೆ ನಡೆಯುವ ಅಷ್ಟಗ್ರಹ ಯೋಗದ ನಿಮಿತ್ತ ಲೋಕಕಲ್ಯಾಣಾರ್ಥವಾಗಿ ಹರಿಕೀರ್ತನೆ, ಭಜನೆ, ಭಾಗವತ ವಾಚನ ಮೊದಲಾದ ಕಾರ್ಯಕ್ರಮಗಳು ತಾ. 1—9—61ರಿಂದ ನಡೆಯುತ್ತಿವೆ. ಈ ಸಂಬಂಧ ಶ್ರೀ ಭಟ್ಟರು ಅಷ್ಟಗ್ರಹಯೋಗ ವಿಚಾರ ಮತ್ತು ಸಾಮುದಾಯಿಕ ಪ್ರಾರ್ಥನೆ ಎಂಬ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿ ಧರ್ಮಾರ್ಥವಾಗಿ ವಿತರಿಸುತ್ತಿರುವರು.

ಅ. ಕ. ನಿರುದ್ಯೋಗಿ ಶಿಕ್ಷಕ-ಶಿಕ್ಷಕಿಯರ ಸಮ್ಮೇಳನವು— ತಾ. 2 2–62ರಂದು ನೇಗಿನಹಾಳದಲ್ಲಿ ಜರಗಲಿದೆ. ಅದೇ ದಿನ ರಾತ್ರಿ ಸಂಘದ ಸಹಾಯಾರ್ಥವಾಗಿ ನಾಟಕ ಪ್ರದರ್ಶನವಿದೆ. ಈಗಾಗಲೇ ಹಲವು ಸಂಘ, ಸಂಸ್ಥೆಗಳು ಸಮ್ಮೇಲನಕ್ಕೆ ಸಹಾಯ ಮಾಡಿವೆ. ಪ್ರತಿಯೊಬ್ಬ ನಿರುದ್ಯೋಗಿ ಶಿಕ್ಷಕ—ಶಿಕ್ಷಕಿಯರು ವರ್ಗಣಿಯಾಗಿ ರೂ. 1/-ನ್ನೂ ಪ್ರತಿನಿಧಿ ಫೀಯಾಗಿ ರೂ. 1/-ನ್ನೂ ಕಳುಹಿಸಿಕೊಡಬೇಕಾಗಿ ಸಂಘವು ವಿನಂತಿಸುತ್ತದೆ.

ಸುಬ್ರಹ್ಮಣ್ಯ— ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಕಿರಿಷಷ್ಟಿ ಮಹೋತ್ಸವದ ಸಂಬಂಧವಾಗಿ ಪ್ರಿನ್ಸಿಪಾಲ್ ಶ್ರೀ ಎಸ್. ಆರ್. ರೋಹಿಡೇಕರರ ಅಧ್ಯಕ್ಷತೆಯಲ್ಲಿ ಇದೇ ತಾ. 11ರಂದು ಧರ್ಮ ಸಮ್ಮೇಲನ ಜರಗಿ ಶ್ರೀ ಯು. ರಾಜರಾಮ ಮಲ್ಯರಿಂದ ಭಾಷಣ, ಶ್ರೀ ಬಿ. ವಿ. ಬಾಳಿಗರಿಂದ ಕವಿತಾವಾಚನ, ಶ್ರೀ ಎಂ. ಜಿ ಭಾಗವತರ್ ಮತ್ತು ಸಂಗಡಿಗರಿಂದ ಸಂಗೀತ ನಡೆಯಿತು. ಆರಂಭದಲ್ಲಿ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಸ್ವಾಗತಿಸಿದರು. ಅಂತ್ಯದಲ್ಲಿ ನಾರಾಯಣ ಶೇಖರು ಧನ್ಯವಾದಗಳನ್ನರ್ಪಿಸಿದರು

ಕೈಮಗ್ಗ ಸಪ್ತಾಹ:— ಅಖಿಲ ಭಾರತ ಕೈಮಗ್ಗದ ಸಪ್ತಾಹವನ್ನು ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನ ಪರಾರದಲ್ಲಿ ತಾ. 7ರಂದು ಶ್ರೀ ಬಿ ಮಂಜಯ್ಯ ಹೆಗ್ಡೆಯವರು ಉದ್ಘಾಟಿಸುತ್ತಾ ಈ ಕೈಗಾರಿಕೆಯ ವೈಶಿಷ್ಟ್ಯವನ್ನು ವಿವರಿಸಿದರು. ಆರಂಭದಲ್ಲಿ ಶ್ರೀ ಮುಂಡಪ್ಪ ಮಾಸ್ತರರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಪಿ. ಎಸ್ ಆರ್. ವೆಂಕಟ್ರಾಮನ್ ಅವರು ಧನ್ಯವಾದಗಳನ್ನಿತ್ತರು.

ದೇಶ ಹಿತಸಾಧನೆಗೆ
ಕಾಂಗ್ರೆಸ್‌ಗೆ ಬೆಂಬಲ ನೀಡಿರಿ

ಭಾರತವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ರಂಗಗಳಲ್ಲಿ ತಾನು ಇದುವರೆಗೆ ಅನುಸರಿಸುತ್ತ ಬಂದ ಧೋರಣೆಗಳನ್ನೇ ಮುಂದಕ್ಕೂ ಅನುಸರಿಸುವುದು. ಈ ಧೋರಣೆಗಳಿಂದ ಜಗತ್ತಿನಲ್ಲಿ ಭಾರತದ ಘನತೆ ಹೆಚ್ಚಿದೆ. ಕಾಂಗ್ರೆಸ್ಸನ್ನು ವಿರೋಧಿಸುತ್ತಿರುವ ಕೆಲವು ಪಕ್ಷಗಳು ಈ ಧೋರಣೆಯನ್ನು ಟೀಕಿಸುತ್ತವೆ ಆದುದರಿಂದ ಚುನಾವಣೆಗಳಲ್ಲಿ ಜನರು ಕಾಂಗ್ರೆಸಿಗೆ ಬೆಂಬಲವಿತ್ತು ಭಾರತದ ನೀತಿಯನ್ನು ಸಮರ್ಥಿಸಿದ್ದೇವೆಂದು ವಿಶ್ವಕ್ಕೆ ತೋರಿಸಿ ಕೊಡಬೇಕಾಗಿದೆ.

ಹಳ್ಳಿಗಳ ಉದ್ಧಾರ

ಚುನಾವಣೆಗಳು ಬರುತ್ತವೆ; ಹೋಗುತ್ತವೆ. ಆದರೆ, ದೇಶವು ಕೈಗೊಂಡಿರುವ ಸಮಾಜವಾದವನ್ನು ಸ್ಥಾಪಿಸುವ ಮಹಾ ಕಾರ್ಯವು ಉಳಿದೇ ಉಳಿಯುವುದು. ಪ್ರತಿಯೊಬ್ಬನಿಗೂ ಬೆಳೆಯಲು ಸಮಾನಾವಕಾಶ ನೀಡುವಂತಹ, ಕೆಲವೇ ಜನರು ಶ್ರೀಮಂತರಾಗುವುದು ಅಸಾಧ್ಯವೆನಿಸುವಂತಹ, ಹಾಗೂ ಬಡವನಾಗಿ ಯಾರೂ ಉಳಿಯಲು ಸಾಧ್ಯವಾಗದಂತಹ ಸಮಾಜವನ್ನು ಸ್ಥಾಪಿಸಲು ಜನರು ವಿಧಾಯಕ ಚಟುವಟಿಕೆಗಳಲ್ಲಿ ಲಕ್ಷ್ಯವನ್ನು ಕೇಂದ್ರೀಕರಿಸಬೇಕು. ಭಾರತದ ಪ್ರಗತಿಯನ್ನು ಅಳೆಯುವ ನಿಜವಾದ ಅಳತೆಗೋಲೆಂದರೆ, ಹಳ್ಳಿಗಳಿಗೆ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆಯೆಂಬುದಾಗಿದೆ. ಜನತೆಯ ಪೈಕಿ ಬಹು ಸಂಖ್ಯಾಕರು ಹಳ್ಳಿಗಳಲ್ಲಿ ವಾಸಿಸುತಿದ್ದು ಅವರ ಅಭಿವೃದ್ಧಿಯಾದ ಹೊರತು ಭಾರತದಲ್ಲಿ ನಿಜವಾದ ಪ್ರಗತಿಯಾಗುವಂತಿಲ್ಲ.

ಶಾಂತಿಯ ಪ್ರಯತ್ನ ಅಗತ್ಯ.

ಪಾಕಿಸ್ತಾನ ಮತ್ತು ಚೀನಗಳ ಪ್ರಶ್ನೆ ಇನ್ನೂ ಪರಿಹಾರವಾಗದವುಗಳು. ಸೈನ್ಯ ಕಳಿಸಿ ಅವರನ್ನು ಹೊರಹಾಕಿರಿ ಎಂದು ಕೆಲವರು ಯಾವಾಗಲೂ ಒದರುತ್ತಿರುತ್ತಾರೆ. ಬೇರೆ ಹಲವು ಕ್ರಮಗಳನ್ನು ಕೈಗೊಳ್ಳದೆಯೇ ಈ ಕ್ರಮ ಕೈಗೊಳ್ಳುವುದೆಂದರೆ, ಮೂರ್ಖತನವಾಗುವುದು. ನಾವು ಚೀನದೊಂದಿಗಿರುವ ಗಡಿಯಲ್ಲಿ ನಮ್ಮ ಸಂರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುತಿದ್ದೇವೆ; ಬಗು ಶಸ್ತ್ರಾಸ್ತ್ರ-ವೆಚ್ಚಗಳಿಂದ ರಸ್ತೆಗಳನ್ನು ನಿರ್ಮಿಸುತಿದ್ದೇವೆ. ಪಾಕಿಸ್ತಾನದ ಸಾಮಾನ್ಯ ಜನರಲ್ಲಿ ಭಾರತದ ಬಗ್ಗೆ ಸಿಟ್ಟು ಇಲ್ಲ. ಆದರೆ, ಅಲ್ಲಿಯ ಸರಕಾರ ಹಾಗೂ ಧುರೀಣರು ಭಿನ್ನರಾಗಿದ್ದಾರೆ ಪ್ರತಿಯೊಂದು ಸಮಸ್ಯೆಯನ್ನೂ ಯುದ್ಧದಿಂದ ಬಗೆಹರಿಸಬೇಕೆಂದು ಸೂಚಿಸುವುದು ಸರಿಯಲ್ಲ; ಶಾಂತಿಯುತವಾಗಿ ಬಗೆಹರಿಸಲು ಎಲ್ಲ ಪ್ರಯತ್ನಗಳೂ ನಡೆಯಬೇಕು.

ಹಿಂದೂ ರಾಷ್ಟ್ರದ ಕನಸು

ಜನಸಂಘ, ಆರ್. ಎಸ್. ಎಸ್. ಹಾಗೂ ಹಿಂದೂ ಮಹಾಸಭೆಗಳು 'ಹಿಂದೂ ರಾಷ್ಟ್ರ'ದ ಮಾತನಾಡುತ್ತಿವೆ. ಅವರು ದಿವಂಗತ ಜಿನ್ನಾರ "ಮುಸ್ಲಿಂ ರಾಷ್ಟ್ರ" ಹಾಗೂ ದ್ವಿರಾಷ್ಟ್ರ ತತ್ವಗಳ ಅನುಕರಣೆ ಮಾಡುತಿದ್ದಾರೆನ್ನಬಹುದು ಜಿನ್ನಾರ ಧೋರಣೆಗಳನ್ನೇ ಅನುಸರಿಸುವುದಾದರೆ, ಭಾರತವು ಹೋಳು ಹೋಳಾಗುವುದು. ಇದೇ ರೀತಿ ಸಿಖ್ ಜಾತೀಯವಾದವೂ ಕೂಡ ಶ್ರೀ ಅಶೋಕ ಮೆಹತರು ಕೂಡ ಪರಿಜಾಬಿ ಸುಬಾ ರಚಿಸಬೇಕೆಂಬ ಜಾತೀಯ ಬೇಡಿಕೆಯನ್ನು ಬೆಂಬಲಿಸಿದುದು ಅತ್ಯಾಶ್ಚರ್ಯಕರವಿದೆ.

ಕಣ್ಣಿದ್ದೂ ಕುರುಡರು

ಸ್ವತಂತ್ರ ಪಕ್ಷವು ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ಬದಲಾವಣೆಗೂ ವಿರೋಧವಾಗಿದೆ ಅದು ಹೇಳುತ್ತಿರುವಂತೆ ಆದರೆ, ಜಗತ್ತು ಸ್ಥಗಿತಗೊಳ್ಳುವುದು. ರಾಜ—ಮಹಾರಾಜರನ್ನೂ ಜಮೀನ್ದಾರರನ್ನೂ ಪುನಃ ಅವರವರ ಸ್ಥಾನಗಳಿಗೆ ತರಬೇಕೆನ್ನುತ್ತದೆ, ಆ ಪಕ್ಷ. ರಾಜ ಮಹಾರಾಜರಿಗೆ ಆದ ಹಾನಿಯ ಬಗ್ಗೆ ಕಣ್ಣೀರು ಸುರಿಸುತ್ತಿರುವ ಅದು ಹಳೆಯ ಪದ್ಧತಿಯ ದುರಾಡಳಿತದಲ್ಲಿ ಶತಮಾನಗಳಿಂದ ಲಕ್ಷಾವಧಿ ಜನರು ಬಳಲುತ್ತಿದ್ದರೆಂಬ ಬಗ್ಗೆ ಸ್ವಲ್ಪವೂ ವಿಚಾರಮಾಡುತ್ತಿಲ್ಲ. ವರ್ತಮಾನ ಹಾಗೂ ಭವಿಷ್ಯತ್ಕಾಲಗಳೇ ಇಲ್ಲವೆನ್ನುವಂತೆ ಸ್ವತಂತ್ರ ಪಕ್ಷವು ಭೂತಕಾಲಕ್ಕೆ ಜೋತುಬೀಳುತ್ತಿದೆ.

ಸಮಗ್ರತೆಯ ರಕ್ಷಣೆ

ರಾಷ್ಟ್ರೀಯ ಸಮನ್ವಯದ ಪ್ರಶ್ನೆಯನ್ನು ಪೂರ್ಣವಾಗಿ ಬಗೆಹರಿಸದಿದ್ದರೆ, ಭಾರತವು ಅಂತರಿಕವಾಗಿ ಚೂರು ಚೂರಾಗುವುದು. ನಮ್ಮ ಮುಂದಿರುವ ಕಾರ್ಯ ಬಹಳ ದೊಡ್ಡದಾಗಿದೆ. ಎಲ್ಲ ಜನರ ಏಕೀಕೃತ ಪ್ರಯತ್ನವಿಲ್ಲದಾದರೆ, ಅದು ಪೂರ್ಣವಾಗುವಂತೆಯೇ ಇಲ್ಲ. ಸಾರ್ವಜನಿಕ ಹಾಗೂ ಆರ್ಥಿಕ ಕ್ರಾಂತಿಯನ್ನು ನಾವು ಕೈಗೊಂಡಿದ್ದು ಇದನ್ನು ಪೂರ್ತಿಗೊಳಿಸಲು ನಾವು ರಾಷ್ಟ್ರೀಯತ್ವದ ಭಾವನೆಯನ್ನು ಉಂಟುಮಾಡಬೇಕಾಗಿದೆ.

ಸಹಕಾರಿ ಬೇಸಾಯ

ಸಹಕಾರಿ ಬೇಸಾಯ ಸಂಘಗಳನ್ನು ಅಭಿವೃದ್ಧಿಪಡಿಸದಿದ್ದರೆ, ನಮ್ಮ ಒಕ್ಕಲುತನಕ್ಕೆ ಭವಿಷ್ಯತ್ತೇ ಇಲ್ಲ. ಸಹಕಾರಿ ಬೇಸಾಯವೆಂದರೆ, ಒಕ್ಕಲಿಗರಿಂದ ಜಮೀನನ್ನು ಕಿತ್ತುಕೊಳ್ಳುವುದಲ್ಲ. ಸಹಕಾರಿ ಬೇಸಾಯವು ಬೇಕಾದವರು ಸ್ವಯಂಪ್ರೇರಣೆಯಿಂದ ಅದನ್ನು ಆರಂಭಿಸಬಹುದು. ಆ ಬಗ್ಗೆ ಸ್ವಲ್ಪವೂ ಒತ್ತಾಯ ಹೇರುವುದಿಲ್ಲ. ಅದು ಸರಿಹೋಗದಿದ್ದರೆ, ವೈಯಕ್ತಿಕ ಬೇಸಾಯಕ್ಕೆ ತಿರುಗಿ ಹೋಗಬಹುದು.

(ಪ್ರಧಾನಿಗಳ ಭಾಷಣದಿಂದ)

ಹಣದ ಜೋಪಾಸನೆಗೆ.....

ಅಂಗಿಯ ಕಿಸೆಗಿಂತ ಮನೆ ಮೇಲು;

ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ

ಆಡಳಿತ ಆಫೀಸು: ಮಂಗಳೂರು 1.

ಜ್ಯೋತಿಷಿಯಲ್ಲದವನ ಜ್ಯೋತಿಷ್ಯ

ಅಷ್ಟಗ್ರಹ ಯೋಗದ ದುಷ್ಪ್ರಭಾವ

ಅಷ್ಟಗ್ರಹ ಯೋಗವು ನಿಕಟವಾಗುತ್ತಿರುವಂತೆ ಅದರಿಂದ ವಿವಂಚನೆ ಗೀಡಾದವರು ಜಾಗತಿಕ ಸ್ಥಿತಿಗತಿಗಳನ್ನು ಎತ್ತಿ ಮಾತಾಡಿಕೊಳ್ಳುವುದು ಕಂಡು ಬರುತ್ತಿದೆ. ಪ್ರಧಾನಿ ನೆಹರು ರವಿಚಂದ್ರಾದಿಗ್ರಹಗಳು ನಮ್ಮ ಭವಿಷ್ಯವನ್ನು ಬರೆಯುವುದಿಲ್ಲವೆಂದೂ ನಾವೇ ನಮ್ಮ ಭವಿಷ್ಯದರ್ಶಿಗಳೆಂದೂ ಅಂದಿರುವುದು ಲೌಕಿಕ ದೃಷ್ಟಿಯಿಂದ ಒಪ್ಪಬಹುದಾದರೂ ಜಾಗತಿಕ ಸಮತೋಲವು ತಪ್ಪುವಂತಹ ವಿಲಕ್ಷಣ ಹಾಗೂ ಅನಿರೀಕ್ಷಿತ ಘಟನೆಗಳು ನಡೆದಾಗ ನವಗ್ರಹಗಳ ಪ್ರಭಾವದ ಕಡೆಗೆ ಮನಸ್ಸು ಹರಿಯುವುದು ಅವಾಸ್ತವವೆನ್ನುವಂತಿಲ್ಲ. ಖಗೋಳ ಶಾಸ್ತ್ರದಲ್ಲಿ ಬಹಳಷ್ಟು ಮುಂದುವರಿದಿದ್ದು, ಮಾನವನ ಉತ್ಥಾನ ಪತನಗಳು ನವಗ್ರಹಗಳ ಚಲನವಲನಗಳನ್ನೇ ಹೊಂದಿಕೊಂಡಿದೆಯೆಂದು ದೃಢವಾಗಿ ಅನಾದಿ ಕಾಲದಿಂದಲೂ ನಂಬಿಕೊಂಡು ಬಂದಿರುವ ಭಾರತದ ಮಟ್ಟಿಗೆ ಹೇಳುವುದಾದರೆ, ಅಷ್ಟಗ್ರಹ ಯೋಗವನ್ನು ಕಡೆಗಣಿಸುವುದು ಸಾಧ್ಯವಿಲ್ಲ.

ಎಂಟು ಗ್ರಹಗಳು ಒಂದು ರಾಶಿಯಲ್ಲಿ ಒಟ್ಟು ಸೇರುವುದಕ್ಕೆ ಬಹಳಷ್ಟು ಮೊದಲೇ ನಮ್ಮ ದೇಶದಲ್ಲಿ ಪ್ರಕೃತಿಯ ಪ್ರಕೋಪಕ್ಕೆ ಪ್ರಾರಂಭವಾಯಿತು. ನಿಕಷ್ಟು ಮಳೆ ಸುರಿಯದೆ ಬರಗಾಲಕ್ಕೆ ಗುರಿಯಾಗುತಿದ್ದ ಪ್ರದೇಶಗಳಲ್ಲಿ ಎಣಿಕೆಗೂ ಮೀರಿದ ಪ್ರಮಾಣದಲ್ಲಿ ವರ್ಷಪಾತವಾಗಿ ಅತಿವೃಷ್ಟಿಯಿಂದಾಗಿ ಕಷ್ಟವನ್ನು ಕಾಣಿಸಿಕೊಳ್ಳುವಂತಾಯಿತು. ಅಂತೆಯೇ ಹಿಂದಿನ ವರ್ಷಗಳಿಗೆ ಹೋಲಿಸಿ ಹೇಳುವುದಾದರೆ, ಈ ವರ್ಷ ಅತಿವೃಷ್ಟಿಯು ಸರ್ವತ್ರ ನಡೆದಿತ್ತು; ಇದರಿಂದಾಗಿ ಪ್ರಾಣಹಾನಿಗಳು ಮಾತ್ರವಲ್ಲ ದವಸಧಾನ್ಯಗಳ ಅಭಾವವೂ ಸಂಪತ್ತಿನಾಶವೂ ನಡೆದಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಶೀತ ಪ್ರದೇಶವೆನಿಸಿದ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಉಷ್ಣಮಾನವು ಶೂನ್ಯಕ್ಕಿಂತಲೂ ಇಳಿದ ನಿದರ್ಶನ ಮತ್ತು ಅತಿಶೀತದ ಪರಿಣಾಮವಾಗಿ ಸಾವಿರಾರು ಜನರ ಮರಣ ಸಂಭವಿಸಿದುವು.

ರಾಜಕಾರಣದ ಬರಡೆಮ್ಮೆಯನ್ನೇ ಕರೆಯುವುದು ಭಾರತೀಯರ ಹವ್ಯಾಸವಾಗಿ ಸ್ವಾತಂತ್ರ್ಯಾನಂತರದಲ್ಲಿ ಪರಿಣಮಿಸಿದೆ. ಈ ಕಾರಣದಿಂದ ಅಷ್ಟಗ್ರಹ ಯೋಗದ ಪ್ರಭಾವವು ರಾಜಕೀಯ ಕ್ಷೇತ್ರದ ಮೇಲೂ ಬೀಳದಿಲ್ಲ. ಗೋವಾ ವಿಮೋಚನೆಯ ಘಟನೆಯು ಸಂತೋಷಕರವಾದುದರಿಂದ ಯೋಗವು ಸತ್ಪರಿಣಾಮ ಬೀರಿದೆಯೆಂದು ತೋರಬಹುದು ಆದರೆ, ಪೋರ್ಚುಗೀಸರ ಮೇಲೆ ಈ ಯೋಗವು ನಮ್ಮಗಿಂತಲೂ ಉಗ್ರವಾಗಿ ಪ್ರಭಾವ ಹಾಕಿರುವುದರಿಂದ ನಮಗೆ ಗೆಲುವಾಯಿತು ಎನ್ನಬೇಕು. ಹಾಗಿದ್ದರೂ ಯೋಗದ ದುಷ್ಪ್ರಭಾವದಿಂದಲೇ ಭಾರತದ ಗೋವಾ ಕಾರ್ಯಾಚರಣೆಯು ವಿದೇಶೀಯರಲ್ಲಿ ವಿಚಿತ್ರ ಪರಿವರ್ತನೆಗೆ ಕಾರಣವಾಗಿದೆಯೆಂಬುದನ್ನು ಯಾರು ಅಲ್ಲವೆನ್ನಲು ಸಾಧ್ಯ? ಕೊಳೆತು ನಾರುತ್ತಿರುವ ಕಾಶ್ಮೀರದ ಪ್ರಶ್ನೆ ಮರಳಿ ಮೇಲೆದ್ದು ಆಣಬೆಯಂತೆ ಕಾಣಿಸಿಕೊಳ್ಳಲು ಹವಣಿಸುತ್ತಿರುವುದಕ್ಕೆ ಕಾರಣವೇನು? ಇದು ವರೆಗೆ ನಿರ್ವಿಘ್ನವಾಗಿ ನಡೆದುಬರುತಿದ್ದ ಕಾಂಗ್ರೆಸ್ ಅಧಿವೇಶನವು ಈ ಬಾರಿ ಶ್ರೀಕೃಷ್ಣಪುರಿಯಲ್ಲಿ ನಡೆದಾಗಗೊಂದಲವೇಳಲು ಅಷ್ಟಗ್ರಹ ಯೋಗವೇ ಕಾರಣವಲ್ಲವೆ? ಕಳೆದೆರಡು ಬಾರಿಯೂ ಕಾಣದಿದ್ದ ರೀತಿಯಲ್ಲಿ ಸಾರ್ವತ್ರಿಕ ಚುನಾವಣೆಗಳ ಸ್ಪರ್ಧಾಳುಗಳಾಗುವ ಉತ್ಸಾಹದಿಂದ ಪರಸ್ಪರ ಕಸ್ತಿಪಂದ್ಯಾಟಗಳು ಈ ಬಾರಿ ಏಕೆ ಆಗುತ್ತಿವೆ? ಆಳುವ ಪಕ್ಷ ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿಯ ಸಿಫಾರಸುಗಳ ಮೇಲೆ ಟೀಕೆ ಟಿಪ್ಪಣಿಗಳು ಹುಟ್ಟಿ ಟಿಕೇಟು ಸಿಗದ ನಿಷ್ಠಾವಂತ ಕಾಂಗ್ರೆಸಿಗರು ಅತೃಪ್ತ ಕಾಂಗ್ರೆಸಿಗರಾಗುವುದಕ್ಕೆ ಅಷ್ಟಗ್ರಹಗಳುಬಂದು ಮನೆಯಲ್ಲಿ ಸೇರಿದುವೇ ಕಾರಣ. ಪ್ರಸಪಾ ಪಕ್ಷದವರು ಕೃಪಲಾನಿಯವರನ್ನು ಜೀವಂತ ಕಳೆದುಕೊಂಡುದು, ಕಮ್ಯುನಿಸ್ಟರು ತಮ್ಮ ಅದ್ವಿತೀಯ ನಾಯಕ ಅಜಯಘೋಷರನ್ನುಸಟು ಕಾಲಕ್ಕೂ ಅಗಲಿದುದು ಈ ಯೋಗದ ಪರಿಣಾಮವೇ ಸರಿ.

ಗೋಮಾಂತಕರು ಸದ್ಯ, ವಿದೇಶೀಯರ ಬಂಧದಿಂದ ಮುಕ್ತರಾದೆವೆಂದೂ ತಮ್ಮ ಮೇಲೆ ಅಷ್ಟಗ್ರಹಯೋಗ ಒಳ್ಳೆಯ ಪರಿಣಾಮ ಮಾಡಿವೆಯೆಂದೂ ಯೋಚಿಸಬಹುದು ಆದರೆ, ಈ ಯೋಗದ ಪರಿಣಾಮವಾಗಿ ಮುಂಬರುವ ವರ್ಷಗಳಲ್ಲಿ ಅವರು ತಾವೀಗ ಪಡುತ್ತಿರುವ ಸುಖಕ್ಕೆ ಎರವಾಗಲೇ ಬೇಕಾಗುವುದು ಖಂಡಿತ. ಗೋವಾ ಬಾಟಲಿ ವ್ಯವಹಾರಸ್ಥರು ಈ ಯೋಗದ ಕುದೃಷ್ಟಿಗೆ ಈಗಾಗಲೇ ಬಿದ್ದುಬಿಟ್ಟದ್ದಾರೆ

ಅಂತಾರಾಷ್ಟ್ರೀಯವಾಗಿ ನೋಡುವುದಾದರೂ ಪಾಶ್ಚಾತ್ಯ ವಸಾಹತು ಶಾಹಿಗಳ ಪಂಚಾಂಗವೇ ಕಂಪಿಸತೊಡಗಿದೆ. ನೆದರ್‌ಲೆಂಡು ಈಗಲೇ ಇದರ ಅನುಭವ ಮಾಡುತ್ತಿದೆ ಅದರ ಮಿತ್ರರಾಷ್ಟ್ರಗಳು ಕಿಂಕರ್ತವ್ಯಃ ಎಂದು ಕಣ್ಣುಬಿಡುತ್ತಿವೆ. ಪೆರುವಿನಲ್ಲಿ ಶಿಖರ ಬಿದ್ದು ಬಹಳಷ್ಟು ನಷ್ಟವಾಯಿತು. ಇಂಡೊನೇಶ್ಯ ಕತ್ತಿಹಿರಿಯತೊಡಗಿದೆ. ಜರ್ಮನಿ ಬೂದಿ ಮುಚ್ಚಿದ ಕೆಂಡದಂತೆ ಒಳಗೊಳಗೇ ಕುದಿಯುತ್ತಿದೆ ಕಾಂಗೊ ವಿಕ್ಷುಬ್ಧ ಮಹಾ ಸಾಗರವಾಗಿದೆ ಇರಾಕು ಕುವೈತವನ್ನು ಕಬಳಿಸಲು ಹವಣಿಸುತ್ತದೆ. ಚೀನಾ ಉಪಖಂಡ ಭಾರತವನ್ನು ಹರಿದು ತಿನ್ನುವ ತಹತಹದಿಂದಿದೆ. ಸಿಲೋನು ಗಂಭೀರ ಪರಿಸ್ಥಿತಿಯ ಕಾಯದಯ ಅನುಭವ ಮಾಡುತ್ತಿದೆ ಪಾಕಿಸ್ಥಾನದ ಮಿಲಿಟರಿ ಅಧ್ಯಕ್ಷರ ನಿರಂಕುಶತೆ ಹೆಚ್ಚುತ್ತಿದೆ. ಅಫಘಾನಿಸ್ಥಾನದಲ್ಲಿ, ಟ್ಯುನೀಸಿಯಾ, ಆಲ್ಜೀರಿಯಾಗಳಲ್ಲಿ ಕಿಚ್ಚು ಎದ್ದಿದೆ ದಕ್ಷಿಣ ಆಫ್ರಿಕೆಯ ಬಿಡಾರವೇ ಬೇರೆಯಾಗಿದೆ. ಅಮೆರಿಕೆ ರಶ್ಯಗಳು ಪರಸ್ಪರ ಅಂಜಿ ಮೌನವಾಗಬೇಕಾಗಿ ಬಂದಿದ. ಹೀಗೆ ಎಲ್ಲೆಲ್ಲಿಯೂ ಒಂದಲ್ಲ ಒಂದು ವ್ಯಾಧಿಯ ರೂಪದಲ್ಲಿ ಗ್ರಹಯೋಗದ ಪ್ರಭಾವ ಬಿದ್ದಿರುವುದನ್ನು ಕಂಡೂ ಕಂಡೂ ಸುಮ್ಮನಿರುವುದು ಸಾಧ್ಯವೆ? ಇಂಗ್ಲೆಂಡ್ ಭಾರತನೊಡನೆ ಕ್ರಿಕಟ್ ಆಡಿಯೂ ಸೋತು ಹೋಗುವಂತಾಗಬೇಕೆ?

ಇವೆಲ್ಲವನ್ನೂ ನಾವೇ ಮಾಡಿಕೊಂಡದ್ದು ಎಂದಾದರೆ ಜ್ಯೋತಿಷ್ಯದ ಗ್ರಹಗಳನ್ನು ನಂಬದಿರಬಹುದು ಆದರೆ, ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿರುವ ನಾವು ತಿಳಿ ತಿಳಿದೂ ಕಾಲಿಗೆ ಕತ್ತಿಹಾಕಿಕೊಳ್ಳುವಷ್ಟು ಮೂರ್ಖರಲ್ಲ ಎಂತಲೇ ಇವೆಲ್ಲ ಆ ದುಷ್ಟ ಗ್ರಹಗಳು ಕೆಟ್ಟ ಕಲಸಗಳು!

—ರಾ.

ಅನಂತದ ಸಾಧನೆ

(೩ನೇ ಪುಟದಿಂದ)

ಅದಕ್ಕೆ ಮುಂದೆ ಮುಂದೆ ಹೋಗಿ ಸಮುದ್ರ ರೂಪವನ್ನು ಧರಿಸ ಬೇಕಾಗಿರುತ್ತದೆ. ನಿಧಾನವಾಗಿ ಪ್ರವಹಿಸುವ ನೀರಿನ ಪ್ರಕೃತಿಯು ಸಮುದ್ರದೊಡನೆ, ಸಹಜವಾಗಿ ಸೇರಿಕೊಳ್ಳುವುದು. ಪ್ರವಹಿಸುವ ನದಿಯ ನೀರು, ತಾನು ಪ್ರವಹಿಸಿ ಹೋಗುವ ಕ್ಷೇತ್ರಗಳಲ್ಲಿ ತುಂಬಾ ಉಪಕಾರಿಯಾಗುವುದಾದರೂ, ಅದರ ದೃಷ್ಟಿ ಸಮುದ್ರದ ಕಡೆಗೇ ಇರುವುದು. ಮತ್ತು ಅದರ ಗತಿಗೆ ಅಂತಿಮ ವಿಶ್ರಾಂತಿಯೂ ಅಲ್ಲಿಯೇ ಲಭಿಸುವುದು.

ನದಿಯು ಸಮುದ್ರ ರೂಪದಲ್ಲಿ ಪರಿವರ್ತನೆಯಾಗಬಹುದು, ಆದರೆ ಅದು ಸಮುದ್ರವನ್ನು ತನ್ನ ಒಂದು ಭಾಗವನ್ನಾಗಿ ಪರಿವರ್ತಿಸಿಕೊಳ್ಳಲಾರದು. ಅನಿರೀಕ್ಷಿತವಾದ ಪ್ರವಾಹದಿಂದ ನದಿಯು ಒಂದು ಕೆರೆಯನ್ನು ಸುತ್ತುವರಿದರೂ, ನದಿಯು ತನ್ನ ಒಂದು ಭಾಗವನ್ನ ಸೃಷ್ಟಿಮಾಡಿದಂತೆ ಆಗಲಾರದು. ಏಕೆಂದರೆ ನದಿ ಅಲ್ಲಿಂದಲೂ ಮುಂದೆ, ಪ್ರವಹಿಸಿ ಹೋಗುವುದಾಗಿಯೇ ಇರುವುದು. ನದಿಯು ಪ್ರವಾಹವು ಸಮುದ್ರದೊಡನೆ ಐಕ್ಯವಾಗಿ ಸಮುದ್ರವಾಗಿ ಪರಿವರ್ತನೆ ಹೊಂದುವ ತನಕ—ಅದಕ್ಕೆ ಶಾಂತಿ ಲಭಿಸಲಾರದು (ಸಶೇಷ)

ವಿದ್ಯಾದಾಯಿನೀ ಶಾಲಾ ಹಳೆ ವಿದ್ಯಾರ್ಥಿ ಸಂಘದ ರಜತೋತ್ಸವ ಆಚರಣೆ — ಸುರತ್ಕಲ್ ವಿದ್ಯಾದಾಯಿನೀ ಶಾಲಾ ಹಳೆ ವಿದ್ಯಾರ್ಥಿ ಸಂಘದ ರಜತೋತ್ಸವ ಸಮಿತಿ ಮತ್ತು ಕಾರ್ಯನಿರ್ವಾಹಕ ಮಂಡಳಿಯ ಸಂಯುಕ್ತ ಸಭೆಯು ಕಳೆದ ತಿಂಗಳ ಅಂತ್ಯದಲ್ಲಿ ಜರಗಿ ಸಂಘದ ರಜತೋತ್ಸವ ಸಮಾರಂಭವನ್ನು 1962ನೆಯ ಎಪ್ರಿಲ್ ತಿಂಗಳ ಎರಡನೆಯ ಯಾ ಮೂರನೆಯ ವಾರದಲ್ಲಿ ಜರಗಿಸುವುದೆಂದೂ, ಅಗಲೇ ಸಂಘವು ಶಾಲೆಗೆ ಕಾಣಿಕೆಯಾಗಿ ಒಪ್ಪಿಸಬೇಕೆಂದಿರುವ ಬಹಿರಂಗ ರಂಗ ಮಂಟಪದ ಶಂಕು ಸ್ಥಾಪನಾ ಸಮಾರಂಭವನ್ನು ಜರಗಿಸುವುದಾಗಿಯೂ, ನಿಧಿ ಸಂಗ್ರಹಣೆಯ ಕಾರ್ಯವನ್ನು 1962ನೆಯ ನಶಂಬರ ತಿಂಗಳ ವರೆಗೆ ಮುಂದುವರಿಸುವುದೆಂದೂ ತೀರ್ಮಾನಿಸಲಾಯಿತು ರಜತೋತ್ಸವ ಸ್ಮಾರಕ ಸಂಚಿಕೆಯೊಂದನ್ನು ಪ್ರಕಟಿಸುವುದಾಗಿಯೂ, ಅದಕ್ಕೆ ಬೇಕಾದ ಲೇಖನ ಮತ್ತು ಜಾಹಿರಾತುಗಳನ್ನು ಫೆಬ್ರವರಿ ತಿಂಗಳ 15ನೆಯ ತಾರೀಕಿನೊಳಗೆ ಸಂಗ್ರಹಿಸುವುದಾಗಿಯೂ ನಿರ್ಣಯಿಸಲಾಯಿತು.

ವಿದ್ಯಾದಾಯಿನೀ ಶಾಲಾ ಹಳೆ ವಿದ್ಯಾರ್ಥಿಗಳು ಮತ್ತು ಅಭಿಮಾನಿಗಳು ಸ್ವಹಸ್ತಗಳಿಂದ ತನು, ಮನ, ಧನಗಳ ಮೂಲಕ ಸಂಘವು ಕೈಗೊಂಡಿರುವ ಕಾರ್ಯವು ಯಶಸ್ವಿಯಾಗಿ ನೆರವೇರುವಂತೆ, ಸಹಕರಿಸ ಬೇಕಾಗಿ ರಜತೋತ್ಸವ ಸಮಿತಿ ಮತ್ತು ಸಂಘದ ಕಾರ್ಯದರ್ಶಿಯು ವಿನಂತಿಸುತ್ತಾರೆ,

1—1—1962 ರಿಂದ
ಉಚಿತವಾಗಿ
ಹಣ ವರ್ಗಾವಣೆ

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟರುಗಳಿಗೆ ಕೆನರಾ ಬ್ಯಾಂಕ್ ಈಗ ಹೊಸ ಅನುಕೂಲತೆಗಳನ್ನು ನೀಡುತ್ತದೆ

ನಮ್ಮ ಎಲ್ಲಾ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟರುಗಳಿಗೆ ದಿನವೊಂದಕ್ಕೆ ರೂ 1,000ಗಳ ವರೆಗೆ ಉಚಿತವಾಗಿ ಅಂಚೆ ವರ್ಗಾವಣೆ ಅನುಕೂಲತೆ ದೊರೆಯುತ್ತದೆ.

ನಮ್ಮ ಯಾವುದೇ ಶಾಖೆಯಲ್ಲಿ ಸೇವಿಂಗ್ಸ್ ಬ್ಯಾಂಕ್ ಅಕೌಂಟ್ ಹೊಂದಿರುವ ಯಾವ ಪಾರ್ಟಿಯ ಅಕೌಂಟಿಗಾದರೂ ಈ ಹಣ ವರ್ಗಾವಣೆ ಮಾಡಬಹುದು.

ನಮ್ಮ ಬ್ಯಾಂಕಿನ ಯಾವುದೇ ಶಾಖೆಯ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟರುಗಳು ಬ್ಯಾಂಕಿನ ಯಾವ ಶಾಖೆಯಿಂದಲಾದರೂ ಈ ಉಚಿತ ಹಣ ವರ್ಗಾವಣೆಯ ಅನುಕೂಲತೆ ಪಡೆಯಬಹುದು

ವಿವರಗಳಿಗೆ ದಯವಿಟ್ಟು ನಿಮ್ಮ ಹತ್ತಿರದ ಶಾಖೆಯ ಮ್ಯಾನೇಜರರೊಡನೆ ವಿಚಾರಿಸಿರಿ

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906)

—: **115** ಶಾಖೆಗಳು ನಿಮ್ಮ ಸೇವೆಯಲ್ಲಿ :—

ಭಾಗಾಕಾರ

ಸಿರಿಪತಿ

ರಾಮು ಗಣಿತದಲ್ಲಿ ಇಡೀ ಶಾಲೆಯಲ್ಲಿಯೇ ಹೆಸರುಗೊಂಡಿದ್ದ, ಅವನಕ್ಕ ಕಮಲೆಗಿಂತ ಅವನೇ ಜಾಣನೆಂದು ಮನೆಯಲ್ಲಿಯೂ ಶಾಲೆಯಲ್ಲಿಯೂ ತೀರ್ಮಾನವೇ ಆಗಿತ್ತು!

ಒಮ್ಮೆ ಊರ ಪಂಚಾಯ್ತ ಕಚೇರಿಯಲ್ಲಿ ಸಂಜೆ ವಿಶೇಷ ಕಾರ್ಯಕ್ರಮವೊಂದಿತ್ತು. ಭಾಷಣದ ನಂತರ ನಾಟಕದ ಏರ್ಪಾಡು ನಡೆದಿತ್ತು!

ಕಮಲೆ ಹಾಗೂ ರಾಮು ಸಮೀಪದಲ್ಲಿದ್ದ ಈ ಸುಸಂಧಿ ಕಳಕೊಳ್ಳುವರೇ? ಇಬ್ಬರೂ ಸಂಜೆ ಊಟದ ಬಗ್ಗೆ ಹೊಟ್ಟೆ ತುಂಬಾ ಇಡ್ಲಿ ತಿಂದೇ ಹೊರಟರು!

ಪಂಚಾಯ್ತ ಕಚೇರಿಯ ವರಾಂಡದಲ್ಲಿ ಹುಡುಗರ ಬಗ್ಗೆ ರಂಗಮಂಟಪದ ಸಮೀಪದ ಮುಂಭಾಗದಲ್ಲಿ ಕೂಡ್ರುವ ವ್ಯವಸ್ಥೆ ಇತ್ತು!

ಕಮಲೆಗೆ ತುಂಟ ರಾಮು ಎಲ್ಲಿಯಾದರೂ ಗಲಾಟೆ ಮಾಡಿಯಾನೆಂಬ ಅಂಜಿಕೆ! ಆದರೆ ಅವನನ್ನು ಕರೆದೊಯ್ಯದಿದ್ದರೆ ನೆಲಗಡಲೆಗೆಂದು ದೊರೆಯುವ ಒಂದಾಣೆಗೆ ಕುತ್ತು! ಹೀಗಾಗಿ ಸಂಗಡ ಕರೆದೊಯ್ಯಲೇ ಬೇಕಾಯಿತು!

ಕಾರ್ಯಕ್ರಮದ ಪ್ರಾರಂಭದಲ್ಲಿ ಮುಂದೆ ಮಂತ್ರಿವರ್ಯರಾಗಲಿರುವ, ನರಸಿಂಗರಾವ್ (ಎಸೆಂಬ್ಲಿ ಮೆಂಬರರು) ತಮ್ಮ ಬಿರುಸು ಗಾಂಭೀರ್ಯದ ಚುರುಕು ಭಾಷಣವನ್ನು ಪಟಪಟಿಸಿದರು.

ಹೊಟ್ಟೆ ತುಂಬಿದ್ದರಿಂದಲೋ ಏನೋ ರಾಮುವಿನ ಕಣ್ಣು ತೂಗ ತೊಡಗಿತು! ರಂಗಮಂಟಪದ ಮುಂದೆಯೇ ಅಕ್ಕನ ಕಾಲ್ಗೆ ಲೆಧಿಂಬಾಗಿಸಿಕೊಂಡು ಶಯನ ಮಾಡಿದ ರಾಮು ಪಾಪ! ಅವನಿಗೆ ಮಂಟಪದಲ್ಲಿ ನಿಂತು ಮಾತಾಡುವ ಪ್ರಚಂಡ ಭಾಷಣ ಅರ್ಥವೆಲ್ಲಿಂದಾದೀತು"

ಅಂತೂ ರಾಮು ನಿದ್ರೆ ಮಾಡಿದ್ದರಿಂದ ಕಮಲೆ ಗೆದ್ದೆನೆಂದಳು. ಅವಳಿಗೆ ತನ್ನ ಗೆಳತಿಯರೊಂದಿಗೆ ಭಾಷಣ ಕೇಳಲು ಅನುಕೂಲವಾಗಿತ್ತು."

ಇನ್ನೇನು ಭಾಷಣ ಮುಗಿಯುವುದರಲ್ಲಿತ್ತು ಊರಿನ ಜನವೆಲ್ಲ ಸೇರಿದ್ದರು" ಭಾಷಣ ಮುಗಿದ ನಂತರ ೧೦ ನಿಮಿಷಗಳಲ್ಲಿ ನಾಟಕ—ನಾಜೂಕಯ್ಯ ಶುರುವಾಗುವುದೆಂದು ತಿಳಿಸಿ ರಂಗಸ್ಥಳ ಖಾಲಿಯಾಗಲಿರುವಾಗ ಸುಷುಪ್ತಾವಸ್ಥೆಯಲ್ಲಿದ್ದ ರಾಮು ರಂಗಮಂಟಪದ ಪಕ್ಕದಲ್ಲಿ ಅನಿರೀಕ್ಷಿತವಾಗಿ ಎದ್ದು ನಿಂತು ಹಲುಬಿದ "ಭಾಗಾಕಾರ ಬಹು ಸುಲಭ. ಭಾಜಕದ ಅಂಶಛೇದಗಳನ್ನು ಸ್ಥಳಾಂತರಿಸಿ ಗುಣಿಸಿದರ—ಭಾಗಾಕಾರ ಬರುವದು ಎಂದೆನ್ನುತ್ತಾ—ಪೂರ್ತಿ ಎಚ್ಚರುಗೊಂಡು ಅಮ್ಮನನ್ನು ಎಣಿಸಿ ಕೂಗತೊಡಗಿದ!! ಧ್ವನಿವಾಹಕ ಡಿಸ್ ಕನೆಕ್ಟ್ ಮಾಡುವ ಮೊದಲೇ ನಮ್ಮ ರಾಮುವಿನ ಮಾತು ಜನರಿಗೆಲ್ಲ ಕೇಳಿಸಿತು. ಎಲ್ಲರೂ 'ಹೋ' ಎನ್ನುತ್ತಾ ಕಣ್ಣೊರಸಿ ನಿಂತಿರುವ ರಾಮುವನ್ನು ಗುರ್ತಿಸಿದರು.

ಅಲ್ಲಿ ಕುಳಿತ ಗುರುಗಳು ಮಾತ್ರ ರಾಮುವಿಗೆ ಗಣಿತದಲ್ಲಿರುವ ಆಸಕ್ತಿಯನ್ನು ಮನಸ್ಸಿನಲ್ಲಿಯೇ ಪ್ರಶಂಸಿಸಿದರು

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S C. 556/೫9 R. E. P. 715/61

ಅರ್ಜಿದಾರ— ವಿಶ್ವೇಶ್ವರ ಹೊಳ್ಳ.

ಯೆದ್ರಿರು— ಪ್ರಭಾಕರ ರಾವ್ ಕೂಡಾ

ಎದ್ರಿರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಎದ್ರಿರು- 1) ಪ್ರಭಾಕರ ರಾವ್ 2) ಶಿವರಾಮ ರಾವ್ ಬಿಜೂರು ಶಿವರಾಯರ ಮಕ್ಕಳು.

3) ರಾಮದಾಸ ರಾಮಕೃಷ್ಣಯ್ಯ ಬಿಜೂರು—

ಕುಂದಾಪುರ ತಾಲ್ಲೂಕು, ಬಿಜೂರು ಗ್ರಾಮಸ್ಥರು

ಮೇಲ್ಕಂಡ ಅಪೀಲ್‌ಜಾರಿಯ ಡಿಕ್ರಿಯ ಖೈವೆಜಿನ ವಸೂಲಿ ಕುರಿತು ಮೃತ ಬಿಜೂರು ಬಾಲಚಂದ್ರ ರಾಯನ ಆಸ್ತಿ ಬಾಬ್ತು ಪ್ಲವ ಸಂ|ರದ ಆದಿಯಿಂದ ಬರತಕ್ಕ ಉಟ್ಟುವಳಿ ವಸೂಲುಮಾಡುವರೆ ರಿಸೀವರ ನೇಮಕ ಮಾಡುವರೆ ಅರ್ಜಿದಾರನು ದಾಖಲುಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 24_1_62ಕ್ಕೆ ತನ್ನಿಗೆಯಿಟ್ಟಿರುವದ್ರಿಂದ ಆ ಕುರಿತು ಯೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜೀರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ.

M. Ananthayya,

Advocate for petitioner.

ಕುಂದಾಪುರ, 9—1—62

ಉಡುಪಿಯ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಜನವರಿ ತಾ. ೨೨ ಮತ್ತು ೨೩ ರಲ್ಲಿ ಪ್ರದರ್ಶಿತವಾಗಲಿರುವ "ಅಮೇರಿಕದಲ್ಲಿ ವಿದ್ಯಾರ್ಥಿ ಜೀವನ" ಚಿತ್ರ ನಿರೂಪಕದ ಒಂದು ದೃಶ್ಯ.

ಮರವು ಮಾತಾಡಿಸಿದಾಗ....

(೨ನೇ ಪುಟದಿಂದ)

ಡ್ಡೋರ ಸಾಹಸ ಡಾಕ್ಟರರೂ ಅವರ ಕಡೇನೇ."

"ಹೌದು, ದೂಮ ಹೊರಗೆ ದೊಡ್ಡ ಮನುಷರಾಂಗೆ ನಮ್ಮ ಉದ್ಧಾರ ಮಾಡೋರಂತ ಎಲ್ಲೆಲ್ಲೂ ಹೆಸರೇ ಆ ದಿನ ನೋಡು. ನಿನ್ಗೆ ನೆನ್ಪಿದೇಂತ ಕಣ್ತದೆ. ಆ ದೊಡ್ಡ ದೊರೆಗಳ ಕೈಬೆಚ್ಚಗೆ ಮಾಡಿ ಒಪ್ಪೊಂದು ಮರಾ ಸಾಗೀಸಲಿಲ್ವ" ನಾ ವಾಗದ್ರೆ ಸಾಯೋ ತನಕಾನೂ ಸೆರೆಮನೆಯೇ ಗತಿಯಾಗ್ತಿತ್ತು" ನೆಂಜ ದೇಹವನ್ನು ತ್ಯಜಿಸುದುದಲ್ಲದೆ ಅಪವಾದಕ್ಕೂ ಗುರಿಯಾದ ಆತ್ಮಹತ್ಯೆ ಕನಸಲ್ಲೂ ನೆಂಜ ಎಣಿಸಲಾರದ ಆತ್ಮಹತ್ಯೆ. ಯಾರ ಆತ್ಮಹತ್ಯೆ? ನಿಜ ...ನಿಜ ... ...ನೆಂಜನ ನಿರ್ಜೀವ ಶರೀರದಿಂದಲೇ ಹೊರಟಂತಾಯಿತು ಧ್ವನಿ. ಆತ್ಮಹತ್ಯೆ ......ನಿಜ ⋮ ಯಾರ ಆತ್ಮಹತ್ಯೆ? ನೆಂಜನ ನಿರ್ಜೀವ ಶರೀರವನ್ನು ಸಾವಿರಾರು ನಾಲಿಗೆಗಳನ್ನು ಚಾಚಿ ಅಗ್ನಿಯು ಆಹುತಿ ಪಡೆಯಿತು." ಎನ್ನುತ್ತಾ ಮರವು ಮತ್ತೆ ತಟಸ್ಥವಾಯಿತು. ಆಗಲೇ ಕತ್ತಲೂ ಆವರಿಸಿತು. ಭಾರವಾದ ಹೃದಯವನ್ನು ಹೊತ್ತುಕೊಂಡು ರೂಮಿನತ್ತ ಹೆಜ್ಜೆ ಹಾಕಿದೆವು.

ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

R E P No 6/1961.

in O S No 189/1952

ಚಂದಯ್ಯ ಶೆಟ್ಟಿ— ಅರ್ಜಿದಾರ

ಮತ್ತು

ವೀರಯ್ಯ ಶೆಟ್ಟಿ ಕೂಡಾ— ಎದ್ರಿಗು(ರೆಸ್ಪೊಂಡೆಂಟರು.)

ಇವರೊಳಗೆ

3ನೇ ಎದ್ರಿ ಸಟಿ, ರತಿಯಮ್ಮನ ಮಗಳು, C/o ಎಮ್. ಎಸ್ ಶೆಟ್ಟಿ, ಬಿ ಟ ವ ಕೆರಿಂಗ್ ಶೋಪ್, ಜೇಕಬ್ ಸರ್ಕಲ್, ಬೊಂಬಾಯಿ. 11 ಮತ್ತು 4ನೇ ಎದ್ರಿ ಶೀಲಾ ರತಿಯಮ್ಮನ ಮಗಳು, C/o ಕೃಷ್ಣ ಶೆಟ್ಟಿ, ಮದ್ರಾಸು ಬ್ರಾಹ್ಮಣರ ಕಾಪೀ ರೆಸ್ಟೋರೆಂಟ್, ಚವಲ ಬಿಲ್ಡಿಂಗ್, ಮುಮ್ಮಾದೇವಿ ರೋಡ್, ಬೊಂಬಾಯಿ_3, ಇವರಿಗೆ —

ಮೇಲೆ ಕಾಣಿಸಿದ ಕ್ರಮನಂಬ್ರದಲ್ಲಿ ಪಾಸಾದ ಫೈನಲ್ ಡಿಕ್ರಿ ಮೇರೆಗೆ ಅರ್ಜಿದಾರರಿಗೆ ರೆಸ್ಪೊಂಡೆಂಟ (ಎದ್ರಿಯವ)ರಿಂದ ಬರತಕ್ಕ ಹಣಗಳಿಗೆ, ಮೇಲ್ಕಾಣಿಸಿದ ಅಮಲ್ದಾರಿ ಅರ್ಜಿಯನ್ನು ಅರ್ಜಿದಾರರು ದಾಖಲು ಮಾಡಿ ರೆಸ್ಪೊಂಡೆಂಟರ ಪಕ್ಕಿನ ಆಸ್ತಿಗಳನ್ನು ಏಲಂಗೆ ತಂದಿದ್ದಾರೆ ತತ್ಸಂಬಂಧ ಅರ್ಜಿದಾರರು ದಾಖಲು ಮಾಡಿರುವ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ಇದೇ ತಾ 31—1—1962ಕ್ಕೆ ಅರ್ಜಿಯು ತನ್ನಿಗೆ ಇಟ್ಟಿದೆ. ನಿಮ್ಮದೇನಾದರೂ ಆಕ್ಷೇಪಗಳಿದ್ದಲ್ಲಿ, ಸದ್ರಿ ದಿವಸ ಹಗಲು ಘಂಟೆ 11ಕ್ಕೆ ಸರಿಯಾಗಿ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದು. ತಪ್ಪಿದ್ರೆ, ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅಮಲ್ದಾರಿಯನ್ನು ತೀರ್ಮಾನಿಸಲಾಗುವುದು.

(By order of the Court)

K Vishwanatha Hegde,

Advocate for Petitioner.

ಉಡುಪಿ, 13—1—1962.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone. 374

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ ಆರ್. ಶೇಟ್

NAVAYUGA, UDIPI.
REGD. NO.BG. 176

18-1-1962

LICENSE NO. 31
Licensed to Post without Prepayment.

ಬ್ಲ್ಯಾಕ್‌ಬರ್ನ್ ಯೋಜನೆ-ಸ್ವಸಹಾಯಕ್ಕೆ ನಿದರ್ಶನ

[ಮಂಗಳೂರಿನಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಜನವರಿ 16ರಿಂದ 20ರ ವರೆಗೆ ಮತ್ತು 22 ಹಾಗೂ 23ರಲ್ಲಿ ಉಡುಪಿಯ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ನಡೆಯಲಿರುವ "ಅಮೇರಿಕದಲ್ಲಿ ವಿದ್ಯಾರ್ಥಿ ಜೀವನ" ಪ್ರದರ್ಶನದ ಸಂದರ್ಭದಲ್ಲಿ ಪ್ರಕಟಣೆಗಾಗಿ ಈ ಲೇಖನವನ್ನು ಸಿದ್ಧಗೊಳಿಸಲಾಗಿದೆ]

ಬ್ಲ್ಯಾಕ್ ಬರ್ನ್‌ನಲ್ಲಿ ಕಲಿತ ಪದವೀಧರರು ಇಂದು ಪುನಃ ಅಲ್ಲಿಗೆ ಬಂದಾಗ, ಹಾಸ್ಟೆಲಿನ ಅಥವಾ ಕ್ಲಾಸ್ ರೂಂ ಕಟ್ಟಡದ ಗೋಡೆಯತ್ತ ಕೈ ತೋರಿಸಿ "ಅದು ನನ್ನ ಗೋಡೆ, ಅಲ್ಲಿ ಇಟ್ಟಿಗೆಗಳನ್ನಿಟ್ಟವನು ನಾನು" ಎಂದು ಅಭಿಮಾನದಿಂದ ನುಡಿಯುತ್ತಾರೆ.

ದಕ್ಷಿಣ ಇಲ್ಲಿನಾಯ್ಸ್‌ನ ಕಾರ್ಲಿನ್‌ವಿಲ್ ಪಟ್ಟಣದಲ್ಲಿ ಬ್ಲ್ಯಾಕ್ ಬರ್ನ್ ಕಾಲೇಜಿನ ಹನ್ನೆರಡು ಕಟ್ಟಡಗಳಲ್ಲಿ ಸುಮಾರು ೪೦೦ ವಿದ್ಯಾರ್ಥಿಗಳು ವಾಸಿಸುತಿದ್ದಾರೆ, ಕೆಲಸ ಮಾಡುತ್ತಿದ್ದಾರೆ, ಹಾಗೂ ಅಧ್ಯಯನ ಮಾಡುತ್ತಿದ್ದಾರೆ.

ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳೇ ಕಟ್ಟಡಗಳನ್ನು ಕಟ್ಟುತ್ತಾರೆ, ಎಲೆಕ್ಟ್ರಿಕಲ್ ವೈರಿಂಗ್ ಕಾರ್ಯ ನಿರ್ವಹಿಸುತ್ತಾರೆ ಮತ್ತು ಪೇವ್‌ಮೆಂಟ್‌ಗಳಿಗೆ ಸಿಮೆಂಟ್ ಹಾಕುತ್ತಾರೆ. ಅವರು ಗೋಡೆಗಳಿಗೆ ಪೈಂಟ್ ಮಾಡುತ್ತಾರೆ ಮತ್ತು ನಿತ್ಯವೂ ಗೋಡೆಗಳನ್ನು ಉಜ್ಜಿ ಶುಚಿಯಾಗಿಡುತ್ತಾರೆ. ಬಟ್ಟೆಗಳನ್ನು ಶುಚಿ ಮಾಡುತ್ತಾರೆ ಮತ್ತು ಅಂಗಳದಲ್ಲಿ ತೋಟಗಾರಿಕೆ ಮಾಡುತ್ತಾರೆ ವಿದ್ಯಾರ್ಥಿಗಳಲ್ಲಿ ಕೆಲವರು ಕಾರ್ಯದರ್ಶಿಗಳಾಗಿ, ಲೈಬ್ರೇರಿಯನ್‌ರಾಗಿ ಅಥವಾ ಫೆಕಲ್ಟಿ ಸಹಾಯಕರಾಗಿ ಕೆಲಸ ಮಾಡುತ್ತಾರೆ. ಬ್ಲ್ಯಾಕ್ ಬರ್ನನಲ್ಲಿ ಮೆಕ್ಕೆಯ ಜೋಳ ಮತ್ತು ಇತರ ಆಹಾರ ವಸ್ತುಗಳನ್ನು ವಿದ್ಯಾರ್ಥಿಗಳೇ ಬೆಳೆಸುತ್ತಾರೆ, ವಿದ್ಯಾರ್ಥಿಗಳು ಅಡಿಗೆ ಮಾಡುತ್ತಾರೆ, ಕಾಲೇಜಿನ ಭೋಜನ ಕೋಣೆಯಲ್ಲಿ ಬಡಿಸುತ್ತಾರೆ, ಅನಂತರ ಕೋಣೆಯನ್ನೂ ಪಾತ್ರಗಳನ್ನೂ ಶುದ್ಧಗೊಳಿಸುತ್ತಾರೆ.

೧೮೩೭ರಲ್ಲಿ ಪ್ರೆಸ್ ಬಿಟೇರಿಯನ್ ಧರ್ಮ ಗುರುವೊಬ್ಬರು ಬ್ಲ್ಯಾಕ್‌ಬರ್ನ್ ಕಾಲೇಜನ್ನು ಸ್ಥಾಪಿಸಿದರು. ೧೯೧೨ರ ವರೆಗೆ ಇದು ಒಂದು ಚಿಕ್ಕ ಲಿಬರಲ್ ಆರ್ಟ್ಸ್ ಕಾಲೇಜಾಗಿ ಮುಂದುವರಿಯಿತು. ಎಲ್ಲ ಮತಗಳ ಜನರಿಗೂ ಪ್ರವೇಶವಿದ್ದರೂ, ಇದರ ಪ್ರಭಾವವು ಬಲುಮಟ್ಟಿಗೆ ಸ್ಥಳೀಯವಾಗಿತ್ತು. ೧೯೧೨ನೇ ವರ್ಷ ಡಾ. ವಿಲಿಯಂ ಎಂ. ಹಡ್ಸನರ ೩೩ ವರ್ಷಗಳ ಕಾಲೇಜಿನ ಅಧ್ಯಕ್ಷತೆ ಪ್ರಾರಂಭವಾಯಿತು, ಬ್ಲ್ಯಾಕ್‌ಬರ್ನ್ ಕಾಲೇಜಿನ ಅದ್ಭುತ ಅಭಿವೃದ್ಧಿಯೂ ಪ್ರಾರಂಭವಾಯಿತು.

೧೯೧೨ನೇ ವರ್ಷದ ಅಂತ್ಯದಲ್ಲಿ ಕೇವಲ ಮೂವತ್ತೈದು ವಿದ್ಯಾರ್ಥಿಗಳಿದ್ದರು, ಕಾಲೇಜಿಗೆ ಬಹಳ ಆರ್ಥಿಕ ಬಿಕ್ಕಟ್ಟು ಇತ್ತು.

ಡಾ ಹಡ್ಸನರು ಪ್ರತಿ ಭಾವಿ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಕಲಿಯಲು ಸಹಾಯಕವಾಗುವಂತೆ ಶ್ರಮಯೋಜನೆಯೊಂದನ್ನು ಪ್ರಾರಂಭಿಸಿ, ಕಾಲೇಜನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರುಮಾಡಿದರು.

ಈ ಯೋಜನೆಯಿಂದಾಗಿ ಕಾಲೇಜಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಯಿತು, ಕಾಲೇಜಿಗೆ ಅಧಿಕ ಪ್ರಮಾಣದಲ್ಲಿ ದತ್ತಿಗಳೂ ದೊರೆತವು. ಸ್ವತಃ ಕಷ್ಟಪಟ್ಟು ಕಲಿತು ಜೀವನದಲ್ಲಿ ಯಶಸ್ಸು ಪಡೆದ ಅನೇಕರು, ಬಡವರಿಗೆ ಸಹಾಯ ಮಾಡಲು ಬದ್ಧಕಂಕಣವಾದ ಈ ಕಾಲೇಜಿಗೆ ಸಹಾಯಮಾಡಲು ಬಹಳ ಉತ್ಸುಕರಾದರು

ಕಾಲೇಜಿನ ಶ್ರಮಯೋಜನೆಯು ಬಹಳ ಯಶಸ್ವಿಯಾಯಿತು. ಶಿಕ್ಷಣ ವೆಚ್ಚಗಳು ಏರುತ್ತಿರುವ ಇಂದಿನ ಕಾಲದಲ್ಲಿ, ಬ್ಲ್ಯಾಕ್ ಬರ್ನ್‌ನಲ್ಲಿ ಶ್ರಮಯೋಜನೆಯಿಂದಾಗಿ ಟ್ಯೂಶನ್ ವೆಚ್ಚಗಳನ್ನು ಕಡಿಮೆ ಮಟ್ಟದಲ್ಲೇ ಇಡಲು ಸಾಧ್ಯವಾಗಿದೆ.

ಈ ಕಾಲೇಜಿನಲ್ಲಿ ಸಾಮಾಜಿಕ ಭೇದಗಳಿಲ್ಲ ಶ್ರಮವು ಕೀಳೆಂಬ ಭಾವನೆಯಿಲ್ಲ ಏಕೆಂದರೆ ಎಲ್ಲರೂ ಶ್ರಮಿಸುತ್ತಾರೆ.

"ಶ್ರಮಸಮಿತಿ"ಯೊಂದರ ಮೂಲಕ ಶ್ರಮಯೋಜನೆಯನ್ನು ನಿರ್ದೇಶಿಸಲಾಗುತ್ತದೆ. ಶ್ರಮಸಮಿತಿಯಲ್ಲಿ ಇಬ್ಬರು ಅಥವಾ ಮೂವರು ಫೆಕಲ್ಟಿ ಸಲಹೆಗಾರರು, ಇಬ್ಬರು ಶ್ರಮವ್ಯವಸ್ಥಾಪಕ ವಿದ್ಯಾರ್ಥಿಗಳು—ಒಬ್ಬರು ಪುರುಷ ವಿಭಾಗಕ್ಕೆ, ಒಬ್ಬರು ಸ್ತ್ರೀ ವಿಭಾಗಕ್ಕೆ—ಮತ್ತು ಎಂಟು ವಿದ್ಯಾರ್ಥಿ 'ಶ್ರಮಮುಖಂಡರು' ಇರುವರು.

ಬ್ಲ್ಯಾಕ್‌ಬರ್ನ್ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿಗೆ ಸಂಬಂಧಿಸಿದಂತೆ ದುಡಿಯುತ್ತಿರುವ ಒಂದು ದೃಶ್ಯ

ವಿದ್ಯಾರ್ಥಿಗಳು ತಮ್ಮ ನಿಯುಕ್ತ ಕಾರ್ಯಗಳನ್ನು ಪೂರ್ತಿಗೊಳಿಸುವರೋ ಇಲ್ಲವೋ ಎಂಬುದನ್ನು ನೋಡಿಕೊಳ್ಳುವ ಹೊಣೆಗಾರಿಕೆ ಶ್ರಮ ಮುಖಂಡರದು ಹಾಗೂ ವ್ಯವಸ್ಥಾಪಕರದು

ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಆದ್ಯತೆ ಕೊಡಲಾಗುತ್ತಿದೆ ಯಾವುದಾದರೊಂದು ರೀತಿಯ ಕೆಲಸವು ತನ್ನ ಅಧ್ಯಯನಕ್ಕೆ ಆತಂಕಕಾರಿ ಎಂದು ವಿದ್ಯಾರ್ಥಿಗೆ ಕಂಡುಬಂದರೆ, ಆತ ಬೇರೆ ರೀತಿಯ ಕೆಲಸ ಬೇಕೆಂದು ವಿಜ್ಞಾಪಿಸಬಹುದು.

ಜನಸಾಮಾನ್ಯರ ಸೇವೆಯಲ್ಲಿ....

ಆರಂಭದಿಂದಲೂ ಸಿಂಡಿಕೇಟ್ ಬ್ಯಾಂಕು ತನ್ನ ಚಿಕ್ಕ ಪುಟ್ಟ ಗ್ರಾಹಕರ, ಜನಸಾಮಾನ್ಯರ ಸೇವೆಯಲ್ಲಿ ವಿಶೇಷ ಆಸಕ್ತಿಯನ್ನು ವಹಿಸುತ್ತಾ ಬಂದಿದೆ.

ಆ ನಯೆಪೈಸೆಗಳಷ್ಟನ್ನು ಸಹಾ ಉಳಿಸುವ 'ಪಿಗ್ಮಿ'ಯಂತಹ ಉಳಿತಾಯ ಯೋಜನೆಯ ಮೂಲಕ ಠೇವಣಾತಿಯ ಅಭ್ಯಾಸವನ್ನು ಪುರಸ್ಕರಿಸುತ್ತಿರುವಂತೆ ಅವರ ಆರ್ಥಿಕ ಆವಶ್ಯಕತೆಗಳನ್ನು ಪೂರೈಸಿಕೊಡಲು ಚಿನ್ನಾಭರಣಗಳ ಭದ್ರತೆಯ ಮೇಲೆ ಚಿಕ್ಕ ಪುಟ್ಟ ಮೊತ್ತದ ಸಾಲಗಳನ್ನು ಒದಗಿಸಿಕೊಡುವುದರಲ್ಲಿ ಸಹಾ ಸಿಂಡಿಕೇಟ್ ಬ್ಯಾಂಕು ಪ್ರಮುಖ ಪಾತ್ರವನ್ನು ವಹಿಸುತ್ತಿದೆ

ಸುಲಭ ನಿಯಮಗಳಲ್ಲಿ ಚಿಕ್ಕ ಮೊಬಲಗುಗಳ ಚಿನ್ನಾಭರಣಗಳ ಭದ್ರತೆಯ ಮೇಲೆ ಸಾಲಗಳನ್ನು ಪಡೆಯಲು:

ನಿಮಗೆ ಸಮೀಪವಿರುವ ನಮ್ಮ ಶಾಖೆಯೊಂದನ್ನು ದಯವಿಟ್ಟು ಸಂದರ್ಶಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕಾಶ್ಮೀರದ ಮೇಲೆ ವಕ್ರದೃಷ್ಟಿ

೧ನೇ ಪುಟದಿಂದ

ಗೊಳಿಸುವುದಕ್ಕೆ ಮಾತ್ರವಲ್ಲ, ಈ ಮೊದಲೇ ನಿಯೋಜಿತಗೊಂಡವುಗಳ ಪ್ರದರ್ಶನಕ್ಕೂ ಈ ನಿರ್ಬಂಧವಿದೆ ಇತ್ತೀಚೆಗೆ ಇರಾಕಿನ ಮಿಲಿಟರಿ ಗವರ್ನರರಾದ ಕಾಸಿಮರನ್ನೂ ತಮ್ಮ ಬಲಕ್ಕೆಂದು ಅವರು ಇಟ್ಟುಕೊಂಡಿದ್ದಾರೆ. ಆದರೆ ಯಾರ ಬಲವೆಷ್ಟೇ ಇದ್ದರೂ ಸತ್ಯವನ್ನು ಮರೆಮಾಚುವುದು ಯಾರಿಂದಲೂ ಸಾಧ್ಯವಿಲ್ಲ ಚೀನವು ಸಹ ಅಜಾಗ ಕಾಶ್ಮೀರದ ಪ್ರದೇಶದಲ್ಲಿ ಸುಮಾರು ಒಂದು ಸಾವಿರ ಚದರ ಮೈಲಿನಷ್ಟು ಭೂಮಿ ತನ್ನದೆಂದು ಹೇಳತೊಡಗಿರುವುದನ್ನು ನೆನೆಯಬೇಕು.

ಪರಿಹಾರ ಹೇಗೆ ಸಾಧ್ಯ?

೧೯೪೮,೪೯ರ ಯುಕ್ತ ರಾಷ್ಟ್ರ ಸಂಘದ ಗೊತ್ತುವಳಿಯಂತೆ ಪಾಕಿಸ್ತಾನವು ತನ್ನ ಸೈನಿಕರನ್ನು ಕಾಶ್ಮೀರದಿಂದ ಹಿಂದೆ ಕರೆದುಕೊಳ್ಳಬೇಕು ಮತ್ತು ಆ ಮೇಲೆ ಕಾಶ್ಮೀರರದ ಜನತೆಗೆ ಸ್ವಯಂ ನಿರ್ಣಯಾಧಿಕಾರ ನೀಡಬೇಕು. ಪಾಕಿಸ್ತಾನವಿಂದು ಸ್ವಯಂ ನಿರ್ಣಯಾಧಿಕಾರದ ಪ್ರಶ್ನೆಯನ್ನು ಮಾತ್ರ ಎತ್ತುತ್ತಿದೆ ಹೊರತು ಆಕ್ರಮಣವನ್ನು ಹಿಂದೆಗೆಯುವುದನ್ನಲ್ಲ ಹದಿನಾಲ್ಕು ವರ್ಷಗಳಷ್ಟು ಹಳೆಯದಾದ ಪ್ರಶ್ನೆಯ ಪರಿಹಾರ ಇಂದಿನ ಸ್ಥಿತಿಯಲ್ಲಿ ಹೇಗೆ ಸಾಧ್ಯ?

—ಗೋರಾ.

Edited Printed & Published by K. H. Shetty, at the Navayuga Press, Udipi, S. India.

ಪ್ರಜಾರಾಜ್ಯ ವಿಶೇಷಾಂಕ — ೧೯೬೨

NAVAYUGA-REPUBLIC DAY SPECIAL 1962

20 nP.



ದೃಷ್ಟಿ ದಿಗಂತದೆಡೆಯಿದ್ದರೂ
ನಿಮ್ಮ ಹೆಜ್ಜೆ ದೃಢವಾಗಿರಲಿ

ಬ್ಯಾಂಕಿನ ವ್ಯವಹಾರ ಬಲ್ಲಿದರಿಗೆ ಮಾತ್ರ ಎಂದು
ಭಾವಿಸುವವರ ಸಂಖ್ಯೆ ಕ್ರಮೇಣ ಇಂದು ಕಡಿಮೆಯಾಗುತ್ತಿದೆ
ಅಂಥ ಭಾವನೆ ಕೇವಲ ಭ್ರಮೆ ಹಾಗೂ ಕಂದಾಚಾರದ
ಮಾತು ವ್ಯವಹಾರಸ್ಥ ಸಣ್ಣ ವಯಸ್ಸಿನವನೆಂದೂ,
ಸ್ವಲ್ಪಾದಾಯಸ್ಥನೆಂದೂ ಬ್ಯಾಂಕಿನವರು ತಾತ್ಸಾರ ತಾಳುವುದಿಲ್ಲ.
ಅವನು ಒಂದಲ್ಲ ಒಂದು ದಿನ ಬಲ್ಲಿದನಾಗುವನೆಂದೂ,
ಇಂದಿನ ಮಿತವ್ಯವಹಾರ ಅವನನ್ನು ಹಣವಂತನನ್ನಾಗಿ ಬೆಳೆಸ
ಬಲ್ಲುದೆಂದೂ ಬ್ಯಾಂಕಿನವರು ಭಾವಿಸುವುದು ಸ್ವಾಭಾವಿಕ.
ಆದ್ದರಿಂದ ಜೀವನದ ಆಸೆ-ಆಕಾಂಕ್ಷೆಗಳು ನಿಮ್ಮ
ದೃಷ್ಟಿಯನ್ನು ದಿಗಂತದೆಡೆಗೆ ಹರಿಸಿದರೂ
ಪ್ರಾಪಂಚಿಕ ವ್ಯವಸ್ಥೆಯಲ್ಲಿ ದೃಢಸಂಕಲ್ಪದ ಹೆಜ್ಜೆ ಇಟ್ಟು
ವಿಜಯ ಬ್ಯಾಂಕಿನಲ್ಲಿ ವ್ಯವಹಾರವನ್ನು
ಪ್ರಾರಂಭಿಸುವುದು ಇಂದಿನ ನಿಮ್ಮ
ಪ್ರಪ್ರಥಮ ಕರ್ತವ್ಯ.

ಈ ನಿರ್ಧಾರ ನಿಮ್ಮನ್ನೆಂದಿಗೂ ನಿರಾಶೆಗೊಳಿಸಲಾರದು

ರಿಜಿಸ್ಟರ್ಡ್ ಆಫೀಸು
"ವಿಜಯ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು-3

ಶಾಖೆಗಳು

ಬೆಂಗಳೂರು	ಕುಂದಾಪುರ	ಮಂಗಳೂರು
ಭಟ್ಕಳ	ಗೋಣಿಕೊಪ್ಪಲ್	ಮಡಿಕೇರಿ
ಬೊಂಬ್ಬಾ	ಕಾಞಂಗಾಡು	ಮೂಡಿಗೆರೆ
ಬ್ರಹ್ಮಾವರ	ಕಾರ್ಕಳ	ಮೈಸೂರು
ಬೈಂದೂರು	ಕಾಸರಗೋಡು	ನಂಜನಗೂಡು
ಚಾಮರಾಜನಗರ	ಕಾಪು	ಪುತ್ತೂರು
ಸಿಟಿ—ಮಂಗಳೂರು	ಕೊಳ್ಳೆಗಾಲ	ಉಡುಪಿ

THE VIJAYA BANK LIMITED

Registered Office: **"Vijaya Bank Building", Light House Hill Road, MANGALORE-3.**



ನವಯುಗ

Vol 41 No. 20

ಸಂಪುಟ ೪೧ ಸಂಚಿಕೆ ೨೦

ಪ್ರಜಾರಾಜ್ಯ ವಿಶೇಷಾಂಕ ೧೯೬೨

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder
Late Sri A. B Shetty
Former Minister for Public Health, Govt of Madras & Govt of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ ಶಾಮರಾಯ ಶೆಟ್ಟಿ,
ಬಿ. ಎ , ಎಲ್ ಟಿ

ಸಂಚಾಲಕ ಸಂಪಾದಕರು
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ.
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಲೆಕ್ಕಕ್ಕೆ ಪಾವತಿ ಮಾಡುವ ಸೌಕರ್ಯವಿರುವುದು

ಭಾರತೀಯ ಗಣರಾಜ್ಯ

೮

ನಾಲ್ಕೂವರೆ ಶತಮಾನಗಳಿಂದ ಪೋರ್ಚುಗೀಸರ ದಬ್ಬಾಳಿಕೆಯಲ್ಲಿ ಅವ್ಯಾಹತವಾಗಿ ನವೆದ ನಮ್ಮ ಗೋವಾಂತಕ ಸಹೋದರರನ್ನು ಸ್ವಾಗತಿಸುತ್ತ ಅವರನ್ನು ಕೂಡಿ ಈ ವರ್ಷ ಪ್ರಜಾಪ್ರಭುತ್ವ ದಿನವನ್ನು ಆಚರಿಸುತ್ತಿದ್ದೇವೆ ಇದಕ್ಕಿಂತ ಹೆಚ್ಚಿನ ಸಂತೋಷ ಸ್ವಾತಂತ್ರ್ಯಪ್ರಾಪ್ತಿಯಾದ ನಂತರ ನಮಗೊದಗಿ ಬಂದಿಲ್ಲ. ಹಾಗೆಯೇ ಮುಂದಿನ ವರ್ಷದೊಳಗೆ ಕಾಶ್ಮೀರದ ಪಾಕ್ ಆಕ್ರಮಿತ ಭೂಭಾಗವೂ ಭಾರತೀಯ ಗಣರಾಜ್ಯದಲ್ಲಿ ಸೇರಿಕೊಂಡು ಸಂತೋಷದ ಸುಗ್ಗಿಯ ದಿನವನ್ನಾಚರಿಸುವಂತಾಗಲಿ ಎಂದೆಲ್ಲರೂ ಬಯಸುತ್ತಾರೆ ವಸಾಹತು ವಾದದ ಅಂತಿಮ ಕಲೆಯು ಈ ವರ್ಷ ದೂರವಾಗಿ ಭಾರತೀಯ ಜನತೆಯ ಬಲ-ಧೈರ್ಯ ಮತ್ತು ನೀತಿಮತ್ತೆಯ ಜ್ವಲಂತ ದ್ಯೋತಕವಾಗಿ ನಿಂತು, ಭಾರತೀಯ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆದಿಡಲು ಯೋಗ್ಯವೆನಿಸಿದ ದಾಖಲೆಯು ನಿರ್ಮಿತಗೊಂಡಿದೆ

ಮೂರನೆಯ ಬಾರಿಗೆ ನಮ್ಮ ರಾಷ್ಟ್ರದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವ ಉಷಃಕಾಲದಲ್ಲಿ ನಾವಿಂದು ನಿಂತಿದ್ದೇವೆ. ಸರಕಾರಿ ಮತ್ತಿತರ ವಿರೋಧ ಪಕ್ಷಗಳು ತಂತಮ್ಮ ಚುನಾವಣಾ ಘೋಷಣೆಯ ಪಾಂಚಜನ್ಯವನ್ನು ಊದುತ್ತ ಮತದಾರರ ಮುಂದೆ ತಿರುಗಾಡತೊಡಗಿವೆ ದೇಶದ ಹಿತವು ಯಾವ ಪಕ್ಷದ ಕೈಯಲ್ಲಿ ಸುಭದ್ರವಾಗಿರಬಲ್ಲದು ಎಂಬುದನ್ನು ವಿವೇಚಿಸಿ ಮತದಾರರು ತಮಗೆ ಸಂವಿಧಾನವಿತ್ತಿರುವ ಅಮೂಲ್ಯ ಅಧಿಕಾರವನ್ನು ಚಲಾಯಿಸುವುದು ಅಗತ್ಯವಿದೆ. ಪ್ರಜಾಪ್ರಭುತ್ವದಲ್ಲಿ ನಾಗರಿಕರ ಕರ್ತವ್ಯವು ಮಹತ್ತರದ್ದಿದೆ ಒಂದು ದೇಶದ ಜನತೆಯ ಬಹುಮತದ ಇಚ್ಛೆಯಂತೆ ಆದೇಶದಲ್ಲಿ ಸರಕಾರವು ಚುನಾಯಿಸಲ್ಪಡುವುದು. ನಾವು ಯಾವುದೇ ಕಾರಣದಿಂದ ಎಳ್ಳಷ್ಟಾದರೂ ಎಡವಿ ಬಿದ್ದರೆ, ಮುಂದಿನೈದು ವರ್ಷ ಕಳವಳದಿಂದಲೇ ಕಳೆಯ ಬೇಕಾದೀತು ಭಾರತದ ಹಿರಿಯ ಮತ್ತು ಸಮರ್ಥ ರಾಜಕೀಯ ಪಕ್ಷ ಕಾಂಗ್ರೆಸ್ಸು ಸ್ವಾತಂತ್ರ್ಯೋತ್ತರದಲ್ಲಿ ಅಧಿಕಾರವನ್ನು ವಹಿಸಿ ದೇಶವನ್ನು ಸಮೃದ್ಧಮಯವನ್ನಾಗಿ ಕಟ್ಟುವುದಕ್ಕೆ ಹೆಣಗುತ್ತಿದೆಯೆಂಬುದನ್ನು ನಾವೆಲ್ಲರೂ ಕಾಣುತ್ತಿದ್ದೇವೆ

ಭಾರತೀಯರಾದ ನಾವು ಇದುವರೆಗೂ ಕಾಂಗ್ರೆಸ್ಸಿನ ಅಧಿಕಾರದ ಸವಿಯನ್ನಷ್ಟೇ ಅರಿತಿದ್ದೇವೆ. ನಮ್ಮಲ್ಲಿರುವ ಬೇರಾವ ಪಕ್ಷವಾದರೂ ಅಧಿಕಾರವನ್ನು ಪಡೆಯುವಷ್ಟು ಪ್ರಬಲವಾಗಿಲ್ಲ, ಆಗುವ ನಿರೀಕ್ಷೆಯೂ ಇಲ್ಲ ಈ ಬಾರಿ ರಾಜಾಜಿಯವರ ಸ್ವತಂತ್ರ ಪಕ್ಷವೊಂದು ಹೊಸತಾಗಿ ಚುನಾವಣೆಗಳಲ್ಲಿ ಭಾಗವಹಿಸುವುದು. ಇದರಿಂದ ಉಳಿದ ಪಕ್ಷಗಳ ಬಲವು ಕುಂದಬಹುದಾದರೂ, ಆ ಪಕ್ಷವು ಪ್ರಬಲವಾಗಿ ಬೆಳೆಯುವುದು ನಮ್ಮಲ್ಲಿ ಸಾಧ್ಯವಿಲ್ಲವೆಂಬುದು. ಖಂಡಿತ ಪ್ರಸಮಾ ಪಕ್ಷದ ಶಕ್ತಿ ದಿನದಿಂದ ದಿನಕ್ಕೆ ಕುಗ್ಗುತ್ತಿದೆ, ಚೀನಾದ ಆಕ್ರಮಣದ ರಹಸ್ಯ ಸ್ಫೋಟನಗೊಂಡ ನಂತರ ಕಮ್ಯೂನಿಸ್ಟರ ಅದೃಷ್ಟವೂ ವಕ್ರವಾಗಿದೆ ಇನ್ನು ಜನಸಂಘ, ಹಿಂದೂ ಮಹಾ ಸಭೆಗಳಂತಹವು ಜಾತೀಯ ಪಕ್ಷವೆಂಬ ಅಪವಾದಕ್ಕೆ ಗುರಿಯಾಗಿವೆ. ಮತ್ತಾವ ಪಕ್ಷವೂ ಅಖಿಲ ಭಾರತೀಯ ವ್ಯಾಪ್ತಿಯನ್ನು ಪಡೆದಿಲ್ಲ; ಪಡೆದಿದ್ದರೂ ಅವು ನಾಮ ಮಾತ್ರಕ್ಕಿರುವಂತಹವು ಎಂಬುದು ನಿರ್ವಿವಾದ.

ದೇಶದಲ್ಲಿ ಪ್ರಜಾಪ್ರಭುತ್ವವು ಸುಸ್ಥಿರವಾಗಿ ಸುವ್ಯಥವಾಗಿ ನಡೆಯ ಬೇಕಾದರೆ, ಆಳುವ ಪಕ್ಷಕ್ಕೆ ಪ್ರಬಲ ಪ್ರತಿಪಕ್ಷವಿರಬೇಕೆಂಬುದು ಒಪ್ಪತಕ್ಕ ಮಾತು ಆದರೆ, ಇದು ಹೇಗೆ ಬೆಳೆಯ ಬೇಕು? ಯಾರಿದನ್ನು ಬೆಳೆಸ ಬೇಕು? ಎಂಬುದನ್ನು ಪರ್ಯಾಲೋಚಿಸ ಬೇಕು ಕಾಂಗ್ರೆಸ್ಸಿಗೆ ಇರುವಂತೆ ಬಹು ವರ್ಷಗಳ ಇತಿಹಾಸವು ಉಳಿದ ಯಾವ ಪಕ್ಷಕ್ಕೂ ಸದ್ಯ ಇಲ್ಲದಿರುವಾಗ, ಕಾಲಾನುಕಾಲದಲ್ಲಿ ಅವೂ ಬೆಳೆದು ಬರಬಹುದೆಂದು ನಿರೀಕ್ಷಿಸಬಹುದು ಆದರೆ, ಈ ನಡುವೆ ಅಧಿಕಾರ ವಹಿಸುವ ಪಕ್ಷವು ಜಾಗರೂಕತೆಯಿಂದ ತನ್ನ ಜವಾಬ್ದಾರಿಯನ್ನು ನಿರ್ವಹಿಸ ಬೇಕಾಗುವುದೆಂಬುದನ್ನು ಮರೆಯುವಂತಿಲ್ಲ. ನಮ್ಮಲ್ಲಿ ರಾಜ್ಯಭಾರ ನಡೆಸುವ ಕಾಂಗ್ರೆಸ್ಸು ಈ ದಿಸೆಯಲ್ಲಿಯೇ ಮುನ್ನಡೆಯುತ್ತಿದೆಯಾದರೂ ಕೆಲವೊಮ್ಮೆ ಎಡವಿಬಿದ್ದಿದೆ. ಸಂಸ್ಥೆಯಲ್ಲಿ ಪಕ್ಷನಿಷ್ಠೆಯು ಕ್ಷೀಣವಾಗುತ್ತ ಬಂದು ವ್ಯಕ್ತಿನಿಷ್ಠೆಯು ಹೆಚ್ಚತೊಡಗಿದೆ. ಇದು ಮುಂದಕ್ಕೂ ಮುಂದುವರಿಯುತ್ತ ಬಂದರೆ, ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ, ರಾಷ್ಟ್ರಕ್ಕೂ ಅಪಾಯವಿದೆ. ಆದುದರಿಂದ ನಮ್ಮ ಕಾಂಗ್ರೆಸಿಗರು ಏಕನಿಷ್ಠೆಯಿಂದ ಪಕ್ಷನಿಷ್ಠರಾಗಿ ಸಮರಸದಿಂದಿರುವುದು ಅಗತ್ಯವೆಂದು ಸೂಚಿಸಬಯಸುತ್ತೇವೆ. ಕಾಂಗ್ರೆಸ್ಸು ಮುಂದಕ್ಕೂ ಭದ್ರವಾಗಿ ಉಳಿಯುವುದು ಅಪೇಕ್ಷಣೀಯವೆಂಬುದರಿಂದ ಛಿದ್ರಗಳಿಗೆ ಅವಕಾಶ ಕೊಡಬಾರದು. ದೇಶದ ಸುರಕ್ಷೆಗಾಗಿ ದೇಶದ ಪ್ರಗತಿಗಾಗಿ, ದೇಶದ ಒಳಿತಿಗಾಗಿ ಕಾಂಗ್ರೆಸ್ಸು ನಿಷ್ಠಾವಂತವಾಗಿ ಸೇವೆ ಸಲ್ಲಿಸುವಂತಾಗಬೇಕು

ಕಳೆದ ವರ್ಷಗಳಲ್ಲಿ ನಾವು ದೇಶದ ಆಂತರಿಕ ಹಾಗೂ ಬಾಹ್ಯಸಂಪತ್ತಿಯನ್ನು ಕ್ರೋಡೀಕರಿಸಿ ನವಯುಗಕ್ಕೊಪ್ಪುವ ನವಭಾರತವನ್ನು ನಿರ್ಮಿಸುವ ಅವಿಚಲ ಸಂಕಲ್ಪ ಮಾಡಿದ್ದೇವೆ. ನಡೆಯುವ ರಾಷ್ಟ್ರ ಪುನಾರಚನೆಯ ಕಾರ್ಯಗಳಿಂದ ದೇಶದಲ್ಲಿ ಕರಗಳು ಭಾರವಾಗತೊಡಗಿವೆ ಜೀವನವು ಕಷ್ಟಮಯವಾಗಿದೆ ಜೀವನವೆಚ್ಚವು ದಿನದಿಂದ ದಿನಕ್ಕೆ ಏರುತ್ತ ನಿರಾಸೆ ಹೆಚ್ಚುತ್ತಿದೆ. ಸಂಕ್ರಾಂತಿಯ ಕಾಲದಲ್ಲಿ ಸಂಕಷ್ಟಗಳು ತಲೆದೋರುವುದು ಸ್ವಾಭಾವಿಕ ಆದರೂ ಮೂರನೆಯ ಯೋಜನೆಯಲ್ಲಿ ತೊಡಗಿರುವ ನಾವು ಯೋಜನೆಯ ಯಶಸ್ವಿಗಾಗಿ ಹೋರಾಡುವುದರೊಡನೆ ಹಿಂದಿನ ಯೋಜನೆಗಳ ಯಶಸ್ವಿತೆ ಮತ್ತವುಗಳಿಂದ ಜನ ಜನಕ್ಕಾದ ಲಾಭಹಾನಿಗಳ ಕಡೆಗೆ ಗಮನ ಅವಶ್ಯ ಕೊಡಬೇಕು.

ನಮ್ಮಲ್ಲಿ ಭಾವೈಕ್ಯದ ಭಾವನೆ ಬೆಳೆದು ಬರಬೇಕು. ದೇಶದ ಸ್ವಾತಂತ್ರ್ಯವನ್ನು ಭದ್ರವಾಗಿ ರಕ್ಷಿಸುವ ಪರಮಕರ್ತವ್ಯದಲ್ಲಿ ನಾವು ಹಿಂದುಳಿಯಬಾರದು. ಯಾವ ಅಪಾಯದ ಸನ್ನಿವೇಶದಲ್ಲೂ ನಾವೆಲ್ಲರೂ ಒಂದೇ ಎಂಬ ಅಖಂಡವಾದ ತಿಳುವಳಿಕೆಯಿಂದ ತಾಯ್ನಾಡಿನ ಮೇಲ್ಮೆಗಾಗಿ ರಕ್ಷಣೆಗಾಗಿ ಒಂದಾಗಿ ಬಾಳುವ, ಹೋರಾಡುವ ಭೀಷ್ಮ ಪ್ರತಿಜ್ಞೆ ಇಂದಿನ ಸುದಿನ ನಾವು ಮಾಡಬೇಕು.

ಸ್ವಗತ

ಪ್ರಜಾರಾಜ್ಯ ದಿನಾಚರಣೆಯ ಸುಸಂದರ್ಭದಲ್ಲಿ ಪ್ರಜೆಗಳು ತಮ್ಮ ಕರ್ತವ್ಯವನ್ನು ಮರಳಿ ಸ್ಮರಿಸುವಂತೆ ಪ್ರೇರೇಪಿಸುವಂತೆ ನಾವು ಈ ವಿಶೇಷ ಸಂಚಿಕೆಯನ್ನು ಪ್ರಕಟಿಸಿದ್ದೇವೆ. ಪ್ರಕಟಣೆಗಾಗಿ ಸ್ವೀಕರಿಸಿರುವ ಕೆಲವೊಂದು ಲೇಖನಗಳು ಸ್ಥಳಾವಕಾಶ ದೊರೆಯದ ಕಾರಣ ಅಪ್ರಕಟಿತವಾಗಿರುವುದಕ್ಕೆ ಅಂತಹ ಲೇಖನಗಳ ಬರಹಗಾರ ಬಂಧುಗಳೊಡನೆ ಕ್ಷಮೆಯಾಚಿಸುತ್ತೇವೆ.

ನಮ್ಮ ಬರಹಗಾರರು ಮತ್ತು ಜಾಹಿರಾತುದಾರರು ತಮ್ಮ ಉದಾರತೆಯಿಂದಾಗಿ ನಮ್ಮ ಈ ಪ್ರಯತ್ನದಲ್ಲಿ ಪಾಲುದಾರರಾಗಿದ್ದಾರೆ. ಅವರೆಲ್ಲರನ್ನೂ ನಾವೀ ಸಂದರ್ಭದಲ್ಲಿ ಅಭಿನಂದಿಸಿ, ಅವರ ಸಹಕಾರವನ್ನು ಮುಂದಕ್ಕೂ ನಿರೀಕ್ಷಿಸುತ್ತೇವೆ ನಮ್ಮ ಚಂದಾದಾರರು ಮತ್ತು ಓದುಗರು ಈ ವಿಶೇಷ ಸಂಚಿಕೆಯನ್ನು ಮೆಚ್ಚುವರೆಂಬ ವಿಶ್ವಾಸದಿಂದ, ಸಹಕಾರಕ್ಕಾಗಿ ಅವರಿಗೂ ಕೃತಜ್ಞತೆಯನ್ನರ್ಪಿಸುತ್ತೇವೆ.

ನಮ್ಮ ಕೆಲ ಸಂಘ ಸಂಸ್ಥೆಗಳು

ಸಿಂಡಿಕೇಟ್ ಬ್ಯಾಂಕ್

'ಸಿಂಡಿಕೇಟ್ ಬ್ಯಾಂಕ್' ಎಂದು ಪ್ರಸಿದ್ಧವಾಗಿರುವ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್‌ನ ಹೆಸರನ್ನು ಕೇಳದವರಿಲ್ಲ. ತನ್ನ ೧೫೮ ಶಾಖೆಗಳ ಮೂಲಕ ದಕ್ಷಿಣ ಭಾರತೀಯರಿಗೆ ಸರ್ವ ಪ್ರಕಾರದ ಬೇಂಕಿಂಗ್ ಸೌಕರ್ಯವನ್ನು ನೀಡುತ್ತ ಬಂದಿರುವ ಈ ಬೇಂಕು ಜನಪ್ರಿಯವಾಗಿದೆ. ಅಲ್ಪ ಉಳಿತಾಯದ ಪಿಗ್ಮಿ ಮತ್ತು ದೊಡ್ಡ ಮೊತ್ತದ ಉಳಿತಾಯದ ಇನ್ವೆಸ್ಟರ್ಸ್ ಪಿಜನ್ಸಿಗಳು ಇದರ ವೈಶಿಷ್ಟ್ಯಗಳು. ಗ್ರಾಮಾಂತರಪ್ರದೇಶಗಳಲ್ಲಿಯೂ ಬೇಂಕಿಂಗ್ ಅಭ್ಯಾಸವನ್ನು ರಕ್ತಗತಗೊಳ್ಳುವಂತೆ ಮಾಡಿದ, ಮಾಡುತ್ತಿರುವ ಕೀರ್ತಿ ಸಿಂಡಿಕೇಟ್ ಬೇಂಕಿನದು. ೧೯೨೫ರಲ್ಲಿ ವಾಮನಾವತಾರದಲ್ಲಿ ಸ್ಥಾಪನೆಗೊಂಡ ಬೇಂಕು ಇಂದು ತ್ರಿವಿಕ್ರಮಾವತಾರವನ್ನು ತಾಳಿ ಲಕ್ಷೋಪಲಕ್ಷ ಜನತೆಯ ಸೇವೆಯನ್ನು ಮಾಡುತ್ತಿದೆ.



ಮೆನೇಜಿಂಗ್ ಡೈರೆಕ್ಟರ್ ಸ್ಥಾನದಿಂದ ನಿವೃತ್ತರಾದ
ಡಾ| ಟಿ. ಎಂ. ಎ. ಪೈ

ಮೆನೇಜಿಂಗ್ ಡೈರೆಕ್ಟರ್ ಸ್ಥಾನವನ್ನೇರಿದ
ಶ್ರೀ ಕೆ. ಕೆ. ಪೈ

*

ಕಳೆದ ವರ್ಷದ ವರೆಗೆ ಬೇಂಕಿನ ಮೆನೇಜಿಂಗ್ ಡೈರೆಕ್ಟರರಾಗಿಯೂ ಇದ್ದ ಚೆಯರ್‌ಮೆನ್ ಡಾ। ಮಾಧವ ಪೈಯವರು ಒಂದು ಅಪೂರ್ವಶಕ್ತಿ. ಅಜೇಯ ಆರ್ಥಿಕ ಯೋಜನೆ, ಅಪಜಯವಿದೂರ ಸಂಘಟನೆ, ಸಂದೇಹಾತೀತ ಆಕರ್ಷಣಾ ನಿರ್ಮಾಣ, ಕಾರ್ಯಶಕ್ತಿ, ದೂರದರ್ಶಿತ್ವ—ಮೊದಲಾದುವುಗಳ ಸಂಗಮವಾದ ಡಾ। ಪೈಯವರ ಮಾರ್ಗದರ್ಶನದಲ್ಲಿ ಬೇಂಕು ಅಗ್ರಗಣ್ಯ ಸ್ಥಾನಗಳಿಸಿದೆ. ಈವರ್ಷದಿಂದ ಜನಪ್ರಿಯರೂ ಶಾಂತನಿರ್ಮಲಚಿತ್ತರೂ, ಕಾರ್ಯಕುಶಲರೂ ಆದಶ್ರೀ ಕೆ.ಕೆ ಪೈಯವರು ಮೆನೇಜಿಂಗ್ ಡೈರೆಕ್ಟರರಾಗಿ ನೇಮಕಗೊಂಡಿದ್ದಾರೆ. ಪ್ರತಿಷ್ಠಾವಂತರೂ ಕೆಲಸದಲ್ಲಿ ಜಾಣರೂ ಆದ ಡೈರೆಕ್ಟರ ಮಂಡಳಿ ಮತ್ತು ಉತ್ಸಾಹಿ ಅಧಿಕಾರಿ ಹಾಗೂ ನೌಕರ ವರ್ಗಗಳ ಸೇವೆಯಿಂದ ದಿನದಿಂದ ದಿನಕ್ಕೆ ಬೇಂಕು ತನ್ನ ಖ್ಯಾತಿಯನ್ನು ಹೆಚ್ಚಿಸುತ್ತಿದೆ. ದೇಶದ ಆರ್ಥಿಕ ಪುನಾರಚನೆಯಲ್ಲಿ ಬೇಂಕು ಹಿಂದೆಯೂ ಗಣನೀಯ ಸೇವೆಸಲ್ಲಿಸುತ್ತಿದೆ; ಮುಂದಕ್ಕೂ ಸಲ್ಲಿಸುತ್ತ ಬರುವುದು.

ವಿಜಯಾ ಬೇಂಕ್, ಲಿಮಿಟೆಡ್

ದಿವಂಗತ ಎ. ಬಿ. ಶೆಟ್ಟರು ತಮ್ಮ ಸಮಾಜೋದ್ಧಾರಕ ಕಾರ್ಯಗಳಲ್ಲಿ ತೊಡಗಿದ್ದಾಗ, ೧೯೩೧ರಲ್ಲಿಈ ಬೇಂಕಿನ ಸ್ಥಾಪನೆಗೂ ಕಾರಣರಾದರು. ಮೊದಲು ಸ್ವಜಾತೀಯಬಾಂಧವರಿಗೆಮಾತ್ರ ಬೇಂಕಿನ ಶೇರುಗಳನ್ನು ಕೊಡಲಾಗುತಿದ್ದರೂ ಈಗ ಇಂತಹ ಪರಿಮಿತಿಯಿರುವುದಿಲ್ಲ ಬೇಂಕು ಎಲ್ಲ ರೀತಿಯ ಬೇಂಕಿಂಗ್ ಸೇವೆಯನ್ನು ತನ್ನ ೨೧ ಶಾಖೆಗಳ ಮೂಲಕ ವಿಶಾಲ ಜನತೆಗೆ ಒದಗಿಸುತ್ತದೆ. ಕೆಲವು ವರ್ಷಗಳಿಗೆ ಹಿಂದೆ ಶೆಡ್ಯೂಲ್ಡ್ ಬೇಂಕಾದ ಇದು ಅಂದಿನಿಂದ ಪ್ರವರ್ಧಮಾನವಾಗಿ ಬೆಳೆಯುತ್ತ ಬರುತ್ತಿದೆ. ಮಂಗಳೂರಿನಲ್ಲಿ ಸ್ವಂತ ಕಟ್ಟಡವೊಂದನ್ನು ಕಟ್ಟಿಸಿದ್ದು, ಮಧ್ಯಮ ವರ್ಗದ ಬೇಂಕಿಂಗ್ ಸಂಸ್ಥೆಗಳಲ್ಲಿ ತನ್ನ ಸ್ಥಾನವನ್ನು ಭದ್ರಗೊಳಿಸಿದೆ. ಜನತೆಯ ಗೌರವಾದರಗಳಿಗೆ ಪಾತ್ರರಾದ ತರುಣ ಉತ್ಸಾಹಿ ಡಾ| ಕೆ. ಬಾಳಪ್ಪ ಶೆಟ್ಟರು ಬೇಂಕಿನ ಆಡಳಿತೆ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ಕಾರ್ಯಪಟು ಕರ್ತವ್ಯಶೀಲ ಶ್ರೀ ಪಿ. ಜಯರಾಮ ಶೆಟ್ಟರು ಕಾರ್ಯದರ್ಶಿಯಾಗಿರುವರು ಸಮರ್ಥಖ್ಯಾತ ವ್ಯಕ್ತಿಗಳಿಂದ ಕೂಡಿದ ಡೈರೆಕ್ಟರ ಮಂಡಳಿ ಮತ್ತು ಯೋಗ್ಯ ನೌಕರರ ಸಹಕಾರದಿಂದ ಬೇಂಕು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ಹಿರಿಯ ಬೇಂಕಿಂಗ್ ಕಂಪೆನಿಗಳ ಸಾಲಿನಲ್ಲಿ ಲೆಕ್ಕಿಸಲ್ಪಡಲಿ.

ಪಾಂಗಾಳ ನಾಯಕ್ ಬೇಂಕ್ ಲಿ.

ರಾಷ್ಟ್ರಕ್ಕೆ, ವ್ಯಾಪಾರ ವಾಣಿಜ್ಯಗಳಿಗೆ ಸೇವೆ ಸಲ್ಲಿಸುವ ಸದುದ್ದೇಶದಿಂದ ೧೯೨೦ರಷ್ಟು ಹಿಂದೆಯೇ ಸ್ಥಾಪನೆಗೊಂಡಿದ್ದ ಈ ಬೇಂಕು ೧೯೬೫ರಲ್ಲಿ ಪಬ್ಲಿಕ್ ಕಂಪೆನಿಯಾಗಿ ರೂಪಾಂತರಗೊಂಡಿತು. ಉಡುಪಿಯಲ್ಲಿ ಇದರ ಪ್ರಧಾನ ಕಾರ್ಯಾಲಯವಿದ್ದು ಒಟ್ಟು ೧೯ ಶಾಖೆಗಳು ಮೈಸೂರು ಮತ್ತು ಕೇರಳ ರಾಜ್ಯಗಳಲ್ಲಿವೆ. ಕಳೆದ ಆರು ವರ್ಷಗಳಿಂದ ಬೇಂಕು ಅದ್ವಿತೀಯವಾದ ಪ್ರಗತಿಯನ್ನು ಗಳಿಸಿ, ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ ತೃಪ್ತಿಕರವಾದ ಬೇಂಕಿಂಗ್ ಸೇವೆಯನ್ನು ಸಲ್ಲಿಸಲು ಸಮರ್ಥವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿಯೇ ಬೇಂಕಿನ ಹೆಚ್ಚಿನ ಶಾಖೆಗಳಿದ್ದು ಅಲ್ಲಿನಸಂಪತ್ತನ್ನು ಸಂಗ್ರಹಿಸಿ, ರಾಷ್ಟ್ರದ ಉಪಯೋಗಕ್ಕೆ ಒದಗುವಂತೆ ಮಾಡುವಲ್ಲಿ ಸಶಕ್ತವಾಗಿದೆ ಶಿಕ್ಷಣ ಕ್ಷೇತ್ರದಲ್ಲಿ ಕೀರ್ತಿಗಳಿಸಿದ ಶ್ರೀ ಪಾಂಗಾಳ ರಾಮದಾಸ ನಾಯಕ್, ಬಿ. ಎ. ಎಲ್. ಟಿ ಇವರು ಬೇಂಕಿನ ಅಧ್ಯಕ್ಷರಾಗಿ, ಡೈರೆಕ್ಟರ ಮಂಡಳಿಯ ಮೂಲಕ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದಾರೆ, ಅನುಭವಶಾಲಿಗಳೂಕಾರ್ಯದಕ್ಷರೂ ಆದ ಶ್ರೀ ಕೆ. ಎಸ್. ಕಾಮತ್‌ರು ಬೇಂಕಿನ ಜನರಲ್‌ಮೆನೇಜರರಾಗಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯುತ್ತಿದ್ದಾರೆ ಈವರ್ಷ ಪಾಲು ಬಂಡವಳ ಹೆಚ್ಚಿಸಿ ಕೊಂಡ ಬೇಂಕು ತೀವ್ರದಲ್ಲೇ ಶೆಡ್ಯೂಲ್ಡ್ ಆಗಿ ರೂಪಾಂತರಗೊಳ್ಳಲೆಂದು ಹಾರೈಸುತ್ತೇವೆ.

ಲಕ್ಷ್ಮಣ ಬಾಬಣೆ ಪೈ ಮೆಮೋರಿಯಲ್ ಪಬ್ಲಿಕೇಶನ್ಸ್—

ಸಂಸ್ಕೃತಿಯ ಮೂಲ ಸ್ರೋತಗಳೆನಿಸಿದ ನಾಲ್ಕು ವೇದ ಮತ್ತು ಸುಪ್ರಸಿದ್ಧ ಇತಿಹಾಸ ಗ್ರಂಥ ಮಹಾಭಾರತಗಳನ್ನು ಆಮೂಲಾಗ್ರವಾಗಿ ಸಂಪಾದಿಸಿ ಪ್ರಕಟಿಸುವ ಉದ್ದೇಶದಿಂದ ರಚಿತವಾದ ಸಂಸ್ಥೆಯಿದು. ಸಂಸ್ಕೃತ ಮೂಲ ಮಂತ್ರ-ಶ್ಲೋಕಗಳೊಡನೆ ಕನ್ನಡಾನುವಾದವನ್ನೂ ಸೇರಿಸಿ, ಇದುವರೆಗೆ ಋಗ್ವೇದದ ೧೬ ಸಂಪುಟಗಳಲ್ಲಿ ಎರಡು, ಮಹಾಭಾರತದ ೫೦ ಸಂಪುಟಗಳಲ್ಲಿ ೪, ಅಥರ್ವವೇದದ ೭ ಸಂಪುಟಗಳಲ್ಲಿ ಒಂದು ಈಗಾಗಲೇ ಪ್ರಕಟವಾಗಿವೆ. ಉಳಿದ ಸಂಪುಟಗಳೂ ಯಜುರ್ವೇದದ ೫ ಮತ್ತು ಸಾಮವೇದದ ೩ ಸಂಪುಟಗಳೂ ಪ್ರಕಾಶಗೊಳ್ಳುವುವು. ಸುಮಾರು ೬೦೦ ರೂಪಾಯಿ ಬೆಲೆ ಬಾಳುವ ಒಟ್ಟು ೮೦ ಸಂಪುಟಗಳನ್ನು ರೂ. ೨೦೦ ತೆತ್ತು ಅಜೀವ ಸದಸ್ಯರಾಗುವವರಿಗೆ ಇವನ್ನು ಧರ್ಮಾರ್ಥ ಕೊಡಿಸಿಕೊಡುವ ವ್ಯವಸ್ಥೆಯಿರುವುದು.

ದಿವಂಗತ ಲಕ್ಷ್ಮಣ ಪೈಯವರು ೧೯ನೆಯ ಶತಮಾನಾಂತ್ಯದಲ್ಲಿ ಬರೆದಿದ್ದ ಈ ಹಿಂದೂ ಸಾಂಸ್ಕೃತಿಕ ಗ್ರಂಥಗಳನ್ನು ಅವರ ಮೊಮ್ಮಗ ಪ್ರೊ| ಬಾಬಣೆ ಶ್ರೀಗಿರಿ ಪೈಯವರು ತಮ್ಮ ಧರ್ಮಪತ್ನಿ ಶ್ರೀಮತಿ ಲಲಿತ ಬಿ. ಪೈಯವರೊಂದಿಗೆ ಸಂಪಾದಿಸಿ ಮುದ್ರಣಕಾರ್ಯವನ್ನು ಮುನ್ನಡೆಸುತ್ತಿರುವರು. ಈ ಪ್ರಕಟಣೆಯ ಕಾರ್ಯಕ್ಕೆ ನೆರವಾಗುವಂತೆ ಧಾರ್ಮಿಕ ಆಸ್ಥೆಯಿರುವವರೆಲ್ಲರೂ ಸಂಸ್ಥೆಯ ಅಜೀವ ಸದಸ್ಯರಾಗಿ ಸೇರಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಬಿ ಪಿಂಟೊ & ಕಂಪೆನಿ

ಭಾರತ ವಿಖ್ಯಾತವಾದ, ಎಂತಹ ಕುಶಲ ಪರೀಕ್ಷಕನ ಪರೀಕ್ಷೆಯಲ್ಲೂ ಅತ್ಯುತ್ತಮ ಪ್ರಶಸ್ತಿ ಪಡೆದ ಹಂಚುಗಳನ್ನು ತಯಾರಿಸುವ ಕಾರಖಾನೆಗಳ ಮಾಲಿಕ ಸಂಸ್ಥೆಯಿದು. ಇವರಲ್ಲಿ ತಯಾರಾದ ಹಂಚುಗಳು ದೂರದ ಆಸ್ಟ್ರೇಲಿಯಾ ಖಂಡದ ವರೆಗೂ ಯಾವುದೇ ಬಿರುಕು ಕೆಡುಕುಗಳಿಲ್ಲದೆ ಮುಟ್ಟುತ್ತಿವೆ ಯೆಂದರೆ ಈ ಹಂಚುಗಳ ಗುಣವನ್ನೂ ಬಾಳಿಕೆಯನ್ನೂ ಬೇರೆ ಹೇಳಬೇಕಾಗಿಲ್ಲ ಮಂಗಳೂರು ಮತ್ತು ಬೊಂಬಾಯಿಗಳಲ್ಲಿ ಕಂಪೆನಿಯ ವಿತರಣೆಯ ವ್ಯವಸ್ಥೆಯಿದ್ದು ಹಂಚಿನ ಎಂಟು ಕಾರಖಾನೆಗಳು ಇವರ ಒಡೆತನದಲ್ಲಿವೆ ೧೮೭೫ರಲ್ಲಿ ಸ್ಥಾಪಿತಗೊಂಡ ಈ ಕಂಪೆನಿಯು ಸುಮಾರು ೯೦ ವರ್ಷಗಳ ಅನುಭವದಿಂದ ತಯಾರಿಸುತ್ತಿರುವ ಮಂಗಳೂರು ಹಂಚುಗಳನ್ನು ಎಲ್ಲರೂ ಉಪಯೋಗಿಸಬಹುದು. ಶ್ರೀ ಎಫ್. ಎಕ್ಸ್. ಡಿ. ಪಿಂಟೊ, ಎಂ. ಎಲ್ ಎ. ಇವರ ಮಾರ್ಗದರ್ಶನದಲ್ಲಿ ಈ ಕಂಪೆನಿಯು ಪ್ರವರ್ಧಮಾನವಾಗಲಿ ಎಂದು ಬಯಸುತ್ತೇವೆ.

(೩೧ನೇ ಪುಟ ನೋಡಿರಿ)

ನಿಮ್ಮ ಮನೆಯ ನಿತ್ಯದ ಉಪಯೋಗಕ್ಕೆ—
ವಿಶೇಷ ಸಮಾರಂಭಗಳಿಗೆ ಅತ್ಯಗತ್ಯವುಳ್ಳ
ಎಲ್ಲ ಪಾತ್ರೆಗಳಿಗೆ—
ಬೆಳ್ಳಿ, ತಾಮ್ರ, ಕಂಚು, ಸ್ಟೈನ್‌ಲೆಸ್ ಸ್ಟೀಲ್,
ಎಲ್ಲ ಪಾತ್ರೆಗಳಿಗೆ- ನಮ್ಮಲ್ಲಿಗೆ ಬನ್ನಿ.
ಐರೋಡಿ ರಾಧಾಕೃಷ್ಣ ಪೈ
ಪಾತ್ರೆ ವ್ಯಾಪಾರಿಗಳು
ರಥಬೀದಿ - - - ಉಡುಪಿ

ನಮ್ಮ ಗ್ರಾಹಕರಿಗೂ, ಹಿತಚಿಂತಕರಿಗೂ
ಪ್ರಜಾರಾಜ್ಯ ದಿನದ ಹಾರ್ದಿಕ ಅಭಿನಂದನೆಗಳು
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್
ತೆಂಕಪೇಟೆ - - - ಉಡುಪಿ
Sri Gajanana Cloth Stores
TENKAPET, UDIPI.
THE FASHION CREATORS IN THE TOWN
& WHERE ALWAYS SOME THING IS NEW!

…ಚುನಾವಣೆಯ ಸಮಯ ಮತ್ತೆ ಸಮೀಪಿಸುತ್ತಿದೆ. ಜನರನ್ನಾಳುವ ಪಕ್ಷವೂ, ವಿರೋಧಿ ಪಕ್ಷಗಳೂ ನಾಲಗೆಯ ಕತ್ತಿಯನ್ನು ಮಸೆದು ಜನತೆಯ ಅಭಿಪ್ರಾಯವನ್ನು ಕೇಳಿ ಆಜ್ಞೆ ಪಡೆಯಲು ಹವಣಿಸಬೇಕಾದ ಈ ಸಂದರ್ಭದಲ್ಲಿ ಜನತೆಯ ಉತ್ತರವೇನಾಗಬಹುದು ಎಂಬ ಕುರಿತು ಯೋಚಿಸುವುದು ಸೂಕ್ತವಾಗಿದೆ.

ಆಳುವ ಪಕ್ಷದ ಸ್ಥಿತಿಗತಿ

ನಮ್ಮ ದೇಶದಲ್ಲಿ ಬ್ರಿಟಿಷ ಮತ್ತು ಅಮೇರಿಕನ್ ಮಾದರಿಯ ಪ್ರಜಾತಂತ್ರವನ್ನೇ ನಾವು ಬಳಕೆಗೆ ತರುತ್ತಿದ್ದೇವಾದರೂ ಸರ್ಕಾರವನ್ನು ವಿರೋಧಿಸಬೇಕು, ವಿರೋಧಿ ಪಕ್ಷಗಳನ್ನು ಬೆಳೆಸಬೇಕು ಎಂಬ ಆಕಾಂಕ್ಷೆ ನಮ್ಮ ಜನರಿಗೆ ಇನ್ನೂ ರಕ್ತಗತವಾದಂತೆ ತೋರುವುದಿಲ್ಲ. ಆಳುವುದಕ್ಕಾಗಿ ತಾನೇ ಸರ್ಕಾರದ ನಿರ್ಮಾಣ? ಪ್ರತ್ಯಕ್ಷವಾದ ವಿರೋಧವನ್ನು ನಾವೇಕೆ ಒಡ್ಡಬೇಕು? ಎಂದು ಜನರು ಕೇವಲ ಬಾಯಿ ಮಾತಿನ ಟೀಕೆ ಟಿಪ್ಪಣಿಗಳಲ್ಲಿಯೇ ಸಂತೃಪ್ತರಾಗಿ ಮತದಾನದ ದಿನ ಸರ್ಕಾರ ಪಕ್ಷಕ್ಕೆನೇ ಮತಗಳನ್ನೆಸೆದರೆ ಅದರಲ್ಲಿ ಆಶ್ಚರ್ಯವಿಲ್ಲ. ಎರಡನೆಯದಾಗಿ, ಆಳುವ ಪಕ್ಷದ ಭದ್ರತೆಗೆ ದೇಶದ ಹತ್ತು ವರ್ಷದ ಪ್ರಗತಿ ಸಾಧನೆಯೂ ಒಂದು ಕಾರಣವಾಗುತ್ತದೆ ವಿರೋಧಿ ಪಕ್ಷಗಳು ಕಾಂಗ್ರೆಸಿನ ಸಾಧಿತದ ವಿಷಯ ಎಷ್ಟೋ ಭಾಷಣ ಬಿಗಿದರೂ ಸರ್ಕಾರಿ ಪಕ್ಷದ ಘೋಷಣೆಗಳು ಕಾರ್ಯಗತವಾಗುತ್ತಿರುವ ಬೃಹತ್ ಚಿತ್ರವನ್ನು ಜನಗಳ ಮನಸ್ಸಿನಿಂದ ಹೊಡೆದೋಡಿಸಲು ಶಕ್ಯವಿಲ್ಲ. ಮೂರನೆಯದಾಗಿ, ಕಾಂಗ್ರೆಸ್ ಸರ್ಕಾರವು ತನ್ನ ಪಕ್ಷದ ಬೆಳವಣಿಗೆಗಾಗಿ ಸರ್ಕಾರವನ್ನು ಉಪಯೋಗಿಸಿಕೊಳ್ಳುತ್ತಿರುವುದು ಹೇಗೂ ಜಗಜ್ಜಾಹಿರವಾಗಿದೆ. ಇದರ ಪರಿಣಾಮವಾಗಿ ಪ್ರತಿ ಹಳ್ಳಿ ಪೇಟೆಗಳಲ್ಲಿಯೂ ಕಾಂಗ್ರೆಸಿನ ಘೋಷಣೆಗೆ, ವಿತ್ತವಿತರಣೆಗೆ ಕೈನೀಡಿ ಅದರಿಂದಲೆ ತಮ್ಮ ಬೇಳೆ ಬೇಯಿಸಿಕೊಂಡ ಹಲವಾರು ಮಹಾನುಭಾವರು ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ ಕೋಟೆಯನ್ನು ಕಾಪಾಡುವುದರಲ್ಲಿ ನೆರವಾಗದಿದ್ದಾರೆಯೇ? ನಾಲ್ಕನೆಯದಾಗಿ ನಮ್ಮ ದೇಶದ ಜನರಲ್ಲಿ ನೂರಕ್ಕೆಪ್ಪತ್ತೈದರಷ್ಟು ಮಂದಿ ಇನ್ನೂ ನಿರಕ್ಷರಿಗಳೆಂದರೂ, ಅವರ ಬುದ್ಧಿವಂತಿಕೆಗೇನೂ ಕಡಿಮೆ ಇರುವುದಿಲ್ಲ. ನಡೆವರೆಡಹದೆ ಕುಳಿತರೆಡಹುವುದಿಲ್ಲ'ವೆಂಬ ಬಂಡವಾಳ್ಯಾಜನಾಣ್ನುಡಿಯಿದೆ. ಅದರಂತೆ ಸರ್ಕಾರವನ್ನು ಟೀಕಿಸುವ ಪಕ್ಷಗಳ ವಿಷಯದಲ್ಲಿ ಇನ್ನೂ ಪ್ರಜೆಗಳಿಗೆ ಧೈರ್ಯವಿದ್ದಂತೆ ತೋರುವುದಿಲ್ಲ, ಕೊನೆಯದಾಗಿ, ಕಾಂಗ್ರೆಸ್ಸಿಗೆ ಇರುವಷ್ಟು ಸಂಘಟನಾ ಶಕ್ತಿ, ಮಂಡಲ ಇತ್ಯಾದಿಗಳ ರಚನೆ ಕಮ್ಯೂನಿಸ್ಟ್ ಪಕ್ಷ ಒಂದನ್ನು ಬಿಟ್ಟರೆ ಬೇರಾವ ಪಕ್ಷಕ್ಕೂ ಸಮನಿಸಿದ ಹಾಗೆ ತೋರುವುದಿಲ್ಲ. ದೇಶದಾದ್ಯಂತ ಹರಡಿರುವ ಸಂಘಟಿತ ಪಕ್ಷ ಕಾಂಗ್ರೆಸ್ ಒಂದೇ ಸರಿ; ಆತೆಯೆ ಎಲ್ಲ ಸ್ಥಳಗಳಿಗೂ ಅಭ್ಯರ್ಥಿಗಳು ದೊರೆವ ಪಕ್ಷವೂ ಇದೊಂದೇ.

ಕಾಂಗ್ರೆಸ್ ಪಕ್ಷದ ಪ್ರಚಲಿತ ಆರಕ್ಷತೆಯೂ ಹದ? ಎಂಬ ಕುರಿತೂ ಯೋಚನೆ ಮಾಡಬೇಕಾಗಿದೆ (೧) ವ್ಯಕ್ತಿಯೊಬ್ಬನ ಪ್ರಾಬಲ್ಯದ ಮೇಲೆ ಅವಲಂಬಿಸಿರುವುದು ಯಾವ ಗಳಿಗೆಗೆ ಅಪಾಯಕರವೆಂದು ಹೇಳುವಂತಿಲ್ಲ; ನಾಯಕ ಪೂಜೆಯ (Personality cult) ಪಂಥವನ್ನು ಕಾಂಗ್ರೆಸ್ ಸಾಕಷ್ಟು ಬೆಳೆಸಿಕೊಂಡಿರುವುದರಿಂದ, ಪಕ್ಷದೊಳಗೆ ಚುನಾವಣೆಯ ಅನಂತರ ಬಿಕ್ಕಟ್ಟಿಗೆ ಸಂದರ್ಭವಿದೆ. ನೆಹ್ರೂ-ಮೆನನ್-ಮಾಲವೀಯರಂಥ 'ಆಕ್ರಮಣಕಾರಿ ಸಮಾಜವಾದಿ'(aggressive socialists)ಗಳ ಒಂದು ಗುಂಪು; ಮಂದಗಾಮಿ ಸಮಾಜವಾದದ ಪುರಸ್ಕರ್ತರಾದ ಮೊರಾರ್ಜಿ-ಪಾಟೀಲ-ಶಾಸ್ತ್ರಿ ಮುಂತಾದವರ ಒಂದು ಗುಂಪು ಕೇಂದ್ರ ಸಚಿವ ಸಂಪುಟದಲ್ಲೇ ಇದ್ದಂತೆ ತೋರುವುದು. ಈ ಭಿನ್ನಾಭಿಪ್ರಾಯದ ದೆಸೆಯಿಂದ ಅನೇಕ ತರದ ನಿಷ್ಕ್ರಿಯ, ಅನ್ಯವಹಾರ್ಯ ಬಿನ್ನತೆಗಳು ಕಾಂಗ್ರೆಸ್ಸಿನ ಶಿಸ್ತಿನ ಕಟ್ಟನ್ನು ಸಡಿಲಿಸಿವೆ. ಇದು ಕಾಂಗ್ರೆಸಿನ ಅಂತರಂಗದ ಬೇನೆ. (೨) ಈ ಸಲದ ಚುನಾವಣೆಗೆ ಉಮೇದ್ವಾರರ ಆಯ್ಕೆಯ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಆಡಳಿತವಾಗಿರುವ ರಾಜ್ಯಗಳ ರಾಜಕೀಯದ ಪ್ರತಿಬಿಂಬವು ಮೂಡಿರುವುದನ್ನು ನಾವು ಗಮನಿಸಬೇಕು. ಮುಖ್ಯಮಂತ್ರಿಯಾಗಬಲ್ಲವನದೊಂದು ಗುಂಪು, ಅವನಿಗೆ ವಿರೋಧಿಗಳದೊಂದು ಗುಂಪು — ಈ ಗುಂಪಿನ ದೆಸೆಯಿಂದ ಸ್ಥಾನ ದೊರೆಯದ ಅಭ್ಯರ್ಥಿಗಳು ಕಾಂಗ್ರೆಸ್ಸನ್ನು ಬಹಿರಂಗವಾಗಿಯೂ, ಗುಪ್ತವಾಗಿಯೂ ವಿರೋಧಿಸುವುದು ಸಾರ್ವತ್ರಿಕವಾಗಿರುವುದರಿಂದ ಕಾಂಗ್ರೆಸಿನ ವಿಜಯವು ಎಂದಿನಂತೆ 'ಪ್ರಚಂಡ' ವಿಜಯವಾಗುವುದು ಅಸಂಭವ (೩) ಕಾಂಗ್ರೆಸ್ ಆಸ್ತ್ಯಕ್ಷರ-ಹತ್ತು ವರ್ಷ ಅವಧಿಯ ಸೂಚನೆ'ಯನ್ನು ಖಡಾಖಂಡಿತವಾಗಿ ಜಾರಿಗೆ ತರುತ್ತಿದ್ದರೆ ಕಾಂಗ್ರೆಸಿನ ಚಾರಿತ್ರ್ಯದ ಮೇಲೆ ಜನರಿಗೆ ಶಂಕೆ ಬರುತ್ತಿದ್ದಿಲ್ಲ; ಅಧಿಕಾರ—ಲಾಲಸರ ಪಕ್ಷವೆಂಬ ಅಪಖ್ಯಾತಿಗೆ ಕಾಂಗ್ರೆಸ್ ತುತ್ತಾಗ

ಮುಂದಿನ ಚುನಾವಣೆ

ಸಾರ್ವತ್ರಿಕ ಚುನಾವಣೆಗಳು ಪ್ರಜಾಪ್ರಭುತ್ವದಲ್ಲಿ ಅನಿವಾರ್ಯ. ಜನತೆ ತನಗೆ ಎಂತಹ ಆಡಳಿತ ಬೇಕು ಎಂಬುದನ್ನು ಬಹಿರಂಗವಾಗಿ ಘೋಷಿಸುವ ಸಾಧನವಿದು. ನಮ್ಮ ಸರಕಾರಿ ಪಕ್ಷ ಕಾಂಗ್ರೆಸ್ಸು ಕೇಂದ್ರದಲ್ಲಿಯೂ ಎಲ್ಲ ರಾಜ್ಯಗಳಲ್ಲಿ ಈ ಬಾರಿಯೂ ಬಹುಮತ ಪಡೆಯುವುದರಲ್ಲಿ ಸಂಶಯವಿಲ್ಲವಾದರೂ ಈ ಹಿಂದಿನ ಚುನಾವಣೆಗಳಂತೆ ಅತ್ಯಧಿಕ ಬಹುಮತ ಗಳಿಸದು; ಇದಕ್ಕೆ ವಿರೋಧಿ ಪಕ್ಷಗಳ ಬಲ ಹೆಚ್ಚಿದುದು ಕಾರಣವಲ್ಲ; ಕಾಂಗ್ರೆಸ್ಸಿನಲ್ಲಿಯೇ ಭಿನ್ನ ಭಿನ್ನ ಗುಂಪುಗಳು ಹುಟ್ಟಿದುದು ಕಾಂಗ್ರೆಸ್ಸಿನ ಜಂಘಾ ಬಲಕ್ಕೆ ಆಘಾತಪ್ರಾಯವಾಗಿದೆ.

ಪ್ರೊ| ಕು. ಶಿ. ಹರಿದಾಸ ಭಟ್ಟ, ಎಂ. ಎ.

(೩೦ನೇ ಪುಟ ನೋಡಿರಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3.

ಮಾಸಿಕ ಉಳಿತಾಯ ಯೋಜನೆ

ನಿಮ್ಮ ಉಳಿತಾಯವನ್ನು
ಕ್ಯುಮಲೇಟಿವ್ ಡಿಪೋಸಿಟಿನಲ್ಲಿ
ವಿನಿಯೋಗಿಸಿರಿ

ಮಾಹೆಯಾನ ತೆತ್ತ ಪ್ರತಿ ಹತ್ತು ರೂಪಾಯಿಗಳು

ಕೆಳಗಿನ ಅವಧಿಯ ನಂತರ ಒದಗಿಸುತ್ತವೆ:

12	ತಿಂಗಳುಗಳು	....	ರೂ.	122 - 60
24	ತಿಂಗಳುಗಳು	....	ರೂ.	250 · 20
36	ತಿಂಗಳುಗಳು	....	ರೂ.	383 30
48	ತಿಂಗಳುಗಳು	....	ರೂ.	521 = 10
60	ತಿಂಗಳುಗಳು	....	ರೂ.	668 - 60

THE KARNATAKA BANK LIMITED

ಅವತಾರ ಶಕ್ತಿ

ಧರ್ಮ ಸಂಸ್ಥಾಪನೆಗೆ ಪರಮಾತ್ಮ ಯುಗಯುಗದಲ್ಲಿ ಅವತಾರವೆತ್ತಿ ಶಾಂತಿಯ ಕಹಳೆಯನ್ನೂದಿ ಶಿಷ್ಟಸಂರಕ್ಷಣೆ ಮಾಡುತ್ತಾನೆಂದು ಭಾರತೀಯರ ವಿಶ್ವಾಸ. ತ್ರಿಗುಣಾತ್ಮಕವಾದ ಪ್ರಪಂಚದಲ್ಲಿ ತಮೋಗುಣ ಅಥವಾ ದಾನವತೆಯ ಪ್ರಾಬಲ್ಯ ಬೆಳೆದು ಅಶಾಂತಿ, ಅನಾಸಕ್ತಿ, ಅತೃಪ್ತಿಗಳು ಗರಿಗೆದರಿನಿಂದಾಗ, ದೇವತ್ವದ ಸ್ಥಿತಿ ಪ್ರಜ್ಞೆಗಳಿಸುವುದೇ ಅವತಾರ. ಈ ಅವತಾರ ಶಕ್ತಿ ಅವಿನಾಶಿ ದೇಶಕಾಲಗಳಿಗೆ ಹೊಂದಿ ಇದು ಅವತರಿಸುತ್ತದೆ.

ಶ್ರೀ ತಡ್ಡಲಸೆ ವಿಶ್ವೇಶ್ವರ ಶರ್ಮಾ

ಪ್ರಪಂಚವು ಪ್ರತಿ ನಿಮಿಷದಲ್ಲೂ ಬದಲಾವಣೆ ಹೊಂದುತ್ತಲೇ ಇರುತ್ತದೆ. ಹಲವಾರು ರೀತಿಯ ರೂಪಕ್ರಿಯೆಗಳೆಲ್ಲ ಹಳೆಯದಾಗುತ್ತ ಮತ್ತೆ ಕೆಲವು ಹೊಸ ಹೊಸದಾಗುತ್ತ ಇರುವುದು ಅದರ ಸ್ವಭಾವ. ಹಾಗಾಗಿ ಪ್ರಪಂಚವು ಪರಿವರ್ತನ ಶೀಲವುಳ್ಳದ್ದೆಂದು ಎಲ್ಲರೂ ನಿರ್ವಿಕಾರವಾಗಿ ಒಪ್ಪಿಕೊಳ್ಳತಕ್ಕ ಮಾತಾಗಿದೆ.

ಆದರೆ ಪರಿವರ್ತನವುಳ್ಳದ್ದೆಂದು ಸುಲಭವಾಗಿ ಒಪ್ಪಿಕೊಂಡರೂ ಪರಿವರ್ತನೆ ಹೊಂದುತ್ತಿರುವ ಸ್ಥಿತಿಗತಿಯನ್ನು ಮಾತ್ರ ತಿಳಿದುಕೊಳ್ಳುವುದು ಕಷ್ಟ ಸಾಧ್ಯ. ಯಾವುದೇ ಒಂದು ವಿಷಯವಾಗಲೀ—ವ್ಯವಸ್ಥೆಯಾಗಲೀ—ನಾಮವಾಗಲೀ—ಕ್ರಿಯೆಯಾಗಲೀ ಅದರ ಮೇಲೆ ನಿಸರ್ಗದ ನಿಯಮದಂತೆ ಆಗುತ್ತಿರುವ ಆಗುಹೋಗುಗಳ ಅಂತರಾಳ ಮಾತ್ರ ಅಗಮ್ಯವಾಗಿಯೇ ಇರುತ್ತದೆ. ಹಾಗಾಗಿ ಕಾಲಕ್ಕೆ ಯಾವುದು ಅಪೇಕ್ಷೆಯೋ ಅದು ಹೊಸದಾಗುತ್ತದೆ. ಯಾವುದು ಜುಗುಪ್ಸೆಯೋ ಅದು ಹಳೆಯದಾಗುತ್ತದೆ.

ಹೀಗೆ ಉಂಟಾಗುತ್ತಿರುವ ಹಳೇ ಮತ್ತು ಹೊಸ ವಸ್ತು ಅಥವಾ ಕ್ರಿಯೆಗಳ ಬದಲಾವಣೆಯ ಕಾಲವನ್ನು ಕ್ರಾಂತಿ ಕಾಲವೆಂದು ಹೇಳಲಾಗುತ್ತಿದೆ. ಇಷ್ಟೇ ಅಲ್ಲ—ಇದಕ್ಕೆ ಕಾರಣನಾದವನನ್ನು ಕಾರಣ ಪುರುಷನೆಂದೂ ಅವತಾರಿಕನೆಂದೂ ಕರೆಯಲಾಗುತ್ತಿದೆ

ಇಂಥ ಕ್ರಾಂತಿಯ ಮಿಂಚುಗಳು ನಮ್ಮ ಭರತ ವರ್ಷದ ಚರಿತ್ರಾಕಾಶದಲ್ಲಿ ಅನೇಕ ಸಾರೆ ಮಿಂಚಿವೆ. ಆ ಮಿಂಚಿನ ಬೆಳಕಿನಲ್ಲಿ ಹಲವರು ಸಂಚರಿಸಿ ಅವತಾರಿಕರೆಂದು ಪ್ರಸಿದ್ಧಿಗೆ ಬಂದಿದ್ದಾರೆ.

ಸತ್ಯ—ಶಾಂತಿ—ನ್ಯಾಯ—ನಿಷ್ಠೆಗಳ—ಪಾರವನ್ನೂ ಆಗಿನ ಜನಾಂಗಕ್ಕೆ ಬೇಕಾದ ವ್ಯವಹಾರ ಸಂಪ್ರದಾಯಗಳನ್ನು ಹೇಳುವುದೇ ಅವತಾರಿಗಳ ಆದರ್ಶ, ಸಂದೇಶ. ಅದಕ್ಕಾಗಿ ಈ ಅವತಾರಿಕ ಶಕ್ತಿ ಆವಿರ್ಭವಿಸುತ್ತದೆ.

ಈ ಶಕ್ತಿಯ ಜಾಗ್ರತಿ ಒಂದು ವ್ಯಕ್ತಿಯಲ್ಲಾಗುತ್ತದೆ. ಆಗ ಆ ವ್ಯಕ್ತಿ ಜನಾಂಗದ ಮುಖಂಡನಾಗುತ್ತಾನೆ ಅವನು ಹೇಳಿದ—ನಿರ್ದೇಶಿಸಿದ ತತ್ವ ವಿಚಾರ ಸರ್ವಮಾನ್ಯವಾಗುತ್ತದೆ.

ಇದು ಧಾರ್ಮಿಕವಿರಲಿ ರಾಜಕೀಯವಿರಲಿ, ಇಲ್ಲವೇ ಸಾಮಾಜಿಕವಿರಲಿ, ಅಂತೂ ಆಯಾ ಕ್ಷೇತ್ರದಲ್ಲಿ ಆಗಿನ ಅವಶ್ಯಕತೆಗೆ ಅನುಸರಿಸಿ ಬದಲಾವಣೆ ಮಾಡಿದ ಮಹಾನ್ ಶಕ್ತಿಗೆ ಎಲ್ಲರೂ ತಲೆಬಾಗುತ್ತಾರೆ.

ಇಂಥ ಮಹಾನ್ ವ್ಯಕ್ತಿಗಳು ಸಾರುತ್ತ ಬಂದ ಸಂದೇಶಗಳಿಂದಲೇ ನಮ್ಮ ಭಾರತೀಯ ಸಂಸ್ಕೃತಿ ಉಳಿದು ಕೊಂಡಿದೆ. ಅದರ ಪ್ರಭಾವ ಬೆಳೆದಿದೆ.

ಈ ಅವತಾರಗಳು ಅನೇಕವೆಂದು ಕರೆಯುತ್ತಿದ್ದರೂ ಆ ವ್ಯಕ್ತಿಗಳ ಉದ್ದೇಶ, ಸಂದೇಶಗಳೆಲ್ಲ ಒಂದೇ. ಪ್ರಪಂಚಕ್ಕೆ ಸತ್ಯ ದರ್ಶನ, ಶಾಂತಿ ಸ್ಥಾಪನೆ.

ಹಾಗಾದರೆ ಈ ಉದ್ದೇಶ ಒಂದೇ ಆದರೆ ಅದನ್ನು ನಿರೂಪಿಸುವ ಶಕ್ತಿ—ವ್ಯಕ್ತಿಗಳೆಲ್ಲ ಯಾಕೆ ಭಿನ್ನವಿರಬೇಕು? ಅವುಗಳಲ್ಲಿ ಯಾಕೆ ಘರ್ಷಣೆಯುಂಟಾಗುತ್ತಿರಬೇಕು? ಎನ್ನುವ ವಿಚಾರ ನಮ್ಮನ್ನು ತುಸು ಗೊಂದಲಕ್ಕಿಳಿಸುತ್ತದೆ. ನಾವಿರಾರು ವರ್ಷಗಳಿಂದಲೂ ಈ ಒಂದೇ ಉದ್ದೇಶ, ಒಂದೇ ಸಾಧನೆಗಾಗಿ ನೂರಾರು ರೀತಿಯ ಮತ—ಪಂಥ, ಆದರ್ಶಗಳೆಲ್ಲ ಯಾಕೆ ಹುಟ್ಟಿಕೊಂಡವು? ಒಂದಕ್ಕೊಂದರ ಮಧ್ಯೇ ತಿಕ್ಕಾಟ ಜಗ್ಗಾಟಗಳಾಗಿ ರಕ್ತಪಾತದಂತಹ ಭೀಕರ ಕಾರ್ಯಗಳೂ ನಡೆಯುವವಲ್ಲ?

ಮತ ಸಂಪ್ರದಾಯಗಳೆಲ್ಲ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಸಿದ್ಧಿಸಾಧನೆಗೆ ಹುಟ್ಟಿಕೊಂಡಂಥ ದಾರಿಗಳು. ಧ್ಯೇಯ ಸಾಧನೆ ಒಂದೇ. ಜನಗಳ ಅಭಿರುಚಿಗೆ ತಕ್ಕಂತಹ, ನಾಡಿನ ಭದ್ರತೆಗೆ ಬಾಧಕವಾಗದಂತಹ ರೀತಿಯಲ್ಲಿ ಇವು ಬೆಳೆದು ಬಂದಿವೆ. ಮತಸ್ಥಾಪಕರು ಮುಂಡಿಸಿದ ಮತದ ಮೇಲೆಯೇ ಕಾಲಕ್ರಮೇಣ ಮಾಲಿನ್ಯತೆ ಮುಸುಕಿದಾಗ, ಮತಿ ಇಲ್ಲದೇ ಜನ ವರ್ತಿಸಿದಾಗ ಲೋಕದ ವ್ಯವಹಾರಕ್ಕೆ ತೊಂದರೆಯಾಗುತ್ತದೆ. ಆಗ ಬೇರೊಂದು ರೀತಿಯಲ್ಲಿ ಜನಕ್ಕೆ ಶಾಂತಿ ಪಾಠ ಹೇಳಬೇಕಾಗುತ್ತದೆ. ಸತ್ಯದ ನಿದರ್ಶನ ತೋರಿಸಿ ಕೊಡಬೇಕಾಗುತ್ತದೆ. ಆಗ ಬರುವಂಥ ಮತ ಪಂಥಗಳು ಬೇರೊಂದು ಬಗೆಯಾಗಿ ಕಾಣುತ್ತಿರುವುದು ಸ್ವಭಾವಿಕವೇ.

ಹೀಗೆ ಹೊಸ ಪಂಥ ತೋರಿಸಿದ ಅವತಾರಿಕ ಶಕ್ತಿಯುಳ್ಳವರೆಂದು ಹೇಳುವ ಪುರುಷರನ್ನು ಕಾಣುವ ದೃಷ್ಟಿಯಲ್ಲೂ ಬೇರೆ ಬೇರೆ ರೀತಿಯ ತೆರೆತರಂಗಗಳು ಉದಯಿಸುತ್ತವೆ. ಲೋಕಕ್ಕೆ ಕಷ್ಟಬಂದಾಗ ಸಮಾಜಕ್ಕೆ ಶಾಂತಿ ಬೇಕಾದಾಗ ಸಾವಿರಾರು ಆರ್ತ ದೃಷ್ಟಿಗಳು ಒಬ್ಬನನ್ನು ನೋಡುತ್ತವೆ. ಸಾವಿರಾರು ಕಂಠಗಳು ಅಭಯ ಬೇಡುತ್ತವೆ. ಆಗ ಅಸಂಖ್ಯ ಜನಗಳ ಪ್ರಾರ್ಥನೆಯಿಂದ ಅಸಂಖ್ಯ ಆತ್ಮಶಕ್ತಿಗಳು ಕೇಂದ್ರೀಕೃತವಾಗಿ ಜಾಗ್ರತ ಆತ್ಮವುಳ್ಳ ಒಬ್ಬದು ವ್ಯಕ್ತಿಯು ಆವಿರ್ಭವಿಸುತ್ತದೆ. ಇದರಿಂದ ಪ್ರಪಂಚಕ್ಕೆ ಬೇಕಾದ ಸತ್ಯ ಶಾಂತಿಗಳ ಸ್ಥಾಪನೆಯಾಗುತ್ತದೆ ನಂತರ ಆ ಅವತಾರಕ ಶಕ್ತಿ ವಿಕೇಂದ್ರೀಕೃತವೋ ಅದೃಶ್ಯವೋ ಆಗುತ್ತಿರ ಬೇಕು ಎಂದನ್ನಿಸುತ್ತದೆ.

ಯಾಕೆಂದರೆ ಈ ಅವತಾರಿಕರ ಚರಿತ್ರ್ಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದು ಹೆಚ್ಚು ಸ್ಪಷ್ಟವಾಗುತ್ತದೆ. ಒಂದು ಕಾಲದಲ್ಲಿ ವಂದ್ಯರಾಗಿ ಹಾಗೇ ಮತ್ತೊಂದು ಕಾಲದಲ್ಲಿ ವಧ್ಯರೂ ಆಗುತ್ತಾರೆ. ಅಥವಾ ಹಿಂಸೆ ಮುಂತಾದ ಆರೋಪಗಳಿಗೆ ತುತ್ತಾಗುತ್ತಾರೆ. ಆಗ ಅವರಲ್ಲಿರುವ ಅವತಾರಕ ಶಕ್ತಿ ಅದೃಶ್ಯವಾಯಿತೆನ್ನೋಣವೇ?

ರಾಮ, ಕೃಷ್ಣ, ಏಸು, ಪೈಗಂಬರ, ಬುದ್ಧ, ಶಂಕರ ಮಾಧ್ವ ಮುಂತಾದವರಲ್ಲ ಆಯಾ ಕಾಲದಲ್ಲಿ ಮತಸ್ಥಾಪಕರಾದರು. ಅವತಾರಕರೆಂದು ಹೇಳಿಸಿಕೊಂಡರು. ಧರ್ಮದೇವರುಗಳ ಬಗ್ಗೆ ಬೇರೆ ಬೇರೆ ನಿಲುವು-ಒಲುವುಗಳನ್ನು ಹೇಳಿದರು. ಆದರೆ ಮೂಲಶಕ್ತಿಯನ್ನು ಮಾತ್ರ ಅಲ್ಲಗಳೆಯಲಿಲ್ಲ. ನಾಮರೂಪ ಕ್ರಿಯೆಗಳು ಮಾತ್ರ ಭಿನ್ನ.

ಹಾಗಿದ್ದರೂ ಅವರೆಲ್ಲರ ಅಂತ್ಯವು ಸಾಮಾನ್ಯ ಒಂದೇ ಬಗೆ, ಸಮಾಜ ಮೊದಲು ನೋಡಿದ ದೃಷ್ಟಿಯಿಂದ ಅವರನ್ನು ನೋಡಲಿಲ್ಲ.

ಗಾಂಧೀಜೀ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಮಹಾ ಯೋಧರು. ಅವರಿಂದ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗಬೇಕಿತ್ತು. ಅದಕ್ಕಾಗಿ ಅವರನ್ನು ಅವತಾರಿಗಳೆಂದು ಕರೆದರು. ಆಗ ಗಾಂಧೀಜಿಯವರು ಹೇಳಿದ ಒಂದೊಂದು ಮಾತೂ ಲಕ್ಷ

(೨೯ನೇ ಪುಟ ನೋಡಿರಿ)

ಪ್ರಜಾರಾಜ್ಯ ದಿನದ ಶುಭಾಶಯಗಳು!

ಮಿತದರದಲ್ಲಿ—ಮನಮೆಚ್ಚುವ ವೈವಿಧ್ಯಪೂರ್ಣ ಬಟ್ಟೆಗಳಿಗೆ

ಸುಂದರ ಕ್ಲೋತ್ ಸ್ಟೋರ್ಸ್

ಕೆಥೋಲಿಕ್ ಸೆಂಟರ್, ಉಡುಪಿ ದ. ಕನ್ನಡ.

ಯಾವತ್ತೂ ತರದ ಕೈಮಗ್ಗ ಮತ್ತು ಗಿರಣಿ ಬಟ್ಟೆಗಳೂ ಸಿಲ್ಕ್ ಬಟ್ಟೆಗಳೂ ಸದಾ ಸಿದ್ಧವಿವೆ.

SUNDARA CLOTH STORES

Catholic Centre, UDIPI, S Kanara.

Prop: K. G. Sunder Rao

ಪರಸ್ಪರರಲ್ಲಿ ತಿಳುವಳಿಕೆ
ಪರಸ್ಪರ ಸಹಕಾರ ವರ್ಧಿಸಿ
ಸರ್ವರಿಗೂ ಸುಖ ಶಾಂತಿ
ದೊರೆಯಲೆಂದು ಹಾರ್ದಿಕವಾಗಿ ಕೋರಿ
ಪ್ರಜಾರಾಜ್ಯ ದಿನದ ಶುಭಾಶಯಗಳನ್ನು ಸಲ್ಲಿಸುತ್ತೇವೆ.

ಸುಖಕರ ಪ್ರಯಾಣಕ್ಕಾಗಿ

ಶೆಟ್ಟಿ ಮೋಟಾರು ಸರ್ವಿಸು

Shetty Motor Service

ಮಂಗಳೂರು-೧ - - - MANGALORE-1

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಗೋವೆಯ ಗಡಿಯನ್ನು ದಾಟಿ ಬಂದೆನು!

ರಾಷ್ಟ್ರಮಾತೆಯ ರೋಗ ಗೋವೆಯನ್ನು ಚೂರಿಯ ಚಿಕಿತ್ಸೆಯಿಂದ ಗುಣಪಡಿಸಿದುದರಿಂದ ಭಾರತೀಯರೆಲ್ಲರೂ ಆನಂದ ಸಾಗರದಲ್ಲಿ ತೇಲಾಡಿದ್ದಾರೆ. ನಸಾಹತು ವಾದದ ಅಂತಿಮ ಕಳಂಕವನ್ನು ಕಿತ್ತು ದಾಸ್ಯದ ನೊಗದಿಂದ ಬಿಡುಗಡೆಹೊಂದಿದ ಗೋವೆಯು ಚಂದ್ರಲೋಕದಂತೆಯೇ ನಮಗೆ ಪ್ರಿಯವಾಗಿದೆ. ಕಾರಣಾಂತರಗಳಿಂದ ಗೋವೆಯು ಮಾತೃಭೂಮಿಗೆ ಸೇರಿಕೊಂಡ ಕೆಲವೇ ದಿನಗಳಲ್ಲಿ ಅತ್ತ ಪಯಣಿಸಿದ ಕವಿ ಕಯ್ಯಾರರ ಈ ಲೇಖನದಲ್ಲಿ ಮಾತೃಭೂಮಿಯ ಕಡೆಗೆ ಅಚಲ ಭಕ್ತಿ, ಗೋವಾ ವಿಮೋಚನೆಗೆ ಆನಂದ ತೃಪ್ತಿಯ ಭಾವ ತುಂಬಿದೆ.

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

ಸುಮಾರು ಆರು ವರ್ಷಗಳ ಹಿಂದೆ, ನನ್ನ ದೇಹದ ರೋಗವೊಂದು ಉಲ್ಬಣಿಸಲು, ಬೇರೆ ದಾರಿ ತೋರದೆ, ಶಸ್ತ್ರಚಿಕಿತ್ಸೆಗೆ ಒಳಗಾದೆನು; ಅದೇ ಕಾಲಕ್ಕೆ ನನ್ನ ಅನೇಕ ಮಿತ್ರರು, ದೇಶಬಾಂಧವರು, ಗೋವೆಯ ಬಿಡುಗಡೆಯ ಹೋರಾಟಕ್ಕಾಗಿ ಹೊರಟಿದ್ದರು; ಆ ಹೋರಾಟವು ಕೇವಲ ಅಹಿಂಸಾಮಯವೆಂಬುದರಿಂದ — ಪೋರ್ಚುಗೀಸರ ಕ್ರೂರ ದಬ್ಬಾಳಿಕೆಗೆ ಒಳಗಾಗಿದ್ದರು; ಶಸ್ತ್ರಚಿಕಿತ್ಸೆಗೆ ಗುರಿಯಾಗಿ ಹಾಸಿಗೆ ಹಿಡಿದಿದ್ದ ನನಗೆ, ನನ್ನದೈಹಿಕ ವೇದನೆಗಿಂತ ಈ ನೋವು ಹೆಚ್ಚಿನ ಸಂಕಟ ಕೊಡುತ್ತಿತ್ತು. ಈ ಉಭಯ ವೇದನೆಗಳ ಸೆಳೆತಗಳ ಮಧ್ಯೆ ಹಾಸಿಗೆ ಹಿಡಿದಲ್ಲಿಂದಲೇ ಈ ಕೆಳಗಿನ ಒಂದು ಕವಿತೆ ಬರೆದೆನು:

"ಮೈಗಂಟಿರುವ ಬೇನೆ ಮದ್ದಿಂದ
ಮಾಸದಿರೆ
ವೈದ್ಯರೆಂದರು ಕೊರೆತವೊಂದೆ
ಗತಿಯೆಂದು!
ಶಸ್ತ್ರಪ್ರಯೋಗ-ಹಿಂಸಾ ಕೃತ್ಯ
ತಿಳಿದಿತ್ತು—
ವಿಧಿಯಿಲ್ಲದಾಯ್ತು! ಮಂಚದಿ
ಮಲಗಿದೆಂದು—
ಕಣ್ಗೆ ಬಟ್ಟೆಯಕಟ್ಟಿ, ಮೈಗೆ ಸೂಜಿಯ
ಚುಚ್ಚಿ,
ಕೊರೆಕೊರೆವರತ್ತಲಿತ್ತಲು ಸುತ್ತಿನಿಂದು.
ಉಳಿವಳಿವುಗಳ ಸೆಳೆತಗಳ ನಡುವೆ
ಸಿಲುಕಿತ್ತು
ನನ್ನ ಪ್ರಾಣಪಕ್ಷಿಯು! ಕೆಳಗಗಾಧ
ಜಲರಾಶಿ!
ವೈನತೇಯನೆ ಮೇಲೆ ಹಾರುತಿಹ
ಕೊಂಚಿಕ್ಕಿ,
ಗರಿಗೆದರದೆಯೆ ಮುದುಡಿತ್ತೆ, ಜೀವ
ಹಕ್ಕಿ!
ಭವ ಬಂಧನವೊ, ನಲುಮೆ
ನಚ್ಚುಗೆಯೊ ಮೆಚ್ಚುಗೆಯೊ
ಬದುಕಿದೆನು; ವೈದ್ಯರೆಂದರು—
ವಾಸಿಯೆಂದು!
ರಾಷ್ಟ್ರ ದೇಹದ ರೋಗ ಗೋವೆ
ನೋವ್ ಮಾಸಿಲ್ಲ!
ಅದಕೆ ಚೂರಿಯ ಚಿಕಿತ್ಸೆ
ಯನೊರೆವರಿಲ್ಲ."

ಮೊನ್ನೆ ಗೋವಾ ಸ್ವತಂತ್ರವಾಯಿತು—ಎಂಬೀ ರೋಮಾಂಚಕ ಹರ್ಷ ವಾರ್ತೆ ಪ್ರಕಟವಾಗಲು, ಮೈಸೂರಿನ ಕವಿ ಮಿತ್ರರೊಬ್ಬರು '"ಗೋವೆಯ ನೋವಿಗೆ ನಿಮ್ಮ ಚೂರಿಯ ಚಿಕಿತ್ಸೆ ಫಲಿಸಿತು' ಎಂದುಬರೆದು ನೆನಪು ಮಾಡಿದಾಗ ನಿಜವಾಗಿಯೂ ಪುಳಕಿತನಾದೆನು!

ನಾನು, ಈ ಘಟನೆಯನ್ನು ಸಂತೋಷದಿಂದಲೇ ನೆನವರಿಕೆ ಮಾಡುತ್ತಿದ್ದೇನೆ. ಹಿಂದೆ ಭರತಖಂಡ ಸ್ವತಂತ್ರವಾಗಲು ಹೋರಾಟ ನಡೆಸುತ್ತಿದ್ದ ಕಾಲದಲ್ಲಿ ಎಂದರೆ—ಉಪ್ಪಿನ ಸತ್ಯಾಗ್ರಹದಿಂದ ತೊಡಗಿ 'ತೊಲಗಿ ಭಾರತದಿಂದ' ಎಂಬೀ ಸಂಗ್ರಾಮ ಸಂದರ್ಭಗಳ ವರೆಗೆ—ರಾಷ್ಟ್ರದ ಬಿಡುಗಡೆಗಾಗಿ ಹಾತೊರೆದು ಹಲವು ಸಲ ಹಾಡಿದ್ದೇನೆ; ಆದರೆ ಆ ಎಲ್ಲಾ ಸಂದರ್ಭಗಳಲ್ಲಿಯೂ 'ಚೂರಿಯ ಚಿಕಿತ್ಸೆ'ಯಂತಹ ಹಿಂಸಾ ಮಾರ್ಗವಾದರೂ ಆದೀತೆಂಬ ಯೋಚನೆ ಬಂದದ್ದೂ ಇಲ್ಲ; ಹಾಗೆ ಬರೆದದ್ದೂ ಇಲ್ಲ!

"ಘೋರಗರ್ಜನೆಯಿರಲಿ,
ದಾನವಾರ್ಭಟವಿರಲಿ,
ಮಾರಿ ಮೃತ್ಯುವೆ ಮುಂದು
ಗುಡುಗುಡಿಸಿ ನಿಂದಿರಲಿ
ಮಂಗಲೋತ್ಸವದಂದು ಸಂಗೀತ
ಸ್ವರವೆಂದು
ಅದನಾಲಿಸುತ ನುಗ್ಗಿ ನುಗ್ಗುವೆವು
ಮುಂದು."

ಎಂಬೀತೆರನಾಗಿ — ಮೃತ್ಯುವಿನೆದುರು ಅಮೃತತ್ವವೇ—ಹಿಂಸೆಯ ಮುಂದೆ ಅಹಿಂಸೆಯೇ—ನಮ್ಮ ಹಾದಿಯೆಂದು ಆ ಸಂದರ್ಭಗಳಲ್ಲೆಲ್ಲಾ ಸಾರಿದ್ದಾಗಿದೆ. ಆದರೆ ಏಕೋ—ಗೋವೆಯ ಬಿಡುಗಡೆಗೆ 'ಚೂರಿಯ ಚಿಕಿತ್ಸೆ'ಯ ವಿನಾ ಅನ್ಯಮಾರ್ಗವಿಲ್ಲವೆಂದು ಕವಿಗ ಕಂಡಿತು. ಎಂಬುದನ್ನು ನಾನಿಂದು ಗೋವೆ ಬಿಡುಗಡೆ ಹೊಂದಿದೀ ಸಂದರ್ಭದಲ್ಲಿ ಸಂತೋಷಪೂರ್ವಕ ಸ್ಮರಿಸುತ್ತಿದ್ದೇನೆ.

— ೨ —

ಕಳೆದ ಕ್ರಿಸ್‌ಮಸ್ ರಜೆಯಲ್ಲಿ, ಶ್ರೀ ಕ್ಷೇತ್ರಗೋಕರ್ಣ ಯಾತ್ರೆಮಾಡಿದೆನು ಉತ್ತರಕನ್ನಡದ 'ಹಾಲಕ್ಕಿ' ಜನರನ್ನೂ ಅವರ ನಡೆನುಡಿಗಳನ್ನು ಕಂಡೆನು; ಸತ್ಯಾಗ್ರಹದ ವೀರಭೂಮಿಯಾದ ಅಂಕೋಲಾ ಸಂದರ್ಶಿಸಿದೆನು, ಮುಂದೆ ಗದಗಿನ ಸಾಹಿತ್ಯ ಸಮ್ಮೇಳನಕ್ಕೆ ಹೋಗಬೇಕಾಗಿತ್ತು; ಕಾರವಾರ ದಾರಿಯಲ್ಲಿ ಹೋಗುವಾಗ ಗೋವಾಗಡಿ ಸಮೀಪಿಸಿದ್ದರಿಂದ ಈ ಪುಣ್ಯ ಭೂಮಿಯನ್ನು ನೋಡಿ ಬರಬೇಕೆಂದು ಅಂಕೋಲಾದಿಂದ ಪತ್ರಿಕೋದ್ಯಮಿ ಗೆಳೆಯ ಶ್ರೀ ತಿಮ್ಮಾಂಬಳ ಆನಂದರೊಡನೆ ಹೊರಟೆನು ಕಾರವಾರ ತಲಪಬೇಕಾದರೆ ಅಲ್ಲಿಗೆ ಸಮೀಪದ ಅಂಜ್‌ದೀವ್ ಬಳಿ ನಮ್ಮ ಯುದ್ಧ ಹಡಗ ನಿಂತದ್ದು ನೋಡಿವೆ ಆ ದ್ವೀಪದಲ್ಲಿ ನಮ್ಮ ಧ್ವಜ ಗೆಲವಿನಿಂದ ಹಾರಾಡುತ್ತಿತ್ತು ಈ ದ್ವೀಪ ಬಹಳ ಚಿಕ್ಕದಾಗಿದ್ದರೂ, ಅದರಲ್ಲಿ ಸುರಂಗಗಳನ್ನು ನೆಲಮಾಳಿಗೆಗಳನ್ನು ತೋಡಿ ಪೋರ್ಚುಗೀಸರು ಕಳ್ಳ ವ್ಯಾಪಾರದ ಸಲುವಾಗಿ ತುಂಬಾ ಸಾಮಾನುಗಳನ್ನು ಅಲ್ಲಿ ಸಂಗ್ರಹಿಸಿ ಇಟ್ಟಿಗ ಬೇಕೆಂದು ಜನರು ಮಾತನಾಡುತ್ತಿದ್ದರು.

ಇದೇ ದ್ವೀಪದಿಂದ ಗೋವಾ ಸಮರದ ರಣಭೇರಿ ಗುಡುಗಿತ್ತು, ನಮ್ಮ ಮತ್ಸ್ಯ ವ್ಯವಸಾಯಿಗಳಲ್ಲಿ ಓರ್ವನನ್ನೂ ಪೋರ್ಚುಗೀಸರು ಇಲ್ಲಿಯೇ ಗುಂಡಿಟ್ಟುಕೊಂದರು, ಆತ ಕೇವಲ ಹತ್ತೊಂಬತ್ತು ವರ್ಷ ಪ್ರಾಯದ ತರುಣ, ಆಗತಾನೇ ಆತನಿಗೆ ವಿವಾಹವಾಗಿತ್ತು; ಆತನ ವಿಧವೆ ಮುಗ್ಧ ಬಾಲಿಕೆಗೆ ಈ ಮರಣ ಸಹನಾತೀತವಾದುದು; ಆ ದೇಶವೀರನ ಮರಣದ ಸಲುವಾಗಿ ರಾಷ್ಟ್ರವೇ ಮರುಗಿ ಪಡುತ್ತಿರುವುದರಿಂದ ಮಾತ್ರ ಆಕೆಯ ಕೊರಗು ಕಡಿಮೆ ಆಗಬೇಕು. ಕರ್ನಾಟಕದ ಮುಂದಾಳು ಶ್ರೀ ನಿಜಲಿಂಗಪ್ಪನವರು, ನಾನು ಅಲ್ಲಿಗೆ ಹೋಗುವ ಕೆಲದಿನಗಳ ಹಿಂದೆ, ಆ ಪ್ರದೇಶವನ್ನು ಸಂದರ್ಶಿಸಿದವರು, ಆಕೆಯನ್ನು ಕಂಡು ಸಹ ಸಂತಾಪವ್ಯಕ್ತಪಡಿಸಿದ್ದಲ್ಲದೆ ಒಂದು ನಿಧಿಯನ್ನೂ ಸಮರ್ಪಿಸಿದರೆಂದು ತಿಳಿದೆನು.

ಅಂಜ್‌ದೀವ್‌ನ ಸುರಂಗಗಳಲ್ಲಿ ಹಾಗೂ ನೆಲಮಾಳಿಗೆಗಳಲ್ಲಿ ಕೆಲವರು ಇನ್ನೂ ಅಡಗಿ ಕೊಂಡಿದ್ದು ಆಗಾಗ ಹೊರ ಬರುತ್ತಿದ್ದಾರೆಂದೂ ಅಲ್ಲಿ ಸದ್ದಿಯಿತ್ತು ಗೋವೆ ಹಾಗೂ ಇತರ ದ್ವೀಪಗಳು ಶರಣಾಗತವಾದುವೆಂಬ ವಾರ್ತೆ ಅಧಿಕೃತವಾಗಿ ತಮಗೆ ತಲಪದೆ ಇರುವುದರಿಂದ. ಅಲ್ಲಿ ತಂಗಿದ್ದ ಪೋರ್ಚುಗೀಸ್ ಮಿಲಿಟರಿಯ ಕೆಲವರು ಅಂತು ಕಿಂಕರ್ತವ್ಯತಾಮೂಢರಾಗಿ ಇರಬಹುದೇ ಎಂದು ಕೆಲವರ ಶಂಕೆ, ಇನ್ನು ಇಲ್ಲಿನ ನೆಲಮಾಳಿಗೆಗಳಲ್ಲಿ ಅಮೂಲ್ಯ ವಸ್ತುಗಳನ್ನು ಕಳ್ಳ ವ್ಯಾಪಾರಕ್ಕೆ ದಾಸ್ತಾನು ಇಟ್ಟಿರುವ ನಿಮಿತ್ತ, ಕಳ್ಳ ವ್ಯಾಪಾರಿಗಳು ಹೀಗೆ ಕಣ್ಣು ಮುಚ್ಚಾಲೆ ಆಡುತ್ತಿರಬಹುದೇ ಎಂದೂ ಶಂಕಿಸುವವರಿದ್ದಾರೆ. ಕೆಲವೇ ದಿನಗಳ ಹಿಂದೆ ಓರ್ವ ಪೋರ್ಚುಗೀಸ್ ಸಿಪಾಯಿ ಅಲ್ಲಿಂದ ಈಜಿಬಂದು ಕಾರವಾರ ಕಿನಾವಳಿಯ ಮಳಲದಂಡೆಯಲ್ಲಿ ಬಿದ್ದಿದ್ದವನನ್ನು ನಮ್ಮ ಸೈನಿಕರು ಎತ್ತಿಕೊಂಡು ಬಂದು ಕಾರವಾರದ ಆಸ್ಪತ್ರೆಯಲ್ಲಿ ಆತನಿಗೆ ಶುಶ್ರೂಷೆ ನಡೆಯುತ್ತಿದೆ ಬಹಳ ಪ್ರಯಾಸದಿಂದ ಜೀವದ ಹಂಗು ತೊರೆದು ಈಜಿಬಂದ ಈತನು ಎರಡೋ ಮೂರೋ ದಿನಗಳ ವರೆಗೆ ನಿರಶನದಿಂದಾಗಿ ಬಹಳ ನಿತ್ರಾಣಗೊಂಡಿರುವುದಲ್ಲದೆ ಈತನ ಮೈಗೆ ಸಮುದ್ರದ ಮೀನೋ ಪ್ರಾಣಿಗಳೋ ಕಚ್ಚಿ ಗಾಯಸಹಿತ ಆಗಿದೆ; ಈತನು ಭಾರತೀಯರನ್ನು ಕಂಡೊಡನೇ ಕಣ್ಣೀರ್ಗರೆದು ಕೂಗುತ್ತಾ, ತನ್ನನ್ನು ಕೊಲ್ಲಬೇಡಿರೆಂದೂ, ತನ್ನ ಹೆಂಡತಿ ಮಕ್ಕಳನ್ನುನೋಡಲಪೇಕ್ಷೆಯಿದೆಯೆಂದೂ ತನ್ನನ್ನು ದಯಮಾಡಿ ಸ್ವದೇಶಕ್ಕೆ ಕಳುಹಿಸಿರೆಂದೂ ಯಾಚಿಸಿದನಂತೆ. ಹೀಗೆ, ಪೋರ್ಚುಗೀಸರ ಉತ್ತುಂಗಪೌರುಷಕ್ಕೆ ಈತನು ಯೋಗ್ಯ ಪ್ರತೀಕನಾಗಿದ್ದನೆಂದು ಜನರು ಮಾತಾಡುತ್ತಿದ್ದಾರೆ.

ಗೋವೆಯಲ್ಲಿ ಘರ್ಷಣೆಯುಂಟಾಯಿತೆಂಬೀ ಸುದ್ದಿ ಕೇಳಿದ ಕೂಡಲೇ ಹತ್ತಿರದ ಕಾರವಾರ ಮುಂತಾದ ನಗರಗಳ ಜನರು ಅತೀವ ಭಯ ಭೀತಿಗೊಳಗಾಗಿರಬಹುದೆಂದು ಯಾರಾದರೂ ಊಹಿಸಬಹುದಷ್ಟೆ? ಆದರೆ ಅಲ್ಲಿನ ಪರಿಸ್ಥಿತಿ ತದ್ವಿರುದ್ಧವಾಗಿರುವುದನ್ನು ನಾನು ಕಂಡೆನು.

ಲೇಖಕರು

* *

ಕಾರವಾರ ನಗರದ ನಾಗರಿಕರು ತುಂಬಾ ಧೈರ್ಯದಿಂದಿದ್ದಾರೆ ಅಕಸ್ಮಾತ್ತಾಗಿ, ಅನಿರೀಕ್ಷಿತವಾಗಿ ತಮ್ಮ ಮೇಲೆ ಬಾಂಬು ಬೀಳಬಹುದೆಂದು ಅವರು ಭಾವಿಸುವುದು ಸಹಜವಾಗಿದ್ದರೂ ತಮ್ಮ ನಾಡಿನ ಒಂದು ವಿಮೋಚನೆಗಾಗಿ ಅಂತಹ ಆಹುತಿಗೂ ಅವರು ಸಿದ್ಧರಿದ್ದಂತೆ ತೋರಿತು ಸಾಮಾನ್ಯ ನಾಗರಿಕರಲ್ಲಿ —ಮಹಿಳೆಯರು, ಮುದುಕರು, ಹಸುಳೆಗಳು—ಇಂತವರ ಮುಖಗಳಲ್ಲಿಯೂ ಗೆಲವು, ಉತ್ಸಾಹ ಧೈರ್ಯಗಳನ್ನು ಕಂಡು ನಾನು ರೋಮಾಂಚನಗೊಂಡೆನು, ಇವರು ಗಾಂಧೀ ಪರಂಪರೆಯ ಪುಣ್ಯ ಸಂತತಿಯೆಂದು ಮನಸಾರೆ ಅಭಿನಂದಿಸಿದೆನು.

— ೩ —

ಗೆಳೆಯ ಶ್ರೀ ತಿಮ್ಮಾಂಬಳ ಆನಂದರೊಡನೆ ಕಾರವಾರದಲ್ಲಿಳಿದು, ಅಲ್ಲಿನ ಸರಕಾರೀ ವಾರ್ತಾಧಿಕಾರಿಗಳೊಂದಿಗೆ ಗೋವಾ ಪರಿಸ್ಥಿತಿಯನ್ನು ವಿಚಾರಿಸಿಕೊಂಡೆವು ಓರ್ವ ಸಾರ್ವಜನಿಕ ಕಾರ್ಯಕರ್ತರನ್ನು ಕೂಡಿಕೊಂಡು ಗೋವಾ ಹಾದಿ ಹಿಡಿದೆವು ಕಾರವಾರದಿಂದ ಸುಮಾರು ಎರಡು ಮೈಲು ಅಂತರದಲ್ಲಿ ಒಂದು ನದಿಯನ್ನು ಲಾಂಚಿನ ಮೂಲಕ ದಾಟಿ ಮುಂದೆ ಆರೇಳು ಮೈಲುಗಳ ವರೆಗೆ ಬಸ್ಸುಪ್ರಯಾಣ ಮಾಡಿದರೆ ಗೋವೆಯ ಗಡಿ ಸಿಗುತ್ತದೆ. ನಾವು ಹೋಗುವಾಗ ಓರ್ವ ಗಾಯಗೊಂಡ ಮಿಲಿಟರಿಯವನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿ ಆತನನ್ನು ಊರಿಗೆ ಒಯ್ಯುತ್ತಿದ್ದರು; ಆತ ಗೋವಾದವನಾಗಿದ್ದನು ತಾನು ರಜೆಯಲ್ಲಿ ಊರಿಗೆ ಬಂದಿದ್ದು, ಈ ಗಲಭೆಯಲ್ಲಿ ನಿಷ್ಕಾರಣವಾಗಿ ತನಗೆ ಪೋರ್ಚುಗೀಸ್ ಸೈನಿಕರು ಗುಂಡಿಟ್ಟರೆಂದೂ ಕಾರವಾರ ಆಸ್ಪತ್ರೆಯಲ್ಲಿ ಶುಶ್ರೂಷೆಗೊಳಗಾಗಿ ತಾನೀಗ ಬಿಡುಗಡೆ ಹೊಂದಿ ಊರಿಗೆ ಹೋಗುತ್ತಿದ್ದೇನೆಂದು ಆತ ತಿಳಿಸಿದನು. ಮಧ್ಯ ಮಾರ್ಗದಲ್ಲಿ ಗೋವಾದಿಂದ ಈ ಗಲಭೆಯ ಸಂದರ್ಭ ಭಯ ಭೀತರಾಗಿ ಓಡಿಬಂದ ಈರ್ವರು ಕ್ರಿಶ್ಚಿಯನ್ ಮಹಿಳೆಯರು ಬಸ್ಸು ಹತ್ತಿದರು. ಅವರಿಗೆ ಮನಃ ಸ್ವದೇಶದೊಳಗೆ ಹೋಗಬೇಕೆಂಬ ಬಯಕೆ; ಬಸ್ಸಿನಲ್ಲಿರುವವರೊಡನೆ ಅಲ್ಲಿನ ಪರಿಸ್ಥಿತಿಯನ್ನು ವಿಚಾರಿಸುತ್ತಿದ್ದರು. ಅವರಲ್ಲಿ ಓರ್ವ ಧೀರಂಮನ್ಯನು—ಆತನೂ ಕ್ರಿಶ್ಚಿಯನ್—ಅವರಿಗೇನೂ ಬೆದರಿಕೆಯಿಲ್ಲ-ತಾನು ಕರೆದುಕೊಂಡು ಹೋಗುತ್ತೇನೆಂದು ಭರವಸೆ

(೧೪ನೇ ಪುಟ ನೋಡಿರಿ)

ಕಿಷ್ಕಿಂಧಾ ಸಂಸ್ಕೃತಿ

ರಾಮಾಯಣ ಕಾಲದ ಕಿಷ್ಕಿಂಧೆ ಕನ್ನಡನಾಡು ಎಂಬುದೀಗ ನಿರ್ವಿವಾದವಾಗಿದೆ; ಅಲ್ಲಿದ್ದವರು ವಾನರರಲ್ಲ, ವಾನರ ಧ್ವಜರು ಎಂಬುದೂ ಒಪ್ಪಿತವಿದೆ. ಪ್ರಪಂಚದ ಅತಿಪ್ರಾಚೀನ ಸಂಸ್ಕೃತಿಯೇ ಕಿಷ್ಕಿಂಧಾ ಸಂಸ್ಕೃತಿಯೆಂದೂ ಹರಪ್ಪ ಮೊಹೆಂಜೋದಾರೊಗಳಲ್ಲಿ ಇದರ ವಿಕಸಿತ ರೂಪವೇ ಹರಡಿತ್ತೆಂದೂ ಹೇಳಲು ಈಗ ಆಧಾರಗಳು ದೊರೆತಿವೆ. ಪ್ರಿನ್ಸಿಪಾಲ್ ಕಲ್ಲೂರರು ಆಳವಾದ ಅಧ್ಯಯನಗಳಿಂದ ಕನ್ನಡಿಗರ ಸಂಸ್ಕೃತಿಯ ಮತ್ತು ಮೇಲ್ಮೆಯ ಮೇಲೆ ಬೆಳಕು ಚೆಲ್ಲಿ ನಾವೆಲ್ಲರೂ ಅಭಿಮಾನ ಪಡುವಂತೆ ಮಾಡಿದ್ದಾರೆ.

ಪ್ರಿನ್ಸಿಪಲ್ ಕೃಷ್ಣ ಕುಮಾರ ಕಲ್ಲೂರ್, ಎಂ.ಎ., ಡಿಪ್. ಇಡಿ., ಎಂ. ಆರ್. ಎಸ್. ಟಿ.

ಈಚೆಗೆ ಬಯಲಿಗೆ ಬಂದ ಅನೇಕ ಸಂಶೋಧನೆಗಳ ಪರಿಣಾಮವಾಗಿ, ಕರ್ನಾಟಕದ ಮಾನವ-ಕುಲವು ಪ್ರಪಂಚದಲ್ಲೆಲ್ಲ ಅತಿ ಪುರಾತನವಾದುದೆಂದೂ, ಭಾರತ ಸಂಸ್ಕೃತಿಯು, ಅದರಲ್ಲೂ ದಕ್ಷಿಣ ಭಾರತ ಸಂಸ್ಕೃತಿಯು ತಿರುಳಾದುದೇ ಕರ್ನಾಟಕವೆಂದೂ ಅದರ ಉಗಮ ಸ್ಥಾನವೇ ಕಿಷ್ಕಿಂಧಾ ಸಂಸ್ಕೃತಿಯೆಂದೂ ನಿರ್ವಿವಾದವಾಗಿ ಹೇಳಬಹುದಾಗಿದೆ. ಕಿಷ್ಕಿಂಧಾ ಈ ಶಬ್ದದ ಮೂಲರೂಪ, ಅಥವಾ ಉತ್ಪತ್ತಿ ಅಥವಾ ಉತ್ಪತ್ತಿ-ಸಿದ್ಧ—ಅರ್ಥ ಇವುಗಳ ವಿಷಯ ಕ್ಲಿಷ್ಟವಾಗಿದ್ದರೂ, ಒಂದು ಮಹಾರಣ್ಯದಿಂದ ಸುತ್ತಲ್ಪಟ್ಟ, ಜನವಸತಿಗನುಕೂಲವಾದ ಫಲವತ್ತಾದ ಬಯಲು ಸೀಮೆ ಎಂದು ಅದರ ಅರ್ಥವನ್ನು ಅನುಮಾನಿಸಬಹುದಾಗಿದೆ.

ಚಂದ್ರನಷ್ಟು ಪುರಾತನ ಭೂಮಿ

ಕರ್ನಾಟಕದ ಪ್ರಸ್ಥಭೂಮಿಯು ಪೃಥ್ವಿಯ ಭೂರಚನಾ ಕ್ರಮದಲ್ಲಿ ಅತಿ ಪುರಾತನವಾದುದು; ಎಂದರೆ ಪೃಥ್ವಿಯ ಭೂಭಾಗವು ಮೊತ್ತಮೊದಲು ರೂಪುಗೊಂಡುದು ಇಲ್ಲಿಯೇ ಎಂದು ಹೇಳಬಹುದಾಗಿದೆ. ಕನಿಷ್ಠಪಕ್ಷ, ಮೊತ್ತಮೊದಲು ರೂಪುಗೊಂಡ ಭೂಭಾಗಗಳಲ್ಲಿ ಕರ್ನಾಟಕದ ಪ್ರಸ್ಥಭೂಮಿಯೂ ಒಂದು ಎಂದಂತೂ ನಿರ್ವಿವಾದವಾಗಿ ಹೇಳಲಡ್ಡಿಯಿಲ್ಲ. ಈ ಪ್ರಸ್ಥಭೂಮಿ ಸರಾಸರಿ ೨೦೦೦ ಅಡಿ ಎತ್ತರವಾಗಿದೆ. ಕಾಶ್ಮೀರವನ್ನುಳಿದರೆ, ಭಾರತದಲ್ಲೆಲ್ಲ ಇದೇ ಅತ್ಯುಚ್ಚವಾದ ಪ್ರಾಂತ. ದಕ್ಷಿಣದ ಪ್ರಾಂತಗಳಲ್ಲೂ ಇದೇ ಅತ್ಯುಚ್ಚವಾದುದು. ತಿಬೇಟವನ್ನು ಜಗತ್ತಿನ ಮೇಲ್ಮಾಳಿಗೆ ಎಂದು ಕರೆಯುವಂತೆ ಕರ್ನಾಟಕದ ಬಹುಭಾಗವನ್ನು ಭಾರತದ ಮೇಲ್ಮಾಳಿಗೆ ಎಂದು ಕರೆಯಬಹುದು. ಕರ್ನಾಟಕದ ಭೂಭಾಗ ಅನೇಕ ಉಚ್ಚ ಶಿಖರಗಳಿಂದ ಕೂಡಿದೆ. ಕರ್ನಾಟಕದ ಭೂಭಾಗವು 'ಪೃಥ್ವೀ ಮಾತೆಯ ಮೊಲೆಗಳಂತಿದೆ' ಎಂದು ಕಾಲಿದಾಸನು ರಘುವಂಶದಲ್ಲಿ ಬಣ್ಣಿಸಿದ್ದಾನೆ. ಕನ್ನಡಿಗರು ಆ ಮಹಾ ಮಾತೆಯ ಆ ವಕ್ಷಸ್ಥಳದ ನಿವಾಸಿಗಳು. ಕರ್ನಾಟಕದ ಶಿಖರಗಳಲ್ಲೆಲ್ಲ ಅತ್ಯುಚ್ಚವಾದುದು ನೀಲಗಿರಿಯ ದೊಡ್ಡಬೆಟ್ಟವಾಗಬೇಕಿತ್ತು. ಆದರೆ ಕನ್ನಡಿಗರು ದುರ್ದೈವದಿಂದಾಗಿ ಅದನ್ನು ಕಳೆದುಕೊಂಡರು. ಇದೀಗ ಚಂದ್ರದ್ರೋಣ ಪರ್ವತಾವಳಿಯ ಮುಳ್ಳಯ್ಯನಗಿರಿಯ ೬೨೦೦ ಅಡಿಯ ಶಿಖರವೇ ಅತ್ಯುಚ್ಚವಾದುದು. ಇದು ಹಿಮಾಲಯದಿಂದ ನೀಲಗಿರಿ ಪ್ರದೇಶದ ವರೆಗಿನ ಸಮಸ್ತ-ಭಾರತದಲ್ಲೆಲ್ಲಾ ಅತ್ಯುಚ್ಚವಾದುದು. ಚಂದ್ರದ್ರೋಣ ಪರ್ವತ ಶಿವಮೊಗ್ಗೆಯ ದಕ್ಷಿಣದಲ್ಲಿದ್ದು ಕರ್ನಾಟಕದ ಮಧ್ಯವರ್ತಿಯೂ ಆಗಿದೆ. ಇದು ದೋಣಿಯಂತೆ ತಗ್ಗಾಗಿಯೂ (ಆಳವಾಗಿಯೂ) ಚಂದ್ರನಂತೆ ವರ್ತುಲಾಕಾರವಾಗಿಯೂ ಇರುವುದರಿಂದ ಇದಕ್ಕೆ ಚಂದ್ರದ್ರೋಣ ಪರ್ವತ ಎಂಬ ಹೆಸರು. ಇದು ಆರಂಭದಲ್ಲಿ ಒಂದು ಬೃಹದಾಕಾರದ ಜ್ವಾಲಾಮುಖಿಯಾಗಿರಬಹುದಾಗಿ ಕೆಲವರ ಅನುಮಾನ, ಅಥವಾ ಚಂದ್ರಗ್ರಹವು ಪೃಥ್ವಿಯಿಂದ ಸಿಡಿಯಲ್ಪಟ್ಟುದು ಇಲ್ಲಿಂದಲೇ ಎಂದೂ, ಈಗಿರುವ ಸುಮಾರು ೨೦೦ ಚದರು ಮೈಲು ವಿಸ್ತಾರದ ವರ್ತುಲಾಕಾರದ ತಗ್ಗು ಅದರ ಗುರುತೆಂದೂ, ಆದರಿಂದಲೇ ಇದಕ್ಕೆ ಚಂದ್ರದ್ರೋಣ ಪರ್ವತ ಎಂಬ ಹೆಸರುಂಟಾಯಿತೆಂದೂ ಊಹಿಸಬಹುದಾಗಿದೆ. ಇಷ್ಟೇ ಅಲ್ಲದೆ, ಚಂದ್ರಗ್ರಹವು ಸಿಡಿಯುವಾಗ ಪೃಥ್ವಿಯ ಒಂದು ಭಾಗವು ಕಿತ್ತಿ ಮೇಲಕ್ಕೆತ್ತಿ ಉಬ್ಬಿ ಬಂದಾಗಲೇ ಕರ್ನಾಟಕದ ಪ್ರಸ್ಥಭಾಗವೂ ರಚಿತವಾಯಿತೆಂದೂ ಊಹಿಸಲು ಅವಕಾಶವಿದೆ. ಹಾಗಿದ್ದರೆ ಕರ್ನಾಟಕವು ಚಂದ್ರನಷ್ಟೇ ಪುರಾತನವಾದುದು. (ಆ ಮೇಲೆ ಮತ್ತೆ ಕೆಲ ಜ್ವಾಲಾಮುಖಿಗಳ ಪರಿಣಾಮವೂ ಈ ನೆಲದ ಮೇಲಾಗಿರುವ ಸಂಭವವಿದೆ.) ಈ ಚಂದ್ರದ್ರೋಣ ಪರ್ವತದಿಂದಾದ ಉಬ್ಬಿದ ಹರವೇ ಕರುನಾಡು=ಎತ್ತರದ ನಾಡು,—ಕರ್ನಾಟಕ. ಈ ಎತ್ತರವೇ ನಾಡಿಗೆ ಅಪಾರ ಅರಣ್ಯಸಂಪತ್ತು, ಜಲಸಂಪತ್ತು, ಖನಿಜಸಂಪತ್ತುಗಳನ್ನೂ ಅತಿ ಫಲವತ್ತಾದ 'ಬೆಲೆ-ಪೊಲ'ವನ್ನೂ, ಅತ್ಯಂತ ಹಿತಕರವಾದ ಹವಾಮಾನವನ್ನೂ ನೀಡಿದೆ; ಜನತೆಯನ್ನೂ "ಉನ್ನತ-ಮಾನಿಸ"ರನ್ನಾಗಿ ಮಾಡಿದೆ. ಇದು ನಾಡಿನ ಭೂ-ರಚನೆಯ ಇತಿಹಾಸ-ಹಾಗೂ-ಮಹತಿ.

ಪೃಥ್ವಿಯ ಪ್ರಥಮ ಪುತ್ರರು

ಇಲ್ಲಿಯ ಮಾನವೇತಿಹಾಸವೂ, ಅಂತೆಯೇ ಅತ್ಯಂತ ಪುರಾತನವಾದುದೂ ಆಷ್ಟೇ ಮಹತಿಯನ್ನು ಪಡೆದುದೂ ಆಗಿದೆ. ಕೆಲ ಸಂಶೋಧಕರ ಲೆಕ್ಕದ ಪ್ರಕಾರ ಇಲ್ಲಿಯ ಮಾನವನ ಇತಿಹಾಸ ೫ ಲಕ್ಷ ವರ್ಷಗಳಷ್ಟು ಪುರಾತನವಾಗಿದೆ. ಪುರಾತನ ಶಿಲಾಯುಗದಲ್ಲಿಯೇ ಇಲ್ಲಿ ಮಾನವ-ಸಂಸ್ಕೃತಿ ರೂಪುಗೊಂಡಿತ್ತಾಗಿ ಅನೇಕ ವಿವೇಚಕರ ಅಭಿಪ್ರಾಯವಿದೆ. ಈ ದೃಷ್ಟಿಯಿಂದ ನೋಡಿದರೆ ಕರ್ನಾಟಕದಲ್ಲಿ ಮಾನವನ ಪ್ರಪ್ರಥಮ ವಾಸ ಹಾಗೂ ವಿಕಾಸ ೫ ಲಕ್ಷ ವರ್ಷಗಳಿಗಿಂತಲೂ ಪುರಾತನವೇ ಆಗಿರಬೇಕು. ಹಾಗೆ ಬಗೆದರೆ ಪೃಥ್ವಿಯ ಪ್ರಥಮ ಮಾನವರಲ್ಲಿಯೂ ಕನ್ನಡಿಗರ ಪೂರ್ವಜರೂ ಪ್ರಪ್ರಥಮರೇ ಆಗಿರಬಹುದು; ಅಥವಾ ಅವರಲ್ಲೊಬ್ಬರಾದರೂ ಆಗಿರಲೇಬೇಕಲ್ಲವೆ ಸಂಸ್ಕೃತಿಯ ವಿಕಾಸ ಕ್ರಮದಲ್ಲಿ ಅಗ್ರಗಣ್ಯರೂ ಆಗಿರಬೇಕು.

ಪ್ರಪಂಚದ ಅನೇಕ ಸಂಸ್ಕೃತಿಗಳಿಗೆ ಉಗಮವಾಗಿ ಗ್ರೀಸ್, ಇಜಿಪ್ತ, ಬೇಬಿಲೋನ್, ಹರಪ್ಪಾ, ಮಹೆಂಜೋದಾರೋ, ಚೀನ್ ಇತ್ಯಾದಿಗಳು ಉಲ್ಲೇಖಿಸಲ್ಪಡುತ್ತವೆ. ಇವುಗಳಂತೆಯೇ, ಅಥವಾ ಇವುಗಳಿಗಿಂತ ಪುರಾತನವಾದುದು ಕಿಷ್ಕಿಂಧಾ ಸಂಸ್ಕೃತಿ. ಮಿಕ್ಕನೇಕ ಸಂಸ್ಕೃತಿಗಳು ಇನ್ನೂ ಗರ್ಭಾವಸ್ಥೆಯಲ್ಲಿರುವಾಗಲೇ ಕಿಷ್ಕಿಂಧಾ ಸಂಸ್ಕೃತಿಯು ರೂಪುಗೊಂಡಿರಬೇಕು. ಅದು ಮಹೆಂಜೋದಾರೋ ಹರಪ್ಪಾ ಸಂಸ್ಕೃತಿಗಳಿಗಿಂತ ಖಂಡಿತವಾಗಿ ಬಹಳೇ ಪುರಾತನವಾದುದು ನಿಸ್ಸಂಶಯ.

ಕರ್ನಾಟಕ ಸಂಸ್ಕೃತಿಯೇ ಮೂಲ ಭಾರತೀಯ ಸಂಸ್ಕೃತಿ

ಕಿಷ್ಕಿಂಧಾ ಎಂಬುದು ಈಗಿನ ಹಂಪೆಯ ಸುತ್ತು ಮುತ್ತಣ ಭಾಗ. ಕರ್ನಾಟಕದ ಅತ್ಯಂತ ಪ್ರಾಚೀನವಾದ ಮಾನವಾವಶೇಷಗಳು ಸಿಕ್ಕುವುದೂ ಈ ಭಾಗದಲ್ಲೇ! ಮಸ್ಕಿ, ಬ್ರಹ್ಮಗಿರಿ, ಚಂದ್ರವಳ್ಳಿಗಳು ಈ ವಿಷಯದಲ್ಲಿ ಪ್ರಖ್ಯಾತವಾಗಿವೆ. ನೂತನ ಶಿಲಾಯುಗವು ಪ್ರಾರಂಭವಾಗುವ ಹೊತ್ತಿಗೆ ಎಂದರೆ ಸುಮಾರು ಕ್ರಿಸ್ತ-ಪೂರ್ವ ೪-೫ಸಾವಿರ ವರ್ಷಗಳಿಗೆ ಮುಂಚೆ ಕನ್ನಡಿಗರ ಪೂರ್ವಜರು ಅತಿ ಭದ್ರವಾದ ಅತ್ಯುಚ್ಚವಾದ ಸಂಸ್ಕೃತಿಯ ತಳಹದಿಯನ್ನು ಹಾಕಿಬಿಟ್ಟಿದ್ದರು. ಆ ತಳಹದಿಯೇ ಇಂದಿನ ಭಾರತೀಯ ಸಂಸ್ಕೃತಿಯ ನಿಜವಾದ ತಳಪಾಯ. ರಾಯಚೂರು, ವಿಜಾಪುರ, ಚಿತ್ರದುರ್ಗಗಳ ನಡುವಿನ ನಾಡಿನಲ್ಲಿಯೇ ಅತಿ ಹೇರಳವಾದ ನೂತನ ಶಿಲಾಯುಗದ ಅವಶೇಷಗಳು ಸಿಕ್ಕುವುವು. ಇದೇ ಕಿಷ್ಕಿಂಧಾ ಪ್ರದೇಶವೂ ಹೌದು; ತಿರುಳ್ಗನ್ನಡದ ಪರಿಸರವೂ ಹೌದು. ಈ ತ್ರಿಕೋಣದ ಒಳನಾಡಿನಲ್ಲಿರುವ ಬ್ರಹ್ಮಗಿರಿಯಲ್ಲಿಂತೂ ನಮ್ಮ ಪುರಾತನ ಸಂಸ್ಕೃತಿಯ ಹಾಗು ನಾಗರೀಕತೆಯ ಅನೇಕ ಪದರುಗಳು ಪ್ರತ್ಯಕ್ಷವಾಗಿ ಕಂಡು ಬರುವಂತಿವೆ. ಐತಿಹಾಸಿಕ ಯುಗಕ್ಕೂ ಹಿಂದಿನ, ಹಾಗು ಐತಿಹಾಸಿಕ ಯುಗದ ವರೆಗಿನ, ಮಾನವ ಚಾರಿತ್ರ್ಯವನ್ನು ಈ ಪದರುಗಳು ಮೆಟ್ಟಲು ಮೆಟ್ಟಲಾಗಿ ತೆರೆದು ತೋರುವಂತಿವೆ. ಈ ಮಾನವೀ ಜೀವನದ ಪ್ರಗತಿಪಥದಲ್ಲಿ ಕರ್ನಾಟಕ ಸಂಸ್ಕೃತಿಯು ಒಡಮೂಡಿ ಬಂದುದಕ್ಕೆ ನೂತನ ಶಿಲಾಯುಗದಲ್ಲಿ ಕಿಷ್ಕಿಂಧಾ ಸಂಸ್ಕೃತಿಯು ಸಾಕಷ್ಟು ಪ್ರಗಲ್ಭವಾದುದೇ ಮೂಲ ಕಾರಣ. ಇದನ್ನೆಲ್ಲ ಬಗೆದು ನೋಡಿದರೆ ಕರ್ನಾಟಕ ಸಂಸ್ಕೃತಿಯು ಮೂಲವು ಈಗ ಯಾವುದು ಭಾರತೀಯ ಸಂಸ್ಕೃತಿಯೆಂದು ಕರೆಯಲ್ಪಡುತ್ತಿದೆಯೋ, ಅದಕ್ಕಿಂತ ಅತಿ ಪುರಾತನವೂ, ಬೇರೆ ಹಾಗು ಸ್ವತಂತ್ರವಾದುದು ಎಂಬುವುದು ಸ್ಪಷ್ಟವಾಗುವುದು. ಕರ್ನಾಟಕ ಸಂಗೀತವೇ

(೨೮ನೇ ಪುಟ ನೋಡಿರಿ)

ಮಕ್ಕಳ ಮಮತೆಯ
"ಬಿಕ್ಕೊ" ರವರ

ಗ್ಲುಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು—ರುಚಿಕರ ಸೇವನೆಗೆ ಪ್ರಸಿದ್ಧಿಪಟ್ಟಿವೆ.

ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,

ಕಾಪು, ದ. ಕ.

"ಜೀವನದೀ ಮಧುಮಾಸಂ"

—x—

ಜೀವನದೀ ಮಧುಮಾಸಂ
ಬತ್ತುತ ಬಂತು,
ಪ್ರವಸಿನ ಮಧುರ ವಿಕಾಸಂ
೧ನನೆಯೊಳೆ ೨ಸಂತು;
೩ಮುಸುರಿದ ಮಕರಂದಪಾನ
೪ಒದವದೆದೆಯ ಭ್ರಮರಗಾನ
೫ಎಚ್ಚರಲೆಂತು?

ಮನೆಗೆಯ್ದುಕ್ಕರೆಯ ಪಿಕಂ
ಹಾರಿದುದೆಲ್ಲಿ?
ಗೂಡುಗೊಂಡ ಹಿಂಡು ಶುಕಂ
ಕಾಣಿಸವಿಲ್ಲಿ!
ಅಳಿಲ ಕಣಜವಿನ್ನು ಸಾಗೆ,
ಹಗಲುದ್ದಕೆ ೬ತೂಗೆ ಗೂಗೆ,
ಚೀರ್ವುದು ಹಲ್ಲಿ.

ನಡುಚೈತ್ರದಿ ೭ಮಸಗೆ ಗ್ರೀಷ್ಮ,
ಬೇಯದೆ ಮನಸು?
ಮಗಚದೆ ೮ಮೃಗಜಲದೊಳೂಷ್ಮ೯
೧೦ಅಡಸಿದ ಕನಸು?
೧೧ಪಾತೆಯೆಲರ ಪಾತಿಯಿಲ್ಲ,
೧೨ತರಗೆಲೆಗಳ ಬಟ್ಟೆಯೊಲ್ಲ
೧೩ಏದೇವುದೊ ನೆನಸು?

೧೪ಬೇಗೆ ಮುಸುಕಲಿಂತು ಶಾನೆ
ದೂರವೆ ವೃಷ್ಟಿ?
ತಂಬನಿಗಿಂಬಾಗೆ ತಾನೆ
ಮೊಳೆಯದೆ ಸೃಷ್ಟಿ?
ಹಸುರು ಹಗಲು ಹೊರಳೆ, ಹೊಂಚು
ಹಾಕದೆ ನೂರಾರು ಮಿಂಚು
ಹುಳಗಳ ದೃಷ್ಟಿ?

ಒಮ್ಮೆ ಮುಗಿಯಲದೆ ವಸಂತ
ವಿನ್ನ ಹುದಳವೆ?
ಒಮ್ಮೆ ಮುಗಿದ ತನುವನಂತ
ರಂ ನಮಗೊಳವೆ?
ಸುಗ್ಗಿ ಮುಗಿದೆ ಮಳೆಯಿಲ್ಲವೆ?
ತನು ಮುಗಿದಡೆ ೧೫ಕೆಳೆಯಿಲ್ಲವೆ?
ಕೆಳೆಗೇನಳಿವೆ?

ಗೋವಿಂದ ಪೈ.

---

೧ ನನೆ=ಮೊಗ್ಗೆ. ೨ ಸಂತು=ಸಂದುಹೋಯಿತು, ಮುಗಿಯಿತು. ೩ ಮುಸುರಿದ=(ಮಕರಂದವನ್ನು ಹೀರಲಿಕ್ಕಾಗಿ ತಾವರೆಗಳಲ್ಲಿ ಎರಗಿ ಅವನ್ನು) ಮುತ್ತಿರುವ. ೪ ಒದವದೆ=ದೊರಕದೆ. ೫ ಎಚ್ಚರು=ಎಚ್ಚರಿಕೆಯೂಗಿರು (ಅಂದರೆ ತುಂಬಿಗಳ ಗಾಯನವು ಹೇಗೆ ತಾನೆ ಎಚ್ಚರವಾಗಿದ್ದೀತು, ಅಂದರೆ ಕೇಳಬಂದೀತು?) ೬ ತೂಗೆ=ತೂಕಡಿಸುತ್ತಿರಲು. ೭ ಮಸಗು=ತೋರಿಬರು, ಪ್ರಾಪ್ತವಾಗು. ೮ ಮೃಗಜಲ=ಉಕ್ಕಂರೆ, ಕಟ್ಟೆಕ್ಕರೆ. ೯ ಊಷ್ಮ=ಉಷ್ಣ, ಸುನಸ್ಸಿನ ಬೇಗೆ ೧೦ ಅಡಸು=ಒಡಗೂಡು. ೧೧ ಪಾತೆಯು ಅಂದರೆ ಪಾತರಗಿತ್ತಿಯು (=butterfly) + ಎಲರ ಪಾತಿ = ಗಾಳಿಯ ದೋಣಿ (=ಪಾತಿ). ೧೨ ತರಗೆಲೆಗಳ ಬಟ್ಟೆ (=ದಾರಿ) ಎಂದರೆ ನಿಷ್ಪ್ರಯೋಜಕವಾದ ಟೀಕೆಗಳಲ್ಲಿ ಮನಸ್ಸು ಸಾಗುತ್ತಿರುವಿಕೆ. ೧೩ ಏವುದೊ? = ಏನು ಮಾಡಬಲ್ಲುದೊ? ೧೪ ಬೇಗೆ=ಸೆಕೆಕಾಲ, ೧೫ ಕೆಳೆ=ಗೆಳೆತನ.

ಸಮಕಾಲೀನ ನಾದಿರಶಹ

ಡೊಮಿನಿಕನ್ ರಿಪಬ್ಲಿಕ್‌ನ ಅಧ್ಯಕ್ಷನಾಗಿ ಮೆರೆದಾಡಿದ ತ್ರುಜಿಲೋ ಈ ಕಾಲದ ನಾದಿರಶಹನೆಂಬ ಉಪನಾಮಕ್ಕೆ ಗುರಿಯಾಗಿದ್ದಾನೆ. ಓರ್ವ ಸಾಮಾನ್ಯ ಪೋಸ್ಟ್ ಮಾಸ್ಟರನಾಗಿದ್ದಾಗಲೇ ಹಿಂಸಾಚರಣೆಯಲ್ಲಿ ತೊಡಗಿದ್ದ ಈ ಮಹಾಶಯನು ಅದೃಷ್ಟವಶದಿಂದ ಹಿಂಸೆಯ ಸಹಾಯದಿಂದಲೇ ಸೈನ್ಯಪಡೆ ಸೇರಿದ; ಅದರ ಬೆಂಬಲದಿಂದಲೇ ಅಧಿಕಾರ ಪದವಿಗೇರಿದ. ನಿರಪರಾಧಿ ಹೈಟಿ ವಾಸಿಗಳನ್ನು ಅಮಾನುಷವಾಗಿ ಬಲಿ ತೆಗೆದುಕೊಂಡು ವಿಶ್ವ ಪರಿಚಿತನಾದ. ಪಾಪಿ ಜನರ ಪಾಪವು ಅವರನ್ನು ತಿನ್ನುತ್ತದೆ. ಅಜ್ಞಾತ ವ್ಯಕ್ತಿಯೊಬ್ಬನ ಕೋವಿಯ ಗುಂಡಿಗೆ ಈ ಕೊಲೆಗಡುಕ ರಾಷ್ಟ್ರಪತಿ ಗುರಿಯಾದನೆಂದು ವಿಶ್ವಸನೀಯವಾಗಿ ತಿಳಿದಾಗ, ಜಗತ್ತಿಗೆ ಜಗತ್ತೇ ಸಮಾಧಾನದ ಉಸಿರುಬಿಟ್ಟಿತು. ಶ್ರೀ ಐತಾಳರು ಈ ರೋಮಾಂಚಕ ಕಥೆಯನ್ನು ಮನೋಜ್ಞವಾಗಿ ಸಂಗ್ರಹಿಸಿದ್ದಾರೆ.

ಶ್ರೀ ಕೆ. ದಾಮೋದರ ಐತಾಳ, ವಿದ್ವಾನ್.

ನೀವು, ಜೆನೆರಲಿಸಿಮೊ ಡಾ। ರಾಫಾಯಲ್ ಲಿಯೋನಿಯಸ್ ತ್ರುಜಿಲೋ, ಆನರೇಬಲ್ ಚೀಫ್ ಆಫ್ ಸ್ಟೇಟ್, ಬೆನಿಫೆಕ್ಟರ್ ಆಫ್ ದಿ ನೇಶನ್, ಪ್ರೆಸಿಡೆಂಟ್, ಡಿಕ್ಟೇಟರ್, ಸುಪ್ರೀಮ್ ಆಫ್ ಡೊಮಿನಿಕನ್ ರಿಪಬ್ಲಿಕ್ ಇವರನ್ನು ಬಲ್ಲಿರಾ? ಈಗವರು ಸ್ವರ್ಗೀಯರಾಗಿರುವರು. ಅವರು ಭೂಲೋಕದಲ್ಲಿ ಸ್ವರ್ಗ ಸುಖವನ್ನನುಭವಿಸಿರುವುದರಿಂದ ಅವರು ಸ್ವರ್ಗೀಯರಾಗಿರುವರೆಂಬ ಮಾತು ನಿಜವಾಗಲಾರದೊ ಏನೊ! ಆದರೆ ಅಜ್ಞಾತ ವ್ಯಕ್ತಿಯೊಬ್ಬನ ಕೋವಿಯ ಗುಂಡಿಗೆ ಗುರಿಯಾಗಿ ಅವುವನ್ನು ನೀಗಿದರು. ೧೯೬೧ರ ಮೇ ಮಾಸ ತೊಂಬತ್ತೊಂದರಂದು ವೃತರಾದ ಅವರ ಹತ್ಯೆಯ ವಾರ್ತೆಯು ವಾಶಿಂಗ್‌ಟನ್ ಮತ್ತು ಪೇರಿಸುಗಳಲ್ಲಿ ಪ್ರಕಾಶಿತವಾದೊಡನೆ ಪ್ರಪಂಚದ ಯಾವ ಸರಕಾರವೂ ಈ ಸುದ್ದಿಯನ್ನು ನಂಬಲಿಲ್ಲ. ಏಕೆಂದರೆ ಕೆಲ ವರ್ಷಗಳ ಹಿಂದೆ ತನ್ನ ಮರಣವಾರ್ತೆಯನ್ನು ಈ ಮಹಾನುಭಾವನೇ ಪ್ರಕಟಿಸಿದ್ದನು. ತನ್ನ ಮರಣವಾರ್ತೆಯನ್ನು ಕೇಳಿದೊಡನೆ ಸಂತೋಷದಿಂದ ಕುಣಿದ ತನ್ನೆಲ್ಲಾ ಶತ್ರುಗಳನ್ನು ತ್ರುಜಿಲೊ ಪ್ರತ್ಯಕ್ಷನಾಗಿ ಪ್ರಾಣನೀಗುವಂತೆ ಮಾಡಿದನು. ಈ ಮಹಾ ಹತ್ಯಾಕಾಂಡದ ಸುದ್ದಿಯನ್ನು ಕೆಲ ತಿಂಗಳ ನಂತರ ಪ್ರಪಂಚದ ಪ್ರಸಿದ್ಧ ಪತ್ರಿಕೆಗಳು ಪ್ರಕಟಿಸಿದುವು.

ಮಧ್ಯ ಅಮೇರಿಕಾದ ಸಮೀಪದಲ್ಲಿರುವ ಕೆರೆಬಿಯನ್ ಸಮುದ್ರ ದ್ವೀಪವಾದ ಹಿಸ್ಪಾನಿಯೋಲಾದಲ್ಲಿ ಡೊಮಿನಿಕನ್ ರಿಪಬ್ಲಿಕ್ ರಾಷ್ಟ್ರವಿದೆ. ಇದು ಕ್ಯೂಬಾದ ಪೂರ್ವ ದಿಕ್ಕಿನಲ್ಲೂ ಶಾಂತಸಾಗರ ಮತ್ತು ಕೆರಿಬಿಯನ್ ಸಮುದ್ರ ಮಧ್ಯದಲ್ಲೂ ಯಿದೆ. ಇದರ ವಿಸ್ತೀರ್ಣ ೧೯,೩೨೨ ಚದರ ಮೈಲು, ಸುಮಾರು ಮೂರು ಕೋಟಿ ಇಲ್ಲಿನ ಜನಸಂಖ್ಯೆ. ಸುಡಾಡ್ ತ್ರುಜಿಲೊ ಎಂಬುದೇ ಇಲ್ಲಿನ ರಾಜಧಾನಿ. ಹೈಟಿ ಯೆಂಬುದು ಡೊಮಿನಿಕನ್‌ಗೆ ತಾಗಿಕೊಂಡಿರುವ ನಿಗ್ರೋ ಪ್ರಜಾಪ್ರಭುತ್ವದ ಇನ್ನೊಂದು ದ್ವೀಪವಾಗಿದೆ.

ಬಹು ಚಿಕ್ಕ ರಾಜ್ಯದ ಈ ಸರ್ವಾಧಿಕಾರಿಯು ನೃಶಂಸನಾಗಿದ್ದನು. ತನ್ನ ನೆರೆರಾಷ್ಟ್ರವಾದ ಹೈಟಿಯ ಮೇಲೆ ಹಗೆ ತೀರಿಸಿಕೊಳ್ಳಲು ಈತನು ಕೇವಲ ಎರಡೇ ರಾತ್ರಿಗಳಲ್ಲಿ ಇಪ್ಪತ್ತೈದು ಸಾವಿರ ಹೈಟಿ ವಾಸಿ ನಿಗ್ರೋಗಳನ್ನು ಕೊಂದಿರುವನೆಂಬ ವಿಚಾರವನ್ನು ನೀವು ಓದಿದರೆ ನಂಬಲಾರಿರಿ. ಅವನ ಗುಪ್ತಾದೇಶ ಬಂದ ಒಂದೆರಡು ದಿನಗಳೊಳಗಾಗಿ ಹೈಟಿ ದ್ವೀಪದಲ್ಲಿ ಹೆಣಗಳ ಬಣಬೆಯು ಒಟ್ಟುಗೂಡಿತು. ಶವಗಳು ರಸ್ತೆಯ ಮಗ್ಗುಲಲ್ಲಿ, ಪ್ರವಾಹಗಳಲ್ಲಿ, ಮನೆಗಳಲ್ಲಿ ನಾಲೆಗಳಲ್ಲಿ ಕಂಡು ಬಂದುವು. ಜಗತ್ತಿನಲ್ಲಿ ಅತಿ ದೊಡ್ಡ ಸಾಮೂಹಿಕ ಕಗ್ಗೊಲೆ ನಡೆದು ಇನ್ನೂ ಎರಡು ವರ್ಷ ಕಳೆದಿಲ್ಲ. ಹೊರದೇಶಗಳಲ್ಲಿ ಈ ಸುದ್ದಿ ಪ್ರಕಟವಾದಾಗ ಯಾರೂ ಮೊದಲು ಇದನ್ನು ನಂಬಲಿಲ್ಲ. ಈ ಘಟನೆಯು ೧೯೫೯ರ ಅಕ್ಟೋಬರ ತಿಂಗಳಲ್ಲಿ ಸಂಭವಿಸಿದ್ದರೂ ಜಗತ್ತಿನ ಪತ್ರಿಕೆಗಳು ಇದನ್ನು ೧೯೬೦ರ ಫೆಬ್ರವರಿ ತಿಂಗಳಲ್ಲಿ ಪ್ರಕಟಿಸಿದುವು. ಅನಂತರ 'ಕಾಲಿಯರ್ಸ್' ಪತ್ರಿಕೆಯು ತನ್ನ ವಿಶೇಷ ಪ್ರತಿನಿಧಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟಿತು. ಆ ಸುದ್ದಿಯನ್ನು ಪ್ರತಿನಿಧಿಯು ಸರಿಯಾಗಿ ಪ್ರಸಿದ್ಧಿಸಿದುದರಿಂದ ಜಗತ್ತಿನ ಎಲ್ಲೆಡೆಗಳಿಂದಲೂ ಈ ಘಟನೆಯ ಬಗ್ಗೆ ತೀವ್ರ ಪ್ರತಿಕ್ರಿಯೆಗಳು ತೋರಿ ಬಂದುವು ತ್ರುಜಿಲೊನ ಅಮಾನುಷ ಶಾಸನದಿಂದಾಗಿ ಅಮೇರಿಕಾವು ಡೊಮಿನಿಕನ್ ರಾಷ್ಟ್ರದೊಂದಿಗೆ ರಾಜನೈತಿಕ ಸಂಬಂಧವನ್ನೆ ಕಡಿದುಕೊಂಡು ಬಿಟ್ಟಿತು. ೧೯೬೦ರ ನವಂಬರ ತಿಂಗಳಲ್ಲಿ ಅವನು ರಶ್ಯಾದಿಂದ ಸಹಾಯವನ್ನು ಯಾಚಿಸಿದನಂತೆ. ಆದರೆ ರಶ್ಯಾವು ಆ ರಾಯಭಾರಿಯನ್ನು ಬೈದು ಹಿಂದಕ್ಕೆ ಕಳುಹಿಸಿತಂತೆ.

ತ್ರುಜಿಲೊ ಕರಿ ಬಣ್ಣದವನಾಗಿದ್ದನು. ರಾಜ್ಯಾಧಿಕಾರವನ್ನು ಪಡೆದುಕೊಳ್ಳುವುದಕ್ಕೆ ಮೊದಲು ಕರಿಯ ಜಗಳಗಂಟಿಕೋಳಿ ಎಂಬ ಹೆಸರಿನಿಂದ ಕುಖ್ಯಾತನಾಗಿದ್ದನು. ಆದರೆ ಅವನು ವಿದೇಶೀಯರನ್ನು ಅನುಕರಿಸಿ ತಾನು ಕರಿಯನಲ್ಲವೆಂಬುವನ್ನು ಎಲ್ಲರಿಗೂ ಸ್ಪಷ್ಟಪಡಿಸ ಬೇಕೆಂದು ಬಯಸಿದ್ದನು.

ತ್ರುಜಿಲೋನ ಪ್ರಾರಂಭಿಕ ಜೀವನ ಬಹು ವಿಚಿತ್ರವಾಗಿತ್ತು. ೧೯೧೧ರಲ್ಲಿ ಅವನು ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಪೋಸ್ಟ್ ಮಾಸ್ಟರನಾಗಿದ್ದನು ತನ್ನ ಕೆಲಸದ ಸಮಯವನ್ನುಳಿದು ಅವನು ಹಳ್ಳಿಗರ ಕುರಿಗಳನ್ನು ಕದ್ದುಕೊಂಡು ತಿನ್ನುವುದರಲ್ಲಿ ಹೆಸರನ್ನು ಪಡೆದಿದ್ದನು. ಒಂದು ಬಾರಿ ಸೈನ್ಯಾಧಿಕಾರಿಯ ಹೆಸರಿಗೆ ಬಂದೊಂದು ಸಮುದ್ರ ಪಾರ್ಸೆಲನ್ನು ಮಾಯಪಡಿಸಿ ಈ ಕುರಿಕಳ್ಳನು ಸೆರೆಮನೆಯನ್ನು ಸೇರಿದನು. ಬಿಡುಗಡೆಯಾದೊಡನೆ ನಾಲ್ಕು ವರ್ಷಗಳ ತನಕ ಯಾರಿಗೂ ಅವನ ಪತ್ತೆಯೇ ಹಚ್ಚಲಿಲ್ಲ ಅನಂತರ ಅವನು ಪುನಃ ಮಾಡಿ ಬಂದನು.

ಮೈಕ್ಲೀನ್ ಎಂಬ ನಾಗರಿಕನಲ್ಲಿ ಅವನು ಕೆಲಸಕ್ಕೆ ಸೇರಿಕೊಂಡನು. ಅಲ್ಲಿ ಅವನು ಸೈನಿಕ ಅಧಿಕಾರಿಗಳಿಗೆ ಬೇಕಾದ ದೇಶೀಯ ಮದ್ಯ ಮತ್ತು ದೇಶೀಯ ಹುಡುಗಿಯರನ್ನು ಒದಗಿಸಿಕೊಡುವ ಕೆಲಸವನ್ನು ಮಾಡುತ್ತಿದ್ದನು. ಮೈಕ್ಲೀನ್‌ನು ಈ ಕಾರಣದಿಂದಾಗಿ ಸೈನಿಕರ ಪ್ರೀತಿ ಪಾತ್ರನಾಗಿದ್ದನು. ಅವನನ್ನು ಸೈನಿಕರು 'ಕರ್ನಲ್' ಎಂದು ತಮಾಷೆಗಾಗಿ ಕರೆಯುತ್ತಿದ್ದರು. ತಮಾಷೆಗಾಗಿ ಆರಂಭವಾದ ಕರ್ನಲ್ ಪದವು ಮೈಕ್ಲೀನ್‌ನಿಗೆ ಪ್ರತಿ ತಿಂಗಳು ಸಂಬಳ ಬರುವಂತೆ ಮಾಡಿತು. ಕುರಿಕಳ್ಳ ತ್ರುಜಿಲೋನ ಕಾರ್ಯದಿಂದಾಗಿ ಮೈಕ್ಲೀನ್ ಮತ್ತು ಸೈನಿಕರು ಬಹಳ ತೃಪ್ತರಾಗಿದ್ದರು. ಆ ಕುರಿಕಳ್ಳನೆ ಅಲ್ಲಿ 'ಜಗಳಗಂಟಿ ಕರಿಕೋಳಿ' ಎಂಬ ಬಿರುದನ್ನು ಪಡೆದಿದ್ದನು. ಅಂತೂ ಎಲ್ಲರ ಸಿಫಾರಸಿನ ಮೇರೆಗೆ ತ್ರುಜಿಲೋ 'ಸೆಕೆಂಡ್ ಲೆಫ್ಟಿನೆಂಟ್' ನಾದನು.

ಕೆಲ ವರ್ಷಗಳುರುಳಿದ ನಂತರ ತ್ರುಜಿಲೋನು ಮೈಕ್ಲೀನ್‌ನ ಈ ಉಪಕಾರದ ಪ್ರತೀಕಾರವನ್ನು ಬಹು ವಿಚಿತ್ರವಾಗಿ ತೀರಿಸಿದನು. ಶುಕ್ಲ ಪಕ್ಷದ ಚಂದ್ರನಂತೆ ತ್ರುಜಿಲೋನು ದಿನದಿಂದ ದಿನಕ್ಕೆ ರಾಜನೈತಿಕ ಜೀವನದಲ್ಲಿ ಹೆಚ್ಚು ಹೆಚ್ಚು ಪ್ರಕಾಶವನ್ನು ಬೀರುತ್ತಿದ್ದನು ಈತನ ಎಲ್ಲಾ ಗುಟ್ಟಿನ ವಿಷಯಗಳನ್ನು ಮೈಕ್ಲೀನ್‌ನೊಬ್ಬನೆ ತಿಳಿದುಕೊಂಡಿದ್ದನು. ಆಗ ತ್ರುಜಿಲೋನ ಕೈಗೆ ರಾಜ್ಯಾಧಿಕಾರವು ಬಂದಿತ್ತು. ಆಗ ಮೈಕ್ಲೀನನು ರಾಷ್ಟ್ರೀಯ ರಕ್ಷಣಾ ದಳದ ಅಧಿಪತಿಯಾಗಿದ್ದನು. ಇದ್ದಕ್ಕಿದ್ದಂತೆ ಆ ದಳದಲ್ಲಿ ಎಲ್ಲಿಲ್ಲದ ಗಡಿಬಿಡಿಗಳು ಮೂಡಿ ಬಂದವು. ಕೂಡಲೆ ಆತನನ್ನು ತ್ರುಜಿಲೋ ಆ ದಳದಿಂದ ದೂ

(೨೬ನೇ ಪುಟ ನೋಡಿರಿ)

ಎಲ್ಲಾ ತರದ ಕೈಮಗ್ಗದ ಉತ್ತಮ ತರಗತಿಯ
ಖಾತ್ರಿ ರಂಗಿನ ಸೀರೆಗಳಿಗೆ
ಒಮ್ಮೆ ಸಂದರ್ಶಿಸಿರಿ.

ಪೂರ್ಣಿಮಾ ಸ್ಟೋರ್ಸ್

— ರಖಂ ಮತ್ತು ಚಿಲ್ಲರೆ ಕೈಮಗ್ಗದ ಜವುಳಿ ಮಳಿಗೆ —
ಪೊಪ್ಯುಲರ್ ಇನ್‌ಶೂರೆನ್ಸ್ ಕಟ್ಟಡ,

ಮಂಗಳೂರು - ೧

ಅಖಿಲ ಭಾರತ ಕೈಮಗ್ಗ ಸಪ್ತಾಹದ ಪ್ರದರ್ಶನದಲ್ಲಿ
ಪದಕ ಮತ್ತು ಪ್ರಶಸ್ತಿ ಪಡೆದ
ನಮ್ಮ ಸೀರೆಗಳನ್ನು ಉಪಯೋಗಿಸಿರಿ.

ಹಿಂದುಳಿದ ವರ್ಗಗಳ ಅಭಿವೃದ್ಧಿ

ಹಿಂದುಳಿದವರು ಯಾರು; ಅವರ ವರ್ಗೀಕರಣವನ್ನು ಹೇಗೆ ಮಾಡಬೇಕು ಎಂಬುದನ್ನು ನಿಷ್ಪಕ್ಷಪಾತ, ನಿರ್ವಿಕಾರ ದೃಷ್ಟಿಯಿಂದ ಪರ್ಯಾಲೋಚಿಸಿದರೆ, ಆರ್ಥಿಕ ಸ್ಥಿತಿಗತಿಯೇ ಹಿಂದುಳಿದಿರುವಿಕೆಯ ಮಾನದಂಡವೆಂದು ತಿಳಿಯುವುದು. ಸೂರ್ಯನಷ್ಟು ಸತ್ಯವಾದ ಈ ತತ್ವವನ್ನು ನಮ್ಮ ಸರಕಾರ ಅಲಕ್ಷಿಸಿ, ಮಹಾನ್ಯಾಯ ಮಾಡುತ್ತಿದೆ. ಶ್ರೀ ರಾಮರಾಯರು ಈ ನಿತ್ಯ ಸತ್ಯ ತತ್ವದ ಮೇಲೆ ಸಂಕ್ಷಿಪ್ತ ವಿಚಾರಗಳನ್ನು ಪ್ರಕಟಿಸಿದ್ದಾರೆ.

ಶ್ರೀ ಸುಬೋಧ ಎಂ. ರಾಮ ರಾವ್.

ಪ್ರಜಾ ರಾಜ್ಯದಲ್ಲಿ ಜನತೆಯು ತಮ್ಮ ಅಭಿವೃದ್ಧಿಗಾಗಿ ಬೇರೆಯವರನ್ನೂ ಅವಲಂಬಿಸುವಂತಿಲ್ಲ. ತಮ್ಮ ಅಭಿವೃದ್ಧಿಗಾಗಿ ತಾವೇ ಪರಿಶ್ರಮಿಸಬೇಕಾಗಿದೆ.

'ಉದ್ಧರೇದಾತ್ಮನಾತ್ಮಾನಂ' ಎಂಬ ಗೀತೋಕ್ತಿಯು ಇದನ್ನು ಸ್ಪಷ್ಟವಾಗಿ ನಿರೂಪಿಸುತ್ತಿದೆ. ಇದು ಸರಿ. ಆದರೆ ಒಬ್ಬ ವ್ಯಕ್ತಿಯು ಅಭಿವೃದ್ಧಿಗೆ ಬರಬೇಕೆಂದರೆ, ಅದಕ್ಕೆ ಹಲವು ಸಾಧನಗಳು ಆವಶ್ಯಕವಾಗಿವೆ. ಆ ಸಾಧನ ಸಾಮಗ್ರಿಗಳೆಲ್ಲ ಒದಗಿ, ಸುತ್ತು ಮುತ್ತಲಿನವರ ಸಹಕಾರ ಸಹಾನುಭೂತಿಗಳು ದೊರೆತರಲ್ಲದೆ, ಅದು ಸಾಧ್ಯವಾಗಲಾರದು. ಪ್ರಕೃತ ಹಿಂದುಳಿದ ವರ್ಗಗಳೆಂಬುವರು ಅಭಿವೃದ್ಧಿಗೆ ಬರಬೇಕೆಂದರೆ—ಮೊದಲು ಅವರ ಹಿಂದುಳಿದಿರುವಿಕೆಯ ಕಾರಣಗಳೇನು ಎಂಬುದು ಸ್ಪಷ್ಟವಾಗಬೇಕು. ಆ ಕಾರಣಗಳು ಅವರ ವೈಯಕ್ತಿಕ ಲೋಪದೋಷಗಳಿಂದ ಉಂಟಾದುವೇ—ಅಥವಾ ಪರಕೀಯರು ಅವರ ಮೇಲೆ ಆರೋಪಿಸಿದುದರಿಂದ ಉಂಟಾದುವೇ ಎಂಬ ವಿಚಾರ ನಡೆದು, ಅವು ನಿವಾರಣೆಯಾಗುವ ಮಾರ್ಗವೇನು ಎಂಬುದನ್ನು ಕುರಿತು ಯೋಚಿಸಬೇಕು. ಅದಕ್ಕಾಗಿ ಮೊದಲು ಅವರಲ್ಲೇ ವಿಚಾರ ಜಾಗೃತಿಯುಂಟಾಗಬೇಕು, ತರುವಾಯ ಸ್ವಯಂ ಪರಿಶ್ರಮಕ್ಕೆ ಸಿದ್ಧರಾಗಬೇಕು. ಅವರಿಗೆ ಅಭಿವೃದ್ಧಿ ವಿಚಾರದಲ್ಲಿ ಲವಲವಿಕೆಯುಂಟಾಗಿದೆ; ಅಭಿಲಾಷೆಯು ಜಾಗೃತವಾಗಿದೆ ಎಂದು ಗೋಚರವಾದಲ್ಲಿ ಇತರರ ಸಹಕಾರ-ಸಹಾನುಭೂತಿಗಳಿಗಾಗಿ ಯೋಚಿಸಬೇಕಾಗಿಯೇ ಇಲ್ಲ—ಅವು ತಾವಾಗಿಯೇ ಬಂದೊದಗುವುವು. ಮುಂದೆ ಅಭಿವೃದ್ಧಿ ಕಾರ್ಯವು ನಿರ್ವಿವಾದವಾಗಿ ಮುಂದುವರಿಯುವುದು—

ಯಾವನೊಬ್ಬ ವ್ಯಕ್ತಿ ಅಥವಾ ಗುಂಪಿನ ಹಿಂದುಳಿದಿರುವಿಕೆಗೆ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ವೃತ್ತಿ ಮೂಲಕ ಎಂಬೀ ನಾಲ್ಕು ಕಾರಣಗಳು ಉಂಟೆಂದು ಯೋಚಿಸಬಹುದಾಗಿದೆ. ಬಹು ಹಿಂದಿನ ಕಾಲದಿಂದಲೂ ನಮ್ಮಲ್ಲಿ ಸಕಲ ವಿಧ ಅಭಿವೃದ್ಧಿಗಳಿಗೂ ಅಥವಾ ಅವನತಿಗಳಿಗೂ ಆ ವ್ಯಕ್ತಿಯು ಜನ್ಮಿಸಿದ ಜಾತಿಯನ್ನೇ ಮೂಲಾಧಾರವಾಗಿಟ್ಟುಕೊಳ್ಳುವ ಪದ್ಧತಿ ನಡೆದು ಬಂತು. ಮಹಾ ಭಾರತ ಕಾಲದಲ್ಲಿ—ಕರ್ಣನು ಶಸ್ತ್ರಾಸ್ತ್ರ ಕೋವಿದನಾಗಿ ತೇಜಸ್ವಿಯಾಗಿ ಅದ್ವಿತೀಯ ಪರಾಕ್ರಮಿಯಾಗಿದ್ದರೂ, ಅವನ ಉತ್ಪತ್ತಿಯು ಕೀಳುಜಾತಿಯಲ್ಲಾಯಿತೆಂಬುದಕ್ಕಾಗಿ ಕೌರವನ ಸಭೆಯಲ್ಲೇ ಪರಸ್ಪರ ಮನೋದ್ಘಾಟನೆಯ ಚರ್ಚೆಗಳು ಪ್ರಾರಂಭವಾದುದುಂಟು. ಈ ಜಾತಿ ಮೂಲಕವಾಗಿ ಬಂದ ಕೀಳ್ತನವನ್ನು ತೊಲಗಿಸಿದರಲ್ಲದೆ ವ್ಯಕ್ತಿಗಳಿಗೆ ಸಮಾಜದಲ್ಲಿ ಸ್ಥಾನಮಾನಗಳಾಗಲೀ ಅಭಿವೃದ್ಧಿಯಾಗಲೀ ಉಂಟಾಗಲಾರದೆಂದು ವಾದಿಸುವವರ ಪಂಗಡವೊಂದುಂಟು. ಈ ಪಂಥದವರ ದೃಷ್ಟಿಕೋಣವನ್ನು ಒಪ್ಪಬಹುದಾದರೂ, ಇಂದು ನಮ್ಮ ಸರಕಾರದ ದೃಷ್ಟಿಯಲ್ಲಿ ಈ ಜಾತೀಯತೆಯ ಆಧಾರದ ಮೇಲೆಯೇ ಸಕಲ ವಿಧ ಪ್ರೋತ್ಸಾಹಗಳಿಗೂ ಅವಕಾಶ ದೊರೆತಿರುವುದರಿಂದ ಸಕಲರೂ ಇದನ್ನೇ ಆಧಾರವಾಗಿಟ್ಟುಕೊಂಡು ತಮ್ಮ ಸ್ವಾರ್ಥತೆಯನ್ನು ಸಾಧಿಸಿಕೊಳ್ಳಲು ಮುಂದಾಗಿದ್ದಾರೆ. ಅದ್ಯಂತ ಜನಾಂಗದಲ್ಲಿ ಬ್ರಾಹ್ಮಣ ಜಾತಿಯೊಂದು ಮುಂದುವರಿದುದೆಂದು ಈಗ್ಗೆ ನಲ್ವತ್ತು ವರ್ಷಗಳ ಹಿಂದೆ ನಿರ್ಣಯಿಸಲ್ಪಟ್ಟಂತೆ, ಅವರದೊಂದು ಜಾತಿಯನ್ನು ಬಿಟ್ಟು ಆರ್ಥಿಕ, ಔದ್ಯೋಗಿಕ, ಶೈಕ್ಷಣಿಕ, ಸಾಂಸ್ಕೃತಿಕ ಮುಂತಾದ ದೃಷ್ಟಿಯಿಂದಲೆಲ್ಲ ಎಷ್ಟೋ ಮುಂದುವರಿದಿರುವ ವೀರಶೈವರು, ಒಕ್ಕಲಿಗರು ಸಹ ತಾವೂ ಹಿಂದುಳಿದವರೆಂದು ಹೇಳಿಕೊಂಡು-ಈ ವಿಧ ರಿಯಾಯಿತಿಗಳನ್ನು ಪಡೆಯಲು ಸಿದ್ಧರಾಗಿದ್ದಾರೆ. ಹೀಗಾದಲ್ಲಿ ಈ ಜಾತೀಯತೆ ಎಂಬುದು ಅಳಿಯುವ ಮಾರ್ಗವೆಲ್ಲಿದೆ?

ಶೈಕ್ಷಣಿಕ ದೃಷ್ಟಿಯಿಂದ ಹಿಂದುಳಿದವರು ಎಂಬ ವರ್ಗವನ್ನು ವಿಂಗಡಿಸಲು, ಸಾಮಾಜಿಕ, ಮತ್ತು ಆರ್ಥಿಕ ಎರಡು ದೃಷ್ಟಿಗಳಿಂದಲೂ ಯೋಚಿಸಬೇಕಾಗುತ್ತಿದೆ. ಸಾಮಾಜಿಕವಾಗಿ ಬ್ರಾಹ್ಮಣ,ಲಿಂಗವಂತ, ವೈಶ್ಯ, ಕ್ಷತ್ರಿಯ ಮುಂತಾದ ಉತ್ತಮ ಪರಿಸ್ಥಿತಿಗಳಲ್ಲಿ ಜನ್ಮಗೊಂಡರೂ ಸಹ ಬಡತನದ ಕಾರಣದಿಂದ ತಂದೆ ತಾಯಿಗಳು ತಮ್ಮ ಜೀವನೋಪಾಯಕ್ಕಾಗಿ ಪಡಬೇಕಾದ ಕಷ್ಟಗಳಲ್ಲಿ ತಮ್ಮ ಮಕ್ಕಳ ಸಹಾಯವನ್ನೂ ಪಡೆಯುವುದರಿಂದ ಅವರಿಗೆ ಯೋಗ್ಯ ಶಿಕ್ಷಣ ಕೊಡಲು ಸಾಧ್ಯವಾಗುವುದಿಲ್ಲ. ಅದರಲ್ಲೂ ಸದ್ಯಃಕಾಲದಲ್ಲಿ ವಿದ್ಯಾಭ್ಯಾಸವು ಅತ್ಯಂತ ವೆಚ್ಚದ ವಿಚಾರವಾಗಿರುವುದರಿಂದ – ಬಡವರಲ್ಲ— ಸಾಮಾನ್ಯ ಮಧ್ಯಮ ವರ್ಗದವರೂ ತಮ್ಮ ಕುಟುಂಬದ ಅನ್ನ ಬಟ್ಟೆಗಳ ಯೋಗಕ್ಷೇಮವನ್ನು ನೋಡಿಕೊಂಡು ನಾಲ್ಕು ಮಂದಿ ಮಕ್ಕಳ ವಿದ್ಯಾವ್ಯಾಸಂಗವನ್ನು ಸಾಗಿಸುವುದು ಅತಿಶಯ ಕಠಿಣವೆಂದು ಯೋಚಿಸುವಂತಾಗಿದೆ. ಆದರೆ ಈಚೆಗೆ ನಿರ್ಬಂಧ ವಿದ್ಯಾಭ್ಯಾಸ ಪದ್ಧತಿಯು ದೇಶದ ಎಲ್ಲಾ ಭಾಗದಲ್ಲೂ ರೂಢಿಗೆ ಬಂದು, ಒಂದು ಮಟ್ಟದ ವರೆಗಾದರೂ-ಎಂದರೆ ಪ್ರಾರಂಭ ತರಗತಿಗಳ ವಿದ್ಯಾಭ್ಯಾಸವನ್ನಾದರೂ

(೨೫ನೇ ಪುಟ ನೋಡಿರಿ)

Greetings from

Sri Krishna Jewellery Mart,

UDIPI.

●

For Guaranteed Gold and Silverware & All kinds of Precious Stones

VISIT Phone: 66

Sri Krishna Jewellery Mart

Ready-made Jewellery Dept.

Commission Agents,

TENKAPET, UDIPI, S. KANARA.

U. Raghavendra Krishna Bhat,
Prop.

25 ವರ್ಷಗಳ ಅನುಭವಿಕ ಲೇಡಿ ಡಾಕ್ಟರ್

ಡಾ|| (ಸೌ) ರತ್ನಾಬಾಯಿ.
R.M.P. (Govt. Regd.)
* *

● ಪ್ರದರ ರೋಗ
● ಗರ್ಭಾಶಯದ ವಿಕಾರ
● ಬಂಜೆತನ
● ಮುಟ್ಟಿನ ದೋಷ
● ಎಲ್ಲ ತರದ ಮೂಲ ವ್ಯಾಧಿ

ಇವೆಲ್ಲ ರೋಗಗಳಿಗಾಗಿ ಸಲಹೆ ಪಡೆಯಿರಿ. ಸ್ತ್ರೀಯರ ಹಾಗೂ ಮಕ್ಕಳ ಯಾವುದೇ ತರಹದ ರೋಗಗಳನ್ನು ಖಾತ್ರಿಯಿಂದ ಸಂಪೂರ್ಣವಾಗಿ ಗುಣಪಡಿಸುತ್ತೇವೆ.

ಪರಸ್ಥಳಿಕರು ರೋಗಗಳ ಬಗ್ಗೆ ವಿವರವಾಗಿ ಬರೆದು ಔಷಧವನ್ನು V. P. ಯಿಂದ ತರಿಸಿಕೊಂಡು ಆರೋಗ್ಯ ಪಡೆಯಿರಿ. ಉತ್ತರಕ್ಕಾಗಿ 15 ನ. ಪೈ. ಅಂಚೆ ಟಿಕೀಟು ಕಳಿಸಿರಿ.

ವೇಳೆ:— ಮುಂ. ೯ ರಿಂದ ೧೨ ಸಾ ೫ ರಿಂದ ೮.

ಭಾರತ ದವಾಖಾನಾ

ಕುಬಸದ ಗಲ್ಲಿ ... ಹುಬ್ಬಳ್ಳಿ.

ಒಂದು ನಗೆ ಬರಹ

ಸಾಹಿತ್ಯ ಮತ್ತು ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವದಲ್ಲಿ ಶಾಸಕ—ಅಧಿಕಾರಿಯ ಪದವಿ ದೊರೆಯಿತೆಂದರೆ ಒಬ್ಬ ಸೃಷ್ಟಿಕರ್ತನ ಸಮಸ್ಥಾನಕ್ಕೆ ಅವರಿಂದೇ ಏರಿರುತ್ತಾನೆ. ಆತನ ಕೈ ಸಾಹಿತ್ಯಕ್ಕೆ ಪ್ರೋತ್ಸಾಹ ರೀತಿಯ ದಾನಕೊಡುವುದಕ್ಕೂ ಮುಂದಾಗುತ್ತದೆ. ಈ ಬಗೆಯ ದಾನಕ್ಕೆ ಪಾತ್ರರಾಗುವ ಅರ್ಹತೆ ಗಾಂಪ ಸಾಹಿತ್ಯದ ಒಡೆಯರಿಗೆ ಮಾತ್ರ ಸುಲಭ ಸಾಧ್ಯವೆನಿಸುತ್ತದೆ. ಸಮತಾವಾದದ ಗುಂಗಿನಲ್ಲಿ ಲೇಖನಿಗಿಂತ ಖಡ್ಗವೇ ತನ್ನ ಶಕ್ತಿಯನ್ನು ಜಮಾಯಿಸಿ, ಉತ್ತಮರ ಬಾಯಿಯಿಂದ ಸತ್ತೆ ಎನ್ನಿಸುತ್ತಿದೆ. ಪ್ರಜಾಪ್ರಭುತ್ವದ ಬಹು ನಾಯಕ ನೀತಿ ಮತ್ತು ಬೇಜವಾಬ್ದಾರಿತನಗಳಿಂದ ಆಗುವ ಅನಾಹುತಗಳ ಒಂದು ಸಂಕ್ಷಿಪ್ತ ಚಿತ್ರವನ್ನು ವಿಖ್ಯಾತ ವಿಡಂಬನಕಾರ ಪ್ರೊ॥ ಶ್ರೀಧರರು ಶಬ್ದಗಳಲ್ಲಿ ಎಳೆದಿದ್ದಾರೆ.

ಪ್ರೊ॥ ಬಿ. ಎಚ್. ಶ್ರೀಧರ, ಎಂ. ಎ.

ಪ್ರಜಾಪ್ರಭುತ್ವವೂ ಬಹುಮತ ನಿರ್ಣಯವೂ ಅವಿನಾಭಾವಿಗಳೆಂಬುದು ಸುಪ್ರಸಿದ್ಧ. ಅದೊಂದು ಪಂಚರ ಪ್ರಪಂಚ. ಸಾಮಾನ್ಯವಾಗಿ ತಮ್ಮ ಹುಟ್ಟು, ಬೆಳವಣಿಗೆ, ಅಭ್ಯಾಸ, ಅಭಿರುಚಿ, ಅಭಿಪ್ರಾಯಗಳಲ್ಲಿ ಪಂಚರು ಪಂಚಮುಖರಾಗಿರುವುದೇ ಹೆಚ್ಚು. ಕಾಲೇಜಿನ ವಾಕ್ ಸ್ಪರ್ಧೆಗಳಲ್ಲಿ ಮೂವರು ನಿರ್ಣಾಯಕರನ್ನು ನಿಯಮಿಸಿದರೆ, ದತ್ತ ವಿದ್ಯಾರ್ಥಿಯೊಬ್ಬನಿಗೆ ಮುದ್ವಾತದಷ್ಟು ಅಂತರವಿರುವಂತೆ ಅವರು ಗುಣಗಳನ್ನಿತ್ತಿರುವ ಸಂದರ್ಭಗಳು ಪರೀಕ್ಷ್ಯನ ಗತಿ "ಹಂಚೊಡೆದು ಪಂಚಂ ಪ್ರಾಡು" ಆಗುವುದನ್ನು ಸಾರುತ್ತವೆ. ಪಂಚನಾಮೆಗಳಲ್ಲಿ ಬಾಯಿ ಬಲವಿರುವವನು ಮೊದಲು ಬರೆದದ್ದಕ್ಕೆ ಮಿಕ್ಕ ನಾಲ್ವರು ಕಣ್ಣು-ಕಿವಿ-ಮನಗಳನ್ನು ಮುಚ್ಚಿಕೊಂಡು ರುಜು ಹಾಕುವುದು ತದ್ವಿರುದ್ಧವಾದ ಉದಾಹರಣೆ.

ಸಲಹೆಯ ಸಮಿತಿಗಳ ನಿರ್ಣಯಮತವು ಎರಡನೆಯ ಉದಾಹರಣೆಯಂತಾದರೆ ಅವುಗಳ ಬಹುಮತವು ಒಮ್ಮೆ ಒಂದನೆಯ ಮಾದರಿಯದಾಗಬಹುದು. ಜೊತೆಗೆ ಎಲ್ಲರನ್ನೂ ಎಲ್ಲ ವಿಷಯಗಳ ತಜ್ಞರೆಂದು ಕಾರ್ಯಕಾಲದಲ್ಲಿ ನಂಬಿ ಬಿಡುವುದೂ ನಮ್ಮ ಪ್ರಜಾಪ್ರಭುತ್ವದ ಪರಮ ಲಕ್ಷಣ. ಹಾಗಲ್ಲದೆ ಎಂಥ ತಜ್ಞನನ್ನೂ ಅಜ್ಞನೆಂದು ತಿರಸ್ಕರಿಸಿ ಅವನ ಸಲಹೆಯನ್ನು ಮೂಲೆಗೆಸೆಯುವುದೂ ನಮ್ಮ ಶಾಸಕರಿಗೆ ಅತಿ ಸುಲಭವಾದ ಕೆಲಸ. ಅಂತೂ ಇಂತೂ ಸುಖೀ ರಾಜ್ಯಕ್ಕೆ ಬಾಯಿ ನೀರು ಬಿಡುತ್ತ ಕುಳಿತ ಪ್ರಜಾ ಶಿಶುವಿಗೆ ದೊರಕುವ ನ್ಯಾಯವೊಂದು ಅದೃಷ್ಟದ್ಯೂತದ ಇಂದ್ರಜಾಲ ಫಲವಷ್ಟೇ! ಹೌದೇ?

ಸಾಹಿತ್ಯ ಪ್ರೋತ್ಸಾಹ—ಸಾಹಿತ್ಯ ಬಹುಮಾನಗಳ ಧನದಾನದ ನಿರ್ಣಯಗಳನ್ನೂ ಮೇಲಿನಂತೆಯೇ ತೆಗೆದುಕೊಳ್ಳದೆ ಹೋದರೆ ಪಂಚನ್ಯಾಯ ದರ್ಶನಕ್ಕೆ ಭಂಗವುಂಟಾಗುವುದಿಲ್ಲವೇ? ಜೊತೆಗೆ—ಅಚ್ಚಾದ ಮೇಲೆ ಅವಕ್ಕೆ ಪೋಷಣೆ—ಮೊದಲೇ ಕೇಳಿದರೆ ಐದಾರು ಹಸ್ತಪ್ರತಿಗಳ ಬೇಡಿಕೆ! ಮೊದಲಿನಂತಾದರೆ ಜಾನ್ಸನ್ ಮಹಾಶಯನು ಕೋಶ ಗ್ರಂಥವನ್ನು ಕಷ್ಟದಿಂದ ಪ್ರಕಟಿಸಿದ ಮೇಲೆ ಲಾರ್ಡ್ ಚೆಸ್ಟರ್ ಫೀಲ್ಡರು ಸಹಾಯವೀಯಲು ಮುಂಬಂದಂತಾಗುತ್ತದೆ; ಎರಡನೆಯ ವಿಧಿ ಗಂಟು ಬಿದ್ದರೆ ಐದಾರು ಪ್ರತಿಗಳನ್ನು ತಯಾರಿಸುವುದಕ್ಕಿಂತ ಮುದ್ರಾಲಯಕ್ಕೆ ಹೋಗಿ ಅಕ್ಷರಗಳನ್ನು ಸ್ವತಃ ಜೋಡಿಸುವುದೇ ಮೇಲು ಎಂದು ಗ್ರಂಥಕರ್ತನಿಗೆ ನಿನಿಸಿದರೆ ಆಶ್ಚರ್ಯವಲ್ಲ. ಇಂದಿನ ಕನ್ನಡದ ಬಡ ಗ್ರಂಥಕರ್ತನಿಗೆ ಇಷ್ಟೆಲ್ಲಾ ಮಾಡಿದ ಮೇಲೂ ವಶೀಲಿ ಬೇಕೇಬೇಕು. ವಶೀಲಿಗೂ ಪ್ರಜಾಪ್ರಭುತ್ವಕ್ಕೂ Invariable Concomitance ಸಾಹಚರ್ಯ ನಿಯಮವಿರುವುದು ೨೦ನೆಯ ಶತಮಾನದ ಭಾರತವು ಸಿದ್ಧಮಾಡಿ ತೋರಿಸಿದೆ. ಆ ಮೇಲೆ ಮುದ್ರಿತ ಪುಸ್ತಕಕ್ಕಾದರೂ **ವಸ್ತುವಿಗಿಂತ ಅದರ ಮುದ್ರಣ ಸೌಂದರ್ಯವೇ ಅಧಿಕ ಅಮೂಲ್ಯ.** ದಕ್ಷಿಣೆಗೆ ತಕ್ಕ ಶಿಕ್ಷಣವಂತ ವರ ದೊರಕುವಂತೆ ಅಥವಾ ಬಣ್ಣಕ್ಕೆ ತಕ್ಕ ಪತಿ ಹೆಣ್ಣಿಗೆ ಸಿಗುವಂತೆ ಮುದ್ರಾ ಸೌಂದರ್ಯಕ್ಕೆ ಅಥವಾ ವಶೀಲಿ ಸೌಂದರ್ಯಕ್ಕೆ ತಕ್ಕ ಧನದಾನ ದೊರಕುತ್ತದೆ. ಪ್ರಜಾಪ್ರಭುತ್ವವೊಂದು ಲಾಟರಿ. ಏಕೆಂದರೆ ನಮಗೆ ಸ್ವಾತಂತ್ರ್ಯ ಸಿಕ್ಕಿದ್ದು ಲಾಟರಿಯಿಂದ! ಪಾವಾಣೆಯನ್ನು ಹಾರಿಸಿದಾಗ ಮುಖ ಮೇಲೆ ಬಿದ್ದುದರಿಂದ!

ಕೆಲ ಸಂದರ್ಭಗಳಲ್ಲಿ ವಿಮರ್ಶಕರಾಗಿ ಕುಳಿತವರ ಗ್ರಂಥಗಳಿಗೇ ಅವರು ಮತದಾನ ಮಾಡಬೇಕಾಗುವುದಂತೆ. ತಮ್ಮ ಗ್ರಂಥಗಳಿಗೇ ತಾವು ಮತ ಕೊಟ್ಟುಕೊಂಡ ಇತಿಹಾಸ ಹೊಸದಲ್ಲವಂತೆ. ತಮ್ಮದಕ್ಕೇ ತಮ್ಮ ರೆಕಮೆಂಡೇಷನ್! Judge, jury and the hangman rolled into one! ಹಾಗಲ್ಲವಾದರೆ "ನಿರುದ್ಯೋಗ ನಿವಾರಣೆಯು ನಿಯೋಜ್ಯನ ಯೋಗ್ಯತೆಯನ್ನು ಗಮನಿಸುವುದಕ್ಕಿಂತ ಹೆಚ್ಚಿನದು" ಎಂಬ ನ್ಯಾಯದಂತೆ ಚೇಲ ಸಾಹಿತ್ಯಕ್ಕೇ ವಿಮರ್ಶನಾಚಾರ್ಯರು ರೆಕಮೆಂಡೇಷನ್ ಕೊಟ್ಟುಬಿಡುವುದು. ಅಥವಾ ಸರಕಾರಿ ಅಧಿಕಾರಿಗಳ ದಾಕ್ಷಿಣ್ಯಕ್ಕೆ ಪಕ್ಕಾಗಿ ಅವರ ಆಶ್ರಿತ ವಾತ್ಸಲ್ಯವನ್ನು ಗೌರವಿಸಿ ವಿಮರ್ಶಿಸಿ ಒಗೆಯುವುದು! ಅದೂ ಅಲ್ಲವಾದರೆ ಸರಕಾರದ ಧೋರಣೆ-ಯೋಜನೆಗಳನ್ನು ಕುರಿತಾಗಿ, ಎತ್ತಿ ಯದ್ವಾತದ್ವಾ ಹೊಗಳುವ ಮುದ್ದಾಂ ಸಾಹಿತ್ಯಕ್ಕೆ ತಪ್ಪದೆ ಬಲಿದಾನ ಮಾಡುವುದು! ಆಧುನಿಕ ವಂದಿಮಾಗಧರಿಗೆ ಜಯವಾಗಲಿ—ಎಂದೀಗ ಹರಸುವುದು ಅನಗತ್ಯ. ಯೇನಕೇನ ಪ್ರಕಾರೇಣ ರಾಜಧಾನಿಗಳಲ್ಲಿ ಪ್ರತಿಷ್ಠಿತರಾದ ಲೇಖಕರ ಸ್ಥಾನಮಾನ ಬಲವಂತೂ ಇದ್ದೇ ಇದೆ—ವಾಯು ಸಬಲಿ ಅವರಿಗೆ ಬೀಳದೆ ಹೋದರೆ ಹೇಗೆ ಈ ಗ್ರಾಮಭಾರತದಲ್ಲಿ?

ಬೇಂದ್ರೆ-ಸೀತಾರಾಮಯ್ಯ-ಗುಂಡಪ್ಪ-ಕಾರಂತ-ಶಂಕರಭಟ್ಟ-ಮರಿಯಪ್ಪ ಭಟ್ಟ-ಗೋವಿಂದ ಪೈಗಳೊಬ್ಬೊಬ್ಬರೇ ನಿರ್ಣಾಯಕರಾಗಲು ಅವರ ಸಂಸ್ಕೃತಿಗೆ ಮನ್ನಣೆಯನ್ನು ಕೊಡಲು ಪ್ರಜಾಪ್ರಭುತ್ವಕ್ಕೆ ಸಾಧ್ಯವಾಗದು. ವರ್ಗೀಕೃತ ಪುಸ್ತಕಗಳನ್ನು ವಿಮರ್ಶಕರಿಗೆ ಕಳಿಸದೆ ಸಂಪಾದನ ಮಾಡಿದ, ಸಂಗ್ರಹಿಸಿದ, ವಿಮರ್ಶಿಸಿದ, ತಾವೇ ಬರೆದ ಎಂಬ ನಾಲ್ಕು ಬಗೆಯ ಪುಸ್ತಕಗಳಲ್ಲಿ ತುಲನೆಮಾಡಿ ಯೋಗ್ಯತಾಶ್ರೇಣಿಯನ್ನು ನಿರ್ಣಯಿಸಬೇಕಾದ ಸೌಂದರ್ಯ ತರ್ಕವನ್ನೂ ವಿಮರ್ಶಕರೆ ಹಿಡಿಯಬೇಕಾಗುತ್ತದೆ ಇಲ್ಲದೆ, **ಬಡವರಲ್ಲದವರ ಮತ್ತು** ಸಮರ್ಥರು ಪ್ರಕಟಿಸಿಕೊಟ್ಟ ಗ್ರಂಥಗಳಿಗೂ ಸಬ್‌ವೆನ್‌ಷನ್ ದಯಪಾಲಿಸಲು ಸರಕಾರಕ್ಕವನು ರೆಕಮೆಂಡ್ ಮಾಡಬೇಕಾಗುತ್ತದೆ. ಪ್ರೋತ್ಸಾಹ ಕೇಂದ್ರವಿಂದು ಒಂದು ರೇಡಿಯೋ ಆಲಯ ಅಥವಾ ಪ್ರತಾಪರುದ್ರ ಯಶೋಭೂಷನ ಆಸ್ಥಾನ!

ಪ್ರಜಾಪ್ರಭುಗಳ ಚಿತ್ತಲಹರಿಯ ವಿವಿಧ ಆಂದೋಲನಗಳಂತು ಸಾಹಿತ್ಯ-ಸಂಗೀತ-ಕಲೆಗಳನ್ನೆತ್ತಿ ಜನಪ್ರಿಯಗೊಳಿಸುವುದರ ಆಧಾರದ ಮೇಲೆ ಕೆಲ ಪ್ರಕಾಶನ ಸಂಸ್ಥೆಗಳು ಗವರ್ನ್‌ಮೆಂಟ್ ಸ್ಟ್ಯಾಂಡರ್ಡ್ (Books that have won Government Awards) ಪುಸ್ತಕಗಳನ್ನೇ ಭಾಷಾಂತರಿಸಿ ಪ್ರಕಟಿಸಲು ಮುಂಬರುವಂತಾಗಿರುವುದೂ ಪ್ರಜಾಪ್ರಭುತ್ವದ ವಿಶಿಷ್ಟ ಗ್ರಹಚಾರವನ್ನೆನಿಸಿದೆ. ಗವರ್ನ್‌ಮೆಂಟ್ ಭಾಷಣಕಾರರು, ಗವರ್ನ್‌ಮೆಂಟ್ ಕಲೆಗಾರರು, ಗವರ್ನ್‌ಮೆಂಟ್ ಮನುಷ್ಯರು, ಗವರ್ನ್‌ಮೆಂಟ್ ಕೆಲಸ—ಎಂದು ಮುಂತಾಗಿ ಗವರ್ನ್‌ಮೆಂಟ್ ಬ್ರ್ಯಾಂಡುಗಳ ಹೊಸ ಜಾತಿಯೇ ಇಂದು ಜಾರಿಗೆ ಬರುತ್ತಿದೆ ಎಂದು ಬೆಂಗಳೂರಿನ ಗೆಳೆಯರೊಬ್ಬರು ಇತ್ತೀಚೆಗೆ ಉದ್ಗರಿಸಿದ್ದಿಲ್ಲಿ ಸ್ಮರಣೀಯ. ಮೆಂಟಾಲಿಟಿ (Mentality) ಅಥವಾ ಮನೋಧರ್ಮದಲ್ಲಿ ಎರಡುವಿಧ: ಆರ್ನಮೆಂಟಾಲಿಟಿ (Ornamentality) ಅಥವಾ ಅಲಂಕಾರಿ ಮತ್ತು ಗವರ್ನ್‌ಮೆಂಟಾಲಿಟಿ (Governmentality) ಅಥವಾ ಸರಕಾರಿ ಎಂದು. ಇವುಗಳಲ್ಲಿ ಆಯ್ದುಕೊಳ್ಳಬಹುದಾದುದು ಯಾವುದು? ಒಂದನ್ನೊಂದು ಅನುಸರಿಸುತ್ತವೆ. ಹೊಗೆಯಿದ್ದಲ್ಲಿ ಬೆಂಕಿಯಿದ್ದ ಹಾಗೆ. ಸರಕಾರವೆಂದರಿಂದು ಒಂದು ಸಮಾಸವಾಗಿದೆ ಅವೆರಡರ. ಸರಕಾರಗಳು (Popular) ಜನಪ್ರಿಯವಾಗಿರುವಾಗ ಅವುಗಳ ವರ್ತನೆಗಳು ಜನಪ್ರಿಯವಾಗುವುದರಲ್ಲೇನಾಶ್ಚರ್ಯವಿದೆ? ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರಭುಗಳೆನ್ನಿಸಿದವರ ಮತ್ತು ಪ್ರಜೆಗಳಲ್ಲಿ ಪ್ರಭುಗಳೆನ್ನಿಸಿದವರ ಹಾಗೂ ಪ್ರಜೆಗಳೂ ಪ್ರಭುಗಳೂ ಆಗಿರುವ ಮೂರು ವರ್ಗಗಳ ಸಮಸ್ಯೆಯಾಗಿದೆ Rulers, Masters and Master-Servants ಅಥವಾ ಶಾಸಕರು, ಮುಖಂಡರು ಮತ್ತು ಮುಖಂಡ — ನೌಕರರು— ಸಭಾಪತಿಗಳು, ನಿರ್ಣಾಯಕ ವಿಮರ್ಶಕರು ಮತ್ತು ಕಾರ್ಯನಿರ್ವಾಹಕರು ಎಂಬ ತ್ರಿವರ್ಗದ ಸಿದ್ಧಿಯಾದವನಿಗೆ ಸಾಹಿತ್ಯ ಮೋಕ್ಷವೆಂಬ ಚತುರ್ಥ ಪರಮಾರ್ಥವು ಸಾಧ್ಯ.

Salvation is the healing of spiritual disease ಆಧ್ಯಾತ್ಮಿಕ ವ್ಯಾಧಿಗೆ ಮೋಕ್ಷವೇ ಮದ್ದು ಎನ್ನುತ್ತಾರೆ. ಎಂದ ದರದಲ್ಲಿ ಪೋಸ್ಟೇಜು ಸ್ಟ್ಯಾಂಪು ಖರ್ಚುಮಾಡಿ ರಿಜಿಸ್ಟರ್ ಮೂಲಕ ಹಸ್ತಪ್ರತಿಯನ್ನು (ಈಗ ಸ್ವೀಕರಿಸುವುದಿಲ್ಲವಂತೆ!) ಅಥವಾ ಮುದ್ರಿತ ಪ್ರತಿಯನ್ನು ಸರಕಾರಿ ಕಚೇರಿಗೆ ಕಳಿಸಿಬಿಟ್ಟರೇಗ ಸಾಹಿತಿಯು ಮುಕ್ತ. ಅವನು "ಕರ್ಮಣ್ಯೇ ವಾಧಿಕಾರಸ್ತೇ" ಎಂದು ಸುಮ್ಮನಿರಬೇಕು. ಒಳ್ಳೆಯ ಪುಸ್ತಕಗಳು ಪ್ರಕಾಶಕರು ಸಿಗದುದರಿಂದ, ಅಪಾತ್ರ ಪ್ರಕಾಶಕರು ಅಪಾತ್ರ ಲೇಖಕರಿಗಷ್ಟೇ ಪ್ರೋತ್ಸಾಹ ನೀಡುವುದು ಅನಿವಾರ್ಯವಾದುದರಿಂದ, ಪ್ರತಿಷ್ಠೆಗಾಗಿ ಎಲ್ಲೋ ಒಬ್ಬಿಬ್ಬರು ಸತ್ಪಾತ್ರರಿಗೆ ಪ್ರತಿಫಲಕೊಡದೆ ಅಥವಾ ಅಲ್ಪಸ್ವಲ್ಪ ಕೊಟ್ಟು ಅವರ ಗ್ರಂಥಗಳನ್ನು ಪ್ರಕಾಶಿಸಿ ಪ್ರದರ್ಶಿಸಿ ಬಿಟ್ಟರೆ ಸಂಭಾವಿತರಿಗಿರಿ ತಮಗೆ ಬಾಯಿಂ ಎಂದು ತಿಳಿಯುವ ಪ್ರಕಾಶಕರೇ ಹೆಚ್ಚಾಗಿರುವುದರಿಂದ. ಹತ್ತು ಕಲ್ಲುಗಳಲ್ಲಿ ಒಂದು ನೆಲ್ಲು—ಅವರ ಪ್ರಕಾಶನಗಳಲ್ಲಿ. ಅದರಿಂದ ಅವರಿಗೆ ಜಂಭ, ದಂಭ ಮತ್ತು ಕೊಡುಗೈ ವೀರತನದ ಅನುಭವ! ಈ ಅಮಲ್ದಾರ ಪ್ರಜಾಪ್ರಭುಗಳ ಪತ್ತೆ ಕೆಲ ಪ್ರತಿಷ್ಠಿತ ಪತ್ರಿಕಾ ಪ್ರಕಾಶಕರಿಗೂ ಸಾಧಾರಣ-ಅನೇಕ ಕಡೆ. ಅದುದರಿಂದ ಸಾಹಿತ್ಯಕ್ಕೂ ಪ್ರಜಾ ಪ್ರಭುತ್ವಕ್ಕೂ ಹಾಕಿದ ಸಂಕ ಅಂಕುಡೊಂಕು "ವಕ್ರೋಕ್ತಿಃ ಕಾವ್ಯ ಜೀವಿತಂ" ಎಂದು ಸಾಹಿತ್ಯ ಲಕ್ಷಣವನ್ನು ಹೇಳಿದ ಕುಂತಕನಿಗೆ ೨೦ನೆಯ ಶತಮಾನದ ಈ ಅಂಕುಡೊಂಕು ಸೇತುವೆಯ ಅರಿವಿದ್ದರಲಿಕ್ಕಿಲ್ಲ. ಸಿನಿಮ ವಿಮರ್ಶಕರು Feminine Curves ಸ್ತ್ರೀ ಶರೀರ ವಕ್ರತೆಯನ್ನು ಕೊಂಡಾಡುವ ಅರಿವೂ ಇದ್ದಿರಲಿಕ್ಕಿಲ್ಲ. ಆದರೆ "ಕವಯಃ ಕ್ರಾಂತದರ್ಶಿನಃ" ಎಂಬಂತೆ ಅಂಥವರ ವಾಣಿ ಭವಿಷ್ಯದಲ್ಲಿ ನಿಜವಾಗುವುದು ಶತಸಿದ್ಧವಲ್ಲವೆ? ಸಾಹಿತಿಯು ತನ್ನ ಭವಿಷ್ಯವನ್ನು ತಾನೇ ಎಂದೋ ಹೇಳಿಕೊಂಡಿದ್ದ. ಈಗ ಅದನ್ನು ಅನುಭವಿಸುತ್ತಿದ್ದಾನೆ. ಏಕೆ? ಅವನಿಗೇ ಗೊತ್ತಿರಲಿಲ್ಲ—ಅವನ ಮಾತಿಗೆ ಈ ಅರ್ಥವೂ ಸಾಧ್ಯ ವೆಂಬುದು!

'ಆಚಾರಃ ಪರಮೋಧರ್ಮಃ' ಎಂಬ ಹಳೆಯ ಮಾತನ್ನು ಕೆಲ ಅಂಧಾಚಾರಗಳ ದೆಸೆಯಿಂದ ಆಧುನಿಕರು ಹಳಿದರು. ಆಚಾರ ವಿಮುಖತೆ ಅದರ ಫಲವಾಗಿ ಹುಟ್ಟಿ ಈಗ ಅನಾಚಾರ ಆಳಲಾರಂಭಿಸಿದೆ. ಸರ್ವಕ್ಷೇತ್ರಗಳಿಗೂ ಅನಾಚಾರವು ಸಾಧಾರಣ. ಆದರೆ Convention ಕವಿಸಮಯಕ್ಕೆ ಹೆಸರಾದ ಸಾಹಿತ್ಯಕ್ಕೇ ಸರಿ ಸಂಪ್ರದಾಯವಿಲ್ಲವಾಗುವಂತೆ ಮಾಡಿದ್ದು ಅತಿ ಅಪನ್ಯಾಯವಾದ ಲೋಕ ಪ್ರತೀಕಾರ! Pen is not mightier than the sword-ಪೆನ್ನು ಸಾಹಿತ್ಯ, ಕತ್ತಿಯು ಲೋಕ. ಲೋಕವಿಂದು ಸಾಹಿತ್ಯವನ್ನು ಬಗ್ಗಿಸಿದೆಯಲ್ಲದೆ ಸಾಹಿತ್ಯವು ಲೋಕವನ್ನಲ್ಲ ಏಕೆ? ಸಾಹಿತ್ಯ ಲೋಕದಲ್ಲಿ ಲೋಕ ಸಾಹಿತ್ಯವು ಹೊಕ್ಕದ್ದರಿಂದ.

ಪಂಪ ಸಾಹಿತ್ಯ—ಗಾಂಪ ಸಾಹಿತ್ಯಗಳಲ್ಲಿ ಭೇದವನ್ನು ಕಾಣುವ ಕಣ್ಣು, ಕಂಡರೂ ಲೆಕ್ಕಿಸುವ ಬುದ್ಧಿ, ಅಳಿದು ಹೋಗುತ್ತಿರುವುದು ಪ್ರಜಾಪ್ರಭುತ್ವದ ಮರಿಯಾದ ಸೋಶಲಿಜಂ ಸಿದ್ಧಾಂತದ ಫಲ. ಜನ

(ಮುಂದಿನ ಪುಟ ನೋಡಿರಿ)

ನಾರದೀಯ ಭಕ್ತಿಸೂತ್ರ

"ಮದ್ಭಕ್ತಃ ಸಮೇ ಪ್ರಿಯಃ"(ನನ್ನ ಭಕ್ತನು ನನಗೆ ಪ್ರಿಯನು) ಎಂದು ಗೀತೆಯಲ್ಲಿ ಕೃಷ್ಣನು ಸಾರಿ ಹೇಳಿದ್ದಾನೆ. ಪರಮಾತ್ಮನನ್ನು ಕ್ಷಣಕಾಲವಾದರೂ ಮರೆಯದೆ ಸದಾ ಸ್ಮರಿಸಿಕೊಂಡಿರುವ ಪ್ರವೃತ್ತಿಯೇ ಭಕ್ತಿ. ಈ ಭಕ್ತಿಯ ಬಗೆ ವಿವರಣೆ ನೀಡುವ ಹಲವಾರು ಸೂತ್ರಗಳು ಸಂಸ್ಕೃತ ಭಾಷೆಯಲ್ಲಿರುವುವಾದರೂ ಭಾಗವತದ ನವನೀತದಂತಿರುವ ನಾರದೀಯ ಭಕ್ತಿಸೂತ್ರ ಸಂಕ್ಷಿಪ್ತವಾದುದು, ಸುಲಭಗ್ರಾಹ್ಯವಾದುದು, ವ್ಯವಹಾರ್ಯವೆನಿಸಿದುದು. ಪ್ರಸ್ತುತ ಲೇಖನದಲ್ಲಿ ಭಕ್ತಾಗ್ರಣಿ ನಾರದರ ಭಕ್ತಿ ಸೂತ್ರದ ಮೇಲೆ ವಿದ್ವಾಂಸರಾದ ಶ್ರೀ ಉಡುಪರು ಕ್ಷ-ಕಿರಣ ಬೀರಿದ್ದಾರೆ.

ಶ್ರೀ ಯ. ನಾ. ಉಡುಪ, ವಿದ್ವಾನ್.

ಸಂಸ್ಕೃತ ಸಾಹಿತ್ಯದಲ್ಲಿ ಮಾಯೆಯಿಂದ ಪಾರಾಗುವ ಅನೇಕ ಮಾರ್ಗಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಶ್ರೀಕೃಷ್ಣ, ವ್ಯಾಸ, ಶುಕ, ಶಾಂಡಿಲ್ಯ, ನಾರದ ಮೊದಲಾದ ಮಹಾಪುರುಷರೆಲ್ಲಾ ಭಕ್ತಿ ಮಾರ್ಗಕ್ಕೇ ಪ್ರಾಧಾನ್ಯವನ್ನಿತ್ತವರು. ಈ ಭಕ್ತಿಯು ದಿವ್ಯಪ್ರೇಮದಿಂದಲೇ ಆರಂಭವಾಗಿ, ಆ ಪುಣ್ಯ ಪ್ರವಾಹದಲ್ಲೇ ಮುಂದೆ ಸಾಗಿ ಸಚ್ಚಿದಾನಂದ ಸಾಗರದಲ್ಲಿ ಐಕ್ಯವಾಗುವ ಆತುರವುಳ್ಳ ಒಂದು ಗುಣವಿಶೇಷ. ಈ ಪ್ರೇಮ, ಪ್ರೀತಿ, ವಾತ್ಸಲ್ಯ—ಇವೆಲ್ಲಾ ಪ್ರಾಣಿಪ್ರಪಂಚಕ್ಕೆ ಸಹಜವಾದ ಗುಣಗಳು. ಇವಕ್ಕಾಗಿ ಗುರುಕುಲವಾಸದ ಅಗತ್ಯವಿಲ್ಲ. ಮಗುವಿಗೆ ತನ್ನ ತಾಯಿಯನ್ನು ಪ್ರೀತಿಸಲೂ, ತಾಯಿಗೆ ತನ್ನ ಮಗುವನ್ನು ಮುದ್ದಿಸಲೂ ಯಾವ ಶಾಲೆಯಲ್ಲೂ ಅಭ್ಯಾಸ ಮಾಡಬೇಕಾಗಿಲ್ಲ. ಪ್ರಕೃತಿದತ್ತವಾದ ಪ್ರೀತಿಯನ್ನು ಪ್ರಪಂಚದ ಕಡೆಯಿಂದ ಪರಮಾತ್ಮನ ಕಡೆಗೆ ಹರಿಸಿದರೆ ಭಕ್ತಿಯಾಯಿತು. ಪರಮಾತ್ಮನ ಪ್ರಸನ್ನತೆಗೆ ಈ ಯುಗದಲ್ಲಿ ಭಕ್ತಿಯೇ ಸುಲಭ ಮಾರ್ಗ—ಸುಖದ ಮಾರ್ಗ.

ಈ ಪ್ರೇಮವನ್ನಿಡಲು ಪ್ರೇಮಸಾಗರನಾದ ಹರಿಯೇ ಯೋಗ್ಯಸ್ಥಾನ. ನಮಗೆ ಮನಸ್ಸಿರಲಿ, ಇಲ್ಲದಿರಲಿ; ಅವನಿಗೆ ಹೃದಯದಲ್ಲಿ ತುಸು ಸ್ಥಾನವನ್ನಿತ್ತರೆ ಸಾಕು; ಅವನು ತ್ರಿವಿಕ್ರಮಾವತಾರಿಯಾಗಿ ಹೃದಯಾಕಾಶವನ್ನೆಲ್ಲಾ ಆವರಿಸುವನು. ಬಲಿ ವಾಮನರ ಕಥೆಯು ಭಕ್ತನೊಬ್ಬನ ಸಾಧನೆಯ ನೈಜ ಚಿತ್ರವಾಗಿದೆ.

ಭಕ್ತಿಯ ವಿಚಾರವನ್ನು ಶ್ರೀಕೃಷ್ಣನು ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲೂ, ವೇದವ್ಯಾಸರು ಭಾಗವತಾದಿ ಪುರಾಣಗಳಲ್ಲೂ ವಿಸ್ತಾರವಾಗಿ ಹೇಳಿದ್ದಾರೆ. ಶಾಂಡಿಲ್ಯರ ಭಕ್ತಿ ಸೂತ್ರವು ಈ ವಿಚಾರವನ್ನೇ ಬೋಧಿಸುವ ಇನ್ನೊಂದು ಗ್ರಂಥ. ಆದರೆ ನಾರದರು ಭಕ್ತಿ ಸೂತ್ರವನ್ನು ಸುಲಭದಲ್ಲಿ ಮನೋಹರವಾಗಿ ಹೇಳಿದುದೇ ಇವರದೊಂದು ವೈಶಿಷ್ಟ್ಯ. ಇದೊಂದು ಭಕ್ತಿಯನ್ನು ಸಾರುವ ಜನಪದ ಗ್ರಂಥ. ಇದರಲ್ಲಿ ಭಗವಂತನನ್ನು ಶಿವ, ವಿಷ್ಣು, ದೇವಿಯೆಂಬ ಯಾವ ಹೆಸರಿನಿಂದಲೂ ಕರೆಯದೆ 'ಅಧು' ಎಂದೇ ಸಂಬೋಧಿಸಿದ್ದಾರೆ. ಭಕ್ತನು ಯಾವ ದೇವ ದೇವಿಯನ್ನೂ ತನ್ನ ಇಷ್ಟದೈವವಾಗಿ ಆರಿಸಬಹುದೆಂದೇ ಇದರರ್ಥ. ಭಕ್ತಿಮಾರ್ಗದಲ್ಲಿ ನಾರದರಂತಹ ವಿಶಾಲ ಹೃದಯಿಗಳು ಅಪರೂಪ!

ನಾರದರ ಪರಂಪರೆಗಳು

ಈ ಭಕ್ತಿ ಸೂತ್ರವನ್ನು ಬರೆದ ನಾರದರು ಯಾರೆಂದು ನಿರ್ಧರಿಸುವುದು ಸುಲಭವಲ್ಲ. ಋಗ್ವೇದದ ಕೆಲವು ಸೂತ್ರಗಳು ನಾರದರ ಹೆಸರಿನಲ್ಲಿವೆ. ಛಾಂದೋಗ್ಯ ಉಪನಿಷತ್ತಿನಲ್ಲಿ ನಾರದರ ವಿಚಾರವಿದೆ. ಮಹಾಭಾರತದ ಅನೇಕ ಕಡೆಗಳಲ್ಲಿ ನಾರದರ ಪ್ರವೇಶವಾಗಿದೆ, ಭಾರತದ ಉದ್ಯೋಗ ಪರ್ವದ ಗಾಲನೆಯ ಅಧ್ಯಾಯವು ನಾರದನಿಗೆ ಸತ್ಯವತಿಯೆಂಬ ಹೆಂಡತಿ ಇದ್ದಳು. ಎಂದಿದೆ. ರಾಜಸೂಯ ಯಾಗವನ್ನು ಧರ್ಮರಾಜನಿಗೆ ಮಾಡುವಂತೆ ಪ್ರೇರಿಸಿದವರೇ ನಾರದರು. ರಾಮಾಯಣವನ್ನು ವಾಲ್ಮೀಕಿಗಳಿಗೆ ಬರೆಯಲು ಪ್ರಚೋದಿಸಿದವರೂ ನಾರದರು. ಬ್ರಹ್ಮನ ಮರೀಚಿ ಮೊದಲಾದ ಹತ್ತುಮಂದಿ ಮಕ್ಕಳಲ್ಲೇ ಇವರು ಕಿರಿಯವರು; ಇಲ್ಲಿ ಇವರು ಬ್ರಹ್ಮಚಾರಿಗಳು. ಭಾರತ ಮತ್ತು ದೇವಿ ಭಾಗವತಗಳಲ್ಲಿ ನಾರದರು ಪರ್ವತಮುನಿಯ ಸೋದರಮಾವನೆಂದಿದೆ. ಇವರು ತ್ರಿಲೋಕ ಸಂಚಾರಿಗಳಂತೆ! ಇವರು ಪರಮೇಶ್ವರನ ಶಾಪದಿಂದ ದೇಹತ್ಯಾಗ ಮಾಡಿ ಮರಳಿ ಜನಿಸಿದರು; ಇವರು ದೇವರ್ಷಿಗಳು ಇವರು ಸಂಜಯರಾಜನ ಮಗಳಾದ ದಮಯಂತಿಯನ್ನು ವಿವಾಹವಾಗಿದ್ದರಂತೆ! ಲಿಂಗ ಪುರಾಣವು ನಾರದರು ಮಹರ್ಷಿ, ಇವರು ತಮ್ಮ ತಂಗಿಯಾದ ಅರುಂಧತಿಯನ್ನು ವಸಿಷ್ಠರಿಗೆ ಮದುವೆ ಮಾಡಿಕೊಟ್ಟಿದ್ದಾರೆಂದಿದೆ. ಕಶ್ಯಪ ಋಷಿಯ ಪತ್ನಿಯಾದ ಮುನಿಯಲ್ಲಿ ಹುಟ್ಟಿದ ದೇವಗಂಧರ್ವನೊಬ್ಬನಿಗೂ ನಾರದನೆಂಬ ಹೆಸರೇ ಇತ್ತು. ಜನಮೇಜಯರಾಜನ ಸರ್ಪ ಸತ್ರದಲ್ಲಿ ಸದಸ್ಯನಾಗಿದ್ದ ವಿಶ್ವಾಮಿತ್ರ ಮಹರ್ಷಿಯ ಮಗನೊಬ್ಬ ನಾರದನಿದ್ದ. ಇಷ್ಟು ಮಂದಿ ನಾರದರೆಲ್ಲಾ ಒಂದೇ ಕಾಲದವರಲ್ಲ; ಒಂದೇ ವ್ಯಕ್ತಿಯೂ ಅಲ್ಲ. ಇವರಲ್ಲಿ ಯಾವ ನಾರದರು ಭಕ್ತಿ ಸೂತ್ರವನ್ನು ಬರೆದರೆಂಬುದು ಸಂದೇಹಾಸ್ಪದ ವಿಚಾರ. ಈ ನಾರದರು ಇದೊಂದು ಗ್ರಂಥವನ್ನಲ್ಲದೆ ನಾರದ ಸ್ಮೃತಿ, ನಾರದೀಯ ಶಿಕ್ಷಾ, ಸಂಗೀತ ಮಕರಂದ ಮೊದಲಾದ ಗ್ರಂಥಗಳನ್ನು ಬರೆದಂತೆ ತೋರುತ್ತದೆ. ಇವರಲ್ಲಿ ಭಕ್ತಿಯೊಂದಿಗೆ ಪಾಂಡಿತ್ಯವೂ ಇತ್ತು. ಇವರ ಕಾಲವನ್ನು ಈಗಿನ ಕೆಲವು ವಿದ್ವಾಂಸರು ೧೨ನೆಯ ಶತಮಾನವೆಂದು ಹೇಳುತ್ತಾರೆ. ಆದರೆ ಶ್ರೀ ಕೃಷ್ಣನ ಕಾಲದಲ್ಲೊಬ್ಬ ಭಕ್ತಿಪ್ರಿಯ ನಾರದನಿದ್ದ, ಶ್ರೀ ಕೃಷ್ಣನ ಕಾಲವನ್ನು ಕ್ರಿ. ಪೂ. ಹದಿನೈದನೆಯ ಶತಮಾನವೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಅಂದ ಮೇಲೆ ಒಬ್ಬ ನಾರದನ ಕಾಲ ಶ್ರೀ ಕೃಷ್ಣನ ಕಾಲವೇ ಅಂಗಂತಾಯಿತು. ಹೀಗೆ ಪ್ರತಿಯೊಬ್ಬ ನಾರದರ ಕಾಲವನ್ನೂ ಕಂಡುಹಿಡಿಯಲು ಸಾಧ್ಯವಿದೆ. ಆದರೆ ಇವರಲ್ಲಿ ಭಕ್ತಿ ಸೂತ್ರವನ್ನು ಬರೆದ ನಾರದರು ಯಾರು? ತ್ರಿಲೋಕ ಸಂಚಾರಿಯೆನ್ನಿಸಿದ್ದ ಪರ್ವತನ ಸೋದರ ಮಾವನಿರಬಹುದೆ? ಒಟ್ಟಿನಲ್ಲಿ ಈ ಭಕ್ತಿಗ್ರಂಥವನ್ನು ಬರೆದ ವ್ಯಕ್ತಿಯು ಅಂಥಿಂಥವನಲ್ಲ. ಭಕ್ತಿ ಮಾರ್ಗದಿಂದ ಭಗವಂತನ ಸಾನ್ನಿಧ್ಯವನ್ನು ಸೇರಿದ ಭಾಗವತೋತ್ತಮ! ಯಾವ ವೇದೋಪನಿಷತ್ತಿಗೂ ಈತನ ಭಕ್ತಿ ಸೂತ್ರ ಕಡಿಮೆಯದಲ್ಲ.

ಭಕ್ತಿ ಸೂತ್ರವನ್ನು ಬರೆದ ನಾರದರು ಸಂಸಾರಿಗಳಾಗಿ ಎಲೆ ಮನೆಯಲ್ಲಿ ಬಾಳಿದವರಲ್ಲವೆಂಬುದು ಸತ್ಯ. ಇವರು ವೀಣಾಪಾಣಿಗಳಾಗಿ ಭಗವನ್ನಾಮ ಸಂಕೀರ್ತನೆಯನ್ನು ಹಾಡುತ್ತಾ ಜೀವನವನ್ನೆಲ್ಲಾ ಕಳೆದರು. ಇವರ ಜೀವನದ ಚಿತ್ರವೇ ಭಕ್ತಿ ಸೂತ್ರವೆಂದರೂ ಅತಿಶಯವಾಗದು. ಈ ನಾರದರು 'ಸ್ತ್ರೀಧನ ನಾಸ್ತಿಕ ವೈರಿ ಚರಿತ್ರಂನ ಶ್ರವಣೀಯಮ್' (ಭ.ಸೂ. ೬೩) ಸ್ತ್ರೀಧನ ನಾಸ್ತಿಕರ ಸಂಸರ್ಗ ಮತ್ತು ವೈರಿಗಳ ಚರಿತ್ರೆಯು ಭಕ್ತರಿಗೆ ನಿಷಿದ್ಧವೆಂದಿರುವುದರಿಂದ ಇವರು ಬ್ರಹ್ಮಚರ್ಯದಿಂದಲೇ ಸನ್ಯಾಸಾಶ್ರಮವನ್ನು ಸ್ವೀಕರಿಸಿದವರಾಗಿರಬೇಕು. ಇವರು 'ತ್ರಿಸತ್ಯಸ್ಯ ಭಕ್ತಿರೇವ ಗರೀಯಸೀ ಭಕ್ತಿರೇವ ಗರೀಯಸೀ' (ಭ. ಸೂ. ೮೧) ಎಂದು ಭಕ್ತಿಯ ಮಹಿಮೆಯನ್ನು ಉದ್ಘೋಷಿಸಿರುವುದರಿಂದ ಇವರಿಗೆ ದೈವ ಸಾಕ್ಷಾತ್ಕಾರವಾಗಿರಬೇಕು. ಆದರೆ ಇವರು ಹಾಡುತ್ತಿದ್ದ ಕೀರ್ತನೆಗಳು ಯಾವುವು? ಆ ಕೀರ್ತನೆಗಳಿಗೆ ಭಗವದ್ಭಕ್ತಿಯ ಅನುಲೇಪಿಸುವ ಶಕ್ತಿ ಯಾವ ಪ್ರಮಾಣದಲ್ಲಿತ್ತು? ಇವೆಲ್ಲಾ ತಿಳಿಯಲು ಇಂದು ಯಾವ ಆಧಾರ ಗ್ರಂಥವೂ ದೊರೆಯುತ್ತಿಲ್ಲ. ಆದರೆ ಸುರಾಸುರರೂ ಮಹತೀವೀಣಾಧಾರಿಯಾದ ನಾರದರ ವಾದಗಳಿಗೆ ತಲೆಬಾಗುತ್ತಿದ್ದರೆಂದು ತೋರುತ್ತದೆ. ಇದಕ್ಕೆ ಪಾಷಾಣವನ್ನೂ ಕರಗಿಸುವ ಇವರ ಭಕ್ತಿಯೇ ಕಾರಣವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ವೇದವ್ಯಾಸರಿಗೂ ಹರಿಕೀರ್ತನವೇ ಸಮಸ್ತ ಧರ್ಮಗಳಿಗಿಂತಲೂ ಮೇಲೆಂದು ಬೋಧಿಸಿದವರು ಶ್ರೀ ನಾರದರು (ಭಾಗವತ ೧-೫) ಇವರ ಅಭಿಪ್ರಾಯದಂತೆ ಭಕ್ತಿ ಅಥವಾ ದಿವ್ಯ ಪ್ರೇಮವು ಮಾನವನನ್ನು ಮುಕ್ತಿಯ ವರೆಗೆ ಒಯ್ಯಬಲ್ಲುದು; ಈ ಪ್ರೇಮ ಪ್ರವಾಹದಲ್ಲಿ ತೇಲುತ್ತಾ ಭಕ್ತ ಕ್ರಮೇಣ ಸಚ್ಚಿದಾನಂದ ಸಾಗರವನ್ನು ಸೇರುವನು.

ಭಕ್ತಿ ಸೂತ್ರ

ನಾರದರ ಭಕ್ತಿ ಸೂತ್ರವು ಚಿಕ್ಕ ಗ್ರಂಥ; ಕೇವಲ ಎಂಬತ್ತನಾಲ್ಕು ಸೂತ್ರಗಳು ಮಾತ್ರ ಇವೆ. ಪುಸ್ತಕವು ಚಿಕ್ಕದಾದರು ಪ್ರತಿಸೂತ್ರಕ್ಕೂ ಕೆಲವು ಪುಟಗಳ ವ್ಯಾಖ್ಯಾನವನ್ನು ಬರೆಯುವಂತೆ ಅಮೂಲ್ಯವಾಗಿ ಹಿಗ್ಗುವ ಗುಣವುಳ್ಳದ್ದಾಗಿದೆ. ಮಹಾಭಾರತದ ನಡುವಣ ಭಗವದ್ಗೀತೆ ಇದು. ವಿಸ್ತಾರವಾದ ಗಾಜಿನ ಮಣಿಗಳ ರಾಶಿಯಲ್ಲಿ ಇದೊಂದು ಕೊಹಿನೂರು ಮಹಾ ಭೂಷಿಯ ಒಯಸಿಸ್ಸು.

'ಅಥಾತೋ ಭಕ್ತಿಂ ವ್ಯಾಖ್ಯಾಸ್ಯಾಮಃ' (ಭ. ಸೂ. ೧) ಎಂದು ಈ ಗ್ರಂಥವು ಆರಂಭವಾಗುವುದರಿಂದ, ಈ ಮಹಾ

(೨೩ನೇ ಪುಟ ನೋಡಿರಿ)

ಫೋನ್ ನಂಬ್ರ

ಮೆನೆಜಿಂಗ್ ಡೈರೆಕ್ಟರ್: 19

ಡೈರೆಕ್ಟರ್ ಇನ್‌ಚಾರ್ಜ ಆಫ ವರ್ಕ್ಸ್: 19A

ಟೆಲಿಗ್ರಾಮ್

"Hanumanco"

ಪೋ. ಬಾ. ನಂಬ್ರ 27

ಜನತಾ ಸೇವೆಯೇ ಜನಾರ್ದನನ ಸೇವೆ

ಮಧ್ವಪೀಠ ಉಡುಪಿ— ಐತಿಹಾಸಿಕ ದೇವಸ್ಥಾನಗಳಿಂದಲಂಕೃತ ಉಡುಪಿ— ಪ್ರಕೃತಿ ಸೌಂದರ್ಯ ಬೀಡಾದ ಉಡುಪಿ— ಅಷ್ಟಮಠಾಧಿಪತಿ ಭಜಕವೃಂದ ಪ್ರೀತಿಪಾತ್ರ ಶ್ರೀಕೃಷ್ಣನ ಉಡುಪಿ. ಅಂತಹ ಉಡುಪಿಯಲ್ಲಿ ಕಳೆದ 31 ವರ್ಷಗಳಿಂದ ಶ್ರೀಕೃಷ್ಣನ ಸಂದರ್ಶನಾರ್ಥವಾಗಿ ಬರುವಂಥ ಸಾವಿರಾರು ಜನರಿಗೆ ಸಾರಿಗೆ ಸೌಕರ್ಯವನ್ನೊದಗಿಸಿ ಜನತಾ ಸೇವೆಯನ್ನು ಗೈಯುತ್ತಿದೆ. ಶ್ರೀಕೃಷ್ಣನನ್ನು ಸಂದರ್ಶಿಸಿದವರು ಶ್ರೀಮನ್ ಮಧ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಸಾಗರ ಕಿನಾರೆಯಲ್ಲಿರುವ ವಡಭಾಂಡೇಶ್ವರ ಕ್ಷೇತ್ರ, ಪಾಜಕ ಕ್ಷೇತ್ರ, ದಕ್ಷಿಣ ಕನ್ನಡ ಜಿಲ್ಲೆಯ ಇನ್ನೂ ಪ್ರಕೃತಿ ಬೀಡಾಗಿ ಪ್ರಾಚೀನ ಕಾಲದ ಕ್ಷೇತ್ರಗಳಾಗಿರುವ ಶ್ರೀ ಕೊಲ್ಲೂರು ಮತ್ತು ಶ್ರೀ ಧರ್ಮಸ್ಥಳಗಳ ದರ್ಶನ ಪಡೆದು ಪಾವನರಾಗಲಿಚ್ಛಿಸುವ ಯಾತ್ರಿಕರ ಸೇವೆಗೆ ಸದಾ ಸಿದ್ಧವಿದೆ. ವಿದ್ಯಾರ್ಥಿ ವೃಂದಕ್ಕೆ ರಿಯಾಯಿತಿ ದರದಲ್ಲಿ ಸೌಕರ್ಯವೊದಗಿಸುತ್ತಿದೆ.

ದಿ ಹನುಮಾನ್ ಟ್ರಾನ್ಸ್‌ಪೋರ್ಟ ಕಂಪೆನಿ

ಪ್ರೈವೇಟ್ ಲಿಮಿಟೆಡ್

ಉಡುಪಿ

ಮೈಸೂರು ಸ್ಟೇಟ್

ಭಾರತದ ರಾಜಕಾರಣವು ನೆರೆನಾಡಿಗೆ ಹಬ್ಬಿದಾಗ

‘ಧ್ವಜ ಹಿಡಿದು ಸಿಂಹಾಯುಧರಾಗಿ ಗಡಿಯೊಳಕ್ಕೆ ನುಗ್ಗುವ ಹಗಲುಗಳ್ಳತನ’ವನ್ನು ಫಾರ್ಮೋಸಾದ ಚಿಯಾಂಗ್ ಕೈಷೇಕರು ಕೈಗೊಂಡಾಗ, ‘ಇಂತಹ ಆದರ್ಶವನ್ನು ಅವರು ಭಾರತದ ತಲೆಕೆಟ್ಟ ಧುರೀಣರಿಂದ ಕಲಿತಿರಬಹುದು’ ಎಂದು ಮುಂತಾದ ಪ್ರತಿಕ್ರಿಯೆಗಳು ಜಗತ್ತಿನಾದ್ಯಂತ ಹೊರಟವು. ಇದರ ಪರಿಣಾಮವಾಗಿ, ಕೈಷೇಕರು ಯಾತ್ರೆಯ ದಿನವನ್ನು ಮುಂದುವರಿಸಿ, ಪೂರ್ವಭಾವಿಯಾಗಿ ಆತ್ಮಶುದ್ಧಿಗೆಂದು ಉಪವಾಸವ್ರತ ಕೈಗೊಂಡರು. ಭಾರತದ ರಾಜಕಾರಣವು ನೆರೆನಾಡಿಗೆ ಹಬ್ಬಿದಾಗ ಉಂಟಾದ ಜಾಗತಿಕ ಪರಿಸ್ಥಿತಿಯ ಚಿತ್ರವನ್ನು ಈ ಬರಹದಲ್ಲಿ ಶ್ರೀ ಕಿನ್ನಿಗೋಳಿಯವರು ಶ್ರಮಪೂರ್ವಕ ಬಿಡಿಸಿದ್ದಾರೆ; ನಮ್ಮ ರಾಜಕಾರಣದ ಮೇಲೆ ಬಿದ್ದ ಕ್ಷ-ಕಿರಣಗಳನ್ನು ಬೊಟ್ಟುಮಾಡಿ ತೋರಿಸಿದ್ದಾರೆ

ಶ್ರೀ ಅ. ಗೌ. ಕಿನ್ನಿಗೋಳಿ.

ಫೊರ್ಮೋಸಾ; ಜನವರಿ—26.

ಫೊರ್ಮೋಸಾ ಸರಕಾರದ ಮುಖಪತ್ರಿಕೆಯು ಚಿಯಾಂಗ್ ಕೈಷೇಕರ ಹೇಳಿಕೆಯೊಂದನ್ನು ಪ್ರಕಟಿಸಿ ಪ್ರಪಂಚಕ್ಕೆ ವಿಸ್ಮಯವನ್ನುಂಟುಮಾಡಿತು.

“........ ಚೀನಾ ದೇಶದ ಪ್ರಜೆಯಾಗಿರುವ ನಾನು ನನ್ನ ಮಾತೃಭೂಮಿಯಲ್ಲಿ ವಾಸಿಸಲಾರದೆ ದೂರದ ಈ ಫೋರ್ಮೋಸಾ ದ್ವೀಪದಲ್ಲಿರಬೇಕಾದುದನ್ನು ಇನ್ನು ಮುಂದೆ ಸಹಿಸಲಾರೆ. ನನ್ನ ಮಾತೃಭೂಮಿಗೆ ಮರಳಿ ಕಾಲಿರಿಸುವ ಹಕ್ಕು ನನಗಿದೆ. ನನ್ನ ದೇಶಬಾಂಧವರನ್ನು ಕೂಡಿಕೊಂಡುಇನ್ನೂ ಶಕ್ಯವಿದ್ದಷ್ಟುದೇಶ ಸೇವೆ ಮಾಡುವ ಸದುದ್ದೇಶದಿಂದ ಕೂಡಿದವನಾಗಿರುತ್ತೇನೆ ಏಕೆಂದರೆ ನನ್ನ ಈ ಶರೀರದ ಕಣಕಣಗಳಲ್ಲಿಯೂ ನನ್ನ ಹುಟ್ಟುನಾಡಿನ ಮೃತ್ತಿಕೆಯು ತುಂಬಿದೆ. ಈ ವಾರ್ಧಕ್ಯದಲ್ಲಿಯೂ ನನ್ನ ನಾಡಿಗಳಲ್ಲಿ ಹರಿಯುವ ಸ್ಫೂರ್ತಿಯ ಸೆಲೆಯು ನನ್ನ ಮಾತೃಭೂಮಿಯ ಅಭಿಮಾನ ಮೂದಕತೆಯನ್ನೊಳಗೊಂಡಿದೆ.

“ಮಾವೊತ್ಸೇ ತಂಗ್ ಮತ್ತು ಚಾಎನ್ ಲೈಯವರು ನನ್ನಂತೆಯೇ ನನ್ನ ದೇಶದ ವೀರಪುತ್ರರು! ಆದ್ದರಿಂದ ಅವರು ನನ್ನ ಬಂಧುಗಳು. ನಾನು ನಿರಾಯುಧನಾಗಿ, ಕುಟುಂಬ ಪರಿವಾರ ಸಮೇತನಾಗಿ, ಧವಳಧ್ವಜಧಾರಿಯಾಗಿ ಚೀನವನ್ನು ಪ್ರವೇಶಿಸುವಾಗ ಅವರು ತೆರೆದ ಕೈಗಳಿಂದ ನಮ್ಮನ್ನು ಸ್ವಾಗತಿಸದಿರಲಾರರೆಂಬ ಭರವಸೆಯಿಂದಲೇ ನಾವು ಹೊರಡುತ್ತೇನೆ. ಒಂದೊಮ್ಮೆ ವ್ಯತಿರಿಕ್ತ ಪರಿಣಾಮಗಳು ಸಂಭವಿಸುವುದಿದ್ದರೂ ಅಂತಿಮ ಬಲಿದಾನವಾಗಿ ನನ್ನ ಪ್ರಾಣಾರ್ಪಣೆಗೂ ಸಿದ್ಧನಿದ್ದೇನೆ.

“ಇಂದು ಪ್ರಪಂಚವನ್ನು 3ನೆ ಜಾಗತಿಕಯುದ್ಧದ ಕಾರ್ಮೋಡಗಳು ಆವರಿಸಿದ್ದು ದಿನ ದಿನವೂ ಲೋಕದ ಜನತೆಯು ಪ್ರಾಣಭಯದಿಂದ ತತ್ತರಿಸುತ್ತಿರುವಾಗ, ದ್ವೇಷಸಾಧನೆ, ದುರಾಗ್ರಹಗಳನ್ನು ಮುಂದುವರಿಸುವುದಕ್ಕೂ, ವೀರೋಕ್ತಿಗಳನ್ನಾಡಿ ವಿರೋಧಿಗಳನ್ನು ಕೆರಳಿಸುವುದಕ್ಕೂ ವ್ಯವಧಾನ ಉಳಿದಿರುವುದಿಲ್ಲ ಈಗ ಜಗತ್ತಿಗೆ ಬೇಕಾದವುಗಳು ಸತ್ಯ, ಅಹಿಂಸೆ, ತ್ಯಾಗಗಳು. ನನ್ನ ನಾಡಿನ ಧರ್ಮದ ಮಹಾ ಗುರುವಾಗಿರುವ ಬುದ್ಧದೇವನ ತತ್ತ್ವಗಳನ್ನು ಇನ್ನಾದರೂ ನನ್ನಂತೆ ಇತರರೂ ಅನುಸರಿಸಲೆಂಬುದು ನನ್ನ ಹೃತ್ಪೂರ್ವಕ ವಿನಂತಿಯಾಗಿದೆ ......”

ಪೇಕಿಂಗ್, ಜನವರಿ-31.

ಮಾವೋತ್ಸೆತಂಗ್ ಮತ್ತು ಚಾಎನ್‌ಲೈಯವರು ಜತೆಹೇಳಿಕೆಯನ್ನು ಹೊರಡಿಸಿದರು.

“......ಕಾಮ್ರೇಡ್ ಕೈಷೇಕರ ಕಳಕಳಿಯ ಹೇಳಿಕೆಯನ್ನು ಓದಿ ಸಂತೋಷಗೊಂಡೆವು. ಅವರ ನಿರ್ಧಾರವು ತತ್ತ್ವಶಃ ಸಾಧುವಾಗಿದೆ. ಮಾತೃಭೂಮಿಯ ಪ್ರಗತಿಗಾಗಿ ಅವರು ಮುಂದೆಯೂ ದುಡಿಯುವರೆಂದು ಹೇಳಿದ ಅಭಿಪ್ರಾಯವು ನಿಜಕ್ಕೂ ವಿಸ್ಮಯಕರವಾಗಿದ್ದಲ್ಲವೆಂದು ತಿಳಿಯುತ್ತೇವೆ. ಅವರು ಈಗಿನ ಜನತಾ ಸರಕಾರದ ರೀತಿ ನೀತಿಗಳಲ್ಲಿ ಸಮಾವೇಶಗೊಂಡು ಮಿತ್ರಪ್ರಜೆಗಳಂತೆ ನಿರಾತಂಕವಾಗಿ ಬಾಳಿ ಬದುಕುವುದಕ್ಕೂ, ಈ ವಾರ್ಧಕ್ಯದಲ್ಲಿಯೂ ಅವರ ನರನಾಡಿಗಳಲ್ಲಿ ಹರಿಯುತ್ತಿರುವ ಸ್ಫೂರ್ತಿಯ ಸೆಲೆಯನ್ನು ಶ್ರಮಜೀವನದ ಮೂಲಕ ಸಾರ್ಥಕಗೊಳಿಸಿನಾಡಿನ ಸಂಪತ್ತನ್ನು ಹೆಚ್ಚಿಸುವುದಕ್ಕೂ ನಿರ್ಧರಿಸಿರುವುದರಿಂದ, ಅವರ ಹೇಳಿಕೆಯಲ್ಲಿ ಮುಂದೆ ಅವರು ರಾಜಕಾರಣದಲ್ಲಿ ಭಾಗವಹಿಸದಿರುವ ಸದಿಚ್ಛೆಯು ವ್ಯಕ್ತವಾಗಿದೆ ಎಂದು ತಿಳಿಯುತ್ತೇವೆ. ಈ ವಿಷಯವು ಕೂಡಾ ಪ್ರಸ್ತುತದ ಸರಕಾರದ ಧೋರಣೆಗೆ ವಿರೋಧವಾಗಿಲ್ಲ.

“ಇನ್ನು, ಸತ್ಯ—ಅಹಿಂಸೆ - ತ್ಯಾಗಗಳ ಕುರಿತು ಅವರು ಆಡಿದ ಮಾತುಗಳು ನಮ್ಮ ಧೋರಣೆಯ ದೃಷ್ಟಿಯಿಂದ ಗಂಭೀರವಾಗಿ ವಿಚಾರಯೋಗ್ಯವಾದ ವಿಷಯಗಳಲ್ಲವಾದರೂ ನಮ್ಮೊಳಗಿನ ಭಾವೀ ಸ್ನೇಹದಸಖ್ಯತೆಯಿಂದ ನಾವು ಅವುಗಳ ಬಗ್ಗೆ ಅಸಮ್ಮತಿಯನ್ನು ಸೂಚಿಸುವುದಿಲ್ಲ. ಏಕೆಂದರೆ ನಮ್ಮ ಮಹಾನ್ ರಾಷ್ಟ್ರದ ಒಂದು ಕಾಲದ ರಾಷ್ಟ್ರೀಯ ಧರ್ಮವಾಗಿದ್ದ ಬೌದ್ಧ ಧರ್ಮದ ಗುರುವು ಬುದ್ಧನೆಂಬವನೊಬ್ಬ ಆಗಿದ್ದನೆಂದು ಇತಿಹಾಸವು ಇಂದಿಗೂ ಹೇಳುತ್ತಿದೆ. ಆ ಹಳೆಯ ಗುರುವಿನ ಮೇಲೆ ಕಾಮ್ರೇಡ್ ಕೈಶೇಕರಿಗಿರುವ ಗೌರವವು ಕೇವಲ ಅವರ ವೈಯಕ್ತಿಕ ವಿಚಾರವೇ ಸರಿ. ಆ ಹಳೆಯ ಧಾರ್ಮಿಕವೆಂದು ಕರೆಯಲ್ಪಡುವ ವಿಚಾರಗಳನ್ನು ಎಲ್ಲರೂ ಅನುಸರಿಸಬೇಕೆಂದು ಅವರು ತನ್ನ ಹೇಳಿಕೆಯಲ್ಲಿ, ಆಡಿದ್ದ ಮಾತು ಕೂಡಾ ಕೇವಲ ಅವರ ಸದಿಚ್ಛೆಯ ದ್ಯೋತಕವೆಂದು ತಿಳಿಯಬಹುದಾದುದರಿಂದ ಅಷ್ಟರ ಮಟ್ಟಿಗೆ ಆಕ್ಷೇಪಾರ್ಹವಾಗಿಲ್ಲ ಅಲ್ಲದೆ ಅವರು ಆ ಮಾತನ್ನು ನಮ್ಮ ಜನತಾಸರಕಾರದ ಆಳ್ವಿಕೆಯ ಪ್ರದೇಶದ ಒಳಗಿದ್ದು ಆಡಿದುದಲ್ಲವಾದುದರಿಂದಲೂ ನಾವು ಮನ್ನಿಸದಿರೆವು.

“ಯುದ್ಧದ ಕಾರ್ಮೋಡಗಳು, ಪ್ರಾಣ ಭಯ, ದ್ವೇಷಸಾಧನೆ ಮತ್ತು ದುರಾಗ್ರಹ ಮೊದಲಾದ, ನಮ್ಮ ಜನತಾನೀತಿಗೆ ಸರಿಹೊಂದದ, ಅರಾಷ್ಟ್ರೀಯ ಶಬ್ದಗಳನ್ನು ಅವರು ಉಪಯೋಗಿಸಬಾರದಾಗಿತ್ತಾದರೂ, ‘ಅಂತಿಮ ಬಲಿದಾನವಾಗಿ ಪ್ರಾಣಾರ್ಪಣೆಗೂ’ ಅವರು ಸಿದ್ಧರಿರುವುದರಿಂದ ಅವು ಕ್ಷಮಾರ್ಹವಾಗಿವೆ

“ಹೀಗೆ, ಒಟ್ಟಿನಲ್ಲಿ ಕಾಮ್ರೇಡ್ ಕೈಷೇಕರ ಹೇಳಿಕೆಯಲ್ಲಿರುವ ಸದಾಶಯಗಳು ಸ್ವಾಗತಾರ್ಹವಾಗಿದ್ದು, ಅವರು ಎಂದು, ಎಷ್ಟು ಗಂಟೆಗೆ, ಯಾವ ಮಾರ್ಗವಾಗಿ ತಮ್ಮ ಮಾತೃಭೂಮಿಯನ್ನು ಪ್ರವೇಶಿಸುವರೆಂಬುದನ್ನು ಮುಂದಾಗಿ ತಿಳಿಸುವರೆಂದು ನಿರೀಕ್ಷಿಸಲಾಗಿದೆ. ಜನತಾ ಸರಕಾರವು ಈಗಿಂದೀಗಲೇ ಅವರ ಸ್ವಾಗತಕ್ಕಾಗಿ ಉತ್ಸುಕವಾಗಿದೆ......”

ನ್ಯೂ ಡಿಲ್ಲಿ; ಫೆಬ್ರುವರಿ-2.

ಟೈಮ್ಸ್ ಆಫ್ ಇಂಡಿಯಾ —ಪತ್ರಿಕೆಯ ಅಭಿಪ್ರಾಯ:— ಚೀಯಾಂಗರ ಚೀನಾ ಪ್ರದೇಶದ ವಾರ್ತೆಯು ಭಾರತಕ್ಕೆ ಅಭಿಮಾನದ ವಿಷಯ. ಅವರು ಅನುಸರಿಸಲಿರುವ ನೀತಿಯು ಶುದ್ಧ ಭಾರತೀಯ ನೀತಿ. ಸತ್ಯ-ಅಹಿಂಸೆ-ತ್ಯಾಗಗಳ ಪ್ರವರ್ತಕರಾದ ಭಗವಾನ್ ಬುದ್ಧ ಮತ್ತು ಮಹಾತ್ಮಾ ಗಾಂಧೀಜಿಯವರು ಭಾರತೀಯರೆಂಬುದನ್ನು ಪ್ರಪಂಚವು ಇನ್ನೂ ಮರೆತಿರಲಾರದು. ಆತ್ಮಾರ್ಪಣೆಗೂ ಸಿದ್ಧವಿರುವ ಧೀರತನಕ್ಕೆ ಅಂತ್ಯವಿಜಯ ಕಟ್ಟಿಟ್ಟದ್ದು.

ಮುಂಬಾಯಿ; ಫೆಬ್ರುವರಿ-3.

ಬ್ಲಿಟ್ಸ್-ಸಂಪಾದಕೀಯದಲ್ಲಿ:— “ಚೀಯಾಂಗರ ಹೇಳಿಕೆಯಲ್ಲಿ ಒಳಗೊಳಗೆ ಕುಹಕವಿದ್ದರೂ, ಪಾಶ್ಚಾತ್ಯ ಬಂಡವಾಳಶಾಹಿ ರಾಷ್ಟ್ರಗಳ ಒಳಸಂಚಿನ ಪ್ರಚೋದನೆಯಿದ್ದರೂ ಮಾವೋತ್ಸೇ ಮತ್ತು ಚಾಎನ್‌ರವರ ಪ್ರತಿ ಹೇಳಿಕೆಯಲ್ಲಿರುವ ಶುಭಾಕಾಂಕ್ಷೆಯನ್ನೂ ಸ್ವಾಗತ ಭಾಷೆಯನ್ನೂ ನಾವು ಶ್ಲಾಘಿಸುತ್ತೇವೆ. ಧರ್ಮದ ಹೆಸರು ಹೇಳಿ ರಾಜಕೀಯ ದುರ್ಲಾಭ ಪಡೆಯುವ ಹತ್ತೊಂಬತ್ತನೆ ಶತಮಾನದ ಪ್ರವೃತ್ತಿಯ ಕಡೆಗೆ ಸಾಕಷ್ಟು ಲಕ್ಷ್ಯ ಕೊಡಲು ಚೀನದ ಜನತಾ ಸರಕಾರವು ಎಚ್ಚರ ವಹಿಸೀತೆಂದೂ ನಂಬುತ್ತೇವೆ ..’ ಎಂಬಭಿಪ್ರಾಯ ಪ್ರಕಟವಾಯಿತು.

ಬೆಂಗಳೂರು, ಫೆಬ್ರುವರಿ, 5.

ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಪ್ರಮುಖ ಲೇಖಕರಾದ ಪ್ರೊ. ಅವಿನಾಶಂ ಅವರು “ಹಿಂಸೆಯ ಸಾಗರಕ್ಕೆ ಅಹಿಂಸೆಯ ಅಮೃತ ಕಲಶ” ಎಂದು ಅಲಂಕಾರಯುಕ್ತ ಶೀರ್ಷಿಕೆ ಕೊಟ್ಟು ಭಾವಪೂರ್ಣ ಲೇಖನ ಬರೆದರು. ಅದರ ಕೊನೆಯಲ್ಲಿ “ಚೀಯಾಂಗರು ಹೇಗಾದರೂ ಒಮ್ಮೆ ತಮ್ಮ ಕೈಗೆ ಸಿಕ್ಕಲೆಂಬುದೇ ಚೀನಾದ ರಕ್ತ ಪಿಪಾಸುಗಳ ಯುಕ್ತಿ. ಅದಕ್ಕಾಗಿಯೇ ಅವರಿಗೆ ಸ್ವಾಗತ ಬಯಸಿದ್ದಾರೆ. ಹಿಂಸ್ರ ಪಶುಗಳನ್ನು ನಂಬಿ ನೀಕೆಯೊಂದು ಅರಣ್ಯ ಪ್ರವೇಶ ಗೈದಂತಾಗದಿದ್ದರೆ ಸಾಕು. ದುರಂತ ಪರಿಣಾಮವನ್ನು ನಾವು ಈಗಿಂದೀಗಲೇ ನಿರೀಕ್ಷಿಸಬಹುದು”—ಎಂದು ವ್ಯಕ್ತಪಡಿಸಿದರು.

ಫೆಬ್ರುವರಿ, 15.

ಕೆಲವು ಕನ್ನಡ ಪತ್ರಿಕೆಗಳು ವಿಶೇಷ

(೨೨ನೇ ಪುಟ ನೋಡಿರಿ)

With the Season's Greetings—

To all our patrons and well-wishers

FROM

JYOTHI TALKIES

MANGALORE.

Coming attractions:

Year's greatest movie marvel
in superb Technicolor—
KONJUM SELANGAI

Star Studded Tamil hit—
MADAPPURA

and the latest outstanding
Kannada play—
SWARNA GOWRI

plus—a galaxy of outstanding pictures.

ಮಹಿಳಾ ಸಾಹಿತೀಮಣಿ

ಗಂಡ ಹೆಂಡಿರ ಸ್ಥಾನಮಾನಗಳು ತಿಳುವಳಿಕೆಗಳು ಏಕಸಮವಿದ್ದರೆ, ಅದು ಹಸನಾದ ಕುಟುಂಬವಾಗುವುದು. ಗಂಡ, ಹೆಂಡತಿಗಿಂತ ಮೇಲ್ಮಟ್ಟಕ್ಕೇರಿದನಾದರೆ, ಆತನಿಗೆ ದೊರೆಯುವ ಗೌರವದಲ್ಲಿ ಆಕೆಯೂ ಸಂತೋಷದಿಂದ ಪಾಲುಗಾರ್ತಿಯಾಗುವಳು. ಆದರೆ, ತದ್ವಿರುದ್ಧವಾಗಿ, ಹೆಂಡತಿಯೇ ಗೌರವ ಶಿಖರವನ್ನಡರಿದರೆ, ಗಂಡನೆಂಬವನಿಗೆ ಈ ಪ್ರಪಂಚದಲ್ಲಿ ತಲೆಯೆತ್ತಿ ನಡೆಯುವುದೂ ಅಸಾಧ್ಯವಾಗುತ್ತದೆ! ಸಮಾಜದ ನಗ್ನಸತ್ಯದ ಆಧಾರದ ಮೇಲೆ ಶ್ರೀ ನವಗಿರಿನಂದರು ಎಳೆದ ಪ್ರಭಾವಶಾಲೀ ಶಬ್ದ ಚಿತ್ರ ಪಿದು.

ಶ್ರೀ "ನವಗಿರಿನಂದ"

ಪದ್ಮಾವತಿಯನ್ನು ಮದುವೆಯಾದಂದಿನಿಂದ ತನ್ನ ಜೀವನದಲ್ಲಿ ಬೆಳಕು ಬರಲಾರಂಭಿಸಿತೆಂದು ವಾಸುದೇವ ಸಂತೋಷಪಟ್ಟಿದ್ದ. ಏಕೆಂದರೆ ಅದುವರೆಗೂ ತಾನು ಕತ್ತಲೆಯಲ್ಲಿದ್ದುದಾಗಿ, ಮದುವೆಯಾದ ಮೇಲಷ್ಟೇ ಅವನಿಗೆ ಗೊತ್ತಾದುದು. ಕಾರಣ, ಪದ್ಮಾವತಿ ಎಲ್ಲಾ ಹುಡುಗಿಯರಂತಲ್ಲ. ಅವಳಲ್ಲಿ ವಿಶೇಷವಿತ್ತು.

ಮದುವೆಗೆ ಮೊದಲು ಅವನಿಗೆ ಆ ವಿಶೇಷ ಗೊತ್ತಾಗಿರಲಿಲ್ಲ. ಅವಳೊಬ್ಬಳು ಬಡ ಉಪಾಧ್ಯಾಯರ ಮಗಳು. ಲನೇ ತರಗತಿಯ ವರೆಗೆ ಕಲಿತಿದ್ದಾಳೆ ಸ್ತ್ರೀಯರಿಗೆ ಬೇಕಾದ ಇತರ ಮನೆಗೆಲಸಗಳಲ್ಲಿಯೂ ನುರಿತಿದ್ದಾಳೆ. ಅತ್ಯಂತ ಸುಂದರಿಯಲ್ಲದಿದ್ದರೂ ಕುರೂಪಿಯಂತೂ ಅಲ್ಲ. ತನಗೆ ಸಾಕು. ಜಾತಕ ಕೂಡಿತು; ಮದುವೆಯೂಯಿತು. ಇದರಲ್ಲೆಲ್ಲಾ ಯಾವ ವಿಶೇಷವೂ ಇರಲಿಲ್ಲ.

ವಾಸುದೇವ ಕೂಡ ಬಡವನೇ. ಹೇಗೋ ಎಸ್. ಎಸ್. ಎಲ್, ಸಿ. ವರೆಗೆ ಕಲಿತು ಉದ್ಯೋಗಾನ್ವೇಷಣೆ ಮಾಡುತ್ತಾ ಬೇಸತ್ತು ಹೋಗಿದ್ದ. ಮದುವೆಯಾದರೆ ಹೆಂಡತಿಯ ಪುಣ್ಯದಿಂದಾದರೂ ಉದ್ಯೋಗ ಸಿಕ್ಕೀತೆಂದು ಅವರಿವರು ಹೇಳಿದ್ದರು. ಆ ನಂಬಿಗೆಯಿಂದಲೇ ಅವನು ಪದ್ಮಾವತಿಯನ್ನು ಮದುವೆಯಾದ.

ಹೆಂಡತಿಯ ಪುಣ್ಯ ಹುಸಿ ಹೋಗಲಿಲ್ಲ; ಮದುವೆಯಾದ ಆರು ತಿಂಗಳಲ್ಲಿ ಒಂದಾನೊಂದು ಪ್ರೈವೇಟ್ ಕಂಪೆನಿಯಲ್ಲಿ ಅವನಿಗೊಂದು ಗುಮಾಸ್ತಗಿರಿ ಸಿಕ್ಕಿಯೇ ಬಿಟ್ಟಿತು. ಹೆಂಡತಿಯನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಿ, ಹೊಸ ಸಂಸಾರ ಹೂಡಿಯೂ ಬಿಟ್ಟ ವಾಸುದೇವ.

ತನಗೆ ಉದ್ಯೋಗ ಸಿಕ್ಕಿದ್ದು ಹೆಂಡತಿಯ ಪುಣ್ಯವೆಂದು ಕೆಲವರನ್ನುವುದನ್ನೂ ಅವನು ಅಲ್ಲಗಳೆಯದಿದ್ದರೂ ಅದರಲ್ಲೇನೂ ವಿಶೇಷ ಅವನಿಗೆ ಕಾಣಲಿಲ್ಲ. ಏಕೆಂದರೆ ಅವನ ಉದ್ಯೋಗದಲ್ಲಿ ಯಾವ ವಿಶೇಷವೂ ಇರಲಿಲ್ಲ. ಅಂಥ ಉದ್ಯೋಗ ತಡವಾಗಿಯಾದರೂ ಒಂದಾನೊಂದು ದಿನ ಸಿಕ್ಕುತಿತ್ತೆಂದು ಅವನಿಗೆ ಗೊತ್ತಿತ್ತು. ಅದಕ್ಕಿಂತ ಹೆಚ್ಚಿನ ಉದ್ಯೋಗದ ಮೇಲೆ ಆಸೆಯೂ ಅವನಿಗಿರಲಿಲ್ಲ. ಅದಕ್ಕೆ ತಕ್ಕ ಪ್ರತ್ಯೇಕ ಯೋಗ್ಯತೆಯೋ ಗುಣವೋ ತನಗಿಲ್ಲವೆಂದು ಅವನಿಗೆಗೊತ್ತಿತ್ತು. ಸಿಕ್ಕಿದ ಉದ್ಯೋಗದಲ್ಲೇ ತೃಪ್ತನಾಗಿರುವುದಕ್ಕೂ ಅವನಿಗ ಗೊತ್ತಿತ್ತು.

ಅವನ ಹೆಚ್ಚಿನ ಸಂತೋಷಕ್ಕೆ ಇದಾವುದೂ ಕಾರಣವಲ್ಲ. ಪದ್ಮಾವತಿಯಲ್ಲೊಂದು ಪ್ರತ್ಯೇಕತೆಯಿತ್ತು; ವಿಶೇಷತೆಯಿತ್ತು. ಸರ್ವ ಸಾಮಾನ್ಯ ಹೆಣ್ಣುಗಳಂತಲ್ಲ ಪದ್ಮಾ. ಕೇವಲ ಅಡಿಗೆ, ಮನೆಗೆಲಸ ಮೊದಲಾದ ಸಂಕುಚಿತ ವಾತಾವರಣದೊಳಗಷ್ಟೇ ಪರಿಮಿತವಾದುದಲ್ಲ. ಪದ್ಮಾವತಿಯ ಕಾರ್ಯಕ್ಷೇತ್ರ.

ಕನ್ನಡನಾಡಿನೊಳಗೆಲ್ಲಾ ಮಘಮಘಿಸುವಂತಹ ವಿಶಿಷ್ಟ ಪ್ರತಿಭೆಯೊಂದು ಅವಳಿಗಿತ್ತು. ಅವಳೊಬ್ಬಳು ಸಾಹಿತಿ. ತಾನು ಪ್ರತಿನಿತ್ಯ ಕಂಡುದನ್ನು ಕೇಳಿದುದನ್ನು ಅನುಭವಿಸಿದುದನ್ನು ವಿಚಾರ ಮಥನ ಮಾಡಿ ತಿಳಿದುಕೊಂಡುದನ್ನು ಹೃದಯಂಗಮವಾಗಿ, ಅರ್ಥವತ್ತಾಗಿ ಸುಲಭ ಗ್ರಾಹ್ಯವಾದ ಸರಳ ಶೈಲಿಯಿಂದ ಬರೆಯುವ 'ಹುಚ್ಚು' ಅವಳಿಗಿತ್ತು. ಇದು ಬರಿಯ ಹುಚ್ಚಲ್ಲ, ಉತ್ತಮ ಹುಚ್ಚೆಂಬುದು ಎಲ್ಲರೂ ಒಪ್ಪಿಕೊಂಡ ಮಾತು ಪದ್ಮೆ ಅದರಲ್ಲಿ ಪಳಗುತ್ತಾ ಪರಿಪಕ್ವಳಾಗುತಿದ್ದಳು. ವಿರಾಮ ವೇಳೆಯಲ್ಲಿ ಅವಳಿಗೆ ಅದುವೇ ಉತ್ಸಾಹದಾಯಕವಾದ ಕಾರ್ಯ.

ಮೊದ ಮೊದಲು ಅವನೇನೋ ಅಂದುಕೊಂಡಿದ್ದ; ಅವಳು ಯಾವುದೋ ಹಾಡೋ ಲಕ್ಷ್ಮೀ ಶೋಭಾನೆಯೋ ಬರೆಯುತ್ತಾಳೆಂದುಕೊಂಡಿದ್ದ. ಸ್ವಭಾವತಃ ಅವನು ಕತೆ-ಕಾದಂಬರಿಗಳೋದುವ ರಸಿಕನಾಗಿರಲಿಲ್ಲ. ಎಲ್ಲಿಯೋ ಧರ್ಮಕ್ಕೆ ಸಿಕ್ಕಿದರೆ ಓದಿದರೋದಿದರೆ, ಬಿಟ್ಟರೆ ಬಿಟ್ಟ.

ಆಕಸ್ಮಿಕವಾಗಿ ಅವನಿಗೆ ತಿಳಿಯಿತು ತನ್ನ ಹೆಂಡಿತಿಯ ಮಹತ್ವ. ಮೊತ್ತ ಮೊದಲು ಅವನು ನೋಡಿದ್ದು ಅವಳಿಗೆ ಬರುವ ಸುಂದರ ಟಪಾಲನ್ನು. ಅವನಿಗಂತೂ ಕಾಗದ ಒರೆಯುವವರಾರೂ ಇಲ್ಲವೆಂದೇ ಹೇಳಬಹುದು. ಹಾಗಿರುವಾಗ ಹೆಂಡತಿಗೆ ಬರುವ ಸುಂದರ ಪತ್ರಿಕೆಗಳನ್ನೂ, ಸಂಪಾದಕರ ಪತ್ರಗಳನ್ನೂ ನೋಡಿ ಅವನು ಮುಗ್ಧನಾದುದು ಸಹಜವೇ ಸರಿ. "ಪದ್ಮಾ ವಾಸುದೇವ' ಎಂಬ ಹೆಸರಿನಲ್ಲಿ ಪ್ರಕಟವಾದ ಅವಳ ಕತೆಗಳನ್ನೋದಿ ರುಚಿಹಿಡಿದ, ಮೆಚ್ಚಿದ. "ಪರವಾಯಿಲ್ಲ ನೀನು; ನನಗಿಂತ ಕಡಿಮೆಯೇ ಕಲಿತವಳಾದರೂ ಮೇಲಾಗಿದ್ದಿ ಬಿಡು' ಎಂದು ಅವಳ ಬೆನ್ನು ತಟ್ಟಿದ. ಅವಳೂ ಸಂತೋಷದಿಂದ ಉಬ್ಬಿದಳು. ತನ್ನ ಕಾರ್ಯಕ್ಕೆ ಪ್ರೋತ್ಸಾಹ ಕಾರಕನಾದ ಪತಿಯೇ ದೊರೆತನೆಂದು ಸಂತೋಷಪಟ್ಟಳು. ಪತ್ರಿಕೆಗಳಿಂದ ಬಂದ ಚಿಕ್ಕ ಚಿಕ್ಕ ಸಂಭಾವನೆಗಳನ್ನು ಪತಿಗೇ ಸಮರ್ಪಿಸಿದಾಗ ವಾಸುದೇವ ಇನ್ನಷ್ಟು ಸಂತೋಷಪಟ್ಟ. ಈ ಸಂದರ್ಭದಲ್ಲಿಯೇ ಅವನಿಗೆ ತೋರಿದ್ದು, ಪದ್ಮಾವತಿಯನ್ನು ಮದುವೆಯಾದ ಮೇಲೆ ತನ್ನ ಜೀವನದಲ್ಲಿ ಬೆಳಕಾಯಿತೆಂದು.

ಇಲ್ಲದಿದ್ದರೆ ಅವನ ಜೀವನದಲ್ಲಿ ಏನು ತಾನೇ ವಿಶೇಷವಿರುತಿತ್ತು? ಸಾವಿರಾರು ಬಡ ಗುಮಾಸ್ತರ ಹಾಗೆ ಅಭಿವೃದ್ಧಿಯೇನೂ ಇಲ್ಲದೆ ಸಂಸಾರದ ರಾಡಿ ನೀರಿನಲ್ಲಿ ಕೈಕಾಲು ಬಡಿದುಕೊಂಡು ಹೇಗಾದರೂ ಜೀವನ ಸಾಗಿಸುವವನೇ ತಾನೆಂದು ಅವನು ಅದು ವರೆಗೆ ತಿಳಿದಿದ್ದ. ಈಗ ತನ್ನ ಹೆಂಡತಿಯಿಂದ ಅಲ್ಪ ಸ್ವಲ್ಪ, ಕಡೇಪಕ್ಷ ಅವಳ ಖರ್ಚಿಗಾದರೂ ಹಣ ಬರುತ್ತದೆಂದರೆ ಅದೊಂದು ಹೊಸ ಬೆಳಕಲ್ಲದೆ ಮತ್ತೇನು?

ಪತಿಯ ಪ್ರೋತ್ಸಾಹದಿಂದ ಪದ್ಮಾವತಿಯ ಪ್ರತಿಭೆ ಹೆಚ್ಚು ಪ್ರಕಾಶಮಾನವಾಗಿ ಪಸರಿಸಲಾರಂಭವಾಯಿತು. ಅವಳು ಕಾದಂಬರೀ ರಂಗದೊಳಗೂ ಪ್ರವೇಶ ಮಾಡಿದಳು. ಎರಡು ಕಾದಂಬರಿಗಳು ಕರ್ನಾಟಕದೊಳಗೆಲ್ಲ ಅವಳಿಗೆ ಒಳ್ಳೆಯ ಹೆಸರನ್ನು ತಂದವು ಮಾತ್ರವಲ್ಲ ಒಂದಿಷ್ಟು ದ್ರವ್ಯಲಾಭವೂ ಅವಳ ಕುಟುಂಬಕ್ಕೆ ಸಹಾಯವಾಯಿತು.

ಈಗೀಗ ಪದ್ಮಾವತಿಗೆ ಬರುವ ಪತ್ರಗಳು ಹೆಚ್ಚಿದುವು. ಪತ್ರಿಕೆಗಳ ಆಗಮನವೂ ಹೆಚ್ಚಿತು ಹೊಗಳಿಕೆಗಳೂ ಹೆಚ್ಚಾದುವು. ಆಗೊಮ್ಮೆ ಈಗೊಮ್ಮೆ ಸಂಘ ಸಂಸ್ಥೆಗಳಿಂದ ಗೌರವಾಹ್ವಾನಗಳೂ ಅವಳಿಗೆ ಬರಲಾರಂಭಿಸಿದುವು. ಇರುವ ಊರೊಳಗೆ ಕೂಡ ಅವಳು ಯಾರು ಏನೆಂಬುದು ಗೊತ್ತಾಗಿ ಹೋಯಿತು. ನೆರೆಮನೆಯ ರಮ... ಹೊರ ಮನೆಯ ಶಾರದೆಗೂ ಅವಳ... ಇನ್ನೊಬ್ಬಳಿಗೂ ಹೀಗೆ ಊರೆಲ್ಲಾ ತಿಳಿದು ಹೋಯಿತು ಪದ್ಮಾವತಿಯ ಪ್ರಭಾವ. ... ದೆಲ್ಲ ಸಹಜ ತಾನೇ.

ಎಷ್ಟಾದರೂ ಪದ್ಮಾವತಿ ಹೆಣ್ಣು. ಗ... ಡಕರಂತೆ ನೆನೆಸಿದಾಗೆಲ್ಲಾ ಹೊಂಗೆ ಓ... ಯಾಡಲು ಸಾಧ್ಯವಿಲ್ಲವಷ್ಟೆ? ಅಂತೆಯೆ... ವಾಸುದೇವ ಆಫೀಸಿಗೆ ಹೋಗುವಾಗ ... ದ್ಮಾವತಿಯ ಎಷ್ಟೋ ಕಾಗದಪತ್ರ, ರಿ... ಸ್ಟ್ರು ಮುಂತಾದುವುಗಳಿಗಾಗಿ ಪೋಸ್ಟಾ... ಫೀಸಿಗೆ ದರ್ಶನ ಕೊಡುತ್ತಿದ್ದನು. ... ಯುವರಿಗೆಲ್ಲಾ ಅವನು 'ಇಂಥವಳ ಗಂಡ... ಎಂದು ಸರ್ವ ಪರಿಚಿತನಾಗಿ ಹೋದನು. "ಆಹಾ! ನಿಮ್ಮ ಶ್ರೀಮತಿಯವರ... ಕ... ಬಹಳ ಚೆನ್ನಾಗಿತ್ತಯ್ಯ. ಏನು ಬರವಣಿ... ಹೃದಯ ಮುಟ್ಟುವ ಹಾಗೆ!" "ನಿಜಕ್ಕೂ ಅವರಿಗೆ ಉಜ್ವಲ ಭವಿಷ್ಯವಿದೆ" "ಮಹಿಳಾ ಸಾಹಿತೀ ಶಿರೋಮಣಿಯಾಗಿ ಬೆಳೆ... ಲಿರುವರು" ಎಂದು ಮುಂತಾಗಿ ಹೆಂಡ... ಯನ್ನು ಅವನಿದಿರೇ ಅನೇಕರು ಹೊಗ... ದೀವಿಸುತ್ತಿದ್ದರು.

ಮಾನವ ಹೃದಯದ ಸೂಕ್ಷ್ಮ ವಿಚಾರ ಸಾಮಾನ್ಯ ಜನರಿಗೇನು ಗೊತ್ತಾಗುತ್ತದೆ? ಗೊತ್ತಾಗುವಷ್ಟು ಆಲೋಚನೆ ತಾನೇ ಯಾರು ಮಾಡಿಕೊಳ್ಳುತ್ತಾರೆ?

ಕ್ರಮಕ್ರಮವಾಗಿ ಹೆಂಡತಿಯ ಹೊಗಳಿಕೆಯನ್ನು ಕೇಳಿದಾಗಲೆಲ್ಲಾ ವಾಸುದೇವನಿಗೇನೋ ಒಂದು 'ಥರಾ' ಆಗತೊಡಗಿತು. ದಿನಹೋದಂತೆ ತಾನು ಹಗುರಾಗಿ ಹೋಗುವಂತೆ ಕಾಣತೊಡಗಿತು. ಸ್ವಭಾವತಃ ಕಲಾರಸಿಕನಲ್ಲದವನು; ಏನೋ ಹೆಂಡತಿ ಬಂದ ಹೊಸತಿನಲ್ಲಿ ಕಡ ತಂದುಕೊಂಡ ಕಲಾರಸಿಕತೆ. ಒಣ ಅಭಿಮಾನಕ್ಕೊಳಗಾಗಿ ಹಾರಿ ಹೋಗತೊಡಗಿತು.

ಅವನ ಆಫೀಸಿನ ಸಹೋದ್ಯೋಗಿಗೆಳೆಯರಲ್ಲಿ ಕೂಡಾ ಎಲ್ಲರೂ ಸುಹೃದಯಿಗಳಾಗಿರಲು ಸಾಧ್ಯವಿಲ್ಲವಷ್ಟೆ? ಇಸನಂಥವರು ತಮ್ಮ ಕಷ್ಟಗಳನ್ನು ಕುರಿತು ಹೇಳಿಕೊಳ್ಳುವಾಗ "ವಾಸುದೇವನಿಗೇನು, ಅದೃಷ್ಟಶಾಲಿ. ಇವನೊಬ್ಬನ ಸಂಪಾದನೆಯಿಂದಲೇ ಸಂಸಾರ ಸಾಗಬೇಕೆಂದಿಲ್ಲ ಪತ್ನಿ ಸಾಕ್ಷಾತ್ ಶ್ರೀದೇವಿಯೇ. ಹೇಗೂ ನಿಭಾಯಿಸಿಕೊಂಡು ಹೋಗಬಹುದು" ಎಂದು ಹೇಳುತ್ತಿದ್ದರು—ವಾಸುದೇವನು ಕೇಳುವಂತೆಯೇ.

ಇದರಿಂದಾಗಿ ಅವನ ಪುರುಷಾಭಿಮಾನವು ಕೆಣಕಿದಂತಾಯಿತು. "ಛೆ, ಎಂತಹ ಹಾಳು ಜನ್ಮ ನನ್ನದು. ನಾನು ಸಂಪಾದನೆ ಮಾಡಿ ಹೆಂಡತಿಯನ್ನು ಸಾಕಬೇಕು; ಅದರ ಬದಲಿಗೆ ಅವಳ ಸಂಪಾದನೆಯನ್ನೂ ಬಳಸಿಕೊಳ್ಳುವುದು ಬಹಳ ಅಪಮಾನವೇ ಸರಿ. ಎಲ್ಲರೂ ಹೆಂಡತಿಯನ್ನು ಸಾಕುವವರಾದರೆ ನಾನು ಹೆಂಡತಿಯಿಂದ ಸಾಕಲ್ಪಡುವವನಾಗುತ್ತೇನಲ್ಲ!" ಎಂದು ತನ್ನನ್ನು ತಾನೇ ಹಳಿದುಕೊಂಡನು.

ಅವನ ಮನಸ್ಸಿನಲ್ಲಾದ ಈ ಬಗೆಯ ಪರಿವರ್ತನೆ ಬಹಳ ದಿನ ಅಡಗಿಕೊಂಡಿರಲಿಲ್ಲ. ಅವಳೆದಿರು ಕೂಡ ಆಗಾಗ ಸಿಡಿಮಿಡಿ

(೨೧ನೇ ಪುಟ ನೋಡಿರಿ)

A great publication house has started, in Hubli, Manipal and Ankola, the momentous work of publishing the most valuable volumes of all the four Vedas and the complete and unabridged Mahabharata. It is LAXMAN BABANI PAI MEMORIAL PUBLICATIONS, HUBLI, District: Dharwar (**Administrative Address: LAXMAN BABANI PAI MEMORIAL PUBLICATIONS, MANIPAL,** Tq : Udipi, Dist: South Kanara). Late Laxman Pai (1853–1927) was born at Ankola, Dist: North Kanara, in one of the richest Gowda Saraswat Brahmana families. The main object of this publication house is to publish these great Indological volumes which he had written during the later part of the nineteenth century and which are, at present, being edited by his grandson, Professor Babani Sheshagiri Pai and being published by him and his wife Mrs Lalita B Pai, the daughter of Sri H. Gopalakrishna Kamath from Basrur, Tq. Coondapoor, Dist.: South Kanara

This publication house is publishing the RIG-VEDA in sixteen volumes containing all the Rig-Vedic Mantras (which are God-inspired) in Kannada Script, the traditional way of chanting them and their translation in Kannada **Already two volumes of the Rig-Veda have been published** The subsequent volumes are in the press

It is, also, publishing the complete and unabridged Mahabharata in fifty (50) volumes, given in which are one hundred thousand (1,00 000) Sanskrit Shlokas composed by the **Greatest Indological Authority**, Maharshi Krishna Dvaipayana Veda Vyasa and their most authentic Kannada translation. **Already, four (4) volumes have been published.** From the fourth volume onwards, beautiful, chaste but artistic illustrations are being inserted in these Mahabharata volumes The subsequent volumes are in the press.

The same publication house has, also, undertaken the publication of the ATHARVA-VEDA in seven (7) volumes in which are given the Vedic Mantras in Kannada Script as well as in Devanagari Script, the correct translation, the word-by-word translation and the general translation in the end **Already, one (1) volume has been published**. The subsequent volumes are in the press.

Similarly, this publication house will undertake, in due course of time, the publication of the YAJUR-VEDA in five (5) volumes and the SAMA-VEDA in two (2) volumes, in all of which the Mantras will be given with the traditional way of chanting them and the most authentic Kannada translation.

In all, these eighty (80) volumes are being published at the rate of three volumes per year. SEVEN VOLUMES HAVE ALREADY BEEN PUBLISHED The price of each volume varies from Rs 5/ to Rs 8/- The total price of all these eighty volumes will be about Rs. 500/- (five hundred rupees) and the total postage at the rate of Re 1/- to Rs. 1·50 per volume, will be about Rs. 100/- (one hundred rupees), thus giving a grand total of (Rs 500/- + Rs. 100/- = Rs 600/-) **six hundred rupees**.

To facilitate the quick publication of all these eighty immortal indological volumes in Sanskrit and Kannada, we are enrolling 'LIFE-MEMBERS" who will contribute IN ADVANCE, a pre-publication price amount of Rs. 200/- (two hundred rupees) either by M O. or by crossed cheque.

These Life Members are entitled to be presented with a copy of all these eighty superfine volumes, each having about 200 – 400 giantsized (i. e. demy octavo, 8¾" × 5⅝") pages, all beautifully bound in strong calico binding. The total cost of these volumes is Rs. 600/-. But our Life Members will get these for Rs 200/- only. All these volumes will be sent to our Life Members by Registered Post at our cost.

All Kannada-speaking people professing any faith, any religion and belonging to any community or caste etc, can become our Life Members.

Individual volumes are not sold as a rule.

Therefore, those who earnestly desire to have these eighty (80) volumes of Vedas and Mahabharata, representing the best in our civilization and culture, please to hurry up and remit Rs. 200/- (two hundred rupees) by M O or by crossed cheque and thus become our esteemed Life Members IMMEDIATELY to our administrative address:—

LAXMAN BABANI PAI MEMORIAL PUBLICATIONS,

P. O. MANIPAL, DIST.: S. KANARA; MYSORE STATE.

ಗೋವೆಯ ಗಡಿಯನ್ನು ದಾಟಿ ಬಂದೆನು!

(೫ನೇ ಪುಟದಿಂದ)

ನೀಡಿದನು. ಆತ ಬೊಂಬಯಿಯಲ್ಲಿ ವಾಸ ಮಾಡುತ್ತಿದ್ದವನು, ಅದೇ ದಿನ ಆತನಿಗೆ ಗೋವೆಯಲ್ಲಿ ಮದುವೆ ನಿಶ್ಚಯವಾಗಿದೆಯಂತೆ; ವಧು ಗೋವೆಯ ಒಳಗೇ ಇದ್ದಾಳೆ; ನೂತನ ವಧುವನ್ನು ಕೈಹಿಡಿವ ಹುರುಪಿನಲ್ಲಿ ಇದ್ದ ಆ ಯುವಕ ಈ ಮಹಿಳೆಯರೀರ್ವರನ್ನು ಗೋವೆಗೊಯ್ಯುವುದಾಗಿ ಸಮಾಧಾನ ಪಡಿಸುತ್ತಿದ್ದನು. ಅನ್ಯಗತಿಯಿಲ್ಲವೆ ಅವರು ಈತನ ಮಾತಿಗೆ ಕಿವಿಗೊಡುತ್ತಿದ್ದರು.

ನಾವು ಗೋವಾದ ಗಡಿಗೆ ಬಂದೆವು; ಅಲ್ಲಿನ ಅಧಿಕಾರಿಯನ್ನು ಕಂಡು ಮಾತನಾಡಿದೆವು; ಪತ್ರಿಕೋದ್ಯಮಿಗಳೆಂದೂ ಲೇಖಕರೆಂದೂ ನಮ್ಮನ್ನು ಪರಿಚಯ ಹೇಳಿದೆವು. ಇನ್ನೂ ಒಳಗಿನ ಪರಿಸ್ಥಿತಿ ಸಮಾಧಾನಕರವಾಗಿಲ್ಲವೆಂದೂ, ಓಡಿಹೋಗುವ ಭರದಲ್ಲಿ ಅಲ್ಲಲ್ಲಿ ಸಿಡಿಮದ್ದುಗಳನ್ನು ಪೋರ್ಚುಗೀಸರು ಹಾಕಿರುವುದರಿಂದ ಸಂಚಾರ ಕ್ಷೇಮಕರವಲ್ಲವೆಂದೂ ಅಧಿಕಾರಿ ತಿಳಿಸಿದರು. ಅಂತೂ, ಕೊನೆಗೆ, ಗಡಿಪ್ರದೇಶದಲ್ಲಿ ಸಾಕಷ್ಟು ಸುರಕ್ಷಿತವಾಗಿರುವವರೆಗೆ ನಮ್ಮನ್ನು ಕರೆದೊಯ್ಯಲು ಓರ್ವ ಸಶಸ್ತ್ರ ಸಿಪಾಯಿಗೆ ನೇಮಿಸಿ ನಮ್ಮನ್ನು ಒಳಹೋಗಲು ಅನುಮತಿಯಿತ್ತರು.

ಸ್ವತಂತ್ರವಾದ ಗೋವೆಯ ನೆಲದ ಪಾವನ ಧೂಳಿಯನ್ನು ಮುಟ್ಟಿ ನಮಸ್ಕರಿಸಿ ಮುಂದೆ ಕಾಲಿಟ್ಟೆನು; ಮೈ ಪುಳಕಿತವಾಯಿತು. ನಮಗೆ ಪ್ರಥಮ ಸ್ವಾಗತವಿತ್ತುದು ಅಲ್ಲಿ ರಾಶಿ ರಾಶಿ ಬಿದ್ದಿದ್ದ ಖಾಲಿ ಬಾಟ್ಲಿಗಳು; 'ಗೋವಾರಿಷ್ಟ'ದ ವಿಷಯ ಜನರು ಮಾತನಾಡುತ್ತಿದ್ದರೆಂದು ಕೇಳಿದ್ದೇನೆ. ಆಗ ಅಲ್ಲಿ ಅದರ ಅವಶೇಷ ರಾಶಿಯನ್ನು ಪ್ರತ್ಯಕ್ಷ ಕಂಡೆನು; ಬಹುಶಃ ಈ ಬಾಟ್ಲಿಗಳ ಅಮಲಿನಿಂದಲೂ, ಕಳ್ಳ ವ್ಯಾಪಾರದ ಹಣದ ಮತ್ತತೆಯಿಂದಲೂ ವೈಮರಿತ ಪೋರ್ಚುಗೀಸ್ ಅಧಿಕಾರಿಗಳು ತಮ್ಮ ಮನುಷ್ಯತ್ವವನ್ನೇ ಕಳೆದುಕೊಂಡು ನಿರ್ವೀರ್ಯರಾಗಿರಬಹುದೆಂದುಊಹಿಸಿದೆ. ಅಲ್ಲಿ ಹತ್ತಿರದಲ್ಲಿಯೇ ಮದ್ಯವ್ಯಾಪಾರದ ಒಂದು ಅಂಗಡಿ-ಈಗ ಧ್ವಂಸವಾಗಿ-ಬಿದ್ದುದು ಕಂಡಿತು. ಮೇಜು ಕುರ್ಚಿ, ಸೋಡಾ ತಯಾರಿಸುತ್ತಿದ್ದ ಯಂತ್ರ, ಒಂದು ಸುಟ್ಟುಹೋದ ಟೈಪ್‌ರೈಟರ್ ಈಗ ಎಲ್ಲವೂ ಅಲ್ಲಿ ಆ ಬಾಟ್ಲಿಗಳ ರಾಶಿಯಲ್ಲಿ ಅಸ್ತವ್ಯಸ್ತವಾಗಿ ಅರ್ಧಮರ್ಧ ಸುಟ್ಟುಹೋಗಿ ಬಿದ್ದಿದ್ದುವು. ಇದು ಎಡಬದಿಯ ದೃಶ್ಯವಾದರೆ, ಬಲ ಬದಿಯಲ್ಲಿ ಒಂದು ಕಟ್ಟಡ ನಾಶವಾಗದೆ ಉಳಿದಿದೆ; ಅದು ಇತ್ತೀಚೆಗೆ ಕಟ್ಟಿಸಿದ್ದಂತೆ; ಆಸ್ಪತ್ರೆಗಾಗಿ ಎಂದು ಅಲ್ಲಿನವರು ಹೇಳಿದರು; ಅದರ ಕಿಟಕಿಗಳೆಡೆಗಳಲ್ಲಿ ಮರಳು ತುಂಬಿದ ಗೋಣಿಯ ರಾಶಿಗಳನ್ನು ಒಟ್ಟಿದ್ದರು; ಅದರ ಹಿಂಬದಿ ನಿಂತು ನಮ್ಮ ಗಡಿಯಿಂದ ಬರುವವರಿಗೆ ಗುಂಡು ಹಾರಿಸಲು ಈ ಸಿದ್ಧತೆ ಮಾಡಿರಬೇಕು; ಬಹುಶಃ ಈ ಎಲ್ಲಾ ಸಿದ್ಧತೆ ಮಾಡಿದ್ದರೂ, ಬಳಿಯಿದ್ದ ಮದ್ಯಮಾಯಾವಿಲಾಸಿನಿ ಅವರ ಬುದ್ಧಿಯನ್ನು ಮಂಕುಗೊಳಿಸಿರಬಹುದು!

ಈ ಸ್ಥಳಕ್ಕೆ 'ಪೋಳೆ' ಎಂದು ಹೆಸರು; ನಾವಲ್ಲಿ ಕೆಲಕಾಲ ನಿಂತು ಸುತ್ತಲಿನ ಸುಂದರ ದೃಶ್ಯವನ್ನು ನೋಡಿದೆವು; ಆ ಪ್ರದೇಶ ತರುಗುಲ್ಮ ರಾಜಿಯಿಂದ ಪ್ರಕೃತಿ ಮನೋಹರವಾಗಿದೆ; ಪೊದರಿನೆಡೆಗಳಲ್ಲಿ ಕೋಳಿಗಳು ನರಿಗಳಿಂದ ಬೆನ್ನಟ್ಟಲ್ಪಟ್ಟು ಓಡುವ ಶಬ್ದ ಕೇಳಿಸುತ್ತಿತ್ತು, ಜೀವದ ಹಂಗು ತೊರೆದು ಮನೆಮಾರು ಬಿಟ್ಟು ನ ಜನರು ತಮ್ಮ ಕೋಳಿಗಳನ್ನು ಸಾಕು ಪ್ರಾಣಿಗಳನ್ನು ಜತೆಗೆ ಹೊತ್ತುಕೊಂಡು ಹೋಗಲು ಸಾಧ್ಯವಾಗದೆ ಇದ್ದ ಕಾರಣ ಅವು ಹೀಗೆ ನರಿಗಳಿಗೆ ಆಹುತಿಯಾಗುತ್ತಿರಬಹುದೆಂದು ಕಾಣುತ್ತದೆ; ಊರ ಹಂದಿಗಳೂ, ಅವುಗಳ ಮರಿಗಳೂ ಪೊದರಿನೆಡೆಗಳಲ್ಲಿ ಅತ್ತಿತ್ತ ಓಡಾಡುತ್ತಿದ್ದುವು, ಅವು ಕೂಡಾ ತುಂಬಾ ನಿಶ್ಶಕ್ತವಾಗಿದ್ದುವು. ಅವುಗಳಿಗೆ ಮುಕ್ಕಲು ಈಗ ಅಲ್ಲಿ ಏನೂ ಇಲ್ಲ; ಅವುಗಳನ್ನು ಮುಕ್ಕುವವರೂ ಇಲ್ಲವಾಗಿ ಅವುಗಳ ಪರಿಸ್ಥಿತಿ ಚಿಂತಾಜನಕವಾಗಿತ್ತು.

ಅಷ್ಟರಲ್ಲಿ ಮುರಿದು ಬಿದ್ದ ತಂತಿಯನ್ನು ಸರಿಪಡಿಸಿ ಕಂಬಗಳನ್ನು ಹಾಕಲು ನಮ್ಮ ಇಂಜಿನಿಯರ್ ಇಲಾಖೆಯ ಕೆಲಸಗಾರರು ಅಲ್ಲಿಗೆ ಬಂದರು, ಪೋರ್ಚುಗೀಸರು ಹಿಂದೆ ಹಾಕಿದ್ದ ತಂತಿ ಕಂಬಗಳೆಲ್ಲಾ ಅಡ್ಡಬಿದ್ದು ಹೋಗಿದ್ದುದನ್ನು ಎತ್ತಿ ಅವನ್ನೇ ಸರಿಪಡಿಸಲು ಸಾಧ್ಯವಿದೆಯೆಂದು ಮನಗಂಡು ಅವರಿಗೆ ತಮ್ಮ ಕೆಲಸ ಬೇಗನೇ ನೆರವೇರುವುದೆಂಬ ಸಂತೋಷವಾಯಿತು. ಗೋವಾ ಗಡಿಯಲ್ಲಿ ಸ್ವಲ್ಪ ದೂರ ನಾವು ಮುಂದುವರಿದು ಮತ್ತೆ ಮರಳಿದೆವು ನಮ್ಮೊಡನಿದ್ದ ಸಿಪಾಯಿಯು, ಒಂದೆರಡು ದಿನಗಳ ಹಿಂದೆ ಇಲ್ಲಿ ಹೋಗುತ್ತಿದ್ದ ಒಂದು ಎತ್ತಿನ ಬಂಡಿಯ ಕೆಳಗೆ ಸಿಡಿಮದ್ದು ಸಿಡಿದು ಅಪಾಯವಾದ ಸುದ್ದಿಯನ್ನು ಹೇಳಿದನು; ಆದಾಗಿ ಅಲ್ಲಿಂದ ನಾವು ಮರಳಿದೆವು. ಮರಳುವಾಗ ಸ್ವತಂತ್ರ ಗೋವೆಯ ಪವಿತ್ರವಾದ ಒಂದು ಹಿಡಿ ಮಣ್ಣನ್ನು ಹೊತ್ತುಕೊಂಡು ಬಂದೆನು. ಎಲ್ಲಕಂಟಕಗಳೂ ಪರಿಹಾರವಾದ ವೇಳೆ ಮರಳಿ ಈ ಪುಣ್ಯ ಭೂಮಿಯ ಸಂದರ್ಶನ ಮಾಡುವ ಹರಕೆ ಹೊತ್ತು ಆ ನೆಲಕ್ಕೆ ಪುನಃ ನಮಸ್ಕರಿಸಿ ಮರಳಿದೆನು.

— ೫ —

ಗೋವಾ ಘಟನೆಯಿಂದಾಗಿ ನಮಗೆ ಯಾರು ಹಿತವರು, ಯಾರು ಅಹಿತರು, ಯಾರು ಶತ್ರುಗಳು ಯಾರು ಹಿತ ಶತ್ರುಗಳು ಎಂಬುದು ಒಮ್ಮೆಗೆ ಪ್ರಕಟವಾದಂತಾಗಿದೆ. ಬ್ರಿಟನು ಭಾರತಕ್ಕೆ ಸ್ವಾತಂತ್ರ್ಯ ನೀಡಿದ್ದು ನಿರ್ವಾಹವಿಲ್ಲದೆವಿನಾ ಬುದ್ಧಿಪೂರ್ವಕವಲ್ಲವೆಂದೂ, ಭಾರತವನ್ನು ಇಭ್ಭಾಗಿಸಿ ನಮ್ಮೊಳಗೆ ಒಳಜಗಳವನ್ನು ನಿರಂತರ ಹೊಗೆಯಾಡುವಂತೆ ಮಾಡಿ ನಮ್ಮ ಕೊರಳಿಗೆ ದಾಸ್ಯದ ನೊಗವನ್ನು ಮರಳಿ ಒಡ್ಡುವ ಹಂಚಿಕೆ ಹೂಡಿತ್ತೆಂಬುದೂ ಈಗ ಅರ್ಥವಾಗುವಂತಿದೆ. ಭಾರತದ ನೀತಿಯ ಕುರಿತೂ ರಕ್ಷಣಾ ಮಂತ್ರಿ ಶ್ರೀ ಮೇನನರ ವೈಯಕ್ತಿಕವಿಚಾ

(೧೯ನೇ ಪುಟ ನೋಡಿರಿ)

INDIA'S MOST DURABLE & ECONOMICAL

DIESEL TRUCK & BUS CHASSIS ....

TATA - MERCEDES - BENZ

DIESEL TRUCKS & BUS CHASSIS

The Arvind Motors (Private) Ltd.,

BALMATTA ROAD :: MANGALORE.

NEO HOTEL DEWAR

HAMPANKATTA, **MANGALORE.**

Phone:- 279.

It is the Hotel
in South Kanara
For everything.

Both in Vegetarian and Non Vegetarian, Indian and Western Style Dishes. Cakes, Biscuits and other Delicious Ice Creams, Fruit Salad and Refrigerated drinks. Special Dinners, Catering at Wedding and other Parties is our speciality.

From frame to finish..........
Dream Homes take shape
with Chandan
Steel Furniture

MEN know CHANDAN Steel Furniture has the durable strength to last a lifetime. WOMEN know, they create a pleasant atmospheres for individual decorative themes.

For a personal satisfaction pay a visit to our new show room designed with a fine taste:

B. P. PAREKH & Co.

"WOODSIDE BUILDING"

K. S. RAO ROAD, MANGALORE-1.

"PYRAMID"

For your requirements in:

School and College Books
Books on Current Day Politics and fiction etc
Sationery and office requisites
Paper and Printer's Sundries

The Reputed Firm in South Kanara

School Book Co.

Book Sellers — Publishers — Stationers

PRINCIPAL PAPER DEALERS

Head Office:	*Branch Office:*
CAR STREET	K. S. RAO ROAD HAMPANKATTA
MANGALORE	MANGALORE
Phone No. 229	Phone No. 229 A

Distributors for:

The Mysore Paper Mills, Ltd.
BHADRAVATHI
(For S. Kanara & N. Malabar)

Agents of.

Ganges Printing Ink Factory, Ltd.
HOWRAH

ಪ್ರಜಾರಾಜ್ಯೋತ್ಸವದ

ಶುಭಾಶಯಗಳು

ಕೆಲಗೂರು ಚಾ ಕೆಲಗೂರು ಚಾ

ಜೈ ಭಾರತ್ ಮಿಲ್ಸ್

ಪ್ರೈವೇಟ್ ಲಿಮಿಟೆಡ್

ರೆಜಿಸ್ಟರ್ಡ್ ಆಫೀಸು: ಉಪೇಂದ್ರ ಭಾಗ್, ಉಡುಪಿ.

ಭಾಷಾಂತರಕ್ಕೊ

ಮನುಷ್ಯ ತಪ್ಪು ಮಾಡಬಹುದು; ಯಂತ್ರವು ತನಗೊಪ್ಪಿಸಿದ ಕಾ
ವನ್ನು ಎಳ್ಳಷ್ಟು ಲೋಪದೋಷವಿಲ್ಲದೆ ಮಾಡುವುದನ್ನು ನಾವು ಕಾಣ
ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಭಾಷಾಂತರ ಮಾಡುವಾಗ ಭಾ
ಭಾಷಾ ಡಾಕ್ಟರನಾದರೂ ತಪ್ಪಿ ಬೀಳುವುದು ಸಂಭವನೀಯ ಇದಕ

ಪ್ರೊ| ಉ. ಲಕ್ಷ್ಮೀನಾ

ನಮ್ಮ ಸ್ವಾತಂತ್ರ್ಯ ನಂತರದ ಮೂರನೆಯ ಮಹಾ ಚುನಾವಣೆಯು ಸಮೀಪಿಸುತ್ತಿದೆ. ವಿಧಾಯಕ ಸಭೆಗಳಲ್ಲಿ, ರಾಜ್ಯ ಸಭೆ, ಲೋಕ ಸಭೆಗಳಲ್ಲಿ ಸ್ಥಾನವನ್ನು ಇನ್ನೈದು ವರ್ಷಗಳ ತನಕ ಭದ್ರಪಡಿಸಿಕೊಳ್ಳಲೇಬೇಕೆಂಬ ಹಟದಿಂದ ಕೆಲವು ಸಾವಿರ ಮಂದಿ ಜನರು, ಗಂಟೆಗಟ್ಟಲೆ ಪ್ರಚಂಡ ಭಾಷಣ ಬಿಗಿಯಲಿದ್ದಾರೆ, ಅನೇಕ ಸಭೆಗಳಲ್ಲಿ, ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ತಮ್ಮ ಮತದಾರ ಕ್ಷೇತ್ರದ ಶ್ರೋತೃಗಳ ಇದಿರು ನಿಂತು ಮತದಾನ ಬೇಡಲು, ಹಾಗೂ ಇದಿರಾಳಿಗಳನ್ನು ಟೀಕಿಸಲು, ಭಾಷಣ ಮಾಡಲೇ ಬೇಕಾಗುತ್ತದೆ, ಕಾರಣ, ಈ ಹತ್ತು ವರ್ಷಗಳಲ್ಲಿ, ಚಿಕ್ಕಪುಟ್ಟ ಸಭೆಗಳಲ್ಲಿ ಮಾತನಾಡದವ ಮುಂದೆ ಎಸೆಂಬ್ಲಿಗೆ ಹೋಗಿ ಮಾತಾಡಬಲ್ಲನೆ! ನಮ್ಮ ಪ್ರತಿನಿಧಿ ಮೂಕನಾಗಿರಬಾರದು. ದೇಶದ ಘಟನೆಯೇನೋ ೨೭ ವರ್ಷಕ್ಕೆ ಮಿಕ್ಕವನ್ಯಾವನೂ— ಆತನು ಹುಚ್ಚಾಸ್ಪತ್ರೆ ಸೇರಿದವನಲ್ಲವಾದರೆ—ವಿಧಾಯಕ ಸಭೆಗಳ ಸದಸ್ಯನಾಗಬಹುದೆಂದಿದ್ದರೂ, ತಮ್ಮ ಪ್ರತಿನಿಧಿ ಮಾತನಾಡಲೇಬೇಕು, ಮೂಕನಾಗಿರಬಾರದು ಎಂದು ಜನ ತುಸು ಆಗ್ರಹವನ್ನೇ ಮಾಡಹತ್ತಿದ್ದಾರೆ. ಹಾಗೆಂದ ಬಳಿಕ ಸ್ಥಾನಾರ್ಥಿಯು ಭಾಷಣ ಬಿಗಿಯ ಬೇಡವೆ? ಭಾಷಣ ಬಿಗಿದು, ಹಾರ, ತುರಾಯಿಗಳನ್ನು ಜನರಿಂದ ಪಡೆದು, ಅವರಿಗೆ ಮುಂದಿನ ೫ ವರ್ಷಗಳಲ್ಲೇ ದೊರಕಿಸುವ ಸ್ವರ್ಗ ಸುಖದ ರೂಪರೇಷೆಗಳನ್ನು ಬಣ್ಣಿಸಲು ಶಕ್ತನಿರುವ ವಾಗ್ಮಿಯೇ ವೋಟುಗಿಟ್ಟಿಸಿ ಮುಂಬರಿವ, ಜಯಿಸುವ ಧೀರನಾದಾನು. ಆದರೆ, ಆತನು ಉತ್ತಮ ವಾಗ್ಮಿಯಲ್ಲವಾದರೆ? ಆಗಲೂ, ಆತ ಇಂದಿನ ದಿನಗಳಲ್ಲಿ ಭಾಷಣಗಳನ್ನು ಬಿಗಿಯುವ ಬಗ್ಗೆ ಕೆಲವರನ್ನಾದರೂ ನೇಮಿಸಬೇಕಾಗುತ್ತದೆ. ತನ್ನ ಗುಣಕಥನಗಳನ್ನು ಹಾಡಬಲ್ಲ, ಹೊಗಳಬಲ್ಲ ಮತ್ತು ಅವನ್ನು ಹತ್ತುಪಟ್ಟು ವಿವರ್ಧಿಸಿ ಕೊಂಡಾಡಬಲ್ಲ ಹೊಗಳುಭಟ್ಟರನ್ನು ಆತನು ಅರಸಲೇ ಬೇಕಾಗುತ್ತದೆ. ಇಲ್ಲವೇ ತನ್ನ ಕುರಿತಾದ ಪ್ರಶಂಸಾ ಲೇಖಗಳನ್ನು ಬರೆಸಬೇಕಾಗುತ್ತದೆ, ಅಂಥ ಕರಪತ್ರಗಳನ್ನು ಹಂಚಬೇಕಾಗುತ್ತದೆ. ಆದರೆ, ಇವೆಲ್ಲವೂ ಅಪ್ಪರ ಯಶಸ್ಸಿಗೆ ಕಾರಣವಾಗಲಾರವು. ಭಾಷಣವನ್ನು ಜನಮೆಚ್ಚಿದಷ್ಟು ಇನ್ಯಾವುದನ್ನೂ ಮೆಚ್ಚುವುದಿಲ್ಲ ಈ ದೃಷ್ಟಿಯಿಂದ ಭಾಷಣಗಳಿಗೆ ಹೆಚ್ಚಿನ ಮನ್ನಣೆ ಇದೆ.

ಅನೇಕವೇಳೆ, ಪಕ್ಷ, ಪಂಗಡಗಳನ್ನು ಸಮರ್ಥಿಸಲು, ಆಯಾಯ ಪಕ್ಷದ ಜನರು ದೇಶಾದ್ಯಂತವೂ ಸುತ್ತುವುದಿದೆ, ತಮ್ಮ ರಾಜ್ಯವಲ್ಲದೆ, ಇತರ ರಾಜ್ಯಗಳಿಗೂ ಹೋಗುವುದಿದೆ. ಅಗ ಅವರು ತಮ್ಮದೇ ಆದ ಮಾತೃಭಾಷೆಯಲ್ಲೋ, ಹಿಂದೀಯಲ್ಲೋ ಇಲ್ಲವೆ, ಇಂಗ್ಲಿಷಿನಲ್ಲೋ ಭಾಷಣಮಾಡಬೇಕಾಗುತ್ತದೆ.ಅದನ್ನು, ಸ್ಥಳೀಯ ಭಾಷೆಯನ್ನೂ ಅರಿತ ಮಹಾನುಭಾವನೊಬ್ಬ ಭಾಷಾಂತರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ,1937 ರಲ್ಲೂ,ಅನಂತರ 1951 ಮತ್ತು 1956 ರಲ್ಲಿ ನಮ್ಮ ಜಿಲ್ಲೆಗೆ ಚುನಾವಣಾ ಪ್ರಚಾರದ ಉದ್ದೇಶವಾಗಿಯೇ ಪಂಡಿತ ನೆಹರೂರವರು ಬಂದುದನ್ನು ಇಲ್ಲಿ ಉಲ್ಲೇಖಿಸಬಹುದು. ಈ ಬಾರಿ, ಇಷ್ಟರಲ್ಲೇ ರಾಜಾಜಿ ಬಂದು ಹೋಗಿದ್ದಾರೆ. ಇಂಥ ಎಲ್ಲ ಮುಖಂಡರೂ ಬಂದಾಗಲೂ, ಭಾಷಣದಷ್ಟೇ ಸಮಯವು ಭಾಷಾಂತರಕ್ಕೂ ಹಿಡಿದಿತ್ತು ಭಾಷಾಂತರವಾದರೋ ಮೂಲದಷ್ಟು ಸಮರ್ಪಕವಾಗಿದ್ದಿತೆ? ಮೂಲ ಭಾಷಣದ ಭಾವವನ್ನೇ ಬಿಂಬಿಸಿತ್ತೆ? ಎಂಬುದೆಲ್ಲ ಇಲ್ಲಿ ಅಪ್ರಸ್ತುತವೆನಿಸಿದರೂ, ಭಾಷಣಕಾರನ ಮನದ ಇಂಗಿತವನ್ನು ಆತನ ಮಾತುಗಳು ಸಮರ್ಪಕವಾಗಿ ವ್ಯಕ್ತಪಡಿಸಿದರೂ, ಅದೇ ಇಂಗಿತವನ್ನು ಮೂಲಕ್ಕೇನೂ ವ್ಯತಿರಿಕ್ತವಾಗದ ರೀತಿಯಲ್ಲಿ ಇನ್ನೊಂದು ಭಾಷೆಯಲ್ಲಿ ಹೇಳಲಾಯಿತೆ? ಎನ್ನುವುದು ಸಂಶಯಾಸ್ಪದವೇ ಇದೆ. ಹೀಗೆ ವಿದ್ವಾಂಸರು ಅನೇಕ ಭಾಷೆಗಳಲ್ಲಿ ಪಳಗಿದವರೇ, ದೊಡ್ಡ ದೊಡ್ಡ ಸಭೆಗಳಲ್ಲಿ ಏನೊಂದೂ ಕಂಪನವಿಲ್ಲದೆ ಮಾತನಾಡಿದವರೇ ಭಾಷಾಂತರ ಮಾಡುವ ಕ್ರಮದಲ್ಲಿ ತಪ್ಪಿಬಿದ್ದರೆ, ತಪ್ಪಿ ಬೀಳುವುದನ್ನು ನಾವು ಕಂಡರೆ, ಇಂಥ ಕ್ಲಿಷ್ಟ ಕಾರ್ಯವನ್ನು ನಿರ್ಜೀವ ಯಂತ್ರವೊಂದು ಯಶಸ್ವಿಯಾಗಿ ಮಾಡಬಲ್ಲುದೆ ಎಂದೆನಿಸುವುದಿಲ್ಲವೆ? ಒಂದು ಭಾಷೆಯಲ್ಲಿ ಮಾಡಿದ ಭಾಷಣಗಳನ್ನು— ಅವು ಎಷ್ಟೇ ಉದ್ದವಿರಲಿ—'ಇನ್ನೊಂದು ಭಾಷೆಗೆ ಪರಿವರ್ತನೆ ಮಾಡಿ ಅದೇ ಅರ್ಥದ ಮಾತುಗಳನ್ನುತ್ಪತ್ತಿಮಾಡಬಲ್ಲ ಯಂತ್ರಗಳು ಇದೀಗ ರಚಿಸಲ್ಪಟ್ಟವೆ. ರಸ್ಯಾ, ಅಮೇರಿಕಾ, ಬ್ರಿಟನ್ ಮೊದಲಾದ ರಾಷ್ಟ್ರಗಳಲ್ಲಿ ಉಪಯುಕ್ತವಾಗುತ್ತಲಿವೆ, ಭಾಷಣದ ಬಗ್ಗೆ ಮಾತ್ರವಲ್ಲದೆ, ಇಬ್ಬರು ವ್ಯಕ್ತಿಗಳ ಸಂಭಾಷಣೆಗೂ, ಸಹಕಾರವನ್ನೀಯುತ್ತಲಿವೆ ಎಂಬುದು ಸತ್ಯ ವಿಚಾರ.

'ಕಟ್ಟು ಕಥೆಗಿಂತ, ಸತ್ಯವೇ ಅನೇಕ ವೇಳೆ ಹೆಚ್ಚು ಆಶ್ಚರ್ಯಜನಕವಿದೆ' ಎಂಬರ್ಥದ ಗಾದೆ ಮಾತಿದೆಯಷ್ಟೆ. ಈ ಶತಮಾನದ ವಿಜ್ಞಾನದ ಬಹುಮುಖ ಆವಿಷ್ಕಾರಗಳನ್ನು ನೆನೆದರೆ, ಮೇಲಿನ ಗಾದೆ ಪೂರ್ಣ ಸತ್ಯವೆನಿಸುತ್ತದೆ. ವಿಮಾನಯಾನ, ಬಾನುಲಿ, ಚಿತ್ರಪ್ರಸಾರ, ಚಲಚ್ಚಿತ್ರ, ಪರಮಾಣು ಶಕ್ತಿಯ ಸಿದ್ಧಿ ಮತ್ತು ಭೂಮಿಯ ಹಿಡಿತವನ್ನು ತಪ್ಪಿಸಿಮಾಡಬಲ್ಲ ಅಂತರಿಕ್ಷ ಯಾತ್ರೆ, ಮೊದಲಾದುವು ಸಾಧ್ಯ ಎಂದು ಮನುಷ್ಯ ಕನಸ್ಸಿನಲ್ಲೂ ನೆನಸಿರಲಾರ. ಇಂಥ ಶೋಧಗಳಿಗೆ ಕಾರಣರಾದ ವಿಜ್ಞಾನಿಗಳೇ ಅವು ಅಸಾಧ್ಯವೆಂದಿರುವ ನಿದರ್ಶನಗಳೂ ಇವೆ. ಹಾಗೆಯೇ ಮನುಷ್ಯನ ಮಾತನ್ನು ಹಾಗೆಯೇ ಸಂಗ್ರಹಿಸಿ, ಅದನ್ನು ಬೇಕಾದಂತೆ ಪುನರುತ್ಪತ್ತಿಗೊಳಿಸಬಲ್ಲ ಯಂತ್ರಗಳೂ—Tape Recorders—ಇತ್ತೀಚೆಗೆ ಸಾಮಾನ್ಯವಾಗಿವೆ. ಆದರೆ, ಒಬ್ಬನು ಮಾತನಾಡುವ ಭಾಷೆಯನ್ನು ಸಂಗ್ರಹಿಸಿ, ಅದನ್ನು ಇನ್ನೊಂದು ಭಾಷೆಗೆ ಪರಿವರ್ತಿಸಿ—ಭಾಷಾಂತರ ಮಾಡಿ, ಆ ಭಾಷಣವನ್ನು ಆ ಎರಡನೆಯ ಭಾಷೆಯಲ್ಲಿ ಒದಗಿಸುವುದೆಂದರೆ, ಇದು ಸಾಧ್ಯವಾಗುವಂತಿಲ್ಲ ಎಂದೇ ಈ ಇಪ್ಪತ್ತೈದು ವರ್ಷಗಳ ಹಿಂದೆ ಬ್ರಿಟನ್, ಅಮೇರಿಕಗಳ ವಿಜ್ಞಾನಿಗಳು ಬಗೆದಿದ್ದರು. ಆದರೆ, ಇಂದು ಭಾಷಾಂತರ ಮಾಡುವ ಯಂತ್ರಗಳೂ ಸಿದ್ಧವಾಗಿವೆ, ಸುಮಾರು [illegible] [illegible]ರಿಂದ ರಸ್ಯಾ, ಅನಂತರ ಬ್ರಿಟನ್, ಅಮೇರಿಕಗಳಲ್ಲಿಯೂ ಇವು ಉಪಯುಕ್ತವಾಗಿವೆ

ಇಂಥ ಯಂತ್ರಗಳ ರಚನೆಯು ದುಸ್ಸಾಧ್ಯವೆಂದು ಬಗೆಯಲು ಹಲವು ಕಾರಣಗಳಿವೆ. ಮನುಷ್ಯನ ಮೆದುಳು ಅತ್ಯಂತ ಸಂಕೀರ್ಣವಾದ, ಗಹನವಾದ ಯಂತ್ರವಿಶೇಷ. ಹೇಳಿದುದನ್ನು ಒಡನೆಯೇ ಗ್ರಹಿ

ಸುವ, ಮತ್ತು ಅವಶ್ಯವಿದ್ದಾಗ ಅದನ್ನು
ನ: ನೆನಪು ಮಾಡಿಕೊಳ್ಳಬಲ್ಲ ಹಾಗ
ಮಾನ್ಯವಾಗಿ, ಆ ವಿಷಯವು ಅನಗ
ದ್ದಾಗ ಆ ವಿಚಾರವನ್ನು ಮರೆವು
ಪಂಜಕ್ಕೆ ಸಾಗಿಸಿ ಬಿಡುವ, ಶಕ್ತಿ
ಷ್ಯನ ಮೆದುಳಿಗಿದೆ. ಹೀಗೆ ಶಬ್ದ
ಹ, ಅರ್ಥಕಲ್ಪನೆ, ಗ್ರಹಣ ಇಲ್ಲವೆ
ಮತ್ತು ಅವಶ್ಯಬಿದ್ದಾಗ (ಈ ಬಗ್ಗ
ಯಾದ ದಾರ ಮತ್ತು ಕ್ರಮಗಳ
ತ್ಯವಿವೆ) ಅದನ್ನು ಕ್ರೋಡೀಕರಿಸಿ
ಯೋಜಿಸಿಕೊಳ್ಳುವ ಶಕ್ತಿ ನಮ್ಮ
ಳನದು. ಇದನ್ನು ಸರಿಯಾಗಿ
ಗಿಸಿದರೇನೇ ಅದು ಇಂದು ನೀವು
ವ 'ಟೇಪ್ ರೆಕಾರ್ಡರ್'ನಂತೆ ಕೆಲ
ಮತ್ತದೆ. ಟೇಪ್ ರೆಕಾರ್ಡರ್ ತನ್ನ
ಡಗಿಸಿಕೊಂಡ ಸದ್ದನ್ನು ಕೇವಲ
ಕವಾಗಿ ಪುನರುತ್ಪತ್ತಿಗೊಳಿಸುತ್ತದೆ
ದ್ದನ್ನು ಗ್ರಹಿಸುವಾಗ, ಅದನ್ನು
ಮೂಡಿಸುವಾಗ ಭಾಷೆಗೇನೂ ಪ್ರಾ
ನ್ಯವಿಲ್ಲ ನಮಗೆ ತಿಳಿಯದ ಬಾ
ಭಾಷಣವನ್ನೋ, ಮಾತನ್ನೋ ಟೇ
ರೆಕಾರ್ಡರಿನಲ್ಲಿ ಮೂಡಿಸಿ ಅರಿ
ದನ್ನು ಅರ್ಥಮಾಡಿಕೊಳ್ಳುವ ಶಕ್ತಿ
ಲ್ಲಿ ಇಲ್ಲದೆ ಹೋದರೆ, ನಮಗೇನೂ
ಯೋಜನವಾಗುವಂತಿಲ್ಲ ವಿಚಾರ
ಯು ಹೀಗೆಯೇ ಇರಬಹುದು ಎಂ
ನ್ನೂಹಿಸಿಕೊಂಡರೂ, (ಇದಂತೂ
ದಲು ಪ್ರಸ್ತಾಪಿಸಿದ ಚುನಾವಣಾ ಭಾ
ಣಗಳ ವಿಚಾರವಾಗಿ ಸತ್ಯವೇ) ನ
ತಿಳಿಯದ ಭಾಷೆಯಲ್ಲಿನ ಉಪನ್ಯಾ
ಅರ್ಥವಾಗುವುದಿಲ್ಲ. ಹಾಗಾದರೆ, ಒ
ಭಾಷೆಯ ಮಾತುಗಳ ಅರ್ಥವನ್ನು
ನ್ನೊಂದು ಭಾಷೆಗೆ ಪರಿವರ್ತಿಸಬೇಕಾ
ಅಸಾಧಾರಣವಾದ ಸಾಮರ್ಥ್ಯವೇಬೇ
ಇದನ್ನು ಯಂತ್ರಗಳಿಂದ ಒದಗಿಸಿ
ಲಾರವು ಎಂದು ಅನೇಕ ವಿಜ್ಞಾನಿ

REMEMBER **Phone: 131**

ASHOK JEWELLERY HOUSE

K. S. RAO ROAD,

HAMPANKATTA, **MANGALORE-1.**

FOR

JEWELLERY AT ITS FINEST

ಯಂತ್ರಗಳೆ?

...ಯಬಹುದಾದ ಕೋಲಾಹಲವೂ ವಾಸ್ತವಿಕ. ಈ ಕೊರತೆಯನ್ನು ದೂರೀ
...ಣು ಭಾಷಾಂತರ ಮಾಡುವುದಕ್ಕೂ ಯಂತ್ರಗಳನ್ನು ಉಪಯೋಗಿಸುವ
...ಯತ್ನ ನಡೆಯುತ್ತಿದೆ. ಇದು ಯಶಸ್ವಿಯಾಗುವ ನಿರೀಕ್ಷೆಯಲ್ಲಿದೆ.

...ರ್ಯ, ಎಂ. ಎ., ಎಲ್. ಟಿ

...ುದರಲ್ಲಿ ಏನೂ ಆಶ್ಚರ್ಯವಿದ್ದಿಲ್ಲ.
...ಇದೂ ಅಲ್ಲದೆ, ಯಂತ್ರಗಳಾಗಲೀ
...ುಷ್ಯರೇ ಆಗಲೀ ಭಾಷಾಂತರ ಮಾ
...ುವುದರಲ್ಲಿ ಮತ್ತೊಂದು ಕಷ್ಟವು ಬರುವು
... ಪ್ರತಿಯೊಂದು ಭಾಷೆಯಲ್ಲಿ ಒಂದು
...ಪ್ರಾಯವನ್ನು ಸೂಚಿಸುವಾಗ ಹೇಳು
... ಮಾತುಗಳನ್ನು ಉಪಯೋಗಿಸುವ
...ಷ್ಟ ಕ್ರಮವೊಂದಿದೆ. ಆ ಕ್ರಮ
... ಪ್ರತಿ ಭಾಷೆಯಲ್ಲಿಯೂ ಒಂ
...ದು ರೀತಿಯಲ್ಲಿದ್ದು ತನ್ನದೇ
... ವೈಶಿಷ್ಟ್ಯವನ್ನು ಪಡೆದಿದೆ. ಕೇವಲ
...ಗಳ ಅರ್ಥವನ್ನು ತಿಳಿದಿದ್ದರೆ, ವಾಕ್ಯ
...ವಿಧ ಪದಗಳನ್ನು ಅದೇ ಸರದಿಯಲ್ಲಿ
...ರ್ಮಾಡಿಕೊಂಡರೆ, ಮತ್ತೊಂದು ಭಾ
...ಯಲ್ಲಿ ಸರಿಯಾದ ಅಭಿಪ್ರಾಯವನ್ನು
...ಡಿಕೊಳ್ಳಲು ಬರುವುದಿಲ್ಲ. ಚಿಕ್ಕದೊಂ
... ಉದಾಹರಣೆಯನ್ನು ಗಮನಿಸಿರಿ:
...e Problems arising due to
...guistic division of India -
... least as many as we see
...m today were not foreseen
...ನ್ನು ಕನ್ನಡಕ್ಕೆ ಭಾಷಾಂತರಮಾಡುವ
...ಲೆ ಪ್ರತಿಮಾತಿನ ಅರ್ಥವನ್ನೂ ಅದೇ
...ದಿಯಲ್ಲಿ ಹೇಳಿದರೆ, ಅವನ್ನು ಯಾವ
... ಉತ್ತಮ ಭಾಷಾಂತರವೆನ್ನಲಾರ.
...ತ್ರವಲ್ಲ, ಹಾಗೆ ಪ್ರತಿ ಪದಾರ್ಥವನ್ನು
...ತ ಉತ್ತಮ ನಿಘಂಟಿನಿಂದ ಹೆಕ್ಕಿ
...ಡಿಸಿದರೂ, ಪುನಃ ನಮ್ಮ ಕನ್ನಡ
...ಯ ಕ್ರಮಕ್ಕನುಗುಣವಾಗಿ ಆ ಪದ
...ನ್ನು ಹೆಕ್ಕಿ ಸಮರ್ಪಕವಾಗಿ ಹೊಂದಿ
...ಲೇನೇ ಅರ್ಥವತ್ತಾದ ವಾಕ್ಯ ರಚನೆ
...ದೀತು. ಹೀಗೆ ಕೇವಲ ಪದಗಳ ಅ
...ರ್ಥ ಕಲ್ಪನೆಯಿಂದ ಉತ್ತಮ ಭಾಷಾಂ
...ವನ್ನು ನಾವು ರಚಿಸಿ ಕೊಳ್ಳಲಾರೆವಲ್ಲ!
... ಭಾಷೆಯ ವೈಶಿಷ್ಟ್ಯದ ಹೊಲಬನ್ನೆ
...ರಿತಿದ್ದರೇನೇ ಉತ್ತಮ ಭಾಷಾಂತರ
ವು ಸಾಧ್ಯ ಎಂಬ ಕಾರಣದಿಂದಲೂ ಬ
ಹುಶಃ ಯಂತ್ರಗಳು ಭಾಷಾಂತರವನ್ನು
ಮಾಡಲಾರವು ಎಂಬ ಅಭಿಪ್ರಾಯವಿತ್ತು.

ಆದರೆ, ಸುಮಾರು ೧೯೪೬ರಲ್ಲಿ ಭಾ
ಷಾಂತರ ಮಾಡಬಲ್ಲ ಯಂತ್ರವನ್ನು ರಚಿ
ಸಲೇ ಬೇಕೆಂದು ಇಲೆಕ್ಟ್ರಾನಿಕ್ ಬ್ರೈನ್
ಗಳನ್ನು ರಚಿಸಿದ, ಉಪಯೋಗಿಸಿದ್ದ ಅ
ನೇಕರು ಪಣತೊಟ್ಟು ರಷ್ಯ, ಬ್ರಿಟನ್ ಅ
ಮೇರಿಕಗಳಲ್ಲಿ ಕಾರ್ಯಪ್ರವೃತ್ತರಾದರು. ಆ
ರಂಭದಲ್ಲಿ ಇವರಿಗೆ ಅತ್ಯಾವಶ್ಯಕವೆಂದು
ತೋರಿದ ವಿಷಯಗಳು ಎರಡು: ಇಂಥ
ಯಂತ್ರಗಳು ಆದಷ್ಟು ಚುರುಕಾಗಿಯೂ
ಮತ್ತು ನಿಖರವಾಗಿಯೂ ತಮಗೆ ನಿಯೋ
ಜಿಸಿದ ಕಾರ್ಯವನ್ನು ಮಾಡತಕ್ಕದ್ದು. ಎಂ
ದರೆ, ಹೇಳಿದ ಮಾತುಗಳನ್ನೆಲ್ಲ ಹೆಕ್ಕಿ ಇವು
ಗಳಿಗೆ ಅನುಗುಣವಾದ ಜೋಡಣೆಗಳನ್ನು
ತನ್ನಲ್ಲಿ ರಚಿಸಿಟ್ಟುಕೊಳ್ಳತಕ್ಕದ್ದು. ಮಾತಿ
ನಷ್ಟೇ ಶೀಘ್ರವಾಗಿ ಅದರ ಗ್ರಹಣ, ಮ
ತ್ತು ಅವವುಗಳಿಗೆ ಸಂಬಂಧಿಸಿದ ಜೋಡಣೆ
ಗಳನ್ನು ರಚಿಸುವುದು ಅಷ್ಟೊಂದು ಕ್ಲಿಷ್ಟ
ಕಾರ್ಯವಾಗಿದ್ದಿಲ್ಲ. ಇಂಥ ರಚನೆಗಳನ್ನೀ
ಹಲವಾರು ಕ್ರಮಗಳಲ್ಲಿ ಇಷ್ಟರಲ್ಲೇ ಅ
ನೇಕ ದೇಶಗಳಲ್ಲಿ-ಪಾಶ್ಚಾತ್ಯ ದೇಶಗಳಲ್ಲಿ
ಕೆಲವೆಡೆ ಮತ್ತು ಪೌರ್ವಾತ್ಯ ದೇಶಗ
ಳಲ್ಲಿ ಜಾಪನಿನಲ್ಲಿ ಮಾತ್ರ-ಮಾಡಿಕೊಳ್ಳ
ಲಾಗಿದೆ.

ಆದರೆ ಕೇಳಿದ ಮಾತುಗಳನ್ನು ಪರಿವ
ರ್ತಿಸುವ ಒಂದು ನಿಯಮವನ್ನು ಸೂತ್ರ
ತ್ವೇನ ಎಂಬಂತೆ, ರಚಿಸಿಕೊಳ್ಳತಕ್ಕದ್ದು.
ಇದನ್ನು 'ಕೋಡ್' (Code) ಎನ್ನುತ್ತಾ
ರೆ. ಈ ಕೋಡ್ ಯಾವ ಭಾಷೆಗೂ ಸಂಬಂ
ಧಿಸದ ಒಂದು ವಿಶಿಷ್ಟ ಧ್ವನಿಗಳ ಸಮೂಹ
ವಾಗಿದೆ. ಪ್ರತಿ ಧ್ವನಿಗೂ ಇಲ್ಲವೆ, ಧ್ವನಿಗಳ
ಸಮೂಹಕ್ಕೂ ವಿಶಿಷ್ಟ ಅರ್ಥವಿದೆ. ಮತ್ತೆ
ಪುನಃ ಅವಶ್ಯ ಬಿದ್ದಾಗ ಈ ಧ್ವನಿಗಳನ್ನು
ಪುನಃ ಉತ್ಪತ್ತಿ ಮಾಡಿ, ನಾವು ಯಾವ
ಭಾಷೆಗೆ ಪರಿವರ್ತಿಸಬೇಕೋ ಆ ಭಾಷೆ
ಯ ಮಾತುಗಳಿಗೆ ಪರಿವರ್ತಿಸಬೇಕು. ಈ
ಕಾರ್ಯವಾದರೋ ಅಷ್ಟು ಸುಲಭವಲ್ಲ; ಈ
ಹಿಂದೆ ಹೇಳಿದಂತೆ ಹೊಸ ಭಾಷೆಯಲ್ಲಿನ
ಪದಗಳ ಜೋಡಣೆಯ ಕ್ರಮವನ್ನರಿತೇ
ಈ ಧ್ವನಿಸಮುಚ್ಚಯಗಳನ್ನು (Code) ನಾ
ವು ಅರಿಸಿಕೊಳ್ಳತಕ್ಕದ್ದು. ಅದನ್ನು, ಅಂದ
ರೆ ಆ ಧ್ವನಿಗಳ ಸಮೂಹವನ್ನು ಸಮರ್ಪ
ಕವಾಗಿ ಆಯ್ದುಕೊಳ್ಳುವ ಕ್ರಮವನ್ನು
ಇಲ್ಲಿ ಯಂತ್ರವು ಮಾಡಬೇಕೆ? ಇಲ್ಲವೆ,
ಮನುಷ್ಯ ಮಾಡಿದರಾದೀತೆ? ಎನ್ನುವ
ಬಗ್ಗೆ ಕೂಡ ನಿಶ್ಚಯವಾದಂತಿಲ್ಲ. ಈ
ಕಾರ್ಯದ ಬಗ್ಗೆ ಮನುಷ್ಯನನ್ನು ನೇಮಿ
ಸಿಕೊಂಡರೆ, ಭಾಷಾಂತರದ ಕಾರ್ಯದ
ಲ್ಲೊಂದು ಭಾಗವನ್ನು ಮಾತ್ರ
ನಾವು ಯಂತ್ರಕ್ಕೊಪ್ಪಿಸಿದಂತಾ
ಯಿತಷ್ಟೆ. ಇದನ್ನು ತಪ್ಪಿಸಿ, ಎಲ್ಲ ಕಾರ್ಯ
ವನ್ನೂ ಯಂತ್ರದ ವಶಕ್ಕೊಪ್ಪಿಸಿದರೆ ಪು
ನಃ ಪ್ರತಿಭಾಷೆಗನುಗುಣವಾದ ಪದಗಳ
ಗ್ರಹಣ, ಜೋಡಣೆ ಮತ್ತು ವಾಕ್ಯಗಳಲ್ಲಿ
ಪದಗಳ ವ್ಯವಸ್ಥೆ ಇವೆಲ್ಲವನ್ನೂ ಸಾರ್ವ
ತ್ರಿಕ ಕ್ರಮ—ಸೂತ್ರಾನುಸಾರವಾಗಿ ರ
ಚಿಸಿಕೊಂಡು, ಈ ಸೂತ್ರದ ಶುದ್ಧವಿರು
ದ್ಧ ಕ್ರಮದ ಜೋಡಣೆಗಳನ್ನೂ ರಚಿಸಿ
ಕೊಳ್ಳತಕ್ಕದ್ದು. ಹೀಗೆ, ಪ್ರತಿಭಾಷೆಗನು
ಗುಣವಾದ ಎರಡು ಜೋಡಣೆಗಳೇ ಇಲ್ಲಿ
ಅವಶ್ಯವೆನಿಸದಿದ್ದರೂ, ಅವಶ್ಯ ಬಿದ್ದಾಗ
ತಕ್ಕ ಕಾರ್ಯವನ್ನು ಮಾಡಬಲ್ಲ—ಕೇಳಿದ
ಶಬ್ದದಿಂದ ಸಾರ್ವತ್ರಿಕ 'ಕೋಡ್'ನಲ್ಲಿನ
ಶಬ್ದವನ್ನು ಸ್ಫುರಿಸುವ ಕಾರ್ಯಕ್ರಮ ಒಂ
ದು ಮತ್ತು ಸಾರ್ವತ್ರಿಕ ಕೋಡಿನಲ್ಲಿನ ಶ
ಬ್ದದಿಂದ ನಮಗೆ ಬೇಕಿರುವ ಭಾಷೆಯಲ್ಲಿ
ನ ತಕ್ಕ ಶಬ್ದವನ್ನು ಒದಗಿಸಿಕೊಳ್ಳುವ
ಹಂಚಿಕೆ ಇವೆರಡೂ ಅಗತ್ಯವಿರುತ್ತವೆ.
ಇವೆರಡನ್ನೂ ಯೋಚಿಸಿಕೊಳ್ಳುವ ಯಂ
ತ್ರವೇ ಉತ್ತಮ ಭಾಷಾಂತರಕಾರಕ
ಯಂತ್ರವಾಗಬಲ್ಲುದು.

ಇಂಥ ಯಂತ್ರದಿಂದ ಲಾಭವಿದೆಯೇ?
ಇಷ್ಟು ಸಂಕೀರ್ಣ ರಚನೆಯನ್ನೊಳಗೊಂ
ಡ ಯಂತ್ರ ವಿಶೇಷದಿಂದ ಭಾಷಾಂತರವ
ನ್ನೊದಗಿಸಿಕೊಳ್ಳಲು ಎಷ್ಟು ಖರ್ಚು ಆ
ಗುತ್ತದೆ? ಇದರ ಬದಲು, ಆ ಭಾಷೆಯ
ನ್ನು ತಿಳಿದವನಿಂದ ಭಾಷಾಂತರವನ್ನು
ಮಾಡಿಸಿದರೆ ಖರ್ಚು ಹೆಚ್ಚೇ? ಈ ವಿಚಾ
ರವನ್ನೂ ಯಂತ್ರರಚನಾಕಾರರು ಅವ
ಶ್ಯ ಗಮನಿಸತಕ್ಕದ್ದು. ಯಂತ್ರವೇ ಇವ
ನ್ನು—ಈ ಕಾರ್ಯವನ್ನು—ಸುಲಭ ದರದ
ಲ್ಲಿ ಮಾಡಬಲ್ಲುದು ಎಂದೇನೋ ಲೆಕ್ಕ
ಹಾಕಿದ್ದಾರೆ; ಮಾತ್ರವೇ ಅಲ್ಲದೆ, ಕೆಲಸ
ಮಾಡುತ್ತ ಹೋದಂತೆ ಯಂತ್ರಕ್ಕೆ ತಗಲು
ವ ವೆಚ್ಚವು ಮತ್ತೂ ಕಡಿಮೆಯಾಗುತ್ತಲೇ
ಹೋಗುತ್ತದೆ. ಈ ಮೂರನೆಯ ಅಂಶವು
ಇಂಥ ಯಂತ್ರರಚನಾಕಾರರನ್ನು ಹುರಿ
ದುಂಬಿಸಿದೆ. ಅಲ್ಲದೆ, ಇದೇ 1961ರ ಸ
ಪ್ಟೆಂಬರದಲ್ಲಿ ಬ್ರಿಟಿಷ್ ದ್ವೀಪಗಳಲ್ಲಿ ನಡೆ
ದ ಸಭೆಯಲ್ಲಿ ಈ ಸಮಸ್ಯೆಯು ಆದಷ್ಟು ತ್ವ
ರಿತವಾಗಿ ಜಾಗತಿಕ ವಿಜ್ಞಾನಿಗಳ ನೆರವಿ
ನಿಂದ ಬಗೆಹರಿಸಲ್ಪಡತಕ್ಕದೆಂಬ ಆಸೆ
ಯೂ ವ್ಯಕ್ತವಾಗಿದೆ

ಇಷ್ಟರ ತನಕ ರಚಿಸಲ್ಪಟ್ಟ ಯಂತ್ರಗ
ಳೇನೋ ಒಂದು ಭಾಷೆಯಿಂದ ಮ
ತ್ತೊಂದು ಭಾಷೆಗೆ ಮಾತ್ರ ಮಾತುಗಳನ್ನು
ಭಾಷಾಂತರಿಸಬಲ್ಲವೇ ವಿನಾ, ವಾಕ್ಯಗ
ಳಲ್ಲಿ ಪದಗಳ ಸಮ್ಯಕ್ ಜೋಡಣೆ, ಪುನ
ರ್ವ್ಯವಸ್ಥೆ ಇವೆಲ್ಲವನ್ನೂ ಸರಿಯಾಗಿ ಸಾ
ಧಿಸಿಲ್ಲ. ಶಬ್ದಕ್ಕೆ ಶಬ್ದದಲ್ಲಿ ಅರ್ಥ ಅಥವಾ,
ಸೂಕ್ಷ್ಮವಾಗಿ ಹೇಳುವುದಾ
ದರೆ ಪದಕ್ಕೆ ಅನುಗುಣವಾಗಿ
ಎರಡನೆ ಭಾಷೆಯಲ್ಲಿ ಪದವೊಂದರ
ಪ್ರಯೋಗ ಇಷ್ಟೇ ಈ ತನಕ ಸಾಧ್ಯವಾ
ಗಿದೆ. ಇದು ಸಾಕೆ? ಹೀಗೆಯೇ ಮಾಡು
ತ್ತ ಹೋದರೆ ಕಾಲಾನುಕ್ರಮದಲ್ಲಿ ಸೂ
ಕ್ತ ಭಾಷಾಂತರಕ್ರಮವು ರಚನೆಗೊಳ್ಳ
ಬಹುದೆ? ಎಂಬಿತ್ಯಾದಿ ಪ್ರಶ್ನೆಗಳನ್ನು
ಸಮರ್ಪಕವಾಗಿ ಪೂರ್ತಿ
ಉತ್ತರಿಸುವ ಸ್ಥಿತಿಯಲ್ಲಿಲ್ಲ. ಯಾವ
ನಾದರೂ ಇಂಥ ಪ್ರಶ್ನೆಗಳನ್ನುತ್ತರಿಸಬ
ಲ್ಲನೆಂದರೆ, ಅದು ಅತನಲ್ಲಿದ್ದ ಆಶಾವಾದ,
ಹುಮ್ಮಸ್ಸುಗಳ ಕುರುಹಷ್ಟೇ ಆಗಿದೆ. ಆದ
ರೆ ಎಂದೂ ಇಂಥ ರಚನೆಯಾಗದು ಎಂಬ
ನಿರಾಸೆಯನ್ನು ಹೇಳುವ ಧೈರ್ಯ ನಮಗಿ
ಲ್ಲವೇ ಇಲ್ಲ.

ರಷ್ಯನ್ ಭಾಷೆಯಿಂದ ಇಂಗ್ಲಿಷಿಗೆ,
ಇಂಗ್ಲಿಷಿನಿಂದ ರಷ್ಯನ್ ಭಾಷೆಗೆ ಭಾಷಾಂ
ತರಿಸುವ ಪ್ರತ್ಯೇಕ ಯಂತ್ರಗಳು ಈ ಕಾ
ರ್ಯವನ್ನು ಸಮರ್ಪಕವಾಗಿ ಮಾಡಿವೆ. ಈ
ಭಾಗದ ಯತ್ನಗಳು ಯಶಸ್ವಿಯೇ ಆಗಿವೆ
ಎಂದರೂ ತಪ್ಪಿಲ್ಲ. ಇದಕ್ಕೆ ಕಾರ
ಣವಾದರೋ ಆ ಎರಡು ಭಾ
ಷೆಗಳಲ್ಲೂ ಇರತಕ್ಕ ಪದಗಳ ವ್ಯವ
ಸ್ಥೆ ಮೊದಲಾದುವುಗಳು ಏಕ ಪ್ರಕಾರವೇ
ಆಗಿದ್ದು, ಇಲ್ಲಿನ ಕ್ರಮವು ಸುಲಭವೆನಿಸಿ
ದೆ. ಆದರೆ ಜರ್ಮನ್ ಭಾಷೆಯಿಂದ ಇಂ

(೭೯ನೇ ಪುಟ ನೋಡಿರಿ)

With the best Compliments of

GANGES PRINTING INK FACTORY LIMITED

Largest Printing Ink Makers in India

CALCUTTA BOMBAY MADRAS DELHI

TILES THAT DEFY ANY TEST

ESTD. 1875.

B. PINTO & COMPANY.

MANGALORE ROOFING TILES

THE ONLY TILES THAT REACHED AUSTRALIA WITHOUT ANY BREAKAGES

FACTORIES

A. B. PINTO & SONS - ORIENTAL TILE WORKS

BATTERY TILE WORKS
MANGALORE TILE CO.
POMPEI TILE WORKS
STANDARD TILE CO.
J. H. MORGAN & SON.

Mangalore Address

PINTO & COMPANY,
Post Box No. 118
MANGALORE-1.

Phone: 81

Tele Grams: EXCELSIOR.

Bombay Address

B. PINTO,
Tile Merchant,
Mazagaon,
BOMBAY-10.

Phone: 41924

Tele Grams: SHIPBRAND.

MANGALORE.

(೧೪ನೇ ಪುಟದಿಂದ)

ರದ ಕುರಿತೂ—ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಅಮೇರಿಕಾ ಪ್ರತಿನಿಧಿ ಸ್ಟಿವನ್‌ಸನ್ ಮಾಡಿದ ವಿಕಟಾಟ್ಟಹಾಸವನ್ನು ನೋಡಿದರೆ ಅಮೇರಿಕದ ಉದ್ದೇಶವಾದರೂ ವಿದಿತವಾಗುತ್ತದೆ ಈ ಮಧ್ಯೆ ಪಾಕಿಸ್ತಾನದ ಮುಖಪತ್ರ 'ಡಾನ್" ಗೋವಾದಲ್ಲಿ ಪಾಲು ಕೇಳಿದ ವಿಚಾರವು ಅತೀವ ಗಮನಾರ್ಹವಿದೆ.

ಇತ್ತೀಚೆಗೆ ಪೋರ್ಚುಗಲ್ ಸರಕಾರಕ್ಕ ಪಾಕಿಸ್ತಾನ ಸರಕಾರಕ್ಕು ಸಂಧಾನ ಮಾತುಕತೆಗಳು ನಡೆಯುತ್ತಿದ್ದು ಗೋವಾದ ಎರಡು ದ್ವೀಪಗಳನ್ನು ಪೋರ್ಚುಗಲ್ ಸರಕಾರ ಪಾಕಿಸ್ತಾನಕ್ಕೆ ಧಾರಾದತ್ತವಾಗಿಕ್ತು, ತನ್ನ ಬಳಿಯಲ್ಲಿಯೇ ಭಾರತದೊಡನೆ ಜಗಳಾಡುತ್ತಿರುವ ಒಂದು ಪಂಗಡವನ್ನು ಇರಿಸಿಕೊಂಡು, ಭಾರತದ ಒಳಗೆ ಪುನಃ ಜಾತೀಯತೆಯ ಗಲಭೆ ಸೃಷ್ಟಿಸಿ, ನೇಟೋ ಸಹಾಯ ಪಡೆದು ಮುಂದೆ ಬೇಕಾದ ಬೇಳೆ ಬೇಯಿಸುವ ಹಂಚಿಕೆಯೊಂದು ಗುಪ್ತಗಾಮಿನಿಯಾಗಿ ನಡೆದಿತ್ತೆಂದೂ, ಈ ವಿಚಾರ ಭಾರತ ಸರಕಾರಕ್ಕೆ ಸರಿಯಾಗಿ ತಿಳಿದೇ ಇಷ್ಟು ತೀವ್ರವಾಗಿ ಗೋವಾದ ಮೇಲೆ ಕಾರ್ಯಾಚರಣೆ ಮಾಡಲು ಆಸ್ಪದವಾಯಿತೆಂದೂ ಕೆಲವು ಪತ್ರಿಕೆಗಳಲ್ಲಿ ವದಂತಿಯಾಗಿದೆ. ಚೀನಾವು ಭಾರತದ ಗಡಿ ಮೀರುತ್ತಿರಲು ಮಿಕ್ಕೆಲ್ಲ ಪಕ್ಷಗಳು ಖಂಡಿಸಿದರೂ, ಭಾರತದ ಕಮ್ಯುನಿಸ್ಟ್ ಪಾರ್ಟಿ ಸಾಮಾನ್ಯತಃ ಮೌನ ತಾಳಿದಂತೆ ಗೋವಾದ ಕುರಿತು ಮಿಕ್ಕೆಲ್ಲರೂ ಸಂತಸ ವ್ಯಕ್ತಪಡಿಸಿದರೂ ಭಾರತದ ಮುಸ್ಲಿಂಲೀಗು ಮಾತ್ರ ಸಾಧಾರಣ ಮೌನವನ್ನೇ ತಾಳಿರುವುದರ ಅರ್ಥವಾದರೂ ಏನಿರಬಹುದೆಂದು ನಾವು ಗಹನವಾಗಿ ಯೋಚಿಸ ತಕ್ಕದ್ದಿದೆ. ರಾಷ್ಟ್ರಘಾತುಕ ಶಕ್ತಿಗಳು, ಕಳ್ಳ ವ್ಯಾಪಾರದ ಕದೀಮರು—ಇನ್ನೂ ನಮ್ಮ ದೇಶದೊಳಗೆ ಕಾರ್ಯಾಚರಣೆ ಮಾಡಲು ಆಸ್ಪದವಿದ್ದರೆ ನಮಗೆ ದೊರೆತ ಸ್ವಾತಂತ್ರ್ಯ ಫಲದ ಸಿಹಿಯನ್ನು ನಾವು ಸರಿಯಾಗಿ ಸವಿಯಲುಂಟೆ ಎಂದು ಚಿಂತಿಸಬೇಕಾಗಿದೆ 'ಪುನರ್ನವ"ವೆಂಬ ನನ್ನ ಈಚಿಗಿನ ಕವನ ಸಂಗ್ರಹದಲ್ಲಿ 'ಗೋವೆಯ ಕರೆ'ಯೊಂದು ಕವನ ಅಡಕವಾಗಿದೆ. ನನ್ನ ಪುಸ್ತಕದ ಕುರಿತು ಅಭಿಪ್ರಾಯ ಪ್ರಕಟಿಸುತ್ತಾ ಹಿರಿಯರಾದ ಶ್ರೀ ಗೋವಿಂದ ಪೈಗಳು ಹೀಗೆ ಹರಸಿ ಬರೆದಿದ್ದಾರೆ.

"ಎಲ್ಲಕ್ಕಿಂತಲೂ ನನಗೆ ಮಿಗಿಲೆನಿಸುವ 'ಗೋವೆಯ ಕರ"ಯಾದರೆ ನನ್ನನ್ನು ವಿಸ್ಮಯಗೊಳಿಸಿತು ಕನ್ನಡ ಭಾಷೆಯಲ್ಲಿ ಸ್ವದೇಶ ಭಕ್ತಿ ಪರವಾದ ಕವಿತೆಗಳದೊಂದು ಕಾವ್ಯ ಮಂಜರಿ ಪ್ರಕಟಿಸಲ್ಪಡಲಿಕ್ಕೆ ಬಂದರೆ, ಆದರಲ್ಲಿ ನಿಮ್ಮ 'ಗೋವೆಯಕರೆ'ಗೆ ಒಂದು ಪಾಸು ಅಂದರೆ ಎರಡು ಪುಟಗಳು ಮೀಸಲಾಗಿ ಇರಿಸಲ್ಪಡದಿರವು. ನಿಮ್ಮನ್ನು ಮತ್ತೊಮ್ಮೆಯೂ ಅಭಿನಂದಿಸುತ್ತೇನೆ"

ಆ ಪದ್ಯದ ಕೆಲವು ಪಂಕ್ತಿಗಳಿಂದ ಈ ಲೇಖನವನ್ನು ನಾನು ಕೊನೆಗೊಳಿಸುತ್ತೇನೆ.

ಏಳಿರಿ ಗೆಳೆಯರೆ

೧

ಮನ ಮನದಲಿ ತಾ ಒಲುಮೆಯ
ಮೂಡಿ,
ತಾಯಿಯ ಚೆಲುವನು ಮನದಣಿ ಹಾಡಿ,
ಹರುಷದಿ ನಾಡಿನ ಸೇವೆಯ ಮಾಡಿ,
ಏಳಿರಿ ಗೆಳೆಯರೆ, ಸಾಗುವಾ ಕೂಡಿ.

೨

ಏಳಿರಿ ಎಲ್ಲರು, ಹುರಿಗೊಂಡೇಳಿ,
ದ್ವೇಷಾಸೂಯೆಗಳಿಲ್ಲದ ಹೂಳಿ,
ಅಂತಃಕಲಹವನೆಲ್ಲವ ಸೀಳಿ,
ನಾಡಿನ ಸೇವೆಯ ಗೆಯ್ಯಲು ಏಳಿ.

೩

ನಾಡಿನ ಅಂಚಿಗೆ ಬಂದಿದೆ ಕುತ್ತು,
ಎಲ್ಲವು ಇಹುದೆ ನಮ್ಮಯ ಸ್ವತ್ತು!
ಎಲ್ಲವು ಮುಗಿದಿರೆ ಏನಿದು ಮತ್ತೆ?
ಏಕಿದು ಗಡಿಗಳ ಗೊಂದಲವಿತ್ತೆ!

೪

ಮಂಗ್ಯೆಚೋರಿನ ಈ ಮಾತೇಕೆ?
ಗಡಿಸಮಿತಿಯ ಈ ಗೊಂದಲವೇಕೆ?
ಬೆಳಗಾಂವ್, ಕಾರ್ವಾರ್ ಪ್ರಶ್ನೆಯದೇಕೆ?
ಇಷ್ಟೆಲ್ಲದ ನಾವ್ ತಾಳಲುಬೇಕೆ?

೫

ಕಾಸರಗೋಡು, ಅಕ್ಕಲ ಕೋಟೆಯು
ಸೊಲ್ಲಾಪುರ ಮೇಣ್ ಆದವಾನಿಯು
ಎಲ್ಲವು ಪರರಿಗೆ ಹೋಗಿರಲಿಂತು
ಸಹಿಸಲು ಬೇಕೆ ನಾವಿದ ನಿಂತು!

೬

ಏಳಿರಿ ಗೆಳೆಯರೆ ಎಲ್ಲವನರಿತು,
ನಮ್ಮಯ ಕಹಿತನವೆಲ್ಲವ ಮರೆತು,
ನಮ್ಮಯ ನೆಲವನು ಉಳಿಸಲು ಬೆರೆತು,
ಏಳಿರಿ, ಅದುವೇ ಜೀವದ ಗುರುತು.

೭

ಸುಮ್ಮನೆ ಕುಳಿತರೆ ಬಿಡುವರೆ ಪರರು?
ಹಾವಳಿಯೆಬ್ಬಿಸಿ ಬಿಂಕದಿ ಅವರು
ತಮ್ಮಯ ಬಲವನು ತೋರುತಲಿಹರು,
ಮಾಯಾಜಾಲವ ಬೀಸುತಲಿಹರು.

೮

ಒಬ್ಬಳೆ ಕನ್ನಡ ತಾಯಿಯು ನಮಗೆ,
ಒಂದೇ ಕನ್ನಡ ಬಾಯಿಯು ನಮಗೆ,
ಹೀಗಿರೆ, ಕನ್ನಡಯೋಚನೆ ನಮಗೆ
ಜೀವದ ಪ್ರಶ್ನೆಯು ಆಗಿಹುದೆಮಗೆ.

೯

ಕನ್ನಡ ಮಾತೆಯ ಮಕ್ಕಳೆ ಏಳಿ,
ತಾಯಿಗೆ ಬಂದಿಹ ಸಂಕಟ ಕೇಳಿ,
ಸಾಗಿರಿ ಮುಂದಕೆ ಜಾಡ್ಯವ ಹೂಳಿ,
ನಾಡಿನ ಸೇವೆಯ ಗೆಯ್ಯುತ ಬಾಳಿ

—ಎಸ್ ಎಸ್ ಬಸುಪಟ್ಟದ
ಗುಳೇದಗುಡ್ಡ

ಭಾರತದ ಸ್ವಾತಂತ್ರ್ಯಯಜ್ಞಪೂ
ರ್ಣಾಹುತಿಯು
ಗೋವೆಯಲಿ! ಬಲಿದಾನಕೆದ್ದು ಬನ್ನಿ!
o o o
ಇದೆ ಮೋಕ್ಷ ಸಾಧನವು,
ಬಿಡುಗಡೆಯೆ ವೈಕುಂಠ,
ಗೋಪ ಕರೆಯುತಲಿಹುದು

ಕ್ರಾಂತಿವೀರ

"ಭಾರತೀಯನಾಗಿ ಚಿಂತಿಸು.
"ಭಾರತೀಯನಾಗಿ ನಡೆಯು.
"ಭಾರತಮಾತೆಯ ಸುಪುತ್ರನಾಗಿ ಮೆರೆಯು."

ಇದೇ

ಭಾರತ ಪ್ರಜಾರಾಜ್ಯ ದಿನಾಚರಣೆಯ ಈ ಶುಭದಿನದಂದು

ಕೊಪೊರೇಶನ್ ಬೇಂಕ್

ಶುಭ ಕಾಮನೆಗಳೊಂದಿಗೆ

ಪ್ರತಿ ಭಾರತೀಯನಿಗೂ ಕಳುಹಿಸುವ ಸಂದೇಶ!

ದಿ

ಕೆನರಾ ಬೇಂಕಿಂಗ್ ಕೊಪೊರೇಶನ್ ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸು: ಉಡುಪಿ. ಆಡಳಿತ ಆಫೀಸು: ಮಂಗಳೂರು.

ಕರಟ ಪುರಾಣ

ಲೇಖನ ಬರೆಯಲೇ ಬೇಕೆಂಬಾಗ ಮೆದುಳಿನ ಯಾವ ಮೂಲೆಯಲ್ಲೂ ವಿಷಯವೇ ಸಿಗದು, ಬರೆಯಬಲ್ಲವನಿಗೆ ವಿಷಯ ಬೇಕೆ? ಎಂದರೆ, ಉಪ್ಪಿಲ್ಲದ ಬರಿಯ ಪಾಕ ಸವಿಯಿರಿ—ಎಂದಂತೆ. ಬೇರೆ ಬೇರೆಯವರು ಸೂಚಿಸಿದ ಯೋಜನೆ, ಸಂಸ್ಕೃತಿ, ಶಿಕ್ಷಣ ರಾಜಕೀಯ, ಭಾವೈಕ್ಯ—ಇನ್ನೂ ಏನೇನೋ ಎಲ್ಲವೂ ನೀರಸ — ಬಾಹ್ಯಾಡಂಬರ, ತಿಪ್ಪೆಯ ಮೇಲಣ ಅಣಬೆ — ನಿರುಪಾಯರಾಗಿ ಶ್ರೀ ಹುರುಳಿಯವರು ಕರಟ ಪುರಾಣಕ್ಕೇನೇ ಶರಣುಹೋಗಬೇಕಾಯಿತು.

ಶ್ರೀ ಹುರುಳಿ ಭೀಮ ರಾವ್

ಯುಗಾದಿ, ದೀಪಾವಳಿ, ಧಾರ್ಮಿಕ ಹಬ್ಬ ಪ್ರಜಾರಾಜ್ಯ ಸ್ವತಂತ್ರ ದಿನಾಚರಣೆಯ ರಾಷ್ಟ್ರೀಯ ಹಬ್ಬ ಎಂದರೆ ಊರಿಗೆಲ್ಲ ಸಂತೋಷ. ನನಗೆ ಮಾತ್ರ, ಅವೆಲ್ಲ ಪ್ರತಿ ವರ್ಷ ತಪ್ಪದೆ ಒಂದರ ಮೇಲೊಂದಾಗಿ ಹಟ ಸಾಧಿಸಿ ಯಾಕೆ ಬರುತ್ತವಪ್ಪಾ ಅನ್ನುವ ಅಸಂತೋಷ. ಅದಕ್ಕೆ ಪ್ರತ್ಯೇಕ ಕಾರಣವೇ ನನಗಿದೆ. ಆಗ ವಿಶೇಷಾಂಕಗಳದೇ ಒಂದು ಸ್ಪರ್ಧೆಯೋ ಜಟ್ಟೀ ಕಾಳಗವೋ ಪ್ರದರ್ಶನವೋ ಸಮಾರಾಧನೆಯೋ ಸಮ್ಮೇಳನವೋ ಅಲ್ಲ ಸುಗ್ಗಿ ಕುಣಿತವೋ—ಅಂತೂ ಏನೋ ಒಂದು ಆಗ ಲೇಖಗಳಿಗಾಗಿ ಬೇಡಿಕೆಗಳು ಬಹಳ. ಹೆಚ್ಚಿನವೂ ದುಡ್ಡಿನ ಬಾಬುಗಳಿಲ್ಲ, ಭಾಷಾಭಿಮಾನದಿಂದ ಸಲಿಸುವಂಥ ಬಿಟ್ಟಿ ಬೇಗಾರಿ ಯಾನೆ ಪುಕಟೆ ಸೇವೆ ಬಾಬು.

ಉಡುಪಿ 'ನವಯುಗ' ವಾರ ಪತ್ರಿಕಾ ಸಂಪಾದಕರು ಪರ್ಯಾಯ: ಅಥವಾ ಪ್ರಜಾರಾಜ್ಯ ವಿಶೇಷಾಂಕ ಹೊರಡಿಸುವ ಮಾಮೂಲಿನವರು ಅದು ನನಗೆ ಗೊತ್ತು. ಅಂತೆ ಆ ಲೇಖದ ಕಾಟದ ಬಾಯಿಯಿಂದ ಬದುಕಲಿಕ್ಕಾಗಿ ಆ ಸಂಪಾದಕರಿಗೆ ನಾನೊಂದು ಪತ್ರ ಬರೆದಿದ್ದೆ. ಅಂಚೆ ಪೆಟ್ಟಿಗೆಗೆ ಹಾಕಿದ ಕೆಲ ಕಾಗದಗಳು ಅಲ್ಲೇ ವರ್ಷಗಟ್ಟಲೆಯಾಗಿ ಉಳಿದು ಹೋಗುವುದು ಅಪರೂಪವಾದರೂ ಅಸಂಭವವಲ್ಲವಾಗಿ ನನ್ನ ಈ ಪತ್ರವೂ ಆ ಸಂಪಾದಕರ ಕೈ ಸೇರದಿರಬಹುದೇ ಎಂಬ ಸಂದೇಹ ನನಗಿದ್ದೇ ಇತ್ತು. ಹ್ಯಾಗೂ ಆ ಪತ್ರದ ಮತಲಬನ್ನು ಇಲ್ಲಿ ನಮೂದಿಸ ಬಯಸುತ್ತೇನೆ. ಅದಿಷ್ಟು:—

'ಸಂಪಾದಕರೇ' ನಾನು ನಮ್ಮೂರಲ್ಲಿ ಈ ಸಮಯದಲ್ಲಿ ಎಲ್ಲಾದರೊಂದು ಮೂಲೆ ಮನೆಯಲ್ಲಿ ಇರಲೇಬೇಕೆಂದು ನೀವು ನಿರೀಕ್ಷಿಸಿಕೊಂಡಿದ್ದರೂ ಕೂಡ ನಾನಲ್ಲಿ ಊರಲ್ಲಿ ಇರುವವನೇ ಅಲ್ಲ. ಮೈಸೂರು ಭೂಸುಧಾರಣೆ ಮುಂದೆ ಶಾಸನವಾಗಿ ಜ್ಯಾರಿಗೆ ಬರುವಾಗ ಅದರ ಏಟಿಗೆ ತಲೆ ಒಡ್ಡಲೇ ಬೇಕಾಗಿ ಬರುವವರಲ್ಲಿ ಕೊನೆಯ ಸಾಲಿನವನು ನಾನು. ಈ ವರ್ಷ ಮಳೆ ವಿಪರೀತ; ಕ್ರಿಮಿಕೀಟಗಳ ಹಾವಳಿ ಅತಿರೇಕ, ಹಾಗೆ ರೂಪಾಯಿಯಲ್ಲಿ ಆರಾಣೆ ಅಂಶದಷ್ಟು ಗೇಣಿ ವಸೂಲಿಯೂ ಕಷ್ಟ ಅನ್ನುತ್ತಾರೆ. ಅದೇನೆಂದು ನೋಡಿಕೊಳ್ಳಬೇಕು ನನಗೆ ಮೇಲಾಗಿ ಧನಿಯ ಮೇಲೆ ಒಕ್ಕಲು, ಒಕ್ಕಲಿನ ಮೇಲೆ ಧನಿ ವ್ಯಾಜ್ಯ ಹೂಡುವ ಕಾಯಿದೆ ಕಾನೂನಿದು ನಮ್ಮ ಪ್ರಜಾರಾಜ್ಯ. ಅಂಥ ವ್ಯಾಜ್ಯಗಳು ತಿಂಗಳುಗಟ್ಟಲೆಯಾಗಿ ತೀರ್ಮಾನಕ್ಕೆ ಬಾಕಿಯಾದರೇನೇ 'ವ್ಯಾಜ್ಯ'ಗಳೆಂಬ ಈ ಕೀರ್ತಿ ಶಾಶ್ವತವಾಗಿ ಉಳಿದೀತಾದ್ದರಿಂದ ಅವು ವಾಯು ವೇಗದಿಂದ ಮುಂದು ಮುಂದಕ್ಕೆ ಸಾಧ್ಯವಾದಷ್ಟು ದೂರ ಹಾರುತ್ತಿರುವುದು ವಕೀಲರಿಗೆಷ್ಟೋ ಅನುಕೂಲ. ಈ ಸಂಬಂಧದ ಅಪೀಲುಗಳಂತೂ ಭಕ್ರಾ—ನಂಗಲ್ ಯೋಜನೆ ಪೂರ್ಣವಾಗುವಾಗಲಾದರೂ ಮುನ್ಸಿಫ್ ಕೋರ್ಟುಗಳಲ್ಲಿ ತೀರ್ಮಾನವಾಗಬಹುದೇನೋ ಎಂಬ ಅನುಮಾನ ಬಂದಿರುವ ಕಾರಣ ಆ ವ್ಯಾಜ್ಯ ವ್ಯವಹಾರಗಳನ್ನು ನೋಡಿಕೊಳ್ಳಬೇಕಾಗಿದೆ ನಾನು. ಇದೆಲ್ಲಾ ನನ್ನ ಬೆನ್ನು ಹತ್ತಿ ಬಂದಿರುವ 'ಅಷ್ಟಗ್ರಹ ಯೋಗ'ದ ಮುನ್ಸೂಚನೆಯೋ?"

'ಮತ್ತೆ ಸಂಪಾದಕರೆ, ಈ ವಿಶೇಷಾಂಕಗಳನ್ನು ಪ್ರಕಟಿಸುವ ಈ ಕಷ್ಟ ವ್ಯಸನ ನಿಮಗೆ ಇನ್ನೂ ಯಾಕೆ ಬೇಕು? ಅಚ್ಚಿನ ಕಾಗದದ ಬೆಲೆ ತಲೆ ಹಾರಿಸುವಷ್ಟು ಏರಿ ಹೋಗಿದೆ. ಹೇಳಿದ ಬೆಲೆ ತೆತ್ತರೂ ಬೇಕಾದ ಕಾಗದವಿಲ್ಲ. (ಈ ಲೇಖನ ಬರೆಯಲು ಕೊಂಡುತಂದ ಕಾಗದದ ಮೇಲೆ ಬರೆಯ ತೊಡಗಿದಾಗ ಬರೆದ ಬರೆದ ಕಾಗದಗಳಲ್ಲಿ ಶಾಯಿ ಹರಡಿ ಹತ್ತೆಂಟು ಕಾಗದಗಳಲ್ಲಿ ಹತ್ತಾರು ಬಾರಿ ಬರೆಯಬೇಕಾಗಿ ಬಂದ ಪ್ರಾಯಶ್ಚಿತ್ತ ನನಗಾದದ್ದೇ ಒಂದು ನಿದರ್ಶನ) ಮುದ್ರಾಲಯದ ಕೆಲಸಗಾರರಲ್ಲಿ ಕೆಲವರಾದರೂ ಇಂಥ ತುರ್ತು ಕೆಲಸದ ಕಾಲವನ್ನೇ ಕಾದುಕೊಂಡಿದ್ದು ಉದ್ದೇಶಪೂರ್ವಕವಾಗಿ 'ಗೈರ ಹಾಜರು' ಆಗ ಬಾರದೆಂದೇನೂ ಇಲ್ಲ. ಇಷ್ಟೇ ಅಲ್ಲದೆ ನಿಮ್ಮ ವಿಶೇಷಾಂಕವನ್ನು ದುಡ್ಡು ಕೊಟ್ಟು ಕೊಳ್ಳುವವನೊಬ್ಬ, ಅದನ್ನು ಓದುವವರು ನೂರು ಮಂದಿ. ಅದರಲ್ಲಿನ ವಿಚಾರ ಪ್ರಚೋದಕ ಜ್ಞಾನವರ್ಧಕ ಕರ್ತವ್ಯ ಬೋಧನೆಯ ಲೇಖಗಳೂ ಪಂಚವಾರ್ಷಿಕ ಯೋಜನೆಯ ವಿವರಗಳ ಹಾಗೂ ಪ್ರಶಂಸೆಯ ಲೇಖಗಳೂ ಉಳ್ಳ ಪುಟಗಳನ್ನು ಕಂಡ ಕ್ಷಣ ಅವನ್ನು ಕಣ್ತೆರೆದೂ ನೋಡದ ನೋಡಿದರೂ ನೋಡಿದಷ್ಟಕ್ಕೇ ಕೈ ಬಿಡುವ ಮಂದಿ ಸೇಕಡಾ ೯೯ ಮಂದಿ. ಕಥೆ ಉಂಟೇ ನಾಟಕ ಉಂಟೇ ಪ್ರಹಸನ ಉಂಟೇ? ಅವನ್ನೋದುತ್ತಾರೆ. ಸಂತೋಷಪಡುತ್ತಾರೆ ಕೆಲವು ವೇಳೆ ನಕ್ಕು ನಗುತ್ತಾರೆ ಸಿನೆಮಾ ಪುಟವಿದ್ದರೆ ಅದರಲ್ಲಿ ಸಿನೆಮಾ ನಟಿಯರ ಚಿತ್ರಗಳಿದ್ದರೆ ಅವುಗಳಿಗೇ ಗಿರಾಕಿ ಹೆಚ್ಚು ಸಂಪಾದಕರೆ! ನಷ್ಟ ಸಹಿಸಿಯಾದರೂ ನೀವು ಮಾಡುತ್ತಿರುವ ನಾಡ ನುಡಿಯ ಈ ಸೇವಾ ಧರ್ಮದ ಪ್ರಯೋಜನವನ್ನು ಕಿಂಚಿತ್ತಾದರೂ ಪಡೆಯಲು ಆತುರಗೊಂಡವರು ಕರ್ನಾಟಕಲ್ಲಿ ಎಷ್ಟು ಮಂದಿ ಇದ್ದಾರು, ಯೋಚಿಸ ಬಾರದೆ?"

ಸಂಪಾದಕರಿಂದ 'ಲೇಖ ಕಳುಹಿಸಿ' ಎಂದು ನನಗೂ ಪತ್ರ ಬಂತು—ಒಂದಲ್ಲ ಎರಡು. ಉದ್ದಾಮ ಹಿರಿಯ ಕಿರಿಯ ಲೇಖಕರು ಬೆಳೆದು ಬಂದಿರುವ ಈಗಿನ ಕರ್ನಾಟಕದಲ್ಲಿ 'ಹಳೆ ಮರದ ಈ ಕೆತ್ತೆ' ಬೇಕೆಂದೂ ಅವರು ಅಪೇಕ್ಷಿಸಿದ್ದು ಜನ ಜೀವನದಲ್ಲಿ ತುಂಬಿರುವ ಅಜ್ಞಾನ ಆಲಸ್ಯಗಳ ಚಿಕಿತ್ಸೆಯ ಯಾವುದೋ ಒಂದು ಕಷಾಯಕ್ಕಿರಬಹುದೇ? ಹೇಗೂ ಇರಲಿ. ಇದರಿಂದ ಒಂದು ಮುಖ್ಯ ಸಂಗತಿ ದೃಢವಾಯಿತು—ನನ್ನ ಪತ್ರ ಅವರಿಗೆ ತಲುಪಿಲ್ಲ ಮತ್ತೇನೆಂದರೆ, ನಾನು ಊರಲ್ಲಿಲ್ಲದ್ದಾಗ ಅವರು ಬರೆದ ಮೊದಲನೇ ಕಾಗದವೂ ನೇತ್ರಾವತಿ ಹೊಳೆಯಲ್ಲೇ ತೇಲಿ ಹೋಯಿತೆಂದು ಅವರು ತಿಳಿದರೆ ನನಗೂ ಎಷ್ಟೋ ಆನಂದ.

ಸಂಪಾದಕರು ಹಲವಾರು ಲೇಖಕಶ್ರೇಷ್ಠರಿಗೂ ಲೇಖಗಳಿಗಾಗಿ ಪತ್ರ ಬರೆಸಿದ್ದಾರೆ ನಿಶ್ಚಯ. ಆದರೆ ಬರೆಯಬೇಕೋ ಬೇಡವೋ ಎಂದು ತೀರ್ಮಾನಕ್ಕೇ ಬಾರದವರು ಕೆಲವರು; ಬರೆಯಲು ಅವಕಾಶವಿಲ್ಲದವರು ಕೆಲವರು; ಕೊನೆಗಳಿಗೆಯಲ್ಲಿ ಏನಾದರೊಂದು ಗೀಚಿ ಕಳುಹಿದರಾಯ್ತು ಎನ್ನುವವರು. ಕೆಲವರು; ಬರೆಯೋಣವೆನ್ನುತ್ತ ದಿನ ಹೋದದ್ದೇ ಗೊತ್ತಾಗದೆ ಜ್ಞಾಪಕವಾಗದೆ ಇರುವವರು ಕೆಲವರು; ದುಡ್ಡಿಲ್ಲವಲ್ಲ ಯಾಕೆ ಬರೆಯೋಣ ಎಂಬ ವೈರಾಗ್ಯನಿಧಿಗಳು ಕೆಲವರು ಇಷ್ಟಾದರೂ ನಿರೀಕ್ಷಣೆಗೂ ಮೀರಿ ಲೇಖಗಳು ಬಂದರೂ ಬರಬಹುದು; ಅವುಗಳಿಗೆ ಪೋಷಕವಾಗಿ ಜಾಹಿರಾತುಗಳ ಬೆಂಬಲವೂ ಅತ್ಯವಶ್ಯವೇ. ಜಾಹಿರಾತಿನವರೇನೂ ಕೊಂಚಕ್ಕೆ ಕೈ ಬಿಡುವವರಲ್ಲ. ಜಾಹಿರಾತಿಗಾಗಿ ಬರೆದ ಪತ್ರಗಳಲ್ಲಿ ಹಲವನ್ನೂ ಕಸದ ಬುಟ್ಟಿಗೆ ತಳ್ಳಿಬಿಡುವಷ್ಟು 'ಮಹಾ ಪ್ರಭು'ಗಳಾಗಿ ಬಿಡುವವರು ಕೆಲವರು. ಕಂಡು ಮಾತಾಡಿಸಿದಾಗ 'ದರ ವಿಪರೀತ' 'ಮುಂದೆ ಎಂದಾದರೂ ನೋಡೋಣ' 'ನಾಳೆ ಬನ್ನಿ' 'ಪತ್ರಿಕಾ ಜಾಹಿರಾತು ನಮಗೆ ಪ್ರಯೋಜನದಲ್ಲ'ಎನ್ನುವ ನೆವನಗಳೋ ಕಾರಣಗಳೋ ಸಾಮಾನ್ಯ. ಕೊಟ್ಟಾರೆಂಬ ಆಶೆ ತೋರಿಸಿದವರ ಕಾಲ ಬುಡಕ್ಕೆ ನಾಲ್ಕಾರು ಬಾರಿ ಸಾರಿ ನಡೆದೂ ಹತ್ತಾರು ಸಲ ಹಿಂದೆ ಮುಂದೆ ಕುಣಿದಾಡಿದರೂ ಕೊನೆಗೂ ಕೊಡದೆ ಹೋಗುವವರು ಕೆಲವರು. ಹಾಗೂ ಒತ್ತಾಯಕ್ಕೋ ದಾಕ್ಷಿಣ್ಯಕ್ಕೋ ಸಂಪಾದಕರ ಉಪಕಾರಕ್ಕೋ ಇಷ್ಟುದಿನ ದಮ್ಮಯ್ಯ ಹಾಕಿದಕ್ಕೋ ಎಂಬಂತೆ ಈ ಜಾಹಿರಾತುಗಳ ದಾನ ಧರ್ಮ, ತ್ಯಾಗ ಔದಾರ್ಯ ಕೆಲವರದು ಅಂತೂ ಇದೊಂದು ಅದೃಷ್ಟ ಪರೀಕ್ಷಾ ಕಾಲದಲ್ಲಿ ಇಂಥ ಅನಿಶ್ಚಿತ ಸಮಸ್ಯೆಗಳು ಸಂಪಾದಕರ ತಲೆ ತಿನ್ನುತ್ತಿರುವಾಗ, 'ಏನು ಬರೆಯಲಿ' ಎಂಬುದು ನನಗೊಂದು ಸಮಸ್ಯೆಯಾಗಿಯೇ ಪರಿಣಮಿಸಿದಂತೆ, ನಾನು ಏನು ಬರೆಯಬೇಕೆಂದು ನನಗೆ ಅವರು ಸೂಚಿಸುವ ಅಂಶ ಕೂಡ ಅವರಿಗೂ ಇನ್ನೊಂದು ಸಮಸ್ಯೆಯಾಗಿ ಕಂಡಿರ ಬಹುದೇನೋ.

'ಏನು ಬರೆಯಲಿ?' ಎಂಬ ಸಮಸ್ಯೆ ಬಿಡಿಸಲು ಬಹಳ ಕಾಲ ಕಾದಾಡಿದೆ. ಆಗಲಿಲ್ಲ. ಆಗ ನನ್ನಲ್ಲಿಗೆ ಬಂದಿದ್ದ ಗೆಳೆಯರೊಬ್ಬರ ಸಲಹೆ ಕೇಳಿದಾಗ ಅವರು ಒಂದು ಡಜನ್ ವಿಷಯಗಳನ್ನು ಹೇಳಿದರು. ಅದರಲ್ಲೊಂದು 'ಈಚೆಗೆ ಜಿಲ್ಲೆಯಲ್ಲಾದ ಅಭಿವೃದ್ಧಿ ಕಾರ್ಯಗಳು'. ಆಗ ನಾನೆಂದೆ.— 'ಸರಿ, ಸ್ವಾಮಿ! ಜಿಲ್ಲೆಯ ಪತ್ರಿಕೋದ್ಯಮಿಗಳನ್ನು ಕರೆದುಕೊಂಡು

(೨೭ನೇ ಪುಟ ನೋಡಿರಿ)

ಉಪಯುಕ್ತವಾದ ಕೆಲವು ಪುಸ್ತಕಗಳು

ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲಿ (ಅನು: ಕು ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟೆಮಾರಾ (ಅನು: ಕು ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0
ಮನೆ ಮದ್ದು (ಡಾ. ಕೊರಡ್ಕಲ್)	2	0
ಕುಲವಿಲ್ಲದ ಹೆಣ್ಣು (ಪಿ. ವೆಂಕೋಬಾಚಾರ್ಯ)	1	8

— ವಿಚಾರಿಸಿರಿ —

ನವಯುಗ ಪ್ರೆಸ್ ಉಡುಪಿ. ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಹಿಳಾ ಸಾಹಿತೀಮಣಿ

(೧೨ನೇ ಪುಟದಿಂದ)

ಗೊಂಡು ಹೊರಡತೊಡಗಿತು. ಅವಳ ಬರವಣಿಗೆಯನ್ನು ಕುರಿತು ಈ ಮೊದಲು ಅವನು ತೋರಿಸುತ್ತಿದ್ದ ಆಸ್ಥೆ ಕಡಮೆಯಾಯಿತು. ಅದರ ವಿಷಯ ಮಾತಾಡುವುದನ್ನೇ ಬಿಟ್ಟನು. ಅವಳಾಗಿ ಏನಾದರೂ ಎತ್ತಿದರೆ "ಅದನ್ನೆಲ್ಲ ನನ್ನ ಹತ್ತಿರ ಹೇಳಬೇಡ" ಎನ್ನುತ್ತಿದ್ದನು. "ನಾನೇನು ನೀನಿಟ್ಟ ಆಳೇ ನಿನ್ನ ಕಾಗದಪತ್ರ ತೆಗೆದುಕೊಂಡು ಟಪ್ಪಾಲುಕಟ್ಟೆ ಹತ್ತಲಿಕ್ಕೆ?' ಎಂದು ಅವನು ಕೇಳಿದ ಮೇಲೆ ಅವಳು ಅದಕ್ಕಾಗಿ ಬೇರೆ ಏರ್ಪಾಡನ್ನೇ ಮಾಡಿಕೊಂಡಳು. ಮುಸುರೆ ತಿಕ್ಕುವವಳೂ ಅವಳ ಮಗನೂ ಅವಳಿಗೆ ನೆರವಾದರು.

ಪತಿಯ ವರ್ತನೆಯಿಂದ ಪದ್ಮಾವತಿಯ ಹೃದಯ ನೊಂದಿತ್ತು. ಯಾಕೆ ಹೀಗಾದರೆಂಬ ಗುಟ್ಟು ಮಾತ್ರ ಅವಳಿಗೆ ಗೊತ್ತಾಗಲಿಲ್ಲ. ತಾನು ಹೆಂಡತಿಗಿಂತ ಕೀಳಾಗುವೆನೆಂಬ ಅವನ ಬಾಧೆ ಅವಳಿಗೆ ಅರ್ಥವಾಗಲಿಲ್ಲ. ಪಾಪ, ಅವಳದು ಸರಳ ಹೃದಯ.

ಒಮ್ಮೆ ಗಣ್ಯ ಮಹನೀಯರೊಬ್ಬರು ಪದ್ಮಾವತಿಯನ್ನು ಮಾತಾಡಿಸಲಿಕ್ಕಾಗಿಯೇ ಬಂದು ಅವಳೊಡನೆ ಮಾತಾಡಿ ಹೋದರು. ವಾಸುದೇವನು ಆಗ ಮನೆಯಲ್ಲೇ ಇದ್ದರೂ, ಅವನೊಡನೆ ಅವರೇನೂ ಮುಖಕೊಟ್ಟು ಮಾತಾಡಿರಲಿಲ್ಲ. ಏನೋ ಮರ್ಯಾದೆಗೆ ಎರಡು ಮಾತಾಡಿದ್ದರೂ, ಅವಳ ಗಂಡನೆಂಬ ದೃಷ್ಟಿಯಿಂದ ಅಷ್ಟೇ ಹೊರತು ಅವನೊಡನೆ ಅವರಿಗೇನು ಕೆಲಸ? ಅವರು ಕೇಳುವ ಸಾಹಿತ್ಯಕ ಪ್ರಶ್ನೆಗಳಿಗೂ ಹರಟೆಗಳಿಗೂ ಅವನೇನು ತಾನೇ ಉತ್ತರ ಕೊಟ್ಟಾನು?

ಈ ಬಗೆಯ ಅನೇಕ ಪ್ರಸಂಗಗಳು ವಾಸುದೇವನಿಗೆ ಮುಳ್ಳು ಚುಚ್ಚುವಂತಾದುವು. ತಾನೇನು ಸಿನೇಮಾ ನಟಿಯ ಗಂಡನೆ?? ಅವಳ ಕೈಯಾಳೆ? ಇದಕ್ಕೇನು ಮಾಡುವುದು?. .

"ಏನ್ರೀ ಮಿಸ್ಟರ್ ವಾಸುದೇವ್! ಆಫೀಸು ಫೈಲ್ ಮುಂದಿಟ್ಟುಕೊಂಡು ಯೋಚ್ನೇ ಮಾಡ್ತಾ? ಹೆಂಡತೀ ಹಾಗೆ ನೀವೂ ಕಲ್ಪನಾಲೋಕದಲ್ಲಿ ಸುತ್ತಾಡ್ತಾ ಇದ್ದೀರೇನು? ಸಾಹಿತ್ಯಕ್ಕೂ ಆಫೀಸ್ ಫೈಲಿಗೂ ತಾರತಮ್ಯ ಸ್ವಲ್ಪ ನೋಡಿಕೊಳ್ಳೀ" ಎಂದು ಮ್ಯಾನೇಜರ್ ಎಗತಾಳೀ ರೂಪದಲ್ಲಿ ಜಭಾಯಿಸಿದಾಗ ವಾಸುದೇವನು ದಾರುಣವಾದ ಯೋಚನೆಯೊಳಗಿಂದ ಅರಿವಿಗೆ ಬಂದನು.

ಮ್ಯಾನೇಜರನ ಮಾತಿಗೆ ಇತರ ಗುಮಾಸ್ತರೂ ಮುಸಿಮುಸಿ ನಕ್ಕರು...

ಆಫೀಸು ಬಿಟ್ಟ ಮೇಲೆ ವಾಸುದೇವನೊಂದು ಹೋಟೆಲಿನೊಳಗೆ ಹೋದನು. ಆಚೆಯ ಟೇಬಲ್ಲಿನ ಮುಂದೆ ಕುಳಿತವರಿಬ್ಬರು ಮಾತಾಡಿಕೊಳ್ಳುತ್ತಿದ್ದರು; "ನೋಡಯ್ಯ, ಈ ಪತ್ರಿಕೆಯಲ್ಲಿ ಬಂದ ಕತೆಯನ್ನು ಭಾರಿ ಮೆಚ್ಚಿದೆಯಷ್ಟೇ? ಆ ಕತೆಗಾರ್ತಿಯ ಗಂಡ ಅಕೋ ಇವರೇ.' ಎಂದು ತೋರಿಸಿದಾಗ ಇನ್ನೊಬ್ಬನು ವಾಸುದೇವನನ್ನು ಕ್ಷಿಏನೋ ಅಳೆವಳೆದು ನೋಡುವ ಹಾಗೆ ನೋಡಿದನು. ಅಂತಹ ಪ್ರತಿಭಾವಂತೆಗೆ ಇಂತಹನು ತಕ್ಕ ಗಂಡನಲ್ಲವೆಂದು ಅವನಿಗೆ ತೋರಿದ ಹಾಗೆ ವಾಸುದೇವನು ಅಂದುಕೊಂಡನು. ಕಹಿಯಾದ ಮದ್ದು ಕುಡಿದ ಹಾಗೆ ಕಾಫಿಯನ್ನು ಕುಡಿದು ಅಲ್ಲಿಂದ ಹೊರಬಿದ್ದನು

ಎಲ್ಲೆಲ್ಲೋ ಸುತ್ತಾಡಿ ಅವನು ಮನೆ ಸೇರುವಾಗ ರಾತ್ರಿ ಹನ್ನೊಂದು ಗಂಟೆ. ಪದ್ಮಾವತಿ ಅವನಿಗಾಗಿ ಕಾದು, ಮಗುವನ್ನ ಮಲಗಿಸಿ ತಾನು ಬರೆಯುತ್ತಾ ಕುಳಿತಿದ್ದಳು. ಅದೊಂದು ಕಾದಂಬರೀ ರಚನೆಯ ಕಾರ್ಯವಾಗಿತ್ತು.

ಅವರೇಕೆ ಇನ್ನೂ ಬರಲಿಲ್ಲವೆಂದು ಆಡಿಗಡಿಗೆ ಬಾಗಿಲೆಡೆಗೆ ನೋಡುತ್ತಿದ್ದಳು. ಬರವಣಿಗೆಯ ಕೆಲಸವೂ ಸಾಂಗವಾಗಿ ಮುಂದುವರಿಯದಾಯಿತು. ತೂಕಡಿಕೆಯೂ ಸೇರಿಕೊಂಡಿತು. ಮೇಜಿನ ಮೇಲೆ ತಲೆಯಿಟ್ಟುಕೊಂಡು ಹಾಗೆಯೇ ಕಣ್ಣು ಮುಚ್ಚಿಕೊಂಡಳು.

ಧಡ ಧಡ ಬಾಗಿಲು ಬಡಿಯುವ ಶಬ್ದ ಕೇಳಿ ಎಚ್ಚತ್ತು ಓಡಿಹೋಗಿ ಬಾಗಿಲು ತೆರೆದಳು.

"ಅಬ್ಬ! ಎಷ್ಟು ಹೊದೆ ಗೊತ್ತೆ? ಎಂದೂ ಇಲ್ಲದೆ ಇವತ್ತು ಇಷ್ಟು ಹೊತ್ತು ಎಲ್ಲಿ ಹೋದಿರಪ್ಪ!" ಎನ್ನುತ್ತಾ ಬಾಗಿಲು ಮುಚ್ಚಿದಳು ಪದ್ಮಾ.

"ಹೆದರಿದ್ದು ಕಾಣುತ್ತಾ ಇದೆಯಲ್ಲಾ! ಮೇಜಿನ ಮೇಲೆ ಪುಸ್ತಕದ ರಾಶೀ— ಬರೀತಾ ಇದ್ದಾಳೆ ಬರೀತಾ! ಭಾರೀ ದೊಡ್ಡ ಆಫೀಸು ಕೆಲ್ಸ ಮಾರಾಯ್ತಿ!" ಎನ್ನುತ್ತಾ ಹೋಗಿ ಮೇಜೀ ಮೇಲಿದ್ದ ಕಾಗದಗಳನ್ನು ಕೈಯಿಂದ ಕೆಳಕ್ಕೆ ಜಾಡಿಸಿಬಿಟ್ಟ ವಾಸುದೇವ

"ಇದೇನಾಯ್ತು ನಿಮಗೆ ಇವತ್ತು? ಹೊತ್ತು ಹೋಗದಕ್ಕೆ ಬರೀತಾ ಇದ್ದರೆ ಹೀಗೇಕೆ ಹೇಳ್ತೀರಿ?"

"ಯಾಕೆ ಕೇಳ್ತೀನಂತಿಯಾ? ಒಂದೇ ಮಾತಿನಲ್ಲಿ ಹೇಳಲಾ, ಹೆಚ್ಚು ಮಾತಿನಲ್ಲಿ ಹೇಳಬೇಕೆ?"

"ಹೆಚ್ಚು ಮಾತಾಗಿದ್ರೆ ನಿಧಾನವಾಗಿ ಹೇಳಿ. ಮೊದಲು ಊಟ ಮಾಡುವ ಬನ್ನಿ.'

"ಮೊದಲು ನನಗೆ ನಿನ್ನ ವಿಷಯ ನಿರ್ಣಯವಾಗಬೇಕು. ಮತ್ತಷ್ಟೇ ಊಟ.'

"ಅಯ್ಯೋ! ಹಾಗೇನಾಯಿತಪ್ಪ!'

"ಇನ್ನೇನಾಗಬೇಕು? ನನ್ನ ಮಾನಮರ್ಯಾದೇ ಎಲ್ಲಾ ಗಾಳಿಯಲ್ಲಿ ಹಾರಾಡಿಕೊಂಡು ಹೋಗ್ತಾ ಇದೇ. ಇನ್ನೀ ಮನೆಗೇ ಬರೋದಿಲ್ಲಾಂತ ಮಾಡಿದ್ದೇ. ಅಗ್ನಿಸಾಕ್ಷಿಯಾಗಿ ನಿನ್ನ ಕಟ್ಟಿಕೊಂಡ ಕರ್ಮಕ್ಕೆ ಬಂದೆ ಮಸಣಕ್ಕೆ ಬಂದ ಹಾಗೆ!"

"ಅಯ್ಯೋ! ಯಾಕೆ ಹೀಗೆ ನನ್ನ ಕೊಲ್ತೀರಿ? ಮುಖ್ಯ ವಿಷಯ ಹೇಳಬಾರದೆ?"

"ನೋಡು ಪದ್ಮಾವತೀ! ನಾನು ನಿನ್ನ ಗಂಡ, ನೀನು ನನ್ನ ಹೆಂಡತಿ. ಹೆಂಡತಿ ಗಂಡನಿಗೆ ಸರಿಸಮಾನಳಾಗಿ ಇರಬೇಕೋ ಬೇಡವೊ?" "ಬೇಕು"

"ನಾನೊಬ್ಬ ಹುಲ್ಲುಮನುಷ್ಯ, ಯಾವ ಯೋಗ್ಯತೇನೂ ಇಲ್ಲದವ"

"ಹಾಗ್ಯಾಕೆ ಹೇಳ್ತೀರಿ ನಿಮ್ಮನ್ನು ನೀವೇ ಕೀಳುಮಾಡಿಕೊಂಡು? ನಿಮಗಿರಬೇಕಾದ ಯೋಗ್ಯತೆಯೆಲ್ಲ ನಿಮಗುಂಟೇ ಉಂಟು!"

"ಇಲ್ಲಾ! ಇಲ್ಲಾ! ಇಲ್ಲ! ನಿನಗಿರುವಂಥಾ ಯೋಗ್ಯತೆ ನನಗಿಲ್ಲವೇ ಇಲ್ಲ! ನಿನ್ನ ಯೋಗ್ಯತೆಗೂ ನನ್ನ ಯೋಗ್ಯತೆಗೂ ಅಜಗಜಾಂತರ! ಒಂದೋ ನಿನ್ನ ಯೋಗ್ಯತೆಗೆ ನಾನು ಏರಬೇಕು, ಇಲ್ಲಾ ನನ್ನ ಯೋಗ್ಯತೆಗೆ ನೀನು ಇಳಿಯಬೇಕು. ನಿನ್ನ ಯೋಗ್ಯತೆಗೆ ಏರಲು ನನ್ನ ಹುಟ್ಟನಿಂದಲೂ ಸಾಧ್ಯವಿಲ್ಲ. ಈಗ ನೀನೇ ಇಳೀಬೇಕು. ಇಳೀತ್ಯಾ ಸರಿ. ಇಲ್ಲದಿದ್ದರೆ ನಿನ್ನ ದಾರಿ ನಿನಗೆ, ನನ್ನ ದಾರಿ ನನಗೆ, ಮಾಡಿಕೊಂಡ ಕರ್ಮಕ್ಕೆ, ನಿನಗೇನಾದರೂ ಅಕ್ಷನಾರ್ಥ......"

ಪದ್ಮಾವತಿ ಅವನನ್ನು ಮುಂದೆ ಮಾತಾಡಬಿಡದೆ, ಅವನ ಬಾಯಿಯನ್ನು ತನ್ನ ಕೈಯಿಂದ ಒತ್ತಿ—" ನಿಮ್ಮಾಣೆ! ಹೀಗೆಲ್ಲಾ ಹೇಳಬೇಡಿ. ನಿಮಗಾಗುವ ಹಾಗೆ ಇರಬೇಕಾದ್ದೇ ನನ್ನ ಧರ್ಮ. ಹೇಳಿ, ನಾನೇನು ಮಾಡಬೇಕೋ ಅದನ್ನು ಹೇಳಿ." ಎಂದಳು.

"ಹೇಳುತ್ತೇನೆ.ಅದನ್ನೇ ಹೇಳುತ್ತೇನೆ. ಇನ್ನು ಮೇಲೆ ನೀನು ಬರವಣಿಗೇ ಕೆಲಸ ಬಿಟ್ಟುಬಿಡಬೇಕು ಕತೇ, ಕವಿತೆ, ಕಾದಂಬರಿ ಅಂಥ ಯಾವುದೂ ನೀನು ಬರೀಬಾರದು. ಏನು ಹೇಳುತ್ತಿ?"

ಪದ್ಮಾವತಿ ಆದುರಿ ಬಿದ್ದವಳಂತೆ ಒಂದರ್ಧ ನಿಮಿಷ ಸ್ತಬ್ಧಳಾದಳು. ತರುವಾಯ "ಏನಾಶ್ಚರ್ಯ! ನೀವಾ ಹೀಗೆ ಹೇಳೋದು! ನಿಮಗೆ ನನ್ನ ಮೇಲೇನಾದರೂ ಹೊಟ್ಟೇಕಿಚ್ಚೋ ಅಂದರೆ ನಾ ನಂಬಲಾರೆ...'

"ಹೊಟ್ಟೆಕಿಚ್ಚಲ್ಲ ಪದ್ಮಾ, ನನ್ನ ಮರ್ಯಾದೆ ಹೋಗ್ತಾ ಇದೇ ಅಂದೆನಲ್ಲಾ! ನಿನ್ನ ಹೊಗಳಿಕೇಲಿ ನಾನೊಬ್ಬ ಇದ್ದೇನಂತ ಯಾರಿಗೂ ಕಾಣ್ಸೋದೇ ಇಲ್ಲಾ. ಹೀಗೆ ಎಷ್ಟು ದಿನ ತಾಳಲಿ! ಹೇಗೆ ಬದುಕಲಿ"

"ಆದರೆ ಇದರಿಂದ ನಷ್ಟವೇನೂ ಇಲ್ಲವಲ್ಲಾ ಸ್ವಲ್ಪ ಲಾಭ ಕೂಡಾ...'

"ಆ ಲಾಭವೇ ಬೇಡ. ಅದೂ ನಾಲ್ಕು ಮಂದಿಗೆ ತಿಳಿದು ಬರುವಂಥ ಲಾಭ. ಬೇಡವೇ ಬೇಡ.'

"ಆಯಿತು. ನಿಮಗಿಷ್ಟವಿಲ್ಲದ ಕೆಲಸ ನಾನು ಮಾಡುವುದಿಲ್ಲ ಇದು ಖಂಡಿತ ಬನ್ನಿ ಊಟಕ್ಕೆ."

"ತಡಿ ಹಾಗಾದರೆ ಈಗ ನೀನು ಬರೆಯುವಂಥಾದ್ದೆಲ್ಲಾ ಏನುಂಟೋ ಅದನ್ನೆಲ್ಲಾ ಸುಟ್ಟು ಹಾಕು."

ಪದ್ಮಾವತಿ ಕೆಳಗೆ ಚೆಲ್ಲಿದ್ದ ಕಾಗದಗಳನ್ನೂ, ಮೊದಲು ಬರೆದಿಟ್ಟಿದ್ದ ಕೆಲವು ರಚನೆಗಳನ್ನೂ ತೆಗೆದುಗೊಂಡು ಹರಿದು ಒಲೆಯೊಳಗೆ ಹಾಕಿ ಬೆಂಕಿ ಹಚ್ಚಿಬಿಟ್ಟಳು!

ಅದರ ಜ್ವಾಲೆಯಲ್ಲಿ ತನ್ನನ್ನು ಆವರಿಕೊಂಡಿದ್ದ ಅವಮಾನವು ಸುಟ್ಟುಹೋಗಿ ಎಲ್ಲಾ ನಿರ್ಮೂಲವಾಯಿತೆಂದು ಅವನಿಗೊಂದು ಬಗೆಯ ಸಮಾಧಾನವಾಯಿತು. ಅದರಿಂದೆದ್ದ ಕಪ್ಪು ಹೊಗೆಯಿಂದ ಪದ್ಮಾವತಿಯ ಕಲ್ಪನೆಯೂ ಪ್ರತಿಭೆಯೂ ಮುಚ್ಚಿಹೋಯಿತು. ಅದೆಂದೂ ಮತ್ತೆ ಮೇಲೆ ಬರಲಿಲ್ಲ. ಉಜ್ವಲ ಮಹಿಳಾ ಸಾಹಿತ್ಯಮಣಿಯೊಂದು ಮಣ್ಣಿನೊಳಗೆ ಹೂತುಹೋಯಿತು. ಅಂದಿನಿಂದ ಅವಳಿಗೆ ಅದೊಂದು ಮನೋವೇದನೆಯಾಗಿ ಪರಿಣಮಿಸಿತು. ದಿನೇ ದಿನೇ ಕೃಶಳಾಗುತ್ತಾ ಹೋದಳು. ಯಾವಾಗಲೂ ಅವಳಿಗೇನೋ ಒಂದು ಕಾಯಿಲೆ, ಕಸಾಲೆ, ಡಾಕ್ಟರು, ಔಷಧ— ಹೀಗಾಯಿತು ಪರಿಸ್ಥಿತಿ.

ಆರೋಗ್ಯ ಕೆಟ್ಟುದರಿಂದ ಈಗ ಪದ್ಮಾವತಿ ಬರೆಯುವುದಿಲ್ಲವೆಂದಷ್ಟೇ ಎಲ್ಲರಿಗೂ ಗೊತ್ತಾದುದು. ವಾಸುದೇವನಿಗೂ ಹೇಳಿಕೊಳ್ಳಲು ಒಳ್ಳೆಯ ಕಾರಣವೇ ಸಿಕ್ಕಿದಂತಾಯಿತು. ಎಲ್ಲಾ ಗುಮಾಸ್ತರ ಹಾಗೆ ತಾನೂ ಒದ್ದಾಡಿಕೊಂಡು ಸಂಸಾರ ಸಾಗಿಸುವಂಥ ಧೀರ ಪುರುಷನಾದೆನೆಂದು ಸಮಾಧಾನದಿಂದಿದ್ದಾನೆ.

ರಿಯಾಯಿತಿ ದರದಲ್ಲಿ—

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣು ವಿನೋದಕಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯ ವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾ ಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿನ್ದಾರ	1	8
33	ಬಾಳಿನ ಬೆಡಗು	1	4
34	ತೋಪಾಸುಮಿತ್ರೆ	1	0
35	ಮದುವೆ ಸೀರೆ	1	0

ಅಪೂರ್ವ ಸಂದರ್ಭ !

ರೂ38-6-0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ.30-0-0ಕ್ಕೆ ಕೊಡಲಾಗುವುದು.

ಬರೆಯಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ

PHONE 203 ESTD 1926

FOUNDATION STONE

Engraved MARBLE TABLETS (GOLD FILLED & LEAD FILLED)

DONE AT

Crown RUBBER STAMP Co. BALMATTA ROAD, MANGALORE

ಭಾರತದ ರಾಜಕಾರಣವು
ನೆರೆನಾಡಿಗೆ ಹಬ್ಬಿದಾಗ
೨

(೧೧ನೇ ಪುಟದಿಂದ)

ಸಂಚಿಕೆಗಳನ್ನು ಜನವರಿ 26ಕ್ಕೆ ಹೊರಡಿಸುವ ಬದಲು, ಚೀಯೂಂಗರ ಶಾಂತಿ ಯಾತ್ರೆಯ ನೆನಹಿಗಾಗಿ ಫೆಬ್ರುವರಿ 15ಕ್ಕೆ ಹೊರಡಿಸಿದವು. ಕೆಲವು ನವ್ಯ ಕವಿಗಳು ಕೆರಳಿ ಕೊರೆದರು.

೧...ಛೀ ಎಂಬೆನೇ ಚೀಯೂಂಗನ ಧೀರ
ಭ್ರಾಂತಿ!
ಲೈ ಎಂಬುದೇ ಸುಳ್ಳು, ಭರವಸೆಯು
ಪೊಳ್ಳು; ಮತ್ತೆಲ್ಲಿ ಶಾಂತಿ?
ನಂಬಿದೆಯೊ 'ಮಾವ'ನನು?
ನಂಬುತಿರು ದೇವನನು—
ಅವನೆ ಗತಿ ನಿನಗೆ!......

ಂ ಂ ಂ

೨...ಸಾಕಿನ್ನು ಕ್ಯಾಪಿಟಲಿಷ್ಟ್ ಕೂಟ!
ನ್ಯೂಯಾರ್ಕಿನಾ ತುಂಬ ಗಗನ
ಚುಂಬಿ,
ಫೋಮೋರ್ಸ ಬರಿಮೋಸ, ಉಳ್ಳವರ
ನಂಬಿ—
ಇಲ್ಲ—ಮಾರ್ಗಗಳಿಗೂ ಇಲ್ಲ ಮೊಳದ
ಷ್ಟು ಚರಂಡಿ!........

ಂ ಂ ಂ

೩. ಕೆನಡಿಗೇಕೆ ಕೆನ್ನೆಸಿಡಿತ? ಕ್ರುಶ್ಚೆ
ವಂಗೆ ಕರುಳುಬಾಲ?
ಕೃಷ್ಣಮೆನನ್ ಪುಷ್ಟನೇನು? ಮೆಕ್ಮ
ಲಂಗೆ ಮರುಳು ಅಲ್ಲ.
ಕೃಷೆಕನಿಗೆ ಶೇಕ್‌ಹ್ಯಾಂಡು ಕೊಡುವ
ಭಾಗ್ಯ ಅರಿಗುಂಟು?
ಗಾಂಧಿ ಸತ್ತು ಹೋದರೇನು? ಬುದ್ಧ
ನೆದ್ದು ಬಂದನಿಂತು!...........

ಂ ಂ ಂ

೪. ಸುಯೇಜ್ ಕೆನಲ್‌ನಲಿ ಹಡಗ
ಮುಳುಗದಿರೆ
ಮೆಕ್‌ಮೋಹನ್ ಗೆರೆ ಅಳಿದೀತೆ?
ದಲಾಯಿ ಲಾಮುಸಿಗೆ ನೆಹರು
ದಲಾಲಿಯು?
ಕ್ಯೆಷೇಕನ ಹೆಜ್ಜೆ—ಕಳೆಯಿತು—
ನಾಲ್ವಾರನ ನಿದ್ದೆ!......ಇತ್ಯಾದಿ

ಯಾಗಿ ನೂರುಗಟ್ಟಲೆ ಗಹ್ಯತಮವಾದ ನವ್ಯಕವಿತೆಗಳು ಅಚ್ಚಾದವು.

ಮೋಸ್ಕೋ; ಫೆಬ್ರುವರಿ-20.

ಪ್ರವಾಡಾ ಪತ್ರಿಕೆಯ ವರದಿ:—"ರಶ್ಯಾಜನತೆಯು ಲೋಕಶಾಂತಿಗೆ ನೆರವಾಗುವ ಯಾವ ಕಾರ್ಯವನ್ನಾದರೂ ಹೃತ್ಪೂರ್ವಕವಾಗಿ ಸ್ವಾಗತಿಸುವುದು. ಸ್ಟಾಲಿನನ ಶವವನ್ನು ನಾವು ಸ್ಥಳಾಂತರಿಸಿರುವುದೇ ಇದಕ್ಕೊಂದು ಸರಿಯಾದ ಉದಾಹರಣೆಯಾಗಿದೆ. ಭಾರತದ ಪಂಚಶೀಲದಿಂದ ಆಕರ್ಷಿತವಾಗಿರುವ ನಮ್ಮ ಜನತೆಯು ಚೀಯೂಂಗರ ಅಹಿಂಸಾ ಪ್ರವಾಸವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಹಿಂದುಳಿಯದು. ಸಹ ಅಸ್ತಿತ್ವವನ್ನು ಪಾಲಿಸುತ್ತಾ ಪ್ರಗತಿಯತ್ತ ಸಾಗುತ್ತಿರುವ ಭಾರತ ಚೀನಗಳೊಳಗೆ ಪರಸ್ಪರ ಸಾಮ್ಯವಿದೆ ಎಂಬುದೂ ಸಂತೋಷ. ಚೀಯೂಂಗರನ್ನು ಸ್ವಾಗತಿಸಿದ ಚೀನಾದ ಜನತೆಯನ್ನು ರಶ್ಯದ ಜನತೆಯು ಅಭಿನಂದಿಸುತ್ತದೆ.

ವಾಶಿಂಗ್‌ಟನ್; ಫೆಬ್ರುವರಿ, 23.

ಮಾಜಿ ಅಧ್ಯಕ್ಷ ಐಸೆನ್ ಹೋವರರು ಕೂಲಂಕಷ ವಿಮರ್ಶಿತವಾದ ಹೇಳಿಕೆಯೊಂದರಲ್ಲಿ— "...ಸಂಬಂಧಿಸಿದವರೊಡನೆ ವಿಚಾರ ವಿನಿಮಯ ಮಾಡಿಕೊಳ್ಳದೆ ಚೀಯೂಂಗರು ಕೈಕೊಂಡ ನಿರ್ಧಾರವು ಮುಕ್ತದ್ವಿತನದ್ದೆನಿಸಲಾರದು. ಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಸಮಗ್ರ ಚೀನವನ್ನು ಪ್ರತಿನಿಧಿಸುತ್ತಿರುವ ಅವರು ಮಧ್ಯಾವಧಿಯಲ್ಲಿ ಈ ಆತ್ಮ ಘಾತುಕವಾದ ಧೋರಣೆಯನ್ನು ತಳೆದುದರಿಂದ ಲೋಕ ಶಾಂತಿಗೆ ನೆರವಾಗುವುದರ ಬದಲು ಮತ್ತೊಂದು ಮಹಾ ಸಮಸ್ಯೆಯನ್ನೇ ಉಂಟುಮಾಡಿದಂತಾಯಿತು. ಯು. ರಾ. ಸಂಸ್ಥೆಯಲ್ಲಿ ಮುಂದ ಕೆಂಪು ಚೀನಕ್ಕೆ ಸ್ಥಾನಕೊಡಬೇಕಾದ ಅನಿವಾರ್ಯತೆಯನ್ನು ಒತ್ತಾಯದಿಂದ ಹೇರುವುದರ ಸಲುವಾಗಿ ಕಮ್ಯುನಿಸ್ಟ್ ಬಣಗಳು ನಡೆಸಿದ ಒಳಸಂಚಿಗೆ ಇಷ್ಟೊಂದು ಸುಲಭವಾಗಿ ಚೀಯೂಂಗರು ಬಲಿಯಾದರೂ ಎಚ್ಚೆತ್ತ ಸ್ವತಂತ್ರ ರಾಷ್ಟ್ರಗಳಿಗೆಲ್ಲ ಈ ಭೇದೋಪಾಯದ ಅರಿವಾಗದಿರದು.... .." ಎಂದಭಿಪ್ರಾಯ ವಿತ್ತರು.

ಲಂಡನ್; ಫೆಬ್ರುವರಿ—25.

ಹೌಸ್ ಆಫ್ ಕಾಮನ್ಸ್‌ನಲ್ಲಿ ಕೇಳಲಾದ ಬಿಸಿ ಬಿಸಿ ಪ್ರಶ್ನೆಗಳಿಗೆ ಮೇಕ್ಮಿಲನರು ಕೊಟ್ಟ ಹಾರಿಕೆಯ ಉತ್ತರಗಳು.

1) "ಚೀಯೂಂಗರು ಬಹುಕಾಲದಿಂದ ತನ್ನ ಮಾತೃಭೂಮಿಗೆ ದೂರದಲ್ಲಿ ವಾಸಿಸಿದ್ದರಿಂದ ಅವರು ಗೃಹಾಸ್ವಾಸ್ಥ್ಯ (Homesick) ಗೊಳ್ಳುವುದು ಸ್ವಾಭಾವಿಕ...

2) "ಸ್ವಾಸ್ಥ್ಯವನ್ನು ಕಳೆದುಕೊಂಡವರ ನಡತೆಯಿಂದ ಜಾಗತಿಕ ಪರಿಣಾಮವೇನಾದರೂ ಸಂಭವಿಸಿದರೆ ಅದು ದುರದೃಷ್ಟಕರ....

3) "ನೂರು ಮೆಗಟನ್ ಬಾಂಬುಗಳು ರಶ್ಯದೊಡನೆ ಎಂಬುದು ಅತಿರಂಜಿತವಾದ ಹೇಳಿಕೆ....

4) "ಕೆಂಪುಚೀನಕ್ಕೆ ಯು. ರಾ. ಸಂಸ್ಥೆಯಲ್ಲಿ ಸ್ಥಾನ ದೊರಕಿಸುವುದಕ್ಕೂ ಚೀಯೂಂಗರ ಪಾದಯಾತ್ರೆಗೂ ನಿಕಟ ಸಂಬಂಧವಿದೆಯೆಂದು ಕಮ್ಯುನಿಸ್ಟರು ಭ್ರಮಿಸುತಿದ್ದರೆ ಅದು ಕೇವಲ ಕನಸು.

5) 'ಭಾರತ—ಚೀನಾ ಗಡಿ ಸಮಸ್ಯೆಯ ತೀರ್ಮಾನಕ್ಕೆ ಚೀಯೂಂಗರ ಪ್ರಭಾವ ನೆರವಾಗದು. ಏಕೆಂದರೆ, ಒಮ್ಮೆ ಅವರು ಚೀನವನ್ನು ಹೊಕ್ಕರೆಂದರೆ ಮುಂದೆ ಅವರ ಅಸ್ತಿತ್ವವೇ ಲೋಕಕ್ಕೆ ಗೊತ್ತಾಗುವ ಸಂಭವವಿಲ್ಲ! .."

ಲಿಸ್ಬನ್; ಫೆಬ್ರುವರಿ-28.

"ಚೀಯೂಂಗರ ನಡತೆಯು ಆತ್ಮಹತ್ಯೆಗೆ ಸಮಾನವಾದುದು. ಸತ್ಯ—ಅಹಿಂಸೆ ಮೊದಲಾದ ಕುತ್ಸಿತವೂ ಹೇಯವೂ ಆದ ಶಬ್ದಗಳನ್ನು ಅವರು ಬಹುಶಃ ಭಾರತದ ತಲೆಕೆಟ್ಟ ಧುರೀಣರಿಂದ ಕಲಿತಿರಬಹುದು. ಮಾತ್ರವಲ್ಲ ಧ್ವಜಹಿಡಿದು ನಿರಾಯುಧರಾಗಿ ಗಡಿಯೊಳಕ್ಕೆ ನುಗ್ಗುವ ಹಗಲು ಗಳ್ಳತನವನ್ನು ಕೂಡಾ ಅವರು ಭಾರತೀಯರಿಂದ ಕಂಡುಕೊಂಡಿರಬೇಕು. ಏಕೆಂದರೆ ಜಗತ್ತಿನಲ್ಲಿ ಇಂಥ ಉದಾಹರಣೆ ನಡೆದುದು ಗೋವೆಯಲ್ಲಿ ಮಾತ್ರ. ಕೆಟ್ಟ ಪರಂಪರೆಗಳು ಲೋಕದಲ್ಲಿ ಬಲು ಬೇಗನೆ ಹಬ್ಬುತ್ತವೆ ಎಂಬುದಕ್ಕೆ ಇದೊಂದು ಸರಿಯಾದ ನಿದರ್ಶನವಾಗಿದೆ. ಚೀನಾ ಸರಕಾರವು ಈ ಆಕ್ರಮಣವನ್ನು ಸಶಸ್ತ್ರವಾಗಿ ಎದುರಿಸಲು ಶಕ್ತವಿದೆ. ಅದರೊಂದಿಗೆ ನಮ್ಮ ಸಹಾನುಭೂತಿಯಿದೆ....." ಮುಂತಾಗಿ ಸಾಲಾಜಾರರು ಸಾಧ್ಯವಾದಷ್ಟು ಸಭ್ಯಭಾಷೆಯಲ್ಲಿ ಹೇಳಿಕೆ ಕೊಟ್ಟರು.

ಕರಾಚಿ; ಮಾರ್ಚ—2.

ಆಯೂಬ್ ಖಾನರ ಸೌಮ್ಯವಾದ ವಿಮರ್ಶೆಯನ್ನು ಡಾನ್ ಪ್ರಕಟಿಸಿತು. "......ಪಾಕಿಸ್ಥಾನಿಗಳು ಕಾಶ್ಮೀರಕ್ಕೆ ನುಗ್ಗಿದಾಗ ಭಾರತೀಯರು ಶಸ್ತ್ರಹಿಡಿದು ಅವರನ್ನು ಹೊರಗಟ್ಟಲು ಬಂದಿದ್ದರು. ಆದರೆ ಗೋವೆಯಲ್ಲಿ ಸ್ವಯಂಸೇವಕರನ್ನು ಒಳನುಗ್ಗಿಸಿದ್ದರು. ಇಂಥಾ ದ್ವಿಮುಖ ಧೋರಣೆಯಿದ್ದರೂ ಭಾರತೀಯರು ಸತ್ಯ ಅಹಿಂಸೆಗಳನ್ನು ಪದೇ ಪದೇ ಉಚ್ಚರಿಸುತ್ತಿರುವರು. ಪ್ರಸ್ತುತ, ಚೀಯೂಂಗರು ಕೂಡಾ ಅದೇ ಸತ್ಯ ಅಹಿಂಸೆಗಳನ್ನು ಒದರುತ್ತಾ ಭಾರತೀಯರಂತೆಯೇ ಚೀನಾ ಪ್ರವೇಶಕ್ಕೆ ಅಣಿಗೊಳಿಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಭಾರತ ಚೀನಾ ಗಡಿ ಸಮಸ್ಯೆಯು ಉಲ್ಬಣವಾಗುತ್ತಿರುವ ಈ ಸಂಧಿಗ್ಧ ಕಾಲದಲ್ಲಿಯೇ ಚೀಯೂಂಗರ ಚೀನಾ ಪ್ರವೇಶದ ಹೇಳಿಕೆಯನ್ನು ನೋಡುವಾಗ, ಇದರಲ್ಲಿ ಭಾರತದ ಕುತಂತ್ರಮಾರ್ಗದ ಕೈವಾಡವಿದೆ ಎಂಬುದನ್ನು ಯಾರಾದರೂ ಕಂಡುಕೊಳ್ಳಬಲ್ಲರು........"

ನ್ಯೂಯಾರ್ಕ್; ಮಾರ್ಚ—4.

ಅಧ್ಯಕ್ಷ ಕೆನಡಿಯ ಸಮಾಧಾನದ ಹೇಳಿಕೆ:— "ಚೀಯೂಂಗರ ನವನಿರ್ಧಾರವು ವ್ಯಕ್ತಿಗತ ಹೊಣೆಗಾರಿಕೆಯುಳ್ಳದ್ದು. ಯು. ರಾ. ಸಂಘದಲ್ಲಿ 'ವೆಟೊ' ಅಧಿಕಾರವಿದ್ದ ಚೀಯೂಂಗರು ಮುಂದೆ ತಮ್ಮ ಸದಸ್ಯತನವನ್ನೇ ಕಳೆದುಕೊಳ್ಳುವುದರಿಂದಾಗಿ ಕಮ್ಯುನಿಷ್ಟ್ ಬಣಕ್ಕೆ ಎರಡು ವೆಟೋ ಹಕ್ಕುಗಳು ದೊರೆತಂತಾಗುವುದಿಲ್ಲ. ಅಥವಾ ಇನ್ನಾವುದೇ ರೀತಿಯಲ್ಲಿ ಅವರ ಬಲ ವರ್ಧಿಸಿದಂತಾಗುವುದಿಲ್ಲ ಆದರೆ ನಿಶ್ಶಸ್ತ್ರೀಕರಣದ ಮಾತ ಕತೆಗಳು ಯಶಸ್ವಿಯಾಗುವ ತನಕ ನಾವು ನಮ್ಮ ಬಲವನ್ನು ವರ್ಧಿಸುತ್ತಲೇ ಹೋಗುವೆವು. ಬರ್ಲಿನ್ ಸಮಸ್ಯೆಯ ಪರಿಹಾರಕ್ಕೆ ಚೀಯೂಂಗರ ಕ್ರಮವನ್ನು ಅನುಸರಿಸಬೇಕೆಂದು ಕೆಲವರು ಪಡುತ್ತಿರುವ ಅಭಿಪ್ರಾಯವು ಎಷ್ಟರ ಮಟ್ಟಿಗೆ ಸರಿಯೆಂಬುದನ್ನು ಸರಕಾರವು ಅಭ್ಯಸಿಸುತ್ತಿದೆ. ಅಹಿಂಸಾ ಮಾರ್ಗವು ಗೆಲವನ್ನೇ ತರುವುದು ನಿಜವೆಂದಾದರೆ ನಮಗೇನೂ ಆ ತತ್ತ್ವದ ಮೇಲೆ ಅನಾದರವಿಲ್ಲ. ಆದರೆ ಸದ್ಯಕ್ಕೆ ಮಾತ್ರ ನಾವು ಸಿದ್ಧಗೊಳಿಸುತ್ತಿರುವ ಐನೂರು ಮೆಗಟನ್ ಬಾಂಬುಗಳನ್ನು ನಿಲ್ಲಿಸಲಾರೆವು. ಈ ನಮ್ಮ ದೃಢವಾದ ನಿಲುವೆಯನ್ನು ಬದಲಿಸುವ ಘಟನೆಯೇನೂ ಈಗ ಸಂಭವಿಸಿಲ್ಲ."

ಫೊರ್ಮೋಸಾ; ಮಾರ್ಚ-7.[ಮ. ರಾತ್ರಿ]

ಕ್ಯೆಷೇಕರ ಖಾಸಗಿ ಕಾರ್ಯದರ್ಶಿಯು ಕೊಟ್ಟ ಪ್ರಕಟನೆ:—

"ಮಾನ್ಯ ಚಿಯೂಂಗ್ ಕ್ಯೆಷೇಕರವರು ತಮ್ಮ ಅಹಿಂಸಾತ್ಮಕ ಚೀನಾ ಯಾತ್ರೆಯ ಕುರಿತು ಜನವರಿ 26ರಂದು ಕೊಟ್ಟ ಹೇಳಿಕೆಗೆ ಜಗತ್ತಿನಾದ್ಯಂತ ಉಂಟಾದ ಪ್ರತಿಕ್ರಿಯೆ ಮತ್ತು ಅಭಿಪ್ರಾಯಗಳನ್ನು ಚೆನ್ನಾಗಿ ಅಭ್ಯಸಿಸುತಿದ್ದು, ಯಾತ್ರೆಯ ದಿನವನ್ನು ಇನ್ನೂ ನಿರ್ಧರಿಸಿಲ್ಲ. ಅಂತರಾತ್ಮ ಪ್ರೇರಣೆಯಂತೆ ಆ ಮುಹೂರ್ತದ ದಿನವನ್ನು ನಿರ್ಧರಿಸುವುದರ ಪೂರ್ವಭಾವಿಯಾಗಿ ಅವರು ತಮ್ಮ ಆತ್ಮಶುದ್ಧಿಗೆಂದು ಉಪವಾಸ ವ್ರತವನ್ನು ಕೈಕೊಂಡು, ಅನಿರ್ದಿಷ್ಟಾವಧಿಯ ತನಕ ಮುಂದುವರಿಸುವ ನಿಶ್ಚಯವನ್ನು ಬಹುಶಃ ಮುಂದಿನ ವರ್ಷದ ಉತ್ತರಾರ್ಧದ ಮೊದಲ ತಿಂಗಳ ಮೊದಲೇ ಮಾಡಲಿರುವರು. ಅವರಿಗೆ ಶುಭಾಶಯಗಳನ್ನು ಕೋರಿದ ಸರ್ವರಿಗೂ ಅವರು ಕೃತಜ್ಞತೆಗಳನ್ನು ಅರ್ಪಿಸಿರುವರು."

ಸಾಹಿತ್ಯ ಮತ್ತು ಪ್ರಜಾಪ್ರಭುತ್ವ

(೯ನೇ ಪುಟದಿಂದ)

ಪದ ಸಾಹಿತ್ಯ—ಅಭಾವ ಗೀತಗಳಲ್ಲೂ ಅದೇ ಸಾಮ್ಯ. ಸಾಮ್ಯನೇ ಇಂದು ಸೋಮ್ಯ—ಸೋಮಪಾನಾರ್ಹ, ಶ್ರೋತ್ರಿಯ. ಆದುದರಿಂದ ರಾಜಕೀಯ ಪಂಡಿತನು ಸಾಮಾಜಿಕ, ತಾತ್ವಿಕ, ಸಾಹಿತ್ಯಿಕ ತಜ್ಞನೂ ಆಗುತ್ತಾನೆ—ಸಮತಾ ಪ್ರಹಾರದಿಂದ ಮುಮತಾಜ್ ಬೇಗಂ ತಾಜ್‌ಮಹಲ್ಲಿಗೆ ಕಾರಣವಾದಂತೆ "ಸಮತಾಜ್ ಬೇಗಂ" ಸಮತಾಜಮಹಲ್ ರಾಜ್ಯಭಾರಕ್ಕೆ ಕಾರಣವಾದರೆ ತಪ್ಪೆ? ಸಮ=ಮಾ (ಲಕ್ಷ್ಮೀ) ಇಂದ ಕೂಡಿದವನು ಅರ್ಥಾತ್ "ಇನ್‌ಫ್ಲುಯೆನ್ಸ್ ಲಕ್ಷ್ಮೀಶ." ಅನನ ವಾದವೇ ಇಂಥದು. ಬಲಿಷ್ಠನಾದ ಭಾವನು ಉಚ್ಚಸ್ಥಾನದಲ್ಲಿ ಯಾವನಿಗಿರುವನೋ ಅವನು ಪ್ರಭಾವಶಾಲಿ. ಭಾವನೆಂದರೆ ಶಕಾರ. ಶೂದ್ರಕನ ಕಾಲದಲ್ಲಿ ಪಾಲಕನ ಪ್ರಭುತ್ವವಿರುವಾಗ ಶಕಾರ ಸರ್ವಪ್ರಭುವಾಗಿ ಮೆರೆಯುತ್ತಿದ್ದನಂತೆ. ಅಂಥ ಶಕಾರಶೀಲತನ್ನು (Anarchy) ಅರಾಜಕ ಪ್ರವೃತ್ತಿಯೆನ್ನುತ್ತಾರೆ. ವಿದ್ಯಾರ್ಥಿಗಳ ಅಶಿಸ್ತು, ಕೂಲಿಕಾರರ ಸಂಪು ಮುಂತಾದವು ತಮ್ಮ ತರರಲ್ಲಿ ಸುಪ್ತವಾಗಿರುವ ಅರಾಜಕ ಪ್ರವೃತ್ತಿಯ ಪರಿಣಾಮ, ಪ್ರಕಟನೆ. ಒಳಗೆ ಉಷ್ಣವಾಗಿರುವಾಗ ಹೊರಗೆ ಬೊಕ್ಕೆ ಏಳುವದಿಲ್ಲವೇ? ಹಾಗೇ. ಆದುದರಿಂದ ಸರಕಾರೀಣ ಕೃತಿಗಳಲ್ಲ ಹಲವು ಪ್ರಜಾಪ್ರಭುತ್ವದ ಮೈಮೇಲಿದ್ದ ಬೊಕ್ಕೆಗಳಂತಿವೆ ಅಲ್ಲಿ ಹಲವಾರು ಶಕಾರರು ದರ್ಬಾರ್ ನಡೆಸುತ್ತಾರೆ. ಅವರೇ ಆ ಉಷ್ಣತಾಜನಕ-ಪ್ರಯೋಗಧಾನಿ (Apparatus) ಗಳಾಗಿದ್ದಾರೆ. ಅವರಿಗಾಗಿಯೇ ನಾವಿಂದು ಶಕಾರ ಸಾಹಿತ್ಯವನ್ನು ನಿರ್ಮಿಸುತ್ತಿರುವುದು. ಪ್ರಜಾಪ್ರಭುತ್ವ + ವಶೀಲಿಭಾಜಿ = ಶಕಾರ ಸಾಹಿತ್ಯ. ಶಕಾರಸಾಹಿತ್ಯ ಸಂವರ್ಧನೆಗಾಗಿ ತನು-ಮನ-ಧನಗಳನ್ನು ಒಂದನ್ನೊಂದಕ್ಕೆ ಅದಲು ಬದಲು ಮಾಡಿಕೊಂಡು ಸರ್ವರೂ ಪ್ರಯತ್ನಿಸುವ ಸಮ ಪ್ರಯತ್ನವೇ ಪ್ರಜಾಸಾಮ್ಯ ಪ್ರಭುತ್ವ—Demono societatem.



ನಾರದೀಯ ಭಕ್ತಿಸೂತ್ರ

(೧೦ನೇ ಪುಟದಿಂದ)

ಶಯನು ಕರ್ಮ ಜ್ಞಾನಗಳ ಕುರಿತು ಹೇಳಿದ ಮೇಲೆ ಈ ಭಕ್ತಿ ಪ್ರಕರಣವನ್ನು ಹೇಳಿರಬಹುದೆಂದು 'ಅಥ' ಎಂಬ ಶಬ್ದದಿಂದ ಆರಂಭ ಮಾಡಿದುದರಿಂದ ಊಹಿಸುತ್ತಾರೆ. ಇದರಂತೆ ಶಾಂಡಿಲ್ಯನ ಭಕ್ತಿ ಸೂತ್ರವೂ 'ಅಥಾತೋಭಕ್ತಿ ಜಿಜ್ಞಾಸಾ' ಎಂದು ಆರಂಭವಾಗುವುದರಿಂದ, ಇಲ್ಲಿ 'ಅಥ'ವೆಂಬ ಶಬ್ದಕ್ಕೆ ಇಷ್ಟ ದೇವತಾ ನಮಸ್ಕಾರಾನಂತರವೆಂದೇ ಅರ್ಥಮಾಡಿಕೊಂಡು, ಆದಿಯಿಂದ ಅಂತ್ಯದ ವರೆಗೆ ಭಗವದ್ವಿಚಾರದಿಂದ ತುಂಬಿದ ಗ್ರಂಥಕ್ಕೆ ಬೇರೊಂದು ಪ್ರಾರ್ಥನೆಯು ಅನಗತ್ಯವೆಂದು ನಾರದರೂ ಶಾಂಡಿಲ್ಯರೂ ತಿಳಿದಿದ್ದಿರಬಹುದು ಎಂದೇ ಭಾವಿಸಬೇಕಾಗುವುದು. ಅಂತೂ ನಾರದರ ಭಕ್ತಿ ಸೂತ್ರವು ಬರಹದಲ್ಲಿರತಕ್ಕ ಸಂಯಮ ಶಕ್ತಿಯನ್ನು ಎತ್ತಿ ತೋರಿಸುತ್ತಿದೆ!

ಭಕ್ತಿ-ಭಕ್ತ

ಭಕ್ತಿಯ ಕುರಿತು ಒಬ್ಬೊಬ್ಬರ ವ್ಯಾಖ್ಯಾನ ಒಂದೊಂದು ವಿಧವಾಗಿ ಕಂಡರೂ ತಿರುಳೆಲ್ಲಾ ಒಂದೇ. 'ಪೂಜಾದಿಷ್ವನುರಾಗಃ ಇತಿಪಾರಾಶರ್ಯಃ' (ಭ. ಸೂ. ೧೬) ಪೂಜಾದಿಗಳಲ್ಲಿರುವ ಅನುರಾಗವನ್ನೇ ವ್ಯಾಸರು ಭಕ್ತಿ ಎನ್ನುತ್ತಾರೆ. 'ಗರ್ಗರು ಪರಮಾತ್ಮನ ಕುರಿತಾದ ಸಂಭಾಷಣೆಯನ್ನೇ—ಆತನ ಕಥಾಕೀರ್ತನೆಗಳಲ್ಲಿರುವ ಪ್ರೀತಿಯನ್ನೇ—ಭಕ್ತಿ ಎನ್ನುತ್ತಾರೆ. (ಭ. ಸೂ. ೧೭). ಶಾಂಡಿಲ್ಯರು, ಪರಮಾತ್ಮನಲ್ಲಿ ಜೀವಾತ್ಮನು ಐಕ್ಯವಾಗುವುದೇ ಭಕ್ತಿ ಎಂದಿದ್ದಾರೆ (ಭ. ಸೂ. ೧೮). ಭಕ್ತಿಸೂತ್ರದಲ್ಲಿ ಶಾಂಡಿಲ್ಯರೇ, 'ಸಾಪರಾನುರಕ್ತಿರೀಶ್ವರೇ', ಅಂದರೆ 'ಭಗವಂತನನ್ನು ಕುರಿತು ಎಲ್ಲಕ್ಕೂ ಹೆಚ್ಚಿನ ಪ್ರೇಮವೇ ಭಕ್ತಿ ಎಂದಿದ್ದಾರೆ. ಶಾಂಡಿಲ್ಯರು ನಾರದರಿಗಿಂತ ಮೊದಲಿದ್ದವರು. ನಾರದರು 'ಪರಮಾತ್ಮನನ್ನು ಕ್ಷಣ ಕಾಲ ಮರೆಯದಿರುವುದೇ ಭಕ್ತಿ ಎಂದೂ, ಈ ಪ್ರೇಮಕ್ಕೆ ವ್ರಜಗೋಪಿಯರೇ ದೃಷ್ಟಾಂತವೆಂದೂ ಹೇಳಿದ್ದಾರೆ. ಸ್ವಾಮಿ ವಿವೇಕಾನಂದರು 'ಭಕ್ತಿಯು ಪ್ರೇಮದಲ್ಲಿ ಹುಟ್ಟಿ ಪ್ರೇಮದಲ್ಲಿ ಸಾಗಿ ಪ್ರೇಮದಲ್ಲಿಪರ್ಯವಸಾನವಾಗುವ ನಿಜವಾದ ಮನಃಪೂರ್ವಕವಾದ ಪರಮಾತ್ಮಾನ್ವೇಷಣ' ಎಂದು ಸುಂದರವಾಗಿ ಹೇಳಿದ್ದಾರೆ.

ಮನುಷ್ಯನಿಗೆ ಪ್ರೇಮವನ್ನು ಹರಿಸಲು ಒಂದು ವ್ಯಕ್ತಿ ಅಥವಾ ಒಂದು ವಸ್ತುವಿನ ಅಗತ್ಯವಿದೆ. ನಿರಾಕಾರದಲ್ಲಿ ಅಥವಾ ಬಟ್ಟಬಯಲಿನಲ್ಲಿ ಮನುಷ್ಯನು ಎಂದೂ ತನ್ನ ಪ್ರೇಮ ಪ್ರವಾಹವನ್ನು ಹರಿದು ಬಿಡಲಾರ. ಆದಕ್ಕೇ ಭಗವದ್ಗೀತೆಯು 'ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಂ, (ಭ. ಗೀ ೧೨-೫.) 'ಅವ್ಯಕ್ತದಲ್ಲಿಆಸಕ್ತವಾದ ಮನಸುಳ್ಳವರಿಗೆ ಕ್ಲೇಶವು ಅಧಿಕತರವಾಗಿರುತ್ತದೆ ಎಂದು ಸಾಕಾರ ಪೂಜೆ ಅಥವಾ ಮೂರ್ತಿ ಪೂಜೆಯನ್ನು ಎತ್ತಿ ಹಿಡಿದಿರುವುದು. ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರೂ ಮೂರ್ತಿಪೂಜಕರಾಗಿದ್ದು ಸಿದ್ಧಿಹೊಂದಿದ ಮೇಲೆಯೇ ನಿರ್ವಿಕಲ್ಪ ಸಮಾಧಿಯ ಸಾಧನೆಯನ್ನು ಕೈಗೊಂಡರು. ಮೂರ್ತಿಪೂಜಕನ ಭಕ್ತಿಯನ್ನು ಹೊಂದಿ ಮೂರ್ತಿಯು ಜೀವಂತವಾಗಿ ಕಾಣಿಸುವುದೆಂದು ಪರಮಹಂಸರ ಚರಿತ್ರೆಯು ಸಾರುವುದು. ಅವರ ಪೂರ್ವಾಶ್ರಮದ ಪತ್ನಿ ಶ್ರೀ ಶಾರದಾದೇವಿಯವರು ಮೂರ್ತಿಯಿಂದ ಭಗವಂತನೇ ಅಥವಾ ಅವನ ಜ್ಯೋತಿಯು ಹೊರಬಿದ್ದು ನೈವೇದ್ಯವನ್ನು ಸ್ವೀಕರಿಸುವ ಕ್ರಮವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಭಕ್ತಿಯು ಅಸಾಧ್ಯ ಕಾರ್ಯವನ್ನು ಸಾಧ್ಯಮಾಡುವ ಅನುಪಮ ಶಕ್ತಿ!

ನಾರದರ ಇಷ್ಟದೇವತೆಯಾದ ಶ್ರೀ ಕೃಷ್ಣನು 'ಮಯ್ಯೇವ ಮನ ಆಧತ್ಸ' (ನನ್ನಲ್ಲಿಯೇ ಮನಸ್ಸಿಡು) 'ಮಯಿ ಬುದ್ಧಿಂ ನಿವೇಶಯ' (ನನ್ನಲ್ಲಿ ಬುದ್ಧಿಯನ್ನು ಸೇರಿಸು), 'ಅಭ್ಯಾಸಯೋಗೇನ ಮಾಮಿಚ್ಛಾಪ್ತುಂ' ನನ್ನಲ್ಲಿ ಮನಸ್ಸನ್ನು ಸ್ಥಿರವಾಗಿಡಲು ಅಶಕ್ತನಾದರೆ 'ಅಭ್ಯಾಸಯೋಗದಿಂದ ನನ್ನನ್ನು ಹೊಂದುವುದಕ್ಕೆ ಇಚ್ಛಿಸು." ಅಭ್ಯಾಸದಿಂದಲೂ ಅಶಕ್ತನಾದರೆ 'ಸರ್ವ ಕರ್ಮ ಫಲ ತ್ಯಾಗಂಕುರು" 'ಸರ್ವ ಕರ್ಮಗಳ ಫಲಗಳನ್ನು ತ್ಯಾಗಮಾಡು ಎಂದು ಹೇಳಿ ಮುಂದೆ ತ್ಯಾಗದ ಮಹಿಮೆಯನ್ನು ಎತ್ತಿ ಹಿಡಿದಿದ್ದಾನೆ ನಾರದರು 'ಅವ್ಯಾವೃತ ಭಜನಾತ್' (ಭ. ಸೂ. ೩೬) ಅಖಂಡ ಭಜನದಿಂದ ಭಕ್ತಿಯು ಸಾಧಿಸುವುದೆನ್ನುವರು. ಅಲ್ಲದೆ ಭಗವಂತನ ಮತ್ತು ಮಹಾ ಪುರುಷರ ಕೃಪೆಯಿಂದ ಭಕ್ತಿಯ ಚಿಲುಮೆಯುಹೃದಯದಿಂದ ಚಿಮ್ಮುವುದೆನ್ನುವರು. ಮಹಾ ಪುರುಷರ ಸಂಗವೂ ಭಗವಂತನ ಕೃಪೆಯಿಂದಲೇ ಪ್ರಾಪ್ತವಾಗುವುದೆಂದು ನಾರದರ ಮತ.

ಈ ಭಕ್ತಿಯ ಅಮಲನ್ನು ಏರಿಸಿಕೊಂಡವನೇ ಭಕ್ತ. ಇವನ ನೆರಳಿಗೂ ಅಭಿಮಾನಡಂಭಾದಿಗಳು ಬರಲಾರವು. ಇವನಿಗೆ ಭಗವಂತನಲ್ಲುದ್ದ ಅನನ್ಯವಾದ ಪ್ರೀಯೇ ಶ್ವಾಸ; ಆಲಸ್ಯ, ಮರವು ಮೊದಲಾದ ದುರ್ಗುಣಗಳೇ ಉಚ್ಛ್ವಾಸ. ಭಕ್ತನಿಗೆ ಜಾತಿ, ವಿದ್ಯೆ, ಧನ, ಕುಲವೆಂಬ ಭೇದವಿಲ್ಲ, ಅವನು ಎಲ್ಲರನ್ನೂ ದೇವರ ಮಕ್ಕಳೆಂದೇ ಭಾವಿಸುವನು. ಇವನಲ್ಲಿ ಕಾಮ ಕ್ರೋಧಾದಿ ಅಭಿಮಾನಗಳು ಮೊಳೆತರೂ ಭಗವಂತನ ಸಾಕ್ಷಾತ್ಕಾರಕ್ಕಾಗಿಯೇ.

ಶ್ಲೋ || ಆತ್ಮಾತ್ವಂ ಗಿರಿಜಾಮತಿಃ
ಪರಿಜನಾಃ ಪ್ರಾಣಾಃ ಶರೀರಂ ಗೃಹಂ
ಪೂಜಾತೇ ವಿಷಯೋಪಭೋಗ ರಚನಾ
ನಿದ್ರಾಸಮಾಧಿಸ್ಥಿತಿಃ ||
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ
ಸ್ತೋತ್ರಾಣಿ ಸರ್ವಾಗಿರೋ
ಯದ್ಯತ್ಕರ್ಮಕರೋಮಿ ತತ್ತದಖಿಲಂ
ಶಂಭೋತವಾರಾಧನಂ ||

'ಹೇ ದೇವ, ನೀನು ನನ್ನ ಆತ್ಮನು ನನ್ನ ಬುದ್ಧಿಯೇ ನಿನ್ನ ಅರ್ಧಾಂಗಿಯಾದ ಪಾರ್ವತಿಯು. ನನ್ನ ಪಂಚಪ್ರಾಣಗಳೂ ನಿನ್ನ ಪರಿಜನರು ನನ್ನ ದೇಹವೇ ನಿನ್ನ ಆಲಯ. ನಾನು ವಿಷಯೋಪಭೋಗಮಾಡುವುದೆಲ್ಲಾ ನಿನ್ನ ಪೂಜೆ. ನನ್ನ ನಿದ್ರೆಯೇ ಸಮಾಧಿ ಸ್ಥಿತಿ. ನಾನು ಸಂಚಾರ ಮಾಡುವುದೆಲ್ಲಾ ನಿನ್ನ ಆರಾಧನೆ' ಹೀಗೆಭಕ್ತನು ನಿತ್ಯವೂ ಆತ್ಮನಿವೇದನೆಯನ್ನುಮಾಡಿಕೊಳ್ಳುವುದುತ್ತಮ. ಸಾರಾಂಶ ಭಕ್ತನು ಭಗವಂತನ ಒಂದು ಸೊತ್ತು.

ಆತನು ಭಕ್ತಾಭೀಷ್ಟ ಪ್ರದಾತ

'ಅಮೃತ ಸ್ವರೂಪಾಚ' (ಭ. ಸೂ ೬) ಭಕ್ತಿಯು ಅಮೃತ ಸ್ವರೂಪವಾದುದು. ಇದು ಮನುಷ್ಯನಿಗೆ ಪೂರ್ಣತೆಯನ್ನು ದೊರಕಿಸಿ ಕೊಡುವುದು. ಜಗತ್ತಿನಲ್ಲಿ ಭಗವಂತನೊಬ್ಬನೇ ಭೂಮವಸ್ತು; ಅವನೊಬ್ಬನೇ ಕಲ್ಪತರು. ನಮ್ಮ ಮೇಲೆ ಆತನ ಅನುಗ್ರಹವಾದರೆ ನಮ್ಮ ಬಯಕೆಗಳೆಲ್ಲಾ ತಾನಾಗಿಯೇ ಈಡೇರುವುವು. ನಮ್ಮ ಆತೃಪ್ತಿಯು ಅವನ ಅನುಗ್ರಹದಿಂದ ಮಾತ್ರ ಪರಿಹಾರವಾಗ ಬಲ್ಲುದು. ಆತಿರೇಕ ಬಯಕೆಯು ಆರೋಗ್ಯದ ಲಕ್ಷಣವಲ್ಲವೆಂಬುದನ್ನು ಯಾರೂ ಮರೆಯಬಾರದು.

'ಅನ್ಯಾಶ್ರಯಾಣಾಂ ತ್ಯಾಗೋಽನನ್ಯತಾ' (ಭ. ಸೂ. ೧೦) ಅನನ್ಯ ಭಕ್ತಿ ಎಂದರೆ ಇತರ ಆಶ್ರಯಗಳನ್ನೆಲ್ಲಾ ತ್ಯಜಿಸುವುದು. ಮಕ್ಕಳಿಗೆ ತಂದೆ ತಾಯಿಗಳೂ, ಸತಿಗೆ ಪತಿಯೂ, ಲೌಕಿಕ ಮನುಷ್ಯನಿಗೆ ಹಣ ಉದ್ಯೋಗಗಳೂ ಆಶ್ರಯವಾದಂತೆ ಭಕ್ತನಿಗೆ ದೇವರು ಮಾತ್ರ ಆಶ್ರಯ. ಲೌಕಿಕ ವ್ಯವಹಾರವೂ ಆಧ್ಯಾತ್ಮಿಕ ಸಾಧನೆಯೂ ಬಹುಕಾಲ ಜೊತೆ ಜೊತೆಯಾಗಿ ಸಾಗಲಾರದು. ಇವುಗಳು ಭಿನ್ನ ಭಿನ್ನ ಗುಣ ಪ್ರಯೋಜನವಿದ್ದವುಗಳು; ಒಂದು ಉತ್ತರ ಧ್ರುವ, ಇನ್ನೊಂದು ದಕ್ಷಿಣ ಧ್ರುವ.

ಭವರೋಗಕ್ಕೆ ಚಿಕಿತ್ಸೆ

ಭಕ್ತರಿಗೆ ಸ್ತ್ರೀ, ಧನ ಮತ್ತು ನಾಸ್ತಿಕರ ವಿಚಾರ ಹಿತಕರವಲ್ಲ. ಸಾಧಕರಾದ ಸ್ತ್ರೀ ಪುರುಷರಿಬ್ಬರೂ ಒಬ್ಬರು ಮತ್ತೊಬ್ಬರ ಸಂಸರ್ಗದಿಂದ ದೂರವಿದ್ದಷ್ಟೂ ಮೇಲು. ಭಕ್ತಿಯಿಂದ ಉನ್ಮತ್ತನಾಗಿ ನೆಲದ ಮೇಲೆ ಹೊರಳಾಡುತ್ತಿದ್ದ ಸ್ತ್ರೀಯನ್ನು ಪುರುಷನು ವಿಶ್ವಾಸದಿಂದ ಕಾಣಬಾರದೆಂದು ಪರಮಹಂಸರು ಹೇಳುತ್ತಿದ್ದರು. ದೇವರೇ ಪುರುಷನಂತೆ ಬಂದರೂ ಸ್ತ್ರೀ ಅವನಲ್ಲಿ ವಿಶ್ವಾಸವಿಡಬಾರದೆಂದು ಶ್ರೀ ಶಾರದಾ ದೇವಿಯರು ಸ್ತ್ರೀಯರಿಗೆ ಬೋಧಿಸುತ್ತಿದ್ದರು. ರಾಮ ಮತ್ತು ಕಾಮ—ಎರಡೂ ಒಟ್ಟಿಗೆ ಬಾಳಲಾರವು. ಸೂರ್ಯನೂ ಕತ್ತಲೆಯೂ ಜೊತೆಯಲ್ಲಿ ಬಾಳಲು ಸಾಧ್ಯವೆ?

ಕ್ಷಯ, ಪ್ಲೇಗ್, ಕಾಲರಾ ರೋಗದ ವಿಷಕ್ರಿಮಿಗಳು ದೇಹವನ್ನು ಆಕ್ರಮಿಸಿದೊಡನೆ ವೈದ್ಯರ ಬಳಿಗೆ ಓಡುತ್ತೇವೆ. ಹಾಗೆಯೇ ಕಾಮ, ಕ್ರೋಧ, ದುರಭಿಮಾನ, ಸ್ವಾರ್ಥಗಳು ನಮ್ಮ ಬೆನ್ನುಹತ್ತಿದೊಡನೆ ಭಗವಂತನನ್ನು ಪ್ರಾರ್ಥಿಸಬೇಕು. ಭವರೋಗಕ್ಕೆ ಅವನನ್ನು ಮೀರಿದ ವೈದ್ಯರಿಲ್ಲ

ನಮ್ಮಲ್ಲಿ ಅಮೃತವಿದ್ದರೆ ಅದನ್ನು, ವಿಷವಿದ್ದರೆ ಅದನ್ನು ದೇವರಿಗೆ ಅರ್ಪಿಸುವ. ವಿಷವನ್ನು ನುಂಗಿ ಜೀರ್ಣಿಸಿಕೊಳ್ಳಲು ವಿಷಕಂಠನು ಮಾತ್ರ ಶಕ್ತ. ನಾವು ದುಷ್ಕೃತ್ಯಗಳನ್ನು ಒಮ್ಮೆಗೇ ಬಿಡಲಾರೆವಾದರೆ ಕುಕೃತ್ಯಗಳನ್ನು ಮಾಡುತ್ತಿರುವಾಗಲೂ ದೇವರನ್ನು ಚಿಂತಿಸುತ್ತಿರೋಣ. ಕಾಮ, ಕ್ರೋಧ, ಲೋಭ, ಅಭಿಮಾನಗಳನ್ನು ದೇವರ ಸಾಕ್ಷಾತ್ಕಾರದ ಕಡೆಗೆ ತಿರುಗಿಸುವ. ಭಗವಂತನು ನಮ್ಮ ಬೆನ್ನು ಕಾಯುತ್ತಿರುವನೆಂದು ಅಭಿಮಾನಪಡುತ್ತಿರೋಣ.

ಭಕ್ತನು ತನ್ನ ಜೀವನದಲ್ಲಿ ಯಾವ ಕಷ್ಟ ಬಂದರೂ ದೇವರನ್ನು ಆತ ಮರೆಯಲಾರ. ಎಳೆಯ ಮಗವನ್ನು ತಾಯಿಯು ತೊಡೆಯ ಮೇಲಿನಿಂದ ದೂರ ತಳ್ಳಿದರೂ ಅದು ಅಳುತ್ತಾ ತಾಯಿಯ ಹತ್ತಿರವೇ ಬರುವುದಲ್ಲವೆ? ಒಂದು ಕಡೆ ಪ್ರಾಪಂಚಿಕರ ದ್ವೇಷ, ಮತ್ಸರ, ಗರ್ವಗಳೆಂಬ ಕಿಚ್ಚು ಜಗತ್ತನ್ನು ಸುಡುತ್ತಿದ್ದರೆ, ಮತ್ತೊಂದು ಕಡೆ ಭಕ್ತರು ತಮ್ಮ ಅಮೃತಮಯ ಜೀವನದಿಂದ ಈ ಕಿಚ್ಚನ್ನು ಆರಿಸುತ್ತಾ ಬರುತ್ತಿದ್ದಾರೆ. ಇಲ್ಲದಿದ್ದರೆ ಈ ಸೃಷ್ಟಿಯು ಎಂದೋ ನರಕದ ಕೂಪವಾಗುತ್ತಿತ್ತು!

ಭಕ್ತಿ, ಪ್ರೀತಿ, ಸಹಾನುಭೂತಿ, ಪ್ರಾರ್ಥನೆಗಳು—ಜಗತ್ತಿನಲ್ಲಿ ಅಸಮಾನವಾದ ಶಕ್ತಿಗಳು. ಹೈಡ್ರೋಜನ್ ಬಾಂಬು, ಆಟಂ ಬಾಂಬುಗಳು ಸಾಧಿಸಲಾರದುದನ್ನು ಈ ಸದ್ಗುಣಗಳು ಸಾಧಿಸಬಲ್ಲವು. ಆಟಂ ಬಾಂಬು ಜಗತ್ತನ್ನೇ ನಾಶಮಾಡಬಲ್ಲುದಲ್ಲದೆ, ಮನುಷ್ಯರ ಹೃದಯದಲ್ಲಿ ಅಡಗಿರುವ ಅಜ್ಞಾನ, ಸ್ವಾರ್ಥ, ಅಹಂಕಾರಗಳನ್ನು ನಿರ್ನಾಮಮಾಡಬಲ್ಲುದೆ? ಭಕ್ತರು ಈ ಅಸಾಧ್ಯ ಕಾರ್ಯವನ್ನೂ ಸಾಧ್ಯಮಾಡಬಲ್ಲರು. ಮೇಲಿನಿಂದ ಬೀಳುವ ಸಿಡಿಮದ್ದಿಗಿಂತ ಭಕ್ತರ ಬಾಯಿಯಿಂದ ಹೊರ ಬೀಳುವ ಒಂದೊಂದು ನುಡಿಯೂ ಹೆಚ್ಚು ಪರಿಣಾಮಕಾರಿಯಾದುದು.

೦೦ ೦೦ ೦೦

ನಮ್ಮ ಹೃದಯವನ್ನೆಲ್ಲಾ ಆವನಿಗೆ ತೆತ್ತರೆ, ಅವನು ಸಂಪೂರ್ಣ ತನ್ನನ್ನೇ ನಮಗೆ ತೆರುವನು! ನಮ್ಮ ಅಲ್ಪ ಜೀವನವನ್ನು ಆವನಿಗೆ ತೆತ್ತರೆ, ನಾವು ಅವನ ಭೂಮದಲ್ಲಿ ಐಕ್ಯರಾಗುವೆವು. ಶ್ರೀ ನಾರದರ ಅಭಿಪ್ರಾಯವೇ ಇದು!

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ
ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ!
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ,
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಮ್ಮ ಸಾಹಿತ್ಯದಲ್ಲಿ ಜಾನಪದ ಗೀತೆಗಳು

ಭಾಷೆಯಂತೆ ಸಾಹಿತ್ಯವೂ ಪ್ರೌಢವಾಗಿಯೇ ಮೊದಲಾಗಲಿಲ್ಲ. ಪ್ರೌಢ ಭಾಷೆಯಂತೆಯೇ ಪ್ರೌಢ ಸಾಹಿತ್ಯವೂ ಜನಸಾಧಾರಣರಿಂದ ದೂರ ಸರಿದು ಪಂಡಿತರ ಜೋಳಿಗೆ ಸೇರಿದೆ. ಆದರೂ ಪಾಮರ ಜನತೆ ತನಗರಿತಿರುವ ನಡೆನುಡಿಯಲ್ಲಿ ತನ್ನ ವಿವಿಧ ಭಾವನೆಗಳನ್ನು ವ್ಯಕ್ತಪಡಿಸಲು ಸಂಕೋಚಪಡಲಿಲ್ಲ. ಎಂತಲೇ ಜನಪದ ಗೀತೆಗಳೂ ಸಾಹಿತ್ಯದ ಒಂದು ಪ್ರಕಾರವಾದುವು. ಈ ಗೀತೆಗಳ ಭಾವಸ್ಪಂದನದ ಕಿಂಚಿತ್ ಪರಿಚಯವನ್ನು ಶ್ರೀ 'ಸಿರಿಪತಿ'ಯವರು ಪ್ರಸ್ತುತ ಲೇಖದಲ್ಲಿ ಮಾಡಿ ಕೊಟ್ಟಿದ್ದಾರೆ.

ಶ್ರೀ 'ಸಿರಿಪತಿ'

ನಮ್ಮ ಹಳ್ಳಿಯಲ್ಲಿಯ ಹಲವಾರು ವಿಷಯಗಳ ಕುರಿತು ಹಾಡುಗಳನ್ನು ಕಟ್ಟಿ ಹಾಡುವ ನಮ್ಮ ಹಳ್ಳಿಗರು ಅಶಿಕ್ಷಿತರಾದರೂ ವರಕವಿಗಳು. ಅವರಿಂದ ರಚಿತವಾದ ಪುಟ್ಟಪದ್ಯಗಳು ಅನಾದಿ ಕಾಲದಿಂದಲೂ ನಮ್ಮ ಸಾಹಿತ್ಯದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿವೆ. ಹಳ್ಳಿಯ ಜನರ ನಿಷ್ಕಪಟ ಹಾಗೂ ರಸಿಕ ಮನೋವೃತ್ತಿಯು ಹಳ್ಳಿಯ ನಿಸರ್ಗ ರಮ್ಯವಾದ ಸಹಜ ಸೌಂದರ್ಯವನ್ನು ಇನ್ನೂ ಮೆರುಗುಗೊಳಿಸಿದೆ. ಹಳ್ಳಿಯ ಹೆಂಗಸರು, ಮಕ್ಕಳು, ತಮ್ಮ ದೈನಂದಿನ ಕೆಲಸಮಾಡುವಾಗ ಬೇಸರಿಕೆ ಕಳೆಯಲೆಂದು ಹಾಡುವಾಗ ತಮ್ಮ ಕ್ಲೇಶಾಭಾವವನ್ನೆಲ್ಲ ಮರೆತು, ಜ್ಞಾನ ಲೋಕದಲ್ಲಿ ವಿಹರಿಸುತ್ತ ಹಳ್ಳಿಯ ಜೀವನದ ನೈಜ ಚಾರಿತ್ರ್ಯದ ಹಾಗೂ, ಸಾಮಾಜಿಕ, ಧಾರ್ಮಿಕ, ನೈತಿಕ ಮಟ್ಟವನ್ನು ತಮ್ಮ ಪದ್ಯರೂಪದಲ್ಲಿ ಪರಿಚಿತಗೊಳಿಸುವರು. ಈ ಕೃತಿಗಳು ನಮ್ಮ ಸಾಹಿತ್ಯದ ಕವನ ಕಲೆಯ ಬುನಾದಿಯೂ ಗಿದ್ದು—ಅಶಿಕ್ಷಿತ ಹಳ್ಳಿಗರ ಪವಿತ್ರ ಕಾಣಿಕೆಯೂ ಗಿರುತ್ತದೆ.

ಬಡತನದ ಬೇಗೆಯಿಂದ ನರಳುವ ಮನೆಯಲ್ಲಿ ನೆರೆದು ಕುಳಿತ ಹೆಣ್ಣಿನ ಮದುವೆಯ ವಿಚಾರ ಪ್ರತಿಯೊಬ್ಬರಲ್ಲಿಯೂ ಚಿಂತೆಯನ್ನೂ ಅಸಹಾಯಕತೆಯನ್ನೂ ಉಂಟುಮಾಡಿದೆ, ಹಳ್ಳಿಗರಿಗೆಹೆಣ್ಣು ಹೊರಹಾಕುವದು ಬಹು ಗಡಚಾದ ಹಾಗೂ ಜವಾಬುದಾರಿ ಸಮಸ್ಯೆ.

ಅಕ್ಕಿ ಕುಟ್ಟಾಲಿಲ್ಲೆ
ರೊಕ್ಕ ಕೈಯಲಿಲ್ಲೆ,
ಈ ಕಾಲವೆಲ್ಲಿ ಮದುವೆಯು।
ತಾಯಮ್ಮ,
ಮನೆಯಲಿ ಮಾಲಕ್ಷ್ಮಿ ನೆರೆದಾಳು.

ಮಗಳನ್ನು ನೋಡಿ ಸಂಬಂಧ ಮಾಡಿಕೊಳ್ಳಲು ಬಂದ ನೆಂಟರು—ಹೊರಗೆ ಹೊರಡುವ ಸನ್ನಿವೇಶ. ಲಗ್ನದ ನಿರ್ಣಯದ ಕುರಿತು ಕಾತರಳಾದ ತಾಯಿಯೊಬ್ಬಳು ಈ ರೀತಿ ನುಡಿಯುವಳು.

ಮಗಳ ಮಾತನು ಕೇಳಿ,
ಮುಗುಳು ನಗೆಯನು ಮಾಡಿ,
ಅಪ್ಪಯ್ಯ ಒಳಗೆ ಹೋದರು।
ಏನೆಂದು?
ಮಗಳನಿನ್ನೆಲ್ಲಿ ಕೊಡುವುದು.

ಮದುವೆಯಾದ ನಂತರ ಹೆಣ್ಣು ಮಗಳು ತನ್ನ ಗಂಡನನ್ನು ಯಾವ ರೀತಿಯಿಂದ ಹಿಂಬಾಲಿಸಿ–ಕರ್ತವ್ಯಜ್ಞಳಾಗಿ ವರ್ತಿಸುವದೆಂದು ಕೆಳಗಿನ ಪದ್ಯದಲ್ಲಿ ತಿಳಿಸುವರು.

ಗಂಡನ ಬಣ್ಣವೇ,
ಕಂಡೆನೆಂಬವರಿಲ್ಲೆ,
ಹೆಂಡತ್ತಿನೊಳಗೆ ಬಸವನೇ ॥
ಹೆಂಡತ್ತಿನೊಳಗೆ ಬಸವನೇ ಹೆಜ್ಜೆಯ,
ಕಂಡೆನೆಂಬವಳೇ ಕಡು ಜಾಣೆ

ಹೆಣ್ಣನ್ನು ನೆಂಟರ ಸ್ಥಿತಿಯನ್ನರಿತು ಕೊಡಬೇಕು. ಮನೆಯಿಂದ ಹೊರಗಾದ ಹೆಣ್ಣು ತವರನ್ನು ನೆನಸಿ ಮರುಗುವಂತಾಗದಿರಲೆಂದು ಹಾರೈಸಿ ಈ ಕೆಳಗಿನ ಪದ್ಯಗಳು ಸಾರುತ್ತಿವೆ.

ಕಬ್ಬು ಸಿಹಿ ಎಂದ್ಹೇಳಿ,
ಬೇರೆಲ್ಲ ಸಿಹಿಯಲ್ಲ,
ಬಚ್ಚಿಷ್ಟಗ್ಹೆಣ್ಣ ಕೊಡಬಿರು॥ತಾಯಮ್ಮ
ಹಬ್ಬ ಜಾತ್ರೆಯೇ ಸಿರಿಯಾಲೊ,—

ದೂರದಲ್ಲಿ ಗೆಳತಿಯ ಗಂಡ ಬರುತ್ತಿದ್ದುದನ್ನು ಕಂಡು ಗೆಳತಿಯರು ತಮ್ಮ ಧನಿಯಳಿಗೆ ಈ ಕೆಳಗಿನಂತೆ ತಿಳಿಸುತ್ತಾರೆ

ಕೈಯ ಕಂಕಣ ದವ್ಳೆ
ಮೈಯ ಭೂಷಣದವಳೆ,
ಸಣ್ಣ ಧನಿಯಳೇ ಕೋಯ್ಹೇಳೆ ॥
ಬಾಲಮ್ಮ
ಉಯ್ಯಾಲಿಂದಿಳಿಯೇ, ದೊರೆ ಬಂದ.

ತಮ್ಮ ಧನಿಯರ ಮಗಳಿಗೆ ಸಿಕ್ಕಿದ ಗಂಡನನ್ನು ಕುರಿತು ಕೆಳಗಿನಂತೆ ಹಳ್ಳಿಯ ಹೆಣ್ಣು ಮಕ್ಕಳು ಹಾಡುವರು.

ಉಂಡುಂಡಿ ಕೈಗೆ,
ಗೆಂಡ ಪಚ್ಚಿಯ ಬಾಳಿ,
ಚೆಂಡಾಡು ಕೈಗೆ ಜೆಳಕಿಯು।
ಬಾಲಮ್ಮಗೆ,
ಗಂಡ ಸಿಕ್ಕಿದನೇ ದೊರೆಮಗ—
ರಾಯರು ಮೆಟ್ಟುವ ಮೆಟ್ಟು
ಚರಮುರಿ ಚೀಕಿನಿ ಮೆಟ್ಟು,
ಮೇಲೊಂದೇತರದ ಹುರಗುಂಜಿ।
ಮೆಟ್ಟ ಮೆಟ್ಟಿ
ರಾಯರ್ನಮ್ಮಲ್ಲಿಗೆ ಬರುತಾರೆ.

ಚತುರರಾದ ಹಾಡುಗಾರ್ತಿಯರು ಹಳ್ಳಿಗರ ಮುಗ್ಧ ಹಾಗೂ—ಸಹಜ—ಪ್ರೇಮ—ಪ್ರಣಯ ಸನ್ನಿವೇಶಗಳನ್ನು ಕುರಿತು ಮಾರ್ಮಿಕವಾಗಿ ಹಾಡಿದ್ದಾರೆ. ಪದ್ಯ ರೂಪದಲ್ಲಿ ಅವರ ಸಂಭಾಷಣೆ ಕೇಳಿರಿ:—

ಹೆಣ್ಣು: ನಿಲ್ಲಿಸೋ ನಿಲ್ಲಿಸು,
ನೀಲಮಾರದ ಕುದುರಿ,
ನಿಲ್ಲಿಸೀ ಮಲ್ಲಿಗಿ ವನದಲ್ಲಿ। ಎಲೊ
ಜಾಣ—
ಬಲ್ಲಿದರ ಮಗಳೆ ಸವಣಿಲ್ಲ.

ಗಂಡು: ದುಂಡು ಮಲ್ಲಿಗಿ ಹೂಗ
ಕೊಂಡು ಮುಡಿಯುವಿಯೇನೆ,
ಕಂಡವರಲ್ಲೆ ಗುಣವೇನೆ॥ಎಲೆ ಜಾಣೆ,
ಕೊಂಡು ಮಾರುವನಾ ಹಿತವೇನೆ—
ಹೆಣ್ಣು: ಅಂದಕ ಚೆಂದಕ ಸೆಟ್ಟಿ
ಮುಂದಕ ರುಮಾಲ ಕಟ್ಟಿ,
ಹಣ್ಣಡಕಿ ಕಟ್ಟಿ ಸಂದಾರ ॥
ನಿನ್ನಂಗಡಿಲಿ,
ಹೂಗೂಂಟೇ ಸೆಟ್ಟಿ ತುರುಬಿಗೆ—
ಗಂಡು: ಹೂಗೇನೊ ಇದೆ ಹೆಣ್ಣೆ–
ನಿನ್ನೆಯ ಹಳೆ ಹೂಗು,
ಒಪ್ಪದದು ನಿನ್ನ ತುರುಬಿಗೆ। ಎಲೆ
ಹೆಣ್ಣೆ,
ನಾಳೆ ತರಿಸುವೆ ಹೊಸಹೂಗು.—

ವರ್ಣಾಶ್ರಮ ಧರ್ಮದಂತೆ—ಆರ್ಯ ಕಾಲದಿಂದಲೂ,ಸ್ಪೃಶ್ಯಾಸ್ಪೃಶ್ಯತೆ ನಡೆದು ಬಂದಿದ್ದು ಅದು ನಮ್ಮ ಹಳ್ಳಿಯಲ್ಲಿ ಇಂದಿಗೂ ಇದೆ—

ಮೇಲ್ಜಾತಿಯ ಗಂಡಸ :—

ಅಂಚಿನ ಮೇಲೆ ಕೂತ್ಕಂಡು,
ಮುಂಚ್ಹುಲ್ಲ ಕೊಯ್ವ ಹೆಣ್ಣೆ,
ಬಲಗೈಯಲ್ಸುಣ್ಣ ಕೊಡು ಹೆಣ್ಣೆ—

ಎಂದು ಅಸ್ಪೃಶ್ಯ ಹೆಣ್ಣಿನೊಡನೆ ಸುಣ್ಣ ಕೇಳಲು—ತನ್ನ ಕೈಯ ಸುಣ್ಣವನ್ನು ಮೇಲ್ಜಾತಿಯವರಿಗೆ ಇತ್ತಲ್ಲಿ ತನಗೇನಾದರೂ ಪಾತಕ ತಾಗೀತೆಂದು ಸಂಕೋಚಗೊಂಡ ಆವಳಿಗೆ ಆ ಗಂಡುಸು ನುಡಿಯುತ್ತಾನೆ:—

ಚಿಪ್ಪಿಯ ಸುಣ್ಣಕ್ಕೂ,
ಪಂಚಬಳ್ಳಿಯ ಯಲೆಗೂ,
ಶಾಸ್ತ್ರವೇನ್ಹೆಣ್ಣೆ ಮೆಲ್ಲಲಿಕ್ಕೂ—

ಜೂಜಾಡುವುದು, ಕಳ್ಳು ಕುಡಿಯುವದು ಮುಂತಾದ ದುಶ್ಚಟಗಳಿಂದ ಹಳ್ಳಿಯ ಹುಂಬರೆಷ್ಟೋ ಜನ ತಮ್ಮ ಮನೆ ಮಡದಿ ಮಕ್ಕಳನ್ನು ಮರೆತು ತಮ್ಮ ಸ್ವತ್ತನ್ನೆಲ್ಲ ವಿಷಯೋಪಭೋಗಕ್ಕೆ ಖರ್ಚುಮಾಡಿ ಗತಿಹೀನರಾಗುತ್ತಿದ್ದ ವಿಷಯದ ಮೇಲೆ ಕರುಣಾಜನಕ ಸನ್ನಿವೇಶವನ್ನು ಈ ಪದ್ಯಗಳಿಂದ ತಿಳಿಯಬಹುದು.

ಲಿಂಬಿಹಣ್ಣ ತಕ್ಕಂಡು,
ಅಂಬಾರಕ ಜೂಜಾಡಿ —
ನಂಬಿಸಿಹೋದ ಮನೆಯಾತ॥
ಬಪ್ಪರಗುಂಟೆ,
ರಂಬೆಯನ್ನನವೆ ಕವೆದಾವ್ರು ॥
ಹಾಸಿಗೆ ಹಾಕಿಸಿ
ಯಾಕೆ ನಿಂತಿದೆ ನೀನು,
ಆತ ಸೂಳೆಯರ ಮನೆಗ್ಹೋದ ॥
ಎಲೆ ಹೆಣ್ಣೆ,
ಜೋತಿಗೂ ಸೆರಗ ಮರೆಮಾಡು.

ಅಬಲೆಯಾದ ಹೆಣ್ಣು-ಸಾಂತ್ವನದಿಂದ, ತನ್ನ ಪತಿವ್ರತಾ ಧರ್ಮದಿಂದ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿ ಹರಕೆ ಹೊತ್ತು, ಅಡ್ಡದಾರಿಗೆ ಬಿದ್ದ ಪತಿಯಲ್ಲಿ ಬದಲಾವಣೆ ಕಾಣುವ ಹಂಬಲದಲ್ಲಿ ಜೀವನದಲ್ಲಿ ಕೊರಗಲೇಬೇಕು. ಇದು ವಿಧಿ ವಿಲಾಸ!

ಅದಕ್ಕೆ ಮುಂದೆ ಬೋಧಿಸುತ್ತಾರೆ:

ಜೋತಿಗೂ ಸೆರಗ ಮರೆಮಾಡು।
ಎಲೆ ಹೆಣ್ಣೆ,
ಹನ್ನೆರಡು ವರ್ಷವರಳಿಯೂ,—
ಹನ್ನೆರಡು ವರುಷ ಅರಳಿ ಪೂಜೆಯ
ಮಾಡು
ಪುಣ್ಯೆದ್ರೆ ಪುರುಷದೊರತಾನೂ.

ಹಳ್ಳಿಗರು ಮಾಡುವ ಪ್ರತಿದಾನ ಧರ್ಮಕ್ಕೂ ಹರಕೆ ಹೊತ್ತಿರುವದೇ ಕಾರಣ—ಮನೆಯಲ್ಲಿ ಕೆಂಪು ಇರುವೆ ಸಂಚರಿಸಿದರೆ-ಕಜ್ಜಾಯ ಮಾಡಿ ತಿನ್ನೋದು ಒಂದು ಹರಿಕೆ ಇಲ್ಲಿ ನೋಡಿ "ಮಜ್ಜಿಗೆ ದಾನ"ದ ಪದ್ಯ—

ಹೆದ್ದಾರಿ ಮನಿಯೋಳು,
ಹೆಗ್ಗಡತಿ ಬಾಲಮ್ಮ,
ಮಜ್ಜಿಗಿ ದಾನ ಮನೆಯಲ್ಲಿ।
ಎನೊಂದ್ರೆ,
ಗೆಜ್ಜಿಕಾಲ್ಮಗನ ಪಡುಕೆಂದು.—

ಹಳ್ಳಿಗರ ಅಂಧವಿಶ್ವಾಸದಲ್ಲಿಯೂ, ದೃಢ ಸ್ವಭಾವದಲ್ಲಿಯೂ ಮುಗ್ಧತೆ—ಎದ್ದು ತೋರುತ್ತಿದೆ. ಈ ಕೆಳಗಿನ ಪದ್ಯಗಳಲ್ಲಿ ಹೂವನ್ನರ್ಪಿಸುವ—ಹಾಗೂ ಗಂಗಾಭಿಷೇಕ ಗೈಯುವ – ಹರಿಕೆ ಹೇಳಿ—ಅದರಿಂದ ಅತೃಪ್ತವಾದ ಹಳ್ಳಿಯಹೆಣ್ಣೊಂದು ತನ್ನ ಹರಿಕೆಯಲ್ಲೇನಾದರೂ ಲೋಪವಿರಬಹುದೆಂದು—ಈ ರೀತಿ ಹಾಡುತ್ತಾಳೆ—

ನಾರಾಯಣ ಸ್ವಾಮಿಗೆ
ಏನೆಂಜಲಾದಾನೆ,
ನೀರೆಂಜಲಾದೊ ನೊಣಕೂತೆ।
ನಾರಣ ಸ್ವಾಮಿ,
ಹೂಗೆಂಜಲಾದೊ ಹುಳಕೂತೆ,—

ತಾಯಿಯೊಬ್ಬಳು ಮಗಳಿಗೆ ಕೆಳಗಿನಂತೆ ಬೋಧಿಸುತ್ತಾಳೆ.

ಬಾಳೆಪಟ್ಟೆಯ ಶೀರೆ,
ಬಾಳೊತ್ತಿ ಉಡದಿರು,
ಬಾಗಿಲಿಗು ಸಾಚಿ ನಿಲ್ಲದಿರು।
ಎಲೆ ಹೆಣ್ಣೆ—
ಭಾವಗುತ್ತುರನೆ ಕೊಡದಿರು.

ಎಲ್ಲಾ ತರದ ಫೋಟೋ ಮತ್ತು ಆರ್ಟ್
ಕೆಲಸಗಳಿಗೆ ಸಂದರ್ಶಿಸಿರಿ

ನಾಯಕ್ ಸ್ಟುಡಿಯೋ,

ಲೈಟ್ ಹೌಸ್ ಹಿಲ್ ರೋಡು, ಹಂಪನಕಟ್ಟೆ, ಮಂಗಳೂರು-1.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ–

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಹಿಂದುಳಿದ ವರ್ಗಗಳ ಅಭಿವೃದ್ಧಿ

(೬ನೇ ಪುಟದಿಂದ)

ರವು ಉಚಿತವಾಗಿ ಜನಾಂಗಕ್ಕೆ ನೀಡಲು ಸಿದ್ಧವಾದರೆ ಗ ವಿದ್ಯಾಭ್ಯಾಸದಲ್ಲಿನ ಹಿಂದುಳಿದಿರುವಿಯನ್ನು ನೀಗಲು ಅವಕಾಶವುಂಟಾದೀದು ಯೋಚಿಸಬಹುದು.

ಲೋಕದಲ್ಲಿ ಕಂಡುಬರುವ ಸಕಲ ಧ ಅವನತಿಗಳಿಗೂ ಮೂಲಕಾರಣ ಆ ಕ ಅವನತಿ-ಬಡತನ ಎಂದರೆ, ಅದರ ಅತಿಶಯೋಕ್ತಿಯೇನಿಲ್ಲ. ಲೋಕದಲ್ಲಿ ಬ್ಬ ವ್ಯಕ್ತಿಯ ಗುಣನಡತೆ, ನೀತಿ ಅನೀ, ವಿದ್ಯೆ-ಅನಕ್ಷರತೆ ಈ ದ್ವಂದ್ವಗಳನ್ನೆಲ್ಲ ಸಿ-ಸಮಾಜದಲ್ಲಿ ಅವನಿಗೆ ಸ್ಥಾನಮಾಗಳನ್ನು ಗಳಿಸಿಕೊಡುವಲ್ಲಿ ಅವನ ಆ ಕ ಸ್ಥಿತಿಯು ಮುಂದಾಗುತ್ತದೆ. ಈ ರಣಕ್ಕಾಗಿಯೇ ನೀತಿಕಾರರು

ಪಣಮುಳ್ಳವನೆ ಕುಲೀನಂ
ಗುಣಿ ರೂಪಾಢ್ಯಂ ಸಮಸ್ತ ವಿದ್ಯಾ ನಿಪುಣಂ ||
ಎಣಿಸಲ್ ವಾಗ್ಮಿಯು ಮಾತನೆ
ಗುಣಮೆಲ್ಲಂ ಒಗದಿ ಪಣಮನಾಶ್ರಯಿಸಿರ್ಕುಂ ||

ಎಂದು ಸಾರಿದ್ದಾರೆ. ಆದುದರಿಂದ ಉ ಮ ಸಂಸ್ಕಾರ ವಿಹೀನರಾದ ಅನೇಕ ಮಂದಿ ಯುಕ್ತಾಯುಕ್ತ, ಪುಣ್ಯ ಪಾಪ ವುಗಳ ವಿವೇಚನೆ ಮಾಡದೆ, ಧನಾರ್ಜನೆಯೊಂದನ್ನೇ ತಮ್ಮ ಮುಖ್ಯ ಜನ್ಯೋದ್ದೇಶವೆಂದುಕೊಂಡು ಮೊದಲು ಧನವಂತರಾಗ ತರುವಾಯ ಇತರ ವಿಚಾರಗಳನ್ನು ಕುರಿತು ಯೋಚಿಸುವುದು ಕಂಡುಬಂದಿದೆ. ಹೀಗೆ ಧನಾರ್ಜನಾ ತತ್ಪರರಾದವರಿಗೆ ಕೇವಲ ಪುಣ್ಯ ಪಾಪ ಯೋಗ್ಯಾಯೋಗ್ಯ ವಿಚಾರವಿರುವುದಿಲ್ಲವೆಂಬುದು ಮಾತ್ರವೇ ಅಲ್ಲ, ಅವರು ತಮ್ಮ ಬಂಧು ಬಾಂಧವರು ಅಣ್ಣ ತಮ್ಮಂದಿರು ಮುಂತಾದ ಆತ್ಮೀಯ ಸಂಬಂಧವನ್ನು ಲಕ್ಷ್ಯಕ್ಕೆ ತರುವುದಿಲ್ಲ. ಈ ಆರ್ಥಿಕ ಅವನತಿಯು ಜಾತಿಮತಗಳ ಮೇಲು ಕೀಳು ಭಾವಗಳನ್ನು ಅವಲಂಬಿಸಿಲ್ಲ. ಆದುದರಿಂದ ಪಾಪಭೀತ ಮನೋಭಾವದ, ಯುಕ್ತಾಯುಕ್ತ ವಿವೇಚನೆಯನ್ನು ಲಕ್ಷ್ಯದಲ್ಲಿಟ್ಟು ನಡೆವ ಉನ್ನತ ಸಂಸ್ಕೃತಿಯನ್ನು ಗಳಿಸಿರುವ ಬ್ರಾಹ್ಮಣ ವರ್ಣದಲ್ಲೇ ಈ ಬಡತನವು ಮನೆಮಾಡಿಕೊಂಡಂತಿದೆ. ಅವರ್ಣದಲ್ಲೂ ಹಲಕೆಲವರು ಉತ್ತಮ ಆರ್ಥಿಕ ಸ್ಥಿತಿಯಲ್ಲಿರುವಂತೆ ಕಂಡುಬರುವುದು. ಆದರೆ ಹಾಗೆ ಕಂಡುಬರುವುದು ಆರ್ಥಿಕ ಸುಸ್ಥಿತಿಯಿಂದಲ್ಲ ಮತ್ತೇನೆಂದರೆ ಅವರ್ಣಕ್ಕೇ ಸ್ವಾಭಾವಿಕವಾಗಿ ಬಂದ ಸಾಂಸ್ಕೃತಿಕ ಮಟ್ಟದ ಮಹಿಮೆಯಿಂದ ಇಂದು ಆರ್ಥಿಕವಾಗಿ ಜನಾಂಗದಲ್ಲಿ ಹಿಂದುಳಿದವರೆಂದು ಪರಿಗಣಿಸುವ ವ್ಯವಸ್ಥೆಯು ರಾಜ್ಯಾಂಗದಲ್ಲಿ ಆಚರಣೆಗೆ ಬರುವುದಾದರೆ, ಇತರ ಜಾತಿಯವರಂತೆಯೇ ಬ್ರಾಹ್ಮಣ ವರ್ಗಕ್ಕೂ ಹಿಂದುಳಿದವರಲ್ಲಿ ಒಂದು ಪಾಲು ದೊರೆಯಬೇಕಾದೀತು.

ಇನ್ನು ವೃತ್ತಿಮೂಲಕವಾಗಿ ಹಿಂದುಳಿದಿರುವ ಪಂಗಡದವರನ್ನು ಕುರಿತು ವಿವೇಚಿಸೋಣ! ಅನೇಕ ಪಂಗಡಗಳವರು ವಂಶ ಪಾರಂಪರ್ಯವಾಗಿ ಅನೇಕ ಹೀನ ವೃತ್ತಿಗಳನ್ನು ಕೈಕೊಂಡಿದ್ದಾರೆ. ಬೀದಿಗಳನ್ನು ಗುಡಿಸುವುದು, ಹೇಸಿಗೆಯನ್ನೆತ್ತುವುದು, ಮುಂತಾದುವು ಮನುಷ್ಯವರ್ಗಕ್ಕಿರುವ ಆತ್ಮಗೌರವವನ್ನೇ ಕುಂದಿಸತಕ್ಕ ಕೆಲವು ವೃತ್ತಿಗಳು. ನಾಗರಿಕ ದೇಶಗಳಲ್ಲಿ ಇಂಥವುಗಳನ್ನು ನಿರ್ಮೂಲಿಸಿ. ಮಾನವವರ್ಗಕ್ಕೆ ಗೌರವವನ್ನು ತಂದುಕೊಡುವಂತಹ ಆಧುನಿಕ ಮಾರ್ಗಗಳಿಂದ ಆಯಾ ಕಾರ್ಯಗಳನ್ನು ನೆರವೇರಿಸಿ ಮಾನವ ಗೌರವವನ್ನು ರಕ್ಷಿಸುತ್ತಿರುವುದು ಪ್ರಶಂಸಾರ್ಹವಾಗಿದೆ. ಜೀವನಕ್ಕಾಗಿ ಬಹು ಕೀಳ್ಮಟ್ಟದ ಕೈಗಾರಿಕೆ-ಎಂದರೆ ಬಿದಿರು, ಬೆತ್ತ, ಎಲೆ, ನಾರು ಮುಂತಾದುವುಗಳಿಂದ ಜನತೆಯ ಉಪಯೋಗಕ್ಕಾಗಿ ಬುಟ್ಟಿ, ಮೊರ, ಚಾಪೆ, ಹಗ್ಗ ಹುರಿಗಳು ಮುಂತಾದುವುಗಳನ್ನು ತಯಾರಿಸುವ ಕೆಲಜಾತಿಗಳವರು ಬಹು ಕೀಳ್ಮಟ್ಟದಲ್ಲಿದ್ದಾರೆ ಸರ್ಕಾರವು ಜಾತೀಯ ದೃಷ್ಟಿಯಿಂದ ಅವರನ್ನು ಉದ್ಧರಿಸುವ ಕಾರ್ಯಕ್ರಮವನ್ನು ಅನುಸರಿಸುವುದಕ್ಕಿಂತಲೂ—ಆರ್ಥಿಕ ದೃಷ್ಟಿಯಿಂದ—ಅವರ ಉದ್ಧಾರಕ ಪ್ರಯತ್ನ ನಡೆಸಿದರೆ ನಿಜವಾದ ಉದ್ಧಾರವಾದೀತು—ಉಪಕಾರವಾದೀತು.

ಏಕೆಂದರೆ-ಪೂರ್ವದಲ್ಲಿ 'ಗುಣಕರ್ಮ ವಿಭಾಗಶಃ' ಎಂದು ಸೃಷ್ಟವಾದ ಚತುರ್ವರ್ಣಗಳು, ಇಂದಿನ ಕಾಲಸ್ಥಿತಿ ಅನುಸರಿಸಿ ಬೆಳೆದಿರುವ ನಾನಾರೀತಿಯ ವಿಧ ಕರ್ಮಗಳ ಗುಣಧರ್ಮವನ್ನನುಸರಿಸಿ, ನಾಲ್ಕಕ್ಕೇ ನಿಂತಿಲ್ಲ—ನಾನೂರಾಗಿವೆ. ಸಾವಿರ ಜಾತಿಗಳಾಗಿವೆ. ಆದುದರಿಂದ ಜಾತೀಯ ದೃಷ್ಟಿಯಿಂದ ಸಹಸ್ರಾರು ಜಾತಿಗಳಿಗೆ ಪ್ರೋತ್ಸಾಹ, ಪ್ರಾತಿನಿಧ್ಯ ಕೊಡುತ್ತ ಹೋದಲ್ಲಿ ಅದು ಕೊನೆಗಾಣದ ಪ್ರಕ್ರಿಯಾಗಿ ಉಳಿಯುವುದು. ಹಾಗಲ್ಲದೆ ಆರ್ಥಿಕವಾಗಿ ಹಿಂದುಳಿದವರಿಗೆ ಪ್ರೋತ್ಸಾಹ ಕೊಡುವುದಾದರೆ, ಉತ್ತಮ, ಮಧ್ಯಮ, ಅಧಮ ಎಂಬ ಜಾತೀಯ ವಿಂಗಡನೆಯಿಲ್ಲದೆ ಆರ್ಥಿಕವಾಗಿ ಹಿಂದುಳಿದಿರುವ ಸಕಲ ಜಾತಿ ಕುಲಗಳವರಿಗೂ ನಿಷ್ಪಕ್ಷಪಾತ ಪ್ರೋತ್ಸಾಹ ದೊರೆಯುವ ಅವಕಾಶವೊದಗಿ ಪ್ರಜಾರಾಜ್ಯದ ನಿಜವಾದ ಧ್ಯೇಯವು-ದೇಶದ ಪ್ರಜಾವರ್ಗಕ್ಕೆಲ್ಲ ಮಾರ್ಗದರ್ಶಕವಾಗುವುದು.

ಜಾತೀಯ ದೃಷ್ಟಿಯಿಂದ ಹಿಂದುಳಿದವರಿಗೆ ಪ್ರೋತ್ಸಾಹ ನೀಡುವುದೆಂಬ ದೃಷ್ಟಿಯಿಂದ ಇನ್ನೂ ಒಂದು ಅನ್ಯಾಯವು ನಡೆಯಲು ಆಸ್ಪದವಿದೆ. ಸರ್ಕಾರದಿಂದ ದೊರೆವ ಈ ಪ್ರೋತ್ಸಾಹದ ಲಾಭವನ್ನು ಆಯಾ ಜಾತಿಗಳಲ್ಲಿರುವ ಸಚಿವರು, ಮುಖಂಡರುಗಳು ಮುಂತಾದವರ ಮೂಲಕ ವಿಶೇಷ ಪ್ರಭಾವ ಬೀರಿ ಶ್ರೀಮಂತ ವ್ಯಕ್ತಿಗಳೂ ಪಡೆಯುವುದು ಸಾಧ್ಯವಾಗುವುದು. ಇದರಿಂದ ಆಯಾ ಜಾತಿಗಳಲ್ಲೇ ನಿಜವಾಗಿ ವಿದ್ಯಾವಂತರಾಗಿ ಆರ್ಥಿಕ ದುಸ್ಥಿತಿಯಲ್ಲಿರುವವರಿಗೆ ದೊರೆಯದೇ ಹೋಗಬಹುದು.

ಆದುದರಿಂದ ಸರ್ಕಾರದವರಿಗೆ—ಹಿಂದುಳಿದವರಿಗೆ ಪ್ರೋತ್ಸಾಹ ಕೊಟ್ಟು ಅವರನ್ನು ಉದ್ಧರಿಸಬೇಕು ಎಂಬ ವಾಸ್ತವ ಧ್ಯೇಯವಿದ್ದಲ್ಲಿ—ಸ್ವಾರ್ಥ ಮೂಲವಾದ ಈ ಜಾತಿ ಮೂಲಕ ಪ್ರೋತ್ಸಾಹ ಕೊಡುವ ಪದ್ಧತಿಯನ್ನು ತಪ್ಪಿಸಿ—ಆರ್ಥಿಕ ದೃಷ್ಟಿಯಿಂದ ಹಿಂದುಳಿದಿರುವವರನ್ನೇ ನಿಜವಾದ ಹಿಂದುಳಿದವರೆಂದು ತೀರ್ಮಾನಿಸಿ ಜಾತಿ-ಕುಲಗಳ ವಿಚಾರವಿಲ್ಲದೆ, ಅಂತಹ ಬಡದೀನ ವಿದ್ಯಾರ್ಥಿಗಳಿಗೆ (ವಿದ್ಯಾರ್ಥಿ) ವೇತನ, ಅಂತಹ ವಿದ್ಯಾಭ್ಯಾಸಮಾಡಿದವರಿಗೆ ನೌಕರಿ, ಬಡತಿ ಮುಂತಾದ ರೀತಿಯಿಂದ ಉತ್ತೇಜನ ಕೊಟ್ಟಲ್ಲಿ-ನಿಜವಾದ ಪ್ರಜಾಸೇವೆ ನಡೆದೀತು. ನೂತನ ಚುನಾವಣೆಯ ನಂತರ ಅಧಿಕಾರಕ್ಕೆ ಬರುವ ಸರ್ಕಾರವಾದರೂ, ಈ ನಿಷ್ಪಕ್ಷಪಾತ ಧೋರಣೆಯನ್ನು ಆಚರಣೆಯಲ್ಲಿ ತಂದು—ನಿಜವಾದ ಪ್ರಜಾರಾಜ್ಯಭಾರಕ್ಕೆ ಅಡಿಗಲ್ಲನ್ನು ಹಾಕುವಂತಾಗಲಿ ಎಂದು ಹಾರೈಸುತ್ತೇವೆ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.
ಹೊಸ ಮುದ್ರಣ—ಸಾದಾ ಪ್ರತಿ 2·00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನನಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕನ್ನಡ

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೆಜ್ ಬುಕ್ ಕಂಪೆನಿ, ಇಂಡಿಯನ್ ಇಂಟಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿ ಪ್ರತಿಗಳು ದೊರೆಯುತ್ತವೆ.

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ ಇಂಗ್ಲಿಷ್ ಪತ್ರವ್ಯವಹಾರ ಮಾಡಲು ಉಪಯುಕ್ತ ಪುಸ್ತಕ

Letter Writing Made Easy

ಸುಲಭದಲ್ಲಿ ಪತ್ರಲೇಖನ

ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು.
ಬೆಲೆ: ರೂ. 1—25.

ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮಾಹಿತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ.

ರೂ1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನೆರಿ
ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ
ಉಡುಪಿ.

ಸಮಕಾಲೀನ ನಾದಿರಶಹ

(೭ನೇ ಪುಟದಿಂದ)

ರವಿರಿಸಿದನು. ಮುದಿ ಮ್ಯೆಕ್ಲೀನನ ಪಾಲಿಗೆ ಇದೊಂದು ದೊಡ್ಡ ಮಾನಸಿಕ ಆಘಾತವಾಯಿತು. ಅವನು ಮನಸ್ಸಿನಲ್ಲೆ ತ್ರುಜಿಲೋನ ಕೃತಘ್ನತೆಯ ಬಗ್ಗೆ ಕೆರಳಿದನು ಒಂದು ದಿನ ಅವನು ಅಲ್ಲಿಯ ಮದ್ಯಗೃಹದಲ್ಲಿ ಮದ್ಯ ಕುಡಿದು ಮತ್ತನಾಗಿ ತ್ರುಜಿಲೋವಿಗೆ ಬಾಯಿಗೆ ಬಂದಂತೆ ಬಯ್ಯುತ್ತಿದ್ದನು. ಆಗಲೇ ಅವನ ಸಮೀಪದಲ್ಲಿದ್ದ ಒಬ್ಬ ವ್ಯಕ್ತಿಯು ಅವನ ರುಂಡವನ್ನು ಮುಂಡದಿಂದ ಬೇರ್ಪಡಿಸಿದನು. ಮದ್ಯಗೃಹವು ಕೆಂಪು ರಕ್ತದಿಂದ ತೊಯ್ದು ಹೋಯಿತು. ಆದರೆ ಆ ಕೊಲೆ ಪಾತಕಿಯು ಹೆದರಿ ಓಡಲಿಲ್ಲ. ಅವನು ತನ್ನ ಜೇಬಿನಿಂದ ತೊಳ ತೊಳಗುವ ನಾಣ್ಯಗಳ ತಟ್ಟೆಯನ್ನು ತೆಗೆದು ಬಹು ಅಭಿಮಾನದಿಂದಲೆ ಹೇಳಿದನು—"ಸಹೋದರರೇ, ನನ್ನನ್ನು ಕ್ಷಮಿಸಿರಿ. ನಾನೀ ಕಾರ್ಯವನ್ನು ಮಾಡದೆ ಹೋಗಿದ್ದಲ್ಲಿ ನನ್ನ ಒಡೆಯನು ನನ್ನನ್ನು ಜೀವಂತನಾಗಿರಲು ಬಿಡುತ್ತಿರಲಿಲ್ಲ. ಈಗ ನನ್ನ ಪ್ರಾಣ ಉಳಿಯಿತು. ಮತ್ತು ಮಡದಿ ಮಕ್ಕಳ ಸುಖಕ್ಕಾಗಿ ಈ ಹಣದ ತಟ್ಟೆಯು ನನ್ನದಾಯಿತು."

ಆದರೆ ಆ ಕೊಲೆ ಪಾತಕಿಯು ಈ ಹಣದ ತಟ್ಟೆಯೊಂದಿಗೆ ತನ್ನ ಮಡದಿ ಮಕ್ಕಳ ಮುಖವನ್ನು ನೋಡಲಿಲ್ಲ. ಮದ್ಯಗೃಹದಿಂದ ಹೊರ ಬಂದೊಡನೆ ತ್ರುಜಿಲೋ ಬೀಸಿದ ಮಾಯದ ಬಲೆಯಲ್ಲಿ ಸಿಕ್ಕಿ ಬಿದ್ದು ಬಳಲಿ ಬಳಲಿ ತನ್ನಸುವನ್ನು ನೀಗಿದನು. ಅನಂತರ ಆ ದೇಶದಲ್ಲಿ ಆ ರೀತಿಯಾದ ಗುಪ್ತ ರಾಜನೀತಿಕ ಹತ್ಯಾಕಾಂಡವು ಆರಂಭವಾಯಿತು.

ತ್ರುಜಿಲೋನು ತನ್ನ ಶಾಸನಕಾಲದಲ್ಲಿ ಆಸ್ಟ್ರೇಲಿಯನ್ ಆಫೀಸರ್ ಬಿಲ್‌ಬರ್ಕನ ಸಹಾಯವನ್ನು ಪಡೆದುಕೊಂಡಿದ್ದನು. ತ್ರುಜಿಲೋನ ಬಲಗೈ ಬಂಟನಾಗಿದ್ದ ಬಿಲ್‌ಬರ್ಕನು ಇತ್ತೀಚೆಗೆ ಕೊಟ್ಟ ಪತ್ರಿಕಾ ಹೇಳಿಕೆಯಲ್ಲಿ ಈ ರೀತಿಯಾಗಿ ಹೇಳಿದ್ದನು—ತ್ರುಜಿಲೋನು: ತಾನು ಸುಧಾರಣೆಯನ್ನು ಮಾಡುವೆನು. ತನ್ನ ದೇಶದ ಎಲ್ಲೆಡೆಯಲ್ಲಿರುವ ಜುಗಾರಿ ಮನೆಗಳು ಮುಚ್ಚುವಂತಾಗಬೇಕು. ಎಂದು ಹೇಳಿ ಈ ಕಾರ್ಯವನ್ನು ನನಗೊಪ್ಪಿಸಿದ್ದನು. ನಾನು ಬಹು ಪ್ರಮಾಣಿಕತೆಯಿಂದ ಈ ಕಾರ್ಯವನ್ನು ನೆರವೇರಿಸಿದೆನು. ಎಲ್ಲಾ ಕಡೆಯ ಜುಗಾರಿ ಮನೆಯ ಮಾಲಕರು ಜೈಲುವಾಸವನ್ನು ಅನುಭವಿಸಿದರು. ಆದರೆ ರಾಜಧಾನಿಯಲ್ಲಿರುವ ಒಂದು ಜುಗಾರಿ ಮನೆಗೆ ಮುತ್ತಿಗೆ ಹಾಕಬಾರದೆಂದು ತ್ರುಜಿಲೋ ನನಗೆ ಆದೇಶವನ್ನಿತ್ತಿದ್ದನು. ಒಂದು ದಿನ ಆ ಜುಗಾರಿ ಮನೆಯನ್ನು ಪೂರ್ಣ ಮುತ್ತುವಂತೆ ತನಗಾತ ಆದೇಶವಿತ್ತನು. ನೂರಕ್ಕಿಂತಲೂ ಹೆಚ್ಚು ಜನರನ್ನು ನಾನೆಂದು ಬಂಧಿಸಿದನು. ಅಷ್ಟು ಜನರು ಸಂಬಳದ ಹಣದೊಂದಿಗೆ ಜುಗಾರಿ ಮನೆಗೂ ಸೆರೆ ಮನೆಗೂ ಬಂದಿದ್ದರು. ಅವರ ಕಿಸೆಯಿಂದ ಎಲ್ಲಾ ಹಣವನ್ನು ದೋಚಿಕೊಂಡು ಅನಂತರ ಬಿಡುಗಡೆಗೊಳಿಸುವಂತೆ ತ್ರುಜಿಲೋನ ಆದೇಶ ನನಗೆ ಬಂತು. ಅಷ್ಟೂ ಹಣವು ಸುಲಭವಾಗಿ ತ್ರುಜಿಲೋನ ಟ್ರೆಜರಿಯನ್ನು ಸೇರಿತು. ಮತ್ತು ಕೇವಲ ಐದು ದಿನಗಳ ನಂತರ ಜುಗಾರಿ ಮನೆಯು ಪುನಃ ತೆರೆಯಲ್ಪಟ್ಟಿತು."

ತ್ರುಜೋಲನ ಮಹತ್ವಾಕಾಂಕ್ಷೆ ೧೯೩೦ ಆಗೋಸ್ತು ೧೬ರಂದು ಪೂರ್ಣವಾಯಿತು. ಅಂದು ವಿದೇಶೀ ಅಧಿಕಾರಿಗಳು ವಿದೇಶಕ್ಕೆ ಮರಳಿದರು. ತ್ರುಜೋಲನು ಡೊಮಿನಿಕನ್‌ನ ಅಧ್ಯಕ್ಷನಾಗಿ ನೆರೆ ರಾಜ್ಯವಾದ ಹೈಟಿಯೊಡನೆ ಹಗೆಯನ್ನು ಕಟ್ಟಿಕೊಂಡನು. ತ್ರುಜೋಲನು ತನ್ನ ದೇಶದ ರಾಜಧಾನಿಗೆ ತನ್ನ ಹೆಸರನ್ನೆ ಇಟ್ಟಿದ್ದನು. ರಾತ್ರಿ ವೇಳೆಯಲ್ಲಿ ಟ್ಯೂಬ್ ಲೈಟುಗಳಲ್ಲಿ 'ಕೇವಲ ದೇವರು ಮತ್ತು ತ್ರುಜೋಲ" ಎಂಬ ಮಾತುಗಳು ಇಲ್ಲಿ ಬೆಳಗುತ್ತಿರುತ್ತವೆ.

ಹೆಣ್ಣು ದಲಾಲಿ ಮಾಡಿಕೊಂಡಿದ್ದ ತ್ರುಜಲೊ ಮುದುಕನಾಗುತ್ತಾ ಹೋದಂತೆ ಹೆಣ್ಣಿನ ಕಡೆಗೆ ಅತನಲ್ಲಿ ಆಸಕ್ತಿ ಹೆಚ್ಚಿತು. ಅವನು ತನ್ನ ನಲ್ಲಳನ್ನು ಪ್ರಸನ್ನೀಕರಿಸುವುದಕ್ಕಾಗಿ ಎಂತಹ ಅಮಾನುಷ ಕೃತ್ಯವನ್ನೆಸಗುವುದಕ್ಕೂ ಹಿಂಜರಿಯುತ್ತಿರಲಿಲ್ಲ. ಅವನಿಗೆ ಡೋನಾ ಆ ಇಸಾಬೆಲ್ ಮಾಯೆ' ಎಂಬೊಬ್ಬ ನಲ್ಲಳಿದ್ದಳು. ಅವಳು ಲಕ್ಷಾಧಿಪತಿಯ ಉತ್ತರಾಧಿಕಾರಿಯಾಗಿದ್ದಳು. ಅವಳ ಬಹು ಹೆಚ್ಚು ಭಾಗದ ಜಮೀನು ಹೈಟಿಗಡಿಯಲ್ಲಿತ್ತು. ಕೆಲ ಹೈಟಿವಾಸಿಗಳು ಸಾಮಾನ್ಯವಾಗಿ ಗಡಿಯ ಬದಿಯಿಂದ ತಮ್ಮ ಕುರಿಗಳಿಗೆ ಬೇಕಾದ ಸೊಪ್ಪುಸೊದೆಗಳನ್ನು ಕೊಂಡೊಯ್ಯುತ್ತಿದ್ದರು.

ಒಂದು ದಿನ ಅವಳೊಂದು ದೊಡ್ಡ ಕೂಟದಲ್ಲಿ ವ್ಯಂಗ್ಯವಾಗಿ ತ್ರುಜೋಲನೊಡನೆ ಹೇಳಿದಳು— "ಕೇವಲ ದೇವರು ಮತ್ತು ತ್ರುಜೋಲ ಬಹು ಸ್ವಾರಸ್ಯವಾಗಿದೆ. ದೇವರು ಮರಗಳಲ್ಲಿ ಎಲೆಗಳನ್ನು ನಿರ್ಮಿಸಬಲ್ಲ ತ್ರುಜೋಲ ಸೈನ್ಯವಿದ್ದೂ ಬಡಪಾಯಿಗಳು ಸೊಪ್ಪು ಕಡಿಯುವುದನ್ನು ನಿಲ್ಲಿಸಲು ಅಸಮರ್ಥನಾಗಿದ್ದಾನೆ" ಎಂದಳು. ಇದನ್ನು ಕೇಳುತ್ತಲೆ ತ್ರುಜೋಲನ ಕೈಯು ತಟ್ಟೆ ಕೆಳಗೆ ಬಿದ್ದಿತು. ಆ ಕೂಡಲೆ ಹೈಟಿ ಗಡಿಪ್ರದೇಶಗಳಿಗೆ ವಯರ್‌ಲೆಸ್ ಸಂದೇಶಗಳನ್ನು ಕಳುಹಿಸಿದನು ಗಡಿ ಪ್ರದೇಶದ ಎಲ್ಲೆಡೆಗಳಿಗೂ ಪೋಲೀಸು ವಾಹನಗಳು ಸಂದೇಶವನ್ನೊಯ್ದುವು. ಸೈನಿಕರು ಎಲ್ಲಾ ಹೈಟಿವಾಸಿ ಮಕ್ಕಳು ಮರಿಗಳು, ಹೆಂಗಸರು ಗಂಡಸರು ಎಲ್ಲರನ್ನೂ ಮರಕಡಿದಂತೆ ಕೊಡಲಿಯಿಂದ ಕಡಿದರು.

ಅಬೋಧ ಹೈಟಿವಾಸಿಗಳು ಈ ಕಗ್ಗೊಲೆಯಿಂದಾಗಿ ತಮ್ಮ ಪ್ರಾಣವನ್ನು ತ್ಯಜಿಸಿದರು. ನೃತ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸುವುದಕ್ಕಾಗಿ ತ್ರುಜಿಲೊ ಆ ಗಡಿ ಪ್ರದೇಶಕ್ಕೆ ಬಂದಿದ್ದನು. ಅವನ ಸಮಕ್ಷಮದಲ್ಲೆ ೨೫ ಸಾವಿರ ಹೈಟಿವಾಸಿಗಳು ಸ್ವರ್ಗಸ್ಥರಾದರು. ಹಳ್ಳಿ ಹಳ್ಳಿಗಳ ಒಳನುಗ್ಗಿ ಸೈನಿಕರು ಹಗ್ಗದಿಂದ ಜನರನ್ನು ಬಿಗಿದು ತಂದು ಆ ಗಡಿ ಪ್ರದೇಶದಲ್ಲಿ ಕೊಲೆಮಾಡಿದರು. ಆ ಸಮಯದಲ್ಲಿ ಬಿಳಿಯರೂ ಕರಿಯರ ಸಹಾಯಕ್ಕಾಗಿ ಧಾವಿಸಿ ಬಂದರೂ ಪ್ರಯೋಜನವೇನೂ ಆಗಲಿಲ್ಲ. ಈ ಸುದ್ದಿಯನ್ನು ಜಾಗತಿಕ ಪತ್ರಿಕೆಗಳು ಪ್ರಕಟಿಸಿದಾಗ ಇದನ್ನಾರೂ ನಂಬಲಿಲ್ಲ. ಪ್ರತ್ಯಕ್ಷ ವೀಕ್ಷಿತ ವರದಿ ಬಂದೊಡನೆ ಎಲ್ಲಾ ದೇಶಗಳು ಈ ಸುದ್ದಿಯನ್ನು ನಂಬಿದವು.

ಸಾವಿರಗಟ್ಟಲೆ ಜನರ ಹತ್ಯೆಗೆ ಕಾರಣನಾದ ತ್ರುಜೋಲ ತಲೆಗೆರೆದ ನೀರು ಕಾಲಿಗೆ ಬರುವುದುಯೆಂಬಂತೆ ತಾನು ಇನ್ನೊಬ್ಬನಿಂದ ಕೊಲ್ಲಲ್ಪಟ್ಟನು.

ಮನದ ಮಾತು

ಜೀವನದಲಿ ಅಲರ ಮಧುರ
ಗಾಳಿ ಬೀಸಿ ಬರುತಿದೆ
ಒಲವು ಜೇನ ಹೃದಯ ಗಾನ
ರಸವ ತುಂಬಿ ತರುತಿದೆ
ಮಾತಿನೊಂದು ಮುತ್ತಿಗಾಗಿ,
ನಗುವಿನೊಂದು ನೋಟಕಾಗಿ,
ಬಯಸಿ ಬಾಳ ತಪವ ಮರೆತು
ಬೀಸಿ ಬೀಸಿ ಬರುತಿದೆ.

ಯಾರು ಏನು ಎಲ್ಲಿ ಭಾವ
ಕುಸುಮ ವರಳಿ ನಗುತಿದೆ,
ಎಂದು ತಿಳಿದು ತಿಳಿಯದಂತೆ
ತುಂಬಿ ತುಳುಕಿ ಉಗುತಿದೆ
ಅಲ್ಲಿ ಬಾಳಬಾನಿನಲ್ಲಿ
ಸುತ್ತಿ ಭಾವ ಜಾಲದಲ್ಲಿ
ಸುತ್ತಿ ಸುಳಿದು ಮುಕ್ತಿ ನಲಿದು
ತೇಲಿ ತೇಲಿ ಬರುತಿದೆ.

ಯಾರು ಏನು ಎನುವ
ಏಕನಾದ ಏಕೆ ಹಾಡುವೆ
ಮನದ ವೀಣೆಯನ್ನೆ ತೆಗೆದು
ಮೀಂಟಿನೋಡು ಕೇಳುವೆ
ಅರಿಯದೇನು ಅಂತು ಹಾಡು;
ಅರಿಯುವನಕ ಹಾಡಿನೋಡು!
ಒಲವಿನಲರಿನೆದೆಯ ರಸವ
ಸವಿದೆ ಇಂತು ಹಾಡುವೆ.

—ಕೊಡ್ಲು ತಿಮ್ಮಪ್ಪ ಗಟ್ಟಿ.

— ಚಿರಸ್ಮರಣೆ —

ವಿಶ್ವವೆ ದಾಸ್ಯದ ಬಂಧನ ಬಲೆಯೊಳು
ಬಹುತೆರ ಬವಣೆಯೊಳಿರುವಂದು;
ಜಗವಿಡಿ ಮೂಢಾಂಧತೆಯೊಲು ಶಯನಿಸೆ
ಕ್ರಾಂತಿ ಕಹಳೆಯನೂದಿದ ಬಂದು. ||೧||
ಶಿಕ್ಷೆ ರಕ್ಷೆಯ ಪೂರ್ಣಾಧಿಕಾರಿಯು
ಪ್ರತಿರೂಪದ ಹಿರಿತತ್ವವನು
ಜನಜಾಗ್ರತಿಗನುವಾಗುವ ಶಾಂತಿಯ
ಮಂತ್ರವ ಶೋಧಿಸಿ ಸಾರಿದನು. ||೨||
ಧರೆಯಲಿ ಧರ್ಮವು ಧೃತಿಗೆಡಲರಿಯುತ
ಅವತರಿಸಿದ ಮಾನವನಾಗಿ
ಸಂದಾ ಯುಗಯುಗದಲಿ ಅವ ಜನಿಸಿದ
ಕ್ರಿಸ್ತ, ಬುದ್ಧ, ಹರಿಶಾನಾಗಿ ||೩||
ಆತ್ಮಾನಂದಾ ಧ್ವಜವನ್ನರಿಯಲು
ಆಧ್ಯಾತ್ಮದ ಜಾಗವೆಹಿರಿದು!
ಪರಹಿತಕಾಗಿಯೆ ಜೀವನ ಮೀಸಲು
ಭೋಗಭಾಗ್ಯ ವಿಭವವು ಕಿರಿದು ||೪||
ಶಾಂತಿ ಅಹಿಂಸೆಯ ತಾರಕ ಮಂತ್ರವೆ
ಜೀವ ವಿಮುಕ್ತವು ಅವಗಹುದು
ಸ್ವತಂತ್ರ ಭಾರತ ಭಾಗ್ಯವಿಧಾತನು
ಭಾರತ ಜನತೆಯ ಪಿತನಹುದು ||೫||
ಪತಿತರಿಗತಿ ಪ್ರಿಯ ಕರಣತ್ರಯದೀ
ವಿಶ್ವಬಾಂಧವನೆ ಅವನಲ್ಲೆ?
ಕರ್ತಾರನು ತಾನಾಗಿರೆ ಫಲವದು—
ತ್ಯಾಜ್ಯವು-ತ್ಯಾಗದ ಹಿರಿ ಗುರುತು! ||೬||
ಓಜನ ನಾಯಕ! ನೀ ಮರೆಯಾದರು—
ಪೂಜ್ಯನು ಭಾರತ ಜನಕೆಲ್ಲ
ನಿನ್ನಾ ಸ್ಮರಣೆಯು ಜೀವನ ಪಾವನ
ನಮಗಿನ್ನೇತರ ಭಯವಿಲ್ಲ! ||೭||

—ಕಡಂದಲೆ, ಜಯರಾಮ ಶೆಟ್ಟಿ.

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!
ಉಡುಪಿ ಕರ್ನಾಟಕ ಸಂಘದ ಮೂರು ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩=೨೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ — ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಕರಟೆ ಪುರಾಣ

೨೦ನೇ ಪುಟದಿಂದ

…ಗಿ ಆ ವೃದ್ಧಿ ಕಾರ್ಯಗಳನ್ನು ತೋ…ಸುವ ಪ್ರತ್ಯೇಕ ಏರ್ಪಾಡೇನೂ ಇಲ್ಲ. …ಲ್ಲೊಂದು ಶಂಕುಸ್ಥಾಪನೆ ಇಲ್ಲೊಂದು …ದ್ಘಾಟನೆ ಜರುಗುವಾಗ ಸುದ್ದಿಗಾರರು …ಮ್ಮ ಖರ್ಚಿನಿಂದ ಬಸ್ಸುಗಳಲ್ಲಿ ಇಲ್ಲವೆ …ಸಿಗೆ ಗೃಹಸ್ಥರೊಡನೆ ಅವರ ಕಾರಿನಲ್ಲಿ …ವರ ದಯೆಯಿಂದ ಅತ್ತ ತೆರಳಿ ಮರ …ನ ವ್ಯವಸ್ಥೆ ಅವರದು. ಮತ್ತೆ ಅ…ಹೋದ ಕಡೆ ಅವರ ಮುಖ್ಯಕರ್ತವ್ಯ …ರ್ತಾ ಸಂಗ್ರಹ' ಅನ್ನುವಾಗ ಕಣ್ಣಿಗೆ …ಷ್ಟು ಆ ವೃದ್ಧಿ ಕಾರ್ಯಗಳ ಕುರಿ…ದ ಅವರ ಅಸಕ್ತ ಮಾಹಿತಿಯು ವಿವ…ಯಾದರೂ ಎಷ್ಟು ಸಮಂಜಸವಾಗಿ…ತು?

ಗೆಳೆಯ:— ಜಿಲ್ಲೆಯ ಸಾಂಸ್ಕೃತಿಕ …ಸ್ಥಿತಿಯ ಕುರಿತು ಬರೆಯಲಾಗದೇ?

ನಾನು:— ಹೌದು; ಆದರೆ ಸರಕಾರ …ಆಶ್ರಯವಿದೆ ಎಂಬ ಸಂಗೀತ ಶಾಲೆಗ…ಸ್ವಂತ ಕಟ್ಟಡವಿಲ್ಲ. ಅಲ್ಲಿ ಕಲಿಸುವ …'ವಿದ್ವತ್ತು' ಶಾಲೆ ಆರಂಭಿಸಿದಾಗ ಎ…ತ್ತೋ ಅದಕ್ಕೂ ಕಡಿಮೆಯಾಗುತ್ತ ಬ…ತ್ತಿದೆ. ಸಂಗೀತದ ಅಂತಸ್ತು ಏರುತ್ತಿ… ಒಟ್ಟು ಗಂಡಸರಿಗೆ ಹೆಣ್ಣು ಕಂಠದ …ಧೈರ್ಯ ಸೊಗಸುಗಾರಿಕೆಗಳ ಅಭ್ಯಾ…ವಾಗಿಲ್ಲ. ನಾಟಕಗಳ ಸ್ಪರ್ಧೆ ಎಂದರೆ …ವೆ ಮುಂದೆ ಆಡಿದ್ದೇ ನಾಟಕ. ಒಂದಿ…ಷ್ಟು ಸಿನೆಮಾ ಮಾದರಿ ಕೆಮ್ಮು ಸೀನು …ಗೂ ಹಾಡಿನ ಗೊಂದಲ, ಸಿನೆಮಾಗಳ …ಆದರ್ಶವೆಂದು ಭಾವಿಸಿದ ನಮ್ಮ ನ…ಮ ನಾಟಕದ ಕಳೆ ಏರಿಸುವ ಕರ್ನಾಟಕದ ಪುರಾತನ ಸಂಸ್ಕೃತಿಯೂ ಸಂಪ್ರದಾಯವೂ ಆದ "ಕಂದ ಪದ್ಯ"ಗಳಿಗೊಂದು ದೊಡ್ಡ ಸಮಾಧಿಯನ್ನೇ ರಚಿಸಿದ್ದಾರೆ. ಜಿಲ್ಲೆಯ ಖ್ಯಾತ ನಟ ಶ್ರೀ ರಂಗನಾಥ ಭಟ್ಟರಿದ್ದರೂ ಸಂಗೀತ ಅಭಿನಯಗಳಲ್ಲಿ ಅವರಿಂದ ತರಬೇತಿ ಪಡೆಯುವಂತೆ ಏರ್ಪಡಿಸಿಕೊಳ್ಳುವುದು ತಮ್ಮ ಗೌರವಕ್ಕೆ ಕುಂದೆಂದು ನಮ್ಮ ಬುದ್ಧಿವಂತರು ಭಾವಿಸಿರಬಹುದೇ? ನಾಟ್ಯ ನರ್ತನಗಳಲ್ಲಿ ಯಾವುದು ಶಾಸ್ತ್ರೀಯ ಯಾವುದು ಅಶಾಸ್ತ್ರೀಯವೆಂಬ ವ್ಯತ್ಯಾಸವರಿಯುವ ಕಾಲವಿನ್ನೂ ಬಂದಿಲ್ಲ. ಅವೆಲ್ಲ ಮನೆ ಮನೆ ವ್ಯಾಸವಾಗಿ ಹೋಗಿದೆ. ಅಂಥ ಸಂಗೀತ ನಾಟಕ ನೃತ್ಯಗಳ ಕುರಿತಾದರೂ ನಾನೇನು ಬರೆಯಲಿ?

ಗೆಳೆಯ:— ಹೋಗಲಿ ಬಿಡು. ರಾಜಕೀಯ ತೆಗೆದುಕೊಳ್ಳಯ್ಯ.

ನಾನು:— ರಾಜಕೀಯವೇ? ಚೆನ್ನಾಯ್ತು ಬಿಡಿ. ಅದೊಂದು ರಾಜಕಾರಣಿಗಳ ಕುಕ್ರನೀತಿಯ ಕೊಳಕು ಆಟ; ಇದರಿಂದಲೇ ಹುಟ್ಟಿದ್ದು ಪಾರ್ಟಿ ಪಂಗಡಗಳು. ಇದರಷ್ಟು ನಿಲಭವಾದ ಇಂದ್ರಜಾಲದ ಪ್ರದರ್ಶನ ಇನ್ನೊಂದಿಲ್ಲ. ನಾಯಕರಿಗೆ ಪಾರ್ಟಿ ಶಿಸ್ತು ಸಂಘಟನೆಗಳನ್ನು ಕಾಪಾಡಿಕೊಂಡು ಬರುವ ಒಂದೇ ತಲೆ. ಅದಕ್ಕೆ ಸೇರುವ ಹಲವರಿಗೂ ದತ್ತಾತ್ರೇಯನಂತೆ ಮೂರು ತಲೆ. ತಮ್ಮ ಸ್ವಾರ್ಥ ಸಾಧನೆಗಾಗಿರುವ ತಲೆ ಒಂದು; ಹಾಗೆ ಸಾಧಿಸಲು ಸಾಧ್ಯವಾಗದಾಗ ಆ ಪಾರ್ಟಿ ಬಿಟ್ಟು ಬೇರೆ ಪಾರ್ಟಿಗೆ ಸೇರಬೇಕೆನ್ನುವ ತಲೆ ಇನ್ನೊಂದು ಆವೇಡೂ ಸಾಗದಿದ್ದರೆ ಪಾರ್ಟಿ ಒಳಗಿದ್ದೇ ಕುರುಕ್ಷೇತ್ರ ನಿರ್ಮಿಸಬೇಕೆನ್ನುವ ತಲೆ ಮೂರನೆಯದು. ಇಂಥ ಗೋಮುಖ ವ್ಯಾಘ್ರಗಳ ಅಪ್ರಮಾಣಿಕರ ವಂಚಕರ ಕುರಿತು ಬರೆಯುವುದು ಮಹಾಪಾಪ.

ಗೆಳೆಯ:— ಆಯಿತು. ಸಮಾಜವಾದಿ ಸಮಾಜ ರಚನೆ ಭಾವೈಕ್ಯತೆ ಇವುಗಳ ಕುರಿತಾದರೂ ಬರೆಯಕೂಡದೇ?

ನಾನು:— ಇವನ್ನೆಲ್ಲ ಹೇಳುವವರು ಬೇರೆ; ಕೇಳುವವರು ಬೇರೆ. ಅವರಿಬ್ಬರಿಗೂ ತಾಳಮೇಳವಿಲ್ಲ. ಹಾಗಿರುತ್ತಿದ್ದರೆ ಇನ್ನೂ ಕೆಲವು ಕನಸಿನ ಕನ್ನಡಿ ಗಂಟನ್ನು ತಂದು ನಮ್ಮ ಮುಂದಿಡುತ್ತಿದ್ದರು. ಸಮಾಜವಾದೀ ಸಮಾಜದ ಮಾತೇನೇ ಇದ್ದರೂ ಅದೊಂದು ಕಣ್ಣುಕಟ್ಟು. ಎಲ್ಲ ಕಾಲಕ್ಕೂ ಬಡವ ಬಡವನೇ. ಶ್ರೀಮಂತ ಶ್ರೀಮಂತನೇ. ಮತ್ತೆ ಭಾವೈಕ್ಯತೆ ಹೇಗೆ ಸಾಧ್ಯವಾದೀತು?

ಗೆಳೆಯ:— ಅದಕ್ಕಾಗಿ ನಮ್ಮ ಮುಂದಾಳುಗಳೇ ಹೋರಟಿರುವಾಗ ಅದೇಕೆ ಸಾಧ್ಯವಾಗದು?

ನಾನು:— ಸಾಧ್ಯವಾಗದೆನ್ನಲು ಕಾರಣ ಒಂದೆರಡಲ್ಲ. ಜೀವನದ ವೆಚ್ಚ ತೆರಿಗೆ ಭಾರ ಇವುಗಳಿಂದ ಜನಸಾಮಾನ್ಯರ ಬೆನ್ನು ಮೂಳೆಯೇ ಮುರಿದುಹೋಗಿದೆ. ಇದು 'ಭಾವೈಕ್ಯತೆ'ಯ ಉಪದೇಶದಿಂದ ಜನರ ಮನಸ್ಸನ್ನು ತಿರುಗಿಸುವುದಾಗಿದೆ. ಮೈಸೂರಿನ ಭೂಸುಧಾರಣೆ ಹಾಗೂ ಪಾನನಿಷೇಧ ಕ್ರಮ ಇನ್ನಿತರ ಆಡಳಿತದ ಲೋಪದೋಷಗಳೊಡನೆ ಸರಕಾರಿ ನೌಕರರ ನೇಮಕದ ನೀತಿಯೂ ಭಾವೈಕ್ಯತೆಯ ವಾತಾವರಣವನ್ನು ಕಲುಕುವುದಾಗಿದೆ. ಇನ್ನು ಮಹಾ ಚುನಾವಣೆ ಕಾಲದಲ್ಲಿ ಪರಸ್ಪರ ದೂಷಣೆ ಟೀಕೆಗಳಿಂದ ಆ ವಾತಾವರಣ ಇನ್ನಷ್ಟು ಕೆಡುವುದಾಗಿದೆ. ಆಗ ಗುಪ್ತವಾಗಿ ಕಾರ್ಯ ಸಾಧಿಸಲು ನೋಡುವ ಜಾತಿ ಭೂತವು ಭಾವೈಕ್ಯತೆಯ ಸಿದ್ಧಾಂತಕ್ಕೆ ಇದಿರಾಗಿ ಹೋರಾಡುವುದಾಗಿದೆ. ಒಟ್ಟು ಭಾವೈಕ್ಯತೆ ಎನ್ನುವುದು ಪ್ರಕೃತ ಅದೊಂದು ಬಾಹ್ಯಾಡಂಬರದ ಗಂಭೀರ ಶಾಸ್ತ್ರವಿಧಿ. ಅಲ್ಲವೇನು?

ಗೆಳೆಯ:— ಹಾಗಾದರೆ ಬರೆಯಲು ನಿನಗೆ ಯೋಗ್ಯ ವಿಷಯವೇನೂ ನನ್ನಿಂದ ದೊರಕಿಲ್ಲ ಎನ್ನುವಿಯಾ?

ನಾನು:— ಬರೆಯಬಹುದಾದ ಒಂದು ವಿಷಯವೂ ನಿಮ್ಮ ಬಾಯಿಂದ ಹೊರಡದಿದ್ದರೆ ನನ್ನ ತಪ್ಪೆ?

ಗೆಳೆಯ:— ವಿಶೇಷಾಂಕಕ್ಕೊಂದು ಲೇಖ ನೀನು ಕಳಿಸಬೇಕಲ್ಲ!

ನಾನು:— ಹೌದು; ಕಳುಹಿಸಬೇಕು, ನಿಮ್ಮಂತೆ ಇನ್ನೂ ನಾಲ್ಕು ಮಂದಿ ಮಿತ್ರರನ್ನು ಕೇಳಿ ನೋಡುತ್ತೇನೆ. ಅವರೇನಾದರೂ ಸಲಹೆ ಮಾಡಿದಲ್ಲಿ ಯೋಗ್ಯವಾದದನ್ನ ನನ್ನ ಮನಸ್ಸಿಗೊಪ್ಪಿದಲ್ಲಿ ಅದನ್ನೇ ಬರೆದು ಕಳುಹಿಸುತ್ತೇನೆ.

ಗೆಳೆಯ— ಇಲ್ಲವಾದರೆ?

ನಾನು:— ಹೆಸರಿಗೆ ಮಾತ್ರ 'ಪ್ರಜಾರಾಜ್ಯ'ವೆಂದು ಜನರ ಮೆಚ್ಚಿಕೆಗಳಿಸುತ್ತಿರುವ ಆ ದಿನಪತ್ರಿಕೆಯ ವಿಶೇಷಾಂಕಕ್ಕೆ 'ನಮ್ಮ ನಿಮ್ಮ ಈ ಪುರಾಣ'ವನ್ನೇ ರವಾನಿಸಿ ಬಿಡುತ್ತೇನೆ.

ಗೆಳೆಯ:— ತಪ್ಪಿದ್ದಂತೆ ಮಾಡಯ್ಯ. ನಿನ್ನ ಕೈ ತಡೆಯುವವರು ಯಾರು?

MEN WHO KNOW
BUY
CANARA SPRINGS
WITH CONFIDENCE

In actual service CANARA SPRINGS have always given a good account of themselves. Made from the best material and tested carefully before despatch, the springs inspire confidence in users. The consistent quality is a guarantee of permanent satisfaction. CANARA SPRINGS create and maintain confidence as the best.

THE CANARA WORKSHOPS LIMITED

Works at: **Maroli, MANGALORE; Amraoti Road, NAGPUR.**

ಕಿಷ್ಕಿಂಧಾ ಸಂಸ್ಕೃತಿ

(೬ನೇ ಪುಟದಿಂದ)

ಮಧ್ಯಯುಗದಲ್ಲಿ ಪರಕೀಯ ಪ್ರಭಾವದಿಂದ ಭಾರತೀಯ ಸಂಗೀತವಾಗಿರುವ ಮಾತು ಸುಪ್ರಸಿದ್ಧವಾಗಿದೆಯಷ್ಟೇ? ಅದರಂತೆಯೇ ಕರ್ನಾಟಕ ಸಂಸ್ಕೃತಿಯೇ ವಿಕಾಸಗೊಂಡು ಅನೇಕ ಪರಕೀಯ ಪ್ರಭಾವಗಳಿಂದೊಡಗೂಡಿ ಇಂದಿನ ಭಾರತೀತೀಯ ಸಂಸ್ಕೃತಿಯಾಗಿದೆ. ಎಂದರೆ ಭಾರತೀಯ ಸಂಸ್ಕೃತಿಯ ತಿರುಳೇ ಕರ್ನಾಟಕ ಸಂಸ್ಕೃತಿ.

ಕಿಷ್ಕಿಂಧೆಯ ತಾಂತ್ರಿಕ ಮಟ್ಟದ ನಾಗರಿಕತೆ

ಕ್ರಿಸ್ತಪೂರ್ವ ೩೫೦೦ ವರ್ಷಗಳ ಪೂರ್ವದಲ್ಲಿ ಸಿಂಧು ನದಿಯ ನಾಗರಿಕತೆ ಹುಟ್ಟಿತೆಂದು ಮಹೆಂಜೋದಾರೊ ಹಾಗು ಹರಪ್ಪಾ ಅವಶೇಷಗಳು ಸಿದ್ಧಗೊಳಿಸಿವೆಯಷ್ಟೇ? ಆ ಸಂಸ್ಕೃತಿಯು ನಮ್ಮ ಕರ್ನಾಟಕ ಸಂಸ್ಕೃತಿಯ ಒಂದು ವಿಸ್ತರಣೆಯೇ ಎಂದೂ ಈ ಚೀಚಿನ ಸಂಶೋಧನೆಗಳಿಂದ ಸ್ಪಷ್ಟವಾಗಿದೆ. ಆ ಸಿಂಧೂ ಪ್ರದೇಶದ ಜನರು ಕರ್ನಾಟಕದಿಂದಲೇ ಬೆಳ್ಳಿ ಬಂಗಾರವನ್ನು ತರಿಸುತ್ತಿದ್ದುದರ ಸ್ಪಷ್ಟ ಉಲ್ಲೇಖಗಳು ದೊರೆತಿವೆ. ಸಮಸ್ತ ದಕ್ಷಿಣ ಭಾರತದಲ್ಲೆಲ್ಲ ಆಗಲೂ ರಾಯಚೂರು—ಕೋಲಾರ ಭಾಗಗಳಿಂದಲೇ ಬಂಗಾರವು ರಫ್ತಾಗುತ್ತಿತ್ತು. ಇದರಿಂದ ಕರ್ನಾಟಕದ ಆಗಿನ ನಾಗರಿಕರು ಚಿನ್ನದ ಗಣಿಗಳಿಂದ ಧಾತುವನ್ನು ಅಗಿದು ಬೇರ್ಪಡಿಸಿ ಮಾರಾಟವಾಗುವ ರೂಪದಲ್ಲಿ ಸಿದ್ಧಗೊಳಿಸಬಲ್ಲ ಕಲೆಯನ್ನು ಚೆನ್ನಾಗಿ ಅರಿತಿದ್ದರೆಂದು ಸ್ಪಷ್ಟವಾಗುವುದು. ಕಲ್ಲಿನ ನಾಗರಿಕತೆಯ ಯುಗ ಹಾಗು ಕಬ್ಬಿಣದ ನಾಗರಿಕತೆಯ ಯುಗಗಳಗೂ ಮೇಲ್ಪಟ್ಟುದು ಚಿನ್ನದ ಗಣಿಗಳ ಯುಗ. ಅಷ್ಟರ ಮಟ್ಟಿನ ಉಚ್ಚವಾದ ನಾಗರೀಕತೆಯ ಮಟ್ಟವನ್ನು ನಮ್ಮ ಕಿಷ್ಕಿಂಧಾ ನಾಗರೀಕತೆ ಆಗಲೇ ಅಳವಡಿಸಿಕೊಂಡಿತ್ತೆನ್ನ ಬಹುದು. ರಾಮಾಯಣದಲ್ಲೂ ಚಿನ್ನಾಭರಣಗಳ ಉಲ್ಲೇಖಗಳಿವೆ ತಾನೇ! ಆ ಚಿನ್ನವೆಲ್ಲ ಕರ್ನಾಟಕದ್ದೇ ಅಥವಾ ಆಗಿನ ಕಿಷ್ಕಿಂಧಾ ನಾಗರಿಕತೆಯ ಫಲವೇ ಎಂದು ನಿರ್ವಿವಾದವಾಗಿ ಹೇಳ ಬಹುದು. ಕರ್ನಾಟಕದಲ್ಲಿ, ಅದರಲ್ಲೂ ಕಿಷ್ಕಿಂಧಾ ಪರಿಸರದಲ್ಲಿ ಅನೇಕ ಪುರಾತನವಾದ ಕಬ್ಬಿಣ ಅದುರಿನ ಗಣಿಗಳೂ ದೊರೆತಿವೆ. ಕನ್ನಡದಲ್ಲಿ ಕಬ್ಬಿಣ "ಕಾರ್ಬೊನ್ನು" "ಕರಿ-ಹೊನ್ನು ಎನ್ನಿಸಿಕೊಂಡಿದೆ. ಇದರಿಂದ ಕನ್ನಡಿಗರ ಪೂರ್ವಜರು ಹೊನ್ನು ಹಾಗು ಕಬ್ಬಿಣಗಳೆರಡರ ಉಪಯೋಗ ಹಾಗು ಮಹತ್ವಗಳನ್ನೂ ಆಗಲೇ ಅರಿತುಕೊಂಡಿದ್ದರೆಂಬುದು ವಿದಿತವಾಗುತ್ತದೆ. ಆ ಜನರು ಅವೆರಡೂ ಧಾತುಗಳನ್ನು ತೆಗೆದು ಅವುಗಳ ವಿವಿಧೋಪಯೋಗವನ್ನು ಪಡೆಯುವಷ್ಟರ ಮಟ್ಟಿಗೆ ಕಿಷ್ಕಿಂಧಾ ನಾಗರಿಕತೆ ಉಚ್ಚವಾಗಿದ್ದಿತು ಎನ್ನಬಹುದು.

ಸಂಸ್ಕೃತದಲ್ಲಿ ಬಂಗಾರಕ್ಕೆ 'ಜಾಂಬವ' 'ಜಾಂಬೂನದ' ಎಂಬ ಹೆಸರುಗಳಿವೆ. ದಕ್ಷಿಣ ಭಾರತಕ್ಕೆ ಜಂಬೂ ದ್ವೀಪ ಎಂತಲೂ ಹೆಸರು; ಎಂದರೆ ಚಿನ್ನದ ನಾಡು. ಚಿನ್ನದ ನಾಡು ಕನ್ನಡ ನಾಡಲ್ಲದೆ ಭಾರತದಲ್ಲಿ ಬೇರೊಂದಿಲ್ಲ. ಸುಗ್ರೀವನ ಕಟ್ಟಾಳುಗಳಲ್ಲಿ ಜಾಂಬುವಂತ ಅತ್ಯಂತ ಆದರಣೀಯ ಮನುಷ್ಯ ತಾನೇ! ಈ ಜಾಂಬುವಂತ ಎಂಬುದು ಕುಲದ ಹೆಸರಾಗಿರಬೇಕು. ಜಾಂಬುವಂತರು ಸೊನ್ನಗಾರರೂ, ಚಿನ್ನವರದರೂ ಆಗಿರಬೇಕು, ಒಂದು ಕಾಲಕ್ಕೆ ಶಿಲ್ಪಿಗಳು ಹೇಗೆ ಸಮಾಜದ 'ಓಜ" ರೂ "ಆಚಾರ್ಯ' ರೂ ಆಗಿದ್ದರೋ ಹಾಗೆಯೇ ಕಿಷ್ಕಿಂಧಾ ನಾಗರಿಕತೆಯಲ್ಲಿ "ಜಾಂಬುವಂತ" ರು ಅತ್ಯಂತ ಪ್ರತಿಷ್ಠಿತರಾಗಿದ್ದಿರಬೇಕು. ಇದರೊಂದಿಗೆ ಕರ್ನಾಟಕವೇ ಆಗಿನ ಜಂಬೂದ್ವೀಪದ ನಡುನಾಡಾಗಿದ್ದಿತೆಂಬುದನ್ನೂ ನಾವು ಮರೆನಂತಿಲ್ಲ. ಕಿಷ್ಕಿಂಧೆಯ 'ವಾನರ'ರು—ಇವರು ನಿಜವಾಗಿ ವಾನರಧ್ವಜರು,—ಲಂಕೆಗೆ ಸೇತುವೆ ಕಟ್ಟಿದರೆನ್ನುವುದರಿಂದ ಆಗಿನ ಆ ಜನಾಂಗದವರು ಜಲ-ತಂತ್ರಶಾಸ್ತ್ರ (ಹೈಡ್ರಾಲಿಕ್ ಹಾಗು ಮರೀನ್ ಎಂಜಿನಿಯರಿಂಗ್)ದಲ್ಲೂ ಕೆಲ ಮಟ್ಟಿಗಾದರೂ ನಿಷ್ಣಾತರಾಗಿದ್ದರೆಂದು ಹೇಳಲಡ್ಡಿಯಿಲ್ಲ. ಇದರಿಂದ ಒಂದು ತಾಂತ್ರಿಕ ಮಟ್ಟವನ್ನೂ ಕಿಷ್ಕಿಂಧಾ ನಾಗರೀಕತೆ ಮುಟ್ಟಿದ್ದಿತೆಂದು ಅರಿಯಬಹುದು

ಸ್ಥಿರ ಸಂಸ್ಕೃತಿ ಮಟ್ಟದ ನಾಗರಿಕತೆ

ಆಗಿನ ಕಿಷ್ಕಿಂಧಾ ನಾಗರಿಕರು ಗುಳೆ ಕಟ್ಟಿಕೊಂಡುತಿರುಗುವಂತಹ ಅವಸ್ಥೆಯವರಾಗಿರದೆ, ಅದಕ್ಕೂ ಮುಂದಿನ ಹಾಗು ಹೆಚ್ಚಿನ ನಾಗರಿಕತೆಯ ಮಟ್ಟವನ್ನು ಮುಟ್ಟಿದ್ದರೆಂಬುದಕ್ಕೆ ರಾಮಾಯಣದ ಉಲ್ಲೇಖಗಳೂ ಸಾಕ್ಷಿ. ಆ ಜನಾಂಗ ಆಗಲೇ ಸಾವಿರಾರು ವರ್ಷಗಳಿಂದ ಬೇರೂರಿದವರಾಗಿದ್ದು, ಸಂಪನ್ನ ರಾಜ್ಯಗಳನ್ನೂ ಸುವ್ಯವಸ್ಥೆ ರಾಜ್ಯ ಪದ್ಧತಿಯನ್ನೂ ಬೆಳೆಯಿಸಿಕೊಂಡವರಾಗಿದ್ದರು ಒಕ್ಕಲುತನದಲ್ಲಿ ನುರಿತವರಾಗಿದ್ದರು. ಅವರ ನಾಡು ಹತ್ತಿಯ ಬೆಳೆಗೆ ತವರಾಗಿತ್ತು. ಒಳ್ಳೊಳ್ಳೆಯ ಬಟ್ಟೆಗಳನ್ನು ನೆಯ್ದುಕೊಳ್ಳಬಲ್ಲ, ಕಲ್ಲಿನ ಮನೆಗಳನ್ನು ಕಟ್ಟಿಕೊಳ್ಳಬಲ್ಲ ಸುಧಾರಣೆಯನ್ನು ಮುಟ್ಟಿದ್ದರು. ಕರ್ನಾಟಕ, ಎಂದರೆ ಅಂದಿನ ಕಿಷ್ಕಿಂಧಾ, ಜಗತ್ತಿನಲ್ಲೇ ಹತ್ತಿಯ ಮೂಲ ಉಗಮ ಸ್ಥಾನವೆಂದರೂ ಸಲ್ಲೀತು ಅಂದಿನಿಂದಲೂ ಇಲ್ಲಿಯ ನೆಲ ಹಾಗು ಹವಾಮಾನ ಹತ್ತಿಯ ಬೆಳೆಗೆ ಅತ್ಯಂತ ತಕ್ಕುದಾಗಿಯೇ ಇವೆ. ದಂಡಕ ವನದ ನಡು ನಾಡೇ ಆಗಿನ ಕಿಷ್ಕಿಂಧೆ. ದಂಡಕ ವನವೆಂದರೆ ಕಾಡು: ಹತ್ತಿಯ ಬನವೆಂತಲೇ ಇರಬೇಕು. ಏಕೆಂದರೆ ಹತ್ತಿಯ ಗಿಡಕ್ಕೆ ಸಂಸ್ಕೃತದಲ್ಲಿ 'ಚಿತ್ರ-ದಂಡಕ' ಎಂತಲೇ ಹೆಸರಿದೆ.

ಕಿಷ್ಕಿಂಧೆಯ ಈ ಭಾಗಕ್ಕೇ ಮತ್ತೊಂದು ಕಾಲದಲ್ಲಿ "ಕುಂತಲ"ವೆಂದೂ ಹೆಸರಿತ್ತು. ಕುಂತಲ ಎಂದರೆ ಕೂದಲು; ಆಗ ಉಣ್ಣೆಗೆ ಈ ಹೆಸರಿರಬೇಕು. ಕರ್ನಾಟಕದ ಭಾಗವಾಗಿದ್ದ ಕುಂತಲ ಪ್ರದೇಶ—ವಿಜಾಪುರ—ರಾಯಚೂರು—ಬಳ್ಳಾರಿ—ಚಿತ್ರದುರ್ಗಗಳ ಭಾಗ—ಇಂದಿಗೂ ಉಣ್ಣೆಗೆ ಪ್ರಸಿದ್ಧವಾಗಿದೆ. ಇಲ್ಲಿಂದ ಉಣ್ಣೆ ಅಥವಾ ಉಣ್ಣೆಯ ಬಟ್ಟೆ ಪರದೇಶಗಳಿಗೆ ಹೋಗುತ್ತಿರಬೇಕು. ಅಂತೇ ಉಣ್ಣೆಯ ನಾಡು ಅಥವಾ ಕುಂತಲನಾಡು ಎಂದು ಹೆಸರು ಬಂದಿರಬೇಕು. ಈ ಭಾಗದ ಕಂಬಳಿಗಳು ಇಂದಿಗೂ ದಕ್ಷಿಣ ಭಾರತದಲ್ಲೆಲ್ಲ ಪ್ರಸಿದ್ಧವಾಗಿವೆ.—ಮುಖ್ಯತಃ ದಾವಣಗೆರೆ-ಬಾಗಿಲುಕೋಟೆಯ ಕಂಬಳಿಗಳು.

ಉದಾತ್ತ ನಾಗರಿಕ

ಕಿಷ್ಕಿಂಧಾ ಸಂಸ್ಕೃತಿಯ ಅತ್ಯುಚ್ಚ ಉದಾಹರಣೆ ಅಥವಾ ಮಾದರಿ ಹನುಮಂತ. ಬಲ, ನಿಷ್ಠೆ, ಹಿರಿದಾದ ಜಾಣ್ಮೆ, ನಿಗ್ರಹದ ಪರಾಕ್ರಮಗಳಿಗೆ ಹನುಮಂತನ್ನೆದುರು ಎಂದಿಗೂ ಇನ್ನೊಬ್ಬರಿಲ್ಲ ಎಂಬುತಿದೆ. ಆತ 'ಜಿತೇಂದ್ರಿಯ'ನೂ ಬುದ್ಧಿವಂತರ ವರಿಷ್ಠನೂ ಎಂದು ಪ್ರಖ್ಯಾತನಾಗಿದ್ದಾನೆ. ಮಾನವೀ ಸಂಸ್ಕೃತಿಯ ಅತ್ಯುಚ್ಚ ಮಟ್ಟಕ್ಕೆ ಆತನ ಈ ಗುಣಗಳೇ ತಿರುಳಾಗಿವೆ. ಇದಕ್ಕಿಂತ ಹೆಚ್ಚಿನ ಮಾನವೀ ಸಂಸ್ಕೃತಿ ಬೇರೊಂದಿರಲು ಸಾಧ್ಯವೇಲ್ಲ. ಅಂತಹ ಸಾಂಸ್ಕೃತಿಕ ಉನ್ನತಿಯ ಪರಮಾವಧಿಯನ್ನು ಹನುಮಂತ ಮುಟ್ಟಿದ್ದ—ಎಂದರೆ ಕನ್ನಡಿಗರು ಮುಟ್ಟಿದ್ದರು—ಅದೂ ಸಹಸ್ರ ಸಹಸ್ರ ವರ್ಷಗಳ ಹಿಂದೆಯೇ—ಎಂಬುದು ನಿರ್ವಿವಾದ.

ಕನ್ನಡಿಗರು ಪರಶುರಾಮನ ಒಕ್ಕಲದವರು

ಕಿಷ್ಕಿಂಧಾ ಎಂದರೆ ಅರಣ್ಯಮಧ್ಯ ಒಂದು ಹಿರಿದಾದ ಬಯಲು ಎಂದು ಹಿಂದೆಯೇ ಹೇಳಿದೆ. ಈ ಬಯಲು ಉಂಟಾದುದು ಹೇಗೆ! ಸಂಸ್ಕೃತಿ ಹಾಗೂ ನಾಗರಿಕತೆಯ ಬೆಳವಣಿಗೆಯಲ್ಲಿ ಅರಣ್ಯಗಳ ಸವರುವಿಕೆಗೆ (Forest clearance) ಒಂದು ವಿಶಿಷ್ಟ ಸ್ಥಾನವಿದೆ. ಕಿಷ್ಕಿಂಧಾ ಸಂಸ್ಕೃತಿಯ ಆದಿ ಪುರುಷ, ಹಾಗೆಂದರೆ, ಕರ್ನಾಟಕದವನೇ ಆದ ಪರಶುರಾಮನೇ ಇರಬೇಕು. ಆತನ ಪರಶು-ತತ್ತ್ವ ಅಥವ ಕೊಡಲಿಯ ಕೈಚಳಕದಿಂದಲೇ ದಂಡಕಾರಣ್ಯದ—ಮುಖ್ಯತಃ ಕರ್ನಾಟಕದ ಬಹುಭಾಗ ಬಯಲುಸೀಮೆಯಾಗಿರಬೇಕು. 'ಕೊಡಲಿಯ ತೂರುವಿಕೆಯಿಂದ ಆತ ಕೊಂಕಣವನ್ನುಂಟುಮಾಡಿದ' ಎಂದರೆ ಜನವಸತಿ ಬೆಳೆದಂತೆ ಅರಣ್ಯವನ್ನು ಕಡಿಕಡಿದು ಆತ ಜನವಸತಿಗೆ ಯೋಗ್ಯವಾಗಬಲ್ಲ ನಿವೇಶನಗಳನ್ನುಂಟುಮಾಡಿದ ಎಂತಲೇ ಅರ್ಥ. ಆಗ ಅದೊಂದು ದೊಡ್ಡ ಚಳುವಳಿಯೇ ಆಗಿರಬೇಕು. ಆ ಚಳುವಳಿಯಿಂದಲೇ ಕಿಷ್ಕಿಂಧಾ ವಿಶಾಲವಾಗಿ ಕರು-ನಾಡಾಯಿತು; ಕರ್ನಾಟಕವಾಯಿತು.

ದಿ. ಕೆನರಾ ನರ್ಸರಿ ರಿಸರ್ಚ್ ಗಾರ್ಡನ್ಸ್

ಪೋಸ್ಟ್: ಉಳಿಯಾರಗೋಳಿ, ಕಾಪು, ದ. ಕ.

ಸ್ಥಾಪನೆ: ೧೯೧೪

45 ವರ್ಷಗಳ ಅನುಭವದಿಂದ ಸಿದ್ಧಪಡಿಸಿದ ವಿವಿಧ

- ಮಾವು, ಚಿಕ್ಕು, ಪೇರಳೆ, ಅಂಜೂರ, ಪನ್ನೇರಳೆ,
- ಜಂಬುನೇರಳೆ, ಸೀತಾಫಲ, ಮಾದಾಳ, ಸಕ್ಕರೆಕಂಚು,
- ಕಿತ್ತಳೆ, ಪಪ್ಪಾಯಿ, ದೀವಿಹಲಸು, ತೆಂಗು, ಒಡಂಬ,
- ಕಾಫಿ, ಅನಾನಸು, ಬಾಳೆಯ ಕಸಿಗಿಡಗಳು ಅಲ್ಲದೆ ವಿವಿಧ

ತರದ ಹೂಗಿಡಗಳು ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿವೆ.

ದಕ್ಷಿಣ ಕನ್ನಡದಲ್ಲೇ ಪ್ರಸಿದ್ಧವಾದ ನಮ್ಮ ಗಿಡಗಳನ್ನು ಭಾರತದಾದ್ಯಂತ ಉಪಯೋಗಿಸಲಾಗುತ್ತದೆ. ಅಲ್ಲದೆ, ಸರಕಾರೀ ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನೂ ಪದಕಗಳನ್ನೂ ಪಡೆದಿವೆ.

— ಒಮ್ಮೆ ಪರೀಕ್ಷಿಸಿ ತೃಪ್ತಿಪಡೆಯಿರಿ —

Tele: GOLDKING

ಪ್ರಜಾರಾಜ್ಯದಿನದ ಹಾರ್ದಿಕ ಶುಭಾಶಯಗಳು.

ಎಸ್. ಎಲ್. ಶೇಟ್

ಡಾಯಮಂಡ್ ಹೌಸ್

ಕೆ. ಎಸ್. ರಾವ್ ರೋಡ್, ಮಂಗಳೂರು—1.

Prop: S. L. SHET

ಗುಡಿ ಬಾಗಿಲು ತೆರೆದಿರಲಿ

ಕವಿ: ಎಸ್. ತಿರುಮಲೇಶ್ವರ ಭಟ್, ಮಂಗಳೂರು.

ಓ ಚಿನ್ಮಯ ಕರುಣಾಮಯ
ಸಚರಾಚರ ವಿಶ್ವಮಯ,

ಆ ನಿನ್ನಯ ವರ ಪ್ರತಿಮೆಯ
ವಿರಚಿಸುವರು ಶಿಲ್ಪಮಯ.

ದೇಗುಲದಲಿ ಕಲ್ ಗುಡಿಯಲಿ
ಪ್ರಸ್ತರಮಯ ಪೀಠದಲಿ.

ಆ ಮೂರ್ತಿಯ ಸ್ಥಾಪಿಸುವರು
ಆರಾಧಿಪ ವ್ಯಾಜ್ಯದಲಿ.

ಕಾಲುದೀವಿಗೆ ಹೊಂಬೆಳಕಿಗೆ
ಚೆಲುಮೂರುತಿಯಿಕ್ಕಡೆಗೆ.

ಪರಿಮಳಿಸಿದೆ ಧೂಪದ ಹೊಗೆ
ದೇವರ ವರಗುಡಿಯೊಳಗೆ.

ಅರ್ಚಕನಾರತಿ ಬೆಳಗುತ
ಮಂತ್ರವನುರೆ ಪಠಿಸುವನು.

ಘಂಟಾರವದಿಂದ ಮಹಾ
ಪೂಜೆಯ ತಾ ಗೆಯ್ಯುವನು.

ಹಣ್ಕಾಯ್ಗಳ ಹರಿವಾಣವ
ಹೊತ್ತಿಹ ನೆರೆದಿಹ ಜನತೆ

ಸುಖಕಾಮನೆಯಿಂ ಪ್ರಾರ್ಥನೆ
ಮೊಳ್ಪುದೆ ಭಕ್ತಿಯ ಘನತೆ

ಶುದ್ಧಾಂತಃಕರಣವದಿರ
ದೀಪೂಜೆಯ ಮೆಚ್ಚುವನೆ?

ಬಾಹ್ಯಾಡಂಬರ ಕೋಸುಗ
ಪೂಜಿಸೆ ದೇವನು ನಗನೆ?

ಪೂಜಾಂತ್ಯದಿ ಪಂಚಾಮೃತ
ತೀರ್ಥವ ಕೊಡುತರ್ಚಕನು.

ದಕ್ಷಿಣೆಯಂ ಸ್ವೀಕರಿಸುತ
ಪೂಜೆಯ ಕೊನೆಗೊಳಿಸುವನು.

ಕಡೆಗಾರಿಸಿ ಗುಡಿಸೊಡರನು
ಬಾಗಿಲ ಪಡಿಗಳ ಬಲಿದು

ಜಡಿಯುತ ಬೀಗವನರ್ಚಕ
ತೆರಳ್ವನು ನಿಜಪಥವಿಡಿದು

ಪೂಜೆಯ ಕೊಂಬಾಸೆಲಿ ಗುಡಿ
ಸೇರಿದ ದೇವನಿಗಾಯ್ತು

ಪೂಜಾಂತ್ಯದಿ ಗುಡಿಯೇ ಸೆರೆ
ಮನೆ; ಸ್ವಾತಂತ್ರ್ಯವು ಹೋಯ್ತು.

ಜನತಾ ಸ್ವಾತಂತ್ರ್ಯದ ಫಲ
ವೇನಿದು ಶವಬಂಧನವು.

ಬೆಳಕಿಲ್ಲದ ಮನವೊಲ್ಲದ
ಗುಡಿಯೊಳಗಾರಾಧನವು.

ಪರಮಾತ್ಮನ ಸೆರೆಹಿಡಿವನ
ಕಡುಮೂರ್ಖತೆಗೇನೆನಲಿ?

ನಿಜ ಬಕುತರ ಮೊರೆ ಕೇಳಲು
ಗುಡಿಬಾಗಿಲು ತೆರೆದಿರಲಿ!

ಭಾಷಾಂತರಕ್ಕೂ ಯಂತ್ರಗಳೆ

(೧೭ನೇ ಪುಟದಿಂದ

ಗ್ಲಿಷಿಗೆ, ಇಂಗ್ಲಿಷಿನಿಂದ ಜರ್ಮನ್ ಭಾಷೆಗೆ ಭಾಷಾಂತರಿಸುವ ಕಾರ್ಯಕ್ರಮಗಳು ಇಷ್ಟು ಸುಲಭವೆನಿಸಿಲ್ಲ. ನಮ್ಮ ದೇಶದ ಭಾಷೆಗಳಲ್ಲಿ ಯಾವುದರಿಂದಲೂ ಇಂಗ್ಲಿಷಿಗೆ ಆಗಲೀ, ಇಂಗ್ಲಿಷಿನಿಂದ ದೇಶದ ಭಾಷೆಗಳಿಗಾಗಲೀ, ಸಂಸ್ಕೃತದಿಂದ ತಮಿಳಿಗೆ, ತಮಿಳಿನಿಂದ ಸಂಸ್ಕೃತಕ್ಕೆ ಭಾಷಾಂತರಿಸುವ ಕ್ರಮಗಳು ತುಂಬಾ ಕಷ್ಟದಾಯಕಗಳೇ. ಇದಕ್ಕೆ ಆಯಾಯ ಭಾಷಾ ರಚನೆಯಲ್ಲಿನ ಪ್ರತ್ಯೇಕ ಸಂಪ್ರದಾಯಗಳೇ ಮುಖ್ಯ ಕಾರಣ.

ಅಂತೂ ಭಾಷಾಂತರವನ್ನು ಮಾಡುವ ಯಂತ್ರಗಳು, ನಾವು ಓದದೆ ಇದ್ದರೂ, ತಾವೇ ಯಾತ್ರದ ಮುಂದ ಹಾದು ಅಲ್ಲಿದ್ದುದನ್ನು ನಮಗೆ ಸಿದ್ಧಿನ ಮೂಲಕ ವಿಚಾರವನ್ನೊದಗಿಸುವ ಪುಸ್ತಕಗಳು ಈ ಶತಮಾನವು ಮುಗಿಯುವಷ್ಟರಲ್ಲೇ ಓದುಗರಲ್ಲಿ ಅನೇಕರ ಜೀವಿತದ ಅವಧಿಯಲ್ಲೇ ಬಳಕೆಗೆ ಬಂದರೆ, ನಾವು ಆಶ್ಚರ್ಯಪಡಬೇಕಾಗಿಲ್ಲ ಅವು ಈಗಲೇ ಬಂದಿದ್ದರೆ ನಮ್ಮ ಚುನಾವಣಾ ಕ್ಷೇತ್ರಗಳಲ್ಲಿ ಅವುಗಳಿಂದ ಅನೇಕ ಹುರಿಯಾಳುಗಳಿಗೆ ತಕ್ಕಷ್ಟು ಉಪಕಾರವೊದಗುತ್ತಿತ್ತು.

ಅವತಾರ ಶಕ್ತಿ

(೪ನೇ ಪುಟದಿಂದ)

ನುಲಕ್ಷ ಜನಗಳ ಮೇಲೆ ಪರಿಣಾಮ ಮಾಡಿತು. ಹಾಗೆಯೇ ಸ್ವಾತಂತ್ರ್ಯ ಸಿದ್ಧಿಯ ನಂತರ ಅವರಲ್ಲಿ ಬೇರೊಂದು ದೃಷ್ಟಿ ಮೂಡಿತು.

ಅಂದಾಗ ಈ ಅವತಾರಿಕ ಶಕ್ತಿ ಹುಟ್ಟಿನೊಂದಿಗೆ ಹುಟ್ಟಿ ಬರುವದಿಲ್ಲವೆಂದೂ ಸಾವಿನೊಂದಿಗೆ ಸಮಾಪ್ತವಾಗುವದಿಲ್ಲವೆಂದೂ ಖಚಿತವಾಗುತ್ತದೆ ಕಾಲಕ್ಕೆಬೇಕಾದಾಗ ಒಬ್ಬ ಪ್ರಭಾವಿಯಲ್ಲಿ ಅದು ಕೇಂದ್ರೀಕೃತವಾಗಿ ಜಾಗ್ರುತವಾಗುತ್ತದೆ.

ಪ್ರಪಂಚವೆಲ್ಲವೂ ತ್ರಿಗುಣಾತ್ಮಕವಾದುದು. ನಮ್ಮ ಜೀವನವು ಸತ್ವ-ರಜ-ತಮೋಗುಣಗಳ ಸಮ್ಮಿಶ್ರಣವಾಗಿದೆ. ಈ ಗುಣಾನುಸಾರವಾಗಿ ದೇವ-ಮಾನವ-ದಾನವ, ಶಕ್ತಿಗಳು ಅಡಗಿಕೊಂಡಿವೆ. ದಾನವರ ದರ್ಪ ಹೆಚ್ಚಾದಾಗ ಪ್ರಪಂಚಕ್ಕೆ ಅಶಾಂತಿ ಸಂಭವಿಸುತ್ತದೆ. ಆಗ ಅದನ್ನ ನಾಶಿಸಲು ದೇವತ್ವದ ವಿಕಾಸವಾಗಬೇಕು, ಹೀಗೆ ಮನುಷ್ಯ ಮನುಷ್ಯತ್ವದಿಂದ ಪೂರ್ಣನಾಗಿ ದೇವತ್ವದ ಸ್ಥಿತಿ ಪ್ರಾಪ್ತಿಯನ್ನು ಪಡೆಯುವದೇ ಅವತಾರಿಕ ಶಕ್ತಿಯ ಸಂಪಾದನೆಯಾಗುತ್ತದೆ. ಆರಾಧನೆಯಾಗುತ್ತದೆ

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು.

ಸುಮಾರು ಐವತ್ತು ವರ್ಷಗಳಿಂದ ಜನತಾಸೇವೆಯಲ್ಲಿ
ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್ಆಯಿಲ್,
ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹ
ಪ್ರತಿನಿತ್ಯ ಅತ್ಯುತ್ತಮ ರೀತಿಯಲ್ಲಿ ತಯಾರಾಗುತ್ತಲಿವೆ.

ಶಾಖೆಗಳು: ಮೈಸೂರು, ಬೆಂಗಳೂರು, ಮಂಗಳೂರು.

ಸೋಲ್ ಏಜಂಟರು:—(ಕರ್ನಾಟಕದಾಚೆಗೆ)
ದಿ ಯುನೈಟೆಡ್ ಕನ್ಸರ್ನ್ಸ್, 54, ಬಂದರ್ ಬೀದಿ, ಮದ್ರಾಸ್.

ಸರ್ವರಿಗೂ ಪ್ರಜಾರಾಜ್ಯ ದಿನದ ಶುಭಾಶಯಗಳು!

ಯಾತ್ರಾಸ್ಥಳವೆಂದೂ ವಿದ್ಯಾಕ್ಷೇತ್ರವೆಂದೂ
ಪ್ರಖ್ಯಾತವಾಗಿದೆ ಉಡುಪಿ!
ಉಡುಪಿಯಲ್ಲಿ ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿರುವ
ಅತ್ಯುತ್ಕೃಷ್ಟ ವಸತಿ ಗೃಹವೆಂದು ಪ್ರಸಿದ್ಧವಾಗಿದೆ—
ರೋಯಲ್ ಮಹಾಲ್!

ಶುಚಿ ರುಚಿಗಳಿಗೆ ಹೆಸರಾಗಿರುವ
ಪ್ರವಾಸಿಕರ ಆದರ್ಶ ನಿವಾಸ!
ಉಡುಪಿ ನಗರದ ಕೇಂದ್ರ ಸ್ಥಳದಲ್ಲಿ
ಪ್ರಶಾಂತ ವಾತಾವರಣದಲ್ಲಿರುವ
ಪ್ರಥಮ ಶ್ರೇಣಿಯ ಭೋಜನ ಮತ್ತು ವಸತಿ ಗೃಹ.
ರೋಯಲ್ ಮಹಾಲ್
ಉಡುಪಿ
ಮಾಲಕರು:— ಕೆ. ವೆಂಕಟ್ರಮಣ ಭಟ್

ಮುಂದಿನ ಚುನಾವಣೆ

(೫ನೇ ಪುಟದಿಂದ)

ಬೇಕಿರಲಿಲ್ಲ. ಈ ವಿಷಯದಲ್ಲಿ ಪಂಡಿತ ನೆಹರೂ ಆದಿ ಆಗಿ ಎಲ್ಲಾ ನಾಯಕರೂ ಕಾಂಗ್ರೆಸಿನ ಅಪಕೀರ್ತಿಗೆ ಹೊಣೆಹೊರಲೇಬೇಕು. ಒಂದು ಸಲ ಹಿಂದೆ ಸರಿದು ಕಾಂಗ್ರೆಸಿನೊಳಗಿನ ತರುಣರಿಗೆ ಅವಕಾಶ ಕಲ್ಪಿಸದೆ ಕಾಂಗ್ರೆಸ್ಸು ತನ್ನ ಸೋಲಿಗೆ ತಾನೇ ಕಾರಣವಾಗುವುದು.

(೪) ಇದು ತನಕ ದುಡ್ಡಿದ್ದ ಸಾಹುಕಾರರು, ಮಹಾರಾಜರು ಮುಂತಾದವರಿಗೆ ಕಾಂಗ್ರೆಸ್ಸಿಂದೇ ಆಶ್ರಯ ಕೊಡುತ್ತಿತ್ತು ಈಗ ಸ್ವತಂತ್ರ ಪಕ್ಷವು ಅವರಿಗೆ ಹೆಚ್ಚು ಆಕರ್ಷಕವಾಗಿ ಕಂಡಿದೆ. ದುಡ್ಡಿನ ಬಲದಿಂದ ಎಷ್ಟಿ ಎಲ್ಲಿ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವೋ ಅಲ್ಲೆಲ್ಲ ಸ್ವತಂತ್ರ ಪಕ್ಷವು ಸೋಲ ಬೇಕಾದ ಕಾರಣವಿಲ್ಲ.

ಒಟ್ಟಿನಲ್ಲಿ, ಹೆಚ್ಚಿನ ಎಲ್ಲಾ ರಾಜ್ಯಗಳಲ್ಲಿಯೂ ಕಾಂಗ್ರೆಸು ಸರ್ಕಾರ ರಚಿಸುವುದು ನಿಶ್ಚಿತವಾದರೂ, ವಿರೋಧ ಪಕ್ಷಗಳು ಅಥವಾ ಕಾಂಗ್ರೆಸಿನ 'ಸ್ವತಂತ್ರ' ವಿರೋಧಿಗಳು ಹೆಚ್ಚಿನ ಪ್ರಮಾಣದಲ್ಲಿ ಆರಿಸಿ ಬರಬಹುದೆಂದು ತೋರುತ್ತದೆ.

ವಿರೋಧಿ ಪಕ್ಷಗಳ ಅನಾಸಕ್ತಿ ಆಲಸ್ಯ

ಜನಸಂಘ, ಪ್ರಜಾಸೋಶಲಿಸ್ಟರು, ಕಮ್ಯುನಿಸ್ಟರು, ಸ್ವತಂತ್ರರು—ಈ ನಾಲ್ಕು ಪಕ್ಷಗಳು ಕಾಂಗ್ರೆಸ್ಸಿನ ಪ್ರಮುಖ ವಿರೋಧಿಗಳಷ್ಟೆ. ಇವುಗಳಲ್ಲಿ ಕಮ್ಯುನಿಸ್ಟರನ್ನು ಬಿಟ್ಟರೆ ಉಳಿದವು ಚುನಾವಣೆಯ ದೃಷ್ಟಿಯಿಂದ ವಿಶೇಷ ಸಂಘಟನೆ ಉಳ್ಳವುಗಳಂತೆ ತೋರುವುದಿಲ್ಲ. ಚುನಾವಣೆಗಳ ನಡುವಿನ ಕಾಲದಲ್ಲಿ ವಿರೋಧಿ ಪಕ್ಷಗಳು ತಮ್ಮ ಪ್ರಚಾರವನ್ನು ಎರಡು ರೀತಿಯಿಂದ ನಡೆಸಬಹುದಾಗುತ್ತದೆ (ಅ) ಶಾಸನ ಸಭೆಗಳೊಳಗೆ ಸರ್ಕಾರಿ ಧೋರಣೆಯನ್ನು ಸದಾಕಾಲ ವಿರೋಧಿಸುವುದರಿಂದ (ಆ) ಸರ್ಕಾರಿ ಧೋರಣೆಯ ಲೋಪದೋಷಗಳನ್ನು ಬಹಿರಂಗ ಸಭೆಗಳಲ್ಲಿ ಘೋಷಿಸುವುದರಿಂದ ಪ್ರಜಾಸೋಶಲಿಸ್ಟರು ಹೆಚ್ಚಾಗಿ ಪಾರ್ಲಿಮೆಂಟ ಭವನದ ಒಳಗಿನ ಕೀರ್ತಿಗೆ ಮನಸೋತವರಾದರೆ, ಕಮ್ಯೂನಿಸ್ಟರು ಎರಡು ದಾರಿಯನ್ನು ಬಳಸಿ ತಮ್ಮ ಪ್ರತಿಷ್ಠೆ ಬೆಳೆಯಿಸಿಕೊಂಡಿದ್ದಾರೆ. ದಿನ ಬಳಕೆಯ ಸರಕುಗಳ ಧಾರಣೆಯ ಏರಿಕೆ, ವಿದೇಶೀ ರಾಜಕೀಯದ ಚಲನವಲನಗಳು, ಅಂತಾರಾಷ್ಟ್ರೀಯ ದಿನಾಚರಣೆ ಮುಂತಾದ ಆಯಕಟ್ಟಿನ ಸದವಕಾಶಗಳನ್ನುಪಯೋಗಿಸಿ ತಮ್ಮ ಧ್ಯೇಯಗಳನ್ನು ಪ್ರಚಾರಪಡಿಸುವುದನ್ನು ಕಮ್ಯೂನಿಸ್ಟ ಪಕ್ಷವೊಂದೇ ಬಳಸಿಕೊಂಡಂತೆ ಕಾಣುವುದು. ಚುನಾವಣೆಗಳ ನಡುವಣ ಕಾಲದಲ್ಲಿಯೂ ಸಂಘಟನೆಯಲ್ಲಿ ಆಸಕ್ತಿಯುಳಿಸಿಕೊಂಡಿರುವ ಪಕ್ಷವು ಇದೊಂದೇ ಜನಸಂಘಕ್ಕೆ ಉತ್ತರ ಭಾರತದಲ್ಲಿ ಕೆಲವು ರಾಜ್ಯಗಳಲ್ಲಿ ಐತಿಹಾಸಿಕ ಕಾರಣಗಳಿಂದಾಗಿ ಬೆಂಬಲ ದೊರೆತಿದೆ ಯಾದರೂ ಈ ಸಾರಿ ಸ್ವತಂತ್ರ ಪಕ್ಷವು ಅವರೊಡನೆ ಸ್ಪರ್ಧಿಸುವುದರಿಂದ ಅವರ ಶಕ್ತಿ ಹ್ರಾಸವಾಗಬಹುದು. ಅಶೋಕ ಮೆಹ್ತಾ, ಕೃಪಲಾನಿ ಹೀಗೆ ಎರಡು ಮೂರು ಹೆಸರುಗಳ ಮೇಲೆ ನಿಂತಿರುವ ಪ್ರಜಾಸೋಶಲಿಸ್ಟ ಪಕ್ಷದ ಅನಿರ್ದಿಷ್ಟ ನೀತಿಯು ಕಾಂಗ್ರೆಸೀ ಸಮಾಜವಾದದ ಪಡಿರೂಪವಾಗಿರುವುದರಿಂದ ಈ ಪಕ್ಷದ ಭವಿತವ್ಯವು ಅನಿರ್ದಿಷ್ಟವೆಂದೇ ಹೇಳಬೇಕು. ರಾಜ್ಯದ ಮಟ್ಟದಲ್ಲಿ ಹಿಂದೆ ಕಾಂಗ್ರೆಸಿನಲ್ಲಿ ಟಿಕೇಟು ಸಿಗದವರೆಲ್ಲ ಪ್ರಜಾಸೋಶಲಿಸ್ಟರಾದಂತೆ, ಇಂದು ಸ್ವತಂತ್ರ ಪಕ್ಷಾನುಯಾಯಿಗಳಾಗುತ್ತಿದ್ದಾರೆ.

ಕಮ್ಯೂನಿಸ್ಟರು ಕಳೆದ ಚುನಾವಣೆಗಳಲ್ಲಿ ಪಡೆದ ಯಶಸ್ಸಿನಷ್ಟನ್ನು ಈ ಸಾರಿ ಸಂಪಾದಿಸಿಯಾರೆಂಬ ನಂಬಿಗೆ ಇಲ್ಲ; ಚೀನಾ ದೇಶದ ಆಕ್ರಮಣವು ಪಕ್ಷದ ಭಾರತೀಯ ಪ್ರಚಾರಕ್ಕೆ ದೊಡ್ಡ ಆಘಾತವನ್ನೇ ಉಂಟುಮಾಡಿದೆ; ಅಲ್ಲದೆ ಈ ಪಕ್ಷದ ನಾಯಕರು ಚೀನೀ ಆಕ್ರಮಣದ ಬಗ್ಗೆ ತಮ್ಮ ನಿಲವನ್ನು ಸಾರಲು ಪಡುವ ಸಂಕಟವನ್ನು ನೋಡಿದರೆ ಅವರ ಮೇಲೆ ಜನರು ಸಂದೇಹಪಡುವುದು ತಪ್ಪೆಂದು ಹೇಳ ಬರುವಂತಿಲ್ಲ ಕಮ್ಯೂನಿಸ್ಟರು ಶಾಂತಿಪ್ರಿಯರು ಎಂದು ಹೇಳುತ್ತ ರಶಿಯ-ಚೀನಗಳ ಉಜ್ವಲ ಅಂತಾರಾಷ್ಟ್ರೀಯತೆಯನ್ನು ಸಾರುತ್ತಾ ನೆಹ್ರೂ ಸರಕಾರವನ್ನು ವಿರೋಧಿಸುವ ಕಮ್ಯೂನಿಸ್ಟರಿಗೆ ಚೀನೀಯರು ಮರೆಯಲಾರದ ಪಾಠವನ್ನು ಕಲಿಸಿದ್ದಾರೆ. ಇದನ್ನು ಇತರರೂ ಕಲಿತುಕೊಳ್ಳ ಬೇಕು. ಅಂತಾರಾಷ್ಟ್ರೀಯ ರಂಗದಲ್ಲಿ ಕಮ್ಯೂನಿಸ್ಟರು ಪಾಶ್ಚಾತ್ಯರಷ್ಟೇ ಕುಟಿಲರು, ಆಕ್ರಮಣ ಮನೋವೃತ್ತಿಯವರೆಂಬುದು ಇದರಿಂದ ಸ್ಪಷ್ಟವಾಗುವುದು. ಜನತೆ ಸಜಾಗಿ ಎಚ್ಚರವಾಗಿದ್ದರೆ ಈ ದೇಶದ ಸ್ವಾತ್ರವನ್ನು ಕಮ್ಯೂನಿಸ್ಟ್ ಪಕ್ಷದ ಕೈಗೆ ಒಪ್ಪಿಸುವ ಆಗತ್ಯ ತೋರುವುದಿಲ್ಲ.

ಸಾರಾಂಶ

ಒಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದ ಮೇಲುಗೈಯಾಗುವುದು ನಿಶ್ಚಿತವಾದ್ದೇ ಸರಿ; ಆದರೆ ಕೆಲವೊಂದು ರಾಜ್ಯಗಳಲ್ಲಿ ಆದರೂ ಕಾಂಗ್ರೆಸಿನ ವಿರೋಧಿಗಳು ಹಿಂದಿಗಿಂತ ಹೆಚ್ಚು ಸಂಖ್ಯೆಯಲ್ಲಿ ಆರಿಸಿಬರಬಹುದು. ಇದಕ್ಕೆ ಅವರ ಸಂಘಟನೆಗಿಂತಲೂ, ಕಾಂಗ್ರೆಸಿನವರ ಅಂತಃಕಲಹವೇ ಮುಖ್ಯ ನೆಪವಾದೀತು ಕಾಂಗ್ರೆಸ್ಸು ಶಿಥಿಲವಾದ ಒಂದು ಸಂಸ್ಥೆ, ಅವರೊಳಗೇನೆ ಅದರ ವಿರೋಧಿಗಳು ಇರುವುದರಿಂದ ಹೊರಗಿನ ವಿರೋಧ ಮಾತ್ರ ತಕ್ಕ ಕೆಲಸವು ಸ್ವಲ್ಪ ಮಟ್ಟಿಗೆ ಇದರಿಂದಲೂ ಕೈಗೂಡುವುದು. ಹೊರಗಿನ ವಿರೋಧವು ತಾತ್ವಿಕವಾಗಿ ನಡೆಯ ಬೇಕಾದರೆ ಸಮಾಜವಾದಿಗಳ ಗುಂಪಿನಲ್ಲಿ ಸ್ವತಂತ್ರ ಪಕ್ಷವೊಂದೇ ನಿಜವಾದ ವಿರೋಧಿ ಪಕ್ಷವೆನ್ನ ಬೇಕು ಆದರೆ ಈ ಪಕ್ಷವು ಕಾಂಗ್ರೆಸಿಗೆ ಮಾತ್ರವಲ್ಲ, ದೇಶದ ಪ್ರಗತಿಗೂ ವಿರೋಧಕ ಮತ್ತು ವಿನಾಶಕ ಪಕ್ಷವೆಂದು ಹೇಳುವವರಿದ್ದಾರೆ. ಯಾವುದು ಸರಿ, ಯಾವುದು ತಪ್ಪೆಂದು ನಿರ್ಣಯಿಸುವ ಅಧಿಕಾರ ಜನತಾ ಜನಾರ್ದನನ ಕೈಯಲ್ಲಿದೆ.

———

Best of Automobile Service
offered by the
Engineers of

MODERN
GARAGE
UDIPI.

Your cars made new by the
most modern and experienced
spray painters

Phone: 65 Grame: KARNAD

Greetings from
SRINIVAS BROTHERS
CAR STREET, MANGALORE—1.

J. B. A. PRINTING INKS
PRIVATE LTD.,
AGRA ROAD, BHANDUP, BOMBAY—78.
Manufacturers of
Finest Qualities of Printing Inks
&
All types of Varnishes.

For your requirements
please contact
SRINIVAS BROTHERS
PAPER MERCHANTS,
BOOK-SELLERS & STATIONERS,
POST BOX NO. 130,
MANGALORE-1.
Phone: 449 Grams: ACTIVE

ನಮ್ಮ ಕೆಲ ಸಂಘ ಸಂಸ್ಥೆಗಳು

(೨ನೇ ಪುಟದಿಂದ)

ಕರ್ನಾಟಕ ಬೇಂಕ್—

ಜಿಲ್ಲೆಯ ಶೆಡ್ಯೂಲ್ಡ್ ಬೇಂಕುಗಳಲ್ಲಿ ಒಂದಾದ ಈ ಬೇಂಕು ಇತ್ತೀಚೆಗಿನ ವರ್ಷಗಳಲ್ಲಿ ತೀವ್ರವಾಗಿ ಬೆಳೆದು ಕರ್ನಾಟಕದ ಪ್ರಸಿದ್ಧ ನಗರಗಳಲ್ಲಿ ಮಾತ್ರವಲ್ಲದ ಭಾರತದ ಇತರ ಹಿರಿಯ ನಗರಗಳಲ್ಲಿಯೂ ಶಾಖೆಗಳನ್ನು ತೆರೆದಿದೆ. ಭದ್ರವಾದ ಆಡಳಿತೆ ಮತ್ತು ಸೂಕ್ತವಾದ ಸೇವೆಯಿಂದ ಬೇಂಕು ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತ ಬರುತ್ತಿದೆ ಜಿಲ್ಲೆಯ ಹಿರಿಯ ಮುಂದಾಳುಗಳಲ್ಲೊಬ್ಬರಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗರಂತಹ ಅನುಭವಿಗಳು ಇದರ ಚೇಯರ್ಮೆನ್‌ರಾಗಿದ್ದಾರೆ. ಬ್ಯಾಂಕಿನ ಪ್ರಗತಿಗಾಗಿ ಅನವರತ ದುಡಿಯುತ್ತಿರುವ ಜನರಲ್ ಮೆನೇಜರ್ ಶ್ರೀ ಕೆ. ಎನ್. ಬಾಸ್ರಿಯವರು ಪರಿಪಕ್ವ ಅನುಭವದಿಂದ ತಕ್ಕ ಮಾರ್ಗದರ್ಶನ ಮಾಡುತ್ತಿದ್ದಾರೆ.

ಕೊರ್ಪೊರೇಶನ್ ಬೇಂಕ್

ಮಂಗಳೂರಿನಲ್ಲೀಗ ಆಡಳಿತ ಕಚೇರಿಯಿದ್ದರೂ ಇದು ಉಡುಪಿಯಲ್ಲಿ ಸ್ಥಾಪನೆಗೊಂಡ ಬೇಂಕು. ದಕ್ಷಿಣ ಕನ್ನಡದಲ್ಲಿ ಸಂಘಟಿತವಾದ ಮೊತ್ತಮೊದಲ ಎರಡು ಬೇಂಕುಗಳಲ್ಲಿ ಇದೂ ಒಂದು. ಮೊದಲಿನಿಂದಲೂ ಉತ್ತಮ ರೀತಿಯ ಬೇಂಕಿಂಗ್ ಸೌಲಭ್ಯವನ್ನು ಒದಗಿಸುತ್ತ ಬಂದ ಇದರ ಶಾಖೆಗಳು ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲಿ ಹರಡಿವೆ. ದಕ್ಷರಾದ ಡೈರೆಕ್ಟರರೂ ಸಿಬಂಧಿಯೂ ಬೇಂಕು ಜನಾನುರಾಗವನ್ನು ಪಡೆಯುವುದಕ್ಕೆ ಕಾರಣರಾಗಿದ್ದಾರೆ.

ಅರವಿಂದ ಮೋಟರ್ಸ್—

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟಾಟಾ ಮೆರ್ಸಿಡಿಸ್ ಬೆನ್ಜ್ ಡೀಜೆಲ್ ಟ್ರಕ್ ಮತ್ತು ಬಸ್ಸುಗಳನ್ನು ವಿತರಣೆ ಮಾಡುವ ಪ್ರಖ್ಯಾತ ಸಂಸ್ಥೆಯಿದು. ತರುಣರೂ ವ್ಯವಹಾರ ಚತುರರೂ ಆದ ಶ್ರೀ ಆರೂರು ಶ್ರೀಪತಿ ರಾವ್ ಇವರ ನೇತೃತ್ವದಲ್ಲಿ ತನ್ನ ವ್ಯವಹಾರವನ್ನು ಬೆಳೆಸಿಕೊಂಡು ಜನಪ್ರಿಯವಾದ ಈ ಸಂಸ್ಥೆಯು ಶ್ರೇಯೋಭಿವೃದ್ಧಿಯನ್ನು ಪಡೆಯಲೆಂದು ಹಾರೈಸುತ್ತೇವೆ.

ಕೆನರಾ ವರ್ಕ್‌ಶಾಪ್ಸ್

ಕೆನರಾ ಸ್ಪ್ರಿಂಗ್‌ಗಳು ಅಖಿಲ ಭಾರತದಲ್ಲಿಯೇ ಸುಪ್ರಸಿದ್ಧವಿವೆ. ಇವು ಬಾಳಿಕೆಯಲ್ಲಿಯೂ ತಾಳಿಕೆಯಲ್ಲಿಯೂ ಅದ್ವಿತೀಯವಿದ್ದು ಇಡಿಯ ಭಾರತದಲ್ಲಿ ಪ್ರಚಾರದಲ್ಲಿದೆ. ಮಂಗಳೂರಿನ ಈ ಸಂಸ್ಥೆಯ ಶಾಖೆಯೊಂದು ಉತ್ತರ ಭಾರತದ ನಾಗಪುರದಲ್ಲಿಯೂ ಪ್ರಾರಂಭವಾದುದು ಈ ಸ್ಪ್ರಿಂಗ್‌ಗಳ ಜನಪ್ರಿಯತೆಯದ್ಯೋತಕ ವಿವಿಧ ಉದ್ಯಮಗಳಲ್ಲಿ ಅನುಭವಗಳಿಸಿದ ಅದ್ವಿತೀಯ ಸಾಹಸಿ ಶ್ರೀ ವಿ. ಎಸ್. ಕುಡ್ವ ಇವರ ಮಾರ್ಗದರ್ಶನದಲ್ಲಿ ವಿದೇಶಗಳಲ್ಲಿಯೂ ಈ ಸ್ಪ್ರಿಂಗುಗಳು ಕೀರ್ತಿ ಪಡೆಯುವಂತಾಗಲಿ.

ಭಾರತ್ ಇಂಡಸ್ಟ್ರಿಯಲ್ & ಪ್ಯಾಕಿಂಗ್ ಕಂಪೆನಿ—

ಪುಷ್ಟಿಕರವಾದ ಗ್ಲುಕೋಸ್‌ಯುಕ್ತ ಪೆಪ್ಪರಮಿಂಟು ಮತ್ತು ಸರ್ವಪ್ರಕಾರದ ಹಣ್ಣಿನ ಶರಬತ್ತುಗಳ ತಯಾರಕ ಸಂಸ್ಥೆಯಿದು. ಇವರ ತಯಾರಿಕೆಗಳು ಈಗಾಗಲೇ ಎಲ್ಲೆಲ್ಲಿಯೂ ಪ್ರಚಾರವಾಗಿ ಜನಪ್ರಿಯವಾಗಿವೆ. ತರುಣೋತ್ಸಾಹಿ ಶ್ರೀ ಕೆ. ಗೋವಿಂದ ಶೆಟ್ಟರ ಮುಂದಾಳುತನದಲ್ಲಿ ಕಂಪೆನಿಯು ಇನ್ನಷ್ಟು ಬೆಳೆದು ಜನತೆಯ ಪ್ರೋತ್ಸಾಹ ಪಡೆಯುವಂತಾಗಲೆಂದು ಆಶಿಸುತ್ತೇವೆ.

ಶ್ರೀ ಕೃಷ್ಣ ಜುವೆಲರಿ ಮಾರ್ಟ್—

ವಿಶುದ್ಧ ಚಿನ್ನದ ಮತ್ತು ಬೆಳ್ಳಿಯ ಹಾಗೂ ಅಮೂಲ್ಯ ರತ್ನಗಳ ಸಿದ್ಧ ಆಭರಣಗಳ ಪ್ರಸಿದ್ಧ ಮಳಿಗೆಯಿದು. ಶ್ರೀ ಯು ರಾಘವೇಂದ್ರ ಕೃಷ್ಣ ಭಟ್ಟರ ಈ ಮಳಿಗೆಯು ಗಿರಾಕಿಗಳಿಗೆ ತೃಪ್ತಿಯನ್ನು ತರುವುದು.

ಭಾರತ ದವಾಖಾನಾ

೨೫ ವರ್ಷಗಳ ಅನುಭವವಿರುವ ಲೇಡಿ ಡಾಕ್ಟರರ ಸಲಹೆ ಬೇಕಾದರೆ, ಈ ದವಾಖಾನೆಯ ಉಪಯೋಗ ಪಡೆಯ ಬೇಕು. ಡಾ. (ಸೌ) ರತ್ನಾಬಾಯಿಯವರು ಸ್ತ್ರೀಯರ ಮತ್ತು ಮಕ್ಕಳ ಎಲ್ಲ ವಿಧದ ರೋಗಗಳನ್ನು ಗುಣಪಡಿಸಿ ಕೊಡುವುದರಲ್ಲಿ ಸಮರ್ಥರಾಗಿದ್ದಾರೆ. ಶ್ರೀಮತಿಯವರ ಸಲಹೆಯನ್ನು ಅಂಚೆ ಮೂಲಕವೂ ಪಡೆಯಬಹುದು.

ಹನುಮಾನ್ ಟ್ರಾನ್ಸ್‌ಪೋರ್ಟ್

ಉಡುಪಿಯ ಮೊತ್ತಮೊದಲ ಟ್ರಾನ್ಸ್‌ಪೋರ್ಟ್ ಕಂಪೆನಿಯಿದು ಬಸ್ಸುಗಳೇ ಇಲ್ಲದಿದ್ದ ಜಿಲ್ಲೆಯ ನಾನಾ ಲೈನುಗಳಲ್ಲಿ ಸಾರಿಗೆಯ ವ್ಯವಸ್ಥೆಯನ್ನು ಮಾಡುತ್ತ, ದೂರದೂರದ ಪ್ರವಾಸಾದಿಗಳಿಗೆ ಬಸ್ಸುಗಳ ಸೌಕರ್ಯವನ್ನು ಒದಗಿಸುತ್ತ ಜನಾದರಣೀಯವಾದ ಕಂಪೆನಿಯಿದು. ಎಂ. ಎಲ್. ಎ. ಶ್ರೀ ಉಪೇಂದ್ರ ಶ್ರೀನಿವಾಸ ನಾಯಕರ ಮಾರ್ಗದರ್ಶನದಲ್ಲಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತದೆ.

ಜ್ಯೋತಿ ಟಾಕೀಸ್

ಉತ್ತಮ ಚಲಚ್ಚಿತ್ರಗಳನ್ನೇ ಜಿಲ್ಲೆಯಲ್ಲಿ ಮೊತ್ತಮೊದಲಿಗೆ ತರಿಸಿ ಪ್ರದರ್ಶಿಸುವ ಸಿನೆಮಾ ಮಂದಿರವಾದ ಇದು ರಸಿಕ ಪ್ರಿಯವೆಂದೆನಿಸಿದೆ. ಸಮರ್ಥರಾದ ಡೈರೆಕ್ಟರ ಮಂಡಳಿಯ ಮಾರ್ಗದರ್ಶನದಲ್ಲಿ ಶ್ರೀ ಎ. ಸಂಜೀವ ಪೂಂಜರ ಹಿರಿತನದಲ್ಲಿ ತಾನು ಗಳಿಸಿದ ಕೀರ್ತಿಯನ್ನು ಮುಂದಕ್ಕೂ ಉಳಿಸಿಕೊಳ್ಳಲಿ; ರಸಿಕ ಬಂಧುಗಳ ಪ್ರೋತ್ಸಾಹ ನಿರಂತರವಾಗಿ ದೊರೆಯುತ್ತಿರಲಿ.

ಕೆನರಾ ನರ್ಸರಿ ರಿಸರ್ಚ್ ಗಾರ್ಡನ್ಸ್

ಕೃಷಿತೋ ನಾಸ್ತಿ ದುರ್ಭಿಕ್ಷಂ ಎಂಬುದನ್ನು ಮನಗಂಡು ದಿ| ಕೆ. ಮುದ್ದಣ್ಣ ಶೆಟ್ಟರು ಕಾಪಿನಲ್ಲಿ ಈ ನರ್ಸರಿಯನ್ನು ಪ್ರಾರಂಭಿಸಿದ್ದರು. ಈಗ ಅವರ ಧರ್ಮಪತ್ನಿ ಶ್ರೀಮತಿ ಕೆ. ಗಿರಿಜಾ ಎಂ. ಶೆಡ್ತಿಯವರು ಇದನ್ನೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಉತ್ತಮ ಜಾತಿಯ ನಾನಾ ಬಗೆಯ ಕಸಿಯ ಗಿಡಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಸರಾಂತ ಈ ನರ್ಸರಿ ಮತ್ತು ಗಾರ್ಡನ್ ಪ್ರೋತ್ಸಾಹನೀಯವಿದೆ.

ಪ್ರಜಾರಾಜ್ಯ ದಿನಾಚರಣೆಯ

ಶುಭಾಶಯಗಳು



ಏರ್ ಕಂಡೀಶನ್ಡ್ ಕೋಣೆಗಳಿರುವ

ಅತ್ಯಾಧುನಿಕ ಮಾದರಿಯ ವಸತಿಗೃಹ

ಕಲ್ಪನಾ

ಉಪೇಂದ್ರ ಭಾಗ್, ಉಡುಪಿ.

ಸದ್ವೈದ್ಯ ಶಾಲಾ—

ನಂಜನಗೂಡಿನಲ್ಲಿ ಸ್ಥಾಪಿತವಾದ ಚೂರ್ಣ ಲೇಹಾದಿ ಸಿದ್ಧೌಷಧ ತಯಾರಿಸುವ ಈ ಸಂಸ್ಥೆಗೆ ಅರ್ಧ ಶತಮಾನದ ಪರಿಪೂರ್ಣ ಅನುಭವವಿದೆ. ಅತ್ಯಾಧುನಿಕ ರೀತಿಯಲ್ಲಿ ಪೂರ್ಣ ಸತ್ವಯುತವಾಗಿ ಭಾರತೀಯ ಆಯುರ್ವೇದ ಶಾಸ್ತ್ರದ ಆಧಾರದ ಮೇಲೆ ಸಿದ್ಧಪಡಿಸುವ ಇಲ್ಲಿನ ಆಯುರ್ವೇದ ಔಷಧಿಗಳು ಅಖಿಲ ಭಾರತ ಪ್ರಸಿದ್ಧವಿವೆ.

ಗೇಂಜಸ್ ಪ್ರಿಂಟಿಂಗ್ ಇಂಕ್ ಫೇಕ್ಟರಿ

೩೬ ವರ್ಷಗಳ ಹಿಂದೆ ಸ್ಥಾಪನೆಗೊಂಡ ಈ ಕಂಪೆನಿಯು ಹೌರಾ, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ ಕಾರಖಾನೆಗಳನ್ನು ತೆರೆದು ಉತ್ತಮ ತರದ ಪ್ರಿಂಟಿಂಗ್ ಶಾಯಿಯನ್ನು ತಯಾರಿಸುತ್ತಿದೆ. ಬೇಗನೆ ಒಣಗುವ, ಅಲಂಕಾರಕ್ಕೊಪ್ಪುವ, ತೀವ್ರ ವರ್ಣಕರವಾದ ಈ ಶಾಯಿ ಎಲ್ಲರನ್ನೂ ಆಕರ್ಷಿಸುವುದು.

ಬಿ. ಬಿ. ಪರೀಖ್ & ಕಂಪೆನಿ—

ಮಂಗಳೂರಿನಲ್ಲಿ ಈ ಸಂಸ್ಥೆಯು ಸ್ಟೀಲ ಕ. ಜೆ. ಮೇಜು, ಕವಾಟು ಸೋಫಾ ಇತ್ಯಾದಿಗಳನ್ನು ವಿತರಣೆ ಮಾಡುತ್ತದೆ. ಆಧುನಿಕ ಮಾದರಿಗೆ ಸರಿಹೊಂದುವಂತಹ ಉಪಕರಣಗಳು ಎಲ್ಲರಿಗೂ ತೃಪ್ತಿಯನ್ನು ತಂದುಕೊಡುತ್ತದೆ. ನ್ಯಾಯ ರೀತಿಯ ವ್ಯವಹಾರಕ್ಕೆ ಇವರು ಹೆಸರಾದವರು.

ಜೈ ಭಾರತ್ ಮಿಲ್ಸ್

ಕೇಲಗೂರ್ ಚಹಕ್ಕೆ ಹೆಸರಾದ ಈ ಮಿಲ್ಲು ಉಡುಪಿಯಲ್ಲಿ ಬಹುಕಾಲದಿಂದಲೂ ಎಣ್ಣೆಗಳನ್ನೂ ತಯಾರಿಸಿ ವಿತರಣೆ ಮಾಡುತ್ತಿದೆ. ಶುದ್ಧವಾದ ತೆಂಗಿನೆಣ್ಣೆ ಮತ್ತು ಎಳ್ಳೆಣ್ಣೆ ಹಾಗೂ ಚಹ ಪುಡಿಗಳನ್ನು ರಖಂ ಮತ್ತು ಚಿಲ್ಲರೆಯಾಗಿ ಇಲ್ಲಿಂದ ಪಡೆಯಬಹುದು. ಪ್ರಖ್ಯಾತ ಕೆಲಗೂರು ಚಾದ ವಿತರಣೆಗಾರರಾಗಿದ್ದಾರೆ.

ಸ್ಕೂಲ್ ಬುಕ್ ಕಂಪೆನಿ—

ಮಂಗಳೂರಿನ ಪುಸ್ತಕ ಹಾಗೂ ಸ್ಟೇಶನರಿ ವ್ಯಾಪಾರ ನಡೆಸುವ ಈ ಕಂಪೆನಿಯು ಕಾಗದ ವಿತರಣೆಯನ್ನೂ ಮಾಡುವುದು. ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡಿಯ ಕರ್ನಾಟಕದಲ್ಲಿಯೂ ಪುಸ್ತಕ ವಿತರಣೆಗೆ ಹೆಸರು ಪಡೆದಿದೆ. ಯಾವತ್ತೂ ಶಾಲಾ, ಕಾಲೇಜು ಮತ್ತು ಲೈಬ್ರರಿಗಳಿಗೆ ಬೇಕಾಗುವ ಎಲ್ಲ ಬಗೆಯ ಪುಸ್ತಕಗಳನ್ನು ಒದಗಿಸಿ ಕೊಡುವುದರಲ್ಲಿ ಇವರ ವೈಶಿಷ್ಟ್ಯವಿದೆ.

ಶ್ರೀನಿವಾಸ ಬ್ರದರ್ಸ್—

ಕಾಗದದ ವ್ಯಾಪಾರ, ಪುಸ್ತಕ ಮಾರಾಟ ಮತ್ತು ಸ್ಟೇಶನರಿ ವ್ಯವಹಾರದಲ್ಲಿ ನುರಿತವರು; ಗಿರಾಕಿಗಳ ಆವಶ್ಯಕತೆಯನ್ನು ಪೂರೈಸುವಲ್ಲಿ ತೀವ್ರ ಮುತುವರ್ಜಿಯನ್ನು ವಹಿಸುವ ಸೌಜನ್ಯದಿಂದ ಜನಾದರಣೆ ಗಳಿಸಿದವರು. ವ್ಯವಹಾರ ಚತುರರಿರುವಂತೆಯೇ ಸಹೃದಯರೂ ಆಗಿದ್ದಾರೆ. ಮುದ್ರಣ ಸಾಹಿತ್ಯವನ್ನೂ ಇವರು ಒದಗಿಸುತ್ತಿದ್ದಾರೆ.

ಅಶೋಕ ಜ್ಯುವೆಲರಿ ಹೌಸ್ -

ಹಿರಿದಾದ ಅಪ್ಪಟ ಚಿನ್ನಾಭರಣಗಳ ಈ ಮಳಿಗೆ ಮಂಗಳೂರಿನಲ್ಲಿರುವುದಾದರೂ ಇಡಿಯ ಜಿಲ್ಲೆಯಲ್ಲಿಯೇ ಪ್ರಖ್ಯಾತವಿದೆ. ನಂಬಿಗೆಗೆ ಅರ್ಹವಾದ ನ್ಯಾಯವಾದ ಬೆಲೆಗೆ ಆಭರಣ ಮಾರುವ ಈ ಮಳಿಗೆಯು ಪ್ರೋತ್ಸಾಹನೀಯವಿದೆ.

ನಿಯೋ ಹೋಟೆಲ್ ದೀವಾರ್—

ಮಂಗಳೂರು ನಗರದ ಕೇಂದ್ರದಲ್ಲಿರುವ ಶಾಕಾಹಾರ ಮತ್ತು ಮಾಂಸಾಹಾರಗಳ ಭೋಜನ ಗೃಹವಿದು. ರುಚಿಕರವೂ ಹಿತಕರವೂ ಆದ ಊಟಕ್ಕೆ ಹೆಸರುವಾಸಿಯಾಗಿದೆ. ಉತ್ಸಾಹಿ ಮತ್ತು ಜನಪ್ರಿಯರಾದ ಶ್ರೀ ಎ. ರಾಮಯ್ಯ ಆಳ್ವರು ಇದರ ಮ್ಹಾಲಕರಾಗಿದ್ದು ಯೋಗ್ಯ ರೀತಿಯ ಮೇಲ್ವಿಚಾರಣೆಯಿಂದ ಗಿರಾಕಿಗಳನ್ನು ಆಕರ್ಷಿಸುತ್ತಾರೆ.

ರೋಯಲ್ ಮಹಾಲ್—

ಹೊಟೇಲು ಉದ್ಯಮದಲ್ಲಿ ಅನುಭವಶಾಲಿಗಳೂ ನಯವಿನಯಸಂಪನ್ನರೂ ಜನಾನುರಾಗಿಗಳೂ ಆದ ಶ್ರೀ ಕೆ. ವೆಂಕಟರಮಣ ಭಟ್ಟರು ಹಲವು ವರ್ಷಗಳಿಂದ ಜಯಶೀಲವಾಗಿ, ನಡೆಸಿಕೊಂಡು ಬರುತ್ತಿರುವ ಶ್ರೇಷ್ಠ ತರಗತಿಯ ಊಟ ಹಾಗೂ ವಸತಿ ಗೃಹ. ಉಡುಪಿ ನಗರದ ಮಹೋನ್ನತ ಬೋರ್ಡಿಂಗ್ ಮತ್ತು ಲೋಜಿಂಗ್ ಎಂದು ಕೀರ್ತಿಗಳಿಸಿದೆ.

ಮೋಡರ್ನ್ ಗೆರೇಜ್—

ದಕ್ಷ ಕೆಲಸಗಾರರಿಂದಲೂ ಇಂಜಿನಿಯರರಿಂದಲೂ ವಾಹನ ರಿಪೇರಿ ಮಾಡುವ ಉಡುಪಿಯ ಏಕ ಮಾತ್ರ ಗೆರೇಜ್. ಕಾರುಗಳಿಗೆ ಅನುಭವಸ್ಥರಿಂದ ಸ್ಪ್ರೇ ಪೈಂಟುಗಳನ್ನು ಮಾಡಲಾಗುವುದು. ವ್ಯವಹಾರ ಕುಶಲರೂ, ಜನಪ್ರಿಯರೂ ಆದ ಶ್ರೀ ಕಾರ್ನಾಡು ಮಂಗೇಶರಾಯರ ಅನುಭವಿಕ ಆಡಳಿತದಲ್ಲಿ ಈ ಗೆರೇಜು ಜನಾನುರಾಗಗಳಿಸಿದೆ.

ಕಲ್ಪನಾ—

ಉಡುಪಿಯಲ್ಲಿ ಇತ್ತೀಚೆಗೆ ಪ್ರಾರಂಭವಾದ ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿರುವ ಚಿತ್ತಾಕರ್ಷಕ ವಸತಿ ಗೃಹ. ನಗರದ ಕೇಂದ್ರದಲ್ಲಿರುವ ಈ ವಸತಿ ಗೃಹವು ಪ್ರವಾಸಿಕರಿಗೆ ಅತ್ಯನುಕೂಲವಾಗಿದೆ. ಉಡುಪಿಯಲ್ಲಿ ಏರ್‌ಕಂಡಿಶನ್ಡ್ ಕೋಣೆಗಳಿರುವ ಪ್ರಥಮ ಶ್ರೇಣಿಯ ಪ್ರಥಮ ವಸತಿಗೃಹವಿದು.

ವಿಶ್ವಭವನ—

ಮಂಗಳೂರು ನಗರದ ಅತ್ಯಂತ ಕೇಂದ್ರ ಸ್ಥಾನದಲ್ಲಿರುವ ಸರ್ವೋತ್ಕೃಷ್ಟವಾದ ಅತ್ಯಾಧುನಿಕ ಮಾದರಿಯ ವಸತಿ ಹಾಗೂ ಭೋಜನ ಗೃಹ. ಇಲ್ಲಿ ಸರ್ವ ಅನುಕೂಲತೆಗಳಿದ್ದು ಯಾವತ್ತೂ ಪ್ರವಾಸಿಕರಿಗೆ ಉಳಕೊಳ್ಳಲು ವ್ಯವಸ್ಥೆ ಇದೆ.

ಶಾಸ್ತ್ರಿ ಮತ್ತು ಕಂಪೆನಿ—

ಮನೆ ಮಠಗಳಿಗಾಗಲೀ, ಆಫೀಸು ಆಸ್ಪತ್ರೆಗಳಿಗಾಗಲೀ ಬೇಕಾಗುವ ಯಾವತ್ತೂ ತರದ ಅತ್ಯಾಧುನಿಕ ಉಕ್ಕಿನ ಪೀಠೋಪಕರಣ (ಫ)ರ್ನಿಚರುಗಳು ಮತ್ತು ಇತರ ಸಾಹಿತ್ಯ ಸಾಮಗ್ರಿಗಳು ದೊರೆಯುತ್ತವೆ. ವ್ಯವಹಾರ ಚತುರರಾದ ಶ್ರೀ ಕೆ. ವಿ. ಶಾಸ್ತ್ರಿಗಳ ದಕ್ಷ ಆಡಳಿತದಲ್ಲಿ ಪ್ರಗತಿದಾಯಕವಾಗಿ ನಡೆಯುವ ಸಂಸ್ಥೆಯಿದು.

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್—

ನಾಲ್ಕು ದಶಕಗಳ ಮೊದಲೇ ಮಂಗಳೂರಲ್ಲಿ ಸ್ಥಾಪಿತವಾಗಿರುವ ಚಿನ್ನಾಭರಣಗಳ ತವರು ಮನೆಯಿದು ಯಾವುದೇ ತರದ ಆಭರಣ, ವಜ್ರಗಳು ಇಲ್ಲಿ ದೊರೆಯುತ್ತವೆ. ಅನುಭವಶಾಲಿ ಶ್ರೀ ಕೆ. ಕೆ. ಆರ್ ಶೇಟ್‌ರ ನೇತೃತ್ವದಲ್ಲಿ ಇದು ಜನಪ್ರಿಯತೆಯನ್ನು ಗಳಿಸಿದೆ, ಹಾಗೂ ಖಾತ್ರಿಯಾದ ಮ್ಹಾಲುಗಳಿಗೆ ಹೆಸರಾಗಿದೆ.

SPECTACLES TO SUIT ALL SIGHTS AND TASTES
at moderate rates

Enquire at:

M/s. Y. RAMA RAO & Co.,
OPHTHALMIC OPTICIANS,
MANGALORE-1.

ಇಂದು ಗೋವೆಯು ಭಾರತದಲ್ಲಿ ವಿಲೀನಗೊಂಡಿದೆ.
ಹಿಂದಿನಿಂದಲೂ ಗೋವೆಯು ಭಾರತದ್ದೇ ಎಂದು ನಾವು ತಿಳಿದಿದ್ದೇವೆ.

ಗೋವಾ ವಿಮೋಚನೆಯ ಸಂತೋಷದೊಡನೆ ಆಚರಿಸುವ ಪ್ರಜಾಪ್ರಭುತ್ವ ದಿನದ ಶುಭ ಮುಹೂರ್ತದಲ್ಲಿ ಸರ್ವರಿಗೂ ನಮ್ಮ ಶುಭಾಶಯಗಳು.

ಗೋವಾ ಸ್ಟೋರ್ಸ್ & ಬೇಕರಿ
ಕೆಥೊಲಿಕ್ ಸೆಂಟರ್, ಉಡುಪಿ.

ಸರ್ವರಿಗೂ ಪ್ರಜಾರಾಜ್ಯ ದಿನೋತ್ಸವದ ಶುಭಾಶಯಗಳು!

ಭವ್ಯವಾದ ಕಟ್ಟಡಗಳಿಗೆ ಬೇಕಾಗುವ

ವಿ ವಿ ಧ ರೀತಿಯ
- ಕಿಟಿಕಿ ಬಾಗಿಲುಗಳು,
- ವೆಂಟಿಲೇಟರುಗಳು,
- ಕಂಪೌಂಡು ಗೇಟುಗಳು,
- ರೋಲಿಂಗ್ ಶಟರುಗಳು,

ಇತ್ಯಾದಿ.... ಇತ್ಯಾದಿ....

ಆಫೀಸುಗಳಿಗೆ—ಮನೆಗಳಿಗೆ
— ಬೇಕಾಗುವ —
- ತರತರದ ಕಪಾಟುಗಳು,
- ಮೇಜುಗಳು,
- ಕಾಟುಗಳು
- ಮತ್ತು ಸೋಫಾ ಸೆಟ್ಟುಗಳು ವಗೈರೆ !

— ಹೆಚ್ಚಿನ ವಿವರಗಳಿಗೆ —

ಶಾಸ್ತ್ರಿ & ಕೊ. SHASTRI & Co.

ಹಂಪನಕಟ್ಟಾ,
ಮಂಗಳೂರು-1.
Phone: 788

Hampankatta,
MANGALORE-1.
Grams: SHASTRYCO.

A HOME AWAY FROM HOME

While on business or pleasure Trip your stay at MANGALORE made more Comfortable & Convenience

VISHWA BHAVAN
BOARDING & LODGING
K. S. R. ROAD,
MANGALORE - 1.

Most Centrally located, Very near to bus stand, Hospitals, Business Centres, Ry. Station. Transport no Problem. Car Parking spaces.

Phone: 222

Opening Shortly:
HOTEL WOODSIDE

ಪ್ರಜಾಪ್ರಭುತ್ವ ದಿನದ ಶುಭಾಶಯಗಳು

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ವ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ. ಬಡ್ಡಿ ಶೇಕಡ 5ರಂತೆ; ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು:
ಬಡ್ಡಿ ಶೇಕಡ 5½ ರ ವರೆಗೆ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಬಡ್ಡಿ ಶೇಕಡ 3 ರಂತೆ.
ಯಾವತ್ತೂ ನಿರ್ಬಂಧಗಳಿಲ್ಲದೆ ಮರುಪಾವತಿ ಪಡೆಯುವ ಸೌಲಭ್ಯ.

ರೂ. 1 ಕೋಟಿಗೂ ಮಿಕ್ಕಿದ ಠೇವಣಾತಿಗಳು

ಶಾಖೆಗಳು:

ಮಂಗಳೂರು, ಬೆಂಗಳೂರು, ಬೇಲೂರು, ಶಿವಮೊಗ್ಗ,
ಭದ್ರಾವತಿ, ತುಮುಕೂರು, ಕುನಿಗಲ್, ಉಡುಪಿ,
ಕಾಸರಗೋಡು, ಇತ್ಯಾದಿ.

THE PANGAL NAYAK BANK LIMITED

REGISTERED OFFICE: UDIPI **ESTD: 1920.**

LICENCE No. 31
Licensed to Post without Prepayment

ಚಿಂತನೆ
ವಚನ
ಕಾರ್ಯಗಳಿಗೆ
ಸ್ವಾತಂತ್ರ್ಯವಿರುವೀ
ಪುಣ್ಯಭೂಮಿಯಲಿ

ಸದ್ವಿವೇಚನೆ
ಸದ್ವಚನ
ಸತ್ಕ್ರಿಯೆಗಳು
ತುಂಬಿ ತುಳುಕಾಡಲಿ
ರಾಷ್ಟ್ರಕ್ಕೆ ಶುಭ; ಪ್ರಜೆಗಳಿಗೆ ಹಿತ ಆಗಲಿ.

• ಪ್ರಜಾರಾಜ್ಯ ಉತ್ಸವದ ಶುಭ ಸಂದರ್ಭದಲ್ಲಿ •

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

Edited, Printed & Pubilshed hy K. H Shetty at the Navayuga Prsss, Udipi. S India

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೨೧ | ಉಡುಪಿ 1—2—1962 ಗುರುವಾರ | Vol. 41 No. 21

ಂಗ್ರೆಸಿಗೆ ಮತ—
ಾಷ್ಟ್ರದ ಹಿತ!

ಕಾಂಗ್ರೆಸಿನ ಜಯ
ಜನತೆಯ ವಿಜಯ.

ಇತ್ತೀಚೆಗೆ ನಡೆಯಲಿರುವ
ಸಾರ್ವತ್ರಿಕ ಚುನಾವಣೆಗಳು

ರಾಷ್ಟ್ರವು ಈ ತಿಂಗಳ ಅಂತ್ಯದ ವೇಳೆಗೆ, ರಹಸ್ಯ ಮತದಾನ ಪದ್ಧತಿಯ ಮೂಲಕ ತನ್ನ ಪ್ರತಿನಿಧಿಗಳನ್ನು ಚುನಾಯಿಸುವುದು. ಮತದಾನವು ಫೆಬ್ರವರಿ ೧೯ರಂದು ಆರಂಭವಾಗಿ ಫೆಬ್ರವರಿ ೨೫ರಂದು ಮುಕ್ತಾಯವಾಗುವುದು. ಪಂಜಾಬ್ ಮತ್ತು ಕೇರಳಗಳಲ್ಲಿ ಮಾತ್ರ ಫೆಬ್ರವರಿ ೨೪ರಂದು ಮತದಾನವು ಆರಂಭವಾಗಿ ಅಂದೇ ಮುಕ್ತಾಯವಾಗುವುದು.

೨೧ ವರ್ಷ ವಯಸ್ಸಿನ ಪ್ರತಿಯೊಬ್ಬ ಸ್ತ್ರೀ ಪುರುಷರೂ ಮತ ನೀಡಬಹುದು. ಯಾರನ್ನು ಚುನಾಯಿಸಬೇಕೆಂಬುದು ಅವರಿಗೆ ಸೇರಿದ ವಿಷಯವಾಗಿದೆ. ಮತದಾರರ ಅಭಿಪ್ರಾಯಕ್ಕೆ ಚುನಾವಣೆಯಲ್ಲಿ ಸೋತವರು ಮನ್ನಣೆ ಕೊಟ್ಟೇ ಕೊಡುವರು. ಏಕೆಂದರೆ ಪ್ರಜಾಪ್ರಭುತ್ವದ ಕಾರ್ಯ ವಿಧಾನವೇ ಈ ರೀತಿ ಇದೆ.

ಕೇರಳ ಮತ್ತು ಒರಿಸ್ಸಾಗಳಲ್ಲಿ ಅಂದರೆ ಯಾವುದೇ ಒಂದು ವಿಧಾನ ಮಂಡಲಿಯು ತನ್ನ ನಿರ್ದಿಷ್ಟ ಕಾಲಾವಧಿಯಾದ ಐದು ವರ್ಷಗಳು ಮುಗಿಯುವ ಮೊದಲೇ ವಿಸರ್ಜನೆಗೊಂಡ ಪ್ರಸಂಗಗಳು ನಡೆದಿರಬಹುದು ಆದರೆ ಯಾವುದೇ ಓರ್ವ ವ್ಯಕ್ತಿಯು ತಾನು ಇಚ್ಛಿಸುವ ಪಕ್ಷ ಅಥವ ಉಮೇದುವಾರನ ಪರವಾಗಿ, ನಿರ್ದಾಕ್ಷಿಣ್ಯವಾಗಿ ಹಾಗೂ ಸ್ವತಂತ್ರವಾಗಿ ತನ್ನ ಅಭಿಮತವನ್ನು ನೀಡುವ ಹಕ್ಕಿಗೆ ಭಂಗ ತರುವ ಪ್ರಶ್ನೆಯು ಎಂದಿಗೂ ಬರುವುದಿಲ್ಲ. ನಮ್ಮ ದೇಶದಲ್ಲಿ ಈ ಸಾರಿ ೨೧ ಕೋಟಿ ಮತದಾರರಿರುವರು, ಅವರಲ್ಲಿ ನೂರಕ್ಕೆ ೭೦ ಮಂದಿ ನಿರಕ್ಷರಸ್ಥರಿರುವರು.

ಎರಡು ಸದನಗಳಿಗಾಗಿ ಚುನಾವಣೆ

ಚುನಾವಣೆಯು ಲೋಕಸಭೆ ಮತ್ತು ವಿಧಾನ ಸಭೆಗಳಿಗಾಗಿ ನಡೆಯುವುದು. ಲೋಕ ಸಭೆಗೆ ೫೦೭ ಸ್ಥಾನಗಳಿವೆ. ಇ ಪೈಕಿ ೭ ಮಂದಿ ಸದಸ್ಯರು ನಾಮಕರಣ ಮಾಡಲ್ಪಟ್ಟವರು, ಇಬ್ಬರು ಆಂಗ್ಲೋ-ಇಂಡಿಯನ್ನರು, ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷ ದ್ವೀಪಗಳು, ಮಿನಿಕಾಯ್ ಮತ್ತು ಅಮಿನಿದಿವಿ ದ್ವೀಪಗಳು, ದಾದ್ರಾ ಮತ್ತು ನಗರ್ ಹವೇಲಿ, ಈಶಾನ್ಯ ಭಾರತದ ಗಡಿ ಕ್ಷೇತ್ರ, ಹಾಗೂ ನಾಗಾ ಗುಡ್ಡಗಾಡಿನ ಪ್ರದೇಶಗಳು-ತುಯೆನ್‌ಸಾಂಗ್ ಕ್ಷೇತ್ರ ಈ ಭಾಗಗಳಿಂದ ತಲಾ ಒಬ್ಬೊಬ್ಬರು ಸದಸ್ಯರು.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯು ೬ ಮಂದಿ ಸದಸ್ಯರನ್ನು ಚುನಾಯಿಸುವುದು ಈ ಸದಸ್ಯರನ್ನು ರಾಷ್ಟ್ರಪತಿಗಳು ವಿದ್ಯುಕ್ತವಾಗಿ ಲೋಕ ಸಭೆಗೆ ನಾಮಕರಣ ಮಾಡುವರು. ಐದು ಹಿಮೂನ್ನತ ಚುನಾವಣಾ ಕ್ಷೇತ್ರಗಳಲ್ಲಿ ಹಿಮಾಚಲ ಪ್ರದೇಶದ ನಾಲ್ಕು ಕ್ಷೇತ್ರಗಳು ಮತ್ತು ಕಾಂಗಾದ ಒಂದು ಚುನಾವಣಾ ಕ್ಷೇತ್ರ ಚುನಾವಣೆಗಳು ಎಪ್ರಿಲ್ ತಿಂಗಳಲ್ಲಿ ನಡೆಯುವುವು.

ಜಮ್ಮು ಮತ್ತು ಕಾಶ್ಮೀರವನ್ನು ಬಿಟ್ಟು ವಿಧಾನ ಸಭೆಗಳಲ್ಲಿ ೩,೩೦೯ ಸ್ಥಾನಗಳಿವೆ. ೨೮೩೩ ಸ್ಥಾನಗಳಿಗೆ ಚುನಾವಣೆಗಳು ನಡೆಯಬೇಕಾಗಿರುವುದು. ಕೇರಳ (೧೨೬ ಸ್ಥಾನಗಳು) ಮತ್ತು ಒರಿಸ್ಸಾ (೧೪೦ ಸ್ಥಾನಗಳು) ಗಳಲ್ಲಿ ಮಧ್ಯಂತರ ಕಾಲದ ಚುನಾವಣೆಗಳು ನಡೆದಿದೆ. ಪಾರ್ಲಿಮೆಂಟ್ ಸ್ಥಾನಕ್ಕಾಗಿ ಕಾಂಗಾದ ಐದು ವಿಧಾನ ಸಭಾಕ್ಷೇತ್ರಗಳಲ್ಲಿ ಚುನಾವಣೆ ಎಪ್ರಿಲ್ ೨೭,೨೮ ಮತ್ತು ೩೦ರಂದು ನಡೆಯುವುದು.

ಮಾರ್ಚಿ ತಿಂಗಳ ದ್ವಿತೀಯಾರ್ಧದಲ್ಲಿ ಚುನಾಯಿತ ಪ್ರತಿನಿಧಿಗಳು ರಾಜ್ಯಸಭೆ ಸದಸ್ಯ (ರಾಜ್ಯಗಳ ಪರಿಷತ್ತು) ಮತ್ತು ವಿಧಾನ ಪರಿಷತ್ತುಗಳಿಗೆ ಸದಸ್ಯರನ್ನು ಆರಿಸುವರು. ರಾಜ್ಯಸಭೆ ಮತ್ತು ವಿಧಾನ ಪರಿಷತ್ತುಗಳ ಮೂರನೆಯ ಒಂದು ಭಾಗ ಸದಸ್ಯರು ಪ್ರತಿ ಆರು ವರ್ಷಗಳಿಗೊಮ್ಮೆ ನಿವೃತ್ತರಾಗುವರು. (ಗುಜರಾತ್, ಅಸ್ಸಾಂ, ಒರಿಸ್ಸಾ, ಕೇರಳ ಮತ್ತು ರಾಜಸ್ಥಾನಗಳಲ್ಲಿ ವಿಧಾನ ಪರಿಷತ್ತುಗಳಿಲ್ಲ)

ಲೋಕಸಭೆ ಮತ್ತು ರಾಜ್ಯದ ವಿಧಾನ ಸಭೆಗಳಿಗೆ ಚುನಾವಣೆಯು ಏಕ ಕಾಲದಲ್ಲಿ ನಡೆಯುವುದರಿಂದ ಪ್ರತಿಯೋರ್ವ ಮತದಾರನಿಗೂ ಎರಡು ಮತದಾನ ಪತ್ರಗಳನ್ನು ಕೊಡಲಾಗುವುದು. ನಸುಗೆಂಪಿನ (ಗುಲಾಬಿ ಬಣ್ಣ) ಪತ್ರವನ್ನು ರಾಜ್ಯದ ವಿಧಾನಸಭೆಗೂ ಮತ್ತು ಬಿಳಿ ಬಣ್ಣದ ಪತ್ರವನ್ನು ಲೋಕಸಭೆಗೂ ಬಳಸಬೇಕು. ಮತದಾನ ಕ್ಷೇತ್ರದಲ್ಲಿ ಮೊದಲು ಮತದಾರನಿಗೆ ರಾಜ್ಯದ ವಿಧಾನ ಸಭೆಯ ಮತದಾನ ಪತ್ರವನ್ನು ಕೊಡಲಾಗುವುದು. ಆ ಪತ್ರದ ಮೇಲೆ ಮತದಾರನು ತನ್ನ ಮತವನ್ನು ಸೂಚಿಸಿ ಅದನ್ನು ಪೆಟ್ಟಿಗೆಗೆ ಹಾಕಿದ ನಂತರ ಲೋಕಸಭೆಯ ಮತದಾನ ಪತ್ರವನ್ನು ನೀಡಲಾಗುವುದು. ಈ ಪತ್ರದ ಮೇಲೂ ಮತದಾರನು ತನ್ನ ಮತವನ್ನು ಸೂಚಿಸಿ ಅದನ್ನು ಪೆಟ್ಟಿಗೆಗೆ ಹಾಕಬೇಕು.

ಈ ಬಾರಿ ಮತದಾನ ವಿಧಾನದಲ್ಲಿ ಒಂದು ಹೊಸ ಪ್ರಯೋಗ ಮಾಡಲಾಗಿದೆ. ೧೯೫೨ ಮತ್ತು ೧೯೫೭ರಲ್ಲಿ ನಡೆದ ಎರಡು ಚುನಾವಣೆಗಳಲ್ಲಿ ಪ್ರತಿಯೊಬ್ಬ ಉಮೇದುವಾರನಿಗೂ ಒಂದೊಂದು ಪ್ರತ್ಯೇಕ ಪೆಟ್ಟಿಗೆ ಇತ್ತು. ಆ ಪೆಟ್ಟಿಗೆಯ ಮೇಲೆ ಉಮೇದುವಾರನ ಅಥವಾ ಪಕ್ಷದ ಸಂಕೇತವಿರುತ್ತಿತ್ತು. ಈ ಬಾರಿ ಲೋಕ ಸಭೆ ಮತ್ತು ವಿಧಾನ ಸಭೆಗಳೆರಡಕ್ಕೂ ಹಾಗೂ ಎಲ್ಲಾ ಉಮೇದುವಾರರಿಗೂ ಒಂದೇ ಪೆಟ್ಟಿಗೆಯಿರುವುದು.

ಈ ಸಾರಿ ಗುರುತುಮಾಡುವ ಹೊಸ ವಿಧಾನವನ್ನು ಅನುಸರಿಸಲಾಗುವುದು. ಅಂದರೆ ಮತದಾರನು ತನ್ನ ಅಭಿಮತವನ್ನು ಮತದಾನ ಪತ್ರದ ಮೇಲೆಯೇ ಗುರುತುಮಾಡಬೇಕು ಮತದಾನ ಪತ್ರದಲ್ಲಿ ಉಮೇದುವಾರರ ಹೆಸರುಗಳಿರುವುವು. ಈ ಹೆಸರುಗಳ ಎದುರು ಸ್ಪರ್ಧಿಸುವ ಆಯಾಯ ಉಮೇದುವಾರರ ಸಂಕೇತಗಳ ಪ್ರತಿರೂಪಗಳಿರುವುವು! ಆ ಸಂಕೇತಗಳ ಮುಂದೆ ಮತದಾರರು ತಮ್ಮ ಮತವನ್ನು ಗುರುತುಮಾಡಿ ಪೆಟ್ಟಿಗೆಗೆ ಹಾಕಬೇಕು. ಮತದಾನ ಪತ್ರಗಳ ಪೆಟ್ಟಿಗೆಯನ್ನು, ಆ ಕೇಂದ್ರದ ಚುನಾವಣಾ ನಿರ್ವಹಣಾಧಿಕಾರಿಯ ಮುಂಭಾಗದಲ್ಲಿ ಉಮೇದುವಾರರ ಏಜೆಂಟ್‌ಗಳು ಹಾಗೂ ಚುನಾವಣಾ ಕೇಂದ್ರದ ಇತರ ಸಿಬ್ಬಂದಿಗೆ ಕಾಣುವಂತಹ ಸ್ಥಳದಲ್ಲಿ ಇಟ್ಟಿರಲಾಗುವುದು.

ಮತಗಳ ಎಣಿಕೆ

ಮತಗಳ ಎಣಿಕೆ ಮತ್ತು ಫಲಿತಾಂಶಗಳ ಪಟ್ಟಿಯ ತಯಾರಿಕೆಯು, ಅನಿರೀಕ್ಷಿತವಾಗಿ ಚುನಾವಣೆ ತಪ್ಪಿಹೋದ ಕೆಲವು ಪ್ರಸಂಗಗಳನ್ನು ಬಿಟ್ಟು, ಫೆಬ್ರವರಿ ೨೫ರಿಂದ ಮಾರ್ಚಿ ೧ರ ನಡುವೆ ನಡೆಯುವುದು. ಒಂದು ಚುನಾವಣಾ ಕ್ಷೇತ್ರದಲ್ಲಾದ ಜಯ ಅಥವಾ ಪರಾಜಯವು ಮತ್ತೊಂದು ಚುನಾವಣಾ ಕ್ಷೇತ್ರದ ಮೇಲೆ ಪರಿಣಾಮಗಳನ್ನುಂಟು ಮಾಡುವುದನ್ನು ತಪ್ಪಿಸುವ ಸಲುವಾಗಿ ರಾಷ್ಟ್ರಾದ್ಯಂತ ಚುನಾವಣೆಯು ಮುಕ್ತಾಯವಾಗುವುದಕ್ಕೆ ಮೊದಲು ಯಾವ ಫಲಿತಾಂಶವನ್ನೂ ಘೋಷಿಸಲಾಗುವುದಿಲ್ಲ.

ಚುನಾವಣಾ ಮಂಡಳಿಯು ಮಾರ್ಚಿ ೩ರಂದು, ಹೊಸ ವಿಧಾನ ಸಭೆಗಳಿಗೆ ಚುನಾಯಿತರಾದ ಸದಸ್ಯರೆಲ್ಲರ ಹೆಸರುಗಳನ್ನು ಸೂಚಿಸುವ ಪ್ರಕಟಣೆಗಳನ್ನು ಹೊರಡಿಸುವುದು. ಮಾರ್ಚಿ ೧ರಂದು ಕೇರಳ ಮತ್ತು ಒರಿಸ್ಸಾಗಳನ್ನು ಬಿಟ್ಟು, ಈಗಿರುವ ವಿಧಾನ ಸಭೆಗಳು ವಿಸರ್ಜನೆಗೊಳ್ಳುವುವು.

ಈಗಿರುವ ಲೋಕ ಸಭೆಯು ಮಾರ್ಚಿ ೩೧ರ ವರೆಗೆ ಮುಂದುವರಿದು ಮಾರ್ಚಿ ತಿಂಗಳ ಉತ್ತರಾರ್ಧದಲ್ಲಿ ಸಮಾವೇಶಗೊಂಡು ರೈಲ್ವೆ ಬಜೆಟ್ ಮತ್ತು ಜನರಲ್ ಬಜೆಟ್‌ಗಳನ್ನು ಪರಿಶೀಲಿಸಿ, ಅವುಗಳಿಗೆ ಅನುಮತಿ ನೀಡುವುದು

ಲೋಕ ಸಭೆಯು ವಿಧಿವತ್ತಾದ ರಚನೆ ಸಂಬಂಧ ಪ್ರಕಟಣೆಯನ್ನು ಏ. ೨ರಂದು ಹೊರಡಿಸಲಾಗುವುದು.

ಮೇ ೧೨ರಂದು ರಾಷ್ಟ್ರಪತಿಗಳು ಮತ್ತು ಉಪ ರಾಷ್ಟ್ರಪತಿಗಳ ಅಧಿಕಾರಾವಧಿಯು ಮುಗಿಯುವುದು. ಆ ಸ್ಥಾನಗಳಿಗಾಗಿ ಆ ದಿನಾಂಕಕ್ಕೆ ಮೊದಲು ಚುನಾವಣೆಗಳು ನಡೆಯಬೇಕು. ಚುನಾವಣಾ ಮಂಡಲಿಯು ಏಪ್ರಿಲ್ ೭ರಂದು ಅಥವಾ ಆ ದಿನಾಂಕದ ಸುಮಾರಿಗೆ ರಾಷ್ಟ್ರಪತಿಗಳ ಮತ್ತು ಉಪರಾಷ್ಟ್ರಪತಿಗಳ ಸಂಬಂಧ ಪ್ರಕಟಣೆಯನ್ನು ಹೊರಡಿಸುವುದು. ಅಗತ್ಯವಾದಲ್ಲಿ ಮೇ ೭ರಂದು ಅಥವಾ ಆ ದಿನಾಂಕದ ಸುಮಾರಿಗೆ ಚುನಾವಣೆಗಳನ್ನು ನಡೆಸಿ ಫಲಿತಾಂಶಗಳನ್ನು ಮೇ ೧೦ರಂದು ಘೋಷಿಸಲಾಗುವುದು.

ಈ ರೀತಿ ಚುನಾವಣೆಗಳು ನಡೆದು ಚುನಾವಣಾ ಗಡಿಬಿಡಿಯು ಕೊನೆಗೊಳ್ಳುವುದು ಐದು ವರ್ಷಗಳ ನಂತರ, ಮತ್ತೆ ೧೯೬೭ರಲ್ಲಿ ಹೊಸ ಚುನಾವಣೆಗಳು ನಡೆಯುವುವು.

("ತಾಯಿನಾಡು" ವಿನ ಕೃಪೆಯಿಂದ")

ಕಾಂಗ್ರೆಸ್ಸಿಗೇ

ಮತದಾನ ಮಾಡಿರಿ!

ತಾಯ್ಗರುಳು

೧

ಶ್ರೀಮತಿ ಪಿ. ಯಶೋದಾ ಯನ್. ಜೆನ್ನಿ.

ಬಡಿಸುತ್ತಿರುವ ವನಜಾ ಊಟದತ್ತ ಲಕ್ಷ್ಯವಿರಿಸದೇ ಯಾವುದೋ ಯೋಚನೆಯಲ್ಲಿ ಮಗ್ನನಾಗಿದ್ದ ಗೋಪಾಲನನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿದಳು. ಆದರೆ ಗೋಪಾಲನಿಗದರ ಅರಿವಿರಲಿಲ್ಲ. "ನಿಮಗಿಂತ ನಮ್ಮ ಬಾಲು ಸರಿಯಾಗಿ ಉಣ್ತಾನೆ,, ಅಕ್ಕರೆಯ ಕುವರ ಐದು ವರ್ಷದ ಬಾಲಕನನ್ನು ನೋಡಿ ನಕ್ಕಳು. ಅವನು ತುಂಟತನದ ಹೆಮ್ಮೆಯಿಂದ ನಗುತ್ತಾ ತಂದೆಯನ್ನು ನೋಡಿದ. ಆದರೆ ಗೋಪಾಲ ನಗಲಿಲ್ಲ. ಮುದ್ದಿನ ಮಗನ ನಗೆಯೂ ಅವನ ಮುಖದಲ್ಲಿ ನಗುಬರಿಸಲಿಲ್ಲ.

ಅವನಿಗೆ ನಿನ್ನೆಯಿಂದಲೂ ಅಳುಮೋರೆ ಮಾಡಿಕೊಂಡಿದ್ದ 'ಮಂಜು,ವಿನ ಚಿತ್ರವೇ ಕಣ್ಣೆದುರು ನಿಂತಂತಾಗಿತ್ತು.

ಈಗ ವನಜಾಳಿಗೆ ನಿಜವಾಗಿಯೂ ಬೇಸರವಾಯ್ತು.

"ಅಲ್ಲ.. ಅದೇನು ಅಂತಾ ಯೋಚನೆ? ಊಟ ಮಾಡಲೂ ಬಿಡುವಿರೋದಿಲ್ಲವೇ?,,

ಗೋಪಾಲ ತಲೆಯೆತ್ತಿ ಪತ್ನಿಯನ್ನು ನೋಡಿದ. ಹಾಗೆಯೇ ದೃಷ್ಟಿ ತಿರುಗಿಸಿ ಬಾಲಕೃಷ್ಣನನ್ನು ನೋಡಿದ.

"ನಿಮ್ಮ ಮೂಕ ಭಾಷೆ ಯಾರಿಗೆ ಅರ್ಥವಾಗುತ್ತೆ?,, ವನಜಾ ಬೇಸರದಿಂದಲೇ ನುಡಿದಳು.

"ಹೌದು ವನಜಾ. ಆದ್ದರಿಂದಲೇ ಹೀಗಾಯ್ತು'

ವನಜಾ ಪ್ರತಿನುಡಿಯಲಿಲ್ಲ. ಮದುವೆಯಾಗಿ ಆರು ವರ್ಷಗಳುರುಳಿದ್ದರೂ ಪತಿಯ ಮನಸ್ಸನ್ನರಿಯುವ ಶಕ್ತಿ ಅವಳಲ್ಲಿರಲಿಲ್ಲ. ಅಷ್ಟೇ ಅಲ್ಲ. ಸರಿಯಾದ ತಿಳುವಳಿಕೆ, ಜ್ಞಾನಗಳಿಲ್ಲದೆ ಅವಳಿಗೆ ಅವನ ಎಷ್ಟೋ ಮಾತುಗಳೂ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಅಲ್ಲದೆ ಮಿತಭಾಷಿಯಾದ ಗೋಪಾಲ ಸಮಸ್ಯೆಯನ್ನಾಗಿರಿಸಿಯೇ ಮಾತು ಮುಗಿಸುತ್ತಿದ್ದ. ಇತ್ತೀಚೆಗಂತೂ ತನ್ನನ್ನು ಅರ್ಥಮಾಡಿಕೊಳ್ಳದ ವನಜಾಳ ಬಗ್ಗೆ ಜಿಗುಪ್ಸೆಯುಂಟಾಗಿತ್ತು. ಎಂದೇ ಪತಿ ಪತ್ನಿಯರಿಬ್ಬರೂ ಮೌನ ತಾಳಿದರು.

ಊಟ ಮುಗಿಸಿ ಕೋಣೆಯಲ್ಲಿ ಯೋಚಿಸುತ್ತಾ ಕುಳಿತ ಗೋಪಾಲನ ಮೆದುಳನ್ನು 'ಮಂಜು, ಕೊರೆಯುತ್ತಿದ್ದಳು. ಮುದ್ದಿನಿಂದ ಮಂಜುಳಾ, ಎಂದಿರಿಸಿದ ಹೆಸರನ್ನು ಅತಿ ಅಕ್ಕರೆಯಿಂದ 'ಮಂಜು, ಎಂದು ಮಾರ್ಪಡಿಸಿದ್ದ ನೆನಪು ಕೊರೆಯುತ್ತಿತ್ತು. ಅವಳ ಮೊತ್ತಗಿನ ಹೂವಿನಂತಹ ಮೈ ಎಷ್ಟು ಬೇಗ ಒಣಗಿ ಎಲುಬಿನ ಗೂಡಿನಂತಾಯಿತು!

ವನಜಾ ಬರುವ ಮೊದಲು ಏಕಾಂಗಿಯಾಗಿ ವಿರಕ್ತನಂತೆ ಜೀವಿಸುವ ಗೋಪಾಲನನ್ನು ಪ್ರೀತಿಯ ಕಣ್ನೋಟದಿಂದ ಸ್ವಾಗತಿಸಿ ಸಂತೈಸುತ್ತಿದ್ದ ಮುದ್ದಿನ ಮರಿ 'ಮಂಜು, ಬೀದಿ ನಾಯಿ ಎಂದು ಮೊದ ಮೊದಲು ತಾತ್ಸಾರದಿಂದ ನೋಡಿದ ಗೋಪಾಲ ಅದರ ಮೈಬಣ್ಣಕ್ಕೆ ಮನಸೋತು, ಪ್ರೀತಿಗೆ ಮರುಳಾಗಿ, ತನ್ನ ಏಕಾಂತತೆಗೆ ಬೇಸರಗೊಂಡು, ತಂದು ಅಲ್ಲ ಬಂದುದಕ್ಕೆ ಅನ್ನ ಹಾಕಿ, ತಿಂಡಿ ಹಾಕಿ ಸಾಕಿದ 'ಮಂಜು, ಅವನ ಪ್ರೀತಿಗೆ ಪ್ರತಿಯಾಗಿ ಅದಕ್ಕಿಂತಲೂ ಹೆಚ್ಚಿನ ಅಕ್ಕರೆ ತೋರಿಸಿದಳು. ಗೋಪಾಲ ಬರುವುದು ತುಸು ತಡವಾದರೆ, ಕೂಗುತ್ತಾ, ಅಳುತ್ತಾ ಉಪವಾಸವೇ ಬಿದ್ದಿರುವಳು. ಅವನು ದೂರದಲ್ಲೇ ಕಾಣಿಸುತ್ತಿರುವಾಗಲೇ ಓಡಿ ಹೋಗಿ ಸ್ವಾಗತಿಸಿ ಅವನ ಕಾಲಿಗೆ ಮೈಯೊರಸುತ್ತಾ ಅವನ ಜೆತೆಯಲ್ಲೇ ಮನೆಗೆ ಮರಳುವಳು.

'ಮಂಜು' ಬಂದು ಒಂದು ವರ್ಷ ಉರುಳುವಷ್ಟರಲ್ಲೇ ಒಂದು ಶುಭ ಗಳಿಗೆಯಲ್ಲಿ ವನಜಾ ಗೃಹ ಪ್ರವೇಶಿಸಿ ಗೃಹಲಕ್ಷ್ಮಿಯೆನಿಸಿ ಬಂದಿದ್ದಳು.

ಗೋಪಾಲ ತನ್ನ ಮೆಚ್ಚಿನ 'ಮಂಜು'ವಿನ ವಿಚಾರ ವನಜಾಳೊಡನೆ ತುಂಬಾ ಮಾತನಾಡುತ್ತಿದ್ದ. 'ಮಂಜು'ವನ್ನು ತುಂಬ ಹೊಗಳುತ್ತಿದ್ದ. ಆದರೆ ಚಿಕ್ಕಂದಿನಿಂದಲೂ ಮಡಿತನದ ಮುದ್ದೆಯಂತೆ ಸಂಪ್ರದಾಯಸ್ಥರ ಕುಟುಂಬದಲ್ಲಿ ಬೆಳೆದ ವನಜಾಳಿಗೆ ಹೀನಪ್ರಾಣದ ವಿಚಾರವಾಗಿ ಕೇಳುವುದೂ ಅಸಹ್ಯವೆನಿಸಿತು. ಪ್ರೀತಿ ಬೇಡ. ಆ ಹೆಂಗರುಳಿನಲ್ಲಿ ಕರುಣೆಯ ಸುಳಿವಾದರೂ ಇರಬಾರದಿತ್ತೇ? ಅದೇನು ಹಾಗೆ?

ವನಜಾ ಬಂದ ಮೇಲೆ 'ಮಂಜು' ಬೆಣ್ಣೆಯಂತಹ ಮೈಬಣ್ಣದ ಮೃದು ಚರ್ಮದ 'ಮಂಜು, ಗೋಪಾಲನಿಂದ ದೂರವಾದಳು.

ಗೋಪಾಲನಿಗಾಗಿ ಅವನಿದಿರಲ್ಲೇನೋ ವನಜಾ 'ಮಂಜು'ವಿಗೆ ಹೊಡೆಯಲು ಕೈಮುಂದೆ ಮಾಡುತ್ತಿರಲಿಲ್ಲ. ಆದರೆ ಅವನಿಲ್ಲದಾಗ ಮಲತಾಯಿ ಕೈಗೆ ಸಿಕ್ಕ ಅನಾಥ ಶಿಶುವಿನಂತೆ, ಮಂಜು ವನಜಾಳ ಕೈಯಲ್ಲಿ ಸಿಕ್ಕಿ ಒದ್ದಾಡುತ್ತಿದ್ದಳು. ಅದರಿಂದಾಗಿ ವನಜಾಳೆಂದರೇ, ಮಂಜುವಿಗೆ ಒಂದು ರೀತಿಯ ಭಯ ಆವರಿಸಿಕೊಂಡಿತ್ತು ಎಂದೇ ಗೋಪಾಲನನ್ನು ಹಿಂಬಾಲಿಸಿ ಕೋಣೆಯ ವರೆಗೂ ಬರುತ್ತಿದ್ದ 'ಮಂಜು' ವನಜಾಳ ಕಣ್ಣೋಟಕ್ಕೆ ಬೆದರಿ ಹಿಂದೆ ಸರಿಯುತ್ತಿದ್ದಳು. ಬಾಲಕೃಷ್ಣ ಹುಟ್ಟಿದ ಮೇಲಂತೂ ಈ ಹಿಂಸೆ ಇನ್ನಷ್ಟು ಹೆಚ್ಚಾಗಿತ್ತು. ಅಲ್ಲದೆ ನಡೆಯಲು ಕಲಿತ ಬಾಲಕೃಷ್ಣ ಮುದ್ದಿನಿಂದ ಮಂಜುವನ್ನು ಮುತ್ತಿಡುತ್ತಿದ್ದ. ಇದರಿಂದ ಅಸಹ್ಯಗೊಂಡ ವನಜಾ, ಮಂಜುವನ್ನು ಸಿಕ್ಕಿದ್ದರಲ್ಲಿ ಬಡೆಯತೊಡಗಿದ್ದಳು. ಪುತ್ರ ವ್ಯಾಮೋಹದ ಪ್ರಾಬಲ್ಯಕ್ಕೆ ಸಿಕ್ಕಿದ ವನಜಾಳಿಗೆ ಪಶುವಿನ ನೋವೂ ಅರ್ಥವಾಗಲಿಲ್ಲ. ಅರ್ಥಮಾಡಿಕೊಳ್ಳುವ ವ್ಯಥೆಯನ್ನೂ ಹಚ್ಚಿಕೊಳ್ಳಲಿಲ್ಲ ಆಕೆ.

ಆದರೆ ಈ ಎಲ್ಲ ವ್ಯಥೆಗಿಂತಲೂ, ಮಂಜುವಿನ ಜೀವನವನ್ನೇ ಹಿಂಡಿದ ವ್ಯಥೆಯೆಂದರೆ ಅಪರೂಪವಾಗಿ ತಾಯಿಯಾಗಿ ಹುಟ್ಟಿದ ಮೂರು ಮರಿಗಳಲ್ಲಿ ನಾಲ್ಕು ದಿನ ಕಳೆಯುವಷ್ಟರಲ್ಲೇ ಎರಡು ಕಾಣೆಯಾಗಿ ಬಿಟ್ಟಿದ್ದವು. 'ಮಂಜು, ನಾಲ್ಕಾರು ದಿನಗಳ ವರೆಗೂ ಕೂಗುತ್ತಾ, ಅಳುತ್ತಾ ಅನ್ನವನ್ನು ತೊರೆದು ಬಿಟ್ಟಳು.

ಊಟ ಮುಗಿಸಿದ ವನಜಾ ತಾಂಬೂಲ ತಟ್ಟೆಯೊಂದಿಗೆ ಗೋಪಾಲನ ಕೋಣೆಗೆ ಬಂದಳು ಆದರೆ ಗೋಪಾಲ ಅವಳತ್ತ ದೃಷ್ಟಿಸಲೂ ಇಲ್ಲ. "ಅಲ್ಲ... ನಿಮಗಿಂದು ಆಗಿದೆಯಾದರೂ ಏನು?,,

"ವನಜಾ... ಮರಿ ಹುಟ್ಟಿ ಎಂಟು ದಿನ ಕಳೀಲಿಲ್ಲ. ಅಷ್ಟು ಬೇಗ ಎರಡನ್ನು ಏನು ಮಾಡಿಬಿಟ್ಟೆ?,, ಗೋಪಾಲ ನೊಂದ ಧ್ವನಿಯಲ್ಲಿ ಕೇಳಿದ.

"ಅದಕ್ಕಾಗಿ ನೀವಿಷ್ಟು ವ್ಯಥೆಪಡೋದೇ? ಅಲ್ಲ... ನಿಮ್ಮಂತವರನ್ನು ನಾನು ನೋಡ್ಲಿಲ್ಲ. ಅಂದ್ರೆ... ಇದೇನು ಮನೆಯೋ ಅಲ್ಲ... ನಾಯಿ ಸಾಕಣೆಯ ಕೇಂದ್ರವೋ... ನನಗೊಂದೂ ಅರ್ಥವಾಗೋದಿಲ್ಲ-,,

"ವನಜಾ! ನಿನ್ನದು ಹೆಂಗರುಳು ನೋಡು. ಮೂರು ದಿನಗಳಿಂದು ಮಂಜು ಹೇಗಿದ್ದಾಳೆ ಗೊತ್ತೇ ನಿನಗೆ?,,

ಈ ಮಾತನ್ನು ಕೇಳಿದ ವನಜಾ ಗಟ್ಟಿಯಾಗಿ ನಗಲಾರಂಭಿಸಿದಳು. ಆದರೆ ಪತಿಯ ಬಾಡಿರುವ ಮುಖದಲ್ಲಿ ತನ್ನನ್ನೇ ತಿವಿಯುವ ನೋಟವನ್ನು ನೋಡಿದೊಡನೆಯೇ ಒಮ್ಮೆಯೇ ನಗು ನಿಂತು ಹೋಯಿತು.

"ಯಾಕೆ ನಗ್ತಿ ವನಜಾ?,,

ಅಲ್ಲ.... ಸಿಟ್ಟು ಮಾಡಬೇಡಿ ನಾಯಿಯನ್ನು ಅವಳು...ಇವಳು ಅನ್ನೋದ್ಕಿಂತ....ಅವರು....ಇವರು....ಅಂದ್ರೆ ಮತ್ತೂ ಚೆನ್ನಾಗಿರುತ್ತೆ ಅಂತ..."ಎಂದು ಪುನಃ ನಗತೊಡಗಿದಳವಳು.

"ವನಜಾ...ನಿಲ್ಲಿಸು ನಗು." ಎಂದು ಕಿರಿಚಿದ ಗೋಪಾಲ ಅಷ್ಟರಲ್ಲೇ 'ಮಂಜು' ಜೋರಾಗಿ ಕೂಗುತ್ತಿತ್ತು. ಇದ್ದ ಒಂದೇ ಒಂದಾಗಿ ಉಳಿದಿದ್ದ ಮರಿಯನ್ನೇ ಕಾತರತೆಯ ನೇತ್ರಗಳಿಂದ ನೋಡುತ್ತಾ ಕೂಗುತ್ತಿತ್ತು. ಗೋಪಾಲ ಅದರ ಬಳಿಗೆ ಹೋಗಿ ಕುಳಿತ. ವನಜ ವಿಸ್ಮಿತ ನೇತ್ರಗಳಿಂದ ನೋಡುತ್ತಾ ನಿಂತಿದ್ದಳು. ಗೋಪಾಲ ಬಳಿ ಕುಳಿತು ಅದರ ತಲೆಯನ್ನು ನೇವರಿಸುತ್ತಾ ಹೇಳಿದ.

"ಮಂಜೂ....ಅಳಬೇಡಪ್ಪ ನಿನ್ನ ಈ ಮರೀನ ಯಾರಿಗೂ ಕೊಡೋದಿಲ್ಲ. ಖಂಡಿತ ನೋಡು ಬೇಕಾದರೆ"

"ಅಯ್ಯೋ....ಇದನ್ನು ಕೊಟ್ಟರೂ ತೆಗೆದುಕೊಂಡು ಹೋಗುವವರು ಬೇಕಲ್ಲ... ದರಿದ್ರದ್ದು. ಹೆಣ್ಣು ಮರಿ....ಯಾರಿಗೆ ಬೇಕಾಗಿದೆ?' ನಗುತ್ತಿದ್ದ ವನಜಾ ತಿರಸ್ಕಾರದ ಮುಖಭಾವ ಧರಿಸಿ ಹೇಳಿದಳು.

'ಮಂಜು, ಯಜಮಾನನನ್ನೇ ದೀನ ನೇತ್ರಗಳಿಂದ ದಿಟ್ಟಿಸುತ್ತಿತ್ತು. ಗೋಪಾಲ ತಲೆ ತಗ್ಗಿಸಿದ್ದ ಅವನ ಕಣ್ಣುಗ

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.

Estd: 1920

ESTD. 1921 ಸ್ಥಾಪನೆ

NAVAYUGA KANNADA WEEKLY, UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಗೌರವ ಸಂಪಾದಕರು:

ಎಸ್. ಗೋಪೀಚಂದ ರಾವ್, ವಿದ್ವಾನ್

ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:

ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:

ನಿಯಮಿತ (ಕಂಟ್ರ್ಯಾಕ್ಟ್) ಕಲಂ ಇಂಚಿಗೆ ರೂ. 2-50

ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ರವೀಂದ್ರವಾಣಿ—ಲೇಖಾಂಕ ೩೩. ವಿಶ್ವಕವಿ ರವೀಂದ್ರನಾಥ ಟಾಗೋರ್

ಅನಂತದ ಸಾಧನೆ

ಅನುವಾದಕರು: ಕೆ ಎನ್. ಭಟ್, ಶಿರಾಡಿಪಾಲ್.

ನದಿಗೆ, ಹೇಗೆ ಸಮುದ್ರವಾಗಿ ಪರಿವರ್ತನೆ ಹೊಂದಬೇಕಾಗಿರುವುದೋ, ಆತ್ಮಕ್ಕೂ ಹಾಗೆಯೇ ಪರಬ್ರಹ್ಮರೂಪವನ್ನು ಹೊಂದಬೇಕಾಗಿದೆ. ಹೀಗೆ ಪರಬ್ರಹ್ಮವಾಗಿ ಪರಿವರ್ತನೆ ಹೊಂದಲು, ಮುಂದುವರಿಯುವ ಪಥದಲ್ಲಿ ಅದು, ಎಲ್ಲವನ್ನೂ ಸ್ಪರ್ಶಿಸುತ್ತಲೇ ಹೋಗಲಿರುವುದು. ಆದರೆ ಆತ್ಮವು ಬ್ರಹ್ಮನನ್ನು ಸ್ಪರ್ಶಿಸಿದ ಬಳಿಕ ಮತ್ತೆ ಮುಂದೆ ಹೋಗಲಾರದು. ಬ್ರಹ್ಮನಲ್ಲಿಯೇ ಅದು ತನ್ನ ಕೊನೆಯ ವಿಶ್ರಾಂತಿಯನ್ನು ಹೊಂದುವುದು. ಅಲ್ಲಿಗೆ ಅದರ ಎಲ್ಲಾ ಚಲನವಲನಗಳ ಪ್ರಯೋಜನವೂ ಪೂರ್ಣವಾಗಿ ಲಭಿಸಿದಂತಾಗುವುದು. ಈ ಅಂತ್ಯದ ವಿಶ್ರಾಂತಿಯ ಸ್ಥಾನವೆಂದರೆ ಆತ್ಮಕ್ಕೂ ಇದೇ ಮಹಾ ಸಮುದ್ರವಾಗಿರುವುದು. ಈ ಉದ್ದೇಶದ ಪೂರ್ಣತೆಗಾಗಿ ಮಾಡುವ, ಪ್ರವಾಹಮಾನವಾದ ನಮ್ಮ ಪ್ರಯತ್ನಗಳಿಗೆ, ನಮ್ಮ ಕವಿತೆ— ಮತ್ತು ಕಲೆ, ಇವುಗಳು ಸೌಂದರ್ಯವನ್ನು ಕೊಡುತ್ತಿದ್ದು, ಆ ರೂಪದಿಂದ ನಮ್ಮನ್ನು ಪ್ರಕಟೀಕರಿಸುತ್ತವೆ.

ಕವಿತೆಯಲ್ಲಿ ಪ್ರಾಣ ಪ್ರತಿಷ್ಠೆ ಮಾಡಬಲ್ಲ ಅದರ ಮಧ್ಯಕೇಂದ್ರವಾದ, ಒಂದು ಶಕ್ತಿ ಇರುವುದು. ಕವಿತೆಯ “ಕೇಂದ್ರಬಿಂದು” ಎಂದು ಇದೇ ಹೇಳಿಸಿಕೊಳ್ಳುವುದು—ಯಾವ ಕವಿತೆಯ ಪ್ರತಿಯೊಂದು ಶಬ್ದವೂ ಈ ಕೇಂದ್ರ— ಮಧ್ಯಬಿಂದುವನ್ನು ಸ್ಪರ್ಶಿಸುತ್ತಿರುವುದೋ ಅದೇ ಸುಂದರವಾದ ಕವಿತೆಯಾಗುವುದು. ಈ ಕೇಂದ್ರದ ಕಲ್ಪನೆಯನ್ನು ಅನುಭವ ಮಾಡಿಕೊಂಡ ಬಳಿಕ ಮಾತ್ರವೇ ವಾಚಕರು ಆ ಕವಿತೆಯ ರಸಾಸ್ವಾದನೆಯನ್ನು ಪೂರ್ಣವಾಗಿ ಮಾಡಿಕೊಳ್ಳಬಲ್ಲರು. ಹೀಗಾದಾಗ ಮಾತ್ರ ಆ ಕವಿತೆಯ ಪ್ರತಿಯೊಂದು ಪಾದವೂ ಸಂಪೂರ್ಣವಾಗಿ ಕವಿ ಕಲ್ಪನೆಯ ಪ್ರಕಾಶದಿಂದ ಬೆಳಗುವುದು. ಕವಿತೆಯು ಕೇಂದ್ರೀಯ ಕಲ್ಪನೆಯಿಂದ ದೂರವಾಗಿದ್ದು, ಅದು ಬೇರೆ ಬೇರೆ, ಅನೇಕ ಭಾವನೆಗಳಿಂದ ಕೂಡಿ ಸುಂದರವಾಗಿಯೇ ಇದೆ—ಎಂದು ಕಂಡರೂ, ಬಳಿಕ ಅದು ನೀರಸವಾದ ಕವಿತೆಯೆಂದು ತೋರುವುದು. ನಮ್ಮ ಆತ್ಮದ ವಿಕಾಸವೂ ಕೂಡ ಈ ಕವಿತೆಯಂತೆಯೇ ಇರುವುದು. ನಮ್ಮ ಆತ್ಮವೂ ಕೂಡ ನಿರ್ದಿಷ್ಟವಾದ ಒಂದು ಕೇಂದ್ರದ ಕಲ್ಪನೆಯ ನಾಲ್ಕೂ ಕಡೆಗಳಲ್ಲಿ ಸಂಚರಿಸುವುದು. ಆದರ ಈ ಸಂಚಾರಕ್ಕೆ—ವಿಶ್ರಾಂತಿಯೂ ಕೂಡ, ಆ ಕೇಂದ್ರದ ಕಲ್ಪನೆಯಲ್ಲಿಯೇ ಇರುವುದು. ಹೀಗಿಲ್ಲದಿರುತ್ತಿದ್ದರೆ, ನಮ್ಮ ಅಸ್ತಿತ್ವವೂ ಧ್ಯೇಯ ಧೋರಣೆಗಳಿಲ್ಲದೆ ಮನಬಂದ ಹಾಗೆ ವಿಹರಿಸುವ ಓರ್ವ ದೈತ್ಯನಂತೆ ಆಗಿ ಹೋಗಬಹುದು.

ನನಗೆ, ನನ್ನ ಬಾಲ್ಯದ ಒಂದು ಘಟನೆ ಈಗ ನೆನಪಾಗುವುದು. ನಮ್ಮ ಓರ್ವ ಅಧ್ಯಾಪಕರು, ನಮಗೆ ಸಂಸ್ಕೃತ ವ್ಯಾಕರಣದ ಒಂದು ಪುಸ್ತಕವನ್ನು ಸಂಪೂರ್ಣವಾಗಿ ಬಾಯಿಪಾಠ ಮಾಡಲು ತುಂಬಾ ಪ್ರಯತ್ನಪಟ್ಟರೂ, ನಮಗೆ ಅದರ ಅರ್ಥವಾಗಲಿ, ಬಾಯಿಪಾಠವಾಗಲೀ ಆಗಲೇ ಇಲ್ಲ. ಆಗಿನ ನಮ್ಮ ಪರಿಸ್ಥಿತಿಯೆಂದರೆ, ನೃತ್ಯ ನಡೆಯುವಾಗ ಕೇವಲ, ಆ ನೃತ್ಯದ ಚಲನವಲನಗಳನ್ನು ಮಾತ್ರ ನೋಡಬಲ್ಲ, ಅದರೊಡನೆ ನಡೆಯುವ ಸಂಗೀತ, ತಾಳ ಲಯ, ಹಾಗೂ, ಸ್ವರ ಪ್ರಸ್ತಾರಗಳ ಜ್ಞಾನವೇ ಇಲ್ಲದ ವ್ಯಕ್ತಿಗಳಂತೆ ಆಗಿಹೋಗಿತ್ತು. ಆ ಸ್ಥಿತಿಯೆಂದರೆ, ನೃತ್ಯವನ್ನು ಅದೊಂದು ಶಾರೀರಿಕ ವ್ಯಾಯಾಮವೆಂದು ತಿಳಿದು—ದೇಹ ಸೌಂದರ್ಯವನ್ನು ಮಾತ್ರ ಪ್ರಶಂಸಿಸುವ ಮಟ್ಟಿಗೆ ಮಾತ್ರವೇ ಆ ಜ್ಞಾನ ಮುಂದುವರಿಯುತ್ತದೆ. ಅಂಗ ಪ್ರತ್ಯಂಗಗಳ ಚಲನೆಯು ಸಂಗೀತಕ್ಕೆ ಅನುಸಾರವಾಗಿ ನಡೆಯುವುದು. ನೃತ್ಯ ಮತ್ತು ಸಂಗೀತ ಇವೆರಡೂ, ಒಂದೇ ತಾಳದೊಳಗೆ ಬಂಧಿಸಲ್ಪಟ್ಟಿರುತ್ತವೆ. ಮತ್ತು ಆ ತಾಳ ಬದ್ಧತೆ, ಹಾಗೂ ಭಾವಾಭಿವ್ಯಕ್ತಿ ಇವು ಅನುಪಮವಾದ ಸೌಂದರ್ಯವನ್ನು ನಿರ್ಮಾಣ ಮಾಡುತ್ತವೆ. ಎಂಬ ಈ ವಿಚಾರ ಆ ವ್ಯಕ್ತಿಗಳಿಗೆ ಸ್ವಲ್ಪವೂ ತಿಳಿದಿರುವುದಿಲ್ಲ.

ನಮ್ಮ ಆತ್ಮದ ಪರಿಸ್ಥಿತಿಯೂ, ಹೀಗೇ ಆಗಿರುತ್ತದ. ಆತ್ಮದ ಪ್ರತಿಯೊಂದು ಚಲನವಲನವೂ ಕೂಡ ಬ್ರಹ್ಮನ ಸಂಗೀತದ ಸ್ವರಗಳಿಂದ ಬಂಧಿಸಲ್ಪಟ್ಟಿರಬೇಕು. ಮತ್ತು ಅವೆರಡೂ, ಒಂದೇ ಪ್ರವಾಹವಾಗಿ ಪ್ರವಹಿಸುತ್ತ ಸಮಸ್ವರಗಳಿಂದ ಮೇಳ ಕೂಡ ಬೇಕಾಗಿರುವುದು —ಉಪನಿಷತ್ತುಗಳಲ್ಲಿ ಒಂದು ವಾಕ್ಯವು ಬಹು ಸುಂದರವಾಗಿ ಬಂದಿದೆ—‘ನಾಹಂ ಮನ್ಯೇ ಸುವೇದೇತಿ, ನೋನವೇದೇತಿ ವೇದಚ’, ಅರ್ಥಾತ್ ಅದನ್ನು ಚೆನ್ನಾಗಿ ತಿಳಿದಿದ್ದೇನೆಂದು ನಾನು ಒಪ್ಪಿಕೊಳ್ಳಲಾರೆ. ಅಥವಾ ನಾನದನ್ನು ತಿಳಿದುಕೊಂಡೇ ಇಲ್ಲ, ಎಂಬುದೂ ನನಗೆ ತಿಳಿದಿಲ್ಲ.

ಜ್ಞಾನ ಸಾಧನದ ಪ್ರಕೃತ ನಿಯಮಗಳ ಅನುಸಾರವಾಗಿ ನಾವು ಅದನ್ನು ತಿಳಿದುಕೊಳ್ಳಲಾರೆವು. ಆದರೆ ಅದು ತಿಳಿದುಕೊಳ್ಳಲು, ಸಾಧ್ಯವಾಗದು, ಎಂದಾದರೆ, ಅದರೊಡನೆ ನಮ್ಮ ಯಾವ ಸಂಬಂಧವೂ ಇರಲಾರದು. ನಿಜ ಹೇಳುವುದಾದರೆ, ನಾವು ಅದನ್ನು ತಿಳಿದುಕೊಂಡಿರುವುದೂ ಅಹುದು,—ತಿಳಿಯದೆ ಇರುವುದೂ ಅಹುದು. ಉಪನಿಷತ್ತುಗಳಲ್ಲಿ ಇದೇ ವಿಚಾರ, ಬೇರೆ ಶಬ್ದಗಳಿಂದಲೂ, ಹೇಳಲ್ಪಟ್ಟಿದೆ —‘ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ, ಆನಂದಂ ಬ್ರಹ್ಮಣೋ ವಿದ್ವಾನ್, ನಬಿಭೇತಿ ಕುತಶ್ಚನ’ ಅರ್ಥಾತ್ ವಾಣಿ, ಮತ್ತು ಮನಸ್ಸು ಇವೆರಡೂ ಆ ಬ್ರಹ್ಮನನ್ನು ಹೊಂದಲಾರವು. ಮರಳಿದುವು. ಕೇವಲ ಆನಂದದ ಮೂಲಕ ಮಾತ್ರ ಬ್ರಹ್ಮನನ್ನು ಹೊಂದಬಹುದು. ಆತನನ್ನು ಹೊಂದಿದ ಬಳಿಕ ಸಮಸ್ತ ಭಯವೂ ದೂರವಾಗುವುದು.

ಭಾಗವಾಗಿ ವಿಂಗಡಿಸಲ್ಪಟ್ಟ ವಸ್ತುಗಳ ಜ್ಞಾನವನ್ನು ನಾವು ತರ್ಕದ ಮೂಲಕ ಪಡೆಯಬಹುದು. ಆದರೆ, ಬ್ರಹ್ಮನನ್ನು ವಿಶ್ಲೇಷಿಸುವುದು ಸಾಧ್ಯವಿಲ್ಲ. ಏಕೆಂದರೆ ಆತನು—ಪೂರ್ಣನಾಗಿದ್ದಾನೆ ಒಂದು. ಅಂಶ ಮಾತ್ರದ ಜ್ಞಾನ ನೀಡಬಲ್ಲ ತರ್ಕವು ಬ್ರಹ್ಮನನ್ನು ಪಡೆಯುವ ಜ್ಞಾನಕ್ಕೆ [illegible] ಬ್ರಹ್ಮನನ್ನು [illegible] ಮಾತ್ರ [illegible] ಜ್ಞಾನದ [illegible] ಇದೆಯೇ— [illegible] ಪೂರ್ಣವಾದ ಸತ್ಯವಲ್ಲ ಇಲ್ಲ!—ತರ್ಕವು ಸಮಗ್ರ ಬಾಹ್ಯ ಜ್ಞಾನವನ್ನು—ಕೊಡುವುದು. ಆದರೆ, ಪ್ರೇಮವು ಆಂತರಿಕ ಜ್ಞಾನವನ್ನು ಕೊಡುವುದು. ಅಂತರ್ವಾಸಿಯ ಜ್ಞಾನವು ಅಂಶಃ ಚರ್ಚೆಗಳಿಂದ ಮಾತ್ರ ಲಭಿಸಲ್ಲದು.

—(ಸಶೇಷ)



ಕೈಮಗ್ಗದಲ್ಲಿ ನೇಯ್ದು ತಯಾರಿಸಿದ ರೇಶ್ಮೆ ಬಟ್ಟೆಗಳ ಪ್ರದರ್ಶನ. ಕುಟೀರೋದ್ಯೋಗಗಳ ಮೂಲಕ ನಿರ್ಮಾಣಗೊಂಡವು ಇವೆಂಬುದು ಭಾರತೀಯರಿಗೆ ಅಭಿಮಾನ!

ಪುತ್ತೂರು ಡಿ. ಮು ಕೋರ್ಟಿನಲ್ಲಿ.

R. E. P. 421/61 O. S. 345/59.

ಕೆ. ವಾಸುದೇವ ಕಾಮತ್ ಎಂಡ್ ಕೊ.

—ವಾದಿ ಅರ್ಜಿದಾರ

ಮತ್ತು

ಪರಮೇಶ್ವರ ಗೌಡ, ಪೂಜಾರಿ ಕೋಡಿ ವೆಂಕಪ್ಪ ಗೌಡರ ಮಗ, ನಾಲ್ಕೂರು ಗ್ರಾಮ, ಪುತ್ತೂರು ತಾಲ್ಲೂಕು —ಪ್ರತಿವಾದಿ ಎದುರೀಗೆ.

ನಿಮ್ಮ ಆಸ್ತಿ ಜಪ್ತು ಮಾಡಿ ಏಲಂ ಪಡಿಸಬೇಕಾಗಿ ಅರ್ಜಿದಾರ ಮಾಡಿದ ಮೇಲಿನ ಅಮಲ್ದಾರಿಯು ತಾ 6-2-62ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಣೆಗಳಿದ್ದರೆ ನೀವು ಆ ದಿನ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟಿಗೆ ಬಂದೆ ಹಾಜರಾಗಿ ಉದಹರಿಸದಿದ್ದರೆ, ನಿಮ್ಮನ್ನು ಬಿಟ್ಟು ಮಾಡಿ ತೀರ್ಮಾನಿಸಲಾಗುವುದೆಂತ ಈ ಮೂಲಕ ತಿಳಿಸಿಯದೆ

Sd/- **K. R Shenoy,**
Advocate for Petitioner.

ಪುತ್ತೂರು, 8—1—62.

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;

ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು. ಉಡುಪಿ

ಆಡಳಿತ ಆಫೀಸು: ಮಂಗಳೂರು 1.

“ನಚಿಕೇತ”ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1 25 ನ ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ ಉಡುಪಿ.

ತುರಿಕೆ ಪುರಾಣ

ಶ್ರೀ. ಎಸ್. ಎಂ. ಶೆಟ್ಟಿ, ಶಿವಮುಂಜೆಪರಾರಿ.

ನಮ್ಮ ಶಾಸ್ತ್ರಕಾರರು, ಚಿತ್ತವೃತ್ತಿಯ ಏಕಾಗ್ರತೆಯಲ್ಲಿ ವಿಘ್ನವೀಯುವ ಯಾವ ಯಾವ ವಸ್ತುಗಳನ್ನು ಸೂಚಿಸಿರುವರೋ -ಅವುಗಳಲ್ಲಿ ತುರಿಸುವಿಕೆಗೆ ಅದೇಕೆ ಸ್ಥಾನವಿತ್ತಿಲ್ಲವೋ ತಿಳಿಯದು. ಪ್ರಾಯಶಃ ತುರಿಸುವಿಕೆಯನ್ನು ತಡೆಯುವ ಯಾವುದಾದರೂ ಆಸನವೊಂದು ಅವರಿಗೆ ತಿಳಿದಿರಬಹುದಾದರೂ, ಹಠ ಯೋಗದಲ್ಲಿ ಅಂತಹ ಯಾವುದೇ ಆಸನದ ಉಲ್ಲೇಖವಿಲ್ಲ.

ತುರಿಸುವಿಕೆಗೂ ಆಸನಕ್ಕೂ ಅದೇನು ಸಂಬಂಧ? ಎಂದು ನೀವು ಕೇಳಬಹುದು. ಈ ತುರಿಕೆಯನ್ನು ತಡೆ ಹಿಡಿಯಲಿಕ್ಕಲ್ಲವಾದರೂ,ಅದರಉಪಶಮನಕ್ಕಾಗಿ ನಾವು ಹಲವಾರು ರೀತಿಯ ಆಸನಗಳನ್ನು ಮಾಡಬೇಕಾಗುತ್ತದೆ. ನೀವು ತುರಿಸಿಕೊಂಡಾಗಿನದೃಶ್ಯವನ್ನುತುಸು ಕಲ್ಪಿಸಿಕೊಳ್ಳಿ ಎಂತೆಂತಹ ಅವಸ್ಥೆಯಾಗುತ್ತದೆ ಮನುಷ್ಯನದು? ಕೈಯು ಸರಾಗವಾಗಿ ಬೆನ್ನು ಕತ್ತುಗಳ ಮೇಲೆ ಓಡಾಡುತ್ತದೆ, ಇಡೀ ಶರೀರದ ಕೆಲಸವನ್ನು ಒಂದೇ ಬಾರಿ ಮಾಡುವ ಆತುರದಲ್ಲಿ! ಈ ರೀತಿಯಲ್ಲಿ ತುರಿಕೆ ಮೊದಲು ಮೆಲ್ಲ ಮೆಲ್ಲನೆ ಪ್ರಾರಂಭವಾಗಿ ಕೊನೆಗೆ ತಿಕ್ಕಾಟದಲ್ಲಿ ಕೊನೆಗೊಳ್ಳುವಷ್ಟರಲ್ಲಿ ನಾಲ್ಕೈದು ರೀತಿಯ ಆಸನವಿದರಲ್ಲಿ ಆವಿರ್ಭವಿಸುತ್ತದೆ. ಈ ತುರಿಕಾಸನದಿಂದಾಗಿ ಉಗುರು, ಕತ್ತು ಬೆನ್ನುಗಳು ಬಲಿಷ್ಟವಾಗುವುವು ಮಾತ್ರವಲ್ಲ, ಹೊಟ್ಟೆಯಲ್ಲಿ ವಾತರೋಗವಿದ್ದರೆ ಅದು ಕೂಡ ನಾಗಾಲೋಟ ಹೂಡುತ್ತದೆ ಎಂಬುದು ನಿಸ್ಸಂದೇಹ.

ಅದೆಷ್ಟೋ ಆಸನಗಳಿಗೆ ಪಶುಗಳ ಹೆಸರೇ ಆಧಾರವಾಗಿದೆ—ಉದಾ --ಕೂರ್ಮಾಸನ, ಮತ್ಸ್ಯಾಸನ, ಮಯೂರಾಸನ ಮುಂತಾದವುಗಳು. ಕೆಲವು ಆಸನಗಳನ್ನು ಮಾಡುವಾಗ ಮನುಷ್ಯರ ಬಾಹ್ಯಾಕೃತಿಯು ಕೆಲವು ಪಶುಗಳನ್ನು ಹೋಲುತ್ತದೆ ಆದುದರಿಂದ ಅದಕ್ಕೆ ಅದೇ ಹೆಸರು ಕೊಟ್ಟಿರಬೇಕು

ತುರಿಕೆಯ ಮಹಾತ್ಮ್ಯೆಯನ್ನು ಇನ್ನೆಷ್ಟು ವರ್ಣಿಸಲಿ? ಒಂದು ದಿನ ನನ್ನ ಕಿರಿಯ ಹುಡುಗ ತಾಯನ್ನು ಕರೆಯುತ್ತಾ–ಅಮ್ಮಾ ಓ ಅಮ್ಮಾ, ಬೇಗ ಬಾ, ತಂದೆಯವರು ಏನೋ ಒಂದು ಹೊಸ ಕಸರತ್ತು ಮಾಡುತ್ತಾರೆ ನೋಡಲಿಕ್ಕಿದ್ದರೆ ಬೇಗ ಬಾ, ಎಂದು ಕೂಗಿ ಹೇಳಿದ. ಆ ಅಷ್ಟರಲ್ಲಿ 'ಅವರು' ಬಂದರು. ಗೋಡೆಗೆ ಸಮಾನಾಂತರದಲ್ಲಿ ನಿಂತು ಬೆನ್ನನ್ನು ಗೋಡೆಗೆ ತಿಕ್ಕುತ್ತಿದ್ದ ನನ್ನನ್ನು ಅವಕ್ಕಾಗಿ ನೋಡಿದರು ನನ್ನ ಶ್ರೀಮತಿಯವರು. "ಅಯ್ಯೊಯ್ಯೋ ಇದೇನು ಮಾಡುತ್ತಿದ್ದೀರಿ. ಬೆಂಕಿ ಹಿಡಿಯಲಿ ನಿಮ್ಮ ಕಸರತ್ತಿಗೆ. ಗೋಡೆಯ ಸುಣ್ಣ ಹೋದೀತು, ಅಂಗಿಯಲ್ಲಿ ಕಲೆಯಾದೀತು, ಬೆನ್ನಿನ ಚರ್ಮ ಹೋದೀತು ಎಂಬುದು ಬೇರೆ ಮಾತು. ಎಂದು ಬಡಬಡಿಸಿದರು

"ಅಲ್ಲ ಮಹಾರಾಯ್ತಿ, ನಾನು ಕಸರತ್ತು ಮಾಡುತ್ತಿಲ್ಲ, ತುರಿಸುತ್ತಿದ್ದೇನೆ, ಎಂದೆ,

ಅಷ್ಟರಲ್ಲಿ ನನ್ನ ಸುಪುತ್ರನು ತನ್ನ ಜಿಜ್ಞಾಸೆಯನ್ನು ಪ್ರಕಟಿಸಿದನು—'ಅಪ್ಪಾ, ಗೋಡೆಗೆ ಕೂಡಾ ತುರಿಸುತ್ತದೇನು?' ಎಂದು.

"ಇಲ್ಲ ಮಗೂ, ಗೋಡೆಯ ಸಹಾಯದಿಂದ ನಾನು ನನ್ನ ಬೆನ್ನನ್ನು ತುರಿಸುತ್ತಿದ್ದೇನೆ."

"ಇದು ಯಾವ ರೀತಿ? ನನ್ನ ಹತ್ತಿರ ಹೇಳುತ್ತಿದ್ದರೆ ನಾನು ತುರಿಸುತ್ತಿದ್ದಿಲ್ಲವೇ? ಯಾರಾದರೂ ಬೆನ್ನು ತುರಿಸಲಿದೆಯೆಂದು, ಬೆನ್ನನ್ನು ಗೋಡೆಗೆ ತಿಕ್ಕುತ್ತಾರೆಯೇ, ನೋಡಿದವರು ಏನೆಂದಾರು?" ಎಂದು ನಗು ನಾಚುತ್ತಾ ನುಡಿದರು ಶ್ರೀಮತಿಯವರು

"ನಿನ್ನ ಮಾತೇನೋ ನಿಜ, ಅಲ್ಲದೆ ನನ್ನ ಕೆಲಸವನ್ನು ಬೇರೆಯವರು ಮಾಡಿದರೆ ನನಗೆ ತುಂಬಾ ಸಂತೋಷವಾಗುತ್ತದೆ ಮಾತ್ರವಲ್ಲ ಇದರಿಂದ ಸೇವಾಭಾವನೆಯ ವಿಕಾಸವಾಗುತ್ತದೆ.—ಆದರೂ ತುರಿಸುವ ಕೆಲಸವನ್ನು ನಾನು ಬೇರೆಯವರಿಗೀಯಲು ತುಂಬಾ ಭಯಪಡುತ್ತೇನೆ. ಏಕೆಂದರೆ, ಬೇರೆಯವರ ತುರಿಸುವಿಕೆ ನಮಗೆ ತೃಪ್ತಿಯೀಯುವುದಿಲ್ಲ. ಮಾತ್ರವಲ್ಲ ಅದು ಕಚುಗುಳಿ ಇಟ್ಟಂತೆ ಅಲ್ಲವಾದರೆ ಉಗುರಿನಿಂದ ಚುಚ್ಚಿದಂತೆಯೇ ಭಾಸವಾಗುತ್ತದೆ" ಎಂದು ನಾನು ವಿವರಣೆಯಿತ್ತೆ.

"ಹಾಗಾದರೆ ನಾನು ತುರಿಸಲಾರೆ ಎಂದು ನಿಮ್ಮ ಅಭಿಪ್ರಾಯವೇ?"

"ಹಾಂ ಹಾಂ, ನಾನು ಹಾಗನ್ನಲಿಲ್ಲ. ನಿನಗೆ ತುರಿಸಲು ಚನ್ನಾಗಿ ಬರುತ್ತಿರಬಹುದು. ಪ್ರಾಯಶಃ ನೀನು ಬಾಲ್ಯದಿಂದಲೇ ಈ ಅಭ್ಯಾಸವನ್ನು ಬೆಳೆಸಿರಬೇಕು. ಇಲ್ಲದಿದ್ದರೆ ಕೆಲವೊಮ್ಮೆ ರಾತ್ರಿಯಲ್ಲಿದ್ದು ಗಂಟೆಗಟ್ಟಲೆ ನಿನ್ನ ಕಾಲನ್ನು ನೀನು ತುರಿಸುತ್ತಿರಲಿಲ್ಲ ರಾತ್ರಿಯಿಡೀ ನೀನು ತುರಿಸುತ್ತಾ ಕುಳಿತರೆ ಬೆಳಗಾಗುವಷ್ಟರಲ್ಲಿ ನಿನ್ನ ಬೆರಳುಗಳು ಅಥವಾ ಉಗುರುಗಳಲ್ಲಿ, ಯಾವುದಾದರೊಂದು ಈ ತಿಕ್ಕಾಟದಲ್ಲಿ ಸವೆದು ಹೋಗಬಹುವೆಂದೂ ಭಯಪಟ್ಟಿದಿದೆ ನಾನು ಹಾಗಿರುವಾಗ ನನಗಿಂತಲೂ ಹೆಚ್ಚು ತುರಿಸುವಿಕೆಯ ಅಭ್ಯಾಸ ನಿನಗಿರುವುದು ಸಹಜವಲ್ಲವೇ? ನೀನು ಈ ಕಲೆಯಲ್ಲಿ ಸಿದ್ಧಹಸ್ತಳು ಮಾತ್ರವಲ್ಲ ಸಿದ್ಧ ನಖಳೂ ಆಗಿರುವೆಯೆಂಬುದು ನಿಸ್ಸಂದೇಹ. ಆದರೆ ವಾಸ್ತವಿಕವಾಗಿ, ಜೀವನದ ಕೆಲವು ಮಹಾನ್ ತತ್ವಗಳಂತೆಯೇ ಇದರಲ್ಲಿ ಕೂಡಾ ಸ್ವಾಶ್ರಯದ ವಿನಃ ಸಿದ್ಧಿಯಿಲ್ಲ."

'ಸಾಕು ಮಾಡಿ, ನಿಮ್ಮ ಈ ದಾರ್ಶನಿಕತೆಯನ್ನು. ನಿಮ್ಮ ಈ ಕಸರತ್ತು ತುಂಬಾ ವಿಕಾರ ಕಾಣುತ್ತದೆ. ಯಾರಾದರೂ ನೋಡಿದರೆ ಏನು ಭಾವಿಸಿಯಾರು?"

"ನೀನೇನು ಇದನ್ನೊಂದು ಸಾಮಾನ್ಯ ಕೆಲಸವೆಂದು ತಿಳಿಯುತ್ತೀಯೇನು? ಅರೇ! ಇದನ್ನು ಕಲಿಯಲಿಕ್ಕಾಗಿ ನಾನೊಬ್ಬ ಗುರುವನ್ನು ಹಿಡಿಯಬೇಕಾಯ್ತು. ಹಾಂ ಗುರು"

"ಗುರು! ಇದನ್ನು ಕೂಡಾ ಯಾರಾದರೂ ಗುರು ಹೇಳಿಕೊಡುತ್ತಾರೇನು? ನೀವು ಮಕ್ಕಳಂತೆ ತಮಾಷೆ ಮಾಡುತ್ತೀರಲ್ಲ!"

ನಾನು ಸುಳ್ಳು ಹೇಳುತ್ತಿಲ್ಲ ರಾಣಿ! ನಾನು ಕೂಡಾ ದತ್ತಾತ್ರೇಯನಂತೆ ಸಮಯ ಸಮಯದಲ್ಲಿ ಕೆಲವು ಗುರುಗಳನ್ನು ಮಾಡಿಕೊಂಡಿದ್ದೇನೆ ಅವುಗಳಲ್ಲಿ ನನ್ನ ಒಂದು ಗುರು ಕೋಣ

ವಾಹ್! ಗುರುವನ್ನು ಯಾರಾದರೂ ಕೋಣ ಎಂದನ್ನುತ್ತಾರೇನು?

ಆದರೆ ನಾನು ಗುರುವನ್ನು ಕೋಣವೆಂದು ಕರೆಯುವುದಿಲ್ಲ, ಕೋಣವನ್ನು ಗುರುವೆಂದು ಕರೆಯುತ್ತೇನೆ

ಅಂದರೆ—?

ಅಂದರೆ, ಎರಡು ಮೂರು ದಿವಸಗಳಿಂದ ನನ್ನ ಬೆನ್ನು ತುರಿಸುತ್ತಿತ್ತು ಆದರೆ ತುರಿಸಲಾಗುತ್ತಿರಲಿಲ್ಲ. ಇವತ್ತು ಬೆಳಗ್ಗೆ ಒಂದು ಕೋಣ ತನ್ನ ಮೈಯನ್ನು ಮರಕ್ಕೆ ತಿಕ್ಕುತ್ತಿತ್ತು. ಅದನ್ನು ನಾನು ನೋಡಿದೆನು ನನ್ನ ಎಲ್ಲಾ ಆತಂಕವು ಕೊನೆಗೊಂಡಿತು ಕೈಕಾಲು ಯಾವ ಅಂಗವನ್ನು ಮುಟ್ಟಲಾಗುವುದಿಲ್ಲವೋ, ಅದನ್ನು ಹೇಗೆ ತುರಿಸಬೇಕು ಎಂದು ತಿಳಿಯಿತು. ನೋಡು, ಅದಕ್ಕಾಗಿಯೇ ಬೆನ್ನನ್ನು ಗೋಡೆಗೆ ತಿಕ್ಕುವ ಪ್ರಯತ್ನ ಮಾಡುತ್ತಿದ್ದೇನೆ. ಆ . ಹಾ.... ಈಗ್ಗೆ ತೃಪ್ತಿಯೆನಿಸುತ್ತದೆ ಎಂದಂದು ನಾನು ಪುನಃ ಬೆನ್ನನ್ನು ಗೋಡೆಗೆ ತಿಕ್ಕತೊಡಗಿದೆ

ಎಷ್ಟೋ ಸಲ ತುರಿಸುವಾಗ ಮನುಷ್ಯನು ಪಶುಗಳ ಹಾವಭಾವವನ್ನು ಅನಿವಾರ್ಯವಾಗಿ ಮಾಡಿ ತೋರಿಸಬೇಕಾಗುತ್ತದೆ.

ಯಾರೋ ಒಬ್ಬ ಸಂಸ್ಕೃತ ಕವಿಯ ಅಭಿಪ್ರಾಯದಂತೆ, ಆಹಾರ, ನಿದ್ರೆ, ಭಯ ಮತ್ತು ಮೈಥುನ ಪ್ರವೃತ್ತಿ ಮನುಷ್ಯ ಮತ್ತು ಪಶುಗಳಿಗೆ ಸರಿಸಮಾನವಾಗಿದೆಯಂತೆ ನನ್ನ ಅಭಿಪ್ರಾಯದಂತೆ ತುರಿಸುವಿಕೆಯನ್ನೂ ಈ ಪಟ್ಟಿಯಲ್ಲಿ ಸೇರಿಸುವುದು ಅವಶ್ಯ. ಒಂದೊಮ್ಮೆ, ಆಹಾರ, ನಿದ್ರೆ ಮೈಥುನ ಮುಂತಾದ ವೃತ್ತಿಗಳು, ವೃತ್ತಿಯ ರೂಪದಲ್ಲಿ ಸರಿಸಮಾನವಾಗಿದ್ದರೂ ಆವಿರ್ಭಾವನದ ರೀತಿಯಲ್ಲಿ ವ್ಯತ್ಯಾಸವಿದೆ ಆದರೆ ತುರಿಕೆಯ ಬಗ್ಗೆ ನೋಡುವುದಾದರೆ ಪಶು–ಮನುಷ್ಯರಿಬ್ಬರಲ್ಲಿಯೂ ಇದರ ವೃತ್ತಿ-ಪ್ರವೃತ್ತಿಗಳಲ್ಲಿ ಬಹಳೇ ಸಾಮ್ಯವಿದೆ

ತುರಿಸುವ ರೀತಿಯಲ್ಲಿ ತುಸು ವ್ಯತ್ಯಾಸ ಕಂಡುಬರುತ್ತದೆ. ಮನುಷ್ಯನು ತನ್ನ ಕೈಯಿಂದ ತುರಿಸಿಕೊಂಡರೆ ಪಶುಗಳು ನಾಲಗೆಯಿಂದ ತುರಿಸಿಕೊಳ್ಳುತ್ತವೆ. ಹಿಂದಿನ ಕಾಲದಲ್ಲಿ ಪ್ರಾಯಶಃ ಇದರಲ್ಲಿಯೂ ಸಮತೆಯಿದ್ದಿರಬೇಕು ಎಂಬುದನ್ನು ನಾನು ನಿರ್ಧರಿಸಿದ್ದೇನೆ. ನಮ್ಮ ಬೆನ್ನು ತುರಿಸುತ್ತಿದ್ದಾಗ ಯಾರಾದರೂ ನಮ್ಮ ಬೆನ್ನ ಮೇಲ ನಾಲಿಗೆಯಾಡಿಸಿದರೆ ಪ್ರಾಯಶಃ ಸಂಭವತಃ ತೃಪ್ತಿಯಾಗಬಹುದು. ಹಾಗೆ ನಾನೆಂದೂ ಮಾಡಿಸಿಲ್ಲ, ಮುಂದೆಂದಾದರೂ ಮಾಡಿಸುವೆನೇ ಎಂಬುದನ್ನು ಹೇಳಲಾರೆ.

ಪ್ರಪಂಚದ ಪ್ರೇಕ್ಷಣೀಯ ವಸ್ತುಗಳಲ್ಲಿ ತುರಿಸುವ ಮನುಷ್ಯನೊಬ್ಬನನ್ನು ಇರಿಸಬೇಕೆಂದು ನನ್ನ ಸಲಹೆ. ಆದರೆ ಅವನ ತುರಿಸುವಿಕೆಯು ಹೇಡಿಯ ಪೌರುಷದಂತೆ ಕ್ಷಣಕಾಲವಿದ್ದು ಮಾಯವಾಗಬಾರದು ಬದಲಾಗಿ ಗಂಟೆಗಟ್ಟಲೆ ತುರಿಸಿದರೂ ತೃಪ್ತಿಸಿಗದಂತಾಗಬೇಕು. ಒಂದೆಡೆಯಲ್ಲಿ ತುರಿಸುವಿಕೆ ತುಸು ಕಡಿಮೆಯಾಗುವಷ್ಟರಲ್ಲಿ ಹತ್ತೆಡೆಯಲ್ಲಿ ಅದು ಭಯಂಕರವಾಗಿ ಹೆಚ್ಚಾಗಬೇಕು. ನಿಜವಾಗಿಯೂ ಇಂತಹ ತುರಿಸುವಿಕೆಯೊಡನೆ ಅದಾರಿಗೆ ಸ್ನೇಹ ಬೆಳೆದಿದೆಯೋ ಅವರು ತುರಿಸುತ್ತಿರುವುದನ್ನೇ ನೋಡಿ ಅದೆಷ್ಟು ಮಂದಿ ಆನಂದಪಡಬಹುದು

ಇಷ್ಟೇ ಅಲ್ಲ ತುರಿಸುವಿಕೆಯ ಕಾರ್ಯದಲ್ಲಿ ಪ್ರವೃತ್ತನಾಗಿರುವ ಮನುಷ್ಯನನ್ನು ರಂಗಮಂಚದ ಮೇಲೆ ಬಿಟ್ಟರೆ, ಸಿದ್ಧಹಸ್ತ ನಟಶ್ರೇಷ್ಠನು ಕೂಡಾ ಅಚ್ಚರಿಪಡು

(೯ನೇ ಪುಟ ನೋಡಿರಿ)

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ. ೭೦ ನ. ಪೈಸೆ
(ಶ್ರೀ ಕೆ ಕೆ ಶೆಟ್ಟಿ, ಎಂ ಎಲ್. ಸಿ ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ ೯೦ ನ. ಪೈಸೆ
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು.
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನೆರಿ

ಬೆಲೆ: ರೂ ನಾಲ್ಕು
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ
ಉಡುಪಿ.

ದೇಶದ ಹಿತಸಾಧನೆಗೆ
ಕಾಂಗ್ರೆಸ್‌ಗೆ ಮತನೀಡಿರಿ

ಶ್ರೀ ಟಿ. ಎ. ಪೈ, ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ.

ದಕ್ಷಿಣ ಕನ್ನಡ ಜಿಲ್ಲೆಯು ಹಿಂದಿನಿಂದಲೂ ಕಾಂಗ್ರೆಸಿಗೆ ಬೆಂಬಲ ನೀಡುವ ಜಿಲ್ಲೆಯೆಂದು ಪ್ರಸಿದ್ಧಿ ಪಡೆದಿದ್ದು ಆ ಮೂಲಕ ತನ್ನ ನ್ಯಾಯವಾದ ಸಂಕಷ್ಟಗಳನ್ನು ಪರಿಹರಿಸುವುದರಲ್ಲಿಯೂ ತನ್ನ ಹಕ್ಕುಗಳನ್ನು ವ್ಯಕ್ತಪಡಿಸಿದೆ. ಕಳೆದ ಹತ್ತು ವರ್ಷಗಳಲ್ಲಿ ಈ ಜಿಲ್ಲೆಯಲ್ಲಿ ಸಾಧಿಸಲಾದ ಪ್ರಗತಿಯು ಮಹತ್ವಪೂರ್ಣವಾಗಿದೆಯೆಂಬುದರಲ್ಲಿ ಅನುಮಾನವಿಲ್ಲ.

ಜಿಲ್ಲೆಯ ನದಿಗಳಿಗೆ ಸೇತುವೆ ಕಟ್ಟುವ ಕಾರ್ಯವು ಭರದಿಂದ ಸಾಗುತ್ತಿದೆ. ಮುಂದಿನ ಐದು ವರ್ಷಗಳಲ್ಲಿ ೪–೫ ಕೋಟಿ ರೂಪಾಯಿಗಳು ಸಾರಿಗೆ ಸೌಕರ್ಯಗಳಿಗೆ ವೆಚ್ಚವಾಗಲಿದ್ದು, ಇದರಿಂದ ನೂರಾರು ಕುಟುಂಬಗಳಿಗೆ ಪ್ರಯೋಜನ ದೊರೆಯಲಿದೆ. ಒಳನಾಡಿನ ಅಭಿವೃದ್ಧಿಯನ್ನೂ ನಾವು ಸಾಧಿಸಿರುವುದರಿಂದ, ಸಾರಿಗೆಯು ಬಹಳಷ್ಟು ಸುಲಭದಾಯಕವಾಗಿದೆ ಮುಂದಿನ ಅವಧಿಯಲ್ಲಿ ಮಂಗಳೂರು–ಹಾಸನ ರೈಲು ದಾರಿ ಮತ್ತು ಮಂಗಳೂರನ್ನು ಸರ್ವಋತು ಬಂದರವನ್ನಾಗಿ ಮಾಡುವ ಯೋಜನೆಯಿದೆ. ಕುಂದಾಪುರ, ಮಲ್ಪೆ, ಮೂಲ್ಕಿ, ಮೊದಲಾದ ಚಿಕ್ಕ ಬಂದರುಗಳನ್ನು ಮೀನುಗಾರಿಕೆಯ ಕೇಂದ್ರ ಅಥವಾ ಔಟ್‌ಲೆಟ್‌ಗಳಾಗಿ ಅಭಿವೃದ್ಧಿಗೊಳಿಸಬೇಕು. ಕುಂದಾಪುರದಿಂದ ಮಂಗಳೂರಿನ ವರೆಗೆ ಕಡಿಮೆ ವೆಚ್ಚದಲ್ಲಿ ಕಾಲುವೆ ತೋಡಿದರೆ, ಕೈಗಾರಿಕೆ ಬೆಳೆಯುವುದಕ್ಕೂ ಅನುಕೂಲವಾಗುವುದು.

ಮುಂದಿನ ೫ ವರ್ಷಗಳಲ್ಲಿ ನಾವು ೬–೧೧ ವರ್ಷದ ಮಕ್ಕಳಿಗೆ ಅನಿವಾರ್ಯವಾಗಿ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗುತ್ತೇವೆ. ನಮ್ಮ ಜಿಲ್ಲೆಯಲ್ಲಿ ಖಾಸಗಿ ಆಡಳಿತೆಯವರು ತುಂಬ ಶಾಲೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ ಇವರಿಗೆ ಶಾಲೆಗಳನ್ನು ನಡೆಸುವುದಕ್ಕೂ ಹೆಚ್ಚಿನ ಮಕ್ಕಳನ್ನು ಆಕರ್ಷಿಸುವುದಕ್ಕೂ ಸೂಕ್ತ ಸಹಕಾರ ದೊರೆಯಬೇಕಾಗಿದೆ. ಎಸ್. ಎಸ್. ಎಲ್. ಸಿ. ವರೆಗೆ, ವಾರ್ಷಿಕ ೧,೨೦೦ ಸಂಪಾದನೆಯಿಲ್ಲದವರ ಮಕ್ಕಳು ಉಚಿತವಾಗಿ ಪಡೆಯಬಹುದಾದರೂ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕು; ಹುಡುಗರು ಬಯಸುವ ವಿಷಯದಲ್ಲಿ ಶಿಕ್ಷಣ ಪಡೆಯುವ ಸೌಲಭ್ಯವನ್ನು ಒದಗಿಸಿಕೊಡಲು ಪ್ರಯತ್ನಿಸಬೇಕು ಕಾಲೇಜು ಶಿಕ್ಷಣವು ವೆಚ್ಚದಾಯಕವಿರುವುದರಿಂದ ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಶಿಷ್ಯವೃತ್ತಿಯನ್ನು ಒದಗಿಸಬೇಕು. ವೃತ್ತಿಪರ ಕಾಲೇಜುಗಳಿಗೆ ಪ್ರೋತ್ಸಾಹ, ಪೊಲಿಟೆಕ್ನಿಕ್‌ಗಳ ಸ್ಥಾಪನೆಯ ಕಾರ್ಯಗಳು ನಮಗಾಗಬೇಕು. ಸ್ನಾತಕೋತ್ತರ ಶಿಕ್ಷಣವನ್ನು ಪಡೆಯುವ ಸೌಲಭ್ಯ ನಮ್ಮ ಪದವೀಧರರಿಗೆ ಇಲ್ಲಿಯೇ ದೊರೆಯುವಂತಾಗಬೇಕು. ಎಲ್ಲ ಬಗೆಯ ಶಿಕ್ಷಣ ಸಂಸ್ಥೆಗಳಿಂದ ಕೂಡಿದ ನಮ್ಮ ಜಿಲ್ಲೆಯಲ್ಲಿ ವಿಶ್ವವಿದ್ಯಾಲಯವೊಂದು ಸ್ಥಾಪಿತವಾಗಬೇಕು

'ಪ್ಯಾಕೇಜ್ ಡೀಲ್' ಯೋಜನೆ ನಮ್ಮ ಕೈತಪ್ಪಿ ಹೋದರೂ ಅಂತಹುದೇ ಯೋಜನೆಯೊಂದು ನಮ್ಮ ಜಿಲ್ಲೆಗೆ ಬೇಕು. ಕೃಷಿಯ ಉತ್ಪನ್ನವನ್ನು ಹೆಚ್ಚುವಂತೆ ಮಾಡಿದರೆ, ನಮ್ಮ ಕೆಲವೊಂದು ಪ್ರಶ್ನೆಗಳು ಕೊನೆಗೊಳ್ಳುವು. ಭೂ ಮಸೂದೆಯಿಂದ ಸಂಕಷ್ಟಕ್ಕೆ ಗುರಿಯಾದವರು ಕೆಲವರಿರಬಹುದು. ಪರಿಹಾರಕ್ಕೆ ಅರ್ಹರಾದವರು ನ್ಯಾಯ ರೀತಿಯಲ್ಲಿ ಅದನ್ನು ಪಡೆಯುವಂತಾಗಬೇಕು. ಚಾಲಗೇಣಿ ಒಕ್ಕಲುಗಳಿಗೆ ತಾವು ದುಡಿಯುವ ಭೂಮಿ ತಮ್ಮದಾಗುವ ಕಾಲಬಂತು. ರೈತನಿಗೆ ಬೇಕಾದ ಬೀಜ ಗೊಬ್ಬರಗಳನ್ನಲ್ಲದೆ ಆವಶ್ಯಕ ಸಾಲವನ್ನೂ ಒದಗಿಸಿಕೊಡಬೇಕಾಗಿದೆ. ಆದಷ್ಟು ಹೆಚ್ಚು ನೀರನ್ನು ಕೃಷಿಗೆ ನಾವು ಉಪಯೋಗಿಸುವಂತಾಗಬೇಕು. ಇದಕ್ಕಾಗಿ 'ಲಿಫ್ಟ್ ಇರ್ರಿಗೇಷನ್' ತೊಡಗಬೇಕು. ಇದುವರೆಗೆ ನಮ್ಮ ಜಿಲ್ಲೆಯಲ್ಲಿ ಒಂದು ಸಾವಿರ ಪಂಪುಗಳು ಇಡಲ್ಪಟ್ಟಿವೆ. ಮುಂದಿನ ೫ ವರ್ಷಗಳಲ್ಲಿ ಮತ್ತು ಐದು ಸಾವಿರ ಪಂಪುಗಳನ್ನಿಡಬೇಕು. ಇದಕ್ಕಾಗಿ ಗ್ರಾಮಾಂತರ ಪ್ರದೇಶಗಳಿಗೆಲ್ಲಾ ವಿದ್ಯುತ್ತನ್ನು ಒದಗಿಸಬೇಕು.

ನಮ್ಮ ಜಿಲ್ಲೆಯಲ್ಲಿ ಔದ್ಯಮಿಕ ಕ್ಷೇತ್ರವೊಂದು ಬೇಗನೇ ನಿರ್ಮಾಣವಾಗುವಂತಾಗಬೇಕು. ಗೊಬ್ಬರ, ಎಣ್ಣೆ ಶುದ್ಧೀಕರಣ, ಮರದ ಪಲ್ಪ್, ಮೀನುಗಾರಿಕೆಯ ಉದ್ಯಮ ಮೊದಲಾದ ಕಾರಖಾನೆಗಳ ಸ್ಥಾಪನೆಗೆ ಇಲ್ಲಿ ಪ್ರಯತ್ನ ನಡೆಸಲಾಗಿದೆ. ಸಣ್ಣ ಮಟ್ಟದ ಕೈಗಾರಿಕೆಗಳನ್ನು ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಸ್ಥಾಪಿಸಲು ಅನುಕೂಲತೆ ಒದಗಿಸಬೇಕು.

ಸರಕಾರಿ ಆಸ್ಪತ್ರೆಗಳಿಗೆ ಸಮರ್ಥ ತರಬೇತಾದ ಡಾಕ್ಟರರು ಮತ್ತು ನರ್ಸುಗಳನ್ನು ಒದಗಿಸುವುದು ಮತ್ತು ಅಗತ್ಯ ಬೇಕುವ ಮದ್ದುಗಳನ್ನು ಪೂರೈಸುವುದು ಮುಖ್ಯವಾಗಿದೆ. ಜಿಲ್ಲೆಯ ಮೂಲೆ ಮೂಲೆಗಳಿಗೂ ವೈದ್ಯಕೀಯ ಸವಲತ್ತು ದೊರೆಯಬೇಕು. ಬಂಟವಾಳ, ಬೆಳ್ತಂಗಡಿಗಳ ಆಸ್ಪತ್ರೆಗಳನ್ನು ತಾಲೂಕು ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಗಳನ್ನಾಗಿ ಭಡ್ತಿಗೊಳಿಸಬೇಕು. ಮಂಗಳೂರಿನಲ್ಲಿ ನಳ್ಳಿನೀರು ಯೋಜನೆ ಮುಗಿದು ಒಳಚರಂಡಿ ಯೋಜನೆಯು ಮುಂದುವರಿಯುತ್ತಿರುವಂತೆಯೇ ಉಡುಪಿಯೇ ಮೊದಲಾದ ತಾಲೂಕು ಮುಖ್ಯ ಪಟ್ಟಣಗಳಲ್ಲಿಯೂ ಅವು ಕಾರ್ಯಗತವಾಗಬೇಕು. ಶುದ್ಧ ನೀರು ಒದಗದ ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮಾಂತರ ನೀರು ಸರಬರಾಯಿ ಯೋಜನೆಯು ಪ್ರಾರಂಭವಾಗಬೇಕು.

ತಾಲೂಕು ಅಭಿವೃದ್ಧಿ ಮಂಡಳ ಮತ್ತು ಪಂಚಾಯತ ಬೋರ್ಡುಗಳು ಸಾರ್ವಜನಿಕರ ಹಿತಾಸಕ್ತಿಗಳನ್ನು ಗಮನಿಸಿ ಅದನ್ನು ತೀವ್ರವಾಗಿ ಸಮರ್ಥ ರೀತಿಯಲ್ಲಿ ನಿರ್ವಹಿಸುವಂತೆ ಅವುಗಳ ನಿಯಮ ನಿಬಂಧನೆಗಳಲ್ಲಿರುವ ಕಠಿನತೆಯನ್ನು ಹೋಗಲಾಡಿಸಬೇಕು. ಗ್ರಾಮೋದ್ಯೋಗಸ್ಥರ ಆನುವಂಶಿಕ ಅಧಿಕಾರ ರದ್ದತಿ, ಮದ್ಯಪಾನ ನಿರೋಧ ಮೊದಲಾದುವುಗಳಿಂದ ನಿರುದ್ಯೋಗಿಗಳಾದವರಿಗೆ ಉದ್ಯೋಗ ಕಲ್ಪಿಸಿಕೊಡಬೇಕು.

ಈಗ ಸಂಭವಿಸುತ್ತಿರುವ ಅರ್ಥಾಂಶ ಸಂಕಷ್ಟಗಳಿಗೆ ಸರಕಾರವು ಒಂದು ವಿಷಯದ ಕುರಿತು ನಿರ್ಧಾರಕ್ಕೆಗೊಳ್ಳುವಲ್ಲಿ ಮತ್ತು ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಆಡಳಿತೆಯಲ್ಲಾಗುತ್ತಿರುವ ತಪ್ಪಿಸಬಹುದಾದ ದೀರ್ಘ ವಿಳಂಬವೇ ಕಾರಣವಾಗಿದ್ದು, ಅದನ್ನು ದೂರ ಮಾಡಬೇಕು.

ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದರಿಂದ ಜಿಲ್ಲೆಯ ಜನತೆಯ ಆಶೆ ಆಕಾಂಕ್ಷೆಗಳು ನೆರವೇರುವ ಸುಸಂದರ್ಭವನ್ನು ಕಲ್ಪಿಸಿಕೊಟ್ಟಂತಾಗುವುದು. ಅಭಿವೃದ್ಧಿ ಯೋಜನೆಗಳನ್ನು ಮುನ್ನಡೆಸಿ ಜನರ ಜೀವನ ಮಟ್ಟವನ್ನು ಹೆಚ್ಚಿಸುವ ಹೊಣೆ ಹೊರುವುದು ಒಂದು ಸುಭದ್ರ ಸರಕಾರಕ್ಕೆ ಮಾತ್ರ ಸಾಧ್ಯ. ಆದುದರಿಂದ ಅಂತಹ ವಾತಾವರಣವನ್ನು ನಿರ್ಮಿಸಲು ಜನರು ಕಾಂಗ್ರೆಸ್ಸಿಗೆ ಮತವಿತ್ತು ಅದರೊಂದಿಗೆ ಸಹಕರಿಸಬೇಕು. ಕಾಂಗ್ರೆಸ್ ಸಾಧನೆಯು ಜಗತ್ತಿನಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ ಇದರಿಂದಾಗಿಯೇ ಎಲ್ಲ ರಾಷ್ಟ್ರಗಳೂ ಭಾರತದ ಬಗ್ಗೆ ಅಭಿಮಾನದಿಂದ ನೆರವೀಯುತ್ತಿವೆ ಕಾಂಗ್ರೆಸ್ ಪಕ್ಷವು ಮುಂದಕ್ಕೂ ಅಧಿಕಾರ ವಹಿಸಿ, ದೇಶದ ಮುನ್ನಡೆಗಾಗಿ ದುಡಿಯುವಂತೆ ಸಹಕಾರವೀಯುವುದು. ಇದಕ್ಕಾಗಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದ್ವಾರನಿಗೆ ಮತವೀಯಬೇಕು.

ಶ್ರೀ ಟಿ. ಎ. ಪೈ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

ಸುಲಭ ದರದಲ್ಲಿ ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ ಹಾಜರಿ ರಿಜಿಸ್ಟರುಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

A HOUSE FOR
Quality Photographs,
Enlargements & Oil Paintings etc
ARUNA PHOTO STUDIO
NEAR BUS STAND, UDIPI, S. KANARA.

ನವಯುಗ

ವರುಷ	ಉಡುಪಿ	ವಾರ
೪೧	೧-೨-೬೨	೨೧

ಕಾಂಗ್ರೆಸ್‌ಗೆ ಮತನೀಡಿರಿ

ಸಾರ್ವತ್ರಿಕ ಚುನಾವಣೆಗಳು ಇನ್ನು ಮೂರು ವಾರಗಳಲ್ಲಿಯೇ ಮುಗಿಯಲಿವೆ. ನಮ್ಮ ಜಿಲ್ಲೆಯ ಎಲ್ಲ ಮತದಾರ ಕ್ಷೇತ್ರಗಳಲ್ಲೂ ಬಿರುಸಿನ ಪ್ರಚಾರ ಕಾರ್ಯ ಈಗಾಗಲೇ ಪ್ರಾರಂಭವಾಗಿದೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಮಹತ್ವಪೂರ್ಣವಾದುವು. ಒಂದು ದೇಶದ ಜನತೆಯು ಬಯಸುವ ಪಕ್ಷದ ಸರಕಾರವನ್ನು ಅಧಿಕಾರಕ್ಕೆ ತರುವುದು ಪ್ರಜಾಸತ್ತೆಯಲ್ಲಿ ಮಾತ್ರ ಸಾಧ್ಯ. ಜನತೆಯು ತಾನು ಮತವಿತ್ತು ಹುರಿಯಾಳುವನ್ನು ಆರಿಸುವಾಗ ಎಚ್ಚರಿಕೆ ತಪ್ಪಿದರೆ ಮುಂದೆ ಪಶ್ಚಾತ್ತಾಪ ಪಡುವ ಪ್ರಮೇಯವೊದಗೀತು. ಪ್ರಜಾಸತ್ತೆಯಲ್ಲಿ ನಾಗರಿಕನಿಗಿರುವ ಅಮೂಲ್ಯಾಧಿಕಾರವೆಂದರೆ, ಮತ ನೀಡುವ ಹಕ್ಕು. ಎಂತಲೇ ತನಗಿರುವ ಒಂದೇ ಒಂದಾದ ಮತವನ್ನು ಮತದಾರನಾದರೂ ಸಂಪೂರ್ಣ ಪರ್ಯಾಲೋಚಿಸಿ, ತನಗೆ ಯೋಗ್ಯನೆಂದು ಕಂಡು ಬಂದ ಹುರಿಯಾಳುವಿಗೆ ನೀಡುವುದು ಅತ್ಯವಶ್ಯ. ಯಾವದೇ ರೀತಿಯ ಸಂಕೋಚವಾಗಲಿ, ಜಾತಿ-ಮತವ್ಯಕ್ತಿಗಳ ಮೇಲಿನ ಅಭಿಮಾನವಾಗಲೀ ಇದಕ್ಕೆ ಅಡ್ಡ ಬರಬಾರದು.

ನಮ್ಮ ಜಿಲ್ಲೆಯು ಪ್ರಾರಂಭದಿಂದಲೂ "ಕಾಂಗ್ರೆಸ್ ಜಿಲ್ಲೆ" ಎಂಬ ಹೆಸರನ್ನು ಪಡೆದಿದೆ. ಕಾಂಗ್ರೆಸ್ ಪಕ್ಷದ ಹುರಿಯಾಳುಗಳಿಗೆ ಸಂಪೂರ್ಣ ಬೆಂಬಲವನ್ನಿತ್ತು ಅದು ಪಕ್ಷದ ಮೇಲೆ ತನಗಿರುವ ಪ್ರೀತ್ಯಾದರಗಳನ್ನಲ್ಲದೆ ವಿಶ್ವಾಸವನ್ನೂ ಈ ಮೊದಲು ಪ್ರದರ್ಶಿಸಿದೆ. ಮೊದಲನೆಯ ಚುನಾವಣೆಯಲ್ಲಿ ಒಂದು ಸ್ಥಾನ ಮತ್ತೆರಡನೆಯ ಬಾರಿ ಎರಡು ಸ್ಥಾನಗಳನ್ನು ನಮ್ಮ ಜಿಲ್ಲೆಯಲ್ಲಿ ವಿರೋಧಿ ಪಕ್ಷದವರು ಗೆದ್ದಿದ್ದರೆಂಬುದು ನಿಜ. ಆದರೂ ಹೆಚ್ಚಿನೆಡೆಗಳಲ್ಲಿ ಕಾಂಗ್ರೆಸ್ಸೇ ಜಯಭೇರಿಯನ್ನು ಬಾರಿಸಿದೆ. ಕಾಂಗ್ರೆಸ್ಸಿನಿಂದಲೇ ತಮ್ಮ ಹಿತಸಾಧನೆಯೆಂದು ನಮ್ಮ ಜನತೆಯು ದೃಢವಾಗಿ ನಂಬಿದೆ. ಈ ಬಾರಿಯೂ ದಲೂ ನಮ್ಮ ಜಿಲ್ಲೆಯ ಮತದಾರ ಬಂಧುಗಳು ತಾವು ಹಾಕಿ ಕೊಟ್ಟಿರುವ ಸತ್‌ಸಂಪ್ರದಾಯವನ್ನು ತಪ್ಪದೆ, ತಮ್ಮ ಕಲ್ಯಾಣವನ್ನು ಸಾಧಿಸಿದ, ಸಾಧಿಸುತ್ತಿರುವ ಮತ್ತು ಮುಂದೆ ಸಾಧಿಸುವ ಏಕಮೇವ ಪಕ್ಷವಾದ ಕಾಂಗ್ರೆಸ್ಸಿಗೆ ತಮ್ಮ ಸರ್ವ ವಿಧದ ಸಹಕಾರವನ್ನು ನೀಡುವರೆಂದು ನಂಬಬಹುದು.

ದೇಶದಲ್ಲಿ ಕಾಂಗ್ರೆಸ್ಸು ಪ್ರಬಲ ಪಕ್ಷವಾಗಿದೆ; ಅದನ್ನು ಸರಿಗಟ್ಟಬಲ್ಲ ಬೇರಾವ ಪಕ್ಷವೂ ನಮ್ಮಲ್ಲಿಲ್ಲ. ಕಾಂಗ್ರೆಸ್ಸು ಮಾತ್ರ ಎಲ್ಲ ಸ್ಥಾನಗಳಿಗೂ ತನ್ನ ಪಕ್ಷದ ಉಮೇದ್ವಾರರನ್ನು ನಿಲ್ಲಿಸಲು ಸಮರ್ಥವಾಗಿದೆ; ಉಳಿದ ಯಾವ ಪಕ್ಷಕ್ಕೂ ಇಂತಹ ಬಲವಿಲ್ಲ; ಅವು ಜನಬೆಂಬಲವನ್ನೂ ಗಳಿಸಿರುವುದಿಲ್ಲ. ನಮ್ಮ ಜಿಲ್ಲೆಯ ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದ್ವಾರರ ಹೆಸರುಗಳನ್ನು ಇದೇ ಸಂಚಿಕೆಯ ಬೇರೆಡೆಯಲ್ಲಿ ಪ್ರಕಟಿಸಿದ್ದೇವೆ. ಜಿಲ್ಲೆಯಲ್ಲಿನ ೧೪ ಸ್ಥಾನಗಳಲ್ಲಿ ೯ ಸ್ಥಾನಗಳಿಗೆ ಜನಸಂಘವು ಸ್ಪರ್ಧಿಸಿದೆ. ಜನಸಂಘವು ಇಷ್ಟೊಂದು ವಿಸ್ತೃತ ಕಾರ್ಯಕ್ಷೇತ್ರವನ್ನಿಟ್ಟುಕೊಂಡು ಚುನಾವಣೆಗೆ ನಮ್ಮ ಜಿಲ್ಲೆಯಲ್ಲಿ ನಿಲ್ಲುವುದು ಇದೇ ಪ್ರಥಮ ಬಾರಿ. ಆದರೆ, ನಮ್ಮಲ್ಲಿ ಆ ಪಕ್ಷದ ಬಲವಾಗಲೀ ವಿಧಾಯಕ ಕ್ರಮವಾಗಲಿ ತೀರ ಅಪರಿಚಿತವಿದೆ; ಅದರಲ್ಲೂ ತ್ರಿಮುಖ—ಚತುರ್ಮುಖ ಸ್ಪರ್ಧೆಯಿರುವಾಗ ಜನತೆಯರಿಯದ ಜಾತೀಯ ಪಕ್ಷವೆಂಬ ಅಪವಾದಕ್ಕೊಳಗಾದ ಸಂಘಕ್ಕೆ ಜಾತ್ಯತೀತ ರಾಷ್ಟ್ರದಲ್ಲಿ ಸ್ಥಾನ ಸಿಗಲಾರದು. ಸಿಗಲೂಬಾರದು. ಪ್ರಸವಾ ಪಕ್ಷವು ಜಿಲ್ಲೆಯ ಉತ್ತರ ಭಾಗವನ್ನೂ ಸ್ವತಂತ್ರ ಪಕ್ಷವು ದಕ್ಷಿಣ ಭಾಗವನ್ನೂ ಹಂಚಿಕೊಂಡು ರಂಗಕ್ಕಿಳಿದಂತೆ ಗೋಚರವಾಗುತ್ತದೆ. ಕೆಲವೊಂದು ಪಟ್ಟಭದ್ರ ವ್ಯಕ್ತಿಗಳ ಆಧಾರದಿಂದ ನಡೆಯುತ್ತಿರುವ ಈ ಎರಡೂ ಪಕ್ಷಗಳು ಜನಮತವನ್ನು ಪಡೆಯಲಾರವು. ಕಮ್ಯುನಿಷ್ಟರೇನೋ ಕೆಲವೊಂದು ಸ್ಥಾನಗಳಿಗೆ ಸ್ಪರ್ಧಿಸಿದ್ದಾರೆ ಆದರೆ, ವಿದೇಶ ನಿಷ್ಠೆಯಿಂದಲೇ ಮುಂದುವರಿಯುವ ಈ ಪಕ್ಷವನ್ನು ಬೆಂಬಲಿಸುವುದೆಂದರೆ, ರಾಷ್ಟ್ರಕ್ಕೆ ಬಗೆದ ದ್ರೋಹ; ಇನ್ನುಳಿದ ಸ್ವತಂತ್ರ ನೆಲೆಯ ಉಮೇದ್ವಾರರು ಯಾವ ಗೊತ್ತುಗುರಿ-ಲಂಗುಲಗಾಮಿಲ್ಲದವರು; ಪ್ರಜಾ ಪ್ರಭುತ್ವದ ಪಕ್ಷಪದ್ಧತಿಯಲ್ಲಿ ಯಾವ ಸ್ಥಾನವೂ ಇಲ್ಲದವರು. ಇವರಿಗೆ ಮತದಾನ ಮಾಡಿದರೂ ನಿಷ್ಪ್ರಯೋಜನ.

ಕಾಂಗ್ರೆಸು ಈ ಬಾರಿ ನಮ್ಮ ಜಿಲ್ಲೆಯಲ್ಲಿ ಎಲ್ಲ ವರ್ಗದ ಜನರಿಗೂ ಸಾಕಷ್ಟು ಪ್ರಾತಿನಿಧ್ಯ ನೀಯುವಂತೆ ತನ್ನ ಅಭ್ಯರ್ಥಿಗಳನ್ನು ಆರಿಸಿದೆ. ಸಾಮಾನ್ಯವಾಗಿ ಯೋಗ್ಯರೂ ಸಮರ್ಥರೂ ಆದವರನ್ನೇ ಚುನಾಯಿಸಿದೆ. ಹಾಗಿರುವಾಗ ವಿರೋಧಿ ಪಕ್ಷಗಳು ತಳಮಳಗೊಳ್ಳುವುದು ಸ್ವಾಭಾವಿಕ. ರಾಷ್ಟ್ರವಿಘಾತಕ ಶಕ್ತಿ ಸಂಪನ್ನರು ಕಾಂಗ್ರೆಸ್ಸಿನ ವಿರುದ್ಧವಾಗಿ ಕಮಗೆಟ್ಟಷ್ಟು ಧೂಳೆಬ್ಬಿಸಲು ಪ್ರಯತ್ನಿಸುತ್ತಿರುವರಾದರೂ ಕಾಂಗ್ರೆಸ್ ಮಾಡಿದ ಕಾರ್ಯಸಾಧನೆಗಳ ಪರಿಚಯವುಳ್ಳವರೆಲ್ಲರೂ ಹಿಂದಿನಂತೆಯೇ ಕಾಂಗ್ರೆಸ್ಸಿಗೆ ಈ ಬಾರಿಯೂ ಬೆಂಬಲವೀಯದಿರಲಾರರು. ಬಹುಸಂಖ್ಯೆಯ ಮತದಾರರಾದ ಹಳ್ಳಿಗರ ಭಕ್ತಿ ಮತ್ತು ವಿಶ್ವಾಸಗಳು ಕಾಂಗ್ರೆಸ್ಸಿನ ಕಡೆಗೆ ಇದೆಯೆಂಬುದರಲ್ಲಿ ಸಂದೇಹವಿಲ್ಲ ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಆಡಳಿತೆಯು ಸಾಧಿಸಿದ ಕಾರ್ಯಗಳನ್ನು ವಿವರಿಸಿ, ಮುಂದೆ ಮಾಡಲಿರುವುವುಗಳನ್ನು ತಿಳಿಸಿ ಹೇಳಿ, ದೇಶದ ಪುನಾರಚನೆಯ ಮಹಾಕಾರ್ಯದಲ್ಲಿ ಕಾಂಗ್ರೆಸ್ ಸಾಧಿಸಿದ ಮಹಾ ಮಹಾ ಸಾಧನೆಗಳ ಪರಿಚಯವನ್ನು ಮಾಡಿ ಮತದಾರರು ಕಾಂಗ್ರೆಸ್‌ನಲ್ಲಿಟ್ಟ ವಿಶ್ವಾಸ ವ್ಯರ್ಥವಾಗಲಿಲ್ಲ ಎಂದು ತಿಳಿಯುವಂತೆ ಮಾಡಬೇಕು. ಪಕ್ಷದ ದೃಷ್ಟಿಯಿಂದಾಗಲೀ ವ್ಯಕ್ತಿಯ ದೃಷ್ಟಿಯಿಂದಾಗಲೀ ಕಾಂಗ್ರೆಸ್ ಉಮೇದ್ವಾರನು ಅರ್ಹನೆಂಬುದನ್ನು ಮನದಟ್ಟು ಮಾಡಿ, ಒಮ್ಮತದಿಂದ ದುಡಿದರೆ, ಕಾಂಗ್ರೆಸ್ಸು ಖಂಡಿತಕ್ಕೂ ಜಯಭೇರಿ ಹೊಡೆಯುವುದು. ಈ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರು ಸೂಕ್ತ ಕಾರ್ಯಶೀಲರಾಗಬೇಕು.

ಈ ಸಂದರ್ಭದಲ್ಲಿ ಮತದಾರರಿಗೊಂದು ಎಚ್ಚರಿಕೆಯ ಮಾತನ್ನು ಬರೆಯುವುದು ಅನುಚಿತವಾಗದು. ಕಾಂಗ್ರೆಸ್ಸಿನ ಕೀರ್ತಿಯ ಮೇಲೆ ಕಲಂಕ ಹಚ್ಚುವ ಪ್ರಯತ್ನವನ್ನು ವಿರೋಧೀ ಪಕ್ಷಗಳು ಮಾಡುವುದು ಸ್ವಾಭಾವಿಕ. ಇದಕ್ಕಾಗಿ ಬಣ್ಣದ ನುಣ್ಣನೆಯ ಮಾತುಗಳಿಂದ ಮತದಾರರನ್ನು ಒಲಿಸಿಕೊಳ್ಳಲು ಹವಣಿಸುವುದೂ ಅಷ್ಟೇ ಸ್ವಾಭಾವಿಕ. ಆದರೆ, ಪ್ರತ್ಯಕ್ಷಾನುಭವವಿಲ್ಲದ ಕಾರ್ಯಾನುಭವವಿಲ್ಲದ, ನಾಮ ಮಾತ್ರಕ್ಕಿರುವ ವಿರೋಧೀ ಪಕ್ಷಗಳು ತೋರಿಸುವ ಆಕಾಶ ಕುಸುಮಗಳಿಂದ ಮತದಾರು ಮೋಸ ಹೋಗಬಾರದು. ಕಾಂಗ್ರೆಸ್ಸಿನ ಕೈಯಲ್ಲಿ ತಮ್ಮ ಭವಿಷ್ಯ ಅತ್ಯುಜ್ವಲವಾಗಿ ಉಳಿಯುವುದು ಎಂಬುದು ಚಿರಸತ್ಯ. ಇದಕ್ಕೆ ಇದುವರೆಗೆ ಕಾಂಗ್ರೆಸ್ ಮಾಡಿದ ಸಾಧನೆಗಳೇ ಸಾಕ್ಷಿ. ಆದುದರಿಂದ ಮತದಾರರೆಲ್ಲರೂ ತಮ್ಮ ಶುಭಚಿಂತಕ ಪಕ್ಷ ಕಾಂಗ್ರೆಸ್ಸಿನ ಉಮೇದ್ವಾರರನ್ನು ಆರಿಸಿ, ತಮ್ಮ ಕಾಂಗ್ರೆಸ್ ನಿಷ್ಠೆಯನ್ನು ತೋರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಮಹಾತ್ಮರ ಆದರ್ಶ

ರಾಷ್ಟ್ರಪಿತ ಮಹಾತ್ಮಾಗಾಂಧಿಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆವೇನೋ ನಿಜ; ಆದರ ಮರೆಯಲ್ಲಿ ಅವರು ಸಾಧಿಸಿದ ಮಹತ್ಕಾರ್ಯಗಳ ಹಿನ್ನಲೆಯಲ್ಲಿ ಅವರು ಇಟ್ಟುಗೊಂಡು ಅಹರ್ನಿಶಿ ದುಡಿಯುತಿದ್ದ ಆದರ್ಶಗಳನ್ನು ಕಾರ್ಯರೂಪಕ್ಕೆ ತರುವಂತೆ ಪ್ರಯತ್ನ ಶೀಲರಾಗುವುದೂ ಅಗತ್ಯ. ಎರಡು ನಿಮಿಷಗಳ ಮೌನ ಶ್ರದ್ಧಾಂಜಲಿಯಿಂದಷ್ಟೇ ಈ ಆದರ್ಶಗಳು ಕೈಗೂಡುವುದಿಲ್ಲ ಅದಕ್ಕೆ ಅವಿರತ ಶ್ರಮ ಬೇಕು; ಏಕನಿಷ್ಟೆಬೇಕು. ಐಕ್ಯದಿಂದ ವರ್ತಿಸಿ, ಅಹಿಂಸಾರೂಪದಲ್ಲಿ ಹೋರಾಟನಡೆಸಿ, ನಮಗೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟ ಬಾಪೂರವರ ಆದರ್ಶಗಳನ್ನು ನಾವು ತಿರಸ್ಕಾರದೃಷ್ಟಿಯಿಂದ ಉಪೇಕ್ಷಿಸುತ್ತೇವೆ. ಅವರು ನೀರು ಹೊಯ್ದು ಬೆಳೆಸಿದ ಕಾಂಗ್ರೆಸ್ ಪಕ್ಷವು ಚುನಾವಣೆಯ ಕಾಲವಲ್ಲೇನೋ ಐಕ್ಯಗೊಂಡಂತೆ ಕಂಡರೂ ಉಳಿದ ಸಮಯ ಪರಸ್ಪರ ಅಧಿಕಾರಕ್ಕಾಗಿ ಹೋರಾಡುತ್ತಿದೆ. ಕೆಲವೊಂದು ಜನರು ಅತೃಪ್ತರಾಗಿ ಪಕ್ಷತ್ಯಾಗ ಮಾಡುವುದು, ತಮಗೆ ತೃಪ್ತಿಯೊದಗುತ್ತವೆಂಬಾಗ ಮರಳಿ ಪಕ್ಷಸೇರುವುದು ಇವು ನಡೆಯುತ್ತಿವೆ. ಪಕ್ಷದ ಸಂಘಟನೆಯು ಶಿಥಿಲಗೊಳ್ಳುತ್ತಿದೆ. ಮಹಾತ್ಮಾ ಗಾಂಧೀಜಿಯವರ ಶಿಷ್ಯರೆಂದುಕೊಳ್ಳುವವರು ಸ್ವಯಂ ಅವರ ಆದರ್ಶವನ್ನು ಮರೆತುಬಿಡುವುದು ಮಾತ್ರವಲ್ಲ ಅದಕ್ಕೆ ವಿರೋಧವಾಗಿ ಕಾರ್ಯ ಪ್ರವೃತ್ತರಾಗುವುದನ್ನು ಕಾಣುವಾಗ ಅಯ್ಯೋ ಎನಿಸುತ್ತದೆ. ನಮ್ಮ ಬಾಪೂ ಒಬ್ಬ ವ್ಯಕ್ತಿಯಲ್ಲ; ಅನಂತ ಶಕ್ತಿ; ಅದ್ವಿತೀಯ ಜ್ಯೋತಿ. ಈ ಜ್ಯೋತಿಯ ಪ್ರಕಾಶದಲ್ಲಿ ನಾವೆಲ್ಲರೂ ಮುಂದರಿಯಬೇಕು; ಅವರು ಜೀವಿತವಿದ್ದಾಗ ಕಾಣುತಿದ್ದ ರಾಮರಾಜ್ಯದ ಕನಸನ್ನು ನೆನಸನ್ನಾಗಿ ಮಾಡಲು ನಾವೆಲ್ಲರೂ ಕಟಬದ್ಧರಾಗಬೇಕು. ಸ್ವಾರ್ಥ ವಂಚನೆ ದ್ವೇಷ ಮತ್ಸರಾದಿ ದುರ್ಗುಣಗಳಿಂದ ಮುಕ್ತರಾಗಿ ಸರ್ವಭಾವದಿಂದ ದೇಶಕಲ್ಯಾಣ ಕಾರ್ಯದಲ್ಲಿ ತೊಡಗಬೇಕು.

ಜಗತ್ಪರ್ಯಟನ

ಅಸಾಮಾನ್ಯ ವ್ಯಕ್ತಿ - ನೆಹರು

ಪಂಡಿತ ನೆಹರು ಭಾರತದ ಬಗ್ಗೆ ಪರಿಪೂರ್ಣ ತಿಳುವಳಿಕೆ ಪಡೆದಿದ್ದಾರೆ; ಭಾರತೀಯರನ್ನೂ ಅರಿತಿದ್ದಾರೆ. ಇದರಿಂದಾಗಿಯೇ ಅವರು ಭಾರತೀಯ ಮತದಾರರ ಒಲವನ್ನು ಗಳಿಸಿದ್ದಾರೆ. ಈ ಒಲವಿನ ಬಲವನ್ನೇ ನೆಮ್ಮಿ ಚುನಾವಣೆಗೆ ನಿಲ್ಲುವ ಕಾಂಗ್ರೆಸಿಗರು ಅನೇಕರಿದ್ದಾರೆ ಕಾಶ್ಮೀರದ ವಿವಾದವನ್ನು ಮಧ್ಯಸ್ಥಿಕೆಯಿಂದ ತೀರ್ಮಾನ ಗೊಳಿಸಿರಿ ಎಂದು ಅಮೆರಿಕನ್ ಅಧ್ಯಕ್ಷ ಜಾನ್ ಕೆನ್ನೆಡಿಯವರು ಕೇಳಿಕೊಂಡರೆ, ಇವರಿಂದ ವಿವಾದ ಬಗೆಹರಿಯದು; ನೇರ ಮಾತುಕತೆಗಳಿಂದಲೇ ನಾವು ಕೊನೆಗಾಣಿಸಬಲ್ಲೆವು ಎಂದು ಅಮೆರಿಕೆಯ ಕೇಳಿಕೆಯನ್ನು ನೆಹರು ತಿರಸ್ಕರಿಸಿದ್ದಾರೆ ಭಾರತಕ್ಕೆ ತನ್ನದಾದ ನೀತಿಯೊಂದಿದೆ; ಅದು ಪ್ರತಿಯೊಂದಕ್ಕೂ ಇನ್ನೊಬ್ಬರು ಹೇಳಿದಂತೆ ನಡೆಯುವುದನ್ನು ನೆಹರು ಸಹಿಸಲಾರರು. ಸಾರ್ವಭೌಮಾಧಿಕಾರ ಪ್ರಜಾಸತ್ತೆ ಭಾರತದ ಹಿತವು ಕಾಂಗ್ರೆಸ್ಸಿನ ಕೈಯಲ್ಲಿ ಭದ್ರವಾಗಿದೆ; ಇದಕ್ಕೆ ಪಂಡಿತರ ಅಸಾಮಾನ್ಯ ವ್ಯಕ್ತಿತ್ವವೂ ಒಂದು ಕಾರಣ.

ರಾಜ್ಯಪಾಲ ಜಯ ಚಾಮರಾಜ

ಜಯಚಾಮರಾಜರು ಮಹಾರಾಜರಾಗಿದ್ದರೂ ಇಂದು ರಾಜ್ಯಪಾಲರು ಉಳಿದ ರಾಜ ಮಹಾರಾಜರಿಗಿಂತ ವಿವೇಕಿಗಳೂ ಯುಗವಾಣಿಗೆ ಕಿವಿಕೊಡುತ್ತಿರುವರೂ ಆದ ಇವರೀಗ ಭಾರತದ ಸಂಪನ್ನತೆ ಮತ್ತು ಭಾವೈಕ್ಯದ ಕಡೆಗೆ ಕಳಕಳಿ ವಹಿಸಿ ಪ್ರಜಾಸತ್ತೆಗೆ ಒಪ್ಪುವ ರಾಜ್ಯಪಾಲರಾಗುವ ಪ್ರಯತ್ನ ಮಾಡುತ್ತಿದ್ದಾರೆ. ರಾಜಕೀಯದಲ್ಲಿ ನಾವು ಒಂದಾಗಿರುವುದೇನೋ ನಿಜ ಸಾಮಾಜಿಕವಾಗಿಯೂ ಭಾವನಾತ್ಮಕವಾಗಿಯೂ ನಾವಿನ್ನೂ ಒಂದಾಗ ಬೇಕಾಗಿದೆ ಶೈಕ್ಷಣಿಕ ಮತ್ತು ಸಾಮಾಜಿಕ ಸುಧಾರಣೆಗಳಿಂದ ನಾವು ಭಾವೈಕ್ಯ ಮಾರ್ಗದಲ್ಲಿ ತುಸು ಮುಂದುವರಿಯ ಬಹುದಾದರೂ, ಈ ಐಕ್ಯ ಮುಖ್ಯವಾಗಿ ವ್ಯಕ್ತಿಗತವಾಗಿದೆ. ಭಾವನಾತ್ಮಕ ಐಕ್ಯವನ್ನು ಸಾಧಿಸದೆ ಯಾವ ದೇಶವಾದರೂ ಸಮಗ್ರವಾಗಿ ಏಕತೆ ಪಡೆಯದು ಎಂದು ಅವರ ಮಾತು ಯಥಾರ್ಥವಾಗಿದೆ. ಸಮಗ್ರದೇಶದ ರಕ್ಷಣೆಗಾಗಿ ವ್ಯಕ್ತಿಸ್ವಾತಂತ್ರ್ಯವನ್ನು ತುಸು ಮೊಟಕುಗೊಳಿಸಬೇಕಾಗಿ ಬಂದರೂ ಉನ್ನತಾದರ್ಶಸಾಧನೆಗೆ ಅದು ಅತ್ಯವಶ್ಯವೆನಿಸುತ್ತದೆ.

ಶ್ರೀಮತಿ ಸಿರಿಮಾವೊ

ಸಿಂಹಳದ ಮಹಿಳಾ ಪ್ರಧಾನಿ ಸಿರಿಮಾವೊ ಭಂಡಾರ ನಾಯಕೆಯವರು ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ದೇಶದಲ್ಲಿ ಗಂಡಾಂತರದ ಪರಿಸ್ಥಿತಿಯನ್ನು ಅಲ್ಲಿ ಬಹಳಷ್ಟು ಹಿಂದೆಯೇ ಘೋಷಿಸಲಾಗಿತ್ತು ಹಾಗಿರುವಾಗಲೇ ಅಲ್ಲಿ ಸರಕಾರವನ್ನು ಉರುಳಿಸುವ ಸಾಹಸವನ್ನು ಮಾಡಹೋದರೆಂದು ತಿಳಿಯುವಾಗ ವಿಸ್ಮಯವಾಗುತ್ತದೆ. ಮಂತ್ರಿ ಮಂಡಳದ ಕೆಲವು ಸದಸ್ಯರನ್ನು ಬಂಧಿಸಿ ಸರಕಾರವನ್ನು ಉರುಳಿಸಲು ಬಹು ದಿನಗಳ

(೬ನೇ ಪುಟ ನೋಡಿರಿ)

ಅಲ್ಲಲ್ಲಿಯ ಸುದ್ದಿಸಾರ

ಅಮೇರಿಕದಲ್ಲಿ ವಿದ್ಯಾರ್ಥಿ ಜೀವನ—ಎಂಬ ಪ್ರದರ್ಶನದ ಉದ್ಘಾಟನೆಯು ಉಡುಪಿ ಎಮ್. ಜಿ. ಎಮ್. ಕಾಲೇಜಿನ ಬಯಲು ರಂಗಮಂಟಪದಲ್ಲಿ ತಾ. 22-1-62 ರಂದು ಡಾ| ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಡಾ| ಎ. ಎಸ್. ಅಡ್ಯೆಯವರು ನೆರವೇರಿಸಿದರು. ಯು. ಎಸ್. ಐ. ಎಸ್. ಶ್ರೀ ಜೋಸೆಫ್ ಎ. ಹೋರ್ನೆಯವರು ಸ್ವಾಗತಿಸಿ, ಅಮೇರಿಕದಲ್ಲಿ ವಿದ್ಯಾರ್ಥಿ ಜೀವನವನ್ನು ವಿವರಿಸಿ ಕೆಲವು ವೈಜ್ಞಾನಿಕ ಪುಸ್ತಕಗಳನ್ನು ಕಾಲೇಜಿಗೆ ದಾನವಿತ್ತರು. ಪ್ರೊ| ಕು. ಶಿ. ಹರಿದಾಸ ಭಟ್ಟರು ಅವನ್ನು ಸ್ವೀಕರಿಸಿ ಆ ಬಗ್ಗೆ ಧನ್ಯವಾದವಿತ್ತರು. ಡಾ| ಅಡ್ಯೆಯವರು ಉದ್ಘಾಟಿಸಿದ ಮೇಲೆ ಡಾ| ಪೈಗಳು ಅಧ್ಯಕ್ಷ ಭಾಷಣ ಮಾಡುತ್ತಾ ಯು. ಎಸ್. ಐ. ಎಸ್. ಅವರ ಔದಾರ್ಯ ಸೇವಾ ಕಾರ್ಯಗಳನ್ನು ವಿವರಿಸಿದರು. ಅನಂತರ ಚಿತ್ರ ಪ್ರದರ್ಶನ ನಡೆಯಿತು

ಉಡುಪಿ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ—ವಾರ್ಷಿಕೋತ್ಸವವು ತಾ. 20—1—1962ರಂದು ಸಬ್ ಜಡ್ಜ್ ಶ್ರೀ ಜಿ. ಬಿ. ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ಸ್ವಾಗತ ಭಾಷಣ ಮಾಡುತ್ತಾ ಜಿಲ್ಲಾ ಬಂಟರ ಸಂಘದ ವಿದ್ಯಾರ್ಥಿ ಭವನಗಳ ಪೂರ್ವೇತಿಹಾಸವನ್ನು ವಿವರಿಸಿ 12 ವರ್ಷಗಳಿಂದ ನಿಂತುಹೋದ ಈ ವಾರ್ಷಿಕೋತ್ಸವವನ್ನು ಸುಪರಿಂಟೆಂಡೆಂಟ್ ಡಾ| ಬಿ. ಬಿ. ಶೆಟ್ಟರ ಸಂಘಟನೆ ಮತ್ತು ಉತ್ಸಾಹದಿಂದ ಆಚರಿಸುವಂತಾದುದು ಸಂತೋಷದಾಯಕವೆಂದರು. ಶ್ರೀ ಎಚ್. ವಸಂತ ಶೆಟ್ಟರು ವರದಿವಾಚನಗೈದರು. ಮಂಗಳೂರಿನ ಶ್ರೀ ಎಸ್ ರಮಾನಂದ ಹೆಗ್ಡೆಯವರು ಸ್ವಸ್ತಿವಾಚನ ಮಾಡುತ್ತಾ ವಿದ್ಯಾರ್ಥಿ ಮತ್ತು ಹಾಸ್ಟೆಲ್ ಜೀವನದ ಅನುಭವಗಳನ್ನು ವಿವರಿಸಿದರು ಶ್ರೀ ವೈ. ರಾಜೀವ ಶೆಟ್ಟರು ಸ್ವಸ್ತಿವಾಚನಕ್ಕೆ ಉತ್ತರವಿತ್ತರು. ಡಾ. ಬಿ. ಬಿ. ಶೆಟ್ಟರು ಮಂತ್ರಿ ಡಾ. ಕೆ. ಕೆ. ಹೆಗ್ಡೆ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದ ಮೇಲೆ ಅಧ್ಯಕ್ಷರು ಬಹುಮಾನ ವಿತರಣೆಗೈದು ಭಾಷಣ ಮಾಡುತ್ತಾ ಹಾಸ್ಟೆಲ್ ಸ್ಥಾಪಕರ ದೂರದೃಷ್ಟಿಗಾಗಿ ಭವನದ ಪ್ರಗತಿಗಾಗಿ ಮೆಚ್ಚುಗೆ ವ್ಯಕ್ತಪಡಿಸಿದರು ಬಳಿಕ ನೆರವಾದ ಸರ್ವರಿಗೂ ಸುಪರಿಂಟೆಂಡೆಂಟ್ ಡಾ| ಬಿ ಬಿ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು. ಕೊನೆಗೆ ಕನ್ನಡ, ತುಳು ನಾಟಕಗಳು ಯಶಸ್ವಿಯಾಗಿ ಅಭಿನಯಿಸಲ್ಪಟ್ಟವು

ವಿಶೇಷ ಮಹಾಸಭೆ— ಶಿರ್ವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘದ ವಿಶೇಷ ಮಹಾ ಸಭೆಯು ತಾ. 21-1-1962 ರಂದು ಶ್ರೀ ನಾಗಪ್ಪ ಶೆಟ್ರು ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಡಿ. ಗ್ಗಪ್ಪ ಹೆಗ್ಡೆಯವರು ಸಭೆ ಕರೆದುದರ ಉದ್ದೇಶ ತಿಳಿಸಿದರು. ಸಭಿಕರಲ್ಲಿ ಶ್ರೀ ರಾಜಣ್ಣ ಶೆಟ್ರು ಭಾಷಣವಿತ್ತರು. ತಾ. 17—12—61ರಂದು ಜರಗಿದ ವಿಶೇಷ ಮಹಾಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾದ ಸಂಘದ ಮೆಮರಂಡಮ್ ಓಫ್ ಎಸೋಸಿಯೇಶನ್ ಮತ್ತು ಕ್ರಮ ನಿಬಂಧನೆಗಳ ತಿದ್ದುಪಡಿಗಳು ಸರ್ವಾನುಮತದಿಂದ ಸ್ಥಿರಗೊಳಿಸಲ್ಪಟ್ಟವು. ಕಾರ್ಯದರ್ಶಿ ಶ್ರೀ ಕೆ. ವಾಸುದೇವ ಶೆಟ್ಟರು ಧನ್ಯವಾದವಿತ್ತರು.

ಎಮ್. ಜಿ. ಎಮ್. ಕಾಲೇಜ್ ದಿನಾಚರಣೆಯು— ಜನವರಿ 24ರಂದು ಮೈಸೂರು ರಾಜ್ಯದ ಕಾಲೇಜು ವಿದ್ಯಾಭ್ಯಾಸದ ಡೈರೆಕ್ಟರ್ ಶ್ರೀ ಪಿ ಎಚ್. ನಾಗಪ್ಪ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕರೆಸ್ಪಾಂಡೆಂಟ್ ಶ್ರೀ ಟಿ. ಎ ಪೈಗಳು ಸ್ವಾಗತ ಭಾಷಣ ಮಾಡುತ್ತಾ ಕಾಲೇಜಿನ ಪೂರ್ವೇತಿಹಾಸ, ಎದುರಿಸಬೇಕಾಗಿ ಬಂದ ಎಡರು ತೊಡರುಗಳನ್ನು ವಿವರಿಸಿ ಕಾಲೇಜಿನ ವಿಶಿಷ್ಟತೆ ಬೇರೆ ಬೇರೆ ರೂಪದಲ್ಲಿ ಅರ್ಥಾಂಶದಷ್ಟು ವಿದ್ಯಾರ್ಥಿಗಳಿಗೆ ಕೊಡಲಾಗುತ್ತಿರುವ ವಿದ್ಯಾರ್ಥಿ ವೇತನಗಳ ಕುರಿತು ಪ್ರಸ್ತಾಪಿಸಿ ನಮ್ಮ ಜಿಲ್ಲೆಯ ಕಾಲೇಜುಗಳು ಯೋಗ್ಯತೆ ಪಡೆದಿದ್ದರೂ ಪೋಸ್ಟ್ ಗ್ರಾಜ್ಯುವೇಟ್ ತರಗತಿಗಳನ್ನು ತೆರೆಯುವ ಅನುಕೂಲತೆಗಳನ್ನು ಒದಗಿಸದಿರುವುದಕ್ಕಾಗಿ ವಿಷಾದಿಸಿ ನಮ್ಮದೇ ಆದ ಯುನಿವರ್ಸಿಟಿಯ ಯೋಜನೆಯೊಂದು ಕಾರ್ಯರೂಪಕ್ಕೆ ಬರುವಂತಾಗಲೆಂದರು. ಪ್ರೊ. ಟಿ. ಕೃಷ್ಣರಾಯರು ಸಂದೇಶಗಳನ್ನು ಓದಿದ ಬಳಿಕ ಅಧ್ಯಕ್ಷರು ಕಾಲೇಜ್ ಟ್ರಸ್ಟಿಗಳಲ್ಲೊಬ್ಬರಾಗಿ ಸೇವೆ ಸಲ್ಲಿಸಿದ ದಿ. ಡಾ. ಎಸ್. ಆರ್. ಪೈಗಳ ತೈಲಚಿತ್ರವನ್ನು ಅನಾವರಣ ಮಾಡಿದರು. ಶ್ರೀ ಎಚ್. ಶಿವರಾಮ ಶೆಟ್ಟರು ಮಾಡಿದ ಸ್ವಸ್ತಿವಾಚನಕ್ಕೆ ಶ್ರೀಮತಿ ತೆರೇಸ ಜೋಸೆಫ್‌ರು ಉತ್ತರಿಸಿದರು ಪ್ರೊ. ಕು. ಶಿ. ಹರಿದಾಸ ಭಟ್ಟರು ಕಾಲೇಜಿನ ಪ್ರಗತಿಪರ ವರದಿಯನ್ನೋದಿದರು. ಅಧ್ಯಕ್ಷರು ಬಹುಮಾನ ವಿತರಣೆಮಾಡಿ ಭಾಷಣ ಮಾಡುತ್ತಾ ಗ್ರಾಮಾಂತರ ಪ್ರದೇಶಗಳಲ್ಲಿ ಉನ್ನತ ಮಟ್ಟದಲ್ಲಿ ನಡೆಯುತ್ತಿರುವ ಕಾಲೇಜು ಪ್ರೋತ್ಸಾಹನೀಯವಾದುದೆಂದೂ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಸಾಗುವುದೊಂದನ್ನೇ ಗುರಿಯಾಗಿಟ್ಟುಕೊಳ್ಳದೆ ಆಳವಾದ ಅಭ್ಯಾಸ ಗುಣ ನಡತೆ ಶಿಸ್ತುಗಳನ್ನು ರೂಪಿಸಿಕೊಳ್ಳತಕ್ಕದೆಂದೂ ಉಪಾಧ್ಯಾಯ ವರ್ಗಕ್ಕೆ ಹೆಚ್ಚಿನ ವೇತನ ಸೌಕರ್ಯ ದೊರೆಯುವುದು ಅತ್ಯಾವಶ್ಯಕವೆಂದೂ ಅಂತರಾಷ್ಟ್ರೀಯ ಭಾಷೆಯಾದ ಇಂಗ್ಲಿಷಿಗೆ ಸ್ವಲ್ಪ ವರ್ಷಗಳ ವರೆಗಾದರೂ ಸ್ಥಾನ ದೊರೆಯಬೇಕಾಗಿದೆಯೆಂದು ಹೇಳಿದರು. ಯೂನಿಯನ್ ಪ್ರೆಸಿಡೆಂಟ್. ಶ್ರೀ ಎನ್. ಎನ್. ಬಲ್ಲಾಳರು ಧನ್ಯವಾದಗಳನ್ನರ್ಪಿಸಿದರು. ಬಳಿಕ ನೃತ್ಯ, ನಾಟಕಾದಿ ಮನರಂಜನಾ ಕಾರ್ಯಕ್ರಮಗಳು ನೆರವೇರಿದವು. ಮರುದಿನ ಕಾಲೇಜ್ ಯೂನಿಯನ್ ದಿನಾಚರಣೆಯು ಮಡಿಕೇರಿಯ ಡಾ. ಪಿ. ನಾಗರಾಜರಾವ್ ಅವರ ಹಿರಿತನದಲ್ಲಿ ಜರಗಿತು

ಉಡುಪಿ ಬೋರ್ಡ್ ಹಾಯರ್ ಸೆಕೆಂಡರಿ ಶಾಲೆಯ ವರ್ಧಂತ್ಯುತ್ಸವವು ತಾ 27-1-62ರಂದು ಸಬ್ ಜಡ್ಜ್ ಶ್ರೀ ಜಿ. ಬಿ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಕೆ. ವಿಟ್ಠಪ್ಪನವರು ಸ್ವಾಗತಿಸಿ ವರದಿಯನ್ನೋದಿದರು. ಎಡ್ವಕೇಟ್ ಶ್ರೀ ಪಿ. ಶಿವಾಜಿ ಶೆಟ್ಟರಿಂದ ಸ್ವಸ್ತಿವಾಚನವಾದ ಮೇಲೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಶಾಲಾ ಪ್ರಗತಿಯನ್ನು ಮೆಚ್ಚಿ ಮಾತನಾಡಿದರು. ರಾತ್ರಿ ನಾಟಕಾದಿ ಮನೋರಂಜನಾ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದುವು. ಬೆಳಿಗ್ಗೆ ಧ್ವಜಾರೋಹಣ, ಸಿಹಿತಿಂಡಿ ವಿತರಣೆ, ಛದ್ಮವೇಷ ಸ್ಪರ್ಧೆಗಳಿದ್ದುವು.

ಪರಿಯಾಳ ಸಮಾಜ ಸುಧಾರಕ ಸಂಘ—ಉಡುಪಿಯ ಈ ಸಂಘದ ವಾರ್ಷಿಕೋತ್ಸವವು ಕಳೆದ ತಾ. 22ರಂದು ಶ್ರೀ ಟಿ. ಎ. ವಾಸುದೇವನ್‌ರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಯು. ಪಿ. ಸುವರ್ಣರಿಂದ ಸ್ವಾಗತ, ಶ್ರೀ ಕೆ ಬಾಲಕೃಷ್ಣ ಸಾಲಿಯಾನ್‌ರಿಂದ ಸಂದೇಶ ವಾಚನ, ಶ್ರೀ ಪಿ. ಬಿ. ಬಂಗೇರರಿಂದ ವರದಿ ವಾಚನ ನಡೆಯಿತು. ಶ್ರಮಿಕ ಮಡಿವಾಳ ಜಾತಿಯವರಿಗೆ ಮದ್ರಾಸು ಸರಕಾರವು ಕಲ್ಪಿಸಿರುವಂತೆ ವಿಶೇಷ ಸಾಲ ಸವಲತ್ತುಗಳನ್ನು ಮೈಸೂರು ಸರಕಾರವು ಕೊಡುವಂತಾಗಬೇಕೆಂದೂ ಪರಿಯಾಳ ಸಮಾಜವನ್ನು ಅತಿ ಹಿಂದುಳಿದ ಪಂಗಡದ ಪಟ್ಟಿಯಲ್ಲಿ ಸೇರಿಸುವಂತಾಗಬೇಕೆಂದೂ ನಿರ್ಣಯಗಳಾದುವು. ಅನಂತರ ಮುಂದಿನ ವರ್ಷಕ್ಕೆ ಶ್ರೀ ಟಿ. ಎ ಸಾಲಿಯಾನರು ಅಧ್ಯಕ್ಷರಾಗಿರುವ ಕಾರ್ಯಕಾರಿ ಸಮಿತಿಯ ರಚನೆಯಾಯಿತು.

ಶ್ರೀ ಪೂರ್ಣಪ್ರಜ್ಞ ಕಾಲೇಜಿನ ದಿನಾಚರಣೆಯು—ಕಳೆದ ತಾ. 23ರಂದು ಅದಮಾರು ಮಠದ ಶ್ರೀ ವಿಭುದೇಶತೀರ್ಥ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಿನ್ಸಿಪಾಲ್ ಶ್ರೀ ವಿ. ಎಮ್. ಇನಾಮ್‌ದಾರರು ಸ್ವಾಗತಿಸಿದರು. ಮುಖ್ಯ ಅತಿಥಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಭಾಷಣವಿತ್ತರು ಬಹುಮಾನ ವಿತರಣೆ, ಮನೋರಂಜನಾ ಕಾರ್ಯಕ್ರಮಗಳು ಯಥಾ ಸಾಂಗವಾಗಿ ಸಾಗಿದವು. ಶ್ರೀ ಗಣೇಶ ತಂತ್ರಿಗಳು ಧನ್ಯವಾದಸಮರ್ಪಣೆ ಮಾಡಿದರು.

ವಿದ್ಯಾರ್ಥಿ ಭವನದ ವಾರ್ಷಿಕೋತ್ಸವ— ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ಕಳೆದ ತಾ 28ರಂದು ಸೆಶನ್ಸ್ ಜಡ್ಜ್ ಶ್ರೀ ಪಿ. ಸಿ. ರಾಮಚಂದ್ರನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಶ್ರೀ ಎನ್. ಶ್ರೀಕರ ಶೆಟ್ಟರು ವರದಿಯನ್ನೋದಿದರು. ಶ್ರೀ ಕೆ ತೇಜಪ್ಪ ಶೆಟ್ಟಿ B. Sc, Ag. ಅವರು ಮಾಡಿದ ಸ್ವಸ್ತಿವಾಚನಕ್ಕೆ ಶ್ರೀ ಎನ್. ಸೀತಾರಾಮ ಶೆಟ್ಟರು ಉತ್ತರಿಸಿದರು ಶ್ರೀ ಜಗನ್ನಾಥ ರೈಗಳು ಸಂದೇಶಗಳನ್ನು ಓದಿದರು. ಶ್ರೀಮತಿ ರಾಮಚಂದ್ರನ್ ಅವರು ಬಹುಮಾನ ವಿತರಿಸಿದರು. ಅಧ್ಯಕ್ಷರು ಹಾಸ್ಟೆಲ್ ಜೀವನದ ಮಹತ್ವವನ್ನು ವಿವರಿಸಿ ಭಾಷಣವಿತ್ತ ಮೇಲೆ ನೃತ್ಯ ನಾಟಕಾದಿ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದವು. ಅಂತ್ಯದಲ್ಲಿ ಶ್ರೀ ಎನ್. ಶ್ರೀಕರ ಶೆಟ್ರು ಧನ್ಯವಾದ ಅರ್ಪಣೆ ಮಾಡಿದರು.

ಶೋಚನೀಯ ನಿಧನ— ಉಡುಪಿ ಕ್ರಿಶ್ಚನ್ ಹ್ಯಾಸ್ಕೂಲಿನ ದಕ್ಷ ಅಧ್ಯಾಪಕರಾಗಿದ್ದ ಶ್ರೀ ಕೆ ಪದ್ಮನಾಭರಾವ್, ಬಿ. ಎ. ಎಲ್. ಟಿ. ಅವರು ತಾ. 18-1-62ರಂದು ಕೆಲವೇ ದಿನಗಳ ಅಸ್ವಸ್ಥದಿಂದಾಗಿ ನಿಧನರಾದುದು ವಿಷಾದಕರವಿದೆ. ದಿವಂಗತರು ಸರಳ ಮತ್ತು ಸಾಧು ಸ್ವಭಾವದವರಾಗಿ ಶಿಸ್ತು ನಿಯಮದ ನಡತೆಯವರಾಗಿ ಜನಾನುರಾಗ ಗಳಿಸಿದ್ದರು.

ಕೆಮ್ತೂರು ಪಡುಮನೆ ಕಾಳಪ್ಪ ಶೆಟ್ಟರ ನಿಧನ—ಕೆಲವು ತಿಂಗಳುಗಳಿಂದ ಅಸ್ವಸ್ಥರಾಗಿದ್ದ ಶ್ರೀ ಕಾಳಪ್ಪ ಶೆಟ್ರು ತಾ. 19—1—62ರಂದು ತಮ್ಮ 73ನೇ ವಯಸ್ಸಿನಲ್ಲಿ ವಿಧಿವಶರಾದರು. ದಿವಂಗತರು ಪರೋಪಕಾರಿಗಳಾಗಿದ್ದು ಜನಾನುರಾಗ ಗಳಿಸಿದ್ದರು. ವಿಶೇಷವಾಗಿ ಬಡಬಗ್ಗರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು.

ಯಕ್ಷಗಾನ ಕಾರ್ಯಕ್ರಮ — ತಾ. 16-1-62ನೇ ರಾತ್ರೆ ಉಡುಪಿ ಯಕ್ಷಗಾನ ಕಲಾಮಂಡಳಿಯವರು ಪರ್ಯಾಯ ಮಹೋತ್ಸವದ ಅಂಗವಾಗಿ ಶ್ರೀ ಮದನಂತೇಶ್ವರ ದೇವಸ್ಥಾನದ ಹೊರ ಪೌಳಿಯಲ್ಲಿ ಶ್ರೀಕೃಷ್ಣ ಸಂಧಾನ ಎಂಬ ಯಕ್ಷಗಾನ ಕೂಟವನ್ನು ಪ್ರಸಿದ್ಧ ಅರ್ಥದಾರಿಗಳ ಕೂಡುವಿಕೆಯಿಂದ ಶ್ರೀ ಕೆ. ನಾರಾಯಣ ಶೆಟ್ಟರ ನಿರ್ದೇಶಕತ್ವದಲ್ಲಿ ನೆರವೇರಿಸಿದರು. ಶ್ರೀ ವಾ. ಲ. ನಾ. ಉಪಾಧ್ಯಾಯರು ಆರಂಭದಲ್ಲಿ ಕಥಾಶ್ರವಣದ ಮಹತ್ವವನ್ನು ವಿವರಿಸಿ, ಅಂತ್ಯದಲ್ಲಿ ಪರ್ಯಾಯ ಪೀಠವನ್ನು ಅಲಂಕರಿಸುವ ಮತ್ತು ಅಗಲುವ ಶ್ರೀಪಾದಂಗಳವರಿಗೆ ಶುಭಕೋರಿ ಧನ್ಯವಾದನಿತ್ತರು.

ಹೊರೆಗಳ ಅರ್ಪಣೆ—ಉಡುಪಿ ತಾಲೂಕು ಬೋರ್ಡ್ ಮೆಂಬರ್ ಶ್ರೀ. ಬಿ, ಕಾಳಪ್ಪ ಶೆಟ್ಟರು ಕಳೆದ ತಾ. 13ರಂದು ಪರ್ಯಾಯ ಸಂಬಂಧ ಶೀರೂರು ಮಠಕ್ಕೆ ಮೂವತ್ತಕ್ಕೂ ಮಿಕ್ಕಿದ ಅಲಂಕೃತ ಲೋರಿಗಳಲ್ಲಿ ಪ್ರೇಕ್ಷಣೀಯ ಮೆರವಣಿಗೆಯಿಂದ ಹೊರೆಗಳನ್ನು ಅರ್ಪಿಸಿರುವರು

ಕಾಲೇಜ್ ಯೂನಿಯನ್ ದಿನಾಚರಣೆ— ಕಳೆದ ತಾ 25ರಂದು ಮಡಿಕೇರಿಯ ಡಾ ಪಿ. ನಾಗರಾಜರಾಯರ ಹಿರಿತನದಲ್ಲಿ ಎಂ. ಜಿ ಎಂ ಕಾಲೇಜ ಯೂನಿಯನ್ ದಿನಾಚರಣೆಯು ಜರಗಿತು ಶ್ರೀ ಎನ್. ಎನ್. ಬಲ್ಲಾಳರು ಸ್ವಾಗತಿಸಿದ ಬಳಿಕ ಬೇರೆ ಬೇರೆ ಕಾರ್ಯದರ್ಶಿಗಳಿಂದ ವರದಿಗಳು ಓದಲ್ಪಟ್ಟವು. ಸಮಾರೋಪ ಭಾಷಣವಾದ ಮೇಲೆ ಮನೋರಂಜನೆಯ ಕಾರ್ಯಕ್ರಮಗಳಾದುವು.

ಡಾ| ಶ್ರೀಪತಿರಾಯರ ನಿಧನ— ಮದ್ರಾಸಿನ ಪ್ರಸಿದ್ಧ ಡಾ. ಯು. ಎಲ್. ನಾರಾಯಣ ರಾಯರ ಪುತ್ರ, ನಾಗೂ ಶ್ರೀ ಕೆ. ಆರ್. ಆಚಾರ್, ಎಂ. ಪಿ ಅವರ ಅಳಿಯ ಡಾ. ಯು. ಶ್ರೀಪತಿರಾಯರು ಮದ್ರಾಸಿನಲ್ಲಿ ಕಳೆದ ತಾ. 20ರಂದು 40ನೇ ವರ್ಷ ಪ್ರಾಯದಲ್ಲಿ ಅಕಾಲ ನಿಧನ ಹೊಂದಿದುದು ವಿಷಾದಕರವಿದೆ. ದಿವಂಗತರು ಮಕ್ಕಳ ಚಿಕಿತ್ಸೆಯಲ್ಲಿ ಪಾರಂಗತರಿದ್ದು ಜನಮೆಚ್ಚುಗೆಯ ಡಾಕ್ಟರರಾಗಿದ್ದರು.

ಸುರತ್ಕಲ್— ವಿದ್ಯಾದಾಯಿನಿ ಹ್ಯಾಸ್ಕೂಲಿನಲ್ಲಿ ಪ್ರಜಾರಾಜ್ಯ ದಿನಾಚರಣೆ ಮತ್ತು ಮಕ್ಕಳ ಆಟ ಪಂದ್ಯಾಟಗಳ ವಾರ್ಷಿಕೋತ್ಸವವು ಶ್ರೀ ಇಡ್ಯ ನಾರಾಯಣರ ಅಧ್ಯಕ್ಷತೆಯಲ್ಲಿ ಜರಗಿತು.

ಕಟಪಾಡಿ— ತಾ. 3—2—62ರಿಂದ 5—2—62ರ ವರೆಗೆ ಸಂಭವಿಸಲಿರುವ ಅಷ್ಟಗ್ರಹ ಕೂಟದಿಂದುಂಟಾಗಬಹುದಾದ ಲೋಕಾರಿಷ್ಟ ನಿವಾರಣೆಗೆ ಹಾಗೂ ಪ್ರಜಾಕ್ಷೇಮಕ್ಕಾಗಿ ಸ್ಥಳೀಯ ಶ್ರೀ ವಿಶ್ವಕರ್ಮೇಶ್ವರ ದೇವರ ಸನ್ನಿಧಿಯಲ್ಲಿ ಕಳೆದ ತಾ. 28ರಂದು ಸಗ್ರಹ ಮೈಸ್ಕ ಕರ್ಮಾಣ ಮಹಾ ಯಾಗ ಪೂಜಾದಿಗಳು ಜರಗಿದುವು.

ತಾ. 26ರಂದು ಪಡುಬಿದ್ರಿ ಸಂಸ್ಕೃತ ನಾರಾಯಣ ಆಚಾರ್ಯ, ಶ್ರೀ ಪಿ ಮಾಧವ ಆಚಾರ್ಯ ಅವರಿಂದಲೂ ತಾ 27ರಂದು ಪಡುಬಿದ್ರೆ ಸಂಸ್ಕೃತ ಶಂಕರಾಚಾರ್ಯ, ಉಡುಪಿಯ ಭಾಸ್ಕರಾಚಾರ್ಯರಿಂದಲೂ ಶ್ರೀ ಸನ್ನಿಧಿಯಲ್ಲಿ ವಿವಿಧ ಸೇವೆಗಳು ನೆರವೇರಿದವು

ಶಿರ್ವ— ಯುವಕ ಮಂಡಳದ ವಾರ್ಷಿಕೋತ್ಸವವು ಕಳೆದ ತಾ. 27ರಂದು ಶ್ರೀ ಜಿ. ವಾಸುದೇವ ಪೈಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಜೆ. ಬಿ ಮಿನೇಜಸ್‌ರಿಂದ ವರದಿ ವಾಚನ ರೆ. ಫಾ ಪಿರೇರಾ, ಶಿರ್ವ ವಿಲಿಯಂ ಪಿಂಟೊ ಸುಬ್ರಮಣ್ಯ ಭಟ್ ಮೊದಲಾದವರಿಂದ ಭಾಷಣಗಳಾದುವು. ವಿವಿಧ ವಿನೋದಾವಳಿಗಳ ನಂತರ ಶ್ರೀ ಶ್ರೀಪಾಲ ಜೈನಿಯವರು ವಂದನಾರ್ಪಣ ಗೈದರು.

ಕಾಂಗ್ರೆಸ್ಸಿಗೇ ಬೆಂಬಲ— ಹೋಟೆಲು ಉದ್ಯಮವು ಕೋಂಗ್ರೆಸ್ ಸರಕಾರದ ಆಶ್ರಯದಲ್ಲಿ ಸುರಕ್ಷಿತವಾಗಿದೆಯಾಗಿಯೂ ಹೋಟೆಲ್ ಉದ್ಯಮಿಗಳು ಕಾಂಗ್ರೆಸ್ಸಿಗೇ ಮತ ನೀಡಬೇಕೆಂದೂ ಮುಂಬಯಿ ರಾಜ್ಯ ಹೊಟೇಲ್ ಫೆಡರೇಶನಿನ ಕಾರ್ಯದರ್ಶಿ ಶ್ರೀ ಬಿ. ಗೋಪಾಲ ಶೆಟ್ಟಿಯವರು ವಿನಂತಿಸಿದ್ದಾರೆ.

ಪ್ರಜಾರಾಜ್ಯ ದಿನಾಚರಣೆಯು— ಉಡುಪಿ ನಗರ ಸಭೆ ಮತ್ತು ಸಾರ್ವಜನಿಕರ ನೇತೃತ್ವದಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಸಂಜೆ ಬಹುಮಾನ ಹಂಚಿದ ಬಳಿಕ ಶ್ರೀ ಪಿ. ಗುರುರಾಜ ಭಟ್ಟರು ಭಾಷಣವಿತ್ತರು

(೭ನೇ ಪುಟದಿಂದ)

ಪೂರ್ವ ಪಾಕಿಸ್ತಾನದಲ್ಲಿ ಹಯೂರಿಯಿಂದ ನಡೆದ ಕ್ರಾಂತಿಯ ರಹಸ್ಯ ಸ್ಫೋಟಗೊಂಡೊಡನೇ ಸರಕಾರ ತೀವ್ರ ಕ್ರಮ ಕೈಗೊಂಡು ಅವನ್ನು ಹತ್ತಿಕ್ಕಿತೆಂದು ತಿಳಿಯುತ್ತದೆ. ಸಿಂಹಳದ ಸರಕಾರವು ದೇಶದ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವಲ್ಲಿ ಅಸಮರ್ಥವಾಗಿದೆ ಎಂಬುದಕ್ಕೆ ಇದೊಂದು ನಿದರ್ಶನವೆನ್ನಬಹುದಾದರೆ, ಸಿರಿಮಾವೋರವರು ಬುಕ್ಕಿನ ಮುಳ್ಳುಗಳ ದಾರಿಯಲ್ಲಿ ನಡೆಯುತ್ತಿದ್ದಾರೆ, ಎನ್ನಲೇಬೇಕು. ಇದರಲ್ಲಿ ಅವರು ಯಶಸ್ವಿಯಾಗುವರೆ?

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ನಮಗಿಂದು ಎಂತಹ ಸಾಹಿತ್ಯ ಬೇಕು?

ಶ್ರೀ ಎನ್. ನಾರಾಯಣ ಬಲ್ಲಾಳ.

ಭಾರತದ ಪ್ರಭಾವೀ ಸಾಹಿತ್ಯ ರಂಗದಲ್ಲಿ ಕನ್ನಡಕ್ಕೆ ಉನ್ನತವಾದ ಒಂದು ಸ್ಥಾನ ಈಗಾಗಲೇ ದೊರಕಿದೆ. ಸಣ್ಣ ಕತೆಗಳು, ಕಾದಂಬರಿಗಳು, ವೈವಿಧ್ಯಮಯ ಹಾಗೂ ವೈಚಾರಿಕ ಗ್ರಂಥಗಳು, ಆಧ್ಯಾತ್ಮಿಕ ಪತ್ರಿಕೆಗಳು, ಸಂಶೋಧನಾ ಗ್ರಂಥಗಳು, ಇತಿಹಾಸ ಕಥನಗಳು, ಆತ್ಮ ಚರಿತ್ರೆಗಳು—ಹೀಗೆ ಹಲವು ಪ್ರಕಾರಗಳಲ್ಲಿ ನಮ್ಮ ಸಾಹಿತ್ಯ ಮೈದುಂಬಿ ಬೆಳೆದಿದೆ; ಬೆಳೆಯುತ್ತಲೂ ಇದೆ.

ಸಾಹಿತ್ಯಿಕ ದೃಷ್ಟಿಯಲ್ಲಿ ನೋಡುವುದಾದರೆ ಜಗತ್ತು ಕಾಮನ ಬಿಲ್ಲಿನಂತೆ ಕ್ಷಣ-ಕ್ಷಣಕ್ಕೆ ವೈವಿಧ್ಯಮಯವಾಗುತ್ತ ನಡೆದಿದೆ. ಜನತೆಯ ಅಭಿರುಚಿ ಬದಲಾವಣೆಗೊಂಡ ಹಾಗೆ ಅವರು ಓದುವ ದೃಷ್ಟಿಕೋನ ಬದಲಾವಣೆಗೊಳ್ಳುವುದು ಸಹಜ. ಸಣ್ಣ ಕತೆಗಳು, ಕಾದಂಬರಿಗಳು ನಮ್ಮ ಓದುಗರ ಪ್ರಧಾನ ಪ್ರಿಯ ಪುಸ್ತಕಗಳಾಗಿವೆ. ವೈಜ್ಞಾನಿಕ, ವೈಚಾರಿಕ, ಸಂಶೋಧನಾತ್ಮಕ ಗ್ರಂಥಗಳಿಗೆ ಆಸಕ್ತಿ ಕಡಿಮೆಯಿರಲು ನಮ್ಮ ಜನರ ನಿರಕ್ಷರತೆಯೂ ಒಂದು ಕಾರಣವಾಗಿದೆ. ಇಂದಿನ ಯಾವುದೇ ನಿಯತ ಕಾಲಿಕೆಗಳನ್ನೇ ಮಗುಚಿರಿ. ಪ್ರಕಟವಾಗುತ್ತಿರುವ ಹೆಚ್ಚಿನ ಕಾದಂಬರಿಗಳ ವಸ್ತುಗಳತ್ತ ವಿವೇಚಿಸಿರಿ. ಜನರ ಅಗ್ಗದ ಅಭಿರುಚಿಗೆ ಅನುಗುಣವಾಗಿ ವ್ಯಾವಹಾರಿಕ ದೃಷ್ಟಿಯಿಂದ ನಮ್ಮ ಸಾಹಿತ್ಯ ಮಾರುಕಟ್ಟೆಯಲ್ಲಿ ಬಿದ್ದಿರುತ್ತದೆ. ಜನರ ಅಭಿರುಚಿಗನುಗುಣವಾದ ಸಾಹಿತ್ಯ ನಿರ್ಮಾಣವಾಗಬೇಕು ಆದರೆ ಆ ಅಭಿರುಚಿಯ ಪಾವಿತ್ರ್ಯದ ಕಡೆಗೆ ಲೇಖನಿ ಹಿಡಿದ ಯೋಧನಃ ತೀವ್ರ ಗಮನ ಕೊಡಬೇಕು. ಈ ವಿಚಾರದಲ್ಲಿ ಲೇಖಕನು ಜನತೆಗೆ ಹಾಗೂ ಭಾವೀ ಸಾಹಿತ್ಯ ಲೋಕಕ್ಕೆ ಜವಾಬ್ದಾರನಿರುತ್ತಾನೆ.

ವಾರ ಭವಿಷ್ಯ, ಸಿನಿಮಾ ಸಮಾಚಾರ, ಅಗ್ಗದ ಪ್ರಶ್ನೋತ್ತರ, ಕೀಳು ಮನೋರಂಜನೆಯ ತುಂಡು ಟೀಕೆಗಳು—ಇವುಗಳೇ ಹೆಚ್ಚಿನ ಕನ್ನಡ ಪತ್ರಿಕೆಗಳ ಬಂಡವಾಳವಾಗಿವೆ. ಪತ್ರಿಕೆಗಳಲ್ಲಿ ವೈಶಿಷ್ಟ್ಯದ ಮಾತೇ ಇಲ್ಲ. ಅನುಕರಣೆಯ ಜಾಡಿನಲ್ಲಿ ಜನರ ಸುಪ್ತ ಉನ್ಮಾದತೆಗೆ ಪ್ರಚೋದನೆಯನ್ನಿತ್ತು, ಆ ಮೂಲಕ ಪತ್ರಿಕಾರಂಗವು ಒಂದು ವ್ಯಾಪಾರವೆಂಬ ಮನೋಭಾವದಿಂದ ಸ್ಪರ್ಧೆಯೇ ನಡೆದಿದೆ. ವಾರಪತ್ರಿಕೆಯೊಂದನ್ನು ನಡೆಸುತ್ತಿರುವ ನನ್ನ ಮಿತ್ರರೊಂದಿಗೆ ಈ ಬಗ್ಗೆ ನಾನು ವಾದ ಹೂಡಿದಾಗ ಅವರು ಹೇಳಿದ ಮಾತಿದು:—

"ಹೌದು! ನೀವೆಲ್ಲ ಆದರ್ಶ, ಆದರ್ಶ ಎಂದು ಬೊಬ್ಬೆ ಹೊಡೆಯುತ್ತೀರಿ. ಆದರ್ಶವೆಂಬುದು ಬಿಸಿಲುಗುದುರೆ. ಆದರ ಬೆನ್ನೇರಿ ಬದುಕಿದವನಿಲ್ಲ. ಘನವಾದ ವಿಚಾರಗಳೊಂದಿಗೆ ಲೇಖನ ಪ್ರಕಟಿಸಿದರೆ ಪುಕ್ಕಟೆಯಾಗಿ ಪಡೆಯುವ ಕೆಲವು ಮಿತ್ರರು ಪತ್ರಿಕೆಯನ್ನು ಹೊಗಳಿಯಾರು. ಆದರೆ ಪತ್ರಿಕೆ ಬದುಕುವ ಮಾತು ಸುಳ್ಳು".

ಇಲ್ಲೇ ನಮ್ಮ ಪತ್ರಿಕಾಕರ್ತರು ತಪ್ಪಿ ಬಿದ್ದಿದ್ದಾರೆ. ಜನರಿಗೆ ಒಳ್ಳೆಯ ವಿಷಯ ಕೊಡಿರಿ. ಅವರ ಅಭಿರುಚಿಯನ್ನು ಉತ್ತಮಗೊಳಿಸಿರಿ ಎಂದರೆ ಬರೆದವರಿಗೂ ಅರ್ಥವಾಗದ ನೀರಸ ಲೇಖನಗಳ ಉದ್ದುದ್ದ ಶಬ್ದಜಾಲದ ಪಾಂಡಿತ್ಯಪೂರ್ಣ ಲೇಖನಗಳನ್ನು ತುಂಬಿಸುವುದೆಂದಲ್ಲ. ಪ್ರಫುಲ್ಲಿತವಾದ ಉದಾತ್ತ ವಿಚಾರಗಳನ್ನು ಸರಳವಾದ, ಆಕರ್ಷಕವಾದ ಹಾಗೂ ಮನೋಜ್ಞವಾಗಿ ತಿಳಿ ಹೇಳುವ ಸಾಹಸವನ್ನು ನಮ್ಮ ಪತ್ರಿಕೆಯವರು ಮಾಡಬೇಕು. ಉದಾಹರಣೆಗಾಗಿ ಚಂದ್ರಲೋಕಕ್ಕೆ ಹಾರಲು ಮಾನವರು ನಡೆಸಿದ ಯತ್ನದ ವಿಚಾರವನ್ನೇ ಇಟ್ಟುಕೊಳ್ಳೋಣ. ಅಂತಹ ಒಂದು ಗಹನವಾದ ವೈಜ್ಞಾನಿಕ ವಿಚಾರವನ್ನೇ ವೈಜ್ಞಾನಿಕ ಪಾರಿಭಾಷಿಕ ಶಬ್ದಗಳ ಜಾಲದೊಂದಿಗೆ ವಿವರಿಸಿದರೆ ಸಾಮಾನ್ಯ ಜನ ಓದಲಾರರೆಂಬುದು ನಿಶ್ಚಯ. ಆದರೆ ಚಂದ್ರಲೋಕಕ್ಕೆ ಒಬ್ಬ ವಿಜ್ಞಾನಿಯು ಹೋಗಲು ಪಟ್ಟ ಪ್ರಯತ್ನ, ಸಾಹಸ, ಅವನು ಗುರಿ ಸೇರಿದ ಬಗೆ ಮತ್ತು ಅವನು ವಿಫಲನಾದ ದುರಂತ—ಇವನ್ನು ವರ್ಣನಾತ್ಮಕ ಕಥಾ ರೂಪದಲ್ಲೊ, ಪ್ರವಾಸ ಕಥನ ರೂಪದಲ್ಲೊ ಹೇಳಿದರೆ ಆಗ ಆ ಲೇಖನ ಎಷ್ಟು ಜನಪ್ರಿಯವಾಗಬಹುದೆಂದು ಪ್ರಯೋಗಿಕವಾಗಿ ಪರೀಕ್ಷಿಸಿ ನೋಡಿ.

ಬೇಸರ ಕಳೆಯಲು ಪತ್ರಿಕೆ ಓದುವುದೇ ವಿನಃ ಜ್ಞಾನವನ್ನೇ ಹೆಚ್ಚಿಸಿಕೊಳ್ಳಲೆಂದಲ್ಲವೆಂಬ ವಾದವೂ ಇದೆ. ಆದರೆ ಸಂಪಾದಕನಾದವನು ಬೇಸರವು ನೀಗುವುದರೊಂದಿಗೆ ಜ್ಞಾನದ ಕಿಡಿಯೂ ಕೆರಳುವಂತೆ ತನ್ನ ಲೇಖನಗಳನ್ನು ಸತ್ವಪೂರ್ಣಗೊಳಿಸಬೇಕು. ಪತ್ರಿಕೆಗಳನ್ನು ಕೇವಲ ಪ್ರಾಯಪ್ರಬುದ್ಧರಷ್ಟೇ ಓದುವುದಲ್ಲ. ಎಳೆಯ ಮೆದುಳಿನ ಶಾಲಾ ಬಾಲಕರೂ ಆಸಕ್ತಿಯಿಂದ ಪುಟ ತಿರುಗಿಸುವುದಿದೆ. ಅಂಗ ವಿನ್ಯಾಸಗಳ ವಿವಿಧ ಭಂಗಿಯ ಚಲಚಿತ್ರ ನಟಿಯರ ಕೊಲಸು ಚಿತ್ರಗಳನ್ನು ಪ್ರಕಟಿಸಿ, ಅದರ ಕೆಳಗಡೆ ಅಶ್ಲೀಲಾರ್ಥಕ್ಕೆಡೆಕೊಡುವ ಅಸಭ್ಯ ಟಿಪ್ಪಣಿಗಳನ್ನು ಪೋಣಿಸುವ ಪ್ರಮುಖ ಪತ್ರಿಕೆಗಳು ಕೆಲವು ನಮ್ಮಲ್ಲಿವೆ. ಚಲಚಿತ್ರ ನಟಿಯರು ಚಲಚಿತ್ರ ಸುದ್ದಿಗಳು ಇಲ್ಲದಿದ್ದರೆ ಇಂದು ಎಷ್ಟೋ ಜನ ಪತ್ರಿಕೆಯನ್ನು ಉಪೇಕ್ಷಿಸಬಹುದು. ಅಲ್ಲದೆ ಚಲಚಿತ್ರವೂ ಒಂದು ಕಲೆ. ನಟ-ನಟಿಯರೂ ಕಲಾವಿದರು ಎಂಬ ಮಾತನ್ನು ನಾವೂ ಒಪ್ಪುತ್ತೇವೆ. ಆದರೊಂದಿಗೆ ಅವರಿಗೆ ಮೇರೆ ಮೀರಿದ ಪ್ರಾಮುಖ್ಯತೆಯನ್ನು ಕೊಟ್ಟ ಪತ್ರಿಕೆಯ ಪಾವಿತ್ರ್ಯದ ಮತ್ತು ಜನರ ಅಭಿರುಚಿಯ ಅಧಃಪತನವನ್ನು ಮಾಡದಿರಲಿ.

ನನ್ನ ಗುರುತಿನ ಮಹಿಳೆಯೊಬ್ಬರಿದ್ದಾರೆ. ಅವರು ಪತ್ರಿಕೆಯನ್ನು ಕೈಗೆತ್ತಿಕೊಂಡೊಡನೆ ಹುಡುಕುವುದು ಚಲಚಿತ್ರ ವಿಭಾಗ. ಅದನ್ನೋದಿದೊಡನೆ ಆ ಬಗ್ಗೆಯೇ ಟೀಕೆ, ಟಿಪ್ಪಣಿ ಪ್ರಾರಂಭವಾಗಿ ಪತ್ರಿಕೆಯ ಓದುವಿಕೆ ಅಲ್ಲಿಗೇ ಅಂತ್ಯಗೊಳ್ಳುತ್ತದೆ. ಚಲಚಿತ್ರ ವಿಭಾಗದ ರಸಿಕತೆ ಇತರ ವಿಭಾಗಗಳಲ್ಲಿಯೂ ತುಂಬಿಬಂದದ್ದೇ ಆದರೆ ಪತ್ರಿಕೆಯ ಪ್ರತಿಯೊಂದು ಪುಟವನ್ನು ಅವರು ಆಸಕ್ತಿಯಿಂದ ನಿರುಕಿಸುತ್ತಿದ್ದರು.

ಇದೇ ರೀತಿ ನಮ್ಮ ಗ್ರಂಥಗಳ ಪಾಡು ಕೂಡಾ ಶೋಚನೀಯವಾಗಿದೆ. ನಮ್ಮ ಜನರಿಗೆ ಈಗ ಒಮ್ಮಿಂದೊಮ್ಮೆಗೇ ಪತ್ತೇದಾರಿಯ ಗೀಳು ಬಂದುಬಿಟ್ಟಿದೆ ಅಗ್ಗದರದ ಪತ್ತೇದಾರಿ ವಸ್ತುಗಳ ವಿಚಿತ್ರ ಕಾದಂಬರಿಗಳು 'ಬಿಸಿ ಬೋಂಡಾ'ಗಳಂತೆ ಒಂದೇ ಸಮನೆ ಖರ್ಚಾಗುತ್ತಿವೆ. ಎಳೆ ಹುಡುಗರಿಂದ ಹಿಡಿದು ಹಣ್ಣು ಮುದುಕರತನಕ ಎಲ್ಲರೂ ಅದರ ಭಕ್ತರೇ! ಇದು ನಮ್ಮ ಸಾಹಿತ್ಯ ಭಕ್ತರಿಗೆ ಮುರುಕಳಿಸಿದ ಮಹಾ ರೋಗ. ಇತ್ತೀಚೆಗೆ ಪ್ರಕಟವಾಗುತ್ತಲಿರುವ ಕೆಲವಾರು ಸಾಮಾಜಿಕ ಗ್ರಂಥಗಳೂ ವಿಷಯ ವೈವಿಧ್ಯತೆಯುಳ್ಳಾಗಲೀ, ವಸ್ತು ವಿಶೇಷತೆಯುಳ್ಳಾಗಲೀ ತೀರಾ ನಿರಾಶೆಯನ್ನೇ ಹುಟ್ಟಿಸಿವೆ. ವಸ್ತುಗಳಲ್ಲಿ ನಾವೀನ್ಯತೆ ಇರಬೇಕು. ಜನಜೀವನದ ವಸ್ತುವನ್ನೇ ಆರಿಸುವಾಗ ಅದು ಸಮಾಜದ ಪ್ರತಿಬಿಂಬವಾಗಬೇಕು. ಆ ಕಾದಂಬರಿಯು ಕೊನೆ ಆದರ್ಶದ ದಾರಿಯನ್ನು ಸೂಚಿಸಬೇಕು. ಸಮಾಜದ ಕುಂದುಕೊರತೆ, ವ್ಯಂಗ್ಯ, ಕೀಳ್ಮಟ್ಟದ ಟೀಕೆಗಳೇ ಕಾದಂಬರಿಯ ಪ್ರಧಾನ ಅಂಗಗಳಲ್ಲ. ದುರ್ಬಲ ವ್ಯಕ್ತಿ ಚಿತ್ರವನ್ನು ಚಿತ್ರಿಸುವ ಲೇಖನಿ ಸತ್‌ಶಕ್ತಿಯ ಮಾದರಿ ವ್ಯಕ್ತಿಗಳನ್ನು ರೂಪಿಸಲಾರದೇ?

ಸಮಾಜದ ನ್ಯೂನತೆಗಳನ್ನು ಟೀಕಿಸುವಷ್ಟು ಸುಲಭವಾಗಿ ವಿಧಾಯಕವಾಗಿ ಪರಿಹಾರ ಸೂಚಿಸುವ ಲೇಖಕರು ನಮ್ಮಲ್ಲಿ ಬಹಳಷ್ಟು ಮಂದಿ ಹುಟ್ಟಿ ಬರಲಿ! ಆದರೆ ಈಗೀಗ ಹೆಚ್ಚಿನವರು ವಸ್ತುವಿನ ಅನುಕರಣೆ ಜೀವನದ ಕಳ್ಳಭಟ್ಟಿಯಲ್ಲೇ ಕಾದಂಬರಿ ರಚಿಸಿ, 'ಕಾದಂಬರಿಗಾರರು' ಆಗುತ್ತಿದ್ದಾರೆ ನಮ್ಮ ಕಾದಂಬರಿಯ ಬ್ರಹ್ಮಾಂಡ ರಾಶಿಯಲ್ಲಿ ಕೆಲವೊಂದನ್ನು, ಹೊರತು ಪಡಿಸಿದರೆ, ಇತ್ತೀಚಿನ ಹಲವಾರು ಕಾದಂಬರಿಗಳು ಯಾವುದೋ ಒಂದು "ನಕಲಿ ಮಾಲು" ಆಗಿ ಕಂಡು ಬರುತ್ತವೆ. ಅದರ ಬದಲು ಉತ್ತಮ, ಇತರ ಭಾಷೀ ಸಾಹಿತ್ಯದ ಅನುವಾದಗಳು ಪ್ರಕಟವಾದರೆ ಸ್ವಾಗತಾರ್ಹವೇ ಆಗಿದೆ.

ನಮ್ಮ ಸಾಹಿತ್ಯ ನಿರ್ಮಾಣದ ಗತಿಯಲ್ಲಿ ಬದಲಾವಣೆಯಾಗಬೇಕು. ಸಾಹಿತ್ಯವು ಜನ ಜೀವನದ ಅಂತಃಶಕ್ತಿ; ಬಾಳಿನ ವಿಕಾಸದ ಶಕ್ತಿ. ಇದು ಪರಿಶುದ್ಧವಾಗಿ, ಪರಿಪೂರ್ಣವಾಗಿ ಬೆಳೆದು ಬರಬೇಕು. ಅಗ್ಗದ ಅಭಿರುಚಿಯ ಆಕರ್ಷಣೆಗೆ ಜನರ ಒಲವು ಅಧಿಕವಾದರೂ ಅದನ್ನು ಬದಲಾಯಿಸಿ, ಅವರ ಮನೋಮಟ್ಟವನ್ನು ನವೀಕರಿಸುವಂತಹ ಜೀವಂತ ಸಾಹಿತ್ಯ ಕನ್ನಡದಲ್ಲಾಗಬೇಕು. ನಮ್ಮ ಸಾಹಿತ್ಯ ಪರಂಪರೆ ಈ ಮಾರ್ಗದಲ್ಲಿ ಮುನ್ನಡೆಯಬೇಕಾದ ಕಾಲ ಈಗ ಬಂದಿದೆ.

ಧೂಮ್ರಪಾನದ ಸಹಜವಾದ ಆನಂದಕ್ಕಾಗಿ
ಸೇದಿರಿ
ಎಸ್. ಆರ್
ಬೀಡಿಗಳನ್ನು
SR
ಎಲ್ಲಾ ಕಡೆಗಳಲ್ಲಿಯೂ ದೊರಕಲ್ಪಡುತ್ತವೆ
S.R. BEEDI WORKS
UDIPI, S. K.
REGD.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 419/1953.

R. I. A. No. 678/1961.

ಕಜ್ಕೆ ಅನಂತಯ್ಯಸೆಲ್ಲಿ — ಅರ್ಜಿದಾರ

ಮತ್ತು

A. ವೆಂಕಟ್ರಮಣರಾವ್ ಕೂಡಾ — ಎದ್ರಿರು.

ಇವರೊಳಗೆ

ಸದ್ರಿ ಅರ್ಜಿಯ 1ರಿಂದ 4ನೇ ಎದ್ರಿರು:—

1. A. ವೆಂಕಟ್ರಮಣರಾವ್, 2. A. ಆನಂದರಾವ್, A. ಲಕ್ಷ್ಮೀನಾರಾಯಣಪ್ಪಯ್ಯನವರ ಮಕ್ಕಳು.

3 A. ಮೋಹನ್‌ರಾವ್, A. ಕೃಷ್ಣರಾಯರ ಮಗ.

4. ರುಗ್ಮಿಣಿಬಾಯಿ, A. ಕೃಷ್ಣರಾಯರ ವಿಧವೆ.

ಉಡ್ಪಿ ತಾಲೂಕು ಬುದಿಯೂರ ಗ್ರಾಮಸ್ಥರು.

ಇವರಿಗೆ ಈ ಮೂಲಕ ತಿಳಿಸುವುದೇನಂದರೆ,

ಮೇಲ್ಕಂಡ ವ್ಯಾಜ್ಯದಲ್ಲಿ ಕೊಡೋಣಾದ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡಬೇಕಾಗಿ ಅರ್ಜಿದಾರನು ದಾಖಲು ಮಾಡಿರುವ ಮೇಲ್ಕಂಡ ಅರ್ಜಿಯನ್ನು ತಾ. 15 2-62ಕ್ಕೆ ಇಟ್ಟಿರುವುದ್ರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿನ ಮೇಲ್ಕಂಡ ಕೋರ್ಟಿನಲ್ಲಿ ಹಗಲು 10 ಗಂಟೆಗೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಬ್ಯಾಕೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. V. Acharya,
Vakil for Petitioner

ಉಡ್ಪಿ, ತಾ. 29.1.62.

ಕಾಂಗ್ರೆಸ್ ಸಾಧಿಸಿದ್ದೇನು?

ಜಾತೀಯತೆಗೆ ಅಂತ

ಭಾರತ ಸ್ವತಂತ್ರವಾಯಿತು ಆದರೆ ಅದರೊಂದಿಗೇನೇ ದೇಶ ವಿಭಜನೆಯೂಗಿ, ಕೋಮುವಾರು ಅಗ್ನಿಜ್ವಾಲೆ ಎಲ್ಲೆಲ್ಲೂ ಹರಡಿತು. ದೇಶವನ್ನೇ ನಾಶಪಡಿಸುವುದೇ ಎಂಬ ಭೀತಿಯೂ ಹರಡಿತು.

ಆದರೆ, ಈ ಧಾರ್ಮಿಕ ಹುಚ್ಚುತನವನ್ನು ಎದುರಿಸಲು ಕಾಂಗ್ರೆಸ್ ಸರ್ವಶಕ್ತಿಯನ್ನೂ ಬಳಸಿ ಹೋರಾಡಿತು. ಧರ್ಮವು ದ್ವೇಷವನ್ನು ಸಾರುತ್ತಿಲ್ಲ; ದ್ವೇಷದ ಉಪದೇಶ ನೀಡಿಲ್ಲ ಎಂದು ಕಾಂಗ್ರೆಸ್ ಸಾರಿ ಹೇಳಿತು. ಈ ಜಾತೀಯ ಜ್ವಾಲೆಯನ್ನು ಹತೋಟಿಯಲ್ಲಿರಿಸಿ ಕಾಂಗ್ರೆಸ್ ಈ ದೇಶವನ್ನು ಉಳಿಸಿತು.

ಜನತೆಯಲ್ಲಿ ಆತ್ಮವಿಶ್ವಾಸ ಮತ್ತೊಮ್ಮೆ ಮೂಡಿತು. ಹಿಂದೂ-ಮುಸ್ಲಿಮರು ಸಹೋದರರಂತೆ ಬಾಳಿ ಬದುಕ ತೊಡಗಿದರು.

ನಿರಾಶ್ರಿತರಿಗೆ ಆಶ್ರಯ

ಸ್ವಾತಂತ್ರ್ಯದ ಜತೆಗೇನೆ ಜಾತೀಯ ಅಗ್ನಿಜ್ವಾಲೆಯು ಹರಡಿ, ಪಾಕಿಸ್ತಾನದಿಂದ ಸಹಸ್ರಾರು ಮಂದಿ ನಿರಾಶ್ರಿತರು ಸರ್ವಸ್ವವನ್ನೂ ಕಳೆದುಕೊಂಡು ಭಾರತಕ್ಕೆ ಬರಲಾರಂಭಿಸಿದರು ಈ ನಿರಾಶ್ರಿತರ ಆಗಮನ ಅನೇಕ ಸಮಸ್ಯೆಗಳನ್ನು ಉಂಟುಮಾಡಿತು

ನಿರಾಶ್ರಿತರು ಪಾಕಿಸ್ತಾನದಲ್ಲಿ ತಮ್ಮ ಆಸ್ತಿ, ಮನೆ, ಸಕಲ ಸಂಪತ್ತನ್ನೂ ಬಿಟ್ಟು ಓಡಿ ಬಂದಿದ್ದರು. ವ್ಯಾಪಾರ-ವ್ಯವಹಾರಗಳನ್ನೆಲ್ಲ ತ್ಯಜಿಸಿ ಜೀವ ಉಳಿಸಿಕೊಳ್ಳಲೆಂದು ಬಂದಿದ್ದರು.

ಈ ನಿರಾಶ್ರಿತರಾದ ಆತುರ ಸೇವೆಗೆ ಕಾಂಗ್ರೆಸ್ ಸರಕಾರ ತನ್ನೆಲ್ಲ ಗಮನ ಹರಿಯಿಸಿತು. ಅನೇಕ ತೊಂದರೆಗಳು ಬಂದರೂ ಕಾಂಗ್ರೆಸ್ ನಿರ್ದಿಷ್ಟ ಹೆಜ್ಜೆಯಿರಿಸಿ ಸಾಗಿತು ಈ ನಿರಾಶ್ರಿತರಿಗೆ ನೆರವು ನೀಡಿ ದೇಶದ ವಿವಿಧ ಭಾಗಗಳಿಗೆ ಕಳುಹಿಸಿ ಜೀವನ ನಿರ್ವಹಣದ ಮಾರ್ಗ ಕಲ್ಪಿಸಿಕೊಟ್ಟಿತು. ನೌಕರಿ, ವ್ಯಾಪಾರ, ಸಹಕಾರ ನೀಡಿತು. ಇಂದಿಗೆ ಈ ಸಮಸ್ಯೆ ಪರಿಹಾರವಾಗಿದೆ.

ಅಧಿಕಾರಶಾಹಿಗೆ ಕೊನೆ

ಭಾರತದ ಪ್ರಮುಖ ಭಾಗವನ್ನು ಬ್ರಿಟಿಷರು ೫೬೨ ಅರಸರ ರಾಜ್ಯಗಳಾಗಿ ವಿಂಗಡಿಸಿದ್ದರು. ಈ ರಾಜ್ಯಗಳಲ್ಲಿ ಜಮೀನುದಾರಿ ಪದ್ಧತಿ ಪ್ರಮುಖವಾಗಿತ್ತು. ಸರ್ವಾಧಿಕಾರ, ಗುತ್ತಿಗೆದಾರಿ ನೀತಿ ಹರಡಿತ್ತು. ಈ ರಾಜ್ಯಗಳ ಜನತೆ ಎಲ್ಲ ಬಗೆಯ ಶೋಷಣೆಗೂ ಹಿಂಸೆಗಳಿಗೂ ಒಳಗಾಗಿ ನರಳುತ್ತಿದ್ದರು. ನಾಗರಿಕ ಹಕ್ಕು ಬಾಧ್ಯತೆಗಳೂ ಅವರಿಗಿರಲಿಲ್ಲ.

ಈ ಅರಸರ ರಾಜ್ಯಗಳಲ್ಲಿ ಕಾಂಗ್ರೆಸಿಗರು ತೀವ್ರವಾಗಿ ಹೋರಾಟ ನಡೆಸಿ ಅಧಿಕಾರಶಾಹಿಯ ವಿರುದ್ಧ ಕಾದಾಡಿದರು. ಎಲ್ಲ ಬಗೆಯ ಹಿಂಸೆ, ದಬ್ಬಾಳಿಕೆಗಳನ್ನು ಸಹಿಸಿ, ಜನತೆಯನ್ನು ಸಂಘಟಿಸಿದರು.

ಸ್ವಾತಂತ್ರ್ಯ ದೊರೆತೊಡನೆಯೇ ಕಾಂಗ್ರೆಸ್ ಈ ಅರಸರ ಅಧಿಕಾರಶಾಹಿಯನ್ನು ಅಳಿಸಿ, ಇವರ ಅಂಕೆಯಲ್ಲಿದ್ದ ಜನತೆಗೂ ಸ್ವಾತಂತ್ರ್ಯ ನೀಡಿತು. ಈ ೫೬೨ ರಾಜ್ಯಗಳಲ್ಲಿ ಹರಡಿದ್ದ ಕತ್ತಲೆಯನ್ನು ಕಾಂಗ್ರೆಸ್ಸು ಅಳಿಸಿ ಬೆಳಕು ತೋರಿತು. ಇಂದು ಈ ಅರಸರ ರಾಜ್ಯಗಳಲ್ಲಿನ ಪ್ರಜೆಗಳೆಲ್ಲರಿಗೂ ಭಾರತದ ಇತರ ಪ್ರದೇಶಗಳಲ್ಲಿನ ಜನತೆಯಂತೆ ಸಕಲ ವಿಧದ ಹಕ್ಕು ಬಾಧ್ಯತೆಗಳೂ ಸ್ವಾತಂತ್ರ್ಯಗಳೂ ಪ್ರಾಪ್ತವಾಗಿವೆ.

ಉಳುವವನೇ ಹೊಲದೊಡೆಯ

ಭಾರತವೆಂದರೆ ರೈತರು-ಎಂದು ಕಾಂಗ್ರೆಸ್ ಯಾವತ್ತೂ ಹೇಳುತ್ತ ಬಂದಿದೆ. ರೈತ ತಲೆಯೆತ್ತಿದಾಗಲೇ ಭಾರತವು ತಲೆಯೆತ್ತೀತು, ಇದಕ್ಕಾಗಿ ರೈತನ ಶೋಷಣೆ ನಿಲ್ಲಬೇಕು. ಎಂತಲೇ ದೇಶದ ವಿವಿಧ ರಾಜ್ಯಗಳಲ್ಲಿ ೧೯೪೭ರಲ್ಲಿ ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದಾಗ, ಜಮೀನುದಾರಿ ಪದ್ಧತಿಯನ್ನು ವಜಾಮಾಡಲು ಅದು ನಿರ್ಧರಿಸಿತು

ಈ ಬಗೆಗೆ ರಾಜ್ಯ ವಿಧಾನ ಸಭೆಗಳು ಶಾಸನಗಳನ್ನು ತಂದುವು. ಶಾಂತಿಯುತವಾಗಿ ಭಾರತದಲ್ಲಿ ಕ್ರಾಂತಿ ನಡೆಯಬೇಕು, ದೇಶದ ಎಲ್ಲ ವರ್ಗದ ಜನರಿಗೂ ಅನುಕೂಲವಾಗಬೇಕು ಎಂಬುದು ಕಾಂಗ್ರೆಸ್ಸಿನ ಧ್ಯೇಯ. ಘಟನಾತ್ಮಕವಾಗಿ ಸಾಮಾಜಿಕ ನ್ಯಾಯ ಎಲ್ಲರಿಗೂ ದೊರೆಯಬೇಕು ಎಂಬುದು ಗುರಿ. ಈ ದಾರಿಯು ನಿಧಾನವಾಗಿ ಕಾಣಬಹುದು ಆದರೆ, ಇದೊಂದೇ ಸಫಲವಾದ ಸೂಕ್ತಮಾರ್ಗ. ಇದೀಗ ಕಾಂಗ್ರೆಸ್ಸು ಜಮೀನುದಾರರ ಶೋಷಣೆಯನ್ನು ಅಂತ್ಯಗೊಳಿಸಿದೆ ಉಳುವವನೇ ತನ್ನ ಭೂಮಿಯ ಒಡೆಯನಾಗಿದ್ದಾನೆ

ಕಮ್ಯೂನಿಸ್ಟರಿಂದ ರಕ್ಷಣೆ

ದ್ವಿತೀಯ ಮಹಾಯುದ್ಧದ ಅಂತ್ಯದೊಡನೆ ತೊಡಕು, ಬಿಕ್ಕಟ್ಟು, ಕಚ್ಚಾಟಗಳು ವಿಶ್ವದಲ್ಲಿ ಆರಂಭವಾದುವು.

ಎರಡು ತತ್ತ್ವಗಳನ್ನು ಪ್ರತಿಪಾದಿಸುವ ಎರಡು ಗುಂಪುಗಳು ವಿಶ್ವದಲ್ಲಿ ತಲೆಯೆತ್ತಿದುವು ಈ ಗುಂಪುಗಳು ಪರಸ್ಪರ ಅಪವಾದನೆ, ಖಂಡನೆಗಳನ್ನು ಸಾಧ್ಯವಾದೆಡೆಗಳಲ್ಲೆಲ್ಲ ಘರ್ಷಣೆಯನ್ನು ಉಂಟುಮಾಡಲು ಮುಂದಾದುವು. ಶೀತಲ ಸಮರ ಆರಂಭವಾಯಿತು. ಕೆಲವು ರಾಷ್ಟ್ರಗಳಲ್ಲಿ ಮತ್ತೊಮ್ಮೆ ಸರ್ವಾಧಿಕಾರೀ ಆಡಳಿತೆ ತಲೆಯೆತ್ತಿತು.

ಈ ಗೊಂದಲ, ಘರ್ಷಣೆಗಳಿಂದಾಗಿ ಯಾವುದೇ ರಾಷ್ಟ್ರದಲ್ಲೂ ಶಾಂತಿ ನೆಮ್ಮದಿಗಳು ಸ್ಥಿರವಾಗಿರದಾದುವು ನಮ್ಮ ದೇಶದಲ್ಲೂ ಅಂತಹ ಗೊಂದಲ ಹುಟ್ಟಿಸುವ ಪ್ರಯತ್ನ ನಡೆಯಿತು.

ಕಮ್ಯೂನಿಸ್ಟರು ತೆಲಂಗಾಣದಲ್ಲಿ ಸರಕಾರದ ವಿರುದ್ಧ ಸಶಸ್ತ್ರ ಹೋರಾಟವನ್ನೇ ಆರಂಭಿಸಿದರು. ಈ ಪ್ರದೇಶವನ್ನು ಗೆದ್ದು ಅಲ್ಲಿ ಪ್ರತಿ ಸರಕಾರ ಸ್ಥಾಪಿಸಿ ಮುಂದೆ ಇಡಿ ದೇಶವನ್ನೇ ಗೆಲ್ಲುವ ಕನಸನ್ನು ಅವರು ಕಂಡರು ಚೀನಾದ ಕಮ್ಯುನಿಸ್ಟರು ಅದೇ ದೇಶದ ಸರಕಾರದ ವಿರುದ್ಧ ಅಂತರ್ಯುದ್ಧ ಹೂಡಿ ವಿಜಯಿಗಳಾದಂತೆ ತಾವೂ ಯುದ್ಧ ನಡೆಸುತ್ತ ತಮ್ಮ ಅಂಕೆಯ ಪ್ರದೇಶವನ್ನು ವಿಸ್ತರಿಸಿಕೊಂಡು ಅಂತಿಮವಾಗಿ ಇಡಿ ದೇಶದ ಮೇಲೆ ಅಧಿಕಾರ ಸ್ಥಾಪಿಸುವ ಕನಸು ಕಂಡರು.

ದೇಶದ ಆಡಳಿತೆಗೆ, ಶಾಂತಿಗೆ, ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿ ನಿಂತರು. ಆದರೆ, ಇವರ ಈ ಆಟವನ್ನು ಕಾಂಗ್ರೆಸ್ ಹುಡಿಗಡಿಸಿತು. ಕಮ್ಯೂನಿಸ್ಟರ ಅಂತರ್ಯುದ್ಧದ ಕನಸು ಅಳಿಯಿತು.

ಹೀಗೆ ಜಗತ್ತಿನ ಪ್ರತಿ ರಾಷ್ಟ್ರದಲ್ಲೂ ಅಶಾಂತಿ ಹರಡಿದಾಗ, ಜಗತ್ತಿನಲ್ಲೇ ಎರಡು ಬಣಗಳು ಹೋರಾಟಕ್ಕಾಗಿ ಕತ್ತಿ ಮಸೆಯುತ್ತಿದ್ದಾಗ, ಭಾರತದಲ್ಲಿ ಕಾಂಗ್ರೆಸ್ ಶಾಂತಿಯನ್ನುಳಿಸಿತು; ಅಭಿವೃದ್ಧಿ ಕಾರ್ಯ ಮುಂದುವರಿಸಿತು. ಅಷ್ಟೇ ಅಲ್ಲ, ವಿಶ್ವಶಾಂತಿ ಸಾಧನೆಗಾಗಿಯೂ ಶ್ರಮಿಸುತ್ತ ಜಗತ್ತಿನಲ್ಲೇ ಈ ದೇಶಕ್ಕೆ ಅತ್ಯಂತ ಗೌರವಯುತ ಸ್ಥಾನವನ್ನು ಗಳಿಸಿಕೊಟ್ಟಿತು.

ತುರಿಕೆ ಪುರಾಣ

(೩ನೇ ಪುಟದಿಂದ)

ವಂತೆ ಅವನು ಹಾವಭಾವಗಳನ್ನು ಪ್ರದರ್ಶಿಸಬಲ್ಲನು. ಎಂದು ನಾನು ಎದೆ ತಟ್ಟಿ ಹೇಳಬಲ್ಲೆ. ಮೊದ ಮೊದಲು ಅವನು ಮೆಲ್ಲ ಮೆಲ್ಲನೆ ತುರಿಸುತ್ತಾ ಸಂತೋಷದ — ಅನಂತರ ಅಧೀರತೆಯ ಭಾವಗಳನ್ನು ಪ್ರದರ್ಶಿಸುವನು. ಬಳಿಕ ಧೀರೋದಾತ್ತ ನಾಯಕನಂತೆ ಗೌರವ, ಧೈರ್ಯದಿಂದ ತನ್ನ ಕೈಗಳನ್ನು ನಿಯುಕ್ತಗೊಳಿಸುತ್ತಾನೆ. ಆ ವೇಳೆ ಯಾರಾದರೂ ಒಬ್ಬ ಧ್ಯಾನಮಗ್ನ ಪ್ರೇಮಿಯಂತೆ ಯಾ ಯೋಗಿಯಂತೆ ಏಕಾಗ್ರತೆಯಿಂದ ತಲ್ಲೀನನಾಗಿ ತನ್ನ ಸುತ್ತ ಮುತ್ತಲಿನ ಜನರ ಇರವನ್ನೂ ಮರೆತುಬಿಡುತ್ತಾನೆ. ಇನ್ನೂ ತುರಿಸುವಿಕೆ ಉಪಶಮನವಾಗದಿದ್ದಲ್ಲಿ ಅವನು ವೀರ ಯೋಧನಂತೆ ಎರಡೂ ಕೈಗಳಲ್ಲಿ ಸಂಘರ್ಷಣೆ ತೀಕ್ಷ್ಣತೆಗಳನ್ನು ಪ್ರಾರಂಭಿಸುತ್ತಾನೆ. ಆಗವನ ತುಟಿಗಳು ಬಿಗಿಯಾಗುತ್ತವೆ. ಕಣ್ಣು ವಿಶಾಲವಾಗುತ್ತದೆ. ಕೈಗಳಲ್ಲಿ ವೇಗ ತನ್ನಿಂದ ತಾನೆ ಸಮಾವೇಶವಾಗುತ್ತದೆ ಈ ರೀತಿಯಲ್ಲಿ [illegible] ಮನೆಗಳಲ್ಲಿ [illegible] ಸಹಿಸುವ [illegible] ಪರಿವಾರದ [illegible] ಆ ವ್ಯಕ್ತಿಯ [illegible] ಪ್ರಾರಂಭಿಸುತ್ತಾನೆ [illegible] ಆವನ ಕ್ರೋಧವು [illegible] ಅವನು [illegible] ದ ಅರ್ಜುನನಂತೆ ವಿಷಾದದ [illegible] ಮಾಡತೊಡಗುತ್ತಾನೆ

ಈಗ ನೀವೇ ಹೇಳಿ, ಎಷ್ಟೇ ದೊಡ್ಡ ಕಲಾಕಾರನಾದರೂ ಇಷ್ಟು ಅಲ್ಪ ಸಮಯದಲ್ಲಿ ಇಷ್ಟೆಲ್ಲಾ ಭಾವಗಳನ್ನು ಪ್ರದರ್ಶಿಸಬಲ್ಲನೇ? ಇದೆಲ್ಲಾ ತುರಿಕೆಯ ಕೃಪಾ ಪ್ರಭಾವವಲ್ಲವೇ?

(ಜ್ಯೋತೀಂದ್ರ ದವೆಯವರ ಹಿಂದೀ ಲೇಖನದ ಅನುವಾದ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಕರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧನಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ ಎರಡು ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25).

ವಿ ಸೂ —ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಮುಖ ಸಾಮಾಜಿಕ ಕರ್ತವ್ಯವೆಂದು

ನೀವು ಓಟು ಮಾಡಲೇ ಬೇಕು!

ಶ್ರೀ ನಾರಾಯಣ ಆಚಾರ್ಯ:

ಹೌದು.. ನಿಮ್ಮದದೊಂದು ಅತೀವ ಮಹತ್ತ್ವದ ಸಾಮಾಜಿಕ ಕರ್ತವ್ಯವಾದ್ದರಿಂದ ನೀವು ಸಾರ್ವತ್ರಿಕ ಚುನಾವಣೆಯಲ್ಲಿ ಮರೆಯದೇ, ತಪ್ಪದೇ, ಯೋಗ್ಯವಾದ ರೀತಿಯಲ್ಲಿ ಓಟು ಮಾಡಲೇಬೇಕು...ಇದು ನಿಮ್ಮ ಮೇಲೇನೂ ಯಾರೂ 'ಶಕ್ತಿ' ಮಾಡುತ್ತಿಲ್ಲ. ಆದರೂ ಸಮಾಜ, ರಾಷ್ಟ್ರ ಮತ್ತು ನೀವು ಸ್ವತಃ ಇವೆಲ್ಲರ ಅಂತಿಮ ಹಿತಕ್ಕಾಗಿ, ಸಮಾಜೋನ್ನತಿ, ರಾಷ್ಟ್ರೋನ್ನತಿ ಮತ್ತು ನಿಮ್ಮ ವೈಯಕ್ತಿಕ ಉನ್ನತಿಗಾಗಿ ನೀವು 'ಮರೆಯದೇ, ತಪ್ಪದೇ, ಯೋಗ್ಯವಾದ ರೀತಿಯಲ್ಲಿ' ನಿಮಗೆ ಘಟನಾನುಸಾರವಾಗಿ ದೊರೆತಿರುವ ಮತದಾನದ ಹಕ್ಕವನ್ನು ಬಜಾಯಿಸಲೇ ಬೇಕು ...ಅದೇಕೆ ಎಂಬುದನ್ನೇ ನಾನು ಪ್ರಸ್ತುತ ಲೇಖನದಲ್ಲಿ ಹೇಳಲು ಬಯಸಿದ್ದೇನೆ....

ಸಮಾಜ ಶಾಸ್ತ್ರ ಮತ್ತು ರಾಜ್ಯ ಶಾಸ್ತ್ರ, ಸಮಾಜಕಾರಣ ಮತ್ತು ರಾಜಕಾರಣ ಇವೆರಡೂ ಬೇರೆ ಬೇರೆ ಎಂಬುದಾಗಿ ಕೆಲವರು ವಿಂಗಡಿಸುತ್ತಾರೆ; ಅವೆರಡೂ ಒಂದಕ್ಕೊಂದು ಹೊಂದಿಕೊಂಡಿಲ್ಲವೆಂದು ಹೇಳುತ್ತಾರೆ. ಮತ್ತು ರಾಜಕಾರಣದಲ್ಲಿ ನುರಿತು ಅದರಿಂದಲೇ ಲಾಭವನ್ನು ಚೆನ್ನಾಗಿ ಘಟಿಸಿಕೊಂಡಿದ್ದವರು, ರಾಜಕೀಯ ಕಾರ್ಯಗಳು ಮತ್ತು ಸಾಮಾಜಿಕ ಕಾರ್ಯಗಳು ಇವೆಲ್ಲವೂ ಬೇರೆ ಬೇರೆ ವಿಷಯಗಳೇ ಇದ್ದು ಸಾಮಾಜಿಕ ಕಾರ್ಯಗಳನ್ನು ಆಚರಿಸುವವರಿಗೆ ರಾಜಕೀಯವು ತಿಳಿಯುವುದಿಲ್ಲವೆಂದೂ, ಸಾಮಾಜಿಕ ಕಾರ್ಯಕರ್ತರು ಮತ್ತು ರಾಜಕೀಯ ಕಾರ್ಯಕರ್ತರು ಇವರ ಧ್ಯೇಯಗಳೂ ಸಹ ಬೇರೆ ಬೇರೆ ಯಾಗಿರುತ್ತವೆಂದೂ ಸಮಯ ಒದಗಿ ಬಂದಾಗ್ಗೆಲ್ಲಾ ನುಡಿಯುತ್ತಿರುತ್ತಾರೆ. ಆದರೆ ಈ ತತ್ವವು ಶುದ್ಧ ಅನ್ಯಾಯಕರ, ತಪ್ಪು ಮತ್ತು ಅವಿವೇಕದ, ಸ್ವಾರ್ಥದ ಪ್ರತೀಕವೇ ಆಗಿರುತ್ತದೆ. ಶುದ್ಧ ರಾಜ್ಯ ಶಾಸ್ತ್ರವನ್ನು ತಿಳಿದು ಕೇವಲ ದೇಶಭಕ್ತಿಯಿಂದಲೇ ಪ್ರೇರಿತರಾದವರು ಮೊದಲೇ ಸಮಾಜಶಾಸ್ತ್ರವನ್ನು ಅಭ್ಯಸಿಸಿರುತ್ತಾರೆ. ಅವರು ಅಂತಹ ಭೇದವನ್ನು, ಕಲಹವನ್ನು ಎಂದೆಂದಿಗೂ ನಿರ್ಮಿಸುವುದಿಲ್ಲ. ಮತ್ತು ರಾಜಕಾರಣ ಹಾಗೂ ಸಮಾಜಕಾರಣ ಇವೆರಡೂ ಬೇರೆ ಬೇರೆ ವಿಷಯಗಳೆಂದೂ ಹೇಳುವುದಿಲ್ಲ. ಹಲವಾರು ರಾಜಕೀಯ ಕಾರ್ಯಕರ್ತರು ಅವುಗಳನ್ನು ಹಾಗೆ ವಿಂಗಡಿಸುವುದರಿಂದಲೇ ಈಗ ಜನತೆಯಲ್ಲಿ 'ರಾಜಕಾರಣ'ವೆಂದರೆ ಒಂದು ತರಹದ ಭಯ, ತಿರಸ್ಕಾರವು ಉಂಟಾಗಿದೆ; ಅದರ ಬಗ್ಗೆ ತಾತ್ಸಾರವು ಹುಟ್ಟಿಬೆಳೆದುಬಂದಿದೆ. ಆದುದರಿಂದಲೇ ಚುನಾವಣೆಯ ವಿಷಯವಾಗಲೀ, ರಾಜ್ಯಾಡಳಿತದ ಬಗ್ಗೆಯಾಗಲೀ ಜನಸಾಮಾನ್ಯರು ಅಷ್ಟು ಆಸಕ್ತಿಯನ್ನು ತೋರಿಸುವುದಿಲ್ಲ ಚುನಾವಣೆಯ ಸಮಯದಲ್ಲಿ ನೂರಕ್ಕೆ ನೂರು ಜನರೂ ಅವರಿಗೆ ಘಟನೆಯಿಂದಲೇ ದೊರೆತಿರುವ ಮತದಾನದ ಹಕ್ಕನ್ನು ಬಜಾಯಿಸುವುದಿಲ್ಲ. ಇದು ಕಳೆದ ಎರಡು ಬಾರಿಯೂ ಬಂದಿರುವ ಅನುಭವ. ನಾವು ಮಾಡಿರುವ ಆಸ್ತಿಯನ್ನು ಉಪಭೋಗಿಸುವುದು ನಮ್ಮ 'ಹಕ್ಕು' ಎಂದು ನಾವು ನಿರ್ಭಯದಿಂದ, ಕಾಯದಾನುಸಾರವಾಗಿ ಹೇಳುತ್ತೇವೋ ಹಾಗೆಯೇ ಮತದಾನಮಾಡುವುದು ಕೂಡ ನಮ್ಮ 'ಜನ್ಮಸಿದ್ಧ ಹಕ್ಕು' ಎಂದು ನಾವು ಏಕೆ ತಿಳಿಯಬಾರದು? ಮತ್ತು ಅದರನುಸಾರವಾಗಿ ನಾವು ಮತದಾನವನ್ನು ಏಕೆ ಮಾಡಬಾರದು? ಘಟನೆಯಿಂದಲೇ ಅದು ನಮ್ಮೆಲ್ಲರಿಗೂ (ಎಂದರೆ ಇಪ್ಪತ್ತೊಂದು ವಯಸ್ಸಾದವರಿಗೆ ಮತ್ತು ಯಾರು ಹುಚ್ಚರು, ಗುನ್ಹೆಗಾರರು ಕೋರ್ಟಿನಿಂದ ಶಿಕ್ಷೆಯನ್ನು ಪಡೆದಿದ್ದವರು ಇಲ್ಲವೋ ಅವರಿಗೆ) ದೊರೆತಿದೆ....ಇದರರ್ಥ ಘಟನೆಯು ನಮಗೆ ಈ ಹಕ್ಕನ್ನು ಕೊಟ್ಟಿದೆಂದರೆ ಅದು ನಮ್ಮೆಲ್ಲರ ಮೇಲೆ ಮಾಡಿರುವ ಉಪಕಾರವಲ್ಲ...ಅದು ನಮ್ಮೆಲ್ಲರ ಜನ್ಮಸಿದ್ಧ ಹಕ್ಕೇ ಇದೆ....ಇದಕ್ಕೆ ಕೆಲವರು, "'ಲೋಕಶಾಹಿ ರಾಜ್ಯವಿದೆ' ಎಂದು ನೀವು ಹೀಗೆ ಹೇಳುತ್ತೀರಿ, ಅದೇ ಹುಕುಮಶಾಹಿಯಾಗಿದ್ದರೆ?" ಎಂದು ಪ್ರಶ್ನೆ ಹಾಕುತ್ತಾರೆ.

ಅದಕ್ಕೆ ಉತ್ತರವನ್ನೀಯುವುದು ಸಹಜ ಸುಲಭ.

ಅದು ಹೇಗೆ ಎಂಬುದು ಥಾಮಸ್ ಪೇನ್ ಇವರು ಒಂದು ಲೇಖನದಲ್ಲಿ ಹೇಳಿದುದನ್ನೇ ಇಲ್ಲಿ ಸಂಕ್ಷಿಪ್ತ ರೀತಿಯಲ್ಲಿ ಹೇಳಿದರೆ ಗೊತ್ತಾಗುವುದಕ್ಕೆ ಅನುಕೂಲವಾಗುತ್ತದೆ. ಅವರು ಹೇಳಿದ್ದು ಹೀಗೆ: ಪ್ರಾತಿನಿಧಿಕ ಲೋಕಸತ್ತಾತ್ಮಕ ಶಾಸನಯಂತ್ರಣವೇ ಜಗತ್ತಿನಲ್ಲಿರುವ ಪ್ರತಿಯೊಬ್ಬ ಮಾನವನಿಗೆ ಅವನು ಜನ್ಮತಾಳಿದ ಗಳಿಗೆಯಿಂದಲೇ ದೊರೆತಿರುವ ನಿಜ ಮಾನವ—ಅಧಿಕಾರವಾಗಿರುತ್ತದೆ. ಅದು ಯಾರೂ ಅವನಿಗೆ 'ಕೊಡುವಂತಹ'ದಲ್ಲ, ಮತ್ತು ಅವನೂ ಅದನ್ನು ಯಾರಿಂದಲೂ 'ಪಡೆಯುಂತಹ'ದಲ್ಲ. ನಮ್ಮ ವಂಶಕ್ಕೆ ದೇವರಿಂದ ದೊರೆತಿರುವ ಈ ರಾಜ್ಯಾಡಳಿತದ 'ದೈವೀ ದೇಣಿಗೆ' ಎಂದು ಯಾವ ಒಬ್ಬ ಮಾನವನಾಗಲೀ ಅಥವಾ ಅವನ ಮನೆತನದವರು ಪರಂಪರೆಯಿಂದಾಗಲೀ ಸಕಲ ಮಾನವರ ಮೇಲೆ ರಾಜ್ಯಾಡಳಿತವು ನಡೆಸುವುದು ಶುದ್ಧ ಅನ್ಯಾಯಕರಲ್ಲದೇ ಅದು ಅವರು ಮಾಡುವುದು 'ಮಾನವೀಗುನ್ಹಾ'ವೇ ಆಗುತ್ತದೆ. ರಾಜ್ಯಾಡಳಿತವೆಂದರೆ ಒಬ್ಬ ಶಕ್ತಿಯುತ ಮನುಷ್ಯನು ಮತ್ತೊಬ್ಬ ಮನುಷ್ಯನ ಜನ್ಮಸಿದ್ಧ ಹಕ್ಕುಬಾಧ್ಯತೆಗಳ ಮೇಲೆ 'ದಾಳಿ' ಮಾಡುವುದಲ್ಲದೇ ಅವನ 'ಮಾನವ ಸ್ವಾತಂತ್ರ್ಯ'ದ 'ಕೊಲೆ' ಮಾಡಿದ ಹಾಗೆ ಆಗುತ್ತದೆ....ಆ ಹಕ್ಕು ಅವನಿಗೆ ಎಂದೆಂದಿಗೂ ಇರುವುದಿಲ್ಲ.... ರಾಜ್ಯಾಡಳಿತವು ಇರುವುದು ಸಕಲ ಸಮಾಜಕ್ಕಾಗಿಯೇ ಮತ್ತು ಸಮಾಜದಿಂದಲೇ ಅದು ಸ್ಥಾಪಿತವಾದುದು...... ತಾತ್ಪರ್ಯ, ರಾಜ್ಯಾಂಗವು ಸಮಾಜವು ಸಮಾಜಕ್ಕಾಗಿಯೇ ಎಂದರೆ ಸಮಾಜದ ಜನ್ಮಸಿದ್ಧವಾದ ಎಲ್ಲಾ ತರಹದ ಹಕ್ಕುಬಾಧ್ಯತೆಗಳನ್ನು ರಕ್ಷಿಸುವುದಕ್ಕಾಗಿ ಹಾಗೂ ಸಮಾಜದಲ್ಲಿ ಸದಾಕಾಲವೂ ಶಾಂತಿ ಸ್ಥಾಪಿಸುವುದಕ್ಕಾಗಿ ನಿರ್ಮಿಸಿರುವ ಆದರದೇಯಾದ ಒಂದು ಅಂಗವಾಗಿರುತ್ತದೆ... .

ಥಾಮಸ್ ಪೇನ್ ಹೇಳಿರುವ ಈ ತತ್ತ್ವವನ್ನು ನಾವು ಚೆನ್ನಾಗಿ ಮನದಲ್ಲಿಟ್ಟುಕೊಂಡರೆ 'ಘಟನೆಯಿಂದಲೇ ನಮಗೆ ಈ ಹಕ್ಕು ಸಿಕ್ಕಿದೆ—ಆ ಹಕ್ಕು ಸಿಕ್ಕಿದೆ' ಎಂದು 'ಉಪಕೃತ'ನಾದವನು ಹೇಳುವ ಧ್ವನಿಯಲ್ಲಿ ನಾವು ಸದಾಕಾಲವೂ ಹೇಳುತ್ತಿರುವುದು ಏನು ಪ್ರಯೋಜನವಿಲ್ಲ. ಜಗತ್ತಿನಲ್ಲಿ ನಾವು ಪ್ರವೇಶಿಸಿದ್ದಾಗಿಯೇ ನಮ್ಮೆಲ್ಲರಿಗೂ ನಾವು ಸಾಯುವ ತನಕ ಏನೂ ತೊಂದರೆ ತೊಡಕುಗಳು, ಮತ್ತೊಬ್ಬನಿಂದುಂಟಾಗದೆ ಪೀಡೆಗಳು ಇವೆಲ್ಲವಿಲ್ಲದೇ ಸರಳವಾಗಿ, ಸುಗಮವಾಗಿ ಜಗತ್ತಿನಲ್ಲೇನೇನು ನಮಗೋಸ್ಕರವಾಗಿ ಎಂದಿರುತ್ತದೆಯೋ ಅವೆಲ್ಲವೂ ಸಮಾಜದ ಒಂದು ನೀತಿ—ನಿರ್ಬಂಧಗಳಲ್ಲಿದ್ದು ನಾವು ಪಡೆಯುವುದು ನಮ್ಮ ಹಕ್ಕು ಮತ್ತು ಇದೇ ತರಹದ ಹಕ್ಕು ಇದೇ ಸಮಾಜದಲ್ಲಿರುವ ಇತರರದೂ ಆಗಿರುವುದರಿಂದ ಅವರಿಗೂ, ಅವರ ಹಕ್ಕುಗಳಿಗೂ ನಾವು ಧಕ್ಕೆಯನ್ನು ಕೊಡದೇ ಬಾಳುವುದು ನಮ್ಮ ಕರ್ತವ್ಯ.

ಇದೇ ಕರ್ತವ್ಯ ಪರಂಪರೆಯಲ್ಲಿ ಚುನಾವಣೆಯಲ್ಲಿ ಭಾಗ ವಹಿಸಿ ಮರೆಯದೇ ತಪ್ಪದೇ, ಯೋಗ್ಯ ರೀತಿಯಲ್ಲಿ ಮತದಾನ ಮಾಡುವುದೂ ನಮ್ಮೆಲ್ಲರ ಕರ್ತವ್ಯ ಎಂದರೆ, ಅದು ನಮ್ಮೆಲ್ಲರ ಹಕ್ಕು ಹೇಗೋ ಹಾಗೆಯೇ ನಮ್ಮ ದೇಶಾಭಿವೃದ್ಧಿಗಾಗಿ ಸರಿಯಾದ್ದವನನ್ನು ಚುನಾಯಿಸಿ ಅವನ ಕೈಯಲ್ಲಿ ನಮ್ಮೆಲ್ಲರ ಪರವಾಗಿ ನಮ್ಮೆಲ್ಲರ ಸುಖ-ಶಾಂತಿಗಾಗಿ ಅಧಿಕಾರಗಳನ್ನು ಕೊಡುವುದೂ ಸಹ ನಮ್ಮೆಲ್ಲರ ಸಾಮಾಜಿಕ ಕರ್ತವ್ಯವಾಗಿರುತ್ತದೆ. ಈ ಕರ್ತವ್ಯವನ್ನು ನಾವು ಯಾರೂ ತಪ್ಪಿಸಿಕೊಳ್ಳುವಂತಹದಲ್ಲ. ಹಾಗೆ ತಪ್ಪಿಸಿಕೊಳ್ಳುವ ಪಕ್ಷದಲ್ಲಿ ನಾವು 'ಸಾಮಾಜಿಕ ಗುನ್ಹೆಗಾರ'ರಾಗುತ್ತೇವೆ. ಏಕೆಂದರೆ ರಾಜಕಾರಣ ಮತ್ತು ಅದಕ್ಕೆ ಸಂಬಂಧಿಸಿರುವ ಚುನಾವಣೆ ಆದಿಗಳು ವಿಶಾಲ ದೃಷ್ಟಿಯಿಂದ ನೋಡಿದರೆ 'ಸಮಾಜಕಾರಣ'ವೇ ಆಗಿರುತ್ತವೆ. ರಾಜಕಾರಣವೇನೂ ಸಮಾಜ ಕಾರಣದಿಂದ ಬೇರೆಂದು ವಿಂಗಡಿಸುವ ಹಾಗಿಲ್ಲ. ಅದೊಂದು 'ಸಮಾಜಕಾರಣ'ವೆ, ಅದೊಂದು 'ಸಾಮಾಜಿಕ ಕಾರ್ಯ' ಆಗಿರುತ್ತದೆ. ಆದುದರಿಂದ ಜನ್ಮಸಿದ್ಧ ಪ್ರಾತಿನಿಧಿಕ ಲೋಕಸತ್ತಾತ್ಮಕ ಶಾಸನ ಯಂತ್ರಣದಲ್ಲಿ (ನ್ಯಾಯವಾಗಿ ನೋಡಿದರೆ ಇದೇ ಶಾಸನ ಯಂತ್ರಣವು ಸಕಲ ಜಗತ್ತಿನಲ್ಲೆಲ್ಲೆಲ್ಲಿಯೂ ಇರಬೇಕಾದುದು.) ನಾವೆಲ್ಲರೂ ಭಾಗ ವಹಿಸಿ ನಮ್ಮನ್ನು ಸರಿಯಾದ ದಾರಿಯಿಂದ ಮುಂದಕ್ಕೆ ಕರೆದುಕೊಂಡು ಹೋಗುವವನಿಗೆ ಮತ್ತು ಯಾರು ಸತ್ತಾಭಿಲಾಷಿ ಇರುವುದಿಲ್ಲವೋ, ಯಾರು ಭ್ರಷ್ಟಾಚಾರವನ್ನು ಮಾಡುವುದಿಲ್ಲವೋ, ಯಾರು ಸ್ವಾರ್ಥ, ಲೋಭ, ಕಪಟ ಇರುವುದಿಲ್ಲವೋ ಅವನಿಗೆ ನಮ್ಮ 'ಪ್ರತಿನಿಧಿ' ಎಂದು ಚುನಾಯಿಸಿಕೊಡುವುದು ನಮ್ಮ ಕರ್ತವ್ಯ, ಹಾಗೂ ಅವನೇನಾದರೂ ಅವನಿಗೆ ದೊರೆತಿರುವ ಅಧಿಕಾರದ ಬಲದಿಂದ ನಮ್ಮೆಲ್ಲರಿಗೆ ಅನ್ಯಾಯಮಾಡುತ್ತಿದ್ದಾನೆ, ಲಂಚ ತೆಗೆದುಕೊಂಡು ಅವನೊಬ್ಬನ ಸುಖ-ಶಾಂತಿಯನ್ನು ಕಾಪಾಡುತ್ತಿದ್ದಾನೆ ಮುಂತಾದ ಭ್ರಷ್ಟಾಚಾರಗಳು ಅವನ ಕಾರ್ಯಾಚರಣೆಯಲ್ಲಿ ಕಾಣಬಂದರೆ ಅವನಿಗೆ ನಾವೇ ಕೊಟ್ಟಿರುವ ಅಧಿಕಾರಗಳನ್ನು ಪ್ರಾತಿನಿಧಿಕ ಲೋಕಸತ್ತಾತ್ಮಕ ಶಾಸನಯಂತ್ರಣ ಪದ್ಧತಿಯಿಂದ ಕಿತ್ತುಕೊಂಡು ಅವನಿಗೆ ಶಾಸಿಸಬಹುದು... ನೋಡಿ, ನಮ್ಮೆಲ್ಲರಿಗೆ ಈ ತರಹದ ಶಾಸನ ಪದ್ಧತಿಯಲ್ಲಿ ಎಂತಹ ಮಹತ್ವದ ಹಕ್ಕು ದೊರೆತಿದೆ! ನಾವು ಬರುವ ಚುನಾವಣೆಯಲ್ಲಿ ಅದರ ಉಪಯೋಗವನ್ನು ಏಕೆ ಮಾಡಬಾರದು?... ಹಾಗಾದರೆ, ನೀವು ಮರೆಯದೇ, ತಪ್ಪದೇ, ಯೋಗ್ಯವಾದ ರೀತಿಯಲ್ಲಿ ಓಟುಮಾಡುವಿರಿ ತಾನೆ?

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಂ. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ತಾಯ್ತರುಳು

(೨ನೇ ಪುಟದಿಂದ)

ಳು ಇನ್ನೂ ಹಾಲು ಹಸುಳೆಯಾಗಿ ಮಲಗಿದ್ದ ಮರಿಯನ್ನು ದಿಟ್ಟಿಸುತ್ತಿದ್ದವು. ಆ ಎರಡು ಮರಿಗಳು, ಈಗಾಗಲೇ ತಾಯಿಯನ್ನಗಲಿದ ಆ ಎರಡು ಮರಿಗಳು ಹೇಗೆ ಜೀವಿಸುತ್ತಿರಬಹುದು? ವನಜಾ ಬೆರಗಾಗಿ ನೋಡುತ್ತಿದ್ದಳು. ಅವಳ ತಂದೆ...ತಾಯಿ... ಅವರಿಗಿಂತಲೂ ಹಿರಿಯರಿಗೆ ಯಾರಿಗೂ ನಾಯಿಯನ್ನು ಸಾಕುವ ಅಭ್ಯಾಸವಿರಲಿಲ್ಲ. ಒಮ್ಮೆ ಪುಟ್ಟ ತಮ್ಮನೊಬ್ಬ ಮುದ್ದಾಗಿದ್ದ ಮರಿಯೊಂದರ ರೂಪಕ್ಕೆ ಮನಸೋತು ಸಾಕಲೆಂದು ಮನೆಗೆ ತಂದಿದ್ದ. ಆದರೆ ಎಂದೂ ಅವನನ್ನು ಮಾತಿನಲ್ಲೂ ಹೆದರಿಸದ ತಂದೆ ಮುದ್ದಿನ ಮಗನನ್ನು ಮೈಯೆಲ್ಲಾ ಉರಿಯೇಳುವಷ್ಟು ತಮ್ಮ ಕೈಯು ಉರಿತೀರುವಷ್ಟು ಹೊಡೆದು ಬಿಟ್ಟಿದ್ದರು. ಆ ಸಮಯದಲ್ಲಿ ಮಗನನ್ನು ಅತಿ ಮುದ್ದಿಸುತ್ತಿದ್ದ ತಾಯಿ ಕೂಡಾ ತಡೆಯಲು ಹೋಗಲಿಲ್ಲ. ಅವನು ಮಾಡಿದ ಅಪರಾಧ ಅಂಥಹದು! ನಾಯಿಯಂತೂ ಆ ಗಲಾಟೆಯಲ್ಲಿ ಪ್ರಾಣ ಉಳಿಸಿಕೊಳ್ಳುವ ಅವಸರದಲ್ಲಿ ಎಲ್ಲಿ ಮಾಯವಾಗಿತ್ತೋ ಯಾರೂ ತಿಳಿಯಲಿಲ್ಲ. ಅಲ್ಲದೆ ಬೀದಿ ನಾಯಿಗಳು ಸಹ ಆ ಮನೆ ಬಾಗಿಲಿಗೆ ಮರೆತು ಕೂಡ ಬರುತ್ತಿರಲಿಲ್ಲ. ಸಣ್ಣ ಮಕ್ಕಳು ಯಾರಾದರೂ ಅದನ್ನು ಮುಟ್ಟಿಯಾರೆಂಬ ಭಯದಿಂದ ಬಂದ ನಾಯಿ. ಮುಂದೆಂದೂ ಮುಖ ತಿರುಗಿಸದಂತೆ ಏರ್ಪಾಡು ನಡೆಸಿ ಬಿಡುತ್ತಿದ್ದರು. ಅಂತಹ ವಾತಾವರಣದಲ್ಲಿ ಬೆಳೆದ ವನಜಾಗೆ, ಅದೇ ಶಿಕ್ಷಣವನ್ನು ಪಡೆದ ವನಜಾಗೆ ನಾಯಿಯೆಂದರೆ ಅದೊಂದು ಅಸಹ್ಯ ಜಂತು. ಪಾಪಿ ಜೀವ, ಕೊಳಕು ಪ್ರಾಣಿ, ಮೈಲಿಗೆಯ ವಸ್ತು. ನಿಜ. ವಸ್ತುವೆಂದೇ ಭಾವಿಸಿದ ಆಕೆ ಅದರ ಸಾವುನೋವುಗಳ ಅರಿವಿಲ್ಲದವಳೋ ಕೈಗೆ ಸಿಕ್ಕಿದ್ದರಲ್ಲಿ ಬಡಿಯುತ್ತಿದ್ದಳು. ಎಂದೇ ಪತಿಯ ವರ್ತನೆಯನ್ನು ಮದುವೆಯಾದಂದಿನಿಂದಲೂ ಕುತೂಹಲದಿಂದ ಆಶ್ಚರ್ಯದಿಂದ ಈಕ್ಷಿಸುತ್ತಿದ್ದಳು

ಗೋಪಾಲನಿಗಂತೂ ವನಜಾಳ ಗುಣ ವಿಚಿತ್ರವೆನಿಸಿತು. ತಾನು ಗಂಡಸು ಕೂಡಾ ವ್ಯಥಿಸುವಾಗ ಹೆಂಗರುಳಿನ ವನಜಾಳ ಹೃದಯದಲ್ಲಿ ಕರುಣೆಗೆ ಸ್ಥಾನವೇ ಇಲ್ಲವೆ? ನಿಜವಾಗಿಯೂ ಗೋಪಾಲನದು ಬಹಳ ಮೃದು ಸ್ವಭಾವ. ಅವನ ಹೃದಯ ಬಹುಕೋಮಲ. ಮದುವೆಯಾದಂದಿನಿಂದಲೂ 'ಮಂಜು'ವಿನ ವಿಚಾರದಿಂದಾಗಿ ಪತಿ, ಪತ್ನಿಯರಿಬ್ಬರಿಗೂ ಮನಸ್ತಾಪ ಉಂಟಾಗುತಿತ್ತು. ಆದರೆ ಎಂದೂ ಗೋಪಾಲ ನಿಷ್ಠುರವಾಗಿ ನುಡಿದವನೇ ಅಲ್ಲ. ವನಜಾಳಿಗಾದರೋ ಗೋಪಾಲ ಮಾತುಗಳೆಲ್ಲ ಒಗಟಿನಂತೆ ತೋರುತ್ತಿದ್ದವು. ಸಿಟ್ಟಿಗೇಳದ ಅವನ ಸ್ವಭಾವವನ್ನು ಮೆಚ್ಚಿದ್ದರೂ ಅವನ ಹೃದಯವನ್ನು ಅರಿಯುವುದು ಅವಳಿಂದಾಗಲಿಲ್ಲ. ಗೋಪಾಲ ಬೆಂಚಿದೆಯಿಂದ ಎಲ್ಲವನ್ನೂ ಸಹಿಸಿಕೊಂಡ. ಕೂಗುತ್ತಿರುವ 'ಮಂಜು'ವಿನ ತಲೆಯನ್ನು ಪ್ರೀತಿ ತುಂಬಿದ ಕೈಗಳಿಂದ ಸವರುತ್ತಾ ಮೂಕನಾಗಿಯೇ ಸಂತೈಸುತ್ತಿದ್ದ. ಕ್ರಮೇಣ ಆ ಮೂಕ ಪ್ರಾಣಿ ಇದೊಂದು ಮರಿಯನ್ನೇ ಪ್ರೀತಿಯ ಧಾರೆಯೆರೆದು ಸಾಕುತ್ತಾ ವ್ಯಥೆಯನ್ನು ಮರೆಯಿತು. ಗೋಪಾಲ ಸಮಾಧಾನಗೊಂಡ.

ಆದರೆ - ಹೀಗೆಯೇ ಬಹಳ ದಿನ ಕಳೆಯಲಿಲ್ಲ. ಒಮ್ಮೆ ಸಂಜೆ ಗೋಪಾಲ ಆಯಾಸಗೊಂಡು ಮರಳಿದಾಗ ಮಂಜು ತನ್ನೆಲ್ಲಾ ಶಕ್ತಿಯನ್ನೊಟ್ಟುಗೂಡಿಸಿ ಗಟ್ಟಿಯಾಗಿ ಬೊಬ್ಬಿಡುತಿತ್ತು. ಗೋಪಾಲ ಬಂದೊಡನೆಯೇ ಮಂಜುವಿನ ಕರ್ಕಶ ಧ್ವನಿ ದೈನ್ಯಕ್ಕೆ ತಿರುಗಿತು. ಅವನನ್ನು ಸುತ್ತಿ ಸುತ್ತಿ ಅಳತೊಡಗಿತು. ಗೋಪಾಲ ನಿಂತಲ್ಲೇ ಕುಸಿದು ಕುಳಿತ. ಮಂಜು ಕೂಗುತ್ತಲೇ ಅವನನ್ನು ನೆಕ್ಕುತಿತ್ತು. ಆದರ ಮರಿ ಮಾತ್ರ ತಾಯನ್ನು ಹಿಂಬಾಲಿಸಿ ಇರಲಿಲ್ಲ.

"ವನಜಾ....,,

"ಏನು?,,

"ಮಂಜುವಿನ ಮರಿ ಎಲ್ಲಿ?,,

"ನನಗೆ ಗೊತ್ತಿಲ್ಲ ಅಂದ್ರೆ - ಮಧ್ಯಾಹ್ನದಿಂದಲೂ ಕಾಣಿಸೋದೇ ಇಲ್ಲ. ಇದು ಮಾತ್ರ ದರಿದ್ರದ್ದು ವಿಪರೀತ ಕೂಗ್ತಿದೆ.,

ಗೋಪಾಲ ಮಾತನಾಡಲಿಲ್ಲ. ಮರಿಯನ್ನು ಕಳೆದುಕೊಂಡ ಆ ತಾಯಿ ಹೃದಯದ ನೋವು, ವನಜಾ, ಹೆಣ್ಣಾಗಿ, ತಾಯಿಯಾಗಿ ಅರ್ಥಮಾಡಿಕೊಳ್ಳಲಿಲ್ಲವೆಂದರೆ.. ಎಂದ ಮೇಲೆ ತಾನು ಅವಳೊಡನೆ ಆ ವಿಚಾರವಾಗಿ ಮಾತನಾಡುವುದಾದರೂ ಏನನ್ನು?

ಮಂಜು ಯಜಮಾನನನ್ನೇ ಪ್ರಶ್ನಾರ್ಥಕವಾಗಿ ದಿಟ್ಟಿಸುತ್ತಾ ಕೂಗುತಿತ್ತು. ಗೋಪಾಲ ಈಗ ನಿರುತ್ತರನಾಗಿದ್ದ. ಎರಡು ಮರಿಗಳನ್ನು ಕಳೆದುಕೊಂಡಾಗ 'ಇನ್ನೊಂದನ್ನು ಸಾಕೋಣ' ಎಂದಿತ್ತ ಆಶ್ವಾಸನೆಯಿಂದು ಮಣ್ಣುಗೂಡಿತ್ತು! ಈಗ ಅವನು ತನ್ನ ಪ್ರೀತಿಯ 'ಮಂಜು'ವಿಗೆ ಯಾವ ಉತ್ತರ ಕೊಡಬೇಕು? ಗೋಪಾಲ ಸುಮ್ಮನೆ ಕುಳಿತೇ ಇದ್ದ. ಅವನ ಕೈಮಾತ್ರ ಅರಿವಿಲ್ಲದೆಯೇ 'ಮಂಜು'ವಿನ ತಲೆಯ ಮೇಲೆ ಆಡುತ್ತಲೇ ಇತ್ತು. ಆದರೆ...ಈ ಬಾರಿ ಆದರಲ್ಲಿ ಯಾವ ಅಭಯದಾನವೂ ಇರಲಿಲ್ಲ. ಬರಿಯ ಸಹಾನುಭೂತಿ ಸೂಚನೆಯೊಂದಿತ್ತೋ ಏನೋ...ಅಥವಾ ಆ ತಾಯ್ತರುಳಿನ ವ್ಯಥೆಯಲ್ಲಿ ತಾನೂ ಭಾಗಿಯೆಂಬರ್ಥದಿಂದಲೋ ಏನೋ ಮೌನವಾಗಿ ಕೈಯಾಡಿಸುತ್ತಿದ್ದ. "ಕಾಲು ತೊಳೀರಿ, ಕಾಫಿ ಆರಿ ಹೋಗ್ತಿದೆ".

"ಅಪ್ಪಾ.......ನನ್ಗೊಂದು ಗೊಂಬೆ ಬೇಕು.,,

"ಅಲ್ಲ....ಮಗು ಮಾತಾಡ್ತಿದೆ. ನೀವ್ಯಾಕೆ ಹೀಗಾಗಿದ್ದೀರಿ ಅಂದ್ರೆ....?"

ಗೋಪಾಲ ಮೌನವಾಗಿ ತಾಯಿ, ಮಗನನ್ನು ನೋಡಿದ ಹಾಗೆಯೇ ಕಂಪನನ್ನೂ ಕಳೆದುಕೊಂಡು, ಮೂರು ಮರಿಗಳನ್ನು ಕಳೆದುಕೊಂಡು ಕೊರಗುತ್ತಿರುವ 'ಮಂಜು'ವನ್ನೂ ನೋಡಿದ. ವನಜಾಳದು ತಾಯಿ ಹೃದಯವಲ್ಲವೇ? ಹೀಗಿದ್ದು 'ಮಂಜು'ವಿನ ದುಃಖ ಅರ್ಥವಾಗಲಾರದೇ?

"ಕಾಫಿ ಆರಿ ಹೋಗುತ್ತೆ" ವನಜಾ ಮತ್ತೊಮ್ಮೆ ಹೇಳಿದಳು. 'ವನಜಾ ...ನನಗೆ ತೊಂದರೆ ಕೊಡಬೇಡ ನನಗೇನೂ ಬೇಡ'. ಎಂದವನೇ ಉತ್ತರವನ್ನು ನಿರೀಕ್ಷಿಸದೆಯೇ ಕೆಳಗಿಳಿದ ಗೋಪಾಲ 'ಮಂಜು' ಕೂಗುತ್ತಲೇ ಹಿಂಬಾಲಿಸಿತು, ಗೋಪಾಲ ಹುಚ್ಚನಂತೆ ಮನೆಯ ಸುತ್ತಮುತ್ತಲೆಲ್ಲ ಹುಡುಕಿದ. ಬೀದಿಯಲ್ಲಿದ್ದ ಕೆಲವರನ್ನು ಕೇಳಿ ನೋಡಿದ. ಆದರೆ 'ಮಂಜು'ವಿನ ಮರಿಯನ್ನು ಯಾರೂ ನೋಡಲೇ ಇಲ್ಲ. ನಿರಾಸೆಯಿಂದ ಹಿಂದಿರುಗಿದ ಗೋಪಾಲನನ್ನು ಬಾಲುವಿನ ಮಾತು ಎಚ್ಚರಗೊಳಿಸಿತು.

"ಅಮ್ಮಾ ಮರೀನ ಯಾಕೆ ಕೊಟ್ಟೆ.... ಅಪ್ಪನತ್ರ ಹೇಳ್ಬೇಡ ಅಂತೀಯಲ್ಲ...ಯಾಕಮ್ಮಾ?"

ಅನಿರೀಕ್ಷಿತವಾಗಿ ಬಂದ ಗೋಪಾಲನನ್ನು ನೋಡಿ ವನಜಾಳ ದೇಹ ನಡುಗಿತು. ಗೋಪಾಲನ ಕಣ್ಣುಗಳು ರಕ್ತವರ್ಣತಾಳಿದ್ದವು. ಎಂದೂ ನೋಡದಂತಹ ಗಂಡನ ಅವತಾರವನ್ನು ನೋಡಿ ವನಜಾ ಬೆದರಿದಳು.

"ಅಪ್ಪಾ...ಬಾಲು ತಂದೆಯ ಬಳಿಗೆ ಬಂದ "ನಡೆಯಾಚೆ...ಹತ್ತಿರ ಬರ್ಬೇಡ. ಕ್ರೋಧ ಗೋಪಾಲನ ವಿವೇಕವನ್ನು ಕೆಡಿಸಿತ್ತು ಏನೂ ಅರಿಯದ ಹಸುಳೆಯನ್ನು ದೂಡಿ ಕೋಣೆಯೊಳಗೆ ಹೊಕ್ಕ. ತಂದೆಯ ಅರ್ಥವಿಲ್ಲದ ವರ್ತನೆಯನ್ನು ನೋಡಿ ಬಾಲಕೃಷ್ಣ ಅಳತೊಡಗಿದ.

"ಮಗುವಿಗಿಂತಲೂ ಇವರಿಗೆ ನಾಯಿ ಹೆಚ್ಚಾಯ್ತಲ್ವೆ!?" ಮುದ್ದಿನ ಮಗನ ಅಳುವನ್ನು ನೋಡಿದ ವನಜಾ ಸಿಡುಕಿನಿಂದ ನುಡಿದು ಒಳಗೆ ಹೋದಳು. ಗೋಪಾಲನಿಗೆಂದು ತಯಾರಿಸಿದ ಕಾಫಿ ಆರಿಹೋಯಿತು.

"ಊಟಕ್ಕೆ ಬನ್ನಿ"

ಮಂಜು ಗಂಜಿ ತಿಂದಿತೇ.!"

"ಏನೋ ನಾನು ನೋಡ್ಲಿಲ್ಲ"

ಗೋಪಾಲ ಹೊರಗೆ ಕಾಲಿಂಸಿದ 'ಮಂಜು'ವಿನ ಬಟ್ಟಲಿನಲ್ಲಿ ಬೆಳಗ್ಗೆ ಹಾಕಿದ ಗಂಜಿ ಹಾಗೆಯೇ ಇತ್ತು. 'ಮಂಜು' ಕೂಗಿ ಕೂಗಿ ಆಯಾಸಗೊಂಡು ಮಲಗಿತ್ತು. ಗೋಪಾಲನ್ನು ನೋಡಿದೊಡನೆಯೇ ಪುನಃ ಕೂಗಲಾರಂಭಿಸಿತು.

ಗೋಪಾಲ ಮೌನವಾಗಿ ಕೋಣೆ ಸೇರಿ ಮಲಗಿದ. ವನಜಾಳಿಗೇಕೋ ಗೋಪಾಲನನ್ನು ಮಾತನಾಡಿಸುವ ಧೈರ್ಯವಿರಲಿಲ್ಲ, ಒಂದೆರಡು ಬಾರಿ ಕರೆದು ವಿಫಲಳಾದಾಗ ತಾನೂ ಉಪವಾಸವೇ ಮಲಗಿದಳು.

ನಾಲ್ಕೈದು ದಿನಗಳು ಕಳೆದವು. ಮನೆಯ ವಾತಾವರಣ ತೀರಾ ನೀರಸವಾಗಿ ಕೆಟ್ಟು ಹೋಗಿತ್ತು. ಮನೆಯಲ್ಲಿ ಸ್ಮಶಾನ ಮೌನ ಆವರಿಸಿತ್ತು. 'ಮಂಜು' ಕೂಗು ನಿಲ್ಲಿಸಿತ್ತು. ಗೋಪಾಲ ಮಾತೆತ್ತುತ್ತಿರಲಿಲ್ಲ. ವನಜಾ ಉಸಿರು ಬಿಗಿ ಹಿಡಿದಿದ್ದಳು ಈ ವಾತಾವರಣದಿಂದ ಬಾಲುವಿನ ಮಾತೂ ಕಡಿಮೆಯಾಗಿತ್ತು. ಗೋಪಾಲ ಸರಿಯಾಗಿ ಉಣ್ಣುತ್ತಿರಲಿಲ್ಲ 'ಮಂಜು' ಕೂಡಾ ಹಸಿವೆ ತಡೆಯದಾದಾಗ ಸ್ವಲ್ಪ ಗಂಜಿ ತಿನ್ನುತ್ತಿತ್ತು.

ವನಜಾಳಿಗೆ ಊಟವೇ ಬೇಡವೆನಿಸುವಂತಾಗಿತ್ತು. ಪತಿಯ ವರ್ತನೆಯಿಂದ ಅವಳ ಹೃದಯ ಬೇಯುತಿತ್ತು.

ಅಂದು ಗೋಪಾಲ ಮನೆ ಪ್ರವೇಶಿಸಿದಾಗ ವನಜಾ ಅಳುತ್ತಿದ್ದಳು. ಗೋಪಾಲನನ್ನು ನೋಡಿದೊಡನೆಯೇ ಅವಳ ಅಳು ಹೆಚ್ಚಾಯಿತು. ಗೋಪಾಲ ಆಶ್ಚರ್ಯದಿಂದ ಪತ್ನಿಯನ್ನು ನೋಡಿದ.

"ಅಯ್ಯೋ 'ನಮ್ಮ ಬಾಲು ಇಲ್ಲ... ಎಲ್ಲ ಕಡೆ ಹುಡುಕಿದೆ 'ಮಧ್ಯಾಹ್ನ ಊಟ ಮಾಡಿದವ ಎಲ್ಲಿ ಹೋದ್ನೋ ಗೊತ್ತಿಲ್ಲ. ನಾನು ನೆರಮನೇಲಿರಬಹುದು ಅಂತ ಯೋಚಿಸಿ ಸುಮ್ಮನಿದ್ದೆ. ಅಪ್ರೆ ಕತ್ತಲಾದ ಮೇಲೆ ಕೇಳಿದ್ರೆ ಇಲ್ಲೆಲ್ಲೂ ಇಲ್ಲ. ಅವ ಎಲ್ಲಿಗೂ ಬರ್ಲೇ ಇಲ್ವಂತೆ. ಆಯ್ಯೋ ನಾನೇನು ಮಾಡ್ಲಿ ...ಅಯ್ಯೋ....ಎಂದವಳೇ ಬಿಕ್ಕಿ ಬಿಕ್ಕಿ ಅಳತೊಡಗಿದಳು.

'ಸೀತಮ್ಮನ ಮನೆ ವಿಚಾರಿಸಿದ್ಯಾ?,,

"ಎಲ್ಲ ಕೇಳಿ ಆಯ್ತು. ಬೀದಿಲಿ ಹುಡುಕಿದೆ. ಎಲ್ಲ ಆಯ್ತು. ಅಯ್ಯೋ .. ನಾನಿನ್ನೇನು ಮಾಡ್ಲಿ?,,



Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone 374.

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್ ಶೇಟ್

(ಹಿಂದಿನ ಪುಟದಿಂದ)

ಗೋಪಾಲ ಮಾತನಾಡದೆ ಬೀದಿಗಿಳಿದ. ಕತ್ತಲಾಗಿತ್ತು. ಬೀದಿಯ ದೀಪಗಳು ಬೆಳಗುತ್ತಿದ್ದವು. ಈ ಹೊತ್ತಿನಲ್ಲಿ ಐದು ವರ್ಷದ ಬಾಲಕ ಎಲ್ಲಿದ್ದಾನೋ? ಹೇಗೆ ಹುಡುಕಲಿ? ಎಂದು ಯೋಚಿಸುತ್ತಾ ಹೆಜ್ಜೆ ಹಾಕುತ್ತಿದ್ದ. ಇದಿರು ಸಿಕ್ಕಿದ ಪರಿಚಿತರಿಬ್ಬರೊಡನೆ ಕೇಳಿದಾಗ ಅವರಿಗೂ ಆಶ್ಚರ್ಯವಾಯಿತು.

"ಮನೇ ಬಾವಿ....ಗೀವಿ..." ಎಂದ ಅವರ ಮಾತು ಕೇಳಿದೊಡನೆಯೇ ಹಿಂದಿನಿಂದ ಓಡಿ ಬರುತ್ತಿದ್ದ ವನಜಾ ಸುತ್ತಲಿರುವ ಜನರನ್ನು ಲಕ್ಷ್ಯಿಸದೆ ಕೂಗ ತೊಡಗಿದಳು. ಗೋಪಾಲ ತಟಸ್ಥನಾಗಿ ನಿಂತಿದ್ದ. ದೂರದಲ್ಲಿ ಮಗು ಅಳುವ ಧ್ವನಿ ಕೇಳಿಸಿತು. ಜನರ ಗುಂಪು ಕಾಣಿಸಿತು

ಗೋಪಾಲ ಧಾವಿಸಿಹೋದ. ಬಾಲಕೃಷ್ಣ ಅಲ್ಲಿ ನಿಂತಿದ್ದ. ಜನರು ನಾನಾ ಪ್ರಶ್ನೆಗಳನ್ನು ಕೇಳುತ್ತಿದ್ದರು.

"ನಿನ್ನ ಮನೆ ಎಲ್ಲಿ? ಯಾರು ನಿನ್ನ ತಂದೆ?", ಬಾಲಕೃಷ್ಣ ಕತ್ತಲಲ್ಲಿ ಅಪರಿಚಿತರ ನಡುವೆ ಸಿಕ್ಕಿ ಭಯದಿಂದ ಬಿಕ್ಕಿ ಬಿಕ್ಕಿ ಅಳುತ್ತಿದ್ದನಲ್ಲದೆ ಯಾವ ಮಾತನ್ನೂ ಆಡುತ್ತಿರಲಿಲ್ಲ.

"ಬಾಲೂ...", ಗೋಪಾಲನ ಧ್ವನಿ ಕೇಳಿದೊಡನೆಯೇ ಬಾಲಕೃಷ್ಣ ಓಡಿಬಂದು ತಂದೆಯನ್ನು ತಬ್ಬಿಕೊಂಡು ಅಳಲಾರಂಭಿಸಿದ.

"ಅಯ್ಯೋ.... ಬಾಲು....ಎಲ್ಲಿಗ್ಹೋಗಿದ್ದೆ?", ವನಜಾ ಓಡಿಬಂದು ಮಗನನ್ನಪ್ಪಿಕೊಂಡು ಗೋಳಿಟ್ಟಳು. "ನಾ...ನು... ನಾ...ನು....'ಮಂಜು'...ಬಂತೂಂತ. ಬಂದದ್ದು....ಮತ್ತೆ ಮನೆ ದಾರಿ ಸಿ....ಕ್ಕಿಲ್ಲ. ಎಂದು ಪುನಃ ಅಳತೊಡಗಿದನವ. ಗೋಪಾಲ ಒಮ್ಮೆಯೇ ಬೆರಗಾಗಿ ನೋಡಿದ ಮಂಜು ಮರಿಯನ್ನು ನೆಕ್ಕುತ್ತಾ ಸಂತೋಷಾಶ್ರುವನ್ನು ಸುರಿಸುತ್ತಿತ್ತು. ಇವರ ಗದ್ದಲದತ್ತ ಅದರ ಲಕ್ಷ್ಯವಿರಲಿಲ್ಲ. ಕಿಡಿಗೇಡಿ ಮಕ್ಕಳ ಕಲ್ಲಿನೇಟಿನಿಂದ ಗಾಯಗೊಂಡ ಮರಿ ಕಿರಿಚುತ್ತಿತ್ತು 'ಮಂಜೂ...", ಗೋಪಾಲನ ಧ್ವನಿಯಿಂದೆಚ್ಚೆತ್ತ 'ಮಂಜು' ಭಯದಿಂದ ಯಜಮಾನಿಯತ್ತ ನೋಡಿತು ಆದರೆ ಕೆಲವೇ ಗಂಟೆಗಳ ಕಾಲ ಮಗನನ್ನಗಲಿದ್ದ ವನಜಾಳ ತಾಯಿ ಹೃದಯಕ್ಕೆ ನೋವಿನರಿವು ಉಂಟಾಗಿತ್ತು. ಪತಿಯ ಕ್ರೋಧಕ್ಕಿದಿರಿಗಿರಲಾರೆನೆಂದು ಆತನಿಗೆ ಗೊತ್ತಾಗದಂತೆಯೇ ಮರಿಯನ್ನು ಬೀದಿಗೆ ಬಿಡಲು ಯಾರೊಡನೆಯೋ ಹೇಳಿ ತಾನು ನಿರಪರಾಧಿಯೆಂದುಕೊಂಡಿದ್ದ ವನಜಾಳಿಗೆ ತನ್ನ ಅಪರಾಧದ ಪ್ರಜ್ಞೆ ಉಂಟಾಗಿತ್ತು. ಎಂದೇ ಆಕೆ ಗದ್ಗದ ಕಂಠದಿಂದ ನುಡಿದಳು. "ನನ್ನದು ತಪ್ಪಾಯ್ತು ಮಂಜೂ ಬಾ ಮನೆಗೆ ಬಾ ನನ್ನನ್ನು ಕ್ಷಮಿಸು.",

"ಮಂಜೂ ..." ಎಂದವನೇ ಗೋಪಾಲ ಮರಿಯ ಮೈ ಮೇಲಿನ ಕೆಸರನ್ನು ಲಕ್ಷ್ಯಿಸದೆ ಕೈಯಲ್ಲೆತ್ತಿಕೊಂಡ ಪತ್ನಿಯಲ್ಲಾದ ಪರಿವರ್ತನೆ ಅವನಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಿತು. ಅಪಾರ ಸ್ವಾಮಿಭಕ್ತಿಯುಳ್ಳ 'ಮಂಜು' ಎಲ್ಲವನ್ನೂ ಮರೆತು ಯಜಮಾನನನ್ನು ಹಿಂಬಾಲಿಸಿತು.

ಮತದಾನ ಎಂದು, ಯಾರಿಗೆ?

ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ತಿಂಗಳಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಗಳು ಈ ಕೆಳಗಿನ ಕಾರ್ಯಕ್ರಮದಂತೆ ನಡೆಯಲಿರುವುವು.

ಫೆಬ್ರವರಿ, ೧೯.

ಬಿದರೆ, ಬಿಜಾಪುರ ಉತ್ತರ, ಬೆಳಗಾಂ, ಕೊಪ್ಪಳ, ಚಿತ್ರದುರ್ಗ, ಉಡುಪಿ, ಬೆಂಗಳೂರು ನಗರ ಮತ್ತು ಚಾಮರಾಜನಗರಗಳ ಲೋಕಸಭಾ ಕ್ಷೇತ್ರಗಳ ಮತ್ತು ಅವಕ್ಕೆ ಒಳಪಡುವ ವಿಧಾನ ಸಭಾ ಕ್ಷೇತ್ರಗಳು

ಫೆಬ್ರವರಿ, ೨೨.

ದಕ್ಷಿಣ ಬಿಜಾಪುರ, ಉತ್ತರ ದಾರವಾಡ, ಮಂಗಳೂರು, ತಿಪಟೂರು, ಚಿಕ್ಕಬಳ್ಳಾಪುರ, ಬೆಂಗಳೂರು, ಮಂಡ್ಯಗಳ ಲೋಕಸಭಾ ಕ್ಷೇತ್ರಗಳು ಮತ್ತು ಅವಕ್ಕೆ ಒಳಪಡುವ ವಿಧಾನ ಸಭಾ ಕ್ಷೇತ್ರಗಳು.

ಫೆಬ್ರವರಿ, ೨೫.

ಚಿಕ್ಕೋಡಿ, ಉತ್ತರ ಕನ್ನಡ, ದಕ್ಷಿಣ ದಾರವಾಡ, ರಾಯಚೂರು, ಬಳ್ಳಾರಿ, ಶಿವಮೊಗ್ಗ, ಹಾಸನ, ತುಮಕೂರು, ಕೋಲಾರ, ಮತ್ತು ಮೈಸೂರು ಲೋಕಸಭಾ ಕ್ಷೇತ್ರಗಳು ಮತ್ತವಕ್ಕೆ ಒಳಪಡುವ ವಿಧಾನಸಭಾ ಕ್ಷೇತ್ರಗಳು.

ಜಿಲ್ಲೆಯ ಅಭ್ಯರ್ಥಿಗಳು

ವಿಧಾನ ಸಭಾ ಕ್ಷೇತ್ರ

ಮಂಗಳೂರು-೧.— ಶ್ರೀ ಮರ್ಸೆಲ್ ಶ್ರೀನಿವಾಸ ನಾಯಕ್ (ಕಾಂ.) ಶ್ರೀ ಸಿ. ಜಿ. ಕಾಮತ್ (ಜ.), ಶ್ರೀ ಎ. ಶಾಂತರಾಮ ಪೈ (ಕ), ಶ್ರೀಮತಿ ಲೋರಾ ಪ್ಯಾಸ್ (ಸ್ವ.)—೪ ಜನರು.

೨ **ಮಂಗಳೂರು-೨.**— ಶ್ರೀ ಬಿ. ಎಂ. ಇದಿನಬ್ಬ (ಕಾಂ), ಶ್ರೀ ರಘುನಾಥ (ಜ), ಶ್ರೀ ಕೆ. ಕೃಷ್ಣ ಶೆಟ್ಟಿ (ಕ.) ಶ್ರೀ ಎ. ನಾಗಪ್ಪ (ಸ್ವ), ಶ್ರೀ ಎಸ್. ಎಂ. ಸಯ್ಯದ್ ಅಹಮದ್ (ಸ್ವತಂತ್ರ)—೫ ಜನರು.

೩. **ಸುರತ್ಕಲ್**— ಶ್ರೀ ಕೆ. ದೂಮಪ್ಪ (ಕಾಂ.), ಶ್ರೀ ಸಂಜೀವನಾಥ ಐಕಳ (ಪ್ರಸವಾ), ಶ್ರೀ ಸುಂದರ ಅಮೀನ್ (ಜ), ಶ್ರೀ ಮರಿಯನ್ ಪ್ಯಾಸ್ (ಸ್ವತಂತ್ರ)—೪ ಜನರು.

೪. **ಪಾಣೆಮಂಗಳೂರು**:-ಡಾ| ಕೆ. ನಾಗಪ್ಪ ಆಳ್ವ (ಕಾಂ), ಶ್ರೀ ರಾಮಯ್ಯ (ಜ), ಶ್ರೀ ಎಂ. ಎಚ್. ಕೃಷ್ಣಪ್ಪ (ಕ), ಡಾ| ಎಂ. ಎಸ್. ಹೆಗ್ಡೆ (ಸ್ವ), ಶ್ರೀ ಕೆ. ಮರಿಯಪ್ಪ ಭಟ್ (ಸ್ವತಂತ್ರ)—೫ ಜನರು.

೫ **ಪುತ್ತೂರು**:—ಶ್ರೀ ಕೆ. ವೆಂಕಟರಮಣ ಗೌಡ (ಕಾಂ), ಶ್ರೀ ಕೆ. ರಾಮ ಭಟ್ (ಜ) ಶ್ರೀ ಕೆ. ಸಂಜೀವ ರೈ (ಕ), ಶ್ರೀ ಕೆ. ಉಗ್ಗಪ್ಪ ಶೆಟ್ಟಿ (ಸ್ವ)—೪ ಜನರು.

೬. **ಸುಳ್ಯ** (ಕಾದಿಟ್ಟದ್ದು): — ಶ್ರೀ ಎಸ್. ಸುಬ್ಬಯ್ಯ ನ್ಯಾಕ್ (ಕಾಂ), ಶ್ರೀ ಕೃಷ್ಣ (ಜ.) ಶ್ರೀ ಕೆ. ವೆಂಕಪ್ಪ. (ಕ) ವೆಂಕಪ್ಪ ನಾಯ್ಕ (ಸ್ವ)—೪ ಜನರು.

೭ **ಬೆಳ್ತಂಗಡಿ**:- ಶ್ರೀ ಬಿ. ವೈಕುಂಠ ಬಾಳಿಗ (ಕಾಂ), ಶ್ರೀ ವಿಶ್ವನಾಥ ಶೆಣೈ (ಜ), ಶ್ರೀ ಕೆ. ಬಿ. ಜಿನರಾಜ ಹೆಗ್ಡೆ (ಸ್ವ), ಶ್ರೀ ರಾಮಯ್ಯ ನ್ಯಾಕ್ (ಸ್ವತಂತ್ರ)—೪ ಜನರು.

೮. **ಮೂಡಬಿದಿರೆ** (ಕಾದಿಟ್ಟದ್ದು):- ಶ್ರೀ ಮಂಜಪ್ಪ ಉಳ್ಳಾಲ (ಕಾಂ), ಶ್ರೀ ಗೋಪಾಲ ಸಾಲೆನ್ನ (ಸ್ವತಂತ್ರ)—೨ ಜನರು.

೯ **ಕಾರ್ಕಳ**—ಡಾ ಕೆ. ಕೆ. ಹೆಗ್ಡೆ (ಕಾಂ), ಶ್ರೀ ದಯಾನಂದ ಆರ್. ಕಲೆ (ಪ್ರಸವಾ) ಶ್ರೀ ಆರ್. ದೇವರಾಯ ಶೆಣೈ ಸ್ವತಂತ್ರ—೩ ಜನರು.

೧೦ **ಉಡುಪಿ**-ಶ್ರೀ ಎಂ. ಮಧ್ವರಾಜ (ಕಾಂ), ಶ್ರೀ ದೇವೀ ಪ್ರಸಾದ ಶೆಟ್ಟಿ (ಜ) ಶ್ರೀ ಕೆ. ದಾಸ ಸೇರಿಗಾರ (ಕ), ಶ್ರೀ ಯು ಎಸ್. ನಾಯಕ್ (ಪ್ರಸವಾ) —೪ ಜನರು.

೧೧ **ಕಾಪು**—ಶ್ರೀ ಎಫ್. ಎಕ್ಸ್ ಡಿ. ಪಿಂಟೋ (ಕಾಂ) ಶ್ರೀ ಭಾಸ್ಕರ ಶೆಟ್ಟಿ (ಪ್ರಸವಾ) ಶ್ರೀ ಎಂ. ಸಿ. ಫೆರ್ನಾಂಡಿಸ್ (ಸ್ವತಂತ್ರ) ೩ ಜನರು

೧೨ **ಬ್ರಹ್ಮಾವರ**—ಶ್ರೀ ಎಸ್. ಧರ್ಮಸಾಮ್ರಾಜ್ಯ (ಕಾಂ.) ಶ್ರೀ ಮಹಬಲೇಶ್ವರ ಅಡಿಗ (ಜ), ಶ್ರೀ ಬಿ. ಶೀನಪ್ಪ ಶೆಟ್ಟಿ (ಪ್ರಸವಾ) ೩ ಜನರು

೧೩ **ಕುಂದಾಪುರ**—ಶ್ರೀ ಯಸ್. ಎಸ್. ಕೊಳ್ಕೆಬೈಲು (ಕಾಂ), ಶ್ರೀ ವಿ ಶ್ರೀನಿವಾಸ ಶೆಟ್ಟಿ (ಪ್ರಸವಾ) ಶ್ರೀ ಕೆ. ಸೂರ್ಯನಾರಾಯಣ ಹಂದೆ (ಸ್ವತಂತ್ರ) —೩ ಜನರು

೧೪ **ಬೈಂದೂರು**—ಶ್ರೀ ವೈ. ಮಂಜಯ್ಯ ಶೆಟ್ಟಿ ಕಾಂಗ್ರೆಸ್, ಶ್ರೀ ಎಚ್. ಸುಬ್ಬರಾವ್ (ಪ್ರಸವಾ) ಶ್ರೀ ವಿಶ್ವೇಶ್ವರಯ್ಯ ಸ್ವತಂತ್ರ—೩ ಜನರು.

ಒಟ್ಟು ೧೪ ಸ್ಥಾನಗಳಿಗೆ ೫೧ ನಾಮಪತ್ರಗಳು. ಇವುಗಳಲ್ಲಿ ಕಾಂಗ್ರೆಸ್ ೧೪, ಜನಸಂಘ ೯, ಕಮ್ಯುನಿಸ್ಟ್ ೬, ಸ್ವತಂತ್ರ ಪಕ್ಷ ೬, ಪ್ರಜಾಸಮಾಜವಾದಿ ಪಕ್ಷ ೬ ಮತ್ತು ಸ್ವತಂತ್ರರು ೧೦.

ಲೋಕ ಸಭೆ.

೧ **ಮಂಗಳೂರು**— ಶ್ರೀ ಎ. ಶಂಕರ ಆಳ್ವ (ಕಾಂ.), ಶ್ರೀ ಎಂ. ಗೋವಿಂದ ರಾವ್ (ಜ.), ಶ್ರೀ ಬಿ. ಎನ್ ಕಕ್ಕಿಲಾಯ (ಕ.), ಶ್ರೀ ಜೆ. ಎಂ. ಲೋಬೋ ಪ್ರಭು (ಸ್ವ.)—೪ ಜನರು.

೨. **ಉಡುಪಿ** – ಶ್ರೀ ಯು. ಶ್ರೀನಿವಾಸ ಮಲ್ಯ (ಕಾಂ), ಶ್ರೀ ಡಿ. ಮೋಹನ ರಾವ್ (ಪ್ರಸವಾ), ಶ್ರೀ ಟಿ. ವೆಂಕಟರಾವ್ (ಸ್ವತಂತ್ರ)—೩ ಜನರು.

ಒಟ್ಟು ೨ ಸ್ಥಾನಗಳಿಗೆ ೭ ನಾಮಪತ್ರಗಳು ಇವುಗಳಲ್ಲಿ ಕಾಂಗ್ರೆಸ್ ೨, ಜನಸಂಘ ೧, ಪ್ರಸವಾ ೧, ಸ್ವತಂತ್ರ ಪಕ್ಷ ೧, ಕಮ್ಯುನಿಸ್ಟ್ ೧, ಮತ್ತು ಸ್ವತಂತ್ರರು ೧.

ಸಿಗುತ್ತವೆ—

ಉಡುಪಿಯ 'ಕಿರಿಯರ ಪ್ರಪಂಚ'ದ
'ಅಂತರಂಗ ಕಾರ್ಯಾಲಯ'ದ
'ನವಭಾರತ ಪುಸ್ತಕ ಭಂಡಾರ'ದ
ಪ್ರಕಟಣೆಗಳು.

ಸುಲಭದಲ್ಲಿ ಇಂಗ್ಲಿಷ್. ಮನೆ ಮದ್ದು, ಸುಲಭದಲ್ಲಿ ಪತ್ರಲೇಖನ
ಎಂಬ ಅತ್ಯುಪಯೋಗಿ ಪುಸ್ತಕಗಳಿಗೆ
ವಿಚಾರಿಸಿರಿ:

ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್
ಕೆ. ಎಸ್ ರಾವ್ ರೋಡು, ಮಂಗಳೂರು—1.

ಕೆನರಾ ಕಾಲೇಜು ಬುಕ್ ಕಂಪೆನಿ,
ಕೊಡಿಯಾಲಬೈಲು, ಮಂಗಳೂರು—3

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1—25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ಕಾಂಗ್ರೆಸಿಗೆ ಮತ— ರಾಷ್ಟ್ರದ ಹಿತ!

ನವಯುಗ

ಕಾಂಗ್ರೆಸಿನ ಜಯ ಜನತೆಯ ವಿಜಯ.

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೨೨ | ಉಡುಪಿ 8—2—1962 ಗುರುವಾರ | Vol. 41 No. 22

ಚುನಾವಣೆಯ ತುತ್ತೂರಿ

ಕಾಂಗ್ರೆಸ್‌ಗೆ ಮತನೀಡಿರಿ

ಆಡಳಿತೆಯಲ್ಲಿ ನಾನಾ ಬಗೆಯಿರುವುದಾದರೂ ಅವುಗಳಲ್ಲಿ ಪ್ರಜಾಪ್ರಭುತ್ವವೇ ಉತ್ತಮವಾದುದೆಂದು ಹೆಚ್ಚಿನವರ ಅಭಿಪ್ರಾಯ ಈ ಕಾರಣದಿಂದಲೇ ಲೋಕದ ಅಧಿಕತರ ಸ್ವತಂತ್ರ ರಾಷ್ಟ್ರಗಳು ಈ ವಿಧದ ಆಡಳಿತೆಯನ್ನು ಮೆಚ್ಚಿಕೊಂಡು, ಅಳವಡಿಸಿಕೊಂಡಿವೆ. ರಾಜ ಮಹಾರಾಜಾಧಿರಾಜರ ನಿರಂಕುಶ ಪ್ರಶಾಸನ ಪ್ರಣಾಳಿಯು ಅವನತವಾಗಿ ಪ್ರಜೆಗಳೇ ಆರಿಸಿದ ಪ್ರತಿನಿಧಿಗಳಿರುವ ಪ್ರತಿನಿಧಿ ಮಂಡಳಿಗಳ ಮುಖಾಂತರ ಆಡಳಿತೆಯು ನಡೆಯುವುದಕ್ಕೆ ಪ್ರಜಾಪ್ರಭುತ್ವವೆಂದು ಹೆಸರು. ನಮ್ಮ ಭಾರತವಾದರೂ ಸ್ವಾತಂತ್ರ್ಯವನ್ನು ಗಳಿಸಿದ ಕ್ಷಣದಲ್ಲೇ ಇಂತಹ ಲೋಕಮಾನ್ಯ ಪದ್ಧತಿಯನ್ನು ವ್ಯವಹಾರಕ್ಕೆ ತಂದು ಜಗತ್ತಿನ ಅತಿ ದೊಡ್ಡ ಪ್ರಜಾರಾಜ್ಯವೆಂಬ ಹೆಸರು ಗಳಿಸಿದೆ.

ಪ್ರಜಾಪ್ರಭುತ್ವದಲ್ಲಿ ಪಕ್ಷೀಯ ಆಡಳಿತೆಯಿರುವುದು ಸ್ವಾಭಾವಿಕ. ಈ ಕಾರಣದಿಂದ ಕೆಲವೊಂದು ರಾಜಕೀಯ ಪಕ್ಷಗಳು ಹುಟ್ಟಿಕೊಳ್ಳುವುದೂ ಅಷ್ಟೇ ಸಹಜ. ದೇಶದ ಉನ್ನತಿಯನ್ನೇ ಉದ್ದೇಶವಾಗಿಟ್ಟು, ಜನತೆಗೆ ಸುಖಸೌಲಭ್ಯಗಳನ್ನು ಕಲ್ಪಿಸಿಕೊಡುವ ಆದರ್ಶವನ್ನು ಇಟ್ಟುಕೊಳ್ಳುವುದು ಎಲ್ಲ ಪಕ್ಷಗಳ ಧ್ಯೇಯವಿರುವುದಾದರೂ ಈ ಗುರಿಯನ್ನು ಮುಟ್ಟಲು ಅನುಸರಿಸುವ ದಾರಿಯಲ್ಲಿ ಮಾತ್ರ ಭಿನ್ನತೆಯಿರುವುದು ಸಾಧ್ಯವಾದುದರಿಂದ ಅನುಸರಿಸುವ ದಾರಿಯ ಸಂಖ್ಯೆ ಹೆಚ್ಚಾದಂತೆ ರಾಜಕೀಯ ಪಕ್ಷಗಳ ಸಂಖ್ಯೆಯೂ ದೊಡ್ಡದಾಗುತ್ತದೆ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ವಿಜಯಗಳಿಸಿದ ಕಾಂಗ್ರೆಸ್ಸು ತನ್ನ ಉದ್ದೇಶ ಪೂರ್ತಿಯಾದ ನಂತರ ದೇಶದ ಪ್ರಶಾಸನ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡಿತು. ಆ ಸಮಯದಲ್ಲಿ ನಮ್ಮಲ್ಲಿ ಆಡಳಿತೆಯನ್ನು ನಿರ್ವಹಿಸಬಲ್ಲ ಇತರ ಯಾವ ರಾಜಕೀಯ ಪಕ್ಷವೂ ಇರಲಿಲ್ಲ; ಮಾತ್ರವಲ್ಲ; ಇಂದಿಗಾದರೂ ಅದು ಸಹಜವಾಗಿಯೇ ಪರಿಣಮಿಸಿದೆಯೆಂದರೆ ಅತಿಶಯೋಕ್ತಿಯಲ್ಲ.

ಅಭಿಪ್ರಾಯ ಭೇದಗಳು ಪ್ರಜಾಪ್ರಭುತ್ವವು ಜೀವಂತವಿರುವುದರ ಸಲ್ಲಕ್ಷಣ. ಆದುದರಿಂದ ಒಂದು ಅಭಿಪ್ರಾಯವಿರುವ ಸಜ್ಜನರೆಲ್ಲರೂ ಬಂದು ಧ್ವಜದಡಿಯಲ್ಲಿ ಕಲೆಯುವುದನ್ನು ತಪ್ಪೆನ್ನುವಂತಿಲ್ಲ. ಆದರಲ್ಲೂ ಅಭಿಪ್ರಾಯ ಸ್ವಾತಂತ್ರ್ಯವಿರುವ ನಮ್ಮಲ್ಲಿ ಇದು ತೀರ ಸಹಜವಾದುದು ಇಂತಹ ಅಭಿಪ್ರಾಯ ಸ್ವಾತಂತ್ರ್ಯವಿರುವುದರಿಂದಲೇ ಮೊದಲ ಚುನಾವಣೆಯ ಕಾಲದಲ್ಲಿ ನೂರಕ್ಕೂ ಮಿಕ್ಕಿದ ರಾಜಕೀಯ ಪಕ್ಷಗಳು ನಮ್ಮಲ್ಲಿದ್ದುವು. ಆದರೆ, ಇವುಗಳಲ್ಲಿ ಹೆಚ್ಚಿನವು ಜನರಿಗೆ ಸ್ವೀಕೃತವಲ್ಲವೆಂದೆನಿಸಲು ಅವೆಲ್ಲವೂ ಕಾಲಕ್ರಮದಲ್ಲಿ ನಿರ್ನಾಮವಾದುವು. ಎರಡನೆಯ ಚುನಾವಣೆಯ ವೇಳೆಗೆ ಇವುಗಳ ಸಂಖ್ಯೆ ಮತ್ತೂ ಕಡಮೆಯಾಗುತ್ತ ಬಂದರೆ, ಇದೀಗ ಮೂರನೆಯ ಬಾರಿಗೆ ನಮ್ಮಲ್ಲಿರುವ ರಾಜಕೀಯ ಪಕ್ಷಗಳ ಸಂಖ್ಯೆ ಮತ್ತೂ ಇಳಿದಿವೆ. ಅಖಿಲ ಭಾರತವ್ಯಾಪಿಯಾಗಿರುವ ಕಾಂಗ್ರೆಸ್, ಪ್ರಸಮಾ, ಜನಸಂಘ ಮತ್ತು ಕಮ್ಯೂನಿಸ್ಟ್ ಪಕ್ಷಗಳನ್ನು ಬಿಟ್ಟರೆ ಉಳಿದುವೆಲ್ಲವೂ ನಿರ್ಬಲವಾಗಿವೆ. ಜನಾನುರಾಗಕ್ಕೆ ಎಡವಾದ ಕಾರಣದಿಂದ ಬೆಂಬಲವನ್ನು ಕಳೆದುಕೊಳ್ಳತೊಡಗಿವೆ. ರಾಷ್ಟ್ರವ್ಯಾಪಿ ಆಂದೋಲನ ಮಾಡಬಲ್ಲ ನಮ್ಮ ಏಕಮೇವ ಪಕ್ಷವೆಂದರೆ ಕಾಂಗ್ರೆಸ್ ಮಾತ್ರವೆಂದು ನಿರ್ಭೀತತೆಯಿಂದ ಹೇಳಬಹುದು.

ಭಾರತವು ಸ್ವತಂತ್ರವಾಗುವುದಕ್ಕೆ ಮೊದಲು ಸ್ವಾತಂತ್ರ್ಯವನ್ನೇ ತನ್ನ ಲಕ್ಷ್ಯವನ್ನಾಗಿಸಿದ ಕಾಂಗ್ರೆಸ್ ಆ ಮೇಲೆ ದಾಸ್ಯಗರ್ತದಲ್ಲಿ ಪತಿತವಾದ ದೇಶವನ್ನು ಪುನಾರಚಿಸಲು ನಿರ್ಧರಿಸಿತ. ಕಾಂಗ್ರೆಸಿನ ಧ್ಯೇಯ ಮತ್ತು ಉದ್ದೇಶಗಳು ಜನತೆಯ ಹೃನ್ಮನಗಳನ್ನು ಆಕರ್ಷಿಸಿದ್ದ ಕಾರಣದಿಂದಾಗಿಯೇ ಈ ಮೊದಲಿನೆರಡು ಚುನಾವಣೆಗಳಲ್ಲಿ ಕಾಂಗ್ರೆಸ್ಸು ಅಪೂರ್ವವಾದ ವಿಜಯವನ್ನು ಗಳಿಸಿದೆ. ದೇಶದ ಪುನಾರಚನಾ ಕಾರ್ಯಗಳನ್ನು ಒಂದು ನಿರ್ದಿಷ್ಟ ರೂಪದಲ್ಲಿ ನಿಯತಗೊಳಿಸಿ ಅವನ್ನು ಆಂತರಿಕ ಮತ್ತು ಬಾಹ್ಯ ಆರ್ಥಿಕ ಸಂಚಯನದಿಂದ ಕಾರ್ಯಗತಮಾಡಿ, ಸಮೃದ್ಧ ಭಾರತವನ್ನು ನಿರ್ಮಿಸುವ ಮಹಾ ಸಾಧನೆಯಲ್ಲಿ ಕಾಂಗ್ರೆಸ್ಸು ಜಯಭೇರಿ ಬಾರಿಸಿದೆ. ನಮ್ಮ ದೇಶವನ್ನು ಸಂದರ್ಶಿಸಿದ ಹೊರದೇಶಗಳ ನಾಯಕಾಗ್ರಣಿಗಳು ಕಳೆದ ಹತ್ತು ವರ್ಷಗಳಲ್ಲಿ ನಾವು ಸಾಧಿಸಿದ ಸಾಧನೆಗಳನ್ನು ಕಂಡು ಅವಾಕ್ಕಾಗಿದ್ದಾರೆ ತಮ್ಮ ತಮ್ಮ ರಾಷ್ಟ್ರಗಳಿಂದ ಸಾಧ್ಯವಿದ್ದ ರೀತಿಯ ಸಹಾಯವನ್ನು ನೀಡುವ ಉತ್ಸಾಹವನ್ನು ತೋರಿಸುತ್ತಿದ್ದಾರೆ.

ಎಂದರೆ, ನಮ್ಮ ಯೋಜನೆಗಳು ವಿದೇಶೀಯರಿಗೆ ಮಾತ್ರ ಕಾಣುವುದು ಎಂದರ್ಥವಲ್ಲ. ನಿಷ್ಪಕ್ಷಪಾತ ದೃಷ್ಟಿಯಿಂದ ಸಹೃದಯತೆಯಿಂದ ದೇಶದ ಮೂಲೆ ಮೂಲೆಗೂ ದೃಷ್ಟಿಹರಿಸುವ ಪ್ರತಿಯೊಬ್ಬನೂ ಈ ಅಭಿವೃದ್ಧಿಯೋಜನೆಯ ಕಾರ್ಯಕ್ರಮಗಳಲ್ಲಿ ಒಂದಲ್ಲ ಒಂದನ್ನು ಕಾಣಬಹುದು. ಹತ್ತು ವರ್ಷಗಳಿಗಿಂತ ಹಿಂದೆ ನಾವು ಜೀವಿಸುತ್ತಿದ್ದ ವಿಧಾನ, ನಮಗೆ ದೊರೆಯುತಿದ್ದ ಅನುಕೂಲತೆಗಳು ಇಂದಿನ ದಿನಕ್ಕಿಂತ ಕೆಳಮಟ್ಟದಲ್ಲಿದ್ದುವು. ಪ್ರಯಾಣ ಸೌಕರ್ಯವಿರಲಿ, ವಾಹನಗಳ ವ್ಯವಸ್ಥೆಯಿರಲಿ, ನದಿಗಳನ್ನು ದಾಟುವುದೇ ಇರಲಿ ಅಥವಾ ಅಂಚೆ ತಂತಿ ಟೆಲಿಫೋನ್ ಸೌಕರ್ಯವಿರಲಿ, ಎಲ್ಲೆಡೆಯೂ ನಾವು ಏಳಿಗೆ ಸಾಧಿಸಿದ್ದೇವೆ. ನದಿನದಿಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಿ, ಕೃಷಿಗೆ ನೀರು, ಬೆಳಕು-ಶಕ್ತಿಗಳಿಗೆ ವಿದ್ಯುತ್ತನ್ನು ಒದಗಿಸಿದ್ದೇವೆ ಮಾತ್ರವಲ್ಲ, ಮೀನುಗಾರಿಕೆಯ ಉನ್ನತಿಗೂ ಅಸ್ಪದ ಕಲ್ಪಿಸಿದ್ದೇವೆ. ಹಳ್ಳಿಹಳ್ಳಿಗಳಲ್ಲಿ ಶಿಕ್ಷಣದ ಸಾಕರ್ಯವನ್ನು ಒದಗಿಸುವ ಗುರಿಯಲ್ಲಿ ಬಹು ಮುಂದೆ ಬಂದಿದ್ದೇವೆ.

ನಾವು ಪ್ರಗತಿ ಸಾಧಿಸಿದ್ದೇವೆ ನಿಜ. ನಮಗೆ ಪ್ರತ್ಯಕ್ಷ ಕಾಣುವ ಸಾಧನೆಗಳು ಕೆಲವಾದರೆ, ಪರೋಕ್ಷವಾಗಿರುವುವೂ ಕೆಲವಿವೆ. ಭಾರತವು ಅತ್ಯಂತ ವಿಶಾಲವಾದ ಬಹು ಬಗೆಯ ಸಮಸ್ಯೆಗಳ ತವರ್ಮನೆಯಾಗಿರುವ ಜನಸಮೃದ್ಧಿಯ ದೇಶವಾಗಿರುವುದರಿಂದ ರಾತ್ರಿ ಬೆಳಗಾಗುವಷ್ಟು ಅಲ್ಪಾವಧಿಯಲ್ಲಿ ಇದನ್ನು ಪುನಾರಚಿಸುವುದು ಶಕ್ಯವಿಲ್ಲ. ನಮಗೆ ದೊರೆಯುವ ಆರ್ಥಿಕ ಸಂಪತ್ತನ್ನು ಹೊಂದಿಕೊಂಡು ಅದಕ್ಕೆ ಮೀರದಂತೆ ನಮ್ಮ ಯೋಜನೆಯನ್ನು ಜಾಗ್ರತವಾಗಿ ಮುಂದುವರಿಸಬೇಕಾಗಿದೆ. ಕಾಂಗ್ರೆಸ್ ಪಕ್ಷವು ಈ ದಿಸೆಯಲ್ಲಿ ತೃಪ್ತಿಕರವಾಗಿ ಕಾರ್ಯವೆಸಗಿ ದೇಶಸೇವೆಯಲ್ಲಿ ತನಗಿರುವ ಕಳಕಳಿಯನ್ನು ವ್ಯಕ್ತಪಡಿಸಿವೆ.

ಈ ಬಾರಿ ಕಾಂಗ್ರೆಸು ಚುನಾವಣಾ ರಂಗಕ್ಕಿಳಿಯುವಾಗ ದೊಡ್ಡ ದೊಡ್ಡ ಮಾತುಗಳ ಪಟ್ಟಿಯನ್ನು ಮುಂದೆ ಇಟ್ಟಿಲ್ಲ. ಜನತೆಯ ಪರಮಾವಶ್ಯಕತೆಗಳಲ್ಲಿ ಕೆಲವೊಂದನ್ನು ಕಾಂಗ್ರೆಸು ತಾನು ಅಧಿಕಾರದಲ್ಲಿದ್ದ ಕಳೆದ ವರ್ಷಗಳಲ್ಲಿ ಪೂರೈಸಿಕೊಟ್ಟಿದೆ. ಮುಖ್ಯವಾಗಿ ದೊಡ್ಡ ಕ್ರಾಂತಿಕಾರಿಯೆನಿಸುವ ರೀತಿಯಲ್ಲಿ ಭೂ ಸುಧಾರಣೆಯ ಸಂಬಂಧದ ಕಾಯಿದೆಯನ್ನು ಮಾಡುವಲ್ಲಿ ಹೆಜ್ಜೆ ಮುಂದಿಟ್ಟಿದೆ. ದೇಶದಲ್ಲಿ ಉಳುವವನೇ ಹೊಲದೊಡೆಯನೆಂಬ ನೀತಿಯನ್ನು ಕಾರ್ಯಗತಗೊಳಿಸುವ ಶಾಸನವು ಹೆಚ್ಚಿನ ರಾಜ್ಯಗಳಲ್ಲಿ ಇನ್ನೇನು ವ್ಯವಹೃತವಾಗಲಿವೆ. ಕಾಂಗ್ರೆಸ್ಸು ಇಂದು ಸಂವಿಧಾನದಲ್ಲಿ ಹೇಳಿದಂತೆ ಸಾಕ್ಷರತೆಯ ಪ್ರಚಾರಕ್ಕೆ ಕಂಕಣ ಬದ್ಧವಾಗಿದೆ. ೬ರಿಂದ ೧೧ ವರ್ಷ ಪ್ರಾಯದ ಮಕ್ಕಳೆಲ್ಲರಿಗೆ ಅವರ ಮನೆಗೆ ಆದಷ್ಟು ಸಮೀಪದಲ್ಲಿಯೇ ಶಿಕ್ಷಣವನ್ನು ಪಡೆಯುವ ಸೌಕರ್ಯವೊದಗಿಸಿಕೊಡುವಲ್ಲಿ ಮುಂದುವರಿದಿದೆ. ಇದಕ್ಕಾಗಿ ಪ್ರತಿಯೊಂದು ಹಳ್ಳಿಗೂ ಒಂದೊಂದು ಪ್ರಾಥಮಿಕ ಶಾಲೆಯನ್ನು ಒದಗಿಸುವ ಉದ್ದೇಶ ಕಾಂಗ್ರೆಸ್‌ನ ಚುನಾವಣಾ ಘೋಷಣೆಯಲ್ಲಿದೆ ಹಾಗೆಯೇ ಹಳ್ಳಿಯ ಜನರ ಸಂಚಾರ ಮತ್ತು ವ್ಯಾಪಾರ ವಹಿವಾಟುಗಳ ಬೆಳವಣಿಗೆಗೆ ಅನುಕೂಲವಾಗುವಂತೆ ಪ್ರತಿ ಹಳ್ಳಿಗೂ ಸಮೀಪದ ನಗರವನ್ನು ಸೇರಿಸುವ ಒಂದೊಂದು ಮಾರ್ಗವನ್ನು ನಿರ್ಮಿಸುವುದು ಕಾಂಗ್ರೆಸ್ ಪಕ್ಷದ ಗುರಿಯಿದೆ. ಕುಡಿಯುವ ನೀರಿನ ಅಭಾವವಿರುವ ಹಳ್ಳಿಗಳೂ ನಮ್ಮಲ್ಲಿ ಅನೇಕವಿರುತ್ತವೆ. ಅಂತಹ ಎಲ್ಲ ಗ್ರಾಮಗಳಿಗೂ ಒಂದೊಂದು ಕುಡಿಯುವ ನೀರಿನ ಬಾವಿಯನ್ನು ತೋಡಿಕೊಡುವ ಉದ್ದೇಶವನ್ನು ಮುಂದಿನ ಐದು ವರ್ಷಗಳಲ್ಲಿ ಕಾಂಗ್ರೆಸು ಸಾಧಿಸುವ ಪಣ ತೊಟ್ಟಿದೆ. ಆಹಾರ ಸ್ವಾವಲಂಬನದ ಗುರಿಯನ್ನು ಕಾಂಗ್ರೆಸ್ಸು ಮೊದಲೇ ಇಟ್ಟುಕೊಂಡಿದ್ದು. ಅವನ್ನು ಮುಂದುವರಿಸಿ, ಮೂರನೆಯ ಯೋಜನಾಂತ್ಯದಲ್ಲಿ ಸಂಪೂರ್ಣ ಸಾಧಿಸಲಾಗುವುದು. ಗ್ರಾಮಾಂತರ ವಸತಿಯ ಯೋಜನೆಗಳೂ ಮುಂದುವರಿಯುವುವು. ಹೀಗೆ ಯಾವುದೇ ಬಣ್ಣ ಬಣ್ಣದ ಮಾತುಗಳಿಂದ ಸ್ವರ್ಗ ರಾಜ್ಯವನ್ನು ಭೂಮಿಗೆ ಇಳಿಸುವೆವೆಂಬ ಪೊಳ್ಳು ಮಾತುಗಳನ್ನು ಕಾಂಗ್ರೆಸ್ ಜನತೆಯ ಮುಂದೆ ಇಟ್ಟಿಲ್ಲ. ನಮ್ಮ ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮುಂದಾದ ಕಾಂಗ್ರೆಸ್, ಇನ್ನುಳಿದುವನ್ನೂ ಒದಗಿಸಿಕೊಡುವ ದೀಕ್ಷೆ ತೊಟ್ಟಿದೆ.

ಕಾಂಗ್ರೆಸ್ಸು ಅಖಿಲ ಭಾರತ ವ್ಯಾಪ್ತಿಯಿರುವ ಏಕಮೇವ ರಾಜಕೀಯ ಪಕ್ಷವಾ

(೧೨ನೇ ಪುಟ ನೋಡಿರಿ)

ಕಾಂಗ್ರೆಸ್ಸಿಗೇ



ಮತದಾನ ಮಾಡಿರಿ!

ಉಪದೇಶ ಪ್ರಭಾವ

ಶ್ರೀ ಎಚ್. ಆನಂದರಾಮ ಅಡಿಗ

ಸುಮತಿ ಹೀನ ಕುಲದಲ್ಲಿ ಹುಟ್ಟಿಬೆಳೆದವಳು. ಅವಳ ತಂದೆ ಅಗರ್ಭ ಶ್ರೀಮಂತರೆಂದೆನ್ನುವ ಸಾಲಿನಲ್ಲಿಲ್ಲದಿದ್ದರೂ ಸಾಧಾರಣ ಮಟ್ಟದ ಐಶ್ವರ್ಯವಂತರಲ್ಲಿ ಆತನೂ ಒಬ್ಬ-ಸುಮತಿ ಒಬ್ಬಳೇ ಮಗಳಾಗಿ ಬೆಳೆದಳು. ವಿದ್ಯಾಭ್ಯಾಸದಲ್ಲಿಯೂ ಸುಮತಿ ಚೆನ್ನಾಗಿ ಕಲಿತು ಮುಂದೆ ಬಂದಳು. ತಂದೆಗೆ ತಲೆಹೊರೆ ಎಂದೆನ್ನಿಸುವುದು ಸುಮತಿಗೆ ತಾಯಿಯಿಂದ ತಿಳಿಯಿತು. ತನ್ನ ಮದುವೆಯ ಬಗ್ಗಾಗಿ ತಂದೆ ತುಂಬಾ ನೊಂದುಕೊಂಡಿದ್ದಾನೆಂದು...ತನ್ನ ಮದುವೆ! ಸುಮತಿ ಓದುತ್ತಾ ಕುಳಿತವಳು ಒಮ್ಮೆ ನಕ್ಕಳು. ಅವಳು ಈ ವರ್ಷ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ತಯಾರಿ ಮಾಡಬೇಕಿತ್ತು. ಪರೀಕ್ಷೆಯೂ ಸಮೀಪಿಸಿದೆ—ಬಹು ಬಿರುಸಿನಿಂದ ದಿನಗಳು ಒಂದರ ಹಿಂದೆ ಒಂದಾಗಿ ಹಾಯ್ದು ಹೋಗುವುದನ್ನು ಸುಮತಿ ಲೆಕ್ಕಿಸುತ್ತಿದ್ದಾಳೆ. ರಾತ್ರಿ-ಹಗಲು-ಕಳೆಯುತ್ತಿ-ವೆ-ಊಟಕ್ಕೆ-ಕಾಫಿಗೆ ಸುಮತಿ ಅಡಿಗೆಯ ಮನೆ ಕಾಣುತ್ತಾಳೆ-ತಾಯಿಯೊಡನೆ ಎರಡು ನಿಮಿಷ ಚರ್ಚಿಸುತ್ತಾಳೆ. ಒಂದು ದಿನದ ಚರ್ಚೆಯಲ್ಲಿ ಸುಮತಿಯ ವಿವಾಹದ ಪ್ರಸ್ತಾಪವೂ ಬಂದುದಕ್ಕಾಗಿ ಸುಮತಿ ನೊಂದುಕೊಂಡಳು. ಛೆ! ನನ್ನೀ ಪರೀಕ್ಷೆಯಿನ್ನೂ ಮುಗಿಯಲಿಲ್ಲ. ಆವಾಗಲೇ ತಂದೆಯವರು ನನಗಾಗಿ ವರಾನ್ವೇಷಣಕ್ಕೆ ತೊಡಗಿದರೆ ನನ್ನ ಗತಿ?!-ಮುಂದು ಕಲಿಬೇಕೆಂಬ ಹಿರಿಯಾಸೆ ಹಿಗ್ಗಿ ಕುದಿಯೊಡೆದು ನನ್ನಲ್ಲಿ ತುಂಬಿಕೊಂಡಿದೆ. ಅಲ್ಲದೇ ಅಣ್ಣನ ನೆರವೂ ಕೂಡಾ ಇದೆ. ಹೀಗಿರುವಾಗ ತಂದೆಯವರು ಮಾತ್ರ ಹೀಗೇಕಾಗಿ ವರ್ತಿಸಿದರು ಎಂಬುದು ನ್ನಿ ಸುಮತಿಗೆ ತಿಳಿಯದ ಮಹಾನ್ ಸಮಸ್ಯೆಯಾಗಿ ಉಳಿಯಿತು. ಅದಕ್ಕಾಗಿ ಒಂದರ್ಧ ಗಳಿಗೆ ಆಲೋಚಿಸಿದಳು. ಆವಳಿಗೆ ಹೊಳೆದದ್ದು:—'ತಂದೆಯವರಿಗೆ ತಿಳಿಸದಿದ್ದರೆ ನನ್ನ ಗತಿ.ಆವರಿಸಿಸಿದಂತೆಯೆ ಎಂದು. ತನ್ನ ಇಷ್ಟು ದಿನದ ತಪ್ಪಿಗಾಗಿ ನೊಂದಳು. ಹೃದಯ ಬೆಂದಿತು. ಅವಳು ಆ ರಾತ್ರಿ ಒಂದು ಪತ್ರವನ್ನು ತಂದೆಗೆ ಬರೆದಳು.

"ಪ್ರೀತಿಯ ತಂದೆಯವರಲ್ಲಿ—ನಿಮ್ಮ ಸಪ್ರೇಮ ಪ್ರೀತಿಯಿಂದ ಬೆಳೆದ ಸುಮತಿಯು ಬೇಡುವ ಆಶೀರ್ವಾದ— ಈ ಪತ್ರ ನನ್ನನ್ನು ಉಳಿಸಬಲ್ಲುದೋ ಅಳಿಸಬಲ್ಲುದೋ ನಾನರಿಯೆ.! ಆದರೆ ನಿಮ್ಮ ಮನೋಗತವನ್ನು ನಾನು ತಾಯಿಯವರಿಂದ ತಿಳಿದು ನಿಮ್ಮೊಡನೆ ಮನಬಿಚ್ಚಿ ಹೇಳಲಾರದವಳಾಗಿ ಈ ಪತ್ರವನ್ನು ಕೈಗೆತ್ತಿಕೊಂಡು ನಡುಗುವ ಕೈಗಳಿಂದ ಬರೆಯುತ್ತಿದ್ದೇನೆ.

"ನಾನೀಗ ನಿಮಗೆ ಹೊರೆಯಾಗಿರಬಹುದು. ಅದು ಕೇವಲ ಲೋಕದೃಷ್ಟಿಯಿಂದ. ಆದರೆ ನಾನು ಯಾರ ಕಾಮ ಪಿಪಾಸೆಗೂ ಒಳಗಾಗದೇ ನಾನೊಬ್ಬಳೇ ಯೋಗ್ಯ ವಿದ್ಯಾರ್ಥಿನಿಯಾಗಿ ಬಾಳಿದ್ದೇನೆ. ಅದು ನಿಮಗೆ-ನಿಮ್ಮ ಹೃದಯಕ್ಕೆ ಸರಿಯಾಗಿ ತಿಳಿದಿದೆ ಆದರೂ ನೀವು ಈಗ ನನ್ನ ಮದುವೆಯ ಬಗ್ಗೆ ಚಿಂತೆಗೊಳಗಾಗಿದ್ದುದನ್ನು ಕೇಳಿ ನನಗೆ ತುಂಬಾ ದುಃಖವಾಯಿತು ನೀವು ನನಗಾಗಿ ಅಷ್ಟು ಪ್ರಯಾಸ ತೆಗೆದುಕೊಳ್ಳುವುದು ಬೇಡ. ನಾನು ಇನ್ನು ನಾಲ್ಕು ವರ್ಷ ಕಾಲೇಜಿಗೆ ಹೋಗಿ ಓದಿ ಏನಾದರೂ ಯೋಗ್ಯ ಉದ್ಯೋಗ ಸಂಪಾದಿಸಿಯೇ ನನಗೊಪ್ಪಿದ ವರನನ್ನು ಆರಿಸಿ ವರಿಸುತ್ತೇನೆ. ಅಷ್ಟರವರೆಗೂ ನಿಮ್ಮಲ್ಲಿ ನನ್ನ ವಿಷಯದಲ್ಲಿ ಸಂಶಯ ಬಂದರೆ ಅಂದೇ ನನ್ನನ್ನು ಗುಂಡಿನೇಟಿಗೆ ತುತ್ತು ಮಾಡುವೆ—ಅದಕ್ಕೆ ನಾನು ಶಿರವಾಗಿ ಒಪ್ಪುವೆ. ಆದರೆ ಈಗ ನಾನು ಖಂಡಿತವಾಗಿಯೂ ನೀವು ಎಣಿಸಿದಂತೆ ವಿವಾಹವಾಗಲು ತಯಾರಿಲ್ಲ. ಈ ವಿಷಯದಲ್ಲಿ ಎಳ್ಳಷ್ಟೂ ನೀವು ತೊಂದರೆ ತೆಗೆದುಕೊಳ್ಳಬೇಡಿ"

ಇಂತು ನಿಮ್ಮ ಕುವರಿ,
ಸುಮತಿ.

ಹಾಗದವೇನೊ ಬರೆದುದಾಗಿದೆ. ಆದರೆ ಆದನ್ನು ತಂದೆಯವರಿಗೆ ಮುಟ್ಟಿಸುವ ಬಗೆಯೆಂತು?...ಸಹೋದರ — ಕೃಷ್ಣನಿನ್ನೂ ಶಾಲೆಯಿಂದ ಬಂದಿಲ್ಲ. ಅವನು ಎಲಿಮೆಂಟರಿ ಶಾಲೆಗೆ ಹೋಗುವ ವಿದ್ಯಾರ್ಥಿ. ಅವನು ಬಂದೊಡನೆ ಕಳುಹಿಸುತ್ತೇನೆಂದು ಸುಮ್ಮಗಾದಳು.

ಶ್ರೀಪತಿರಾಯರಿಗೆ ಮಗಳ ವರ್ತನೆ ತೀರಾ ಹೊಸದಾಗಿ ಕಂಡಿತು. ಹದಿನಾರಕ್ಕೂ ಮಿಕ್ಕಿದ ಹರೆಯದ ಕುವರಿ ಸುಮತಿಯ ವಿವಾಹಕ್ಕೆ ನಾನು ತೊಡಗಿದರೆ ಹುಡುಗಿಯೇ ಬೇಡವೆನ್ನುತ್ತಾಳಲ್ಲ. ಇದು ಕಲಿಯುಗ ಎನ್ನುವುದು ಎಳ್ಳಷ್ಟಾದರೂ ಸುಳ್ಳಲ್ಲ. ಹುಚ್ಚು ಹುಡುಗಿ. ಸರಿ ದಾರಿಗೆ ಬಂದೀತು. ಒಂದು ಮನಸ್ಸು ಸುಮತಿಗೆ ಹಾಗಂದಿರಬಹುದು ಆಗ! ಎಂದು ತಮ್ಮಷ್ಟಕ್ಕೆ ಒಂದು ದಾರಿಗೆ ಬಂದು ದೂರದೂರಿನ ವರನ ಮನೆಯವರಿಗೆ ಪತ್ರ ಬರೆದರು, 'ಹುಡುಗಿ ನೋಡಲು ಬನ್ನಿರೆಂದು' ಈ ವಿಷಯ ತನ್ನವಳಲ್ಲಿ ಮಾತ್ರ ಪ್ರಸ್ತಾಪಿಸಿ "ಹೌದೇನೆ, ಸುಮತಿ ಹಾಗೇಕೆ ಹಟಹಿಡಿದುಕೊಂಡಿದ್ದಾಳೆ? ನಾನೀಗ ಅವರಿಗೆ ಪತ್ರ ಬರೆದುದಾಗಿದೆ. ಇನ್ನು ಒಂದೆರಡು ದಿನದಲ್ಲಿ ಬಂದೇ ಬರುತ್ತಾರೆ" ಎಂದು ಹೆಂಡತಿಯನ್ನು ಸಂತೋಷ ಸಾಗರದಲ್ಲಿ ಈಜಾಡಿಸಿದರು. ಆ ಮೇಲೆ, ಮಗಳ ಗಮನಕ್ಕೆ ತರುವುದು. ಅವರು (ವರನು) ಬಂದ ನಂತರವೇ ಎಂದು ಅವರೊಳಗೆ ನಿರ್ಣಯಿಸಿಕೊಂಡರು.

ಒಮ್ಮೆ ವರನ ಕಡೆಯವರ ಟ್ಯಾಕ್ಸಿಯೂ ಬಂದಿತು. ಶ್ರೀಪತಿ ರಾಯರಿಗೆ ಹರ್ಷವೋ ಹರ್ಷ. ಎಲ್ಲಿಲ್ಲದ ಸಂಭ್ರಮದಲ್ಲಿ ನಲಿದಾಡಿದರು. ಮಹಡಿಯ ಕೋಣೆಯೊಂದರಲ್ಲಿ ಪಬ್ಲಿಕ್ ಪರೀಕ್ಷೆಗಾಗಿ ತಯಾರಿ ಮಾಡುತಿದ್ದ ಸುಮತಿಗೆ ಒಮ್ಮಿಂದೊಮ್ಮೆ ಆಶ್ಚರ್ಯದ ಹೊನಲೆದ್ದಿತು. ಮನೆಯ ಮುಂದುಗಡೆ ಟ್ಯಾಕ್ಸಿಯಿಂದ ತಂದೆಯವರೂ ಬೇರೆಯವರೂ ಇಳಿಯುತ್ತಿದ್ದರು. 'ಇದೇಕಾಗಿ ಬಂದರು?"—ಮನದಲ್ಲೇ ಅರ್ಥ ಮಾಡಿಕೊಂಡಳು—

'ಹೌದು ನಿಜವಾಗಿಯೂ ತಂದೆಯವರು ನನ್ನ ವಿವಾಹಕ್ಕೆ ಸರ್ವಸನ್ನಾಹ ಮಾಡಿದ ಹಾಗಿದೆ—ತನ್ನ ಅಣ್ಣನಿಂದ ಬಂದ ಪತ್ರ ಕೈಗೆತ್ತಿಕೊಂಡು ಓದಿದಳು:—ಪ್ರೀತಿಯ ತಂಗಿ ಸುಮತಿ, ನೀನು ಈ ವರ್ಷ ಪರೀಕ್ಷೆಯಲ್ಲಿ ಚೆನ್ನಾಗಿ ಓದಿ ತೇರ್ಗಡೆಯಾಗುತ್ತೀ ಎಂದು ನಾನು ತಿಳಿದಿದ್ದೇನೆ. ನೀನು ಪರೀಕ್ಷೆಯಲ್ಲಿ ಪಾಸಾದರೆ ಇಲ್ಲಿಯೇ ಕಾಲೇಜಿಗೆ ಕಳುಹಿಸುವ ವ್ಯವಸ್ಥೆ ಮಾಡಿಸುತ್ತೇನೆ.ಅಷ್ಟರ ವರೆವಿಗೂ ನೀನು ವಿವಾಹದ ಆಸೆಯನ್ನೇ ಬಿಟ್ಟು ಬಿಡು. ಸನ್ಯಾಸಿಯಾಗು! ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸ್ ಬಾರದೆ ಇರಬೇಡ. ಚೆನ್ನಾಗಿ ಓದು. ಈ ಪತ್ರವನ್ನು ಓದಲು ನಿನಗೆ ಸಮಯವೆಲ್ಲಿದೆ! ಎಲ್ಲರಿಗೂ ಕ್ಷೇಮ ತಿಳಿಸು. ಇಂತು ನಿನ್ನ ಅಣ್ಣ—ಸುಂದರ.

ಅಣ್ಣ—ನಿನ್ನ ಹೃದಯವೆಷ್ಟು ವಿಶಾಲ. ನಿನ್ನ ತಂಗಿಯನ್ನು ವಿದ್ಯಾವಂತೆಯಾಗಿ ಮಾಡಲು ನೀನೆಷ್ಟು ಶ್ರಮಿಸುತ್ತೀ. ಶ್ರೀದೇವರ ದಯದಿಂದ ನಾನು ಉತ್ತೀರ್ಣಳಾಗಲು ಅರ್ಹಳಾಗಿದ್ದೇನೆ-ಹಾಗೂ ಪ್ರಯತ್ನಿಸುತ್ತೇನೆ'. ಬರೆದಿದ್ದಳು ಸುಮತಿಯು ಅಣ್ಣನಿಗೆ ಚುಟುಕಾಗಿ. ಕಾರ್ಡಿನಲ್ಲಿ—ಅಷ್ಟರಲ್ಲಿಯೇ ತಂದೆಯವರ ಈ ರೀತಿಯ ವರ್ತನೆ—ಕೆಳಗೆ ಮಾತುಗಳು ಬೇಡ ಬೇಡವೆಂದರೂ ಸುಮತಿಯ ಕಿವಿಯನ್ನು ಮುಟ್ಟುತ್ತಿವೆ—ವರದಕ್ಷಿಣೆ—ವರೋಪಚಾರ ಎಲ್ಲ ನಿಶ್ಚಯವಾದ ಹಾಗೆ. ಇನ್ನು ಹುಡುಗಿಯನ್ನು ನೋಡಬೇಕಲ್ಲ—ಎಂದರು ಪುರೋಹಿತರಂತಿರುವವರು. ಮೆಲ್ಲನೆ ಮೆಟ್ಟಲನ್ನೇರಿ ಯಾರೋ ಬಂದ ಹಾಗಾಯಿತು. ಬಿಗು ಮನಸ್ಸಿನಿಂದ ಎಳೆದು ತೆಗೆಯದೆ ಸುಮತಿ ಪುಸ್ತಕವನ್ನು ಮುಖಕ್ಕೆ ಮುಚ್ಚಿ ಓದುತ್ತಿದ್ದಳು.

'ಸುಮತೀ ..." ಬಂದವರು ತಾಯಿ. ಆ ನುಡಿಯಲ್ಲಿ ಎಷ್ಟು ಮೃದುತ್ವವಿತ್ತು.

'ಸುಮತೀ ಕೆಳಗೆ ಬರುವುದಿಲ್ಲವೇನೆ?" ತಾಯಿ ಮೆಲ್ಲನೆ ಒಳಬಂದು ಕೇಳಿದರು.

'ಬರುತ್ತೇನೆ—

'ಬಾ'.

'ಈಗಲ್ಲ, ಇನ್ನೆರಡು ಗಂಟೆ ತಡೆದು'

'ಈಗಲೇ ಬರಬೇಕಂತೆ....'

'ಯಾಕಂತೆ?' ಪ್ರಶ್ನೆಗೆ ಉತ್ತರವು ಬಿರುಸಾಗಿಯೇ ಸುಮತಿಯ ಬಾಯಿಯಿಂದ ಬರುತ್ತಿದ್ದುವು.

'ನಿನ್ನನ್ನು ನೋಡಲು ಯಾರೋ ಬಂದಿದ್ದಾರೆ!'

'ನನ್ನನ್ನು ನೋಡಲಿಕ್ಕೆ ನನಗೇನಾಗಿದೆ?'

'ಸುಮ್ಮನೆ ಪ್ರಶ್ನೆ ಬೆಳಸಬೇಡ ಸುಮ

(೧೨ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ರಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ; ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ಸ್ಥಿರಖಾ ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ರವೀಂದ್ರವಾಣಿ—ಲೇಖಾಂಕ ೩೪. ವಿಶ್ವಕವಿ ರವೀಂದ್ರನಾಥ ಟಾಗೋರ್

ಅನಂತದ ಸಾಧನೆ

ಅನುವಾದಕರು: ಕೆ ಎನ್. ಭಟ್, ಶಿರಾಡಿಪಾಲ್.

ಈ ಕಾರಣದಿಂದ ಉಪನಿಷತ್ತಿನ—'ಮನಸ್ಸು ಬ್ರಹ್ಮನನ್ನು ಹೊಂದಲಾರದು; ವಾಣಿಯಿಂದ ಆತನ ಗುಣಗಾನ, ವರ್ಣನೆಯೂ ಪೂರ್ಣವಾಗದು. ನಮ್ಮ ಆತ್ಮವು ಮಾತ್ರ ಪ್ರೇಮ, ಮತ್ತು ಆನಂದದಿಂದ ಬ್ರಹ್ಮನನ್ನು ಪಡೆಯಬಲ್ಲುದು' ಎಂಬ ಈ ವಾಕ್ಯ ಸತ್ಯವೇ ಆಗಿದೆ.

ಬ್ರಹ್ಮನೊಡನೆ ಪೂರ್ಣವಾದ ಏಕಾತ್ಮ ಭಾವವನ್ನು ಹೊಂದಿಸಿಕೊಂಡ ಬಳಿಕವೇ ಆತ್ಮ ಬ್ರಹ್ಮನನ್ನು ಪಡೆಯಬಲ್ಲುದು ಆಧ್ಯಾತ್ಮದ ಮಾರ್ಗವು ಇದೇ ಆಗಿದೆ. ಈ ಆತ್ಮಿಕ ಮಿಲನದಲ್ಲಿಯೇ ಬ್ರಹ್ಮಜ್ಞಾನದ ನಿಜಸ್ವರೂಪ ಅಡಗಿದೆ. ಇಂತಹ ಜ್ಞಾನದಿಂದ ಮಾತ್ರ ನಾವು ಬ್ರಹ್ಮನನ್ನು ತಿಳಿದುಕೊಳ್ಳಬಲ್ಲೆವು. ಒಟ್ಟಿನಲ್ಲಿ ನಾವು ಬ್ರಹ್ಮತ್ವವನ್ನು ಪಡೆದ ಬಳಿಕವೇ ಗಹನವಾದ ಬ್ರಹ್ಮ ಜ್ಞಾನವನ್ನು ಹೊಂದಬಲ್ಲೆವು. ಆದರೆ ಇದು ಹೇಗೆ ಸಾಧ್ಯ? ಅಸೀಮದಲ್ಲಿ, ಪೂರ್ಣತೆಯಲ್ಲಿ—ವಿಕಾಸವಿರುವುದಿಲ್ಲ. ಬ್ರಹ್ಮ ಜ್ಞಾನದಲ್ಲಿ ನಾವು ನಿಧಾನವಾಗಿ ವಿಕಾಸವನ್ನು ಹೊಂದಲಾರೆವು. ಏಕೆಂದರೆ ಬ್ರಹ್ಮನು ತನ್ನಷ್ಟಕ್ಕೆ ತಾನೆ ಪೂರ್ಣನಾಗಿದ್ದಾನೆ. ಆತನಲ್ಲಿ ವೃದ್ಧಿಯಾಗುತ್ತಿರುವ ಕ್ರಮವೇ ಇರುವುದಿಲ್ಲ.

ನಮ್ಮ ಅಂತರಾತ್ಮನಲ್ಲಿ ಪರಮಾತ್ಮನ ಜ್ಞಾನವು—ಪೂರ್ಣತೆಯ ಪರಾಕಾಷ್ಠೆಯ ಸ್ಥಿತಿಯಲ್ಲಿ ಮಾತ್ರ ಆಗುವುದು; ಹೊರತು, ಹಂತ ಹಂತವಾಗಿ ಇಲ್ಲ. ಇದನ್ನೇ ಉಪನಿಷತ್ತುಗಳು— ॥ ಸತ್ಯಂ ಜ್ಞಾನಂ ಅನಂತಂ ಬ್ರಹ್ಮಯೋ ವೇದನಿಹಿತಂ ಗುಹಾಯಾಂ ಪರಮೇ ವ್ಯೋಮನ್ ಸೋಽಶ್ನುತೇ ಸರ್ವಾನ್, ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ॥ ಅರ್ಥಾತ್, ಅನಂತನಾದ ಬ್ರಹ್ಮನನ್ನು ಯಾರು ಆತ್ಮದ ಆಳವಾದ ಗುಹೆಯಲ್ಲಿ ವಾಸಿಸುವನೆಂದು ತಿಳಿದಿರುವನೋ ಮತ್ತು ಹೃದಯಾಕಾಶದಲ್ಲಿ ಇರುವನೆಂದು ತಿಳಿದಿರುವನೋ ಅಂಥವನು ಎಲ್ಲೆಲ್ಲಿಯೂ ಬ್ರಹ್ಮನೊಡನೆ, ಮಿಲನವನ್ನು ಹೊಂದಿ, ತಾನು ಇಚ್ಛಿಸಿದ ವಸ್ತುಗಳೆಲ್ಲವನ್ನೂ ಪಡೆದು, ಆನಂದ ಹೊಂದುವನು.

ಪರಮಾತ್ಮನು ನಮ್ಮ ಆತ್ಮವನ್ನು ವರಿಸಿಕೊಂಡಿರುವುದರಿಂದ, ಏಕಾತ್ಮ ಭಾವ ಸ್ಥಾಪಿತವಾಗಿ ಹೋಗಿರುವುದು. ವೈದಿಕ ಮಂತ್ರದಲ್ಲಿ– "ಯದೇತತ್ ಹೃದಯಂ ಮಮ! "ತದಸ್ತು ಹೃದಯಂ ತವ!" ಅಂದರೆ, ನಿನ್ನ ಹೃದಯವೇ ನನ್ನ ಹೃದಯವಾಗಲೀ! ॥ ಏಷಾಸ್ಯ ಪರಮೋಗತಿಃ ಈ ॥ಏಷ। ಎಂದರೆ, ಯಾವ ಹೆಸರೂ ಕೊಡಲ್ಪಡದಿರುವ ಅರ್ಥಾತ್ ॥ಅಸ್ಯ॥ ನಮ್ಮ ಹೃದಯದಲ್ಲಿ ಸದಾ ಇರುವುದು. ಈ ॥ಏಷ॥ವೇ ನಮ್ಮ ॥ಅಸ್ಯ॥ದ ಧ್ಯೇಯವಾಗಿದೆ. ॥ಏಷಾಸ್ಯ ಪರಮಾ ಸಂಪತ್॥ ಇದೇ ಅದರ ಶ್ರೇಷ್ಠವಾದ ಸಂಪತ್ತಾಗಿದೆ. ॥ಏಷಾಸ್ಯ ಪರಮೋ ಲೋಕಃ ಇದೇ ಅದರ ಶ್ರೇಷ್ಠವಾದ ನಿವಾಸಸ್ಥಾನವಾಗಿದೆ ॥ಏಷಾಸ್ಯ ಪರಮಾನಂದಃ॥ ಇದೇ ಅದರ ಪರಮಾನಂದವಾಗಿದೆ. ಅರ್ಥಾತ್, ಈ ಸಹವಾಸವೆಂದರೆ, ಇವೆರಡರ ವಿವಾಹವು ಅನಂತ ಕಾಲದಿಂದಲೇ ಆಗಿ ಕೂಡಿರುವುದು. ಈಗ ಅನಂತ ಪ್ರೇಮಲೀಲೆ ಮಾತ್ರ ನಡೆಯುತ್ತಿರುವುದು. ಸಮಯ ಮತ್ತು ಆಕಾಶ, ಇವುಗಳ ಅನಂತ ಪಥದಲ್ಲಿ ಇವರೀರ್ವರೂ ಕಣ್ಣು ಮುಚ್ಚಾಲೆ ಆಟವನ್ನು ಆಡುತ್ತಿದ್ದಾರೆ. ನಮ್ಮ ಆತ್ಮರೂಪೀ ವಧು ಈ ಲೀಲೆಯ ರಹಸ್ಯವನ್ನು ತಿಳಿದುಕೊಂಡಾಗ—ಅವಳಿಗೆ ಶಾಂತಿ ಮತ್ತು ವಿಶ್ವಾಸವು ಪ್ರಾಪ್ತವಾಗುವುದು. ಆಗ, 'ಸಮುದ್ರದೊಡನೆ ಕೂಡಿದ ನದಿಯ ಒಂದು ಭಾಗವು ಹೇಗೆ ಸಮುದ್ರವನ್ನು ಕೂಡಿಕೊಂಡೇ ಇರುವುದೋ—ಹಾಗೆಯೇ ಆತ್ಮರೂಪೀ ವಧುವಿನ ವ್ಯಕ್ತಿತ್ವದ ಒಂದು ಅಂಶವು ಅನಂತದೊಡನೆ ಕೂಡಿಯೇ ಇರುವುದು' ಎಂಬ ಅನುಭವವು, ಆ ವಧುವಿಗೆ ಅನುಭವವಾಗಲಾರಂಭಿಸುವುದು. ನದಿಯು ಸಮುದ್ರದೊಡನೆ ಕೂಡಿಕೊಳ್ಳಲು ಹೇಗೆ ಮುಂದುವರಿಯುತ್ತಿರುವುದೋ, ಹಾಗೆಯೇ ಮನುಷ್ಯ ಜೀವನದ ಒಂದು ಅಂಶವು ಅನಂತದೊಡನೆ ಕೂಡಿಕೊಳ್ಳಲು, ಯತ್ನಶೀಲವಾಗಿರುತ್ತದೆ. 'ವಿಶ್ವದ ಒಡೆಯನೇ ತನ್ನ ಒಡೆಯ.' ಎಂದು ಆತ್ಮವು ತಿಳಿದುಕೊಂಡ ಬಳಿಕ, 'ವಿಶ್ವವೇ ತನ್ನ ಮನೆ' ಎಂದು ಭಾವಿಸುವುದು. ಈ ಭಾವನೆ ಬಂದ ಮೇಲೆಯೇ ವ್ಯಕ್ತಿಯ ಲೌಕಿಕ ಕಾರ್ಯಗಳೂ ಕೂಡ ಪ್ರೇಮದಿಂದಲೇ ಪ್ರೇರಿತವಾಗುತ್ತವೆ. ಇಂತಹ ಆತ್ಮವನ್ನು ಪಡೆದ ವ್ಯಕ್ತಿಯು, ಜೀವನದ ಎಲ್ಲಾ ಕಷ್ಟಗಳನ್ನೂ ಪ್ರೇಮ ಭಾವನೆಯಿಂದಲೇ ಸಹಿಸುತ್ತಾನೆ. ಪ್ರೇಮದಲ್ಲಿ ಪೂರ್ಣತೆಯನ್ನು ಹೊಂದಲು ಇದು ಆತನಿಗೆ ಪರೀಕ್ಷೆಯಂತಿರುವುದು. ಅರ್ಥಾತ್ ಆತ್ಮರೂಪೀ ವಧು ತನ್ನ ಪ್ರೇಮದ ಶಕ್ತಿಯನ್ನು ತೋರಿಸುವುದಕ್ಕಾಗಿ, ತನ್ನ ಪ್ರೇಮಿಯ ಕಾರ್ಯಗಳಲ್ಲಿ ನಗು ನಗುತ್ತಲೇ ಸಹಕರಿಸುತ್ತಾಳೆ ಎಂದಿನ ತನಕ ಆಕೆ ಅಂಧಕಾರದಲ್ಲಿ ಮುಳುಗಿರುತ್ತಾಳೋ ಅಂದಿನ ತನಕ ತನ್ನ ಮುಖದ ವಸ್ತ್ರವನ್ನು ಆಕೆ ತೆಗೆಯಲಾರಳು. ಮುಖದ ಆವರಣವನ್ನು ತೆಗೆಯುವ ವರೆಗೆ ಆಕೆ, ತನ್ನ ಪ್ರಿಯಕರನನ್ನು ಗುರುತಿಸಲಾರಳು! ತನ್ನ ಪ್ರಿಯಕರನನ್ನು ಗುರುತಿಸುವ ವರೆಗೆ, ಆಕೆ, ಮನೆಯ ಕೆಲಸದಾಕೆಯಂತೆ, ಕೆಲಸ ಮಾಡುತ್ತಿರುತ್ತಾಳೆ. ಈ ಪರಿಸ್ಥಿತಿಯಲ್ಲಿ ಆಕೆ, ಸಂಶಯ-ದುಃಖಗಳಿಗೆ ಸಿಲುಕಿ ಬಹು ಕಷ್ಟಪಡುತ್ತಿರುತ್ತಾಳೆ; "ದೌರ್ಭಿಕ್ಷ್ಯಾತ್ ಯಾತಿ ದೌರ್ಭಿಕ್ಷ್ಯಂ, ಕ್ಲೇಶಾತ್-ಕ್ಲೇಶಂ, ಭಯಾತ್ ಭಯಂ" ಅರ್ಥಾತ್ ಹಸಿವಿನಿಂದಲೇ ಹಸಿವು! ಕಷ್ಟದಿಂದಲೇ ಕಷ್ಟ! ಮತ್ತು ಭಯದಿಂದಲೇ ಭಯ ಪ್ರಾಪ್ತವಾಗುತ್ತದೆ!

(ಶೇಷ)

Life Insurance Corporation of India,
Udipi Divisional Office,
"[illegible]",
P. B. No. 5, Udipi.

It is proposed to let the following portions in the Canara Mutual Compound belonging to the Life Insurance Corporation of India, at the junction of Court Road and Church Road, Udipi.

1. Shop fronts on the ground floor of Canara Mutual Building, bearing Door Nos.
(i) 13—3—11
(ii) 13—3—12
(iii) 13—3—8; 13—3—9; 13—3—10; 13—3—10A.

2. Seperate Block (House) in the compound along with compound (i. e., with yield from the trees existing) bearing door Nos. 13—3—18 and 13—3—19.

Interested parties may apply in the prescribed form which should reach the undersigned not later than 15th February 1962. The application forms can be had from the Establishment Department at the Divisional Office during office hours on any working day.

T. R. A. Pai,
Sr. Divisional Manager.
Udipi 31—1—1962.

WHEN AT MANGALORE
CHANDARANAS
Warmly Welcome you no matter whether for
SHOPPING OR SEEING
The biggest Single Establishment
With 7,650 square feet of Luxurious Shopping space
offers the widest range of choice under one Roof
in the whole of Mysore State.
SERVICE WITH A SMILE
GREETS YOU AT
CHANDARANA BROTHERS
HAMPANKATTA, MANGALORE-1.
First in AIR-CONDITIONED SHOPPING

ಸತ್ಯ, ಪ್ರೇಮ ಮತ್ತು ಕರುಣೆ

ಶ್ರೀ ಎಂ. ಬಿ. ಶಂಕರ ರಾವ್

ಸತ್ಯ, ಪ್ರೇಮ ಮತ್ತು ಕರುಣೆ—ಈ ಮೂರು ಗುಣಗಳು ಪರಮಾತ್ಮನಿಂದ ಉದ್ಭವಿಸಿದ ಉತ್ತಮ ಗುಣಗಳು. ಸತ್ಯ ಧರ್ಮವು ಶ್ರೀರಾಮಚಂದ್ರನಿಂದ ಪ್ರಕಾಶಿಸಿತು; ಪ್ರೇಮಕಾಂತಿಯು ಶ್ರೀಕೃಷ್ಣನಿಂದ ಬೆಳಗಿತು; ಕರುಣೆಯ ಪ್ರಚಾರಕನು ಬುದ್ಧದೇವನು. ಈ ಮೂರು ಮಹಾ ಗುಣಗಳ ಶಕ್ತಿಯಿಂದ ಭರತ ಖಂಡದ ಸಂಸ್ಕೃತಿಯು ಆದರ್ಶರೂಪವಾಯಿತು. ಕರುಣೆಯೂ, ಅಹಿಂಸೆಯೂ ದ್ವಂದ್ವಭಾವಗಳು. ಕರುಣೆಯ ಭಾವವೇ ಅಹಿಂಸೆಯು. ಈ ಅಹಿಂಸೆಯ ಪ್ರಭಾವದಿಂದಲೇ ಮಹಾತ್ಮಾ ಗಾಂಧಿಯು ಇಡಿ ಭೂಲೋಕದಲ್ಲಿ ಎರಡನೆಯ ಬುದ್ಧನಾಗಿ ಅವತರಿಸಿದರು. ಕರುಣೆಯೂ, ಅಹಿಂಸೆಯೂ ಸಮ್ಮಿಳಿತವಾದಾಗ ಪ್ರೇಮವು ಜನಿಸುವುದು. ಪ್ರೇಮವು ಇತರರ ಸುಖದಲ್ಲಿ ತನ್ನ ಆನಂದವನ್ನು ಸೂಚಿಸುತ್ತದೆ. ತನ್ನ ಸುಖದಲ್ಲಿ ತಾನು ಹಾರಾಡುವುದು ಬಹಳ ಸುಲಭವಾದ ಕರ್ಮವು. ಈ ಕರ್ಮವನ್ನು ಪ್ರಾಣಿಗಳು ಕೂಡ ದಿನನಿತ್ಯ ಮಾಡುತ್ತಲಿವೆ. ಇತರರ ಸುಖಕ್ಕಾಗಿ ನಿಷ್ಕಾಮ ಕರ್ಮಗಳನ್ನು ಮಾಡಿದರೆ ಅಂತಹ ಕರ್ಮಗಳು 'ನೈಜಪ್ರೇಮ'ವೆನ್ನಿಸುವವು. ಅಂತೆಯೇ ಇತರರ ಸಂಕಷ್ಟಗಳಲ್ಲಿ ನಾವು ಭಾಗವಹಿಸುವುದು ಕರುಣೆಯೆನ್ನಿಸುವುದು. ಬರೇ ಕಣ್ಣೀರು ಸುರಿಸಿದಾಗ ಮಾತ್ರ ಕರುಣೆಯು ಸಂಪೂರ್ಣವಾಗದು. ದುಃಖದಿಂದ ಬಳಲುವವರ ದುಃಖವನ್ನು ನಿವಾರಿಸುವ ಕರ್ಮಗಳನ್ನೆಸಗಿದರೆ ಮಾತ್ರ 'ಕರುಣೆ'ಯು ಫಲಕಾರಿಯಾಗುವುದು. ಕರುಣೆಯ ಧ್ಯೇಯವಿರುವ ಮಾನವನು ದುಃಖಿತರ ದುಃಖವನ್ನು ನೋಡಿ ತಟಸ್ಥನಾಗಿ ತಪ್ಪಿಸುವುದಿಲ್ಲ; ಪರಂತು ತನ್ನಿಂದ ಕೈಲಾದಷ್ಟು ಸಹಾಯ ಹಸ್ತವನ್ನು ನೀಡಿ ದುಃಖಿತರ ಕಷ್ಟಗಳನ್ನು ಪರಿಹರಿಸುವನು. ಉಚ್ಚಭಾವದ ಮಾನವನ ಹೃದಯವು ಬೆಣ್ಣೆಯಿಂದಲೂ ಮೃದುವಾಗಿದೆ ಎಂದು ನೀತಿ ಶತಕದಲ್ಲಿ ಹೇಳಿಯದೆ. ಬೆಂಕಿಯು ಬೆಣ್ಣೆಯನ್ನು ತ್ವರ್ಯ ಕರಗಿಸುವಂತೆ, ಕರುಣಾಳುವಿನ ಎದೆಯು ಇತರರ ಸಂಕಷ್ಟಗಳನ್ನು ಕಾಣುವಾಗ ಕೂಡಲೇ ಕರಗುತ್ತದೆ. ಅಂತಹ ಕರುಣಾಳು ಇತರರಿಗಾಗಿ ತನ್ನ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧನು. ಆಚಾರ್ಯ ವಿನೋಬಾ ಭಾವೆಯವರು ಇಂತಹ ಉನ್ನತ ಕರುಣಾಳುವಿನ ನಿದರ್ಶನ.

ಸತ್ಯ ಮಾರ್ಗವನ್ನು ಹಿಡಿಯದೇ ಕರುಣೆಯ ಭಾವವನ್ನು ಮನನ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಸತ್ಯವಿರುವಲ್ಲಿ ಮಾತ್ರ ಕರುಣೆಗೆ ಅವಕಾಶವಿದೆ— ಅದುಕಾರಣವೇ, ಮಹಾತ್ಮಾ ಗಾಂಧಿಯವರು ತನ್ನ ಅಹಿಂಸೆಯೊಡನೆ ಸತ್ಯಾಗ್ರಹವೆನ್ನುವ ವಾಕ್ಯನ್ನು ಸದಾ ಉಚ್ಚರಿಸಿ ದೇಶಸೇವಕರಲ್ಲಿ ಉತ್ಸಾಹವನ್ನೂ ಸಾಹಸವನ್ನೂ ಅಂಕುರಿಸುತ್ತಿದ್ದರು. ಅವರ ಅನುಯಾಯಿಗಳಲ್ಲಿ ಹಲವರು ಸತ್ಯವನ್ನು ಬಿಟ್ಟುಬಿಟ್ಟರು— ಕರುಣೆಯನ್ನು ತಳ್ಳಿದರು, ಸ್ವಾರ್ಥಕ್ಕೇನೇ ಮೇಲಿನ ಸ್ಥಾನವನ್ನು ಕೊಟ್ಟರು. ಇದು ದೇಶಕ್ಕೊದಗಿದ ವಿಧಿಯ ಹೇತು ಎನ್ನಬಹುದು.

ಸತ್ಯಕ್ಕೆ ಬಲವನ್ನು ಒತ್ತರಿಸುವ ಗುಣವು ಪ್ರೇಮವು. ಪ್ರೇಮವೂ, ಕರುಣೆಯೂ ಜೊತೆಯಾದಲ್ಲಿ ಸತ್ಯಕ್ಕೆ ಎಡೆಯುಂಟು. ಈ ಮೂರು ಗುಣಗಳೂ, ಶ್ರೀ ರಾಮ, ಶ್ರೀ ಕೃಷ್ಣ, ಮತ್ತು ಮಹಾ ಬುದ್ಧ ದೇವರ ಅವತಾರದಿಂದ ಭರತ ಖಂಡವನ್ನು ಬಹಳ ಮಟ್ಟಿಗೆ ಉದ್ಧರಿಸಿದವು. ದೇಶದ ಸಂಸ್ಕೃತಿಯೂ ಈ ಗುಣಗಳಿಂದಲೇ ಬೆಳಗಿಬಂತು. ಅನಂತರ ಅನೇಕಾನೇಕ ಸಾಧು ಸಂತರು ದೇಶದ ಬೇರೆ ಬೇರೆ ಭಾಗಗಳಲ್ಲಿ ಹುಟ್ಟಿ ಈ ಗುಣಗಳ ವೈಶಿಷ್ಟ್ಯವನ್ನು ತಮ್ಮ ಬುದ್ಧಿಬಲದಿಂದ ಮೇಲಡಿಸಿ ಮುಕ್ತಿ ಪಡೆದರು. ನಾರಾಯಣನು ಪ್ರೇಮಮಯನು ಎಂಬುದಾಗಿ ಶಂಕರಾಚಾರ್ಯರು ಆಗಾಗ್ಯೆ ಉದ್ಗಾರವೆತ್ತಿದ್ದಾರೆ. ವೇದಗಳೂ, ಉಪನಿಷತ್ತುಗಳೂ ಸತ್ಯವನ್ನೇ ಮುಂದಾಗಿಟ್ಟಿರುವವು. ಅದು ಕಾರಣ ಸತ್ಯ, ಪ್ರೇಮ, ಕರುಣೆಗಳು ಇಡೀ ಬ್ರಹ್ಮಾಂಡವನ್ನು ಆಧರಿಸಿವೆ ಎಂಬುದರಲ್ಲಿ ಯಾರೊಬ್ಬರೂ ಸಂಶಯ ಪಡಲಾರರು. ಈ ಗುಣಗಳ ಪ್ರಾಬಲ್ಯದಿಂದಲೇ ಲೋಕದಲ್ಲಿ ಶಾಂತಿಯುಂಟಾಗತಕ್ಕದ್ದು. ಈ ಗುಣಗಳು ಎಲ್ಲಿ ಲೋಪವಾಗುವವೋ ಅಲ್ಲಿ ಜಯಕ್ಕೆ ಅವಕಾಶವಿರದು.

"ಅಹಂಕಾರವನ್ನು ಸುಟ್ಟುಬಿಟ್ಟು, ಪ್ರೇಮವನ್ನೂ, ಕರುಣೆಯನ್ನೂ ಸಂಪಾದಿಸಿ, ಮಾತ್ಸರ್ಯವನ್ನು ದೂರೀಕರಿಸಿ ಕರ್ಮದಲ್ಲಿ ಮುನ್ನಡೆ" ಎಂಬ ತತ್ವವನ್ನು ಗೀತೆಯು ಬೋಧಿಸುತ್ತದೆ. ಪರಮಾತ್ಮನು ಪ್ರೇಮ ರೂಪಿಯು, ಕರುಣೆಯು, ಪ್ರೇಮ ಸ್ವರೂಪವು ಮತ್ತು ನಿತ್ಯವು ಪ್ರೇಮವನ್ನೂ, ಕರುಣೆಯನ್ನೂ ಒಂದುಗೂಡಿಸುವ ಮಹಾ ಜ್ಞಾನದ ತಿರುಳು ಈ ಗುಣಗಳು ದೇಶದ ಎಲ್ಲೆಡೆಗಳಲ್ಲೂ ಹಬ್ಬಿರಿ, ದೇಶಕ್ಕೂ ಇಡೀ ಬ್ರಹ್ಮಾಂಡಕ್ಕೂ ಸುಖವುಂಟಾಗಲಿ ಎಂದು ನಾವು ದಿನನಿತ್ಯ ಪರಮಾತ್ಮನಲ್ಲಿ ಶರಣುಹೋಗುವ.

ನಮ್ಮ ಸಾಹಿತ್ಯ ಸೇವೆ

ಕೆ. ವೆಂಕಟರಾಮಾಚಾರ್ಯ, ವಿದ್ವಾನ್, ಸುರತ್ಕಲ್ಲು.

ಕನ್ನಡ ಸಾಹಿತ್ಯ ಭಾಂಡಾಗಾರದಲ್ಲಿ ಸಾವಿರ ವರುಷಗಳಿಂದಲೂ ರಚಿತವಾದ ಅನೇಕ ವಿಷಯಕ ಗ್ರಂಥರತ್ನಗಳಿವೆಯೆಂಬುದು ಕವಿಚರಿತೆಯಿಂದ ತಿಳಿಯುತ್ತದೆ. ಅದರಲ್ಲಿ ಹೇಳಿರದ ಕೆಲವು ಕೃತಿಗಳ ವಿಚಾರವಾಗಿ ಆಗಾಗ ಪ್ರಕಟನೆಗಳಾಗುತ್ತವೆ. ಕವಿಚರಿತೆಯು ಕೇವಲ ಗ್ರಂಥಸೂಚಿ—ಕೆಲವು ಪದ್ಯಗಳ ಉದ್ಧಾರದಿಂದ ಗ್ರಂಥಾನುಕ್ರಮಣಿಕೆಯಾದುದರಿಂದ, ಇಡಿಯ ಕೃತಿಯ ಪರಿಚಯವಾಗಲೀ, ವಿಷಯ ವಿವೇಚನೆಯಾಗಲಿ ಆಗುವಂತಿಲ್ಲ. ಆ ಕೊರತೆಗೆ ಕನ್ನಡದ ಕಣ್ವರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಕೆಲವು ಕವಿಗಳ ಕೃತಿಗಳ ದೀರ್ಘ ಪರಿಚಯಕ್ಕೆ ತೊಡಗಿದರು (ಕನ್ನಡ ಕೈಪಿಡಿ, ಭಾಗ ೨) ಅದಾಗಿ, ಕನ್ನಡದ ಹಲವು ಪ್ರಮುಖ ಗ್ರಂಥಗಳ ವಿಷಯ, ಪಾತ್ರಾದಿ ವಿವೇಚನೆಯುಳ್ಳ 'ಕನ್ನಡದಸಾಹಿತ್ಯ ಚರಿತೆ'ಯನ್ನು ಶ್ರೀ ರಂ. ಶ್ರೀ ಮುಗಳಿಯವರು ಇತ್ತೀಚೆಗೆ ಬರೆದರು. ಇವೆಲ್ಲಾ ಕೃತಿಗಳ ವಿಚಾರ ವಿವರಣೆಗಳು ಸಾಕ್ಷಾತ್ತಾಗಿ ನಮಗೆ ತಿಳಿಯಲು ಅನುವಾಗಿಲ್ಲ, ಆ ಎಲ್ಲಾ ಗ್ರಂಥಗಳು ಅಚ್ಚಾಗಿಲ್ಲ! ಕೆಲವು ಕೃತಿಗಳು ಅಚ್ಚಾಗಿದ್ದರೂ, ಇದೀಗ ದೊರೆಯುವುದಿಲ್ಲ! ಇತ್ತೀಚೆಗೆ ಕೆಲವೆಡೆ ಘನ ಮಠಗಳೂ ಸಂಘ ಸಂಸ್ಥೆಗಳೂ ಪ್ರಾಚೀನ ಕೃತಿಗಳನ್ನು ಪರಿಷ್ಕರಿಸಿ, ಪ್ರಕಟಿಸುವ ಸತ್ಕಾರ್ಯಕ್ಕೆಳಸಿವೆಯೆಂಬುದು ಸಂತೋಷಾಸ್ಪದವಾಗಿದೆ. ಆದರೆ, ಇವುಗಳಲ್ಲಿ ಈ ವರೆಗೊಮ್ಮೆಯಾದರೂ ಅಚ್ಚಾಗಿರುವ ಹಲವು ಕೃತಿಗಳೇ ಇರುವುವಲ್ಲದೆ, ಒಮ್ಮೆಯಾದರೂ ಅಚ್ಚಾಗಿಲ್ಲದ ಕೃತಿಗಳ ಪ್ರಕಟನೆಯು ಅತಿ ವಿರಳವಾಗಿದೆಯೆಂಬುದು ಸತ್ಯಸೂರ್ಣವಾದ ವಿಷಾದಮಯ ವಿಷಯವದೆ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾಲಯ, ಲಿಂಗಾಯತ ವಿದ್ಯಾಭಿವೃದ್ಧಿ ಸಂಘ, ಇತ್ಯಾದಿ ಕಡೆಗಳವರು ಈ ಸದ್ವಿಷಯದ ಬಗ್ಗೆ ಖಾಸ ಹೆಚ್ಚು ಗಮನಿಸಬೇಕಾಗಿದೆ!

ಅದಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವಲ್ಲಿ ಇಂತಹ ಪ್ರಾಚೀನ ಕೃತಿ ಪ್ರಕಟನೆಯ ಕೆಲಸವು ಒಂದು ತಲೆಮಾರಿನ ಹಿಂದೆ ಹುಲುಸಾಗಿ ಸಾಗಿತ್ತು! ಚೆನ್ನಬಸವ ಪುರಾಣ, ಶಬ್ದಮಣಿ ದರ್ಪಣ, ಭರತೇಶ ವೈಭವ, ಹನುಮದ್ರಾಮಾಯಣ, ಪುರಂದರದಾಸಾದಿಯರ ಕೃತಿಗಳು, ಯಕ್ಷಗಾನ ಪ್ರಬಂಧಗಳು, ಇತ್ಯಾದಿಗಳು ಕೆಲವು ಮಾತ್ರ ಇಲ್ಲಿ ಉಲ್ಲೇಖನೀಯಗಳಾಗಿವೆ. ಈ ವಿಷಯದಲ್ಲಿ ಉಪೇಕ್ಷೆ-ವಿರಕ್ತಿ ಉಂಟಾಗಲು [ಕಾರಣವೇನೆಂದು ಇದೀಗ ನಾವು ಗಮನಿಸಬೇಕಾಗಿದೆ ಇಂದಿಗೆ ಆಧುನಿಕ ಸಾಹಿತ್ಯ ಪ್ರಪಂಚವು ಬಲು ಹೆಚ್ಚು ಮಟ್ಟಿಗೆ ಸುಲಭ ಸಾಧ್ಯವಾಗಿ ಸಾಗಬರುತ್ತದೆ. ಆದರ ಪ್ರಾಚೀನ ಕೃತಿಗಳ ಸಂಗ್ರಹ ಹಾಗೂ ಪ್ರಕಟನೆಯು ತುಸ ಕಡಿಮೆ ಮಟ್ಟಿಗೆ ಮತ್ತು ಕಷ್ಟಸಾಧ್ಯವಾಗಿ ಸಾಗಬೇಕಾಗಿದೆಯೆಂಬುದು ನಿಜವಾದ ಮಾತಾಗಿದೆ. ಪರಂತು, ಅತ್ಯಾವಶ್ಯಕವಾದುದು ಅತಿ ಕಷ್ಟದಿಂದ ಸಾಧ್ಯವಾದರೆ ಬಹುಫಲವನ್ನೀಯಬಲ್ಲುದೆಂದು ಭಾವಿಸಬೇಕಲ್ಲವೇ? ಇನ್ನು, ಈ ಜಿಲ್ಲೆಯಲ್ಲಿ ಪ್ರಕಟವಾದ ಪುಸ್ತಕಗಳು ವಾಚಕರಿಂದ ಹೆಚ್ಚು ಆದರಿಸಲ್ಪಡುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಇದು ಆತ್ಮೀಯರೆನ್ನುವ ಅಭಿಮಾನವಿಲ್ಲದ ಜನತೆಯು ಆಚರಿಸುವುದಾಗಿದೆ. ಪರಜಿಲ್ಲೆಯ ಅವುದೇ ಪುಸ್ತಕವಾಗಲೀ ಅದು ಒಳ್ಳಿತಿರಬೇಕೆಂಬ—ಒಳ್ಳಿತಿಲ್ಲವೆಂಬ—ಆಶಯವು ಆ ಪುಸ್ತಕವನ್ನು ಪಡೆದು ಓದಿ ತಿಳಿಯುವ ವಿಷಯವಾಗಿದೆ. ಅಂದ ಮೇಲೆ, ನಮ್ಮ ಜಿಲ್ಲೆಯಲ್ಲಿ ಹಲವಾರು ಕಾಲೇಜ್, ಹೈಸ್ಕೂಲ್‌ಗಳಾಗಲೀ; ಗ್ರಾಮ ಸಂಘ, ಯುವಕ ಜನಸಂಘ, ಮಹಿಳಾ ಸಂಘಗಳಾಗಲೀ, ವರ್ಷಂಪ್ರತಿ ಹೆಚ್ಚುತ್ತಿರುವುದು ಸಾಮಾಜಿಕರ-ವಿದ್ಯಾರಂಗದ - ಪ್ರಗತಿಪರ ಲಕ್ಷಣವಾಗಿದೆ. ಆ ವಿದ್ಯಾಲಯಗಳು, ಹಾಗೂ ಸಂಘಗಳು ತಮ್ಮ ತನದ ಕುರುಹಿಂದಾದರೂ, ನಮ್ಮ ಜಿಲ್ಲೆಯಲ್ಲಿ ಪ್ರಕಟವಾದ ಯಾವತ್ತೂ ಪುಸ್ತಕದ ಒಂದೆರಡು ಪ್ರತಿಗಳನ್ನು ತರಿಸಿ, ಓದಿ, ಗುಣದೋಷಗಳನ್ನು ತಿಳಿಸಿ, ತಿದ್ದಿಕೊಳ್ಳುವಂತೆ ಗ್ರಂಥ

(೯ನೇ ಪುಟ ನೋಡಿರಿ)

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್ ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ. 2-50 ನ್ನು ಮನಿಯಾರ್ಡರು ಮೂಲಕ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಣದ ಜೋಪಾಸನೆಗೆ....
ಅಂಗಿಯ ಕಿಸೆಗಿಂತ ಮನೆ ಮೇಲು;
ಬೇಂಕುಗಳು ಮನೆಗಿಂತ ಎಷ್ಟೋ ಮೇಲು.
ಕೊರ್ಪೊರೇಶನ್ ಬೇಂಕ್
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಉಡುಪಿ
ಆಡಳಿತ ಆಫೀಸು: ಮಂಗಳೂರು-1.

ಜನ ಹೆಚ್ಚಳವನ್ನು ತಡೆಯಲು

ಪೌಷ್ಟಿಕ ಆಹಾರದ ಉಪಯೋಗ

ಆಹಾರಾಭಾವವು ಮರಣ ಪ್ರಮಾಣವನ್ನು ಹೆಚ್ಚಿಸುತ್ತದೆ ಎಂಬುದು ಎಲ್ಲರಿಗೂ ಸ್ಪಷ್ಟವಾಗಿ ತಿಳಿಯುವ ವಿಚಾರ. ಈ ಕಾರಣದಿಂದಲೇ ಯುದ್ಧ, ಅಂಟುರೋಗಗಳಂತೆ ಆಹಾರಾಭಾವವೂ ಜನಸಂಖ್ಯಾ ಪ್ರಮಾಣವನ್ನು ತಡೆಹಿಡಿಯುವುದು ಎಂಬ ತಿಳುವಳಿಕೆಯಿತ್ತು. ಆದರೆ, ಆಹಾರಾಭಾವದಿಂದ ಜನಸಂಖ್ಯೆಯು ಕಡಿಮೆಯಾಗುವುದರ ಬದಲು ಹೆಚ್ಚುತ್ತದೆ ಎಂದು ಯಾರಾದರೂ ಹೇಳಿದರೆ, ಅದು ವಿರೋಧಾಭಾಸವಾಗಿ ಕಾಣಿಸುವುದು ಸಹಜ.

ಇದುವರೆಗಿನ ಅನುಭವಗಳಿಂದ ಹೇಳುವುದಾದರೆ, ಸಂಕಷ್ಟ, ಬರಗಾಲ ಮತ್ತು ಅಂಟುರೋಗಗಳು ಸಂಭವಿಸಿದ ನಂತರ ಜನಸಂಖ್ಯಾ ಪ್ರಮಾಣವು ಅತೀವ ತೀವ್ರವಾಗಿ ಏರುವುದು. ಹಾಗೆಯೇ ಆಹಾರವು ಪೌಷ್ಟಿಕಾಂಶಗಳ ದೃಷ್ಟಿಯಲ್ಲಿ ಕೆಳಮಟ್ಟದ್ದಿರುವ, ಹಸಿವೆಯಿಂದ ಸಾವಿರಾರು ಜನರು ಮೃತ್ಯುವಶರಾಗುವುದು ತೀರ ಸಾಮಾನ್ಯವಾಗಿ ಪರಿಣಮಿಸಿರುವ ಚೀನ, ಭಾರತ, ಈಜಿಪ್ಟ್ ಮೊದಲಾದ ದೇಶಗಳಲ್ಲಿ ಜನಸಂಖ್ಯೆಯು ಹೆಚ್ಚಳದ ಪ್ರಮಾಣವು ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿದೆ. ಪೌಷ್ಟಿಕ ಆಹಾರಗಳನ್ನು ಸೇವಿಸುವ ದೇಶಗಳಲ್ಲಿ ಜನಸಂಖ್ಯೆಯು ಹ್ರಾಸವಾಗುವ ಲಕ್ಷಣಗಳು ಗೋಚರಿಸುತ್ತವೆ. ಆಸ್ಟ್ರೇಲಿಯಾ, ನ್ಯೂಜಿಲೇಂಡ್, ಅಮೇರಿಕೆ ಮೊದಲಾದುವು ಈ ಬಗೆಯ ರಾಷ್ಟ್ರಗಳು.

ಈ ವಿರೋಧಾಭಾಸವನ್ನು ಹೀಗೆ ಸ್ಪಷ್ಟೀಕರಿಸಬಹುದು. ಸಮಾಜವ್ಯಾಪಿ ಆಹಾರಾಭಾವವು ಮರಣಪ್ರಮಾಣವನ್ನು ಹೆಚ್ಚಿಸುತ್ತದೆ; ಆದರೆ, ಇದಕ್ಕೂ ಮಿಗಿಲಾಗಿ ಜನನಪ್ರಮಾಣವನ್ನು ಏರಿಸುತ್ತದೆ. ಇದರಿಂದಾಗಿ ಜನಸಂಖ್ಯೆಯಲ್ಲಿ ವೃದ್ಧಿಯು ತಲೆದೋರುತ್ತದೆ. ಸಮಾಜದಲ್ಲಿ ಅರೆಹೊಟ್ಟೆಯುಣ್ಣುವವರಲ್ಲಿ ಹೆಚ್ಚು ಮಕ್ಕಳು ಹುಟ್ಟುವುದನ್ನು ನಾವು ಕಾಣುತ್ತೇವೆ. ಪ್ರಾಚೀನ ಗ್ರೀಕರಲ್ಲಿ 'ಪ್ರೊಲೇಕಾರಿಯನ್' ಎಂಬ ಅಡ್ಡ ಹೆಸರು, ಹಸಿದಿದ್ದು ಮಕ್ಕಳನ್ನು ಪಡೆಯುವವನಿಗೆ ಇತ್ತು. 'ದರಿದ್ರರ ಬಟ್ಟಲು ಖಾಲಿಯಾಗಲೂ ಬರಿದು, ಆದರೆ, ಅವರ ಸಂತಾನವು ಮಾತ್ರ ಹಿರಿದು' ಎಂಬ ಗಾದೆಯ ಮಾತು ಪಶ್ಚಿಮ ಅಮೇರಿಕೆಯಲ್ಲಿದೆ.

ಈ ಬಗೆಯ ಎಲ್ಲರಿಗೂ ತಿಳಿದ ಸತ್ಯಾಂಶಗಳ ಅರಿವಿದ್ದರೂ ಜನಸಂಖ್ಯಾವೃದ್ಧಿಯ ವಿವೇಚಕರು ಅನ್ನಾಭಾವದಿಂದ ಜನಸಂಖ್ಯೆ ಇಳಿಯುತ್ತದೆ; ಇಲ್ಲವೇ ಏರುತ್ತಿರುವ ಜನ ಪ್ರಮಾಣವನ್ನು ಅದು ಸ್ಥಗಿತಗೊಳಿಸುತ್ತದೆ; ಹಾಗೆಯೇ ಅನ್ನಾಧಿಕ್ಯವು ಜನಸಂಖ್ಯೆಯ ವೃದ್ಧಿಗೆ ಕಾರಣವಾಗುತ್ತದೆ ಎಂದು ತಿಳಿಯುತ್ತ ಬಂದಿದ್ದಾರೆ. ಆದರೆ, ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಇದ್ದ ತತ್ವವೇತ್ತನೂ ಜನಸಂಖ್ಯಾ ಶಾಸ್ತ್ರಜ್ಞನೂ ಆದ ಥಾಮಸ್ ಡಬ್ಲಡೆಯ ಅಭಿಪ್ರಾಯ ಇದಕ್ಕೆ ವಿರುದ್ಧವಿತ್ತು. ಅವನು ಅನ್ನಾಭಾವದಿಂದ ಜನಸಂಖ್ಯೆಯ ಪ್ರಮಾಣವು ಹೇಗೆ ಹೆಚ್ಚುತ್ತದೆ ಎಂಬುದನ್ನು ತಿಳಿಸಿ ಹೇಳುವ ಪ್ರಯತ್ನ ಮಾಡಿದನು. ೧೮೫೩ರಲ್ಲಿ ಆತನೊಂದು ನಿಬಂಧದಲ್ಲಿ ಹೀಗೆ ಬರೆದಿದ್ದಾನೆ—

"ವನಸ್ಪತಿ ಮತ್ತು ಪ್ರಾಣಿಗಳ ಯಾವುದಾದರೊಂದು ಜಾತಿಯ ಅಸ್ತಿತ್ವವು ಅಪಾಯದ ಮಟ್ಟಕ್ಕೆ ಬಂದಾಗ, ಪ್ರಕೃತಿಯು ಅದರ ಪ್ರಜನ ಶಕ್ತಿಯನ್ನು ಹೆಚ್ಚಿಸಿ, ಅದನ್ನು ರಕ್ಷಿಸುವ ಪ್ರಯತ್ನ ಮಾಡುತ್ತದೆ. ಪೌಷ್ಟಿಕಾಹಾರಗಳ ಅಭಾವದಿಂದ ನಾಶವಾಗುವ ಸಂದರ್ಭದಲ್ಲಿ ಹೆಚ್ಚಾಗಿ ಹೀಗಾಗುತ್ತದೆ. ಪರಿಣಾಮವಾಗಿ ಅಪರಿಪುಷ್ಟತೆಯು ಪ್ರಜನನ ಶೀಲತೆಗೆ ಅನುಕೂಲವಾಗುವುದು; ಅತ್ಯಧಿಕ ಪರಿಪುಷ್ಟತೆಯು ಇದಕ್ಕೆ ಪ್ರತಿಕೂಲವಿರುವುದು."

ದುರ್ಭಾಗ್ಯವಶದಿಂದ ಡಬ್ಲಡೆಯ ಈ ಸಿದ್ಧಾಂತಗಳು ಸಾಕಷ್ಟು ಪ್ರಚಾರವಾಗಲಿಲ್ಲ. ವಿಕ್ಟೋರಿಯನ್ ಯುಗದ ಮಧ್ಯಮ ಮತ್ತು ಉಚ್ಚ ವರ್ಗಗಳ ಭಾವನೆ ಹಾಗೂ ನೈತಿಕ ಮಾನ್ಯತೆಗಳಿಗೆ ಈ ಹೊಸ ಸಿದ್ಧಾಂತಗಳಿಂದ ಆಘಾತವಾಗುವುದರಿಂದಲೂ ಡಬ್ಲಡೆಯು ಪರ್ಯಾಪ್ತ ಪ್ರಮಾಣಗಳನ್ನು ಮುಂದಿಡದಿರುವುದರಿಂದಲೂ ಹೀಗಾಯಿತು. ಆದರೆ, ಇಂದು ಇವುಗಳಿಗೆ ಬಲವೀಯಬಲ್ಲ ಪ್ರಮಾಣಗಳು ದೊರೆತಿವೆ.

ನಿರಂತರ ಅರೆ ಹೊಟ್ಟೆಯಲ್ಲಿರುವುದರಿಂದ ಮನುಷ್ಯನ ಹಸಿವೆಯು ಕಡಿಮೆಯಾಗುವುದು, ಮತ್ತಿದರಿಂದ ಕ್ರಮೇಣ ಅಲ್ಪಾಹಾರದಿಂದಲೇ ಆತನು ತೃಪ್ತನಾಗುತ್ತಾನೆ. ಆಗ, ಮನುಷ್ಯನ ಗಮನ ಆಹಾರದಿಂದ ಬೇರೆಡೆಗೆ ಸರಿಯುತ್ತದೆ. ಆಗ, ಆತನನ್ನು ಕಾಮಾಸಕ್ತಿಯೊಂದೇ ಜೀವಶಾಸ್ತ್ರೀಯ ದೃಷ್ಟಿಯಿಂದ ಮಹತ್ವಪೂರ್ಣವೂ ಮಾನಸಿಕ ದೃಷ್ಟಿಯಿಂದ ತೃಪ್ತಿಕರವೂ ಸಮಾಧಾನಗೊಳಿಸುವ ಸಾಧನವಾಗುತ್ತದೆ. ಒಂದು ಪ್ರವೃತ್ತಿಯ ಹ್ರಾಸದಿಂದಾದ ಕೊರೆಯು ಇನ್ನೊಂದರ ವೃದ್ಧಿಯಿಂದ ತುಂಬಿಬರುತ್ತದೆ.

ಈ ಸತ್ಯವನ್ನು ಪಶುಪಾಲಕರು ಅವಶ್ಯ ತಿಳಿದಿರುತ್ತಾರೆ. ಬಹಳವಾಗಿ ಕೊಬ್ಬಿದ ಪಶುಗಳು ನಪುಂಸಕವಾಗಿರುತ್ತವೆ. ಅವುಗಳ ಪೌರುಷವನ್ನು ಮರಳಿ ತರಲು ಬೆಳೆದ ಕೊಬ್ಬನ್ನು ಕರಗಿಸುವ ಪ್ರಯತ್ನ ಮಾಡುತ್ತಾರೆ. ಪ್ರೋಟೀನ್ ಇಲ್ಲವೇ ಸಸಾರಜನಕದ ಅಭಾವವು ಪಶುಗಳ ಗರ್ಭಧಾರಣಾ ಶಕ್ತಿಯನ್ನು ಹೆಚ್ಚಿಸುತ್ತದೆ. ಜೆ. ಆರ್. ಸ್ಲೊನೇಕರರ ಪ್ರಯೋಗವೊಂದು ಇದನ್ನು ಸಿದ್ಧ ಮಾಡಿ ತೋರಿಸುತ್ತದೆ.

ಸ್ಲೋನೇಕರರು ಇಲಿಗಳ ಆರು ಸಂತಾನವನ್ನು ಸಸಾರಜನಕದ ಪ್ರಮಾಣವು ಬೇರೆ ಬೇರೆಯಿರುವ ಆಹಾರಗಳನ್ನು ಇತ್ತು ಸಾಕಿದರು. ನೇಕಡಾ ಹತ್ತು ಸಸಾರಜನಕವಿರುವ ಆಹಾರವನು ಉಂಡ ಇಲಿಗಳಲ್ಲಿ ಪ್ರತಿಶತ ಐದು ಇಲಿಗಳು ನಪುಂಸಕವಾದುವು. ಪ್ರತಿಶತ ೧೮ ಸಸಾರಜನಕಯುಕ್ತ ಆಹಾರವಿತ್ತಾಗ, ನಪುಂಸಕರ ಪ್ರಮಾಣ ೨೨ ನೇಕಡಾ ಆಯಿತು. ಹಾಗೆಯೇ ೨೨ ಅಂಶವಿರುವ ಆಹಾರ ಕೊಟ್ಟಾಗ ನೂರಕ್ಕೆ ೪೦ರಷ್ಟು ನಪುಂಸಕರ, ಹೆಚ್ಚಿದರು.

ಈ ಪ್ರಯೋಗದಿಂದ ಸಸಾರಜನಕವು ಆಹಾರದಲ್ಲಿ ಹೆಚ್ಚಾದಂತೆ ಗರ್ಭಧಾರಣಾ ಶಕ್ತಿಯು ಹ್ರಾಸವಾಗುವುದೆಂದು ತಿಳಿಯಬಹುದು. ಮನುಷ್ಯರ ವಿಷಯದಲ್ಲೂ ಈ ಮಾತು ಸ್ವಯಂಸಿದ್ಧವಾಗುತ್ತದೆ. ಏಷಿಯಾ, ಆಫ್ರಿಕ ಮತ್ತು ದ. ಅಮೇರಿಕಾಗಳಲ್ಲಿ ಸಸಾರಜನಕದ ಉಪಯೋಗವು ಬಹಳ ಕಡಿಮೆಯಿರುವುದರಿಂದಲೇ ಇಲ್ಲಿ ಜನಸಂಖ್ಯೆಯ ಸಮಸ್ಯೆ ತೀವ್ರವಾಗಿದೆ. ಪಶ್ಚಿಮ ಯುರೋಪ್, ಅಮೇರಿಕೆಯ ಸಂಯುಕ್ತ ರಾಜ್ಯಗಳು, ಆಸ್ಟ್ರೇಲಿಯಾ ನ್ಯೂಜೀಲೇಂಡ್‌ಗಳಲ್ಲಿ ಸಸಾರಜನಕಯುಕ್ತ ಆಹಾರವನ್ನು ಹೆಚ್ಚಾಗಿ ಸೇವಿಸುವುದರಿಂದ ಜನಸಂಖ್ಯೆ ತೀರ ಕಡಿಮೆ. ಕೆಲವೊಂದು ದೇಶಗಳ ಜನಸಂಖ್ಯೆಯ ಹೆಚ್ಚಳಿಯ ಪ್ರತಿಶತ ಮತ್ತು ಅಲ್ಲಿನವರು ಉಪಯೋಗಿಸುವ ಆಹಾರದಲ್ಲಿ ಸಸಾರಜನಕದ ಪ್ರಮಾಣವನ್ನು (ಗ್ರಾಮುಗಳಲ್ಲಿ) ಕ್ರಮವಾಗಿ ಇಲ್ಲಿ ಕಾಣಬಹುದು:

ಫಾರ್ಮೋಸಾ—	೪೫·೩, ೪·೭.
ಮಲಯಾ—	೩೯·೭, ೭·೫
ಭಾರತ—	೩೩·೦, ೮·೭
ಇಟಲಿ—	೨೩·೪, ೧೫·೨
ಜರ್ಮನಿ—	೨೦·೦, ೩೭·೩
ಆಸ್ಟ್ರೇಲಿಯಾ—	೧೮·೦, ೫೯·೯
ಅಮೇರಿಕಾ—	೧೭·೯, ೬೧·೪
ಸ್ವೀಡನ್—	೧೫·೦, ೬೨·.

ಉಪಯೋಗಿಸುವ ಆಹಾರದಲ್ಲಿ ಅತ್ಯಲ್ಪ ಸಸಾರ ಜನಕವಿರುವ ಫಾರ್ಮೋಸಾದಲ್ಲಿ ಜನಸಂಖ್ಯೆಯೇರುವ ಪ್ರಮಾಣವು ಅತಿ ಹೆಚ್ಚಿನದಾಗಿದೆ; ಹಾಗೆಯೇ ಸ್ವೀಡನ್‌ನಲ್ಲಿ ಅತ್ಯಧಿಕ ಸಸಾರಜನಕದ ಉಪಯೋಗವಾಗುವುದರಿಂದ ಅಲ್ಲಿ ಜನಸಂಖ್ಯೆಯು ಏರುವುದಾದರೂ ಅತಿ ಮೆಲ್ಲಗೆ. ನಮ್ಮ ದೇಶದಲ್ಲಿ ಜನಸಂಖ್ಯೆಯು ಏರುತ್ತಿದ್ದು ದೊಡ್ಡ ಸಮಸ್ಯೆಯಾಗಿ ನಿಂತಿದೆ. ಇದನ್ನು ತಡೆಹಿಡಿಯುವುದಕ್ಕೆ ಪೌಷ್ಟಿಕ ಆಹಾರವು ಎಲ್ಲರಿಗೂ ದೊರೆಯುವಂತೆ ಮಾಡುವುದೇ ಸೂಕ್ತ ಕ್ರಮವಾಗಿದೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 600/1961.

ಉರ್ಬನ್ ಸಾಲ್ಡಾಂಝಾ ಕೂಡಾ — ವಾದಿರು

ಮತ್ತು

ಸುಂದರಿ ಸೆಟ್ಟಿ ಕೂಡಾ 5 ಜನರು — ಪ್ರತಿವಾದಿರು

3ನೇ ಪ್ರತಿವಾದಿ-ಭುಜಂಗ ಸೆಟ್ಟಿ- ನರ್ಸಿ ಸೆಟ್ಟಿ ಮಗ— ಕಾರ್ಕಳ ತಾಲ್ಲೂಕು ನಿಂಜೂರು ಗ್ರಾಮದ ತಾನದ ಬೆಟ್ಟು ಎಂಬಲ್ಲಿರುವವ—

ಮೇಲ್ಕಂಡ ದಾವೆಯು 1ರಿಂದ 4ನೇ ವರೆಗಿನ ಪ್ರತಿವಾದಿಗಳು ಮತ್ತು ಯಿತ್ತಲಾಗೆ ಮೃತಪಟ್ಟ ನರ್ಸಿಸೆಟ್ಟಿ ಕೂಡಾ ಕುಟುಂಬದ ಪ್ರಯೋಜನದ ಬಗ್ಗೆ ವಾದಿಂದ ಪಡದ ಪ್ರತಿಫಲದ ರೂಪಾಯಿ 700-00ಕ್ಕೆ ಕಳೆದ ತಾರೀಕು 10-5-1960ರಲ್ಲು ವಾದಿರಿಗೆ ಬರಕೊಟ್ಟ ಡಿ. ಪ್ರೊ. ನೋಟು ಪ್ರಕಾರ ಬಡ್ಡಿ ಅಸಲು ಬಡ್ಡಿ ಅವೇಜು ಬರಮಾಡಿ ಕೊಳ್ಳುವರೇ ವಾದಿರು ದಾಕಲ್ಲ ಮಾಡಿದ ದಾವೆಯು 3ನೇ ಪ್ರತಿವಾದಿಯ ಹಾಜರಾತಿ ಬಗ್ಗೆ ಯಿನೇ ತಾ. 24-2-1962ಕ್ಕೆ ಯಿಟ್ಟಿದೆ ಅದ್ರಿಂದ 3ನೇ ಪ್ರತಿವಾದಿಯು ಸದ್ರಿ ದಿವಸ ಬೆಳಿಗ್ಗೆ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉಜರಿಸುವರೇ ತಪ್ಪಿದರೆ ಕೋರ್ಟಿನವರಿಗೆ ಯುಕ್ತ ತೋರುವಂತೆ ಸದ್ರಿದಾವಾ ತೀರ್ಮಾನಿಸಲಾಗುವುದು. ಎಂತ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿದೆ

P. Vittaldas Hegde

ವಾದಿರ ಕಡೆ ಎಡ್ವಕೇಟ್

ಕಾರ್ಕಳ ತಾ. 5-2-1962.

CANARA BANK LIMITED

IMPRESSIVE PROGRESS DURING 1961

The working of the Canara Bank Limited for the year ended 31st December, 1961, has resulted in a net profit of Rs. 21·24 lakhs (Subject to audit) after making the usual and necessary provisions and provision for taxation. This compares favourably with the net profit of Rs. 20·30 lakhs for 1960, arrived at **before** providing for taxation.

With the last year's carry forward of Rs. 0·45 lakhs a sum of Rs. 21·69 lakhs is available for distribution. The Directors of the Bank propose to set apart Rs. 6·70 lakhs for Statutory Reserves, which inclusive of Rs 6·30 lakhs under Share Premium account, now stand at Rs. 63 lakhs; Rs. 0·62 lakhs for payment of 5% dividend to Preference Shareholders (Rs. 0·62 lakhs last year); Rs. 5·40 lakhs for payment of 15% dividend to equity Shareholders (Rs. 5·40 lakhs last year); Rs. 4·50 lakhs for contingencies (Rs. 3·50 lakhs inner Reserves last year); and Rs. 4·00 lakhs for bonus to staff (Rs. 3·10 lakhs last year), thus leaving a balance of Rs. 0·47 lakhs to be carried forward (Rs. 0·45 lakhs last year).

Deposits of the Bank at Rs. 37·56 crores show an increase of Rs. 6·74 crores over last years figure (21·9% increase). Total advances at Rs. 20·39 crores stand improved by Rs. 3·76 crores (22·6% increase). As usual, the liquidity has been well maintained, the ratio of total advances to deposits being at 54·3%.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನೆರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ

ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೮-೨-'೬೨	೨೨

ನಿಮ್ಮ ಓಟು ಕಾಂಗ್ರೆಸಿಗೆ

ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡುವಂತೆ ಕೇಳಿಕೊಳ್ಳಲು ಪ್ರಧಾನಿ ನೆಹರು ನಮ್ಮ ಜಿಲ್ಲೆಯ ರಾಜಧಾನಿ ಮಂಗಳೂರಿಗೆ ಬಂದರು. ಕಾಂಗ್ರೆಸ್ಸಿನ ಹಿರಿಮೆಯನ್ನೂ ಅದು ಸಾಧಿಸಿದ ಮಹಾ ಕಾರ್ಯಗಳನ್ನೂ ವಿವರಿಸಿ, ರಾಷ್ಟ್ರದ ಉತ್ಥಾನಕ್ಕೆ ಕಾಂಗ್ರೆಸ್ಸು ಗೆದ್ದುಬರುವುದು ಅತ್ಯವಶ್ಯವೆಂದು ತಿಳಿಸಿದರು. ವಿರೋಧೀ ಪಕ್ಷಗಳ ಲೋಪದೋಷಗಳನ್ನೂ ಕರ್ತೃತ್ವಶಕ್ತಿಯ ಅಭಾವವನ್ನೂ ಎತ್ತಿತೋರಿಸಿದರು. ಸ್ವಾತಂತ್ರ್ಯಾನಂತರ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಪ್ರಚಾರಾರ್ಥ ನೆಹರುರವರು ಮಂಗಳೂರಿಗೆ ಭೆಟ್ಟಿ ನೀಡುತ್ತಿರುವುದು ಇದು ಮೂರನೆಯ ಬಾರಿ. ಪ್ರಧಾನಿಯವರು ದೇಶದ ಸಮೃದ್ಧ ಮತ್ತು ವಿಖ್ಯಾತ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ನಂತರ ಕಾರ್ಯಗತವಾದ ಅಭಿವೃದ್ಧಿ ಕಾರ್ಯಗಳನ್ನು ಕಾಣಬೇಕೆಂಬ ಆಸೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಹೇಳಿದಂತೆ ನಮಗೆಲ್ಲರಿಗೂ ಇರುವುದು ಸ್ವಾಭಾವಿಕ. ಆದರೆ, ಪಂಡಿತರ ಪ್ರಾಯ, ಅವರ ನಿರಂತರ ಕಾರ್ಯಕ್ರಮಗಳ ಭರಾಟೆಗಳಿಂದ ಅವರು ಮಂಗಳೂರನ್ನು ಬಿಡು ಬೇರೆಲ್ಲಿಗೂ ಹೋಗುವುದು ಅಸಾಧ್ಯವಾಗಿ ಪರಿಣಮಿಸಿತು. ಇದರಿಂದ ನಮಗಾಗಬಹುದಾದ ಗ್ಲಾನಿಯನ್ನು ನಾವು ಅವಶ್ಯ ಬಿಟ್ಟುಕೊಡಬೇಕು.

ಪ್ರಧಾನಿಯವರು ಹುಬ್ಬಳ್ಳಿಯಲ್ಲಿ ಭಾಷಣಮಾಡುತ್ತ ಹೇಳಿದರು: "ಕಾಂಗ್ರೆಸ್ಸನ್ನುಳಿದ ಇತರ ಪಕ್ಷಗಳಿಗೆ ಶಕ್ತಿಯಿಲ್ಲ; ಜನರ ಬೆಂಬಲವೂ ಇಲ್ಲ. ಈ ಸಣ್ಣ ಸಣ್ಣ ಗುಂಪುಗಳು ಆರಿಸಿ ಬಂದರೆ, ಅವು ಏನನ್ನು ತಾನೇ ಮಾಡಬಲ್ಲವು? ತಮ್ಮ ತಮ್ಮಲ್ಲಿ ಜಗಳ ಮಾತ್ರ ಆಡಿಕೊಳ್ಳಬಲ್ಲವು ಈ ಹೇಳಿಕೆ ಅರ್ಥವತ್ತಾಗಿದೆ ಚುನಾವಣಾ ಆಯೋಗವು ಹೊರಡಿಸಿದ ಗಜೆಟಿನ ಪ್ರಕಾರ, ಕಾಂಗ್ರೆಸ್ಸು ಲೋಕಸಭೆಯ ೪೯೪ ಸ್ಥಾನಗಳಿಗೆ ಹುರಿಯಾಳುಗಳನ್ನು ನಿಲ್ಲಿಸಿ ಪ್ರಥಮ ಸ್ಥಾನಗಳಿಸಿದರೆ, ೧೯೪ ಹುರಿಯಾಳುಗಳನ್ನು ನಿಲ್ಲಿಸಿದ ಜನಸಂಘವು ದ್ವಿತೀಯ ಸ್ಥಾನದಲ್ಲಿದೆ. ಉಳಿದ ಎಲ್ಲ ಪಕ್ಷಗಳೂ ನಿಲ್ಲಿಸಿದ ಸ್ಪರ್ಧಾಳುಗಳ ಸಂಖ್ಯೆ ಇದಕ್ಕೂ ಕಡಿಮೆಯಿದೆ. ಹಾಗಿರುವಾಗ, ವಿರೋಧೀ ಪಕ್ಷಗಳ ಬಹು ಸಂಖ್ಯೆಯ ಉಮೇದ್ವಾರರು ಗೆದ್ದುಬಂದರೂ ಪರಸ್ಪರ ಭಿನ್ನಾಭಿಪ್ರಾಯವಿರುವ ಇವು ತಮ್ಮ ತಮ್ಮೊಳಗೆ ಬಡಿದಾಡಿಕೊಳ್ಳಬಹುದಷ್ಟೇ ಹೊರತು ಸರಕಾರ ರಚಿಸುವುದು ಎಂದಿಗೂ ಸಾಧ್ಯವಿಲ್ಲ. ನಮ್ಮ ರಾಜ್ಯದ ಬಗ್ಗೆ ಹೇಳುವುದಾದರೆ, ಒಟ್ಟು ೨೦೮ ಸ್ಥಾನಗಳಲ್ಲಿ ಕಾಂಗ್ರೆಸ್ಸು ಎಂದಿನಂತೆ ಎಲ್ಲ ಸ್ಥಾನಗಳಿಗೂ ಹುರಿಯಾಳುಗಳನ್ನು ನಿಲ್ಲಿಸಿದೆ ಉಳಿದ ಪಕ್ಷಗಳು ನಾಮ ಮಾತ್ರಕ್ಕೆಂಬಂತೆ ಅಲ್ಪ ಸಂಖ್ಯೆಯಲ್ಲಿ ಉಮೇದ್ವಾರರನ್ನು ನಿಲ್ಲಿಸಿವೆ ಒಟ್ಟಿನಿಂದ, ಹಿಂದಿನ ಎರಡು ಚುನಾವಣೆಗಳ ಕಾಲಕ್ಕಿಂತ ಈ ಬಾರಿ ಸ್ಪರ್ಧಾಳುಗಳ ಸಂಖ್ಯೆಯು ಅತೀವ ಹೆಚ್ಚಾಗಿ ಹೆಚ್ಚಿನ ಮತದಾರ ಕ್ಷೇತ್ರದಲ್ಲಿ ತ್ರಿಮುಖ-ಚತುರ್ಮುಖ ಸ್ಪರ್ಧೆಗಳು ಕಂಡು ಬರುತ್ತವೆ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಅನಿವಾರ್ಯ; ಸ್ಪರ್ಧಾಭಾವನೆಯೂ ಅವಶ್ಯವೇ. ಇಲ್ಲಿ ನಿರ್ಣಯ ಕೊಡತಕ್ಕ ಅಧಿಕಾರವಿರುವುದು ಮತದಾರರಲ್ಲಿ ಮಾತ್ರ. ಪ್ರಗತಿ ಸಾಧನೆಯು ಬೇರಿನ್ನಾವ ಪಕ್ಷಗಳಿಂದಲೂ ಸಾಧ್ಯವಾಗದು; ಕಾಂಗ್ರೆಸ್ಸು ಮಾತ್ರ ಆ ಕಾರ್ಯವನ್ನು ಸಾಧಿಸಬಲ್ಲುದು. ಕಾಂಗ್ರೆಸ್ಸಿಗೆ ತ್ಯಾಗದ ಪರಂಪರೆಯಿದೆ. ದೇಶಕ್ಕಾಗಿ ತ್ಯಾಗ ಮತ್ತು ಸೇವೆಗಳನ್ನು ಕೈಗೊಳ್ಳುವುದಕ್ಕೆ ಅದು ಬದ್ಧ ಕಂಕಣವಾಗಿದೆ. ಸಮಾಜವಾದಿ ಮಾರ್ಗದಲ್ಲಿ ದೇಶವನ್ನು ಮುನ್ನಡೆಸಿ ಸಮಾಜವಾದಿ ಸಮಾಜ ರಚನೆಯನ್ನು ಸಾಧಿಸಿ, ಕಲ್ಯಾಣ ರಾಷ್ಟ್ರವನ್ನು ನಿರ್ಮಿಸಬಲ್ಲ ಶಕ್ತಿ ಸಂಪನ್ನ ಪಕ್ಷವೆಂದರೆ, ಕಾಂಗ್ರೆಸ್ ಮಾತ್ರ. ಬಹುಕಷ್ಟದಿಂದ ನಾವು ಸಂಪಾದಿಸಿದ ಸ್ವರಾಜ್ಯ ಸ್ವರ್ಗ ಸುಖವನ್ನುಣ್ಣಲು ನಾವೆಲ್ಲರೂ ಬಯಸುವುದು ತಪ್ಪಲ್ಲ. ಇದಕ್ಕಾಗಿ ರಾಜಕೀಯ ಸ್ವಾತಂತ್ರ್ಯದೊಡನೆ ಆರ್ಥಿಕ ಸ್ವಾತಂತ್ರ್ಯವನ್ನೂ ನಾವು ಗಳಿಸುವುದು ಅಗತ್ಯವಿದೆ. ಆಗ ಮಾತ್ರ ಸ್ವರಾಜ್ಯವು ಸ್ಥಾಪನೆಯಾಗಿ ಸ್ವರಾಜ್ಯದ ಕಲ್ಪನೆಗಳು ಅರ್ಥವತ್ತಾಗುವುವು. ಇದಕ್ಕಾಗಿ ಕಾಂಗ್ರೆಸ್ಸು ದುಡಿದಿದೆ; ದುಡಿಯುತ್ತಿದೆ. ಮುಂದಕ್ಕೂ ದುಡಿಯುವಂತೆ ಅವಕಾಶವನ್ನು ಕಲ್ಪಿಸಿಕೊಡುವುದು ಮತದಾರರ ಕರ್ತವ್ಯವಾಗಿದೆ.

ತಮ್ಮ ಹಿತಾಸಕ್ತಿ ಯಾವ ಪಕ್ಷದ ಕೈಯಲ್ಲಿ ಭದ್ರವಾಗಿರಬಲ್ಲುದು ಎಂಬುದನ್ನು ಮತದಾರರು ಆಲೋಚಿಸಬೇಕು. ಭಾರತದ ಬಗ್ಗೆಯೇ ಹಗಲಿರುಳು ಶ್ರಮಿಸುತ್ತಿರುವ ಪ್ರಧಾನಿಯವರ ಹೇಳಿಕೆಯಂತೆ ಜಾತೀಯವಾದಿಗಳ ಕೈಗಳಲ್ಲಿ ಅದಿರುವುದು ಸರ್ವಥಾ ಅಸಾಧ್ಯ. ಗೊತ್ತುಗುರಿಯಿಲ್ಲದ, ರಚನಾತ್ಮಕ ಕಾರ್ಯಕ್ರಮವಿಲ್ಲದ ಪ್ರಸವಾ, ಸಮಾಜವಾದಿ ಮೊದಲಾದ ಕುಂಟು ಪಕ್ಷಗಳು ದೇಶದ ಉನ್ನತಿಯನ್ನು ಸಾಧಿಸುವುದು ಅಷ್ಟರಲ್ಲಿಯೇ ಇದೆ. ಇನ್ನು ವಿದೇಶನಿಷ್ಠರಾದ ಕಮ್ಯುನಿಷ್ಟರನ್ನು ಬೆಂಬಲಿಸುವುದೆಂದರೆ, ನಾಗರಹಾವನ್ನು ಮುಷ್ಟಿಯಲ್ಲಿ ಬಿಗಿಹಿಡಿದಂತೆಯೇ ಸರಿ. ಹಾಗಿರುವಾಗ, ಜನಸೇವಾತತ್ಪರವಾದ ಹಿರಿಯ ರಾಜಕೀಯ ಪಕ್ಷ ಕಾಂಗ್ರೆಸ್ಸನ್ನು ಮತವಿತ್ತು ಎಲ್ಲೆಲ್ಲಿಯೂ ಗೆದ್ದುಬರುವಂತೆ ಮಾಡುವುದರಿಂದ, ಮತದಾರರ ಹಿತ ಸಾಧಿತವಾಗುವುದು; ಭಾರತದ ಸುರಕ್ಷೆ, ಸುಭದ್ರತೆ ಮತ್ತು ಅಭಿವೃದ್ಧಿ ಸಾಧ್ಯವಾಗುವುದು. ಈ ಕಾರಣದಿಂದ ಎಲ್ಲ ಮತದಾರರೂ ವಿವೇಚನಾತ್ಮಕ ದೃಷ್ಟಿಯಿಂದ ತಮ್ಮ ಕ್ಷೇತ್ರದಲ್ಲಿ ನಿಂತಿರುವ ಉಮೇದ್ವಾರರಲ್ಲಿ ಕಾಂಗ್ರೆಸ್ ಹುರಿಯಾಳುಗಳಿಗೆ ಬೆಂಬಲವಿತ್ತು ಗೆದ್ದುತರಬೇಕು; ಭಾರತದ ಪುನಾರಚನೆಗೆ, ಭವ್ಯಭಾರತ ನಿರ್ಮಾಣಕ್ಕೆ ಸಹಾಯಕರಾಗಬೇಕು. ಕಾಂಗ್ರೆಸ್ಸಿಗೆ ನೀಡುವ ಮತವೆಂದರೆ, ಜನಹಿತ ಸಾಧನೆಗೆ ನೀಡುವ ಮತವೆಂಬುದನ್ನು ಅವಶ್ಯ ತಿಳಿದುಕೊಳ್ಳಬೇಕು.

ದೇಶರಕ್ಷೆ, ಸುಭದ್ರತೆಗೆ

ಕಾಂಗ್ರೆಸ್ ಪಕ್ಷದ ಸರಕಾರ ರಚಿಸಿಕೊಳ್ಳಿರಿ

[ಮಂಗಳೂರಿನಲ್ಲಿ ಪ್ರಧಾನಿ ನೆಹರು ಜಾತೀಯವಾದದಿಂದಾಗುವ ಹಾನಿ, ವಿರೋಧೀ ಪಕ್ಷಗಳ ಅಸಮರ್ಥತೆಗಳ ಬಗ್ಗೆ ವಿಚಾರಪರಿಪ್ಲುತ ಭಾಷಣವಿತ್ತು ಕಾಂಗ್ರೆಸ್‌ಗೆ ಮತವೀಯುವಂತೆ ವಿನಂತಿಸಿದರು ' ಈ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.]

ದೇಶವನ್ನು ಎಲ್ಲ ವಿಧದಿಂದಲೂ ಸಮೃದ್ಧ ಮತ್ತು ಸಶಕ್ತವಾಗಿ ರೂಪಿಸಬೇಕಾದರೆ, ದೃಢವೂ ಸಮರ್ಥವೂ ಆದ ಸರಕಾರವನ್ನು ರಚಿಸುವುದು ಅವಶ್ಯ. ಇಂದು ಭಾರತದಲ್ಲಿ ಇಂತಹ ಸರಕಾರವನ್ನು ಸ್ಥಾಪಿಸಲು ಕಾಂಗ್ರೆಸ್ ಒಂದರಿಂದಲೇ ಸಾಧ್ಯ. ಪ್ರಗತಿಯ ದಾರಿಯಲ್ಲಿ ಮುನ್ನಡೆಯುತ್ತಿರುವ ನಮ್ಮ ದೇಶದ ಪ್ರಗತಿಪರ ಯೋಜನೆಗಳು ಯಶಸ್ವಿಯಾಗಬೇಕಾದರೆ, ಜನತೆಯು ಕಾಂಗ್ರೆಸ್ ಪಕ್ಷಕ್ಕೆ ಮತವಿತ್ತು ಅದನ್ನು ಅಧಿಕಾರದ ಗದ್ದುಗೆಗೇರಿಸಬೇಕು.

ವಿರೋಧಿ ಪಕ್ಷಗಳ ರೂಪದಲ್ಲಿರುವ ಪ್ರಜಾ ಸಮಾಜವಾದಿ ಪಕ್ಷದ ಸಿದ್ಧಾಂತಗಳು ಕಾಗದ ಪತ್ರಗಳಲ್ಲಿಯೇ ಇವೆ. ಈ ಪಕ್ಷವು ಕಾರ್ಯವೆಸಗುತ್ತಲೇ ಇಲ್ಲ. ಸ್ವತಂತ್ರ ಪಕ್ಷವೊಂದು ಅಪ್ರಯೋಜಕ ಪಕ್ಷ. ರಾಜ ಮಹಾರಾಜರು ಜಹಗೀರುದಾರರೂ ಸೇರಿ ದೇಶದಲ್ಲಿ ಯಾವ ಬದಲಾವಣೆಯೂ ನಡೆಯಬಾರದೆಂದು ಈ ಪಕ್ಷದ ಮುಖದಲ್ಲಿ ಹೇಳಹೊರಟಿದ್ದಾರೆ. ಭಾರತದ ಕಮ್ಯುನಿಸ್ಟ್ ಪಕ್ಷದ ಬುದ್ಧಿ ವಕ್ರವಾಗಿದೆ. ಏಕೆಂದರೆ, ಅವರಲ್ಲಿ ವಿಚಾರ ಶಕ್ತಿ ಎಂಬುದೇ ಇರುವುದಿಲ್ಲ. ವಿಚಾರಗಳನ್ನು ಪರರಿಂದ ಪಡೆಯುವುದು ತಪ್ಪಲ್ಲ; ಆದರೆ, ಹೊರಗಿನ ದೇಶದವರು ತಮ್ಮ ನಿಟ್ಟಿನಲ್ಲಿ ಮಾಡಿದ ವಿಚಾರಗಳು ನಮ್ಮ ದೇಶಕ್ಕೆ ಹೊಂದಿಕೊಳ್ಳಲಾರವು. ಚೀನೀಯರು ಭಾರತವನ್ನು ಆಕ್ರಮಿಸಿರುವಾಗ, ಕಮ್ಯುನಿಸ್ಟರಲ್ಲಿಯೂ ಎರಡು ಪಂಗಡವಾಯಿತು. ಒಂದು ಗುಂಪಿನವರು ಭಾರತದ ಮೇಲೆಯೇ ಅಪಾದನೆ ಹೊರಿಸಿದರು; ಇನ್ನೊಂದು ಪಂಗಡದವರು ಇಬ್ಬರದೂ ತಪ್ಪು ಎಂದರು. ಇಷ್ಟರಿಂದಲೇ ಕಮ್ಯುನಿಷ್ಟರು ವಿಚಾರಮಾಡುವ ರೀತಿಯೇ ತಪ್ಪು ಎಂದು ತಿಳಿಯುವುದು. ಇವರ ವಿಚಾರಗಳು ರಾಷ್ಟ್ರದ ಹೊರಗಣ ಶಕ್ತಿಗಳಿಂದ ಪ್ರೇರೇಪಿತವಾಗುತ್ತಿವೆ ಇಂತಹ ಪಕ್ಷಗಳಿಂದ ದೇಶ ಹಿತವಾಗುವಂತಿಲ್ಲ.

ನಮ್ಮ ದೇಶದ ಅಲ್ಲಲ್ಲಿ ಸಂಕುಚಿತ ಜಾತೀಯವಾದೀ ಪಕ್ಷಗಳು ತಲೆಯೆತ್ತುವ ಸೂಚನೆಗಳು ಕಂಡು ಬರುತ್ತವೆ. ಹಿಂದು, ಮುಸ್ಲಿಂ, ಕ್ರೈಸ್ತ ಯಾವ ಜಾತಿಗೆ

ಕುರುವಿನ ಮೇಲೆ ಬೊಕ್ಕೆ

ಗ್ರಹಗತಿಯ ಬಗ್ಗೆ ವಿಶ್ವಾಸವಿಟ್ಟವರು ಹೇಳಿದಂತೆ ಅಷ್ಟಗ್ರಹಯೋಗವು ಸಂಭವಿಸಿ ಕೊನೆಗೊಂಡಿತು. ಈ ಬಗ್ಗೆ ಮೊದಲಿದ್ದ ಅಸ್ಥೆ ಕೊನೆಗೆ ಉಳಿಯದಂತಾಯಿತು. ಬಿರುಗಾಳಿ, ಭೂಕಂಪನವೇ ಮೊದಲಾದ ದುರದುಷ್ಟಕರ ಘಟನೆಗಳು ನಡೆದು ಕಷ್ಟನಷ್ಟಗಳು ಪ್ರಾಣಹಾನಿಗಳು ಸಂಭವಿಸುವುವೆಂಬುದಾಗಿ ಒಂದು ಪಂಗಡದ ಜ್ಯೋತಿಷಿಗಳು ಹೆದರಿಸಿದ್ದರೆ, ಇನ್ನೊಂದು ಪಂಗಡದವರು ಇಂತಹ ಅನಾಹುತಗಳು ನಡೆಯಲಾರವೆಂದೂ ಅಂದಿದ್ದರು; ಜನತೆಯಲ್ಲಿ ಧೈರ್ಯ ತುಂಬುವ ಪ್ರಯತ್ನ ಮಾಡಿದ್ದರು. ಆದರೆ, ಗ್ರಹಗತಿಯನ್ನೇ ನೆಮ್ಮುವ ಸಂಪ್ರದಾಯ ಶರಣರು ಈ ಗ್ರಹಮಿಲನದ ಅಪೂರ್ವಯೋಗದಿಂದಾಗ ಬಹುದಾದ ಲೋಕಾರಿಷ್ಟ ನಿವಾರಣೆಗಾಗಿ ಯಜ್ಞಯಾಗಾದಿಗಳನ್ನೂ ಭಜನೆ ಸ್ತುತಿಗಳನ್ನೂ ಮಾಡುವುದರಲ್ಲಿ ನಿರತರಾಗಿದ್ದರು. ಸಂಪ್ರದಾಯ ಶರಣರ ಭಕ್ತಿ ವಿಶ್ವಾಸಗಳಿಂದಾಗಿಯೇ ಗ್ರಹಯೋಗದ ದುಷ್ಪರಿಣಾಮ ತಪ್ಪಿಹೋಯಿತು ಎಂದೂ ಸಮಾಧಾನಪಡಬಹುದು ಇವುಗಳಲ್ಲಿ ವಿಶ್ವಾಸವಿಲ್ಲದವರು ಜ್ಯೋತಿಷ್ಯರ ಹೇಳಿಕೆಗಳೇ ನಿರಾಧಾರವೆಂದೂ ಈಗ ತೃಪ್ತಿಯ ನಗು ನಗಬಹುದು. ಆದರೆ, ಇಷ್ಟರಲ್ಲೇ ಇನ್ನೊಂದು ಹೆದರಿಕೆಯನ್ನು ಬ್ರಿಟನ್ನಿನ ಖಗೋಲ ಶಾಸ್ತ್ರಜ್ಞರೊಬ್ಬರು ಹುಟ್ಟಿಸಿದ್ದಾರೆ. ಭೂಮಿಯು ನಾಶವಾಗಬೇಕಾದರೆ, ಇನ್ನೂ ಮೂರು ಸಾವಿರ ಕೋಟಿ ವರ್ಷಗಳು ಕಳೆಯಬೇಕು; ಆದರೆ, ಉತ್ತರ ಮತ್ತು ದಕ್ಷಿಣ ಧ್ರುವಗಳು ತಮ್ಮ ಸ್ಥಾನಗಳನ್ನು ಬದಲಾಯಿಸುವ ಲಕ್ಷಣವಿದ್ದು ಶೀಘ್ರದಲ್ಲಿಯೇ ಗಂಡಾಂತರ ಪರಿಸ್ಥಿತಿಯೊದಗುವುದು ಎನ್ನುತ್ತಾರೆ ಇವರು. ಇವರ ಅಂಬೋಣದಂತೆ ಕೆಟ್ಟ ಹವೆ, ಭೂಕಂಪ, ಜ್ವಾಲಾಮುಖಿ ಮೊದಲಾದುವುಗಳೊಡನೆ ಈ ಗಂಡಾಂತರ ಆರಂಭವಾಗಿ ಧ್ರುವಸ್ಥಾನ ಬದಲಾವಣೆಯಲ್ಲಿ ಪರ್ಯವಸಾನಗೊಳ್ಳುವುದು. ಆಗ, ನೂರಕ್ಕೆ ಐವತ್ತು ಜನರು ಇಡಿಯ ಜಗತ್ತಿನಲ್ಲಿ ಸಾಯುವರು. ಆದರೆ, ನಿಶ್ಚಿತದಿನವಿನ್ನೂ ಅಗೋಚರವಿರುವುದರಿಂದ ಸಮಾಧಾನದಿಂದಿರಬಹುದೋ ಏನೋ!

ಸೇರಿದವನೇ ಇರಲಿ, ಜಾತೀಯ ಪ್ರಶ್ನೆಯನ್ನು ರಾಜಕೀಯಕ್ಕೆ ತರಬಾರದು ನಮ್ಮ ಸಂವಿಧಾನದಲ್ಲಿ ಎಲ್ಲ ನಾಗರಿಕರಿಗೂ ಅವರವರ ವಿಶ್ವಾಸದಂತೆ ಮತನಂಬಿಕೆಯನ್ನು ಇರಿಸಿಕೊಳ್ಳಲು ಅಧಿಕಾರವಿದೆ; ಆದರೆ, ಇದು ಧಾರ್ಮಿಕ ಅಥವಾ ಸಾಮಾಜಿಕ ಪ್ರಶ್ನೆ. ಧಾರ್ಮಿಕ ಪ್ರಶ್ನೆಯನ್ನು ರಾಜಕಾರಣಕ್ಕೆ ಸಂಬಂಧಿಸಿದರೆ, ಘರ್ಷಣೆಯೇಳುವುದು ಖಂಡಿತ. ಜಾತೀಯ ಪ್ರಶ್ನೆ ಮುಂದೆ ಬಂದುದರಿಂದಲೇ ಭಾರತದ ವಿಭಜನೆಯಾಗಿ ಪಾಕಿಸ್ತಾನವು ನಿರ್ಮಾಣವಾಯಿತು; ಮಹಾತ್ಮಾಗಾಂಧೀಜಿಯವರ ಕೊಲೆಯಾಯಿತು. ಭಾರತದ ಅಂತರಾತ್ಮದಲ್ಲಿ ಜಾತೀಯ ವಾದವು ಎಂತಹ ದುಷ್ಕೃತ್ಯಗಳಿಗೆ ಪ್ರೇರೇಪಣೆ ನೀಡುತ್ತಿವೆಯೆಂಬುದಕ್ಕೆ ಇವು ಜ್ವಲಂತ ನಿದರ್ಶನಗಳು.

ಭಾರತ ಮತ್ತು ಪಾಕಿಸ್ತಾನಗಳು ಸರ್ವಸಾಮಾನ್ಯವಾಗಿ ಒಂದೇ ಸತ್ವಬಲದಿಂದ ಬೆಳೆದು ಬಂದವುಗಳು. ಆದರೂ ಜಾತೀಯ ವಾದಿಗಳ ಮೇಲುಗೈಯಿಂದಾಗಿ ದೇಶ ವಿಭಜನೆಯಾಯಿತು. ಅನ್ಯತ್ರವಿಧಿಯಿಲ್ಲದ ಕಾರಣದಿಂದ ನಾವಾದರೂ ಈ ವಿಭಜನೆಗೆ ತಲೆಬಾಗಲೇ ಬೇಕಾಯ್ತು. ನಾವು ಭಾರತೀಯರು ಬೇರೆ ಬೇರೆ ಪಕ್ಷಗಳಿಗೆ ಸೇರಿದ್ದರೂ ಒಂದೇ ರಾಷ್ಟ್ರದ ನಾಗರಿಕರಂತೆ ಭೇಟಿಯಾಗುತ್ತೇವೆ. ಆದರೆ, ಜಾತೀಯ ಭೂತದಿಂದ ನಿರ್ಮಾಣವಾದ ಪಾಕಿಸ್ತಾನದಲ್ಲಿ ಜಾತೀಯ ವಾದವು ಬೆಳೆಯುತ್ತ ಬಂದು ಭಾರತ—ಪಾಕಿಸ್ತಾನಗಳ ನಡುವೆ ವೈಷಮ್ಯವನ್ನು ತಂದುಹಾಕಿವೆ ಇದರಿಂದ ಯಾರೊಬ್ಬರಿಗೂ ಸುಖ ದೊರೆಯಲಾರದು. ಮಾನಸಿಕ ಸಂಕುಚಿತತೆಯಿರುವುದರಿಂದಲೇ ನಮ್ಮಲ್ಲಿಯೂ ಜಾತೀಯ ಪ್ರಶ್ನೆಯೇಳುತ್ತದೆ. ಇದರಿಂದ ದೇಶವು ಅಧಃಪತನವಾಗುತ್ತದೆ. ಆದುದರಿಂದ ಜಾತೀಯ ವಾದವನ್ನು ಬೆಳೆಯಗೊಡಬಾರದು.

ಅಖಂಡ ಭಾರತದ ಐಕ್ಯ ಮತ್ತು ಜಾತೀಯ ವಾದದ ನಿರ್ಮೂಲನೆಗಳೇ ಗಾಂಧೀಜೀ ಜೀವನದ ಮುಖ್ಯ ಗುರಿಗಳಾಗಿದ್ದವು. ಕಾಂಗ್ರೆಸ್ಸು ದೇಶದ ಏಕತೆಗಾಗಿ ದುಡಿಯುತ್ತಿದೆ. ಭಾರತವು ಸಮಗ್ರವಾಗಿ ಒಂದೇ ಎಂಬುದನ್ನು ನಾವು ಅವಶ್ಯ ತಿಳಿದುಕೊಳ್ಳಬೇಕು. ಯಾವ ಮತಾವಲಂಬಿಗಳೇ ಇರಲಿ, ಎಲ್ಲರೂ ಮೊತ್ತಮೊದಲು ಭಾರತೀಯರೇ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಮ್ಮ ಪ್ರಾಚೀನ ಗ್ರಂಥಗಳನ್ನು ತೆರೆದು ನೋಡಿದರೆ, ಅವುಗಳಲ್ಲಿ ಹೃದಯ ವೈಶಾಲ್ಯವಿದ್ದುದರ ಅರಿವಾಗುತ್ತದೆ. ಆದರೆ, ಇಂದು ಪರಿಸ್ಥಿತಿ ಹೀಗಿಲ್ಲ. ನಾವು ಜಾತಿಪದ್ಧತಿಗಳನ್ನು ಅನುಸರಿಸುತ್ತಿರುವುದರಿಂದ ನಮ್ಮ ನಮ್ಮ ನಡುವೆ ಅಡ್ಡ ಗೋಡೆ ನಿಂತುಕೊಂಡಿದೆ. ಇಂತಹ ಸಂಕುಚಿತ ಪ್ರವೃತ್ತಿಯ ವಿರುದ್ಧ ನಾವು ಹೋರಾಡದೆ ಹೋದರೆ, ದೇಶವು ಅಭಿವೃದ್ಧಿಗೊಳ್ಳಲಾರದು. ಈ ಬಗೆಯ ತಡೆ ಮತ್ತು ಪ್ರತ್ಯೇಕತಾ ಭಾವನೆಯನ್ನು ತೊಡೆದು ಹಾಕದೆ ದೇಶ ಮುನ್ನಡೆಯಲಾರದು. ಭಾರತವು ಒಂದಾಗಬೇಕು; ಭಾರತೀಯರೆಲ್ಲರ ಹೃದಯವು ಭಾವನಾತ್ಮಕವಾಗಿ ಒಂದಾಗಬೇಕು.

ನಮ್ಮ ಜನರಲ್ಲಿ ಇನ್ನೂ ಸಂಕುಚಿತ ಮತ್ತು ಪ್ರತ್ಯೇಕತಾ ಮನೋಭಾವವಿರುವುದರಿಂದಲೇ ಜಾತೀಯ ಸಂಸ್ಥೆಗಳು ಬೆಳೆಯುತ್ತವೆ ಇಂತಹ ಪಕ್ಷಗಳಿಗೆ ಎಂದಿಗೂ ಬೆಂಬಲ ನೀಡಬಾರದ; ಏಕೆಂದರೆ, ಇವು ದೇಶವನ್ನು ರಸಾತಳಕ್ಕೆ ಮೆಟ್ಟಿ ಬಿಡುವವು ಭಾರತದಲ್ಲಿ ಒಕ್ಕಟ್ಟನ್ನು ಉಳಿಸಿಕೊಳ್ಳುವುದು ಅತ್ಯವಶ್ಯ. ಇಲ್ಲವಾದರೆ ನಮ್ಮ ಸ್ವಾತಂತ್ರ್ಯವೂ ಉಳಿಯಲಾರದು. ದುರ್ದೈವದಿಂದ ನಮಗೆ ಹಾನಿಯನ್ನು ತಂದೊಡ್ಡುವ ದುರಾಕಾಂಕ್ಷೆಯ ಪರರಾಷ್ಟ್ರಗಳು ನಮ್ಮತ್ತ ಕಡೆ ದೃಷ್ಟಿಯಿಟ್ಟುಕೊಂಡಿವೆ. ಇಂತಹ ಅಪಾಯಕಾರಿ ಸನ್ನಿವೇಶದಲ್ಲಿ ನಾವಿದ್ದೇವೆ ಆದದರಿಂದ ಈಗ ನಮಗೆ ಸುಭದ್ರವಾದ ಸರಕಾರವು ರಚಿತಗೊಳ್ಳುವ ಆಗತ್ಯವಿದೆ. ಇಂತಹ ಸರಕಾರ ರಚನೆ ಕಾಂಗ್ರೆಸ್ ಒಂದರಿಂದಲೇ ಸಾಧ್ಯವಾಗುವುದು. ನಮ್ಮ ಸುತ್ತು ಮುತ್ತಲಿನ ಆಫ್ರೋ ಏಷ್ಯನ್ ರಾಷ್ಟ್ರಗಳಲ್ಲಿ ಅನೈಕ್ಯದ ದೆಸೆಯಿಂದಾಗಿ, ದಂಗೆಗಳು ಎದ್ದು ಸರ್ವಾಧಿಕಾರಿಯ ಉದಯವಾಗಿದೆ. ಅಲ್ಲಿ ಸಮರ್ಥ ಮತ್ತು ಸುಭದ್ರ ಸರಕಾರವಿರುತಿದ್ದರೆ, ಇಂತಹ ಘಟನೆ ನಡೆಯುತ್ತಿರಲಿಲ್ಲ. ಆದುದರಿಂದಾಗಿ ಕಾಂಗ್ರೆಸ್ಸೊಂದನ್ನೇ ಭಾರತೀಯರು ಬೆಂಬಲಿಸಬೇಕು

ಭಾರತದಲ್ಲಿ ಕಾಂಗ್ರೆಸ್ ಒಂದೇ ಪಕ್ಷವಿರಬೇಕೆಂದು ನಾನು ಬಯಸುವುದಿಲ್ಲ. ಇತರ ಪಕ್ಷಗಳೂ ಇರಬಹುದು; ಆದರೆ, ಕಾಂಗ್ರೆಸ್ಸಿನಂತೆಯೇ ಉಳಿದ ಪಕ್ಷಗಳೂ ಗೊತ್ತುಗುರಿಗಳನ್ನಿಟ್ಟುಕೊಳ್ಳಬೇಕು. ಇವಿಲ್ಲದ ಪಕ್ಷಗಳು ಯಾವ ಪ್ರಯೋಜನಕ್ಕೂ ಬರಲಾರವು. ನಮ್ಮ ದೇಶದಲ್ಲಿರುವ ಇತರ ಯಾವುದೇ ಪಕ್ಷಕ್ಕೆ ನಿರ್ದಿಷ್ಟವಾದ ನಿಲುವೆಯಿರುವುದಿಲ್ಲ. ಇದ್ದರೂ ಅದು ಅತೀವ ಸಂಕುಚಿತವಾದದ್ದು ಇಂತಹ ಪಕ್ಷಗಳು ಗೆದ್ದು ಬಂದರೆ, ರಾಷ್ಟ್ರದ ಅಭಿವೃದ್ಧಿ ಕಾರ್ಯಗಳೆಲ್ಲವೂ ಕುಂಟುವುದು.

ಭಾರತದನ್ನು ನಮ್ಮ ಮುಂದಿರುವ ಅಪಾಯಕರ ಸನ್ನಿವೇಶದಲ್ಲಿಯೂ ಔದ್ಯಮಿಕವಾಗಿ, ಆರ್ಥಿಕವಾಗಿ ಬೆಳೆಸಲು ಹಣಗ ಬೇಕಾಗಿದೆ. ರಾಷ್ಟ್ರಕ್ಕೊಂದು ದಕ್ಷವೂ ಸುಭದ್ರವೂ ಆದ ಸರಕಾರವಿದ್ದರೆ ಮಾತ್ರ ಇದು ಸಾಧ್ಯವಾಗುವುದು ಇಂತಹ ಸರಕಾರ ಸ್ಥಾಪಿಸಲು ಕಾಂಗ್ರೆಸ್ಸೊಂದೇ ಸರ್ವಸಮರ್ಥವಾದುದು. ಆದುದರಿಂದ ಭಾರತದ ಅಭಿವೃದ್ಧಿಗೆ, ಭದ್ರತೆಗೆ ಮತ್ತು ಐಕ್ಯಸಾಧನೆಗೆ ಎಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಮತವಿತ್ತು ಅದು ಗೆದ್ದುಬರುವಂತೆ ಮಾಡಬೇಕು.

ಪೆರ್ಡೂಳೆ — ಬಾಸೆಲ್ ಮಿಶನ್ ಕಿರಿಯ ಬುನಾದಿ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ 31ರಂದು ಡಾ. ಟಿ. ಎಂ ಎ ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು

ಶಿರ್ವ—ಸೈಂಟ್ ಮೇರಿಸ್ ಹೈಸ್ಕೂಲಿನ ವರ್ಧಂತ್ಯುತ್ಸವವು ಕಳೆದ ತಾ 29ರಂದು ಮಂಗಳೂರು ಡಯಸಿಜಿನ ಬಿಶೋಪರಾದ ರೈಟ್ ಡಾಕ್ಟರ್ ರೆವರೆಂಡ್ ಆರ್. ಡೆಮೆಲ್ಲೊ ಇವರ ಅಧ್ಯಕ್ಷತೆಯಲ್ಲಿ ಜರಗಿತು ಆಡಿಟೋರಿಯಮ್‌ನ ಉದ್ಘಾಟನೆ ಮತ್ತು ಶ್ರೀ ಎಫ್. ಎಕ್ಸ್ ಡಿ ಪಿಂಟೊ ಅವರ ಭಾವಚಿತ್ರ ಅನಾವರಣೆಯನ್ನು ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ನೆರವೇರಿಸಿದರು. ಶ್ರೀ ಎಫ್. ಎಕ್ಸ್ ಡಿ ಪಿಂಟೊ, ಎಂ. ಎಲ್. ಎ. ಅವರು ಬಹುಮಾನ ವಿತರಣೆ ಮಾಡಿದರು ಅಧ್ಯಕ್ಷರ ಭಾಷಣವಾದ ಮೇಲೆ ವಿನೋದಾವಳಿಗಳು ನೆರವೇರಿದುವು.

ಜಗತ್ಪರ್ಯಟನ

ಗುಲಾಂ ಮಹಮ್ಮದ

ಭಾರತಕ್ಕೆ ನೆಹರು ಇರುವಂತೆ ಜಮ್ಮೂ ಕಾಶ್ಮೀರಕ್ಕೆ ಬಕ್ಷಿಗುಲಾಮ ಮಹಮ್ಮದರಿದ್ದಾರೆ. ಕಾಶ್ಮೀರವು ಜನತೆಯ ಇಚ್ಛೆಯಂತೆ ಈ ಹಿಂದೆಯೇ ಭಾರತದಲ್ಲಿ ವಿಲೀನಗೊಂಡಿದೆಯೆಂದು ಹೇಳುವ ಮಹಮ್ಮದರು ಪಾಕಿಸ್ತಾನಿಗಳ ಕುತಂತ್ರವನ್ನು ಕಾಶ್ಮೀರಿಗಳಿಗೆ ಮುಂದಟ್ಟು ಮಾಡಿದ್ದಾರೆ. ರಾಜಕಾರಣದಲ್ಲಿ ಮುಂದುವರಿಯುವ ಕಾಶ್ಮೀರದಲ್ಲೂ ೭೦ ಸ್ಥಾನಗಳಿಗೆ ೩೭೦ಕ್ಕೂ ಮೀರಿದ ಉಮೇದ್ವಾರರು ಇರುವಾಗ ಮುಖ್ಯ ಮಂತ್ರಿ ಗುಲಾಂ ಮಹಮ್ಮದರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. ಕಾಶ್ಮೀರದ ವಿಧಾನ ಸಭೆಗೆ ಸ್ಪರ್ಧಿಸಿದ ಇವರ ವಿರೋಧಿ ಅಭ್ಯರ್ಥಿಯನ್ನು ನಿನ್ನೆ ಅಧಿಕೃತವಾಗಿ ತಿರಸ್ಕರಿಸಲಾಯಿತು. ಇವರೊಡನೆ ಇವರ ಸಚಿವ ಸಂಪುಟದ ಮಂತ್ರಿಗಳಲ್ಲಿಯೂ ಮೂವರನ್ನು ವಿರೋಧಿಸದೆ ಕಾಶ್ಮೀರದ ಜನತೆ ತಮ್ಮ ವಿಶ್ವಾಸವನ್ನು ಪ್ರಕಟಿಸಿದ್ದಾರೆ.

ಅಮೆರಿಕೆಯ ಕೆನ್ನೆಡಿ

ಅಧ್ಯಕ್ಷ ಸುಕರ್ಣರು ನ್ಯೂಗಿನಿಯ ಪ್ರಶ್ನೆಯನ್ನು ಹೇಗೆ ಬಿಡಿಸುವರೆಂದು ಲೋಕವೇ ನೋಡುತ್ತಿದೆ. ವಿಮಾನಗಳು ಸೈನ್ಯಪಡೆಯನ್ನು ಹೊತ್ತು ಬರುವಾಗ, ಅಮೆರಿಕೆಯಲ್ಲಿ ತಂಗಲು ಅವಕಾಶ ನೀಡಬೇಕೆಂದು ಡಚ್ಚ ಸರಕಾರವು ಕೇಳಿದಾಗ, ಅಮೆರಿಕೆಯು ಸಮ್ಮತಿಸಿದುದರಿಂದ ಸುಕರ್ಣರು ಮಾತ್ರವಲ್ಲ, ಇಂಡೋನೇಶ್ಯದ ಜನತೆಯೆಲ್ಲವೂ ಕ್ರುದ್ಧವಾಗಿದೆ. ವಿವಂಚನೆಗೊಂಡಿದೆ. ಇದರ ಪರಿಣಾಮವಾಗಿ ಅಮೆರಿಕನ್ ರಾಯಭಾರಿ ಕಚೇರಿಯ ಮುಂದೆ ವಿದ್ಯಾರ್ಥಿಗಳು ಮತ ಪ್ರದರ್ಶನ ನಡೆಸಿದರು, ಆ ಸಂದರ್ಭದಲ್ಲಿ ಕಛೇರಿಗೂ ಅಲ್ಲಿನ ನೌಕರರಲ್ಲಿ ಕೆಲವರಿಗೂ ಧಕ್ಕೆಯೊದಗಿದೆ. ವಸಾಹತುವಾದವನ್ನು ವಿರೋಧಿಸುತ್ತೇನೆನ್ನುವ ಅಮೆರಿಕೆಯು ಸಮಸ್ಯೆಯನ್ನು ಬಿಡಿಸಲು ವಿಧಾನಾತ್ಮಕ ಕ್ರಮಗಳಲ್ಲಿ ತೊಡಗದೆ ಇರುವುದು ವಿಚಿತ್ರವೆನಿಸುತ್ತದೆ. ಭಾರತವೂ ಅಮೆರಿಕೆಯ ಹೇಳಿಕೆಯಂತೆ ನಡೆದಿದ್ದರೆ, ಗೋವೆ ಸದಾಕಾಲಕ್ಕೂ ನಮ್ಮಿಂದ ದೂರವಾಗುತಿತ್ತು ಎಂಬ ಸಂದೇಹ ಈಗೀಗ ಬಲವಾಗುತ್ತಿದೆ.

ಅಶೋಕ ಮೆಹತಾ

ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷ ಅಶೋಕ ಮೆಹತಾರ ವ್ಯಕ್ತಿತ್ವಕ್ಕೆ ಪ್ರಶ್ನೆಯಿಲ್ಲ. ಆದರೆ, ವ್ಯಕ್ತಿತ್ವ ಮಾತ್ರದಿಂದಲೇ ಮೇಲ್ಮೆಗೆ ಬರುವುದು, ಸಮಾಜಸೇವೆ ಮಾಡುವುದು ಪ್ರಜಾಪ್ರಭುತ್ವದಲ್ಲಿ ಅಸಾಧ್ಯ. ಬರಡೆಮ್ಮೆಯಂತಹ ಪ್ರಸಮಾಪಕ್ಷದಲ್ಲಿ ಅಶೋಕ ಮೆಹತ ಇರುವುದರಿಂದ ಪ್ರಸಮಾವೇನೋ ಜೀವ ಹಿಡಿದು ನಿಂತಿದೆ. ಸಮಾಜವಾದದ ತತ್ವದ ತಳಹದಿಯಲ್ಲಿ ಸಮಾಜವನ್ನು ರೂಪಿಸಬೇಕೆಂದಿರುವ ಕಾಂಗ್ರೆಸ್ ಸರಕಾರದಲ್ಲಿ ಕೆಲವೇ ಮಂದಿ ಶ್ರೀಮಂತರ ಕೈಯಲ್ಲಿ ಸಂಪತ್ತು ನಿಂತಿದೆ ಎನ್ನುವ ಇವರು ಕಾಂಗ್ರೆಸ್ ಸರಕಾರಕ್ಕೆ ನೊಡುವಾದರೂ ಬಡವರಲ್ಲಿ ಸಂಪತ್ತಿರಲಿಲ್ಲವೆನ್ನುವುದನ್ನು ಮರೆತಂತಿದೆ. ಸಮಾಜವಾದವೆಂಬುದು ರಾತ್ರಿ ಬೆಳಗಾಗುವುದರೊಳಗೆ ಸಾಧಿಸಬಹುದಾದ ಪವಾಡವಲ್ಲವೆಂಬುದನ್ನು ಅವರೂ ತಿಳಿಯದೆ ಹೇಳಿದರು ಪ್ರಸಮಾ ಪಕ್ಷವು ಇಂತಹ ಪವಾಡ ಮಾಡಿ ತೋರಿಸಲಿ ಎಂದರೆ, ಅದು ನಿಲ್ಲಿಸಿದ ಹುರಿಯಾಳುಗಳು ಒಟ್ಟು ೧೬೬ ಎಂದರೆ, ಲೋಕಸಭೆಯ ಸ್ಥಾನಗಳಲ್ಲಿ ಸುಮಾರು ಮೂರರಲ್ಲಿ ಒಂದಂಶದನ್ನು ಮಾತ್ರ!

ಪ್ರಜಾಪ್ರಭುತ್ವ ದಿನಾಚರಣೆ—

ಉಡುಪಿ ಲಾಯನ್ಸ್ ಕ್ಲಬ್ಬಿನವರು ಕೊರಗರ ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯನ್ನು ಜರಗಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಎ ಪೈಯವರು ಧ್ವಜಾರೋಹಣ ಮಾಡಿ ವಿಶ್ವದ ವಿನಾಶವನ್ನು ತಡೆದು ಲೋಕ ಶಾಂತಿಗಾಗಿ ದುಡಿಯಲು ಕರೆಯಿತ್ತರು. ಕೊಡಗಿನ ಪ್ರೊ| ತಾ| ಪಿ. ನಾಗರಾಜರಾವ್‌ರವರು ಅಸ್ಪೃಶ್ಯತಾ ನಿವಾರಣೆ, ಸ್ವಾತಂತ್ರ್ಯಾನಂತರ ದೇಶವಲ್ಲಾದ ಪ್ರಗತಿ ಮೊದಲಾದ ಕುರಿತು ಭಾಷಣವಿತ್ತರು. ಶ್ರೀಮತಿ ಗುಲಾಬಿ ಹೆಗ್ಗಡ್ತಿಯವರು ಬಹುಮಾನ ಜೊತೆಗೆ ಉಚಿತವಾಗಿ ಕೊಟ್ಟ ನೆರವೂ ಮತ್ತು ಪ್ರಸಾದರ ಭಾವಚಿತ್ರವನ್ನು ಶ್ರೀ ಟಿ ಎ. ಪೈಯವರು ಅನಾವರಣ ಮಾಡಿದರು ಆರಂಭದಲ್ಲಿ ಶ್ರೀ ಜಿ ಎಸ್. ನರ್ಗಾಕಾರ್‌ರವರು ಸ್ವಾಗತಿಸಿದರು

ಜಿಲ್ಲೆಯ ಕಾಂಗ್ರೆಸ್ಸು ಅಭ್ಯರ್ಥಿಗಳು

ವಿಧಾನ ಸಭಾಕ್ಷೇತ್ರ—

ಬೈಂದೂರು—	ಶ್ರೀಗಳಾದ ಪೈ. ಮಂಜಯ್ಯ ಶೆಟ್ಟಿ
ಕುಂದಾಪುರ—	ಎಸ್. ಎಸ್. ಕೊಳ್ಕೆಬೈಲು
ಬ್ರಹ್ಮಾವರ—	ಎಸ್. ಧರ್ಮಸಾಮ್ರಾಜ್ಯ
ಉಡುಪಿ	ಎಮ್. ಮಧ್ವರಾಜ್
ಕಾರ್ಕಳ—	ಡಾ. ಕೆ. ಕೆ. ಹೆಗ್ಡೆ
ಮೂಡಬಿದ್ರಿ—	ಮಂಜಪ್ಪ ಉಳ್ಳಾಳ.
ಕಾಪು—	ಎಫ್. ಎಕ್ಸ್. ಡಿ. ಪಿಂಟೊ
ಮಂಗಳೂರು 1.—	ಮಾಕೀಲ್ ಶ್ರೀನಿವಾಸ ನಾಯಕ್
ಮಂಗಳೂರು 2 —	ಬಿ. ಎಂ. ಇದಿನಬ್ಬ,
ಸೂರತ್ಕಲ್—	ಕೆ. ದೂಮಪ್ಪ
ಪಾಣೆಮಂಗಳೂರು —	ಡಾ| ಕೆ. ನಾಗಪ್ಪ ಆಳ್ವ
ಪುತ್ತೂರು—	ಕೆ. ವೆಂಕಟರಮಣ ಗೌಡ
ಸುಳ್ಯ (ರಿ.)—	ಎಸ್. ಸುಬ್ಬಯ್ಯ ನಾಯಕ
ಬೆಳ್ತಂಗಡಿ—	ಬಿ. ವೈಕುಂಠ ಬಾಳಿಗ

ಲೋಕಸಭೆ

ಉತ್ತರ ವಿಭಾಗ—	ಶ್ರೀ ಯು. ಶ್ರೀನಿವಾಸ ಮಲ್ಯ
ದಕ್ಷಿಣ ವಿಭಾಗ—	ಶ್ರೀ ಎ. ಶಂಕರ ಆಳ್ವ

ಚುನಾವಣಾ ತಾರೀಕು— ಉತ್ತರ ವಿಭಾಗ-ಫೆಬ್ರವರಿ, 19.

ದಕ್ಷಿಣ ವಿಭಾಗ —ಫೆಬ್ರವರಿ, 22.

ಚಂದಾಹಣ ಬಾಕಿ ಇರುವ ಚಂದಾದಾರರು ದಯವಿಟ್ಟು ಅವನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಅಪೇಕ್ಷಿಸುತ್ತೇವೆ.

—ಮ್ಯಾನೇಜರ ನವಯುಗ.

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ಕಲಿಯಬೇಕಾದ ಪಾಠ

ಗುರುವು ಮೌನವಾಗಿ ವಾತ್ಸಲ್ಯಪೂರ್ಣ ದೃಷ್ಟಿಯಿಂದ ನವಾಗಂತುಕನತ್ತ ನೋಡುತ್ತ ಮೃದು ಸ್ವರದಲ್ಲಿ ಹೇಳಿದನು: 'ವತ್ಸ, ನೀನೇನೋ ನನ್ನ ಬಳಿಗೆ ಬಂದಿರುವೆ. ನಿನ್ನನ್ನು ನನ್ನ ಬಳಿಗೆ ಕಳುಹಿಸಿದವನು ನಿನಗೆ ಶಿಕ್ಷಣದಾನ ಮಾಡಲು ನಾನು ಅರ್ಹನೆಂದು ತಿಳಿದಿದ್ದು, ಅದಕ್ಕಾಗಿ ಕೃತಜ್ಞತೆಗಳು- ಆದರೆ, ನಾನದಕ್ಕೆ ಪಾತ್ರನಲ್ಲವೆಂಬುದನ್ನು ನಾನು ತಿಳಿದಿದ್ದೇನೆ. ಕಲಿಸುವುದಕ್ಕೆ ನನ್ನಲ್ಲಿರುವುದಾದರೂ ಏನು? ನಾನು ನಿರಂತರವೂ ಕಲಿಯುತ್ತ ಇರುವವನಾದುದರಿಂದ ನಿನಗೇನನ್ನೂ ಕಲಿಸಲಾರೆನು. ನಿಜ ಹೇಳುವುದಾದರೆ, ಯಾರೊಬ್ಬನಾದರೂ ಇನ್ನೊಬ್ಬನಿಗೆ ಕಲಿಸುವುದಿಲ್ಲ. ಕಲಿಯುವವನು ತನ್ನೊಳಗಿನ ಒಂದು 'ಉನ್ಮೇಷ" (ಎಚ್ಚರ)ದಿಂದ ಕಲಿತುಕೊಳ್ಳುತ್ತಾನೆ. ಗುರುತ್ವದ ಶ್ರೇಯ ಪಡೆಯುವವರು ಈ ಉನ್ಮೇಷಕ್ಕೆ ನಿಮಿತ್ತ ಮಾತ್ರರಾಗುತ್ತಾರೆ. ನಿಮಿತ್ತ ಮಾತ್ರರಾಗುವುದಕ್ಕೆ ಗುರುವೇ ಏಕಾಗಬೇಕು? ಸೃಷ್ಟಿಯಲ್ಲಿ ಯಾವುದೇ ಒಂದು ವಸ್ತುವು ನಿಮಿತ್ತವೆನಿಸಬಹುದು".

ನವಾಗಂತುಕನು ತಲೆವಾಗಿ ಹೇಳಿದನು—"ಆದರೆ, ನಾನಿತ್ತ ಬರುವುದಕ್ಕೆ ಮೊದಲೇ ನಿಮ್ಮನ್ನು ನನ್ನ ಗುರುವೆಂದು ತಿಳಿದಿದ್ದೇನೆ ಇನ್ನು, ನಿಮ್ಮಾಜ್ಞೆಯನ್ನು ಶಿರಸಾವಹಿಸುತ್ತೇನೆ."

ಗುರುವು ಹೇಳಿದನು—"ನಿನ್ನ ಇಚ್ಛೆಯಿದ್ದಂತಾಗಲಿ ಇಲ್ಲಿಯೇ ಇರು. ಇಲ್ಲಿ ಸ್ಥಳಾವಕಾಶ ಬೇಕೆಂಬಷ್ಟಿದೆ. ಅಧ್ಯಯನ ಮತ್ತು ಚಿಂತನೆಗೆ ಆವಶ್ಯಕ ಸೌಕರ್ಯಗಳೆಲ್ಲವೂ ನಿನಗೆ ಇಲ್ಲಿ ದೊರೆಯುವುವು. ಮತ್ತು...."ಗುರುವೊಮ್ಮೆ ಕಣ್ಣು ಎತ್ತರಿಸಿ ಸುತ್ತಲೂ ನೋಡಿದನು. ಕೈಗಳಿಂದ ಅನಿಶ್ಚಿತವೆನಿಸುವ ಸಂಕೇತ ಮಾಡುತ್ತ ಮುಂದುವರಿಸಿದನು. "ಇವೆಲ್ಲವೂ ಇವೆ. ನೋಡು, ಕೇಳು, ಬೇಕೆಂದಾದರೆ ಯೋಚನೆ ಮಾಡು; ಶಕ್ಯವಿರುವಷ್ಟು ಆನಂದವನ್ನು ಪಡೆ."

ಂಂ ಂಂ ಂಂ

"ಏನು ನೋಡಿದೆ?"

"ಗುರುದೇವ, ನಾನು ಒಂದು ಪಕ್ಷಿಯನ್ನು ನೋಡಿದೆ. ಬಹಳ ಸುಂದರವಾದ ಪಕ್ಷಿ."

"ಮತ್ತು?"

"ಎಷ್ಟು ಸುಂದರ ಪಕ್ಷಿ! ನಾನೂ ಅಂತಹ ಒಂದು ಪಕ್ಷಿಯಾಗಿರುತ್ತಿದ್ದರೆ, ಅದರಂತೆಯೇ ಆಕಾಶದಲ್ಲಿ ಹಾರಾಡಬಲ್ಲೆ ಮತ್ತು ದೂರ ದೂರದ ವರೆಗೆ ತಿರುಗಾಡಬಲ್ಲೆ ಎಂಬ ವಿಚಾರ ನನ್ನಲ್ಲಿ ಮೂಡಿತು."

ಗುರುವು ಸ್ವಲ್ಪ ಹೊತ್ತು ಸ್ಥಿರ ದೃಷ್ಟಿಯಿಂದ ಯುವಕನತ್ತ ನೋಡತೊಡಗಿದನು ಉತ್ತೇಜನವೇನನ್ನೂ ತೋರ್ಪಡಿಸದೆ ಅವನು ಹೇಳಿದನು— "ಇದೇನೋ ಸರಿ. ನೋಡು ಇನ್ನೂ ಸರಿಯಾಗಿ ನೋಡು. ಎಲ್ಲವೂ ಸುಂದರವಾಗಿವೆ. ಶಕ್ಯವಿರುವಷ್ಟು ಆನಂದಗ್ರಹಣ ಮಾಡು"

ಂ ಂ ಂ

"ಏನನ್ನು ಕಂಡೆ?"

"ಗುರುದೇವ, ಒಂದು ಅತಿಸುಂದರ ಪಕ್ಷಿ ಕಂಡಿತು"

"ಮುಂದೆ?"

"ಆ ಪಕ್ಷಿ ಸದಾ ಕಾಲ ನನ್ನ ಬಳಿಯಲ್ಲೇ ಉಳಿಯಬೇಕೆಂಬ ಆಶೆ ಮೊಳೆದೋರಿತು. ಅದಕ್ಕಾಗಿ ಅದನ್ನು ಹಿಡಿದು ಪಂಜರದಲ್ಲಿ ಬಂಧಿಸಿಡುವ ಹಂಬಲವಾಯಿತು."

"ಹೋಗು, ಏನನ್ನೋ ಕಂಡೆ; ಮೊದಲು ನೋಡಿದುದಕ್ಕಿಂತ ಈಗ ಕಂಡುದರಲ್ಲಿ ಸತ್ಯಾಂಶ ಅಧಿಕವಿದೆ" ಗುರುವು ಕಿಂಚಿತ್ಕಾಲ ಅವೇ ತೆರದ, ಆದರೆ ರಹಸ್ಯಪೂರ್ಣವಾದ ದೃಷ್ಟಿಯಿಂದ ಶಿಷ್ಯನತ್ತ ನೋಡುತ್ತ ನಿಂತನು. "ಅಧಿಕ ಸತ್ಯತೆಯಿದೆ; ಆದರೆ, ಜ್ಞಾನವಿನ್ನೂ ಇಲ್ಲ ಹೋಗು, ಪುನಃ ನೋಡು; ಕೇಳು. ಸಾಧ್ಯವೆನಿಸುವಷ್ಟು ಆನಂದಪಡೆಯು."

ಂಂ ಂಂ ಂಂ

"ಏನು ನೋಡಿದೆ?"

"ಒಂದು ಹಕ್ಕಿ ಕಂಡೆ. ಅತ್ಯಂತ ಸುಂದರ ಪಕ್ಷಿ ಇಂತಹುದನ್ನು ಇದು ವರೆಗೆ ಕಂಡಿಲ್ಲ; ಮುಂದಕ್ಕೆ ಕಾಣುವೆನೆಂಬ ಕಲ್ಪನೆಯೂ ಇಲ್ಲ."

"ಮತ್ತೆ?"

"ಮುಂದೇನೂ ಇಲ್ಲ ಗುರುದೇವ. ಅದನ್ನು ನೋಡುತ್ತ ನಿಂತೆ. ನಾನು ನನ್ನಲ್ಲಿಯೇ ಅಂದುಕೊಂಡೆ— "ಇದು ಪಕ್ಷಿ ಇದು ಸುಂದರವಿದೆ; ಇದೇ ಅಪ್ರತಿಮವಿದೆ" ಅಷ್ಟರಲ್ಲಿ ಪಕ್ಷಿ ಹಾರಿಹೋಯಿತು. ಆಗ ನಾನಂದುಕೊಂಡೆ

"ನಾನು ಹಕ್ಕಿಯನ್ನು ಕಂಡಿದ್ದೆ, ಅದು ಸುಂದರವಾಗಿತ್ತು, ಅಪ್ರತಿಮವಿತ್ತು, ಮತ್ತದು ಹಾರಿಹೋಯಿತು. ಆದರೆ, ನನಗಾ ಪಕ್ಷಿಯಿಂದ ಏನಾಗಬೇಕು? ಅದರ ಜೀವ ಅದಕ್ಕೆ ಆ ಮೇಲೆ ನಾನಿತ್ತ ಬಂದೆ."

ಗುರು ಸ್ಥಿರ ದೃಷ್ಟಿಯಿಂದ ಶಿಷ್ಯನತ್ತ ನೋಡಿದನು. ದೃಷ್ಟಿವಿಕಾಸದಲ್ಲಿ ಕಡಿಮೆಯಿರಲಿಲ್ಲ; ರಹಸ್ಯಮಯತೆಯಲ್ಲೂ ಕಮ್ಮಿಯಿರಲಿಲ್ಲ. ಆ ಮೇಲೆ, ಅವನ ಮುಖ ಒಮ್ಮಿಂದೊಮ್ಮೆಗೆ ವಾತ್ಸಲ್ಯಪೂರ್ಣ ನಗೆಯಿಂದ ಅರಳಿತು. ಅವನು ಹೇಳಿದನು.- 'ನೀನು ನೋಡಿಯೇ ಬಿಟ್ಟೆ. ಜ್ಞಾನವೆಂದರೆ, ಇಷ್ಟೇ. ಇದಕ್ಕಿಂತ ಹೆಚ್ಚಾದ ವಿದ್ಯೆ ಕಲಿಸಲು, ನನ್ನೊಡನಿಲ್ಲ. ಈ ವಿದ್ಯೆಯೂ ದರೂ ನನ್ನ ಹತ್ತಿರವಿಲ್ಲ;ಎಲ್ಲೆಲ್ಲಿಯೂ ಅದು ಹರಡಿದೆ. ಯಾರಿಗೂ ಯಾರೊಬ್ಬನೂ ಕಲಿಸುವುದಿಲ್ಲ ಒಳಗಣಿಂದಾಗುವುದು, ಗುರು ನಿಮಿತ್ತ ಮಾತ್ರ. ಈ ನಿಮಿತ್ತವೂ ಗುರುವೇ ಆಗ ಬೇಕೆಂದಿಲ್ಲ; ವಿಶಾಲ ಸೃಷ್ಟಿಯ ಯಾವುದೇ ವಸ್ತುವು ಆಗ ಬಹುದು ಎಂದಿದ್ದೆನಲ್ಲವೆ?" ಒಂದು ಸಲ, ಮತ್ತೆ ಅವನ ಕೈ ಅದೇ ಅಸ್ಪಷ್ಟ ಸಂಕೇತವನ್ನು ಮಾಡಿ, ತೊಡೆಯ ಮೇಲೆ ಕುಳಿತಿತು.

'ಹೋಗು ವತ್ಸ, ನೋಡು, ಕೇಳು, ಸಾಧ್ಯವಿರುವಷ್ಟು ಆನಂದವನ್ನು ಅನುಭೋಗಿಸು" ಎಂಬ ಉದ್ಗಾರ ಅವನ ಬಾಯಿಯಿಂದ ತನಗೆ ತಾನಾಗಿಯೇ ಹೊರಟಿತ್ತು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಅಲ್ಲಲ್ಲಿಯ ಸುದ್ದಿಸಾರ

ಕರಾವಳಿಗೆ ಪ್ರತ್ಯೇಕ ವಿಶ್ವವಿದ್ಯಾನಿಲಯ— ಇದೇ ತಾ. ೪ರಂದು ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜಿನ ವಾರ್ಷಿಕೋತ್ಸವವು ಮಣಿಪಾಲದ ಎಕೆಡೆಮಿ ಒಫ್ ಜನರಲ್ ಎಡ್ಯೂಕೇಶನಿನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಆರ್. ಆರ್. ಉಮರ್ಜಿಯವರು ಸ್ವಾಗತಿಸಿ ಪ್ರಗತಿಪರ ವರದಿಯನ್ನೋದಿದರು. ಶಿಕ್ಷಣಾಭಿವೃದ್ಧಿಗಾಗಿ ಆತ್ಮಾಸಕ್ತಿಯಿಂದ ಅನವರತ ದುಡಿಯುತ್ತಿರುವ ಡಾ| ಪೈಗಳನ್ನು ಅಭಿನಂದಿಸಿ ಅವರು ಯೋಜಿಸಿರುವ ಪಶ್ಚಿಮ ಕರಾವಳಿಯ ವಿಶ್ವವಿದ್ಯಾನಿಲಯವು ಸ್ಥಾಪಿತವಾದರೆ ಅವರ ಅದ್ಭುತ ಪರಿಶ್ರಮಕ್ಕೆ ಕಿರೀಟ ಇಟ್ಟಂತಾಗುವುದೆಂದರು. ಡಾ| ಎಂ. ಪಿ. ಪೈ ಅವರು ಸ್ವಸ್ತಿವಾಚನಗೈದರು ಯೂನಿಯನ್ ಅಧ್ಯಕ್ಷ ಕುಮಾರಿ ಪ್ರೇಮಾ ಹಂದೆಯವರು ಉತ್ತರಿಸಿದರು. ಅಧ್ಯಕ್ಷ ಡಾ| ಪೈಗಳು ಬಹುಮಾನ ವಿತರಣೆ ಮಾಡಿ ಭಾಷಣ ಮಾಡುತ್ತಾ ವಿಶ್ವವಿದ್ಯಾನಿಲಯಗಳು ಯುವಜನಾಂಗದಲ್ಲಿ ನವಚೇತನ ತುಂಬಬೇಕು, ಯುವಕರಲ್ಲಿ ವಿಶಾಲ ಮನೋಭಾವವನ್ನೂ ಪರಿಶ್ರಮ ಉತ್ತಮ ಧ್ಯೇಯ ಗುಣಗಳನ್ನೂ ನಿರ್ಮಾಣ ಮಾಡಲು ಶಿಕ್ಷಣ ರಂಗದಲ್ಲಿ ನವ ವಿಧಾನಗಳನ್ನು ರೂಪಿಸಬೇಕು. ವಿದ್ಯಾರ್ಥಿಗಳು ಪಾಠೇತರ ಚಟುವಟಿಕೆಗಳಲ್ಲಿ ಕೂಡಾ ಭಾಗವಹಿಸಿ ಪ್ರತಿಭಾವಂತರಾಗಿ ಮುಂದೆ ಸಾಗಬೇಕು, ಸ್ತ್ರೀಯರು ಕೂಡಾ ಪರಂಪರಾಗತ ಗೌರವವನ್ನು ಕಾದುಕೊಂಡು ರಾಷ್ಟ್ರ ಜೀವನದಲ್ಲಿ ಮುನ್ನಡೆಯಬೇಕು ಜನತೆಯ ಸಹಕಾರ ದೊರೆತಲ್ಲಿ ಪಶ್ಚಿಮ ಕರಾವಳಿಯಲ್ಲಿ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಬೇಕೆಂಬುದು ನನ್ನ ಆಕಾಂಕ್ಷೆ ಎಂದರು ಬಳಿಕ ಕಾರ್ಯದರ್ಶಿ ಶ್ರೀ ಜಿ. ಎಂ. ರಾಮಕೃಷ್ಣರು ವಂದನೆಗಳನ್ನರ್ಪಿಸಿದರು. ಅಂತ್ಯದಲ್ಲಿ ಮನೋರಂಜನಾ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದುವು.

ವರ್ಧಂತ್ಯುತ್ಸವ—ಉಡುಪಿ ಕ್ರಿಶ್ಚನ್ ಹೈಸ್ಕೂಲಿನ ವಾರ್ಷಿಕೋತ್ಸವವು ಕಳೆದ ತಾ. 31ರಂದು ಧಾರವಾರ ಮಿಶನ್ ಹೈಸ್ಕೂಲಿನ ಹೆಡ್‌ಮಾಸ್ಟರ್ ಶ್ರೀ ರೋಬರ್ಟ್ ಎನ್. ಬಂಗೇರರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್‌ಮಾಸ್ಟರ್ ಶ್ರೀ ಜೋಶುವಾರಿಂದ ವರದಿ ವಾಚನವಾದ ನೇರೆ ಕಾಪಿನ ಡಾ| ಎಂ ಬಿ. ಶೆಟ್ಟರು ಸ್ವಸ್ತಿವಾಚನ ಗೈದರು ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಭಾಷಣವಿತ್ತ ಬಳಿಕ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದುವು.

ತೀರ್ಥಹಳ್ಳಿ—ಇಲ್ಲಿ ಪ್ರಮುಖ ಕಂಟ್ರಾಕ್ಟರ್ ಆಗಿದ್ದು ಸಾರ್ವಜನಿಕ ಕಾರ್ಯಕರ್ತರಾಗಿ ಜನಪ್ರಿಯರಾಗಿದ್ದ ಕಟಪಾಡಿ ಚೆಲುವಯ್ಯ ಸೆಟ್ಟರು 75ನೇ ವಯಸ್ಸಿನಲ್ಲಿ ತಾ. 22—1—62ರಂದು ನಿಧನಗೊಂಡರು ದಿವಂಗತರು ಸ್ಥಳೀಯ ಬಂಟರ ಯಾನೆ ನಾಡವ ಸಂಘದ ಸ್ಥಾಪಕ ಅಧ್ಯಕ್ಷರಾಗಿದ್ದರು.

ಮಣಿಪಾಲ— ಹಾಯರ್ ಸೆಕೆಂಡರಿ ಶಾಲಾ ವಾರ್ಷಿಕೋತ್ಸವವು ತಾ. 2-2-62 ರಂದು ಡಾ ಟಿ. ಥೋಮಸ್ ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು ಶಾಲಾ ವರದಿಯನ್ನು ಮುಖ್ಯೋಪಾಧ್ಯಾಯ ಶ್ರೀ ಬಿ. ಆರ್. ಹೆಗ್ಡೆಯವರು ಓದಿದ ಬಳಿಕ ಹಳೆ ವಿದ್ಯಾರ್ಥಿ ಡಾ. ಟಿ. ಉಪೇಂದ್ರರಾಯ ಪೈ ಅವರು ಸ್ವಸ್ತಿವಾಚನವೆಸಗಿದರು. ಶಾಲಾ ಆಟಪಾಟಗಳಲ್ಲಿ ಯಶಸ್ವಿಯಾದವರಿಗೆ ಡಾ. ಎಲಿಜಬೆತ್ ಥೋಮಸ್ ಇವರು ಪಾರಿತೋಷಕ ವಿತರಣೆ ಗೈದರು. ಬಳಿಕ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ವಿವಿಧ ವಿನೋದಾವಳಿಗಳೂ ಜರಗಿದುವು. ಶಾಲಾ ಅಧ್ಯಾಪಕರಿಂದ ತುಳು ನಾಟಕವು ಅಭಿನಯಿಸಲ್ಪಟ್ಟಿತು.

ಇದರ ಅಂಗವಾಗಿ ಪೂರ್ವಾಹ್ನ ಧ್ವಜಾರೋಹಣವು ವಿವಿಧ ವಸ್ತು ಪ್ರದರ್ಶನವೂ ಇತ್ತು.

ಮಂದಾರ್ತಿ— ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ರಥೋತ್ಸವವು 13-2-62ರಂದು ಜರಗಲಿರುವುದೆಂದೂ ಭಕ್ತಾದಿಗಳು ಬಂದು ಶ್ರೀಮುಡಿ ಗಂಧಪ್ರಸಾದ ಪಡೆದು ಕಾರ್ಯಕ್ರಮವನ್ನು ಚಂದಗಾಣಿಸಿಕೊಡಬೇಕೆಂದೂ ಎಕ್ಸಿಕ್ಯೂಟಿವ್ ಅಫೀಸರ್ ಶ್ರೀ ಬಿ. ಉಮೇಶ ರಾಯರು ಅಪೇಕ್ಷಿಸುತ್ತಾರೆ. ಉತ್ಸವವು ತಾ. 1೧ರಿಂದ 1೮ರ ವರೆಗೆ ಜರಗಲಿರುವುದು.

ಪುತ್ತೂರು (ಉಡುಪಿ)— ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಅಷ್ಟಗ್ರಹಯೋಗದ ದುಷ್ಪರಿಣಾಮಗಳ ನಿವಾರಣೆಗಾಗಿ ಶ್ರೀಗಳಾದ ಪುತ್ತೂರು ಕೃಷ್ಣ ಭಟ್ಟ ಮತ್ತು ಹನುಮಾಚಾರ್ಯರ ಮುಂದಾಳುತನದಲ್ಲಿ ಕಳೆದ ತಾ. 19೦೦ದ 31ರ ವರೆಗೆ ಭಜನೆ ಪೂಜೆ, ಯಾಗಾದಿಗಳು ಜರಗಿದುವು. ತಾ 31 ರಂದು ಅದಮಾರು ಮಠದ ಶ್ರೀ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀ ಪಿ. ಹಯವದನ ಭಟ್ಟರಿಂದ ಸ್ವಾಗತ ಶ್ರೀಗಳಾದ ರಾಮದಾಸ ಭಟ್ಟ, ಅನಂತಪದ್ಮನಾಭ ಆಚಾರ್ಯ, ಮತ್ತು ಅಧ್ಯಕ್ಷರಿಂದ ಭಾಷಣಗಳಾದುವು.

ಉಡುಪಿ ರೋಟರಿ ಕ್ಲಬ್—ಇದರ ಸಭೆಯೊಂದು ಮಣಿಪಾಲದಲ್ಲಿ ಜನವರಿ 29ರಂದು ಲಾ ಶಾಂಗ್ರಿಲಾ ಗಾರ್ಡನ್‌ನಲ್ಲಿ ಜರಗಿತು, ಮೈಸೂರಿನ ಸಾರ್ವಜನಿಕ ಸಲಹಾ ಖಾತೆಯ ಅಧ್ಯಕ್ಷ ಶ್ರೀ ದೇವೇ ಗೌಡರು ಮುಖ್ಯ ಅತಿಥಿಗಳಾಗಿದ್ದ ಈ ಸಭೆಯಲ್ಲಿ ಇತ್ತೀಚೆಗೆ ರಾಷ್ಟ್ರಾಧ್ಯಕ್ಷರಿಂದ ಉತ್ತಮ ಉಪಾಧ್ಯಾಯರೆಂದು ಪ್ರಶಸ್ತಿ ಪಡೆದ ಶ್ರೀ ಕಜ್ಕೆ ಕೇಶವ ಕಾಮತರನ್ನು ಗೌರವಿಸಲಾಯಿತು. ಅಲ್ಲದೆ ರೋಟರಿ ಕ್ಲಬ್ಬಿನವರು ಏರ್ಪಡಿಸಿದ ರಾಷ್ಟ್ರಗೀತೆ ಮತ್ತು ಭಾಷಣ ಸ್ಪರ್ಧೆಯಲ್ಲಿ ವಿಜಯಿಗಳಾದ ವಿದ್ಯಾರ್ಥಿಗಳಿಗೆ ಬಹುಮಾನ ಕೊಡಲಾಯಿತು ಆರಂಭದಲ್ಲಿ ಡಾ ಟಿ. ಎಂ. ಎ. ಪೈಯವರು ಸ್ವಾಗತಿಸಿದರು. ಅತಿಥಿ ಶ್ರೀ ಗೌಡರು ಶಿಕ್ಷಣ ಕ್ಷೇತ್ರದ ಶಿಸ್ತಿನ ಕುರಿತು ಭಾಷಣವಿತ್ತರು. ಕೊನೆಯಲ್ಲಿ ಶ್ರೀ ಎ. ಜಿ ಆಳ್ವಯವರು ವಂದನೆಗಳನ್ನರ್ಪಿಸಿದರು.

ಮಣಿಪಾಲ ಇಂಜಿನಿಯರಿಂಗ್ ಕಾಲೇಜ್‌ನ ಸ್ಪೋರ್ಟ್ಸ್ ಎಸೋಸಿಯೇಶನ್‌ನ ವತಿಯಿಂದ ಇದೇ 1 ಮತ್ತು 2ರಂದು ವಾರ್ಷಿಕ ಪಂದ್ಯಾಟಗಳು ಜರಗಿದುವು. ಪ್ರಿನ್ಸಿಪಾಲ್ ಶ್ರೀ ವೆಂಕಟರಮಣ ಭಟ್ಟರಿಂದ ಪಂದ್ಯಾಟಗಳು ಉದ್ಘಾಟಿಸಲ್ಪಟ್ಟವಲ್ಲದೆ ತಾ. 2ನೇ ಸಂಜೆ ಕೆ. ಎಮ್. ಸಿ. ಗ್ರೌಂಡ್ಸ್‌ನಲ್ಲಿ ಸಭೆ ಜರಗಿ ಶ್ರೀಮತಿ ಪ್ರೇಮಾ ಎ. ಪೈಯವರಿಂದ ಬಹುಮಾನ ವಿತರಣೆ ನಡೆಯಿತು.

ತಾ. 3ರಂದು ಕಾಲೇಜ್ ದಿನಾಚರಣೆಯು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಒಫ್ ಸಾಯನ್ಸ್‌ನ ನಿವೃತ್ತ ಡೈರೆಕ್ಟರ್ ಪ್ರೊ. ಬಿ. ವೆಂಕಟೇಶಾಚಾರ್ ಇವರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ಜರಗಿತು.

ಉಡುಪಿ ತಾಲೂಕು ಪ್ರಾಥಮಿಕ ಶಿಕ್ಷಕರ ಯೂನಿಯನ್—ಇದರ ವಾರ್ಷಿಕ ಮಹಾ ಸಭೆಯು ತಾ. 4ರಂದು ಯೂನಿಯನ್ ಅಧ್ಯಕ್ಷ ಶ್ರೀ ಎಸ್. ದುಗ್ಗಪ್ಪ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಜರಗಿ ಪ್ರಧಾನ ಕಾರ್ಯದರ್ಶಿ ಎಚ್. ಎ ಪಿ ಶೆಣೈಯರು ಸಮರ್ಪಿಸಿದ ವರದಿ ಮಂಜೂರಾಯಿತು. ಶ್ರೀ ಸಿ. ಕೃಷ್ಣ ಮಾಂಜರ್ ಪರಿಶೋಧಿತ ವರದಿಯನ್ನು ಮಂಡಿಸಿದ ಬಳಿಕ ಹೊಸ ವರ್ಷದ ಆಡಳಿತ ಮಂಡಳಿಯ ಚುನಾವಣೆಯಾಯಿತು. ಅನಂತರ ಶಾ. ಎ. ಶಾಲೆಗಳ ಕನ್ನಡ ಪಂಡಿತರಿಗೆ 1957ರಿಂದಲೂ ಸೆಕೆಂಡರಿ ಅಧ್ಯಾಪಕರ ವೇತನಮಾನ ಅನ್ವಯಿಸಬೇಕೆನ್ನುವ, 1961ನೇ ಮೇಯಲ್ಲಿ ಟ್ರೈನಿಂಗ್ ಪರೀಕ್ಷೆಗೆ ಕೂತ ಅಧ್ಯಾಪಕರ ಸರ್ಟಿಫಿಕೇಟುಗಳನ್ನು ಕೂಡಲೇ ಕಳುಹಿಸಬೇಕೆನ್ನುವ, ಪ್ರಾಥಮಿಕ ಶಾಲೆಗಳನ್ನು ಸರಕಾರವೇ ನಡೆಸಬೇಕೆನ್ನುವ ವಿಧಾನ ಪರಿಷತ್ತಿಗೆ ಆರಿಸಲ್ಪಡುವ ಅಧ್ಯಾಪಕ ಕ್ಷೇತ್ರದ ಪ್ರತಿನಿಧಿಗೆ ಮತನೀಯುವ ಹಕ್ಕನ್ನು ಪ್ರಾಥಮಿಕ ಅಧ್ಯಾಪಕರಿಗೂ ಕೊಡಬೇಕೆನ್ನುವ 'ಹಾಯರ್ ಗ್ರೇಡ್' ಅಧ್ಯಾಪಕರ ವೇತನಮಾನದ ಪರಮಾವಧಿಯನ್ನು ಹೆಚ್ಚಿಸಬೇಕೆನ್ನುವ ನಿರ್ಣಯಗಳಾದುವು.

ನಿಮಗಿದು ತಿಳಿದಿದೆಯೆ?

ಕುಷ್ಠರೋಗದ ಸಮಸ್ಯೆಗಳು

ಅನು: ಶ್ರೀ ಭಾಸ್ಕರ ಜಿ. ಶೆಟ್ಟಿ, ಮುಂಬಾಯಿ.

೧. ಎರಡು ಮಿಲಿಯಕ್ಕಿಂತಲೂ ಹೆಚ್ಚಾಗಿ ಕುಷ್ಠರೋಗಿಗಳು ಭಾರತದಲ್ಲಿರುವರೆಂದೂ, ಕೆಲವು ಸ್ಥಳಗಳಲ್ಲಿ ಸಾವಿರಕ್ಕೆ ನಾಲ್ವತ್ತರಂತೆ ಜನರು ಕುಷ್ಠರೋಗಕ್ಕೆ ತುತ್ತಾಗಿರುವರೆಂದೂ ಲೆಕ್ಕ ಹಾಕಲಾಗಿದೆ. ಇದರಲ್ಲಿ ಸುಮಾರು ಅರ್ಧ ಮಿಲಿಯ ಜನರ ರೋಗವು ಸಾಂಸರ್ಗಿಕ ಮಾದರಿಯದಾಗಿದೆ.

೨. ಸುಮಾರು ೧೫ ವರ್ಷಗಳ ಮೊದಲು ಕುಷ್ಠನಿವಾರಣಾ ಶ್ರದ್ಧರು, ಈ ರೋಗಗವನ್ನು ಕರುಣಾ ಭಾವದಿಂದ ಕಂಡು ಅದಕ್ಕಾಗಿ ಸೇವಾತ್ಯಾಗವನ್ನು ಮಾಡಿದ್ದರ ಮಹಾತ್ಮ ಗಾಂಧಿಯವರು ಕುಷ್ಠರೋಗಕ್ಕೆ ಬಲಿಯಾದ ರೋಗಿಯನ್ನು ಸೇವಾಗ್ರಾಮದಲ್ಲಿ ಆರೈಕೆಮಾಡಿ, ಈ ರೋಗನಿವಾರಣೋನ್ನತಿಗಾಗಿ ಸೇವಾಕಾರ್ಯವನ್ನೆಸಗಿದರು. ಈಗ ಇದು ವೈದ್ಯಕೀಯ ಹಾಗೂ ವೈಜ್ಞಾನಿಕ ಸಮಸ್ಯೆಯಾಗಿ ಪರಿಣಮಿಸಿದೆ. ವೈದ್ಯಕೀಯ ಹಾಗೂ ಇತರ ಅನ್ವೇಷಣಾಕಾರರು ಇದರ ಬಗ್ಗೆ ವಿಶೇಷ ಆಸಕ್ತಿ ವಹಿಸುತ್ತಿದ್ದಾರೆ ನವಶಕದಲ್ಲಿ 'ಡಿ. ಡಿ. ಎಸ್.' (Diamino Diphenyl Sulphone)ನ್ನು ಕುಷ್ಠರೋಗದ ಪ್ರತಿಹಾರಕವೆಂದು ಕಂಡುಹಿಡಿದಿದ್ದಾರೆ

೩. ಇಂದು ಕುಷ್ಠರೋಗ ಸೇವೆಯ್ನು ಕೊಡುವುದನ್ನು 'ಕುಷ್ಠನಿವಾರಣಾ ಪ್ರಸಾರಕ ಸಂಘ ಹಾಗೂ ಹಿಂದೂ ಕುಷ್ಠ ನಿನಿವಾರಣಾ ಸಂಘ' ಮೊದಲಾದುವುಗಳು ಹೊತ್ತಿವೆ.

೪. ಈ ಸಮಸ್ಯೆಯು ಸರಕಾರದ ದೃಷ್ಟಿಯನ್ನು ತನ್ನತ್ತ ಹೆಚ್ಚೆಚ್ಚು ಸೆಳೆದುಕೊಂಡಿದೆ. ದೇಶದಲ್ಲಿ ಹಬ್ಬಿರುವ ಈ ವಿಸ್ತೃತ ರೋಗದ ಪುನರೀಕ್ಷಣೆಗಾಗಿ ೧೯೫೪ರಲ್ಲಿ ಸರಕಾರವು ಒಂದು ಸಮಿತಿಯನ್ನು ನೇಮಿಸಿತ್ತು.

೫. ಮಧ್ಯ ಹಾಗೂ ದಕ್ಷಿಣ ಭಾಗದಲ್ಲಿ ಈ ರೋಗದ ಪ್ರಸಾರವು ಅಲ್ಪಾಂಶವೂ ಪೂರ್ವ ಭಾಗದಲ್ಲಿ ಅಧಿಕಾಂಶವೂ ಆಗಿರುವುದು. ಈ ಪ್ರದೇಶಗಳಲ್ಲಿ ಕುಷ್ಠರೋಗದ ಪ್ರಸಾರವು ಸಾವಿರಕ್ಕೆ ೨೦ರಿಂದ ೪೦ರ ತನಕವೂ, ಕೆಲವು ಪ್ರದೇಶಗಳಲ್ಲಿ ಹಾಗೂ ಸಾಮೂಹಿಕ ಗ್ರಾಮಗಳಲ್ಲಿ ೧೦೦೦ಕ್ಕೆ ೧೦೦ಕಿಂತಲೂ ಹೆಚ್ಚಾಗಿ ಕಂಡುಬರುತ್ತದೆ.

೬. ಕುಷ್ಠರೋಗದಿಂದ ಬಳಲುತ್ತಿರುವ ರೋಗಿಗಳಿಗೆ ಆಧುನಿಕ ಚಿಕಿತ್ಸೆಯನ್ನು ಕೊಡಲು ಸರಕಾರವು 'ರಾಷ್ಟ್ರೀಯ ಕುಷ್ಠರೋಗ ಪ್ರತಿಬಂಧಕ' ಕಾರ್ಯಕ್ರಮವನ್ನು ಕೆಲವು ಗೊತ್ತುಪಡಿಸಿದ ಪ್ರದೇಶಗಳಲ್ಲಿ ಕೈಗೊಂಡಿದೆ. ಪ್ರತಿಯೊಂದು ಕುಷ್ಠರೋಗ ನಿವಾರಣಾ ಸಂಸ್ಥೆಯು ೫೦ ೦೦೦ಯೂ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶಗಳನ್ನು ಆವರಿಸಿದೆ. ಇದರ ಮೂಲಕ ಶಿಕ್ಷಣ ಪ್ರಸಾರವಲ್ಲದೆ, ರೋಗಿಗಳ ತಪಾಸಣೆ ಹಾಗೂ 'ಸಲ್ಫೋನ್' ಮೂಲಕ ಚಿಕಿತ್ಸೆಯನ್ನು ಮಾಡಲಾಗುತ್ತಿದೆ.

೭. ಇಷ್ಟರವರೆಗೆ ಸುಮಾರು ೧೩ ಮಿಲಿಯ ಜನ ಸಂಖ್ಯೆಯನ್ನು ಆವರಿಸಲ್ಪಟ್ಟ ೧೧೩ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ನಾಗಪುರದ ಮೆಡಿಕಲ್ ಕಾಲೇಜಿನಲ್ಲಿ ಶೈಕ್ಷಣಿಕ ಸಂಸ್ಥೆಯನ್ನು ಕುಷ್ಠರೋಗ ಪ್ರತಿಬಂಧಕ ಸಂಸ್ಥೆಗಳಿಗೆ ಬೇಕಾಗುವ ವೈದ್ಯರ ಸಲುವಾಗಿ ಸ್ಥಾಪಿಸಲಾಗಿದೆ.

೮. ಕುಷ್ಠರೋಗ ನಿವಾರಣಾ ಸೇವಕರನ್ನು ತರಬೇತಿಗೊಳಿಸುವ . ಹಾಗೂ ರೋಗ ನಿವಾರಣಾ ಸಮಸ್ಯೆಯ ಸಂಶೋಧನೆಯನ್ನು ನಡೆಸುವ ಕಾರ್ಯವನ್ನು ಮದ್ರಾಸಿನ ಸಮೀಪವಿರುವ 'ಕೇಂದ್ರೀಯ ಕುಷ್ಠರೋಗ ಬೋಧನೆ ಮತ್ತು ಅನ್ವೇಷಣಾ ಸಂಸ್ಥೆಯು' ಮಾಡುತ್ತಿದೆ

೯. ಗಾಂಧಿ ಮೆಮೋರಿಯಲ್ ಲೆಪ್ರೊಸಿ ಫೌಂಡೇಶನ್"ಗೆ ಸಹಾಯಕವಾಗಿ. ಸರಕಾರವು ಆಂಧ್ರಪ್ರದೇಶದ ಚಿಲ್ಕಪಲ್ಲಿಯಲ್ಲಿ ಶೈಕ್ಷಣಿಕ ಕೇಂದ್ರವನ್ನು ವೈದ್ಯರ ಸಲುವಾಗಿ ಸ್ಥಾಪಿಸಿರುವುದು.

೧೦. ಕುಷ್ಠರೋಗದ ಹಲವಾರು ಯೋಜನೆಗಳು ಸುಸಂಗತವಾಗಿ ಕಾರ್ಯಕಾರಿಯಾಗಿವೆಯೋ ಹಾಗೂ ಅದಕ್ಕೆ ಬೇಕಾಗುವ ಸಹಾಯವನ್ನು ಸರಕಾರದಿಂದ ಪಡೆಯಲು ಮತ್ತು ರೋಗ ನಿವಾರಣಕ್ಕಾಗಿ ಯೋಗ್ಯ ಸಲಹೆಗಳನ್ನು ಸರಕಾರಕ್ಕೆ ನೀಡುವ ಸಲುವಾಗಿ, ಭಾರತ ಸರಕಾರವು ೧೯೫೫ರಲ್ಲಿ ಸರಕಾರಿ ಹಾಗೂ ಕುಷ್ಠರೋಗಕ್ಕಾಗಿ ದುಡಿಯುವ ಸೇವಾಸಂಸ್ಥೆಗಳ ಪ್ರತಿನಿಧಿಗಳುಳ್ಳ ಕುಷ್ಠರೋಗ ಸಲಹಾ ಸಮಿತಿ'ಯನ್ನು, ಸ್ಥಾಪಿಸಿತ್ತು

೧೧ ರೋಗಿಯ ಮೇಲೆ 'ಡಿ ಡಿ.ಎಸ್'ನ ಮೂಲಕ ಆಗುವ ಸಂಕ್ಷೇಪ ಪರಿಣಾಮವನ್ನು ಅರಿಯಲು ಸರಕಾರವು ತುಂಬಾ ಶ್ರಮವಹಿಸಿತ್ತು ಹಾಗೂ ಅದು ಪ್ರಯೋಜನಕಾರಿಯೂ ಆಯಿತು.

೧೨ ಮೂರನೆಯ ಯೋಜನೆಯಲ್ಲಿ ಇದರ ವಿಸ್ತಾರವು ಇನ್ನೂ ಆಗಬೇಕೆಂದು ಸರಕಾರವು ಪ್ರಸ್ತಾಪಿಸಿತ್ತು. ಇದಕ್ಕಾಗಿ ರೋಗ ಪ್ರತಿಬಂಧಕ ಸಂಸ್ಥೆಯಲ್ಲದೆ, ವೈದ್ಯಕೀಯ ಹಾಗೂ ಸಮತ್ವ ವೈದ್ಯಕೀಯ ಶಿಕ್ಷಣ ಪಡೆಯಲು ಇನ್ನೂ ಹತ್ತು ಶೈಕ್ಷಣಿಕ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದೂ ಅಲ್ಲದೆ ಕುಷ್ಠರೋಗಿಯ ಶಾರೀರಿಕ, ಮಾನಸಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ನೋಡುವುದಕ್ಕಾಗಿ ಇನ್ನು ಹೆಚ್ಚು ಕುಷ್ಠರೋಗ ಕೇಂದ್ರ ಸ್ಥಾಪಿಸಬೇಕೆಂದೂ ಆಲೋಚಿಸುತ್ತು.

೧೩. ಶಸ್ತ್ರ ಚಿಕಿತ್ಸಾಲಯ ಪುನರ್ನಿರ್ಮಾಣಕ್ಕಾಗಿ ಅಖಿಲ ಭಾರತೀಯ ಶೈಕ್ಷಣಿಕ ಕೇಂದ್ರವನ್ನು ಸ್ಥಾಪಿಸಲೂ ಪ್ರಸ್ತಾಪಿಸಿತ್ತು.

೧೪. ಯೋಜನಾವಧಿಯಲ್ಲಿ ಕುಷ್ಠರೋಗ ಪ್ರತಿಬಂಧಕಕ್ಕಾಗಿ ೭ ಕೋಟಿ ರೂಪಾಯಿಗಳನ್ನು ಹಂಚಲು ತೆಗೆದಿಡಲಾಗಿದೆ ನಾನಾತರದ ಕುಷ್ಠರೋಗ ನಿವಾರಣಾ ಯೋಜನೆಗಾಗಿ W. H O. ಹಾಗೂ UNESCO ತುಂಬಾ ಪ್ರಯತ್ನ ಮಾಡುತ್ತಿವೆ.

೧೫ ಆಧುನಿಕ ಜ್ಞಾನ ಮತ್ತು ಶಸ್ತ್ರ ಚಿಕಿತ್ಸೆಯ ಫಲಿತಾಂಶವಾಗಿ, ಕುಷ್ಠರೋಗದ ಸಮೂಲ ನಾಶವು ಇನ್ನು ಕೆಲವೇ ಸಮಯದೊಳಗೆ ಆಗಬಹುದೆಂದು ನಿರೀಕ್ಷಿಸಬಹುದು.

('ಫ್ರೀ ಪ್ರೆಸ್ ಬುಲ್ಲೆಟಿನ್'ನಿಂದ)



ವಿವಿಧ ವಲಯಗಳಲ್ಲಿ ಕಾಗದ ಪತ್ರಗಳನ್ನು ಹಂಚುವುದಕ್ಕಾಗಿ ಮೋಟಾರ್ ಸೈಕಲ್ ಚಾಲಕರು ನವದೆಹಲಿಯ ಜನರಲ್ ಪೋಸ್ಟ್ ಆಫೀಸಿನಿಂದ ನಗರದ ನಾನಾ ವಲಯ ಅಂಚೆ ಕಚೇರಿಗಳಿಗೆ ತೆರಳುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ನಮ್ಮ ಸಾಹಿತ್ಯ ಸೇವೆ

(೪ನೇ ಪುಟದಿಂದ)

ಕರ್ತರನ್ನು—ಪ್ರಕಾಶಕರನ್ನು—ಪ್ರೋತ್ಸಾಹಿಸಬೇಕು! ಏಕೆಂದರೆ, ಜಿಲ್ಲೆಯವರಾದರೂ ಪ್ರಥಮತಃ ಬರೆಯುವಲ್ಲಿ ಕೆಲವೊಂದು ಗುಣದೋಷಗಳು ಬೆರೆಸಿವೆಯೆಂಬುದು ಅಂತರಿಕ ಸಂವೇದ್ಯವಾಗಿದೆ. ಅವರು ತಂತಮ್ಮೊಳಗೆ — ಹಿರಿಯರು ಕಿರಿಯರನ್ನೂ —ಬೆನ್ನು ತಟ್ಟಿ ಹುರಿದುಂಬಿಸುವುದಲ್ಲದೆ, ಪುಸ್ತಕಗಳ ವಿಕ್ರಯಕ್ಕೆ ನೆರವಾಗುತ್ತಾ, ಮುಂದಿನ ಬಾರಿ ಇನ್ನೂ ಚೆಲುವಾಗಲು—ಬೇಗ ಪುನರ್ಮುದ್ರಣವಾಗಲು ಅನುವಾಗುತ್ತಾರೆ. ಅಲ್ಲಿಯ ಪತ್ರಿಕೆಗಳು ಇಂತಹ ಕೃತಿಗಳ ಪ್ರಥಮ ಪ್ರಕಟನೆಗೆಳಸಿ ಕೊಂಚ ಉಪಕರಿಸುತ್ತವೆ. ಇಂತಹ ಅನೇಕ ಸದವಕಾಶಗಳು ಈ ದ.ಕನ್ನಡ ಜಿಲ್ಲೆಯಲ್ಲಿ ತೀರ ವಿರಳವಾಗಿವೆಯೆಂದರೆ ತಪ್ಪಾಗದು! ದ.ಕ. ಜಿಲ್ಲೆಯು ಮದ್ರಾಸ್ ಪ್ರಾಂತೀಯ ರಾಜನೀಯಕ್ಕೆ ಈ ಮೊದಲು ಸೇರಿದ್ದುದರಿಂದ ನಾವು ಬೇರೆ, ಇತರರು ಬೇರೆ, ಎಂಬೀ ಮನೋಭಾವ ಎಲ್ಲೆಡೆ ಬೆಳೆದಿತ್ತು. ಪರಂತು, ಇದೀಗ ವಿಶಾಲ ಮೈಸೂರು ನಾಡ—ಕರ್ನಾಟಕ ರಾಜ್ಯ— ಒಂದಾಗಿ— ಪ್ರತ್ಯೇಕವಾಗಿ— ಕೆಲವು ವರ್ಷಗಳಾದುವು. ಈ ಸದವಕಾಶದ ಪ್ರತಿಫಲವಾಗಿ ನಮ್ಮಲ್ಲಿದಕ್ಷ ಹೊಕ್ಕು ಬಳಕೆಗಳಾಗುತ್ತಿವೆ. ಆದರೆ, ಈ ಜಿಲ್ಲೆಯವರು ಬೇರೆಯವರಿಗಿಂತ ಕಡಿಮೆಯವರೆಂಬ ಸ್ವಹೀನತಾದೃಷ್ಟಿ ಇನ್ನಾದರೂ ನಮ್ಮಿಂದ ತೊಲಗಬೇಕು. ನಾವೂ ಪ್ರಾಚೀನ ಕೃತಿಗಳ ಸಂಗ್ರಹ, ಪ್ರಕಟನೆಗಳಲ್ಲಿ ಆಸಕ್ತಿ ಇನ್ನೂ ಹೆಚ್ಚು ತಾಳಬೇಕು ಅದರೊಂದಿಗೆ, ಆಧುನಿಕ ಸಾಹಿತ್ಯರಂಗದ ವಿವಿಧ ಕೃತಿಗಳನ್ನು ಪ್ರಕಟಿಸುವವರಿಗೆ ಆಸರೆ ದೊರೆಯುವಂತಾಗಬೇಕು. ನಮ್ಮಲ್ಲಿಯ ಹಿರಿಯರು ಕಿರಿಯರನ್ನು ಪ್ರೋತ್ಸಾಹಿಸಬೇಕು. ಹಿರಿಯರೂ ಕಿರಿಯರೂ ತಮ್ಮೊಳಗೆ ವಿಚಾರವಿನಿಮಯ ಮಾಡಿ ತಿದ್ದಿಕೊಳ್ಳಬೇಕು. ಸ್ವಾವಲಂಬನ ದೃಷ್ಟಿಯಿಂದ ಬಾಳಬಲ್ಲೆವೆನ್ನಬೇಕು. ಆಗಲೇ ಸಾಹಿತ್ಯರಂಗದಲ್ಲಿ ಈ ಜಿಲ್ಲೆ ಸತ್ವವನ್ನು ಪಡೆದೀತು! ಅಂತಹ ಸತ್ಕಾರ್ಯಕ್ಕೆಳಸುವುದೇ ಈ ದಿನದ ಸತ್‌ಸಂಕಲ್ಪವಾಗಲಿ!

ಗ್ರಹಗಳ ತಂಟೆ

"ಸವಗಿರಿನಂದ"

ಏನೋ ನಮಗೊಂದಿಷ್ಟು ಕಷ್ಟ ಬಂತೊಂದರೆ, ಗ್ರಹಚಾರ ಕೂಡ್ತಾಯಿದೇ ಅಂತ ಹೇಳಿಕೊಂಡು ಸಮಾಧಾನ ತಾಳುತ್ತೇವೆ. ಇನ್ನೊಬ್ಬರಿಗೆ ಸಮಾಧಾನ ಮಾಡಲಿಕ್ಕೂ ನಮಗೆ ನಾವೇ ಸಮಾಧಾನ ಹೇಳಿಕೊಳ್ಳಲಿಕ್ಕೂ ಗ್ರಹಚಾರಾಂತ ಒಂದು ಇರೋದು ಒಳ್ಳೇದೇ ಮತ್ತೆ.

ಆದರೆ ಕೆಲವು ಬುದ್ಧಿವಂತರಿದ್ದಾರೆ, ಅವರಿಗೆ ಗ್ರಹಚಾರದ ಮಾತು ಕೇಳುತ್ಲೇ ನಗು ಬರುತ್ತೆ" ಪ್ರತಿಯೊಂದು ಕಷ್ಟಸುಖವೆಂಬ ಜೊತೆಗೆ ತಕ್ಕ ಕಾರಣವೊಂದು ಉಂಟೇ ಉಂಟು: ಅದನ್ನು ಕಂಡುಕೊಳ್ಳಲಾಗದ ಬುದ್ಧಿಗೇಡಿಗೂ ಸೋಮಾರಿಗಳು ಗ್ರಹಚಾರಂತ ಹೇಳಿಕೊಂಡು ತಮ್ಮನ್ನು ತಾವೇ ಮೋಸಮಾಡಿಕೊಳ್ತಾರೆ; ಅನಾವಶ್ಯಕವಾಗಿ ದುಡ್ಡು ಕೂಡಾ ಹಾಳುಮಾಡಿಕೊಳ್ತಾರೆ" ಅಂತ ಆ ಬುದ್ಧಿವಂತರು ಹೇಳುತ್ತಾರೆ. ಅಂತಹರಲ್ಲಿ ಕೆಲವರನ್ನು ನಾನು ತುಸು ಪರೀಕ್ಷೆ ಕೂಡಾ ಮಾಡಿದ್ದುಂಟು. ಅವರು ಗ್ರಹಚಾರಾ ಅಂತ ಬಾಯಿಂದ ಹೇಳೋದಿಲ್ಲ, [ಬುದ್ಧಿಯೊಳಗೇ ಹೇಳಿಕೊಳ್ತಾರೆ. ಗುಟ್ಟಾಗಿ ರಾಹುಕಾಲ ನೋಡುವವರು, ಗುಟ್ಟಾಗಿ ದೇವರಿಗೆ ಕೈ ಮುಗಿವವರು, ಗುಟ್ಟಾಗಿ ಹುಂಡಿಗೆ ದುಡ್ಡು ಹಾಕುವವರು, ಎಲ್ಲಾ ಅಂಥವರೇ ಅನ್ನಿ. ಕೆಲವರು ನಮಗೆ ದೇವರ ನಂಬುಕೆ ಇಲ್ಲಾ ಅನ್ನೋದೇ ಒಂದು ಬುದ್ಧಿವಂತಿಗೆ, ಫ್ಯಾಶನ್ನು ಅಂತ ಭಾವಿಸಿಕೊಂಡು, ಬಾಗಿಲು ತೆರೆದ ಕೂಡಲೇ ಲಕ್ಷ್ಮೀ ಪಟಕ್ಕೆ ಊದುಬತ್ತಿ ಹಚ್ಚಿಟ್ಟು ಕೈ ಮುಗಿದೇ ಕಾರ್ಯ ಪ್ರಾರಂಭ ಮಾಡುತ್ತಾರೆ

ಇಂಥವರಿಗಿಂತ ಮೇಲಾಗಿ ದೇವರನ್ನು ನಂಬದ ಬುದ್ಧಿವಂತರೊಬ್ಬರಿದ್ದರು. ದೇವರ ನಂಬುಗೆಯಿಲ್ಲದವರಿಗೆ ಜ್ಯೋತಿಷ್ಯದ ಮೇಲೂ ನಂಬುಗೆ ಇರೋದಿಲ್ಲ ತಾನೆ? ಅವರು ಹೊಸಾ ಮನೆಕಟ್ಟಿ,ಗ್ರಹಶಾಂತಿ, ಗಣಹೋಮ ಮುಂತಾದ್ದೇನೂ ಮಾಡದೆ, ಗ್ರಹಪ್ರವೇಶ ಮಾಡಿ ಸಂಸಾರ ಶುರುಮಾಡಿಯೇ ಬಿಟ್ರು. ಅವರ ಹೆಂಡ್ತಿಯೂ ತಾಯಿಯೂ ಕ್ರಮಪ್ರಕಾರ ಎಲ್ಲಾ ಮಾಡಬೇಕಂತ ಹೇಳಿದರೂ ಅವರೇನೂ ಆ ಮೂಢರ ಮಾತು ಕೇಳಲಿಲ್ಲ. ಮುಂದೆ ಮೂರೇ ತಿಂಗಳೊಳಗೆ, ಹುಶಾರಾಗಿದ್ದ ಅವರ ಮಗ ಮೂರೇ ದಿನದ ಜ್ವರದಲ್ಲಿ ಸತ್ತು ಹೋದ. ಅವರ ಹೆಂಡತಿ, ತಾಯಿ ಮುಂತಾದವರು 'ಇದು ಅಕ್ರಮ ಗ್ರಹಪ್ರವೇಶದ ಫಲ' ಎಂದು ಹೇಳಿ ಹೇಳಿ ಬಾಯಿ ಬಾಯಿ ಬಡಕೊಂಡರು. ಆ ಮೇಲೆ ಅವರಿಗೂ ಹಾಗಂತ ಕಂಡದೆ. ಏನೋ ಜ್ವರದಿಂದ ಮಗ ಸತ್ತರೂ ಸಮಾಧಾನಕ್ಕಾಗಿ ಗ್ರಹಚಾರವನ್ನು ನಂಬಲೇ ಬೇಕಾಯಿತು, ಪಾಪ.

ಕೆಲವರು ಜ್ಯೋತಿಷ್ಯವನ್ನೂ ದೇವರನ್ನೂ ನಂಬದೇ ಇದ್ದರೂ ಹಾಗೆಂತ ಬಾಯಿಬಿಟ್ಟು ಹೇಳಿಕೊಳ್ಳಲಿಕ್ಕೆ ಅವರಿಗೆ ಭಯ. ಹೀಗೇ ಅರ್ಧ ನಂಬಿದವರು, ಮುಕ್ಕಾಲು ನಂಬಿದವರು, ಇನ್ನೊಬ್ಬರಿಗೆ ಮಾತ್ರ ನಂಬುಗೆ ಹೇಳಿ ತಾವು ನಂಬದವರು, ಒಂದಿಷ್ಟು ದುಡ್ಡು ಕೊಟ್ಟು ತಮ್ಮ ಭಾರವನ್ನು ಅವರ ಮೇಲೆ ಹಾಕಿ ತಾವು ಪುಣ್ಯಾತ್ಮರಾದೆವೆಂದು ನಂಬುವವರು ಹೀಗೆಲ್ಲಾ ತರತರದ ಜನರಿದ್ದಾರೆ.

ಜ್ಯೋತಿಷ್ಯದ ವಿಷಯ ಇರುವುದು ಕೂಡಾ ಹಾಗೆಯೇ. ಪರಿಹಾರ ಮಾರ್ಗದೊಂದಿಗೇ ಜ್ಯೋತಿಷ್ಯದ ಮಾತು. ಸರ್ವನಾಶವಾದರೆ ಪರಿಹಾರಕ್ರಮ ಸರಿಯಾಗದೆ ನಾಶವಾಯಿತೆನ್ನುವರು. ಸ್ವಲ್ಪ ನಾಶವಾಗಿ ಸ್ವಲ್ಪ ಉಳಿದರೆ ಪರಿಹಾರ ನಡೆಸಿದ್ದರಿಂದಲೇ ಇಷ್ಟಾದರೂ ದಕ್ಕಿತೆನ್ನುತ್ತಾರೆ. ಒಳ್ಳೆಯವರಿಗೆ ಕಷ್ಟಬಂದರೆ ಈ ಕಲಿಕಾಲದಲ್ಲಿ ಒಳ್ಳೇವರಿಗೇ ಕಷ್ಟಬರೋದು ಅನ್ನುತ್ತಾರೆ. ಕೆಟ್ಟವರಿಗೆ ಕಷ್ಟ ಬಂದರೆ, ಅವನ ಕರ್ಮಫಲ ಅನುಭವಿಸ್ತಾನೇ ಅನ್ನುತ್ತಾರೆ. ರಾಹುಕಾಲ ಅಂತಕಾದರೂ ಅದೂ ಒಂದು ಕೆಡುಕೇ, ರಾಹುಕಾಲದಲ್ಲಿ ಮಾಡಿದ್ದು ಒಳ್ಳೇದಾದರೂ ಅದರ ದುಷ್ಫಲ ಮುಂದೆ ಸಿಗುತ್ತದೆ ಅನ್ನುತ್ತಾರೆ. ಹೇಗೆ ನೋಡಿದರೂ ಜ್ಯೋತಿಷ್ಯವೇನೋ ಚಿರಂಜೀವಿಯೇ.

ಮುಖ್ಯ, ಮನುಷ್ಯರಿಗೆ ಸೋಮಾರಿತನ ಹೆಚ್ಚಾದ್ದರಿಂದಲೇ ಪೂಜೆಪುನಸ್ಕಾರ ಎಲ್ಲಾ ಬಿಟ್ಟುಬಿಟ್ಟು ದೇವರಿಲ್ಲಾಂತ ಹೇಳಿಕೊಳ್ಳುತ್ತಾರಂತಲೇ ನನಗೆ ಕಾಣುತ್ತೆ. ಅದೇನೋ ಹೇಗಾದರೂ ಇರಲಿ.

ಒಂದು ಮಾತು ದೊಡ್ಡ ವಿಜ್ಞಾನಿಗಳು ಕೂಡ ಒಪ್ಪುವ ಹಾಗಾಗಿ ಹೋಗಿದೆ. ನಮ್ಮ ಬುದ್ಧಿಗೆ ಮೀರಿದ ಶಕ್ತಿಯೊಂದು ಉಂಟೆಂತ ಎಷ್ಟೋ ವಿಧದಲ್ಲಿ ಎಂತೆಂಥವರಿಗೋ ಮನದಟ್ಟಾಗಿದೆ. ಜ್ಯೋತಿಶ್ಶಾಸ್ತ್ರವನ್ನೇ ವೈಜ್ಞಾನಿಕ ರೀತಿಯಾಗಿ ಹೇಳಿಕೊಂಡು ಹಾಗೊಂದು ಒಪ್ಪುತ್ತಾರೆ. ಗ್ರಹ—ಗ್ರಹಗಳ ಪರಸ್ಪರ ಆಕರ್ಷಣಶಕ್ತಿಯಿಂದ ಗ್ರಹ ಲೋಕದೊಳಗಿರುವ ಪ್ರತಿಯೊಂದು ಚರಾಚರ ವಸ್ತುಗಳಿಗೂ ಪ್ರಭಾವವಾಗುತ್ತೇಂತ ಬುದ್ಧಿವಂತರು ಹೇಳೋದನ್ನು ನಾನು ಕೇಳಿದ್ದೇನೆ.

ಆದರೆ ಇಷ್ಟೆಲ್ಲಾ ಗಡಿಬಿಡಿ, ಭಯಾಂದೋಳನ ಯಾಕೇಂತ ನನಗೆಗೊತ್ತಾಗೋದಿಲ್ಲ.

ಚಳಿಗಾಲಕ್ಕೆ ಚಳಿ, ಮಳೆಗಾಲಕ್ಕೆ ಮಳೆ, ಬಿಸಿಲುಕಾಲಕ್ಕೆ ಬಿಸಿಲು ಬಂದೇ ಬರುತ್ತೆ. ಒಂದೊಂದು ವರ್ಷ ಜಾಸ್ತಿಯಾಗುತ್ತೆ, ಕಡಿಮೆಯಾಗುತ್ತೆ. ಹಾಗೆಯೇ ಇಂತಿಷ್ಟು ವರ್ಷಗಳಿಗೊಮ್ಮೆ, ಅಥವಾ ಇಂತಿಷ್ಟು ಯುಗಗಳಿಗೊಮ್ಮೆ ಧೂಮಕೇತು ಕಾಣೋದಿಲ್ವೆ? ಆಗ ಅದರ ಪ್ರಭಾವವೂ ಕಾಣದೆ ಹೋದೀತೆ? ಅದೇ ರೀತಿ ಪಂಚಗ್ರಹಯೋಗ, ಅಷ್ಟಗ್ರಹಯೋಗ, ಅಂತ ಬಂದೀತು, ಬರುತ್ತೇ, ಬರಲೀ, ಬಂತೇ ಬಂತೆನ್ನಿ. ಬಂದೂಬಿಡ್ತೂನ್ನಿ ಬಂದಾಗ ಅವುಗಳ ಪ್ರಭಾವವೂ ಬಾರದೆ ಹೋಗುತ್ತೆಯೇ? ಅದೂ ಬರಲಿ ಇವುಗಳನ್ನೆಲ್ಲಾ ಮುಂದಾಗಿ ತಿಳಿಸುವ ಜೋಯಿಸರಿಗೆಲ್ಲಾ ಕೃತಜ್ಞತೆ ತಿಳಿಸುತ್ತಾ, ತಕ್ಕ ಮುಂಜಾಗ್ರತೆ ವಹಿಸಿಕೊಂಡು ಶಾಂತಿಯಿಂದಲೇ ಅವುಗಳನ್ನು ಸ್ವಾಗತಿಸಲಿಲ್ವೇ? ಮರ್ಯಾದೆ ಕೊಟ್ಟು ಮರ್ಯಾದೆ ತಕ್ಕೊಳಬೇಕು ಅನ್ನುತ್ತಾರಲ್ಲಾ, ಹಾಗೆ.

ಅದು ಬಿಟ್ಟು ಹೆದರಿಕೊಂಡೇ ಇದ್ದರೆ, ಓಡುವವರನ್ನು ಓಡಿಸುವ ಪ್ರಾಣೀ ಹಾಗೆ ಗ್ರಹಗಳಿಗೂ ಕುಶಾಲು ಬಂದೀತು. ಎಚ್ಚರ ತಪ್ಪೀತು. ಪಾಪ, ಗ್ರಹಗಳೆಂದರೆ ಅವುಗಳನ್ನು ನಂಬಿದವರನ್ನೇ ಆಧರಿಸಿಕೊಂಡು, ಅವಕ್ಕೆ ಹಸಿವಾದಾಗಲೆಲ್ಲಾ 'ಗ್ರಹಚಾರ'ಗಳನ್ನು ಹೊತ್ತು ಹಾಕುವುದು ಅವುಗಳ ಸ್ವಭಾವ. ಕೆಲವು ವರ್ಷಗಳಿಗೊಮ್ಮೆಯೋ,ಯುಗಗಳಿಗೊಮ್ಮೆಯೋ ಅವುಗಳಿಗೆ ಮಹಾ ಹಸಿವೆ ಬರುವುದೂ ಇದ್ದೀತು. ಮಹಾಭಾರತ ಯುದ್ಧ ಸಮಯದಲ್ಲಿ ಹೀಗೇ ಅಷ್ಟಗ್ರಹ ಯೋಗವಾಗಿತ್ತಂತೆ!

ಆದರೆ ಒಂದು ವಿಷಯ ನಾವು ಗಟ್ಟಿಯಾಗಿ ನಂಬಬಹುದು,—ಗ್ರಹಗಳು ಎಷ್ಟೇ ಪೀಡೆ ಕೊಟ್ಟರೂ ಪ್ರಳಯಾಗಿಳಯೂ ಕಂದು ಹಾಕಿ ತಮ್ಮನ್ನು ತಾವೇ ನಾಶಮಾಡಿಕೊಳ್ಳಲಿಕ್ಕೇ ಇಲ್ಲ. ಹಾಗೆ ಮಾಡಿದರೆ ಅವುಗಳು ಬದುಕಿರುವುದುಂಟೆ? ಅದು ಅವುಗಳ ಆತ್ಮಹತ್ಯೆವೇ ಸರಿ! ಆಗ ಅವುಗಳಿಗೂ ಅಣುಯುದ್ಧದ ಹುಚ್ಚು ಹಿಡಿದ ಮಾನವರಿಗೂ ಏನು ವ್ಯತ್ಯಾಸ ಹೇಳಿ? ಜೋಯಿಸರನ್ನು ಕೇಳಿದರೆ, ಅಣುಯುದ್ಧವೂ ಗ್ರಹಚಾರ ಫಲವೇ ಅಂದಾರು. ಇದು ನಮ್ಮ ನಿಮ್ಮೊಳಗಿನ ಮಾತು.

ಗ್ರಹಗಳು ದೇವತೆಗಳು. ಅಂದರೆ ದೇವತಾ ಗುಣವುಳ್ಳವುಗಳೆಂದೇ ಆಯಿತು. ಅವುಗಳು, ಅವುಗಳಿಗಿಂತಲೂ ಮೇಲಾದ ದೇವರ ಶಕ್ತಿಗೆ ಒಳಗಾಗಿದ್ದಾವೆ; ಅವು ಆಚೆ ಈಚೆ ಹೋಗುವಾಗ ಜಗತ್ತಿಗೂ ಹೆಚ್ಚುಕಡಮೆಯಾಗುವುದು ಸಹಜ ತಾನೇ. ಅದಕ್ಕೇ ಗ್ರಹಗಳನ್ನೆಲ್ಲಾ ಚಾಲನೆ ಮಾಡುವ ದೇವರನ್ನೇ "ಸ್ವಲ್ಪ ಜಾಗ್ರತೆಯಿಂದ ಗ್ರಹಗಳನ್ನು ನೋಡಿಕೋಪ್ಪಾ" ಅಂತ ನಾವೆ ಬೇಡಿಕೊಳ್ಳಬೇಕಾಗುತ್ತದೆ. ಒಂದೂ ತೋರದಾಗ ದೇವರೇ ಗತಿ ತಾನೇ!

ಇದೆಲ್ಲಾ ಯಾಕೆ ಹೇಳಲಿಕ್ಕೆ ಬಂದೇ ಅಂದರೆ, ಜೋಯಿಸರು ಹೇಳಿದ ವಿಷಯ ಯಾರಿಗೆ ತಾನೇ ಗೊತ್ತಿಲ್ಲ? ಅದೇ ಎಂಟು ಗ್ರಹಗಳ ತಂಟೇ ಮಾತು. ಎಲ್ಲೆಲ್ಲಿಯೂ ಇದೇ ಮಾತು. ಸುಮ್ಮ ಸುಮ್ಮನೇ ಬಾಯಾಡಿಸುವವರಿಗೆ ಅವಲಕ್ಕಿ ಸಿಕ್ಕಿದ ಹಾಗಾಯ್ತು ಈ ಮಾತು. ಎಷ್ಟು ಮಾತಾಡಿದರೇನು? ಗ್ರಹ ಬಿಟ್ಟು ಗ್ರಹಕ್ಕೆ ಹಾರಲಿಕ್ಕಾಗುತ್ತೆಯೆ? ಹಾರಿದರೂ ಇನ್ನೊಂದು ಗ್ರಹದಲ್ಲಿ ತಾನೆ ಹೋಗಿ ಬೀಳಬೇಕು? ಒಳ್ಳೇ ಗ್ರಹಗಳ ಚೆಂಡಾಟವಾಯ್ತು! ಅದರಲ್ಲೇ ಅಂಟಿಕೊಂಡಿರುವ ನಮಗೆಲ್ಲಾ ದೇವರೇ ಗತಿಯಲ್ಲದೆ ಇನ್ನೇನಿದೆ?

ದೇವರನ್ನೇ ಅನನ್ಯ ಗತೀ ಅಂತ ನಂಬಿದರೆ ಖಂಡಿತಾ ಕಾಪಾಡಲ್ಪಡುತ್ತಾನೇ ಅನ್ನಲಿಕ್ಕೆ ಎಷ್ಟೋ ಉದಾಹರಣೆಗಳುಂಟು. ಆದರೆ ಗ್ರಹಗಳ ವಿಷಯದಲ್ಲಿ ಮಾತ್ರ ಹೇಳಲಿಕ್ಕಾಗೋದಿಲ್ಲಾತೆ. ಬಹುಶಃ ದೇವರೇ ಗ್ರಹಗಳಿಗೆ ಅಂತಹ ಶಕ್ತಿಕೊಟ್ಟಿದ್ರೂ ಇದ್ದಾನು. ಅವುಗಳ ತಂಟೆ ನೋಡಿದರೆ ಹಾಗೂ ಕಾಣುತ್ತೆ. ದೇವತೆಗಳನ್ನೂ ಕಾಡಿಸುವಂತಹ ವಿಶೇಷ ಶಕ್ತಿಯುಳ್ಳ ದೇವತೆಗಳಂತೆ ಅವು. ಸಾಕ್ಷಾತ್ ಶಿವನನ್ನೆ ಶನಿಪೀಡಿಸಿದ್ದಾನಂತೆ. ದೇವತೆಗಳನ್ನೆಲ್ಲಾ ಗೆದ್ದ ರಾವಣ ಗ್ರಹಗಳ ಮುಂದೆ ಸೋತೇ ಹೋಗಿದ್ದಾನಲ್ಲ?

ಅದಕ್ಕೇ ಗ್ರಹಗಳ ಪೂಜೆ ಕೂಡಾ ಮಾಡಬೇಕೂ ಅನ್ನೋದು, ನಡೀ ತಾನೆ ಇದೆ. ದೇವರು ಕೂಡಾ ಗ್ರಹಗಳಿಗೆ ಬುದ್ಧಿ ಹೇಳ್ತಾ ಇರಲೀ ಅಂತ ದೇವರಿಗೂ ವಿಶೇಷ ಪೂಜೆ ಮುಂತಾದ್ದು ಸಾಗ್ತಾನೇ ಇದೆ.

ಒಳ್ಳೇದೇ ಅನ್ನಿ. ದಿವಸ ದೂಡಲಿಕ್ಕೆ ನಮಗೂ ಒಂದು ಧೈರ್ಯಬೇಕಲ್ಲ? ಸ್ವ

(ಮುಂದಿನ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು 3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 6¼ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.
THE VIJAYA BANK LTD.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone. 374.
ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು,(ಗವರ್ನ್‍ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

(ಹಿಂದಿನ ಪುಟದಿಂದ)

…ವಾದರೂ ಆ ಗ್ರಹಗಳಿಗೆ ಕರುಣೆ ಹು…ತ್ತೂ ಅಂತ ನಮಗೂ ಒಂದು ಆಶಾ…ದಬೇಕಲ್ಲ? ಆಶಾವಾದ ತಾನೇ ಮನುಷ್ಯನಿಗೆ ಆಧಾರ?

ಆದರೆ ವಿಪತ್ತು ಜಾರಿ ನ್ಯೆಮೇಲೆ ಬೀಳುತ್ತೇ ಅನ್ನುವಾಗ, ನಿವಾರಣೋಪಾಯ ಕೊಳ್ಳೋದೇ ಈ ಸೋಮಾರಿ ಮಾನವನ ಗುಣಾಂತ ಕಾಣುತ್ತೆ—ನಿಜಕ್ಕೂ ಪರಿಹಾರ ಮಾರ್ಗಗಳನ್ನು ಐದು ವರ್ಷಗಳ ಹಿಂದೆಯೇ ಪ್ರಾರಂಭಮಾಡಬೇಕಿತ್ತು.

ಪಂಚವರ್ಷ ಪ್ರಣಾಳಿಕೇ ಅಂತ ಪ್ರಾರಂಭ ಮಾಡಿದ ಮನುಷ್ಯ ಗ್ರಹಗಳ ವಿಷಯದಲ್ಲಿ ಅವನ್ನು ಮರೆತ ಹಾಗಾಯ್ತು. …ಸಲು, ಜೋಯಿಸರು ಲೆಕ್ಕಮಾಡಿ ಹೇಳಕ್ಕೇ ತಡ ಮಾಡಿದರೋ ಏನೋ! ನಾನೂ ವಿಷಯ ನಿಮಗೆ ಕೇಳಲಿಕ್ಕೆ ತಡವಾಗಿ ಹೋಯ್ತು ನೋಡಿ!

1962—ಫೆಬ್ರುವರಿಯಲ್ಲಿ ಅಷ್ಟಗ್ರಹ …ಗ ಬರುತ್ತೇ ಅಂತ ಉಂಟಷ್ಟೇ? …ದಕ್ಕೆ ಮೊದಲೇ ಅವುಗಳ ನೆರಳು ಬೀಳ… ಪ್ರಾರಂಭವಾಗಲಿಲ್ಲವೆ? ಇತ್ತೀಚಿನ …ರ್ಷಗಳಲ್ಲಿ ನಡೆದ ಅನಾಹುತಗಳನ್ನು …ಲ್ಪ ಹಿಂದಿರುಗಿ ಅಡ್ಡಗಣ್ಣು ಹಾಕಿ …ನೋಡಬಾರದೆ? ಎಂತೆಂತಹ ರೈಲ್ವೆ ಅಪ…ಘಾತಗಳಾದುವು? ಎಂತೆಂಥಾ ಅತಿವೃಷ್ಟಿ ಅನಾವೃಷ್ಟಿಯಾಯ್ತು? ಎಷ್ಟು ನದಿಗಳು …ದ ಹಾರಿ ನಾಡಿನೊಳಗೆ ಹರಿದುವು? …ಷ್ಟು ಊರು ಮುಳುಗಿ ಕೊಚ್ಚಿ ಹಾಳಾಯ್ತು? ಎಷ್ಟು ಕಡೆ ನೆಲ ನಡುಗಿತು? …ಷ್ಟು ಕಡೆ ಒಡೆಯಿತು? ಎಂತೆಂಥಾ …ಶ ಗಾಳಿ ಬೀಸಿತು? ಬಿಸಿಲಲ್ಲಿ ಬೆಂದು …ತ್ತವರೆಷ್ಟು? ಗೋವಾದಂಥ ರಾಜ್ಯ ಕಳೆದು…ಕೊಂಡು ಎಷ್ಟು ನಾಡು ಪೇಚಾಡಬೇಕಾಯ್ತು? ಬಸ್ಸುಗಳೆಷ್ಟು ಇಡಿಯಿಡೀ …ಯೊಳಗೆ ಧುಮುಕಿದುವು? ಬೀದಿ…ಟ್ಟು ಆಚೀಚೆ ಓಡಿದುವು? ವಿಮಾನಗ…ಷ್ಟು ಜೀವಗಳನ್ನು ಮೇಲ್ಲೋಕ ಮುಟ್ಟಿ…ದುವೆ? ಇನ್ನೂ ಚಿಲ್ರೇ ಪಲ್ರೇ ಎಷ್ಟೋ…ನೋ!

ಇದೆಲ್ಲಾ ಇತ್ತೀಚಿನ ವರ್ಷಗಳಲ್ಲಿ ಜಾ…ನೇ ಅಂದರೆ ಅಷ್ಟಗ್ರಹ ಯೋಗದ …ಪೂರ್ವ ಸೂಚನೆ ತಾನೆ? ಹಾಗೂ ಗ್ರಹ …ಟದ ಕೇಂದ್ರ ಕಾಲ ದಾಟದ ಮೇಲೆ …ಡಾ ಅವುಗಳ ನೆರಳಿನ ಕಾಟ ಇ…ಲ್ಲಂತ ಏನು ದೃಢ?

ಹೀಗೆ ನೆರಳೂ ಗಿರಳೂ ಅಂತ ಬರು…ಗ ಆ ನೆರಳಲ್ಲಿ ಕುಳಿತು ವಿಶ್ರಾಂತಿಪ…ವ ಶ್ರೀಸಾಮಾನ್ಯನಿಗಳೂ ಬೇಕಾ…ಷ್ಟಿರುತ್ತಾರಪ್ಪೆ? ದೈವಿಕವಾಗಿರುವ ಗ್ರಹಗಳ ಕಾಟದ ಮೇಲೆ ಇವೆರಡೊಂದು ಆಟ ಜಾಸ್ತಿ—ಇನ್ನಷ್ಟು ಪೀಡೆಯೂ! ಸ್ಪಷ್ಟವಾಗಿ ಹೇಳ್ತೀನೇಂತ ಸಿಟ್ಟಾಗಬೇಡಿ ಮತ್ತೆ.

ನೆರೆಹಾವಳಿ ಮುಂತಾದ ವಿನಾಶವುಂಟಾದ ಕೂಡಲೇ ಅದಕ್ಕೆ ಪರಿಹಾರದ ಏರ್ಪಾಡು ನಡೆಯಬೇಕಾದ್ದೇನೋ ನ್ಯಾಯವೇ. ಅದಕ್ಕಾಗಿ ಸಂಘ ಸಂಸ್ಥೆಗಳು ತೋರಿದಾಗ, ಅದರಲ್ಲಿ ನಡೆಯುವ ಸ್ವಾರ್ಥ ಮಾಯೆಗಳಿಂದಾಗಿ ನಿಜವಾದ ನಿವಾರಣೆ ಕಾಲುಭಾಗದಷ್ಟೇ ನಡೆಯುವಾಗ, ಸಜ್ಜನರ ಹೊಟ್ಟೆ ಎಷ್ಟು ಉರಿದೀತು ಹೇಳಿ!

ಹಾಗೆ ಈ ಗ್ರಹಗಳ ವಿಷಯದಲ್ಲಿಯೂ, ಶಾಂತಿ, ಪೂಜೆ, ಹೋಮ, ಅರ್ಚನೆ ಎಲ್ಲಾ ಮಾಡಬೇಕಾದ್ದೇನೋ ನ್ಯಾಯವೇ, ಆಗತ್ಯವೇ. ಅದಕ್ಕಾಗಿ ಕೆಲವು ವ್ಯಾಪಾರಿಗಳು ಹಿಂಬಾಗಿಲಿನ ಮೂಲಕವಾಗಿ ತಮ್ಮ ವ್ಯಾಪಾರವನ್ನು ಈ ವ್ಯವಹಾರದಲ್ಲಿ ಶುರುಕಿಸುವುದೆಂದರೇನು? ಕನಸಿನಲ್ಲಿ ಮಹಾ ಪುರುಷರು ಬಂದು "ಭಕ್ತಾ, ಹೀಗೆ ಹೀಗೆ ಪ್ರಚಾರ ಮಾಡು. ಇಂತಿಷ್ಟು ದುಡ್ಡು ಕಳುಹಿಸಿ ಪ್ರಸಾದ ಪಡೆಯುವ ನಿಯಮ ಹೂಡು. ಇದನ್ನು ತಿರಸ್ಕರಿಸಿದವರು ಇಂತಿಷ್ಟು ತಿಂಗಳಲ್ಲಿ ಸರ್ವನಾಶವಾಗುತ್ತಾರೆಂದು ನನ್ನ ವಚನವಿದೆಯೆಂದು ಶಾಪ ನೀಡು. ತ್ವರೆಮಾಡು." ಎಂದು ಹೇಳುವುದೆಂದರೇನ? ಮಹಾ ಪುರುಷರೇ ಪ್ರಜೆಗಳಿಗೆ ಶಾಪ ನೀಡುವರೆ? ಕೆಲವು ಪುಣ್ಯ ಸ್ಥಳಗಳ ಹೆಸರಿನಿಂದ ಪಾಮರರ ಪ್ರಮಾಣ ಮಾಡಿಸಿ ಓಟುಗಿಟ್ಟಿಸಿಕೊಳ್ಳುವ ತಂತ್ರದ ಹಾಗೆ ತಾನೇ ಇದು ಕೂಡ?

ಅತಿ ಬುದ್ಧಿವಂತರಷ್ಟು ಅಂದವರು.' ಜನಸಾಮಾನ್ಯರು ಪಾಪಭೀರುಗಳು ಅಂಥ ಅವರಿಗ ಗೊತ್ತು. ಬೆದರಿಸುವರ ಮೇಲೆ ಕಪ್ಪೆ ಹಾಕಿದರಂತೆ, ಹಾಗೆ ಪಸುಶೀಲ ಪುಣ್ಯಾತ್ಮರ ಬಲಹೀನತೆಗಳನ್ನು ಉಪಯೋಗಿಸಿಕೊಂಡು ಈ ಬಗೆಯ ಶಕ್ತಿಗಳು ತಮ್ಮ ವ್ಯಾಪಾರ ವಹಿವಾಟುಗಳನ್ನು ನಡೆಸುವುದು ನೋಡುವಾಗ ಇದೂ ಗ್ರಹಗಳ ಕಾಟವೆಂದೇ ಅಂದರೆ ತೀರಿತು. ಒಂದೆಡೆ ಹೊಂಡವಾದರೆ ಇನ್ನೊಂದೆಡೆ ದಿಣ್ಣೆ ಒರಲೇಬೇಕಷ್ಟೆ? ಒಂದೆಡೆ ಲಾಭವಾದರೆ ಇನ್ನೊಂದೆಡೆ ನಷ್ಟವಾದಂತೇ ಲೆಕ್ಕ. ಗ್ರಹಗಳಂತೂ ಯಾವುದನ್ನೂ ತಿನ್ನೋದಿಲ್ಲ, ಮಾಸೋದಿಲ್ಲ, ಮುಟ್ಟೋದಿಲ್ಲ. ಅವು ನಿಜಕ್ಕೂ ದೇವತೆಗಳು — ದೇವಗುಣದವು ಅಂತೆಯೇ ದೇವರ ಹಾಗೇ ಅವ ಎಲ್ಲವನ್ನೂ ನಮ್ಮ ಪಾಲಿಗೇ ಹಿಂದೆ ಬಿಡುತ್ತವೆ. ಆದರೂ ಒತ್ತಾಯದಿಂದ ಹೋಮ ಮಾಡಿ ನಾವೇ ಅವಕ್ಕಿಷ್ಟು ಅತಿಥಿ ಉಪಚಾರದಂತೆ ತಿನ್ನಿಸುತ್ತೇವೆ. ಪಾಪ ಅವೂ ನಮ್ಮನ್ನು ಮೆಚ್ಚುತ್ತವೆ. ಮುಖ್ಯವಾಗಿ ಅವುಗಳಿಗೆ ಬೇಕಾದ್ದು ನಮ್ಮ ಭಕ್ತಿ, ಶರಣಾಗತಿ, ಅವುಗಳಿಂದಲೇ ನಮ್ಮೆಲ್ಲ ಸುಖವೂ ಎಂಬ ಜ್ಞಾನ, ಆದಕ್ಕೆ ತಕ್ಕ ಕೃತಜ್ಞತೆಯ ಕೃತಿಗಳು—ಇಷ್ಟೇ ಅವುಗಳಿಗೆ ಬೇಕಾದ್ದು.

ಅಲ್ಲದೆ ಕೆಲವರು ಭಯಪಡಿಸುವ ಹಾಗೆ ದೇವರಾಗಲೀ ಮಹಾನ್ ವಿಭೂತಿ ಪುರುಷರಾಗಲೀ "ನೀವು ನಮ್ಮ ಪ್ರತಿನಿಧಿ ಹೇಳುವ ಮಾತನ್ನು ತಿರಸ್ಕರಿಸಿದರೆ... ತಿಂಗಳೊಳಗೆ ನಾಶವಾಗುವಿರಿ" ಎಂದೆಷ್ಟು ಮಾತ್ರಕ್ಕೂ ಹೇಳಲಾರರು. ಶಕ್ತ್ಯನುಸಾರ ಭಾಗವಹಿಸಿ ಪುಣ್ಯಭಾಜನರಾಗಿರಿ" ಎಂಬ ನ್ಯಾಯದ ವಾಕ್ಯ ಹೇಳಲಿಕ್ಕೆ ಸ್ವಪ್ನಗಿಪ್ನ ಅಂತ ಹೇಳಬೇಕಾಗಿಲ್ಲ. ಸ್ವಪ್ನವೇ ಕಟ್ಟಿದ್ದರೂ ಅದನ್ನು ಹೇಳಿಕೊಂಡು ತಿರುಗಾಡಿಸಬೇಕಾಗಿಲ್ಲ. ಅದು ಆತ್ಮಸಾಕ್ಷಿಯನ್ನ ಮೋಸಪಡಿಸುವುದೇ ಸರಿ!

ಅಲ್ಲಾ, ನನಗೆ ಗೊತ್ತಿಲ್ಲದೆ ಕೇಳ್ತೇನಂತಲೇ ಇಟ್ಟುಕೊಳ್ಳಿ. ಒಂದು ಪೂಜೆ ಮಾಡಿಸಿದರೆ ಪೂಜೆಮಾಡಿಸಿದವರಿಗೆ ಮಾತ್ರವೇ ಒಳ್ಳೇದಾಗುವುದೆಂದು ಅರ್ಥವೆ? ಇತರರಿಗೆ, ದುಡ್ಡಿಲ್ಲದವರಿಗೆ, ಯಾವ ದೇವರ ದಯವೂ ಸಿಗಲಾರದೆ? ಹೊತ್ತು ಹೊತ್ತಿಗೆ ಉಣ್ಣಲು ಗತಿಯಿಲ್ಲದವರು ಕೂಡಾ ಪ್ರಾಣ ಭೀತಿಯಿಂದ ಸಾಲಮಾಡಿಯಾದರೂ ಗ್ರಹ ಸೇವೆ ಮಾಡಿಸಿದರೇನೇ ಬಚಾವಾಗೋದೆ? ಊರೊಳಗಿನ ದೇವರಿಗೆ ಮಾತ್ರ ಪೂಜೆ ಮಾಡಿದರೆ ಸಾಲದೆ? ಹೊಟ್ಟೆ ಬಾಯಿ ಕಟ್ಟಿಯಾದರೂ ಪರವೂರಿನ ದೇವರುಗಳಿಗೂ ಹಣ ಕಳುಹಿಸಬೇಕ? ...

ಹಣದ ಬಲವಿರುವ ಧಾರ್ಮಿಕ ಮಹಾ ಪ್ರಭುಗಳು ಮಹಾ ಮಹಾ ಪೂಜೆ, ಅರ್ಚನೆ, ಹೋಮಾದಿಗಳನ್ನು ಮಾಡಿಸುವಾಗ ಅವರ ಆ ನಿಃಸ್ವಾರ್ಥ ಪುಣ್ಯಕಾರ್ಯದ ಪ್ರಭಾವವು ಮೂಲೆ ಮೂಲೆಗಳಲ್ಲಿಯೂ ಹಂಚಿಹರಡಿ ಹೋಗುವುದಿಲ್ಲವೆ?

ಯಾಕಿಲ್ಲ? ಖಂಡಿತಾ ಹೋಗತ್ತೆ ಅಂತ ತಾನೇ ಹೇಳ್ತೀರಿ?

ನಾನಿಷ್ಟು ಯಾಕೆ ಹೇಳ್ಲಿಕ್ಕೆ ಶುರು ಮಾಡಿದೇ ಅಂದರೆ, ನನ್ನಂಥ ಗೂಡುನಿವಾಸಿಗಳು ಅನಾವಶ್ಯಕವಾಗಿ ಹೆದರಬಾರದೂ ಅಂತಲೇನೇ, ಬಡವರೆಲ್ಲಾ ಗಡಿಬಿಡಿಯಾಗದೆ ಶಾಂತಚಿತ್ತರಾಗಿ ನಿತ್ಯ ಕೃತ್ಯಗಳಲ್ಲಿ ಮಗ್ನರಾಗಿದ್ರೇನೇ ಸಾಕು. ನಿಮ್ಮಿಷ್ಟ ದೇವರನ್ನೇ ನಿತ್ಯದಂತೆ ಪೂಜೆ ಮಾಡಿಕೊಂಡಿದ್ರೇನೇ ಸಾಕು. ಧೈರ್ಯದಿಂದ, ನೀತಿಯಿಂದ ನ್ಯಾಯದಿಂದ ನಡೆಯುತ್ತಾ ಇದ್ರೆ ಗ್ರಹಗಳು ಅವುಗಳಷ್ಟಕ್ಕೆ ಆಟವಾಡಿಕೊಂಡು ಬಂದು, ಒಂದೇ ಕೋಣೆಯೊಳಗೆ ಕೂಟ ಕೂಡಿಕೊಂಡು, ಅವುಗಳ ಪಾಡಿಗೆ ಹೋಗೇ ಹೋಗುತ್ತವೆ. ಹಾಗೂ ಅವುಗಳು ಒಂದಿಷ್ಟು ಹೆಚ್ಚೇ ಹಾರಾಡಿದರೂ ನಿಜವಾದ ಸದುದ್ದೇಶದವರು ಮಾಡುವ ಪೂಜೆಯ ಫಲ ನಿಮಗೆಲ್ಲರಿಗೂ ಉಂಟು. ನಿಮ್ಮ ಸಣ್ಣ ಭಕ್ತಿಯನ್ನೇ ನಂಬಿಕೊಂಡು ನೀವು ಧೈರ್ಯವಾಗಿರಿ. ನಿಮ್ಮ ಶಕ್ತ್ಯಾನುಸಾರ ಲಘು ಸೇವೆಯನ್ನೇ ಸಲ್ಲಿಸಿರಿ. ನಾಕು ಮಹಾಭಾರತ ಯುದ್ಧ ಕಾಲದಲ್ಲಿ ಕೂಡಾ ಏನು ಕೆಡುಕಾಯಿತು? ದುಷ್ಟ ಶಕ್ತಿಗಳ ನಾಶವಾಯ್ತು. ನಮಗ ಭಾರತದಂತಹ ಉದ್ಗ್ರಂಥ ಸಿಕ್ಕಿತು. ಅರ್ಥವೇನು? ಗ್ರಹಗಳು ಲೋಕಕ್ಕೆ ಒಳ್ಳೇದನ್ನೇ ಮಾಡುತ್ತವೆ ಗೊತ್ತೆ!

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ. ರೂ ಎರಡು ಉತ್ತಮ ಪ್ರತಿ ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವೂ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25)

ವಿ ಸೂ —ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ



ಉಪದೇಶ ಪ್ರಭಾವ

(೨ನೇ ಪುಟದಿಂದ)

ತಿ,ಒಳ್ಳೇ ಸೀರೆಯುಟ್ಟು ಬೇಗ ಬಾ, ತಲೆ ಬಾಚಿ ಕಟ್ಟಿಕೊಳ್ಳು. ರಾತ್ರಿಯಿಡೀ ನಿದ್ರೆ ಬಿಟ್ಟು ಮುಖವೆಲ್ಲ ಕಳೆಗೆಟ್ಟಿದೆ—ಕೂಡಲೇ ಬಾ”

ಇನ್ನೂ ತಾಯಿಯನ್ನು ತೊಂದರೆಗೆ ಸಿಕ್ಕಿಸುವುದಕ್ಕೆ ಸುಮತಿ ಇಚ್ಛೆಪಡದೇ ‘ಬರುತ್ತೇನಮ್ಮಾ’ ಎಂದು ಅದೇ ಉಡುಪಿನಲ್ಲೇ ಕೆಳಗಿಳಿದಳು. ಶ್ರೀಪತಿರಾಯರು ಮೆಲ್ಲನೆ ಸುಮತಿಯನ್ನು ನೋಡಿ!

‘‘ಅಯ್ಯೋ ಪ್ರಾರಬ್ಧವೇ’ ಎಂದು ತಲೆ ಬಡಿದು ಕೊಂಡರು. ಹಾಸಿದ್ದ ಚಾಪೆಯ ಮೇಲೆ ಕುಳಿತಾಗ ಮೆಲ್ಲಗೆ ಬಂದವರ ಪರಿಚಯವನ್ನು ಪುರೋಹಿತರು ಮಾಡುತ್ತಾ ಮಗೂ, ಈ ಹುಡುಗನು M. A. ಪರೀಕ್ಷೆಯಲ್ಲಿ ಪಾಸಾಗಿ ಈಗ ಕಾಲೇಜೊಂದರಲ್ಲಿ ಉಪಾಧ್ಯಾಯನಾಗಿದ್ದಾನೆ. ತಿಂಗಳಿಗೆ ಸಂಬಳವೂ ಸಾಕಷ್ಟು ಬರುತ್ತಿದೆ. ಗೌರವಸ್ಥ ಯುವಕ. ಹೇಗೆ ನಿನ್ನ ಮನಸ್ಸಿನಲ್ಲಿ ಇದ್ದುದನ್ನು ಹೇಳಿಬಿಡು.’

ವರನು ಪ್ರಶ್ನೆ ಕೇಳಬೇಕೆಂಬ ಇಚ್ಛೆಯಿಂದ ಮುಖ ಮುಖ ನೋಡುತ್ತಿದ್ದ—ಸುಮತಿ ಮುಖವೆತ್ತಿ ದೈನ್ಯ ಭಾವದಿಂದ ಹೇಳಿದಳು—‘ನಾನು ಅಬಲೆ — ಸ್ತ್ರೀ. ನಾನು ವಿದ್ಯಾವಂತೆಯಾಗಿ ಸಮಾಜದಲ್ಲೊಂದು ಸ್ಥಾನ ಕಲ್ಪಿಸಿಕೊಂಡು ಬಾಳಬೇಕೆಂಬ ಆಸೆಯಿದೆ—ಅಲ್ಲದೇ ಚಿಕ್ಕಂದಿನಲ್ಲಿಯೇ ಪುರುಷನ ಆಟದ ಗೊಂಬೆಯಾಗಿ ಮನೆಯಲ್ಲಿಯೇ ಇದ್ದು ಕೊಳೆಯುವ ಇಚ್ಛೆ ನನ್ನಲಿಲ್ಲ’

‘ಹಾಗಾದರೆ ನಿನಗೆ ಇನ್ನೂ ಕಲಿಯಬೇಕೆಂಬ ಇಚ್ಛೆಯಿದೆಯೆ?

ಇಲ್ಲವೇ? ನೀವು ವಿದ್ಯಾಪಾರಂಗತರು. ನಿಮ್ಮ ಒಳದನಿ ಏನನ್ನುತ್ತಿದೆ?,ಅದನಷ್ಟು ಒರೆಗೆ ಹಚ್ಚಿ ಹೇಳಿರಿ? ನಿಮ್ಮ ತಂಗಿಯು ಅಣ್ಣಾ, ನಾನು ಕಾಲೇಜಿಗೆ ಹೋಗಿ ಓದಬೇಕೆಂದು. ಕೇಳಿದರೆ ನೀವೇನನ್ನುತ್ತೀರಿ?’

‘ನಿಜ! ನಿನಗೆ ವಿವಾಹವಾಗಿ ಓದುವ ಇಚ್ಛೆಯಿಲ್ಲವೇ?’

ಸುಮತಿಯು ಕರುಳು ನಕ್ಕಿತು. ಬಿಸಿಯಾದೊಂದು ಉಸಿರನ್ನು ಬಿಡುತ್ತಾ ‘ನಾನೇನು ಹೇಳಲಿ? ನನಗೆ ಈಗ ವಿವಾಹವಾಗುವ ಇಚ್ಛೆಯೇ ಇಲ್ಲ—ವಿವಾಹ!? ಸರಿಯಾದ ಅರ್ಥವನ್ನು ತಿಳಿದುಕೊಂಡೇ ಮಾತನಾಡಲಿಲ್ಲ ನೀವು. ಅದೊಂದು ಬಂಧನವಲ್ಲವೇ? ಮದುವೆಯಾದ ಮೇಲೆ ಆಕೆ ಆತನ ಅರ್ಧಾಂಗಿ. ಆತ ಹೇಳಿದ—ಅನುಸರಿಸುವ ಮಾರ್ಗವನ್ನೇ ಅನುಸರಿಸುವುದು ಆಕೆಯ ಧರ್ಮ! ಧರ್ಮಕ್ಕನುಸರಿಸಿ ನಡೆಯದಿದ್ದ ಮೇಲೆ ಆಕೆ ಪತ್ನಿಯಾದಳೆ? ಕೊನೆಗೆ ಜಿಗುಪ್ಸೆಹೊಂದಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಕ್ಕಿಂತ ಮದುವೆಯಾಗದೇ ಬಂಧನವಿರದೇ ವಿದ್ಯೆಯನ್ನು ಅಭ್ಯಸಿಸುವುದು ಯೋಗ್ಯವಲ್ಲವೇ? ಈ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರ ಹೀಗೆಂದು ಹೊಳೆಯುವುದು. ‘ಸುಖವನ್ನು ಅನುಭವಿಸುವವಂಗೆ ವಿದ್ಯೆ ಸಂಹೋಗದು—ವಿದ್ಯೆ ಕಲಿಯಬೇಕೆಂಬವನು ಸುಖದ ನೆರವನ್ನು ನೋಡಬಾರದು ಎಂಬ ಆರ್ಯೋಕ್ತಿಯಿಲ್ಲವೇ?—ಹೇಳಿರಿ! ನಾನೇನು ಮಾಡಬೇಕು?” ಸುಮತಿ ಅತ್ತಳು ಆದರೆ ಯಾರಿಗೂ ತೋರಗೊಡಲಿಲ್ಲ.

ಗಂಭೀರವಾಗಿ M. A. ಪದವೀಧರರು ಹೇಳಿದರು. ಮಾತಿನಲ್ಲಿ ಗಾಂಭೀರ್ಯವಿತ್ತು. ಆಶ್ವಾಸನೆಯಿತ್ತು; ಅಭಯವಿತ್ತು. ‘‘ಓದಲೇಬೇಕೆಂಬ ಲವಲವಿಕೆ ನಿನ್ನಲ್ಲಿ ಬೇರೂರಿದೆ—ಅದು ನಿಜ! ಆದರೆ ಪ್ರಕೃತಿ ದೇವಿಯ ಬಿಸಿ ಉಸಿರು ನಿನ್ನ ದೇಹದಲ್ಲಿ ಹೊಕ್ಕಿದೆ-ನೀನಾಗ ಪ್ರೌಢೆಯಾದೆ-ಯೌವನಸ್ಥಳಾದೆ-ಹಾಗಿರುವುದರಿಂದಲೇ ನೀನು ವಿವಾಹವಾಗುವುದು ತಂದೆಗೆ ಸಂಕಟದುದರಿಂದ ಮಾತ್ರವಲ್ಲದೇ ಈ ಸಮಾಜದ ಬಿರುನುಡಿಗೆ ಬೆದರಿ ಬಾಳುವುದಕ್ಕಿಂತ ಸಂಸಾರಿಯಾಗಿ ಸುಖವಾಗಿರುವುದು ಮೇಲೆಂದು ಈ ಕಾರ್ಯ ವೆಸಗಿದರು: ಇಂತಹ ಪ್ರಸಂಗಗಳು ಈ ಕಲಿಯುಗದ ರಂಗಭೂಮಿಯ ಮೇಲೆ ಈಗೀಗ ಹೆಚ್ಚಾಗಿ ಪ್ರದರ್ಶಿತವಾಗುತ್ತಿವೆ. ತನ್ಮಧ್ಯೆ ಕಥಾನಾಯಕಿಯ ಅತ್ಯಾಚಾರ ಅನಾಚರಗಳನ್ನೂ ಸಹಾ ನಾವು ನೋಡುತ್ತೇವೆ-ಹಾಗಾಗಬಾರದೆನ್ನುತ್ತೇವೆ. ಸಮಾಜದ ವಿಷಭರಿತ ಸರ್ಪಗಳು ಅಂತಹದಕ್ಕೆ ಬೇಕಾದಷ್ಟು ಎಡೆಕೊಡುತ್ತವೆ. ಸಮಾಜದ ಕೆಲವು ಸರ್ಪಗಳು ಕೆಲವೆಡೆ ನಶಿಸಿಹೋಗುತ್ತಿವೆ. ಹೇಗೂ ಇರಲಿ, ನಿನಗೆ ಇಂತಹ ವಿಚಾರಗಳು ಈಗ ಬೇಕಾಗಲಿಕ್ಕಿಲ್ಲ. ನೀನು ಕೋಲೇಜ್ ವಿದ್ಯಾರ್ಥಿನಿಯಾಗಿಯೋ—ಇಲ್ಲವೇ ಇನ್ನಾವುದಾದರೂ ಸಮಾಜ ಸಂಘದಲ್ಲಿ ಕಾರ್ಯಕರ್ತಳಾಗಿಯೋ ಕಾರ್ಯದಕ್ಷತೆಯಿಂದ ಕೆಲಸ ನಿರ್ವಹಣೆಯನ್ನು ಸಾಗಿಸುತ್ತಿರುವಾಗ ನಿನಗೆ ಇಂತಹ ಮಾತುಗಳ ಅರಿವಾಗುವುದು. ಈಗ ನಡೆಯುವ ಕಾರ್ಯಕಲಾಪಗಳು ಸಹಾ ನಿನಗೆ ಸೇರಲಾರವು ನಿಸರ್ಗವು ನಿನ್ನನ್ನು ನೀರಿನ ಮೇಲೆ ಗರಿ ಎಳೆದಂತೆ ಮೃದುವಾಗಿ ನಯವಾಗಿ ಅತ್ತ ಎಳೆಯುವುವು-ಅದಕ್ಕೆಲ್ಲಾ ಅಧೀರಳಾಗಿದ್ದರೆ ಸಾಧ್ಯವಾಗಲಿಕ್ಕಿಲ್ಲ-ಸ್ತ್ರೀ ಅಬಲೆಯೆಂದು-ಹೇಳುವುದು ನಿನಗೆ ವಿದಿತವಾಗಿದ್ದರೆ ನೀನು ಖಂಡಿತವಾಗಿಯೂ ವಿವಾಹವಾಗು-ನಿನ್ನಲ್ಲಿ ಮುಂದೆ ಬರುವ ಕಷ್ಟ ಕಾರ್ಪಣ್ಯಗಳನ್ನು ಎದುರಿಸುವ ಮಹಾ ಶಕ್ತಿಯಿದ್ದರೆ—ನಿನ್ನಿಚ್ಛೆಯಂತೆ ನಡೆ-ಅಂತಹದಕ್ಕೆ ದೇವನು ಶಕ್ತಿಯನ್ನು ಕೊಡಲಿ’ ಎಂದು ಹಾರೈಸುತ್ತೇನೆ-ಇಂದೇ ನಿನ್ನ ಸಮಸ್ಯೆ-ನಿನ್ನ ಕೈಗೆತ್ತಿಕೊಳ್ಳಬೇಡ-ಪರೀಕ್ಷೆ ಮುಗಿದೊಡನೆ ನಿಧಾನವಾಗಿ ಮನಸ್ಸಿನೊಡನೆ ಚರ್ಚಿಸಿ, ನಂತರ ದಾರಿಗೆ ಬಂದು ಆಲೋಚಿಸು. ಸಮಾಜದಲ್ಲಿ ಅಬಲೆಯೊಬ್ಬಳ ಪಾತ್ರ ಹೇಗಿರಬೇಕೆಂದು - ಕೊನೆಗೆ—ನಾನು ಹೇಳಿದ ಮೊದಲಿನ ಘಟ್ಟಕ್ಕೆ ನೀನು ಬಂದರೆ ನನಗೆ ಪತ್ರ ಬರೆ— — ಇಷ್ಟನ್ನು ನೆನಪಿನಲ್ಲಿಡು—” ಸ್ಫೂರ್ತಿದಾಯಕವಾದ ಮಾತನ್ನು ಕೇಳಿದ ಸುಮತಿಯು ಕಣ್ಣುಗಳಲ್ಲಿ ಆನಂದ ಭಾಷ್ಪವುರುಳಿತು. ಅಲ್ಲದೇ ತಲೆಯೆತ್ತದೆ ಒಳಗೋಡಿದಳು-ಶ್ರೀಪತಿ ರಾಯರು ವಿಚಿತ್ರ ಪ್ರಪಂಚದಲ್ಲಿ ನಡೆಯುವ ಆಟಕ್ಕಾಗಿ ನೊಂದರು-ಬೇಗುದಿಯಗೊಂಡರು. M. A. ಪದವೀಧರರ ಟ್ಯಾಕ್ಸಿಯೂ ಕೂಡ ಉಪಚಾರ ತೀರಿಸಿಕೊಂಡು ಬಂದ ದಾರಿಗೆ ಸುಂಕವಿಲ್ಲವೆಂಬಂತೆ-ಓಟಕಿತ್ತಿತು—

ತಿಂಗಳು ಗತಿಸಿತು. ತಂದೆ. ತಾಯಿಯವರಲ್ಲಿ ಸ್ವಾತಂತ್ರ್ಯಗಳಿಸಿದ ಸುಮತಿಗೆ ಸರಿಯಾಗಿ ನಿದ್ರೆಯೇ ಬರುತ್ತಿರಲಿಲ್ಲ-ನಿದ್ರೆಯ ಅಮಲೂ ಕೂಡ ಅವಳನ್ನು ಆವರಿಸಿರಲಿಲ್ಲ-ಹಾಗಾಗಿ ಅವಳು ಕೃಶಳಾದಳು. ಮನೋಪಟಲದ ಮನೋನಿರ್ಧಾರ- ಮನಸ್ಸಿನ ಉದ್ವೇಗ ಇವುಗಳು ಅವಳನ್ನು ಆಸ್ಪತ್ರೆಗೆ ತಳ್ಳಿದುವೆಂದರೂ ತಪ್ಪಾಗದು ಹತ್ತಾರು ದಿನಗಳಲ್ಲ ಓದುವಿಕೆಯ ಹುಚ್ಚು ಸಂಪೂರ್ಣ ನಶಿಸಿಹೋಗಿ-ಅಣ್ಣನ ಪತ್ರವೂ ಕೂಡಾ ಫಲಕಾರಿಯಾಗದೆ-M. A. ಪದವೀಧರ ಗಂಡಿನೊಡನೆ ಸುಮತಿಯು ಪಾಣಿಗ್ರಹಣವೂ ನಡೆಯಿತು—

ಹೊಸ ಶಾಖೆಯ ಪ್ರಾರಂಭ

159

ನೇ ಶಾಖೆ

ಗುಂಡ್ಲುಪೇಟೆ

(ಮೈಸೂರು ರಾಜ್ಯದ ಮೈಸೂರು ಜಿಲ್ಲೆ)

ನಮ್ಮ 159 ನೇ ಶಾಖೆಯು
ಮೈಸೂರು ರಾಜ್ಯದ ಮೈಸೂರು ಜಿಲ್ಲೆಯ
ಗುಂಡ್ಲು ಪೇಟೆಯಲ್ಲಿ

ಫೆಬ್ರವರಿ ೯, ೧೯೬೨ರಿಂದು

ಪ್ರಾರಂಭವಾಗಿ
ಎಲ್ಲಾ ವಿಧದ ಬ್ಯಾಂಕಿಂಗ್ ವ್ಯವಹಾರವನ್ನು
ನಡೆಸುವುದು

• ಹೆಚ್ಚು ಜನರಿಗೆ-ಹೆಚ್ಚು ಸೇವೆಗೆ •

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಉಡುಪಿ, ಮೈಸೂರು ರಾಜ್ಯ
ಸ್ಥಾಪನೆ: ೧೯೨೫.

ಕಾಂಗ್ರೆಸ್‌ಗೆ ಮತನೀಡಿರಿ

(೧ನೇ ಪುಟದಿಂದ)

ಲ್ಲ ಮತದಾರ ಕ್ಷೇತ್ರಗಳಿಗೂ ತನ್ನ ಪಕ್ಷದ ಸ್ಪರ್ಧಾಳುಗಳನ್ನು ನಿಲ್ಲಿಸುವ ಶಕ್ತಿವಂತ ಪಕ್ಷ. ಪ್ರಜಾ—ಸ್ವತಂತ್ರ – ಸಮಾಜವಾದಿ ಮೊದಲಾದ ಕೆಲವೊಂದು ಪಕ್ಷಗಳ ಕೆಲವೊಂದು ವ್ಯಕ್ತಿಗಳನ್ನು ಮಾತ್ರ ಹೊಂದಿಕೊಂಡಿರುವ ಪಕ್ಷಗಳು. ಇವು ಇದುವರೆಗೆ ವಿಧಾನ ಸಭೆ—ಲೋಕ ಸಭೆಯಲ್ಲಿ ಉಚಿತ ಬಲವನ್ನೂ ಪಡೆದಿಲ್ಲ. ಕಮ್ಯೂನಿಸ್ಟ್ ಪಕ್ಷ ಭಾರತದಂತಹ ರಾಷ್ಟ್ರದ ಹವಾಮಾನದಲ್ಲಿ ಬೆಳೆಯಲಾರದು ಬೆಳೆಯಬಾರದು ಜಾತೀಯ ಭಾಷೆಯಿರುವ ಕೆಲವೊಂದು ಪಕ್ಷಗಳು ಜಾತ್ಯತೀತ ಭಾರತಕ್ಕೆ ಹೇಳಿಸಿದವುಗಳಲ್ಲ. ಈ ಕಾರಣದಿಂದ ಸುಭದ್ರ ಸರಕಾರವನ್ನು ಸ್ಥಾಪಿಸಿ, ಜನತೆಯ ಹಿತಾಕಾಂಕ್ಷೆಗಳನ್ನು ಸಾಧಿಸುವುದು ಕೇವಲ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಸಾಧ್ಯ. ಬೇರೆ ಸಂಸ್ಥೆಯ ಪ್ರತಿನಿಧಿಗಳನ್ನು ಕೆಲವೊಂದು ಪಕ್ಷಗಳು ನಿಲ್ಲಿಸಿವೆ. ಇವರೆಲ್ಲರೂ ಗೆದ್ದು ಬಂದರೂ ವಿಧಾನ ಸಭೆ-ಲೋಕ ಸಭೆಯಲ್ಲಿ ಅವರ ಸಂಖ್ಯೆ ತೀರ ಅಲ್ಪವಿರುವುದರಿಂದ ಸರಕಾರ ರಚಿಸಲು ಅವರಿಂದ ಸಾಧ್ಯವಿಲ್ಲ. ನಮ್ಮ ದೇಶದ ಎಲ್ಲ ವಿರೋಧಿ ಪಕ್ಷಗಳಿಗೂ ಈ ಮಾತನ್ನು ಅನ್ವಯಿಸಬಹುದಾಗಿದೆ. ಗೆದ್ದರೂ ತಾನು ಜನತೆಗಿತ್ತ ಭರವಸೆಗಳಾಗಿ ಪೂರೈಸುವ ಆಕಾಂಕ್ಷೆಯಿಲ್ಲದವರೂ ಕೆಲವರಿದ್ದಾರೆ. ಅಂತಹರು ನಾನಾ ಬಗೆಯ ಆಶೆ ಆಮಿಷಗಳನ್ನು ಜನತೆಯ ಮುಂದಿಡುತ್ತಾರೆ. ಇವುಗಳು ಕೇವಲ ಭರವಸೆಗಳಾಗಿ ಚುನಾವಣಾ ಗಾಳಿಯಲ್ಲಿ ತೂರಿಹೋಗುತ್ತವೆ. ಮಾತ್ರ

ತಾನಿತ್ತ ಭರವಸೆಗಳನ್ನು ಪೂರ್ಣರೂಪದಲ್ಲಿ ಸಲ್ಲಿಸುವ ಪಕ್ಷವೆಂದರೆ ಕಾಂಗ್ರೆಸ್ ಜನತೆಯ ಬೆಂಬಲದಿಂದ ಸುಭದ್ರ ಸರಕಾರ ರಚಿಸಿ ಜನಕಲ್ಯಾಣ ಸಾಧಿಸುವ ಪಕ್ಷ ಕಾಂಗ್ರೆಸ್ ಮಾತ್ರ ಉತ್ತಮ ಅನುಭವಿಗಳ, ಮೇಧಾವಿಗಳ ರಚನಾತ್ಮಕ ಬುದ್ಧಿಮತ್ತೆಯ ಪ್ರಯೋಜನ ದೊರೆಯುವುದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ. ದೇಶದಲ್ಲಿ ಜನಾದರಗಳಿಸಿದ ಪಕ್ಷ ಕಾಂಗ್ರೆಸ್. ಕಾಂಗ್ರೆಸ್‌ಗೆ ಮತವಿತ್ತು ಅಧಿಕಾರವನ್ನು ಮರಳಿ ಐದು ವರ್ಷ ಅದರ ಕೈಗಳಿಗೆ ಈಯುವುದು ನಾಗರಿಕರಾದ ನಮ್ಮ ಕರ್ತವ್ಯ. ಆದುದರಿಂದ ನಿಮ್ಮ ಅಮೂಲ್ಯವಾದ ಮತವನ್ನು ಕಾಂಗ್ರೆಸ್‌ಗೆ ನೀಡಿರಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ಕಾಂಗ್ರೆಸಿಗೆ ಮತ— ರಾಷ್ಟ್ರದ ಹಿತ!

ನವಯುಗ

ಕಾಂಗ್ರೆಸಿನ ಜಯ ಜನತೆಯ ವಿಜಯ.

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೨೩ | ಉಡುಪಿ 15—2—1962 ಗುರುವಾರ | Vol. 41 No. 23

೧೯೬೨—೬೩ ರ
ಕರ್ನಾಟಕದ ವಾರ್ಷಿಕ ಯೋಜನೆ

ತೃತೀಯ ಯೋಜನೆಯಲ್ಲಿ ಮೈಸೂರಿನ ಪಾಲು ೨೫೦ ಕೋಟಿ ರೂ. ಈ ಪೈಕಿ ೧೯೬೨-೬೩ನೆಯ ವರ್ಷಕ್ಕೆ ಅನ್ವಯಿಸಿದ ವೆಚ್ಚದ ಅಂದಾಜ್ ೪೨ ಕೋಟಿ ರೂ. ರಾಜ್ಯದ ಪ್ರತಿನಿಧಿಗಳು ಇತ್ತೀಚೆಗೆ ಯೋಜನಾ ಆಯೋಗದ ಪ್ರತಿನಿಧಿಗಳನ್ನೂ ಕೇಂದ್ರ ಸರ್ಕಾರದ ಮಂತ್ರಿಗಳನ್ನೂ ಕಂಡು ಈ ವರ್ಷದ ಯೋಜನಾ ಕಾರ್ಯಕ್ರಮಗಳ ಬಗ್ಗೆ ಪರಸ್ಪರ ಸಮಾಲೋಚನೆ ನಡೆಸಿದ್ದಾರೆ.

ಮೈಸೂರು ಸರ್ಕಾರದ ಮುಂದಿರುವ ಯೋಜನಾ ಕಾರ್ಯಕ್ರಮಗಳ ಪೈಕಿ ವಿದ್ಯುಚ್ಛಕ್ತಿಯ ಅಭಿವೃದ್ಧಿ ಕಾರ್ಯಕ್ರಮಗಳೂ ಮುಖ್ಯವಾಗಿವೆ. ಈ ವರ್ಷದಲ್ಲಿ ತುಂಗಭದ್ರಾ ಎಡದಂಡೆ ಯೋಜನೆಯ ಅಂಗವಾಗಿ ಪ್ರತಿಯೊಂದೂ ೯ ಮೇಗಾವಾಟ್ ಶಕ್ತಿಯುಳ್ಳಿರುವ ಎರಡು ಮತ್ತು ಭದ್ರಾ ಯೋಜನೆ ಅಂಗವಾಗಿ ೨ ಮೇಗವಾಟ್ ಶಕ್ತಿಯ ಒಂದು ವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರ ಕೆಲಸ ಮಾಡತೊಡಗುವುದು.

ಶರಾವತಿ ಹೈಡ್ರೋ-ಎಲೆಕ್ಟ್ರಿಕ್ ಯೋಜನೆಗೆ ಸಂಬಂಧಪಟ್ಟ ಕಾರ್ಯ ಬೇರೆ ಮುಂದುವರಿಯುತ್ತಿದೆ. ೮೯·೧ ಮೇಗಾವಾಟ್ ಶಕ್ತಿಯ ಎರಡು ಕೇಂದ್ರಗಳಲ್ಲೂ ೬೩-೬೪ರ ಹೊತ್ತಿಗೆ ವಿದ್ಯುಚ್ಛಕ್ತಿ ತಯಾರಿಕಾ ಕಾರ್ಯ ಆರಂಭವಾಗುವುದು. ೬೨—೬೩ರಲ್ಲಿ ಶರಾವತಿ ಯೋಜನೆಯ ಎರಡನೆಯ ಹಂತದ ಕಾರ್ಯ ಆರಂಭವಾಗುವುದು. ಈ ಹಂತದಲ್ಲಿ ಪ್ರತಿಯೊಂದೂ ೮೯·೧ ಮೇಗವಾಟ್ ಶಕ್ತಿಯಿರುವ ಒಟ್ಟು ಆರು ವಿದ್ಯುತ್ ತಯಾರಿಕಾ ವಿಭಾಗಗಳ ಸ್ಥಾಪನೆ ಸೇರಿರುತ್ತವೆ. ೬೪ರ ಹೊತ್ತಿಗೆ ಮೊದಲ ವಿಭಾಗ ಸಿದ್ಧವಾಗುವುದು.

ಈ ವರ್ಷದಲ್ಲಿ ಶರಾವತಿಯಿಂದ ಬೀರೂರಿನ ವರೆಗೆ ೧೦೮ ಮೈಲಿಗಳಷ್ಟು ದೂರದ 'ಟ್ರಾನ್ಸ್‌ಮಿಷನ್ ಲೈನ್'' ಹಾಕಲಾಗುವುದು. ಮುಂದಿನ ವರ್ಷ ಬೀರೂರಿನಿಂದ ಬೆಂಗಳೂರಿನ ವರೆಗೆ 'ಟ್ರಾನ್ಸ್‌ಮಿಷನ್ 'ಲೈನ್'' ಹಾಕುವ ಕಾರ್ಯ ನಡೆಯುವುದು.

ತುಂಗಭದ್ರಾ ಹೈಡ್ರೋ-ಎಲೆಕ್ಟ್ರಿಕ್ ಅಂಗವಾಗಿ ೯ ಮೇಗಾವಾಟ್‌ಗಳ ಶಕ್ತಿಯ ಮೂರು ವಿದ್ಯುತ್ ತಯಾರಿಕಾ ವಿಭಾಗಗಳಿರುವುವು. ಈ ಪೈಕಿ ಮೊದಲನೆಯದು ಈಗಾಗಲೇ ಕೆಲಸ ಮಾಡುತ್ತಿದೆ. ಪ್ರಶಸ್ತ ಸಾಲಿನಲ್ಲಿ ಇನ್ನೊಂದೂ ಸಿದ್ಧವಾಗುವುದು. ೬೩—೬೪ರ ಹೊತ್ತಿಗೆ ಮೂರನೆಯದೂ ಸಿದ್ಧವಾಗುವುದು.

೬೧—೬೨ರಲ್ಲಿ ಸುಮಾರು ೧೫೦ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ನಿರೀಕ್ಷೆ ಇದೆ. ೬೨—೬೩ರಲ್ಲಿ ಇನ್ನೂ ೧೦೦ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಕಾರ್ಯ ನಡೆಯುವುದು.

ನೀರಾವರಿ ಕಾರ್ಯಕ್ರಮಗಳು

ನೀರಾವರಿ ಯೋಜನೆಗಳ ಪೈಕಿ ತುಂಗಭದ್ರಾ ಮತ್ತು ಭದ್ರಾ ಯೋಜನೆಗಳ ಕಾರ್ಯಕ್ರಮ ಪ್ರಥಮ ಯೋಜನೆಯಲ್ಲಿಯೇ ಆರಂಭವಾಯಿತು. ತೃತೀಯ ಯೋಜನೆ ಕಾಲದಲ್ಲಿ ಈ ಎರಡೂ ಯೋಜನೆಗಳು ಪೂರ್ಣಗೊಳ್ಳುವುವು.

ಘಟಪ್ರಭಾ ಯೋಜನೆಯ ಎರಡನೆಯ ಹಂತದ ಕಾರ್ಯ ಮತ್ತು ಮಲಪ್ರಭಾ ಯೋಜನೆ, ಇವು ರಾಜ್ಯದ ತೃತೀಯ ಯೋಜನೆಯಲ್ಲಿ ಸೇರಿರುವ ಎರಡು ಮುಖ್ಯ ಯೋಜನೆಗಳಾಗಿವೆ

ತೃತೀಯ ಯೋಜನೆಯ ಕೊನೆ ಹೊತ್ತಿಗೆ ಮೈಸೂರು ರಾಜ್ಯದಲ್ಲಿ ಒಟ್ಟು ೯.೫ ಲಕ್ಷ ಎಕರೆಗಳಷ್ಟು ಭೂಮಿಗೆ ಹೊಸದಾಗಿ ನೀರಾವರಿ ಸೌಕರ್ಯ ಒದಗಿ ಬರುವುದು. ೬೨-೬೩ರಲ್ಲಿ ಈ ಪೈಕಿ ೪.೧ ಲಕ್ಷ ಎಕರೆಗಳಿಗೆ ನೀರಾವರಿ ಸೌಕರ್ಯ ಒದಗಿಸುವ ಗುರಿ ಇಟ್ಟುಕೊಳ್ಳಲಾಗಿದೆ.

ಮೈಸೂರಿನಲ್ಲಿ ನೀರಾವರಿ ಸೌಕರ್ಯಗಳ ಕೊರತೆ ಇದೆ. ನೀರಾವರಿ ಬಾವಿಗಳು ಮತ್ತು ಕೆರೆಗಳನ್ನು ತೋಡುವುದರಿಂದ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಲು ಸಾಕಷ್ಟು ಅವಕಾಶಗಳಿವೆ. ಸುಮಾರು ೧೪,೦೦೦ ಕೆರೆಗಳ ದುರಸ್ತು ಕಾರ್ಯ ನಡೆಯಬೇಕಾಗಿದೆ. ಬಾವಿಗಳನ್ನು ತೋಡಲು ಅನೇಕ ಕಡೆ ಬೇಡಿಕೆ ಇದೆ. ೨,೦೦೦ ಬಾವಿಗಳನ್ನು ತೋಡುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ.

ಬೀಜೋತ್ಪನ್ನ

೧೯೬೧—೬೨ರಲ್ಲಿ ಒಟ್ಟು ೫ ಬಿತ್ತನೆ ಬೀಜ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮವಿದ್ದು ಈ ಪೈಕಿ ಮೂರು ಕೇಂದ್ರಗಳು ಈಗಾಗಲೇ ಸ್ಥಾಪಿತವಾಗಿವೆ. ಇನ್ನುಳಿದ ಎರಡು ಕೇಂದ್ರಗಳ ಸ್ಥಾಪನೆ ಕಾರ್ಯಕೂಡ ನಡೆಯುತ್ತಿದೆ ಮುಂದಿನ

(೧೨ನೇ ಪುಟ ನೋಡಿರಿ)

ಕಾಂಗ್ರೆಸ್‌ಗೇ ಮತ, ಏಕೆ?

ಪರದಾಸ್ಯದ ಸಂಕೋಲೆಗಳಿಂದ ಭಾರತವನ್ನು ಮುಕ್ತಗೊಳಿಸಿ, ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ೭೭ ವರ್ಷಗಳ ಹಿರಿಯ ಮಹೋಜ್ವಲ ಪಕ್ಷ— ಕಾಂಗ್ರೆಸ್

ಸತ್ಯ ಅಹಿಂಸೆಗಳ ನೆಲೆಯಲ್ಲಿ ನ್ಯಾಯಸಮ್ಮತವಾಗಿ ಹೆಜ್ಜೆಯಿಡುವ ಆದರ್ಶ ಪಕ್ಷ – ಕಾಂಗ್ರೆಸ್.

ಯಾವ ಭೇದ ಭಾವನೆಗೂ ಆಸ್ಪದ ನೀಡದೆ ಸಮಸ್ತ ಜನತೆಗೂ ಸಮಾನಾವಕಾಶವನ್ನು ನೀಡುವ ನಿರ್ಧಾರಮಾಡಿ, ಅದರಂತೆ ನಡೆಯುತ್ತಿರುವ ಪಕ್ಷ— ಕಾಂಗ್ರೆಸ್.

ಪ್ರಜಾತಂತ್ರ ಪದ್ಧತಿಯ ಸಹಕಾರ ಮಾರ್ಗದ ಕಲ್ಯಾಣಕಾರಕ ಪ್ರಜಾರಾಜ್ಯವನ್ನು ಸ್ಥಾಪಿಸುವ ಗುರಿಯತ್ತ ದೃಢವಾಗಿ ಮುಂದುವರಿಯು ಪಕ್ಷ–ಕಾಂಗ್ರೆಸ್

ದೇಶದ ಎಲ್ಲ ಜಾತಿಮತಗಳನ್ನು ಸಮದೃಷ್ಟಿಯಿಂದ ನೋಡುವ ಮತ್ತು ನಡೆಯುವ ಸ್ಥಿರತೆಯುಳ್ಳ ಪಕ್ಷ—ಕಾಂಗ್ರೆಸ್

ಸಮಾಜವಾದೀ ಸ್ವರೂಪದ ಸಮಾಜವನ್ನು ರಚಿಸುವ ಗುರಿಯನ್ನು ಸಾಧಿಸುತ್ತ ನಡೆಯುತ್ತಿರುವ ಪಕ್ಷ— ಕಾಂಗ್ರೆಸ್.

ಸ್ತ್ರೀಯರಿಗೆ ಹಕ್ಕು ಬಾಧ್ಯತೆಗಳಲ್ಲಿ ಪುರುಷರಷ್ಟೇ ಸಮಾನಾಧಿಕಾರವಿತ್ತ ಪಕ್ಷ— ಕಾಂಗ್ರೆಸ್

ಶ್ರಮ ಜೀವನದ ಬಗ್ಗೆ ಗೌರವ, ಕೂಲಿಯಾಳುಗಳ ಕಡೆಗೆ ಕಲ್ಯಾಣ ದೃಷ್ಟಿ, ರೈತರ ಏಳಿಗೆಯಲ್ಲಿ ಆಸಕ್ತಿ ತೋರುತ್ತಿರುವ ಪಕ್ಷ— ಕಾಂಗ್ರೆಸ್

ಶಿಕ್ಷಣದ ಕ್ಷೇತ್ರವನ್ನು ಸುವಿಸ್ತೃತಗೊಳಿಸಿ ಸಾಕ್ಷರತೆಯ ಪ್ರಸಾರಕ್ಕಾಗಿ ಸೊಂಟಕಟ್ಟಿ ನಿಂತ ಪಕ್ಷ— ಕಾಂಗ್ರೆಸ್

ಹರಿಜನರ ಹಿತ ಸಂವರ್ಧನೆ ಮತ್ತು ಪರಿಶಿಷ್ಟ ವರ್ಗದವರ ಪ್ರಗತಿಗಾಗಿ ದುಡಿಯುತ್ತಿರುವ ಪಕ್ಷ— ಕಾಂಗ್ರೆಸ್

ಪಂಚಶೀಲಗಳ ಪ್ರಭಾವದಿಂದ ವಿಶ್ವವನ್ನೇ ಭಾರತದ ಕಡೆಗೆ ಆಕರ್ಷಿಸಿದ, ವಿಶ್ವ ಶಾಂತಿಗೆ ಹೊಂದಿಕೊಳ್ಳುವ ವಿದೇಶ ನೀತಿಯಿರುವ ಪಕ್ಷ – ಕಾಂಗ್ರೆಸ್.

ಪಂಚವಾರ್ಷಿಕ ಯೋಜನೆಗಳ ಮೂಲಕ ಸಣ್ಣ ದೊಡ್ಡ ಉದ್ಯಮಗಳ ಉನ್ನತಿಗಾಗಿ ದೃಢ ಹೆಜ್ಜೆಯಿಡುತ್ತಿರುವ ಪಕ್ಷ— ಕಾಂಗ್ರೆಸ್.

ಸಾಹಿತ್ಯ, ಸಂಸ್ಕೃತಿ, ಕುಶಲ ಕೈಗಾರಿಕೆಗಳ ಕ್ಷೇತ್ರದಲ್ಲಿ ನವೋತ್ಸಾಹ ತುಂಬುವಂತೆ ಶ್ರಮಿಸುತ್ತಿರುವ ಪಕ್ಷ – ಕಾಂಗ್ರೆಸ್.

ನಿರುದ್ಯೋಗ ನಿವಾರಣೆಯನ್ನು ಮಾಡುವುದಕ್ಕೂ ಅನ್ನ ಬಟ್ಟೆಗಳ ಸಮೃದ್ಧಿಯನ್ನು ಸಾಧಿಸುವುದಕ್ಕೂ ಹೋರಾಡುತ್ತಿರುವ ಪಕ್ಷ— ಕಾಂಗ್ರೆಸ್

ಸಂಚಾರ ಸಾರಿಗೆ-ಸಂಪರ್ಕಗಳ ಸೌಲಭ್ಯವನ್ನು ದೇಶದ ಜನತೆಯೆಲ್ಲರಿಗೂ ಒದಗಿಸಿ ಕೊಡಲು ವಚನ ಬದ್ಧವಾದ ಪಕ್ಷ— ಕಾಂಗೆಸ್.

ಸುಖ ಶಾಂತಿಗಳ ಸದಾಚರಣದ ಸರ್ವೋದಯದ ಉತ್ತಮ ಜೀವನಕ್ಕೆ ಕಾರಣೀ ಭೂತವಾದ ಪಕ್ಷ— ಕಾಂಗ್ರೆಸ್

ಇಂತಹ ಅತ್ಯುನ್ನತ, ಅತ್ಯುದಾತ್ತ ಧ್ಯೇಯ ಧೋರಣೆಗಳಿಗೆ ಹೆಸರಾದ ಕಾಂಗ್ರೆಸ್‌ಗೆ ಪಕ್ಷದ ಅಭ್ಯರ್ಥಿಯನ್ನು ಮತವಿತ್ತು ಆರಿಸಿಕೊಳ್ಳುವುದು— ಭಾರತೀಯ ಜನತೆ.

ಕಾಂಗ್ರೆಸ್‌ಗೆ ಮತವಿತ್ತು ನಿಮ್ಮ ಭವಿಷ್ಯವನ್ನು ಸುಭದ್ರಗೊಳಿಸಿರಿ.

ಕಾಂಗ್ರೆಸ್‌ಗೆ ನೀಡುವ ಮತ

ರಾಷ್ಟ್ರಕ್ಕೆ ತರುವುದು ಹಿತ.



ಕುರುಡಿಯ ಕಾರಭಾರ

ಶ್ರೀ ಗೋರಾ।

ಶಂಕರ ಮುದುಕನಾಗಿದ್ದರೂ ತನ್ನ ಗದ್ದೆಯಲ್ಲಿ ಅತ್ಯುತ್ಸಾಹದಿಂದ ದುಡಿಯುತ್ತಿದ್ದ. ಈ ವರ್ಷ ಸುದೈವದಿಂದ ಮೋಡಗಳು ಉದಾರವಾಗಿ ಅವಶ್ಯಕತೆ ಬಿದ್ದಾಗ ನೀರು ಸುರಿಸಿದ್ದುವು ಇದರಿಂದ ಬೆಳೆಯು ಹುಲುಸಾಗಿ ಕೈಗೆ ಬಂದಿತ್ತು ಸುಗ್ಗಿಯ ಸಾಗುವಳಿಗಾಗಿ ಆತ ಗದ್ದೆಯನ್ನು ಉಳುತ್ತಿದ್ದ ಎಡಗೈಯಲ್ಲಿ ನೇಗಿಲ ಹಿಡಿ ಹಿಡಿದು, ಬಲಗೈಯಲ್ಲಿ ಆಗಾಗ ಎತ್ತುಗಳ ಬಾಲವನ್ನು ನೇವರಿಸುತ್ತ ಅವುಗಳ ವೇಗವು ಏಕಪ್ರಕಾರವಿರುವಂತೆ ಕೇಲಿ ಕೊಡುತ್ತಿದ್ದ. ತಾನು ಎತ್ತುಗಳೊಡನೆ ಮುಂದಕ್ಕೆ ನಡೆಯುತ್ತಿದ್ದಂತೆಯೇ ಹತ್ತಿರದಲ್ಲಿಯೇ ನೇಜಿ ನೆಡುತ್ತಿದ್ದ ತನ್ನ ಪತ್ನಿ ಪದ್ಮಳ ಕಡೆಗೆ ಅರ್ಥವತ್ತಾದ ನಗುವಿನಿಂದ ಕೂಡಿದ ಮುಖವನ್ನು ತಿರುಗಿಸುತ್ತಿದ್ದ. ಆಕೆಯು ಸೆರಗನ್ನು ಸೊಂಟಕ್ಕೆ ಬಿಗಿದು, ಬಟ್ಟೆಯನ್ನು ಮೊಣಗಂಟಿನ ಮೇಲೆ ಎತ್ತಿ ಕಟ್ಟಿ, ನೇಜಿಯ ಸೂಡಿಯನ್ನು ಬಿದಿರಿ, ನಾಲ್ಕೈದು ಭತ್ತದ ಗಿಡಗಳನ್ನ ಪ್ರತ್ಯೇಕಿಸಿ ಉತ್ತು ಹದಮಾಡಿದ ಗದ್ದೆಯ ಭಾಗದಲ್ಲಿ ನಾಟುತ್ತಿದ್ದಳು. ಮಣ್ಣಿನ ಮಕ್ಕಳಾದ ಅವರು ತಮ್ಮ ದುಡಿಮೆಯಲ್ಲಿಯೇ ಸ್ವರ್ಗಸುಖ ಕಾಣುತ್ತಿದ್ದರು

ಸ್ವಲ್ಪ ಸಮಯ ಕಳೆಯಿತು. ಇಬ್ಬರ ಪಾದಗಳೂ ಶಿಥಿಲವಾದುವು, ಬಟ್ಟೆ ಬೆವರಿನಿಂದ ತೊಯ್ದು ಹೋಯಿತು ಕೈಗಳು ತುಸು ಕಂಪಿಸತೊಡಗಿದುವು. ಹೊಟ್ಟೆಯೊಳಗೆ ಹನ್ನೆರಡು ಒನಕೆಗಳ ಬಡಿದಾಟ ಪ್ರಾರಂಭವಾಯಿತು ಇಬ್ಬರೂ ಅನತಿ ದೂರದಲ್ಲೇ ಇರುವ ತಮ್ಮ ಮನೆಯಿಂದ ಬರುವ ದಾರಿಯನ್ನೇ ಪ್ರತೀಕ್ಷಿಸುತ್ತಿದ್ದರು ಆ ದಾರಿಯಲ್ಲಿ ಯಾರೂ ಬಾರದೆ ಇರುವುದನ್ನು ಕಂಡು, ನಿರಾಶರಾಗಿ ಮರಳಿ ತಮ್ಮ ಕಾರ್ಯದಲ್ಲಿ ತೊಡಗಿದರು. ತುಸು ಹೊತ್ತಾದ ಬಳಿಕ ಪದ್ಮ ನೆಟ್ಟಗೆ ನಿಂತು, ನೆಟಿಕೆ ಮುರಿದುಕೊಂಡು ಆಕಾಶದತ್ತ ನೋಡಿ ಹೇಳಿದಳು— "ನೇಸರು ಬಹಳ ಮೇಲಕ್ಕೆ ಬಂತು ಇನ್ನೂ ಲಲ್ಲಿ ಗಂಜಿಯೂಟ ತರಲಿಲ್ಲ?"

ಶಂಕರನು ಧ್ವನಿಗೂಡಿಸಿದ— 'ಹೌದು. ಇಷ್ಟು ಹೊತ್ತಿನೊಳಗೆ ಬರಬೇಕಿತ್ತು ಏನಾಯಿತೆಂದು?"

ಮಗಳ ಕರ್ತವ್ಯ ಪರಾಯಣತೆಯು ಪ್ರಶಂಸೆ ತಾಯಿತಂದೆಗೆ ಒಳಗಿಂದೊಳಗೆ ಸಂತೋಷವನ್ನುಂಟುಮಾಡಿದರೂ ತನಗಾದ ಪ್ರಸನ್ನತೆಯನ್ನವರೆಂದೂ ಪ್ರಕಟಿಸಲಾರರು ಎಂತಲೇ ಪದ್ಮ ನುಡಿದಳು "ಹೌದು, ನಿಮ್ಮ ಮಗಳು ಬಹಳ ಒಳ್ಳೆಯವಳು ಪಾಪ ಇಂದು ಬೆಟ್ಟ ನಡುದಾರಿಯಲ್ಲಿ ಬಿದ್ದು ಆಕೆಯ ಬರವನ್ನು ತಡೆದಿರಬೇಕು ಆದರೆ, ಒಂದು ಮಾತು ತಿಳಿದುಕೊಳ್ಳಿ ನಿಮ್ಮ ಮಗಳ ಮನಸ್ಸು ಆಟ ಓಟಗಳಲ್ಲಿ ಹರಿಯುವಷ್ಟು ಕೆಲಸ ಕಾರ್ಯಗಳತ್ತ ಹರಿಯುವುದಿಲ್ಲ ನನ್ನ ಮಾತನ್ನಂತೂ ನೀವು ಕೇಳುವುದಿಲ್ಲ; ನಾನು ಅದೆಷ್ಟು ಬಾರಿ ನಿಮ್ಮೊಡನೆ ಹೇಳಿದೆ … ."

"ಏನೆಂದರೆ, ಆಕೆಯಲ್ಲಿ ಗದರಿಸುತ್ತೇನೆ; ಬೆದರಿಸುತ್ತೇನೆ ಹೊಡೆಯುತ್ತೇನೆ ಎಂದು ಅಲ್ಲವೆ? ಆಕೆಯ ಪ್ರಾಯವನ್ನಾದರೂ ಗಮನಿಸು ಇದೇನು ಆಕೆಯು ಆಡುತ್ತಿರಬೇಕಾದ ಸಮಯವಲ್ಲವೆ? ನಿಜ ನುಡಿಯುವುದಾದರೆ, ಅವಳು ರಾಣಿಯಾಗುವ ಯೋಗ್ಯತೆಯಿದ್ದವಳು ಪಾಪ, ಒಬ್ಬ ಬಡ ರೈತನ ಮಗಳಾಗಿ ಹುಟ್ಟಿ ಆ ಯೋಗ್ಯತೆಯನ್ನೆಲ್ಲ ಕಳೆದುಕೊಂಡಳು"

'ಸಾಕು, ಸಾಕು ಕುಶಾಲು ಮಾಡಬೇಡಿ ಆಕೆ ರಾಣಿಯಲ್ಲ ಮಹಾರಾಣಿಯಾಗತಕ್ಕವಳು, ನನ್ನ ಮಾತನ್ನಂತೂ ಆಕೆ ಗಮನಿಸುವುದಿಲ್ಲ, ಇನ್ನು ನಿಮ್ಮ ಹೊಗಳಿಕೆಯಿಂದ ಗಾಳಿ ತುಂಬಿದ ಪುಗ್ಗೆಯಂತಾಗಿ ಬಿಡುತ್ತಾಳೆ'

ಶಂಕರ ಏನನ್ನೂ ಇದಕ್ಕೆ ಪ್ರತ್ಯುತ್ತರವೆಂದು ಹೇಳಲಿಲ್ಲ ಪದ್ಮಳಾದರೂ ಒಮ್ಮೆ ದಾರಿಯ ಉದ್ದಕ್ಕೆ ನೋಟ ಹಾಯಿಸಿ, "ಮನೆಗೆ ಹೋಗಿ ನೋಡಿ ಬರುತ್ತೇನೆ, ನಿಮ್ಮ ರಾಣಿಯಾಗುವ ಹುಡುಗಿ ಎಲ್ಲಿ ದೂಳಾಟ ಆಡ ಹೊರಟಿದೆಯೆಂದು" ಎಂದು ಗದ್ದೆಯಿಂದ ಮೇಲೆ ಬಂದು, ಆ ಕೆಸರು ನೀರಲ್ಲೇ ಕೈಕಾಲು ತೊಳೆದ ಶಾಸ್ತ್ರ ಮುಗಿಸಿ ಮನೆಯ ಮಾರ್ಗ ಹಿಡಿದಳು. ಶಂಕರ ಹಿಂದಿನಿಂದ ಕೂಗಿ ಹೇಳಿದ— 'ಪದ್ದೂ, ಇನ್ನು ಆಕೆಯ ಮೇಲೆ ಕೈಯೆತ್ತಬೇಡ, ಮತ್ತೆ,'

"ಕೈಯೇಕೆ ಯೆತ್ತಬೇಕು? ರಾಣಿಯ ಕಾಲು ಹಿಡಿದು ಪೂಜೆ ಮಾಡುತ್ತೇನೆ," ಆವೇಶಪೂರ್ವಕವಾಗಿ ಹೇಳುತ್ತ ಹಿಂದೂ ನೋಡದೆ ಆಕೆ ಮುಂದುವರಿದಳು. ಶಂಕರ ಅಲ್ಲೇ ಗದ್ದೆಯ ನಡುವಲ್ಲಿ ನಿಂತವನು ನಿಂತುಕೊಂಡೇ ಉಳಿದ,

ಪದ್ಮ ಒಗು ಒಗೆಯಿಂದ ಗುಡಿಸಲ ಬಳಿ ಬಂದಾಗ, ಬಾಗಿಲು ಹಾಕಿರುದುದನ್ನು ಕಂಡು ಮಗಳು ಮನೆಯಲ್ಲೇ ಇರುವಳೆಂದು ಊಹಿಸಿದಳು "ಲಲ್ಲಿ, ಸತ್ತು ಹೋದೆಯೇನ? ಏತಕ್ಕೆ ಗಂಜಿ ತರಲಿಲ್ಲ? ಮಾತಾಡುವುದಿಲ್ಲವೇಕೆ?' ಗದರಿಕೆಯ ದನಿಯಲ್ಲಿ ಕೇಳಿದಳು ಒಳಗಣಿಂದ ಯಾವುದೇ ಉತ್ತರ ಬಾರದಿರಲು ಪದ್ಮ ಅಧೀರಳಾದಳು ಒಳಹೊಕ್ಕು ನೋಡಿದಳು ಲಲ್ಲಿ ಬಿಡಿಸಿದ ಚಾಪೆಯಲ್ಲಿ ಒರಗಿದ್ದಳು, ಕಣ್ಣುಗಳನ್ನು ತೆರೆದೂ ಇದ್ದಳು ಪದ್ಮಾ ಮಗಳ ಹಣೆಗೆ ಕೈಯಿಕ್ಕಿ ನೋಡಿದಳ– ಕಾವಲಿಯಂತದು ಕಾಯುತ್ತಿತ್ತು' ಕಟ್ಟಿಕೊಂಡಿದ್ದ ತುಂಬಿದ ಸಿಟ್ಟು ಅಲ್ಲಿಯೇ ಆರಿಹೋಯಿತು ಆಕೆಯು ಅಲ್ಲಿಯೇ ಕುಸಿದು ಕುಳಿತಳು ತನ್ನ ಏಕಮಾತ್ರ ಪುತ್ರಿ ಲಲಿತೆಯು ಜ್ವರದಿಂದ ನರಳುತ್ತಿದ್ದಳು. ತುಸು ಧೈರ್ಯತಂದು ಕೊಂಡು, ಅಂಗಾಂಗಗಳಲ್ಲಿ ಕೈಸವರಿದಾಗ, ಲಲ್ಲಿಗೆ ಜ್ವರ ಮಾತ್ರ ಬಂದುದಲ್ಲ, ಮೈಯಲ್ಲಿ ಮೈಲಿಗೆಯ ಚಿಕ್ಕ ಪುಟ್ಟ ಗುಳ್ಳೆಗಳೂ ಇದ್ದಿರುವುದ ಕಂಡು ಬಂತು ಮಲಗಿದ್ದ ಲಲ್ಲಿಯ ಕಣ್ಣುಗಳು ಕೆಂಪಾಗಿದ್ದುವು, ಅವುಗಳಲ್ಲಿ ನೀರು ತುಂಬಿ ಬಂದಿತ್ತು ಆಕೆಯ ತುಟಿಗಳು ಕಂಪಿಸುತ್ತಿದ್ದುವು ಆದರೂ ಪ್ರಯತ್ನ ಪೂರ್ವಕವಾಗಿ ಹೇಳಿದುವು. "ನನ್ನನ್ನು ಕ್ಷಮಿಸಮ್ಮ ಇಂದು ನನ್ನಿಂದಾಗಿ ನೀನು ಮತ್ತು ಅಪ್ಪ ಉಪವಾಸ ಬೀಳಬೇಕಾಯಿತು,,

"ಅಯ್ಯೋ ಮಗು, ನಿನ್ನಿಂದೇನಾಯಿತು? ಮೈಲಿಗೆ ಅಂಟಿದೆ; ಕೆಲವು ದಿನ ಆಡ್ಡಾಡಬೇಡ ಜ್ಞಾಂ,, ತಾಯಿಯು ಸ್ನೇಹಭರಿತ ದೃಷ್ಟಿಯಿಂದ ಮಗಳನ್ನು ನೋಡುತ್ತ ಆಕೆಯ ಕಣ್ಣೀರನ್ನು ಒರಸಿದಳು.

"ಅಮ್ಮ ,, ಲಲ್ಲಿಯು ಮೆತ್ತಗೆ ಕರೆದಳು

"ಏನು ಮಗೂ ?,,

"ದಾಕು ಹಾಕಿಸಿಕೊಂಡವರಿಗೂ ಮೈಲಿಗೆ ಅಂಟುವುದೆ?,

'ನಾನು ಹೇಗೆ ಹೇಳಲಿ? ಇದು ಪ್ರಕೃತಿಯ ಕೋಪ ಎಲ್ಲರೂ ಸಹಿಸಿಕೊಳ್ಳಬೇಕಾಗಿದೆ"

"ನಾನಿದನ್ನು ಒಪ್ಪಲಾರೆ ಮನುಷ್ಯನು ವೈಜ್ಞಾನಿಕ ಸಹಾಯದಿಂದ ಪ್ರಕೃತಿಯ ಬಹಳಷ್ಟು ಕೋಪತಾಪಗಳನ್ನು ಗೆದ್ದಿದ್ದಾನೆ ಅಜ್ಞಾನ ಮತ್ತು ಅಂಧ ವಿಶ್ವಾಸದ ಕೋಪ ಇಲ್ಲವೇ ಪರಿಣಾಮವಿದು, ಅಮ್ಮ'

ಲಲ್ಲಿಯ ಮಿದುಳಿಗೆ ಇಂತಹ ಜ್ಞಾನ ಹೇಗೆ ಹೊಕ್ಕಿತು ಎಂದು ಪದ್ಮ ತಿಳಿದಿರಲಿಲ್ಲ, ಇದನ್ನು ತಿಳಿಯುವ ಕುತೂಹಲದಿಂದ ಕೇಳಿದಳು—"ಇದೆಲ್ಲವನ್ನೂ ನೀನು ಎಲ್ಲಿಂದ ಅರಿತುಕೊಂಡು ಬಂದೆ?"

"ಮೋಹನನು ಎಲ್ಲವನ್ನೂ ಹೇಳಿದ ಅವನ ಮನೆಯಲ್ಲಿ ಯಾರಿಗೂ ಸಿಡುಬು ಅಂಟಲಿಲ್ಲ ಇದಕ್ಕೆ ದಾಕು ಹಾಕಿಸಿಕೊಂಡುದೇ ಕಾರಣ ಯಾರು ದಾಕು ಹಾಕಿಸಿಕೊಳ್ಳಲಿಲ್ಲವೋ ಅವರು ರೋಗಕ್ಕೆ ಬಲಿಯಾಗಿ, ಅದರ ಫಲವನ್ನು ಅನುಭವಿಸುತ್ತಿರುತ್ತಾರೆ"

ಪದ್ಮ ಕಣ್ಣುಗಳನ್ನು ಅಗಲಿಸಿ ಲಲಿತೆಯ ಮುಖವನ್ನೇ ನೋಡ ತೊಡಗಿದಳು ಆಕೆಯ ವದನಾರವಿಂದವು ಜ್ವರದಿಂದಾಗಿ ವಿಹ್ವಲಿತವಾಗಿದ್ದರೂ ಒಂದು ಅಜ್ಞಾತ ಗಂಭೀರ ಭಾವದಿಂದ ಕೂಡಿತ್ತು 'ನಿನ್ನೆ ಮತ್ತು ತಂದೆಯವರ ಹಠದಿಂದಾಗಿಯೇ ನನಗೀ ಕಷ್ಟವನ್ನು ಅನುಭವಿಸಬೇಕಾಯಿತು ನಾನು ಗುಣಮುಖಳಾದೊಡನೆಯೇ ದಾಕು ಹಾಕಿಸಿಕೊಳ್ಳುತ್ತೇನೆ,, ಎಂದ ಲಲ್ಲಿ ಸಮ್ಮತಿಗಾಗಿ ತಾಯತ್ತ ಹೊರಳಿದಳ.

'ಸರಿಯಮ್ಮ, ಹಾಗೆಯೇ ಮಾಡು ಈಗ ಮಲಗಿರು,, ಎಂದು ಪದ್ಮ ಎದ್ದಳ, ಮನೆಯ ಹೊರಗಡೆ ಬಂದಳು ಆಕೆಯ ಹೃದಯವಾದರೂ ಧಗಧಗವೆನ್ನು

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder
Late Sri A B Shetty
Former Minister for Public Health, Govt of Madras & Govt of Mysore

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು
ಎಸ್. ಗೋಪೀಚಂದ ರಾವ್, ವಿದ್ವಾನ್
ಬಿ ಶಾಮರಾಯ ಶೆಟ್ಟಿ, ಬಿ ಎ, ಎಲ್ ಟಿ

ಸಂಚಾಲಕ ಸಂಪಾದಕರು
ಕೆ ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50

ಚಂದಾ
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 6 75
ಬಿಡಿಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ ಬಡ್ಡಿ ಸೇಕಡಾ 5ರಂತೆ. ರೂ 87–00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ 100–00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು ಬಡ್ಡಿ ಸೇಕಡಾ 5¼ರ ವರೆಗೆ

ತಾ 1–4–1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ

THE PANGAL NAYAK BANK. LTD.
Estd: 1920

ರವೀಂದ್ರವಾಣಿ—ಲೇಖಾಂಕ ೩೫. ವಿಶ್ವಕವಿ ರವೀಂದ್ರನಾಥ ಟಾಗೋರ್

ಅನಂತದ ಸಾಧನೆ

ಅನುವಾದಕರು: ಕೆ ಎನ್. ಭಟ್, ಶಿರಾಡಿಪಾಲ್.

ನಾನು ಒಂದು ದಿನ ಮಬ್ಬುಗತ್ತಲೆಯ ವೇಳೆ, ಒಂದು ತೀರ್ಥ ಸ್ಥಳದಲ್ಲಿ ಸೇರಿದ್ದ ಒಂದು ಗುಂಪಿನೆಡೆಯಿಂದ ಕೇಳಿದ ಒಂದು ಗೀತೆ. ಅದನ್ನು ನಾನೆಂದೂ ಮರೆಯಲಾರೆ. ಆ ಗೀತದ ಮುಖ್ಯ ಭಾಗ—'ಹೇ ಮಾತೇ! ನನ್ನನ್ನು ಉದ್ಧರಿಸಿ ಮುನ್ನಡೆಸು!, ಎಂದಿಷ್ಟೇ ಆಗಿತ್ತು.

ನಮ್ಮ ನಿತ್ಯ ಜೀವನದ ಕಾರ್ಯಕಲಾಪಗಳ ನಡುವೆ ಈ ರೀತಿಯ ಪ್ರಾರ್ಥನೆ ಸದಾ ಕೇಳಿಸುತ್ತಲೇ ಇರುವುದು, ಗಾಡಿ ಹೊಡೆಯುವವನೂ ಕೂಡ ಹೀಗೆಯೇ ಹೇಳುತ್ತಿರುತ್ತಾನೆ. ಶೆಟ್ಟಿ ವ್ಯಾಪಾರವಾಡುವಾಗಲೂ ಸಹ ಹೀಗೆಯೇ ಭಾವಿಸುತ್ತಿರುತ್ತಾನೆ. ಹಾಗಾದರೆ, ಎಲ್ಲರೂ ಹೀಗೆ ಹೇಳುತ್ತಿರುವುದರ ಅರ್ಥವೇನು? ನಾವು ಮಾಡುತ್ತಿರುವ ಕೆಲಸದ ಮೂಲಕ ನಮ್ಮ ಧ್ಯೇಯಸ್ತಂಭದ ವರೆಗೆ ನಮಗೆ ತಲಪುವುದಕ್ಕಾಗುವುದಿಲ್ಲ! ಎಂಬ ಅನುಭವದಿಂದ ನಾವು ಹೀಗೆ ಹೇಳುತ್ತಿರುತ್ತೇವೆಯೇ? ಅಥವಾ ತನ್ನ ಆಟದ—ಬೊಂಬೆಯಿಂದ ತೃಪ್ತಿಹೊಂದದ-'ನನಗೆ ಇದು ಬೇಕು' ಎಂದು ಒಂದು ಸಲ ಹೇಳಿದರೆ, – ಮತ್ತೊಂದು ಸಲ 'ನನಗೆ ಅದು ಬೇಕು' ಎಂದು ಹೇಳುತ್ತ ಅಳುತ್ತ ಹಟ ಹಿಡಿಯುವ ಅಬೋಧ ಬಾಲಕನಂತೆ, ನಮ್ಮ ಹೃದಯವು ಅಸಂತುಷ್ಟವಾಗಿರುವುದೇ? ಅದಕ್ಕಾಗಿಯೇ "ನನ್ನನ್ನು ಉದ್ಧರಿಸಿ ಮುನ್ನಡೆಸು!" ಎಂಬ ಉದ್ಗಾರ ಸದಾ ಹೃದಯದಿಂದ ಹೊರಡುತ್ತಿರುವುದೇ? ಹಾಗಿದ್ದರೆ ನಮ್ಮ ಅಪೇಕ್ಷೆ ಏನು? ನಾವು ಮುಂದೆ, ಮುಂದೆ ಎಂದರೆ, ಎಲ್ಲಿಗೆ ಯಾವ ಅಂತಹ ಸ್ಥಳಕ್ಕೆ ಹೋಗಲು ಅಪೇಕ್ಷಿಸಿ—"ನನ್ನನ್ನು ಪಾರು ಮಾಡಿ ಮುನ್ನಡೆಸು!" ಎಂದು ಹೇಳುತ್ತಿದ್ದೇವೆ? ಹಾಗಾದರೆ ನಮ್ಮ ಸಮೀಪವಿರುವ ಅಥವಾ ನಮಗೆ ತಿಳಿಯದೆ ಇರುವ, ಒಂದು ಪ್ರತ್ಯೇಕವಾದ ಸ್ಥಳವನ್ನು ನಾವು ಅಪೇಕ್ಷಿಸುತ್ತ ಇರುತ್ತೇವೆಯೇ? ಅಂತಾದರೆ ನಾವು ಇಚ್ಛಿಸುವ ಆ ಸ್ಥಾನ, ಈ ಪ್ರಪಂಚದಿಂದ ಬಹು ದೂರವಾಗಿದೆಯೆ? ಅಥವಾ ಪ್ರಪಂಚದೊಳಗೇ ಇರುತ್ತಿರುವುದೇ? ಹಾಗಲ್ಲವಾದರೆ ನಾವು ಈ ಜೀವನ ಜವಾಬ್ದಾರಿಯಿಂದ ಬಿಡುಗಡೆ ಹೊಂದಲು, ಯೂ, ಎಲ್ಲಾ ಕಾರ್ಯಗಳಿಂದಲೂ ಮುಕ್ತರಾಗಲು, ಅಪೇಕ್ಷಿಸಿ "ನನ್ನನ್ನು ಪಾರು ಮಾಡಿ ಮುನ್ನಡೆಸು!" ಎಂದು ಪ್ರಾರ್ಥಿಸುತ್ತೇವೆಯೇ? ಇಲ್ಲ! ನಾವು ನಮ್ಮ ಕೆಲಸಗಳನ್ನು ಮಾಡುತ್ತ ಇದ್ದುಕೊಂಡು, ನಮ್ಮ ಉದ್ದೇಶವೇನೆಂಬುದನ್ನು ಯೋಚಿಸುತ್ತಿರುತ್ತೇವೆ. 'ನಮ್ಮನ್ನು ಪಾರು ಮಾಡಿ ಮುನ್ನಡೆಸು!' ಎಂಬ ವಾಕ್ಯವು ನಮ್ಮ ಮುಖದಿಂದ ಹೊರಬೀಳುವಾಗಲೂ, ನಮ್ಮ ಹಸ್ತಗಳು ಕೆಲಸ ಮಾಡುತ್ತಲೇ ಇರುತ್ತವೆ.

"ಓ, ಆನಂದ ಮಹಾ ಸಾಗರನೇ! ನಿನ್ನ ಆಚೆ ತಟವೂ ಈಚೆ ತಟವೂ ನಿನ್ನಲ್ಲಿಯೇ ಕೂಡಿ ಒಂದಾಗಿ ಹೋಗಿವೆ. 'ಈ ಬದಿ, ಮತ್ತು ಆ ಬದಿ' ಎಂಬ ಭೇದಭಾವ ನಿನ್ನಲ್ಲಿ ಉಳಿದಿಲ! ಆದರೆ, ಇದನ್ನು ಹೀಗೆ ಹೇಳುತ್ತಿರುವ ನನಗೆ ನಿಜವಾಗಿಯೂ, ನಿನ್ನ ಆ ತಟ (ಆಚೆಯ ಕೊನೆ)ದ ಜ್ಞಾನವನ್ನು—ಹೊಂದಲು ಸಾಧ್ಯವಾಗಿಲ್ಲ. ಆ ಅನುಭವವೂ ಇಲ್ಲ ಈ ಕಾರಣ ನನ್ನ ಜಿಜ್ಞಾಸೆಯಿಂದ ಕೂಡಿದ ಮನಸ್ಸು ನಿನ್ನ ಆತಟದ ಜ್ಞಾನವನ್ನು ಹೊಂದಲು, ವ್ಯಾಕುಲಗೊಂಡಿದೆ. ನನ್ನ ದೃಷ್ಟಿಯಲ್ಲಿ, ನನ್ನ ಪ್ರೇಮದಲ್ಲಿ, ||ಅದು-ಮತ್ತು ಇದು|| ಯಾವಾಗ ಏಕೈಕವಾಗುವುದೋ ಆಗ ಮಾತ್ರ ನನ್ನ ಈ ಚಿಂತೆ-ದೂರವಾದೀತು. ನನ್ನ ಈ "ನಾನು" ಎಂಬುದು ನನ್ನದೆಂದು ನನಗೆ ತಿಳಿದಿರುವ, ನನ್ನ ಮನೆಗಾಗಿ ಕೆಲಸ ಮಾಡುತ್ತಿದೆ. ಆದರೆ ನನ್ನದಾಗಿರುವ ಈ ಮನೆ "ನಿನ್ನದು" ಎಂದು ತಿಳಿದುಕೊಳ್ಳುವ ವರೆಗೆ ಈ ಕಷ್ಟಗಳಿಗೆ ಅಂತ್ಯವಿರಲಾರದು, ಹಾಗೆ ಭಾವಿಸಿಕೊಳ್ಳುವ ವರೆಗೆ-ನಮ್ಮ ಹೃದಯದಿಂದ—"ನನ್ನನ್ನು ಪಾರು—ಮಾಡಿ ಮುನ್ನಡೆಸು!" ಎಂಬ ಉದ್ಗಾರ ಹೊರಡುತ್ತಲೇ ಇರುವುದು. ಆದರೆ ಹೀಗೆ ಹೇಳುವ ವ್ಯಕ್ತಿಯು, "ನನ್ನ ಎಲ್ಲಾ ಕಾರ್ಯಗಳೂ ನಿನ್ನ ಕಾರ್ಯಗಳೇ ಆಗಿವೆ." ಎಂದು ಯಾವಾಗ ಹೇಳಬಲ್ಲವನಾಗುತ್ತಾನೋ, ಆಗ ಆತನು ಸ್ವತಃ ಉದ್ಧಾರಹೊಂದಿ ಆತನ ಇಚ್ಛೆಯಂತೆ ಮುಂದೆ ಹೋಗಬಹುದು.

ಈ "ನನ್ನ"ದೆಂಬ ಮನೆಯನ್ನು "ನಿನ್ನ"ದಾಗಿ ಮಾಡದೆ ಇದ್ದರೆ, ನಾನು ನಿನ್ನೊಡನೆ ಸೇರಿಕೊಳ್ಳುವುದಾದರೂ, ಹೇಗೆ ಸಾಧ್ಯ? ಈ "ನನ್ನದು" ಎಂಬ ಕೆಲಸವನ್ನು "ನಿನ್ನ ಕೆಲಸ"ವನ್ನಾಗಿ ಮಾಡದ ಹೊರತು, ನಾನು ನಿನ್ನೊಡನೆ ಕೂಡಿಕೊಳ್ಳುವುದು ಹೇಗೆ? ಒಂದು ವೇಳೆ ನಾನು ನನ್ನ ಮನೆಯನ್ನು ತ್ಯಜಿಸಿಬಿಟ್ಟರೆ, ನಿನ್ನ ಮನೆಯನ್ನೂ ಅದರೊಡನೆಯೇ ತ್ಯಜಿಸಿದಂತಾಗುವುದು. ನನ್ನ ಮನೆಯನ್ನು ಬಿಟ್ಟ ನಾನು ನಿನ್ನ ಮನೆಗೆ ತಲುಪಲಾರೆನು! ಒಂದು ವೇಳೆ ನಾನು, ನನ್ನದೆಂಬ ನಾನು ಮಾಡುವ, ಕೆಲಸವನ್ನು ಬಿಟ್ಟುಬಿಟ್ಟರೆ, ನಿನ್ನ ಕೆಲಸವೂ ಪೂರ್ಣವಾಗಿ ಕೈಬಿಟ್ಟು ಹೋಗುವುದು, ನಾನು ಮಾಡಬೇಕಾದ ಕೆಲಸವನ್ನು ಬಿಟ್ಟುಬಿಟ್ಟರೆ, ಆ ಬಳಿಕ ನಾನು ನಿನ್ನ ಕೆಲಸವನ್ನೂ ಮಾಡಲಾರದವನಾಗುತ್ತೇನೆ. ಏಕೆಂದರೆ—ನಾನು ನಿನ್ನೊಳಗೆ ವಾಸವಾಗಿರತಕ್ಕವನು; ನೀನು ನನ್ನೊಳಗೆ ವಾಸವಾಗಿರುವವನು! ಅಂದರೆ, ನೀನು ನನ್ನ ಹೊರತು—ನಾನು ನಿನ್ನ ಹೊರತು, ಇರಲಾರೆವು!"

ಈ ಕಾರಣದಿಂದ ತನ್ನ ಮನೆ, ಮತ್ತು ತನ್ನ ಕೆಲಸದಲ್ಲಿ ಬಂಧಿಸಲ್ಪಟ್ಟಿರತಕ್ಕವರು, "ನನ್ನನ್ನು ಪಾರುಮಾಡಿ ಉದ್ಧರಿಸು" ಎಂಬ ಈ ಪ್ರಾರ್ಥನೆ ಮಾಡುತ್ತಾರೆ. ಏಕೆಂದರೆ, ಆ ಆನಂದ ಮಹಾಸಾಗರವೂ ಇಲ್ಲೇ ಇರುವುದು. ನಾವು ಅದನ್ನು ದಾಟಿ ಅದರ ಆಚೆ ತಟಕ್ಕೆ ತಲುಪಬೇಕಾದ ಅದರ ಈಚೆಯ ತಟವೂ ಇಲ್ಲಿಯೇ ಇರುವುದು.

— ಸಂಪೂರ್ಣ —

ಇತಿ "ಸಾಧನಾ ಗ್ರಂಥಾನುವಾದಂ ಸಮಾಪ್ತಂ"

ದೇಶನಿಷ್ಠ ಕಾಂಗ್ರೆಸನ್ನೇ ಆರಿಸಿಕೊಳ್ಳಿರಿ

ಭಾರತದ ಲೋಕ ಸಭೆಯಲ್ಲಿ ೨೬ ಮಂದಿ ಸದಸ್ಯರು ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಾರೆ. ಇವುಗಳಲ್ಲಿ ೧೯೬೨ರಲ್ಲಿ ನಡೆದ ಚುನಾವಣೆಯಲ್ಲಿ ೨೩ ಸ್ಥಾನಗಳನ್ನು ಕಾಂಗ್ರೆಸ್, ಒಂದು ಸ್ಥಾನವನ್ನು ಪ್ರಸವಾ ಮತ್ತು ಎರಡು ಸ್ಥಾನಗಳನ್ನು ಇತರ ಪಕ್ಷ ಹಾಗೂ ಸ್ವತಂತ್ರರು ಗಳಿಸಿದ್ದರು. ಈ ಚುನಾವಣೆಯಲ್ಲಿ ಒಟ್ಟು ೫೭,೯೩,೪೪೦ ಮತಗಳು ನೀಡಲ್ಪಟ್ಟಿದ್ದು ಕಾಂಗ್ರೆಸ್ಸು ಇವುಗಳಲ್ಲಿ ೩೨,೧೯,೦೧೪ ಮತಗಳನ್ನು (ಅಂದರೆ, ಸೇಕಡಾ ೫೫.೫೨) ಪಡೆದಿತ್ತು. ಉಳಿದ ಪಕ್ಷಗಳು ಗಳಿಸಿದ್ದ ಮತಗಳ ಪ್ರತಿಶತ ಈ ರೀತಿಯಿದೆ:

ಪ್ರಸವಾ ೧೪.೬೭
ಜನಸಂಘ ೨.೪೮
ಕಮ್ಯುನಿಸ್ಟ್ ೧.೪೭
ಇತರ ಪಕ್ಷ ಮತ್ತು ಸ್ವತಂತ್ರರು ೨೧.೮೯.

೧೯೬೭ರಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಈ ೨೬ ಲೋಕಸಭಾ ಸ್ಥಾನಗಳಿಗೆ ೮೮ ಜನರು ಸ್ಪರ್ಧಿಸಲಿದ್ದಾರೆ. ವಿವಿಧ ಪಕ್ಷಗಳ ಉಮೇದ್ವಾರರ ಸಂಖ್ಯೆ ಈ ರೀತಿಯಿದೆ:

ಕಾಂಗ್ರೆಸ್ ೨೬
ಪ್ರಸವಾ ೧೨
ಜನಸಂಘ ೬
ಕಮ್ಯುನಿಸ್ಟ್ ೩
ಇತರ ಪಕ್ಷಗಳು ಮತ್ತು ಸ್ವತಂತ್ರರು ೪೦.

ನಮ್ಮ ರಾಜ್ಯದ ಶಾಸನ ಸಭೆಯಲ್ಲಿ ೨೦೮ ಸ್ಥಾನಗಳಿದ್ದು ೧೯೬೨ರ ಚುನಾವಣಾನಂತರ ಸಭೆಯಲ್ಲಿ ವಿವಿಧ ಪಕ್ಷಗಳ ಬಲಾಬಲ ಹೀಗಿದೆ:

ಕಾಂಗ್ರೆಸ್ ೧೩೮
ಪ್ರಸವಾ ೧೮
ಜನಸಂಘ ಇಲ್ಲ.
ಕಮ್ಯುನಿಸ್ಟ್ ಇಲ್ಲ.
ಇತರ ಪಕ್ಷಗಳು ಮತ್ತು ಸ್ವತಂತ್ರರು ೩೯.

೧೯೬೨ರ ಚುನಾವಣೆಯಲ್ಲಿ ರಾಜ್ಯದಲ್ಲಿ ಒಟ್ಟು ೬೪,೨೦,೧೫೯ ಮತಗಳನ್ನು ಹುರಿಯಾಳುಗಳು ಪಡೆದಿದ್ದು ಅವುಗಳಲ್ಲಿ ಕಾಂಗ್ರೆಸಿಗರು ೩೩,೩೪,೮೩೯ ಮತ ಗಳಿಸಿರುವರು. ಬೇರೆ ಬೇರೆ ಪಕ್ಷಗಳು ಸಂಪಾದಿಸಿದ ಮತಗಳ ಪ್ರತಿ ಶತ ಈ ರೀತಿಯಿದೆ—

ಕಾಂಗ್ರೆಸ್ ೫೨.೦೮
ಪ್ರಸವಾ ೧೪.೦೫
ಜನಸಂಘ ೧.೩೭
ಕಮ್ಯುನಿಸ್ಟ್ ೧.೯೨
ಇತರ ಪಕ್ಷಗಳು ಮತ್ತು ಸ್ವತಂತ್ರರು ೩೦.೫೮

ಈ ಬಾರಿಯ ಚುನಾವಣೆಗಳಲ್ಲಿ ಸ್ಪರ್ಧಿಸುವ ಬೇರೆ ಬೇರೆ ಪಕ್ಷಗಳ ಸಂಖ್ಯಾ ಬಲದ ವಿವರ ಹೀಗಿದೆ:

ಕಾಂಗ್ರೆಸ್ ೨೦೮
ಪ್ರಸವಾ ೮೩
ಜನಸಂಘ ೬೩
ಕಮ್ಯುನಿಸ್ಟ್ ೩೧
ಇತರ ಪಕ್ಷ ಮತ್ತು ಸ್ವತಂತ್ರರು ೪೯೩
ಒಟ್ಟು ೬೭೮

ಇಡಿಯ ಭಾರತದ ಲೋಕ ಸಭೆಯ ೫೯೪ ಸ್ಥಾನಗಳಿಗೆ ೧೯೭೯ ಜನರು ಸ್ಪರ್ಧಿಸುತ್ತಾರೆ. ಇಂತಹ ಸ್ಪರ್ಧಾಳುಗಳ ಸಂಖ್ಯೆ ಕಳೆದ ಚುನಾವಣೆಯ ವೇಳೆ ೧೫೯೩ ಇತ್ತು. ಈ ಬಾರಿ ಸ್ಪರ್ಧಿಸುವ ವಿವಿಧ ಪಕ್ಷಗಳ ಸಂಖ್ಯಾಬಲ ಹೀಗಿದೆ:

ಕಾಂಗ್ರೆಸ್ಸು ೫೧೫
ಪ್ರಸವಾ ೧೭೬
ಜನಸಂಘ ೧೯೪
ಕಮ್ಯುನಿಸ್ಟ್ ೧೩೭
ಸ್ವತಂತ್ರ ಪಕ್ಷ ೧೭೨
ಇತರ ಪಕ್ಷಗಳು ಮತ್ತು ಸ್ವತಂತ್ರರು ೮೨೫.

ಮೇಲಿನ ಅಂಕೆ ಸಂಖ್ಯೆಗಳಿಂದ ವಿರೋಧಿ ಪಕ್ಷಗಳಲ್ಲಿ ಯಾವುದೇ ಒಂದಾದರೂ ಕಾಂಗ್ರೆಸ್ಸಿಗೆ ಸಮನಾಗಿ ನಿಲ್ಲುವಷ್ಟು ಶಕ್ತಿಯನ್ನು ಪಡೆದಿಲ್ಲವೆಂಬುದು ಕಂಡುಬರುವುದು. ಮಾತ್ರವಲ್ಲ, ಜನತೆಯ ಬೆಂಬಲವಾದರೂ ಕಾಂಗ್ರೆಸಿಗೆ ಹೊ

(೯ನೇ ಪುಟ ನೋಡಿರಿ)

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;
ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೋರ್ಪೊರೇಶನ್ ಬೇಂಕ್
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಉಡುಪಿ
ಆಡಳಿತ ಆಫೀಸು: ಮಂಗಳೂರು-1.



ಅಧ್ಯಾಪಕರ ಲಕ್ಷಣ ಮತ್ತು ಕರ್ತವ್ಯಗಳು

ಶ್ರೀಮತಿ ಪಿ. ಯಶೋದಾ ಯನ್. ಜೆನ್ನಿ

ಮಾನವನಾಗಿ ಹುಟ್ಟಿದ ಮೇಲೆ ಸಾಧ್ಯವಾದಷ್ಟು ಒಳ್ಳೆಯ ಜೀವನವನ್ನು ನಡೆಯಿಸಿ ತಮ್ಮ ಬದುಕನ್ನು ಸಾರ್ಥಕಪಡಿಸಬೇಕೆನ್ನುವ ವಿಷಯವನ್ನು ಬುದ್ಧಿಜೀವಿಗಳೆಲ್ಲರೂ ಒಪ್ಪುತ್ತಾರೆ. ಆದರಲ್ಲೂ ಅಧ್ಯಾಪಕವೃತ್ತಿಯನ್ನು ಅನುಸರಿಸಿದವನು ಎಲ್ಲ ದೃಷ್ಟಿಯಿಂದಲೂ ಆದರ್ಶ ಧ್ಯೇಯ ಧೋರಣೆಗಳುಳ್ಳವನಾಗಬೇಕು. ಏಕೆಂದರೆ ಆತನ ರೀತಿ ನೀತಿಯಿಂದ, ನಡೆ ನುಡಿಯಿಂದ, ವಿದ್ಯಾಬುದ್ಧಿಗಳಿಂದ ಆತನ ಬದುಕೊಂದೇ ಸಾರ್ಥಕ ಪಡೆದರಾಗಲಿಲ್ಲ. ಮುಂದಿನ ಜನಾಂಗವಾದ ಎಳೆಯ ಮಕ್ಕಳ ಒಳಿತು ಕೆಡುಕುಗಳ ಪ್ರಾಮುಖ್ಯ ಜವಾಬ್ದಾರಿ ಅಧ್ಯಾಪಕನದಾಗಿದೆ. ಅನೇಕ ಎಳೆಯ ಜೀವಗಳ ಒಳ್ಳೆಯ ಬದುಕಿನ ಸೃಷ್ಟಿಗೆ ಅಡಿಗಲ್ಲು ಹಾಕಬೇಕಾಗಿದೆ. ಆದದರಿಂದ ಅಧ್ಯಾಪಕನು ತನ್ನ ಕರ್ತವ್ಯವನ್ನೂ, ಜವಾಬ್ದಾರಿಯನ್ನೂ, ಉನ್ನತ ಧ್ಯೇಯವನ್ನೂ ಪೂರೈಸುವುದರಲ್ಲಿ ಹೆಜ್ಜೆ ಹೆಜ್ಜೆಗೂ ಜಾಗರೂಕನಾಗಿರಬೇಕು. ನಡೆನುಡಿಗಳೆರಡರಲ್ಲೂ ಆದರ್ಶ ವ್ಯಕ್ತಿಯಾಗಿರಲು ಯತ್ನಿಸುತ್ತಿರಬೇಕು. ಆದರ್ಶ ಎಂದರೇನು? ಆದರ್ಶನಾಗಿರುವುದು ಎಷ್ಟರ ಮಟ್ಟಿಗೆ ಸಾಧ್ಯ? ಆದರ್ಶನಾಗಿರಲು ಇರುವ ಮುಖ್ಯ ಅಡೆತಡೆಗಳಾವುವು? ಎಂಬ ವಿಚಾರವಾಗಿ ನೋಡೋಣ.

ಮೊದಲನೆಯದಾಗಿ ಪ್ರತಿಯೊಬ್ಬ ಅಧ್ಯಾಪಕನೂ ತನ್ನ ವೃತ್ತಿಯ ಹಿರಿಮೆಯನ್ನು ಆರ್ಥಿಕ ಅಳತೆ ಗೋಲಿನ ದೃಷ್ಟಿಯಿಂದ ಅಳೆಯದೆ ಅದರಲ್ಲಿರುವ ಪವಿತ್ರತೆಯನ್ನು ಅರಿಯಬೇಕು. ತನ್ನ ವೃತ್ತಿಯ ಬಗ್ಗೆ ತಾನು ಸದಾ ಅಭಿಮಾನಿಯಾಗಿರಬೇಕು. ತನ್ನ ಉದ್ಯೋಗವು ಎಲ್ಲ ರೀತಿಯಿಂದಲೂ ಉಚ್ಚತಮವಾದುದು, ಇದರಲ್ಲಿ ಹೊಟ್ಟೆಬಟ್ಟೆಯ ಪ್ರಶ್ನೆಗೆ ಪ್ರಧಾನಸ್ಥಾನಕೊಡಲು ಸಾಧ್ಯವೇ ಇಲ್ಲ. ಅದಕ್ಕಿಂತಲೂ ಮಹತ್ತರವಾದ ಆತ್ಮಾನಂದವನ್ನೂ, ಜೀವನ ಸಾಫಲ್ಯವನ್ನೂ ಪಡೆಯಲು ಸಾಧಿಸಲು ಸಾಧ್ಯವಿದೆ ಎಂಬ ನಂಬಿಕೆಯಿಂದಿರಬೇಕು. ಈ ವೃತ್ತಿಯ ಸಾಫಲ್ಯದಲ್ಲಿ ದೊರೆಯುವ ಆತ್ಮಸಂತೋಷ ಕರ್ತವ್ಯ ಪಾಲನೆಮಾಡಿದಾಗ ಉಂಟಾಗುವ ಹುರುಪು ಇವೆಲ್ಲಾ ತನ್ನ ಬದುಕನ್ನು ಸಾರ್ಥಕಗೊಳಿಸುತ್ತವೆ. ಈ ಸಾರ್ಥಕತೆಯು ತನ್ನ ಆರ್ಥಿಕ ಅಡಚಣೆಯ ಕೊರಗನ್ನು ಖಂಡಿತವಾಗಿಯೂ ನಿವಾರಿಸಬಲ್ಲುದು. ಬರಿಯ ಬದುಕುವುದಕ್ಕಾಗಿಯೇ ತನ್ನ ವೃತ್ತಿಯಲ್ಲ. ತಾನು ಸಾಧಿಸುತ್ತಿರುವುದೊಂದು ಮಹತ್ಕಾರ್ಯವೆಂಬ ಒಳ್ಳೆಯ ಅಭಿಪ್ರಾಯವನ್ನು ಕೆಲಸದಲ್ಲಿ ಉತ್ಸಾಹವನ್ನು ದೃಢಚಿತ್ತವನ್ನು ಹೊಂದಿದವನಾಗಿರಬೇಕು. ಆದರೆ ಈಗ ಆಗಿದೆಯೇನು? ಅಧ್ಯಾಪಕರೆಂದರೆ ಸಮಾಜ ವ್ಯಂಗ್ಯೋಕ್ತಿಗಳನ್ನಾಡಿ ನಗುತ್ತಿರುತ್ತದೆ. ಪತ್ರಿಕೆಗಳಲ್ಲಿ ವ್ಯಂಗ್ಯ ಚಿತ್ರಗಳು ಮೋಜಿನ ರೀತಿಯಲ್ಲಿ ಕಾಣಸಿಗುತ್ತವೆ. ಊರಿನಲ್ಲಿ ತಾತ್ಸಾರದ ದೃಷ್ಟಿಯನ್ನು ಎದುರಿಸಿ ಸಹಿಸಿಕೊಂಡಿರಬೇಕಾಗಿದೆ. ಇದಕ್ಕೆ ಕಾರಣರಾರು? ಅಧ್ಯಾಪಕರಲ್ಲಿ ಪ್ರಗತಿ ಶೀಲರಿಗೆ ಉತ್ಸಾಹಿಗಳಿಗೆ, ಆದರ್ಶ ಜೀವಿಗಳಿಗೆ, ಬುದ್ಧಿಶಾಲಿಗಳಿಗೆ, ಕೊರತೆಯೇನಿಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಆದರೆ ಅಂತವರ ಸಂಖ್ಯೆ ಉಳಿದವರ ಸಂಖ್ಯೆಗಿಂತ ಬಹಳ ಕಡಿಮೆಯಾಗಿರುವುದರಿಂದ 'ಅಧ್ಯಾಪಕ' ಎಂಬ ಗೌರವಾನ್ವಿತ ಶಬ್ದವು ತನ್ನ ಗೌರವ ಸ್ಥಾನದಿಂದ ದಿನೇ ದಿನೇ ಕೆಳಗಿಳಿಯುತ್ತಿದೆಯೆಂದು ವಿಷಾದದಿಂದ ಹೇಳಲೇ ಬೇಕಾಗಿದೆ. ಇದರಿಂದ ಪಾರಾಗುವ ಮಾರ್ಗ ಅಧ್ಯಾಪಕರಿಗೇ ಬೇಕಾಗಿಲ್ಲವೇನೋ ಎಂದು ಕಾಣುತ್ತದೆ.

ಅಧ್ಯಾಪಕರಲ್ಲಿರುವ ಕೆಲವು ಸಾಮಾನ್ಯ ಕುಂದುಕೊರತೆಗಳು:—ಸಾವಿರಾರು ತಾಪತ್ರಯಗಳಿಗೆ ಸಿಕ್ಕಿ ತೊಳಲಾಡುವ ಬಡತನದ ಬೇಗೆಯಲ್ಲಿ ಬೇಯುವ ಅಧ್ಯಾಪಕ ಎಷ್ಟರ ಮಟ್ಟಿಗೆ ಆದರ್ಶ ಪ್ರಾಯನಾಗಿ, ಉತ್ಸಾಹಿಯಾಗಿ, ಚಟುವಟಿಕೆಯಿಂದ ಕೆಲಸ ಮಾಡಿಯಾನು ಎಂದರೆ ನಿಜವಾಗಿಯೂ ಸ್ವಲ್ಪ ಯೋಚಿಸಿಯೇ ಉತ್ತರ ಕೊಡಬೇಕಾಗುತ್ತದೆ ಏಕೆಂದರೆ ಮಕ್ಕಳ ಏಳಿಗೆಯೇ ಅಂದರೆ ಭಾವೀ ಜನಾಂಗದ ಉನ್ನತಿಯೇ ಪ್ರಗತಿಯೆಂದು ಭಾವಿಸುವ ಸಹನೆ ಆತನಲ್ಲಿ ಉಳಿಯುವುದಿಲ್ಲ. ನೂರಾರು ತಾಪತ್ರಯ ಸಂಕಷ್ಟಗಳಿಂದ ಆತನಿಗೆ ಬದುಕೇ ಭಾರವಾಗಿರುತ್ತದೆ. ಉತ್ಸಾಹ, ಶಕ್ತಿಗಳಂತೂ ಮೊದಲೇ ಇಲ್ಲ. ಇನ್ನು ಆದರ್ಶವೋ ಕೆಲಸಕ್ಕೆ ಸೇರಿ ಕೆಲವೇ ವರ್ಷಗಳೊಳಗೆ ಮೂಲೆ ಪಾಲಾಗಿ ಬಿಡುತ್ತದೆ. ಅಂದ ಮೇಲೆ ಉಳಿದುದೇನು? ಬರೇ ಯಾಂತ್ರಿಕ ದುಡಿತವೊಂದೇ. ಹೊಟ್ಟೆಗಾಗಿ, ಬದುಕಲಿಕ್ಕಾಗಿ ಒಂದು ಉದ್ಯೋಗ ಅಷ್ಟೇ.

ಅಧ್ಯಾಪಕ-ಸಜೀವ ಮಾನವ ಜನಾಂಗದ ಬುದ್ಧಿಯ, ಗುಣನಡತೆಯ, ಬೆಳವಣಿಗೆಗಳ ಕಾರಣಕರ್ತ. ಬರಿಯ ಯಂತ್ರದಂತೆ ದುಡಿದರೆ ಸಾಕೆ? ಸಾಲದು ನಿಜ. ಆದರೂ ಆತ ನೂರಾರು ತಾಪತ್ರಯಗಳಿಂದ ತೊಳಲಾಡಿ ಬೆಂದು ಆಯಾಸಗೊಂಡು ಕೆಲಸದಲ್ಲಿ ಉತ್ಸಾಹವನ್ನೂ ಉದ್ಯೋಗದಲ್ಲಿ ಆದರ್ಶವನ್ನೂ, ಬಾಳಿನಲ್ಲಿ ಉನ್ನತ ಧ್ಯೇಯವನ್ನೂ ಕಳೆದುಕೊಂಡರೆ ಆಶ್ಚರ್ಯವೇನಿಲ್ಲ. ಇದಕ್ಕೆ ಪರಿಹಾರವಿಲ್ಲವೆ? ಇದೆ. ಪರಿಹಾರವನ್ನು ಆತನೇ ಪ್ರಯತ್ನಪೂರ್ವಕ ಸಾಧಿಸಿಕೊಳ್ಳಬೇಕಾಗಿದೆ. ಅಧ್ಯಾಪಕ ಯಾವಾಗಲೂ ಯೋಚಿಸುತ್ತಿರಬೇಕು. ಸುತ್ತಲಿನ ಜಗತ್ತಿಗಾಗಿ ಸಾವಿರಾರು ಎಳೆಯ ಜೀವಗಳಿಗಾಗಿ ತನ್ನ ಬದುಕು ಈ ಬದುಕಿನಲ್ಲಿ ಉನ್ನತ ಗುರಿಯನ್ನು ಸಾಧಿಸಿದರೆ ತನ್ನ ಬೇರೆಲ್ಲಾ ಸಮಸ್ಯೆಗಳು ತೀರಾ ಕ್ಷುಲ್ಲಕವಾಗಿಯೇ ಕಾಣಿಸುವುದೆಂಬುದನ್ನು ಪದೇ ಪದೇ ತನ್ನ ಮನಕ್ಕೆ ತಾನೇ ಜ್ಞಾಪಿಸಿಕೊಡುತ್ತಿರಬೇಕು. ಈ ರೀತಿಯಲ್ಲಿ ಯೋಚಿಸಿ ವಿಚಾರಿಸಿ ಕೆಲಸ ಮಾಡುವ ಅಧ್ಯಾಪಕನು ತನ್ನ ಬೇರೆಲ್ಲಾ ಅಡಚಣೆಗಳನ್ನು ಹಿಂದೆ ಸರಿಸಿ ತನ್ನ ಧ್ಯೇಯವನ್ನು ಸುಲಭ ರೀತಿಯಲ್ಲಿ ಸಾಧಿಸಿಕೊಳ್ಳುವಂತೆ ಪ್ರವೃತ್ತನಾಗುವನೆಂದು ಖಂಡಿತವಾಗಿ ಹೇಳಬಹುದು.

ಇನ್ನು ಅಧ್ಯಾಪಕರಲ್ಲಿರುವ ಎರಡನೆಯದೊಂದು ಪಂಗಡವೆಂದರೆ ಅವರಲ್ಲಿರುವ ತಿಳುವಳಿಕೆ, ಅನುಭವ, ಜ್ಞಾನಗಳ ಅಭಾವದಿಂದಾಗಿ ಮಕ್ಕಳಲ್ಲುಂಟಾಗುವ ಕೊರತೆಗೆ ಕಾರಣವಾಗುವ ಪಂಗಡ. ಈಗೀಗಲಂತೂ ದಿನೇ ದಿನೇ ವಿದ್ಯೆಯ ಮಟ್ಟ ಸುಧಾರಿಸುತ್ತಿದೆ ಎಂಬ ಹೆಸರಿನಲ್ಲಿ ಕೆಳಗಿಳಿಯುತ್ತಿದೆ ಎಂಬ ವಿಷಯವನ್ನು ಹೆಚ್ಚಿನವರು ಬಲ್ಲವರಾಗಿದ್ದಾರೆ. ಅಧ್ಯಾಪಕ ಅಥವಾ ಅಧ್ಯಾಪಿಕೆಯರಲ್ಲಿ ತಿಳುವಳಿಕೆಯ ಕೊರತೆ, ವಿದ್ಯೆಯ ಕೊರತೆ ಎಲ್ಲಿಯವರೆಗೆ ವ್ಯಾಪಿಸಿದೆಯೆಂದರೆ, ಸರಿಯಾದ ಅಕ್ಷರ, ಶಬ್ದಗಳ ಜ್ಞಾನವನ್ನು ಗಳಿಸಿರದವರು ಕೂಡಾ "ಟೀಚರ್" ಎಂಬ ಹೆಸರನ್ನು ಗಳಿಸಿಕೊಂಡು ತಮ್ಮ ಕೈಕೆಳಗೆ ಕಲಿಯುವ ವಿದ್ಯಾರ್ಥಿಗಳ ತೊಳಲಾಟ, ಗೋಳಾಟಗಳಿಗೆ ಕಾರಣರಾಗಿರುತ್ತಾರೆ. ತಮ್ಮ ತಪ್ಪುಗಳನ್ನೆಲ್ಲಾ ಸರಿಯೆಂದು ತಿಳಿದು ಗಟ್ಟಿಮಾಡಿಕೊಂಡು ಅದನ್ನೇ ಮಕ್ಕಳಿಗೆ ಬಾಯಿಪಾಠ ಮಾಡಿಸಿ ಹೇಗಾದರೂ ಕಲಿಸಿದರಾಯ್ತು ಎಂಬ ಧೋರಣೆಯಿಂದ ದಿನ ದೂಡುವ ಅಧ್ಯಾಪಕರನ್ನು ಕಂಡಾಗ ಯಾರಿಗಾದರೂ ತಾತ್ಸಾರದ ಜೊತೆಗೇ 'ಅಯ್ಯೋ ಪಾಪವೇ' ಎಂದು ಕೂಡಾ ಎನ್ನಿಸದಿರದು. ಇಂತಹರಿಂದ ಶಿಕ್ಷಣ ಪಡೆದ ಮಕ್ಕಳು ಎಷ್ಟೊಂದು ವಿದ್ಯೆ ಕಲಿತಾರು? ಹೇಗೆ ಸುಧಾರಿಸಿಯಾರು? ಎಂಬುದನ್ನು ಊಹಿಸಿಯೇ ಅರಿಯಬೇಕು. ಇದು ಪರಿಹರಿಸಲಾರದ ಸಮಸ್ಯೆ. ಇದಕ್ಕಾಗಿ ಅಧ್ಯಾಪಕರ ವಿದ್ಯೆಯ ಮಟ್ಟ ಏರಬೇಕು. ಬುದ್ಧಿಯ ಮಟ್ಟವೇನೋ ಎಲ್ಲರದ್ದೂ ಒಂದೇ ತೆರನಾಗಿರುವುದಿಲ್ಲ ನಿಜ. ಆದರೂ ಕೂಡಾ ಮಕ್ಕಳಿಗೆ ಶಿಕ್ಷಣವೀಯುವ ಸಂದರ್ಭದಲ್ಲಿ ಜಾಗರೂಕತೆಯಿಂದಲೂ, ಮಂದಾಲೋಚನೆಯಿಂದಲೂ, ವರ್ತಿಸಿ ತಮ್ಮ ಕಾರ್ಯವನ್ನು ಸಫಲಗೊಳಿಸಲೇ ಬೇಕು.

ಇನ್ನು ಮೂರನೆಯ ವರ್ಗವೆಂದರೆ ಹಿಂದುಳಿದ ಅಥವಾ ಕಟುವಾಗಿ ಹೇಳುವುದಾದರೆ ಕೀಳ್ಮಟ್ಟದ ವೃತ್ತಿ ಬಾಂಧವರು. ಈ ವರ್ಗದವರ ಸಂಖ್ಯೆ ಕಡಿಮೆಯಾದರೂ, ಪಾತ್ರೆ ತುಂಬಾ ಇರುವ ಹಾಲನ್ನು ಕೆಡಿಸಲು ಒಂದೆರಡು ಹನಿ ಹುಳಿರಸವು ಸಾಕಾಗುವಂತೆ ಈ ವರ್ಗದವರಿಂದಾಗಿ ಇಡೀ ಅಧ್ಯಾಪಕ ಜಾತಿಗೆಲ್ಲಾ ಕೆಟ್ಟ ಹೆಸರು ಅಂಟುವಂತಿದೆ. ಈ ವರ್ಗದಲ್ಲಿ ಅಧ್ಯಾಪಕರಿಗಿಂತ ಅಧ್ಯಾಪಕಿಯರ ಸಂಖ್ಯೆಯೇ ಧಾರಾಳವಾಗಿದೆಯೆಂಬುದನ್ನು ದುಃಖದಿಂದಲಾದರೂ ನಿಸ್ಸಂಕೋಚವಾಗಿ ಹೇಳಲೇ ಬೇಕಾಗಿದೆ. ಇವರಲ್ಲಿ ಬುದ್ಧಿಯ ಮಟ್ಟವೋ ತೀರಾ ಕೆಳಗಿನದು. ಮಿದುಳಿನ ಶಕ್ತಿ ಯೋಚನೆಯನ್ನು ಮಾಡುವಷ್ಟು ಇಲ್ಲ. ಇನ್ನು ವಿಚಾರ ಶಕ್ತಿಗೆ ಅನ್ಯರ ವಿಚಾರಗಳಲ್ಲೇ ಆಸಕ್ತಿ ಜಾಸ್ತಿ. ಇವರು ತಮ್ಮನ್ನು ತಾವೇ ಅರಿಯಲಾರರು. ಮಕ್ಕಳಿಗೆ ಕಲಿಸುವಷ್ಟು ವಿದ್ಯಾ ಪ್ರೌಢಿಮೆಯಂತೂ ಬದಿಗಿರಲಿ, ತಮ್ಮನ್ನು ತಾವೇ ತಿದ್ದಿಕೊಳ್ಳುವಷ್ಟು ಯೋಗ್ಯತೆ ಇರದು. ಅವರಿಗೆ ಶಿಕ್ಷಣದ ಧ್ಯೇಯ, ಧೋರಣೆ ಆದರ್ಶಗಳೊಂದೂ ತಿಳಿಯದು. ಆದರೆ ಈ ಎಲ್ಲ ದೌರ್ಬಲ್ಯಗಳನ್ನು ಮುಚ್ಚಲು ಅವರು ತಮ್ಮ ನಾಲಗೆಯನ್ನು ಹರಿಯ ಬಿಡುತ್ತಾರೆ. ಮಕ್ಕಳ ಇದಿರು ಸಹೋದ್ಯೋಗಿಗಳ ಟೀಕೆ, ವಿಮರ್ಶೆ, ಚರ್ಚೆ, ಜಗಳ, ಇವೆಲ್ಲಾ ಇಂತಹರ ದಿನ ನಿತ್ಯದ ಚಟುವಟಿಕೆಗಳು. ವಿದ್ಯಾ ಮಂದಿರದಲ್ಲಿದ್ದುಕೊಂಡು ಹೇಯವಾಗಿ, ಅಸಹ್ಯವಾಗಿ,

(೯ನೇ ಪುಟ ನೋಡಿರಿ)

FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು -3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ 2—0—0.
ಒಂದು ಪ್ರತಿ ಬೇಕಾದವರು ರೂ. 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜಿಲ್ಲೆಯ ಮತದಾರರಿಗೆ
ನಾಯಕರ ಕಿವಿ ಸೂಚನೆ

ಬಡತನ, ನಿರಕ್ಷರತೆಗಳು ಯಾವುದೇ ‍ತಿಯ ಸಮಾಜದ ಸೊತ್ತಲ್ಲ. ಎಲ್ಲ ಒಕ್ಕಟ್ಟಿನಿಂದ ಸೇರಿ ಅವುಗಳನ್ನು ಪ ರಿಹರಿಸಲು ಪ್ರಯತ್ನಿಸಬೇಕು. ನಮ್ಮಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ...ಂದಾಳುಗಳಾಗಲು ಅರ್ಹತೆಯಿರುವು ದನ್ನು ಗಮನಿಸಿ ಚುನಾವಣೆಗೆ ನಿಲ್ಲಿಸಿದ ಉಮೇದ್ವಾರಿಗಳಿಗೆ ಮತವಿತ್ತು, ಕಾಂಗ್ರೆಸನ್ನು ಬೆಂಬಲಿಸಬೇಕು.

—ಶ್ರೀ ಟಿ. ಎ. ಪೈ.

ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬಲ್ಲ ಏಕ ಮಾತ್ರ ಸಂಸ್ಥೆ ಕಾಂಗ್ರೆಸ್ ಈಗ ಅದು ನಮ್ಮ ರಾಜ್ಯ ...ಕೆಯನ್ನು ಮುಂದೊತ್ತುತ್ತಿರುವುದು ನಮ್ಮ ಭಾಗ್ಯ. ಇತರ ಯಾವ ಪಕ್ಷಗಳಿಂದಲೂ ಈ ಧ್ಯೇಯವನ್ನು ಮುಂದಿಟ್ಟು ...ಂಡು ಮುಂದುವರಿಯಲು ಸಾಧ್ಯವಿ... ಕೇರಳದಲ್ಲಿ ಒಮ್ಮೆ ಅಧಿಕಾರಕ್ಕೆ ಬಂದ ಕಮ್ಯುನಿಸ್ಟರು ಕೊನೆಗೆ ಎದುರಿಸ ...ಕಾಗಿ ಬಂದ ಸಾರ್ವಜನಿಕ ...ತೃಪ್ತಿ ಮತ್ತು ಅಪಜಯವೇ ಇದಕ್ಕೆ ದಾಹರಣೆ. ಆದುದರಿಂದ ಮಹಾ ಚುನಾವಣೆಯಲ್ಲಿ ಕಾಂಗ್ರೆಸಿಗೇನೆ ಬೆಂಬಲ ...ಡಿರಿ.

—ಶ್ರೀ ಯು. ಎಸ್. ಮಲ್ಯ.

ನಮ್ಮ ಮೆಚ್ಚಿನ ಪ್ರಜಾರಾಜ್ಯದಲ್ಲಿ ಮತದಾನದ ಹಕ್ಕು ಸರ್ವರಿಗೂ ಸೇರಿದುದು. ಒಂದೊಂದು ಮತವೂ ಅಮೂಲ್ಯವಾದುದು. ಪ್ರಾತಿನಿಧಿಕ ಸರಕಾರದಲ್ಲಿ ಮತದ ಬೆಲೆಯರಿತುಕೊಳ್ಳಿ. ದೇಶ ಹಿತ ಸಾಧಿಸುವ ಪಕ್ಷ ಕಾಂಗ್ರೆಸ್ಸನ್ನು ಚುನಾವಣೆಯಲ್ಲಿ ಬಹು ಮತದಿಂದ ಆರಿಸಿರಿ; ಮತವು ಸಾರ್ಥಕವಾಗುವಂತೆ ನೋಡಿಕೊಳ್ಳಿರಿ.

—ಡಾ| ಕೆ. ಕೆ. ಹೆಗ್ಡೆ.

ಚುನಾವಣೆಯಲ್ಲಿ ಮತದಾನ ಮಾಡುವ ಮೊದಲು ಯಾವ ಪಕ್ಷಕ್ಕೆ ಬೆಂಬಲ ...ತ್ತರೆ ಅನುಕೂಲವೆಂದು ಆಲೋಚಿಸುವುದು ಅಗತ್ಯ. ಕಾಂಗ್ರೆಸ್ಸಿನಿಂದ ಹಲವು ...ತೊಂದರೆಗಳು ಬಂದಿರಬಹುದು; ಆ...ರೆ, ಇತರ ಪಕ್ಷಗಳು ಅದಕ್ಕಿಂತ ಯೋಗ್ಯವಾಗಿವೆಯೇ ಎಂದು ಯೋಚಿಸಿರಿ. ಪಂಡಿತ ನೆಹರುಗಳಂತಹ ಯೋಗ್ಯ ನಾಯಕರ ಬಲವಿರುವ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಕಾಂಗ್ರೆಸ್ ಉಮೇದ್ವಾರಿಗಳಿಗೇನೇ ಓಟು ಕೊಡಿರಿ.

—ಶ್ರೀ ಬಿ. ಮಂಜಯ್ಯ ಹೆಗ್ಡೆ.

ಬಡವ ಬಲ್ಲಿದರೆನ್ನುವ ಭೇದಭಾವ ಕಾಂಗ್ರೆಸ್ಸಿನ ಸರಕಾರದಲ್ಲಿ ಹುಟ್ಟಲು ಸಾಧ್ಯವೇ ಇಲ್ಲ. ಅಂತೆಯೇ ಐಶ್ವರ್ಯವಂತರು ಇನ್ನೂ ಐಶ್ವರ್ಯ ವಂತರಾಗುವ ...ತೇ ಇಲ್ಲಲ್ಲ. ಸರ್ವಜನ ಸಮಾನತೆಯ ಸಮಾಜವೊಂದರ ಸೃಷ್ಟಿಯೇ ಕಾಂಗ್ರೆಸ್ಸಿನ ಧ್ಯೇಯ.

— ಶ್ರೀ ಎಫ್. ಎಲ್ಸ್. ಡಿ. ಪಿಂಟೊ.

ದೇಶದ ಸರ್ವತೋಮುಖ ಅಭಿವೃದ್ಧಿ ...ಹೊಗಬೇಕು; ಅದು ಜಗತ್ತಿನ ಮುಕುಟ ...ಣಿಯಾಗಿ ಮೆರೆಯಬೇಕು. ಈ ದಿಸೆಗೆ ...ಜ್ಯ ನೌಕೆಯನ್ನು ಸಕಲ ಅಡ್ಡಿ ಆತಂ...ಕಗಳನ್ನು ದಾಟಿಸಿಕೊಂಡು ಒಯ್ಯಬಲ್ಲ ಏಕಮಾತ್ರ ಸಂಸ್ಥೆ ಕಾಂಗ್ರೆಸ್. ಆದುದರಿಂದ ಕಾಂಗ್ರೆಸ್ ಉಮೇದ್ವಾರಿಗಳನ್ನು ಬೆಂಬಲಿಸುವುದು ಅಗತ್ಯ.

—ಶ್ರೀ ವಿ. ಎಸ್. ಕುಡ್ವ

ಕಾಂಗ್ರೆಸ್ಸು ಹೊರತು ಯಾವ ಪಕ್ಷವೂ ಸರಕಾರವನ್ನು ರಚಿಸಲು ಬೇಕಾಗುವಷ್ಟು ಉಮೇದ್ವಾರಿಗಳನ್ನು ನಿಲ್ಲಿಸಿಲ್ಲವೆಂದ ಮೇಲೆ ಅವು ಹೇಳುವಂತಹ ಬೇಜವಾಬ್ದಾರಿ ಕಾಯಿದೆಗಳನ್ನು ಕಾರ್ಯರೂಪಕ್ಕೆ ತರಲು ವಿರೋಧೀ ಪಕ್ಷಗಳಿಂದ ಸಾಧ್ಯವಿಲ್ಲ. ಭಾರತವನ್ನು ಪ್ರಗತಿ ಪಥದಲ್ಲಿ ಮುಂದುವರಿಸಿದ ಕಾಂಗ್ರೆಸ್ಸ ಪಕ್ಷದ ಧ್ಯೇಯವನ್ನು ಯಾವ ಪ್ರತಿಗಾಮಿ ಶಕ್ತಿಗಳೂ ಅಲ್ಲಾಡಿಸುವುದು ಸಾಧ್ಯವಿಲ್ಲ. ಸ್ವಯಂಪೂರ್ಣತೆಯ ಕಡೆ ಸಾಗುತ್ತಿರುವ ಭಾರತದ ನಡಿಗೆಯ ವೇಗ ಹೆಚ್ಚಬೇಕಾಗಿದೆ. ಇದನ್ನು ಸಾಧಿಸಲು ಸಾಧ್ಯವಿರುವ ಒಂದೇ ಒಂದು ಸುಸಂಘಟಿತ ಸಂಸ್ಥೆ ಕಾಂಗ್ರೆಸ್ ಪಕ್ಷ.

— ಡಾ| ಕೆ ನಾಗಪ್ಪ ಆಳ್ವ.

ವಿರೋಧೀ ಪಕ್ಷದವರೇಕೆನ್ನುವವರು ಕಾಂಗ್ರೆಸ್ಸನ್ನು ಟೀಕಿಸಿ ಓಟು ಕೇಳುತ್ತಾರೆಯೇ ಹೊರತು ಅವರೇನು ಮಾಡುತ್ತಾರೆಂದು ಹೇಳುವುದಿಲ್ಲ. ಪ್ರಸಪಾ ಪಕ್ಷಕ್ಕೆ ಒಂದು ನಿಶ್ಚಿತ ನೀತಿಯಿಲ್ಲ. ಭಾರತೀಯ ಜನ ಸಂಘವಾದರೂ ಬಾಲ್ಯಾವಸ್ಥೆಯಲ್ಲಿದ್ದು ಧಾರ್ಮಿಕ ಹಿನ್ನೆಲೆಯಲ್ಲಿ ಕೆಲಸ ಮಾಡುವ ಪಕ್ಷ. ರಾಷ್ಟ್ರದ ರಾಜ್ಯಭಾರವನ್ನು ವಹಿಸುವ ಶಕ್ತಿ ಬಂದಿಲ್ಲ. ಆದುದರಿಂದ ಸಣ್ಣಪುಟ್ಟ ವಿಚಾರಗಳಿಗಾಗಿ ಹಾಳು ಮಾಡದೆ ದೇಶದ ಅಭಿವೃದ್ಧಿ ಭದ್ರತೆಗಾಗಿ ಕಾಂಗ್ರೆಸಿಗೇನೇ ಬೆಂಬಲ ಕೊಡಬೇಕು.

— ಶ್ರೀ ಕೆ ಸೂರ್ಯನಾರಾಯಣ ಅಡಿಗ.

ಜನತೆಯ ಸುಖ ಕಲ್ಯಾಣಕ್ಕಾಗಿ ಕಾಂಗ್ರೆಸ್ ಪಕ್ಷ ಮತ್ತು ಸರಕಾರಗಳು ರಾತ್ರಿ ಹಗಲೆನ್ನದೆ ದುಡಿಯುತ್ತಿವೆ. ಪಂಡಿತ ನೆಹರುರವರ ಮುಖಂಡತ್ವ ದೇಶಕ್ಕೊಂದು ಹೆಮ್ಮೆಯಾಗಿದೆ. ಇಂದು ಜಗತ್ತು ನೆಹರುರವರ ಮುಖಂಡತ್ವವನ್ನು ಒಪ್ಪುತ್ತದೆ. ಆದಕಾರಣ ಮುಂದಿನ ಐದು ವರ್ಷಗಳಲ್ಲಿ ಭದ್ರ ಸರಕಾರ ಸ್ಥಾಪನೆಗಾಗಿ ಎಲ್ಲರೂ ಕಾಂಗ್ರೆಸ್‌ಗೆ ಪ್ರಚಂಡ ಬೆಂಬಲವನ್ನು ನೀಡಬೇಕು.

—ಶ್ರೀ ಕೆ. ಕೆ. ಶೆಟ್ಟಿ.

ಮಹಿಳಾ ಮತದಾರರು

ಇಪ್ಪತ್ತೊಂದು ವರ್ಷ ವಯಸ್ಸಿನ ಪ್ರತಿಯೋರ್ವ ಮಹಿಳೆಯೂ ಮತದಾನ ಮಾಡಬಹುದು.

ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಸುಮಾರು ೧೦ ಕೋಟಿ ಮಹಿಳೆಯರು ಮತದಾನ ಮಾಡಬಹುದು. ಈ ಸಂಖ್ಯೆಯು ಅಮೆರಿಕಾದ ಸಂಯುಕ್ತಸಂಸ್ಥಾನಗಳ ಒಟ್ಟು ಮತದಾರರ ಸಂಖ್ಯೆಗೆ ಹೆಚ್ಚುಕಡಿಮೆ ಸಮನಾಗಿರುವುದು.

೧೯೫೧—೫೨ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆಗೆ ಮೊದಲು, ಅನೇಕ ಮಹಿಳಾ ಮತದಾರರ ಹೆಸರುಗಳನ್ನು ತೆಗೆದು ಹಾಕಲಾಯಿತು. ಅವರು, ರಿಜಿಸ್ಟ್ರೇಷನ್ ಅಧಿಕಾರಿಗಳಿಗೆ ತಮ್ಮ ಸರಿಯಾದ ಹೆಸರುಗಳನ್ನು ತಿಳಿಸಲು ಹಿಂಜರಿದುದೇ ಇದಕ್ಕೆ ಕಾರಣ.

ಮಹಿಳಾ ಮತದಾರರು ತಮ್ಮ ಮನೆಗಳಲ್ಲಿನ ಪುರುಷರೊಡನೆ ಇರುವ ಸಂಬಂಧದ ವಿವರಗಳನ್ನು "ಎ" ಎಂಬುವರ ತಾಯಿ, "ಬಿ" ಎಂಬುವರ ಪತ್ನಿ ಇತ್ಯಾದಿಗಳಿಂದ ಕರಡು ಮತದಾರರ ಪಟ್ಟಿಯಲ್ಲಿ ಸೂಚಿಸಲಾಯಿತು. ಸ್ಥಳೀಯ ಆಚಾರ ವ್ಯವಹಾರಗಳ ಪ್ರಕಾರ, ನಿರ್ದಿಷ್ಟ ಕ್ಷೇತ್ರದ ಮಹಿಳೆಯರು, ಅಪರಿಚಿತರಿಗೆ ತಮ್ಮ ಸರಿಯಾದ ಹೆಸರುಗಳನ್ನು ತಿಳಿಸಲು ಇಷ್ಟಪಡದಿದ್ದುದು ಇದಕ್ಕೆ ಕಾರಣವಾಗಿದೆ.

ಈ ಅಂಶವನ್ನು ಮನಗಂಡು, ಮತದಾರರ ಗುರುತಿಗೆ ಹೆಸರು ಮಾತ್ರ ಅಗತ್ಯ, ಅವರ ಸಂಬಂಧವಲ್ಲವೆಂದು ಸೂಚನೆಗಳನ್ನೀಯಲಾಯಿತು ಆದ್ದರಿಂದ, ಹೆಸರೂ ಸೇರಿ ಸಾಕಷ್ಟು ವಿವರಗಳಿಲ್ಲದೆ ಇದ್ದಲ್ಲಿ ಯಾವ ಮತದಾರರನ್ನೂ ಪಟ್ಟಿಗೆ ಸೇರಿಸಲು ಆಗುವುದಿಲ್ಲ

ತಮ್ಮ ಹೆಸರುಗಳನ್ನು ಸರಿಯಾಗಿ ತಿಳಿಸುವಂತೆ ಮಹಿಳಾ ಮತದಾರರಿಗೆ ಒಂದು ಮನವಿಯನ್ನು ಮಾಡಿಕೊಳ್ಳಲಾಯಿತು, ಬಿಹಾರ್‌ನಂತಹ ಕೆಲವು ರಾಜ್ಯಗಳಲ್ಲಿ, ಅವರ ಹೆಸರುಗಳ ದಾಖಲಾತಿಗೆ ಸಹಾಯಕವಾಗುವಂತೆ ಕೊನೆಯ ದಿನಾಂಕವನ್ನು ಒಂದು ತಿಂಗಳು ಮುಂದಕ್ಕೆ ಹಾಕಲಾಯಿತು. ಆದರೂ ಸಹ ಮಹಿಳೆಯರು ಹೆಸರುಗಳನ್ನು ದಾಖಲು ಮಾಡಿಸಲು ಮುಂದೆ ಬರಲಿಲ್ಲ.

ಸುಮಾರು ೨೮ ಲಕ್ಷ ಮಹಿಳಾ ಮತದಾರರು ತಮ್ಮ ಹೆಸರುಗಳನ್ನು ಸರಿಯಾಗಿ ತಿಳಿಸಲಿಲ್ಲ; ತತ್ಫಲವಾಗಿ, ಅವರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಲಾಯಿತು. ಮುಖ್ಯವಾಗಿ ಇಂತಹ ಪ್ರಸಂಗಗಳು ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಮುಂಚಿನ ರಾಜ್ಯಗಳಾದ ಮಧ್ಯ ಭಾರತ ಹಾಗೂ ವಿಂಧ್ಯ ಪ್ರದೇಶಗಳಲ್ಲಿ ನಡೆದುವು.

ದ್ವಿತೀಯ ಸಾರ್ವತ್ರಿಕ ಚುನಾವಣೆಯಲ್ಲಿ ಈ ಅವಿಚಾರಾಭಿಪ್ರಾಯವು ದೂರ ಸರಿಯಿತು. ನೂರಕ್ಕೆ ೯೪ ಮಂದಿ ವಯಸ್ಕ ಮಹಿಳೆಯರು ಮಹಿಳಾ ಮತದಾರರು ಹೆಸರುಗಳ ದಾಖಲಾತಿಗಾಗಿ ತಾವೇ ಮುಂದೆ ಬಂದರು. ಇವರಲ್ಲಿ ನೂರಕ್ಕೆ ೪೦ ಮಂದಿ ಮಹಿಳೆಯರು ಮತದಾನ ಮಾಡಿದರು. ಲೋಕಸಭೆಗೆ ೨೭ ಮಂದಿ ಮಹಿಳೆಯರೂ ರಾಜ್ಯ ವಿಧಾನ ಸಭೆಗಳಿಗೆ ೧೯೫ ಮಂದಿ ಮಹಿಳೆಯರೂ ಆರಿಸಿ ಬಂದರು.

ಅಂದಿನಿಂದ ಮತದಾನ ಸೌಲಭ್ಯಗಳು ಉತ್ತಮಗೊಂಡಿವೆ. ಹೆಚ್ಚು ಮಂದಿ ಮಹಿಳೆಯರು ಚುನಾವಣಾ ಕೇಂದ್ರಗಳನ್ನು ನಿರ್ವಹಿಸುತ್ತಿರುವರು. ಹೆಚ್ಚು ಮಹಿಳೆಯರೇ ಇರುವ ಅಥವಾ 'ಪರ್ದಾ' ಪದ್ಧತಿಯಿರುವ ಸ್ಥಳಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಚುನಾವಣಾ ಕೇಂದ್ರಗಳಿರುವುವು. ಆದರೂ ಸಾಮಾನ್ಯವಾಗಿ, ಪುರುಷರು ಮತ್ತು ಮಹಿಳೆಯರು, ಲಿಂಗ ಭೇದ ಭಾವವಿಲ್ಲದೆ, ಚುನಾವಣಾ ಕೇಂದ್ರದ ಬಳಿ ಒಂದೇ ಸಾಲಿನಲ್ಲಿ ಒಬ್ಬರ ಹಿಂದೆ ಒಬ್ಬರು ನಿಲ್ಲಬೇಕಾಗುವುದು.

ಕೆಲವು ಮಹಿಳೆಯರಿಗೆ ಅಂಚೆ ಮೂಲಕ ಮತದಾನ ಮಾಡುವ ಅಧಿಕಾರವಿದೆ. ಅವರಿಗೆ ಮತದಾನ ಪತ್ರಗಳನ್ನು ಅಂಚೆಯ ಮೂಲಕ ಒದಗಿಸಲಾಗುವುದು. ಅವರಿಗೆ ಒದಗಿಸಲಾಗುವ ಸೂಚನೆಗಳ ಮೇರೆಗೆ ಅವರು ಮತದಾನ ಪತ್ರಗಳನ್ನು

(ಆನೇ ಪುಟ ನೋಡಿರಿ)

In the Court of the Subordinate Judge of Udipi·

O. S. No. 51 of 1961.

Between.-

Dejamma and others— Plaintiffs.

and

Kusumaji and others -Defendants.

To, Defendants 2, 5 and 8 to 10

2. Laxmimathi, daughter of Padmavathi. 5. Bhoja daughter of Kusumaji 8. Padmaraja 9. Babu, 10. Appi— Children of 2nd deft. Lakshmimathi.

All are residing in Kadaba.

In the above suit for partition fresh notice has been ordered to the above persons by substituted service and posted for their appearance to 24—2—1962 You are hereby warned to appear before the Sub Court in person or by a Pleader duly instructed on 24—2—1962 at 11 O'clock, failing wherein the said suit will be decreed exparte.

H P Aithal,

Advocate for Plaintiffs.

Udipi, 7—2—1962.

ನವಯುಗ

ವರುಷ	ಉಡುಪಿ	ವಾರ
೪೧	೧೫-೨-೬೨	೨೩

ಕೊನೆಯ ಪ್ರಾರ್ಥನೆ

ಸ್ವತಂತ್ರ ಭಾರತದ ಪ್ರಜಾಸತ್ತೆಯಲ್ಲಿ ಮೂರನೆಯ ಬಾರಿಗೆ ಸಾರ್ವತ್ರಿಕ ಚುನಾವಣೆಗಳು ಇನ್ನು ನಾಲ್ಕಾರು ದಿನಗಳಲ್ಲಿ ಪ್ರಾರಂಭವಾಗಿ ಕೊನೆಗೊಳ್ಳುವುವು. ಆದುದರಿಂದಲೇ ತಮಗುಳಿದ ಅಲ್ಪ ಕಾಲದಲ್ಲಿ ಚುನಾವಣೆಗೆ ನಿಂತ ಎಲ್ಲ ಹುದ್ದರಿಗಳೂ ಬಿರುಸಿನಿಂದ ತಮ್ಮ ತಮ್ಮ ಪ್ರಚಾರ ಕಾರ್ಯದಲ್ಲಿ ಮಗ್ನರಾಗಿರುವರು. ಪ್ರತಿಯೊಂದು ಹುದ್ದರಿಯ ಪ್ರತಿನಿಧಿಯೂ ಮತದಾರನನ್ನು ಕಂಡು ತಮ್ಮನ್ನು ಬೆಂಬಲಿಸುವಂತೆ ವಿನಂತಿಸಿಕೊಳ್ಳುವುದು ಸಹಜ; ಮತ್ತು ಅವಶ್ಯಕ ಮತ್ತವನ ಕರ್ತವ್ಯ ಕೂಡ. ಎಲ್ಲ ಸ್ಪರ್ಧಾಳುಗಳ ಧ್ಯೇಯ–ನೀತಿಯನ್ನು ತಿಳಿದುಕೊಂಡು ಮತದಾರನು ತನಗೆ ದೊರೆತಿರುವ ಮತವನ್ನು ಅವಶ್ಯವಾಗಿ ಚಲಾಯಿಸಬೇಕು. ಯಾರೇ ಆಗಲಿ, ಯಾವ ಕಾರಣದಿಂದಾಗಲೀ ಮತದಾನ ಮಾಡುವ ಪರಮ ಕರ್ತವ್ಯದಿಂದ ವಿಮುಖನಾಗಬಾರದು. ಪ್ರಜಾಪ್ರಭುತ್ವದ ರಾಜ್ಯ ಪದ್ಧತಿಯಲ್ಲಿ ನಾಗರಿಕನಿಗೆ ದೊರೆತ ಈ ಉನ್ನತಾಧಿಕಾರವನ್ನು ಆತ ಅವಶ್ಯ ನಿರ್ವಹಿಸಲೇ ಬೇಕು. ಹೀಗೆ ನಿರ್ವಹಿಸುವಾಗ, ಆತನು ತುಂಬ ಆಲೋಚನೆಯನ್ನೂ ಮಾಡಬೇಕು.

ಮತದಾನವನ್ನು ಜಾತಿ, ಮತ, ಕೋಮು, ದಾಕ್ಷಿಣ್ಯ ಇಲ್ಲವೇ ಜುಲುಮೆಗಳಿಗೊಳಗಾಗಿ ಎಂದಿಗೂ ಮಾಡಬಾರದು. ಮತ ಬೇಡುವವರಾದರೂ ಇಂತಹ ಸಂಕುಚಿತ ಮನೋಭಾವನೆಯನ್ನು ಕೆರಳಿಸಬಾರದು. ನಾವು ಜಾತ್ಯತೀತ ರಾಷ್ಟ್ರ ಕಟ್ಟಬೇಕೆಂದು ಒಪ್ಪಿದ್ದೇವೆ. ಜಾತೀಯತೆ, ಕೋಮುವಾರು ಭಾವನೆಗಳು ಹುಟ್ಟಿಸಿದ ಉಪದ್ವ್ಯಾಪಗಳನ್ನು ಅರಿತಿದ್ದೇವೆ. ಯಾವ ಪಕ್ಷಕ್ಕೆ ಸೇರಿದವರಿರಲಿ ಅಥವಾ ಸ್ವತಂತ್ರರಾಗಿ ನಿಂತವರೇ ಇರಲಿ, ಇಂತಹ ಸಂಕುಚಿತ ಪ್ರವೃತ್ತಿಗಳಿಗೆ ಆಸ್ಪದ ಕೊಡಬಾರದು. ಚುನಾವಣೆಯಲ್ಲಿ ಎಲ್ಲ ಹುರಿಯಾಳುಗಳೂ ಗೆಲ್ಲುವುದು ಸರ್ವಥಾ ಅಸಂಭವ. ಈ ಚುನಾವಣೆಯ ಕಾಲದಲ್ಲಿ ವಿವಿಧ ರೀತಿಯಿಂದ ಸಾಮಾಜಿಕ ವಾತಾವರಣವನ್ನು ಎಷ್ಟು ಮಾತ್ರಕ್ಕೂ ಕಲುಷಿತಗೊಳಿಸಬಾರದು; ಹಾಲಾಹಲದ ಬೀಜ ಸಮಾಜದಲ್ಲಿ ಬಿತ್ತಲ್ಪಟ್ಟು ಮುಂದೆ ವಿಷ ವೃಕ್ಷಗಳೇ ತುಂಬಿ ಬೆಳೆಯುವಂತಹ ರುದ್ರ ಭೀಷಣತೆಯನ್ನು ಹುಟ್ಟಿಸಬಾರದು. ಹಿರಿಯ ಪಕ್ಷ ಕಾಂಗ್ರೆಸಿರಲಿ, ಅದರ ವಿರೋಧೀ ಪಕ್ಷಗಳೇ ಇರಲಿ, ತಮ್ಮ ತಮ್ಮ ನೀತಿಯನ್ನು ಜನತೆಗೆ ಮಂದಟ್ಟು ಮಾಡಿಕೊಡಬೇಕಲ್ಲದೆ, ಒತ್ತಾಸೆ ತೋರಿಸಿ ಒತ್ತಾಯ ಹೇರುವುದು ಸಮಂಜಸವಲ್ಲ. ಮತದಾರನು ತನಗೆ ಒಪ್ಪಿತವಾದ ಪಕ್ಷದ ರೀತಿನೀತಿಗಳನ್ನು ಅವಶ್ಯ ಬೆಂಬಲಿಸಿಯೇ ತೀರುವನು. ಪ್ರಚಾರ ಕಾರ್ಯದಲ್ಲೂ, ಸಾಧನಗಳಲ್ಲೂ ಪವಿತ್ರತೆಯನ್ನು ಉಳಿಸಿಕೊಳ್ಳುವುದು ಎಲ್ಲರೂ ಮಾಡಬೇಕಾದ ಅತ್ಯಗತ್ಯವೆನಿಸಿದ ಕೆಲಸ.

ಹಾಗಾಗುವಾಗ ಮತದಾರನ ಸ್ವೇಚ್ಛೆಗೆ ವಿರುದ್ಧವಾಗಿ ಮತಗಿಟ್ಟಿಸುವ ಯೋಚನೆ—ಸಂಚುಗಳನ್ನು ಮಾಡಬಾರದು ಎಂದರ್ಥವಾಗುವುದು. ಮತದಾರನು ತನ್ನ ಅಧಿಕಾರವನ್ನು ಚಲಾಯಿಸುವಾಗ, ತುಂಬ ಎಚ್ಚರಿಕೆಯಿಂದಿರಬೇಕಾಗುತ್ತದೆ. ಮೊದಲೇ ಹಲವಾರು ಜನರ ನಿತ್ಯ ಉಪದ್ರವದಿಂದ ಕಂಗಾಲಾದ ಮತದಾರ ದಿಕ್ಕುಕೆಡಬಾರದು. ತನ್ನ ಕ್ಷೇತ್ರದಲ್ಲಿ ನಿಂತಿರುವ ವಿವಿಧ ಸ್ಪರ್ಧಾಳುಗಳ ಮತ್ತವರು ಸೇರಿಕೊಂಡಿರಬಹುದಾದ ಪಕ್ಷಗಳ ಧ್ಯೇಯಗಳನ್ನೂ ನೀತಿಗಳನ್ನೂ ತಿಳಿದುಕೊಳ್ಳಬೇಕು. ಯಾವ ಪಕ್ಷದ ನೀತಿ ನಡವಳಿಕೆಗಳು ತನ್ನ ನೀತಿ—ನಡವಳಿಕೆಗೆ ಹೆಚ್ಚಾಗಿ ಹೊಂದಿಕೊಂಡಿದೆಯೋ ಅಂತಹ ಪಕ್ಷದ ಉಮೇದ್ವಾರನಿಗೆ ತನ್ನ ಮತವನ್ನೀಯಬೇಕು. ತಾನು ಮತಹಾಕಿದವನು ಗೆಲ್ಲಲೇಬೇಕು; ಇಲ್ಲವೇ ಇತರರು ಸೋಲಲೇಬೇಕು ಎಂದು ಮುಂತಾದ ಪೂರ್ವಗ್ರಹಗಳು ಯಾರೊಬ್ಬರಿಗೂ ಇರಬಾರದು. ನಿಷ್ಕಲ್ಮಶ ನಿರ್ವಿಕಲ್ಪ ಮನಸ್ಸಿನಿಂದ ಎಲ್ಲವನ್ನೂ ತೂಗಿ ನೋಡಿ ಒಂದು ದೃಢ ನಿರ್ಧಾರಕ್ಕೆ ಬರಬೇಕು. ತನಗೆ ಮೆಚ್ಚುಗೆ ಕಾಣುವ ಪಕ್ಷದ ಹುರಿಯಾಳುವನ್ನು ಬೆಂಬಲಿಸಬೇಕು. ಯಾವುದೇ ದೃಷ್ಟಿಯಿಂದ ವಿಚಾರ ಮಾಡಿದರೂ ಕಾಂಗ್ರೆಸ್ ಪಕ್ಷದ ಹುರಿಯಾಳುವನ್ನು ಆರಿಸುವುದು ನಾಗರಿಕರಿಗೂ ಒಳ್ಳೆಯದು; ಕಾಂಗ್ರೆಸ್ ಪಕ್ಷಕ್ಕೂ ಒಳ್ಳೆಯದು. ಕಾಂಗ್ರೆಸ್ಸು ಕಳೆದ ೧೪ ವರ್ಷಗಳಲ್ಲಿ ಏನು ಮಾಡಿದೆ ಎಂಬುದನ್ನು ನಾವೆಲ್ಲರೂ ಕಾಣುತ್ತಿದ್ದೇವೆ. ಕಾಂಗ್ರೆಸ್ ಪಕ್ಷವು ಶ್ರೀಮಂತರ ಪಕ್ಷ; ನಮ್ಮದು ಬಡವರ ಪಕ್ಷವೆಂದು ಹೇಳುವವರೂ ತಮ್ಮ ಹೃದಯವನ್ನು ಮುಟ್ಟಿಕೊಂಡು, ಜನತೆಯನ್ನು ವಂಚಿಸ ಹೊರಟಿದ್ದಾರೆ. ನಿರ್ಧನರೂ ಅನಕ್ಷರಸ್ಥರೂ ಆಗಿರುವ ನಮ್ಮ ಹಳ್ಳಿಗಳ ಜನರು ಇಂತಹ ನುಣ್ಣನೆಯ ವಂಚನೆಯ ನುಡಿಗೆ ಮರುಳಾಗಬಾರದು. ದೇಶದ ಪುನಾರಚನಾ ಕಾರ್ಯದಲ್ಲಿ ಕಾಂಗ್ರೆಸ್ಸು ತನ್ನ ಪಾಲಿನ ಸೇವೆಯನ್ನು ಸಂಪೂರ್ಣವಾಗಿ ನಿರ್ವಹಿಸಿದೆ. ನಂದನವನದಂತೆ ಕಾಂಗ್ರೆಸ್ಸು ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುಂದುವರಿಯುತ್ತಿರುವುದನ್ನು ಎಲ್ಲರೂ ಕಂಡಿರುವೆವು. ತನ್ನ ಪಕ್ಷದಲ್ಲಿಯೂ ವಿರೋಧೀ ಪಕ್ಷಗಳಲ್ಲಿಯೂ ತೀವ್ರವಾದ ವಿರೋಧವು ಹುಟ್ಟಿಕೊಂಡಿದ್ದರೂ ಕಾಂಗ್ರೆಸ್ಸು ತಾನು ತನ್ನ ಮತದಾರರಿಗೆ ಇತ್ತ ಆಶ್ವಾಸನೆಯಂತೆ ಭೂಸುಧಾರಣಾ ವಿಧೇಯಕವನ್ನು ವ್ಯವಹೃತಗೊಳಿಸಲು ಉತ್ಸುಕವಾಗಿದ್ದು ಅದನ್ನು ಹೆಚ್ಚಿನ ರಾಜ್ಯಗಳಲ್ಲಿ ಮಂಜೂರುಮಾಡಿದೆ. ರಾಷ್ಟ್ರಾಧ್ಯಕ್ಷರ ಸಹಿಯನ್ನು ಕಾಯುತ್ತಿದೆ. ಇದರಿಂದಾಗಿ ಜಮೀನುದಾರಿ ಜಹಗೀರುದಾರಿ ಪದ್ಧತಿಯು ನಿರ್ನಾಮವಾಗಿ ಉಳುವವನೇ ಹೊಲದೊಡೆಯನಾಗುವುದು ಸಾಧ್ಯವಾಗುವುದು. ಅದುವರೆಗೆ ರೈತ ಜನರ ಹಿತ ರಕ್ಷಣೆಗಾಗಿ ಒಕ್ಕಲು ಹಿತ ಮಸೂದೆಯು ಜ್ಯಾರಿಯಲ್ಲಿದೆ. ಇದರಿಂದ ರೈತಜನರ ಹಿತ ಸಾಧನೆಯಲ್ಲಿ, ಬಡವರ ಉದ್ಧಾರಕಾರ್ಯದಲ್ಲಿ, ಹಿಂದಿನ ಆಡಳಿತ ಪ್ರಣಾಳಿಯ ಕಾರಣದಿಂದ ಒಂದೆಡೆಯೇ ಸೇರಿಹೋದ ಸಂಪತ್ತು ಸಮಾಜವಾದದ ನೈಜ ತತ್ವಗಳಂತೆ ಹೇಗೆ ಹಂಚಿಹೋಗುತ್ತದೆ ಎಂಬುದನ್ನು ನಾವು ಮನಗಾಣಬಹುದು. ಸಮಾಜವಾದ ತತ್ವಗಳಿಗನುಸಾರವಾಗಿ ನವ ಸಮಾಜವನ್ನು ರಚಿಸಿ, ದೇಶದಲ್ಲಿ ಶ್ರೀಮಂತಿಕೆಯನ್ನೂ ಬಡತನವನ್ನೂ ನಿರ್ನಾಮ ಮಾಡಿ ದೇಶವನ್ನು ಪುನಾರಚಿಸುವ ಆದರ್ಶ ಹೊತ್ತ ಕಾಂಗ್ರೆಸ್ಸು ಎರಡೂ ವರ್ಗಗಳಿಗೆ ಅನ್ಯಾಯವಾಗದಂತೆ ಹೊಸತಾದ ರೀತಿಯಲ್ಲಿ ದೇಶೋದ್ಧಾರ ಕಾರ್ಯದಲ್ಲಿ ತತ್ಪರವಿರುವುದನ್ನು ನಾವು ಮನಗಾಣಬೇಕು. ಆದುದರಿಂದ, ವಿರೋಧಿ ಪಕ್ಷದವರ ಅಪಪ್ರಚಾರದಿಂದ ಮತದಾರರು ದಿಕ್ಕುಗೆಡದೆ ಕಾಂಗ್ರೆಸ್ ಪಕ್ಷವನ್ನೇ ಬಹುಮತದಿಂದ ವಿಧಾನ ಸಭೆಗೂ ಲೋಕ ಸಭೆಗೂ ಆರಿಸಿ ಕಳಿಸುವುದರಿಂದ ತಮ್ಮ ಉದ್ಧಾರ ಕಾರ್ಯದಲ್ಲಿ ಅಗ್ರಗಾಮಿಗಳಾದಂತಾಗುವುದು. ಈ ಕಾರಣದಿಂದ ನಿಮ್ಮೆಲ್ಲರೂ ಮತಗಳನ್ನು ಕಾಂಗ್ರೆಸ್ ಪಕ್ಷದ ಹುದ್ದರಿಗೇನೇ ಕೊಟ್ಟು, ಕಾಂಗ್ರೆಸ್‌ನ ಕೈಯಲ್ಲಿ ನಿಮ್ಮ ಭವಿಷ್ಯವನ್ನು ಭದ್ರವಾಗಿರಿಸುವುದು ಅವಶ್ಯವೆಂದು ಕೊನೆಯದಾಗಿ ವಿನಂತಿಸುತ್ತೇವೆ.

ಬೆಂಕಿ ಹೊಗೆಯುತ್ತಿದೆ

ಶಾಂತವಾಗಿದ್ದ ಕಾಶ್ಮೀರದ ಪ್ರಶ್ನೆಯನ್ನು ಕೆದಕ ಹೋಗಿ ಭಾರತದ ರಾಜಕಾರಣದಲ್ಲಿ ಚುನಾವಣೆಯ ವೇಳೆ ದೂಳೆಬ್ಬಿಸ ಹೊರಟಿದ್ದ ಪಾಕಿಸ್ತಾನದ ನಿರಂಕುಶ ಅಧ್ಯಕ್ಷರೆನಿಸಿದ ಮೇಜರ್ ಜನರಲ್ ಅಯೂಬಖಾನರು ತಮ್ಮ ದೇಶದ ರಾಜಕಾರಣದಲ್ಲೇ ಹೊಗೆಯಾಡುತ್ತಿರುವುದನ್ನು ಶಾಂತಗೊಳಿಸಬೇಕಾಗಿದೆ. ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಸುಹ್ರವರ್ದಿಯವರು ರಾಜಕೀಯದಲ್ಲಿ ಪ್ರವೇಶಿಸಬಾರದೆಂದು ತನಗಿತ್ತಿದ್ದ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಆರೋಪದ ಮೇಲೆ ಅವರನ್ನು ಬಂಧಿಸಿ ವಿಚಾರಣೆಗೆ ಗುರಿಮಾಡಿದ ಅಯೂಬರ ವರ್ತನೆ ಎಲ್ಲ ಪಾಕಿಸ್ತಾನಿಗಳಿಗೂ ಸರಿಕಂಡಿದೆಯೆಂದು ಹೇಳುವಂತಿಲ್ಲ. ಸರಿಯೆನಿಸಿದ್ದರೆ; ಪೂರ್ವ ಪಾಕಿಸ್ತಾನದಲ್ಲಿ ಅಶಾಂತಿಯು ಕಾವು ಹರಡುತ್ತಿರಲಿಲ್ಲ. ಅಲ್ಲಿನ ವಿದ್ಯಾರ್ಥಿಗಳೂ ಮತ್ತಿತರರೂ ಸೇರಿ, ಸುಹ್ರವರ್ದಿಯವರ ಕಡೆಗೆ ಪಾಕ್ ಸರಕಾರವು ತೋರಿದ ವರ್ತನೆಯಿಂದ ಕೆರಳಿ ಮತ ಪ್ರದರ್ಶನವನ್ನು ನಡೆಸತೊಡಗಿದ್ದು, ಇದನ್ನು ತಣಿಸುವಲ್ಲಿ ಮಿಲಿಟರಿ ಅಧ್ಯಕ್ಷರು ಇದುವರೆಗೆ ಉಗ್ರೋಪಾಯ ಪ್ರಯೋಗ ಮಾಡಿಯೂ ಅಸಮರ್ಥರಾಗಿದ್ದಾರೆನ್ನುವಾಗ, ದಿನದಿಂದ ದಿನಕ್ಕೆ ಅವರು ಅಪ್ರಿಯರಾಗುತ್ತ ಬರುತಿದ್ದಾರೆಂದು ಹೇಳಬಹುದು. ಪಾಕಿಸ್ತಾನದ ಹೊಸ ರಾಜ್ಯ ಘಟನೆಯು ತಯಾರಾಗಿ ಅದಕ್ಕನುಸಾರ ಚುನಾವಣೆಯು ನಡೆಯುವುದೆಂದು ಒಂದು ವರ್ಷ ಕಳೆದರೂ ಇನ್ನೂ ಆ ಸಂವಿಧಾನವು ಪೂರ್ಣಗೊಂಡಿಲ್ಲದಿರುವುದು ಇಂತಹ ಅಭಿಪ್ರಾಯಕ್ಕೆ ಮತ್ತಷ್ಟು ಒತ್ತಾಸೆ ಕೊಟ್ಟಿದೆಯೆನ್ನಬಹುದು. ನೇಪಾಳದಲ್ಲಿ ಅರಸರ ವಿರುದ್ಧ ನೇಪಾಲೀ ಕಾಂಗ್ರೆಸ್‌ನ ಅಧ್ಯಕ್ಷ ಸೂತ್ರಧಾರತನದಲ್ಲಿ ನಡೆಯುತ್ತಿರುವ ಗೊಂದಲ, ಪೂರ್ವ ಪಾಕಿಸ್ತಾನದ ಗುಲ್ಲು, ಚೀನಾದ ಆಕ್ರಮಣಗಳ ಹಿನ್ನೆಲೆಯಲ್ಲಿ ನಡೆಯುತ್ತಿರುವ ಭಾರತೀಯ ಚುನಾವಣೆಗಳು ಭಾರತೀಯರಿಗೆ ಪ್ರಜಾಪ್ರಭುತ್ವದಲ್ಲಿ, ಕಾಂಗ್ರೆಸ್ ಧುರೀಣತ್ವದಲ್ಲಿ ವಿಶ್ವಾಸವಿದೆಯೆಂದು ಜಗತ್ತಿಗೆ ತೋರಿಸಿಕೊಡಬೇಕಾಗಿದೆ.

ಎಕೆಡೆಮಿಯ ಸಂಗೀತ ಮತ್ತು ಲಲಿತ ಕಲಾಶಾಲೆಗಳ— ವರ್ಧಂತ್ಯುತ್ಸವವು ಇದೇ ತಾ. 10ರಂದು ಡಾ. ಸುಂದರ ರಾಮ ಪೈ ಸ್ಮಾರಕ ರಂಗಮಂಟಪದಲ್ಲಿ ಸಬ್ ಜಡ್ಜ್ ಶ್ರೀ ಜಿ. ಬಿ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಪ್ರಾರ್ಥನೆಯ ನಂತರ ಎಕೆಡೆಮಿಯ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಮಾಧವ ಭಟ್ಟರು ವರದಿಯನ್ನು ಓದಿದ ಮೇಲೆ ಅಧ್ಯಕ್ಷರು ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಣೆ ಮಾಡಿ ಭಾಷಣವಿತ್ತರು. ಅಂತ್ಯದಲ್ಲಿ ಮನೋರಂಜನೆಯ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದುವು.

ಕಡಿಯಾಳಿ ಹಾ. ಎ. ಶಾಲೆಯ— ವರ್ಧಂತ್ಯುತ್ಸವವು ತಾ. ೧೦ರಂದು ಉಡುಪಿಯ ಎ. ಡಿ. ಇ. ಓ. ಶ್ರೀ ವಿ ಎಸ್. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಶಾಲೆಯ ವರದಿಯನ್ನು ಓದಿ ಹೇಳಿ, ಪಂಪ್‌ಸೆಟ್ಟನ್ನು ದಾನವಾಗಿತ್ತ ಶಾಲಾ ಹಳೆ ವಿದ್ಯಾರ್ಥಿ ಸಂಘಕ್ಕೂ ಶಾಲಾಭಿವೃದ್ಧಿ ಸಂಘಕ್ಕೂ, ಮಧ್ಯಾಹ್ನದ ಗಂಜಿ ಊಟದ ವ್ಯವಸ್ಥೆಗೆ ನೆರವಾದವರಿಗೂ ಕೃತಜ್ಞತೆಯನ್ನರ್ಪಿಸಿದರು. ಹ. ವಿ. ಸಂಘದ ಅಧ್ಯಕ್ಷ ಶ್ರೀ ಕೆ ಕೆ. ಪೈ ಅವರು ಪಂಪ್‌ಸೆಟ್ಟನ್ನು ಉದ್ಘಾಟಿಸಿ, ೮೦೦ ಮಕ್ಕಳಿಗೆ ನೀರು ಕುಡಿಯುವುದಕ್ಕೂ ತೋಟಗಾರಿಕೆಯ ಅಭಿವೃದ್ಧಿಗೂ ಇದು ಸಹಾಯಕವಾಗುವುದೆಂದರು. ಅಧ್ಯಕ್ಷರು ಮಾತನಾಡುತ್ತ ದಕ್ಷಿಣ ಕನ್ನಡದ ವಿದ್ಯಾಪ್ರಗತಿಯನ್ನು ಕೊಂಡಾಡಿ, ಈ ಶಾಲೆಯು ಸರ್ವ ರೀತಿಯಲ್ಲೂ ಉತ್ತಮವಾದುದೆಂದು ಶಾಲಾ ಪರಿಶೀಲನೆ ಮಾಡಿದ ಡಿ. ಇ ಶ್ರೀ ಪೈ, ಗೋಪಾಲರು ಬರೆದ ಷರಾವನ್ನು ಸಮರ್ಥಿಸಿದರು. ವಿದ್ಯಾರ್ಥಿಗಳು 'ಕಿತ್ತೂರ ಕೇಸರಿ' ಎಂಬ ನಾಟಕವನ್ನು ಈ ಸಂದರ್ಭದಲ್ಲಿ ಅಭಿನಯಿಸಿದರು. ಪೂರ್ವಾಹ್ನ ಶ್ರೀ ಶ್ರೀಶ ಆಚಾರ್ಯರು ಧ್ವಜವರಳಿಸಿದರು.

ಕಡಿಯಾಳಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ— ವಾರ್ಷಿಕೋತ್ಸವವು ತಾ 11ರಂದು ನಡೆಯಿತು. ಉಡುಪಿಯ ಎಡ್ವೊಕೇಟ್ ಶ್ರೀ ಎಂ ಡಿ. ಕಾಮತರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರು ಸ್ವಾಗತಿಸಿದ ಮೇಲೆ, ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪಿಚಂದರಾಯರು 1961ಕ್ಕೆ ಸಂಬಂಧಿಸಿದ ಸಂಘದ ವರದಿಯನ್ನು ಓದಿದರು. ಸಂಘವು ಈ ವರ್ಷ, ಒಂದು ಪುಸ್ತಕ ಭಂಡಾರ ಮತ್ತು ಹಿಂದೀ ವರ್ಗವಿಭಾಗಗಳನ್ನು ಪ್ರಾರಂಭಿಸಿರುವುದಾಗಿಯೂ ಅದರಲ್ಲಿ ಉಲ್ಲೇಖಿಸಲಾಗಿತ್ತು. ಅಧ್ಯಕ್ಷರು ಸಂಘದ ಕಾರ್ಯಪ್ರಗತಿಗೆ ಸಂತೋಷ ವ್ಯಕ್ತಪಡಿಸಿ ಶಾಲೆಯನ್ನು ಹೈಸ್ಕೂಲಾಗಿ ಪರಿವರ್ತಿಸುವಲ್ಲಿ ಸಂಘವು ಪ್ರಯತ್ನಮಾಡಬೇಕೆಂದು ವಿನಂತಿಸಿ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿತರಿಸಿದರು. ಆ ಮೇಲೆ ಹಳೆಯ ವಿದ್ಯಾರ್ಥಿಗಳು ಶ್ರೀಮಾನ್ ಭಿಕನ್ನಾಸಿಯೆಂಬ ಸಂಗೀತ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ಅಂದು ಬೆಳಿಗ್ಗೆ ಸಂಘದ ಸದಸ್ಯರ ಮಹಾಧಿವೇಶನ ನಡೆದು ವರದಿ ಮತ್ತು ಲೆಕ್ಕ ಪತ್ರಗಳನ್ನು ಮಂಜೂರು ಮಾಡಿ, ಮುಂದಿನ ವರ್ಷಕ್ಕೆ ಕಾರ್ಯಕಾರಿ ಸಮಿತಿಯನ್ನು ಆರಿಸಿತು.

ಅಲ್ಲಲ್ಲಿಯ ಸುದ್ದಿ ಸಾರ

ಕಾಂಗ್ರೆಸಿಗೆ ಹರಿಜನರ ಬೆಂಬಲ– ತಾ. 3–2–62ರಲ್ಲಿ ಅಷ್ಟಗ್ರಹ ಯೋಗದ ಅನಿಷ್ಟ ಶಾಂತಿ ಬಗ್ಗೆ ಭಿರ್ತಿ, ಸಾಸ್ತೇರಿ, ಹೇಟಬೆಟ್ಟು, ಬೇಳೂರು, ಕಿಜಯಬೆಟ್ಟು ಭಜನೆ ಸಂಘಗಳ ಸಾಮೂಹಿಕ ನಗರ ಸಂಕೀರ್ತನೆ, ಅಹೋ ರಾತ್ರಿ ಭಜನೆ ವೈಭವದಿಂದ ನೆರವೇರಿ, ಸಮುದ್ರ ಸ್ನಾನವಾಗಿ ಶ್ರೀ ಎಸ್. ರಾಮನವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ–ಶ್ರೀಗಳಾದ ಎಸ್. ನಾರಾಯಣ, ಗಣಪ, ಕೊಂಬ ಕುಂತಾದವರಿಂದ ಭಾಷಣಗಳಾಗಿ–ಜಿಲ್ಲಾ 8 ಸಂಗಡದ ಹರಿ ಗಿರಿ ಜನ ಭಜನ ಸಂಘಗಳ 300 ಮೆಂಬರರು, ತಾಲೂಕುಬೋರ್ಡು, ಪಂಚಾಯತಬೋರ್ಡು, ಮಂಡಲಕಾಂಗ್ರೆಸ್ ಪ್ರೆಸಿಡೆಂಟರುಗಳು ಹಾಗೂ ಮೆಂಬರುಗಳು ಮತ್ತು ಬೈಂದೂರು ವಗಿನ ಹರಿಜನ ಗೌಡರು ರಿ. ಸಿ. ಹಾದೀಕ ಬೆಂಬಲ ಇತ್ತು ಸರ್ವರಿಗೂ ಚಿರಪರಿಚಯಾಗಿರುವನೆಂದೂ ಕಾಂಗ್ರೆಸ್ಸಿನಿಂದಲೇ ಹರಿಜನರ ಏಳಿಗೆ ಆಗ ಬೇಕಾಗಿರುವುದರಿಂದ ಹರಿಜನರೆಲ್ಲಾ ಕಾಂಗ್ರೆಸ್ ಜೋಡೆತ್ತಿನ ಗುರ್ತಿಗೆ— ಮುಖ್ಯವಾಗಿ ಬ್ರಹ್ಮಾವರದಲ್ಲಿ ಶ್ರೀ ಧರ್ಮಸಾಮ್ರಾಜ್ಯರಿಗೆ, ಉಡುಪಿಯಲ್ಲಿ ಶ್ರೀ ಮಧ್ವರಾಜರಿಗೆ ಮತವಿತ್ತು ಬೆಂಬಲ ನೀಡಬೇಕಾಗಿಯೂ ಶ್ರೀ ಯು. ಗೋಪಾಲಕೃಷ್ಣನವರು ಹೇಳಿಕೊಂಡ ಸೂಚನೆಯನ್ನು ಸರ್ವಾನುಮತದಿಂದ ಸ್ವೀಕರಿಸಿ ಶ್ರೀ ಮಾಲಿಂಗನವರ ಧನ್ಯವಾದದೊಡನೆ ಸಭಾಂತ್ಯವಾಯಿತು.

ನೂತನ್ ಕ್ಲೀನರ್ಸ್‌ನ ಪ್ರಾರಂಭೋತ್ಸವ— ಉಡುಪಿ ಚರ್ಚ ರೋಡಿನಲ್ಲಿನ ನೂತನ್ ಫೋಟೋ ಸ್ಟುಡಿಯೋದಲ್ಲಿ ಇದೇ ತಾ. 9ರಂದು ಹೊಸತಾಗಿ ವ್ಯವಸ್ಥಿತವಾದ ನೂತನ್ ಕ್ಲೀನರ್ಸ್ ಇದರ ಪ್ರಾರಂಭೋತ್ಸವವು ನೆರವೇರಿತು. ಈ ಸಂಬಂಧ ಸಂತೋಷ ಉಪಾಹಾರ ಕೂಟ ಜರಗಿದಾಗ ವ್ಯವಸ್ಥಾಪಕ ಶ್ರೀ ಶ್ರೀನಿವಾಸ ಬಿ. ಮೆಂಡನ್‌ರು ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸಿದರು.

ಉಡುಪಿ ಸ್ಪೋರ್ಟ್ಸ್ ಎಸೋಸಿಯೇಶನ್— ಇದರ ವಾರ್ಷಿಕ ಪಂದ್ಯಾಟಗಳ ಉದ್ಘಾಟನೆಯು ಇದೇ ತಾ 10ರಂದು ಎಮ್. ಜಿ. ಎಮ್. ಕಾಲೇಜಿನ ಆಟದ ಬಯಲಲ್ಲಿ ಶ್ರೀ ಟಿ. ಎ. ಪೈಯವರಿಂದ ನೆರವೇರಿಸಲ್ಪಟ್ಟಿತು. ಮರುದಿನ ಸಂಜೆ ಸಮಾರೋಪ ಮತ್ತು ಬಹುಮಾನ ವಿತರಣಾ ಸಮಾರಂಭವು ಎ. ಆರ್. ಪಿ. ಕೊಪ್ಪಿಕರ್ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಬಸ್ರೂರು ಮಹಿಳಾ ಮಂಡಳದ ವಾರ್ಷಿಕೋತ್ಸವವು— ತಾ. 20.1–62ರಂದು ಬೈಂದೂರು ಬ್ಲೋಕಿನ ಮಹಿಳಾ ಸಮಾಜ ಹಿತಚಿಂತನಾ ಮಂಡಳಿ ಸಹ ಅಧ್ಯಕ್ಷೆಯೂ, ಕುಂದಾಪುರ ಮಹಿಳಾ ಸಂಘದ ಅಧ್ಯಕ್ಷೆಯೂ ಆದ ಶ್ರೀಮತಿ ಶಾರದ ಆರ್. ಸಿದ್ಧಾಂತಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಕುಮಾರಿ ಸರೋಜಿನಿ ಹೆಗ್ಡೆಯವರಿಂದ ಸ್ವಾಗತ ಭಾಷಣ, ಕುಮಾರಿ ಸುಶೀಲಾ ಬಾಯಿಯವರಿಂದ ವರದಿ ವಾಚನವಾದ ಬಳಿಕ ಶ್ರೀ ವೀರರಾಜೇಂದ್ರ ಹೆಗ್ಡೆಯವರು ಸಂಘದ ಅಭ್ಯುದಯದ ಕುರಿತು ಸಲಹೆಗಳನ್ನಿತ್ತರು. ಅಧ್ಯಕ್ಷೆಯವರು ತಮ್ಮ ಭಾಷಣದಲ್ಲಿ ಸರಕಾರವು ಇಂದು ಮಹಿಳೆಯರಿಗೆ ಕೊಡುವ ಸ್ಥಾನ ಮಾನ ಸವಲತ್ತುಗಳು ಸಾಲದೆಂಬುದಾಗಿಯೂ ದೇಶದ ಬಡತನ ನಿವಾರಣೆಯಾಗ ಬೇಕಾದರೆ ಗಂಡಸರ ಜೊತೆಯಲ್ಲಿ ಪ್ರತಿ ಮಹಿಳೆಯರೂ ಪಾಲುದಾರರಾಗ ಬೇಕೆಂಬುದಾಗಿಯೂ ಇಂದಿನ ಮಹಿಳಾ ಏಳಿಗೆಯೇ ದೇಶದ ಏಳಿಗೆ ಎಂಬುದಾಗಿಯೂ ಮುಂದಿನ ಜನಾಂಗವಾದ ಮಕ್ಕಳ ಏಳಿಗೆಯು ಮಹಿಳೆಯರ ಮೇಲಿರುವುದರಿಂದ ಸರಕಾರವು ಮಹಿಳೆಯರ ಏಳಿಗಾಗಿ ವಿಶೇಷ ಗಮನ ಕೊಡುವುದು ಉಚಿತವೆಂಬುದಾಗಿಯೂ ಅಭಿಪ್ರಾಯ ಪಟ್ಟರಲ್ಲದೆ ಇಂತಹ ಸಂಘ, ಸಂಸ್ಥೆಗಳಲ್ಲಿ ಸ್ತ್ರೀಯರು ಭಾಗ ವಹಿಸುವಂತೆ ಮಾಡುವುದು ಗಂಡಸರ ಕರ್ತವ್ಯವೆಂದೂ ಸ್ತ್ರೀಯರು ತಮ್ಮ ಸಹಭಾಗಿಗಳೆಂಬುದನ್ನು ಗಂಡಸರು ಪರಿಗಣಿಸಬೇಕೆಂದೂ ಹೇಳಿದರು. ಹಾಗೂ, ಈ ಕ್ಷೇತ್ರದಲ್ಲಿ ಈ ಸಂಸ್ಥೆಯನ್ನು ಕಟ್ಟಿ ಬೆಳಗಿಸಿದ ಕಾರ್ಯಕರ್ತರನ್ನು ಶ್ಲಾಘಿಸಿದರು. ಬಳಿಕ ಮಹಿಳಾ ಮಂಡಳದವರಿಂದ ನಾಟಕ ನೃತ್ಯಾಭಿನಯಗಳು ಸಾಂಗವಾಗಿ ಜರಗಿದುವು.

ಕೆಥೊಲಿಕ್ ವಿದ್ಯಾರ್ಥಿ ಸಂಘ— ಉಡುಪಿ ವಿಭಾಗದ ಕೋಲೇಜುಗಳ ಕೆಥೊಲಿಕ್ ವಿದ್ಯಾರ್ಥಿ ಸಂಘದ ಮಹಾಸಭೆಯು ಇದೇ ತಾ 10ರಲ್ಲು ಡಾನ್ ಬಾಸ್ಕೋ ಕ್ಲಬ್ಬಿನಲ್ಲಿ ಶ್ರೀ ನೋರಿಯನ್ ರೊಡ್ರಿಗಸ್ ಇವರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯಕಾರಿ ಸಮಿತಿಗೆ ಶ್ರೀ ಶಿರ್ತಾಡಿ ವಿಲಿಯಮ್ ಪಿಂಟೊ(ಅಧ್ಯಕ್ಷ) ಕುಮಾರಿ ಓಲೀಫಿಯಾ ಡಿಸೋಜ ಉಪಾಧ್ಯಕ್ಷೆ, ಶ್ರೀ ಜೋನ್ ಲಸ್ರಾದೊ—ಕಾರ್ಯದರ್ಶಿ; ಕುಮಾರಿ ನೆಲ್ಲಿ ಡಿಸೋಜ ಸಹ ಕಾರ್ಯದರ್ಶಿಣಿ ಶ್ರೀ ಬೊನಿಫಸ್ ನೊರೊನ್ಹ ಖಜಾಂಚಿಯಾಗಿ ಅವಿರೋಧವಾಗಿ ಆರಿಸಲ್ಪಟ್ಟರು. ರೆ. ಫಾ. ಸಿಲ್ವೆಸ್ಟರ್ ಡಿಸೋಜರವರ ಹಿತವಚನಗಳ ತರುವಾಯ ಶ್ರೀ ಗ್ರೆಗೊರಿ ಅಂದ್ರಾದೆಯವರು ಧನ್ಯವಾದ ಸಮರ್ಪಿಸಿದರು

ದೇಲಂಪಾಡಿ– ಇದೇ ತಾ. 3ರಂದು ಶ್ರೀ ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ಟರ ನಿರ್ದೇಶನದಲ್ಲಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಭಕ್ತ ಮಯೂರಧ್ವಜ ಯಕ್ಷಗಾನ ಕಾಲಕ್ಷೇಪ ನಡೆಯಿತು. ವ್ಯವಸ್ಥಾಪಕ ಶ್ರೀ ಕೆ. ಬಿ. ರೈಗಳು ಧನ್ಯವಾದ ಸಮರ್ಪಿಸಿದರು.

ನೇಗಿನಹಾಳ—ತಾ. 2—2—62ರಂದು ಬೆಳಗಾವಿ ಜಿಲ್ಲಾ ನೇಗಿನ ಹಾಳದಲ್ಲಿ ಅ. ಕ. ನಿರುದ್ಯೋಗಿ ತರುಣ ಶಿಕ್ಷಕ.ಶಿಕ್ಷಕಿಯರ ಸಮ್ಮೇಲನವು ವಿಜೃಂಭಣೆಯಿಂದ ನೆರವೇರಿತು. ಶ್ರೀ ಬಿ. ಬಿ ಮಮದಾಪೂರರು ಸಮ್ಮೇಲನವನ್ನು ಉದ್ಘಾಟಿಸಿದರು. ಡಾ. ಎಮ್. ಎಸ್. ಹೆಗ್ಡೆಯವರು ಸಂದೇಶಗಳನ್ನು ಓದಿದರು ಹಲವರು ಭಾಷಣ ಮಾಡಿದರು. ಅಂತ್ಯದಲ್ಲಿ ಮನೋರಂಜನೆಯ ಕಾರ್ಯಕ್ರಮಗಳಾದುವು.

ಪಡುಕೋಣೆ— ತಾ. 6–2–62ರಂದು ಕುಂದಾಪುರ ರೇಂಜಿನ ಹಿರಿಯ ಪರೀಕ್ಷಾಧಿಕಾರಿ ಶ್ರೀ ಪಿ. ಎಸ್ ನಾರಾಯಣ ರಾಯರ ಸೂಚನೆಯಂತೆ ಪಡುಕೋಣೆ ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಶಾಲಾಭಿವೃದ್ಧಿ ಸಮಿತಿಯೊಂದೊಡಗೂಡಿ ನಾಡಾ ಪಂಚಾಯತ್ ಅಧ್ಯಕ್ಷ ಶ್ರೀ ರಾಮಕೃಷ್ಣ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಶ್ರೀ ಶಂಕರನಾರಾಯಣರಾಯರಿಂದ ಮಧ್ಯಾಹ್ನ ಊಟದ ಉದ್ಘಾಟನೆ ನೆರವೇರಿತು. ಮುಖ್ಯೋಪಾಧ್ಯಾಯ ಶ್ರೀನಿವಾಸರಾವ್‌ರವರು ಸ್ವಾಗತಿಸಿದ ಮೇಲೆ ಶ್ರೀಗಳಾದ ಪಿ ರಾಮಚಂದ್ರಯ್ಯ, ಪಿಲಿಪ್ ಲೂವಿಸ್‌ರು ಭಾಷಣ ಮಾಡಿದರು.

ಜಿಲ್ಲಾ ಬೋರ್ಡು ಶಾಲಾ ಅಧ್ಯಾಪಕರ ಗೋಳು— ಬರ್ಖಾಸ್ತಾದ ದ. ಕ. ಜಿಲ್ಲಾಬೋರ್ಡಿನ ಆಡಳಿತೆಯಲ್ಲಿರುವ ನೌಕರರೆಲ್ಲಾ ಹೊಸ ಮೈಸೂರು ರಾಜ್ಯದ 1959ನೇ ಪಂಚಾಯತ ಆಕ್ಟಿನ ಪ್ರಕಾರ ತಾ1.11.1959 ರಿಂದಲೇ ಸರಕಾರಿ ನೌಕರರಾಗಿರುತ್ತಾರೆ ಮತ್ತು ಮದ್ರಾಸು ಸರಕಾರದ ಫಂಡಮೆಂಟಲ್ ರೂಲು ಪ್ರಕಾರ ಅರ್ಧ ಸಂಬಳದ ಪೆನ್‌ಶ್ಯನ್ ಪಡೆಯಲು ಪಕ್ಕಿಲ್ಲದ ತಪ್ಪು 60ನೇ ವರ್ಷ ಪ್ರಾಯದಲ್ಲಿ ನಿವೃತ್ತರಾಗುವವರಿದ್ದಾರೆ

ಆದರೆ ಬರ್ಖಾಸ್ತಾದ ದ. ಕ. ಜಿಲ್ಲಾ ಬೋರ್ಡು ಇವರ ಆಡಳಿತೆ ವರ್ಗದವರು ಹೊಸ ಮೈಸೂರು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸುವ ಏಕರೂಪದ ರೂಲು ಜ್ಯಾರಿಗೆ ಬರುವ ತನಕ ರೂಢಿಯಲ್ಲಿದ್ದ ರೂಲು ಪ್ರಕಾರವೇ ಅಧ್ಯಾಪಕರನ್ನೆಲ್ಲಾ 55ನೇ ವರ್ಷದಲ್ಲೇ ನಿವೃತ್ತರನ್ನಾಗಿ ಮಾಡಿ ಅರ್ಧ ಸಂಬಳದ ಪೆನ್‌ಶ್ಯನ್ ಕೊಡದೆ ಹೊರದೂಡುತ್ತಿದೆ.

ಇದರಿಂದಾಗಿ ಆಗುವ ಅನ್ಯಾಯದ ಕುರಿತು ವಿವರಿಸಿ, ನ್ಯಾಯಪಡಿಸಬೇಕೆಂದು ಕೇಳಿಕೊಂಡರೂ ಪ್ರಯೋಜನ ಬೀಳಲಿಲ್ಲ ಆದುದರಿಂದ ನ್ಯಾಯಪಡುವುದಕ್ಕೆ ಕೋರ್ಟಿಗೇ ಹೋಗಬೇಕಾಗಿದೆ, ಆ ಬಗ್ಗೆ ತುಂಬಾ ಖರ್ಚು ಇದೆ. ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ, ಆದುದರಿಂದ ದ. ಕ. ಜಿಲ್ಲಾ ಬೋರ್ಡ ಆಡಳಿತೆಯಲ್ಲಿರುವ ಎಲ್ಲಾ (ಪ್ರಾಥಮಿಕ ಮತ್ತು ಹೈಸ್ಕೂಲು) ಶಾಲೆಗಳ ಅಧ್ಯಾಪಕರೂ ತಮ್ಮ ಸಹಾಯ ಧನವನ್ನು ಈ ಕಾರ್ಯವನ್ನು ಮುಂದೊತ್ತಿಕೊಂಡು ಹೋಗಲು ಉದ್ಯುಕ್ತರಾದ ಕುಂದಾಪುರ ತಾಲ್ಲೂಕು ಪ್ರಾಥಮಿಕ ಶಾಲಾ ಅಧ್ಯಾಪಕರ ಯೂನಿಯನ್ ಪ್ರೆಸಿಡೆಂಟ್ ತೆಕ್ಕಟೆ ಇವರಿಗೆ ತ್ವರಿಯ ಕಳುಹಿಸಿ ಪ್ರೋತ್ಸಾಹಿಸ ಬೇಕಾಗಿ ಕೋರಲಾಗಿದೆ.

ಜಗತ್ಪರ್ಯಟನ

ಸತ್ವ ಪರೀಕ್ಷೆ

ಪಂಡಿತ ನೆಹರು ಎಂದರೆ ಕಾಂಗ್ರೆಸ್ಸಿಗರಿಗೆ ಮಾತ್ರವಲ್ಲ, ಇಡಿಯ ದೇಶಕ್ಕೆನೇ ಪ್ರಿಯರು. ಆದುದರಿಂದ ಕೆಲವು ಧುರೀಣರು ನಮಗೆ ನೆಹರುಗಳ ಮೇಲೆ ವಿಶ್ವಾಸವಿದೆ. ಆದರೆ, ಕೃಷ್ಣಮೆನನ್ನರಲ್ಲಿಲ್ಲವೆನ್ನುತ್ತಾರೆ ಇಂತಹರ ಮಾತುಗಳಿಂದ ನೊಂದ ನೆಹರು ಹೇಳುತ್ತಾರೆ· ಇದು ಅರ್ಥವಿಲ್ಲದಮಾತು; ಮೆನನ್ನರ ಮೇಲೆ ವಿಶ್ವಾಸವಿಲ್ಲವೆಂದು ನಾನು ಅನ್ನಬೇಕು· ನನಗವರ ಮೇಲೆ ವಿಶ್ವಾಸವಿದೆ ಎಂದು· ಆದರೂ ನೆಹರೂ ಜಾಲ ಅಲ್ಲಿ ನಡೆಯಲಿಲ್ಲ .ಉತ್ತರ ಬೊಂಬಾಯಿಯಲ್ಲಿ ಕೃಷ್ಣಮೆನನ್ನರು ಗೆಲ್ಲುವುದೆಂದರೆ, ನೆಹರು ಗೆಲ್ಲುವುದಕ್ಕೂ ಹೆಚ್ಚೆನಿಸಿದೆ· ಕಮ್ಯುನಿಸ್ಟೇತರ ವಿರೋಧಿ ಪಕ್ಷಗಳ ಚಕ್ರವ್ಯೂಹದಲ್ಲಿ ಭಾರತದ ಸಂರಕ್ಷಣಾಮಂತ್ರಿಗಳ, ಅವರ ಜತೆಗೆ ಪ್ರಧಾನಿ ನೆಹರುಗಳ ಸತ್ವಪರೀಕ್ಷೆಯಾಗಲಿದೆ ಕಳೆದ ಬಾರಿಯೂ ಇದೇ ಮಾದರಿಯ ಹೋರಾಟ ಅಲ್ಲಿ ನಡೆದಿತ್ತು, ಅದರಲ್ಲಿ ಮೆನನ್ನರು ಮತ್ತಳಿಯರ. ಹೊರಬಂದರು. ಈ ಸಲದ ಕಾಳಗ ಇದಕ್ಕಿಂತ ಬಿರುಸಿದ್ದರೂ ವಿಜಯ ಪಂಡಿತ ಆದರೆ ಇದು ಮೆನನ್ನರು ವಿಜಯವಲ್ಲ; ನೆಹರೂ ವಿಜಯವೆಂದು ಬೇರೆ ಹೇಳಬೇಕಾಗಿಲ್ಲ.

ರಾಜಾಜಿಯ ಕನಸು

ಸ್ವತಂತ್ರ ಪಕ್ಷದ ಅಗ್ರಣಿ ರಾಜಾಜಿ ಚುನಾವಣೆಗೆ ನಿಲ್ಲದಿದ್ದರೂ ಚುನಾವಣಾ ರಂಗಕ್ಕೆ ಇಳಿದಿದ್ದಾರೆ. ಉತ್ತರ ಮುಂಬಯಿಯಲ್ಲಿ ಮೆನನ್ನರ ವಿರುದ್ಧ ಮತ್ತು ಮಧ್ಯ ಪ್ರದೇಶದಲ್ಲಿ ನಂದರ ವಿರುದ್ಧ ಪ್ರಚಾರ ನಡೆಸಿ, ಭಾರತದ ಸಂರಕ್ಷಣಾನೀತಿ ಮತ್ತು ಯೋಜನಾ ನೀತಿಯನ್ನು ತಾವು ಪ್ರತಿಭಟಿಸುವುದಾಗಿ ಅವರು ಹೇಳುತ್ತಾರೆ ಕಾಂಗ್ರೆಸ್‌ನ ಆಳಿಕೆಯಿಂದ ಲೈಸನ್ಸ್‌ರಾಜ್ಯ ಮತ್ತು ಪೋಲೀಸ್ ರಾಜ್ಯ ಉದಿತವಾಗಿದೆಂದು ದೂರುವ ರಾಜಾಜಿಯವರು ತಾವು ಬಯಸುವ ಭಾರತ ಹೇಗಿರಬೇಕೆಂದು ವಿವರಿಸಿ ಹೇಳಿದ್ದಾರೆ· ಆದರೆ, ಅವರು ಬಯಸುವ ರೀತಿಯ ಭಾರತದ ನಿರ್ಮಾಣವು ಸ್ವತಂತ್ರ ಪಕ್ಷದ ಧೋರಣೆಯಿಂದ ಸಾಧ್ಯವಾದೀತೇ ಎಂಬುದು ಸಂದೇಹಾಸ್ಪದ. ಸಮಾಜವಾದ ಮಾದರಿಯಲ್ಲಿ ಸೌಮ್ಯರೂಪದ ಕ್ರಾಂತಿಯಿಂದ ಕಲ್ಯಾಣ ರಾಷ್ಟ್ರಕಟ್ಟುವ ಕಾಂಗ್ರೆಸಿನತತ್ವ ಬಂಡವಳಶಾಹಿ ಪ್ರಿಯರಿಗೆ ಹೇಗೆ ಸರಿ ಕಂಡೀತು?

ಪೇಚಿನಲ್ಲಿ ತಾರಾಸಿಂಗರು

ಶ್ರೀ ಎಸ್, ಆರ್. ದಾಸರ ಅಧ್ಯಕ್ಷತೆಯಲ್ಲಿ ಸಿಕ್ಖರ ಮೇಲೆ ಪಕ್ಷಪಾತವನ್ನು ತೋರಿಸಲಾಗುತ್ತಿದೆ ಎಂಬ ಆರೋಪದ ವಿಚಾರಣೆ ನಡೆಸಲು ಆಯೋಗವೊಂದನ್ನು ನೇಮಿಸಲಾಗಿತ್ತು ತಾನೆ? ಆ ಆಯೋಗವು ತನ್ನ ವರದಿಯನ್ನು ಇದೀಗ ಒಪ್ಪಿಸಿದೆ. ಸರಕಾರದ ಮೇಲೆ ಹೊರಿಸಿದ ಆರೋಪವು ನಿರಾಧಾರವಾದುದು· ಸಿಕ್ಖರ ಮೇಲೆ ಯಾವುದೇ ರೀತಿಯ ಪಕ್ಷಪಾತವನ್ನು ತೋರಿಸಲಾಗುತ್ತಿಲ್ಲವೆಂದು ಈ ವರದಿಯಲ್ಲಿ ಹೇಳಿದೆ. ಮಾಸ್ಟರ ತಾರಾಸಿಂಗರು ಈ ಸಮಿತಿಯ ರಚನೆಗೆ ಪ್ರಾರಂಭದಲ್ಲಿ ಒಪ್ಪಿದ್ದರೂ ಮುಂದೆ ಯಾವ ರೀತಿಯಿಂದಲೂ ಸಹಕರಿಸಲಿಲ್ಲವೆಂದೂ ಇಂತಹ ಅಸಹಕಾರಕ್ಕೆ ಪಂಜಾಬ ಸುಬಾದ ಬೇಡಿಕೆಯ ಪ್ರಶ್ನೆಯನ್ನು ಈ ಆಯೋಗದ ಕಕ್ಷೆಗೆ ಪ್ರತ್ಯಕ್ಷವಾಗಿ ನೀಡದಿದ್ದುದೇ ಕಾರಣವೆಂದೂ ತಿಳಿಯುತ್ತದೆ. ಹಾಗಾದರೆ, ಅಕಾಲೀ ನೇತಾರ ತಾರಾಸಿಂಗರು ಬೇಡಿದ್ದೇನು? ಅವರು ಒಪ್ಪಿದ್ದಾವುದಕ್ಕೆ? ಪಂಜಾಬಿ ಸುಬಾ ರಚನೆ ಮಾತ್ರ ಅವರಿಗೆ ಬೇಕಿತ್ತು;ಅಂದರೆ,ಪಕ್ಷಪಾತದ ಆರೋಪ ಕೇವಲ ಆರೋಪ ಮಾತ್ರ!

ನೇಪಾಳದಲ್ಲಿ ಬಂಡು

ನೇಪಾಲದ ಅರಸ ಮಹೇಂದ್ರರು ಬಿಕ್ಕಟ್ಟಿನ ಸರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. ರಾಷ್ಟ್ರದ್ರೋಹದ ಆರೋಪ ಹೊರಿಸಿ ಪ್ರಜಾಪ್ರಭುತ್ವ ಪದ್ಧತಿಯ ಸರಕಾರವನ್ನು ಕಿತ್ತೊಗೆದು ತನ್ನ ಕೈಗಳಿಗೆ ಅಧಿಕಾರವನ್ನು ತಗೆದುಕೊಂಡರು· ಆದರೆ, ಇದರಿಂದ ಕುಪಿತಗೊಂಡ ನೇಪಾಳಿ ಕಾಂಗ್ರೆಸಿಗರು ಭೂಗತ ಚಟುವಟಿಕೆಗಳಿಗೆ ತೊಡಗಿದ್ದಾರೆಂದೂ ನೇಪಾಲದಾದ್ಯಂತ ಕ್ರಾಂತಿಯೆಬ್ಬಿಸುವ ಪ್ರಯತ್ನ ನಡೆಸುತ್ತಿರುವರೆಂದೂ ವರದಿಗಳು ಬರತೊಡಗಿದೆ. ಸರಕಾರವು ಸೇನೆ-ಪೋಲೀಸುಗಳನ್ನು ಕಳಿಸಿ ಅದನ್ನು ಬಗ್ಗು ಬಡೆಯುವುದರಲ್ಲಿ ವ್ಯಸ್ತವಾಗಿದೆಯೆಂದು ಹೇಳುತ್ತಿದೆಯಾದರೂ ಬಂಡುಗಾರರ ತೀವ್ರ ತರದ ಚಟುವಟಿಕೆಗಳನ್ನು ಹತ್ತಿಕ್ಕುವುದು ಅಷ್ಟು ಸುಲಭವಾಗಿಲ್ಲ. ಎಂತಲೇ ಭಾರತದಲ್ಲಿ ತರಬೇತಿ ಪಡೆದವರೇ ನೇಪಾಳದಲ್ಲಿ ಬಂದು ಸಂಘಟಿಸುತ್ತಿರುವರು ಎಂಬ ದೂರು ಅಲ್ಲಿನ ಮಂತ್ರಿಯೋರ್ವರ ಬಾಯಿಂದ ಹೊರಬಿದ್ದಿದೆ.

ನಿಶ್ಶಸ್ತ್ರೀಕರಣದ ಪ್ರಶ್ನೆ

ನಿಶ್ಶಸ್ತ್ರೀಕರಣದ ಪ್ರಶ್ನೆ ಸಮುದ್ರದ ತೆರೆಯಂತೆ ಮೇಲೇರುತ್ತದೆ. ಉರುಳುತ್ತದೆ. ಅಮೆರಿಕೆಯ ಅಧ್ಯಕ್ಷ ಕೆನ್ನಡಿ ಮತ್ತು ಬ್ರಿಟಿಷ್ ಪ್ರಧಾನಿ ಮ್ಯಾಕಮಿಲನರು ಮರಳಿ ಈ ಬಗ್ಗೆ ಒಪ್ಪಿ ರಷ್ಯನ್‌ಪ್ರಧಾನಿ ಕ್ರುಶ್ಚೇವ್‌ರಿಗೆ ಪತ್ರಬರೆದಿದ್ದಾರೆ· ಜಿನೇವಾದಲ್ಲಿ ಮುಂದಿನತಿಂಗಳು ೧೪ನೆಯ ತಾರೀಕು ಸೇರಲಿರುವ ಇದಕ್ಕೆ ಭಾರತವನ್ನೊಳಗೊಂಡು ೧೮ ರಾಷ್ಟ್ರಗಳನ್ನು ಆಮಂತ್ರಿಸಬೇಕೆಂದು ಅವರು ಉತ್ತರ ಬರೆದಿದ್ದಾರೆ. ಕಳೆದ ಶರತ್ಕಾಲದಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ಕೆನ್ನಡಿ–ಕ್ರುಶ್ಚೇವರು ಒಪ್ಪಿಕೊಂಡಿದ್ದ ನಿಶ್ಶಸ್ತ್ರೀಕರಣದ ತತ್ವಗಳು ಈ ಮಾತುಕತೆಗಳಿಗೆ ನೆರವಾಗುತ್ತವು ಎಂದು ಹೇಳಲಾಗುತ್ತದೆ. ಆದರೆ, ಔಪಚಾರಿಕವಾಗಿ ಬಂದು ಸೇರುತ್ತಿರುವ ಇಂತಹ ಸಮ್ಮೇಲನವು ಏನನ್ನು ಸಾಧಿಸೀತೆಂದು ಸಾಧಿಸಿದ ಬಳಿಕ ತಾನೇ ಹೇಳಬೇಕು.

ದೇಶದಲ್ಲಿ ಮತದಾನ ಪ್ರಾರಂಭ

ದೇಶದಲ್ಲಿ ಸ್ವಾತಂತ್ರ್ಯ ನಂತರ ನಡೆಯಲಿರುವ ಮೂರನೆಯ ಮಹಾ ಚುನಾವಣೆಯು ನಮ್ಮ ಜಿಲ್ಲೆಯಲ್ಲಿ ಉಡುಪಿ ಲೋಕಸಭಾ ಮತದಾರ ಕ್ಷೇತ್ರದಲ್ಲಿ ತಾ ೧೯ರಂದೂ ಮಂಗಳೂರಲ್ಲಿ ತಾ. ೨೨ ರಂದೂ ನಡೆಯುವುದು. ಫೆಬ್ರುವರಿ ೨೫ ರಂದು ಸಂಜೆಯ ವೇಳೆಗೆ ಎಲ್ಲಾ ರಾಜ್ಯಗಳಲ್ಲಿಯೂ ಮತದಾನವು ಮುಗಿದು ಎಣಿಕೆ ಕೆಲಸ ಪ್ರಾರಂಭವಾಗುತ್ತದೆ.

ಅದೇ ದಿನ ರಾತ್ರಿ ಕೆಲವು ಚುನಾವಣಾ ಫಲಿತಾಂಶಗಳನ್ನು ರಾಷ್ಟ್ರಕ್ಕೆ ತಿಳಿಸಲಾಗುವುದು. ಮಾರ್ಚಿ ೨ನೆಯ ತಾರೀಖಿನ ವೇಳೆಗೆ ಎಲ್ಲಾ ಫಲಿತಾಂಶಗಳೂ ಪ್ರಕಟವಾಗುವುವು

> **ಮತದಾರರು ಮಾಡಬಾರದ್ದು**
>
> ಒಂದು ಚಿಹ್ನೆಗಿಂತ ಹೆಚ್ಚಿನ ಚಿಹ್ನೆಗಳ ಮೇಲೆ ಗುರುತು ಮಾಡಬಾರದು.
>
> ಮತದಾನ ಪತ್ರದ ಹಿಂಭಾಗದಲ್ಲಿ ಗುರುತು ಮಾಡಬಾರದು.
>
> ಪುತ್ತಾವುದೇ ಗುರುತನ್ನಾಗಲಿ ಹೆಬ್ಬೆಟ್ಟಿನ ಗುರುತನ್ನಾಗಲಿ ಮಾಡಬಾರದು.
>
> ಮತಪತ್ರದ ಮೇಲೆ ನಿಮ್ಮ ಸಹಿ ಹಾಕಬಾರದು. ಇಲ್ಲವೇ ಮತ್ತೇನನ್ನಾಗಲಿ ಬರೆಯಬಾರದು. ಇವುಗಳಲ್ಲಿ ಯಾವುದನ್ನಾದರೂ ಮಾಡಿದಲ್ಲಿ ನಿಮ್ಮ ವೋಟನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ಈ ಬಾರಿ ನಡೆಯುವ ಚುನಾವಣೆಗಳಲ್ಲಿ ೨೦ ಕೋಟಿ ೧೦ ಲಕ್ಷ ಜನ ಮತದಾರರು ಭಾಗವಹಿಸುವರು. ಹಿಂದಿನ ಚುನಾವಣೆಗಳಲ್ಲಿ ಬಾಗವಹಿಸಿದ್ದಕ್ಕಿಂತ ೧ ಕೋಟಿ ೭೦ ಲಕ್ಷದಷ್ಟು ಅಧಿಕ ಸಂಖ್ಯೆಯ ಮತದಾರರು ಈ ಬಾರಿ ಚುನಾವಣೆಗಳಲ್ಲಿ ಭಾಗವಹಿಸಲಿರುವರು. ಮತದಾರರ ತೀರ್ಪು ಐದು ವರ್ಷಗಳಿಗೆ ಕ್ರಮಬದ್ಧವಾಗಿರುತ್ತದೆ. ಮತದಾರರು ಆಲೋಚಿಸಿ ತೂಕಮಾಡಿ ಅನಂತರ ತಮ್ಮ ನಿರ್ಧಾರವನ್ನು ಕೈಗೊಳ್ಳಬೇಕಾಗುತ್ತದೆ.

ಮತದಾರರಲ್ಲಿ ಶೇ. ೭೫ರಷ್ಟು ಜನರು ಅನಕ್ಷರಸ್ಥರಾಗಿರುವರು. ಹಿಂದಿನ ಅನುಭವದಿಂದ ಹೇಳುವುದಾದರೆ ಜನಸಾಮಾನ್ಯರು ಎಷ್ಟೇ ಹಿಂದುಳಿದಿರಬಹುದು ಮತ್ತು ತಿಳಿವಳಿಕೆ ಇಲ್ಲದಿರಬಹುದು. ಆದಾಗ್ಯೂ ಅವರು ತಮಗೆ ಒಳ್ಳೆಯದಾವುದು ಅಥವಾ ಕೆಟ್ಟದಾವುದು ಎಂಬುದನ್ನು ಅರಿತುಕೊಳ್ಳುವಷ್ಟು ಮಟ್ಟಿಗೆ ವ್ಯವಹಾರ ಜ್ಞಾನ ಪಡೆದಿರುತ್ತಾರೆ. ಜನಸಾಮಾನ್ಯರಿಗೆ ಅರಿವಾಗುವಂತಹ ಸರಳವಾದ ಮತದಾನ ಪದ್ಧತಿಯನ್ನು ಒದಗಿಸಿದಲ್ಲಿ ಅವರು ವಿವೇಚನೆಯಿಂದ ತಮಗೆ ಸೂಕ್ತರೆನಿಸಿದವರಿಗೇ ತಮ್ಮ ತಮ್ಮ ಮತಗಳನ್ನು ನೀಡುವರು.

ಅಕ್ಷರಸ್ಥರಾದವರ ಸಂಖ್ಯೆ ಕಡಿಮೆ ಇರುವ ಕಾರಣ ಚಿಹ್ನೆಗಳ ಪದ್ಧತಿಯನ್ನು ಅನುಸರಿಸಬೇಕಾಗಿದೆ. ಓದು ಬರಹ ಬಾರದ ಮತದಾರರು ತಾವು ಅಪೇಕ್ಷಿಸುವಂತಹ ಉಮೇದುವಾರರಿಗೆ ಗೌಪ್ಯವಾಗಿ ಮತದಾನ ಮಾಡಲು ಚಿಹ್ನೆಗಳ ಪದ್ಧತಿಯಿಂದ ಸಾಧ್ಯವಾಗಿ ಪರಿಣಮಿಸಿದೆ.

ಈ ಬಾರಿ ಹೊಸದೊಂದು ವಿಧಾನವನ್ನು ಅನುಸರಿಸಲಾಗಿದೆ. ಅದೇ ಅಂಕನ ಪದ್ಧತಿ. ಮತಪತ್ರದ ಮೇಲೆ ಗುರುತು ಮಾಡುವುದೇ ಈ ಹೊಸ ಪದ್ಧತಿಯಾಗಿದೆ. ಮತ ಪತ್ರದ ಮೇಲೆ ಸ್ಪರ್ಧಿಸುವ ಉಮೇದುವಾರರ ಹೆಸರುಗಳು, ಅವರ ಚುನಾವಣಾ ಚಿಹ್ನೆಗಳು ಮಾತ್ರ ಇರುವುವು. ಮತದಾರರೊಬ್ಬರು ಮತದಾನ ಕೇಂದ್ರವನ್ನೂ ಪ್ರವೇಶಿಸಿದ ನಂತರ ಪ್ರತ್ಯೇಕವಾಗಿರುವ ಸ್ಥಳವೊಂದರಲ್ಲಿ ತನಗೆ ಬೇಕಾದ ಉಮೇದುವಾರರೊಬ್ಬರ ಹೆಸರು ಮತ್ತು ಚಿಹ್ನೆಯ ಮುಂದೆ ಗುರುತು ಮಾಡಿ ಅನಂತರ ಮತ ಪತ್ರವನ್ನು ಆ ಮತದಾನ ಕೇಂದ್ರದ ಅಧಿಕಾರಿಯ ಸಮ್ಮುಖದಲ್ಲಿ ಪೆಟ್ಟಿಗೆಯೊಳಗೆ ಹಾಕುವರು. ಈ ಪೆಟ್ಟಿಗೆಯು ಎಲ್ಲರಿಗೂ ಕಾಣುವಂತಹ ಸ್ಥಳದಲ್ಲಿರುವುದು. ಲೋಕಸಭೆ ಮತ್ತು ವಿಧಾನ ಸಭೆಗಳೆರಡಕ್ಕೂ ಒಂದೇ ಪೆಟ್ಟಿಗೆ ಇರುವುದು.

ತನ್ನ ಬೆಂಬಲ ಪಡೆಯುವ ಬಗ್ಗೆ ಮಾಡುವ ಪ್ರಚಾರದ ವಿಚಾರದಲ್ಲಿ ಮತದಾರ ಎಚ್ಚರದಿಂದಿರಬೇಕು. ಕೋಮು ಅಥವಾ ಜಾತಿಯ ಆಧಾರದ ಮೇಲೆ ಮತದಾರರಿಂದ ಮತಗಳನ್ನು ಅಪೇಕ್ಷಿಸುವುದು ಕಾನೂನಿನ ಪ್ರಕಾರ ಭ್ರಷ್ಟಾಚರಣೆಯಾಗಿರುತ್ತದೆ.

ನಿರಂತರವೂ ಜಾಗರೂಕತೆಯಿಂದಿರುವುದೇ ಸ್ವಾತಂತ್ರ್ಯಕ್ಕಾಗಿ ನಾವು ತೆತ್ತ ಬೆಲೆಯಾಗಿರುತ್ತದೆ. ಮತದಾರ ನಿರುತ್ಸಾಹ ನಿರ್ಲಕ್ಷ್ಯ, ಉದಾಸೀನ ಮನೋಭಾವ ತಾಳುವುದರಿಂದ ಪ್ರಜಾಪ್ರಭುತ್ವದ ಆದರ್ಶಕ್ಕೆ ಧಕ್ಕೆ ತಗಲುತ್ತದೆ. ವೋಟು ಅತ್ಯಮೂಲ್ಯವಾದದ್ದು. ಅದನ್ನು ಯಾವ ಬೆಲೆಗಾಗಲೀ ಕೊಳ್ಳುವಂತಿಲ್ಲ.

ಸೋಮಾರಿತನ ಅಥವಾ ನಿರಾಸಕ್ತಿಯ ಕಾರಣದಿಂದಾಗಿ ಮತ ನೀಡದೇ ಇರುವುದೂ ತಪ್ಪು. ಅತ್ಯಮೂಲ್ಯವಾದ ಹಕ್ಕನ್ನು ವ್ಯರ್ಥಪಡಿಸುವುದನ್ನು ಗಮನಕ್ಕೆ ತಂದುಕೊಂಡಿದ್ದೇ ಆದರೆ ಮತದಾನ ಕೇಂದ್ರವೊಂದಕ್ಕೆ ಹೋಗಿ ಮತದಾನ ಮಾಡುವ ಬಗ್ಗೆ ಉಂಟಾಗುವ ಅನಾನುಕೂಲ ಅತ್ಯಲ್ಪವೇ.

ಸಹಸ್ರಾರು ವೋಟುಗಳಲ್ಲಿ ತನ್ನದೊಂದು ವೋಟು ಏನು ಮಹಾ ಎಂದು ಯಾರೂ ಭಾವಿಸಬಾರದು. ಏಕೆಂದರೆ ಆ ಒಂದೇ ಒಂದು ವೋಟು ವ್ಯತ್ಯಾಸಕ್ಕೂ ಕಾರಣವಾಗಬಹುದು.

THE KARNATAKA BANK LIMITED, UDIPI, S· K.

(Registered Office-MANGALORE-3)

ದಿ ಕರ್ಣಾಟಕ ಬೇಂಕ್, ಲಿಮಿಟೆಡ್, ಉಡುಪಿ, ದ.ಕ.

(ರಜಿಸ್ಟರ್ಡ್ ಆಫೀಸು— ಮಂಗಳೂರು-3)

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಲ್ಲಿ ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಪಾವತಿ ಮಾಡದೇ ಬಾಕಿ ಮಾಡಿರುವುದರಿಂದ ಸದರಿ ಸಾಲಗಳನ್ನು ವಸೂಲು ಮಾಡುವಗೆ ಅವರಿಗೆ ರಿಜಿಸ್ಟ್ರ ನೋಟೀಸುಗಳನ್ನು ಬಿಟ್ಟಿದ್ದರೂ (ಕೆಲವು ನೋಟೀಸುಗಳು ಮೃತಪಟ್ಟಿರುವುದಾಗಿ ಯಾ ಇತರ ಕಾರಣಗಳಿಗಾಗಿ ವಾಪಾಸು ಬಂದಿದ್ದು) ಕೂಡಾ ಸದರಿ ಈಡಿಟ್ಟ ನಗಗಳನ್ನು ಬಿಡಿಸದೇ ಇರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಇದೇ 1962ನೇ ಇಸವಿ ಫೆಬ್ರವರಿ ತಿಂಗಳ 28ನೇ ತಾರೀಕಿನ ಅಪರಾಹ್ನ 2 ಘಂಟೆಯ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ವಗೈರೆ ಬಾಕಿಗಳನ್ನು ಸಲಾಯಿಸಿ ನಗಗಳನ್ನು ವಾಪಾಸು ಪಡಕೊಳ್ಳದೇ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ಇದೇ 1962ನೇ ಇಸವಿ ಮಾರ್ಚಿ ತಿಂಗಳ 3ನೆಯ ತಾರೀಕು ಶನಿವಾರ ಮಧ್ಯಾಹ್ನ ಘಂಟೆ 12ಕ್ಕೆಯೂ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ನೋಟೀಸು ಶಿವಾಯಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಜಂಜಾಪ್ರ ನಂಬ್ರ.	ಸಾಲದ ನಂಬ್ರ.	ಸಾಲ ಪಡೆದವರ ಹೆಸರು.	ಸಾಲದ ಮೊಬಲಗು
1	522/57	ಪಿ. ರಂಗಪ್ಪ ನ್ಯಾಕ, ರಘುರಾಮ ನ್ಯಾಕರ ಮಗ, ಉಡುಪಿ ತಾಲೂಕು, ಪುತ್ತೂರು ಗ್ರಾಮ, ಪುತ್ತೂರು ಪೋಸ್ಟ್.	ರೂ. 500/=
2	310/59	ವಿ. ಗೋಪಾಲಕೃಷ್ಣ ಉಪಾಧ್ಯಾಯ, ವಿ. ರಾಮಚಂದ್ರ ಆಚಾರ್ಯರ ಮಗ, ವಸಂತ ಭವನ, ಮಧುಗಿರಿ, (ತುಮಕೂರು ಜಿಲ್ಲೆ).	275/=
3	154/60	ರಾಮಚಂದ್ರ ರಾವ್, ಕುಂಜೂರು ವ್ಯಾಸರಾಯರ ಮಗ, ಗುಂಡಿಬೈಲು, ಉಡುಪಿ ಪೋಸ್ಟ್.	950/=
4	7/61	ಭೂಮಿ ಅಮ್ಮ, ಸುಬ್ರಾಯ ಭಟ್ಟರ ಹೆಂಡತಿ, ನಂಬ್ರ 76ನೆ ಬಡಗುಬೆಟ್ಟು ಗ್ರಾಮದ ಕುಕ್ಕಿಕಟ್ಟೆ, ಉಡುಪಿ ಪೋಸ್ಟು.	100/=
5	56/61	ಬಾಲಕೃಷ್ಣ ಕಾಮತ್, ಸುಂದರ ಕಾಮತರ ಮಗ, ಕಲ್ಸಂಕ, ಉಡುಪಿ.	300/=
6	64/61	ವಿಟ್ಠಲ ಪೂಜಾರಿ, ಕೃಷ್ಣ ಪೂಜಾರಿ ಮಗ, ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಮೂಡು ಪೆರಂಪಳ್ಳಿ, ಶಿವಳ್ಳಿ ಪೋಸ್ಟ್.	125/=

ಉಡುಪಿ,
ತಾ. 12—2—1962.

K. B· Rama Rao,
ಏಜಂಟ್.

ಮಹಿಳಾ ಮತದಾರರು

(೫ನೇ ಪುಟದಿಂದ)

ಭರ್ತಿಮಾಡಿ, ಅವುಗಳನ್ನು ಮತದಾನವು ವಾಸ್ತವವಾಗಿ ಆರಂಭವಾಗುವುದಕ್ಕೆ ಮೊದಲು ಅಂಚೆ ಮೂಲಕ ರಿಟರ್ನಿಂಗ್ ಅಧಿಕಾರಿಗಳಿಗೆ ಕಳುಹಿಸುವರು. ಸಶಸ್ತ್ರ ದಳಗಳಲ್ಲಿನ ಸಿಬ್ಬಂದಿ ಹಾಗೂ ವಿದೇಶಗಳಲ್ಲಿ ರಾಯಭಾರ ಕಚೇರಿಗಳಲ್ಲಿರುವ ಉದ್ಯೋಗಸ್ಥರ ಪತ್ನಿಯರಿಗೆ ಈ ಸೌಲಭ್ಯವು ದೊರೆಯುವುದು.

ವಿಶೇಷ ಮತದಾರರ ವರ್ಗದಲ್ಲಿರುವ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ರಾಜ್ಯಪಾಲರು, ಲೋಕ ಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ರಾಜ್ಯ ಸಭೆಯ ಉಪಾಧ್ಯಕ್ಷರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಂತ್ರಿಗಳು—ಇವರುಗಳ ಪತ್ನಿಯರೂ ಈ ಸೌಲಭ್ಯವನ್ನು ಪಡೆದಿರುವರು.

ಮಹಿಳೆಯರು ಅಂಚೆ ಮೂಲಕ ಕಳುಹಿಸುವ ಮತದಾನ ಪತ್ರಗಳನ್ನೊಳಗೊಂಡ ಲಕ್ಕೋಟೆಯ ಮೇಲೆ ಸ್ಪಷ್ಟವಾಗಿ ಕಾಣುವಂತೆ "F" ಎಂದು ಗುರುತು ಮಾಡಿರಲಾಗುವುದು. ಇದರಿಂದ, ರಿಟರ್ನಿಂಗ್ ಅಧಿಕಾರಿಯು, ಎಷ್ಟು ಮಂದಿ ಮಹಿಳೆಯರು ಅಂಚೆ ಮೂಲಕ ಮತದಾನ ಮಾಡಿರುವರೆಂಬುದನ್ನು ಸುಲಭವಾಗಿ ತಿಳಿಯಬಹುದು.

ಮಹಿಳಾ ಮತದಾರರು ಚುನಾವಣೆಯಲ್ಲಿ ಹೆಚ್ಚು ತೀವ್ರಾಸಕ್ತಿಯಿಂದ ಭಾಗವಹಿಸುವುದಕ್ಕೆ ಈ ಸೌಲಭ್ಯಗಳು ನೆರವಾಗುವುವು. ವಾಸ್ತವವಾಗಿ, ಬಹುಶಃ ಪುರುಷರಿಗಿಂತ ಸ್ತ್ರೀಯರೇ ಉಮೇದುವಾರರ ಆಯ್ಕೆಯಲ್ಲಿ ವಿಶೇಷ ಆಸಕ್ತಿಯನ್ನು ತಳೆದಿರುವರು.

ಕಳೆದ ಚುನಾವಣೆಯಲ್ಲಿ, ಉತ್ತರ ಪ್ರದೇಶದ ಒಂದು ಚುನಾವಣಾ ಕೇಂದ್ರದಲ್ಲಿ ಸ್ಪರ್ಧಿಸಿದ್ದ ಉಮೇದುವಾರರೊಬ್ಬರಿಗೆ ಇಬ್ಬರು ಪತ್ನಿಯರಿದ್ದರು. ಮತಗಳಿಗಾಗಿ ಆತ ಮತದಾರರಲ್ಲಿ ಬೇಡುತ್ತಿದ್ದಾಗ ಮಹಿಳಾ ಮತದಾರರು ಆತನನ್ನು ಪುರಸ್ಕರಿಸಲಿಲ್ಲ, ಬಲವಾಗಿ ಟೀಕಿಸಿದರು. ತನ್ನ ಮೊದಲನೆಯ ಪತ್ನಿಯ ಬಗ್ಗೆ ನಿಷ್ಠೆ ತೋರಿಸದಾತ, ತನ್ನನ್ನು ಚುನಾವಣೆಯಲ್ಲಿ ಸ್ಪರ್ಧೆಗಾಗಿ ಆರಿಸಿದ ಪಕ್ಷಕ್ಕೆ ತಾನು ನಿಷ್ಠೆ ತೋರಬಲ್ಲನೇ ಎಂದು ಮಹಿಳೆಯರು ಆತನನ್ನು ಹೀಯಾಳಿಸಿದರು. ಬಹುಶಃ ಆ ಉಮೇದುವಾರನಿಗೆ ಮಹಿಳಾ ಮತದಾರರಿಂತ ಅತ್ಯಂತ ಕಡಿಮೆ ಮತಗಳು ಬಂದಿರಬೇಕು.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1—25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ

ಅಧ್ಯಾಪಕರ ಲಕ್ಷಣ ಮತ್ತು ಕರ್ತವ್ಯಗಳು

(೪ನೇ ಪುಟದಿಂದ)

ಆಕಸ್ಮಿಕವಾಗಿ ವರ್ತಿಸುತ್ತಾರಾದರೂ ಅಂತಹ ಅಧೋಗತಿಗಿಳಿಯುವುದರ ಜೊತೆಗೇ ತಮ್ಮ ವೃತ್ತಿ ಬಂಧುಗಳನ್ನೂ ಕೆಟ್ಟ ಹೆಸರಿನ ಕೆಸರಿನಲ್ಲಿ ಅದ್ದಿ ದುರ್ದೈವದಿಂದ ತಮ್ಮ ಶಿಷ್ಯರಾಗಿರುವ ಪುಟ್ಟ ಬಾಲ ಬಾಲಿಕೆಯರನ್ನು ತಮ್ಮ ರೀತಿಯಲ್ಲಿಯೇ ಕತ್ತಲೆಯ ಕೂಪದಲ್ಲಿ ಕೊಳೆಯಲು ಕಾರಣರಾಗುತ್ತಾರೆ. ಇಂತಹರಿಂದಾಗಿ ಅಧ್ಯಾಪಕ ಸಮಾಜಕ್ಕೇ ಊರಲ್ಲಿ ನಿಂದೆ, ಅಪಮಾನಗಳುಂಟಾಗುವುದು. ಆ ಜಾತಿಗೆ ಸೇರಿದ ಅಧ್ಯಾಪಿಕೆಯರ, ಶೀಲ, ನಡತೆಗಳ ವಿಷಯವಂತೂ ಊರವರ ಹರಟೆಗೆ ರಸ ಪಾತ್ರಣವಾಗುತ್ತವೆ ಹೀಗಾಗಿ ಉದ್ಯೋಗ ಹಿಡಿದ ಮಹಿಳೆಯರ ವಿಷಯವಾಗಿಯೇ ಜನರಲ್ಲಿ, ಅದೂ ಹೆಚ್ಚಾಗಿ ಹಳ್ಳಿಗರಲ್ಲಿ ಅವಿದ್ಯಾವಂತರಲ್ಲಿ ತಿರಸ್ಕಾರ, ಕೆಟ್ಟ ಭಾವನೆಗಳು ಬೆಳೆದು ಬಿಡುತ್ತವೆ. ಆ ನಡುವೆ ಅಲ್ಪ ಸಂಖ್ಯಾಕರಾದ ಉಳಿದ ಅಧ್ಯಾಪಿಕೆಯರೂ ತಮ್ಮ ವೃತ್ತಿಗೇ ಬರುವ ಕಲಂಕವನ್ನೂ, ಅಪಮಾನವನ್ನು ಸಹಿಸಿಕೊಂಡಿರಬೇಕಾಗುತ್ತದೆ. ಕೆಟ್ಟದನ್ನು ನಂಬುವಷ್ಟು ಸುಲಭವಾಗಿ ಒಳ್ಳೆಯದನ್ನು ಜನರು ನಂಬಲಾರರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಚಿಕ್ಕ ಮಕ್ಕಳಿಗೆ, ಬಾಲಿಕೆಯರಿಗೆ ಮಾದರಿಯಾಗಿರಬೇಕಾಗಿರುವ ಅಧ್ಯಾಪಿಕೆಯರು ಹೀನ ಮಟ್ಟಕ್ಕಿಳಿದು ತಮ್ಮ ಶೀಲವನ್ನು ಕೆಡಿಸಿಕೊಳ್ಳುವುದಲ್ಲದೆ, ಮಕ್ಕಳಿಗೂ ಅನೀತಿಯನ್ನು, ಅವಿಚಾರವನ್ನು ಪ್ರತ್ಯಕ್ಷ ಮತ್ತು ಪರೋಕ್ಷ ರೀತಿಯಲ್ಲಿ ಬೋಧಿಸಿ ತಮ್ಮ ಜೀವನದೊಂದಿಗೆ ಭಾವೀ ಜನಾಂಗಗಳನ್ನು ಹಾಳುಮಾಡಲೆತ್ನಿಸುವ ಅಧ್ಯಾಪಿಕೆಯರಿಂದ ಜನತೆ ಏನನ್ನು ನಿರೀಕ್ಷಿಸಬಹುದು? ವಿದ್ಯೆಯನ್ನೇ? ಶೀಲವನ್ನೇ? ವಿಚಾರವನ್ನೇ? ವಿವೇಕವನ್ನೇ? ಇವುಗಳಿಲ್ಲದರ ಕೊರತೆಯನ್ನು ಬೆಣ್ಣೆಯಂತಹ ಮಾತುಗಳಿಂದ ಮರುಳುಗೊಳಿಸುವ ಜಾಣತನ ಬೇರೆ ಇಂತಹ ಜನರಲ್ಲಿದೆ. ಇರಲಿ. ಈ ವಿಚಾರ ಬರೆದಷ್ಟೂ ತೀರದು.

ಮೂರ್ಖಂಗೆ ಬುದ್ಧಿಯ ನ .... ಎಂಬ ಸರ್ವಜ್ಞ ಪದವನ್ನು ನೆನಪಿಗೆ ತಂದುಕೊಂಡು ಸುಮ್ಮನಿರುವುದು ಮೇಲು. ಅಲ್ಲದೆ ಇಂತಹ ವಿಷಯವನ್ನು ಹೇಳಿ, ಆಗಾ ಒರೆದು ಮುಗಿಸುವಂತಹುದಲ್ಲ. ಏಕೆಂದರೆ ವಿದ್ಯೆ ಮತ್ತು ಉದ್ಯೋಗದ ಹೆಸರಿನಿಂದ ಸುಧಾರಣೆಯ ಬೆಡಗಿನಿಂದ ನೀತಿ ಮತ್ತು ಶೀಲಗಳನ್ನೇ ಅಲಕ್ಷ್ಯಿಸಿ ಬಾಳುವ ಬಣ್ಣದ ಚಿಟ್ಟೆಯರ ವಿಷಯಗಳು ಮತ್ತು ಬುದ್ಧಿಯ ಮಟ್ಟದ ಬದಲಾವಣೆಯಾಗದೆ ಈ ದೀನ ನಡತೆಗೆ, ಇದರಿಂದಾಗುವ ದುಷ್ಪರಿಣಾಮಗಳಿಗೆ ಮುಕ್ತಾಯವೆಲ್ಲಿಯದು? ಆದರೆ ಅವರಿಂದಾಗಿ ಎಲ್ಲರಿಗೂ ಕೆಟ್ಟ ಹೆಸರು ಬರುವ ಅಶಕ್ಯಯ ಸನ್ನಿವೇಶ ಮಾತ್ರ ಬೇಸರಬರಿಸುವಂತಹದಾಗಿದೆ. ಮಕ್ಕಳಿಗೆ ನಾವು ಬರಿಯ ಓದುಬರಹವನ್ನು ಕಲಿಸಿದರೆ ಸಾಕೆ? ಸಾಲದು ಎಂಬ ಮಾತು ತಿಳಿದವರೆಲ್ಲರಿಗೂ ಗೊತ್ತಿದ್ದದ್ದೆ. ಬರಿಯ ಅಕ್ಷರ ವಿದ್ಯೆಯನ್ನು ವಿದ್ಯಾವಂತ ಹೆತ್ತವರು ಮನೆಯಲ್ಲೂ ಕಲಿಸಿಯಾರು. ಆದರೆ ಶಾಲೆಯಲ್ಲಿ ಮಗುವು ಅಕ್ಷರಜ್ಞಾನವನ್ನು ಮಾತ್ರ ಕಲಿಯಲಿಕ್ಕಾಗಿ ಬರುವುದಲ್ಲ, ಅದಕ್ಕಿಂತಲೂ ಮುಖ್ಯವಾಗಿ ಅನೇಕ ಸದ್ಗುಣಗಳನ್ನು ಸಾಂಘಿಕ ಜೀವನ, ಸಹಕಾರ, ಸತ್ಯಪ್ರಿಯತೆ, ಪ್ರಾಣಿದಯೆ, ಸ್ನೇಹ, ಸದಾಚಾರ ಇತ್ಯಾದಿಗಳನ್ನು ಅಭ್ಯಾಸಿಸಬೇಕಾಗಿದೆ. ಈ ಗುಣಗಳೆಲ್ಲಾ ಚಿಕ್ಕಂದಿನಿಂದಲೂ ಮೊಳಕೆಯ ರೂಪದಲ್ಲಿ ಮಗುವಿನ ಮನಸದಲ್ಲಿ ಬಿತ್ತಲ್ಪಟ್ಟು, ಪೋಷಿಸಲ್ಪಡುತ್ತಾ ಬಂದರೇನೇ ಆ ಮಗುವು ಬೆಳೆದು ಸಭ್ಯನಾದ, ಸದ್ಗುಣ ಸಂಪನ್ನನಾದ, ಸಮಾಜಜೀವಿಯಾಗಬಲ್ಲುದು. ಮಕ್ಕಳಲ್ಲಿ ಅನುಕರಣ ಶಕ್ತಿಯು ಅಸೀಮವಾಗಿರುವುದರಿಂದ ಅವರು ಸದಾ ತಮ್ಮ ಅಧ್ಯಾಪಕನನ್ನು ತಪ್ಪದೆ ಅನುಕರಿಸಲೆತ್ನಿಸುತ್ತಾರೆ. ಈ ಕಾರಣದಿಂದಾಗಿ ಅಧ್ಯಾಪಕರು ತಮ್ಮ ನುಡಿಗಳನ್ನು ಮಾತ್ರ ಚೊಕ್ಕಟವಾಗಿಟ್ಟುಕೊಂಡರೆ ಸಾಲದು. ನಡೆನುಡಿಗಳೆರಡೂ ಅನುಕರಣೀಯವಾಗುವಂತೆ ವರ್ತಿಸಬೇಕು. ಹಾಗಲ್ಲದೆ "ಹೇಳೋದು ಶಾಸ್ತ್ರ ಇಕ್ಕೋದು ಗಾಳ" ಎನ್ನುವ ಗಾದೆಯ ರೀತಿಯಲ್ಲಿ ವರ್ತಿಸಿದರೆ ಮಕ್ಕಳು ಗಲಿಬಿಲಿಗೊಳ್ಳುತ್ತಾರೆ. ಗುರಿಯಿಲ್ಲದ ದಾರಿಯಲ್ಲಿ ಸಾಗಿ ಗತಿ ಅವರದ್ದಾಗುತ್ತದೆ. ಆದುದರಿಂದ ಬರೀ ಪಾಠದ ಸಮಯದಲ್ಲಿ ಮಾತ್ರ "ಮಕ್ಕಳೇ ಶುಚಿಯಾಗಿರಬೇಕು. ಪ್ರಾಣಿದಯೆ ತೋರಿಸಬೇಕು, ಕಡಿಯಬಾರದು, ಸುಳ್ಳು ಹೇಳಬಾರದು, ಬೇರೆಯವರ ಹತ್ತಿರ ಬಿರುನುಡಿಗಳನ್ನಾಡಿ ಜಗಳಾಡಬಾರದು" ಎಂದು ಉಪದೇಶಿಸಿ ಕಡೆಗೆ ತನ್ನ ಪಾಡು ತನಗೆಂದು ಇಚ್ಛಾನುಸಾರವಾಗಿ ಮಕ್ಕಳೆದುರೇ ವರ್ತಿಸಿದರೆ ಫಲವೇನು? ನೀರಲ್ಲಿ ಹೋಮ ಮಾಡಿದಷ್ಟೇ ಫಲ ಅಲ್ಲವೆ? ಮಕ್ಕಳೆದಿರು ಅಧ್ಯಾಪಕನ ವರ್ತನೆ ಎಷ್ಟೊಂದು ಎಚ್ಚರಿಕೆಯಿಂದ ಕೂಡಿದ್ದರೂ ಸಾಲದು. ತಪ್ಪಿಸಿಕೊಳ್ಳಲಾರದಂತಹ ಏನಾದರೂ ಚಿಕ್ಕಪುಟ್ಟ ದುರಭ್ಯಾಸಗಳಿಗೆ ಬಲಿಬಿದ್ದ ಅಧ್ಯಾಪಕರು ಕೂಡಾ ಮಕ್ಕಳೆದುರಿಗೆ ತಮ್ಮ ಅದೌರ್ಬಲ್ಯವನ್ನು ತಪ್ಪಿ ಕೂಡಾ ತೋರಿಸಕೂಡದು ಹೀಗೆ ಪ್ರತಿಯೊಬ್ಬ ಅಧ್ಯಾಪಕನೂ ಅಧ್ಯಾಪಕಿಯರೂ ತಮ್ಮಲ್ಲಿರುವ ಕುಂದುಕೊರತೆಗಳನ್ನು ತಾವೇ ಕಂಡುಕೊಂಡು ವಿಚಾರಶೀಲತೆಯಿಂದ ತಮ್ಮನ್ನು ತಾವೇ ತಿದ್ದಿ ಸುಧಾರಿಸಿಕೊಂಡು ತಮ್ಮ ಪವಿತ್ರವಾದ ಈ ಶಿಕ್ಷಕ ವೃತ್ತಿಯಲ್ಲಿರುವ ಉನ್ನತ ಗುರಿಯನ್ನು ಮುಟ್ಟಲು ಯತ್ನಿಸತೊಡಗಿದರೆ ಇಡಿಯ ಸಮಾಜದ ಉನ್ನತಿಯೇ ಸುಲಭ ಸಾಧ್ಯವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಹಾಗಾಗಲೆಂದೂ ಹಾಗಾಗಲೇಬೇಕೆಂದೂ ನಾವೆಲ್ಲರೂ ಹಾರ್ದಿಕವಾಗಿ ಹಾರೈಸೋಣ. ಮನಸ್ಸಿದ್ದಲ್ಲಿ ಮಾರ್ಗವಿದೆ. ಮನಃಪೂರ್ವಕವಾಗಿ ಮಾಡುವ ಯಾವ ಕೆಲಸವೇ ಆದರೂ ಪೂರ್ಣಫಲವನ್ನು ಖಂಡಿತವಾಗಿ ಕೊಡಬಲ್ಲುದು. ಅಧ್ಯಾಪಕ ಬಂಧು ಭಗಿನಿ ವರ್ಗದವರೆಲ್ಲರೂ ತಮ್ಮನ್ನು ತಾವೇ ಅರಿತುಕೊಂಡು ತಮ್ಮಿಂದ ಸಾಧ್ಯನಾದಷ್ಟು ಉತ್ತಮ ರೀತಿಯಲ್ಲಿ ತಮ್ಮ ವೃತ್ತಿಯಲ್ಲಿ ದುಡಿದು ದೇಶದ ಏಳಿಗೆಗೆ ಕಾರಣರಾಗುವಂತಾಗಲೆಂದು ಹಾರೈಸೋಣ.

ದೇಶನಿಷ್ಠ ಕಾಂಗ್ರೆಸ್ಸನ್ನೇ ಆರಿಸಿಕೊಳ್ಳಿರಿ

(೩ನೇ ಪುಟದಿಂದ)

ರತು ಉಳಿದ ಯಾವ ಪಕ್ಷದ ಕಡೆಗೂ ಇಲ್ಲವೆಂಬುದು ದೃಢವಾಗುವುದು. ಸ್ವತಂತ್ರವ್ಯಕ್ತಿಗಳು ವೈಯಕ್ತಿಕ ನೆಲೆಯಲ್ಲಿ ಧಾರಾಳ ಸಂಖ್ಯೆಯಲ್ಲಿ ಹಿಂದೆಯೂ ಸ್ಪರ್ಧಿಸಿದ್ದಾರೆ; ಇಂದೂ ಸ್ಪರ್ಧಿಸುತಿದ್ದಾರೆ. ಆದರೆ, ಅವರ ಸಂಖ್ಯೆಗೂ ಅವರು ಗಳಿಸಿದ್ದ ಮತಗಳಿಗೂ ತಾಳತಂತಿಯಿರುವುದಿಲ್ಲ. ಅಲ್ಲದೆ, ಪ್ರಜಾಪ್ರಭುತ್ವದ ಪಕ್ಷೀಯ ಆಡಳಿತೆಯ ಯುಗದಲ್ಲಿ ಇಂತಹ ಸ್ವಚ್ಛಂದ ಪ್ರವೃತ್ತಿಯ ಸ್ವತಂತ್ರರನ್ನು ಮನ್ನಿಸುವವರಾದರೂ ಯಾರು? ಅವರಿಗೆ ಇರುವ ಬೆಲೆಯಾದರೂ ಏನು?

ಈ ಬಾರಿ ರಾಜಾಜಿಯವರ ಸ್ವತಂತ್ರ ಪಕ್ಷವೊಂದು ಬೇರೆ ಸ್ಪರ್ಧಿಸುತ್ತಿದೆ. ರಾಜಾಜಿಯವರು ಭಾರತೀಯರ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವಂತೆಯೇ ಸ್ವತಂತ್ರ ಪಕ್ಷದ ಪ್ರಚಾರವೂ ಕುಂಠಿತವಾಗುತ್ತಿದೆಯೆಂಬುದು ತಿಳಿದು ಬರುತ್ತದೆ. ಜನ್ಮಭೂಮಿ ಮದ್ರಾಸಿನಲ್ಲಿಯೇ ಸ್ವತಂತ್ರ ಪಕ್ಷ ಬಲಿಯದಿರುವಾಗ ಉಳಿದೆಡೆಯ ಪಾಡೇನು?

ವಿವಿಧ ಪಕ್ಷಗಳು ನಿಲ್ಲಿಸಿದ ಹುರಿಯಾಳುಗಳ ಸಂಖ್ಯೆಯನ್ನೂ ಆ ಪಕ್ಷಗಳು ಹಿಂದಿನ ಬಾರಿ ಗಳಿಸಿದ್ದ ಮತಗಳನ್ನೂ ತೂಕಮಾಡುವಾಗ, ಕಾಂಗ್ರೆಸ್ಸು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಎಲ್ಲೆಡೆಯೂ ಕಾಂಗ್ರೆಸ್ಸು ಪ್ರಚಂಡ ಬಹುಮತದೊಡನೆ ಗೆದ್ದು ಬರುವುದು ಖಂಡಿತ. ಜನತೆಯ ಸುರಕ್ಷೆಯನ್ನು ನೋಡಿಕೊಳ್ಳುವಂತೆ ಮೂವತ್ತೈದು ವರ್ಷವೂ ಅದು ಅಧಿಕಾರ ವಹಿಸುವುದು ನಿಸ್ಸಂದೇಹ. ಎಲ್ಲರೂ ಮೆಚ್ಚುವ, ಮೆಚ್ಚಲೇಬೇಕಾದ ಕಾಂಗ್ರೆಸ್ ಪಕ್ಷವನ್ನೇ ನೀವೂ ಏಕೆ ಬೆಂಬಲಿಸಬಾರದು? ನಿಮ್ಮ ಬಹುಮೂಲ್ಯವಾದ, ನಿಮ್ಮ ಸ್ವತಂತ್ರಾಧಿಕಾರದಲ್ಲಿರುವ ಓಟನ್ನು ಕಾಂಗ್ರೆಸಿಗೇನೇ ಕೊಟ್ಟು, ದೇಶನಿಷ್ಠ ಕಾಂಗ್ರೆಸಿಗೆ ನಿಮ್ಮ ನಿಷ್ಠೆಯನ್ನೂ ಪ್ರದರ್ಶಿಸಿರಿ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರ ವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನರಿ

ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ
ಉಡುಪಿ.

ಚಂದಾಹಣ ಬಾಕಿ ಇರುವ ಚಂದಾದಾರರು ದಯವಿಟ್ಟು ಅದನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಅಪೇಕ್ಷಿಸುತ್ತೇವೆ.

—ಮೆನೇಜರ್ ನವಯುಗ.

ಬೆಲೆಯೇರಿಕೆಗೆ ಕಾಂಗ್ರೆಸ್ ಕಾರಣವೆ?

ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರು ಅವಶ್ಯಕ ಪದಾರ್ಥಗಳ ಬೆಲೆಯೇರಿಕೆಯ ವಿರುದ್ಧ ಕೂಗಾಡುತ್ತಿರುವವರಿಗೆ ಸಮರ್ಪಕ ಉತ್ತರವನ್ನು ಕೊಟ್ಟಿದ್ದಾರೆ. ಬೆಲೆಯೇರಿಕೆಗೆ ಕಾಂಗ್ರೆಸ್ ಸರಕಾರವು ಕಾರಣವಲ್ಲ; ಅಧಿಕ ಉತ್ಪಾದನೆ ಮತ್ತು ಗಳಿಕೆಗಳೇ ಕಾರಣವೆಂಬುದನ್ನು ಮನಗಾಣಿಸಿ ಕಾಂಗ್ರೆಸ್ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುವುದರಿಂದ ಜನತಾಕಲ್ಯಾಣವಾಗುವುದೆಂದಿದ್ದಾರೆ. ಅವರ ಒಂದು ಭಾಷಣದ ಸಾರವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ರಾಷ್ಟ್ರದ ಭವಿಷ್ಯ ಜನತೆಯ ಕೈಯಲ್ಲಿದೆ. ಭಾರತದ ೪೩ ಕೋಟಿ ಜನರಿಗೆ ಮತದಾನದ ಅಧಿಕಾರ ದೊರೆತಿದೆ. ಮತದಲ್ಲಿ ರಾಜ್ಯಶಕ್ತಿ ಅಡಗಿದೆ. ದೈವ ಶಕ್ತಿಗೆ ಶರಣು ಹೋದಾಗ ಅದನ್ನು ದೈವಭಕ್ತಿ ಎನ್ನುತ್ತೇವೆ; ರಾಜ್ಯ ಶಕ್ತಿಗೆ ಶರಣು ಹೋದಾಗ ಅದನ್ನು ದೇಶಭಕ್ತಿ ಎನ್ನುತ್ತೇವೆ. ಆದುದರಿಂದ ಎಲ್ಲರೂ ದೇಶಭಕ್ತರಾಗಿ ಮಹಾ ಚುನಾವಣೆಯಲ್ಲಿ ಮತದ ಮಹಾ ಶಕ್ತಿಯನ್ನು ಚಲಾಯಿಸಬೇಕು.

ನಮ್ಮ ಸಂವಿಧಾನ ಪ್ರಪಂಚದ ಶ್ರೇಷ್ಠ ರಾಜ್ಯಾಂಗಗಳಲ್ಲಿ ಒಂದಾಗಿದೆ. ಇದರ ನಿರೂಪಣೆಯ ಸಮಯದಲ್ಲಿ ಕಾಂಗ್ರೆಸ್ಸು ತನ್ನ ಸ್ವಾರ್ಥವನ್ನು ಸಾಧಿಸಬಹುದಿತ್ತು. ೧೯೧೭ರಲ್ಲಿ ರಷ್ಯನ್ ಕ್ರಾಂತಿಯ ವೇಳೆ ಕೇವಲ ಕಮ್ಯುನಿಸ್ಟ್ ಪಕ್ಷವೇ ಅಧಿಕಾರದಲ್ಲಿರುವ ರೀತಿಯಲ್ಲಿ ಅಲ್ಲಿ ರಾಜ್ಯಾಂಗ ರಚನೆಯಾಯಿತು. ಆದರೆ, ಕಾಂಗ್ರೆಸ್ಸಿಗೆ ಆ ಸಣ್ಣ ಬುದ್ಧಿ ಇರಲಿಲ್ಲ; ಈಗಲೂ ಇಲ್ಲ. ಜನತೆಯೇ ಜನಾರ್ದನವೆಂದು ಕಾಂಗ್ರೆಸ್ ಭಾವಿಸುತ್ತದೆ. ಆದುದರಿಂದಲೇ ನಮ್ಮ ಸಂವಿಧಾನದಲ್ಲಿ ಯಾವ ಭೇದಭಾವನೆಯೂ ಇಲ್ಲದೆ ಸರ್ವಸಮಾನತಾ ಹಕ್ಕನ್ನು ನೀಡಿ ಭದ್ರವಾದ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲು ಹಾಕಿದೆ.

ಕಾಂಗ್ರೆಸ್ ಸಂಸ್ಥೆ ಶ್ರೇಷ್ಠವಾದುದು- ಇದರಲ್ಲಿ ಕೆಲವರು ಕೆಟ್ಟವರಿರಬಹುದಾದರೂ ಬೇರೆ ಪಕ್ಷಗಳಲ್ಲಿರುವವರಿಗಿಂತ ಈ ಪಕ್ಷದಲ್ಲಿನ ಕೆಟ್ಟವರ ಸಂಖ್ಯೆ ಕಡಿಮೆಯಿದೆ. ರಾಜ್ಯಶಕ್ತಿಯನ್ನು ಪಡೆದಿರುವ ಜನರು ವಿಚಾರ ಮಥನಮಾಡಿ, ಶ್ರೇಷ್ಠವಾದುದೂ ಭದ್ರ ಸರಕಾರವನ್ನು ರಚಿಸುವ ಸಾಮರ್ಥ್ಯವಿರುವುದೂ ಆದ ಕಾಂಗ್ರೆಸ್ ಪಕ್ಷವನ್ನು ಆರಿಸಬೇಕು.

ದೇಶದಲ್ಲಿ ಬೆಲೆ ಹೆಚ್ಚಳದ ಮಾತೇ ಎಲ್ಲೆಲ್ಲಿಯೂ ಕೇಳಿ ಬರುತ್ತಿದೆ. ದೇಶದಲ್ಲಿ ಹಣ ಹೆಚ್ಚಿದಷ್ಟೂ ಬೆಲೆಯೇರುವುದು ಸಹಜ. ಬ್ರಿಟಿಷರು ಇಲ್ಲಿ ಆಳುತಿದ್ದಾಗ, ಎರಡನೆಯ ಮಹಾ ಯುದ್ಧದ ಕಾರಣ ಹಣದುಬ್ಬರವಾಯಿತು; ಪದಾರ್ಥಗಳ ಬೆಲೆಯೂ ಹೆಚ್ಚಿತು. ಭಾರತದ ರಿಜರ್ವ್ ಬ್ಯಾಂಕಿನಲ್ಲಿ ಚಲಾವಣೆಯಲ್ಲಿದ್ದ ಹಣವನ್ನು ನೋಟುಗಳ ಮುದ್ರಣದ ಮೂಲಕ ೧,೨೦೦ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಯಿತು. ಇದು ಹಿಂದೆ ಇದ್ದ ಹಣದ ಆರು ಪಾಲಷ್ಟು. ಹಣ ಅಧಿಕವಾದಾಗ ಬೆಲೆಗಳು ಕೂಡಾ ಸಹಜವಾಗಿ ಹೆಚ್ಚಿದುವು. ಹಣ ಹೆಚ್ಚಿದಷ್ಟೂ ಖರ್ಚು ಹೆಚ್ಚುತ್ತದೆ. ಅಂದರೆ, ವಸ್ತುಗಳ ಬೆಲೆಯೇರುತ್ತದೆ ಒಂದು ಪದಾರ್ಥವನ್ನು ಬಯಸುವವನು ಕೈಯಲ್ಲಿ ಹಣವಿದ್ದರೆ, ಅದನ್ನು ಹೆಚ್ಚು ಬೆಲೆ ತೆತ್ತು ಕೊಳ್ಳಲು ಹಿಂಜರಿಯುವುದಿಲ್ಲ. ಬೆಲೆಯೇರಿಕೆ ಒಂದು ಚಕ್ರವಿದ್ದಂತೆ. ಒಂದು ವಸ್ತುವಿನ ಬೆಲೆಯೇರಿತೆಂದರೆ, ಜೀವನಾವಶ್ಯಕ ಎಲ್ಲ ವಸ್ತುಗಳ ಬೆಲೆಯೂ ಹೆಚ್ಚುತ್ತದೆ.

ಪ್ರಗತಿ ಪಥದಲ್ಲಿರುವ ದೇಶದಲ್ಲಿ ಪದಾರ್ಥಗಳ ದರಯೇರುವುದು ಸಹಜ. ಸ್ವರಾಜ್ಯ ಬಂದ ಮೇಲೆ, ವಿದ್ಯಾಭ್ಯಾಸ, ಕೈಗಾರಿಕೆ, ಜನಾರೋಗ್ಯ, ವ್ಯವಸಾಯ— ಮೊದಲಾದ ಎಲ್ಲ ಕ್ಷೇತ್ರಗಳಲ್ಲಿ ಅತ್ಯುತ್ತಮ ಕಾರ್ಯ ಯೋಜನೆಗಳು ಎಡೆಬಿಡದೆ ನಡೆಯುತ್ತಿವೆ; ಉದ್ಯೋಗದ ಸವಲತ್ತು ಹೆಚ್ಚುತ್ತಲಿದೆ. ೪೩ ಕೋಟಿ ಜನರ ಸರ್ವತೋಮುಖ ನಾಕಯುಕ್ಕಾಗಿ ಅಭ್ಯುದಯ ಯೋಜನೆಗಳನ್ನು ಹಾಕುತ್ತಲಿದೆ. ಮೊದಲನೆ ಯೋಜನೆಯಲ್ಲಿ ೨,೪೦೦ ಕೋಟಿ, ಎರಡನೆಯ ಯೋಜನೆಯಲ್ಲಿ ೪,೮೦೦ ಕೋಟಿ ರೂಪಾಯಿಗಳು ವೆಚ್ಚವಾದುವು. ಹೀಗೆ ದುಡ್ಡಿನ ಮೊತ್ತ ಹೆಚ್ಚಿದಷ್ಟೂ ಜನಗಳ ದುಡಿಮೆ ಹೆಚ್ಚಿತು. ದುಡಿಮೆ ಹೆಚ್ಚಿದಂತೆಲ್ಲ ಪದಾರ್ಥಗಳ ಬೆಲೆಯೂ ಹೆಚ್ಚಿತು.

ಆದರೆ, ಹಣದುಬ್ಬರಕ್ಕೆ ಸರಿಯಾಗಿ ಬೆಲೆ ಹೆಚ್ಚಿಲ್ಲ. ರಾಷ್ಟ್ರದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಅಧಿಕ ಉತ್ಪನ್ನವಾಗುತ್ತಿರುವುದೇ ಇದಕ್ಕೆ ಕಾರಣ. ಅಧಿಕೋತ್ಪಾದನೆಯೇ ಮಿತಿಮೀರಬಹುದಾದ ಬೆಲೆಗಳನ್ನು ಹತೋಟಿಯಲ್ಲಿಟ್ಟಿದೆ.

ಆರ್ಥಿಕೋನ್ನತಿಯಲ್ಲಿ ಅಗ್ರಗಣ್ಯ ಸ್ಥಾನಗಳಿಸಿದ ಅಮೆರಿಕೆಯಲ್ಲೂ ಬೆಲೆ ಹೆಚ್ಚಳವಿದೆ. ಈ ರೋಗ ಒಂದು ದೇಶಕ್ಕೆ ಮಾತ್ರ ಸೀಮಿತವಿರಲಾರದು. ಇಡಿ ಜಗತ್ತಿನ ಸಂಚಾರ ಸೌಲಭ್ಯಗಳು ಹೆಚ್ಚಿ, ಒಂದು ದೇಶದಲ್ಲಿ ಆರ್ಥಿಕಕ್ಷೇತ್ರವವರು ಇಡಿ ಜಗತ್ತಿನ ಮೇಲೆ ಪರಿಣಾಮವನ್ನುಂಟುಮಾಡುತ್ತಾರೆ.

ಬೆಲೆಯ ಹತೋಟಿಯು ಆಡಳಿತಾಂಗದ ದೃಷ್ಟಿಯಿಂದ ದೂರವಾಗಿಲ್ಲ. ಇದ್ದಕ್ಕಿದ್ದಂತೆ ಇದನ್ನು ಸಾಧಿಸುವ ವಿಚಕ್ಷಣತೆಯು ಯಾವ ಅರ್ಥಶಾಸ್ತ್ರಜ್ಞನಿಗೂ ಇನ್ನೂ ಹೊಳೆದಿಲ್ಲ ಒಂದು ವೇಳೆ ಹೀಗೆ ಬಲಾತ್ಕಾರದಿಂದ ಮಾಡಿದಗೆ, ಅನಾಹುತವೂ ಆಗಬಹುದು.

ವಸ್ತುಗಳ ಬೆಲೆ ಹೆಚ್ಚಿ ಜೀವನವೇ ಕಷ್ಟವಾಗಿದೆ ಎಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಿವೆ. ಮೊದಲು ಐದು ರೂಪಾಯಿ ವೇತನದ ನೌಕರನು ರೂಪಾಯಿಗೆ ನಾಲ್ಕು ಸೇರು ಅಕ್ಕಿ ಕೊಳ್ಳುತಿದ್ದ. ಇಂದವನ ಸಂಬಳ ರೂ ೫೦ಕ್ಕೆ ಏರಿದೆ. ಆದರೆ, ಅಕ್ಕಿಯ ಬೆಲೆ ೪ ಸೇರಿಗೆ ೧೦ ರೂಪಾಯಿ ಆಗಿರುವುದಿಲ್ಲವೆಂಬುದನ್ನು ಗಮನಿಸಬೇಕು ದುಡಿಯುವವನು ಸಹಜವಾಗಿಯೇ ಬೆಲೆ ಹೆಚ್ಚಳಕ್ಕೆ ಸರಿಯಾದ ವೇತನವನ್ನು ಕೇಳಿಯೇ ಕೇಳುತ್ತಾನೆ ಅಕ್ಕಿಯ ಉತ್ಪನ್ನ ಹೆಚ್ಚಿರುವುದರಿಂದಲೇ ಅದು ಹೆಚ್ಚು ಏರಿಲ್ಲವೆಂದು ತಿಳಿಯಬಹುದು.

ಆರ್ಥಿಕ ವ್ಯವಸ್ಥೆಯಲ್ಲಿ ಸಮತೋಲನೆಯನ್ನುಂಟುಮಾಡುವುದು ಎಣಿಸಿದಷ್ಟು ಸುಲಭವಲ್ಲ. ಇದು ಡೊಂಬರು ಹಗ್ಗದ ಮೇಲೆ ನಡೆದಂತೆ. ಆದುದರಿಂದ ದೇಶದ ಆಗುಹೋಗುಗಳ ನಿರ್ವಹಣೆಯನ್ನು ಹೊತ್ತ ಸರಕಾರದಲ್ಲಿರುವವರಿಗೆ ಬುದ್ಧಿ ಸಾಮರ್ಥ್ಯ ಬೇಕು. ಆರ್ಥಿಕ ನೀತಿಯ ನಿರೂಪಣೆಯ ನೈಪುಣ್ಯಬೇಕು. ಹಣದುಬ್ಬರ, ಉತ್ಪನ್ನದ ಹೆಚ್ಚಳ ಹಾಗೂ ಇವುಗಳ ವಿತರಣೆಯ ಪ್ರಮಾಣ—ಇವೆಲ್ಲವುಗಳ ನಿರ್ವಹಣೆಯ ಬುದ್ಧಿ ಶಕ್ತಿ ಅಗತ್ಯ.

ಬೆಲೆ ಏರಿಕೆ ಕಾಂಗ್ರೆಸಿನ ಅಪರಾಧವಲ್ಲ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಇದಕ್ಕಿಂತಲೂ ಉತ್ತಮವಾದ ಆಡಳಿತ ನಡೆಸುವುದು ಸಾಧ್ಯವಿಲ್ಲ. ಕಾಂಗ್ರೆಸಿನ ಅಮೃತ ಸೇಚಿತ ಮಹೋನ್ನತ ತತ್ವಗಳ ನೆರಳಿನಲ್ಲಿ ರಾಷ್ಟ್ರಕ್ಕೆ ಭವ್ಯ ಭವಿಷ್ಯವಿದೆಯೆಂಬುದಂತೂ ಖಂಡಿತ.

ರಷ್ಯದ ಮಾತನ್ನು ನಮ್ಮವರು ಆಡುತ್ತಾರೆ. ನಮ್ಮಲ್ಲಿರುವಂತೆ ಅಲ್ಲಿಯೂ ಯೋಜನಾ ಸಮಿತಿಗಳಿವೆ. ಯುದ್ಧಾನಂತರದಲ್ಲಿ ಮಾಸ್ಕೊ ನಗರವು ಬೆಳೆದಿದೆ ಮನೆಗಳ ಕಟ್ಟಡ ಬಹಳವಾಗಿ ನಡೆದಿದೆ. ಅಲ್ಲಿ ಆಗುತ್ತಿರುವ ಪ್ರಗತಿ ಸಾಧನೆಯ ಲೆಖ್ಖವೆಲ್ಲ ಸಿಗುತ್ತದೆ. ಏಕೆಂದರೆ, ಅಲ್ಲಿನ ಆಸ್ತಿಯೆಲ್ಲವೂ ಸರಕಾರದ್ದೇ. ಮನೆಗಳೂ ಸರಕಾರಕ್ಕೆ ಸೇರಿದವುಗಳೇ. ವೈಯಕ್ತಿಕ ಆಸ್ತಿಪಾಸ್ತಿಗಳಿಗೆ ಅಲ್ಲಿ ಅವಕಾಶವಿಲ್ಲ. ಹತ್ತು ವರ್ಷಗಳ ಮೊದಲು ಬೆಂಗಳೂರು ಹೇಗಿತ್ತು? ಈಗ ಹೇಗಿದೆ? ಎಲ್ಲೆಲ್ಲಿ ನೋಡಿದರೂ ನಗರಗಳ ಬೆಳವಣಿಗೆ. ಒಂದಕ್ಕಿಂತ ಒಂದು ಉನ್ನತವಾದ ಮನೆಗಳು. ಈ ಬೆಳವಣಿಗೆ ಹೇಗೆ ಸಾಧ್ಯವಾಯಿತು? ಈ ಭವ್ಯ ಕಟ್ಟಡಗಳಿಗೆ ಬೇಕಾದ ಕಬ್ಬಿಣ, ಸಿಮೆಂಟ್, ವಿದ್ಯುದುಪಕರಣಗಳು, ಇತರ ಸಾಮಾನುಗಳು ಎಲ್ಲಿಂದ ಬಂದುವು ಮಾಯಾಮಂತ್ರದಿಂದ ಬಂದಿಲ್ಲ. ಕಾಂಗ್ರೆಸ್ಸಿನ ಆಡಳಿತದ ಮಹೋನ್ನತಸಾಧನೆಯೇ ಕಾರಣ. ಇಂತಹ ಹಲವಾರು ಪ್ರಗತಿ ಸಾಧನೆಗಳನ್ನು ನಾವು ಉದಾಹರಿಸಬಹುದಾಗಿದೆ

ಕಾಂಗ್ರೆಸ್ ಆಡಳಿತೆಯ ಬೃಹದ್ಯೋಜನೆಗಳ ಪರಿಣಾಮವಾಗಿ ಉತ್ಪಾದನೆ ಹೆಚ್ಚಾಯಿತು. ಅದರ ಪರಿಣಾಮವಾಗಿ ವಾಣಿಜ್ಯ ಬೆಳೆಯಿತು, ವಾಣಿಜ್ಯೋದ್ಯಮ ಮೊದಲಾದುವು ಬೆಳೆದಂತೆಲ್ಲ ಉದ್ಯೋಗಾವಕಾಶ ಹೆಚ್ಚಿತು; ಜನರ ಕೈಯಲ್ಲಿ ಹಣ ಓಡಾಡ ತೊಡಗಿತು. ಹೀಗಾಗಿ ನಿತ್ಯೋಪಯೋಗಿ ಸಲಕರಣೆಗಳನ್ನು ಕೊಳ್ಳುವ ಸಾಮರ್ಥ್ಯ ಬೆಳೆಯಿತು. ಇದಕ್ಕೆ ಜನರ ಸಾಹಸ ಮತ್ತು ಸರಕಾರದ ಉನ್ನತಧ್ಯೇಯ ಇವೆರಡೂ ಕಾರಣ ನಾವು ಸ್ವಾತಂತ್ರ್ಯ ಹೋರಾಟದ ಮೂಲಕ ರಾಜಕೀಯ ಕೀರ್ತಿಯನ್ನು ಗಳಿಸಿದಂತೆ ಆರ್ಥಿಕ ಕ್ಷೇತ್ರದಲ್ಲಿಯೂ ಕೀರ್ತಿ ಪತಾಕೆಯನ್ನು ಹಾರಿಸಬೇಕಾಗಿದೆ.

ಶ್ರೀ ಕೆ. ಹನುಮಂತಯ್ಯ

ರಷ್ಯ ಬಹಳ ಮುಂದುವರಿದಿದೆ ಎನ್ನುತ್ತೇವೆ ಆದರೆ, ರಷ್ಯದ ಪ್ರಧಾನಿಯವರು 'ನಾವು ಅಮೆರಿಕೆಯ ಮಟ್ಟಕ್ಕೆ ಬರಲು ಇನ್ನೂ ೨೦ ವರ್ಷಬೇಕು' ಎನ್ನುತ್ತಾರೆ. ರಷ್ಯನ್ ಕ್ರಾಂತಿಯಾಗಿ ೪೫ ವರ್ಷಗಳು ಸಂದುವು. ಅಂದಿನಿಂದ ಅಪಾರ ಸಾಧನೆ ಮಾಡಿದರೂ ಇನ್ನೂ ಅಮೆರಿಕೆಯ ಮಟ್ಟಕ್ಕೆ ಬರಲು ಸಾಧ್ಯವಾಗಲಿಲ್ಲ. ಇದನ್ನು ಗಮನಿಸಿದರೆ, ನಾವು ಸ್ವಾತಂತ್ರ್ಯ ನಂತರದ ಕೇವಲ ಈ ಅಲ್ಪಾವಧಿಯಲ್ಲಿ ಸಾಧಿಸಿರುವುದು ಅಲ್ಪಮಾನವೇನೂ ಅಲ್ಲ. ರಷ್ಯದಲ್ಲಿಯಾದರೂ ಅನೇಕ ಕಡೆ ನಮ್ಮ ಜನಜೀವನದ ಮಟ್ಟವೇ ಇದೆ.

ಆದುದರಿಂದ ಕಾಂಗ್ರೆಸ್ ಪಕ್ಷದ ಕೈಯಲ್ಲಿ ಭಾರತೀಯ ಜನತೆಯ ಹಿತ ಸಾಧನೆಯು ಭದ್ರವಾಗಿದೆ. ಜನಹಿತವನ್ನೇ ಗುರಿಯಾಗಿಟ್ಟುಕೊಂಡು ಅದಕ್ಕಾಗಿಯೇ ಶ್ರಮಿಸುತ್ತ ಬಂದಿರುವ ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸಿ, ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ ಮಾಡುವುದರಿಂದ ಭಾರತದ ಭವಿಷ್ಯವು ಉಜ್ವಲವಾಗುವುದು ಖಂಡಿತ.

ನಿಮ್ಮ ಮತಗಳನ್ನು ಕಾಂಗ್ರೆಸ್ ಉಮೇದ್ವಾರಿಗಳಿಗೇನೇ ನೀಡಿ ಸುಭದ್ರ ಭಾರತ ರಚನೆಗೆ ಬೆಂಬಲ ನೀಡಿರಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಕುರುಡಿಯ ಕಾರಭಾರ

(೨ನೇ ಪುಟದಿಂದ)

ತಿತ್ತು. ಲಕ್ಷ್ಮಿಯ ಮಾತಿನಲ್ಲಿ ಸ್ವಲ್ಪವಾದರೂ ಸತ್ಯಾಂಶವಿದೆಯೆಂದಾಕೆಗೆ ಅರಿವಾಯ್ತು. ಒಂದು ವಿಧದ ಕೈದಿಯಂತೆ ಆಕೆ ಮೆತ್ತಗೆ ಸುಳಿದು ಗದ್ದೆಯ ಬದಿಗೆ ಸಾಗಿದಳು.

ಕೆಲವು ದಿನಗಳ ತರುವಾಯ ವೈಲಿಗೆಯು ಗ್ರಾಮದ ಕೆಲವಾರು ಜನರನ್ನು ಬಲಿ ತೆಗೆದುಕೊಂಡಿತು. ಆದರೆ, ತನ್ನ ಕಾಟಕ್ಕೆ ಗುರಿಯಾದವರ ಮುಖ ಮತ್ತು ಶರೀರಗಳಲ್ಲಿ ತನ್ನ ಆಗಮನದ ಮುದ್ರೆಯನ್ನು ಬಹುವಾಗ ಒತ್ತಿತ್ತು. ಲಲಿತೆಯ ಶರೀರದಲ್ಲೂ ವೈಲಿಗೆಯ ಕಲೆಗಳು ಉಳಿದುಕೊಂಡುವಲ್ಲದೆ ಆಕೆಯ ಎರಡೂ ಕಣ್ಣುಗಳು ಕೆಡುತ್ತ ಬಂದುವು. ಅವುಗಳಲ್ಲಿ ಮೂಡಿದ್ದ ವೈಲಿಗೆಯ ಗುಳ್ಳೆಗಳು ತಮ್ಮೊಡನೆ ದೃಷ್ಟಿ ಶಕ್ತಿಯನ್ನೂ ಕೊಂಡು ಹೋದುವು. ಇದನ್ನು ತಿಳಿದ ಶಂಕರ–ಪದ್ಮರು ಗೋಗರೆದು ಅತ್ತುಬಿಟ್ಟರು, ಯಾರಾದರೂ ಬಂದವರತ್ತ ತರ್ಜನಿ ಮಾಡಿ 'ಯಾರಿವರು?' ಎಂದು ಅವರು ಪ್ರಶ್ನಿಸಿದಾಗ, ಲಲ್ಲಿ ಹೇಳುತಿದ್ದಳು — 'ನನಗಾರೂ ತೋರುತ್ತಿಲ್ಲ' ಎಂದು. ಲಲ್ಲಿ ಕುರುಡಿಯಾದಳು ಎಂದವರಿಗೆ ವಿಶ್ವಾಸ ಹುಟ್ಟಿತು. ಇದರಿಂದ ನೊಂದರು; ಅತ್ತರು. ಆಕೆ ಗಂಡಾದರೂ ಆಗಿರುತಿದ್ದರೆ, ಒಂದು ರೀತಿಯಾಗುತಿತ್ತು; ಆದರೆ, ಹುಡುಗಿಯ ಸರ್ವತೋಕಾರದ ಜೀವನವು ಕಣ್ಣುಗಳಿಲ್ಲದೆ ಹೇಗೆ ಸಾಗೀತು? ಈ ಬಗ್ಗೆ ಯೋಚಿಸುತಿದ್ದಂತೆ ಅವರ ಹೃದಯವೂ ಒಡೆಯುವಂತಿತ್ತು.

ಲಲ್ಲಿ ಮತ್ತಾಕೆಯ ತಾಯ್ತಂದೆಯರ ಕಡೆಗೆ ಹಳ್ಳಿಯ ಎಲ್ಲ ಜನರ ಸಹಾನುಭೂತಿಯಿತ್ತು. ಆದರೆ, ಕೇವಲ ಸಹಾನುತಾಪದಿಂದೇನಾಗುವುದು? ನಗರದತ್ತಣಿಂದ ಬಂದವರು 'ನಿರಾಶರಾಗಬೇಡಿ. ಆಸ್ಪತ್ರೆಯಲ್ಲಿ ಡಾಕ್ಟರರಿಗೆ ತೋರಿಸಿದರೆ ಸರಿಯಾದರೂ ಆಗಬಹುದು' ಎಂದ ಧೈರ್ಯ ತುಂಬ ತೊಡಗಿದರು.

ಶಂಕರ ಇದನ್ನೂ ಮಾಡಿದ ಆದರೆ, ಅಲ್ಲಿಂದ ಭಗ್ನಮನೋರಥನಾಗಿಯೇ ತಂದೆ ಮಗಳು ಹಿದಿರುಗಬೇಕಾಯಿತು. ಜನರ ಮಾತನ್ನು ಕೇಳಿ, ಹಲವಾರು ಪಂಡಿತರು, ಹಕೀಮರು ಎಲ್ಲರನ್ನೂ ಕಂಡಾಯಿತು; ಆದರೆ, ಎಲ್ಲವೂ ನಿಷ್ಫಲವೆನಿಸಿದಾಗ, ಆ ಜೀವ ಈ ಶಾಪವನ್ನು ಅನುಭವಿಸಲೇ ಬೇಕೆಂದು ಅವರು ತಿಳಿದು ಖಿನ್ನರಾದರು.

ಶಂಕರ–ಪದ್ಮರಂತೆ ಲಲ್ಲಿ ಮಾತ್ರ ಹತಾಶಳಾಗಲಿಲ್ಲ. ದೃಷ್ಟಿಯೇನೋ ಹೋಯಿತು; ಆದರೆ, ಬುದ್ಧಿ ಮತ್ತು ಕಾರ್ಯಶಕ್ತಿ ಉಳಿದಿದೆಯಲ್ಲಾ ಎಂದವಳು ಯೋಚಿಸುತಿದ್ದಳು. ಮನೆಯ ಚಿಕ್ಕಪುಟ್ಟ ಕೆಲಸಗಳಲ್ಲಿ ಆಕೆ ತೊಡಗುವ ಪ್ರಯತ್ನ ಮಾಡಿದಳು. ಆದರೆ, ಕೆಲಸದ ನಡುವೆ ಮಣ್ಣಿನ ಮಡಿಕೆಗಳು ಒಡೆಯುತಿದ್ದುವು; ಕೆಲವೊಮ್ಮೆ ಅಲ್ಲಿಯೇ ಇರುವ ಪಾತ್ರೆಗಳನ್ನು ಮೆಟ್ಟಿ ಎಡವಿಬೀಳುತಿದ್ದಳು; ಗೋಡೆ-ಬಾಗಿಲುಗಳಿಗೆ ಡಿಕ್ಕಿ ಹೊಡೆಯುತಿದ್ದಳು. ಇದನ್ನು ಕಂಡ ತಾಯಿ; ಮಗೂ, ನೀನು ಹೇಳಿದ ಮಾತನ್ನು ಕೇಳುವುದಿಲ್ಲ. ಕುರುಡಿಯಿಂದ ಏನು ತಾನೇ ಕೆಲಸವಾಗಬಹುದು? ಸುಮ್ಮನೆ ವಸ್ತುಗಳನ್ನು ಒಡೆದುಹಾಕುತ್ತಿ ಜೀವಕ್ಕೇನೇ ಗಂಡಾಂತರ ತಂದುಕೊಳ್ಳುತ್ತಿ. ಒಂದು ಮೂಲೆಯಲ್ಲಿ ಸುಮ್ಮನೆ ಕುಳಿತರಾಗದೇ" ಎಂದು ಮೆತ್ತಗಾಗಿ ಗದರಿಸುತಿದ್ದಳು

ಆಗ ಮಗಳನ್ನು ತಿದ್ದಳು—"ಅಮ್ಮಾ, ಏನೋ ಚೂರು ಪಾರು ನಷ್ಟವಾಗುವುದೆಂದು ನೀನು ಹೆದರಿದರೆ, ನಾನು ಕೆಲಸ ಮಾಡುವುದನ್ನು ಕಲಿಯುವುದಾದರೂ ಹೇಗೆ?"

"ಕಲಿಯುತ್ತಿ ನೀನು, ನಿನ್ನ ತಲೆ! ದೊಡ್ಡ ಕಾರಖಾನೆ ನಡೆಸುತ್ತಿಯಲ್ಲ? ಕಣ್ಣುಗಳೇ ಇಲ್ಲದೆ ಹೋದರೆ, ಕಲಿಯುವುದಾದರೂ ಏನನ್ನು? ಮಾಡುವುದಾದರೂ ಏನನ್ನು?"

ಲಲಿತೆ ಸುಮ್ಮನಾಗುತಿದ್ದಳು. ಕುರುಡಿಯಾಗಿದ್ದೂ ಕಲಿಯುವ, ಮಾಡುವ ತನ್ನ ಆಸೆಯನ್ನು ಆಕೆ ತಾಯಿಗೆ ಹೇಗೆ ತಿಳಿಸಬಲ್ಲಳು? ಆದರೂ ಯಾರಿಂದಲಾದರೂ ಸೋಲೊಪ್ಪಿಕೊಳ್ಳುವ ಹುಡುಗಿ ಆಕೆಯಾಗಿರಲಿಲ್ಲ.

ಒಂದು ದಿನ ಶಂಕರ–ಪದ್ಮರು ಗದ್ದೆಯಲ್ಲಿ ಕೆಲಸ ಮಾಡುತ್ತ ಇರುವಾಗ ಮಾತಾಡಿಕೊಳ್ಳುತಿದ್ದರು. ಪದ್ಮ ಹೇಳುತಿದ್ದಳು—"ಅಲ್ಲ, ನಮ್ಮ ನಂತರ ಲಕ್ಷ್ಮಿಯು ಹೇಗೆ ಬದುಕಬಲ್ಲಳೆಂಬುದೇ ನನಗೆ ಹೆದರಿಕೆ ಆಕೆಯನ್ನು ಸಾಕುವವರಾದರೂ ಯಾರು?"

ಅಷ್ಟರಲ್ಲಿ ಒಂದು ಸ್ವರ ಕಿವಿಗೆ ಬಿತ್ತು—"ಹೆದರುವ ಆಗತ್ಯವಿಲ್ಲ. ನನ್ನನ್ನು ನಾನೇ ನೋಡಿಕೊಳ್ಳುತ್ತೇನೆ. ನಿಮ್ಮ ಆಶೀರ್ವಾದ ಒಂದಿದ್ದರೆ ಸಾಕು."

ಇಬ್ಬರೂ ತಲೆಯೆತ್ತಿ ಅಕ್ಕ ಪಕ್ಕ ನೋಡತೊಡಗಿದರು. ಕುಸು ದೂರದಲ್ಲಿಯೇ ಕೈಯಲ್ಲಿ ದಂಡೆಯೂರಿ ಲಲ್ಲಿ ಅವರತ್ತಲೇ ಬರುತಿದ್ದಳು. ಇಬ್ಬರೂ ತಮ್ಮ ಕಣ್ಣುಗಳನ್ನು ನಂಬಲಿಲ್ಲ. ಪದ್ಮ ಗಾಬರಿಗೊಂಡು ಕೇಳಿದಳು—"ಏ. ನೀನು ಬಂದೆಯಾದರೂ ಯಾರೊಡನೆ?"

"ಇದರ ಸಂಗಡ ಇದುವೇ ನನ್ನ ಪಥಪ್ರದರ್ಶಕ ನೀವು ಗದ್ದೆಯತ್ತ ಹೋದ ಬಳಿಕ ಇದರ ಸಹಾಯದಿಂದ ಇಡಿಯ ಹಳ್ಳಿಯನ್ನೇ ಸುತ್ತುತ್ತೇನೆ. ಎಲ್ಲ ದಾರಿಗಳೂ ಎಲ್ಲರ ಮನೆಗಳೂ ನನಗೆ ಸರಿಯಾಗಿ ಗೊತ್ತು. ನಿಮಗೆ ಮಾತ್ರ ನಾನು ಹೇಳಿರಲಿಲ್ಲ. ಬೇಕಾದರೆ ಒಂದು ಬಾರಿ ಪರೀಕ್ಷೆ ಮಾಡಿ ನೋಡಿ' ಎಂದು ಲಲ್ಲಿ ತನ್ನ ಕೈಯ ದಂಟೆಯನ್ನೊಮ್ಮೆ ನೆಲಕ್ಕೆ ಬಲವಾಗಿ ಊರಿದಳು.

ಶಂಕರನ ಮುಖ ಪ್ರಸನ್ನವಾಯಿತು; ಆದರೆ, ತಾಯಿಯದು ಮಾತ್ರ ಮಲಿನವಾಯಿತು. ಕಂಪಿಸುವ ಧ್ವನಿಯಲ್ಲಿ ಆಕೆಯೆಂದಳು—"ನಾನು ನಿನ್ನೊಡನೆ ಚರ್ಚೆ ನಡೆಸ ಬಯಸುವುದಿಲ್ಲ. ನನ್ನ ಮಾತನ್ನು ನೀನು ಕೇಳುವವಳೂ ಅಲ್ಲ. ಈಗಲಾದರೂ ನೀನು ಕೇಳುವಿಯೆಂಬ ಭರವಸೆಯೂ ನನಗಿಲ್ಲ. ಆದರೆ, ನೀನು ಹೀಗೆ ಬಲ್ಲ ಮನೆಯಿಂದ ಹೊರಗೆ ಬರುವುದು ಎಷ್ಟೆಂದರೂ ಒಳ್ಳೆಯದಲ್ಲ. ಎಲ್ಲಾದರೂ ಹಳ್ಳ-ಕೊಳ್ಳಗಳಿಗೋ ತೋಡುಗಳಿಗೋ ಬಿದ್ದರೆ, ಅಥವಾ ಎತ್ತು ಕೋಣಗಳ ಕೊಂಬಿಗೆ ಎದುರಾದರೆ, ನಿನ್ನೊಡನೆ ನಾವೂ ಅನುಭವಿಸಬೇಕಾಗುವುದು. ಮದ್ದು ಗಿದ್ದು ಮಾಡಲು ಹಣವಾದರೂ ನಮ್ಮ ಹತ್ತಿರವಿಲ್ಲ.'

ತಾಯಿಯ ಮಾತಿನಿಂದ ಮಗಳ ಮುಖದ ತೇಜವೇ ಕುಂದಿಹೋದುದನ್ನು ಗಮನಿಸಿದ ಶಂಕರನು ನಡುವೆ ಬಾಯಿ ಹಾಕಿದ. "ಇರಲಿ, ಲಕ್ಷ್ಮಿ, ನೀನು ಇಲ್ಲಿಗೆ ಬಂದುದಾದರೂ ಏಕೆ?"

"ನಿಮ್ಮೊಡನೆ ಒಂದು ಮಾತು ಹೇಳಲೇ ಅಪ್ಪಾ?"

"ನನ್ನೊಡನೆಯೆ? ಅದೇನಪ್ಪಾ ಸಂಜೆ ಮನೆಯಲ್ಲೇ ಹೇಳಿದರೆ, ಆಗುತಿದ್ದಿಲ್ಲವೆ?" ವಿಸ್ಮಯಗೊಂಡ ಶಂಕರ ಹೇಳಿದ.

ಲಲಿತೆ ದೃಢವಾಗಿ ಹೇಳಿದಳು— "ಇಲ್ಲಿಗೇನೆ ಬಂದು ನಾನು ನನ್ನ ಆಶಯವನ್ನು ತಿಳಿಸಲು ಬಯಸಿದೆ."

"ಅದೆಲ್ಲ ಏತಕ್ಕೆ? ಇಲ್ಲಿ ನಿನಗೆ ಕೆಲಸವಾದರೂ ಏನು" ತಾಯಿಯ ಪ್ರಶ್ನೆಯಿದು.

'ಕೆಲಸವಿಪೆಯವನ್ನು ಮನೆಯಲ್ಲಿ ಒಬ್ಬಳೇ ನಿರುದ್ಯೋಗಿಯಾಗಿ ಕುಳಿತು ಸಾಕಾಗಿ ಹೋಯಿತು. ನೀವು ಗಂಜಿ ಬೇಯಿಸಿಟ್ಟು ಗದ್ದೆಗೆ ಬನ್ನಿ; ನಾನದನ್ನು ಸಮಯಕ್ಕೆ ಸರಿಯಾಗಿ ಇಲ್ಲಿಗೆ ತಂದು ಮುಟ್ಟಿಸುವೆ. ಇದರಿಂದ ನಿಮ್ಮೊಡನೆ ಮಾತಾಡುವ ಸಂದರ್ಭವೂ ಬರುವುದು; ತಿರುಗಾಡುವುದರಿಂದ, ನನ್ನ ಮನಸ್ಸೂ ಕುಸು ಹಗುರಾಗುವುದು "

ಪದ್ಮಳಿಗೆ ಈ ಮಾತು ಅರ್ಥವೇ ಆಗಲಿಲ್ಲ. ಆದರೂ ಮಾತು ಹಾರಿಸಲು ಆಕೆ, "ಒಳ್ಳೆಯದು; ನೋಡುವ; ಈಗ ಮನೆಗೆ ಹೋಗು.'

ಏನನ್ನೂ ನುಡಿಯದೆ ಲಲ್ಲಿ ಮನೆಯತ್ತ ತಿರುಗಿದಳು ದಂಟೆಯೂರುತ್ತ ಊರುತ್ತ ಆಕೆ ದಾರಿ ಹಿಡಿದಳು. ಅಲ್ಪ ಸಮಯದ ವರೆಗೆ ಶಂಕರ ಮತ್ತು ಪದ್ಮ ಆಶ್ಚರ್ಯ ಮತ್ತು ಆಹ್ಲಾದಗಳಿಂದ ಆಕೆಯು ಹೋಗುತ್ತಿರುವುದನ್ನೇ ನೋಡ ತೊಡಗಿದರು; ಆಕೆ ದೃಷ್ಟಿಯಿಂದ ಮರೆಯಾದ ಬಳಿಕ, ತಮ್ಮ ಕೆಲಸದಲ್ಲಿ ತೊಡಗಿದರು

ಅಂದಿನಿಂದ ಲಲ್ಲಿ ಹಿಂದಿನಂತೆಯೇ ಮಧ್ಯಾಹ್ನ ಗಂಜಿಯನ್ನು ಹಿಡಿದುಕೊಂಡು ಗದ್ದೆಗೆ ಬರ ತೊಡಗಿದಳು ಆಕೆಯ ಕುರುಡು ತನದಿಂದ ಯಾವ ತೊಂದರೆಯೂ ಆಗಲಿಲ್ಲ. ಕಾಲಕ್ರಮದಲ್ಲಿ ಆಕೆ ಮನೆಗೆಲಸದಲ್ಲಿಯೂ ತಾಯಿಗೆ ನೆರವಾಗ ತೊಡಗಿದಳು. ಒಂದು ದಿನ ಸಂಜೆ ಆಕೆ ರಾತ್ರೆಯ ಅಡಿಗೆಯನ್ನೂ ಮುಗಿಸಿ ಒಲೆ ನಂದಿಸಿದ್ದಳು. ಇದನ್ನು ತಿಳಿದ ಪದ್ಮ ಮಗಳ ಕೈಗಳನ್ನು ಮುಟ್ಟಿದ್ದಳು. ಆ ಕೈಗಳಲ್ಲಿ ಅಲ್ಲಲ್ಲಿ ಬೆಂಕಿ ತಗಲಿ ಬೊಕ್ಕೆಗಳೆದ್ದಿದ್ದುವು, ಸಜಲನೇತ್ರಗಳಿಂದ ಆಕೆ ಮಗಳನ್ನು ಅಪ್ಪಿ ಚುಂಬಿಸಿದಳು ಮತ್ತು ಹೇಳಿದಳು— "ಹೀಗೆಲ್ಲಾ ಮಾಡುವುದು ಸರಿಯಲ್ಲ ಮಗೂ. ಎಲ್ಲಾದರೂ ಬಟ್ಟೆಗೆ ಬೆಂಕಿ ತಾಗಿದರೆ. .?'

ತಾಯಿಯ ಸ್ವರದಲ್ಲಿ ಪ್ರೇಮುಲ ಭಾವನೆಯಿದ್ದುದು ಲಲ್ಲಿಗೆ ಅನುಭವಕ್ಕೆ ಬಂತು. ಆದುದರಿಂದಲೇ ಆಕೆಯೇನೂ ಹೇಳಲಿಲ್ಲ; ತಾಯಿಯ ಕುತ್ತಿಗೆಗೆ ಜೋತುಬಿದ್ದಳು. ಇಬ್ಬರ ಕಣ್ಣುಗಳಲ್ಲೂ ಪ್ರಸನ್ನತೆಯ ಬಾಷ್ಪವಾರಿ ಬಿಂದುಗಳು ಉಕ್ಕಿಬರುತ್ತಿದ್ದುವು.

ಒಂದು ದಿನ ನಗರದಲ್ಲಿ ಕಲಿಯಲು ಹೋಗಿದ್ದ ಮೋಹನ ಲಕ್ಷ್ಮಿಯ ಮನೆಗೆ ಬಂದ. ಆ ಮಾತು ಈ ಮಾತು ಆಡುವಾಗ, ಅಲ್ಲಿ ಕುರುಡರಿಗೆ ವಿದ್ಯಾಭ್ಯಾಸ ನೀಡುವ ಶಾಲೆಯೊಂದಿದೆಯೆಂದು ಹೇಳಿದ. ಇದನ್ನು ತಿಳಿದಲಲ್ಲಿ ತಾನೂ ಅಲ್ಲಿ ಕಲಿಯುವೆನೆಂದು ಹಠ ಹಿಡಿದಳು. ತಾಯ್ತಂದೆಯರು ಮೊದಮೊದಲು ಇದರತ್ತ ಗಮನ ಹರಿಸಲಿಲ್ಲ. ಅವರು ಇದನ್ನು ನಂಬುವುದಕ್ಕೂ ಸಿದ್ಧರಿರಲಿಲ್ಲ. ಆದರೆ, ಲಲ್ಲಿ ತನ್ನ ಆಸೆ ಈಡೇರಿಸಲು ಅನ್ನಾಹಾರ ಸೇವೆಯನ್ನೂ ಬಿಡತೊಡಗಿದುದರಿಂದ, ಅಸಹಾಯಕರಾಗಿ ಒಪ್ಪಲೇ ಬೇಕಾಯಿತು.

ಲಲಿತ ಮನೆಯಲ್ಲಿಲ್ಲದಾಗ, ಅವರಿಗೆ ಆಕೆಯದೇ ನೆನಪು ಬರುತಿತ್ತು. ಆಕೆಯದೇ ಚಿಂತೆಯೂ ಇರುತಿತ್ತು. ಆದರೂ ಏನೋ ಕುಸು ಕಲಿತ ನಂತರ ಆಕೆಯ ಜೀವನ ಉತ್ತಮಗೊಂಡೀತೆಂದು ಅವರು ಊಹಿಸಿದ್ದರು. ಆಗಾಗ ಅವಳ ಶಾಲೆಯಿಂದ ಪತ್ರ ಬರುತಿತ್ತು: ಅದರಲ್ಲಿ "ನಿಮ್ಮ ಮಗಳು ಬಹಳ

ಧೂಮ್ರಪಾನದ ಸಹಜವಾದ ಆನಂದಕ್ಕಾಗಿ
ಸೇದಿರಿ
ಎಸ್. ಆರ್
ಬೀಡಿಗಳನ್ನು
SR
REGD.
ಎಲ್ಲಾ ಕಡೆಗಳಲ್ಲಿಯೂ ದೊರಕಲ್ಪಡುತ್ತವೆ
S.R. BEEDI WORKS
UDIPI, S. K.

ಪ್ರತಿಭಾಶಾಲಿನಿ; ಬಹಳ ಬೇಗನೆ ಓದು ಬರಹ ಹಾಗೂ ಕಸಬುಗಳನ್ನು ಕಲಿಯುತ್ತಿದ್ದಾಳೆ" ಎಂದು ಓದುವಾಗ, ಅವರು ಸ್ವರ್ಗ ಸುಖಾನುಭವ ಪಡುತ್ತಿದ್ದರು.

ಐದು ವರ್ಷಗಳ ನಂತರ ಲಲಿತೆ ಮನೆಗೆ ಮರಳಿದಾಗ ಯುವತಿಯಾಗಿದ್ದಳು. ಬೆತ್ತ, ಬಿದಿರುಗಳಿಂದ ಬುಟ್ಟಿಗಳನ್ನೂ ಪೆಟ್ಟಿಗೆಗಳನ್ನೂ ಹೆಣೆಯುತ್ತಿದ್ದಳು. ಹತ್ತಿ ಹತ್ತಿಯಿಂದ ನೂಲುತ್ತಿದ್ದಳು; ಉಣ್ಣೆಯಿಂದ ಸ್ವೆಟ್ಟರ್ ಮೊದಲಾದುವನ್ನು ನೇಯುತ್ತಿದ್ದಳು. ಕುರುಡರ ಉಬ್ಬಿದ ಬ್ರೈಲ್ ಲಿಪಿಯಲ್ಲಿ ಸಾಮಾನ್ಯ ರೂಪದಿಂದ ಬರೆಯುತ್ತಿದ್ದಳು; ಓದುತ್ತಿದ್ದಳು; ಹಸ್ತಾಕ್ಷರ ಹಾಕುತ್ತಿದ್ದಳು. ಹೀಗೆ, ಇಡಿಯ ಗ್ರಾಮದಲ್ಲಿ ಆಕೆಯೊಬ್ಬಳೇ ಓದುಬರಹ ಬಲ್ಲ; ಉದ್ಯೋಗ ಮಾಡಬಲ್ಲ ಮಹಿಳೆಯಾದಳು.

ಲಲಿತೆಯ ಮುಂದೆ ತನ್ನ ಹೊಟ್ಟೆ ಹೊರೆಯುವ ಸಮಸ್ಯೆ ಮಾತ್ರ ಇರಲಿಲ್ಲ. ಆದುದರಿಂದ, ಆಕೆ ಸಹಕಾರಿ ಸಮಿತಿಯ ಬೋರ್ಡಿನಿಂದ ಆರ್ಥಿಕ ಸಹಕಾರ ಪಡೆದು ಒಂದು ಸಹಕಾರಿ ಉದ್ಯೋಗ ಶಾಲೆಯನ್ನು ಸ್ಥಾಪಿಸಿದಳು. ಅಲ್ಲಿ ಹಳ್ಳಿಯ ರೈತರೂ ಹೆಂಗಸರೂ ಬಿಡುವು ಸಮಯದಲ್ಲಿ ಬಂದು ಕೆಲಸ ಮಾಡುತ್ತಿದ್ದರು. ಆಸುಪಾಸಿನ ಮೂಕರು, ಕಿವುಡರು, ಕುರುಡರು ಮೊದಲಾದವರು ಬಂದು ಕೆಲಸ ಮಾಡತೊಡಗಿದರು. ಲಲಿತೆಯು ತಾನು ಕೆಲಸ ಮಾಡುತ್ತಿದ್ದಳಲ್ಲದೆ ಇತರರಿಗೆ ಕಲಿಸುತ್ತಲೂ ಇದ್ದಳು. ಇದರಿಂದ ಆ ಹಳ್ಳಿಯೊಂದು ಚಿಕ್ಕಪುಟ್ಟ ಉದ್ಯೋಗಗಳ ಕೇಂದ್ರವಾಗಿ ರೂಪಾಂತರಗೊಂಡಿತು; ಗ್ರಾಮೀಣ ಜನರ ಆದಾಯವೂ ಹೆಚ್ಚಿ, ಅವರ ಸ್ಥಿತಿಗತಿಯಲ್ಲಿ ಸುಧಾರಣೆಯೂ ಸಾಧ್ಯವಾಯಿತು. ಲಲಿತೆಯ ಜಾದುವನ್ನು ಎಲ್ಲರೂ ಹೊಗಳತೊಡಗಿದರು.

ದೂರ ದೂರದ ಊರುಗಳಿಂದ ಜನರು ಲಲಿತೆಯನ್ನು ಕಾಣಲು ಬರುತ್ತಿದ್ದರು. ಅವರೊಡನೆ ನಾಲ್ಕಾರು ಮಿನಿಟು ಮಾತನಾಡಿ, ಕೈ ಜೋಡಿಸಿ ಕ್ಷಮೆಯಾಚಿಸುತ್ತಿದ್ದಳು: "ಕ್ಷಮಿಸಿ. ನನಗೆ ತುಂಬ ಕೆಲಸವಿದೆ" ಆಕೆಯು ಇಡಿಯ ಉದ್ಯೋಗಶಾಲೆಯಲ್ಲಿ ತಿರುಗಾಡುತ್ತಿದ್ದಳು; ಅಲ್ಲದೆ ತನ್ನ ಕೆಲಸಗಳನ್ನೂ ಸಮರ್ಪಕವಾಗಿ ಮಾಡಿ ಪೂರೈಸುತ್ತಿದ್ದಳು. ಇದನ್ನು ಕಂಡ ಯಾರೇ ಆಗಲಿ, ಆಕೆ ನೇತ್ರಹೀನಳೆಂದು ತಿಳಿಯುವಂತಿರಲಿಲ್ಲ

ಲಲಿತೆ ನೇತ್ರಹೀನೆಯಾಗಿದ್ದರೂ ಉದ್ಯೋಗಶಾಲೆಯ ಮಾತೃವಾಗಿ ಪರಿಣಮಿಸಿದಳು. ಪ್ರೀತಿಯ ಲಲ್ಲಿಯು ಮಾತೃ ಲಲಿತಾ ಬಾಯಿಯಾಗಿ ಹೆಸರು ಪಡೆದಳು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

೧೯೬೨—೬೩ರ ಕರ್ನಾಟಕದ ವಾರ್ಷಿಕ ಯೋಜನೆ

(೧ನೇ ಪುಟದಿಂದ)

ವರ್ಷ, ಹೊಸದಾಗಿ ಇನ್ನೂ ಆರು ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವಿದೆ.

೬೨—೬೩ರಲ್ಲಿ ೨.೨ ಲಕ್ಷ ಟನ್‌ಗಳಷ್ಟು ಆಹಾರಧಾನ್ಯಗಳನ್ನು ಹೆಚ್ಚಾಗಿ ಬೆಳೆಸಬೇಕೆಂಬ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ವಾಣಿಜ್ಯ ಬೆಳೆಗಳನ್ನು ತೆಗೆಯುವ ಕಾರ್ಯಕ್ರಮಗಳನ್ನು ಚುರುಕುಗೊಳಿಸುವ ಅಂಗವಾಗಿ ಎಣ್ಣೆ ಬೀಜಗಳ ಉತ್ಪನ್ನ ೩೦,೦೦೦ ಟನ್‌ಗಳಷ್ಟು ಹೆಚ್ಚುವ ನಿರೀಕ್ಷೆ ಇದೆ; ಕಬ್ಬಿನ ಉತ್ಪನ್ನ ೧೯,೦೦೦ ಟನ್‌ಗಳಷ್ಟು ಹೆಚ್ಚುವ ನಿರೀಕ್ಷೆ ಇದೆ; ಹತ್ತಿಯ ಬೆಳೆ ೭೦,೦೦೦ ಟನ್‌ಗಳಷ್ಟು ಹೆಚ್ಚುತ್ತದೆ.

ಸೀ ಐಲೆಂಡ್ ಹತ್ತಿಯನ್ನು ಬೆಳೆಯುವ ಕಾರ್ಯಕ್ರಮದಲ್ಲಿ ಸಾಕಷ್ಟು ಪ್ರಗತಿ ಸಾಧ್ಯವಾಗಿದೆ ಸುಮಾರು ೩,೦೦೦ ಎಕರೆಗಳಷ್ಟು ಭೂಮಿಯಲ್ಲಿ ಈ ಬೆಳೆಯನ್ನು ಇಂದು ತೆಗೆಯಲಾಗುತ್ತಿದೆ.

ಕೈಗಾರಿಕಾ ಪ್ರಗತಿ

ರಾಜ್ಯದ ಕೈಗಾರಿಕಾ ವಿಸ್ತರಣೆ ಕಾರ್ಯಕ್ರಮಗಳ ಪೈಕಿ 'ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ"ಯ ವಿಸ್ತರಣೆ ಕೂಡ ಸೇರಿದೆ ಫೆರೋಸಿಲಿಕನ್ ತಯಾರಿಕಾ ಕಾರ್ಖಾನೆ, ಉಕ್ಕಿನ ಉತ್ಪನ್ನ ಹೆಚ್ಚಿಸುವ ಯೋಜನೆ, ಸರ್ಕಾರದ ಪಿಂಗಾಣಿ ಕಾರ್ಖಾನೆಯ ವಿಸ್ತರಣೆ ಗಂಧಕಾಮ್ಲ ತಯಾರಿಕಾ ಕಾರ್ಖಾನೆ ಇತ್ಯಾದಿಗಳು ಕೈಗಾರಿಕಾ ವಿಸ್ತರಣೆ ಅಂಗವಾಗಿ ಸರ್ಕಾರದ ಮುಂದಿವೆ.

ಸರ್ಕಾರದ ವಿದ್ಯುತ್ ಸಲಕರಣೆಗಳ ಕಾರ್ಖಾನೆಯ ಅಂಗೀಕೃತ ವಿಸ್ತರಣೆ ಕಾರ್ಯಕ್ರಮದ ಪ್ರಕಾರ ಈಗಿನ ಉತ್ಪನ್ನ ಪ್ರಮಾಣವನ್ನು ದ್ವಿಗುಣಗೊಳಿಸಲಾಗುತ್ತದೆ ಮೋಟಾರ್ಸ್, ಟ್ರಾನ್ಸ್‌ಫಾರ್ಮರ್ಸ್, ಸ್ವಿಚ್‌ಗೇರ್ ಇತ್ಯಾದಿಗಳು ಈ ಕಾರ್ಖಾನೆಯಲ್ಲಿ ತಯಾರಾಗುತ್ತಿವೆ. ಈ ಕಾರ್ಖಾನೆಯ ಉತ್ಪನ್ನ ಪ್ರಮಾಣವನ್ನು ಮೂರುಪಟ್ಟು ಹೆಚ್ಚಿಸುವ ಕಾರ್ಯಕ್ರಮವೊಂದು ಇದೀಗ ಪರಿಶೀಲನೆಯ ಘಟ್ಟದಲ್ಲಿದೆ.

ಪಿಂಗಾಣಿ ಕಾರ್ಖಾನೆಯಲ್ಲಿ ತಯಾರಾಗುವ ಬಿಡಿ ಭಾಗಗಳು ಭೂಪಾಲಿನಲ್ಲಿರುವ ಹೆವಿ ಎಲೆಕ್ಟ್ರಿಕಲ್ಸ್ ಕಾರ್ಖಾನೆಯ ಬೇಡಿಕೆಗಳನ್ನು ಪೂರೈಸುತ್ತವೆ

ಫೆರೋ ಸಿಲಿಕನ್ ಕಾರ್ಖಾನೆಯ ಪ್ರಥಮ ಭಾಗದಲ್ಲಿ ಕಾರ್ಯ ಆರಂಭಿಸುವ ನಿರೀಕ್ಷೆ ಇದ್ದು ದ್ವಿತೀಯ ಭಾಗದ ಕಾರ್ಯಕೂಡ ಇನ್ನು ಕೆಲವು ತಿಂಗಳಲ್ಲೇ ಮುಗಿಯಬಹುದು.

ತೃತೀಯ ಯೋಜನೆ ಅಂಗವಾಗಿ ಮೈಸೂರು ರಾಜ್ಯದಲ್ಲಿ ಕೇಂದ್ರ ಸರ್ಕಾರವು ಆರಂಭಿಸಿರುವ ಗಡಿಯಾರಗಳ ಕಾರ್ಖಾನೆಯೂ ಸೇರಿದೆ ಮೆಷೀನ್ ಟೂಲ್ಸ್ ಕಾರ್ಖಾನೆಯ ವಿಸ್ತರಣೆ, ಕೋಲಾರದ ಚಿನ್ನದ ಗಣಿಗಳು ಮತ್ತು ಹಟ್ಟಿ ಚಿನ್ನದ ಗಣಿಗಳು ಇವುಗಳ ವಿಸ್ತರಣೆ ಕೂಡ ಗಮನಾರ್ಹ. ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ವಿಸ್ತರಣೆಗೆ ಅವಶ್ಯಕವಾದ ನೆರವನ್ನೂ ನೀಡಲು ಕೇಂದ್ರ ಸರ್ಕಾರ ಮುಂದೆ ಬಂದಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಕಾರ್ಯಕ್ರಮದ ಅಂಗವಾಗಿ ಗ್ರಾಮಾಂತರ ಕುಶಲಕರ್ಮಿಗಳ ೧೦ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮವು ರಾಜ್ಯದ ತೃತೀಯ ಯೋಜನೆಯಲ್ಲಿ ಸೇರಿದೆ.

ಎಂಟು ಕೈಗಾರಿಕಾ ಎಸ್ಟೇಟುಗಳ ಸ್ಥಾಪನೆ ಕಾರ್ಯ ಮುಗಿದಿದೆಯಲ್ಲದೆ ಸಹಕಾರಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸುವ ಕಾರ್ಯಕ್ಕೆ ಈಗ ಗಮನ ಕೊಡಲಾಗುತ್ತಿದೆ.

ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ಹುಬ್ಬಳ್ಳಿ—ಕಾರವಾರ ರಸ್ತೆಯ ವಿಸ್ತರಣೆ ಕಾರ್ಯ ಬಿರುಸಿನಿಂದ ಸಾಗುತ್ತಿದೆ ಈ ರಸ್ತೆಯ ವಿಸ್ತರಣೆ ಫಲವಾಗಿ ವಾಗಿ ಕಬ್ಬಿಣದ ಅದುರನ್ನು ಸಾಗಿಸುವ ಕಾರ್ಯ ಸುಲಭವಾಗುವುದು.

ರಾಜ್ಯ ಸರ್ಕಾರ ರಸ್ತೆ ಸಾರಿಗೆ ಕಾರ್ಪೋರೇಷನ್ ಸ್ಥಾಪಿಸಿದೆ. ೧೯ ಜಿಲ್ಲೆಗಳ ಪೈಕಿ ೧೫ ಜಿಲ್ಲೆಗಳಲ್ಲಿ ಈಗ ಬಸ್ ಪ್ರಯಾಣದ ರಾಷ್ಟ್ರೀಕರಣ ನಡೆದಿದೆ.

ವಿದ್ಯಾಭ್ಯಾಸ ಮತ್ತು ಆರೋಗ್ಯ

ಪ್ರಸಕ್ತ ಸಾಲಿನಲ್ಲಿ ಪ್ರಾಥಮಿಕ ಶಾಲೆಗಳಿಗೆ ೧.೬೨ ಲಕ್ಷದಷ್ಟು ಬಾಲಕರು ಹೆಚ್ಚಾಗಿ ಸೇರಿದ್ದಾರೆ. ೧೯೬೨-೬೩ರ ಹೊತ್ತಿಗೆ ಇನ್ನೂ ೧೯೨ ಲಕ್ಷ ಬಾಲಕರು ಪ್ರಾಥಮಿಕ ಶಾಲೆಗಳಿಗೆ ಹೋಗುವಂತಾಗಬೇಕೆಂದು ಸರ್ಕಾರ ಹಾಡಿಕೊಂಡಿರುವ ಗುರಿಯಾಗಿದೆ.

ಶಾಲಾ ಬಾಲಕರಿಗೆ ಮಧ್ಯಾಹ್ನದ ವೇಳೆಯಲ್ಲಿ ಊಟ ಒದಗಿಸಮಕಾರ್ಯಕ್ರಮದ ಫಲವಾಗಿ ಒಂದು ಲಕ್ಷ ಜನ ಮಕ್ಕಳು ಪ್ರಯೋಜನ ಪಡೆಯುತ್ತಾರೆ ಈ ಕಾರ್ಯಕ್ರಮ ಮುಂದೆಯೂ ಮುಂದುವರಿಯುವುದು.

ಮಲೇರಿಯಾ ಮತ್ತು ಸಿಡುಬು ರೋಗಗಳ ನಿವಾರಣೆ ಕಾರ್ಯಕ್ರಮವನ್ನು ಚುರುಕುಗೊಳಿಸಲಾಗುವುದು. ೧೯೬೩-೬೪ರ ಕೊನೆ ಹೊತ್ತಿಗೆ ಇಡೀ ರಾಜ್ಯವು ಸಿಡುಬುರೋಗ ನಿವಾರಣಾ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಕುಟುಂಬ ಯೋಜನಾ ಕಾರ್ಯಕ್ರಮಕ್ಕೂ ರಾಜ್ಯದ ಯೋಜನೆಯಲ್ಲಿ ವಿಶೇಷ ಪ್ರಾಮುಖ್ಯತೆ ಕೊಡಲಾಗಿದೆ ಪ್ರತಿಯೊಂದು ಜಿಲ್ಲೆಯಲ್ಲೂ ಸಂಚಾರಿ ಚಿಕಿತ್ಸಾಲಯವೊಂದನ್ನು ಒದಗಿಸುವ ಕಾರ್ಯಕ್ರಮವಿದೆ. ರಾಜ್ಯದಲ್ಲಿ ಇಂದು ನಾಲ್ಕು ಕುಟುಂಬ ಯೋಜನಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಈ ತನಕ ೧೪೯ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ೧೯೬೨-೬೩ರಲ್ಲಿ ಇನ್ನೂ ೨೩ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮವಿದೆ.

ಬೆಂಗಳೂರು ಮತ್ತು ಮೈಸೂರಿನ ಮೆಡಿಕಲ್ ಕಾಲೇಜುಗಳಲ್ಲಿ ಪದವಿ ನಂತರದ ಕೆಲವು ಕೋರ್ಸ್‌ಗಳನ್ನು ಆರಂಭಿಸಲಾಗುವುದು.

ಗ್ರಾಮಾಂತರ ವಸತಿ ಯೋಜನೆ ಕಾರ್ಯಕ್ರಮದ ಅಂಗವಾಗಿ ೨೩೧ ಗ್ರಾಮಗಳ ಸರ್ವೆ ಕಾರ್ಯ ನಡೆದಿದೆ. ೨೫೬ ಗ್ರಾಮಗಳಿಗೆ ಅನ್ವಯಿಸಿದಂತೆ ಲೆ ಔಟ್ ಕಾರ್ಯಕ್ರಮಗಳು ಸಿದ್ಧವಾಗಿವೆ.

ಇಂತಹ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವ ಕಾಂಗ್ರೆಸ್ ಪಕ್ಷವನ್ನು ಅವಶ್ಯ ಬೆಂಬಲಿಸಿರಿ.

ಎಲ್ಲರಿಗೂ ಬೇಕಾಗಿದೆ

ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಪ್ರತಿಯೊಬ್ಬರ ಆರ್ಥಿಕ ಅನುಕೂಲತೆ ಮತ್ತು ಆವಶ್ಯಕತೆಗಳಿಗೆ ಒಪ್ಪುವ ಫಲದಾಯಕ ಯೋಜನೆಗಳು ನಮ್ಮಲ್ಲಿವೆ.

ಪಿಗ್ಮಿ	ಠೇವಣಾತಿ ಯೋಜನೆ. ಪ್ರತಿದಿನವೂ ಉಳಿಸಬೇಕೆಂಬ ಅಪೇಕ್ಷೆಯುಳ್ಳವರಿಗೆ ಅಗತ್ಯ. ನಾಲ್ಕಾಣೆಯಷ್ಟು ಅಲ್ಪ ಮೊತ್ತದಿಂದಲೂ ಆರಂಭಿಸಬಹುದು. ಪಿಗ್ಮಿಯು ಬೇಂಕಿನ ಸೇವೆಯನ್ನು ಮನೆಬಾಗಿಲಿಗೆ ತರುವುದು.
ಕ್ಯುಮ್ಯುಲೆಟಿವ್	ಠೇವಣಾತಿಗಳು. ರೂಪಾಯಿ ಐದು ಅಥವಾ ಅದರ ಗುಣಕಗಳಲ್ಲಿ ಸಂಗ್ರಹಿಸಿಡಲು ಉತ್ತಮ ಸಾಧನ. ಮಾಸಿಕ ವೇತನ ಪಡೆಯುವ ಮಂದಿಗೆ ಅನುಕೂಲ ಹಾಗೂ ಆಕರ್ಷಕವಾಗಿದೆ.
ಲಕ್ಷ್ಮಿ	ಕೇಶ್ ಸರ್ಟಿಫಿಕೇಟ್ ನಿಮಲ್ಲಿರುವ ಬಂಡವಾಳಕ್ಕೆ ಲಾಭದಾಯಕ ಪ್ರತಿಫಲ ದೊರೆಯುವುದು ಸುಪ್ತ ಧನದ ಸದ್ವಿನಿಯೋಗಕ್ಕೆ 'ಲಕ್ಷ್ಮಿ'ಯ ಆಹ್ವಾನ ಮನೋಹರವಾಗಿದೆ.
ವಿದ್ಯಾರ್ಥಿಗಳಿಗೆ	ವಿಶೇಷ ಸೌಲಭ್ಯ. ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಪಾಠವಿದೆ. ಮಾತ್ರವಲ್ಲದೆ ನಮ್ಮ ಶಾಖೆಯಿಂದ ಧರ್ಮಾರ್ಥವಾಗಿ ಹಣ ಪಾವತಿ ಮಾಡುವ ಅವಕಾಶ ಕಲ್ಪಿಸಿ ಕೊಡಲಾಗಿದೆ.

ಆದರ್ಶ ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited Printed & Published by K. H. Shetty, at the Navayuga Press, Udipi, S. India.

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೨೪ | ಉಡುಪಿ 22—2—1962 ಗುರುವಾರ | Vol. 41 No. 24

ಗ್ರಾಮೀಣ ಜನರ ಯಕ್ಷ ಪ್ರಶ್ನೆ

ನಿರುದ್ಯೋಗ ನಿವಾರಣಾ ಸಮಸ್ಯೆ

ನಿರುದ್ಯೋಗ ನಿವಾರಣೆಯ ಪ್ರಶ್ನೆಯನ್ನು ಬಗೆಹರಿಸಲು ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಮಹತ್ವದ ಸ್ಥಾನವನ್ನು ಇತ್ತಿರುವುದು ನಿಜವಾದರೂ, ದೇಶದಲ್ಲಿ ಸುರಕ್ಷಿತ ನಿರುದ್ಯೋಗಿಗಳ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚುತ್ತ ಬರತೊಡಗಿದೆ. ಬೆಳೆದು ಬರುತ್ತಿರುವ ಈ ಸಮಸ್ಯೆಯು ಈಗಾಗಲೇ ಗಂಭೀರ ರೂಪವನ್ನು ಧಾರಣೆ ಮಾಡಿದೆ. ಹಾಗಿರುವಾಗ, ಇದನ್ನು ದೂರೀಕರಿಸುವಲ್ಲಿ ನಾವು ವಿಶೇಷ ಗಮನವೀಯದೆ ಹೋದರೆ, ಪರಿಸ್ಥಿತಿ ವಿಷಮಕ್ಕೇರುವುದು ನಿರ್ವಿವಾದ. ಯಾವುದೇ ಸರಕಾರವಿರಲಿ, ತನ್ನ ಪ್ರಜೆಗಳು ಕೆಲಸವನ್ನು ಬೇಡಿ ಬಂದಾಗ, ಅವರ ಬೇಡಿಕೆಯನ್ನು ಪೂರೈಸುವುದು ಅತ್ಯಗತ್ಯ. ದೇಶದ ಸಂಪತ್ತು ಹೆಚ್ಚುವುದೆಂದರೆ, ದೇಶದಲ್ಲಿ ಕೆಲಸ ಮಾಡಬಲ್ಲ ಪ್ರತಿಯೊಬ್ಬನಿಗೂ ಆತನ ಶಕ್ತಿಯು ಸದುಪಯೋಗವಾಗುವಂತಹ ಉದ್ಯೋಗವನ್ನು ಕಲ್ಪಿಸಿಕೊಡುವುದೇ ಆಗಿದೆ.

ನಮ್ಮ ದೇಶದಲ್ಲಿ ಸುಶಿಕ್ಷಿತರ ನಿರುದ್ಯೋಗ ಸಮಸ್ಯೆ ಮಾತ್ರವಲ್ಲ, ಅಶಿಕ್ಷಿತರ ನಿರುದ್ಯೋಗದ ಪ್ರಶ್ನೆಯೂ ಇದೆ. ದೇಶದಲ್ಲಿ ಮುಕ್ಕಾಲಂಶ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವುದರಿಂದ ಹಳ್ಳಿಗಳಲ್ಲಿ ಈ ಪ್ರಶ್ನೆಯು ಭೂತಾಕಾರವನ್ನು ತಳೆದಿದೆ. ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಯ ಪರಿಣಾಮವಾಗಿ ಇದು ಮತ್ತಷ್ಟು ಬೃಹದಾಕಾರ ತಾಳತೊಡಗಿದೆಯೆಂದೇ ಹೇಳಬೇಕು. ಗ್ರಾಮಾಂತರದಲ್ಲಿ ಔದ್ಯಮಿಕ ರಂಗವು ಬೆಳೆದುಬಂದಿಲ್ಲ. ಇದ್ದ ಜನರೆಲ್ಲರೂ ತಮ್ಮ ಪೂರ್ವಜರಂತೆ ಕೃಷಿಯನ್ನೇ ಉಪಜೀವನವನ್ನಾಗಿ ಮಾಡಿಕೊಂಡಿರುತ್ತಾರೆ. ನಿಜವಾಗಿ ಕೃಷಿಕ್ಷೇತ್ರವನ್ನು ಹೊಂದಿಕೊಂಡು ಸುಖಜೀವನ ನಡೆಸಲು ಸಾಧ್ಯವಿರುವ ಜನಸಂಖ್ಯೆಯು ಮುಪ್ಪಟ್ಟು ಜನರು ಅದನ್ನೇ ಅವಲಂಬಿಸಿಕೊಂಡಿರುವುದರಿಂದ, ನಮ್ಮ ರೈತ ಜನರಲ್ಲಿ ಅಧಿಕ ಸಂಖ್ಯಾಕರು ಅರೆ—ಉದ್ಯೋಗಿಗಳಾಗಿರುವರು. ಇದರಿಂದಾಗಿ ಅವರ ಸಾಂಪತ್ತಿಕ ಸ್ಥಿತಿಗತಿಗಳು ಅತೃಪ್ತಿಕರವಿದೆ ಮಾತ್ರವಲ್ಲ; ಅವರ ಜೀವನ ಮಟ್ಟವಾದರೂ ತೀರ ಹೀನ ದೆಸೆಯಲ್ಲಿದೆಯೆಂಬುದು ಅಕ್ಷರಶಃ ನಿಜ.

ಹಳ್ಳಿಯಲ್ಲಿ ಮನೆಮಾಡಿಕೊಂಡಿರುವ ಬಹು ಸಂಖ್ಯಾಕ ಭಾರತೀಯರ ಆರ್ಥಿಕ ಸ್ಥಿತಿಗತಿಗಳು ಉನ್ನತವಾಗುವ ವರೆಗೆ ಅವರ ವಿದ್ಯಾಭ್ಯಾಸ ಆರೋಗ್ಯ ಹಾಗೂ ಜೀವನ ಮಟ್ಟವು ಪ್ರಗತಿದಾಯಕವೆನಿಸುವುದು ಸಾಧ್ಯವಿಲ್ಲ. ಆದುದರಿಂದ ಎಲ್ಲರೂ ಹೇಳುವಂತೆ ಗ್ರಾಮೀಣ ಜನತೆಯು ಸಾಂಪತ್ತಿಕ ಪರಿಸ್ಥಿತಿ ಸುಧಾರಿಸಿದಂದೇ ಭಾರತದ ಉದ್ಧಾರ; ಕಲ್ಯಾಣ ರಾಷ್ಟ್ರದ ಸ್ಥಾಪನೆ ಸಾಧ್ಯವೆನಿಸುವುದು. ಅವರ ಸಾಂಪತ್ತಿಕ ಸ್ಥಿತಿಯು ಸುಧಾರಣೆಯೆಂದರೆ ಕೃಷಿಯ ಕ್ಷೇತ್ರಕ್ಕೆ ಅವಶ್ಯವಿರುವುದಕ್ಕಿಂತ ಹೆಚ್ಚಿನ ಜನರನ್ನು ಇತರ ರಂಗಕ್ಕೆ ಒಯ್ಯುವುದ; ಮತ್ತು ಅರೆ ನಿರುದ್ಯೋಗಿಗಳಾಗಿದ್ದವರಿಗೆ ಅಲ್ಲಿಯೇ ಬಿಡುವಿನ ಉದ್ಯೋಗಗಳನ್ನು ಕಲ್ಪಿಸಿಕೊಡುವುದು. ಇದಕ್ಕಾಗಿ ಹಳ್ಳಿಗಳಲ್ಲಿ ಅಭಿವೃದ್ಧಿ ಯೋಜನೆಗಳು ಅಧಿಕಾಧಿಕವಾಗಿ ಕಾರ್ಯರೂಪಕ್ಕೆ ಬರಬೇಕಾಗಿದೆ.

ಹಳ್ಳಿಗಳ ಅರೆ—ಉದ್ಯೋಗಿಗಳ ಪ್ರಶ್ನೆಯು ತಾಂಡವವಾಡುತ್ತಿರುವ ನಮ್ಮ ದೇಶದಲ್ಲಿ ಸ್ಥಳೀಯ ಯೋಜನೆ ಮತ್ತು ಉದ್ಯಮಗಳ ಮೂಲಕ ಅದನ್ನು ದೂರ ಮಾಡಲು ಕೈಗೊಂಡ ಕಾರ್ಯಕ್ರಮಗಳು ನಿಜವಾಗಿಯೂ ಅತ್ಯಲ್ಪ. ಮನೆಗಳನ್ನು ಕಟ್ಟುವುದು, ಮಾರ್ಗಗಳ ರಿಪೇರಿ ಮಾಡುವುದು, ನೀರಾವರೀ ಕಾಲುವೆಗಳನ್ನು ಪುನಾರಚಿಸುವುದೇ ಮೊದಲಾದ ಕೆಲವೊಂದು ಸ್ಥಳೀಯ ಆವಶ್ಯಕತೆಯನ್ನು ಪೂರೈಸುವ ಕಾಮಗಾರಿಗಳಿಂದ ಈ ಪ್ರಶ್ನೆಯು ತುಸು ಹಗುರವಾಗಿದೆಯೆಂಬುದು ನಿಜ; ಆದರೆ, ಪ್ರಶ್ನೆಯು ಸಂಪೂರ್ಣವಾಗಿ ಉತ್ತರಿಸಲ್ಪಟ್ಟಿದೆಯೆಂದು ಹೇಳುವಂತಿಲ್ಲ. ಸಮಾಜ ವಿಕಾಸ ಯೋಜನೆಯಲ್ಲಿ ಇವುಗಳ ಬಗ್ಗೆ ತುಸು ಕಾರ್ಯ ನಡೆದಿದೆ; ಸತ್ಯ ನುಡಿಯುವುದಾದರೆ, ಸ್ಥಾನೀಯ ನಾಯಕತ್ವವು ಸುಯೋಗ್ಯವಾಗಿ ದೊರೆತೆಡೆಗಳಲ್ಲಿ ಮಾತ್ರ ಈ ಯೋಜನೆಗಳು ಕಾರ್ಯರೂಪಕ್ಕಿಳಿದಿವೆ. ಉಳಿದೆಡೆಗಳಲ್ಲಿ ಸರಕಾರದ ಸಹಾಯಧನವಾದರೂ ಸಂಪೂರ್ಣವಾಗಿ ಉಪಯೋಗಿಸಲ್ಪಟ್ಟಿಲ್ಲ; ಎಂದರೆ ಪ್ರಾರಂಭವಾಗಿದ್ದ ಕಾರ್ಯಕಲಾಪಗಳು ಅರ್ಧದಲ್ಲೇ ಸ್ಥಗಿತಗೊಂಡಿದೆ. ಹಾಲು ಮಾರುವುದು, ಮೊಟ್ಟೆಗಳ ಮಾರಾಟ, ತರಕಾರಿಗಳ ಉತ್ಪಾದನೆ—ಮೊದಲಾದುವು ರೈತಜನರಿಗೆ ತಮ್ಮ ವ್ಯವಸಾಯದ ಆದಾಯದೊಡನೆ ವರ್ಷವಿಡೀ ಸಂಪಾದನೆಯನ್ನು ಕೊಡುವಂತಹ ಬಿಡುವಿನ ಉದ್ಯೋಗಗಳು ಉದ್ಯೋಗಗಳಲ್ಲಿ ಪಶು ಸಾಕಣೆ, ಕೋಳಿಗಳ ಪೋಷಣೆ ಮೊದಲಾದ ಉಪವೃತ್ತಿಗಳತ್ತ ಈಗೀಗ ಲಕ್ಷ್ಯ ಹರಿದಿದೆಯಾದರೂ ರಾಷ್ಟ್ರೀಯ ಮಟ್ಟದಲ್ಲಿ ಈ ಬಗ್ಗೆ ಹೆಚ್ಚಿನ ಪ್ರಚಾರ ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ.



ಭಾರತದಲ್ಲಿ ಬಳಸುವ ಸಲುವಾಗಿ ಅಮೇರಿಕನ್ ಖಾಸಗಿ ಜನರ ಕಾಣಿಕೆಯಿಂದ ಕೊಳ್ಳಲಾಗಿರುವ ಕುಟುಂಬಯೋಜನೆ ಕುರಿತು ಚಲಿಸುವ ಕ್ಲಿನಿಕ್‌ನ್ನು ಭಾರತಕ್ಕೆ ಕಾಣಿಕೆಯಾಗಿ ಕೊಡಲಾಯಿತು. ವಿಶ್ವ ಜನಸಂಖ್ಯೆಯ ತುರ್ತು ಚಳವಳಿಯ ಸ್ಥಾಪಕ ಹ್ಯೂ ಮೂರ್‌ರವರು ಕ್ಲಿನಿಕ್‌ವ್ಯಾನಿನ ಬೀಗದಕೈಯನ್ನು ನ್ಯೂಯಾರ್ಕಿನಲ್ಲಿರುವ ಭಾರತದ ಕೌನ್ಸಿಲ್‌ಜನರಲ್‌ರ ಪತ್ನಿ ಶ್ರೀಮತಿ ಮಹಾನ್ನಾರಾಯಣರವರಿಗೆ ಕೊಡುತ್ತಿರುವುದನ್ನು ಕಾಣಬಹುದು.

ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಳ್ಳುವುದರಲ್ಲಿ ಉತ್ಸಾಹ ತೋರಿಸುತ್ತಿರುವ ನಮ್ಮ ಯೋಜಕರು ಮತ್ತು ಆಡಳಿತಗಾರರು ನಮ್ಮ ಗ್ರಾಮೀಣ ಜನತೆಯು ಸೋಮಾರಿಯಾಗಿ ಕಳೆಯುವ ಸಮಯವನ್ನು ಬಳಸಿಕೊಂಡು, ಕೆಲವೊಂದು ಸರಳ ವಿಧಾನದ ತಂತ್ರಗಳನ್ನು ಅಳವಡಿಸಿಕೊಂಡು, ಅತ್ಯಲ್ಪ ಬಂಡವಳದಲ್ಲಿ ತಮ್ಮ ಗಳಿಕೆಯನ್ನು ಹೆಚ್ಚಿಸಿಕೊಳ್ಳುವ ಉಪಾಯಗಳನ್ನೂ ಕಲಿತುಕೊಳ್ಳುವಂತೆ ಅವಕಾಶ ಕಲ್ಪಿಸಿಕೊಡಬೇಕೆಂಬುದನ್ನು ಮರೆಯಬಾರದು. ಅತ್ಯಲ್ಪ ಬಂಡವಳವನ್ನು ಉಪಯೋಗಿಸಿ, ಕೋಳಿ ಸಾಕಣೆಯನ್ನೂ ದನ-ಎಮ್ಮೆ ಸಾಕಣೆಯನ್ನೂ ಲಾಭದಾಯಕವಾಗುವಂತೆ ನಡೆಸಿಕೊಂಡು ಹೋಗಬಹುದು; ಹಳ್ಳಿಯ ಬಡಿಗನೂ ಕಮ್ಮಾರನೂ ವ್ಯವಸಾಯದ ಸುಧಾರಿತ ಸಾಧನಗಳನ್ನು ತಯಾರಿಸಿದರೆ, ತನ್ನ ಗಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು ಮಾತ್ರವಲ್ಲ, ಇಂತಹ ಸಾಧನಗಳನ್ನು ಬಳಸಿಕೊಂಡು ರೈತನೂ ತನ್ನ ಉತ್ಪತ್ತಿಯಲ್ಲಿ ಹೆಚ್ಚಳ ಸಾಧಿಸಿಕೊಳ್ಳಬಹುದು. ಈ ಮಾದರಿಯ ಸುಲಭ ಹಾಗೂ ಸರಳವಾದ ತಂತ್ರಗಳ ಮೂಲಕವೇ ನಾವು ನಮ್ಮ ಗ್ರಾಮೀಣ ಪ್ರದೇಶದ ಜನರ ನಿರುದ್ಯೋಗವನ್ನು ದೂರಮಾಡಬಹುದು ಮತ್ತು ಅವರ ಆದಾಯವನ್ನು ಹೆಚ್ಚಿಸಿಕೊಳ್ಳಲು ಸಹಾಯ ನೀಡಬಹುದು.

ಅಭಿವೃದ್ಧಿಗೊಳ್ಳುತ್ತಿರುವ ನಮ್ಮ ದೇಶದಲ್ಲಿ ಯಾದರೂ ಇಂತಹ ಸಣ್ಣ ಉದ್ಯೋಗಗಳ ಮತ್ತು ಗ್ರಾಮೀಣ ಉದ್ಯೋಗಗಳ ಯೋಜನೆಗಳು ತೀರ ಅತ್ಯಾವಶ್ಯಕರವಿವೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುವ ನಮ್ಮ ಗುರಿ ಇನ್ನೂ ಬಹಳ ದೂರದಲ್ಲಿದೆ. ನಮ್ಮಲ್ಲಿಂದು ಬಂಡವಳದ ಮೊತ್ತವು ಕಡಿಮೆಯಿರುವುದರಿಂದ ಅತ್ಯಲ್ಪ ಬಂಡವಳದಿಂದ ಅತ್ಯಧಿಕ ಲಾಭಗಳಿಸುವ ವಿಧಾನವನ್ನು ಚಿಂತಿಸುವ ಅಗತ್ಯವಿದೆ. ನಮ್ಮ ಯೋಜನೆಗಳೆಲ್ಲವೂ [illegible] ಮಾಡುವಲ್ಲಿ ಬಂಡವಳ ಮತ್ತು ಆದಾಯಗಳಿರುವಂತೆ ರೂಪಿತವಾಗಿವೆ. ಎಂದರೆ, ನಾವು ಮುನ್ನೂರು ಬಂಡವಳ ಹೆಚ್ಚು ಮಾಡಿದರೆ ನೂರು ರೂಪಾಯಿಯಷ್ಟು ರಾಷ್ಟ್ರೀಯ ಆದಾಯವು ಏರುತ್ತದೆ. ಆದರೆ, ಗ್ರಾಮೀಣ ಯೋಜನೆಯ ಕ್ರಮವನ್ನು ಅನುಲಕ್ಷಿಸಿದಾಗ, ಕೇವಲ ನೂರರ

(೪ನೇ ಪುಟ ನೋಡಿ)

ಅಳಿಯನ ದೀವಳಿಗೆ!

ಶ್ರೀ ಎಚ್ ರಾಮಕೃಷ್ಣ ಅಡಿಗ.

ವರ್ಷವಿಡೀ ಹಚ್ಚಹಸುರಾಗಿ ಮೆರೆವ ಬಯಲು, ಸ್ಮಶಾನ ಮೌನ ತಾಳಿ ಮಲಗಿದಂತಿತ್ತು. ಆದರ ತುದಿಯಲ್ಲಿ, ಬಯಲ ತಲೆಯಂತೆ ತೋರುವ ಕಾಡು ಗುಡ್ಡಗಳು ಬಂದು ಕೂಡುವಲ್ಲಿ—ಅದಕ್ಕೆ ಜೀವಕಳೆಯನ್ನು ಕೊಡುವುದೇ ಆ ಮನೆ! ತಪ್ಪಿದರೆ ಅವರ ಒಕ್ಕಲು ಕೊರಗನ ಮನೆ. ಅದು ಕಾಡಿನ ಮಧ್ಯದಲ್ಲಿದ್ದುದರಿಂದ ಇದ್ದೂ ಇಲ್ಲದಂತೆ ಆ ಊರಿಗೆ ತಿಲಕದಂತಿದ್ದ ಮನೆಯೇ ಸದ್ದಿಲ್ಲದೆ ನಿಂತದ್ದರಿಂದ ಊರೂ ನೀರವದಿಂದ ತುಂಬಿತ್ತು. ಚಿಕ್ಕ ಮಕ್ಕಳ ಆಟದ ಅಕ್ಕರೆಯ ಕೂಗೂ ಕೇಳಿ ಬರುತ್ತಿರಲಿಲ್ಲ.

ಶಿವರಾಮ ಇದನ್ನೆಲ್ಲ ಕಂಡು ಕಂಗೆಟ್ಟ! ಅವನ ವರ್ತನೆಯೇ ಅದಕ್ಕೆ ಕಾರಣವಾಗಿದ್ದಿತು.

ಆತ ಬೆಳಿಗ್ಗೆಯೇ ಮಾವನ ಮನೆಯ ಆ ಊರಿನ ಬುಡವನ್ನು ಮುಟ್ಟಿದ್ದ. ಗಂಟೆ ಹನ್ನೆರಡಕ್ಕಿಂತಲೂ ಮಿಕ್ಕಿ ಹೋದುದರಿಂದ ಆತನಿಗೆ ಒಂದು ಉಪಾಯ ಹೂಡಬೇಕಾದ ಪ್ರಸಂಗ ಬಂತು. ಮಧ್ಯಾಹ್ನವಾಗುತ್ತಲೇ ಉಂಡು, ಪಟ್ಟಾಂಗಕ್ಕೆ ಕುಳಿತುಕೊಳ್ಳುವ ಮಾವನ ಮನೆಯವರನ್ನೇ ನೆನೆದು, ಶಿವರಾಮ, ಆ ಊರನ್ನು ಸುತ್ತಿ ತೆರಳುವ ಹೊಳೆಯ ಬದಿಯಲ್ಲಿನ ಬಂಡೆಯ ಗಿಡದ ನೆರಳಲ್ಲಿ ಇಳಿಹೊತ್ತಿನ ತನಕ ಕಾದು ಕುಳಿತುಕೊಳ್ಳಬೇಕಾಯ್ತು. ಬಿಸಿಲಿನ ತಾಪ ಕುಂದುತ್ತಲೇ ಆತ ಅಲ್ಲಿಂದ ಹೊರಟಿದ್ದ.

ಚಿಕ್ಕ ಗುಡ್ಡವನ್ನು ಏರಿ, ಬಯಲಿಗಿಂದು ಬಲ ಬದಿಯ ದಾರಿಯನ್ನು ಹಿಡಿದು ನಾಲ್ಕು ಮಾರು ಸರಿಯುತ್ತಲೇ, ತೆಂಗಿನ ಕಂಗಿನ ಮರಗಳೆಡೆಯಲ್ಲಿ ಕಂಗೊಳಿಸುವ ಮುಳಿ ಹುಲ್ಲಿನ ಮಾವನ ಮನೆ, ದೂರದಲ್ಲಿ ಅಸ್ಪಷ್ಟವಾಗಿ ಕಂಡುಬರುತ್ತದೆ. ಶಿವರಾಮ ಹೆಜ್ಜೆಯಿಕ್ಕುತ್ತ ಅಲ್ಲಿಂದಲೇ ಎಣಿಸತೊಡಗಿದ್ದ—"ಯಾರಾದರೂ ಮಕ್ಕಳು ನೋಡಿಯೇ ನೋಡುತ್ತಾರೆ. ಸುದ್ದಿ ಬಂದು ಮುಟ್ಟುತ್ತಲೇ ಅತ್ತೆ ಮಾವಂದಿರು ತನ್ನ ಸ್ವಾಗತಕ್ಕಾಗಿ ಕಾದು, ಬಾಗಿಲಿನಲ್ಲಿ ನಿಂತಿರುತ್ತಾರೆ. ಮತ್ತೆ ತಾನು ಅವರ ಮನೆಯವನೇ ಆಗುತ್ತೇನೆ..... ಗೃಹಪ್ರವೇಶದ ಸಂದರ್ಭದಲ್ಲಿ ಯಾರೂ ಬಾಗಿಲಿನಲ್ಲಿಲ್ಲದಿದ್ದರೆ... ತಾನೊಬ್ಬನೇ ಕಳ್ಳನಂತೆ ಹೇಗೆ ಒಳಗೆ ಪ್ರವೇಶಿಸಲಿ... ಅವರು ಕಾಫಿ ಕುಡೀತಲೂ ಇರಬಹುದು, ಊಟ ಮಾಡುತ್ತಲೂ ಇರಬಹುದು... ಆಗ ತಾನು ಹೊರಗೆ ಹೋಗಿ ಒಬ್ಬನೇ ಚಾವಡಿಯಲ್ಲಿ ಕುಳಿತಿರುವುದೇ?" ಅವನ ಮನ ಹೇಸಿಕೊಂಡಿತು

ಆದರೆ ಮಾವನ ಮನೆಯ ಮುಂದಿನ ಮೆಟ್ಟಲನ್ನು ಮುಟ್ಟುವ ತನಕ ಆತ ಬಗೆದಂತೆ ಎಂಟು ವರ್ಷದ ತುಂಟೆ ಗೀತಾಳೂ ಇದಿರ್ಗೊಳ್ಳಲಿಲ್ಲ.... "ಬಾವ ಬಂದ್ರು ಇದ್ದಾರೆ.... ಓ.... ಅಗೋ...." ಎಂದು ಯಾರೂ ಬಯಲಲ್ಲಿ ಬರುವ ತನ್ನನ್ನು ಬೊಟ್ಟಿಟ್ಟು ತೋರಿಸಲಿಲ್ಲ.... ಹೀಗಾಗುವಂತಿದ್ದರೆ ತಾನು ಮಧ್ಯಾಹ್ನವೇ ಬರಬಹುದಿತ್ತೆಂದು ಮನಸಿನಲ್ಲೇ ಗೊಣಗಿಕೊಂಡ.

ಪ್ರತಿಯೊಂದರಲ್ಲೂ ರಸಿಕತೆಯನ್ನು ಕಂಡುಕೊಳ್ಳುವ ಸ್ವಭಾವ ಶಿವರಾಮನದು. ಆದಕ್ಕೇ ಆತ 'ತಾನು ದೀಪಾವಳಿಗೆ ಬರುತ್ತೇನೆ' ಎಂತ, 'ಬನ್ನಿರಿ' ಎಂದು ಬರೆದ ಮಾವನ ಪತ್ರಕ್ಕೆ ಉತ್ತರ ಬರೆದಿರಲಿಲ್ಲ. ಇದ್ದಕ್ಕಿದ್ದಂತೆಯೇ ಒಮ್ಮೆಲೇ ಹೋಗಿ ಪಾರ್ವತಿಗೆ ಸಂತೋಷವನ್ನುಂಟು ಮಾಡಬೇಕು, ಅತ್ತೆ ಮಾವಂದಿರಿಗೆ ಆಶ್ಚರ್ಯವನ್ನು ತಂದೊಡ್ಡಬೇಕು' ಎಂದಾತ ಉತ್ತರ ಬರೆಯುವ ಸಾಹಸಕ್ಕೆ ಕೈಯಿಕ್ಕಿರಲಿಲ್ಲ. ಕಾಲೇಜಿಗೆ ರಜೆ ಬಗೆದು, ಹಾಸ್ಟೇಲಿನಿಂದ ಬೆಳಿಗ್ಗೆ ೭ ಗಂಟೆಗೆ ಸರಿಯಾಗಿ ಮಾವನ ಮನೆಗೆಂದು ಹೊರಟಿದ್ದ.

ಸುಖಾಂತವೆಂದು ತಿಳಿದುಕೊಂಡ ವಿಷಯದ ಫಲಿತಾಂಶ ಕಠಿಣವಾಗಿ ಕಂಡುಬಂದಾಗ. ತಾನು ಮಾಡಿದ್ದು ತಪ್ಪೆಂದು ದರ ಅರಿವಾಗುತ್ತದೆ. ಶಿವರಾಮನು ಹಾಗೆಯೇ ತಿಳಿದುಕೊಳ್ಳಬೇಕಾಯ್ತು. ಇದಿರ್ಗೊಳ್ಳಲೆಂದು ಹೆಬ್ಬಾಗಿಲಿನ ಹೊಸ್ತಿಲು ದಾಟಿ ಚಾವಡಿಯೇರುವಾಗಲೂ ಯಾರೂ ಕಂಡುಬರಲಿಲ್ಲ. ಕೊನೆಯ ಅಸ್ತ್ರವೆಂದು ಬಲಾತ್ಕಾರದಿಂದ "ಕ್ಕೋಕ್ಕೋ" ಎಂದು ಕೆಮ್ಮತೊಡಗಿದ. "ಭಾವ!.... ಓ...ಭಾವ...ಅಮ್ಮಾ ಭಾವ ಬಂದರು' ದಿಂದು ಕೂಗಿದ ಗೀತಾ, ಪುನಃ ಒಳಗೆ ಓಡಿದಳು. ಒಂದರ ಹಿಂದೆ ಮತ್ತೊಂದು ಪರಿವಿಡಿಯಿಂದ ನೆಗೆಯುವ ಕುರಿಮರಿಗಳಂತೆ ಮಕ್ಕಳು ಪಡಸಾಲೆ ಬಾಗಿಲಿನಿಂದ ಹೊರಬಂದುವು, ಹಿಂದೆ ಅತ್ತೆ ಮಾವಂದಿರು. ಪಾರ್ವತಿಯ ಮುಖ ಶಿವರಾಮನಿಗೆ ಎಲ್ಲಿ ನೋಡಿದರೂ ಕಾಣಲಿಲ್ಲ. ... ಅದಕ್ಕೇ ಆತ, "ಬಸ್ಸಿನಲ್ಲಿ ಬಂದೀರಾ" ಎಂದು ಇದಿರು ಬಂದು ಪ್ರಶ್ನಿಸಿದ ಮಾವನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಅವರು ಮತ್ತೊಮ್ಮೆ ಗಡುಸು ದನಿಯಿಂದ ಕೇಳಿದರು, "ಈಗಿನ ಬಸ್ಸಿನಲ್ಲಿ ಯೋ... '

"ಹೌದು. ಈಗಿನ ಬಸ್ಸಿಗೇನೇ ಬಂದೆ"

"ಮನೆಯಿಂದಲೇ?... ,,

"ಇಲ್ಲ. ಹಾಸ್ಟೇಲಿನಿಂದಲೇ ಹೊರಟೆ. ಮನೆಯಿಂದ ಪತ್ರ ಬಂದಿತ್ತು. ಎಲ್ಲರೂ ಸೌಖ್ಯದಲ್ಲಿದ್ದಾರಂತೆ ,, ಮುಂಬರಲಿರುವ ಎಲ್ಲಾ ಪ್ರಶ್ನೆಗಳಿಗೂ ಮೊದಲೇ ಉತ್ತರಿಸಿ ಶಿವರಾಮ ಮೌನಿಯಾದ.

"ಓಹೋ...ಹಾಗೋ... ,, ಪದ್ಧತಿಯಂತೆ ಮಾವ ದೇಶಾವರದ ನಗೆ ಬೀರಿದರು.

ಪಾರ್ವತಿಯ ಕೈಯಿಂದಲೇ ಸ್ವೀಕರಿಸಿ, ಗಳಗಳನೆ ಕುಡಿದು, "ಚೆನ್ನಾಗಿದೆ. ನಿನ್ನದೇ ಹದ ತಾನೇ.... ,, ಎಂದು ಮುಗುಳ್ನಗೆಯಿಂದಲೇ ಸಂತೋಷವನ್ನು ವ್ಯಕ್ತಪಡಿಸಬೇಕೆಂದು ಬಗೆದ ಶಿವರಾಮನಿಗೆ ಗೀತಾ ತಂದಿತ್ತ ಕಾಫಿ ರುಚಿಸಲಿಲ್ಲ...... ಒಣಗಿದ ಬಾಯಿ, ಹಸಿದ ಹೊಟ್ಟೆ ಮಾತ್ರ ತುಸು ತೃಪ್ತಿಗೊಂಡವು. "ಶಂಕರ ಎಲ್ಲಿ...ಗೀತಾ....ಶಂ...,, ಎನ್ನುತ್ತಲೇ...

"ಯಾಕೆನ್ನ ಈ ರಾಜ್ಯಕ್ಕೆಳೆತಂದೆ ಹರಿಯೇ... ಹುಡುಕಲಾರದೆ ಸರವ ಪರಿತಪಿಸು...,, ಎಂದು ಶಿವರಾಮನನ್ನು ಕಂಡು ಬೆಚ್ಚಿಬಿದ್ದ ಶಂಕರ ಪದ್ಯವನ್ನು ಅರ್ಧಕ್ಕೇ ನಿಲ್ಲಿಸಿದ. ಅತ್ತೆ ಮಾವಂದಿರ ಮುಖ ಇವನ ಹಾಡನ್ನು ಕೇಳಿ ಮುದುಡಿಕೊಂಡರೆ, ಶಿವರಾಮನ ಮುಖ ಸ್ವಲ್ಪ ಅರಳಿತು, ಶಂಕರ ಬಂದನಲ್ಲಾ ಎಂದು.

ಶಂಕರ ಅವನ ಮದುವೆಯ ಮಡದಿ ಪಾರ್ವತಿಯ ಅಣ್ಣ, ಹಾಗೂ ಮೋಜಿ ಗೆಳೆಯ.... ಅವನಿಂದಲೇ ಈ ಚೆಲ್ಲಾಟದ ಚದುರೆ ಪಾರ್ವತಿಯ ಸೊಗಸಿನ ಅಮೃತ ದೂಟ ಶಿವರಾಮನಿಗೆ ಲಭಿಸಿದುದು ಎನ್ನಬಹುದು.

ಅವರಿಬ್ಬರ ಮೊದಲ ಭೇಟಿ ಪಟ್ಟಣದ ಸಿನೇಮಾ ಮಂದಿರದಲ್ಲಾಯಿತು. "ಟೊಪ್ಪಿಯೋ ತಲೆಯೋ, ತಲೆಯೋ ಟೊಪ್ಪಿಯೋ. ಟೊಪ್ಪಿ ತಲೆ ಎರಡೂ ಸಿನೇಮಾ ಪ್ರೋ ಹರಿಯೇ....,, ಎಂದು ಶಿವೂನ ಟೊಪ್ಪಿಯನ್ನು ಹಾಸ್ಯ ಮಾಡಿದ ಶಂಕರನ ಮಾತನ್ನು ಕೇಳಿ ಎಲ್ಲರೂ ನಕ್ಕರು. "ಕಣ್ಣು ಕಾಂಬುವೆ ಸಿನೆಮಾ.... ಸಿನೆಮಾ ಕಾಂಬುವೇ ಕಣ್ಣು.... ಕಣ್ಣು ಸಿನೆಮಾಗಳೆರಡೂ ಮೆದುಳ ಬಳಿ ಹೆಲ್ಲೀ ...,, ಎಂದು ಸಿಟ್ಟಿನಿಂದ ತಕ್ಷಣ ನುಡಿದ ಶಿವೂನ ವಾಗ್ಬಾಣಕ್ಕೆ ಗಲಭೆ ನಿಂತಿತು. ಶಿವೂ—ಶಂಕರರು ಗೆಳೆಯರಾದರು.

ಅದೇ ರಸಿಕ ಶಿವೂ ಮೊದಲ ಬಾರಿಯ ದೀವಳಿಗೆಯ ಹಬ್ಬಕ್ಕೆಂದು ಮಾವನ ಮನೆಗೆ ಬಂದಿದ್ದಾನೆ. ಪಾರ್ವತಿಯೊಡನೆ ಲಲ್ಲೆಗರೆಯಬೇಕೆಂದು ತವಕಿಸಿ ನಿರಾಶೆಗೊಂಡ ಮನ, ಮಾತಾಡಿ ಹೊತ್ತು ಕಳೆಯಲೊಬ್ಬ ವ್ಯಕ್ತಿ ಸಿಕ್ಕಿದನಲ್ಲಾ ಎಂದು ತುಸು ಪ್ರಫುಲ್ಲಿತವಾಯಿತು.

"ಭಾವ ನಿಮ್ಮ ಬಾಲವೆಲ್ಲಿ...,, ಶಂಕರ ಬಂದವನೇ ರಾಗವೆಳೆಯತೊಡಗಿ ಎಂತಹ ಭೀಕರ ಪರಿಸ್ಥಿತಿಯಲ್ಲೂ, ಗರಪದ ವೇಳೆಯಲ್ಲೂ ತಮಾಷೆ ಮಾಡು ಶಂಕರನ ಸ್ವಭಾವ ಶಿವೂಗೆ ಹೊಸತೇ ಪಾರ್ವತಿಯನ್ನುದ್ದೇಶಿಸಿಯೇ ತಮಾ ಮಾಡುತ್ತಿರಬೇಕು...... ಎಂದು ನಾಚಿ ಶಿವೂ, ವಿಷಯ ಬದಲಾಯಿಸುತ "ಶಂಕರ ತಿರುಗಾಡಿಕೊಂಡು ಬರೋ ವೇ... ,, ಎಂದ.

"ಹೋ....ಅದಕ್ಕೇನು? ಆದರೆ ಕಳ್ಳಿ ಕೋಟು ಗೀಟು ಹಾಕಿಕೊಂಡರೆ ಭ ತ ಗೀತ ಬಂತು ಅಂತಾರೆ....,,

"ಕಳಚಿಟ್ಟು ಬರುತ್ತೇನೆ, ಮಹಾರಾಯ...,, ಶಿವೂ ಒಳಗೆಗೆ ಹೊರಡಲುದ್ಯುಕ್ತನಾದ. ತಾನು ತಂದ ಚಿಕ್ಕ ಟ್ರಂಕು ಕೈಯಲ್ಲೇ ಇತ್ತು.

"ಇಟ್ಕೊಂಡಿ....ನಾನು ಹಿಡಿದುಕೊಳ್ತೇನೆ...,, ಶಂಕರ ತೆಗೆದುಕೊಳ್ಳಲಿಕ್ಕೆಂದು ಕೈ ಮುಂದೆ ಚಾಚಿದ.

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ವಿಚಿತ್ರ ಮೃತ್ಯುಪತ್ರಗಳು

ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ.



ಪ್ರವಾಹ ಪೀಡಿತರಿಗೆ ಪರಿಹಾರ ನೀಡಲು ತಕ್ಕ ತರಬೇತಿ ಪಡೆಯುವ ಸೈನಿಕ ವಿದ್ಯಾರ್ಥಿಗಳು.

ಕೆಲವು ಸಮಯದ ಹಿಂದೆ ಫಿನ್‌ಲೇಂಡಿನ ಒಬ್ಬ ವೃದ್ಧನು ತನ್ನ ಉಯಿಲಿನಲ್ಲಿ "ನನ್ನ ಮರಣಾನಂತರ ನನ್ನ ಎಲ್ಲಾ ಸ್ಥಿರಚರ ಸಂಪತ್ತುಗಳಿಗಿರುವ ಒಬ್ಬನೇ ಒಬ್ಬ ಅಧಿಕಾರಿಯೆಂದರೆ ಭೂತ 'ಮಾತ್ರ" ಎಂದು ಬರೆದು ಸತ್ತನು. ಅವನ ಮರಣಾನಂತರ ಅವನ ಉಯಿಲನ್ನು ಓದಿದ ಪ್ರತಿಯೊಬ್ಬನೂ ಆಶ್ಚರ್ಯಚಕಿತನಾದನು. ಅವನ ಸಂಪತ್ತಿಗೆ ಅಧಿಕಾರಿಯಾದ ಭೂತ ಯಾರ ಕೈಗೂ ಸಿಗುವಂತಿರಲಿಲ್ಲವಾದುದರಿಂದ ಸರಕಾರವು ಅವನ ಸಂಪತ್ತನ್ನು ವಶಪಡಿಸಿಕೊಂಡಿತು.

ಫ್ರಾನ್ಸಿನ ಒಬ್ಬ ದೊಡ್ಡ ವಕೀಲನು ತನ್ನ ಉಯಿಲಿನಲ್ಲಿ ತನ್ನೆಲ್ಲಾ ಸಂಪತ್ತನ್ನು ಒಂದು ಹುಚ್ಚಾಸ್ಪತ್ರೆಗೆ ಬರೆದಿದ್ದನು— "ನನ್ನನ್ನು ವಕೀಲನನ್ನಾಗಿ ಮಾಡಿದ ಎಲ್ಲಾ ಜನರೂ ಹುಚ್ಚರೇ ಆಗಿದ್ದರು. ಆದುದರಿಂದ ಅವರಿಗೆ ಕೃತಜ್ಞತೆ ತೋರಿಸಲು ಇದಕ್ಕಿಂತ ಒಳ್ಳೆಯ ಉಪಾಯ ನನಗೆ ತೋಚುವುದಿಲ್ಲ". ಎಂದವನು ಉಲ್ಲೇಖಿಸಿದ್ದನು.

ನ್ಯೂಯಾರ್ಕಿನ ವಾಲ್‌ಸ್ಟ್ರೀಟಿನ ನಿವಾಸಿಯೊಬ್ಬನು ಬರೆದ ಉಯಿಲು ಅತಿ ವಿಚಿತ್ರವಾಗಿದೆ—'ನನ್ನ ಪತ್ನಿಗೆ ನನ್ನ ಮರಣಾನಂತರ ನನ್ನ ಸಂಪತ್ತಿನಲ್ಲಿ ಒಂದೇ ಒಂದು ಡಾಲರನ್ನು ಮಾತ್ರ ಕೊಡತಕ್ಕದ್ದಲ್ಲದೆ ಅವಳೆಷ್ಟು ತಿಳಿದಿದ್ದಳೋ ಅಷ್ಟು ಮೂರ್ಖನಾನಲ್ಲ ಎಂಬುದನ್ನು ಆಕೆಗೆ ತಿಳಿಸತಕ್ಕದು

'ನನ್ನ ಪುತ್ರನಿಗೆ ನಾನೀ ಉಯಿಲಿನ ಮುಖಾಂತರ ತಿಳಿಯಪಡಿಸುವುದೇನೆಂದರೆ ಅವನು ಸ್ವಯಂಗಳಿಸಿ ಮಜಾಮಾಡಲಿ. ಏಕೆಂದರೆ ಕಳೆದ ೩೫ ವರ್ಷಗಳಿಂದಲೂ ಅವನು, ನಾನು ತುಂಬಾ ಮಜಾ ಮಾಡುತ್ತೇನೆ ಎಂದು ತಿಳಿದಿದ್ದಾನೆ ಆದರೆ ಅದು ಅಕ್ಷರಶಃ ಕಲ್ಪನೆ ಮಾತ್ರಾ ಆಗಿದೆ.

'ನನ್ನ ಸಂಪತ್ತಿನಿಂದ ನನ್ನ ಪುತ್ರಿಗೆ ಒಂದು ಲಕ್ಷ ಡಾಲರು ಕೊಡಲಿಚ್ಛಿಸುತ್ತೇನೆ. ಏಕೆಂದರೆ ಅವಳ ಪತಿಯು ಜೀವನದಲ್ಲಿ ಏನಾದರೂ ಒಂದು ಒಳ್ಳೆಯ ಕೆಲಸ ಮಾಡಿರುವನಾದರೆ ಅದು ನನ್ನ ಪುತ್ರಿಯನ್ನು ವಿವಾಹವಾದುದು.

'ಕಳೆದ ಹತ್ತು ವರ್ಷದಿಂದ ನನಗೆ ತೋರಿಸದೆ ಅಡಗಿಸಿಟ್ಟಿದ್ದ ನನ್ನೆಲ್ಲಾ ವಸ್ತ್ರಗಳನ್ನು ಹ. ಗ. ಕಳೆದ ವರ್ಷ ನಾನು 'ಪಾಮ್' ಬೀಚಿಗೆ ಹೋದಾಗ ನನ್ನ ಓವರ್ ಕೋಟನ್ನು ತೊಟ್ಟುಕೊಳ್ಳುತಿದ್ದನು. ಅವೆಲ್ಲವನ್ನೂ ನಾನು ನನ್ನ ನೌಕರನಿಗೆ ಕೊಡಲಿಚ್ಛಿಸುತ್ತೇನೆ.

'ನನ್ನ ಡ್ರೈವರನಿಗೆ ನನ್ನ ಮೋಟಾರನ್ನು ಕೊಡತಕ್ಕದ್ದು. ಯಾಕೆಂದರೆ ಮೋಟಾರಿನ ಎಲ್ಲಾ ಯಂತ್ರಗಳನ್ನು ಆತನು ಮುರಿದು ಅದು ಚಲಿಸದಂತೆ ಮಾಡಿದ್ದಾನೆ. ಉಳಿದಂಶವನ್ನು ಮುಂದರಿಸಲಿಕ್ಕಾಗಿಯೇ ನಾನು ಈ ಅವಕಾಶವನ್ನು ಕೊಡಲಿಚ್ಛಿಸುತ್ತೇನೆ.

"ಯಾರಾದರೂ ಅನ್ಯ ಚತುರ ವ್ಯಕ್ತಿಯನ್ನು ತನ್ನ ಪಾಲುಗಾರನನ್ನಾಗಿ ಆರಿಸಿಕೊಳ್ಳಬೇಕೆಂದು ನನ್ನ ಪಾಲುದಾರನಿಗೆ ನಾನು ಪರಾಮರ್ಶೆಯಾಯ ಬಯಸುತ್ತೇನೆ ,,

ಕೆಲವೊಮ್ಮೆ ಕೇವಲ ಅಭ್ಯಾಸವನ್ನು ಸುಧಾರಿಸಲಿಕ್ಕಾಗಿಯೇ ವಿಚಿತ್ರ ಉಯಿಲುಗಳನ್ನು ಬರೆದ ಉಲ್ಲೇಖವಿದೆ. ನಾಡಿಂಗ್ ಹ್ಯಾಮ್‌ನ ಜಾರ್ಜ್ ಬೇಸನ್ ತನ್ನ ಮಾತೃ ಭೂಮಿಯಾದ ಅಮೇರಿಕಾವನ್ನು ಬಿಟ್ಟು ಇಂಗ್ಲಂಡಿನಲ್ಲಿ ನೆಲೆಸ ಬಯಸಿದನು. ಇದರಿಂದ ಬೇಸರಗೊಂಡ ಅವನ ಶ್ರೀಮಂತ ತಂದೆಯು ತನ್ನ ಮಗನಿಗೆ ಮರಣಾನಂತರ ಒಂದೇ ಒಂದು ಡಾಲರನ್ನು ಕೊಡುವಂತೆ ಉಯಿಲನ್ನು ಬರೆದಿದ್ದನು,

ಲಂಡನಿನ ಒಬ್ಬ ಶ್ರೀಮಂತ ವ್ಯಕ್ತಿಯು ತನ್ನ ಮಕ್ಕಳಿಗೆ ಬಹಳ ದೊಡ್ಡ ಸಂಪತ್ತನ್ನು ತನ್ನ ಉಯಿಲಿನಲ್ಲಿ ಬರೆದು ಅದಕ್ಕೊಂದು ಶರ್ತವನ್ನಿಟ್ಟನು— ತನ್ನ ಮಕ್ಕಳಲ್ಲಿಯಾರಾದರೂ ಪಾರ್ಲಿಮೆಂಟಿನಲ್ಲಿಯ ಸಾಮಾಜಿಕ ಸದಸ್ಯತ್ವವನ್ನು ಸ್ವೀಕರಿಸಬಾರದು. ಯಹೂದಿ ಧರ್ಮದ ವಿನಾ ಬೇರಾವ ಧರ್ಮವನ್ನೂ ಸ್ವೀಕರಿಸಬಾರದು.. ಬೇರಾವ ಧರ್ಮದ ಹೆಂಗಸಿನೊಡನೆ ವಿವಾಹವಾಗಬಾರದು. ಈ ಶರ್ತವನ್ನು ಮುರಿದ ಯಾವ ನನ್ನ ಪುತ್ರನಿಗೂ ಒಂದು ಬಿಲ್ಲೆಯನ್ನೂ ಕೊಡಬಾರದು ಎಂದು ಬರೆದಿಟ್ಟಿದ್ದನು.

ಒಬ್ಬ ವ್ಯಕ್ತಿಯು ತನ್ನ ಮರಣ ಕಾಲದಲ್ಲಿ ಬರೆದ ಉಯಿಲಿನಲ್ಲಿ ತನ್ನ ಮರಣಾನಂತರ, ತನ್ನ ಮರಣ ದಿನಗಳಂದು ಮೊದಲ ೫ ವರ್ಷ ತನ್ನ ಮೇಜಿನ ಒಂದೊಂದು ಡ್ರಾಯರನ್ನು ಮಾತ್ರಾ ತೆರೆಯಬೇಕು. ಎಂದು ಮಾತ್ರ ಬರೆದಿಟ್ಟನು ನಾಲ್ಕು ವರ್ಷಗಳ ಕಾಲ ಒಂದೊಂದು ಡ್ರಾಯರನ್ನು ತೆರೆದಾಗ ಅದರಲ್ಲಿ ಒಂದೊಂದು ಕಾಗದ ದೊರೆಯುತ್ತಿತ್ತು. ಅದರಲ್ಲಿ – ಆಶೆ, ವಿಶ್ವಾಸಗಳಿರಲಿ, ನಿಮ್ಮ ಇಚ್ಛೆಯು ಪೂರ್ಣವಾಗುವುದು ಎಂದಿಷ್ಟೇ ಬರೆಯಲ್ಪಟ್ಟಿತ್ತು. ಐದನೇ ಮರಣ ದಿನದಂದು ಐದನೇ ಡ್ರಾಯರನ್ನು ತೆಗೆದಾಗ ಅದರಲ್ಲಿ ವಿಧಿವತ್ತಾಗಿ ಬರೆಯಲ್ಪಟ್ಟ ನಿಜವಾದ ಉಯಿಲು ಲಭಿಸಿತು.

ಇತ್ತೀಚೆಗೆ ಕೆಲ ಸಮಯದ ಹಿಂದೆ ಒಬ್ಬ ವ್ಯಕ್ತಿಯು ತನ್ನ ಉಯಿಲಿನಲ್ಲಿ— "ತನ್ನ ಮಡದಿಗೆ ಬರೇ ಒಂದು ಬಿಲ್ಲೆಯನ್ನು ಕಳುಹಿಸಬೇಕು. ಅದು ಕೂಡಾ ಸ್ಟಾಂಪು ಹಾಗಿಸದ ಕವರಿನಲ್ಲಿ ಹಾಕಿ ಕಳುಹಿಸತಕ್ಕದ್ದು ,, ಎಂದು ಬರೆದಿದ್ದನು.

ಫ್ರಾನ್ಸ್ ದೇಶದ ನಿವಾಸಿಯಾದ ಮೇಡಮ್ ಎ. ಕ್ಲಾರಾ ಗುಜ್‌ಮೆನ್ ಎಂಬಾಕೆಯು ತನ್ನ 'ವಿಲ್ಲಿ'ನಲ್ಲಿ ನಕ್ಷತ್ರಮಂಗಳಗ್ರಹದ ವಿನಃ ಇನ್ನಾವುದೇ ಗ್ರಹದಿಂದ ಪ್ರಥಮ ಸಂದೇಶ ತಂದವನಿಗೆ ತನ್ನ ಸಂಪತ್ತಿನ ಬಹು ದೊಡ್ಡ ಪಾಲನ್ನು ಕೊಡತಕ್ಕದೆಂದು ಬರೆದಿರುವಳು. ಅವಳ ಈ ಬಹು ದೊಡ್ಡ ಮೊತ್ತಕ್ಕೆ ಇನ್ನೂ ಯಾರೂ ಅಧಿಕಾರಿಗಳಾಗಿಲ್ಲ.

ಫ್ರಾನ್ಸ್‌ನ ಒಬ್ಬ ಡಾಕ್ಟರನ —ತನ್ನ ಸಂಪತ್ತಿನಿಂದ ಪ್ರತಿವರುಷ ಬಹಳ ಸುಂದರವಾದ ಮೂಗಿರುವ ಯುವತಿಗೆ, ಸ್ತ್ರೀಯೂ ಪುರುಷನಿಗೆ ಪುರಸ್ಕಾರ ನೀಡತಕ್ಕದು ಎಂದು ಬರೆದಿಟ್ಟಿರುವನು. ಈ ಸ್ಪರ್ಧೆಗಿರುವ ಶರ್ತವೆಂದರೆ ಇದರಲ್ಲಿ ಫ್ರಾನ್ಸಿನ ವಿನಹ ಬೇರಾವ ದೇಶದವರೂ ಭಾಗವಹಿಸಬಹುದು. ಮಾತ್ರವಲ್ಲ ಭಾಗವಹಿಸುವವರ ಕೂದಲು ಕೆಂಪು ಇರತಕ್ಕದು. ಹಾಗೂ ಹುಬ್ಬು ಕಪ್ಪು ಇರಲೇ ಬೇಕು.

ಇಟಲಿಯ ಒಬ್ಬ ಯುವಕನು—ತನ್ನ ಸುಂದರವಾದ ಬಂಗಲೆಯಲ್ಲಿ ವಿವಾಹದ ಆಶೆಯನ್ನು ತೊರೆದ ಮುದುಕಿಯರನ್ನು ಮಾತ್ರ ಇರಗೊಡಬೇಕು ಎಂದು ಬರೆದಿಟ್ಟಿರುವನು.

ಹಲವಾರು ಮಂದಿ ತಮ್ಮ ಅಂತ್ಯೇಷ್ಟಿಯ ಕುರಿತೂ ವಸಿಯತನ್ನು ಬರೆದಿಟ್ಟಿರುವರು. ಕೆಲಿಫೋರ್ನಿಯಾದ ಒಬ್ಬ ಧನಿಕನು — ನನ್ನ ಗೋರಿಯ ಮೇಲೆ ಬೆಳೆದ ಹುಲ್ಲು ಒಣಗಿದಾಗ ನಾನು ಈಗ ನೇಮಿಸಿರುವ ಟ್ರಸ್ಟನ್ನು ರದ್ದುಮಾಡಬೇಕು ,, ಎಂದು ಉಲ್ಲೇಖಿಸಿರುವನು.

ಅಂತ್ಯೇಷ್ಟಿಗೆ ಸಂಬಂಧಿಸಿದ ಅನೇಕ ಉಲ್ಲೇಖಗಳು ನಮ್ಮ ಪುರಾಣಗಳಲ್ಲೂ ಸಿಗುತ್ತವೆ. ಬೌದ್ಧ ಗ್ರಂಥಗಳಲ್ಲಿ ೬ ಮಂದಿ ತೀರ್ಥಂಕರರವಿಷಯದೊರೆಯುತ್ತದೆ ಅವರಲ್ಲಿ ಒಬ್ಬನು ಅಜೀವಕ ಮತದ ಗೋಶಾಲ ಎಂಬವನು. ಶ್ರಾವಸ್ತಿಯಲ್ಲಿ ಅವನಿಗೆ ಮರಣ ಕಾಲ ಸಮೀಪಿಸಿದಾಗ ಅವನು ತನ್ನ ಶಿಷ್ಯರನ್ನು ಕರೆದು ನಾನು ಸತ್ತನಂತರ ಕಾಲುಗಳನ್ನು ಹಗ್ಗದಿಂದ ಕಟ್ಟಿ ಶ್ರಾವಸ್ತೀ ನಗರದ ರಾಜಮಾರ್ಗಗಳಲ್ಲಿ ನನ್ನನ್ನು ಎಳೆಯಬೇಕು. ಮತ್ತು ಗೋಶಾಲನು ತೀರ್ಥಂಕರನಲ್ಲವಾದರೂ ತನ್ನನ್ನು ತೀರ್ಥಂಕರನೆನ್ನುತಿದ್ದನು ಎಂದೆಂದು ನನ್ನ ಮುಖದ ಮೇಲೆ ಉಗುಳಬೇಕು" ಎಂದು ಅಪ್ಪಣೆ ಮಾಡಿದ್ದನು.

ಶಹಾಜಹಾನ ಬೇಗಂ ಮುಮ್ತಾಜಳಿಗಾಗಿ ತಾಜಮಹಾಲ್ ರೂಪುಗೊಂಡಿತು. ತನ್ನ ಗೋರಿಗೆ ಮುಚ್ಚಳವಿರಬಾರದೆಂದು ಅಕ್ಬರನು ಬಯಸಿದ್ದನು. ಅವನ ಪುತ್ರನು ಅದನ್ನು ನೆರವೇರಿಸಿದನು.

ಒಬ್ಬ ವ್ಯಕ್ತಿಗೆ ತಾನು ಜೀವವಿದ್ದಾಗಲೇ ಹೂಳಲ್ಪಡುವೆನೆಂಬ ಭಯವಿತ್ತು. ಅವನು ತನ್ನ ಉಯಿಲಿನಲ್ಲಿ ಒಂದೊಮ್ಮೆ ನಾನು ಸತ್ತರೆ ನಲ್ಲ ದಿವಸ ನನ್ನನ್ನು ಹೂಳಬಾರದು, ಹಾಗೂ ನಾಲ್ಕನೇ ದಿನ ಒಬ್ಬ ಶಸ್ತ್ರ ಚಿಕಿತ್ಸಕರನ್ನು ಕರೆದು ಅವರಿಗೆ ೮ ಪೌಂಡ್ ಫೀಸನ್ನು ಕೊಟ್ಟು ನನ್ನಲ್ಲಿಗೆ ಎಲ್ಲಿ ಯಾವರೂ ಇರು ಜೀವವಿದ್ದರೂ ನಿಷ್ಪ್ರಾಣಗೊಳ್ಳುವಂತೆ ಹೇಳಬೇಕು ಎಂದು ಬರೆದಿದ್ದನು. ವಿಯನ್ನಾದ ಒಬ್ಬ ವ್ಯಕ್ತಿಯು ಕತ್ತಲೆಗೆ ತುಂಬಾ ಹೆದರುತ್ತಿದ್ದನು. ಅವನು ತನ್ನ ಉಯಿಲಿನಲ್ಲಿ—

(೧೦ನೇ ಪುಟ ನೋಡಿರಿ)



ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;

ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಉಡುಪಿ

ಆಡಳಿತ ಆಫೀಸು: ಮಂಗಳೂರು 1.

ಭಾವೀ ಅತಿಥಿ

ಶ್ರೀಮತಿ ಜಾಕ್ವಿಲಿನ್ ಕೆನೆಡಿ

ಲೇಖಕರು: ಜಾಕ್ವೆಸ್ ಲೋವೆ.

ಅತ್ಯಂತ ಕಿರಿಯ ವಯಸ್ಸಿನ ಅಮೆರಿಕಾಧ್ಯಕ್ಷ ಪತ್ನಿಯರುಗಳಲ್ಲಿ ಸತಿಕೆನೆಡಿ ಮೂರನೆಯವರು. ಇವರ ಕಾಲದಲ್ಲಿ ಶ್ವೇತಭವನದ ಜೀವನ ವಿಧಾನದಲ್ಲೇ ಬದಲಾವಣೆಯಾಗಲಿದೆ. ಎಳೆಯ ಮಕ್ಕಳು, ಸಣ್ಣವರೂ—ಶ್ವೇತ ಭವನದ ನಿವಾಸಿಗಳಾಗುವುದರ ಜೊತೆಗೆ ಶಿಶುವಿಹಾರ ಕೂಡ ವ್ಯವಸ್ಥಿತ ವಾಗಲಿದೆ ಇಷ್ಟೇ ಅಲ್ಲ, ಬೃಹದಾಕಾರದ ಈ ಭವನದಲ್ಲಿ ಸಾಮಾನ್ಯವಾಗಿ ಸಂತೋಷಮಯವಾದ ವಾತಾವರಣ ಬರಲಿದೆ. ಬಹುದೊಡ್ಡ ಪ್ರಮಾಣದಲ್ಲಿ ಗೃಹಾಲಂಕಾರ ನಡೆಯಲಿದೆ. ಕಲಾವಸ್ತುಗಳ ಪ್ರವೇಶವಾಗಲಿದೆ. ಉತ್ಸಾಹ ಜೀವನದಲ್ಲಿ ಅದ್ಭುತ ಆಸಕ್ತಿ ಇವೇ ಸತಿ ಕೆನಡಿಯವರ ಮೋಹಕಾಂಶಗಳು

ಕಳೆದ ಮೂರು ವರ್ಷಗಳಿಂದಲೂ ಸತಿ ಕೆನಡಿಯವರ ಪರಿಚಯವನ್ನು ಛಾಯಾ ಚಿತ್ರಕಾರನ ಸ್ಥಾನದಿಂದ ಪಡೆಯುವ ಅದೃಷ್ಟ ನನ್ನದು. ವಾಷಿಂಗ್‌ಟನ್ನಿನಲ್ಲಿ ಹ್ಯಾನಿನ್ ಪೋರ್ಟಿನಲ್ಲಿ ಪ್ರಾಥಮಿಕ ಚುನಾವಣೆಗಳ ಕಾಲದಲ್ಲಿ ಚುನಾವಣಾ ಪ್ರಚಾರಕಾಲದಲ್ಲಿಅವರಚಿತ್ರಗಳನ್ನು ತೆಗೆದು ಕೊಂಡಿದ್ದೇನೆ. ರಾಷ್ಟ್ರದ ನಾನಾ ಕಡೆಗಳಲ್ಲಿ ಅವರೊಡನೆ ಸಂಚರಿಸಿದ್ದೇನೆ. ಗಂಡನೊಡನೆ, ಕುಟುಂಬದೊಡನೆ, ಗೆಳೆಯರು ಹಾಗೂ ಸ್ನೇಹಿತರೊಡನೆ, ರಾಜಕಾರಣಿಗಳೊಡನೆ, ಸಾರ್ವಜನಿಕರೊಡನೆ ಅವರನ್ನು ನೋಡಿದ್ದೇನೆ. ಈ ಎಲ್ಲಾ ಸಂದರ್ಭಗಳಲ್ಲೂ ಆಕರ್ಷಕ ವ್ಯಕ್ತಿಯೂ ಬುದ್ಧಿವಂತೆಯೂ ಆದ ಜಾಕ್ವಿಲಿನ್ ಬೋವಿಯರ್‌ಅವರ ವಿಷಯದಲ್ಲಿ ಗೌರವ ಭಾವನೆ ನನ್ನಲ್ಲಿ ಕುದುರುತ್ತಾ ಬಂದಿದೆ. ಎಲ್ಲಾ ಸಂದರ್ಭಗಳಲ್ಲೂ ಅವರ ಸ್ವಂತ ವ್ಯಕ್ತಿತ್ವ ಬೆಳಗಿದೆ. ಅಹಂಭಾವವಿಲ್ಲ, ಸ್ವಂತ ಅರಿವು ಸ್ಪಷ್ಟವಾಗಿದೆ. ತನಗೇನು ಬೇಕು, ತನಗೆ ಯಾವುದು ಪ್ರಿಯ, ತಾನು ಯಾರು ಎಂಬೆಲ್ಲ ಅರಿವು ಆಕೆಗುಂಟು. ನಿಜವಾದ ವಿವೇಚನಾ ಸ್ವಭಾವ ಆಕೆಯದು. ಜೀವನದ ಎಲ್ಲಾ ರಂಗದವರಲ್ಲೂ ಆಕೆ ಸಹಾನುಭೂತಿಪರಳು ತನ್ನ ನಿಲುವು ಏನೆಂಬುದನ್ನು ಬಲ್ಲ ಆಕೆಗೆ ಆ ವಿಷಯದಲ್ಲಿ ಭೀತಿಯಿಲ್ಲ ಅಂಚೆ ಉಡುಸು ಹಾಗೂ ನಡತೆಗಳ ವಿಷಯದಲ್ಲಿ ಆಕೆ ಸ್ವಾತಂತ್ರ್ಯವನ್ನು ಸ್ವವ್ಯಕ್ತಿತ್ವ ಪೋಷಣೆಯನ್ನೂ ಪ್ರದರ್ಶಿಸುತ್ತಾ ಬಂದಿದ್ದಾರೆ. ಸಂಭಾಷಣದಲ್ಲಿ ಚತುರೆ; ಆಕೆಗೆ ಪ್ರತಿಯೊಂದರಲ್ಲೂ ಪ್ರತಿಯೊಬ್ಬರಲ್ಲೂ ಆಸಕ್ತಿ. ಆಕೆಯ ಒಡನಾಟವೇ ಸಂತೋಷಕರವಾದುದು

ಕುಟುಂಬ ಜೀವನದ ನಂತರ ಆಕೆಗಿರುವ ಪ್ರಧಾನ ಆಸಕ್ತಿಯೆಂದರೆ ಕಲೆ, ಓದಿನಲ್ಲಿ ಬಹಳವಾದ ಆಸಕ್ತಿ, ಪ್ರಾಚೀನ ಸಾಹಿತ್ಯದಿಂದ ಆಧುನಿಕಕೃತಿಗಳವರೆಗೆಎಲ್ಲವನ್ನೂ ಓದುತ್ತಾರೆ. ಜಾರ್ ಬೋರ್‌ನಂತಹ ಬರೆಹಗಾರನ ಪುಸ್ತಕಗಳೂ ಆಕೆಯ ಓದಿನ ವ್ಯಾಪ್ತಿಗೆ ಸೇರುತ್ತವೆ. ಸಂಗೀತವೂ ಪ್ರಿಯವೇ; ಈ ಕ್ಷೇತ್ರದಲ್ಲೂ ಆಕೆಯ ಅಭಿರುಚಿ ಅಪೇರಾದ ಕೆಲವು ಜನಪ್ರಿಯ ಕೃತಿಗಳ ವರೆಗೆ ಹಬ್ಬಿದೆ.

ಆದರೆ ಚಿತ್ರಕಲೆ ಆಕೆಯ ಮುಖ್ಯ ಹವ್ಯಾಸ ಸ್ವತಃ ಚಿತ್ರಕಾರಳಾದ ಸತಿ ಕೆನೆಡಿ ಉತ್ತಮ ಕೃತಿಗಳ ಸಂಗ್ರಾಹಕರೂ ಹೌದು. ಇದುವರೆಗಿನ ಆಕೆಯ ಸಂಗ್ರಹ ಪ್ರಧಾನವಾಗಿ ರೇಖಾ ಚಿತ್ರಗಳದು. ಅವುಗಳನ್ನು ಸ್ವದೇಶ ವಿದೇಶಗಳೆರಡರಲ್ಲೂ ಕೊಳ್ಳುತ್ತಾರೆ.

ಆಕೆಯ ಸ್ವಂತ ಚಿತ್ರಗಳು ಅದ್ಭುತ ಎನಿಸುವಷ್ಟು ಸ್ವಪ್ನಾತ್ಮಕವಾದವು; ಅವರು ಅರ್ಧ ಮಟ್ಟಿಗೆ ಆದಿಕಲದ ಶೈಲಿಗೆ ಹೋಲುವಂತದು ಚಿತ್ರಕಲೆಯ ಒಂದು ಮೋಹಕ ಅಂಶವೆಂದರೆ ಆ ವಿಷಯದಲ್ಲಿ ಆಕೆಯ ನಿರಾಡಂಬರತೆ. ಚಿತ್ರಕಲೆಗಾಗಿ ಪ್ರತ್ಯೇಕವಾದ ಕಲಾ ಶಾಲೆಯಾಗಲಿ ಕೊಠಡಿಯಾಗಲಿ ಇಲ್ಲ. ಚಿತ್ರ ಬರೆಯುವಾಗ ವಿಶಿಷ್ಟವಾದ ಉಡುಪನ್ನಾಗಲಿ ಏಪ್ರನ್‌ನ್ನಾಗಲಿ ಕೊಡುವುದಿಲ್ಲ. ಚಿತ್ರ ರಚನೆಗೆ ಬೇಕಾದ ಮರದ ಚೌಕಟ್ಟನ್ನು ಎಲ್ಲಾದರೂ ಗುಂಡಿನಲ್ಲಿ ಇಟ್ಟಿರುತ್ತಾರೆ. ಬಳಸುವ ಬಣ್ಣದ ಪೆಟ್ಟಿಗೆಯೂ ಅಗ್ಗದ್ದು.

ಆಕೆಯ ಛಾಯಾ ಚಿತ್ರ ಕಲೆಯ ವಿಷಯವೂ ಅಷ್ಟೆ. ಸಿದ್ಧಹಸ್ತರಾದ ಛಾಯಾ ಚಿತ್ರಗಾರ್ತಿ ಆಕೆಯ ಕೆಮರಾ ಸರಳವಾದ ತ್ರಿಪಾದಿ. ಯಾವ ಸಹಾಯಕ ಸಲಕರಣೆಗಳನ್ನು ಆಕೆ ಇಟ್ಟುಕೊಂಡಿಲ್ಲ ಬಹು ಮಂದಿ ಸಾರ್ವಜನಿಕರು ಛಾಯಾಗ್ರಹಣವನ್ನು ಅನಿವಾರ್ಯವಾದ ತೊಂದರೆ ಎಂದರೆ, ಈಕೆ ಅದನ್ನು ಒಂದು ಸ್ವಾತ್ಯತ್ಮಕ ಮಾಧ್ಯಮ ಎಂಬುದಾಗಿ ಭಾವಿಸುತ್ತಾರೆ.

ಜನ ಎಲ್ಲಾ ಬಗೆಯ ಜನ, ಜಾಕ್ವಿಲಿನ್ ಕೆನಡಿಗೆ ಬಹು ಮೆಚ್ಚು, ಆಕೆ ಎದುರಿಸ ಬೇಕಾದ ಎಷ್ಟೋ ಪರಿಸ್ಥಿತಿಗಳಲ್ಲಿ ಸಾಮಾನ್ಯರು ದಿಕ್ಕುಗೆಟ್ಟಾರು. ೧೯೬೦ರ ಬೇಸಿಗೆಯಲ್ಲಿ ಒಂದು ದಿನ ಚಿತ್ರಗಳನ್ನು ತೆಗೆವ ಸಲುವಾಗಿ ಹ್ಯಾನಿನ್ ಪೋರ್ಟಿಗೆ ಹೋಗಿದ್ದೆ. ಸತಿ ಕೆನಡಿ ಬೆಳಗಿನ ಉಪಹಾರಕ್ಕೆ ಬಂದರು ಆಗ ಸುಮಾರು 100 ಮಂದಿ ಮನೆ, ತೋಟ ಹಾಗೂ ತಾರಸಿಗಳ ಮೇಲೆ ನುಗ್ಗಿ ಬಂದರು ಮನೆಯ ಮೂರು ಟೆಲಿಫೋನ್‌ಗಳಲ್ಲಿ ಉಕ್ರೇನಿಯನ್, ಪೋಲೀಷ್ ಹಾಗೂ ಸರ್ಬಿಯನ್ ಭಾಷೆಗಳಲ್ಲಿ ಮಾತು ನಡೆದಿತ್ತು. ಆಗ ಸೆನಟರಾಗಿದ್ದ ಗಂಡ ಅಲ್ಪ ಸಂಖ್ಯಾಕರುಗಳ ಸಮಿತಿಯ ಸಭೆಯೊಂದರಲ್ಲಿದ್ದರು. ಸತಿ ಕೆನೆಡಿ ಮುಗುಳ್ನಕ್ಕು ಉಪಹಾರಕ್ಕಾಗಿ ಅಡಿಗೆ ಮನೆಗೆ ತೆರಳಿದರು.

ಸತಿ ಕೆನೆಡಿ ಅವರ ಪ್ರಸ್ತಾಪ ಮಾಡುವಾಗ ಮನಸ್ಸಿಗೆ ಬರುವ ಇತರ ವಿಷಯಗಳೆಂದರೆ ಅವರ ಸರಳತೆ ಹಾಗೂ ಅಪ್ರಚ್ಛನ್ನ ಸ್ವಭಾವಗಳು ಈ ಸ್ವಭಾವಗಳು ಆಕೆಯ ಹಾಗೂ ಆಕೆಯ ಗಂಡನ ಕುಟುಂಬಗಳಿಗೂ ಸಹಜವಾದವು, ಜಾಕ್ವಿಲಿನರ ತಂಗಿ ಹಾಗೂ ಅಮೆರಿಕಾಧ್ಯಕ್ಷರ ಸೋದರರು ಹಾಗೂ ಸೋದರಿಯರ ಸಹಜ ನಡವಳಿಕೆ ಪ್ರಶಂಸಾರ್ಹವಾದುದು. ಜಾಕ್ವಿಲಿನ್‌ರ ಕುಟುಂಬ ಜೀವನದಲ್ಲಿ ಉಡುಪಿನಲ್ಲಿ ಮನೆಯ ಓರಣದಲ್ಲಿ ಈ ಸಹಜತೆ ಎದ್ದುಕಾಣುತ್ತದೆ.

ಆಕೆಯ ಬಟ್ಟೆಬರೆಗಳ ಸಂಖ್ಯೆ ದೊಡ್ಡದಲ್ಲ. ಇರುವವನ್ನೇ ಬಹು ಕಾಲ ತೊಡುತ್ತಾರೆ. ಒಂದು ವರ್ಷದ ನಂತರ ಛಾಯಗ್ರಹಣ ಮಾಡಿದಾಗಲೂ ಆಕೆ ಒಂದು ವರ್ಷದ ಹಿಂದಿನ ಉಡುಪನ್ನೇ ಧರಿಸಿದ್ದುದುಂಟು.

ನನಗೆ ತಿಳಿದಿರುವ ಮಟ್ಟಿಗೆ ಮನೆಯಲ್ಲಿ ಆಕೆಯ ನಡವಳಿಕೆ ಸರಳವಾದುದು. ವಿವಾಹಿತ ಜೀವನದುದ್ದಕ್ಕೂ ಸೆನೆಟರ ಪತ್ನಿಯಾಗಿಯೇ ಉಳಿದಿದ್ದರೂ ಈ ಸರಳವಾದ ಸ್ವಭಾವ ಉಳಿದುಬಂದಿದೆ.

ವಾಷಿಂಗ್‌ಟನ್ ಡಿ. ಸಿ ಯ ಜಾರ್ಜ್‌ಟೌನ್ ವಿಭಾಗದಲ್ಲಿಯ ಕೆನೆಡಿ ಮನೆ ಕೆಂಪು ಇಟ್ಟಿಗೆಗಳದು. ಸೌಕರ್ಯಪೂರ್ಣವಾದ ಮನೆ. ವಾಷಿಂಗ್‌ಟನ್ನಿನ ಮನೆಗಳಿಗೆ ಹೋಲಿಸಿದರೆ ನಿರಾಡಂಬರವಾದುದು. ಆಸನಾಲಂಕಾರಗಳಲ್ಲಿ ಸರಳತೆ ಒಡಮೂಡಿತ್ತು. ಗೃಹಾಲಂಕಾರ ಕಲ್ಲಾವಿದನ ಕೈವಾಡ ಎಲ್ಲೂ ಕಾಣ ಬರುತ್ತಿರಲಿಲ್ಲ. ಅದರ ಬದಲು ಎಲ್ಲಾ ಮೇಜುಗಳ ಮೇಲೂ ಜಾಕ್ವಿಲಿನ್ ಕೆನೆಡಿಯ ಸ್ಥಿಕಲೆಗೆ ಸಂಬಂಧಿಸಿದ ಪುಸ್ತಕಗಳ ರಾಶಿ ಬಿದ್ದಿದ್ದವು ಆದರೆ ಮೊಟ್ಟಮೊದಲು ಕಣ್ಣಿಗೆ ಬೀಳುವ ವಸ್ತುಗಳೆಂದರೆ ಹೂಗಳು, ಎಲ್ಲೆಲ್ಲೂ ಹೊಸ ಹೂವುಗಳೇ ಹೂವು ಬೆಳೆಯುವುದರಲ್ಲೂ ಕತ್ತರಿಸಿ ಓರಣವಾಗಿ ಜೋಡಿಸುವುದರಲ್ಲಿಯೂ ಸತಿ ಕೆನೆಡಿ ಬಹು ಎಚ್ಚರಿಕೆಯನ್ನು ತಾಳ್ಮೆಯನ್ನೂ ವಹಿಸುತ್ತಿದ್ದರು.

ಮೂರು ವರ್ಷದ ಮಗು ಕೆರೋಲಿನ್ ತಾಯಿಯೊಂದಿಗೆ ತೋಟದಲ್ಲಿ ಆಡ್ತಾಡುತಿತ್ತು. ಸಾಮಾನ್ಯ ಜೀವನದ ತಂದೆತಾಯಿಗಳಿಗಿಂತ ಹೆಚ್ಚು ಹೊತ್ತು ತಾಯಿ ಮಗಳೊಂದಿಗೆ ಇರುತಿದ್ದಳೆಂದರೆ ಅಚ್ಚರಿಯೇನಿಲ್ಲ. ತಾಯಿ ಮಗಳೂ ಬಹು ದೂರದ ವರೆಗೆ ಆಡ್ತಾಡುತ್ತಾ ಹೂಗಳನ್ನು ಕೊಯ್ಯುತ್ತಿದ್ದರು. ಸಮುದ್ರದ ದಂಡೆಯಲ್ಲಿ ಕಾಲ ಕಳೆಯುತ್ತಿದ್ದರು ಓದುತ್ತಿದ್ದರು ಸಾಮಾನ್ಯವಾಗಿ ಕೆರೋಲಿನ್ ಪುಸ್ತಕವನ್ನು-ಕೆಲವೊಮ್ಮೆ ಮಕ್ಕಳ ಪುಸ್ತಕವನ್ನು ಸಾಮಾನ್ಯವಾಗಿ ಹೂವುಗಳು ಪ್ರಾಣಿಗಳು, ನಕ್ಷತ್ರಗಳು ಹಾಗೂ ಪ್ರಪಂಚವನ್ನು ಕುರಿತ ಪುಸ್ತಕಗಳನ್ನು ಒಯ್ಯುತ್ತಿದ್ದಳು ಆಗಾಗ್ಗೆ ಮಗಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಸತಿ ಕೆನೆಡಿ ಪೈಂಟಿಂಗ್‌ಗಳ ಪುಸ್ತಕವನ್ನು ನೋಡುತ್ತಿದ್ದಳು.

ಕೆರೋಲಿನ್ನಳ ಜೀವನ ಸರಳವಾಗಿರುವಂತೆ ನೋಡಿಕೊಳ್ಳುವುದು ಸತಿ ಕೆನೆಡಿಯ ಪರಿವಾರ, ಛಾಯಗ್ರಹಣ ಅತಿಯಾಗದಂತೆ ನೋಡಿಕೊಳ್ಳುತ್ತಿದ್ದರು. ಮಗಳ ಜೊತೆಗೆ ಇರುವ ಸಲುವಾಗಿ ಜಾಕ್ವಿಲಿನ್ ಎಷ್ಟೋ ಸಾಮಾಜಿಕ ಕೂಟಗಳಿಗೆ ಹೋಗುತ್ತಿರಲಿಲ್ಲ. ಮಕ್ಕಳನ್ನು ಬೆಳೆಸುವ ವಿಷಯದಲ್ಲಿ ಆಕೆಯ ರೀತಿ ನೀತಿಗಳನ್ನು ಕಂಡು ಪ್ರಶ್ನಿಸಿದಾಗ "ಪ್ರೀತಿ ಹಾಗೂ ಶಿಸ್ತು" ಎಂದು ನುಡಿದ ಆಕೆ ಉಳಿದ ವಿಷಯಗಳನ್ನು ಅವುಗಳಿಗೇ ಬಿಡುವುದೊಳಿತು ಎಂದರು.

ಜಾಕ್ವಿಲಿನ್ ಕೆನೆಡಿ ತನ್ನನ್ನು ರಾಜಕಾರಣಿಯೆಂದು ಭಾವಿಸುವುದಿಲ್ಲ. ತನ್ನ ಸ್ಥಾನ ಹೆಂಡತಿಯದು ತಾಯಿಯದು ಎನ್ನುತ್ತಾರೆ ಆಕೆ.

ಪತ್ನಿಯ ಹಾಗೂ ತಾಯಿಯ ಸ್ಥಾನದಲ್ಲಿ ನಿಂತು ಗಂಡನ ಹಾಗೂ ಮಕ್ಕಳ ಸುಖವನ್ನು ನೋಡಿಕೊಳ್ಳುವುದು ಸ್ವಂತ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದು, ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ಸಂತೋಷದಿಂದ ಇರುವುದು ಕುಟುಂಬ ಜೀವನವಾಗಿ ನೋಡಿಕೊಳ್ಳುವುದು—ಇದು ಪ್ರಥಮ ಮಹಿಳೆಯಾಗಿಯೂ ಅಧ್ಯಕ್ಷರ ಭವನದ ಆತಿಥೇಯಳಾಗಿಯೂ ನಿರ್ವಹಿಸಬೇಕಾದ ಕರ್ತವ್ಯಗಳು ಎಂಬುದಾಗಿ ಜಾಕ್ವಲಿನ್ ಕೆನೆಡಿ ಭಾವಿಸಿದ್ದಾರೆ.



ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ವಿಜ್ಞಾನ ಹೇಳುತ್ತದೆ

ನಾರಿಯರು ಅಬಲೆಯರಲ್ಲ



ತಾಸಿಗೆ ನಾಲ್ಕು ಸಾವಿರ ಮೈಲು ವೇಗದಲ್ಲಿ ಹಾರಬಲ್ಲ ಅಮೇರಿಕನ್ ರಾಕೆಟ್‌ನ ಮಾದರಿಯಿದು. ನವಂಬರ ೯ರಂದು ಇದನ್ನು ಪ್ರಾಯೋಗಿಕವಾಗಿ ಹಾರಿಸಲಾಯಿತು.

ಪುರುಷರಿಗಿಂತ ಸ್ತ್ರೀಯರಲ್ಲಿ ದುಃಖ, ನಿರಾಶೆ ಮತ್ತು ದೀರ್ಘಕಾಲದ ವ್ಯಾಧಿ ಮೊದಲಾದುವನ್ನು ಸಹಿಸುವ ಶಕ್ತಿಯು ಅಧಿಕವಾಗಿದೆಯೆಂದು ವಿಜ್ಞಾನವು ಸಿದ್ಧ ಮಾಡಿ ತೋರಿಸಿದೆ. ಮಾನಸಿಕ ಶಕ್ತಿಯಲ್ಲಂತೂ ಸ್ತ್ರೀಯರೇ ಅಧಿಕಶ್ರೇಷ್ಠರೆನ್ನಬಹುದು. ಹುಟ್ಟುವ ಸಂಖ್ಯೆಯಲ್ಲಿ ಗಂಡಸರೇ ಹೆಚ್ಚೆಂದು ತಿಳಿದು ಬಂದಿರುವುದು ಇದನ್ನು ಪುಷ್ಟೀಕರಿಸುತ್ತದೆ. ಹೆಂಗಸರು ರೋಗಕ್ಕೆ ಬಲಿಯಾಗುವುದೇನೋ ಹೆಚ್ಚು; ಹಾಗಿದ್ದರೂ ಅವರು ದೀರ್ಘಾಯುಷಿಯರಾಗುತ್ತಾರೆ. ಬ್ರಿಟನ್ನಿನ ಡಾಕ್ಟರರ ಗಣನೆಯಂತೆ ಸಾಯುವುದಕ್ಕಿರುವ ಸಂಭಾವ್ಯ ಕಾರಣಗಳಿಗೆ ನೂರಕ್ಕೆ ೫೭ರಷ್ಟು ಪುರುಷರೇ ಗುರಿಯಾಗುತ್ತಾರೆ. ಇದನ್ನು ಗಮನಿಸಿಯೇ ಒಬ್ಬ ವೈಜ್ಞಾನಿಕನು ಅಂತರಿಕ್ಷಯಾತ್ರೆಗೆ ಹೆಂಗಸು ಅಧಿಕ ಉಪಯುಕ್ತವೆಂದು ಹೇಳಿದ್ದಾನೆ. ಆಕೆ ಅಲ್ಪಸ್ಥಳವನ್ನು ಮಾತ್ರ ಆಕ್ರಮಿಸುವವಳು ಮಾತ್ರವಲ್ಲ ಹಗುರಳಾಗಿಯೂ ಇರುವವಳು. ಅಂತರಿಕ್ಷ ಯಾತ್ರೆಯಲ್ಲಿ ಅಡ್ಡಬರುವ ಪ್ರತಿಕೂಲ ಪರಿಸ್ಥಿತಿಗಳನ್ನೂ ವಾಯುಮಂಡಳದ ಪರಿವರ್ತಿತ ಚಲನವಲನಗಳನ್ನೂ ಸ್ತ್ರೀ ಸಹಿಸಿಕೊಳ್ಳಬಲ್ಲಳು.

ಸ್ತ್ರೀಯರಲ್ಲಿರುವ ಈ ಗುಪ್ತ ಸುರಕ್ಷಿತ ಶಕ್ತಿಯ ರಹಸ್ಯವೇನು? ಆಧುನಿಕ ಸಭ್ಯತೆ ಮತ್ತು ಅಪ್ರಾಕೃತಿಕ ಜೀವನವು ತೀವ್ರತೆ ಮತ್ತು ಕೃತಕತೆಯ ವಾತಾವರಣವನ್ನು ನಿರ್ಮಿಸಿದುವು. ಕೆಲವು ಜನರ ಮೇಲೆ ಇವು ದುಷ್ಪ್ರಭಾವವನ್ನು ಬೀರಿವೆ. ಆದರೆ ಪ್ರಕೃತಿಯು ಸ್ತ್ರೀಯರ ಶರೀರವನ್ನು ಪುರುಷರಿಗಿಂತ ಕಷ್ಟ ಸಹಿಷ್ಣುತಾ ಶಕ್ತಿಯನ್ನು ಹೆಚ್ಚು ಸಹಿಸುವಂತೆ ನಿರ್ಮಾಣ ಮಾಡಿದೆ. ಜನ್ಮದಾರಭ್ಯದಿಂದಲೂ ಸ್ತ್ರೀಲಕ್ಷಣವೆನಿಸಿದ "ಎಕ್ಸ್‌ಕ್ರೊಮೋಸೋಮ್"ನ ಸಂಖ್ಯೆಯು ಪುರುಷದೇಹಕ್ಕಿಂತ ಸ್ತ್ರೀ ಶರೀರದಲ್ಲಿ ಅಧಿಕವಾಗಿದೆಯೆಂದು ಶರೀರವಿಜ್ಞಾನವು ಹೇಳುತ್ತದೆ. ಈ ಕಾರಣದಿಂದಲೇ ಹೋಮಿಯೋ ಫೋಲಿಯಾ, ಬಣ್ಣದ ಕುರುಡುತನ, ಲಿವರ್‌ದೋಷ ಮೊದಲಾದ ರೋಗಗಳಿಗೆ ಜನ್ಮದಿಂದಲೇ ಗುರಿಯಾಗುವವರಲ್ಲಿ ಪುರುಷರೇ ಹೆಚ್ಚು. ಎರಡನೆಯದಾಗಿ, ಹೆಂಗಸರ ರಕ್ತದಲ್ಲಿರುವುದಕ್ಕಿಂತ ಗಂಡಸರ ರಕ್ತದಲ್ಲಿ ಗಾಮಾಗ್ಲೋಬಿನ್‌ನ ಪ್ರಮಾಣ ಕಡಿಮೆಯಿರುವದೆಂದು ಗೊತ್ತಾಗುತ್ತದೆ. ರೋಗದ ಕೀಟಾಣುಗಳಲ್ಲಿ ಇವು ಸಂಘರ್ಷ ನಡೆಸುವುವೆಂದು ತಿಳಿದು ಬಂದಿದೆ. ನೆತ್ತರಿನಲ್ಲಿ ಇವುಗಳ ಪ್ರಮಾಣವು ಕಡಿಮೆಯಿರುವುದಾದರೆ, ಮನುಷ್ಯನು ಅತಿ ತ್ವರಿತದಲ್ಲಿ ರೋಗಗಳಿಗೆ ಗುರಿಯಾಗುತ್ತಾನೆ.

ಸ್ತ್ರೀಯರು ಗರ್ಭವನ್ನು ಧರಿಸಬೇಕಾಗುವುದು; ಮಗುವಿಗೆ ಜನ್ಮವೀಯುವುದೆಂದರೆ ಇನ್ನೊಂದು ಜನ್ಮವನ್ನು ತಳೆದು ಬಂದಂತೆಯೆಂಬುದು ನಿಜ. ಹಾಗಿದ್ದರೂ ವಿಧಿಯು ಈ ಸಂಬಂಧದಲ್ಲಿ ದಯಾಶೀಲತೆಯನ್ನು ತೋರಿಸಿದೆ. ಹೆಂಗಸಿನ ಪ್ರಾಯ ೧೫ಗಳಿಂದ ೪೫ರ ವರೆಗೆ ಗರ್ಭಧಾರಣೆ ಮಾಡಲು ತಕ್ಕುದಾಗಿದೆ. ಆದುದರಿಂದ ಈ ಅವಧಿಯಲ್ಲಿ ಅವರಲ್ಲಿ ವಿಶೇಷ ಶಕ್ತಿಯಿರುತ್ತದೆ. ಆದರೆ, ನಲ್ವತ್ತೈದು ವರ್ಷಾನಂತರ ಸ್ತ್ರೀಯರ ಕಾರೋನರಿಯ ಅವ್ಯವಸ್ಥೆ ಹೆಚ್ಚುವುದು. ಯುವಾವಸ್ಥೆಯಲ್ಲಿ ಮಾಸಿಕ ಧರ್ಮವು ನಿಂತು ಹೋಗುವ ಇಲ್ಲವೇ ಅವ್ಯವಸ್ಥಿತವಾಗುವ ಸ್ತ್ರೀಯರೂ ಕಾರೋನರಿಗೆ ಈಡಾಗುವ ಸಂಭವವಿದೆ.

ಸ್ತ್ರೀಯರ ಹಾರ್ಮೋನ್ಸ್ ಎಸ್ಟ್ರೋಜನ್ ತತ್ವದಿಂದ ಕೂಡಿದೆ. ಈ ತತ್ವ ಶಾಂತಿ ಪ್ರಧಾನ ಗುಣವುಳ್ಳದು. ಸ್ತ್ರೀಯರ ಪ್ರಾಕೃತಿಕ ವೈಶಿಷ್ಟ್ಯವು ಈ ತತ್ವವನ್ನು ಇಡಿಯ ಶರೀರದಲ್ಲಿ ಹರಡಿಸುತ್ತದೆ. ಆದುದರಿಂದಲೇ ಪುರುಷರಿಗಿಂತ ಸ್ತ್ರೀಯರು ಅಧಿಕಧೀರರೂ, ಶಾಂತರೂ ಸಹನಾಶೀಲರು ಕೋಮಲ ಸ್ವಭಾವದವರೂ ಆಗಿರುತ್ತಾರೆ. ಇದಕ್ಕೆ ವಿಪರೀತವಾಗಿ ಪುರುಷರ ಹಾರ್ಮೋನ್ಸ್‌ನಲ್ಲಿ ಟೆಸ್ಟೋಸ್ಟೆರೋನ್ ತತ್ವಗಳು ಶರೀರದಲ್ಲಿ ಉತ್ತೇಜನವನ್ನು ಹುಟ್ಟಿಸುತ್ತವೆ. ಇದರಿಂದಾಗಿ ಪುರುಷರು ಸ್ವಭಾವದಿಂದ ತೇಜರೂ ಕ್ರೋಧಿಗಳೂ ಆಗಿರುತ್ತಾರೆ; ಮತ್ತು ಅವರ ಸಂಚಿತ ಶಕ್ತಿಯು ಬಹು ಬೇಗನೇ ಕ್ಷಯವಾಗುವುದು

ನಲ್ವತ್ತೈದು ವರ್ಷಾನಂತರ ಸ್ತ್ರೀ ಪುರುಷರು ಹೃದ್ರೋಗಕ್ಕೆ ಗುರಿಯಾಗುವುದಾದರೆ, ಇದಕ್ಕೆ ರಕ್ತದಲ್ಲಿರುವ ಕೊಬ್ಬಿನ ಪ್ರಮಾಣ ಸಂತುಲನೆಯು ನಷ್ಟವಾಗುವುದೇ ಕಾರಣವೆಂದು ಹೃದಯ ವಿಶೇಷಜ್ಞರು ಹೇಳುತ್ತಾರೆ. ಇಂತಹ ರೋಗಿಗಳಿಗೆ ಎಸ್ಟ್ರೋಜನ್ ಕೊಡುವುದರಿಂದ ಆಶಾದಾಯಕ ಲಾಭ ದೊರೆಯುತ್ತದೆ. ಚಿಕಾಗೋ ನಗರದ ಡಾ| ರೂಫ್ ಎಂಬವರು ಈ ತಥ್ಯವನ್ನು ಕೋಳಿಗಳ ಮೇಲೆ ಪ್ರಯೋಗ ಮಾಡಿ ಸಿದ್ಧಪಡಿಸಿದ್ದರು. ಅವರು ಹೆಣ್ಣು-ಗಂಡು ಕೋಳಿಯೆರಡಕ್ಕೂ ಕೊಬ್ಬು ಕೂಡಿದ ಆಹಾರ ವಿತ್ತರು. ಅನಂತರ, ಹುಂಜವನ್ನು ಕೊಯ್ದಾಗ, ಅದರ ನರನಾಡಿಗಳಲ್ಲಿ, ಅಧಿಕ ಕೊಬ್ಬಿನ ಪದಾರ್ಥಗಳನ್ನು ತಿನ್ನುವ ಹೃದ್ರೋಗಿ ಪುರುಷನ ನರನಾಡಿಯಲ್ಲಿ ಇರುವ ದೋಷಗಳು ದೃಷ್ಟಿಗೋಚರವಾದುವು. ಆದರೆ, ಹೇಂಟೆಯಲ್ಲಿ ಯಾವ ದೋಷವೂ ಕಂಡುಬರಲಿಲ್ಲ. ಇದರಿಂದ ಕೊಬ್ಬು ಕೂಡಿದ ಆಹಾರ ಸೇವಿಸುವುದರಿಂದ ಆಗಬಹುದಾದ ಹಾನಿಗಳಿಂದ ಪರಮಾತ್ಮನು ಹೆಂಗಸರನ್ನು ತಾನಾಗಿಯೇ ಸಂರಕ್ಷಿಸಿದ್ದಾನೆಂದು ಹೇಳಬಹುದು. ಅವರ ದೇಹದಲ್ಲಿರುವ ಎಸ್ಟ್ರೋಜನ್ ಅವರ ರಕ್ಷಣೆ ಮಾಡುತ್ತದೆ.

ಇಂಗ್ಲೆಂಡಿನಲ್ಲಿ ಕೊರೊನರಿ ವ್ಯಾಧಿಯಿಂದ ಪೀಡಿತರಾದ ಅನೇಕ ವ್ಯಕ್ತಿಗಳಿಗೆ ಎಸ್ಟ್ರೋಜನ್ ಕೊಟ್ಟುದರಿಂದ ಸಾಕಷ್ಟು ಗುಣ ಕಂಡಿದೆ. ಆದರೆ, ಕೆಲವರಲ್ಲಿ ಸ್ತ್ರೀ ಪ್ರಧಾನ ಗುಣವೂ ಹೆಚ್ಚಿದುದು ಕಂಡುಬಂದಿದೆ. ಇದರಿಂದಾಗಿ, ಅನೇಕ ಪುರುಷರಿಗೆ ಗಡ್ಡ ಗೀಸಿಕೊಳ್ಳುವ ಅವಶ್ಯಕತೆಯೇ ಉಳಿಯಲಿಲ್ಲ. ಅವರ ತಲೆಯಲ್ಲಿ ಕೂದಲು ಏಕಪ್ರಕಾರವಾಗಿ ಬೆಳೆಯತೊಡಗಿತು. ಇದರೊಡನೆ ತುಸು ಶ್ರಮದ ಅರಿವೂ ಅವರಿಗಾಯಿತು; ಕಾಮವಾಸನೆಯೂ ಕಡಿಮೆಯಾಯಿತು.

ಹೆಂಗಸರು ಗರ್ಭವತಿಯರಿರುವಾಗ, ಅವರ ರಕ್ತದಲ್ಲಿ ಎಸ್ಟ್ರೋಜನ್ ಅಧಿಕವಾಗಿ ಇರುವುದರಿಂದ ರೋಗನಾಶಕ ಶಕ್ತಿಯ ಉತ್ಪಾದನೆ ಅಧಿಕವಾಗುತ್ತದೆಂದು ಕೆಲವರು ಡಾಕ್ಟರರು ಹೇಳುತ್ತಾರೆ. ಈ ಕಾರಣದಿಂದ ಗಂಟುಗಳು, ಎಲುಬುಗಳಲ್ಲಿರುವ ನೋವು ಈ ಕಾಲದಲ್ಲಿ ತಮಗೆ ತಾವಾಗಿಯೇ ದೂರವಾಗುತ್ತವೆ. ಸ್ತ್ರೀಯರ ಲಿವರ್ ಹಾರ್ಮೋನ್‌ಗಳನ್ನು ರೂಪಾಂತರಗೊಳಿಸುವಲ್ಲಿ ವಿಶೇಷ ನೆರವಾಗುತ್ತದೆಂದು ಡಾ. ರೋಬರ್ಟರನ್ನುತ್ತಾರೆ. ಆದರೆ ಕಾರೋನರಿ ರೋಗ ಪೀಡಿತ ಪುರುಷರ ಲಿವರ್ ಔಷಧ ರೂಪದಲ್ಲಿ ನೀಡಿದ ಎಸ್ಟ್ರೋಜನ್‌ನ ಮೇಲೆ ಕೂಡ ಅಧಿಕ ಅನುಕೂಲ ಪ್ರಭಾವ ಬೀರುವುದಿಲ್ಲ.

ಮೇಲೆ ಹೇಳಿದ ತಥ್ಯಗಳಿಂದ ಸ್ತ್ರೀಯ ಎದುರು ಪುರುಷನು ಅಸಮರ್ಥನೆಂದು ತಿಳಿಯುತ್ತದೆ. ಪ್ರಕೃತಿಯು ಬಹು ಯೋಚಿಸಿಯೇ ಸ್ತ್ರೀಗೆ ಸಂಚಿತ ಶಕ್ತಿಯ ವರವನ್ನಿತ್ತಿದೆ. ಆದುದರಿಂದಲೇ ಸ್ತ್ರೀ ಅತ್ಯಲ್ಪ ಸಾಧನಗಳಿಂದಲೇ ತೃಪ್ತಿಯಿಂದಿರಬಲ್ಲಳು. ಚಳಿ, ಹಸಿವೆ, ನೀರಡಿಕೆ, ಆಯಾಸ ಮೊದಲಾದುವು ಪುರುಷರನ್ನು ಕಾಡುವುದಕ್ಕಿಂತ ಸ್ತ್ರೀಯನ್ನು ಕಡಿಮೆ ಅಶಾಂತಗೊಳಿಸುತ್ತದೆ! ಆದುದರಿಂದ ಸ್ತ್ರೀಯರು ತಮ್ಮ ಸ್ವಾಭಾವಿಕ ಶಕ್ತಿಯ ಮಹತ್ವವನ್ನು ತಿಳಿದುಕೊಂಡು, ತಮ್ಮನ್ನು ಅಬಲೆಯರೆಂದು ತಿಳಿಯದೆ, ತಮ್ಮ ಸ್ವಾಸ್ಥ್ಯ ಮತ್ತು ಯೌವನವನ್ನು ಮತ್ತಷ್ಟು ಸ್ಥಾಯಿಗೊಳಿಸಿ ದಾಂಪತ್ಯ ಜೀವನವನ್ನು ಸರಸ ಮತ್ತು ಸುಂದರವಾಗಿಸುವುದು ಅಪೇಕ್ಷಣೀಯವಲ್ಲವೇ?

ಸಿಗುತ್ತವೆ—

ಉಡುಪಿಯ 'ಕಿರಿಯರ ಪ್ರಪಂಚ'ದ
'ಅಂತರಂಗ ಕಾರ್ಯಾಲಯ'ದ
'ನವಭಾರತ ಪುಸ್ತಕ ಭಂಡಾರ'ದ
ಪ್ರಕಟಣೆಗಳು

ಸುಲಭದಲ್ಲಿ ಇಂಗ್ಲಿಷ್, ಮನೆ ಮದ್ದು, ಸುಲಭದಲ್ಲಿ ಪತ್ರಲೇಖನ
ಎಂಬ ಅತ್ಯುಪಯೋಗಿ ಪುಸ್ತಕಗಳಿಗೆ
ವಿಚಾರಿಸಿ:

ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್
ಕೆ. ಎಸ್. ರಾವ್ ರೋಡು, ಮಂಗಳೂರು—1.

ಕೆನರಾ ಕಾಲೇಜು ಬುಕ್ ಕಂಪೆನಿ.
ಕೊಡಿಯಾಲಬೈಲು, ಮಂಗಳೂರು

ನವಯುಗ

ವರುಷ	ಉಡುಪಿ	ವಾರ
೪೧	೨೨-೨-'೬೨	೨೪

ವಸಾಹತುವಾದ ಸಮಿತಿ

ವಸಾಹತುವಾದದ ಬಗ್ಗೆ ಸಂಯುಕ್ತ ರಾಷ್ಟ್ರಸಂಘವು ಶೀಘ್ರದಲ್ಲೇ ನೇಮಿಸಲಿರುವ ಹದಿನೇಳು ರಾಷ್ಟ್ರಗಳ ವಿಶೇಷ ಸಮಿತಿಯೊಂದರ ಅಧ್ಯಕ್ಷ ಸ್ಥಾನವನ್ನು ಭಾರತದ ಪ್ರತಿನಿಧಿ ಶ್ರೀ ಸಿ. ಎಸ್. ಝಾ ಅವರಿಗೆ ನೀಡುವುದು ಈಗ ನಿಶ್ಚಯವಾದಂತಿದೆ. ಭಾರತವು ತಾನಾಗಿಯೇ ಈ ಹುದ್ದೆಯನ್ನು ಗಳಿಸಲು ವಿಶೇಷ ಆಸ್ಥೆಯನ್ನು ತೋರಿಸಿರಲಿಲ್ಲವಾದರೂ ಪಾಶ್ಚಾತ್ಯ ಬಣದ ಪ್ರಮುಖ ರಾಷ್ಟ್ರವೆನಿಸಿದ ಅಮೇರಿಕೆಯು ಇಂತಹ ಸೂಚನೆಯಿತ್ತಿರುವುದು ಮಹತ್ವಪೂರ್ಣವಾಗಿದೆ. ಭಾರತವು ತನ್ನ ಭೂಲೋಕದಲ್ಲಿದ್ದ ಪೋರ್ಚುಗೀಸರ ವಸಾಹತುಗಳನ್ನು ಮುಕ್ತಗೊಳಿಸಲು ಕೊನೆಯ ಗಳಿಗೆಯಲ್ಲಿ ತೆಗದುಕೊಂಡ ಸೈನಿಕ ಕಾರ್ಯಾಚರಣೆಯನ್ನು ಉಗ್ರವಾಗಿ ವಿರೋಧಿಸಿದ ಅಮೇರಿಕೆಯೇ ಇಂತಹ ಸೂಚನೆಯನ್ನು ಇತ್ತುದರಿಂದ, ಗೋವಾ ವಿಮೋಚನೆಯ ಬಗ್ಗೆ ಭಾರತವಿಟ್ಟಿದ್ದ ಹೆಜ್ಜೆಯನ್ನದು ಅನುಮೋದಿಸುತ್ತ ಬರುತ್ತಿದೆಯೆಂಬುದನ್ನು ಅವಶ್ಯ ತಿಳಿದುಕೊಳ್ಳಬಹುದು.

ಬಹು ದೀರ್ಘ ಕಾಲ ವಸಾಹತುಶಾಹಿಯ ಪಾದದಡಿಯಲ್ಲಿ ನವೆದ ಭಾರತವು ವಸಾಹತುವಾದವನ್ನು ಕೊನೆಗಾಣಿಸಲು ಸೂಕ್ತ ಮಾರ್ಗದರ್ಶನ ಮಾಡಲು ಸರ್ವಸಮರ್ಥವಿದೆಯೆಂಬುದನ್ನು ಈಗ ಪಾಶ್ಚಾತ್ಯ ರಾಷ್ಟ್ರಗಳೂ ಒಪ್ಪಿಕೊಂಡಂತಾಗಿದೆ; ಎಂದರೆ, ಪೋರ್ಚುಗೀಸರನ್ನು ಗೋವೆಯಿಂದ ಹೊಡೆದೋಡಿಸಲು ಅನುಸರಿಸಿದ ದಂಡೋಪಾಯವನ್ನಿವು ಪರೋಕ್ಷವಾಗಿ ಬೆಂಬಲಿಸುತ್ತ ಬರುತ್ತಿರುವಂತೆ ಭಾಸವಾಗುತ್ತಿವೆ. ಸಮಿತಿಯಲ್ಲಿ ಇಂಗ್ಲೆಂಡ್ ಮತ್ತು ಅಮೇರಿಕೆಗಳು ಕೂಡಿ ನಾಲ್ಕು ಪಾಶ್ಚಾತ್ಯ ರಾಷ್ಟ್ರಗಳು, ರಶ್ಯ ಮತ್ತು ಯುಗೋಸ್ಲಾವಿಯಗಳನ್ನು ಕೂಡಿ ಮೂರು ಕಮ್ಯುನಿಸ್ಟ್ ರಾಷ್ಟ್ರಗಳು, ಎರಡು ದಕ್ಷಿಣ ಅಮೇರಿಕದ ರಾಷ್ಟ್ರಗಳು, ಭಾರತವನ್ನು ಕೂಡಿ ಮೂರು ಏಶ್ಯದ ರಾಷ್ಟ್ರಗಳು ಮತ್ತು ಐದು ಆಫ್ರಿಕನ್ ರಾಷ್ಟ್ರಗಳು ಹೀಗೆ ಒಟ್ಟು ಹದಿನೇಳು ರಾಷ್ಟ್ರಗಳು ಇರುವವು, ಉಳಿದೆಲ್ಲವುಗಳನ್ನೂ ಬಿಟ್ಟು ಭಾರತವನ್ನೇ ಅಧ್ಯಕ್ಷ ಸ್ಥಾನಕ್ಕೇರಿಸುವ ಆಶಯ ವ್ಯಕ್ತವಾದುದು ಅತಿ ಮಹತ್ವಭರಿತವೆನಿಸುವಂತೆಯೇ ಅತಿ ವಿಚಿತ್ರವೂ ಇರುತ್ತದೆ. ಮೊದಲು ಪಾಶ್ಚಾತ್ಯ, ಕಮ್ಯುನಿಸ್ಟ್ ಮತ್ತು ತಟಸ್ಥ ಬಣಗಳಿಗೆ ಸಮಾನ ಪ್ರಾಶಸ್ತ್ಯ ನೀಡುವಂತೆ ಇಂತಹ ಸಮಿತಿಯ ರಚನೆಯಾಗಬೇಕೆಂದು ಸೋವಿಯೆತ್ ರಶ್ಯವು ಬಯಸಿದ್ದರೂ, ಅದರ ಸೂಚನೆಗೆ ಬೆಂಬಲ ದೊರೆಯಲಿಲ್ಲವೆಂಬುದನ್ನು ಗಮನಿಸಬೇಕು. ಅದರೆ, ಅಮೇರಿಕೆಯು ಮುಂದೆ ಇಟ್ಟಿರುವ ರಾಷ್ಟ್ರಮಾಲಿಕೆಯಲ್ಲಿ ರಶ್ಯವು ತೃಪ್ತಿಯ ಉಸಿರನ್ನೇ ಬಿಡುವಂತಾಗಿದೆ. ಆಫ್ರಿಕನ್ ಮತ್ತು ಏಶ್ಯ ಖಂಡಗಳ ರಾಷ್ಟ್ರಗಳ ಯಾವುದೇ ಕಾರ್ಯಕ್ರಮವನ್ನು ಹಿಂದೆ ಮುಂದೆ ನೋಡದೆ ಸಮರ್ಥಿಸುತ್ತ ಬಂದ ರಶ್ಯವು ಈ ಎಂಟು ಮತ್ತು ತನ್ನ ಸಹೋದರ ಕಮ್ಯುನಿಸ್ಟ್ ರಾಷ್ಟ್ರಗಳೊಡನೆ ಸೇರಿ ಈ ಸಮಿತಿಯಲ್ಲಿ ಗಣನೀಯವಾದ ಲಾಭ ಪಡೆಯುವುದು ಸಾಧ್ಯವಿದೆ. ಏಕೆಂದರೆ, ಅದರ, ತಿಳುವಳಿಕೆಯಂತೆ ಅಮೇರಿಕನ್ ಪಂಗಡದಲ್ಲಿ ಕೇವಲ ಆರು ಸದಸ್ಯರು ಮಾತ್ರವಿರುವರು. ಇದರಿಂದ ರಶ್ಯವು ತನ್ನ ಮೂಲ ಬೇಡಿಕೆಯನ್ನೇ ಪರ್ಯಾಯ ರೂಪದಲ್ಲಿ ಸಾಧಿಸಿಕೊಂಡಿತು ಎಂದು ಹೇಳ ಬಹುದು. ಭಾರತವನ್ನು ಅಮೇರಿಕೆಯು ಅಧ್ಯಕ್ಷ ಪೀಠಕ್ಕೆ ಏರಿಸುವ ಉದಾರತೆಯನ್ನು ತೋರಿಸಿರುವುದರ ಮೂಲ ಕಾರಣವಿನ್ನೂ ಗೊತ್ತಾಗಿಲ್ಲ. ಆದರೂ ಗೋವಾ ಕಾರ್ಯಾಚರಣೆಯ ಸಂಬಂಧದಲ್ಲಿ ಅಮೇರಿಕನ್ ವಿದೇಶ ಮಂತ್ರಿಯ ವಿಲಕ್ಷಣ ಹೇಳಿಕೆ—ವಾದಗಳಿಂದ ಭಾರತೀಯರು ನೊಂದಿದ್ದಾರೆ ಎಂಬುದು ನಿಜ. ಏಶ್ಯನ್ ರಾಷ್ಟ್ರಗಳಲ್ಲಿ ಭರದಿಂದ ಹಬ್ಬತೊಡಗಿದ ಕಮ್ಯುನಿಜಂ ಅನ್ನು ತಡೆಗಟ್ಟಬೇಕಾದರೆ, ಭಾರತದಂತಹ ರಾಷ್ಟ್ರದ ಸ್ನೇಹವು ಅದಕ್ಕೆ ಅತ್ಯವಶ್ಯ. ಪಶ್ಚಿಮ ನ್ಯೂಗಿನಿಯ ಕಡೆಗೆ ಸೇನೆ ರವಾನೆಮಾಡುವ ವಿಮಾನವನ್ನು ಅಮೇರಿಕೆಯಲ್ಲಿ ಇಳಿಸಲು ಒಪ್ಪಿಗೆ ನೀಡಿದುದನ್ನು, ಅದು ಎದುರಿಸಬೇಕಾಗಿ ಬಂದ ಪ್ರತಿಭಟನೆಯನ್ನು ಮತ್ತು ಇದರ ಕಾರಣದಿಂದಾಗಿ ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದುದನ್ನು ನಾವು ಗಮನಿಸಬೇಕು. ಹೀಗೆ ಆಫ್ರೇಶ್ಯನ್ ರಾಷ್ಟ್ರಗಳ ಸ್ನೇಹವನ್ನು ಉಳಿಸಿಕೊಳ್ಳುವ ಇರಾದೆಯಿಂದ ಕೆನ್ನೆಡಿ ಸರಕಾರದ ಉದಾರ ನೀತಿಯಿಂದ ಅಮೇರಿಕೆಯು ಇಂತಹ ವಿಚಾರವನ್ನು ಮುಂದಿಟ್ಟಿದೆಯೆಂದು ತಿಳಿಯಬಹುದು.

ಇಲ್ಲಿ ಒಂದು ಮಾತನ್ನು ಅವಶ್ಯ ತಿಳಿದು ಕೊಳ್ಳಬೇಕು. ಸಮಿತಿಯೊಂದಾದ ಕ್ಷಣ, ಅದು ಕೆಲಸ ಮಾಡಬೇಕು. ವಸಾಹತುವಾದ ಸಂಬಂಧದ ಸಮಿತಿಯು ನ್ಯಾಯೋಚಿತವಾದ ನಿರ್ಧಾರಕ್ಕೆ ಬಂದು ಸಂ. ರಾ. ಸಂಸ್ಥೆಗೆ ವರದಿಯೊಪ್ಪಿಸಬೇಕಾಗಿದೆ. ಮೊದಲೇ ತನ್ನ ಬಲ ಹನ್ನೊಂದು ಇದೆಯೆಂದೂ ಪಾಶ್ಚಾತ್ಯರ ಬಲ ಕೇವಲ ಆರು ಎಂದೂ ತಿಳಿದುಕೊಂಡಿರುವ ರಶ್ಯವು ತನ್ನ ವಾದ ಮೇಲೆಂದು ವಾದಿಸಲು ಹಿಂದೆ ಮುಂದೆ ನೋಡಲಾರದು. ಆದರೂ ಅದು ಯಾವ ಸಮಸ್ಯೆಗಳಿಗೂ ಆಸ್ಪದವನ್ನು ನೀಡದಂತೆ, ಯಾವುದೇ ಒಂದು ಪಕ್ಷದ ಕಡೆಗೆ ಅಂಟಿಕೊಳ್ಳತುಕೊಳ್ಳದಂತೆ ಎರಡೂ ಬಣಗಳನ್ನು ಸರಿಯಾಗಿ ಹೊಂದಿಸಿಕೊಂಡು ಮುನ್ನಡೆಯಬೇಕಾದುದು ಅಗತ್ಯ. ಇಬ್ಬಣಗಳ ನಡುವೆ ಸಮತುಲನೆಯನ್ನು ಕಾಪಾಡಿಕೊಂಡು ಭಾರತ ಬರಬೇಕಾಗುವುದು. ಭಿನ್ನತೆಯಲ್ಲಿಯೂ ಏಕತೆಯನ್ನು ಸಂಸ್ಥಾಪಿಸುವ ಮಹಾ ಕೃತಿಗೆ ಹೆಸರಾದ ಭಾರತೀಯ ಸಂಸ್ಕೃತಿಯ ತತ್ವಗಳಡಿಯಲ್ಲಿ ಶ್ರೀ ಝಾ ಅವರು ಭಾರತದ ಶಾಂತಿಯುತ ನೀತಿಯಂತೆ ನಡೆದು, ಜಗತ್ತಿನಲ್ಲಿ ವಸಾಹತುವಾದದ ಕಲಂಕವನ್ನು ತೊಡೆದು ಹಾಕಲು ತನ್ನ ಶಕ್ತಿಮೀರಿ ಪ್ರಯತ್ನಿಸುವರೆಂದು ನಂಬಬಹುದು. ಗೋವಾ ವಿಮೋಚನೆಯನ್ನು ಸಾಧಿಸಿಕೊಂಡ ಭಾರತವು ಉಳಿದ ವಸಾಹತುಗಳ ಸ್ವಾತಂತ್ರ್ಯ ಪ್ರಾಪ್ತಿಗೆ ನಾಂದಿಯಿಟ್ಟಿತು ಎಂಬ ಉದ್ಗಾರವನ್ನು ಶಾಂತ ಮಾರ್ಗದಲ್ಲಿಯೇ ಸತ್ಯಮಾಡಿಸಲೆಂದು ಹಾರೈಸಿದರೆ ತಪ್ಪಾಗಲಾರದು.

ಉತ್ತರದ ಚುನಾವಣೆ

ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ, ಅಂದರೆ ಉಡುಪಿ ಲೋಕಸಭಾ ಸದಸ್ಯ ಕ್ಷೇತ್ರಕ್ಕೆ ಒಳಪಟ್ಟ ಸುರತ್ಕಲ್, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಕಾರ್ಕಳ ಮತ್ತು ಮೂಡಬಿದರೆ ವಿಧಾನ ಸಭಾ ಕ್ಷೇತ್ರಗಳಲ್ಲಿ ತಾ. ೧೯ರಂದು ಮತದಾನವು ನಡೆಯಿತು. ಸರ್ವಸಾಮಾನ್ಯವಾಗಿ ಎಲ್ಲೆಡೆಯೂ ತುರುಸಿನ ಸ್ಪರ್ಧೆ ನಡೆದಿದ್ದರೂ ಮತದಾನವು ಶಾಂತ ವಿಧಾನದಲ್ಲೇ ನೆರವೇರಿತು ಎನ್ನಬಹುದು ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಾಳುಗಳು ತಮ್ಮ ತಮ್ಮ ಕ್ಷೇತ್ರದ ಎಲ್ಲ ಮತದಾರರನ್ನೂ ಪ್ರತ್ಯಕ್ಷ ಕಂಡು ಸಾಧ್ಯವಾದಷ್ಟು ರೀತಿಯಲ್ಲಿ ತಮ್ಮ ತಮ್ಮ ಪಕ್ಷಗಳ ಧ್ಯೇಯ ಧೋರಣೆಗಳನ್ನು ನಿರೂಪಿಸಿರುವುದು ಮತ್ತು ಆದಷ್ಟು ಕಡಿಮೆ ಪ್ರಚಾರ ಸಭೆಗಳನ್ನು ಏರ್ಪಡಿಸಿದುದು ಗಮನೀಯವಿದೆ. ಮತದಾರರಾದರೂ ತಮ್ಮ ಮುಂದೆ ಆಯ್ಕೆಗಾಗಿ ನಿಂತ ಬಹು ಜನರಲ್ಲಿ ಯಾರನ್ನು ಆರಿಸಬೇಕೆಂದು ಪೇಚಿಗೆ ಸಿಕ್ಕಿಬೀಳುವ ಸಂಭವವಿದ್ದರೂ ಅಧಿಕಾಧಿಕ ಸಂಖ್ಯೆಯಲ್ಲಿ ನಾಗರಿಕನಾದವನಿಗಿರುವ ಪರಮಾಧಿಕಾರವನ್ನು ಚಲಾಯಿಸಲು ಮುಂದೆ ಬಂದುದು ಅಭಿಮಾನಾಸ್ಪದವಿದೆ; ಪ್ರಜಾ ಪ್ರಭುತ್ವದ ತತ್ವಗಳನ್ನು ರಕ್ತಗತ ಮಾಡಿಕೊಳ್ಳುವಲ್ಲಿ ಅಗ್ರಸರರಾದ ಮತದಾರರನ್ನು ಮೊತ್ತಮೊದಲು ಅಭಿನಂದಿಸ ಬೇಕಾಗಿದೆ. ಇದು ವರೆಗೆ ಬಂದಿರುವ ತಾತ್ಕಾಲಿಕ ವರದಿಯಂತೆ ಈ ಪ್ರದೇಶದಲ್ಲಿ ಸೇ. ೫೫ ಮತದಾರರು ಮತದಾನ ಮಾಡಿರುವರೆಂದೂ ಉಡುಪಿ ಕ್ಷೇತ್ರದಲ್ಲಿ ಮಾತ್ರ ಎಲ್ಲಕ್ಕಿಂತ ಹೆಚ್ಚು, ಎಂದರೆ, ಸುಮಾರು ಸೇ. ೬೫-೭೦, ಮತದಾರರು ಮುಂದೆ ಬಂದಿರುವುದಾಗಿಯೂ ಗೊತ್ತಾಗುತ್ತದೆ. ಹಳ್ಳಿಗರ ಕೈಯಲ್ಲಿಯೇ ಹೆಚ್ಚಿನ ಮತವಿರುವುದರಿಂದ ಗ್ರಾಮೀಣ ಜನರೂ ಮತದಾನದ ಮಹತ್ವವನ್ನು ಅರಿತುಕೊಂಡಿರುವರೆಂದು, ಅವರು ತೋರಿಸಿದ ಉತ್ಸಾಹದಿಂದ ತಿಳಿದುಕೊಳ್ಳಬಹುದು.

ಇನ್ನು ಅಧಿಕ ಮತ ಗಳಿಸುವ ಹುರಿಯಾಳುಗಳು ಯಾರೆಂದು ಈಗಲೇ ಹೇಳ ಬರುವಂತಿಲ್ಲ. ಮತದಾರರು ಗುಪ್ತವಾಗಿ ನೀಡಿದ ಮತಗಳಲ್ಲಿ ತಮಗೆಷ್ಟು ಬಿದ್ದಾವೆಂಬುದನ್ನು ಊಹಿಸುವುದು ಈ ಬಾರಿ ಸಾಧ್ಯವಿಲ್ಲವಾಗಿದೆ ಆದರೂ ನಂಬಬಹುದಾದ ವರ್ತಮಾನದಂತೆ, ಜಿಲ್ಲೆಯ ಉತ್ತರ ವಿಭಾಗದ ಮತದಾರರು ಕಾಂಗ್ರೆಸ್ ಪಕ್ಷವನ್ನೇ ಬಲವಾಗಿ ಬೆಂಬಲಿಸಿದ್ದಾರೆಂದು ತಿಳಿಯುತ್ತದೆ. ತಮ್ಮ ಭವಿಷ್ಯವನ್ನು ಮರಳಿ ಐದು ವರ್ಷಗಳ ಕಾಲ ಕಾಂಗ್ರೆಸ್ ಪ್ರತಿನಿಧಿಯ ಕೈಗಳಿಗೆ ಒಪ್ಪಿಸಲು ಅವರು ನಿರ್ಧಾರ ಮಾಡಿದ್ದಾರೆಂದು ತಿಳಿಯುತ್ತದೆ. ಈ ಬಗ್ಗೆ ಇನ್ನೊಂದು ವಾರದಲ್ಲೇ ಸಂಪೂರ್ಣ ವಿವರ ತಿಳಿಯುವುದರಿಂದ ವಿಶೇಷ ಬರೆಯಬೇಕಾಗಿಲ್ಲ. ಈ ನಡುವೆ, ಜಿಲ್ಲೆಯ ದಕ್ಷಿಣ ಭಾಗದವರೂ ಉತ್ತರದವರಂತೆಯೇ ಕಾಂಗ್ರೆಸ್ ಹುರಿಯಾಳುಗಳನ್ನು ಬೆಂಬಲಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಅಲ್ಲಲ್ಲಿಯ ಸುದ್ದಿಸಾರ

ಕೆಲಂಡರ್ ಸ್ವೀಕಾರ - ಹಳೆಯಂಗಡಿ ಮೆಸರ್ಸ್ ಎಚ್. ವೆಂಕಟರಾಯ ಶೆಣೈಯವರ 'ಶೆಣೈಯವರ ಮಂಗಳೂರು ನಸ್ಯ', ಶ್ರೀ ಎಂ. ಆರ್. ಕಾನಾರ್ಡ್‌ರವರ ಬಮಾಶಲ್, ಉಡುಪಿಯ ಎಸ್. ಆರ್. ಬೀಡಿ ವರ್ಕ್ಸ್ ಕಾರ್ಕಳದ ಸೊವರಿನ್ ಸ್ಟಫ್, ಮಂಗಳೂರಿನ ಶ್ರೀನಿವಾಸ ಬ್ರದರ್ಸ್‌ರ ಜೆ. ಬಿ. ಎ. ಪ್ರಿಂಟಿಗ್ ಇನ್ಸ್, ಮದ್ರಾಸಿನ ನೆಲ್ಸನ್ ಎಂಡ್ ಕಂಪೆನಿ ಉಡುಪಿಯ ಮಹಾ ರಾಷ್ಟ್ರ ಎಜೆಕ್ಸ್ ಕೊರ್ಪರೇಶನ್, ಬೊಂಬಾಯಿಯ ನ್ಯೂ ಕರ್ನಾಟಕ ಒಪ್ಟಿಕಲ್ ಕೋದ ಕೆ. ಎನ್. ಶೆಟ್ಟಿ, ಉಡುಪಿಯ ಈಸ್ಟರ್ನ್ ಇಲೆಕ್ಟ್ರಿಕಲ್ಸ್ ಇವರ ಕೆಲಂಡರುಗಳನ್ನು ಆದರಪೂರ್ವಕ ಸ್ವೀಕರಿಸಿದ್ದೇವೆ

ಕಾಂಗ್ರೆಸ್ಸಿಗೆ ಹರಿಜನರ ಬೆಂಬಲದ ಸಭೆ— ತಾ. 14—2—62ರಲ್ಲು ಶ್ರೀ ಕೆ. ಕೆ ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿ ಕುಂಜಿಬೆಟ್ಟು ಬಸವಪುರ ಹರಿಜನ ಕೊಲೊನಿಯಲ್ಲಿ ಸಭೆ ಜರಗಿ, ಹರಿಜನ ಏಳಿಗೆ ಕಾಂಗ್ರೆಸ್ಸಿನಿಂದಲೇ ಆಗಬೇಕಾಗಿರುವುದರಿಂದ ಕಾಂಗ್ರೆಸ್ಸಿಗೆ ಓಟು ಕೊಡಬೇಕೆಂದು — ಅಧ್ಯಕ್ಷರು ಕೇಳಿಕೊಂಡದ್ದಲ್ಲದೆ — ಸ್ವರ್ಗವನ್ನು ಇಳಿಸುತ್ತೇನೆಂದು ಯಾರು ಹೇಳಿದರೂ ಕಿವಿಕೊಡದೆ ಆಳುವ ಪಕ್ಷವಾದ ಕಾಂಗ್ರೆಸ್ಸಿಗೆ ಸೇರಿ ಕಾಂಗ್ರೆಸ್ಸಿಗೆನೆ ಮುಖ್ಯವಾಗಿ ಉಡುಪಿಯಲ್ಲಿ ಶ್ರೀ ಮಧ್ವರಾಜರಿಗೆ, ಬ್ರಹ್ಮಾವರದಲ್ಲಿ ಶ್ರೀ ಧರ್ಮಸಾಮ್ರಾಜ್ಯರಿಗೆ—ಶ್ರೀ ಜಗಜ್ಯೋತಿ ಬಸವೇಶ್ವರ ಸ್ವಾಮಿಯ ಆಜ್ಞಾಧಾರಕರಾದ ಉಡುಪಿ ಕುಂದಾಪುರ ಹರಿಜನರೆಲ್ಲರೂ ತಮ್ಮ ಅಮೂಲ್ಯ ಓಟನ್ನಿತ್ತು ಸಹಕರಿಸಬೇಕೆಂದೂ ಸದ್ರಿ ಕುಂಜಿಬೆಟ್ಟು ಕೊಲೊನಿಯಲ್ಲಿ —ದಿ॥ ರಂಗರಾಯರು ಕಾದಿಟ್ಟ ಸ್ಥಳದಲ್ಲಿ ಕಮ್ಯುನಿಟಿ ಹೋಲ್ ಮತ್ತು ದೈವದ ಮನೆ ಕಟ್ಟುವ ನಿರ್ಮಾಣಕ್ಕಾಗಿ ಸರ್ವ ಸಹಕಾರ ನೀಡಲಿಕ್ಕೆ ಕಾಂಗ್ರೆಸ್ ತಪ್ಪಲಿಕ್ಕಿಲ್ಲವೆಂದೂ ಕೇಳಿದ ಶ್ರೀಯು ಗೋಪಾಲಕೃಷ್ಣನವರ ಸೂಚನೆಯನ್ನು ಸರ್ವಾನುಮತದಿಂದ ಸ್ವೀಕರಿಸಿ— ಕಾಂಗ್ರೆಸ್ ಜೆಂಬರಾಗಿ ಧನ್ಯವಾದದೊಡನೆ ಸಭಾಂತ್ಯವಾಯಿತು.

ಶಿವರಾತ್ರಿ ಉತ್ಸವ—ಮಂಗಳೂರಿನ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಕಾಲಾವಧಿ ಜರಗುವ ಮಹಾಶಿವರಾತ್ರಿ ಉತ್ಸವವು ಇದೇ ತಿಂಗಳ ತಾ. 27ರಿಂದ ಪ್ರಾರಂಭವಾಗಿ ತಾ. 6-3-62ರ ವರೆಗೆ ವಿವಿಧ ಕಾರ್ಯಕ್ರಮಗಳಿಂದ ಜರಗುವುದು—ಫೆಬ್ರವರಿ ತಾ. 27ಕ್ಕೆ ಧ್ವಜಾರೋಹಣ— ಮಾರ್ಚ್ ತಾ. 4ಕ್ಕೆ ಜಾಗರಣೆ 5ಕ್ಕೆ ಸಮಾರಾಧನೆ ಮತ್ತು ಓಕುಳಿ.

ಮದ್ರಾಸಿನಲ್ಲಿ ಮಧ್ವನವಮಿ ಮಹೋತ್ಸವ— ಮದ್ರಾಸು ಮಾಧ್ವಸಂಘದವರು, ಪ್ರತಿ ವರ್ಷ ನಡೆಸಿ ಬರುವ "ಮಧ್ವನವಮಿ ಮಹೋತ್ಸವ"ವನ್ನು ಇದೇ ತಾ. 13, 14 ರಂದು, ದಾಸಪ್ರಕಾಶದ ಮಾಲೀಕರಾದ ಶ್ರೀ ಕೆ. ಸೀತಾರಾಮ ರಾಯರ ವಸತಿಗೃಹವಾದ "ದಾಸಪ್ರಸಾದ"ದಲ್ಲಿ ಅತಿ ವಿಜೃಂಭಣೆಯಿಂದ ಆಚರಿಸಿದರು.

ಉತ್ಸವದ ಕಾರ್ಯಕ್ರಮದ ಅಂಗವಾಗಿ ತಾ 13ರಂದು ಬೆಳಿಗ್ಗೆ ಮಧ್ವವಿಜಯ ಪಾರಾಯಣವಾದ ಮೇಲೆ, ಮಹಾ ಪೂಜೆ ಮತ್ತು ಬ್ರಾಹ್ಮಣ ಸಂತರ್ಪಣೆ ಜರಗಿತು. ಸಾಯಂಕಾಲ ನಡೆದ ವಿದ್ವತ್ಸಭೆಯಲ್ಲಿ ಮಧ್ವಾಚಾರ್ಯರ ಶಾಸ್ತ್ರದ ವಿಷಯವಾಗಿ ಶ್ರೀ ವಿದ್ಯಾಭೂಷಣ ಡಾ. ಬಿ. ಎನ್. ಕೆ. ಶರ್ಮರವರು ಅತಿ ಸರಳವಾಗಿ ಎಲ್ಲ ಸಭಿಕರಿಗೂ ಅರ್ಥವಾಗುವಂತೆ ಭಾಷಣ ಮಾಡಿದರು. ಉಡುಪಿ ಅದಮಾರು ಮಠದ ಆಸ್ಥಾನ ವಿದ್ವಾಂಸರಾದ ಶ್ರೀ ಕುಂಜಿಬೆಟ್ಟು ಶ್ರೀನಿವಾಸ ಉಪಾಧ್ಯಾಯರವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು.

ರಾತ್ರಿಯಲ್ಲಿ ಶ್ರೀ ಮಧ್ವಾಚಾರ್ಯರ ಭಾವಚಿತ್ರವನ್ನು ಶ್ರೀ ಸೀತಾರಾಮ ರಾಯರು, ಅವರ ಮಕ್ಕಳು ಮತ್ತು ಇತರ ಭಕ್ತವೃಂದದ ಭಜನೆಯೊಂದಿಗೆ ಗಂಗಾಧರೇಶ್ವರ ದೇವಸ್ಥಾನದ ಸುತ್ತುವರಿದು ಬೀದಿಗಳಲ್ಲಿ ಉತ್ಸವದೊಂದಿಗೆ ಕೊಂಡುಹೋಗಲಾಯಿತು. ರಾತ್ರಿ ಪೂ

ಜಗತ್ಪರ್ಯಟನ

ಜಗತ್ತು ನೋಡುತ್ತಿದೆ

ಫೂಲಪುರ ಮತದಾರ ಕ್ಷೇತ್ರದಲ್ಲಿ ತಮ್ಮ ಪ್ರತಿಸ್ಪರ್ಧಿಗಳನ್ನೂ ಸೋಲಿಸಿ ಪಂಡಿತ ನೆಹರು ಲೋಕ ಸಭೆಗೆ ಆರಿಸಿ ಬಂದುದು ಹಾಲಿನಷ್ಟು ತಿಳಿಯಾಗಿರುವಂತೆ ಮುಂದಿನ ಐದು ವರ್ಷಗಳ ವರೆಗೆ ಅವರೇ ತಮ್ಮ ಪಕ್ಷದ ನಾಯಕತ್ವವನ್ನು ವಹಿಸಿ ಸರಕಾರ ಸ್ಥಾಪಿಸುವುದೂ ಖಂಡಿತವಿದೆ. ಆದರೆ, ಅವರು ನೇಮಿಸಬಹುದಾದ ಮಂತ್ರಿಗಳಲ್ಲಿ ಮಾತ್ರ ಒಂದೆರಡು ಗಣನೀಯವಾದ ಬದಲಾವಣೆಯಾಗುವುದು ಮಾತ್ರ ಸಾಧ್ಯವಿದೆ. ಭಾರತದಲ್ಲಿ ಕಾಂಗ್ರೆಸ್ಸು ಸರಕಾರವು ಮರು ಅಧಿಕಾರ ಸ್ವೀಕರಿಸುವುದು ನಿಶ್ಚಯವೆಂದು ಇಡಿಯ ಜಗತ್ತೇ ತಿಳಿದಿದೆ. ಹಾಗಿದ್ದರೂ ಅನಕ್ಷರಸ್ಥರ ಬೀಡಿನಲ್ಲಿ, ಜಗತ್ತಿನ ಅತ್ಯಧಿಕ ಮತದಾರರಿರುವ ಪ್ರಜಾಪ್ರಭುತ್ವ ಭಾರತದಲ್ಲಿ ಚುನಾವಣೆ ನಡೆಯುವ ಕುತೂಹಲವನ್ನು ಜಗತ್ತಿಗೆ ಜಗತ್ತೇ ಕಾಣಲು ಆತುರ ತೋರಿಸುತ್ತಿದೆ. ಭಾರತದ ಜನತೆಯು ಸೂಕ್ತವಾಗಿ ತಮ್ಮ ಕರ್ತವ್ಯ ಪಾಲಿಸಿಕೊಡುವುದೂ ಕುತೂಹಲಕಾರಕವಿದೆ.

ಮುಂದಿನ ರಾಷ್ಟ್ರಪತಿ ಯಾರು?

ಸಾರ್ವತ್ರಿಕ ಚುನಾವಣೆಗಳು ಮುಗಿಯುತ್ತ ಬಂದಂತೆ ಮುಂದಿನ ರಾಷ್ಟ್ರಪತಿ ಉಪರಾಷ್ಟ್ರಪತಿಗಳ ಆಯ್ಕೆಯ ಕಡೆ ಭಾರತೀಯರ ಗಮನ ಹರಿಯುವುದು ಸ್ವಾಭಾವಿಕವಿದೆ ಪ್ರಚಲಿತ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ರಾಜಕೀಯದಿಂದ ದೂರ ಉಳಿಯುವ ದೃಢ ನಿರ್ಧಾರ ಮಾಡಿರುವುದರಿಂದ ಅವರ ಸ್ಥಾನಕ್ಕೆ ಈಗಿನ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್ ಬರುವುದು ಸಂಭವನೀಯ. ಪೌರ್ವಾತ್ಯ-ಪಾಶ್ಚಾತ್ಯ ಸಂಸ್ಕೃತಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ ಮಹಾ ದಾರ್ಶನಿಕರೆನಿಸಿದ ಇವರು ರಾಜಕಾರಣದಲ್ಲೂ ಪಳಗಿದವರು. ಪೂರ್ವ ಪಶ್ಚಿಮಗಳ ನಡುವೆ ಸೌಹಾರ್ದದ ಸೇತು ಕಟ್ಟಲು ಆಶಿಸುತ್ತಿರುವ ಭಾರತದಂತಹ ದೊಡ್ಡ ಪ್ರಜಾಸತ್ತೆಗೆ ಇವರಂತಹ ರಾಷ್ಟ್ರಪತಿಯನ್ನು ಆಯ್ದುಕೊಳ್ಳುವುದು ನ್ಯಾಯೋಚಿತವೇ. ದಾಕ್ಷಿಣಾತ್ಯರೆಂಬ ಕಳಂಕ ಇವರನ್ನು ಆ ಸ್ಥಾನಕ್ಕೆ ಅನರ್ಹರನ್ನಾಗಿ ಮಾಡಬಾರದು

ಕಡಿದಾಳರು ಅಗ್ನಿಕುಂಡದಲ್ಲಿ

ದೊಡ್ಡ ಆಸ್ತಿವಂತರಿರುವ ಕರ್ನಾಟಕದ ಕಂದಾಯ ಮಂತ್ರಿ ಕಡಿದಾಳ ಮಂಜಪ್ಪನವರು ಕಳೆದ ಬಾರಿ ಅವಿರೋಧವಾಗಿ ವಿಧಾನ ಸಭೆಗೆ ಆಯ್ಕೆಗೊಂಡಿದ್ದರೂ ಈ ಬಾರಿ ಪ್ರಬಲ ವಿರೋಧವನ್ನೇ ಎದುರಿಸಬೇಕಾಗಿ ಬಂದಿದೆ. ಭೂಸುಧಾರಣೆಯಂತಹ ಕ್ರಾಂತಿಕಾರಿ ವಿಧೇಯಕವನ್ನು ಪಟ್ಟು ಹಿಡಿದು ಜ್ಯಾರಿಗೆ ತರುವಲ್ಲಿ ಹೆಣಗಾಡಿ ತೋರಿಸಿದ ತನ್ನ ಮಂತ್ರಿಪದದ ಕರ್ತವ್ಯ ಪರಾಯಣತೆಯೇ ಅವರಿಗೀಗ ಮೃತ್ಯುವಾಗುವುದೋ ಎಂಬ ಭಯವಿದೆ ದೊಡ್ಡ ದೊಡ್ಡ ಭೂಮಾಲಿಕರಿರುವ ಶೃಂಗೇರಿ ಕ್ಷೇತ್ರದಲ್ಲಿ ಕಡಿದಾಳರು ಗೆದ್ದು ಬಂದರೆಂದರೆ, ಅದು ಭೂಸ ಧಾರಣಾ ವಿಧೇಯಕವು ದೇಶ ಹಿತಸಾಧಕವೆಂಬುದನ್ನು ಅವಶ್ಯ ಸಾರಿ ಹೇಳತ್ತದೆ. ಒಕ್ಕಲಿಗರಾದ ಹಳ್ಳಿಗರ ಮತಗಳು ತನ್ನ ಕಡೆಗವೆಯೆಂದು ನಂಬಿದ ಇವರ ವಿಶ್ವಾಸವನ್ನು ಒಕ್ಕಲು ಮತದಾರರು ಕಾಪಾಡುವರೋ ಇಲ್ಲವೋ ಎಂಬುದನ್ನು ಕಾಣ ಬೇಕಾಗಿದೆ.

ಜತ್ತಿ—ನಿಜಲಿಂಗಪ್ಪ

ಮುಖ್ಯ ಮಂತ್ರಿ ಜತ್ತಿಯವರೂ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರೂ ಗೆದ್ದು ವಿಧಾನ ಸಭೆಗೆ ಬರುವುದು ಸುನಿಶ್ಚಿತವಿರುವಂತೆಯೇ ಭಾವಿ ಮುಖ್ಯ ಮಂತ್ರಿ ಪದವಿಗೆ ಬಿರುಸಿನ ಹೋರಾಟ ನಡೆಯುವುದೂ ಖಂಡಿತವಿದೆ. ಕೇಂದ್ರ ಚುನಾವಣಾ ಸಮಿತಿಯು ಇವರಿಬ್ಬರಲ್ಲಿ ಯಾರಾದರೊಬ್ಬರನ್ನು ಕೇಂದ್ರಕ್ಕೆ ಎಳೆದುಕೊಂಡಿದ್ದರೆ, ಈ ಕಾಳಗ ತಪ್ಪುತಿತ್ತು, ನ್ಯಾಯ. ಕರ್ನಾಟಕದಲ್ಲಿ, ವಿರೋಧಿ ಪಕ್ಷಗಳು ತೀರ ನಿರ್ಬಲವಿರುವ ಕಾರಣದಿಂದ ನಾಯಕದ್ವಯರ ಹೋರಾಟವು ಅವಶ್ಯವೆಂಬುದೇ ದಿಲ್ಲಿಯ ನಾಯಕರ ಅಭಿಪ್ರಾಯವಿದ್ದರೂ ಇರಬಹುದು ಆದರೆ ಪಕ್ಷದ ಬಲಸಂವರ್ಧನೆ ಮತ್ತು ಸೌಹಾರ್ದ ಮನೋಭಾವಗಳಿಗಾಗಿ ಇಂತಹ ಕಾಳಗ ಮರೆಸೆಯುವ ನೆಂಬ್ಬನಿಗೆ ಅವಕಾಶ ತೆರೆದುಕೊಡುವ ಸಾಧ್ಯತೆಯೂ ಇದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ.

ಅಯೂಬರಿಗೆ ವಿರೋಧ

ಫೀಲ್ಡ್ ಮಾರ್ಶಲ್ ಅಯೂಬಖಾನರು ತಮ್ಮ ಏಕಚಕ್ರಾಧಿಪತ್ಯವನ್ನು ಬಿಗಿಗೊಳಿಸುತ್ತ ಒಂದಾದನಂತರ ಒಂದು ವರ್ಷವನ್ನು ದೂಡುತ್ತಿದ್ದಾರೆ; ತನ್ನ ಅಧಿಕಾರವನ್ನು ಸ್ಥಿರವಾಗಿ ಉಳಿಸಲು ಪ್ರಯತ್ನ ಮಾಡ ಹೊರಟಿದ್ದಾರೆ ಆದರೆ ಅವರ ಸರ್ವಾಧಿಕಾರವನ್ನು ಪಾಕಿಸ್ತಾನೀ ಜನತೆ ಬಯಸುತ್ತಿಲ್ಲವೆಂಬುದಕ್ಕೆ ಪೂರ್ವಪಾಕಿಸ್ತಾನದ ಗೊಂದಲವೇ ನಿದರ್ಶನ ತನ್ನೊಡನೆಯೇ ಸ್ವತಂತ್ರವಾದ ಭಾರತವು ತನ್ನನ್ನು ಪ್ರಜಾಪ್ರಭುತ್ವ ರಾಷ್ಟ್ರವೆಂದು ಘೋಷಿಸಿ ಮೂರು ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿದರೂ ಅದು ಮಾತ್ರ ಮತ್ತೂ ಮತ್ತೂ ಪತನದ ದಾರಿಯನ್ನೇ ಮೆಟ್ಟುತ್ತಿದೆ. ಈಗ ಲಂಡನ್ ನಗರದಲ್ಲಿ ಮೊತ್ತ ಮೊದಲಿಗೆ ಪಾಕ್ ವಿದ್ಯಾರ್ಥಿಗಳು ಅಯೂಬಖಾನರ ವಿರುದ್ಧ ಮತಪ್ರದರ್ಶನ ಮಾಡತೊಡಗಿದುದರಿಂದ ಪರಿಸ್ಥಿತಿ ಮತ್ತಷ್ಟು ಕಠಿಣವಾಗತೊಡಗಿದೆ. ಇದನ್ನೂ ಮುಂದಿನ ಗಂಡಾಂತರಗಳನ್ನು ಎದುರಿಸುವ ಧೀರತೆ ಅವರಲ್ಲಿದೆಯೇ ಎಂಬುದು ಸಮಸ್ಯಾತ್ಮಕವಾಗಿದೆ.

ಭಾರತ ದರ್ಶನ



ವ್ಯವಸಾಯೋತ್ಪನ್ನಗಳ ಹೆಚ್ಚಳವನ್ನು ಸಾಧಿಸಲು ನೀರಾವರಿಯೋಜನೆಗಳೂ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸಲು ವಿದ್ಯುದ್ಯೋಜನೆಗಳೂ ಅತ್ಯವಶ್ಯ ಭಾಕ್ರಾ ಅಣೆಕಟ್ಟು ಈ ಎರಡೂ ಉದ್ದೇಶಗಳನ್ನು ಪೂರೈಸುವ ಗುರಿಯನ್ನಿಟ್ಟುಕೊಂಡಿದೆ. ಕಳೆದ ದಶಂಬರ 10 ರಲ್ಲು ಪ್ರಧಾನಿ ನೆಹರೂರವರು ಈ ಅಣೆಕಟ್ಟಿನ ಎಡದಂಡೆಯ ವಿದ್ಯುದಾಗಾರವನ್ನು ಉದ್ಘಾಟಿಸಿದರು. ನವದೆಹಲಿಯಂತಹ ಐದು ನಗರಗಳಿಗೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದೆ ಮೇಲಿನ ಚಿತ್ರದಲ್ಲಿ ಪ್ರಧಾನಿಯವರು ಭಾಕ್ರಾದ ಐದನೆಯ ವಿದ್ಯುಜ್ಜನಕವನ್ನು ಕಾರ್ಯಾಚರಣೆಗೆ ತೊಡಗಿಸಲು ಗುಂಡಿಯೊತ್ತುತ್ತಿರುವುದನ್ನು ಕಾಣಬಹುದು.

ಮತ್ತು ಪ್ರಸಾದ ವಿನಿಯೋಗನೊಂದಿಗೆ ಮೊದಲನೆಯ ದಿವಸದ ಕಾರ್ಯಕ್ರಮವು ಮುಕ್ತಾಯವಾಯ್ತು.

ಎರಡನೆಯ ದಿವಸ ತಾ 14ರಂದು ಶ್ರೀ ಎನ್. ಕೆ ಶರ್ಮಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ವೇದಾಂತ ಶಿರೋಮಣಿ ಕೊಂಜಿಬೆಟ್ಟು ಶ್ರೀನಿವಾಸ ಉಪಾಧ್ಯಾಯರು "ವಿಷ್ಣು ಸರ್ವೋತ್ತಮತ್ವ"ದ ವಿಶದವಾಗಿ ಭಾಷಣ ಮಾಡಿದರು ಈ ಭವ್ಯ ಸಭೆಯನ್ನು ದೇಶದ ಅನೇಕ ಭಾಗಗಳಿಂದ ಬಂದು ಅಲಂಕರಿಸಿದ ಪಂಡಿತೋತ್ತಮರಿಗ ಮಹಾಸಂಘದ ಕಡೆಯಿಂದ ವಿದ್ವತ್ಸಂಭಾವನೆಯಾಯಿತು.

ಭಜನೆ ಮತ್ತು ರಾತ್ರಿ ಪೂಜೆಯ ನಂತರ ಪ್ರಸಾದ ವಿನಿಯೋಗದಿಂದ ತಾ. 4ರಂದು ಪುರಂದರ ದಾಸರ ಉತ್ಸವದೊಂದಿಗೆ ಪ್ರಾರಂಭಿಸಿದ ಹತ್ತು ದಿವಸಗಳ ಉತ್ಸವವು ನಿರ್ವಿಘ್ನದಿಂದ ಕೊನೆಗೊಂಡಿತು.

16ನೇ ತಾರೀಕು ಶುಕ್ರವಾರ ಸುಮಾರು ಮೂರು ನಾಲ್ಕು ಸಾವಿರ ಬಡಬಗ್ಗರಿಗೆ ದಾಸಕ್ರಾಶದಲ್ಲಿ ಅನ್ನದಾನ ಮಾಡಲಾಯಿತು

ಆದಿ ಉಡುಪಿ—ಸ್ಥಳೀಯ ಡಾ ಎ. ಕೆ. ಶೆಟ್ಟಿ ಪ್ರಭಾಕರ ಸ್ಪೋರ್ಟ್ ಟ್ರೂಪ್‌ನ ಶಿಬಿರಾಗ್ನಿ ಸಮಾರಂಭವು ೨ ಲಾ ವಾರದಲ್ಲಿ ಇದೇ ತಾ. 14ರಂದು ಮಣಿಪಾಲ ಇಂಜನಿಯರಿಂಗ್ ಕಾಲೇಜಿನ ಲೆಕ್ಚರರ್ ಶ್ರೀ ಎ ನಾರಾಯಣ ಆಚಾರ್ ಇವರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿಗಳೊಂದಿಗೆ ವಿಜೃಂಭಣೆಯಿಂದ ಜರಗಿತು.

ಚಂದಾದಾರರಲ್ಲಿ ವಿನಂತಿ.

'ನವಯುಗ'ದ ಚಂದಾ ಹಣ ಬಾಕಿ ಇರುವ ಚಂದಾದಾರರಿಗೆಲ್ಲಾ ಬಾಕಿಯನ್ನು ಕಳುಹಿಸಿಕೊಡುವಂತೆ ಈ ಮೊದಲೇ ಬರೆದಿರುತ್ತೇವೆ ಇನ್ನೂ ಬಾಕಿಯನ್ನು ಕಳುಹಿಸಿಕೊಡದವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಡುವಂತೆ ಈ ಮೂಲಕ ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ. ವಿ ಪಿ ಮಾಡಿದರೆ 75 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಚಂದಾ ಹಣವನ್ನು ಮನಿಯಾರ್ಡರ್ ಮಾಡಿ ಆಗಲಿ, ಸಿಂಡಿಕೇಟ್ ಬ್ಯಾಂಕ್ ಮೂಲಕವಾಗಲೀ ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಬಿನ್ನವಿಸುತ್ತೇವೆ. ಅಂತೂ ಈ ತಿಂಗಳಾಂತ್ಯದೊಳಗೆ ಚಂದಾ ಬಾರದಿದ್ದರೆ ಕ್ರಮಶಃ ನಾವು ಕಳುಹಿಸುವ ವಿ. ಪಿ. ಯನ್ನಾದರೂ ಸ್ವೀಕರಿಸಬೇಕಾಗಿ ಮುಂದಾಗಿ ಕೇಳಿಕೊಳ್ಳುತ್ತೇವೆ

—ಮೆನೇಜರ್.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನೆರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ
ಉಡುಪಿ.

ಕ್ಯಾನ್ಸರ್ ನಿವಾರಣೆ

ಇತ್ತೀಚೆಗೆ ಹ್ಯಾಂಬರ್ಗ್‌ನಲ್ಲಿ ದಕ್ಷಿಣೋತ್ತರ ಜರ್ಮನ್ ವೈದ್ಯರ ಎಂಬತ್ತೆಂಟನೆಯ ಸಮ್ಮೇಳನವು ನಡೆಯಿತು. ಇಂಗ್ಲೆಂಡ್ ಹಾಗೂ ಜಪಾನಿನ ಕೆಲವಾರು ತಜ್ಞರು ಇದರಲ್ಲಿ ಭಾಗವಹಿಸಿದ್ದರು. ಹೊಸ ಔಷಧಗಳನ್ನು ಕಂಡುಹಿಡಿಯುವುದರ ಮೂಲಕ ಮತ್ತು ವ್ಯಾಧಿಯು ಆರಂಭ ಕಾಲದಲ್ಲಿಯೇ ಅದನ್ನು ಕಂಡು ಹಿಡಿಯುವುದರ ಮೂಲಕ ಅನೇಕ ವ್ಯಾಧಿಗಸ್ಥರು ರೋಗವಿಮುಕ್ತರಾಗಿದ್ದಾರೆಂದೂ, ಅವರ ಒರೆದಲ್ಲಿ ಕಂಡುಬಂದಿದ್ದ ಕ್ಯಾನ್ಸರ್ ಗುಣಪಡಿಸಲ್ಪಟ್ಟಿದೆಯೆಂದೂ ಜರ್ಮನ್ ತಜ್ಞ ಫ್ರಿನ್ಸ್ ತಿಳಿಸುತ್ತಾರೆ. ಹದಿನೈದು ವರ್ಷಗಳ ಹಿಂದೆ ಶಸ್ತ್ರ ಚಿಕಿತ್ಸೆ ಮಾಡಲ್ಪಟ್ಟ ಐವತ್ತಾರು ರೋಗಿಗಳಲ್ಲಿ ಅರ್ಧದಷ್ಟು ಮಂದಿ ಸಂಪೂರ್ಣ ಗುಣಹೊಂದಿ ಈಗಲೂ ಸೌಖ್ಯದಿಂದಿದ್ದಾರೆ. ಸತ್ತವರು ಸಹ ಕ್ಯಾನ್ಸರ್ ದೆಸೆಯಿಂದಾಗಿ ಸಾಯಲಿಲ್ಲವೆಂದೂ ಹೇಳಲಾಗಿದೆ. ಕ್ಯಾನ್ಸರನ್ನು ಆರಂಭ ಕಾಲದಲ್ಲಿಯೇ ಕಂಡುಹಿಡಿಯಲು 'ಬಯಾಪ್ಸಿ' ಎಂಬ ಮಾರ್ಗವನ್ನನುಸರಿಸಲಾಗಿದೆ. ಸೂಕ್ಷ್ಮದರ್ಶಕ ಯಂತ್ರದ ಮೂಲಕ ಗ್ರಂಥಿಗಳನ್ನು ಪರೀಕ್ಷಿಸಿ ವ್ಯಾಧಿಯ ಇರುವಿಕೆಯನ್ನು ಅರಿತುಕೊಳ್ಳುವುದೇ ಈ ವಿಧಾನ.

ಹ್ಯಾಂಬರ್ಗಿನ ಡಾ॥ ಹಾರ್ಸ್ಟ್ ಎಂಬವರು ವ್ಯಾಧಿಯನ್ನು ಕಂಡುಹಿಡಿಯುವುದಕ್ಕೂ, ಅದೇ ಸಮಯದಲ್ಲಿ ಅದನ್ನು ನಿವಾರಿಸುವುದಕ್ಕೂ ಹೊಸ ಹಾದಿ ಕಂಡುಹಿಡಿದಿದ್ದಾರೆ. 'ರೇಡಿಯೋ, ಐಯೋಡಿನ್ ಗಿಣಿ, ಎಂಬ ವಸ್ತುವನ್ನು ತಣ್ಣೀರಿನಲ್ಲಿ ಕರಗಿಸಿ ವ್ಯಾಧಿಗ್ರಸ್ತನಿಗೆ ಕುಡಿಸುವುದೇ ಈ ವಿಧಾನ. ಅವರು ಈ ವಿಧಾನವನ್ನು ಅಣುಶಕ್ತಿಪಾನವೆಂದು ಹೆಸರಿಸಿದ್ದಾರೆ.

ಈ ಔಷಧಿಯು ಶೀಘ್ರದಲ್ಲಿಯೇ ತನ್ನ ಕ್ರಿಯೆಯನ್ನು ಆರಂಭಿಸಿ 'ಥೈರಾಡ್', ಗ್ರಂಥಿಯಲ್ಲಿ ಸೇರಿರ ಬಹುದಾದ ಕ್ಯಾನ್ಸರ್ ಕ್ರಿಮಿಗಳನ್ನೆಲ್ಲಾ ಒಂದಾಗಿ ಸೇರಿಸಿ, ಅಲ್ಲಿಂದವು ಕದಲದಂತೆ ನಿರ್ಬಂಧನ ಮಾಡುವುದು. ಕ್ರಿಮಿಗಳೆಲ್ಲಾ ಸೇರಿರುವ ಭಾಗವನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆದು ಬಿಡಬಹುದು. ಅಧಿಕ ಅಣುಶಕ್ತಿಪಾನದಿಂದ ಥೈರೈಡ್ ಗ್ರಂಥಿಯಲ್ಲಿನ ಕ್ರಿಮಿಗಳೆಲ್ಲವನ್ನೂ ನಾಶಗೊಳಿಸ ಬಹುದು. ಆದರೆ ಇದರಿಂದುಂಟಾಗಬಹುದಾದ ಒಂದು ಅಪಾಯವೆಂದರೆ, ಅಣುಕ್ರಿಯೆಯಿಂದ ಕೇವಲ ವ್ಯಾಧಿಗ್ರಸ್ಥ ನಾಳಗಳು ಮಾತ್ರವಲ್ಲದೆ, ಸುಸ್ಥಿತಿಯಲ್ಲಿರುವ ನಾಳಗಳೂ ದುರ್ಬಲವಾಗಬಹುದು. ಆದ್ದರಿಂದಲೇ, ಈ ಚಿಕಿತ್ಸೆಯಲ್ಲಿ ತೆಗೆದುಕೊಂಡ ಪ್ರತಿ ನಾಲ್ವರಲ್ಲಿ ಒಬ್ಬನು ಮಾತ್ರ ಗುಣಮುಖನಾಗಿದ್ದಾನೆ. ಆದರೆ ಈ ಹೊಸ ವಿಧಾನದಲ್ಲಿ ಒಳ್ಳೆಯದೊಂದು ಅನುಕೂಲವೂ ಇದೆಯೆಂಬುದನ್ನು ಮರೆಯಲಾಗದು. ಶ್ವಾಸಕೋಶ, ಎಲುಬುಗಳು ಮುಂತಾದುವುಗಳಲ್ಲಿ ವ್ಯಾಪಿಸಿರ ಬಹುದಾದ ಕ್ಯಾನ್ಸರ್ ಕ್ರಿಮಿಗಳು ರಕ್ತದಲ್ಲಿ ಸೇರಿರುವ ಅಯೋಡಿನ್ ಗಿಣಿಗನ್ನು ಎದುರಿಸಲಾರದೇ ಸತ್ತು ಹೋಗುವುವು. ಅಂತೂ ಕ್ಯಾನ್ಸರ್ ದೇಹದ ಯಾವ ಭಾಗದಲ್ಲಿದೆಯೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದೆಂಬ ವಿಷಯ ಮಾತ್ರ ನಿರ್ವಿವಾದವಾದದು.

ಥೈರಾಯ್ಡ್ ಗ್ರಂಥಿಗಳ ಅಧಿಕ ಕ್ರಿಯೆಯಿಂದುಂಟಾಗಬಹುದಾದ ಆಪತ್ತನ್ನು ಈ ಅಣುಶಕ್ತಿಪಾನವು ಹೋಗಲಾಡಿಸುವುದು. ಇಂತಹ ಕಾಯಿಲೆಯು ಹೆಚ್ಚಾಗಿ ಹೆಂಗಸರಲ್ಲಿಯೇ ಕಂಡು ಬರುವುದು. ಅಧಿಕ ಬೆಳವಣಿಗೆ ಹೊಂದಿರುವ ಥೈರ್ಯಾಡ್ ಗ್ರಂಥಿಯನ್ನೂ ಗುಣಪಡಿಸಲು ಮೊದಲು ಶಸ್ತ್ರಚಿಕಿತ್ಸೆಯನ್ನೆ ಮಾಡಬೇಕಾಗಿತ್ತು. ಆದರೆ ಈಗ ಈ ಹೊಸ ವಿಧಾನದಿಂದ ಸೇಕಡಾ ತೊಂಬತ್ತು ಮಂದಿ ಕಾಯಿಲೆಯವರನ್ನ ಶಸ್ತ್ರಚಿಕಿತ್ಸೆಯಿಲ್ಲದೆಯೇ ಗುಣಪಡಿಸಬಹುದು. ಈಗಾಗಲೇ ಪ್ರಪಂಚದ ನಾನಾ ಭಾಗಗಳಲ್ಲಿ ೨ 00,00 ರೋಗಿಗಳು ಈ ವಿಧದ ಚಿಕಿತ್ಸೆಯಿಂದ ಗುಣಪಡಿಸಲ್ಪಟ್ಟಿದ್ದಾರೆ.

ಕೆಲವು ವೇಳೆ ಈ ಅಣುಶಕ್ತಿಪಾನದಿಂದ ಅಧಿಕ ಬೆಳೆದ ಥೈರ್ಯಾಡ್ ಗ್ರಂಥಿಯು ಗುಣವಾಗದಿರುವ ಸಂದರ್ಭಗಳೂ ಇವೆ. ಈ ಗ್ರಂಥಿಯ ಬೆಳವಣಿಗೆಗೆ ಕಾರಣ ನಮ್ಮ ಆಹಾರದಲ್ಲಿ ಸಾಕಷ್ಟು ಅಯೋಡಿನ್ ಇಲ್ಲದಿರುವುದೇ ಎಂದು ಹಟ್ಕೋ ಎಂಬ ಹ್ಯಾಂಬರ್ಗ್ ತಜ್ಞರು ತಿಳಿಸಿದ್ದಾರೆ. ಆಹಾರದಲ್ಲಿ ಅಯೋಡಿನ್ ಲವಣವನ್ನು ಸೇರಿಸಿಕೊಳ್ಳುವುದರಿಂದ ಗುಣ ಕಾಣದಿರಲು, ಈಗ ಇನ್ನೂ ಅನೇಕ ಹೊಸ ಪ್ರಯೋಗಗಳು ನಡೆಸಲ್ಪಡುತ್ತಿವೆ. ಫಲಪ್ರದವಾದ ವಿಷಯಗಳು ಇಷ್ಟರಲ್ಲೇ ಹೊರಬೀಳಬಹುದೆಂಬ ನಂಬಿಕೆಯಿದೆ

ರವೀಂದ್ರವಾಣಿ

ಜೀವನ

ಯೌವನ ಕಾಲದಲ್ಲಿ ನನ್ನ ಜೀವನವು ಸುಂದರ ಹೂವಿನಂತಿತ್ತು. ನೋಡಲು ಹೊರ ಸಂಪತ್ತು ಮೆರೆದಿತ್ತು. ಆ ಹೃಷ್ಟಪುಷ್ಟ ತುಷ್ಟಿಯ ಕಾಲದಲ್ಲಿ ನನ್ನ ಒಂದೆರಡು ಎಸಳುಗಳನ್ನು ಕಳೆದುಕೊಂಡರೂ ನನ್ನ ಯೌವನದ ಆ ಘಂಟೆಯಲ್ಲಿ ನನ್ನ ಆ ಸಂಪತ್ತಿಗೆ ತುಟ್ಟಿ ಇರಲಿಲ್ಲ. ವಸಂತ ಕಾಲದ ಮಂದ ಮಾರುತನು ನನ್ನ ಬಾಗಿಲಿನಲ್ಲಿ ನಿಂತು ಬೇಡಿದಾಗ ನನ್ನ ಎಸಳುಗಳನ್ನು ಆತನಲ್ಲಿ ಚೆಲ್ಲಲು ನಾನು ಹಿಂಜರಿಯಲಿಲ್ಲ.

ಆದರೆ ಇಂದು ಯೌವನ ಮುಗಿದಿದೆ. ವಿಕಸಿತ ಅಂದಿನ ಯೌವನ ಪೂರಿತ ಕುಸುಮವು ತನ್ನ ಎಸಳುಗಳನ್ನೆಲ್ಲಾ ಕಳೆದುಕೊಂಡು ಹಣ್ಣಿನ ರೂಪು ತಾಳಿದೆ. ಇಂದು ವಸಂತ ಮಂದಮಾರುತನಲ್ಲಿ ಚೆಲ್ಲಲು ಯೌವನದ ಆ ಎಸಳುಗಳಿಲ್ಲ. ಆ ಚಿಕ್ಕಂದದಾಟದಲ್ಲಿ ವಿನಿಯೋಗಿಸಲು ನನಗೆ ಏನೂ ಇಲ್ಲ. ಇಂದು ನಾನು ಹಣ್ಣಾಗಿರುವೆನು. ನನ್ನ ಚರಮಗುರಿಯೆಂದರೆ ಒಳತುಂಬಿ ಬಂದಿರುವ ಆಂತರಿಕ ರಸ, ರಮ್ಯತೆಗಳ ಸಂಪತ್ತನ್ನು ಒಂದಿಷ್ಟು ಚೆಲ್ಲದೆ ಭಗವಂತನ ಚರಣಾರವಿಂದಗಳಲ್ಲಿ ಸರ್ವಸಮಗ್ರವಾಗಿ ಅರ್ಪಿಸುವನಾಗಿದೆ.

ಕಳೆದ ಮಹಾ ಚುನಾವಣೆಗಳ ಸಮಯದಲ್ಲಿ ಮತದಾನ ಪ್ರಾರಂಭವಾಗುವ ಮುನ್ನ ಮತದಾರರಿಗೆ ಚುನಾವಣಾ ಸಿಬ್ಬಂದಿ ಓಟಿಂಗ್ ಚೀಟಿಗಳನ್ನು ಕೊಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ರಾಜ್ಯದಲ್ಲಿ ಮತದಾನ ಪ್ರಾರಂಭ

ಸ್ವಾತಂತ್ರ್ಯ ಪ್ರಾಪ್ತಿಯಾದಾರಭ್ಯ ದೇಶದಲ್ಲಿ ಇದೀಗ ಮೂರನೆಯ ಬಾರಿ ಮಹಾ ಚುನಾವಣೆಗಳು ನಡೆಯುತ್ತಿವೆ. ಫೆಬ್ರುವರಿ 16ರಂದು ಪ್ರಾರಂಭವಾಗುವ ಈ ಚುನಾವಣೆಗಳು ಫೆಬ್ರುವರಿ ೨೦ರಂದು ಮುಕ್ತಾಯಗೊಳ್ಳುವುವು. 21 ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನ ಸುಮಾರು 21 ಕೋಟಿ ಮತದಾರರು ಲೋಕಸಭೆ ಮತ್ತು ವಿಧಾನಸಭೆಗಳಿಗೆ ತಮ್ಮ ತಮ್ಮ ಪ್ರತಿನಿಧಿಗಳನ್ನು ಆರಿಸುವರು.

ಲೋಕಸಭೆಯಲ್ಲಿ ಒಟ್ಟು 507 ಸ್ಥಾನಗಳಿಗೆ ಏಳು ಜನ ಸದಸ್ಯರನ್ನು ನಾಮಕರಣ ಮಾಡಲಾಗುವುದು. ಜಮ್ಮು ಮತ್ತು ಕಾಶ್ಮೀರ ವಿಧಾನ ಸಭೆಯು ಆರು ಜನ ಸದಸ್ಯರನ್ನು ಆರಿಸುವುದು. ಹೀಗೆ ಆಯ್ಕೆಯಾದ ಸದಸ್ಯರನ್ನು ರಾಷ್ಟ್ರಪತಿಗಳು ಲೋಕಸಭೆಗೆ ನಾಮಕರಣ ಮಾಡುವರು. ಹಿಮಾಚ್ಛಾದಿತ ಐದು ಪಾರ್ಲಿಮೆಂಟರಿ ಚುನಾವಣಾ ಕ್ಷೇತ್ರಗಳಲ್ಲಿ— ಹಿಮಾಚಲ ಪ್ರದೇಶದಲ್ಲಿ ನಾಲ್ಕು ಮತ್ತು ಕಾಂಗ್ರಾದಲ್ಲಿ ಒಂದು-ಚುನಾವಣೆಗಳು ಏಪ್ರಿಲ್ ತಿಂಗಳಲ್ಲಿ ನಡೆಯುವುವು.

ಜಮ್ಮು ಮತ್ತು ಕಾಶ್ಮೀರವೂ ಸೇರಿ ಎಲ್ಲಾ ರಾಜ್ಯಗಳ ವಿಧಾನ ಸಭೆಗಳಲ್ಲಿ 3,175 ಸ್ಥಾನ ಇವೆ, ಚುನಾವಣೆಗಳು 2,833 ಸ್ಥಾನಗಳಿಗಾಗಿ ನಡೆಯಬೇಕಾಗಿವೆ, ಕೇರಳ (1-6 ಸ್ಥಾನಗಳು) ಮತ್ತು ಒರಿಸ್ಸಾ (140 ಸ್ಥಾನಗಳಲ್ಲಿ) ಈಗಾಗಲೇ ಮಧ್ಯಕಾಲೀನ ಚುನಾವಣೆಗಳು ನಡೆದಿವೆ.

ಈ ಬಾರಿ ಮಹಾ ಚುನಾವಣೆಗಳಲ್ಲಿ ಗಳಲ್ಲಿ ಸುಮಾರು 10 ಕೋಟಿ ಜನ ಮಹಿಳಾ ಮತದಾರರು ಮತ ನೀಡುವರು. ಆದ್ದೇ ಕಳೆದ ಮಹಾ ಚುನಾವಣೆಗಳಲ್ಲಿ 92,141,59 ಜನ ಮಹಿಳಾ ಮತದಾರರಿದ್ದರು.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ ೬೦ ನ ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ ೯೦ ನ. ಪೈಸೆ
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಟಿ. ಟಿ. ಕೆ. ಅರ್ಥಮಂತ್ರಿಯೆ?

ಸಾರ್ವತ್ರಿಕ ಚುನಾವಣೆಯಲ್ಲಿ ಸರ್ವ ಪ್ರಥಮ ವಿಜಯ ಗಳಿಸಿದ ಸತ್ತಾರೂಢ ಕಾಂಗ್ರೆಸ್ ಪಕ್ಷದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರ ಹೆಸರು ಎಂದೆಂದಿಗೂ ಸ್ಮರಣೀಯ.ವಿದೆ. ಇಂದಿಗೆ ಸುಮಾರು ಐದು ವರ್ಷಗಳಿಗೆ ಮೊದಲು ಲೋಕ ಸಭೆಯಲ್ಲಿ ಕಮ್ಯುನಿಸ್ಟ್ ಸದಸ್ಯ ಶ್ರೀ ಹಿರೇನ ಮುಖರ್ಜಿಯವರು ಇವರ ಬಗ್ಗೆ ರಚಿಸಿದ ಒಂದು ಕವಿತೆಯನ್ನು ಹಿಂದೂ ಮಹಾಸಭೆಯ ಶ್ರೀ ಎನ್. ಸಿ. ಚಟರ್ಜಿಯವರು ಓದಿಹೇಳಿದ್ದರು. ಆ ಕವಿತೆಯು ಇಂಗ್ಲಿಷ್ ಭಾಷೆಯಲ್ಲಿದ್ದು, ಅದರ ಭಾವಾನುವಾದ ಹೀಗಿದೆ:

ಇದ್ದರೊಬ್ಬರು ಕೃಷ್ಣಮಾಚಾರಿ
ಅವರೇ ಟಿ. ಟಿ. ಕೃಷ್ಣಮಾಚಾರಿ
ಸುಂದರವಿತ್ತವರ ಹೆಂಗುದುರೆಯೊಂದು
ಆದರವಿದ್ದರು ಬಹು ನಿರ್ದಯ
ಹುಲ್ಲನೂ ಅದಕೆ ನೀಡುವರಲ್ಲ!
ಅನಗೇಯಿಸುತಿದ್ದರು ಪ್ರತಿಕ್ಷಣವೆಲ್ಲ!
ಕುದುರೆಯೆಂದಿತು ಕಾತರಭಾವದಿಂದ
'ಕೃಷ್ಣಮಾಚಾರಿ,
ಮಡಿದು ಹೋಗುವೆನು ನಾ ಹೀಗೆ ಉಳಿದರೆ,!
'ಅಂಜ ಬೇಡೆಲೆ ಎನ್ನ ಕುದುರೆ,
ಟಿ. ಟಿ. ಊದಿದರು ತನ್ನ ಅಂತಿಮ ಸೀಟಿ
ಅಸಹಾಯ ಹೆಂಗುದುರೆ ಎತ್ತಿತು ಯಮನೂರಿಗೆ ಚೀಟಿ !!

ವಿತ್ತಮಂತ್ರಿ ಕೃಷ್ಣಮಾಚಾರಿಯವರು ತನ್ನ ಅನೇಕ ವಿಧೇಯಕಗಳಿಂದ ವಿರೋಧಿ ಪಕ್ಷದ ಕಮ್ಯುನಿಸ್ಟ್ ಮತ್ತು ಹಿಂದೂ ಮಹಾ ಸಭೆಯ ಸದಸ್ಯರಲ್ಲಿ ಏಕರೂಪದ ಭಾವನೆಯನ್ನು ಹುಟ್ಟಿಸಿದ್ದರೆಂದು ಈ ಘಟನೆಯೇ ಸಾಕ್ಷಿ.

ಛಗಲ ಆಯೋಗವು ಮುಂಧ್ರಾಕಾಂಡದ ಸಂಬಂಧವಿತ್ತ ವರದಿಯ ಕಾರಣದಿಂದ ವಿತ್ತ ಮಂತ್ರಿಯವರು ರಾಜಿನಾಮೆಕೊಡ ಬೇಕಾಯಿತು. ಅನಂತರ, ಆಗ ಗೃಹ ಮಂತ್ರಿಯಾಗಿದ್ದ ಗೋವಿಂದವಲ್ಲಭ ಪಂತರು ಮದ್ರಾಸಿಗೆ ಬಂದಾಗ, ಆಚಾರಿಯವರ ಪ್ರಶಂಸೆ ಮಾಡಿದರು. ಈ ಪ್ರಶಂಸೆ ಕೂಡ, ಕೆಲವರು ಸಂಸತ್ ಸದಸ್ಯರಲ್ಲಿ ಅಸಮಾಧಾನವನ್ನುಂಟು ಮಾಡಿತು.

ತಿರುವಲ್ಲೂರಿನಲ್ಲಿರುವ ೬೨ ವರ್ಷ ಪ್ರಾಯದ ಕೃಷ್ಣಮಾಚಾರಿಯವರು ಸಾರ್ವತ್ರಿಕ ಚುನಾವಣೆಯ.ಲ್ಲಿ ಕಾಂಗ್ರೆಸ್ ಟಿಕೇಟನ್ನು ಒಂದು ಶರ್ತದ ಮೇಲೆ ಸ್ವೀಕರಿಸಿದ್ದಾರೆಂದು ಹೇಳಲಾಗುತ್ತಿದೆ. ಅರ್ಥಮಂತ್ರಿ ಸ್ಥಾನದಲ್ಲಿ ಅವರು ಏರುವುದೇ ಆ ಶರ್ತವಿರಬಹುದೆ? ಸರ್ ಶ್ರೀ ಚೆಟ್ಟಿ, ಮಥಾಯ್ ಮತ್ತು ದೇಶಮುಖರಲ್ಲಿ ಯಾರಾದರೂ ವಿತ್ತ ಮಂತ್ರಿಪದವಿಯಿಂದ ಹೊರ ನಡೆದ ಬಳಿಕ ಅದನ್ನು ಮರಳಿ ಪಡೆಯಲು ಬಯಸಲಿಲ್ಲ.

ಪ್ರಧಾನಿ ನೆಹರುರವರಿಗೆ ಸಂಕ್ಷಣಾ ವಿಭಾಗಕ್ಕೆ ಶ್ರೀ ಕೃಷ್ಣ ಮೆನನ್ನರ ಸೇವೆಯು ಅನಿವಾರ್ಯವೆಂದು ಅನಿಸಿದಂತೆ ಅರ್ಥ ಮಂತ್ರಾಲಯಕ್ಕೆ ಮುಖ್ಯವಾಗಿ ತೃತೀಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ—ಶ್ರೀ ಟಿ ಟಿ. ಕೆ. ಯವರ ಸೇವೆಯು ಅತ್ಯವಶ್ಯವೆನಿಸಿದರೆ, ಆ ಮಾತು ಬೇರೆ. ಬ್ರಿಟನ್ನಿನಲ್ಲಿ ಥಾರ್ನಿಕ್ರಾಫ್ಟರಂತಹ ಪ್ರಭಾವಶಾಲಿ ವ್ಯಕ್ತಿ ಅರ್ಥ ಖಾತೆಯಿಂದ ದೂರವಾದಾಗಲೂ ಅಲ್ಲಿನ ಆರ್ಥಿಕ ವ್ಯವಸ್ಥೆಯಲ್ಲಿ ಯಾವ ಧೂಮ ಕೇತುವೂ ಕಾಣಿಸಲಿಲ್ಲ. ಹಾಗಿರುವಾಗ, ಕಾಂಗ್ರೆಸ್ ಪಕ್ಷ ಮಾತ್ರ ಕೃಷ್ಣಮಾಚಾರಿಯವರ ಸೇವೆಯಿಲ್ಲದೆ ಕೇಂದ್ರ ಸರಕಾರದ ಕಾರ್ಯಕಲಾಪಗಳನ್ನು ಸುಚಾರು ರೂಪದಲ್ಲಿ ನಡೆಸಲಾರದು ಎಂದರೆ, ಯೋಚಿಸಬೇಕಾಗುವ ವಿಚಾರ.

ರಾಜನೀತಿಜ್ಞರು ಮತ್ತು ಉದ್ಯಮಿಗಳಂತೆಯೇ ದೇಶದ ಪ್ರತಿಯೊಬ್ಬ ಶಿಕ್ಷಿತ ನಾಗರಿಕನೂ ಶ್ರೀ ಕೃಷ್ಣಮಾಚಾರಿಯವರ ಹೆಸರನ್ನು ಬಲ್ಲ. ಆದುದರಿಂದಲೇ ಅವರು ಅರ್ಥ ಮಂತ್ರಿಯಾಗುವುದನ್ನು ಭಾರತೀಯರು ಅದೆಷ್ಟು ಮೆಚ್ಚುವರೋ ಈಗಲೇ ಹೇಳಬರುವಂತಿಲ್ಲ.

ವಿಜ್ಞಾನದಿಂದ ಮಾನವ ಕಲ್ಯಾಣ

ನೀವು ಕುಳ್ಳರೆ? ಚಿಂತೆ ಬೇಡ

ಸುಮಾರು ನಲುವತ್ತು ವರ್ಷಗಳಿಂದ ನಡೆಯುತ್ತಿರುವ ಪ್ರಯೋಗಗಳ ದೆಸೆಯಿಂದಾಗಿ ದೇಹದ ಬೆಳವಣಿಗೆ ಕುಗ್ಗಿ ಕುಳ್ಳವಾಗಿರುವವರನ್ನು ಎತ್ತರ ಬೆಳೆಯುವಂತೆ ಮಾಡಲು ಸಾಧ್ಯವಿದೆಯೆಂದು ಜರ್ಮನಿಯ ಪಾರಿಶ್ರಮಿಕರು ಕಂಡುಹಿಡಿದಿದ್ದಾರೆ. ೫೮ ಅಂಗುಲಗಳ ಎತ್ತರಕ್ಕಿಂತ ಕಡಿಮೆಯಿರುವ ಪುರುಷರನ್ನೂ, ೫೪ ಅಂಗುಲಗಳ ಎತ್ತರಕ್ಕಿಂತ ಕಡಿಮೆಯಿರುವ ಸ್ತ್ರೀಯರನ್ನೂ ಕುಳ್ಳರೆಂದೇ ಭಾವಿಸಬೇಕೆಂದು ಹೇಳಲಾಗಿದೆ. ಫ್ರಾಂಕ್‌ಫರ್ಟ್ ವಿಶ್ವವಿದ್ಯಾಲಯದಲ್ಲಿ ನಡೆದ ಸಂಶೋಧನೆಗಳಿಂದ ಕಂಡು ಹಿಡಿಯಲ್ಪಟ್ಟ ಈ ಚಿಕಿತ್ಸಾ ಕ್ರಮವು ಪಶ್ಚಿಮ ಜರ್ಮನಿಯಲ್ಲಿ ಮಾತ್ರವಲ್ಲದೆ ಹೊರಗೂ ಎಲ್ಲರ ಗಮನವನ್ನು ಸೆಳೆದಿದೆ.

ಮನುಷ್ಯನ ದೇಹದಲ್ಲಿನ 'ಪಿಟ್ಯೂಟರಿ' ನಾಳಗಳಲ್ಲಿ ಉತ್ಪತ್ತಿಯಾಗುವ ವಸ್ತುವೊಂದರಿಂದ ದೇಹದ ಬೆಳವಣಿಗೆಯು ನಡೆಯುತ್ತಿದೆಯೆಂದು ಕಂಡು ಹಿಡಿಯಲ್ಪಟ್ಟದೆ. ಉತ್ತಮ ವರ್ಗಕ್ಕೆ ಸೇರಿದ ಪ್ರಾಣಿಗಳ ಶರೀರದಿಂದ ಈ 'ಹಾರ್ಮೋನು'ಗಳನ್ನು ತೆಗೆದು, ಅದನ್ನು ಕನಿಷ್ಠವರ್ಗದ ಪ್ರಾಣಿಗಳಿಗೆ ಪ್ರಯೋಗಿಸಲಾಯಿತು. ಇದರಲ್ಲಿ ಜಯವು ದೊರಕುವುದೆಂಬ ಸೂಚನೆಗಳು ಕಂಡೊಡನೆ ಜಾನುವಾರುಗಳ ಹಾರ್ಮೋನುಗಳನ್ನು ತೆಗೆದು ಇಲಿಗಳ ದೇಹಕ್ಕೆ ಬಿಡಲಾಯಿತು. ಇದರಿಂದ ಒಂದು ಅಂಗುಲದಷ್ಟು ಬೆಳವಣಿಗೆ ಕಂಡು ಬಂದಿತು. ಆದೇ ಕನಿಷ್ಠವರ್ಗದ ಪ್ರಾಣಿಗಳಲ್ಲಿನ ಹಾರ್ಮೋನುಗಳನ್ನು ಉತ್ತಮ ವರ್ಗದ ಪ್ರಾಣಿಗಳಲ್ಲಿ ಪ್ರಯೋಗಿಸಿದಾಗ ಯಾವ ವಿಧವಾದ ವ್ಯತ್ಯಾಸವೂ ಕಂಡು ಬರಲಿಲ್ಲ.

ಹಾರ್ಮೋನ್ ಚಿಕಿತ್ಸೆಯನ್ನು ಅನಂತರ ಮನುಷ್ಯ ದೇಹದ ಮೇಲೆ ಮಾಡಲಾಯಿತು. ಇದಕ್ಕಾಗಿ ಅವಶ್ಯಕವಾದ ಹಾರ್ಮೋನುಗಳನ್ನು ಕೋತಿಗಳ ಶರೀರದಿಂದ ತೆಗೆಯಲಾಯಿತು. ಈ ಸಂಶೋಧನೆಯು ಇನ್ನೂ ಒಂದು ಘಟ್ಟಕ್ಕೆ ಬಂದಿಲ್ಲ. ಮನುಷ್ಯ ಶರೀರದಲ್ಲಿನ 'ಪಿಟ್ಯೂಟರಿ' ನಾಳಗಳಲ್ಲಿ ದೊರಕುವ ವಸ್ತುವನ್ನು ಮನುಷ್ಯನಿಗೆ ಪ್ರಯೋಗಿಸಿದ್ದೇ ಆದರೆ ಫಲವೇನಾದರೂ ದೊರಕುವುದೇನೋ ಎಂದು ಪರೀಕ್ಷಿಸಲಾಯಿತು. ಈ ಪ್ರಯೋಗ ನಡೆಸಲ್ಪಟ್ಟವರಲ್ಲಿ ಒಬ್ಬನು ಒಂದು ಅಂಗುಲವೂ ಮತ್ತೊಬ್ಬನು ಮುಕ್ಕಾಲು ಅಂಗುಲವೂ ಎತ್ತರ ಬೆಳೆದರು. ಅಲ್ಲದೆ ಇಬ್ಬರ ಶರೀರದ ತೂಕವೂ ಹನ್ನೊಂದು ಪೌಂಡುಗಳಷ್ಟು ಹೆಚ್ಚಾಯಿತು. ಅವರಿಬ್ಬರ ರಕ್ತದಲ್ಲಿನ ಸಕ್ಕರೆಯ ಅಂಶವೂ ಉತ್ತಮಗೊಂಡಿತು.

ಕೇವಲ ಒಂದು ಅಂಗುಲದಷ್ಟು ಎತ್ತರ ಬೆಳೆಯು ವಿಕೆಯ ಅಲ್ಪ ಪ್ರಮಾಣದ್ದೆಂದೇ ಹೇಳಬಹುದು; ಆದರೆ ಇವರ ಬಗ್ಗೆ ನಿತ್ಯ ಸಂಶೋಧನೆ ನಡೆಯುತ್ತಿದ್ದು, ಅದಷ್ಟು ಬೇಗ ಮಾನವ ಶರೀರದ ಕುಬ್ಜತೆಯ ನಿವಾರಣೆಯಾಗಿ ಅವನು ಎತ್ತರ ಬೆಳೆಯುವಂತೆ ಮಾಡಲು ಸಾಧ್ಯವಿದೆಯೆಂದು ದೃಢವಾಗಿ ನಂಬಬಹುದಾಗಿದೆ. (ಯೂ. ಸಿ. ಎಸ್).

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 3/1962.

ದಾರಮ್ಮ ಸೆಡ್ತಿ, ಗಣಪಯ್ಯ ಸೆಟ್ರ ವಿಧವೆ ಉಡುಪಿ ತಾಲ್ಲೂಕು ಹೇರೂರು ಗ್ರಾಮದ ಹಾಡಿಮನೆ— ಅರ್ಜಿದಾರಳು.

ಮತ್ತು

ಕಮಲ ಯಸ್. ಸೆಟ್ಟಿ, ಯಚ್. ಶೀನ ಸೆಟ್ಟಿ ವಿಧವೆ, C/o.Sarvothama Shetty Jarbai Wadia Building, No. 3, Room No. 17., 1st. flour, Vishy Parel, Bombay. —ಎದ್ರಿಳು.

ಅರ್ಜಿದಾರಳ ಮಗ, ವ ಯೆದ್ರಿಳ ಗಂಡ ತಾರೀಕು 20—1—1961ರಲ್ಲಿ ಬೊಂಬಾಯಿಯಲ್ಲಿ ಮೃತಪಟ್ಟ ಯಚ್. ಶೀನ ಸೆಟ್ಟಿಗೆ ಮೇಲ್ಕಂಡ ಡಿಕ್ರಿಯಲ್ಲಿ ಕಾಣ್ಪಿಸಿದ ಪ್ರಕಾರ ಬರತಕ್ಕ ರೂ. 2400-06ಕ್ಕೆ ತನ್ನಹೆಸರಿಗೆ ವಾರಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳ ಕಡೆಯಿಂದ ದಾಖಲಾದ ಸದ್ರಿ ಅರ್ಜಿಯು ತಾರೀಕು 28—2—1962ಕ್ಕೆ ಸಾಬಿತೆಗೆ ಇಟ್ಟಿದೆ. ಆಕ್ಷೇಪ ಉಳ್ಳವರು ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟಿನ ಮುಂದೆ ಹಾಜ್ರಾಗಿ ಆಕ್ಷೇಪಿಸಮಾಡಿಕೊಳ್ಳತಕ್ಕದ್ದು ಯೆಂಬ ಸಂಗತಿ ಈ ಮೂಲಕ ತಿಳಿಸಿಯದೆ.

K. Laxminarayana Aithal,
Vakil for petitioner.
ಉಡುಪಿ, 17—2—1962.

THE CANARA INDUSTRIAL & BANKING SYNDICATE, LIMITED,
Registered Office: UDIPI (Mysore State)
SHIRVA
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಶಿರ್ವ (ದ. ಕ.)

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಸಮಯದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಜಾಕಿ ಮಾಡಿರುತ್ತೆವರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಸದ್ರಿಯವರಿಗೆ ರಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸಹಾ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವದರೇ ತಪ್ಪಿದ ಕಾರಣ ಸದ್ರಿಯವರಿಗೆ ವ ಸದ್ರಿಯವರ ಪ್ರತಿನಿಧಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಮಾರ್ಚ ತಿಂಗಳ ತಾರೀಕು 15ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 17—3—62ರಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಯಾ ನವಾಗೆ ಯುಕ್ತ ಕಂಡ ತಾರೀಕಿನಲ್ಲಿ ಪುನಹಾ ನೋಟಿಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು
35/1280 ತಾ. 20—7—1959	ಶ್ರೀ ವಾಸು ಶೆಟ್ಟಿ S/o ಬಾಬು ಶೆಟ್ಟಿ ಪಯ್ಯಾರು ಪಡುಮನೆ ಕಳತ್ತೂರು ಪೋಸ್ಟ್	60=00
35/1829 ತಾ. 21—9—59	ಶ್ರೀ ವೆಂಕಟ್ರಮಣ ಆಚಾರಿ, S/o ಮಂಜಯ್ಯ ಆಚಾರಿ ಮಜಲಬೆಟ್ಟು.. ಪೆರ್ನಾಲ್ P. O.	20=00
35/2075 ತಾ. 28—10—59	ಶ್ರೀ ಸಿಲ್ವೆಸ್ಟರ್ ಕೊರ್ಡ S/o ಮಾರ್ಶಲ್ ಕೊರ್ಡ ಮೊಡಬೆಟ್ಟು—ಪಾದೂರು P.O.	20=00

Office Of
THE CANARA INDUSTRIAL & BANKING SYNDICATE, LTD.
SHIRVA: Dated 15—2—1962

M. BHASKER SHET
Manager at Shirva

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1 25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಸರಳ ವ್ಯಾಯಾಮ—ಸೂರ್ಯ ನಮಸ್ಕಾರ

ಬಿ ರ

ವ್ಯಾಯಾಮ ಮಾಡುವುದೊಂದು ಒಳ್ಳೆಯ ಅಭ್ಯಾಸವೆಂದು ಎಲ್ಲರೂ ತಿಳಿದಿದ್ದಾರೆ. ಒಬ್ಬೊಬ್ಬರಿಗೆ ಒಂದೊಂದು ಬಗೆಯ ವ್ಯಾಯಾಮವು ಇಷ್ಟವಾಗಿ ಕಾಣಬಹುದು. ಕೆಲವೊಂದು ರೀತಿಯ ವ್ಯಾಯಾಮಗಳನ್ನು ಕಲಿತುಕೊಳ್ಳಬೇಕಾದರೆ, ಕೆಲವೊಂದು ರೀತಿಯ ವ್ಯಾಯಾಮಗಳ ಕೆಲವೊಂದು ನಿರ್ದಿಷ್ಟ ಅನುಕೂಲತೆಗಳೂ ಬೇಕಾಗುತ್ತದೆ. ವಿಶಿಷ್ಟ ಪ್ರಕಾರದ ವ್ಯಾಯಾಮಗಳಿಗೆ ಅಧಿಕ ವೆಚ್ಚ ಬರುವ ಸಾಧನಸಲಕರಣೆಗಳು, ಕೆಲವೊಮ್ಮೆ ಮಾರ್ಗದರ್ಶಕರು ಕೂಡ ಬೇಕಾಗಬಹುದು.

ಸೂರ್ಯ ನಮಸ್ಕಾರವೆಂಬುದು ಅತಿ ಸುಲಭ ರೂಪದ ವ್ಯಾಯಾಮ. ಯಾರೇ ಆಗಲಿ, ಯಾವ ಬಗೆಯ ತೊಂದರೆಯೂ ಇಲ್ಲದೆ ಈ ಸರಳ ವ್ಯಾಯಾಮವನ್ನು ಮಾಡಬಹುದು. ತಾಸುಗಟ್ಟಲೆ ಕಸರತ್ತು ಮಾಡುವುದಕ್ಕಿಂತ ಒಬ್ಬ ವ್ಯಕ್ತಿಯು ಪ್ರತಿ ದಿನ ನಿಯತಿಪೂರ್ವಕ ಸ್ವಲ್ಪ ಕಾಲ ಸೂರ್ಯನಮಸ್ಕಾರದ ವ್ಯಾಯಾಮವನ್ನು ಮಾಡಿದರೆ, ಶಕ್ತಿ, ಸ್ಫೂರ್ತಿ ಮತ್ತು ಸಹಜತೆಯ ಅನುಭವ ಮಾಡಿಕೊಳ್ಳುವನು ಎಂದು ವ್ಯಾಯಾಮ ವಿಶಾರದರ ದೃಷ್ಟಿಕೋಣವಿದೆ. ಸೂರ್ಯನಮಸ್ಕಾರವು ಶರೀರವನ್ನು ಆರೋಗ್ಯವಂತ ಮತ್ತು ಸುಘಟಿತಗೊಳಿಸುವಲ್ಲಿ ಮಹತ್ವಪೂರ್ಣ ಪಾತ್ರ ವಹಿಸುತ್ತದೆ. ಈ ವ್ಯಾಯಾಮದ ಅನುಭವವಿರುವವರು ಈ ಸತ್ಯ ಸೂರ್ಯ ಸಂಗತಿಗಳನ್ನು ತಿಳಿದುಕೊಳ್ಳದಿರಲಾರರು.

ಸೂರ್ಯನನ್ನು ಚರಾಚರ ಸೃಷ್ಟಿಯ ಜೀವನದಾತನೆಂದು ಹೇಳುತ್ತಾರೆ. ನಮ್ಮ ಪುರಾಣಗಳು ಮತ್ತು ಇತರ ಪ್ರಾಚೀನ ಧಾರ್ಮಿಕ ಸಾಹಿತ್ಯದಲ್ಲಿ ಸೂರ್ಯ ಮಹಿಮೆಯ ಹಲವಾರು ಉದಾಹರಣೆಗಳು ದೊರೆಯುತ್ತವೆ. ವ್ಯಾಯಾಮದಂತೆಯೇ ನಿತ್ಯವೂ ಕ್ರಮ ಪ್ರಕಾರವಾಗಿ ಸಂಧ್ಯಾವಂದನೆಯನ್ನು ಮಾಡಿದರೂ ಗಾಯತ್ರೀ ಮಂತ್ರದ ಪರಿಚಯವಾಗುವುದು. ಗಾಯತ್ರೀ ಮಂತ್ರವೆಂದರೆ ಭಗವಾನ್ ದೇವನ ಸ್ತುತಿಯಾಗಿದೆ.

ಭಾರತದಲ್ಲಿ ಯುಗ ಯುಗಾಂತರಗಳಿಂದ ಸೂರ್ಯನ ಆರಾಧನೆಯು ನಡೆಯುತ್ತ ಬರುತ್ತಿದೆ. ಸವಿತಾ, ಸಹಸ್ರರಶ್ಮಿ, ಆದಿತ್ಯ ಮೊದಲಾದ ಹೆಸರುಗಳಿಂದ ವೇದಗಳಿಂದ ವೇದಗಳಲ್ಲಿ ಉಲ್ಲೇಖಿಸಲಾಗಿದೆ. ವೇದಗಳಲ್ಲಿ ವರ್ಣಿತವಾದಂತೆ ಸೂರ್ಯನು ತಲೆಯಲ್ಲಿ ಸುವರ್ಣ ಜಟಿತ ಕಿರಣಗಳ ಮುಕುಟವನ್ನು ಧರಿಸಿ ಸದಾ ಶೋಭಾಯಮಾನನಾಗಿ ತೋರುತ್ತಾನೆ. ಇಂದಿನ ವರೆಗೂ ಪ್ರತಿವರ್ಷವೂ ಹಿಂದೂ ಸಮಾಜದವರು ಆಚರಿಸುತ್ತಿರುವ 'ರಥಸಪ್ತಮಿ' ಪರ್ವವು ಸೂರ್ಯದೇವನೊಡನೆ ಸಂಬಂಧಪಡಿಸಿಕೊಂಡಿದೆ.

ರಾಮಾಯಣದಲ್ಲೊಂದು ಪ್ರಸಂಗ ಬರುತ್ತದೆ. ಶ್ರೀರಾಮಚಂದ್ರನು ರಾವಣನೊಡನೆ ಕೊನೆಯ ಬಾರಿಗೆ ಹೋರಾಟಕ್ಕೆ ತೊಡಗುವ ಮೊದಲು 'ಆದಿತ್ಯ ಹೃದಯ'ವೆಂಬ ಹೆಸರಿನ ಪ್ರಾರ್ಥನೆ ಮಾಡುವಂತೆ ಅಗಸ್ತ್ಯ ಮುನಿಯು ಆದೇಶ ನೀಡುತ್ತಾನೆ. ಈ ಪ್ರಾರ್ಥನೆಯು ಒಂದು ರೀತಿಯ ಸೂರ್ಯೋಪಾಸನೆಯಾಗಿತ್ತು. ಈ ಪ್ರಾರ್ಥನೆಯ ಪ್ರಭಾವದಿಂದಲೇ ರಾವಣನ ಮೇಲೆ ವಿಜಯ ಸಂಪಾದಿಸಿದನೆಂದು ಹೇಳುತ್ತಾರೆ.

ಮಹಾ ಭಾರತದಲ್ಲಿ ದ್ರೌಪದಿಯು ಸೂರ್ಯನ ಆರಾಧನೆಯನ್ನು ಮಾಡಿದ ಉಲ್ಲೇಖವಿದೆ. ಈ ಪ್ರಾರ್ಥನೆಯ ಫಲವಾಗಿ ಸೂರ್ಯನು ಪ್ರಸನ್ನನಾಗಿ ದ್ರೌಪದಿಗೊಂದು ಅಕ್ಷಯ ಪಾತ್ರೆಯನ್ನು ಕೊಟ್ಟನು. ಈ ಪಾತ್ರೆಯ ಬಲದಿಂದಾಗಿ, ವನವಾಸ ಕಾಲದಲ್ಲಿಯೂ ದರೂ ತಮ್ಮಲ್ಲಿಗೆ ಬರುತ್ತಿದ್ದ ಎಲ್ಲ ಅತಿಥಿಗಳಿಗೆ ಸತ್ಕಾರ ನೀಡುವಲ್ಲಿ ಪಾಂಡವರು ಸಮರ್ಥರಾಗುತ್ತಿದ್ದರು. ಮಹರ್ಷಿ ದೂರ್ವಾಸನನ್ನೂ ಆತನ ಸಹಸ್ರ ಸಂಖ್ಯೆಯ ಶಿಷ್ಯರನ್ನೂ ಸತ್ಕರಿಸಿದ ವಿಧಾನವು ಮನೋರಂಜಕವಿದೆ.

ಭಾರತದಲ್ಲಿ ಕೆಲವೊಂದು ಸೂರ್ಯ ದೇವಾಲಯಗಳ ಸ್ಥಾಪನೆಯೂ ಆಗಿತ್ತು. ಇವುಗಳಲ್ಲಿ ಮುಲ್ತಾನ ಕಾಶ್ಮೀರ ಮತ್ತು ಕೊಣಾರ್ಕದಲ್ಲಿರುವ ಸೂರ್ಯದೇವಾಲಯಗಳು ಜಗದ್ವಿಖ್ಯಾತವಾಗಿವೆ.

ಪಂಜಾಬ ರಾಜ್ಯದಲ್ಲಿರುವ ಮುಲ್ತಾನದಲ್ಲಿರುವ ಸೂರ್ಯಮಂದಿರವು ಅತಿ ಪ್ರಾಚೀನ ಕಾಲದ್ದು. ಕಾಶ್ಮೀರದ ಮಾರ್ತಾಂಡ ಮಂದಿರವು ಎರಡನೆಯ ಸ್ಥಾನಗಳಿಸುತ್ತದೆ. ಕಾಶ್ಮೀರದ ಮಹಾರಾಜನೂ ಅನುಪಮಯೋದ್ಧನೂ ಆಗಿದ್ದ ಲಲಿತಾದಿತ್ಯನು (ಕ್ರಿ. ಶ. ೬೯೯-೭೪೬) ಸೂರ್ಯನಲ್ಲಿರುವ ತನ್ನ ಅಗಾಧ ಶ್ರದ್ಧೆಯನ್ನು ಪ್ರದರ್ಶಿಸಲು ಈ ದೇವಾಲಯವನ್ನು ಕಟ್ಟಿಸಿದ್ದನು. ಔರಂಗಜೇಬನ ಆಡಳಿತಾವಧಿಯಲ್ಲಿ ಮುಲ್ತಾನದ ದೇವಸ್ಥಾನಕ್ಕೆ ಕ್ಷತಿತಟ್ಟಿತು. ಹಾಗೆಯೇ ಮಾರ್ತಾಂಡ ಮಂದಿರವು ಕ್ರಿ. ಶ. ೧೩೯೦ರಿಂದ ೧೪೧೪ರ ವರೆಗೆ ಆಳಿದ್ದ ಸಿಕಂದರ್ ಬುತಶಿಕನ್‌ನ ಕೈಯಿಂದ ಭಗ್ನವಾಯಿತು.

ಒಡಿಸ್ಸ ರಾಜ್ಯದ ಕೋನಾರ್ಕದ ಸೂರ್ಯ ಮಂದಿರವು ಪುರಿಯಿಂದ ೨೦ ಮೈಲು ದೂರದಲ್ಲಿದೆ. ಆದರೆ, ಇಂದು ಈ ದೇವಾಲಯವೂ ಭಗ್ನಾವಸ್ಥೆಯಲ್ಲಿದೆ. ಅಲ್ಲಿ ದೊರೆಯುತ್ತಿರುವ ಅವಶೇಷಗಳಿಂದ, ಒಂದು ಕಾಲದಲ್ಲಿ ಕೋನಾರ್ಕವು ವಾಸ್ತು ಶಿಲ್ಪದ ಉತ್ತಮ ಮಾದರಿಯಾಗಿ ಮೆರೆದಾಡಿತ್ತು ಎಂಬುದು ಭಾಸವಾಗುವುದು.

ಸೂರ್ಯದೇವನ ಬಗ್ಗೆ ಎಲ್ಲರಲ್ಲಿಯೂ ಅಭಿಮಾನವಿದೆ-ಎಂತಲೇ ಸರ್ವಸಾಮಾನ್ಯವಾಗಿ ಎಲ್ಲ ದೇಶದವರೂ ಸೂರ್ಯನಮಸ್ಕಾರ ಮಾಡುತ್ತಾರೆ. ಹಿಂದೂ ಜನರಲ್ಲಿ ಉರಿಯುವ ದೀಪಕ್ಕೆ ಸೂರ್ಯ ದೇವನು ತನ್ನ ಪ್ರಕಾಶಜ್ಯೋತಿಯನ್ನೀಯುತ್ತಾನೆ ಎಂಬ ವಿಶ್ವಾಸವಿದೆ. ಈ ಕಾರಣದಿಂದಲೇ ಬಾಯಿಂದ ಗಾಳಿಯೂದಿ ದೀಪವನ್ನು ಆರಿಸುವ ಪರಿಪಾಠ ಬಹು ಕಡಿಮೆ. ಗಾಳಿ ಹಾಕುವಾಗ, ಬಾಯ ಎಂಜಲು ಸಿಡಿಯಬಹುದು ಎಂಬ ಭಯವೇ ಇದಕ್ಕೆ ಕಾರಣ.

ಸೂರ್ಯ ನಮಸ್ಕಾರವು ಕೇವಲ ಧಾರ್ಮಿಕ ಭಾವನೆಗಳಿಗೆ ಉತ್ತೇಜನ ನೀಡುವುದು ಮಾತ್ರವಲ್ಲ, ವೈಜ್ಞಾನಿಕ ಕಾರಣಗಳಿಂದಲೂ ಅದು ಗ್ರಾಹ್ಯವೆನಿಸಿದೆ. ಹಿಂದೂ ಸಂಸ್ಕೃತಿಯಲ್ಲಿ ಅಡಕವಾಗಿರುವ ಎಲ್ಲ ವಿಶ್ವಾಸಗಳಿಗೂ ಧಾರ್ಮಿಕ ಹಿನ್ನೆಲೆಯಿರುವುದಾದರೂ ಆರೋಗ್ಯದೃಷ್ಟಿಯು ಇವೆಯೆಂದು ಹೇಳಬಹುದು. ಅ[ತ]ಸ್ನಾನದಿಂದ ರೋಗ ನಾಶವಾಗುವ[ದೆಂ]ಬುದನ್ನೂ ನಾವು ಗಮನಿಸಬಹುದು.

—————

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳುಹಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಿತ್ರ ಮೃತ್ಯುಪತ್ರಗಳು

(೩ನೇ ಪುಟದಿಂದ)

ನಾನು ಸತ್ತನಂತರ ನನ್ನ ಗೋರಿಯ [...] ರಾತ್ರಿಯಿಡೀ ದೀಪವಿರುವ ವ್ಯವಸ್ಥೆ ಮಾ[ಡ]ಬೇಕು ಎಂದು ಬರೆದಿದ್ದನು.

ತನ್ನ ಸಂಪತ್ತನ್ನು ಪಶುಗಳಿಗೆ [...] ಕೊಟ್ಟ ಉಯಿಲುಗಳೂ ಉಪಲಬ್ಧವಿವೆ. ಒಬ್ಬನು ತನ್ನ ಮೂರು ಸಾವಿರ ಪೌಂಡುಗಳನ್ನು ಒಂದು ಗಿಳಿ ಮತ್ತೊಂದು ಪಶುವಿಗಾಗಿ ಬರೆದಿಟ್ಟು ಸತ್ತಿದ್ದನು. ಅ[ವನ] ಸಂಬಂಧಿಕರು ಹಣಕ್ಕಾಗಿ ತುಂಬಾ [...] ದಾಡಿದರೂ ಅವರು ನಿರಾಶರಾದರು. [ಇ]ದೇ ರೀತಿಯಲ್ಲಿ ೭೪ ವರ್ಷ ಪ್ರಾಯ[ದ] ಶ್ರೀಮತಿ ಕ್ಯಾಥರೀನ್ ಓಲ್ಬರ್ಗ್ ಎಂ[ಬ]ಳೆಯು ತನ್ನ ಎಲ್ಲಾ ಸಂಪತ್ತನ್ನು ತ[ನ್ನ] ಮನೆನಾಯಿ ಮತ್ತು ೫ ಬೆಕ್ಕಿನ ಮ[ರಿಗ]ಳಿಗೆ ಈಯುವಂತೆ ಉಯಿಲು ಬರೆದಿದ್ದಳು.

ತಾವು ನಂಬಲೂ ಬಹುದು ನಂ[ಬದೆ] ಇರಲೂ ಬಹುದು. ಆದರೆ ವಿಚಿತ್ರವ[ಪ್ಪ] ಬರೆದ ಉಯಿಲುಗಳಿವೆ. ಬ್ರಿಟನಿನ ಒ[ಬ್ಬ] ಸಾಲಿಸಿಟರನು ಹಿಮದ ಮೇಲೆ ಜಾ[...] ಆಟವಾಡುತ್ತಿದ್ದಾಗಲೇ ಜಾರಿಬಿದ್ದು [ಮ]ರಣೋನ್ಮುಖನಾದಾಗ ತನ್ನ ಚೂರಿಯ[ಿಂ]ದ ಹಿಮದ ಮೇಲೆ ತನ್ನ ಅಂತ್ಯೇಚ್ಛೆಯನ್ನು ಬರೆದನು.

ಒಬ್ಬ ವ್ಯಕ್ತಿಯು ತನ್ನ ಮನೆಯ [...] ಗಿಲಿಕದ ಕದದ ಮೇಲೆ ಉಯಿಲನ್ನು ಬರೆ[ದು] ಇಬ್ಬರು ಸಾಕ್ಷಿಗಳ ಹಸ್ತಾಕ್ಷರವನ್ನು ಮಾಡಿಸಿದ್ದನು. ಅವನ ಮರಣಾನಂ[ತರ] ಅದರ ಫೋಟೋವನ್ನು ತೆಗೆದು ಕೋ[ರ್]ಟಿನಲ್ಲಿ ಹಾಜರಪಡಿಸಿದಾಗ ಅದನ್ನು [ಒ]ಪ್ಪಲು ಅವರು ನಿರಾಕರಿಸಿದರು. ಕ[ಡೆಗೆ] ಸಾಕ್ಷಿಯವರು ಕದಳನ್ನೆತ್ತಿಕೊಂ[ಡು] ಕೋರ್ಟಿಗೆ ಹೋಗಿ ಅವರನ್ನು ಒಪ್ಪಿ[ಸ]ಬೇಕಾಯ್ತು.

ಒಬ್ಬನು ಗೋಧಿಯ ಹಿಟ್ಟಿನ ಗೋ[...]ಯ ಮೇಲೆ ತನ್ನ ಅಂತ್ಯೇಚ್ಛೆಯನ್ನು [...]ಯಿಸಿದ್ದರೆ, ಇನ್ನೊಬ್ಬನು ತನ್ನ ಕೈ[...]ಯಾರದಲ್ಲಿಯೇ ಕೊರೆಯಿಸಿದ್ದನು.

ನದಿಯ ತಟದ ಕೆಸರಿನಲ್ಲಿ ರುಂಡ[...] ಹೂತು ಹೋದ ಮೃತ ವ್ಯಕ್ತಿಯ ಶ[ವ]ವು ಸಿಕ್ಕಿತು. ಹುಡುಕಿದಾಗ ಅವನ [ಪಾ]ಕೇಟಿನಲ್ಲಿದ್ದ ಸಿಗರೇಟಿನ ಡಬ್ಬಿಯಲ್ಲಿ ಅವನ ಮಸೀಯತು ಸಿಕ್ಕಿತು.

ಜಗತ್ತಿನಲ್ಲಿ ಎಲ್ಲಕ್ಕಿಂತಲೂ ಸಣ್ಣ[ಉ]ಯಿಲೊಂದು ಸಿಕ್ಕಿತು, ಅದನ್ನು [...]ನ ಮೇಲೆ ಬರೆಯಲಾಗಿತ್ತು. ಈ [...] ಸೂಕ್ಷ್ಮ ಅಕ್ಷರಗಳನ್ನು ಭೂತಗನ್ನ[ಡಿ]ಯಿಲ್ಲದೆ ಓದಲಿಕ್ಕೇ ಸಾಧ್ಯವಿಲ್ಲವಂ[ತೆ]. ಕಾಂಟ್‌ಟಾಲ್‌ಸ್ಕಾಯ ಎಂಬ ವ್ಯ[ಕ್ತಿ]ಯು ಗಿಡಕೊಪ್ಪಲಿನ ಮೇಲೆ ತನ್ನ [ಅಂ]ತ್ಯೇಚ್ಛೆಯನ್ನು ನಮೂದಿಸಿದ್ದನು. ಜಗ[ತ್ತಿ]ನಲ್ಲಿರುವ ಎಲ್ಲದಕ್ಕಿಂತಲೂ ಸುದೀರ್ಘ[ವಾ]ದ ಉಯಿಲನ್ನು ಬರೆದವಳು ಒಬ್ಬ ಮ[ಹಿ]ಳೆ. ಅವಳ ಉಯಿಲಿನಲ್ಲಿ ೬೫ ಸಾವಿರ [ಶ]ಬ್ದಗಳಿವೆ. ಅದನ್ನು ಬರೆಯಲು ಅವ[ಳಿಗೆ] ೨೦ ವರ್ಷಗಳು ತಗಲಿದವು. ಅವ[ಳು] ಯಾವುದೋ ಪುಸ್ತಕ ಬರೆಯುತ್ತಿರ[ಬೇ]ಕೆಂದೇ ಅವಳ ಇಷ್ಟಮಿತ್ರರು ತಿಳಿದಿದ್ದ[ರು].

(ಹಿಂದಿಯಿಂದ)

ಅಳಿಯನ ದೀವಳಿಗೆ!

(೨ನೇ ಪುಟದಿಂದ)

"ಬೇಡ..ಬೇಡ...ನಾನೇ..., ಔಪಚಾರಿಕವಾಗಿ ನುಡಿದು ನಡೆದ ಶಿವೂ.

"ಓಹೋ... ದೀಪಾವಳಿಗೆಂದು ಪವಿತ್ರ ವಸ್ತುಗಳು ಬಂದಿರಬೇಕು.... ವೈಲಿಗೆಲ್ಲೇ ಮುಟ್ಟಬಾರದು ಕಾಣುತ್ತೆ... ,,

ಸಮರ್ಪಕವಾದ ಉತ್ತರವನ್ನು ಕೊಡಲು ಶಕ್ತನಾದ ಶಿವೂ, ಬಾಗಿಲು ಮುಚ್ಚಿಕೊಂಡೇ ಮೆಟ್ಟಲೇರಿದ. ತನ್ನರಗಿಣಿಯ ನಗುಮುಖದ ಓರೆಗಣ್ಣೋಟ ಕಾಣದಿದ್ದುದರಿಂದ ಸ್ಫೂರ್ತಿಯ ಅಭಾವವೋ ಅಥವಾ ಅನಾವಶ್ಯಕವೆಂದೋ—ಸುಮ್ಮನಿದ್ದು ಮೆಟ್ಟಲೇರಿದ.

ಮಕ್ಕಳಿಗೆ ಸಿಹಿ ತಿಂಡಿ ಕೊಟ್ಟು, ಕೋಟು ಕಳಚಿ ಸೆಟ್ಟಿಗೆಗೆ ಹಾಕಿ ಬೇಗ ವಿಶ್ರಮಿಸುತ್ತಿರುವಾಗ ಮೇಲೆ ಬಂದ ಶಂಕರ ಕೇಳಿದ—"ಅದೇನು ಭಾವ?... ಮನೇಲೂ ಕಳ್ಳರಿದ್ದಾರೆಂದು ನಿಮಗೆ ತಿಳಿಯಿತೇ..., ಆಡಬಾರದ ಮಾತೆಂದು ತಿಳಿದ ಬಳಿಕ, ತುಟಿ ಕಚ್ಚಿ ನಿಂತ ಶಂಕರನಿಗೆ "ಹೌದು.... ನಮ್ಮ ಜಾಗ್ರತೆ ನಮಗೆ—ಕಳ್ಳರಿರಲಿ ಇಲ್ಲದೆ ಇರಲಿ..., ಏನು ಹೇಳಬೇಕೆಂದು ತೋಚದೆ ಶಿವರಾಮನೆಂದ. ಆದರೆ ಶಂಕರನ ಮುಖ ಮಾತ್ರ ಕಪ್ಪಿಟ್ಟಿತು.... 'ಏನು... ನೀನೇ ಕಳ್ಳನಂತೇಕೆ ಮಾಡುತ್ತಿ? ಮುಖ ಬಾಡಿ ಹೋಯಿತೇಕೆ? ,, ಎಂದು ಮತ್ತೆ ಶಿವೂನೇ ಮಾತಾಡಿದ.

"ಭಾವ ಬನ್ನೀ.... ,, ವಿರಸ ಪ್ರಸಂಗವನ್ನು ನಿಲ್ಲಿಸುವ ಪೋಲೀಸ್ ಅಧಿಕಾರಿಯ ಸಿಳ್ಳಿನಂತೆ, ಗೀತಾಳ ಕರೆ ಅವರನ್ನು ಅಲ್ಲಿಂದ ಎಚ್ಚರಿಸಿತು, ಹಾಗೇ ಇಬ್ಬರೂ ಕೆಳಗಿಳಿದರು... ಮತ್ತೊಮ್ಮೆ ಕಾಫಿ ಕುಡಿದದ್ದಾಯಿತು ... ಆಗಲೂ ಶಿವರಾಮನಿಗೆ ಕಾಫಿ ರುಚಿಸಲಿಲ್ಲ... ಹೆಬ್ಬಾಗಿಲನ್ನು ದಾಟುತ್ತಲೇ ಚಾವಡಿಯಿಂದ ತಾಯಿ ಶಂಕರನಿಗೆಂದರು—

"ಶಂಕರ, ಸಂಪೂರ್ಣ ಗುಡ್ಡವನ್ನು ಇವತ್ತೇ ತಿರುಗಿಸಬೇಡ. ನಾಳೆಗೂ ಇರಲಿ. ಬೇಗ ಹಿಂಬನ್ನಿ..., ಎಂದು.

ಮುಳುಗುವ ಸೂರ್ಯನ ಹೊಂಬಣ್ಣದ ಕಿರಣದಲ್ಲಿ ಮುಳುಗಿ ಕೆಂಪಾದ ಪಾರ್ವತಿಯ ಮುಖ, ಕೋಣೆಯ ಕಿಟಕಿಯ ಸರಳುಗಳೆಡೆಯಿಂದ, ಅಕಸ್ಮಾತ್ ಹಿಂತಿರುಗಿದ ಶಿವರಾಮನಿಗೆ ಕಾಣಿಸಿತು. ಕೈಯಲ್ಲಿ ಕನ್ನಡಿಯನ್ನು ಹಿಡಿದು, ತನ್ನನ್ನೇ ತಾನು ನಗಿಸುವ ಪ್ರಯತ್ನವನ್ನು ಮಾಡುತ್ತಿರುವುದನ್ನು ನೋಡಿದ ಶಿವೂಗೆ ಆಕೆ ಮತ್ತೂ ಮೋಹಕವಾಗಿ ಕಂಡಳು.

"ಹುಚ್ಚು ಹುಡುಗಿ... ಒಳಗೇ ಕುಳಿತುಕೊಂಡು, ನನಗೆ ಎಂತಹ ದುಃಸ್ಥಿತಿಯನ್ನು ತಂದೊಡ್ಡಿದೆ. ಅಬ್ಬಾ ನಿನ್ನ ಹೆಮ್ಮೆಯೇ..., ಎಂದು ಮನದೊಳಗೇ ಧ್ವನಿ ಮಾಡಿ ನಿಂತ ಶಿವೂ.

"ಭಾವ.... ಬೆಟ್ಟ ಏರಲಿಕ್ಕೆ ಈಗಲೇ ಮುಂಗಾಲು ಗಂಟೆಗೆ ಕೈ ಕೊಟ್ಟು ನಿಂತರೆ ಹೇಗೆ.... ಇಷ್ಟು ಎತ್ತರ ಏರಬೇಕಾಗಿದೆಯಲ್ಲ..., ಬೆಟ್ಟದ ತುದಿಯ ಬಂಡೆಯ ಎಡೆಯಲ್ಲಿ ಬೆಳೆದ ಗೋಳಿಯ ಮರವನ್ನು ಬೆರಳಿಟ್ಟು ತೋರಿಸಿದ ಶಂಕರ ಮಾವನ ಮನೆಗೆ ಬಂದ ಶಿವೂನ ಹೆಚ್ಚಿನ ಸಮಯವನ್ನು ಆ ಮರ, ಆ ಹೊಳೆಯ ಬದಿಯ ಬಂಡೆ ಸೆಳೆಕೊಂಡಿವೆ.... ಆದರಿಂದ ಉತ್ಸಾಹ ಉಡುಗಿ ಹೋಗಿದೆ. ಏಕೋ ತಿಳಿಯದು—

"ಶಂಕರ, ತುದಿ ತನಕ ಹೋಗೋದು ಬೇಡ.... ಇಲ್ಲೇ ಕತ್ತಲಾಯಿತಲ್ಲ.... ಮನೇ ಕಡೆಗೇ ಹೋಗೋಣ ,, ಅವನನ್ನು ಹಿಂಬಾಲಿಸುತ್ತಾ ಶಿವೂ ಹೇಳಿದ

"ಹೂಂ. ಹಾಗಾದರೆ ಹಾಗೇ ಆಗಲಿ..., ಶಂಕರನೂ ವಿರೋಧ ಸೂಚಿಸದೆ ಮೆಲ್ಲನೆ ನಡಿಯತೊಡಗಿದ. ಅಲ್ಲಿ ಇಲ್ಲಿ ಸುತ್ತಿ ಇಬ್ಬರೂ ಮಾತಾಡತೊಡಗಿದರು ....ಮಬ್ಬು ಕತ್ತಲು ಸುತ್ತಲೂ ಕವಿಯತೊಡಗಿತು... ಶಿವೂಗೆ ತನ್ನ ಹೃದಯಕ್ಕೂ ಕತ್ತಲು ಕವಿಯುತ್ತಿದೆ ಎಂದು ಭಾಸವಾಯಿತು... ಮಾಗಿಯಂತೆ ಶಂಕರನ ಪ್ರಶ್ನೆಯನ್ನು ಒಂದೇ ಉತ್ತರದಲ್ಲಿ ಮುಗಿಸಿ, ಏನೋ ಧ್ಯಾನಿಸತೊಡಗಿದ...

ಅವರು ಮನೆಗೆ ಬಂದಾಗ, ಗಾಳಿಗೆ ಅತ್ತಿತ್ತ ಬಳುಕಿ, ನೆರಳನ್ನು ಕುಣಿಸುವ ದೀಪವನ್ನು ಹಿಡಿದುಕೊಂಡು ಪಾರ್ವತಿಯು ಚಾವಡಿಯ ಕಂಬಕ್ಕೊರಗಿ ನಿಂತಿದ್ದಳು.... ಮಬ್ಬು ಬೆಳಕಿನಲ್ಲಿ ಅವಳ ಸೌಂದರ್ಯ ಸವಿಯಲಾರದ ಶಿವೂ, ಅಲ್ಲೇ ನಿಲ್ಲು ಎಂಬ ಸಂಕೇತವೋ ಎಂಬಂತೆ ಒಮ್ಮೆ ಕೆಮ್ಮಿದ. ಆಕೆ ಒಲವಿನ ಕೆಮ್ಮನ್ನು ಹುಲಿಯ ಗರ್ಜನೆಯೆಂದು ತಿಳಿದುಕೊಂಡು, ಹೆದರಿದ ಹುಲ್ಲೆಯಂತೆ ಒಳಕ್ಕೆ ನೆಗೆದಳು.... ಶಿವೂ ಮುಕ್ಕಾಲು ನಿರಾಶನಾದ,

"ಊಟಕ್ಕೆ ಕುಳಿತಾಗಲೂ ಹಾಗೇ.. ಮಾತೇ ಮಾತು... ಶಿವೂನ ಎದುರಿನಲ್ಲಿ ಮಾವ ಕುಳಿತುಕೊಂಡಿದ್ದರು... ಆದ್ದರಿಂದ ಎಣ್ಣೆ ಬಡಿಸಲೆಂದು ಮಿಂಚಿನಂತೆ ಬಂದೇಗಿ ಮಾಯವಾದ ಪಾರ್ವತಿಯನ್ನು ಶಿವರಾಮನಿಗೆ ಕಾಣಲಾಗಲಿಲ್ಲ ಊಟವಾಯಿತು. ಹೊಟ್ಟೆ ತುಂಬಿತೋ ಇಲ್ಲವೋ ಶಿವನೇ ಬಲ್ಲ—ಶಿವೂ ಏನು ಬಲ್ಲ!

"ಶಂಕರ ನೀವೆಲ್ಲಾ ಪಡು ದಿಕ್ಕಿನ ಚಾವಡಿಯಲ್ಲಿ ಮಲಗಿಕೊಳ್ಳಿ. ಉಪ್ಪರಿಗೇಲಿ ಮಲಗಿದರೆ ನಿಮ್ಮನ್ನು ಕಚ್ಚಿ ಮಲಗಿದರೆ ನಿಮ್ಮನ್ನು ಕರೆದೆಬ್ಬಿಸುವವರ್ಯಾರು? ನಾವೂ ಇಲ್ಲೇ ಮಲಗುತ್ತೇವೆ...., ಚಾವಡಿಯಲ್ಲಿ ನಿಂತಿದ್ದರು ಅತ್ತೆ, ಶಿವರಾಮನಿಗೆಂದು ಹಾಲನ್ನು ತಂದು....

"ಅಯ್ಯಮ್ಮ, ನಾನು ಬೇಕಾದ ಮೇಲೆ ಸ್ನಾನ ಮಾಡುತ್ತೇನೆ... ಭಾವನ್ನ ಬೇಗ ಸ್ನಾನ ಮಾಡಿಸಿ ಬಿಡಿರಿ....ನೀರೆರೆಯಲಿಕ್ಕೆ ಪಾರ್ವತಿ ಇದ್ದಾಳೆ... ಕಳೆದ ವರ್ಷ ನಮ್ಮನ್ನೆಲ್ಲಾ —ಹೊಡೆದು ಬಡಿದು ಬಚ್ಚಲು ಹೊಂಡಕ್ಕೆ ಎಳೆತಂದವಳು, ಈ ವರ್ಷ... ,, ತನ್ನ ನೆಚ್ಚಿನ ಮಡದಿಯ ಪ್ರತಾಪ ಕೇಳಿಯೋ, ಪ್ರಶಂಸೆಯೆಂದೋ, ಶಿವೂನ ಮುಖ ತುಸು ಬಿರಿಯಿತು.

"ನೀನು, ಯಾವಾಗಲೂ ಹಾಗೇ ಮಾತಾಡ್ತಿರುವುದು—ತಮಾಷೇನೇ..., ಅಡಿಗೆ ಮನೆಯಿಂದ ಪಾರ್ವತಿಯ ಅಸ್ಪಷ್ಟ ಸೊಲ್ಲು ಕೇಳಿಸಿತು ಆ ಮಾತಿನೊಡನೆ—ಮೇಲಕ್ಕೆ ಪುಟನೆ ಗೆಯ್ಯುವ ಹುಬ್ಬು ಕಣ್ಣನ್ನರಳಿಸಿ ಕುಣಿವ ಕಿರಿಯ ಕಣ್ಗೊಂಬೆ, ನಸು ಕೆಂಪೇರಿ ಮತ್ತೂ ಶೋಭೆಗೊಳ್ಳುವ ಗಲ್ಲ....ಅವಕ್ಕಿಂತ ತುಸು ಕೆಂಪಾದ ತುಟಿ, ಹೊರ ಹೊಮ್ಮುವ ಭಾವದಂತೆಯೇ ಬಳುಕುವ ಮೈಕೈ—ಎಲ್ಲವನ್ನು ಶಿವರಾಮ ಕಲ್ಪಿಸಿ ಕಂಡುಕೊಂಡ.

ಶಿವೂ ಆಕೆನ್ನೆಲ್ಲ ಸರಿಯಾಗಿ ಕಂಡುಕೊಂಡುದುದು ಬೇಸಿಗೆ ರಜೆಯಲ್ಲಿ.... ಆತ ಅಲ್ಲಿಗೆ ಬಂದಾಗ ಗೀತಾಳೊಡನೆ ಪಾರ್ವತಿ ಬೆರೆತುಕೊಂಡು ತನ್ನನ್ನು ಎಷ್ಟು ಸರಿಯಾಗಿ ಆಣಕಿಸಿದ್ದಳು.... ತಾನೆಷ್ಟು ಸಾರಿ ಸೋಲನ್ನೊಪ್ಪಿಕೊಂಡಿದ್ದೆ.... ಆದರೆ ಅದೇ ಹದಿನಾಲ್ಕರ ಹರೆಯದ ಪಾರ್ವತಿ, ಈಗ ಹನ್ನೆರಡೂ ದಾಟಿದವಳಂತಾಗಿಬಿಟ್ಟಾಳೆ.... ಮಾತಿಲ್ಲ...ಕತೆಯಿಲ್ಲ...ಏಕೆ ... ಹಾಗೇಕೆ ಮಾಡುತ್ತಾಳೆ...? , ಪ್ರಶ್ನಾರ್ಥಕ ಚಿಹ್ನೆಯ ಪೆಡಂಭೂತ, ಕಣ್ಮುಚ್ಚಿಕೊಂಡಾಗಲೂ ತೆರೆದುಕೊಂಡಾಗಲೂ ಎದುರು ಕುಣಿಯುತಿತ್ತೇ ವಿನಾ ಉತ್ತರದ ಹೊಳಪು ಹೊಳೆವುತ್ತಿರಲಿಲ್ಲ.... ಕಿರು ತಾರೆಯಂತೆ ಚಾವಡಿಯ ಗೋಡೆಯಲ್ಲಿ ಪ್ರಕಾಶ ಬೀರುವ ಮಿಣುಕು ದೀಪವೊಂದನ್ನು ಬಿಟ್ಟು, ಉಳಿದೆಲ್ಲ ದೀಪಗಳು ನಿದ್ರಿಸಿದ್ದುವು. ಶಿವರಾಮನಿಗೆ ಪದೇ ಪದೇ ಅದೇ ಕಾಣುತಿತ್ತು...

ಗೋಡೆಯಲ್ಲಿನ ದೀಪವನ್ನು ಯಾರೋ ತೆಗೆದರು. ಹುಬ್ಬು ಗಂಟಿಕ್ಕಿ ಶಿವೂ, ದಿಟ್ಟಿಸಿ ನೋಡಿದ ಪಾರ್ವತಿ ದೀಪವನ್ನು ಹಿಡಿದು ಕೊಂಡು, ಎದುರಿನ ಅಂಗಳಕ್ಕಿಳಿದಳು—ಬಾವಿಕಟ್ಟೆಯ ಕಡೆಗೆ ಹೊರಟಂತೆ ಕಾಣುತಿತ್ತು.

ಬಳಲಿದ ಮನಸ್ಸಿನ ಶಿವೂ, ಧೈರ್ಯ ತಂದುಕೊಂಡು ತಾನೂ ಎದ್ದು ಹೊರಟ, ಪಾರ್ವತಿಯೊಡನೆ ಮಾತನಾಡಿಯೇ ಬಿಡುತ್ತೇನೆಂದು—

"ಪಾರ್ವತಿ...ನನ್ನ ಮೇಲೆ ಬೇಸರವೇ...., ಜೈಲರನ ಮುಂದಿನ ಕೈದಿಯ ದೀನ ಸ್ವರದಂತಿತ್ತು ಆ ದನಿ.

ಮುಂದೆ ಹೆದರಿ ಬಿಡದೆ ಅಲ್ಲೇ ನಿಂತು, ತಕ್ಷಣ ಆಕೆ ನುಡಿದಳು— "ನಿಮ್ಮ ಮೇಲೇಕೆ ಬೇಸರ... ನನ್ನ ಮೇಲಿನ ಬೇಸರವೇ..., ಪಾರ್ವತಿ ಮಾತಿನ ಮಲ್ಲಿ ಎಂಬುದನ್ನು ಶಿವೂ ಮದುವೆಯಾದವನೇ ತಿಳಿದಿದ್ದ... ಅಲ್ಲದಿದ್ದರೆ ಅನಿರೀಕ್ಷಿತ ಪ್ರಶ್ನೆಗೆ ಅಷ್ಟು ಸ್ಪಷ್ಟ ಉತ್ತರವನ್ನು ತಕ್ಷಣ ನೀಡಲು ಆಕೆ ಶಕ್ತಳಾಗುತ್ತಿದ್ದಿಲ್ಲ. ಪಾರ್ವತಿ ಬಹು ಮೆತ್ತಗಿನ ಸ್ವರದಲ್ಲಿ ಹೇಳಿದಳು:

"ನಿಮ್ಮ ಪಾದ ಹಿಡೀತೇನೆ.... ಆ ಕೊರಳಿನ ವಿಚಾರ ಮಾತೆತ್ತ ಬೇಡಿ.... ನಾನು ಬಾವಿ ಹಾರಿ ಸಾಯ್ತೇನೆ.... ,

ಶಿವೂನ ಎದೆ 'ಧಸಕ್ಕೆಂದಿತು. ಅರ್ಧದಲ್ಲೇ ತಡೆದು ಆತ ನುಡಿದ—"ಅಯ್ಯೋ ಬಾವಿಗೆ ಯಾಕೆ ಹಾರೋದು... ಆದದ್ದಾದರೂ ಏನು ತಿಳಿಸಬಾರದೆ ....,

"ಇವತ್ತು ಸ್ನಾನಕ್ಕೆಂದು ಬೆಳಿಗೆ ಹೊಳೆಗೆ ಹೋಗಿದ್ದೆ, ಅಮ್ಮ ಚಕ್ರಸರ ಹಾಕಿಕೊಳ್ಳೆಂದು ಪೆಟ್ಟಿಗೆಯಿಂದ ತೆಗೆದು ಕೊಟ್ಟಿದ್ದಳು. ನಾನು ಪೆಟ್ಟಿಗೆ ಮೇಲೆ ಇಟ್ಟು, ಹೊಳೆಗೆ ಹೋಗಿ ಆ ಬಂಡೆ ಮಡುವಿನಲ್ಲಿ ಸ್ನಾನ ಮಾಡಿ ಬಂದೆ, ಮಧ್ಯಾಹ್ನ ಬಂದು ನೋಡುವಾಗ ಸರವಿರಲಿಲ್ಲ. ನಿಮ್ಮ ತಾಯಿ 'ಪ್ರಸಾದ'ವೆಂದು ಕೊಟ್ಟ ಸರವಂತೆ ಅದು.... ಮಾವಯ್ಯ ಬಯ್ಯದಿರ್ತಾರೆಯೇ.... ಲಕ್ಷಣದ ಸರವನ್ನು ಯಾರೋ ಕದ್ದುಕೊಂಡರಲ್ಲಾ... ಇನ್ನೇನು ಮಾಡುವುದು.... ,, ತೆರೆತೆರೆಯಾಗಿ ಉಕ್ಕಿ ಬರುವ ದುಃಖ, ಉದುರಿಸುವ ಮುತ್ತಿನ ಕಂಬನಿಯನ್ನು ಶಿವೂ ಕಾಣಲಿಲ್ಲ. ಅವನಿಗೆ ಕಥೆ ಕೇಳಿ ಬಾವಿ ಹಾರಿಕೊಳ್ಳುವಂತಾಗಿತ್ತು. ಆದರೂ— "ಮನೆಯನ್ನೆಲ್ಲಾ ಹುಡುಕಿದೆಯಾ....ಹೇಳಿಯಲೆಲ್ಲಾ ದರೂ..., ಎಂದು ರಾಗವೆಳೆದ.

"ಛೇ.... ಹೊಳೇಲೆಲ್ಲಿಂದ.... ಮನೆಯಿಂದಲೇ ಯಾರೋ ಕಳ್ಳರು...., ಬಲಗೂಡಿದ ಸ್ವರ.

"ಹೋಗಲಿ ಬಿಡು.... ಅಷ್ಟೇ ತೂಕದ ಚಿನ್ನದ ಸರ ನಾನು ತಂದು ಕೊಡುತ್ತೇನೆ.... ಇನ್ನು ದುಃಖಿಸಿ ಫಲವೇನು? ,, ಎಂದು ಶಿವೂ ಸಂತೈಸಿದ. ಮತ್ತೆ ಮರು ಮಾತಾಡದೆ ಶಿವೂ ಹೋಗಿ ಮಲಗಿಕೊಂಡ.

"ತಂದೆಗೆ ಕಾಗದ ಬರೀಲೆ, ಸಂಪೂ

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್. ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು 3. ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ ೪½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜು ಎದುರುಗಡೆ)ಮಂಗಳೂರು. ಮಾಲಿಕ: ಕೆ. ಕೆ. ಆರ್. ಶೇಟ್

ರ್ಣ ಕತೆಯನ್ನು ವಿವರಿಸಿ ...ಕಳ್ಳ ಬಂದು ಕದ್ದದ್ದಂತೆಯಲ್ಲಿ ಕ್ಷಮೆಯನ್ನಾದರೂ ... ಆಲೋಚನೆಯ ತೆರೆಗಳು ಒಂದರ ಮೇಲೊಂದೆದ್ದು ಬಂದು ಹತ್ತಿಕ್ಕಿ, ಮೈಮೇಲೆಲ್ಲ ಕುಂತುರ್ವನಿಯನ್ನು ಹಾರಿಸುತಿದ್ದುವು.

"ಭಾವ...ಏಳಿ...ಬೇಗ ಏಳಿ.... ಅಲ್ಲದಿದ್ದರೆ ನಾನೇ ಮೊದಲು ಮೀಯ್ತೇನೆ" ಗೀತಾ ಶಿವರಾಮನನ್ನು ಎಚ್ಚರಿಸಲೆಂದು ಬಂದು ಕೂಗಿ ಕರೆದಳು. ಎದ್ದು ಕುಳಿತು ಕೊಳ್ಳದಿದ್ದರೆ ಮೈದಡವಿ ಎಚ್ಚರಗೊಳಿಸಲೂ ಹಿಂದಾಗದ ತುಂಟಿ ಗೀತಾ, ಕರೆದೊಡನೆ ಎದ್ದ ಶಿವೂ.

"ನಿಮಗೆ ಸ್ನಾನದ ಯೋಚನೇಲಿ ನಿದ್ದೇನೆ ಬರ್ಲಿಲ್ವ ಭಾವ .. ಶಂಕ್ರಣ್ಣ ಎಷ್ಟು ಕೂಗಿದ್ರು ಏಳೊಲ್ಲ ...ನೀವು ಒಂದೇ ಬಾರಿಗೆ ಎದ್ದು ಬಿಟ್ಟಿದ್ದೀರಿ '

"ಗೀತಾ ಒಂದು ದೀಪವನ್ನು ತಂದು ಕೊಡು ಉಪ್ಪರಿಗೆಗೆ ಹೋಗಿ ಸ್ನಾನದ ಪಂಚೆ ತರ್ತೀನಿ" ಮಾತು ಮುಗಿಸುವ ಮೊದಲೇ ದೀಪವನ್ನು ತಂದು ನಿಂತಿದ್ದಳು ಗೀತಾ.

ಶಿವೂ ದೀಪವನ್ನು ತೆಗೆದುಕೊಂಡು ಮಾಳಿಗೆಯ ಮೆಟ್ಟಿಲ್ಲನೇರಿದ.

ಗೀತಾ ಬಚ್ಚಲು ಮನೆಗೆ ಬಂದು ಅಂದಳು—"

"ಅಮ್ಮ ಭಾವನ್ನ ಕರೆದುಕೊಂಡು ಬಂದೆ..." ಮಧ್ಯೆ ಉಸಿರು ಬಿಡದೆ ಒಮ್ಮೆಲೇ ಹೇಳಿದ್ದನ್ನು ಕೇಳಿ ...ಪಾರ್ವತಿ ಸೊಂಟಕ್ಕಿಟ್ಟ ಕೊಡಪಾನವನ್ನು ಹಿಡಿದು ಅಲ್ಲೇ ನಿಂತಳು

"ಬರಲಿಲ್ಲ. ಮಾರಾಯತೀ ಇಷ್ಟು ಬೇಗ ನಿಂತು ಕಾಯ್ಬೇಡ—ಉಪ್ಪರಿಗೆಗೆ ಹೋಗಿದ್ದಾರೆ, ಅಣ್ಣನಿಂದ ಕಲಿತ ಕೆಣಕು ನುಡಿಯನ್ನು ಗೀತಾ ಅಕ್ಕನ ಹತ್ತಿರ ಹೇಳಿದಳು.

ಸ್ಟೂಲಿನ ಮೇಲೆ ನಿಂತು, ತುದಿಯಲ್ಲಿನ ಅಜ್ಜಿಯ ಮಡಿವಸ್ತ್ರವನ್ನು ಒಣಗಿಸುವ ಕೋಣೆಯ ಮುಚ್ಚಿಗೆಯ ಮೇಲೆ ಭಾವ ಏನನ್ನೋ ಎಸೆಯುತ್ತಿರುವುದನ್ನು ಗೀತಾ ಕಂಡಳು. ಎಡದ ಕೈಯಲ್ಲಿ ಕೋಟು ಜೋತಾಡುತಿತ್ತು. ಕೂಡಲೇ ಗೀತಾ ಕೇಳಿದಳು—" ಏನಾಯ್ತು ಭಾವ 'ಅಲ್ಲೇನು ಮಾಡ್ತೀರಿ ...",

"ಆಂ..." ಬೆಚ್ಚಿಬಿದ್ದು ಶಿವೂ ರಾಗವೆಳೆದ.

"ಅಲ್ಲೇನು ಮಾಡ್ತೀರಿ .." ಆಕೆ ಮತ್ತೆ ಪ್ರಶ್ನಿಸಿದಳು

"ಏನಿಲ್ಲಾ....ಕೋಟಿನ ಕಿಸೆಯಲ್ಲಿ ಶಾಲೇ ಹುಡುಗರು ಸಿಗರೇಟಿನ ತುಂಡು, ಕಸಗಿಸ ತುಂಬಿಸಿಟ್ಟಿದ್ದಾರೆ....ಅದನ್ನೇ ಬಿಸಾಡಿದೆ ಅಷ್ಟೆ" ಗೀತಳು ತನ್ನನ್ನು ನಂಬಿದಳೆಂದು ಶಿವೂ ಹಿರಿ ಹಿರಿ ಹಿಗ್ಗಿದ.

ಶಿವೂ ಕೆಳಗಿಳಿದು ಬಂದ. ದೇವರೆದುರಿನ ಮಣೆಯಲ್ಲಿ ಕುಳಿತು ಎಣ್ಣೆ ತುಪ್ಪ ಮೈಗೆ ಸರಿಯಾಗಿ ಪೂಸಿಕೊಂಡದ್ದಾಯ್ತು ಮತ್ತೊಂದು ವರ್ಷದ ತನಕ ಈ ಸ್ನಾನ ಬೇಡಪ್ಪಾ ಎಂಬಂತಹ ಸ್ನಾನವೊಂದು ಮುಗಿಯಿತು ಅಡಿಗೆ ಮನೆಯಲ್ಲಿ ಕೊಟ್ಟ ಮೊಸರವಲಕ್ಕಿಯನ್ನು ತಿಂದೂ ಆಯಿತು. ಪುನಃ ನಿದ್ರಿಸಲೆಂದು ಶಿವೂ ಚಾವಡಿಗೆ ಬಂದು, ಮಲಗಿದ.

ಕಣ್ಣು ಅಲ್ಲೇ ಬಾಡಲಿಕ್ಕೆ ಹತ್ತಿದ್ದಿತು ಬಚ್ಚಲು ಮನೆಯಿಂದ ಮಂದಸ್ವರ ಕೇಳಿಸುತಿತ್ತು—" ಅಲ್ಲ ಅಮ್ಮ..ಮನೇಲಿ ಕಳೆದುಹೋದದ್ದು ಹೌದು..,

"ಹಾಗಾದರೆ ಅವರಿಗಾದರೂ ಹೇಗೆ ತಿಳಿಯಿತು", "ಶಂಕರ ಪೀರಿಕೆ ಮಾಡಿರಬೇಕು ನಾನು ಮುಕ್ತಾಯ ಮಾಡಿದೆ.," "ಒಟ್ಟು ನಿಮ್ಮಿಂದ ನನಗೆ ಸುಖವಿಲ್ಲ . ಹೋಗು ಶಾಂತಾಳನ್ನು ಕರೆದುಕೊಂಡು ಬಾ," ತಾಯಿಯ ಆಜ್ಞೆಯನ್ನು ಹೊತ್ತುಕೊಂಡು, ಚಾವಡಿಗೆ ಬಂದು, ತಂಗಿಯನ್ನು ಕರೆದು ಹೋದಳು ಪಾರ್ವತಿ.

ಶಿವೂ ಬೆಳಗ್ಗೆ ಎದ್ದು ಮುಖ ತೊಳೆಯಲೆಂದು ಹೊರಟಾಗ ಅಡಿಗೆ ಮನೆಯಿಂದ ಗೀತಾಳ ದನಿ ಕೇಳಿಸಿತು "ಅಣ್ಣ.. ಮುಚ್ಚಿಗೆ ಮೇಲೆ ಸಿಗರೇಟಿನ ತುಂಡುಗಳನ್ನು ಭಾವ ಎಸೆದಿದ್ದಾರೆ. ತೆಗೆದು ಬಿಸಾಡಿಬಿಡು ..ಅಲ್ಲದಿದ್ದರೆ ಅಜ್ಜಿ ನಿನಗೆ ಬೈತಾರೆ ..", ಎಂದು

ಆದರೆ ಮುಖ ತೊಳೆದು ಹಿಂತಿರುಗಿ ಬರುವಾಗ ಮನೆಯಲ್ಲಿ ರಾದ್ಧಾಂತವೇ ತೊಡಗಿತ್ತು.

"ಹೌದು ..ನಿನ್ನೆಯಿಂದಲೇ ನನಗೆ ಅವನ ಮೇಲೆ ಸಂಶಯವಿತ್ತು. ಕತೆ ಪುಸ್ತಕ, ಚಿತ್ರಪುಸ್ತಕ ಈ ಪೋಷಾಕು ಶೃಂಗಾರಕ್ಕೆಂತ ಎಲ್ಲಿ ದುಡ್ಡು ಸಿಕ್ಕುತ್ತೆ ...ತಮಾಷೆಗೆಂದು ತೆಗೆದಿಟ್ಟಿರಬೇಕು. ಈಗ ಮರ್ಯಾದೆ ಹೋಗುತ್ತೆಂತ ತಂದ್ಯೊಟ್ಟ..", ಮೇಜಿನ ಬಳಿ ನಿಂತು ಮಾವ ಒದರುತ್ತಿದ್ದರು.

ಅತ್ತೆ "ಸುಮ್ನಿರಿ ನೋಡುವ", ಎಂದು ಸಮಾಧಾನ ಮಾಡುತ್ತಿದ್ದರು.

ಶಂಕರ ಕಲ್ಲಾಗಿ ಒದಿಯಲ್ಲಿ ನಿಂತುಕೊಂಡಿದ್ದ ಅವನೇ ಕಳ್ಳನೆಂದು ಮನೆಗೆ ಮನೆಯೇ ಅರಚಿಕೊಳ್ಳುತಿತ್ತು. ಮಧ್ಯಾಹ್ನದ ತನಕವೂ ಇದೇ ಗಲಾಟೆ ನಡೆದೇ ಇತ್ತು.

ನಿರುದ್ಯೋಗ ನಿವಾರಣಾ ಸಮಸ್ಯೆ

(೧ನೇ ಪುಟದಿಂದ)

ಪಾಯಿಗಳ ಬಂಡವಳವು ೩೦೦ ರೂಪಾಯಿಗಳ ಆದಾಯವನ್ನು ತರುವುದು ಸಾಧ್ಯವಿದೆ. ಹೀಗಾಗ ಬೇಕಾದರೆ, ಆಡಳಿತಾತ್ಮಕವಾಗಿ ತುಂಬ ಕಾರ್ಯಸಾಧಿಸಬೇಕಾಗಿದೆ, ಮಾತ್ರವಲ್ಲ, ಉತ್ಪಾದಿತವಾದ ಸರಕುಗಳಿಗೆ ಯೋಗ್ಯ ಮಾರು ಕಟ್ಟೆಯನ್ನೂ ನಿರ್ಮಿಸಬೇಕಾಗಿದೆ. ಆದರೆ, ಇದೇನೂ ಕಠಿಣವಾದ ಕಾರ್ಯವಾಗಲಾರದು. ರಾಷ್ಟ್ರ ಪುನಾರಚನೆಗಾಗಿ ಕಟಿಬದ್ಧರಾಗಿರುವ ಸರಕಾರ ಇದನ್ನು ಸಾಧಿಸಲು ಮುಂದಾಗಬೇಕು

ಭಾರತಕ್ಕೆ ಅಮೆರಿಕೆಯು ತ್ರಿವಿಧವಾಗಿ ನೆರವಾಗುತ್ತಿದೆ. ಅಭಿವೃದ್ಧಿ ಸಾಲಗಳು, ತಾಂತ್ರಿಕ ಸಹಾಯಗಳೊಡನೆ ಶಾಂತಿಗಾಗಿ ಆಹಾರಧಾನ್ಯಗಳನ್ನೂ ಅದು ಕೊಡತೊಡಗಿದ ೧೯೫೪ರ ನಂತರ ಅದು ಭಾರತಕ್ಕೆ ನೀಡಿದ ಸಹಾಯದಲ್ಲಿ ನೂರಕ್ಕೆ ೬೦ರಷ್ಟು ಆಹಾರ ಧಾನ್ಯಗಳ ರೂಪದಲ್ಲಿಯೇ ಇದೆ. ಹಾಲಿನಪುಡಿ ಮತ್ತು ಎಣ್ಣೆಗಳಲ್ಲದೆ ೧೮ ಮಿಲಿಯ ಟನ್ನು ಆಹಾರಧಾನ್ಯಗಳನ್ನದು ಇದುವರೆಗೆ ನಮಗೆ ಕೊಟ್ಟಿದೆ ಅದು ನಮ್ಮ ಗ್ರಾಮೀಣ ಉದ್ಯೋಗ ಕಾರ್ಯಕ್ರಮವನ್ನು ತೀವ್ರಗೊಳಿಸಲು ತನ್ನ ಮಿಕ್ಕಿದ ವ್ಯವಸಾಯೋತ್ಪನ್ನಗಳನ್ನು ಸಹಾಯದ ರೂಪದಲ್ಲಿ ನೀಡಲು ಮುಂದಬಂದಿದೆ. ಅಧ್ಯಕ್ಷ ಕೆನೆಡಿಯವರ 'ಶಾಂತಿಗಾಗಿ ಆಹಾರ'ವೆಂಬ ಹೊಸ ಯೋಜನೆಯು ಅಂತಾರಾಷ್ಟ್ರೀಯ ಮಹತ್ವವುಳ್ಳದು ಗ್ರಾಮೀಣ ಪ್ರದೇಶಗಳಲ್ಲಿ ಯೋಜನಾ ಕಾರ್ಯದಲ್ಲಿ ದುಡಿಯುವ ಹಳ್ಳಿಗರಿಗೆ ತಮ್ಮ ಸಂಬಳದ ಒಂದಂಶವಾಗಿ ಆಹಾರ ಧಾನ್ಯವನ್ನೀಯುವುದೇ ಈ ಯೋಜನೆಯ ಗುರಿ ಇದರಿಂದ, ಯೋಜನೆಯ ಆರ್ಥಿಕ ವೆಚ್ಚವನ್ನು ಕಡಿಮೆಮಾಡಬಹುದು; ಅದರ ಜೊತೆಗೆ ಆಹಾರಧಾನ್ಯಗಳ ಬೆಲೆಯೇರಿಕೆಯನ್ನೂ ತಡೆಯಲು ನೆರವಾಗಬಹುದು ಇಂತಹ ಯೋಜನೆಯು ಅತ್ಯಧಿಕ ಸಂಖ್ಯೆಯಲ್ಲಿ ಗ್ರಾಮೀಣ ಜನರು ದುಡಿಯಬಲ್ಲ ಕಾಲುವೆಗಳ ತೋಡುವಿಕೆ ಮತ್ತು ಮಾರ್ಗಗಳ ರಚನೆ ಮೊದಲಾದವುಗಳಲ್ಲಿ ಅತ್ಯುಪಯುಕ್ತವೆನಿಸಬಲ್ಲುದು.

ಬಿಹಾರ ರಾಜ್ಯದ ಪುರುಲಿಯಾದಲ್ಲಿ ಕೈಗೊಳ್ಳಲಾಗುವ ಒಂದು ಬೃಹದ್ಯೋಜನೆಯಲ್ಲಿ ಅಮೆರಿಕೆಯ 'ಶಾಂತಿಗಾಗಿ ಆಹಾರ' ಕಾರ್ಯಕ್ರಮವನ್ನು ಜ್ಯಾರಿಗೊಳಿಸುವ ಕುರಿತು ಮಾತುಕತೆಗಳು ಕೊನೆಯ ಹಂತಕ್ಕೆ ಬರುತ್ತಿವೆ ಇದೇ ಮೊದ[illegible]ಯಲ್ಲಿ ಈ ಕಾರ್ಯಕ್ರಮ ಭಾರತದ ವಿವಿಧ ಹಳ್ಳಿಗಳಲ್ಲೂ ಆರಂಭವಾಗಬೇಕು ಇದರಿಂದ ಅಭಿವೃದ್ಧಿ ಯೋಜನೆಗಳು ಕಾರ್ಯಕೃತವಾಗುವುವಲ್ಲದೇ ಅದರೊಡನೆಯೇ ಗ್ರಾಮೀಣ ಜನರ ನಿರುದ್ಯೋಗ ಸಮಸ್ಯೆಯೂ ಪರಿಹಾರಗೊಳ್ಳುವುದು. ನಮ್ಮ ಯೋಜನಾ ಕರ್ತರೂ ಆಡಳಿತಗಾರರೂ ಇತ್ತ ಅವಶ್ಯ ಗಮನ ಹರಿಸಬೇಕು

—ಗೋರಾ

ಎಲ್ಲರಿಗೂ ಬೇಕಾಗಿದೆ

ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಪ್ರತಿಯೊಬ್ಬರ ಆರ್ಥಿಕ ಅನುಕೂಲತೆ ಮತ್ತು ಅವಶ್ಯಕತೆಗಳಿಗೆ ಒಪ್ಪುವ ಫಲದಾಯಕ ಯೋಜನೆಗಳು ನಮ್ಮಲ್ಲಿವೆ.

ಪಿಗ್ಮಿ	ರೇವಣಾತಿ ಯೋಜನೆ ಪ್ರತಿದಿನವೂ ಉಳಿಸಬೇಕೆಂಬ ಆಪೇಕ್ಷೆಯುಳ್ಳವರಿಗೆ ಅಗತ್ಯ. ನಾಲ್ಕಾಣೆಯಷ್ಟು ಅಲ್ಪ ಮೊತ್ತದಿಂದಲೂ ಆರಂಭಿಸಬಹುದು. ಪಿಗ್ಮಿಯು ಬೇಂಕಿನ ಸೇವೆಯನ್ನು ಮನೆಬಾಗಿಲಿಗೆ ತರುವುದು.
ಕ್ಯುಮ್ಯುಲೆಟಿವ್	ರೇವಣಾತಿಗಳು. ರೂಪಾಯಿ ಐದು ಅಥವಾ ಆದರ ಗುಣಕಗಳಲ್ಲಿ ಸಂಗ್ರಹಿಸಿಡಲು ಉತ್ತಮ ಸಾಧನ ಮಾಸಿಕ ವೇತನ ಪಡೆಯುವ ಮಂದಿಗೆ ಅನುಕೂಲ ಹಾಗೂ ಆಕರ್ಷಕವಾಗಿದೆ.
ಲಕ್ಷ್ಮಿ	ಕೇಶ್ ಸರ್ಟಿಫಿಕೇಟ್ ನಿಮಿತ್ತರುವ ಬಂಡವಾಳಕ್ಕೆ ಲಾಭದಾಯಕ ಪ್ರತಿಫಲ ದೊರೆಯುವುದು ಸುಪ್ತ ಧನದ ಸದ್ವಿನಿಯೋಗಕ್ಕೆ 'ಲಕ್ಷ್ಮಿ'ಯ ಆಹ್ವಾನ ಮನೋಹರವಾಗಿದೆ.
ವಿದ್ಯಾರ್ಥಿಗಳಿಗೆ	ವಿಶೇಷ ಸೌಲಭ್ಯ ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಪಾರವಿಸೆ. ಮಾತ್ರವಲ್ಲದೆ ನಮ್ಮ ಶಾಖೆಯಿಂದ ಧರ್ಮಾರ್ಥವಾಗಿ ಹಣ ಪಾವತಿ ಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ.

ಆದರ್ಶ ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ. 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೨೫ | ಉಡುಪಿ 1—3—1962 ಗುರುವಾರ | Vol· 41 No· 25

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ

ವಿದ್ಯಾರ್ಥಿ ಸಂಖ್ಯೆಗೆ ಮಿತಿ ಅವಶ್ಯವೆ?

ಪಶ್ಚಿಮ ಬಂಗಾಳ ಸರಕಾರವು ಶೈಕ್ಷಣಿಕ ಪ್ರಣಾಳಿಯಲ್ಲಿ ಯಾವ ರೀತಿಯ ಸುಧಾರಣೆಗಳನ್ನು ಮಾಡಬಹುದೆಂಬುದನ್ನು ವರದಿಮಾಡುವಂತೆ ಸುವಿಖ್ಯಾತ ಬ್ರಿಟಿಷ್ ವಿದ್ಯಾ ತಜ್ಞರಾದ ಸರ್ ಜಾನ್ ಸಾರ್ಜೆಂಟರನ್ನು ಕೇಳಿಕೊಂಡಿತ್ತು. ಸರ್ ಸಾರ್ಜೆಂಟರು ತಮ್ಮ ವರದಿಯನ್ನೀಗ ಸರಕಾರಕ್ಕೆ ಒಪ್ಪಿಸಿದ್ದಾರೆ. ಇದರಲ್ಲಿ ಅವರು ಕೆಲವೊಂದು ಪ್ರಮುಖ ಸಿಫಾರಸುಗಳನ್ನು ಮಾಡಿದ್ದಾರೆ. ಪ್ರಾಥಮಿಕ ಶಿಕ್ಷಣದಿಂದ ತೊಡಗಿ ವಿಶ್ವವಿದ್ಯಾಲಯ ಶಿಕ್ಷಣ ಕ್ಷೇತ್ರದ ವರೆಗೆ ಇವರ ವರದಿಯಲ್ಲಿ ಲಕ್ಷೀಕರಣ ಬಿದ್ದಿದ್ದು, ಇವರು ಸರಕಾರಕ್ಕೆ ಮಾಡಿದ ಸಿಫಾರಸುಗಳು ಬಹು ಬೆಲೆ ಬಾಳುವಂತಹವುಗಳಾಗಿವೆ. ಕೇವಲ ಪಶ್ಚಿಮ ಬಂಗಾಳಕ್ಕೆ ಮಾತ್ರವಲ್ಲ, ಭಾರತದ ಎಲ್ಲ ರಾಜ್ಯಗಳೂ ಈ ವರದಿಯ ಮುಖ್ಯಾಂಶಗಳನ್ನು ಕಾರ್ಯಗತ ಮಾಡಿದರೆ, ನಮ್ಮ ದೇಶದ ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವುದರೊಡನೆ ನಮ್ಮಲ್ಲಿ ನೀಡಲಾಗುತ್ತಿರುವ ಶಿಕ್ಷಣದ ಮಟ್ಟವೂ ಉನ್ನತವಾಗುವುದು ಸಾಧ್ಯವಿದೆ. ಆದರೆ, ನಮ್ಮ ಸರಕಾರಗಳ ಮತ್ತು ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಯು ಮಾತ್ರ ಇಂತಹ ಕ್ರಾಂತಿಕಾರಿ ಸುಧಾರಣೆಗಳನ್ನು ಮಾಡಲು ಬಲವಾದ ಆತಂಕವಾಗಿ ಪರಿಣಮಿಸುವುದು ಖಂಡಿತ.

ಸರ್ ಸಾರ್ಜೆಂಟರು ಮಾಡಿದ ಸಿಫಾರಸುಗಳನ್ನು ಹೀಗೆ ಸಂಗ್ರಹಿಸಬಹುದು.

೧. ಪ್ರಾಥಮಿಕ ಶಿಕ್ಷಣವನ್ನು ಮೂಲ ಶಿಕ್ಷಣದ ಮಾದರಿಗೆ ಪರಿವರ್ತಿಸುವುದಕ್ಕೆ ಅಗ್ರ ಪ್ರಾಶಸ್ತ್ಯವನ್ನಿತ್ತು ಆದಷ್ಟು ಕಡಿಮೆ ಅವಧಿಯಲ್ಲಿ ಅದನ್ನು ಸಾಧಿಸಬೇಕು. ಮಾತ್ರವಲ್ಲ, ಮೂಲ ಶಿಕ್ಷಣದ ಅವಧಿಯನ್ನು ಮಗುವಿನ ೧೪ ವರ್ಷದ ವರೆಗೆ ಅಥವಾ ಎಂಟನೆಯ ತರಗತಿಯ ವರೆಗೆ ವಿಸ್ತರಿಸಬೇಕು. ಉಪಾಧ್ಯಾಯರಿಗೆ ನೀಡುವ ಮೂಲ ಶಿಕ್ಷಣ ತರಬೇತಿಯ ಅವಧಿಯು ಈಗ ಒಂದು ವರ್ಷವಾಗಿದ್ದು ಅದನ್ನು ಕೂಡಲೇ ಎರಡು ವರ್ಷಗಳಿಗೆ ಹೆಚ್ಚಿಸಬೇಕು. ತರಬೇತಿ ಹೊಂದಿದ ಅಧ್ಯಾಪಕರ ಕೊರತೆಯಿರುವ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಬೇಕು.

೨. ಹಿರಿಯ ಮಾಧ್ಯಮಿಕ ಶಿಕ್ಷಣದ ಮಟ್ಟವನ್ನು ಎತ್ತರಿಸಿ, “ಇಂಟರಮೀಡಿಯೇಟ್” ತರಗತಿಯ ವರೆಗಿನ ಶಿಕ್ಷಣವನ್ನಿದು ಒಳಗೊಂಡಿರಬೇಕು. ಈ ಹಾಯರ್ ಸೆಕೆಂಡರಿಯಲ್ಲಿ ಉತ್ತೀರ್ಣರಾದವರು ನೇರವಾಗಿ ಎರಡು ವರ್ಷದ ಪದವೀ ವರ್ಗಗಳಿಗೆ ಸೇರುವಂತಾಗಬೇಕು ಎಂದರೆ, ಎರಡು ವರ್ಷಗಳ ಇಂಟರ್ ಮೀಡಿಯೇಟ್ ಶಿಕ್ಷಣವನ್ನು ಮಾಧ್ಯಮಿಕ ಶಿಕ್ಷಣದಲ್ಲಿಯೇ ಸೇರ್ಪಡೆಗೊಳಿಸಬೇಕು. ಸದ್ಯದ ಮಟ್ಟಿಗೆ ೧೧ ವರ್ಷದ ವರೆಗೆ ಮುಂದುವರಿಯುವ ಹಾಯರ್ ಸೆಕೆಂಡರಿ ಶಿಕ್ಷಣ ಪ್ರಣಾಳಿಯನ್ನು ಮುಂದುವರಿಸಬಹುದು.

೩. ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ, ಪೂರ್ವಕಲಾಶಾಲಾ ಪರೀಕ್ಷೆಗಳ ಪರಿಣಾಮವನ್ನು ಮಾತ್ರ ಗಣನೆಗೆ ತಂದುಕೊಳ್ಳಬಾರದು. ಅದರ ಬದಲು, ಪ್ರತಿ ಕಾಲೇಜಿನ ಅಧಿಕಾರಿಗಳು ಇಂತಹ ವಿದ್ಯಾರ್ಥಿಗಳಿಗೆ ಮತ್ತೊಂದು ಪರೀಕ್ಷೆಯನ್ನು ಮಾಡಿ, ಇದರ ಪರಿಣಾಮವನ್ನು ಮಾತ್ರ ಅನುಲಕ್ಷಿಸಬೇಕು. ನಿಯಮಿತ ಸೀಟುಗಳಿರುವ ಕಾಲೇಜುಗಳಲ್ಲಿ ಸ್ಪರ್ಧಾಕ್ರಮದಲ್ಲಿಯೇ ವಿದ್ಯಾರ್ಥಿಗಳ ಆಯ್ಕೆಯು ನಡೆಯಬೇಕು.

೪. ಯಾವುದೇ ದೊಡ್ಡ ಕಾಲೇಜಿನಲ್ಲಾದರೂ ಒಂದು ಸಾವಿರಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಾರದು. ಕೆಲವೊಂದು ಸಾವಿರ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ದಿನದಲ್ಲಿ ಎರಡು ಮೂರು ‘ಶಿಫ್ಟ್’ಗಳಲ್ಲಿ ಪ್ರವಚನ ನಡೆಸುವ ಪದ್ಧತಿಯು ಅವಾಂಛನೀಯ. ಪ್ರವೇಶವನ್ನು ನಿಯಂತ್ರಿಸದೆ ಹೋದರೆ, ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಅಧ್ಯಾಪಕ ವಿದ್ಯಾರ್ಥಿ ಪ್ರಮಾಣವನ್ನು ಉಚಿತ ರೀತಿಯಲ್ಲಿಟ್ಟುಕೊಳ್ಳುವುದು ಸಾಧ್ಯವಿಲ್ಲ.

೫. ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಿರಬಾರದು. ಪ್ರತಿ ಆರು ಸಾವಿರ ವಿದ್ಯಾರ್ಥಿಗಳಿಗೆ ಒಂದು ವಿಶ್ವವಿದ್ಯಾಲಯಗಳಿರಬೇಕು. ಎಲ್ಲ ವಿಶ್ವವಿದ್ಯಾಲಯಗಳೂ ಒಂದೇ ರೀತಿಯ ಕೋರ್ಸುಗಳನ್ನು ನೀಡದೆ ಕೆಲವೊಂದು ವಿಶಿಷ್ಟ ಪದ್ಧತಿಯ ಶಿಕ್ಷಣ ವಿಭಾಗಗಳನ್ನು ತೆರೆಯಬೇಕು.

೬. ಇಂಜನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ರಾಷ್ಟ್ರದ ಅರ್ಥವ್ಯವಸ್ಥೆಗೆ ಬೇಕಾದಷ್ಟನ್ನು ನೋಡಿಕೊಳ್ಳಬೇಕು. ತಾಂತ್ರಿಕ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ಅಧಿಕಾಧಿಕ ಪ್ರಮಾಣದಲ್ಲಿ ನೀಡಲು ಪೋಲಿಟೆಕ್ನಿಕ್ ಸಂಸ್ಥೆಗಳನ್ನು ಹೆಚ್ಚಾಗಿ ಸ್ಥಾಪಿಸಬೇಕು. ಇದರ ಜೊತೆಗೇನೇ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಶಿಕ್ಷಣ ನೀಡುವ ಸಮಯದಲ್ಲಿಯೇ ವ್ಯಾವಹಾರಿಕ ಕ್ಷೇತ್ರದಲ್ಲೂ ಅನುಭವ ಬರುವಂತೆ ಪ್ರತಿ ಪೋಲಿಟೆಕ್ನಿಕಲ್ ಸಂಸ್ಥೆಯನ್ನೂ ಔದ್ಯಮಿಕ ಸಂಸ್ಥೆಗಳಿಗೆ ಜೋಡಣೆಗೊಳಿಸಬೇಕು. ಶಿಕ್ಷಣದ ಮಾಧ್ಯಮದ ಪ್ರಶ್ನೆಯು ಗಡುಚಾದರೂ ಇಂಗ್ಲಿಷ್ ಭಾಷೆಯ ಶಿಕ್ಷಣವು ಭಾರತೀಯ ವಿದ್ಯಾರ್ಥಿಗಳಿಗೆ ಲಾಭಪ್ರದವಾದುದು; ವಿಶ್ವವಿದ್ಯಾಲಯ ವಿಭಾಗದಲ್ಲಿ ಇಂಗ್ಲಿಷ್ ಭಾಷೆಯ ವಿಶೇಷ ಅಧ್ಯಯನದ ಅವಕಾಶ ಕಲ್ಪಿಸಿಕೊಡುವುದು ಸೂಕ್ತವಾಗಿದೆ.

ಈಗ ಈ ಸಿಫಾರಸುಗಳ ಬಗ್ಗೆ ಕುರಿತು ವಿಚಾರಮಾಡಬಹುದು.

೧. ಮೂಲ ಶಿಕ್ಷಣ ಮಾದರಿಯನ್ನು ಶೀಘ್ರವಾಗಿ ವ್ಯವಹೃತಗೊಳಿಸಲು ಉತ್ಸಾಹವಿದೆಯಾದರೂ ಅದನ್ನು ೧೪ನೆ ವರ್ಷದ ವರೆಗೆ ಮುಂದುವರಿಸಲು ಹೇರಾಸೆಯಿರುವುದಾದರೂ ಆರ್ಥಿಕ ಅನುಕೂಲತೆ ಅಡ್ಡ ಬರುತ್ತದೆ. ಈಗಾಗಲೇ ಮೂಲ ಶಿಕ್ಷಣ ಶಾಲೆಗಳೆಂದು ಪರಿವರ್ತನೆಗೊಂಡ ಶಾಲೆಗಳ ದುರವಸ್ಥೆಯನ್ನು ಕಾಣುವಾಗ, ಇವನ್ನು ವ್ಯವಸ್ಥಿತಗೊಳಿಸದೆ ಮುಂದೆ ಹೆಜ್ಜೆಯಿಡುವುದು ಮೂರ್ಖತನವೆನಿಸುವುದು. ತರಬೇತಿ ಹೊಂದಿದ ಅಧ್ಯಾಪಕರ ಅಭಾವವನ್ನು ಹೆಚ್ಚಿನ ತರಬೇತಿ ಶಾಲೆಗಳ ಸ್ಥಾಪನೆಯಿಂದ ನೀಗಿಸಬಹುದಾದರೂ ಒಂದು ವರ್ಷದ ತರಬೇತಿಯಿಂದ ಬಹಳವಾಗಿ ಆರ್ಥಿಕ ಲಾಭವಾಗುವುದು. ಇದು ತಪ್ಪಿದರೆ, ವೆಚ್ಚ ಒಂದಕ್ಕೆ ಮೂರಾಗುವುದು ಖಂಡಿತ.

೨. ಹಾಯರ್ ಸೆಕೆಂಡರಿ ಶಿಕ್ಷಣದ ಬಗ್ಗೆ ಅಖಿಲಭಾರತದ ದೃಷ್ಟಿಕೋಣ ತೀರ ಚಂಚಲವಿದೆ. (ಇಂಟರ್ ಮೀಡಿಯೇಟ್ ಶಿಕ್ಷಣವನ್ನು ಇದರಲ್ಲಿ ಸೇರಿಸಿಕೊಳ್ಳುವುದರಿಂದ) ಸೆಕೆಂಡರಿ ಶಾಲೆಗಳ ಪುನಾರಚನೆ ಅವಶ್ಯವಾಗುವುದು. ಪ್ರಯೋಗ ಶಾಲೆಯೇ ಮೊದಲಾದ ಸೌಲಭ್ಯ-ಸಲಕರಣೆಗಳನ್ನು ಅಧ್ಯಾಪಕರನ್ನೂ ಒದಗಿಸಬೇಕಾಗುವುದು. ಇದಕ್ಕೂ ಆರ್ಥಿಕ ಅನುಕೂಲತೆ ಅತ್ಯಲ್ಪ ಇರುವುದು ತಡೆಯೊಡ್ಡುತ್ತದೆ. ಇದರ ಜೊತೆಗೆ ಕಾಲೇಜುಗಳಲ್ಲಿ ಈಗ ಇರುವ ಅಧ್ಯಾಪಕರ-ಮತ್ತಿತರ ಸಿಬ್ಬಂದಿಗಳ ನಿರುದ್ಯೋಗ ಸಮಸ್ಯೆಯ ಪ್ರಶ್ನೆ ಏಳುತ್ತದೆ. ಇದನ್ನು ಸಮಾಧಾನಕರವಾಗಿ ಬಗೆಹರಿಸುವುದು ಪ್ರಯಾಸಕರವೆನಿಸುತ್ತದೆ.

೩. ಕಾಲೇಜು ಸೇರುವವರಿಗೆ ಪುನಃ ಪರೀಕ್ಷೆ ಮಾಡುವುದರಿಂದ ಹೆಚ್ಚಿನ ಲಾಭ ದೊರೆಯುವುದು ಸಂದೇಹವೇ. ಸರಕಾರವೇ ನಿರ್ದಿಷ್ಟ ಗುಣ ಪಡೆದವರನ್ನು ಮಾತ್ರ ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಅರ್ಹರೆಂದು ಸಾರುವ ಈಗಿನ ಪ್ರಣಾಳಿಯನ್ನೇ ಮುಂದುವರಿಸಿ, ಸ್ಪರ್ಧಾಕ್ರಮದಲ್ಲಿಯೇ ಪ್ರವೇಶ ನೀಡುವುದು ಸುಖಕರವೆನ್ನಬಹುದು. ಇನ್ನೊಂದು ಪರೀಕ್ಷೆಯನ್ನು ಹೇಗೆ, ಯಾವ ವಿಷಯಗಳಲ್ಲಿ, ಯಾವ ಯಾವ ಮಾಧ್ಯಮದಲ್ಲಿ ಮಾಡಬೇಕು ಎಂದು ಮುಂತಾದ ಹೊಸ ಪ್ರಶ್ನೆಗಳು ಏಳುವುದರಿಂದ ಇದು ಸರಳ ವ್ಯವಹಾರ್ಯವಲ್ಲವೆನ್ನಬಹುದು.

೪. ಕಾಲೇಜುಗಳ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಬೇಕಾದರೆ, ಅವು ಪ್ರವೇಶ ನೀಡುವ ವಿದ್ಯಾರ್ಥಿಗಳ ಸಂಖ್ಯೆಯನ್ನೂ ಏರಿಸಬೇಕಾಗುತ್ತದೆ. ಒಂದು ಸಾವಿರವೆಂದು ಮಿತಿಹಾಕುವುದರಿಂದ ಕಾಲೇಜಿನ ಆರ್ಥಿಕ ಸ್ಥಿತಿ ಕುಂದುವುದು. ಈ ಕೊರತೆಯನ್ನು ತುಂಬಿಸಿ ಕೊಳ್ಳುವುದು. ಶುಲ್ಕವನ್ನು ಹೆಚ್ಚಿಸುವುದರಿಂದ ಮಾತ್ರ ಸಾಧ್ಯ. ಆದರೆ, ಇದು ಸದ್ಯ ಅಸಾಧ್ಯ.

೫. ಮೇಲಿನ ವಿಚಾರವೇ ಇದಕ್ಕೂ ಅನ್ವಯಿಸುತ್ತದೆ. ವಿಶ್ವ ವಿದ್ಯಾಲಯಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುವುದು ಅಸಾಧ್ಯವಿರುವುದರಿಂದ, ಇತರ ವಿಧಾನಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಲು ಅನುಕೂಲತೆ ಮತ್ತು ಅವಕಾಶವಿಲ್ಲದಿರುವುದರಿಂದ, ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಸಂಖ್ಯೆಗೆ ಮಿತಿ ಹಾಕುವುದು ಸಾಧ್ಯವಿಲ್ಲ.

೬. ತಾಂತ್ರಿಕ ಶಿಕ್ಷಣಾರ್ಥಿಗಳಿಗೆ ಪ್ರಾಯೋಗಿಕ ಅನುಭವವು ಅತ್ಯವಶ್ಯವೆಂಬುದು ನಿಜ. ಸಾಧ್ಯವಿದ್ದಲ್ಲೆಲ್ಲ, ಇದರ ಅನುಕೂಲತೆಯನ್ನು ಒದಗಿಸುವ ಪ್ರಯತ್ನ ನಡೆದಿದೆ; ಮುಂದಕ್ಕೂ ನಡೆಯುತ್ತದೆ. ತಾಂತ್ರಿಕ ಶಿಕ್ಷಣದ ವಿಕಾಸವನ್ನು ಮಾಡುವಲ್ಲಿ ನಾವು ಹಿಂದೆಯುಳಿದಂತೆ ಕಂಡರೂ ಆ ಬಗ್ಗೆ ಪ್ರಯತ್ನ ತೀವ್ರವಾಗಿ ನಡೆಯುತ್ತದೆ. ಶಿಕ್ಷಣದ ಮಾಧ್ಯಮವು ಪ್ರಾದೇಶಿಕ ಭಾಷೆಯಾಗಬೇಕೆಂಬ ವಾದವನ್ನೂ ಶಾಂತವಾಗದಿರುವಾಗ ಈ ಬಗ್ಗೆ ಏನೂ ಹೇಳುವಂತಿಲ್ಲ. ಆದರೂ ಈ ವಾದ ಪುರಸ್ಕರಣೀಯವೆನ್ನಬಹುದು. ಇಂಗ್ಲಿಷ್ ಭಾಷೆಯ ಅಧ್ಯಯನ ಅವಶ್ಯ, ಅನಿವಾರ್ಯ. ಆ ಬಗ್ಗೆ ಎರಡು ಮಾತಿಲ್ಲ.

ಹೀಗೆ ಸರ್ ಸಾರ್ಜಂಟರ ವರದಿಯನ್ನು ವಿಮರ್ಶಿಸಿದರೆ, ಅವರು ಮಾಡಿರುವ ಸಿಫಾರಸುಗಳು ಇಡಿಯ ಭಾರತಕ್ಕೇನೇ ಹಿತಕಾರಕ ಮತ್ತು ಅಪೇಕ್ಷಣೀಯ. ಆದರೆ, ಆರ್ಥಿಕ ಸ್ಥಿತಿಗತಿಗಳಿಗೆ ಹೊಂದಿ

(ಆನೇ ಪುಟ ನೋಡಿರಿ)

ಹಕ್ಕಿ ಹಾರಿ ಹೋಯಿತು

ಶ್ರೀ ಎಚ್. ಆನಂದರಾವ ಅಡಿಗ

ರತ್ನ ಹಾಸಿಗೆಗೆ ಹಿಡಿದ ತನ್ನ ದೇಹವನ್ನು ಒಮ್ಮೆ ಮುಗುಚಿಕೊಂಡಳು. ತನ್ನ ಕೋಣೆಯಲ್ಲಿ ಇನ್ನಾರೂ ಇರಲಿಲ್ಲ. ತಂದೆಯನ್ನು ಮೊದಲೇ ಕಳೆದುಕೊಂಡು ಅಣ್ಣ ದಿನಕರ, ತಾಯಿಯೊಡನೆ ಪ್ರೇಮದಿಂದ ಬೆಳೆದು ಬಂದ ರತ್ನ ಅಕೆಗಾಗಿ ಹಂಬಲಿಸಿ ಕೂಗಿದಳು—

"ಅಮ್ಮಾ....ಅಮ್ಮಾ.. "

ಅಡಿಗೆಯ ಮನೆಯಿಂದ ಹೊರಬರುತ್ತಾ ಸಾವಿತ್ರಮ್ಮ ಕಣ್ಣೀರನ್ನೊರಸಿಕೊಂಡಳು.

ಅದೊಂದು ದೃಶ್ಯ ರತ್ನಳಿಗೆ ಅಗಾಧ ದುಃಖ ಸದೃಶವಾಗಿತ್ತು.

"ಅಮ್ಮಾ ನೀನಾದರೂ ಏಕೆ ಅಳುತ್ತಿರುವೆ?"

"ಯಾರು ಅತ್ತರು? ಅಡಿಗೆ ಮನೆಯಲ್ಲಿ ಹೊಗೆ ತುಂಬಿತ್ತು. ಕಣ್ಣಲ್ಲಿ ನೀರು ಬಂತು."

'ಅಮ್ಮಾ, ನಾನಿನ್ನೂ ಮಗುವಲ್ಲ. ಬೆಳೆದು ದೊಡ್ಡವಳಾಗಿದ್ದೇನೆ. ಪ್ರತಿಯೊಬ್ಬರ ಹೃದಯವನ್ನು ಅಳೆಯಬಲ್ಲ ಶಕ್ತಿ ಸಾಮರ್ಥ್ಯವನ್ನು ದೇವರು ಕೊಟ್ಟಿದ್ದಾನೆ. ಆದರೆ..."

ಸಾವಿತ್ರಮ್ಮ ನಿಲ್ಲಲಾರದೆ ಹೊರಟು ಹೋದರು.

ರತ್ನಳ ಸ್ಮೃತಿ ಪಟಲದ ಮೇಲೆ ಒಂದು ತಿಂಗಳ ಹಿಂದಿನ ನೆನೆಪು ಮರುಕಳಿಸಿತು. ತನ್ನನ್ನು ಪ್ರೀತಿಯ ಅಧ್ಯಾಪಕಿಯಾದ ಶಾಂತಿ ದೇವಿಯವರು ತಪ್ಪದೆ ತನ್ನ ಕಾರಿನಲ್ಲಿ ಪರೀಕ್ಷೆಗೆ ಕರೆದುಕೊಂಡು ಹೋಗಿ ತಂದು ಬಿಡುತ್ತಿದ್ದರು. ನಡೆಯುವುದಕ್ಕೂ ಆಗದ ನಿತ್ರಾಣದಲ್ಲಿ ನಾಲ್ಕು ವರ್ಷದ ಪರಿಶ್ರಮದ ಪರೀಕ್ಷೆ ಮುಗಿಸಿದೆ. ನನ್ನ ಖಾಹಿಲೆ ನನ್ನ ಜೀವಕ್ಕೆ ಧಕ್ಕೆ ತರುವಂಥ ಮಹಾ ವಿಷ ವೃಕ್ಷವಾಯಿತೇ? ಶಾಂತಿ ದೇವಿಯವರು ಬಂದು ನೋಡಿ ಹೋದರು. ರತ್ನ—ಉಳಿಯುವುದು ಖಂಡಿತ. ಅವಳ ಆರೋಗ್ಯದ ಕಡೆ ಗಮನ ಹರಿಸಿ ಎಂದಿದ್ದರು. ಆದರೆ ಅಂದು ಅವರು ಮಕ್ಕಳಂತೆ ಅತ್ತದ್ದೇಕೆ ಅವರಿಗೂ ನನ್ನ ಈ ದಾಖಲೆ ವಾಸಿಯಾಗುವ ಸೂಚನೆ ಕಂಡಿರದೆ? ಇಲ್ಲ—ನಾನು ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಮುನ್ನ ನಾನೆಲ್ಲಿರುವೆ?

"ಮೊನ್ನೆ ಬಂದವರು ಹುಡುಗಿಗೆ ಖಾಹಿಲೆ ವಾಸಿಯಾಗಲೀ ಮತ್ತು ನೋಡುವರಂತೆ"...ಎಂದಿದ್ದಾರು.

ಅಣ್ಣ ದಿನಕರನೊಡನೆ 'ಲೆಕ್ಚರ್' ಬಂದು ನನ್ನ ನೋಡಿ ಉತ್ಸುಕತೆಯಿಂದಲೇ ದಿಟ್ಟಿಸಿ "ಮಿಸ್ಟರ್ ದಿನಕರ್, ಪರೀಕ್ಷೆ ಮುಗಿಯಲಿ" ಎಂದಿದ್ದರು. ಎಲ್ಲರೂ ಹೀಗನ್ನುತ್ತಿರುವುದೇಕೆ? ಅವರೆಲ್ಲರಿಗೂ ನನ್ನ ಜೀವನದ ಸಮಾಪ್ತಿ ತಿಳಿದಿರಬಹುದೇ? ಅಣ್ಣನೇಕೆ ಮುಖವನ್ನು ಸಪ್ಪೆ ಮಾಡಿಕೊಂಡಿರುವ? ಅವನಿಗೂ ಸಂಪೂರ್ಣ ಅರ್ಥವಾಗಿದ್ದರೆ ಡಾಕ್ಟರಿಗೇಕೆ ಹಣ ಸುರಿಸುತ್ತಾನೆ?"

ರತ್ನಳಿಗೆ ತನ್ನ ಜೀವ ನದಿಯು ಬತ್ತಿ ಹೋಗಲು ಹೆಚ್ಚು ಸಮಯ ಬೇಕಿಲ್ಲವೆಂದು ಹಂಬಲಿಸಿ ಹಂಬಲಿಸಿ ಕ್ಷೀಣತ್ವವನ್ನು ಹೊಂದಿದಳು

ಬೂಟಿನ ಶಬ್ದ... ಎಂದಿನಂತೆ. ಡಾಕ್ಟರು ಬಂದರು. ಮುಂದಾಗಿ ಬಂದು 'ರತ್ನ, ಹೇಗಿರುವೆ?' ಎನ್ನುವ ಅಣ್ಣ ನಿಧಾನ ಬರುತ್ತಲಿದ್ದಾನೆ. ರತ್ನಳಿಗೆ ಇಂದು ತನ್ನ ವಿಚಾರವನ್ನು ಡಾಕ್ಟರೊಡನೆ ಬಾಯಾರ ಕೇಳಬೇಕೆನಿಸಿತು, ಅಣ್ಣನೊಡನೆ ಸುಮ್ಮನೆ ಹಣ ವ್ಯಯಿಸಬೇಡವೆಂದೂ ತಿಳಿಸಿದರೆ ಏನಾಗುತ್ತದೆ? ದಿನದಿನವೂ ತನ್ನ ಕೈಯನ್ನು ಮುಟ್ಟಿ ಹೃದಯ ಪರೀಕ್ಷಿಸುತ್ತಿರುವ ಡಾಕ್ಟರರ ಕೈಯಾದರೂ ಅಮೃತವಾಗಿದ್ದರೆ ಇಷ್ಟರಲ್ಲಿಯೇ ನಾನು ಸುಖಿಯಾಗುತ್ತಿರಲಿಲ್ಲವೇ

ಲಬ್....ಡಬ್.... ಹೃದಯ ವಿಕಾರ ಸದೃಶ ಕೂಗು ರತ್ನಳ ಕಿವಿಗೂ ಮುಟ್ಟುತ್ತಿದೆ. "ಓಹೋ" ಡಾಕ್ಟರು ಬಹು ಬೇಗನೆ ಎದ್ದರು. ಇಂದೇಕೆ ತ್ವರಿತದಲ್ಲಿ ಎದ್ದು ಬಿಟ್ಟರು ಅಣ್ಣನೊಡನೆ ಪಿಸು ಮಾತು, ರತ್ನಳಿಗೆ ಈಗ ಕೂಗಿಕೊಂಡರೆ ಏನು ಎನ್ನುವಂತಾಯಿತು. ಸ್ಮೃತಿ ತಪ್ಪಿ ಹೋಯಿತು.

ಮದ್ದುಗಳ ಮೇಲೆ ಮದ್ದು.... ಇಂಜೆಕ್ಷನ್ನುಗಳ ಮೇಲೆ ಇಂಜೆಕ್ಷನ್....

ಅಣ್ಣ ದಿನಕರ— ತಾಯಿ ಸಾವಿತ್ರಮ್ಮನವರ ಮುಖ ಸ್ಮಶಾನ ಭೂತಗಳ ಆವೇಶದಿಂದ ಬೆಂದಂತಿತ್ತು. ರತ್ನ ಮೆಲ್ಲನೆ ಕಣ್ತೆರೆದಳು.

ಡಾಕ್ಟರರು ಹಸನ್ಮುಖಿಯಾದರು.

"ರತ್ನಾ....ಏನಾಗುತ್ತಿದೆ" ಅಣ್ಣ ಕಣ್ಣೀರೊರಸಿಕೊಳ್ಳುತ್ತಾ ತಡವರಿಸುತ್ತಾ ಕೇಳಿದ...

'ಇನ್ನೇನಾಗುತ್ತಿದೆಯಣ್ಣಾ, ಹುಟ್ಟಬಾರದವರು ಹುಟ್ಟಿ ತಾಯಿ-ಅಣ್ಣಂದಿರಿಂದ ಸೇವೆಯನ್ನು ಮಾಡಿಸಿಕೊಂಡು ಅದನ್ನು ತೀರಿಸಲು ಸಮಯಕೊಡದೆ ಯಮ ಕೊಂಡೊಯ್ಯುತ್ತಿದ್ದಾನಲ್ಲಾ ಎಂಬ ದುಃಖವಲ್ಲದೆ ಬೇರೇನೂ ಕಾಯಿಲೆಯಲ್ಲಣ್ಣಾ.... ನನಗಾಗಿ ಇನ್ನು ಹಣ ವ್ಯಯಿಸಬೇಡ... ನಾಯಿಕೊಡೆಯಂತೆ ಹುಟ್ಟಿ ನಶಿಸಿಹೋಗುವ ನನ್ನಂತಹ ಬಾಳ್ವೆಗೆ ಯಾರೂ ಮರುಗದಿರಿ....ಡಾಕ್ಟರ್, ನಿಮ್ಮ ವಿಶ್ವಪ್ರಯತ್ನಕ್ಕೆ ಯಾವ ರೀತಿಯ ಪ್ರತಿಫಲ ಕೊಡಲಿ? ಅಶಕ್ತಳಾಗಿ ಹಾಸಿಗೆಯ ಹಚ್ಚಡವಾಗಿರುವ ನನ್ನಲ್ಲಿ ನೀವು ಏನು ಕೇಳಲಾಶಿಸುವಿರಿ? ನಾನು ಬಿ. ಎ.ಯಲ್ಲಿ ಉತ್ತೀರ್ಣಳಾದರೆ ಅಣ್ಣನೊಡನೆ ಬೇಡಿ ಮೆಡಿಕಲ್‌ಕೋಲೇಜಿನಲ್ಲಿ ವ್ಯಾಸಂಗ ಮುಂದುವರಿಸಬೇಕೆಂಬ ಆಸೆ ಇದ್ದಿತು. ಆದರೆ ವಿಧಿಯ ಕೈವಾಡ....ಡಾಕ್ಟರ್ ... ನಿಮ್ಮಲ್ಲಿ ನನ್ನ ಖಾಹಿಲೆ ಗುಣಪೂರ್ಣವಾಗುವಂಥ ಔಷಧಗಳು ಏನೂ ಇಲ್ಲವೇ? ಅಮ್ಮಾ ಅಳುತ್ತಿರಬೇಡ... ಇದ್ದೊಬ್ಬ ಮಗಳನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಹೃದಯ ಕರಗದೇ? ಅಣ್ಣ ನನ್ನು ನೋಡಿ ಸಂತೋಷಪಡು....ಅಮ್ಮಾ ನಾನು ನಿನಗೆ ಸುಖದ ಬಟ್ಟಲಲ್ಲಿ ಆಹಾರ ಕೊಡಬೇಕೆಂದು ಬಯಸಿದ್ದೆ ಆದರೆ ಇಂದದು ವಿಷದ ಬಟ್ಟಲಾಗುತ್ತಿದೆ. ಸಂತೋಷದಿಂದ ನಕ್ಕು ನಲಿದು ಓಡಾಡುತ್ತಿದ್ದ ರತ್ನಳಿಗೆ ಆದ ದುರ್ಗತಿಯಿಂದ ಮನೆಯು ಮಸಣವಾಗುತ್ತಿದೆ. ಅಣ್ಣಾ, ಡಾಕ್ಟರಿನ್ನೂ ಕುಳಿತುಕೊಂಡೇ ಇರುವರಲ್ಲ...ಅವರ ಋಣ ವಿಮುಕ್ತಳನ್ನಾಗಿ ಮಾಡಿಬಿಡು—

ಡಾಕ್ಟರ್....'

ಕುರ್ಚಿಯಲ್ಲಿ ತಲೆಗೆ ಕೈಹಿಡಿದು ಸಮಸ್ಯಾತ್ಮಕ ದೃಷ್ಟಿಯಿಂದ ರತ್ನಳ ಮಾತುಗಳನ್ನು ಕೇಳುತ್ತಿದ್ದ ಡಾಕ್ಟರ್ ಚಂದ್ರದಾಸರನ್ನು ರತ್ನಳ ಕೂಗು ಎಚ್ಚರಿಸಿತು.

ರತ್ನ ಮೆಲ್ಲನೆ ತನ್ನ ದಿಂಬಿನಡಿಯಿಂದ ನೂರು ರೂಪಾಯಿ ಕಣ್ಣೀರಲ್ಲಿ ಒದ್ದೆಯಾದ ನೋಟೊಂದನ್ನು ಡಾಕ್ಟರರ ಮುಂದೆ ಹಿಡಿದು. ಡಾಕ್ಟರ್-ಶಾಂತಿದೇವಿಯವರು ನನ್ನ ರೋಗ ವಿಮುಕ್ತಮಾಡಿದವರಿಗೆ ಕೊಟ್ಟುಬಿಡು ಎಂತ ಹೇಳಿದ್ದಾರೆ-ಇದನ್ನು ಸ್ವೀಕರಿಸಿ ನನ್ನನ್ನು ಋಣಮುಕ್ತಳನ್ನಾಗಿ ಮಾಡಿಬಿಡಿರಿ....ನನಗೆ ನನ್ನುಳಿವಿನ ಬಗ್ಗೆ ಎಳ್ಳಷ್ಟೂ ಆಸೆಯಿಲ್ಲ. ಆದ್ದರಿಂದ ಮಾತ್ರ...ಒಂದು ಜೀವಿ ನನಗಾಗಿ ಹಂಬಲಿಸುತ್ತಿದೆ ಡಾಕ್ಟರ್...ಲೆಕ್ಚರರ್ ಶ್ರೀ ಕಾಂತರಾಯರು... ಅವರ ನಗುವಿನ ಎಳೆ ನೋಟ...ಪರಿಶುದ್ಧ ಹೃದಯ... ಅಣ್ಣಾ.... ಒಮ್ಮೆಲೆ ನನ್ನ ದುರ್ವಿಧಿಯನ್ನು ಅವರಿಗೆ ತಿಳಿಸಬೇಡ...ನಿಧಾನ ತಿಳಿಸಿಬಿಡು.'

ಹೆಚ್ಚಿಗೆ ಮಾತನಾಡಿದರೆ ನಿಮಗೆ ಆಯಾಸವಾಗುತ್ತದೆ. ಸುಮ್ಮನೆ ಮಲಗಿ...' ಡಾಕ್ಟರ್ ಇನ್ನೊಂದು ಇಂಜೆಕ್ಷನ್ ಚುಚ್ಚಿದರು. ದೇವರು ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವನ್ನು ಕೊಡದೆ 'ಇರಲಾರನು' ಎಂದಳು

'ಅಮ್ಮಾ, ಅಣ್ಣನಿಗೆ ನೌಕರಿಯಿದೆ. ಅವನಿಗೆ ಮದುವೆ ಮಾಡಿಸಿ ಅತ್ತಿಗೆಯನ್ನು ಕರೆಸಿಕೊಳ್ಳು. ಆನಂತರ ನಿನಗೆ ಸುಖವಾಗುವುದು'

'ರತ್ನ—ನೀವೆಲ್ಲರೂ ಅಳಿಯುವ ಪಂಜರವಾದರೆ—ನಾನು ಉಳಿಯುವ ಪಂಜರವೇ ನೀನಳಿದು ನಾನುಳಿದರೇನು?—ನೀನೊಮ್ಮೆ ಉಳಿದುಕೊ...ನೀನು ಮನಸ್ಸಿನಲ್ಲಿ ಏನೇನೋ ಕಂದುಕೊಳ್ಳಬೇಡ. ಸುಮ್ಮನೆ ಮಲಗು...'

(೧೧ನೇ ಪುಟ ನೋಡಿರಿ)

ESTD. **1921** ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ರಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920



ಕುರುಡು ರಾಜಕಾರಣದಿಂದ

ಪಾಕಿಸ್ತಾನದಲ್ಲಿ ತೀವ್ರ ಅಸಂತೃಪ್ತಿ

ಪಾಕಿಸ್ತಾನದ ಅಧ್ಯಕ್ಷ
ಅಯೂಬ ಖಾನ್

ಭಾರತದೊಡನೆಯೇ ಸ್ವತಂತ್ರವಾದ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯ ಉದ್ದೇಶವಿನ್ನೂ ಕನಸಿನ ಮನೆಯಾಗಿಯೇ ಉಳಿದಿದೆ. ಮಾರ್ಶಲ್ ಅಯೂಬ ಖಾನರ ಸರ್ವಾಧಿಕಾರವು ಒಂದು ರೀತಿಯಿಂದ ಯಶಸ್ವಿಯಾಗಿ ನಡೆಯುತಿತ್ತು ಎಂದು ನೋಡುವವರಿಗೆ ಕಾಣುತಿದ್ದಂತೆಯೇ ಒಳಗಿಂದೊಳಗೆ ಅತೃಪ್ತಿಯೂ ಅಸಂತೋಷವೂ ಮೂಡಿಬಂದುದು ಈಗ ಸರಿಯಾಗಿ ವ್ಯಕ್ತವಾಗಿದೆ. ಪೂರ್ವ ಪಾಕಿಸ್ಥಾನದಲ್ಲಿ ಅಯೂಬ ವಿರೋಧಿ ಚಳವಳವು ಪ್ರಾರಂಭವಾಗಿತ್ತಾದರೂ ಅದರ ವ್ಯಾಪ್ತಿಯು ವಿಶಾಲವಾಗಿರಲಿಲ್ಲ ಆದರೆ, ಲಂಡನ್ನಿನಲ್ಲಿರುವ ಪಾಕಿಸ್ತಾನಿಗಳ ದೊಡ್ಡ ಸಭೆಯೊಂದು ಅಲ್ಲಿ ನಡೆದು ದಂಡನಾಳಿಕೆಯನ್ನು ಪಾಕಿಸ್ತಾನದಲ್ಲಿ ಕೊನೆಗೊಳಿಸಿ, ವಯಸ್ಕ ಮತದಾನ ಪ್ರಣಾಳಿಯಲ್ಲಿ ಪ್ರಜಾಸತ್ತೆಯನ್ನು ಸ್ಥಾಪಿಸಬೇಕು; ಪಾಕಿಸ್ತಾನದಲ್ಲಿರುವ ರಾಜಕೀಯ ಕೈದಿಗಳನ್ನು ಮುಕ್ತಗೊಳಿಸಬೇಕು, ಎಂಬ ಬೇಡಿಕೆಗಳನ್ನು ಮುಂದಿಟ್ಟಿತು. ಈ ಸಭೆಯನ್ನು ಏರ್ಪಡಿಸಿದ ಸಮಿತಿಯ ಹೆಸರಾದರೂ 'ಪಾಕಿಸ್ತಾನ ಪ್ರಜಾಪ್ರಭುತ್ವದ ಪುನರ್‌ಸ್ಥಾಪನಾ ಸಮಿತಿ"ಯೆಂದಿದ್ದು ಇದು ಪಾಕಿಸ್ತಾನಿಗಳ ತೀವ್ರ ಅತೃಪ್ತಿಯನ್ನು ಪ್ರದರ್ಶಿಸುತ್ತದೆ. ಬ್ರಿಟಿಷ್ ಲೇಬರ್ ಪಕ್ಷದ ಕೆಲವೊಂದು ಪ್ರಮುಖರೂ ಈ ಸಮಿತಿಗೆ ಬೆಂಬಲವನ್ನೂ ಒತ್ತಾಸೆಯನ್ನೂ ಇತ್ತಿದ್ದಾರೆನ್ನುವಾಗ, ಪಾಕಿಸ್ತಾನದ ಆಡಳಿತೆಯ ಬಗ್ಗೆ ಬ್ರಿಟನ್ನಿನಲ್ಲಿಯೂ ಪ್ರತಿಕೂಲಾಭಿಪ್ರಾಯದ ಗಾಳಿ ಬೀಸ ತೊಡಗಿದೆಯೆನ್ನುವುದು ನಿರ್ವಿವಾದ.

ಪೂರ್ವ ಪಾಕಿಸ್ತಾನದ ಢಾಕ್ಕಾ ಮತ್ತಿತರ ಕಡೆಗಳಲ್ಲಿ ಅಲ್ಲಿನ ನಾಗರಿಕರು ತಮ್ಮ ರಾಷ್ಟ್ರದ ಅಪ್ರಜಾಪ್ರಭುತ್ವ ಆಡಳಿತೆಯ ಬಗ್ಗೆ ವಿರೋಧವನ್ನು ತೋರಿಸುತ್ತ ಬಂದಿದ್ದರೂ ಲಂಡನ್ನಿನ ಸಭೆಯಲ್ಲಿ ಪಾಕ್ ನಾಗರಿಕರು ಮೊತ್ತಮೊದಲಿಗೆ ಸಾಮೂಹಿಕ ಅತೃಪ್ತಿಯನ್ನು ಬಹಿರಂಗವಾಗಿ ತೋರಿಸಿದರು. ಪೂರ್ವ ಪಾಕಿಸ್ತಾನದಲ್ಲಾದ ಪ್ರತಿಭಟನೆಗಳನ್ನು ಅಲ್ಲಿನ ಪೋಲೀಸರೂ ಸಮಾಚಾರ ಪತ್ರಿಕೆಗಳೂ ಮಾರ್ಶಲ್ ನಿಯಮಗಳ ಭದ್ರ ರಕ್ಷಾ ಕವಚ ಬಲದಿಂದ ಅಣಗಿಸಿದರೆಂಬುದು ನಿಜ. ಮಾಜಿ ಪಾಕ್ ಪ್ರಧಾನಿ ಸುಹ್ರವರ್ದಿಯವರನ್ನು ಪಾಕ್ ಸರಕಾರವು ಇತ್ತೀಚೆಗೆ ಸೆರೆ ಹಿಡಿಯಿತು. ನ್ಯಾಯೋಚಿತವಾದ ವಿಚಾರಣೆ ಅವರ ಬಗ್ಗೆ ನಡೆಯಬೇಕೆಂದು ಡಾಕ್ಕಾದ ಬಾರ್ ಎಸೋಸಿಯೇಶನ್ ಧೈರ್ಯದಿಂದ ಕೇಳಿಕೊಂಡಿತ್ತು. ಆದರೆ, ಕ್ರಿಮಿನಲ್ ಪ್ರೊಸೀಜರ್ ಕೋಡಿನ ಆರನೆಯ ವಿಭಾಗಕ್ಕೆ ತಿದ್ದುಪಡಿಯನ್ನು ಮಾಡಿ ಸುಹ್ರವರ್ದಿಯವರಿಂದ ಹೇಬಿಯಸ್ ಕಾರ್ಪಸ್‌ನ ಅಧಿಕಾರವನ್ನೂ ಸರ್ವಾಧಿಕಾರಿ ಸರಕಾರವು ಕಿತ್ತುಕೊಂಡಿತು. ರಾಜಕಾರಣದಲ್ಲಿ ಭಾಗವಹಿಸುವುದಕ್ಕೆ ತಡೆಯಾಜ್ಞೆ ಪಡೆದವರು ಸುಹ್ರವರ್ದಿ ಒಬ್ಬರೇ ಅಲ್ಲ; ಅವಾಮಿ ಲೀಗ್ ಮತ್ತು ರಾಷ್ಟ್ರೀಯ ಅವಾಮಿ ಪಕ್ಷದ ಬಹುಜನ ನಾಯಕರು ಇವರಂತೆಯೇ ಅಸಹಾಯಕರಾಗಿದ್ದಾರೆ. ಹಾಗಿದ್ದರೂ ಅಯೂಬ ಖಾನರು ಮುಂಬರುವ ಕೆಲವೇ ತಿಂಗಳುಗಳೊಳಗೆ ರಾಷ್ಟ್ರಕ್ಕೊಂದು ಸಂವಿಧಾನವನ್ನು ತರುವ, ಅದರಂತೆ ಚುನಾವಣೆಗಳನ್ನು ನಡೆಸುವ ಮತ್ತು ಮಾರ್ಶಲ್ ಕಾಯಿದೆಯನ್ನು ಕೊನೆಗೊಳಿಸುವ ಭರವಸೆಯನ್ನೀಯುತ್ತಾರೆ. ಇದು ಆಗುವುದಾದರೂ ಹೇಗೆ; ಮಾರ್ಶಲ್ ಅಯೂಬ ಖಾನರ ಅಭಿಪ್ರಾಯದಂತೆ ಅಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವು ಅಸಫಲಗೊಂಡಿದೆ. ಅಧಿಕಾರಿಗಳ ಕೈವಾಡವಿಲ್ಲದೆ ಪಕ್ಷಗಳು ಕಾರ್ಯನಿರ್ವಹಣವಾಗುವುದು ಅಸಾಧ್ಯವೆಂಬ ಪರಿಸ್ಥಿತಿ ಉಂಟಾಗಿದೆ. ಇದಕ್ಕಾಗಿ, ಪ್ರಜಾಪ್ರಭುತ್ವಕ್ಕೆ ಪಂಚಾಂಗ ಹಾಕುವಂತೆ ಜಿಲ್ಲಾ ಮತ್ತು ತಾಲೂಕು ಮಟ್ಟಗಳಲ್ಲಿ ೮೦ ಸಾವಿರ ಸ್ಥಾನೀಯ ಸದಸ್ಯರನ್ನು ಒಂದು ವರ್ಷ ಮೊದಲು ಚುನಾಯಿಸಲಾಯಿತು. ಆದರೆ, ಈ ಸದಸ್ಯಮಂಡಲಿಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಎಂದು ಮುಂತಾಗಿ ಅಧಿಕಾರಿಗಳನ್ನೇ ತಂದು ತುಂಬಿಸಲಾಯಿತು. ಪ್ರಾಥಮಿಕ ಪ್ರಜಾಪ್ರಭುತ್ವ ಪದ್ಧತಿಯಂತೆ ಚುನಾಯಿತರಾದವರು ಅಯೂಬ ಖಾನರನ್ನು ಅಧ್ಯಕ್ಷರನ್ನಾಗಿ ಆರಿಸಿದರು. ಸಂವಿಧಾನವೊಂದನ್ನು ರಚಿಸುವಂತೆ ಅವರಿಗೆ ಅಧಿಕಾರವನ್ನಿತ್ತರು. ಆ ಮೇಲೆ, ಸಂವಿಧಾನದ ನಿರ್ಮಾಣದ ಕಾರ್ಯವು ತೊಡಗಿ ಈ ಫೆಬ್ರವರಿ ತಿಂಗಳ ಅಂತ್ಯದೊಳಗೆ ಹೊರ ಬರಬೇಕು, ಅದಾದ ಮೇಲೆ ಸರ್ವಸಾಮಾನ್ಯವಾಗಿ ಎಪ್ರಿಲ್ ತಿಂಗಳಲ್ಲಿ ಚುನಾವಣೆ ನಡೆಯಬೇಕು.

ಸಂವಿಧಾನ ನಿರ್ಮಾತರಲ್ಲಿ ಒಬ್ಬ ಆಸ್ಟ್ರೇಲಿಯಾದ ತಜ್ಞನೂ ಇದ್ದಾನೆ. ಈ ನಿರ್ಮಾತರು ಒಂದು ಗಡುಚಾದ ಪ್ರಶ್ನೆಯನ್ನು ಉತ್ತರಿಸಬೇಕಾಗಿ ಬಂದಿದೆ. ಎಂದರೆ, ಇಡಿಯ ಪಾಕಿಸ್ತಾನವನ್ನು ಭಾರತದಂತೆ ಫೆಡರಲ್ ಮಾದರಿಯಲ್ಲಿ ಒಕ್ಕೂಟಗೊಳಿಸಬೇಕೇ ಅಥವಾ ಏಕ ಘಟಕ ರಾಷ್ಟ್ರವಾಗಿ ಘೋಷಿಸಬೇಕೆ? ಎಂಬುದೇ ಈ ಪ್ರಶ್ನೆ. ಪೂರ್ವ ಪಾಕಿಸ್ತಾನದಲ್ಲಿ ತೋರಿಬರುತ್ತಿರುವ ಅಶಾಂತಿ—ಅತೃಪ್ತಿಗಳಿಗೆ ತಮ್ಮನ್ನು ರಾವಲ್ಪಿಂಡಿಯಿಂದ ಆಳುವ ಹಂಚಿಕೆ ನಡೆಯುತ್ತಿದೆಯೆಂಬ ವರ್ತಮಾನವೂ ಪ್ರಭಾವ ಬೀರಿದೆಯೆನ್ನಬಹುದು. ಇಂತಹುದೇ ಅಸಂತೋಷವನ್ನು ಪಶ್ಚಿಮ ಪಂಜಾಬನ್ನುಳಿದ ಪಶ್ಚಿಮ ಪಾಕಿಸ್ತಾನೀ ಸಂಸ್ಥಾನಗಳೂ ವ್ಯಕ್ತಪಡಿಸುತ್ತಿವೆ. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳ ನಡುವೆ ಕೆಲವೊಂದು ವಾಸ್ತವಿಕವಾದ ಸಮಸ್ಯೆಗಳಿವೆ. ಇವುಗಳ ಭಾಷೆಗಳು ಬೇರೆ ಬೇರೆ; ನಡುವೆ ಸಾಗರದಂತಹ ದೂರವಿದೆ, ಮತ್ತು ಮುಖ್ಯವಾಗಿ ಪೂರ್ವ ಪಾಕಿಸ್ತಾನದ ಜನಸಂಖ್ಯೆಯೂ ಪಶ್ಚಿಮಕ್ಕಿಂತ ಅಧಿಕವಿದೆ. ಇದು ಅಯೂಬರ ತಲೆ ತಿನ್ನುವ ಆಟವಾಗಿದೆ.

ತಯಾರಾಗುತ್ತಿರುವ ಸಂವಿಧಾನದಲ್ಲಿ ವಯಸ್ಕ ಮತದಾನವನ್ನು ಕಲ್ಪಿಸಲಾಗುತ್ತಿಲ್ಲವೆಂಬುದು ಪ್ರಥಮವಾಗಿದೆ. ಅಧಿಕ ಅನಕ್ಷರಸ್ಥರ ರಾಷ್ಟ್ರದಲ್ಲಿ ಪ್ರಜಾಸತ್ತೆಯು ನಡೆಯುವುದು ಸಾಧ್ಯವಿಲ್ಲವೆಂದು ಮಿಲಿಟರಿ ಆಡಳಿತೆಯು ಹೇಳಿದರೂ ಪ್ರಾಥಮಿಕ ಪ್ರಜಾಪ್ರಭುತ್ವ ಪ್ರಣಾಳಿಯು ದಖಕಿಸ್ಥಾನದ ಅತಿ ಹೆಚ್ಚಿನ ವಿದ್ಯಾವಂತರಿಗೆ ಮತಾಧಿಕಾರವನ್ನು ನಿರಾಕರಿಸಿದಾಗ ಪ್ರಮುಖ ನಿಜ ಹೇಳುವುದಾದರೆ ಮಾರ್ಶಲ್ ಅಯೂಬಖಾನರು ತನ್ನ ನಾಯಕತನವನ್ನು ಒಪ್ಪಿ ಪ್ರಶ್ನಿಸದೆ ಹಿಂಬಾಲಿಸಿ ಬರುವಂತಹ ಮತದಾರ ಪಟ್ಟಿಯನ್ನು ತಯಾರಿಸ ಬಯಸುತ್ತಾರೆ. ಪಂಜಾಬದ ದೊಡ್ಡ ದೊಡ್ಡ ಜಮೀನುದಾರರು ಮತ್ತು ಕರಾಚಿಯ ಹಿರಿಯ ವ್ಯಾಪಾರಸ್ಥರು ಮತ್ತು ವಿದ್ಯಾವಂತ ಜನತೆಯು ತನ್ನ ಬೆಂಬಲಕ್ಕೆ ಬರುವುದಿಲ್ಲ ಮತ್ತಿದರಿಂದಾಗಿ, ತನ್ನ ಆಡಳಿತೆಯು ಅಸ್ಥಿರವಾಗುವುದೆಂಬುದನ್ನು ಸ್ವಯಂ ಅಯೂಬಖಾನರು ತಿಳಿದಂತೆ ತೋರುವುದಿಲ್ಲ. ಅಯೂಬಖಾನರು ತಂದಿರುವ ಭೂಸುಧಾರಣೆಯಂತೆ ಪರಮಾವಧಿ ಮಿತಿ

(೧೧ನೇ ಪುಟ ನೋಡಿರಿ)



ಹಿಂದೂಸ್ಥಾನ ಮೆಷೀನ್ ಟೂಲ್ಸ್‌ನಲ್ಲಿ ತಯಾರಾದ ಮೆಷೀನ್ ಟೂಲ್‌ಗಳು

ಹಣದ ಜೋಪಾಸನೆಗೆ.....

ಅಂಗಿಯ ಕಿಸೆಗಿಂತ ಮನೆ ಮೇಲು;
ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೋರ್ಪೊರೇಶನ್ ಬೇಂಕ್
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ
ಆಡಳಿತ ಆಫೀಸು: ಮಂಗಳೂರು 1

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ

ಬೆಲೆ ರೂಪಾಯಿ ಒಂದು.

ರೂ. 1-26 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ಕನ್ನಡದಲ್ಲಿ ಸಣ್ಣ ಕಥೆಗಳು

ಶ್ರೀ ಬಿ. ಜಿ. ಸತ್ಯಮೂರ್ತಿ.

ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳ ಮಹಾಪೂರವೇ ಬಂದು ಬಿಟ್ಟಿರುವ ಈ ಕಾಲದಲ್ಲಿ ಸಣ್ಣ ಕಥೆಗಳ ಬಗ್ಗೆ ನಾವು ವಿವೇಚನೆ ನಡೆಸಿದರೆ, ಕೆಲ ಸಾಹಿತ್ಯ ರಸಿಕರಿಗೆ ಉಪೇಕ್ಷೆ ಬಂದುಬಿಡಬಹುದು. ಕನ್ನಡ ಸಾಹಿತ್ಯವು ಭಾರತೀಯ ಪರಂಪರಾಗ ಭಾಷಾ ಇತಿಹಾಸದಲ್ಲಿ ಉಜ್ವಲವಾಗಿ ಉಳಿದಿದ್ದರೆ ಅದು ಸಣ್ಣಕತೆಗಳ ವೈಶಿಷ್ಟ್ಯಪೂರ್ಣ ವಿಶಿಷ್ಟತೆಯಿಂದ!

ಮೊನ್ನೆ ಮೊನ್ನೆಯ ವರೆಗೂ ಕನ್ನಡದ ಸಣ್ಣಕತೆ ನಮ್ಮ ಸಾಹಿತ್ಯದಲ್ಲಿ ಒಂದು ಉಜ್ವಲವಾದ ಪರಂಪರೆಯನ್ನು ಸ್ಥಾಪಿಸಿಬಿಟ್ಟಿತ್ತು. ಆದರೆ ಇಂದು ಕಾದಂಬರಿಯು ಸಣ್ಣಕತೆಗಳ ಸ್ಥಾನವನ್ನು ಸಂಪೂರ್ಣ ಆಕ್ರಮಿಸಿ ಬಿಟ್ಟಿದೆ. ಒಂದು ರೀತಿಯಲ್ಲಿ ಅತಿಕ್ರಮಿಸಿದೆ ಎಂದರೂ ತಪ್ಪಾಗಲಾರದು.

ಕನ್ನಡ ಸಾಹಿತ್ಯದ ಪ್ರಾರಂಭಕಾಲದಿಂದಲೂ ಸಣ್ಣಕತೆ ಒಂದು ವೈಶಿಷ್ಟ್ಯಪೂರ್ಣ ಸ್ಥಾನವನ್ನು ಆಕ್ರಮಿಸಿಕೊಂಡೇ ಇತ್ತು. ಕ್ರಿಸ್ತಶಕ ಆರನೇ ಶತಮಾನದಷ್ಟು ಹಿಂದೆ ನಮ್ಮ ಸಾಹಿತ್ಯದಲ್ಲಿ 'ಒಡ್ಡಾರಾಧನೆ'ಯಂತಹ ಸಣ್ಣಕತೆಗಳು ರಚಿತವಾಗಿದ್ದುವೆಂದು ಹೇಳಬಹುದಾದರೂ, ಅನೇಕರಿಗೆ ಆಶ್ಚರ್ಯವಾದ ಈ ಸಂಗತಿ ಸತ್ಯಸಂಗತಿ!

ಹಳೆಗನ್ನಡದಿಂದ ಹೊಸಗನ್ನಡಕ್ಕೆ ನಾವು ಕಾಲಿರಿಸಿದಾಗ ನವ್ಯ ಕವಿತೆಗಳಂತೆ ಸಣ್ಣಕತೆಗಳು ಹೆಚ್ಚಿನ ಪ್ರಾಮುಖ್ಯತೆಯಿಂದ ಪ್ರಕಟವಾದುವು.

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಪ್ರಿಗಳಾದ ಪಂಜೆ, ಕಾಮತ್, ಮಾಸ್ತಿ ಮುಂತಾದವರು ಸ್ವತಂತ್ರವಾದ ಸಣ್ಣಕತೆಗಳನ್ನು ಬರೆದು ನಮ್ಮ ಸಾಹಿತ್ಯಪಥಕ್ಕೊಂದು ರೂಪಕೊಟ್ಟರು.

ಮೊದಮೊದಲು ನಮ್ಮ ಕಥೆಗಾರರಿಗೆ ಹೊರ ಭಾಷೆಗಳ ಸಂಸ್ಕಾರ, ತಮ್ಮ ಅಧ್ಯಯನದ ಪರವಾಗಿ ಕತೆಗಳಲ್ಲಿ ತೂರಿ ಬರುತ್ತಿತ್ತು. ಆದರೆ ಕನ್ನಡದ ಜನಜೀವನದ ನೈಜ ಚಿತ್ರವನ್ನು ಚಿತ್ರಿಸಲು ಬಹುಬೇಗನೆ ನಮ್ಮ ಕಥೆಗಾರರ ಸಾಮರ್ಥ್ಯವನ್ನು ಪಡೆದರು.

ಇಪ್ಪತ್ತನೇ ಶತಮಾನದ ಮೂರನೇ ದಶಕದಿಂದಾರಂಭಿಸಿ ಸುಮಾರು ೨೫ ವರ್ಷಗಳ ಕಾಲವನ್ನು ಕನ್ನಡದ ಸಾಹಿತ್ಯದ ಸಣ್ಣಕಥೆಗಳ ಯುಗ ಎಂದು ಹೇಳಬಹುದು.

ಈ ಕಾಲದಲ್ಲಿ ಸಣ್ಣಕಥೆಗಳು ವಿಂಗಡದ ರೂಪದಿಂದ ಪ್ರಕಟವಾದುವು. ಹಿರಿಯ ಲೇಖಕರು, ಕಿರಿಯ ಲೇಖಕರು, ಮರಿಲೇಖಕರು ಎಲ್ಲರೂ ತಮ್ಮ ಲೇಖನಿಯನ್ನು ಸಣ್ಣ ಕಥೆಗಳತ್ತ ತಿರುಗಿಸತೊಡಗಿದರು. ಸಾಹಿತ್ಯಾಭಿಮಾನಿಯು, ತನ್ನ ಸಾಹಿತ್ಯ ಶಕ್ತಿಯನ್ನು, ಸಣ್ಣ ಕಥೆಗಳ ರಚನೆಯಿಂದಲೇ ಪ್ರಾರಂಭಿಸಿದನು. ಹಿರಿ ಸಾಹಿತಿಯು ತನ್ನ ವಿದ್ವತ್ತಿನ ಜಾಣ್ಮೆಯನ್ನು ಸಣ್ಣ ಕತೆಯಲ್ಲಿ ಭಟ್ಟಿಯಿಳಿಸಿ, ತನ್ನ ಪಾಂಡಿತ್ಯವನ್ನು ಪ್ರದರ್ಶಿಸಿದನು. ಹೀಗೆ ಸಾಹಿತ್ಯ ಭಂಡಾರದಲ್ಲಿ ರಸಪ್ರಭಾವವೇ ಹರಿಯಿತು. ಅಂತೆಯೇ ಕಸದ ರಾಶಿಯೂ ಬೆಳೆಯಿತು.

ಆದರೆ ಒಂದು ಮಾತ್ರ ನಿಜ. ಸಣ್ಣ ಕತೆಗಳು ಹುಲುಸಾಗಿ ಬೆಳೆದುವು. ಹಿರಿಮೆಯಿಂದ ಮೆರೆದು ಅಂತಾರಾಷ್ಟ್ರೀಯ ಮನ್ನಣೆಯನ್ನು ಗಳಿಸಿದುವು.

ಈ ಸಮಯದಲ್ಲಿ ಅನೇಕ ಉತ್ತಮ ಕನ್ನಡ ಸಾಹಿತಿಗಳು ಸಾಹಿತ್ಯಾಕಾಶದಲ್ಲಿ ತೇಜಃಪುಂಜ ತಾರೆಗಳಂತೆ ಗೋಚರಿಸಿದರು. ತರುಣ ಲೇಖಕರ ಬಳಗ ಒಂದು ಹೊಸ ಆಶೋದಯದೊಂದಿಗೆ ಬಲಿತು ನಿಂತಿತು. ಸಣ್ಣ ಕತೆಗಳ ಬಗ್ಗೆ ಕನ್ನಡದ ಜನ ಅಭಿಮಾನ ತಾಳುತ್ತಿದ್ದಂತೆ ಲೋಕಮನ್ನಣೆಯೂ ದೊರಕತೊಡಗಿತು.

ಈ ಸಂದರ್ಭದಲ್ಲಿ ಕನ್ನಡದಲ್ಲಿ ಸಣ್ಣ ಕತೆಗಳಿಗೊಂದು ಉಚ್ಚ ಸ್ಥಾನವನ್ನು ಕೊಟ್ಟ ಮಹನೀಯರ ಬಳಗವನ್ನು ಉಚ್ಚರಿಸುತ್ತಾ ಹೋಗುವುದಾದರೂ, ಅದೊಂದು ನೂರು ಪುಟಗಳಿಗೆ ಕಡಿಮೆಯಾಗದ ಹೆಬ್ಬೊತ್ತಿಗೆಯಾಗಬಹುದು. ಆದರೂ ಕನ್ನಡ ಕತೆಗಾರ ಯುವಕರಿಗೆ ಯೋಗ್ಯ ಸ್ಫೂರ್ತಿಯನ್ನು, ಉತ್ತಮ ಸ್ಥಾನವನ್ನು, ಆದರ್ಶವನ್ನು, ಉತ್ತಮ ಪರಂಪರೆಯನ್ನು ಹಾಕಿಕೊಟ್ಟಿರುವವರಲ್ಲಿ ಮಾಸ್ತಿ, ಕಾರಂತರು, ಅ. ನ. ಕೃ., ಬಿ. ಟಿ. ಜಿ. ಕೃಷ್ಣ (ಸಗೋರಮೋ) ಪುಟ್ಟಪ್ಪ, ಆನಂದ, ಶಾಮಲಾ ದೇವಿ, ಬೆಟಗೇರಿ ಕೃಷ್ಣಶರ್ಮ ಮುಂತಾದವರು ಮುಖ್ಯರು.

ಆದರೆ, ಇವರ ಒಂದೊಂದು ಬಗೆಯ ವೈಶಿಷ್ಟ್ಯವನ್ನು, ಇಲ್ಲವೇ ಆದರ್ಶವನ್ನು ಅಧ್ಯಯನ ಮಾಡಿ ಅವರಿಗೂ ಸರಿ ಮಿಗಿಲಾದ ಕೃತಿಗಳನ್ನು ನೀಡಿದ ಸಣ್ಣ ಕತೆಗಳ ಕೃತಿಗಾರರು ಅನೇಕರಿದ್ದಾರೆ.

ಭಾರತೀಯ ಸಾಹಿತ್ಯದಲ್ಲಿ ಸುಂದರ ಜೀವನ ಚಿತ್ರವನ್ನು ರೂಪಿಸಿದ ಅನೇಕ ಯುವಕ ಬರಹಗಾರರು ನಮ್ಮಲ್ಲಿದ್ದಾರೆ.

ಆದರೇ......?.......!

ಈ ರೀತಿ ಗಗನಕ್ಕೇರುತ್ತಿದ್ದ ಸಣ್ಣ ಕತೆಗಳ ಉನ್ನತ ಪರಂಪರೆಗೆ ಒಮ್ಮಿಂದೊಮ್ಮೆಗೆ ಯಾವ ಜಾಡ್ಯ ತಾಗಿತೋ? ಸಣ್ಣ ಕತೆಗಳ ಜಾಡಿನಲ್ಲಿ ಪ್ರಗತಿಯನ್ನೈದುತ್ತಿದ್ದ ನಮ್ಮ ಎಳೆಯ ಲೇಖಕರು ಮರೆ ಸೇರಲು ಕಾರಣವೇನು?

ಇದು ಈಗ ವಿವೇಚಿಸಬೇಕಾದ ಪ್ರಶ್ನೆ. ವಿವೇಚನೆಯ ಹಿನ್ನೆಲೆಯಲ್ಲಿ ವಾಸ್ತವಿಕ ಪರಿಹಾರವೂ ಇದೆ. ಒಂದೊಮ್ಮೆಗೆ ನಮ್ಮ ಜನ ಕಾದಂಬರಿಯ ಅಂಧಾರಾಧಕರಾದುದೇ ಸಣ್ಣ ಕತೆಗಳ ನಿರ್ಮೂಲಕ್ಕೆ ಕಾರಣವಾಯ್ತು. ಅಗ್ಗದರದ ಕೈಹೊತ್ತಿಗೆಗಳು ವಿಲಕ್ಷಣ ಆಕೃತಿಯಲ್ಲಿ ವರ್ಣವೈಖರಿಯ ವಿಕೃತಿಯಲ್ಲಿ ಪ್ರಕಟವಾಗ ತೊಡಗಿದುವು. ಕಡಿಮೆ ಬೆಲೆಗೆ ಕೀಳ್ಮಟ್ಟದ ಅಭಿರುಚಿಯನ್ನು ಪ್ರಚೋದಿಸುವ ವೈವಿಧ್ಯಮಯ ಕಾದಂಬರಿಗಳು ಪ್ರಕಟವಾದುವು.

ವಿಚಾರ ಪ್ರಚೋದನೆಗಿಂತಲೂ ಕಾಮ ಪ್ರಚೋದನೆಯೇ ಜೀವಾಳವಾಗಿ ಉಳ್ಳ ಕಾದಂಬರಿಗಳು ಕೇವಲ ವ್ಯಾವಹಾರಿಕವಾದ ದೃಷ್ಟಿಕೋನದಲ್ಲಿ ಕನ್ನಡದ ಸಾಹಿತ್ಯದ ಪವಿತ್ರಮಯ ವಾತಾವರಣವನ್ನು ಕಲುಷಿತಗೊಳಿಸ ತೊಡಗಿದುವು. ಇದಕ್ಕೆ ಪೂರಕವಾಗಿ ಮಾನವೀಯ ಮೌಲ್ಯಗಳ ಪ್ರತಿಬಿಂಬಗಳೆನಿಸಿದ ಪತ್ತೆದಾರಿ ಕಾದಂಬರಿಗಳು ಶತರೂಪದಲ್ಲಿ ಜನ್ಮ ತಾಳಿದುವು.

ಈ ದಾಂಧಲೆಯ ವಿಷಚಕ್ರದಲ್ಲಿ ಸಣ್ಣ ಕತೆಗಳ ಸರಳ ಹಾಗೂ ಮುಗ್ಧ ಜೀವನಕ್ಕೆ ಎಡೆಯೆಲ್ಲಿ?

ಸಣ್ಣ ಕತೆಗಳಲ್ಲಿ ಒಂದು ಉಚ್ಚತಮ ಪರಂಪರೆಯನ್ನು ಹಾಕಿಕೊಟ್ಟ ಮಾಸ್ತಿ ರಾಜಕೀಯ ಲೇಖನಿಯನ್ನು ಹಿಡಿದಿದ್ದಾರೆ. ನಿರಂಜನ, ಕಾರಂತರು, ಕಟ್ಟೀಮನಿ, ಅ. ನ. ಕೃ. ಕಾದಂಬರಿಯ ವ್ಯಾವಹಾರಿಕ ಬಂಧನದಲ್ಲಿ ತಮ್ಮ ಸುಖದುಃಖ ಬಿಡುತ್ತಿದ್ದಾರೆ. ಆನಂದ, ಗೋರೂರು ಸಾಹಿತ್ಯರಂಗದಲ್ಲಿ, ನಿರ್ಲಿಪ್ತರಾದಂತಿದೆ. ಪುಟ್ಟಪ್ಪನವರ ದೃಷ್ಟಿ ಅಂತರ್ಮುಖಿಯಾಗಿದೆ. ಕನ್ನಡದ ಹೊಸ ಹುರುಪಿನ ಕತೆಗಾರರು ಸಣ್ಣ ಕತೆಗಳ ಕಡೆ ಬೇಸತ್ತು ಕಾದಂಬರಿ ಕೋಟೆಗೆ ಲಗ್ಗೆ ಹತ್ತುತ್ತಿದ್ದಾರೆ. ಹೀಗಾಗಿ ಸಣ್ಣ ಕತೆಗಳ ಹುಲುಸಾದ ಬೆಳೆ ಕೊಡುವ ಹಸನು ಭೂಮಿ ಬೆಂಗಾಡಾಗುತ್ತಿದೆ.

ಈ ಸಂದರ್ಭದಲ್ಲಿ ಕನ್ನಡದ ಸಣ್ಣ ಕತೆಗಳ ಅಳಿವು-ಉಳಿವಿನ ಬಗ್ಗೆ ಹಿರಿಯರು ಯೋಚಿಸಬೇಕಾದ್ದು, ಕಿರಿಯರು ಉತ್ಸಾಹ ತಾಳಬೇಕಾದ್ದು ತೀರ ಅವಶ್ಯ.

ಸಣ್ಣ ಕತೆಗಳ ವ್ಯಾಖ್ಯೆಯನ್ನು ಅನೇಕ ಉತ್ಸಾಹಿ ತರುಣ ಬರಹಗಾರರು ತಪ್ಪು ತಿಳಿದಂತಿದೆ. ಸಣ್ಣ ಕತೆಯೆಂದೊಡನೆ ಒಂದು ವ್ಯಕ್ತಿಯ ಸಮಗ್ರಜೀವನದ ಕಲಶ ಮೇಲೋಗರವಾಗಬೇಕೆಂದಿಲ್ಲ. ಅಥವಾ ವೈವಿಧ್ಯಮಯ ವ್ಯಕ್ತಿತ್ವದ ಬಲತ್ಕಾರಿ ಕಿರು ನಿರೂಪಣೆಯಲ್ಲ. ಬದಲು ಜೀವನದ ಒಂದು ಮುಖದ, ಒಂದು ಘಟನೆಯ, ಒಂದು ವ್ಯಕ್ತಿತ್ವದ, ಸಹಜ, ಸಜೀವ, ನಿರೂಪಣೆಯಾದರೆ ಸಾಕು. ಅದೊಂದು ವಿಶಿಷ್ಟ ಸಣ್ಣ ಕತೆಯೆನಿಸುವುದು. ಇಂದು ಕೆಲವು ಕತೆಗಳನ್ನು ಓದುವಾಗ ಕಿರು ಕಾದಂಬರಿಯನ್ನು ಓದಿದಂತಾಗುತ್ತದೆ. ಒಂದು ಸಮಗ್ರ ವ್ಯಕ್ತಿ ಚಿತ್ರದ, ಬೃಹತ್ ರೂಪವನ್ನು, ಸ್ವಲ್ಪದರಲ್ಲಿ ಹುದುಗಿಸುವ ಸಾಹಸ ನಡೆಯುತ್ತಿದೆ. ಇದರಿಂದ ಒಂದು ಸತ್ವಶಾಲಿ ವಸ್ತುವು ಭಾವಪೂರ್ಣವಾಗಿ, ಸತ್ವಹೀನವಾಗಿ, ಅಪ್ರಿಯಂತೆ, ಅಸಹಜತೆಯ ಪ್ರತೀಕಗಳಾಗುವುದು.

ಕತೆಗೆ ಘಟನಾಬದ್ಧವಾದ ಜೀವನ, ಸಚೇತನವಾದ ಕ್ರಿಯಾಶಕ್ತಿ, ವೈವಿಧ್ಯಪೂರ್ಣವಾದ ರಸಮಯ ಸನ್ನಿವೇಶ ಇವು ಜೀವಾಳವಾಗಿದ್ದರೆ ಸಾಕು. ಚುಟುಕಾಗಿ ಹಾಗೂ ಚುರುಕಾಗಿ, ಜೀವನ ಧ್ಯೇಯಮಯ ಬಾಳ್ವೆಯನ್ನು ಕಲೆಯ ಒಪ್ಪದೊಂದಿಗೆ, ಕತೆಗಾರನು ಚಮತ್ಕಾರಪೂರ್ವಕವಾಗಿ ನೀಡುವುದಾದರೆ, ಅ[illegible]ತೆಯು ಪರಿಪೂರ್ಣತೆ ಪಡೆಯುತ್ತದೆ. ಅಂತಹ ಕತೆಗಳನ್ನು ಮಾಸ್ತಿ ಅ.ನ.ಕೃ. ಆನಂದ, ಗೋರೂರು, ಪುಟ್ಟಪ್ಪ ಮುಂತಾದವರು ಚೆನ್ನಾಗಿ ನೀಡಿದ್ದಾರೆ. ಅವ[illegible] ಕತೆಗಳಲ್ಲಿ ತೇಜಸ್ಸಿದೆ. ಹೃದಯಾಂತರಾಳದಿಂದ ಹೊರಹೊಮ್ಮುವ ಓಜಸ್ಸಿದೆ. ಮಾನವೀಯ ಧರ್ಮದ ಪರಿಪಕ್ವ ಅನುಭವವಿದೆ. ಇವೆಲ್ಲವೂ ಪರಿಪೂರ್ಣವಾಗಿ [illegible]ಮ್ಮಿಳಿತಗೊಂಡಿದೆ. ಅರ್ಥ ಸಂದೇಶವನ್ನು ಅದೆಷ್ಟು ಜಾಣ್ಮೆಯಿಂದ ಮೋಣಿಸಿದ್ದಾರೆ.

ನಿರಂಜನ, ಕೃಷ್ಣಮೂರ್ತಿ, ಪುಂಡಲೀಕ, ರಾಜರತ್ನಂ, ಕೆ. ಗೋಪಾಲಕೃಷ್ಣರಾವ್, ಅನುಪಮ, ವಾಣಿ, ಭಾರತಿಸುತ ಮೊದಲಾದವರೂ ಕನ್ನಡದ ಸಣ್ಣ ಕತೆಗಳ ಬೆಳೆಯನ್ನು ಬೆಳೆಸಲು ಕಾರಣರಾಗಿದ್ದಾರೆ.

ಕನ್ನಡದ ಸಣ್ಣ ಕತೆಗಳಲ್ಲಿ ಸತ್ವಪರಿಪೂರ್ಣತೆಯು ಇನ್ನಷ್ಟು ಬರಬೇಕಾದರೆ ನಮ್ಮ ಎಳೆಯ ಉತ್ಸಾಹಿ ಬರಹಗಾರರನ್ನು ಹುರಿದುಂಬಿಸುವ ಒಂದು ಹಿರಿಯ ಅನುಭವಿ ಬರಹಗಾರರ ನಿರ್ದೇಶನ ಮಂಡಳಿ ರೂಪುಗೊಳ್ಳುವುದೂ ಅವಶ್ಯವಿದೆ. ಇಂದು ಕತೆಗಾರರ ಯೋಗ್ಯ ಕತೆಗಳ [illegible]ಮರ್ಶೆಯನ್ನು ನಡೆಸುವವರಿಲ್ಲ. ಸಣ್ಣ ಕತೆಗಾರರಿಗೆ ಸ್ಫೂರ್ತಿಯನ್ನು ಉತ್ಸಾಹವನ್ನು, ಹುರಿದುಂಬಿಸು[illegible]

(೯ನೇ ಪುಟ ನೋಡಿರಿ)

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮೂಲಕ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂರನೆಯ ಯೋಜನೆಯಲ್ಲಿ

ಗ್ರಾಮೋನ್ನತಿಗಾಗಿ ಪಶುಪಾಲನೆ

ತೃತೀಯ ಯೋಜನಾವಧಿಯಲ್ಲಿ ಗ್ರಾಮಗಳ ಉನ್ನತಿ ಸಂಬಂಧವಾದ ಕಾರ್ಯಕ್ರಮದಲ್ಲಿ ಪಶುಪಾಲನಾ ಕಾರ್ಯಕ್ರಮವೂ ಸೇರಿದೆ. ನದಿ ಕಣಿವೆ ಪ್ರದೇಶಗಳಲ್ಲಿ ಮಿಶ್ರ ಬೇಸಾಯ ವಿಧಾನಕ್ಕೆ ಪ್ರಾಮುಖ್ಯವೀಯಲಾಗುವುದು. ಆಹಾರ ಧಾನ್ಯಗಳು ಮತ್ತು ನಗದು ಬೆಳೆಗಳ ಜೊತೆಗೇ ಪಶುಗಳಿಗಾಗಿ ಮೇವನ್ನೂ ದ್ವಿದಳ ಧಾನ್ಯದ ಬೆಳೆಗಳನ್ನೂ ಬೆಳೆಯಲಾಗುವುದು. ಉತ್ತಮ ಜಾತಿಯ ಪಶುಪ್ರಾಣಿಗಳನ್ನು ಕೊಳ್ಳುವುದಕ್ಕೆಂದು ಬೇಸಾಯಗಾರರಿಗೆ ಹಣಕಾಸಿನ ನೆರವನ್ನೂ ನೀಡಲಾಗುವುದು. ಬೆಳೆ ಉತ್ಪಾದನೆಯೊಂದಿಗೆ ಪಶುಪಾಲನೆಯನ್ನು ಜೋಡಿಸುವುದರಿಂದ ಭೂಮಿ, ಶ್ರಮ ಮತ್ತು ಬಂಡವಾಳವನ್ನು ದಕ್ಷಪೂರ್ಣವಾಗಿಯೂ ಮಿತವ್ಯಯದಿಂದಲೂ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಈ ರೀತಿಯ ಮಿಶ್ರ ಬೇಸಾಯ ವಿಧಾನದಿಂದಾಗಿ ಕೃಷಿ ಕ್ಷೇತ್ರದಲ್ಲಿನ ಉಪ ಉತ್ಪನ್ನಗಳನ್ನು ಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ಬೇಸಾಯಗಾರರಿಗೆ ವರ್ಷಪೂರ್ತಿ ಹೆಚ್ಚಿನ ಉದ್ಯೋಗಾವಕಾಶ ಲಭಿಸುತ್ತದೆ, ಮತ್ತು ಅವರಿಗೆ ಹೆಚ್ಚಿನ ವರಮಾನವೂ ಪ್ರಾಪ್ತವಾಗುತ್ತದೆ.

ಭಾರತದಲ್ಲಿ ಒಟ್ಟು ೩೩ ಕೋಟಿ ಪಶುಪ್ರಾಣಿಗಳವೆಯೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ದನಕರುಗಳು ಮತ್ತು ಎಮ್ಮೆಗಳ ಸಂಖ್ಯೆ ೨೨ ಕೋಟಿಗಳಿಗಿಂತಲೂ ಹೆಚ್ಚಿದೆ. ಅಂದರೆ ಜಗತ್ತಿನಲ್ಲಿರುವ ಒಟ್ಟು ದನಕರುಗಳ ಸಂಖ್ಯೆಯಲ್ಲಿ ಮೂರನೆಯ ಎರಡರಷ್ಟು ಭಾರತದಲ್ಲಿಯೇ ಇದ್ದಂತಾಯಿತು. ಅವುಗಳ ಉತ್ಪನ್ನಶಕ್ತಿ ಮಾತ್ರ ತೀರ ಕಡಿಮೆ. ನಮ್ಮ ದೇಶದಲ್ಲಿ ಹಸುಗಳು ಸರಾಸರಿ ೪೦೦ ಪೌಂಡುಗಳಷ್ಟು ಹಾಲನ್ನು ಕೊಡುತ್ತವೆ. ಎಮ್ಮೆಗಳಾದರೋ ೧೧೦೦ ಪೌಂಡುಗಳಷ್ಟು ಹಾಲನ್ನು ಕೊಡುತ್ತವೆ. ಅದೇ ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿನ ಪಶುಗಳು ೫೦೦೦ ಪೌಂಡುಗಳಷ್ಟು ಹಾಲನ್ನು ಕೊಡುತ್ತವೆ

ಗೋಸಂವರ್ಧನೆಯ ಸಂಬಂಧವಾದ ಸಮಸ್ಯೆಯು ನಾಲ್ಕು ರೀತಿಯದ್ದಾಗಿದೆ. ತಳಿಗಳ ಸುಧಾರಣೆ, ಅನುಪಯುಕ್ತ ಪಶುಗಳ ಉಪಯೋಗವನ್ನು ನಿಲ್ಲಿಸುವುದು, ಪಶುಪ್ರಾಣಿಗಳಿಗೆ ಉತ್ತಮ ದರ್ಜೆಯ ಆಹಾರವನ್ನು ಒದಗಿಸುವುದು ಮತ್ತು ಪಶುಪ್ರಾಣಿಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು. ಮೊದಲನೆಯ ಎರಡು ಯೋಜನೆಗಳಲ್ಲಿ ವ್ಯಾಪಕವಾಗಿ ಗೋಸಂವರ್ಧನಾ ಕಾರ್ಯಕ್ರಮವನ್ನು ಕೈಗೊಂಡು ಈ ನಾಲ್ಕು ರೀತಿಯ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಕ್ರಮಕೈಗೊಳ್ಳಲಾಯಿತು. ಈ ಕಾರ್ಯಕ್ರಮವನ್ನೇ "ಆದರ್ಶ ಪಶು ಗ್ರಾಮ ಕಾರ್ಯ ಯೋಜನೆಯೆಂದು ಕರೆಯಲಾಗುತ್ತಿದೆ.

ಈ ಕಾರ್ಯ ಯೋಜನೆಯಲ್ಲಿ ಅಂತರ್ಗತವಾಗಿರುವ ಗ್ರಾಮಗಳಲ್ಲಿ ಆದರ್ಶ ಪಶುಗ್ರಾಮ ಕ್ಷೇತ್ರಗಳನ್ನೂ ರೂಪಿಸಲಾಗುವುದು. ಉತ್ತಮ ತಳಿಯ ಬೀಜದ ಹೋರಿಗಳನ್ನು ಈ ಕ್ಷೇತ್ರಗಳಿಗೆ ಪೂರೈಸಿ ಉತ್ತಮ ತಳಿಯ ಜಾನುವಾರುಗಳನ್ನೂ ವೃದ್ಧಿಸಲಾಗುವುದು. ಜೊತೆಗೆ ಕೃತಕವೀರ್ಯ ಪ್ರಯೋಗವಿಧಾನಗಳನ್ನು ಜನಪ್ರಿಯಗೊಳಿಸಲಾಗುವುದು. ಅದೇ ಸಮಯದಲ್ಲಿ ಉಪಯೋಗಕ್ಕೆ ಬಾರದ ಹೋರಿಗಳನ್ನು ಬೇರ್ಪಡಿಸಲಾಗುವುದು. ಜಾನುವಾರುಗಳಿಗೆ ಆಹಾರದ ರೂಪದಲ್ಲಿ ಕೊಡುವ ಮೇವನ್ನೂ ಆಹಾರ ವಸ್ತುಗಳನ್ನೂ ಅಧಿಕ ಪ್ರಮಾಣದಲ್ಲಿ ಉತ್ಪಾದಿಸುವ ಬಗ್ಗೆ ಕ್ರಮಕೈಗೊಳ್ಳಲಾಗುವುದು. ಅಂಟು ಜಾಡ್ಯಗಳು ತಗಲದಂತೆ ಮಾಡುವುದು. ಅಂಟು ಜಾಡ್ಯಗಳು ತಗಲದಂತೆ ಮಾಡುವುದಕ್ಕಾಗಿ ಪಶುಪ್ರಾಣಿಗಳಿಗೆ ಚುಚ್ಚುಮದ್ದನ್ನು ಹಾಕಲಾಗುವುದು. ಈ ಕಾರ್ಯಯೋಜನೆಯ ಉದ್ದೇಶ ಹಾಲಿನ ಉತ್ಪತ್ತಿಯನ್ನು ಹೆಚ್ಚಿಸುವುದು ಮತ್ತು ಪಶುಪ್ರಾಣಿಗಳಿಂದ ಹೆಚ್ಚು ಹೆಚ್ಚಾಗಿ ಕೆಲಸಮಾಡಿಸಲು ಸಾಧ್ಯವಾಗುವಂತೆ ಮಾಡುವುದೇ ಆಗಿದೆ, ದ್ವಿತೀಯ ಯೋಜನಾಂತ್ಯದಲ್ಲಿ ಸುಮಾರು ಎರಡು ಸಾವಿರ ಗ್ರಾಮಗಳಿಗೆ ಸಂಬಂಧಿಸಿದಂತೆ ೧೯೬ ಆದರ್ಶ ಪಶುಗ್ರಾಮ ಕ್ಷೇತ್ರಗಳಿವೆ.

ಪಶು ಸಂಪತ್ತನ್ನು ಒಂದು ಅಚ್ಚುಕಟ್ಟಾದ ರೀತಿಯಲ್ಲಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಸಮಗ್ರ ಭಾರತ ಕಾರ್ಯನೀತಿಯೊಂದನ್ನು ರೂಪಿಸಿದೆ. ಈ ಕಾರ್ಯ ನೀತಿಯನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಅಂಗೀಕರಿಸಿವೆ. ಭಾರತದ ದನಗಳಲ್ಲಿ ಸುಸ್ಪಷ್ಟವಾದ ೨೫ ತಳಿಗಳಿವೆ. ಎಮ್ಮೆಗಳಲ್ಲಿ ೬ ತಳಿಗಳಿವೆ. ಕೆಲವು ಹಾಲು ಕೊಡುವ ತಳಿಗಳಾಗಿವೆ. ಮತ್ತೆ ಕೆಲವು ದುಡಿಮೆಗೆ ಮಾತ್ರಯೋಗ್ಯವಾಗಿವೆ. ಪಂಜಾಬಿನ ಹರಿಯಾನ, ಗುಜರಾತಿನ ಕಂಕರೇಜ್ ಮತ್ತು ಆಂಧ್ರಪ್ರದೇಶದ ಓಂಗೋಲ್ ಪ್ರದೇಶಗಳಲ್ಲಿ ಹಾಲುಕೊಡುವ ಹಾಗೂ ದುಡಿಮೆಗೆ ಯೋಗ್ಯವಾದ ತಳಿಗಳಿವೆ. ಇಂತಹ ತಳಿಗಳನ್ನೇ ಸಂವರ್ಧಿಸುವುದು ರಾಷ್ಟ್ರೀಯ ಕಾರ್ಯನೀತಿಯಾಗಿದೆ. ತೃತೀಯ ಯೋಜನಾವಧಿಯಲ್ಲಿ ಪ್ರಯೋಗಾರ್ಥವಾಗಿ ಉನ್ನತ ಪ್ರದೇಶಗಳಲ್ಲಿನ ತಳಿಗಳನ್ನು ತಂದು ದೇಶದಲ್ಲಿ ಮಿಶ್ರತಳಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವಿದೆ. ಜರ್ಸಿತಳಿ ಪಶುಗಳುಳ್ಳ ಫಾರಂಗಳನ್ನು ಸ್ಥಾಪಿಸುವ ಉದ್ದೇಶವಿದೆ.

ಬೀಜದ ಹೋರಿಗಳ ಅಭಾವವೂ ಪಶುಸಂವರ್ಧನಾ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಲು ತಡವಾಗುತ್ತಿರುವುದಕ್ಕೆ ಒಂದು ಮುಖ್ಯ ಕಾರಣವಾಗಿದೆ ಎನ್ನಬಹುದು. ದೇಶದಲ್ಲಿ ೧೨೫ ಸರಕಾರಿ ಗೋಸಂವರ್ಧನಾ ಫಾರಂಗಳಿವೆ. ಇಲ್ಲಿ ಒಟ್ಟು ೫,೦೦೦ ಬೀಜದ ಹೋರಿಗಳು ಮಾತ್ರ ಇವೆ. ಇವು ಸಾಲದು. ಬೀಜದ ಹೋರಿಗಳನ್ನು ಸಾಕುವ ೧೧ ಫಾರಂಗಳನ್ನು ಸ್ಥಾಪಿಸಲು ತೃತೀಯ ಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ಸುಮಾರು ೩೦,೦೦೦ ಉತ್ಕೃಷ್ಟ ಜಾತಿಯ ಕರುಗಳನ್ನು ಸಾಕಲು ಸಹಾಯ ನೀಡುವ ಉದ್ದೇಶವಿದೆ.

ಬೀಜದ ಹೋರಿಗಳ ಅಭಾವವನ್ನು ನೀಗಿಸುವ ಉದ್ದೇಶದಿಂದ ಕೃತಕವೀರ್ಯ ಪ್ರಯೋಗ ವಿಧಾನವನ್ನು ತ್ವರಿತವಾಗಿ ವಿಸ್ತರಿಸಲಾಗುತ್ತಿದೆ. ೧೯೬೦ರ ಅಂತ್ಯದ ವೇಳೆಗೆ ೬೭೦ ಕೃತಕ ವೀರ್ಯ ಪ್ರಯೋಗ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ವಿವಿಧ ಆದರ್ಶ ಪಶುಗ್ರಾಮ ಬ್ಲಾಕ್‌ಗಳಲ್ಲಿ ಸೇವೆ ಸಲ್ಲಿಸುವುದಕ್ಕಾಗಿ ಅಧಿಕ ಸಂಖ್ಯೆಯ ಕೃತಕ ವೀರ್ಯ ಪ್ರಯೋಗ ಕೇಂದ್ರಗಳನ್ನು ಸ್ಥಾಪಿಸಲು ತೃತೀಯ ಯೋಜನೆಯಲ್ಲಿ ಅವಕಾಶವೇರ್ಪಡಿಸಲಾಗಿದೆ. ಗೋಶಾಲೆಗಳಂತಹ ಖಾಸಗಿ ಸಂಸ್ಥೆಗಳ ಮೂಲಕ ಗೋಸಂವರ್ಧನಾ ಕಾರ್ಯ ಚಟುವಟಿಕೆಗಳನ್ನು ತೀವ್ರಗೊಳಿಸಲಾಗುವುದು.

ಕೀಳು ದರ್ಜೆಯ ಜಾನುವಾರುಗಳನ್ನು ಪ್ರತ್ಯೇಕಿಸುವ ವಿಚಾರವು ಗೋಸಂವರ್ಧನಾ ಕಾರ್ಯಕ್ರಮಕ್ಕೆ ಪರಿಪೂರಕವಾಗಿರುತ್ತದೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆಂದೇ ಕೊಂಚ ಮಟ್ಟಿಗೆ ಗೋಸದನ ಕಾರ್ಯಯೋಜನೆಯನ್ನು ಜಾರಿಗೆ ತರಲಾಯಿತು. ಈ ಕಾರ್ಯಯೋಜನೆಯ ಪ್ರಕಾರ ಉಪಯೋಗಕ್ಕೆ ಬಾರದೇ ಇರುವ ಪಶುಪ್ರಾಣಿಗಳ ಸಂತಾನವನ್ನು ತಡೆಗಟ್ಟುವ ಉದ್ದೇಶದಿಂದ ಅವುಗಳನ್ನು ನಿರ್ಜನ ಪ್ರದೇಶಗಳಿಗೆ ಸಾಗಿಸಲಾಗುವುದು. ಗೋಸದನ ಕಾರ್ಯಯೋಜನೆಗಳನ್ನು ಆಗಿಂದಾಗ್ಗೆ ಪರಿಷ್ಕರಿಸುತ್ತ ಬರಲಾಗಿದೆ. ಪರಿಷ್ಕರಣೆಯ ಉದ್ದೇಶ ಗೋಸದನಗಳು ಲಾಭದಾಯಕವಾಗಿರುವಂತೆ ಮಾಡುವುದೇ ಆಗಿದೆ. ಸತ್ತ ಪ್ರಾಣಿಗಳ ಚಕ್ಕಳ, ಮೂಳೆ, ಕೊಂಬುಗಳು ಮುಂತಾದುವನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು ಮೇಲ್ಪಟ್ಟಳಿತ ವೆಚ್ಚಗಳನ್ನು ತಗ್ಗಿಸುವುದೂ ಒಂದು ಉದ್ದೇಶವಾಗಿದೆ.

ಹುಲ್ಲುಗಾವಲುಗಳನ್ನು ಅಭಿವೃದ್ಧಿಪಡಿಸುವುದು ಮೇವನ್ನು ಅಧಿಕ ಪ್ರಮಾಣದಲ್ಲಿ ಉತ್ಪತ್ತಿ ಮಾಡುವುದು, ಉತ್ಪತ್ತಿ ಮಾಡಿದ ಮೇವನ್ನು ಕೆಡದಂತೆ ಇಡುವ ಬಗ್ಗೆ ಉತ್ತಮ ರೀತಿಯ ಏರ್ಪಾಟುಗಳನ್ನು ಮಾಡುವುದು, ವ್ಯಾವಸಾಯಿಕ ಉಪ ಉತ್ಪನ್ನಗಳನ್ನು ಪೂರ್ಣವಾಗಿ ಬಳಸಿ

(ಆನೇ ಪುಟ ನೋಡಿರಿ)

ಮೇಲಿನ ಸಾಲು: ಹರಿಯಾನ ಜಾತಿಯ ದನ (ಎಡ), ೪೬ ರಾತಲು ಹಾಲು ಕೊಡುವ ಎಮ್ಮೆ (ಬಲ).
ಕೆಳಗಿನ ಸಾಲು: ಭಾರತದ ಪಶು ತಳಿಗಳ ಮಾದರಿಗಳು (ಎಡ), ಪರಿಶೀಲನೆಗೆ ಗುರಿ ಮಾಡಿದ ಕರುಗಳು (ಬಲ).

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೧-೩-'೬೨	೨೫

ಕೆನ್ನೆಡಿಯವರ ಶಂಕೆ

ಅಮೆರಿಕೆಯ ಅಧ್ಯಕ್ಷ ಜಾನ್ ಕೆನ್ನೆಡಿಯವರು ತಮ್ಮ ಸೋದರ ರೋಬರ್ಟ್ ಕೆನ್ನೆಡಿಯವರನ್ನು ಪ್ರಪಂಚದ ವಿವಿಧ ರಾಷ್ಟ್ರಗಳ ಸಂದರ್ಶನಕ್ಕೆ ಕಳುಹಿಸಿದ್ದಾರೆ. ಹೀಗೆ ಕಳಿಸಲು ಕೆಲವೊಂದು ಕಾರಣಗಳಿರುವುದಾದರೂ ಹೆಚ್ಚಿನ ದೇಶಗಳ ವಿದ್ಯಾರ್ಥಿಗಳು ಅಮೆರಿಕೆಯ ಕಡೆಗೆ ವಿರೋಧೀ ಭಾವನೆಯನ್ನಿಟ್ಟುಕೊಳ್ಳಲು ಕಾರಣವೇನೆಂಬುದನ್ನು ತಿಳಿದುಕೊಳ್ಳುವ ಅಭಿಲಾಷೆಯೂ ಇವುಗಳಲ್ಲಿ ಒಂದು ಎಂಬುದನ್ನು ಅಧ್ಯಕ್ಷ ಕೆನ್ನೆಡಿಯವರೇ ಒಂದು ಪತ್ರಿಕಾ ಪರಿಷತ್ತಿನಲ್ಲಿ ಬಹಿರಂಗ ಪಡಿಸಿದ್ದಾರೆ. ಕೆನ್ನೆಡಿಯವರ ಅಭಿಪ್ರಾಯದಂತೆ, ಸ್ವತಂತ್ರ ಸಮಾಜ ನಿರ್ಮಾಣಕ್ಕೆ ಅತ್ಯಧಿಕವಾಗಿ ಹೆಣಗಾಡುವ ಒಂದು ರಾಷ್ಟ್ರದ ಬಗ್ಗೆ ಯಾವುದೇ ದೇಶದ ಬಗ್ಗೆ ವಿರೋಧೀ ಭಾವನೆಯನ್ನು ಯಾವಕಾರಣದಿಂದ ಬೆಳೆಸಲಾಗುತ್ತಿದೆಯೆಂಬುದು ಅವರಿಗೆ ಅರ್ಥವಾಗುತ್ತಿಲ್ಲ. ಇದರಿಂದಾಗಿ ಅವರ ಮನಸ್ಸಿನಲ್ಲಿ ಎದ್ದ ಹೊಯ್ದಾಟವನ್ನು ಕೊನೆಗೊಳಿಸುವ ಇರಾದೆಯಿಂದ ಇಂತಹ ಕಾರಣಗಳನ್ನು ಕಲೆ ಹಾಕಿ ಸಾಧ್ಯವಾದರೆ, ಅವನ್ನು ದೂರ ಮಾಡುವ ಆಶಯ ಅವರದ್ದಿರಬಹುದು.

ಆದರೆ, ಒಂದು ಮಾತು ನಿಜವೆಂದು ಒಪ್ಪಿಕೊಳ್ಳಬೇಕು. ಯಾವುದೇ ಒಂದು ದೇಶದಲ್ಲಿ ವಿದ್ಯಾರ್ಥಿಗಳು ಅಮೆರಿಕೆಗಾಗಲಿ ರಶ್ಯಕ್ಕಾಗಲಿ ಪರರಾಗಿರುವರೆಂದು ಹೇಳುವಂತಿಲ್ಲ. ಅಮೆರಿಕೆಯಿಂದು ರಶ್ಯಕ್ಕೆ ಮಾತ್ರ ಹೆದರುತ್ತದೆ. ಅದುದರಿಂದ, ತನಗೆ ವಿರೋಧವಾದ ಭಾವನೆ ಹುಟ್ಟಿತು ಎಂದರೆ, ಅಲ್ಲಿ ರಶ್ಯಕ್ಕೆ ಪರವಾದ ಭಾವನೆಯಿದೆ ಎಂದು ಅದರ ಕಲ್ಪನೆ. ಇಂತಹ ಊಹಾಪೋಹವು ನಿಜವಲ್ಲವೆಂದೇ ಹೇಳಬೇಕಾಗುತ್ತದೆ. ವಿದ್ಯಾರ್ಥಿಗಳು ಅಮೆರಿಕನ್ ಅಥವಾ ರಶ್ಯನ್ ಭಾವನೆಗಳಿಗೆ ಗುರಿಯಾಗದೆ, ಸ್ವದೇಶದ ಬಗ್ಗೆ ಮಾತ್ರ ವಿಶೇಷ ಯೋಚಿಸುತ್ತಾರೆಂದರೆ, ಅದು ಎಂದಿಗೂ ಅತಿಶಯೋಕ್ತಿಯಾಗಲಾರದು. ಈ ಮಾತು ಸ್ವತಃ ಅಮೆರಿಕೆಗೂ ಅನ್ವಯಿಸುತ್ತದೆ, ಕೆಲವು ಸಮಯಕ್ಕೆ ಮೊದಲು ಶ್ರೀ ಕಾಸ್ಟ್ರೋರವರು ಅಮೆರಿಕನ್ ವಿರೋಧವಾಗಿ ಕ್ಯೂಬಾದಲ್ಲಿ ಭಾಷಣ ಮಾಡುತಿದ್ದಾಗ, ಅಮೆರಿಕನ್ ವಿದ್ಯಾರ್ಥಿಗಳು ಕ್ಯೂಬಾದಿಂದ ಬರುವ ಸಕ್ಕರೆಯನ್ನು ನಾಶ ಮಾಡಿದುದನ್ನು ನೆನಪಿಸ ಬೇಕಾಗುತ್ತದೆ. ಇದಕ್ಕೆ ಅಮೆರಿಕನ್ ವಿದ್ಯಾರ್ಥಿಗಳಲ್ಲಿನ ದೇಶಾಭಿಮಾನವೇ ಕಾರಣವಲ್ಲವೆ? ಹಾಗೆಯೇ ಶ್ರೀ ರಾಬರ್ಟ್ ಕೆನ್ನೆಡಿಯವರ, ಜಪಾನಿನಲ್ಲಿ ತುಸು ಬಿಕ್ಕಟ್ಟಿಗೆ ಸಿಕ್ಕಿಕೊಂಡರು. ಇದಕ್ಕೆ ಕಾರಣವನ್ನರಸಲು ದೂರ ಹೋಗ ಬೇಕಾಗಿಲ್ಲ. ಅಮೆರಿಕನ್ ದಳಗಳು ಕೆಲವರು ಜಪಾನಿನಲ್ಲಿರುವುದೂ ಅವರ ಒಕಿನಾವಾವು ಇನ್ನೂ ಅಮೆರಿಕೆಯ ನಿಯಂತ್ರಣದಲ್ಲಿರುವುದೂ ಹೇತುವೆಂಬುದು ಸುಸ್ಪಷ್ಟವಿದೆ. ಜಪಾನಿನಲ್ಲಿರುವ ಕಮ್ಯೂನಿಷ್ಟರು ಈ ಕಾರಣದಿಂದ ವಿದ್ಯಾರ್ಥಿಗಳನ್ನು ಉದ್ರಿಕ್ತರಾಗುವಂತೆ ಮಾಡುವುದು ಸಾಧ್ಯವಾದರೂ ಅಮೆರಿಕನ್ ವಿರೋಧ ಭಾವನೆಯನ್ನು ಹುಟ್ಟಿಸಲಾರರು. ಇಂತಹ ವಿರೋಧಭಾವನೆಗೆ ಜಪಾನೀಯರಲ್ಲಿರುವ ಸ್ವದೇಶಾಭಿಮಾನವೇ ಕಾರಣವೆಂಬುದು ನಿರ್ವಿವಾದ. ಈ ತೆರದ ವರ್ತನೆಯು ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿಯೂ ಇಲ್ಲವೆಂದು ಹೇಳುವಂತಿಲ್ಲ. ೧೯೫೬ರಲ್ಲಿ ಹಂಗೇರಿಯ ವಿದ್ಯಾರ್ಥಿಗಳು ರಶ್ಯನ್ ನಿಯಂತ್ರಣಕ್ಕೆ ವಿರೋಧವಾಗಿ ಎದ್ದ ದಂಗೆಯಲ್ಲಿ ಗಣನೀಯ ಪಾತ್ರವಹಿಸಿದ್ದರು. ಮಾವೋಟ್ಸೆ ಟುಂಗರೂ ತಮ್ಮ ರಶ್ಯಾವಲಂಬಿತ ನೀತಿಯ ಬಗ್ಗೆ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಎದುರಿಸಬೇಕಾಯ್ತು. ಚೀನದಲ್ಲಿ ಕೂಡ ಮೊದಲಿದ್ದ ರಶ್ಯನ್ ತಂತ್ರಜ್ಞರನ್ನು ಹೊರದೂಡಬೇಕೆಂಬ ಆವೇಶ ಹುಟ್ಟಿ ಬಂದುದು ಸ್ವದೇಶಾಭಿಮಾನದ ಬೀಜದಿಂದ. ಇಂದು ಪಾಕಿಸ್ತಾನದ ಮಿಲಿಟರಿ ಆಡಳಿತೆಯ ವಿರೋಧವಾಗಿ ವಿದ್ಯಾರ್ಥಿಗಳು ಅತೃಪ್ತಿ ವ್ಯಕ್ತಪಡಿಸಿದರೆ, ಅದರಲ್ಲಿ ರಶ್ಯದ ಕೈವಾಡವಿದೆಯೆನ್ನುವುದಾಗಲೀ, ಅಮೆರಿಕೆಯ ಕುತಂತ್ರವಿದೆಯೆಂದಾಗಲೀ ಹೇಳುವುದಲ್ಲ. ತಮ್ಮ ನಾಡಿನ ಬಗ್ಗೆ, ಅದರ ಆಗುಹೋಗುಗಳ ಬಗ್ಗೆ ಅವರಲ್ಲಿ ತೋರಿ ಬರುವ ಉತ್ಸಾಹವೇ ಅದಕ್ಕೆ ಮೂಲ ಸ್ರೋತ. ಪಾಕಿಸ್ತಾನದಲ್ಲಿ ಇಂದು ಅಮೆರಿಕನ್ ವಿರೋಧಿ ಭಾವನೆಯು ಮೂಡಿರುವುದಕ್ಕೆ ತಮ್ಮ ದೇಶವು ಅಮೆರಿಕೆಯನ್ನು ಅವಲಂಬಿಸಿಕೊಂಡಿರ ಬಾರದು ಎಂಬ ಆದರ್ಶವೇ ಮೂಲವೆಂಬುದು ನಿರ್ವಿವಾದ.

ನಮ್ಮ ದೇಶವಾದರೂ ಅಮೆರಿಕೆಯಿಂದ ಸಹಾಯವನ್ನು ಗಳಿಸುತ್ತಿದೆ. ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುವ ಪ್ರತಿ ದೇಶವೂ ಭದ್ರ ಭವಿಷ್ಯ ನಿರ್ಮಾಣಕ್ಕಾಗಿ ಹೊರ ದೇಶಗಳಿಂದ ನಾನಾ ವಿಧದ ಸಹಾಯವನ್ನು ಅಪೇಕ್ಷಿಸುವುದು ಸಹಜ. ನಮ್ಮ ಪಂಚವಾರ್ಷಿಕ ಯೋಜನೆಗಳಿಗೆ ಅಮೆರಿಕೆಯು ಕೊಡುಗೈಯಿಂದ ನೆರವು ನೀಡುತ್ತಿದೆ. ಆದರೆ, ಹೀಗೆ ಸಹಾಯ ಪಡೆಯುವುದನ್ನು ನಮ್ಮಲ್ಲಿ ಕೆಲವರು ಪ್ರತಿಭಟಿಸುವುದುಂಟು. ಸ್ವತಂತ್ರ ಪಕ್ಷವು ಕಾಂಗ್ರೆಸ್ ಸರಕಾರವನ್ನು ಟೀಕಿಸಲು ಈ ವಿದೇಶೀ ಸಹಾಯವನ್ನು ಒಂದು ಪ್ರಬಲ ಅಸ್ತ್ರವನ್ನಾಗಿ ಮಾಡಿಕೊಂಡಿರುವುದನ್ನು ನಾವು ಕಾಣುತ್ತೇವೆ. ಇಷ್ಟರಿಂದಲೇ ಇದು ಅಮೆರಿಕನ್ ಇಲ್ಲವೆ ರಶ್ಯನ್ ವಿರೋಧೀ ಭಾವನೆಯೆನ್ನುವುದು ಸರಿಯಾಗಲಾರದು. ದೇಶದ ಆಂತರಿಕ ಸಂಪತ್ತಿಯನ್ನೇ ಹೆಚ್ಚಿಸಿ ಅಲ್ಪ ಪ್ರಮಾಣದ ಯೋಜನೆಗಳನ್ನು ಕೈಗೊಳ್ಳ ಬೇಕು; ವಿದೇಶೀಯರ ಮುಂದೆ ಕೈ ಚಾಚ ಬಾರದು. ಎಂಬ ಆದರ್ಶ ಮಾತ್ರವೇ. ಇದರಲ್ಲಿ ಸ್ವಾಭಿಮಾನವಿದೆ. ಯಾವುದೇ ರಾಷ್ಟ್ರ, ಅದೆಷ್ಟೇ ಚಿಕ್ಕದಿರಲಿ, ನಿರ್ಬಲವಿರಲಿ ಸ್ವರಾಷ್ಟ್ರಾಭಿಮಾನದ ಭಾವನೆಯಿರುವುದು ಅತ್ಯವಶ್ಯ. ಇದನ್ನು ಅಪರಾಧವೆಂದಾಗಲೀ ದೋಷವೆಂದಾಗಲೀ ಕಲ್ಪಿಸುವುದು ಸರ್ವಥಾ ಅಸಮಂಜಸ. ಆದುದರಿಂದ ಅಧ್ಯಕ್ಷ ಕೆನ್ನೆಡಿಯವರು ಸೋದರರನ್ನು ಭೂಪ್ರದಕ್ಷಿಣೆಗೆ ಕಳುಹಿಸಿದ್ದು ಉಚಿತವೆಂದೇ ಹೇಳ ಬಹುದಾದರೂ ಅವರು ಮೂಲತಃ ಇಟ್ಟುಕೊಂಡಿದ್ದ ಉದ್ದೇಶ ಮಾತ್ರ ಮೂಲಾಶೀತವಾದುದೆಂದೂ ಸಹಜ ಸ್ವದೇಶಾಭಿಮಾನವೇ ವಿದ್ಯಾರ್ಥಿಗಳ ವರ್ತನೆಗೆ ಪ್ರೇರಕವೆಂದೂ ಖಂಡಿತವಾಗಿಯೂ ಹೇಳಬಹುದು.

ಜನತೆಯ ಮತ

ಇಡಿಯ ಭಾರತದಲ್ಲಿ ಮೂರನೆಯ ಬಾರಿಗೆ ಸಾರ್ವತ್ರಿಕ ಚುನಾವಣೆಗಳು ಇದೀಗ ಮುಕ್ತಾಯಗೊಂಡು ಅಲ್ಲಲ್ಲಿಯ ಫಲಿತಾಂಶಗಳು ಪ್ರಕಟವಾಗ ತೊಡಗಿದೆ. ಇನ್ನು ಒಂದೆರಡು ದಿನಗಳಲ್ಲಿ ಎಲ್ಲಕ್ಷೇತ್ರಗಳ ಫಲಿತಾಂಶವೂ ಹೊರಬರಲಿದೆ. ಕೇವಲ ಒಂದೇ ವಾರದಲ್ಲಿ ಇಷ್ಟೊಂದು ದೊಡ್ಡ ದೇಶದಲ್ಲಿ ಸುಮಾರು ೨೦ಕೋಟಿ ಮತದಾರರಿರುವ ಪ್ರಜಾಪ್ರಭುತ್ವದಲ್ಲಿ ಶಾಂತರೀತಿಯಲ್ಲಿ ಚುನಾವಣೆಗಳು ಮುಕ್ತಾಯಗೊಂಡುದು ಸಂತೋಷದ ಸಂಗತಿ ಮಾತ್ರವಲ್ಲ, ಅದು ನಮಗೆ ಅಭಿಮಾನಾಸ್ಪದವೂ ಹೌದು. ಸರ್ವಸಾಮಾನ್ಯವಾಗಿ ಇಡಿಯದೇಶದ ಎಲ್ಲ ವಿಧಾನ ಸಭಾ ಮತ್ತು ಲೋಕ ಸಭಾಕ್ಷೇತ್ರಗಳಲ್ಲಿಯೂ ಕುರುಸಿನ ಸ್ಪರ್ಧೆಯಿದ್ದರೂ ಗೊಂದಲಗಳಿಗೆ ಅಸ್ಪದ ನೀಡದಂತೆ ತಮ್ಮ ನಾಗರಿಕಾಧಿಕಾರವನ್ನು ಚಲಾಯಿಸಿದ ನಮ್ಮ ಮತದಾರರನ್ನು ಅವಶ್ಯ ಕೊಂಡಾಡಬೇಕು.

ಚುನಾವಣೆಗಳ ಫಲಿತಾಂಶಗಳೆಲ್ಲವೂ ಬರುವುದಕ್ಕೆ ಮೊದಲು ಆ ಬಗ್ಗೆ ಹೆಚ್ಚಿಗೇನನ್ನೂ ಹೇಳಲು ಸಾಧ್ಯವಿಲ್ಲವಾದರೂ ಮತದಾರರು ತಮ್ಮ ಹಿತವನ್ನು ಯಾರ ಕೈಗೆ ಒಪ್ಪಿಸಿದರೆ ನೆಮ್ಮದಿಯಾದೀತು ಎಂಬುದನ್ನು ನಿರ್ವಂಚಕ ಪ್ರವೃತ್ತಿಯಿಂದ ವ್ಯಕ್ತಪಡಿಸಿದ್ದಾರೆ ಎಂದು ಇದುವರೆಗೆ ಪ್ರಕಟವಾದ ಫಲಿತಾಂಶಗಳಿಂದ ತಿಳಿಯಬಹುದು. ಇಷ್ಟರ ವರೆಗೆ ಗೊತ್ತಾದಂತೆ ಎಲ್ಲ ರಾಜ್ಯಗಳಲ್ಲಿಯೂ ಆಳುವ ಪಕ್ಷ ಕಾಂಗ್ರೆಸ್ಸು ವಿಜಯವನ್ನು ಗಳಿಸುತ್ತ ಮುಂದೆ ಸಾಗುತ್ತಿದೆ. ಇದೇ ಗತಿಯಿಂದ ಮುನ್ನಡೆಯಿತೆಂದರೆ, ಎಲ್ಲ ರಾಜ್ಯಗಳಲ್ಲಿಯೂ ಅದು ಸರಕಾರವನ್ನು ರಚಿಸಲು ಆವಶ್ಯಕವೆನಿಸಿದಷ್ಟು ಸ್ಥಾನಗಳನ್ನು ಖಂಡಿತ ಗಳಿಸುವುದು ಎಂದು ಹೇಳಬಹುದು. ವಿರೋಧೀ ಪಕ್ಷಗಳು ಗೆದ್ದ ಸ್ಥಾನಗಳು ಕೆಲವೆಡೆ ಹೆಚ್ಚೆಂದು ತೋರಿಬರಬಹುದಾದರೂ ಅವುಗಳಲ್ಲಿ ಸತ್ವ ತುಂಬುವಂತಿಲ್ಲವೆಂಬುದು ನಿಸ್ಸಂದೇಹ. ಭಾರತೀಯ ಜನತೆಯು ತಮ್ಮ ಹಿತವು ಕಾಂಗ್ರೆಸ್ಸಿನ ಕೈಗಳಲ್ಲಿದೆಯೆಂಬ ಅಭಿಪ್ರಾಯವನ್ನು ಈ ಬಾರಿ ಮತ್ತೊಮ್ಮೆ ದೃಢಪಡಿಸಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಜಗತ್ಪರ್ಯಟನ

ಶ್ರೀ ಮಧ್ವರಾಜ

ಉಡುಪಿಯ ತಾಲೂಕು ಬೋರ್ಡಿನ ಅಧ್ಯಕ್ಷರಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಸೇವಾನಿರತರಾಗಿರುವ ಶ್ರೀ ಎಂ. ಮಧ್ವರಾಜರು ಉಡುಪಿ ಮತದಾರ ಕ್ಷೇತ್ರದಿಂದ ವಿಧಾನ ಸಭೆಗೆ ಕಾಂಗ್ರೆಸ್ ಹುರಿಯಾಳಾಗಿ ಸ್ಪರ್ಧಿಸಿದಾಗ ಅವರ ವಿಜಯದ ಬಗ್ಗೆ ಎಲ್ಲರೂ ಸಂದೇಹಗೊಂಡಿದ್ದರು. ಆದರೆ ಚುನಾವಣೆಯ ಕಾವು ಏರುತ್ತಾ ಬಂದಂತೆ ಪ್ರತಿಸ್ಪರ್ಧಿಯು ಪ್ರತಿಷ್ಠರಾಗಿದ್ದರೂ ಕಾಂಗ್ರೆಸು ಅತ್ಯಲ್ಪ ಬಹುಮತದಿಂದಾದರೂ ಗೆದ್ದು ಬರುವುದು ಖಂಡಿತವೆಂಬ ವಿಶ್ವಾಸವು ಮೂಡಿತ್ತು. ಫಲಿತಾಂಶವು ಪ್ರಕಟಗೊಂಡಾಗ, ಕಾಂಗ್ರೆಸ್ ಗೆದ್ದುದು ಮಾತ್ರವಲ್ಲ, ಪ್ರತಿಸ್ಪರ್ಧಿಗಳು ಪ್ರಚಂಡ ಸೋಲುಣ್ಣ ಬೇಕಾಯಿತು. ವಿದ್ಯಾವಿನಯ ಸಂಪನ್ನರಾದ ಮಧ್ವರಾಜರು ತನ್ನ ಮತದಾರ ಕ್ಷೇತ್ರದ ಕಲ್ಯಾಣವನ್ನು ಸಾಧಿಸಿ ಮತ್ತಷ್ಟು ಜನಪ್ರಿಯರಾಗುವರೆಂದು ನಂಬಲು ಸಾಧ್ಯವಿದೆ. ಉತ್ಸಾಹಿಗಳೂ ತರುಣರೂ ಕಾರ್ಯಶಕ್ತಿಯುಳ್ಳವರೂ ಆದ ಇವರ ವಿಜಯದಿಂದ ಕಾಂಗ್ರೆಸ್ ಕಳೆದ ಬಾರಿ ಕಳೆದುಕೊಂಡ ಸ್ಥಾನವನ್ನು ಈ ಬಾರಿ ಮರಳಿ ತಂದು ಕೊಟ್ಟಾಂತಾಯಿತ್ತು.

ಜತ್ತಿಯವರ ಚಿಂತೆ

ಮುಖ್ಯ ಮಂತ್ರಿ ಜತ್ತಿಯವರು ರಾಜಕಾರಣದಲ್ಲಿ ತಂತ್ರವಾದಿಯಿರುವಂತೆಯೇ ಚುನಾವಣೆಯಲ್ಲಿಯೂ ಎಂದು ಹೇಳಬಹುದು. ಈ ತಂತ್ರವಾದತನದಿಂದಲೇ ಕಂಪಿಸುತ್ತಿರುವ ತನ್ನ ಮುಖ್ಯ ಮಂತ್ರಿ

SYNDICATE BANK REPORTS GREATER PROGRESS

Profits and Deposits Improve

The Syndicate Bank has pleasure in announcing that the net profit of the Bank for the year 1961 is Rs. 32,37,540-53 inclusive of a sum of Rs. 27,708-25 brought forward from the previous year's account, as against Rs. 25,22,904/- in 1960. Out of this, the Directors have transferred Rs. 11,00,000/- to the Reserve Fund' bringing the total reserves inclusive of share premium to Rs. 53,50,471/-. The balance of Rs. 21,37,540-53 is proposed to be appropriated as under:

Provision for dividend: Dividend maintained at the last year's level of 20% taxable on equity shares and at 8.57% and 7.15% on 6% and 5% C. P. Shares respectively.	Rs.	6,52,789-97
Provision for taxation:	Rs.	12,25,000-00
Bonus to Staff:	Rs.	2,25,000-00
Carried forward:	Rs.	34,750-56

The total deposits of the Bank have increased to Rs. 24,63,20,000/- during the year, as against Rs. 18.86,89,000/- last year, an increase of Rs. 5.76,31,000/-.

...ನವನ್ನು ಕೊನೆಯ ವರೆಗೂ ಉಳಿಸಿಕೊಂಡು ಬಂದಿದ್ದಾರೆ. ಜಮಖಂಡಿ ಮತದಾರ ಕ್ಷೇತ್ರದಿಂದ ವಿಧಾನ ಸಭೆಗೆ ಸ್ವತಂತ್ರ ಪಕ್ಷದ ಹುರಿಯಾಳುವಿಗಿಂತ ಹತ್ತೊಂಬತ್ತು ಸಾವಿರ ಹೆಚ್ಚಿನ ಮತ ಪಡೆದು ಶ್ರೀ ಜತ್ತಿಯವರು ಗೆದ್ದು ಬಂದರು. ಆದರೆ, ಅವರು ಇನ್ನೂ ಒಂದು ಇದಕ್ಕಿಂತ ಮಹತ್ವದ ಚುನಾವಣೆಯನ್ನೆದುರಿಸಬೇಕಾಗಿದೆ. ಮುಖ್ಯ ಮಂತ್ರಿ ಪದವಿಯನ್ನೇ ದೃಷ್ಟಿಯಲ್ಲಿಟ್ಟುಕೊಂಡಿರುವ ಇವರು ಕಾಂಗ್ರೆಸ್ ಪಕ್ಷದ ನಾಯಕನಾಗಿ ಆಯ್ಕೆಗೊಳ್ಳಲು ಈಗಿಂದೀಗಲೇ ಪ್ರಯತ್ನಿಸುತ್ತಿರಬಹುದು. ಆದರೆ, ಜತ್ತಿಯವರ ಬಲಗೈ ಮಂತ್ರಿಸ್ತ ಕೆಲವೊಂದು ಮಂತ್ರಿಗಳೂ ಸದಸ್ಯರೂ ಈ ಚುನಾವಣೆಯಲ್ಲಿ ಉರುಳಿ ಹೋದುದರಿಂದ ಅವರು ಹೊಸ ಮಿತ್ರರನ್ನು ಗಳಿಸಬೇಕಾಗಿದೆ.

ಮೆನನ್ನರ ವಿಜಯ

ಅಂತಾರಾಷ್ಟ್ರೀಯ ದೃಷ್ಟಿಯಿಂದ ಉತ್ತರ ಮುಂಬಯಿಯ ಲೋಕ ಸಭೆಗೆ ನಡೆಯುವ ಚುನಾವಣೆ ಮಹತ್ವಪೂರ್ಣವಾದುದು. ಅಲ್ಲಿ ನಡೆದ ಮೆನನ್—ಕೃಪಲಾನಿ ಪೈಪೋಟಿಯು ಭಾರತದ ಆಂತರಿಕ ರಕ್ಷಣೆಯ ಪ್ರಶ್ನೆಯಾಗಿ ಮುಂದೆ ಬಂದಿತ್ತು. ಚುನಾವಣೆಗೆ ನಾಲ್ಕು ದಿನಗಳಿಗೆ ಮೊದಲು ಮೆನನ್ನರು ಸೋಲುವರೇ ಎಂಬ ಸಂದೇಹ ಬಲವಾಗಿತ್ತು. ಆದರೆ, ಪ್ರಧಾನ ಮಂತ್ರಿ ನೆಹರುರವರ ಅವಿರತ ಪ್ರಯತ್ನದಿಂದ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ಚವಣರ ಚುನಾವಣಾ ಪ್ರಚಾರ ವೈಖರಿಯಿಂದ ಅಲ್ಲಿ ಮೆನನ್ನರು ಗೆದ್ದು ಬರುವುದೀಗ ಖಂಡಿತವೆಂದಾಗಿದೆ. ಮೆನನ್ನರನ್ನು ಕಮ್ಯುನಿಸ್ಟರಿಂದು ದೂರಿ ಚೀನಾದ ಆಕ್ರಮಣವನ್ನು ತಡೆಯುದರಲ್ಲಿ ಅವರು ಅಸಮರ್ಥರಾಗಿದ್ದಾರೆಂಬ ಆರೋಪವನ್ನು ಉತ್ತರ ಬೊಂಬಾಯಿಯ ಮತದಾರರು ಸುಳ್ಳೆಂದು ಸಿದ್ಧಮಾಡಿಕೊಡುವುದು ಖಂಡಿತವಿದೆ. ಇದರಿಂದ ನೆಹರುರವರ ಸೀತಿಗೆ ಮತ್ತೊಮ್ಮೆ ಪುಷ್ಟಿದೊರೆಯುವುದು.

ಪುತ್ತೂರು ಡಿ. ಮು ಕೋರ್ಟಿನಲ್ಲಿ

O. S. No. 464/61

ಮಮ್ಮುಂಞ ಬ್ಯಾರಿ —ವಾದಿ.

Vs.

ಅವುದ್ರಾಮ ಬ್ಯಾರಿ --ಪ್ರತಿವಾದಿ.

ಪ್ರತಿವಾದಿ ಅವುದ್ರಾಮ ಬ್ಯಾರಿ, ಅಲಿ ಬ್ಯಾರಿಗಳ ಮಗ, ಬೆಳ್ತಂಗಡಿ ತಾಲೂಕು ಕುವೆಟ್ಟು ಗ್ರಾಮದ ಗುರುವ್ಯಾನಕೆರೆ ಪೇಟೆಯಲ್ಲಿ ವಾಸವಿರುವುದು. P. O. ಗುರುವ್ಯಾನಕೆರೆ. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಯು ನಿಮ್ಮ ಮೇಲೆ ಕಟ್ಟೋಣ ಸ್ವಾಧೀನ ವಗೈರೆ ನಿವೃತ್ತಿಗಳಿಗೆ ಮಾಡಿದ ದಾವೆಯನ್ನು ಕೋರ್ಟು ಮುಂದೆ ನಿಮ್ಮ ಹಾಜರಾತಿ ಬಗ್ಗೆ ತಾರೀಕು 9—3..1962ಕ್ಕೆ ಇಡಲಾಗಿದೆ ಆ ಬಗ್ಗೆ ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಸದ್ರಿ ದಿವಸ ಈ ಕೋರ್ಟು ಮುಂದೆ ಘಂಟೆ 11ಕ್ಕೆ ಹಾಜರಾಗತಕ್ಕದ್ದು. ತಪ್ಪಿದ್ರೆ ನಿಮ್ಮ ಶಿವಾಯಿ ಮುಂದಿನ ತನಿಖೆ ನಡೆಸಲಾದೀತು. ತಿಳಿದಿರಲಿ.

(ಕೋರ್ಟು ಹುಕುಂ ಪ್ರಕಾರ)

(ಸಹಿ) ಡಿ ಯೆನ್. ಭಟ್

ವಾದಿಕಡೆ ಎಡ್ವೋಕೇಟ್

ಪುತ್ತೂರು, ತಾ. 20..2—1962

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

S. C. 369/1961.

ಕುಂಞ ಕೆ.ಹೆಂಗ್ಸು ... ವಾದಿ

ಕೃಷ್ಣಪ್ಪ ಗೌಡ—ಕುಂಞ ಗೌಡರ ಮಗ, ಪುತ್ತೂರು ತಾಲ್ಲೂಕು ಬೆಟ್ಟಂಪಾಡಿ ಗ್ರಾಮದ, ಪತ್ತಡ್ಕ ಎಂಬಲ್ಲಿ— ಪ್ರತಿವಾದಿ.

ವಾದಿಯಿಂದ ಪ್ರತಿವಾದಿಯು ಕೈಕಡವಾಗಿ ಪಡೆದ ಐವಜು ವ ಬಡ್ಡಿ ಕೂಡಾ ರೂ.100.50ರ ವಸೂಲಿಗೆ ವಾದಿಯು ಮಾಡಿದ ದಾವೆಯು ಕೈಪೇತು ನೋಟೀಸಿನ ಪ್ರಕಾರ ತಾ 3-3-1962ಕ್ಕೆ ಇಟ್ಟಿರುವದರಿಂದ ಪ್ರತಿವಾದಿಯು ಆ ದಿನ ಈ ಕೋರ್ಟು ಮುಂದೆ 11 ಘಂಟೆಗೆ ಹಾಜ್ರಾಗಿ ಬರಹ ಮೂಲಕ ತನ್ನ ಆಕ್ಷೇಪಣೆಗಳಿದ್ದರೆ ಹೇಳಿಕೊಳ್ಳತಕ್ಕದ್ದು ಆ ರೀತಿ ಹಾಜ್ರಾಗಲು ತಪ್ಪಿದರೆ ಆತನನ್ನು ಶಿವಾಯಿ ಮಾತ ಮಾಡಿ ಈ ದಾವೆಯನ್ನು ಮುಂದಿನ ತನಿಖೆಯಿಂದ ಕ್ರಮದಂತೆ ತೀರ್ಮಾನಿಸಲಾಗುವುದು ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(*Sd*·) B. L. N. Rai,

Advocate for Plaintiff.

Puttur, S. K., 7—2—1962.

ಅಲ್ಲಲ್ಲಿಯ ಸುದ್ದಿಸಾರ

ಹೈಸ್ಕೂಲ್ ವಾರ್ಷಿಕೋತ್ಸವ— ಮುಂಬಾಯಿಯ ಬಂಟರ ಯೂನಿ ನಾಡವರ ಸಂಘದ ಸಂಚಾಲಕತ್ವದಲ್ಲಿ ನಡೆಸಲ್ಪಡುವ ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನ 33ನೇ ವಾರ್ಷಿಕೋತ್ಸವವು ಇದೇ ಮಾರ್ಚ ತಿಂಗಳ 4ನೇ ಆದಿತ್ಯವಾರ ಅಪರಾಹ್ನ ಘಂಟೆ 2.30ಕ್ಕೆ ಸರ್ ಕಾವಸ್ಜಿ ಜಹಾಂಗೀರ್ ಹಾಲ್‌ನಲ್ಲಿ ಜರಗಲಿರುವುದು. ಮಹಾರಾಷ್ಟ್ರದ ರಾಜ್ಯಪಾಲರಾದ ಮಾನ್ಯ ಶ್ರೀ ಪ್ರಕಾಶರು ಮುಖ್ಯ ಆತಿಥಿಯಾಗಿಯೂ, ಮುಂಬಯಿಯ ಮೇಯರ್ ಮಾನ್ಯ ಶ್ರೀ ವಿ. ಬಿ ವರ್ಲಿಕರ್‌ರವರು ಅಧ್ಯಕ್ಷರಾಗಿಯೂ ಬರಲಿರುವರು.

ತಾವೆಲ್ಲರೂ ಬಂದು ಈ ಸಮಾರಂಭವನ್ನು ಚಂದಗಾಣಿಸಿ ಕೊಡಬೇಕಾಗಿ ಶಾಲಾ ಕಮಿಟಿಯ ಕಾರ್ಯದರ್ಶಿ ಶ್ರೀ ಜಗನ್ನಾಥ ವಿ.ಸೆಟ್ಟರು ವಿನಂತಿಸುತ್ತಾರೆ.

ಮಂಗಳೂರು ಎಸ್. ಆರ್.ಎಸ್. ಹೋಮಿನಲ್ಲಿ— ತಾ. 17—2—62ರಂದು ಮದ್ರಾಸಿನ ಡಾ| ಕೆ. ಎಮ್. ರೈಯವರು ಎ. ವಿ. ಪೂಂಜ ಸಭಾ ಭವನದಲ್ಲಿ ಜರಗಿದ ಸಭೆಯಲ್ಲಿ ಭಾಷಣವಿತ್ತರು. ಉಪಾಹಾರವಾದ ಬಳಿಕ ಶ್ರೀ ಪಿ ಎಸ್, ತಿಮ್ಮಪ್ಪ ಶೆಟ್ಟರು ಡಾ| ರೈಯವರ ಪರಿಚಯ ಭಾಷಣ ಮಾಡಿದರು. ಡಾ| ರೈಯವರು ಭಾಷಣ ಮಾಡುತ್ತಾ ಭವನದಲ್ಲಿ ನಿವಾಸಿಕರ ಶಿಸ್ತು ನಿಯಮಗಳನ್ನೂ ಬಿಡುವೇಳೆಯಲ್ಲಿ ಅವರು ಉತ್ತಮ ಪುಸ್ತಕಗಳ ಓದುವಿಕೆಯ ಪ್ರಾಮುಖ್ಯತೆಯನ್ನೂ ವಿವರಿಸಿದರು. ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಎಚ್. ದಾಸಣ್ಣ ಆಳ್ವರು ಡಾ| ರೈಗಳ ವ್ಯಕ್ತಿತ್ವವನ್ನು ಕೊಂಡಾಡಿ ಗುಣಗಾನ ಮಾಡಿದರಲ್ಲದೆ ಡಾ| ರೈಯವರು ವಾಚನಾಲಯಕ್ಕೆ ದಾನವಿತ್ತ ಉತ್ಕೃಷ್ಟ ಪುಸ್ತಕಗಳ ಪ್ರಯೋಜನವನ್ನು ನಿವಾಸಿಕರು ಪಡೆಯ್ಬವಂತಾಗಬೇಂದರು. ಸಭಾಂತ್ಯದಲ್ಲಿ ಶ್ರೀ ಶ್ರೀಕರ ಸೆಟ್ಟರು ಧನ್ಯವಾದ ಅರ್ಪಣೆ ಮಾಡಿದರು

ಶ್ರೀನಿವಾಸ ಬ್ರದರ್ಸ್— ಮಂಗಳೂರಿನ ಪ್ರಸಿದ್ಧ ಕಾಗದ, ಸ್ಟೇಶನರಿ ಮತ್ತು ಮುದ್ರಣ ಸಾಹಿತ್ಯಗಳ ವರ್ತಕರಾದ ಶ್ರೀನಿವಾಸ ಬ್ರದರ್ಸ್‌ರು ತಮ್ಮ ವ್ಯವಹಾರ ಕೇಂದ್ರವನ್ನು ಲೋವರ್ ಕಾರ್ ಸ್ಟ್ರೀಟ್‌ನಲ್ಲಿ ಹೊಸತಾಗಿ ಕಟ್ಟಿಸಿದ ಕಟ್ಟಡಕ್ಕೆ ತಾ 25-2-62ರಂದು ಬದಲಾಯಿಸಿದ ಸಂಬಂಧ ಸಂಜೆ ಸತ್ಕಾರ ಕೂಟವೊಂದನ್ನು ಏರ್ಪಡಿಸಿದರು ಪಾರ್ಟ್ನರ್ ಶ್ರೀ. ಯು. ಆರ್. ಪೈಯವರು ಅತಿಥಿಗಳನ್ನು ಸ್ವಾಗತಿಸಿದರು.

ಹಳೆ ವಿದ್ಯಾರ್ಥಿ ಸಂಘದ ಸ್ಥಾಪನೆ— ಶ್ರೀ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟರಿ ಶಾಲೆ ಮತ್ತು ಕುಡುಕಾಲು ಗಣಪತಿ ಎಲಿಮೆಂಟರಿ ಶಾಲೆಗಳ ಹಳೆ ವಿದ್ಯಾರ್ಥಿಗಳ ಸಭೆಯು ತಾ. 18—2—62ರಂದು ಉಭಯ ಶಾಲೆಗಳ ಮೆನೇಜರ್ ಶ್ರೀ ಕುರುಕಾಲು ಗಣಪಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯ ಕನ್ವೀನರ್ ಶ್ರೀ ಕೆ. ವಾಸು ಶೆಟ್ಟರು ಸ್ವಾಗತ ಭಾಷಣ ಮಾಡುತ್ತಾ ಸಭೆ ಕರೆದ ಉದ್ದೇಶವನ್ನು ತಿಳಿಸಿ ಹಳೆ ವಿದ್ಯಾರ್ಥಿ ಸಂಘ ಸ್ಥಾಪನೆಯ ಅವಶ್ಯಕತೆಯನ್ನು ವಿವರಿಸಿದರು ಸಭಿಕರಲ್ಲಿ ಶ್ರೀಗಳಾದ ಕೆ. ಶಿವರಾಮ ಶೆಟ್ಟಿ ಬಿ. ಎಸ್. ಕುರುಕಾಲ್, ಬಿ. ವಿ. ರಾವ್ ಶೇಖರ ಆಚಾರ್ಯ, ವಿ. ರಾಮರಾವ್ ಮೊದಲಾದವರು ಭಾಷಣವಿತ್ತರು. ನಂತರ ಶ್ರೀಗಳಾದ ಕೆ. ವಾಸು ಶೆಟ್ಟಿ—ಅಧ್ಯಕ್ಷ, ಕೆ. ಶಿವರಾಮ ಶೆಟ್ಟಿ ಉಪಾಧ್ಯಕ್ಷ, ಬಿ. ಎಸ್. ಕುರುಕಾಲ್—ಕಾರ್ಯದರ್ಶಿ, ವಿ. ರಾಮರಾವ್—ಉಪಕಾರ್ಯದರ್ಶಿ, ಕೆ. ವೆಂಕಟ್ರಮಣ ಭಟ್—ಕೋಶಾಧಿಕಾರಿ ಮತ್ತು ಶ್ರೀಗಳಾದ ಪುಷ್ಕರ ಶೆಟ್ಟಿ, ಶಂಕರ ಶೆಟ್ಟಿ ಚಂದ್ರಶೇಖರ ಶೆಟ್ಟಿ, ಸಾಧು ಶೆಟ್ಟಿ, ಸಂಜೀವ ಬಿ. ಶೆಟ್ಟಿ, ರಾಮಚಂದ್ರ ಶೆಟ್ಟಿ, ಕೆ. ಕೃಷ್ಣಯ್ಯ ಶೆಟ್ಟಿ, ವಿಠಲರಾವ್, ಮಹಾಲಿಂಗ ಮೂಲ್ಯ, ಶೇಖರ ಆಚಾರ್ಯ, ಶ್ರೀಮತಿ ಮೇರಿ ಡಿ'ಸೋಜರು ಸದಸ್ಯರಾಗಿರುವ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರ ಸಮಯೋಚಿತ ಭಾಷಣದ ನಂತರ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ದ. ಕ. ಚುನಾವಣಾ ಫಲಿತಾಂಶ.

ಬೈಂದೂರು ಕ್ಷೇತ್ರ— ಕಾಂಗ್ರೆಸ್ ಅಭ್ಯರ್ಥಿ ಶ್ರೀ ಯಡ್ತರೆ ಮಂಜಯ್ಯ ಶೆಟ್ಟರು 1,839 ಮತಗಳನ್ನು ಹೆಚ್ಚು ಗಳಿಸಿ ವಿಜಯಗಳಿಸಿದ್ದಾರೆ.

ಮತಗಳ ವಿವರ—

ಶ್ರೀ ವೈ ಮಂಜಯ್ಯ ಶೆಟ್ಟಿ (ಕಾಂಗ್ರೆಸ್) 16,591

ಶ್ರೀ ಎಚ್. ಸುಬ್ಬರಾವ್ (ಪಿ ಎಸ್.ಪಿ.) 14,752.

ಶ್ರೀ ವಿಶ್ವೇಶ್ವರಯ್ಯ (ಸ್ವತಂತ್ರ) 2,509

ಅಸಿಂಧು ಮತಗಳು 1,695.

ಕುಂದಾಪುರ ಕ್ಷೇತ್ರ— ಕಾಂಗ್ರೆಸ್ ಉಮೇದ್ವಾರಿ ಶ್ರೀ ಎಸ್ ಎಸ್. ಕೊಳ್ಕೆಬೈಲು 2,117 ಹೆಚ್ಚು ಮತ ಗಳಿಸಿ ವಿಜಯಿಯಾಗಿದ್ದಾರೆ.

ಶ್ರೀ ಎಸ್. ಎಸ್ ಕೊಳ್ಕೆಬೈಲು (ಕಾಂಗ್ರೆಸ್) 16,975.

ಶ್ರೀ ಶ್ರೀನಿವಾಸ ಸೆಟ್ಟಿ (ಪಿ. ಎಸ್. ಪಿ.) 14,858.

ಶ್ರೀ ಕೆ ಎಸ್. ಹಂದೆ (ಸ್ವತಂತ್ರ),460.

ಅಸಿಂಧು ಮತಗಳು 1,038.

ಕಾರ್ಕಳ ಕ್ಷೇತ್ರ— ಪಿ. ಎಸ್. ಪಿ. ಅಭ್ಯರ್ಥಿ ಶ್ರೀ ದಯಾನಂದ ಆರ್. ಕಲ್ಲಿಯವರು 5,862 ಬಹುಮತಗಳಿಂದ ಜಯಗಳಿಸಿದ್ದಾರೆ.

ಶ್ರೀ ದಯಾನಂದ ಆರ್. ಕಲ್ಲಿ (ಪಿ. ಎಸ್. ಪಿ.) 17,234

ಡಾ.ಕೆ.ಕೆ. ಹೆಗ್ಡೆ (ಕಾಂಗ್ರೆಸ್) 11,372

ಶ್ರೀ ದೇವರಾಯ ಶೆಡ್ಯೆ (ಸ್ವತಂತ್ರ) 578

ಅಸಿಂಧು ಮತಗಳು— 681

ಕಾಪು ಕ್ಷೇತ್ರ— ಪಿ ಎಸ್. ಪಿ. ಹುರಿಯಾಳು ಶ್ರೀ ಭಾಸ್ಕರ ಸೆಟ್ಟಿರು 183 ಹೆಚ್ಚು ಮತ ಪಡೆದು ವಿಜಯಿಯಾಗಿದ್ದಾರೆ.

ಶ್ರೀ ಭಾಸ್ಕರ ಸೆಟ್ಟಿ (ಪಿ. ಎಸ್. ಪಿ.) 13,624.

ಶ್ರೀ ಎಫ್. ಎಕ್ಸ್. ಡಿ. ಪಿಂಟೊ (ಕಾಂಗ್ರೆಸ್) 13,441.

ಶ್ರೀ ಮಥಾಯಸ್ (ಸ್ವತಂತ್ರ) 870.

ಅಸಿಂಧು ಮತಗಳು 1343.

ಉಡುಪಿ ಕ್ಷೇತ್ರ— ಕಾಂಗ್ರೆಸ್ ಹುರಿಯಾಳು ಶ್ರೀ ಎಂ. ಮಧ್ವರಾಜರು 7,548. ಬಹುಮತದಿಂದ ವಿಜಯಿಯಾಗಿದ್ದಾರೆ.

ಶ್ರೀ ಎಂ. ಮಧ್ವರಾಜ (ಕಾಂಗ್ರೆಸ್) 17,511

ಶ್ರೀ ಯು. ಎಸ್. ನಾಯಕ್ (ಪಿ.ಎಸ್.ಪಿ. 8,003.

ಶ್ರೀ ಕೆ. ದಾಸ ಸೇರಿಗಾರ (ಕಮ್ಯುನಿಸ್ಟ್ 5,695.

ಶ್ರೀ ದೇವೀ ಪ್ರಸಾದ ಶೆಟ್ಟಿ (ಜನಸಂಘ) 1,774.

ಅಸಿಂಧು ಮತಗಳು— 1,351.

ಸೂರತ್ಕಲ್ ಕ್ಷೇತ್ರ— ಪಿ. ಎಸ್. ಪಿ. ಅಭ್ಯರ್ಥಿ ಶ್ರೀ ಸಂಜೀವನಾಥರು 2,867 ಬಹುಮತದಿಂದ ಆರಿಸಲ್ಪಟ್ಟಿದ್ದಾರೆ

ಶ್ರೀ ಸಂಜೀವನಾಥ (ಪಿ. ಎಸ್. ಪಿ.) 12,835.

ಶ್ರೀ ಕೆ. ದೂಮಪ್ಪ (ಕಾಂಗ್ರೆಸ್)9,968

ಶ್ರೀ ಮಾರಿಯೋಸ್ ಪಾಯಸ್, (ಸ್ವತಂತ್ರ) 1,420.

ಶ್ರೀ ಸುಂದರ ಅಮೀನ್(ಜನಸಂಘ)629

ಅಸಿಂಧು ಮತಗಳು 1,545.

ಮೂಡಬಿದ್ರೆ ಕ್ಷೇತ್ರ— ಸ್ವತಂತ್ರ ಪಕ್ಷದ ಶ್ರೀ ಗೋಪಾಲ ಸಾಲೆನ್ನರು 260 ಬಹುಮತದಿಂದ ಆರಿಸಲ್ಪಟ್ಟಿದ್ದಾರೆ. (ರಿಸರ್ವ ಸ್ಥಾನ)

ಗೋಪಾಲ ಸಾಲೆನ್ನರು (ಸ್ವತಂತ್ರ) 10,433

ಶ್ರೀ ಮಂಜಪ್ಪ ಉಳ್ಳಾಲ, (ಕಾಂಗ್ರೆಸ್) 10,173.

ಅಸಿಂಧು ಮತಗಳು 1,116.

ಸುಳ್ಯ ಕ್ಷೇತ್ರ— ಕಾಂಗ್ರೆಸ್ ಅಭ್ಯರ್ಥಿ ಶ್ರೀ ಸುಬ್ಬಯ್ಯ ನಾಯ್ಕರು 2796. ಬಹುಮತದಿಂದ ಆರಿಸಿಬಂದಿದ್ದಾರೆ [ರಿಸರ್ವ)

ಮಂಗಳೂರು 1ನೇ ಕ್ಷೇತ್ರ— ಕಾಂಗ್ರೆಸ್ ಹುರಿಯಾಳು ಶ್ರೀ ಮಜೇಲ್ ಶ್ರೀನಿವಾಸ ನಾಯ್ಕರು 5,716 ಬಹುಮತದಿಂದ ಆಯ್ಕೆಯಾಗಿದ್ದಾರೆ.

ಪುತ್ತೂರು ಕ್ಷೇತ್ರ— ಕಾಂಗ್ರೆಸ್ ಅಭ್ಯರ್ಥಿ ಶ್ರೀ ಕೆ. ವೆಂಕಟ್ರಮಣ ಗೌಡರು 6,056 ಹೆಚ್ಚು ಮತ ಗಳಿಸಿ ಆರಿಸಲ್ಪಟ್ಟಿದ್ದಾರೆ.

ಮಂಗಳೂರು, 2, ಬೆಳ್ತಂಗಡಿ, ಪಾಣೆಮಂಗಳೂರು, ಬ್ರಹ್ಮಾವರ ಕ್ಷೇತ್ರಗಳ ಮತಗಳ ಎಣಿಕೆಯು ಈ ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಮುಗಿದಿಲ್ಲವಾದರೂ ಕಾಂಗ್ರೆಸ್ ವಿಜಯಗಳಿಸುವ ಚಿಹ್ನೆ ಇದೆ.

ಉತ್ತರ ಮತ್ತು ದಕ್ಷಿಣಭಾಗಗಳ ಪಾರ್ಲಿಮೆಂಟ್ ಸ್ಥಾನಗಳನ್ನು ಕೂಡಾ ಕಾಂಗ್ರೆಸ್ ಗೆಲ್ಲುವುದು ನಿಶ್ಚಿತವೆಂದು ತೋರುತ್ತದೆ.

ಕನರ್ಾರು— ಶ್ರೀ ಕೆ. ಜಿ. ಸೋಮಪ್ಪ ರೈಗಳೇ ಮೊದಲಾದವರ ಪ್ರಯತ್ನದಿಂದ ಪುತ್ತೂರು ತಾಲೂಕಿನ ಕನರ್ಾರಲ್ಲಿ ತಾರೀಕು 24—2—62ರಿಂದ ಅಂಚೆ ಕಚೇರಿ ಪ್ರಾರಂಭಿಸಲ್ಪಟ್ಟಿದೆ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಎಚ್. ವಿ. ಶೆಟ್ಟಿಯವರು ಇದನ್ನು ಉದ್ಘಾಟಿಸಿದರು.

ಪುತ್ತೂರು ಡಿ. ಮು ಕೋರ್ಟಿನಲ್ಲಿ

O. S. No. 160/61

ಮಂಜಪ್ಪ ಕೂಡಾ —ವಾದಿರು

ದೇರಪ್ಪ ಕೂಡಾ —ಪ್ರತಿವಾದಿರು

ಪ್ರತಿವಾದಿರು 1) ದೇರಪ್ಪ 2) ಜಾಕು 3) ಹೊನ್ನಮ್ಮ 4) ರಾಮಕ್ಕ 5) ಮೋನಪ್ಪ —ನೇಸು ಹೆಂಗ್ಸಿನ ಮಕ್ಕಳು

6) ಚೆಂಮ್ರು 7) ಗಂಗು 8) ಮ್ಯಾಲ —ದೇರಪ್ಪ ಮಕ್ಕಳು.

13) ನಾರಾಯಣ 14) ಅಣ್ಣು —ಜಾಕು ಮಕ್ಕಳು

16) ವಿಮಲಾ—ಹೊನ್ನಮ್ಮನ ಮಗಳು

ಎಲ್ಲರೂ ಶಂಭೂರು ಗ್ರಾಮದಲ್ಲಿರುತ್ತಾರೆ. ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ದಾವಾ ಆಸ್ತಿಯನ್ನು 535 ಪಾಲುಗಳನ್ನಾಗಿಮಾಡಿ 389ಪಾಲುಗಳನ್ನು ವಾದಿರ ಬಗ್ಗೆ 40ನೇ ವಾದಿಯು ಸ್ವಾಧೀನ ಕೊಡ್ಬಿಬೇಕಾಗಿಯೂ, ಮತ್ತು ಹುಟ್ಟುವಳಿ ಕೊಡ್ಬಿಬೇಕಾಗಿಯೂ ವಗೈರೆ ನಿವೃತ್ತಿಗಳನ್ನು ಕೇಳಿ ವಾದಿರು ನಿಮ್ಮ ಮೇಲೆ ಕೂಡಾ ಮಾಡಿದ ದಾವೆಯನ್ನು ತಾರೀಕು 8—3—62ಕ್ಕೆ ನಿಮ್ಮ ನೋಟೀಸಿಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯಿಮಾಡಿ ಯುಕ್ತ ರಂತೆ ತೀರ್ಮಾನಿಸಲಾದೀತು.

(*Sd*) M. Sadashiva Rao,

Vakil for plaintiff

ತಾರೀಕು 20—2—1962

ಕಾಶ್ಮೀರದ ಮಾತುಕತೆಗೆ

ಆಯೂಬಖಾನರಿಗೆ ಮರಳಿ ಕರೆ

ಭದ್ರತಾ ಮಂಡಳದಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಮರಳಿ ಎತ್ತುವ ಪ್ರಯತ್ನ ನಡೆಸಿದ ಪಾಕಿಸ್ತಾನಕ್ಕೆ ಈ ವಿವಾದವನ್ನು ಪ್ರತ್ಯಕ್ಷ ಮಾತುಕತೆಗಳ ಮೂಲಕ ಬಗೆ ಹರಿಸಿಕೊಳ್ಳುವುದು ಉತ್ತಮ ಪಕ್ಷವೆಂದು ಅಮೇರಿಕೆಯು ಹಿತವಾದವನ್ನು ನೀಡಿತ್ತು. ಭಾರತೀಯ ಪ್ರಧಾನಿ ನೆಹರುಗಳಾದರೂ ೧೯೬೦ರ ಸಪ್ಟಂಬರದಲ್ಲಿ ಪಾಕಿಸ್ತಾನಕ್ಕೆ ಸಂದರ್ಶನ ವಿತ್ತಾಗ, ಈ ಸಂಬಂಧದ ಮಾತುಕತೆಯನ್ನು ನಡೆಸಲು ಜನರಲ್ ಆಯೂಬ ಖಾನರನ್ನು ಭಾರತಕ್ಕೆ ಆಮಂತ್ರಿಸಿದ್ದರು. ಆ ಸಮಯದಲ್ಲಿ ಉಭಯ ನಾಯಕರೂ ಈ ಪ್ರಶ್ನೆಯು ಒಂದು ಜಟಿಲ ಸಮಸ್ಯೆಯೆಂದೂ ಇದರ ಪರಿಹಾರಕ್ಕೆ ಗಂಭೀರ ವಿಚಾರ ವಿಮರ್ಶೆಯು ಅತ್ಯವಶ್ಯವೆಂದೂ ಒಮ್ಮತಕ್ಕೆ ಬಂದಿದ್ದರು. ಇತ್ತೀಚೆಗೆ ಪಾಕ್ ಶಿಕ್ಷಣ ಮಂತ್ರಿಯವರು ನವದೆಹಲಿಗೆ ಬಂದಾಗಲೂ ಪಾಕ್ ಅಧ್ಯಕ್ಷರಿಗೆ ಹಿಂದೆ ಇತ್ತಿದ್ದ ಆಮಂತ್ರಣವನ್ನು ಮರಳಿ ಜ್ಞಾಪಿಸಲಾಗಿತ್ತು.

ಆದರೆ, ಆಯೂಬಖಾನರು ಭಾರತವು ತನಗೆ ಆಹ್ವಾನವನ್ನೇ ನೀಡಿಲ್ಲವೆಂದು ಅಂದಿದ್ದುರಿಂದ ಈಗ ಅಧಿಕೃತವಾಗಿ ಭಾರತವು ಸ್ನೇಹಮಯ ವಾತಾವರಣದಲ್ಲಿಯೇ ಕಾಶ್ಮೀರ ಪ್ರಶ್ನೆಯ ಪರಿಹಾರದ ಬಗ್ಗೆ ಪ್ರತ್ಯಕ್ಷ ಮಾತುಕತೆ ನಡೆಸಲು ಸಿದ್ಧವಿದೆಯೆಂಬುದನ್ನು ಅವರಿಗೆ ತಿಳಿಸಲು ಉತ್ಸುಕವಾಗಿದೆ. ಎರಡು ದೇಶಗಳ ನಡುವೆ ಇರಬಹುದಾದ ಯಾವುದೇ ವಿವಾದವನ್ನು ಬಲಪ್ರದರ್ಶನಕ್ಕಿಂತ ಶಾಂತವಾಗಿ ಮಾತುಕತೆಗಳ ಮೂಲಕ ಇತ್ಯರ್ಥಗೊಳಿಸುವುದು ಲಾಭಕರ ಮತ್ತು ಹಿತಕರವೆಂದು ಭಾರತದ ಅಭಿಪ್ರಾಯವಿರುತ್ತದೆ. ಆದುದರಿಂದಲೇ ಭಾರತವು ತಾನು ಮೊದಲೇ ನೀಡಿದ್ದ ಕರೆಯನ್ನೀಗ ಮರಳಿ ಅವರಿಗೆ ಈಯಲು ಉತ್ಸುಕವಾಗಿದೆ.

ಅಮೇರಿಕೆಯ ರಾಷ್ಟ್ರಪತಿ ಶ್ರೀ ಜಾನ್ ಕೆನ್ನೆಡಿಯವರ ವಿಶೇಷ ಸಲಹೆಗಾರ ಶ್ರೀ ಚೆಸ್ಟರ್ ಬೋಲ್ಸ್‌ರವರು ಈಗಾಗಲೇ ಪಾಕಿಸ್ತಾನವನ್ನು ಸಂದರ್ಶಿಸುತ್ತಾರೆ. ಇವರು ಆಯೂಬ ಖಾನರನ್ನು ಕಂಡು, ಕಾಶ್ಮೀರದ ಸಂಬಂಧವಾಗಿಯೂ ಪ್ರಸ್ತಾಪಿಸುವರೆಂಬ ವದಂತಿಯಿದೆ. ಈ ವಿವಾದದ ಸಮಾಧಾನಕ್ಕಾಗಿ ಪ್ರತ್ಯಕ್ಷ ಮಾತುಕತೆಗೆ ಪಾಕಿಸ್ತಾನವು ತಯಾರಾಗಬೇಕೆಂದೂ ಇವರು ಸಲಹೆ ನೀಡುವರೆಂದು ನಂಬಲಾಗಿದೆ. ಈ ಕಾರಣಗಳಿಂದ ಬೋಲ್ಸರ ಪಾಕ್ ಭೆಟ್ಟಿಯು ಸಾಕಷ್ಟು ಪ್ರಭಾವಪೂರ್ಣವಾಗುವುದೆಂಬ ನಿರೀಕ್ಷೆಯಿದೆ.

ಆದುದರಿಂದಲೇ ಈ ಸಂದರ್ಭದಲ್ಲಿ ಭಾರತವು ತನ್ನ ಪಾಲಿನ ಕರ್ತವ್ಯವೆಂದು ಈಯಲಾಗಿದ್ದ ಆಮಂತ್ರಣವನ್ನು ಮರಳಿ ನೆನಪಿಗೆ ತರುವಂತೆ ಪಾಕಿಸ್ತಾನದಲ್ಲಿರುವ ಭಾರತೀಯ ಹೈ ಕಮಿಶನರ್ ಶ್ರೀ ರಾಜೇಶ್ವರ ದಯಾಳರನ್ನು ಕೇಳಿಕೊಂಡಿದೆ. ಶ್ರೀ ದಯಾಳರು ಭಾರತವಿತ್ತ ಆಮಂತ್ರಣವನ್ನು ಪಾಕ್ ಅಧ್ಯಕ್ಷ ಆಯೂಬ ಖಾನರಿಗೆ ಮುಟ್ಟಿಸುವರು. ಇದರೊಡನೆ ಭಾರತವು ಇದರ ಪರಿಹಾರವನ್ನು ಕೊನೆಗೊಳಿಸಲು ತೀರ ಉತ್ಸಾಹದಿಂದಿರುವೆಯೆಂಬುದನ್ನೂ ತಿಳಿಸುವರು. ಯಾವುದೇ ಪೂರ್ವ ಶರ್ತಗಳಿಲ್ಲದೇನೇ ಮಾತುಕತೆಗೆ ಭಾರತವು ಸಿದ್ಧವಿರುವುದೆಂಬುದನ್ನೂ ಆವಶ್ಯಕತೆಯಿರುವುದಾದರೆ, ವರಿಷ್ಠ ಮಟ್ಟದ ಭೇಟಿ ನಡೆಯುವುದಕ್ಕೆ ಮೊದಲು ಅಧಿಕಾರಿ ಮಟ್ಟದಲ್ಲಿ ವಿಚಾರ ವಿಮರ್ಶೆ ಮಾಡಬಹುದೆಂಬುದನ್ನೂ ಸ್ಪಷ್ಟವಾಗಿ ಶ್ರೀ ದಯಾಳರು ತಿಳಿಸುವರು.

ಭಾರತವು ಇಷ್ಟೊಂದು ಉದಾರತೆಯನ್ನು ಪ್ರದರ್ಶಿಸಲು ಮುಂದೆ ಬಂದಾಗ ಪಾಕಿಸ್ತಾನವು ಯಾವ ಕಡೆ ವಾಲುವುದೆಂದು ತಿಳಿದಿಲ್ಲ. ಅಯ್ಯೂಬಖಾನರಿಗೆ ಕಾಶ್ಮೀರದ ಪ್ರಶ್ನೆಯೊಂದು ತನ್ನ ಅಧಿಕಾರ ಚಲಾಯಿಸುವ ಅಧಿಕಾರದಂಡದಂತಿದೆ. ಭಾರತವನ್ನು ಅವಕಾಶ ಪೊದಗಿದಾಗ ನಿಂದಿಸುತ್ತ ನಡೆಯುತ್ತಿರುವ ತನ್ನ ನೀತಿಗೆ ಭದ್ರ ಬುನಾದಿಯಂತಿದ್ದ ಇಂತಹ ಸವಲತ್ತನ್ನು ಅದು ಕಳೆದುಕೊಳ್ಳಲು ಸಿದ್ಧವಿದೆಯೆ? ಈ ಸಮಸ್ಯೆಯು ಸಮಸ್ಯೆಯಾಗಿಯೇ ಎಷ್ಟು ದಿನಗಳ ಮಟ್ಟಿಗೆ ಉಳಿಯುವುದೋ ಅದು ವರೆಗೆ ಪಾಕಿಸ್ತಾನದ ಸರ್ವಾಧಿಕಾರವನ್ನು ಚಲಾಯಿಸಲು ಅನುಕೂಲವಿದ್ದ ಸದವಕಾಶವನ್ನು ಆಯೂಬ ಖಾನರು ಕಳೆದುಕೊಳ್ಳಲು ಸಿದ್ಧರಿರಲಾರರು. ಆದರೆ, ಫೆಬ್ರವರಿಯ ಕೊನೆಯ ತಾರೀಕಿನಂದು ತನ್ನ ರಾಷ್ಟ್ರದ ಸಂವಿಧಾನವನ್ನು ಪ್ರಕಟಗೊಳಿಸುವ ಇವರು ಭಾರತವು ನೀಡುವ ಆಹ್ವಾನವನ್ನು ಯಾವ ದೃಷ್ಟಿಯಿಂದ ಕಾಣುವರೆಂದು ತಿಳಿಯಬೇಕಾಗಿದೆ. ಈಗಾಗಲೇ ತನ್ನ ಮೇಲೆ ಪಾಕ್ ಜನತೆಗೆ ಬೇಸರ ಬಂದಿರುವುದನ್ನು ಅವರು ಮನಗಂಡರೆಂದರೆ, ಕಾಶ್ಮೀರದ ಬಗ್ಗೆ ನಡೆಯಬಹುದಾದ ಮಾತುಕತೆಗಳಿಗೆ ತಯಾರಾದಾರು, ಸಮಸ್ಯೆಯನ್ನು ತ್ವರಿತದಲ್ಲಿ ಬಿಡಿಸುವ ಉತ್ಸಾಹವನ್ನೂ ಅವರು ತೋರಿಸಿಯಾರು.

ಕಾಶ್ಮೀರವು ಭಾರತದ ಅಂಗವೆಂದೂ ಅದನ್ನು ಪಾಕಿಸ್ತಾನವು ಆಕ್ರಮಿಸಿದೆಯೆಂದೂ ಭಾರತದ ವಾದವಿರುತ್ತದೆ. ಆದರೆ, ಪಾಕಿಸ್ತಾನವು ಇದನ್ನು ಒಪ್ಪುವುದಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಗೊತ್ತುವಳಿಯಂತೆ ಅಲ್ಲಿ ಜನಮತ ಗಣನೆಯು ನಡೆದು, ಅದು ಯಾರಿಗೆ ಸೇರಬೇಕೆಂಬುದನ್ನು ಇತ್ಯರ್ಥಗೊಳಿಸಬೇಕೆಂಬುದು ಮಾತ್ರ ಪಾಕ್ ವಾದ. ಮತಗಣನೆ ನಡೆಯಬೇಕಾದರೆ, ಆಕ್ರಮಿತ ಕಾಶ್ಮೀರದಿಂದ ಪಾಕಿಸ್ತಾನವು ಹೊರ ನಡೆಯಬೇಕೆಂದೂ ಆ ಮೇಲೆ ತಾನೇ ಮತಗಣನೆಯೆಂದೂ ಸಂ. ರಾ. ಸಂಘವು ಒಪ್ಪಿರುವಾಗ, ಗೊತ್ತುವಳಿಯ ಮೊದಲನೆ ಅಂಶದ ಕಾರ್ಯಾಚರಣೆಯಾಗದೆ ಮುಂದಿನ ಅಂಶವು ಮಾತ್ರ ಅನ್ವಯವಾಗದು.

ಜಮ್ಮು ಮತ್ತು ಕಾಶ್ಮೀರಗಳ ಉನ್ನತ್ತಿಗಾಗಿ ಹೋರಾಡುತ್ತಿರುವವರು ಭಾರತೀಯರು. ಅಲ್ಲಿನ ಜನತೆಗೆ ಪಾಕಿಸ್ತಾನ ಸೇರಲು ಆತುರವಾದರೂ ಇದ್ದಿಲ್ಲ; ಈಗಲೂ ಇಲ್ಲ. ಕಾಶ್ಮೀರದಲ್ಲೂ ಪ್ರಜಾಜನರ ಸುಖಕ್ಕಾಗಿ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದೆ. ಹದಿನಾಲ್ಕು ವರ್ಷಗಳಿಗೆ ಮೊದಲು ಇದ್ದಂತೆ ಇಂದು ಕಾಶ್ಮೀರವು ಉಳಿದಿಲ್ಲ. ಈ ಕಾರಣದಿಂದ ಕಾಶ್ಮೀರದ ಜನತೆ ಈಗಾಗಲೇ ಭಾರತದೊಡನೆ ಸೇರಿಕೊಂಡು, ಅಂದಿನಿಂದಲೂ ಮುಂದುವರಿಯುತ್ತಿದೆ; ಎಂದರೆ,

ಈಗಾಗಲೇ ಪಾಕಿಸ್ತಾನವನ್ನು ಸಂದರ್ಶಿಸುತ್ತಿರುವ ಅಮೇರಿಕೆಯ ಅಧ್ಯಕ್ಷ ಕೆನ್ನೆಡಿಯವರ ವಿಶೇಷ ಸಲಹೆಗಾರ ಚೆಸ್ಟರ್ ಬೌಲ್ಸ್‌ರವರು.

ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ; ಅದರಲ್ಲಿ ಪಾಕಿಸ್ತಾನಕ್ಕೆ ಇಣಿಕಿ ನೋಡುವಷ್ಟೂ ಅಸ್ಪದವಿಲ್ಲ. ಈ ಸತ್ಯಸಂಗತಿಯನ್ನು ಆಯೂಬ ಖಾನರು ಒಪ್ಪಿಕೊಳ್ಳುವುದು ಸಾಧ್ಯವೆ?

(೫ನೇ ಪುಟದಿಂದ)

ಕೊಳ್ಳುವುದು— ಈ ಮೂಲಕ ಪಶುಗಳ ಆಹಾರ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಲಾಗುವುದು.

ಅಭಾವ ಸಮಯಗಳಲ್ಲಿ ಪಶು ಪ್ರಾಣಿಗಳ ಸಂಗ್ರಹಾಲಯಗಳು (ಫಾಡರ್ ಬ್ಯಾಂಕ್) ಅತ್ಯಂತ ಉಪಯುಕ್ತವಾಗಿರುತ್ತವೆ. ತೃತೀಯ ಯೋಜನಾಂತ್ಯದಲ್ಲಿ ಪ್ರತಿಯೊಂದು ಅಭಿವೃದ್ಧಿ ಬ್ಲಾಕ್‌ನಲ್ಲಿಯೂ ಕನಿಷ್ಟ ಪಕ್ಷ ಒಂದು ಪಶು ವೈದ್ಯಶಾಲೆ ಅಥವಾ ಚಿಕಿತ್ಸಾಲಯವಿರುವುದು. ಸಾಂಕ್ರಾಮಿಕ ರೋಗಗಳ ಪತ್ತೋಟಿಗೆ ಅಗತ್ಯವಾದ ವ್ಯಾಕ್ಸೀನುಗಳು ಮತ್ತು ಸೀರಂಗಳನ್ನು ಸಹ ಅಧಿಕ ಪ್ರಮಾಣದಲ್ಲಿ ತಯಾರಿಸಲಾಗುವುದು. ಗೋಮಾರಿ ನಿರ್ಮೂಲನಾ ಕಾರ್ಯಕ್ರಮವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು. ಗೋಸಂರಕ್ಷಣಾ ಕಾರ್ಯಕ್ರಮಗಳಲ್ಲಿ ಕೇಂದ್ರ ಗೋ ಸಂವರ್ಧನಾ ಪರಿಷತ್ತು ಒಂದು ಮುಖ್ಯವಾದ ಪಾತ್ರವನ್ನು ವಹಿಸುತ್ತಿದೆ. ಪರಿಷತ್ತು ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದೇ ಅಲ್ಲದೆ ಕಾರ್ಯಕರ್ತರಿಗೆ ತರಬೇತಿ ನೀಡುತ್ತದೆ ಮತ್ತು ವಸ್ತು ಪ್ರದರ್ಶನಗಳನ್ನೂ ವ್ಯವಸ್ಥೆಗೊಳಿಸುತ್ತದೆ.

Statement about ownership and other particulars about Newspaper: NAVAYUGA

FORM IV (Rule 8)

1.	*Place of Publication*	...	UDIPI
2.	*Periodicity of its Publication*	...	WEEKLY
3.	*Printers' Name*	...	K. H. SHETTY
	Nationality	...	INDIAN
	Address		Palukote, Udipi (S.K.)
4.	*Publishers' Name*	...	K. H. SHETTY
	Nationality	...	INDIAN
	Address	...	Palukote, Udipi (S.K.)
5.	*Editor's Name*	...	K. H. SHETTY
	Nationality	...	INDIAN
	Address	...	Palukote, Udipi (S.K)
6.	*Names and addresses of individuals who own the news-paper and partners or shareholders holding more than one percent of the total capital.*		K. H. SHETTY Palukote, Udipi (S.K.) (Prop.)

I, K. H. Shetty, hereby declare that the particulars given above are true to the best of my knowledge and belief.

(Sd.) K. H. SHETTY,
Signature of Publisher.

Date 1—3—1962.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.

(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಅಮೇರಿಕೆಯ ಮುತ್ಸದ್ದಿತನದಿಂದ

ಕಾಂಗೋವಿನಲ್ಲಿ ಶಾಂತಿ ಸ್ಥಾಪನೆ

ಕಳೆದೆರಡು ವರ್ಷಗಳಿಂದ ಕಾಂಗೋದ ಆಕಾಶದಲ್ಲಿ ಹಬ್ಬಿದ್ದ ಕಾರ್ಮೋಡಗಳು ಈಗ ತಿಳಿಯಾಗಿ ಅಲ್ಲಿ ವಾತಾವರಣವು ನಿರ್ಮಲವಾಗುವ ನಿದರ್ಶನಗಳು ತೋರಿ ಬರತೊಡಗಿವೆ. ಕಟಾಂಗಾದ ಅಧ್ಯಕ್ಷ ಶೋಂಬೇಯವರು ಕಾಂಗೋ ಕೇಂದ್ರ ಸರಕಾರದ ಶ್ರೀ ಅಡೌಲರೊಂದಿಗೆ ಕಳೆದ ದಶಂಬರದಲ್ಲಿ ಒಂದು ಒಡಂಬಡಿಕೆಗೆ ಸಹಿ ಹಾಕಿದ್ದರು. ಕಟಾಂಗಾದ ಪ್ರಾದೇಶಿಕ ಸಭೆಯು ಇದನ್ನು ಒಪ್ಪಿಕೊಂಡಿತು. ಈ ಒಪ್ಪಂದದನ್ವಯ ಕಟಾಂಗಾವು ಕಾಂಗೋವಿನ ಒಕ್ಕೂಟವನ್ನು ಒಪ್ಪುವುದು, ಇಡಿ ಕಾಂಗೋವಿನ ಮೇಲೆ ಕೇಂದ್ರ ಸರಕಾರವನ್ನು ಮನ್ನಿಸುವುದು, ಯುಕ್ತ ರಾಷ್ಟ್ರ ಸಂಘದ ಗೊತ್ತುವಳಿಗಳನ್ನು ಕಾರ್ಯರೂಪಕ್ಕೆ ತರುವುದು; ಕಟಾಂಗಾದಲ್ಲಿರುವ ವಿದೇಶೀಯ ರಾಜಕೀಯ ಸಲಹೆಗಾರರನ್ನೂ ಲಾಭಬಡಕರನ್ನೂ ಹೊರಗೆ ಹಾಕುವುದು. ಮುಖ್ಯವಾಗಿ ಹೇಳುವುದಾದರೆ, ಕಟಾಂಗದ ಪ್ರಶ್ನೆಯನ್ನು ಬಗೆಹರಿಸಲು ಇದ್ದ ಮುಖ್ಯ ಆತಂಕವೆಂದರೆ, ವಿದೇಶೀಯ ರಾಜಕೀಯ ಸ್ವಾರ್ಥಿಗಳ ಕಾಟ. ಈಗ ಇವರನ್ನು ಹೊರಕ್ಕಟ್ಟುವ ಬಗ್ಗೆ ನಿರ್ಧಾರವಾದುದರಿಂದ, ಪರಿಸ್ಥಿತಿಯನ್ನು ಶಾಂತಗೊಳಿಸಲು ದಾರಿ ಸುಗಮವಾದಂತಾಯಿತು.

ಕಟಾಂಗದಲ್ಲಿರುವ ವಿದೇಶೀಯ ಸ್ವಾರ್ಥಸಾಧಕರೂ ರಾಜಕೀಯ ಸಲಹೆಗಾರರೂ ಹಿಂದೆ ಸರಿಯುವುದನ್ನು ಪರಿಶೀಲಿಸಲು ಸಂಯುಕ್ತ ರಾಷ್ಟ್ರ ಸಂಘ ಮತ್ತು ಕಟಾಂಗದ ಪ್ರತಿನಿಧಿಗಳಿರುವ ಸಮಿತಿಯೊಂದನ್ನು ರಚಿಸಲು ಶೋಂಬೇ ಒಪ್ಪಿದ್ದಾರೆ. ಅಲ್ಲಿದ್ದ ಫ್ರೆಂಚ ಕಮಾಂಡರ ಕರ್ನಲ್ ಫಾಲ್ಕ್ಯುಸರನ್ನು ಕೂಡಿ ಬಹುಮಂದಿ ವಿದೇಶಿಯ ಕುತಂತ್ರಿಗಳು ಈಗಾಗಲೇ ಕಟಾಂಗ ತ್ಯಜಿಸಿದ್ದಾರೆಂದು ಹೇಳಲಾಗುತ್ತಿದೆ. ಉಳಿದ ಲಾಭ ಬಡಕರೂ ಬಿಟ್ಟು ತೆರಳುವ ವರೆಗೆ ಸಂ. ರಾ. ಸಂಘವು ಎಲಿಜಬೆಥ್ ವಿಲ್ಲೆಯನ್ನು ನಿಯಂತ್ರಣದಲ್ಲಿಟ್ಟುಕೊಂಡಿದೆ ಇದು ಕೊನೆಗೊಂಡಿತೆಂದರೆ, ಕಾಂಗೋವಿನಲ್ಲಿ ಶಾಂತಿ ಸ್ಥಾಪನೆಯಾಗಿ ಸಂ. ರಾ. ಸಂಘವು ಎದುರಿಸಬೇಕಾಗಿದ್ದ ದೊಡ್ಡ ಪ್ರಶ್ನೆಯೊಂದು ಬಹು ಪ್ರಯಾಸದಿಂದಲಾದರೂ ಬಗೆ ಹರಿದಂತೆ ಆಯ್ತೆನ್ನಬಹುದು.

ಕಾಂಗೋ ಸಮಸ್ಯೆಯನ್ನು ಬಿಡಿಸುವಲ್ಲಿ ಅಮೇರಿಕೆಯು ಸಂ. ರಾ ಸಂಘಕ್ಕೆ ಪ್ರಾರಂಭದಿಂದಲೂ ಹೃತ್ಪೂರ್ವಕ ಸಹಾಯವನ್ನು ನೀಡಿದೆ; ಒತ್ತಾಸೆಯನ್ನಿತ್ತಿದೆ. ಪೆಟ್ರಿಸ್ ಲುಮುಂಬಾ ಮತ್ತು ಡಾಗ್ ಹೆಮ್ಮರ್ ಶೆಲ್ಲರ ಬಲಿದಾನ ತೆಗೆದುಕೊಂಡು ವಿಶ್ವಕ್ಷೋಭಕಾರಕವೆನಿಸಿದ ಈ ಗಡುಚಾದ ರಾಜಕೀಯ ಗಂಟನ್ನು ಬಿಡಿಸುವಲ್ಲಿ ಅದು ಆಡಿದ ಪಾತ್ರ ಬಹು ಮಹತ್ವದ್ದೆನ್ನಲಡ್ಡಿಯಿಲ್ಲ. ಲುಮುಂಬಾರ ಉತ್ತರಾಧಿಕಾರಿಯಾಗಿ ಬಂದ ಅಡೌಲರ ನಾಯಕತ್ವದಲ್ಲಿ ಕಾಂಗೋವನ್ನು ಒಗ್ಗೂಡಿಸುವ ಬಗ್ಗೆ ಅದು ಅತೀವ ಕಳಕಳವಹಿಸಿತ್ತು. ಪ್ರತ್ಯೇಕತೆಯನ್ನು ಬಯಸುತಿದ್ದ ಶೋಂಬೇಯವರು ಅಮೇರಿಕೆಯ ಸಂದರ್ಶನ ಮಾಡ ಬಯಸಿದಾಗ, ಅವರಿಗೆ ಅಗತ್ಯವಾದ ವೀಸಾ ಕೊಡದಿದ್ದುದೂ ಇದಕ್ಕೊಂದು ಉದಾಹರಣೆಯೆನ್ನಬಹುದು. ಅಮೇರಿಕೆಯ ಕಾಂಗ್ರೆಸಿನ ಒಳಗೂ ಹೊರಗೂ ಶೋಂಬೆಯವರಿಗೂ ಅವರ ಬೆಂಗೋಲಾಗಿ ನಿಂತು ಸರ್ವ ವಿಧದ ಆರ್ಥಿಕ ಸವಲತ್ತುಗಳನ್ನು ಅವರಿಗೆ ಒದಗಿಸುತ್ತ ಬಂದ ಬೆಲ್ಜಿಯಂ-ಬ್ರಿಟಿಷ್ ಮೈನಿಂಗ್ ಕಾರ್ಪೋರೇಶನ್ನಿಗೂ ಹಲವಾರು ಸ್ನೇಹಿತರಿದ್ದರು. ಆದುದರಿಂದ ಶೋಂಬೆಯವರು ಅಮೇರಿಕೆಗೆ ಸಂದರ್ಶನವಿತ್ತರೆಂದರೆ, ಅದು ಅವರ ಪ್ರತ್ಯೇಕತಾ ಮನೋಭಾವನೆಗೆ ಮತ್ತಷ್ಟು ಪ್ರೋತ್ಸಾಹಕೊಡಬಹುದು ಎಂದು ರಾಜ್ಯಾಂಗ ಮಂತ್ರಿ ಶಾಖೆಯು ತಿಳಿದು ವೀಸಾ ನೀಡಲು ನಿರಾಕರಿಸಿತು.

ಅಮೇರಿಕೆಯು ಈ ದಿಸೆಯಲ್ಲಿ ಇನ್ನೂ ಒಂದು ಮಹಾಕಾರ್ಯಮಾಡುತ್ತಿದೆ. ಬೆಲ್ಜಿಯಂಬ್ರಿಟಿಷ್ ಮೈನಿಂಗ್ ಸಂಸ್ಥೆಯಾದ ಯೂನಿಯನ್ ಮೈನರಿಯು ಈಗ ಶೋಂಬೆಯವರಿಗೆ ಕರವನ್ನು ಕೊಡುತ್ತಿದೆ. ಅದು ಕಾಂಗೋ ಕೇಂದ್ರ ಸರಕಾರದೊಡನೆ, ಕರ ತೆರಲು ಭಾದ್ಯವಾಗುವಂತೊಡಂಬಡಿಕೆ ಮಾಡಿಕೊಳ್ಳುವಂತೆ ಒತ್ತಾಯಿಸುತ್ತಿದೆ. ಈ ಕರದ ಮೊತ್ತವು ವರ್ಷಕ್ಕೆ ೩೦ ಲಕ್ಷ ಪವನುಗಳು ಈ ಹಣದ ಬಲದಿಂದಲೇ ಇದು ವರೆಗೂ ಶೋಂಬೆಯವರು ಹಾರಾಡಿದರು. ಯಾವುದೇ ರೀತಿಯ ಪ್ರಯತ್ನದಿಂದ ಅವರಿಗೆ ಸಲ್ಲುತ್ತಿರುವ ಈ ಕರದ ಮೊತ್ತವು ನಿಂತಿತೆಂದರೆ, ಆಗ, ಶೋಂಬೆಯವರ ರೆಕ್ಕೆ ಕತ್ತರಿಸಿ ಹೋದಂತೆ; ಅದರ ಪರಿಣಾಮವಾಗಿ ಸಂಧಾನ ಕಾರ್ಯವೂ ಶೀಘ್ರಗೊಳ್ಳುವ ನಿರೀಕ್ಷೆಯಿದೆ, ಮಾತ್ರವಲ್ಲ, ಶೋಂಬೇಯವರ ಪ್ರತ್ಯೇಕತೆಯ ಅರ್ಭಟೆ ತನಗೆ ತಾನಾಗಿಯೇ ನಿಂತುಬಿಡುವುದು.

ಶೋಂಬೆಯವರು ಅಡೌಲರಿಗೊಂದು ಪತ್ರವನ್ನು ಬರೆದು, ಅದರಲ್ಲಿ ಅನ್ಯರ ಮಧ್ಯಸ್ಥಿಕೆಯಿಲ್ಲದೆ ತಾವಿಬ್ಬರೇ ಸೇರಿ ಕಟಾಂಗ ಮತ್ತು ಕಾಂಗೋಗಳ ಜನತೆಯ ಹಿತಾಸಕ್ತಿಗಳ ಆಧಾರದಲ್ಲಿ ಕಾಂಗೋವನ್ನು ಒಂದುಗೂಡಿಸುವ ಬಗ್ಗೆ ರಾಜಕೀಯ ಇತ್ಯರ್ಥವನ್ನು ಮಾಡುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. 'ಅನ್ಯರ ಮಧ್ಯಸ್ಥಿಕೆ'ಯೆಂದರೆ, ಸಂ.ರಾ. ಸಂಘದ ಕೈವಾಡವೆಂದೆಂದವರು ಕಲ್ಪಿಸಿರಬಹುದು. ಆದರೆ ಸಂ. ರಾ. ಸಂಘವು ಈ ಸಂಬಂಧದಲ್ಲಿ ತನ್ನ ನಿಲುಮೆಯನ್ನು ಮೊದಲೇ ದೃಢ ಪಡಿಸಿದೆ. ಶಾಂತಿ ಮತ್ತು ಸುವ್ಯವಸ್ಥೆಗಳು ಒಂದು ಬಾರಿಗೆ ಸ್ಥಾಪಿತವಾದುವೆಂದರೆ ರಾಷ್ಟ್ರವು ಕ್ರಮವಾಗಿ ಅಭಿವೃದ್ಧಿ ಪಥಗಮನ ಮಾಡುವುದರಿಂದ, ಆ ಮೇಲೆ ತನಗೆ ಕಾಂಗೋವಿನಲ್ಲಿ ಉಳಿಯುವ ಇರಾದೆಯಿಲ್ಲವೆಂದದು ಸಾರಿ ಹೇಳಿದೆ.

ಶೋಂಬೆಯವರಿಗೆ ತನ್ನ ಮತ್ತು ತನ್ನ ಕಟಾಂಗದ ಭವಿಷ್ಯದ ಬಗ್ಗೆ ಬಹಳ ಕಳವಳ-ಚಿಂತೆಯಿದೆ. ಆದುದರಿಂದ ಪ್ರಧಾನಿ ಅಡೌಲರು ಈ ಬಗ್ಗೆ ತಕ್ಕ ಭರವಸೆಯನ್ನು ನೀಡುವುದು ಅನುಚಿತವಲ್ಲ. ಕಳೆದ ಹತ್ತೊಂಭತ್ತು ತಿಂಗಳುಗಳಿಂದ ರಕ್ತ ನದಿ ಹರಿದ, ಶಕ್ತಿಗಳ ಕಣವಾದ ಕಾಂಗೋ ತನ್ನಲ್ಲಿ ಅಡಕವಾಗಿರುವ ಪ್ರತಿ ರಾಜ್ಯದ ಹಿತಾಸಕ್ತಿಗಳಿಗೆ ಕಡೆಯಾಗದಂತೆ ಕೇಂದ್ರ ಶಕ್ತಿ ಪೀಠವನ್ನು ಮನ್ನಿಸಿ, ಅಸೀಮ ಶಕ್ತಿಯಾಗಿ ಬಾಳುವುದು ಅವಶ್ಯವೆಂಬುದನ್ನು ತೋರಿಸಿಕೊಡಬೇಕು ಅಡೌಲರಾದರೂ ಶೋಂಬೆಯವರನ್ನು ಸಂಪೂರ್ಣ ಭಗ್ನಾಶರಾಗದಂತೆ, ಉಳಿದ ಭಾಗಗಳವರೂ ಅತೃಪ್ತರಾಗದಂತೆ ಮುತ್ಸದ್ದಿತನದಿಂದ ವರ್ತಿಸುವರೆಂದು ನಂಬ ಬಹುದು.

ಕನ್ನಡದಲ್ಲಿ ಸಣ್ಣ ಕಥೆಗಳು

(೪ನೇ ಪುಟದಿಂದ)

ಪತ್ರಿಕೆಗಳು ಸಾಕಷ್ಟಿಲ್ಲ. ನಮ್ಮ ಪತ್ರಿಕೆಗಳು ಆಗೊಮ್ಮೆ ಈಗೊಮ್ಮೆಯಂತೆ ಎಳೆಯ ಕತೆಗಾರರಿಗೆ ಪ್ರೋತ್ಸಾಹದ ರೂಪದಲ್ಲಿ ಸ್ಪರ್ಧೆಗಳನ್ನು ಏರ್ಪಡಿಸುತ್ತಿವೆಯಾದರೂ, ಅದೊಂದು ಶಾಶ್ವತ ಹಾಗೂ ಪೂರ್ಣ ಪ್ರಯತ್ನವೆನಿಸಲಾರದು.

ಪ್ರತಿ ಪತ್ರಿಕೆಗಳು ಎಳೆಯ ಕತೆಗಾರರಿಗೆ ಒಂದು ಆದರ್ಶವನ್ನು ಹಾಕಿ ಕೊಡುವ ರೀತಿಯಲ್ಲಿ ತಮಗೆ ಬಂದ ಕತೆಗಳ ವಿಮರ್ಶೆಗಾಗಿ, ಒಂದು ಪ್ರತ್ಯೇಕ ವಿಭಾಗವನ್ನು ಪ್ರತಿ ಸಂಚಿಕೆಯಲ್ಲೂ ತರುವಂತಾಗ ಬೇಕು. ಸಾಹಿತ್ಯ ಸಂಸ್ಥೆಗಳು, ಸಾಹಿತ್ಯ ಪರಿಷತ್ತು, ಎಳೆಯ ಕತೆಗಾರರ, ಉತ್ತಮ ಕತೆಗಳನ್ನು ಸಂಗ್ರಹಿಸಿ ಪುಸ್ತಕ ಪ್ರಕಟಿಸುವ ಕಾರ್ಯಕ್ರಮ ಕೈಕೊಳ್ಳ ಬೇಕು.

ಹಿಂದೆ ಕರ್ಮವೀರ, ಕತೆಗಾರ, ಪತ್ರಿಕೆಗಳವರು ಮಾಡಿದಂತೆ ತಿಂಗಳಿಗೊಮ್ಮೆ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾದ ಕತೆಗಳ ವಿಮರ್ಶೆಯನ್ನು ನಡೆಸಿ, ತನ್ಮೂಲಕ ಎಳೆಯ ಕತೆಗಾರರಿಗೆ ಮುಂದುವರಿಯಲು ಪ್ರೇರೆಪಿಸಬೇಕು.

ಪ್ರಜಾವಾಣಿಯವರು ಏರ್ಪಡಿಸುವ ಸ್ತುತ್ಯ ಸ್ಪರ್ಧೆಯಂತೆ ಕನ್ನಡ ಸಾಹಿತ್ಯ ಪರಿಷತ್ತು ಸಹ ದೊಡ್ಡ ಮೊತ್ತದ ಬಹುಮಾನಗಳನ್ನಿರಿಸಿ, ಸಣ್ಣ ಕತೆಗಳ ಸ್ಪರ್ಧೆಯನ್ನು ವ್ಯಾಪಕವಾದ ಮಟ್ಟದಲ್ಲಿ ಏರ್ಪಡಿಸ ಬೇಕು. ಇಂತಹ ಪೂರ್ವ ನಿಯೋಜಿತ ಕಾರ್ಯಕ್ರಮಗಳೊಂದಿಗೆ, ನಮ್ಮ ಕನ್ನಡ ಸಣ್ಣ ಕತಾ ಸಾಹಿತ್ಯ ಬೆಳೆಯುವುದಾದರೆ ಸಾಹಿತ್ಯದ ರಸಗಂಗೆ, ಸಾಹಿತ್ಯ ರಸಿಕರೆಲ್ಲರ ಹೃದಯಗಳಲ್ಲಿ ಪ್ರವಹಿಸುವದೆಂಬುದು ನಿಶ್ಚಯ.

ಹಾಗೇ ಆಗಲಿ!

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು. ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಡೆದು ಬಂದ ದಾರಿ

ಹೊಸ ಹಗಲಿಗೆ ಹೊಸ ಜೀವನ

[ಕಾಕಾ ಕಾಲೇಲಕರರು ತನ್ನ ಜೀವನದ ಬಗ್ಗೆ ಮಾಡಿದ ಉದ್ಗಾರಗಳ ಸಂಗ್ರಹವಿದು. ತನ್ನ ಜೀವನದ ಹೊರವಳಲಯವು ವಿಕ್ಷುಬ್ಧವೆಂಬಂತೆ ತೋರಿದರೂ ಅದರ ಅಂತರಾಳದಲ್ಲಿ ಗಂಭೀರ ಶಾಂತಿಯಡಗಿದೆ ಎನ್ನುತ್ತಾರೆ ಇವರು]

ಸಾಹಿತ್ಯಸೇವಕನಿಗೆ ತನ್ನ ಲೇಖನಿಯ ಬಲದಿಂದಲೇ ಜೀವನ ನಿರ್ವಹಿಸುವ ಅವಕಾಶ ಪ್ರಾಪ್ತವಾಗಬೇಕೆಂದು ನನ್ನ ಅಭಿಪ್ರಾಯ ಯಾವುದೇ ಒಬ್ಬ ಸೇವಕನು ತಾನು ಕೆಲಸ ಮಾಡುತ್ತಿರುವ ವಿಭಾಗದಲ್ಲಿಯೇ ಬದುಕುವ ಅಧಿಕಾರ ಹೊಂದಲೇಬೇಕು ಆದರೆ, ಆ ವಿಭಾಗವನ್ನೇ ಪ್ರೇರಕ ಭಾವನೆಯೆನ್ನುವುದು ಮಾತ್ರ ಸರಿಯಲ್ಲ. ಮನುಷ್ಯನಾದವನು ಕೆಲಸ ಮಾಡುವುದು ಏತಕ್ಕಾಗಿ ಆತ್ಮ ಸಂತೋಷಕ್ಕಾಗಿಯೆ? ಅಥವಾ ಸಮಾಜ ಸೇವೆಗಾಗಿಯೆ? ಅವನ ಅಭಿರುಚಿಯು ಯಾವ ಕ್ಷೇತ್ರದಲ್ಲಿಯೇ ಅದರಲ್ಲಿ ಕಾರ್ಯವೆಸಗುತ್ತ ಆತ್ಮ ಸಂತೋಷ ಮತ್ತು ಸಮಾಜ ಸೇವೆಗಳು ಒಡನೊಡನೆಯೇ ಸಿದ್ಧವಾಗುತ್ತವೆಯೆ?

ನನ್ನ ಜೀವನದ ಸಂಸ್ಮರಣೆಯನ್ನು ನೆನಪಿಸುತ್ತ ಹೋದರೆ, ಧನಾಭಾವದಿಂದ ನಾನು ಪೀಡಿತನಾಗಿದ್ದೆನೆಂಬುದು ಭಾಸವಾಗುವುದಿಲ್ಲ ಅಥವಾ ಧನಗಳಿಸುವುದಕ್ಕಾಗಿ ಏನನ್ನಾದರೂ ಮಾಡಲು ಉದ್ಯುಕ್ತನಾದುದೂ ಗೊತ್ತಿಲ್ಲ. ನಾನು ಬಹಳ ಬಡತನದ ದಿನಗಳನ್ನು ಕಂಡಿದ್ದೇನೆ, ಆದರೆ, ಅದರಿಂದ ನಾನೆಂದೂ ಚಿಂತಿತನಾದುದಿಲ್ಲ. ಅಧ್ಯಯನ ಮತ್ತು ಸಂತ ಸಮಾಗಮವೇ ನನ್ನ ಪ್ರೇರಕ ತತ್ವಗಳಾಗಿದ್ದುವು ದೇಶದ ಸ್ವಾತಂತ್ರ್ಯ, ಸಮಾಜಸೇವೆ ಮತ್ತು ಆಧ್ಯಾತ್ಮಿಕ ಆತ್ಮಾನ ಭೂತಿ-ಈ ಮೂರು ಆದರ್ಶಗಳಿಂದ ನಾನು ಜೀವನವನ್ನು ಕಳೆದಿದ್ದೇನೆ.

ದೇಶದ ಸ್ವಾತಂತ್ರ್ಯಕ್ಕಾಗಿ ಏನಾದರೂ ಕ್ರಾಂತಿ ಮಾಡಬೇಕೆಂಬ ಭಾವನೆಯಿಂದ ಜನಜಾಗೃತಿಯ ಕಡೆಗೆ ನನ್ನ ಗಮನ ಹರಿಯಿತು. ಅದರಲ್ಲಿ ಪತ್ರಕಾರಿಕನ ಮತ್ತು ರಾಷ್ಟ್ರೀಯ ಶಿಕ್ಷಣದ ಕ್ಷೇತ್ರಗಳು ನನಗೆ ಲಭಿಸಿದುವು ಇವುಗಳಿಂದಲೇ ನನ್ನ ಜೀವನ ಕಾರ್ಯವು ನಿಶ್ಚಯ ರೂಪವನ್ನು ಪಡೆಯಿತು.

ಮಹಾರಾಷ್ಟ್ರದ ಸಂತ ಸಾಹಿತ್ಯದಿಂದ ಮತ್ತು ತಾಯ್ತಂದೆಯವರ ಜೀವನದಿಂದ ಭಕ್ತಿಯ ಪ್ರೇರಣೆ ದೊರೆಯಿತು. ಆದರೆ, ಅದರಲ್ಲಿ ಉತ್ಕಟತೆ ಬರುವುದಕ್ಕೆ ಸಾವಂತವಾಡಿಯ ಒಬ್ಬಾತ ಸೇವಕನ ಮಾತುಗಳೇ ಕಾರಣವಾದುವು ಆತನೇನೋ ಕೇಳಕೇಳಿ ಚಪರಾಸಿಯಾಗಿದ್ದ ಅದರೂ ಆತ ನನ್ನ ಬಾಲ ಮನಸ್ಸಿನಲ್ಲಿ ಭಕ್ತಿಯ ಉತ್ಕಂಠತೆಯ ಬೀಜವನ್ನು ಬಿತ್ತಿಬಿಟ್ಟನು. ಆಧ್ಯಾತ್ಮ್ಯಪ್ರೇರಣೆಯು ಒಬ್ಬ ಮುದಿ ಒಡ ತೀರ್ಥಯಾತ್ರಿಯ ದೆಸೆಯಿಂದಾಯಿತು. ಇವೆರಡರ ವಿವರಣೆಯನ್ನೂ ನನ್ನ 'ಸ್ಮರಣಯಾತ್ರಾ'ವೆಂಬ ಪುಸ್ತಕದಲ್ಲಿ ಕೊಟ್ಟಿದ್ದೇನೆ. ಕ್ರಾಂತಿಕಾರಿ ದೇಶಭಕ್ತಿ ಪ್ರೇರಣೆ ಒಬ್ಬ ಪೋಲೀಸ್ ಹವಾಲದಾರನಿಂದ ಸಿಕ್ಕಿತು ಮುಂದೆ ಮಾತ್ರ ಈತನು ಅನೇಕ ಷಡ್ಯಂತ್ರಗಳನ್ನು ಭೇದಿಸುವಲ್ಲಿ ಮತ್ತು ನೂರಾರು ಯುವಕರಿಗೆ ಶಿಕ್ಷೆ ಕೊಡಿಸುವಲ್ಲಿ ಇಂಗ್ಲಿಷ್ ಸರಕಾರಕ್ಕೆ ಸಹಾಯ ನೀಡಿದನು. ಎಂತಹ ವಿಲಕ್ಷಣವೆನಿಸುತ್ತಿಲ್ಲವೇ ಇದು!

ನನ್ನ ಜೀವನದಲ್ಲಿ ಬಾಹ್ಯ ಸಂಘರ್ಷಗಳು ಇಲ್ಲವೆಂದೇ ಹೇಳಬಹುದು. ಜೀವನದಲ್ಲಿ ಆಂತರಿಕ ಆಲಸ್ಯ, ಅವ್ಯವಸ್ಥಿ ಮತ್ತು ಪ್ರಮಾದ ಶೀಲತೆಗಳೊಡನೆ ನಾನು ಯಾವಾಗಲೂ ಹೋರಾಡಬೇಕಿತ್ತು ಇವುಗಳ ಮೇಲೆ ವಿಜಯ ಸ್ಥಾಪಿಸುವುದು ಇಂದಿಗೂ ನನ್ನಿಂದ ಸಾಧ್ಯವಾಗಿಲ್ಲ.

ನನಗೆ ಪ್ರವಾಸ ಇಲ್ಲವೇ ಯಾತ್ರೆ ಮಾಡುವ ಅವಕಾಶ ದೊರೆತಾಗ ತುಂಬ ಆನಂದವಾಗುತ್ತದೆ. ನಾನು ಸ್ವಭಾವದಿಂದಲೇ ಯಾತ್ರಾಶೀಲ ಆದುದರಿಂದ ನನ್ನ ಜೀವನ ವೃತ್ತಾಂತವನ್ನು ನಾನು 'ಸ್ಮರಣ ಯಾತ್ರೆ" ಎಂದೇ ಕರೆದಿದ್ದೇನೆ 'ಹಿಮಾಲಯದ ಯಾತ್ರೆ", 'ಬ್ರಹ್ಮದೇಶದ ಪ್ರವಾಸ", 'ಅತಟದ (ಪೂರ್ವ ಆಫ್ರಿಕಾ",),ನೆರೆಹೊರೆಯವರು", 'ಸೂರ್ಯೋದಯದ ರಾಷ್ಟ್ರ' (ಜಪಾನ್), ಸಕ್ಕರೆಯ ದ್ವೀಪ—ಮಾರೀಶಿಯಸ್ ಮೊದಲಾದ ಗ್ರಂಥಗಳಲ್ಲಿ ಅದೇ ಆನಂದವನ್ನು ವ್ಯಕ್ತಪಡಿಸಿದ್ದೇನೆ. ನದಿಗಳು, ಸರೋವರಗಳು, ಸಮುದ್ರತಟ, ಪ್ರಪಾತ ಮೊದಲಾದುವುಗಳನ್ನು ಕಾಣುವುದರಿಂದ ನನ್ನ ಮನಸ್ಸು ಯಾವಾಗಲೂ ಸುಪ್ರಸನ್ನವಿರುತ್ತದೆ

ಪ್ರತಿನಿತ್ಯ ಆಯಾಸಗೊಂಡು ಮಲಗಿದ ಬಳಿಕ, ಮುಂಜಾನೆಯು ಹೊಸ ಪ್ರಾಣವನ್ನು ಹಿಡಿದುಕೊಂಡು ನನ್ನನ್ನು ಎಚ್ಚರಿಸುತ್ತದೆ ನನ್ನ ಜೀವನದಲ್ಲಿ ಆಳವಾದ ಉದಾಸೀನತೆ ಮತ್ತು ಹೊಸ ಉತ್ಸಾಹದ ಕ್ರಮವಾದರೂ ಇದೇ. ಉಪನಿಷತ್ತಿನ ಗ್ರಂಥಗಳ ಸಾಧನೆಯು ಹೊಸ ಬಾದ ಬಲವನ್ನು ನೀಡುತ್ತದೆ.

ಅದೃಷ್ಟದ ಇಳಿತ ಭರತಗಳಿಗಿಂತ ಅನೇಕ ಪಾಲು ಸಮರ್ಥನಿರುವವನಿಗೆ ಬೇಗಲೇ ಸ್ವಾಸ್ಥ್ಯ ಗಳಿಸುವುದು ಸಾಧ್ಯವಾಗಿದೆ. ಮನುಷ್ಯನ ಮನಸ್ಸಿನಲ್ಲಿ ಅಶಾಂತಿ ಮತ್ತು ಚಂಚಲತೆಯ ಒಂದು ಅಲ್ಪಾಂಶವು ಇರಲೇಬೇಕು. ಆದರೆ, ಈ ಅವಗುಣವು ಪೃಷ್ಠ ಭಾಗದಲ್ಲಿದೆ ಸಮುದ್ರದ ಅಂತಸ್ಥಳದಲ್ಲಿ ಗಂಭೀರ ಶಾಂತಿಯಿರುವುದನ್ನು ಎಲ್ಲರೂ ಬಲ್ಲರು.



ರಕ್ಷಣಾ ಪಡೆಗಳಿಗೆ ಉಪಯುಕ್ತವಾದ ಹೆಲಿಕಾಪ್ಟರ್ ಮಾದರಿಯ ವಿಮಾನವೊಂದನ್ನು ಕಾಣಬಹುದು.

ಪಾಕಿಸ್ತಾನದಲ್ಲಿ ತೀವ್ರ ಅಸಂತೃಪ್ತಿ

(೩ನೇ ಪುಟದಿಂದ)

ಯು ಐದುನೂರು ಎಕ್ರೆ ತರಿಭೂಮಿ ಅಥವಾ ಒಂದು ಸಾವಿರ ಎಕ್ರೆ ನೀರಾಸಾಗುವಳಿಯಿಲ್ಲದ ಭೂಮಿಯಾಗಿರುವುದರಿಂದ, ಈ ಭೂಮಾಲಕರಿಗೆ ಯಾವ ಹೆಚ್ಚಿನ ತೊಂದರೆಯೂ ಉಂಟಾಗುವುದಿಲ್ಲ. [...]ವರ್ಗದವರ ಬುದ್ಧಿವಾದದಂತೆ ನಿರೂಪಿತವಾ[...] ಅಯೂಬರ ಆರ್ಥಿಕ ಧೋರಣೆಗಳಿಂದಾ[...] ಕರಾಚಿಯ ಕೆಲವೇ ಮಂದಿ ವ್ಯಾಪಾರ[...]ರೊಡನೆ ಮಾತ್ರ ವ್ಯಾಪಾರ ವಹಿವಾಟ[...] ಕೇಂದ್ರೀಕೃತವಾಗುತ್ತಿದೆ ಪಾಕಿಸ್ತಾನ[...] ಮುಂಗಡ ಪತ್ರವು ಅಧರಿಸಿರುವುದು ಮುಖ್ಯವಾಗಿ ಅಮೆರಿಕದ ಸಂರಕ್ಷಣಾ ಸಹಾಯವನ್ನು, ಅವರ ಯೋಜನೆಗಳು ನ[...]ಯುವುದು ಕೂಡ ಇದೇ ಮಾದರಿಯಲ್ಲಿ ಮಾತ್ರವಲ್ಲ, ಪಾಕಿಸ್ತಾನದ ಎಳೆ ಹರೆಯ ಸೇನಾ ನಾಯಕರಲ್ಲಿಯೂ ಅಸಂತುಷ್ಟಿ ಹರಡಿದೆಯೆಂದು ಕೇಳುತ್ತದೆ ಕ್ರಾಂತಿಯ ಮಾರ್ಗ ತಪ್ಪಿ ಹೋದುದಕ್ಕಾಗಿ ಇವ[...] ಪರಿತಪಿಸುತ್ತಾರೆ, ಕಾಶ್ಮೀರ ಪ್ರಶ್ನೆಯನ್ನು ಬಗೆಹರಿಸಲು ಅಯೂಬ ಖಾನರು ಇಡುತ್ತಿರುವ ಮಂದ ಪದನ್ಯಾಸದಿಂದ ಅತೃಪ್ತರಾಗಿದ್ದಾರೆ ಹೀಗೆ ಮುಂಬರು[...] ಕೆಲವೇ ವಾರಗಳಲ್ಲಿ ಪಾಕ್ ಸರ್ವಾಧಿಕಾರಿಯು ವಿಲಕ್ಷಣ ಸನ್ನಿವೇಶ[...]ನ್ನು ಎದುರಿಸಬೇಕಾಗುವುದು ಖಂಡಿತ ಜನತೆಯ ಬೆಂಬಲವನ್ನು ಪಡೆಯುವ [...]ಲುವಾಗಿ ತುಂಬ ಉದಾರ ನೀತಿಯನ್ನೂ ಅನುಸರಿಸಬೇಕಾಗಿ ಬರಬಹುದು. ಇದ[...] ವರೆಗೆ ತಾನು ಅಲಂಕರಿಸಿ ಸುಖವಾಗಿ [...]ನ ಗಳಿದಂತೆಯೇ ಮುಂದಕ್ಕೂ ಇರ[...]ಯಸುವುದಾದರೆ, ಮಾರ್ಶಲ್ ಅಯೂಬ ಖಾನರು ಇಂತಹ ಉದಾರ ಧೋರಣೆ [...]ಹಿಸಿಕೊಳ್ಳುವುದು ಅತ್ಯಾವಶ್ಯಕವಿದೆ.

ಇದನ್ನೆಲ್ಲಾ ಗಮನಿಸುವಾಗ, ನಮ್ಮ ಭಾರತದ ಪರಿಸ್ಥಿತಿಯು ಅದೆಷ್ಟೋ ಪಾಲು ಮೇಲ್ಮಟ್ಟದ್ದಾಗಿದೆ. ನಮ್ಮ ರಾಷ್ಟ್ರ ಸ್ವತಂತ್ರ ಪ್ರಜಾಪ್ರಭುತ್ವವಾಗಿ ಮೆರೆಯುತ್ತ ಬರುತ್ತಿರುವುದು ನಮಗೆ ಅಭಿಮಾನಾಸ್ಪದವಲ್ಲವೆ?

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ. 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Doposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ

THE VIJAYA BANK LTD.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone. 374

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ: ಕೆ.ಕೆ ಆರ್.ಶೇಟ್

ಹಕ್ಕಿ ಹಾರಿ ಹೋಯಿತು

(೨ನೇ ಪುಟದಿಂದ)

'ಡಾಕ್ಟರರಿಗೆ ಕಾಫಿ ಕೊಟ್ಟೆಯೇನು?' ರೋಗಿಯಿಂದಲೇ ಇಂತಹ ಮಾರ್ಮಿಕ ಮಾತನ್ನು ಕೇಳುತ್ತಿರುವುದು

ಚಂದ್ರದಾಸರು ಇದೆ ಮೊದಲು "ನನಗೇನೂ ಬೇಡವಾಗಿದೆ ..."

'ಹೋಗುವವಳಿಗೆ ಏನೂ ಬೇಡವಾದರೆ ...ಇರುವವರಿಗೂ ಏನೂ ಬೇಡವೆ

ಡಾಕ್ಟರ್ ಹಾಗನ್ನದಿರಿ . ..'

ರತ್ನನನ್ನುಳಿದು ಮಿಕ್ಕೆಲ್ಲವರೂ ಮಾರು ಕೋಣೆಗೆ ಹೋದರು ರತ್ನಳ ಕೆಮ್ಮು ಮೊದಿನದಿಂದ ದಿನಕ್ಕೆ ವಿಪರ್ಯಾಸಕ್ಕೆ ತಿರುಗುತಿತ್ತು .. . ಜೊತೆಗೆ ರಕ್ತ. ... ಉಫ್ .. ಊಫ್ . ಛೆ ಮೊದಮೊದಲು ಸ್ವರ ಈಗ ನಿಸ್ವರ ..

ಇಪ್ಪತ್ತರ ಎಳೆಯ ಬಾಳೆಯ ಸುಳಿಯಂತೆ ಬೆಳೆದುಬಂದ ರತ್ನ ಎಲ್ಲರ ಮೆಚ್ಚಿಗೆಗೆ ಪಾತ್ರಳಾಗಿ ಎಲ್ಲರ ಮನಸ್ಸನ್ನೂ ಕೋರೈಸಿದಳು. ಕಾಲೇಜಿನಲ್ಲಿ ಮೊದಲಿಗಳೆನಿಸಿ ಮೆರೆದಳು. ಕೇವಲ ಒಂದು ತಿಂಗಳ ಹಿಂದೆಯೆ ತಾನೊಬ್ಬ ರೋಗಿ ಎನಿಸಿದುದು ಆಕೆಗೆ ಪರೀಕ್ಷೆಯ ತಯಾರಿಯಲ್ಲಿ ಅಶಕ್ತಳಾದವಳು ಪರೀಕ್ಷೆಯನ್ನೇನೊ ಮುಗಿಸಿದಳು—ಫಲಿತಾಂಶ ತಿಳಿಯಲು ಕೆಲವು ದಿನಗಳಿನ್ನೂ ಗತಿಸ ಬೇಕಾಗಿದೆ ಇವಾಗಲಂತೂ ಫಲಿತಾಂಶದ ಆಸೆಯನ್ನೇ ತೊರೆದಳು- ಏನಾದರೇನು? ಸಂತೋಷದ ವಿಷಯಗಳನ್ನು ಕೇಳಲು ರತ್ನ ಉಳಿಯುವಳೇ? ಉಳಿದರೂ ಕೇಳಬಾರದ ಸ್ಥಿತಿಯಲ್ಲಿದ್ದೇನು ಪ್ರಯೋಜನ? ಒಮ್ಮೆಯಾದರೂ ಶಾಂತಲಾ ನನ್ನ ನೋಡಲು ಬಂದಿದ್ದಳೆ? ಶ್ರೀಮಂತರ ಮಗಳು. ನನ್ನ ಗೆಳತಿಯಾದರೇನಾಯ್ತು? ಶಾಂತಿ ದೇವಿಯವರೆಂದಂತೆ ನನ್ನ ರೋಗ ಆಕೆಗೂ ಬಡಿದರೆ? ಬೇಡ .ನಾನೆಂತೂ ರೋಗಿಯಾದೆ. ಆಕೆಯಾದರೂ ಹಸನ್ಮುಖಿಯಾಗಿರಲಿ! ಆದರೆ ಶಾಂತಿ ದೇವಿಯವರಿಗೆ ಏಕೆ ಅಂತಹ ಹೆದರಿಕೆಯಿಲ್ಲ? 'ಮಕ್ಕಳಿಲ್ಲ ಮರಿಯಿಲ್ಲ, ನನಗೇನೂ ಹೆದರಿಕೆಯಿಲ್ಲ" ಎಂದರಲ್ಲ ನಿನ್ನೆ...ಇಂದೂ ಬಂದೇ ಬರುತ್ತಾರೆ. ಏನಾದರೂ ಹಣ್ಣು ತಂದೇ ತರುತ್ತಾರೆ ನಿರಾಕರಿಸಿದರೆ ಆವರಿಗೆ ಅಗಾಧ ದುಃಖವಾಗುತ್ತದೆ ದಿನವೂ ಅವರಿಂದ ಹಣ್ಣು ತೆಗೆದುಕೊಳ್ಳುತ್ತಿದ್ದರೆ ಅದೊಂದು ಋಣವಾಗದೆ? ಒಮ್ಮೆ ಹಾಗೆಂದಾಗ 'ಸುಮ್ಮನಿರು ರತ್ನ—ನೀನು ನನ್ನ ಮಗಳು ಹಾಗಾಗಿ ಅದು ಋಣವಾಗದು' ಎಂದಿದ್ದರು. ಅದಕ್ಕೆ ನಾನೇನ್ನಲಿ? ಇಷ್ಟೆಲ್ಲಾ ಪ್ರಯೋಜನ ಔಷಧಗಳ ಪ್ರಯೋಗ ನಡೆಸಿದರೂ ಏನಾದರೂ ಗುಣ ತೋರಲಾರದೇಕೇ

ಬಂದರು ಶಾಂತಿದೇವಿಯವರು ಹಿಂದುಗಡೆ ಪ್ರಮಿಳಾ ಬಂದಿದ್ದಳು. ಸ್ನೇಹದ ಮರ್ಮವನ್ನು ಸರಿಯಾಗಿ ಅರಿತವಳೆಂದರೆ ಪ್ರಮೀಳೆಯೊಬ್ಬಳೇ. ಆಕೆ ಬಡವೆಯಾದರೇನಾಯ್ತು. ಅಂತರ್ಯ ಪರಿಶುದ್ಧವಿದೆಯಲ್ಲವೇ"

"ರತ್ನಕ್ಕ ನಿನ್ನ ಗತಿ ಹೀಗಾಯಿತೇ? .. ಪ್ರಮೀಳ ತಬ್ಬಿಕೊಂಡಳು. ಉಬ್ಬಿ ನಲಿಯುತ್ತಿದ್ದ ಮಾಂಸಖಂಡಗಳ ಬದಲು ಒಣಗಿದ ಮೂಳೆಗಳು ಮಾತ್ರ ಕಾಣಿಸುತ್ತಿದ್ದವು.. "ಪ್ರಮೀಳಾ . ನಿನಗಾಗಿ ಇಷ್ಟು ದಿನ ಉಳಿದುಕೊಂಡಿರುವೆ ."

"ನನಗೆ ತಿಳಿದಿರಲಿಲ್ಲ, ಇಲ್ಲವಾಗಿದ್ದರೆ ಇಲ್ಲೇ ಉಳಿದುಕೊಳ್ಳುತ್ತಿದ್ದೆ ,,

'ಅದು ಸಂತೋಷ ಆದರೆ ಅಂದು ಕಾಲೇಜಿನಲ್ಲಿ ಹೇಳಿದ ಆ ಮಾತು ನಡೆಸಿಬಿಡು ,,

"ಯಾವ ಮಾತು ರತ್ನಕ್ಕ ? ,,

"ಅದೇ ನನ್ನ ಅತ್ತಿಗೆಯಾಗುವ ಆ ಮಾತು ,,

ಪ್ರಮೀಳೆಗೆ ಏನೂ ಹೇಳಲಾಗಲಿಲ್ಲ.

"ಆ ಮಾತೊಂದನ್ನು ನಡಸಿ ಬಿಡು ಪ್ರಮೀಳಾ ಆದರಿಂದ ನನ್ನಾತ್ಮಕ್ಕೆ ಚಿರಶಾಂತಿಯುಂಟಾಗುತ್ತದೆ .,

ಶಾಂತಿ ದೇವಿಯವರು ಆ ಬಗ್ಗೆ ಆಶ್ವಾಸನೆಯಿತ್ತರು ಎಲ್ಲರಿಗೂ ಸಾವಿತ್ರಮ್ಮ ಕಾಫಿ ಕೊಟ್ಟರು

"ಮೇಡಂ ..ಇನ್ನೆಷ್ಟು ದಿನ ಕೊಳೆಯಬೇಕು ನಾನು? ನಿಮಗಿನ್ನೂ ನನ್ನ ಬಗ್ಗೆ ಆಸೆಯಿದೆಯೇ? ರಿಸಲ್ಟ್ ಎಂದು ಬರುತ್ತದೆ? ಬಂದರೆ ನನಗೇನು? ನಾನೆಲ್ಲೋ ನೀವೆಲ್ಲೋ? ಆತ್ಮವನ್ನು ಸಂತೋಷಕ್ಕಾಗಿ . ಅದರೊಂದಿಗೆ ಕಳುಹಿಸುತ್ತಿರುವೆ ನನಗಿನ್ನು ಕೆಲವು ದಿನ... ಪುನಃ ಕೆಟ್ಟ ಕೆಮ್ಮು ..ರಕ್ತ ..ಐದು.... ಹತ್ತು ..ಹದಿನೈದು ನಿಮಿಷ ..

"ರತ್ನಕ್ಕ ...ಇಂತಹ ರೋಗಕ್ಕೆ ಔಷಧವಿಲ್ಲವಂತಲ್ಲ ಇದೆ ನೀನು ಗುಣವಾಗುತ್ತಿ . ನನಗೇಕೋ ಧೈರ್ಯವಿದೆ .,, ರತ್ನ ಕೈಯಾಡಿಸಿದಳು .. ಆ ಮುಖದ ಭಾವನೆಯಲ್ಲಿ ಡಾಕ್ಟರನ್ನೂ ದಂಗುಬಡಿಸಿದ ಈ ರೋಗ ನಿನಗೆ ಧೈರ್ಯ ಕೊಟ್ಟಿರುವುದೇ ಎನ್ನುವಂತಿತ್ತು... ಮತ್ತೆ ನಾಲ್ಕು ದಿನ ಸಂದುವು ರಿಸಲ್ಟ್ ಹೊರಬಿದ್ದಿತು ರತ್ನ B A ಯಲ್ಲಿ ಮೊದಲ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಳು. ದಿನಕರ ಸಂತೋಷದಿಂದಲೆ ಒಳಬಂದ. ರತ್ನಳಿಗೆ ಹೇಗೆ ಹೇಳಬೇಕೆಂದು ಬೇರೆಯವರ ವಿಚಾರ ಹೇಳುತ್ತಾ 'ರತ್ನ, ನೀನು ಫಸ್ಟ್ ಕ್ಲಾಸ್... ಕಾಲೇಜಿನಲ್ಲಿ ಈ ವರುಷ ಮತ್ತಾರೂ ಹಾಗೆ ರಿಸಲ್ಟ್ ತರಲಿಲ್ಲ, ಎಂದನು.

ಸಂತೋಷದ ವಾರ್ತೆ ಕೇಳಿ ರತ್ನಳ ಬತ್ತಿ ಹೋದ ಪಂಜರದಿಂದ ಪ್ರಾಣ ಪಕ್ಷಿ ದೂರ ಬಹುದೂರ ರೆಕ್ಕೆ ಬಡಿದು ಹಾರಿ ಹೋಯಿತು.



ಅಹಮದಾಬಾದಿನ ಸಮೀಪದ ಕಲೋಲ್‌ನ ಸಾರ್ಧ ಗ್ರಾಮದಲ್ಲಿ ಬಾವಿಯೊಂದರಿಂದ ಎಣ್ಣೆ ಹೊರ ಹರಿದು ಬರುತ್ತಿರುವುದನ್ನು ಕೇಂದ್ರ ಉರುವಲು ಮಂತ್ರಿ ಶ್ರೀ ಮಾಳವೀಯಾ ಆವರು ವೀಕ್ಷಿಸುತ್ತಿರುವುದು

ಚಂದಾದಾರರಲ್ಲಿ ವಿನಂತಿ.

'ನವಯುಗ'ದ ಚಂದಾ ಹಣ ಬಾಕಿ ಇರುವ ಚಂದ ದಾರರಿಗೆಲ್ಲಾ ಬಾಕಿಯನ್ನು ಕಳುಹಿಸಿಕೊಡುವಂತೆ ಈ ಮೊದಲೇ ಬರೆದಿರುತ್ತೇವೆ ಇನ್ನೂ ಬಾಕಿಯನ್ನು ಕಳುಹಿಸಿಕೊಡದವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಡುವಂತೆ ಈ ಮೂಲಕ ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ ವಿ ಪಿ ಮಾಡಿದರೆ 75 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಚಂದಾ ಹಣವನ್ನು ಮನಿಯಾರ್ಡರ್ ಮಾಡಿ ಆಗಲಿ, ಸಿಂಡಿಕೇಟ್ ಬ್ಯಾಂಕ್ ಮೂಲಕವಾಗಲೀ ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಬಿನ್ನವಿಸುತ್ತೇವೆ ಅಂತೂ ಈ ತಿಂಗಳಾಂತ್ಯದೊಳಗೆ ಚಂದಾ ಬಾರದಿದ್ದರೆ ಕ್ರಮಶಃ ನಾವು ಕಳುಹಿಸುವ ವಿ ಪಿ ಯನ್ನಾದರೂ ಸ್ವೀಕರಿಸಬೇಕಾಗಿ ಮುಂದಾಗಿ ಕೇಳಿಕೊಳ್ಳುತ್ತೇವೆ

—ಮೆನೇಜರ್.



"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ

ಬೆಲೆ ರೂ. 1-50 ನ ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ 1-25 ನ ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ

ನವಭಾರತ ಬುಕ್ ಡಿಪೊ, ಉಡುಪಿ.

ಗಾಂಧೀಜಿಯೆನ್ನುವಂತೆ

ನೈತಿಕ ಕಟ್ಟುಪಾಡು ಅಥವಾ ಕಾನೂನು

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಪ್ರತಿಯೊಬ್ಬ ಮನುಷ್ಯನ ಚಿತ್ತವೆನ್ನುವ ಗೃಹಕ್ಕೆ ಎರಡು ಬಾಗಿಲುಗಳಿವೆ. ಅವುಗಳಲ್ಲಿ ಒಂದು ಬಾಗಿಲು ಆತನ ಜೀವನದ ಅನುಭವವನ್ನು ಇದ್ದಕ್ಕಿದ್ದಂತೆ ತೋರಿಸಿಕೊಡುವುದು. ಎರಡನೆಯ ಬಾಗಿಲು ಆತನು ಆದರ್ಶ ಪುರುಷನಾಗಿ ಬಾಳಬೇಕಾದರೆ ಯಾವ ವಿಧದಲ್ಲಿ ಜೀವನವನ್ನು ಸಾಗಿಸತಕ್ಕದ್ದು ಎನ್ನುವ ನೈತಿಕ ಕಟ್ಟುಪಾಡನ್ನು ತೋರಿಸಿ ಕೊಡುವುದು. ಪ್ರತಿಯೊಬ್ಬ ಮಾನವನು ತನ್ನ ಜೀವನ ಸ್ವಾರಸ್ಯವನ್ನು ಕೂಲಂಕಷವಾಗಿ ತಾನೇ ಶೋಧಿಸಿಕೊಂಡು, ತಾನು ಮಾಡಿರುವ ಅನೇಕಾನೇಕ ತಪ್ಪುಗಳನ್ನು ತಿದ್ದಿಕೊಂಡು ಆದಷ್ಟು ಮಟ್ಟಿಗೆ ತನ್ನ ದೇಹವನ್ನೂ, ಮನಸ್ಸನ್ನೂ ಆತ್ಮವನ್ನೂ ಪರಿಶುದ್ಧಗೊಳಿಸಿದರೆ ಆತನ ಜನ್ಮವು ಸಫಲವಾಗಬಹುದು. ಅಂತಹ ಸಾಧನೆದಿಂದ ಆತನು ಅಧರ್ಮ, ಪಾಪ ಕೃತ್ಯಗಳು, ಅಹಂಕಾರ, ಮತ್ತು ಮಾತ್ಸರ್ಯಗಳನ್ನು ತ್ಯಜಿಸಬಹುದು. ಅನೇಕಾನೇಕ ನೀತಿ ಸೂಕ್ತವಾದ ಗಾದೆಗಳನ್ನು ಹೇಳುತ್ತಾ ಬರೆಯುತ್ತಾ, ಬರುವುದು ಬಹಳ ಕಷ್ಟವಲ್ಲ; ಆದರೆ ಅವುಗಳ ಸಾರವನ್ನು ಹೀರಿ, ಆದಷ್ಟು ಮಟ್ಟಿಗೆ ನಮ್ಮ ಜೀವನದಲ್ಲಿ ಅದನ್ನು ಅಳವಡಿಸಿಕೊಂಡರೆ ಮಾತ್ರ ಆ ಗಾದೆಗಳಿಗೆ ಬೆಲೆಯಿದೆ. ಪ್ರಾಮಾಣಿಕತನಕ್ಕೆ ಪ್ರಥಮ ಸ್ಥಾನವೀಯದೇ ಯಾವ ನೈತಿಕ ಕಾನೂನನ್ನೂ ಸರಿಯಾಗಿ ನಡೆಸಲು ಸಾಧ್ಯವಿಲ್ಲವೆಂಬುದು ನಿರ್ವಿವಾದವು.

ಪರಮಾತ್ಮನು ಸರ್ವಶಕ್ತನು, ಅತ್ಯಂತ ಪರಿಶುದ್ಧನು ಮತ್ತು ಕರುಣಾಸಾಗರನು. ಸ್ವಾರ್ಥದಿಂದ ಕಟ್ಟಲ್ಪಟ್ಟ ಮಾನವನಲ್ಲಿ ಪರಮಾತ್ಮನ ತೇಜಸ್ಸು ತಗಲುವುದು ಅಪೂರ್ವ. ಫಲಾಪೇಕ್ಷೆಯಿಂದ ಮಾಡುವ ಕರ್ಮಗಳು ಪರಮಾತ್ಮನ ಅನುಗ್ರಹಕ್ಕೆ ಒಳಪಡಲಾರವು. ಪರೋಪಕಾರಿಯು ಪ್ರತ್ಯುಪಕಾರವನ್ನು ಅಪೇಕ್ಷಿಸಿ ತನ್ನ ಕರ್ಮಗಳನ್ನು ಮುಂದುವರಿಸಿದರೆ ಆತನ ಗುಣದಲ್ಲಿ ತೇಜಸ್ಸು ಅಂಕುರಿಸದು. ಸ್ವಭಾವ ಗುಣದಲ್ಲಿಯೇ ತಾನು ಪರೋಪಕಾರಿಯಾಗಿ ಸಂತೋಷಪಡುವ ಮಾನವನು ದೈವಬಲವನ್ನು ತನ್ನಷ್ಟಕ್ಕೆ ಹೊಂದುವನು. ಆತನು ಮಾಡುವ ಸದುದ್ದೇಶದ ಕಾರ್ಯಗಳು ಸಫಲವಾಗುವವು. ಆತನು ಜನಪ್ರೀತನಾಗುವನು. ಸಮಾಜದಿಂದ ಹೊಗಳಿಕೆಯನ್ನು ಪಡೆಯುವ ಉದ್ದೇಶದಿಂದಮಹಾ ಕಾರ್ಯಗಳಿಗೆಕೈಗೊಡುವವನಲ್ಲಿ ದೈವಬಲವಿಲ್ಲ. ಕಾಲಕ್ರಮೇಣ ಆತನು ಅಹಂಕಾರಿಯಾಗಿ ಜನರ ಮೆಚ್ಚುಗೆಯು ಅವನಿಂದ ದೂರವಾಗುವುದು. ಸತ್ಯಪಥದಲ್ಲಿ ನಡೆವ ನಿರಹಂಕಾರಿಗೆ ಜನಸಾಮಾನ್ಯರ ಹೊಗಳಿಕೆಯ ಬಹುಮಾನವು ಎಂದೂ ಅಗತ್ಯವಿಲ್ಲ. ನೈತಿಕ ಕಾನೂನಿಗೆ ಸರಿಯಾಗಿ ನಡೆವ ಮಾನವನಿಗೆ ಬಹುಮಾನದ ಆಶೆಯಿಲ್ಲ, ಬಹುಮಾನ ಬಂದಾಗ ಆತನು ಹಿಗ್ಗಲಾರನು.

ನಮ್ಮ ಅಪೇಕ್ಷೆಗಳು ಮತ್ತು ಉದ್ದೇಶಗಳು ಎರಡು ವಿಧವಾಗಿವೆ. ಒಂದು ಸ್ವಾರ್ಥನಿಷ್ಟ—ಇನ್ನೊಂದು ನಿಃಸ್ವಾರ್ಥ. ಇವಲ್ಲಿ ಮೊದಲನೆಯದು ನೀತಿಗೆ ವಿರುದ್ಧವಾದುದು. ಎರಡನೆಯದು ಸಮಾಜ ಕಲ್ಯಾಣಕ್ಕೆ ಆಧಾರಭೂತವಾದುದು. ನಿಃಸ್ವಾರ್ಥಗುಣದ ಪರೋಪಕಾರಿಯು ತನ್ನನ್ನು ತಾನೇ ಎಂದಿಗೂ ಹೊಗಳಿಕೊಳ್ಳಲಾರನು. ಮಾತ್ರವಲ್ಲ ಇತರರು ತನ್ನನ್ನು ವಿಶೇಷವಾಗಿ ಶ್ಲಾಘಿಸುತ್ತ ಬಂದರೆ ಬಹಳವಾಗಿ ಬೇಸರಿಸುವನು. ಕೋಪ, ಅಸತ್ಯ ಮತ್ತು ಮಾತ್ಸರ್ಯಗಳು ಮಾನವನಿಂದ ದೂರವಾಗಿರಬೇಕಾದ ದುರ್ಗುಣಗಳು. ಈ ದುರ್ಗುಣಗಳಿಂದ ಮಾನವ ಚಿತ್ರವು ಕಲಂಕವಾಗಿ ಆತನ ಜೀವನವು ನಿಷ್ಪ್ರಯೋಜಕವಾಗಬಹುದು. ನಿಸ್ವಾರ್ಥ ಸಮಾಜಸೇವೆಯೇ ನೈತಿಕ ಕಾನೂನುಗಳಲ್ಲಿ ಶಾಶ್ವತವಾಗಿ ಉಳಿಯುವ ಕಾನೂನೆಂದರೆ ಅತಿಶಯೋಕ್ತಿಯಾಗದು.

ಹಲವು ಮಾನವರು ಈಗಿನ ಕಾಲದಲ್ಲಿ ಸಮಾಜಸೇವೆಯ ನೆಪದಲ್ಲಿ ತಮ್ಮ ತಮ್ಮ ಕುಟುಂಬಗಳ ಅಭಿವೃದ್ಧಿಯ ನೆಲೆಯನ್ನು ಪುಷ್ಟಿಗೊಳಿಸುತ್ತ ಬರುವುದನ್ನು ನಾವು ದಿನೇ ದಿನೇ ನೋಡುತ್ತ ಇದ್ದೇವೆ. ಇನ್ನು ಕೆಲವರು ತಮ್ಮ ಐಶ್ವರ್ಯದ ಬಲದಿಂದ ಪರ್ವತಗಳನ್ನು ಕೂಡ ಕರಗಿಸಿ ಬಿಟ್ಟು ನೀರುಮಾಡಿ ಬಿಡುವ ಸಾಮರ್ಥ್ಯವನ್ನು ಪ್ರದರ್ಶಿಸುವರು. ಮಾನವನು ತಾನು ಮಾಡುವ ಕರ್ಮಗಳ ಭಾವವು ಇತರರಿಗೆ ಗೋಚರವಾಗಬಹುದೆಂದು ಯಾವಾಗಲೂ ತಿಳಿಯತಕ್ಕದ್ದು. ವಿವೇಕಶಾಲಿಯಾದವರು ಇತರರ ಕಾರ್ಯಸಾಧನಗಳ ತತ್ವಗಳನ್ನು ತಮ್ಮ ಬುದ್ಧಿಬಲದಿಂದ ಸರಿಯಾಗಿ ಅರಿತುಕೊಳ್ಳುವರು. ಇಂದ್ರಿಯಗಳನ್ನು ಬಹಳ ಮಟ್ಟಿಗೆ ಸ್ವಾಧೀನದಲ್ಲಿರಿಸಿಕೊಳ್ಳದವರಿಗೆ ನಿಸ್ವಾರ್ಥ ಸಮಾಜಸೇವೆಯನ್ನು ಮಾಡಲಿಕ್ಕೆ ಎಂದೂ ಸಾಧ್ಯವಾಗದು. ಕಪಟಜಾಲದಿಂದ ಮಾನವನು ಕೆಲವು ಬಾರಿ ಗೆದ್ದು ಮೆರೆಯ ಬಹುದು ಆದರೆ ಕಾಲಕ್ರಮೇಣ ಆತನ ದುರ್ಗುಣಗಳು ಆತನ ಹೃದಯವನ್ನು ಕೊರೆದು ಅವನ ಚಿತ್ತಶಾಂತಿಯನ್ನು ಭಗ್ನಗೊಳಿಸುವುದರಲ್ಲಿ ಏನೂ ಸಂದೇಹವಿಲ್ಲ.

ಮೊದಲಾಗಿ ಮಾನವನು ತನ್ನ ಮನಸ್ಸನ್ನು ನಿರ್ಮಲವಾಗಿಡ ತಕ್ಕದ್ದು. ಆಗ ಆತನಿಗೆ ಮಾನವ ಜೀವನದ ಉದ್ದೇಶಗಳ ಗಮ್ಯಸ್ಥಾನವು ಗೋಚರಿಸುವುದು. ಧರ್ಮ, ಭಕ್ತಿ, ಜ್ಞಾನಗಳ ಅಮೂಲ್ಯವಾದ ಸಾಧನವು ಆತನಿಗೆ ಚಿತ್ತ ಶುದ್ಧತೆಯಿಂದ ಸುಲಭವಾಗಿ ತೋರಿಬರುವುದು. ತನ್ನ ಸ್ವಾಭಾವಿಕ ಕರ್ಮಗಳನ್ನು ಧರ್ಮದಿಂದ ನಡೆಸುತ್ತ ಬರುವಾಗ ಮಾನವನು ಭಗವಂತನ ಸ್ಮರಣೆಯನ್ನು ಸದೇ ಸದೇ ಮಾಡುತ್ತ ಬಾಳ ಬೇಕು. ಆ ಸ್ಮರಣೆಯಿಂದ ಭವ್ಯವಾದ ವಿಷಯವು ಬೇರಿಲ್ಲ. ಅಧರ್ಮ ಪಥದಲ್ಲಿ ನಡೆಯುವವನಿಗೆ ಆ ಸ್ಮರಣೆಯು ಭವ್ಯವಾಗಿ ತೋರದು. ಅಂತಹವರು ಪಾಪನಿವಾರಣೆಯಗೋಸುಗ ಭಗವಂತನ ಸ್ಮರಣೆಯನ್ನು ಮಾಡಿದರೆ ಅಂತಹ ಕಪಟ ಪ್ರೇರಣೆಗೆ ಏನೊಂದೂ ಬೆಲೆಯಿಲ್ಲದೆ, ಅಂತಹವರು ದೈವ ದ್ರೋಹಿಗಳಾಗುವರು.

ದೇಶಕ್ಕೆ ದುಃಖಗಳನ್ನು ಒದಗಿಸುವ ಕಾನೂನುಗಳನ್ನು ನೈತಿಕ ಕಟ್ಟುಪಾಡುಗಳಲ್ಲ. ಅಂತಹ ಕಾನೂನುಗಳಿಂದ ಸಮಾಜವು ಏಳಿಗೆಗೆ ಬರುವಂತಿಲ್ಲ. ಅಧಿಕ ಲಾಭವನ್ನೆ ತನ್ನ ಗುರಿಯಾಗಿಟ್ಟುಕೊಂಡು ಗಿರಾಕಿಗಳನ್ನು ದಣಿಸುವ ವ್ಯಾಪಾರಿಯು ನೈತಿಕ ಕಾನೂನನ್ನು ಮುರಿದಂತಾಗುತ್ತದೆ. ತನ್ನ ಜೀವನವನ್ನು ನ್ಯಾಯವಾದ ರೀತಿಯಲ್ಲಿ ಸಾಗಿಸುವಷ್ಟು ಲಾಭವನ್ನು ಆತನು ಪಡೆದರೆ ಆತನ ಗಿರಾಕಿಗಳು ದಣಿಯಲಾರರು ಅದೇ ರೀತಿ ತನ್ನ ಸಂಪಾದನೆಯ ಅಭಿವೃದ್ಧಿಯನ್ನು ಮಾತ್ರ ಮುಖ್ಯ ಗುರಿಯಾಗಿಟ್ಟುಕೊಂಡು ಕಕ್ಷಿಗಾರನ ಮನೆಯನ್ನು ನಾಶಗೊಳಿಸುವ ವಕೀಲರು ಸಮಾಜಕ್ಕೆ ದ್ರೋಹ ಮಾಡಿದಂತಾಗುವುದು. ತನ್ನ ಜೀವನವನ್ನು ನ್ಯಾಯವಾದ ರೀತಿಯಲ್ಲಿ ಸಾಗಿಸುವಷ್ಟು ಸಂಪಾದನೆಯನ್ನು ವಕೀಲರು ಮಾಡಿದರೆ ಅವರ ಉದ್ಯೋಗವು ಸಮಾಜ ಸೇವೆಯಾಗಿ ಪರಿಣಮಿಸುವುದು ಇದೇ ರೀತಿ ವೈದ್ಯರು ರೋಗಿಯ ಹಣದ ಚೀಲದ ಪರೀಕ್ಷೆಯನ್ನು ಮಾಡುವ ಕ್ರಮವನ್ನು ಹಿಂದಕ್ಕೆ ದೂಡಿ ರೋಗಿಯು ತನ್ನವನೇ ಎಂಬ ಪ್ರೇಮದ ಭಾವನೆಯಿಂದ ಆತನ ಸೇವೆ ಮಾಡಿ ಆತನಿಗೆ ಜೀವದಾನ ಮಾಡಿದರೆ ಅವರ ವೃತ್ತಿಯು ಬಹು ಗಂಭೀರವಾದ ಪ್ರೇಮಯುಕ್ತವಾದ ದೇವ ಸೇವೆಯಾಗಿ ಸಲ್ಲುವುದು. ರೋಗಿಯು ಕೂಡ ತನ್ನ ಶಕ್ತಿ ಮೀರಿ ತನ್ನನ್ನು ಉಳಿಸಿದ ವೈದ್ಯನಿಗೆ ಧನ ಸೇವೆಯನ್ನು ನಡೆಸಿ ಬಿಡುವನು. ಅದೇ ರೀತಿ ತಾಯಿಯು ದಿನ ನಿತ್ಯ ತಪ್ಪು ಮಾಡುವ ತನ್ನ ಮಗುವನ್ನು ತನ್ನ ಮರಿ ಚಿನ್ನದ ಮರಿ ಪರರ ಮರಿ ಕಾಗೆ ಮರಿ ಎಂಬ ಮುದ್ದಾಟದಿಂದ ಹಾಳುಮಾಡದೆ, ತಕ್ಕ ಸಮಯದಲ್ಲಿ ಬುದ್ಧಿವಾದದ ಮೂಲಕವೋ ಸಾಮಾನ್ಯ ಚಿಕ್ಕ ಶಿಕ್ಷೆಯ ಮೂಲಕವೊ ಅಂತಹ ಮಕ್ಕಳನ್ನು ಸಣ್ಣದಿರುವಾಗಲೇ ಸರಿಗೊಳಿಸದೆ ಹೋದರೆ ಅಂತಹ ಕೊಂಡಾಟದ ಮಕ್ಕಳು ಪ್ರಾಯ ಬಂದಾಗ ಅಯೋಗ್ಯರಾಗಿ ಕುಟುಂಬದ ಗೌರವವನ್ನು ಕಲಂಕಗೊಳಿಸುವ ಭಯವಿದೆ.

ನೈತಿಕ ಕಾನೂನು ಬಹಳ ವೈಭವವುಳ್ಳದ್ದು. ನೈತಿಕ ಕಾನೂನು ಅರಿತು, ಅದರಂತೆ ಜೀವನವನ್ನು ನಡೆಸುವವನು ಸಮಾಜ ಕಲ್ಯಾಣಕ್ಕೆ ಭಾಗಿಯಾಗುವನು. ಆತನನ್ನು ಸಮಾಜವು ಸದಾ ಕಾಲವೂ ಮನ್ನಿಸುವುದು ಆತನಲ್ಲಿ ಭಗವಂತನ ಅನುಗ್ರಹವು ಸದಾ ಕಾಲ ಹಸರಿಸುವುದು. ಆತನ ಚಿತ್ತವು ಶಾಂತವಾಗಿ ಆತನಿಂದ ಅನೇಕಾನೇಕರು ಉಪಕಾರವನ್ನು ಪಡೆಯುವರು. ಭೌತಿಕ ಬಾಗ್ಯಕ್ಕೆ ಮನಗೊಟ್ಟ ಈ ಯುಗದಲ್ಲಿ ನೈತಿಕ ಕಟ್ಟುಪಾಡುಗಳನ್ನು ಬಲವತ್ತರಮಾಡಿ ಪಾರಮಾರ್ಥಿಕ ತತ್ವಗಳ ಭಾಗ್ಯವನ್ನು ಕೂಡ ಅರಿತುಕೊಂಡು ಸತ್ವಶಾಲಿಯಾಗ ನಡೆದರೆ ಮಾತ್ರ ನಮ್ಮ ಜೀವನವು ಸಾರ್ಥಕವಾಗಬಹುದು.

(೧ನೇ ಪುಟದಿಂದ)

ಕೊಂಡೇ ಪ್ರತಿಯೊಂದು ಕಾರ್ಯಕ್ರಮವೂ ನಡೆಯಬೇಕಾದುದರಿಂದ, ಇವನ್ನು ಕೃತಿಗಿಳಿಸಲು ಸದ್ಯದ ಪರಿಸ್ಥಿತಿಯಲ್ಲಿ ನಮಗೆ ಅಸಾಧ್ಯವೆನಿಸಿದೆ. ಆದರೂ ಅನುಕೂಲ ವಾತಾವರಣವೊದಗಿದಾಗಲಾದರೂ ಇವನ್ನು ಹಂತ ಹಂತವಾಗಿ ಇಡಿಯ ಭಾರತದಲ್ಲಿ ವ್ಯವಹೃತಗೊಳಿಸುವುದು ಅಪೇಕ್ಷಣೀಯವಿದೆ.

ಜೇಡಿಕೆಯೊಡನೆ ಅನುಕೂಲತೆಯನ್ನು ತೂಗಿ ನೋಡಿ, ಪಶ್ಚಿಮ ಬಂಗಾಳ ಸರಕಾರ ಈ ಸಿಫಾರಸುಗಳು ಆದರ್ಶವಿರುವುವಾದರೂ ಅನ್ವಯಸಾಧ್ಯವೆಂಬ ನಿರ್ಧಾರಕ್ಕೆ ಬಂದರೆ, ಅದರಿಂದ ಸರ್ ಸಾರ್ಜಂಟರಿಗೆ ಅವಮಾನವಾಗುವುದಲ್ಲ; ನಮ್ಮ ಪ್ರಥಮ ಆವಶ್ಯಕತೆ ಶಿಕ್ಷಣದ ಕಡೆಗೆ ನಮ್ಮ ಸರಕಾರಗಳು ಕೊಡುತ್ತಿರುವ ಆಸ್ಥೆಯೆಷ್ಟೆಂದು ಮಾತ್ರ ಅಭಿವ್ಯಕ್ತವಾಗುತ್ತದೆ.

—ಗೋರಾ

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಪಿಗ್ಮಿ
- ಕ್ಯುಮುಲೇಟಿವ್
- ಇನ್ವೆಸ್ಟರ್ಸ್ ಏಜನ್ಸಿ
- ಲಕ್ಷ್ಮಿ ಕ್ಯಾಶ್ ಸರ್ಟಿಫಿಕೇಟ್ಸ್
- ಸಿಂಡಿಕೇಟ್ ಬ್ಯಾಂಕ್ ಕ್ಯಾಶ್ ಸರ್ಟಿಫಿಕೇಟ್ಸ್
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ-ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು

ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು

ದಕ್ಷಿಣ ಭಾರತದಾದ್ಯಂತ ಹಬ್ಬಿರುವ 159 ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)

ಸ್ಥಾಪನೆ: 1925

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ: ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ್ (ಆಂಗ್ಲ ಸ್ವಯಂಬೋಧಿನಿ) ನವಭಾರತ ಪುಸ್ತಕ ಭಂಡಾರ ಉಡುಪಿ

ಸಂಪುಟ ೪೧ ಸಂಚಿಕೆ ೨೬ | ಉಡುಪಿ 8-3-1962 ಗುರುವಾರ | Vol. 41 No. 26

ಚುನಾವಣಾನಂತರದಲ್ಲಿ
ಕರ್ನಾಟಕದ ರಾಜಕಾರಣ

ಶ್ರೀ ಬಿ. ಡಿ. ಜತ್ತಿ

ಶ್ರೀ ನಿಜಲಿಂಗಪ್ಪ

ಮೂರನೆಯ ಸಾರ್ವತ್ರಿಕ ಚುನಾವಣೆಯು ಮುಗಿದು, ಅದರ ಫಲಿತಾಂಶಗಳು ಈಗಾಗಲೇ ಘೋಷಿಸಲ್ಪಟ್ಟಿವೆ. ದೇಶದ ಹೆಚ್ಚಿನ ರಾಜ್ಯಗಳಲ್ಲಿ ಎಂದರೆ, ರಾಜಸ್ಥಾನ ಮತ್ತು ಮಧ್ಯಪ್ರದೇಶಗಳನ್ನು ಬಿಟ್ಟು ಉಳಿದ ರಾಜ್ಯಗಳಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತವನ್ನು ಪಡೆದು ಮತ್ತೆ ಅಧಿಕಾರವನ್ನು ವಹಿಸುವಂತಾಗಿದೆ. ಲೋಕ ಸಭೆಯಲ್ಲಿ ಯಾದರೂ ಅಧಿಕಾರಾರೂಢ ಪಕ್ಷ ಕಾಂಗ್ರೆಸ್ ನಿಚ್ಚಳ ಬಹುಮತವನ್ನು ಗಳಿಸಿಕೊಂಡಿದೆ; ಜಗತ್ತಿನ ರಾಷ್ಟ್ರಗಳು ಕುತೂಹಲದಿಂದ ನಿರೀಕ್ಷಿಸಿಕೊಂಡಿದ್ದ ಭಾರತದ ಸಾರ್ವತ್ರಿಕ ಚುನಾವಣೆಗಳು ಮೂರನೆಯ ಬಾರಿಗೂ ಕಾಂಗ್ರೆಸ್ಸಿನ ಪ್ರಚಂಡ ವಿಜಯದೊಡನೆ ಪರ್ಯವಸಾನಗೊಂಡಿತು.

೧೯೫೭ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಕರ್ನಾಟಕದ ೨೦೮ ವಿಧಾನಸಭಾ ಸ್ಥಾನಗಳು ಈ ರೀತಿಯಾಗಿ ಹಂಚಿಹೋಗಿದ್ದುವು:

ಕಾಂಗ್ರೆಸ್	೧೫೧
ಕಮ್ಯುನಿಸ್ಟ್	ಇಲ್ಲ.
ಪ್ರಸವಾ	೧೮
ಜನಸಂಘ	ಇಲ್ಲ

ಇತರ ಪಕ್ಷಗಳು ಸ್ವತಂತ್ರರು: ೩೯.

ಈ ಅಂಕೆ ಸಂಖ್ಯೆಗಳಿಂದ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ಸು ವಿರೋಧಿ ಪಕ್ಷಗಳ ಪ್ರಾಬಲ್ಯವು ಅತೀವ ಕಡಿಮೆಯಿತ್ತು ಎಂಬುದು ವ್ಯಕ್ತವಾಗುವುದು.

ಮೇಲೆ ಹೇಳಿದ ಪಕ್ಷಗಳು ಕಳೆದ ಸಾರಿ ಸಂಪಾದಿಸಿದ ಮತಗಳ ಪ್ರತಿಶತ ಈ ರೀತಿಯಿದೆ.

ಕಾಂಗ್ರೆಸ್	೫೨·೦೮
ಕಮ್ಯುನಿಸ್ಟ್	೧·೯೨
ಪ್ರಸವಾ	೧೪·೦೫
ಜನಸಂಘ	೧·೩೭

ಇತರ ಪಕ್ಷಗಳು ಮತ್ತು ಸ್ವತಂತ್ರರು: ೩೦·೫೮

ಈ ಬಾರಿಯ ಚುನಾವಣೆಗಳ ನಂತರ ರಾಜ್ಯದ ವಿಧಾನ ಸಭೆಯಲ್ಲಿ ವಿವಿಧ ಪಕ್ಷಗಳ ಬಲಾಬಲಗಳು ಇಂತಿವೆ.

ಕಾಂಗ್ರೆಸ್ ೧೩೯
ಕಮ್ಯುನಿಸ್ಟ್ ೪
ಪ್ರಸವಾ ೨೧
ಜನಸಂಘ ಇಲ್ಲ
ಇತರ ಪಕ್ಷಗಳು ಮತ್ತು ಸ್ವತಂತ್ರರು ೪೪

ಇವುಗಳು ಗಳಿಸಿದ ಮತಗಳ ಪ್ರತಿಶತವು ಹೀಗಿದೆ:

ಕಾಂಗ್ರೆಸ್ ೪೭
ಕಮ್ಯುನಿಸ್ಟ್ ೨
ಪ್ರಸವಾ ೧೨
ಜನಸಂಘ ೨
ಇತರ ಪಕ್ಷಗಳು ಮತ್ತು ಸ್ವತಂತ್ರರು ೩೭

ಇವರಲ್ಲಿ ೨೦೬ ಸ್ಥಾನಗಳಿಗೆ ಸ್ಪರ್ಧಿಸಿದ ಸ್ವತಂತ್ರ ಹುರಿಯಾಳುಗಳು ಶೇಕಡಾ ೨೮ರಷ್ಟು ಮತಗಳನ್ನೂ ೩೬ ಸ್ಥಾನಗಳನ್ನೂ ಗಳಿಸಿರುವರು. ಆದರೆ, ಪಕ್ಷ ಪದ್ಧತಿಯ ನಮ್ಮ ಪ್ರಜಾಪ್ರಭುತ್ವದಲ್ಲಿ ಇಂತಹ ವೈಯಕ್ತಿಕ ನೆಲೆಯಲ್ಲಿ ಗೆದ್ದು ಬಂದವರಿಗೆ ವಿಶೇಷ ಮಹತ್ವವಿಲ್ಲವೆಂಬುದರಿಂದ ವಿರೋಧಿ ಪಕ್ಷಗಳು ಇನ್ನೂ ದುರ್ಬಲವಿವೆಯೆಂದೇ ಹೇಳಬೇಕು.

ಕಳೆದ ಮತ್ತು ಈ ಸಲದ ಚುನಾವಣೆಗಳ ಫಲಿತಾಂಶಗಳನ್ನು ಅವಲೋಕಿಸಿದಾಗ, ಕಾಂಗ್ರೆಸ್ಸು ತನ್ನ ಸಂಖ್ಯಾಬಲ ಬೆಂಬಲವನ್ನೂ ಕಳೆದುಕೊಂಡಿದೆ. ಈ ಬಾರಿ ಕಮ್ಯುನಿಸ್ಟರೂ ೪ ಸ್ಥಾನಗಳನ್ನು ಗಳಿಸಿಕೊಂಡುದೊಂದು ವಿಶೇಷ. ಪ್ರಸವಾದ ಮುನ್ನಡೆ ನಿಧಾನವಾಗಿಯೇ ಉಳಿದಿದೆ. ಆದರೆ, ಇತರ ಪಕ್ಷಗಳೂ ಸ್ವತಂತ್ರರೂ ಈ ಹೆಚ್ಚಿನ ಸ್ಥಾನಗಳನ್ನು ಸಂಪಾದಿಸಿದ್ದಾರೆ ಎಂಬುದು ವಿದಿತವಾಗುವುದು.

ವಿಧಾನ ಸಭೆಯ ಚುನಾವಣೆಗಳಲ್ಲಿ ಕೆಲವೊಂದು ಮೋಜಿನ ಸಂಗತಿಗಳು ನಡೆದಿವೆ, ಕರ್ನಾಟಕದಲ್ಲಿನ ಕಾಂಗ್ರೆಸ್ ಹುರಿಯಾಳುಗಳಲ್ಲಿ ಮುಖ್ಯ ಮಂತ್ರಿ ಜತ್ತಿ ಮತ್ತು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರ ಗುಂಪುಗಳೆಂಬ ಭಾವನೆಯು ಅವರನ್ನು ಆರಿಸುವಾಗಲೇ ವ್ಯಕ್ತವಾಗಿತ್ತು. ಆದರೆ, ಚುನಾವಣೆಗಳಲ್ಲಿ ಜತ್ತಿಯವರು ಗೆದ್ದು ಬಂದಿದ್ದರೂ ಅವರ ಮಂತ್ರಿ ಮಂಡಳದ ಹೆಚ್ಚಿನ ಸದಸ್ಯರು ಮತ್ತು ಅವರ ಹಿಂಬಾಲಕರೆಂದು ಕೊಂಡವರು ಸೋಲುಣ್ಣಬೇಕಾಯಿತು. ಹಾಗೆಯೇ ನಿಜಲಿಂಗಪ್ಪನವರು ಪರಾಜಿತರಾದರೂ ಅವರ ಗುಂಪಿನವರು ಹೆಚ್ಚಾಗಿ ಗೆದ್ದು ಬಂದಿದ್ದಾರೆ. ಇದರಿಂದಾಗಿ ರಾಜ್ಯದ ರಾಜಕೀಯವು ನೆಮ್ಮದಿಯಿಂದ ಮುನ್ನಡೆಯುವುದು ಬಹಳ ತಕ್ಕೂ ಸಾಧ್ಯವಿಲ್ಲದಂತಾಗಿದೆ. ಭಾವೀ ಮುಖ್ಯ ಮಂತ್ರಿಯೆಂದು ತಿಳಿಯಲಾದ ನಿಜಲಿಂಗಪ್ಪನವರು ಸೋತುದರಿಂದ ತನ್ನ ದಾರಿ ನಿಷ್ಕಂಟಕವಾಯಿತೆಂದು ಜತ್ತಿಯವರು ತಿಳಿದಿರಬಹುದಾದರೂ ಅವರ ಬೆಂಬಲಿಗರ ಸಂಖ್ಯೆಯು ಕಡಿಮೆಯೆಂದು ಹೇಳಲಾಗುತ್ತಿದೆ. ಹಾಗೆಂದು ಚುನಾವಣೆಯಲ್ಲಿ ಸೋತ ನಿಜಲಿಂಗಪ್ಪನವರನ್ನು ನಾಯಕಪದಕ್ಕೆ ಚುನಾಯಿಸುವ ದಾರಿಯಿರುವುದಾದರೂ ಅದು ತೀವ್ರ ಬಿಕ್ಕಟ್ಟಿಗೆ ಕಾರಣವಾಗುವುದು. ಚುನಾವಣೆಗೆ ಒಂದು ತಿಂಗಳು ಮೊದಲು ನಿಂತಿದ್ದ ನಮ್ಮ ಕೋಳಕು ರಾಜಕೀಯದ ಸ್ಪರ್ಧೆಯು ಮುಂದಿನ ಒಂದೇ ತಿಂಗಳಲ್ಲಿ ಮರಳಿ ಸುರುವಾಗುವುದು ಖಂಡಿತ. ಇದನ್ನು ತಪ್ಪಿಸುವ ವರೆಗೆ ರಾಜ್ಯದ ರಾಜಕೀಯ ನೆಮ್ಮದಿಯಿಂದಿರುವುದು ಸಾಧ್ಯವಿಲ್ಲ ರಾಜ್ಯಕಲ್ಯಾಣವಾಗುವುದೆಂದು ನಿರೀಕ್ಷಿಸುವುದೂ ಸುಲಭವಲ್ಲ.

ಇದಕ್ಕಾಗಿ ಮೂರನೆಯ ಸೂಚನೆಯೊಂದೂ ಮುಂದೆ ಬರುತ್ತಿದೆಯೆಂದು ತಿಳಿಯುತ್ತದೆ ಎರಡೂ ಗುಂಪುಗಳಿಗೆ ಬೇಕಾದವರಾಗಿ ಚುನಾವಣೆಗಳಲ್ಲಿ ಆರಿಸಿ ಬಂದವರನ್ನೇ ನಾಯಕರನ್ನಾಗಿ ಆರಿಸುವುದು. ಆಗ, ಈಗಿನ ಮಂತ್ರಿಗಳಾದ ಕಡಿದಾಳ ಮಂಜಪ್ಪ ಮತ್ತು ಬಿ. ವೈಕುಂಠ ಬಾಳಿಗಾರ ಹೆಸರು ಮುಂದೆ ಬರುತ್ತವೆ ಶ್ರೀ ಮಂಜಪ್ಪನವರಾದರೋ ಶೃಂಗೇರಿಯಿಂದ ತನ್ನ ಪ್ರಬಲ ಪ್ರತಿಸ್ಪರ್ಧಿ ಭೂಸುಧಾರಣಾ ವಿರೋಧಿ ಸ್ವತಂತ್ರಪಕ್ಷದ ಪ್ರಭಾವಶಾಲೀ ಹುರಿಯಾಳುವನ್ನು ಸೋಲಿಸಿ, ತಾನು ತಂದ ಭೂಸುಧಾರಣಾ ಮಸೂದೆಗೆ ಜನಬಲವಿದೆಯೆಂಬುದನ್ನು ತೋರಿಸಿಕೊಟ್ಟವರು. ಕೆಂಗಲ್ಲರ ನಂತರದಲ್ಲಿ ಮೂರು ತಿಂಗಳ ಅಲ್ಪಾವಧಿಯಲ್ಲಿ ಮಾಜಿ ಮೈಸೂರಿನ ಮುಖ್ಯ ಮಂತ್ರಿಗಳಾಗಿದ್ದವರು ಮಂತ್ರಿಗಳಾಗಿಯೂ ಹಲವು ವರ್ಷಗಳ ಅನುಭವವಿರುವವರು. ನಿಜಲಿಂಗಪ್ಪನವರ ಮಂತ್ರಿಮಂಡಳದಲ್ಲಿಯೂ ಇವರು ಇದ್ದರು.

ಶ್ರೀ ವೈಕುಂಠ ಬಾಳಿಗರು ಬೆಳ್ತಂಗಡಿ ಮತದಾರ ಕ್ಷೇತ್ರದಲ್ಲಿ ಸ್ವತಂತ್ರ ಪಕ್ಷದ ನಾಯಕಮಣಿ ಶ್ರೀ ಜಿನರಾಜ ಹೆಗ್ಡೆಯವರನ್ನು ಪರಾಜಿತಗೊಳಿಸಿ ಆರಿಸಿಬಂದ ಮಂತ್ರಿವರ್ಯರು ನಿಜಲಿಂಗಪ್ಪನವರ ಸಂಪುಟದಲ್ಲಿ ಇವರು ಇದ್ದರು. ಮುಂದೆ ಜತ್ತಿಯವರು ಅಧಿಕಾರ ಪಡೆದಾಗ, ಇವರು ಪದಭ್ರಷ್ಟರಾದರೂ ಉಭಯ ಗುಂಪುಗಳಲ್ಲಿನ ಸಂಬಂಧವನ್ನು ಮಧುರಗೊಳಿಸುವ ಕಾರಣದಿಂದ ಸಚಿವರ ಸಂಖ್ಯೆಯನ್ನು ವಿಸ್ತರಿಸಬೇಕಾಗಿ ಬಂದಾಗ ಇವರು ಮರಳಿ ಪದವಿ ಪಡೆದವರು— ನಿಜಲಿಂಗಪ್ಪನವರ ಬೆಂಬಲಿಗನೆಂದು. ಆದುದರಿಂದ ವಿಧಾನಸಭೆಯ ನಾಯಕತ್ವವನ್ನು ಉಭಯ ಪಂಗಡಗಳ ವಿಶ್ವಾಸಕ್ಕೆ ಪಾತ್ರನಾದವನೇ ವಹಿಸಬೇಕಾಗಿ ಬಂದರೆ, ಅನುಭವವನ್ನು ಕಡೆಗಣಿಸುವುದಿಲ್ಲವಾದರೆ, ಇವರಿಬ್ಬರಲ್ಲಿ ಯಾರಾದರೊಬ್ಬರನ್ನು ಅವಶ್ಯ ಆರಿಸಿಕೊಳ್ಳಬೇಕಾಗುವುದು.

ಮುಖ್ಯ ಮಂತ್ರಿಯು ಯಾರಾಗುವರು ಎಂಬುದು ಮತ್ತು ಆತನು ಆರಿಸುವ ಮಂತ್ರಿಗಳಾಗುವ ಅದೃಷ್ಟವುಳ್ಳ ಸದಸ್ಯರಾರು ಎಂಬುದು ಕುತೂಹಲಕಾರಕವಿದೆಯೆನ್ನಬಹುದಾದರೂ ಅದಕ್ಕಿಂತಲೂ ದೊಡ್ಡ ಚಿಂತೆಯೊಂದು ಕನ್ನಡಿಗರನ್ನು ಕಾಡತೊಡಗಿದೆ. ಶ್ರೀ. ಕೆ. ಸಿ. ರೆಡ್ಡಿಯವರ ಕಾಲದಿಂದಲೂ ಗುಂಪಿನ ರಾಜಕಾರಣಕ್ಕೆ ಹೆಸರಾದ ಮೈಸೂರಿನಲ್ಲಿ ಈ ಚುನಾವಣಾ ನಂತರವಾದರೂ ಗೊಂದಲಕ್ಕೆ ತಡೆಯಾದೀತು ಎಂದು ನಂಬಿದವರು ನಿರಾಶೆಯಿಂದ ನಿಟ್ಟುಸಿರು ಬಿಡುವಂತಾಗಿದೆ. ಕಾಂಗ್ರೆಸ್ಸು ಕಳೆದ ಬಾರಿಗಿಂತ ಈ ಸಾರೆ ೧೨ ಸ್ಥಾನಗಳನ್ನು ಕಳೆದುಕೊಳ್ಳಲು ಮತ್ತು ಮಂತ್ರಿಮಂಡಳಿಯ ಸದಸ್ಯರೂ, ಪ್ರಾದೇಶಿಕ ಕಾಂಗ್ರೆಸ್ಸಿನ ಪದಾಧಿಕಾರಿಗಳೂ ತಮ್ಮ ಸ್ಥಾನವನ್ನು ಕಳೆದುಕೊಳ್ಳುವಂತಾದುದರಲ್ಲಿ ಈ ಗುಂಪಿನ ರಾಜಕಾರಣವೂ ಪ್ರಮುಖ ಪಾತ್ರ ವಹಿಸಿದೆಯೆಂಬುದು ನಿರ್ವಿವಾದ ಇಂತಹ ಮನೋವೃತ್ತಿ ದೂರವಾಗದೆ ರಾಜ್ಯಕ್ಕೆ ನೆಮ್ಮದಿಯಿಲ್ಲ: ಕಾಂಗ್ರೆಸ್ಸಿಗೆ ಹಿತವಿಲ್ಲವೆಂಬುದನ್ನು ಅವಶ್ಯ ತಿಳಿಯಬೇಕು; ಮತ್ತು ನಮ್ಮ ಚುನಾಯಿತ ಕಾಂಗ್ರೆಸ್ ಪ್ರತಿನಿಧಿಗಳೂ ಪ್ರಾದೇಶಿಕ ಕಾಂಗ್ರೆಸ್ ಅಧಿಕಾರಿಗಳೂ ಭಿನ್ನಾಭಿಪ್ರಾಯಗಳನ್ನು ಎತ್ತಿ ಕಟ್ಟಿಡಿಕೊಳ್ಳುವುದರಲ್ಲೇ ಸಂತೋಷಪಡದೆ, ಪಕ್ಷ ಮತ್ತು ರಾಜ್ಯದ ಹಿತದೃಷ್ಟಿಯಿಂದ ಒಮ್ಮನಸ್ಸಿನಿಂದ ಕರ್ತವ್ಯ ಪರಾ

(೧೨ನೇ [illegible] ನೋಡಿರಿ)

ಬಲ್ಗೇರಿಯಾದ ಒಂದು ಕಥೆ—

ತಂದೆ ನುಡಿದ ಭವಿಷ್ಯ

ಮರಗಳಿನ್ನೂ ಬೋಳಾಗಿ, ಕಪ್ಪಾಗಿದ್ದುವು, ಆದರೆ ಹುಲ್ಲು ಮಾತ್ರ ಅಲ್ಲಲ್ಲಿ ನೆಲದ ಮೇಲೆ ಮೂಡಿಬರುತ್ತಿತ್ತು, ೧೯೪೩ರ ವಸಂತ ಕಾಲ ಸಮೀಪಿಸುತ್ತಿತ್ತು.

ಕೆಲವು ದಿನಗಳಿಂದ ಜರ್ಮನರು ಸುಮ್ಮನಿದ್ದರು. ಇಬ್ಬರು ಮನುಷ್ಯರು ಬಿಸಿಲು ಕಾಯಿಸಿಕೊಳ್ಳುತ್ತ ಕುಳಿತಿದ್ದರು.

ಅವರಲ್ಲೊಬ್ಬಾತ ಸಣ್ಣವನು, ಬಿಳಿಗೂದಲು ಮತ್ತು ನೀಲಿಗಣ್ಣುಗಳು, ಆತನು ತನ್ನ ಮೊಣಕೈಯನ್ನೂರಿಕೊಂಡು, ಮುಗುಳ್ನಗುತ್ತಿದ್ದನು.

ಇನ್ನೊಬ್ಬಾತ ಎತ್ತರದಾಳು, ವಿಶಾಲವಾದ ಭುಜಗಳು. ಅನೇಕ ವಾರಗಳ ಕಪ್ಪುಗಡ್ಡ, ಒಂದು ಕಾಲನ್ನು ಮಡಿಸಿಕೊಂಡು, ಜಾಗರೂಕತೆಯಿಂದ ಸಿಗರೇಟನ್ನು ಸುತ್ತಿ ತಯಾರಿಸುತ್ತಿದ್ದಾನೆ.

“ಹೊಗೆಸೊಪ್ಪು ಬೇಕೆ?”— ಎಂದು ಆತನು ತನ್ನ ಮಿತ್ರನನ್ನು ಕೇಳಿದನು ಆತನ ಕಡೆ ನೋಡದೆಯೇ “ಸಿಗರೇಟು ಸುತ್ತಿಕೊಳ್ಳುವುದಕ್ಕೆ ಹೊಗೆಸೊಪ್ಪು ಬೇಕೇನು?”

“ನನಗೆ ಬೇಡವೆನಿಸುತ್ತೆ, ನಾನೇನೋ ಬೇರೆ ಆಲೋಚನೆ ಮಾಡುತ್ತಿದ್ದೇನೆ,— ಎಂದು ಆತನು ಉತ್ತರವಿತ್ತನು.

“ನನ್ನ ಸೋದರನು ಅದನ್ನು ನಿನ್ನೆ ಕಳಿಸಿಕೊಟ್ಟನು. ಬಹು ಕಾಲದಿಂದ ನಾನು ಆತನಿಗೇನೂ ಬರೆದಿಲ್ಲ. ಆದರೆ, ಆತನು ನನಗೊಂದು ಸಣ್ಣ ಚೀಲ ಕಳಿಸಿಕೊಟ್ಟನು. ಸೈನಿಕನು ಧೂಮ್ರಪಾನ ಮಾಡದಿರಲಾರನು. ಒಂದು ಇಡಿ ವಾರ ರೊಟ್ಟಿಯಿಲ್ಲದಿರಬಹುದು, ಆದರೆ ಹೊಗೆಸೊಪ್ಪಿಲ್ಲದೆ ಇರಲಾರನು.,,— ಎಂದು ಆ ಗಡ್ಡದಾತನು ಹೇಳುತ್ತ, ತುಟಿಯಿಂದ ಕಾಗದವನ್ನು ಕಚ್ಚಿದನು.

ಮೊದಲನೆಯ ಸೈನಿಕನು ತನ್ನ ತಲೆಯನ್ನಲ್ಲಾಡಿಸಿದನು. ಆಕಾಶದ ಕಡೆ ದೃಷ್ಟಿ ಹಾಯಿಸುತ್ತ, ಆತ ಅನಿರೀಕ್ಷಿತವಾಗಿ—

“ನನಗೊಬ್ಬ ಮಗನು ಹುಟ್ಟುವನು!, ಎಂದನು.

“ಮಗನೆ?,,

“ಮಗನೆ?“

“ಹೌದು, ಮಗನು”—ಎಂದು ಆತನು ಪುನಃ ಹೇಳ ತೊಡಗಿದನು ಆತನು ಆಕಾಶದ ಕಡೆ ನೋಡುತ್ತಲೇ ಮಾತನಾಡಿದನು.

“ಮಗನೇ ಹುಟ್ಟುವನೆಂದು ಹೇಗೆ ಹೇಳುತ್ತಿ? ಹುಡುಗಿ ಕೂಡ ಆಗಬಹುದು. ನಿನಗೆ ಅಷ್ಟೊಂದು ಖಾತರಿಯಾಗಲು ಕಾರಣವೇನು?”-ಎಂದು ಗಡ್ಡದಾತನು ಕೇಳಿದನು, ತಮ್ಮ ಮಿತ್ರನ ಕಡೆಗೆ ನೋಡಿ, ಗಹಗಹಿಸಿ ನಗುತ್ತ.

ಆತನು ಪುನಃ ನಕ್ಕನು. ಹೆಣ್ಣು ಮಗು ಹುಟ್ಟಬಹುದೆಂದಲ್ಲ. ತಾನು ಜಾಣತನದ ಮಾತನ್ನಾಡಿದುದಕ್ಕಾಗಿ.

ಬಿಳಿಗೂದಲಿನಾತನು ಬೆನ್ನು ತಿರುಗಿಸಿ, ಕೈಗಳನ್ನು ತಲೆಯಡಿಯಲ್ಲಿಟ್ಟುಕೊಂಡು, ಪುನಃ ಆಕಾಶದಕಡೆ ನೋಡತೊಡಗಿದನು. ಆಕಾಶವು ತಿಳಿಯಾಗಿ, ನೀಲಿಯಾಗಿತ್ತು. ತರುವಾಯ ಆತನು ಕೈಕಾಲು ಚಾಚಿಕೊಂಡು ಉತ್ತರವಿತ್ತಾಗ ಆತನ ಗೆಳೆಯನು ನಗು ನಿಲ್ಲಿಸಿದನು.

“ಇಲ್ಲ, ಕಾರ, ಅದು ಹಾಗಲ್ಲ. ಮಗನೇ ಹುಟ್ಟುವನು! ನಾನು ಬಯಸಿದ್ದು ಮಗನನ್ನೇ! ಮಗನೇ ಹುಟ್ಟುವುದು ಖಂಡಿತ!”—ಎಂದನು.

ಕಾರ ತನ್ನ ಸಿಗರೇಟನ್ನು ಹೊತ್ತಿಸಿಕೊಂಡನು. ಕಾಲು ಚಾಚಿಕೊಂಡು, ತನ್ನ ಮೊಣಕೈಯ ಮೇಲೆ ಬಾಗಿದನು, ತರುವಾಯ ಹೊಗೆಯನ್ನು ಹೊರಬಿಡುತ್ತ, ಸಂತೋಷದಿಂದ ಕಣ್ಣು ಮುಚ್ಚಿಕೊಂಡು..

“ಆಗ! ಈ ಹೊಗೆಸೊಪ್ಪು ಚೆನ್ನಾಗಿದೆ, ಅದು ಹೃದಯದ ಮೇಲೆ ಅಂಜನದಂತೆ ಬೀಳುತ್ತದೆ....ಹಾಗಾದರೆ, ಮಗನೇ ಹುಟ್ಟುತ್ತಾನೆಯೋ?“

ಆತನು ಹುಬ್ಬುಗಂಟು ಹಾಕಿಕೊಂಡನು. ಹಳೆಯ ಕಾಲದ ಮರದ ಬುಡದ ಬಳಿಯಲ್ಲಿ ಬೆಳೆದಿದ್ದ ಹುಲ್ಲಿನಕಡೆ ಆತನು ನೋಡಿದನು.

“ಅವನು ಎಂತಹ ಮಗನಾಗುವನೆಂಬುದನ್ನು ನೀವೇ ನೋಡುವಿರಿ! ಅವನಿಗೆ ಜ್ಲತಾನ್ ಎಂದು ಹೆಸರಿಡಬೇಕೆಂದು ನಾನು ನನ್ನ ಪತ್ನಿಗೆ ಬರೆದಿದ್ದೇನೆ. ಜ್ಲತಾನ್ ಎಂದರೆ ಚಿನ್ನದ ಮನುಷ್ಯ ಎಂದು ಅರ್ಥ!?

ಗಡ್ಡದ ಗೆಳೆಯನು ಆತನ ಕಡೆ ನೋಡಿದನು. ಆತನಿನ್ನೂ ಆಕಾಶದ ಕಡೆಯೇ ನೋಡುತ್ತಿದ್ದನು. ಆತನ ಕಣ್ಣುಗಳು ಹೊಳೆಯುತ್ತಿದ್ದುವು. ಸಂತಸದಿಂದ ಮುಗುಳ್ನಗುತ್ತ ಆತನು ಮುಂದುವರಿಸಿದನು ತನ್ನ ಮಾತನ್ನು:—

“ಅವನು ಬೆಳೆದಾಗ ನಾನು ಅವನನ್ನು ಪಾಠಶಾಲೆಗೆ ಕಳಿಸುವೆನು: ನಮ್ಮ ತಂದೆಯು ಸಹ ನನ್ನನ್ನೊಮ್ಮೆ ಹಾಗೆಯೇ ಶಾಲೆಗೆ ಕಳಿಸಿದ್ದರು. ಏನಾದರೇನು? ಎಲ್ಲ ಬಗೆಯ ಮರಗಳಿಂದಲೂ ಧೂಮ್ರಪಾನಕ್ಕಾಗಿ ಪೈಪ್ ತಯಾರಿಸಲಾಗದು. ಇದು ನಿರರ್ಥಕ ಪ್ರಯತ್ನವೆಂದು ಗ್ರಹಿಸಿದೊಡನೆಯೇ ಆತನು ಅದನ್ನು ಬಿಟ್ಟುಬಿಟ್ಟನು........ಆದರೆ, ನನ್ನ ಮಗನು ಜ್ಲತಾನ್ ಬುದ್ಧಿವಂತನಾಗುವನು, ನಾನು ಅವನನ್ನು ಮಹಾ ಮೇಧಾವಿಯಾಗಿ ಮಾಡುವೆನು ಕಾರ!

ಗಡ್ಡದ ಸೈನಿಕ ಕಾರ ಈ ಮಾತುಗಳನ್ನು ಕೇಳುತ್ತ, ನಿಧಾನವಾಗಿ ತನ್ನ ಸಿಗರೇಟನ್ನು ಹೊತ್ತಿಸಿಕೊಂಡನು. ಆತನ ಕಣ್ಣುಗಳು ಮರಗಳ ಮೇಲೆ ದೃಷ್ಟಿ ಹಾಯಿಸುತ್ತಿದ್ದುವು. ಬೋಳುಮರಗಳ ಮೇಲೆ ಎತ್ತರದಲ್ಲಿ ಬಿಳಿಯ ಮೋಡಗಳು ಬಲ್ಗೇರಿಯದ ಕಡೆಗೆ ತೇಲಿ ಬರುತ್ತಿದ್ದುವು. ಸಂತಸಗೊಂಡಿದ್ದ ಗೆಳೆಯನ ಮಾತುಗಳನ್ನು ಆತನು ಹೇಳುತ್ತಿದ್ದಂತೆ. ತನ್ನ ಮೊದಲ ಗಂಡು ಮಕ್ಕಳು ಹುಟ್ಟಿದಾಗ ತನಗುಂಟಾಗಿದ್ದ ಸಂತೋಷದ ಕುರಿತು ಆಲೋಚಿಸಿದನು, ಕಾರ ಅದು ಸುಮಾರು ಹತ್ತು ವರ್ಷಗಳ ಹಿಂದಿನ ಮಾತು. ಅದರೂ ಪ್ರತಿಯೊಂದು ವಿವರಣೆಯೂ ಆತನಿಗೆ ನೆನಪಿತ್ತು..... ಅಸೂಯಾಭರಿತನಾಗಿ ಆತನು ಗೆಳೆಯನ ಕಡೆ ನೋಡಿದನು.

“ಕಾರ! ಗಂಡು ಮಗನನ್ನು ಪಡೆಯುವುದು ಮಹತ್ತರ ವಿಷಯ ಅಲ್ಲವೆ? ,,— ಎಂದು ಆತನು ಹೇಳಿದನು. ತನ್ನ ಮೊಣಕೈ ಊರಿಕೊಂಡು ಮೇಲಕ್ಕೇಳುತ್ತ, ಸಂಗಾತಿಯನ್ನು ದಿಟ್ಟಿಸಿ ನೋಡಿದನು.

ಕಾರ ತಕ್ಷಣವೇ ಉತ್ತರ ಕೊಡಲಿಲ್ಲ. ಆತನು ತನ್ನ ಹುಬ್ಬುಗಳನ್ನು ಏರಿಸಿ, ಬಹು ಕಾಲದ ಹಿಂದೆಯೇ ಈ ಅನುಭವಗಳೆಲ್ಲವನ್ನೂ ಪಡೆದವನಂತೆ ಇಂತೆಂದನು;

“ನಿಜ ಹೇಳಬೇಕಾದರೆ. ಅದು ಮಾನವ ಜೀವನದಲ್ಲಿ ಅತ್ಯಂತ ಹರ್ಷದ ಸಮಯ. ನವ ಜೀವವೊಂದನ್ನು ನೀನೇ ನಿರ್ಮಿಸಿದ್ದೀಯೆಂಬ ಭಾವನೆ! ,

ಬಿಳಿ ಕೂದಲಿನ ವ್ಯಕ್ತಿಯು ಬೆನ್ನು ತಿರುಗಿಸಿದನು. ಪುನಃ ತನ್ನ ಕೈಗಳನ್ನು ತಲೆಯಡಿಯಲ್ಲಿಟ್ಟುಕೊಂಡು, ಮುಗುಳ್ನಗುತ್ತ. ಬಾನಂಗಳದ ಕಡೆ ದಿಟ್ಟಿಸಿ ನೋಡತೊಡಗಿದನು.

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA KANNADA WEEKLY, UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾದಾರರನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

“ನಚಿಕೇತ”ರ
ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 6½ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920



ಹೊಸ ವರಮಾನ ತೆರಿಗೆಯ ಕಾನೂನು

ಲೋಕಸಭೆಯು ಕಳೆದ ಅಧಿವೇಶನದಲ್ಲಿ ಹೊಸ ವರಮಾನ ತೆರಿಗೆ ವಿಧೇಯಕವನ್ನು ಅನುಮೋದಿಸಿತು. ವರಮಾನ ತೆರಿಗೆ ಕಾನೂನಿನ ಅಭಿಯೋಜನೆಯಲ್ಲಿ ಕಳೆದ ೧೦೦ ವರ್ಷಗಳಲ್ಲಿ ನಡೆಸಿದ ಪ್ರಯೋಗ ಮತ್ತು ಅನುಭವವನ್ನು ಈ ವಿಧೇಯಕವು ಒಂದೇ ಶಾಸನದಲ್ಲಿ ಅಳವಡಿಸುತ್ತದೆ. ತೆರಿಗೆದಾರರು ಕಾನೂನಿನ ಪ್ರಕಾರ, ತಮ್ಮ ಹಕ್ಕು ಮತ್ತು ಬಾಧ್ಯತೆಗಳ ಬಗೆಗೆ ಸ್ಪಷ್ಟವಾದ ಕಲ್ಪನೆಯನ್ನು ಪಡೆಯುವಂತಹ, ಆಡಕವಾದ ಶಾಸನವು ಈಗ ನಮ್ಮ ದೇಶದಲ್ಲಿ ಪ್ರಥಮತಃ ರೂಪುಗೊಂಡಿದೆ, ೧೮೬೦ರಲ್ಲಿ ಭಾರತದಲ್ಲಿ ವರಮಾನ ತೆರಿಗೆ ಶಾಸನವು ಜಾರಿಗೆ ಬಂದಿತು. ಅಲ್ಲಿಂದೀಚಿನ ದೀರ್ಘಾವಧಿಯಲ್ಲಿ ಅನೇಕ ಅನುಭವಗಳು ಬಂದಿವೆ. ಆರಂಭದ ದಿನಗಳಲ್ಲಿ ತೆರಿಗೆಯ ದರವು ಕಡಿಮೆಯಿತ್ತು; ಈ ಶಾಸನವನ್ನು ಜಾರಿಗೆ ತರುವ ಆಡಳಿತೆ ಯಂತ್ರ ವ್ಯವಸ್ಥೆಯೂ ಸುಲಭವಾಗಿತ್ತು ಆದರೆ, ಇಂದು, ವರಮಾನ ತೆರಿಗೆ ಕಾನೂನು, ಆಧುನಿಕ ಕೈಗಾರಿಕಾ ಸಮುದಾಯದ ಎಲ್ಲಾ ಆರ್ಥಿಕ ಚಟುವಟಿಕೆಗಳಿಂದಲೂ ಉತ್ಪನ್ನವಾಗುವ ವರಮಾನಗಳಿಗೂ ಅದು ವ್ಯಾಪಕವಾಗುವಂತಿರಬೇಕಾಗಿದೆ. ಈ ಪ್ರತಿಯೊಂದು ಆರ್ಥಿಕ ಚಟುವಟಿಕೆಗಳೂ ತಮ್ಮದೇ ವಿಶಿಷ್ಟವಾದ ಸ್ವಭಾವಗಳನ್ನ ಪಡೆದಿರುವುದರಿಂದ ಅವುಗಳಿಗೆ ವಿಶೇಷ ಕ್ರಮಗಳನ್ನು ಅನ್ವಯಿಸಬೇಕಾಗುತ್ತದೆ. ಸಂಬಳ ತೆಗೆದುಕೊಳ್ಳುವ ವರ್ಗದವರು ಮಾತ್ರವೇ ವರಮಾನ ತೆರಿಗೆಯನ್ನು ಕೊಡುವುದಿಲ್ಲ. ವಿವಿಧ ವರ್ಗದ ವ್ಯಕ್ತಿಗಳು ಮತ್ತು ಸಂಸ್ಥೆಗಳ ಬಗೆಗೆ ಪ್ರತ್ಯೇಕ ಪ್ರತ್ಯೇಕವಾಗಿ ತೆರಿಗೆಯನ್ನು ವಿಧಿಸಬೇಕಾಗುತ್ತದೆ. ಅಸಂಖ್ಯಾತ ಬಗೆಯ ವರಮಾನಗಳಿಗೆ ವ್ಯಾಪಕವಾಗುವಂತಹ ಶಾಸನವು, ಬಿಗಿಯಾಗಿಯೂ ವ್ಯಾಪಕವಾಗಿಯೂ ಸಂಕ್ಲಿಷ್ಟವಾಗಿಯೂ ಇರದ ವಿಧಿಯಿಲ್ಲ. ಈಗ ತೊಂದರೆಯಿಲ್ಲದೆ ತೆರಿಗೆಯನ್ನು ಕೊಡಬಹುದು ಎಂದು ಹೇಳಲಾಗದಿದ್ದರೂ, ಹೊಸ ಶಾಸನವು ಕಡಿಮೆ ತೊಂದರೆಯಿಂದ ತೆರಿಗೆಯನ್ನು ಕೊಡುವುದಕ್ಕೆ ಸಹಾಯಕವಾಗಿದೆ. ದೇಶದ ಪ್ರತಿಯೊಬ್ಬ ನಾಗರಿಕನು, ಎಲ್ಲರ ಅನುಕೂಲಕ್ಕಾಗಿ ತೆರಿಗೆಯನ್ನು ಕೊಡುವ ಹೊಣೆಗೆ ಒಳಗಾಗಿರುವನು. ಆದರೆ ಮಾನವ ಸ್ವಭಾವಕ್ಕನುಗುಣವಾಗಿ, ಅತ್ಯಂತ ಸತ್ಯಸಂಧನಾದ ತೆರಿಗೆದಾರನೂ ಸಹ ಗೊಣಗಿಕೊಂಡೇ ತೆರಿಗೆಯನ್ನು ಕೊಡುವನು.

ಆಧುನಿಕ ಪ್ರಜಾತಂತ್ರ ಸಮಾಜದಲ್ಲಿ ತೆರಿಗೆಗಳು ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗುವ ಹಣವನ್ನು ಒದಗಿಸುವ ಸಂಪನ್ಮೂಲಗಳಷ್ಟೇ ಅಲ್ಲ; ಇಡೀ ಜನ ಸಮುದಾಯದ ಸಾಮಾಜಿಕ ನೀತಿಯನ್ನು ಅನುಷ್ಠಾನಕ್ಕೆ ತರುವ ಸಾಧನವೂ ಆಗಿರುವುವು. ಭಾರತ ದೇಶವನ್ನು ಆರ್ಥಿಕವಾಗಿ ಬಲಪಡಿಸುವ ದೃಷ್ಟಿಯಿಂದ, ಪಂಚವಾರ್ಷಿಕ ಯೋಜನೆಗಳ ಮೂಲಕ, ಅಗಾಧ ಪ್ರಮಾಣದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ. ಇದಕ್ಕಾಗಿ ತೆರಿಗೆಗಳನ್ನು ಎತ್ತದೆ ಉಪಾಯವಿಲ್ಲ. ಅದೇ ಸಮಯದಲ್ಲಿ ತೆರಿಗೆಯ ಕಾರ್ಯನೀತಿಯಿಂದ ಆಗುವ ಸಾಮಾಜಿಕ ಪರಿಣಾಮವು, ಸಂವಿಧಾನದಲ್ಲಿ ಉಲ್ಲೇಖವಾಗಿರುವ ಸರ್ಕಾರದ ಕಾರ್ಯನೀತಿಯ ಪ್ರತ್ಯಕ್ಷ ತತ್ವಗಳಲ್ಲಿ, ಅತಿ ಹೆಚ್ಚಿನ ಮಹತ್ವವನ್ನು ಗಳಿಸುತ್ತದೆ. ಈ ಪ್ರತ್ಯಕ್ಷ ತತ್ವಗಳಲ್ಲಿ ಎರಡು ತತ್ವಗಳು ಸರ್ಕಾರದ ಕಾರ್ಯನೀತಿಯು ವರಮಾನ ಮತ್ತು ಐಶ್ವರ್ಯದ ನಡುವಿನ ಅಂತರವನ್ನು ಕಡಿಮೆ ಮಾಡುವ ಹಾಗೂ ಆರ್ಥಿಕ ಶಕ್ತಿಯನ್ನು ಆದಷ್ಟು ಸಮವಾಗಿ ಹಂಚುವಂತಿರಬೇಕೆಂದು ಸೂಚಿಸುತ್ತವೆ.

ಸ್ವಾತಂತ್ರ್ಯಕ್ಕೆ ಮೊದಲು ತೆರಿಗೆಯನ್ನು ಮುಖ್ಯವಾಗಿ ಕಂದಾಯದ ಉದ್ದೇಶದಿಂದ ವಿಧಿಸಲಾಗುತ್ತಿತ್ತು. ಆದ್ದರಿಂದ ಅವಕ್ಕೆ ನಿರ್ದಿಷ್ಟವಾದ ಮಿತಿಯಿತ್ತು. ಸ್ವಾತಂತ್ರ್ಯ ನಂತರ ತೆರಿಗೆಯ ಕಾರ್ಯನೀತಿ ಮತ್ತು ತೆರಿಗೆ ಶಾಸನಗಳನ್ನು ಉತ್ಪಾದನೆ ಹಾಗೂ ಸಾಮಾಜಿಕ ಆರ್ಥಿಕ ಉದ್ದೇಶಗಳಿಗೆ ಸಹಾಯಕವಾಗಿರುವಂತೆ ರೂಪಿಸಲಾಯಿತು.

ಪ್ರಥಮ ಪಂಚವಾರ್ಷಿಕ ಯೋಜನೆಯ ಸಮಯದಲ್ಲಿ ತೆರಿಗೆ ವಿಧಾನವನ್ನು ಸುಧಾರಿಸುವ ಕೆಲಸ ಆರಂಭವಾಯಿತು. ದ್ವಿತೀಯ ಯೋಜನೆಯ ಆರಂಭದಲ್ಲಿ ಪ್ರತ್ಯಕ್ಷ ತೆರಿಗೆ ಪದ್ಧತಿಗೆ, ಸಮಗ್ರ ರಚನೆಯ ಮೂಲಕವಾಗಿ, ಒಂದು ವೈಜ್ಞಾನಿಕ ರೂಪವನ್ನು ಕೊಡಲಾಯಿತು. ದ್ವಿತೀಯ ಯೋಜನೆಯು ಮುಂದುವರಿದಂತೆ, ಅಪ್ರತ್ಯಕ್ಷ ತೆರಿಗೆ ಕಾರ್ಯ ಯೋಜನೆಯನ್ನು ಕೇಂದ್ರ ಎಕ್ಸೈಜ್ ಮೂಲಕವಾಗಿ ವಿಸ್ತಾರವಾದ ಬುನಾದಿಯ ಮೇಲೆ ರೂಪಿಸಲಾಯಿತು.

ಪ್ರತ್ಯಕ್ಷ ತೆರಿಗೆಯ ಸಮಗ್ರ ರಚನೆಯಲ್ಲಿ ಅತ್ಯಂತ ಮುಖ್ಯವಾದುದು ವರಮಾನ ತೆರಿಗೆ ಅದಕ್ಕೆ ಸೇರಿಕೊಂಡಂತೆ, ಬಂಡವಾಳ ಗಳಿಕೆಯ ಮೇಲೆ ತೆರಿಗೆ, ಐಶ್ವರ್ಯದ ಮೇಲೆ, ತೆರಿಗೆ ವೆಚ್ಚದ ಮೇಲೆ ತೆರಿಗೆ, ಚಳುವಳಿಯ ಮೇಲೆ ತೆರಿಗೆ, ಮತ್ತು ಆಸ್ತಿ ತೆರಿಗೆ ಇರುವುವು. ಹೊಸ ವರಮಾನ ತೆರಿಗೆ ಶಾಸನವನ್ನು, ಕಾನೂನು ಕಮೀಷನ್ ಮತ್ತು ಪ್ರತ್ಯಕ್ಷ ತೆರಿಗೆ ಆಡಳಿತ ವ್ಯವಸ್ಥಾ ವಿಚಾರಣ ಸಮಿತಿಯ ವರದಿಗಳ ಮೇಲೆ ಹಾಗೂ, ಈಗಿರುವ ಶಾಸನದ ಅಭಿಯೋಜನೆಯ ಕಾಲದಲ್ಲಿ ಪಡೆದುಕೊಂಡ ಅನುಭವಗಳ ಬೆಳಕಿನಲ್ಲಿ ಸಿದ್ಧಪಡಿಸುವಾಗ (ಅದನ್ನು ಖಚಿತವಾಗಿ ಹೇಳುವುದಾದರೆ ಇದ್ದ ಶಾಸನವನ್ನು ಪುನರ್-ಪರಿಶೀಲಿಸಿದಾಗ) ಅಸ್ಪಷ್ಟವಾದ, ಸಂದಿಗ್ಧವಾದ ಭಾಗಗಳನ್ನು ತೆಗೆದುಹಾಕಿ ತಿಳಿಯಾದ ಭಾಷೆಯಲ್ಲಿ ಬರೆಯುವುದಕ್ಕೆ ಗಮನಕೊಡಲಾಗಿದೆ.

ಉದ್ದುದ್ದ ವಾಕ್ಯಗಳನ್ನು ಉದ್ದುದ್ದ ನಿಬಂಧನೆಗಳನ್ನು ಸಣ್ಣ ಸಣ್ಣ ವಾಕ್ಯಗಳು ಮತ್ತು ನಿಬಂಧನೆಗಳನ್ನಾಗಿ ವಿಭಾಗಿಸಿ, ಪುನರ್ - ವ್ಯವಸ್ಥೆ ಮಾಡಲಾಗಿದೆ.

ಹೊಸ ಶಾಸನವು ವಿವಿಧ ವಿಷಯದಲ್ಲಿ ವ್ಯಾಪಕವಾದ ವಿನ್ಯಾಸವನ್ನು ಹೊಂದಿರುವುದಲ್ಲದೆ, ಹಿಂದಿರುವುದಕ್ಕಿಂತಲೂ ಸರಳವಾಗಿದ್ದು ಓದುವುದಕ್ಕೆ ಸುಲಭವಾಗಿದೆ. ಅನೇಕ ಒದಲಾವಣೆಗಳನ್ನು ಹೊಸ ಶಾಸನದಲ್ಲಿ ಅಳವಡಿಸಲಾಗಿದೆ. ಈ ಬದಲಾವಣೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದು

೧) ತೆರಿಗೆ ಗೊಳಪಡುವವರು ಗ್ರಹಿಸಲು ಕಷ್ಟವೆಂದು ಅಭಿಪ್ರಾಯಪಟ್ಟ ಭಾಗಗಳನ್ನು ವಿವರಿಸುವ ಗುರಿಯುಳ್ಳವು.

೨) ಈ ಶಾಸನವನ್ನು ಜಾರಿಗೆ ತರುವುದಕ್ಕೆ ಉತ್ತಮವಾದ ವಿಧಾನವನ್ನು ಒದಗಿಸುವ ಗುರಿಯುಳ್ಳವು.

೩. ತೆರಿಗೆಯನ್ನು ತಪ್ಪಿಸಿಕೊಳ್ಳುವುದು ಮತ್ತು ವರಮಾನವನ್ನು ಮುಚ್ಚಿಡುವುದು ಈ ಪ್ರಯತ್ನಗಳ ಮೇಲೆ ಕ್ರಮಕೈಗೊಳ್ಳುವ ಗುರಿಯುಳ್ಳವು.

ಹೊಸದಾಗಿ ತಲೆದೋರುತ್ತಿದ್ದ ಸಮಸ್ಯೆಯೆಂದರೆ, ಈ ಶಾಸನದ ಕಾರ್ಯಾಚರಣೆ ನಿಧಾನವಾಗುವುದು. ಆದಾಗ್ಯೂ, ಹೊಸ ಶಾಸನವು ತೆರಿಗೆದಾರರಿಗೆ ಅನುಕೂಲವಾಗಿ ಮುಂದುವರಿಯುವುದೆಂದು ಎಲ್ಲ ಕಡೆಯಿಂದಲೂ ಅಭಿಪ್ರಾಯ ಬಂದಿದೆ. ತೆರಿಗೆಯನ್ನು ಸಂಗ್ರಹಿಸುವವರ ವಿರುದ್ಧ ಉಪಯೋಗಿಸುತ್ತಿರುವ, ಅನೇಕ ಬಿರುನುಡಿಗಳನ್ನು ಮುಂದೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಆಡಬೇಕಾಗುವುದೆಂದು ನಿರೀಕ್ಷಿಸಲಾಗಿದೆ.

ಇನ್ನು ಮುಂದೆ ಸತಿಪತಿಗಳು ಕಾನೂನು, ವೈದ್ಯಕೀಯ ಮುಂತಾದ ಒಂದೇ ವೃತ್ತಿಯನ್ನು ಕೈಗೊಂಡಿದ್ದರೆ ಅವರ ಪ್ರತ್ಯೇಕವಾದ ವರಮಾನವನ್ನು ವರಮಾನ ತೆರಿಗೆ ವಿಧಿಸುವ ಸಲುವಾಗಿ ಒಟ್ಟುಗೂಡಿ

(೧೦ನೇ ಪುಟ ನೋಡಿರಿ)

ಪಶ್ಚಿಮ ಬಂಗಾಳದ ಸಿಂಗೂರಿನ ಕುಟುಂಬ ಯೋಜನಾ ಕೇಂದ್ರದಲ್ಲಿವ-ಹಿಳಾ ವೈದ್ಯರೊಬ್ಬರು ಗ್ರಾಮೀಣ ಮಹಿಳೆಯೊಬ್ಬಳಿಗೆ ನಕ್ಷೆಗಳ ಸಹಾಯದಿಂದ ಕುಟುಂಬ ಯೋಜನೆಯ ಆವಶ್ಯಕತೆಗಳನ್ನು ತಿಳಿಸಿ ಹೇಳುತ್ತಿರುವುದನ್ನು ಈ ಚಿತ್ರದಲ್ಲಿ ನೋಡಿರಿ

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;
ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ
ಆಡಳಿತ ಆಫೀಸು: ಮಂಗಳೂರು-1.

ಭವ್ಯ ಕಟ್ಟಡಗಳಿಗೆ ಬೇಕಾಗುವ—
ಕಿಟಕಿ-ಬಾಗಿಲು, ವೆಂಟಿಲೇಟರು
ರೋಲಿಂಗ್ ಶಟರು, ಗೇಟುಗಳಿಗೆ

ಶಾಸ್ತ್ರಿ & ಕೊ
ಮಂಗಳೂರು—1

ಆಫೀಸು-ಮನೆಗಳಿಗೆ ಬೇಕಾಗುವ—
ವಿವಿಧ ಕಪಾಟುಗಳು, ಮೇಜು,
ಕುರ್ಚಿಗಳು, ಮಂಚ, ಸೋಫಾಗಳಿಗೆ

ಧರ್ಮದ ಮರೆಯಲ್ಲಿ

ಮಠ ದೇವಾಲಯಗಳು

ಶ್ರೀ ವೆಂ. ಅಡಿಗ

'ದೇವಾಲಯ' ಅಂದರೆ ದೇವನಿರುವ ಸ್ಥಳ. ದೇವನು ಎಲ್ಲೆಲ್ಲೂ ಇರಬಹುದು. ಹಾಗೆ ಊರೆಲ್ಲ ಅಲೆಯುವ 'ಅವನನ್ನು' ಭಕ್ತಜನರ ಉಪಕಾರಕ್ಕಾಗಿ ಮಂತ್ರ-ತಂತ್ರಗಳ ಸಹಾಯದಿಂದ, ಬರಮಾಡಿಸುವುದು, ಅವನಿಗೆ ಮೆಚ್ಚುಗೆಯಾಗುವಂತೆ, ದಿನವೂ ಅವನ ಸಾಹಸಮಯ ಜೀವನವನ್ನು ಹಾಡಿ ಹೊಗಳುವ ಹಾಗೆ ಏರ್ಪಡಿಸುವುದು. ಅವನಂತೆಯೇ ಸ್ಥಿರವೂ ಭದ್ರವೂ ಆದ, ಅವನ ಗುಡಿ ಪ್ರಾಕಾರಗಳಲ್ಲೆಲ್ಲ ಅವನು ಬಯಸಿದ, ಅನುಭವಿಸಿದ್ದ, ಸನ್ನಿವೇಶ ವಿಷಯಗಳನ್ನು ಚಿತ್ರಿಸುವುದು. ಅವನ ಒಲವಿಗೆ ಅಷ್ಟು ಕಾಲದಿದ್ದರೆ, ಅವನನ್ನು ಸಿಂಗರಿಸಿ, ಉತ್ಸವಗರೆದು, ಮೆರೆಯಿಸಿ, ಮಲಗಿಸಿ, ತೂಗುವುದು ಇದು ನಮ್ಮಲ್ಲಿ ದೇಗುಲದ ಆಗುಹೋಗುಗಳ ಸ್ಥಿತಿ.

'ಮಠ' ಎಂದರೆ ಮೇಲಿನಂತಿರುವ ಸ್ಥಳದಲ್ಲಿ, ಆದಕ್ಕೂ ತುಸು ಮಿಗಿಲಾಗಿ, ನಮ್ಮಲ್ಲಿನ ಒಬ್ಬರನ್ನು ಆರಿಸಿ, ಶಾಸ್ತ್ರನಿಯಮ ಸಂಪ್ರದಾಯದಂತೆ ಅಲಂಕರಿಸಿ, ಗೌರವಿಸಿದ ಹಾಗೆ 'ದೇವತನ್ನ'ಕೊಡಿಸುವುದು ದೇವತ್ವವನ್ನು ಹೊಂದಿದ ಮೇಲೆ, ನಾವು ಸಲ್ಲಿಸುವ ಪೂಜೆ ಪುರಸ್ಕಾರಗಳ ಗೊಡವೆಯಾಗಲೀ, ಅಸ್ತಿತ್ವದ ಸಂಬಂಧಗಳ ಚಿಂತೆಯಾಗಲೀ ಇರಬಾರದು—ಎಲ್ಲವನ್ನು ಶ್ರೀಮನ್ನಾರಾಯಣನಿಗೆಂದು ಅರ್ಪಿಸಬೇಕು. ಅವನ ಪ್ರೇರಣೆಯಂತೆ, ಧ್ಯಾನ.....ಚಿಂತನ......ಯೋಗಾದಿಗಳಲ್ಲಿ ಮೈಮರೆಯಬೇಕು.

ಅಂತಹ ಸಿದ್ಧ ಪುರುಷರ ಸೇವೆಯಿಂದ ಎಷ್ಟೋ ಜನರು ತಮ್ಮ ಪಾಪ ಧನ.... ದೇಹಾದಿಗಳ ಕೊಳೆಯನ್ನು ಕಳೆದುಕೊಂಡು ಪುನೀತರಾಗುತ್ತಾರೆ? ಕೆಲವರು ಜೀವಂತ 'ಸ್ವರ್ಗ'ಕ್ಕೇರುತ್ತಾರೆ? ಮತ್ತೆ ಕೆಲವರು ಸತ್ತು ಬದುಕುತ್ತಾರೆ? ಇದೆಲ್ಲ ಶ್ರೀಮಠದ ಅನುಗ್ರಹದ ಕತೆಯಾದಂತೆ, ವಿಗ್ರಹದ ಪರಾತ್ಪರ ಪವಾಡಗಳ ವಿಚಾರ ಇನ್ನೂ ಹಲವು ಇವೆ.

ಬೇರೆ ಕೆಲವು ಪರಕೀಯ ಧರ್ಮ ಪಂಥದವರಂತೆ, ನಮ್ಮಲ್ಲಿ ದೇವಗುರು ಮಂದಿರಗಳಿಗೆ ವಾರವೂ, ವರ್ಷವೂ ಹೋಗಿ ಬರಬೇಕೆಂಬ ತೊಂದರೆಯಿಲ್ಲ.........ಕೋರ್ಟು—ಕಛೇರಿ, ಪರೀಕ್ಷೆಗಳ ಫಲಿತಾಂಶಗಳನ್ನು ಬದಲಾಯಿಸಲಿಕ್ಕೊ, ಹೆಣ್ಣು ಹಣಗಳ ಅಪೇಕ್ಷೆಯನ್ನು ಕೇಳಿಕೊಳ್ಳುವುದಕ್ಕೊ, ಬಂದ ರೋಗ-ರುಜಿನಗಳನ್ನು ಪರಿಹರಿಸಿಕೊಳ್ಳಲಿಕ್ಕೊ, ಅಲ್ಲಿಗೆ ಹೋಗಿ ಬಂದರೆ ಸರಿ—ಅಲ್ಲಿ ಹಣ್ಣುಕಾಯಿಯಿಂದ ಹಿಡಿದು ಉತ್ಸವ ಮೆರವಣಿಗೆಯ ತನಕ 'ಅವನನ್ನು" ಕೊಂಡಾಡುವುದಕ್ಕೆ ಅವಕಾಶವಿದೆ. ದೇವನು ಸರ್ವಶಕ್ತನು. ಭಕ್ತಜನರು ಬೇಕಾದ್ದನ್ನು ಮಾಡಿಸಿಕೊಂಡು ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳಬಹುದು.

ಆದರೆ ಒಂದು—, ಎಲ್ಲರಿಗೂ ಒಬ್ಬನೇ ದೇವನಿದ್ದ ಕಡೆಯಲ್ಲಿ ಭಯವಿಲ್ಲ. ಆವರವರ ಭಕ್ತಿಕಾಣಿಕೆಗೆ ತಕ್ಕಂತೆ ದಾಮಾಶಯವಾಗಿ ಅವನು ಪೂರೈಸಬಲ್ಲನು. ಎಲ್ಲಿಯಾದರೂ ಬೇರೆ ಬೇರೆ ಜನರಿಗೆ, ಬೇರೆ ಬೇರೆ ದೇವನಾದರೆ ತೀರಿತು—ಗೆದ್ದ ದೇವನು ಸೋತದೇವನನ್ನು ತಿಂದುಹಾಕಿ, ಅವನ ನಂಬಿದವರನ್ನೂ ಕಾಡಿಸತೊಡಗುವುದು. ಇದಕ್ಕೆ ಗತ ವೈಭವವನ್ನು ತೊಳೆದುಳಿದ 'ಹಾಳು (ಉ) ಹಂಪೆಯೇ" ಸಾಕ್ಷಿ?

ನಮ್ಮಂತೆಯೇ, ದೇವ ಧರ್ಮನೀತಿಗಳಿಗೂ ಕಾಲಗತಿ, ಇತಿಮಿತಿಗಳು ಇರಬಹುದೇನೊ? ಒಮ್ಮೆ ಬುದ್ಧ ನೀತಿ ಮೆರೆಯಿತು. ಆ ಮೇಲೆ ಅದನ್ನು ಹಿಂದೂ ಧರ್ಮವಿರೋಧಿಸಿತು. ಹಿಂದುಗಳಲ್ಲೇ ಹಲವು ಒಳಭೇದಗಳು! 'ಗುಪ್ತ'ರೇ ಮೊದಲಾದವರು ವಿಷ್ಣು ಪಂಥವನ್ನು ಮೆರೆದಾಡಿಸಿದಂತೆ, 'ಪಲ್ಲವ"ರೇ ಮೊದಲಾದವರ ನೆರವಿನಿಂದ ಶೈವ ಪಂಥವು ಮೇಲೆ ಬಂತು.... ಅದರ ಮೇಲೆ ಮುಸ್ಲಿಮರ ಹೊಡೆತ—ಆ ಮೇಲೆ ಮತ್ತೆ ಹಲವರ ಕುಣಿತ – ಹೀಗೆ ಮುಂದುವರಿಯುತ್ತಿದೆ.

ಅಂತೂ....ದೇವ ಧರ್ಮಗಳ ಹೆಸರಿನಲ್ಲಿ ಹೇಳಿತೀರದಷ್ಟು ಘಟನೆಗಳು ನಡೆದು ಹೋದವು. ದೇಗುಲಗಳು ಹುಟ್ಟಿದಂತೆ, ದೇಗುಲಗಳು ಅಡಗಿದವು! 'ಕಲೆ'ಗಳು ಬೆಳೆದ ಹಾಗೆ ಕೊಳೆಗಳು ಮುತ್ತಿಕೊಂಡವು

...ಆ ರೀತಿಯ ಅವಗಡ ಹೊಡೆತಗಳನ್ನು ತಪ್ಪಿಸಿಕೊಂಡು ನಮ್ಮಲ್ಲಿ ಇಂದೂ ಅದೆಷ್ಟೋ ದೇಗುಲಗಳು ಬದುಕಿ ನಿಂತಿವೆ? ಆದರೆ ಆ ಹಿಂದಿನ ಪೂಜೆ ಪುರಸ್ಕಾರಗಳು ಸಲ್ಲುತ್ತಿರುವುದು ಬರಿಯ ಕೆಲವಕ್ಕೆ–ಉಳಿದವುಗಳಿಗೆಲ್ಲ ಪ್ರಾಣಿಗಳ 'ಅಭಿಷೇಕ'ವೇ ಗತಿ—ಇದು ಯೋಚನೀಯ? ಹಾಗೆ ಹಾಳಾಗಿ ಬಿದ್ದುಹೋದ, ಭಕ್ತ ಜನರ ಬೆಂಬಲವಿಲ್ಲದ, ಸರಕಾರದ ಸಹಕಾರವನ್ನು ಕಾಣದ 'ಶಿಲಾ" ದೇವನನ್ನು ಯಾರು ಕೇಳುತ್ತಾರೆ?........ಅವನಿಗೆ ನೆಲವೇ ಗುಡಿ—ಆಕಾಶವೇ ಮಾಡು....ಚಳಿ ಮಳೆ ಬಿಸಿಲುಗಳೇ ಸೇವಕರು—



ಅಮೆರಿಕೆಯ ಬಾಹ್ಯಾಂತರಿಕ್ಷ ಸಂಚಾರಿ ಶ್ರೀ ಜಾನ್ ಗ್ಲೆನ್ ಅವರು ಅಗ್ನಿ ಬಾಣದ ಸಮೀಪ ನಿಂತುಕೊಂಡಿರುವುದನ್ನು ಇಲ್ಲಿ ನೋಡಬಹುದು.

ಮತಧರ್ಮಗಳ ಭವಿಷ್ಯವೂ ಇಂತೆಯೇ ಹಣದ ಆಧಾರ ಅಡಗಿದಾಗ ಅವುಗಳನ್ನು ಕಾಣುವವರಿಲ್ಲ ಧನವಿಲ್ಲದ ದೇವನನ್ನೇ ಕಡೆಗಣಿಸಿದ ಜನ, ಧನಹೀನ ಮನುಷ್ಯಜೀವಿ, ಮಠಪತಿಗಳನ್ನು ಹೇಗೆ ನೋಡಿಯಾರು? ದಯಾವಂತ ದೇಶಾಧಿಕಾರಿಗಳು ಇದನ್ನು ಗಮನದಲ್ಲಿಟ್ಟುಕೊಂಡು, ಮಠ ದೇವಾಲಯಗಳ ಸೊತ್ತುಗಳನ್ನು ಆಸ್ತಿಕೆ ಮಾಡಿ, ದೇವಗುರು ಧರ್ಮಗಳ ಧನವನ್ನು ಅಪಹರಿಸುವ ವಿರೋಧೀಶಕ್ತಿಯನ್ನು ಸದೆಬಡಿದು, ಧರ್ಮೋಪಕಾರ ಮಾಡುವರೆಂದು ನಂಬಿಕೊಂಡರೆ ತಪ್ಪಾದೀತೆ?

ಏಕಾಗ್ರತೆಯೇ ಚಿತ್ತಶುದ್ಧಿಯ ಮೊದಲ ಹೆಜ್ಜೆ-ಚಿತ್ತಶುದ್ಧಿಯೇ ತಿಳಿವಿನ ಮೂಲ–ತಿಳಿವಿನಿಂದ ಮನುಷ್ಯ ಮಹಾ ಜ್ಞಾನಿಯಾಗಿ ಕೃತಾರ್ಥನಾಗಬಹುದು. ಏಕಾಗ್ರಚಿತ್ತ ಸಿದ್ಧಿಯಾಗಬೇಕಾದರೆ, ಮನಸ್ಸು ಒಂದು ಕಡೆ ನೆಲೆನಿಂತಿರಬೇಕಷ್ಟೇ? ಅದಕ್ಕಾಗಿಯೇ ನೂರಾರು ವಿಗ್ರಹಗಳು ವೆತಾಳಿರಬಹುದು—ಅದರ ರಕ್ಷಣೆಗಾ ಗುಡಿ ಗೋಡೆಗಳು ಬಂದಿರಬಹುದು–

...ಹಿಂದೆ ಭಾರತ ಸಕಲ ಕಲೆಯ ಬೀಡು—ಒಂದೊಂದು ದೇಗುಲದಲ್ಲೂ ಅದೆಷ್ಟು ನಾಜೂಕಿನ ಚಿತ್ರಗಳು! ಅದೆಷ್ಟು ಸಾಂಸ್ಕೃತಿಕ ಪೂರ್ಣ ಪೂರ್ವ ನೋಟಗಳು! ಅದೆಷ್ಟು ಸಿದ್ಧಾಂತಮಯ ದೃಶ್ಯಗಳು! ಎಲ್ಲಕ್ಕು ಮೊದಲು, ಪ್ರತಿಷ್ಠಿತ ವಿಗ್ರಹಗಳಲ್ಲಿನ, ರಸಭರಿತ ಸುಂದರ ಕಲಾ ನಿಪುಣತೆಯ ದಿವ್ಯ ಕೂಟಗಳನ್ನು ನೋಡುವಾಗ್ಗೆ, ದೇವನ ಹೆಸರಿನಲ್ಲಿ ಕಲಾಪ್ರದರ್ಶನದ 'ಗುಟ್ಟು' ಹೊಳೆಯದಿರದು.

ಒಬ್ಬೊಬ್ಬ ದೇವನಿಗೆ ನೂರಾರು ದೇಗುಲಗಳಿರುವಾಗ, ಅವನು ಯಾವ ಯಾವ ಕಡೆಗಳಲ್ಲಿ ಇರಬಲ್ಲನು? ಎಲ್ಲ ನಿಶ್ಚಿತ ಸ್ಥಳಗಳಲ್ಲೂ ಇರುವನಾದರೆ, ಎಲ್ಲೆಲ್ಲೂ ಯಾಕಿಲ್ಲ? ಎಲ್ಲೆಲ್ಲೂ ಇರುವ ಅವನು ನಮ್ಮ ಕೂಡ ಇರಲಾರನೆ? '—ದೇಹವೆ ದೇವಾಲಯ-ಜೀವವೇ ಪರಮಾತ್ಮ – ಎಂದು ನಮ್ಮ ಅರ್ಚಕರು ದಿನವೂ ಹಾಡುತ್ತಾರೆ. 'ಅಜ್ಞಾನದ ನಿರ್ಮಾಲ್ಯವನ್ನು ತೆಗೆದೊಗೆದು, ನೀನೇ ನಾನು ಎಂಬ ಭಾವನೆಯಿಂದ ಪೂಜಿಸುತ್ತೇವೆ......' ಎಂದೂ ಭಾರಿ ಭಾರಿ ಹೇಳಿಕೊಳ್ಳುತ್ತಾರೆ— ಆದರೆ, ಕಾರ್ಯತಃ ಏನೆಂಬುದು ತಿಳಿದುಬಂದಿಲ್ಲ.

(೧೨ನೇ ಪುಟ ನೋಡಿರಿ)

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ. 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.
THE VIJAYA BANK LTD.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ

ಶ್ರೀನಿವಾಸ ಮಲ್ಯ

ಉಲ್ಲಾಳ ಶ್ರೀನಿವಾಸ ಮಲ್ಯರೆಂದರೆ ಅಖಿಲ ಭಾರತ ಪ್ರಸಿದ್ಧಿ ಪಡೆದವರು ಸ್ವಾತಂತ್ರ್ಯ ಹೋರಾಟದ ಸಮಯ ಕಾಂಗ್ರೆಸ್ ಸಂಸ್ಥೆಯನ್ನು ಸೇರಿದ ಇವರು ಅಂದಿನಿಂದ ಇಂದಿಗೂ ಅದರ ಮೂಲಕ ದೇಶಸೇವೆಯಲ್ಲಿ ಶ್ರಮಿಸುತ್ತಿದ್ದಾರೆ ಜಿಲ್ಲಾ ಕಾಂಗ್ರೆಸ್, ಪ್ರಾದೇಶಿಕ ಕಾಂಗ್ರೆಸ್ ಹಾಗೂ ಅಖಿಲ ಭಾರತೀಯ ಕಾಂಗ್ರೆಸ್‌ನಲ್ಲಿ ನಾನಾ ಸ್ಥಾನಗಳನ್ನಲಂಕರಿಸಿ ತಮ್ಮ ಸೇವಾ ವೃತ್ತಿಯಲ್ಲಿ ಯಶಸ್ವಿಯೆನಿಸಿದ್ದಾರೆ ೧೯೫೨ರಿಂದಲೂ ಉಡುಪಿಯ ಲೋಕಸಭಾ ಮತದಾರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಇವರು ಆರಿಸಿಹೋಗಿದ್ದಾರೆ ಇಡಿಯ ಜಿಲ್ಲೆಯ ಬೇರೆ ಬೇರೆ ಅವಶ್ಯಕತೆಗಳನ್ನು ಅರಿತುಕೊಂಡು ಅದನ್ನು ತನ್ನ ತಂತ್ರಮಂತ್ರಗಳಿಂದ ಸಾಧಿಸಿಕೊಳ್ಳುವುದರಲ್ಲಿ ಅಸೀಮ ಜಾಣಾಕ್ಷತೆ ತೋರಿಸುತ್ತಿರುವ ಇವರು ಇನ್ನೂ ಉಳಿದಿರುವ ಪ್ರಮುಖ ಸಮಸ್ಯೆಗಳನ್ನು ಬಿಡಿಸುವಂತೆ ಈ ಬಾರಿಯೂ ಗೆದ್ದುಬಂದಿದ್ದಾರೆ ಇವರ ಆಯ್ಕೆ ಕೇವಲ ಉಡುಪಿಯ ಮಟ್ಟಿಗೆ ಸೀಮಿತವಿರುವುದಿಲ್ಲ; ಮಲ್ಯರೆಂದರೆ ದಕ್ಷಿಣ ಕನ್ನಡ ಜಿಲ್ಲೆ ಎಂಬ ಭಾವನೆ ದೆಹಲಿಯಲ್ಲಿದೆ

ವೈ ಮಂಜಯ್ಯ ಶೆಟ್ಟಿ

೧೯೫೨ರಿಂದಲೂ ನಿರಂತರವಾಗಿ ಒಂದೇ ಮತದಾರ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿ ಹೋದವರು ವಿರಳ ಇಂತಹ ಕೆಲವೇ ಮಂದಿಯಲ್ಲಿ ಬೈಂದೂರಿನ ಶ್ರೀ ಯಡ್ತರೆ ಮಂಜಯ್ಯ ಶೆಟ್ಟರೂ ಒಬ್ಬರು ವೃತ್ತಿಯಲ್ಲಿ ವಕೀಲರಾದ ಇವರು ಕಳೆದ ಬಾರಿ ಅವಿರೋಧ ಆಯ್ಕೆಗೊಂಡಿದ್ದರೂ ಈ ಸಲ ಪ್ರಬಲ ಸ್ಪರ್ಧೆಯನ್ನು ಎದುರಿಸಬೇಕಾಯಿತು ಇದರಲ್ಲಿ ಅವರು ಚೆನ್ನಾಗಿ ತೇರಬಂದರು ನಿಷ್ಠಾವಂತ ಕಾಂಗ್ರೆಸಿಗರಾದ ಇವರು ತನ್ನ ಕ್ಷೇತ್ರದ ಉನ್ನತಿಗಾಗಿ ದುಡಿದವರು. ಗುಣ ಧನ ಸಂಪನ್ನರಾದ ಇವರು ಗಣ್ಯ ಶಾಸನ ಸಭಾ ಸದಸ್ಯರಾಗಿ ಗಳಿಸಿದ ಹೆಸರನ್ನು ಇನ್ನು ಮುಂದಕ್ಕೂ ಉಳಿಸಿಕೊಳ್ಳುವುದು ಖಂಡಿತ. ಭೂಸುಧಾರಣೆಯೇ ಮೊದಲಾದ ಕ್ರಾಂತಿಕಾರಿ ಮಸೂದೆಗಳಿಗೆ ಬೆಂಬಲವಿತ್ತವರಲ್ಲಿ ಇವರು ಅಗ್ರಗಣ್ಯರು ಜನಹಿತ ಸಾಧನೆಯಲ್ಲಿ ಇವರು ಮುಂದೆಯೂ ಹಿಂದುಳಿಯಲಾರರು

ಎಸ್ ಎಸ್. ಕೊಳ್ಕೆಬೈಲ್

ಪ್ರಜಾ ಪಕ್ಷದ ಅಗ್ರಣಿ ಶ್ರೀ ವಿ ಶ್ರೀನಿವಾಸ ಶೆಟ್ಟರು ಕಳೆದ ಬಾರಿ ಕುಂದಾಪುರದಲ್ಲಿ ಸುಮಾರು ಮುನ್ನೂರು ಮತಗಳಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಕುಂದಾಪುರದಲ್ಲಿ ಸೋಲಿಸಿದ್ದರೂ ಈ ಬಾರಿ ಅವರು ಕಾಂಗ್ರೆಸಿನ ಶ್ರೀ ಎಸ್ ಎಸ್ ಕೊಳ್ಕೆಬೈಲರಿಂದ ಎರಡು ಸಾವಿರಕ್ಕೂ ಮಿಕ್ಕಿದ ಮತಗಳಿಂದ ಸೋಲುಣ್ಣಬೇಕಾಯಿತು ಶ್ರೀ ಕೊಳ್ಕೆಬೈಲರು ೧೯೫೭ರಲ್ಲಿ ಪ್ರಜಾಪಕ್ಷದಿಂದ ವಿಧಾನ ಸ

ಚುನಾವಣೆಯಲ್ಲಿ ಗೆದ್ದ ದ. ಕನ್ನಡದ

ಕಾಂಗ್ರೆಸ್ ಜನತಾ ಪ್ರತಿನಿಧಿಗಳು



ಎಸ್ ಎಸ್ ಕೊಳ್ಕೆಬೈಲ್

ಭೆಗೆ ಆರಿಸಿ ಹೋಗಿದ್ದರಾದರೂ ಅನಂತರ ಸುಮಾರಿನಲ್ಲಿ ಕಾಂಗ್ರೆಸ್ ಸೇರಿ ಅಂದಿನಿಂದಲೂ ಪಕ್ಷದಲ್ಲಿ ದುಡಿಯುತ್ತಿದ್ದಾರೆ ಗಣ್ಯ ವಕೀಲರೂ ಕಾರ್ಯಶೀಲರೂ ಚತುರ ಮಾತುಗಾರರೂ ಆದ ಇವರು ಧೈರ್ಯದಿಂದ, ಉತ್ಸಾಹದಿಂದ ಉಚಿತಕಾರ್ಯಗಳನ್ನು ತೊಡಗಿ, ಅವನ್ನು ಕೊನೆಮುಟ್ಟಿಸುವ ಕಾರ್ಯಪಟುಗಳು ಕಾಂಗ್ರೆಸ್ ಸಂಸ್ಥೆಯಲ್ಲಿಯೂ ಜನಸಾಧಾರಣರಲ್ಲಿಯೂ ಹೆಚ್ಚು ಬಳಕೆಯಿಂದ ಇರುವ ಇವರು ವಿಧಾನ ಸಭಾ ಕಾಂಗ್ರೆಸ್ ಪಕ್ಷಕ್ಕೊಂದು ಧೈರ್ಯದ ನಿಧಿಯೆಂದು ಹೇಳಬಹುದು ಜನಸೇವೆಯಲ್ಲಿ ಇವರ ಕೈ ಎಂದಿಗೂ ಹಿಂದುಳಿಯಲಾರದು

ಎಸ್ ಡಿ ಧರ್ಮಸಾಮ್ರಾಜ್ಯ

೧೯೪೫ರಿಂದ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ದುಡಿಯುತ್ತ ಬಂದಿರುವ ಶ್ರೀ ಎಸ್. ಡಿ ಧರ್ಮಸಾಮ್ರಾಜ್ಯರು ಬ್ರಹ್ಮಾವರ ಕ್ಷೇತ್ರದಲ್ಲಿ ಅಪರಿಚಿತರಾಗಿದ್ದರು ಆದರೆ, ತನ್ನ ವಿನಿಮಯ, ಸೌಜನ್ಯ, ಮೃದುಮಧುರ ವಾಕ್ಯಗಳಿಂದ ಅವರು ಜನತೆಯನ್ನು ಆಕರ್ಷಿಸಿ, ಆರು ಸಾವಿರ ಹೆಚ್ಚಿನ ಮತಗಳಿಂದ ಕಾಂಗ್ರೆಸ್ ಬಾವುಟವನ್ನು ಎತ್ತಿ ಹಿಡಿದರು ಪಂಚಾಯತದ ಅಧ್ಯಕ್ಷರಾಗಿ, ಜಿಲ್ಲಾ ಬೋರ್ಡಿನ ಸದಸ್ಯರಾಗಿ ವಿವಿಧ ಕಾಂಗ್ರೆಸ್ ಸಮಿತಿಗಳ ಸದಸ್ಯರಾಗಿ, ನಾನಾ ಸಾರ್ವಜನಿಕ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಇವರು ಕಾರ್ಕಳ ತಾಲೂಕು ಬೋರ್ಡಿನ ಉಪಾಧ್ಯಕ್ಷರಿರುವರು ಜನಸಾಮಾನ್ಯರ ನಡುವೆಯೇ ಅವರೊಡನೆ ಕಳೆದ ೧೭ ವರ್ಷಗಳನ್ನು ಕಳೆದ ಇವರು ಜನತೆಯ ಆಶೆಯನ್ನು ಅರಿತುಕೊಂಡಿರುವರು; ಅವನ್ನು ಪೂರೈಸುವಲ್ಲಿ ತನ್ನ ಸಹೋದ್ಯೋಗಿಗಳೊಡನೆ ಸಂಪೂರ್ಣ ಮನಸ್ಸಿನಿಂದ ದುಡಿಯುವರೆಂಬುದರಲ್ಲಿ ಸಂದೇಹವಿಲ್ಲ.

ಎಂ ಮಧ್ವರಾಜ

ಯುವಕರಾಗಿರುವ ಶ್ರೀ ಮಧ್ವರಾಜರು ಸುಶಿಕ್ಷಿತರು. ಸಾರ್ವಜನಿಕ ಸೇವಾಕಾಂಕ್ಷಿಗಳಾಗಿ ಜನಸೇವೆಯಲ್ಲಿ ಆಸಕ್ತಿ ವಹಿಸುತ್ತಿರುವವರು ತನ್ನ ತಾರುಣ್ಯದಲ್ಲಿಯೇ ತಾಲೂಕು ಡೆವಲೆಪ್‌ಮೆಂಟ್ ಬೋರ್ಡಿನ ಅಧ್ಯಕ್ಷರಾಗಿ ಸೇವೆಸಲ್ಲಿಸುತ್ತಿರುವ ಇವರು ತನ್ನ ಕಾರ್ಯದಕ್ಷತೆಯನ್ನು ಉಡುಪಿ ತಾಲೂಕಿನ ಜನತೆಗೆ ತೋರಿಸಿಕೊಟ್ಟಿದ್ದಾರೆ ಕಳೆದ ಚುನಾವಣೆಯಲ್ಲಿ ನಾಲ್ಕು ಸಾವಿರ ಮತಗಳಿಂದ ಕಾಂಗ್ರೆಸ್ ಕಳೆದುಕೊಂಡಿದ್ದ ಸ್ಥಾನವನ್ನು ಈ ಬಾರಿ ಶ್ರೀ ಮಧ್ವರಾಜರು ಪ್ರಚಂಡ ಬಹುಮತದಿಂದ (ಸುಮಾರು ಒಂಬತ್ತು ಸಾವಿರ) ಮರಳಿ ಗಳಿಸಿ ತಂದಿದ್ದಾರೆ ಉಡುಪಿಯ ಆವಶ್ಯಕತೆಗಳ ಪ್ರತ್ಯಕ್ಷ ಪರಿಚಯವಿರುವ ಇವರು ಅವನ್ನು ಪೂರೈಸುವವರಲ್ಲಿ ಅಸೀಮ ಶ್ರದ್ಧಾಸಕ್ತಿ ವಹಿಸುವರೆಂದು ಮತದಾರರು ನಂಬಿದ್ದಾರೆ.

ಎಂ ಮಧ್ವರಾಜ

ಎ. ಶಂಕರ ಆಳ್ವ

ಮಂಗಳೂರು ಲೋಕಸಭಾ ಮತದಾರ ಕ್ಷೇತ್ರದಿಂದ ಸ್ವತಂತ್ರಪಕ್ಷದ ಪ್ರಬಲ ವಿರೋಧವನ್ನೂ ಕಡೆಗಣಿಸಿ ಹೆಚ್ಚಿನ ಬಹುಮತದಿಂದ ಆರಿಸಿ ಬಂದ ಶ್ರೀ ಎ ಶಂಕರ ಆಳ್ವರು ವೃತ್ತಿಯಲ್ಲಿ ವಕೀಲರಾದರೂ ಸಾರ್ವಜನಿಕ ಸೇವೆಯಲ್ಲಿ ತುಂಬ ದುಡಿದವರು ನಯವಿನಯ ಸಂಪನ್ನರಾಗಿರುವುದರಿಂದ ಜನಾನುರಾಗಗಳಿಸಿರುವರು. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾದ ಇವರು ಜನತೆಯ ಸುಖದುಃಖಗಳನ್ನು ಮನವರಿಕೆ ಮಾಡಿಕೊಂಡವರು ಸ್ಥಳೀಯ ಸಂಸ್ಥೆಗಳ ಸದಸ್ಯರಾಗಿ, ಮಜೂರ ಸಂಘಟಕರಾಗಿ, ನಿಸ್ವಾರ್ಥ ಬುದ್ಧಿಯ ಸೇವಕರಾಗಿ ಹೆಸರು ಪಡೆದವರು ಹಿಡಿದ ಕಾರ್ಯದಲ್ಲಿ ನಿಶ್ಚಿತ ಧೋರಣೆಯಂತೆ ಕೊನೆಯ ವರೆಗೂ ಮುಂದುವರಿದು ಹೋಗುವ ಶ್ರೀ ಆಳ್ವರು ಲೋಕಸಭೆಗೆ ಹೊಸಬರಾದರೂ ಮತದಾರರ ಕಡೆಗಿರುವ ತನ್ನ ಕರ್ತವ್ಯವನ್ನು ಉತ್ತಮ ರೀತಿಯಲ್ಲಿ ಪೂರೈಸುವುದರಲ್ಲಿ ಸಂದೇಹವಿಲ್ಲ. ಶ್ರೀ ಆಳ್ವ ಅವರು ಕ್ರೀಡಾಪಟುಗಳೂ ಹೌದು ಎಂಬುದು ಹಚ್ಚಿನವರಿಗೆ ತಿಳಿದಿರಲಾರದು.

ಡಾ। ನಾಗಪ್ಪ ಆಳ್ವ

ಪ್ರಾದೇಶಿಕ ಕಾಂಗ್ರೆಸ್ಸಿನ ಅಧ್ಯಕ್ಷ ನಿಜಲಿಂಗಪ್ಪನವರು ಸೋತರೂ ಅವರ ಉಪಾಧ್ಯಕ್ಷ ಡಾ। ನಾಗಪ್ಪ ಆಳ್ವ ಅವರು ಕಮ್ಯುನಿಸ್ಟ್ ಅಭ್ಯರ್ಥಿಯನ್ನು ಸೋಲಿಸಿ ಆಯ್ಕೆಗೊಂಡಿದ್ದಾರೆ ಡಾ। ಆಳ್ವರು ಇನ್ನೂ ಬಾಲರಾಗಿದ್ದಾಗಲೇ, ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದು, ಈಗ ಅದರ ಸುನಾಂದದ ನೆಯಲ್ಲಿ ಆಸಕ್ತರಾದವರಲ್ಲಿ ಒಬ್ಬರು. ನಗರ ಸಭೆ ಜಿಲ್ಲಾ ಬೋರ್ಡ್ ಸದಸ್ಯರಾಗಿ ದುಡಿದವರು. ಈಗಲೂ ವಿವಿಧ ಸಾರ್ವಜನಿಕ ಸಂಘ ಸಂಸ್ಥೆಗಳ ಸದಸ್ಯರಾಗಿ ಸೇವೆಸಲ್ಲಿಸುತ್ತಿರುವ ಇವರು ಸದ್ಯ ಬೆಂಗಳೂ

(ಆರನೇ ಪುಟ ನೋಡಿರಿ)

ನವಯುಗ

ವರುಷ	ಉಡುಪಿ	ವಾರ
೪೧	೮-೩-'೬೨	೨೬

ಚುನಾವಣೆಗಳ ನಂತರ

ದೇಶದ ಹನ್ನೆರಡು ರಾಜ್ಯಗಳ ಪೈಕಿ ಹತ್ತರಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತವನ್ನು ಗಳಿಸಿ ಅಧಿಕಾರಕ್ಕೆ ಮರಳಿ ಬಂದಿದೆ. ರಾಜಸ್ಥಾನ ಮತ್ತು ಮಧ್ಯ ಪ್ರದೇಶಗಳಲ್ಲಿ ಕಾಂಗ್ರೆಸ್ ಬಹು ಸಂಖ್ಯಾಕರಿರುವ ಸ್ವತಂತ್ರ ಸದಸ್ಯರ ಸಹಕಾರದಿಂದ ಸರಕಾರ ಸ್ಥಾಪಿಸಬೇಕಾಗುವುದು, ಏಕೆಂದರೆ, ರಾಜಸ್ಥಾನದಲ್ಲಿ ಶೇ. ೫೦ ಸ್ಥಾನಗಳನ್ನು ಕಾಂಗ್ರೆಸ್ಸು ಗಳಿಸಿದ್ದರೆ, ಮಧ್ಯ ಪ್ರದೇಶದಲ್ಲಿ ಇದಕ್ಕೂ ಎರಡು ಕಡಿಮೆ. ಹಾಗಿರುವಾಗ, ಸಾರ್ವತ್ರಿಕ ಚುನಾವಣಾ ನಂತರದಲ್ಲಿ ಕಾಂಗ್ರೆಸ್ಸು ತನ್ನ ಸೋಲು ಗೆಲುಗಳ ಕಡೆಗೆ ತುಸು ಅವಲೋಕನ ಮಾಡಿ, ಮುಂದಿನ ಚುನಾವಣೆಯ ವೇಳೆಗೆ ಪಕ್ಷದ ಬಲ ಸಂವರ್ಧಿಸಿಕೊಳ್ಳುವುದು ಅತ್ಯವಶ್ಯವೆನಿಸಿದೆ. ಅಸ್ಸಾಮ್, ಗುಜರಾತ್, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಕಾಂಗ್ರೆಸ್ಸು ತನ್ನ ಸ್ಥಿತಿಯನ್ನು ಉತ್ತಮಗೊಳಿಸಿದ್ದು, ಇದರಲ್ಲಿ ಮಹಾರಾಷ್ಟ್ರವು ಅಗ್ರಗಣ್ಯವಾಗಿದೆ. ಇಲ್ಲಿನ ೨೬೪ ಸ್ಥಾನಗಳಲ್ಲಿ ಶೇ. ೮೧ ರಷ್ಟನ್ನು ಕಾಂಗ್ರೆಸ್ಸು ಗೆದ್ದುಕೊಂಡಿದೆ. ಮಹಾರಾಷ್ಟ್ರದ ರಚನೆಯಾದ ಕಾರಣ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಪ್ರಭಾವು ತಾನಾಗಿಯೇ ಕುಗ್ಗಿಹೋದುದರಿಂದ ಹೀಗಾಯಿತೆನ್ನಬೇಕು. ಇದರಿಂದಾಗಿ ಹಿಂದೆ ೩೧ ಸ್ಥಾನ ಗಳಿಸಿದ್ದ ಪ್ರಸವಾದ ಬಲವು ಕೇವಲ ೯ಕ್ಕೆ ಇಳಿಯಿತು. ಕಮ್ಯುನಿಸ್ಟರಾದರೂ ೬ ಸ್ಥಾನಗಳನ್ನು ಮಾತ್ರ ಪಡೆಯುವಷ್ಟು ಇಳಿದುಹೋದರು. ದೇಶದ ವಿವಿಧ ರಾಜ್ಯಗಳ ಪೈಕಿ ಮಹಾರಾಷ್ಟ್ರವು ತೀರ ದುರ್ಬಲ ವಿರೋಧವಿರುವ ರಾಜ್ಯವೆಂಬುದು ನಿರ್ವಿವಾದ. ಎಲ್ಲಕ್ಕಿಂತ ಮಿಗಿಲಾಗಿ ಸ್ವತಂತ್ರ ಪಕ್ಷದ ಬಿರುಗಾಳಿ ಹೊಡೆದಿದ್ದ ಈ ರಾಜ್ಯದಲ್ಲಿ ನಾಮ ಮಾತ್ರಕ್ಕಾದರೂ ಒಬ್ಬನೇ ಒಬ್ಬ ಪ್ರತಿನಿಧಿಯಿಲ್ಲದಾದುದು ಸ್ವತಂತ್ರ ಪಕ್ಷದ ದೌರ್ಭಾಗ್ಯ. ಗುಜರಾತದಲ್ಲಿ ಮಾತ್ರ ಇದು ೨೬ ಸ್ಥಾನಗಳನ್ನು ಗಳಿಸಿ ಪ್ರಮುಖ ವಿರೋಧೀ ಪಕ್ಷವಾಗಿ ಪರಿಣಮಿಸಿದೆ. ರಾಷ್ಟ್ರದ ಉಳಿದ ಎಂಟು ರಾಜ್ಯಗಳಲ್ಲಿ ಕಾಂಗ್ರೆಸ್ಸಿನ ಬಲವು ಹ್ರಾಸವಾಗುತ್ತ ಒಂದುದು ಹಾಗೂ ವಿರೋಧೀಪಕ್ಷಗಳ ಸಂಖ್ಯಾಬಲವು ವರ್ಧಿಸುತ್ತ ಹೋದುದನ್ನು ಮುಂದೆಕ್ಕಾದರೂ ಕಡೆಗಣಿಸುವಂತಿಲ್ಲ. ೨೮೮ ಸದಸ್ಯರಿರುವ ಮಧ್ಯ ಪ್ರದೇಶದಲ್ಲಿ ಒಟ್ಟು ೧೭೪ ಕಾಂಗ್ರೆಸ್ ಪಕ್ಷದವರಾದರೂ ಹೊಸ ವಿಧಾನ ಸಭೆಯಲ್ಲಿ ಇವರ ಬಲ ಕೇವಲ ೧೪೨; ಎಂದರೆ ಅರ್ಧಕ್ಕೂ ಎರಡು ಕಡಿಮೆ. ರಾಜಸ್ಥಾನದ ೧೭೬ ಸ್ಥಾನಗಳಲ್ಲಿ ಕಾಂಗ್ರೆಸ್ಸು ೧೧೯ನ್ನು ಕಳೆದ ಬಾರಿ ಗಳಿಸಿದ್ದರೆ, ಈ ಸಲ ೮೮ ಮಾತ್ರ ಸಂಪಾದಿಸಿದೆ. ಆಂಧ್ರ, ಉತ್ತರ ಪ್ರದೇಶ, ಪಂಜಾಬ ಮತ್ತು ಬಿಹಾರಗಳಲ್ಲಿ ಕಾಂಗ್ರೆಸ್ಸು ಸುಮಾರು ೪೦ರಿಂದ ೫೦ರಷ್ಟು ಸ್ಥಾನಗಳನ್ನು ಕಳೆದುಕೊಂಡಿದೆ. ಮದ್ರಾಸದಲ್ಲಿ ೧೩ ಮತ್ತು ಮೈಸೂರಿನಲ್ಲಿ ೧೩ ಸದಸ್ಯರ ಬಲ ಕಡಿಮೆಯಾಗಿದೆ. ಈ ಆರು ರಾಜ್ಯಗಳಲ್ಲಿ ನಿಚ್ಚಳ ಬಹು ಮತವು ಕಾಂಗ್ರೆಸ್ಸಿಗೆ ಇರುವುದರಿಂದ ಸರಕಾರ ರಚನೆಯ ಕಾರ್ಯಕ್ಕೆ ಈಗಾಗಲೇ ಆರಂಭವಾಗಿದೆ. ಆದರೆ, ಮಧ್ಯ ಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಸ್ವತಂತ್ರ ಸದಸ್ಯರ ಸಹಕಾರದಿಂದ ಅದು ಸರಕಾರ ರಚನೆ ಮಾಡಬೇಕಾಗಿ ಬಂದಿದೆ.

ಕಾಂಗ್ರೆಸಿನ ಬಲಹ್ರಾಸಗೊಳ್ಳುವುದಕ್ಕೆ ಮತ್ತಿದರಿಂದಾಗಿ ವಿರೋಧೀ ಪಕ್ಷಗಳು ಬಲವಾಗುವುದಕ್ಕೆ ಯಾವುದೇ ಸೈದ್ಧಾಂತಿಕ ಕಾರಣವಿದೆಯೆನ್ನುವಂತಿಲ್ಲ. ಈ ಸಾರಿ ಹೊಸತಾಗಿ ಚುನಾವಣಾ ರಂಗಕ್ಕಿಳಿದ ಸ್ವತಂತ್ರ ಪಕ್ಷವು ಬಿಹಾರದಲ್ಲಿ ೪೯, ರಾಜಸ್ಥಾನದಲ್ಲಿ ೩೬, ಗುಜರಾತದಲ್ಲಿ ೨೬, ಆಂಧ್ರದಲ್ಲಿ ೧೯, ಉತ್ತರ ಪ್ರದೇಶದಲ್ಲಿ ೧೪ ಸ್ಥಾನಗಳನ್ನು ಗಳಿಸಿದೆಯೆಂಬುದು ನಿಜ. ಒಟ್ಟಿನಲ್ಲಿ ಈ ಪಕ್ಷದಿಂದ ಕಾಂಗ್ರೆಸ್ಸಿನ ಮೇಲೆ ಹೆಚ್ಚಿನ ಪರಿಣಾಮವಾಗಿಲ್ಲ. ಪ್ರಸವಾವು ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಸಂಪೂರ್ಣ ಕುಸಿದು ಹೋದರೂ ಮಧ್ಯ ಪ್ರದೇಶದಲ್ಲಿ ತನ್ನ ಬಲವನ್ನು ೧೩ರಿಂದ ೩೩ಕ್ಕೆ ಹೆಚ್ಚಿಸಿಕೊಂಡಿದೆ. ಕಮ್ಯುನಿಸ್ಟರು ಆಂಧ್ರದಲ್ಲಿ ಮಾತ್ರ ತಮ್ಮ ಬಲವನ್ನು ಎತ್ತರಿಸಿದ್ದು ಉಳಿದೆಡೆ ಇದ್ದಂತೆಯೇ ಇದ್ದಾರೆನ್ನಬಹುದು. ಆಂಧ್ರ ಮತ್ತು ಪಶ್ಚಿಮ ಬಂಗಾಳ ಕೇರಳವನ್ನೂ ಸೇರಿಸಬಹುದು) ಗಳನ್ನು ಬಿಟ್ಟು ಉಳಿದೆಡೆಯು ಇವರ ಶಕ್ತಿ ವಿರೋಧೀ ಪಕ್ಷಕ್ಕೆ ಬೇಕೆಂಬಷ್ಟಿಲ್ಲ. ಮಧ್ಯ ಪ್ರದೇಶ (೪೧) ಮತ್ತು ಉತ್ತರ ಪ್ರದೇಶ (೪೮) ಗಳಲ್ಲಿ ಜನಸಂಘ, ಗುಜರಾತ (೨೬), ಬಿಹಾರ (೪೮), ಮತ್ತು ರಾಜಸ್ಥಾನ (೩೬)ಗಳಲ್ಲಿ ಸ್ವತಂತ್ರ ಪಕ್ಷ, ಮದ್ರಾಸದಲ್ಲಿ ಡಿ. ಎಂ.ಕೆ. (೫೦)ಗಳು ಪ್ರಬಲ ವಿರೋಧೀ ಪಕ್ಷಗಳಾಗುವುವು. ಮೈಸೂರಿನಲ್ಲಿ ಪ್ರಸವಾ (೨೦) ಆ ಸ್ಥಾನಕ್ಕೇರಿದರೆ ಆಸಾಮು. ಮಹಾರಾಷ್ಟ್ರ ಮತ್ತು ಪಂಜಾಬಗಳಲ್ಲಿ ಹೇಳಿಸಿಕೊಳ್ಳುವ ವಿರೋಧೀ ಪಕ್ಷವೇ ಇರುವುದಿಲ್ಲ.

ಈ ಕಾರಣಗಳಿಂದಾಗಿ ಜನತೆಯು ಕಾಂಗ್ರೆಸ್ಸನ್ನು, ಅದರ ಧ್ಯೇಯ ಧೋರಣೆಗಳನ್ನು ಎತ್ತಿ ಹಿಡಿದಿದೆಯೆನ್ನುವುದರಲ್ಲಿ ಸಂಶಯವಿಲ್ಲ. ಆದರೂ ಕಾಂಗ್ರೆಸ್ ವಿರೋಧಿಯಾಗಿ ಬಿದ್ದಿರುವ ಮತಗಳನ್ನೂ ನಾವು ಅಲಕ್ಷ್ಯಿಸುವಂತಿಲ್ಲ. ಕೇಂದ್ರದಲ್ಲಾದರೂ ಕಾಂಗ್ರೆಸು ೩೪೨ ಸ್ಥಾನಗಳನ್ನು (೪೭೩ರಲ್ಲಿ) ಮಾತ್ರ ಪಡೆದಿದೆ. ಎಂದರೆ ಕಳೆದ ಬಾರಿಗಿಂತ ಅದು ರಾಜ್ಯಗಳಲ್ಲಿಯೂ ಕೇಂದ್ರದಲ್ಲಿಯೂ ಒಟ್ಟಿನಲ್ಲಿ ತನ್ನ ಬಲವನ್ನು ಕಳೆದುಕೊಂಡಿದೆ ಎಂದು ಅರ್ಥವಾಗುವುದು. ಸಮಾಜವಾದ ಮಾದರಿಯ ಕಲ್ಯಾಣರಾಷ್ಟ್ರವನ್ನು ಕಟ್ಟುವ ಕಾಂಗ್ರೆಸ್ಸಿನ ಗುರಿಯು ಜನತೆಗೆ ಒಪ್ಪಿತವಿರುವುದಾದರೂ ಕಾಂಗ್ರೆಸ್ಸಿಗರ ನಿಷ್ಠೆ ಮತ್ತು ಅವರ ಸಮರ್ಥತೆಯನ್ನು ಜನತೆಯು ಆಹ್ವಾನಿಸುತ್ತದೆಯೆಂದು ಈ ವಿರೋಧ ಮತಗಳಿಂದ ತಿಳಿಯಬಹುದು. ವಿವಿಧ ರಾಜ್ಯಗಳಲ್ಲಿ ಕಾಂಗ್ರೆಸಿಗರು ಅಧಿಕಾರಕ್ಕಾಗಿ ಹೋರಾಡುತ್ತಿರುವುದನ್ನು ಜನ ನಿರ್ಲಕ್ಷ್ಯಿಸಿಲ್ಲ. ಮುಖ್ಯವಾಗಿ ಉತ್ತರ ಪ್ರದೇಶ, ಮೈಸೂರು, ಪಂಜಾಬ, ಮಧ್ಯಪ್ರದೇಶಗಳ ಪರಿಸ್ಥಿತಿ ಇದಕ್ಕೆ ನಿದರ್ಶನವಾಗಿದೆ. ಯಾವುದೇ ಆಂತರಿಕ–ಬಾಹ್ಯ ಗೊಂದಲಗಳಿಗೆ ಆಸ್ಪದ ನೀಡದ ಚವನರ ರಾಜ್ಯದಲ್ಲಿ ಕಾಂಗ್ರೆಸ್ಸಿನ ಕೋಟೆ ಭದ್ರವಿರುವುದನ್ನು ನಾವು ಗಮನಿಸಿದರೆ, ಕಾಂಗ್ರೆಸಿಗರು ಪರಸ್ಪರ ಹೊಡೆದಾಡಲು ತೊಡಗಿದರೆಂದರೆ, ಇದರಿಂದ ಮುಂದಿನ ಚುನಾವಣೆಯ ವೇಳೆಗೆ ದುಷ್ಪ್ರಭಾವ ಬೀರುವುದು ಖಂಡಿತವೆನ್ನಬಹುದು. ಹೀಗಾಗದೆ ಸಕಲ ಕಾಂಗ್ರೆಸಿಗರೂ ತಮಗೊದಗಿ ಬಂದ ಅವಕಾಶವನ್ನು ಸೇವಾ ಭಾವದಿಂದ ಸೌಹಾರ್ದಯುತವಾಗಿ ಉಪಯೋಗಿಸಿದರೆ ಕಾಂಗ್ರೆಸ್ಸಿಗೆ ಹಿತವಾಗುವುದು ಖಂಡಿತ.

ಜಗತ್ಪರ್ಯಟನ

ರಾಜೇಂದ್ರ ಪ್ರಸಾದ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಇನ್ನು ಚುನಾವಣೆಗೆ ನಿಲ್ಲುವುದಿಲ್ಲ ಆದರೆ, ತಾನು ಅಧಿಕಾರವನ್ನು ಎರಡಂದಿನಿಂ

ಸುತ್ತಲಿನ ರಾಜಕಾರಣ

ಒಂದು ಕಾಲದಲ್ಲಿ ನಮ್ಮ ದೇಶದ ಅಂಗಗಳಾಗಿದ್ದು, ಬ್ರಿಟಿಷರ ಪ್ರಶಾಸನ ಕಾಲದಲ್ಲಿ ಸ್ವತಂತ್ರವಾಗಿ ರೂಪುಗೊಂಡ ಬ್ರಹ್ಮ, ಸಿಂಹಳ ಮತ್ತು ಪಾಕಿಸ್ತಾನಗಳ ಇತ್ತೀಚೆಗಿನ ರಾಜಕೀಯ ಸ್ಥಿತ್ಯಂತರಗಳು ಮಹತ್ವಪೂರ್ಣವಾದುವುಗಳು; ಬಹುದಿನಗಳಿಂದ ಪಾಕ್ ಜನತೆ ಎದುರು ನೋಡುತಿದ್ದ ಸಂವಿಧಾನವನ್ನು ಅಧ್ಯಕ್ಷ ಆಯೂಬಖಾನರು ಹೊರಗೆಡಹಿದರು ಮುಂದಿನ ಜೂನ್ ಸುಮಾರಿಗೆ ಅಲ್ಲಿ ಚುನಾವಣೆ ನಡೆಯುವುದು. ಈ ಸಂವಿಧಾನವು ಪ್ರಗತಿಪರವೆನ್ನುವಂತಿಲ್ಲವಾದರೂ ಸರ್ವಾಧಿಕಾರೀ ಆಡಳಿತೆಗೊಂದು ಮುಟ್ಟುಗೋಲು ಹಾಕಲು ನೆರವಾಗಬಹುದು. ಸಿಂಹಳದಲ್ಲಿ ಸರಕಾರವನ್ನು ಉರುಳಿಸುವ ವ್ಯರ್ಥ ಸೈನಿಕ ಕ್ರಾಂತಿಯೊಂದು ಇತ್ತೀಚೆಗೆ ನಡೆಯಿತು; ಆದರೆ, ಅದನ್ನು ಸದೆಬಡಿಯಲಾಯಿತು. ಹಾಗಿದ್ದರೂ ಈ ಕ್ರಾಂತಿಯ ಸಂಚುಗಾರರೆಂಬ ಆರೋಪಕ್ಕೆ ಗುರಿಯಾದವರು ಮಾಜಿ ಪ್ರಧಾನಿಗಳಾಗಿದ್ದ ಡಡ್ಲಿ ಸೇನಾನಾಯಕೆ ಮತ್ತು ಸರ್ ಜಾನ್ ಕೋಟೆವಾಲಾರು ಮಾತ್ರವಲ್ಲ ಅಲ್ಲಿನ ಗವರ್ನರ್ ಜನರಲ್ ಸರ್ ಒಲಿವರ್ ಗುಣತಿಲಕೆಯವರೂ ಒಬ್ಬರು ಒಂದು ರಾಷ್ಟ್ರದ ಮಂಷ್ಟಾಧಿಕಾರಿಯೇ ಸೈನಿಕ ಬಂಡಾಯಕ್ಕೆ ಎಡೆಮಾಡಿಕೊಡುವುದು ಅದೆಷ್ಟು ಸಂಭವನೀಯವೆನ್ನುವಂತಿಲ್ಲವಾದರೂ ಇವರನ್ನು ವಜಾಮಾಡಿ ಅವರ ಸ್ಥಾನದಲ್ಲಿ ಡಬ್ಲ್ಯು. ಗೋಪಾಲವಾರವರನ್ನು ನೇಮಿಸಿಯೂ ಆಯ್ತು. ಇಲ್ಲಿ ಸೇನಾ ಬಂಡಾಯ ವಿಫಲವಾದರೆ, ಬ್ರಹ್ಮದಲ್ಲಿ ಅದು ಸಫಲಗೊಂಡು, ಅಧಿಕಾರವನ್ನು ದಂಡನಾಯಕ ನೇವಿನ್‌ರವರು ವಶಪಡಿಸಿದ್ದಾರೆ. ರಾಷ್ಟ್ರಾಧ್ಯಕ್ಷರು ಪ್ರಧಾನಿ ಮತ್ತು ಸಚಿವರು ಹಾಗೂ ಸಂಸತ್ ಸಭೆಗಳ ಅಧ್ಯಕ್ಷರುಗಳು ಬಂಧಿತರಾಗಿದ್ದಾರೆ. ಜಗತ್ತಿನ ರಾಜಕಾರಣಿಗಳಲ್ಲಿ ಒಬ್ಬರಾದ ಯು-ನೂ ಅವರೂ ಇಂತಹ ದುರವಸ್ಥೆಗೆ ಈಡಾದುದು ವಿಚಿತ್ರವೆನಿಸುವುದು ಸಹಜ. ಈ ಮಧ್ಯೆ ನಮ್ಮ ಸುತ್ತಲಿನಲ್ಲಿ ಆಗುವ ಇಂತಹ ಗಂಡಾಂತರಗಳ ನಡುವೆ ನಾವು ಸಚೇತರಾಗಿ ನಾಗರಿಕತೆಯಲ್ಲಿ ವಿಶ್ವಾಸ ತೋರಿಸಬೇಕಾಗಿದೆ.

ದಲೂ ಅವರು ಭಾರತದ ಏಕತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಪೋರ್ಚುಗೀಸ ವಸಾಹತಿನ ಕಲಂಕದಿಂದ ಬಿಡುಗಡೆಗೊಂಡ ಗೋವೆ, ದೀವ ಮತ್ತು ದಮನಗಳು ಅವು ವಿಮೋಚನೆಗೊಂಡಂದಿ ಭಾರತದ ಆಳಿಕೆಗೆ ಒಳಪಟ್ಟಿದ್ದು, ಅಲ್ಲಿ ಸೈನಿಕ ಆಡಳಿತೆಯು ಇದುವರೆಗೆ ನಡೆಯುತಿತ್ತು. ಅಲ್ಲಿ ಇನ್ನು ದಂಡಿನಾಳಿಕೆಯು ಅಗತ್ಯವಿಲ್ಲವೆಂಬುದು ಮನವರಿಕೆಯಾದುದರಿಂದ, ನಾಗರಿಕ ಆಡಳಿತೆಯನ್ನು ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ. ಈ ನಡುವೆ ಅವೆಲ್ಲವನ್ನೂ ಕೇಂದ್ರ ಸರಕಾರದ ನೇರ ಆಡಳಿತೆಯಲ್ಲಿರುವ ಪ್ರದೇಶವೆಂದು ಡಾ॥ ಪ್ರಸಾದರು ಸುಗ್ರೀವಾಜ್ಞೆಯೊಂದನ್ನು ಹೊರಡಿಸಿ ಗೋವನ್ನರಿಂತಕರಿಗೆ ಸಂತೋಷ ಮಾಡಿದ್ದಾರೆ. ಇಷ್ಟರಲ್ಲಿ ಅಲ್ಲಿಯೇ ಅಲ್ಲಿನ ಸೇನೆಯ ಆಳಿಕೆಯು ಕೊನೆಗೊಳ್ಳುವುದೆಂದು ಆಶಿಸಬಹುದು.

ಸಿರಿಮಾವೋ

ಮಹಿಳಾ ಪ್ರಧಾನಿಯನ್ನು ಸಿಲೋನ ಪಡೆದಾಗ, ಈ ಹೆಂಗಸೇನು ಮಾಡಬಲ್ಲಳು ಎಂದು ಪ್ರಶ್ನಿಸಿದವರಿರಬಹುದು. ಸಿರಿಮಾವೋ ಬಂಡಾರನಾಯಿಕೆ ಅವರು ತೊಟ್ಟಿಲು ತೂಗುವ ಕೈಯೇ ರಾಷ್ಟ್ರವನ್ನಾಳುವುದೆಂದು ತೋರಿಸಿಕೊಟ್ಟಿದ್ದಾರೆ. ಅನಿರೀಕ್ಷಿತವಾಗಿ ಅಲ್ಲಿ ಸೇನಾ ಬಂಡಾಯ, ರಾಜಕಾರಣಿ-ಅಧಿಕಾರಿಗಳ ಕುತಂತ್ರದಿಂದ ನಡೆಯುತ್ತದೆ ಎಂಬಾಗಲೇ ಅದನ್ನು ಹತ್ತಿಕ್ಕಿ ನಾಗರಿಕ ಆಡಳಿತೆಯನ್ನು ಉಳಿಸಿದ ಕೀರ್ತಿ ಅವರದು. ಗವರ್ನರ ಜನರಲರಂತಹ ಉಚ್ಚಾಧಿಕಾರಿಯನ್ನೇ ಪದಚ್ಯುತಿಗೊಳಿಸುವಲ್ಲಿ ಅವರು ಯಶಸ್ವಿಯಾದರು.

ಯು- ನೂ

ಬರ್ಮಾಯ ಪ್ರಧಾನಿ ಯು –ನೂ ಸರಿತ ರಾಜಕಾರಣಿ. ಆದರೆ, ತನ್ನ ಕೆಲವೊಂದು ಧೋರಣೆಗಳ ಕಾರಣದಿಂದ ದಂಡಿನಾಳಿಕೆಗೆ ದಾರಿಮಾಡಿಕೊಟ್ಟರು. ಸರ್ ರ ಲ್ ಮಾದರಿಯ ಸಂವಿಧಾನ ರಚನೆಯ ಯೋಜನೆ ಅವರಿಗೆ ಮುಳುವಾಯಿತು. ಎರಡು ವರ್ಷಗಳಿಗೆ ಮೊದಲು ಇವರಿಗೆ ಅಧಿಕಾರ ವಹಿಸಿಕೊಟ್ಟ ಸೇನಾನಿ ನೇವಿನರೇ ಇವರಿಂದ ಅದನ್ನು ಮರಳಿ ಕಸಿದುಕೊಳ್ಳುವಂತಾದುದು ಪ್ರಜಾಪ್ರಭುತ್ವವು ನೆಮ್ಮದಿಯಿಲ್ಲವೆಂಬುದರ ಕುರುಹು. ಪದಚ್ಯುತರಾದುದು ಮಾತ್ರವಲ್ಲ ಬಂಧಿತರೂ ಆಗಿದ್ದಾರೆನ್ನುವಾಗ ಅವರ ಗ್ರಹಗತಿಯೇ ನೆಟ್ಟಗಿಲ್ಲವೆನ್ನಬೇಕಾಗಿದೆ.

ಥಾನುಪಿಳ್ಳೈ

ಕೇರಳದ ಮುಖ್ಯ ಮಂತ್ರಿ ಪಟ್ಟಂ ತಾನು ಪಿಳ್ಳೈ ಯವರು ತ್ರಿಚೂರಿನಲ್ಲಿ ಚೀನ್ರ ಕಲ್ಲಿ ಏಟಿಗೆ ಗುರಿಯಾದರು. ಕರ್ಷಕ ಸಂಘದವರು ಏರ್ಪಡಿಸಿದ್ದ ಮತ ಪ್ರದರ್ಶನದ ವೇಳೆ ಈ ದುರಂತವು ನಡೆಯಿತು. ಸಂವಿಧಾನದಲ್ಲಿ ಮತಪ್ರದರ್ಶನ ಮಾಡುವುದು ನ್ಯಾಯವೆನ್ನಬಹುದಾದರೂ ಆದರೆ ಇಂತಹ ಅಮಾನುಷ ಕೃತ್ಯಗಳಿಗೆ ಆಸ್ಪದ ಕಲ್ಪಿಸಿಕೊಡುವುದು ಸರ್ವಥಾ ಅನುಚಿತ. ಶ್ರೀ ಪಿಳ್ಳೈಯವರು ಸದ್ಯ ಚಿಕಿತ್ಸೆ ಹೊಂದುತಿದ್ದು ಗುಣಮುಖರಾಗುತಿದ್ದಾರೆ: ಸರಿಯೇ. ಆದರೂ ಇಂತಹ ಪೈಶಾಚಿಕ ವೃತ್ತಿಯು ಅವಶ್ಯ ಖಂಡನೀಯ.

ಅಲ್ಲಲ್ಲಿಯ ಸುದ್ದಿಸಾರ

ದ. ಕ. ಜಿಲ್ಲಾ ಚುನಾವಣಾ ಫಲಿತಾಂಶ ವಿಧಾನ ಸಭೆ

ಬೆಳ್ತಂಗಡಿ ಕ್ಷೇತ್ರ— ಕಾಂಗ್ರೆಸ್ ಪತಿಯಿಂದ ಶ್ರೀ ಬಿ ವೈಕುಂಠ ಬಾಳಿಗರು 494 ಹೆಚ್ಚು ಮತ ಪಡೆದು ಆಯ್ಕೆಯಾಗಿದ್ದಾರೆ.

ಶ್ರೀ ಬಿ. ವೈಕುಂಠ ಬಾಳಿಗ (ಕಾಂ) 15,983.
ಶ್ರೀ ಜಿನರಾಜ ಹೆಗ್ಡೆ (ಸ್ವ. ಪ) 12,489
ಶ್ರೀ ಕೆ. ರಾಮನಾಯಕ್ (ರಿ) 4,730.
ಶ್ರೀ ವಿಶ್ವನಾಥ ಶೆಟ್ಟಿ (ಜ. ಸ.) 1,418
ಅಸಿಂಧು ಮತಗಳು 1,301.

ಬಹ್ಮಾವರ ಕ್ಷೇತ್ರ— ಕಾಂಗ್ರೆಸ್ ಅಭ್ಯರ್ಥಿ ಶ್ರೀ ಧರ್ಮಸಾಮ್ರಾಜ್ಯರು 7,686 ಹೆಚ್ಚು ಮತದಿಂದ ಚುನಾಯಿತರಾಗಿದ್ದಾರೆ.

ಶ್ರೀ ಧರ್ಮಸಾಮ್ರಾಜ್ಯ (ಕಾಂ) 14,601
ಶ್ರೀ ಕೆ. ಮಹಾಬಲೇಶ್ವರ ಅಡಿಗ (ಜ. ಸ) 190.
ಶ್ರೀ ಬಿ. ಶೀನಪ್ಪ ಶೆಟ್ಟಿ (ಪಿ. ಎಸ್. ಪಿ) 6,915.
ಅಸಿಂಧು ಮತಗಳು 2,008.

ಮಂಗಳೂರು 2ನೇ ಮತದಾರ ಕ್ಷೇತ್ರ— ಕಮ್ಯುನಿಸ್ಟ್ ಅಭ್ಯರ್ಥಿ ಶ್ರೀ ಎ. ಕೃಷ್ಣ ಶೆಟ್ಟರು 918 ಹೆಚ್ಚು ಮತಗಳಿಸಿ ಚುನಾಯಿತರಾಗಿದ್ದಾರೆ.

ಮತಗಳ ವಿವರ—

ಶ್ರೀ ಎ. ಕೃಷ್ಣ ಶೆಟ್ಟಿ (ಕ) 17,750
,, ಬಿ. ಎಂ. ಇದಿನಬ್ಬ (ಕಾ) 16,832
,, ಎಚ್ ನಾಗಪ್ಪ (ಸ್ವ ಪ) 4,297
,, ರಘುನಾಥ (ಜ ಸ) 1,935
ಶ್ರೀ ಎಸ್ ಎಮ್. ಎಸ್. ಮಹಮ್ಮದ್ (ಸ್ವ) 1,172
ಅಸಿಂಧು ಮತಗಳು 1,487

ಪಾಣೆಮಂಗಳೂರು ಕ್ಷೇತ್ರ— ಕಾಂಗ್ರೆಸ್ ಹುರಿಯಾಳು ಡಾ| ನಾಗಪ್ಪ ಆಳ್ವ 5,325 ಮತದಿಂದ ಆರಿಸಿ ಬಂದಿದ್ದಾರೆ.

ಡಾ. ನಾಗಪ್ಪ ಆಳ್ವ (ಕಾಂ) 16,126
ಶ್ರೀ ಎಮ್. ಎಚ್. ಕೃಷ್ಣಪ್ಪ (ಕ) 10,801
ಡಾ. ಎಮ್ ಎಸ್. ಹೆಗ್ಡೆ (ಸ್ವ. ಪ) 6,311
ಶ್ರೀ ಮರಿಭಟ್ (ಸ್ವ) 907
ಶ್ರೀ ರಾಮ ಮಯ್ಯ (ಜ. ಸ.) 701
ಅಸಿಂಧು ಮತಗಳು 1,119

(ಇತರ ಮತದಾರ ಕ್ಷೇತ್ರಗಳ ಫಲಿತಾಂಶವನ್ನು ಕಳೆದ ವಾರ ಕೊಡಲಾಗಿದೆ.)

ಲೋಕ ಸಭೆ

ಉತ್ತರ ವಿಭಾಗ— ಕಾಂಗ್ರೆಸ್ ಹುರಿಯಾಳು ಶ್ರೀ ಶ್ರೀನಿವಾಸ ಮಲ್ಯರು 12,866 ಹೆಚ್ಚು ಮತಗಳಿಸಿ ಆರಿಸಲ್ಪಟ್ಟಿದ್ದಾರೆ.

ಶ್ರೀ ಶ್ರೀನಿವಾಸ ಮಲ್ಯ (ಕಾಂ.) 1,17,027
ಶ್ರೀ ಡಿ. ಮೋಹನ್ ರಾವ್ (ಪಿ. ಎಸ್. ಪಿ) 1,04,161
ಶ್ರೀ ಟಿ. ವೆಂಕಟ ರಾವ್ (ಸ್ವ) 12,840
ಅಸಿಂಧು ಮತಗಳು 7,451

ದಕ್ಷಿಣ ವಿಭಾಗ— ಕಾಂಗ್ರೆಸ್ ಅಭ್ಯರ್ಥಿ ಶ್ರೀ ಎ. ಶಂಕರ ಆಳ್ವರು 34,756 ಬಹುಮತದಿಂದ ಆರಿಸಲ್ಪಟ್ಟಿದ್ದಾರೆ.

ಶ್ರೀ ಎ. ಶಂಕರ ಆಳ್ವ (ಕಾಂ) 1,18,102
ಶ್ರೀ ಜೆ. ಎಮ್. ಲೋಬೊ ಪ್ರಭು (ಸ್ವ.) 83,346
ಶ್ರೀ ಬಿ. ವಿ. ಕಕ್ಕಿಲ್ಲಾಯ (ಕ.) 59,656
ಶ್ರೀ ಎಮ್. ಗೋವಿಂದ ರಾವ್ (ಜ ಸ.) 17,974
ಅಸಿಂಧು ಮತಗಳು 9,455

ಅಂಚೆ ಮನೆಯ ಉದ್ಘಾಟನೆ— ತಾ. 18-2-1962ರಂದು ಪೆರ್ಡೂರಲ್ಲಿ ಪಂಚಾಯತ್ ಅಧ್ಯಕ್ಷ ಶ್ರೀ ಬಿ ಭುಜಂಗ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಉಡುಪಿ ವಿಭಾಗದ ಅಂಚೆ ಇಲಾಖೆಯ ಇನ್‌ಸ್ಪೆಕ್ಟರ್ ಶ್ರೀ ಎಸ್ ಕೆ. ಹೊಳ್ಳರು, ಡಿಪಾರ್ಟ್‌ಮೆಂಟಲ್ ಸಬ್ ಪೋಸ್ಟು ಆಫೀಸನ್ನು ಉದ್ಘಾಟಿಸಿದರು. ಪಂಚಾಯತಿಯ ಉಪಾಧ್ಯಕ್ಷ ಶ್ರೀ ತಮ್ಮಣ್ಣ ಹೆಬ್ಬಾರರು ಸ್ವಾಗತಿಸಿದನಂತರ, ಶ್ರೀ ಅನಂತ ಪದ್ಮನಾಭ ಅಡಿಗ ಮತ್ತು ಶ್ರೀ ಕೆ. ಗೋಪಾಲಕೃಷ್ಣ ಉಪಾಧ್ಯಾಯರು ಪ್ರಚಲಿತ ವಿಚಾರವಾಗಿ ಭಾಷಣವಿತ್ತರು. ಅಧ್ಯಕ್ಷ ಭಾಷಣದ ಬಳಿಕ ಶ್ರೀ ಎ. ಪಿ. ಕಲ್ಯಾಣಿಯವರು ಧನ್ಯವಾದವಿತ್ತರು ಅಧ್ಯಕ್ಷರು, ಪೋಸ್ಟಲ್ ಸೂಪರಿಂಟೆಂಡೆಂಟ್‌ರವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸುವ ಪತ್ರವನ್ನು ಡಬ್ಬಿಗೆ ಹಾಕುವುದರ ಮೂಲಕ ಅಂಚೆ ಕಛೇರಿಯ ಕಾರ್ಯಕ್ರಮವು ಪ್ರಾರಂಭವಾಯ್ತು. ಶ್ರೀ ಆನಂದ ರಾಯರು ಇಲ್ಲಿಯ ಪೋಸ್ಟು ಮಾಸ್ತರರಾಗಿ ನೇಮಕ ಹೊಂದಿರುತ್ತಾರೆ.

ಪರ್ಯಾಯ ಪರ್ಯಾಯ ಸಂಚಿಕೆ— ಸಂಪಾದಕರು: ಮೂಮೂಸನಾಕರ್. ರಥ ಬೀದಿ, ಉಡುಪಿ.

ಉಡುಪಿಯ ಪರ್ಯಾಯ ಸಮಾರೋಪದ ಸದವಸರದಲ್ಲಿ ಪ್ರಕಟವಾದ ವಿಶೇಷ ಸಂಚಿಕೆಯನ್ನು ಆದರದಿಂದ ಸ್ವಾಗತಿಸುತ್ತೇವೆ. ವಿವಿಧಾಭಿರುಚಿಯ ಕೆಲವು ಲೇಖನಗಳಿಂದ ಕೂಡಿರುವ ಈ ಸಂಚಿಕೆಗೆ ಕಲಾವಿದ ಶ್ರೀ ಬಿ. ಪಿ. ಬ್ಯಾರಿಯವರ ಉಡುಪಿ ಶ್ರೀ ಕೃಷ್ಣ ಹೆಚ್ಚಿನ ಮೆರುಗನ್ನು ಇತ್ತಿದ್ದಾನೆ —ಗೋರಾ.

ಶ್ರೀ ಕೃಷ್ಣ ಮಂದಿರ— ಮುಂಬಯಿಯ ಹಾಗೂ ಇನ್ನಿತರ ಉದಾರ ಮಹನೀಯರ ಸಹಾಯ ಸಹಕಾರಗಳಿಂದ ಮುಂಬಯಿಯಲ್ಲಿ ಕಟ್ಟಿಸಲಾದ ಶ್ರೀ ಕೃಷ್ಣ ಮಂದಿರದಲ್ಲಿ ಶ್ರೀ ಗೋಪಾಲ ಕೃಷ್ಣ ದೇವರ ಮೂರ್ತಿಯನ್ನು ಪ್ರತಿಷ್ಠೆ ಮಾಡುವ ಕೆಲಸವೊಂದು ಬಾಕಿಯಾಗಿತ್ತು, ಈ ಸುಕಾರ್ಯವನ್ನು ಇದೇ ಮಾರ್ಚ್ ತಿಂಗಳ ತಾ 12ನೇ ಸೋಮವಾರ ಬೆಳಿಗ್ಗೆ ಘಂಟೆ 10-30ಕ್ಕೆ ನೆರವೇರಿಸುವುದೆಂದು ನಿಶ್ಚಯಿಸಲಾಗಿದೆ. ಭಗವಾನ್ ಶ್ರೀ ಕೃಷ್ಣ ಮಂದಿರಕ್ಕೆ ವರ್ಣಭೇದವಿಲ್ಲದೆ ಸರ್ವ ಹಿಂದುಗಳಿಗೆ ಪ್ರವೇಶವಿದೆ

ಶ್ರೀಕೃಷ್ಣ ಮಂದಿರವು ಇಲ್ಲಿಯ ಮತ್ತು ದೇಶದ ಹಿಂದುಗಳಿಗೆಲ್ಲ ಮಹಾಕ್ಷೇತ್ರವೆಂದೆನಿಸಬೇಕು. ಶ್ರೀ ಕೃಷ್ಣ ದೇವರ ಕೃಪೆಯನ್ನಭಿಲಾಶಿಸುವ ಭಕ್ತರಿಗೆಲ್ಲ ಈ ದೇವಾಲಯವು ಪುಣ್ಯಸ್ಥಳವೆಂದಾಗಬೇಕು. ಗೋಪಾಲಕೃಷ್ಣ ಮೂರ್ತಿಯು ನಮಗೆಲ್ಲ ಸನ್ಮಾರ್ಗದರ್ಶಕನಾಗಬೇಕು. ಕೃಷ್ಣ ಮಂದಿರವು ನಮ್ಮ ಚಟುವಟಿಕೆಗಳಿಗೊಂದು ಕೇಂದ್ರವಾಗಬೇಕು. ಇವೇ ನಮ್ಮ ಧ್ಯೇಯ.

ಈ ಧ್ಯೇಯಗಳನ್ನು ಪೂರೈಸುವುದು ಮತ್ತು ಶ್ರೀ ಕೃಷ್ಣ ದೇವರ ಪೂಜಾ ವಿನಿಯೋಗಗಳು ಸಾಂಗವಾಗಿ ಎಡೆಬಿಡದೆ ಸಾಗುವಂತೆಯೂ ಮಾಡುವುದು ನಮ್ಮ ಮುಖ್ಯ ಕರ್ತವ್ಯ. ಇದಕ್ಕಾಗಿ ಪ್ರತಿಯೊಬ್ಬನೂ ಕಡಿಮೆಯಲ್ಲಿ ರೂ. 5ನ್ನು ಕೊಟ್ಟು ಶ್ರೀಕೃಷ್ಣ ಪ್ರತಿಷ್ಠೆಯ ಕಾರ್ಯವನ್ನು ಯಶಸ್ವಿಯಾಗುವಂತೆ ಮಾಡಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಬಿ. ಎಸ್. ಕೆ ಬಿ ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಕೆ. ಭುಜಂಗರಾಯರು ವಿನಂತಿಸುತ್ತಾರೆ.

ವಾರ್ಷಿಕೋತ್ಸವ— ಮಂಗಳೂರು ಸನ್ಯಾಸಿಗುಡ್ಡದಲ್ಲಿರುವ ಆರ್ಯ ಸಮಾಜದ ಮಂದಿರದಲ್ಲಿ ತಾ 1ರಂದು ಋಷಿ ಬೋಧೋತ್ಸವವೂ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವವೂ ಶ್ರೀ ಡಿ. ಮಂಜಯ್ಯ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು.

ಮೊದಲಾಗಿ ಆಶ್ರಮದ ಮಕ್ಕಳಿಂದ ಈಶ್ವರ ಪ್ರಾರ್ಥನೆ ಮತ್ತು ಭಜನೆ ಆದ ಬಳಿಕ ಡಾ. ಕೆ ಬಿ. ಶೆಟ್ಟರು ಸ್ವಾಗತ ಭಾಷಣಮಾಡಿ ಆಶ್ರಮದ ವರದಿ ವಾಚನಗೈದರು ಬಳಿಕ ವಿವಿಧ ಆಟಗಳ ಸ್ಪರ್ಧೆಗಳಲ್ಲಿ ವಿಜಯಿಯಾದ ಬಾಲಕ ಬಾಲಕಿಯರಿಗೆ ಪುರಸ್ಕಾರ ವಿತರಣೆಯಾಯಿತು. ಮುಖ್ಯ ಭಾಷಣಕರ್ತರಾದ ಶ್ರೀ ರುದ್ರದೇವ ಶಾಸ್ತ್ರಿಯವರು, ಮಹರ್ಷಿ ದಯಾನಂದರ ಹುಟ್ಟು ಅವರಿಗೆ ಜ್ಞಾನೋದಯ ಉಂಟಾದ ಘಟನೆಯನ್ನು ತದನಂತರ ರಾಷ್ಟ್ರ ನಿರ್ಮಾಣಕ್ಕಾಗಿ ಅವರು ಗೈದ ಸೇವೆ ಮೊದಲಾದುವನ್ನು ಸವಿಸ್ತರವಾಗಿ ವಿವರಿಸಿದರು ಆ ಮೇಲೆ ಶ್ರೀ ಪಿ. ಸಂಜೀವ ಕಾಮತರು ಮಾನವರೆಲ್ಲ ಒಂದೇ ಜಾತೀಯವರೆಂದೂ ಆದುದರಿಂದ ಮನುಷ್ಯರೆಲ್ಲರೂ ಏಕೇಶ್ವರ ಹಾಗೂ ಏಕಧರ್ಮೋಪಾಸನೆಯ ಅವಶ್ಯಕತೆಯನ್ನು ಕುರಿತು ಒತ್ತಿ ಹೇಳಿದರು. ವೈಧಿಕ ಧರ್ಮವು ಅತ್ಯಂತ ಪ್ರಾಚೀನವಾಗಿದ್ದು ವೈಜ್ಞಾನಿಕವಾಗಿರುವುದರಿಂದ ನಾವೆಲ್ಲರೂ ವೈಧಿಕಧರ್ಮವನ್ನೇ ಅನುಸರಿಸಬೇಕೆಂದೂ ಅದರಲ್ಲಿಯೇ ಶ್ರೇಯಸ್ಸು ಇದೆಯೆಂದೂ ಹಾರ್ದಿಕವಾಗಿ ನುಡಿದರು. ಈಗ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ಆಗುವ ಅನಾಚಾರಗಳನ್ನು ದೇವರ ಹೆಸರಿನಲ್ಲಿ ಮಠ ಮತ್ತು ದೇವಸ್ಥಾನಗಳಿಗಾಗುವ ಹಣದ ದುರ್ವ್ಯಯವನ್ನು ಖಂಡಿಸಿದ ಅನಂತಯ್ಯನವರು ಆಹಾರ ಬಟ್ಟೆಗಳಿಲ್ಲದೆ ಬಡತನದಿಂದ ಕೊರಗುವ ಬಡಬಗ್ಗರ ಸೇವೆಯನ್ನು ಗೈದು ಅವರು ಅನ್ಯರಮತಕ್ಕೆ ಸೇರದಂತೆ ಮಾಡಬೇಕೆಂದೂ ಹೇಳಿದರು. ಅಧ್ಯಕ್ಷರು ಆಶ್ರಮದ ಕಾರ್ಯಗಳನ್ನು ಹೊಗಳಿ ಬಾಲ್ಯವಿವಾಹ ಜಾತೀಯತೆ ಮತ್ತು ಮೂರ್ತಿಪೂಜೆ ಖಂಡನೆ ಸ್ತ್ರೀ ಶಿಕ್ಷಣ ಗುರು ಕುಲಶಿಕ್ಷಣ ಪದ್ಧತಿ. ವೈದಿಕ ಧರ್ಮದ ಪ್ರಚಾರ ಮೊದಲಾದುವುಗಳಲ್ಲಿ ದೇಶಕ್ಕೆ ಮಹರ್ಷಿ ದಯಾನಂದರಿಂದ ದೊರೆತಸೇವೆಯನ್ನು ವಿವರಿಸಿದರು. ಕೊನೆಯದಾಗಿ ಡಾ. ಕೆ. ಬಿ. ಶೆಟ್ಟರು ಧನ್ಯವಾದ ಅರ್ಪಿಸಿ ಸಭೆಯು ಶಾಂತಿ ಪಾಠದೊಂದಿಗೆ ಮುಕ್ತಾಯವಾಯಿತು.

ನವದೆಹಲಿಯಲ್ಲಿ ಗಣರಾಜ್ಯ ದಿನೋತ್ಸವ

ದೇಶದಲ್ಲಿ ಗಣರಾಜ್ಯ ದಿನವನ್ನು ರಾಷ್ಟ್ರೀಯ ಉತ್ಸವದೋಪಾದಿಯಲ್ಲಿ ಆಚರಿಸಲಾಗುತ್ತದೆ.

೧೯೬೨ರ ಜನವರಿ ೨೬ರಂದು ದೇಶವು ಗಣರಾಜ್ಯವಾಗಿ ೧೨ ವರ್ಷಗಳು ತುಂಬಿ ೧೩ನೆಯ ವರ್ಷದಲ್ಲಿ ಕಾಲಿಟ್ಟಿತು.

ಭಾರತದ ರಾಜಧಾನಿಯಲ್ಲಿ ಭೂ, ನೌಕಾ ಹಾಗೂ ವಾಯು ಸೇನೆಗಳಿಂದ ಆಕರ್ಷಕ ಕವಾಯತು ನಡೆಯಿತು ಸೇನಾ ಕವಾಯತಿನನಂತರ ಸುಮಾರು ೩,೦೦೦ ಶಾಲಾ ಮಕ್ಕಳು ಶಿಸ್ತಿನಿಂದ ಬಂದರು. ಡಾ| ಎಸ್. ರಾಧಾಕೃಷ್ಣನ್ ಅವರು ವಂದನೆ ಸ್ವೀಕರಿಸಿದರು.

ಸಾಂಸ್ಕೃತಿಕ ಉಜ್ವಲ ಪ್ರದರ್ಶನವು ಸುಮಾರು ೭೦೦ ಜನ ಜಾನಪದ ಕಲಾವಿದರ ನರ್ತನ ಮತ್ತು ಸಂಗೀತದೊಂದಿಗೆ ಆರಂಭವಾಯಿತು. ಈ ಕಲಾವಿದರು ಹಾಡುತ್ತಾ ಕುಣಿಯುತ್ತಾ ಉಪರಾಷ್ಟ್ರಪತಿಗಳಿದ್ದ ವೇದಿಕೆಯ ಮುಂದೆ ಹಾದು ಹೋದರು. ಅನಂತರ ದಿವ್ಯಾಲಂಕೃತ್ಯ ಹನ್ನೆರಡು ಆನೆಗಳು ಮೆರವಣಿಗೆಯಲ್ಲಿ ಬಂದುವು. ಆನೆಗಳ ಮೇಲೆ ಕುಳಿತಿದ್ದ ಮಾವುತರೇ ಅತ್ಯಂತ ಸೊಗಸಾಗಿ ಉಡುಪುಗಳನ್ನು ಧರಿಸಿದ್ದರು.

ಅನಂತರ ರಾಜ್ಯಗಳು ಮತ್ತು ಕೇಂದ್ರ ಮಂತ್ರಿ ಶಾಖೆಗಳು ವ್ಯವಸ್ಥೆಗೊಳಿಸಿದ್ದ ೧೮ ಟ್ಯಾಬ್ಲೋಗಳು ಮೆರವಣಿಗೆಯಲ್ಲಿ ಬಂದುವು. ಕೆಲವು ಟ್ಯಾಬ್ಲೋಗಳು ದೇಶದ ಕಳೆದ ಒಂದು ದಶಕದಲ್ಲಿ ಗಳಿಸಿರುವ ಆರ್ಥಿಕ ಪ್ರಗತಿಯನ್ನು ಪರಿಚಯ ಮಾಡಿಕೊಟ್ಟವು. ರಾತ್ರಿ ರಾಷ್ಟ್ರಪತಿ ಭವನ ಮತ್ತಿತರ ಸರ್ಕಾರಿ ಕಟ್ಟಡಗಳು ದೀಪಾಲಂಕೃತಗೊಂಡಿದ್ದುವು.

ಜನವರಿ ೨೭ ಮತ್ತು ೨೮ರಂದು ಜಾನಪದ ನೃತ್ಯೋತ್ಸವ ನಡೆಯಿತು. ಜನವರಿ ೨೯ರಂದು ಚಿತ್ತಾಕರ್ಷಕ 'ಬೀಟಿಂಗ್ ದಿ ರಿಟ್ರೀಟ್' ಕಾರ್ಯಕ್ರಮ ನಡೆಯಿತು. ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಕವಿ ಸಮ್ಮೇಳನವೊಂದು ಮತ್ತು ಮುಷೈರಾವೊಂದು ಸಹ ನಡೆದವು.

ಗಣರಾಜ್ಯ ದಿನವು ಸೇನಾ ಪ್ರದರ್ಶನವಲ್ಲ ಆದರೆ ಅದೊಂದು ರಾಷ್ಟ್ರೀಯ ಉಜ್ವಲ ಪ್ರದರ್ಶನವಾಗಿದೆ. ದೇಶದ ಗತ ಮಹತ್ಸಾಧನೆಗಳನ್ನು ಜನರಿಗೆ ನೆನಪು ಮಾಡಿಕೊಟ್ಟು ದೇಶದ ಮುಂದಿರುವ ಮಹತ್ಕಾರ್ಯಗಳ ಹೊರೆಗಳನ್ನು ಸಾಧಿಸುವ ಬಗ್ಗೆ ಅವು ಸ್ಫೂರ್ತಿದಾಯಕವಾಗಿರುವಂತೆ ಮಾಡುವುದೇ ಗಣರಾಜ್ಯ ದಿನೋತ್ಸವದ ಆಚರಣೆಯ ಒಂದು ಉದ್ದೇಶವಾಗಿದೆ.

ಗಣರಾಜ್ಯದ ದಿನ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಗೋವಾದ ಜಾನಪದ ಕಲಾವಿದರನ್ನು ಚಿತ್ರದಲ್ಲಿ ಕಾಣಬಹುದು.

ಕೃಷ್ಣ ಮೆನನ್

ತಾನು ಎದುರಿಸಬೇಕಾಗಿ ಬಂದ ಕೃಪಲಾನಿಯವರು ತಮ್ಮನ್ನು ಕಮ್ಯುನಿಸ್ಟನೆಂದು ಎಷ್ಟು ಟೀಕಿಸಿದರೂ ತುಟಿಬಿಚ್ಚದ ಮೆನನ್ನರು ಉತ್ತರ ಮುಂಬಯಿ ಮತದಾರ ಕ್ಷೇತ್ರದಿಂದ ೧೪೦ ಸಾವಿರ ಬಹುಮತದಿಂದ ಲೋಕ ಸಭೆಗೆ ಆರಿಸಿ ಬಂದಿದ್ದಾರೆ. ಈಗ ಅವರು ತಾನು ಪ್ರಚ್ಛನ್ನ ಕಮ್ಯುನಿಸ್ಟನಲ್ಲವೆಂಬುದನ್ನು ಬಹಿರಂಗಗೊಳಿಸಿದ್ದಾರೆ.

ಕಾಂಗ್ರೆಸ್ ಜನತಾ ಪ್ರತಿನಿಧಿಗಳು

(೫ನೇ ಪುಟದಿಂದ)

ರಿನಲ್ಲಿ ನೆಲಸಿರುವರಾದರೂ ತನ್ನ ಜಿಲ್ಲೆಯನ್ನು ಮರೆತಿಲ್ಲ. ತನ್ನ ಕಾರ್ಯದಕ್ಷತೆಯಿಂದ ರಾಜ್ಯದ ರಾಜಕೀಯ ಕ್ಷೇತ್ರದಲ್ಲಿ ಗಣನೀಯ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಈ ಕಾರಣದಿಂದ ಈ ಬಾರಿಯ ಸಚಿವ ಸಂಪುಟದಲ್ಲಿ ಇವರ ಹೆಸರೂ ಸೇರಿಕೊಳ್ಳುವ ನಿರೀಕ್ಷೆಯಿದೆ. ಕಾರ್ಯದಕ್ಷತೆಗೂ ಸೇವೆಗೂ ಹೆಸರಾದವರಿಗೆ ಮಾತ್ರ ಇಂತಹ ಸ್ಥಾನ ದೊರಕಿತೆಂದರೆ, ರಾಜ್ಯದ ಭಾಗ್ಯದ ಬಾಗಿಲು ತೆರೆದಂತೆ.

ಎಂ ಶ್ರೀನಿವಾಸ ನಾಯಕ್

ಮಂಗಳೂರು ನಗರ ಸಭೆಯ ಅಧ್ಯಕ್ಷರಾಗಿ ಬಹುಮುಖ ಕೀರ್ತಿ ಗಳಿಸಿದ ಶ್ರೀ ಮಣೇಲ್ ಶ್ರೀನಿವಾಸ ನಾಯ್ಕರು ಇನ್ನೂ ಐವತ್ತು ತುಂಬದವರು. ಎಳೆಯ ಹರೆಯದಿಂದಲೇ ವ್ಯಾಪಾರ ವಹಿವಾಟಿನಲ್ಲಿ ದುಡಿದು ಕಾರ್ಯದಕ್ಷತೆಯಲ್ಲಿ ಪರಿಪಕ್ವ ಅನುಭವ ಗಳಿಸಿಕೊಂಡವರು. ಶೈಕ್ಷಣಿಕ, ಧಾರ್ಮಿಕ, ಸಾರ್ವಜನಿಕ ಸಂಸ್ಥೆಗಳಲ್ಲಿ ದುಡಿದ ಶ್ರೀಮಂತ ನಾಯ್ಕರು ಮಂಗಳೂರು ನಗರದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಜನತೆಯೊಡನೆ ಪ್ರೀತಿವಿಶ್ವಾಸದಿಂದ ನಡೆದು ತನ್ನಿಂದ ಕೈಲಾದಷ್ಟು ಸೇವೆ ಮತ್ತು ಸಹಾಯ ನೀಡುತ್ತ ಬಂದಿರುವ ಇವರು ಕಮ್ಯುನಿಸ್ಟ್ ಅಭ್ಯರ್ಥಿಯನ್ನು ಸೋಲಿಸಿ ಪ್ರಚಂಡ ಬಹುಮತದಿಂದ ಆರಿಸಿ ಬಂದಿದ್ದಾರೆ. ಇವರು ಮಂಗಳೂರು ಮತ್ತು ಜಿಲ್ಲೆಯ ಹಿತಸಾಧನೆಗೆ ದುಡಿಯಲು ಕಟಿಬದ್ಧರಾಗುವುದು ಖಂಡಿತ.



ಬಿ. ವೈಕುಂಠ ಬಾಳಿಗಾ

ಮುಖ್ಯ ಮಂತ್ರಿ ಜತ್ತಿಯವರು ತಾನು ಗೆದ್ದು ಬಂದುದರೊಡನೆ ಹೆಚ್ಚಿನ ಮಂತ್ರಿಗಳನ್ನು ಕಳೆದುಕೊಂಡರು. ಆದರೂ ಸ್ವತಂತ್ರ ಪಕ್ಷದ ಪ್ರಾಬಲ್ಯವಿದ್ದ ಬೆಳ್ತಂಗಡಿಯಲ್ಲಿ ಕಾಂಗ್ರೆಸ್ಸಿನ ಮಂತ್ರಿ ಬಾಳಿಗಾ ಅವರು ಶ್ರೀ ಜಿನರಾಜ ಹೆಗ್ಡೆಯವರನ್ನು ಸೋಲಿಸಿ ಮೇಲೆ ಬಂದರು. ೧೯೫೭ರಿಂದಲೂ ವಿಧಾನ ಸಭಾ ಸದಸ್ಯರಾಗಿರುವ ಇವರು ನಿಜಲಿಂಗಪ್ಪನವರ ಮಂತ್ರಿಮಂಡಳದಲ್ಲಿದ್ದರು; ಹಾಗೆಯೇ ಕಾಂಗ್ರೆಸ್ಸಿನ ಎರಡು ಬಣಗಳ ನಡುವೆ ಸಾಮಂಜಸ್ಯ ಕಲ್ಪಿಸಲು ಸಂಪುಟದಲ್ಲಿ ಜತ್ತಿಯವರು ಸೇರಿಸಿಕೊಂಡವರಲ್ಲಿ ಇವರೂ ಒಬ್ಬರು. ಈ ಗುಂಪಿನ ರಾಜಕಾರಣವು ಇನ್ನೂ ಅಳಿಯದಿರುವುದರಿಂದ ಶಿಕ್ಷಣ, ವಿಮೆ, ಬೇಂಕಿಂಗ್ ಕ್ಷೇತ್ರಗಳಲ್ಲಿ ಪ್ರತ್ಯಕ್ಷ ಅನುಭವವಿರುವ ಇವರು ಪರಿಸ್ಥಿತಿಗಳ ಒತ್ತಡದ ಮೇಲೆ ವಿಧಾನ ಸಭಾ ಕಾಂಗ್ರೆಸ್ಸಿನ ನಾಯಕತ್ವ ಸ್ವೀಕರಿಸಬೇಕಾಗಿ ಬಂದರೂ ಆಶ್ಚರ್ಯವಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ೬೭ ವರ್ಷದ ಬಾಳಿಗಾ ಅವರು ತಾರುಣ್ಯದಂತೆಯೇ ಇಂದಿಗೂ ದುಡಿಯುತ್ತಿದ್ದಾರೆ.

ವೆಂಕಟರಮಣ ಗೌಡ

೧೯೫೭ರಿಂದಲೂ ವಿಧಾನ ಸಭಾ ಸದಸ್ಯರೆಂದು ಆಯ್ಕೆಗೊಂಡು ಬಂದವರಲ್ಲಿ ಪುತ್ತೂರಿನ ಶ್ರೀ ಕೆ. ವೆಂಕಟರಮಣ ಗೌಡರೂ ಒಬ್ಬರು. ಬಹಿರಂಗ ಪ್ರಚಾರವಿಲ್ಲದೆಯೇ ತನ್ನ ಕ್ಷೇತ್ರಾಭಿವೃದ್ಧಿಯ ವಿವಿಧ ಕಾರ್ಯಗಳಲ್ಲಿ ತೊಡಗಿರುವ ಇವರ ಮೇಲೆ ಪುತ್ತೂರಿನ ಜನತೆ ಮರಳಿ ವಿಶ್ವಾಸವನ್ನು ಪ್ರದರ್ಶಿಸಿದೆ. ವಕೀಲ ವೃತ್ತಿಯವರಾದ ಶ್ರೀ ಗೌಡರು ಇಂದು ವಕಾಲತ್ತನ್ನು ಬಿಟ್ಟುಬಿಟ್ಟಿರುವರು. ಪುತ್ತೂರಿನಂತಹ ಗ್ರಾಮೀಣ ಪ್ರದೇಶಗಳ ಅಭ್ಯುತ್ಥಾನದ ಕಾರ್ಯದಲ್ಲಿ ಅವರು ತುಂಬ ಕಳಕಳಿ ವಹಿಸಿದ್ದಾರೆಂದೇ ಅವರು ಈ ಬಾರಿಯೂ ವಿಶೇಷ ಬಹುಮತದಿಂದ ಗೆದ್ದುಬಂದಿದ್ದಾರೆ; ಸ್ವತಂತ್ರ ಪಕ್ಷವನ್ನೂ ಸೋಲಿಸಿದ್ದಾರೆ. ಸರಳರೂ ನಿರಹಂಕಾರಿಗಳೂ ಸೌಮ್ಯರೂ ನಿಗರ್ವಿಗಳೂ ಆದ ಶ್ರೀ ಗೌಡರು ರಾಜಕೀಯವನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವಂತೆ ಕಂಡರೂ ಸತ್ಯಸ್ಥಿತಿ ಹಾಗಿರುವುದಿಲ್ಲ

ಎ. ಸುಬ್ಬಯ್ಯ ನಾಯ್ಕ್

ಉಪಾಧ್ಯಾಯರಾಗಿ ತಮ್ಮ ಜೀವನ ರಂಗಕ್ಕೆ ದುಮುಕಿದ್ದ ಶ್ರೀ ಸುಬ್ಬಯ್ಯ ನಾಯ್ಕರು ೧೯೫೭ರಿಂದ ವಿಧಾನ ಸಭಾ ಸದಸ್ಯರಾಗಿದ್ದಾರೆ. ಅವರಿಂದು ಉಪಾಧ್ಯಾಯ ವೃತ್ತಿಯಲ್ಲೇ ಇರುತ್ತಿದ್ದರೆ,ಯಾವುದೋ ಒಂದು ಊರಲ್ಲಿ ಬೋರ್ಡು ಹೈಸ್ಕೂಲಿನ ಹಿಂದಿ ಪಂಡಿತರಾಗಿಯೇ ಉಳಿಯಬೇಕಾಗಿತ್ತು. ಕಾಂಗ್ರೆಸ್ ಪಕ್ಷವನ್ನು ಸೇರಿದ ಇವರು ಪುತ್ತೂರಿನ ದ್ವಿಸದಸ್ಯ ಮತದಾರ ಕ್ಷೇತ್ರದಿಂದ ೧೯೫೭ರಲ್ಲಿ ಆರಿಸಿ ಬಂದರು. ಸಹಜವಾಗಿ ಅಧ್ಯಾಪಕರಲ್ಲಿರುವ ಉದಾರತೆ, ಸಮಾಜ ಕಲ್ಯಾಣ ಕಾರ್ಯಗಳಲ್ಲಿ ಆಸಕ್ತಿ ಮೊದಲಾದ ಉನ್ನತ ಗುಣಗಳುಳ್ಳ ಅವರು ತನ್ನ ಕ್ಷೇತ್ರದ ಉನ್ನತಿಗೆ ಕಾರಣರಾದವರು. ಈ ಸಾರಿ ಸುಳ್ಯದ ಕಾದಿಟ್ಟ ಮತದಾರ ಕ್ಷೇತ್ರದಿಂದಲೂ ತನ್ನ ಮೂವರು ಎದುರಾಳಿಗಳನ್ನೂ ಸೋಲಿಸಿ ಗೆದ್ದು ಬಂದಿದ್ದಾರೆ. ಅಧ್ಯಾಪಕ ವೃತ್ತಿಗೆ ರಾಜಿನಾಮೆಯಿತ್ತು ಹೊರ ಬಂದ ಇವರಿಗೆ ಈಗ ರಾಜಕೀಯವೇ ವೃತ್ತಿ ಎಂಬಂತಾಗಿದೆ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

ಕವಿ ಲಕ್ಷ್ಮೀಶನ ಶಬ್ದಾಲಂಕಾರ ವೈಭವ— ಲೇಖಕರು: ಶ್ರೀ ರಾ. ನ. ಮಳಗಿ. ಪ್ರಕಾಶಕರು: ಸಾಹಿತ್ಯ ಭಂಡಾರ ಹುಬ್ಬಳ್ಳಿ. ಪುಟಗಳು ೮೦. ಬೆಲೆ: ರೂ ೧-೨೫

ನಾಡಲೋಲ ಲಕ್ಷ್ಮೀಶನ ಕವಿತಾ ಶೈಲಿಯು ಮನೋಹರವಿರುವುದಕ್ಕೆ ಆತನು ಬಳಸಿಕೊಂಡ ಅಲಂಕಾರಗಳೂ ಕಾರಣವಾಗಿವೆ. ಪ್ರತಿ ಪದ್ಯದಲ್ಲಿಯೂ ಅನರ್ಘ್ಯ ಶಬ್ದಾವಲಿಗಳಿರುವಂತೆಯೇ ಶಬ್ದಾರ್ಥಾಲಂಕಾರಗಳೂ ಕಂಗೊಳಿಸುತ್ತವೆ. ಅಪ್ರಯತ್ನವಾಗಿ ಬಂದಿರುವ ಇಂತಹ ಶಬ್ದಾಲಂಕಾರಗಳ ದಿಗ್ದರ್ಶನವನ್ನು ಶ್ರೀ ಮಳಗಿಯವರು ಸಾಹಿತ್ಯಾಭ್ಯಾಸಿಗಳಿಗೆ ಮಾಡಿಕೊಡುವ ಉದ್ದೇಶದಿಂದ ಈ ಪುಸ್ತಕದಲ್ಲಿ ಲಕ್ಷ್ಮೀಶನ ಜೈಮಿನಿ ಭಾರತದ ಶಬ್ದಾಲಂಕಾರ ವೈಭವಕ್ಕೆ ನಿದರ್ಶನವೆನಿಸಿದ ೧೮೬ ಷಟ್ಪದಿಗಳನ್ನು ಆರಿಸಿ ವಿವರಿಸಿದ್ದಾರೆ. ಈ ೧೮೬ ಪದ್ಯಗಳಲ್ಲಿ ಬಂದಿರುವ ಯಮಕ, ಅನುಪ್ರಾಸಾದಿಗಳ ವೈವಿಧ್ಯವನ್ನು ಅನುಲಕ್ಷಿಸಿ ೨೪ ಗುಂಪುಗಳಲ್ಲಿ ಅವನ್ನು ವಿಂಗಡಿಸಿದ್ದಾರೆ. ವರಕವಿ ಬೇಂದ್ರೆಯವರನ್ನುವಂತೆ "ಕವಿ ಲಕ್ಷ್ಮೀಶನ ವಾಣಿಯಲ್ಲಿ ವೇಣಿನಾದವೂ ಇದೆ; ವೀಣಾನಾದವೂ ಇದೆ. ಅದರ ಸಮರಸ ಸೌಭಾಗ್ಯವು ಯಾರ ಕಿವಿಯಲ್ಲಿ ಹೃದಯದಲ್ಲಿ ಧ್ವನಿತವಾಗುವುದೋ ಅವರು ಧನ್ಯರು." ಶ್ರೀ ಮಳಗಿಯವರು ಇಂತಹ ಧನ್ಯರಲ್ಲಿ ಒಬ್ಬರಾಗಿದ್ದು, ಜೈಮಿನಿ ಭಾರತವನ್ನು ಓದಿ ಅದರ ರಸಾಸ್ವಾದನೆ ಮಾಡುವ ಅಭಿಲಾಷೆಯನ್ನು ಕುದುರಿಸುವಂತೆ ಈ ಪುಸ್ತಕವನ್ನು ಬರೆದು ಉಪಕಾರ ಮಾಡಿದ್ದಾರೆ. ಸಾಹಿತ್ಯಾಭ್ಯಾಸಿಗಳು ಅವಶ್ಯ ಸಂಗ್ರಹಿಸಲೇಬೇಕಾದ ಪುಸ್ತಕವಿದು.

ಭಾವಾಂಜಲಿ: (ವಿವಿಧ ಲೇಖಕರಿಂದ). ಪ್ರಕಾಶಕರು: ಲೋಕ ಸೇವಾವೃಂದ, ಆಳಕೆ, ದ. ಕನ್ನಡ. ಪುಟಗಳು: ೭೭. ಬೆಲೆ: ರೂ. ೧-೫೫.

ಭಾವಗೀತೆಗಳ ಹೊರೆ ಭಾರವಾಗುತ್ತ ಬರುತ್ತಿರುವ ಇಂದಿನ ದಿನಗಳಲ್ಲಿ ಆಧ್ಯಾತ್ಮಿಕ ವಾದವನ್ನು ಪ್ರತಿನಿಧಿಸುವ ಕವಿತೆಗಳು ಅತ್ತಿಯ ಹೂವಿನಂತೆ ಅರಳುವುದಿದೆ. ಭಾವಾಂಜಲಿಯು ಭಕ್ತಿಪ್ರದವಾದ ಆಧ್ಯಾತ್ಮಿಕ ಭಾವಪ್ರಧಾನವಾದ ಗೀತೆಗಳ ಅಂಜಲಿಯಾಗಿ ಕನ್ನಡಿಗರ ಮುಂಬಂದಿದೆ. ಈ ಸಂಗ್ರಹದಲ್ಲಿ ಒಟ್ಟು ೭೦ ಗೀತೆಗಳಿವೆ. ಶ್ರೀಗಳಾದ ಎಂ. ನಾರಾಯಣಭಟ್, ಕೆ. ಪಟ್ಟಣ್ಣ ಗೌಡ, ಎಸ್. ತಿರುಮಲೇಶ್ವರ ಭಟ್ಟ, ಹಳೆಹಿತ್ಲು ಶಂಕರನಾರಾಯಣ ಭಟ್ಟ, ಎಚ್. ಶ್ರೀಧರರಾವ್, ದೇವಕುಮಾರಿ, ಕೇಡಿಮೂಲೆ ಗೋಪಾಲಕೃಷ್ಣ ಭಟ್ಟ, ಉಳುವಾನ ಗಂಗಾಧರ ಭಟ್ಟ ಮತ್ತು ಚಕ್ರಪಾಣಿಯರ ಕೃತಿಗಳು ಇವುಗಳಾಗಿವೆ. ಭಾವನಾರೂಪವಾದ ಅಸೀಮ ಶಕ್ತಿಯನ್ನು ಸಂಯಮಿಸಿ, ಅದನ್ನು ಉಚಿತ ಮಾರ್ಗಗಾಮಿಯಾಗಿಸಿ ಉತ್ಕೃಷ್ಟ ಧ್ಯೇಯ ಸಾಧನೆಗೆ ಬಳಸಿಕೊಳ್ಳುವವರು ಉತ್ತಮ ಸಾಧಕರು; ಭಕ್ತರು ಉಪರೋಕ್ತ ಕವನಕಾರರು ಪರಮಾತ್ಮನ ಸಾಧನೆಯಲ್ಲಿ ಅದನ್ನು ಬಳಸಿಕೊಂಡಿರುವುದು ಇಲ್ಲಿನ ಕವನಗಳಿಂದ ವ್ಯಕ್ತವಾಗುತ್ತದೆ. ಹಾಗೆಂದು ಇವೆಲ್ಲವೂ ಕೇವಲ ಭಕ್ತಿಗೀತೆಗಳೇ ಎನ್ನುವಂತಿಲ್ಲ. ಸಾಹಿತ್ಯದ ಮೆರಗು ಕಡಿಮೆಯಾಗಿದ್ದರೂ ಕವನಗಳ ಉದ್ದೇಶ ಸಾರ್ಥಕವಾಗಿದೆ. ಶ್ರೀ ನಾರಾಯಣ ಭಟ್ಟರ ಈ ಕವಿತೆಯನ್ನು ಓದಿರಿ.

ತ್ವರೆಯಿಂದ ಓಡಿ ಬಾ। ಜಗವನ್ನು ತಬ್ಬಿಕೋ;
ಮರೆಯಿಂದ ಹೊರಗೆ ಬಾ। ಜನರನ್ನು ಬಿಗಿದುಕೋ;
ಸೆರೆಯಿಂದ ಝರಿಯಿಂದ। ಮುಗುವನ್ನು ತಡೆದುಕೋ
ಕರೆದೊಮ್ಮೆ ನೇವರಿಸು। ಹಿಡಿದೆತ್ತಿ ಹಡೆದುಕೊ॥

ಸರಳವಾದ ಪದ ಪ್ರಯೋಗದಿಂದಲೇ ಜಗತ್ತಿನ ಜನತೆಯ ಕರೆಯನ್ನು ಪರಮಾತ್ಮನಿಗೆ ಮುಟ್ಟಿಸಲು ಇದು ಶಕ್ತವಿದೆ.

ಆಳಕೆಯ ಸ್ನೇಹಿತರ ಪ್ರಯತ್ನವು ಸ್ತುತ್ಯ. ಅವರಿಂದ ಸರಸ್ವತಿಯು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೇವೆ ಮಾಡಿಸಿಕೊಳ್ಳಲಿ.

ನಮ್ಮ ಅಜಪುರ— ಪ್ರಕಟಣಕಾರರು: ಕರ್ನಾಟಕ ಸಂಘ, ಬ್ರಹ್ಮಾವರ, ದ. ಕನ್ನಡ. ಬೆಲೆ: ರೂ. ೧—೫೦.

ಬ್ರಹ್ಮಾವರದ ಕರ್ನಾಟಕ ಸಂಘವು ಪ್ರತಿ ವರ್ಷವೂ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಜನ ಜಾಗ್ರತಿಯ ಕಾರ್ಯದಲ್ಲಿ ದುಡಿಯುತ್ತಿದೆ. 'ನಮ್ಮ ಅಜಪುರ' ವೆಂಬುದು ೧೯೬೧ರ ವಿಜಯ ದಶಮಿಯ ಸಮಯ "ಬ್ರಹ್ಮಾವರ"ದ ಚರಿತ್ರೆ, ನಿಸರ್ಗಪರಿಚಯವೇ ಮೊದಲಾದ ವಿಷಯಗಳನ್ನು ಸಂಗ್ರಹಿಸಿ, ಅವನ್ನು ಸಾರ್ವಜನಿಕರಿಗೆ ಪ್ರಸ್ತುತಪಡಿಸುವ ಪ್ರಯತ್ನ ಅದರೊಡನೆ ನಾಲ್ಕು ಉತ್ತಮ ಮಟ್ಟದ ಬರಹಗಳನ್ನೂ ಕನ್ನಡಿಗರು ಓದಿ ಮೆಚ್ಚಬಹುದು. ಸರ್ವಸಾಮಾನ್ಯವಾಗಿ ನಮ್ಮ ದೇಶದ ಪ್ರತಿ ಊರಿಗೂ ಪ್ರತಿ ಕಲ್ಲಿಗೂ ತನ್ನದೇ ಆದ ಒಂದೊಂದು ಇತಿಹಾಸವಿರುತ್ತದೆ. ಅದರಲ್ಲಿ ಜೊಳ್ಳೂ ಕೂಡಿರಬಹುದು. ಇವೆಲ್ಲವನ್ನೂ ಸಂಗ್ರಹಿಸಿ ವಿಮರ್ಶೆಯ ಒರೆಗಲ್ಲಿನಲ್ಲಿ ಒರೆದು ನೋಡಿದರೆ, ಇತಿಹಾಸ ಶುದ್ಧವಾದೀತು. ಇದಕ್ಕಾಗಿ ಪ್ರತಿ ಊರಿನ ಪರಿಚಯ ಪ್ರಾಮುಖವೆನಿಸಿದ ಇಂತಹ ಪುಸ್ತಕಗಳು ಪ್ರಕಟವಾಗುವುದು ಅವಶ್ಯ. ಯಕ್ಷಗಾನದ ಪಾರ್ತಿ ಸುಬ್ಬನ ಊರಾದ ಈ ಅಜಪುರ ಇಲ್ಲವೇ ಬ್ರಹ್ಮಾವರದ ಕೈಪಿಡಿಯು ಉಳಿದ ಊರಿನವರಿಗೂ ಸ್ಫೂರ್ತಿಯನ್ನು ತಂದುಕೊಡುವಂತಾಗಿ ನಮ್ಮೂರಿನ ಗತೇತಿಹಾಸದ ಮೇಲೆ ಕ್ಷ-ಕಿರಣ ಬೀಳುವಂತಾಗಲಿ ಎಂದು ಬಯಸುತ್ತೇವೆ. ನಾವಿಂದು ಅಮೆರಿಕೆ-ಇಂಗ್ಲೆಂಡ್-ರಶ್ಯ-ಜಪಾನ್‌ಗಳ ಬಗ್ಗೆ ಬೇಕಷ್ಟನ್ನು ತಿಳಿದಿರುವೆವಾದರೂ ನಮ್ಮ ದೇಶದ, ರಾಜ್ಯದ, ಜಿಲ್ಲೆಯ, ಹೆಚ್ಚೇಕೆ, ನಮ್ಮ ಊರಿನ ಬಗ್ಗೆ ನಮ್ಮಲ್ಲಿ ಸ್ಪಷ್ಟವಾದ ತಿಳುವಳಿಕೆಯಿರುವುದಿಲ್ಲ. ಇಂತಹ ಗ್ರಂಥ ಪ್ರಕಾಶನದಿಂದ ನಮಗೂ ನಮ್ಮ ಮುಂದಿನವರಿಗೂ ಈ ಸಂಬಂಧದ ಜ್ಞಾನವೆಲ್ಲ ಲಭಿಸುವುದು ಸಾಧ್ಯ. —ಗೋರಾ

ನಿರ್ಮಲ ಗ್ರಾಮದ ಕುಶಲ ಕಲೆಗಳು

ಆಂಧ್ರಪ್ರದೇಶದ ವಾರಂಗಲ್ ಜಿಲ್ಲೆಗೆ ಸೇರಿದ ನಿರ್ಮಲ್ ಎಂಬ ಹೆಸರಿನ ಗ್ರಾಮ ನೋಡುವುದಕ್ಕೆ ಒಂದು ಕೈಗಾರಿಕಾ ಕೇಂದ್ರವಾಗಿರುವ ಗ್ರಾಮ ಎಂಬ ಭಾವನೆಯೇ ಉಂಟಾಗುವುದಿಲ್ಲ. ಸುತ್ತಲೂ ಬೆಟ್ಟಗಳು ಮತ್ತು ಅರಣ್ಯಗಳಿಂದ ಕೂಡಿರುವ ಈ ಗ್ರಾಮ ಒಂದು ಸಣ್ಣಗ್ರಾಮವಾದರೂ ಅದರ ಕೀರ್ತಿ ಬಹಳ ದೊಡ್ಡದು. ಕಾರಣ ಇಷ್ಟೇ ಅದು ಕುಶಲ ಕಲಾವಿದರ ತವರೂರಾಗಿದೆ. ಕುಶಲ ಕಲಾವಿದರು ತಯಾರಿಸುವ ಗೊಂಬೆಗಳು ಆಟದ ಸಾಮಾನುಗಳು ಮತ್ತು ಇತರ ಕಲಾತ್ಮಕ ವಸ್ತುಗಳು ಕಲಾಭಿಮಾನಿಗಳನ್ನು ಮುಗ್ಧಗೊಳಿಸುತ್ತವೆ.

ಈ ಗ್ರಾಮ ಬಹಳ ಹಿಂದಿನ ಕಾಲದಿಂದಲೂ ತುಂಬಾ ಪ್ರಸಿದ್ಧಿ ಪಡೆದಿದೆ. ಈ ಗ್ರಾಮದ ಹೆಸರು ಕೂಡ ವಾರಂಗಲ್ಲಿನ ಕಾಕತೀಯ ರಾಜವಂಶಕ್ಕೆ ಸೇರಿದ ನಿಮ್ಮ ನಾಯಕನ ಹೆಸರಿನಿಂದ ಉದ್ಭೂತವಾದುದು ಆಗಿನ ಕಾಲದಲ್ಲಿ ಈ ಗ್ರಾಮದ ಹಿರಿಯ ಕುಶಲ ಕಲಾವಿದರು ಕೆಲವು ಮೂಲಿಕೆಗಳ ರಸದಿಂದ ಚಿನ್ನವನ್ನು ತಯಾರಿಸುತ್ತಿದ್ದರು. ಈ 'ಚಿನ್ನ' ನಿಜವಾದ ಚಿನ್ನದಂತೆಯೇ ಇರುತಿತ್ತು. ಅಷ್ಟೇ ಅಲ್ಲ, ಕಲವು ಕಲ್ಲು ಮತ್ತು ಗೋಂದುಗಳಿಂದ ತಮಗೆ ಬೇಕಾದ ಬಣ್ಣಗಳನ್ನೂ ಅವರು ತಯಾರಿಸುತ್ತಿದ್ದರು.

ನಿರ್ಮಲ್ ಗ್ರಾಮದಲ್ಲಿ ಆಟದ ಸಾಮಾನುಗಳನ್ನು ತಯಾರಿಸುವ ಕೈಗಾರಿಕೆ ಆರಂಭವಾದುದು ಮಾತ್ರ ವಾರಂಗಲ್ಲಿನ ವೆಲಮರ ಕಾಲದಲ್ಲಿ ಎಂದು ಹೇಳಬಹುದು. ಚಿತ್ರಕಲೆಯಲ್ಲಿ ಸಿದ್ಧಹಸ್ತರೆನಿಸಿದ್ದ 'ಜೀಂಗಾರರು' ಎಂಬಜಾತಿಗೆ ಸೇರಿದವರು ಈ ಕೈಗಾರಿಕೆಯನ್ನು ಆರಂಭಿಸಿದರು. ಇವರು ಬರೆಯುತ್ತಿದ್ದ ಚಿತ್ರಗಳಲ್ಲಿ ಸಾಮಾನ್ಯವಾಗಿ ಪುರಾಣ ಕಥೆಗಳ ದೃಶ್ಯಗಳನ್ನೇ ಹೆಚ್ಚಾಗಿ ಬಳಸುತ್ತಿದ್ದುದು ಕಂಡು ಬರುತ್ತದೆ. ರಾಮಾಯಣ ಮತ್ತು ಮಹಾಭಾರತ ಇವು ಅವರಿಗೆ ಬೇಕಾದ ಸ್ಫೂರ್ತಿಯನ್ನು ನೀಡುತ್ತಿದ್ದುವು.

ಗ್ರಾಮದ ಸುತ್ತಲೂ ಇರುವ ಅರಣ್ಯಗಳಲ್ಲಿ ಆಟದ ಸಾಮಾನುಗಳ ತಯಾರಿಕೆಗೆ ಬೇಕಾಗುವ ಹಗುರವಾದ ಮರ ಹೇರಳವಾಗಿ ಸಿಗುವುದೂ ಈ ಕೈಗಾರಿಕೆ ಬೆಳೆಯಲು ಒಂದು ಒಳ್ಳೆಯ ಅವಕಾಶವನ್ನು ಕಲ್ಪಿಸಿತು. ಅಲ್ಲದೆ, ಈ ಪ್ರದೇಶದ ಶ್ರೀಮಂತರ ಕೈಗಾರಿಕೆಯ ಬೆಳವಣಿಗೆಗೆ ನೀಡಿದ ಪ್ರೋತ್ಸಾಹ ಕೂಡ ಗಮನಾರ್ಹ.

ಈ ಕೈಗಾರಿಕೆ ೧೫೦ ವರ್ಷಗಳಷ್ಟು ಹಿಂದೆ ಒಂದು ವಾಣಿಜ್ಯಸ್ವರೂಪ ಕೊಟ್ಟವರೆಂದರೆ ಸೋಮಯ್ಯ ಮತ್ತು ಲಿಂಬಯ್ಯ ಜನ ಅವರ ಹೆಸರನ್ನು ಇಂದಿಗೂನೆನಸುತ್ತಾರೆ.

ಆಟದ ಸಾಮಾನುಗಳನ್ನು ತಯಾರಿಸುವುದಕ್ಕಷ್ಟೇ ಅಂದು ಸೀಮಿತವಾಗಿದ್ದ ಕೈಗಾರಿಕೆ ಮುಂದೆ ವರ್ಷಗಳುರುಳಿದಂತೆ ವೈವಿಧ್ಯ ಗುಣವನ್ನು ಪಡೆಯಿತು. ಮರದ ತಟ್ಟೆಗಳು, ಸುಂದರವಾದ ಪೆಟ್ಟಿಗೆಗಳು ಗೋಡೆಯ ಮೇಲೆ ಅಲಂಕಾರಕ್ಕೆ ನೇತು ಹಾಕುವ ಕುಶಲ ಕಲಾ ವಸ್ತುಗಳು ಇವೇ ಮೊದಲಾದ ವಿವಿಧ ವಸ್ತುಗಳೂ ತಯಾರಾಗ ತೊಡಗಿವೆ. ಹೀಗೆ ವಸ್ತುಗಳ ವೈವಿಧ್ಯ ಹೆಚ್ಚಿದ ಹಾಗೆ ತೇಗದ ಮರ ಕೂಡ ಬಳಕೆಗೆ ಬಂದಿದೆ. ಇಂದು ಅಲ್ಲಿ ತಯಾರಾಗುತ್ತಿರುವ ವಸ್ತುಗಳ ಪೈಕಿ ಕುರ್ಚಿ ಮೇಜು ಇತ್ಯಾದಿಗಳೂ ಟೇಬಲ್ ಲ್ಯಾಂಪುಗಳೂ, ಪಾತ್ರೆಗಳೂ ಸಿಗರೇಟ್ ಮತ್ತು ಟ್ರಿಂಕೆಟ್ ಬಾಕ್ಸ್‌ಗಳೂ ಸೇರಿವೆ.

ವಸ್ತುಗಳ ತಯಾರಿಕೆಯ ಸೂಕ್ಷ್ಮ ಪರಿಚಯ ಹೀಗಿದೆ: ತೇಗದ ಮರವನ್ನು ಕುಶಲ ಕಲಾವಿದರೂ ತಮಗೆ ಬೇಕಾದ ಒಂದು ಆಕಾರಕ್ಕೆ ಮೊದಲು ಕತ್ತರಿಸಿಕೊಳ್ಳುತ್ತಾರೆ. ಅನಂತರ ಲೇತಿನ ಸಹಾಯದಿಂದ ಅದಕ್ಕೆ ಒಂದು ಫಿನಿಶ್, ಅಥವಾ ಪರಿಪೂರ್ಣತೆ ಕೊಡುತ್ತಾರೆ. ಹೊರ ಮೈಯನ್ನು ನಯವಾಗಿ ಮಾಡಲು ಅದಕ್ಕೆ ನೈಟ್ರೋಸ್ ಸೆಲ್ಯುಲೋಸ್ ಕಾಂಪೌಂಡ್‌ನ ಒಂದು ಪದರ ಹಚ್ಚುತ್ತಾರೆ. ಅನಂತರ ಡ್ಯೂಕೋ ಸ್ಪ್ರೇಪೇಯಿಂಟಿಂಗ್ ಪ್ರಯೋಗದ ಮೂಲಕ ಅವುಗಳಿಗೆ ಬಣ್ಣಹಚ್ಚಿ ಬಗೆ ಬಗೆಯ ಅಲಂಕಾರ ವಿನ್ಯಾಸಗಳನ್ನು ಇಳಿಸುತ್ತಾರೆ. ಟ್ರೇಸಿಂಗ್ ವಿಧಾನದ ಮೂಲಕ ಹೀಗೆ ಇಳಿಸುವ ವಿನ್ಯಾಸಗಳನ್ನು ಅನುಸರಿಸಿ ಚಿತ್ರ ಬಿಡಿಸುತ್ತಾರೆ. ಕೆಲವು ಕಡೆ ಚಿನ್ನದ ಹೊಳಪು ಬೇಕಾದರೆ ರಾಸಾಯನಿಕ ಚಿನ್ನವನ್ನು ಆ ಪ್ರದೇಶಕ್ಕೆ 'ಸ್ಪ್ರೇ' ಮಾಡುತ್ತಾರೆ

ಹೀಗೆ ನಿರ್ಮಲ್ ಗ್ರಾಮದ ಈ ಮರದ ಸಾಮಾನುಗಳ ಕೈಗಾರಿಕೆ ಇಂದು ದೇಶ ದಾದ್ಯಂತ ಪ್ರಖ್ಯಾತಿ ಪಡೆಯುವುದರ ಜೊತೆಗೆ ವಿದೇಶೀ ಮಾರುಕಟ್ಟೆಯನ್ನೂ ಪಡೆಯುತ್ತದೆ ಸುಮಾರು ೨ ಲಕ್ಷ ರೂ. ಗಳ ಮೌಲ್ಯದಷ್ಟು ವಸ್ತುಗಳನ್ನು ಈ ಗ್ರಾಮ ಮಾರಾಟ ಮಾಡುತ್ತದೆ ಇಲ್ಲಿ ತಯಾರಾಗುವ ವಸ್ತುಗಳಿಗೆ ಅಮೇರಿಕ ಬ್ರಿಟನ್‌ಗಳಲ್ಲಂತೂ ಉತ್ತಮ ಮಾರುಕಟ್ಟೆ ಇದೆ

ಹೊಸ ಹೊಸ ಚಿತ್ರ ವಿನ್ಯಾಸಗಳ ಕಡೆಗೆ ದೃಷ್ಟಿ ಹೊರಳಿಸುತ್ತಿರುವ ನಿರ್ಮಲ್ ಗ್ರಾಮದ ಕುಶಲಕಲಾವಿದರು ಈಗ ತಾವು ತಯಾರಿಸುವ ವಸ್ತುಗಳಲ್ಲಿ ಅಜಂತಾಗುಹೆಗಳಲ್ಲಿನ ಚಿತ್ರಗಳನ್ನೂ ಮೊಘಲರ ಸಂಪ್ರದಾಯದ ಸುಂದರ ಚಿತ್ರಗಳನ್ನೂ ಶುದ್ಧ ಭಾರತೀಯ ಸಂಪ್ರದಾಯದ ವಿನ್ಯಾಸಗಳನ್ನೂ ಬಿಡಿಸುತ್ತಿದ್ದಾರೆ.

ದಕ್ಷಿಣ ಭಾರತದ ಸುಪ್ರಸಿದ್ಧ ಕಂಚಿನ ವಿಗ್ರಹಗಳು ಮತ್ತು ಲೇಪಾಕ್ಷಿ ದೇವಸ್ಥಾನದ ಸುಂದರ ಭಿತ್ತಿ ಚಿತ್ರಗಳೂ ಈಗೀಗ ನಿರ್ಮಲ್ ಗ್ರಾಮದ ಕುಶಲ ಕಲಾವಿದರಿಗೆ ಸ್ಫೂರ್ತಿ ನೀಡುತ್ತಿವೆ.

ಕಳೆದ ಒಂದು ದಶಕದಲ್ಲಿ ಆಂಧ್ರ ಪ್ರದೇಶ ಸರ್ಕಾರವು ಈ ಗ್ರಾಮದ ಕುಶಲ ಕಲೆಗಳಿಗೆ ವಿಶೇಷ ರೀತಿಯ ಉತ್ತೇಜನ ನೀಡಲು ಶ್ರಮಿಸಿದೆ. ಹೊಸ ಹೊಸ ವಿಧಾನಗಳ ಕಡೆಗೆ ಮತ್ತು ಉಪಕರಣಗಳ ಕಡೆಗೆ ಕಲಾವಿದರ ಗಮನವನ್ನೂ ಸೆಳೆದು ಅವರ ಕಲಾಭ್ಯಾಸವನ್ನು ಹೆಚ್ಚು ಆಧುನಿಕಗೊಳಿಸುವಪ್ರಯತ್ನ ನಡೆದಿದೆ.



ನಿರ್ಮಲ ಗ್ರಾಮದ ಕುಶಲ ಕಲಾವಿದ ರಚನಾಮಗ್ನನಾಗಿದ್ದಾನೆ.

ಉದಯೋನ್ಮುಖ ಲೇಖಕ ಶ್ರೀ. ಪಿ ಎನ್. ಹೆಬ್ಬಾರ ('ಸಿರಿಸತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ನೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ 2=00

ರೂ. ೨=೨೫ ನ. ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು, (ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ) ಮಂಗಳೂರು. ಮಾಲಿಕ: ಕೆ. ಕೆ. ಆರ್. ಶೇಟ್

ಹೊಸ ವರಮಾನ ತೆರಿಗೆಯ ಕಾನೂನು

(೪ನೇ ಪುಟದಿಂದ)

ಸಲಾಗಿದೆಯೆಂದು ವ್ಯಥೆ ಪಡಬೇಕಾಗಿಲ್ಲ. ರಿಫಂಡ್‌ಗಳನ್ನು ಮಾಡುವ ಬಗೆಗೆ ವಿಳಂಬವಾದ ಪ್ರಸಂಗಗಳಲ್ಲಿ, ಆ ವಿಳಂಬದ ಅವಧಿಗೆ ಶೇ. ೪ರಷ್ಟು ಬಡ್ಡಿಯನ್ನು ಕೊಡಲಾಗುವುದು. ಹೊಸ ಶಾಸನದಲ್ಲಿ, ಭಾರತದಲ್ಲಿರುವ ನಿವಾಸಿಗಳು ವಿದೇಶಗಳಲ್ಲಿ ಗಳಿಸಿದ ಹಿಂದಿನ ವರಮಾನಗಳ ಮೇಲೆ, ತೆರಿಗೆ ವಿಧಿಸುವ ಅವಕಾಶ ಹೊಸ ಶಾಸನದಲ್ಲಿಲ್ಲ. ವಿದೇಶಗಳಲ್ಲಿರುವ ತಮ್ಮ ಹಣವನ್ನು ಭಾರತಕ್ಕೆ ತರುವ ಬಗ್ಗೆ ಜನರ ಮನಸ್ಸಿನಲ್ಲಿ ಮೂಡುವ ಕಳವಳವನ್ನು ತೊಡೆದು ಹಾಕುವ ದೃಷ್ಟಿಯಿಂದ ಇದನ್ನು ಮಾಡಲಾಗಿದೆ. ಕೈಗಾರಿಕೆಗಳಲ್ಲಿರುವ ಕೆಲಸಗಾರರ 'ಗ್ರ್ಯಾಚ್ಯುಯಿಟ' ಹಣದಲ್ಲಿ ಮಾಲಿಕರ ಪಾಲಿನ ಮೇಲೆ ವಿನಾಯಿತಿಯಿರುವುದು. ಸರ್ಕಾರಿ ನೌಕರರ ಗ್ರ್ಯಾಚ್ಯುಯಿಟಿಗಳಿಗೆ ಮಾತ್ರವೇ ತೆರಿಗೆ ವಿನಾಯಿತಿ ಕೊಡುವ ಬಗೆಗೆ ಗಣನೀಯವಾದ ತೊಂದರೆಯಿತ್ತು. ಈ ಸೌಲಭ್ಯವನ್ನು ಈಗ ಎಲ್ಲರಿಗೂ ಅನ್ವಯಿಸಲಾಗಿದೆ.

ಹೊಸ ಶಾಸನವು ಕಲೆಯ ಸಂವರ್ಧನೆಗೆ ಅವಕಾಶ ನೀಡುತ್ತವೆ. ಕಲಾವಿದರಿಗೆ ಉತ್ತೇಜನವೀಯುತ್ತದೆ. ಕಲಾವಿದರು, ಸಂಗೀತಗಾರರು, ಲೇಖಕರು, ನಾಟಕ ಕರ್ತೃಗಳು ಮತ್ತು ನಟರಿಗೆ ಅವರು ಕೊಡುವ ವಿಮೆಯ ಹಣದ ಮೇಲೆ ಹೆಚ್ಚಿನ ಪ್ರಮಾಣದ 'ರಿಬೇಟ್' ಕೊಡುವರು. ಅವರ ದುಡಿಮೆಯ ಅವಧಿ ಕಡಿಮೆ ಇರುವುದೆಂದು ಈ ರಿಯಾಯಿತಿಯನ್ನು ಅವರಿಗೆ ಕೊಡಲಾಗಿದೆ. ಸಾಹಿತ್ಯ ಮತ್ತು ಕಲಾಕೃತಿಗಳಿಗೆ ದೊರೆಯುವ ಗೌರವ ಧನ ಮತ್ತು ಕಾಪಿರೈಟ್‌ಗಳ ಮೇಲೆ ಹಾಕುವ ತೆರಿಗೆಯನ್ನು ಸರಳಗೊಳಿಸಲಾಗಿದೆ.

ಈ ಉದಾಹರಣೆಗಳು, ಹೊಸ ಶಾಸನವು ತೆರಿಗೆದಾರರ ತೊಂದರೆ ಮತ್ತು ಕಿರುಕುಳವನ್ನು ತೆಗೆದುಹಾಕುವುದೆಂಬುದನ್ನು ತೋರಿಸುತ್ತವೆ. ವಾಣಿಜ್ಯ ಮತ್ತು ಕೈಗಾರಿಗೆ ಹಾಗೂ ವೃತ್ತಿ ಕ್ಷೇತ್ರಗಳಲ್ಲಿ ತೆರಿಗೆದಾರರಿಗೆ ಪರಿಹಾರಗಳನ್ನು ಕೊಡುವ ಅನೇಕ ಅವಕಾಶಗಳು ಹೊಸ ಶಾಸನದಲ್ಲಿವೆ.

ಸರ್ಕಾರಕ್ಕೆ ನ್ಯಾಯವಾಗಿ ಸಲ್ಲಬೇಕಾದ ಎಲ್ಲಾ ತೆರಿಗೆಗಳು ಸೇರುವಂತೆ ಹಾಗೂ ತೆರಿಗೆಯಿಂದ ತಪ್ಪಿಸಿಕೊಳ್ಳುವಂತೆ ಹಾಗೂ ಕೊಡದೆ ಸತಾಯಿಸುವುದನ್ನು ಕನಿಷ್ಠಗೊಳಿಸುವಂತೆ ಶಾಸನದಲ್ಲಿ ಕೆಲವು ನಿಬಂಧನೆಗಳನ್ನು ಬಿಗಿಪಡಿಸಲಾಗಿದೆ.

ಬಹುಶಃ ಅಧಿಕ ಸಂಖ್ಯೆಯ ಜನರ ಗಮನವನ್ನು ಸೆಳೆದಿರುವ ಅಂಶವೆಂದರೆ ಟ್ರಸ್ಟ್(ದತ್ತಿನಿಧಿ)ಗಳ ವರಮಾನಕ್ಕೆ ವಿನಾಯಿತಿಯನ್ನು ನೀಡಿರುವುದು ದತ್ತಿನಿಧಿಯ ಯಾವುದೇ ವರ್ಷದ ವರಮಾನದಲ್ಲಿ ಶೇಕಡಾ 25ಕ್ಕೆ ಮೇಲ್ಪಟ್ಟು ಸಂಗ್ರಹವಾದ ಹಣ ಅಥವಾ ೧೦,೦೦೦ ರೂ. ಗಳು, ಇದರಲ್ಲಿ ಯಾವುದು ಹೆಚ್ಚೋ ಅದರ ಮೇಲೆ ತೆರಿಗೆಯನ್ನು ಹಾಕಲಾಗುವುದು. ಕೆಲವು ಷರತ್ತುಗಳನ್ನು ಅನುಸರಿಸಿ, ೧೦ ವರ್ಷಗಳ ಅವಧಿಯ ವರೆಗೂ ಈ ಸಂಗ್ರಹಕ್ಕೆ ಅವಕಾಶವನ್ನೀಯಲಾಗುವುದು. ಈ ಟ್ರಸ್ಟ್‌ಗಳು ನಡೆಸುವ ವ್ಯವಹಾರಕ್ಕೆ ಸಂಬಂಧಪಟ್ಟ ಷರತ್ತನ್ನು ಈಗ ತೆಗೆದುಹಾಕಲಾಗಿದೆ ಏಕೆಂದರೆ ಈ ಟ್ರಸ್ಟ್‌ಗಳ ಅಧೀನದಲ್ಲಿರುವ ವ್ಯವಹಾರ ಯಾವುದೇ ಒಂದು ವರ್ಗದ ಕೋಮಿನ ಜಾತಿ ಅಥವಾ ಮತದ ಹಿತಾಸಕ್ತಿಗಳಿಗಾಗಿ ಮಾತ್ರವೇ ಇದ್ದಲ್ಲಿ ಅವುಗಳ ಮೇಲೆ ತೆರಿಗೆ ರಿಯಾಯಿತಿಗಳನ್ನು ನಿರ್ಬಂಧಗೊಳಿಸಲಾಗಿದೆ ಇದು ಕೊಂಚ ಮಟ್ಟಿನ ವಿವಾದಕ್ಕೆ ಎಡೆಕೊಡುವುದು ಹೊಸ ನಿರ್ಬಂಧಗಳು ಈಗಿರುವ ದತ್ತಿಗಳಿಗೆ ಅನ್ವಯವಾಗುವುದಿಲ್ಲ. ಆದರೆ ೧೯೬೨ರ ಎಪ್ರಿಲ್ ೧ರ ನಂತರ, ಅಂದರೆ ಹೊಸ ಶಾಸನವು ಜಾರಿಗೆ ಬಂದ ನಂತರ ರೂಪುಗೊಳ್ಳುವ ದತ್ತಿಗಳಿಗೆ ಇದು ಅನ್ವಯವಾಗುವುದು.

ದೇಶದ ಐಕ್ಯತೆಯನ್ನು ಬಲಪಡಿಸಲು ರಾಷ್ಟ್ರೀಯ ಮತ್ತು ಭಾವೈಕ್ಯತೆಯು ಅತ್ಯಂತ ಪ್ರಾಮುಖ್ಯವನ್ನು ಪಡೆದಿರುವ ಈ ಸಮಯದಲ್ಲಿ, ಒಂದು ವರ್ಗದ ಅಥವಾ ಪ್ರತ್ಯೇಕವೆನಿಸಿದ ಆಸಕ್ತಿಗಳಿಗೆ ಉತ್ತೇಜನವೀಯುವ ಶಾಸನವಿರುವುದು ಸೂಕ್ತವೆನಿಸದು.

ಹೊಸ ಶಾಸನದ ಪ್ರಕಾರ, ವರಮಾನ ತೆರಿಗೆಯ ವ್ಯಾಪ್ತಿಯಲ್ಲಿರುವ ಪ್ರತಿ ವ್ಯಕ್ತಿಯೂ ನಿರ್ದಿಷ್ಟ ದಿನಾಂಕದೊಳಗಾಗಿ ತನ್ನ ವರಮಾನ ವಿವರಗಳನ್ನು ವರಮಾನ ಅಧಿಕಾರಿಗಳಿಗೆ ಸಲ್ಲಿಸಬೇಕು. ಆ ರೀತಿ ಮಾಡದಿದ್ದರೆ ಆತನು ಕೊಡಬೇಕಾದ ತೆರಿಗೆಯ ಮೇಲೆ ಶೇ. 6ರಂತೆ ಬಡ್ಡಿಯನ್ನು ಹಾಕಲಾಗುವುದು. ಆ ರೀತಿ ಮಾಡುವ ಮೊದಲು ರಿಯಾಯಿತಿ ದಿನಗಳನ್ನು ಕೊಡಲಾಗುವುದು.

ಹೊಸ ಶಾಸನದಲ್ಲಿ, ದಂಡವನ್ನು ವಿಧಿಸುವಿಕೆ ಹಾಗೂ, ತೆರಿಗೆ ಸಂಬಂಧ ಅಪರಾಧಗಳ ಬಗೆಗೆ ಪ್ರಾಸಿಕ್ಯೂಷನ್ ಮಾಡುವುದರ ಸಂಬಂಧ ನಿಬಂಧನೆಗಳನ್ನು ಬಿಗಿಮಾಡಲಾಗಿದೆ ತೆರಿಗೆಯನ್ನು ತಪ್ಪಿಸಿಕೊಳ್ಳುವ ಅಪರಾಧವು ಶಿಕ್ಷಾರ್ಹವಾಗುತ್ತದೆ ಆದರೆ ಈ ಅಧಿಕಾರವನ್ನು ದುರುಪಯೋಗಪಡಿಸದಂತೆ, ರಕ್ಷಣೆಗೂ ಈ ಶಾಸನದಲ್ಲಿ ಅವಕಾಶವಿರುವುದು.

ತೆರಿಗೆಯ ಆಡಳಿತ ಯಂತ್ರ ವ್ಯವಸ್ಥೆಯು ಕಾರ್ಯಾಚರಣೆಗೆ ತೊಡಗಿದಾಗ, ತೆರಿಗೆಯ ಹೊರೆಯ ಕೂಗು ಆಗಾಗ ಕೇಳಿಬರುತ್ತದೆ. ಆದರೆ, ತೆರಿಗೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡದಿದ್ದರೆ, ವಿಧಿಸಿದ ತೆರಿಗೆಯನ್ನು ಸುಸೂತ್ರವಾಗಿ ಕೊಡುತ್ತಿದ್ದರೆ, ಈ ತೊಂದರೆಯು ತೀರ ಕಡಿಮೆಯಾಗುವುದೆಂದು ಹೇಳಬಹುದು. ಉತ್ಪಾದನೆ ಮತ್ತು ಸಾಮಾಜಿಕ ಆರ್ಥಿಕ ಉದ್ದೇಶಗಳುಳ್ಳ ಕಾನೂನಿನ ಅನ್ವಯದಿಂದ ದೇಶದ ಸಂಪನ್ಮೂಲಗಳು ಹೆಚ್ಚಿದರೆ, ಸಂವಿಧಾನದಲ್ಲಿ, ನಿರೀಕ್ಷಿಸಲಾಗಿರುವ ಗುರಿಯು ಈಡೇರುತ್ತದೆ. ನಮ್ಮ ರಾಷ್ಟ್ರವು ಇತರ ರಾಷ್ಟ್ರಗಳ ಸಾಲಿನಲ್ಲಿ ಅಧಿಕವಾಗಿ ಬಲವಾದ ರಾಷ್ಟ್ರವಾಗಿ ನಿಲ್ಲುವುದು.

ಲೈಬ್ರರಿಗಳಿಗೆ ಉಪಯುಕ್ತ ಪುಸ್ತಕಗಳು

ಅವಳ ಹುಚ್ಚು	ಕೆ. ರಾಮಕೃಷ್ಣ ಶೆಟ್ಟಿ	0=87
ಸಂಪಿಗೆ ಅರಳಿತು	ನಂಜರಾಜ ಅರಸು	1=25
ಮೌನ ಸಂಧಾನ	ಗೀತಾ ಕುಲಕರ್ಣಿ	1=50
ಋಣ ಬಂಧನ	ಎಂ. ಆರ್. ಬಲ್ಲಾಳ	2=00
ವೈಯ್ಯಾರಿ	ಗೊರೂರು ರಾ. ಅಯ್ಯಂಗಾರ	4=00
ಹಳ್ಳಿಯ ಚಿತ್ರಗಳು	,,	1=25
ಕೊಲೆಯ ಹೆಣ್ಣು	ಹ. ರಾ. ಕಿದಿಯೂರು	0=75
ನಗ್ನ ನೃತ್ಯ	ಹ. ಲೋ. ಬಂಕಾಪುರ	0=75
ಮಾಲಿನಿ	ಅನುರೂಪಾದೇವಿ	0=50
ಹೆಣ್ಣು ಹೃದಯ	ಎಚ್ಚಾರ್ಕೆ	0=50
ಹೆಣ್ಣಿನ ಕಣ್ಣು	ಹ. ರಾ. ಕಿದಿಯೂರು	0=60
ವಿಲಾಸಿನಿ	ಅಂಥಾನಿಯೊ	0=50
ಸನ್ಯಾಸಿ ಕಂಡ ಸುಂದರಿ	ಶಿವಕಿಲೆ ಗೋಸ್ತಿನ್	0=8[illegible]
ಆತ್ಮ ಗೆದ್ದಿತು	ಜಾನ್‌ಕಿನ್‌ಬೆಕ್	0=50
ಕಾಂಚನ	ಜಿ. ಬಿ. ಪಾಟೀಲ	1=50
ಗೆದ್ದ ಹೆಣ್ಣು	ನವಗಿರಿನಂದ	1=25
ಅಜ್ಞಾತ ವಾಸ	ವೀರಭದ್ರಯ್ಯ	1=50
ಡೈವೋರ್ಸ್	ಕೆ. ನರಸಯ	0=62
ಕಂಕಣದ ಸಂಕಲ್ಪ	ಸೀತಾಪತಿ	0=50
ವ್ಯಾಪಾರದಲ್ಲಿ ಹೆಚ್ಚು ಹಣಗಳಿಸುವ ಗುಟ್ಟು		1=50
ಗಾಂಧಿತತ್ವ ದರ್ಶನ	ಹ. ರಾ. ಕಿದಿಯೂರು	1=00
ಭಾರತೀಯ ಮಹಾವ್ಯಕ್ತಿಗಳು	,,	2=00
ವಿಖ್ಯಾತ ಜೀವಿಗಳು	,,	0=75
ನಮ್ಮ ಊರಿನ ರಸಿಕರು	ಗೊರೂರು	2=00
ಪುಟ್ಟ ಮಲ್ಲಿಗೆ	,,	1=20
ಕವಿದರ್ಶನ	ಜವರೇ ಗೌಡ	1=75
ಗೀತಾಧ್ವನಿ	ಕೆ. ನಾರಾಯಣ ಸ್ವಾಮಿ	1=50
ಸಾಪೇಕ್ಷವಾದ	ಹೆಚ್. ವಿ. ರಂಗರಾಜ್	1=00
ಹಣದ ವಿನಿಮಯ ಬೆಲೆ	ಜಿ. ರಾಮಕೃಷ್ಣ ರೆಡ್ಡಿ	1=50
ಸತ್ಯರೂಪ ನಿತ್ಯಾನಂದ	ಮ. ನೋ. ಮಾಲವಿಯ	0=50
ನಮ್ಮ ಶರೀರದ ರಚನೆ	ಎಚ್ಚೆಸ್ಕೆ	0=85
ಗಾಂಧಿಜೀಯ ಆರ್ಥಿಕವಾದ	ನಾರಾಯಣರಾವ್	0=25
ಕೈಲಾಸಂ ಜೋಕುಗಳು	—	0=50
ಎಂ. ಎನ್. ರಾಯ್	ವಿಚಾರಸಾಹಿತ್ಯ	0=37
ಪತ್ತೇದಾರನ ಸಂಶಯ	ವಿಶ್ವಮಯ	1=75
ಮೈಸೂರು ತಾಲೂಕು ಬೋರ್ಡುಗಳ ನಿಯಮಗಳು	ಎಸ್. ಎನ್. ಪುಣೇಕರ ವಕೀಲ	1=25
ನಮ್ಮ ಮೈಸೂರು ರಾಜ್ಯ	ಆಕಳವಾಡಿ	0=87
ಹೊಲಿಗೆಯ ಶಿಕ್ಷಣ	ಜೆ. ಎನ್. ಕುಲಕರ್ಣಿ	1=00
ಸಂಯುಕ್ತ ರಾಷ್ಟ್ರ ಸಂಘ	ಡಾ। ಪಾಟೀಲ	1=50
ಆಧುನಿಕ ರೈತ ಭಾಗ ೧	ಆಕಳವಾಡಿ	0=75
,, ಭಾಗ ೨	,,	0=75
ಮಹಾತ್ಮಾ ಗಾಂಧೀಜಿ	ಪಂಡಿತ ಜೆ. ಎ. ಕವಲಿ	0=75
ಸೆರೆಗುಡಿಕನ ಸಂಸಾರ	,,	0=37
ಭಾರತೀಯರ ಹಬ್ಬಗಳು	,,	1=75
ಭಾರತೀಯರ ಚರಿತ್ರೆ ಪಂಡಿತ	,,	0=50
ಮೋರುತಿ ರಾಯ	,,	0=37
ಸರೋಜಿನಿ ನಾಯುಡು	,,	0=37
ಬಲಶಾಲಿ ಭೀಮಸೇನ	,,	0=37
ಮುದ್ರಾ ರಾಕ್ಷಸ	,,	0=45
ನಾಗಾನಂದ	,,	0=45
ಪ್ರತಿಮಾ	,,	0=45
ಮೃಚ್ಛಕಟಿಕ	,,	0=45
ಸ್ವಪ್ನವಾಸವದತ್ತ	,,	0=45
ಕುಮಾರಸಂಭವ	,,	0=45
ಕಿರಾತಾರ್ಜುನೀಯ	,,	0=45
ನೈಷಧೀಯ ಚರಿತ	ಪಂಡಿತ ಜೆ. ಎ. ಕವಲಿ	0=45
ಕಾದಂಬರಿ	,,	0=45
ನೇತಾಜಿ ಸುಭಾಸ ಚಂದ್ರಬೋಸ	,,	0=45
ಚಿತ್ತರಂಜನ ದಾಸರು	,,	0=40
ರಾಜಾರಾಮ ಮೋಹನ ರಾಯ	,,	0=40
ಶ್ರೀ ಶಿವಛತ್ರಪತಿ	,,	0=40
ಸರ್ವಪಲ್ಲಿ ರಾಧಾಕೃಷ್ಣನ್	,,	0=40
ಮಹರ್ಷಿ ದಾದಾಬಾಯಿ ನೌರೋಜಿ		0=40
ಝಾನ್ಸಿಯ ಮರೆಯದ ಮಹಾರಾಣಿ	,,	0=40
ಕೆಚ್ಚೆದೆಯ ಕರ್ಣ	,,	0=40
ಅಳಿವಿಲ್ಲದ ಅಭಿಮನ್ಯು	,,	0=40
ಭರತನ ಬಂಧುಪ್ರೇಮ	,,	0=40
ಕಸ್ತೂರಬಾ ಗಾಂಧಿ	,,	0=40
ಡಾ। ಎನಿಬೆಸೆಂಟ	,,	0=40
ಮಹಾತ್ಮಾ ಗಾಂಧೀಜಿ	,,	0=75
ಮಾಲತೀ ಮಾಧವ	,,	0=45
ವೇಣೀ ಸಂಹಾರ	,,	0=45
ಅಭಿಜ್ಞಾನ ಶಾಕುಂತಲ	,,	0=45
ಶ್ರೀಕೃಷ್ಣ ಸುದಾಮ	,,	0=40
ಪೌರಾಣಿಕ ಕಥೆಗಳು	,,	0=40
ವಿವೇಕಾನಂದರು	,,	0=40
ಭಕ್ತ ಪ್ರಲ್ಹಾದ	ಎ. ಜೆ. ಮುಸಳಿ	0=40
ರಾಜರ್ಷಿ ಅಶೋಕ	ನಾರಾಯಣ ಶರ್ಮಾ	0=40
ಶ್ರೀ ವಿದ್ಯಾರಣ್ಯರು	ಚಿದಂಬರಾನಂದ	0=40
ಚಾಕ್ಲೇಟ ಮತ್ತು ಇತರ ಕತೆಗಳು	ಹಿರೇಮಠ	0=40
ಶಂಕರಾಚಾರ್ಯರು	ಗುಂಡು ರಾಮಯ್ಯ	1=50

ಕೆಟಲಾಗಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ,
ಉಡುಪಿ.

ತಂದೆ ನುಡಿದ ಭವಿಷ್ಯ

(೨ನೇ ಪುಟದಿಂದ)

"ನಾನು ತಂದೆಯಾಗಲಿದ್ದೇನೆ...... ಸಣ್ಣ ಬಿಳಿಗೂದಲಿನ ವ್ಯಕ್ತಿಯು ತಂದೆಯಾಗಲಿದ್ದಾನೆ ....ಏನೆನ್ನುತ್ತೀ ಕಾರ!?"

o o o

ಮೂರನೆಯ ದಿನ ನಸುಕಿನ ವೇಳೆಗೇ ಜರ್ಮನರು ದಾಳಿ ನಡೆಸಿದರು... ...

ಬಲ್ಗೇರಿಯನ್ನರು ದಾಳಿಯನ್ನು ಹಿಮ್ಮೆಟ್ಟಿಸಿದಾಗ, ಸೂರ್ಯನು ಶ್ರದ್ಧೆಯಿಂದ ಜಗತ್ತಿನ ಮೇಲೆ ಹೊಳೆಯುತ್ತಿದ್ದನು. ಪಕ್ಷಿಗಳು ಸಂತೋಷದಿಂದ ಆಕಾಶದಲ್ಲಿ ಹಾರಾಡತೊಡಗಿದುವು. ಜೀವನವು ತನ್ನ ಶಾಶ್ವತ ಪಥಾನುಸರಣೆಯಲ್ಲಿತ್ತು—

ಗಡ್ಡದ ಸೈನಿಕನು ಮೃತದೇಹವೊಂದನ್ನೊಯ್ಯುತ್ತಿದ್ದುದನ್ನು ಕಂದಕಗಳಲ್ಲಿದ್ದವರು ಕಂಡರು. ಒಂದು ತೋಳು ಜೋತಾಡುತ್ತಿತ್ತು, ಮುರಿದ ಟೊಂಗೆಯಂತೆ ಅದು ಅಲುಗಾಡುತ್ತಿತ್ತು. ಇನ್ನೊಂದು, ನಿರ್ಜೀವವಾಗಿ ಎದೆಯ ಮೇಲಿತ್ತು ಅವರೆಲ್ಲರೂ ಮೌನವಾಗಿದ್ದರು. ಅವರು ಕಂಡಿದ್ದ ಮೃತದೇಹಗಳಲ್ಲಿ ಇದು ಮೊದಲನೆಯದೇನೂ ಅಲ್ಲ. ಅವರು ನಡುಗಿದರು, ತಲೆಗಳನ್ನು ತಗ್ಗಿಸಿ, ಟೋಪಿಗಳನ್ನು ಗೌರವಾರ್ಥವಾಗಿ ತೆಗೆದರು.

"ಬಿಳಿಗೂದಲಿನ ಸೈನಿಕ"— ಎಂದು ಯಾರೋ ಹೇಳಿದರು.

ಗಡ್ಡದ ಸೈನಿಕ ಬಾಗಿದನು ಮೃತದೇಹವನ್ನು ಒಣ ನೆಲದ ಮೇಲಿಟ್ಟು ಮೊಣಕಾಲೂರಿದನು. ಕರಡಿಯಂತಹ ಈ ಒರಟು ವ್ಯಕ್ತಿಯ ಕಣ್ಣುಗಳು ತೇವಗೊಂಡಿದ್ದುವು.

ಅದೇ ಹೊತ್ತಿಗೆ ಸರಿಯಾಗಿ, ಪೊದೆಯಂಚಿನಿಂದ ಸೈನಿಕನೊಬ್ಬಾತನು ಓಡಿಬಂದನು. ಹಿಂದಿನ ದಿನ ಸೈನ್ಯವು ಅಲ್ಲಿದ್ದಾಗ ಆ ಸೈನಿಕನ ಕೈಯಲ್ಲೊಂದು ಬಿಳಿಯ ಹಾಳೆಯಿದ್ದಿತು.

"ಏನು ಸಮಾಚಾರ? ಬಿಳಿಯ ಕೂದಲಿನಾತನೆಲ್ಲಿದ್ದಾನೆ? ಎಲ್ಲಿದ್ದಾನಾತ? ಆತನಿಗೆ ಗಂಡು ಮಗು ಹುಟ್ಟಿದ್ದಾನೆಂದು ತಿಳಿಸಿರಿ!....

ಯುದ್ಧದ ನಿಯಮವು ಇಂತಹುದು ತಂದೆಯುವರು ವಸ್ತುತಃ ತಂದೆಯುವರೆಂದು ಕರೆಸಿಕೊಳ್ಳುವ ಮೊದಲೇ ಸತ್ತುಹೋಗುತ್ತಾರೆ.

ಆಕಾಶವು ತಿಳಿಯಾಗಿತ್ತು, ಪಕ್ಷಿಗಳು ಶ್ರದ್ಧೆಯಿಂದ ರಣರಂಗದ ಮೇಲೆ ಹಾರಾಡುತ್ತಿದ್ದುವು.

ಪುತ್ತೂರು ಡಿ ಮು. ಕೋರ್ಟಿನಲ್ಲಿ

R E P 479/61 O S 212/60

ಪೇದ್ರು ಸೋಜ —ಅರ್ಜಿದಾರ

ನರಸಿಂಹ ಆೃತಾಳ ಕೂಡಾ —ಎದ್ರಿರು

1ನೇ ಎದ್ರಿ ನರಸಿಂಹ ಆೃತಾಳ ಸುಬ್ಬಣ್ಣ ಆೃತಾಳರ ಮಗ, ಬೆಳ್ತಂಗಡಿ ತಾಲೂಕು ಲೈಲಗ್ರಾಮದಲ್ಲಿ ಇವನಿಗೆ ತಿಳಿಸುವುದೇನೆಂದರೆ—

ಎದ್ರಿಗನ್ನು ವಾರಂಟಿನಿಂದ ಹಿಡಿದು ಸಿವಿಲ್ ಜೈಲಿಗೆ ರವಾನಿಸಬೇಕೆಂತ ದಾಖಲುಮಾಡಿದ ಈ ಅಮಲ್ದಾರಿಯು ತಾ. 15—3—62ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಉದಹರಿಸಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್

ಅರ್ಜಿದಾರನ ವಕೀಲ್,

ಪುತ್ತೂರು, ತಾ. 15—2—62

ಅಮೃತ ಬಿಂದು

ಇನ್ನೊಬ್ಬರ ಕಷ್ಟದ್ದನ್ನು ಆಲೋಚಿಸದವರಿಗೆ ತಲೆ ನೋವು ಎಂಬುದು ಬಾರದು!

o o o

ಬಡವರ ಕಣ್ಣೀರಿನ ಮೂಲಕ ಶ್ರೀಮಂತರು ತಮ್ಮ ಸುಖವನ್ನು ಕಾಣಲಿಚ್ಛಿಸುತ್ತಾರೆ.

o o o

ಸೂಜಿಯಂತೆ ಮನುಷ್ಯ ನಿರ್ಲಿಪ್ತನಿರಬೇಕು ರೇಶ್ಮೆ, ಬಂಗಾರ ಎಂಥ ಬಟ್ಟೆಯೊಳನುಗ್ಗಿ ಬಂದರೂ ಸೂಜಿ ನಗ್ನವಾಗಿದ್ದು ಯಾವುದನ್ನೂ ಅಂಟಿಸಿಕೊಳ್ಳುವದಿಲ್ಲ

o o o

ಒಬ್ಬಳೇ ಮಗಳಿದ್ದರೆ ಆಕೆ ದಾರಿ ತಪ್ಪುತ್ತಾಳೆ; ಒಬ್ಬನೇ ಮಗನಿದ್ದರೆ ಆತನು ದಾರಿಗೆ ಬರುವದಿಲ್ಲ.

o o o

ಹಸಿವೆ, ನೀರಡಿಕೆ ಮತ್ತು ನಗ್ನತೆಯ ಕಷ್ಟ ಅನುಭವಿಸಿದವರಿಗೆ ಈ ಲೋಕದಲ್ಲಿಯೇ ದೇವರನ್ನು ಕಾಣುವದು ಸಾಧ್ಯ.

o o o

ಕಾಲುಜಾರಿ ಬಿದ್ದರೆ ಮೇಲಕ್ಕೇಳಬಹುದು. ಆದರೆ ಬಾಯಿ ಜಾರಿದರೆ ಅನರ್ಥವಾಗುತ್ತದೆ.

o o o

ಹಿರಿಯರ ಹಾಗೂ ಕಿರಿಯರ ಅಭಿಪ್ರಾಯಕ್ಕೆ ಅಂಟಿಕೊಳ್ಳಬೇಕು. ಅದುವೆ ಜಾಣತನ!

o o o

ಹೆಂಗಸಿನ ಸ್ವರವೆಂದರೆ ಯಾವ ಮುಚ್ಚಿದ ಕದವೂ ತೆರೆಯುತ್ತದೆ!

o o o



ಪುರುಷಹಗ್ಗದ ಉದ್ಯಮದಲ್ಲಿ ಭಾರತವು ಅಗ್ರಸ್ಥಾನವನ್ನು ಪಡೆದಿದೆ ಈ ಚಿತ್ರದಲ್ಲಿ ಪುರಿಯಿಂದ ತಯಾರಿಸಲಾದ ಹಲವಾರು ವಸ್ತು ಸರಕುಗಳನ್ನು ಕಾಣಬಹುದು.

ಯಾವ ಮೂರ್ಖನ ಮುಖವನ್ನೂ ನೋಡಲಾರೆನೆನ್ನುವವರು ತಮ್ಮ ಮನೆಯ ಕನ್ನಡಿಯನ್ನು ಮೊದಲು ಒಡೆಯಬೇಕು.

o o o

ಇನ್ನೊಬ್ಬರ ಮೇಲೆ ಕೆಸರೆರೆಚಬಲಿಚ್ಛಿಸುವವರ ಕೈ ಕೆಸರಾಗುವದನ್ನು ತಪ್ಪಿಸಲು ಸಾಧ್ಯವಿಲ್ಲ

o o o

ಮೂರ್ಖರು ಬುದ್ಧಿವಂತರಿಂದ ಕಲಿಯುವದಕ್ಕಿಂಥಾ ಹೆಚ್ಚನ್ನು ಬುದ್ಧಿವಂತರು ಮೂರ್ಖರಿಂದ ಕಲಿತುಕೊಳ್ಳುತ್ತಾರೆ

o o o

ಆಧುನಿಕ ಕಾಲದಲ್ಲಿ ಸಭ್ಯನೆನಿಸಲು ಅನಿವಾರ್ಯ ಸಹಾಯಕನೆಂದರೆ ಕ್ಷೌರಿಕ.

o o

ಭೀಕರ ಕೃತ್ಯ ರುದ್ರರೌದ್ರತೆಯು ಈ ಜಗತ್ತು ಸೌಂದರ್ಯವೆಂಬ ಸಂಗೀತದಿಂದ ಸಾಧುವಾಗಿದೆ.

o o

ಸೂರ್ಯನಿಂದಾಗಿ ತನ್ನ ನಕ್ಷತ್ರಗಳನ್ನೆಲ್ಲಾ ಕಳೆದುಕೊಂಡೆ ಎಂದು ಆಕಾಶ ಶೋಕಿಸಿದರೆ, ಸೂರ್ಯನಿಂದಾಗಿ ತನ್ನ ಸುಂದರ ಹನಿಯನ್ನು ಕಳಕೊಂಡೆ ಎಂದು ಹೂ ರೋದಿಸುವದು.

o o

ಬೆಂಕಿಗೆ ಆಹುತಿಯಾದ ಮರವು ಕಿಡಿಗಳನ್ನು ಚಿಮ್ಮಿ ಅದೇ ತನ್ನ ಹೂವುಗಳೆಂದು ತನ್ನ ವಿನಾಶದ ಕಾಲದಲ್ಲೂ ಆನಂದಿಸುವದ!

o o o

ಗುಟ್ಟಾಗಿ ಅದನ್ನು ಯಾಚಿಸುವ ಕಾರಣವೇ ಹೊಗಳಿಕೆಯಿಂದ ಮನುಷ್ಯನಿಗೆ ನಾಚಿಕೆ ಎನಿಸುತ್ತದೆ.

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2·00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೆಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿ ಪ್ರತಿಗಳು ದೊರೆಯುತ್ತವೆ.

ಮಠ ದೇವಾಲಯಗಳು

(೪ನೇ ಪುಟದಿಂದ)

ಇಂದು ಮಂತ್ರಿಗಳಿಗಿದ್ದ ಗೌರವ, ಹಿಂದೆ ಪೂಜಾರಿಗಿತ್ತು. ಅವರು ಮಂತ್ರಿಗಳ ಮಂತ್ರಿಗಳಾಗಿದ್ದರು. ಎಂತಹ ಯುದ್ಧವೇ ಬರಲಿ, ಯಾರೇ ಸೋಲಲಿ, ಅವರಿಗೆ ಕೈ ತುಂಬ ಹಣ, ಮೈತುಂಬ ತೃಪ್ತಿ ಇದ್ದೇ ಇತ್ತು— 'ಕೋಟಿ—ಚೆನ್ನಯ'ರಂತಹ ಪರಾಕ್ರಮದಿಂದ ಗೆದ್ದವರನ್ನು ವಿಗ್ರಹ ಕೆತ್ತಿ ಪೂಜಿಸಲಿಕ್ಕೂ ಅವರು ಬೇಕು-ಸೋತ ನಿರ್ಭಾಗ್ಯನನ್ನು 'ಧರ್ಮದ್ರೋಹಿ' ಎಂದು ಹಿಂದೂಡಲಿಕ್ಕೂ ಅವರು ಬೇಕು.

ಆದರೆ ಇಂದು ದೇವಾಲಯಗಳ ಅರ್ಚಕರನ್ನು ಕೇಳುವವರಿಲ್ಲ. ದುಡಿಯುವ ರೈತನಂತೆ ತ್ರಿಕಾಲವೂ ನುಡಿಯುತ್ತಾರೇನೊ ನಿಜ. ಅದಕ್ಕೆ ಬೆಲೆ ಕಟ್ಟುವ ಯೋಗ್ಯರಿಲ್ಲವಾಗಿದೆ—ಯಾರಾದರೂ ಬಂದಾರು, ಏನಾದರೂ ಕೊಟ್ಟಾರು, ಎಂದು ಹಲವರ ಕೈಬಾಯಿ ನೋಡುವ ಪರಿಸ್ಥಿತಿ ಬಂದಿದೆ. ಅವರ ಅರೆಹೊಟ್ಟೆಯ, ಅರೆ ಬಟ್ಟೆಯ ಜೀವನದ ಮೆರವಣಿಗೆಯ ದೃಶ್ಯ ದೇವನಿಗೆ ಸರಿಕಾಣಿಸದಿರಬಹುದು.

ಅಂದಿನ ಮಠಗಳೆಂದರೆ ಸರಕಾರಕ್ಕೇ ಅದೊಂದು ಹಿರಿಯ ಸರಕಾರ—ಸರ್ವಶಾಸ್ತ್ರ ಶಾಸನಗಳನ್ನು ಚಿತ್ರಿಸುವ ಪ್ರಧಾನ ಕೇಂದ್ರ—ಅಂದ ಬಳಿಕ ಕೇಳಬೇಕೆ? ಮಠದೊಡೆಯರು ದರ್ಶನವಿತ್ತ ಕಡೆಗಳಲ್ಲೆಲ್ಲ ಮಠದ ಶಾಖೆ ಮೂಡಿಕೊಂಡಿತು. ನಂಬಿದ ಶಿಷ್ಯವೃಂದವು ಮೆರೆದಾಡಿತು.

ಆ ಸ್ವರ್ಣಮಾದಕ ಯುಗವು ಈಗ ಬದಲಾಯಿಸಿದೆ. ರಾಜಾಧಿರಾಜರೆ ಅಧಿಕಾರ ಕಳೆದುಕೊಂಡಿದ್ದಾರೆ. ರಾಜ್ಯಭಾರದ ಬೀಗದ ಕೈ ಬಡವನ ಕೈಸೇರಿತು. ಬಡವನು ಏನು ಮಾಡಿಯಾನು? ಮಠದ ಅಭ್ಯುದಯ ಹಾಗೆ ಅವರೋಹಣವಾಗ ಹತ್ತಿತು.

ಪರಿಸ್ಥಿತಿ ಹೀಗಿರುವಾಗ, ಮಠಗಳು ಹಿಂದಿನಂತೆ ದಾನಧರ್ಮ ನಿರತವಾಗಿಲ್ಲವೆಂದೂ, ಹಾದಿತಪ್ಪಿದೆಯೆಂದೂ ದೂರಿಕೊಳ್ಳುವುದು ತಪ್ಪು-ಅವರ ಬಹಿಷ್ಕಾರದ 'ಬಾಂಬ್' ಅಸ್ತ್ರಕ್ಕೆ ಜನತೆ ಹೆದರದಾಗ, ಆಳುವವರ ನೆರವು ದೊರೆಯದಾಗ, ಅವರೇನು ಮಾಡುವುದು? ಎಷ್ಟೇ ಇರಲಿ, ಆ ಮಾತು ಬೇರೆ— ಇದ್ದುದೆಲ್ಲವನ್ನೂ ಬಿಳಿಯ ಹೊಂಟೆಯ ಕಂದಿನ ತಲ ತಲಾಂತರದವರ ವಿಚಾರವೇನು? ಇದನ್ನೆಲ್ಲ ಸಮಾಜ ನೋಡಿಕೊಳ್ಳಬೇಕು? ಮೇಲಾಗಿ ಅವರು ಬೇರೆ ಮತೀಯ ಮಠಗುರುಗಳ ಹಾಗೆ ಸುಂಕ ಕೂಡ ಎತ್ತುವುದಿಲ್ಲ. ಮದುವೆ, ಜನನ, ಮರಣಗಳ ಮಧ್ಯೆ ಹಣ ಕಸಿಯುವುದೂ ಇಲ್ಲ. ಇದೆಲ್ಲ ನಮ್ಮ ಪುಣ್ಯ.

......ಗಾಂಧೀಜಿಯು ವಿಮಾನಾರೂಢರಾಗಿ, ಸ್ವರ್ಗಕ್ಕೇರುವ ಚಿತ್ರ ನಮ್ಮಲ್ಲಿದೆ. ಅದನ್ನು ಕಂಡು ನನ್ನ ತಂಗಿಯ ಮಗು 'ಗಾಂಧಿದೇವರೂ........ಮೇಲೆ ಹೋಗುತ್ತಾರೇ...., ಎಂದು ಕೈಮುಗಿಯುತ್ತದೆ- ಅದು ಮಕ್ಕಳ ಮನಸ್ಸು. ಅವುಗಳಿಗೆ ವಿಚಾರಾತ್ಮಕ ಬುದ್ಧಿ ಇಲ್ಲ—ಕೇಳಿಕೊಂಡುದನ್ನು ಹೇಳುತ್ತಿರುತ್ತಾವೆ—ನಾವೂ ಅದೇ ಮಟ್ಟಕ್ಕೆ ಇಳಿದು ಅವುಗಳಂತೇ ವರ್ತಿಸಿದರೆ ಹೇಗೆ? ಎಲ್ಲ ಏನೆಂದಾರು? ಆದೂ, ಅದೇ...ಚಿತ್ರ...ದ ಎದುರಿಗೆ ಅವರ ನಾಮ ಹಾಡುತ್ತಾ, ದಮ್ಮಯ್ಯ ಹಾಕಿ ಬನ್ನಿರೆಂದು ಗೋಳಾಡಿದರೂ, ಬೇಕಾದರೆ ತಲೆಯೊಡೆದುಕೊಂಡರೂ, ಅವರು ಬಂದಾರೇ? ಹಾಗೆ ಬರಲಿಲ್ಲ ಎಂದುಕೊಂಡು ಅವರನ್ನು ನಿರ್ದಯೀ, ನಿಷ್ಠುರೀ, ಎಂದೆಲ್ಲ ಸಹಸ್ರನಾಮ ಮಾಡಿ ಮಾಡಿ ಮುಗಿಸಿಬಿಡುವುದೇ?

ಈ ಆಟಗಳ ಪೇಚಾಟಗಳನ್ನು ಕಂಡವರಿಗೆ ನಗು ಬಂದೀತು?

ಕರ್ನಾಟಕದ ರಾಜಕಾರಣ

(೧ನೇ ಪುಟದಿಂದ)

ಯಣತಿಯ ಭಾವನೆಯಿಟ್ಟು ದುಡಿಯಲು ಮುಂದಾಗುವರೆಂದು ಆಶಿಸಿದರೆ, ತಪ್ಪಾಗಲಾರದು.

ಲೋಕಸಭೆಯ ಪ್ರತ್ಯಕ್ಷ ನಿರ್ವಾಚಿಕ ಸ್ಥಾನಗಳ ಸಂಖ್ಯೆ ೪೯೪ ಇದ್ದು ಇವುಗಳಲ್ಲಿ ಈ ಲೇಖ ಬರೆಯುವ ಹೊತ್ತಿಗೆ ೪೭೨ ಸ್ಥಾನಗಳ ಫಲಿತಾಂಶ ಪ್ರಕಟವಾಗಿದೆ. ಇವುಗಳಲ್ಲಿ

ಕಾಂಗ್ರೆಸ್	೩೪೧
ಕಮ್ಯುನಿಸ್ಟ	೨೯
ಪ್ರಸಪಾ	೧೦
ಜನ ಸಂಘ	೧೫

ಇತರ ಪಕ್ಷಗಳು ಮತ್ತು ಸ್ವತಂತ್ರರು ೬೨ ಸ್ಥಾನಗಳನ್ನು ಪಡೆದಿವೆ. ಹೊಸತಾಗಿ ಚುನಾವಣಾ ರಂಗವನ್ನು ಪ್ರವೇಶಿಸಿದ ಸ್ವತಂತ್ರ ಪಕ್ಷವು ೧೮ ಸ್ಥಾನಗಳನ್ನು ಗಳಿಸಿಕೊಂಡಿದೆ.

ಈ ಬಾರಿಯ ಚುನಾವಣೆಯ ನಂತರ ಎಲ್ಲ ರಾಜ್ಯಗಳಲ್ಲಿಯೂ ವಿಧಾನ ಸಭಾ ಸ್ಥಾನವನ್ನು ಸಂಪಾದಿಸಿದ ಪಕ್ಷವೆಂದರೆ ಕಾಂಗ್ರೆಸ್ ಮಾತ್ರ. ಕಮ್ಯುನಿಸ್ಟ್ ಪಕ್ಷವು ಕೆಲವೆಡೆ ತನ್ನ ಬಲವನ್ನು ಹೆಚ್ಚಿಸಿಕೊಂಡರೂ ಗುಜರಾತದಲ್ಲಿ ಹೇಳ ಹೆಸರಿಲ್ಲದಂತಾಗಿದೆ. ಹಾಗೆಯೇ ಮದ್ರಾಸು, ಆಂಧ್ರಪ್ರದೇಶ, ಪಂಜಾಬುಗಳಲ್ಲಿ ಪ್ರಜಾ ಸಮಾಜವಾದಿ ಪಕ್ಷ, ಮೈಸೂರು, ಮದ್ರಾಸು, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಗುಜರಾತ್, ಅಸ್ಸಾಂ ಮತ್ತು ಬಂಗಾಳಗಳಲ್ಲಿ ಜನಸಂಘಗಳೂ ಒಂದೇ ಒಂದು ಸ್ಥಾನವನ್ನು ಪಡೆಯಲಿಲ್ಲ. ರಾಜಾಜಿಯವರ ಸ್ವತಂತ್ರ ಪಕ್ಷವು ವಿವಿಧ ರಾಜ್ಯಗಳಲ್ಲಿ ಈ ಕೆಳಗಿನಂತೆ ಸ್ಥಾನಗಳನ್ನು ಸಂಪಾದಿಸಿದೆ:

ಮೈಸೂರು	೯
ಮದ್ರಾಸು	೬
ಮಧ್ಯಪ್ರದೇಶ	೨
ಆಂಧ್ರ ಪ್ರದೇಶ	೧೯
ಗುಜರಾತ್	೨೬
ಬಿಹಾರ	೫೦
ಪಂಜಾಬ	೩
ರಾಜಸ್ಥಾನ	೩೬
ಉತ್ತರ ಪ್ರದೇಶ	೧೫

ಕಾಂಗ್ರೆಸ್ಸಿನ ಬಲವು ಎಲ್ಲ ರಾಜ್ಯಗಳಲ್ಲೂ ಹಿಂದಿನ ಬಾರಿಗಿಂತ ಕುಸಿದಿದೆ. ದೇಶದಲ್ಲಿ ವಿರೋಧೀ ದಳಗಳ ಸಂಖ್ಯೆಯೂ ಅವುಗಳ ಪ್ರಚಾರವೂ ಬೆಳೆಯುತ್ತ ಬಂದಂತೆ ಕಾಂಗ್ರೆಸ ತನ್ನ ಮೊದಲಿನ ಶಕ್ತಿಯನ್ನು ಕಳೆದುಕೊಳ್ಳುವುದು ಸ್ವಾಭಾವಿಕವೆಂಬುದು ತಿದ್ದರೂ ಪಕ್ಷದ ಬಲವು ಹೀಗೆಯೇ ಕ್ಷೀಣವಾಗುತ್ತ ನಡೆದರೆ ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಬಂದೊದಗಿದ ಪರಿಸ್ಥಿತಿಯನ್ನು ಮುಂದಿನ ಚುನಾವಣೆಯ ನಂತರದಲ್ಲಿ ಇನ್ನೂ ಕೆಲವೊಂದು ರಾಜ್ಯಗಳಲ್ಲಿ ಕಾಂಗ್ರೆಸ್ಸು ಎದುರಿಸಬೇಕಾಗಬಹುದು. ಆದುದರಿಂದ ಈ ಕಡೆಗೆ ತೀವ್ರ ಗಮನಹರಿಸುವುದು ಮತ್ತು ಪಕ್ಷದ ಬಲಸಂವರ್ಧನಾಕಾರ್ಯದಲ್ಲಿ ತೊಡಗುವುದು ಕಾಂಗ್ರೆಸಿಗರ ಆದ್ಯ ಕರ್ತವ್ಯವಾಗಿದೆ

ಜನಸಾಮಾನ್ಯರ ಸೇವೆಯಲ್ಲಿ.......

ಆರಂಭದಿಂದಲೂ ಸಿಂಡಿಕೇಟ್ ಬ್ಯಾಂಕು
ತನ್ನ ಚಿಕ್ಕ ಪುಟ್ಟ ಗ್ರಾಹಕರ, ಜನಸಾಮಾನ್ಯರ
ಸೇವೆಯಲ್ಲಿ ವಿಶೇಷ ಆಸಕ್ತಿಯನ್ನು ವಹಿಸುತ್ತಾ ಬಂದಿದೆ

ಆ ನಯೆಪೈಸೆಗಳಷ್ಟನ್ನು ಸಹಾ
ಉಳಿಸುವ 'ಪಿಗ್ಮಿ'ಯಂತಹ ಉಳಿತಾಯ
ಯೋಜನೆಯ ಮೂಲಕ ಜೀವನಾತಿಯ
ಅಭ್ಯಾಸವನ್ನು ಪುರಸ್ಕರಿಸುತ್ತಿರುವಂತೆ
ಅವರ ಆರ್ಥಿಕ ಆವಶ್ಯಕತೆಗಳನ್ನು ಪೂರೈಸಿ
ಕೊಡಲು ಚಿನ್ನಾಭರಣಗಳ ಭದ್ರತೆಯ
ಮೇಲೆ ಚಿಕ್ಕ ಪುಟ್ಟ ಮೊತ್ತದ ಸಾಲಗಳನ್ನು
ಒದಗಿಸಿ ಕೊಡುವುದರಲ್ಲಿ ಸಹಾ ಸಿಂಡಿಕೇಟ್
ಬ್ಯಾಂಕು ಪ್ರಮುಖ ಪಾತ್ರವನ್ನು ವಹಿಸುತ್ತಿದೆ.

ಸುಲಭ ನಿಯಮಗಳಲ್ಲಿ ಚಿಕ್ಕ
ಮೊಬಲಗುಗಳ ಚಿನ್ನಾಭರಣಗಳ
ಭದ್ರತೆಯ ಮೇಲೆ ಸಾಲಗಳನ್ನು ಪಡೆಯಲು:

ನಿಮಗೆ ಸಮೀಪವಿರುವ ನಮ್ಮ ಶಾಖೆಯೊಂದನ್ನು ದಯವಿಟ್ಟು ಸಂದರ್ಶಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ
ಇಂಗ್ಲಿಷ್ ಪತ್ರವ್ಯವಹಾರ ಮಾಡಲು
ಉಪಯುಕ್ತ ಪುಸ್ತಕ

Letter Writing Made Easy

ಸುಲಭದಲಿ ಪತ್ರಲೇಖನ

೧ ✓

ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು.

ಬೆಲೆ: ರೂ 1—25.

ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮಾಹಿತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ.

ರೂ1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

—: ಏಲಂ ಪ್ರಕಟಣೆ :—

ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ, ಈ ಸಂಘಕ್ಕೆ ಸೇರಿದ 76ನೇ ಬಡಗಬೆಟ್ಟು ಗ್ರಾಮದ (ಮಿಷನು ಮಾರ್ಕೆಟಿನ ಬಳಿಯಿರುವ) ಸ. ನಂಬ್ರ 93/2A ಯಲ್ಲಿರುವ ಹಂಚು ಚಾವಣಿಯ ಮನೆಯ ಸಾಮಗ್ರಿಗಳನ್ನು ತಾ. 25—3—1962ರಂದು ಸಾಯಂಕಾಲ 5 ಗಂಟೆಗೆ ಕೋರ್ಟು ರೋಡಿನಲ್ಲಿರುವ ಈ ಸಂಘದ ಆಫೀಸಿನಲ್ಲಿ, ಬಹಿರಂಗವಾಗಿ ಏಲಂಮಾಡಲಾಗುವುದು. ಈ ಬಗ್ಗೆ ತಿಳಿಯಬಹುದಾದ ಇತರ ನಿಯಮ ಮತ್ತು ಶರ್ತಗಳ ವಿವರಣೆಗಳನ್ನು ಈ ಸಂಘದ ಆಫೀಸಿನ ನೋಟೀಸು ಬೋರ್ಡಿನಲ್ಲಿ, ಕೆಲಸದ ಯಾವುದೇ ದಿವಸದ ಆಫೀಸು ಸಮಯದಲ್ಲಿ ಪರೀಕ್ಷಿಸಬಹುದು.

(ಅಪ್ಪಣೆ ಪ್ರಕಾರ)

M. V. Hegde
ಮೆನೇಜರ್.

ಉಡುಪಿ ತಾಲೂಕು ವ್ಯವಸಾಯ ಉತ್ಪನ್ನ ಸಹಕಾರ ಮಾರಾಟ ಸಂಘ ಲಿಮಿಟೆಡ್, ಉಡುಪಿ.

ತಾ 4—3—1962.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು, ಫಾರ್ಮುಗಳು, ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ಭೇಟಿಮಾಡಿ ವಿಚಾರಿಸಿರಿ: ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ್ (ಆಂಗ್ಲ ಸ್ವಯಂಬೋಧಿನಿ) ನವಭಾರತ ಪುಸ್ತಕ ಭಂಡಾರ ಉಡುಪಿ

ಸಂಪುಟ ೪೧ ಸಂಚಿಕೆ ೨೭ | ಉಡುಪಿ 15—3—1962 ಗುರುವಾರ | Vol. 41 No. 27

ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ

ರಶ್ಯ—ಅಮೆರಿಕೆಗಳ ಭಿನ್ನ ವಿಚಾರಧಾರೆ

ಜಗತ್ತಿನ ಅತಿ ಪ್ರಮುಖ ಪ್ರಶ್ನೆಗಳಲ್ಲಿ ಒಂದಾದ ನಿಶ್ಶಸ್ತ್ರೀಕರಣವನ್ನು ಸಾಧಿಸುವ ಸಲುವಾಗಿ ಮುಂದಿನ ವಾರದಲ್ಲಿ ಜಿನೀವಾದಲ್ಲಿ ಮರಳಿ ಮಾತುಕತೆಗಳು ಪ್ರಾರಂಭವಾಗುವುವು. ಇವುಗಳಲ್ಲಿ ಭಾರತವನ್ನೊಳಗೊಂಡು ಪೂರ್ವ-ಪಶ್ಚಿಮಗಳ ೧೮ ರಾಷ್ಟ್ರಗಳು ಭಾಗವಹಿಸುವುವು. ಆದರೆ, ಈಗ ತಿಳಿದುಬಂದಿರುವಂತೆ ಈ ನಿಶ್ಶಸ್ತ್ರೀಕರಣದ ಸಮಸ್ಯೆಯ ಬಗ್ಗೆ ರಶ್ಯ ಮತ್ತು ಅಮೆರಿಕೆಗಳ ನೀತಿಯು ವಿಭಿನ್ನವಿರುವುದು. ಸಮಸ್ಯೆಯೊಡನೆ ಸಂಬಂಧಿಸಿರುವ ವಿಭಿನ್ನ ವಾಸ್ತವಿಕಾಂಶಗಳ ಮೇಲೆ ವಿಚಾರ ಮಾಡುವುದು ಕಡಿಮೆಯಾಗಿ, ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳು ತಂತಮ್ಮ ವಿಚಾರಗಳನ್ನು ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ವ್ಯಕ್ತಗೊಳಿಸುವ ಸಂಭವವೇ ಇದೆಯೆಂದೂ ಈ ಎರಡು ಬಣಗಳ ಶಕ್ತಿ ಪ್ರದರ್ಶನಕ್ಕೆ ಅಧಿಕ ಮಹತ್ತ್ವವು ಒದಗಿಬರುವ ಸಂದರ್ಭವಿದೆಯೆಂದೂ ಈ ಕಾರಣದಿಂದ ಇಕ್ಕಡೆಯವರೂ ಚಮತ್ಕಾರಿಕ ಸೂಚನೆಗಳನ್ನು ಮುಂದಿಡುವ ಕುರಿತು ಗಂಭೀರವಾಗಿ ಆಲೋಚನೆ ಮಾಡುತ್ತಿದ್ದಾರೆಂದೂ ಸ್ಪಷ್ಟವಾಗಿ ಗೊತ್ತಾಗಿದೆ.

ರಶ್ಯದ ಸೂತ್ರತ್ರಯ

ಸೋವಿಯತ್ ರಶ್ಯವು ಬಹಿರಂಗದಲ್ಲಿ ಸಂಪೂರ್ಣ ನಿಶ್ಶಸ್ತ್ರೀಕರಣವನ್ನು ಸಾಧಿಸುವ ಉತ್ಸಾಹವನ್ನು ತಳೆದಿದ್ದು ಇದಕ್ಕಾಗಿ ನಾಟಕೀಯವೆನಿಸುವ ಗೊತ್ತುವಳಿಯನ್ನು ತಯಾರಿಸುತ್ತಿದೆ. ಅಂತಾರಾಷ್ಟ್ರೀಯ ನಿರೀಕ್ಷಣೆಗೊಳಪಟ್ಟು, ಮೂರು ತ್ವರಿತ ಸೂತ್ರಗಳ ಮೂಲಕ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುವ ಹಂಬಲವನ್ನದು ಇಟ್ಟುಕೊಂಡಿದೆ.

ರಶ್ಯವು ಯೋಜಿಸಿದ ಮೂರು ಸೂತ್ರಗಳಲ್ಲಿ ಮೊದಲನೆಯದಾದ ಅಣವಿಕ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಸಂಬಂಧಿಸಿದ ಎಲ್ಲ ಸಾಧನಗಳನ್ನೂ ಸಂಪೂರ್ಣವಾಗಿ ನಷ್ಟ ಮಾಡಬೇಕೆಂಬುದು ಅಗ್ರಗಣ್ಯವಾಗಿದೆ. ಹಾಗೆಯೇ ಯಾವುದೇ ಇತರ ದೇಶಗಳಲ್ಲಿ ಇಟ್ಟುಕೊಂಡಿರುವ ತನ್ನ ಸೈನಿಕ ಠಾಣೆಗಳನ್ನು ಎಲ್ಲ ರಾಷ್ಟ್ರಗಳೂ ನಿರ್ಮೂಲಗೊಳಿಸಬೇಕು; ವಿದೇಶಗಳಲ್ಲಿರಬಹುದಾದ ತನ್ನ ಸೇನೆಯನ್ನು ಎಲ್ಲ ದೇಶಗಳೂ ಸ್ವದೇಶಕ್ಕೆ ಮರಳಿ ಕರೆದುಕೊಳ್ಳಬೇಕು ಎಂಬಿವು ಇದರ ಪೂರಕ ಶರ್ತಗಳಾಗಿವೆ. ಈ ಶರ್ತಗಳು ಕಾರ್ಯಾನ್ವಿತಗೊಂಡುವೆಂದರೆ, ಪ್ರತ್ಯೇಕ ದೇಶದ ಸೈನಿಕ ಶಕ್ತಿ ಮತ್ತು ಶಸ್ತ್ರಾಸ್ತ್ರ ಸಂಗ್ರಹವು ಕಡಿಮೆಗೊಳ್ಳಲು ಕಾರಣವಾಗುವುದು. ಮುಖ್ಯವಾಗಿ ರಶ್ಯ ಮತ್ತು ಅಮೆರಿಕೆಗಳು ೧೦ ಲಕ್ಷ ೭೦ ಸಾವಿರಕ್ಕಿಂತ ಅಧಿಕ ಸೈನಿಕರನ್ನು ಇಟ್ಟುಕೊಳ್ಳುವಂತಿಲ್ಲ.

ನಿಶ್ಶಸ್ತ್ರೀಕರಣದ ದ್ವಿತೀಯ ಸೂತ್ರದನ್ವಯ ಅಣವಿಕ ರಾಸಾಯನಿಕ ವಿಷಪೂರಿತ ಮತ್ತು ಸಾಮೂಹಿಕ ವಿನಾಶಕಾರಕವೆನಿಸುವ ಇತರ ಶಸ್ತ್ರಾಸ್ತ್ರಗಳ ಮೇಲೆ ಸಂಪೂರ್ಣ ಪ್ರತಿಬಂಧ ಹೇರಲಾಗುವುದು. ಇಂತಹ ಮಾರಕಾಸ್ತ್ರಗಳನ್ನು ನಿರ್ಮಾಣ ಮಾಡುವುದನ್ನು ನಿಷೇಧಿಸುವುದಲ್ಲದೇ ಈಗ ಇರಬಹುದಾದ ಎಲ್ಲ ಅಸ್ತ್ರಗಳನ್ನೂ ಅಂತಾರಾಷ್ಟ್ರೀಯ ನಿರೀಕ್ಷಕರ ಸಮ್ಮುಖದಲ್ಲಿ ನಷ್ಟಮಾಡಲಾಗುವುದು. ಇದೇ ವೇಳೆಗೆ, ಸೇನೆ ಮತ್ತು ಶಸ್ತ್ರಾಸ್ತ್ರಗಳ ಪರಿಮಾಣದಲ್ಲಿಯೂ ಕಡಿತವಾಗುವುದು. ಇದರಿಂದಾಗಿ ಎಲ್ಲ ದೇಶಗಳ ರಕ್ಷಣಾ ವ್ಯಯವು ಗಣನೀಯವಾಗಿ ಇಳಿಮುಖವಾಗುವುದು.

ಮೂರನೆಯ ಚರಣದಲ್ಲಿ ರಶ್ಯವು ಇನ್ನುಳಿದ ಶಸ್ತ್ರ ಮತ್ತು ಸೇನೆಯನ್ನೂ ಸಮಾಪ್ತಗೊಳಿಸುವ ಸಂಭಾವನೆಯನ್ನು ವ್ಯಕ್ತಪಡಿಸಿದೆ. ಎಂದರೆ, ಉಪರ್ಯುಕ್ತ ಎರಡು ಸೂತ್ರಗಳನ್ನು ಕಾರ್ಯಾಚರಣೆ ನಡೆದರೆ, ಶಸ್ತ್ರಾಸ್ತ್ರಗಳ ಉತ್ಪಾದನೆಯು ಸಂಪೂರ್ಣವಾಗಿ ನಿಂತುಹೋಗುವುದು; ಹೀಗಿರುವುದರಿಂದಾಗಿ ಸೈನಿಕ ವೆಚ್ಚವಾದರೂ ಕೊನೆಗೊಳ್ಳುವುದು. ಹಾಗಾದಾಗ, ಯುದ್ಧ ಸಚಿವಾಲಯ, ಸೇನಾ ಪ್ರಶಾಸನ ಮತ್ತು ಸೈನಿಕ ಪ್ರಶಿಕ್ಷಣಗಳ ಆವಶ್ಯಕತೆಯೂ ಉಳಿಯದಂತಾಗುವುದು. ಈ ಸೂತ್ರದಲ್ಲಿ ರಶ್ಯವು ತೋರ್ಪಡಿಸಿದ ಆಶಯಗಳು ತೀರ ಕಾಲ್ಪನಿಕವೆಂದು ಹೇಳಬಹುದು.

ಕಾರ್ಯಾನ್ವಿತಗೊಂಡಾಗ

ಸೋವಿಯತ್ ರಶ್ಯವು ನಿರ್ದೇಶಿಸಿದ ಸೂತ್ರಗಳು ಸಂಪೂರ್ಣವಾಗಿ ಕಾರ್ಯಕೃತಗೊಂಡವೆಂದರೆ, ಪ್ರತಿ ದೇಶದಲ್ಲಿಯೂ ಕೇವಲ ಪೋಲೀಸು ವಿಭಾಗ ಮತ್ತು ಅತ್ಯಲ್ಪ ಪ್ರಮಾಣದ ಸೇನೆಯು ಉಳಿಯುವುದು. ಆಂತರಿಕ ರಕ್ಷಣೆ ಮತ್ತು ಶಾಂತಿ ವ್ಯವಸ್ಥೆಗಳನ್ನು ಉಳಿಸಿಕೊಳ್ಳುವುದರಲ್ಲಿ ಇವು ಉಪಯೋಗವಾಗುವುವು. ಈ ವಿಭಾಗಗಳೊಡನೆ ಯುದ್ಧಕ್ಕೆ ನಿರುಪಯುಕ್ತವಾದ ಸಾಮಾನ್ಯ ಸ್ವರೂಪದ ಶಸ್ತ್ರಾಸ್ತ್ರಗಳು ಇರುವುವು. ಅಂತಾರಾಷ್ಟ್ರೀಯ ಸಂಕಟದ ಸಂದರ್ಭವೊದಗಿದಾಗ, ಎಲ್ಲ ದೇಶಗಳೂ ಈ ಸೈನಿಕರನ್ನು ಸಂಯುಕ್ತ ರಾಷ್ಟ್ರ ಸಂಘದ ಸುರಕ್ಷಾ ಪರಿಷತ್ತಿನ ಅಧೀನಕ್ಕೆ ಒಪ್ಪಿಸುವುವು. ಪೂರ್ಣ ನಿಶ್ಶಸ್ತ್ರೀಕರಣವನ್ನು ಸಾಧಿಸುವುದರಿಂದ ದೊರೆಯ ಬಹುದಾದ ಉಳಿತಾಯದ ಅಂಶದ ಸ್ವಲ್ಪ ಭಾಗವನ್ನು ಅನಭಿವೃದ್ಧ ದೇಶಗಳ ವಿಕಾಸಕ್ಕಾಗಿ ಒದಗಿಸಿ, ಅವುಗಳಿಗೆ ಆರ್ಥಿಕ ಮತ್ತು ತಾಂತ್ರಿಕ ಸಹಾಯವು ದೊರೆಯುವಂತೆ ಮಾಡಬೇಕೆಂದೂ ರಶ್ಯದ ಸಲಹೆಯಿದೆ.

ಅಮೇರಿಕೆಯ ಆಶಯ

ಆದರೆ, ಅಮೆರಿಕೆ ಹಾಗೂ ಪಾಶ್ಚಾತ್ಯ ರಾಷ್ಟ್ರಗಳ ವಿಚಾರಧಾರೆಯು ಇದಕ್ಕೆ ವ್ಯತಿರಿಕ್ತವಿದೆ. ಅಮೆರಿಕೆಯು ಪಾಶ್ಚಾತ್ಯ ರಾಷ್ಟ್ರಗಳ ಕಡೆಯಿಂದ ಅಣವಿಕ ಪ್ರಯೋಗಗಳನ್ನು ಕೂಡಲೇ ನಿಲ್ಲಿಸಿಬಿಡುವ ಬಗ್ಗೆ ಸಂಧಿಯಾಗಬೇಕೆಂದು ಹೇಳುತ್ತದೆ. ಯಾವುದೇ ವಿಧದ ನಿಶ್ಶಸ್ತ್ರೀಕರಣ ಕಾರ್ಯಕ್ರಮದ ಪ್ರಾಥಮಿಕ ಹೆಜ್ಜೆಯಿದಾಗುವುದು. ರಶ್ಯವು ಈ ಒಡಂಬಡಿಕೆಯ ಮೂಲಕ ತನ್ನ ಶಕ್ತಿಯ ಪರೀಕ್ಷೆಯನ್ನು ಮಾಡಲು ಅಮೆರಿಕೆ ಬಯಸುತ್ತಿದೆಯೆಂದೂ ಅಪ್ರತ್ಯಕ್ಷವಾಗಿ ರಶ್ಯದಲ್ಲಿ ವ್ಯಾಪಕ ರೀತಿಯ ಸಂದೇಹ ಜಾಲವನ್ನು ಹರಡಿಸಲು ಪ್ರಯತ್ನಿಸುತ್ತಿದೆಯೆಂದೂ ಸಂಶಯ ಪಡುತ್ತದೆ. ಅಲ್ಲದೆ, ತಾನು ಮುಂದಿಟ್ಟ ನಿಶ್ಶಸ್ತ್ರೀಕರಣ ಸಮಸ್ಯಾ ಪರಿಹಾರದ ಮೊದಲೆರಡು ಸೂತ್ರಗಳಂತೆ ಅಣವಿಕ ಶಸ್ತ್ರ ಮತ್ತು ಅದರ ತಯಾರಿಯ ಮೂಲಗಳ ಮೇಲೆ ಪ್ರತಿಬಂಧ ಹೇರುವಾಗ, ಈಗಿರುವ ಶಸ್ತ್ರಾಸ್ತ್ರಗಳನ್ನೂ ಅವುಗಳ ಮೂಲಗಳನ್ನೂ ನಿರ್ನಾಮ ಮಾಡುವಾಗ, ಮುಂದೆ, ಯುದ್ಧದ ದೃಷ್ಟಿಕೋಣದಿಂದ ಅಣವಿಕ ಪರೀಕ್ಷಣೆಯೇ ಅನಾವಶ್ಯಕವೆನಿಸುವುದು. ಅಂದರೆ, ಅಣವಿಕ ಪರೀಕ್ಷೆಯನ್ನು ತಡೆಗಟ್ಟಲು ಯಾವುದೇ ಹೊಸ ಒಡಂಬಡಿಕೆಯ ಆವಶ್ಯಕತೆಯಿಲ್ಲ. ತಾನು ಅದು ಮುಂದಿಸಿದ ತ್ರಿಸೂತ್ರಗಳಿಂದಲೇ ಅದು ಪೂರೈಸಲ್ಪಡುತ್ತದೆ ಎಂದು ರಶ್ಯವು ವಾದಿಸುತ್ತದೆ.

ಕರಪತ್ರವಿತರಣೆ

ಈ ಸಮ್ಮೇಳನದಲ್ಲಿ ಭಾಗ ವಹಿಸುವ ೧೮ ರಾಷ್ಟ್ರಗಳ ನಡುವೆ ಅಮೆರಿಕೆ ಮತ್ತು ರಶ್ಯಗಳು ಕೆಲವೊಂದು ಕಾಗದಪತ್ರಗಳನ್ನು ವಿತರಣೆ ಮಾಡಿದ್ದು, ಇವುಗಳಲ್ಲಿ ವಾಶಿಂಗ್‌ಟನ್ ಮತ್ತು ಮಾಸ್ಕೋಗಳ ವಿಚಾರ ಧಾರೆಯು ವಿವರಿಸಲ್ಪಟ್ಟಿದೆಯೆಂದೂ ಗೊತ್ತಾಗುತ್ತದೆ. ನಿಶ್ಶಸ್ತ್ರೀಕರಣ ಸಮಸ್ಯೆಯ ಮೇಲೆ ವಿಚಾರವು ವ್ಯಕ್ತವಾಗಿದ್ದರೂ ತಾವು ಯಾವ ನೀತಿಯನ್ನು ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ಅನುಸರಿಸುವೆವು ಎಂಬುದನ್ನು ವಿಸ್ತೃತವಾಗಿ ತಿಳಿಸಿಲ್ಲವೆಂದು ಗೊತ್ತಾಗಿದೆ. ಅಮೆರಿಕೆಯ ಯೋಜನೆಯಲ್ಲಿ ನಿಶ್ಶಸ್ತ್ರೀಕರಣದ ಪ್ರಮುಖ ಅಂಗವೆನಿಸಿದ ಅಣವಿಕ ಶಸ್ತ್ರಾಸ್ತ್ರಗಳ ಕೊನೆಗೆ ಯೋಜನಾಂತ್ಯದಲ್ಲಿ ಸ್ಥಾನವು ದೊರೆಯುವುದಾದರೆ, ರಶ್ಯನ್ ಯೋಜನೆಯು ಬಹಳ ಚಮತ್ಕಾರಿಕ ವಿಧಾನದಿಂದ ಪ್ರಾರಂಭವಾಗುವುದು; ಈ ಯೋಜನೆಯಲ್ಲಿ ಪ್ರಾರಂಭದಲ್ಲಿಯೇ ಅಣವಿಕ ಶಸ್ತ್ರಗಳ ಉತ್ಪಾದನೆಯ ಮೇಲೆ ಪ್ರತಿಬಂಧ ಹೇರುವ ಪ್ರಸ್ತಾಪವಿದೆ; ಅಸ್ತ್ರಗಳ ಮೇಲೆ ನಿಷೇಧವನ್ನು ಎರಡನೆಯ ಸೂತ್ರದಲ್ಲಿ ಹಾಕಲಾಗಿದೆ.

ನಿಶ್ಶಸ್ತ್ರೀಕರಣದ ಸಂಬಂಧ ಚರ್ಚೆ ನಡೆಸುವುದೇ ಈ ಸಮ್ಮೇಳನದ ಪ್ರಧಾನ ಗುರಿಯಾಗಿದ್ದರೂ ಅಮೆರಿಕೆಯು ಇತರ ಕೆಲವೊಂದು ಪ್ರಶ್ನೆಗಳ ಕುರಿತಾಗಿಯೂ ವಿಚಾರ ನಡೆಸುವ ಆಲೋಚನೆಯಲ್ಲಿದೆ. ಇಂತಹವುಗಳಲ್ಲಿ ಅಂತಾರಾಷ್ಟ್ರೀಯ ಕ್ಷೋಭೆ ಮತ್ತು ಅವಿಶ್ವಾಸಗಳು ಬೆಳೆಯುವುದಕ್ಕೆ ಉಂಟಾಗಿರುವ ವಿಷಯಗಳು ಅತಿ ಪ್ರಧಾನವಾದುವುಗಳೆನ್ನಬಹುದು.

ಭಾರತದ ನಿಲುವು

ಈ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಭಾರತವು ವಹಿಸುವುದು. ಭಾರತವಾದರೂ ತನ್ನ ನೀತಿಯನ್ನು ನಿರ್ಧಾರಗೊಳಿಸುವ ಸಮಯದಲ್ಲಿ ಅಮೆರಿಕೆ ಮತ್ತು ರಶ್ಯಗಳ ವಿಭಿನ್ನ ವಿಚಾರಧಾರೆಗಳನ್ನು ನೋಡಿಕೊಂಡು ಅವನ್ನು ಅಧ್ಯಯನ ಮಾಡುವುದು. ಮಹಾರಾಷ್ಟ್ರಗಳೆರಡರಲ್ಲಿ ಕಂಡುಬಂದಿರುವ ವಿಭಿನ್ನತೆಯಿಂದಾಗಿ ೧೮ ರಾಷ್ಟ್ರಗಳ ಸಮ್ಮೇಳನವು ಯಾವುದೇ ರೀತಿಯ ಪ್ರಗತಿಯನ್ನು ಸಾಧಿಸಲಾರದೆಂದು ಭಾವಿಸುತ್ತದೆ. ಈ ಸಮ್ಮೇಳನವು ಯಾವ ರೀತಿಯಲ್ಲಾದರೂ ಒಂದು ನಿರ್ಧಾರಕ್ಕೆ ಬರಲು ಅಸಮರ್ಥವಾಯಿತೆಂದರೆ, ಪೂರ್ವ ಮತ್ತು ಪಶ್ಚಿಮಗಳ ನಡುವೆ ತೋರಿಬಂದಿರುವ ಶಸ್ತ್ರಾಸ್ತ್ರ ಸ್ಪರ್ಧೆಯು ಮತ್ತಷ್ಟು ತೀವ್ರವಾಗಿ ಮುಂದುವರಿಯುವುದು, ಆಗ ಯಾವ ವಿಧದ ಸಮಾಧಾನಕರ ಪರಿಸ್ಥಿತಿಯನ್ನು ಉಳಿಸಿಕೊಳ್ಳುವುದೂ ಅಸಾಧ್ಯವಾಗುವುದು—ಎಂದು

(೧೦ನೇ ಪುಟ ನೋಡಿ)

ಒಂದು ಮರ್ಮಸ್ಪರ್ಶಿ ಕಥೆ—

ಆವಶ್ಯಕತೆ ಉಳಿಯಲಿಲ್ಲ

ಶ್ರೀ ಎಸ್. ಗೋಪೀಚಂದ ರಾವ್

ರಾಮಕೃಷ್ಣ ಹಸೆಯಲ್ಲಿ ಕುಳಿತಿದ್ದನೇನೋ ಹೌದು; ಆತನ ಚಿಕ್ಕಪ್ಪನ ಹೆಣ್ಣುಮಕ್ಕಳು ಆರತಿಯೆತ್ತಿದರು. ಅದರ ಪ್ರತಿಫಲವೆಂದು ಹರಿವಾಣಕ್ಕೆ ಮುಕ್ತಹಸ್ತದಿಂದ ಹಣವನ್ನು ಯಾಂತ್ರಿಕನಾಗಿಯೇ ಸುರಿದಿದ್ದ. ಆತನನ್ನೇ ಮೋರೆನೋಟದಿಂದ ನೋಡುತ್ತಿದ್ದ ನವವಧುವಿಗೆ ಇಂತಹ ಯಾಂತ್ರಿಕತೆಯ ಅರಿವು ಆಗದಿರಲಿಲ್ಲ. ಆಕೆ ನೋಡುತ್ತಿದ್ದಂತೆಯೇ ತನ್ನ ಕೈಹಿಡಿದ ಪತಿಯ ನಯನಗಳಿಂದ ಎರಡು ಹನಿ ನೀರು ರೆಪ್ಪೆಗಳೆಡೆಯಿಂದ ಜಾರಿ, ಉಟ್ಟಿದ್ದ ಜರಿಯ ಧೋತಿಗೆ ಬಿದ್ದು ಆರಿಹೋದುವು. ಸಂಭ್ರಮ ಸಡಗರಗಳಿಗೆ ಹೆಸರಾಗಿದ್ದ ಆ ಚಪ್ಪರದಲ್ಲಿ ಅದನ್ನು ಗಮನಿಸಿದವರು ಮಾತ್ರ ಯಾರೊಬ್ಬರೂ ಇರಲಿಲ್ಲ. ಎಲ್ಲರೂ ಅವರವರ ಕಾರ್ಯಗಳಲ್ಲಿ ತತ್ಪರರಾಗಿದ್ದರು. ಹಸೆ ಮಣೆಯಿಂದ ಎದ್ದ ರಾಮು ಉಪಚಾರವನ್ನೆಲ್ಲ ಯಾಂತ್ರಿಕವಾಗಿಯೇ ಪೂರೈಸಿ ನೆಟ್ಟಗೆ ತನ್ನ ಕೋಣೆಯೊಳಕ್ಕೆ ನಡೆದ. ಅಲ್ಲಿ ಮಂಚದ ಮೇಲೆ ಕುಕ್ಕರಿಸಿದ. ನಿಮಿಷಗಳುರುಳಿದಂತೆ ಆತನ ಮುಖವೂ ವಿವರ್ಣವಾಗತೊಡಗಿತು. ಕಣ್ಣುಗಳಲ್ಲಿ ನೀರು ತುಂಬಿತು. ತಲೆದಿಂಬನ್ನೆಲ್ಲ ಒದ್ದೆಮಾಡತೊಡಗಿದ. ಸಂಭ್ರಮದಿಂದಿರಬೇಕಾದ ಗಳಿಗೆಯಲ್ಲಿಯೂ ಆತನನ್ನು ಅದಾವುದೋ ಒಂದು ಮನೋಗ್ಲಾನಿ ಕವಿದಿತ್ತು; ಅದು ಅವನ ಹೃದಯವನ್ನು ಸೀಳಿತ್ತು; ಅವನ ಮನಸ್ಸು ಆಗಿಹೋದ ಒಂದು ಘಟನೆಯನ್ನು ನೆನಪಿಸಿ ಅಳುತ್ತಲಿತ್ತು. ಅದು ಆಗದೆ ಇರುತ್ತಿದ್ದರೆ, ತನ್ನಕ್ಕನೇ ತನಗೆ ಆರತಿ ಬೆಳಗುತ್ತಿರಲಿಲ್ಲವೆ?

ಐದು ವರುಷಗಳ ಹಿಂದಿನ ಮಾತು. ಊರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ರಾಮು ಅನ್ನದೇವರನ್ನೊಲಿಸುವ ದಾರಿಯನ್ನು ಕಾಣಬೇಕಿತ್ತು. ಹೇಳಿಕೇಳಿ ನಿರುದ್ಯೋಗಿಗಳ ತವರಾದ ಆ ಸುಡುಗಾಡಿನಲ್ಲಿ ಉದ್ಯೋಗಾವಕಾಶವಾದರೂ ಎಲ್ಲಿಂದ ಬರಬೇಕು? ಅದಕ್ಕಾಗಿಯೇ ಬೊಂಬಾಯಿಯಲ್ಲಿದ್ದ ತನ್ನ ಗೆಳೆಯನೊಬ್ಬನೊಡನೆ ಪತ್ರ ವ್ಯವಹಾರವನ್ನೂ ಇಟ್ಟುಕೊಂಡಿದ್ದ. ಆತನೇನೋ ಅಲ್ಲಿ ಒಳ್ಳೆಯ ಉದ್ಯೋಗವನ್ನು ಅವಲಂಬಿಸಿ, ಸುಖೋದಯಿಂದ ಬದುಕಲು ಶಕ್ತನಾಗಿದ್ದ. ಒಂದು ದಿನ ಆತನಿಂದ ಪತ್ರವೂ ಬಂತು. “ಸುಮ್ಮನೆ ಊರಲ್ಲಿ ಕುಳಿತು ನೊಣ ಓಡಿಸುವುದೇಕೆ? ಕೂಡಲೇ ಇಲ್ಲಿ ಬಾ. ಏನಾದರೂ ಪ್ರಯತ್ನ ಮಾಡಿದರೆ ಕೆಲಸ ಸಿಕ್ಕೀತು. ಕೇವಲ ಅಪ್ಲಿಕೇಶನ್‌ಗಳಿಂದ ಕೆಲಸ ಕೈಗೂಡುವ ಕಾಲ ಇದಲ್ಲ. ಅದರೊಂದಿಗೆ ಕಾಂಡಿಡೇಟೂ ಹಾಜರಿರಬೇಕಾಗುತ್ತದೆ. ಆದುದರಿಂದ ತಡ ಮಾಡಬಾರದು” ಎಂದು.

ಮಿತ್ರನ ಪತ್ರ ಕೈಸೇರಿದಂದು ರಾಮುವಿಗೆ ಸ್ವರ್ಗವು ಮೂರೇ ಗೇಣು ಉಳಿದಂತಾಯಿತು. ಆದರೆ, ಬೊಂಬಾಯಿಗೆ ಹೋಗಬೇಕಾದರೆ, ಹಣ ಬೇಕು ತಾನೆ? ತಂದೆಯವರನ್ನು ಇದಕ್ಕಾಗಿ ಕಾಡಿದರೆ ಕಾಸೂ ಹುಟ್ಟಲಾರದು. ಎಲ್ಲಿ ಬೊಂಬಾಯಿ? ಎಲ್ಲಿ ನಮ್ಮೂರು? ಯಾರವನೋ ಗೆಳೆಯ? ಅಲ್ಲಿ ಹೋಗಿ ಫುಟ್‌ಪಾಥಿನಲ್ಲಿ ಬಿದ್ದು ಸಾಯುವುದಕ್ಕಿಂತ ಇಲ್ಲೇ ಮನೆಯಲ್ಲಿ ಉಪವಾಸ ಬಿದ್ದಾದರೂ ಸಾಯಬಹುದು ಎಂಬ ವಾದದ ಕುರಕ್ಕರ್ತರ ಮುಂದೆ ಆತ ಏನೆಂದು ಬಾಯಿ ಬಿಚ್ಚಬೇಕು? ಅಲ್ಲದೆ ಹಣವೆಂದರೆ ಸುಮ್ಮನಾಗುತ್ತದೆಯೆ? ಐವತ್ತು ರೂಪಾಯಿಗಳನ್ನಾದರೂ ಅವರು ತರಬೇಕು ಎಲ್ಲಿಂದ? ಕೊನೆಗೆ ನೂರು ಯೋಚನೆ ಮಾಡಿ, ತನ್ನ ಭಾವನಿಂದ ರೂಪಾಯಿ ಎರವಲು ಪಡೆದು ಮನೆಯಲ್ಲಿ ಅಕ್ಕನ ಮನೆಗೆಂದು ಹೇಳಿ ಬೊಂಬಾಯಿಯ ದಾರಿ ಮೆಟ್ಟಿಯೇ ಬಿಟ್ಟ. ಅಲ್ಲಿ ಹೋದ ನಂತರ, ಸತ್ಯ ಸಂಗತಿಯನ್ನು ತಿಳಿಸಿ ಮನೆಗೆ ಕಾಗದವನ್ನೂ ಹಾಕಿದ.

ಗೆಳೆಯ ಮೋಹನನ ಉದಾರತೆಯಿಂದ ರಾಮುವಿನ ದಿನಗಳು ಸುಲಭವಾಗಿ ಉರುಳುತ್ತಿದ್ದುವು. ಪ್ರತಿ ನಿತ್ಯವೂ ವರ್ತಮಾನ ಪತ್ರಿಕೆ ವೀಕ್ಷಿಸುವುದು, 'ವಾಂಟೆಡ್ ಕಲಂ'ನಲ್ಲಿ ತನ್ನ ಯೋಗ್ಯತೆಗೆ ತಕ್ಕ ಉದ್ಯೋಗಾವಕಾಶಕ್ಕೆ ಅರ್ಜಿ ಬರೆಯುವುದು; ಸಾಧ್ಯವಾದರೆ, ಅದನ್ನು ಕೈಯಾರೆ ಮುಟ್ಟಿಸುವುದು, ಅವರಿಂದ 'Let me see' ಎನ್ನಿಸಿಕೊಳ್ಳುವುದು, ಕೊನೆಗೆ ಮರಳುವುದು-ಇದೇ ಆತನ ದಿನಚರ್ಯೆಯಾಗಿತ್ತು. ಇನ್ನೂ ಅವಿವಾಹಿತನಾಗಿದ್ದ ಮಿತ್ರನ ಮನಸ್ಸಿನಂತೆಯೇ ಆತನ ವೇತನವೂ ಇದ್ದುದರಿಂದ ಬಹಿರಂಗವಾಗಿ ರಾಮುವಿಗೆ ಯಾವ ಅನನುಕೂಲವಾಗಲಿಲ್ಲ.

ಆದರೆ, ರಾಮುವಿನ ಮನಸ್ಸು ಒಳಗಿಂದೊಳಗೆ ಹೊಯ್ದಾಡುತ್ತಿತ್ತು. ಬೂದಿಯೊಳಗೆ ಹೊಗೆಯುತ್ತಿರುವ ಬೆಂಕಿಯಂತೆ ಅವನ ಮನಸ್ಸು ಆಂತರಿಕವಾಗಿ ನೋಯುತ್ತಿತ್ತು. ಕೆಲಸದ ಆಸೆಯಿಂದ ಬೊಂಬಾಯಿ ಸೇರಿ ತಿಂಗಳುಗಳು ಆರು ಸಂದಿದ್ದುವು. ಆದರೂ ಮನದಾಶೆಯಿನ್ನೂ ಕನಸಿನ ಮಂಡಿಗೆಯಾಗಿಉಳಿದಿತ್ತು. ಈ ವ್ಯಸನದಿಂದ ಅವನು ಸೊರಗಿ ಕಡ್ಡಿಯಾಗಿ ಹೋದ. ಈ ಸಂಗತಿ ಮಿತ್ರ ಮೋಹನನಿಗೂ ತಿಳಿಯದಿರಲಿಲ್ಲ. ಆದರೆ ಆತನಾದರೂ ಏನು ಮಾಡಬಹುದಾಗಿತ್ತು? ಅವನೂ ಹೇಳಿ ಕೇಳಿ ಕಂಪೆನಿಯೊಂದರ ನೌಕರ ತಾನೆ?

ಇನ್ನೂ ಕೆಲವು ಬಾರಿ ಸೂರ್ಯ ಉದಿಸಿದ; ಅಸ್ತಂಗತನಾದ. ಒಂದು ದಿನ ಮುಂಜಾನೆ ಎದ್ದ ರಾಮು ವರ್ತಮಾನ ಪತ್ರಿಕೆಯನ್ನೇ ತಿರುವಿ ಹಾಕುತ್ತಿದ್ದ. ಗೆಳೆಯ ಮೋಹನನೂ ಪ್ರಾತರ್ವಿಧಿಯನ್ನು ಮುಗಿಸಿ ಅತ್ತ ಬಂದ. ಅದೇನು ಆತನಿಗೆ ಕಂಡಿತೊ, ವಿನೋದಕ್ಕೆಂದು, 'ಇನ್ನೂ ಅದೆಷ್ಟು ದಿನ ಪೇಪರ್ ನೋಡಬೇಕಾಗುತ್ತದೊ?' ಎಂದ. ರಾಮುವು ದಿಗ್ಗನೆದ್ದು ನಿಂತ; ಅವನ ನೇತ್ರಗಳು ಸಜಲವಾದುವು. “ಮೋಹನ, ನನಗಂತೂ ಉದ್ಯೋಗ ಗಳಿಸುವ ಆಶೆಯಿಲ್ಲ. ಇಷ್ಟು ದಿನ ಇಲ್ಲಿದ್ದು ನಿನಗೆ ಕಷ್ಟ ಕೊಟ್ಟದ್ದೇ ಸಾಕೆನಿಸುತ್ತದೆ. ನೆಟ್ಟಗೆ ಮನೆಗೆ ನಡೆಯುವ ಎಂದೆನಿಸುತ್ತದೆ.”

“ಹೆಚ್ಚು ಚಿಂತಿಸಬೇಡ ರಾಮು. ತಾಳುವಿಕೆಗಿಂತನ್ಯ ತಪವು ಬೇರಿಲ್ಲ ಎನ್ನುತ್ತಾರಲ್ಲಾ. ಇನ್ನೂ ಕೆಲ ದಿನವಿರು. ಎಲ್ಲಿಯಾದರೂ ಏನಾದರೂ ಆದೀತು. ನಾವು ಕೇಳಿದೊಡನೆಯೇ ಕೆಲಸ ಕೊಡಲು ಕಂಪೆನಿಯೇನು ನಮ್ಮ ಮಾವನ ಮನೆಯೆ?” ಎಂದು ಮಾತು ಮುಗಿಸುವುದರಲ್ಲಿದ್ದ, ಹೊರಗಣಿಂದ ಅಂಚೆಯವನು 'ಪೋಸ್ಟ್' ಎಂದು ಕೂಗಿ ಬಾಗಿಲು ತಟ್ಟಿದ. ಹೊರಹೋಗಿ ಅದನ್ನು ತಂದ ಮೋಹನ “ರಾಮೂ ನೋಡು, ನಿನಗೊಂದು ಕವರಿದೆ” ಎಂದು ಆತನ ಕೈಗಿತ್ತ.

ಮನೆಯಿಂದಲೂ ಕಾಗದ ಬಾರದೆ ಎಂಟು ದಿನಗಳು ಸಂದಿದ್ದುವು. ಅವರಿಗೂ ತನ್ನ ಮೇಲೆ ಕೋಪ ಬಂದಿರಬೇಕು; ತಮ್ಮ ಕಣ್ಣೆದುರು ದುಡಿದು ಸಂಪಾದಿಸಬೇಕಾದ ಮಗ ತಮ್ಮ ಮುಂದೆಯೂ ಇಲ್ಲ; ದುಡಿಮೆಯೂ ಇಲ್ಲವೆಂಬಾಗ ಯಾವ ತಾಯ್ತಂದೆಯರಿಗೆ ಸಿಟ್ಟು ಬಾರದು? ಪ್ರಾಯಃ ತತ್‌ಕ್ಷಣ ಹೊರಟು ಬಾ ಎಂದು ಬರೆದಿರಬೇಕೆಂದು ಉದಾಸೀನನಾಗಿಯೇ ಕವರನ್ನೊಡೆದ. ಆದರೆ, ಪತ್ರದ ವಿಷಯವನ್ನು ಓದುತ್ತ ಹೋದಂತೆ ಆತ ತನ್ನ ಕಣ್ಣುಗಳನ್ನೇ ನಂಬದಾದ; 'ಪ್ರಕಾಶ ಎಂಡ್ ಕಂಪೆನಿ'ಯಲ್ಲಿ ಕೆಲಸಕ್ಕೆ ಹಾಜರಾಗಬೇಕೆಂದು ಆರ್ಡರ್ ಆದಾಗಿತ್ತು! ರಾಮುವಿನ ನಯನಗಳು ಕೃತಜ್ಞತೆಯಿಂದ ತುಂಬಿ ಬಂದುವು. ಮೋಹನನ ಅನ್ನವನ್ನುಂಡುದರ ಪರಿಣಾಮವಾಗಿ ಆರುವರೆ ತಿಂಗಳುಗಳ ನಂತರ ರಾಮುವಿಗೆ ಉದ್ಯೋಗ ಲಭಿಸಿತ್ತು.

ಅವನು ಮೋಹನನ ಬಳಿಗೆ ಹೋಗಿ ಪತ್ರವನ್ನಿತ್ತ. ಓದಿದ ಆತನಿಗೂ ಸಂತೋಷವಾಯಿತು “ಓ,

(೧೦ನೇ ಪುಟ ನೋಡಿರಿ)

ESTD. **1921** ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು; ಬಡ್ಡಿ ಸೇಕಡಾ 5½ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920



ತಮಿಳು ನಾಡಿನ ತೀರ್ಥ

ಆರುಮುಗನ ಪಳನಿ

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಪಳನಿಯು ಮಧುರೆ ಜಿಲ್ಲೆಯಲ್ಲಿ ಹೆಸರುವಾಸಿಯಾದ ಒಂದು ಪಟ್ಟಣ. ಈ ಪಟ್ಟಣವು ಸಮುದ್ರ ಮಟ್ಟದಿಂದ ೧೦೬೮ ಅಡಿಗಳ ಎತ್ತರದಲ್ಲಿದ್ದು ಪ್ರಸಿದ್ಧ ಸುಬ್ರಹ್ಮಣ್ಯ ಸ್ವಾಮಿಯ ಕ್ಷೇತ್ರವಾಗಿದೆ. ಈ ಪಟ್ಟಣದ ದಕ್ಷಿಣ ಭಾಗದಲ್ಲಿ ಪಳನಿ ಮಲೆ ಎಂಬ ಹೆಸರಿನಿಂದ ಪ್ರಖ್ಯಾತಿಗೊಂಡ ಒಂದು ಗುಡ್ಡವಿದೆ. ಈ ಪರ್ವತಕ್ಕೆ ವರಾಹಗಿರಿ ಎಂಬ ಹೆಸರೂ ಇದೆ. ೪೫೦ ಅಡಿಗಳಷ್ಟು ಎತ್ತರವಾಗಿರುವ ಈ ಗುಡ್ಡದ ಮೇಲೆ ಸುಬ್ರಹ್ಮಣ್ಯ ದೇವಸ್ಥಾನವು ಅಲಂಕಾರವಾಗಿ ನಿಂತಿರುವುದು. ಇಲ್ಲಿಯ ಸುಬ್ರಹ್ಮಣ್ಯ ಸ್ವಾಮಿಯನ್ನು 'ದಂಡಾಯುಧಪಾಣಿ' ಎಂದು ಭಕ್ತರು ಕರೆಯುವ ಪದ್ಧತಿಯಿದೆ. ಆತನ ಆಯುಧವು ದಂಡವು. ಈ ಸ್ವಾಮಿಯ ವಾಹನವು ನವಿಲು. ದೇಗುಲದ ಪಡುದಿಕ್ಕಿನಲ್ಲಿ ಒಂದು ಸುಂದರವಾದ ಗೋಪುರವಿದೆ.

ಈ ಪವಿತ್ರವಾದ ಮಲೆಯನ್ನು ಅಗಸ್ತ್ಯ ಮುನಿಯು ಸೃಷ್ಟಿಸಿದ್ದು ಎನ್ನುವ ದಂತಕಥೆಯು ವಾಡಿಕೆಯಲ್ಲಿದೆ. ಈ ಮಹಾ ಮುನಿಯು ಹಲವು ಕಾಲ ಈ ಗಿರಿಯಲ್ಲಿ ತಪಸ್ಸನ್ನು ಸಾಧಿಸಿ, ಅನಂತರ ಕೈಲಾಸಕ್ಕೆ ಪ್ರಯಾಣ ಮಾಡಿದರು ಎಂದು ಕ್ಷೇತ್ರ ಪುರಾಣದಿಂದ ಸ್ಪಷ್ಟವಾಗುವುದು. ಈ ಗಿರಿಯ ಮೇಲೆ ಸುಬ್ರಹ್ಮಣ್ಯ ಸ್ವಾಮಿಯು ಬಂದು ನೆಲಸಲು ಏನು ಕಾರಣವಿರಬಹುದು ಎನ್ನುವ ವಿಚಾರದಲ್ಲಿ ಒಂದು ದಂತಕಥೆಯು ತಮಿಳುನಾಡಿನಲ್ಲಿ ಬಹಳ ಮಟ್ಟಿಗೆ ಪ್ರಚಾರವಾಗಿರುವುದು. ಪರಮ ಶಿವನಿಗೆ ಗಣೇಶ ಮತ್ತು ಸುಬ್ರಹ್ಮಣ್ಯರೆಂಬ ಇಬ್ಬರು ಪುತ್ರರು. ಇವರಿಬ್ಬರೂ ಭೂಯಾತ್ರೆಯನ್ನು ಮಾಡುವ ಯೋಚನೆಯಲ್ಲಿ ಬಿದ್ದರು! ಶಿಥಿಲ ಕಾಯನಾದ ಸುಬ್ರಹ್ಮಣ್ಯನು ಮಯೂರಾಸನನಾಗಿ ಭೂಯಾತ್ರೆಗೆ ಓಡೋಡಿ ಹೋದನು. ಅತಿಸ್ಥೂಲಕಾಯನಾದ ಗಣೇಶನಿಗೆ ಇದು ಸಾಧ್ಯವಾಗದೆ ಹೋಯಿತು. ಆದರೂ ಪರಿಪಕ್ವ ಬುದ್ಧಿಯುಳ್ಳ ಗಣೇಶನು ತನ್ನ ತಂದೆಯು ಕೂತಲ್ಲಿ ಹೋಗಿ ಮೂರು ಪ್ರದಕ್ಷಿಣೆ ಮಾಡಿದನು. ಪರಮ ಶಿವನು ತನ್ನ ಮಗನ ಬುದ್ಧಿಗೆ ಮೆಚ್ಚಿ ತನ್ನ ಕೈಯಲ್ಲಿದ್ದ ಒಂದು ದಾಳಿಂಬ ಫಲವನ್ನು ಗಣೇಶನಿಗೆ ಉಚಿತವಾಗಿ ಕೊಟ್ಟನು. ಭೂಯಾತ್ರೆ ಮುಗಿಸಿ ಸುಬ್ರಹ್ಮಣ್ಯನು ಹಿಂದಿರುಗಿದಾಗ ದಾಳಿಂಬದ ಹಣ್ಣು ಗಣೇಶನ ಹಸ್ತವಲ್ಲಿತ್ತು. ತಾನು ಈ ಪಂತದಲ್ಲಿ ಸೋತೆನೆಂದು ಸುಬ್ರಹ್ಮಣ್ಯನು ಬಹಳ ವ್ಯಸನಪಟ್ಟನು. ಆಗ ದಯಾಳುವಾದ ಪರಮ ಶಿವನು ತನ್ನ ಕಿರಿಯ ಮಗನನ್ನು ಕರೆದು "ಪ್ರಿಯನೇ ನೀನು ವ್ಯಸನಿಸುವುದು ಸರಿಯಲ್ಲ. ಗಣೇಶನು ನನ್ನ ಸುತ್ತು ಬಂದು ನನ್ನಿಂದ ದಾಳಿಂಬದ ಹಣ್ಣನ್ನು ಸ್ವೀಕರಿಸಿದನು. ನೀನು ನನ್ನ ಪ್ರೀತಿಯ ಪುತ್ರನಿರುವೆ. ನೀನೇ ನನ್ನ ಫಲವೆಂದು ನಾನು ತಿಳಿದಾಗ ನಿನಗೆ ಪ್ರತ್ಯೇಕ ಒಂದು ಫಲವನ್ನು ಕೊಡುವ ಅವಶ್ಯವಿಲ್ಲದೆ" ಎಂದು ನಗುತ್ತ ಸುಬ್ರಹ್ಮಣ್ಯನನ್ನು ಅಪ್ಪಿಕೊಂಡನು. ಆ ದಿನದಿಂದ ಈ ಮಲೆಗೆ ಪಳನಿಯೆನ್ನುವ ನಾಮವು ಸಂದಿತು. ಯಾತ್ರಿಕರು ಹೆಗಲ ಮೇಲೆ ಕಾವಡಿಯನ್ನು ಧರಿಸಿ ಸುಬ್ರಹ್ಮಣ್ಯನ ದರ್ಶನ ಮಾಡುವ ವಾಡಿಕೆಯೂ ಇದೆ. ಪಳನಿಮಲೆಯ ಒಂದು ಭಾಗವನ್ನು ಇಡುಂಬ ಮಲೆ ಎಂದು ಕರೆಯುತ್ತಿದ್ದರು. ಅಗಸ್ತ್ಯ ಮುನಿಯ ಸೇವಕನಾದ ಇಡುಂಬನೆಂಬವನು ಮುನಿಯು ಕೈಲಾಸಕ್ಕೆ ತೆರಳುವಾಗ ಮಲೆಯ ಒಂದು ಭಾಗವನ್ನು ಹೆಗಲ ಮೇಲೆ ಹೊತ್ತು ತಾನೂ ಮುನಿಯನ್ನು ಹಿಂಬಾಲಿಸಿದನು ಎನ್ನುವ ಸಂಕೇತವನ್ನು ದೃಢಗೊಳಿಸುವ ಕೆಲವು ಭಕ್ತರು ಕಾವಡಿಯನ್ನು ಹೊತ್ತು ಮಲೆಯ ಮೇಲೆ ಕಾಣಿಸುವ ವಾಡಿಕೆಯಿದೆ. ಕ್ಷೀರಾಭಿಷೇಕವು ಸುಬ್ರಹ್ಮಣ್ಯನ ಆರಾಧನೆಗಳಲ್ಲಿ ವಿಶೇಷವಾದ ಪೂಜ್ಯವು. ಸುಬ್ರಹ್ಮಣ್ಯ ಸ್ವಾಮಿಯ ಭಕ್ತರು ದಕ್ಷಿಣ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಇದ್ದೇ ಇರುವರು. ದಕ್ಷಿಣ ಕೇರಳದ ಮತ್ತು ತಮಿಳು ನಾಡಿನವರಿಗಂತೂ ಸುಬ್ರಹ್ಮಣ್ಯ ಸ್ವಾಮಿಯು ಜೀವನಾಧಾರದ ದೇವರೆಂದೇ ನಿಶ್ಚಲವಾದ ನಂಬಿಗೆ ಇದೆ.

ಇಲ್ಲಿಯ ದಂಡಾಯುಧಪಾಣಿಗೆ ಬಾಲ ಸುಬ್ರಹ್ಮಣ್ಯನೆಂದೂ ಹೆಸರಿದೆ – ಆತನು ಬಾಲಕನ ರೂಪದಲ್ಲಿ ಪ್ರಕಾಶಿಸುವನು. ಆವನನ್ನು ತಮಿಳರು, ವೆಟ್ರಿವೇಲು, ವಡಿವೇಲು, ವೇಲಾಯುಧ, ಮುರುಗ, ಆರುಮುಗ, ಷಣ್ಮುಗ, ದಂಡಪಾಣಿ, ಕಂದಸ್ವಾಮಿ, ಮೊದಲಾದ ಹಲವು ಹೆಸರುಗಳಿಂದ ಪೂಜಿಸುವರು. ತಿರುನಲ್‌ವೇಲಿಯ ಶೈವರು ಹೆಚ್ಚಾಗಿ ಈ ಸ್ವಾಮಿಯನ್ನು ಶಕ್ತಿ ವಡಿವೇಲು, ಶಂಕರ ವಡಿವೇಲು, ದಂಡಾಯುಧಪಾಣಿ ಎಂದು ಕರೆಯುವ ವಾಡಿಕೆಯಿದೆ. ಈ ಸ್ವಾಮಿಯನ್ನು ಕಾರ್ತಿಕೇಯನೆಂದು ಕರೆವ ವಾಡಿಕೆಯಿದೆ. ವೇದಗಳಲ್ಲಿ ಈ ಸ್ವಾಮಿಯ ಸೂಚನೆಯು ಲೋಪವಾಗಿದ್ದರೂ ಪುರಾಣಗಳು ಸುಬ್ರಹ್ಮಣ್ಯನ ಸ್ತುತಿಯನ್ನು ಮಾಡಿವೆ. ಉತ್ತರ ಹಿಂದುಸ್ಥಾನದಲ್ಲಿ ಮಾತ್ರ ಈ ಸ್ವಾಮಿಯ ಪ್ರಚಾರವಿಲ್ಲ. ತಮಿಳು ನಾಡಿನ ಪ್ರತಿಯೊಂದು ಮುಖ್ಯವಾದ ಗ್ರಾಮದಲ್ಲಿ ಸುಬ್ರಹ್ಮಣ್ಯನ ಗುಡಿ ಇದೆ. ರಾಮಾಯಣದ ಬಾಲಕಾಂಡದಲ್ಲಿ ಸುಬ್ರಹ್ಮಣ್ಯನ ಜನನವನ್ನು ವಿವರಿಸಿರುವೆ. ಸ್ಕಂದನೆಂದು ಮಹಾಭಾರತದಲ್ಲಿ ವರ್ಣಿಸಲ್ಪಟ್ಟ ಸುಬ್ರಹ್ಮಣ್ಯನು ಎಲ್ಲಾ ದೇವತೆಗಳ ಸೈನ್ಯದ ಸೇನಾಧಿಪತಿಯೆಂದು ವಿವರಿಸಲ್ಪಟ್ಟಿರುವನು ಆರು ಮುಖಗಳಿಂದ ಶೋಭಿಸುವ ಕಾರಣ ಈ ಸ್ವಾಮಿಗೆ ಷಣ್ಮುಖನೆನ್ನುವರು. ಶರವೆನ್ನುವ ವಿಪಿನದಲ್ಲಿ ಆತನು ಬಹು ಕಾಲ ವಿದ್ದುದರಿಂದ ತಮಿಳರು ಈ ದೇವರನ್ನು 'ಶರವಣ ಭಾವ'ನೆನ್ನುವರು. ಆತನ ರೂಪವು ಬಹು ಚೆಲುವಾಗಿ ಆತನು ಸದಾಕಾಲವೂ ಬಾಲಕನಂತೆ ತೋರುವ ಕಾರಣ ಆತನನ್ನು 'ಕುಮಾರ'ನೆಂದು ಕರೆವುದೂ ಉಂಟು. ಮಳೆಯಾಳ ದೇಶದವರಿಗೆ ಆತನು ಸದಾಕಾಲ 'ಕುಮಾರ'ನು ರುದ್ರಯಾಮಲದಲ್ಲಿ ಈತನನ್ನು "ಸಾರಸ್ವತ, ಮತ್ತು ಸಿದ್ಧ"ನೆಂದು ಬಣ್ಣಿಸಿದ್ದಾರೆ. ಆಗಮಗಳು ಈತನಿಂದಲೇ ನಿರ್ಮಿತವಾದುವು ಎಂಬುದು ಹಲವರ ಅಭಿಪ್ರಾಯ.

ಸೈನಿಕನಾಗುವುದು ಪಾಪಕಾರ್ಯವಲ್ಲ. ಮಾತೃಭೂಮಿಯ ರಕ್ಷಣೆಗಾಗಿ ದುಡಿಯುವ ಪ್ರತಿಜ್ಞೆ ಮಾಡುವುದು. ಸರ್ವರ ಪ್ರೀತಿಗೆ ಪಾತ್ರನಾಗುವುದೆಂದರೆ ಗೌರವವಲ್ಲವೆ?

ಅಮೃತ ಬಿಂದು

ಭಗವಂತನು ತನ್ನದೇ ಆದ ಹೂವುಗಳನ್ನು ಮನುಷ್ಯನ ಕೈಯಿಂದ ಪಡೆಯಲು ಇಚ್ಛಿಸುತ್ತಾನೆ

o o o

ಮನುಷ್ಯಸಮಾಜವು ಕ್ರೂರವಾದುದು; ಆದರೆ ಮನುಷ್ಯನು ದಯಾಪರನು.

o o o

ತಿರಸ್ಕರಿಸಲ್ಪಟ್ಟ ಪ್ರೇಮದಿಂದ ಜೀವನದ ಸಂಪತ್ತು ಬೆಳೆಸುತ್ತದೆ.

o o o

ಮೃತ್ಯುವೆಂಬ ಕಾರಂಜಿಯ ಕಾರಣವೇ ಜೀವನವೆಂಬ ನೀರು ಆಟವಾಡುತ್ತದೆ.

o o o

ದೇವರನ್ನು ಬಿಟ್ಟು ಉಳಿದೆಲ್ಲವನ್ನು ಸಂಪಾದಿಸಿದ ಮನುಷ್ಯರು ಎಲ್ಲವನ್ನು ಬಿಟ್ಟು ದೇವರನ್ನು ಸಂಪಾದಿಸಿದವರನ್ನು ನೋಡಿ ನಗುತ್ತಾರೆ.

o o o

ಸತ್ಯವೆಂಬ ನದಿಯು ತಪ್ಪುಗಳೆಂಬ ಅದರ ಕಾಲುವೆಗಳ ಮೂಲಕ ಹರಿಯುತ್ತದೆ.

o o o

ಮನುಷ್ಯನು ಪ್ರಾಣಿಯಂತೆ ವರ್ತಿಸಿದಾಗ ಪ್ರಾಣಿಗಿಂತಲೂ ನಿಕೃಷ್ಟ ರೀತಿ ವರ್ತಿಸುತ್ತಾನೆ.

o o o

ಕಪ್ಪು ಮೋಡಗಳು, ಬೆಳಕಿನಿಂದ ಚುಂಬಿಸಲ್ಪಟ್ಟಾಗ, ಸ್ವರ್ಗದ ಸುಂದರ ಹೂಗಳಾಗಿ ಕಂಗೊಳಿಸುತ್ತವೆ.

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;

ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ

ಆಡಳಿತ ಆಫೀಸು: ಮಂಗಳೂರು-1.

ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಮನೆಯ ಬಳಿಯಿರುವ

ಬಹುಮುಖ ವೈದ್ಯ – ಹುಳಿಹಬ್ಬೆ

ಶ್ರೀ ಕೆ. ಅಚ್ಯುತ ಶ್ರೀನಿವಾಸ ಪೈ, ಉಡುಪಿ.

ವೃಕ್ಷಾಮ್ಲಂ ತಿಂತಿಡೀ ಶಂಚಚುಕ್ರಂ
ಸ್ಯಾದಮ್ಲ ವೃಕ್ಷಕವ್ ।
ವೃಕ್ಷಾಮ್ಲ ಮಾಮಮ್ಲೋಷ್ಣಂ
ವಾತಘ್ನಂ ಕಫ ಪಿತ್ತಲಮ್ ॥
ಪಕ್ವಂತು ಗುರು ಸಂಗ್ರಾಹಿಕಟುಕಂ
ಕುವರಂ ಲಘು ।
ಅಮ್ಲೋಷ್ಣಂ ರೋಚನಂ ರುಕ್ಷಂ
ದೀಪನಂ ಕಫವಾತಕೃತ್ ॥
ತೃಷ್ಣಾರ್ಶೋ ಗ್ರಹಿಣೀಗುಲ್ಮ ಶೂಲ
ಹೃದ್ರೋಗಜಿತ್ ।

ವೃಕ್ಷಾಮ್ಲ, ತಿಂತಿಡೀಕ, ಚುಕ್ರ,
ಅಮ್ಲ ವೃಕ್ಷಕ (ಸಂಸ್ಕೃತ ನಾಮಗಳು)

ಇದು ಫಲ ವರ್ಗದ ವನಸ್ಪತಿಯು, ಇದರ ಗಿಡವು ದೊಡ್ಡದಾಗುವುದು. ಕರ್ನಾಟಕ, ಕೊಂಕಣದಲ್ಲಿಯೂ ಹೆಚ್ಚಾಗಿ ಬೆಳೆಯುವುದು. ಇದೊಂದು ಅತ್ಯುಪಯೋಗಿ ವೃಕ್ಷ. ನೋಡುವುದಕ್ಕೆ ಸುಂದರವಾಗಿ ಶೋಭಾಯಮಾನವಾಗಿ ಕಾಣುವದು. ಎಲೆಗಳು ದಪ್ಪವಾಗಿದ್ದು ಸ್ಪರ್ಶಕ್ಕೆ ಮೃದುವಾಗಿರುವವು. ಇದರ ಹಣ್ಣಿಗೆ 'ಅಮಸೋಲು' ಎನ್ನುವರು. (ತುಳುವಿನಲ್ಲಿ ಜಾರ್ಗೆ, ಕನ್ನಡದಲ್ಲಿ ಹುಳಿಹಬ್ಬೆ ಎಂದು ಕರೆಯುತ್ತಾರೆ.)

ಈ ಹಣ್ಣಿನ ಬಣ್ಣವು ಕೆಂಪಗಿದ್ದು ಕಿತ್ತಳೆ ಆಕಾರವಿದೆ. ಹಣ್ಣಿನ ತೊಗಟೆಯು ದಪ್ಪಗಿರುವದು. ತೊಗಟೆ ಬಿಚ್ಚಿದರೆ ಒಳಗೆ ಮಜ್ಜಾ, ರಸ, ಬೀಜ, ಇಷ್ಟು ಪದಾರ್ಥಗಳಿವೆ. ಮಜ್ಜಾವನ್ನು ತಿನ್ನುತ್ತಾರೆ. ಆಹ್ಲಾದದಾಯಕವೂ, ರುಚಿಯೂ ಆಗಿರುವದು. ಒಳಗಿನ ರುಚಿಯಾದ ನೀರನ್ನು ಕುಡಿಯುವರು. ಈ ಮರದ ಎಲ್ಲಾ ಭಾಗಗಳು ಹುಳಿಯಾಗಿರುವವು. ಬೀಜದಿಂದ ಎಣ್ಣೆಯನ್ನು ತೆಗೆಯುತ್ತಾರೆ. ಅದು ಮೇಣದಂತೆ ಬೆಳ್ಳಗಾಗಿ ಗಟ್ಟಿ ಇರುವದು. ಇದಕ್ಕೆ 'ಸೋಲಿ ಮೇಣ"ವೆನ್ನುತ್ತಾರೆ. ಇದನ್ನು ತಿನ್ನುವುದಕ್ಕೂ, ಔಷಧಗಳಲ್ಲಿಯೂ ಉಪಯೋಗಿಸುವರು. ಇದರ ಎಣ್ಣೆಗೆ ಕೊಂಕಣದಲ್ಲಿ 'ಭಿರಂಡೇಲ' ಎಂದು ಕರೆಯುವರು. ಹಣ್ಣಿನ ಮೇಲಿನ ಸಿಪ್ಪೆ ತೆಗೆದು ಚೂರು ಮಾಡಿ ಹಣ್ಣಿನ ರಸದಲ್ಲಿ ೪-೬ ಸಲ ತೋಯಿಸಿ ಒಣಗಿಸಿ ಇಡುವರು.

ಗೋವೆ ಮತ್ತು ಮಾಲವಣಗಳಿಂದ ಪ್ರತಿ ವರುಷ ಖಂಡಿಗಟ್ಟಲೆ ಅಮಸೋಲನ್ನು ಪರದೇಶಕ್ಕೆ ಕಳುಹಿಸುವರು. ಇದರ ಎಣ್ಣೆಯನ್ನು ಅಲ್ಲಿ ಊಟದ ಸಮಯ ಉಪಯೋಗಿಸುವರು. ಫಲ, ತೊಗಟೆ, ಬೀಜದ ಎಣ್ಣೆ, ಹಣ್ಣು ಎಲ್ಲವೂ ಅತ್ಯುಪಯೋಗಿ ಭಾಗಗಳು ಔಷಧಯುಕ್ತವಾಗಿರುವವು.

ಇದು ಒಗರು, ಹುಳಿ, ಉಷ್ಣ, ಪಿತ್ತಕಾರಿ, ಕಫಹರ, ಗ್ರಾಹಿ, ಅಗ್ನಿದೀಪನ ಗುಣ ಉಳ್ಳದ್ದು. ವಾತ, ಪಿತ್ಥ, ಅಮವಾತ, ರಕ್ತವಿಕಾರ, ಅಮಾತಿಸಾರ, ಸಂಗ್ರಹಿಣೀ, ಮೂಲವ್ಯಾಧಿ, ಗುಲ್ಮ, ಕೃಮಿ, ಶೂಲ. ಪ್ರಮೇಹ, ಹೃದ್ರೋಗ, ವಾತೋದರ, ವ್ರಣ ಇವುಗಳನ್ನು ಸಂಪೂರ್ಣ ಗುಣಪಡಿಸುವ ಶಕ್ತಿ ಸಾಮರ್ಥ್ಯವಿರುವದು. ಒಣಗಿದ ಹಣ್ಣು, ಗ್ರಾಹೀ, ದೀಪನ, ಪಾಚನ, ರುಚಿಕರ, ರಕ್ತ, ಪಿತ್ಥ ನಾಶಕವಿದ್ದು, ಶೀತವೀರ್ಯವಾಗಿರುವದು.

ಕಾಯಿಯು: ಒಗರು, ಹುಳಿ, ಉಷ್ಣ, ಪಿತ್ಥಕರ. ಕಫಕರ ಅಗ್ನಿದೀಪಕ, ರುಚಿಕರವಿದ್ದು ಜಡವಿದೆ. ವಾಯು, ವಾತೋದರ, ಅತಿಸಾರ, ವ್ರಣಗಳನ್ನು ಸಂಪೂರ್ಣ ಗುಣಪಡಿಸುತ್ತದೆ!

ತೊಗಟೆ ಹೃದ್ಯವಿದ್ದು, ಸ್ತಂಭಕವಿದೆ. ಬೀಜದ ಎಣ್ಣೆ— ಅಮ್ಲಪಿತ್ತ ನಾಶಕ, ಅತಿಸಾರ ಶಾಮಕ, ಸ್ತಂಭಕ, ವ್ರಣರೋಪಕವಿದೆ. ಪಥ್ಯಕರವಾದುದು. ಅಮಸೋಲು ರುಚಿಕೊಡತಕ್ಕದ್ದಾದ್ದರಿಂದ ಅಡಿಗೆಯಲ್ಲಿ ಉಪಯೋಗಿಸುವರು. ಸಾರು, ಚಟ್ನಿ, ಮೊದಲಾದ ಪದಾರ್ಥಗಳನ್ನು ಮಾಡುತ್ತಾರೆ. ಹುಣಸೆ ಹಣ್ಣಿಗಿಂತಲೂ ಪಥ್ಯವಾದದ್ದು. ರಕ್ತ ಆಮಾಂಶ, ಅತಿಸಾರ, ಸಂಗ್ರಹಿಣಿಗಳಿಗೆ ಹಿತವಾದುದು. ಕಾಲು ಕೈ ಬಿರಿಯುವುದಕ್ಕೆ 'ಯೋಗೇಶ್ವರ' ತೈಲದೊಂದಿಗೆ ಬಿರುಕುಗಳಲ್ಲಿ ಸೋಲ ಮೇಣವನ್ನು ತುಂಬಬೇಕು. ಉರಿ ಕಡಿಮೆಯಾಗಿ ಬಿರುಕುಗಳು ತುಂಬಿಬರುವವು.

ಎಲುಬು ನೋಯುತ್ತಿದರೆ 'ಯೋಗೇಶ್ವರ' ತೈಲ ತಿಕ್ಕಿ, ಅಮಸೋಲಿನ ಎಲೆಗಳನ್ನು ಅರೆದು ಬಿಸಿಮಾಡಿ ಕಟ್ಟಬೇಕು. ಗುಣವಾಗುತ್ತದೆ.

ಅಂಗೈ ಅಂಗಾಲುಗಳಲ್ಲಿ ಉರಿ ಇದ್ದರೆ ಇದರ ಎಣ್ಣೆಯನ್ನು ಯೋಗೇಶ್ವರ ತೈಲದೊಂದಿಗೆ ಮಿಶ್ರಮಾಡಿ ಹಚ್ಚಬೇಕು.

ಬೆಂಕಿ ಬಿಸಿ ನೀರಿನ ವ್ರಣಗಳಿಗೆ ಯೋಗೇಶ್ವರ ತೈಲ ಮತ್ತು ಇದರ ಮೇಣದ ಎಣ್ಣೆಯನ್ನು ಮಿಶ್ರಮಾಡಿ ಹಾಗಿಸಿದಲ್ಲಿ ಬೆಂಕಿ, ಬಿಸಿ ನೀರಿನ ವ್ರಣಗಳು ಕಲೆ ಸಹಾ ಉಳಿಯದೆ ವಾಸಿಯಾಗುತ್ತವೆ.

ಔಷಧ ಯುಕ್ತವಾಗಿರುವ ಈ ಸೋಲ ಮೇಣವನ್ನು ಸಂಗ್ರಹಿಸಿ ಇಡಲೇಬೇಕು. ಇದು ಮನೆ ವೈದ್ಯನಂತಿರುವದು. ತುರಿಕೆ ಇರುವ ಭಾಗಗಳಿಗೂ, ಹುಳ ಮೇಯುವ ಚರ್ಮ ವ್ಯಾಧಿಗೂ ಅತ್ಯಲ್ಪ ಖರ್ಚಿನದಾದ "ಅಮಸೋಲು ಮೇಣ ಮತ್ತು 'ಯೋಗೇಶ್ವರ ತೈಲ" ಉಪಯೋಗಿಸಿ ಗುಣಲಾಭಪಡೆಯಬಹುದು,

———

ನಿಮಗೆ ಗೊತ್ತಿರಲಿ

ಜೀವಾತ್ಮನಿಂದ ಭಿನ್ನವಾದ ಪ್ರಾಣ

ಉಸಿರಾಡುವುದರಿಂದಲೇ ಶರೀರದ ಎಲ್ಲ ಅಂಗಾಂಗಗಳೂ ತಮ್ಮ ಕಾರ್ಯಗಳಲ್ಲಿ ಉದ್ಯುಕ್ತವಾಗುತ್ತವೆ. ಉಚಿತ ರೀತಿಯಲ್ಲಿ ಮತ್ತು ಉಚಿತ ಪರಿಮಾಣದಲ್ಲಿ ನಾವು ಶ್ವಾಸ ತೆಗೆದುಕೊಳ್ಳದೆ ಹೋದರೆ, ಶರೀರದ ವಿಕಾಸವೂ ಆಗಲಾರದು, ಅರೆ ಉಸಿರಾಟದಿಂದಾಗಿ ಶ್ವಾಸಕೋಶದ ನೂರಾರು ಒಳ ಕೋಣೆಗಳು ನಿರುದ್ಯೋಗಿಯಾಗಿ ಕೆಲವೇ ಅಂಶ ಮಾತ್ರ ಕಾರ್ಯತತ್ಪರವಾಗುತ್ತವೆ. ಹೀಗೆ ಕೆಲಸ ಮಾಡದ ಶ್ವಾಸಕೋಶದ ಭಾಗವು ಕಾಲಕ್ರಮದಲ್ಲಿ ಶಕ್ತಿಹೀನವಾಗುತ್ತವೆ; ಮತ್ತು ಮುಂದೊಂದು ದಿನ ಕೋಶದ ಬಹು ಭಾಗವು ಕಾರ್ಯಹೀನವಾಗುವುದೂ ಇದೆ. ಆಗ ಆಮ್ಲಜನಕವೂ ಸಮಾವೇಶವಾಗುವುದಿಲ್ಲ; ಇದರಿಂದ ಪಾಚನ ಶಕ್ತಿಯೂ ಸಮಾಪ್ತಗೊಳ್ಳುವುದು: ಮಾನವನ ಕೊನೆಯೂ ಆಗುವುದು. ಆದುದರಿಂದ ಸರಿಯಾಗಿ ಉಸಿರಾಡುವುದು ಅವಶ್ಯ.

ಜೀವನದ ಎಲ್ಲ ಕೆಲಸಗಳನ್ನೂ ನಡೆಸುವಂತಹ ಒಂದು ಅಪೂರ್ವ ಶಕ್ತಿ ನಮ್ಮ ಸುತ್ತಲಿರುವ ವಾಯುಮಂಡಲದಲ್ಲಿದೆ. ವಾಯುವಿನಲ್ಲಿರುವ ಈ ಶಕ್ತಿಯನ್ನು ನಾನಾ ಹೆಸರುಗಳಿಂದ ಕರೆಯುತ್ತಾರೆ. 'ಪ್ರಾಣ"ವೆಂದಿದನ್ನು ಹೆಸರಿಸುವುದು ಬಹು ಉಚಿತವಾಗಿದೆ. ಗಾಳಿಯಲ್ಲಿ ಪ್ರಾಣವೆಂಬ ಹೆಸರಿನ ಒಂದು ಶಕ್ತಿಯಿದೆಯೆಂದೂ ಇದರ ಬಲದಿಂದಲೇ ಪ್ರಪಂಚದ ಚಕ್ರವು ನಡೆಯುತ್ತಿದೆಯೆಂದೂ ಹೇಳುತ್ತಾರೆ. ಪ್ರಾಣವು ಎಲ್ಲ ಜೀವಂತ ವಸ್ತುಗಳಲ್ಲಿರುತ್ತದೆ; ನಿರ್ಜೀವವಸ್ತುಗಳಿಂದ ಬೇರೆಯಾಗಿ ವಾಯುಮಂಡಲದಲ್ಲಿ ಸಮಾವೇಶಗೊಳ್ಳುತ್ತದೆ. ಇದನ್ನೇ ಸಂಜೀವಿನೀ ಶಕ್ತಿಯೆಂದೂ ಹೆಸರಿಸುತ್ತಾರೆ. ಪ್ರಾಣಶಕ್ತಿಯು ಸರ್ವವ್ಯಾಪಕವಿರುತ್ತದೆ; ಹೆಚ್ಚಿನ ಜನರು ಜೀವಾತ್ಮ ಮತ್ತು ಪ್ರಾಣಗಳನ್ನು ಒಂದೆಂಬುದಾಗಿಯೇ ತಿಳಿಯುತ್ತಾರೆ; ಆದರೆ, ಹಾಗೆ ತಿಳಿದುಕೊಳ್ಳುವುದು ಸರಿಯಲ್ಲ. ಜೀವಾತ್ಮವೆಂಬುದು ಪರಮಾತ್ಮನ ಒಂದಂಶ; ಇದು ಎಲ್ಲ ಜೀವಿಗಳಲ್ಲಿಯೂ ಇರುವಂತಹದು. ಇದರ ಸುತ್ತಲೂ ಇತರ ಪದಾರ್ಥಗಳೂ ಪ್ರಾಣ ಶಕ್ತಿಯೂ ಇರುತ್ತವೆ. ಪ್ರಾಣವೆಂಬುದೊಂದು ಶಕ್ತಿಯ ರೂಪ. ಈ ಶಕ್ತಿಯು ಜೀವಾತ್ಮನೊಡನೆ ಸೇರುವುದರಿಂದ ಭೌತಿಕ ವಿಕಾಸವಾಗುತ್ತದೆ. ಜೀವಾತ್ಮವು ಶರೀರದಿಂದ ಹೊರಟು ಹೋದಾಗ, ಪ್ರಾಣವು ಅಧಿಕಾರರಹಿತವಾಗಿ, ಶರೀರದ ಅವಯವ ಮತ್ತು ಪರಮಾಣುಗಳ ಆಜ್ಞಾಕಾರಿಯಾಗುತ್ತದೆ. ಶರೀರವು ನಷ್ಟವಾಗಿ, ಪಂಚಭೂತಗಳಲ್ಲಿ ವಿಲೀನಗೊಳ್ಳುತ್ತದೆ; ಆಗ ಆ ಶರೀರದ ಪ್ರತಿ ಪರಮಾಣುವೂ ತನ್ನೊಡನಿರುವ ಪ್ರಾಣದ ಅಣುಮಾತ್ರವನ್ನು ತನ್ನಲ್ಲಿ ಕೂಡಿಸಿಕೊಳ್ಳುತ್ತದೆ. ಮುಂದೆ ಇವು ಒಂದನ್ನೊಂದು ಸೇರುತ್ತವೆ; ಪ್ರಾಣವು ತಾನು ಹೊರಟಿರುವ ವಾಯುಮಂಡಲವನ್ನೇ ಕೂಡುತ್ತದೆ. ಜೀವಾತ್ಮವು ಪ್ರಾಣದ ಸಂಯೋಗವಿರುವಷ್ಟು ಕಾಲ ಮಾತ್ರ ಅದನ್ನು ನಿಯಂತ್ರಣದಲ್ಲಿಟ್ಟುಕೊಳ್ಳ ಬಲ್ಲುದು.

ಪರಮಾಣುಗಳು ಜೀವಾತ್ಮನ ಇಚ್ಛೆಯ ಮೇರೆಗೆ ತಮ್ಮೊಳಗೆ ಸೇರ ಬಲ್ಲವು. ಪ್ರಾಣವು ಶಕ್ತಿಯ ಮೂಲ. ಆದುದರಿಂದ ಪದಾರ್ಥಗಳಲ್ಲಿ ವೇಗ, ಬಲ ಮತ್ತು ಜೀವನವು ತಲೆದೋರುತ್ತವೆ. ಈ ಪ್ರಾಣವು ಯಾವ ರೂಪದಲ್ಲೂ ವ್ಯಕ್ತವಾಗಬಲ್ಲುದು. ವೇಗ, ಬಲ, ಶಕ್ತಿ, ಆಕರ್ಷಣೆ, ವಿದ್ಯುಚ್ಛಕ್ತಿ, ಗ್ರಹಗಳ ನಡೆ, ಜೀವರೂಪ—ಇವುಗಳಲ್ಲಿ ಯಾವ ವಿಧದಲ್ಲಾದರೂ ಪ್ರಕಟವಾಗಬಹುದು. ಶಕ್ತಿ ಮ

(೯ನೇ ಪುಟ ನೋಡಿರಿ)

'ಖೀರಾ' ಉಕ್ಕಿನ ಫರ್ನಿಚರುಗಳು, ಮಂಚ-ಸೋಫಾಗಳು, ವೈವಿಧ್ಯಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮಗ್ರಿಗಳು ಇತ್ಯಾದಿ ಇತ್ಯಾದಿಗಳಿಗೆ ವಿಚಾರಿಸಿರಿ —

ಶಾಸ್ತ್ರಿ & ಕೊ
ಮಂಗಳೂರು—1

ನಡೆದು ಬಂದ ದಾರಿ

ಮುಳ್ಳಿನಿಂದ ಹೂವಿನ ಹಾಸಿಗೆಗೆ

[ಹಿಂದೀ ಸಾಹಿತ್ಯದ ವಿಖ್ಯಾತ ಕವಿ ದಿನಕರರು ದುಃಖ ಬೆರಸದ ಸುಖವನ್ನೂ ಸುಖ ಕೂಡಿರದ ದುಃಖವನ್ನೂ ಅರಿತಿಲ್ಲವೆನ್ನುತ್ತಾರೆ "ಸುಖೇ ದುಃಖೇ ಸಮೇಕೃತ್ವಾ" ಎಂಬ ಗೀತೋಕ್ತಿಯನ್ನು ಇವರು ಕಾರ್ಯಗತಗೊಳಿಸಿದ್ದಾರೆನ್ನಬಹುದು]

ನನ್ನ ಬೀಜಮಂತ್ರವಾವುದು ಎಂಬ ವಿಚಾರದಲ್ಲಿ ವಿಶೇಷವೇನೂ ಹೇಳುವಂತಿಲ್ಲ. ಪ್ರವೃತ್ತಿ ಅಥವಾ ಜೀವನ ಸ್ವೀಕಾರದ ಭಾವ ಮಾತ್ರ ನನ್ನ ಬೀಜಮಂತ್ರ. ನನ್ನ ಕರ್ಮರತಿ, ಕರ್ಮಯೋಗ, ಅಧ್ಯವಸಾಯಗಳೇ ಜೀವನ ಸ್ವೀಕಾರದ ಭಾವಗಳು ಯಾವಾಗಲೂ ಕಾರ್ಯತತ್ಪರನಾಗಿರುವ ಭಾವವೇ ನನ್ನ ಕ್ರಿಯೊಪ್ರೇರಕ.

ನನ್ನ ಪ್ರೇರಕ ಭಾವವಾದರೂ ಆರ್ಥಿಕ ಆವಶ್ಯಕತೆಯತ್ತ ಒಲಿಯಲಿಲ್ಲ. ಆತ್ಮಾಭಿವ್ಯಕ್ತಿಯ ಸುಖ, ರಚನೆಯ ಪ್ರಕ್ರಿಯೆಯಲ್ಲಿ ಕಳೆದುಕೊಂಡು ಎಲ್ಲವುಗಳಿಂದಲೂ ಮುಕ್ತನಾಗುವ ಆನಂದ ಇವುಗಳೇ ನನ್ನ ಪ್ರೇರಕ ಭಾವಗಳು. ಪುಸ್ತಕಗಳಿಂದ ನನಗೆ ಆನಂದವು ದೊರೆಯುತ್ತದೆ; ಅದು ರಚನೆಯ ವೇಳೆಯಲ್ಲಿ ನನ್ನ ಬಳಿ ಬರುತ್ತದೆ. ಆ ನಂತರ ದೊರೆಯುವ ಸುಖವು ಪ್ರಶಂಸೆ ಕೇಳುವ ಸುಖ ಇಲ್ಲವೇ ಅಸ್ಪಷ್ಟವೆನಿಸಿದ ಸುಖ.

ಕರುಣಾಜನಕವೆನಿಸಿದ ಇಲ್ಲವೇ ಬಹಳ ಕಷ್ಟಕರವೆಂದು ನಾನು ತಿಳಿಯಬಹುದಾದ ಯಾವುದೇ ಸಂಕಟವನ್ನು ನಾನು ಎದುರಿಸಲಿಲ್ಲ. ಬಡತನದಲ್ಲಿಯೇ ಹುಟ್ಟಿದ ವ್ಯಕ್ತಿಯೊಬ್ಬ ದೊಡ್ಡ ಕಷ್ಟಗಳನ್ನು ಎದುರಿಸುತ್ತ ಮೆಲ್ಲಮೆಲ್ಲನೆ ಬೆಳೆಯುತ್ತ ಬರುತ್ತಾನೆ. ಹಾಗೆಯೇ ನಾನಾದರೂ ಕೆಸರು, ಮುಳ್ಳು, ಕಾಡುಗಳನ್ನೂ ಮರುಭೂಮಿಯನ್ನೂ ಹಾದು ರೇಶ್ಮೆಯ ನಗರವನ್ನು ಮುಟ್ಟಿದ್ದೇನೆ. ನನ್ನ ಇಡಿಯ ಜೀವನವು ಭಯಾನಕ ಸಂಘರ್ಷಗಳ ನಡುವೆಯೇ ಕಳೆದಿದೆ; ಇಂದಿಗಾದರೂ ನಾನು ಸಂಘರ್ಷಗಳ ನಡುವೆಯೇ ಇದ್ದೇನೆ. ಪ್ರಾಯಃ ನನ್ನ ಬೆನ್ನ ಹಿಂದೆಯೇ ನಡೆದು ಬರುತ್ತಿರುವ ಭಯಾನಕ ಸಂಘರ್ಷಗಳು ನನ್ನ ಜೀವನದಲ್ಲಿನ ಸುಖ ಮತ್ತು ದುಃಖಗಳ ನಡುವಣ ಅಂತರ ಸೂಚಿಸುವ ರೇಖೆಯನ್ನು ದೂರಮಾಡಿವೆಯೆಂದು ಹೇಳಬಹುದು. ಆದುದರಿಂದಲೇ ದುಃಖದಿಂದ ಸಂಪೂರ್ಣ ಬೇರೆಯಾದ ದುಃಖದ ಸ್ಮರಣೆಯೂ ನನಗಿಲ್ಲ; ಅದರೊಡನೆ ಸುಖದಿಂದ ಪ್ರತ್ಯೇಕವಾದ ದುಃಖದ ನೆನಪೂ ಇಲ್ಲ.

ಸಂಪತ್ತಿನೊಡನೆ ಇಲ್ಲವೇ ಕೀರ್ತಿಯೊಡನೆ ಸಂಬಂಧವಿರುವಂತೆ ಪೂರ್ಣ ಸಂತೋಷವು ಇದು ವರೆಗೆ ನನಗೆ ಲಭಿಸಿಲ್ಲ. ಆತ್ಮಾಭಿವ್ಯಕ್ತಿಯ ದೃಷ್ಟಿಯಿಂದ ಹೇಳುವುದಾದರೆ, 'ರಸವಂತಿ' ಕಾವ್ಯದಿಂದ ಸಂತೋಷಗೊಂಡಿದ್ದೇನೆ; ಆನಂತರ 'ಕುರುಕ್ಷೇತ್ರ' ಮತ್ತು "ರಶ್ಮಿರಥೀ"ಗಳನ್ನು ಬರೆದಾಗಲೂ ತುಷ್ಟನಾಗಿದ್ದೇನೆ. 'ಊರ್ವಶೀ' ಕಾವ್ಯವನ್ನು ಬರೆಯುತ್ತಿರುವಾಗ ದೊರೆತ ಆನಂದವು ಹಿಂದಿನದನ್ನು ಮೀರಿಸುತ್ತದೆ. ಆದರೆ, ಅದು ಮುದ್ರಿತವಾಗುತ್ತ ಬಂದಂತೆ ಅಸಂತುಷ್ಟನಾಗಿದ್ದೇನೆ. ನಾನಿಂದಿಗೂ ಕೈ ಚಾಚಿ ಗಾಳಿಯಲ್ಲಿ ಅರಸುತಿದ್ದೇನೆ. ನಿರಾಕಾರದಿಂದ ಎಳೆದು, ಸಾಕಾರಗೊಳಿಸಲು ನಾನು ಬಯಸುತ್ತಿರುವೆನಾದರೂ ಅದು ಕೈ ಸೇರುವುದೋ ಇಲ್ಲವೋ ಹೇಳಲಾರೆ. ಬಹು ಸಂಖ್ಯೆಯ ಮೆಟ್ಟಲುಗಳನ್ನು ದಾಟಿ ಬಂದಿದ್ದೇನೆ, ಇನ್ನೂ ಅದೆಷ್ಟೋ ಮೆಟ್ಟಲುಗಳನ್ನು ದಾಟಬೇಕಾಗಿದೆ. ಇವುಗಳಲ್ಲಿ ಕೆಲವುಗಳ ಮೇಲೆ ಪೂರ್ವಜ ಕವಿಗಳ ಪಾದ ಚಿಹ್ನೆಯು ತೋರುತ್ತಿದೆ, ಆದರೆ, ಮತ್ತೆ ಕೆಲವುಗಳಲ್ಲಿ ಯಾವ ಗುರುತೂ ಇಲ್ಲ. ನನಗೆ ಪೂರ್ಣ ಸಂತೋಷವು ಯಾವುದರಿಂದ ದೊರೆಯುವುದೋ ನಾನು ಹೇಳಲಾರೆ.

ಜೀವನವ್ಯಾಪಿ ಪ್ರಭಾವ ಬೀರಿದ ಯಾವುದೇ ಘಟನೆಯು ನಡೆದಿದೆಯೆಂದು ನಾನು ತಿಳಿದಿಲ್ಲ. ನನಗೆ ಪಾಠವನ್ನು ಕಲಿಸಿದ, ಮುಂದಿನ ದಿನಗಳಲ್ಲಿ ನಾನು ಜಾಗರೂಕನಿರುವಂತೆ ಮಾಡಿದ, ನನ್ನ ವಿಶ್ವಾಸದಲ್ಲಿ ಪರಿವರ್ತನೆಯನ್ನು ತಂದ ಹಲವಾರು ಘಟನೆಗಳಿವೆ. ಭೂತ ಪ್ರೇತಗಳ ಅಸ್ತಿತ್ವ ಮತ್ತು ದೃಶ್ಯ ವಾಸ್ತವಿಕತೆಯಲ್ಲಿ ನಾನು ಇಟ್ಟಿರುವ ವಿಶ್ವಾಸವು ಇಂತಹ ಘಟನೆಗಳಿಂದಾಗಿ ಹುಟ್ಟಿಕೊಂಡಿತು.

ಸಿತಾರ ಬಾರಿಸುವುದನ್ನು ಕೇಳುವುದೆಂದರೆ, ನನಗೆ ಬಲು ಇಷ್ಟ. ತುಲಸೀರಾಮಾಯಣ ಕಬೀರ ವಚನಾವಲಿ, ಅಲೆಕ್ಸಿಸ್ ಕರ್‍ಲ್ಸನ ಮ್ಯಾನ್ ದಿ ಅನ್‌ನೋನ್, ವಿಲ್ ಡುರಾಂಟನ ಸ್ಟೋರೀ ಆಫ್ ಫಿಲಾಸಫಿ ಮತ್ತು ಬರ್ಟ್ರಂಡ್ ರಸ್ಸೆಲರ ಎಲ್ಲ ಗ್ರಂಥಗಳು ನನಗೆ ಬಹುಪ್ರಿಯವಾದ ಪುಸ್ತಕಗಳು.

ಮರಗಳ ದೃಶ್ಯಗಳು ನನಗೆ ಬಹಳ ಇಷ್ಟ ಕಾಣುತ್ತದೆ. ಕಮಲದ ಹೂವು ಪ್ರಸನ್ನತೆ ಈಯುತ್ತದೆ. ಸರೋವರದಲ್ಲಿ ನಾವೆಯಲ್ಲಿ ತಿರುಗಾಡುತ್ತ ಕವನ ಪವನವನ್ನು ಹೊಕ್ಕಾಗ ಭೂಮಿಯು ನೆನಪೇ ಉಳಿಯುವುದಿಲ್ಲ. ಶ್ರಾವಣ ಮತ್ತು ಭಾದ್ರಪದ ಮಾಸಗಳಲ್ಲಿ ಹರಿಯುವ ಗಂಗೆಯನ್ನು ನಾನು ಹಿಂದಿನಿಂದಲೂ ಕಂಡು ಪ್ರಫುಲ್ಲಿತನಾಗಿದ್ದೇನೆ. ಇಂದಿಗೂ ಸಂತುಷ್ಟನಾಗುತ್ತೇನೆ.

ಸೆರೆಯಾಳುಗಳು ತೃಪ್ತರಾಗಿರುವ

ಫ್ರಾಂಕ್‌ಫರ್ಟ್ ಪ್ರಾಣಿ ಸಂಗ್ರಹಾಲಯ

ಜರ್ಮನಿಯ ಫ್ರಾಂಕ್‌ಫರ್ಟಿನಲ್ಲಿರುವ ಪ್ರಾಣಿ ಸಂಗ್ರಹಾಲಯವನ್ನು ಪ್ರಕೃತಿ ದೇವಿಯ ಒಂದು ಅದ್ಭುತ ಕೃತಕ ನೆಲೆವೀಡಾಗಿ ಪರಿವರ್ತಿಸಿದ್ದಾರೆ ಡಾ. ಬೆರ್ನ್ಹಾರ್ಡ್ ಗ್ರಿಮೆಕ್ಸ್ ಎಂಬುವವರು. ಈ ಪ್ರದರ್ಶನಾಲಯದಲ್ಲಿ ಅದ್ಭುತವಾದ ಗಾಜಿನ ಮನೆಯೊಂದನ್ನು ಕೇವಲ ಪಕ್ಷಿ ವರ್ಗಕ್ಕೆಂದೇ ಸೃಷ್ಟಿಸಲಾಗಿದೆ. ಪಕ್ಷಿ ಲೋಕದ ಬಗ್ಗೆ ಹೆಚ್ಚು ತಿಳಿಯುವ ಆಕಾಂಕ್ಷೆಯುಳ್ಳವರಿಗೆ ಇದೊಂದು ತೆರೆದ ಪುಸ್ತಕದಂತಿದೆ. ಈ ಪ್ರಾಣಿ ಸಂಗ್ರಹಾಲಯಕ್ಕೆ ಬರುವವರ ಸೌಕರ್ಯಗಳನ್ನು ಹಲವಾರು ವಿಧಗಳಲ್ಲಿ ಇಲ್ಲಿ ಗಮನಿಸಿಕೊಳ್ಳಲಾಗಿದೆ.

ಡಾಕ್ಟರ್ ಬೆರ್ನ್ಹಾರ್ಡ್ ಗ್ರಿಮೆಕ್ಸ್ ಎಂಬವರು ಪ್ರಾಣಿಗಳ ಮತ್ತು ಪಕ್ಷಿಗಳ ಬಗ್ಗೆ ಅನೇಕ ವಿಸ್ಮಯಕಾರೀ ಅಂಶಗಳನ್ನು ಕಂಡು ಹಿಡಿದಿರುವರೆಂಬುದು ಮಾತ್ರವೇ ಅಲ್ಲದೆ ಅವುಗಳ ಬಗ್ಗೆ ಅನೇಕ ಪ್ರಬಂಧಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. ಕೆಲವೊಂದು ಶೈಕ್ಷಣಿಕ ಚಿತ್ರಗಳನ್ನೂ ಇವರು ನಿರ್ಮಿಸಿದ್ದಾರೆ.

ತಮ್ಮ ಸಹೋದ್ಯೋಗಿಗಳೊಡನೆ ಇವರು ಆಫ್ರಿಕಾಕ್ಕೆ ತೆರಳಿ, ಅಲ್ಲಿನ ಪ್ರಾಣಿ ವರ್ಗದ ಬಗ್ಗೆ ಹೆಚ್ಚು ಅರಿತು "ಸೆರೆಂಗೆಟಿ ಚಿರಾಯುವಾಗಲಿ" ಎಂಬ ಅರಣ್ಯ ಸಂಬಂಧ ಚಿತ್ರವೊಂದನ್ನು ತಯಾರಿಸಿದರು. ಇದನ್ನು ಅವರು ತಮ್ಮ ಮಗ ಮೈಕೇಲನು ಡಾಕ್ಟರ್ ಪದವಿ ತೆಗೆದುಕೊಳ್ಳಲು ಹೆಚ್ಚಿನ ಅರಿವನ್ನು ಪಡೆಯಲೋಸುಗವೇ ತಯಾರಿಸಿದರು. ಆದರೆ ದುರದೃಷ್ಟವಶಾತ್ ಚಿತ್ರೀಕರಣದ ಸಮಯದಲ್ಲಿ ನಡೆದ ಒಂದು ವಿಮಾನ ಅಪಘಾತದಲ್ಲಿ ಅವರ ಮಗ ಮೈಕೇಲ್ ತೀರಿಕೊಂಡರು. ಅನಂತರ ಈ ಚಿತ್ರವು ಸಾರ್ವತ್ರಿಕವಾಗಿ ಪ್ರದರ್ಶಿತವಾಗಿ ಎಲ್ಲೆಡೆಯೂ ಪ್ರಶಂಸಿಸಲ್ಪಟ್ಟು ಅನೇಕ ಬಹುಮಾನಗಳನ್ನು ಪಡೆದು, ಕಡೆಗೆ ಹಾಲಿವುಡ್ಡಿನ ಪ್ರಖ್ಯಾತ ಆಸ್ಕಾರ್ ಪ್ರಶಸ್ತಿಯನ್ನು ಪಡೆಯಿತು. ಮಗನ ವಿಯೋಗದ ಅನಂತರವೂ ಧೈರ್ಯಚಿತ್ತದಿಂದ ಅವರು ಮಾಡಿದ ಕೆಲಸಕ್ಕೆ ಪ್ರತಿಫಲ ದೊರಕಿತೆನ್ನಬಹುದು.

ಆಫ್ರಿಕಾದಲ್ಲಿ ತಮಗಾದ ಹಲವಾರು ಅನುಭವಗಳನ್ನು ಕುರಿತು ಇವರು ಬರೆದಿರುವ ಪುಸ್ತಕವೊಂದು ವಿಶ್ವದ ಹಲವಾರು ಭಾಷೆಗಳಲ್ಲಿ ತರ್ಜುಮೆಯಾಗಿದೆ. ೧೯೪೫ರಲ್ಲಿ ಫ್ರಾಂಕ್‌ಫರ್ಟಿನ ಪ್ರಾಣಿ ಸಂಗ್ರಹಾಲಯವು ಇವರ ಮೇಲ್ವಿಚಾರಣೆಗೆಂದು ಒಪ್ಪಿಸಲ್ಪಟ್ಟಿತು. ಆದೇ ತಾನೇ ಎರಡನೆ ಮಹಾಯುದ್ಧವು ಮುಗಿದು ಹೋಗಿದ್ದ ಆ ಕಾಲದಲ್ಲಿ ಆ ಪ್ರಾಣಿ ಸಂಗ್ರಹಾಲಯವು ಒಂದು ಮರುಭೂಮಿಯಂತೆ ಹಾಳುಬಿದ್ದಿತ್ತು. ಆಗ ಅದರಲ್ಲಿ ಕೇವಲ ಹದಿನೈದು ಪ್ರಾಣಿಗಳು ಮಾತ್ರವಿದ್ದುವು ಈಗ ಆ ಪ್ರಾಣಿ ಸಂಗ್ರಹಾಲಯದಲ್ಲಿ ಏಳುನೂರಕ್ಕೂ ಹೆಚ್ಚಿನ ಪ್ರಾಣಿಗಳು, ಪಕ್ಷಿಗಳು ಇದ್ದು ಜರ್ಮನಿಯಲ್ಲಿಯೇ, ಏಕೆ, ಯೂರೋಪ್ ಖಂಡದಲ್ಲಿಯೇ ಬೇರಾವ ನಗರದ ಪ್ರಾಣಿ ಸಂಗ್ರಹಾಲಯದಲ್ಲಿಯೂ ಕಾಣಸಿಗದ ಕೆಲ ಅಪೂರ್ವ ಜಾತಿಯ ಮೃಗಪಕ್ಷಿಗಳೂ ಇವೆ.

ಪಕ್ಷಿ ವರ್ಗಗಳ ವಾಸಕ್ಕೆಂದೇ ಒಂದು ನವೀನ ಮಾದರಿಯ ಗಾಜಿನ ಮನೆಯೊಂದು ಸಿದ್ಧಗೊಳಿಸಲ್ಪಟ್ಟಿದೆ. ಅಲ್ಲಿರುವ ಪಕ್ಷಿಗಳಿಗೆ ತಮ್ಮನ್ನು ಸೆರೆಯಲ್ಲಿಟ್ಟಿದ್ದಾರೆಂಬ ಭಾವನೆಯೇ ಬರದಂತಿರುವುದಕ್ಕಾಗಿಯೇ ಈ ಪ್ರಯತ್ನ ಮಾಡಲಾಗಿದೆ. ವೀಕ್ಷಕರಿಗೂ ಸಹ ತಾವು ಸೆರೆಹಿಡಿದು ಇಡಲ್ಪಟ್ಟಿರುವ ಕೆಲವು ಪಕ್ಷಿಗಳನ್ನು ನೋಡುತ್ತಿದ್ದೇವೆಂಬ ಭಾವನೆಯೇ ಬರುವುದಿಲ್ಲ. ಈ ಗಾಜಿನ ಮನೆಯಲ್ಲಿ ಬೇರೆ ಬೇರೆ ದೇಶದ ಹಲವಾರು ಜಾತಿಯ ಹಕ್ಕಿಗಳು ಒಂದಾಗಿ ಆನಂದದಿಂದ ವಾಸಿಸುತ್ತಿವೆ. ಇಂತಹದೊಂದು ಪಕ್ಷಿನಿಲಯವು ವಿಶ್ವದಲ್ಲಿಯೇ ಬೇರಾವ ಮೃಗಾಲಯದಲ್ಲಿಯೂ ಇಲ್ಲ.

ಈಗ್ಗೆ ಕೆಲವಾರಗಳ ಹಿಂದೆ ಇದೇ ಮೃಗಶಾಲೆಯಲ್ಲಿ ಮತ್ತೊಂದು ವಿಶೇಷ ಅಭಿವೃದ್ಧಿಯನ್ನು ಕಾಣಬಹುದಾಗಿದೆ. ವೀಕ್ಷಕರು ಪ್ರಾಣಿಗಳನ್ನು ನೋಡುತ್ತಿರುವಾಗ ಅವುಗಳ ವಿಷಯವನ್ನು ಮೈಕ್ ಮೂಲಕ ಕೇಳುತ್ತಿರಬಹುದಾಗಿದೆ. ಮೃಗಾಲಯದ ಅಧಿಕಾರಿಯಾದ ಬೆರ್ನ್ಹಾರ್ಡ್ ಗ್ರಿಮೆಕ್ಸ್ ಅವರೇ ಸ್ವತಃ ಈ ಉಪನ್ಯಾಸವನ್ನು ಕೊಡುತ್ತಾರೆ. ವೀಕ್ಷಕರಿಗೆ ಈ ಹೊಸ ವ್ಯವಸ್ಥೆಯು ಹೆಚ್ಚಿನ ತೃಪ್ತಿ ನೀಡುತ್ತಿದೆಯೆಂಬುದನ್ನು ಕಂಡುಕೊಂಡ ಜರ್ಮನ್ ಸರಕಾರವು ಈ ಪ್ರಾಣಿ ಸಂಗ್ರಹಾಲಯಕ್ಕೆಂದೇ ಪ್ರತ್ಯೇಕ ಬಾನುಲಿಕೇಂದ್ರವೊಂದನ್ನು ಕೊಟ್ಟಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಬೆರ್ನ್ಹಾರ್ಡ್ ಗ್ರಿಮೆಕ್‌ರವರ ಆಶೆಆಕಾಂಕ್ಷೆಗಳೆಲ್ಲಾ ಫ್ರಾಂಕ್‌ಫರ್ಟಿನ ಪ್ರಾಣಿ ಸಂಗ್ರಹಾಲಯದ ಅಭಿವೃದ್ಧಿಯಲ್ಲಿಯೇ ಅಡಗಿವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೭೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ. ೭೦ ನ. ಪೈಸೆ.
(ಶ್ರೀ ಹನುಮಂತರಾವ್ ಮಾಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೧೫-೩-'೬೨	೨೭

ಮಂತ್ರಿಗಳ ಸಂಖ್ಯೆ

ಸಾರ್ವತ್ರಿಕ ಚುನಾವಣೆಗಳು ಮುಕ್ತಾಯಗೊಂಡು ದೇಶದ ಎಲ್ಲ ರಾಜ್ಯಗಳಲ್ಲಿಯೂ ಕಾಂಗ್ರೆಸ್ಸು ಮರಳಿ ಅಧಿಕಾರ ಸೂತ್ರವನ್ನು ಗ್ರಹಣ ಮಾಡುವಂತಾಗಿದೆ. ಎಲ್ಲ ರಾಜ್ಯಗಳಲ್ಲಿಯೂ ಮುಖ್ಯ ಮಂತ್ರಿಯ ಆಯ್ಕೆಯು ಈಗಾಗಲೇ ನಡೆದಿದ್ದು, ಕೆಲವೆಡೆ ಮಂತ್ರಿ ಮಂಡಳಿಯೂ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದೆ. ಇನ್ನುಳಿದ ರಾಜ್ಯಗಳಲ್ಲಿಯೂ ಇಷ್ಟರಲ್ಲಿಯೇ ಸಚಿವ ಸಂಪುಟದ ಸದಸ್ಯರ ನಾಮಾವಳಿಯು ಬಹಿರಂಗಪಡುವುದರಲ್ಲಿದೆ. ಲೋಕ ಸಭೆಯು ಈ ತಿಂಗಳ ಅಂತ್ಯದಲ್ಲಿ ವಿಸರ್ಜನೆಗೊಳ್ಳುವುದಿದ್ದು, ಚುನಾಯಿತ ಸದಸ್ಯರು ಎಪ್ರಿಲ್ ಮೊದಲನೆ ದಿನಾಂಕದಂದು ಶಪಥ ಗ್ರಹಣ ಮಾಡಲಿರುವರು ಲೋಕ ಸಭಾ ಕಾಂಗ್ರೆಸ್ ಪಕ್ಷವು ಶ್ರೀ ನೆಹರುರವರನ್ನೇ ತನ್ನ ನಾಯಕರನ್ನಾಗಿ ಆರಿಸಿಕೊಳ್ಳುವುದು ನಿಶ್ಚಯ. ಅಂತೂ ದೇಶದ ಆಡಳಿತವು ಕಾಂಗ್ರೆಸ್ಸಿನ ಕೈಗಳಲ್ಲಿಯೇ ಭದ್ರವಾಗಿ ಮಗುದೊಮ್ಮೆ ಸೇರುವಂತೆ ಆಯ್ತು.

ಈಗ ಎದ್ದಿರುವ ಒಂದು ಮಹಾ ಸಮಸ್ಯೆಯನ್ನು ಗಂಭೀರವಾಗಿ ಎಲ್ಲರೂ ವಿಚಾರ ಮಾಡಬೇಕು. ರಾಜ್ಯದಲ್ಲಾಗಲೀ ಕೇಂದ್ರದಲ್ಲಾಗಲೀ ಮಂತ್ರಿ-ಉಪಮಂತ್ರಿಗಳ ಸಂಖ್ಯೆ ಎಷ್ಟಿರಬೇಕು ಎಂಬುದನ್ನು ವಿವೇಚಿಸುವ ಸಮಯವೀಗ ಪ್ರಾಪ್ತವಾಗಿದೆ ಹಿಂದಿನ ಚುನಾವಣೆಗಳ ನಂತರವೇ ಹುಟ್ಟಿದ ಸಚಿವ ಸಂಪುಟಗಳ ಮಂತ್ರಿ ಸಂಖ್ಯೆಗಿಂತ ಸರ್ವ ಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲಿಯೂ ಈ ಸಂಖ್ಯೆಯು ಈ ಬಾರಿ ಹೆಚ್ಚಾಗಿದೆ. ಮದರಾಸು ರಾಜ್ಯವು ಇದಕ್ಕೊಂದು ಅಪವಾದವೆನ್ನಬಹುದು. ಅಲ್ಲಿನ ಮುಖ್ಯ ಮಂತ್ರಿ ಶ್ರೀ ಕಾಮರಾಜನಾಡಾರರು ಕೇವಲ ಎಂಟು ಜನ ಮಂತ್ರಿಗಳಿಂದ ತನ್ನ ರಾಜ್ಯವನ್ನು ನಡೆಸಿಕೊಳ್ಳಲು ಸಮರ್ಥರಾಗುವಾಗ, ಉಳಿದವರಿಗೆ ದೊಡ್ಡ ಸಂಖ್ಯೆಯ ಮಂತ್ರಿಗಳೇಕೆ ಎಂಬ ಪ್ರಶ್ನೆ ಪ್ರತ್ಯೇಕ ತೆರಿಗೆದಾರನಲ್ಲಿಯೂ ಉದ್ಭವಿಸುತ್ತದೆ. ೧೯೫೨ರಲ್ಲಿ ರಾಜ್ಯ ಮಟ್ಟದ ಮಂತ್ರಿ ಉಪಮಂತ್ರಿಗಳ ಅವಶ್ಯಕತೆಯೇ ಎಲ್ಲಿಯೂ ಬರಲಿಲ್ಲ; ೫೭ರಲ್ಲಿ ಇವರೂ ಬೇಕಾದರು. ೬೨ರಲ್ಲಿ ಇಷ್ಟು ಮಾತ್ರ ಸಾಲದೆ ಪಾರ್ಲಿಮೆಂಟರಿ ಕಾರ್ಯದರ್ಶಿಗಳೂ ಬೇಕಾಗಿದ್ದಾರೆ. ಹೀಗೆ ಚುನಾಯಿತರಾದ ಕಾಂಗ್ರೆಸ್ ಸದಸ್ಯರಲ್ಲಿ ಒಟ್ಟಿನಲ್ಲಿ ಆರರಲ್ಲೊಬ್ಬನು ಒಂದಿಲ್ಲೊಂದು ಪದವಿಯಲ್ಲಿ ವಿರಾಜಮಾನನಾಗುವುದು ಅದೆಷ್ಟು ಶೋಭನೀಯವೋ ತಿಳಿಯುವುದಿಲ್ಲ. ಯಾವುದೇ ಒಂದು ಸಮಿತಿಯಲ್ಲಿ ೧೫ಕ್ಕಿಂತ ಕಡಿಮೆ ಸದಸ್ಯರಿದ್ದರೆ ಮಾತ್ರ ಸುಸೂತ್ರವಾಗಿ ಕಾರ್ಯ ನಡೆಸುವುದು ಸುಲಭ ಸಾಧ್ಯವೆಂಬುದು ರಾಜ ನೀತಿಜ್ಞರ ಅಂಬೋಣ. ಇದನ್ನು ಅಲ್ಲಗಳೆಯುವುದೂ ಸಾಧ್ಯವಿಲ್ಲ. ಸಮಿತಿಯು ಚಿಕ್ಕದಾದಷ್ಟು ಅದರ ಸದಸ್ಯರ ಸಂಬಂಧವು ಹೆಚ್ಚುವುದು; ಪರಸ್ಪರ ತಿಳುವಳಿಕೆ ಹೆಚ್ಚಿಸಿಕೊಳ್ಳುವ ಅವಕಾಶವೂ ಅಧಿಕವಾಗುವುದು. ಮಂತ್ರಿಗಳ ಸಂಖ್ಯೆಯು ರಾಜ್ಯದ ವಿಧಾನ ಸಭೆಯ ಸದಸ್ಯರ ಸಂಖ್ಯೆಗೆ ಒಂದು ಮಿತವಾದ ಪ್ರಮಾಣಕ್ಕಿಂತ ಹೆಚ್ಚಿರಬಾರದು. ಉದಾಹರಣೆ ಮಹಾರಾಷ್ಟ್ರದ ಸುಮಾರು ೨೧೦ ಜನ ಕಾಂಗ್ರೆಸ್ ವಿಧಾನಸಭಾ ಸದಸ್ಯರಲ್ಲಿ ೩೧ ಜನರು ಮಂತ್ರಿಗಳು, ಎಂದರೆ ಏಳು ಜನರಲ್ಲಿ ಒಬ್ಬನಿಗೆ ಮಂತ್ರಿಪಟ್ಟ. ವಿಧಾನ ಸಭೆಯ ಒಟ್ಟು ಸ್ಥಾನಗಳೊಡನೆ ಹೋಲಿಸುವುದಾದರೆ, ಸೇ. ೧೫ರಷ್ಟು ಇದಾಗುವುದು ಹೀಗೆಯೇ ವಿವಿಧ ರಾಜ್ಯಗಳ ಜಾತಕವನ್ನು ಬಿಚ್ಚಿನೋಡಿದರೆ, ಇದು ಮತ್ತಷ್ಟು ವಿಶದವಾಗುವುದು. ನಮ್ಮ ರಾಜ್ಯದಲ್ಲಾದರೂ ಇದು ವರೆಗಿನ ವರದಿಗಳಂತೆ ೧೪ ಜನ ಮಂತ್ರಿಗಳೂ ೧೦ ಜನ ಉಪಮಂತ್ರಿಗಳೂ ಇರುವರಂತೆ. ಒಟ್ಟು ಕಾಂಗ್ರೆಸ್ ಸದಸ್ಯರು ೧೩೮ ಇರುವಾಗ ಈ ಸಂಖ್ಯೆಯು ಸೇ ೧೭½ ಆಗುವುದು! ಇಂತಹ ಬೃಹತ್ ಪ್ರಮಾಣದ ಸಚಿವ ಮಂಡಳಿಯು ಅಗತ್ಯವೇ ಎಂಬುದನ್ನು ಆಲೋಚಿಸಬೇಕು. ತೆರಿಗೆದಾರರು ಅತೀವ ಕಷ್ಟದಿಂದ ತೆರುತ್ತಿರುವ ಕರದ ಹಣವನ್ನು ಮಂತ್ರಿಗಳ ಸಂಬಳ ಭತ್ತೆಯೆಂದು ದೊಡ್ಡ ಮೊತ್ತದಲ್ಲಿ ಪೋಲು ಮಾಡುವುದು ಎಂದಿಗೂ ಸರಿಯಾಗಲಾರದು.

ವಿಸ್ತಾರ ಸಚಿವ ಸಂಪುಟದ ಪ್ರಶ್ನೆಯೇಕೆ ಬಂದಿತೆಂದರೆ, ಕಾಂಗ್ರೆಸ್ಸಿನ ಒಳಪಂಗಡಗಳ ಭಾವನೆಯಿಂದಾಗಿ ಎಂಬುದು ಸರ್ವ ವಿದಿತವಿದೆ. ಪಕ್ಷದೊಳಗಿನ ಪ್ರತಿಯೊಂದು ಹಿತಾಸಕ್ತಿಗೂ ಸಂಪುಟದಲ್ಲಿ ಸ್ಥಾನ ದೊರೆಯಬೇಕು (ದೊರೆಯದೆ ಹೋದರೆ?) ಎಂಬುದರಿಂದ ವಿವಿಧ ರಾಜ್ಯಗಳಲ್ಲಿ ವಿಶಾಲ ನೀತಿಯ ಮೇಲೆ ಮಂತ್ರಿಗಳ ಸಂಖ್ಯೆ ಹೆಚ್ಚಿದೆ. ಇದು ಸರಿಯೆಂದು ಹೇಳುವಂತಿಲ್ಲ. ಕಾಂಗ್ರೆಸ್ಸು ಅಧಿಕಾರ ಗ್ರಹಣ ಮಾಡುವುದು ಜನತೆಯ ಹಿತಕ್ಕಾಗಿ, ಕಾಂಗ್ರೆಸ್ಸಿನ ಒಳ ಪಂಗಡಗಳನ್ನು ತೃಪ್ತಿಪಡಿಸುವುದಕ್ಕಲ್ಲ. ಈ ಮಾತು ಹೆಚ್ಚಿನ ರಾಜಕಾರಣಿಗಳಿಗೆ ಪಥ್ಯವಾಗಲಾರದು. ಆದರೂ ಜನತೆಯು ಪಕ್ಷದ ಹಿತಾಸಕ್ತಿ ರಕ್ಷಣೆಗಿಂತ ಸಮಾಜದ ಹಿತಾಸಕ್ತಿಯನ್ನು ಹೆಚ್ಚಾಗಿ ಅಪೇಕ್ಷಿಸುತ್ತದೆ. ಕಾಂಗ್ರೆಸ್ಸಿನಲ್ಲಿ ಇಂದು ಒಳಪಂಗಡಗಳು ಹುಟ್ಟಿಕೊಂಡಿರುವುದಕ್ಕೆ ಅಧಿಕಾರ ಲಾಲಸೆಯೇ ಕಾರಣ. ಇದಕ್ಕೆ ನಮ್ಮ ರಾಜ್ಯವನ್ನೇ ನಿದರ್ಶನವಾಗಿ ತೆಗೆದುಕೊಳ್ಳಬಹುದು. ನಿಜಲಿಂಗಪ್ಪ-ಜತ್ತಿಯವರ ಗುಂಪಿನ ರಾಜಕಾರಣದಿಂದ ಕಾಂಗ್ರೆಸ್ಸಿನ ಬಲವಿಲ್ಲಿ ಹ್ರಾಸವಾಗುತ್ತ ನಡೆದಿದೆ; ಅಧಿಕಾರಕ್ಕಾಗಿ ಸ್ಪರ್ಧೆ ನಡೆದ ನಿದರ್ಶನಗಳೂ ಇಲ್ಲದಿಲ್ಲ. ಪ್ರತಿ ಗುಂಪಿಗೂ ಮಂತ್ರಿ ಮಂಡಳಿಯಲ್ಲಿ ಸ್ಥಾನಕೊಡುತ್ತ ಹೋದರೆ, ಒಬ್ಬೊಬ್ಬನು ಒಂದೊಂದು ಗುಂಪಿಗೆ ಸೇರಿದವನಾದಾನು! ತೋರಿಕೆಯ ಮಟ್ಟಿಗೆ ವಿಶಾಲ ತಳಹದಿಯ ಸಚಿವ ಸಂಪುಟಗಳು ಭಿನ್ನಾಭಿಪ್ರಾಯ ನಿವಾರಣೆಗೆ ಸಹಾಯಕವೆಂದು ಕಂಡರೂ ಇದರಿಂದ ಪರಸ್ಪರ ಜಿದ್ದು-ಸ್ಪರ್ಧೆಗಳು ಹೆಚ್ಚಿ ಭಿನ್ನಾಭಿಪ್ರಾಯಗಳನ್ನು ಮತ್ತಷ್ಟು ಹೆಚ್ಚಿಸಲು ಪ್ರೇರಕವಾಗುತ್ತವೆ. ಇದಕ್ಕೆ ನಿಜಲಿಂಗಪ್ಪ ಜತ್ತಿಯವರ ಗುಂಪುಗಳೇ ನಿದರ್ಶನ. ಈ ಬಾರಿಯಂತೂ ಗುಂಪಿನ ರಾಜಕಾರಣವೇ ಗೆದ್ದಿತು, ಮುಂದಕ್ಕಾದರೂ ಕಾಂಗ್ರೆಸ್ ಆದಷ್ಟು ಕಡಿಮೆ ಮಂತ್ರಿಗಳಿಂದ ಉತ್ತಮ ಆಡಳಿತೆ ನಡೆಸುವಂತೆ ತೆರಿಗೆದಾರರಲ್ಲಿಯೂ ವಿರೋಧಿ ಪಕ್ಷಗಳಲ್ಲಿಯೂ ಅಪಪ್ರಚಾರಕ್ಕೆ ಆಸ್ಪದ ನೀಡದಂತೆ ನೋಡುವುದು ಅಗತ್ಯವಿದೆ.

ಜಗತ್ಪರ್ಯಟನ

ಡಾ| ರಾಧಾಕೃಷ್ಣನ್

ಸ್ವಾಮಿ ವಿವೇಕಾನಂದರ ನಂತರ ಭಾರತೀಯ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪ್ರಚಾರ ಮಾಡುವ ಡಾ| ರಾಧಾಕೃಷ್ಣನ್ ಅನುಭವ ಮತ್ತು ಪಾಂಡಿತ್ಯಗಳ ಮೂರ್ತಿ. ಆಕಸ್ಮಿತ್ತಾಗಿ ರಾಜಕಾರಣದಲ್ಲಿ ಸೇರಿಕೊಂಡ ಇವರು ಯಶಸ್ವೀ ರಾಜಕಾರಣಿಯೂ ಆಗಿದ್ದಾರೆ. ಭಾರತದ ಉಪರಾಷ್ಟ್ರಪತಿಯಾಗಿ ಹನ್ನೆರಡು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಇವರು ಪ್ರಸಾದರ ನಿವೃತ್ತಿಯ ನಂತರ ಅವರ ಸ್ಥಾನವನ್ನು ಅಲಂಕರಿಸುವುದು ಈಗ ಸರ್ವ ಸಾಮಾನ್ಯವಾಗಿ ದೃಢವಾಗಿದೆ. ಪ್ರಧಾನಿ ನೆಹರುರವರು ಇವರ ಮೇಲೆ ಆಕರ್ಷಿತರಾಗಿದ್ದಾರೆಂದರೆ, ಮತ್ತೆ ಆ ವಾರ್ತೆ ಸುಳ್ಳಾಗಲಾರದು. ಮಹಾರಾಷ್ಟ್ರದ ಗವರ್ನರ್ ಶ್ರೀ ಪ್ರಕಾಶರು, ವಿಜಯಲಕ್ಷ್ಮಿ ಪಂಡಿತ್ ಮೊದಲಾದ ಕೆಲವು ಹೆಸರುಗಳು ಉಪರಾಷ್ಟ್ರಪತಿ ಸ್ಥಾನಕ್ಕೆ ಮುಂದೆ ಬಂದಿವೆ.

ಶ್ರೀಮತಿ ಕೆನ್ನೆಡಿ

ಅಮೇರಿಕೆಯ ರಾಷ್ಟ್ರಪತಿ ಜಾನ್ ಕೆನ್ನೆಡಿಯವರ ಪತ್ನಿ ಶ್ರೀಮತಿ ಕೆನ್ನೆಡಿಯವರು ತಮ್ಮ ಆರೋಗ್ಯವು ಚೆನ್ನಾಗಿಲ್ಲವಾದರೂ ಭಾರತದ ಸಂಚಾರಕ್ಕೆ ಧೈರ್ಯದಿಂದ ತೊಡಗಿದ್ದಾರೆ. ಶ್ರೀಮತಿಯವರಿಗೆ ಭಾರತೀಯರು ಆದರದ ಸ್ವಾಗತ ಬಯಸುತ್ತಾರೆ ಗೋವಾ ವಿಮೋಚನೆಯ ಪ್ರಸಂಗವಲ್ಲವಾಗಿದ್ದರೆ. ಇವರು ಈ ಮೊದಲೇ ಇಲ್ಲಿಗೆ ಆಗಮಿಸುತ್ತಿದ್ದರು. ಪ್ರಧಾನಿ ನೆಹರು ಇತ್ತ ಆಮಂತ್ರಣವನ್ನು ಅವರು ಕಳೆದ ನವಂಬರದಲ್ಲಿಯೇ ಸ್ವೀಕರಿಸಿದ್ದರು. ಶ್ರೀಮತಿ ಕೆನ್ನೆಡಿಯವರು ಭಾರತವನ್ನು ಸಂದರ್ಶಿಸಿದ ಅಮೇರಿಕನ್ ಅಧ್ಯಕ್ಷ ಪತ್ನಿಯರಲ್ಲಿ ಮೊತ್ತಮೊದಲಿಗರು. ಐಸನ್ ಹಾವರರು ಭಾರತ ದರ್ಶನ ಮಾಡಿದ ಪ್ರಪ್ರಥಮ ಅಮೇರಿಕನ್ ಅಧ್ಯಕ್ಷರೆಂದು ಹೆಸರು ಪಡೆದಿದ್ದಾರೆ; ಆದರೆ, ಆಗ ಅವರು ತಮ್ಮ ಪತ್ನಿಯನ್ನ ಕರೆತರಲಿಲ್ಲ. ಶ್ರೀಮತಿ ಕೆನ್ನೆಡಿಯವರು ಕಲಾಪ್ರಿಯೆ ತನ್ನ ಸತಿಯಂತೆಯೇ ಇತರರನ್ನು ತಿಳಿದುಕೊಳ್ಳುವ ಆಸಕ್ತಿಯುಳ್ಳವರು. ಅಮೇರಿಕೆಯ ಈ ಪ್ರಥಮ ಮಹಿಳೆಯು ಭಾರತವನ್ನು ಸಂದರ್ಶಿಸಿ ಇಲ್ಲಿನ ನಿಜಸ್ಥಿತಿಯನ್ನು ಮನವರಿಕೆ ಮಾಡಿಕೊಳ್ಳುವುದರಲ್ಲಿ ಹಿಂದೆ ಬೀಳಲಾರರು. ಅನಭಿವೃದ್ಧ ದೇಶಗಳಲ್ಲಿ ಒಂದಾದ್ದು, ಆರ್ಥಿಕ ವಿಕಾಸದತ್ತ ತ್ವರಿತಗತಿಯಲ್ಲಿ ಮುನ್ನಡೆಯುತ್ತಿರುವ ಭಾರತದ ಬಗ್ಗೆ ಅಮೇರಿಕೆಯಲ್ಲಿ ಕೆಲವೊಮ್ಮೆ ಸಂದೇಹವೆದ್ದುದೂ ಇದೆ. ಭಾರತಕ್ಕೆ ಬಂದ ವಿಧದ ಅಮೇರಿಕನ್ ಮಂಡಳಿಗಳು ಈ ಸಂದೇಹವನ್ನ ದೂರಮಾಡಲು ಪ್ರೇರಕವೆನಿಸಿದರೂ ತಾನು ಕಂಡ ಭಾರತದ ನಿಜ ಚಿತ್ರವನ್ನು ಶ್ರೀಮತಿ ಕೆನ್ನೆಡಿಯವರು ಅಮೇರಿಕನ್ ಅಧ್ಯಕ್ಷರ ಮುಂದಿಡಲು ಸಮರ್ಥರು; ಅಧಿಕಾರವಂತರು. ಆದುದರಿಂದ ಅವರ ೯ ದಿನಗಳ ಸಂದರ್ಶನವು ಭಾರತ-ಅಮೇರಿಕನ್ ಸ್ನೇಹದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕುವುದೆಂದು ನಂಬಬಹುದು.

ಚೌ ಎನ್‌ಲಾಯ್

ಭಾರತವು ತಳೆದ ದೃಢ ನಿಲುವಿನಿಂದ ಚೀನೀಯ ಪ್ರಧಾನಿ ಚೌಎನ್‌ಲಾಯ್ ತುಸು ಅಧೀರರಾದಂತೆನಿಸುತ್ತದೆ. ಭಾರತ-ಟಿಬೇಟುಗಳ ನಡುವಣ ವ್ಯಾಪಾರದ ಒಡಂಬಡಿಕೆಯನ್ನು ಮುಂದುವರಿಸುವಂತೆ ಕೇಳಿಕೊಳ್ಳುವ ಸೌಜನ್ಯದೊಡನೆ ಭಾರತ-ಚೀನಾ ಸೀಮಾವಿವಾದವನ್ನು ನೇರ ಚರ್ಚೆಯ ಮೂಲಕ ಬಗೆ ಹರಿಸಲು ತಾನು ಸಿದ್ಧನೆಂದು ಚೌ ಅಂದಿದ್ದಾರೆ. ಆದರೂ ತನ್ನದಾದ ಭೂಭಾಗವನ್ನು ಚೀನ ಆಕ್ರಮಿಸಿರುವಾಗ, ಅದರೊಡನೆ ಯಾವುದೇ ಒಡಂಬಡಿಕೆಯಿಲ್ಲವೆಂದೂ, ಅದು ಸಾಧಿತವಾಗುವುದಕ್ಕೆ ಮೊದಲೇ ಚೀನವು ಭಾರತದ ಭೂಭಾಗದಿಂದ ಕಂಬಿಕೀಳಬೇಕೆಂದೂ ಭಾರತವು ಸ್ಪಷ್ಟವಾದ ಶಬ್ದಗಳಿಂದ ಚೀನವನ್ನು ಕೇಳಿಕೊಂಡಿದೆ. ಈ ಬಗ್ಗೆ ಚೌ ಯಾವ ಧೋರಣೆ ತಳೆಯುವರೆಂಬುದು ಕುತೂಹಲಕಾರಕವಿದೆ

ಎಸ್. ಆರ್. ಕಂಠಿ

ಶ್ರೀ ಶಿವಲಿಂಗಪ್ಪ ರುದ್ರಪ್ಪ ಕಂಠಿಯವರು ಕರ್ನಾಟಕದ ಮುಖ್ಯ ಮಂತ್ರಿಯಾದರು. ಜತ್ತಿ ಗುಂಪಿನವರನ್ನು ಮಂತ್ರಿ ಮಂಡಳಿಯಲ್ಲಿ ಸೇರಿಸಲೇ ಬೇಕೆಂದು ಕೇಂದ್ರವು ಸಲಹೆ ಮಾಡಿರುವಾಗ ತನಗೂ ತನ್ನವರಿಗೂ ಮನಸ್ಸಿಲ್ಲವಾದರೂ ಅವರದಕ್ಕೆ ಸಿದ್ಧರಾಗಲೇ ಬೇಕಾಗಿದೆ. ಒಡೆದು ಹೋಗುವ ಕಾಂಗ್ರೆಸ್ಸನ್ನು ಒಂದು ಗೂಡಿಸುವ ಹವಣಿಕೆಗಳಲ್ಲಿ ಈ ಉಪಾಯವೂ ಒಂದೆನ್ನಬಹುದು ಆದರೆ, ಜತ್ತಿಯವರು ತನ್ನ ಗುಂಪಿನವರಿಗೆ ಇಂತಿಷ್ಟು ಪ್ರಾತಿನಿಧ್ಯ ನೀಡಬೇಕೆಂದು ಹಠಹಿಡಿದಿದ್ದಾರೆಂದೂ ಅದು ದೊರೆಯದೆ ಹೋದರೆ ತಾನು ಸಂಪುಟದಲ್ಲಿ ಸೇರಲಾರೆನೆಂದಿರುವರೆಂದೂ ವರ್ತಮಾನ ಆಂಧ್ರದಲ್ಲಿ ಮಾಜಿ ಮುಖ್ಯ ಮಂತ್ರಿ ಡಿ. ಸಂಜೀವಯ್ಯನವರೇನೋ ದೂರ ನಿಂತರು; ಇಲ್ಲಿ ಜತ್ತಿಯವರು ದೂರಗುಳಿಯುವುದು ತೀರ ಅಸಂಭವ. ವಿಶಾಲ ತಳಹದಿಯ ನೀತಿಯು ಜತ್ತಿಯವರನ್ನು ಗೆದ್ದುಕೊಂಡೀತು.

ಕೃಷ್ಣಮೆನನ್

ಭಾರತಕ್ಕಿಂತಲೂ ವಿದೇಶಗಳಲ್ಲಿ ಭಾರತದ ಸಂರಕ್ಷಣಾ ಮಂತ್ರಿಯೆಂದು ಹೆಸರಾದವರು ಶ್ರೀ ಕೃಷ್ಣಮೆನನ್ ಜಿನೇವಾದಲ್ಲಿ ನಿಶ್ಶಸ್ತ್ರೀಕರಣ ಪ್ರಶ್ನೆಯ ಕುರಿತಾಗಿ ೧೮ ರಾಷ್ಟ್ರಗಳ ಮಹಾ ಸಮ್ಮೇಳನದಲ್ಲಿ ಇವರು ಭಾರತದ ಪ್ರತಿನಿಧಿ ಮಂಡಳಿದ ನಾಯಕರೆಂದು ಭಾಗ ವಹಿಸುವರು. ಪ್ರಧಾನಿ ನೆಹರುರವರ ವಿದೇಶ ನೀತಿಯನ್ನು ಸರಿಯಾಗಿ ತಿಳಿದು ಅದರಂತೆ ನಡೆಯುವ ಮೆನನ್ನರು ೮-೧೦ ವಾರದ ವರೆಗೆ ಮುಂದುವರಿಯ ಬಹುದಾದ ಈ ಸಮ್ಮೇಳನದಲ್ಲಿ ಮಹತ್ವಪೂರ್ಣ ಪಾತ್ರ ವಹಿಸುವರೆಂದು ನಂಬಬಹುದು.

ಅಲ್ಲಲ್ಲಿಯ ಸುದ್ದಿ ಸಾರ

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ— ಮೈಸೂರು ನಗರದ ಯಾದವಗಿರಿ ಬಡಾವಣೆಯಲ್ಲಿರುವ ಈ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭವು ತಾ. 3—3—62 ರಂದು ಮೈಸೂರು ಪುರಸಭೆಯ ಅಧ್ಯಕ್ಷ ಶ್ರೀ ಎಚ್. ಕೆಂಪೇಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎ. ರಾಮಪ್ಪನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಪೈ ಸಂಜೀವ ರೈಯವರು ವಿದ್ಯಾರ್ಥಿ ಸಂಘದ ವರದಿಯನ್ನೂ ಶ್ರೀ ಮೋಹನ ಎಸ್. ಚಂಪಾರವರು ಸಂದೇಶಗಳನ್ನೂ ಓದಿದರು. ಮುಖ್ಯ ಅತಿಥಿಗಳಾದ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಡೈರೆಕ್ಟರ್ ಶ್ರೀ ಪಿ ಮಲ್ಲಿಕಾರ್ಜುನಪ್ಪನವರು ಭಾಷಣ ಮಾಡುತ್ತಾ ಪ್ರಸಾರಾಂಗದ ಬೆಳವಣಿಗೆಯನ್ನು ವಿವರಿಸಿದರು. ವಿದ್ಯಾರ್ಥಿಗಳು ವ್ಯಾಸಂಗದ ಕಡೆಗೆ ವಿಶೇಷ ಗಮನವಿಟ್ಟು ಪರೀಕ್ಷೆಗಳಲ್ಲಿ ಉತ್ತಮ ರೀತಿಯಲ್ಲಿ ಉತ್ತೀರ್ಣರಾಗಲು ಯತ್ನಿಸಬೇಕೆಂದರು ಅಧ್ಯಕ್ಷ ಶ್ರೀ ಗೌಡರು ಮಾತನಾಡುತ್ತಾ ಇಂದಿನ ರಾಜಕೀಯ ಬೆಳವಣಿಗೆಯ ಅರಿವು ಮಾಡಿಕೊಂಡು ಮುಂದಿನ ಅಧಿಕಾರಿಗಳಾದ ವಿದ್ಯಾರ್ಥಿಗಳು ಪರಿಸ್ಥಿತಿಯನ್ನರಿತು ತಮ್ಮ ವ್ಯಕ್ತಿತ್ವವನ್ನು ಬೆಳೆಸಲು ಪ್ರಯತ್ನಿಸಬೇಕೆಂದೂ, ವಿದ್ಯಾರ್ಥಿಗಳು ಶಿಸ್ತಿನಿಂದ ವರ್ತಿಸುತ್ತಿರಬೇಕೆಂದೂ ಹೇಳಿ ಈ ವಿದ್ಯಾರ್ಥಿ ನಿಲಯವು ಯೋಗ್ಯ ರೀತಿಯಲ್ಲಿ ನಡೆಯುತ್ತಿರುವ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ಮನರಂಜನಾ ಕಾರ್ಯಕ್ರಮಗಳಾದ ಮೇಲೆ ಸಂಘದ ಅಧ್ಯಕ್ಷ ಶ್ರೀ ಎಂ ಎಸ್. ಶ್ರೀಕಂಠನವರು ವಂದನಾರ್ಪಣಗೈದರು.

ಪೂರ್ಣಿಮೋತ್ಸವ—ದ. ಕ. ನೊಗವೀರ ಮಹಾಜನ ಸಂಘದವರು ಉಚ್ಚಿಲದಲ್ಲಿ ಸ್ಥಾಪಿಸಿರುವ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಇದೇ ತಾ. 20ನೇ ಹುಣ್ಣಿಮೆಯ ದಿನ ವಾರ್ಷಿಕ ಪೂರ್ಣಿಮೋತ್ಸವವು ಜರಗಲಿರುವುದು ಆದಕ್ಕೆ ಸರ್ವರೂ ಬಂದು ಶ್ರೀ ದೇವೀ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಬೇಕಾಗಿ ಸಂಬಂಧಪಟ್ಟವರು ಅಪೇಕ್ಷಿಸುತ್ತಾರೆ.

ತುಳು ನಾಟಕ— ಇದೇ ತಾ. 17 ಮತ್ತು 18ನೇ ರಾತ್ರಿ 9 ಗಂಟೆಗೆ ಉಡುಪಿ ವಿಕ್ಟೋರಿಯ ಜುಬಿಲಿ ಯೂನಿಯನ್ ಕ್ಲಬ್ಬಿನ ಡಾ. ಸುಂದರರಾವ್ ಪೈ ಮೆಮೋರಿಯಲ್ ರಂಗಮಂಟಪದಲ್ಲಿ ಶ್ರೀ ಗಣೇಶ ನಾಟಕ ಸಭಾದವರು ತುಳುರಾಜ್ಯ ಪತ್ರಿಕೆಯ ಸಹಾಯಾರ್ಥವಾಗಿ 'ತಮ್ಮಲೆ ಅರ್ವತ್ತನ ಕೋಲ' ಎಂಬ ತುಳು ನಾಟಕವನ್ನು ಅಭಿನಯಿಸಲಿರುವರು.

ಸತ್ಕಾರ ಸಮಾರಂಭ—ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ತಾ 8ರಲ್ಲಿ ತಮ್ಮ ಪುತ್ರಿ ಸೌ| ನಳಿನಿಯವರನ್ನು ಶ್ರಿಂಗೇರಿ ಹಂದೆ ನರಸಿಂಹ ಭಟ್ಟರ ಪುತ್ರ ಶ್ರೀ ಪರಮೇಶ್ವರ ಭಟ್ಟರು ವಿವಾಹವಾದ ಸಂಬಂಧ ಮರುದಿನ ತಮ್ಮ ಸ್ವಗೃಹವಾದ ಉಡುಪಿ 'ಅಲಂಕಾರ'ದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ಅದಕ್ಕೆ ನಗರದ ಮಹನೀಯರನೇಕರು ಆಗಮಿಸಿದ್ದರು

ಮುಂಬೈಯಲ್ಲಿ ರಾತ್ರಿ ಶಾಲೆಯ ವರ್ಧಂತ್ಯುತ್ಸವ— 4ನೇ ಮಾರ್ಚ್ 1962ರಂದು ಮುಂಬೈಯ ಕಾವಜೀ ಜಹಂಗೀರ ಹಾಲಿನಲ್ಲಿ ಬಂಟರ ಯಾನೆ ನಾಡವರ ಸಂಘದ ವತಿಯಿಂದ ನಡೆಸಲ್ಪಡುವ ಕರ್ನಾಟಕ ಧರ್ಮಾರ್ಥ ರಾತ್ರಿ ಪ್ರೌಢ ಶಾಲೆಯ 38ನೇ ವಾರ್ಷಿಕೋತ್ಸವವು ಮುಂಬೈಯ ಮೇಯರರಾದ ಶ್ರೀ ವಲ್ಲೀಕರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಮಹಾರಾಷ್ಟ್ರದ ರಾಜ್ಯಪಾಲರಾದ ಶ್ರೀ ಶ್ರೀ ಪ್ರಕಾಶರವರು ಅಂದಿನ ಮುಖ್ಯ ಅತಿಥಿಗಳಾಗಿದ್ದರು.

ಪ್ರಾರ್ಥನೆಯ ಬಳಿಕ ಶಾಲಾ ಕಮಿಟಿಯ ಅಧ್ಯಕ್ಷ ಶ್ರೀ ಕೆ. ಶಾಮರಾಯ ಶೆಟ್ಟಿಯವರು ಸ್ವಾಗತಭಾಷಣಗೈದರು ಆ ಬಳಿಕ ಅಧ್ಯಕ್ಷಸ್ಥಾನದಿಂದ ಶ್ರೀ ವಲ್ಲೀಕರ್‌ರವರು ಮುಂಬೈಯಲ್ಲಿ ಕನ್ನಡಿಗರ ಚಟುವಟಿಕೆಗಳನ್ನು ಪ್ರಶಂಸಿಸಿ ಮಾತಾಡಿದರು ಮುಖ್ಯ ಅತಿಥಿಗಳಾದ ಶ್ರೀ ಶ್ರೀ ಪ್ರಕಾಶರವರು ರಾತ್ರಿ ಶಾಲೆಯ ಆವಶ್ಯಕತೆ ಅದರಲ್ಲೂ ಕನ್ನಡಿಗರು ನಡೆಸುತ್ತಿರುವ ಧರ್ಮಾರ್ಥ ರಾತ್ರಿ ಶಾಲೆಗಳ ಕುರಿತು ಪ್ರಶಂಸೆಗೈದರು ಆ ಬಳಿಕ ಅಧ್ಯಕ್ಷರು ಬಹುಮಾನ ವಿತರಣೆಗೈದರು.

ಮನೋರಂಜನಾ ಕಾರ್ಯಕ್ರಮದಲ್ಲಿ ಶ್ರೀ ಕೆ ಕೆ ಶೆಟ್ಟಿ ಮತ್ತು ಪಾರ್ಟಿಯವರ ನೃತ್ಯಗಳೂ ಶಾಲಾ ವಿದ್ಯಾರ್ಥಿಗಳಿಂದ ಪ್ರದರ್ಶಿಸಲ್ಪಟ್ಟ ಛದ್ಮ ವೇಷ ಪ್ರದರ್ಶನವೂ ತುಂಬಾ ಮನೋರಂಜಕವಿತ್ತು. ಕೊನೆಗೆ ಶಾಲಾ ಕಾರ್ಯದರ್ಶಿ ಶ್ರೀ ಜಗನ್ನಾಥ ಶೆಟ್ಟಿ, ಬಿ. ಎ (ಆನರ್ಸ್) ಅವರ ಧನ್ಯವಾದಗಳೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು

ಬೆಂಗಳೂರು ಆಕಾಶವಾಣಿಯಿಂದ ಯಕ್ಷಗಾನ ಕಾರ್ಯಕ್ರಮ— ನೀಲಂಪಾಡಿಯ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ— ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ ಮತ್ತು ಸಂಗಡಿಗರಿಂದ ನಡೆಸಲ್ಪಡುವ 'ಶ್ರೀಕೃಷ್ಣರಾಯಭಾರ' ಎಂಬ ಕಥಾ ಭಾಗದ ಯಕ್ಷಗಾನ ಕಾರ್ಯಕ್ರಮವು ಇದೇ 15-3-62 ಗುರುವಾರ ಸಂಜೆ 6-45ರಿಂದ 7-45ರ ವರೆಗೆ ನಡೆಯುವ ಗ್ರಾಮಸ್ಥರ ಕಾರ್ಯಕ್ರಮದಲ್ಲಿ ಬೆಂಗಳೂರು ಆಕಾಶವಾಣಿಯಿಂದ ಪ್ರಸಾರವಾಗುವುದಾಗಿ ಗೊತ್ತಾಗಿದೆ.

ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೀ. ವ. ಕೇಶವ (ಹಾಡುಗಾರಿಕೆ) ಎಂ ಕೃಷ್ಣ ಭಟ್ (ಮೃದಂಗ) ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ (ಚಾರಣ) ಯು ಬಿ. ಗೋವಿಂದಯ್ಯ (ಶ್ರೀಕೃಷ್ಣ) ರಮಾನಂದ ಬನಾರಿ (ವಿದುರ) ಕೆ ಎ ಭಂಡಾರಿ—(ಭಾನುಮತಿ) —ಅವರುಗಳು ಭಾಗವಹಿಸುವರು.

ಉತ್ತಮ ಶಾಲೆಗಳ ಸ್ಪರ್ಧೆ—ಪ್ರವೇಶ ಪತ್ರಗಳು— ಜಿಲ್ಲೆಯಲ್ಲಿಯ ಪ್ರಾಥಮಿಕ ಶಾಲೆಗಳಿಗಾಗಿ ಏರ್ಪಡಿಸಿದ ಉತ್ತಮ ಶಾಲೆಗಳ ಸ್ಪರ್ಧೆಗಾಗಿ ಮುದ್ರಿತ ಪ್ರವೇಶ ಫೋರ್ಮುಗಳು ತಯಾರಾಗಿವೆ. ಸ್ಪರ್ಧೆಯಲ್ಲಿ ಭಾಗವಹಿಸಲೆಳಸುವ ಶಾಲೆಗಳು ಈ ಪ್ರವೇಶ ಪತ್ರಗಳನ್ನು ಸಂಬಂಧಪಟ್ಟ ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರರ ಆಫೀಸಿನಿಂದ ಪಡೆಯಬಹುದು. ಇಲ್ಲವೇ 15 ನಯೇ ಪೈಸೆಯ ಸ್ಟಾಂಪಿನೊಂದಿಗೆ ಸೆಲ್ಫ್ ಎಡ್ರೆಸ್ ಕವರಿನೊಂದಿಗೆ ಬರೆಕೊಳ್ಳಬಹುದು. ಸರಿಯಾಗಿ ಬರೆದ ಪ್ರವೇಶ ಪತ್ರಗಳು ಸಂಬಂಧಿಸಿದ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಿಗೆ 25—3—62ರೊಳಗೆ ತಲಪತಕ್ಕದ್ದು ಅನಂತರ ಬಂದ ಪ್ರವೇಶಗಳನ್ನು ಗಮನಿಸಲಾಗುವುದಿಲ್ಲ ಎಂದು ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ ವಿಠಲ ಶೆಣೈಯವರು ತಿಳಿಸುತ್ತಾರೆ

ಬ್ರಹ್ಮೋಪದೇಶ ಸಮಾರಂಭ— ಸಿಂಡಿಕೇಟ್ ಬ್ಯಾಂಕಿನ ಮಂಗಳೂರು ಶಾಖೆಯ ಮೆನೇಜರ್ ಶ್ರೀ ಎಚ್. ಡಿ ಎಸ್. ಪೈಯವರ ಪ್ರಥಮ ಪುತ್ರ ಶ್ರೀ ಗಣೇಶ ಪೈಯವರ ಬ್ರಹ್ಮೋಪದೇಶ ಸಮಾರಂಭವು ತಾ. 8-3-62ರಂದು ಮಂಗಳೂರಿನ ಪೆಂಟ್‌ಲೇಂಡ್ ಪೇಟೆಯ ಸಿಂಡಿಕೇಟ್ ಬ್ಯಾಂಕ್ ಹೌಸಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಸಂಬಂಧ ಮರುದಿನ ರಾತ್ರಿ ಭೋಜನ ಕೂಟವನ್ನೂ ಏರ್ಪಡಿಸಲಾಗಿತ್ತು

ಭಾರತದಲ್ಲಿ ವಿಮಾನ ನಿರ್ಮಾಣ

ಭಾರತದಲ್ಲಿಯೇ ಈಗ ಪ್ರಯಾಣಿಕರ ವಿಮಾನಗಳು ತಯಾರಾಗುತ್ತಿವೆ ಭಾರತದ ಇಂತಹ ಪ್ರಥಮ ವಿಮಾನವನ್ನು ಪ್ರಧಾನಿ ನೆಹರು ಕಳೆದ ನವಂಬರ ೨-ರಂದು ಉದ್ಘಾಟಿಸಿದರು. ಈ ವಿಮಾನವನ್ನು ದಿವಂಗತ ಏರ್ ಮಾರ್ಶಲ್ ಸುಬ್ರೋತೊ ಮುಖರ್ಜಿಯವರ ಹೆಸರಿನಲ್ಲಿ 'ಸುಬ್ರೋತೊ' ಎಂದು ಹೆಸರಿಸಲಾಗಿದೆ. ಮೇಲಿನ ಚಿತ್ರದಲ್ಲಿ ಪ್ರಧಾನಿ ಮತ್ತು ರಕ್ಷಣಾಮಂತ್ರಿ ಶ್ರೀ ಕೃಷ್ಣಮೆನನ್ನರು ಸುಬ್ರೋತೊ ಹಾರಾಟವನ್ನು ವೀಕ್ಷಿಸಿದನಂತರ ಮರಳುತ್ತಿರುವುದನ್ನೂ ಕೆಳಗಿನ ಚಿತ್ರದಲ್ಲಿ ಕಾನ್ಪುರದಲ್ಲಿ ಪ್ರಧಾನಿಯವರು ವಿಮಾನರಚನಾಲಯದಲ್ಲಿ ತಾಂತ್ರಿಕ ಕೆಲಸಗಾರರ ಪರಿಚಯ ಪಡೆಯುತ್ತಿರುವುದನ್ನೂ ನೆಹರೂರ ಹಿಂದೆ ಮೆನನ್, ಏರ್ ವೈಸ್ ಮಾರ್ಶಲ್ ಹರಿಜಿಂದರ್ ಸಿಂಘರನ್ನೂ ಕಾಣಬಹುದು.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ]

ಸ್ತೋತ್ರಾರ್ಣವಃ— (ಸಂಸ್ಕೃತ) ಸಂಪಾದಕರು: ಶ್ರೀ ಟಿ. ಚಂದ್ರಶೇಖರನ್. ಪ್ರಕಾಶಕರು: ಮದ್ರಾಸು ಸರಕಾರದ ಪ್ರಾಚ್ಯ ಪುಸ್ತಕ ಭಂಡಾರ, ಮದ್ರಾಸು. ಪುಟಗಳು: 4+೨೩೬. ಬೆಲೆ: ರೂ. ೨೦—೩೦.

ಮದ್ರಾಸು ಸರಕಾರದ ಪ್ರಾಚ್ಯ ಪುಸ್ತಕ ಭಂಡಾರದಲ್ಲಿರುವ ಹಲವಾರು ಅಮುದ್ರಿತ ಸ್ತೋತ್ರಗಳನ್ನು ಒಂದೆಡೆ ಸೇರಿಸಿ ಪ್ರಕಟಿಸಿದ ಪುಸ್ತಕವೇ ಈ ಸ್ತೋತ್ರಾರ್ಣವ. ಮಾನವನ ಪ್ರಧಾನೋದ್ದೇಶವು ಜನ್ಮ ಮೃತ್ಯು ಮತ್ತು ಪುನರ್ಜನ್ಮಗಳಿಗೆ ಹೊರತಾದ ಮುಕ್ತಿ. ಪ್ರತಿಯೊಂದು ಆಸ್ತಿಕ ಮತವೂ ಮೋಕ್ಷವನ್ನು ಒಪ್ಪುತ್ತದೆ. ಮತಗಳ ನಡುವೆ ಸಾಧನೆಯ ಮಾರ್ಗದಲ್ಲಿ, ಜೀವಾತ್ಮ—ಪರಮಾತ್ಮ ಸಂಬಂಧದಲ್ಲಿ ಅಭಿಪ್ರಾಯ ಭೇದಗಳಿರಬಹುದು. ಕರ್ಮ, ಭಕ್ತಿ ಮತ್ತು ಜ್ಞಾನಯೋಗಗಳನ್ನು ವೇದಾಂತವು ಪ್ರತಿಪಾದಿಸುತ್ತದೆ ಶ್ರೀ ಮದ್ಭಗವದ್ಗೀತೆಯಲ್ಲಾದರೂ ಈ ಮೂರು ಯೋಗಗಳನ್ನೇ ವಿವರಿಸಲಾಗಿದೆ ಇವುಗಳಲ್ಲಿ ಜ್ಞಾನ ಮತ್ತು ಕರ್ಮಯೋಗಗಳಿಗಿಂತ ಭಕ್ತಿ ಯೋಗವು ಸರಳ, ಸುಲಭವಾದುದು. ಪರಮಾತ್ಮನನ್ನೇ ಅನನ್ಯ ಭಾವದಿಂದ ನೆನೆಯುವುದೇ ಭಕ್ತಿ. ಕಲಿಯುಗದಲ್ಲಿ ಹರಿನಾಮವೊಂದೇ ತಾರಕವೆಂಬ ದಾಸರೂ ಭಕ್ತಿಯನ್ನು ಅಗ್ರಗಣ್ಯವೆಂದು ಭಾವಿಸಿದ್ದಾರೆ

ಭಕ್ತರಲ್ಲಿ ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿಗಳೆಂದು ನಾಲ್ಕು ವಿಭಾಗವಿದ್ದರೆ, ಭಕ್ತಿಯಲ್ಲಿ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನವೆಂದು ನವ ವಿಧಗಳಿರುತ್ತವೆ. ಇವುಗಳಲ್ಲಿ ಎರಡನೆಯದಾದ ಕೀರ್ತನೆಯು ಪರಮಾತ್ಮನ ಪ್ರಶಂಸಾಪರವಾದುದು; ಇದನ್ನೇ ಸ್ತೋತ್ರವೆನ್ನುವರು. ಕೀರ್ತನೆಯಿಂದಾಗಿ ಅನೇಕಾನೇಕ ಭಕ್ತರು ಪರಮಾತ್ಮ ಸಾಯುಜ್ಯವನ್ನು ಪಡೆದಿರುವರೆಂದು ನಮ್ಮ ಪುರಾಣಗಳು ಹೇಳುತ್ತವೆ. ಭಕ್ತಿಮಾರ್ಗದಲ್ಲಿ ಮುನ್ನಡೆದು ದೇವತಾಪ್ರಾರ್ಥನೆಯನ್ನು ಅವರು ನಡೆಸಿ ತಮ್ಮ ಉದ್ಧಾರ ಮಾಡಿಕೊಳ್ಳಲು ಅನುಕೂಲವಾಗುವಂತೆ ಪೂರ್ವ ಭಕ್ತರಿಂದಲೂ ಪಂಡಿತರಿಂದಲೂ ಹಲವಾರು ಬಗೆಯ ಸ್ತೋತ್ರಗಳು ಬರೆಯಲ್ಪಟ್ಟಿವೆ. ಇವು ಬಹಳ ಸುಲಭಗ್ರಾಹ್ಯವಾಗಿದ್ದು ಛಂದೋಬದ್ಧವಾಗಿ ಲಿಖಿತವಿರುವುದರಿಂದ, ಕಂಠಪಾಠ ಮಾಡಿಕೊಳ್ಳುವುದಕ್ಕೂ ಅರ್ಥವಿಸಿಕೊಳ್ಳುವುದಕ್ಕೂ ಅನುಕೂಲವಿರುತ್ತವೆ.

'ಸ್ತೋತ್ರಾರ್ಣವ,'ವೆಂಬ ಪ್ರಸ್ತುತ ಪುಸ್ತಕದಲ್ಲಿ ಬೇರೆ ಬೇರೆ ಕವಿಗಳಿಂದ ಲಿಖಿತವಾದ ೨೦೯ ಸ್ತೋತ್ರಗಳಿವೆ ಇವುಗಳಲ್ಲಿ ಕೆಲವು ಚಿಕ್ಕವಾಗಿಯೂ ಕೆಲವು ತುಸು ದೊಡ್ಡದಾಗಿಯೂ ಇವೆ. ಸ್ತೋತ್ರಗಳಲ್ಲಿ ಪ್ರಶಂಸಿತರಾದ ದೇವತೆಯನ್ನು ಗಮನದಲ್ಲಿಟ್ಟು ಈ ಇಡಿಯ ಸ್ತೋತ್ರಾರ್ಣವನ್ನು ಒಂಬತ್ತು ತರಂಗಗಳಾಗಿ ಸಂಪಾದಕರು ವಿಭಜಿಸಿದ್ದಾರೆ. ಗಣೇಶ, ಶಿವ, ವಿಷ್ಣು, ರಾಮ, ಕೃಷ್ಣ. ಪ್ರಕೀರ್ಣ (ಇತರ) ಸುಬ್ರಹ್ಮಣ್ಯ, ದೇವಿ ಮತ್ತು ಮಂಗಳ ವೆಂಬಿವೇ ಆ ತರಂಗಗಳು. ಇಂತಹ ವಿಭಜನೆಯಿಂದಾಗಿ ಪಾಠಕರು ತಮಗೆ ಬೇಕಾದ ದೇವತಾ ಸ್ತೋತ್ರವನ್ನು ಆರಿಸಿಕೊಳ್ಳಲು ಸುಲಭವಾಗುವುದು. ಸ್ತೋತ್ರಗಳ ಮೂಲ ಪ್ರತಿಗಳಲ್ಲಿ ಕೆಲವು ಕಾಗದದಲ್ಲಿಯೂ ಇನ್ನು ಕೆಲವು ತಾಳೆಗರಿಯಲ್ಲಿಯೂ ಕೆಲವು ಅಶುದ್ಧವಾಗಿಯೂ ಇನ್ನು ಕೆಲವು ಶುದ್ಧವಾಗಿಯೂ ಇದ್ದುವೆಂದೂ ಅವೆಲ್ಲವನ್ನೂ ಬಹುಪ್ರಯಾಸದಿಂದ ಪಂಡಿತರ ಸಹಾಯದಿಂದ ಸಾಮಾನ್ಯ ಶುದ್ಧಗೊಳಿಸಿ ಈ ಬೃಹತ್ ಗ್ರಂಥವನ್ನು ಸಿದ್ಧಪಡಿಸಿರುವುದಾಗಿ ಸಂಪಾದಕರು ತಿಳಿಸಿದ್ದಾರೆ. ಅಲ್ಲದೇ, ತಾವು ಆರಿಸಿಕೊಂಡ ಮೂಲ ಪ್ರತಿಗಳ ತಾಲಿಕೆಯನ್ನು ವಿಸ್ತಾರವಾಗಿ ನೀಡಿದ್ದಾರೆ. ಪುಸ್ತಕದ ಮುದ್ರಣ, ಹೊದಿಕೆಗಳು ಅದರ ಉಪಯೋಗಕ್ಕೆ ತಕ್ಕಂತೆ ಅಂದವಾಗಿವೆ. ಆದರೂ ೧೩ ಪುಟಗಳಷ್ಟು ಉದ್ದಕ್ಕೆ ಬೆಳೆದ ಶುದ್ಧಾಶುದ್ಧ ಪತ್ರಿಕೆಯನ್ನು ತುಸು ಕಡಿಮೆಮಾಡ ಬಹುದಿತ್ತೆನಿಸುತ್ತದೆ. ಆಸ್ತಿಕ ಮಹಾಶಯರಿಗೆ ಉಪಯುಕ್ತವಾದ ನಮ್ಮ ಪೂರ್ವಜರಿಂದ ಬರೆಯಲಾದ ಸ್ತೋತ್ರಗಳು ಒಂದೆಡೆಯಲ್ಲೇ ದೊರೆಯುವಂತೆ ಮಾಡಿದ ಸಂಪಾದಕರು ಮತ್ತವರ ಸಹಾಯಕರು ಹಾಗೂ ಪ್ರಕಾಶಕರು ಕೃತಜ್ಞತಾರ್ಹರು. ಈ ಮಹಾ ಸಂಪುಟದ ಉಪಯೋಗವನ್ನು ಆಸ್ತಿಕಮಹಾಶಯರು ಅವಶ್ಯಮಾಡಿಕೊಳ್ಳಬಹುದು.

ಮುಕ್ತಿ—(ಕಾದಂಬರಿ) ಲೇಖಕರು: ಶ್ರೀ ಶಾಂತಿನಾಥ ದೇಸಾಯಿ. ಪ್ರಕಾಶಕರು: ಮನೋಹರ ಗ್ರಂಥಮಾಲಾ, ಧಾರವಾಡ. ಪುಟಗಳು; ೨೯೨. ಬೆಲೆ. ರೂ. ೪ ೦೦ (ಸಾದಾ ಪ್ರತಿ) ರೂ. ೫—೦೦ (ಕ್ಯಾಲಿಕೋ ಪ್ರತಿ).

ಕನ್ನಡದ ಇತಿವೃತ್ತಾತ್ಮಕ ಕಾದಂಬರಿಗಳನ್ನು ಓದಿ ಓದಿ ದಣಿದ ಓದುಗರು ಶ್ರೀ ದೇಸಾಯಿಯವರ 'ಮುಕ್ತಿ"ಯನ್ನು ಅವಶ್ಯ ಬಯಸುತ್ತಾರೆ. ಇಲ್ಲಿನ ಕಥಾ ರಚನೆಯು ಇಂಗ್ಲಿಷ್ ಮಾದರಿಯನ್ನು ಹೋಲುತ್ತಿದ್ದು ಕನ್ನಡಕ್ಕೆ ಹೊಸತಾಗಿದೆ. ಈ ಕಾರಣದಿಂದಲೇ ಆರಂಭದ ಕೆಲವು ಹಾಳೆಗಳನ್ನು ಮುಖಸಿಂಡರಿಸಿಕೊಂಡೇ ಮಗುಚ ಬೇಕಾಗುತ್ತದೆ. ವಾಚನದಲ್ಲಿ ತನ್ಮಯತೆಯನ್ನು ಹೆಚ್ಚಿಸಿದಂತೆ ಕಾದಂಬರಿಯ ಓಟದ ಪರಿಚಯವು ತುಸು ತುಸುವಾಗಿ ಅರಿವಾಗುತ್ತದೆ; ನಿರೂಪಣಾವೈಖರಿಯು ನಮ್ಮನ್ನು ಮುಗ್ಧಗೊಳಿಸುತ್ತದೆ. ಆಂಗ್ಲ ಕಥಾವಿಧಾನದ ರಚನೆ ಕನ್ನಡಕ್ಕೆ ಒಗ್ಗುವುದು ಸ್ವಲ್ಪ ಸಂದೇಹವೆನಿಸಿದ್ದರೂ ಶ್ರೀ ದೇಸಾಯಿಯವರು ಅದನ್ನು ಅಂಗೀಕರಿಸಿಕೊಳ್ಳುವ ಸಾಹಸ ತೋರಿಸಿದ್ದಾರೆ; ಅದರಲ್ಲಿ ಯಶಸ್ವಿಯಾಗಿದ್ದಾರೆಂದೇ ಹೇಳಬಹುದು.

ಮನೋ ವಿಶ್ಲೇಷಣಾತ್ಮಕವಾದ ಈ ಕಾದಂಬರಿಯಲ್ಲಿ ವಿಘಟನೆಯೇ ಜೀವಾಳವೆನಿಸಿದೆ. ದುರ್ಬಲ ಮನಸ್ಸಿನ ಭಾವ ಪರವಶ ಶೀಲನಾದ ಗೌರೀಶ ಜೀವನದ ಬಹುಮುಖ ಕಾರ್ಯಭಾರದಲ್ಲೂ ಸಬಲನಾಗಲು ಅಶಕ್ತನಾಗಿ ಆಫ್ರಿಕೆಯನ್ನು ಸೇರುವುದರಿಂದಲೇ ಮುಕ್ತಿಯೆಂದು ತಿಳಿ

ಭಾರತ ಪ್ರವಾಸ ಕೈಕೊಂಡಿರುವ ಅಮೇರಿಕೆಯ ಅಧ್ಯಕ್ಷರ ಪತ್ನಿ ಜೆಕಲಿನ್ ಕೆನೆಡಿ, ಜೋನ್ ಕೆನೆಡಿ ಮತ್ತು ಅಮೇರಿಕೆಯ ಉಪರಾಷ್ಟ್ರಪತಿ ಜೋನ್ಸನ್.

ಯುತ್ತಾನೆ- ಸದಾ ಪ್ರಸನ್ನನಾಗಿ ಜೀವನವನ್ನೇ ಕಬಳಿಸುವ ಬೇನೆಯಿಂದ ನವೆಯುತ್ತಿದ್ದ, ಶ್ರೀಕಾಂತ ತಾನು ಮೆಚ್ಚಿದ ಪ್ರೇಯಸಿಯನ್ನು ಸಹ ಮರೆತು, ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಮುಕ್ತನೆನಿಸುತ್ತಾನೆ. ಆತನ ತಂಗಿ ಕಾಮಿನಿಯು ಹಠಮಾರಿತನ ಮತ್ತದರಿಂದ ಆಕೆ ಗೆಯ್ಯುವ ಪಾಪಕೃತ್ಯಗಳಿಂದಾಗಿ ಅಧಃಪತಿತಳಾಗಿ ಮುಕ್ತಳಾಗ ಬಯಸುತ್ತಾಳೆ. ವಿಭಿನ್ನ ಪ್ರವೃತ್ತಿಯ ಈ ಮೂವರ ನಡುವೆಯೂ ಬಲವಾದ ಸ್ನೇಹ ಬಂಧವೊಂದಿತ್ತು; ಆ ಸ್ನೇಹ ಬಂಧದಿಂದ ಮೂವರು ಮೂರು ವಿಧವಾಗಿ ಮುಕ್ತರಾದೆವೆಂದು ಭಾವಿಸಿಕೊಂಡುದೇ 'ಮುಕ್ತಿ'ಯ ಸಾರ. ಇವರು ಪ್ರಧಾನ ಪಾತ್ರಗಳಾದರೆ, ಪೂರಕವೆನಿಸುವ ಸತ್ಯೇಂದ್ರ ಡೋಲಿಯರೂ ತಮ್ಮ ಪಾತ್ರವನ್ನು ಯಶಸ್ವಿಯಾಗಿಯೇ ನಿರ್ವಹಿಸಿದ್ದಾರೆ. ಎಲ್ಲಕ್ಕಿಂತಲೂ ಗೌರೀಶನ ಅಸಹಾಯಕ ಪರಿಸ್ಥಿತಿ ಮತ್ತು ತೀರ ದುರ್ಬಲತೆಯು ಹೃದಯಸ್ಪರ್ಶಿಯಾಗಿ ಚಿತ್ರಿತವಾಗಿರುವ ಈ ಕಾದಂಬರಿಯು ಕನ್ನಡದ ಪ್ರಯೋಗ ವಾದಕ್ಕೆ ನಾಂದಿ ಹಾಕಿ ಕೊಡುವುದೆಂದು ಆಶಿಸಬಹುದು.

ತರಂಗ ಲಹರಿ— ಲೇಖಕರು: ವಿದ್ವಾನ್ ಕೆ. ಎನ್. ಭಟ್, ಶಿರಾಡಿಪಾಲ್ ಮತ್ತು ಡಾ| ಸುರತ್ಕಲ್ ಶ್ರೀನಿವಾಸ ರಾವ್, ಮುಂಡಾಜೆ. ಪ್ರಕಾಶಕರು: ವಿಚಾರಸಾಹಿತ್ಯ ಮಾಲೆ, ಕಡಿರುದ್ಯಾವರ, ದ ಕನ್ನಡ. ಪುಟಗಳು: ೪೦ ಬೆಲೆ: ರೂ. ೦—೬೦.

ಕನ್ನಡದ ಕವಿಗಳಲ್ಲಿ ಈಗಾಗಲೇ ಒಬ್ಬರಾಗಿ ಹೋಗಿರುವ ಕೆ. ಎನ್. ಭಟ್ ಮತ್ತು ವಿದ್ಯಾರ್ಥಿಯಾಗಿದ್ದಾಗ ಬರೆದು ಆಗ ಕಂತೆಯನ್ನು ಬಿಡಿಸದ ಶ್ರೀನಿವಾಸರಾಯರ ಸಂಯುಕ್ತ ತರಂಗಲಹರಿಯಿದು. ಒಬ್ಬೊಬ್ಬರ ೧೨-೧೨ ಗೀತೆಗಳು ಇಲ್ಲಿ ಸಂಗ್ರಹವಾಗಿವೆ. ಪ್ರಾಚೀನ ಮಾರ್ಗದ ಛಂದಸ್ಸುಗಳೆಲ್ಲವೂ ನಾಮಾವಶೇಷವಾಗಿ ನವ್ಯಕವಿತೆಗಳ ಈ ಯುಗದಲ್ಲಿಯೂ ಲೇಖಕದ್ವಯರು ಹೆಚ್ಚಿನ ಮಟ್ಟಿಗೆ ಕಂದ, ವೃತ್ತ, ಷಟ್ಪದಿಗಳನ್ನೇ ಬಳಸಿಕೊಂಡಿರುವುದು ವೈಶಿಷ್ಟ್ಯಪೂರ್ಣವಿದೆ. ಶ್ರೀ ರಾಯರ 'ರಾತ್ರಿ, ಪದ್ಯವನ್ನು ನೋಡಿ:

ರಾತ್ರಿಯಿದಿರವಿರ್ದೊಡೆ ಕೇಳ್
ಧಾತ್ರಿಯುಮಿಲ್ಲದ ಶಿಶುವಿನ ತೆರದಿಂ,
ಜನರುಂ
ದಾತ್ರಿಲಿ ಸವೆವುದನರಿತು ವಿ
ಧಾತ್ರಂ ಜನಹಿತಕೆ ರಾತ್ರಿಯಂ
ಸೃಜಿಸಿರ್ಪಂ ||

೩೭ ವರ್ಷಗಳ ಹಿಂದೆ ಬರೆದಿದ್ದ ಕವನವಿದು. ಇಲ್ಲಿಯ ಉಪಮೆ, ಅರ್ಥ, ಪ್ರಾಸ, ಛಂದಸ್ಸು—ಎಲ್ಲವೂ ಸೂಕ್ತವಿವೆ, ಆದರೆ, ೧೯೬೨ರಲ್ಲಿರುವ ಕನ್ನಡದ ಜನಸಾಮಾನ್ಯರಿಗೆ ಈ ಬೆಡಗನ್ನು ಕಾಣುವ ಆಶೆಯಿದೆಯೆ?

ಶ್ರೀ ಶಿರಾಡಿಪಾಲರ 'ಭಾರತರಂಗ" ಗೀತೆಯಲ್ಲಿ ಕೆಲವೊಂದು ತಿದ್ದುಪಾಟು ಮಾಡಿದ್ದರೆ ಉತ್ತಮವೆನಿಸುತ್ತದೆ. ಉದಾಹರಣೆಗೆ ೨ನೆ ಪದ್ಯದ ಮೂರನೆ ಸಾಲು 'ಸಾಧಕರೆಲ್ಲರು ಸ್ತುತಿಪರ್" ಎಂಬಲ್ಲಿ ಛಂದೋದೋಷವೂ ಇದೆ ಅದನ್ನು 'ಸಾಧಕರೆಲ್ಲರ್ ನುತಿಪರ್" ಎಂದು ತಿದ್ದಿದರೆ ಆಕರ್ಷಕನೆನಿಸುತ್ತದೆ. 'ಕಾವ್ಯಂಕುರ", (ಪುಟ ೧೧) ಉದರಂಲಂಬೋದರ (ಅದೇ) ಸುರಸಾವಾರ (ಅದೇ) ಮೊದಲಾದ ಸಂಶಯಾಸ್ಪದ ಪ್ರಯೋಗಗಳನ್ನು ಬಿಡುತ್ತಿದ್ದರೆ, ಹಳೆಯ ಛಂದಸ್ಸಿಗೆ ಪ್ರಾಧಾನ್ಯವಿತ್ತು, ನವೀನಕ್ಕೂ ಸ್ಥಾನವಿತ್ತು ಹೊರಬಂದ 'ತರಂಗ ಲಹರಿ" ಆಕರ್ಷಕವಿದೆಯೆನ್ನಬಹುದು.. ಶ್ರೀ ತಿರುಮಲೇಶ್ವರ ಭಟ್ಟರು ಮುನ್ನುಡಿಯಲ್ಲಿ ಹೇಳಿದಂತೆ ಪ್ರಾಚೀನತೆಯ ಪುನರುಜ್ಜೀವನ ಮಾಡಿ ಮಾರ್ಗದರ್ಶನವಿತ್ತಿದ್ದಾರೆ ಲೇಖಕರು. ತರಂಗಲಹರಿಯನಾದ ತರಂಗಗಳೂ ಭಾವ ಲಹರಿಗಳೂ ವಾಚಕರನ್ನು ಆಕರ್ಷಿಸಲು ಸಮರ್ಥವಿವೆ.

—ಗೋರಾ.

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಅದನ್ನು ಅದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಅಪೇಕ್ಷಿಸುತ್ತೇವೆ.

—ಮೆನೇಜರ್ ನವಯುಗ

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಆರೋಗ್ಯ ರಕ್ಷಣೆಗಾಗಿ
ವಿಶೇಷ ಕಾರ್ಯ ಯೋಜನೆಗಳು

ಸಾರ್ವಜನಿಕರ ಆರೋಗ್ಯ ಮಟ್ಟವನ್ನು ಉತ್ತಮಗೊಳಿಸಲು ನಿರಂತರ ಪ್ರಯತ್ನ ನಡೆಯುತ್ತಿದೆ. ನಾಡಿನ ಆರ್ಥಿಕ ಉನ್ನತಿ ಸಾಧ್ಯವಾಗಬೇಕಾದರೆ ಜನಾಂಗದ ಆರೋಗ್ಯ ಮಟ್ಟ ಉತ್ತಮವಾಗಿರಬೇಕಾದುದು ಅತ್ಯಾವಶ್ಯಕ. ಆರೋಗ್ಯವಂತ ಜನ ನಾಡಿನ ಒಂದು ಬಹು ಮುಖ್ಯ ಸಂಪತ್ತು ಎನ್ನಬಹುದು

ಕಳೆದ ಒಂದು ದಶಕದಲ್ಲಿ ಸರಕಾರ ಕೈಗೊಂಡಿರುವ ಹತ್ತಾರು ಸಾರ್ವಜನಿಕ ಆರೋಗ್ಯ ಯೋಜನೆಗಳ ಫಲವಾಗಿ ಜನರ ಸರಾಸರಿ ಆಯುಸ್ಸಿನ ಪ್ರಮಾಣ ಹೆಚ್ಚಿರುವುದು ಕಂಡು ಬರುತ್ತದೆ. ಮರಣಗಳ ಸಂಖ್ಯೆ ಕಡಿಮೆಯಾಗಿದೆ.

ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ಕಾರ್ಯಗತವಾದ ಸಾರ್ವಜನಿಕ ಆರೋಗ್ಯ ಕಾರ್ಯಯೋಜನೆಗಳ ಮುಖ್ಯ ಉದ್ದೇಶ ಸಾರ್ವಜನಿಕರ ಆರೋಗ್ಯ ರಕ್ಷಣೆಯನ್ನು ನೋಡಿಕೊಳ್ಳಬಲ್ಲಂತಹ ಸಂಸ್ಥೆಗಳನ್ನು ಸ್ಥಾಪಿಸುವುದು, ತಾಂತ್ರಿಕ ಸಿಬ್ಬಂದಿಯನ್ನು ಹೆಚ್ಚಿಸುವುದು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಸಲುವಾಗಿ ಕೈಕೊಳ್ಳಬೇಕಾದ ಕ್ರಮಗಳು, ಕುಟುಂಬ ಯೋಜನಾ ಕಾರ್ಯಕ್ರಮ, ಶುಚಿತ್ವಪಾಲನೆ ಚಳುವಳಿ ಇತ್ಯಾದಿಗಳ ನಿರ್ವಹಣೆಯೇ ಆಗಿತ್ತು.

ಈ ಕಾರ್ಯ ಯೋಜನೆಗಳ ಫಲವಾಗಿ ಇಂದು ಸುಮಾರು ೧೩,೬೦೦ ಆಸ್ಪತ್ರೆಗಳು ಮತ್ತು ಔಷಧಾಲಯಗಳು ನಾಡಿನಾದ್ಯಂತ ಸ್ಥಾಪಿತವಾಗಿವೆ. ಒಟ್ಟು ೧,೬೦,೦೦೦ ಹಾಸಿಗೆಗಳಿಗೆ ಈ ಆಸ್ಪತ್ರೆಗಳಲ್ಲಿ ಅವಕಾಶ ದೊರಕಿದೆ. ಕುಷ್ಠ ರೋಗ ಇತ್ಯಾದಿ ಭೀಕರ ರೋಗಗಳನ್ನು ವಾಸಿ ಮಾಡುವ ಆಸ್ಪತ್ರೆಗಳೂ ಹೊಸದಾಗಿ ಸ್ಥಾಪಿತವಾಗಿವೆ.

ಕ್ಷಯರೋಗ ನಿವಾರಣೆ ಪ್ರಯತ್ನ

ಕ್ಷಯರೋಗ ಒಂದು ಭಾರಿ ಸಮಸ್ಯೆಯೇ ಆಗಿದೆ. ಇತ್ತೀಚೆಗೆ ನಡೆದ ಒಂದು ಸಮೀಕ್ಷೆ ಪ್ರಕಾರ ಶ್ವಾಸಕೋಶಗಳಿಗೆ ಕ್ಷಯರೋಗ ತಗಲಿರುವ ಒಟ್ಟು ೫೦ ಲಕ್ಷ ಜನ ರೋಗಿಗಳಿರ ಬಹುದೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ೧೫ ಲಕ್ಷದಷ್ಟು 'ಕೇಸ್'ಗಳು ಸಾಂಕ್ರಾಮಿಕವಾಗಿ ಇರಬಹುದು

ಕ್ಷಯ ರೋಗದ ವಿರುದ್ಧ ಕೈಗೊಳ್ಳುವ ಕಾರ್ಯಯೋಜನೆ ಅಂಗವಾಗಿ ಸಾಮೂಹಿಕ ಮಟ್ಟದಲ್ಲಿ ಬಿ. ಸಿ. ಜಿ. ಮದ್ದು ಹಾಕುವ ಕಾರ್ಯಕ್ರಮ ಕೈಗೊಳ್ಳಬೇಕಾಗುತ್ತದೆ. ಕ್ಷಯ ರೋಗಿಗಳ ಪರೀಕ್ಷೆ ಮತ್ತು ಚಿಕಿತ್ಸೆಗಾಗೆಂದು ಪ್ರತ್ಯೇಕ ಆಸ್ಪತ್ರೆಗಳನ್ನು ಸ್ಥಾಪಿಸಬೇಕಾಗುತ್ತದೆ. ಔಷಧಾಲಯಗಳ ಸ್ಥಾಪನೆ ಕೈಗೊಳ್ಳಬೇಕಾಗುತ್ತದೆ.

ಬೆಂಗಳೂರಿನಲ್ಲಿ ಸಂಶೋಧನೆ, ಚಿಕಿತ್ಸೆ ಸಿಬ್ಬಂದಿಯ ತರಬೇತಿ ಮತ್ತು ಆಡಳಿತ ನಿರ್ವಹಣೆಗೆ ಸಂಬಂಧಪಟ್ಟಂತೆ ಒಂದು ಪ್ರತ್ಯೇಕ ರಾಷ್ಟ್ರೀಯ ಸಂಸ್ಥೆಯು ಸ್ಥಾಪಿತವಾಗಿದೆ. ಈ ಸಂಸ್ಥೆಗೆ ವಿಶ್ವ ಸಂಸ್ಥೆಯ ಆಶ್ರಯದಲ್ಲಿರುವ ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿ ಮತ್ತು ವಿಶ್ವ ಆರೋಗ್ಯ ಸಂಸ್ಥೆಯಿಂದ ನೆರವು ದೊರಕಿದೆ,

ಕುಷ್ಠ ರೋಗ ಮತ್ತು ವ್ರಣ

ಕುಷ್ಠರೋಗದಿಂದ ಸುಮಾರು ೨೦ ಲಕ್ಷ ಜನ ನರಳುತ್ತಿರುವರೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ೫ ಲಕ್ಷ ಜನರ ರೋಗ ಸಾಂಕ್ರಾಮಿಕವಾದುದು. ಕಳೆದ ಒಂದು ದಶಕದಲ್ಲಿ ಈ ರೋಗವನ್ನು ಎದುರಿಸುವ ಸಲುವಾಗಿ ಲಭ್ಯವಾಗಿರುವ ಪರಿಣಾಮಕಾರಿ ಔಷಧಿಗಳ ಫಲವಾಗಿ ಈ ರೋಗಿಗಳನ್ನೂ ಆಸ್ಪತ್ರೆಯಲ್ಲಿಟ್ಟೇ ಚಿಕಿತ್ಸೆ ನಡೆಸುವುದಕ್ಕೆ ಗಮನ ಕೊಡುವಬದಲು ಈ ಸುಳುವು ದೊರೆತ ಕೂಡಲೇ ಮನೆಯಲ್ಲಿಯೇ ಚಿಕಿತ್ಸೆಗೆ ಅವಕಾಶ ಮಾಡಿಕೊಡುವ ಕಾರ್ಯಕ್ಕೆ ಗಮನಕೊಡಲಾಗಿದೆ.

ತೃತೀಯ ಯೋಜನೆ ಕಾಲದಲ್ಲಿ ಈ ರೋಗವನ್ನು ವ್ಯಾಪಕ ರೀತಿಯಲ್ಲಿ ಎದುರಿಸುವ ಉದ್ದೇಶವಿದೆ. ನಿಯಂತ್ರಣ ಕೇಂದ್ರಗಳು ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದರ ಜೊತೆಗೆ ಈ ರೋಗಕ್ಕೆ ಗುರಿಯಾಗಿರುವ ಜನರ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಪುನರ್ವ್ಯವಸ್ಥೆಗಾಗಿ ವಿಶೇಷವಾಗಿ ಗಮನ ಕೊಡಲು ಉದ್ದೇಶಿಸಲಾಗಿದೆ. ಇದಕ್ಕಾಗಿಯೇ ಪ್ರತ್ಯೇಕ ಕೇಂದ್ರಗಳು ಸ್ಥಾಪಿತವಾಗಲಿವೆ.

ಕ್ಯಾನ್ಸರ್ ಅಥವಾ ವ್ರಣರೋಗದ ಸಮಸ್ಯೆಯನ್ನೂ ತೀವ್ರವಾಗಿ ಎದುರಿಸಬೇಕಾಗಿದೆ. ಕ್ಯಾನ್ಸರ್ ವಾರ್ಡ್‌ಗಳು ಮತ್ತು ಕೇಂದ್ರಗಳ ಸ್ಥಾಪನೆಗೆ ಅವಶ್ಯಕ ನೆರವನ್ನು ರಾಜ್ಯ ಸರಕಾರಗಳಿಗೆ ನೀಡಲಾಗುತ್ತದೆ.

ವೈದ್ಯರನ್ನು ಸಿದ್ಧಗೊಳಿಸುವ ಒಟ್ಟು ೬೦ ಕಾಲೇಜುಗಳು ಇಂದು ದೇಶದಲ್ಲಿವೆ. ಆದರೆ ಜನಸಂಖ್ಯೆ ದೃಷ್ಟಿಯಿಂದ ನೋಡಿದಾಗ ಅವಶ್ಯಕವೆನಿಸುವಷ್ಟು ಜನ ವೈದ್ಯರು ಒದಗಬೇಕಾದರೆ ಕಾಲೇಜುಗಳ ಸಂಖ್ಯೆ ಹೆಚ್ಚಬೇಕಾಗುತ್ತದೆ ಶಿಕ್ಷಣ ಸೌಲಭ್ಯವಿರುವ ಆಸ್ಪತ್ರೆಗಳ ಸಂಖ್ಯೆ ೧೧೦. ವೈದ್ಯಕೀಯ ಉದ್ಯಮದ ದೃಷ್ಟಿಯಿಂದ ಇವುಗಳ ಸ್ಥಾನ ಬಹು ಮುಖ್ಯವಾದುದು.

ಪ್ರಾಥಮಿಕ ಆರೋಗ್ಯ ಕೇಂದ್ರಗಳು.

ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸುವ ಸಲುವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಯೋಜನೆಯೊಂದಿದೆ. ಈ ಕೇಂದ್ರಗಳ ಸ್ಥಾಪನೆಗೆ ವಿಶೇಷ ರೀತಿಯ ಪ್ರಾಮುಖ್ಯತೆ ನೀಡಲಾಗಿದೆ.

ಈ ಕಾರ್ಯಕ್ಕಾಗಿ ಇಡೀ ದೇಶವನ್ನು ೫೦೦೦ ಬ್ಲಾಕುಗಳಾಗಿ ವಿಭಜಿಸಲಾಗಿದೆ ಒಂದೊಂದು ಬ್ಲಾಕಿನಲ್ಲಿಯೂ ಸುಮಾರು ೬೬,೦೦೦ ಜನವಾಸವಾಗಿದ್ದಾರೆ ಸಾಮುದಾಯಿಕ ಅಭಿವೃದ್ಧಿ ಯೋಜನೆ ಅಂಗವಾಗಿ ಇರುವ ಈ ಒಂದೊಂದು ಬ್ಲಾಕಿನಲ್ಲಿಯೂ ಒಂದೊಂದು ಪ್ರಾಥಮಿಕ ಆರೋಗ್ಯ ಕೇಂದ್ರವು ಸ್ಥಾಪಿತವಾಗಿದೆ ರೋಗ ನಿವಾರಕ ಹಾಗೂ ಚಿಕಿತ್ಸಾರೂಪದ ಸೇವೆಗಳನ್ನು ಈ ಕೇಂದ್ರಗಳು ಒದಗಿಸುತ್ತವೆ.

ಆಸ್ಪತ್ರೆಗಳ ಆಡಳಿತ ವ್ಯವಸ್ಥೆಗೆ ಸಂಬಂಧಪಟ್ಟಂತೆ ಹಲವು ಕಾರ್ಯಯೋಜನೆಗಳು ಜಾರಿಗೆ ಬಂದಿವೆ. ಹೊರಗಿನ ರೋಗಿಗಳ ಚಿಕಿತ್ಸೆ. ವೈದ್ಯಕೀಯ ಚಿಕಿತ್ಸೆಯ ದಾಖಲೆ ಪತ್ರಗಳನ್ನು ಸುರಕ್ಷಿತವಾಗಿಡುವುದು; ಆಹಾರ ವ್ಯವಸ್ಥೆ ಮತ್ತಿತರ ಈ ವಿಚಾರಗಳಿಗೆ ಸಂಬಂಧಪಟ್ಟಂತೆ ಅನೇಕ ಸುಧಾರಣೆಗಳು ಜಾರಿಯಲ್ಲಿವೆ.

ಆರೋಗ್ಯ ಸೇವೆಗಳ ಫಲವಾಗಿ ಮರಣಗಳ ಸಂಖ್ಯಾಪ್ರಮಾಣ ಕಡಿಮೆಯಾಗುವುದರ ಪರಿಣಾಮವಾಗಿ ಉಂಟಾಗಿರುವ ಜನಸಂಖ್ಯೆ ಹೆಚ್ಚಳವು ಒಂದು ದೊಡ್ಡ ಸಮಸ್ಯೆಯೇ ಆಗಿದೆ. ಮರಣಗಳ ಸಂಖ್ಯೆ ಮತ್ತು ಜನನಗಳ ಸಂಖ್ಯೆ ಮಧ್ಯೆ ಒಂದು ಸಮತೂಕ ಏರ್ಪಡದೇ ಹೋದರೆ, ಸಾರ್ವಜನಿಕ ಆರೋಗ್ಯ ಸೇವೆಗಳ ಉದ್ದೇಶವೇ ಕೊನೆಗೆ ವಿಫಲಗೊಳ್ಳುವ ಸಂಭವವಿದೆಯೆಂದೇ ಕುಟುಂಬಯೋಜನೆಗೆ ವಿಶೇಷ ರೀತಿಯ ಮಹತ್ವ ಕೊಡಲಾಗುತ್ತಿದೆ. ಕುಟುಂಬ ಯೋಜನೆ ಜೀವನಕ್ಕನ್ವಯಿಸಿದ ಒಂದು ಸಿದ್ಧಾಂತವಾಗಬೇಕು. ಜನ ಇದನ್ನು ಮಾನ್ಯಮಾಡಬೇಕು.

ಮಹಾರಾಷ್ಟ್ರದ ಮುಖ್ಯ ಮಂತ್ರಿಯಾಗಿ ಪುನರಾಯ್ಕೆ ಹೊಂದಿದ ವೈ. ಬಿ. ಚವನರು.

ಜೀವಾತ್ಮನಿಂದ ಭಿನ್ನವಾದ ಪ್ರಾಣ

(ಆನೇ ಪುಟದಿಂದ)

ತ್ತು ಬಲಗಳ ಕೇಂದ್ರವು ಪ್ರಾಣ. ಈ ಪ್ರಾಣದಿಂದಾಗಿಯೇ ಗತಿಯು ಆಗುತ್ತದೆ ಈ ಗತಿಯು ಭೌತಿಕ ರೂಪದಲ್ಲಿ ಕಂಡು ಬರುತ್ತದೆ. ಪ್ರಾಣವು ಭೌತಿಕ ತತ್ವವಲ್ಲ. ಅದು ವಾಯುವಿನಲ್ಲಿರುವುದಾದರೂ ವಾಯುವು ಪ್ರಾಣದಲ್ಲಿರುವುದಿಲ್ಲ.

ಉಸಿರಾಟದ ಮೂಲಕ ನಾವು ಪ್ರಾಣವನ್ನು ಗ್ರಹಿಸುತ್ತೇವೆ. ಗಾಳಿಯಲ್ಲಿದು ಇಲ್ಲವೆಂದಾದರೆ, ನಾವೆಲ್ಲರೂ ಸತ್ತೇಹೋಗುತಿದ್ದೆವು. ನಮ್ಮ ಶರೀರವು ಅನ್ನ ಜನಕದೊಡನೆ ಇದನ್ನು ತೆಗೆದುಕೊಳುತ್ತದೆ. ಆದರೆ, ಅನ್ನಜನಕದಲ್ಲಿ ಆ ವಸ್ತು ಮಾತ್ರ ಇಲ್ಲವೆಂದರೆ ಆಶ್ಚರ್ಯವಲ್ಲವೆ? 'ಜೈನೆಸಿಸ್' ಎಂಬ ಹೆಸರಿನ ಗ್ರಂಥದ ಲೇಖಕನು ವಾಯುಮಂಡಳದ ಈ ಗಾಳಿ ಮತ್ತು ಪ್ರಾಣವೆಂಬ ಪದಾರ್ಥಗಳ ಅಂತರವನ್ನು ಅರಿತಿದ್ದನು. ಆ ಪುಸ್ತಕದಲ್ಲಿ ಈ ಸಂಬಂಧವಾದ ವಿಚಾರ ಸ್ವಲ್ಪ ಮಟ್ಟಿಗೆ ದೊರೆಯುತ್ತದೆ ಪ್ರಾಣವೆಂಬುದು ಕೇವಲ ವಾಯುಮಂಡಳದ ಗಾಳಿಯಲ್ಲಿ ಮಾತ್ರವಲ್ಲ, ಉಳಿದೆಡೆಯೂ ಇರಬಲ್ಲುದು; ಎಂದರೆ, ವಾಯುವೇ ಇಲ್ಲದ ಕಡೆಗಳಲ್ಲಿ ಕೂಡ ಪ್ರಾಣವು ಇರುವುದು.

ಇದು ಬಹಳ ಸೋಜಿಗವೆನಿಸುವುದಿಲ್ಲವೇ?



ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಆವಶ್ಯಕತೆ ಉಳಿಯಲಿಲ್ಲ

(೨ನೇ ಪುಟದಿಂದ)

ನಾಳೆಯೇ ಕೆಲಸಕ್ಕೆ ಸೇರಿಕೊಳ್ಳಬೇಕಾಗಿದೆ. ಅದಕ್ಕಾಗಿ ತಕ್ಕ ಏರ್ಪಾಡುಮಾಡಬೇಕೆಂದು ಆತ ರಾಮುವಿಗೆ ಹಲವಾರು ಸಲಹೆಗಳನ್ನಿತ್ತ. ಆತನಿಗೂ ಆಫೀಸಿಗೆ ಹೋಗಲು ವೇಳೆಯಾದ್ದರಿಂದ ಉಡುಪು—ತೊಡುಪುಗಳು, ದಾಕ್ಷಿಣ್ಯ—ಕಲಿಗೆಗಳು ಶಿಷ್ಟಾಚಾರಗಳ ವ್ಯವಹಾರ ಮೊದಲಾದುವುಗಳ ಬಗ್ಗೆ ಅವನು ಉಪದೇಶವಿತ್ತ. ಕೆಲಸ ದೊರೆಯುವುದೇ ಕಷ್ಟ; ದೊರೆತುದನ್ನು ಉಳಿಸಿಕೊಳ್ಳುವುದು ಮತ್ತೂ ಪ್ರಯಾಸ ಎಂದು ಮುಂತಾಗಿ ಅಪ್ಪಟ ದೇಶಭಕ್ತರು ಸ್ವಾತಂತ್ರ್ಯ ರಕ್ಷಣೆ ಮುಳ್ಳಿನ ಹಾಸಿಗೆಯೆಂದಂತೆ ಲಗುಬಗೆಯಿಂದ ತಿಳಿಸಿದ ನೌಕರಿ ಸೇರುವ ಹೊಸ ಹುರುಪಿನಲ್ಲಿ ರಾಮು ಎಂದುದಕ್ಕೆಲ್ಲಾ ಸೈಗುಟ್ಟಿ, ನಾಳಿನ ತಯಾರಿಯಲ್ಲಿಯೇ ನಿಮಗ್ನನಾದ.

ಸಂಜೆಯ ಹೊತ್ತು. ದಿನದ ೨೪ ತಾಸುಗಳೂ ಕೆಲಸ ಮಾಡುತ್ತಿರುವ ಬೊಂಬಾಯಿ ನಗರ ಈ ಸಮಯದಲ್ಲಿ ಮತ್ತಷ್ಟು ಗದ್ದಲದಿಂದ ಕೂಡಿರುತ್ತದೆ. ತಾನು ಕೆಲಸಕ್ಕೆ ಹಾಜರಾಗಬೇಕಾದ ಕಂಪೆನಿಯ ಕಾರ್ಯಾಲಯವನ್ನು ರಾಮು ನೋಡಿ ಬಂದ. ಇನ್ನೇನು, ರಾತ್ರೆ ಬೆಳಗಾಗುವುದೇ ತಡ, ಆತನ ಹಣೆಗಂಟಿದ್ದ 'ನಿರುದ್ಯೋಗಿ' ಎಂಬ ನಾಲ್ಕಕ್ಷರದ ಪದವಿಯು ಮೂರಕ್ಷರಗಳಲ್ಲಿ ಪರ್ಯವಸಾನಗೊಳ್ಳುವ ಶುಮುಹೂರ್ತ ಸಮೀಪಗತವಾಗುತ್ತಿದೆ. ಎಂದಿಲ್ಲದ ಹುಮ್ಮನಸ್ಸಿನಿಂದ ರಾಮು ಅಂದು ಆನಂದಲೋಲನಾಗಿದ್ದ. ತನ್ನ ಸ್ನೇಹಿತನೊಬ್ಬನ ಕರುಣೆಯಿಂದ ಇಷ್ಟು ದಿನ ಕಾದುದರ ಪರಿಣಾಮವಾಗಿ ಬೊಂಬಾಯಿಯ ಮಹಾನಗರದಲ್ಲಿ ಉದ್ಯೋಗ ಲಭಿಸುವ ಸದವಕಾಶ ಪ್ರಾಪ್ತವಾಗಿರುವಾಗ ಯಾರಿಗೆ ತಾನೇ ಸಂತೋಷವಾಗದುಳಿಯದು?

ರಾತ್ರೆಯೆಲ್ಲ ಜಾಗರಣೆ ಮಾಡಿ ಬೆಳಗಾಗುವುದನ್ನೇ ನಿರೀಕ್ಷಿಸುತಿದ್ದ ರಾಮುವನ್ನು ಟ್ರಾಮುಗಳ, ರೈಲು ಬಂಡಿಗಳ, ಬಸ್ಸುಗಳ ತೀವ್ರನಾದ ಓಡಾಟದ ಗದ್ದಲವು ಬೆಳಗಾಗುತ್ತಿರುವುದನ್ನು ಸೂಚಿಸಿತು. ಲಗುಬಗೆಯಿಂದ ರಾಮುವೆದ್ದು ಪ್ರಾತರ್ವಿಧಿಗಳನ್ನು ಪೂರೈಸಿ ಪಾದಗಳಿಗೆ ಬೂಟು ಸಿಕ್ಕಿಸುವನಿದ್ದ, ಹೊರಗಡೆ ಬಾಗಿಲಲ್ಲಿ ಕಟಕಟ ಶಬ್ದ ಕೇಳಿಬಂತು. ಈ ಬೆಳಗ್ಗಿನ ಜಾವದಲ್ಲಿ ಬಾಗಿಲು ಬಡಿಯುವವನು ಯಾವನಪ್ಪ ಎಂದು ಅರ್ಧ ತುರುಕಿಸಿದ ಬೂಟನ್ನು ಅಲ್ಲಿಯೇ ಕೊಡಹಿ ಬಾಗಿಲ ಬಳಿ ನಡೆದ. ಟೆಲಿಗ್ರಾಮ್ ಮೆಸೆಂಜರನು ಆತನನ್ನು ಸ್ವಾಗತಿಸಿದ, ರಾಮಕೃಷ್ಣರಾವ್ ಎಂದರೆ ಯಾರು ಎಂದು ವಿಚಾರಿಸಿ, ಆತನೇ ಎಂಬುದನ್ನು ಖಚಿತ ಮಾಡಿಕೊಂಡು, ಒಂದು ಟೆಲಿಗ್ರಾಂ ಕವರನ್ನು ಇತ್ತು, ಸಹಿ ತೆಗೆದುಕೊಂಡು ಸರಿದು ಹೋದನವ. ಟೆಲಿಗ್ರಾಂ ಬಿಚ್ಚಿ ಓದಿದ ರಾಮು ಅಲ್ಲೇ ಕುಕ್ಕರಿಸಿ ಬಿದ್ದುಬಿಟ್ಟ.

ಮೋಹನನೂ ಗಾಬರಿಯಿಂದ ಹೊರಬಂದ. ಗೆಳೆಯನ ಅಸಹಾಯಕ ಪರಿಸ್ಥಿತಿಯನ್ನು ಕಂಡ ಅವನು 'ಏನು, ಏನಾಯಿತು?' ಎಂದು ನಿಕಟ ಸರಿದ. ಉತ್ತರ ರೂಪವಾಗಿ ರಾಮು ಏನನ್ನೂ ಉಸಿರದೆ ಸುರಿಯುತಿದ್ದ ಕಣ್ಣೀರನ್ನು ಒರಸಿ ಬಿಕ್ಕಳಿಸುತ್ತ ಕೈಯ್ಯ ತಾರನ್ನು ಮುಂದೆ ಚಾಚಿದನು.

''Madhava Serious Start Immediatly' (ಮಾಧವನಿಗೆ ತೀವ್ರ ಖಾಯಿಲೆ ಕೂಡಲೆ ಹೊರಡು) ಮಾಧವನೆಂದರೆ, ರಾಮುವಿನ ಭಾವ; ಅಕ್ಕನ ಗಂಡ. ಆತನಿಗೆ ಊರಿಂದ ಬೊಂಬಾಯಿಗೆ ಬರಲು ಧನರೂಪದ ಸಹಾಯವಿತ್ತವರು; ಅಲ್ಲದೇ, ಆ ಮೇಲಾದರೂ ಪ್ರತಿ ತಿಂಗಳೂ ಒಂದಲ್ಪ ಹಣವನ್ನು ಕಳುಹಿಸುತಿದ್ದವರು. ಇಂದು ಆತನಿಗೆ ಉದ್ಯೋಗ ಲಭಿಸುತ್ತಿರುವುದು ನಿಜವೇ ಎಂದಾದರೆ, ಅದು ಅವರ ಅನುಗ್ರಹದಿಂದ. ಅಂತಹ ಭಾವನವರು ಸಕತ್ ಖಾಯಿಲೆಯಲ್ಲಿ ಬಿದ್ದಿರುವಾಗ ಕೂಡಲೇ ಹೊರಟು ಹೋಗುವುದು ನ್ಯಾಯ. ಆದರೆ...ಆದರೆ...ಬಹು ದಿನಗಳ ಪೇಚಾಟದ ನಂತರ ಲಭಿಸುತ್ತಿರುವ ಉದ್ಯೋಗವನ್ನು ಕೈಬಿಟ್ಟು ತೆರಳುವುದೆಂದರೆ... ಭವಿಷ್ಯವನ್ನೇ ಹಾಳು ಮಾಡಿಕೊಂಡಂತೆ.

ರಾಮು ತಡವರಿಸುತ್ತ ಕೇಳಿದ, 'ಈಗ ಏನು ಮಾಡಲಿ?' ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮೋಹನನಾದರೂ ಯಾವ ಸಲಹೆಯನ್ನು ನೀಡಬಲ್ಲ? ತಾನೇ ಆ ಪರಿಸ್ಥಿತಿಯಲ್ಲಿದ್ದರೆ, ಆಗೇನು ಮಾಡುತಿದ್ದ? ಮನೆಯಿಂದ ಬರುವ ತಾರುಗಳೆಲ್ಲವೂ ಸಾಮಾನ್ಯವಾಗಿ ಅದೇ ತೆರದವಿರುತ್ತವೆ. ಪರಊರಲ್ಲಿರುವ ಮಕ್ಕಳಿಗೆ ಊರ ನೆನಪನ್ನು ಮಾಡಿಕೊಡಲು ಹೆತ್ತವರು ಹೂಡುವ ತಂತ್ರವಾದರೂ ಇದೇ ತಾನೆ' ನಾಲ್ಕಾರು ದಿನಗಳ ಹಿಂದೆ ಕ್ಷೇಮವೆಂದು ಪತ್ರ ಬಂದಿರುವಾಗ, ತೀವ್ರವಾಗಿ ಅಷ್ಟೊಂದು ಬಲಿಯುವ ರೋಗವಾದರೂ ಏನಿರಬಹುದು? ಅದರ ಮೇಲೆ ನಿರುದ್ಯೋಗಿಯೊಬ್ಬನು ಊರಿಗೆ ಮರಳಬೇಕಾದರೂ ಹಣ ಬೇಡವೆ? ಟಿ ಎಂ. ಓ. ಬಂದಿದ್ದರೆ, ತೀವ್ರತೆ ನಿಜವಾಗಿ... ಇತ್ತು ಎನ್ನಬಹುದು. ಕೇವಲ ತಾರು ಎಂದರೆ, ಒಂದೆರಡು ದಿನ ತಡವಾದರೂ ಚಿಂ... ಯಿಲ್ಲ, ಅಂತೂ ಒಮ್ಮೆ ಬಂದು ಹೋ... ನಮಗೆಲ್ಲಾ ನಿನ್ನನ್ನು ಕಾಣುವ ಆಸೆ ವಿ... ತಿವಾರಿದ" ಎಂಬೇ ಅರ್ಥ. ಈ ಹಿಂ... ಯೂ ತಂದೆಯವರು, ನಿನ್ನ ನೆನಪಾಗು... ತ್ತಿದೆ, ಕೆಲಸವಿಲ್ಲದಿದ್ದರೂ ಚಿಂತೆಯಿ... ಇದ್ದುದನ್ನೇ ಹಂಚಿಉಂಡು ನಗುವುದು... ದಿರೋಣ"ವೆಂದು ನಾಲ್ಕಾರು ಬಾರಿ ... ದಿದ್ದರು. ಈ ತಾರು ಅದರ ಅಂತಿಮ ... ಕ್ರಮವೆಂದು ಮೋಹನನು ಊಹಿಸಿ ನಿಶ್ಚ... ಕ್ಕೆ ಬಂದುದು ಸ್ವಾಭಾವಿಕ

'ಏನು ಮಾಡಲಿ ಮೋಹನ?" ಎಂ... ಪ್ರಶ್ನೆಗೆ ಉತ್ತರಕೊಡಬೇಕಾಗಿತ್ತು. ಈ... ನೂ ಉತ್ತರ ನೀಡದೆ ಹೋದರೆ, ಅಪ... ಚಿತ ಬೊಂಬಾಯಿಯಲ್ಲಿ ರಾಮುವಿಗೆ ... ರಾರು ಹಿತವರಿದ್ದಾರು? ಎಂತಲೇ, ... ಮು, ಊರಿಗೆ ಮರಳುವುದು ಆಗದ... ದರೆ, ಇದೀಗ ಕೈಗೆ ಬಂದ ತುತ್ತನ್ನು ... ಯೇ ಕೈಬಿಡುವುದು ಸರಿಯಲ್ಲ. ಆದ... ರಿಂದ ಹೇಗೂ ಕೆಲಸಕ್ಕೆ ಹಾಜರಾಗಲು ಹೊರಟಿದ್ದಿ ಅಲ್ಲಿ ಹೋಗಿ, ಇಂದು ಸೇ... ಕಂಪೆನಿಯ ಮೆನೇಜರರು ದಯಾಳ... ರೆಂದು ಕೇಳಿದ್ದೇನೆ. ಸಂಜೆಗೆ ಅವರನ್ನು ಕಂಡು, ತಾರಿನ ಸುದ್ದಿಯನ್ನು ತಿಳಿ... ಮತ್ತೆ ಒಂದು ವಾರದ ರಜೆಯನ್ನು ಕ... ಳ ಇಲ್ಲವೆನ್ನಲಾರರು. ನಾಳೆ ಮ... ನೆಯ ರೈಲಿನಲ್ಲಿ ಹೊರಟರೆ ನಾಳದು ... ರು ತಲಪುತ್ತದೆ."

ಉದ್ಯೋಗಿಯಾಗ ಹೊರಟ ರಾಮುವಿಗೂ ಈ ಸಲಹೆ ಸರಿ ಕಂಡಿತು. ... ಯೇ ಮಾಡುವೆನೆಂದು ಆವನು ಒಗ... ದುಃಖದಿಂದ ನೊಂದ ಮುಖವನ್ನೊಮ್ಮೆ ನಳ್ಳಿನೀರಿನಿಂದ ತೊಳೆದು ಒರಸಿ, ಬೂಟು ಸಿಕ್ಕಿಸಿ ಹೊರನಡೆದ.

ನಿರುದ್ಯೋಗಿಯಾಗಿ ದಿನ ದೂಡುತ್ತಿದ್ದವನಿಗೆ ಉದ್ಯೋಗ ಪ್ರಾಪ್ತವಾದ ದಿನವೆಂದರೆ, ದರಿದ್ರನಿಗೆ ಕೊಪ್ಪರಿಗೆ ಸಿಕ್ಕ ದಿನದಂತೆ. ಮಾಡಲೊಂದು ಉದ್ಯೋಗವಿಲ್ಲದೆ ಹೋದರೆ ತಿಂದ ಅನ್ನವಾದರೂ ಮೈಗೆ ಹಿಡಿಸದು; ಕುಬೇರನಿರಲಿ, ಕಂಗಾಲನೇ ಇರಲಿ, 'ಉದ್ಯೋಗಂ ಪುರುಷಲಕ್ಷಣಂ' ಎಂದು ನಮ್ಮ ಹಿರಿಯರೇ ಅಂದಿದ್ದಾರೆ.

ಮಧ್ಯಮ ವರ್ಗಕ್ಕೆ ಸೇರಿದವರ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳು ತಮ್ಮ ಅಧ್ಯಾಪಿಕೆಯರ ಮಾರ್ಗದರ್ಶನದಲ್ಲಿ ಮನರಂಜನೆಯ ಕಾರ್ಯಗಳಲ್ಲಿ ತೊಡಗಿ ಸಂತೋಷಿಸುತ್ತಿರುವುದನ್ನು ಚಿತ್ರದಲ್ಲಿ ನೋಡಬಹುದು

ಉಡುಪಿ ಡಿ ಮು ಕೋರ್ಟಿನಲ್ಲಿ

O S. 412/1961

ಪರಮೇಶ್ವರ ಶೆಟ್ಟಿ — ವಾದಿ

ಮತ್ತು

ತಿಮ್ಮಪ್ಪ ಶೆಟ್ಟಿ ಕೂಡಾ — ಪ್ರತಿವಾದಿರು

ಇವರೊಳಗೆ

ಸದ್ರಿ ವಾಜ್ಯದ ನಾಲ್ಕನೇ ಪ್ರತಿವಾದಿ— ಉಡುಪಿ ತಾಲೂಕು ಕಾಡೂರು ಗ್ರಾಮದಲ್ಲಿರುವ ಸಿದ್ಧಕ್ಕ ಶೆಡ್ತಿ ಮಗ ರಘುರಾಮ ಶೆಟ್ರಿಗೆ ತಿಳಿಯಪಡಿಸುವುದು.

ಪ್ರತಿವಾದಿರು ತಾರೀಕು 27—8—1960 ರ ವರೆಗೆ ವಾದಿಗೆ ಇರುತ್ತಿದ್ದ ಭೋಗ್ಯಾದಿ ದಕ್ಕಿನ ಆಸ್ತಿಗಳನ್ನು ವಾದಿಯೊಳಗೆ ಚಾಲಗೇಣಿ ಹಕ್ಕಿನಿಂದ ಅನುಭವಿಸಿ ಬರುತ್ತಿದ್ದ ಬಾಬ್ತು ವಿಕಾರಿ ಬಾಬ್ತು ಪೂರಾ ಮತ್ತು, ಶಾರ್ವರಿ ಬಾಬ್ತು ದಾಮಾಶಯ ಗೇಣಿ ಬಾಕಿ, ಬಡ್ಡಿ ವಗೈರೆ ಒಟ್ಟು ರೂಪಾಯಿ 98—12 ವಸೂಲಿ ಕೇಳಿ ವಾದಿಯು ಮಾಡಿದ ವ್ಯಾಜ್ಯವು ತಾರೀಕು 22—3—62ಕ್ಕೆ ತನಿಕೆಗೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪ ಇದ್ದಲ್ಲಿ ಆ ದಿವಸ ಈ ಕೋರ್ಟು ಮುಂದೆ ಬೆಳಗ್ಗೆ 10 ಘಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು

P.N. Krishnamoorthy Rao
Advocate for Plaintiff.
Udipi, S. K. Dated 8—3—62.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್.

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಕ್ಷಣ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

ಅದು ಅನುಭವದಿಂದ ಮಾತು. ನಿರುದ್ಯೋಗಿಯಾಗುವುದೂ ಅಸ್ವಸ್ಥನಾಗುವುದೂ ಸಮಾನ ದುಃಖಗಳು. ಹಾಗಿರುವಾಗ, ಮೋಹನನಿತ್ತ ಸಲಹೆ ರಾಮುವಿಗೂ ಸರಿಕಂಡುದು ಸಹಜ.

ನಿಶ್ಚಿತ ಸಮಯಕ್ಕೆ ಅರ್ಧ ತಾಸು ಬೇಗನೇ ಪ್ರಕಾಶ ಮತ್ತು ಕಂಪೆನಿಯ ಕಾರ್ಯಾಲಯವನ್ನು ಮುಟ್ಟಿದ ರಾಮುವನ್ನು ಜವಾನನೊಬ್ಬನು ಎದುರ್ಗೊಂಡನು. ಅವನಿಂದ ಮೆನೇಜರರ ಬಗ್ಗೆ ಪ್ರಶ್ನಿಸಿ ತಿಳಿದುಕೊಂಡ ರಾಮುವಿಗೆ ತುಸು ಸಮಾಧಾನದ ಉಸಿರು ಬಿಡುವ ತಾಯಿತು. ತನ್ನ ಆಪದ್ಬಾಂಧವರಾದ ಭಾವ, ಮತ್ತೀಗ ಮೆನೇಜರ—ಇವರ ಕಡೆಗೆ ಹರಿದಿದ್ದ ರಾಮುವೀಗ ದ್ವಿಮಾರ್ಗಗಾಮಿಯಾಗಿದ್ದ. ಒಂದನ್ನು ಮಾತ್ರ ಹಿಡಿಯಲಾರದೆ ಎರಡರಲ್ಲೂ ಒಂದೊಂದು ಪಾದವಿಟ್ಟಂತಾಗಿದ್ದ. ಇದೇ ಭಾವನಾ ಸಾಗರದಲ್ಲಿ ಮುಳುಗಿದ್ದ ರಾಮುವಿಗೆ ಕಂಪೆನಿಯ ನೌಕರರು ಒಬ್ಬೊಬ್ಬರಾಗಿ ಬರತೊಡಗಿದುದಾಗಲಿ, ತನ್ನ ಕಡೆಗೆ ದಿಟ್ಟಿಸುತ್ತ ಒಳನಡೆದುದಾಗಲೀ ತಿಳಿಯಲಿಲ್ಲ. ಹೆಚ್ಚೇಕೆ, ಸ್ವಯಂ ಮೆನೇಜರ ಸಾಹೇಬರು ಕಾರಿಂದಿಳಿದು ಒಳಹೋದುದರ ಪರಿವೆಯೂ ಆಗಲಿಲ್ಲ. 'ರಾಮಕೃಷ್ಣ ರಾವ್, ತಮ್ಮನ್ನು ಮೆನೇಜರರು ಕರೆಯುತ್ತಾರೆ, ಎಂದು ಜವಾನ ಹೆಗಲಿಗೆ ಕೈಮುಟ್ಟಿಸಿ ಕರೆದಾಗಲೇ ರಾಮುವಿಗಾದುದು ಎಚ್ಚರ

ಹಾಂಹೂ ಎಂದು ರಾಮು ಒಳಹೋದ. ಕೆಲಸಕ್ಕೆ ಹಾಜರಾಗಿಯೂ ಆಯ್ತು. ಉದ್ಯೋಗಿ ಎನಿಸಿಕೊಂಡುದೂ ಆಯ್ತು. ಆದರೆ, ಅವನ ಮನಸ್ಸು ಮಾತ್ರ ಸಂಜೆ ಘಂಟೆ ಆರು ಹೊಡೆಯುವುದನ್ನೇ ಕನವರಿಸುತಿತ್ತು. ಬಾರಿಸಿಯೂ ಆಯಿತು ನೌಕರರೆಲ್ಲರೂ ತಂತಮ್ಮ ದಾರಿಹಿಡಿದು ಹೊರಟರು. ರಾಮು ಮಾತ್ರ ಮೆನೇಜರರ ಕೋಣೆಯ ಬಾಗಿಲ ಬಳಿ ನಿಂತ. ಒಳಗಡೆ ನಾಲ್ಕಾರು ಮಂದಿ ಕೂತು ಏನನ್ನೋ ಮಾತಾಡಿಕೊಳ್ಳುತ್ತಿದ್ದರು. ಜವಾನನನ್ನು ವಿಚಾರಿಸಿದಾಗ, ಈ ಮಾತುಕತೆ ಪಕ್ಕ ಮುಗಿಯುವಂತಿಲ್ಲವೆಂದೂ ತಿಳಿಯಿತು. ಆದರೆ, ತನ್ನ ಕೆಲಸವಾಗಬೇಕಾದರೆ, ಅವರ ಬಿಡುವನ್ನು ಅರಸಿ ಹೋಗಬೇಕು; ಅದಕ್ಕಾಗಿ ಕಾದುನಿಂತ; ನಿಂತು ಕಾಲು ಬತ್ತಿ ಹೋಗಲು ಬೆಂಚಿಯಲ್ಲಿ ಕುಳಿತ. ಮತ್ತೆ, ಅದೇ ಚಿಂತೆ ಮೆನೇಜರರು ಆಗದು ಎಂದರೆ? ಮರು ಗಳಿಗೆಯಲ್ಲೇ ತನ್ನ ಕಲ್ಪನೆಯು ತಲೆಬುಡವಿಲ್ಲದ್ದೆಂದವನಿಗೆ ತೋರುತಿತ್ತು. ಪ್ರಥಮ ದರ್ಶನದಲ್ಲಿಯೇ ಮೆನೇಜರರು ದೇವತಾ ಮನುಷ್ಯನೆಂದಾತನಿಗೆ ಮನವರಿಕೆಯಾಗಿತ್ತು,

ರಾತ್ರೆ ಒಂಬತ್ತು ಘಂಟೆಯವರೆಗೂ ಅವರ ಮಾತು ಮುಗಿದಂತೆ ಕಾಣಲಿಲ್ಲ. ಆದರೂ, ಹೊರಡುವ ಸಿದ್ಧತೆ ಮಾಡಿದರು. ಮೆನೇಜರರು ಅತಿಥಿಗಳನ್ನು ಹಿಂದಿಟ್ಟುಕೊಂಡು, ಕಾರಿನ ಬಳಿಗೆ ನಡೆಯುತಿದ್ದರು ಅವಕಾಶ ತಪ್ಪಿಸಿಕೊಳ್ಳಬಾರದೆಂದು ರಾಮು ಮುಂದೆ ನಡೆದು, ಅವರನ್ನು ಕಂಡು, 'ಗುಡ್ ನೈಟ್ ಸರ್" ಎಂದ. ಅವರು, 'ಹಲೋ, ರಾಮ ಕಿಶನ್, ಗುಡ್ ನೈಟ್! ಆರ್ ಯು ಗೋಯಿಂಗ್ ಓನ್?" ಎಂದರು. 'ವೇರಿವೆಲ್ ಸರ್ ಎಂಬ ಆತನ ಉತ್ತರಕ್ಕೆ, 'ವೆರಿಗುಡ್', ಎಂದು ಕಾರನ್ನು ಹತ್ತಿಯೇಬಿಟ್ಟರು. ಅತಿಥಿಗಳೂ ಅವರ ಹಿಂದೆ ಕಾರೇರಿದರು. ನಿಮಿಷಾರ್ಧದಲ್ಲಿ ಕಾರು ಸ್ಟಾರ್ಟಾಗಿ ಅದೃಶ್ಯವಾಯಿತು.

ರಾಮು ಭಾರವಾದ ಹೃದಯದೊಡನೆ ತಲೆಯನ್ನೂ ಹೊತ್ತು ರೂಮಿಗೆ ಮರಳಿದ. ಆತನ ಬರವನ್ನೇ ನಿರೀಕ್ಷಿಸುತ್ತ ಮೋಹನ ಕುಳಿತಿದ್ದ. ನಡೆದುದನ್ನು ತಿಳಿದ ಆತ ಸಮಾಧಾನ ಮಾಡಿದ- "ನಿನಗೇನೋ ನಮ್ಮದೇ ಚಿಂತೆ. ಅವರಿಗೆ ಕಾಗೇನು? ತನ್ನ ಸಂಸಾರದ ಯೋಚನೆ ಮಾತ್ರವಲ್ಲದೆ ಇಡಿಯ ಕಂಪೆನಿಯ ಚಿಂತೆಯೂ ಇದೆ. ಆದರ ಪಾಲುದಾರರು, ಗಿರಾಕಿಗಳು, ನೌಕರರು, ಪೂರೈಕೆದಾರರು ಇನ್ನು ಯಾರು ಯಾರೋ ಎಲ್ಲರನ್ನೂ ಸಮತೂಗಿಸಿ ಹೋಗದಿದ್ದರೆ, ಆಗುತ್ತದೆಯೆ? ನಾಳೆ ಬೆಳಗ್ಗೆ ಹೋದವನೇ ವಿಚಾರಿಸು. ಆಗ ಹೆಚ್ಚಾಗಿ ಬಿಡುವಿರುತ್ತದೆ."

ಸ್ಫೂರ್ತಿಗೊಂದು ಸಮಾಧಾನವಾದರೂ ಇದ್ದರೆ ತುಸು ಆಯಬ್ಬ ಅನ್ನಿಸುತ್ತದೆ ಅಂತೆಯೇ ರಾಮುವಿನ ನೊಂದ ಹೃದಯಕ್ಕೆ ಮೋಹನನ ಸಾಂತ್ವನ ತುಸು ಆರಾಮವಿತ್ತಿತು.

ಮರುದಿನ ಮೆನೇಜರರನ್ನು ಕಂಡ ರಾಮುವಿಗೆ ಸಂತೋಷದ ಸ್ವಾಗತ ಸಿಕ್ಕಿತು ನೌಕರರು—ಮತ್ತು ಮೆನೇಜರರ ನಡುವೆ ಸಹೋದರ ಭಾವನೆಯಿರಬೇಕು ಎಂಬ ಅವರ ವಿನಯದ ಮಾತುಗಳು ಆತನನ್ನು ಮುಗ್ಧಗೊಳಿಸಿದುವು. ರಾಮು ಮೆಲ್ಲನೆ ತನಗೆ ಬಂದಿದ್ದ ತಾರಿನ ಕಾಗದವನ್ನು ಮುಂದಿಟ್ಟ; ಅದನ್ನು ನೋಡಿದ ಮೆನೇಜರರೂ ಅವಾಕ್ಕಾದರು. 'ಸರಿ, ನೀವು ಹೋಗಬೇಕಾಗಿದೆ ತಾನೆ? ಯಾವಾಗ ಹೋಗುತ್ತೀರಿ?" ಎಂದರವರು.

"ತಾವು ಹೇಳಿದ ದಿನ..."

"ಹಾಗೆಂದರಾಗುತ್ತದೆಯೆ? ಪ್ರಾಯಃ ನಿನ್ನೆ ನೀವು ಕಾದದ್ದೂ ಇದಕ್ಕೇ ಇರಬೇಕು, ಅಲ್ಲವೆ?"

"ಹೌದು ಸರ್"

"ಆಗಲೇ ಹೇಳಬಹುದಿತ್ತಲ್ಲ? ಇಂದು ಮುಂಜಾನೆಯೇ ಟ್ರೇನು ಹಿಡಿಯಬಹುದಿತ್ತು."

ರಾಮು ಮೌನನಾದ. ಮೆನೇಜರರೇ ಮುಂದುವರಿಸಿದರು ಮಾತನ್ನು. "ಹೂಂ, ನಿಮಗೇನು ಹೆದರಿಕೆಯಾಯಿತೆ? ನಾನಾದರೂ ಮನುಷ್ಯನಲ್ಲವೆ? ಸರಿ, ಈಗ ಹೊರಡುತ್ತೀರಾ? ಅಥವಾ ನಾಳೆ ಮುಂಜಾನೆ......"

"ನಾಳೆ ಮುಂಜಾನೆ ಹೊರಡುತ್ತೇನೆ ಸರ್. ಆದುದರಿಂದ ಒಂದು ವಾರ......"

"ಅದೇಲ್ಲ ಆ ಮೇಲೆ ತಾನೆ? ನಿನ್ನೆ ಬೆಳಗ್ಗೆಯೇ ಹೇಳಬಾರದಿತ್ತೇ? ರಿಪೋರ್ಟಿಂಗ್ ಡೇಟನ್ನೇ ಮುಂದುವರಿಸುತಿದ್ದೆ. ಇರಲಿ, ಆದುದು ಆಯಿತಲ್ಲ!"

ರಾಮುವಿನ ಹೃದಯ ಮೆನೇಜರರ ಕೃಪೆಗೆ ಭಕ್ತಿಯಿಂದ ಅವನತವಾಯಿತು. ಇಂತಹ ಉದಾರಿಯೂ ದಯಾಳುವೂ ಆದ ಮೆನೇಜರರ ಪಾದ ತೊಳೆದು ನೀರು ಕುಡಿಯಬೇಕು ಎಂದುಕೊಂಡ. ದೇಶದಲ್ಲಿ ಕಮ್ಯುನಿಜಂ ಬೆಳೆಯುವುದಂತೆ ಅಧಿಕಾರ ಸ್ಥಾನದಲ್ಲಿರುವವರು ನೌಕರ ವರ್ಗವನ್ನು ಮೆಟ್ಟನಿಲ್ಲಲು ಹವಣಿಸುವುದೊಂದನ್ನುಳಿದರೆ, ಸ್ವಾಮಿ-ಸೇವಕ ಸಂಬಂಧ ಮಧುರವಾಗುವುದಿಲ್ಲವೆ? ಈ ಮೆನೇಜರರಂತಹರೇ ಎಲ್ಲೆಡೆಯೂ ಅಧಿಕಾರಿಗಳಾಗಿದ್ದರೆ, ಕಮ್ಯುನಿಜಂಗೆ ಖಂಡಿತಕ್ಕೂ ಮುಟ್ಟುಗೋಲು—ಎಂದು ಆತನಂದುಕೊಂಡ ಸಂಜೆ ಮರಳಿದವನೇ ಮೋಹನನಿಗೆ ಸಂಗತಿ ತಿಳಿಸಿದಾಗ ಅವನ ಕೊರಳು ಕಟ್ಟಿಬಂದಿತ್ತು,

° ° °

ಮೂರನೆಯ ದಿನ ಪ್ರಕಾಶ ಮತ್ತು ಕಂಪೆನಿಯ ಮೆನೇಜರರು ನೌಕರರ ಹಾಜರಿ ಪುಸ್ತಕವನ್ನು ಎಂದಿನಂತೆ ಪರಿಶೀಲಿಸುತಿದ್ದರು. ರಾಮಕೃಷ್ಣ ರಾವ್‌ರ ಕಲಮನ್ನೂ ಕಂಡರು. ಅವರಿಗೆ ಎಲ್ಲಿಲ್ಲದ ವಿಸ್ಮಯಾಶ್ಚರ್ಯಗಳಾದುವು. ರಾಮುವೂ ಸಹಿಹಾಕಿದ್ದ. ಕೂಡಲೇ ಬೆಲ್ ಮಾಡಿ ಜವಾನನ ಮೂಲಕ ಆತನನ್ನು ಕರೆಸಿಕೊಂಡರು. ರಾಮುವಿನ ಮುಖ ನಿಸ್ತೇಜವಾಗಿತ್ತು.

"ಏನು ಮಿಸ್ಟರ್ ಊರಿಗೆ ಹೋಗುತ್ತೇನೆಂದು ಹೋಗಲಿಲ್ಲ?,

"ಅದರ ಅವಶ್ಯಕತೆ ಉಳಿಯಲಿಲ್ಲ ಸರ್" ರಾಮು ಕಣ್ಣೀರೊರಸುತ್ತ ಹೇಳಿದ.

ಪಕ್ಕದ ಜವಾನ ಒಂದು ತಾರನ್ನೂ ಅದಕ್ಕೆ ಲಗ್ತೀಕರಿಸಿದ ಒಂದು ಪತ್ರವನ್ನೂ ಮೇಜಿನ ಮೇಲಿಂದ ಎತ್ತಿ ಮುಂದಿಟ್ಟ. ಆ ತಾರೇ ಮೆನೇಜರರಿಗೆ ರಾಮುವಿನ ಒಗಟು ನುಡಿಯನ್ನು ಬಿಡಿಸಿ ಹೇಳಿತ್ತು. .

"Madhava Expired"

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 439/61.

ಬಿ. ಕೆ. ಶೇಟ್ — ವಾದಿ,

ಮತ್ತು

ಬಿ. ಎಚ್ ಅಬ್ದುಲ್ ಖಾದರ್ — ಪ್ರತಿವಾದಿ.

ಇವರೊಳಗೆ

ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿಯಲ್ಲಿರುವ ಒರಿಜಿನಲ್ ಖಾದರ್ ಬೀಡಿ ವರ್ಕ್ಸಿನ ಪ್ರೊಪ್ರೈಟರ್ ಬಿ. ಎಚ್. ಅಬ್ದುಲ್ ಖಾದರ್—ಇವರಿಗೆ

ವಾದಿಯು ನಿಮ್ಮ ಮೇಲೆ ಲೇವಾದೇವಿ ಬಾಬ್ತು ಮಾಡಿದ ದಾವೆಯನ್ನು ತಾ. 15—3—1962ಕ್ಕೆ ನಿಮ್ಮ ಹಾಜರಾತಿಗೆ ಇಟ್ಟಿರುತ್ತದೆ. ಆ ದಿನಸ ನೀವು ಸ್ವತಹ ಅಥವಾ ವಕೀಲರ ಮುಖಾಂತರ ಮೇಲಿನ ಕೋರ್ಟಿನಲ್ಲಿ ಬೆಳಗ್ಗೆ 10½ ಗಂಟೆಗ ಹಾಜರಾಗದಿದ್ದಲ್ಲಿ ಸದ್ರಿ ದಾವೆಯನ್ನು ನಿಮ್ಮ ಗೈರು ಹಾಜರಿನಲ್ಲಿ ತೀರ್ಮಾನಿಸಲಾಗುವುದು.

(By order of the Court)

P. R. Shenoy,
Advocate for Plaintiff.

Udipi. 9—3—1962.

ದಿ ವಿಜಯಾ ಬೇಂಕ್ ಲಿಮಿಟೆಡ್ ಕುಂದಾಪುರ

Regd. Office: VIJAYA BANK BUILDING,
Light House Hill Road,
MANGALORE-3. South Kanara.

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಪುರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸ್ಲು ವ ಬಡ್ಡಿಯನ್ನು ಈ ವರೆಗೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ ಕೆಲವರು ವಾಸಸ್ಥಾನದಲ್ಲಿ ಇಲ್ಲವೆಂಬುದಾಗಿ ಕೆಲವು ರಿಜಿಸ್ಟ್ರಿ ನೋಟೀಸುಗಳು ನಮಗೇನೇ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ತಾರೀಕು 29—3—'62 ನೇ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ 31-12-1961ರ ವರೆಗೆ ಬಡ್ಡಿ ಸೇರಿ ಮೊಬಲಗು
57/59	ಶ್ರೀ ಕೆ. ವಿಟ್ಠಲ್ ಸೆಟ್ಟಿ, ತಿಮ್ಮಪ್ಪ ಸೆಟ್ರ ಮಗ ಕೂಕನಾಡ್ ಬೇವಲಕುಂದ ಗ್ರಾಮ ಪೋಸ್ಟ್ ಯಕ್ಲಾಡಿ	152=25
287/59	ಶ್ರೀ ಕೊರಗಯ್ಯ ಸೆಟ್ಟಿ, ಚಿಕ್ಕಮ್ಮ ಸೆಡ್ತಿಯವರ ಮಗ, ಹಲ್ಸಾಡು ದೊಡ್ಡಮನೆ ಪೋಸ್ಟ್ ಕಂಡ್ಲೂರು	87=65
314/59	ಶ್ರೀ ಎ ರಶಿಕರ ಸೆಟ್ಟಿ, ಉದಾರ್ ಮಹಾಬಲ ಸೆಟ್ರ ಮಗ, ಆಜ್ರಾಡಿಗ್ರಾಮ ಪೋಸ್ಟ್ ಸ್ವಾಬರ್ ಕಟ್ಟೆ ದ. ಕ.	143=05
364/59	ಶ್ರೀ ಯಚ್. ಸುಬ್ರಹ್ಮಣ್ಯ ಕೆದಿಲಾಯ ಗಣಪಯ್ಯ ಕೆದಿಲಾಯರ ಮಗ, ಶಿರಿಯಾರ ಗ್ರಾಮ ಪೋಸ್ಟ್ ಸ್ವಾಬರ್‌ಕಟ್ಟೆ ದ ಕ.	117=05
498/59	ಶ್ರೀ ಯಚ್. ಸೋನಪ್ಪ ಸೆಟ್ಟಿ, ಪೀರಣ್ಣ ಸೆಟ್ರ ಮಗ, ಹಾಲಾಡಿಗ್ರಾಮ, ಪೋಸ್ಟ್ ಪೈಕಾಡಿ	321=60
556/59	ಶ್ರೀ ತಿಮ್ಮಪ್ಪ ಸೆಟ್ಟಿ. ಗೋವಿಂದ ಸೆಟ್ರ ಮಗ ಮೂದಯನ ಮನೆ, ಹೆರಿಕುದ್ರು ಆನಗಳ್ಳಿ ಗ್ರಾಮ, ಪೋಸ್ಟ್ ಹೇರಿಕುದ್ರು ದ. ಕ.	89=70

K. BHASKARA HEGDE.
Agent,

Office of the Vijaya Bank Ltd.
Coondapoor, S. K.
Dated 7th March 1962

ನಮ್ಮ ರಾಜ್ಯದ

ವಿಧಾನ ಸಭೆಯ ಬಲಾಬಲಗಳು

ಕರ್ನಾಟಕ ರಾಜ್ಯದಲ್ಲಿ ಆಳುವ ಪಕ್ಷ ಕಾಂಗ್ರೆಸ್ಸು ಮೂರನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಕೆಲವೊಂದು ದೊಡ್ಡ ಆಘಾತವನ್ನು ಉಣ್ಣುವಂತಾಯಿತು. ಈ ಹೊಡೆತಗಳು ಪಕ್ಷದ ಜನರು ತೀವ್ರ ಗಮನವನ್ನು ಅತ್ತ ಹರಿಸಿ, ಇದಕ್ಕೆ ಕಾರಣವೇನೆಂಬುದನ್ನು ತಿಳಿದು, ಅವನ್ನು ದೂರೀಕರಿಸುವ ಬಗ್ಗೆ ಪ್ರಯತ್ನ ನಡೆಸಬೇಕೆಂಬುದನ್ನು ಎತ್ತಿ ತೋರಿಸುತ್ತವೆ. ಚುನಾವಣೆಯಲ್ಲಿ ಆಡಳಿತ ಪಕ್ಷದಂತೆಯೇ ವಿರೋಧ ಪಕ್ಷಗಳೂ ಆಘಾತವನ್ನು ತಿನ್ನಬೇಕಾಗಿ ಬಂದರೂ ಅವು ತಮ್ಮ ಬಲವನ್ನು ಹೆಚ್ಚಿಸಿಕೊಂಡಿವೆಯೆಂಬುದು ತುಸು ಸಮಾಧಾನಕರವಿದೆ. ಕಾಂಗ್ರೆಸ್ಸು ಒಟ್ಟಿನಲ್ಲಿ ನಿಚ್ಚಳ ಬಹುಮತ ಗಳಿಸಿ ಮರಳಿ ಅಧಿಕಾರ ಗ್ರಹಣ ಮಾಡುವಂತಾಗಿದೆ. ಹಾಗಿದ್ದರೂ ಅದು ಉಣ್ಣಬೇಕಾದ ಸೋಲುಗಳು ಕಡೆಗಣಿಸುವಂತಹವಲ್ಲವೆಂಬುದನ್ನು ಅವಶ್ಯ ನೆನಪಿನಲ್ಲಿಟ್ಟುಕೊಳ್ಳಬೇಕು.

ಚುನಾವಣೆಗೆ ಹುರಿಯಾಳುಗಳನ್ನು ಆರಿಸುತ್ತಿರುವಾಗಲೇ ಗುಂಪಿನ ಮನೋವೃತ್ತಿಯು ಇಲ್ಲಿ ಕಂಡು ಬಂದಿತ್ತು. ಕಾಂಗ್ರೆಸ್ ಹೈಕಮಾಂಡು ಅದೇನೋ ಒಂದು ತರದ ತೇಪೆ ಹಚ್ಚಿ ಹುರಿಯಾಳುಗಳ ಆಯ್ಕೆ ನಡೆಸಿತು. ಆಡಳಿತದ ನಾಯಕ ಜತ್ತಿ ಮತ್ತು ಪ್ರಾದೇಶಿಕ ಕಾಂಗ್ರೆಸಿನ ಅಧ್ಯಕ್ಷ ನಿಜಲಿಂಗಪ್ಪನವರ ನಡುವೆ ಎದ್ದ ಬಿರುಕು ಸುಸ್ಪಷ್ಟವಾಗಿ ಎದ್ದು ತೋರುವಂತಿತ್ತು.

ಚುನಾವಣಾ ಫಲಿತಾಂಶವು ಪ್ರಕಟವಾಗುತ್ತ ಬಂದಂತೆ ಆಳುವ ಪಕ್ಷದ ಮಹಾ ಮಹಾ ವ್ಯಕ್ತಿಗಳೇ ಬೇರೆ ಬೇರೆದೆಗಳಲ್ಲಿ ಬಿದ್ದು ಹೋದ ವಾರ್ತೆಗಳು ಬರತೊಡಗಿದುವು. ಜತ್ತಿ ಮಂತ್ರಿಮಂಡಳದ ಆಧಾರಸ್ತಂಭದಂತಿದ್ದ ಟಿ. ಸುಬ್ರಹ್ಮಣ್ಯಂರವರು ಸೋತ ಮಂತ್ರಿಗಳಲ್ಲಿ ಮೊದಲಿಗರೆನಿಸಿದರೆ, ಇವರನ್ನು ಮಾಲಿ ಮರಿಯಪ್ಪ ಗೃಹಮಂತ್ರಿ ಚೆನ್ನಬಸಪ್ಪ, ಡಾ| ಕೆ. ಕೆ. ಹೆಗಡೆ, ಎನ್. ರಾಚಯ್ಯ, ಮೊದಲಾದ ಇತರ ಮಂತ್ರಿಗಳೂ ನಾಲ್ವರು ಉಪಮಂತ್ರಿಗಳೂ ಹಿಂಬಾಲಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ, ಭಾವೀ ಮುಖ್ಯಮಂತ್ರಿಯೆಂದು ಸರ್ವಸಾಧಾರಣವಾಗಿ ತಿಳಿದಿದ್ದ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರೂ ಪರಾಜಿತರಾದುದು ಮಹಾ ದುಃಸ್ಥಿತಿಯೆನ್ನಬೇಕು. ಹೀಗೆ ಜತ್ತಿಯವರೂ ನಿಜಲಿಂಗಪ್ಪನವರೂ ಎದುರಿಸಬೇಕಾದ ಸೋಲು ಏಕಸಮಯವಾಗಿಯೇ ಇದೆಯೆಂಬುದೊಂದು ಈ ಚುನಾವಣೆಗಳ ವೈಶಿಷ್ಟ್ಯ.

ನಿಜಲಿಂಗಪ್ಪನವರು ಸೋತುದರಿಂದ ಅವರ ಗುಂಪು ನಾಯಕನನ್ನು ಕಳೆದುಕೊಂಡಂತಾಯಿತು. ಆದರೂ ನಾಯಕತ್ವದ ಸ್ಪರ್ಧೆಗೆ ನಿಲ್ಲಲು ಪಕ್ಷದ ಅಧ್ಯಕ್ಷರು ಸಿದ್ಧರಿದ್ದರೂ, ಸೋತ ವ್ಯಕ್ತಿಯೊಬ್ಬನು ನಾಯಕ ಸ್ಪರ್ಧೆಗೆ ನಿಲ್ಲುವುದನ್ನು ಕಾಂಗ್ರೆಸ್ ಹೈಕಮಾಂಡು ಒಪ್ಪಲು ಮುಂದೆ ಬಂದಂತೆ ಕಾಣಲಿಲ್ಲ. ಆದುದರಿಂದಲೇ ಕೇಂದ್ರ ಗೃಹ ಮಂತ್ರಿ ಲಾಲಬಹದೂರ ಶಾಸ್ತ್ರಿಯವರ ನೇತೃತ್ವದಲ್ಲಿ ಶ್ರೀ ಎಸ್. ಆರ್. ಕಂಠಿಯವರು ವಿಧಾನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ತೋರಿಕೆಯ ಮಟ್ಟಿಗೆ ಒಮ್ಮತದಿಂದ ಆಯ್ಕೆಗೊಂಡರು. ಶ್ರೀ ಕಂಠಿಯವರಾದರೂ ನಿಜಲಿಂಗಪ್ಪನವರ ಗುಂಪಿಗೆ ಸೇರಿದವರೆಂದು ಪ್ರತೀತಿ. ಇವರು ವಿಧಾನ ಸಭಾಧ್ಯಕ್ಷರಾಗಿದ್ದು ನಿಷ್ಪಕ್ಷಪಾತತನದ ವರ್ತನೆಯನ್ನರಿತಿರುವೆನೆಂದರೂ ಈ ನಿಷ್ಪಕ್ಷಪಾತತನವನ್ನು ಆದೆಷ್ಟರ ಮಟ್ಟಿಗೆ ನಿರೀಕ್ಷಿಸಬಹುದೋ ಈಗಲೇ ಹೇಳುವಂತಿಲ್ಲ. ಆದರೂ ನಾಯಕರಾಗಿ ಆಯ್ಕೆಗೊಂಡ ಇವರು ಯಾವ ಗುಂಪಿಗೂ ಮನೋವೃತ್ತಿಗೂ ಬಗ್ಗದೆ ಸರಕಾರವನ್ನು ನಡೆಸಬೇಕೆಂಬುದು ಜನತೆಯ ಆಶಯ. ಇದನ್ನು ಪೂರೈಸುವ ಭರವಸೆಯನ್ನು ಅವರು ಇತ್ತಿದ್ದಾರೆ; ಇತ್ತ ಭರವಸೆಯನ್ನು ಉಳಿಸಿ ಕೊಡಬೇಕಾದುದು ಮಾತ್ರ ಅವರನ್ನು ಸೇರಿದೆ.

ಆಳುವ ಪಕ್ಷವು ಸೋಲುಂಡಂತೆಯೇ ವಿರೋಧೀ ಪಕ್ಷಗಳೂ ತಮ್ಮ ನಾಯಕರನ್ನು ಕಳೆದುಕೊಂಡಿವೆ. ತನ್ನ ಭಾಷಣಕ್ಕೆ ಹೆಸರಾದ ಮಲ್ಲಾರಾಧ್ಯ, ಉದಾರ ನೀತಿಯಿಂದ ಕೀರ್ತಿ ಗಳಿಸಿದ ಶ್ರೀನಿವಾಸ ಶೆಟ್ಟಿ, ತನ್ನ ಉನ್ನತ ಕಂಠದಿಂದ ಸಭೆಯ ಗಮನವನ್ನು ಸೆಳೆಯುತ್ತಿದ್ದ ಪುಟ್ಟರಾಮಯ್ಯ, ಇವರೆಲ್ಲರೂ ಚುನಾವಣೆಯಲ್ಲಿ ಸೋತಿದ್ದಾರೆ. ನಾಯಕರನ್ನು ಕಳೆದುಕೊಂಡಿರುವುದಾದರೂ ಪ್ರಜಾ ಪಕ್ಷವು ತನ್ನ ಬಲವನ್ನು ಮಾತ್ರ ತುಸು ಎತ್ತರಿಸಲು ಶಕ್ತವಾಗಿದೆ. ವಿಸರ್ಜನೆಗೊಂಡ ವಿಧಾನ ಸಭೆಯ ಏಕಮೇವ ಕಮ್ಯುನಿಸ್ಟ್ ಸದಸ್ಯ ನರಸಿಂಹನ್‌ರವರೂ ಸಭಾಸದನದಲ್ಲಿ ಇನ್ನು ಮುಂದೆ ಇರುವಂತಾಗಲಿಲ್ಲ. ಆದರೂ ಇವರ ಪಕ್ಷವು ಮೂರು ಸ್ಥಾನಗಳನ್ನು ಈ ಸಲ ಸಂಪಾದಿಸಿದೆ. ಹಾಗೆಯೇ ಸ್ವತಂತ್ರ ಪಕ್ಷವೂ ದುರವಸ್ಥೆಗೆ ಗುರಿಯಾಗಿದೆ. ರಾಜ್ಯ ಸ್ವತಂತ್ರ ಪಕ್ಷದ ಅಧ್ಯಕ್ಷ ಜಿನರಾಜ ಹೆಗ್ಡೆ ಪ್ರಧಾನ ಕಾರ್ಯದರ್ಶಿ ವಿ. ಟಿ. ಶ್ರೀನಿವಾಸನ್, ಲೋಬೊ ಪ್ರಭು ಮತ್ತು ಜೆ. ಎಂ. ಇಮಾಮರು ಚುನಾವಣೆಗಳಲ್ಲಿ ಪರಾಜಯವನ್ನಪ್ಪಿದ್ದಾರೆ. ಆದರೂ ಮೊತ್ತಮೊದಲ ಬಾರಿಗೇನೇ ಈ ಪಕ್ಷವು ಒಂಬತ್ತು ಸ್ಥಾನಗಳನ್ನು ಆಕ್ರಮಿಸಿರುವುದು ಆಶ್ಚರ್ಯದ ಸಂಗತಿ.

೬೦ ಸ್ಥಾನಗಳಿಗೆ ಸ್ಪರ್ಧಿಸಿದ ಜನಸಂಘವು ಎರಡನೆಯ ಬಾರಿಗೆ ಪ್ರತಿಯೆಡೆಯಲ್ಲೂ ತೀವ್ರವಾದ ಸೋಲುಂಡಿದೆ. ಸೋಶಿಯಲಿಸ್ಟ್ ಪಕ್ಷವಾದರೂ ಅದರ ಅಧ್ಯಕ್ಷ ಗೋಪಾಲ ಗೌಡರೊಬ್ಬರನ್ನೇ ವಿಧಾನ ಸಭಾ ಸದಸ್ಯರನ್ನಾಗಿ ಪಡೆದಿದೆ. ಮೂರನೆಯ ಸಾರ್ವತ್ರಿಕ ಚುನಾವಣೆಗಳ ಅಂತಿಮ ಪರಿಣಾಮವನ್ನು ಹೇಳುವುದಾದರೆ, ವಿಧಾನ ಸಭೆಯ ಆಡಳಿತ ಪಕ್ಷವು ಹಿಂದಿನ ಬಾರಿಗಿಂತ ೧೨ ಸ್ಥಾನಗಳನ್ನು ಕಳೆದುಕೊಂಡು ೧೩೬ ಸದಸ್ಯರ ಬೆಂಬಲವನ್ನು ಮಾತ್ರ ಗಳಿಸಿದೆ. ಇದರಿಂದಾಗಿ ವಿರೋಧೀ ಪಕ್ಷಗಳ ಬಲವು ಏರಷ್ಟಾಗಿದೆ.

ಆದರೆ, ಒಂದು ಆಶ್ಚರ್ಯಕರ ಸುದ್ಧಿಯೆಂದರೆ, ರಾಜ್ಯದ ೨೬ ಲೋಕ ಸಭಾ ಸ್ಥಾನಗಳಲ್ಲಿ ಕಾಂಗ್ರೆಸ್ಸು ೨೫ನ್ನು ಗಳಿಸಿಕೊಂಡು ಆತ್ಮವೋಘವಿಜಯವನ್ನು ಗಳಿಸಿದೆಯೆಂಬುದು ಇಂತಹ ಉತ್ತಮ ಪರಿಣಾಮವು ಮಹಾರಾಷ್ಟ್ರದಲ್ಲೂ ದೊರೆತಿಲ್ಲವೆಂಬುದು ಗಮನೀಯವಿದೆ.

ರಶ್ಯ—ಅಮೆರಿಕೆಗಳ ಭಿನ್ನ ವಿಚಾರಧಾರೆ

(೧ನೇ ಪುಟದಿಂದ)

ಭಾರತದ ಅಭಿಪ್ರಾಯವಿದೆ. ಹಾಗಾಯಿತೆಂದರೆ, ವಿಶ್ವವು ವಿನಾಶದ ದಾರಿಯಲ್ಲೇ ಮುನ್ನಡೆದಂತೆ ಮತ್ತು ಇದುವರೆಗಿನ ನಾಗರಿಕತೆಯು ಮಣ್ಣುಪಾಲಾದಂತೆ. ಭೋರ್ಗರೆದು ಹರಿಯುವ ನದಿಯ ನೀರನ್ನು ತಡೆದು ನೀರಾವರಿ ಸೌಕರ್ಯವನ್ನು ಒದಗಿಸುವ ಸಂಯೋಜಿತ ಅಣೆಕಟ್ಟಿನಂತಿದೆ ಈ ನಿಶ್ಶಸ್ತ್ರೀಕರಣ ಒಡಂಬಡಿಕೆ. ಅದು ಮುರಿಯಿತೆಂದರೆ, ಕಟ್ಟೆ ಒಡೆದಾಗ ಕಟ್ಟೆಯ ನೀರು ಹುಚ್ಚು ಹೊಳೆಯಾಗಿ ಬೆಳೆಗೆ ಮಾರಿಯಾಗಿ ನೆಲವನ್ನು ಕೊಚ್ಚುವಂತೆ ವಿನಾಶಕಾರಕವಾಗುತ್ತದೆ. ಇದನ್ನು ತಡೆಯುವಲ್ಲಿ ಭಾರತವು ಆಡಲಿರುವ ಪಾತ್ರ ಬಹಳಷ್ಟು ಎತ್ತರವಿದೆ; ಇರಲೇಬೇಕಾದುದು.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ. 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಿಲ್ಲರೆ ನಯಾಪೈಸೆಗಳೆ?
ಹತ್ತು, ನೂರರ ನೋಟುಗಳೆ?
ಯಾವುದೇ ಇರಲಿ—
ವ್ಯವಸ್ಥಿತವಾಗಿ ಉಳಿಸಿ;
ಅಭಿವೃದ್ಧಿಯನು ಗಳಿಸಿ.

ದಿನದ ಇಪ್ಪತ್ತೈದು ನಯಾಪೈಸೆಗಳು
ಏಳು ವರುಷಗಳಲ್ಲಿ
ಏಳುನೂರು ರೂಪಾಯಿಗಳ
ನಿಧಿಯನ್ನು ನಿಮಗೆ
ತಂದೊಪ್ಪಿಸುವ
ಪಿಗ್ಮಿ
ಸಿಂಡಿಕೇಟ್ ಬೇಂಕ್ ಮೊದಲಾಗಿ
ಪ್ರಾರಂಭಿಸಿದ ಮತ್ತೀಗ
ಸರ್ವ ಜನಪ್ರಿಯವಾದ
ಚಿಕ್ಕ ಉಳಿತಾಯ ಯೋಜನೆ

ವರುಷದ ಒಂದು ಸಾವಿರ ರೂಪಾಯಿಗಳು
(ನೀವು ಇನ್ನೂರ ಐವತ್ತರಿಂದಲೂ
ಪ್ರಾರಂಭಿಸಬಹುದು)
ಮೂವತ್ತೈದು ವರುಷಗಳಲ್ಲಿ ನೂರು ಸಾವಿರ
ರೂಪಾಯಿಗಳಿಗಿಂತಲೂ ಹೆಚ್ಚಿಗೆ
ಸಂಪತ್ತನ್ನು ಕೂಡಿಸಿ ಕೊಡುವ
ಇನ್ವೆಸ್ಟರ್ಸ್ ಏಜನ್ಸಿ
ಭಾರತೀಯ ಬೇಂಕಿಂಗ್ ಕ್ಷೇತ್ರದಲ್ಲೇ
ನವೀನವಾಗಿ ಸಿಂಡಿಕೇಟ್ ಬೇಂಕ್
ಕೈಗೊಂಡಿರುವ ಮತ್ತೀಗ ಜನಾನುರಾಗ
ಗಳಿಸುತ್ತಿರುವ ವಿನಿಯೋಗ ವಿಭಾಗ

ನಿಮಗೆ ಬೇಕಾದ ವಿವರಗಳನ್ನೀಯಲು ನಮ್ಮ
ನೂರ ಐವತ್ತೊಂಬತ್ತು ಶಾಖೆಗಳು ಸಿದ್ಧವಾಗಿವೆ.
ಅಥವಾ ನೀವು ನೇರವಾಗಿ ನಮ್ಮ ಪ್ರಧಾನ ಕಾರ್ಯಾಲಯಕ್ಕೆ ಬರೆಯಬಹುದು.
ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಜಿಸ್ಟರ್ಡ್ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ.
ಸ್ಥಾಪನೆ: ೧೯೨೫

Edited Printed & Published by K. H. Shetty, at the Navayuga Press, Udipi, S. India.

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೨೬ | ಉಡುಪಿ 22—3—1962 ಗುರುವಾರ | Vol. 41 No. 26

ರಾಜ್ಯ ಕಾಂಗ್ರೆಸಿನಲ್ಲಿ ಗುಂಪುಗಾರಿಕೆಯ ಮೇಲಾಟ



ಲೋಕ ಸಭೆಗೆ ಮದ್ರಾಸು ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಗೊಂಡ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು.

ವಿಧಾನ ಸಭೆಯಲ್ಲಿ ನಿಚ್ಚಳ ಬಹುಮತಗಳಿಸಿದ್ದರೂ ಮಂತ್ರಿ ಮಂಡಳ ರಚನೆಯ ಸಂಬಂಧದಲ್ಲಿ ಕಾಂಗ್ರೆಸ್ಸು ವಿಶೇಷ ತಲೆ ಕೆಡಿಸಿಕೊಳ್ಳಬೇಕಾಗಿ ಬಂದ ರಾಜ್ಯಗಳಲ್ಲಿ ನಮ್ಮ ಕರ್ನಾಟಕ ರಾಜ್ಯವೂ ಒಂದು. ಒಂದು ದೃಷ್ಟಿಯಿಂದ ಹೇಳುವುದಾದರೆ, ಇಲ್ಲಿನ ಸಮಸ್ಯೆ ಉಳಿದೆಡೆಗಳಲ್ಲಿಯದಕ್ಕಿಂತ ಬಹಳಷ್ಟು ಗಡುಚಾಗಿಯೇ ಇತ್ತು. ಕಳೆದ ಹತ್ತು ವರ್ಷಗಳಲ್ಲಿ ಈ ರಾಜ್ಯದ ಮಂತ್ರಿ ಮಂಡಳಿಯಲ್ಲಿ ಬಹಳಷ್ಟು ಪರಿವರ್ತನೆ ನಡೆಯಿತು. ಕೆಂಗಲ್ ಹನುಮಂತಯ್ಯನವರು ಉರುಳಿ ಕಡಿದಾಳ ಮಂಜಪ್ಪನವರು ಹಳೆಯ ಮೈಸೂರಿನ ಮೂರು ತಿಂಗಳ ಮುಖ್ಯ ಮಂತ್ರಿಯಾಗಿದ್ದರು, ಮತ್ತೆ ಕರ್ನಾಟಕವು ರಚನೆಗೊಂಡಾಗ ನಿಜಲಿಂಗಪ್ಪನವರು ಆಸ್ಥಾನಕ್ಕೇರಿ, ೧೯೫೭ರ ಚುನಾವಣಾನಂತರ; ಕೆಲಸಮಯದನಂತರ ಬಿ.ಡಿ ಜತ್ತಿಯವರು ಅದರಲ್ಲಿ ವಿರಾಜಮಾನರಾದರು, ಎಂದರೆ, ವಿಧಾನ ಸಭೆಯ ನಾಯಕತ್ವವು ಉಳಿದ ರಾಜ್ಯಗಳಲ್ಲಿ ಐದು ವರ್ಷಗಳ ಮಟ್ಟಿಗಾದರೂ ಸುಧೃಢವಿರುವುದೆಂಬ ಭರವಸೆಯಿದ್ದರೂ ಇಲ್ಲಿ ಅದು ಸದಾ ಕಾಲವೂ ಒಂದೂವರೆ ಕಾಲಿನ ಆಧಾರದಲ್ಲಿಯೇ ನಿಂತಿರುವುದೆಂಬುದು ಜಗಜ್ಜನಿತ ವಿಷಯ. ಇದರ ಪರಿಣಾಮವೇನಾಯಿತೆಂಬುದನ್ನು ೧೦ ಜನ ಮಂತ್ರಿ ಉಪಮಂತ್ರಿಗಳು ಸೋತ ಈ ಚುನಾವಣೆಯಲ್ಲಿ ವ್ಯಕ್ತವಾಗಿದೆ.

ಇದರಿಂದ ಕಾಂಗ್ರೆಸ್ಸು ಹೈಕಮಾಂಡು ಈ ಬಾರಿ ತುಸು ಎಚ್ಚರಿಕೆ ವಹಿಸಿದಂತೆ ತೋರುತ್ತದೆ. ಕಾಂಗ್ರೆಸ್ಸಿನ ನಿಜಲಿಂಗಪ್ಪ ಜತ್ತಿಯವರ ಗುಂಪುಗಳು ಪರಸ್ಪರ ಕಚ್ಚಾಡಿಕೊಳ್ಳುತ್ತಿರುವುದು ಮತ್ತಿದರಿಂದ ಆಡಳಿತೆಯ ಮೇಲೆ ದುಷ್ಪ್ರಭಾವ ಬೀರುವುದು ತತ್ಪರಿಣಾಮವಾಗಿ ಕಾಂಗ್ರೆಸ್ಸು ಜನಾದರಣೆಗೆ ಎರವಾಗುತ್ತ ಹೋಗುತ್ತಿರುವುದು ನಿಷ್ಠಾವಂತ ಕಾಂಗ್ರೆಸಿಗನಾರಿಗೂ ಸಮ್ಮತವಿರುವುದಿಲ್ಲ. ಈ ಕಾರಣದಿಂದಲೇ ಜತ್ತಿ—ನಿಜಲಿಂಗಪ್ಪನವರಿಗೆ ಹೈಕಮಾಂಡು ಈ ಸಂದರ್ಭದಲ್ಲಿ ಸ್ಪಷ್ಟವಾದ ಮಾತುಗಳಿಂದ ಪದೇ ಪದೇ ನಾಯಕತ್ವದಲ್ಲಿ ಬದಲಾವಣೆ ಮಾಡಬಾರದೆಂದೂ ಮೊದಲನೆ ಸಾರಿಯೇ ಆರಿಸಿಕೊಳ್ಳುವಾಗ ಎಚ್ಚರಿಕೆಯಿಂದಿರಬೇಕೆಂದೂ ಸೂಚಿಸಿದೆಯೆಂದು ತಿಳಿಯುತ್ತದೆ. ಇದು ಸ್ವಾಗತಾರ್ಹ ಮತ್ತು ಅಪೇಕ್ಷಣೀಯವಾದ ಸೂಚನೆ. ಇದನ್ನು ರಾಜ್ಯದ ವಿಧಾನ ಸಭಾ ಸದಸ್ಯರು ಸ್ವೀಕರಿಸಿರುವರೆಂದು ನಂಬುತ್ತೇವೆ.

ಎರಡನೆಯದಾಗಿ, ಚುನಾವಣೆಯಲ್ಲಿ ಸೋತ ವ್ಯಕ್ತಿಯೊಬ್ಬನನ್ನು ನಾಯಕತ್ವಕ್ಕೆ ಆರಿಸುವ ಬಗ್ಗೆ ಹೈಕಮಾಂಡು ತನ್ನ ನಿರ್ದಿಷ್ಟ ನಿಲುವೆಯಿಂದ ವಿರೋಧಾಭಿಪ್ರಾಯವನ್ನು ಪ್ರಕಟಿಸಿರುವುದು ರಾಜ್ಯದ ಮೇಲೆ ತೋರಿಸಿದ ಉಪಕಾರ ಮತ್ತು ಮುಂದಿನವರಿಗೊಂದು ಆದರ್ಶ. ಸರ್ವಸಾಮಾನ್ಯವಾಗಿ, ವಿಧಾನ ಸಭಾ ಸದಸ್ಯನಲ್ಲದವನನ್ನು ನಾಯಕಪಟ್ಟಕ್ಕೇರಿಸುವುದು ಅನಪೇಕ್ಷಣೀಯವಾದರೂ, ಅನಿವಾರ್ಯ ಪ್ರಸಂಗಗಳಲ್ಲಿ ಇದನ್ನು ಮಾಡಬೇಕಾಗಿಯೂ ಬರಬಹುದು; ಆದರೂ ಅಂತಹ ನಿದರ್ಶನಗಳು ತೀರ ಅಪರೂಪ. ಹಿಂದೆ, ಮದ್ರಾಸು, ಒಡಿಸ್ಸ, ಮಧ್ಯ ಪ್ರದೇಶಗಳಲ್ಲಿ ಹೀಗೆ ಮಾಡಲಾಗಿತ್ತು; ಮತ್ತೆ ಆರು ತಿಂಗಳುಗಳೊಳಗೆ ಅವರು ಚುನಾವಣೆಗೆ ನಿಂತು ಗೆದ್ದು ಬಂದರು. ಆದರೆ, ಸಾರ್ವತ್ರಿಕ ಚುನಾವಣೆಗಳಲ್ಲಿ ಜನತೆಯಿಂದ ತಿರಸ್ಕರಿಸಲ್ಪಟ್ಟವನೊಬ್ಬನನ್ನು ಹೀಗೆ ಹಿಂದಿನ ಬಾಗಿಲಿಂದ ತರುವುದು ಸರ್ವಥಾ ನ್ಯಾಯವೆನ್ನ ಬರುವುದಿಲ್ಲ. ಈ ದಿಸೆಯಲ್ಲಿ ಈ ಬಾರಿ ತಳೆದ ಧೋರಣೆಯು ಯಥಾರ್ಥವಾದುದು. ಎಂ. ಪಿ.ಯಾಗಿ ಆಯ್ಕೆಗೊಂಡಿದ್ದ ಎಂ. ಪಿ. ಕೃಷ್ಣಪ್ಪನವರಿಗೆ ಮಂತ್ರಿಯಾಗಲು ಅನುಮತಿಯೊಯಲಾಯಿತಾದರೂ ನಾಯಕತ್ವದ ಪಟ್ಟಿಗೆ ಹೈಕಮಾಂಡು ತನ್ನ ಒಪ್ಪಿಗೆ ನೀಡಲಿಲ್ಲವೆಂಬಾಗ ಅದರ ನಿಲುವೆಯು ದೃಢವಾಗತ್ತ ಬಂದಂತೆ ಗೋಚರವಾಗುತ್ತದೆ. ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡನ್ನು ಅವಶ್ಯ ಅಭಿನಂದಿಸಬೇಕಾಗಿದೆ.

ಅಂತೂ ವಿಧಾನ ಸಭಾಧ್ಯಕ್ಷರಾಗಿದ್ದ ಶ್ರೀ ಎಸ್. ಆರ್. ಕಂಠಿಯವರು ಇದರ ನಾಯಕತ್ವವನ್ನು ಸ್ವೀಕರಿಸಿದರು. ಆಯ್ಕೆಯಾದರೂ ಕೊನೆಯ ಮಟ್ಟಿಗೆ 'ಒಮ್ಮತ'ದಿಂದಲೇ ನಡೆಯಿತು. ಮುಂದೆ ಮಂತ್ರಿಗಳ ಆಯ್ಕೆಯ ಪ್ರಶ್ನೆ ಹೆಮ್ಮರವಾಗಿ ನಿಂತಿತು; ಇಂದಿಗೂ ಅದು ನಿಂತೇ ಇದೆ. ಕಾಂಗ್ರೆಸ್ ಪಕ್ಷದೊಳಗೆ ಆದಷ್ಟು ಹೊಂದಾಣಿಕೆಯನ್ನು ಸ್ಥಾಪಿಸುವ ಅಭಿಲಾಷೆಯಿಂದ ಹೈಕಮಾಂಡು ವಿಶಾಲ ತಳಹದಿಯಲ್ಲಿ ಮಂತ್ರಿ ಮಂಡಳವನ್ನು ನಿರ್ಮಿಸುವಂತೆ ಸಲಹೆಯಿತ್ತಿತು. ಅದರಂತೆ ೧೪ ಮಂತ್ರಿ ಮತ್ತು ೧೦ ಉಪಮಂತ್ರಿಗಳಿರುವ ಸಚಿವ ಸಂಪುಟವು ನಮ್ಮ ರಾಜ್ಯದಲ್ಲಿ ರೂಪುಗೊಳ್ಳಬೇಕಿತ್ತು. ಆದರೆ, ಇಲ್ಲಿಯ ಗುಂಪಿನ ರಾಜಕಾರಣದ ಗುಂಪುಗಾರಿಕೆಯಿಂದಾಗಿ ಅದಿನ್ನೂ ಸಫಲವಾಗಿಲ್ಲ. ನಿಜಲಿಂಗಪ್ಪನವರ ಗುಂಪು ಜತ್ತಿಯವರನ್ನು ಬಲವಾಗಿ ದ್ವೇಷಿಸುತ್ತಿರುವುದೇ ಇದಕ್ಕೆ ಕಾರಣವೆಂದು ವ್ಯಕ್ತವಾಗಿದೆ. ೧೪ ಮಂತ್ರಿಸ್ಥಾನದ ೧೦ನ್ನೂ ೧೦ ಉಪಮಂತ್ರಿ ಸ್ಥಾನಗಳಲ್ಲಿ ಎಲ್ಲನ್ನೂ ತಾವು ಇಟ್ಟುಕೊಂಡು ಉಳಿದುವನ್ನು ಜತ್ತಿಯವರಿಗೆ ಕೊಡಬೇಕೆಂಬ ಅಭಿಪ್ರಾಯ ಈ ಗುಂಪಿನದು. ಅದೂ ಅಲ್ಲದೆ ಸಂಧಾನದ ಮಾತುಕತೆ ನಡೆಸಲು ಇನ್ನೂ ಪರಿಸ್ಥಿತಿ ತಿಳಿಯಾಗಿಲ್ಲವೆಂದು ಈ ಗುಂಪು ಹೇಳುತ್ತದೆ! ಆದರೆ, ಸುದೈವದಿಂದ, ಶ್ರೀ ಬಿ. ವೈಕುಂಠ ಬಾಳಿಗಾ ಅವರು ವಿಧಾನ ಸಭಾಧ್ಯಕ್ಷರಾಗಿಯೂ ಶ್ರೀ ಎ. ಆರ್. ಪಂಚಗಾವಿಯವರು ಉಪಾಧ್ಯಕ್ಷರಾಗಿಯೂ ಒಮ್ಮತದಿಂದ ಆಯ್ಕೆಯಾದುದು ಕುತೂಹಲಕರವಿದೆ. ಇವರಲ್ಲಿ ಮೊದಲನೆಯವರು ನಿಜಲಿಂಗಪ್ಪನ ಕಡೆಯವರೆಂದೂ ಎರಡನೆಯವರು ಜತ್ತಿ ಗುಂಪಿನವರೆಂದೂ ಪ್ರತೀತಿಯಿದೆ.

ಜತ್ತಿಯವರು ತಮ್ಮ ಗುಂಪಿನಲ್ಲಿ ೫೦ ಜನ ಸದಸ್ಯರಿದ್ದಾರೆಂದು ಹೇಳುತಿದ್ದಾರೆ. ವಿಧಾನ ಸಭೆಯ ೧೩೮ ಕಾಂಗ್ರೆಸ್ ಸ್ಥಾನಗಳಿಗೆ ಇಂದಿರುವ ಪ್ರಮಾಣದಂತೆ ಕಡಿಮೆ ಪಕ್ಷ ೫ ಮಂತ್ರಿ ಮತ್ತು ೩ ಉಪಮಂತ್ರಿ ಸ್ಥಾನಗಳನ್ನು ಅವರು ಬೇಡಿದರೆ ಅದು ಗುಂಪಿನ ರಾಜಕಾರಣಕ್ಕೆ ವಿರೋಧವೆನಿಸದು. ಆದರೆ, ಇಲ್ಲಿ ಬರುವ ತೊಂದರೆಗಳು ಎರಡು. ಮೊದಲನೆಯದಾಗಿ, ಜತ್ತಿಯವರ ಗುಂಪಿಗೆ ಇಷ್ಟು ಸಂಖ್ಯೆಯಲ್ಲಿ ಪ್ರಾತಿನಿಧ್ಯ ನೀಡಲು ಇನ್ನೊಂದು ಗುಂಪಿನವರು ಸಿದ್ಧರಿಲ್ಲ. ಮತ್ತು ಎರಡನೆಯದಾಗಿ, ಜತ್ತಿಯವರು ಚುನಾವಣೆಯಲ್ಲಿ ಗೆದ್ದ ತನ್ನ ಹಿಂದಿನ ಸಹೋದ್ಯೋಗಿಗಳೆಲ್ಲರನ್ನೂ ಸಚಿವರಾಗಿ ಸೇರಿಸಬೇಕೆಂದು ವಾದಿಸುತ್ತಿರಬಹುದು. ಇದಕ್ಕೆ ಕಾರಣವಾದರೂ ಇಲ್ಲದಿಲ್ಲ, ಕಳೆದ ವರ್ಷ ಈ ಎರಡು ಗುಂಪುಗಳಲ್ಲಿ ತೀವ್ರ ಹೋರಾಟ ನಡೆದಾಗ, ತಮ್ಮ ಸಹೋದ್ಯೋಗಿಗಳಲ್ಲಿ ಯಾರೊಬ್ಬನನ್ನಾದರೂ ಬಿಟ್ಟು ಬಿಡಲು ತಾನು ಸಿದ್ಧನಿಲ್ಲವೆಂದೂ ಬೇಕಾದರೆ, ಸಂಪುಟವನ್ನು ವಿಸ್ತರಿಸಬಹುದೆಂದೂ ಹೇಳಿದ್ದನ್ನು ನೆನಪಿಸಿಕೊಳ್ಳಬೇಕು. ಇಂತಹ ಮಾಜಿ ಮಂತ್ರಿಗಳ ಸಂಖ್ಯೆಯು ಕಡಿಮೆಯಿರುವುದಾದರೂ ಅವರೆಲ್ಲರನ್ನೂ ಹೊಸ ಮಂತ್ರಿ ಮಂಡಳದಲ್ಲಿ ಸೇರಿಸಲು ನಿಜಲಿಂಗಪ್ಪ ಗುಂಪಿನವರು ಒಪ್ಪಲಾರರು; ಒಪ್ಪುವುದು ಸಾಧ್ಯವೂ ಇಲ್ಲ. ಇದರಿಂದಾಗಿ ಎಂದೋ ಬಗೆಹರಿಯಬೇಕಾಗಿದ್ದ ಮತ್ತು ಬಗೆಹರಿಯಬಹುದಾಗಿದ್ದ ಈ ಪ್ರಶ್ನೆ ಇನ್ನೂ ಹಾಗೆಯೇ ಉಳಿದಿದೆ ಮಾತ್ರವಲ್ಲ, ಇನ್ನೂ ಬಹುಕಾಲ ಹೀಗೆಯೇ ಉಳಿಯಬಹುದು.

ನಿರುಪಾಯರಾದ ಮುಖ್ಯ ಮಂತ್ರಿ ಕಂಠಿಯವರು ತಮ್ಮ ಮಂತ್ರಿ ಮಂಡಳಿಯ ರಚನೆಯನ್ನು ಅರ್ಧದಲ್ಲಿಯೇ ನಿಲ್ಲಿಸಿ ಒಟ್ಟು ೧೧ ಹೆಸರುಗಳನ್ನು ಬಹಿರಂಗಪಡಿಸಿದರು. ಮಂತ್ರಿಗಳೆಲ್ಲರೂ ಸಂಪೂರ್ಣವಾಗಿ ನಿಜಲಿಂಗಪ್ಪನವರ ಗುಂಪಿಗೆ ಸೇರಿದವರೆಂಬುದೂ ಎಲ್ಲರಿಗೂ ತಿಳಿದಿರುವ ರಹಸ್ಯ. ಶ್ರೀ ಕಂಠಿಯವರು ತಾನು ನಾಯಕನಾಗಿ ಆಯ್ಕೆಗೊಂಡಾಗಲೇ ಇ

(ಆನೇ ಪುಟ ನೋಡಿರಿ)

ಸತ್ತರೆ ಸ್ವರ್ಗ.... ಬದುಕಿದರೆ....?

ಶ್ರೀಮತಿ ಯಶೋದಾ ಯನ್. ಜೆನ್ನಿ

ಮಗು ಒಂದೇ ಸವನೆ ಕಿರಿಚುತಿತ್ತು. ತಾಯಿ ಯಾವುದೋ ಹಾಡನ್ನು ಗುಣು ಗುಣಿಸುತ್ತಾ ತೂಗುತ್ತಿದ್ದಳು. ಆದರೆ ಅಳುವ ಆ ಮಗುವಿಗೆ ತಾಯಿಯ ಸಂಗೀತದ ಸವಿಯೂ ಹಿಡಿಸಲಿಲ್ಲ. ತೂಗಿ, ತೂಗಿ ಸೋತ ಅವಳ ಮೇಲೂ ದಯೆಯಿರಲಿಲ್ಲ. "ಥೂ....ಶನಿ....ನೀನೊಂದೇಕೆ ಬದುಕಿ ಬಿಟ್ಟಿಯೋ ಅವರೊಂದಿಗೇ ಸಾಯಬಾರದಾಗಿತ್ತೇ...?" ಎಂದು ಗೊಣಗುತ್ತಾ ಮಗುವನ್ನೆತ್ತಿಕೊಂಡು ಸಿಟ್ಟಿನಿಂದ ಗೋಡೆಗೊರಗಿ ಕುಳಿತಳವಳು. ಮಗುವಿಗೆ ಆವಳಿಗಿಂತಲೂ ಹೆಚ್ಚಿನ ಸಿಟ್ಟು ಬಂತೇನೋ ಅದು ಇನ್ನೂ ಗಟ್ಟಿಯಾಗಿ ಅಳಲು ಪ್ರಾರಂಭಿಸಿತು. ಅಳುವನ್ನು ನಿಲ್ಲಿಸಲು ಕೇಳದ ಆ ಮಗುವನ್ನು ಸಮಾಧಾನಪಡಿಸುವುದೇ ವ್ಯರ್ಥವೆಂದೋ ಅಥವಾ ಅಸಾಧ್ಯವೆಂದೋ ಆಕೆ ಮೌನವಾಗಿ ಕುಳಿತೇ ಇದ್ದಳು ಕೈಯಲ್ಲಿದ್ದ ಮಗು ಕಾಲು ಬಡಿದು ಕಿರಿಚುತಿತ್ತು.

"ಅಂತವರಿಗೆ ಮಕ್ಕಳ ಆಸೆ ಎನಿದೆಯಮ್ಮಾ? ಮಕ್ಕಳು ಅವರಿಗೊಂದು ಕಂಟಕ ಅಷ್ಟೆ. ಅವರ ಸುಖಕ್ಕೆ ಅಡ್ಡಿ. ದೇವರು ಅಂತವರಿಗೆ ಯಾಕೆ ಮಕ್ಕಳನ್ನು ಕೊಡ್ತಾನೆಯೋ, ರಾತ್ರಿ ಇಡೀ ಮಗು ಅಳುತ್ತಿದ್ದರೆ ಆಕೆ ಮಲಗಿ ಗೊರಕೆ ಹೊಡೆಯುತಿರ್ತಾಳೆ."

"ಗೊರಕೆಯೇ....ಅಲ್ಲ....ಬೇರೆ ಯಾರಾದರೂ ಬಂದಿರ್ತಾರೆಯೋ...."

"ಅದೂ ಹೌದೂನ್ನಿ. ಇಂತಹ ಶನಿ ಸಂತಾನ ಹೆತ್ತುಕತ್ತು ಹಿಸುಕೋಕೆದಾರಿ ಬೇಕಲ್ಲ...."

ಕರುಣಾ ಹೃದಯಿಗಳೆಂದೆನಿಸಿದವರು ತನ್ನ ಬಗ್ಗೆ ಆಡುತ್ತಿದ್ದ ಮಾತುಗಳನ್ನು ಆಕೆಯೂ ಹಲವು ಬಾರಿ ಕೇಳಿದ್ದಳು. ಅಂತಹ ಕರ್ಕಶ ಮಾತುಗಳನ್ನು ಕೇಳಿಯೂ ಆಕೆ ಇನ್ನೂ ಬದುಕಿಯೇ ಇದ್ದಳು

"ಆಯ್ಯೋ....ಆಕೆ ಎಂತಹ ರಕ್ಷಸಿ ಗೊತ್ತೇ? ದೇವರಂತಹ ಆತನನ್ನು ಕೊಂದು ಆ ಮುದುಕಿ ತಾಯ ಹೊಟ್ಟೆಯನ್ನು ಉರಿಸಿದ ಆಕೆಗೆ ಇನ್ನು ಆ ಮಗುವಿನ ಮೇಲೆ ಯಾವ ಆಸೆ ಇದ್ದೀತು ಹೇಳಿ?" "ಇದೂ ಹೋಗುವಂತೆ ಪ್ರಯತ್ನ ಮಾಡಿದ್ಲಂತೆ. ಆದರೆ ಉಳಿದು ಬಿಡ್ತು, ಪಾಪ!"

ಮಗುವಿನ ಅಳುವಿನ ನಡುವೆಯೂ ಕೇಳಿಸಿಕೊಂಡ ಮಾತುಗಳೆಷ್ಟೋ! ನೂರಾರು! ಸಾವಿರಾರು!! ಆದರೆ ಇಲ್ಲಿಗೇ ಮುಗಿದೀತೇ ಅವಳ ಕತೆ? ಕೇವಲ ಇನ್ನೂ ಮೂರು ತಿಂಗಳ ಕೂಸಾಗಿರುವ ಕರುಳ ಬಳ್ಳಿಯನ್ನು ಉಳಿಸಿ ಬೆಳಸುವ ವರೆಗೆ... ಅಲ್ಲ ತಾನು ಕೊನೆಯುಸಿರೆಳೆಯುವ ವರೆಗೂ...ಮುಗಿದೀತೇ? ಇಲ್ಲ...ಅದಕ್ಕೆ ಕೊನೆಯೆಂಬುದೇ ಇಲ್ಲ. ಅವಳ ಕೊನೆಗಾಲದ ನಂತರವೂ ಉಳಿಯುವಂತಹ ಕತೆ...

ಮಗು ಅತ್ತು ಅತ್ತು ಸೋತು ಬಿಕ್ಕುತಿತ್ತು. ಆಕೆ ಒಮ್ಮೆಯೇ ಬೆಚ್ಚಿ ಹಾಲು ಕುಡಿಸುವ ಯತ್ನಮಾಡಿದಳು. ಕೂಗಿ ಕೂಗಿ ಗಂಟಲೊಣಗಿದ್ದರಿಂದಲೋ ಏನೋ ....ಮೊದಲು ತಾಯ ಹಾಲನ್ನೂ ನಿರಾಕರಿಸಿದ ಮಗು ಈಗ ಬಿಕ್ಕುತ್ತಾ ಕುಡಿಯತೊಡಗಿತು.

ಕೆಲವೇ ನಿಮಿಷಗಳಲ್ಲಿ ಅತ್ತು ಸೋತ ಮಗು ತಾಯ ಕೈಯಲ್ಲೇ ನಿದ್ರಿಸಿತು. ಆಕೆ ಮೆಲ್ಲನೆ ಅದನ್ನೆತ್ತಿ ತೊಟ್ಟಿಲಲ್ಲಿಟ್ಟಳು. ಒಂದು ನಿಮಿಷ ಮಲಗಿದ ಆ ಮುಗ್ಧ ಮಗುವಿನ ಮೊಗವನ್ನು ನೋಡುತ್ತಾ ನಿಂತಳು. ಆದರೆ ಮರುಕ್ಷಣದಲ್ಲೇ ಆ ಮುಗ್ಧತೆಯ ಹಿಂದೆಯೇ ಮತ್ತೊಂದು ಮೊಗದ ಕರಿನೆರಳು ಕಾಣಿಸಿದಂತಾಯಿತು. ಆಕೆಯ ಮೈ ಕಂಪಿಸಿತು. ಅಲ್ಲಿ ನಿಲ್ಲಲಾಗದೆ ಹೊರಗಿನ ಕೋಣೆಗೆ ಬಂದು ಕುರ್ಚಿಯಲ್ಲಿ ಕುಸಿದು ಕುಳಿತಳು, ತಲೆ ಎತ್ತಿ ನೋಡಿದಳು.

ಗೋಡೆಯ ಮೇಲೆಯೂ ಅದೇ ಆ ಮುಗ್ಧ ನಗು....ಮಗುವಿನ ನಗೆಯಂತೆಯೇ ಇದ್ದ ಆ ನಗುವಿನ ಮೊಗದ ಶ್ಯಾಮಸುಂದರ! ತನ್ನ ಬಾಳ ಸರ್ವಸ್ವವೆಂದು ನಂಬಿ ತನ್ನ ಹೃದಯವನ್ನೇ ಅರ್ಪಿಸಿ ಈಗ ಅಪರಾಧಿನಿ ಎಂದೆನಿಸಿದ್ದ ತಾನು! ಅಲ್ಲಿಯೂ ಶ್ಯಾಮಸುಂದರನೊಂದಿಗೆ ಕುಳಿತಿದ್ದ ಫೊಟೋವಿನಲ್ಲಿಯೂ ಬಾಡಿದ ಮುಖದಲ್ಲೇ ಕುಳಿತಿದ್ದಳು. ಅದೇಕೋ!

ಜಗತ್ತಿನಲ್ಲಿ ಸುಖ ದುಃಖವೆಂಬುದು ಹಗಲು,ರಾತ್ರಿಯಂತೆಯಂತೆ.ಆದರೆ,ಅಳುವವರು ಅಳುತ್ತಲೇ ಇರುತ್ತಾರೆ, ಕೊನೆಗಾಲದ ವರೆಗೂ!,ಆದರೆ....ನಗುವವರು ಶ್ಯಾಮಸುಂದರನಂತೆ ನಗುತ್ತಲೇ ಬಾಳುತ್ತಾರೆ.

ಊಹ್ಞೂ....ಶ್ಯಾಮ ಸುಂದರ ಹಾಗಲ್ಲ. ಬಾಳೂರದ ಹೇಡಿ....ಥೂ....

ಸಂಕಟದಿಂದ ಮುಖ ತಿರುಗಿಸಿದಳಾಕೆ ಎಷ್ಟೋ ಬಾರಿ ಅಷ್ಟೇ ಸಿಟ್ಟಿನಿಂದ ಅದಕ್ಕಿಂತಲೂ ಹೆಚ್ಚಿನ ನೋವಿನಿಂದ ಆ ಫೋಟೊವನ್ನಾಕೆ ತೆಗೆದಿರಿಸಿದ್ದಳು. ಅದೇಕೋ ಪುನಃ ಮನಸ್ಸು ಬದಲಾಯಿಸಿ ಅದೇ ಸ್ಥಾನದಲ್ಲಿರಿಸಿದ್ದಳು.

ಶ್ಯಾಮ ಸುಂದರ ದ್ರೋಹಿ, ಹೇಡಿ. ಆಕೆ ಅವನನ್ನು ತಿರಸ್ಕರಿಸುತ್ತಿದ್ದಳು. ಸತ್ತ ಮೇಲೆಯೂ ದ್ವೇಷಿಸುತ್ತಿದ್ದಳು. ನಿಜ. ಆದರೆ....ಮೂರು ತಿಂಗಳ ಹಸು ಗೂಸು... ಮುಂದೆ ಬೆಳೆದು ದೊಡ್ಡವನಾಗಿ ತನ್ನ ಜನ್ಮದಾತನನ್ನು ನೋಡ ಬಯಸಿದಾಗ.... ಅವನಿಗಾಗಿಯಾದರೂ ಇರಲಿ ಎಂದೇ ಅದನ್ನಿನ್ನೂ ಇರಿಸಿದ್ದಳು. ಸಿಟ್ಟಿನ ಭರದಲ್ಲಿ ತೆಗೆದಿರಿಸಿದರೂ ಹಳೆಯ ಕಹಿ ನೆನಪಿಗಾದರೂ ಇರಲಿ ಎಂದೇ ಕಾಣಿಸುತಿತ್ತು.

ಆದರೆ....ಅದನ್ನು ನೋಡಿದಷ್ಟು ಬಾರಿಯೂ ಆಕೆಯ ಹೃದಯ ಅವ್ಯಕ್ತ ನೋವಿನಿಂದ ನರಳುತಿತ್ತು. ಹೇಡಿ! ಎಂದು ಮನ ಕನಿಕರದಿಂದ ಅಳುತ್ತಲಿತ್ತು. ಕಲ್ಲಿದೆ ಬೆಣ್ಣೆಯಂತೆ ನೀರಾಗುತ್ತಲಿತ್ತು. ಆದರೆ.... ಆದರೆ...ಆತನ್ನ ಆಳವಾದ ನೋವಿಗೆ ಸಮಾಧಾನವೀಯುವ ಮಾತಿರಲಿ, ಅದನ್ನು ಗುರುತಿಸಬಲ್ಲವರಾದರೂ ಇರುತ್ತಿದ್ದರೆ...ಇದ್ದರೆ....ಉರಿಯುವ ಗಾಯಕ್ಕೆ ಉಪ್ಪು ನೀರನ್ನೆರಚಿ ಸಂತೋಷಪಡುವ ಜನರ ನಡುವೆ ತಾನು ಏಕಾಕಿನಿಯಾಗಿ ಬಾಳಿನ ಆ ಸಹನೀಯ ನೋವನ್ನು ಒಳಗೊಳಗೇ ನುಂಗಿಕೊಳ್ಳಬೇಕಾಗಿದೆ.

ಎರಡು ವರ್ಷಗಳ ಹಿಂದೆ...

ಮರೆಯಲಾಗದ ಸವಿನೆನಪು....ಕೆಲವೇ ತಿಂಗಳುಗಳೊಳಗೆ ಮಿದುಳನ್ನೇ ಕಲಕಿದ ಭ್ಯಾಕಹಿ ನೆನಪು...ದಿನ ದಿನವೂ ಮಾಯದ ಗಾಯವಾಗಿ ಮಿದುಳನ್ನು ಕೊರೆಯುವ, ಹೃದಯವನ್ನು ಹಿಂಡುವ ಕ್ರೂರ ನೆನಪುಗಳ ಸಾಲು....ವಸುಂಧರಾ ಚಿಕ್ಕಂದಿನಿಂದಲೂ ಯಾರನ್ನೂ ಪ್ರೀತಿಸಿದವಳೇ ಅಲ್ಲ. ತಾಯಿಗೆ ಎಂಟನೆಯ ಮಗುವಾಗಿ ಹುಟ್ಟಿದ ಆಕೆ ತನ್ನ ಹುಟ್ಟಿನೊಂದಿಗೆ ತಾಯ ಸಾವಿನ ಕಹಿಯನ್ನೂ ಅನುಭವಿಸಿದಳು. ಮೊದಲೇ ಬಡತನದಿಂದ ಜಿಂದು ಕಂಗಾಲಾದ ತಂದೆ ಹೇಳದೆ ಕೇಳದೆ ಊರು ಬಿಟ್ಟ. ಮೊದಲಿನ ಏಳು ಮಂದಿ ಹುಡುಗರಲ್ಲಿ ಆರಕ್ಕಿಂತ ಹೆಚ್ಚು ವರ್ಷದವರು ಅಲ್ಲಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಆ ಮೇಲಿನ ಇಬ್ಬರನ್ನು ತಂದೆಯ ಅಣ್ಣನೆನಿಸಿಕೊಂಡವ ಕರೆದೊಯ್ದ. ಹೇಗಿದ್ದರೂ ಹುಡುಗರು,ಆರೇಳು ವರ್ಷವಾದರೆ ಹೊಟೇಲಿನ ತಟ್ಟೆಯನ್ನಾದರೂ ತೊಳೆದಾರು ಎಂಬ ಯೋಚನೆ ಆ ಹೋಟೇಲು ಸಾಹುಕಾರನಿಗೆ ಕೊನೆಗೆ ಯಾರಿಗೂ ಬೇಡವಾಗಿ ಉಳಿದ ಆರು ತಿಂಗಳ ಹೆಣ್ಣು ಮಗುವನ್ನು ಮಕ್ಕಳಿಲ್ಲದ ಆಕೆಯ ಸೋದರತ್ತೆ ಕರೆದೊಯ್ದು 'ವಸುಂಧರಾ' ಎಂದು ನಾಮಕರಣ ಮಾಡಿದ್ದರು. ಆದರೆ ಒರಟು ಹೃದಯದ ಆಕೆಯನ್ನು ಬಂಜೆತನ ಇನ್ನಷ್ಟು ಕಠೋರಳನ್ನಾಗಿ ಮಾಡಿತ್ತು. ಯಾವುದೋ ಹೆಂಗಸಿನ ಸಲಹೆಗೆ ಕಿವಿಗೊಟ್ಟು ಆರು ತಿಂಗಳ ಕೂಸನ್ನಾಕೆ ಸಾಕಲು ಕರೆದೊಯ್ದುಬಿಟ್ಟಳು.

ವಸುಂಧರೆ ಮಗುವಿದ್ದಾಗಲೇ ಅತ್ತೆ ಮನೆಯ ಕಹಿ ವಾತಾವರಣದ ಕತ್ತಲನ್ನು ಕಾಣುವಂತಾಯಿತು. ಮಾವನಂತೂ ಹಗಲೂ, ರಾತ್ರಿ ಹೊರಗಿಂದ ಹೊರಗೇ ಇದ್ದು ಮನೆ ವೆಚ್ಚಕ್ಕೆ ಹೆಂಡತಿ ಕೈಯಲ್ಲಿ ಸ್ವಲ್ಪ ಕೊಟ್ಟು ತನ್ನಷ್ಟಕ್ಕೆ ತಾನೇ ಇದ್ದುಬಿಡುವವ. ವಸುಂಧರೆಗೆ ಚಿಕ್ಕಂದಿನಲ್ಲೇ ಮನೆಕೆಲಸ, ಬಯ್ಗಳು, ಹೊಡೆತಗಳಲ್ಲದೆ ಪ್ರೀತಿ ಎಂದರೇನೆಂಬುದು ತಿಳಿಯಲಿಲ್ಲ.

ಆದರೆ ವಸುಂಧರೆಗೆ ಅತ್ತೆ ಮಾಡಿದ ಒಂದೇ ಒಂದು ಮಹದುಪಕಾರವೆಂದರೆ ತಮ್ಮ ಮನೆಯ ಪಕ್ಕದಲ್ಲೇ ವಾಸಿಸುತ್ತಿದ್ದ ಶಿಕ್ಷಕಿಯೊಬ್ಬರ ಮಾತಿಗೆ ಮರುಳಾಗಿ ವಸುಂಧರೆಯನ್ನೋದಿಸಿ ವಿದ್ಯಾವತಿಯನ್ನಾಗಿ ಮಾಡಿದ್ದು, ಕ್ರಮೇಣ ವಸುಂಧರೆಯ ಓದಿಗಾಗಿ ಅನಾವಶ್ಯ ಮಾಡಬೇಕಿಲ್ಲ ಎಂಬ ಅತ್ತೆಯ ಸಮಸ್ಯೆಯನ್ನು ಬಗೆಹರಿಸಿದವಳೂ ಆ ಶಿಕ್ಷಕಿಯೇ.

(೧೧ನೇ ಪುಟ ನೋಡಿರಿ)

ESTD. **1921** ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ಪ್ರಾಪಂಚಿಕ ಐಕ್ಯಕ್ಕೆ

ಭಾರತದ ಅಮೂಲ್ಯ ದೇಣಿಗೆ

[ಪ್ರಪಂಚದಲ್ಲಿ ಐಕ್ಯ ಬೇಕೆಂಬ ವಾದದ ಹಿಂದೆ ಹಿಂಸೆ, ಅಸಹನೆ, ದ್ವೇಷ ಮತ್ತು ಅನಾಧ್ಯಾತ್ಮ್ಯಗಳೂ ಇಣಿಕಿ ಹಾಕುತ್ತಿವೆ. ಭಾರತವು ಅಹಿಂಸೆ, ಸಹನೆ, ನಿರ್ದ್ವೇಷ ಮತ್ತು ಅಧ್ಯಾತ್ಮ ಭಾವಗಳಿಂದ ಐಕ್ಯವನ್ನು ಸಾಧಿಸಿಕೊಂಡು ಪ್ರಪಂಚಕ್ಕೆ ಹಿಂದಿನಿಂದಲೂ ಗುರುವಾಗಿದೆ. ಈ ಚತುಸ್ಸೂತ್ರಗಳನ್ನು ಇತರರೂ ಅಳವಡಿಸಿಕೊಂಡರೆ ಮಾತ್ರ ಐಕ್ಯ ಸಾಧ್ಯವೆಂದು ಈ ಲೇಖದಲ್ಲಿ ಹೇಳುತ್ತಾರೆ, ಪ್ರಸಿದ್ಧ ಆಂಗ್ಲ ಮನೀಷಿ ಶ್ರೀ ಆರ್ನಾಲ್ಡ್ ಟ್ಯಾನಬೀ]

ಜೀವನ ಮತ್ತು ಮಾನವೀಯ ಸಮಸ್ಯೆಗಳಿಗೆ ಸಮಾಧಾನ ಕಂಡು ಹಿಡಿಯುವುದಕ್ಕೆ ಭಾರತದಲ್ಲೊಂದು ವಿಶಿಷ್ಟ ಪದ್ಧತಿಯಿದೆ, ಈ ಪದ್ಧತಿಯು ವಿಶ್ವಕ್ಕೂ ಬಹು ಉಪಯುಕ್ತವಾಗಬಲ್ಲುದು. ದ್ವೇಷರಹಿತವಾದುದು ಭಾರತೀಯರ ಒಂದು ಮಾರ್ಗ. ಇವರು ಇತರ ರಾಷ್ಟ್ರಗಳೊಡನೆ ಹೋರಾಡುವಾಗ, ದ್ವೇಷಭಾವವಿಲ್ಲದೇ ಹೋರಾಟ ನಡೆಸುತ್ತಾರೆ; ಈ ಹೋರಾಟವು ಕೊನೆಗೊಂಡ ಬಳಿಕ ಅವರು ಕಳೆದು ಹೋದ ದಿನಗಳನ್ನು ನೆನಪಿಕೊಳ್ಳುವುದೂ ಇಲ್ಲ; ಕಠೋರತೆಯಿಂದ ವರ್ತಿಸುವುದೂ ಇಲ್ಲ.

ನಾನು ನನ್ನ ಹಿಂದಿನ ದಿಲ್ಲೀ ಯಾತ್ರೆಯ ವೇಳೆ ಮಹಾತ್ಮಾ ಗಾಂಧಿಯವರ ಸಮಾಧಿಯ ಮುಂದೆ ನಿಂತವನು ಯೋಚಿಸುತ್ತ ಇದ್ದೆ—"ಉತ್ತಮ ರೀತಿಯಲ್ಲಿ ಸ್ವಾತಂತ್ರ್ಯಾಂದೋಲನವನ್ನು ನಡೆಸುತ್ತ ತನ್ನ ದೇಶೀಯರ ಹಿತಚಿಂತನೆಯನ್ನು ಮಾಡುತ್ತ ಅವರನ್ನು ಬಂಧಮುಕ್ತಗೊಳಿಸಿದ ಇನ್ನೊಬ್ಬನು ಇರುವನೆ?

ಮಹಾತ್ಮಾ ಗಾಂಧಿಯವರು ತನ್ನ ದೇಶಕ್ಕೆ ಸಲ್ಲಿಸಿದಂತೆಯೇ ನನ್ನ ದೇಶಕ್ಕೂ ಸೇವೆ ಸಲ್ಲಿಸಿದ್ದಾರೆ. ಯಾವುದೇ ಒಂದು ಸಾಮ್ರಾಜ್ಯದ ಮೇಲೆ ಅಧಿಕಾರ ಜಮಾಯಿಸುವುದು ಸುಲಭ; ಆದರದನ್ನು ಬಿಟ್ಟುಕೊಡುವುದು ಕಠಿನ. ಒಂದು ಸರಕಾರವು ತನಗೆ ವಿರೋಧ ಕಂಡುಬಂದಾಗ ಅದರ ಪ್ರತಿಕ್ರಿಯೆಯ ಬಲ ಪ್ರಯೋಗ ಮಾಡಿಯೇ ತೀರಬೇಕಾಗುತ್ತದೆ; ಹೋರಾಟವು ತೀವ್ರವಾಗಿ ಹಿಂಸಾತ್ಮಕವೆನಿಸಿದಾಗ, ಎರಡೂ ಪಕ್ಷಗಳಿಗೆ— ಮುಖ್ಯವಾಗಿ ಸರಕಾರಿ ಪಕ್ಷಕ್ಕೆ—ಶುಭ ಮಾರ್ಗವೆಂದೂ ಉಳಿಯುವುದಿಲ್ಲ. ಗಾಂಧೀಜಿ ಭಾರತ ಮತ್ತು ಬ್ರಿಟನ್‌ಗಳನ್ನು ಇಂತಹ ಅಶುಭ ಹೋರಾಟದಿಂದ ಬದುಕಿಸಿದ್ದಾರೆ. ಅವರು, ಭಾರತೀಯರು ಪೊಳ್ಳು ರಾಜಕಾರಣದ ಬಲವನ್ನು ಬದಿಗಿಟ್ಟು ಆಧ್ಯಾತ್ಮಿಕ ಬಲವನ್ನು ನಂಬಿ ತಮ್ಮ ಸ್ವಾತಂತ್ರ್ಯ ಸಾಧನವನ್ನು ಹೂಡುವಂತೆ ಪ್ರೇರಣೆ ಕೊಟ್ಟರು. ಇದರಿಂದ, ಇಂಗ್ಲಿಷರು ಭಾರತದಿಂದ ಅಪಮಾನ-ಅಪಯಶಗಳನ್ನು ಪಡೆಯದೆ ಸ್ನೇಹಾಚಾರದಿಂದಲೇ ಭಾರತ ಬಿಡಬೇಕಾಗಿ ಬಂತು.

ಮಹಾತ್ಮರು ತಮ್ಮ ಕಾರ್ಯವನ್ನು ಬೇರೆಯವರನ್ನು ಪ್ರೇರೇಪಿಸಿಯೇ ಮಾಡಿಸುತ್ತಾರೆ. ಅವರಿಗೆ ತದನುಕೂಲ ನಡೆಯುವ ಯೋಗ್ಯ ವ್ಯಕ್ತಿ ದೊರೆಯಲಿಲ್ಲವೆಂದಾದರೆ, ಅವರ ಉದಾತ್ತತೆಯು ಪೂರ್ಣ ಅಭಿವ್ಯಕ್ತಗೊಳ್ಳದು. ಪ್ರಾಚೀನ ಯುನಾನಿಗಳು ಉದ್ದಾಮ ಬಾವುಕರು, ಅಲ್ಲದೆ ಅಂಜಿಕೆಯಿಲ್ಲದೆ ಆದರಂತೆ ವ್ಯವಹರಿಸುತಿದ್ದರು. ಆತ್ಮನಿಯಂತ್ರಣ ಹೀನ ಹಿಂಸೆಯಿಂದ ಅವರು ತಮ್ಮ ನಾಗರಿಕತೆಯನ್ನು ನಷ್ಟಮಾಡಿದರು. ಗಾಂಧೀಜಿಯವರಿಗೆ ಪ್ರಾಚೀನ ಯುನಾನಿನಲ್ಲೇ ಕಾರ್ಯವೆಸಗಬೇಕಾಗಿದ್ದರೆ, ಅವರು ಸಫಲರಾಗುತ್ತಿರಲಿಲ್ಲ. ಅಹಿಂಸಾತ್ಮಕ ಅಸಹಯೋಗವು ಗಾಂಧೀಜಿ ಮತ್ತು ಭಾರತೀಯ ಜನತೆಯ ಸಂಯುಕ್ತ ವಿಜಯವಾಗಿತ್ತು. ಗಾಂಧೀಜಿಯವರಿಗೆ ಸಹಾಯಮಾಡಿದ ಭಾರತೀಯರ ಭಾವನೆಯು ಪ್ರಾಚೀನ ಭಾರತೀಯ ಪರಂಪರೆಯ ಒಂದು ಅಭಿವ್ಯಕ್ತಿ ಮಾತ್ರ.

ಅಹಿಂಸಾತ್ಮಕ ಕ್ರಾಂತಿಯು ಭಾರತದ ವಿಶಿಷ್ಟ ಕೊಡುಗೆ. ಭಾರತ ಮತ್ತು ಬ್ರಿಟನ್‌ಗಳ ರಾಜನೀತಿಯನ್ನು ಪರಿಹರಿಸಿಕೊಳ್ಳುವುದರೊಡನೆ ಅದಕ್ಕೆ ಭೂದಾನ ಆಂದೋಲನದಂತಹ ಹೊಸ ಕ್ಷೇತ್ರವೊಂದು ಸಿಕ್ಕಿದೆ. ಚೀನದೊಡನೆ ತನ್ನ ಪರಂಪರೆಯ ನೀತಿ ಪಾಲನೆಯಲ್ಲಿ ಭಾರತವು ಸೋಲನ್ನುಣ್ಣುತ್ತಿದೆ. ಆದರೂ ಗಾಂಧೀಜಿ ಹಾಗೂ ಭಾರತೀಯ ಇತಿಹಾಸದ ಪ್ರತಿಯೊಬ್ಬ ಗುರುಗಳೂ ತೋರಿಸಿ ಕೊಟ್ಟ ಭಾರತೀಯ ಆದರ್ಶ ಅಹಿಂಸೆಯನ್ನು ವಿಶ್ವಕ್ಕೆ ಪ್ರದರ್ಶಿಸಬೇಕಾಗಿದೆ. ಅಹಿಂಸಾ ಭಾವನೆಯು, ನೈತಿಕ ಆದರ್ಶದಿಂದ ಕೂಡಿದ ಮನೋಸ್ಥಿತಿ. ಪ್ರತಿ ನೈತಿಕ ಆದರ್ಶದೊಡನೆಯೂ ಒಂದು ಬೌದ್ಧಿಕ ದೃಷ್ಟಿಕೋಣ ಅವಶ್ಯ ಇರುತ್ತದೆ. ಸತ್ಯ ಮತ್ತು ಮುಕ್ತಿ ಪ್ರಾಪ್ತಿಗೆ ಅನೇಕ ಮಾರ್ಗಗಳಿವೆ ಎಂಬುದನ್ನು ಈ ದೃಷ್ಟಿಕೋಣವು ಒಪ್ಪುತ್ತದೆ. ಇಂತಹ ಉದಾರ ದೃಷ್ಟಿಯು ಭಾರತದ ವೈಶಿಷ್ಟ್ಯ. ಶೈವ-ವೈಷ್ಣವರಿಬ್ಬರೂ ತಮ್ಮ ಆಚರಣೆಯಿಂದ ಸತ್ಯ ಮತ್ತು ಮುಕ್ತಿಯನ್ನು ಸಂಶೋಧಿಸುತ್ತವೆ ಎನ್ನುತ್ತಾರೆ. ತನಗೆ ತಾನು ಅನುಸರಿಸುವ ಮಾರ್ಗವೇ ಶ್ರೇಯಸ್ಕರವೆಂದು ಅವರು ಅನ್ನಬಹುದು; ಆದರೆ, ತನ್ನದು ಮಾತ್ರ ಸರಿ, ಉಳಿದವರದು ತಪ್ಪು ಎಂಬ ವಾದಕ್ಕೆ ಭಾರತೀಯ ಹೋಗುವುದಿಲ್ಲ.

ಧರ್ಮದ ಬಗ್ಗೆ ಇರುವ ಇಂತಹ ಉದಾರತೆ ಬೌದ್ಧ ಧರ್ಮದಲ್ಲಿಯೂ ಇದೆ. ಬುದ್ಧನೇ ಮಾನವರ ಆಧ್ಯಾತ್ಮಿಕ ಮುಕ್ತಿ ಮಾರ್ಗವನ್ನು ಕಂಡುಹಿಡಿದವನೆಂದು ಬೌದ್ಧರೆನ್ನುವರಾದರೂ ಅವರ ಆಚಾರವು ಉದಾರವಾಗಿದೆ. ಆಗ್ನೇಯ ಮತ್ತು ಪೂರ್ವ ಏಶ್ಯಗಳಲ್ಲಿ ಇದನ್ನು ಸ್ಪಷ್ಟವಾಗಿ ನಾವು ಕಾಣಬಹುದು.

ಹೆಚ್ಚಿನ ಕ್ರೈಸ್ತರು ತಮ್ಮ ಧರ್ಮ ಮಾತ್ರ ಸತ್ಯ ಮತ್ತು ಮುಕ್ತಿಯ ರಾಜದ್ವಾರವೆಂದು ತಿಳಿಯುತ್ತಾರೆ. ಮೊದಲು ಕೆಲವರು ಇತರ ಧರ್ಮಗಳನ್ನು ನಷ್ಟಪಡಿಸುವ ಪ್ರಯತ್ನ ಮಾಡಿದರು ಇಂತಹ ನೀತಿಯು ಭಾರತಕ್ಕಿಂತ ಪಶ್ಚಿಮಕ್ಕಿರುವ ದೇಶಗಳಲ್ಲಿ ಹುಟ್ಟಿದ ಎಲ್ಲ ಧರ್ಮಗಳಲ್ಲಿಯೂ ಕಂಡು ಬಂದಿತ್ತು. ಕ್ರೈಸ್ತ, ಇಸ್ಲಾಂ, ಯೆಹೂದಿ, ಮೂಲ ಪಾರ್ಸಿ ಧರ್ಮ ಮತ್ತು ಆಧುನಿಕ ಪಾಶ್ಚಾತ್ಯ ವಿಚಾರ ಧಾರೆಗಳಲ್ಲಿ—ಫ್ಯಾಸಿಜಂ, ನಾಜೀವಾದ, ಸಾಮ್ಯವಾದಗಳಲ್ಲಿ—ಅಸಹಿಷ್ಣುತೆಯು ಸಾಮಾನ್ಯವಾದುದು.

'ಇಷ್ಟು ದೊಡ್ಡ ರಹಸ್ಯವನ್ನು ಕೇವಲ ಒಂದೇ ದಾರಿಯ ಮೂಲಕ ಮುಟ್ಟಲಾಗದು" ಎಂದು ನಾಲ್ಕನೆಯ ಶತಮಾನದಲ್ಲಿ ರೋಮನ್ ಸೆನೇಟರ ಕ್ವಿಟ್ಸ್ ಒರೇಲಿಯಸ್ ಸಿಮಾಕಸನು ಮಿಲಾನಿನ ಪಾದ್ರಿ ಎಂಬ್ರೋಸನಿಗೆ ಒಂದು ಪತ್ರದಲ್ಲಿ ಬರೆದಿದ್ದನು. ಕ್ರಿ. ಶ. ೩೯೦ರಲ್ಲಿ ರೋಮನ್ ಸಾಮ್ರಾಜ್ಯದ ಸರಕಾರಿ ಧರ್ಮವು ಕ್ರೈಸ್ತವಾಗಿತ್ತು. ಸರಕಾರವಾದರೂ ಇತರ ಎಲ್ಲ ಧರ್ಮಗಳನ್ನೂ ನೆಲಸಮ ಮಾಡುತಿತ್ತು. ಸಿಮಾಕಸನು ಕ್ರೈಸ್ತೇತರ ದಳದ ನಾಯಕನಾಗಿದ್ದನು, ಮೇಲಿನ ಆತನ ವಾಕ್ಯ ಭೂಮಧ್ಯ ಸಾಗರ ಪ್ರದೇಶದ ಸಮಸ್ತ ಪ್ರಾಚೀನ ಧರ್ಮಗಳ ಭಾವನೆಯನ್ನು ಪ್ರಕಟಗೊಳಿಸಿತ್ತು

ಈ ಉದಾರ ಮತ್ತು ವಿಶಾಲಧಾರ್ಮಿಕ ದೃಷ್ಟಿಯು ಆಗಲೇ ಸಮಗ್ರವಿಶ್ವದಲ್ಲಿ ಕರಡಿತ್ತು. ಆದರೆ, ಇಂದದನ್ನು ಸುರಕ್ಷಿತವಿಡುವ ಹೊಣೆ ಭಾರತದ ತಲೆಯ ಮೇಲಿದೆ. ಹೀಗೆ ಭಾರತವು ತನ್ನೊಡನೆ ಪ್ರಾಚೀನ ಭೂಮಧ್ಯ ಸಾಗರ ಪ್ರದೇಶದ ಧಾರ್ಮಿಕ ಪರಂಪರೆಯ ಉತ್ತರಾಧಿಕಾರಿಯೂ ಹೌದು. ಸಿಮಾಕಸ ಮತ್ತು ಅಶೋಕರನ್ನು ಸಜೀವಗೊಳಿಸುವ ಹೊಣೆ ಭಾರತದ್ದು.

ಸ್ವಾತಂತ್ರ್ಯಾನಂತರ ಸಂವಿಧಾನ ರಚನೆಯ ಕಾಲದಲ್ಲಿ ತನ್ನ ಉತ್ತರದಾಯಿತ್ವವನ್ನು ಭಾರತ ಮರೆಯಲಿಲ್ಲ. ಹಿಂದೂ ಧರ್ಮವನ್ನು ಭಾರತವು ತನ್ನ ಧರ್ಮವೆಂದು ಸ್ವೀಕರಿಸಲಿಲ್ಲ. ಎಲ್ಲ ಧರ್ಮಗಳ ಅನುಯಾಯಿಗಳಿಗೂ ಸಮಾನಾಧಿಕಾರನೀಡುವ ಧರ್ಮಾತೀತ ರಾಷ್ಟ್ರರಚನೆ ಮಾಡಿತು. ೧೯೧೨—[illegible]ರ ಸುಮಾರು ರಶ್ಯನರು ವಾರ್ಸಾನಗರದಲ್ಲಿ ಪೌರ್ವಾತ್ಯ ಸಂಪ್ರದಾಯ-ವಾದಿರೂಪದ ಇಗರ್ಜಿಯನ್ನು ರಚಿಸಿದರು. ಇದರಿಂದ ಪೋಲೋ ಜನರಿಗೆ ಅಪಮಾನವಾಗಿತ್ತು. ೧೯೧೮ರಲ್ಲಿ ಪೋಲಾಂಡು ಸ್ವತಂತ್ರವಾದಾಗ, ಅವರು ಈ ಮಂದಿರವನ್ನು ನೆಲಸಮ ಮಾಡಿದರು. ಆದರೆ ಔರಂಗಜೇಬನ ಮಸೀದಿಗಳನ್ನು ಭಾರತೀಯರು ಉರುಳಿಸಲಿಲ್ಲ. ಇಂತಹ ಮಸೀದಿಗಳಲ್ಲಿ ಒಂದು ಕಾಶಿಯ ಗಟ್ಟದಲ್ಲಿದೆ; ಇನ್ನೊಂದು ಮಥುರೆಯ ಕೃಷ್ಣನ ಪಕ್ಕದಲ್ಲಿದೆ. ಎಂದರೆ, ಹಿಂದುಗಳ ಶ್ರೇಷ್ಠತಮ ತೀರ್ಥಸ್ಥಾನಗಳಲ್ಲಿಯೂ ಇಸ್ಲಾಮಿಗೆ ಪ್ರವೇಶವಿದೆ.

ಬ್ರಿಟಿಷರಾದರೂ ತಮ್ಮ ಸತ್ತೆಯನ್ನು ಚಿರಸ್ಥಾಯಿಗೊಳಿಸಲು ಮುಸಲ್ಮಾನರ

(೧೦ನೇ ಪುಟ ನೋಡಿರಿ)

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;
ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಉಡುಪಿ
ಆಡಳಿತ ಆಫೀಸು: ಮಂಗಳೂರು 1.



ಖೀರಾ' ಉಕ್ಕಿನ ಫರ್ನಿಚರುಗಳು, ಮಂಚ-ಸೋಫಾಗಳು, ವೈವಿಧ್ಯಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮಗ್ರಿಗಳು ಇತ್ಯಾದಿ ಇತ್ಯಾದಿಗಳಿಗೆ ವಿಚಾರಿಸಿರಿ —

ಶಾಸ್ತ್ರಿ & ಕೊ
ಮಂಗಳೂರು—1

ಕರ್ನಾಟಕದ

ನೂತನ ಸಚಿವ ಸಂಪುಟ

ಮುಖ್ಯ ಮಂತ್ರಿ ಕಂಠಿ

ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲಿಗೂ "ಮೈಸೂರು" ಯೋಜನಾಬದ್ಧ ವಿಕಾಸ ಕಾರ್ಯಕ್ರಮವನ್ನಿಟ್ಟುಕೊಂಡಿತ್ತು. ಆದರೆ, ಸ್ವಾತಂತ್ರ್ಯ ನಂತರ ಅದರಲ್ಲಿ ಮತ್ತು ೧೯೫೬ರ ನವಂಬರ ೧ರ ನಂತರ ಅದೂ ಸೇರಿದ ಕರ್ನಾಟಕದಲ್ಲಿ ಗುಂಪಿನ ರಾಜಕಾರಣದಿಂದಾಗಿ ಇಂತಹ ವಿಕಾಸಕ್ಕೆ ಅಡ್ಡಿ ಬಂತು. ಆದರೆ, ಈಗ ನಾಯಕತ್ವ ಬದಲಾವಣೆಯಿಂದಾಗಿ ಈ ಆತಂಕವೂ ದೂರ ಹೋಯಿತೆನ್ನಬಹುದೋ ಏನೋ! ಶ್ರೀ ಕಂಠಿಯವರು ನಾಯಕರಾದುದರಿಂದ ಈ ಭಾವನೆ ಹುಟ್ಟುವುದು. ಇವರು ಗುಂಪಿನ ರಾಜಕಾರಣಕ್ಕೆ ಬಲಿಯಾಗದೆ, ರಾಜ್ಯದ ಸಂಮ್ಯಕ್ ಹಿತದ ಕಡೆಗೆ ಗಮನವಿಡುವವರು. ಬಹು ದೀರ್ಘಕಾಲದ ವರೆಗೆ ಮಾಜಿ ಮುಂಬಯಿ ರಾಜ್ಯದ ವಿಧಾನ ಸಭೆಯ ಉಪಾಧ್ಯಕ್ಷರಾಗಿ, ಮತ್ತು ಕರ್ನಾಟಕ ರಾಜ್ಯರಚಿತಗೊಂಡ ಮೇಲೆ ಅದರ ವಿಧಾನ ಸಭಾಧ್ಯಕ್ಷರಾಗಿ ನಿಷ್ಪಕ್ಷಪಾತವಾಗಿ ಯೋಚಿಸಲು ಅವರು ಕಲಿತುಕೊಂಡಿದ್ದಾರೆ. ಅವರ ಈ ಗುಣದಿಂದಾಗಿಯೇ ಕಾಂಗ್ರೆಸಿನ ವಿರೋಧಿ ಗುಂಪಿನವರು ಅವರ ನಾಯಕತ್ವವನ್ನು ಸ್ವೀಕರಿಸಲು ಒಪ್ಪಿದರೆಂಬ ಕೆನಿಸುತ್ತದೆ.

ಕರ್ನಾಟಕದ ಮೂರನೆಯ ಯೋಜನೆಯು ಹಿಂದಿನೆರಡಕ್ಕಿಂತಲೂ ದೊಡ್ಡದು. ಇದರ ಸಾಫಲ್ಯವಾಗಬೇಕಾದರೆ, ರಾಜ್ಯದ ಆಡಳಿತ ಪಕ್ಷದಲ್ಲಿನ ಪರಸ್ಪರ ವಿರೋಧೀ ಭಾವನೆಗಳನ್ನು ದೂರ ಮಾಡಬೇಕು. ಈ ಕಾರ್ಯವನ್ನು ಕಂಠಿಯವರು ಮಾಡಲು ಅಸಮರ್ಥರಲ್ಲ.

೫೮ ವರ್ಷದ ಶ್ರೀ ಕಂಠಿ ೧೯೩೫ರಲ್ಲಿ ಕೊಲ್ಹಾಪುರದ ಕಾಲೇಜಿನಿಂದ ವಕೀಲಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ನಂತರ ಹರಿಜನರು, ರೈತ ಜನರು, ನೇಕಾರರ ಸಂಘಟನೆಯಲ್ಲಿ ಕೆಲಸಮಾಡಿ ಸಾರ್ವಜನಿಕ ಸೇವಾರಂಗಕ್ಕೆ ಕಾಲಿಟ್ಟರು. ಆ ಸಮಯದಿಂದಲೇ ಕಾಂಗ್ರೆಸ್ಸಿನ ರಾಜಕೀಯದಲ್ಲಿ ಇವರು ಸೇರಿಕೊಂಡರು. ೧೯೩೯ ಕರ್ನಾಟಕ ಪ್ರಾದೇಶಿಕ ಮತ್ತು ಅಖಿಲ ಭಾರತ ಕಾಂಗ್ರೆಸ್‌ಗಳ ಸದಸ್ಯರಾಗಿ ಆಯ್ಕೆಗೊಂಡರು. ಮುಂದಿನ ವರ್ಷ ಬಿಜಾಪುರಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದರು. ೧೯೪೦-೪೭ರ ನಡುವೆ ಸತ್ಯಾಗ್ರಹಾಂದೋಲನವನ್ನು ಮುನ್ನಡೆಸಿದರು. ಈ ಸಮಯದಲ್ಲಿ ಹಲವು ಬಾರಿ ಸೆರೆಮನೆ ಯಾತನೆಯನ್ನೂ ಅನುಭವಿಸಿದರು. ಸಂಸತ್ತಿನ ಮತ್ತು ಸಾರ್ವಜನಿಕ ಕಾರ್ಯಕಲಾಪಗಳಿಗೆ ಇವರು ಏಕ ರೀತಿಯ ಸ್ಥಾನನೀಡುತ್ತಾರೆ. ಮಹಾರಾಷ್ಟ್ರದೊಡನೆ ಸೌಹಾರ್ದದಿಂದಿರುವ ಇವರ ಮುಖ್ಯಮಂತ್ರಿತನದವಧಿಯಲ್ಲಿ ಉಭಯರಾಷ್ಟ್ರಗಳ ನಡುವಿನ ಸೀಮಾವಿವಾದ ಮತ್ತು ನೀರಹಂಚಿಕೆಯ ಪ್ರಶ್ನೆಗಳು ಸಮಾಧಾನಕರವಾಗಿ ತೀರ್ಮಾನಗೊಂಡಾವೆಂದು ಆಶಿಸಿದರೆ, ಅತಿಶಯೋಕ್ತಿಯೆನಿಸದು.

ಎಂ. ವಿ. ಕೃಷ್ಣಪ್ಪ

೧೯೧೮ರ ಜುಲೈ ೧ರಂದು ಜನಿಸಿದ ಎಂ. ವಿ. ಕೃಷ್ಣಪ್ಪನವರು ಮೈಸೂರು ವಿಶ್ವವಿದ್ಯಾಲಯ ಮತ್ತು ಮದ್ರಾಸು ಲಾ ಕಾಲೇಜುಗಳಲ್ಲಿ ಉಚ್ಚ ಶಿಕ್ಷಣ ಪಡೆದರು. ೧೯೪೧ರಿಂದ ೪೪ರ ವರೆಗೆ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ೪೫—೫೦ರಲ್ಲಿ ಕೋಲಾರ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದರು. ಕೋಲಾರ ಜಿಲ್ಲಾ ಬೋರ್ಡಿನ ಸದಸ್ಯರಾಗಿ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಯ ಡೈರೆಕ್ಟರರಾಗಿ ಇದ್ದರು. ೪೫ರಿಂದ ೫೨ರ ವರೆಗೆ ಮೈಸೂರು ಶಾಸನ ಸಭೆಯ ಪ್ರಧಾನ ವಿಪ್ ಆಗಿದ್ದು, ೧೯೫೨, ೫೭ರಲ್ಲಿ ಲೋಕ ಸಭಾ ಸದಸ್ಯರಾದರು ೫೨ರಲ್ಲಿ ಕೃಷಿ ಮತ್ತು ಆಹಾರ ಖಾತೆಯ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿ ೫೭ರಲ್ಲಿ ಆಹಾರ ಉಪಮಂತ್ರಿಯಾಗಿದ್ದರು. ಮುಲಗಲ್ ವಿವಿಧೋದ್ದೇಶ ಸಹಕಾರಿ ಸಂಘವನ್ನಿವರೇ ಸ್ಥಾಪಿಸಿದರು. ವಿದ್ಯಾರ್ಥಿ ಕಾಂಗ್ರೆಸ್‌ನ ಹೋರಾಟಾವಧಿಯಲ್ಲಿ ಎರಡು ಬಾರಿ ಜೇಲು ಕಂಡವರು. ರಶ್ಯ, ನಾರ್ವೆ, ಸ್ವೀಡನ್, ಬ್ರಿಟನ್, ಫ್ರಾನ್ಸು, ಚೀನಾ ಮತ್ತು ಜಪಾನುಗಳನ್ನು ಸಂದರ್ಶಿಸಿದವರು ಈ ಬಾರಿ ತುಮಕೂರು ಕ್ಷೇತ್ರದಿಂದ ಲೋಕ ಸಭೆಗೆ ಆಯ್ಕೆಯಾಗಿ ಹೋಗಿದ್ದಾರೆ.

ಎಂ. ವಿ. ರಾಮರಾವ್

ಶ್ರೀ ಎಂ. ವಿ. ರಾಮರಾವ್ ೧೯೦೭ರಲ್ಲಿ ಹುಟ್ಟಿದವರು. ೧೯೩೦ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪದವಿ ಗಳಿಸಿ, ೧೯೩೪ರಲ್ಲಿ ಬೊಂಬಾಯಿ ಲಾ ಕಾಲೇಜಿನಲ್ಲಿ ನ್ಯಾಯಶಾಸ್ತ್ರ ಪದವೀಧರರಾದರು. ೩೬ರಲ್ಲಿ ಸಾರ್ವಜನಿಕ ಕ್ಷೇತ್ರಕ್ಕಿಳಿದ ಇವರು ೪೦ರಿಂದ ೪೪ರ ತನಕ ತುಮಕೂರ ನಗರ ಸಭಾಧ್ಯಕ್ಷರಾದರು. ರಾಷ್ಟ್ರೀಯಾಂದೋಲನದಲ್ಲಿ ಮುಮುಕಿ ೧೬ ತಿಂಗಳ ಶಿಕ್ಷೆ ಅನುಭವಿಸಿದರು ಮರಳಿದ ಬಳಿಕ ಪುನಃ ನಗರ ಸಭಾಪತಿಯಾಗಿ ಆಯ್ಕೆಗೊಂಡರು. ೧೯೪೭ರಲ್ಲಿ ಶಾಸನ ಸಭೆಗೂ ೫೨ರಲ್ಲಿ ಲೋಕ ಸಭೆಗೂ ಆಯ್ಕೆ ಬಂದಿದ್ದರು. ೫೭ರಲ್ಲಿ ನಿಜಲಿಂಗಪ್ಪನವರ ಮಂತ್ರಿ ಮಂಡಳಿಯಲ್ಲಿವರು ಗೃಹ ಮತ್ತು ಕಾನೂನು ಶಾಖಾ ಮಂತ್ರಿಯಾಗಿದ್ದರು. ೫೫-೫೭ರಲ್ಲಿ ಎಂ. ಪಿ. ಸಿ. ಸಿ. ಯ ಪ್ರಧಾನ ಕಾರ್ಯದರ್ಶಿಯಾಗಿದ್ದರು ಇವರು ವಿಧಾನಪರಿಷತ್ತಿಗೆ ಪದವೀಧರ ಮತದಾರ ಕ್ಷೇತ್ರದಿಂದ ಆರಿಸಿ ಬಂದಿದ್ದರು.

ಒರಿಸ್ಸಾದ ಶಾಲಾ ಬಾಲಕ ಬಾಲಿಕೆಯರು ಸಂತೋಷದಿಂದ ಹಾಡುತ್ತಾ ಕುಣಿಯುತ್ತಿರುವುದನ್ನು ಕಾಣಬಹುದು.

ಆರ್. ಎಂ. ಪಾಟೀಲ್

ಶ್ರೀ ಆರ್. ಎಂ. ಪಾಟೀಲರ ಹುಟ್ಟು ೧೯೧೯ರಲ್ಲಿ ಸಾಂಗ್ಲಿಯ ವೆಲ್ಲಿಂಗ್ಟನ್ ಕಾಲೇಜ್ ಮತ್ತು ಕೊಲ್ಹಾಪುರದ ಲಾ ಕಾಲೇಜುಗಳಲ್ಲಿ ಕಲಿತು ಪದವೀಧರರಾದ ನಂತರ, ೧೯೩೦ರಲ್ಲಿ ಕಾಂಗ್ರೆಸ್ ಸೇರಿದರು. ೧೯೪೬ರಲ್ಲಿ ಡಿಸ್ಟ್ರಿಕ್ಟ್ ಅಸಿಸ್ಟಾಂಟ್ ಪಬ್ಲಿಕ್ ಪ್ರಾಸಿಕ್ಯೂಟರರಾಗಿ ನೇಮಿತರಾಗಿ ಮುಂದೆ ಧಾರವಾಡದಲ್ಲಿ ಜಿಲ್ಲಾ ಸರಕಾರಿ ಪ್ಲೀಡರರಾಗಿಯೂ ಸಾರ್ವಜನಿಕ ವಕೀಲರಾಗಿಯೂ ನಿಯುಕ್ತರಾದರು. ೧೯೫೭ರಲ್ಲಿ ರಾಜಿನಾಮೆಯಿತ್ತು ಕರ್ನಾಟಕದ ವಿಧಾನ ಸಭೆಗೆ ನವಲಗುಂದ ಕ್ಷೇತ್ರದಿಂದ ಸ್ಪರ್ಧಿಸಿ, ಗೆದ್ದು ಬಂದು ನಿಜಲಿಂಗಪ್ಪ ಸಂಪುಟದಲ್ಲಿ ಆರೋಗ್ಯ ಮಂತ್ರಿಯಾಗಿದ್ದರು ಈ ಬಾರಿಯೂ ಅದೇ ಕ್ಷೇತ್ರದಿಂದ ಪುನರಾಯ್ಕೆಗೊಂಡಿದ್ದಾರೆ.

ಯಶೋಧರಮ್ಮ ದಾಸಪ್ಪ

೧೯೦೫ರಲ್ಲಿ ಜನ್ಮತಾಳಿದ ಇವರು ಬೆಂಗಳೂರು ಮಿಷನ್ ಶಾಲೆ, ಮದ್ರಾಸದ ರಾಣಿ ಮೇರಿ ಕಾಲೇಜುಗಳಲ್ಲಿ ಶಿಕ್ಷಣ ಪಡೆದರು. ಶ್ರೀ ಎಚ್. ಸಿ. ದಾಸಪ್ಪನವರೊಂದಿಗೆ ೧೯೨೬ರಲ್ಲಿ ವಿವಾಹಿತೆಯರಾದರು. (ಶ್ರೀ ದಾಸಪ್ಪನವರು ಪಾರ್ಲಿಮೆಂಟಿನ ಸದ್ಯದ ಅಂದಾಜು ಸಮಿತಿಯ ಅಧ್ಯಕ್ಷರು) ೧೯೩೯ರಲ್ಲಿ ಮೈಸೂರು ವಿಧಾನ ಸಭೆಗೆ ಆರಿಸಿ ಬಂದ ಇವರು ಮರಳಿ ಈ ಬಾರಿ ಚುನಾಯಿತರಾದರು. ಮೈಸೂರು ನಗರ ಪಾಲಿಕೆಯ ಸದಸ್ಯೆಯಾಗಿದ್ದರು. ೧೯೩೭ರಲ್ಲಿ ಶಿವಪುರದಲ್ಲೂ ಆ ಮೇಲೆ ಮೈಸೂರಿನಲ್ಲೂ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಮಹಿಳೆಯೀಕೆ. ಇತರ ಆಂದೋಲನದಲ್ಲೂ ಇವರು ಭಾಗವಹಿಸಿದ್ದರು. ಕಸ್ತೂರ್ಬಾ ನಿಧಿಯೊಡನೆ ಇವರ ಸಂಬಂಧವಿಂದಿಗೂ ಇದೆ. ಸಾಮಾಜಿಕ ಕಲ್ಯಾಣದ ಕಾರ್ಯಕ್ರಮಗಳಲ್ಲಿ ಈಕೆ ಆಸಕ್ತಿ ವಹಿಸಿದ್ದು, ರಾಜ್ಯ ಸಮಾಜಕಲ್ಯಾಣ ಸಲಹಾ ಮಂಡಳಿಯ ಸದಸ್ಯೆಯಾಗಿದ್ದಾರೆ.

ನಾಗಪ್ಪ ಆಳ್ವ

ಮಂಗಳೂರಿನ ಸರಕಾರಿ ಮತ್ತು ಮದ್ರಾಸದ ಮೆಡಿಕಲ್ ಕಾಲೇಜ್‌ಗಳಲ್ಲಿ ವ್ಯಾಸಂಗ ಮಾಡಿದ್ದ ಡಾ। ನಾಗಪ್ಪ ಆಳ್ವ ೧೯೦೮ರಲ್ಲಿ ಜನಿಸಿ ಬಂದರು. ೧೯೨೭ರಲ್ಲಿ ಸರ್ಕಾರಿ ಕಾಲೇಜಿನಲ್ಲಿ ಉತ್ತಮ ನಡತೆಯ ಬಗ್ಗೆ ಪಾರಿತೋಷಕವನ್ನು ಪಡೆದಿದ್ದರು. ೧೯೩೭—೩೯ರಲ್ಲಿ ಮದ್ರಾಸು ವಿದ್ಯಾರ್ಥಿ ಸಂಘದ ಸಂಘಟನಾ ಕಾರ್ಯದರ್ಶಿಯಾಗಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೂ ಕಾಂಗ್ರೆಸ್ ಕೆಲಸಗಾರರಾದ ಇವರು ೩೭ರಲ್ಲಿ ಸೆರೆ ಮನೆಗೂ ಹೋಗಿದ್ದರು. ೪೩—೪೯ರಲ್ಲಿ ಮಂಗಳೂರು ಸರ್ಕಲ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ, ೪೯—೫೨ರಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ, ೫೨ರಿಂದ ಕೆ. ಪಿ. ಸಿ. ಸಿ ಯ ಸದಸ್ಯರಾಗಿ, ದ. ಕ. ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಪಕ್ಷದ ನಾಯಕರಾಗಿ (೪೭—೫೦) ಜಿಲ್ಲಾ ಬೋರ್ಡಿನ ಸದಸ್ಯರಾಗಿ (೪೭) ೧೦ ವರ್ಷಗಳ ವರೆಗೆ ಮಂಗಳೂರು ನಗರ ಸ

(೧೨ನೇ ಪುಟ ನೋಡಿರಿ)



ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಖಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಭಾರತ ಸರಕಾರದ

ದೊಡ್ಡ ಕೊರತೆಯ ಮುಂಗಡಪತ್ರ

ಮುಂದಿನ ತಿಂಗಳಲ್ಲಿ ಹೊಸತಾಗಿ ಚುನಾಯಿತವಾದ ಲೋಕಸಭೆಯು ೧೯೬೨-೬೩ನೆ ವರ್ಷದ ಮುಂಗಡ ಪತ್ರವನ್ನು ಮಂಜೂರು ಮಾಡುವುದಾದರೂ ಅಷ್ಟರ ವರೆಗೆ ಸರಕಾರವು ಮಾಡಬಹುದಾದ ವೆಚ್ಚಗಳಿಗಾಗಿ ವಿಸರ್ಜನೆಗೊಳ್ಳಲಿರುವ ಪಾರ್ಲಿಮೆಂಟಿನ ಅಂಗೀಕಾರ ಮುದ್ರೆಯನ್ನು ಪಡೆಯುವುದು ಅಗತ್ಯವಾಗಿದೆ. ಈ ಕಾರಣದಿಂದ ಕೇಂದ್ರ ಆರ್ಥಿಕ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ಈ ಮುಂಗಡ ಪತ್ರವನ್ನು ಮಂಡಿಸಿದರು.

೧೯೬೧—೬೨ರ ಮುಂಗಡ ಪತ್ರದಲ್ಲಿ ಆಯವು ರೂ. ೧,೦೧೭·೯೫ ಕೋಟಿ ಮತ್ತು ವ್ಯಯವು ರೂ. ೧,೦೩೩·೫೭ ಕೋಟಿ ಎಂದೂ ಸೂಚಿಸಲಾಗಿದ್ದು ಇದು ರೂ ೫·೫೭ ಕೋಟಿಗಳ ಕೊರತೆಯನ್ನು ತೋರಿಸುತಿತ್ತು. ಆದರೆ, ಪರಿಷ್ಕೃತ ಅಂದಾಜಿನಂತೆ ಆಯ ಮತ್ತು ವ್ಯಯಗಳಲ್ಲಿ ಹೆಚ್ಚಳವಾದರೂ ಒಟ್ಟಿನಲ್ಲಿ ರೂ. ೩೩·೯೬ ಕೋಟಿಗಳ ಉಳಿತಾಯವು ತೋರಿ ಬರುತ್ತಿದೆ. ಮುಂದಿನ ವರ್ಷದ ಮುಂಗಡ ಪತ್ರದನ್ವಯ, ರೂ. ೧,೩೦೫·೯೭ ಕೋಟಿ ಆಯ ಮತ್ತು ರೂ. ೧,೩೭೯·೩೩ ಕೋಟಿಗಳ ವ್ಯಯವು ಆಗಲಿದ್ದು ಇದರ ಪರಿಣಾಮವಾಗಿ ರೂ. ೬೩·೪೬ ಕೋಟಿಗಳ ಕೊರತೆ ಉಳಿಯುವುದು.

ರೆವಿನ್ಯೂ ಆಯವು ಈ ವರ್ಷಕ್ಕಿಂತ ಮುಂದಿನ ವರ್ಷದಲ್ಲಿ ರೂ. ೨೨೬·೭೬ ಕೋಟಿಗಳಷ್ಟು ಹೆಚ್ಚಳವನ್ನು ತೋರಿಸುವುದಾದರೂ ರೂ. ೩೨೪·೧೮ ಕೋಟಿಗಳಷ್ಟು ವೆಚ್ಚವೂ ಹೆಚ್ಚುವುದರಿಂದ ಇಂತಹ ಕೊರತೆಯು ಕಾಣಿಸಿಕೊಳ್ಳುವಂತಾಗಿದೆ. ಸಂರಕ್ಷಣೆಗಾಗಿ ವೆಚ್ಚವಾಗಲಿರುವ ಹಣವು ರೂ ೩೪೦·೬೭ ಕೋಟಿಗಳಷ್ಟಿದ್ದು ಇದು ಈ ವರ್ಷಕ್ಕಿಂತ ರೂ. ೩೪·೭೪ ಕೋಟಿಗಳಷ್ಟು ಏರಿಕೆಯನ್ನು ತೋರಿಸುತ್ತದೆ. ಉಳಿದುದು ನಾಗರಿಕ, ಸಾಮಾಜಿಕ ಮತ್ತು ಅಭಿವೃದ್ಧಿ ಯೋಜನೆ ಮೊದಲಾದ ವಿಭಾಗಗಳಲ್ಲಿ ಹಂಚಿ ಹೋಗುವುದು.

ದೇಶದ ಸೀಮೆಯಲ್ಲಿ ಶತ್ರುಗಳೆನಿಸಿ ಚೀನ ಮತ್ತು ಪಾಕಿಸ್ತಾನಗಳು ನಡೆಸುತ್ತಿರುವ ಸಂಚಿನ ಕಾರಣದಿಂದ ನಮ್ಮ ಸರಕಾರವಾದರೂ ತನ್ನ ಸಂರಕ್ಷಣಾ ಬಲವನ್ನು ಸುದೃಢಗೊಳಿಸುವುದು ಅಗತ್ಯವಾಗಿ ಪರಿಣಮಿಸಿದೆ. ಸಶಸ್ತ್ರ ಸೇನೆ ಮತ್ತು ವಿಮಾನ ಬಲದ ಅಭಿವೃದ್ಧಿಯನ್ನು ಸಾಧಿಸಿ ದೇಶದ ಐಕ್ಯ ಮತ್ತು ಭದ್ರತೆಯನ್ನು ಉಳಿಸಿಕೊಳ್ಳಲು ಆವಶ್ಯಕ ಕಾರ್ಯಕ್ರಮಗಳನ್ನು ರೂಪಿಸಲು ಈ ಹೆಚ್ಚಿನ ಹಣವು ಬೇಕಾಗಿರುತ್ತದೆ. ವಸ್ತುತಃ ಭಾರತವು ಸಮರದಲ್ಲಿ ಉತ್ಸಾಹವನ್ನು ತೋರಿಸುವುದಿಲ್ಲ; ಶಾಂತವಾದ ವಿಧಾನಗಳಿಂದಲೇ ತನ್ನ ಸೀಮಾ ಸಮಸ್ಯೆಗಳನ್ನೂ ಪರಿಹರಿಸಿಕೊಳ್ಳುವ ಆಸೆಯಿಂದಿದೆ ಹಾಗಿದ್ದರೂ ಮುಂದೆ ಒದಗಬಹುದಾದ ಗಂಡಾಂತರಗಳನ್ನು ಎದುರಿಸಲು ಈಗಿಂದೀಗಲೇ ತಕ್ಕ ಸಿದ್ಧತೆ ನಡೆಸುವುದು ಅಪೇಕ್ಷಣೀಯ

ಗೋವೆ, ದೀವು ಮತ್ತು ದಮನಗಳಿಂದ ೫·೧೧ ಕೋಟಿ ರೂಪಾಯಿಗಳ ಆಯವನ್ನು ಹಿಡಿಯಲಾಗಿದ್ದರೂ ಆ ಪ್ರದೇಶಗಳಿಗೆ ರೂ. ೫·೨೮ ಕೋಟಿಗಳನ್ನು ವೆಚ್ಚಮಾಡಲು ಒದಗಿಸಲಾಗಿದೆ. ಮಾತ್ರವಲ್ಲ, ಅಲ್ಲಿ ಪ್ರಚಲಿತವಿದ್ದ ಪೋರ್ಚುಗೀಜ ನಾಣ್ಯಗಳನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ೭|| ಕೋಟಿ ರೂಪಾಯಿಗಳನ್ನು ಭಾರತೀಯ ರಿಜರ್ವ ಬೇಂಕಿಗೆ ನೀಡಲು ಉದ್ದೇಶಿಸಿದೆ.

ಮುಂದಿನ ವರ್ಷದಲ್ಲಿ ಯೋಜನಾ ವಿಭಾಗದಲ್ಲಿ ೧,೧೦೭ ಕೋಟಿ ರೂಪಾಯಿಗಳು ಖರ್ಚಾಗುವುವು ಇದರಲ್ಲಿ ರೂ. ೧೯೨ ಕೋಟಿ ರೆವಿನ್ಯೂ ಬಾಬಿನಲ್ಲಿಯೂ ರೂ. ೯೧೫ ಕೋಟಿ ಸಾಲಗಳೂ ಸೇರಿ ಬಂಡವಾಳ ವೆಚ್ಚದ ರೂಪದಲ್ಲಿಯೂ ಇರುವುವು. ರೇಲ್ವೆ ಮತ್ತು ಹಿಂದುಸ್ತಾನ್ ಸ್ಟೀಲ್ ಸಂಸ್ಥೆಗಳು ಕ್ರಮವಾಗಿ ರೂ ೨೬ ಕೋಟಿ ಮತ್ತು ರೂ ೩೦ ಕೋಟಿಗಳನ್ನು ತಮ್ಮ ಮೂಲಗಳಿಂದ ಒದಗಿಸುವುವು. ಕೇಂದ್ರವು ಮಾಡುವ ವೆಚ್ಚದಲ್ಲಿ ರೂ. ೭೫೮ ಕೋಟಿಗಳನ್ನು ತಾನೇ ಇಟ್ಟುಕೊಂಡು, ಉಳಿದ ರೂ. ೪೦೫ ಕೋಟಿಗಳನ್ನು ವಿವಿಧ ರಾಜ್ಯಗಳಿಗೆ ಹಂಚಿ ಕೊಡುವುದು. ರಾಜ್ಯ ಸರಕಾರಗಳು ಇದಕ್ಕೆ ರೂ ೨೫೩ ಕೋಟಿಯನ್ನು ಸೇರಿಸಿ ತಮ್ಮ ರಾಜ್ಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವವು. ಆಗ, ಮುಂದಿನ ವರ್ಷದಲ್ಲಿ ಒಟ್ಟು ಯೋಜನೆಗಾಗಿ ವೆಚ್ಚವಾಗುವ ಮೊಬಲಗು ರೂ. ೧೪೬೬ ಕೋಟಿಗಳಷ್ಟಾಗುವುದು

ಯೋಜನಾ ವೆಚ್ಚವು ಹೆಚ್ಚಿದಂತೆ ಖಾಸಗಿ ಬಂಡವಳ ಹೂಡಿಕೆಯೂ ಅಧಿಕವಾದಂತೆ ಧಾರಣೆಯ ಮಟ್ಟವನ್ನು ಸ್ಥಿರತೆಯನ್ನಿಟ್ಟುಕೊಳ್ಳುವುದು ಈ ವರ್ಷ ಸಾಧ್ಯವೆನಿಸಿದೆ ಇದಕ್ಕೆ ವ್ಯಾವಸಾಯಿಕ ಮತ್ತು ಔದ್ಯಮಿಕ ಉತ್ಪನ್ನಗಳಲ್ಲಿ ನಿರೀಕ್ಷೆಮೀರಿದ ಏರಿಕೆಯಾದುದೇ ಕಾರಣ. ಪೂರೈಕೆ ಮತ್ತು ಬೇಡಿಕೆಗಳ ನಡುವೆ ಸಮತೋಲನವನ್ನಿಡುವ ದಿಸೆಯಲ್ಲಿ ಸರಕಾರದ ಹಣಕಾಸಿನ ನೀತಿಯು ಪರಿಣಾಮಕಾರಿ ಪಾತ್ರ ವಹಿಸಿದೆ. ಕಳೆದ ಅಂದಾಜು ಆಯವ್ಯಯ ಪಟ್ಟಿಯಲ್ಲಿ ಹಾಕಲಾದ ಹೆಚ್ಚಿನ ಕರಗಳಿಂದ ಉತ್ತಮ ವರಮಾನ ಬರುವುದು ಸಾಧ್ಯವಾಯಿತು ಮಾತ್ರವಲ್ಲ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಇರುವ ಸಂಪನ್ಮೂಲಗಳ ವ್ಯಾಪ್ತಿಯು ವಿಶಾಲಗೊಳ್ಳಲು ಕಾರಣವಾಯ್ತು; ಹಣದುಬ್ಬರದ ಪರಿಣಾಮವನ್ನು ತಡೆಗಟ್ಟಲು ಸಾಧ್ಯವೆನಿಸಿತು

ವಿದೇಶೀ ಸಹಾಯವನ್ನು ಸಂಗ್ರಹಿಸುವ ವಿಷಯದಲ್ಲಿ ತೀರ ಎಚ್ಚರಿಕೆಯಿಂದಿರಬೇಕಾಗುತ್ತದೆ. ಮುಂದೆ ದೇಶದ ಆರ್ಥಿಕ ಸ್ಥಿತಿಯ ಮೇಲೆ ತೀವ್ರ ಪರಿಣಾಮ ಬೀರದಿರುವಂತೆ ಬಹಳ ಅನುಕೂಲ ಶರ್ತಗಳ ಆಧಾರದ ಮೇಲೆ ಅವಿಕಸಿತ ದೇಶಗಳ ಅಭಿವೃದ್ಧಿಗಾಗಿ ಸಹಾಯ ನೀಡ ಬೇಕೆಂಬ ಉದಾರತೆ ಹೆಚ್ಚಿನ ಸಂಪನ್ನ ರಾಷ್ಟ್ರಗಳಲ್ಲಿ ಕಾಣತೊಡಗಿದೆ. ವಿದೇಶವಿನಿಮಯದ ದೃಷ್ಟಿಯಿಂದ ಸಮತೋಲನ ಪರಿಸ್ಥಿತಿಗೆ ನೀಡುವಂತೆಯೇ ಯೋಜನಾಕಾರ್ಯಗಳಿಗೂ ಪ್ರಾಮುಖ್ಯತೆ ನೀಡಬೇಕೆಂಬ ವಿಚಾರಕ್ಕೂ ಈಗ ಬೆಲೆ ಬಂದಿದೆ ಭಾರತಕ್ಕಾದರೂ ವಿದೇಶೀಯ ನೆರವು ಉದಾರ ಶರ್ತಗಳ ಆಧಾರದಲ್ಲಿ ದೊರೆಯುತ್ತಿರುವುದು ನಮ್ಮ ಭಾಗ್ಯವೇ ಸರಿ

ಆರ್ಥಿಕ ಮಂತ್ರಿ ಮೊರಾರ್ಜಿ ದೇಸಾಯಿ

ಮೂರನೆಯ ಆರ್ಥಿಕ ಸಮಿತಿಯು ಮಾಡಿದ ಶಿಫಾರಸುಗಳಲ್ಲಿ ಒಂದಂಶವನು ಕೇಂದ್ರವು ಸ್ವೀಕರಿಸಿರುವುದರಿಂದ ರಾಜ್ಯ ಸರಕಾರಗಳಿಗೆ ಅದು ನೀಡುವ ಎಕ್ಸೈಸ್ ಮತ್ತು ವರಮಾನ ತೆರಿಗೆಗಳ ಅಂಶವು ಹೆಚ್ಚುವುದು ಇದರಿಂದ ಎಲ್ಲ ರಾಜ್ಯಗಳ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳುವುವೆಂಬ ನಿರೀಕ್ಷೆಯಿದೆ. ರೂ. ೪೫೫ ಕೋಟಿಗಳಷ್ಟು ವಿದೇಶೀ ಸಹಾಯವೂ ರೂ. ೨೬೦ ಕೋಟಿ ಸಾರ್ವಜನಿಕ, ಸಾಲವೂ ಮುಂದಿನ ವರ್ಷ ದೊರೆಯಬಹುದೆಂದು ಅಂದಾಜು ಪಟ್ಟಿಯು ಹೇಳುತ್ತದೆ.

ಮುಂಗಡ ಪತ್ರವು ೬೪ ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸುತ್ತಿರುವುದಾದರೂ ಅರ್ಥ ಮಂತ್ರಿಗಳು ಯಾವುದೇ ಹೊಸ ತೆರಿಗೆಯ ಪ್ರಸ್ತಾಪವನ್ನು ಮಾಡಲಿಲ್ಲ. ಆದರೆ, ಸದ್ಯ ಇದರ ಮಂಡನೆಯು ಕೇವಲ ತಾತ್ಕಾಲಿಕೋಪಯೋಗವೆನಿಸುತ್ತಿರುವುದರಿಂದ, ಮುಂದೆ ಅಧಿಕಾರ ಪಡೆಯುವ ಲೋಕ ಸಭೆಯು ಈ ಪತ್ರವನ್ನು ಮಂಜೂರು ಮಾಡಬೇಕಾಗಿರುವುದರಿಂದ, ಆಗ ಕೊರತೆಯನ್ನು ತುಂಬಿಸಿ ಕೊಳ್ಳಲು ಹೊಸ ಹೊಸ ಕರಗಳು ಅವತ್ಯ ಬಂದೇ ಬರುವುವು ಎಂಬುದು ಖಂಡಿತವಾಗಿ ತಿಳಿದು ಬಂದಿದೆ. ಆದರೆ, ತೆರಿಗೆ ಗುರಿಯಾಗುವ ಸರಕುಗಳಾವುವೆಂದು ಮಾತ್ರ ತಿಳಿದಿಲ್ಲ.

ನಮ್ಮ ಕೇಂದ್ರ ಸರಕಾರದ ಮುಂದಿನ ವರ್ಷದ ಮುಂಗಡ ಪತ್ರವು ತೃಪ್ತಿಕರವೆಂದೆನಿಸುತ್ತಿಲ್ಲ. ವಿದೇಶೀ ಸಹಾಯದ ಬಲದಲ್ಲಿಯೇ ನಮ್ಮ ಯೋಜನೆಗಳು ನಿಂತಿವೆ. ಹಾಗಿದ್ದರೂ ಆತ್ಮತೃಪ್ತಿಪಟ್ಟುಕೊಳ್ಳಲು ಯಾವ ಕಾರಣವೂ ಇಲ್ಲ. ಭಾರತ ಸರಕಾರದ ಆರ್ಥಿಕ ನೀತಿಯು ಪ್ರಗತಿಪರವಾಗಿದೆ ಮಾತ್ರವಲ್ಲವೆ ಚುನಾವಣೆಗಳ ಆಡಳಿತ ಪಕ್ಷವನ್ನೇ ಮರಳಿ ಬೆಂಬಲಿಸಿದ ಜನತೆಯು ಈ ನೀತಿಯನ್ನು ಒಪ್ಪಿಕೊಂಡಿದೆಯೆನ್ನಬಹುದು.



ಬೆಂಗಳೂರಿನ ಕಂಚು ವಸ್ತು ತಯಾರಿಕಾ ಕೇಂದ್ರದಲ್ಲಿ ನಿರ್ಮಿಸಿದ "ದೀಪಲಕ್ಷ್ಮಿ".

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೨೨-೩-'೬೨	೨೮

ಪಾಕ್ ಮನೀಷೆಯೇನು?

ಕಾಶ್ಮೀರ ಪ್ರಶ್ನೆಯನ್ನು ನೇರವಾದ ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳಬೇಕೆಂದು ಭಾರತವೇನೋ ತನ್ನ ಕಡೆಯಿಂದ ಬಹು ದಿನಗಳಿಂದಲೂ ಪ್ರಯತ್ನಗಳನ್ನು ನಡೆಸುತ್ತ ಬಂದಿದೆ. ಮಾತ್ರವಲ್ಲ, ಅಂಥ ಪರಿಹಾರದ ನ್ಯಾಯೋಚಿತ ಮಾರ್ಗಗಳ ದ್ವಾರವನ್ನು ಸದಾ ಮುಕ್ತವಾಗಿರಿಸಿದೆ. ಪಾಕಿಸ್ತಾನದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ರಾಜೇಶ್ವರ ದಯಾಳರು ಈ ಸಂಬಂಧದಲ್ಲಿ ಪಾಕ್ ಸತ್ತಾಧರರ ಮನಸ್ಸನ್ನು ಒಲಿಸಲು ಅದೆಷ್ಟು ಪ್ರಯತ್ನಪಟ್ಟರೂ ಅವೆಲ್ಲವೂ ನಿಷ್ಫಲವಾಗುವಂತಹ ದುಸ್ಥಿತಿ ತಲೆದೋರುವ ಚಿಹ್ನೆಗಳೇ ಗೋಚರಿಸುತ್ತಿವೆ. ಕಳೆದ ನಾಲ್ಕು ವರ್ಷಗಳಿಂದ ನಿದ್ರಿಸುತ್ತಿದ್ದ ಈ ಪ್ರಶ್ನೆಯನ್ನು ಗೋವಾ ವಿಮೋಚನೆಯಿಂದ ಧೃತಿಗೆಟ್ಟ ಅಧ್ಯಕ್ಷ ಅಯೂಬ ಖಾನರು ಮರಳಿ ಎಚ್ಚರಿಸುವ ಸಾಹಸ ತೋರಿಸಿದರು; ಆದರೆ, ಇದರ ಪರಿಹಾರಕ್ಕೆ ನೇರ ಮಾತುಕತೆಗೆ ಬರಬೇಕೆಂಬ ಪ್ರಧಾನಿ ನೆಹರುರವರ ಆಮಂತ್ರಣವನ್ನು ಮಾತ್ರ ಸಂಪೂರ್ಣ ನಿರಾಕರಿಸಿರುವುದು ಅವರ ಮನೀಷೆಗೆ ಕನ್ನಡಿ ಹಿಡಿಯುತ್ತದೆ. ಇತ್ತೀಚೆಗೆ ಆಝಾದ ಕಾಶ್ಮೀರದ ಅಧ್ಯಕ್ಷ ಖುರ್ಶಿದರು ಢಾಕ್ಕಾದಲ್ಲಿ ಮಾತನಾಡುತ್ತ 'ಪಾಕಿಸ್ತಾನವು ಭಾರತದೊಡನಿರುವ ಈ ವಿವಾದವನ್ನು ಕೊನೆಗೊಳಿಸಲು ಶಾಂತ ವಿಧಾನಗಳನ್ನು ಇದು ವರೆಗೆ ಅನುಸರಿಸಿದ್ದು ಅವು ಅಯಶಸ್ವಿಯಾಗಿವೆ. ಆದುದರಿಂದ ಯುದ್ಧವಿಲ್ಲದೆ ಕಾಶ್ಮೀರವು ಪಾಕಿಸ್ತಾನಕ್ಕೆ ಎಂದಿಗೂ ಸಿಗಲಾರದೆಂಬುದು ದೃಢವಾಗುತ್ತದೆ' ಎಂದು ಹೇಳಿದರೆಂದು ವರದಿಯಾಗಿದೆ. ಇದೇ ಮಾದರಿಯ ಇಲ್ಲವೇ ಇದೇ ಅರ್ಥ ಬರುವಂತಹ ಹೇಳಿಕೆಗಳು ಪದೇ ಪದೇ ಪಾಕ್ ನಾಯಕರ ಮುಖದಿಂದ ಈ ಮೊದಲೂ ಹೊರಟದ್ದುವು; ಮುಂದಕ್ಕೂ ಹೊರಡುವುವು.

ಇಲ್ಲಿ ಒಂದು ವಿಷಯವನ್ನು ಅವಶ್ಯ ಗಮನಿಸಬೇಕು. ಪಾಕ್ ನಾಯಕತನದಲ್ಲಿ ಕಳೆದ ಹದಿನಾಲ್ಕು ವರ್ಷಗಳಲ್ಲಿ ಬೇಕೆಂಬಷ್ಟು ಪರಿವರ್ತನೆಯಾದರೂ ಸರಕಾರದ ನೀತಿ–ಧೋರಣೆಗಳು ಬದಲಾಗುತ್ತ ನಡೆದರೂ ಭಾರತದೊಡನಿರುವ ಸಂಬಂಧವು ಮಾತ್ರ ಅಂದಿನಿಂದ ಇಂದಿನವರೆಗೂ ಏಕಪ್ರಕಾರವಿರುವುದು; ಅದರಲ್ಲೂ ಕಾಶ್ಮೀರದ ಕಡೆಗೆ ಅವಲಂಬಿಸಿದುವ ನೀತಿಯು ಅಪರಿವರ್ತನೀಯವೆಂಬಂತೆ ನಿಂತಿರುವುದು. ಏಕೆಂದರೆ, ಸ್ವದೇಶದ ಆಂತರಿಕ ದುರ್ಬಲತೆಗಳು ಅಧಿಕಗೊಂಡಾಗ, ಜನತೆಯು ಸರಕಾರದತ್ತ ತೀಕ್ಷ್ಣ ದೃಷ್ಟಿಯನ್ನು ಹರಿಸತೊಡಗುವಾಗ, ಅದರ ಗಮನವನ್ನು ಇತರತ್ರ ಹರಿಯುವಂತೆ ಮಾಡಲು ಪ್ರಾರಂಭದಿಂದಲೂ ಪಾಕ್ ಅಧಿನಾಯಕರು ಕಾಶ್ಮೀರ ವಿವಾದವನ್ನು ಉತ್ತಮ ಸಮರ್ಥ ರಕ್ಷಾಕವಚದಂತೆ ಬಳಸಿಕೊಂಡಿರುವುದು ವಿಶ್ವವಿದಿತವಿರುವುದು. ಶಾಂತಿಯ ಬಾಗಿಲು ಮುಚ್ಚಿದೆಯೆಂದು ಹುಯ್ಯಲೆಬ್ಬಿಸುವ ಪಾಕ್ ನೇತಾರರು ಬಾಗಿಲನ್ನು ತೆರೆದು 'ಬನ್ನಿರಿ' ಎಂದು ಕೈ ಮುಗಿದು ಒಂದಲ್ಲ, ಹಲಬಾರಿ ಆಮಂತ್ರಿಸಿದರೂ ಅದನ್ನು ತಮ್ಮ ಸ್ವಾಭಾವಿಕ ಕಿವುಡುತನದಿಂದ ನಿರ್ಲಕ್ಷ್ಯಿಸುತ್ತ ಬರುವುದರ ಅರ್ಥವೇನು? ಈ ವಿವಾದವು ವಿವಾದವಾಗಿಯೇ ಉಳಿಯಬೇಕೆಂದು ಭಾರತವೆಂದಿಗೂ ಬಯಸುತ್ತಿಲ್ಲ; ಸಾಮಾನ್ಯವಾಗಿ ಹೇಳುವುದಾದರೆ, ಇದು ಅಂತಹ ದೊಡ್ಡ ವಿವಾದವಾಗಿಯೂ ಉಳಿದಿಲ್ಲ. ಈಗ ಉಳಿದಿರುವ ಅಂಶವೆಂದರೆ ಪಾಕಿಸ್ತಾನವು ತಾನು ಆಕ್ರಮಿಸಿಕೊಂಡು 'ಆಝಾದ ಕಾಶ್ಮೀರ'ವೆಂದು ನಾಮಕರಣ ಮಾಡಿರುವ ಭೂಭಾಗದಿಂದ ಅದು ಕಂಬಿ ಕೀಳುವುದು ಮಾತ್ರ. ಆದರೆ, ಕಾಶ್ಮೀರವು ನ್ಯಾಯಾನ್ಯಾಯಗಳ ವಿವೇಚನೆಯಿಲ್ಲದೇನೇ ತನಗೆ ದೊರೆಯಬೇಕೆಂಬ ಆದರ ಕುರುಡು ವಾದದಿಂದ ಅಲ್ಲಿನ ನಾಯಕರಿಗೆ ತುಂಬ ಲಾಭವಿದೆ. ಅಭಿವೃದ್ಧಿಯನ್ನು ಕಾಣದ ಪಾಕ್ ಜನತೆಯನ್ನು ವಂಚಿಸಿ, ತಮ್ಮ ಸ್ವಾರ್ಥಸಾಧನೆ ಮಾಡಿಕೊಳ್ಳಲು ಪಾಕ್ ನಾಯಕರಿಗೆ ಈ ವಿವಾದ ಸದಾಕಾಲಕ್ಕೂ ವಿವಾದವಾಗಿಯೇ ಉಳಿಯಬೇಕು. ಈ ಕಾರಣದಿಂದಲೇ ಅವರು ಮಾತುಕತೆಯ ಪ್ರಸ್ತಾಪವನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತಾರೆ. ಚೀನವು ಭಾರತದ ಭೂಮಿಯನ್ನು ಅಕ್ರಮವಾಗಿ ಆಕ್ರಮಿಸಿರುವುದರಿಂದ ಈ ಎರಡು ರಾಷ್ಟ್ರಗಳ ನಡುವಣ ಘರ್ಷಣೆಯನ್ನು ತನ್ನ ಲಾಭಾಂಶವನ್ನಾಗಿ ಉಪಯೋಗಿಸಲು ಅಯೂಬ ಖಾನರು ಹೇಸದೆ ಮುಂದುವರಿಯುತಿದ್ದಾರೆ. ಪಾಕಿಸ್ತಾನ—ಚೀನಾಗಳ ಸೀಮೆಯನ್ನು ನಿರ್ಧರಿಸುವ ಒಡಂಬಡಿಕೆಯೊಂದನ್ನು ಮಾಡಿಕೊಳ್ಳಲು ಅವರು ಸನ್ನದ್ಧರಾಗಿದ್ದಾರೆ. ಕಾಶ್ಮೀರದ ಒಂದಂಶದಲ್ಲಿ ಈ ಎರಡು ದೇಶಗಳ ಗಡಿಯಿದೆಯೆಂದು ಪಾಕಿಸ್ತಾನ ಹೇಳುತ್ತದೆ; ಸಾಮ್ರಾಜ್ಯವಾದಿ ಚೀನವಾದರೂ ಇದನ್ನು ಒಪ್ಪುವುದು; ಏಕೆಂದರೆ, ಇಂತಹ ಸಂಧಾನದಿಂದ ಅದಕ್ಕೆ ಲಾಭವಿದೆ. ಆದರೆ, ಕಾಶ್ಮೀರವು ಭಾರತಕ್ಕೆ ಸೇರಿದುದು ಆದುದರಿಂದ ಚೀನಾದೊಡನೆ ಸೀಮಾ ಒಡಂಬಡಿಕೆಯನ್ನು ಮಾಡಿಕೊಳ್ಳಲು ಪಾಕಿಸ್ತಾನಕ್ಕೆ ಯಾವ ರೀತಿಯಲ್ಲೂ ಅಧಿಕಾರವಿಲ್ಲ. ಭಾರತ ಮಾತ್ರ ಅದರ ಸಂಬಂಧವಾಗಿ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳಬಹುದೆಂದು ಪ್ರಧಾನಿ ನೆಹರುರವರ ಎಚ್ಚರಿಕೆಯನ್ನು ಉಭಯ ರಾಷ್ಟ್ರಗಳೂ ಅವಶ್ಯ ತಿಳಿದುಕೊಳ್ಳಬೇಕು.

ಪಾಕಿಸ್ತಾನವು ಸುಳ್ಳುಪೊಳ್ಳು ಆಧಾರಗಳಿಂದ ಕಾಶ್ಮೀರವು ತನ್ನದೆಂದು ವಾದಿಸಬಹುದು; ತನ್ನ ಕುಹಕದಿಂದ ಕೆಲವೊಂದು ಸಭ್ಯರಾಷ್ಟ್ರಗಳನ್ನು ವಂಚಿಸಬಹುದು. ಆದರೆ, ಎಲ್ಲರನ್ನೂ ಎಲ್ಲ ಕಾಲಕ್ಕೂ ವಂಚಿಸುವುದು ಸಾಧ್ಯವಿಲ್ಲವೆಂಬುದನ್ನು ಅದು ಅವಶ್ಯ ತಿಳಿದಿರಬೇಕು. ವಿಶ್ವದ ಹೆಚ್ಚಿನೆಲ್ಲ ರಾಷ್ಟ್ರಗಳೂ, ರಶ್ಯ ಕೂಡ, ಕಾಶ್ಮೀರ ಭಾರತದ್ದೆಂದು ಒಪ್ಪಿರುವಾಗ, ತನ್ನ ಕುರುಡು ರಾಜ ಕಾರಣದ ಗುಂಗಿನಲ್ಲಿ ಪಾಕಿಸ್ತಾನ ವಾದಿಸುತ್ತ ಕುಳಿತರೆ, ಅದು ಆಕಾಶವನ್ನು ಮುಷ್ಟಿಯಲ್ಲಿ ಬಿಗಿ ಹಿಡಿಯುವೆನೆಂಬ ವ್ಯರ್ಥ ಸಾಹಸ ಮಾತ್ರ. ತನ್ನ ದೇಶದೊಳಗಿನ ಆಂತರಿಕ ವಿರೋಧಿಗಳನ್ನು ಹತ್ತಿಕ್ಕಲು ಅಸಮರ್ಥರಾದ ಅವರು ಕಾಶ್ಮೀರದ ಗುಳಿಗೆಕೊಟ್ಟು ಅವರನ್ನು ಒಳಿತು ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಅಯೂಬ ಖಾನರು ಎಂದಿಗೂ ಸಫಲರಾಗುವುದು ಸಾಧ್ಯವಿಲ್ಲ. ಸೂರ್ಯನನ್ನು ಕರಿಯ ಮೋಡ ಕವಿದು ಅಲ್ಪಕಾಲ ಮರೆಮಾಡಬಹುದು; ಮುಂದೆ ಮೋಡ ತಾನಾಗಿಯೇ ಹಾರಿ ಹೋದಾಗ ಸೂರ್ಯ ಮತ್ತಷ್ಟು ಪ್ರಕಾಶಮಾನವಾಗಿ ಬೆಳಗುತ್ತಾನೆ. ವಿವಾದವನ್ನು ನಿಜವಾಗಿಯೂ ಕೊನೆಗೊಳಿಸುವ ಇಚ್ಛೆ ಅಯೂಬ ಖಾನರಿಗೆ ಎಳ್ಳಷ್ಟೂ ಇಲ್ಲವೆಂಬುದಕ್ಕೆ ಅವರ ಇದುವರೆಗಿನ ವರ್ತನೆಯೇ ಸಾಕ್ಷಿಯಾಗಿದೆ.

ಆಲ್ಜೀರಿಯನ್ ವಿಜಯ

ಏಳು ವರ್ಷಗಳಿಂದ ಎಡೆಬಿಡದೆ ನಡೆದು ಸಾವಿರಾರು ಪ್ರಾಣ ಬಲಿಗೆ ಕಾರಣವೆನಿಸಿದ ಫ್ರಾನ್ಸ್—ಆಲ್ಜೀರಿಯಾಗಳ ನಡುವಣ ಹೋರಾಟವು ಇದೀಗ ಕೊನೆಗೊಳ್ಳುವ ಹಂತಕ್ಕೆ ಬಂದು ಮುಟ್ಟಿದುದು ಪ್ರಸನ್ನತೆಯ ವಿಚಾರವಿದೆ. ಆಲ್ಜೀರಿಯಾದ ಹೋರಾಟವು ಸ್ವಾತಂತ್ರ್ಯದ ಬೇಡಿಕೆಯನ್ನು ಮುಂದಿಟ್ಟುಕೊಂಡೇ ಪ್ರಾರಂಭವಾಗಿದ್ದು, ಅದು ಸಶಸ್ತ್ರ ರೂಪ ಧಾರಣೆ ಮಾಡಿತ್ತು. ಫ್ರೆಂಚ ಸರಕಾರದ ವಿರುದ್ಧ ಸಶಸ್ತ್ರವಾಗಿ ಕಾದಾಟ ನಡೆಸಿ ಯಶಸ್ವಿಯಾದ ಆಲ್ಜೀರಿಯನ್ನರು ಇನ್ನು ಮುಂದಿನ ಮಾರ್ಗವನ್ನು ನಿರ್ಧರಿಸಬೇಕಾಗಿದೆ. ಅಧ್ಯಕ್ಷ ಡಿಗಾಲೆಯವರು ತನ್ನವರ ವಿರೋಧವನ್ನೂ ಕಡೆಗಣಿಸಿ, ಆಲ್ಜೀರಿಯಾಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದಕ್ಕೆ ಮುಂದಾಗಿದ್ದಾರೆ. ಯುದ್ಧ ವಿರಾಮ ಒಡಂಬಡಿಕೆಯಾದ ನಂತರ ಚುನಾವಣೆಗಳು ನಡೆದು ಸಂವಿಧಾನ ರಚನೆಯೇ ಮೊದಲಾದ ವ್ಯಾವಹಾರಿಕ ಕಾರ್ಯಕಲಾಪಗಳಿಗೆ ಅಣಿಯಾಗಬೇಕಾಗಿದೆ. ತಾನು ಫ್ರಾನ್ಸಿನೊಡನೆ ಇಟ್ಟುಕೊಳ್ಳಬೇಕಾದ ಸಂಬಂಧವನ್ನದು ಗೊತ್ತುಮಾಡಬೇಕಾಗಿದೆ. ಅಧ್ಯಕ್ಷ ಡಿಗಾಲೆಯವರಾದರೂ ಉದಾರತೆಯಿಂದ ವರ್ತಿಸಿ ತಾವಿತ್ತ ಸ್ವಾತಂತ್ರ್ಯ ಪ್ರದಾನದ ವಚನವನ್ನು ಪೂರೈಸಿಕೊಡುವರೆಂದು ನಂಬಬಹುದು. ಉಭಯ ರಾಷ್ಟ್ರಗಳಲ್ಲಿ ಮುಂದೆಯೂ ಮಧುರ ಬಾಂಧವ್ಯವುಳಿಯುವಂತೆ ಆಲ್ಜೀರಿಯನರೂ ಅವರೊಡನೆ ತುಸು ಉದಾರತೆಯಿಂದಲೇ ವರ್ತಿಸಲು ಒಪ್ಪಿಕೊಂಡಿರುವರೆಂದು ತಿಳಿಯುತ್ತದೆ. ಆಲ್ಜೀರಿಯಾದಲ್ಲಿರುವ ಫ್ರೆಂಚರನ್ನು ಯೋಗ್ಯ ರೀತಿಯಲ್ಲಿ ರಕ್ಷಿಸಿಕೊಂಡು ಬರಲು ಅವರು ಒಪ್ಪಿದ್ದಾರೆ. ಫ್ರಾನ್ಸಿನ ವ್ಯಾಪಾರ, ಅಣ್ವಸ್ತ್ರ ಪ್ರಯೋಗ, ಸಹರಾ ಮರುಭೂಮಿಯಲ್ಲಿ ತೈಲ ಸಂಶೋಧನೆ—ಮೊದಲಾದುವುಗಳ ಕಡೆಗೂ ಅವರು ತುಂಬ ಉದಾರತೆ ತೋರಲು ಸಿದ್ಧರಾಗಿದ್ದಾರೆ. ಜಾಗತಿಕ ಪ್ರಶ್ನೆಗಳಲ್ಲಿ ಒಂದಾದ ಆಲ್ಜೀರಿಯಾವು ಹಿಂಸಾಮಾರ್ಗದಲ್ಲೇ ಮುನ್ನಡೆದಿರುವುದಾದರೂ ಶಾಂತಿಯ ಒಡಂಬಡಿಕೆಯಲ್ಲಿ ಸ್ವಾತಂತ್ರ್ಯದ ಆಶ್ವಾಸನೆಯಲ್ಲಿ ಪರ್ಯವಸಾನಗೊಳ್ಳುವಂತಾದುದು ನಿಜಕ್ಕೂ ಸ್ವಾಗತಾರ್ಹ.

ಜಗತ್ಪರ್ಯಟನ

ರಾಜೇಂದ್ರ ಪ್ರಸಾದ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪ್ರಚಲಿತ ಸಂಸತ್ತಿನ ಕೊನೆಯ ಸಭೆಯನ್ನು ಉದ್ಘಾಟಿಸಿ ತಮ್ಮ ಭಾಷಣ ಮಾಡಿದರು. ಇದುವರೆಗೂ ಯಾವ ರೀತಿಯಲ್ಲೂ ಸಿಕ್ಕಿ ಬೀಳದ ಅವರು ಈ ಬಾರಿ ಮಾತ್ರ ಒಂದು ಶಬ್ದದಿಂದ ತಪ್ಪಿಬಿದ್ದಿದ್ದಾರೆ. 'ನನ್ನ ಸರಕಾರವು ಚುನಾವಣೆಯಲ್ಲಿ ಹೋರಾಡಿ ಗೆದ್ದಿದೆ" ಎಂದವರು ಪ್ರಧಾನಿಯವರು ತಯಾರಿಸಿಕೊಟ್ಟ ಭಾಷಣದಲ್ಲಿದ್ದುದನ್ನು ಓದಿ ಹೇಳಿದರು. ಸಮಾಜವಾದೀ ಧೋರಣೆ ಮತ್ತು ಕಾರ್ಯಕ್ರಮಕ್ಕಾದ ವಿಜಯವನ್ನು ತಮ್ಮ ಸರಕಾರದ ವಿಜಯವೆಂದು ಸಮರ್ಥಿಸುವ ಹವಣಿಕೆಯು ಆ ಭಾಷಣದಲ್ಲಿದ್ದಿರಬಹುದು. ಆದರೂ ರಾಜ್ಯ ಸಭೆಯಲ್ಲಿನ ಕಮ್ಯುನಿಸ್ಟ ಸದಸ್ಯರೊಬ್ಬರು ಈ ಅಂಶವನ್ನು ಕುರಿತು ಸಂವಿಧಾನಾತ್ಮಕ ಅನೌಚಿತ್ಯವಿರುವುದನ್ನು ಎತ್ತಿತೋರಿಸಿದರು.

ಎಸ್. ಆರ್. ಕಂಠಿ

ಶ್ರೀ ಎಸ್. ಆರ್. ಕಂಠಿಯವರು ತಾವು ವಿಧಾನ ಸಭಾ ಕಾಂಗ್ರೆಸ್ ಪಕ್ಷದ ನಾಯಕನಾಗುವೆನೆಂದು ಎಂದಿಗೂ ಊಹಿಸಿರಲಾರರು. ಕೇಂದ್ರದಿಂದ ಬಂದ ಶಾಸ್ತ್ರಿಯವರು ಚುನಾವಣೆಯಲ್ಲಿ ಸೋತವರು ನಾಯಕತ್ವಕ್ಕೆ ಸ್ಪರ್ಧಿಸಬಾರದೆಂದು ದೃಢವಾಗಿ ನುಡಿದುದರಿಂದ ಮತ್ತಿತರ ಕಾರಣಗಳಿಂದ ಕಳೆದ ಬಾರಿ ಜತ್ತಿಯವರ ಹೆಸರು ಮುಂದೆ ಬಂದಂತೆಯೇ ಅನಿರೀಕ್ಷಿತವಾಗಿ ಬಂತು. ಶಾಂತಿಯ ಅಧ್ಯಕ್ಷಪೀಠದಲ್ಲಿದ್ದ ಕಂಠಿಯವರಿಗೆ ಮುಖ್ಯ ಮಂತ್ರಿಯ ಪೀಠವು ಮುಳ್ಳಿನ ಹಾಸಿಗೆಯೆಂಬುದು ಇಷ್ಟರಲ್ಲಿಯೇ ಮನವರಿಕೆಯಾಗಿದೆ. ತನ್ನ ಸಹ ಮಂತ್ರಿಗಳ ಆಯ್ಕೆಯನ್ನೇ ಸಂಪೂರ್ಣಗೊಳಿಸುವಲ್ಲಿ ವಿವಿಧ ಪ್ರಶ್ನೆಗಳನ್ನು ಎದುರಿಸ ಬೇಕಾದ ಕಂಠಿಯವರು ಹಾಸಿಗೆಯಿಂದ ಮುಳ್ಳಿಗೆ ನೆಗೆದೆನೆಂದು ತಿಳಿದರೆ ಆಶ್ಚರ್ಯಪಡ ಬೇಕಿಲ್ಲ.

ಕೃಷ್ಣ ಮೆನನ್

ಸಂರಕ್ಷಣಾ ಶಾಖೆಯು ಇದುವರೆಗೆ ಕೃಷ್ಣ ಮೆನನ್ನರ ಕೈಗಳಲ್ಲಿಯೇ ಉಳಿದು ಬಂದಿದ್ದರೂ ಪ್ರಧಾನಿ ನೆಹರೂ ತಾನೇ ಅದರ ನೀತಿಗೆ ಜವಾಬ್ದಾರನೆಂದು ಭರವಸೆಯಿತ್ತಿದ್ದಾರೆ. ಚೀನಾವು ಭಾರತದ ಮೇಲೆ ಮಾಡಿದ ಆಕ್ರಮಣವನ್ನು ಹಿಂದೆಗೆಸಲು ಶಾಂತ ವಿಧಾನಗಳು ವಿಫಲಗೊಂಡರೆ, ಉಳಿದ ಮಾರ್ಗಗಳನ್ನು ಅನುಸರಿಸಬೇಕಾಗುವುದು ಎಂದು ಅವರು ಹೇಳಿದ್ದಾರೆ. ಮೆನನ್ನರಲ್ಲಿ ಪಕ್ಷದೊಳಗಿನವರಿಗೇನೇ ಸಾಕಷ್ಟು ವಿಶ್ವಾಸವಿಲ್ಲದಿರುವಾಗ, ಸಂರಕ್ಷಣೆಯಂತಹ ಗುರುತರ ಖಾತೆಯನ್ನು ಅವರಿಗೆ ಮುಂದೆ ನೀಡಲಾಗುವುದಿಲ್ಲವೆಂದೂ ಪ್ರಧಾನಿಗಳೇ ಅದನ್ನು ನಿರ್ವಹಿಸುವರೆಂದೂ ಈಗ ನಿಶ್ಚಯವಾಗಿ ತಿಳಿದು ಬಂದಿದೆ. ಗೋವಾ ವಿಮೋಚನಾನಂತರ ನಮಗೂ ನಮ್ಮ ಬಲವೆಷ್ಟೆಂಬುದರ ಮನವರಿಕೆಯಾಗತೊಡಗಿದೆ. ಆದರೂ ಹಠಾತ್ತಾಗಿ ಚೀನಾದ ಮೇಲೆ ಏರಿ ಹೋಗಬೇಕೆಂಬ ವಾದವನ್ನು ನೆಹರು ಎಂದಿಗೂ ಒಪ್ಪುವುದಿಲ್ಲ.

ಜೀವ ವಿಮಾ ಕಾರ್ಪೊರೇಶನಿನ ಪ್ರಗತಿ

1961ರ ಹೊಸ ವ್ಯವಹಾರ ರೂಪಾಯಿ 608 ಕೋಟಿಗಳಿಗೂ ಮೀರಿದೆ

ಜೀವ ವಿಮಾ ಕಾರ್ಪೋರೇಶನಿನ ಪ್ರಗತಿ ಭರದಿಂದ ಸಾಗುತ್ತಿದೆ. ಇದರ 1961ರ ವ್ಯವಹಾರ ಮುಂಚಿನ ವರ್ಷಕ್ಕಿಂತಲೂ ಅತಿ ಹೆಚ್ಚಾಗಿರುತ್ತದೆ. 1961ರ ಹೊಸ ವ್ಯವಹಾರ ರೂ. 608 ಕೋಟಿಗಳಿಗೂ ಮೀರಿರುತ್ತವೆ.

1961ರ ಹೊಸ ವ್ಯವಹಾರ 1960ಕ್ಕಿಂತ ಸೇಕಡಾ 22.8ರಷ್ಟು ಅಧಿಕವಾಗಿರುತ್ತದೆ. 1960ರ ವ್ಯವಹಾರ ರೂ. 497.54 ಕೋಟಿಗಳಾಗಿದ್ದು ಇದು 1959ಕ್ಕಿಂತ ಸೇಕಡಾ 16.9ರಷ್ಟು ಹೆಚ್ಚಾಗಿತ್ತು. 1961ರ ಒಟ್ಟು ಹೊಸ ವ್ಯವಹಾರ (ಎನ್ಯುಟೀಸ್‌ಗಳನ್ನು ಬಿಟ್ಟು) ರೂ. 608,76,10,000 ಆಗಿರುತ್ತವೆ

ಕಾರ್ಪೊರೇಷನಿಗೆ 1961 ಒಂದು ಕಷ್ಟಕರವಾದ ವರ್ಷವೆಂದು ತೋರಿ ಬರಲಾಗಿತ್ತು. ಯಾಕೆಂದರೆ ನೆರೆ ಹಾವಳಿ ಮತ್ತು ಇತರ ಆಪತ್ತುಗಳಿಂದಾಗಿ ಹಲವಾರು ಕಡೆಗಳಲ್ಲಿ ವಿಮಾ ವ್ಯವಹಾರವನ್ನು ಮಾಡುವುದೇ ಕಷ್ಟಕರವೆಂದು ಕಂಡುಬರಲಾಗಿತ್ತು. ಆದರೂ ಕೋರ್ಪರೇಷನಿಗೆ ರೂ. 702.93 ಕೋಟಿಗಳಷ್ಟು ವ್ಯವಹಾರವನ್ನು ತರಲಾಗಿತ್ತು ಇದರಲ್ಲಿ ರೂ. 608 75 ಕೋಟಿಗಳಷ್ಟು ವ್ಯವಹಾರವನ್ನು ಪೂರೈಸಲಾಗಿದೆ

ಹೊಸ ಪಾಲಿಸಿದಾರರು

ಪೂರ್ಣ ವರ್ಷದ ವ್ಯವಹಾರದ ಬಗ್ಗೆ ವಿವರಗಳನ್ನು ಸಿದ್ಧಪಡಿಸಲು ಸ್ವಲ್ಪ ಸಮಯ ತಗಲಲಿದ್ದರೂ, ನವಂಬರ 30, 1961ರ ವರೆಗೆ ಮಾರಾಟ ಮಾಡಿರುವ 8,23,470 ಪಾಲಿಸಿಗಳಲ್ಲಿ 5,78,897 ಪಾಲಿಸಿಗಳನ್ನು (ಅಂದರೆ ಸೇಕಡಾ 70ರಷ್ಟು) ಜೀವ ವಿಮೆಯನ್ನು ಪ್ರಥಮ ಭಾರಿ ಪಡೆಯುವ ಜನತೆಗೆ ಮಾರಾಟ ಮಾಡಲಾಗಿದೆ. ಪಾಲಿಸಿಗಳನ್ನು ಹೊಸ ಪಾಲಿಸಿದಾರರಿಗೆ ಅತಿ ಹೆಚ್ಚಾಗಿ ಮಾರಾಟ ಮಾಡಿದ ಡಿವಿಜನ್‌ಗಳಲ್ಲಿ ಮಧುರೈ ಡಿವಿಜನ್ ಪ್ರಥಮ ಸ್ಥಾನವನ್ನು ಗಳಿಸಿರುತ್ತದೆ. ಕಟಕ್ ಡಿವಿಜನ್, ಕೊಯಂಬತೂರ್ ಡಿವಿಜನ್, ಟ್ರಿವೇಂಡ್ರಮ್ ಮತ್ತು ಲಕ್ನೋ ಡಿವಿಜನ್‌ಗಳು, ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಸ್ಥಾನಗಳನ್ನು ಪಡೆದಿರುತ್ತವೆ.

ನೋನ್-ಮೆಡಿಕಲ್ ಯೋಜನೆಗಳು

ನವಂಬರ 30, 1961ರ ವರೆಗೆ ಸುಮಾರು 284 ಸಾವಿರ ಪಾಲಿಸಿಗಳನ್ನು (ಅಂದರೆ ಒಟ್ಟು ಮಾರಾಟ ಮಾಡಿದ ಪಾಲಿಸಿಗಳ ಸೇಕಡಾ 34.6ರಷ್ಟು) ವೈದ್ಯಕೀಯ ಪರೀಕ್ಷೆ ಇಲ್ಲದ ಯೋಜನೆಗಳ ಮೂಲಕ ಮಾರಾಟ ಮಾಡಲಾಗಿದೆ. ದಕ್ಷಿಣ ವಲಯ ಈ ಯೋಜನೆಗಳ ಮೂಲಕ ಸೇಕಡಾ 42 7ರಷ್ಟು ಪಾಲಿಸಿಗಳನ್ನು ಮಾರಾಟ ಮಾಡಿರುತ್ತದೆ, ಮತ್ತು ಮಧ್ಯ ವಲಯ ಸೇಕಡಾ 39.8ರಷ್ಟು ಪಾಲಿಸಿಗಳನ್ನು ಮಾರಾಟ ಮಾಡಿರುತ್ತದೆ.

ದಕ್ಷಿಣ ವಲಯ ಪ್ರಥಮ ಸ್ಥಾನದಲ್ಲಿ

ಕಾರ್ಪೋರೇಷನಿನ ಐದು ವಲಯಗಳಲ್ಲಿ ದಕ್ಷಿಣ ವಲಯವು ರೂ. 151.62 ಕೋಟಿಗಳಷ್ಟು ವ್ಯವಹಾರವನ್ನು ಮಾಡಿ ಪ್ರಥಮ ಸ್ಥಾನವನ್ನು ಪಡೆದಿರುತ್ತದೆ. ಎರಡನೇ ಸ್ಥಾನದಲ್ಲಿರುವ ಪೂರ್ವ ವಲಯ ರೂ 138 91 ಕೋಟಿಗಳಷ್ಟು ವ್ಯವಹಾರವನ್ನು ಮಾಡಿದೆ.

ಆದರೆ ಮುಂಚಿನ ವರ್ಷಕ್ಕಿಂತ 1961ರಲ್ಲಿ 32.1% ಹೆಚ್ಚಿಗೆ ವ್ಯವಹಾರವನ್ನು ಮಾಡಿ ಉತ್ತರ ವಲಯವು ಸೇಕಡಾ ಪರಿಮಾಣದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ. ಮಧ್ಯ ವಲಯ 24 8%, ದಕ್ಷಿಣ ವಲಯ 23.5%, ಪೂರ್ವ ವಲಯ 20.9% ಮತ್ತು ದಕ್ಷಿಣ ವಲಯ 16.6% ಹೆಚ್ಚು ವ್ಯವಹಾರವನ್ನು ಮಾಡಿರುತ್ತವೆ.

ವ್ಯವಹಾರವನ್ನು ಪೂರೈಸುವುದರಲ್ಲಿ ಪೂರ್ವ ವಲಯ ರೂ. 138.91 ಕೋಟಿಗಳಷ್ಟು ವ್ಯವಹಾರವನ್ನು (ಅಂದರೆ ಸೇಕಡಾ 91.2ರಷ್ಟು) ಪೂರೈಸಿ ಪ್ರಥಮ ಸ್ಥಾನವನ್ನು ಪಡೆದಿದೆ.

ಕಾರ್ಪೋರೇಷನು ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ. 1961ರ ಕೊನೆಯಲ್ಲಿ 440 ಬ್ರೇಂಚ್ ಆಫೀಸುಗಳು ಮತ್ತು ಸಬ್ ಬ್ರೇಂಚ್ ಆಫೀಸುಗಳು, ಮತ್ತು 132 ಡೆವೆಲಪ್‌ಮೆಂಟ್ ಸೆಂಟರ್‌ಗಳು ಇದ್ದು ಕಾರ್ಪೋರೇಷನಿನ ಆಡಳಿತೆಯಲ್ಲಿ ಜೀವ ವಿಮಾ ಮಾರಾಟತನದ ಕೆಲಸವನ್ನು ಮುಂದರಿಸುತ್ತದೆ.

ಕಾರ್ಪೋರೇಷನಿನ ಒಟ್ಟು 578 ಆಫೀಸುಗಳಲ್ಲಿ (1961ರ ಕೊನೆಯಲ್ಲಿ) 163 ಆಫೀಸುಗಳು ಮಾತ್ರ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರುವ ಪಟ್ಟಣಗಳಲ್ಲಿ ಇರಿಸಲಾಗಿತ್ತು. 1962ರ ಕೊನೆಯಲ್ಲಿ 532 ಬ್ರಾಂಚ್ ಮತ್ತು ಸಬ್ ಬ್ರಾಂಚ್ ಆಫೀಸುಗಳು ಮತ್ತು 187 ಡೆವೆಲಪ್‌ಮೆಂಟ್ ಆಫೀಸುಗಳು ಇರಬಹುದೆಂದು ತಿಳಿಯಲಾಗಿದೆ.

1961ರಲ್ಲಿ ಏಜಂಟರ ಸಂಖ್ಯೆಯು 1 39 821ರಿಂದ 1,54,261ಕ್ಕೆ ಏರಿರುತ್ತದೆ, ಮತ್ತು ಫೀಲ್ಡ್ ಆಫೀಸರರ ಸಂಖ್ಯೆ 5,754ರಿಂದ 7,008ಕ್ಕೆ ಏರಿರುತ್ತದೆ.

ಸುಮಾರು 6000 ಫೀಲ್ಡ್ ಆಫೀಸರರಿಗೆ ಮಾರಾಟತನದ ಬಗ್ಗೆ ತರಬೇತು ಕೊಡಲಾಗಿದೆ. ಅಲ್ಲದೆ 1961ರಲ್ಲಿ ಅನೇಕ ಏಜಂಟರನ್ನು ತರಬೇತುಗೊಳಿಸಲಾಗಿದೆ.

ಅಲ್ಲಲ್ಲಿಯ ಸುದ್ದಿಸಾರ

ಜನತಾ ಯೋಜನಾ ಸಪ್ತಾಹವು ತಾ 16ರಂದು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಶ್ರೀ ಟಿ ಎ. ಪೈಯವರಿಂದ ಉದ್ಘಾಟಿಸಲ್ಪಟ್ಟಿತು. ಪ್ರಾದೇಶಿಕ ಯೋಜನಾಧಿಕಾರಿ ಶ್ರೀ ವೆಂಕೋಬರಾಯರು ಸ್ವಾಗತ ಭಾಷಣ ಮಾಡಿ ಮೂರನೇ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳನ್ನು ವಿವರಿಸಿದರು. ಶ್ರೀ ಟಿ. ಎ ಪೈಯವರು ತಮ್ಮ ಭಾಷಣದಲ್ಲಿ ಜನರ ಆರ್ಥಿಕ ಸ್ಥಿತಿ ಈ ಯೋಜನೆಯ ಮೂಲಕ ವರ್ಧಿಸಬೇಕು, ಪ್ರಕೃತಿದತ್ತ ಸೌಲಭ್ಯದ ಸದುಪಯೋಗವಾಗಬೇಕು, ನಮ್ಮ ಜನರು ಉತ್ತಮ ನಾಗರೀಕರಾಗಬೇಕು ಎಂದು ಮುಂತಾಗಿ ಹೇಳಿದರು ಈ ಸಪ್ತಾಹವು ವಸ್ತು ಪ್ರದರ್ಶನ ಪ್ರಚಾರ ಉಪನ್ಯಾಸ ಚಲಚಿತ್ರ ಪ್ರದರ್ಶನದೊಂದಿಗೆ ಒಂದು ವಾರ ಜರಗಿತು.

ಗ್ರೂಪ್ ಎಂಡ್ ಸುಪರೆನ್ಯುವೇಶನ್ ಸ್ಕೀಮ್— ಗ್ರೂಪ್ ಎಂಡ್ ಸುಪರೆನ್ಯುವೇಶನ್ ಯೋಜನೆಯ ಮೂಲಕ 1961ರಲ್ಲಿ ರೂ. 5,15,19,000 ವ್ಯವಹಾರವನ್ನು ಪೂರೈಸಲಾಗಿದೆ. 1960ರಲ್ಲಿ ಈ ವ್ಯವಹಾರ ರೂ. 4,21,70,000 ಆಗಿತ್ತು. ಈ ಯೋಜನೆಯಲ್ಲಿ ಅಧಿಕ ವ್ಯವಹಾರವನ್ನು ಮಾಡುವ ವ್ಯವಸ್ಥೆಯನ್ನು ಕಾರ್ಪೋರೇಷನು ಮಾಡಿರುತ್ತದೆ.

ಸಾಹಿತ್ಯ ಎಕೇಡೆಮಿಗೆ ಆಯ್ಕೆ-ಎಂ ಜಿ. ಎಮ್. ಕಾಲೇಜಿನ ಪ್ರೊಫೆಸರರೂ, ಪ್ರಸಿದ್ಧ ಸಾಹಿತಿಗಳೂ ಆದ ಶ್ರೀ ಕು ಶಿ. ಹರಿದಾಸ ಭಟ್ಟ ಎಂ. ಎ. ಅವರು ಮೈಸೂರು ರಾಜ್ಯದ ಸಾಹಿತ್ಯ ಎಕೇಡೆಮಿಯ ಗವರ್ನಿಂಗ್ ಕೌನ್ಸಿಲಿಗೆ ಆಯ್ಕೆಗೊಂಡಿದ್ದಾರೆ

ನಾಗರಿಕ ಹಿತರಕ್ಷಣಾ ಸಮಿತಿ— ಎಂಬ ಸಮಿತಿಯೊಂದು ಸಾಗರದಲ್ಲಿ ತಾ. 13—3—62ರಂದು ಶ್ರೀ ವಿಠಲ ಮಂದಿರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಸ್ಥಾಪಿಸಲ್ಪಟಿದೆ. ಈ ಬಗ್ಗೆ ತಾತ್ಕಾಲಿಕವಾಗಿ ಒಂದು ಕಾರ್ಯಕಾರಿ ಸಮಿತಿಯು ರಚಿಸಲ್ಪಟ್ಟಿದೆ. ತಾ 12—3—62ರಂದು ಸಾಗರ ಪುರಸಭೆಯವರು ನೆಹರು ಮೈದಾನವನ್ನು ಕೋನ್ವೆಂಟ್ ಸ್ಕೂಲಿನವರಿಗೆ ಕೊಡಬೇಕೆಂದು ತೀರ್ಮಾನಿಸಿದುದನ್ನು ಈ ಸಭೆಯು ಪ್ರತಿಭಟಿಸಿ ಆ ಮೈದಾನವನ್ನು ಭಾವೀಹಿತದೃಷ್ಟಿಯಿಂದ ಸಾರ್ವಜನಿಕರ ಉಪಯೋಗಕ್ಕಾಗಿ ರಕ್ಷಿಸಿಕೊಂಡು ಬರಬೇಕೆಂದು ತೀರ್ಮಾನಿಸಿತು.

ವಿವಾಹ ಸಮಾರಂಭ—ಶ್ರೀ ಬೆಳ್ಳಾರೆ ನಾರಾಯಣ ಶೇಣರ ಪ್ರಥಮ ಪುತ್ರ, ಶ್ರೀ ಕೆ. ಗಂಗಾಧರ ಶೇಕ ಮತ್ತು ಶ್ರೀ ಮುಡ್ಲೂರು ನಡಿಗುತ್ತು ಕೃಷ್ಣ ಶೆಟ್ಟರ ತೃತೀಯ ಪುತ್ರಿ ಕುಮಾರಿ ಉಮಾವತಿ ಇವರ ವಿವಾಹ ಸಮಾರಂಭವು ತಾ. 19—3—62ರಂದು ಮಂಗಳೂರು ಡೋನ್ ಬೋಸ್ಕೊ ಹೋಲಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಸಮಾರಂಭಕ್ಕೆ ಊರ ಪರವೂರ ಮಹನೀಯರನೇಕರು ಆಗಮಿಸಿ ವಧೂವರರನ್ನು ಆಶೀರ್ವದಿಸಿದರು.

ತುಳುನಾಟಕ ಪ್ರದರ್ಶನ— ಮಂಗಳೂರಿನ ತುಳುರಾಜ್ಯ ಸಮಿತಿಯವರು ಉಡುಪಿಯ ಡಾ। ಸುಂದರರಾಮ ಪೈ ಸ್ಮಾರಕ ರಂಗಭೂಮಿಯಲ್ಲಿ ತಾ. 17 ಮತ್ತು 18ರಂದು „ತಮ್ಮಲೆ ಅರ್ವತ್ತನ ಕೋಲ"ವೆಂಬ ತುಳು ನಾಟಕವನ್ನು ಪ್ರೇಕ್ಷಣೀಯವಾಗಿ ಅಭಿನಯಿಸಿದರು. ಕೋಲ, ಕೋಳಿ ಅಂಕಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿದ ಈ ನಾಟಕದಲ್ಲಿ ಪಂಕಣ್ಣ ಮತ್ತು ಭಟ್ಟರ ಪಾತ್ರಗಳು ಅತ್ಯಧಿಕ ಸ್ವಾಭಾವಿಕವಾಗಿದ್ದು ಯಶಸ್ವಿಯಾಗಿದ್ದವು. ಸಮಿತಿಯ ಅಧ್ಯಕ್ಷ ಶ್ರೀ ಜಾರಪ್ಪನವರು ಸಮಿತಿಯ ಉದ್ದೇಶಗಳನ್ನು ವಿವರಿಸಿ, ಧನ್ಯವಾದಗಳನ್ನಿತ್ತರು.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

Regd. Office: VIJAYA BANK BUILDING.
LIGHT HOUSE HILL ROAD,
MANGALORE-3. South Kanara.

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲಗಳನ್ನು ಕ್ಲಪ್ತ ಕಾಲದಲ್ಲಿ ಮರುಪಾವತಿ ಮಾಡುವರೇ ತಪ್ಪಿರುವುದರಿಂದ, ಆ ಬಗ್ಗೆ ಸದ್ರಿಯವರಿಗೆ ಬೇಂಕಿನಿಂದ ಕ್ರಮ ಪ್ರಕಾರವಾದ ರಜಿಸ್ಟ್ರಿ ನೋಟೀಸುಗಳನ್ನು ಕೊಟ್ಟಿದ್ದರೂ ಸದ್ರಿ ಲೋನುಗಳ ಬಾಬ್ತು ಅಸ್ಲು ಬಡ್ಡಿ ಮೊಬಲಗನ್ನು ಸಲಾಯಿಸದೆ ಬಾಕಿಮಾಡಿ ಕೊಂಡಿರುವುದರಿಂದಲೂ, ಆ ಪೈಕಿ ಕೆಲವು ರಜಿಸ್ಟ್ರಿ ನೋಟೀಸುಗಳು ಅವುಗಳ ವಿಳಾಸದಾರರು ಹಾಲಿ ತಮ್ಮ ವಾಸಸ್ಥಾನದಲ್ಲಿ ಇಲ್ಲವೆಂಬ ಕಾರಣದಿಂದ ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಸಂದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 7-4-1962ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಈ ಬೇಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸಲಾಗುತ್ತದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 31-12-'61ರ ವರೆಗಿನ ಅಸ್ಲು ಬಡ್ಡಿ ಮೊಬಲಗು.
		ರೂ. ನ.ಪೈ.
335/59	ಶ್ರೀ ಬಿ ವಿಷ್ಣು ಭಟ್ಟ, ರಾಮಪ್ಪ ಭಟ್ಟರ ಮಗ, ಕೊಲ್ಲೂರು ಗ್ರಾಮ, ಪೋಸ್ಟ್ ಕೊಲ್ಲೂರು	194-25
387/59	,, ಬಿ. ಮಂಜುನಾಥ ಶೇರೆಗಾರ, ಸುಬ್ರಾಯ ಶೇರೆಗಾರರ ಮಗ, ಪೋಸ್ಟ್ ಮಯ್ಯಾಡಿ	80-75
460/59	,, ದುರ್ಗಯನ ಮನೆ ಬದ್ರಕಾರ್ವಿ, ಪುಟ್ಟ ಕಾರ್ವಿಯ ಮಗ, ಆಮ್ಮೋರ್ ತಪ್ಲು, ಪೋಸ್ಟ್ ಉಪ್ಪುಂದ	22 45
649/59	,, ಬಾಲಯ ಶೆಟ್ಟಿ, ಮಂಜಯ ಶೆಟ್ರ ಅಳಿಯ, ಕಂಚಿಕೋಳ್ಳಿ ಮನೆ, ಸೂಕರ್ಾದ, ಪೋಸ್ಟ್ ಬೈಂದೂರು.	14-10
671/59	,, ನಾಗ ದೇವಡಿಗ, ಗೋವಿಂದನ ಅಳಿಯ, ಕೆರೆಬೆಟ್ಟು, ಎಡ್ತರೆ ಗ್ರಾಮದ ಹೊಸಾಡು, ಪೋಸ್ಟ್ ಬೈಂದೂರು	14-15
674/59	,, ಲಾದ್ರು ರೋಡ್ರಿಗಸ್, ಬಸ್ತ್ಯಾನ್ ರೋಡ್ರಿಗಸರ ಮಗ, ಅಂಗಡಿ ಹಿತ್ಲು, ಯೆಡ್ತರೆ ಗ್ರಾಮ, ಪೋಸ್ಟ್ ಬೈಂದೂರು	19-60
691/59	,, ದುರ್ಗ ಬಿಲ್ಲವ, ಮಾಚ ಬಿಲ್ಲವನ ಅಳಿಯ ಬೆಳಗಲ್ ಕಟ್ಟೆ, ಪೋಸ್ಟ್ ಮಯ್ಯಾಡಿ	36-40
698/59	,, ನಾಗ ದೇವಡಿಗ, ಮಂಜುನಾಥ ದೇವಡಿಗನ ಅಳಿಯ, ಕೊಪ್ಲಿ ಮನೆ, ಯೆಡ್ತರೆ ಗ್ರಾಮ, ಪೋಸ್ಟ್ ಬೈಂದೂರು	15-35
1036/59	,, ನರಸಿಂಹ ಮಂಜುನಾಥ ಪ್ರಭು, ಮಂಜುನಾಥ ಪ್ರಭುಗಳ ಮಗ, ಉಪ್ಪುಂದ ಗ್ರಾಮ, ಪೋಸ್ಟ್ ಉಪ್ಪುಂದ	35-40
19/60	,, ಹೊನ್ನಯನ ಮಂಜುನಾಥ ಶೇರೆಗಾರ, ಅಣ್ಣಪ್ಪ ಶೇರೆಗಾರರ ಮಗ, ಪೋಸ್ಟ್, ಪಡುವರಿ	47-00
57/60	,, ಖಾಜಿ ಮೊಯಿದಿನ್ ಸಾಹೇಬ, ಮಹಮ್ಮದ್ ಸಾಹೇಬರ ಮಗ, ಕೇರಿ, ಶಿರೂರು	143-25
60/60	,, ಯು ನಾರಾಯಣ ಶೆಟ್ಟಿ, ಮಾದಯ ಶೆಟ್ರ ಮನೆ, ಉಪ್ಪುಂದ ಗ್ರಾಮ, ಪೋಸ್ಟ್ ಉಪ್ಪುಂದ	63 45

Office of The VIJAYA BANK, LTD. BYNDOOR.
Date, 17—3—1962

K.Bhojaraja Hegde
Agent.

ನ್ಯಾರಿ ಕಂಟ್ರಾಕ್ಟರ

ಭಾರತದ ಕ್ರಿಕೆಟ್ ತಂಡದ ನಾಯಕ ಶ್ರೀ ನ್ಯಾರಿ ಕಂಟ್ರಾಕ್ಟರರು ಮಿದುಳಿನ ಸಂಬಂಧದಲ್ಲಿ ಎರಡು ಬಗೆಯ ಶಸ್ತ್ರಚಿಕಿತ್ಸೆಗೆ ಗುರಿಯಾಗಬೇಕಾಯಿತು. ಯಶಸ್ವಿಯಾಗಿ ಚಿಕಿತ್ಸೆ ನಡೆಸಿದ ಡಾಕ್ಟರರ ವರದಿಯಂತೆ ಈಗವರು ಸುಧಾರಿಸುತ್ತಿದ್ದಾರೆ. ಕ್ರಿಕೆಟ್ ಆಡುತ್ತಿರುವಾಗ, ಚೆಂಡಿನ ಹೊಡೆತದಿಂದ ಇವರ ತಲೆಯ ಎಲುಬು ಒಡೆದು ಒಳಗೆ ರಕ್ತವು ಮಡುಗಟ್ಟಿ ನಿಂತಿತು. ವಿಮಾನದಲ್ಲಿ ಬಂದ ರಕ್ತದ ಕಾರಣದಿಂದ ರಕ್ತವನ್ನು ಕೊರತೆಯುಳ್ಳ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ನನ್ನ ಬ್ರಿಜ್‌ಟೌನಿನ ಜನರಲ್ ಆಸ್ಪತ್ರೆಯಲ್ಲಿ ಇವರು ಗುಣಹೊಂದುತ್ತಿದ್ದಾರೆ

ಕನ್ನಡ ಪುಸ್ತಕಗಳಿಗೆ—
ಮತ್ತು
ಕಥೆಕಾದಂಬರಿಗ ಇತ್ಯಾದಿ ಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಗುಂಪುಗಾರಿಕೆಯ ಮೇಲಾಟ

(೧ನೇ ಪುಟದಿಂದ)

ದು ತಾತ್ಕಾಲಿಕವಾದ ವ್ಯವಸ್ಥೆಯೆಂಬರ್ಥದಲ್ಲಿ ಹೇಳಿಕೆಗಳನ್ನು ಕೊಡುತ್ತ ಬಂದುದು ಔಚಿತ್ಯಪೂರ್ಣವೆನ್ನಬರುವುದಿಲ್ಲ. ಇವುಗಳಿಂದ ತಾನು ನಿಜಲಿಂಗಪ್ಪನವರ ನಮ್ರ ಸೇವಕರೆಂಬ ಭಾವವನ್ನು ಪ್ರತಿಬಿಂಬಿಸ ಬಯಸಿದರೂ ಅವರು ರಾಜಕಾರಣ ಪಟುವಲ್ಲವೆಂಬುದು ವ್ಯಕ್ತವಾಗುವುದು. ಈ ಕಾರಣದಿಂದಲೇ 'ಶ್ರೀ ಕಂಠಿಯವರ ಟೆಂಪರರಿ ಮಂತ್ರಿ ಮಂಡಲ" ವೆಂಬ ಹೆಸರೂ ಬಂದುಬಿಟ್ಟಿದೆ; ಸ್ಪೀಕರ್ ಸ್ಥಾನದಲ್ಲಿ ತನ್ನ ನಾಲಿಗೆಯನ್ನು ಬಿಗಿ ಹಿಡಿಯುತ್ತಲಿದ್ದ ಕಂಠಿ ಈಗೇಕೆ ತೀರ ಸಡಿಲು ಬಿಡುತ್ತಿದ್ದಾರೆಯೋ ಹೇಳಬರುವುದಿಲ್ಲ. ನಿಜಲಿಂಗಪ್ಪನವರ ಭಕ್ತರ ಒಲವು ಸದಾ ತನ್ನ ಕಡೆಗಿರಲಿ ಎಂಬುದರಿಂದಾಗಿಯೋ ತಾವೇ ಅವರ ಭಕ್ತರೆಂಬುದನ್ನು ಲೋಕಕ್ಕೆ ತಿಳಿಸಿ ಹೇಳುವುದಕ್ಕಾಗಿಯೋ ಹೀಗೆ ಅಂದಿರುವುದಾದರೆ, ಇನ್ನು ಮುಂದಕ್ಕಾದರೂ ಆ ರೀತಿಯೊಡುವುದು ಮುಖ್ಯ ಮಂತ್ರಿ ಕಂಠಿಯವರಿಗೆ ಶೋಭನೀಯವಲ್ಲವೆಂಬುದನ್ನವರು ಅವಶ್ಯ ತಿಳಿಯಬೇಕು.

ಶ್ರೀ ಕಂಠಿಯವರು ತನ್ನ ಸಹಕಾರಕ್ಕಾಗಿ ೮ ಮಂತ್ರಿಗಳನ್ನೂ ೨ ಉಪಮಂತ್ರಿಗಳನ್ನೂ ನೇಮಿಸಿಕೊಂಡಿದ್ದಾರೆ.

ಮಂತ್ರಿಗಳು ಹಂಚಿಕೊಂಡ ಖಾತೆಗಳು ಸದ್ಯಕ್ಕೆ ಈ ರೀತಿಯಾಗಿವೆ:

೧. ಶ್ರೀ ಕಂಠಿ (ಮುಖ್ಯ ಮಂತ್ರಿ)-- ಸಾಮಾನ್ಯ ಆಡಳಿತ, ಹಣಕಾಸು, ಶಿಕ್ಷಣ ಇತ್ಯಾದಿ.

೨. ಶ್ರೀ ಎಂ. ವಿ. ಕೃಷ್ಣಪ್ಪ (ಇವರು ವಿಧಾನ ಪರಿಷತ್ತಿಗೆ ಸ್ಪರ್ಧಿಸಿದ್ದಾರೆ)-- ಕಂದಾಯ, ತೆರಿಗೆ.

೩. ಶ್ರೀ ಎಂ. ವಿ. ರಾಮರಾವ್-- ಕಾನೂನು, ಕಾರ್ಮಿಕ, ಸ್ಥಾನಿಕ ಸ್ವರಾಜ್ಯ.

೪. ಶ್ರೀ ಆರ್. ಎಂ. ಪಾಟೀಲ-ಗೃಹ

೫ ಶ್ರೀಮತಿ ಯಶೋಧರಮ್ಮ ದಾಸಪ್ಪ--ಸಮಾಜ ಕಲ್ಯಾಣ.

೬. ಡಾ. ನಾಗಪ್ಪ ಆಳ್ವ—ಸಾರ್ವಜನಿಕ ಆರೋಗ್ಯ.

೭ ಶ್ರೀ ವೀರೇಂದ್ರ ಪಾಟೀಲ್— 'ಪಿ. ಡಬ್ಲ್ಯು. ಡಿ.' ಸಾರಿಗೆ.

೮. ಶ್ರೀ ಬಿ. ರಾಚಯ್ಯ—ಕೃಷಿ, ಸಹಕಾರ.

೯ ಮಲ್ಲಪ್ಪ—ಉದ್ಯಮ, ವಾಣಿಜ್ಯ.

ಉಪಮಂತ್ರಿಗಳಾಗಿ ಶ್ರೀಗಳಾದ ಅಬ್ದುಲ್ ಗಫರ್ ಮತ್ತು ಮಕ್ಸೂದ ಅಲಿಖಾನ ಇವರನ್ನು ನೇಮಿಸಿಕೊಳ್ಳಲಾಗಿದೆ

ಈಗ ಮಂತ್ರಿ ಮಂಡಳಿಯು ವಿಸ್ತೃತಗೊಂಡಾಗ ಈ ಮಂತ್ರಿಗಳು ತಮ್ಮ ಖಾತೆಗಳಲ್ಲಿಯೇ ಕೆಲವನ್ನು ಹೊಸಬರಿಗೆ ಬಿಟ್ಟುಕೊಡುವರು.

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಅದನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಅಪೇಕ್ಷಿಸುತ್ತೇನೆ.

—ಮೆನೇಜರ್ ನವಯುಗ.

ಗೋಮಾಂತಕರ ಹಿತರಕ್ಷಣೆಗೆ

ಕೇಂದ್ರ ಪ್ರಶಾಸನದಡಿಗೆ ಗೋವೆ

ಪೋರ್ಚುಗೀಜ ಪದದಲಿತವಾಗಿದ್ದ ಗೋವೆ, ದಮನ ಮತ್ತು ದಿವ್ಯೂಗಳನ್ನು ಭಾರತದ ಒಕ್ಕೂಟಕ್ಕೆ ಸಂವಿಧಾನಾತ್ಮಕವಾಗಿ ಸೇರಿಸುವ ಕಾರ್ಯವೀಗ ಪೂರ್ತಿಗೊಂಡಿದೆ. ಗೋವಾ ವಿಮೋಚನೆಯೊದಾಗಲೇ ಅವು ಭಾರತದೊಡನೆ ಕೂಡಿಕೊಂಡಂತಾಗಿರುವುದಾದರೂ ಅವನ್ನು ಕೇಂದ್ರ ಸರಕಾರದ ಅಂಕಿತದಲ್ಲಿರುವ ಪ್ರದೇಶವೆಂದು ಸಾರುವ ರಾಷ್ಟ್ರಾಧ್ಯಕ್ಷರ ಸುಗ್ರೀವಾಜ್ಞೆಯನ್ನು ಲೋಕ ಸಭೆಯು ಈಗ ಅಂಗೀಕರಿಸಿದೆ. ಎಲ್ಲ ಪಕ್ಷಗಳೂ ಈ ಕಾರ್ಯಕ್ರಮವನ್ನು ಮುಕ್ತಕಂಠದಿಂದ ಸ್ವಾಗತಿಸಿದುವು. ಈ ಸಂಬಂಧದ ಮಸೂದೆಯು ೩೦೩ ಮತಗಳಿಂದ ಸ್ವೀಕೃತವಾಯ್ತು ವಿಶೇಷವೆಂದರೆ, ಇದಕ್ಕೆ ವಿರೋಧವಾಗಿ ಒಂದೇ ಒಂದು ಮತವೂ ಬೀಳದಿರುವುದು. ಲೋಕಸಭಾಕಾರ್ಯಕಲಾಪಗಳಲ್ಲಿ ಗೋವಾ ಸಂಬಂಧಿತ ಮಸೂದೆಯೊಂದು ಅದ್ವಿತೀಯ ದಾಖಲೆಯನ್ನು ನಿರ್ಮಿಸಿದೆಯೆನ್ನಬಹುದು

ಗೋವೆಯಲ್ಲಿ ಮಿಲಿಟರಿ ಆಡಳಿತೆಯನ್ನು ಸಂಸ್ಥಾಪಿಸುವಾಗ ಮಧ್ಯ ಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕಗಳಿಂದ ನಾಗರಿಕ ಅಧಿಕಾರಿಗಳನ್ನೂ ಪೋಲೀಸ ಅಧಿಕಾರಿ ಮತ್ತು ಸಿಪಾಹಿಗಳನ್ನೂ ಅಲ್ಲಿಗೆ ಕರೆದೊಯ್ಯಲಾಗಿತ್ತು. ಆದರೆ, ಈಗ ಅಲ್ಲಿ ಆಡಳಿತೆಯು ನಿರ್ವಿಘ್ನವಾಗಿ ಸ್ಥಾಪಿತವಾಗಿದ್ದು ಸುಸೂತ್ರವಾಗಿ ಮುನ್ನಡೆಯುವುದೆಂಬ ವಿಶ್ವಾಸ ಮೂಡಿ ಬಂದಿರುವುದರಿಂದ, ಅವರನ್ನೆಲ್ಲ ಅವರವರ ರಾಜ್ಯಗಳಿಗೆ ಮರಳಿ ಕಳಿಸಲಾಗುವುದೆಂದು ತಿಳಿದು ಬರುತ್ತಿದೆ.

ವಿಮೋಚನಾ ಕಾಲದ ಉದ್ವಿಗ್ನ ಪರಿಸ್ಥಿತಿಯಲ್ಲಿ ಅಲ್ಲಿನ ಆಡಳಿತವನ್ನು ಮಿಲಿಟರಿ ಗವರ್ನರರ ಕೈಗಳಿಗೊಪ್ಪಿಸಿರುವುದಾದರೂ, ಪರಿಸ್ಥಿತಿಯು ತಿಳಿಯಾದೊಡನೆ ಈ ಮಿಲಿಟರಿ ಆಡಳಿತೆಯನ್ನ ಕೊನೆಗೊಳಿಸಿ ನಾಗರಿಕ ಆಡಳಿತೆಯನ್ನು ಸ್ಥಾಪಿಸಲಾಗುವುದೆಂದು ಹೇಳಲಾಗಿತ್ತು. ಮೇ| ಜ| ಕ್ಯಾಂಡೆಥ್‌ರವರ ಚಾಣಾಕ್ಷತೆಯಿಂದ, ಗೋವೆಯಲ್ಲಿ ಈ ಶಾಂತಿ ಮತ್ತು ಸುವ್ಯವಸ್ಥೆಗಳು ಸ್ಥಾಪಿತವಾಗಿರುವುದೆಂದು ಕೇಂದ್ರ ಸರಕಾರಕ್ಕೆ ಮನವರಿಕೆಯೊದುದರಿಂದ ಎಪ್ರಿಲ್ ತಿಂಗಳ ಆದಿ ಅಥವಾ ಮಧ್ಯಭಾಗದಲ್ಲಿ ಇಲ್ಲಿನ ದಂಡಿನಾಳಿಕೆಯನ್ನು ಕೊನೆಗೊಳಿಸುವರೆಂಬ ಸುದ್ದಿ ಬಲವಾಗಿ ಹರಡಿದೆ. ರಶ್ಯದಲ್ಲೀಗ ಭಾರತೀಯ ರಾಯಭಾರಿಗಳಾಗಿರುವ ಶ್ರೀ ಕೆ. ಪಿ. ಎಸ್. ಮೆನನ್ನರನ್ನು ನಾಗರಿಕ ಗವರ್ನರರೆಂದು ನಾಮಕರಣ ಮಾಡಲಾಗುವ ನಿರೀಕ್ಷೆಯಿದೆಯೆಂದೂ ತಿಳಿಯುತ್ತದೆ.

ಗೋವೆಯಲ್ಲಿ ನಾಗರಿಕರ ಹಿತಚಿಂತನೆಗಾಗಿ ಸರ್ವಪ್ರಯತ್ನವು ನಡೆಯುತ್ತಿದೆ. ಅಲ್ಲಿ ಪ್ರಚಲಿತವಿದ್ದ ಪೋರ್ಚುಗೀಜ ಇಸ್ಕೇಡೊ ನಾಣ್ಯಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ರಿಜರ್ವ್ ಬೇಂಕಿಗೆ ತಕ್ಕನಿರ್ದೇಶವಿತ್ತಿದೆ; ಇದಕ್ಕಾಗಿ ೭|| ಕೋಟಿ ರೂಪಾಯಿಗಳನ್ನೂ ಮುಂದಿನ ಬಜೆಟಿನಲ್ಲಿ ಒದಗಿಸಿದೆ. ಸ್ಟೇಟ್ ಬೇಂಕ್ ಆಫ್ ಇಂಡಿಯದ ಶಾಖೆಯನ್ನು ಅಲ್ಲಿ ತೆರದಿದೆ. ವಿಮೋಚನಾ ವೇಳೆ ಕೆಟ್ಟು ಹೋಗಿದ್ದ ಮೋರಿ, ಸಂಕ, ಕಟ್ಟಡ ವಿಮಾನ ನಿಲ್ದಾಣ ಮೊದಲಾದುವನ್ನು ಮರಳಿ ರಿಪೇರಿ ಮಾಡಿದೆ. ಜೀವ ವಿಮಾ ಕಾರ್ಪರೇಶನ್ನು ಸಹ ಇಲ್ಲಿ ಮೂರು ಶಾಖೆಗಳನ್ನು ತೆರೆದಿದೆ ಪೂನಾದ ಹಿಂದೀ ಪ್ರಚಾರ ಸಭೆಯು ಇಲ್ಲಿಯೂ ಕಳೆದ ಫೆಬ್ರವರಿಯಲ್ಲಿ ತನ್ನ ಹಿಂದೀ ಪರೀಕ್ಷೆಗಳನ್ನು ನಡೆಸಿದೆ. ಅಲ್ಲಿಗು ಎಸ್. ಎಸ್. ಸಿ. ಬೋರ್ಡ್ ಗೋಮಾಂತಕರಿಗೆ ಹಿಂದಿನಿಂದಲೂ ಸೌಕರ್ಯ ಒದಗಿಸುತಿತ್ತು. ಇನ್ನು ಮುಂದೆ, ಮಹಾರಾಷ್ಟ್ರದ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ಗೋವೆ—ದಮನ—ದಿವ್ಯೂಗಳ ಮೇಲೂ ಇರುವುದು. ಮುಂದಿನ ತಿಂಗಳಲ್ಲಿ ಶಿಕ್ಷಣದ ಮೂಲಕ ಭಾವೈಕ್ಯಸಾಧನೆಯ ಕುರಿತು ಪರಿಶೀಲನೆ ಮಾಡಲಿರುವ ಸಮಿತಿಯೂ ಇಲ್ಲಿಗೆ ಸಂದರ್ಶನವೀಯಲಿದೆ. ಒಕ್ಕೂಟ ಭಾರತದ ಪ್ರತಿ ಪ್ರದೇಶವೂ ಪಡೆಯಬಹುದಾದ ಸೌಕರ್ಯ—ಸೌಲಭ್ಯಗಳನ್ನು ಗೋವೆಯೂ ಪಡೆಯುವಂತಾಗಿದೆ.

ಸದ್ಯ ಗೋವೆಯು ಕೇಂದ್ರ ಪ್ರಶಾಸನದಡಿಯ ಪ್ರದೇಶವೆಂದು ನಿರ್ಧರಿಸಲಾಗಿದೆ. ಆದರೆ, ಇದನ್ನು ಕೆಲವರು ಒ



ಡಾ| ರಾಜೇಂದ್ರ ಪ್ರಸಾದ್.

ಪ್ಪುವುದಿಲ್ಲ. ಗೋವೆಯನ್ನು ಪ್ರತ್ಯೇಕ ರಾಜ್ಯವಾಗಿ ಇರಿಸಬೇಕೆಂದೂ ಕೊಂಕಣಿಯನ್ನು ಅದರ ಭಾಷೆಯಾಗಿ ಸ್ವೀಕರಿಸಬೇಕೆಂದೂ ಗೋಮಾಂತಕರ ಒಂದು ಪಂಗಡವು ಹೇಳುತ್ತದೆ. ಆದರೆ, ಪ್ರಧಾನಿ ನೆಹರು ಪ್ರತ್ಯೇಕ ರಾಜ್ಯವಾಗಿ ನಿಲ್ಲುವ ಆಲೋಚನೆ ಸಲ್ಲದೆಂದು ಅಭಿಪ್ರಾಯಪಟ್ಟಿದ್ದಾರೆ. ಕೆಲವು ಪಕ್ಷಗಳ ನಾಯಕರು ನಿಲಿಪ್ತರಾಗಿ, ಅದನ್ನು ಹತ್ತಿರದ ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತಗಳಲ್ಲಿ ವಿಲೀನಗೊಳಿಸಬೇಕೆಂದು ಹೇಳುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಕನ್ನಡಿಗರು ಗೋವೆ ತಮಗೆ ಬೇಕೆಂದೂ ಮಹಾರಾಷ್ಟ್ರೀಯರು ತಮ್ಮದೆಂದೂ ವಾದಿಸುವುದಕ್ಕೆ ಈಗಲೇ ತೊಡಗಿದ್ದಾರೆ.

ಗೋವೆಯು ಭಾರತದಿಂದ ಐದು ಶತಮಾನಗಳಕಾಲ ಪ್ರತ್ಯೇಕವಾಗಿರುವುದಾದರೂ, ಇದರ ಪ್ರಭಾವವು ಅಲ್ಲಿನವರ ಸಂಸ್ಕೃತಿ—ಜೀವನಗಳ ಮೇಲೆ ಬಿದ್ದಿರುವುದಾದರೂ ಗೋಮಾಂತಕರು ಭಾರತೀಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಅವರ ವಿಶಿಷ್ಟತೆಯನ್ನು ರಕ್ಷಿಸಿಕೊಂಡು ಬರುತ್ತೇವೆಂದು ಪ್ರಧಾನಿಯವರು ಪ್ರಾರಂಭದಲ್ಲೇ ಭರವಸೆಯನ್ನಿತ್ತಿದ್ದು, ಅದನ್ನು ನಡೆಸಿಕೊಡುವುದು ಅಗತ್ಯವಿರುವುದು ಇದಕ್ಕಾಗಿ ಯಾವುದೇ ರಾಜ್ಯದಲ್ಲಿ ಸೇರ್ಪಡೆಗೊಳಿಸುವುದರಿಂದ ಉದ್ದೇಶಸಾಧನೆಯಾಗಲಾರದು; ಪ್ರತ್ಯೇಕ ರಾಜ್ಯವಾಗಿಡುವುದಾದರೂ ವ್ಯವಹಾರ್ಯವೆನಿಸದು; ಆದುದರಿಂದ, ಕೇಂದ್ರ ಪ್ರಶಾಸಿತ ಪ್ರದೇಶವಾಗಿ ತಮ್ಮ ಸಂಸ್ಕೃತಿ-ವಿಶಿಷ್ಟತೆಯನ್ನು ಉಳಿಸಿಕೊಳ್ಳುವುದೇ ಗೋಮಾಂತಕರಿಗೆ ಹಿತಕರವೆನ್ನಬಹುದು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.**

ಮಾರಾಟಗಾರರು: **ನವಭಾರತ ಬುಕ್ ಡಿಪೊ, ಉಡುಪಿ.**

ಸೀಮಾ ವಿವಾದದಲ್ಲಿ

ಭಾರತದ ನಿಶ್ಚಲ ನಿಲುಮೆ

[ಅಕ್ಸಾಯ್ ಚಿನ್ ಮಾರ್ಗವನ್ನು ಚೀನಕ್ಕೆ ಗೇಣಿಗೆ ಕೊಡಲು ಒಪ್ಪಿದ್ದಾರೆಂದು ಅಮೆರಿಕನ್ ವರದಿಗಾರರೊಬ್ಬರು ತಪ್ಪು ತಿಳುವಳಿಕೆಯಿಂದ ವರದಿ ಮಾಡಿದ್ದಾರೆ. ಆದರೆ, ಇಂತಹ ಆಲೋಚನೆ ಎಂದೂ ಮಾಡಿದ್ದಿಲ್ಲ; ಮಾಡುವ ಹಾಗೂ ಇಲ್ಲವೆಂದು ನೆಹರು ಈಗ ಸ್ಪಷ್ಟೀಕರಿಸಿದ್ದಾರೆ.

ಇದೇ ವರ್ಷದ ಜೂನ್ ತಿಂಗಳ ಪ್ರಾರಂಭದಲ್ಲಿ ಕೊನೆಗೊಳ್ಳಲಿರುವ ಭಾರತ-ಟಿಬೇಟು ವ್ಯಾಪಾರ ಒಡಂಬಡಿಕೆಯನ್ನು ಪುನರುಜ್ಜೀವನಗೊಳಿಸಬೇಕೆಂಬ ಕೇಳಿಕೆಯು ಚೀನಾದಿಂದ ಕೆಲವು ದಿನಗಳಿಗೆ ಮೊದಲು ಭಾರತ ಸರಕಾರದ ಕೈಸೇರಿದೆ. ಇದಕ್ಕೆ ಉತ್ತರ ರೂಪವಾಗಿ ಭಾರತವು, ಚೀನವು ಮಾಡಿರುವ ಆಕ್ರಮಣವನ್ನು ಸಂಪೂರ್ಣವಾಗಿ ಹಿಂದೆಗೆದುಕೊಳ್ಳದ ಹೋದರೆ ಆಕ್ರಮಣಗಾರ ರಾಷ್ಟ್ರದೊಡನೆ ಯಾವುದೇ ರೀತಿಯ ಒಪ್ಪಂದವನ್ನು ಮಾಡಿಕೊಳ್ಳಲು ತಾನು ಸಿದ್ಧವಿರುವುದಿಲ್ಲವೆಂಬುದನ್ನು ಸ್ಪಷ್ಟವಾದ ಶಬ್ದಗಳಿಂದ ತಿಳಿಸಿದ. ಇದಕ್ಕೆ ಚೀನಾವು ಯಾವ ರೀತಿಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದೆಂಬುದು ಇನ್ನೂ ತಿಳಿದುಬರಬೇಕಾಗಿದೆ.

ಈ ವಿಷಯವು ರಾಷ್ಟ್ರಪತಿಗಳು ಲೋಕ ಮತ್ತು ರಾಜ್ಯ ಸಭೆಗಳ ಸಂಯುಕ್ತ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಸೂಚಿಸಲ್ಪಟ್ಟಿದೆ. ಈ ಸಂಬಂಧದ ಪತ್ರವ್ಯವಹಾರದ ಪೂರ್ತಿ ಪಾಠವಿನ್ನೂ ತಿಳಿದಿಲ್ಲವಾದರೂ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳು ಮುಕ್ತಾಯಗೊಂಡಿದ್ದುದರಿಂದ, ಚೀನವು ಸೀಮಾ ಸಮಸ್ಯೆಯ ಕುರಿತು ಭಾರತದೊಡನೆ ಸಮಾಲೋಚನೆ ನಡೆಸಲು ಸಿದ್ಧವಿರುವುದೆಂದೂ ಪ್ರಧಾನಿ ಚೌ ಎನ್‌ಲಾಯ್ ಪತ್ರದಲ್ಲಿ ಪ್ರಸ್ತಾಪಿಸಿರುವುದಾಗಿ ಗೊತ್ತಾಗಿದೆ.

ಟಿಬೇಟಿನಲ್ಲಿ ಅತ್ಯಾಚಾರವೆಸಗಿದ ಚೀನವು ಟಿಬೇಟಿನ ಸುತ್ತಲಿನ ರಾಷ್ಟ್ರಗಳೊಡನೆ ಗಡಿ ಪ್ರಶ್ನೆಯನ್ನು ಇತ್ಯರ್ಥಗೊಳಿಸಿ ತಾನು ಸಂಭಾವಿತನೆಂಬುದನ್ನು ಲೋಕಕ್ಕೆ ತೋರಿಸಿಕೊಡುವ ತಹತಹದಿಂದಿದೆ. ಇದಕ್ಕಾಗಿಯೇ ಅದು ಬ್ರಹ್ಮ ಮತ್ತು ನೇಪಾಳಗಳೊಡನೆ ಇಂತಹ ಗಡಿ ಸಂಬಂಧದ ಮಾತುಕತೆಗಳನ್ನು ನಡೆಸಿ, ಸೂಕ್ತ ಒಡಂಬಡಿಕೆಯನ್ನು ಮಾಡಿಕೊಂಡಿದೆ. ಇನ್ನು ಭಾರತವೊಂದನ್ನು ಒಲಿಸಿಕೊಂಡಿತೆಂದರೆ, ಅದರ ಇಷ್ಟಾರ್ಥ ಪೂರೈಸಿದಂತೆಯೇ ಸರಿ. ಈ ಹವಣಿಕೆಯಿಂದಲೇ ಅದು ವ್ಯಾಪಾರ ಒಡಂಬಡಿಕೆಯನ್ನು ಮುಂದುವರಿಸಿ ತಾನು ವಿಶ್ವಾಸ್ಯನೆಂದೆನಿಸಿಕೊಳ್ಳಲು ಹವಣಿಸುತ್ತಿದೆ. ಸೀಮಾ ವಿವಾದಕ್ಕೂ ವ್ಯಾಪಾರ ಒಡಂಬಡಿಕೆಗೂ ಏನೇನೂ ಸಂಬಂಧವಿಲ್ಲ; ಎರಡೂ ಬೇರೆ ಬೇರೆ ಸ್ವರೂಪದ ಪ್ರಶ್ನೆಗಳು ಎಂದು ಚೀನವು ವಾದಿಸಬಹುದು. ಆದರೆ, ಭಾರತದ ಮಟ್ಟಿಗೆ ಹೇಳುವುದಾದರೆ, ತನ್ನ ಭೂಭಾಗವನ್ನು ಅಕ್ರಮದಿಂದ ಆಕ್ರಮಿಸಿ, ಇನ್ನೂ ಹೆಚ್ಚಿನ ಭಾಗವನ್ನು ತನ್ನದೆಂದು ವಾದಿಸ ಹೊರಟಿರುವ ನೆರೆ ರಾಜ್ಯ—ಚೀನದೊಂದಿಗೆ ಯಾವುದೇ ಸಂಧಿಪತ್ರಕ್ಕೆ ಸಹಿ ಹಾಕುವುದೆಂದರೆ, ಕಣ್ಣುಮುಚ್ಚಾಲೆಯಾಟ ಆಡಿದಂತಲ್ಲ. ಸಿಂಕಿಯಾಂಗಿನ ಯಾರ್ಖಂಡ ಮತ್ತು ಟಿಬೇಟಿನ ಗರ್ಟೋಕ್‌ಗಳನ್ನು ಜೋಡಿಸುವ ರಾಷ್ಟ್ರೀಯ ಹೆದ್ದಾರಿಯು ಭಾರತದ ಅಂಗವಾದ ಲಡಾಖಿನ ಅಕ್ಸಾಯ್‌ಚಿನ್ ಪೀಠ ಭೂಮಿಯನ್ನು ಹಾದು ಹೋಗುತ್ತದೆ. ಟಿಬೇಟಿಗೆ ಪೂರೈಕೆ ಮಾಡುವ ಉದ್ದೇಶದಿಂದ ಚೀನವು ಈ ಮಾರ್ಗವನ್ನು ನಿರ್ಮಿಸಿದೆ. ಚೀನವು ಭಾರತಕ್ಕೆಸಗಿದ ಪ್ರಥಮ ದ್ರೋಹವೇ ಇದೆನ್ನಬಹುದು. ಈ ರಸ್ತೆಯು ೧೯೫೭ರಲ್ಲಿ ಪೂರ್ಣಗೊಂಡಾಗಲೇ ಚೀನವು ಲಡಾಖ ಮತ್ತು ಈಶಾನ್ಯ ಗಡಿ ಪ್ರದೇಶದ ಬಹು ಅಂಶ ಭೂಭಾಗವು ತನಗೆ ಸೇರಿದುದು ಎಂಬ ವಾದವನ್ನು ಮುಂದಿಟ್ಟಿತು. ಆಗ, ಭಾರತವೊಂದು ನ್ಯಾಯೋಚಿತ ಪರಿಹಾರವನ್ನು ಮುಂದಿಟ್ಟರೂ ಅದು ಚೀನಕ್ಕೆ ಸ್ವೀಕೃತವಾಗಲಿಲ್ಲ.

ಈ ನಡುವೆ ಭಾರತದ ವಿಷಯವಾಗಿ ವಿದೇಶಗಳಲ್ಲಿಯೂ ಸ್ವತಃ ಭಾರತದಲ್ಲಿಯೂ ಅಪನಂಬಿಕೆ ಹುಟ್ಟಿಸುವ ಪ್ರಸಂಗವೊಂದು ನಡೆಯಿತು. ಪ್ರಧಾನಿ ನೆಹರು ಇತ್ತೀಚೆಗೆ ಅಮೆರಿಕೆಯ 'ವಾಶಿಂಗ್‌ಟನ್ ಪೋಸ್ಟ್' ಎಂಬ ಪತ್ರಿಕೆಯ ಬಾತ್ಮೀದಾರರಿಗಿತ್ತ ಸಂದರ್ಶನವೊಂದರಲ್ಲಿ ಲಡಾಖದ ಮೇಲೆ ಭಾರತದ ಸಾರ್ವಭೌಮಾಧಿಕಾರವನ್ನು ಚೀನವು ಮನ್ನಿಸಲು ಸಿದ್ಧವಿದೆಯೆಂದಾದರೆ, ಅದು ಅಕ್ಸಾಯ್‌ಚಿನ್ ಪ್ರಸ್ಥ ಭೂಮಿಯಲ್ಲಿ ಕಡಿಸಿದ ರಸ್ತೆಯನ್ನು ಚೀನಕ್ಕೆ ಗೇಣಿಕೊಡಲು ತಯಾರಿದೆಯೆಂದು ತಿಳಿಸಿದರೆಂದು ವರದಿ ಹರಡಿದೆ. ಇಂತಹ ಅಪಮಾನಕಾರಕವಾದ ಶರ್ತವನ್ನು ಭಾರತವು ಒಪ್ಪುವುದು ಅದರ ಘನತೆಗೆ ಕುಂದು ತಂದುಕೊಂಡಂತೆ. ಈ ಕಾರಣದಿಂದಲೇ ಭಾರತದಲ್ಲಿಯೂ ಕೆಲವೆಡೆ ಬಲವಾದ ವಿರೋಧಾಭಿಪ್ರಾಯವು ತಲೆದೋರಿತ್ತು. ಸಂರಕ್ಷಣಾ ಮಂತ್ರಿ ಮೆನನ್ನರ ಕೈವಾಡವೂ ಇದರ ಹಿಂದೆಯಡಗಿದೆಯೆಂದು ಸಂದೇಹಿಸಲಾಗಿತ್ತು.

ಆದರೆ, ಸತ್ಯಸಂಗತಿಯು ಇದಕ್ಕೆ ವ್ಯತಿರಿಕ್ತವಾಗಿದೆಯೆಂದು ಈಗ ತಿಳಿಯುತ್ತದೆ. ಅಮೆರಿಕನ್ ಬಾತ್ಮಿದಾರನು ಪ್ರಧಾನಿಗಳ ಮಾತಿನ ಅರ್ಥವನ್ನು ತಪ್ಪಾಗಿ ತಿಳಿದುಕೊಂಡುದರಿಂದ ಇಂತಹ ಅಪಪ್ರಚಾರವು ನಡೆಯುವುದಕ್ಕೆ ಕಾರಣವಾಯಿತು ಎಂಬುದನ್ನು ಮರೆಯುವಂತಿಲ್ಲ. ಸುಮಾರು ಒಂದೂವರೆ ವರ್ಷದ ಹಿಂದೆ ತಾನು, ಚೀನವು ತಾನು ಆಕ್ರಮಿಸಿರುವ ಭೂಭಾಗದಿಂದ ಹೊರನಡೆಯಬೇಕೆಂದೂ ನಮ್ಮ ಸೈನ್ಯ ಪಡೆಯು ಆಕ್ರಮಿಸಿದೆಯೆಂದು ಹೇಳಲಾಗುವ ಭೂಮಿಯಿಂದ ನಾವೂ ಹಿಂದೆ ಸರಿಯುವೆವೆಂದೂ ಕೊಡುಗೆಯನ್ನಿತ್ತಿರುವುದಾಗಿ ನೆಹರು ಸ್ಪಷ್ಟೀಕರಿಸಿದ್ದಾರೆ. ಅಲ್ಲದೆ ಅಕ್ಸಾಯ್ ಚೀನ್ ಮಾರ್ಗವನ್ನು ನಾಗರಿಕೋದ್ದೇಶಗಳಿಗಾಗಿ, ಆ ಬಗ್ಗೆ ನಿರ್ಧಾರವಾಗುವ ವರೆಗೆ ಚೀನವು ಬಳಸಿಕೊಳ್ಳಬಹುದೆಂದು ಮಾತ್ರ ತಾನು ಹೇಳಿರುವೆನಲ್ಲದೆ ಅದನ್ನು ಗೇಣಿಗೆ ಕೊಡುವ ವಿಚಾರವನ್ನೇ ಮಾಡಿಲ್ಲವೆಂದೂ ನೆಹರು ತಿಳಿಸಿದ್ದಾರೆ. ಅಷ್ಟು ಮಾತ್ರವಲ್ಲದೆ ಈ ಸೂಚನೆಗಳು ಅಂದು ಕೇವಲ ತಾತ್ಕಾಲಿಕವಾಗಿದ್ದುವು. ಚೀನವು ಇವನ್ನು ನಿರಾಕರಿಸಿದ್ದರಿಂದ ಈ ಕೊಡುಗೆಗಳು ತಮಗೆ ತಾವೇ ನಷ್ಟಗೊಂಡುವು ಎಂದವರು ಹೇಳಿದ್ದಾರೆ. ಎಂದರೆ, ಲಡಾಖ ಮತ್ತು ಮ್ಯಾಕಮೋಹನ ರೇಖೆಯ ವರೆಗಿನ ಭೂಭಾಗದ ಮೇಲೆ ಭಾರತದ ಪ್ರಭುತ್ವವನ್ನು ಚೀನವು ಒಪ್ಪಿಕೊಂಡರೆ, ಮಾರ್ಗವನ್ನು ಗೇಣಿಗೆ ನೀಡುವ ಮಾತನ್ನೇ ಅವರು ಎತ್ತಲಿಲ್ಲ; ಎತ್ತುವುದು ಸಾಧ್ಯವೂ ಇಲ್ಲ. ಅಮೆರಿಕನ್ ವರದಿಗಾರನೊಬ್ಬನ ಇಂತಹ ತಪ್ಪು ಗ್ರಹಿಕೆಯಿಂದಾಗಿ ದೇಶದಲ್ಲೂ ವಿದೇಶಗಳಲ್ಲೂ ಕುಸು ಗೊಂದಲ ಮಾತ್ರ ಏಳುವಂತಾಯಿತು.

ಹಾಗಿರುವಾಗ, ಭಾರತವಾದರೂ ಚೀನದೊಡನೆ ವ್ಯಾಪಾರದ ಒಡಂಬಡಿಕೆ ಮಾಡಿಕೊಳ್ಳಲು ಉತ್ಸುಕತೆ ತೋರಿಸದಿರುವುದರಲ್ಲಿ ಆಶ್ಚರ್ಯವೇನಿಲ್ಲ. ಟಿಬೇಟಿನೊಳಗಡೆಯೇ ಚೀನವೀಗ ಭಾರಿಯ ಅತೃಪ್ತಿಯನ್ನೆದುರಿಸಬೇಕಾಗಿದೆ. ದೇಶದ ಪರಂಪರಾಪ್ರಾಪ್ತ ರಕ್ಷಕರೆನಿಸಿದ ದಲಾಯ್ ಲಾಮಾರವರ ಅನುಪಸ್ಥಿತಿಯಿಂದ ಅಲ್ಲಿ ಬೆಂಕಿ ಒಳಗಿಂದೊಳಗೆ ಉರಿಯುತ್ತಲಿದೆ. ಮಾನವತೆಯ ದೃಷ್ಟಿಯಿಂದ ಭಾರತವು ಲಾಮಾರಿಗೆ ಆಶ್ರಯವನ್ನಿತ್ತಿದೆಯಾದರೂ ಅಲ್ಲಿನ ಪ್ರಸಂಗದೊಡನೆ ಭಾರತದ ಸಂಬಂಧವೇನೂ ಇರುವುದಿಲ್ಲ. ಹಾಗಿರುವಾಗ, ಭಾರತವು ತನ್ನ ಆಕ್ರಮಣಕಾರನೊಬ್ಬನೊಡನೆ ಸೀಮಿತ ಸೌಲಭ್ಯ ವಿನಿಮಯಕ್ಕಾಗಿ ಯಾವ ಒಪ್ಪಂದಕ್ಕೂ ಸಹಿಮಾಡಬೇಕೆಂದಿರುವುದಿಲ್ಲ. ಚೀನವು ಭಾರತದ ಮಿತ್ರತ್ವವನ್ನು ಬಯಸುವುದಾದರೆ, ಅದು ನ್ಯಾಯಕ್ಕೆ ತಲೆಬಾಗ ಬೇಕು. ಅಂದರೆ, ತನ್ನ ಆಕ್ರಮಣವನ್ನು ನಿಶ್ಶರ್ತವಾಗಿ ಹಿಂದೆಗೆದುಕೊಳ್ಳಬೇಕು.

ಭಾರತ ಸಂಚಾರ ಕೈಗೊಂಡಿರುವ ಅಮೆರಿಕೆಯ ಅಧ್ಯಕ್ಷರ ಪತ್ನಿ ಶ್ರೀಮತಿ ಜಾಕ್ವಿಲಿನ್ ಕೆನಡಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಪತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು
ಚಿತ್ರಾಂಗದೆ
ಬೆಲೆ: ೬೦ ನ ಪೈಸೆ
(ಶ್ರೀ ಕೆ ಕೆ ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)
ರವೀಂದ್ರನಾಥರ ಕಿರುಗತೆಗಳು
ಬೆಲೆ. ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಭಾರತದ ಅಮೂಲ್ಯ ದೇಣಿಗೆ

(೩ನೇ ಪುಟದಿಂದ)

ಮಾರ್ಗವನ್ನೇ ಹಿಡಿದರು. ಇವು ವಿಕ್ಟೋರಿಯನ್ ಮಾದರಿಯಲ್ಲಿ ಮೊದಲಾದುವು. ಭಾರತೀಯರು ಇವನ್ನೂ ಹಾಳುಗೆಡಹುವುದಿಲ್ಲ. ತಾಜಮಹಾಲನ್ನು ರಕ್ಷಿಸುವಂತೆಯೇ ಭಾರತ ಕ್ರೈಸ್ತರ ಇಗರ್ಜಿಯನ್ನೂ ಕಾಪಾಡುತ್ತದೆ.

ಭಾರತದ ಇಂತಹ ಉದಾರ ನೀತಿ ಆಧುನಿಕ ಯುಗದಲ್ಲಿ ವಿಶ್ವಕ್ಕೆ ಆದರ್ಶಪ್ರಾಯವಾಗಿದೆ. ಇಂದು ವಿಜ್ಞಾನವು ದೂರವೆಂಬುದನ್ನು ದೂರಮಾಡಿಸಿದೆ. ಸ್ಥಾನೀಯ ಸಂಸ್ಕೃತಿ, ಧರ್ಮವೆಲ್ಲವನ್ನೂ ಒಂದರೊಡನೊಂದು ತಂದು ನಿಲ್ಲಿಸುತ್ತದೆ. ಭೌತಿಕ ದೃಷ್ಟಿಯಿಂದ ನಾವು ನೆರೆಹೊರೆಯವರು; ಆದರೆ, ಮನೋವೈಜ್ಞಾನಿಕ ದೃಷ್ಟಿಯಿಂದ ನಾವು ಹೆರವರು. ನಮ್ಮ ನಮ್ಮ ಭಿನ್ನತೆಗೆ ನಾವಿಂದು ಎಂದಿಗಿಂತ ಹೆಚ್ಚಿನ ಮಹತ್ವವೀಯುತಿದ್ದೇವೆ.

ಈ ಭಿನ್ನತೆ ಹೇಗೆ ದೂರವಾದೀತು? ಇದು ನಮ್ಮನ್ನು ಬೆದರಿಸಲು ಶಕ್ತವೆ? ಹಾಗಾದರೆ, ನಾವು ಒಬ್ಬರನ್ನೊಬ್ಬರು ಕೊಲ್ಲಲು ಹವಣಿಸುವುದರಲ್ಲಿಯೇ ಹಾಳಾಗಿ ಹೋಗುವವರು. ಆದುದರಿಂದ ನಾವೆಲ್ಲರೂ ಒಂದೇ ಕುಟುಂಬದವರಂತಿರಬೇಕು. ಇದೊಂದೇ ನಮಗೆ ಬದುಕಲುಳಿದಿರುವ ಮಾರ್ಗ. ಇದಕ್ಕಾಗಿ ನಾವು ಮಾನವನ ಸಾಂಸ್ಕೃತಿಕ ಸಂಪತ್ತಿನ ವಿವಿಧ ರೂಪಗಳನ್ನೂ ಮಹತ್ವಗಳನ್ನೂ ತಿಳಿದುಕೊಳ್ಳಬೇಕು. ನಾವು ನಮ್ಮ ನೆರೆಯವನ ಕೊಡುಗೆಗಾಗಿ ಅವನನ್ನು ಹೊಗಳಬೇಕಾಗಿಲ್ಲ; ಮಾನವ ಜಾತಿಯ ನಿಜವಾದ ನಿಧಿಯೆಂದು ಪ್ರೀತಿಸಬೇಕು. ಈ ದೃಷ್ಟಿಯಲ್ಲಿ ಏಕತೆಯಲ್ಲೂ ಅನೇಕತೆಯನ್ನುಳಿಸಿಕೊಂಡ ಭಾರತದ ಉಪಲಬ್ಧ ಸಮಸ್ತ ವಿಶ್ವಕ್ಕೆ ಮಹತ್ವವಾದುದು.

ಗಾಂಧೀಜಿಯವರಿಗೆ ಪ್ರತಿ ದಿನ ನೂರಾರು ಕೆಲಸ ಮಾಡಬೇಕಾಗುತಿತ್ತು. ಆದರೂ ಅವರು ಧ್ಯಾನಾವಸ್ಥಿತರಾಗಲು ಸಮಯ ತಂದುಕೊಳ್ಳುತಿದ್ದರು. ಅವರು ಹಾಗೆ ಮಾಡದಿರುತಿದ್ದರೆ, ಕೆಲಸ ಮಾಡುವುದೂ ಅವರಿಗೆ ಅಸಾಧ್ಯವೆನಿಸುತಿತ್ತು; ಏಕೆಂದರೆ, ಧ್ಯಾನದ ಆಕ್ಷಣಗಳೇ ಅವರ ಅಸೀಮ ಆಧ್ಯಾತ್ಮಿಕ ಮೂಲಸ್ರೋತವಾಗಿತ್ತು. ಈ ರೀತಿಯ ಅಭ್ಯಾಸವು ಭಾರತೀಯ ಪರಂಪರೆಯ ಒಂದು ವಿಶೇಷತೆ.

ಸಾಮುದಾಯಿಕ ಯೋಜನೆಯೇ ಮೊದಲಾದ ನೂರಾರು ಆವಶ್ಯಕತೆಗಳನ್ನು ಭಾರತೀಯ ಜನತೆ ಪೂರೈಸಿಕೊಳ್ಳಬೇಕಾಗಿದೆ. ಸಾಂಸಾರಿಕ ಚಿಂತೆಗಳಿಂದ ತನ್ನ ಆಧ್ಯಾತ್ಮಿಕ ಜೀವನವನ್ನು ಹಾಳು ಮಾಡದೇನೇ ವ್ಯಾವಹಾರಿಕ ಕಾರ್ಯಗಳನ್ನು ಮಾಡಬಹುದೆಂದು ಗಾಂಧೀಜಿ ತೋರಿಸಿಕೊಟ್ಟಿದ್ದಾರೆ. ಆಧ್ಯಾತ್ಮಿಕ ಸಾಧನೆಯೇ ವ್ಯಾವಹಾರಿಕ ಕಾರ್ಯಕಲಾಪದ ಪ್ರಾಣಸ್ರೋತವೆಂದಿದ್ದಾರೆ; ಪ್ರಾಯಃ ನಮ್ಮ ಸಮಸ್ತ ವ್ಯವಹಾರಿಕ ಕಾರ್ಯಗಳು ಸಫಲವಾಗುವುದು ಇದರಿಂದಲೇ ಹೊರತು, ಕೇವಲ ಓಡಾಟ ಹುಡುಕಾಟಗಳಿಂದಲ್ಲ.

ಭಾರತವಿಂದು ಈ ಅಮೂಲ್ಯ ಪಾಠವನ್ನು ಜಗತ್ತಿಗೆ ಕಲಿಸಬೇಕು. ಮಧ್ಯಯುಗದಲ್ಲಿ ಪಶ್ಚಿಮದಲ್ಲಿ ಕ್ರೈಸ್ತ ಧರ್ಮವು ಸ್ವಲ್ಪ ಮಟ್ಟಿಗೆ ಧ್ಯಾನಾವಸ್ಥೆಯ ಮಹತ್ವವನ್ನು ಅನುಭವ ಮಾಡಿಕೊಂಡು, ಅದನ್ನು ಸಾಧಿಸಿತು. ಅನಂತರ ನಾವೀ ಆಧ್ಯಾತ್ಮಿಕ ಕಲೆಯನ್ನು ಸಂಪೂರ್ಣ ಕಳೆದುಕೊಂಡೆವು. ಇದು ದೊಡ್ಡ ನಷ್ಟ: ಏಕೆಂದರೆ, ಜೀವನ ಕಲೆ—ಧ್ಯಾನಕಲೆ (ಆಧ್ಯಾತ್ಮಿಕ) ಎರಡೂ ಪರ್ಯಾಯ ವಾಚಿಗಳು. ಮಾನವನು ವಿನಾಶದಿಂದ ಬದುಕಬೇಕಾದರೆ, ಆಧ್ಯಾತ್ಮಿಕತೆಗಿಂತ ಅಧಿಕ ಸಹಾಯಕವಾಗುವ ವಸ್ತು ಬೇರೊಂದಿಲ್ಲ.

ವಿಜ್ಞಾನದ ಮಹತ್ಸಾಧನೆ

ಸಮುದ್ರದಿಂದ ಕುಡಿಯುವ ನೀರು

ಒಳ್ಳೆಯ ಕುಡಿಯುವ ನೀರು ಮನುಷ್ಯನಿಗೆ ಬೇಕಾದ ಅತ್ಯಾವಶ್ಯಕ ವಸ್ತುಗಳಲ್ಲೊಂದು ಎಂಬುದು ನಿರ್ವಿವಾದ. ಒಳ್ಳೆಯ ನೀರು ದೊರಕದಿರುವ ಪ್ರದೇಶಗಳಲ್ಲಿ ಸಮುದ್ರದ ಉಪ್ಪು ನೀರನ್ನು ಹೇಗೆ ಕುಡಿಯುವ ನೀರಾಗಿ ಪರಿವರ್ತಿಸಬಹುದೆಂಬುದರ ಬಗ್ಗೆ ಸಂಶೋಧನೆಗಳು ನಡೆಸಲ್ಪಡುತ್ತಿವೆ. ಇಂತಹ ಪರೀಕ್ಷೆಗಳಿಂದ ವಿಶ್ವದ ಸಕಲ ರಾಷ್ಟ್ರಗಳಿಗೂ ಮಹದುಪಕಾರ ಮಾಡಿದಂತಾಗುವುದು.

“ಎರಡನೆಯ ಮಹಾ ಯುದ್ಧದ ಉಪಸಂಹಾರದ ನಂತರ ಪಶ್ಚಿಮ ಜರ್ಮನಿಯ ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೂ ನೀರು ಸರಬರಾಜಿಗೊಂದು ಮಧ್ಯವರ್ತಿ ಸಂಸ್ಥೆಯೊಂದರ ಸ್ಥಾಪನೆಯ ಪ್ರಯತ್ನ ನಡೆದಿದೆ. ನೀರಿನ ಅಭಾವವನ್ನು ತೀರಿಸುವುದಕ್ಕೆ ಅನೇಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ” ಎಂಬೆಲ್ಲ ವಿಷಯಗಳನ್ನೂ ಹ್ಯಾಲಿಗನ್ ಎಂಬ ಚಿಕ್ಕ ದ್ವೀಪಸ್ತೋಮವೊಂದರ ನೀರು ಸರಬರಾಜನ್ನು ನೋಡಿಕೊಳ್ಳುತ್ತಿರುವ ಮುಖ್ಯಾಧಿಕಾರಿಯಾದ ಸ್ಟ್ಪುರ್ ಎಂಬವರು ತಿಳಿಸಿದರು.

ಹ್ಯಾಲಿಗನ್ ದ್ವೀಪಸ್ತೋಮದ ಹೆಚ್ಚಿನ ಭಾಗ ಜೌಗುಪ್ರದೇಶವಾಗಿದ್ದು ಇದರ ಬಾವಿಯ ನೀರು ಬಹಳ ಉಪ್ಪಿನಿಂದ ಕೂಡಿದ್ದು ಮನುಷ್ಯ ಹಾಗೂ ಪ್ರಾಣಿವರ್ಗದ ಉಪಯೋಗಕ್ಕೆ ಅನರ್ಹವಾಗಿದೆ. ಜರ್ಮನಿಯ ಎತ್ತರದ ಪ್ರದೇಶಗಳೊಂದಿಗೆ ಈ ಹ್ಯಾಲಿಗನ್ ದ್ವೀಪಗಳನ್ನು ಕೊಳಾಯಿಗಳಿಂದ ಒಂದುಗೂಡಿಸುವುದರಿಂದ ಈ ಪ್ರದೇಶದ ಅಭಾವ ನಿವೃತ್ತಿಯಾಗುತ್ತದೆಯೆಂದು ತಿಳಿದು ಬಂದಿದೆ.

ಹ್ಯಾಲಿಗನ್ ದ್ವೀಪ ನಿವಾಸಿಗಳು ಕುಡಿಯುವ ನೀರಿಗೆ ಮಳೆಯನ್ನೇ ಎದುರು ನೋಡಿಕೊಂಡಿರಬೇಕಾಗಿದೆ. ಈ ಜಲವೂ ಸಹ ಕಶ್ಮಲ ರಹಿತವಾಗಿರುವುದಿಲ್ಲ. ಅದಲ್ಲದೆ ವರ್ಷದ ಸಕಲ ಕಾಲಗಳಲ್ಲಿಯೂ ಮಳೆಯನ್ನು ನಿರೀಕ್ಷಿಸಲಾಗುವುದಿಲ್ಲ. ಈ ದ್ವೀಪ ಸ್ತೋಮದಲ್ಲಿ ಮುಖ್ಯ ದ್ವೀಪವಾದ ಪೆಲ್‌ವರ್ಮ್ ಎಂಬ ಪ್ರದೇಶಕ್ಕೆ ಕೊಳಾಯಿಗಳನ್ನು ಹಾಕುವ ಕಾರ್ಯ ಮೊಟ್ಟಮೊದಲನೆಯದಾಗಿ ಪ್ರಾರಂಭವಾಗಲಿದೆ. ಈ ಅಗಾಧವಾದ ಕಾರ್ಯಕ್ಕೆ ನಾಲ್ವತ್ತು ಲಕ್ಷ ಜರ್ಮನ್ ಪ್ರಾಂಕುಗಳಷ್ಟು ಕರ್ಚಾದೀತೆಂದು ನಿರೀಕ್ಷಿಸಲಾಗಿದೆ. ಈ ಕೊಳಾಯಿಗಳು ಒಂದು ವಿಧವಾದ ಗಟ್ಟಿಯಾದ ಪ್ಲಾಸ್ಟಿಕ್‌ನಿಂದ ಮಾಡಲ್ಪಟ್ಟಿದೆ. ಈ ವಿಧವಾದ ಕೊಳವೆಗಳೇ ಮೊದಲಾದುವೆಂದು ಪರೀಕ್ಷೆಗಳಿಂದ ತಿಳಿದು ಬಂದಿದೆ. ನೀರನ್ನೊದಗಿಸಲು ಈ ಏರ್ಪಾಡುಗಳೇ ಅಲ್ಲದೆ, ಸಮುದ್ರದ ಉಪ್ಪುನೀರನ್ನು ಕುಡಿಯುವ ನೀರಾಗಿ ಪರಿವರ್ತಿಸುವ ಬಗ್ಗೆ ಅನೇಕ ಪ್ರಯೋಗಗಳು ನಡೆಸಲ್ಪಡುತ್ತವೆ.

ಅನೇಕ ದೇಶಗಳು ಈ ಬಗೆಯ ಸಂಶೋಧನೆ ನಡೆಸುತ್ತವೆ. ಸಹರಾ ಮರುಭೂಮಿಯಲ್ಲಿಯೂ, ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿಯೂ ಕಡಲ ನೀರಿನ ಶುದ್ಧೀಕರಣ ಯಶಸ್ವಿಯಾಗಿದೆ. ಇದರಿಂದ ಒಣಗಿ ನಿಂತಿರುವ ಮರುಭೂಮಿಯ ಪ್ರದೇಶಗಳಿಗೂ ನೀರಿನ ಅಭಾವವಿರುವ ಪ್ರದೇಶಗಳಿಗೂ ಬೇಕಾಗುವ ನೀರನ್ನು ಒದಗಿಸಲಾಗುತ್ತಿದೆ. ‘ಎಲೆಕ್ಟ್ರೋ—ಡಯೋಲಿಸಿಸ್’ ಎಂಬ ಕ್ರಿಯೆಯಿಂದ ಸಾಗರದ ನೀರಿನಲ್ಲಿರುವ ಉಪ್ಪು ಪ್ರತ್ಯೇಕಿಸಲ್ಪಟ್ಟು ಕುಡಿಯುವ ನೀರನ್ನು ಒದಗಿಸುವ ವಿಧಾನ ಒಂದು ಬಗೆಯದಾದರೆ, ಸಮುದ್ರದ ನೀರನ್ನು ಬರ್ಫವಾಗಿಸುವುದು ಇನ್ನೊಂದು ಬಗೆ. ಸಮುದ್ರದ ನೀರು ಬರ್ಫವಾದಾಗ ಅದರ ಉಪ್ಪು ಬೇರೆಯಾಗುವುದು.

ಅಂತೂ, ಸಮುದ್ರದ ನೀರಿನಿಂದ ಕುಡಿಯುವ ನೀರನ್ನು ಪಡೆಯುವ ವಿಷಯದಲ್ಲಿದ್ದ ಯಾಂತ್ರಿಕ ತೊಂದರೆಗಳ್ಯಾವುವೂ ಈಗ ಉಳಿದಿಲ್ಲವೆಂದರೂ, ಆ ಶುದ್ಧೀಕರಣದ ಯಂತ್ರಸಾಧನೆಗಳಿಗೆ ಅಗಾಧ ವೆಚ್ಚವಾಗುವುದೆಂದೂ, ಅದಲ್ಲದೆ ಆ ಯಂತ್ರಗಳ ಕ್ರಿಯೆಗೂ ಬೇಕಾದಂತೆ ವೆಚ್ಚವಾಗುವುದೆಂದೂ ತಿಳಿದುಬಂದಿದೆ. ಹ್ಯಾಲಿಗನ್ ದ್ವೀಪನಿವಾಸಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಪ್ರಶ್ನೆ ಅತಿ ಮುಖ್ಯವೆನಿಸಿದ್ದರೂ, ಇಷ್ಟೊಂದು ಭಾರೀ ಕರ್ಚಿನಲ್ಲಿ ಈ ಕಾರ್ಯವನ್ನು ಕೈಗೊಳ್ಳುವುದು ಸೂಕ್ತವೆನಿಸಲಾರದು. ನಾಡಿನ ಹಣಕಾಸಿನ ಪರಿಸ್ಥಿತಿಗನುಗುಣವಾದ ಬೇರಾವುದಾದರೂ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಅವರು ಯೋಚಿಸುತ್ತಿದ್ದಾರೆ.

ಸದ್ಯದಲ್ಲಿಯೇ ಪೆಲ್‌ವರ್ಮಿನ ಬಳಿ ಎಲೆಕ್ಟ್ರೋ-ಡಯಾಲಿಸಿಸ್ ಯಂತ್ರ ಸ್ಥಾಪನೆಯಾಗುವ ನಿರೀಕ್ಷೆಯಿದೆ. ಹೇಗಾದರೂ ಈ ಅಭಾವ ಪರಿಸ್ಥಿತಿಯನ್ನು ಎದುರಿಸಿಯೇ ತೀರಬೇಕೆಂದು ಜರ್ಮನ್ ವಿಜ್ಞಾನಿಗಳು ಬದ್ಧ ಕಂಕಣರಾಗಿದ್ದಾರೆ. ಇದರಲ್ಲಿ ಇವರು ಜಯಿಸಿದ್ದೇ ಆದರೆ ಕೇವಲ ತಮ್ಮ ಜನತೆಯ ಹಿತ ಸಾಧನೆಯನ್ನು ಮಾತ್ರವಲ್ಲದೆ, ಲೋಕದ ಹಿತಸಾಧನೆಯನ್ನೂ ಅವರು ಮಾಡಿದಂತಾಗುತ್ತದೆಂಬುದರಲ್ಲಿ ಸಂದೇಹವಿಲ್ಲ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,

ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ

6=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಸತ್ತರೆ ಸ್ವರ್ಗ.. ಬದುಕಿದರೆ?

(೨ನೇ ಪುಟದಿಂದ)

ವಸುಂಧರೆ ಎಸ್. ಎಸ್. ಎಲ್. ಸಿ. ಪಾಸಾದಾಗ ಮನಸ್ಸಿರಲಿ, ಇಲ್ಲದಿರಲಿ, ತನ್ನನ್ನು ಸಾಕಿ ಸಲಹಿದುದರ ಋಣ ವಿಮೋಚನೆಗಾಗಿ ವಸುಂಧರೆ ಮೌನವಾಗಿ ಗುಮಾಸ್ತೆಯ ಕೆಲಸಕ್ಕೆ ಸೇರಿದ್ದಳು.

ಕೆಲಸಕ್ಕೆ ಸೇರಿ ಒಂದು ವರ್ಷದ ವರೆಗೆ ಯಾವ ಆತಂಕವೂ ಇಲ್ಲದೆ ಸಾಗಿತ್ತು ವಸುಂಧರೆಯ ಯಾಂತ್ರಿಕ ಜೀವನ. ಬಂದ ಸಂಬಳವನ್ನು ಅತ್ತಿತ್ತ ಅಲುಗಿಸದೆ ಅತ್ತೆಯ ಕೈಗಿತ್ತರೆ ಆಕೆ ಹರ್ಷ ಚಿತ್ತದಿಂದ ಆರು ತಿಂಗಳಿಗೊಂದು ಸೀರೆಯನ್ನೂ ಮೂರು ತಿಂಗಳಿಗೊಮ್ಮೆ ಒಂದೆರಡು ರೂಪಾಯಿಗಳನ್ನೂ ಕೈಗೀಯುತ್ತಿದ್ದಳು. ಪರಿಸ್ಥಿತಿಯ ಪ್ರಭಾವದಿಂದಲೋ ಸ್ವಾಭಾವಿಕವಾದ ಗುಣ ನಡತೆಯಿಂದಲೋ ವಸುಂಧರಾ ಕಠೋರ ಚಿತ್ತಳೂ, ಮಿತಭಾಷಿಣಿಯೂ, ಸಹನಾಶೀಲೆಯೂ ಆಗಿ ಬೆಳೆದಿದ್ದಳು. ಆಫೀಸಿನ ಹಲವು ಮಂದಿ ಸ್ತ್ರೀ ಪುರುಷ ಸಹೋದ್ಯೋಗಿಯರಿಂದ ದೂರವಾಗಿಯೇ ಇರುವ ಆಕೆ ಮಾತನಾಡಿ ಸ್ನೇಹ ಬೆಳೆಸುವ ಸ್ವಭಾವದವಳಾಗಿರಲಿಲ್ಲ. ಆಕೆಯ ಸ್ವಭಾವವನ್ನೇ ಅಹಂಕಾರವೆಂದೂ ದುರಭಿಮಾನವೆಂದೂ ಹೇಳಿಕೊಳ್ಳುತ್ತಿದ್ದ ಸಹೋದ್ಯೋಗಿಗಳು ಆಕೆಯೊಡನೆ ಸರಳವಾಗಿ ಮಾತನಾಡುವುದೆಂದೇ ಇರಲಿಲ್ಲ.

ಆದರೆ .. ಅಲ್ಲಿಯ ಒಂದು ಜೀವ ಆಕೆಯ ಗುಣ, ನಡತೆಯನ್ನು ಬಹಳವಾಗಿ ಮೆಚ್ಚಿಕೊಂಡಿತ್ತು. ಗೆಳೆಯರೊಡನೆ ಆಕೆಯನ್ನು ನಿಸ್ಸಂಕೋಚವಾಗಿ ಹೊಗಳುತ್ತಲಿತ್ತು. ಅವನೇ ಶ್ಯಾಮ ಸುಂದರ.

ಶ್ಯಾಮ ಮಗುವಿನಂತಹ ಮುಗ್ಧ ಮನಸ್ಸಿನ ಭಾವ ಜೀವಿಯೆಂಬುದನ್ನು ಎಲ್ಲರೂ ಹೊಗಳುತ್ತಿದ್ದುದು ವಸುಂಧರೆಗೂ ಗೊತ್ತು. ಆದರೆ ಇತರರ ವಿಷಯವಾಗಿ ಅದರಲ್ಲೂ ಗಂಡಸರ ವಿಷಯವಾಗಿ ಎಂದೂ ಯೋಚಿಸಿದವಳೇ ಅಲ್ಲ ವಸುಂಧರಾ. ಯುವತಿಯಾಗಿದ್ದ ಆಕೆಯ ಮದುವೆಯ ಪ್ರಸ್ತಾಪ ಕುರಿತು ಕೂಡಾ ಅತ್ತೆಯ ಬಾಯಲ್ಲಿ ಕೇಳದವಳೇ ಅಲ್ಲ. ಅಲ್ಲದೆ ತಾನು ಅತ್ತೆಯ ಋಣವಿಮೋಚನೆಗಾಗಿಗಂಡಾಗಿ, ದುಡಿಯಬೇಕು ಎಂಬ ಅಚಲ ನಿರ್ಧಾರ ಆಕೆಯ ಮನದಲ್ಲಿ ಬೇರೂರಿ ಬಿಟ್ಟಿತ್ತು ಗಂಡನಿಂದ ಬರುವ ಹಣವೂ ದಿನೇ ದಿನೇ ಕಡಿಮೆಯಾಗಿ ಮನೆಯ ಖರ್ಚು ಹೆಚ್ಚುತ್ತಿರುವ ಸಮಯದಲ್ಲಿ ಗಂಡಿನಂತೆ ದುಡಿದು ತಾನೂ ಖರ್ಚು ಮಾಡದೆ ಕೈಯಲ್ಲಿಡುವ ಅರುವತ್ತು ರೂಪಾಯಿಗಳನ್ನು ಅತ್ತೆ ಮರೆಯಲು ಸಿದ್ಧಳಿರಲಿಲ್ಲ.

ಉದ್ಯೋಗದ ನೆಪದಿಂದ ರಂಗು ರಂಗಿನ ಸೀರೆಗಳನ್ನುಟ್ಟು ಬಣ್ಣದ ಚಿಟ್ಟೆಗಳಂತೆ ಮೆರೆದಾಡುತ್ತಿರುವ ಸ್ತ್ರೀ ಸಮೂಹದಲ್ಲಿ ತೀರಾ ಭಿನ್ನ ಪ್ರಕೃತಿಯ ಸರಳ ರೀತಿಯ ವೇಷ ಭೂಷಣಗಳ ಗಂಭೀರ ವರ್ತನೆಯ ವಸುಂಧರಾ ಶ್ಯಾಮನ ಗೌರವಾದರಗಳಿಗೆ ಪಾತ್ರಳಾದಳು. ಆತ ಸಿನಿಮಾ ಪ್ರೇಮಿಯಾಗಿದ್ದ. ಪ್ರೀತಿ, ಪ್ರೇಮಗಳ ಕತೆ, ಕಾದಂಬರಿಗಳನ್ನೂ ಬಹಳ ಓದಿದ್ದ. ವಸುಂಧರೆಯ ಗುಣ, ನಡತೆಯನ್ನು ಮೆಚ್ಚಿಕೊಂಡಿದ್ದ ಆತ ತಾನಾಗಿಯೇ ಅವಳನ್ನು ಮಾತನಾಡಲೆತ್ನಿಸುತ್ತಿದ್ದ. ಆದರೂ ಮಿತಭಾಷಿಣಿ ವಸುಂಧರಾ ಅಗತ್ಯಕ್ಕಿಂತ ಹೆಚ್ಚಿನ ಮಾತನ್ನಾಡುತ್ತಿರಲಿಲ್ಲ. ಆದರೂ ....ಅವಳನ್ನೇ ಮದುವೆಯಾಗಿ ಆದರ್ಶ ಬಾಳನ್ನು ನಡೆಸಬೇಕು ಎಂಬ ಕನಸನ್ನು ಕಾಣುವ ವರೆಗೂ ಆತನ ಆಸೆ ಬೆಳೆದು ಬಿಟ್ಟಿತು. ಅವಳ ಕಷ್ಟ, ತಾಪತ್ರಯಗಳನ್ನು ದೂರೀಕರಿಸಿ ಅವಳನ್ನು ಸುಖವಾಗಿರಿಸುವುದು ತನ್ನ ಕರ್ತವ್ಯವೆಂದು ನಿಶ್ಚಯಿಸಿಕೊಂಡ.

ಮೊದಲೇ ಹೆಣ್ಣಿನಂತಹ ಮೃದು ಮನಸ್ಸಿನ, ಮೃದು ಮಾತುಗಳ ಶ್ಯಾಮ ವಸುಂಧರೆಯೊಡನೆ ಬಹಳ ಜಾಗರೂಕತೆಯಿಂದ ಮಾತನಾಡುತ್ತಿದ್ದ, ಆಕೆಯ ಮನಸ್ಸಿಗೆ ಹಿತವಾಗುವಂತೆಯೂ, ಸ್ವಲ್ಪವೂ ನೋವಾಗದಂತೆಯೂ ವರ್ತಿಸಲೆತ್ನಿಸುತ್ತಿದ್ದ.

ಮನುಷ್ಯ ಸ್ನೇಹವನ್ನು, ಮೃದು ಮಾತುಗಳನ್ನು ಕಂಡರಿಯದ ಆಕೆಗೆ ಶ್ಯಾಮನ ಮಾತಿನ ಇಂಪು ಉರಿಯುವ ಹೃದಯಕ್ಕೆ ತಂಪನ್ನೀಯಿತು. ಮನೆಯಲ್ಲಿ, ನೆರೆಕರೆಗಳಿಂದ ಮಾತ್ರವಲ್ಲ ಸಹೋದ್ಯೋಗಿಗಳಿಂದಲೂ ದೂರ ಉಳಿದಿದ್ದ ಆಕೆ ತನಗೆ ತಿಳಿಯದೆಯೇ ಶ್ಯಾಮನ ಹತ್ತಿರ ಹತ್ತಿರ ಸರಿಯತೊಡಗಿದಳು.

ಆರು ತಿಂಗಳುಗಳು ಕಳೆಯುವುದರೊಳಗೇ ಶ್ಯಾಮ ವಸುಂಧರೆಯ ಪ್ರಿಯಗೆಳೆಯನಾಗಿ ಪ್ರಣಯಿಯಾಗಿ ಬದಲಾಗಿದ್ದ. ವಸುಂಧರೆಯಾದರೋ ತನಗಾಗಿ ಮರುಗುವ, ತನ್ನನ್ನು ಮೃದು ಮಾತಿನಿಂದ ಸಂತೈಸಿ ಪ್ರೀತಿಸುವ ಒಂದೇ ಒಂದು ಜೀವಕ್ಕಾಗಿ ಏನನ್ನೂ ಮಾಡಲೂ ಸಿದ್ಧಳಿದ್ದಳಲ್ಲದೆ ಪ್ರತಿ ಹೇಳುವ ಅಥವಾ ವಿರೋಧಿಸುವ ಶಕ್ತಿಯುಳ್ಳವಳಾಗಿರಲಿಲ್ಲ. ಆದಿನ ಆತ ಕೊನೆಯದಾಗಿ ಹೇಳಿದ

‘ಪ್ರಿಯ ವಸುಂಧರಾ ನೀನೇನೋ ನಾನು ಪ್ರೇಮದ ಹೆಸರಿನಿಂದ ಹೆಣ್ಣಿನ ಬಾಳನ್ನು ಹಾಳುಗೆಡಹುವ ನೀಚನೆಂದೆಣಿಸಬಹುದು. ಆದರೆ....ನಿನ್ನಾಣೆ ವಸೂ....ನನ್ನ ಉಸಿರೊಂದಿದ್ದರೆ ನಿನ್ನ ಕೈಬಿಡಲಾರೆ.”

ವಸುಂಧರೆ ಆತ ಆ ಮಾತನ್ನು ಹೇಳುವುದಕ್ಕಿಂತಲೂ ಮೊದಲೇ ನಂಬಿ ಬಿಟ್ಟಿದ್ದಳು ಆದ್ದರಿಂದಲೇ ಮುಂದೆ ಮಾತನಾಡಗೊಡಲಿಲ್ಲ. ಮುಗ್ಧ ಹೃದಯದ ಮೃದು ಮನಸ್ಸಿನ ಆತ ಮರೆ, ಮೋಸಗಳನ್ನು ಮಾಡುವುದು ಸಾಧ್ಯವೇ? ಛೆ! ಎಂತಹ ಕೆಟ್ಟ ಯೋಚನೆ!

ಆದರೂ ಅದೇಕೋ ವಸುಂಧರೆ ಮತ್ತು ಶ್ಯಾಮರ ವಿವಾಹ ನಡೆಯಲಿಲ್ಲ. ವಸುಂಧರೆಯ ಅತ್ತೆಯ ಕಿವಿಗೆ ಆ ಮಾತನ್ನು ಕೇಳಿ ಸಹಿಸುವ ಶಕ್ತಿಯಂತೂ ಖಂಡಿತ ಇರಲಿಲ್ಲವಾದ್ದರಿಂದ ವಸುಂಧರೆಗಂತೂ ಮದುವೆಯ ಮಾತೆತ್ತುವ ಧೈರ್ಯ ಸ್ವಲ್ಪವೂ ಇರಲಿಲ್ಲ. ಅಲ್ಲದೆ ಅವರಿಬ್ಬರ ಜಾತಿಯೂ ಬೇರೆ ಬೇರೆಯೇ ಎಂದ ಮೇಲೆ ಆ ಅತ್ತೆಯೆದುರು ಹೇಳುವ ಧೈರ್ಯ, ಸಾಹಸ ವಸುಂಧರೆಗೆ ತುಸುವೂ ಇರಲಿಲ್ಲ.

ಶ್ಯಾಮನೇನೋ ತನ್ನಿಂದ ಮಾತ್ರ ಯಾವ ಅಡ್ಡಿಯೂ ಇಲ್ಲವೆಂದೂ ಭರವಸೆಕೊಟ್ಟಿದ್ದ. ಆ ಭರವಸೆಯೊಂದೇ ವಸುಂಧರೆಗಿದ್ದ ಬೆಂಬಲ.

ಆದರೆ ಶ್ಯಾಮ ದಿನಗಳೆದಂತೆ ಸ್ವಲ್ಪ ಸ್ವಲ್ಪ ಬದಲಾಗುತ್ತಿದ್ದ. ಆತನ ಮೃದು ಮಾತುಗಳು ಎಂದಿನಂತೆಯೇ ಇದ್ದರೂ ಆತನ ಬಿಚ್ಚು ಹೃದಯದಿಂದ ಹರಟುತ್ತಿಲ್ಲವೆಂಬುದು ವಸುಂಧರೆಯ ಗಮನಕ್ಕೆ ಬಾರದಿರಲಿಲ್ಲ. ಯಾವುದನ್ನೂ ಒಮ್ಮೆಯೂ ಮರೆಮಾಚದ ಆತ ಯಾವುದೋ ಒಂದು ಗುಪ್ತ ಕಳವಳದಿಂದ ಒಳಗೊಳಗೇ ಕೊರಗುತಿದ್ದನೆಂಬುದನ್ನು ಆತನ ಬಾಡಿದ ಮೊಗವೇ ಸ್ಪಷ್ಟಪಡಿಸುತಿತ್ತು. ಕಾರಣವನ್ನು ಕೇಳದಾಗಲೆಲ್ಲ. ಆತ ಬಲವಂತದ ನಗುವನ್ನೆಳೆದು ತಂದು, ಏನಿಲ್ಲ, ಎಂದೇ ಮಾತು ಮುಗಿಸಿದ್ದ. ಕೊನೆಗೊಮ್ಮೆ ವಸುಂಧರೆಯ ಬಲಾತ್ಕಾರಕ್ಕೆ ಬಾಗಿ ಆಕೆಯಲ್ಲಿ ತನ್ನ ಗೌಪ್ಯವನ್ನು ಅಡಗಿಸಲಾರೆನೆಂದು ಕಳವಳದಿಂದ ಆತ ಹೇಳತೊಡಗಿದ.

“ವಸೂ...ಏನೆಂದು ಹೇಳಲಿ? ನನ್ನ ಏಕಾಕಿ ಬಂಧು, ನನ್ನ ಜನ್ಮದಾತೆ...ಪ್ರೀತಿಯ ಮಾತೇ........... ನನ್ನ ಮದುವೆಯಾದರೆ ಆತ್ಮಹತ್ಯೆಮಾಡಿಕೊಳ್ಳುತ್ತಾಳಂತೆ. ನಾನು ಕನಸಿನಲ್ಲೂ ಯೋಚಿಸದ ವಿಚಾರವಿದು “ಅಯ್ಯೋ.... ಈಗ ನಾನೇನು ಮಾಡಲಿ?” ಎಂದವನೇ ಮಗುವಿನಂತೆ ಅಳ ತೊಡಗಿದ.

ಸಿಡಿಲಿಗಿಂತಲೂ ಕರ್ಕಶವಾಗಿದ್ದ ಆ ಮಾತುಗಳನ್ನು ಕೇಳಿ ವಸುಂಧರೆ ಬೆಚ್ಚಿಬಿದ್ದಳು. ಆಕೆಯ ಮೈಯೆಲ್ಲ ಬೆವರಿತು. ಜಗತ್ತಿನಲ್ಲಿ ತನ್ನನ್ನು ಪ್ರೀತಿಸುವವರಿದ್ದಾರೆ ಎಂದು ತಿಳಿದು ನಗುತ್ತಿದ್ದ ವಸುಂಧರೆಗೆ ಆ ಮಾತಿಗೆ ಪ್ರತಿ ಹೇಳುವ ಶಕ್ತಿಯೇ ಉಳಿದಂತಿರಲಿಲ್ಲ. ಶ್ಯಾಮ ಅಳುತ್ತಿದ್ದ. ಹೆಣ್ಣಿನಂತೆ, ಮಗುವಿನಂತೆ ಅಳುತ್ತಿದ್ದ.

ವಸುಂಧರಾ ಬೆವರಿದ ದೇಹದಿಂದ, ನಡುಗುವ ಮೈಯಿಂದ ಕಲ್ಲಾಗಿ ಕುಳಿತು ನೋಡುತ್ತಿದ್ದಳು. ಬಹಳ ಹೊತ್ತಿನ ಮೇಲೆ ನಡುಗುವ ಧ್ವನಿಯಿಂದ ಆಕೆ ಮಾತೆತ್ತಿದಳು....

“ಹಾಗಾದರೆ....ನೀವು ನನ್ನ ಕೈಬಿಡ್ತೀರಾ? ಆದರೆ....ಆದರೆ....ನಾನು ಇನ್ನು ಆರೇಳು ತಿಂಗಳುಗಳಲ್ಲಿ ತಾಯಿಯಾಗಲಿದ್ದೇನೆ”.

“ನನಗೆಗೊತ್ತು ವಸುಂಧರಾ ನನಗೀಗ ದಾರಿಯೇ ಕಾಣಿಸುತ್ತಿಲ್ಲ ನನ್ನ ತಾಯಿಯ ಹಟವೂ ನನಗೆ ಗೊತ್ತು. ಆಕೆ ಹೇಳಿದ ಮಾತನ್ನು ಪಾಲಿಸಿಯೇ ಬಿಡುವಳು. ಅಯ್ಯೋ...ನಾನೀಗ ಏನು ಮಾಡಲಿ?”

ಆತ ಈ ಇಕ್ಕಟ್ಟಿನಿಂದ ಪಾರಾಗುವ ಮಾರ್ಗ ಕಾಣದೆ ಹೆಣ್ಣಿನಂತೆ ಅಳುತ್ತಿದ್ದ. ವಸುಂಧರಾ ಬಸುರಿ. ತಾಯಿ ಆತ್ಮ ಹತ್ಯೆ ಮಾಡಿಕೊಳ್ತಾಳೆ. ಮುಂದಾಲೋಚನೆಯಿಲ್ಲದೆ ಬೆಳೆದ ಪ್ರೇಮ ಆತನನ್ನು ಕಂಗೆಡಿಸಿತ್ತು. ವಸುಂಧರೆಗೆ ಅತಿಯಾದ ದುಃಖದಿಂದಾಗಿ ಅಳು ಬರಲಿಲ್ಲ. ಅಳುವ ಆತನನ್ನು ಕತ್ತೆತ್ತಿ ನೋಡಿ ತಲೆ ತಗ್ಗಿಸಿ ಕುಳಿತಿದ್ದಳು.

“ಆದರೆ ವಸೂ....ನೀನು ಅಳಬೇಡ. ಏನಾದರೂ ಮಾಡಿ ನಿನ್ನ ಕೈಹಿಡೀತ್ತೇನೆ. ಈ ಉಸಿರಿರುವ ವರೆಗೆ ನಿನ್ನ ಕೈಬಿಡಲಾರೆ.”

ವಸುಂಧರಾ ಉತ್ತರವನ್ನೇ ಕೊಡಲಿಲ್ಲ. ಅಳುವ ಆತನ ಮೊಗವನ್ನೊಮ್ಮೆ ದಿಟ್ಟಿಸಿ ನೋಡಿದಳು ಮಾತ್ರ. ಈ ವರೆಗಿನ ತನ್ನ ಕಷ್ಟಸಂಕಟಗಳನ್ನೆಲ್ಲ ಶ್ಯಾಮನ ಹೃದಯದಾಸರೆತಿಯಲ್ಲಿ ಮರೆಯಬೇಕೆಂದು ಬಯಸಿದ್ದ ಆಕೆಗೆ ಬದುಕುವ ಆಸೆಯೇ ವ್ಯರ್ಥವೆನಿಸಿತು.

ಶ್ಯಾಮ ಮೌನವಾಗಿ ಇದಿರಿನ ವೃಕ್ಷಗಳತ್ತ ಶೂನ್ಯ ದೃಷ್ಟಿಯಿಂದ ದಿಟ್ಟಿಸುತ್ತಿದ್ದ ಕತ್ತಲಾಗುತ್ತಾ ಬಂದಿತ್ತು. ವಸುಂಧರಾ ಗಡಬಡಿಸಿ ಎದ್ದು ನಿಂತಳು. ಮನೆಯಲ್ಲಿ ಕಾದಿರುವ ಅತ್ತೆಯ ಕೆಂಗಣ್ಣಿನ ವ್ಯಂಗ್ಯನೋಟ ಸ್ವಾಗತದನೆನಪಾಯಿತು ಈ ವರೆಗೂ ಇಂದಲ್ಲ ನಾಳೆ ಆ ನೋಟದಿಂದ ಪಾರಾಗಿ ಎಲ್ಲರಂತೆಯೇ ತಾನಾಗಿ ಬಾಳುವೆನೆಂಬಾಸೆಯಿಂದ ಆ ಚುಚ್ಚು ನೋಟದ ನೋವನ್ನು ಸಹಿಸುತ್ತಿದ್ದಾಕೆಗೆ ಇಂದು ಯಾವ ಆಸೆಯೂ ಉಳಿದಿರಲಿಲ್ಲ.

ಆಕೆ ವೇಗವಾಗಿ ನಡೆಯತೊಡಗಿದಳು. ಶ್ಯಾಮನತ್ತ ಹಿಂತಿರುಗಿಯೂ ನೋಡದೆ

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.
THE VIJAYA BANK LTD.

Tel: ‘BLUEYAGAR’. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.
ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ರಭಸದಿಂದ ಹೆಜ್ಜೆ ಹಾಕಿದಳು.

ಶ್ಯಾಮ! ಮೃದು ಹೃದಯಿಯೆಂದು ಮುಗ್ಧ ಮನದವನೆಂದು ಮಧುರ ಮಾತಿನವನೆಂದು ಪ್ರೀತಿಸಿದ ಶ್ಯಾಮ ಏನಾಗಿ ಬಿಟ್ಟ? ಮೋಸಗಾರ ಹೇಡಿ ಯಾರಿಗೂ ಒಲಿಯದೆ ಯಾರನ್ನೂ ಪ್ರೀತಿಸದೆ ತನ್ನ ಪಾಡಿಗೇ ತಾನಿದ್ದುದನ್ನು ಸಹಿಸದೆ ತನ್ನ ಸರ್ವಸ್ವವನ್ನೂ ಸೂರೆಗೊಂಡ ಶ್ಯಾಮ ದ್ರೋಹಿಯಾಗಿದ್ದಾನೆ.

ವಸುಂಧರೆಯ ಹೃದಯ ತಿರಸ್ಕಾರದಿಂದ, ಕ್ರೋಧದಿಂದ ಅಸಹನೆಯಿಂದ ಉರಿಯುತಿತ್ತು. ಮನೆಬಾಗಿಲಲ್ಲಿ ಮುಖ ಸಿಂಡರಿಸಿಕೊಂಡು ನಿಂತ ಅತ್ತೆಯ ಯಾವ ವ್ಯಂಗ್ಯನುಡಿಗಳೂ ಅವಳಿಗೆ ಕೇಳಿಸಲೇ ಇಲ್ಲವೇನೋ ಎಂಬ ರೀತಿಯಲ್ಲಿ ಮನೆ ಸೇರಿದಳವಳು.

ನಾಲ್ಕು ದಿನಗಳ ವರೆಗೂ ಯಾವ ವಿಶೇಷ ಘಟನೆಗಳೂ ನಡೆಯಲಿಲ್ಲ. ಆದರೆ ಶ್ಯಾಮ ಮಾತ್ರ ಒಂದು ವಾರದ ರಜೆ ಪಡೆದಿದ್ದನೆಂಬ ವಾರ್ತೆ ತಲಪಿತ್ತು. ಆಫೀಸಿನ ಜನರೆಲ್ಲ ವಸುಂಧರೆಯನ್ನು ನೋಡಿ ನಗುತ್ತಿದ್ದಂತೆ ತೋರುತಿತ್ತು. ತಲೆ ತಗ್ಗಿಸಿಕೊಂಡು ಒಳ ಸೇರುತ್ತಿದ್ದ ವಸುಂಧರೆಗೆ ತಲೆ ಎತ್ತುವುದೇ ಪ್ರಯಾಸವೆನಿಸುತ್ತಿತ್ತು.

ಐದನೆಯ ದಿನ ಮುಂಜಾನೆ ವಸುಂಧರೆ ಏಳುವಷ್ಟರಲ್ಲೇ ಅತ್ತೆ ನೆರೆಮನೆಯ ನಾಲ್ಕಾರು ಹೆಂಗಸರ ಮಧ್ಯೆ ನಿಂತು ಮಾತನಾಡುತ್ತಿದ್ದಳು.

"ಅಯ್ಯೋ ಪಾಪ! ನೇಣು ಹಾಕ್ಕೊಂಡದ್ದೇ" ,,

"ಹೌದೊಂದೆ....ಆ ತಾಯಿಗೆ ಅವನೊಬ್ನೇ ಮಗ. ಅವನನ್ನೇ ನಂಬಿದ್ದು. ಹುಡುಗ ಮರ್ಯಾದಸ್ತ; ಯೋಗ್ಯ. ಆದ್ರಿಂದ್ಲೇ ತಾಯಿ ಮಾತು ಮೀರಲಾರ್ದೆ ಆದೂ ಸಮಾಜದಲ್ಲಿ ಕೆಟ್ಟ ಹೆಸ್ರು ಬಂತಲ್ಲ ಅಂತ ಅಂಜಿ ಪ್ರಾಣಕ್ಕೇ ಮಾಡ್ಕೊಂಡ"

"ಈಗಿನ ಕಾಲದ ಹುಡುಗ್ಯರಿಗೆ ಅಂತ ಮರ್ಯಾದೆ, ನಾಚಿಕೆ ಇದೆಯೇ? ಥೂ..." ವಸುಂಧರೆ ಬಂದುದನ್ನು ನೋಡಿಯೂ ನೋಡದವರಂತೆ ಹೆಂಗಸರು ಬಾಯಿಗೆ ಬಂದಂತೆ ಹರಟುತ್ತಿದ್ದರು.

"ವಸುಂಧರಾ....ಶ್ಯಾಮ ಆತ್ಮಹತ್ಯೆ ಮಾಡಿಕೊಂಡನಂತೆ." ಅವಳ ಮುಖವನ್ನೇ ಸೂಕ್ಷ್ಮವಾಗಿ ಪರಿಶೀಲಿಸುತ್ತಾ ಸಂಶಯ ದೃಷ್ಟಿಯ ಅತ್ತೆ ನುಡಿದಳು.

"ಅಂ...ಹೌದೇ?" ಬೆಚ್ಚಿ ಬೆದರಿದ ಆಕೆ ನಡುಗುತ್ತಾ ಕೇಳಿದಳು. ಆ ಸಮಯದಲ್ಲೂ ಹೆಂಗಸರು ಒಳಗೊಳಗೇ ನಗುತ್ತಿದ್ದರು. ಅವರ ನಗುವನ್ನು ನೋಡಿಯೂ ನೋಡದವಳಂತೆ ವಸುಂಧರಾ ಶ್ಯಾಮಸುಂದರನ ಮನೆಯತ್ತ ಕೆದರಿದ ಕೂದಲಿನಿಂದ ಹುಚ್ಚಿಯಂತೆ ಓಡಿದಳು. ವೇಗವಾಗಿ ಓಡಿ ಆಯಾಸದಿಂದ ಕಂಗೆಟ್ಟು ಭ್ರಾಂತಳಂತೆ ಬಂದ ವಸುಂಧರೆಯನ್ನು ಶ್ಯಾಮನ ಮನೆಯ ಮುಂದಿನ ಜನಸ್ತೋಮ ನೋಡಿ ನಕ್ಕಿತು.

"ಅಯ್ಯೋ....ಪಾಪ! ಮುದುಕಿ ಹೊಟ್ಟೆ ಉರಿಸಿದ ರಕ್ಕಸಿ...ಪಾಪಿ ಮುಖ ಹೊತ್ಕೊಂಡು ಬಂದಿದ್ದಾಳೆ. ಉರಿಯುವ ಅಗ್ನಿಗೆ ತುಪ್ಪವೆರಚಲು ಬಂದಿದ್ದಾಳೆ" ಜನಸ್ತೋಮದ ಮಧ್ಯೆ ಶವವಾಗಿ ಮಲಗಿದ್ದ ಶ್ಯಾಮಸುಂದರನ ಮುಖ ನೋಡುವ ಬಯಕೆಯನ್ನು ಮಾತಿನಿಂದಲೇ ತಡೆದ ಜನರಿಂದ ಮುಖ ಮರೆಸಲು ಹಿಂದೆಯೇ ಓಡತೊಡಗಿದಳು ವಸುಂಧರೆ

"ಆಕೆಯೇ ಏನೋ ಮಾಡಿ ಕೊಲೆಗೈದಿದ್ದಾಳೆ.

ಮದ್ದು... ಮಂತ್ರ.... ಮಾಟ.....ವಿಷ..." ಈ ಎಲ್ಲ ಮಾತುಗಳನ್ನೂ ಕೇಳಿಯೂ ವಸುಂಧರೆ ಹುಚ್ಚಿಯಾಗಲಿಲ್ಲ. ಅಥವಾ ಶ್ಯಾಮಸುಂದರನಂತೆ ಸಾಯಲಿಲ್ಲ. ಅತ್ತೆಯ ಮನೆಯಲ್ಲೂ ಮರ್ಯಾದೆಬಿಟ್ಟವಳೆಂದು ಹೊರತಳ್ಳಲ್ಪಟ್ಟ ವಸುಂಧರಾ ಏಕಾಂಗಿನಿಯಾಗಿ ಬಾಳಬೇಕಾಯಿತು. ಸಮಾಜದ ನೂರಾರು ಕಹಿ ಮಾತುಗಳನ್ನು, ವ್ಯಂಗ್ಯ ನೋಟಗಳನ್ನು ಸಹಿಸಿಕೊಂಡ ಅವಳ ಹೃದಯ ಕಲ್ಲಾಗಿತ್ತು. ಆದರೆ ಇದಕ್ಕೆಲ್ಲ ಕಾರಣನಾದ ಶ್ಯಾಮ ಯಾವ ತೊಂದರೆ, ಸಂಕಷ್ಟಗಳೂ ಬೇಡವೆಂದು ಪಾರಾಗಿಬಿಟ್ಟಿದ್ದ. ಹೆಣ್ಣಿನಂತೆ ಸಾವಿನ ದಾರಿ ಹಿಡಿದಿದ್ದ. ಗಂಡಾಗಿ, ಗಂಡೆದೆಯಿಂದ ಬಾಳಬಯಸಿದ ವಸುಂಧರೆಗೆ ಮುಕ್ತಿ ಇರಲಿಲ್ಲ. ಶಾಂತಿ ಎಂದೋ ತೊಲಗಿಹೋಗಿತ್ತು.

"ಈಗಲಾದರೂ ಶ್ಯಾಮನ ಹೆಸರೆತ್ತಿ ಕರುಣಾಪೂರಿತವಾದ ನುಡಿಗಳು ಕೇಳುತ್ತಿದ್ದವು.

"ಅಯ್ಯೋ ಪಾಪ...!"

ಜತೆಯಲ್ಲೇ ಮತ್ತೊಂದು ವಾಕ್ಯ "ರಕ್ಕಸಿ....ಪಾಪಿ......" ಸತ್ತ ಶ್ಯಾಮನಿಗೆ ಸಹಾನುಭೂತಿ. ಬದುಕ ಬಯಸಿದ ವಸುಂಧರೆಗೆ? ಮಗುವಿನ ಅಳು ಕೇಳಿ ವಸುಂಧರೆ ಗಡಬಡಿಸಿ ಎದ್ದು ಒಳಗೋಡಿದಳು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ನೂತನ ಸಚಿವ ಸಂಪುಟ

(೪ನೇ ಪುಟದಿಂದ)

ಭಾಸದರಾಗಿ, ಜಿಲ್ಲಾ ಬೋರ್ಡ್ ಆರೋಗ್ಯ ಸಮಿತಿಯ ಅಧ್ಯಕ್ಷರಾಗಿ (೪೬-೫೦) ಇದ್ದರು. ಅಲ್ಲದೇ ಮಂಗಳೂರು ಬಂದರ ಮತ್ತು ದಕೆ ಕೆಲಸಗಾರರ ಸಂಘದ ಅಧ್ಯಕ್ಷರು, ಮಂಗಳೂರು ಬಂದರ ಟ್ರಸ್ಟಿನ ಸದಸ್ಯರು, ಭಾರತೀಯ ವೈದ್ಯಕ ಸಂಘದ ದ. ಕನ್ನಡ ಶಾಖಾಧ್ಯಕ್ಷರು, ಎ. ಐ. ಸಿ ಸಿ. ಯ ಸದಸ್ಯರು ಆಗಿ ಎಂ. ಪಿ. ಸಿ. ಸಿ. ಯ ಉಪಾಧ್ಯಕ್ಷರಾಗಿದ್ದಾರೆ. ಪಾಣೆಮಂಗಳೂರು ಕ್ಷೇತ್ರದಿಂದ ಈ ಬಾರಿ ವಿಧಾನ ಸಭೆಗೆ ಆರಿಸಿ ಬಂದಿದ್ದಾರೆ.

ವೀರೇಂದ್ರ ಪಾಟೀಲ್

ಇಂದಿನ ಸಂಪುಟದಲ್ಲಿ ಎಳೆಯರಾದ ಇವರು ಚಿಂಚೊಳ್ಳಿಯಲ್ಲಿ ೧೯೩೪ರಲ್ಲಿ ಹುಟ್ಟಿದರು. ೫೫, ೫೬ರಲ್ಲಿ ಬಿ. ಎ., ಬಿ. ಎಲ್. ಪದವಿಗಳನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದಗಳಿಸಿದರು. ವಕೀಲಿಯನ್ನು ತ್ಯಜಿಸಿ 'ಕೋರ್ಟು ಬಿಟ್ಟು ನಡೆಯಿರಿ, ಚಳವಳಿಯಲ್ಲಿ ಭಾಗವಹಿಸಿದರು; ಮುಂದೆ, ಪಿ. ಸಿ. ಸಿ. ಯ ಪ್ರಧಾನ ಕಾರ್ಯದರ್ಶಿಯಾಗಿ, ೧೯೫೨ರಲ್ಲಿ ಹೈದರಾಬಾದ ವಿಧಾನ ಸಭೆಗೆ ಆರಿಸಿ ಬಂದರು. ಕರ್ನಾಟಕ ರಚನೆಯಾದಾಗ, ೫೭ರಲ್ಲಿ ತನ್ನ ಊರು ಮನೆಯಿಂದಲೇ ವಿಧಾನಸಭೆಗೆ ಚುನಾಯಿತರಾಗಿ ಬಂದರು. ಪ್ರಾದೇಶಿಕ ಕಾಂಗ್ರೆಸ್ ಸದಸ್ಯರೂ ಗುಲ್ಬರ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದಾರೆ. ನಿಜಲಿಂಗಪ್ಪ ಸಂಪುಟದಲ್ಲಿ (೧೯೫೭-೫೮) ಉದ್ಯಮ ವಿಭಾಗದ ಉಪಮಂತ್ರಿ ಮತ್ತು ಜತ್ತಿ ಮಂಡಳಿಯಲ್ಲಿ (೬೧-೬೨) ಅಬಕಾರಿ, ಪಾನನಿರೋಧ, ಗ್ರಾಮಕೈಗಾರಿಕೆಗಳ ಮಂತ್ರಿಯಾಗಿದ್ದರು. ಈ ಬಾರಿಯೂ ಹಿಂದಿನ ಮತದಾರ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದಾರೆ.

ಬಿ. ರಾಚಯ್ಯ

ಹರಿಜನ ಕೃಷಕ ಕುಟುಂಬಕ್ಕೆ ಸೇರಿದ ಶ್ರೀ ಬಿ. ರಾಚಯ್ಯ ೧೯೨೨ರಲ್ಲಿ ಜನಿಸಿದರು. ಸೆಂಟ್ರಲ್ ಕಾಲೇಜಿನಿಂದ ಬಿ. ಎಸ್ಸಿ, ಲಾಕಾಲೇಜಿನಿಂದ ಬಿ ಎಲ್. ಪದವಿ ಪಡೆದರು. ವಿದ್ಯಾರ್ಥಿಯಾಗಿದ್ದಾಗಲೇ ಹಿಂದುಳಿದವರ ಶಿಕ್ಷಣ ಮತ್ತು ಅಸ್ಪೃಶ್ಯತಾ ನಿವಾರಣೆಗಳಲ್ಲಿ ತುಂಬ ಆಸ್ತೆಯಿತ್ತು. ಹರಿಜನ ಸಂಘದ ಕಾರ್ಯದರ್ಶಿಯಾಗಿ ಒಂದು ಹಾಸ್ಟೆಲನ್ನು ಕಟ್ಟಿಸಿದರು. ೧೯೫೨ರಲ್ಲಿ ಯಳಂದೂರಿನಿಂದ ವಿಧಾನ ಸಭೆಗೆ ಆಯ್ಕೆಗೊಂಡ ಇವರು ಹಲವಾರು ಸಮಿತಿಗಳಲ್ಲಿ ದುಡಿದಿದ್ದಾರೆ. ಎರಡನೆಯ ಬಾರಿ ಚಾಮರಾಜ ನಗರ ಕ್ಷೇತ್ರದಿಂದ ಚುನಾಯಿತರಾದರು. ಮೈಸೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಮತ್ತು ರಾಜ್ಯ ಸರಕಾರದ ಅಧಿಕೃತ ಭಾಷಾ ಸಮಿತಿಯ ಸದಸ್ಯರಾಗಿದ್ದರು. ಈ ಸಲ ಸಂತೆಮರಹಳ್ಳಿಯಿಂದ ರಾಜ್ಯ ವಿಧಾನ ಸಭೆಗೆ ಗೆದ್ದು ಬಂದಿದ್ದಾರೆ.

ಕೆ. ಮಲ್ಲಪ್ಪ

೫೩ ವರ್ಷದ ಶ್ರೀ ಕೆ. ಮಲ್ಲಪ್ಪನವರು ಬೆಂಗಳೂರಿನ ಸೆಂಟ್ರಲ ಕಾಲೇಜ್ ಮತ್ತು ಮದ್ರಾಸಿನ ಲಾ ಕಾಲೇಜ್‌ಗಳಲ್ಲಿ ಪದವಿ ಗಳಿಸಿದರು. ಹಿಂದಿನ ಕೊಡಗು ರಾಜ್ಯದಲ್ಲಿ ಮಂತ್ರಿಯಾಗುವ ವರೆಗೆ ಅವರು ವಕೀಲಿ ವೃತ್ತಿ ಮಾಡುತ್ತಿದ್ದರು. ೧೯೩೭—೪೭ರಲ್ಲಿ ಕೊಡಗು ವಿಧಾನ ಪರಿಷತ್ತಿನ ಸದಸ್ಯರೂ ೪೭ರಿಂದ ೫೨ರ ವರೆಗೆ ಮಡಿಕೇರಿ ನಗರ ಸಭಾಪತಿಯೂ ಆಗಿ, ಕೊಡಗು ಕರ್ನಾಟಕ್ಕೆ ಸೇರುವ ವರೆಗೆ ಅಲ್ಲಿನ ನ್ಯಾಯಾಂಗ ಸಚಿವರಾಗಿದ್ದರು. ಸಹಕಾರಿ ಆಂದೋಲನದಲ್ಲಿ ತೀವ್ರ ಆಸಕ್ತಿ ತೋರಿಸುತ್ತಿರುವ ಇವರು ಕೊಡಗು ರಾಜ್ಯ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿದ್ದರು, ೫೭ರಲ್ಲಿ ರಾಜ್ಯವಿಧಾನ ಸಭೆಗೆ ಆಯ್ಕೆಯಾದ ಇವರು ೬೨ರಲ್ಲಿಯೂ ಅದೇ ಮಡಿಕೇರಿ ಕ್ಷೇತ್ರದಿಂದ ಗೆದ್ದು ಬಂದಿದ್ದಾರೆ.

ಅಮೇರಿಕೆಯಲ್ಲಿ ಭಾರತೀಯ ಮಾಜಿ ರಾಯಭಾರಿ ಶ್ರೀ ಛಗಲಾ ಅವರು ರಾಜ್ಯ ಸಭೆಗೆ ಕಾಂಗ್ರೆಸ್ ಪಕ್ಷದ ಹುರಿಯಾಳುವಾಗಿ ಸ್ಪರ್ಧಿಸಲಿರುವರು.

"ಕಟ್ಟು ಬುತ್ತಿಯ ಮುಂದೆ
ಉಣಲುಂಟು ತಾಳು" ॥

.... ಎಂದು ಕನ್ನಡದ ಕವಿಯೊಬ್ಬರು ಹಾಡಿದರು. ತಾಳುವಿಕೆಗಿಂತ ತಪವು ಬೇರಿಲ್ಲವೆಂಬ ಮಹಾ ನೀತಿ ವಾಕ್ಯವನ್ನು ಜನರ ಮುಂದಿಟ್ಟ ಈ ವರ ಕವಿಯು ಅದರ ಸಮರ್ಥನೆಗಾಗಿ ಅನೇಕ ನುಡಿಮುತ್ತುಗಳನ್ನು ಹೆಣೆದು ಅನುರಗೀತವೊಂದನ್ನು ರಚಿಸಿದರು.

'ಇಂದಿನ ತ್ಯಾಗಬುದ್ಧಿಯಿಂದ ನಾಳಿನ ಸುಖ ಪ್ರಪಂಚವನ್ನು ರಚಿಸಿಕೊ. ಇಂದು ಉಳಿಸಿ ನಾಳೆ ಉಣ್ಣು' ಎಂದು ಠೇವಣಾತಿಯ ಮಹತ್ವಿಕೆಯನ್ನು ಅಂದಿನ ದಿನಗಳಲ್ಲೂ ಹಾಡಿದರು.

—ನಿಮ್ಮ ಆರ್ಥಿಕ ಯೋಜನೆ—
—ಮುಂದೆ ಉಣಲು ಇಂದು ಬುತ್ತಿ ಕಟ್ಟುವ—
—ಠೇವಣಾತಿಯ ವಿವರಗಳಿಗೆ ನಮ್ಮಲ್ಲಿ ವಿಚಾರಿಸಿರಿ—

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೨೯ | ಉಡುಪಿ 29—3—1962 ಗುರುವಾರ | Vol. 41 No. 29

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ; ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗಿ ಪುಸ್ತಕ ಸುಲಭದಲ್ಲಿ ಇಂಗ್ಲಿಷ್ (ಆಂಗ್ಲ ಸ್ವಯಂಬೋಧಿನಿ) ನವಭಾರತ ಪುಸ್ತಕ ಭಂಡಾರ ಉಡುಪಿ

ಕಾಂಗ್ರೆಸಿಗೆ ಅಂಟಿಕೊಂಡ

ವಿಶಾಲ ತಳಹದಿಯ ಮಹಾರೋಗ

ಈಗಾಗಲೇ ಮುಕ್ತಾಯಗೊಂಡ ಚುನಾವಣೆಗಳಿಗೆ ಮೊದಲು ಪಕ್ಷ—ಪ್ರತಿಪಕ್ಷಗಳ ನಡುವೆ ಬೇಕೆಂಬಷ್ಟು ಹೊಯ್ದಾಟ ನಡೆದರೆ, ಅನಂತರ ಬಹುಮತ ಪಕ್ಷವಾಗಿ ಗೆದ್ದ ಕಾಂಗ್ರೆಸ್ಸಿನೊಳಗಣ ಗುಂಪುಗಳಲ್ಲಿ ಪರಸ್ಪರ ತಿಕ್ಕಾಟ ನಡೆಯಿತು. ಯಾವ ರಾಜ್ಯದಲ್ಲಿ ನೋಡಿದರೂ ಕಾಂಗ್ರೆಸ್ ಪಕ್ಷದೊಳಗೆ ಭಿನ್ನಾಭಿಪ್ರಾಯದ ಗುಂಪಿನವರು—ಅತೃಪ್ತರು—ಇದ್ದೇ ಇರುವುದು ಸರ್ವ ಸಾಮಾನ್ಯವೆಂಬಂತಾಗಿದೆ. ಈ ಗುಂಪಿನ ರಾಜಕಾರಣದಿಂದಾಗಿಯೇ ಕಾಂಗ್ರೆಸ್ಸು ತನ್ನ ಬಲವನ್ನು ಕಳೆದುಕೊಳ್ಳುತ್ತ ಬರುತ್ತಲಿದೆ. ಇಂತಹ ಗುಂಪುಗಳಿಗೆ ಸೇರಿದವರನ್ನು ತೃಪ್ತಿಪಡಿಸಿ, ಪಕ್ಷದಲ್ಲಿರಿಸಿಕೊಳ್ಳುವ ಹವಣಿಕೆಯು ಎಲ್ಲೆಡೆಯೂ ಈ ಸಲ ಸುಸ್ಪಷ್ಟವಾಗಿ ಗೋಚರವಾಗಿದೆ. ಇದಕ್ಕಾಗಿಯೇ ಎಲ್ಲ ಪಂಗಡಗಳ ಅಭಿಪ್ರಾಯಗಳಿಗೂ ಆಸ್ಪದ ನೀಡುವಂತೆ ವಿಶಾಲ ತಳಹದಿಯ ಮಂತ್ರಿಮಂಡಳಗಳನ್ನು ರಚಿಸಬೇಕು ಎಂಬ ಸಲಹೆ ಕಾಂಗ್ರೆಸ್ ಹೈಕಮಾಂಡಿನಿಂದ ರಾಜ್ಯದ ಮುಖ್ಯಮಂತ್ರಿಯವರಿಗೆ ಬಂದಿದ್ದು, ಅದರಂತೆ ಪ್ರತಿರಾಜ್ಯದಲ್ಲಿಯೂ ವಿಶಾಲ ತಳಹದಿಯ ಮಾತ್ರವಲ್ಲ ವಿಶಾಲ ಸಂಖ್ಯೆಯ ಸಚಿವ ಸಂಪುಟಗಳು ನಿರ್ಮಾಣಗೊಂಡಿವೆ; ಆಗುತ್ತಿವೆ.

ಅಜಗಜಾಂತರ

ಎಲ್ಲ ರಾಜ್ಯಗಳ ಪೈಕಿ ಮದ್ರಾಸ ರಾಜ್ಯದಲ್ಲಿ ಕೇವಲ ಒಂಭತ್ತೇ ಸದಸ್ಯರಿರುವ ಮಂತ್ರಿ ಮಂಡಳಿಯನ್ನು ಕಾಮರಾಜ ನಾಡಾರರು ರಚಿಸಿ ಎಲ್ಲರ ದೃಷ್ಟಿಯಲ್ಲೂ ಮುಂದೆ ಬಂದಿದ್ದಾರೆ. ಇವರಲ್ಲಿ ಐವರು ಹೊಸಬರಿರುವುದು ಮತ್ತೊಂದು ವೈಶಿಷ್ಟ್ಯ. ಮದ್ರಾಸಿನ ಕಾಂಗ್ರೆಸ್ಸು ನಾಡಾರರ ಆಡಳಿತೆಯಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟಿದೆ; ಅಲ್ಲಿ ಗುಂಪುಗಾರಿಕೆಯ ಮನೋಭಾವವಿಲ್ಲವೆಂದು ಖಂಡಿತ ಹೇಳಬಾರದಾದರೂ ಇದ್ದರೂ ಅದು ಅಗಣ್ಯವಾಗಿದೆಯೆಂಬುದು ನಿರ್ವಿವಾದ. ವಿವಿಧ ಜಿಲ್ಲೆಗಳಿಗೆ ಪ್ರಾತಿಧ್ಯ ನೀಡುವ, ಎಲ್ಲರ ಹಿತಸಂಬಂಧಗಳನ್ನು ಸಾಕಷ್ಟು ಪ್ರತಿನಿಧಿಸುವ ಈ ನವರತ್ನ ಸದೃಶರು ಅಲ್ಲಿ ದಕ್ಷರೀತಿಯಲ್ಲಿ ಆಡಳಿತೆಯನ್ನು ನಿರ್ವಹಿಸುವುದು ಖಂಡಿತ. ಇಂದು ಮಾತ್ರವಲ್ಲ, ಮದ್ರಾಸದಲ್ಲಿ ಹಿಂದಿನಿಂದಲೂ ಸಚಿವ ಸಂಪುಟ ವು ಬೃಹದ್ರೂಪ ತಳೆದುದಿಲ್ಲ; ಆಡಳಿತೆಯಲ್ಲಿ ವ್ಯತ್ಯಯ ತೋರಿ ಬಂದುದಿಲ್ಲ. ದೇಶದ ರಾಜ್ಯಗಳಲ್ಲಿ ಸಮರ್ಥ ಆಡಳಿತೆ ನಡೆಸುವ ಕೆಲವೇ ಸರಕಾರಗಳಲ್ಲಿ ಮದ್ರಾಸ ಸರಕಾರವು ಅಗ್ರ ಪಂಕ್ತಿಯಲ್ಲಿ ನಿಂತಿದೆ.

ಇದಕ್ಕೆ ವಿಪರೀತವಾದ ಪರಿಸ್ಥಿತಿ ಪಂಜಾಬದಲ್ಲಿ ಉದ್ಭವಿಸಿದೆ. ಅಲ್ಲಿ ಚುನಾಯಿತರಾದ ಪ್ರತಿ ಮೂರು ಕಾಂಗ್ರೆಸ್ ಸದಸ್ಯರಲ್ಲಿ ಒಬ್ಬನಿಗೆ ಮಂತ್ರಿಪಟ್ಟವು ಲಭಿಸಿದೆ. ಮುಖ್ಯ ಮಂತ್ರಿ ಪ್ರತಾಪಸಿಂಹ ಕೈರೋನರ ವಿರುದ್ಧ ಸಾಕಷ್ಟು ಫಿತೂರಿ ನಡೆದರೂ ಕೈರೋನರು ಅಗ್ರಪಟ್ಟವನ್ನು ಪಡೆಯದುಳಿಯಲಿಲ್ಲ. ಇದರ ಪರಿಣಾಮವಾಗಿಯೇ ಸಚಿವ ಮಂಡಳಿಯ ರೂಪ ಎಂದಿಗಿಂತ ಬಹುದೊಡ್ಡದೆನ್ನುವಂತಾಯಿತು.

ಕರ್ನಾಟಕದ ದುರವಸ್ಥೆ

ಉತ್ತರ ಪ್ರದೇಶದ ಸರಕಾರದಲ್ಲಿ ೪೧ ಮಂತ್ರಿಗಳಿದ್ದು ಕೇಂದ್ರ ಸರಕಾರದ ಮಂತ್ರಿ ಸಂಖ್ಯೆಯೊಡನೆ ಸ್ಪರ್ಧಿಸುವಂತಿದೆ. ಹಾಗೆಯೇ ಎಲ್ಲ ರಾಜ್ಯಗಳಲ್ಲೂ ಭೂರಿ ಸಂಖ್ಯೆಯಲ್ಲಿ ಮಂತ್ರಿಗಳು ನೇಮಕವಾಗಿದ್ದಾರೆ. ಕರ್ನಾಟಕವೊಂದನ್ನು ಬಿಟ್ಟು ಉಳಿದೆಲ್ಲ ರಾಜ್ಯಗಳಲ್ಲಿಯೂ ಸಚಿವ ಸಂಪುಟದ ರಚನೆಯು ಸಾಮಾನ್ಯವಾಗಿ ಪೂರ್ತಿಗೊಂಡರೂ ನಮ್ಮಲ್ಲಿ ಮಾತ್ರ ಬಿಕ್ಕಟ್ಟು ಪರಿಹಾರವಾಗುವ ಸಲ್ಲಕ್ಷಣಗಳು ಕಂಡುಬರುತ್ತಿಲ್ಲ. ನಿಜಲಿಂಗಪ್ಪ—ಜತ್ತಿಯವರ ಹೊಡೆದಾಟಕ್ಕೆ ಉಪಶಮನಗೊಳ್ಳುವ ಮಾರ್ಗವಾವುದೂ ಕಾಣುತಿಲ್ಲ. ಹೈಕಮಾಂಡಿನ ಅಭಿಪ್ರಾಯವನ್ನು ನಿಜಲಿಂಗಪ್ಪನವರು ಒಪ್ಪಿದರೂ ಅವರ ಗುಂಪಿನವರು ಒಪ್ಪುವುದಿಲ್ಲವೆಂದರೆ, ಯಾರಿಂದ ಏನು ಮಾಡಲಾದೀತು? ಇದುವರೆಗಿನ ಪರಿಸ್ಥಿತಿಯನ್ನವಲೋಕಿಸಿ ಹೇಳುವುದಾದರೆ, ಜತ್ತಿ ಗುಂಪಿನವರು ಮಂತ್ರಿಮಂಡಳದಲ್ಲಿ ಸೇರಲು ಅಷ್ಟೊಂದು ಉತ್ಸುಕರಾಗಿಲ್ಲ. ಇನ್ನಾರು ತಿಂಗಳಲ್ಲಿ ತಮ್ಮ ಬಲವನ್ನು ಹೆಚ್ಚಿಸಿಕೊಂಡು ಮರಳಿ ಅಧಿಕಾರ ಗಳಿಸಿಯೇವು ಎಂಬ ಆತ್ಮವಿಶ್ವಾಸವೂ ಅವರಲ್ಲಿ ಇದ್ದಿರಬಹುದು. ಇಲ್ಲವೇ ಜ್ಯೋತಿಷ್ಯರು ಅವರಿಗೆ ಭವಿಷ್ಯ ನುಡಿದಿರಲೂಬಹುದು. ಈ ಎರಡು ಪಂಗಡಗಳ ತಾತ್ವಿಕ ಭಿನ್ನಾಭಿಪ್ರಾಯವು ಕತ್ತೀಚೆಗೆ ವೈಯಕ್ತಿಕ ಭಿನ್ನಾಭಿಪ್ರಾಯದ ರೂಪಧರಿಸಿರುವುದನ್ನು ಉಪಲಕ್ಷ್ಯಿಸುವಾಗ, ಇದಕ್ಕೆ ಪರಿಹಾರವಾದರೂ ಇದೆಯೇ ಎಂಬ ಸಂದೇಹ ಉದ್ಭವಿಸುತ್ತಿದೆ. ಇಂತಹ ಯಾದವೀ ಕಲಹದಿಂದ ರಾಜ್ಯ ಸರಕಾರವು ಮರಳಿನ ಮೇಲೆಯೇ ನಿಲ್ಲಬೇಕಾಗುವುದರಿಂದ ಜನತಾ ಕಲ್ಯಾಣದ ಮಾತು ಬಹು ದೂರ ವುಳಿಯಿತು ಎನ್ನದೆ ಗತ್ಯಂತರವಿಲ್ಲ.

ಪ್ರತಿನಿಧಿ—ಅಸ್ವಮೇಧ

ನಮ್ಮ ಜನತೆಯಲ್ಲಿ ಆವಶ್ಯಕತೆಗಿಂತ ಹೆಚ್ಚಾಗಿ ರಾಜಕಾರಣಕ್ಕೆ ಪ್ರಾಧಾನ್ಯವೀಯುವ ಪ್ರವೃತ್ತಿ ಮೂಡಿಬಿಟ್ಟಿದೆ. ವಿಧಾನ ಸಭೆ—ಲೋಕಸಭೆಗಳ ಸದಸ್ಯನಾಗುವುದೆಂದರೆ, ಸಜೀವ ಸ್ವರ್ಗಾರೋಹಣ ಮಾಡಿದಂತೆ ಎಂಬ ವಿಚಿತ್ರಾನುಭವ ನಮ್ಮ ಜನ ಪ್ರತಿನಿಧಿಗಳಲ್ಲಿ ರೂಢಿಯಾಗಿದೆ. ಅದಕ್ಕಾಗಿಯೇ ಚುನಾವಣೆಗಳ ವೇಳೆ ತಮ್ಮ 'ಶಕ್ತಿ ಸರ್ವಸ್ವ'ಗಳನ್ನು ಕೇಂದ್ರೀಕರಿಸಿ ದುಡಿಯುತ್ತಾರೆ. ಮಿತಿಮೀರಿ ವೆಚ್ಚಮಾಡುತ್ತಾರೆ. ಇಂತಹ ಶ್ರಮ-ತ್ಯಾಗಗಳು ಸಫಲಗೊಂಡವೆಂದರೆ, ಮುಂದೆ ಮಂತ್ರಿ ಪಟ್ಟದ ಕನಸು ಕಾಣುತ್ತಾರೆ. ಈ ಪಟ್ಟಕ್ಕೆ ಹೇಳಿಕೊಳ್ಳುವಷ್ಟು ವೇತನವಿಲ್ಲವಾದರೂ ಅಧಿಕಾರ ಧನಮದವು ಅವರಿಂದ ಇಂತಹ ಕೆಲಸಬೇಡವೆಂದರೂ ಮಾಡಿಸುತ್ತದೆ. ಮಂತ್ರಿ ಪದವಿಗೆ ದೊರೆಯುವ ಸೌಲಭ್ಯ, ಸಂಭ್ರಮ, ಗೌರವ, ತಮ್ಮ 'ಹಿತಾಸಕ್ತಿ'ಗಳ 'ಹಿತ"ವನ್ನು ಸಾಧಿಸಿಕೊಳ್ಳುವ ಹಂಬಲ—ಅಸಾಧ್ಯವಾದುದನ್ನು ಸಾಧ್ಯವನ್ನಾಗಿ ಮಾಡುವ ಸಂಜೀವಿನೀ ಶಕ್ತಿಪ್ರಾಪ್ತಿಯ ಕಾಮನೆಗಳೇ ಈ ಅತೃಪ್ತ"ರ ಗುಂಪು ಹುಟ್ಟಿಕೊಳ್ಳಲು ಕಾರಣ. ನ್ಯಾಯವಾದ ಪ್ರಜಾಸತ್ತೆಯಲ್ಲಿ ಇವಾವುವಕ್ಕೂ ಪ್ರಾಧಾನ್ಯವಿಲ್ಲವಾದರೂ ನಮ್ಮ ದೇಶದಲ್ಲಿ ಈ 'ಅಸ್ವಮೇಧ"ಗಳ ಪ್ರತಿಧ್ವನಿ ಏರುತ್ತಲೇ ಇದೆ.

ನೀತಿನಿರೂಪಕ ಮಂತ್ರಿ

ಮಂತ್ರಿಯು ನಮ್ಮ ದೇಶದಲ್ಲಿ ತನ್ನ ಕರ್ತವ್ಯವನ್ನು ಸರಿಯಾಗಿ ತಿಳಿದು ವರ್ತಿಸುತ್ತಿಲ್ಲವೆಂಬುದು ಇದು ವರೆಗಿನ ಅನುಭವ. ಸಂಪುಟವು ನಿರ್ಧರಿಸಿದ ಸರಕಾರದ ಧೋರಣೆಯನ್ನು ತಮ್ಮ ಶಾಖೆಯ ಅಧಿಕಾರಿಗಳಿಗೆ ತಿಳಿಸಿ, ಅದರಂತೆ ತನ್ನ ಶಾಖೆಯ ಕಾರ್ಯವು ನಡೆಯುವಂತೆ ನೋಡುವುದು ತಾನು ಜನತಾ ಪ್ರತಿನಿಧಿಯಾದುದರಿಂದ ಅವರೊಡನೆ ಸದಾ ಸಂಪರ್ಕವಿರಿಸಿ ಅವರ ಸುಖ-ಕಷ್ಟಗಳನ್ನು ಕಂಡುಕೊಂಡು, ಅವುಗಳ ಪರಿಹಾರದ ಬಗ್ಗೆ ಸಂಪುಟದಲ್ಲಿ ಚರ್ಚಿಸಿ, ಜನಕಲ್ಯಾಣ ಹೇತುವೆನಿಸುವ ಧೋರಣೆಗಳನ್ನು ರೂಪಿಸಲು ತೊಡಗುವುದು ಮಂತ್ರಿಯಾದವನ ಕರ್ತವ್ಯ. ಈ ಧೋರಣೆಗಳನ್ನು ಕಾರ್ಯಾಚರಣೆಗೆ ತರುವ ಹೊಣೆಗಾರಿಕೆ ಮಂತ್ರಿಗಿಲ್ಲ; ಆತನು ಅಧಿಕಾರಿಯೆಂದೂ ಅಲ್ಲ. ಆದರೆ ಅಧಿಕಾರಿಗಳಿಂದ ಸರಕಾರದ ಧೋರಣೆಯನ್ನು ಕೃತಿಗಿಳಿಸುವಂತೆ ನೋಡುವವನು ಮಾತ್ರ. ನಮ್ಮ ಮಂತ್ರಿಗಳ ಪಟ್ಟವು ಈ ರೀತಿಯದಲ್ಲ. ಮಂತ್ರಿಯೆಂದರೆ, ತಾನು ಸರ್ವಾಧಿಕಾರಿಯೆಂಬ ಭಾವನೆಯೂ ಕೆಲವರಲ್ಲಿ ಬಂದುಬಿಟ್ಟಿದೆ. ತಾವು ಧೋರಣೆಗಳನ್ನು ರೂಪಿಸುವುದನ್ನು ಬಿಟ್ಟುಕೊಟ್ಟು, ತಮ್ಮ ಶಾಖೆಯವರು ಮುಂದೆ ತಂದಿರುವ ನೀತಿಯೆಲ್ಲವಕ್ಕೂ ಸೈಗುಟ್ಟಿ, ಸರಕಾರದ ಲೇಬಲ್ ಹಚ್ಚಿಬಿಡುವುದು ಮಾತ್ರ ತಮ್ಮ ಕರ್ತವ್ಯವೆಂದವರು ತಿಳಿದಂತಿದೆ. ಇಂತಹ ನೀತಿಯನ್ನು ನಿಷ್ಪಕ್ಷವಾಗಿ ವ್ಯವಹೃತಗೊಳಿಸುವಲ್ಲಿಯಾದರೂ ಮಂತ್ರಿಗಳ 'ತಮ್ಮ ಹಿತಾಸಕ್ತಿ' ರಕ್ಷಣೆಗೆ ಅಡ್ಡಬಾರದಂತೆ ನಡುವೆ ಪ್ರವೇಶಿಸುತ್ತಾರೆ. ವೃತ್ತಿಪರ ಶಿಕ್ಷಣ ಕಾಲೇಜುಗಳಲ್ಲಿ ಸೀಟುಗಿಟ್ಟಿಸುವುದರಿಂದ ಹಿಡಿದು ಪಬ್ಲಿಕ್ ಸರ್ವಿಸ್ ಕಮಿಶನ್ನಿನ ಮೂಲಕ ನೌಕರಿಗೆ ಆಯ್ಕೆನಡೆಯುವವರೆಗೂ ನಮ್ಮ ಮಂತ್ರಿವರ್ಯರು—ಎಂ.ಎಲ್. ಎ.ಗಳು ವರ್ಚಸ್ಸು ಬೀರಬಲ್ಲ ಸೂರ್ಯರಂತಿರುವಾಗ, ಭಿನ್ನಾಭಿಪ್ರಾಯಗಳು ಹುಟ್ಟದೆ ಇರುವುದು ಸಾಧ್ಯವೆ? ಆದುದರಿಂದಲೇ ಒಮ್ಮೆ ಜನತಾ ಪ್ರತಿನಿಧಿಯಾದವನು ಮರಳಿಯೂ ಆಗ ಬೇಕೆಂದು ಆತುರಪಡುತ್ತಾನೆ; ಒಂದು ಬಾರಿ ಮಂತ್ರಿಪಟ್ಟವೇರಿದವನು ಅದರಿಂದ ಕೆಳಗಿಳಿಯುವಾಗ, ಪಾತಾಳ ಸೇರಿದಂತೆ ಚಡಪಡಿಸುತ್ತಾನೆ. ಕೇವಲ ಸೇವೆಯ ಉದ್ದೇಶ ಮಾತ್ರವಿರುತಿದ್ದರೆ, 'ನಾನೈದು ವರ್ಷ ಸೇವೆಮಾಡಿದೆ; ಇನ್ನು ಬೇರೆಯವರು ಮುಂದೆ ಬರಲಿ' ಎಂದು ಅವಶ್ಯ ಹೊಸಬರಿಗೆ ಅವಕಾಶ ಮಾಡಿಕೊಡುತ್ತಿದ್ದನು

ವಿಶಾಲ ತಳಹದಿ ಎಂದರೇನು?

ರಾಜ್ಯಗಳಲ್ಲೆಲ್ಲ ವಿಶಾಲ ತಳಹದಿಯ ಮಂತ್ರಿ ಮಂಡಳಿ ರಚಿಸುವ ಸಲಹೆಯಿತ್ತ ಕಾಂಗ್ರೆಸ್ ಹೈಕಮಾಂಡ, ತನ್ನ ಸಲಹೆಗೆ ಯಾವ ರೀತಿಯ ಅರ್ಥವನ್ನು ನಿರ್ಧರಿಸಿಕೊಂಡಿತ್ತೋ ತಿಳಿದಿಲ್ಲ. ಆದರೆ, ಇದರ ಅರ್ಥವನ್ನು ರಾಜ್ಯಗಳ ಮುಖ್ಯ ಮಂತ್ರಿಯವರೆಲ್ಲ ತಮಗನುಕೂಲವಾಗುವಂತೆ ಹೆಚ್ಚು ಸಂಖ್ಯೆಯ ಸದಸ್ಯರಿರುವ ಮಂತ್ರಿಮಂಡಳವೆಂದು ಮಾಡಿಕೊಂಡಿದ್ದಾರೆ. ಈ ಬಗ್ಗೆ ಪ್ರಧಾನಿ ನೆಹರೂರವರ ಅಭಿಪ್ರಾಯ ಮಾತ್ರ ವಿರುದ್ಧವಿದೆ. 'ವಿಶಾಲ ತಳಹದಿ"ಯೆಂದರೆ, ಸಂಪುಟ ಚಿಕ್ಕದೇ ಆದರೂ ಅದರಲ್ಲಿ ಎಲ್ಲ ಅಭಿಪ್ರಾಯಗಳವರಿಗೂ ಸ್ಥಾನ ಕಲ್ಪಿಸಬೇಕು ಎಂದರ್ಥ ಹೇಳುತ್ತಾರೆ. ಎಲ್ಲ ರಾಜ್ಯಗಳಲ್ಲೂ ಈಗ ನಡೆದ, ನಡೆಯುತ್ತಿರುವ 'ವಿಸ್ತರಣಾ ನೀತಿ'ಯನ್ನು ತಾನು ಬೆಂಬಲಿಸುವುದಿಲ್ಲವೆಂ

(೧೩ನೇ ಪುಟ ನೋಡಿರಿ)

ಕುರಿಗಾಹಿಯ ಮಗ

ರಂಫೇಲ್ ತುಂಬಾ ಸಣ್ಣ ಹುಡುಗ ಅವನ ತಂದೆಯು ಸಹಕಾರೀ ಕೃಷಿ ಕ್ಷೇತ್ರದಲ್ಲಿ ಕುರಿಗಾಹಿ. ರಂಫೇಲ್ ಕಾಲಕ್ರಮದಲ್ಲಿ ಪಾಠ ಶಾಲೆ ಸೇರಿ ಓದ ತೊಡಗಿದನು. ಅವನ ಎಳೆಯ ವಯಸ್ಸಿನಲ್ಲೇ ಅವನಿಗೆ ದುರ್ಭಾಗ್ಯವೊದಗಿತು. ಅವನ ತಾಯಿಗೆ ತೀವ್ರ ಕಾಹಿಲೆಯಾಗಿ, ಆಕೆ ತೀರಿಕೊಂಡಳು. ತಾಯಿಯ ಮರಣದಿಂದ ರಂಫೇಲ್ ಅತ್ಯಂತ ದುಃಖಿತನಾದನು. ಆಕೆಯು ಅವನನ್ನು ಅತ್ಯಂತ ಪ್ರೀತಿಯಿಂದ ಸಾಕುತ್ತಿದ್ದಳು. ಅವನಿಗೆ ಸದಾ ಉತ್ತಮ ಆಹಾರ ನೀಡುತ್ತಿದ್ದಳು. ಒಳ್ಳೆಯ ಬಟ್ಟೆಗಳನ್ನು ತೊಡಿಸುತ್ತಿದ್ದಳು. ತಾಯಿಯು ತೀರಿಕೊಂಡ ಮೇಲೆ ನೆರೆಯೂರಿನ ಮಹಿಳೆಯೊಬ್ಬಳನ್ನು ತಂದೆ ಮೋಹಿಸಿದನು. ಆ ಹಳ್ಳಿಗೆ ಹೋದ ತಂದೆಯು ಒಮ್ಮೆ ವಾಪಸು ಬರಲೇ ಇಲ್ಲ. ರಂಫೇಲ್ ಒಬ್ಬಂಟಿಗನಾದನು ಅವನಿಗೆ ಮನೆಯೇ ಬೇಡವಾಯಿತು. ಆದುದರಿಂದ ಅವನು ಕುರಿಯ ಹಿಂಡುಗಳ ಹಿಂದೆಯೇ ತಿರುಗಾಡಲಾರಂಭಿಸಿದನು. ಮೊದಮೊದಲು ಕುರಿಗಾಹಿಗಳು ಅವನ ಮುಂದೆ ಅವನ ತಾಯಿ-ತಂದೆ ಸುದ್ದಿಯನ್ನೇ ಎತ್ತುತ್ತಿರಲಿಲ್ಲ. ನಡುವಯಸ್ಸಿನ ತೊದೋರ್ ಮಾವನು ಮೃದು ಹೃದಯದಿಂದ ಆದರದ ನೋಟವನ್ನು ಬೀರುತ್ತ ಒಂದು ದಿನ ರಂಫೇಲನ ಭುಜವನ್ನು ತಟ್ಟುತ್ತ—

“ಕುಳಿತುಕೊಳ್ಳಪ್ಪ. ವಿಶ್ರಾಂತಿ ತೆಗೆದುಕೋ—ನಿನಗೆ ಹಸಿವೆಯಾಗುತ್ತಿರಬೇಕು. ನನ್ನ ಹೆಂಡತಿಯು ಸ್ವಲ್ಪ ಕೋಳಿಯ ಸಾರನ್ನು ಕಳಿಸಿದ್ದಾಳೆ. ಕಪಾಟಿನಲ್ಲಿ ಸ್ವಲ್ಪ ಪಂಜ್ಜಿಗೆಯೂ ಇದೆ. ಸ್ವಲ್ಪ ರೊಟ್ಟಿ ತಿನ್ನು...”—ಎಂದು ಹೇಳಿದನು. ಬಿಸಿಲು—ಗಾಳಿಗಳಲ್ಲಿ ಓಡಾಡಿ, ಆತನ ಮುಖವು ಬಾಡಿದ್ದಿತು.

ರಂಫೇಲ್ ರೊಟ್ಟಿ ತಿಂದ., ತುಟಿಗಳನ್ನೊರಸಿಕೊಂಡು, ಕುರಿಗಾಹಿಯ ಕೋಣೆಯ ಸುತ್ತಲೂ ನೋಡಿದನು. ಆ ಮೇಲೆ ತೆರೆದ ಕಿಟಕಿಯ ಮೂಲಕ ಕಣ್ಣು ಹಾಯಿಸಿ, ದೂರದ ದೊಡ್ಡಿಯಲ್ಲಿ ಮಲಗಿದ್ದ ಬಿಳಿಯ ಮರೀನೋ ಕುರಿಗಳನ್ನು ಕಂಡನು. ಆಗ ವಸ್ಸೀಲ್‌ತಾತನು ಕೋಣೆಯೊಳಕ್ಕೆ ಬಂದನು. ಆತನು ನಿಡುಗಂಬದಂತೆ ಎತ್ತರವಾಗಿದ್ದನು. ಹಲ್ಲಿಲ್ಲದ ಬಾಯಲ್ಲಿ ಯಾವಾಗಲೂ ‘ಪೈಪಿ’ನಿಂದ ಧೂಮ್ರಪಾನ ಮಾಡುತ್ತಿದ್ದದರಿಂದ, ಆತನ ಉದ್ದವಾದ ಬಾಗಿದ ಮೀಸೆಗಳು ಹಳದಿಯಾಗಿದ್ದುವು. ಮಗು ರಂಫೇಲನನ್ನು ಕಂಡೊಡನೆಯೇ ವಸ್ಸೀಲ್‌ತಾತನು ಮುಗುಳ್ನಗುತ್ತ—

“ಇವನು ನಮ್ಮ ಎಳೆಯ ಸಹಾಯಕ! ನೀನು ಬಂದದ್ದು ಒಳ್ಳೆಯದಾಯಿತು. ಸಂತೋಷ!”—ಎಂದು ಹೇಳಿದನು.

ಆತನು ತನ್ನ ಕೈಗಳನ್ನು ಚಾಚಿ, ರಂಫೇಲ್‌ನ ಕೈಗಳನ್ನು ಹಿಡಿದುಕೊಂಡನು. “ನೀನು ನಮ್ಮ ಮಗು. ಇಲ್ಲಿ ಬಾ. ನೀನು ಇಲ್ಲಿ ಉಪವಾಸ ಇರಬೇಕಾಗಿಲ್ಲ. ನೀನು ಯಾವ ತರಗತಿಯಲ್ಲಿ ಓದುತ್ತಿದ್ದೀಯೆ?”—ಎಂದು ಆತನು ಕೇಳಿದನು.

“ಆರನೆಯದರಲ್ಲಿ”—ಎಂದು ರಂಫೇಲ್ ನಾಚಿಕೆಯಿಂದ ಉತ್ತರಕೊಟ್ಟನು.

“ಒಳ್ಳೆಯದು. ಆದರೆ, ನೀನು ಶಾಲೆ ಬಿಡಬಾರದಾಗಿತ್ತು, ಹಿಂದಿನ ಕಾಲದಲ್ಲಿ ಶಾಲೆಗೆ ಹೋಗುವುದು ನಮಗೆ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಆಗಿನ ಪರಿಸ್ಥಿತಿಗಳೇ ಬೇರೆಯಾಗಿದ್ದುವು. ಹಳ್ಳಿಯ ಧನಿಕರಿಗೆ ಮೂರ್ಖರಾದ ಆಳುಗಳು ಹೊಲಗೆಲಸಕ್ಕೆ ಬೇಕಾಗಿದ್ದರು ಅವರಿಗೆ ಸಾಧ್ಯವಿದ್ದಷ್ಟು ಕಡಮೆ ಕೂಲಿ ಕೊಡುವುದು ಧನಿಕರಿಗೆ ಸಾಧ್ಯವಾಗಬೇಕಾಗಿತ್ತು. ನಾನು ಮುದುಕನಾದ ಮೇಲೆಯೇ ಓದುಬರಹಗಳನ್ನು ಕಲಿತದ್ದು. ಈಗ, ನಾನು ವಾರ್ತಾಪತ್ರಿಕೆಯನ್ನು ಓದಬಲ್ಲೆ. ನೀನು ...”—ಎನ್ನುತ್ತ ಆತನು ತನ್ನ ಮಾತ ನಿಲ್ಲಿಸಿದನು. ಏಕೆಂದರೆ, ಮುಗುವಿನ ಕಣ್ಣುಗಳು ಆ ವೇಳೆಗಾಗಲೇ ತೇವವಾಗಿದ್ದುವು—ಕಣ್ಣೀರಿನಿಂದ. ಆತನು ಹೇಳಿದುದೇ ಹೆಚ್ಚಾಯಿತು. ಆದುದರಿಂದಲೇ ಆತನು ಮಾತು ಬದಲಾಯಿಸುತ್ತ—

“ನಿನಗೆ ಇಷ್ಟವಿದ್ದರೆ, ವ್ಯಾಸಂಗಕ್ಕೆ ಕಾಲ ಮೀರಿತೆನ್ನುವ ಮಾತೇ ಇಲ್ಲ. ನಾನು ಎಷ್ಟೋ ಮಾತು ನಿನಗೆ ಹೇಳಿಬಿಟ್ಟೆ. ಆದರೇನು? ನಾವು ಸ್ನೇಹಿತರಲ್ಲವೇ? ನೀನು ನಮ್ಮ ಮಗುವೇ!”—ಎಂದು ಆತನು ಸಮಾಧಾನ ಮಾಡಿದನು. ಆ ಮೇಲೆ ಆತನು ಕಿರಿಯ ಕುರಿಗಾಹಿ ತೊದೋರ್ ಕಡೆಗೆ ತಿರುಗಿ—

“ನಾನು ಮುದುಕನಾದ ಕಾರಣ, ನನಗೆ ಸರಿಯಾಗಿ ನಿದ್ದೆ ಬರದು. ಆದುದರಿಂದಲೇ ನಾನು ಇತ್ತೀಚೆಗೆ ರಾತ್ರಿಯ ಹೊತ್ತು ಆಲೋಚನೆ ಮಾಡುತ್ತಿರುತ್ತೇನೆ. ನಾವು ರಂಫೇಲನನ್ನು ನಮ್ಮ ಜತೆಗೇಕೆ ಕರೆದುಕೊಳ್ಳಬಾರದು? ಅವನ ಕಡೆ ನೋಡು, ಎಷ್ಟು ಚೆನ್ನಾಗಿ, ದೊಡ್ಡವನಾಗಿ ಬೆಳೆದಿದ್ದಾನೆ ನೋಡು. ನಮ್ಮ ಕುರಿಗಳನ್ನು ನೋಡಿಕೊಳ್ಳಲು ಈಗ ನಮಗೆ ಯಾರಾದರೂ ಒಬ್ಬರು ಬೇಕಾಗಿದ್ದಾರೆ. ಇವನಿಗಿಂತಲೂ ಉತ್ತಮರಾದವರು ನಮಗೆ ಯಾರೂ ಸಿಕ್ಕುವುದಿಲ್ಲ”—ಎಂದು ಹೇಳಿದನು.

“ನಿಮ್ಮ ಮಾತು ಸರಿಯೆಂದು ನನಗೂ ಎನಿಸುತ್ತಿದೆ. ಆದರೆ ಈ ವಿಷಯವನ್ನು ನಾವು ದಳ ನಾಯಕರಿಗೂ, ಕ್ಷೇತ್ರಾಧ್ಯಕ್ಷರಿಗೂ ತಿಳಿಸಬೇಕು”—ಎಂದು ತೊದೋರ್ ಮಾವನು ಉತ್ತರವಿತ್ತನು.

ರಂಫೇಲ್ ಮೌನನಾಗಿ ತನ್ನ ತಲೆಯನ್ನು ತಗ್ಗಿಸಿಕೊಂಡಿದ್ದನು. ಸ್ವಲ್ಪ ಹೊತ್ತು ಕಳೆದ ಮೇಲೆ—

“ನನಗೆ ನೀವು ಎಂತಹ ಕೆಲಸವಾದರೂ ಕೊಡಿ ನಾನು ಇಲ್ಲಿಯೇ ಇರಬಯಸುತ್ತೇನೆ”—ಎಂದು ಆ ಹಿರಿಯರಿಗೆ ತಿಳಿಸಿದನು.

ರಂಫೇಲ್ ಅಲ್ಲಿಯೇ ಕುರಿಗಾಹಿಯಾಗಿ ಉಳಿದನು.

ವಸಂತಕಾಲ ಬಂತು. ಬಯಲುಗಳಲ್ಲಿ ಹೂಗಳು ತುಂಬಿದ್ದುವು ಕ್ಷೇತ್ರ ಹಸುರು ಬಣ್ಣ ಬಳೆದಂತಿತ್ತು. ಹಣ್ಣಿನ ಮರಗಳಲ್ಲಿ ಮೊಗ್ಗುಗಳೊಡೆಯುತ್ತಿದ್ದುವು. ಚೆರ್ರಿ ಹೂಗಳ ಸುವಾಸನೆಯು ಗಾಳಿಯಲ್ಲಿ ಪ್ರಸರಿಸಿತ್ತು. ಕುರಿಮರಿಗಳು ಮೊಲೆಯೂಡುವುದನ್ನು ಬಿಟ್ಟು, ಹುಲ್ಲನ್ನೂ, ಆಹಾರವನ್ನೂ ಮೇಯ ತೊಡಗಿದ್ದುವು, ಆದರೆ, ಬಾಗಿಲನ್ನು ತೆಗೆದೊಡನೆಯೇ ಅವು ಹೊರಕ್ಕೆ ಓಡಿ ಹೋಗುತ್ತ, ನೆಗೆದಾಡಿ ಒಂದರೊಡನೊಂದು ಜಗಳವಾಡುತ್ತ, ಆತುರದಿಂದ ಹುಲ್ಲು ಮೇಯುತ್ತಿದ್ದುವು.

ರಂಫೇಲ್ ಒಳ್ಳೆಯ ಕುರಿಗಾಹಿಯಾದನು. ಕೃಷಿ ಕ್ಷೇತ್ರವು ಅವನಿಗೆ ಒಂದು ಚರ್ಮದ ಚೀಲವನ್ನು ಒದಗಿಸಿತ್ತು. ಅದಕ್ಕೆ ಪಟ್ಟಿಗಳೂ, ಮುಚ್ಚಳವೂ ಇದ್ದುವು. ಅದರಲ್ಲಿ ರಂಫೇಲ್ ತನ್ನ ರೊಟ್ಟಿಯನ್ನೂ, ಬೇಜನ್ನೂ ಇಟ್ಟುಕೊಳ್ಳುತ್ತಿದ್ದನು ತೊರೆಯಿಂದ ನೀರು ಕುಡಿಯಲು ಬಗ್ಗಿದಾಗ ಅದು ಬಿದ್ದು ಹೋಗುವುದಕ್ಕೂ ಅವಕಾಶವಿರಲಿಲ್ಲ. ಅವನು ತನ್ನ ಕೈಯಲ್ಲೊಂದು ಕೋಲನ್ನೂ ಹಿಡಿದುಕೊಂಡಿದ್ದನು. ಅದಕ್ಕೆ ಹಳ್ಳಿಯ ನಮೂನೆಯ, ಚೌಕಿನ ಕೆತ್ತನೆಯಿದ್ದಿತು. ಊರಿನ ಅತ್ಯುತ್ತಮ ಕುರಿಗಾಹಿಯಾಗಿದ್ದ ನಕೇತಾತನು ಅದನ್ನು ಅವನಿಗೆ ಅನೇಕ ವರ್ಷಗಳ ಹಿಂದೆಯೇ ಕೊಟ್ಟಿದ್ದನು. ಈಗ ಆತನಿಗೆ ವಿಶ್ರಾಂತಿ ವೇತನ ದೊರೆಯುತ್ತಿದೆ

“ಇದನ್ನು ಚೆನ್ನಾಗಿ ಇಟ್ಟುಕೊಂಡಿರು, ತಪ್ಪಿಸಿಕೊಂಡು ಹೋದ ಕುರಿಯನ್ನು ಹಿಡಿಯಲು ಅದನ್ನು ಉಪಯೋಗಿಸು—ಅದರ ಕೊಕ್ಕೆಯನ್ನು ಮಾತ್ರ” ಆದರೆ, ಯಾರ ಪ್ರಾಣಿಯನ್ನೂ ಅದರಿಂದ ಎಂದೂ ಹೊಡೆಯಬೇಡ. ಪಾಪ! ಅದರವೂ ಪ್ರಾಣವೇ....”—ಎಂದು ನಕೇತಾತನು ಆ ಕೋಲನ್ನು ಕೊಟ್ಟಾಗ; ಎಚ್ಚರಿಕೆ ಕೊಟ್ಟಿದ್ದನು.

ಆಗ ರಂಫೇಲ್, ಹೊಳೆಯುತ್ತಿದ್ದ ಆ ಕೋಲನ್ನು ತೆಗೆದುಕೊಂಡು, ತನ್ನ ಗೇಣಿನಿಂದ ಅದನ್ನು ಅಳೆದನು.

ಈಗ ಅವನು ಯಾವಾಗಲೂ ತನ್ನ ದೃಷ್ಟಿಯನ್ನು ಕುರಿಗಳ ಮೇಲೆಯೇ ಇಟ್ಟಿರುತ್ತಿದ್ದನು. ಅವುಗಳಲ್ಲಿ ಬಿಳಿಯವೇ ಹೆಚ್ಚಾಗಿದ್ದುವು, ಕೆಲವು ಕಂದು ಬಣ್ಣದ್ದುವು ಕೂಡ. ಮರೀನೋ ಕುರಿಗಳನ್ನು ಅತ್ಯಂತ ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದು ದಳನಾಯಕನು ಎಚ್ಚರಿಕೆ ಕೊಟ್ಟಿದ್ದನು. ಅವುಗಳಿಂದ ಬೇರೆ ಹಿಂಡನ್ನು ಬೆಳೆಸಬೇಕಾಗಿದೆಯೆಂದೂ, ಸ್ಥಳೀಯ ತಳಿಯ ಕುರಿಗಳ ಉಣ್ಣೆಯು ದಪ್ಪವೆಂದೂ ಆತನು ತಿಳಿಸಿದ್ದನು.

ಬೇಸಗೆಯಲ್ಲಿ ಕುರಿಗಾಹಿಗಳು ಬೆಳಗಾ

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಕಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ ‘ನವಯುಗ’ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920



ಈಶ್ವರವಾದವನ್ನೊಪ್ಪಿದ

ನಾಥಪಂಥ ಪ್ರವರ್ತಕ-ಗೋರಖ

ಕ್ರಿಸ್ತಶಕ ೧೩-೧೪ನೆಯ ಶತಮಾನದಲ್ಲಿ ನಾಥ ಸಂಪ್ರದಾಯದ ಅನುಯಾಯಿಗಳು ಮುಖ್ಯವಾಗಿ ರಾಜಸ್ಥಾನ, ಉತ್ತರ ಪ್ರದೇಶ, ಮಹಾ ರಾಷ್ಟ್ರಗಳಲ್ಲಿ ಹರಡಿದ್ದರು ಇವರಲ್ಲಿ ಕೆಲವರು ದಕ್ಷಿಣ ಭಾರತಕ್ಕೂ ಆಗಮಿಸಿದ್ದರೆಂದು ತಿಳಿಯುತ್ತದೆ. ಈ ನಾಥ ಸಂಪ್ರದಾಯಿಗಳಲ್ಲಿ ಆದಿನಾಥ (ಈಶ್ವರ)ನು ಮೊದಲಿಗನೆಂದೂ ಹೆಸರಾಂತ ಮತ್ಸ್ಯೇಂದ್ರನಾಥನು ಇವನ ಶಿಷ್ಯನೆಂದೂ ಗೋರಖನಾಥನು ಈತನ ಶಿಷ್ಯನಾಗಿದ್ದನೆಂದೂ ತಿಳಿಯುತ್ತದೆ.

ಮತ್ಸ್ಯೇಂದ್ರನಾಥನು ಮೀನಾನಾಥ ಇಲ್ಲವೇ ಮಚ್ಛೇಂದ್ರನಾಥನೆಂದು ಕರೆಯಲ್ಪಡುತಿದ್ದನು. ನಾಲ್ಕನೆಯ ಬೋಧಿಸತ್ವ ಅವಲೋಕಿತೇಶ್ವರನ ಹೆಸರಿನಿಂದ ಇವನು ಪ್ರಖ್ಯಾತನಾಗಿದ್ದನು. ನೇಪಾಳದಲ್ಲಿ ಇವನನ್ನು ಬಹಳವಾಗಿ ಮನ್ನಿಸುತಿದ್ದರು. ಸಾಗರದ ತಟದಲ್ಲಿ ಆದಿನಾಥ (ಈಶ್ವರ)ನು ಪಾರ್ವತಿಗೆ ಯೋಗ ವಿದ್ಯೆಯನ್ನು ತಿಳಿಸಿ ಹೇಳುತಿದ್ದನಂತೆ; ಆಗ ಪಾರ್ವತಿಯು ತಲೆ ತೂಕಡಿಸುತ್ತ ನಿದ್ರಿಸಿದಳಂತೆ; ಮತ್ಸ್ಯೇಂದ್ರನಾಥನು ಮೀನಿನ ರೂಪವನ್ನು ತಳೆದು ಈ ಯೋಗವಿದ್ಯೆಯನ್ನು ಕದ್ದು ಕೇಳಿದನಂತೆ. ಈ ಕಾರಣದಿಂದಲೇ ಆವನಿಗೆ ಮತ್ಸ್ಯೇಂದ್ರನೆಂದ ಹೆಸರು ಬಂದಿತಂತೆ. ಮತ್ಸ್ಯೇಂದ್ರನು ಸಂಸ್ಕೃತದಲ್ಲಿಯೂ ರಾಜಸ್ಥಾನಿ ಹಿಂದಿಯಲ್ಲಿಯೂ ಕೆಲವೊಂದು ಪದ್ಯಗಳನ್ನು ಬರೆದಿದ್ದಾನೆ. ಇವೆಲ್ಲವೂ ನಾಥ ಸಂಪ್ರದಾಯಕ್ಕೆ ಸಂಬಂಧಪಟ್ಟವುಗಳೆನ್ನಬಹುದು.

ಮತ್ಸ್ಯೇಂದ್ರನಾಥನು ಈಶ್ವರವಾದೀಯು ನಾಥಸಂಪ್ರದಾಯದವನಾದರೂ ಈತನ ಶಿಷ್ಯ ಗೋರಖನಾಥನೇ ಈ ಸಂಪ್ರದಾಯ ಪ್ರವರ್ತಕನೆಂದು ಪ್ರತೀತಿಯಿದೆ. ಭಾರತೀಯ ದಂತಕಥೆಗಳ ಆಧಾರದಿಂದ ಹೇಳುವುದಾದರೆ, ಅವನು ಸರ್ವ ವ್ಯಾಪಕ; ಸರ್ವ ಶಕ್ತಿವಂತ. ಮತ್ಸ್ಯೇಂದ್ರನಾಥನ ಪ್ರತಿಸ್ಪರ್ಧಿಯಾದ ಇವನು ಗೋರಖ (ಗೋರಕ್ಷ) ರಾಜ್ಯದ ಸಂರಕ್ಷಕನಾದ ಸಂತನೆನ್ನುತ್ತಾರೆ. ಮತ್ಸ್ಯೇಂದ್ರನಾಥನು ಆಳುತಿದ್ದ ನೇಪಾಳ ದೇಶವನ್ನು ಇವನು ಬಹಳ ಪರಿಶ್ರಮದಿಂದ ತನ್ನ ಅಂಕಿತಕ್ಕೆ ತಂದುಕೊಂಡನು. ಆ ಮೇಲೆಯೇ ಮತ್ಸ್ಯೇಂದ್ರನ ಶಿಷ್ಯತ್ವವನ್ನು ಗ್ರಹಿಸಿದನು. ಟಿಬೇಟಿನ ಒಂದು ಜನಶ್ರುತಿಯಂತೆ ಗೋರಖನಾಥನು ಬೌದ್ಧನು. ಈತನ ಎಲ್ಲ ಶಿಷ್ಯರೂ ಪ್ರಾರಂಭದಲ್ಲಿ ಬೌದ್ಧರಿದ್ದರು. ಆದರೆ, ಹನ್ನೆರಡನೆಯ ಶತಮಾನದ ಅಂತ್ಯದಲ್ಲಿ ಸೇನವಂಶವು ನಾಶವಾದ ಬಳಿಕ ಇವರೆಲ್ಲರೂ ಶೈವ ಮತವನ್ನು ಸ್ವೀಕರಿಸಿದರು.

ಈತನ ಸಂಬಂಧವಾಗಿ ನೇಪಾಳದಲ್ಲಿ ಇನ್ನೊಂದು ಕಥೆಯಿದೆ. ಗೋರಖನು ಸಾಧಾರಣ ಕರಕೌಶಲದಿಂದ ಹನ್ನೆರಡು ವರ್ಷಗಳ ವರೆಗೆ ಮಳೆಯನ್ನು ತಡೆದನಂತೆ! ನೀರಿನ ಮೂಲಸ್ಥಾನವೆಲ್ಲವನ್ನೂ ಅರಸಿ ಅವೆಲ್ಲವನ್ನೂ ಮಂತ್ರಬಲದಿಂದ ಏಕ ಸೂತ್ರದಲ್ಲಿ ಬಂಧಿಸಿದನಂತೆ! ಆ ನೀರೋದ್ಗಮಗಳೆಲ್ಲವೂ ಆ ಸೂತ್ರದ ಮೇಲೆ ನಿಂತುವು. ಹನ್ನೆರಡು ವರ್ಷ ಪರ್ಯಂತ ನೀರು ಯಾವುದೇ ರೀತಿಯಿಂದ ಸುರಿಯಲಿಲ್ಲ. ಎಲ್ಲೆಡೆಯೂ ಹಾಹಾಕಾರವೆದ್ದಿತು. ಕೊನೆಗೆ ಹೇಗೆ ನೀರು ಹೊರಹೇರಿಯಿತು ಎಂಬ ವಿಚಾರದಲ್ಲಿ ಬೌದ್ಧ ಮತ್ತು ಬ್ರಾಹ್ಮಣ ಜನಶ್ರುತಿಗಳು ಸಹಮತವಾಗಿಲ್ಲ; ಹಾಗಿದ್ದರೂ ಹಳೆಯ ಕಥೆಗಳಲ್ಲಿ ಇದು ಮಹತ್ವಪೂರ್ಣವಾಗಿದೆ.

ರಾಜಸ್ಥಾನದಲ್ಲಿ ಗೋರಖನನ್ನು ಗುಗ್ಗ ಗೂಗನೆಂದು ಕರೆಯಲಾಗುತಿತ್ತು. ಇವನು ಎಳವೆಯಲ್ಲೇ ಒಂದು ಸರ್ಪವನ್ನು ತಿಂದುದರಿಂದ 'ಜಹರಪೀರ' (ವಿಷಪಾನಿ) ಎಂದೂ ಹೆಸರಿಸಲಾಗುತಿತ್ತು. ಬಾಗರ ಇಲ್ಲವೇ ಉತ್ತರ ರಾಜಸ್ತಾನದ ರಾಜನಾಗಿದ್ದನೆಂದೂ ಹೇಳಲಾಗುತ್ತದೆ. ಆದುದರಿಂದಲೇ 'ಜಾಗರಬೀರ' ಎಂಬ ಹೆಸರೂ ಇವನಿಗಿತ್ತು. ಆದರೆ, ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಸಾಕಷ್ಟು ಕೀರ್ತಿವಂತನೆನಿಸಿದ ಇವನ ಚರಿತ್ರೆಯನ್ನು ತಿಳಿಯಲು ಪ್ರಾಮಾಣಿಕವಾದ ಆಧಾರಗಳಾವುವೂ ದೊರಕಿರುವುದಿಲ್ಲ. ಸಿಕ್ಕಿರುವ ಆಧಾರಗಳನ್ನಾದರೂ ಸರಿಯಾಗಿ ಸಂಶೋಧಿಸಲಾಗಿಲ್ಲ. ಆದರೂ ೧೩ನೆಯ ಶತಮಾನದಲ್ಲಿ ಈತನು ಇದ್ದನೆಂದು ಹೇಳುತ್ತಾರೆ.

ಗೋರಖನಾಥನು ನಾಥ ಸಂಪ್ರದಾಯದ ಪ್ರವರ್ತಕನೆಂದು ಹೇಳುತ್ತಾರೆ. ಈ ಸಂಪ್ರದಾಯವು ದಾರ್ಶನಿಕತೆಯ ದೃಷ್ಟಿಯಿಂದ ಶೈವ ಮತದಲ್ಲಿ ಅಂತರ್ಗತವಾಗುತ್ತದೆ; ಹಾಗೆಯೇ ವ್ಯಾವಹಾರಿಕತೆಯ ದೃಷ್ಟಿಯಿಂದ ಪತಂಜಲಿಯ ಹಠಯೋಗಕ್ಕೆ ಅತಿ ನಿಕಟವಿದೆ. ಗೋರಖನ ಮತವು ಧರ್ಮಸಾಹಿತ್ಯದಲ್ಲಿ ನಾಥ ಪಂಥವೆಂದು ಹೆಸರಾಗಿದೆ. ಇವನ ಮೊದಲಿದ್ದ ಸಿದ್ಧರ ವಜ್ರಯಾನದ ವಿಕಸಿತ ರೂಪವೇ ಇದೆನ್ನುತ್ತಾರೆ. ಈ ನಾಥ ಸಂಪ್ರದಾಯವು ೧೪ನೆಯ ಶತಮಾನದ ವರೆಗೆ ಧರ್ಮ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಮೆರೆದಾಡಿಕೊಂಡಿತ್ತು. ಇದರಲ್ಲಿ ಅನುಭೂತಿ ಮತ್ತು ಹಠಯೋಗಗಳಿಗೆ ಪ್ರಧಾನ ಸ್ಥಾನವಿದೆ. ಈ ಸಂಪ್ರದಾಯದಿಂದಲೇ ಪ್ರಭಾವಿತನಾದ ಸಂತ ಕಬೀರನು ನಿರ್ಗುಣ ಪಂಥದಲ್ಲಿ ನಾಥನಿಗೇ ಅಗ್ರಗಣ್ಯ ಸ್ಥಾನ ಕಲ್ಪಿಸಿದನೆನ್ನಬಹುದು.

ಡಾಗ್ ಹೆಮ್ಮರ್‌ಶೆಲ್ಡರ ಮರಣಾನಂತರ ಸೇರಿದ ಸಂ. ರಾ. ಸಾಮಾನ್ಯ ಸಭೆಯ ಪ್ರಥಮ ಅಧಿವೇಶನ. ಪ್ರಧಾನ ಕಾರ್ಯದರ್ಶಿಯ ಖಾಲಿ ಕುರ್ಚಿಯನ್ನು ಕಂಡು ಸದಸ್ಯರೆಲ್ಲರೂ ಕಣ್ಣೀರ್ಮಿಡಿದರು.

ವಜ್ರಯಾನ ಪಂಥದಲ್ಲಿರುವಂತೆಯೇ ನಾಥ ಸಂಪ್ರದಾಯದಲ್ಲೂ ಶೂನ್ಯದಲ್ಲೇ ಈಶ್ವರ ಭಾವನೆಯಿದೆ. ಇದೇ ಶೂನ್ಯವನ್ನು ಮುಂದೆ ಕಬೀರನೂ ಒಪ್ಪಿಕೊಂಡನು. ಗೋರಖನಾಥನು ಧರ್ಮ ಸಾಹಿತ್ಯದಲ್ಲಿ ದೊಡ್ಡ ಸಂತಕವಿ. ಸಂಸ್ಕೃತದಲ್ಲೇ ಇವನು ಹಲವು ಗ್ರಂಥಗಳನ್ನು ಬರೆದನೆಂದು ಹೇಳುತ್ತಾರೆ. ಗೋರಖಬೋಧ ಮೊದಲಾದ ಹತ್ತು ಗ್ರಂಥಗಳು ಈತನವೇ ಎಂಬ ನಿಶ್ಚಯಕ್ಕೆ ವಿದ್ವಾಂಸರು ಬಂದಿದ್ದಾರೆ. ಇವನು ತನ್ನ ಪಂಥದ ಪ್ರಚಾರಕ್ಕಾಗಿ ಜನಸಮುದಾಯದ ಭಾಷೆಯನ್ನೇ ಆಶ್ರಯಿಸಿದನು. ಗೌತಮ ಬುದ್ಧನು ಕೂಡ ತನ್ನ ಮತ ಪ್ರಚಾರಕ್ಕೆ ಸಂಸ್ಕೃತವನ್ನು ಬಿಟ್ಟು ಜನಸಾಧಾರಣರ ಭಾಷೆಯಾಗಿದ್ದ ಪಾಳಿಯನ್ನೇ ಸ್ವೀಕರಿಸಿದ್ದನು. ಜನರೆಲ್ಲರಿಗೂ ತನ್ನ ಸಿದ್ಧಾಂತವನ್ನು ತಿಳಿಸುವುದಕ್ಕಾಗಿ ಅವರ ಭಾಷೆಯಲ್ಲಿಯೇ ಗೋರಖನು ಕವಿತೆ ಬರೆದನು. ಆದರೆ, ಆತನು ಬರೆದ ಗ್ರಂಥಗಳ ಪ್ರಾಮಾಣಿಕತೆಯು ಮಾತ್ರ ಇನ್ನೂ ತೂಗಾಡುತ್ತಿದೆ.

ಗೋರಖನಾಥನ ವಿಚಾರ ಧಾರೆಯ ಮೇಲೆ ಬೌದ್ಧರ ಮತ್ತು ಸಿದ್ಧರ ಪ್ರಭಾವವು ಸರಿಯಾಗಿ ಬಿದ್ದಿರುತ್ತದೆ. ಈ ಸಂಪ್ರದಾಯವು ನಿವೃತ್ತಿಮಾರ್ಗಿ ಜ್ಞಾನಯೋಗದಲ್ಲಿ ಸೇರುತ್ತದೆ. ನಾಥ ಎಂದರೆ ಮುಕ್ತಿದಾನ ಮಾಡುವವನೆಂದರ್ಥ. ಸ್ವಯಂ ಮುಕ್ತನಾದವನು ಮಾತ್ರ ಮುಕ್ತಿದಾನ ಮಾಡಬಲ್ಲ. ಆದಾದರಿಂದಲೇ ನಾಥ ಸಂಪ್ರದಾಯದಲ್ಲಿ ಸಾಂಸಾರಿಕ ಬಂಧನಗಳಿಂದ ಮುಕ್ತನಾಗುವ ವಿಧಿಗಳೇ ಬಹಳವಾಗಿ ಹೇಳಲ್ಪಟ್ಟಿವೆ. ಪ್ರಪಂಚದ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳಿಂದ ವೈರಾಗ್ಯದ ಭಾವನೆಯು ಮನಸ್ಸಿನಲ್ಲಿ ಮೂಡಿದಾಗ ಮಾತ್ರ ಬಿಡುಗಡೆಯಾಗಬಹುದು. ಇಂತಹ ವೈರಾಗ್ಯವು ಗುರುವಿನ ಸಹಾಯದಿಂದ ಮಾತ್ರ ಉಂಟಾಗಬಲ್ಲುದು ಆದುದರಿಂದ ನಾಥ ಸಂಪ್ರದಾಯವು ತನ್ನ ಕ್ರಿಯಾಪಕ್ಷದಲ್ಲಿ ಗುರುದೀಕ್ಷೆಯಿಂದ ತೊಡಗುತ್ತದೆ. ಗುರುವಾದರೂ ಶಿಷ್ಯನ ದೃಢತೆ ಮತ್ತು ಯೋಗ್ಯತೆಗಳನ್ನು ನೋಡಿಕೊಂಡು ದೀಕ್ಷೆ ಕೊಡುತ್ತಾನೆ.

ವೈರಾಗ್ಯದ ಭಾವನೆಯು ಮನಸ್ಸಿನಲ್ಲಿ ದೃಢವಾಗಿ ಬೇರು ಬಿಟ್ಟಾಗ, ಅದು ಮೂರು ಮಾರ್ಗಗಳಲ್ಲಿ ಅಭಿವ್ಯಂಜನೆಯಾಗಬಲ್ಲುದು. ಇಂದ್ರಿಯ ನಿಗ್ರಹ, ಪ್ರಾಣ ಸಾಧನೆ ಮತ್ತು ಮನಸಾಧನೆಗಳೇ ಆ ಮಾರ್ಗಗಳು ಇಂದ್ರಿಯ ನಿಗ್ರಹವು ಅತಿ ಮುಖ್ಯವಾದುದು. ಇದರ ಮೇಲೆ ನಾರಿಯ ಆಕರ್ಷಣೆ ಬಹಳ. ಬೌದ್ಧ ವಿಹಾರಗಳಲ್ಲಿ ಭಿಕ್ಷುಣಿಗಳಿಗೆ ಪ್ರವೇಶ ನೀಡಿದುದರಿಂದಾಗಿ, ಆ ಧರ್ಮದಲ್ಲಿ ಅಧಃ ಪತನವು ಕಾಣಿಸಿಕೊಂಡಿದ್ದುದನ್ನು ಇಲ್ಲವೇ ವಜ್ರಯಾನದಲ್ಲಿ ಭೈರವಿ ಮತ್ತು ಯೋಗಿನಿಯರ ಸಂಗದಿಂದ ತಾಂತ್ರಿಕೋಪಾಸನೆಯಲ್ಲಿ ಧರ್ಮವು ವಿಕೃತವಾದುದನ್ನು ನೋಡಿದುದರಿಂದಲೇ ತನ್ನ ಸಂಪ್ರದಾಯದಲ್ಲಿ ಗೋರಖನಾಥನು ಇಂದ್ರಿಯ ನಿಗ್ರಹಕ್ಕೆ ಅಗ್ರಸ್ಥಾನ ನೀಡಿದ್ದಿರಬಹುದು.

(೧೦ನೇ ಪುಟ ನೋಡಿರಿ)

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;

ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಉಡುಪಿ

ಆಡಳಿತ ಆಫೀಸು: ಮಂಗಳೂರು-1.

ಭಾಷಾ ವಿವೇಚನೆ

ಏಕಲಿಪಿ ಮತ್ತು ಏಕಮಾಧ್ಯಮ

ಮೂಲ: ಪ್ರಾ| ವಿಷ್ಣು ಪ್ರಸಾದ ತ್ರಿವೇದಿ.
ಅನುವಾದ: ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ,

ನಾವು ಯಾವ ಭಾಷೆಯಲ್ಲಿ ಬರೆಯುತ್ತೇವೆ, ಯಾವ ಲಿಪಿಯನ್ನು ಓದುತ್ತೇವೆ ಎಂಬುದಕ್ಕಿಂತಲೂ; ನಾವು ಏನನ್ನು ಬರೆಯುತ್ತೇವೆ, ಏನನ್ನು ಓದುತ್ತೇವೆ ಎಂಬುದು ಅತಿ ಮಹತ್ವಪೂರ್ಣವಾದುದು. ಒಂದೇ ಆಕಾರದ ಹಲವು ಬಾಟಲಿಗಳಿಗೆ ಒಂದೇ ರೀತಿಯ ಲೇಬಲನ್ನು ಹಚ್ಚಿದರೆ ಮಾತ್ರ ಅವುಗಳನ್ನು ಒಂದೇ ಆಕಾರದವು ಎಂದು ನಂಬಬಹುದು ಎಂಬವನನ್ನು ಮೂರ್ಖನೆನ್ನದಿರಲು ಸಾಧ್ಯವಿಲ್ಲ. ದೇಶದ ಸ್ತ್ರೀ ಪುರುಷರೆಲ್ಲರೂ ಒಂದೇ ರೀತಿಯ ಪೋಷಾಕನ್ನು ಧರಿಸಿದರೆ, ದೇಶದ ಐಕ್ಯತೆಗೆ ಪುಷ್ಟಿ ದೊರೆಯಬಹುದೆಂದು ನಂಬುವುದು ಮೂರ್ಖತನವಲ್ಲದೆ ಮತ್ತೇನು? ಅಮೇರಿಕಾ ಯುರೋಪುಗಳಲ್ಲಿ ಇಂತಹ ಘಟನೆಗಳು ನಡೆದಿವೆ. ಆದರೂ ಅವರಲ್ಲಿದ್ದ ಸ್ಪರ್ಧೆ, ಯುದ್ಧಾಸಕ್ತತೆ ಕಡಿಮೆಯಾಗಿಲ್ಲ. ಹಿಂಧೀ ಭಾಷೆಗಾಗಿ ಲಿಪಿಯ ಐಕ್ಯ, (ಬಾಹ್ಯ ಶಕ್ತಿಯಿಂದ ಹೇರಲ್ಪಟ್ಟದು) ಇದ್ದಾಗ್ಯೂ ಅವರಲ್ಲಿ ಹಿಂದೂ ಮುಸ್ಲಿಮ್ ಭೇದ ಅಳಿಯಲಿಲ್ಲ. ನಮ್ಮ ರಾಜಕೀಯ ಚಳುವಳಿಯ ಭಾಷಾ ವಾಹನ ಇಂಗ್ಲಿಷೇ ಆಗಿತ್ತು. ಆದರೂ ಅದೇ ಮಾಧ್ಯಮದಿಂದ ಪರಸ್ಪರ ವಿರೋಧಿ ಹೇಳಿಕೆಗಳೂ ಪ್ರಕಟಗೊಂಡಿದ್ದುವು. ಇಂದಿಗೂ ಹಲವಾರು ರಾಜಕೀಯ ಮಂಡಲಗಳು ಆಂಗ್ಲ ಮಾಧ್ಯಮದಲ್ಲಿಯೇ ನಡೆಯುತ್ತಿವೆಯಾದರೂ ಅವರ ಪ್ರಾದೇಶಿಕ ಅಹಂಭಾವ ಅಥವಾ ಜಾತಿವೃತ್ತಿಯ ಅಭಿಮಾನಗಳು ಎಲ್ಲಿಯೂ ತೋರಿ ಬರುತ್ತಿಲ್ಲ. ವಾಹನಕ್ಕೆ ಹೆಚ್ಚಿನ ಬೆಲೆಯಿದೆ ಎಂಬುದು ನಿಜ. ಆದರೆ ಒಯ್ಯಲ್ಪಡುವ ವಸ್ತುವಿಗೆ ವಾಹನಕ್ಕಿಂತಲೂ ಹೆಚ್ಚಿನ ಬೆಲೆಯಿದೆ ಎಂಬುದು ನಿರ್ವಿವಾದ. ಆಂಗ್ಲ ಭಾಷೆಯು ನಮ್ಮ ಐಕ್ಯಕ್ಕೆ ಸಹಕರಿಸಿತು. ಆ ಏಕತೆಯನ್ನು ಸಂಗೋಪನೆಗೈಯ್ದಿತು. ಇದರಿಂದಾಗಿಯೇ ನಮ್ಮ ಸನಾತನ ಭಾವನೆಗಳಿಗೆ ಪೋಷಣೆ ದೊರೆಯಿತು. ಇಂತಹ ಸೌಂದರ್ಯ ಅನುಭವ ವೈಭವಗಳು ನಮಗೆ ಆಂಗ್ಲ ಸಾಹಿತ್ಯದಿಂದಲೇ ದೊರೆತುವು. ಆಂಗ್ಲ ಭಾಷೆಯಿಂದಾಗಿಯೇ ಪಾಶ್ಚಾತ್ಯರಿಗೆ ಭಾರತದ ಪರಿಚಯವಾಯಿತು. ಭಾರತೀಯರಿಗೆ ಪುನರಪಿ ಸ್ವದೇಶ ದರ್ಶನವಾಯಿತು. ಇಮರ್ಸನನ ಕೃತಿಯನ್ನೋದಿ ನಾವು ಅಮೇರಿಕೆಯ ಅಂತರಾಳವನ್ನರಿಯಬಹುದು. ವರ್ಡ್‌ವರ್ಥ್, ಶೆಲ್ಲಿ, ಬರ್ಕರಂತವರ ಕೃತಿಗಳಿಂದ ನಾವು ಇಂಗ್ಲೆಂಡಿನ ಸಾಮೀಪ್ಯ ಪಡೆಯುತ್ತೇವೆ. ಆದರೆ ಇದಕ್ಕೆ ವಿರೋಧವಾಗಿ ಬಂಗಾಲಿ ಕೃತಿಗಳನ್ನೋದಿ ನಾವು ಅಷ್ಟು ಸಂನಿಕಟತೆ ಪಡೆಯಲು ಸಾಧ್ಯವಾಗಲಿಲ್ಲ ಆದರೆ ಕವಿ ರವೀಂದ್ರರ ಸಾಹಿತ್ಯದ ಅನುಶೀಲನೆಯಿಂದ ನಮಗೆ ಬಂಗಾಲದ ಅಧಿಕ ಪರಿಚಯವಾಯ್ತು. ಅವರ ಕೃತಿಗಳನ್ನು ನಾನು ಆಂಗ್ಲ ಭಾಷೆಯಲ್ಲಿಯೇ ಓದಿರಬಹುದಂತೆ! ಅದರಿಂದೇನು? ಸಾಧನ ಮತ್ತು ವಾಹನಗಳ ಮೂಲ್ಯವನ್ನು ನಾನು ಕಡಿಮೆ ರೂಪದಲ್ಲಿ ಉಲ್ಲೇಖಿಸಿದವನೆಂದು ತಿಳಿಯಬಾರದು. ಆದರೆ ಅದಕ್ಕೆ ಅತಿರೇಕ ಮಹತ್ವನೀಯುವುದನ್ನು ನಾನು ಒಪ್ಪುವುದಿಲ್ಲ.

"ಲಿಪಿಯ ಬಗ್ಗೆ ಪ್ರಸ್ತಾವನೆ"

ನಮ್ಮ ವಿವಿಧ ಭಾಷೆಗಳ ಲಿಪಿಗಳು ವಿವಿಧ ಪ್ರಭಾವಗಳಿಂದ ವಿಕಾಸಗೊಂಡಿವೆ. ಅವುಗಳಲ್ಲಿ ಎಷ್ಟೋ ಲಿಪಿಗಳಿಗೆ ತಮ್ಮದೇ ಆದ ವ್ಯಕ್ತಿತ್ವವಿದೆ. ಬಹಳ ವಿಶಾಲ ಸಂಖ್ಯೆಯಲ್ಲಿ ಹಸ್ತಲಿಖಿತ ಸಾಹಿತ್ಯಗಳು ದೊರೆತಿವೆ. ಅವುಗಳನ್ನು ಈ ಆಧುನಿಕ ಕಾಲದಲ್ಲಿ ಮುದ್ರಿಸಲಾಗಿದೆ. ಆ ಲಿಪಿಗಳೊಳಗೆ ಜನರ ಜೀವನ ಹುದುಗಿದೆ ಈ ಪರಿಸ್ಥಿತಿಯಲ್ಲಿ ಒಂದೇ ಲಿಪಿಯ ಆಗ್ರಹ ಯುಕ್ತವೆನಿಸಲಾರದು. ಒಂದು ಲಿಪಿಯನ್ನು ಪ್ರಚಾರ ಮಾಡುವ ಕಾರ್ಯವು ಇತರ ಲಿಪಿಗಳ ಉಚ್ಚಾಟನೆಯ ಉದ್ದೇಶದಿಂದ ಪ್ರೇರಿತವಾಗಿರಬಾರದು. ದೇಶದ ವಿವಿಧ ಭಾಷೆಗಳ ಉಚ್ಚಾರವನ್ನು ಗೈಯುವಷ್ಟು ದೇವನಾಗರೀ ಲಿಪಿಯು ಸಮೃದ್ಧವಾಗಿರಬೇಕು. ಪ್ರಾದೇಶಿಕ ದೇವನಾಗರೀ ಲಿಪಿಯು ಹೇಗಾದರೂ ಇರಲಿ, ಆದರೆ ರಾಷ್ಟ್ರೀಯ ದೇವನಾಗರಿಯು ಶಕ್ಯವಿದ್ದಷ್ಟು ಉಚ್ಚಾರ ಪ್ರತಿಬಿಂಬಕ ಹಾಗೂ ಕಾರ್ಯಕ್ಷಮ್ಯವಾಗಿರಬೇಕು. ಜನರ ಜೀವನದಲ್ಲಿ ಸಮರೂಪವಾಗಿ ಬೆರೆತಿರುವ ಲಿಪಿಗಳತ್ತ ದೇವನಾಗರಿಯು ಮುಂದುವರಿದರೂ ಆದರ ಸೀಮೆಯನ್ನು ಮುರಿಯಲು ಇದು ಸಮರ್ಥವಾದೀತೆಂಬುದು ಅಶಕ್ಯ! ಅಂದ ಬಳಿಕ ಆ ಕುರಿತು ಆಗ್ರಹದ ಭೂಮಿಕೆಯನ್ನೀಯುವುದೂ ಅನಾವಶ್ಯಕ, ಈ ದೇಶದ ಸುಶಿಕ್ಷಿತ ನಾಗರಿಕರು ಪ್ರಾದೇಶಿಕ ಹಾಗೂ ದೇವನಾಗರಿ ಭಾಷೆಗಳ ಹೊರತು ಇನ್ನೂ ಒಂದೆರಡು ಭಾಷೆಗಳನ್ನು ಸಹಜವಾಗಿಯೇ ಕಲಿಯಬಲ್ಲರು. ಉರ್ದು ಮತ್ತು ಯಾವುದಾದರೊಂದು ದ್ರಾವಿಡ ಭಾಷೆಯನ್ನು ಕಲಿಯುವುದು ನಮ್ಮ ಜನಗಳಿಗೆ ಸಹಾಯಕವಾಗಬಹುದು. ಸಾರ್ವತ್ರಿಕ ಏಕರೂಪತೆಯನ್ನು ತರುವುದೆಂಬುದು ಈ ಯಂತ್ರಯುಗದ ಒಂದು ಅಂಟುರೋಗವೇ ಆಗಿದೆ.

ಹಿಂದಿಯಿಂದ ಪ್ರಯೋಜನ

ಹಿಂದಿಯನ್ನು ನಾವು ಉತ್ತಮ ರೀತಿಯಿಂದ ಕಲಿಯಬೇಕು. ರಾಷ್ಟ್ರಭಾಷೆಯೆಂದು ಅದು ಅಭ್ಯಾಸ ಕ್ರಮದಲ್ಲಿ ಅನಿವಾರ್ಯವಾಗಿರಬೇಕು. ಹಿಂದಿಯನ್ನು ಕಲಿಯುವಾಗ ನಾವು, ತುಳಸಿದಾಸ, ಸೂರದಾಸ, ಪ್ರೇಮಚಂದರ ನಿಕಟವರ್ತಿಗಳಾದಂತೆ ನಮ್ಮ ಯುವಕರು ಮರಾಠಿ, ಬಂಗಾಲಿ, ಕನ್ನಡ, ತಮಿಳು ಉರ್ದು ಭಾಷೆಗಳನ್ನು ಅಭ್ಯಸಿಸಬೇಕು. ಆಯಾಯ ಭಾಷೆಯನ್ನು ಪ್ರದೇಶದೊಡನೆ ವ್ಯವಹಾರಕ್ಕಾಗಿ ಕಲಿಯ ಬೇಕು ಎಂಬುದು ನಿಜವಾದರೂ ಆ ಭಾಷಾ ಸಾಹಿತ್ಯ ಭಂಡಾರದ ಅರಿವಿಗಾಗಿ ಕಲಿಯಬೇಕೆಂಬುದು ಅತಿ ಮಹತ್ವದ್ದಾಗಿದೆ.

—: ಇಂಗ್ಲಿಷಿನ ಮಹತ್ವ :—

ಇಂಗ್ಲಿಷಿನ ಕುರಿತೂ ನನ್ನ ಅಭಿಪ್ರಾಯ ಇದೇ ಆಗಿದೆ. ಉದ್ಯಮ, ವಿದ್ಯೆ, ಯಂತ್ರ ವಿದ್ಯೆ, ಮತ್ತು ವಿಜ್ಞಾನದ ದೃಷ್ಟಿಯಿಂದ ಇದು ಅತಿ ಉಪಯೋಗೀ ಸಾಧನವಾಗಿದೆ. ಆದರೂ ಈ ಮುಖ್ಯಕೆ... ಗೌಣ. ಆಂಗ್ಲ ಭಾಷಾ ಸಾಹಿತ್ಯದಲ್ಲಿ ... ಸಾಧಾರಣ ಸೌಂದರ್ಯವಿದೆ. ಮಾನವ ಭಾವನೆಯ ಹೃದಯಂಗಮ ನಿರೂಪಣೆಯಿದೆ. ಮನುಷ್ಯನಲ್ಲಿರುವ ಉದಾತ್ತ ಉದಾರತೆಗಳು ಇದರಲ್ಲಿ ಆವಿರ್ಭವಿಸಿ... ಆಂಗ್ಲ ಸಾಹಿತ್ಯದ ಪರಿಶೀಲನೆಯಿಂದ ನಮ್ಮ ದೃಷ್ಟಿಯ ಕ್ಷಿತಿಜವು ವಿಸ್ತಾರವನ್ನು ಪಡೆದಿದೆ. ನಮ್ಮ ಜೀವನ ಭಾವನೆಗ... ಪುಷ್ಟವಾಗಿವೆ. ದೃಢವಾಗಿವೆ. ನಮ್ಮ ದೃಷ್ಟಿದೋಷದ ಕೆಲವೊಂದು ಪ್ರಮಾಣವು ನಿವಾರಿಸಲ್ಪಟ್ಟಿದೆ. ಪಾಶ್ಚಾತ್ಯ ಆ...ನ ಸಾಹಿತ್ಯದಲ್ಲಿ ಆಂಗ್ಲ ಭಾಷೆಯು ಶಿರೋಮಣಿಯಂತಿದೆ. ಐತಿಹಾಸಿಕ ಕಾರಣಗಳಿಂದಾಗಿ ನಮಗೆ ಆ ಭಾಷೆಯ ಸಂಪರ್ಕ ಬೆಳೆದಿದೆ. ಆ ಸಂಪರ್ಕ ಪರಿಚಯ ಬೆಳೆಯ ಬೇಕು ಆದರೆ ಅದು ನಮ್ಮ ಪ್ರತಿಭಾರ್ಜನೆಯ ವಾಹನವಾಗಬೇಕೆಂಬುದು ನನ್ನ ಬಯಕೆಯಲ್ಲ. ಸಾಹಿತ್ಯ ಸಂಪರ್ಕಗೊಂಡ ನಮ್ಮ ಮಾತೃಭಾಷೆಯಲ್ಲಿಯೇ ಅಂತರಂಗ, ಕಲ್ಪನಾ ವಿಲಾಸ, ನಾವೀನ್ಯ ಸಹಜ ರೀತಿಯಲ್ಲಿ ಆವಿರ್ಭಾವಗೊಳ್ಳುತ್ತದೆ. ಆದರೆ ನಮ್ಮ ಹೃದಯಕ್ಕೆ ಪ್ರೇರಣೆಯೀಯುವ ಸಾಮರ್ಥ್ಯ ಆಂಗ್ಲ ಭಾಷೆಯಿಂದಲೇ ದೊರೆತಿದೆ. ರಾಜಾರಾಮ ಮೋಹನ್‌ರಾಯಿ, ವಿವೇಕಾನಂದ, ...ರೋಜಿನಿ, ರವೀಂದ್ರನಾಥ, ಶ್ರೀ ಅರವಿಂದ, ಗಾಂಧೀಜಿ, ರಾಧಾಕೃಷ್ಣನ್, ನೆಹರೂ, ರಾಜಾಜಿ ಮುಂತಾದ ಅನೇಕ ಮಂದಿ ಸಾಹಿತ್ಯಕಾರರು ವಿಚಾರಕ, ರಾಜಕಾರಣಿಗಳು ಮಾತೃಭಾಷೆಯಂತೆಯೇ ಆಂಗ್ಲ ಭಾಷೆಯನ್ನು ಸ್ವೀಕರಿಸಿದವರು. ಅವರು ಈ ಭಾಷೆಯ ಪರದೇಶಿತ್ವವನ್ನೇ ತೊರೆಯಿಸಿರುವರು. ಆದರೆ ಆಂಗ್ಲಭಾಷೆಯ ಕಡೆಗೆ ಅತಿರಿಕ್ತ ಭಕ್ತಿ ಹಾಗೂ ಆಂಗ್ಲ ಭಾಷೆಯ ಅನಾದರಗಳೆರಡೂ ತ್ಯಾಜ್ಯವೇ ಆಗಿದೆ.

ಸಂಸ್ಕೃತದ ಮಹತ್ವ

ಈ ಇಹಸುಖವಾದೀ ಅರ್ಥ ಪ್ರಾ...ಯಣ, ಯಂತ್ರಕೇಂದ್ರೀ, ಗತಿಪ್ರಿಯ ಯುಗದಲ್ಲಿ ಸಂಸ್ಕೃತಕ್ಕೆ ಒಳ್ಳೆಯ ಮಾತುಗಳೇನೋ ದೊರೆಯುತ್ತವೆ. ಆದರೆ ನಿಜವಾದ ಆದರ ಸಿಗುವುದಿಲ್ಲ. ನಮ್ಮ ಶಿಕ್ಷಣದಲ್ಲಿಯೂ ಈ ಭಾಷೆಯ ಸ್ಥಾನ ಸ್ಥಿರವಾಗಿಲ್ಲ ಒಂದೆರಡು ಇಂಗ್ಲಿಷು ಶಬ್ದಗಳನ್ನು ಥಟದಡನೆ ಉಚ್ಚರಿಸಲು ಬಂದೊಡನೆ ನಮ್ಮ ಅಭಿಮಾನ ಹೆಚ್ಚಿಬಿಡುತ್ತದೆ ಮಾತ್ರವಲ್ಲ ಸಂಸ್ಕೃತದಲ್ಲಿ ಕಲಿಯಲು ಕೂಡಾ ಏನಿದೆ? ಪ್ರದೇಶ ಭಾಷೆ, ರಾಷ್ಟ್ರ ಭಾಷೆ, ಇಂಗ್ಲಿಷು ... ವುಗಳನ್ನು ಕಲಿಯಿರಿ. ಕಲಿಯಬೇಕಾದ ಇನ್ನಿತರ ವಿಷಯಗಳೂ ಅನಂತವಾಗಿವೆ. ಅಂದ ಬಳಿಕ ಈ ಭಾಷೆಯನ್ನು ಕಲಿಯುವುದೇ ಬೇಡ ಎಂದೆನ್ನುವಷ್ಟು ಬೇಸರ ಬರುತ್ತದೆ. ಇದು ದರಿಂದಲೇ ನಾವು ನಮ್ಮ ಈ ಅಜ್ಜಿಯನ್ನು ಬದಿಗೆ ಸರಿಸಿ ಬಿಟ್ಟಿದ್ದೇವೆ. ಒಂದೆರಡು ಭಾಷೆಗಳು ಮಾತ್ರವಲ್ಲ ಎಲ್ಲಾ ಭಾಷೆಗಳೂ ಈ ಅಜ್ಜಿಯನ್ನು ದೂರ ಸರಿಸಿ ಮೂಲೆ ಸೇರಿಸಿವೆ. ಸಂಸ್ಕೃತವ...

(೯ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

R. I. A. 339/62.

O P. No 41/1961.

ಕಾಮಿಲ್ ಸಿರಿಲ್ ಲೂವಿಸ್— ಅರ್ಜಿದಾರ.
ಈ ಮೂಲಕ ಎಲ್ಲಾ ಜನರಿಗೆ ತಿಳಿಸುವುದೇನೆಂದರೆ:—

ತಾರೀಕು 27—12—60 ರಲ್ಲು ಕ್ಯೂವೆಟ್ (ಅರೇಬಿಯಾ) ನಲ್ಲಿ ಮೃತಪಟ್ಟ ಫೆಡರಿಕ್ ಫಿಲಿಪ್ ಜೋನ್ ಲೂವಿಸರ ಉತ್ತರಾಧಿಕಾರಿ ಅವರ ತಂದೆ ಮೇಲೆ ಹೇಳಿದ ಅರ್ಜಿದಾರರು ತಾ 3—10—1961 ರಲ್ಲು ಮೇಲಿನ ಕೋರ್ಟಿನಿಂದ ಪಡಕೊಂಡ ಸಕ್ಸೆಶನ್ ಸರ್ಟಿಫಿಕೇಟನ್ನು ಸದ್ರಿ ಮೃತಪಟ್ಟವರಿಗೆ ಕ್ಯೂವೆಟ್ ಸರಕಾರದ ಪರವಾಗಿ ಬೊಂಬಾಯಲ್ಲಿರುವ ಪ್ರೊಟೆಕ್ಟರ್ ಅಫ್ ಎಮಿಗ್ರೆಂಟ್ಸ್ ರಿಂದ ಮತ್ತು ದಿ. ಬ್ರಿಟಿಷ್ ಬ್ಯಾಂಕ್ ಅಫ್ ದಿ ಮಿಡ್ಲ್ ಈಸ್ಟ್, ಕ್ಯೂವೆಟ್‌ನಿಂದ ಬರತಕ್ಕ ಐವೇಜುಗಳನ್ನು ವಸೂಲು ಮಾಡುವರೆ ಎಕ್ಸ್‌ಟೆಂಡ್ (extend, ಮಾಡಬೇಕಾಗಿ ಪ್ರಾರ್ಥಿಸಿ ಮಾಡಿದ ಮೇಲೆ ಕಾಣಿಸಿದ R. I, A. 339/62 ಅರ್ಜಿಯನ್ನು ತಾ 6-4-62ಕ್ಕೆ ತನ್ಖಿಗೆ ಇಟ್ಟಿರುತ್ತಾರೆ. ಸದ್ರಿ ಎಕ್ಸ್‌ಟೆನ್ಸನ್ ಸರ್ಟಿಫಿಕೇಟನ್ನು ಅರ್ಜಿದಾರರಿಗೆ ಕೊಡುವರೆ ಆಕ್ಷೇಪವಿರುವವರು ಆ ದಿವಸ ಬೆಳಿಗ್ಗೆ 10½ ಗಂಟೆಗೆ ಮೇಲಿನ ಕೋರ್ಟಿನಲ್ಲಿ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು.

P. R. Shenoy
Advocate for Petitioner.
ಉಡುಪಿ 24—3—62.

ವಿಜ್ಞಾನದ ನವ್ಯ ಸೃಷ್ಟಿ

ಪ್ರಳಯಂಕರ ಯಮ — ಮಾರಕಾಸ್ತ್ರ

ಅಮೇರಿಕಾಧ್ಯಕ್ಷ ಜಾನ್ ಕೆನೆಡಿ



ರಶ್ಯಾದ ಪ್ರಧಾನಿ
ನಿಕಿಟಾ ಕ್ರುಶ್ಚೇವ್

ರಶ್ಯ ಮತ್ತು ಅಮೇರಿಕೆಗಳಲ್ಲಿ ಒಂದು ವಿಚಿತ್ರ ರೀತಿಯ ಬಾಂಬು ನಿರ್ಮಾಣವಾಗಿವೆಯೆಂದು ಕೆಲವು ವಾರಗಳ ಹಿಂದೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಈ ಆಶ್ಚರ್ಯಜನಕ ಬಾಂಬಿನ ವಿಸ್ಫೋಟದಿಂದ ಲಕ್ಷಾಂತರ ಜನರು ಖಂಡಿತಕ್ಕೂ ಸಾವನ್ನಪ್ಪುವರು. ಆದರೆ, ಪ್ರಾಣ ಹಾನಿಯನ್ನುಳಿದರೆ, ಮತ್ಯಾವುದೇ ರೀತಿಯ ನಷ್ಟವು ಸಂಭವಿಸುವುದಿಲ್ಲ. ಎಲ್ಲಿಯೂ ಬೆಂಕಿ ಹರಡುವುದಿಲ್ಲ; ಯಾವುದೇ ಮನೆ ಉರುಳುವುದಿಲ್ಲ, ಮತ್ತಾವ ವಸ್ತುವಿಗೂ ಹಾನಿ ತಟ್ಟುವುದಿಲ್ಲ. ಒಂದು ನಗರದಲ್ಲಿ ಈ ಬಾಂಬನ್ನು ಸಿಡಿದರೆ, ಅಲ್ಲಿರುವ ಜನರಿಗೆ ಅವರು ಮಾರ್ಗಗಳಲ್ಲಿ ನಡೆಯುತ್ತಿರಲಿ, ಮನೆಗಳಲ್ಲಿ ಉಳಿದುಕೊಂಡಿರಲಿ, ಆಫೀಸು-ಕಾರಖಾನೆಗಳಲ್ಲಿ ಕಾರ್ಯಮಗ್ನರಾಗಿರಲಿ, ಒಮ್ಮಿಂದೊಮ್ಮೆಗೇನೇ ತಮ್ಮ ಶರೀರವು ಉರಿಯಿಂದ ಕಂಗೆಡುತ್ತಿರುವಂತೆ ಭಾಸವಾಗುವುದು. ಬಹು ಸಂಖ್ಯೆಯ ಜನರು ತತ್‌ಕ್ಷಣವೇ ಸಾವನ್ನಪ್ಪುವರು; ಇನ್ನು ಕೆಲವರು ಒಂದೆರಡು ತಾಸುಗಳಲ್ಲಿ ಮೃತ್ಯುಮುಖರಾಗುವರು; ಮತ್ತೂ ಜೀವ ಹಿಡಿದಿರುವವರು ಏಳು ದಿನಗಳೊಳಗೆ ಯಮಸದನ ಸೇರುವರು. ಇಂತಹ ಮಾರಕಾಸ್ತ್ರದ ನಿರ್ಮಾಣದಿಂದ, ಶತ್ರು ರಾಜ್ಯದ ಜನತೆಯನ್ನು ನಿರ್ಮೂಲ ಮಾಡಿದರೂ ರಾಜ್ಯದ ಸೊತ್ತುಗಳು ಹಾಳಾಗದೆ ತಮ್ಮ ಕೈ ಸೇರುವಂತೆ ಮಾಡುವುದು ಸಾಧ್ಯವಾಗಿದೆ.

ಈ ಶಕ್ತಿಶಾಲಿನಿ ಬಾಂಬನ್ನು ನ್ಯೂಟ್ರೋನ್ ಬಾಂಬೆನ್ನುತ್ತಾರೆ. ಇದರಿಂದ ಹೊರಡುವ ನ್ಯೂಟ್ರೋನ್ ಕಿರಣಗಳು ಒಂದೆರಡು ಮೈಲು ಅಥವಾ ಇನ್ನೂ ಹೆಚ್ಚು ದೂರಕ್ಕೆ ಹರಡಿ, ಆ ಪರಿಧಿಯೊಳಗಿರುವ ಎಲ್ಲ ಪ್ರಾಣಿ ಮತ್ತು ಮನುಷ್ಯರ ಶರೀರವನ್ನು ಪ್ರವೇಶಿಸುವುವು; ಅವುಗಳ ಜೀವಕೋಶಗಳನ್ನು ನಾಶಮಾಡುವುವು; ಶರೀರದಲ್ಲಿ ನಡೆಯುವ ರಾಸಾಯನಿಕ ಪ್ರಕ್ರಿಯೆಗಳನ್ನು ಅಸ್ತವ್ಯಸ್ತಗೊಳಿಸುವುವು; ಇದರಿಂದಾಗಿಯೇ ಪ್ರಾಣಹಾನಿಯು ಸಂಭವಿಸುವುದು. ಮೃತ್ಯುಕಿರಣ ಮತ್ತು ಮೃತ್ಯುಬಲವನ್ನೇ ನ್ಯೂಟ್ರೋನ್ ಕಿರಣ ಮತ್ತು ನ್ಯೂಟ್ರಾನ್ ಬಾಂಬೆಂದು ಕರೆಯುತ್ತಾರೆಂದು ವಿಜ್ಞಾನಿಗಳು ಹೇಳುತ್ತಾರೆ.

ನ್ಯೂಟ್ರಾನ್ ಕಿರಣದಂತೆಯೇ! ಆಪ್ಟಿಕಲ್ ಕಿಲ್ಲರ್ ಎಂಬುದೊಂದು ಅಸ್ತ್ರವಿದೆ. ಇದು ತನ್ನ ಭಯಂಕರ ಉಷ್ಣತೆಯಿಂದ ಘನತಮ ಧಾತುಗಳನ್ನಾದರೂ ಏಕಕ್ಷಣದಲ್ಲಿ ಕರಗಿಸಿ ಶತ್ರುಗಳ ಟ್ಯಾಂಕುಗಳನ್ನೂ ನಿರುಪಯುಕ್ತಗೊಳಿಸುತ್ತದೆ. ಇದರ ಬಗ್ಗೆ ಇನ್ನೂ ಸಂಶೋಧನೆಗಳು ನಡೆದರೆ, ಆಗ, ಇದು ಪ್ರಕ್ಷೇಪಾಸ್ತ್ರಗಳನ್ನು ಕೂಡ ಮಾರ್ಗ ಮಧ್ಯದಲ್ಲಿಯೇ ಕೆಡಿಸುವಲ್ಲಿ ಸಶಕ್ತವಾಗಬಹುದು.

ಈ ಕಿರಣಗಳನ್ನು ಹುಟ್ಟಿಸುವ ಸಾಧನವನ್ನು "ಆಪ್ಟಿಕಲ್ ಕಿಲ್ಲರ್", ಅಥವಾ ಪ್ರಕಾಶೀಯ ವಿಧ್ವಂಸಕವೆನ್ನುತ್ತಾರೆ. ಫೋಟೊ ತೆಗೆಯುವ ಫ್ಲೇಶನ್ನು ನೀವು ಕಂಡಿರಬಹುದು ಇದರಂತಿರುವ, ಆದರೆ, ಇದಕ್ಕಿಂತ ಶಕ್ತಿಶಾಲಿಯಾದ ಫ್ಲೇಶನ್ ಪ್ರಕಾಶವು ಛಿದ್ರಗಳನ್ನು ಹಾದು ಒಂದು ದೊಡ್ಡ ಲೋಹದ ಪಾತ್ರೆಯನ್ನು ದಾಟುತ್ತದೆ ಈ ಪಾತ್ರೆಯು ಭೂತಗನ್ನಡಿಯ ಆಕಾರದಂತಿರುತ್ತದೆ. ಇದರೊಳಗೆ ಹಲವಾರು ತರದ ಯಂತ್ರಗಳಿರುತ್ತವೆ. ಈ ಯಂತ್ರಗಳು ಫ್ಲೇಶಿನ ಬೆಳಕನ್ನು ಅತ್ಯಧಿಕ ಬಿಸಿಯಾದ ಕೆಂಪು ಪ್ರಕಾಶವನ್ನಾಗಿ ಪರಿವರ್ತಿಸುತ್ತವೆ. ಅದರೊಂದಿಗೆ ನಿಶ್ಚಿತ ದೂರದಲ್ಲಿ ನಿಯಂತ್ರಿತಗೊಳಿಸುತ್ತವೆ. ಆ ಲಕ್ಷ್ಯ ಬಿಂದುವಿನಲ್ಲಿರುವ ವಸ್ತು ಯಾವುದೇ ಇರಲಿ, ಅದು ಉಷ್ಣದಿಂದ ಕರಗಿ ನಷ್ಟವಾಗುವುದು; ಅದರಲ್ಲಿರಬಹುದಾದ ಚಾಲಕನು ಕ್ಷಣಮಾತ್ರದಲ್ಲಿ ಸುಟ್ಟು ಭಸ್ಮವಾಗುವನು.

ವ್ಯವಹಾರದಲ್ಲಿ ಈ ಯಂತ್ರವನ್ನು "ರಾಡಾರ್"ನೊಡನೆ ಜೋಡಿಸಿರಬಹುದು; ಇದರ ಸಂಪೂರ್ಣ ಕಾರ್ಯವು ಸ್ವಯಂಚಾಲಿತವಿರುತ್ತದೆ. ಪ್ರಕಾಶೀಯ ವಿಧ್ವಂಸಕದ ಲಕ್ಷ್ಯ ೧,೦೦೦ ಗಜ ದೂರದಲ್ಲಿದೆಯೆಂದೂ ಎರಡು ಸಾವಿರ ಗಜ ದೂರದಲ್ಲಿ ನಮ್ಮತ್ತ ಕಡೆಗೊಂದು ಟ್ಯಾಂಕು ಬರುತ್ತಿದೆಯೆಂದೂ ತಿಳಿಯಿರಿ. ನಮ್ಮ ಸೈನಿಕ ತಂತ್ರಜ್ಞನು ಸ್ವಿಚ್ ಆನ್ ಮಾಡುತ್ತಾನೆ. ಆಗಲೇ ರಾಡಾರಿನ ಎಂಟೇನಾವು ನಾಲ್ಕೂ ಕಡೆಗೆ ತಿರುಗಿ, ಟ್ಯಾಂಕಿಗೆ ಅಭಿಮುಖವಾಗಿ ನಿಲ್ಲುವುದು. ಟ್ಯಾಂಕು ನಮ್ಮತ್ತ ಓಡುತ್ತ ಬರುತ್ತಿದೆ; ೧,೫೦೦ ಗಜ, ೧೨೦೦ ಗಜ.. ೧,೧೦೦ ಗಜ....೧,೦೦೦ ಗಜದಲ್ಲಿ ಬರುತ್ತಿದೆ ಎಂದುಕೊಳ್ಳಿ ಆಕ್ಷಣ ವಿಧ್ವಂಸಕದಲ್ಲಿ ಸ್ವಯಂ ಫ್ಲೇಶ್ ಆಗುವುದು; ಅದರ ಉಷ್ಣತೆಯು ಟ್ಯಾಂಕನ್ನು ಕರಗಿಸಿ ಕೊನೆಗೊಳಿಸುವುದು!

ಪ್ರಕಾಶ ಕಿರಣಗಳಿಂದ ಸಂಹಾರ ಮಾಡುವ ಇನ್ನೊಂದು ವಿಧಾನವನ್ನು ಹ್ಯೂಜ್ ಏಯರ್ ಕ್ರಾಫ್ಟ್ ಕಂಪೆನಿ ಮತ್ತು ಬೆಲ್ ಟೆಲಿಫೋನ್ ಕಂಪೆನಿಗಳು ಕಂಡು ಹಿಡಿದಿವೆ. ಇದರ ಹೆಸರು 'ಲೇಜರ್' ಎಂದು; ಎಂದರೆ, "ಲೈಟ್ ಆಂಪ್ಲಿಫಿಕೇಶನ್ ಬೈ ಸ್ಟಿಮ್ಯುಲೆಡ್ ಅಮಿಶನ್".

ಧ್ವನಿ ವರ್ಧಕವು ಧ್ವನಿಯನ್ನು ಬಹಳಷ್ಟು ಶಕ್ತಿಶಾಲಿಯನ್ನಾಗಿ ಮಾಡುವಂತೆ 'ಲೇಜರ್' ಪದ್ಧತಿಯು ಸಾಧಾರಣ ಪ್ರಕಾಶವನ್ನು ಲಕ್ಷಾಂತರಪಟ್ಟು ಪರಿವರ್ಧಿತಗೊಳಿಸಿ, ಅದಕ್ಕೆ ಅತ್ಯುಷ್ಣ ಕಿರಣ ಪುಂಜದ ರೂಪಕೊಡುವುದು. ಇದರಿಂದ ಹತ್ತು ಮೈಲು ದೂರದಲ್ಲಿರುವ ಉಕ್ಕನ್ನಾದರೂ ಕರಗಿಸಬಹುದು ಈ ಪದ್ಧತಿಯು ಅಧಿಕ ವಿಕಾಸಗೊಂಡಾಗ, ಪ್ರಕಾಶದಲ್ಲಿ ಓಡಾಡುವ ಶತ್ರುವಿನ ಪ್ರಕ್ಷೇಪಾಸ್ತ್ರ ಮತ್ತು ಸ್ಪುಟ್ನಿಕ್‌ಗಳನ್ನು ನೀರು ಮಾಡುವುದು ಸಾಧ್ಯವಾಗಬಹುದು. ಇಂತಹುದೇ ಇನ್ನೊಂದು ವಿಧಾನದಿಂದ ೧,೦೦೦ ಮೈಲು ದೂರದಿಂದ ಪ್ರಕ್ಷೇಪಾಸ್ತ್ರ ಮತ್ತು ಸ್ಪುಟ್ನಿಕ್‌ಗಳನ್ನು ನಿರುಪಯೋಗಗೊಳಿಸಬಹುದು.

ದೂರಗಾಮಿ ಪ್ರಕ್ಷೇಪಾಸ್ತ್ರ ಮತ್ತು ಸ್ಪುಟ್ನಿಕ್‌ಗಳನ್ನು ವ್ಯರ್ಥಗೊಳಿಸಲು ಇನ್ನೊಂದು ಸಾಧನವನ್ನು ಕಂಡುಹಿಡಿಯಲಾಗುತ್ತಿದೆ. ಇದನ್ನು ಅಯಿನ್ ಬೀಮ್

(ಆನೇ ಪುಟ ನೋಡಿರಿ)

ವ್ಯಾಪಾರೋದ್ಯಮಿಗಳಿಗೆ ಚೆನ್ನಾಗಿ ತಿಳಿದಿದೆ

ವ್ಯವಹಾರ ದಕ್ಷತೆ, ಸಹಕಾರ ಮತ್ತು ಸ್ನೇಹ ಸೌಹಾರ್ದಗಳಿಗಾಗಿ
ಒಂದು ಬ್ಯಾಂಕನ್ನು ವ್ಯಾಪಾರೋದ್ಯಮಿಗಳು ಆಯ್ಕೆ ಮಾಡುತ್ತಾರೆ.

ಕೆನರಾ ಬ್ಯಾಂಕ್ ಅಂತಹುದೊಂದು ಬ್ಯಾಂಕ್

ನಿಮ್ಮ ಖಾತೆ ಚಿಕ್ಕದಿರಲಿ ಅಥವಾ ದೊಡ್ಡದಿರಲಿ
ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳು ಸ್ವದೇಶ
ಅಥವಾ ವಿದೇಶಗಳಿಗೆ ಸಂಬಂಧಪಟ್ಟದ್ದಾಗಿರಲಿ
ನಮ್ಮ ವಿಶಾಲ ಅನುಭವದ ಪ್ರಯೋಜನವನ್ನು
ಪಡೆಯಲು ನಿಮ್ಮನ್ನು ಆದರದಿಂದ
ಸದಾ ಸ್ವಾಗತಿಸುತ್ತೇವೆ.



ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ ಸಂಪೂರ್ಣ ಭದ್ರತೆ

ನವಯುಗ

ವರುಷ	ಉಡುಪಿ	ವಾರ
೪೧	೨೯-೩-'೬೨	೨೯

ರೆಡ್ಡಿಯವರ ಸೂಕ್ತ ಸಲಹೆ

ಸಾರ್ವತ್ರಿಕ ಚುನಾವಣೆಗಳಲ್ಲಿ ಸೋತು ಹೋದ ಕಾಂಗ್ರೆಸ್ ಹುರಿಯಾಳುಗಳನ್ನು ರಾಜ್ಯ ಸಭೆ ಅಥವಾ ವಿಧಾನ ಪರಿಷತ್ತುಗಳಿಗೆ ಪರೋಕ್ಷವಾಗಿ ಪ್ರವೇಶಿಸುವುದಕ್ಕೆ ಅವಕಾಶ ನೀಡುವುದಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನೀಲಂ ಸಂಜೀವ ರೆಡ್ಡಿಯವರು ಹೇಳಿದ್ದಾರೆ. ಇದುವರೆಗೆ ನಡೆದು ಬಂದಿರುವ ಸಂಪ್ರದಾಯದಂತೆ ವಿಧಾನ ಪರಿಷತ್ತು ಹಾಗೂ ರಾಜ್ಯ ಸಭೆಗಳಲ್ಲಿ ನಡೆಯುವ ಅಪ್ರತ್ಯಕ್ಷ ಚುನಾವಣೆಗಳಲ್ಲಿ ಸಾರ್ವತ್ರಿಕ ಚುನಾವಣೆಗಳಲ್ಲಿ ಪರಾಭವಗೊಂಡ ಪ್ರತಿಷ್ಠಾವಂತರನ್ನು ನಿಲ್ಲಿಸಿ, ಅವರನ್ನು ಎಳೆದು ತರುವ ಕ್ರಮವು ಇನ್ನು ಮುಂದೆ ನಿಲ್ಲುವುದು ಎಂದು ಈ ಮಾತಿನ ಅರ್ಥವಾಗುವುದು. ಆದರೆ, ಸ್ಥಳೀಯ ಸಂಸ್ಥೆಗಳ ಇಲ್ಲವೇ ಪದವೀಧರರೇ ಮೊದಲಾದವರ ಮತದಾರ ಕ್ಷೇತ್ರಗಳಿಂದ ಹಾಗೂ ಉಪಚುನಾವಣೆಗಳಲ್ಲಿ ಚುನಾವಣೆಗೆ ನಿಲ್ಲಲು ಯಾವ ಅಭ್ಯಂತರವೂ ಇಲ್ಲವೆಂದವರು ಸ್ಪಷ್ಟೀಕರಿಸಿದ್ದಾರೆ.

ಶ್ರೀ ರೆಡ್ಡಿಯವರ ವಿಚಾರಧಾರೆಯು ನೇರ ಮಾರ್ಗದಲ್ಲಿ ಹರಿದಿದ್ದು, ಅದು ನಿಜಕ್ಕೂ ಸ್ವಾಗತಾರ್ಹವಿರುವುದು. ಸಾರ್ವತ್ರಿಕ ಚುನಾವಣೆಗಳಲ್ಲಿ ಜನತೆಯಿಂದ ತಿರಸ್ಕರಿಸಲ್ಪಟ್ಟವನು ಅಪ್ರತ್ಯಕ್ಷವಾಗಿ ಹಿಂಬಾಗಿಲಿನಿಂದ ಒಳನುಗ್ಗುವುದು ಜನಾಭಿಪ್ರಾಯಕ್ಕೆ ಪ್ರತಿಕೂಲವಿರುವುದೆಂದು ಬೇರೆ ಹೇಳಬೇಕಾಗಿಲ್ಲ. ಅಂತೆಯೇ ಮತ್ತಾವುದೇ ರೀತಿಯ ಮತದಾರ ಕ್ಷೇತ್ರಗಳು ಪರಿಮಾಣದಲ್ಲಿ ಸೀಮಿತವಿರುವುದಾದರೂ ಅಲ್ಲಿ ನಡೆಯುವ ಚುನಾವಣೆಗಳು ಸಾರ್ವತ್ರಿಕ ಚುನಾವಣೆಗಳಷ್ಟೇ ಮಹತ್ವಪೂರ್ಣವಾಗಿವೆ. ಆದುದರಿಂದ, ಸೋತ ಹುರಿಯಾಳುಗಳು ಇಂತಹ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳಾಗಿ ಮುಂದೆ ಬಂದರೆ, ಅದನ್ನು ಆಕ್ಷೇಪಿಸುವುದೂ ತರವಲ್ಲ. ಹಿಂಬಾಗಿಲಿನಿಂದ ಒಳನುಗ್ಗಬಯಸುವ ಹುರಿಯಾಳುಗಳ ಸಂಖ್ಯೆಗೇನೂ ಕಡಿಮೆಯಿಲ್ಲ. ಹಿಂದಿನ ವರ್ಷಗಳಲ್ಲಿ ಇಂತಹರನ್ನೇ ಹಿತ್ತಿಲ ಬಾಗಿಲಿಂದ ಒಳಗೆ ಕರೆದುಕೊಂಡು ಹೋಗುವ ಪರಿಪಾಠವನ್ನು ಕಾಂಗ್ರೆಸ್ಸು ತಾನೇ ಹಾಕಿ ಕೊಟ್ಟಿದೆ. ಆದರೆ, ಇಂತಹ ತಂತ್ರಗಳ ಪರಿಣಾಮವಾಗಿಯೇ ಅದು ಅಲ್ಲಲ್ಲಿ ಅಪಕೀರ್ತಿಯನ್ನೂ ಗಳಿಸಿದೆ; ತನ್ನ ಪ್ರಭಾವವನ್ನೂ ಕಳೆದುಕೊಂಡಿದೆ. ಹಿಂದಿನ ವರ್ಷಗಳ ಅನುಭವವನ್ನು ವಿಮರ್ಶಿಸಿ, ಮುಂದಿನ ದಾರಿಯನ್ನು ನಾವು ನಿರ್ಧರಿಸುವುದಾದರೆ, ಶ್ರೀ ರೆಡ್ಡಿಯವರ ಹೇಳಿಕೆಯನ್ನು ರಾಜ್ಯ ಹಾಗೂ ಕೇಂದ್ರ ಮಟ್ಟಗಳಲ್ಲಿ ಕಾರ್ಯಗತ ಗೊಳಿಸಬೇಕು. ಪ್ರಜಾಪ್ರಭುತ್ವದಲ್ಲಿ ಜನತೆಯ ಅಭಿಮತಕ್ಕೆ ಮಾನ್ಯತೆ ದೊರೆಯುವುದು ಅಪೇಕ್ಷಣೀಯವೆಂಬುದರಿಂದ ಒಂದು ಬಾರಿ ಪ್ರತ್ಯಕ್ಷವಾಗಿ ಜನತೆಯಿಂದ ಹೊರದೂಡಲ್ಪಟ್ಟ ವ್ಯಕ್ತಿಯನ್ನು ಮತ್ತೆ ಅದರ ಇಚ್ಛೆಗೆ ವಿರೋಧವಾಗಿ ಎತ್ತಿ ಕಟ್ಟುವುದು ಅನುಚಿತ. ಈ ಬಾರಿ ಇದುವರೆಗೆ ರಾಜ್ಯ ಸಭೆ ಮತ್ತು ವಿಧಾನ ಪರಿಷತ್ತುಗಳಿಗೆ ಶಿಫಾರಸು ಮಾಡಲಾದವರು ಚುನಾವಣೆಗಳಲ್ಲಿ ಸೋತವರಲ್ಲವೆಂಬುದು ತುಸು ಸಮಾಧಾನಕರ. ಹಾಗೆಯೇ ಮುಂದೆಯೂ ಇದೇ ಆದರ್ಶದಾರಿಯನ್ನು ಮೆಟ್ಟುವುದು ಅತ್ಯವಶ್ಯವಿರುವುದು.

ಆದರೆ ನೀಲಂರವರ ಈ ಹೇಳಿಕೆಯು ಆದರ್ಶ ಪ್ರಾಯವೆಂಬತಿದ್ದರೂ ಕೆಲವು ಮಂದಿ ಕಾಂಗ್ರೆಸಿಗರಿಗಿದು ಪಥ್ಯವೆನಿಸದೆಂಬುದೂ ಸತ್ಯ. ಹತ್ತು ವರ್ಷ ಪ್ರಜಾಪ್ರತಿನಿಧಿಯಾದವರು ನಿವೃತ್ತರಾಗಿ ಹೊಸಬರಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬ ಅವರ ವಿಚಾರವು ಸ್ವಾಗತಾರ್ಹವಾಗಿದ್ದರೂ ಅದಕ್ಕೆ ಬಲವಾದ ವಿರೋಧ ಪಕ್ಷದೊಳಗೆ ಹುಟ್ಟಿಕೊಂಡಿತ್ತೆಂಬುದನ್ನೂ ಅದರಿಂದಾಗಿ ಶ್ರೀ ರೆಡ್ಡಿಯವರು ಕಾಂಗ್ರೆಸಿಗರ ವಿಶ್ವಾಸವನ್ನು ಪಡೆಯಬೇಕಾದಷ್ಟು ಪಡೆಯಲಿಲ್ಲವೆಂದೂ ಹೇಳಬಹುದು. ಈ ಕಾರಣದಿಂದಾಗಿಯೇ ಅವರು ರಾಜ್ಯದ ರಾಜಕೀಯಕ್ಕೆ ತನ್ನ ಅಧ್ಯಕ್ಷತನದ ಅವಧಿಮುಗಿಯುವುದಕ್ಕೆ ಮೊದಲೇ ಮರಳಲು ಉತ್ಸುಕರಾದರೆಂದೂ ಭಾವಿಸಬಹುದು. ಹೀಗಿದ್ದರೂ ರೆಡ್ಡಿಯವರ ಹೇಳಿಕೆ—ಅಭಿಪ್ರಾಯಗಳು ಜನತೆಯ ಮನದಾಶಯಗಳು. ಯುವಕರು ಹೆಚ್ಚು ಹೆಚ್ಚಾಗಿ ಕಾಂಗ್ರೆಸ್ ಸೇರಬೇಕೆಂಬ ಆಗ್ರಹ ಬರುತ್ತಿದೆಯಾದರೂ ನಮ್ಮ ಹಿರಿಯ ರಾಜಕೀಯ ಧುರೀಣರು ತಮ್ಮ ಸ್ಥಾನವನ್ನು ಅವರಿಗೆ ಬಿಟ್ಟುಕೊಡಲು ಸಿದ್ಧರಿಲ್ಲವೆಂಬುದು ಲಜ್ಜಾಸ್ಪದವಿರುವುದು. ಅಂತೆಯೇ ಚುನಾವಣೆಯಲ್ಲಿ ತ್ಯಾಜ್ಯನಾದವನನ್ನು ಹಿಂಬಾಗಿಲಿನಿಂದ ಕರೆತರುವುದು ಕೂಡ. ಕೇಂದ್ರ ಕಾಂಗ್ರೆಸ್ ಸಮಿತಿಯ ಕೆಲ ಸದಸ್ಯರಲ್ಲಿ ಸೋತ ಮಂತ್ರಿಗಳನ್ನು ಗವರ್ನರರನ್ನಾಗಿ ಮಾಡಬಾರದು, ರಾಜ್ಯ—ಕೇಂದ್ರ ಮಂತ್ರಿಮಂಡಳದ ಸದಸ್ಯರ ಸಂಖ್ಯೆ ಮಿತವಾಗಿರಬೇಕು ಎಂಬ ವಿಚಾರವು ಸುಳಿದಾಡುತ್ತಿದೆಯೆಂದು ಕೇಳುತ್ತೇವೆ. ಪಕ್ಷದ ಜನಪ್ರಿಯತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಈ ಯೆಲ್ಲ ವಿಚಾರಗಳನ್ನೂ ಮಥಿಸಿ ಕಾರ್ಯರೂಪಕ್ಕೆ ತರುವುದು ಅಗತ್ಯವೆಂದು ಸೂಚಿಸಬಯಸುತ್ತೇವೆ. ಇದಕ್ಕೆ ತಪ್ಪಿದರೆ, ತನಗೆ ಬೇಡಾದವನೊಬ್ಬನನ್ನು ತನ್ನ ಮೇಲೆ ಹೇರಿ ಕೂತುಕೊಳ್ಳಿಸಿದಾಗ ಆಗುವ ವ್ಯಥೆಯೇ ಜನತೆಯಲ್ಲಿ ಹುಟ್ಟಿಕೊಳ್ಳಬಹುದು ಮತ್ತಿದು ಮುಂದಿನ ಚುನಾವಣೆಗಳಲ್ಲಿ ಪ್ರತಿಬಿಂಬಿತಗೊಳ್ಳದಿರಲಾರದು.

ಅಪ್ರಾಸಂಗಿಕ ಮಾತು

ಮಹಾರಾಷ್ಟ್ರದ ರಾಜ್ಯಪಾಲ ಶ್ರೀ ಪ್ರಕಾಶಕರು ಒಳ್ಳೆಯ ಮನುಷ್ಯರು; ರಾಜ್ಯಪಾಲರ ಕರ್ತವ್ಯಗಳಿಗೆ ಚ್ಯುತಿಬಾರದೆ ಸಮರ್ಥ ರೀತಿಯಲ್ಲಿ ಅವನ್ನು ನಿರ್ವಹಿಸುವುದರಲ್ಲಿ ಚಾಣಾಕ್ಷರು. ಆದರೆ, ಮಹಾರಾಷ್ಟ್ರ – ಕರ್ನಾಟಕಗಳ ಸೀಮಾ ವಿವಾದವಿರುವ ಪ್ರದೇಶಗಳ ಚುನಾವಣಾ ಫಲಿತಾಂಶವು ಮಹಾರಾಷ್ಟ್ರವು ತಳೆದ ಸೀಮಾನೀತಿಯನ್ನು ಸಮರ್ಥಿಸುತ್ತದೆಯೆಂದು ತನ್ನ ಭಾಷಣದಲ್ಲಿ ಅಂದ ಮಾತು ಮಾತ್ರ ತುಟಿ ಮೀರಿ

ಜಗತ್ಪರ್ಯಟನ

ಕೇಂದ್ರ ಸಚಿವ ಮಂಡಳಿ

ಶ್ರೀಮತಿ ಕೆನ್ನೆಡಿಯವರನ್ನು ಕಳಿಸಿಕೊಟ್ಟು ಪ್ರಧಾನಿ ನೆಹರು ತನ್ನ ಕ್ಯಾಬಿನೆಟ್ಟಿನ ಬಗ್ಗೆ ಚಿಂತಿಸತೊಡಗಿದ್ದಾರೆ. ಯಾರನ್ನು ಇಟ್ಟುಕೊಳ್ಳಬೇಕು ಯಾರನ್ನು ಸೇರಿಸಿಕೊಳ್ಳಬೇಕು ಎಂಬುದಕ್ಕಿಂತಲೂ ಯಾರನ್ನು ಕೈಬಿಡಬೇಕು ಎಂಬುದೇ ಅವರು ಮೊದಲು ನಿರ್ಧರಿಸಬೇಕಾದ ಪ್ರಶ್ನೆಯಾಗಿದೆ. ರಾಜ್ಯಗಳಲ್ಲಿ ವಿಶಾಲ ತಳಹದಿಯ ನೆಪದಲ್ಲಿ ವಿಸ್ತೃತ ಸಚಿವ ಸಂಪುಟಗಳು ರಚಿತವಾಗಿರುವಾಗ, ಕೇಂದ್ರದ ಮಂಡಳಿಯಲ್ಲಿ ಯಾರಿರುವರು ಎಂಬುದಕ್ಕಿಂತ, ಅದರ ಆಕಾರವೇನು ಎಂದು ಜನತೆ ಎದುರು ನೋಡುತ್ತಿದೆ.

ನಾಡಾರರ ಚಿಂತೆ

ಮದ್ರಾಸದ ಅನಭಿಷಿಕ್ತ ದೊರೆ ಕಾಮರಾಜರು ಕಾಂಗ್ರೆಸ್‌ನ ಸೂತ್ರಚಾಲಕರು. ಅವರು ಇದುವರೆಗೆ ಯಾವ ಬಗ್ಗೆಯೂ ಚಿಂತಿಸಬೇಕಾಗಿರಲಿಲ್ಲ. ಆದರೆ, ಈ ಬಾರಿಯ ಚುನಾವಣೆಗಳಲ್ಲಿ ಪ್ರತ್ಯೇಕತೆಯನ್ನು ಬಯಸುವ ಡಿ. ಎಂ. ಕೆ. ಯು ವಿಧಾನಸಭೆಯ ೫೦ ಸ್ಥಾನಗಳನ್ನೂ ಲೋಕ ಸಭೆಯ ೭ ಸ್ಥಾನಗಳನ್ನೂ ಗೆದ್ದಿರುವಾಗ ಅವರು ಸುಮ್ಮನಿರುವುದು ಸಾಧ್ಯವಿಲ್ಲ. ಪ್ರಾರಂಭದಲ್ಲಿ ತಾನೇ ಕಳಗಂಗೆ ಪರೋಕ್ಷ ರೀತಿಯ ಪ್ರೋತ್ಸಾಹ ಕೊಟ್ಟ ಇವರು ಈಗ ಅದನ್ನು ಮುರಿಯುವ ಹವಣಿಕೆ ಮಾಡಲೇ ಬೇಕಾಗಿ ಬಂದಿದೆ.

ದ್ರವಿಡ ಸ್ಥಾನಕ್ಕೆ ಸಮರ್ಥನೆ

ಮಾಜಿ ಗವರ್ನರ ಜನರಲ್ ರಾಜಗೋಪಾಲಾಚಾರಿಯವರು ಪಾಕಿಸ್ತಾನವನ್ನು ಕೊಡಲು ಒಪ್ಪಿದ ಮಹಾತ್ಮರು. ಅವರು ಈಗಲೂ ಇದೇ ರೀತಿಯಲ್ಲಿ ಆಂಧ್ರ, ತಮಿಳುನಾಡು, ಕರ್ನಾಟಕ ಮತ್ತು ಕೇರಳಗಳನ್ನು ಒಂದುಗೂಡಿಸಿ ದ್ರವಿಡಸ್ಥಾನ ಕಟ್ಟುವ ಹವಣಿಕೆಯುಳ್ಳ ಡಿ. ಎಂ. ಕೆ.ಯನ್ನು ಬೆಂಬಲಿಸುವಂತೆ ತೋರುತ್ತದೆ. ಭಾವೈಕ್ಯ ಸಾಧನೆಗಾಗಿ ದೇಶಕ್ಕೆ ದೇಶವೇ ಹೆಣಗಲು ಮುಂದೆ ಬಂದಿರುವಾಗ, ಇಂತಹ ಪ್ರತ್ಯೇಕತಾ ಮನೋಭಾವನೆಗೆ ಬುದ್ಧಿಜೀವಿಗಳೂ ಮರುಳಾಗುವುದು ಆಶ್ಚರ್ಯ. ಆಗರಿ, ರಾಜಾಜಿ ಸುಮ್ಮನಿರುವ ವ್ಯಕ್ತಿಯಲ್ಲ. ಅವರಿಗೆ ಮಾಡಲು, ಮಾತಾಡಲು ಏನಾದರೂ ಒಂದು ಬೇಕೇ ಬೇಕು.

ದುದೆನ್ನಲೇ ಬೇಕು. ಬೆಳಗಾಂವಿಯಲ್ಲಿ ಮಾತ್ರ ಕೆಲವೊಂದು ಮತಗಳಿಂದ ಸಂಯುಕ್ತ ಮಹಾರಾಷ್ಟ್ರದ ಹುರಿಯಾಳು ಆರಿಸಿ ಬಂದಿದ್ದಾರೆ. ಉಳಿದೆಡೆ ಕರ್ನಾಟಕದ ನೀತಿಯನ್ನೇ ಜನತೆ ಸಮರ್ಥಿಸಿದೆ; ಅದೇನಿದ್ದರೂ ಇದನ್ನು ಮಹಾರಾಷ್ಟ್ರ ವಿಧಾನ ಮಂಡಳದ ಮುಂದೆ ಇಡಬೇಕಾದ ಆವಶ್ಯಕತೆಯಿರುವುದಿಲ್ಲ. ಪ್ರತ್ಯೇಕ ವಿದರ್ಭರಾಜ್ಯವನ್ನು ಬೇಡಿದ ಅಣೆಯವರು ಗೆದ್ದರೆಂದ ಮಾತ್ರಕ್ಕೆ ಮಹಾರಾಷ್ಟ್ರವು ವಿದರ್ಭವನ್ನು ಕೊಡಲು ಮುಂದಾಗುವುದಿಲ್ಲ ಅಥವಾ, ಕಾಸರಗೋಡಿನಲ್ಲಿ ಕಳೆದ ಬಾರಿ ನಡೆದ ಮರುಚುನಾವಣೆಯಲ್ಲಿ ಕರ್ನಾಟಕ ಸಮಿತಿಯು ಯಶಗಳಿಸಿದುದರಿಂದ ಆ ಪ್ರದೇಶವು ಇದುವರೆಗೆ ಕರ್ನಾಟಕದಲ್ಲಿ ಸೇರಲೂ ಇಲ್ಲ. ಸೀಮಾವಿವಾದದ ಪ್ರಶ್ನೆಯನ್ನು ಉಭಯಸರಕಾರದ ಪ್ರತಿನಿಧಿಗಳೂ ಪರಿಶೀಲಿಸಿ ವರದಿಯನ್ನು ಸಿದ್ಧಪಡಿಸುತ್ತಲಿರುವ ಈ ಸಂದಿಗ್ಧ ವೇಳೆಯಲ್ಲಿ ಅಪ್ರಾಸಂಗಿಕವಾಗಿ ಅವರು ಆಡಿದ ಮಾತು ಕರ್ನಾಟಕದವರನ್ನು ಕಳವಳಕ್ಕೆ ಗುರಿ ಮಾಡಿದೆ. ಹೊಣೆಗಾರ ಪದವಿಯಲ್ಲಿರುವ ವ್ಯಕ್ತಿಗಳಿಂದ ಇಂತಹ ಮಾತುಗಳನ್ನು ಆಡಿಸುವುದು ಚಾಣಾಕ್ಷ ಮುಖ್ಯಮಂತ್ರಿ ಚವನರಿಗೂ ಶೋಭನೀಯವಲ್ಲ.

ನಾರಾಯಣನ್‌ರ ನಿಧನ

ಅಧ್ಯಾಪಕ ವೃತ್ತಿಯಿಂದ ವಿಶ್ವಸಂಸ್ಥೆ ಸೇರಿದ ಕುಂಭಕೋಣಂನ ಟಿ. ಜಿ. ನಾರಾಯಣನ್ ಅಲ್ಲಿ ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿದವರು. ಕೇವಲ ೫೫ ವರ್ಷ ಪ್ರಾಯದ ಇವರು ಜನೇವಾದಲ್ಲಿ ಸೇರುತ್ತಿರುವ ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ವಿಶ್ವಸಂಸ್ಥೆಯ ಸಹಾಯಕ ಪ್ರತಿನಿಧಿಯಾಗಿ ಭಾಗವಹಿಸುತ್ತಿದ್ದರು. ಆಕಸ್ಮಾತ್ತಾಗಿ ಕಾಣಿಸಿಕೊಂಡ ಹೃದಯ ವಿಕಾರದಿಂದ ಮೃತ್ಯುಮುಖರಾದುದು ಪಿಪಂಚ ನೀಯ ಆದರ್ಶಗುಣನಡತೆ, ಪ್ರತಿಭೆ ನಿಸ್ವಾರ್ಥಗಳಿಗೆ ಹೆಸರಾದ ನಾರಾಯಣನ್‌ರನ್ನು ಕಳೆದುಕೊಂಡ ಭಾರತ ನಿರ್ಭಾಗ್ಯ.

ಕರ್ನಾಟಕದ ರಾಜಕೀಯ

ಕರ್ನಾಟಕದ ಮುಖ್ಯ ಮಂತ್ರಿ ಕಂರಿ ದೆಹಲಿಯಾತ್ರೆ ಮುಗಿಸಿ ಬಂದರು. ಫಲ ಮಾತ್ರ ನಾಸ್ತಿ. ಜತ್ತಿ ಗುಂಪಿನವರನ್ನು ಸಚಿವ ಸಂಪುಟದಲ್ಲಿ ಸೇರಿಸಲೇ ಬಾರದೆಂದೂ, ಒಂದು ವೇಳೆ ಕೂಡಿಸಿದರೂ ಜತ್ತಿ ಮತ್ತು ಮಂಜಪ್ಪನವರನ್ನು ಆ ಮಂತ್ರಿಸಲೇ ಬಾರದೆಂಬ ಹಠ ಆವರ ಗುಂಪಿನವರದು. ಇದನ್ನು ಒಪ್ಪಿಕೊಂಡರೆ, ಪಕ್ಷದ ಇಬ್ಭಾಗ ಪ್ರತ್ಯಕ್ಷವಾಗಿ ಆಡಳಿತ ಕತ್ತಿಯಧಾರೆಯ ಮೇಲೆ ನಡೆಯುವುದು. ಇದಕ್ಕಾಗಿ ಹೊಂದಾಣಿಕೆಯಾಗಬೇಕು. ಜತ್ತಿಯಾದರೂ ಮೂರರಲ್ಲೊಂದು ಪಾಲು ಮಂತ್ರಿ ಪದಕೇಳುತ್ತಾರೆ; ತಾನು ಹೇಳಿದ ಜನರನ್ನೇ ಆರಿಸಬೇಕೆನ್ನುತ್ತಾರೆ. ಈ ಕಲ್ಲಪ್ಪ ಗುಂಡಪ್ಪನವರ ನಡುವೆ ಮಣಸಪ್ಪ ಮಾತ್ರ ಚಟ್ನಿಯಾಗುತ್ತಾನೆ.

ಡಿಗಾಲೆಯವರ ಉದಾರತೆ

ಫ್ರಾನ್ಸಿನ ಅಧ್ಯಕ್ಷ ಡಿಗಾಲೆ ಭಾರತದಲ್ಲಿದ್ದ ಮಾಜಿ ಫ್ರೆಂಚ ವಸಾಹತುಗಳನ್ನು ಭಾರತಕ್ಕೆ ಕಾನೂನು ಬದ್ಧವಾಗಿ ಒಪ್ಪಿಸಿಬಿಡಲು ನಿರ್ಧರಿಸಿದ್ದಾರೆ. ಇದಕ್ಕಾಗಿ ಈ ಸಂಬಂಧದ ವಿವರವನ್ನವರು ಚರ್ಚಿಸಲಿಕ್ಕಾಗಿ ಪಾರ್ಲಿಮೆಂಟಿನಲ್ಲಿ ಇಡಲಿದ್ದಾರೆ. ಅಲ್ಜೀರ್ಸ್ ಸಂಬಂಧದಲ್ಲಿಯೂ ಉದಾರನೀತಿಯನ್ನುತಳೆದ ಡಿಗಾಲೆ ಸೈನಿಕ ಆಡಳಿತೆಯ ಮೂಲಕ ಅಧಿಕಾರ ಪಡೆದರೂ ಜನಪ್ರಿಯರಾಗುವುದನ್ನು ವಿಶ್ವವೇ ಕಾಣುತ್ತಿದೆ.

ವಿಮೋಚನಾ ಕಾರ್ಯಕ್ಕೆ ಸಿದ್ಧತೆ

ಇಂಡೋನೇಶ್ಯದ ಅಧ್ಯಕ್ಷ ಸುಕರ್ಣರು ಪಶ್ಚಿಮ ನ್ಯೂಗಿನಿಯಾವನ್ನು ವಿಮೋಚನೆಗೊಳಿಸಲು ಉತ್ಸುಕರಾಗಿದ್ದಾರೆ. ಈ ಕಾರ್ಯವನ್ನು ಶಾಂತ ಮಾರ್ಗದಲ್ಲಿಯೇ ಸಾಧಿಸಲು ಇದುವರೆಗೆ ಕಾದರೂ ಮಾತುಕತೆಯಲ್ಲಿ ಯಾವ ಪ್ರಗತಿಯೂ ಕಾಣದಿದ್ದುದರಿಂದ ಅವರು ಸೈನಿಕ ಕಾರ್ಯಾಚರಣೆಗೆ ತೊಡಗುವ ದೃಢ ನಿರ್ಧಾರಮಾಡಿ, ಎಲ್ಲ ಸೇನಾ ವಿಭಾಗಗಳೂ ತುದಿಗಾಲಲ್ಲಿ ನಿಲ್ಲಲು ಆಜ್ಞೆಯಿತ್ತಿದ್ದಾರೆ.

ಅಲ್ಲಲ್ಲಿಯ ಸುದ್ದಿ ಸಾರ

ಸತ್ಕಾರ— ಉಡುಪಿ ಕ್ಷೇತ್ರದ ಎಂ. ಎಲ್. ಎ.ಗಳಾದ ಶ್ರೀ ಎಂ ಮಧ್ವರಾಜರನ್ನು ಅಭಿನಂದಿಸಲು ಉಡುಪಿ ಲಾಯನ್ಸ್ ಕ್ಲಬ್ಬಿನವರು ತಾ. 21-3-62ರಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಲಾಯನ್ಸ್ ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಕೆ. ಎಸ್. ಕಾಮತರು ಸ್ವಾಗತ ಭಾಷಣ ಮಾಡಿ ಬೆಂಗಳೂರಲ್ಲಿ ಇತ್ತೀಚೆಗೆ ನೆರವೇರಿದ ಲಾಯನ್ಸ್ ಕ್ಲಬ್ಬಿನ ವಿವರಗಳನ್ನಿತ್ತರು. ಲಾಯನ್ ಶ್ರೀ ಟಿ. ಎ. ಪೈಯವರು ಭಾಷಣ ಮಾಡುತ್ತ ಜನಪ್ರತಿನಿಧಿಗಳು ತಮ್ಮ ಮತದಾರ ಕ್ಷೇತ್ರಕ್ಕೆ ಆಗಾಗ ಸಂದರ್ಶಿಸಿ ಅವರ ಸಂಪರ್ಕವನ್ನು ಬೆಳೆಸಿ ಅವರ ಸಮಸ್ಯೆಗಳನ್ನು ತಿಳಿದುಕೊಂಡು ಅದರ ನಿವಾರಣೆಗಾಗಿಯೂ ಸಮಸ್ತ ರಾಜ್ಯದ ಅಭಿವೃದ್ಧಿಗಾಗಿಯೂ ಪ್ರಯತ್ನಿಸಬೇಕು ಒಟ್ಟಾರೆ ಮುಂದಿನ ಐದು ವರ್ಷಗಳಲ್ಲಿ ಉಡುಪಿಯ ಕೀರ್ತಿವರ್ಧಿಸುವಂತೆ ಶ್ರೀ ಮಧ್ವರಾಜರು ವಿಧಾನ ಸಭೆಯಲ್ಲಿ ಪ್ರಯತ್ನಿಸಬೇಕೆಂದರು. ತರುವಾಯ ಡಾ| ಪಿ. ರಾಘವೇಂದ್ರ ನಾಯಕರು, ಶ್ರೀ ಬಿ. ಎನ್. ಗುಪ್ತರೂ ಶ್ರೀ ಮಧ್ವರಾಜರಿಗೆ ಶುಭಾಕಾಂಕ್ಷೆ ಕೋರಿ ಮಾತನಾಡಿದರು. ಶ್ರೀ ಮಧ್ವರಾಜರು ತನ್ನನ್ನು ಸತ್ಕರಿಸಿದುದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತ ಮುಂದಿನ ಐದು ವರ್ಷಗಳಲ್ಲಿ ಜನತಾ ಪ್ರತಿನಿಧಿಯಾಗಿ ಮನಃ ಪೂರ್ವಕ ಸೇವೆ ಸಲ್ಲಿಸುವುದಾಗಿ ಭರವಸೆಯಿತ್ತರು. ಶ್ರೀ ಎನ್. ವಿ. ಕಾಮತರು ಧನ್ಯವಾದಗಳನ್ನರ್ಪಿಸಿದ ಬಳಿಕ ರಾತ್ರಿ ಭೋಜನ ಸತ್ಕಾರ ನಡೆಯಿತು.

ನಿಧನ:— ಹೆಜಮಾಡಿ ಟೈಲ್ ಫೇಕ್ಟರಿಯ ಪ್ರಗತಿಗಾಗಿ ಸದಾ ದುಡಿಯುತ್ತಿದ್ದ ಶ್ರೀ ಮೂಲ್ಕಿ ಮುಕುಂದ ಕುಡುವರು ತಾ 11-3-62ರಂದು ನಿಧನರಾದುದು ವಿಷಾದಕರವಿದೆ. ದಿವಂಗತರು ಮಣಿಪಾಲದ ಹೆಚ್ಚಿನ ಸಂಸ್ಥೆಗಳ ಡೈರೆಕ್ಟರಾಗಿ ಸೇವೆ ಸಲ್ಲಿಸಿದ್ದರು. ಸರಳ ಸ್ವಭಾವದವರಾಗಿ ಜನಾನುರಾಗಿಗಳಾಗಿದ್ದರು.

ಗೆದ್ದವರಿಗೆ ಸತ್ಕಾರ—ಮಂಗಳೂರು ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಆರಿಸಲ್ಪಟ್ಟ ಶ್ರೀ ಎ. ಶಂಕರ ಆಳ್ವ ಮತ್ತು ವಿಧಾನ ಸಭೆಗೆ ಆಯ್ಕೆ ಹೊಂದಿದ ಶ್ರೀ ಮಹೇಲ್ ಶ್ರೀನಿವಾಸ ನಾಯಕ ಇವರನ್ನು ಸತ್ಕರಿಸಲು ಮಂಗಳೂರಿನ ಇಂಟಕ್ ಆಫೀಸಿನಲ್ಲಿ ಸತ್ಕಾರ ಸಮಾರಂಭವೊಂದನ್ನು ಇತ್ತೀಚೆಗೆ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಶ್ರೀ ಆನಂದ ಗಡಿಯಾರರು ಸ್ವಾಗತ ಭಾಷಣಮಾಡಿದ ಮೇಲೆ ವಿಜಯಿ ಪ್ರತಿನಿಧಿ ಅತಿಥಿಗಳು ಭಾಷಣ ವಿತ್ತರು. ಅಧ್ಯಕ್ಷರು ಭಾಷಣಮಾಡುತ್ತ ನಮ್ಮ ಪ್ರತಿನಿಧಿಗಳು ಸರಕಾರದಿಂದ ಮಜೂರರ ಹಿತ ಸಾಧನೆಯಾಗುವಂತೆ ಪ್ರಯತ್ನಿಸಬೇಕೆಂದರು. ಬಳಿಕ ಶ್ರೀ ಎಂ. ಬಿ. ಸರ್ಪನವರು ಧನ್ಯವಾದಗಳನ್ನರ್ಪಿಸಿದರು.

ವಿವಾಹ ಸಮಾರಂಭ— ಶ್ರೀ ಕೆಮ್ತೂರು ಪಡುಮನೆ ಅಣ್ಣಯ್ಯ ಸೆಟ್ಟರ ಪುತ್ರ ಶ್ರೀ ಜಯರಾಮ ಸೆಟ್ಟರು, ಶ್ರೀ ಅಂಬಲಪಾಡಿ ಶಂಭು ಸೆಟ್ಟರ ಪುತ್ರಿ ಸೌ| ರಾಜೀವಿಯನ್ನು ತಾ. 21-3-62ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ನಿವೃತ್ತ ಡಿಪ್ಯುಟಿ ಕಲೆಕ್ಟರ್ ಶ್ರೀ ಪಿ. ಎಸ್ ತಿಮ್ಮಪ್ಪ ಸೆಟ್ರ ಪುತ್ರ ಶ್ರೀ ಸುಂದರ್ ರಾಜರವರು ಶ್ರೀ ಕಾಪು ಸುಬ್ಬಯ್ಯ ಸೆಟ್ರ ಮನೆ ದಿ. ಸೋಮಯ ಸೆಟ್ರ ಪುತ್ರಿ ಸೌ| ಲೀಲಾವತಿಯನ್ನು ತಾ 26-3-62ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡಿನ— ಮಲ್ಪೆ ಶಾಖೆಯ ಹೊಸ ಕಟ್ಟಡದ ಪ್ರಾರಂಭೋತ್ಸವವು ಇದೇ ತಾ. 30ನೇ ಸಂಜೆ 4½ ಗಂಟೆಗೆ ಶ್ರೀ ಎಂ. ಮಧ್ವರಾಜ ಎಂ. ಎಲ್. ಎ. ಅವರಿಂದ ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಡುವುದು

ಹಳೇ ವಿದ್ಯಾರ್ಥಿ ಸಂಘದ ಮಹಾಸಭೆ— ಉಡುಪಿಯ ಬೈಲೂರು ಯಂ. ಯಂ. ಶಾಲಾ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾ ಸಭೆಯು ತಾ. 25-3-62ರಂದು ಸಂಘದ ಅಧ್ಯಕ್ಷ ಶ್ರೀ ಡಬ್ಲ್ಯು ಎನ್. ಅಮ್ಮನರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಘಟನೆಯನ್ನು ಶ್ರೀ ಎಸ್. ಎ. ಭಂಡಾರಿಯವರು ಮಂಡಿಸಿದರು. ಸದರಿ ಶಾಲೆಯ ಕಟ್ಟಡದ ಬಡಾವಣೆಗೈದು ಪ್ರೌಢ ಪ್ರಾಥಮಿಕ ಶಾಲೆಯನ್ನಾಗಿ ಮಾರ್ಪಡಿಸುವಂತೆ ಸಂಬಂಧ ಪಟ್ಟವರನ್ನು ಒತ್ತಾಯಿಸುವ ಠರಾವನ್ನು ಮಂಜೂರು ಮಾಡಲಾಯಿತು. ಶಾಲಾ ಹಿತವನ್ನು ಕೋರಿ ಶ್ರೀಯುತರುಗಳಾದ ಗ್ಲೇಡಸನ್ ಜತ್ತನ್ನ, ಡೇವಿಡ್ ಎ. ಕರ್ಕಡ, ಜೋಬ್ ಡಿ. ಅಮ್ಮನ್ನ (ಮೆನೇಜರ್) ಮತ್ತು ಕುಮಾರಿ ಮನೋರಮ ಜತ್ತನ್ನರು ಸಭಿಕರ ಪರವಾಗಿ ಭಾಷಣಗೈದರು. ಗತ ವರುಷದ ಆಡಳಿತ ಸಮಿತಿಯನ್ನೇ ಮುಂದಿನ ವರುಷಕ್ಕೆ ಸರ್ವಾನುಮತದಿಂದ ಮುಂದುವರಿಸಲಾಯಿತು. ಕಾರ್ಯದರ್ಶಿ ಶ್ರೀ ಜಿ. ಯಸ್ ಕರ್ಕಡರು ಧನ್ಯವಾದ ಸಮರ್ಪಿಸಿದ ಬಳಿಕ ಲಘೂಪಹಾರದೊಂದಿಗೆ ಕಾರ್ಯಕ್ರಮ ಅಂತ್ಯಗೊಂಡಿತು.

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್ — ಕಾರ್ಪೊರೇಶನ್ ಬೇಂಕು ೧೯೬೧ನೆ ಕೆಲೆಂಡರ್ ವರ್ಷದಲ್ಲಿ ಗಣನೀಯವಾದ ಪ್ರಗತಿಯನ್ನು ಸಾಧಿಸಿದೆ. ಈ ವರ್ಷದಲ್ಲಿ ಬೇಂಕಿನ ಆಡಳಿತ ಕಛೇರಿಯನ್ನು ಮಂಗಳೂರಿಗೆ ಸ್ಥಾನಾಂತರಿಸಲಾಯಿತಲ್ಲದೆ ಬೆಳಗಾಂವ ಬೇಂಕ್ ಆಫ್ ಸಿಟಿಜನ್ಸ್ ನ್ನು ರಿಜರ್ವ ಬೇಂಕಿನ ಆದೇಶದಂತೆ ವಿಲೀನಗೊಳಿಸಲಾಯಿತು. ಇದರಿಂದ ವರ್ಷಾಂತ್ಯದಲ್ಲಿ ಬೇಂಕಿನ ಶಾಖೆಗಳು ೭೮ ಆದಂತಾಯಿತು. ರೂ. ೨೫ ಲಕ್ಷ ತೆತ್ತ ಬಂಡವಳವಿರುವ ಈ ಬೇಂಕಿನ ಕಾಯ್ದಿಟ್ಟ ನಿಧಿಯು ರೂ. ೨೧ ಲಕ್ಷ ಇರುವುದು. ಒಟ್ಟು ಠೇವಣಾತಿ ೧೨ ಕೋಟಿಗೂ ಮಿಕ್ಕಿದ್ದು ಹಿಂದಿನ ವರ್ಷಕ್ಕಿಂತ ಇದು ರೂ. ೧½ ಕೋಟಿ ಹೆಚ್ಚಾಗಿದೆ. ಬೇಂಕಿನ ಸಾಲ ಮೂಲಗಳು ರೂ. ೧೩ ಕೋಟಿಯಿದ್ದು ಇದು ೧೯೬೦ರ ಅಂಕೆ ಸಂಖ್ಯೆಗಳಿಗಿಂತ ೨ ಕೋಟಿಯಷ್ಟು ಅಧಿಕವಿದೆ. ೧೯೬೧ರಲ್ಲಿ ಬೇಂಕು ಸಮರ್ಥರೀತಿಯಿಂದ ಜನತೆಗೆ ಸೇವೆಯನ್ನು ಸಲ್ಲಿಸುತ್ತ ೮೧ ಲಕ್ಷ ರೂ. ಲಾಭವನ್ನು ಗಳಿಸಿದೆ. ವಿತರಣೆಗೆ ದೊರೆತ ರೂ. ೮,೩೩,೪೩೯=೫೯ ರಲ್ಲಿ ರೂ. ೧,೬೫,೦೦೦ ವನ್ನು ಕಾಯ್ದಿಟ್ಟ ನಿಧಿಗೆ ವರ್ಗಮಾಡಲಾಗಿದೆ ಉಳಿದ ರೂ. ೬,೬೮,೪೩೯=೫೯ ರಲ್ಲಿ ಆದಾಯ ತೆರಿಗೆಯ ಬಗ್ಗೆ ರೂ. ೩,೯೦,೦೦೦ವನ್ನು ಪ್ರತ್ಯೇಕಿಸಿ, ಇಕ್ವಿಟಿ ಶೇರುದಾರರಿಗೆ ಸೇ. ೧೫ರಂತೆ ಮತ್ತು ಸೇ. ೫ ಮತ್ತು ಸೇ. ೪½ಯ ಫಸ್ಟ್ ಪ್ರಿಫರೆನ್ಸ್ ಶೇರುದಾರರಿಗೆ ರೂ ೫೦ ರ ಪ್ರತಿ ಶೇರಿಗೆ ರೂ. ೩.೨೫ ಮತ್ತು ೨.೯೩ ರಂತೆ ಡಿವಿಡೆಂಡ್ ನೀಡಲು ಡೈರೆಕ್ಟರರು ಸಮ್ಮತಿಸಿದ್ದಾರೆ. ಈ ಡಿವಿಡೆಂಡ್ ಆದಾಯ ತೆರಿಗೆಗೆ ಒಳಪಟ್ಟಿದೆ. ಬೇಂಕು ನೀಡಿರುವ ಸಾಲಗಳೆಲ್ಲವೂ ಸುರಕ್ಷಿತವಾಗಿ ಮರಳುವಂತಿವೆ. ಬೇಂಕು ತನ್ನ ೫೪ನೆಯ ವರ್ಷದಲ್ಲಿ ಹಿಂದಿನ ವರ್ಷಗಳಿಗಿಂತಲೂ ಉತ್ತಮವಾದ ಪ್ರಗತಿಯನ್ನು ಸಾಧಿಸಿದ್ದು, ಬಂಡವಾಳ ಠೇವಣಾತಿಗಳ ಪ್ರಮಾಣವನ್ನು ಹೆಚ್ಚಿಸಲು ತನ್ನ ಬಂಡವಾಳವನ್ನು ಹೆಚ್ಚಿಸುವ ಯೋಚನೆಯಲ್ಲಿದೆ. ಬೇಂಕಿನ ಅಧಿಕಾರಿವರ್ಗ ಹಾಗೂ ಡೈರೆಕ್ಟರ ಮಂಡಳಿಯನ್ನು ಸಾಮ್ಯ ಆಡಳಿತಕ್ಕಾಗಿ ಅಭಿನಂದಿಸಲೇಬೇಕು.

ಪರ್ಕಳ— ಶ್ರೀ ಶಾರದಾ ಯಕ್ಷಗಾನ ಕಲಾ ಮಂಡಳಿ, ಪರ್ಕಳ ಇದರ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ತಾ. 24-3-62ರಂದು ಯಕ್ಷಗಾನ ಬಯಲಾಟ ಪ್ರದರ್ಶನವು ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಜರಗಿತು. ಶ್ರೀ ಎ. ಜನಾರ್ಧನ ಅಲ್ಸೆಯವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು ಪೋಸ್ಟ್ ಮಾಸ್ಟರ್ ಶ್ರೀ ಕೆ. ಆನಂದ ಸೆಟ್ಟರು ಸ್ವಾಗತಭಾಷಣ ಮಾಡಿದ ಬಳಿಕ ಸಂಘದ ಕಾರ್ಯದರ್ಶಿ ಶ್ರೀ ಎಸ್. ರಾಘವ ಸೆಟ್ಟಿಗಾರರಿಂದ ವರದಿವಾಚನ ಮಾಡಲ್ಪಟ್ಟಿತು. ನಂತರ ಯಕ್ಷಗಾನ ಕಲೆಯ ಕುರಿತು ಶ್ರೀ ಸದಾನಂದ ಹೆಬ್ಬಾರ್ B. A., B. T. ಅಧ್ಯಾಪಕ, ಬೋರ್ಡು ಹೈಸ್ಕೂಲು, ಕೋಟೇಶ್ವರ ಇವರು ಉತ್ತಮವಾದ ಸಮಯೋಚಿತ ಭಾಷಣವನ್ನಿತ್ತರು. ಅಧ್ಯಕ್ಷರು ಯಕ್ಷಗಾನ ಕಲೆಯ ಕುರಿತು ಸುರಸವಾದ ಭಾಷಣವನ್ನಿತ್ತು ಮಂಡಳಿಯ ಏಳಿಗೆಯನ್ನು ಹಾರೈಸಿ ಮಾತನಾಡಿದರು. ಸಮಾರಂಭದ ಉದ್ಘಾಟನೆಯನ್ನು ಶ್ರೀ ಬಿ. ಕಾಳಪ್ಪ ಸೆಟ್ಟಿ ಮೆಂಬರ್ ಉಡುಪಿ ತಾಲೂಕು ಬೋರ್ಡು ಇವರು ನೆರವೇರಿಸಿದರು ಅನಂತರ ಮಂಡಳಿಯ ಸದಸ್ಯರು "ವೀರವರ್ಮ ವಿಜಯ, ಮತ್ತು ವೃಷಸೇನ ವಧೆ" ಎಂಬ ಕಥಾ ಭಾಗವನ್ನು ಶ್ರೀ ಟಿ. ಶಾಂತಪ್ಪ ಮಾಸ್ತರ್‌ರವರ ನಿರ್ದೇಶನದಲ್ಲಿ ಬಡಗು ತಿಟ್ಟಿನ ಬಯಲಾಟ ರೂಪದಲ್ಲಿ ಆಡಿ ತೋರಿಸಿದರು. ಕೊನೆಗೆ ಕಾರ್ಯದರ್ಶಿಯವರು ಸಮಾರಂಭದ ಯಶಸ್ಸಿಗೆ ಕಾರಣರಾದವರೆಲ್ಲರಿಗೆ ಧನ್ಯವಾದವನ್ನರ್ಪಿಸಿದರು.

ಶಾಲಾ ವಾರ್ಷಿಕೋತ್ಸವ—ಮಿತ್ತಬಾಗಿಲು ಪಂಚಾಯತ್—ಕಡಿರುದ್ಯಾವರ ಪ. ಶಾಲೆಯಲ್ಲಿ ತಾ. 24-3-1962ರಂದು ಶಾಲಾ ವಾರ್ಷಿಕೋತ್ಸವವು ಶ್ರೀ ಜಿ. ಎನ್. ಭಿಡೆ ತಾಲೂಕ್ ಬೋರ್ಡು ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅತಿಥಿಯಾಗಿ ಆಗಮಿಸಿದ, ವಿದ್ವಾನ್, ಜಿ. ಮಲ್ಲಾರಿಭಟ್ ಹೊಸಪೇಟೆ ಬಳ್ಳಾರಿಯವರು "ಮಕ್ಕಳ ಭವಿಷ್ಯ ಚಿಂತನೆಯ ಕುರಿತು ಉಪನ್ಯಾಸ ಮಾಡಿದರು. ಪಂಚಾಯತ್ ಚೇರ್‌ಮೇನ್ ವೆಂಕಟಸುಬ್ಬರಾಯರ ಸ್ವಾಗತ ಭಾಷಣದೊಂದಿಗೆ ಸಭಾಕಾರ್ಯಕ್ರಮವು ಪ್ರಾರಂಭವಾಗಿ, ಸಭಾಸದರ ಭಾಷಣಗಳು ನಡೆದ ಬಳಿಕ, ಮಕ್ಕಳ ಮತ್ತು ಹಿರಿಯರ ನಾಟಕ ವಿನೋದಾದಿಗಳು ನಡೆದುವು. ಇಂತು ಸಭಾಕಾರ್ಯಕ್ರಮವು ಯಶಸ್ವಿಯಾಗಿ ಕೊನೆಗೊಂಡಿತು

ಅಯೂಬರಿಗೆ ವಿರೋಧ

ಪಾಕ್ ಅಧ್ಯಕ್ಷ ಅಯೂಬ ಖಾನರು ಏಪ್ರಿಲ್ ಕೊನೆಯ ವಾರದಲ್ಲಿ ನೂತನ ಸಂವಿಧಾನದನ್ವಯ ಪ್ರಾಂತೀಯ ಮತ್ತು ಕೇಂದ್ರ ವಿಧಾನ ಮಂಡಳಗಳಿಗೆ ಚುನಾವಣೆ ನಡೆಸಲು ಗೊತ್ತು ಮಾಡಿದ್ದಾರೆ. ಆದರೆ, ಅವರು ಬಹಿರಂಗಪಡಿಸಿದ ಘಟನೆಯು ಪ್ರಜಾಪ್ರಭುತ್ವಕ್ಕೆ ಕುಠಾರ ಪ್ರಾಯವೆಂದು ಹೇಳುತ್ತ ಅದರ ವಿರುದ್ಧ ವಿದ್ಯಾರ್ಥಿಗಳು ಮತ ಪ್ರದರ್ಶನ ಮಾಡುತ್ತಾರೆ; ಸಂವಿಧಾನದ ಪ್ರತಿಗಳನ್ನು ಸುಡುತ್ತಾರೆ. ವಿರೋಧಿಗಳು ತಾವೇ ಬಹುಮತ ಗಳಿಸಿ ಸಂವಿಧಾನವನ್ನು ತಿದ್ದಬೇಕೆಂದೂ ಬಯಸುತ್ತಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುವ ಕೆಚ್ಚು ಅಯೂಬರಲ್ಲಿದೆಯೋ?

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು

ನಮ್ಮ ಆಫೀಸಿನಿಂದ ಕೊಡೋಣಾದ ತಾ. 22-3-62ರ ನವಯುಗ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ ಏಲಂ ನೋಟೀಸಿನಲ್ಲಿ, ಶ್ರೀ ಬಾಲಯ ಶೆಟ್ಟಿ, ಮಂಜಯ ಶೆಟ್ರ ಅಳಿಯ, ಕುಂಜಳ್ಳಿ ಮನೆ, ಸೂರ್ಕುಂದ, ಬೈಂದೂರು ಪೋಸ್ಟ್, ಇವರ ಹೆಸರಿನ ಲೋನ್ ನಂಬ್ರ 649/59ರ ಎದುರಿಗೆ ರೂಪಾಯಿ 14=15 ಎಂದು ತಪ್ಪಾಗಿ ಬಿದ್ದುದನ್ನು ರೂ. 60=60 ಎಂದು ತಿದ್ದಿ ಓದಬೇಕು.

K. Bhojaraja Hegde.
Agent.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 214/1960.

ಕೋಟಿ ಪೂಜಾರಿ ಕೂಡಾ— ವಾದಿರು
ನರಸಿಂಹ ಭಟ್ಟ ಕೂಡಾ— ಪ್ರತಿವಾದಿರು.

2ನೆ ಪ್ರತಿವಾದಿ ಉಮ್ಮರ್ ಕುಂಞಿ ಬ್ಯಾರಿ ಆಮದ್ ಕುಞ್ಞಿ ಬ್ಯಾರಿಯ ಮಗ, ಬೆಳ್ತಂಗಡಿ ತಾಲೂಕು, ಶಿಶಿಲ ಗ್ರಾಮದ, ಗಾಣದ ಕೊಟ್ಯ—ಇವರಿಗೆ ತಿಳಿಸುವುದೇನೆಂದರೆ

ಅವಾರ್ಡು ವಿಮೋಚನೆ ಬಗ್ಗೆ ವಾದಿರು ದಾಖಲು ಮಾಡಿದ ಈ ದಾವೆಯು ತಾ. 6-4-62ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉಪಹರಿಸಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for Plaintiff.

ಪುತ್ತೂರು, 13-3-62.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ. 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಅದನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಅಪೇಕ್ಷಿಸುತ್ತೇವೆ.

—ಮೆನೇಜರ್ ನವಯುಗ.

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all the teacher, the student and the layman.

Price: Rs. 1 = 25. (Postage extra)

If Rs.1=50 is sent by M O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.
M/s Navabharat Book Depot, Udipi.

ಪ್ರಳಯಂಕರ ಯಮ— ಮಾರಕಾಸ್ತ್ರ

(೫ನೇ ಪುಟದಿಂದ)

ಪ್ರೊಜೆಕ್ಟರ್ ಇಲ್ಲವೇ ಅಯಾನ್‌ಗನ್ ಎನ್ನುತ್ತಾರೆ. ಇದರ ಮೂಲಕ ಕೃತ್ರಿಮ ಉಪಗ್ರಹ ಹಾಗೂ ಬಾಹ್ಯಾಂತರಿಕ್ಷಗಾಮಿ ಅಸ್ತ್ರಗಳನ್ನು ಕೂಡ ಹಾಳುಗೆಡಹಬಹುದು.

ಅಮೆರಿಕೆಯು ಸಾಮೋಸ್ ಎಂಬ ಕೃತ್ರಿಮ ಉಪಗ್ರಹ ಗ್ರಹವನ್ನು ಆಕಾಶದಲ್ಲಿ ಹಾರಿಸಿದೆ. ಇದು ತಾನು ಸುತ್ತುವರಿಯುವ ದೇಶಗಳ ಚಿತ್ರಪಟಗಳನ್ನು ಟೆಲಿವಿಜನ್ ಕೆಮರದಲ್ಲಿ ತೆಗೆದು ಅಮೆರಿಕನ್ ವೈಜ್ಞಾನಿಕರಿಗೆ ಮುಟ್ಟಿಸುತ್ತದೆ. ಇಂತಹ ಉಪಗ್ರಹವನ್ನು ಪತ್ತೇದಾರಿ ಉಪಗ್ರಹವೆನ್ನುತ್ತಾರೆ. ಅಮೆರಿಕೆಯ ಈ 'ಸಾಮೋಸ್' ರಶ್ಯದ ಮೇಲೂ ಹಾರಾಡುತ್ತದೆ.

ಇಂತಹ ಪತ್ತೇದಾರಿ ಉಪಗ್ರಹಗಳಗಳನ್ನು ಕೆಡಿಸಲು ರಶ್ಯದ ವಿಜ್ಞಾನಿಗಳೂ ಬಹಳ ಒದ್ದಾಡುತಿದ್ದಾರೆ. ಉಪಗ್ರಹಗಳ ಟೆಲಿವಿಜನ್ ಕೆಮರಾ ಮತ್ತಿತರ ಟ್ರಾನ್ಸ್‌ಮಿಟರುಗಳನ್ನು ಭಗ್ನಗೊಳಿಸಲು ಅವರು ಉಪಾಯ ಚಿಂತಿಸುತಿದ್ದಾರೆ ಒಂದು ಪ್ರಯೋಗದಿಂದ ಟೆಲಿವಿಜನಿನ ಭೂತಗನ್ನಡಿಯನ್ನು ಕಣ ವರ್ಷದಿಂದ ಕೆಡಿಸುವುದು ಸಾಧ್ಯವೆನಿಸಿದೆ.

ರಾಡಾರಿನ ಭೂತಕನ್ನಡಿಗಳಿಂದ ಪ್ರಬಲ ವಿದ್ಯುತ್ ಚುಂಬಕೀಯ ಅಲೆಗಳನ್ನು ಯಾವುದೇ ಸ್ಥಾನದಲ್ಲಿ ನಿಯಂತ್ರಿಸಿ, ಅವುಗಳಿಗೆ ಮೃತ್ಯು ಕಿರಣಗಳ ರೂಪ ನೀಡಲು ಸಾಧ್ಯವಿದೆ. ವಸ್ತುತಃ ಕೆಲವು ದೊಡ್ಡ ದೊಡ್ಡ ರಾಡಾರ್‌ಗಳ ಭೂತಗನ್ನಡಿಗಳನ್ನು ತಂತ್ರೀಜಾಲದಿಂದ ಹೊದಿಸುತ್ತಾರೆ; ಇಲ್ಲವಾದರೆ, ಅಕ್ಕಪಕ್ಕದ ಮನುಷ್ಯರು ಸುಟ್ಟು ಹೋಗುತಿದ್ದರು.

ಇದುವರೆಗೆ ರಾಡಾರನ್ನು ಮೃತ್ಯುಕಿರಣ ಯಂತ್ರದ ರೂಪದಲ್ಲಿ ವಿಕಸಿತಗೊಳಿಸಲಾಗಲಿಲ್ಲ. ಇದಕ್ಕೆ ಅತ್ಯಧಿಕ ಪ್ರಮಾಣದ ವಿದ್ಯುಚ್ಛಕ್ತಿಯು ಬೇಕಾಗುತ್ತದೆ. ಆದರೆ, ಇಷ್ಟು ಶಕ್ತಿಯು ಸಿಗದಿರುವುದರಿಂದ ವಿಕಾಸದ ಪ್ರಯತ್ನವನ್ನು ಬಿಟ್ಟುಕೊಡಲಾಗಿದೆ.

ಆದರೆ, ಅಮೆರಿಕೆಯ ವೆಸ್ಟಿಂಗ್ ಹೌಸ್ ಇಲೆಕ್ಟ್ರಿಕ್ ಕಾರ್ಪರೇಶನ್ ಮಲಿಕ್ಯುಲರ್ ಇಲೆಕ್ಟ್ರೋನಿಕ್ಸ್ ಎಂಬುದನ್ನು ಕಂಡುಹಿಡಿದಿದೆ. ಇದರಿಂದ, ಅಲ್ಪ ಪ್ರಮಾಣದ ವಿದ್ಯುತ್ತಿನಿಂದ ಅಧಿಕ ಪ್ರಮಾಣದ ವಿದ್ಯುತ್ತನ್ನು ಪಡೆಯಬಹುದು. ಈ ವಿಶ್ವಯಿಂದಾಗಿ, ವೈಜ್ಞಾನಿಕರು ಮರಳಿ ಮೃತ್ಯುಕಿರಣ ತಯಾರಿಸುವ ಉದ್ದೇಶ್ಯದಿಂದ ರಾಡಾರದ ಕಡೆಗೆ ಅಧಿಕ ಲಕ್ಷ್ಯ ಪೂರೈಸ್ಸ ತೊಡಗಿದ್ದಾರೆ.

ರಾಡಾರಿನ ಕಟೋರಿನ ವ್ಯಾಸವು ೧೮॥ ಅಡಿಯಿದ್ದು, ಅದರಲ್ಲಿ ಒಂದು ಸೆಂಟಿಮೀಟರ್ ಉದ್ದದ ವಿದ್ಯುತ್ ಚುಂಬಕೀಯ ಅಲೆಗಳನ್ನು ಹರಿಸಿದರೆ, ಅವು ಅರ್ಧ ಮೈಲು ದೂರದಲ್ಲಿ ನಿಯಂತ್ರಿತವಾಗುವುದು; ಅಲ್ಲಿ ೯ ಸಾವಿರ ಡಿಗ್ರಿ ಉಷ್ಣತೆಯಿರುವ ಒಂದು ಗೋಲಾಕಾರವಾಗಿ ಹೊಳೆಯುವುದು. ಹೀಗೆಯೇ ಬೇರೆ ಬೇರೆ ಅಳತೆಯ ಸಾಧನಗಳಿಂದ ಬೇರೆ ಬೇರೆ ದೂರದಲ್ಲಿ ಅವುಗಳ ಪ್ರಭಾವ ಬೀಳುವಂತೆ ಮಾಡಬಹುದು. ಒಂದರ ಬದಲು ಎರಡು ಕಟೋರಗಳನ್ನು ಉಪಯೋಗಿಸಿಕೊಂಡರೆ, ಆಗ ವಿಮಾನ, ಪ್ರಕ್ಷೇಪಾಸ್ತ್ರಗಳನ್ನೂ ಕರಗಿಸುವುದು ಸಾಧ್ಯವಾಗುತ್ತದೆ. ಈ ವಿಧಾನವು ಪರ್ಯಾಪ್ತ ವಿಕಾಸವಾದಾಗ ಸಂರಕ್ಷಣೆಯ ವಿಭಾಗದಲ್ಲಿ ಬಹಳ ಉಪಯುಕ್ತವೆನಿಸಬಲ್ಲುದು.

ಇಂದು ಚಾಲ್ತಿಯಿರುವ ಆಕಾಶಬಾಣಗಳು ಹಾರುವಾಗ, ಅವುಗಳ ಹಿಂಭಾಗದಿಂದ ಬಿಸಿ ಅನಿಲಗಳ ಹೊಗೆಯು ಹೊರಬರುವುದು. ಈಗ ಶತ್ರು ಪ್ರದೇಶದ ಮೇಲೆ ಹಾರುವಾಗ ಅನಿಲಗಳ ಬದಲು ವಿದ್ಯುನ್ಮಯ ಕಿರಣಗಳನ್ನು ಉಗುಳುವ ರಾಕೇಟುಗಳು ತಯಾರಾಗುತ್ತಿವೆ. ಈ ಕಿರಣಗಳನ್ನು ಬೇಕಾದಂತೆ ನಿಯಂತ್ರಿಸುವುದೂ ಸಾಧ್ಯವಿದೆ. ಇವು ಪ್ರಾಣಿಗಳನ್ನು ಯಮನೂರಿಗೆ ಅಟ್ಟಿಬಿಡುವುವು. ಪರಿಣಾಮವು ಎಲ್ಲರಿಗೂ ತಿಳಿಯುವುದಕ್ಕೆ ಮೊದಲೇ ಹತ್ಯಾಕಾಂಡವು ಆರಂಭವಾಗಿ ಮುಗಿದಿರುತ್ತದೆ.

ಮೃತ್ಯು ಕಿರಣಗಳಂತೆಯೇ ಅತಿ ಧ್ವನಿಕ (ಅಲ್ಟ್ರಾಸೋನಿಕ್) ಕಿರಣಗಳ ವಿಕಾಸವೂ ಭರದಿಂದ ಸಾಗುತ್ತಿದೆ. ನಾನಾ ಪ್ರಕಾರದ ಕಿರಣ ಮತ್ತು ಅಲೆಗಳನ್ನು ಆಕ್ರಮಣ ಮತ್ತು ಸಂರಕ್ಷಣೆಗಳೆರಡರಲ್ಲೂ ಪ್ರಯುಕ್ತಗೊಳಿಸುವ ಹಂಬಲ ಮಿತಿಮೀರುತ್ತಿದೆ. ಮುಂದೆ ಎಂದಾದರೂ ಯುದ್ಧವು ನಡೆಯಿತೆಂದರೆ, ಆಗ ಈ ಆಧುನಿಕ ಯಮನ ಕರಾಳ ನೃತ್ಯ ಖಂಡಿತಕ್ಕೂ ಪ್ರಾರಂಭವಾಗುವುದು.

ಕರ್ನಾಟಕದ ಮುಂಗಡಪತ್ರ

ರಾಜ್ಯದ ಕೆಡುತ್ತಿರುವ ಆರ್ಥ ವ್ಯವಸ್ಥೆ

ಮಂತ್ರಿ ಮಂಡಳಿಯ ರಚನೆಯಿನ್ನೂ ಮುಗಿಯದಿರುವುದರಿಂದ ಅರ್ಥಶಾಖೆಯನ್ನೂ ವಹಿಸಿಕೊಂಡಿರುವ ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ಕಂಠಿಯವರು ೩೨೩ ಲಕ್ಷ ರೂಪಾಯಿ ಕೊರತೆಯ ಮುಂಗಡ ಪತ್ರವನ್ನು ವಿಧಾನ ಸಭೆಯಲ್ಲಿ ಮಂಡಿಸಿದರು ಈ ಕೊರತೆಯನ್ನು ತುಂಬಿಸಿಕೊಳ್ಳುವ ಸಲುವಾಗಿ, ಹೆಚ್ಚಿನ ಕರಗಳನ್ನು ಹೇರಲಾಗುವುದೆಂದೂ ಇವುಗಳ ವಿವರವನ್ನು ಕಾಲಕ್ರಮದಲ್ಲಿ ಬಹಿರಂಗಗೊಳಿಸುವುದೆಂದೂ ಅವರು ಹೇಳಿದರು. ಎ. ಜಿ. ರಾಮಚಂದ್ರರಾವ್ ಸಮಿತಿಯು ಆರ್ಥಿಕ ಮೂಲಗಳನ್ನು ಕಂಡುಹಿಡಿದು ರಾಜ್ಯದ ಆದಾಯವನ್ನು ಹೆಚ್ಚಿಸಲು ಹಲವಾರು ಸಲಹೆಗಳನ್ನು ಮಾಡಿದ್ದು, ಅವುಗಳನ್ನು ಪರಿಶೀಲಿಸಿದ ನಂತರವೇ ಈ ಕರಾಕರಣೆಯ ವಿವರಗಳು ತಿಳಿದುಬರಬಹುದು ಆದರೆ. ರಾಜ್ಯದ ಮುಂಗಡ ಪತ್ರದಲ್ಲಿ ತೋರಿಸಿದ ಕೊರತೆಯನ್ನು ತುಂಬಿಸಿಕೊಳ್ಳಲೇ ಬೇಕಾಗಿರುವುದುಗಮನೀಯವಿದೆ.

ಆಂಧ್ರ ಪ್ರದೇಶದ ಮುಂಗಡ ಪತ್ರದಲ್ಲಿಯೂ ೨ ಕೋಟಿ ರೂ. ಕೊರತೆಯಿದೆಯಾದರೂ ಸಂಪನ್ಮೂಲಗಳು ಹೆಚ್ಚಿದರೆ ಮಾತ್ರ ಕೆಲವೊಂದು ವೆಚ್ಚಗಳನ್ನು ಮಾಡಲಾಗುವುದೆಂದು ಅಲ್ಲಿನ ಅರ್ಥ ಮಂತ್ರಿಯವರು ಹೇಳಿದ್ದಾರೆ. ಬಹು ವರ್ಷಗಳಿಂದಲೂ ಕೊರತೆಯನ್ನೇ ತೋರಿಸುವ ರಾಜ್ಯಗಳು ತಮ್ಮ ಆರ್ಥಿಕ ಸ್ಥಿತಿಯು ನೆಟ್ಟಗಾಗದೆ ವೆಚ್ಚದ ಬಾಬುಗಳನ್ನು ಮಾತ್ರ ಹೆಚ್ಚಿಸುತ್ತ ಹೋಗುವುದು ಸಲ್ಲಕ್ಷಣವೆನ್ನಬರುವುದಿಲ್ಲ. ಇದಕ್ಕೆ ನಮ್ಮ ರಾಜ್ಯವೂ ಅಪವಾದವಾಗಿ ಉಳಿಯಲಾರದು.

ಎ. ಜಿ. ಆರ್. ಸಮಿತಿಯು ಮುಖ್ಯವಾಗಿ ಕರಾಕರಣೆಯ ಪ್ರಮಾಣವನ್ನು ಹೆಚ್ಚಿಸುವ ಏಳು ವಿಧಾಗಗಳನ್ನು ತೋರಿಸಿದೆ. ಹೊಸ ಕಟ್ಟಡಗಳ ಮೇಲೆ ಹೊರಿಸುವ ಕರವೊಂದು ಲಾಭಪ್ರದವಾಗಿ ಕಂಡುಬಂದೀತು. ಉಳಿದ ಭೂಕಂದಾಯ, ನೀರಾವರಿ ಕರಗಳ ಮೇಲೆ ಸರ್‌ಚಾರ್ಜು ಮಾರಾಟ ತೆರಿಗೆಯ ತಿದ್ದುಪಡಿ, ಒಕ್ಕಲುತನದ ಉತ್ಪತ್ತಿಯ ಮೇಲೆ ಸೂಪರ್‌ಟೇಕ್ಸ್, ಮನರಂಜನೆಯ ಕರದಲ್ಲಿ ಹೆಚ್ಚಳ—ಮೊದಲಾದುವು ಹೆಚ್ಚಿನ ಆದಾಯ ತರುವಂತಿಲ್ಲ. ಈಗಾಗಲೇ ಕಾನೂನಾಗಿ ಭೂಸುಧಾರಣೆಯು ರೂಪಿತವಾಗಿರುವುದರಿಂದ ಅದು ಸಂಪೂರ್ಣವಾಗಿ ಕಾರ್ಯಕೃತಗೊಂಡಾಗ, ಭೂಕಂದಾಯವು ರಾಜ್ಯ ಮುಂಗಡ ಪತ್ರದಲ್ಲಿ ಅಲಂಕರಿಸಿದ್ದ ಸ್ಥಾನವನ್ನು ಕಳೆದುಕೊಳ್ಳುವುದು. ರಾಜ್ಯದ ಆರ್ಥಿಕೋತ್ಪನ್ನದಲ್ಲಿ ವಾಹನ ತೆರಿಗೆ ಮತ್ತು ಮಾರಾಟ ತೆರಿಗೆಗಳು ಮಾತ್ರ ಅಗ್ರಗಣ್ಯವಾದುವು

ಪಂಚವಾರ್ಷಿಕ ಯೋಜನೆಗಳ ಹೆಸರಿನಲ್ಲಿ ನೀರಾವರಿ, ವಿದ್ಯುಚ್ಛಕ್ತಿ ಮೊದಲಾದುವುಗಳಿಗೆ ಅತೀವ ಹಣವನ್ನುವಿನಿಯೋಗಿಸಲಾಗಿದೆ. ೧೯೬೩ರ ಮಾರ್ಚಿಯಲ್ಲಿ ರಾಜ್ಯದ ಸಾಲವು ೧೯೦ ಕೋಟಿ ರೂಪಾಯಿಗಳಾಗಬಹುದೆಂದು ಶ್ರೀ ಕಂಠಿಯವರು ಹೇಳುತ್ತಾರೆ. ಇದೇ ರೀತಿಯಲ್ಲಿ ಸಾಲವು ಹೆಚ್ಚುತ್ತ ಹೋದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಕೆಡುವುದು ಖಂಡಿತ. ಕೇಂದ್ರ ಸರಕಾರದಿಂದ ಸಾಲವನ್ನೋ ಸಹಾಯಧನವನ್ನೋ ಬಹಳವಾಗಿ ನಿರೀಕ್ಷಿಸುವ ನಮ್ಮ ರಾಜ್ಯದ ಆರ್ಥ ವ್ಯವಸ್ಥೆಯು ಕೆಟ್ಟು ಹೋದುದಕ್ಕೆ ನಮ್ಮ ವಿನಿಯೋಗ ಪ್ರಣಾಲಿಯೇ ಬಹುಮಟ್ಟಿಗೆ ಕಾರಣವೆನ್ನಬಹುದು. ಸಾಕಷ್ಟು ಆದಾಯ ಕೊಡುವಂತಹ ಯೋಜನೆಗಳನ್ನು ಪ್ರಾರಂಭದಲ್ಲಿ ಕೈಗೊಳ್ಳಬೇಕೇ ಹೊರತು ನಷ್ಟವನ್ನು ಉಂಟು ಮಾಡುವುವನ್ನಲ್ಲ. ನಮ್ಮ ಹಲವಾರು ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಯೋಜನೆಗಳಿನ್ನೂ ಆದಾಯ ತರುವಂತಹ ನೆಲೆಗೆ ಬಂದಿಲ್ಲವೆಂದು ಮಂತ್ರಿವರ್ಯರೇ ಹೇಳುವಾಗ, ಹಾಕಿದ ದುಡ್ಡಿಗೆ ಯಾವ ಪ್ರತಿಫಲವೂ ದೊರೆತಿಲ್ಲವೆಂಬುದು ನಿಶ್ಚಯವಾಗುತ್ತದೆ. ರಾಜ್ಯದಲ್ಲಿ ತೊಡಗಿಸುವ ಬಂಡವಾಳವು ಶೀಘ್ರದಲ್ಲಿಯೇ ಆದಾಯ ತರುವಂತಹದಾದರೆ, ರಾಜ್ಯದ ಆರ್ಥಿಕ ಸ್ಥಿತಿಯು ಸುಧಾರಿಸಬಲ್ಲುದು.

ನಮ್ಮ ಮುಂಗಡ ಪತ್ರದಲ್ಲಿ ಕಂಡುಬರುವ ಇನ್ನೊಂದು ಅಂಶವೆಂದರೆ, ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರಕಾರವು ನೀಡಿದ ಸಾಲದ ಮೊತ್ತ ಮತ್ತು ಅವು ಮರುಪಾವತಿ ಮಾಡದೆ ಉಳಿದಿರುವ ಅಂಶ. ಸ್ಥಳೀಯ ಸಂಸ್ಥೆಗಳು ಸರಕಾರಕ್ಕೆ ಸಂದಾಯಮಾಡ ಬೇಕಾದ ಮೊತ್ತವೇ ೩೨ ಕೋಟಿ ರೂಪಾಯಿಗಳಷ್ಟಿದೆ. ಸರಕಾರವಾದರು ಸಾರ್ವಜನಿಕರಿಂದ ಸಾಲವನ್ನು ಪಡೆದು ಕೊಡಿಸಿದ ಹಣವನ್ನು ಮರುಪಾವತಿಯ ದಿನದಂದು ಹಿಂತಿರುಗಿಸಬೇಕಾಗಿರುವಾಗ ಸ್ಥಳೀಯ ಸಂಸ್ಥೆಗಳು ಇಂತಹ ಬೇಜವಾಬ್ದಾರಿತನದಿಂದ ವರ್ತಿಸುವುದು ಸೂಕ್ತವೆನ್ನುವಂತಿಲ್ಲ. ಇಲ್ಲಿ ಸರಕಾರದ ದೋಷವೂ ಇದೆಯೆನ್ನಬಹುದು. ಸಾಲವನ್ನುಶರ್ತಗಳಿಗನುಸಾರವಾಗಿ ಮರಳಿ ವಸೂಲು ಮಾಡುವ ಕರ್ತವ್ಯದಿಂದ ಸರಕಾರವು ಹಿಂದುಳಿಯಬಾರದು. ಸರಕಾರವು ನ್ಯಾಯೋಚಿತ ವಿಧಾನದಲ್ಲಿ ನಡೆಸಿರುತಿದ್ದರೆ, ಇಷ್ಟು ದೊಡ್ಡ ಮೊತ್ತದ ಸಾಲವು ವಸೂಲಿಯಾಗದೆ ಉಳಿಯಲಾರದೆಂದೆನಿಸುತ್ತದೆ.

ಕೇಂದ್ರ ಸರಕಾರದಿಂದ ರಾಜ್ಯಗಳಿಗೆ ದೊರೆಯುವ ಹಣವು ಚಂದಾ ಸಮಿತಿಯ ವರದಿಯಂತೆ ಹೆಚ್ಚಾಗುವುದರಿಂದ ರಾಜ್ಯ ಸರಕಾರಗಳ ಆರ್ಥಿಕ ಸ್ಥಿತಿಯು ಸುಸವಾದರೂ ಉತ್ತಮಗೊಂಡೀತು. ರಾಜ್ಯದಲ್ಲಿ ಮಾಡುವ ವೆಚ್ಚವೆಲ್ಲವನ್ನೂ ತೂಗಿ ಮಾಡಬೇಕು; ಹಣತೊಡಗಿಸುವಲ್ಲಿ ಅತೀವ ಜಾಗ್ರತೆ ವಹಿಸಬೇಕು; ಕರಗಳ ವಸೂಲಿಯ ಕಾರ್ಯವು ಸಮರ್ಥರೀತಿಯಲ್ಲಿ ನಡೆಯಬೇಕು—ಹೀಗಾದಲ್ಲಿ ಮಾತ್ರ ಸ್ಥಿತಿ ಉನ್ನತವಾದೀತು; ಇಲ್ಲವಾದರೆ ಇದೇ ದುಸ್ಥಿತಿ ಇನ್ನೂ ಮುಂದುವರಿದೀತು.

೧೯೬೨-೬೩ರ ರಾಜ್ಯದ ಮುಂಗಡ ಪತ್ರದ ಅಂಕೆಗಳು ಈ ರೀತಿಯಿವೆ:

ಆಯ: ರೂ. ೯೯,೭೦,೯೬,೦೦೦

ವ್ಯಯ: ರೂ. ೧೦೨,೯೩,೪೯,೦೦೦

ಕೊರತೆ: ರೂ. ೩,೨೨,೬೩,೦೦೦

ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ ?
ಫರ್ನಿಚರುಗಳಲ್ಲಿಲ್ಲಿ 'ಹೀರಾ' ತಿಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ ?
ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಓರಣಕ್ಕಾಗಿ— ತಾಳಿಕೆ ಬಾಳಿಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ದೇಶ ವಿಖ್ಯಾತವಾದ 'ಹೀರಾ' ಉಕ್ಕಿನ ಫರ್ನಿಚರುಗಳನ್ನೆ ಉಪಯೋಗಿಸಿರಿ. ವಿಚಾರಿಸಿರಿ, ಯಾ, ಶೋ ರೂಮನ್ನು ಸಂದರ್ಶಿಸಿರಿ.

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ನಿಕಲಿಪಿ ಮತ್ತು ನಿಕಮಾಧ್ಯಮ

(೪ನೇ ಪುಟದಿಂದ)

ಒಂದು ಪ್ರದೇಶದ ಭಾಷೆಯಾಗಿರದೆ, ವಿಶಾಲ ಭಾರತದ ಭಾಷೆಯಾಗಿದೆ ವಾಲ್ಮೀಕಿ, ಕಾಲಿದಾಸ, ಹೇಮಚಂದ್ರ, ಅಭಿನವ ಗುಪ್ತ, ಶಂಕರಾಚಾರ್ಯ ಜಗನ್ನಾಥ, ಜಯದೇವ, ಸಾಯಣ, ಅಥವಾ ವಾಚಸ್ಪತಿ ಯಾವ ಪ್ರದೇಶಗಳಿಗೆ ಸೇರಿದವರೆಂಬುದೇ ಅದೆಷ್ಟೋ ಮಂದಿಗೆ ತಿಳಿದಿಲ್ಲ. ಇದು ವಿಚಿತ್ರ ಸತ್ಯ. ತಿಳಿಯುವ ಅವಶ್ಯಕತೆಯಾದರೂ ಏನು? ಅದೆಷ್ಟೋ ತತ್ವ ಚಿಂತಕರು ತಮ್ಮ ಹೆಸರನ್ನು ಕೂಡಾ ಗುಪ್ತವಾಗಿರಿಸಿದ್ದಾರೆ ಇದೆಷ್ಟು ವಿಲಕ್ಷಣ ಸಂಗತಿ! ಸಂಸ್ಕೃತದಲ್ಲಿರುವ ಜೀವನ ಸತ್ಯ ಧರ್ಮಭಾವನೆ ಪಾಂಡಿತ್ಯ ವಿಸ್ತಾರ ಸೌಂದರ್ಯ ವಿಲಾಸ, ಕೋಮಲತೆ, ಸುವಾಸನೆಗಳಿಂದ ಭಾರತವನ್ನರಿಯಲು ಸಾಧ್ಯವಿದೆ ಸಂಸ್ಕೃತದ ಅಧ್ಯಯನ ಪಾಂಡಿತ್ಯದ ವಿನಃ ನಿಜವಾದ ಭಾರತ ಯಾ ಭಾರತದ ಆತ್ಮವನ್ನರಿಯುವದು ಅಸಂಭವ ಭಾರತದ ಭಾವಾತ್ಮಕ ಐಕ್ಯದ ಪುರಸ್ಕರ್ತರೂ ಅನುರಾಗಿಗಳೂ ಶಿಕ್ಷಣದ ವಿಷಯ ಆಲೋಚಿಸುವಾಗ ಸಂಸ್ಕೃತವನ್ನು ಮರೆಯಲು ಸಾಧ್ಯವೇ ಇಲ್ಲ ಸಂಸ್ಕೃತ ಅಧ್ಯಯನದಿಂದ ನಮ್ಮ ಭಾವಾತ್ಮಕ ಐಕ್ಯವು ಪರಿಪುಷ್ಟವಾಗಬಲ್ಲುದ, ನಮ್ಮ ಜನಭಾಷೆಯು ನವಜೀವನ ತಳೆಯಬಲ್ಲುದು, ಯಾವೊಂದೂ ಪ್ರಯತ್ನದ ವಿನಃ ನಮ್ಮ ಭಾಷೆಗಳು ಸಂನಿಕಟತೆಯನ್ನು ಹೊಂದಿಯಾವು ಸ್ವತಂತ್ರ ಭಾವನೆಯು ಆಂಗ್ಲ ಭಾಷೆಯಲ್ಲಿ, ಸತ್ಯ ಜಿಜ್ಞಾಸೆಯ ಭಾವನೆಯು ಸಂಸ್ಕೃತದಲ್ಲಿ ಕಂಡು ಬರುವಷ್ಟು ಇನ್ನೆಲ್ಲಿಯೂ ಕಂಡು ಬರುವುದಿಲ್ಲ.

ಜನ ಭಾಷೆಯು ಸಮೃದ್ಧವಾಗಲಿ

ಆಧುನಿಕ ಜನ ಭಾಷೆಗಳು ಆ ಎಲ್ಲಾ ದೃಷ್ಟಿಯಿಂದ ಉಚ್ಚ ವಿಚಾರ, ಉಚ್ಚ ಆದರ್ಶ, ಉಚ್ಚ ಸೌಂದರ್ಯ ಮತ್ತು ಉಚ್ಚ ಜ್ಞಾನವನ್ನು ಹೊರಗೆಡಹಲು ಸಮರ್ಥವಾಗಬೇಕು ಅದಕ್ಕಾಗಿ ಪುರುಷಾರ್ಥವನ್ನು ನಿರ್ಮಿಸುವ ಕೆಲಸ ನಮ್ಮದು ಮತ್ತು ನಮ್ಮ ಅಖಂಡರಾಷ್ಟ್ರದ್ದು. ನೀವು ನಿಮ್ಮ ಭಾಷೆಯನ್ನು ಎಲ್ಲಾ ವ್ಯವಹಾರಗಳಲ್ಲಿ ಉಪಯೋಗಿಸಲು ಆಗದಿರಬಹುದು. ಅವುಗಳಲ್ಲಿ ಕಥೆ, ಕವಿತೆ, ನಾಟಕಗಳು ಬರೆಯಲ್ಪಟ್ಟಿರಬಹುದು. ಆದರೆ ಜ್ಞಾನ ವಿಜ್ಞಾನ ಮತ್ತು ಶಾಸ್ತ್ರ, ಆತ್ಮ ಜ್ಞಾನಗಳ ಮೀಮಾಂಸೆಯು ಅದರಲ್ಲಿರದಿದ್ದ ಪಕ್ಷದಲ್ಲಿ ಅದರ ಬೆಲೆಯು ಗೌಣವಾಗಿ ಬಿಡುತ್ತದೆ ನಮ್ಮ ಅಂತಃಕರಣದಲ್ಲಿ ಅದು ಸಂಪೂರ್ಣ ಪ್ರತಿಷ್ಠೆಯನ್ನು ಸ್ಥಾಪಿಸಿಲ್ಲ ಎಂಬುದೇ ಅದರ ಅರ್ಥ. ವಾನೆಕೆಲಸವನ್ನು ಮಾಡುವ ದಾಸಿಯ ಸ್ಥಾನ ಯಾರಿಗೆ ಪ್ರಾಪ್ತವಾಗಿರುವ ಭಾಷೆಗೆ ಜನ ರಾಜ್ಯದ ರಾಣಿಯ ಪದವಿಯು ದೊರೆಯಬೇಕು

ಸಹಕಾರಿ ಕೃಷಿ ಕ್ಷೇತ್ರವೊಂದರ ಆಡಳಿತ ಮಂಡಳಿಯು ಕೃಷಿಯ ಬೆಳೆಯ ಬಗ್ಗೆ ಯೋಜನೆ ರೂಪಿಸುತ್ತಿದೆ

— ನಮ್ಮ ಉತ್ತರಾಧಿಕಾರಿ —

ಗುಜರಾತಿ, ಮರಾಠಿ, ಬಂಗಾಲಿಗಳು ಹಿಂದೀ ಭಾಷೆಗಳೇ ಆಗಿವೆ ಹಾಗೆಯೇ ದಕ್ಷಿಣದ ದ್ರವಿಡ ಭಾಷೆಗಳೂ ನಮ್ಮವೇ ಅನೇಕ ವರ್ಷಗಳಿಂದಲೂ ಆಯಾಯ ಪ್ರಾದೇಶಿಕ ಸಮಾಜವು ಈ ಭಾಷೆಯನ್ನು ಉಪಯೋಗಿಸುತ್ತಿವೆ ಈ ಭಾಷೆಗಳಲ್ಲಿ ಜನರಂಜನೆಯು ಎಲ್ಲಾ ರೀತಿಯ ಸೌಂದರ್ಯೋಪಾಸನೆಯು ನಡೆದಿದೆ ಕರುಣಾಪೂರ್ಣ ಆರ್ತತಾಮಯ ವಾಣಿಯಿಂದ ಭಕ್ತರು ಭಗವಂತನನ್ನು ಈ ಭಾಷೆಯಿಂದಲೇ ಸ್ತುತಿಸುತ್ತಾರೆ ಕೀರ್ತನಕಾರರು ಪೌರಾಣಿಕ ಕಥೆಗಳನ್ನು ನವನವೀನ ರೂಪದಿಂದ ವರ್ಣಿಸುತ್ತಾ ಜನರಂಜನೆಗೈದುದು ಇದೇ ಭಾಷೆಯಲ್ಲಿ ಜ್ಞಾನಿಗಳು ನೀತಿ ಮತ್ತು ಮೋಕ್ಷದ ಕುರಿತಾದ ವಿವರವನ್ನು ನೀಡಲು ಈ ಭಾಷೆಗಳನ್ನೇ ಬಳಸಿದ್ದಾರೆ ಜನರ ಹೃದಯದಲ್ಲಿ ಒಂದೊಮ್ಮೆ ಸಾಹಿತ್ಯ ಮಾಧ್ಯಮದಿಂದಲೇ ಅನುಸಂಧಾನ ಅಭಿಸಂಧಾನ ಮಾಡುವ ಆಕಾಂಕ್ಷೆಯಿದ್ದುದಾದರೆ ನಮಗೆ ಈ ನಮ್ಮ ಉತ್ತರಾಧಿಕಾರಿಯನ್ನು ಮರೆಯಲು ಸಾಧ್ಯವಿಲ್ಲ ಅದರ ಪೂರ್ಣ ವಿನಿಯೋಗವನ್ನು ನಾವು ಮಾಡಲೇ ಬೇಕು ನಮ್ಮ ಮಾತೃಭಾಷೆಯ ಸಂಬಂಧ ನಮ್ಮ ಜೀವನದೊಡನೆ ನಿಗೂಢವಾಗಿ ಬೆರೆತಿದೆ ಆ ಸ್ಥಾನವನ್ನು ಬೇರಾವ ಭಾಷೆಯೂ ಕಬಳಿಸಲು ಸಾಧ್ಯವಿಲ್ಲ ಮಾತೃಭಾಷೆಗೆ ಪೂರ್ಣ ಗೌರವ ಪ್ರತಿಷ್ಠೆಗಳನ್ನು ದೊರಕಿಸಿ ಕೊಡುವುದು ಸಮಾಜ ಮತ್ತು ಸರಕಾರದ ಕರ್ತವ್ಯವಾಗಿದೆ ಪದವಿ ಪರೀಕ್ಷೆಯ ತನಕ ನಮ್ಮ ಎಲ್ಲಾ ಶಿಕ್ಷಣವು ಮಾತೃಭಾಷೆಯಲ್ಲಿಯೇ ದೊರೆಯಬೇಕು ಆಗ ಮಾತ್ರ ನಮ್ಮ ಭಾಷೆಯು ಸರ್ವ ವ್ಯವಹಾರ ಮತ್ತು ವ್ಯವಸಾಯದ ಆವಿಷ್ಕಾರಕ್ಕೆ ಸ್ವಾಭಾವಿಕ ಸಾಧನವಾದೀತು ಆ ಭಾಷೆಯು ಜ್ಞಾನ ವಿಜ್ಞಾನ ಅಭಿವ್ಯಕ್ತಿಯ ಭಾಷೆಯಾದಾಗಲೇ ಅದರ ವಿವಿಧ ಸಾಮರ್ಥ್ಯದ ಪ್ರತಿಬಿಂಬ ನಮ್ಮ ಸ್ಫೂರ್ತಿ ಕಲ್ಪನಾರಮ್ಯ ಸಾಹಿತ್ಯದ ಉದ್ಭವವೂ ಗೋಚರಿಸಬಹುದು ಶಂಕರಾಚಾರ್ಯರ ಸರಳ, ಸುಬೋಧ ಪ್ರಭಾವೀ ಗದ್ಯದ ತಳದಿಂದ ಕಾಲಿದಾಸನ ಅಭಿರಾಮ ಮತ್ತು ಅಭಿಜಾತ ವಾಗರ್ಥ ಪ್ರತಿಪದ ಹೊಂದಿ ಜೀವನದ ಸರ್ವ ವಿಷಯಗಳನ್ನೂ ಸ್ಪರ್ಶಿಸು ಆ ಶಿಕ್ಷಣ ಕವಿಚಿಂತಕ ಮತ್ತು ಜ್ಞಾನಿಗಳಿಗೆ ಸಂಸ್ಕೃತ ಮಾಧ್ಯಮದಿಂದಲೇ ಲಭಿಸಿದೆ ವೃತ್ತಪತ್ರಿಕೆಗಳು ಲೋಕಗಮ್ಯ ವಾಣಿಯಿಂದಲೇ ಜನರ ಜ್ಞಾನ ಪಿಪಾಸೆಯನ್ನು ಅಲ್ಪ ಸ್ವಲ್ಪ ಹಿಂಗಿಸುವ ಪ್ರಯತ್ನ ಮಾಡುತ್ತವೆ ಉಚ್ಚ ಶಿಕ್ಷಣದಿಂದಲೇ ಅಪೇಕ್ಷಿತವಾಗಿರುವ ಕಾರ್ಯಗಳು ಅಲ್ಪ ಪ್ರಮಾಣದಲ್ಲಿ ನೆರವೇರಿವೆ ಎಂಬುದೂ ನಮ್ಮ ಸದ್ಭಾಗ್ಯವೇ ಅಲ್ಲವೇ? ವಿವೇಚನೆ ಮತ್ತು ತತ್ವಜ್ಞಾನಗಳ ವಿಷಯದಲ್ಲಿ ಮಾಸಿಕ, ತ್ರೈಮಾಸಿಕಗಳು ರಾಜಕಾರಣದ ಕುರಿತು ದಿನಪತ್ರಿಕೆ ಮತ್ತಿತರ ನಿಯತ ಕಾಲಿಕಗಳು ವಿದ್ಯಾರ್ಥಿಯ ಶಿಕ್ಷಣದ ಪ್ರಾಥಮಿಕ ಅವಶ್ಯಕತೆಯನ್ನು ಕೆಲವೊಂದು ಪ್ರಮಾಣದಲ್ಲಿ ಅವಶ್ಯವಾಗಿಯೇ ಹಿಂಗಿಸಿವೆ ವೃತ್ತಪತ್ರಿಕೆಗಳಿಗೆ ಅನೇಕ ನಿಯಮಗಳಿದ್ದರೂ ಅವು ವ್ಯಾವಹಾರಿಕ ಭಾಷೆಯ ಉಪಯೋಗದಿಂದ ಜನಸಾಮಾನ್ಯರ ಸಾಮೀಪ್ಯವನ್ನು ಸೇರಿವೆ. ಒಂದೊಮ್ಮೆ ಅವುಗಳು ತಮ್ಮ ಕಾರ್ಯಗೈಯುದಿರುತ್ತಿದ್ದಲ್ಲಿ ವಿದ್ವಾಂಸರ ಮತ್ತು ಸಾಮಾನ್ಯ ಜನತೆ, ಸಾಹಿತ್ಯಕಾರರು ಮತ್ತು ಜನಗಳ ನಡುವೆ ಒಂದು ದೊಡ್ಡ ಅಂತರವೇ ಉಂಟಾಗುತಿತ್ತು ಈ ಕಾರ್ಯ ಇದಕ್ಕಿಂತಲೂ ಉಚ್ಚ ಪಾಠಶಾಲೆಯಿಂದ ವಿದ್ಯಾರ್ಥಿಗಳು ನೆರವೇರಿಸಬೇಕು ಪ್ರಾದೇಶಿಕ ಭಾಷೆಯಲ್ಲಿ ಉಚ್ಚ ದರ್ಜೆಯ ಪಂಡಿತ ನಿರ್ಮಾಣಗೈದು, ಅವರ ಜ್ಞಾನವನ್ನು ಲೋಕಗಮ್ಯ ಶೈಲಿ ಮತ್ತು ಶಿಷ್ಟ ಸಮಸ್ತ ಭಾಷೆಯಲ್ಲಿ ಒಂದೇ ಸವನೆ ಪ್ರಸರಿತಗೈಯುವ ಮಹಾನ್ ಕಾರ್ಯವನ್ನು ಪ್ರಾದೇಶಿಕ ವಿದ್ಯಾರ್ಥಿಗಳು ಗೈಯಬೇಕು. ಇದೇ ದೇಶದ ವಿದ್ಯಾರ್ಥಿಗಳು ಆಂಗ್ಲ ಅಥವಾ ಹಿಂದೀ ಭಾಷೆಯನ್ನು ಮಾಧ್ಯಮವನ್ನಾಗಿ ಸ್ವೀಕರಿಸಿದರೆ ಈ ಕಾರ್ಯ ಆಗಲಾರದು ಒಂದೊಮ್ಮೆ ಆ ಪ್ರಯತ್ನವು ನಡೆದರೂ ಅದರ ಜ್ಞಾನ ಪಾವಳಿಯು ಕ್ಷೀಣವಾಗುವ ಸಂಭವ ಹೆಚ್ಚುತ್ತದ.

(ಮರಾಠೀ ಸಾಪ್ತಾಹಿಕ 'ಸಾಧನಾ'ದಿಂದ)

ಉದಯೋನ್ಮುಖ ಲೇಖಕ ಶ್ರೀ ಪಿ ನ್ ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ ಎಂ ಎ. ಪೈ, ಎಂ ಬಿ ಬಿ ಎಸ್)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ ನೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳವುಗಳನ್ನು ಕಾಣಬಹುದು

180 ಪುಟಗಳು — ಬಿಳಿ ಕಾಗದ — ಬೆಲೆ ರೂ 2=00

ರೂ. 2=೨೫ ನ ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವ

ನವಭಾರತ ಪುಸ್ತಕ ಭಂಡಾರ, ಉಡುಪಿ

Tel. 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone 374

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜು ಎದುರುಗಡೆ)ಮಂಗಳೂರು ಮಾಲಿಕ,ಕೆ ಕೆ ಆರ್ ಶೇಟ್

ನಾಲಿಗೆ ಸಡಿಲು ಬಿಡದೆ

ಕಣ್ಣುತೆರೆದು ನೋಡಬೇಕು

(ಪ್ರಧಾನಿ ನೆಹರುರವರು ಭಾರತದ ಬಗ್ಗೆ ಅಹರ್ನಿಶಿ ಚಿಂತಿಸುವವರು; ಅವರು ಚೀನ, ಜಾತೀಯತೆ, ಯೋಜನೆಯ ಪ್ರಶ್ನೆಯ ಬಗ್ಗೆ ವ್ಯಕ್ತಪಡಿಸಿದ ವಿಚಾರಗಳನ್ನು ಇಲ್ಲಿ ಸಂಗ್ರಹಿಸಿಕೊಡಲಾಗಿದೆ).



ಭಾರತ-ಚೀನಾಗಳ ನಡುವಣ ಸೀಮಾ ವಿವಾದವು ಇಂದಿಗೆ ಮಾತ್ರವಲ್ಲ ಮುಂದಿಗೂ ಅತಿ ಗಂಭೀರವೆನಿಸಿದ ಪ್ರಶ್ನೆಯಾಗಿದೆ. ಇದನ್ನು ಯುದ್ಧದ ಮೂಲಕ ಸರಳವಾಗಿ ಬಗೆ ಹರಿಸಿಕೊಳ್ಳಬಹುದೆಂಬುದು ತೀರ ಹುಚ್ಚು ಕಲ್ಪನೆ. ಎರಡು ಕಡೆಯವರಲ್ಲಿ ಯಾರಾದರೊಬ್ಬರು ಸಂಧಾನದ ದಾರಿ ಹಿಡಿಯರೆಂದರೆ, ಅವರು ತಮ್ಮ ಶತ ಪ್ರಯತ್ನಗಳಿಂದ ಜಯಶೀಲರಾಗಲು ಹೆಣಗಾಡುವುದು ಸ್ವಾಭಾವಿಕ. ಜಗತ್ತು ನಿಶ್ಶಸ್ತ್ರೀಕರಣದತ್ತ ಸಾಗುವ ಪ್ರಾಥಮಿಕ ಹೆಜ್ಜೆಗಳನ್ನಿಡುತ್ತಿರುವ ಈ ಸಂದರ್ಭದಲ್ಲಿ ನಾವಾರೂ ಕಾಣದಂತಹ ಕೊನೆಗೆ ನಮ್ಮನ್ನು ಮುಟ್ಟಿಸಬಲ್ಲ ಯುದ್ಧದ ಮಾರ್ಗಕ್ಕೆ ದುಮುಕುವುದು ವಿವೇಕತನವೆನಿಸದು. ಆದುದರಿಂದಲೇ ನಾವು ಈ ಪ್ರಶ್ನೆಯನ್ನು ಶಾಂತಿಯುತ ಮಾರ್ಗಗಳಿಂದಲೇ ಬಿಡಿಸಬೇಕೆಂದು ಬಯಸುತ್ತೇವೆ. ದುರದೃಷ್ಟವಶದಿಂದ ಇದು ಅಸಾಧ್ಯವೆಂಬುದಾದರೆ, ಅನ್ಯಮಾರ್ಗವನ್ನರಸುವುದು ಅನಿವಾರ್ಯವೆನಿಸುವುದು. ಆದರೂ ಶಾಂತ ವಿಧಾನಗಳ ಬಾಗಿಲನ್ನು ಮುಚ್ಚುವಂತಹ ಇಲ್ಲವೇ ಅದಕ್ಕೆ ನಿರ್ಬಂಧ ಹೇರುವಂತಹ ಮಾರ್ಗಗಳನ್ನು ಎಂದಿಗೂ ಅನುಸರಿಸಬಾರದು. ಒಂದು ವೇಳೆ ಇಂತಹ ಅಪ್ರಿಯ ಕ್ರಮಗಳನ್ನು ಕೈಗೊಂಡೆವೆಂದರೆ, ಆಗ, ಭೌಗೋಳಿಕವಾಗಿ, ಐತಿಹಾಸಿಕವಾಗಿ ಅನಾದಿಯಿಂದ ಸಂಬಂಧವಿರಿಸಿಕೊಂಡಿದ್ದ ಈ ಎರಡು ಏಶ್ಯನ್ ಮಹಾರಾಷ್ಟ್ರಗಳ ಭವಿಷ್ಯದ ಸಂಬಂಧವು ಕೆಟ್ಟು ಹೋಗುವುದು; ಇಂದಿಗೆ ಮಾತ್ರವಲ್ಲ ಮುಂದೆಯೂ ಇವುಗಳ ನಡುವೆ ಮಧುರ ಸಂಬಂಧವೇರ್ಪಡುವುದು ತಪ್ಪಿ ಹೋಗುವುದು.

ಸದಾ ನೆರೆಹೊರೆಯಲ್ಲಿರುವವರೊಡನೆ ವೈಮನಸ್ಯ ಕಟ್ಟಿಕೊಳ್ಳುವುದು ಯಾರೊಬ್ಬನಿಗೂ ಸಾಧ್ಯವಿಲ್ಲ. ಹಾಗೆಯೇ ತನ್ನತನವನ್ನು ಕಳೆದು ಬದುಕುವುದೂ ಅಸಾಧ್ಯ. ಆದುದರಿಂದ ಶಾಂತಿಯ ತಳಹದಿಯಲ್ಲಿ ಪ್ರಶ್ನೆಗೆ ಪರಿಹಾರ ಲಭಿಸುವಂತಹ ಪರಿಸ್ಥಿತಿಯನ್ನು ನಾವು ನಿರ್ಮಿಸಬೇಕಾಗಿದೆ. ಜಾಗತಿಕ ಪರಿಸ್ಥಿತಿ ಮತ್ತು ನಿಲುವುಗಳು ಇದಕ್ಕೆ ಸಹಕಾರಿಯಾಗಬಲ್ಲವು. ಆದರೆ, ಚೀನದ ಮಟ್ಟಿಗೆ ಹೇಳುವುದಾದರೆ, ಈ ಪ್ರಾಪಂಚಿಕ ಅಭಿಪ್ರಾಯವು ಬೆಲೆಯಿಲ್ಲದ್ದು; ಅದು ಚೀನದ ಮೇಲೆ ಯಾವ ಪ್ರಭಾವವನ್ನೂ ಬೀರಲಾಗದು ಎನ್ನುವುದು ಕಷ್ಟವಾದರೂ ಸಾಕಷ್ಟು ಪ್ರಭಾವ ಹೇರಲಾರದೆಂಬುದು ಖಂಡಿತವಿದೆ. ಪ್ರಪಂಚದ ಹೆಚ್ಚಿನ ರಾಷ್ಟ್ರಗಳು ಚೀನಾ ವಿವಾದದಲ್ಲಿ ನಮಗೆ ಬೆಂಬಲ ಕೊಡುತ್ತಿವೆ; ಹಾಗಿದ್ದರೂ ನಾವು ಮುಂದೆ ಬರಬಹುದಾದುದನ್ನು ಎದುರಿಸುವ ಸಲುವಾಗಿ ಈಗಿಂದೀಗಲೇ ಸಿದ್ಧತೆಯನ್ನು ನಡೆಸಿಕೊಂಡು ಬರಬೇಕು. ಕೇವಲ ಜಾಗತಿಕ ಸಹಾನುಭೂತಿ—ಬೆಂಬಲಗಳ ಭರವಸೆಯಿಂದ ನಾವು ಮುಂದುವರಿಯುವುದು ಸಾಧ್ಯವಿಲ್ಲ.

ಭಾರತೀಯ ಜನತೆಯಲ್ಲಿ ಒಳಿತು—ಕೆಡುಕುಗಳ ಭಾವನೆಗಳು ಮಿಶ್ರವಾಗಿವೆ, ಕೆಲವೊಮ್ಮೆ ನಮ್ಮ ಜನರಲ್ಲಿ ದೇವತ್ವವು ಗೋಚರಿಸಿತೆಂದರೆ, ಮತ್ತೆ ಕೆಲವೊಮ್ಮೆ ದಾನವತೆಯು ತಾಂಡವವಾಡುವುದು. ಇದೆಲ್ಲವೂ ಪರಿಸ್ಥಿತಿಯನ್ನವಲಂಬಿಸಿದೆ. ದೇಶ ವಿಭಜನೆಯ ವೇಳೆಯಲ್ಲಿ ಈ ದಾನವತೆಯು ಮೂಡಿಬಂದು ಜಗತ್ತಿನ ಮುಂದೆ ನಾವು ತಲೆಬಾಗುವಂತೆ ಮಾಡಿತೆಂಬುದನ್ನು ನಾವು ಮರೆಯಲರೆವು. ದೇಶದೊಳಗೇನೇ ಮರಳಿ ವಿಭಜನೆಯನ್ನು ಬಯಸುವ ಪ್ರವೃತ್ತಿಯು ಇತ್ತೀಚೆಗೆ ಬಲಿಯತೊಡಗಿದೆ. ಮದ್ರಾಸದಲ್ಲಿ ದ್ರಾವಿಡ ಮುನ್ನೇತ್ರ ಕಳಗಂ ತನ್ನ ಬಲವನ್ನು ಮತ್ತಷ್ಟು ಹೆಚ್ಚಿಸಿಕೊಂಡಿದೆ. ಭಾರತದಿಂದ ಹೊರನಡೆದು ಪ್ರತ್ಯೇಕತಾ ಭಾವನೆಯನ್ನು ತಳೆಯುವ ಈ ಪಕ್ಷದ ತತ್ವಗಳಿಗೆ ಅಲ್ಲಿ ಹೆಚ್ಚಿನ ಮನ್ನಣೆ ದೊರೆತಿರುವುದು ಈ ದಾನವತೆಯ ಪ್ರತೀಕವೆನ್ನಬಹುದು. ಇಂತಹ ಅರಾಷ್ಟ್ರೀಯ ಮನೋಭಾವನೆಯನ್ನು ನಾವು ಈಗಿಂದೀಗಲೇ ಹತ್ತಿಕ್ಕದೆ ಹೋದರೆ, ಮುಂದೆ ಪ್ರಪಾತದಲ್ಲಿ ಕುಸಿಯುತ್ತೇವೆಯೆಂಬುದು ಸುಸ್ಪಷ್ಟವಿದೆ.

ದೇಶದ ಭದ್ರತೆಯನ್ನೂ ಉಳಿಸಿಕೊಳ್ಳುವ ಮತ್ತು ಅದನ್ನು ಸರಿದಾರಿಯಲ್ಲಿ ಮುಂದೆ ಸಾಗಿಸುವ ದಾರಿ ದೀಪವನ್ನು ನಾವಿಂದು ಹಿಡಿದು ನಡೆಯುತ್ತಿದ್ದೇವೆ. ಯಾವುದೇ ಕಾರಣದಿಂದ ಈ ದೀಪವನ್ನು ಮಂಜು ಮುಸುಕದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನಮ್ಮ ನಡೆಯನ್ನು ಯಾರೊಬ್ಬರಾದರೂ ಕುಂಠಿತಗೊಳಿಸದಂತೆ ಎಚ್ಚರವಾಗಿರುವುದು ಬಹಳ ಆಗತ್ಯ. ಪ್ರಚಲಿತ ಲೋಕಸಭೆಯ ಕೈಯಲ್ಲಿರುವ ಆ ದೀಪವನ್ನು ಸಭೆಯು ವಿಸರ್ಜನೆಗೊಂಡಾಗ ಮುಂದೆ ಅಧಿಕಾರ ಪಡೆಯಲಿರುವ ಸಂಸತ್ತಿನ ಕೈಗಳಿಗೆ ಒಪ್ಪಿಸಬೇಕಾಗಿದೆ. ಹೀಗೆಯೇ ಒಂದು ಲೋಕಸಭಾನಂತರ ಮತ್ತೊಂದು, ಒಂದು ಪೀಳಿಗೆಯ ನಂತರ ಬೇರೊಂದು ಪೀಳಿಗೆಯು ಆ ದೀಪವನ್ನು ಸದಾ ಬೆಳಗಿಸಿಯೇ ಇಟ್ಟುಕೊಳ್ಳಬೇಕು; ಅದರ ಸಹಾಯದಿಂದ ನಾವು ಮುನ್ನಡೆಯುತ್ತಿರಬೇಕು. ಹೀಗೆ ಮುಂದೆ ನಡೆಯಬೇಕೆಂದಾದರೆ, ನಮ್ಮ ಭವಿಷ್ಯದ ಬಗ್ಗೆ ಏನಾದರೂ ಕಾಲ್ಪನಿಕ ಚಿತ್ರಗಳನ್ನಾದರೂ ಇಟ್ಟುಕೊಳ್ಳುವುದು ಅತ್ಯಗತ್ಯ. ನಮ್ಮ ಉದ್ದೇಶವನ್ನು ಮರೆತುಬಿಟ್ಟು ಅದರಿಂದ ಕೈತೊಳೆದುಕೊಂಡು, ನಿಶ್ಚೇಷ್ಟಿತರಂತೆ ಬಿದ್ದುಕೊಂಡಿರುವುದರಿಂದ, ನಮ್ಮ ಕೆಲಸವಾಗುವುದಿಲ್ಲ. ಇಡಿಯ ಜಗತ್ತು ತನ್ನ ಜೀವನ ಪರಿಕ್ರಮವನ್ನು ಗಳಿಗೆಯಿಂದ ಗಳಿಗೆಗೆ ಬದಲಾಯಿಸುತ್ತಿರುವಾಗ, ನಾವಿನ್ನೂ ಹಳೆಯ ರೀತಿ ರಿವಾಜೆಂದು ಅವಕ್ಕೆ ಅಂಟಿಕುಳಿತರೆ ಪ್ರಯೋಜನವಿಲ್ಲ. ನಾವೀಗ ಬದುಕುತ್ತಿರುವಂತೆಯೇ ಕೊನೆಯವರೆಗೂ ಉಳಿಯಬೇಕೆಂದರೆ, ಅದು ಆಗದ ಹೋಗದ ಮಾತಾಗುವುದು. ಬದಲಾಗುತ್ತಿರುವ ಪ್ರಪಂಚದಲ್ಲಿ ನಾವೂ ಬದಲಾಗಲು ಸಿದ್ಧರಾಗಬೇಕು. ಸ್ವತಂತ್ರ ಪಕ್ಷ-ಜನಸಂಘದಂತೆ ಮುಂದೆ ಹೋಗುತ್ತಿರುವ ರಾಷ್ಟ್ರವನ್ನು ಜಗ್ಗಿ ೧೦೦-೨೦೦ ವರ್ಷಗಳ ಹಿಂದಿನ ಪರಿಸ್ಥಿತಿಗಳನ್ನು ಉಳಿಸಿಕೊಳ್ಳುವುದೆಂದರೆ, ಅದು ಅಕಾಲಿಕವಾದುದು, ಬೆಲೆಯಿಲ್ಲದುದು. ಆದುದರಿಂದ ನಾವು ಮುನ್ನಡೆಯಬೇಕು; ನಮ್ಮ ಗುರಿ ಮುಟ್ಟುವತನಕ ಎಂದಿಗೂ ಹಿಂದಿರುಗಿ ನೋಡಬಾರದು; ಪಥಗಾಮಿಗಳಾದ ನಮ್ಮನ್ನು ತಡೆಯಬಹುದಾದ ಜಾತೀಯತೆ, ಪ್ರಾಂತೀಯತೆಗಳ ಭಾವನೆಗಳು ಬಂದು ಎದುರಾಗದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕು.

ನಮ್ಮ ಯೋಜನೆಗಳು ನಿಷ್ಪ್ರಯೋಜಕವೆಂಬ ದೂರು ಇದೆ. ಇವೆಲ್ಲವೂ ಸಂಪೂರ್ಣ ಸಫಲವಾಗಿವೆಯೆಂದು ಹೇಳಲಾರೆವಾದರೂ ಕಳೆದ ಹದಿನೈದು ವರ್ಷಗಳಲ್ಲಿ ನಾವು ಪ್ರಗತಿಪರವಾದ ಹೆಜ್ಜೆಗಳನ್ನಿಟ್ಟಿದ್ದೇವೆ. ನಮ್ಮ ಜನತೆಯು ಈ ಯೋಜನೆಗಳ ಲಾಭಗಳನ್ನು ಪಡೆದಿದೆ. ಜಮೀನ್ದಾರಿ-ಜಹಗೀರುದಾರಿ ಪದ್ಧತಿಯಲ್ಲಿ ಸಿಕ್ಕಿಕೊಳ್ಳದ ಜನಸಾಮಾನ್ಯರು ಯೋಜನೆಯ ಮಹತ್ವವನ್ನೂ ಉಪಯೋಗವನ್ನೂ ಅರಿತುಕೊಂಡಿದ್ದಾರೆ. ಕ್ರಿಯಾಶೀಲವಾಗದೆ, ಪ್ರಗತಿಪಥಗಾಮಿಯಾಗಿ ನಿಷ್ಕ್ರಿಯವಾಗಿ ಕುಳಿತರೆ ಯಾವುದೇ ದೇಶ ಉದ್ಧಾರವಾಗದು; ಅದಕ್ಕಾಗಿ ನಿಯೋಜಿತ ಯೋಜನೆಗಳು ಅತ್ಯವಶ್ಯ. ನಾವು ಸಾಧಿಸಿದ ಪ್ರಗತಿಯನ್ನು ವಿದೇಶೀಯರೆಲ್ಲರೂ ಮುಕ್ತಕಂಠದಿಂದ ಹೊಗಳುತ್ತಾರೆ; ನಮ್ಮವರು ಮಾತ್ರ ಕುರುಡುಗಣ್ಣಿನಿಂದ ನೋಡುವುದು ವಿಚಿತ್ರವೆನಿಸುತ್ತದೆ.

ಜಿನೇವಾದಲ್ಲಿ ನಡೆದ ನಿಶ್ಶಸ್ತ್ರೀಕರಣ ಸಮ್ಮೇಲನದಲ್ಲಿ ಪಾತ್ರವಹಿಸಿದ ಭಾರತ ಪ್ರತಿನಿಧಿ ಮಂಡಲದ ನಾಯಕ ವಿ. ಕೆ. ಕೃಷ್ಣ ಮೆನನ್

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು—3

ಈಶ್ವರವಾದವನ್ನೊಪ್ಪಿದ

(೩ನೇ ಪುಟದಿಂದ)

ನಾಥ ಸಂಪ್ರದಾಯದ ಆರಾಧ್ಯ ದೇವತೆ ಶಿವ. ಆತನೇ ಯೋಗದೀಕ್ಷೆಯನ್ನು ಮೊತ್ತಮೊದಲಿಗೆ ಪಾರ್ವತಿಗೆ ನೀಡಿದವನು. ಮತ್ಸ್ಯೇಂದ್ರನಾಥನು ತಾನು ಕದ್ದು ಕೇಳಿದ ದೀಕ್ಷೆಯನ್ನು ಗೋರಖನಿಗೆ ಇತ್ತನು. ಶಿಷ್ಯನು ತನ್ನ ಸಾಧನೆ ಮತ್ತು ಅನುಭೂತಿಗಳಿಂದ ಗುರುವಿಗೂ ಮಿಗಿಲೆನಿಸಿದನು. ಕದ್ದು ಜ್ಞಾನ ಪಡೆದ ಅಪರಾಧಕ್ಕಾಗಿ ಮತ್ಸ್ಯೇಂದ್ರನಾಥನು ಈಶ್ವರನಿಂದ ಶಪಿತನಾದಾಗ ಶಿಷ್ಯ ಗೋರಖನೇ ಆತನನ್ನು ಬದುಕಿಸಿದನು. ಗೋರಖನು ನೀಡಿದ ಉಪದೇಶಗಳಲ್ಲಿ ಶಿವ ಮತ್ತು ಶಕ್ತಿಗಳೇ ಆದಿ ತತ್ತ್ವಗಳೆಂದು ಪ್ರತಿಪಾದಿತವಾಗಿವೆ.

ಈ ನಾಥ ಸಂಪ್ರದಾಯದಲ್ಲಿ ಇಂದ್ರಿಯ ನಿಗ್ರಹ ಇಲ್ಲವೇ ಯೋಗಕ್ಕೆ ಪ್ರಾಧಾನ್ಯವಿದ್ದುದರಿಂದ ಇದರ ಅನುಯಾಯಿಗಳನ್ನು ಜೋಗಿಗಳೆಂದೂ ಕರೆಯುತ್ತಾರೆ. ಈ ಜೋಗಿಗಳು ತಮ್ಮ ಹಠಯೋಗದ ಬಲದಿಂದ ಅಸಾಧ್ಯವಾದುದನ್ನು ಸಾಧ್ಯವನ್ನಾಗಿ ಮಾಡಿ ತೋರಿಸುತ್ತಾರೆ. ಅಲ್ಲಲ್ಲಿ ತಮ್ಮ ಮಠಗಳನ್ನು ಸ್ಥಾಪಿಸಿ, ಸಂಪ್ರದಾಯ ಪ್ರಚಾರವನ್ನೂ ಇವರು ಮಾಡಿದ್ದರು. ಇದಕ್ಕೆ ದೇಶದ ಮೂಲೆ ಮೂಲೆಯಲ್ಲಿ ನಾಥರ ಬಗ್ಗಿರುವ ದಂತಕಥೆ, ಅವರ ಮಠಗಳೇ ಸಾಕ್ಷಿ. ಗೋರಖನಾಥನ ಹೆಸರು ಎಲ್ಲೆಡೆಯೂ ಪ್ರಚಲಿತವಿದ್ದು ಆತನು ಅಸೀಮ ಗುರುಭಕ್ತನೆಂದು ಹೇಳಲಾಗುತ್ತದೆ. ಈ ಸಂಪ್ರದಾಯದ ಅನುಯಾಯಿಗಳು ಇಂದಿಗೂ ವಿರಳವಾಗಿಯಾದರೂ ಸಿಗುತ್ತಾರೆ.

—ಗೋರಾ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ಸ.

ಕುರಿಗಾಹಿಯ ಮಗ

(೨ನೇ ಪುಟದಿಂದ)

ಗುಪ್ಪದಕ್ಕೆ ಮುಂಚೆಯೇ ಕುರಿಗಳ ಹಿಂಡುಗಳನ್ನು ಮೇವಿಗೆ ಕೊಂಡೊಯ್ಯುತ್ತಿದ್ದರು ಮತ್ತು ಸಂಜೆಗೆ ಕೂಡ ತಡವಾಗಿಯೇ ವಾಪಸು ಬರುತ್ತಿದ್ದರು. ಕುರಿಗಳು ಬೆಳೆಯುತ್ತಿದ್ದುದನ್ನೂ, ಅವುಗಳ ಬಾಲಗಳು ದೊಡ್ಡದಾಗಿ, ಉಣ್ಣೆ ತುಂಬಿಕೊಳ್ಳುತ್ತಿದ್ದುದನ್ನೂ ಕಂಡು ರಂಫೇಲ್ ಸಂತೋಷಪಡುತ್ತಿದ್ದನು. ಅವುಗಳನ್ನು ರೊಪ್ಪದಲ್ಲಿ ಬಿಟ್ಟು, ಬಾಗಿಲು ಮುಚ್ಚಿದ ಮೇಲೆ ಬಹಳ ಹೊತ್ತಿನ ವರೆಗೆ ಅವನಿಗೆ ನಿದ್ರೆ ಬರುತ್ತಿರಲಿಲ್ಲ. ಕುರಿಗಾಹಿಗಳಿಗಾಗಿ ಕೃಷಿಕ್ಷೇತ್ರವು ಚಲಿಸುವ ಮನೆಗಳನ್ನು ಕಟ್ಟಿಕೊಟ್ಟಿರುತ್ತದೆ. ತಮ್ಮ ಕುರಿಗಳೊಟ್ಟಿಗೆ ಅವರು ತಮ್ಮ ಮನೆಗಳನ್ನು ಸುಲಭವಾಗಿ ಸಾಗಿಸುತ್ತಿರಬಹುದು. ಆದರೆ ತನ್ನ 'ಸೊಳ್ಳೆಪಂಜರ'ದಲ್ಲಿ ರಂಫೇಲ್ ಹೆಚ್ಚು ಹೊತ್ತು ಇರುತ್ತಿರಲಿಲ್ಲ. ಅವನಿಗೆ ನಕ್ಷತ್ರಗಳನ್ನು ನೋಡುತ್ತಿರುವುದೂ, ತಂಗಾಳಿಯ ಮೃದು ಸ್ಪರ್ಶಾನುಭವ ಪಡೆಯುವುದೂ, ಎಲೆಗಳ ಸರಸರ ಶಬ್ದವನ್ನು ಕೇಳುವುದೂ ಹೆಚ್ಚು ಇಷ್ಟವಾಗಿತ್ತು.

ಆದರೆ ಅವನು ಕ್ಷೇತ್ರದಲ್ಲಿ ಕಳೆಯುತ್ತಿದ್ದ ದಿನಗಳೆಲ್ಲವೂ ಒಳ್ಳೆಯದಾಗಿ ಇರುತ್ತಿರಲಿಲ್ಲ. ಕೆಲವು ಸಲ ಗುಡುಗು, ಕೆಲವು ಸಲ ಜಡಿಮಳೆ ಬರುತ್ತಿದ್ದುವು. ಆಲಿಕಲ್ಲು ಅಪರೂಪವಾಗಿರಲಿಲ್ಲ. ಒಂದು ದಿನ ವೆಂಕೋ ಸುಗ್ಗಿಯ ಕೆಲಸಕ್ಕೆ ಸಹಾಯ ಮಾಡಲು ಹೊರಟು ಹೋಗಿದ್ದುದರಿಂದ ರಂಫೇಲ್ ಒಬ್ಬನೇ ಇದ್ದನು. ಅವನು ಕುರಿಗಳನ್ನು ಒಂದು ಗುಡ್ಡಕ್ಕೆ, ಬೆಟ್ಟದ ತಪ್ಪಲಿಗೆ ಹೊಡೆದುಕೊಂಡು ಹೋಗಿದ್ದನು. ಅಲ್ಲಿ ಬೇಸಗೆಯ ಶಾಖಕ್ಕೆ ಹುಲ್ಲು ಇನ್ನೂ ಹೆಚ್ಚು ಒಣಗಿರಲಿಲ್ಲ. ನೆರಳೂ ಸುಲಭವಾಗಿ ಸಿಕ್ಕುತ್ತಿದ್ದು, ತಂಪಾದ ಹೊಳೆಯೂ ಸಮೀಪದಲ್ಲಿದ್ದಿತು. ಆದರೆ, ಅಂದು ಬೆಟ್ಟದ ಮೇಲಿನಿಂದ ಗುಡುಗಿನ ಸಪ್ಪಳ ಕೇಳಿಸಿತು. ಗುಡುಗಿಗೂ, ಆಕಾಶದಲ್ಲಿ ಆಗಿಂದಾಗ್ಗೆ ಹಾರುವ ವಿಮಾನಗಳ ಸಪ್ಪಳಕ್ಕೂ ವ್ಯತ್ಯಾಸವು ರಂಫೇಲಿಗೆ ತಿಳಿಯಲಿಲ್ಲ. ಅವನು ತಲೆಯೆತ್ತಿ ನೋಡಿದನು. ಕಪ್ಪಾದ ಮೋಡವು ಕ್ಷೇತ್ರದ ಮೇಲೆ ಹಾಯುತ್ತಿದ್ದುದನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಗಾಳಿ ಬಲವಾಗಿ ಬೀಸುತ್ತಿತ್ತು. ಮರಗಳ ಕೊಂಬೆಗಳೇ ಬಾಗುತ್ತಿದ್ದುವು. ನೋವಿಗೆ ನರಳುತ್ತಿರುವಂತೆ, ಅಡವಿಯಲ್ಲಿ ಕೊಯ್ ಎಂಬ ಶಬ್ದ ಕೇಳಿಸುತ್ತಿತ್ತು. ಮೋಡವು ಹೆಚ್ಚು ಹೆಚ್ಚು ಕಪ್ಪಾಯಿತು. ಇದ್ದಕ್ಕಿದ್ದಂತೆ ಕಗ್ಗತ್ತಲೆಯು ಕವಿದಂತಾಯಿತು. ರಂಫೇಲ್, ಹಳ್ಳಿಯ ಹುಡುಗರಂತೆಯೇ ಬಿರುಗಾಳಿಗೇನೂ ಅಪರಿಚಿತನಾಗಿರಲಿಲ್ಲ. ಅವನಿಗೆ ಅದರಿಂದ ಹೆದರಿಕೆಯಾಗಲಿಲ್ಲ. ಈಗ ಅವನ ಚರ್ಮದ ಚೀಲದಲ್ಲಿ ಪ್ಲಾಸ್ಟಿಕಿನ ಮಳೆಯಂಗಿ ಕೂಡ ಇತ್ತು. "ಚೀಲದಲ್ಲಿ ರೊಟ್ಟಿಯಿಲ್ಲದೆ, ಬಿಸಿಲುಗಾಲದಲ್ಲಿ ಮಳೆಯಂಗಿ ಇಲ್ಲದೆ ಹೊರಗೆ ಹೋಗಕೂಡದು" ಎಂಬ ಗಾದೆಯು ರಂಫೇಲಿಗೆ ಗೊತ್ತಿತ್ತು. ಗಾಳಿಯು ನಿಂತಿತು. ಆದರೆ ದೊಡ್ಡ ದೊಡ್ಡ ಮಂಜಿನಗಡ್ಡೆ ಚೆಂಡುಗಳು ಎಲ್ಲ ಕಡೆಗಳಿಂದಲೂ ಬೀಳತೊಡಗಿದುವು. ಕುರಿಗಾಹಿಯು ತನ್ನ ಮಳೆಯಂಗಿಯನ್ನು ಒಡನೆಯೇ ತೊಟ್ಟುಕೊಂಡನಾದರೂ ತಲೆಯ ಮೇಲೆ ಏನೂ ಇರಲಿಲ್ಲ. ಅವನ ತಲೆಯ ಮೇಲೆ ಹಿಮದ ತುಂಡುಗಳು ಟಪ ಟಪನೆ ಬಿದ್ದುವು. ಕುರಿಗಳೂ ಹೊಡೆತ ತಾಳಲಾರದೆ 'ಬ್ಯಾ, ಬ್ಯಾ' ಎಂದು ಅರಚತೊಡಗಿದುವು. ಗಾಬರಿಗೊಂಡುವು. ಮಾಡುವುದಾದರೂ ಏನು? ಅವುಗಳನ್ನು ರೊಪ್ಪಕ್ಕೆ ಹೊಡೆಯುವುದು ಆಗ ಸಾಧ್ಯವಿರಲಿಲ್ಲ. ರೊಪ್ಪ ತುಂಬ ದೂರದಲ್ಲಿತ್ತು. ಅವುಗಳನ್ನು ಅವುಗಳ ಪಾಡಿಗೆ ಬಿಟ್ಟು, ತಾನು ಓಡಿಹೋಗಿ, ತನ್ನ ಪ್ರಾಣ ಉಳಿಸಿಕೊಳ್ಳುವುದೇ? ಈ ಯೋಚನೆಯು ಅವನ ಮನಸ್ಸಿನಲ್ಲಿ ಸುಳಿಯಿತಾದರೂ, ಅವನು ಅದನ್ನು ಒಡನೆಯೇ ತ್ಯಜಿಸಿದನು. ಹುಡುಗನ ಚಿಂತೆಗೆ ಆಲಿಕಲ್ಲೇನೂ ಬಿಡುವು ಕೊಡಲಿಲ್ಲ. ಕೆಟ್ಟ ಧನಿಕನು ತನ್ನ ಆಳನ್ನು ಹಿಂದೆ ಹೊಡೆಯುತ್ತಿದ್ದಂತೆ, ನಿರ್ದಯದಿಂದ ಬಾನಂಗಳದ ಕಲ್ಲುಗಳು ಕೆಳಗೆ ಬೀಳುತ್ತಿದ್ದುವು. ಹುಡುಗನ ಮೇಲೆ ಅಲ್ಲೇ ಇದ್ದ ಮರಗಳ ಕೆಳಗೆ ತನ್ನ ಕುರಿಗಳನ್ನು ರಂಫೇಲ್ ಕೂಡಿಸಿದನು. ಹಸುರೆಲೆಗಳು ಕೆಳಗೆ ಬೀಳುತ್ತಿದ್ದುವು. ಒಮ್ಮೊಮ್ಮೆ ಮುರಿದ ರೆಂಬೆಗಳೂ ಬೀಳುತ್ತಿದ್ದುವು. ದೂರದಿಂದ ಪ್ರವಾಹ ಬಂದು, ಎರಡು ಕುರಿಮರಿಗಳನ್ನು ಕೊಚ್ಚಿಕೊಂಡು ಹೋಯಿತು. ರಂಫೇಲ್ ಗಟ್ಟಿಯಾಗಿ ಕೂಗಿದನಾದರೂ, ಆ [illegible] ರಭಸದಲ್ಲಿ ಲೀನವಾಗಿ ಹೋಯಿತು. ಆ ಪ್ರವಾಹದೊಂದಿಗೆ [illegible] ಒಡಿದನು. ತನ್ನ ಕೋಲಿನ [illegible] ಒಂದು ಕುರಿಮರಿಯನ್ನು ತೆಗೆದು [illegible] ಕೊಂಡನು. ಆ ಮೇಲೆ ಇನ್ನೊಂದನ್ನೂ ಕಾಪಾಡಿದನು. ಆದರೆ, ಇನ್ನೂ ಹೆಚ್ಚು ಪ್ರವಾಹಗಳು ಬಂದು ಅಲ್ಲಲ್ಲಿ ನೀರು ತುಂಬಿಕೊಂಡರೆ ಏನು ಗತಿ? ಅವನು ದಿಙ್ಮೂಢನಾದನು. ಅವನಿಗೆ ನಡುಕ ಹತ್ತಿತು. ಹಲ್ಲು ಕಡಿಯುತ್ತ, ಕಣ್ಣೀರಿಡ ತೊಡಗಿದನು. ತನ್ನ ಬಲಹೀನತೆಯ ಬಗ್ಗೆ ಅವನಿಗೆ ಲಜ್ಜೆಯಾಯಿತು. ಅಷ್ಟರಲ್ಲಿಯೇ ಗಾಳಿ ಬೀಸಿತು, ಮೋಡ ಚದರಿತು. ದಿಗಂತ ತಿಳಿಯಾಯಿತು. ಕುರಿಗಳು ಒಂದೊಂದಾಗಿ ತಮ್ಮ ಉಣ್ಣೆಯನ್ನು ಕೊಡವಿಕೊಂಡುವು. ಕ್ಷೇತ್ರಗಳ ಕೆಳಭಾಗದಲ್ಲಿ ಇಬ್ಬರು ಮನುಷ್ಯರು ಕಾಣಿಸಿಕೊಂಡರು. ರಂಫೇಲನಿಗೆ ಅತ್ಯಂತ ಸಂತೋಷವಾಯಿತು. ತೊದೋರ್ ಮಾವನು ಮೊದಲು ಬಂದನು. ಆತನ ಹಿಂದೆಯೇ ನಾಲಗೆಯನ್ನು ಹೊರಗೆ ತೋರಿಸಿಕೊಂಡ, ಏದುಸಿರಿಡುತ್ತ ವಸ್ಸೀಲ್ ತಾತನೂ ಬಿರನೆ ಬರುತ್ತಿದ್ದುದು ಕಾಣಿಸಿತು.

'ರಂಫೇಲ್! ಮಗೂ, ಹೋಗಿದ್ದೀಯಪ್ಪ?''—ಎಂದು ತೊದೋರ್ ಮಾವನು ಆದರದಿಂದ ಕೇಳಿದನು. ಆತನನ್ನೆತ್ತಿಕೊಂಡು ಮುದ್ದಿಸಿದನು.

''ಈ ಹುಡುಗ ಒಳ್ಳೆಯ ಕುರಿಗಾಹಿಯಾಗುತ್ತಾನೆಂದು ನಾನು ಹೇಳಲಿಲ್ಲವೇ? ನಾಳೆ ನಾವು ಅವನಿಗೆ ಹೆಣ್ಣು ಕುರಿಗಳ ಇಡೀ ಹಿಂಡನ್ನೇ ಒಪ್ಪಿಸೋಣ'—ಎಂದು ವಸ್ಸೀಲ್ ತಾತನು ಜೋರಾಗಿ ಉಸಿರು ಬಿಡುತ್ತಾ ಕೇಳಿದನು.

ಬಿರುಗಾಳಿಯು ಹೇಗಿತ್ತು, ಅದನ್ನು ಅವನು ಹೇಗೆ ತಡೆದುಕೊಂಡನು, ಎಷ್ಟು ಕುರಿಮರಿಗಳು ಕಳೆದು ಹೋದುವು—ಎಂದು ಹಿರಿಯ ಕುರಿಗಾಹಿಗಳಿಬ್ಬರೂ ಕಿರಿಯ ರಂಫೇಲನನ್ನು ವಿಚಾರಿಸಿದರು.

'ಅಲ್ಲಿರುವ ಎರಡು ಮರಿಗಳೂ ಪ್ರವಾಹದಲ್ಲಿ ಕೊಂಡು ಹೋಗಿದ್ದುವು. ಆದರೆ ನನ್ನ ಕೋಲಿನಿಂದ ನಾನು ಅವುಗಳನ್ನು ಎಳೆದುಕೊಂಡೆನು"—ಎಂದು ಹುಡುಗನು ಹೆಮ್ಮೆಯಿಂದ ಹೇಳಿದನು.

''ಅದು ಸ್ಪಷ್ಟವೇ! ನಾಳೆ ನಾವು ಇವನನ್ನು ದತ್ತು ತೆಗೆದುಕೊಳ್ಳಲೇಬೇಕು. ಇಡೀ ಸಭೆಯಲ್ಲಿ ಈ ಮಾತು ಎಲ್ಲರಿಗೂ ತಿಳಿಸೆಂದು ಅಧ್ಯಕ್ಷರಿಗೆ ಹೇಳೋಣ. ಇಂದಿನಿಂದ, ರಂಫೇಲ್, ನೀನು ನಮ್ಮ ಕುರಿಸಂಗೋಪನ ಕ್ಷೇತ್ರದ ದತ್ತುಮಗ! ನಿನ್ನ ಕೆಲಸಕ್ಕಾಗಿ ಸಿಕ್ಕುವ ಸಂಬಳವನ್ನು ನಾವು ಸರಕಾರದ ಬ್ಯಾಂಕಿನಲ್ಲೇ ಜಮಾ ಮಾಡಿಸಿಡುತ್ತೇವೆ. ಶಾಲೆಯ ವಿಷಯ ನಾನು ಈಗಾಗಲೇ ನಿನಗೆ ಹೇಳಿದ್ದೇನೆ. ನೀನು ಕಷ್ಟಪಟ್ಟು ಹೇಗಾದರೂ ಮಾಡಿ 'ಇಂಟರ್ಮೀಡಿಯೇಟ್' ಶಾಲಾ ಶಿಕ್ಷಣ ಮುಗಿಸಲೇ ಬೇಕು!—ಎಂದು ವಸ್ಸೀಲ್ ತಾತನು ಘೋಷಣೆಯಿಂದ ಹೇಳಿದನು.

'ಇನ್ನು ಬೇಗ ಬೇಗ ಹೋಗೋಣ. ಕುರಿಮರಿಗಳನ್ನು ರೊಪ್ಪಕ್ಕೆ ಕೊಂಡೊಯ್ಯಬೇಕು. ರಂಫೇಲ್ ಕೂಡ ಬಟ್ಟೆ ಬದಲಾಯಿಸಬೇಕು"—ಎಂದು ತೊದೋರ್ ಮಾವನು ಹೇಳಿದನು.

ಅವರೆಲ್ಲರೂ ಕುರಿಮರಿಗಳೊಂದಿಗೆ ರೊಪ್ಪಕ್ಕೆ ಹೋದರು.

ಆ ತರುವಾಯದ ಶರತ್ಕಾಲದಲ್ಲಿ ರಂಫೇಲ್ ಸಂಜೆಯ ಶಾಲೆಯಲ್ಲಿ ಭರ್ತಿಯಾದನು. ಅವನು ಕುರಿಗಾಹಿಗಳ ಕೋಣೆಯಲ್ಲಿಯೇ ನಿದ್ರಿಸುತ್ತಿದ್ದನು. ತೊದೋರ್ ಮಾವನ ಹೆಂಡತಿಯು ಅವನ ಬಟ್ಟೆಗಳನ್ನು ಒಗೆದಿಡುತ್ತಿದ್ದಳು. ವಸ್ಸೀಲ್ ತಾತನ ಹೆಂಡತಿಯು ಆಗಾಗ್ಗೆ ಅವನಿಗೆ ಭಕ್ಷ್ಯಗಳನ್ನು ಕಳಿಸಿಕೊಡುತ್ತಿದ್ದಳು. ಸಹಕಾರೀ ಕೃಷಿಕ್ಷೇತ್ರದ ಭೋಜನಗೃಹದಲ್ಲಿ ಪೆಸಾರ್ ಅತ್ತೆಯ ಮೇಲ್ವಿಚಾರಣೆಯಲ್ಲಿ ಅವನ ನಿತ್ಯದ ಊಟ ಉಪಚಾರಗಳು ಚೆನ್ನಾಗಿ ನಡೆಯುತ್ತಿದ್ದುವು. ಆಕೆಯು ಸದಾ ಹಸನ್ಮುಖಿಯಾಗಿ ಎಲ್ಲವನ್ನೂ ಚೊಕ್ಕಟವಾಗಿ ಇಟ್ಟಿರುತ್ತಾಳೆ.

— —

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿ ಕರ್ನಾಟಕ ಸಂಘದ ಮೂರು ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು ಯು ರಾಘವೇಂದ್ರ ಆಚಾರ್ಯ, ಎಂ ಎ

ಆಧುನಿಕ ಪ್ರಪಂಚದ ಮನುಷ್ಯತ್ವರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು ಅವುಗಳ ಹಿಂದಿರುವ ತತ್ವಗಳು ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ

೨. ಸಾಮಾನ್ಯ ರೋಗಗಳು

ಲೇಖಕರು ಡಾ| ಕೆ ಎಲ್ ಐತಾಳ, ಎಂ ಬಿ ಬಿ ಎಸ್

ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ

೩. ಭೌತಿಕ ದರ್ಶನ

ಲೇಖಕರು ಬಡೆಕ್ಕಿಲ ಕೃಷ್ಣ ಭಟ್ಟ, ಎಲ್ಎಲ್ ಬಿ

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ

ಪ್ರತಿಯೊಂದು ಪುಸ್ತಕದ ಬೆಲೆ ಬರೀ ಒಂದು ರೂಪಾಯಿ

ರೂ ೩—೦೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ

ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ ಇಂಗ್ಲಿಷ್ ಪತ್ರವ್ಯವಹಾರ ಮಾಡಲು ಉಪಯುಕ್ತ ಪುಸ್ತಕ

Letter Writing Made Easy

ಸುಲಭದಲಿ ಪತ್ರಲೇಖನ

೧ ೨

ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು

ಬೆಲೆ ರೂ 1—25

ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮಾಹಿತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ

ರೂ1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು

ನವಭಾರತ ಪುಸ್ತಕ ಭಂಡಾರ ಉಡುಪಿ

NAVAYUGA, UDIPI.
REGD. NO.BG. 176

29-3-1962

LICENSE NO. 31
Licensed to Post without Prepayment

ನಡೆದು ಬಂದ ದಾರಿ

ನಾ ಮಾತ್ರ ತೃಷಿತ ನಿರ್ಝರನಿರುವೆನು

[ಹಿಂದೀ ಸಾಹಿತ್ಯಕಾರ ಶ್ರೀ ನರೇಂದ್ರ ಶರ್ಮಾರು ತನ್ನ ನಡೆದ ದಾರಿಯ ಬಗ್ಗೆ ಬರೆದ ರೋಚಕ ವೃತ್ತಾಂತವಿದು.]

ಆರ್ಥಿಕ ಆವಶ್ಯಕತೆಗಳು ನನ್ನ ಜೀವನ ಪ್ರವಾಹವನ್ನು ಮುನ್ನಡೆಸಿಲ್ಲವೆಂದು ನಾನು ಹೇಗೆ ಅನ್ನಲಿ? ಹಾಗಿದ್ದರೂ ಇಷ್ಟು ಮಾತ್ರ ಹೇಳಬಲ್ಲೆ: "ನನ್ನ ಆರ್ಥಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಎಂದಿಗೂ ಅತ್ಯಧಿಕ ಜಾಗರೂಕನಾಗಲಿಲ್ಲ; ಆ ಬಗ್ಗೆ ಪ್ರಯತ್ನವನ್ನೂ ಮಾಡಲಿಲ್ಲ." ಇಂದಿನ ಪ್ರಯೋಜನ ಶೀಲ, ನಿಯೋಜನ ಸಾಧ್ಯ ಮತ್ತು ಯೋಜನಾಬದ್ಧವೆನಿಸಿದ ಯುಗದಲ್ಲಿ ನನ್ನಂತಹ ಅಲ್ಪಜ್ಞರೇ ತಮ್ಮ ಯೋಗ ಕ್ಷೇಮದ ಬಗ್ಗೆ ಪರೋಕ್ಷವಾಗಿ ವಿಶ್ವಾಸ ತಾಳಿರುವರು ಎಂದರೆ ಆಶ್ಚರ್ಯವಿಲ್ಲ.

ನಾನು ನನಗಿಂತಲೂ ಬೇರೆಯವರನ್ನು ನಂಬುವುದು ಹೆಚ್ಚು. ಇದರಿಂದಾಗಿಯೇ ನನಗೆ ತಿಳಿದೋ ತಿಳಿಯದೆಯೋ ಪ್ರೇರಣೆ ಮತ್ತು ಉತ್ಸಾಹಗಳು ಲಭಿಸುತ್ತವೆಯೆಂದು ಭಾಸವಾಗುತ್ತದೆ. ಇನ್ನೊಬ್ಬರ ವಿಶ್ವಾಸವನ್ನು ನಾನು ಗಳಿಸಿಕೊಂಡು ಅವರು ನಿರಾಶರಾಗುವಂತಾದ ನಿದರ್ಶನಗಳೂ ಇವೆ. ಈ ಕಾರಣದಿಂದ ಬೇರೆಯವರೂ ನನ್ನ ವಿಶ್ವಾಸಕ್ಕೆ ದ್ರೋಹ ಬಗೆದುದೂ ಇದೆ. ಆದರೆ, ಒಬ್ಬನೇ ಒಬ್ಬ ವ್ಯಕ್ತಿಯಿಂದಾದ ತಪ್ಪುಗಳು ಅವ್ಯಕ್ತದಲ್ಲಿ ಅವಿಶ್ವಾಸ ಹುಟ್ಟುವಂತೆ ಎಂದಿಗೂ ಮಾಡಿಲ್ಲ.

ತನಗೆ ಹೊರತಾಗಿ ಬಹಳವಿದೆ ಲೋಕದಲಿ
ಆದರಲ್ಲೆ ನಿರ್ಭರನಿರುವೆ ನಾನು
ಜಗಕೆನ್ನ ತೃಷೆಯಿರಲಿ ಮೇಣಿಲ್ಲದಿರಲಿ
ನಾಮಾತ್ರ ತೃಷಿತ ನಿರ್ಝರಯಿರುವೆನು ॥

'ಜಗಕೆನ್ನ ತೃಷೆಯಿರಲಿ ಮೇಣಿಲ್ಲದಿರಲಿ' ಎಂಬಲ್ಲಿ ಉದ್ದಂಡತೆಯ ಅಂತರ್ಭಾವವಿದೆ. 'ನಿರ್ಝರ' ಶಬ್ದದಲ್ಲಿ ಅಹಂಕಾರದ ಅಂತರ್ಧ್ವನಿಯಿದೆ-ಈ ಎರಡು ದೋಷಗಳು ನನ್ನಲ್ಲಿವೆ. ಆದರೆ, 'ನಾ ಮಾತ್ರ ತೃಷಿತನಿರುವೆನು' ಎಂಬುದು ಸಂಪೂರ್ಣ ಸತ್ಯ. ಸೌಹಾರ್ದ, ಸ್ನೇಹ, ಸತ್ಯ ಮತ್ತು ಸೌಂದರ್ಯಗಳ ತೃಷೆ ನನಗಿದೆ. ಮೇಲಿನ ಕವಿತೆಯು ನನ್ನ ತೃಷೆಯ ಅಭಿವ್ಯಕ್ತಿಯಾಗಿದೆ

ತೃಷೆಯು ನನ್ನಲ್ಲಿ ಅವ್ಯಕ್ತರೂಪದಲ್ಲಿ ಪ್ರಾರಂಭದಿಂದಲೇ ಇದ್ದಿರಬೇಕು; ಇದರಿಂದ ಪ್ರೇರಿತನಾಗಿಯೇ ನಾನು ಬಾಲ್ಯಾವಸ್ಥೆಯಲ್ಲಿ ಸಾಮಾಜಿಕ ಮತ್ತು ರಾಜನೀತಿಕ ಚಳವಳದತ್ತ ಆಕರ್ಷಿತನಾದೆನು ಈ ತೃಷೆಯೇ ನನ್ನನ್ನು ಕವಿತೆಯ ಬಳಿಗೊಯ್ದಿತು. ಸಾಮಾಜಿಕ, ರಾಜನೀತಿಕ ಚಳವಳದ ಸಂಬಂಧ ಕರ್ಮಕ್ಷೇತ್ರದಲ್ಲಿ; ಕವಿತೆಯದು ಮರ್ಮಕ್ಷೇತ್ರದಲ್ಲಿ ಆದುದರಿಂದ ಕಾರ್ಯ ಸಂಭಾವನೆಯ ಶೈಲಿ ಮತ್ತು ಪ್ರಣಾಲಿಗಳು ಬದಲಾಗುತ್ತವೆ; ಹಾಗಿದ್ದರೂ ಮೊದಲಿದ್ದಂತೆಯೇ ಸೌಹಾರ್ದ ಸ್ನೇಹ, ಸತ್ಯ ಮತ್ತು ಸೌಂದರ್ಯಗಳ ಧ್ಯೇಯ ದೂರವಾಗುವುದಿಲ್ಲ.

ನಾನು ಪಂತರ "ವೀಣಾ" ಮತ್ತು ಮಹಾದೇವಿಯವರ "ನೀಹಾರ"ಗಳಿಂದ ಪ್ರೇರಿತನಾಗಿ ಕವಿತೆಯ ಕಡೆಗೆ ಒಲಿದೆನು ನನ್ನ ಶಿಲ್ಪ ಸಂಬಂಧಿ ಅಭಿರುಚಿಯು ಪಂತರಿಂದ ಪ್ರಭಾವಿತವಾದುದು, ಭಾವಕ್ಷೇತ್ರದಲ್ಲಿ ನನಗೆ ಮಹಾದೇವಿಯವರ ವೇದನೆ—ಸಂವೇದನೆಯು ಆಸಕ್ತಿ ತಂದು ಕೊಟ್ಟಿತು.

ವೀಣಾ ಮತ್ತು ನೀಹಾರ ಪುಸ್ತಕಗಳು ನನ್ನ ಅಧ್ಯಾಪಕ ಮಹೇಶ್ವರ ಪ್ರಸಾದ ಶುಕ್ಲರಿಂದ ಓದಲು ಸಿಕ್ಕಿದ್ದುವು. ಆದುದರಿಂದ ಅವರಿಗೆ ನಾನು ಆಭಾರಿಯಾದ್ದೇನೆ. ಇಂದಿನ ಶಿಕ್ಷಕರೂ ತಮ್ಮ ವಿದ್ಯಾರ್ಥಿಗಳ ಸುಪ್ತ ಪ್ರವೃತ್ತಿಗಳನ್ನು ಜಾಗ್ರತಗೊಳಿಸುವಲ್ಲಿ ಆಸಕ್ತಿ ತೋರಿಸುತ್ತಿರುವರೋ ಇಲ್ಲವೋ ನಾನು ತಿಳಿದಿಲ್ಲ. ಅಹೇತುಕ ಕೃಪೆಯು ದೇವರ ದಾನ. ತಮ್ಮ ಅಹೇತುಕ ಕೃಪೆಯ ಕಾರಣದಿಂದಲೇ ಗುರುಜನರು ಪೂಜ್ಯರೆನಿಸಿದ್ದಾರೆ.

ಗುರುಜನರ ಕೃಪೆ ಸುಹೃಜ್ಜನರ ಸ್ನೇಹವನ್ನು ನಾನು ಸದಾಕಾಲ ಪಡೆಯುತ್ತ ಬಂದಿದ್ದೇನೆ. ನನ್ನಿಂದ ಗುರುದಕ್ಷಿಣೆಯನ್ನು ಸ್ವೀಕರಿಸಿ, ನನ್ನ ಗುರುಗಳು ನನ್ನನ್ನು ಇಂದಿಗೂ ಋಣಮುಕ್ತನನ್ನಾಗಿ ಮಾಡಲಿಲ್ಲ. ತಂದೆಯನ್ನು ಕಳೆದುಕೊಂಡ ಹುಡುಗನಾಗಿದ್ದಾಗ, ನನ್ನ ಚಿಕ್ಕಪ್ಪರು ನನ್ನನ್ನು ಸ್ನೇಹದಿಂದ ಪೋಷಿಸಿದ್ದರು. ಅವರ ಒಬ್ಬ ಮುದಿ ಸಹೋದ್ಯೋಗಿಯು ನನಗೆ ಬಾಲ್ಯಾವಸ್ಥೆಯಲ್ಲಿ ಅನಾಯಾಸವೆಂಬಂತೆ ಅಕ್ಷರಜ್ಞಾನವನ್ನು ನೀಡಿದನು. ಔಷದೋಪಚಾರ ಮಾಡುವ ವೈದ್ಯರು ಹಲವು ಬಾರಿ ನನಗೆ ಹೊಸ ಬದುಕನ್ನು ಕೊಟ್ಟರು. ಹೈಸ್ಕೂಲ್ ಸೇರುವುದಕ್ಕೆ ಮೊದಲೇ ನನ್ನ ಹಳ್ಳಿಯ ಓರ್ವ ಸುಶಿಕ್ಷಿತ ಗೃಹಸ್ಥನು ನನ್ನನ್ನು ಇಂಗ್ಲಿಷಿನ ಪ್ರಾರಂಭಿಕ ತರಗತಿಯಲ್ಲಿ ಉತ್ತೀರ್ಣಗೊಳಿಸಿದನು. ಹೈಸ್ಕೂಲಿನ ಮುಖ್ಯೋಪಾಧ್ಯಾಯರು ನನ್ನ ಅಭಿರುಚಿ ಮತ್ತು ನನ್ನ ಸಂಸ್ಕಾರಗಳಿಗೆ ಒಪ್ಪವಿಟ್ಟು ಅವನ್ನು ಪರಿಮಾರ್ಜಿತಗೊಳಿಸಿದರು; ಪ್ರಯಾಗದ ಸಾಹಿತ್ಯ ನನ್ನನ್ನು ಪ್ರೋತ್ಸಾಹಗೊಳಿಸಿತು; ಓರ್ವ ಶುಭ ಹಿತಚಿಂತಕನ ಪ್ರೇರಣೆಯಿಂದ ಗೃಹಸ್ಥನಾದೆನು; ಅನಾಯಾಸವಾಗಿ ಆಗಾಗ ನನಗೆ ಸ್ನೇಹಿತರ ಸಹಾಯ ಲಭಿಸುತ್ತಿರುತ್ತದೆ. ನನ್ನ ಜೀವನದಲ್ಲಿ ಇನ್ನೇನಾದರೂ ಒಳಿತು ಇರುವುದಾದರೆ, ಅದನ್ನು ಗಳಿಸಿದ ಕೀರ್ತಿ ನನಗೆ ಬರುವುದಿಲ್ಲ; ನನ್ನ ಹಿತೈಷಿಗಳಿಗದು ಸಲ್ಲಬೇಕಾಗುದು;

ನನ್ನ ಆತ್ಮ-ಸಂಘರ್ಷ ಸದಾ ನಡೆಯುತ್ತಿರುತ್ತದೆ. ಕೆಲವೊಮ್ಮೆ ಈ ಹೋರಾಟವು ಶ್ರೇಯ ಮತ್ತು ಪ್ರೇಯಗಳ ನಡುವೆ ಬರುವುದೂ ಇದೆ. ಶ್ರೇಯವು ಜಯಗಳಿಸಿದಾಗ ನನಗೆ ತುಂಬ ಸಂತೋಷವಾಗುವುದು ಪ್ರೇಯವು ಪ್ರಾಪ್ತಿಯಾಗುವುದಾದರೂ ಶ್ರೇಯದ ಮಾಧ್ಯಮದಲ್ಲಿಯೇ. ಇದನ್ನು ಪರಮಾತ್ಮನ ಕೃಪೆಯೆಂದು ನಾನು ತಿಳಿಯುತ್ತೇನೆ.

ನನ್ನ ಅಸಂಘಟಿತ ಜೀವನದಲ್ಲಿ ನಡೆದ ಯಾವ ಘಟನೆಯನ್ನು ಹೆಸರಿಸಲಿ? ಭೂಮಿಯ ಮೇಲೆ ಸಂಚರಿಸುವ ಇರುವೆಯ ಜೀವನದಲ್ಲಿ ಏನಾದರೂ ಏರುಪೇರುಗಳು ನಡೆಯುವುದಿದೆಯೆ? ಮರದ ಚಮಚೆ ವ್ಯಂಜನದ ರುಚಿಯೇನು ಅರಿಯಬಲ್ಲುದು? ನನಗೆ ನನ್ನ ಬಗ್ಗೆ ಹೆಚ್ಚು ಹೇಳುವುದು ಅಷ್ಟು ಸುಲಭವೆನಿಸುವುದಿಲ್ಲ.

ಮನಸ್ಸಿನಲ್ಲಿ ಅನೇಕ ಬಾರಿ ಉದಾಸೀನ ಭಾವನೆಯು ಹಂಡಿದೆ; ದೂರವಾಗಿಯೂ ಇದೆ. ಉದಾಸೀನತೆಯಿಂದ ದೂರವುಳಿಯುವ ಒಂದೇ ಒಂದು ಉಪಾಯ ಈಗ ಹೊಳೆಯುತ್ತಿದೆ— ನನ್ನ ಬಗ್ಗೆ ಹೆಚ್ಚು ವಿಚಾರ ಮಾಡದಿರುವುದು. ಉದಾಸೀನತೆಯ ಕಡೆಗೆ ಹೆಚ್ಚಿನ ಲಕ್ಷ್ಯ ಹರಿಸಬಾರದು. 'ನಗುವುದಾದರೆ, ತನ್ನೊಳಗೆ, ಪ್ರೇಮಿಸುವುದಾದರೆ, ತನ್ನ ಹೊರತು"— ಇದೇ ನನ್ನ ಸಿದ್ಧಾಂತ

ಉತ್ತಮ ಭದ್ರತೆ
ಮತ್ತು
ಯೋಗ್ಯ ಬಡ್ಡಿ

ಸೇವಿಂಗ್ಸ್ ಬ್ಯಾಂಕ್ 3%
ಬಡ್ಡಿಯನ್ನು ಆರು ತಿಂಗಳಿಗೊಮ್ಮೆ ಜಮೆ ಮಾಡಲಾಗುವುದು,

$5\frac{1}{4}$% ಕಾಯಂ ಠೇವಣಾತಿ
೬ ವರ್ಷಗಳ ಅವಧಿಗೆ

ಹೆಚ್ಚಿನ ಮಾಹಿತಿಗೆ
ನಮ್ಮ 159 ಶಾಖೆಗಳಲ್ಲೊಂದರೊಡನೆ ವ್ಯವಹರಿಸಿರಿ

ಸಿಂಡಿಕೇಟ್ ಬ್ಯಾಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ವಿಶಾಲ ತಳಹದಿಯ ಮಹಾರೋಗ

(೧ನೇ ಪುಟದಿಂದ)

ದವರು ಅಂದಿದ್ದಾರೆ. ಹೈಕಮಾಂಡಿನ ಸದಸ್ಯರು ಆಗಿರುವ ಇವರು ಅಲ್ಲಿ ಮಾತ್ರ ಈ ರಹಸ್ಯವನ್ನು ಭೇದಿಸಿದಂತೆ ಕಂಡುಬರುವುದಿಲ್ಲ. ಆದುದರಿಂದಲೇ ಈ ಸಂಬಂಧದಲ್ಲಿ ಅವರು ದ್ವಿಮುಖ ಧೋರಣೆ ತಳೆದಿರುವರೇ ಎಂಬ ಸಂದೇಹವೂ ಬಲವತ್ತರವಾಗತೊಡಗಿದೆ.

ಚುಚ್ಚು ಮದ್ದು ಬೇಕು.

ಅದೇನೇ ಇದ್ದರೂ ರಾಜ್ಯಗಳ ಆರೋಗ್ಯದ ಮತ್ತು ಜನ ವಿಶ್ವಾಸದ ದೃಷ್ಟಿಯಿಂದ ಮಂತ್ರಿಮಂಡಳಿಯ ಸದಸ್ಯರ ಸಂಖ್ಯೆಯು ಹಿತ-ಮಿತವಿರಬೇಕು. ಆಡಳಿತೆಯಲ್ಲಿ ಮಿತವ್ಯಯವನ್ನು ಸಾಧಿಸಬೇಕೆಂದು ಸಾರುತ್ತಿರುವವರು, ಜನತೆಯ ಆವಶ್ಯಕತೆಗಿಂತ ಹೆಚ್ಚು ವೆಚ್ಚ ಮಾಡಬಾರದೆಂದು ಉಪದೇಶಿಸುವವರು ಮಂತ್ರಿಗಳ ವೇತನ ಭತ್ತೆ, ನೌಕರ-ಚಾಕರರೆಂದು ಲಕ್ಷಗಟ್ಟಲೆ ರಾಜ್ಯದ ಆದಾಯ ಪೋಲು ಮಾಡುವುದು ನ್ಯಾಯವಲ್ಲ ಈ ಬಾರಿ ಹೀಗೆಯೇ ಸುಮ್ಮನುಳಿದರೆ, ಈ ವಿಸ್ತರಣೆಯ ಸೋಂಕುರೋಗ ಮತ್ತಷ್ಟು ವ್ಯಾಪಕ ಸ್ವರೂಪದ್ದಾಗುವುದು ನಿರ್ವಿವಾದವೆಂಬುದರಿಂದ ಇದಕ್ಕೆ ತಕ್ಕ ಚುಚ್ಚು ಮದ್ದನ್ನು ಈಗಲೇ ನೀಡಬೇಕಾಗಿದೆ.

ಮುಂದಿನ ಕಾರ್ಯಕ್ರಮ

ಕೆಲವೊಂದು ನಿಷ್ಠಾವಂತ ಕಾಂಗ್ರೆಸಿಗರು ಇಂತಹ 'ವಿಸ್ತರಣಾ ನೀತಿ'ಯಿಂದ ನೊಂದಿದ್ದಾರೆ. ಆದುದರಿಂದಲೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಕೆಲವರು ಈ ಸಂಬಂಧದಲ್ಲಿ ಉಗ್ರ ನೀತಿಯನ್ನನುಸರಿಸಬೇಕೆನ್ನುತ್ತಾರೆ. ಇವರ ಅಂಬೋಣದಂತೆ ರಾಜ್ಯದಲ್ಲಿ ಒಟ್ಟು ೧೫ ಮತ್ತು ಕೇಂದ್ರದಲ್ಲಿ ೨೦ಕ್ಕಿಂತ ಹೆಚ್ಚು ಜನ ಮಂತ್ರಿಗಳಿರಬಾರದು. ವಾಸ್ತವಿಕವಾಗಿ ಪಂಡಿತ ನೆಹರೂ ಸದ್ಯದ ವಾತಾವರಣದಿಂದ ನೊಂದಿರುವುದಾದರೆ, ಅವರು ಬಯಸುವರಾದರೆ, ಈ ಉಗ್ರ ನೀತಿಯು ಕಾಂಗ್ರೆಸ್ ಸಮಿತಿಯ ಮುಂದೆ ಬರುವುದು. ಈಗಾಗಲೇ ಅಧಿಕಾರ ವಹಿಸಿರುವ ಮಂತ್ರಿಮಂಡಳಿಯು ರಾಜಿನಾಮೆಯನ್ನಿತ್ತು, ಸಣ್ಣ ಪ್ರಮಾಣದ ಮಂಡಳಿಯು ಮರಳಿ ಅಧಿಕಾರಕ್ಕೆ ಬರುವಂತೆ ಮಾಡಬಹುದು. ಆದರೆ, ಪ್ರಧಾನಿಯವರ ಧೋರಣೆಯು ವಾಸ್ತವರೂಪಯಾವುದೆಂಬುದೇ ಯಕ್ಷಪ್ರಶ್ನೆ.

—ಗೋರಾ

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

Edited Printed & Published by K. H. Shetty, at the Navayuga Press, Udipi, S. India.

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾ[ರ]
ಉಡುಪಿ

ಸಂಪುಟ ೪೧ ಸಂಚಿಕೆ ೩೦ | ಉಡುಪಿ 5—4—1962 ಗುರುವಾರ, | Vol. 41 No. 30

ಕರ್ನಾಟಕ ರಾಜ್ಯಕ್ಕೆ

ಎರಡು ಹೆಚ್ಚಿನ ವಿಶ್ವವಿದ್ಯಾಲಯಗಳು

ಶೈಕ್ಷಣಿಕ ಮಟ್ಟವನ್ನು ಉಳಿಸಿಕೊಂಡು ಬರಬೇಕಾದರೆ, ಉತ್ತಮ ಅಧ್ಯಾಪಕ-ಅಲ್ಪ ಸಂಖ್ಯೆಯ ಮಕ್ಕಳು ಎಂಬ ಕಕ್ರಮದಂತೆಯೇ ವಿಶ್ವವಿದ್ಯಾಲಯಗಳಲ್ಲಿಯೂ ಉನ್ನತ ಶಿಕ್ಷಣವು ದೊರೆಯುವಂತೆ ಮಾಡಲು ಪ್ರತಿ ವಿಶ್ವವಿದ್ಯಾಲಯದಲ್ಲಿಯೂ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಐದು ಸಾವಿರಕ್ಕೆ ಮಿಕ್ಕಿರಬಾರದು ಎಂಬುದನ್ನು ಎಲ್ಲ ಶಿಕ್ಷಣತಜ್ಞರೂ ಹೇಳುತ್ತಾರೆ; ಒಪ್ಪಿಕೊಳ್ಳುತ್ತಾರೆ. ಆದರೆ, ನಮ್ಮ ದೇಶದಲ್ಲಿ ಇಂತಹ ಸೌಲಭ್ಯವನ್ನು ಒದಗಿಸಿಕೊಡಬೇಕಾದುದು ಅವೆಷ್ಟೇ ಆವಶ್ಯಕವಿದ್ದರೂ, ಸದ್ಯದ ಪರಿಸ್ಥಿತಿಯಲ್ಲಿ ಅಸಾಧ್ಯವೇ ಆಗಿದೆ. ಪಶ್ಚಿಮ ಬಂಗಾಳದ ಸರಕಾರಕ್ಕೆ ಒಪ್ಪಿಸಲಾದ ಪಾಶ್ಚಾತ್ಯ ತಜ್ಞರ ವರದಿಯ ಮೇಲೂ ಇದೇ ಮಾದರಿಯ ಟೀಕೆ-ಟಿಪ್ಪಣಿ ಹೊರಟಿರುವುದನ್ನು ನಾವು ಗಮನಿಸಬಹುದು. ವಿಶ್ವವಿದ್ಯಾಲಯ ಸಹಾಯ ಧನಾಯೋಗವು ಆದರ್ಶ ವಿಶ್ವವಿದ್ಯಾಲಯ ಸ್ಥಾಪನೆಯನ್ನು ಬಯಸುತ್ತದಾದರೂ ಅದು ಆರ್ಥಿಕ ದುಃಸ್ಥಿತಿಯಿಂದ ಅವ್ಯವಹಾರ್ಯವೆನಿಸಿರುವುದು ಜಗಜ್ಜನಿತವಿದೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸುವಂತೆಯೇ ಉಚ್ಚಶಿಕ್ಷಣದಲ್ಲೂ ಸಾಧನೆ ಮುಂದುವರಿಯಬೇಕು.

ಎರಡು ವಿಶ್ವವಿದ್ಯಾಲಯಗಳು

ನಮ್ಮ ಕರ್ನಾಟಕ ರಾಜ್ಯದಲ್ಲಿ ಎರಡು ವಿಶ್ವವಿದ್ಯಾಲಯಗಳಿವೆ. ಇವುಗಳಲ್ಲಿ ಸುಮಾರು ೪೦ ಸಾವಿರಕ್ಕೂ ಮಿಕ್ಕಿದ ವಿದ್ಯಾರ್ಥಿಗಳು ಕಲಿಯುತಿದ್ದಾರೆ. ಬೆಂಗಳೂರು ಜಿಲ್ಲೆಯೊಂದರಲ್ಲೇ ಸುಮಾರು ೨೦ ಸಾವಿರ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಶಿಕ್ಷಣವನ್ನು ಪಡೆಯುತ್ತಾರೆ. ಹಾಗೆಯೇ ರಾಜ್ಯದ ಪಶ್ಚಿಮದಲ್ಲಿನ ಕನ್ನಡ ಜಿಲ್ಲೆಗಳಲ್ಲೂ ವಿದ್ಯಾರ್ಥಿಗಳ ದಟ್ಟಣೆ ವಿಪರೀತವಿದೆ. ಈ ಕಾರಣದಿಂದಾಗಿ ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಪ್ರತ್ಯಪ್ರತ್ಯೇಕವಾದ ಎರಡು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕೆಂದು ವಿಧಾನ ಪರಿಷತ್ತಿನಲ್ಲಿ ಶ್ರೀ ಎಂ. ಕೆ. ಎಲ್. ಶಾಸ್ತ್ರಿಯವರು ಹೇಳಿದುದು ಸಮಯೋಚಿತವಿದೆ. ಒಂದು ವಿಶ್ವವಿದ್ಯಾಲಯಕ್ಕೆ ಅವಶ್ಯವಿರುವ ಮತ್ತು ಇರಬಹುದಾದ ಎಲ್ಲ ವ್ಯಾಸಂಗ ಸೌಕರ್ಯಗಳು ಬೆಂಗಳೂರಿನ ಕಾಲೇಜುಗಳಲ್ಲಿವೆ. ಆದುದರಿಂದ ಅಲ್ಲಿನ ಬೇಡಿಕೆಯು ಕ್ಷಿಪ್ರದಲ್ಲಿಯೇ ಈಡೇರುವ ಸಂಭವವನ್ನೂ ಅಲ್ಲಗಳೆಯಲಾಗುವುದಿಲ್ಲ. ಈ ಬಗ್ಗೆ ಮುಖ್ಯಮಂತ್ರಿ ಕಂಠಿಯವರು ರಾಜ್ಯಸರಕಾರವು ಈ ಬೇಡಿಕೆಯನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದ್ದಾರೆ. ವಿಶ್ವವಿದ್ಯಾಲಯ ಸ್ಥಾಪನೆಯ ಪ್ರಶ್ನೆಯು ಕೇಂದ್ರ ಸರಕಾರ ಮತ್ತು ವಿಶ್ವವಿದ್ಯಾಲಯ ಸಹಾಯ ಧನಾಯೋಗಗಳ ಅಂತಿಮ ನಿರ್ಧಾರಕ್ಕೊಳಪಡುವುದಾದರೂ ರಾಜ್ಯ ಸರಕಾರವು ಈ ಸಂಬಂಧದಲ್ಲಿ ಅವುಗಳ ಮೇಲೆ ಅವಶ್ಯಕತೆಗಳನ್ನು ಒತ್ತಿಹಿಡಿದು ಒತ್ತಾಯ ಹೇರುವುದು ಅನುಚಿತವಾಗಲಾರದು.

ಕರಾವಳಿ ಜಿಲ್ಲೆಗಳ ಬೇಡಿಕೆ

ಬೆಂಗಳೂರು ವಿಶ್ವವಿದ್ಯಾಲಯದ ಬೇಡಿಕೆಯು ಪೂರ್ಣವಾಗುವುದರೊಡನೆಯೇ ಕರಾವಳಿಯ ಜಿಲ್ಲೆಗಳ ಬೇಡಿಕೆಯನ್ನೂ ಪೂರೈಸುವುದು ಅಗತ್ಯವೆಂದು ಹೇಳಬಹುದು. ಮುಖ್ಯವಾಗಿ ರಾಜ್ಯದಲ್ಲಿ ಶಿಕ್ಷಣಸ್ತರವನ್ನೂ ಸಾಕ್ಷರತೆಯ ಪ್ರಮಾಣವನ್ನೂ ಹಿಂದಿನಿಂದಲೂ ಉಳಿಸಿಕೊಂಡು ಬಂದಿರುವ ದಕ್ಷಿಣ ಕನ್ನಡ ಜಿಲ್ಲೆಯು ಸರಸ್ವತಿಯ ಪವಿತ್ರ ಕ್ಷೇತ್ರವಾಗಿದೆ. ಸರಕಾರವು ಇಲ್ಲಿ ಕೈಗೊಂಡಿರುವ ಶಿಕ್ಷಣ ಪ್ರಸಾರದ ಕಾರ್ಯಕ್ಕಿಂತ ಖಾಸಗಿ ವ್ಯಕ್ತಿಗಳೂ ಸಂಘ ಸಂಸ್ಥೆಗಳೂ ಈ ಕ್ಷೇತ್ರದಲ್ಲಿ ಬಹಳ ಕಾಲದಿಂದಲೂ ಮುಂದೆ ಬಂದು ಜನತೆಯಲ್ಲಿ ಶಿಕ್ಷಣಾಭಿರುಚಿಯನ್ನು ಹುಟ್ಟಿಸಿ, ಅದನ್ನು ಬೆಳೆಸಿಕೊಂಡು ಬಂದಿವೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣದ ಸೌಲಭ್ಯಗಳು ಧಾರಾಳವಾಗಿ ದೊರೆಯುವ ಬೆಂಳೆಣಿಕೆಯ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡವೂ ಒಂದು ಎಂದು ಹೇಳಬಹುದು. ಇಲ್ಲಿನ ಶೈಕ್ಷಣಿಕ ಕ್ಷೇತ್ರದಲ್ಲಿ ನಡೆದ ಕ್ರಾಂತಿಯು ಅಖಿಲ ಭಾರತದಲ್ಲಿಯೇ ಮನೆ ಮಾತಾಗಿ ಬಿಟ್ಟಿದೆ.

ವಿದ್ಯಾರ್ಥಿಗಳ ದಟ್ಟಣೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಒಟ್ಟು ೧೫ ಕಾಲೇಜುಗಳಿವೆ ಇವುಗಳಲ್ಲಿ ವೈದ್ಯಕೀಯ, ನ್ಯಾಯಶಾಸ್ತ್ರ, ತಂತ್ರಶಾಸ್ತ್ರ ಕಾಲೇಜುಗಳೂ ಸೇರಿವೆ. ಉತ್ತರ ಕನ್ನಡದ ಎರಡು, ಕೊಡಗಿನ ಒಂದು ಕಾಲೇಜುಗಳನ್ನು ಕೂಡಿಸಿಕೊಂಡರೆ ೧೮ ಕಾಲೇಜುಗಳಾಗುವುವು ಇನ್ನೂ ಎರಡು ಮೂರು ಕಾಲೇಜುಗಳು ಸದ್ಯದಲ್ಲಿಯೇ ಇಲ್ಲಿ ಸ್ಥಾಪನೆಯಾಗುವ ನಿರೀಕ್ಷೆಯಿದೆ. ಹಾಗಾಗಿ ಇಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯೂ

ಶ್ರೀಮತಿ ಕೆನೆಡಿಯವರು ಜೈಪುರಕ್ಕೆ ಭೇಟಿ ಕೊಟ್ಟಾಗ ಭಾರತೀಯ ಪರಂಪರೆಯಂತೆ, 'ಆರತಿ' ಯಿಂದ ರಾಜಮಹಲಿನಲ್ಲಿ ಸ್ವಾಗತಿಸುವುದನ್ನೂ, ಪಕ್ಕದಲ್ಲಿ ಜೈಪುರದ ಮಹಾರಾಣಿಯರನ್ನೂ ಕಾಣಬಹುದು.

ಸುಮಾರು ೧೫ ಸಾವಿರಕ್ಕೆ ಹತ್ತಿರ ಹತ್ತಿರವಾಗುವುದು ಇಷ್ಟೊಂದು ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಓದುವ ಈ ಪ್ರದೇಶಕ್ಕೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವು ರಚಿತಗೊಳ್ಳುವುದು ಅವಾಸ್ತವವೆನ್ನುವುದು ಸಾಧ್ಯವಿಲ್ಲ. ದಕ್ಷಿಣ ಕನ್ನಡದ ಕಾಲೇಜುಗಳಲ್ಲಿ ಸ್ನಾತಕೋತ್ತರ ಶಿಕ್ಷಣದ ವ್ಯವಸ್ಥೆಯನ್ನೂ ಮಾಡುವ ಶಕ್ತಿಯಿದೆ; ಸಾಮರ್ಥ್ಯವಿದೆ. ಉತ್ಸಾಹವಿದೆ. ಆದರೆ, ಕೆಲವೊಂದು ಪ್ರಸಕ್ತ ಹಿತಸಂಬಂಧವನ್ನು ಅನುಲಕ್ಷಿಸುವ ವ್ಯಕ್ತಿಗಳಿಂದಾಗಿ ಅವುಗಳ ವ್ಯವಸ್ಥಾಪಕರ ಉತ್ಸಾಹವು ತಡೆಯಲ್ಪಟ್ಟಿದೆ. ಇದಕ್ಕೆ ಹರಿಯಲು ಸದವಕಾಶವಿತ್ತರೆ, ಅದು ಮುಂದುವರಿದು ಅಪೂರ್ವ ಸಾಹಸವೆಸಗುವುದರಲ್ಲಿ ಸಂದೇಹವಿಲ್ಲ. ಹಾಗೆಯೇ ಒಕ್ಕಲುತನವೇ ಮೊದಲಾದ ಕಾಲೇಜುಗಳನ್ನೂ ತೆರೆಯಲು ಸೂಕ್ತ ವಾತಾವರಣ ಇಲ್ಲಿದೆ ಈ ಜಿಲ್ಲೆಗಳಿಂದ ಬೇರೆ ಬೇರೆ ರಾಜ್ಯಗಳಲ್ಲಿಯೂ ನಮ್ಮ ರಾಜ್ಯದ ಇತರತ್ರವೂ ವಿದ್ಯಾರ್ಜನೆ ಮಾಡುತ್ತಿರುವವರ ಸಂಖ್ಯೆ ಗಣನೀಯವಲ್ಲವೆನ್ನುವಂತಿಲ್ಲ.

ಐದು ವಿಶ್ವವಿದ್ಯಾಲಯಗಳು

ನಮ್ಮ ರಾಜ್ಯಕ್ಕೆ ಕನಿಷ್ಠ ೫ ವಿಶ್ವವಿದ್ಯಾಲಯಗಳು ಬೇಕು ಎಂಬ ವಾದವು ಸಾಧುವಾದುದು. ಮೇಲೆ ನಿರೂಪಿಸಿದ ನಾಲ್ಕಲ್ಲದೆ 'ಹೈದರಾಬಾದ ಕರ್ನಾಟಕ' ಪ್ರದೇಶದಲ್ಲಿಯೂ ಒಂದು ವಿಶ್ವವಿದ್ಯಾಲಯವು ಬೇಕು. ಆದರೆ, ಬೆಂಗಳೂರು ಮತ್ತು ಕರಾವಳಿ ಜಿಲ್ಲೆಗಳ ಬೇಡಿಕೆಗೆ ಪ್ರಥಮ ಪ್ರಾಶಸ್ತ್ಯ ದೊರೆಯಬೇಕು. ಕೊನೆಯದನ್ನು ಪರಿಸ್ಥಿತಿಯು ಅನುಕೂಲವಾದಾಗ ಪೂರ್ಣಮಾಡಬೇಕು.

ಸಣ್ಣ ವಿಶ್ವವಿದ್ಯಾಲಯಗಳು

ವಿಶ್ವವಿದ್ಯಾಲಯ ಸ್ಥಾಪನೆ, ಕಾಲೇಜುಗಳ ಬಡಾವಣೆ, ಅಲ್ಲಿ ಹೊಸ ಹೊಸ ವ್ಯಾಸಂಗ ವಿಭಾಗಗಳ ಪ್ರಾರಂಭ ಮೊದಲಾದುವುಗಳಲ್ಲಿ ರಾಜಕೀಯ ಹಿತಾಸಕ್ತಿಗಳ ಕೈವಾಡ ನಡೆಯುತ್ತಿರುತ್ತದೆ ಎಂಬುದು ಹೊಸ ವಿಚಾರವಲ್ಲವಾದರೂ, ಅವು ಅನಪೇಕ್ಷಣೀಯವೆಂದು ಯಾರೊಬ್ಬನೂ ಹೇಳಬಲ್ಲ. ದಕ್ಷಿಣ ಕನ್ನಡದ ಕಾಲೇಜುಗಳು ರಾಜ್ಯದ ಯಾವ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳ್ಳಬೇಕೆಂಬ ವಿಚಾರದಲ್ಲಿ ಉಂಟಾದಗೊಂದಲ—ವೈಮನಸ್ಯ ಇನ್ನೂ ಮರೆತು ಹೋಗುವಂತಿಲ್ಲ ಅತ್ಯಧಿಕ ದೊಡ್ಡದಾದ ವಿಶ್ವವಿದ್ಯಾಲಯಗಳಾಗಲೀ, ಕಾಲೇಜುಗಳಾಗಲೀ ನಿರೀಕ್ಷಿತ ಮಟ್ಟದಲ್ಲಿ ಮುನ್ನಡೆಯುವುದು ಸಾಧ್ಯವಿಲ್ಲ. ಗುರುಕುಲಮಾದರಿಯ ವಿಶ್ವವಿದ್ಯಾಲಯಗಳು ರಚನೆಯಾಗಿ, ಸೇರ್ಪಡೆಗೊಳ್ಳುವ ಕಾಲೇಜುಗಳ ಸಂಖ್ಯೆಯು ಕಡಿಮೆಯಾದಷ್ಟು ಉಸ್ತುವಾರಿ ನೋಡಿಕೊಳ್ಳುವುದು ಸುಲಭ.

ಪರಿಣಾಮಕಾರಿ ಶಿಕ್ಷಣ

ದೇಶದ ಆರ್ಥಿಕ ಪರಿಸ್ಥಿತಿಯನ್ನೇ ಶೈಕ್ಷಣಿಕ ಪ್ರಗತಿಯು ಅವಲಂಬಿಸಿಕೊಂಡಿರಬೇಕಾಗುತ್ತದೆ ಅನಿವಾರ್ಯ ಪ್ರಾಥಮಿಕ ಶಿಕ್ಷಣದ ಕಡೆಗೆ ರಾಜ್ಯ ಸರಕಾರಗಳು ತೀವ್ರ ಗಮನ ನೀಡುವುದು ಅನಿವಾರ್ಯವೆಂದಾಗಿದೆ. ಕೇಂದ್ರದ ಸಹಾಯ ಪಡೆದೂ ಪ್ರಾಥಮಿಕ ಶಿಕ್ಷಣದ ಉನ್ನತ ಮಟ್ಟವನ್ನು ಉಳಿಸಿಕೊಂಡು ಬರುವುದು ರಾಜ್ಯ ಸರಕಾರಗಳಿಗೆ ಅಸಾಧ್ಯವೆನಿಸಿದೆ. ಒಬ್ಬ ಅಧ್ಯಾಪಕನು ಎಷ್ಟು ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳಿಗೆ ಕಲಿಸುತ್ತಾನೋ ಅಷ್ಟು ಶಿಕ್ಷಣದ ಮಟ್ಟವು ಉನ್ನತವಾಗುವುದು; ಉತ್ತಮ ಪ್ರತಿಭಾಸಂಪನ್ನರನ್ನೇ ಅಧ್ಯಾಪಕರ ವೃತ್ತಿಗೆ ಆಕರ್ಷಿ

(೧೨ನೆ ಪುಟ ನೋಡಿರಿ)

ಧೂಳು ಮುಸುಕಿದ ಭಾವಚಿತ್ರ

ಶ್ರೀ ಬಿ. ಜಿ. ಸತ್ಯಮೂರ್ತಿ

ವಿಜಯ ಏನನ್ನೋ ಚಿಂತಿಸುತ್ತಾ ನಡೆದಿದ್ದ.

ಎದುರಿಗೆ ಕಂಡ "ಆಲ್ಕೊ" ಸ್ಟುಡಿಯೋ ಅವನ ಚಿಂತನಾಪಥವನ್ನೇ ಬದಲಾಯಿಸಿತು.

ಅಂದು ತಾನು ಮತ್ತು ಮಾಧುರಿ ಸಿನೇಮ ನೋಡಲು ಬಂದಾಗ ವಿಜಯನೇ ಒತ್ತಾಯಪಡಿಸಿ ಮಾಧುರಿಯ ಒಟ್ಟಿಗೆ ಫೊಟೊ ತೆಗೆಸಿದ್ದರು. ಆ ಸ್ಟುಡಿಯೋ ನೋಡುತ್ತಲೇ ವಿಜಯನಿಗೆ ತಾವು ತೆಗೆಯಿಸಿದ ಫೊಟೋದ ನೆನಪಾಗಿ ಸ್ಟುಡಿಯೋಗೆ ಹೋದ.

ಮಾಧುರಿಯ ಒಟ್ಟಿಗೆ ನಿಂತು ತೆಗೆಯಿಸಿದ ಆ ಫೊಟೋವನ್ನು ನೋಡುತ್ತಿದಂತೇ ವಿಜಯನಿಗೆ ಸ್ವಂತಾನು ಸ್ವಂತವಾಗಿ ಭಾವೀ ಜೀವನದ ರಸ ನಿಮಿಷಗಳ ಆಲೋಚನೆಗಳು ಬರುತ್ತಿದ್ದುವು.

ಕಿಸೆಯಿಂದ ಐದು ರೂಪಾಯಿಯ ನೋಟೊಂದನ್ನು ಹೊರತೆಗೆದು ರಸೀದಿಗಾಗಿ ವಿಜಯ ಕಾದು ನಿಂತ. ಎರಡು ನಿಮಿಷಗಳಲ್ಲಿ ಸ್ಟುಡಿಯೋದ ಫೋಟೊಗ್ರಾಫರ್ ಫೊಟೋದ ಮೂರು ಪ್ರತಿಗಳನ್ನು ಒಂದು ಕವರಿನಲ್ಲಿ ಹಾಕಿ ಅದರೊಟ್ಟಿಗೆ ಹಣಸಂದ ರಸೀದಿಯನ್ನು ವಿಜಯನ ಕೈಗಿತ್ತ.

ವಿಜಯನು ಹಣತೆತ್ತ ರಸೀದಿ ಪಡೆದು ಫೊಟೋ ಇದ್ದ ಕವರನ್ನು ಕಿಸೆಯಲ್ಲಿಟ್ಟುಕೊಂಡು ಹೊರಬಂದ.

ಸಂಜೆಯ ನಗರದ ವಾತಾವರಣ ವಿಜಯನಿಗೆ ಅಂದೇನೋ ಎಂದಿಗಿಂತ ಹೊಸದಾಗಿದ್ದಂತಿತ್ತು.

ಆ ದೊಡ್ಡ ರಸ್ತೆಗಳೆಲ್ಲವೂ ಜನ ಜಂಗುಳಿಯಿಂದ ಕೂಡಿತ್ತು.

ಅಸ್ತಮಿಸುತ್ತಿದ್ದ ಸೂರ್ಯನ ಕಿರಣ ಸಮೂಹ ಎತ್ತರದ ಕಟ್ಟಡಗಳ ಎಡೆಕೆಯಲ್ಲಿ ತೂರಿ ಬರುತ್ತಿತ್ತು. ಮುಪ್ಪಿನಿಂದ ಕೂಡಿದ ಆ ಕಿರಣಗಳ ಹೊಂಬೆಳಕು, ವಿಜಯನಿಗೇನೋ ಒಂದು ವಿಧವಾದ ಆಹ್ಲಾದಮಾನವಾಗಿದ್ದಂತೆ ತೋರಿತು

ಕಿಸೆಯಲ್ಲಿದ್ದ ಮಾಧುರಿಯ ಫೊಟೋವಿನ ಒಂದು ಪ್ರತಿಯನ್ನು ಮಾತ್ರ ಹೊರತೆಗೆದು ಕೈಯಲ್ಲಿ ಇಟ್ಟುಕೊಂಡು ಆಗಾಗ ನೋಡುತ್ತಿದ್ದ.

ಅವಳ ಮಂದಸ್ಮಿತ; ಅರೆ ಬಿರಿದ ತುಟಿಗಳಿಂದ ಬರಲೋ ಬೇಡವೋ ಎಂಬಂತೆ ಅನುಮಾನಿಸುತ್ತಿದ್ದಾಗಲೇ ಫೊಟೋಗ್ರಾಫರ್ ಕ್ಯಾಮರವನ್ನು ಕ್ಲಿಕ್ ಮಾಡಿರಬೇಕು. ಮಾಧುರಿಯ ಆಕರ್ಷಕ ಮುದ್ದು ಮುಖಕ್ಕೆ ಆ ನಗುವಿನ ತಿಳಿಮಿಂಚು ವಿಶೇಷವೊಂದು ಶೋಭಾಯಮಾನವಾಗಿದೆ.

ಅರೆತೆರೆದ ಆ ತುಂಬು ಎದೆಯ ಮೇಲೆ ವೈಯ್ಯಾರವಾಗಿ ಅವಳು ಇಳಿ ಬಿಟ್ಟಿದ್ದ ಆ ಉದ್ದನೆಯ ಸಪೂರ ಜಡೆ ಎಷ್ಟೊಂದು ಆಕರ್ಷಕವಾಗಿದೆ! ತಿದ್ದಿ ಬಾಚಿದ ಮುಂದಲೆಯ ನೀಳ ಬೈತಲೆಯ ಸೊಗಸು! ಕುರುಳಿನ ಸಮೂಹದಿಂದ ಪ್ರಯತ್ನಪೂರ್ವಕ ತಪ್ಪಿಸಿಕೊಂಡು ಬಂದು ಅವಳ ವಿಶಾಲವಾದ ಲಲಾಟದ ಮೈದಾನದಲ್ಲಿ ಸ್ವೇಚ್ಛೆಯಾಗಿ ವಿಹರಿಸುತ್ತಿರುವ ಆ ವೃತ್ತಾಕಾರದ ಕುರುಳಿನ ಸೊಬಗೆಷ್ಟು! ಅಂತಹ ಸುಂದರ ಮಂದಾರದೊಂದಿಗೆ ಜೊತೆಗೂಡಿರುವ ತನ್ನ ಅದೃಷ್ಟ ನಿಜವಾಗಿಯೂ ಮೆಚ್ಚುವಂತಹದೆ!

"ಮಾಧುರಿ" ಎಂದು ಯಾರಿಗೂ ಕೇಳಿದಷ್ಟು ಸಣ್ಣ ಧ್ವನಿಯಲ್ಲಿ ವಿಜಯ ತನ್ನಲ್ಲೇ ತಾನು ಸಿಸು ಮಾತನಾಡಿಕೊಂಡು, ಮಾಧುರಿಯ ಭಾವ ಚಿತ್ರವನ್ನು ಹೃದಯ ತುಂಬಿ ಬಂದು ತನ್ನ ತುಟಿಗಳಿಗೆ ಒತ್ತಿಕೊಳ್ಳುವ ಪ್ರಯತ್ನ ಮಾಡಿದ

'ಪಾಂ.... ಪಪಾ...' ಎಂದು ವಿಕಟವಾಗಿ ಹಾರನ್ ಮಾಡಿಕೊಂಡೆ ಬಂದ ಲಾರಿಯೊಂದು ವಿಜಯನ ಅತ್ಯಂತ ಸಮೀಪದಲ್ಲಿಯೇ ವೇಗವಾಗಿ ಹೋಯಿತು. ಅದರ ವೇಗಕ್ಕೆದ್ದ ರಸ್ತೆಯ ಇಕ್ಕೆಲಗಳ ಧೂಳು ರಪ್ಪನೆ ವಿಜಯನಿಗೆ ಬಡಿಯಿತು. ಕೈಲಿದ್ದ ಭಾವ ಚಿತ್ರವನ್ನು ಇನ್ನೇನು ತುಟಿಗೆ ತಾಗಿಸಬೇಕೆನ್ನುವಷ್ಟರಲ್ಲಿ, ಆ ಆಕಸ್ಮಿತ ಧೂಳಿನ ರಾಶಿ ವಿಜಯನ ಕೈಲಿದ್ದ ಭಾವ ಚಿತ್ರವನ್ನು ಹಾರಿಸಿ ಬಿಟ್ಟಿತ್ತು.

ಆಕಸ್ಮಿಕವಾಗಿ ಆದ ಧೂಳಿನಾಘಾತದಿಂದ ವಿಜಯ ಅವಾಕ್ಕಾದ ಕಣ್ಣುಗಳಲ್ಲಿನ ಧೂಳನ್ನು ಕರವಸ್ತ್ರದಿಂದ ಒರೆಸಿ ನಿಚ್ಚಳವಾಗಿ ಬಿಟ್ಟು ಅತ್ತ, ಇತ್ತ ದೃಷ್ಟಿ ಹಾಯಿಸಿದ.

ಭಾವಚಿತ್ರ ಅಲ್ಲೆ ರಸ್ತೆಯ ಬದಿಗೆ ಬಿದ್ದಿತ್ತು.

ಆದರೆ ಆ ಚಿತ್ರ ಲೋರಿಯ ಚಕ್ರಕ್ಕೆ ಸಿಕ್ಕಿ ನಜ್ಜು-ಗುಜ್ಜಾದಂತಿತ್ತು. ಅದರಲ್ಲಿದ್ದ ಪ್ರತಿಬಿಂಬ ಧೂಳಿನರಾಶಿಯಲ್ಲಿ ಕಾಣದಂತಿತ್ತು.

ವಿಜಯ ಭಾವ ಚಿತ್ರವನ್ನು ಕೈಗೆತ್ತಿಕೊಂಡು ಅದರ ಮೇಲಿದ್ದ ಧೂಳನ್ನು ಕೊಡಲು ಸ್ವಚ್ಛಗೊಳಿಸಿ, ಲೋರಿ ಹೋದ ದಿಕ್ಕನ್ನೆ ದಿಟ್ಟಿಸ ತೊಡಗಿದ.

ಮೊದಲು ಬಂದ ಲೋರಿ ಧೂಳೆಬ್ಬಿಸಿ, ವಿಜಯನ ಕೈಲಿದ್ದ ಭಾವಚಿತ್ರವನ್ನು ಕೆಳಗೆ ಹಾರುವಂತೆ ಮಾಡಿ ಹೋಗಿತ್ತು. ಅದರ ಹಿಂದೆಯೇ ಬಂದ ಮತ್ತೊಂದು ಲೋರಿ ಕೆಳಗೆ ಬಿದ್ದ ಆ ಭಾವಚಿತ್ರದ ಮೇಲೆಯೇ ಹರಿದು ಹೋಗಿತ್ತು. ಧೂಳಿನ ಗುಂಗಿನಲ್ಲಿದ್ದ ವಿಜಯನಿಗೆ ಈಗಲೇ ಗೊತ್ತಾಗಿದ್ದು, ಮೊದಲು ಬಂದ ಆ ಲೋರಿಯ ಹಿಂದೆ ಮತ್ತೂ ಒಂದು ಲೋರಿಯೂ ಹೋಗಿದೆ ಎಂದು.

ಈಗ ಏಕೋ ವಿಜಯನ ಮುಖದ ಮೇಲಿನ ವರ್ಣವೇ ಬದಲಾದಂತಿತ್ತು. ಬಾರಿ ಬಾರಿಗೂ ಮಾಧುರಿಯೊಂದಿಗೆ ಆನಿದ್ದ ಆ ಭಾವಚಿತ್ರವನ್ನೆ ನೋಡುತ್ತಾ ನಡೆದ.

ಮಾಧುರಿವಿನಃ ಕಾರಣ ರಜಾ ಹಾಕಿ ಎಲ್ಲಿಗೆ ಹೋದಳೆಂಬ ಸಮಸ್ಯೆಯನ್ನು ಎಷ್ಟು ಯೋಚಿಸಿದರೂ, ವಿಜಯನಿಂದ ಬಗೆಹರಿಸಲಾಗಲಿಲ್ಲ.

'ಅಸ್ವಸ್ಥತೆಯಿಂದ ಹೋಗಿರಬಹುದೇ? ಎಂದುಕೊಂಡ.

'ಇಲ್ಲ ರಜಾ ಮಾಡುವ ಮುನ್ನ ದಿನವೂ, ತನ್ನೊಡನೇ ಎಷ್ಟೊಂದು ಮಾತಾಡಿದ್ದಳು' ಎಂದು ಉತ್ತರಿಸಿತು ಅಂತರಂಗ.

ಪ್ರಭಾ ಳೊಂದಿಗೆ ಋಣವೂ ಹರಿದು ಅಷ್ಟೇ ಸಮಯವಾಯಿತು.

ವಿಜಯನ ಮಾನದಂಡ ಒಂದೆಡೆ ಕುಳಿತ ಪ್ರಭಾಳನ್ನೂ, ಇನ್ನೊಂದೆಡೆ ಕುಳಿತ ಮಾಧುರಿಯನ್ನೂ ಅಳೆಯ ತೊಡಗಿತು.

ಇದರಲ್ಲಿ ತನಗೆ ಬೇಕಾದವಳು ಯಾರು?

ಯಾರದರೇನು? ಇನ್ನು ತನ್ನ ಪ್ರೇಮ ದಂಡದಲ್ಲಿಟ್ಟು ಅಳತೆ ನೋಡಲು ಪ್ರಭೆಳೇ ಅಲ್ಲಿ ಇಲ್ಲವಲ್ಲ!

ಹೌದು ಪ್ರಭಾಳೊಂದಿಗೆ ಅಂದೇ ವಿಚ್ಛೇದ ನಡೆದು ಹೋಗಿತ್ತು.

ಇನ್ನು ಆ ಸ್ಥಳವನ್ನು ತನ್ನ ಪ್ರೇಮ ಪುತ್ತಳಿಯಾಗಿ ಮಾಧುರಿಯೇ ಬಂದು ಕಳಕಳಿಸುವಂತೆ ಜೀವ ತುಂಬುತ್ತಾಳೆ.

ವಿಜಯನ ಬಾಹ್ಯ ಚಕ್ಷುಗಳ ಮುಂದೆ ಆ ಸಂಜೆಯ ನಗರದ ಬೀದಿಯೆಲ್ಲವೂ, ಶೂನ್ಯವಾದಂತೆ ಕಾಣುತ್ತಿತ್ತು. ಅವನ ಕ್ಷೋಭೆಗೊಂಡ ಮನವನ್ನು ಗುರುತಿಸುವಂತಿರಲಿಲ್ಲ. ಅಲ್ಲಿದ್ದುದು ಎರಡೇ ಎರಡು ಚಿತ್ರಗಳು ಮಾತ್ರ!

ಒಂದು ಪ್ರಭಾಳದ್ದು.

ಮತ್ತೊಂದು ಮಾಧುರಿಯದು.

ತನ್ನ ಬಗೆಗಣ್ಣಿನೆದುರು ಸ್ಥಿರವಾಗಿನಿಂತ ಆ ಚಿತ್ರಗಳಲ್ಲಿ ಪ್ರಭಳ ಛಾಯೆಯನ್ನು ಅವನ ಮನ ಹೇಸುತಿತ್ತು. ಮಾಧುರಿಯ ಛಾಯೆಯೊಂದನ್ನೇ ಅವನು ಸಂತಸದಿಂದ ನೋಡಲಿಚ್ಛಿಸುತ್ತಿದ್ದ.

ಆದರೇ ಅದಾವುದೋ ಪ್ರತಿಧ್ವನಿ ಅವನ ಕಿವಿಯ ಅತ್ಯಂತ ಸಮೀಪದಲ್ಲಿಯೇ ಧ್ವನಿಸುತ್ತಿತ್ತು.

ವಿಜಯ ನಿಬ್ಬೆರಗಾಗಿ ಆ ಧ್ವನಿ ಬಂದತ್ತ ನಿರುಕಿಸಿದ. ಪ್ರಭಾಳ ಕಳಾಹೀನ ಮುಖ. ಅವಳ ಯಾಚಕ ದೃಷ್ಟಿ ವಿಜಯನತ್ತಲೇ ಇತ್ತು. ಅವಳ ತೆರೆದ ತುಟಿದ್ವಯದಿಂದ ಏನೋ ಅಸ್ಪಷ್ಟ ಶಬ್ದವು ಹೊರಬರುತ್ತಿತ್ತು.

'ನೀವು ನನ್ನನ್ನೇಕೆ ತ್ಯಜಿಸಿದಿರಿ?'

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣೆ ಮಾಡಿರಿ: ಬಡ್ಡಿ ಸೇಕಡಾ ೫ರಂತೆ: ರೂ. 87--00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4--1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ತಪ್ಪು ತಿಳಿಯಬೇಡಿರಿ

ನೀವು ಸರಿಯಾಗಿ ಉಸಿರಾಡುತ್ತೀರಾ?

ಇದೀಗ ಹುಟ್ಟಿದ ಮಗುವೂ ಉಸಿರಾಡುವುದು ಹೇಗೆಂದು ತಿಳಿದುಕೊಂಡಿದೆ. ತುಸು ಗಂಭೀರವಾಗಿ ಯೋಚಿಸಿದರೆ, ಮಕ್ಕಳು ಚೆನ್ನಾಗಿ ಉಸಿರಾಡುವುದನ್ನು ಕಲಿತುಕೊಂಡಿದ್ದಾರೆ; ಆದರೆ, ದೊಡ್ಡವರೇ ಅದನ್ನು ಮರೆತು ಬಿಟ್ಟಿದ್ದಾರೆ ಜೀವನ ಮತ್ತು ವಾತಾವರಣದ ವಿಭಿನ್ನ ವಿಕಾರಗಳಿಂದ ಮಕ್ಕಳು ದೂರವಿರುತ್ತಾರೆ; ಆದರೆ, ಹಿರಿಯರು ತಮಗರಿವಿಲ್ಲದಂತೆಯೇ ತಮ್ಮ ಮೂಲ ಸ್ವಭಾವ ಮತ್ತು ಮೂಲ ಕ್ರಿಯೆಗಳನ್ನು ವಿಸ್ಮೃತ ಮಾಡಿಕೊಂಡಿರುವರಾದರೂ ಉಸಿರಾಡುವುದು ಹೇಗೆಂಬುದನ್ನು ಅವಶ್ಯ ಕಲಿತುಕೊಳ್ಳಬೇಕು.

. ಉಸಿರಾಡುವುದು ಊಟ ಮಾಡುವುದರಂತೆಯೇ, ಆದರೆ, ಅದಕ್ಕಿಂತಲೂ ಮಹತ್ವಪೂರ್ಣವಾದ ಒಂದು ಕೆಲಸ. ಆಹಾರ ಸೇವನೆಯಿಂದ ನಮ್ಮ ಎಲುಬು, ಮಾಂಸ ಸ್ನಾಯು ಮೊದಲಾದುವು ನಿರ್ಮಾಣಗೊಳ್ಳುತ್ತವೆ ಹಾಗೂ ಪೋಷಿತವಾಗುತ್ತವೆ ಆದರೆ ಉಸಿರಾಟವು ನಮಗೆ ಅಪೂರ್ವ ಶಕ್ತಿಯೀಯುತ್ತದೆ ಈ ಶಕ್ತಿಯಿಲ್ಲವೆಂದಾದರೆ, ನಮ್ಮ ಶರೀರವೊಂದು ಜಡಪಿಂಡ ಮಾತ್ರವಾದೀತು. ಉಸಿರಾಟದಿಂದ ನಮ್ಮ ರಕ್ತಕ್ಕೆ ಇಂಧನವು ಲಭಿಸುತ್ತದೆ. ಇದರ ಹೊರತು ನಮ್ಮ ಮೆದುಳು ಇಲ್ಲವೇ ಶರೀರಗಳು ನಿಷ್ಕ್ರಿಯವೆನಿಸುವುವು. ಅದರ ಜೊತೆಗೆ ನಾವು ತಿನ್ನುವ ಆಹಾರವಾದರೂ ನಮಗೆ ಯಾವ ಪ್ರಯೋಜನವನ್ನೂ ನೀಡುವುದಿಲ್ಲ. ಉಚಿತ ವಿಧಾನದಲ್ಲಿ ಉಸಿರಾಡುವುದು ತಿಳಿಯುವುದಾದರೆ, ದಿನದಲ್ಲಿ ನಾವು ಮಾಡುವ ಮಾನಸಿಕ ಅಥವಾ ಶಾರೀರಿಕ ಕೆಲಸಗಳನ್ನು ಅಧಿಕ ಸರಳವಾಗಿ, ಸಮರ್ಪಕವಾಗಿ ಪೂರೈಸುವುದು ಸಾಧ್ಯವಿದೆ.

ಪ್ರತಿಯೊಂದು ಪ್ರಾಣಿಯೂ ಸ್ವಾಭಾವಿಕವಾಗಿ ಉಸಿರಾಡುವುದು; ಇದು ಅವರ ಮೂಲ ಸ್ವಾಭಾವಿಕ ಕ್ರಿಯೆ ಆದುದರಿಂದಲೇ ನಮಗೆ ಸರಿಯಾಗಿ ಉಸಿರಾಡಲು ಗೊತ್ತಿದೆಯೆಂದುಕೊಳ್ಳುತ್ತೇವೆ. ಆದರೆ, ಇದು ಸತ್ಯವಲ್ಲ. ನಾವು ಯಾವಾಗಲೂ ಅಸಂಖ್ಯಾತ ಶಾರೀರಿಕ, ಮಾನಸಿಕ ಮತ್ತು ವೈಜ್ಞಾನಿಕ ಅಡೆತಡೆಗಳ ನಡುವೆ ಇರುತ್ತೇವೆ; ಇದರಿಂದ ನಮ್ಮ ಶಕ್ತಿಯು ನಿರಂತರ ಕುಂಠಿತವಾಗುತ್ತ ಹೋಗುತ್ತಿದೆ. ಈ ಔದ್ಯೋಗಿಕ ಯುಗದಲ್ಲಿ ನಮ್ಮ ಜೀವನಕ್ಕೆ ಅತ್ಯಂತಾವಶ್ಯಕವೆನಿಸಿದ ಆಮ್ಲಜನಕದ ಪ್ರಮಾಣವು ಕಡಿಮೆಯೆನಿಸುತ್ತ ಬರುತ್ತಿದೆ.

ಪ್ರಸವಕಾಲದ ಕೆಲವು ದಿನಗಳ ವರೆಗೆ ಮಕ್ಕಳು ಸ್ವಾಭಾವಿಕ ವಿಧಾನದಲ್ಲಿಯೇ ಉಸಿರಾಡುತ್ತವೆ. ಉಸಿರಾಟದ ವೇಳೆ ಅವರ 'ಡೈಫ್ರಾಮ್' ಸ್ನಾಯುವು ಕೆಲಸ ಮಾಡುವುದು. ಆದುದರಿಂದಲೇ ಶ್ವಾಸಕೋಶಗಳು ಸಂಪೂರ್ಣ ತುಂಬಿಕೊಳ್ಳುವಂತೆ ಶ್ವಾಸ ತೆಗೆದುಕೊಳ್ಳುತ್ತವೆ. ಹಿರಿಯರ ಶರೀರ ಮತ್ತು ಮನಸ್ಸುಗಳಲ್ಲಿರುವಂತೆ ದಣಿವು ಈ ಚಿಕ್ಕ ಮಕ್ಕಳಲ್ಲಿರದಿರುವುದೂ ಅವುಗಳ ಸರಿಯಾದ ಉಸಿರಾಟಕ್ಕೆ ಕಾರಣವಾಗುತ್ತದೆ.

ಪ್ರಾಯವು ಹೆಚ್ಚುತ್ತ ಬಂದಂತೆ, ಅಡೆತಡೆಗಳ ಪ್ರಭಾವವು ಕಾಣಿಸಿಕೊಳ್ಳುತ್ತದೆ. ಇದರಿಂದ ಸ್ವಾಭಾವಿಕತೆಯು ಕುಂಠಿತವಾಗುತ್ತದೆ; ಇದರಿಂದಾಗಿ ಕೆಲವು ವರ್ಷ ಕಳೆದ ಮೇಲೆ, ಅವಶ್ಯವೆನಿಸುವಷ್ಟು ಗಾಳಿಯನ್ನೂ ನಾವು ಸೇವಿಸುವುದಿಲ್ಲ. ಎಂದರೆ, ನಮ್ಮ ಶ್ವಾಸಕೋಶದ ಮೇಲ್ಭಾಗವು ಮಾತ್ರ ಗಾಳಿಯಿಂದ ತುಂಬಿಕೊಳ್ಳುವಂತೆ ಅಲ್ಪವಾಗಿ ಉಸಿರಾಡುತ್ತೇವೆ; ಆಗ ಕೆಳಗಿರುವ ಡ್ಯಾಫ್ರಾಮ್ ನಿರುಪಯುಕ್ತವಾಗುತ್ತದೆ ಹೀಗೆ ಸಾಕಷ್ಟು ಪ್ರಮಾಣದಲ್ಲಿ ಉಚಿತ ವಿಧಾನದಲ್ಲಿ ಉಸಿರಾಡದಿರುವುದರಿಂದ, ನಮ್ಮ ಶರೀರವು ನಾನಾ ವಿಧದ ರೋಗಗಳಿಗೆ ಬಲಿಯಾಗುತ್ತದೆ; ಹಾಗೆಯೇ ಅದಕ್ಕೆ ಶರೀರದ ದಣಿವಿನ ಮನವರಿಕೆಯೂ ಆಗುತ್ತದೆ. ಇದರಿಂದ ರಕ್ತ ಚಲನೆಯು ಸಮುಚಿತ ಮತ್ತು ಸುಚಾರು ರೂಪದಲ್ಲಿ ನಡೆಯುವುದಿಲ್ಲ, ಮೆದುಳಿನ ವಿಚಾರ ಶಕ್ತಿಯಲ್ಲೂ ಹ್ರಾಸ ಕಾಣಿಸಿಕೊಳ್ಳುವುದು. ಮಾನವನು ಆಲಸಿಯಾಗುತ್ತಾನೆ; ಮತ್ತು ಶೀಘ್ರಾತಿ ಶೀಘ್ರದಲ್ಲಿ ಆಯಾಸದ ಅನುಭವವು ಆಗುವುದು.

ನಾವೂ ಎಲ್ಲರಂತೆ ಉಸಿರಾಡುತ್ತೇವೆ, ಒಂದು ನಿಮಿಷದಲ್ಲಿ ಹದಿನಾರು ಬಾರಿ ಈ ಗಣನೆಯಲ್ಲಿಯಾದರೂ ಹೆಚ್ಚು ಕಡಿಮೆಯಾಗುವುದಿಲ್ಲ ನಾವು ಸರಿಯಾದ ರೀತಿಯಲ್ಲಿ ಉಸಿರಾಡಲಿಲ್ಲವೆಂದರೆ, ಒಂದು ದಿನದಲ್ಲಿ ೨೩,೦೪೦ ತಪ್ಪುಗಳನ್ನು ಪುನರಾವರ್ತಗೊಳಿಸಿದಂತೆ, ಪ್ರತಿಯೊಂದು ತಪ್ಪು ನಮ್ಮ ಮೇಲೆ ದುಷ್ಪ್ರಭಾವವನ್ನು ಬೀರುವುದು ನಮ್ಮ ಆರೋಗ್ಯ ದೃಷ್ಟಿಯಿಂದ ಅದು ಕೆಟ್ಟ ಪರಿಣಾಮವನ್ನು ಮಾಡದಿರುವುದಿಲ್ಲ. ಆದುದರಿಂದ ಆರೋಗ್ಯಜೀವನದಿಂದಿರಬಯಸುವವನು ಸಮುಚಿತ ರೀತಿಯಲ್ಲಿ ಉಸಿರಾಡಲು ಕಲಿತುಕೊಳ್ಳಬೇಕು.

ಉತ್ತಮ ರೀತಿಯಲ್ಲಿ ಉಸಿರಾಡುವುದು ಹೇಗೆ ಎಂದು ತಿಳಿಯುವುದಕ್ಕೆ ಮೊದಲು ನಮ್ಮ ಶರೀರದ ಪ್ರಾರಂಭಿಕ ಜ್ಞಾನವು ಅವಶ್ಯವಾಗಿದೆ. ಮುಖ್ಯವಾಗಿ ಉಸಿರಾಟದ ಅಂಗಗಳ ಪರಿಚಯವು ಅತ್ಯಗತ್ಯ. ಮೂಗಿನ ಮೂಲಕ ನಾವು ಉಸಿರಾಡುತ್ತೇವೆ ಶ್ವಾಸಕೋಶಗಳು ಉಸಿರನ್ನು ಎಳೆದುಕೊಳ್ಳುತ್ತವೆ. ಉಸಿರಾಟದಲ್ಲಿ ಗಾಳಿಯನ್ನು ಒಳಗೆ ತೆಗೆದುಕೊಳ್ಳಲು ಮತ್ತು ಹೊರಗೆ ಬಿಡಲು 'ಡ್ಯಾಫ್ರಾಮ್' ಸ್ನಾಯು ಅದನ್ನು ಒತ್ತುತ್ತದೆ. ಆದುದರಿಂದ ಉಸಿರಾಟದ ಕಾರ್ಯದಲ್ಲಿ ಈ ಸ್ನಾಯುವು ಮಹತ್ವದ ಪಾತ್ರ ವಹಿಸುತ್ತದೆ. ನಾವು ಮಲಗುವಾಗ, ಕೂತುಕೊಳ್ಳುವಾಗ, ಮತ್ತು ಕಾರ್ಯಮಗ್ನವಾಗುವಾಗ ಡ್ಯಾಫ್ರಾಮ್‌ನ ಕಾರ್ಯಕ್ಕೆ ಅಡೆ-ತಡೆ ಬೀಳದಂತೆ ನೋಡಿಕೊಂಡಿರಬೇಕು. ಒಂದು ವೇಳೆ ಅಡೆತಡೆಗಳು ಬಿದ್ದವೆಂದರೆ, ಡ್ಯಾಫ್ರಾಮ್‌ನ ಕಾರ್ಯ ಕುಂಠಿತವಾಗುವುದು. ಶ್ವಾಸಕೋಶಗಳೂ ಸರಿಯಾಗಿ ಗಾಳಿಯನ್ನು ತೆಗೆದುಕೊಳ್ಳುವುದಿಲ್ಲ ಹಾಗೆಯೇ ಬಿಡುವುದೂ ಇಲ್ಲ.

ಸಮುಚಿತ ರೀತಿಯಲ್ಲಿ ಉಸಿರಾಡುವುದಕ್ಕೆ ಮತ್ತದು ಸ್ವಾಭಾವಿಕ ರೂಪದಲ್ಲಿರುವುದಕ್ಕೆ ಅಭ್ಯಾಸವು ಬೇಕೇ ಬೇಕು.

ನಾವು ಯಾವಾಗಲೂ ನೆಟ್ಟಗಾಗಿ ಕುಳಿತುಕೊಳ್ಳಬೇಕು; ನಡೆಯಬೇಕು. ಆಗ ಶರೀರದ ಎಲ್ಲ ಅಂಗಗಳೂ ಸರಿಯಾಗಿ ಕೆಲಸ ಮಾಡುವುವು ಡ್ಯಾಫ್ರಾಮ್ ಕೂಡ ಚಲೋ ರೀತಿ ಕಾರ್ಯತತ್ಪರವಾಗುವುದು. ಶರೀರವನ್ನು ನೆಟ್ಟಗೆ ನಿರ್ದಿಷ್ಟ ಆಸನದಲ್ಲಿರಿಸಿಕೊಂಡು ಡ್ಯಾಫ್ರಾಮ್ (ಹೊಕ್ಕುಳಿನ ಬಳಿ)ಯಿಂದ ಉಚ್ಛ್ವಾಸಿಸಲು ಪ್ರಯತ್ನಿಸಬೇಕು. ಬೇಕೆನಿಸಿದರೆ, ಹೊಟ್ಟೆ ಮತ್ತು ನಾಭಿಯ ನಡುವಣ ಭಾಗವನ್ನು ಕೈಗಳಿಂದ ಮೇಲಕ್ಕೆ ದೂಡಿಕೊಳ್ಳಬಹುದು. ಆಗ ಶ್ವಾಸಕೋಶಗಳು ಸರಿಯಾಗಿ ಗಾಳಿಯನ್ನು ತುಂಬಿಸಿಕೊಳ್ಳುವುವು. ಡ್ಯಾಫ್ರಾಮ್ ಕೂಡ ಚಟುವಟಿಕೆಯಿಂದ ಕಾರ್ಯತತ್ಪರವಾಗುವುದು.

ಗಾಳಿಯನ್ನು ಒಳಗೆ ತೆಗೆದುಕೊಂಡ ನಂತರ ಅದನ್ನು ಹೊರಬಿಡುವ (ನಿಶ್ವಾಸಿಸುವ) ಸರದಿ ಬರುವುದು ಆಗ ನಾಭಿ ಬಳಿ ಇಟ್ಟಿದ್ದ ಕೈಯನ್ನು ತೆಗೆಯಬೇಕು ಶ್ವಾಸವನ್ನಾದಷ್ಟು ಮೆಲ್ಲಮೆಲ್ಲನೆ ಬಿಡಬೇಕು. ಆದರೆ, ಸಂಪೂರ್ಣ ಉಸಿರಾಡಿದ ಗಾಳಿಯನ್ನು ಹೊರಗೆ ಹಾಕಬೇಕೆಂಬುದನ್ನು ಮರೆಯಬಾರದು. ಆಗ ಶ್ವಾಸಕೋಶಗಳು ಸಂಪೂರ್ಣ ರಿಕ್ತವಾಗುವುವು. ಪ

(೧೦ನೇ ಪುಟ ನೋಡಿರಿ)



ಬಾಹ್ಯಾಂತರಿಕ್ಷಗಾಮಿ ಜೋನ್ ಗ್ಲೆನ್‌ರವರು ಆಕಾಶ ಬಾಣದೊಳಗೆ ಪ್ರವೇಶಿಸುತ್ತಿರುವುದನ್ನು ಕಾಣಬಹುದು.

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;

ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ

ಆಡಳಿತ ಆಫೀಸು. ಮಂಗಳೂರು-1.



ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ?
ಫರ್ನಿಚರುಗಳಲ್ಲೆಲ್ಲ 'ಹೀರಾ' ತಿಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ?

ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಬಳಕೆಗಾಗಿ— ತಾಳಿಕೆ ಬಾಳಿಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ದೇಶ ವಿಖ್ಯಾತವಾದ '**ಹೀರಾ**' ಉಕ್ಕಿನ ಫರ್ನಿಚರುಗಳನ್ನೇ ಉಪಯೋಗಿಸಿರಿ. ವಿಚಾರಿಸಿರಿ, ಯಾ, ಶೋ ರೂಮನ್ನು ಸಂದರ್ಶಿಸಿರಿ.

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ವಿಶ್ವವಿಖ್ಯಾತವಾದ

ಭಾರತೀಯ ದರ್ಶನ ಶಾಸ್ತ್ರಗಳು

ಸುಮಾರು ೧೪ನೆಯ ಶತಮಾನದ ವರೆಗಿನ ಕಾಲವನ್ನು ಭಾರತೀಯ ದಾರ್ಶನಿಕತೆಯ ವಿಕಾಸ ಕಾಲವೆಂದು ಹೇಳಬಹುದು ಈ ಸಮಯದಲ್ಲಿ ಅತಿ ಶೀಘ್ರವಾಗಿ ಈ ವಿಕಾಸವು ನಡೆಯುತ್ತ ಬಂದಿದ್ದು ಇದನ್ನು ಭಾಷ್ಯಕಾಲವೆನ್ನುತ್ತಾರೆ. ಈಶ್ವರನ ಅಸ್ತಿತ್ವವನ್ನು ಒಪ್ಪುವ ಮತ್ತು ಒಪ್ಪದಿರುವ ಆಧಾರದ ಮೇಲೆ ದರ್ಶನಗಳನ್ನು ಆಸ್ತಿಕ ಮತ್ತು ನಾಸ್ತಿಕವೆಂದೆರಡು ತೆರವಾಗಿ ವಿಂಗಡಿಸಬಹುದು ವೇದದ ಸಿದ್ಧಾಂತಗಳನ್ನು ಸ್ವೀಕರಿಸದಿರುವ ದರ್ಶನವು ನಾಸ್ತಿಕ ಮತ್ತು ಒಪ್ಪುವ ದರ್ಶನವು ಆಸ್ತಿಕವೆನಿಸುವುದು ನಾಸ್ತಿಕ ದರ್ಶನಗಳನ್ನು ಚಾರ್ವಾಕ, ಜೈನ ಮತ್ತು ಬೌದ್ಧ ದರ್ಶನಗಳೆಂದು ಮೂರು ವಿಭಾಗ ಮಾಡುತ್ತಾರೆ

ಚಾರ್ವಾಕ ದರ್ಶನ

ಆಚಾರ್ಯ ಬೃಹಸ್ಪತಿಯು ಈ ದರ್ಶನದ ರಚಯಿತರು ಭೌತಿಕ ಜೀವನವನ್ನು ಸುಖಮಯವನ್ನಾಗಿ ಮಾಡುವುದೇ ಈ ದರ್ಶನದ ಸಿದ್ಧಾಂತ

ಯಾವಜ್ಜೀವಂ ಜೀವೇದೃಣಂ
ಕೃತ್ವಾ ಘೃತಂ ಪಿಬೇತ
ಭಸ್ಮೀ ಭೂತಸ್ಯ ದೇಹಸ್ಯ
ಪುನರಾಗಮನಂ ಕುತಃ ||

ಜೀವವಿರುವ ವರೆಗೆ ಸಾಲವನ್ನು ಮಾಡಿಯಾದರೂ ತುಪ್ಪವನ್ನೇ ಕುಡಿಯಬೇಕು, ಭಸ್ಮೀಭೂತವಾದ ದೇಹವು ಮರಳಿ ಬರುವುದಿಲ್ಲವಾದ್ದರಿಂದ ಧರಬೇಕಾದುದೇಇಲ್ಲ ಇವು ಚಾರ್ವಾಕ ಸಿದ್ಧಾಂತದಪಂಚಾಯಕ ಶಬ್ದಗಳು ಈ ದರ್ಶನವು ಪ್ರತ್ಯಕ್ಷ ಪ್ರಮಾಣವನ್ನು ಮಾತ್ರ ಒಪ್ಪುತ್ತದೆ ಚಾರ್ವಾಕರ ಮತದಂತೆ ಭೂಮಿ, ನೀರು, ತೇಜಸ್ಸು ಮತ್ತು ವಾಯುಗಳ ಸಂಮಿಶ್ರಣದಿಂದ ಶರೀರವು ನಿರ್ಮಾಣವಾಗುತ್ತದೆ ಮರಣವೆಂಬುದೇ ಮೋಕ್ಷ. ಸ್ವಭಾವ ಸಿದ್ಧವಾಗಿಯೇ ಜಗತ್ತು ಉತ್ಪನ್ನವಾಗುತ್ತದೆ, ಮತ್ತು ನಷ್ಟವಾಗುತ್ತದೆ ದೇವರೆಂಬವನಾರೂ ಇರುವುದಿಲ್ಲ, ಲೋಕಾನುಸಾರ ನಡೆಯುವುದರಿಂದ ಇದನ್ನು ಲೋಕಾಯತಿಕವೆಂದೂ ಹೇಳಬಹುದು.

ಜೈನ ದರ್ಶನ

ಜೈನ ವಿದ್ವಾಂಸರು ಆಚಾರ್ಯ ಋಷಭ ದೇವನು ಆದ್ಯ ಧರ್ಮ ಪ್ರಚಾರಕನು ಎನ್ನುತ್ತಾರೆ. ಜೈನರು ಇಪ್ಪತ್ತನಾಲ್ಕು ತೀರ್ಥಂಕರರನ್ನು ಒಪ್ಪುತ್ತಾರೆ ಜೈನಧರ್ಮವು ಮೋಕ್ಷಪ್ರಾಪ್ತಿಗೆ ಮೂರು ಸಾಧನಗಳನ್ನು ಒಪ್ಪಿದೆ ಸಂಮ್ಯಗ್ದರ್ಶನ, ಸಂಮ್ಯಗ್ ಜ್ಞಾನ (ಜೀವ, ಅಜೀವ, ಆಸ್ರವ, ಬಂಧ, ಸಂಬರ, ನಿರ್ಜರಾ ಮತ್ತು ಮೋಕ್ಷಗಳ ಜ್ಞಾನ) ಮತ್ತು ಸಂಮ್ಯಕ್ಚರಿಗಳೇ ಇವು ಚರಿತ್ರಸಿದ್ಧಿಗಾಗಿ, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳ ವ್ರತಾಚರಣೆ ಮಾಡುವುದು ಅತ್ಯಂತಾವಶ್ಯಕವೆಂದಿವರು ತಿಳಿಯುತ್ತಾರೆ ಇವಲ್ಲದೆ ಇನ್ನೂ ಐದು ಅಸ್ತಿಕಾಯಗಳನ್ನು ಜೈನದರ್ಶನವು ಒಪ್ಪುತ್ತದೆ. ಅವು ಜೀವಾಸ್ತಿಕಾಯ, ಪುದ್ಗಲಾಸ್ತಿಕಾಯ, ಆಕಾಶಾಸ್ತಿಕಾಯ, ಧರ್ಮಾಸ್ತಿಕಾಯ ಮತ್ತು ಅಧರ್ಮಾಸ್ತಿಕಾಯಗಳು ಸ್ಯಾದ್ವಾದ ಸಪ್ತಭಂಗೀನ್ಯಾಯವು ಜೈನ ದರ್ಶನದಲ್ಲಿ ಪ್ರಸಿದ್ಧವಿರುತ್ತದೆ ಜೈನರು ಆತ್ಮವನ್ನು ಒಪ್ಪುತ್ತಾರೆ

ಬೌದ್ಧ ದರ್ಶನ

ಭಗವಾನ್ ಗೌತಮ ಬುದ್ಧನಿಂದ ಪ್ರತಿಷ್ಠಿತವಾದ ಧರ್ಮವೇ ಬೌದ್ಧಧರ್ಮ. "ತ್ರಿಪಿಟಕ" ವೆಂಬದು ಈ ದರ್ಶನದ ಅನುಯಾಯಿಗಳ ಮೂಲಗ್ರಂಥ ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ ಮತ್ತು ಮಾಧ್ಯಮಿಕವೆಂಬಿವು ಈ ಗ್ರಂಥದ ಪ್ರಧಾನವಾದ ನಾಲ್ಕು ಸಂಪ್ರದಾಯಗಳು. ಈ ವಿಷಯದಲ್ಲಿ ಕೆಳಗಿನ ಶ್ಲೋಕವು ಸುಪ್ರಸಿದ್ಧವಿದೆ

ಮುಖ್ಯೋ ಮಾಧ್ಯಮಿಕೋ ವಿವರ್ತ
ಮಖಿಲಂ ಶೂನ್ಯಸ್ಯ ಮೇನೇಜಗತ್
ಯೋಗಾಚಾರ ಮತೇತುಸಂತಿ
ಮತಯಸ್ತಾಸಂ ವಿವರ್ತೇ ಖಿಲಃ
ಅರ್ಥೋಸ್ತಿ ಕ್ಷಣಿಕಸ್ತ್ವಸಾ
ವನುಮಿತೋಬುದ್ಧ್ಯೇತಿ
ಸೌತ್ರಾಂತಿಕಃ
ಪ್ರತ್ಯಕ್ಷಂ ಕ್ಷಣ ಭಂಗುರಂ ಚ
ಸಕಲಂ ವೈಭಾಷಿಕೋ ಭಾಷತೇ।

ಮಾಧ್ಯಮಿಕ ಸಂಪ್ರದಾಯವು ಜಗತ್ತು ಶೂನ್ಯವೆಂದೂ ಯೋಗಾಚಾರವು ವಿಜ್ಞಾನ ಮತ್ತು ಮನಸ್ಸನ್ನೇ ಸತ್ಯವೆಂದೂ ಸೌತ್ರಾಂತಿಕವು ಬಾಹ್ಯ ಪದಾರ್ಥಗಳೆಲ್ಲವೂ ಅನುಮಾನದ ಮೂಲಕ ಸತ್ಯವೆಂದೂ ವೈಭಾಷಿಕವು ಪ್ರತ್ಯಕ್ಷದ ಮೂಲಕ ಅಂತಃ ಅಥವಾ ಬಾಹ್ಯ ಜಗತ್ತಿನ ಸಂಬಂಧವಿರುವ ಸಮಸ್ತ ಪದಾರ್ಥಗಳನ್ನು ಸತ್ಯವೆಂದೂ ಸಾರುತ್ತವೆ. ಇವುಗಳಲ್ಲಿ ವೈಭಾಷಿಕವನ್ನು ಸರ್ವಾಸ್ತಿವಾದವೆಂದೂ ಯೋಗಾಚಾರ ಸಂಪ್ರದಾಯವನ್ನು ವಿಜ್ಞಾನವಾದವೆಂದೂ ಕರೆಯುವುದೂ ಇದೆ.

ಆಸ್ತಿಕ ದರ್ಶನಗಳು

ಆಸ್ತಿಕ ದರ್ಶನಗಳು ಆರು ಇವೆ. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ ಮತ್ತು ವೇದಾಂತಗಳೇ ಇವು ಷಡ್ದರ್ಶನಗಳೆಂದೂ ಇವು ಸುವಿಖ್ಯಾತವಾಗಿವೆ

ನ್ಯಾಯ ದರ್ಶನ

ಗೌತಮ ಮಹರ್ಷಿಯು ನ್ಯಾಯ ಸೂತ್ರದ ನಿರ್ಮಾತೃ ಪದಾರ್ಥ ಮೀಮಾಂಸಾತ್ಮಕ ಮತ್ತು ಪ್ರಮಾಣ ಮೀಮಾಂಸಾತ್ಮಕಗಳೆಂದು ಇದು ಎರಡು ಧಾರೆಗಳಾಗಿ ಹರಿದಿದೆ ಪದಾರ್ಥ ಮೀಮಾಂಸೆಯಲ್ಲಿ ಪ್ರಮಾಣ ಪ್ರಮೇಯ, ಸಂಶಯ, ಪ್ರಯೋಜನ ಮೊದಲಾದ ಹದಿನಾರು ಪದಾರ್ಥಗಳ ವಿವೇಚನೆಯಿದೆ ಇವು ಪ್ರಾಚೀನ ನ್ಯಾಯ'ವೆಂಬ ಹೆಸರಿನಿಂದ ಸುಪ್ರಸಿದ್ಧವಾಗಿದೆ ಪ್ರಮಾಣ ಮೀಮಾಂಸೆಯಲ್ಲಿ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ—ಈ ಪ್ರಮಾಣಗಳ ವಿವೇಚನೆಯಿದ್ದು ಇವನ್ನು 'ನವ್ಯನ್ಯಾಯ'ವೆನ್ನುತ್ತಾರೆ. ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ ಮೊದಲಾದ ಷೋಡಶ ಪದಾರ್ಥಗಳ ಯಥಾರ್ಥ ಜ್ಞಾನದ ಮೂಲಕ ಮಾನವ ಜೀವನವು ಗುರಿಮುಟ್ಟುವುದು. "ಋತೇ ಜ್ಞಾನಾನ್ನ ಮುಕ್ತಿ." ಜ್ಞಾನವಿಲ್ಲದೆ ಮುಕ್ತಿಯಿಲ್ಲ ಎಂಬುದೇ ಈ ದರ್ಶನದ ಅಭಿಪ್ರಾಯ. ಪರಮಾಣು, ಆತ್ಮಾ, ಈಶ್ವರ ಇತ್ಯಾದಿ ನಿತ್ಯ ಪದಾರ್ಥಗಳ ಮೂಲಕ ಜಗತ್ತು ಇದೆ ಇಂದ್ರಿಯಗಳ ಮೂಲಕ ಕಾಣುವ ಜಗತ್ತು ಸತ್ಯ. ಪರಮಾಣು ಸಮವಾಯಿಕಾರಣ, ಈಶ್ವರ ನಿಮಿತ್ತಕಾರಣ ಮತ್ತು ಅನುಮಾನಗಮ್ಯ. ಈಶ್ವರ (ಪರಮಾತ್ಮ)ನ ಇಚ್ಛೆಯಂತೆ ಒಂದು ಪರಮಾಣು ಇನ್ನೊಂದು ಪರಮಾಣುವಿನೊಂದಿಗೆ ಸೇರಿ ದ್ವ್ಯಣುಕ ತ್ರ್ಯಣುಕದ ಸಂಮಿಶ್ರಣದಿಂದ ತ್ರಸರೇಣು, ಹೀಗೆಯೇ ಪಂಚ ಭೂತಗಳ ಸಮುತ್ಪತ್ತಿಯಾಗುತ್ತದೆ. ಮಿಥ್ಯಾಜ್ಞಾನದಿಂದಲೇ ಪುನರ್ಜನ್ಮಾದಿ ದುಃಖಗಳು ತಲೆದೋರುತ್ತವೆ. ಆದದರಿಂದ ಆತ್ಮನ ಸಾಕ್ಷಾತ್ಕಾರವು ಅತ್ಯಂತ ಆವಶ್ಯಕವಾಗಿದೆ

ಗುಡ್ಡಕಾಡುಗಳ ಪ್ರದೇಶದಲ್ಲಿ ಆನೆಯ ಮೇಲೆ ಸವಾರಿ ಮಾಡಿ ಸೇವೆ ಸಲ್ಲಿಸಲು ಮುಂದಾದ ಮಲೇರಿಯಾ ನಿರೋಧ ಸ್ವಯಂಸೇವಕರು

ವೈಶೇಷಿಕ ದರ್ಶನ

ಈ ದರ್ಶನದ ಮೂಲಸೂತ್ರದ ಪ್ರಣೇತರು ಕಣಾದರು ಬಾಹ್ಯ ಜಗತ್ತಿನ ವಿಸ್ತೃತ ಸಮೀಕ್ಷೆಯೇ ವೈಶೇಷಿಕರ ಮುಖ್ಯ ತಾತ್ಪರ್ಯ. ಈ ದರ್ಶನದಲ್ಲಿ ದ್ರವ್ಯ ಗುಣ, ಕರ್ಮ, ಸಾಮಾನ್ಯ ವಿಶೇಷ, ಸಮವಾಯ ಮತ್ತು ಅಭಾವವೆಂಬ ಏಳು ಪದಾರ್ಥಗಳನು ಒಪ್ಪಲಾಗಿದೆ ಆತ್ಮನಿಂದ ಭಿನ್ನ ಪದಾರ್ಥದ ಜ್ಞಾನವುದಿಸದ ವರೆಗೆ ಆತ್ಮಕ್ಕೆ ಯಥಾರ್ಥ ಜ್ಞಾನವಾಗುವುದಿಲ್ಲ ಆತ್ಮ ಮತ್ತು ಆತ್ಮದಿಂದ ಬೇರೆಯಾದ ಪದಾರ್ಥಗಳ ಸಾಧರ್ಮ್ಯ ವೈಧರ್ಮ್ಯಗಳನ್ನು ತಿಳಿದ ಮೇಲೆಯೇ ತತ್ವಜ್ಞಾನವು ಉತ್ಪನ್ನವಾಗುವುದು ಪೃಥ್ವಿ ಜಲ, ತೇಜ ವಾಯು, ಆಕಾಶ, ಕಾಲ, ದಿಶಾ, ಆತ್ಮಾ, ಮನ-ಇವು ನವ ದ್ರವ್ಯಗಳು. ಇದರಲ್ಲಿ ತತ್ವ ಜ್ಞಾನದ ಉತ್ಪತ್ತಿಮಾಡಿಸುವುದು ಮತ್ತು ಮೋಕ್ಷದ ಕಾರಣವಾಗುವುದರಿಂದ ನಿಷ್ಕಾಮ ಕರ್ಮದ ಸಂಪಾದನೆ ಮಾಡುವುದೂ ಅತೀವ ಅವಶ್ಯಕವೆಂದು ತಿಳಿಯಲಾಗುತ್ತದ

ಸಾಂಖ್ಯ ದರ್ಶನ

ಕಪಿಲ ಮುನಿಯು ಸಾಂಖ್ಯ ದರ್ಶನದ ಪ್ರತಿಪಾದಕನು ಈ ದರ್ಶನವು ದ್ವೈತ ಮತ ಪ್ರತಿಪಾದಕವಿರುವುದು. ಪ್ರಕೃತಿ ಮತ್ತು ಪುರುಷಗಳೆಂಬ ಎರಡು ತತ್ವಗಳಿವೆ ಪ್ರಕೃತಿಯು ಚೇತನ ಸ್ವರೂಪ ಪುರುಷನಲ್ಲಿ ಮಿಲನವಾದಾಗ, ಜಗತ್ತಿನ ಸೃಷ್ಟಿಯಾಗುತ್ತದೆ. ಪ್ರಕೃತಿಯು ಏಕ ಮತ್ತು ಜಡವಿರುವುದು ಪುರುಷ ಚೇತನ ಮತ್ತು ಅನೇಕ ಸಾಂಖ್ಯ ದರ್ಶನವು ಸತ್ಕಾರ್ಯ ವಾದವನ್ನು ಸಮರ್ಥಿಸುತ್ತದೆ ಸತ್ವ, ರಜ, ತಮಗಳೆಂಬ ಮೂರು

(೯ನೇ ಪುಟ ನೋಡಿರಿ)

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ — **ವಿಜಯ ಬೇಂಕ್ ಬಿಲ್ಡಿಂಗ್,**

ಲೈಟ್ ಹೌಸ್ ಹಿಲ್ ರೋಡ್,

Lstd. 1931.
Phone No 240 — ಮಂಗಳೂರು — 3

ವರ್ಗ — ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ತ್ರಿಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಅಮೆರಿಕನರು ಕಂಡಂತೆ

ದಾರಿದ್ರ್ಯದ ಮೂಲ ಕಾರಣಗಳು

[ರಾಯಭಾರಿ ಗಾಲ್‌ಬ್ರೈತರು ಗುಜರಾಥ ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣದಿಂದ ಈ ಲೇಖವನ್ನು ತಯಾರಿಸಲಾಗಿದೆ.]

ದಾರಿದ್ರ್ಯದ ಕಾರಣಗಳು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತವೆ, ಬಂಡವಾಳದ ಮತ್ತು ತಾಂತ್ರಿಕ ಜ್ಞಾನದ ಪೂರೈಕೆ ಮುಂತಾದ ಏಕೈಕ ಪರಿಹಾರ ಎಲ್ಲೆಡೆಗಳಲ್ಲೂ ಬಡತನಕ್ಕೆ ಅನ್ವಯವಾಗದು. ಮನುಷ್ಯನೀಗ ನಿರತನಾಗಿರುವ ಮಹಾ ಪ್ರಯತ್ನಗಳ ಪೈಕಿ, ಸ್ವವಿನಾಶದ ಸಾಧನಗಳ ಅಭಿವೃದ್ಧಿ ಮತ್ತು ಅಂತರಿಕ್ಷ ವಿಜಯದ ಸ್ಪರ್ಧೆಯನ್ನು ಬಿಟ್ಟರೆ, ಅತ್ಯಂತ ತೀವ್ರವಾದ ಹಾಗೂ ಚೈತನ್ಯ ವಿನಿಯೋಗವಾಗುವ ಮೂರನೆಯ ಮಹಾ ಪ್ರಯತ್ನವೆಂದರೆ, ದಾರಿದ್ರ್ಯದ ಸಮಸ್ಯೆಗಳನ್ನು ಪರಿಹರಿಸಲು ಆತ ಮಾಡುತ್ತಿರುವ ಪ್ರಯತ್ನಗಳು.

ಸ್ವವಿನಾಶ ಹಾಗೂ ಚಂದ್ರಲೋಕ ಪ್ರಯಾಣ ಈ ಎರಡು ವಿಷಯಗಳಲ್ಲೂ, ಸಂಬಂಧಿಸಿದ ಸಮಸ್ಯೆಯ ಅತ್ಯಂತ ಜಾಗರೂಕ ಪರಿಶೀಲನೆಯ ನಂತರ ಕ್ರಮ ಕೈಗೊಳ್ಳಲಾಗುವುದು, ಆದರೆ ಇಂತಹ ವಿಶ್ಲೇಷಣೆಗೆ ಯಾವ ಪ್ರಯತ್ನವನ್ನೂ ಮಾಡದೆ ದಾರಿದ್ರ್ಯದ ಸಮಸ್ಯೆಯ ನಿವಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ದಾರಿದ್ರ್ಯದ ಕಾರಣಗಳ ಹಾಗೂ ಅವುಗಳ ಪರಿಹಾರದ ಬಗೆಗೆ ನಮ್ಮಲ್ಲಿ ವಿವಿಧ ರೀತಿಯ ಗ್ರಹಿಕೆಗಳಿವೆ. ಸಂಬಂಧಿಸಿದ ಜನರ ಆಲಕ್ಷ್ಯ, ವಸಾಹತುಶಾಹಿ, ಸುಲಿಗೆ, ಅಜ್ಞಾನ, ಸ್ಥಿರ ಸರಕಾರವಿಲ್ಲದಿರುವಿಕೆ, ಅಧಿಕ ಜನಸಂಖ್ಯೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಅಭಾವ ಮುಂತಾದವುಗಳನ್ನು ಬಡತನದ ಕಾರಣಗಳೆಂದು ಈಗ ಗ್ರಹಿಸಲಾಗಿದೆ. ನಮ್ಮ ಬಳಿ ವಿವರಣೆಗಳು ವಿಪುಲವಾಗಿವೆ, ಪ್ರತಿಯೊಂದು ಹೊರ ನೋಟಕ್ಕೆ ಸಮಂಜಸವೆಂದು ತೋರುತ್ತದೆ. ಆದರೆ ಪ್ರತಿಯೊಂದೂ ಅಸಮರ್ಪಕ ಎಂದು ಹೇಳಿದರೆ ಯಥಾರ್ಥವಾದೀತು.

ಎಲ್ಲ ರೀತಿಯ ವಿವರಣೆಯಲ್ಲೂ ಸ್ವಲ್ಪ ನಿಜಾಂಶವಿದೆ. ಎಂದರೆ ಸಾಮಾನ್ಯವಾಗಿ ಹೇಳಲಾಗುವ ದಾರಿದ್ರ್ಯದ ಯಾವುದೇ ಕಾರಣಗಳನ್ನು ಸಮಗ್ರವಾಗಿ ಸ್ವೀಕರಿಸಲು ಸಾಧ್ಯವಿಲ್ಲ; ಯಾವುದನ್ನೂ ಸಂಪೂರ್ಣವಾಗಿ ಅಲ್ಲಗಳೆಯುವುದೂ ಸಾಧ್ಯವಿಲ್ಲ. ಬಡತನದ ಕೆಲವು ಕಾರಣಗಳು ಕೆಲವು ದೇಶಗಳಲ್ಲಿ ಕಾರ್ಯಗತವಾಗಿವೆ; ಇನ್ನಿತರ ಕಾರಣಗಳು ಇತರ ದೇಶಗಳಲ್ಲಿ ಕಾರ್ಯಗತವಾಗಿವೆ.

ಬಡತನದ ಬಗೆಗೆ ವೈದ್ಯಕೀಯ ರೀತಿಯಲ್ಲಿ ವಿಮರ್ಶೆ ನಡೆಸಬೇಕು ಎಂಬ ನನ್ನ ಅಭಿಪ್ರಾಯಕ್ಕೆ ಇದು ಪೋಷಕವಾಗಿರುತ್ತದೆ. ಈ ರೋಗದ ಕಾರಣಗಳನ್ನು ತಿಳಿದು ಕೊಳ್ಳಬೇಕಾದರೆ, ನಾವು ಇವುಗಳ ಸಹಸ್ರಾರು ವೈವಿಧ್ಯವನ್ನು ಮನಗಾಣಬೇಕು. ಯಾವುದೇ ಎರಡು ಸಂದರ್ಭಗಳಲ್ಲಿ ಇವುಗಳು ಒಂದೇ ರೀತಿ ಇರುವ ಸಂಭವ ಅತಿ ಕಡಿಮೆ ಎಂಬುದನ್ನು ಮನಗಾಣಬೇಕು. ಪ್ರತಿಯೊಂದು ಸಂದರ್ಭಕ್ಕೂ ಮುಕ್ತವಾಗಿರುವ ರೋಗ ನಿಧಾನವನ್ನು ನಾವು ಕಂಡು ಹಿಡಿಯಬೇಕು, ಅಂತಹ ನಿರ್ದಿಷ್ಟ ರೋಗ ನಿದಾನವಿಲ್ಲದಿದ್ದರೆ, ನಾವು ಯಾವ ಸಂಬಂಧವೂ ಇಲ್ಲದಿರುವ ನಿರುಪಯುಕ್ತ ಪರಿಹಾರ ಕ್ರಮಗಳನ್ನು ಮಾತ್ರ ಸೂಚಿಸಿದಂತಾಗುವುದು. ವಾಸ್ತವವಾಗಿ ನಾವು ಕಳೆದ ಅನೇಕ ವರ್ಷಗಳಿಂದ ಈ ರೀತಿ ವರ್ತಿಸುತ್ತ ಬಂದಿದ್ದೇವೆ. ಮುಖ್ಯವಾಗಿ, ತಪ್ಪು ಎಲ್ಲಿದೆ ಎಂಬ ಬಗೆಗೆ ಹೆಚ್ಚು ಖಚಿತವಾದ ತಿಳುವಳಿಕೆಯಿಲ್ಲದಿರುವಾಗ, ನಾವು, ಬಂಡವಾಳದ ಹಾಗೂ ಸ್ವಲ್ಪಮಟ್ಟಿಗೆ ತಾಂತ್ರಿಕ ಜ್ಞಾನದ ಕೊರತೆಗಳೇ ಮೂಲ ಸಮಸ್ಯೆ ಎಂದು ಭಾವಿಸುತ್ತೇವೆ. ಈ ಬಂಡವಳ, ತಾಂತ್ರಿಕತೆಯು ಅಧಿಕ ಸಮೃದ್ಧ ದೇಶಗಳಲ್ಲಿ ಹೇರಳವಾಗಿರುವುದು. ಅಲ್ಲಿ ಅವು ಹೊರ ದೇಶಗಳಿಗೆ ರಫ್ತು ಮಾಡಲು ಲಭ್ಯವಿರುವುದು. ಇಂತಹ ಭಾವನೆ ಮೂಡಲು ಪ್ರಬಲ ಕಾರಣ, ಅಮೆರಿಕದಲ್ಲಿ ಮತ್ತು ಪಶ್ಚಿಮ ಯುರೋಪಿನಲ್ಲಿ ನಿರಕ್ಷರತೆಯ ಸಮಸ್ಯೆಯಿಲ್ಲ. ಇಲ್ಲಿ ವಸಾಹತುಶಾಹೀ ಸುಲಿಗೆಯಿಲ್ಲ, ಹೆಚ್ಚಿನ ದೇಶಗಳಲ್ಲಿ ತೀವ್ರ ಸ್ವರೂಪದ ವರ್ಗಭೇದಾತ್ಮಕ ಸುಲಿಗೆಯಿಲ್ಲ. ಮಿತಿಮೀರಿದ ಜನಸಂಖ್ಯಾಭಿವೃದ್ಧಿಯಿಲ್ಲ. ಜನರು ಬಲು ಮಟ್ಟಿಗೆ ಕಾರ್ಯಶೀಲರಾಗಿರುತ್ತಾರೆ, ತಮ್ಮ ಪ್ರಗತಿ ಸಾಧನೆಯಲ್ಲಿ ನಿರತರಾಗಿರುತ್ತಾರೆ, ಸಾರ್ವಜನಿಕ ಶಾಸನ ಮತ್ತು ಸುವ್ಯವಸ್ಥೆಯ ಕನಿಷ್ಠ ಆವಶ್ಯಕತೆಗಳನ್ನು ಇಲ್ಲಿ ಪಾಲಿಸಲಾಗುತ್ತಿದೆ ಹೀಗೆ, ಪ್ರಪಂಚದ ಈ ಭಾಗಗಳಲ್ಲಿ ಬಂಡವಾಳದ ಮತ್ತು ತಾಂತ್ರಿಕ ನಿಪುಣತೆಯ ಸರಬರಾಜು, ಐಶ್ವರ್ಯಾಭಿವೃದ್ಧಿಯನ್ನ ನಿಯಂತ್ರಿಸುತ್ತಿದೆ. ಆದರೆ ಬಡತನವಿರುವಲ್ಲೆಲ್ಲ ಬಂಡವಾಳ ಮತ್ತು ತಾಂತ್ರಿಕ ಸಹಾಯದ ಸರಬರಾಜಿನ ಸೂಚನೆ ಕೊಡುವುದೆಂದರೆ, ಜೀವಾತುಗಳು ವಿಪುಲವಾಗಿರುವ ಹಾಗೂ ಅವುಗಳಿಂದ ತನ್ನ ಸ್ವಂತ ಆರೋಗ್ಯ ಉತ್ತಮವಾದುದನ್ನು ಮನಗಂಡಿರುವ ವೈದ್ಯನು ಕೊಡುವ ಸಲಹೆಗೆ ಸದೃಶವಾಗಿರುತ್ತದೆ. ಆತನು ತನ್ನ ಸೂಚನೆ ಕೇಳ ಬರುವ ಎಲ್ಲ ರೋಗಿಗಳಿಗೂ ತನ್ನ ಜೀವಸತ್ವದ ಗುಳಿಗೆಗಳನ್ನು ಸೂಚಿಸುತ್ತಾನೆ. ಈ ರೋಗಗಳಿಗೆ, ಕ್ಯಾಲ್ಸಿಯಂನ ಕೊರತೆ, ಪೋಷಕ ಸತ್ವದ ಕೊರತೆ, ಜಜ್ಜಿದ ಬೆನ್ನೆಲುಬು, ಮಲೇರಿಯ, ಆನೆಕಾಲು ಮತ್ತು ತೀವ್ರ ಉದ್ವೇಗ ಮುಂತಾದ ಅನೇಕ ಕಾರಣಗಳಿರುವುದರಿಂದ, ಸಹಜವಾಗಿ, ಆತನು ಕೊಟ್ಟ ಔಷಧದಿಂದ ವಾಸ್ತವ ಪ್ರಯೋಜನ ದೊರೆಯುವುದಿಲ್ಲ. ಬಡತನದ ನಿವಾರಣೆಗೆ ಈಗ ನಡೆಯುತ್ತಿರುವ ಪ್ರಯತ್ನಗಳು ಈ ಮಾದರಿಯವು ಎಂದರೆ, ಅತಿಶಯೋಕ್ತಿಯಲ್ಲ.

ಬಡತನವನ್ನು ನಿವಾರಿಸಬೇಕಾದರೆ, ಆಯಾ ಸಂದರ್ಭಗಳಲ್ಲಿ ಬಡತನಕ್ಕೆ ಕಾರಣಗಳಾಗಿರುವ ಅಂಶಗಳನ್ನು ಕಂಡುಹಿಡಿದು, ಯೋಗ್ಯ ಪರಿಹಾರ ಕ್ರಮಗಳನ್ನು ಯೋಜಿಸಬೇಕು. ನಿರಕ್ಷರತೆಯ ನಿವಾರಣೆಯು ಮೊದಲನೆ ಆವಶ್ಯ ಕ್ರಮವಾಗಿರುವುದು. ಹಣ, ಚೈತನ್ಯ ಹಾಗೂ ಸಹಾಯಗಳನ್ನು ಶಾಲಾ ವ್ಯವಸ್ಥೆಯ ಸಂಘಟನೆಗೆ ವಿನಿಯೋಗಿಸಬೇಕು. ಶಾಲಾ ವ್ಯವಸ್ಥೆಯ ಸಂಘಟನೆಗೆ, ಸಾರ್ವಜನಿಕ ಆಡಳಿತದ ಪರಿಣಾಮಕಾರಿ ವಿಧಾನಗಳ ಸಂಘಟನೆ ಆವಶ್ಯವಿದ್ದರೆ, ಅದೇ ಪ್ರಥಮ ಕಾರ್ಯವಾಗಬೇಕು. ಲೋಭಗ್ರಸ್ತ ಸಾಮಾಜಿಕ ವ್ಯವಸ್ಥೆಯು ಪರಿಣಾಮಕಾರಿ ಸರಕಾರಕ್ಕೆ ತಡೆಯಾಗಿರುವುದಾದರೆ, ಅಂತಹ ವ್ಯವಸ್ಥೆಯ ವಿಸರ್ಜನೆಯೇ ಪ್ರಥಮ ಕಾರ್ಯವಾಗಬೇಕು.

ಸಾಮಾಜಿಕ ನ್ಯಾಯಕ್ಕೆ ಕ್ರಮಕೈಗೊಳ್ಳದೆ ಹಣವನ್ನು ವಿನಿಯೋಗಿಸುವುದರಿಂದಲೇ ಫಲ ಲಭಿಸೀತೆಂದು ಭಾವಿಸುವುದು ದೊಡ್ಡ ತಪ್ಪು. ನಾವು ಸಾಕಷ್ಟು ಆರ್ಥಿಕ ಸಹಾಯವನ್ನಿತ್ತರೆ, ದೀರ್ಘ ಕಾಲದಿಂದ ರೂಢವಾಗಿರುವ ಜನತೆಯ ಮೇಲಿನ ಅನ್ಯಾಯಗಳನ್ನು ಸರಿಪಡಿಸಬಹುದು ಎಂದು ಕೆಲವೊಮ್ಮೆ ಭಾವಿಸಲಾಗುತ್ತಿದೆ. ಆದರೆ ಈ ರೀತಿ ವಿನಿಯೋಗಿಸಲು ಪ್ರಪಂಚದಲ್ಲಿ ಸಾಕಷ್ಟು ಹಣವಿಲ್ಲ, ಅನ್ಯಾಯವನ್ನು ನಿವಾರಿಸಲು ವೆಚ್ಚ ಮಾಡುವ ಹಣವು ಅನೇಕ ಬಾರಿ, ಈಗಿನ ಸಾಮಾಜಿಕ ವ್ಯವಸ್ಥೆಯಿಂದ ಅನುಕೂಲತೆ ಪಡೆಯುತ್ತಿರುವ ಜಮೀನುದಾರರ, ಅಧಿಕಾರಿಗಳ ಹಾಗೂ ಇತರರ ಜೇಬುಗಳಿಗೆ ಹೋಗುತ್ತಿರುವುದೇ ಇದಕ್ಕೆ ಕಾರಣ.

ಆದ್ದರಿಂದ ಎಲ್ಲ ರೋಗಗಳಿಗೂ ಒಂದೇ ಪರಿಹಾರ ವಿಧಿಸುವುದು ತಪ್ಪಾಗಿರುವಂತೆ ಅದೇ ರೀತಿ, ಎಲ್ಲ ಬಗೆಯ ದಾರಿದ್ರ್ಯಗಳಿಗೂ ಏಕ ರೀತಿಯ ನಿವಾರಣಾ ಕ್ರಮದ ಯೋಜನೆ ಅಸಮಂಜಸವಾಗಿದೆ. ವಿವಿಧ ರೀತಿಯ ಬಡತನಗಳ ನಿರ್ದಿಷ್ಟ ಕಾರಣಗಳನ್ನು ಕಂಡು ಹಿಡಿದು, ಯೋಗ್ಯ ಪರಿಹಾರ ಕ್ರಮಗಳನ್ನು ಯೋಜಿಸುವುದು ಸುಲಭವಲ್ಲ; ಆದರೆ ಇದೇ ಸೂಕ್ತವಾದ ವಿಧಾನವೆಂಬುದನ್ನು ನಾವು ಮರೆಯಬಾರದು. ಈ ಪರಿಹಾರ ಕ್ರಮಗಳನ್ನು ಕೈಗೊಳ್ಳುವಲ್ಲಿ ನಾವು ಮುಂದುವರಿಯಬೇಕು.

ಗಾಲ್‌ಬ್ರೈತರು

ಈ ಸಮಸ್ಯೆಗೆ

ಸುಲಭ ಪರಿಹಾರ

ಅನೇಕ ಮಕ್ಕಳು ಶಾಲೆಗೆ ಸೇರುವ ಮೊದಲೇ ಉಳಿತಾಯದ ಅನುಕೂಲತೆಗಳನ್ನು ಅರಿತಿರುತ್ತಾರೆ. ಹೇಗೆ ಗೊತ್ತೆ? ಅವರ ತಂದೆ-ತಾಯಿಯರು "ಕೆನರಾ ಬ್ಯಾಂಕ್"ನಲ್ಲಿ ಕ್ರಮವಾಗಿ ಹಣ ಕೂಡಿಡುತ್ತಾರೆ.



ಮುಂದಿನ ತುರ್ತು ಪರಿಸ್ಥಿತಿಗಳು, ಉಚ್ಚ ಶಿಕ್ಷಣ, ವೈದ್ಯಕೀಯ ವೆಚ್ಚ, ನಿವೃತ್ತಿ ಸಮಸ್ಯೆ, ಇತ್ಯಾದಿಗಳಿಗೆ ಇದೇ ಪರಿಹಾರ ಎಂಬುದು ಅವರ ತಂದೆ-ತಾಯಿಗಳಿಗೆ ತಿಳಿದಿದೆ.

ನಮ್ಮ ಯಾವುದಾದರೊಂದು ಶಾಖೆಯಲ್ಲಿ ಇಂದೇ ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆ ತೆರೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ ಸಂಪೂರ್ಣ ಭದ್ರತೆ

ಸುಲಭ ದರದಲ್ಲಿ

ಶಾಲೆಗಳಿಗೆ ಬೇಕಾಗುವ

ಯಾವತ್ತು ಫಾರ್ಮುಗಳೂ ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೫-೪-'೬೨	೩೦

ಪ್ರಶಸ್ತಿಯಲ್ಲ, ಬಹುಮಾನ

ಇತ್ತೀಚೆಗಿನ ಒಂದೆರಡು ವರ್ಷಗಳಿಂದ ಕೇಂದ್ರ ಸರಕಾರವು ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡುವ ಒಂದು ಯೋಜನೆಯನ್ನು ರೂಪಿಸಿದ್ದು ಕೆಲವೊಬ್ಬರಿಗೆ ಅಂತಹ ಮಹಾ ಪ್ರಶಸ್ತಿಯನ್ನು ದಾನ ಮಾಡಿದೆ. ಈ ಪ್ರಶಸ್ತಿಯು ಅಧ್ಯಾಪಕ ವರ್ಗಕ್ಕೆ ನೀಡುವ ಗೌರವವೆಂಬ ಪೂಜ್ಯ ಭಾವನೆಯ ಹಿನ್ನೆಲೆಯಲ್ಲಿಯೇ ರೂಪಿತವಾಗಿರುತ್ತದೆ. ಈಗ ನಮ್ಮ ಕರ್ನಾಟಕ ರಾಜ್ಯ ಸರಕಾರವು ಕೂಡ ತನ್ನ ಹಿರಿಯಕ್ಕನ ಈ ಚಾಳಿಯನ್ನು ಅನುಸರಿಸಿ, ಅದೇ ಮಾದರಿಯಲ್ಲಿ ಪ್ರತಿ ವರ್ಷ ಒಂದೊಂದೂ ರೂ ೩೦೦ರಷ್ಟು ಬೆಲೆ ಬಾಳುವ ಹದಿನೈದು ಪ್ರಶಸ್ತಿಗಳನ್ನು ರಾಜ್ಯ ಮಟ್ಟದಲ್ಲಿ ನೀಡುವ ನಿರ್ಣಯ ಮಾಡಿದೆಯೆಂದು ಮುಖ್ಯ ಮಂತ್ರಿ ಕಂಠಿಯವರು ಪತ್ರಿಕಾ ಪರಿಷತ್ತಿನಲ್ಲಿ ಸಾರಿದ್ದಾರೆ. ಈ ಹದಿನೈದರಲ್ಲಿ ಐದನ್ನು ಉಚ್ಚ ಮಾಧ್ಯಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರಿಗೂ ಉಳಿದ ಹತ್ತನ್ನು ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಕೊಡುವುದಾಗಿಯೂ ಅವರು ಘೋಷಿಸಿದ್ದಾರೆ. ಶಿಕ್ಷಕರ ಸುಖದುಃಖಗಳ ಕಡೆಗೆ ವಿಶೇಷ ರೀತಿಯ ಗಮನವನ್ನು ನೀಡುವವರಂತೆ ಪ್ರಾರಂಭದಿಂದಲೂ ಪ್ರದರ್ಶಿಸುತ್ತ ಬರುತ್ತಿರುವ ಶ್ರೀ ಕಂಠಿಯವರು ಈ ಪ್ರಶಸ್ತಿಗಾಗಿ ಸರಕಾರವು ವಾರ್ಷಿಕ ೪|| ಸಾವಿರ ರೂಪಾಯಿಗಳ ಮಹಾ ವೆಚ್ಚವನ್ನು ಮಾಡಿ ಶಿಕ್ಷಕರ ಘನತೆ-ಗೌರವ, ಸ್ಥಾನ-ಮಾನಗಳನ್ನು ಎತ್ತರಿಸುವ ಮಹಾ ಸಾಹಸವನ್ನು ಮಾಡಿದ್ದೆ ಎಂಬ ತಿಳುವಳಿಕೆಯಿಟ್ಟುಕೊಂಡಿರಬಹುದು. ಪ್ರಶಸ್ತಿಗಳ ಮೌಲ್ಯ ಹಾಗೂ ಸಂಖ್ಯೆಯು ಅಧ್ಯಾಪಕ ಗೌರವ ಮತ್ತು ಅಧ್ಯಾಪಕ ವರ್ಗದವರ ಸಂಖ್ಯೆಗೆ ಸಮನಾಗಿಲ್ಲವೆಂಬ ಪ್ರಶ್ನೆಯನ್ನು ಒತ್ತಟ್ಟಿಗಿಟ್ಟರೂ ಈ ಪ್ರಶಸ್ತಿ ನೀಡುವ ಕ್ರಮವೊಂದು ಬಹಳ ವಿಚಿತ್ರ ಮಾತ್ರವಲ್ಲ, ವಿಲಕ್ಷಣವೆನ್ನಿಸುತ್ತದೆ.

ಇಂತಹ ಪ್ರಶಸ್ತಿಯನ್ನು ಗಳಿಸಲು ಅರ್ಹರಾಗಬೇಕಾದರೆ, ೨೦ ವರ್ಷಗಳ ಸೇವೆಯನ್ನು ಶಿಕ್ಷಕರು ಸಲ್ಲಿಸಬೇಕಾಗುತ್ತದೆ; ಎಂದರೆ, ನಿವೃತ್ತರಾಗಲು ಸಿದ್ಧರಾಗಿರುವವರಿಗೆ ಮಾತ್ರ ಇಂತಹ ಗೌರವವು ಲಭಿಸುವಂತಾಗುವುದು. ಕೆಲವು ಅಧ್ಯಾಪಕರು ವೃತ್ತಿಯಿಂದ ನಿವೃತ್ತರಾದ ನಂತರವೇ ಇಂತಹ ಪ್ರಶಸ್ತಿಯನ್ನು ಪಡೆದ ಉದಾಹರಣೆಗಳೂ ಇಲ್ಲದಿಲ್ಲ. ಕನಿಷ್ಠ ಸೇವೆಯ ವರ್ಷಗಳನ್ನು ಕಡೆಗಣಿಸಬಹುದಾದರೂ ಪ್ರಶಸ್ತಿ ಪಡೆಯಲು ೨೦ ವರ್ಷ ಸೇವೆ ಸಲ್ಲಿಸಿದ ಶಿಕ್ಷಕನು ಅರ್ಜಿ ಫಾರಂನ್ನು ತರಿಸಿಕೊಂಡು, ಅದನ್ನು ಭರ್ತಿಮಾಡಿ ತನ್ನ ಮೇಲಿನ ಅಧಿಕಾರಿಗಳ ಮೂಲಕ ಸರಕಾರಕ್ಕೆ ಕಳಿಸಬೇಕು. ಉತ್ತಮನಾದ, ಆದರ್ಶನೆನಿಸಿದ ಒಬ್ಬ ಶಿಕ್ಷಕ ತಾನು ಉತ್ತಮನೆಂದು, ಉಳಿದವರಿಗೆ ಆದರ್ಶನೆಂದು ತನಗೆ ತಾನೇ ಸರ್ಟಿಫಿಕೇಟನ್ನು ಕೊಟ್ಟುಕೊಂಡು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು ಮತ್ತೆ ಮೇಲಧಿಕಾರಿಗಳ ಕಾಲ ಬಳಿ ತನಗೆ ಪ್ರಶಸ್ತಿ ಕೊಡಿರೆಂದು ಅಂಗಲಾಚಬೇಕಾಗುತ್ತದೆ. ತಲೆಯ ಮೇಲೆ ಮತ್ತೊಂದು ತಲೆಯ ಅಧಿಕಾರವಿರುವ ನಮ್ಮ ಶಿಕ್ಷಣ ಇಲಾಖೆಯಲ್ಲಿ ನಾಲ್ಕಾರು ಅಧಿಕಾರಿಗಳನ್ನು ಮರಿಹೋಗಿ ತನ್ನ ಅರ್ಜಿಯನ್ನು ಮೇಲೆತ್ತಿಸಿಕೊಂಡರೆ ಮಾತ್ರ ಇಂತಹ ಪ್ರಶಸ್ತಿ ಪಡೆಯುವುದು ಸಾಧ್ಯವೆನಿಸೀತು. ಆಗ, ಉತ್ತಮತೆ, ಆದರ್ಶತನ, ಸಮರ್ಥತೆಗಳಿಗಿಂತಲೂ ಪ್ರಶಸ್ತಿಗಳಿಸಲು ಆತನು ತೊಟ್ಟ ಹಠ ಮತ್ತು ಎಸಗಿದ ಸಾಹಸಗಳೇ ಮೂಲ ಕಾರಣವಾಗುವುವು ಎಂಬುದನ್ನು ಸಂಪೂರ್ಣ ಅಲ್ಲಗಳೆಯುವಂತಿಲ್ಲ. ಇಂತಹ ಮಾದರಿಯಲ್ಲಿ ಪ್ರಶಸ್ತಿ ನೀಡುವ ವಿಧಾನವು ಶಿಕ್ಷಕರ ವರ್ಗಕ್ಕೆ ಮಾಡುತ್ತಿರುವ ಅವಹೇಳನವಲ್ಲವೆ? ಅಲ್ಲವೆಂದಾದರೆ, ಪ್ರಶಸ್ತಿಯೆಂಬುದು ಕುಹಕ ಘನತೆಯ ದ್ಯೋತಕ ಮಾತ್ರವಲ್ಲವೆ?

ಪರಿಮಳ ಯುಕ್ತವೂ ಸುಂದರವೂ ಔಷಧೋಪಯೋಗಿಯೂ ಆದ ಹೂವೊಂದು ತನ್ನಲ್ಲಿ ಸುಗಂಧವಿದೆ, ತನ್ನಲ್ಲಿ ಸೌಂದರ್ಯವಿದೆ; ತನ್ನಲ್ಲಿ ರೋಗ ನಿವಾರಕ ಗುಣವಿದೆ; ಆದುದರಿಂದ ಎಲ್ಲರೂ ಬನ್ನಿರಿ, ನನ್ನನ್ನು ಆಯ್ದುಕೊಳ್ಳಿರಿ ಎಂದು ಹೇಳಿಕೊಂಡು ಬರುವುದಿಲ್ಲ. ಅಂತಹ ಹೂವನ್ನು ಲವಲವಿಕೆಯಿದ್ದವರೇ ಅದನ್ನು ಅರಸಿ, ಕೊಯ್ದುಕೊಳ್ಳುತ್ತಾರೆ. ಹಾಗೆಯೇ ಆತ್ಮಪ್ರಶಂಸಾಪರವಾದ ಅರ್ಜಿಯನ್ನು ಅಧ್ಯಾಪಕನೇ ತುಂಬಿಸುವಂತೆ ಅರ್ಜಿಗಳನ್ನು ಕರೆಯುವ ಪದ್ಧತಿಯು ರಾಷ್ಟ್ರೀಯ, ರಾಜ್ಯ ಪ್ರಶಸ್ತಿಗೆ ಕಳಂಕ ಪ್ರಾಯವಾದುದು. ಇಂತಹ ಮಾದರಿಯಿಂದಾಗಿ ನಿಜವಾದ ಪ್ರಶಸ್ತ ವ್ಯಕ್ತಿಯು ಪ್ರಶಸ್ತಿಗಾಗಿ ಅರ್ಜಿಯನ್ನೇ ಹಾಕಲಾರ. ತನ್ನ ಹೊಗಳಿಕೊಳ್ಳುವುದು ಅಂತರಂಗ ಶುದ್ಧಿಯೂ ಅಲ್ಲ; ಬಾಹ್ಯ ಶುದ್ಧಿಯೂ ಅಲ್ಲ. ಇವೆರಡಕ್ಕೂ ಹೊರತಾದ ಇಂತಹ ಕ್ರಮವು ಅಕ್ರಮ ಮತ್ತು ಅಪಮಾನಕರವೆಂದು ವಿವೇಕಿಗಳೆಲ್ಲರೂ ತಿಳಿಯಬಲ್ಲರು.

ಶಿಕ್ಷಣ ವಿಭಾಗದಲ್ಲಿ ದುಡಿಯುವ ಶಿಕ್ಷಕರೆಲ್ಲರ ದಾಖಲೆಗಳು ವಿದ್ಯಾ ಇಲಾಖೆಯೊಡನಿರುತ್ತವೆ. ಆತನು ದುಡಿಯುವ ಶಾಲೆ, ಆ ಶಾಲೆಯಲ್ಲಿ ಆತನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ತೋರಿದ ಜಾಣ್ಮೆ, ಶಾಲೆಯಲ್ಲಿ ಆತನು ಕಲಿಸಿದ ಪಾಠಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು. ಇನ್ನೂ ಏನೇನೋ ಎಲ್ಲವೂ ಶಾಲೆಯ ಪರಿಶೀಲನೆ ನಡೆಸುವ ಇಲಾಖೆಯ ಅಧಿಕಾರಿಗಳ ಕಛೇರಿಯಲ್ಲಿ ದಾಖಲೆಯಾಗಿರುತ್ತವೆ. ಇವುಗಳಿಂದಲೇ ಅಧ್ಯಾಪಕನ ಅರ್ಹತಾನರ್ಹತೆಗಳನ್ನು ನಿರ್ಣಯ ಮಾಡುವುದು ಅಸ್ವನಹಾರ್ಯವಲ್ಲವೆಂಬುದರಿಂದ ಶಿಕ್ಷಣ ಇಲಾಖೆಯೇ ನೇರವಾಗಿ ಪ್ರಶಸ್ತಿ ಪಡೆಯಲು ಅರ್ಹನಾದವರನ್ನು ಆಯ್ದು ಸರಕಾರಕ್ಕೆ ಅವರ ಹೆಸರುಗಳನ್ನು ತಿಳಿಸುವ ಪದ್ಧತಿಯು ಶೋಭನೀಯ, ಸಮಂಜಸ. ರಾಷ್ಟ್ರಪತಿಗಳು ನೀಡುವ ಭಾರತ ರತ್ನ, ಪದ್ಮವಿಭೂಷಣ, ಪದ್ಮಶ್ರೀ ಮೊದಲಾದ ಬಿರುದುಗಳಿಗಾಗಿ ಅಭ್ಯರ್ಥಿಗಳಿಂದ ಅರ್ಜಿ ಕರೆಯುವ ಪರಿಪಾಠವಿಲ್ಲ. ಮಿಲಿಟರಿ ಗೌರವಗಳನ್ನೂ ಪದಕಗಳನ್ನೂ ನೀಡುವಾಗ ಅವರನ್ನು ಅರ್ಜಿ ಹಾಕಿರೆಂದು ಕೇಳಿಕೊಳ್ಳುವುದಿಲ್ಲ. ಖಾನೇಷುಮಾರಿಯಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ ಪದಕ-ಪ್ರಶಸ್ತಿ ನೀಡುವಾಗ ಅವರನ್ನೂ ಅರ್ಜಿಗಾಗಿ ಒತ್ತಾಯಿಸುವುದಿಲ್ಲ. ಏಕೆಂದರೆ, ಅವರ ಅರ್ಹತೆ, ಯೋಗ್ಯತೆ, ಸಮರ್ಥತೆ, ಆದರ್ಶತೆ, ಅವರು ಸಲ್ಲಿಸಿದ ಸೇವೆ, ಮಾಡಿದ ತ್ಯಾಗ—ಎಲ್ಲವುಗಳ ಮಾಹಿತಿ ಗೌರವ ನೀಡುವವನಿಗೆ ಗೊತ್ತಿರುತ್ತದೆ.

ಸರಕಾರವು ಶಿಕ್ಷಕರಿಂದ ಪ್ರಶಸ್ತಿಗಾಗಿ ಅರ್ಜಿ ಕರೆಯುವುದನ್ನು ಬಿಟ್ಟು ಕೊಡುವಂತೆ ಎಲ್ಲರೂ ಒತ್ತಾಯಿಸಬೇಕು. ಶಿಕ್ಷಕರು ಇದು ಗೌರವವಲ್ಲ; ಅಗೌರವವೆಂದು ತಿಳಿದು ಸರಕಾರದ ನೀತಿಯನ್ನು ಪ್ರತಿಭಟಿಸಬೇಕು; ಸರಕಾರವಾದರೂ ಪ್ರಶಸ್ತಿಯನ್ನು ಪ್ರಶಸ್ತಿಯನ್ನಾಗಿ ಉಳಿಸಿಕೊಳ್ಳಬೇಕು. ಇಲ್ಲವಾದರೆ, ಪ್ರಶಸ್ತಿಗಳಿಗಾಗಿ ಅರ್ಜಿ ಕರೆಯುವ ಬದಲಿಗೆ ಸಹಾಯ ಧನವನ್ನು ಪಡೆಯಲು ಅರ್ಜಿ ಕರೆಯಲಿ. ಪ್ರಶಸ್ತಿಯ ಸ್ಥಾನಮಾನವನ್ನು 'ಸಹಾಯತೆ' ಸ್ಥಾನಮಾನಗಳಿಗೆ ಇಳಿಸುವುದೆಂದರೆ, ಗಣಪತಿಯನ್ನು ಮಾಡಹೋಗಿ ಹಾಳು ಮಂಗನನ್ನು ರಚಿಸಿದಂತೆಯೇ ಸರಿ.

ಸೀರಿಯನ್ ಬಂಡಾಯ

ಸಿರಿಯಾವು ಸಂಯುಕ್ತ ಅರಬ ಪ್ರಜಾರಾಜ್ಯದಿಂದ ಸಿಡಿದು ಪ್ರತ್ಯೇಕ ಸ್ವತಂತ್ರ ರಾಷ್ಟ್ರವಾದ ಆರು ತಿಂಗಳಲ್ಲಿಯೇ ಅಲ್ಲಿ ಬಂಡಾಯವೆದ್ದು ರಕ್ತರಹಿತ ಕ್ರಾಂತಿಯ ಮೂಲಕ ಸೇನೆಯು ಅಧಿಕಾರವನ್ನು ತನ್ನ ಕೈಗಳಿಗೆ ತೆಗೆದುಕೊಂಡಿತು. ಜನತೆಯ ಆಶಯಂತೆ ಅಧ್ಯಕ್ಷ ನಾಜೀಂ ಕುಡಸಿ ಮತ್ತು ಡಾ॥ ದಾವಲಿಬಿಯವರ ಸರಕಾರವು ನಡೆದುಕೊಳ್ಳಲು ಅಸಮರ್ಥವಾಯಿತೆಂದೂ ಇದರಿಂದಾಗಿ ಅವರು ರಾಜೀನಾಮೆ ಕೊಟ್ಟು ಸಂಸತ್ತನ್ನು ವಿಸರ್ಜಿಸಿದ ನಂತರವೇ ಸೈನ್ಯವು ತನ್ನ ಕೈಗಳಿಗೆ ಅಧಿಕಾರವನ್ನು ತೆಗೆದುಕೊಂಡಿತೆಂದೂ ತಿಳಿಯುತ್ತದೆ. ಕಳೆದ ವರ್ಷ ಸಪ್ತಂಬರದ ಅಂತ್ಯದಲ್ಲಿ ಸಂಯುಕ್ತ ಅರಬ ಪ್ರಜಾರಾಜ್ಯದ ವಿರುದ್ಧ ಬಂಡು ಹೂಡಿದವರಲ್ಲಿ ಪ್ರಸಿದ್ಧರಾದ ಕರ್ನಲ್ ಅಬ್ದುಲ್ ಕರೀಮ್ ನಿಹಲವಿಯವರೇ ಈ ಕ್ರಾಂತಿಯ ಪ್ರಮುಖ ಪ್ರೇರಕರೆಂದೂ ಗೊತ್ತಾಗುತ್ತದೆ. ಸಿರಿಯಾದೊಳಗೇನೇ ನಸ್ಸೇರ ಪರರ ಒಂದು ಗುಂಪು ನಿರ್ಮಾಣವಾಗಿದೆ. ಇದು ಏಗುಪ್ತ—ಸಿರಿಯಾಗಳ ವಿಲೀನೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಿದೆಯೆಂದು ತಿಳಿದು ಬರುತ್ತದೆ. ಇದಕ್ಕಾಗಿ ಸದ್ಯದ ಸೇನಾಡಳಿತದಲ್ಲಿರುವ ವಿಘಾತುಕ ಶಕ್ತಿಗಳನ್ನು ಉಚ್ಚಾಟನೆ ಮಾಡಿ, ಸಿರಿಯಾದಲ್ಲಿ ಜನಮತ ಸಂಗ್ರಹ ಮಾಡುವ ವ್ಯವಸ್ಥೆ ನಡೆಸುವುದಾಗಿ ಈ ಗುಂಪು ಹೇಳುತ್ತದೆ. ಸಿರಿಯಾ ಮಿಸ್ರ ಮಂಡಳವಾದರೂ ಎರಡೂ ರಾಷ್ಟ್ರಗಳಿಗೆ ಸಮಾನ ಸ್ಥಾನಮಾನಗಳು ದೊರೆಯುವಂತೆ, ಸಿರಿಯಾದ ಗೌರವ ಹಾಗೂ ಅಸ್ತಿತ್ವಗಳಿಗೆ ರಕ್ಷಣೆ ನೀಡುವಂತೆ, ಈ ಹಿಂದೆ ನಡೆದ ತಪ್ಪುಗಳು ಪುನರಾವರ್ತನೆಗೊಳ್ಳದಂತೆ ಏಗುಪ್ತದ ಹಿರಿತನದಲ್ಲಿದಲ್ಲಿ ಸಂಯುಕ್ತ ಅರಬ ಪ್ರಜಾರಾಷ್ಟ್ರವನ್ನು ಮರಳಿ ಕಟ್ಟುವಂತೆ ಜನಮತ ಸಂಗ್ರಹಿಸಲು ತಾನು ಸಿದ್ಧವಿರುವುದಾಗಿ ಸಾರಿದೆ. ಅಧ್ಯಕ್ಷ ನಸ್ಸೇರ ಪರರಾದವರಿಂದಲೇ ಈ ಕ್ರಾಂತಿಯು ಸಂಯೋಜಿತವಾಯಿತೆನ್ನುವುದರಲ್ಲಿ ಸಂಪೂರ್ಣ ಸತ್ಯಾಂಶವಿಲ್ಲವೆಂದೇ ಹೇಳಬಹುದಾದರೂ ಅಂತಹರ ಸಮರ್ಥನೆಯು ಈ ಕ್ರಾಂತಿಗೆ ಅವಶ್ಯವಿತ್ತೆಂದು ಭಾವಿಸಲೇ ಬೇಕು. ಸಿರಿಯಾ ಸಿಡಿದು ಹೋದರೂ ಆ ಬಗ್ಗೆ ಹೆಚ್ಚು ಕಳವಳ ತೋರಿಸದ ನಸ್ಸೇರರು ಮರಳಿ ಬರುವೆನೆಂಬ ಸಿರಿಯಾವನ್ನು ಬಳಿಗೆ ಕರೆಯದೆ ಒದ್ದೆಸೆಯಲಾರರು.

ಜಗತ್ಪರ್ಯಟನ

ರಾಜ್ಯಪಾಲ ಅಯ್ಯಂಗಾರ

ಲೋಕಸಭೆಯ ಅಧ್ಯಕ್ಷರಾಗಿದ್ದ ಅನಂತಶಯನಂ ಅಯ್ಯಂಗಾರರು ವಸ್ತುತಃ ಕಾಂಗ್ರೆಸ್ ತಿಕೀಟಿನಿಂದ ಮೂರು ಬಾರಿಯೂ ಸಂಸತ್ತಿಗೆ ಆರಿಸಿಬಂದಿದ್ದರು. ಲೋಕಸಭೆಯ ಉಪಾಧ್ಯಕ್ಷರಾಗಿ ಮತ್ತೆ ಅಧ್ಯಕ್ಷರಾಗಿ ನಿಷ್ಪಕ್ಷಪಾತತನದಲ್ಲಿ ಹೊಕ್ಕು ಬಳಕೆಯುಳ್ಳವರು ಮೂರನೆಯ ಬಾರಿಯೂ ಅಧ್ಯಕ್ಷನಾಗಬೇಕೆಂದು ಸ್ಪರ್ಧಿಸಿದ ಇವರ ನಿಷ್ಪಕ್ಷಪಾತತನವು ಇವರನ್ನು ರಾಜ್ಯಪಾಲ ಪದವಿಗೆ ಆರಿಸುವಂತೆ ಮಾಡಿತು. ಬಿಹಾರದ ರಾಜ್ಯಪಾಲರೆಂದು ನೇಮಿತರಾದ ಇವರು ತನಗೆಬೇಕಾದಾಗ ಅಧಿಕಾರ ಸ್ವೀಕರಿಸಬಲ್ಲರು.

ಜಯಚಾಮ ರಾಜ

ಸದ್ಯ ವಿದೇಶ ಸಂಚಾರದಲ್ಲಿ ಆಸಕ್ತರಾಗಿರುವ ಕರ್ನಾಟಕ ರಾಜ್ಯಪಾಲ ಜಯಚಾಮ ರಾಜರು. ಅವರೂ ಜನತೆಯ ಒಂದು ಗುಂಪೂ ಬೇಡವೆಂದರೂ ಮರಳಿ ರಾಜ್ಯಪಾಲರಾಗಿ ಮುಂದುವರಿಯುವಂತೆ ರಾಷ್ಟ್ರಪತಿಗಳು ಕೇಳಿಕೊಂಡಿದ್ದಾರೆ. ಬೇಡವೆಂದರೂ ಬಂದ ಈ ಪದವಿಯನ್ನವರು ತ್ಯಜಿಸುವಂತಿಲ್ಲ. ಮೈಸೂರಿನ ಮಹಾರಾಜರಾದ ಒಡೆಯರರು ಕರ್ನಾಟಕದ ರಾಜ್ಯಪಾಲರಾಗಬೇಕೆಂದು ಕೇಂದ್ರವು ಬಹಳ ಆಗ್ರಹ ತೊಟ್ಟಂತೆ ಕಾಣುತ್ತದೆ.

ರಂಗನಾಥ ದಿವಾಕರ

ಕರ್ನಾಟಕದ ನಾಯಕಮಣಿಗಳಲ್ಲಿ ಒಬ್ಬರಾದ ರಂಗನಾಥ ದಿವಾಕರರು ಬಿಹಾರದ ರಾಜ್ಯಪಾಲ ಪದವಿಯಿಂದ ನಿವೃತ್ತರಾಗಿ ಹಾಗೆಯೇ ದೂರನಿಂತರು. ಆದರೆ, ಅವರನ್ನು ರಾಜಕಾರಣದಿಂದ ದೂರವಿರಿಸಲು ದೇವರಿಗೂ ಮನಸ್ಸಿಲ್ಲ. ಆದುದರಿಂದಾಗಿಯೇ ರಾಷ್ಟ್ರಾಧ್ಯಕ್ಷರು ಅವರನ್ನು ರಾಜ್ಯ ಸಭೆಗೆ ಸದಸ್ಯರನ್ನಾಗಿ ನಾಮಕರಣ ಮಾಡಿದ್ದಾರೆ. ಯೋಗ್ಯತೆಯನ್ನು ಅರಸುವುದೆಂದರೆ ಹೀಗೆಯೇ. ದಿವಾಕರರಂತಹರು ಸಂಸತ್ತಿನಿಂದ ದೂರನಿಂತು ಮಾಡುವುದಕ್ಕಿಂತ ಒಳಗಡೆನಿಂತು ಮಾಡಬೇಕಾದುದು ಬಹಳವಿದೆ.

ಜವಾಹಿರಲಾಲ

ಶೀತ ಜ್ವರದಿಂದ ಗಂಟಲು ಕಳೆದುಕೊಂಡ ಪ್ರಧಾನಿ ನೆಹರು ತನ್ನ ಮುಂದಿನ ಮಂತ್ರಿ ಮಂಡಳಿಯ ಕಡೆಗೆ ವಿಶೇಷ ಗಮನವೀಯಬೇಕಾಗಿ ಬಂದಿದೆ. ಎಪ್ರಿಲ್ ೧೦ರಿಂದ ರಚಿತಗೊಂಡ ಹೊಸ ಸಂಸತ್ತು ೧೬ರಂದು ಸಭೆ ಸೇರುವುದಕ್ಕೆ ಮೊದಲು ಮಂಡಳಿಯ ಆಯ್ಕೆಯು ಮುಗಿದು ವಿಧಿ

ವತ್ತಾಗಿ ಕಾರ್ಯವನ್ನು ಪ್ರಾರಂಭಿಸಬೇಕಾಗಿದೆ. ಇದಕ್ಕಾಗಿ ಅವರು ಆಯ್ಕೆಯ ಬಗ್ಗೆಯೇ ಚಿಂತಿಸುತಿದ್ದಾರೆ.

ಸುಕರ್ಣರ ಸಹಸಾಹಸ

ಇಂಡೋನೇಶ್ಯದ ಅಧ್ಯಕ್ಷ ಸುಕರ್ಣರು ಸಂಧಾನ ಮಾರ್ಗದಲ್ಲಿ. ಡಚ್ಚರಿಂದ ಪಶ್ಚಿಮ ನ್ಯೂಗಿನಿಯನ್ನು ಪಡೆಯಲು ಅಸಮರ್ಥರಾಗಿದ್ದರಿಂದ ಅವರು ವಿಮೋಚನಾ ಕಾರ್ಯವನ್ನು ಆರಂಭಿಸಿದ್ದಾರೆಂದು ತಿಳಿಯುತ್ತದೆ. ಪಶ್ಚಿಮ ನ್ಯೂಗಿನಿಯಿಂದ ೨೫ ಮೈಲು ದೂರವಿರುವ ವಾಯ್ಗೋದ್ವೀಪವನ್ನು ಇವರ ಸೇನೆಯು ಸ್ವತಂತ್ರಗೊಳಿಸಿ ತನ್ನ ಕೈಯಲ್ಲಿರಿಸಿಕೊಂಡಿದೆಯೆಂದು ಜಕಾರ್ತಾ ಬಾನುಲಿಯು ವಾರ್ತೆಯಿತ್ತಿದೆ. ಆದರೆ, ಹೊಲ್ಲೆಂಡು ಮಾತ್ರ ಈ ವರದಿಯನ್ನು ನಿರಾಕರಿಸಿದೆ.

ಡಾ| ರಾಧಾಕೃಷ್ಣನ್

ಮುಂದಿನ ರಾಷ್ಟ್ರಪತಿಯಾಗಲಿರುವ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಉಜ್ವಲ ದಾರ್ಶನಿಕನಿರುವಂತೆಯೆಉನ್ನತ ಮಟ್ಟದ ಸಾಹಿತಿಗಳು, ಭಾವೈಕ್ಯ ಪ್ರತಿಪಾದಕರು. ಸಾಹಿತ್ಯ ಅಕಾಡೆಮಿಯಲ್ಲಿ ವಿಚಾರ ಸಂಕಿರಣವೊಂದನ್ನು ಉದ್ಘಾಟಿಸುತ್ತ ಅವರು ಭಾವೈಕ ಸಾಧನೆಯಲ್ಲಿ ಜಾತೀಯತೆಯು ಅನಿಷ್ಟಕಾರಿಯೆಂಬುದನ್ನು ವಿವರಿಸಿ, ಲೇಖಕರು ಇದನ್ನು ದೂರೀಕರಿಸಿ, ರಾಷ್ಟ್ರೀಯ ಮನೋಭಾವನೆಯು ಬೆಳೆಯುವಂತೆ ಮಾಡಬೇಕು ಎಂದು ಕರೆಯಿತ್ತಿದ್ದಾರೆ. ಪರಿಸ್ಥಿತಿಗೆ ಹೊಂದುವಂತೆ ಜನ ಸ್ವಭಾವವನ್ನು ಪರಿವರ್ತಿಸುವ ದಿವ್ಯೌಷಧವು ಸಾಹಿತ್ಯವಾದದಲ್ಲಿ ವೈಟ್ಯರೂಪದ ಸಾಹಿತಿಯು ರಾಷ್ಟ್ರನಿರ್ಮಾಣದಲ್ಲಿ ಮಹತ್ವಪೂರ್ಣ ಪಾತ್ರ ವಹಿಸುವನೆಂಬುದು ಸ್ವಯಂ ಸಿದ್ಧವಾಗುವುದು.

ಅಧ್ಯಕ್ಷ ಅಯೂಬ್ ಖಾನ್

ಎರಡು ರೆಕ್ಕೆಗಳ ಪಾಕಿಸ್ತಾನದಲ್ಲಿ ಒಂದು ಅಧ್ಯಕ್ಷ ಅಯೂಬರ ಲೀಲಾಕ್ಷೇತ್ರವೆನಿಸಿದ್ದರೆ, ಇನ್ನೊಂದು ಕುರುಕ್ಷೇತ್ರವಾಗುವುದೋ ಎಂಬ ಸಂದೇಹವೆದ್ದಿದೆ. ಅವರು ರಚಿಸಿದ ಸಂವಿಧಾನವನ್ನು ಪಶ್ಚಿಮ ಪಾಕಿಸ್ತಾನವು ಸ್ವಾಗತಿಸಿ ಚುನಾವಣೆಗೆ ನಾಮಪತ್ರಗಳ ಸುರಿಮಳೆಯನ್ನೇ ಸುರಿಸಿದರೂ ಪೂರ್ವ ಪಾಕಿಸ್ತಾನ ತಟಸ್ಥವೆಂಬಂತಿದೆ. ಸಂವಿಧಾನ ವಿರೋಧಿಯಾದ ಮತಪ್ರದರ್ಶನಗಳು ಅಲ್ಲಿ ಇನ್ನೂ ಮುಂದುವರಿಯುತ್ತಿವೆ. ಈ ಪ್ರದೇಶದಲ್ಲಿ ಒಂದೇ ಒಂದು ನಾಮಪತ್ರವೂ ಬೀಳಲಿಲ್ಲವಂತೆ. ಅಧ್ಯಕ್ಷ ಅಯೂಬರಿಗೆ ಇದಕ್ಕೂ ಮಿಗಿಲಾದ ಗಂಡಾಂತರಗಳನ್ನು ಎದುರಿಸಿ ಗೊತ್ತು. ಆದರೆ ಎಲ್ಲೆಡೆಯೂ ಒಂದೇ ನೀತಿ ಯಶಸ್ವಿಯಾಗಲಾರದು.

ಲೇಖಿಕೆ ಪರ್ಲ್‌ಬಕ್

ಪರ್ಲ್‌ಬಕ್‌ರವರು ಸುವಿಖ್ಯಾತ ಅಮೇರಿಕನ್ ಸಾಹಿತಿಗಳು; ವಿಶ್ವವಿದಿತರು ಇವರೀಗ ಭಾರತದಲ್ಲಿ ಸಂಚಾರಮಾಡುತಿದ್ದಾರೆ. ಗೋವೆಯ ಮೇಲೆ ಭಾರತವು ಮಾಡಿದ ವಿಮೋಚನಾ ಸಮರವನ್ನವರು ಸಮರ್ಥಿಸಿದ್ದಾರೆ. ಅಮೇರಿಕೆಯ ಬಹು ಜನರು ಭಾರತೀಯ ಇತಿಹಾಸ ಮತ್ತು ರಾಜಕಾರಣವನ್ನು ಆಳವಾಗಿ ಅಭ್ಯಸಿಸಿಲ್ಲ, ಗಾಂಧೀಜಿಯವರ ಅಹಿಂಸಾ ತತ್ವದಿಂದ ಅವರು ಬಹಳಷ್ಟನ್ನು ಬಯಸಿದ್ದರು, ಹಾಗೆಯೇ

ಅಲ್ಲಲ್ಲಿಯ ಸುದ್ದಿ ಸಾರ

ಮಾನ ಪತ್ರ ಸಮರ್ಪಣೆ—ಪುತ್ತೂರು ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ತಾ 25-3-62ರಂದು ಶ್ರೀ ಉಗ್ರಾಣ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರುಗಿದ ಸಾರ್ವಜನಿಕ ಸಮಾರಂಭದಲ್ಲಿ ಕರ್ನಾಟಕದ ಪ್ರಸಿದ್ಧ ಕವಿದ್ವಯರಾದ ಶ್ರೀ ಮಂಜೇಶ್ವರ ಗೋವಿಂದ ಪೈಯವರಿಗೆ ಮತ್ತು ಶ್ರೀ ಕಡವ ಶಂಭು ಶರ್ಮರಿಗೆ ಲೋಕ ಸೇವಾ ವೃಂದದ ವತಿಯಿಂದ ಮಾನಪತ್ರ ಸಮರ್ಪಣ ಕಾರ್ಯ ಜರುಗಿಸಲ್ಪಟ್ಟಿತು. ಸಮಾರಂಭದಲ್ಲಿ ಶ್ರೀ ಕಡವ ಶಂಭು ಶರ್ಮರು ಉಪಸ್ಥಿತರಿದ್ದರು. ಲೋಕ ಸೇವಾ ವೃಂದದ ಅಧ್ಯಕ್ಷ ಶ್ರೀ ಯಂ. ನಾರಾಯಣ ಭಟ್ಟರು ಮಾನಪತ್ರ ಸಮರ್ಪಣೆ ಮಾಡುವ ಉದ್ದೇಶದ ಕುರಿತಾಗಿ ಮಾತನಾಡಿ ಇಬ್ಬರೂ ಕವಿಗಳ ಜೀವನದ ಮಹತ್ವ ವರ್ಣಿಸಿದರು. ನಂತರ ಅವರು ಶ್ರೀ ಗೋವಿಂದ ಪೈಯವರಿಗೆ ಉದ್ದೇಶಿತವಾದ ಮಾನಪತ್ರವನ್ನೋದಿ ಸಭೆಗೆ ಆಗಮಿಸದಿದ್ದ ಶ್ರೀ ಗೋವಿಂದ ಪೈಯವರ ಬಗ್ಗಾಗಿ, ಸಭಾಧ್ಯಕ್ಷರ ಕೊಡೆ ನೀಡಿದರು. ನಂತರ ಶ್ರೀ ಯಚ್. ಶ್ರೀಧರ ರಾವ್, ಎಂ. ಎ., ಬಿ ಟಿ. ಲೋಕ ಸೇವಾ ವೃಂದದ ಉಪಾಧ್ಯಕ್ಷ— ಇವರಿಂದ ಶ್ರೀ ಕಡವ ಶಂಭು ಶರ್ಮರಿಗೆ ಮಾನಪತ್ರ ಸಮರ್ಪಣೆಯಾಯಿತು. ಪ್ರಮುಖ ಮಹನೀಯರ ನೆಲೆಯಿಂದ ವಕೀಲ್ ಶ್ರೀ ಸಿ. ಯಸ್. ಶಾಸ್ತ್ರಿ, ಶ್ರೀ ಕೆ. ಪುಟ್ಟಣ್ಣ ಗೌಡ, ಸಿಸ್ತ್ರಾನ್, ವಕೀಲ್ ಶ್ರೀ ಹೆಚ್. ಸದಾಶಿವ ರಾವ್, ಡಾ. ಬಿ. ಕೃಷ್ಣ ಭಟ್, ಶ್ರೀ ಹೆರಂಜೆ ರಘುರಾಮ ಹೆಗ್ಡೆ, ಶ್ರೀ ಎಸ್. ತಿರುಮಲೇಶ್ವರ ಭಟ್, ಸಿಸ್ತ್ರಾನ್, ಶಿರೋಮಣಿ, ಶ್ರೀ ಪಿ. ಶ್ರೀನಿವಾಸಾಚಾರ್ ಭಟ್, ವಿದ್ವಾನ್, ಶ್ರೀ ಎ. ಸುರೇಂದ್ರ ರೈ, ಶ್ರೀ ಕೆ. ನಾಗರಾಜ ನಾಯಕ್ ಮತ್ತು ಶ್ರೀ ಆರ್. ಯತಿರಾಜುಲು ಚೆಟ್ಟಿಯಾರ್ ಮೊದಲಾದವರು ಇಬ್ಬರೂ ಕವಿಗಳನ್ನು ಪ್ರಶಂಸಿಸಿ ಮಾತನಾಡಿದರು.

ಸನ್ಮಾನಿತರಲ್ಲಿ ಶ್ರೀ ಕಡವ ಶಂಭು ಶರ್ಮರು ಮಾನಪತ್ರಕ್ಕೆ ಉತ್ತರವಿತ್ತರು. ಅಧ್ಯಕ್ಷರು ಶ್ರೀ ಗೋವಿಂದ ಪೈಗಳು ಮತ್ತು ಶ್ರೀ ಕಡವ ಶಂಭು ಶರ್ಮರ ಕುರಿತಾಗಿ ಅಂಗ್ಲ ಕವಿಗಳಿಗೆ ಹೋಲಿಸಿ ಸ್ವಾರಸ್ಯವಾಗಿ ಮಾತನಾಡಿದರು. ಕಾರ್ಯದರ್ಶಿ ಶ್ರೀ ಯು. ಗಂಗಾಧರ ಭಟ್ಟರು ಧನ್ಯವಾದ ಸಮರ್ಪಿಸಿದರು.

ಮಾನಪತ್ರವನ್ನು ಶ್ರೀ ಗೋವಿಂದ ಪೈಗಳಿಗೆ ಮರುದಿನ ಅವರ ಮನೆಯಲ್ಲಿ ಸಮರ್ಪಿಸಲಾಯಿತು.

ಉಡುಪಿ ತಾಲೂಕು ಪ್ರಾಥಮಿಕ ಶಿಕ್ಷಕರ ಯೂನಿಯನಿನ — ಕೌನ್ಸಿಲ್ ಸಭೆಯು ಯೂನಿಯನಿನ ಅಧ್ಯಕ್ಷ ಶ್ರೀ ಎಸ್ ದುಗ್ಗಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ. 1—4—62ರಂದು ಜರಗಿತು. ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಎ. ಪಿ. ಕೆದ್ಲಾಯರು ಯೂನಿಯನು ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿದರು ನಂತರ ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಬಿ. ಎಸ್. ಕುಕ್ಕಾಲ್ ಹಾಗೂ ಮಹಾಲಿಂಗ ಸೆಟ್ಟರನ್ನು ಸದಸ್ಯರನ್ನಾಗಿ ಆರಿಸಲಾಯಿತು. ಜಿಲ್ಲಾ ಯೂನಿಯನಿನ ಕೌನ್ಸಿಲ್ ಸದಸ್ಯರನ್ನಾಗಿ ಶ್ರೀಗಳಾದ ಭೋಜ ಪೂಜಾರಿ, ಬೋನ ಕೋಡ್ರಾಸ ಬಿ. ಎಸ್. ಕುಕ್ಕಾಲ್, ರಾಮ ಶೆಟ್ಟಿ, ರಾಮ ಅರ್ಸ್, ಮಹಾಲಿಂಗ ಶೆಟ್ಟಿ ಮತ್ತು ಜಿ. ನಾರಾಯಣ ಶೆಟ್ಟರನ್ನು ಆರಿಸಲಾಯಿತು.

ನಂತರ ಮುಖ್ಯೋಪಾಧ್ಯಾಯರಿಗೆ ಪ್ರತ್ಯೇಕ ಸಂಬಳ ನಗದಿ ಮಾಡುವ, ಒಂದು ಆಡಳಿತೆಯಿಂದ ಅಧ್ಯಾಪಕನು ಇನ್ನೊಂದು ಆಡಳಿತೆಗೆ ಹೋಗುವಾಗ ಹಿಂದಿನ ಸರ್ವೀಸನ್ನು ಗಣಿಸುವ ಪ್ರಟೇಜಿಗೆ ಸರ್ವೀಸು ಲೆಕ್ಕ ಮಾಡುವಾಗ ಆನ್ವೆಂಡ್ ಸರ್ವೀಸು ಕೂಡಿಸಿ ಕೊಳ್ಳುವ ಸಂಬಳ ಬಟವಾಡೆಯಲ್ಲಾಗುವ ವಿಳಂಬ ತಡೆಯುವ ನಿರ್ಣಯಗಳು ಮಂಜೂರಾದುವು.

ಕಡಿಯಾಳಿ ಶ್ರೀ ಮಹಿಷಮರ್ಧಿನಿ ಯಕ್ಷಗಾನ ಸಂಘದ-- ವಾರ್ಷಿಕೋತ್ಸವವು ದಿನಾಂಕ ೩ರಂದು ಕಡಿಯಾಳಿ ದೇವಸ್ಥಾನದ ಪರಾರದಲ್ಲಿ ಶ್ರೀ ಟಿ. ರಮೇಶ ಯು. ಪೈ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಶ್ರೀ ಜಗನ್ನಾಥ ಸೆಟ್ಟರು ಸ್ವಾಗತ ಭಾಷಣ ಮಾಡಿದ ತರುವಾಯ ಶ್ರೀ ದೇವರಾಯ ಪ್ರಭುಗಳವರು ವರದಿವಾಚನ ಮಾಡಿದರು. ಶ್ರೀ ಪಾ. ಲ ನಾ. ಉಪಾಧ್ಯಾಯರು ಜನರಂಜನೆಯ ದುರಾಸೆಯಿಂದ ಸುಧಾರಣೆಯ ಸೋಗನ್ನು ತಟ್ಟಿಕೊಂಡು ಯಕ್ಷಗಾನಕ್ಕೆ ಎಸಗುತ್ತಿರುವ ಅಪಚಾರವನ್ನು ಕಲಾಪ್ರೇಮಿಗಳು ತಡೆಗಟ್ಟುವುದು ಅಗತ್ಯವೆಂದರು. ಅಧ್ಯಕ್ಷರು ಯಕ್ಷಗಾನದ ಪ್ರಾಚೀನ ಮಾದರಿಯಲ್ಲಿರುವ ಕಲಾಪೂರ್ಣತೆಯನ್ನು ವಿವರಿಸಿದರು. ಬಳಿಕ "ಮಯೂರಧ್ವಜ ಗರ್ವಭಂಗ" ಮತ್ತು "ಮೀನಾಕ್ಷೀ ಕಲ್ಯಾಣ"ವೆಂಬ ಯಕ್ಷಗಾನಗಳು ಶ್ರೀ ಮಟ್ಪಾಡಿ ಕೃಷ್ಣಯ್ಯ ಸೆಟ್ಟರ ತರಬೇತಿಯಿಂದ ಪ್ರದರ್ಶಿತವಾದುವು.

ಹೊಸ ಕಟ್ಟಡದ ಪ್ರಾರಂಭೋತ್ಸವ—ಕೆನರಾ ಬೇಂಕಿಂಗ್ ಕೊರ್ಪೊರೇಶನಿನ ಮಲ್ಪೆ ಶಾಖೆಯ ಹೊಸ ಕಟ್ಟಡದ ಪ್ರಾರಂಭೋತ್ಸವವು 30—3—62ರಂದು ಶ್ರೀ ಎಮ್. ಮಧ್ವರಾಜ ಬಿ.ಎ., ಎಮ್. ಎಲ್. ಎ ಇವರಿಂದ ಡಾ. ಟಿ. ಎಮ್. ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಉಪಾಹಾರದ ಬಳಿಕ ಬೇಂಕಿನ ಚೇರ್ಮೇನ್ ಶ್ರೀ ಯು. ಗೋಪಾಲಕೃಷ್ಣ ನಾಯ್ಕರು ಸ್ವಾಗತ ಭಾಷಣ ಮಾಡುತ್ತಾ ಸಾರ್ವಜನಿಕ ಸಹಕಾರದಿಂದ ಇಲ್ಲಿ ಹೊಸ ಕಟ್ಟಡದ ನಿರ್ಮಾಣವಾಗುವಂತಾಯಿತೆಂದೂ, ಇಂದಿನ ದಿನಗಳಲ್ಲಿ ಬೇಂಕುಗಳ ಹೊಣೆ ವಿಶೇಷವಾದುದೆಂದೂ ಮುಂತಾಗಿ ಹೇಳಿದರು. ಮಧ್ವರಾಜರು ಕಟ್ಟಡ ಪ್ರಾರಂಭೋತ್ಸವವನ್ನು ಜರಗಿಸುತ್ತಾ ರಾಷ್ಟ್ರಾಭಿವೃದ್ಧಿಗೆ ಬೇಂಕುಗಳ ಸಹಕಾರ ಅತ್ಯಾವಶ್ಯಕ. ಮಲ್ಪೆಯಲ್ಲಿ ಕೊರ್ಪೊರೇಶನ್ ಬೇಂಕಿನ ಹೆಸರನ್ನು ತಂದವರು ದಿವಂಗತ ಡಾ. ಯು. ಸುಂದರ ರಾಮ ಪೈಯವರು- ಅವರು ವಿವಿಧ ರೀತಿಯಲ್ಲಿ ಮಾಡಿರುವ ಸೇವೆ ಸ್ಮರಣೀಯವಾಗಿದೆ. ಕಳೆದ 25 ವರ್ಷಗಳಿಂದ ಕೊರ್ಪೊರೇಶನ್ ಬೇಂಕುಯುಕ್ತ ಸೇವೆ ಗೈದು ಜನಪ್ರಿಯತೆ ಗಳಿಸಿದೆ ಇದರಿಂದಾಗಿಯೇ ಇಲ್ಲಿ ಈ ಹೊಸ ಕಟ್ಟಡ ತಲೆ ಎತ್ತುವಂತಾಯಿತು ಎಂದರು. ಅಧ್ಯಕ್ಷ ಡಾ. ಮಾಧವ ಪೈಗಳು ಭಾಷಣವೀಯುತ್ತಾ ಬೇಂಕುಗಳಿಂದಾಗಿ ದೇಶದ ವೃದ್ಧಿಯಾಗುತದೆ ಎಂಬಷ್ಟರಿಂದಲೇ ನಾವು ತೃಪ್ತಿಪಡದೆ ಜನರು ತಮ್ಮ ಉಳಿತಾಯವನ್ನು ಹೆಚ್ಚಿಸುವಂತೆ ನೋಡಬೇಕು. ಉಳಿತಾಯಗೈದು ಅದನ್ನು ಬೇಂಕಿನಲ್ಲಿ ಠೇವಣಾತಿ ಮಾಡಿದರೆ ಅದು ಅರ್ಥಘನವಾಗುವುದು. ರಾಷ್ಟ್ರ ನಿರ್ಮಾಣಕ್ಕೂ ಸಹಾಯ ಮಾಡಿದಂತಾಗುವುದು. ಎಲ್ಲರೂ ಉಳಿತಾಯಮಾಡಿ ರಾಷ್ಟ್ರ ನಿರ್ಮಾಣಕ್ಕೆ ನೆರವಾಗಬೇಕು. ಕೊರ್ಪೊರೇಶನ್ ಬೇಂಕಿನ ಸ್ಥಾನ, ಉನ್ನತವಾದುದಕ್ಕಾಗಿ ನಾವು ಹೆಮ್ಮೆಪಡಬಹುದಾಗಿದೆ ಎಂದರು. ಬೇಂಕಿನ ಡಿಪ್ಯುಟಿ ಜನರಲ್ ಮೆನೇಜರ್ ಶ್ರೀ ಬಿ. ಶಂಕರ ಶೆಣೈಯವರು ಧನ್ಯವಾದ ಸಮರ್ಪಿಸಿದರು.

ಉಪಾಹಾರ ಸಮಾರಂಭ—ಉಡುಪಿಯ ಪ್ರಸಿದ್ಧ ವಾಣಿಜ್ಯೋದ್ಯಮಿಗಳಾದ ಶ್ರೀ ಟಿ. ರಮೇಶ ಯು. ಪೈಗಳು ಮಣಿಪಾಲದಲ್ಲಿ ಅತ್ಯಾಧುನಿಕ ರೀತಿಯಲ್ಲಿ ಕಟ್ಟಿಸಿದ ಗೃಹ ಪ್ರವೇಶದ ಸಂಬಂಧ ತಾ. 31—3—62ನೇ ಸಂಜೆ ಉಪಾಹಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು ಈ ಸಮಾರಂಭಕ್ಕೆ ಊರುಪರವೂರುಗಳಿಂದ ಅನೇಕ ಮಹನೀಯರು ಆಗಮಿಸಿದ್ದರು. ಶ್ರೀ ರಮೇಶ ಪೈಗಳು ಸರ್ವರಿಗೂ ಹಾರ್ದಿಕ ಸ್ವಾಗತ ನೀಡಿದರು

ಹಿರಿಯಡ್ಕ—ಮಹತೋಬಾರ್ ಶ್ರೀ ವೀರ ಭದ್ರ ದೇವಸ್ಥಾನದಲ್ಲಿ ತಾ. 19-4-62 ರಿಂದ 24—4—62ರ ವರೆಗೆ ರಥೋತ್ಸವ ಕಾರ್ಯಕ್ರಮಗಳು ಜರಗಲಿರುವುವೆಂದೂ, ಭಕ್ತಾದಿಗಳು ಬಂದು ಶ್ರೀ ಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ ಶ್ರೀದೇವರ ಕೃಪೆಗೆಪಾತ್ರರಾಗ ಬೇಕೆಂದೂ ಮೆನೇಜಿಂಗ್ ಟ್ರಸ್ಟಿ ಶ್ರೀ ಎ. ಜಿನದೇವ ಆಳ್ವರು ಅಪೇಕ್ಷಿಸುತ್ತಾರೆ.

ಕನ್ನಡ ಗ್ರಂಥಗಳಿಗೆ ಬಹುಮಾನ:— ಕನ್ನಡ ಸಾಹಿತ್ಯದ ವಿವಿಧ ಉತ್ತಮ ಪುಸ್ತಕಗಳಿಗೆ ರಾಜ್ಯ ಸರಕಾರದವರು 1961ನೇ ಸಾಲಿಗೆ ರೂ. 500ರಂತೆ ನಗದಿ ಬಹುಮಾನ ಕೊಟ್ಟಿದ್ದಾರೆ. ಅದರಂತೆ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳ 'ಪುನರ್ನವ' ಎಂಬ ಕಾವ್ಯ ಪುಸ್ತಕಕ್ಕೆ ರೂ. 500 - ಬಹುಮಾನ ದೊರೆತಿದೆ.

ಮಂಘೂರು— ಶ್ರೀ ಸಿದ್ಧೇಶ್ವರ ವಿನಾಯಕ ದೇವಸ್ಥಾನದಲ್ಲಿ ತಾ. 6—1—63 ರಿಂದ 10—1—63ರ ತನಕ ಮಹಾಪೂಜಾ ಸೇವಾ ಮಹೋತ್ಸವವು ವೈಶಿಷ್ಟ್ಯಪೂರ್ಣವಾಗಿ ಜರಗಲಿರುವುದೆಂದೂ ಸರ್ವರೂ ಚಿತ್ತೈಸಿ ಸಹಕರಿಸಿ ತೀರ್ಥ ಪ್ರಸಾದ ಸ್ವೀಕರಿಸಬೇಕೆಂದೂ ಮಂಘೂರು ಶ್ರೀ ಸಿದ್ಧಿ ವಿನಾಯಕ ಸೇವಾ ಸಂಘ, ಕಾಸರಗೋಡು ಇವರು ವಿನಂತಿಸುತ್ತಾರೆ.

ಭಾರತೀಯರಾದರೂ ಅಮೇರಿಕೆಯ ಅಂತರಿಕ ನೀತಿಗಳನ್ನು ತಿಳಿದುಕೊಂಡಿಲ್ಲ, ಈ ಕಾರಣದಿಂದಾಗಿ ಭಾರತ ಅಮೇರಿಕೆಗಳ ನಡುವೆ ಇನ್ನೂ ಅಂತರವಿದೆಯೆಂದೂ ಗೋವೆಯ ಸಮಸ್ಯೆಯ ಬಗ್ಗೆ ಅಮೇರಿಕನರಿಗೆ ಸಾಮಾನ್ಯ ತಿಳುವಳಿಕೆಯಿಲ್ಲವಾದುದರಿಂದ ಅಲ್ಲಿ ಗೊಂದಲವೆದ್ದತೆಂದೂ ಅವರು ಹೇಳಿದ್ದಾರೆ.

ಜಾನ್ ಕೆನ್ನೆಡಿ

ಅಣ್ವಸ್ತ್ರ ಪ್ರತಿಬಂಧದ ಪ್ರಶ್ನೆಯು ದಿನದಿಂದ ದಿನಕ್ಕೆ ಜಟಿಲವಾಗುತ್ತ ಹೋಗುತ್ತಿದೆ. ರಶ್ಯ-ಅಮೇರಿಕೆಗಳು ಪರಸ್ಪರ ಒಡಂಬಡಿಕೆಯೊಂದಕ್ಕೆ ಬಾರದುಳಿಯುವುದೇ ಇದಕ್ಕೆ ಕಾರಣವೆನಿಸಿದೆ ಒಪ್ಪಂದವಾದರೂ ಅದನ್ನು ಸರಿಯಾಗಿಪಾಲಿಸಲಾಗುತ್ತದೆಯೋ ಇಲ್ಲವೋ ಎಂಬುದು ಜಗತ್ತಿಗೆತಿಳಿಯುವಂತೆ ಪರಿಣಾಮಕಾರಿಯಾದ ಅಂತಾರಾಷ್ಟ್ರೀಯ ವ್ಯವಸ್ಥೆಗೆ ಅವಕಾಶ ದೊರೆಯದ ಯಾವ ನಿಶ್ಶಸ್ತ್ರೀಕರಣ ಒಡಂಬಡಿಕೆಯೂ ನಿರುಪಯೋಗಿ ಎಂದು ಅಮೇರಿಕೆಯ ಅಧ್ಯಕ್ಷರು ಹೇಳುತ್ತಾರೆ. ಈ ಕಾರಣದಿಂದ ಸೋವಿಯತ್ತಾದರೂ ಹಿಂಜರಿಯುತ್ತದೆ. ಹೀಗೆ ಮಾತುಕತೆಗಳು ನಿರರ್ಗಳವಾಗಿ ನಡೆಯುತ್ತ ಹೋದರೂ ಫಲವು ಮಾತ್ರ ಗಗನ ಕುಸುಮವೆಂಬಂತೆಯೇ ಉಳಿದಿದೆ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ರಾಮಾಯಣ ಚರಿತ

ಆದರ್ಶನಾರೀಮಣಿ – ಊರ್ಮಿಳಾ

ಶ್ರೀ ಎಂ. ಬಿ ಶಂಕರರಾವ್, ಐ. ಎ. ಎಸ್. (ನಿವೃತ್ತ)

ಅನಾದಿಯಿಂದ ರಾಮಾಯಣವು ಹಿಂದು ಸಂಸ್ಕೃತಿಯಲ್ಲಿ ಅತುಲ ಸ್ಥಾನವನ್ನು ಪಡೆದು ಆ ಪುರಾಣಕಾವ್ಯವನ್ನು ಹಲವು ಭಾಷೆಗಳಲ್ಲಿ ಭಾಷಾಂತರ ಮಾಡಿರುವರು. ಆದಿ ಕವಿ ವಾಲ್ಮೀಕಿ, ತುಳಸಿದಾಸ, ಕಂಬ ಮೊದಲಾದವರು ಈ ಮಹಾ ಕಾವ್ಯವನ್ನು ಬಹಳ ಅಲಂಕಾರವಾದ ವಿಧದಲ್ಲಿ ರಚಿಸಿ ಸಂಸ್ಕೃತ, ಹಿಂದಿ ಮತ್ತು ತಮಿಳು ಭಾಷೆಗಳನ್ನು ಉದ್ಧರಿಸುವರು. ಸನ್ಯಾಸಿ ಸಮನಾದ ಲಕ್ಷ್ಮಣನ ಪತ್ನಿಯಾದ ಊರ್ಮಿಳೆಯ ಗುಣವರ್ಣನವು ಈ ಮೂರು ಕವಿಗಳು ರಚಿಸಿದ ರಾಮಾಯಣದಲ್ಲೂ ಕಂಡುಬರುವುದಿಲ್ಲ. ಆಕೆಯು ಜನಕರಾಜನ ಪುತ್ರಿಯೆಂದೂ ಭೂಕನ್ಯೆ ಸೀತೆಯು ಜನಕನಿಗೆ ಲಭಿಸಿದ ಅನಂತರ ಜನಕನ ರಾಣಿಯ ಉದರದಲ್ಲಿ ಜನ್ಮವೆತ್ತಿದವಳೆಂದೂ, ಲಕ್ಷ್ಮಣನು ಆಕೆಯನ್ನು ವರಿಸಿಕೊಂಡನೆಂದೂ ಹೇಳಿ ಆಕೆಯ ಚರಿತೆಯು ಮುಗಿಸಲ್ಪಟ್ಟಿದೆ. ಆದರೆ ಭವಭೂತಿ ಎನ್ನುವ ಸಂಸ್ಕೃತ ಮಹಾ ಕವಿಯು ತನ್ನ ಕಾವ್ಯದಲ್ಲಿ ಊರ್ಮಿಳೆಯ ಗುಣವನ್ನು ಕೆಲವು ಮಟ್ಟಿಗೆ ಶ್ಲಾಘಿಸಿರುವನು. ನಮ್ಮ ಕಾಲದ ಕವಿಗಳಲ್ಲಿ ರವೀಂದ್ರನಾಥ ಠಾಕೂರರು ತನ್ನ ಭಾಷಣವೊಂದರಲ್ಲಿ ಊರ್ಮಿಳೆಯನ್ನು ವಿಶೇಷವಾಗಿ ಹೊಗಳಿರುವರು. ಅಂತೆಯೇ ಬರೆದಿರುವರು.

ಜನನ ಕಾಲದಿಂದ ಕೊನೆಯ ವರೆಗೂ ಊರ್ಮಿಳೆಯು ಸೀತೆಯನ್ನು ದೇವಿಯಂತೆ ಆರಾಧಿಸುತಿದ್ದಳು. ಸೀತೆಯು ದೇವಾಂಶ ಸಂಭೂತಳೆಂದು ಆಕೆಗೆ ಚೆನ್ನಾಗಿ ತಿಳಿದು ತನ್ನ ಪತಿಯನ್ನು ಅಗಲುವಾಗ ತಾನು ವ್ಯಸನಪಡಲಿಲ್ಲ. ರಾಮಸೀತೆಯರ ಸೇವೆಗಾಗಿ ತನ್ನ ಪತಿಯು ಅರಣ್ಯವಾಸಿಯಾದಾಗ, ತಾನು ತನ್ನ ಗಂಡನನ್ನು ಪರಮಾತ್ಮನ ಸೇವೆಗಾಗಿ ಕಳುಹಿಸಿರುವೆನು ಎಂದು ಭಾವಿಸಿ ಹಲವು ವರ್ಷಗಳ ತನಕ ಏಕಾಂತವಾಸವನ್ನು ವಹಿಸಿಕೊಂಡಳು. ರೂಪದಲ್ಲಿ ಸೀತೆಗೂ, ಊರ್ಮಿಳೆಗೂ ಹೆಚ್ಚಿಗಿನ ವ್ಯತ್ಯಾಸವಿರಲಿಲ್ಲವೆಂದು ಮಹಾಕವಿ ಭವಭೂತಿಯು ಬರೆದ ಕಾವ್ಯಗಳಿಂದ ವಿಷದವಾಗುವುದು. ಊರ್ಮಿಳೆಯನ್ನು ಲಕ್ಷ್ಮಣನಿಗೆ ಕನ್ಯಾದಾನ ಮಾಡುವ ಸಮಯ ಜನಕರಾಜನು ಹೇಳಿದ ಮಾತುಗಳು ಹೀಗಿವೆ. "ಲಕ್ಷ್ಮಣನೆ, ನನ್ನ ಪ್ರೀತಿಯ ಕುವರಿಯ ಹಸ್ತವನ್ನು ಹಿಡಿದುಕೊ. ಅವಳಲ್ಲಿ ನಿಶ್ಚಲವಾದ ಭಕ್ತಿಯೂ, ಕಲಂಕವಿಲ್ಲದ ಪ್ರೇಮವೂ ಇವೆ. ಸುಖದಲ್ಲೂ ದುಃಖದಲ್ಲೂ ಆಕೆಯು ನಿನ್ನ ಸಮಭಾಗಿಯಾಗಿ ಬಾಳುವಳು" ಸೀತಾ, ಸಾವಿತ್ರಿ, ದಮಯಂತಿ ಮೊದಲಾದ ಪಾತಿವ್ರತ್ಯ ಶಿರೋಮಣಿಗಳಲ್ಲಿ ಊರ್ಮಿಳೆಯನ್ನು ಭವಭೂತಿಯು ಸೇರಿಸಿರುವನು ಆಕೆಗೆ ತನ್ನ ಪತಿಯಾದ ಲಕ್ಷ್ಮಣನಲ್ಲಿ ಅಗಾಧವಾದ ಪ್ರೇಮವು ಊರಿತ್ತು. ಆದುದರಿಂದ ಆತನ ಚಿತ್ತಕ್ಕೆ ಕುಂದು ಬರಬಾರದೆನ್ನುವ ಘನವಾದ ಉದ್ದೇಶದಿಂದ ಆತನು ರಾಮಸೇವೆಗಾಗಿ ಕಾನನಕ್ಕೆ ಹೊರಟಾಗ ತಾನು ಪ್ರತಿಬಂಧಿಸದೆ, ರಾಮಸೀತೆಯರ ಸೇವೆಗಾಗಿ ತನ್ನ ಪತಿಯನ್ನು ಅರ್ಪಣಮಾಡಿ ಹಲವು ವರ್ಷಗಳ ವರೆಗೆ ತಾನು ಏಕಾಂಗಿಯಾದಳು ಈಕೆಯ ತ್ಯಾಗಯೋಗವು ಮಹತ್ತರವಾದುದು. ಸೀತೆಯ ವನವಾಸದ ಕಷ್ಟಗಳಿಂದ ಊರ್ಮಿಳೆಯ ತ್ಯಾಗ ಶಕ್ತಿಯೇ ಮಿಗಿಲಾದುದೆನ್ನುವುದರಲ್ಲಿ ಸಂದೇಹವಿಲ್ಲ— ಪುರಾಣಗಳಲ್ಲಿ ಮಾತ್ರ ಈಕೆಯ ಗುಣವರ್ಣನಗಳು ಲೋಪವಾಗಿವೆ—

ಶ್ರೀ ರಮೇಶಚಂದ್ರದತ್ತರು ಬರೆದ ರಾಮಾಯಣದಲ್ಲಿ ಊರ್ಮಿಳೆಯ ಗುಣವನ್ನು ಬಹು ಗಂಭೀರವಾದ ರೀತಿಯಲ್ಲಿ ವರ್ಣಿಸಿರುವುದೆ. ಆಕೆಯ ರೂಪಲಾವಣ್ಯವು ಕೂಡ ಸೀತೆಯ ರೂಪಲಾವಣ್ಯಕ್ಕೂ ಮಿಗಿಲಾಗಿತ್ತೆಂದು ವಿವರಿಸಲ್ಪಟ್ಟಿದೆ. ಆಕೆಯ ವಿಧಿಯು ಮಾತ್ರ ಪಶ್ಚಾತ್ತಾಪಕರವಾದುದು. ಏನೂ ತಪ್ಪು ಮಾಡದೆ ತನ್ನ ಪ್ರೀತಿಯ ಪತಿಯಿಂದ ೧೪ ವರ್ಷಗಳ ಪರ್ಯಂತರ ಅಗಲಿದ್ದು ದಿನನಿತ್ಯ ಆತನ ಸ್ಮರಣದಲ್ಲೆ ಏಕಾಂಗಿಯಾಗಿ ಎಳೆಯ ವಯಸ್ಸಿನಲ್ಲಿ ಅರಮನೆಯಲ್ಲಿ ಕಾಲಗಳೆವುದು ಆಕೆಯ ಜನ್ಮಫಲವಾಗಿ ಪರಿಣಮಿಸಿತು. ವಿಧಿಯ ಆಟವನ್ನು ಮೀರಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲವೆನ್ನುವ ವಿಚಾರವು ಊರ್ಮಿಳೆಯ ಜನ್ಮದಿಂದ ಅರಿಯಬಹುದು ನವ ಯೌವನೆಯಾದ, ಅತಿ ಸುಂದರಿಯಾದ ತಾನು ತನ್ನ ಪತಿಯಿಂದ ಅಗಲಿ ಹಲವು ಕಾಲ ಏಕಾಂಗಿಯಾಗಿ ಪತಿಯ ಧ್ಯಾನದಲ್ಲೇ ಇದ್ದು ಮೌನ ವ್ರತವನ್ನು ಸಾಧಿಸಿದ ಆಕೆಯ ತಪಸ್ಸು ಮೇರುಗಿರಿಯಷ್ಟು ಉನ್ನತವಾಗಿರಬೇಕು. ವಿಧಿಯು ಗುಣದಲ್ಲಿ ರಾಕ್ಷಸೀ ಸ್ವರೂಪಳಾದ ಮಂಥರೆಯ ಮತ್ತು ಕೈಕೇಯಿಯ ಮೂಲಕ ಊರ್ಮಿಳೆಯ ಜನ್ಮದಲ್ಲಿ ಒಂದು ವಿಧದ ಆಶ್ಚರ್ಯದ ಅಗಲುವಿಕೆಯನ್ನು ತಂದೊಡ್ಡಿತು. ದಶರಥನು ಈಕೆಯ ಶೋಕದಲ್ಲಿ ತಾನೂ ಬೆಂಡಾಗಿದ್ದನು. ರಾಮ, ಲಕ್ಷ್ಮಣ, ಸೀತೆಯರಿಗೆ ಅರಣ್ಯಕ್ಕೆ ಅಟ್ಟಿ ನಿರ್ದೋಷಿಯಾದ ಊರ್ಮಿಳೆಗೆ ಕೂಡ ಗಂಡನಿಂದ ವಿಯೋಗವು ಒದಗಿತೆಂಬ ದೋಷವು ದಶರಥನ ಮನಸ್ಸನ್ನು ಕಾಡುತಿತ್ತು. ಅಂತೆಯೇ ಕೆಲವು ಸಮಯದೊಳಗೆ ಇಹಲೋಕದ ಭಾಗ್ಯವನ್ನೇ ತ್ಯಜಿಸಿಬಿಟ್ಟು ಸ್ವರ್ಗಸ್ಥನಾದನು. ಇದರಿಂದ ಅರಮನೆಯಲ್ಲಿಯೇ ಇದ್ದ ಊರ್ಮಿಳೆಯ ಶೋಕವೇನೂ ಕಡಿಮೆಯಾಗಲಿಲ್ಲ. ಪ್ರಾಣವನ್ನು ಕಳಕೊಂಡಂತಾಯಿತು.

ರಾಮನು ಕಾಡಿಗೆ ಹೊರಡುವಾಗ ಸೀತೆಯೂ ಹಠಹಿಡಿದು ಆತನನ್ನು ಹಿಂಬಾಲಿಸಿದಳು. ಯಾರ ನೀತಿ ಬೋಧನೆಗಳಿಗೂ ಮನಗೊಡಲಿಲ್ಲ ಗಂಡನನ್ನು ಬಿಟ್ಟು ಒಂದು ನಿಮಿಷವಾದರೂ ಇರಲಾರೆನೆಂದಳು ಊರ್ಮಿಳೆಯು ತನ್ನನ್ನು ಹಿಂಬಾಲಿಸದೆ ತನ್ನ ತಾಯಿ ಎಂದರೆ ಆಕೆಯು ಅತ್ತೆಯ ಸೇವೆಯನ್ನು ಮಾಡುತ್ತ ಇರಲಿ, ಎಂದ ಲಕ್ಷ್ಮಣನು ನುಡಿದಾಗ [ತನ್ನ ಗಂಡನ ಮನಸ್ಸನ್ನು ನೋಯಿಸದೆ, ಆತನಲ್ಲಿ ನಿರ್ಭೀತಿಯಾಗಿ ನಡೆದು ಕಂಗಾಲಾದ ಕೌಸಲ್ಯೆಯ ದಾಸ್ಯವನ್ನು ಮಾಡಿ ಹದಿನಾಲ್ಕು ವರ್ಷಗಳ ತನಕ ಏಕಾಗ್ರಚಿತ್ತದಿಂದ ಪತಿಧ್ಯಾನ ಮಾಡುತ್ತ ತಪಗೈದಳು. ಚಿಕ್ಕ ವಯಸ್ಸಿನ ರಾಜ ಕನ್ಯೆಯ ಈ ಅತುಲವಾದ ಪ್ರಭೆಯನ್ನು ರವೀಂದ್ರನಾಥರು ಬಹು ಸೊಗಸಾಗಿ ಹಾಡಿರುವರು. ಸಾವಿತ್ರಿಯು ತನ್ನ ಗಂಡನ ಪ್ರಾಣದಾನಕ್ಕಾಗಿ ಯಮನನ್ನು ಹಿಂಬಾಲಿಸಿದರೆ, ಊರ್ಮಿಳೆಯು ನಿಷ್ಕಾಮ ಕರ್ಮಯೋಗಿನಿಯಾಗಿ ಪತಿಧ್ಯಾನದಲ್ಲಿಯೇ ಸಂಸಾರ ಸುಖವನ್ನು ಕಂಡು ಅತ್ತೆಯ ಸೇವೆಮಾಡಿ ತಾನು ೧೪ ವರ್ಷಗಳ ವರೆಗೆ ಸನ್ಯಾಸಿನಿಯೇ ಆದಳು. ಈ ಪುಣ್ಯಾತ್ಮ ಸ್ತ್ರೀಯನ್ನು ಆದರ್ಶ ನಾರೀಮಣಿ ಎನ್ನುವುದರಲ್ಲಿ ಎಳ್ಳಿನಷ್ಟಾದರೂ ಅತಿಶಯೋಕ್ತಿ ಇಲ್ಲ.

ಅಧ್ಯಕ್ಷ ಕೆನ್ನಡಿ ತನ್ನ ಸಲಹೆಗಾರರಲ್ಲೊಬ್ಬರಾದ ಮಿ। ವಿಲಿಯಂ ಫೋಸ್ಟರರೊಂದಿಗೆ ವಿಚಾರ ವಿನಿಮಯ ಮಾಡುತ್ತಿದ್ದಾರೆ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ!
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1–25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ

ಭಾರತೀಯ ದರ್ಶನ ಶಾಸ್ತ್ರಗಳು

(೪ನೇ ಪುಟದಿಂದ)

ಗುಣಗಳ ಸಮಾನ ಅವಸ್ಥೆಯೇ ಪ್ರಕೃತಿಯಾಗಿದೆ. ಈ ಮೂರು ಗುಣಗಳಲ್ಲಿ ವೈಷಮ್ಯವಾದಾಗಲೇ ಸೃಷ್ಟಿಯ ಉದಯವಾಗುವುದು. ಒಟ್ಟು ಇಪ್ಪತ್ತೈದು ತತ್ವಗಳು ಈ ದರ್ಶನದಲ್ಲಿ ಪ್ರಸಿದ್ಧವಿವೆ ಪುರುಷ, ಪ್ರಕೃತಿ, ಮಹತ್ತತ್ವ (ಬುದ್ಧಿ) ಅಹಂಕಾರ, ಮನಸ್ಸು, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚತನ್ಮಾತ್ರೆಗಳು ಮತ್ತು ಪಂಚ ಮಹಾಭೂತಗಳೇ ಈ ತತ್ವಗಳು ಸಾಂಖ್ಯದ ದಾರ್ಶನಿಕ ದೃಷ್ಟಿಕೋಣವು ಯಥಾರ್ಥವಾದದ ಕಡೆಗೆ ಒಲಿದಂತಿದೆ (ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗುಗಳು ಜ್ಞಾನೇಂದ್ರಿಯಗಳು, ವಾಕ್, ಪ್ರಾಣಿ, ಪಾದ, ಗುದದ್ವಾರ, ಜನನೇಂದ್ರಿಯಗಳು ಕರ್ಮೇಂದ್ರಿಯಗಳು, ಶಬ್ದ,ಸ್ಪರ್ಶ,ರೂಪ, ರಸ, ಗಂಧಗಳು ತನ್ಮಾತ್ರೆಗಳು,ಪೃಥ್ವೀ, ಅಪ್, ತೇಜಸ್, ವಾಯು ಆಕಾಶಗಳು ಭೂತಗಳು)

ಯೋಗ ದರ್ಶನ

ಯೋಗ ದರ್ಶನದ ಪ್ರಧಾನಾಚಾರ್ಯನು ಪತಂಜಲಿ ಮುನಿ ಯೋಗ ದರ್ಶನದ ಹಲವಾರು ಪ್ರಕಾರಗಳಲ್ಲಿ ಸಿದ್ಧಿಗಳ ವರ್ಣನೆ ವಿಸ್ತಾರವಾಗಿದೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣೆ, ಧ್ಯಾನ ಮತ್ತು ಸಮಾಧಿಗಳೆಂಬ ಎಂಟು ಯೋಗಾಂಗಗಳಿವೆ ಈ ಅಷ್ಟಾಂಗಗಳ ಅಧ್ಯಯನದಿಂದ ಚಿತ್ತವೃತ್ತಿಯು ನಿರುದ್ಧವಾಗುವುದು ಅದು ಮೊದಲು ಏಕಾಗ್ರವಾಗುವುದು ಚಿತ್ತವು ಧ್ಯೇಯ ವಸ್ತುವಿನ ಆಕಾರವನ್ನು ಗ್ರಹಿಸುವಾಗ, ಸಮಾಧಿಯು ಉಂಟಾಗುವುದು. ಸಾಂಖ್ಯ ದರ್ಶನವು ಒಪ್ಪಿರುವ ೨೫ ತತ್ವಗಳು ಯೋಗ ಶಾಸ್ತ್ರದಲ್ಲಿಯೂ ಒಪ್ಪಲ್ಪಟ್ಟಿವೆ. 'ಪರಮಾತ್ಮ'ನೆಂಬ ಹೆಚ್ಚಿನ ತತ್ವವನ್ನು ಈ ಶಾಸ್ತ್ರವು ಹೇಳುತ್ತದೆ ಆದುದರಿಂದ ಯೋಗವನ್ನು 'ಸೇಶ್ವರ ಸಾಂಖ್ಯ'ವೆಂದು ಕರೆಯುವುದೂ ಇದೆ. ಯೋಗದಲ್ಲಿ ಕ್ಲೇಶ, ಕರ್ಮ, ವಿಪಾಕ (ಕರ್ಮಫಲ) ಆಶಯ (ಕರ್ಮಫಲಾನುರೂಪ ಸಂಸ್ಕಾರ)ಗಳ ಸಂಪರ್ಕದಿಂದ ರಹಿತನಾದ ಪುರುಷ ವಿಶೇಷವನ್ನು ಪರಮಾತ್ಮನೆನ್ನುತ್ತಾರೆ. ಈತನು ಸದಾ ವಿಮುಕ್ತ, ಐಶ್ವರ್ಯ ಮತ್ತು ಜ್ಞಾನದ ಪರಾಕಾಷ್ಠೆಯೇ ಈತನು

ಮೀಮಾಂಸಾದರ್ಶನ

ಆಚಾರ್ಯ ಜೈಮಿನಿಯು ಮೀಮಾಂಸಾ ದರ್ಶನದ ಪ್ರಮುಖನು ವೈದಿಕ ಕರ್ಮಕಾಂಡದ ವಿಧಾನದಲ್ಲಿ ಕಂಡು ಬರುವ ವಿರೋಧ ಪರಿಹಾರಮಾಡಿ, ಏಕವಾಕ್ಯತೆಯನ್ನು ಉತ್ಪನ್ನ ಮಾಡುವುದೇ ಈ ದರ್ಶನದ ಪ್ರಧಾನೋದ್ದೇಶ ಮೀಮಾಂಸಾವೆಂದರೆ, ಧರ್ಮವಿವೇಚನೆಯೆಂದರ್ಥ 'ಧರ್ಮಾಖ್ಯಂ ವಿಷಯಂ ವಸ್ತುಂ ಮೀಮಾಂಸಾಯಾಃ ಪ್ರಯೋಜನಮ್' ವೇದದ ಮೂಲಕ ಹೇಳಲಾದ ಇಷ್ಟಸಾಧನ ಧರ್ಮಗಳಿವೆ, ಅನಿಷ್ಟ ಸಾಧನ ಧರ್ಮಗಳೂ ಇವೆ ವೇದವು ಸ್ವಯಂ ನಿತ್ಯಸಿದ್ಧ ಮತ್ತು ಅಪೌರುಷೇಯ ಕರ್ಮವೇ ಸರ್ವ ಪ್ರಧಾನ ವಸ್ತು. ಕರ್ಮದಿಂದಲೇ ಅಪೂರ್ವ ಮತ್ತು ಅಪೂರ್ವದಿಂದ ಫಲವು ಪ್ರಾಪ್ತವಾಗುತ್ತದೆ, ಆದರೆ, ಅಪೂರ್ವದ ಮೂಲಕ ಸಮುತ್ಪನ್ನ ಫಲ (ಸ್ವರ್ಗಾದಿ) ಕಾಲಾಂತರದಲ್ಲಿ ಪ್ರಾಪ್ತವಾಗುವುದು—ಎಂದು ಈ ದರ್ಶನವು ಹೇಳುತ್ತದೆ

ವೇದಾಂತ ದರ್ಶನ

ಮಹರ್ಷಿ ಬಾದರಾಯಣರು ವೇದಾಂತ ಸೂತ್ರದ ನಿರ್ಮಾತರು ಆಚಾರ್ಯ ಬಾದರಾಯಣ ಪ್ರಣೀತ ಈ ವೇದಾಂತ ಸಿದ್ಧಾಂತಕ್ಕನುಸಾರವಾಗಿ 'ಬ್ರಹ್ಮಸತ್ಯಂ ಜಗನ್ಮಿಥ್ಯಾ,' 'ಜೀವೋ ಬ್ರಹ್ಮೈವನಾಪರಃ' ಎಂದರೆ, ಬ್ರಹ್ಮವು ಸತ್ಯ, ಜಗತ್ತು ಮಿಥ್ಯಜೀವನವೇ ಬ್ರಹ್ಮ ಮತ್ತು ಬ್ರಹ್ಮನಿಗೆ ಅತಿರಿಕ್ತವಾಗಿ ಮತ್ತೇನೂ ಇರುವುದಿಲ್ಲ. ಶಂಕರಾಚಾರ್ಯರು ಅದ್ವೈತಮತವನ್ನು ಪುಷ್ಟೀಕರಿಸಿರುವರು ಈ ಜಗತ್ತು ಮಾಯೆಯ ದ್ವಾರಾ ರಚಿತವಾದುದು, ಆದುದರಿಂದ ಇದು ಅನಿರ್ವಚನೀಯ. ಅಥವಾ, ಇದು ಹೀಗೆಯೇ ಇದೆಯೆಂದು ನಿಶ್ಚಯವಾಗಿ ಹೇಳಬಾರದು ಮಿಥ್ಯವೆಂದರೆ, ಒಂಜೆಯ ಮಗನಂತಲ್ಲ, ಪರಮಾರ್ಥ ತತ್ವಜ್ಞಾನವಾಗುವಾಗ, ಜಗತ್ತನ್ನು ನೋಡುವ ಸಾಧಕನು ಸರ್ವತ್ರ ಬ್ರಹ್ಮ ಸ್ವರೂಪದವನ್ನು ಕಾಣುತ್ತಾನೆ.

ಬ್ರಹ್ಮನಿಗೆ ಸಗುಣ ಮತ್ತು ನಿರ್ಗುಣವೆಂಬ ಎರಡು ಸ್ವರೂಪಗಳಿವೆ ಮಾಯಾ ವಿಶಿಷ್ಟ ಬ್ರಹ್ಮವು ಸಗುಣವೆಂದೂ ಪರಮಾತ್ಮನೆಂದೂ ವೇದಾಂತ ಒಪ್ಪುತ್ತದೆ ಸಗುಣ ಬ್ರಹ್ಮನು ಜಗತ್ತಿನ ಕರ್ತ, ಧರ್ತನು ನಿರ್ಗುಣವು ಮಾಯಾರಹಿತ, ಸತ್ಯರೂಪ, ಅಖಂಡ, ವ್ಯಾಪಕ ಸಚ್ಚಿದಾನಂದ ಸ್ವರೂಪವಾಗಿಯೂ, ಇದನ್ನು ಅದ್ವೈತ ದರ್ಶನದಲ್ಲಿ ಒಪ್ಪಲಾಗಿದೆ. ವೇದಾಂತದಲ್ಲಿ ಮೂರು ಸತ್ತೆಗಳನ್ನು ಸ್ವೀಕರಿಸುತ್ತಾರೆ: ಪಾರಮಾರ್ಥಿಕ, ಪ್ರಾತಿಭಾಸಿಕ ಮತ್ತು ವ್ಯಾವಹಾರಿಕ. ಈ ದರ್ಶನದ ಅನುಯಾಯಿಗಳು ಬ್ರಹ್ಮಸೂತ್ರ, ಗೀತೆ, ಉಪನಿಷತ್ತುಗಳನ್ನು 'ಪ್ರಸ್ಥಾನ ತ್ರಯೀ" ಎನ್ನುತ್ತಾರೆ ಇದರಂತೆ ಜ್ಞಾನ ಪ್ರಾಪ್ತಿಯೇ ಮೋಕ್ಷ. ಬ್ರಹ್ಮನ ಸ್ವರೂಪವನ್ನು ಸಾಕ್ಷಾತ್ಕಾರದ ಮೂಲಕ ಅನುಭವಮಾಡಿಕೊಳ್ಳಬಹುದು ತಿಳಿಯುವ ಇಚ್ಛೆಯಿರುವವನು ಸ್ವಯಂ ಅನುಭವ ಮಾಡಿಕೊಳ್ಳುವುದು ಅತ್ಯಂತಾವಶ್ಯಕ. ಆದುದರಿಂದ ಬ್ರಹ್ಮ ಜಿಜ್ಞಾಸುಗಳು ಆದಕ್ಕನುಸಾರವಾಗಿ ಅನುಷ್ಠಾನ ಸಾಧನಾದಿಗಳನ್ನು ಮಾಡುವುದು ಪರಮಾವಶ್ಯಕವಿದೆ ವೇದಾಂತ ದರ್ಶನದಲ್ಲಿ ಇದನ್ನು ಸುಸ್ಪಷ್ಟವಾಗಿ ಹೇಳಲಾಗಿದೆ. ಈ ದರ್ಶನದಲ್ಲಿ ಶ್ರುತಿ (ವೇದ)ಯೇ ಪ್ರಮಾಣ; ವೇದಾನುಕೂಲವಾದ ತರ್ಕವು ಪ್ರಮಾಣವೆಂದು ಸ್ವೀಕೃತವಾಗಿದೆ.

(ವಿವಿಧ ಮೂಲಗಳಿಂದ)

—ಗೋರಾ.



ಮೇಲಿನ ಚಿತ್ರ: ಕೇಂದ್ರ ಮಂತ್ರಿ ಮಾಳವೀಯರು ಪೈಸೋಲಿಯಲ್ಲಿ ಪೆಟ್ರೋಲಿಯಂ ರೈಲು ಚಾಲನೆಗಾಗಿ ಗುಂಡಿಯನ್ನೊತ್ತಿದರು. ಕೆಳಗಿನ ಚಿತ್ರ: ಪೆಟ್ರೋಲಿಯಂ ತುಂಬಿದ ವಾಗೀನುಗಳನ್ನು ಹೊತ್ತು ರೈಲು ಪೈನಾರಿ ನಿಲ್ದಾಣದಿಂದ ಹೊರಡುತ್ತದೆ

Tel. 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone 374

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು ಮಾಲಿಕ: ಕೆ ಕೆ ಆರ್.ಶೇಟ್

ನೀವು ಸರಿಯಾಗಿ ಉಸಿರಾಡುತ್ತೀರಾ?

(೩ನೇ ಪುಟದಿಂದ)

ರ್ಯಾಪ್ತವಾಯುವು ಮರಳಿ ಒಳ ಹೋಗಲು ಅವಕಾಶಲಭಿಸುವುದು. ಉಸಿರಾಟದ ಕಾರ್ಯವು ತೀವ್ರವಾಗಿ ಇಲ್ಲವೇ ನಿಧಾನವಾಗಿ ನಡೆಯಬಾರದು. ಶ್ವಾಸಕ್ರಮವು ಲಯ ಬದ್ಧವಾಗಿ ಸುಂದರವಾಗಿರಬೇಕು. ಹೀಗೆ ಅಭ್ಯಾಸವನ್ನು ಮಾಡುತ್ತ ಹೋದಂತೆ ಅದು ನಿಮ್ಮ ಸ್ವಭಾವದ ಒಂದಂಗವಾಗಿ ನಿಂತು ಬಿಡುವುದು; ಆ ಮೇಲೆ ಉಸಿರಾಟದ ಕೃತಕ ಪ್ರಯತ್ನವನ್ನು ನಿಲ್ಲಿಸಿ ಬಿಡಬೇಕು ಅತ್ಯಂತ ಸ್ವಾಭಾವಿಕವಾಗಿ ಆಗ ಉಸಿರಾಡುವುದು ಸಾಧ್ಯ. ರಕ್ತ ಪ್ರವಾಹವು ಸರಿಯಾಗುವುದು. ಶರೀರದಲ್ಲಿ ಹಾನಿಕರವೆನಿಸಿದ ಕಾರ್ಬನ್ ದಯೋಕ್ಸೈಡ್ ಲೇಶ ಮಾತ್ರವೂ ಉಳಿಯಲಾರದು; ಶರೀರದೊಳಗೆ ಸ್ವಾಭಾವಿಕತೆಯುಳಿಯುವುದು; ಉತ್ಸಾಹ ಮೂಡುವುದು. ಆಯಾಸದ ಅನುಭವವಾಗುವುದಿಲ್ಲ; ಆಮ್ಲಜನಕವು ಪರ್ಯಾಪ್ತ ಪ್ರಮಾಣದಲ್ಲಿ ದೊರೆಯುವುದು ಮತ್ತು ರೋಗಗಳು ದೂರವೋಡವುವು.

ಉಚಿತ ರೀತಿಯಲ್ಲಿ ಉಸಿರಾಡುವುದರಿಂದ ಅತ್ಯಂತ ಕಠಿಣವಾದ ಕಾರ್ಯಗಳೂ ಸರಳವಾಗುವುವು. ಸ್ವಿಜರ್ಲೆಂಡಿನ ಉನ್ನತ ಪರ್ವತ ಶಿಖರವನ್ನು ಏರಲು ಹೊರಟ ಪರ್ವತಾರೋಹಿಯೊಬ್ಬನಿಗೆ ಈ ಅನುಭವವುಂಟಾಯಿತು. ಇವನ ದಳದ ನಾಯಕನು ಆರೋಹಣದ ವೇಳೆ ಆಲ್ಲಲ್ಲಿ ಸದಸ್ಯರನ್ನು ನಿಲ್ಲಿಸಿ, ಸರಿಯಾಗಿ ಉಸಿರನ್ನು ತೆಗೆದುಕೊಳ್ಳುವಂತೆ ಹೇಳುತಿದ್ದನು. ಪ್ರತಿಯೊಬ್ಬನೂ ಹತ್ತು ಹತ್ತು ಬಾರಿ ಉಸಿರಾಡಿದ ನಂತರ ಮರಳಿ ಮುಂದುವರಿಯುತಿದ್ದರು ಹೊಸ ಸದಸ್ಯನಿಗೆ ಇದೊಂದು ವಿಚಿತ್ರವೆನಿಸಿತಾದರೂ ಹೀಗೆ ಮಾಡಿದ ನಂತರ ಅವನಿಗೆ ತನ್ನ ಕಾರ್ಯದಲ್ಲಿನ ಕಠಿನತೆಯ ಅಂಶ ಕಡಿಮೆಯಾಗುತಿದ್ದುದು ಅನುಭವಕ್ಕೆ ಬಂತು. ಉಪ್ಪರಿಗೆಯ ಮೆಟ್ಟಲೇರುವಾಗ, ಗುಡ್ಡದ ದಾರಿಯನ್ನು ತುಳಿಯುವಾಗ, ನೀವೂ ಹೀಗೆಯೇ ಮಾಡಿದಿರೆಂದರೆ, ಆಯಾಸವು ಎಳ್ಳಷ್ಟೂ ಆಗಲಾರದು.

ಭಾವೋದ್ರೇಕಪೂರ್ಣ ಪರಿಸ್ಥಿತಿ ಮತ್ತು ಉಸಿರಾಟಗಳ ನಡುವೆ ಬಲವಾದ ಸಂಬಂಧವಿದೆ ಪ್ಲೇಟ್‌ಫಾರ್ಮಿನ ಮೇಲೆ ಮಾತಾಡಲು ನಿಂತಾಗ, ನೌಕರಿಯ ಪೂರ್ವಸಂದರ್ಶನಕ್ಕೆ ಹೋದಾಗ, ಯುವತಿ ಅಥವಾ ಯುವಕನೊಡನೆ ಪ್ರಣಯ ಪ್ರಸ್ತಾಪ ಮಾಡುವಾಗ,ಕಾಲುಗಳಲ್ಲಿ ಬಲಕಡಿಮೆಯಾದಂತಾಗುವುದು; ಎದೆ ಜೋರಾಗಿ ಬಡೆಯುವುದು,ಉಸಿರು ತೀವ್ರವಾಗುವುದು.ಇಸಾಧಾರಣಮಾನಸಿಕ ಸ್ಥಿತಿಯ ಕಾರಣದಿಂದ ಶರೀರದ ಮೇಲೆ ಪ್ರತಿಕ್ರಿಯೆಯಾಗುವುದು; ಮತ್ತಿದರಿಂದ ಉಸಿರಾಟದ ಕಾರ್ಯವು ಕಠಿನವಾಗುವುದು ಇಂತಹ ಸಂದರ್ಭಗಳಲ್ಲಿ ಮೊದಲು, ಕೆಲವು ಬಾರಿ ಸರಿಯಾಗಿ ಉಸಿರಾಡುವುದರಿಂದ ಇಂತಹ ಪರಿಸ್ಥಿತಿಯು ದೂರವಾಗುವುದು.

ಸಂಗದಂವಾಗಿ ಉಸಿರಾಡುವುದಕ್ಕೆ ಡಾಕ್ಟರರು ಹೊಸ ವಿಧಾನಗಳನ್ನು ಹೇಳುತ್ತಾರೆ. ಇವುಗಳಲ್ಲಿ ಹೆಚ್ಚಿನವು ಅಸಾಧ್ಯವೆಂದು ನಾವು ಸ್ವೀಕರಿಸಲು ಹಿಂದೆ ಮುಂದೆ ನೋಡುತ್ತೇವೆ. ಆದರೆ, ಸಾಧಾರಣ ಪ್ರಯೋಗಕ್ಕಾಗಿ, ಸರಳ ವಿಧಿಯನ್ನು ಅಮೆರಿಕೆಯ ಡಾ| ಬೆರೀಕರು ಹೇಳಿದ್ದಾರೆ. ಇದರಂತೆ ೧೫–೨೦ ಡಿಗ್ರಿಗಳನ್ನು ಹಿಂದೆ ಬೆನ್ನು ಬಗ್ಗಿಸಿದರೆ, ಡ್ಯಾಫ್ರಮ್‌ನ ಮೇಲೆ ದೇಹದ ಮೇಲ್ಭಾಗದ ಭಾರವು ಬೀಳುವುದು; ಅದರಿಂದ, ಶ್ವಾಸಕೋಶವು ಸರಿಯಾಗಿ ಕಾರ್ಯಮಗ್ನವಾಗುವುದು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ.

ವಿಜ್ಞಾನ ಸಂಶೋಧನೆ

ವಾತಸಂಬಂಧದ ರೋಗಗಳಿಗೆ ಮೂಲವೇನು?

ನಾವು ಸೇವಿಸುವ ಆಹಾರವೆಲ್ಲವೂ ಜೀರ್ಣವಾಗುವುದಿಲ್ಲ. ಸತ್ವಯುತ ಭಾಗವು ರಕ್ತದಲ್ಲಿ ಕಲೆತು ನಿಸ್ಸಾರ ಭಾಗವು ಮಲಮೂತ್ರ ರೂಪದಲ್ಲಿ ಹೊರಕ್ಕೆ ನೆಯಲ್ಪಡುವುದು. ಸತ್ವಯುತ ಭಾಗದಲ್ಲಿಯೂ ಕೆಲವೊಂದು ಅಂಶವು ಜೀರ್ಣ ಹೊಂದದೆ ಕರುಳಿಗೆ ಪ್ರವೇಶಿಸಿ, ಅನಾವಶ್ಯಕ ಪದಾರ್ಥಗಳೊಂದಿಗೆ ಹೊರ ಹಾಕಲ್ಪಡುತ್ತದೆ, ಎಂಬ ವಿಷಯವನ್ನು ಪಶ್ಚಿಮ ಜರ್ಮನಿಯ ಪ್ರಸಿದ್ಧ ವೈದ್ಯರಾದ ಡಾ. ವಾಲ್‌ಕೀಮರ್ ಎಂಬವರು ಕಂಡುಹಿಡಿದಿದ್ದಾರೆ. ವಾತ ರೋಗಗಳು ಉಂಟಾಗಲು ಇದೇ ಮುಖ್ಯಕಾರಣವಾಗಿರಬಹುದೋ ಏನೋ ಎಂದು ಹೇಳಲಾಗುತ್ತದೆ.

ಶರೀರ ಶಾಸ್ತ್ರಕ್ಕೆ ಸಂಬಂಧಿಸಿದ ಈಗ ನಡೆಯುತ್ತಿರುವ ಸಂಶೋಧನೆಗಳಿಂದ ಹೊರಬಿದ್ದಿರುವ ಕೆಲವಾರು ಹೊಸ ವಿಷಯಗಳಿಂದ ವೈದ್ಯಕೀಯ ಜಗತ್ತಿನಲ್ಲಿ ಹಲವು ಹೊಸ ಮಾರ್ಪಾಟುಗಳು ಏರ್ಪಡುವ ಸಾಧ್ಯತೆಯಿದೆ. ಮಾನವ ಹಾಗೂ ಪ್ರಾಣಿವರ್ಗದ ಕರುಳಿನ ಚರ್ಮಗಳ ಮೂಲಕ ಜೀರ್ಣಕೋಶದ ಕ್ರಿಯೆಗೊಳಪಡದ ಆಹಾರ ಪದಾರ್ಥಗಳೂ ಕರುಳಿನೊಳ ನುಗ್ಗುವುವು ಎಂಬ ಹೊಸ ವಿಷಯವನ್ನು ಪಶ್ಚಿಮ ಜರ್ಮನಿಯ ಪ್ರಖ್ಯಾತ ವೈದ್ಯರಾದ ಡಾಕ್ಟರ್ ವಲ್‌ಕೀಮರ್ ತಮ್ಮ ದೀರ್ಘ ಸಂಶೋಧನೆಗಳ ನಂತರ ಹೊರಗೆಡಹಿದ್ದಾರೆ.

ನಾವು ಸೇವಿಸುವ ಆಹಾರವು ಜೀರ್ಣಕೋಶದ ಬೇರೆ ಬೇರೆ ಅವಯವಗಳ ಹಲವಾರು ಕ್ರಿಯೆಗಳಿಗೊಳಗಾಗಿ, ಅವುಗಳ ರಸಗಳೊಂದಿಗೆ ಮಿಶ್ರಿತವಾದ ನಂತರ ಜೀರ್ಣವಾದ ಆಹಾರದ ಸತ್ವಯುತ ಭಾಗವು ರಕ್ತದೊಂದಿಗೆ ಮಿಳಿತವಾಗುವುದು. ಹಾಗೆ ರಕ್ತದೊಂದಿಗೆ ಸೇರದ ಅನಾವಶ್ಯಕ ಪದಾರ್ಥಗಳು ಸಣ್ಣ ಕರುಳಿನ ಮೂಲಕ ಹೊರಗೆ ತಳ್ಳಲ್ಪಡುವುವು ಎಂಬುದು ಇದುವರೆಗೆ ಎಲ್ಲರಿಗೂ ತಿಳಿದ ವಿಷಯ. ಜೀರ್ಣವಾಗದ ಆಹಾರದಲ್ಲಿನ ಸೂಕ್ಷ್ಮ ಪದಾರ್ಥಗಳು ಕರುಳಿನೊಳಗೆ ಪ್ರವೇಶಿಸಬಹುದೆಂಬುವ ವಿಷಯವನ್ನು ಇದುವರೆಗೂ ಯಾರೂ ಚಿಂತಿಸಿರಲಿಲ್ಲ

ವಾಲ್‌ಕೀಮರ್ ಆರಂಭದಲ್ಲಿ ಹಂದಿ, ಆಡು, ನಾಯಿ ಮುಂತಾದ ಪ್ರಾಣಿಗಳ ಮೇಲೆ ತಮ್ಮ ಪ್ರಯೋಗವನ್ನು ನಡೆಸಿದರು. ಆ ಸಂಶೋಧನೆಗಳಲ್ಲಿ ಅವರು ಗಳಿಸಿದ ಯಶಸ್ಸನ್ನು ಕಂಡು ಕೆಲಮಂದಿ ತಮ್ಮ ದೇಹಗಳ ಮೇಲೆ ಪ್ರಯೋಗ ನಡೆಸುವಂತೆ ತಾವಾಗಿಯೇ ಮುಂದೆ ಬಂದರು. ವಾಲ್‌ಕೀಮರ್ ಅವರ ಶರೀರದ ಮೇಲೆ ತಮ್ಮ ಪ್ರಯೋಗಗಳನ್ನು ತೊಡಗಿಸಿದರು. ಆಲೂಗಡ್ಡೆ, ಜೋಳ ಮುಂತಾದುವುಗಳಲ್ಲಿನ 'ಸ್ಟಾರ್ಚ್'ನ್ನೂ ರೊಟ್ಟಿಯನ್ನು ತಯಾರಿಸಲು ಉಪಯೋಗಿಸುವ 'ಈಸ್ಟ್' ಎಂಬ ಪದಾರ್ಥವನ್ನೂ ಹಾಲಿನಲ್ಲಿ ಕದಡಿ ಅವರಿಗೆ ಕುಡಿಯಲು ಕೊಡಲಾಯಿತ್ತು ಈ ಪ್ರಯೋಗದಿಂದ ಅವರು ಕಂಡುಹಿಡಿದ ಕೆಲವು ಅಂಶಗಳು ಬೆರಗುಗೊಳಿಸುವಂತಹವುಗಳಾಗಿವೆ. ಧಾನ್ಯಗಳನ್ನು ಲೆಕ್ಕ ಮಾಡಿ ಸೇವಿಸಿದೆವೆಂದರೆ, ಸುಮಾರು ಒಂದು ಕೋಟಿ ಕಾಳುಗಳಿಗೆ ಒಂದು ಅಥವಾ ಎರಡು ಧಾನ್ಯಗಳು ಪಚನಕ್ರಿಯೆಗೆ ಒಳಪಡದೆಯೇ ಕರುಳಿನೊಳಗೆ ನುಗ್ಗಿಬಿಡುವುದೆಂಬುದೇ ಇವರು ಕಂಡು ಹಿಡಿದ ಹೊಸ ವಿಷಯ ಈ ಧಾನ್ಯಗಳು ಕರುಳಿನಲ್ಲಿಗಲೀ ರಕ್ತದೊಂದಿಗೆ ಬೆರೆತಾಗಲಿ ಗಲೀ, ಯಾವುದೇ ವಿಧವಾದ ಮಾರ್ಪಾಟನ್ನೂ ಹೊಂದುವುದಿಲ್ಲ ಕೊನೆಗೆ ಇದು ಕೆಮ್ಮುವಾಗ ಹೊರಬರುವ ಶ್ಲೇಷ್ಮದೊಂದಿಗೂ ಅಥವಾ ಮೂತ್ರದೊಂದಿಗೋ ಹೊರಬೀಳುವುದು.

ಡಾ ವಾಲ್‌ಕೀಮರರ ಈ ಸಂಶೋಧನೆಗೆ ಜರ್ಮನಿಯ ಪತ್ರಿಕೆಗಳು ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟು ವಿವರವಾಗಿ ವಿಮರ್ಶಿಸಿವೆ. ಈ ಹೆಜ್ಜೆಯಲ್ಲಿ ಸಂಶೋಧನೆಗಳನ್ನು ನಡೆಸಲು ಮೊದಲು ಬೆಳಕು ತೋರಿದವರೇ ವಾಲ್‌ಕೀಮರ್ ಎಂದು ಆ ಪತ್ರಿಕೆಗಳು ಪ್ರಶಂಸಿಸಿವೆ.

ಬರ್ಲಿನ್ನಿನ ವಿಖ್ಯಾತ ವೈದ್ಯರೂ ವೈದ್ಯಕೀಯ ಮಾಸಪತ್ರಿಕೆಯೊಂದರ ಸಂಪಾದಕರೂ ಆದ ಡಾ ಕುನ್ಹೋ ಎಂಬವರು ಈ ಸಂಶೋಧನೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಚೆನ್ನಾಗಿ ಕೆಲಸಮಾಡುತ್ತಿರುವ ಒಂದು ಯಂತ್ರದೊಳಗೆ ಮರಳು ಸೇರಿಕೊಂಡಲ್ಲಿ ಆ ಯಂತ್ರವು ಹೇಗೆ ಕೆಟ್ಟುಹೋಗುವುದೋ, ಹಾಗೆಯೇ ಪಚನವಾಗದ ಆಹಾರ ಪದಾರ್ಥಗಳು ಮನುಷ್ಯನ ರಕ್ತದೊಂದಿಗೆ ಸೇರಿಕೊಂಡರೆ ಶರೀರಕ್ರಿಯೆಯು ಹಾಳಾಗಿ ಹೋಗುವುದೆಂದು ತಿಳಿಸಿದ್ದಾರೆ ಇಂತಹ ಒಂದು ಆಕಸ್ಮಿಕದಿಂದಲೇ ಅಜೀರ್ಣಸಂಬಂಧದ ಸಕಲ ವ್ಯಾಧಿಗಳೂ ಬರಬಹುದೆಂದೂ ವಾತ ಸಂಬಂಧವಾದ ರೋಗಗಳಿಗೂ ಇದೇ ಕಾರಣವಾಗಿರಬಹುದೆಂದೂ ಡಾ ಕುನ್ಹೋ ಅಭಿಪ್ರಾಯ ಪಡುತ್ತಾರೆ ಸಾಕಷ್ಟು ಆಹಾರ ದೊರಕದ ಕಡಿಮೆ ಆಹಾರ ಸೇವಿಸುವವರ ವಿಷಯವಾಗಿ ಹೇಳುವುದಾದರೆ, ಇಂತಹವರಲ್ಲಿ ಹೊಟ್ಟೆ ತುಂಬ ಊಟ ಮಾಡುವವರಿಗಿಂತ ಹೆಚ್ಚಾಗಿ ಪಚನವಾಗದ ಪದಾರ್ಥಗಳು ರಕ್ತದೊಂದಿಗೆ ಸೇರಲು ಅವಕಾಶವಿದೆಯೆಂದು ಡಾ ವಾಲ್‌ಕೀಮರ್ ಕಂಡುಹಿಡಿದಿದ್ದಾರೆ.

ಸಿಕ್ಕಿದ್ದನ್ನು ತಿನ್ನುವುದು, ಸರಿಯಾದ ಪ್ರಮಾಣದಲ್ಲಿ ತಿನ್ನದಿರುವುದು, ಆಹಾರದಲ್ಲಿ ಇರಬೇಕಾದ ಮುಖ್ಯಾಂಶಗಳು ಇಲ್ಲದಿರುವುದು ಇವೆಲ್ಲಾ ಹಲವಾರು ರೋಗರುಜಿನಗಳಿಗೆ ಹಾದಿಯನ್ನು ತೆರವು ಮಾಡಿಕೊಡಬಹುದೆಂದು ತಿಳಿಸಲಾಗಿದೆ. ಮಾನವ ಕುಲದ ಹಿತದೃಷ್ಟಿಯಿಂದ ವಾಲ್‌ಕೀಮರ್ ಹಾಗೂ ಅವರ ಸಹೋದ್ಯೋಗಿಗಳೂ ಈ ವಿಷಯದಲ್ಲಿ ಹೆಚ್ಚಿನ ಸಂಶೋಧನೆಗಳಲ್ಲಿ ತೊಡಗಿದ್ದಾರೆ.



ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಅದನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಅಪೇಕ್ಷಿಸುತ್ತೇವೆ

—ಮೆನೇಜರ್ ನವಯುಗ

ಧೂಳು ಮುಸುಕಿದ ಭಾವಚಿತ್ರ

(೨ನೇ ಪುಟದಿಂದ)

'ಮಾಧುರಿಯ ಮೇಲಿನ ಪ್ರೇಮದಿಂದ.'

''ನೀವು ನನ್ನನ್ನು ಈಗಾಗಲೇ ವಿವಾಹವಾಗಿಲ್ಲವೇ'?

''ವಿಚ್ಛೇಧನವನ್ನು ಮಾಡಿದ್ದೇನೆ.'

'ದಂಪತಿಗಳ ಈ ಋಣವನ್ನು ಈ ರೀತಿಯಿಂದ ತುಂಡರಿಸಲಾರದು!'

'ಅದನ್ನಂದೇ ಮಾಡಿ ಮುಗಿಸಿದ್ದೇನೆ'.

'ಅದು ಅಷ್ಟು ಸುಲಭವಾಗಿ ತ್ಯಜಿಸುವ ಸಂಬಂಧವಲ್ಲ.'

'ಒತ್ತಾಯಕ್ಕೆ ಒಳಗಾಗುವ ಬಂಧವೂ, ಅಲ್ಲ'!

'ನಿಜವಾಗಿಯೂ, ನನ್ನನ್ನು ಒಪ್ಪಿರಲಿಲ್ಲವೆ?'

''ಇಲ್ಲ, ನನ್ನ ತಾಯಿಯ ಆಗ್ರಹಕ್ಕೊಳಗಾಗಿ"
ನನ್ನೊಂದಿಬಾಳ್ವೆಮಾಡುವವರುನೀವಲ್ಲವೇ

'ಅದರೇನಾಯಿತು?'

' ನನಗೆ ನೀವು ಅನ್ಯಾಯವೆಸಗಿದ್ದೀರಿ. ಇದು ನಿಮ್ಮ ಅಕ್ಷಮ್ಯ ಅಪರಾಧ":

' ಅವಿವೇಕವೆಲ್ಲ ನೀನು ನನಗೆ ಕಲಿಸಬೇಕಾಗಿಲ್ಲ!"

"ಇದು ವಿವೇಕ ಅವಿವೇಕದ ಪ್ರಶ್ನೆಯಲ್ಲ. ಹಿಂದೂ ಸಂಪ್ರದಾಯದ ಸದಾಚಾರ."

''ನೀನು ನನ್ನನ್ನು ಬಲಾತ್ಕರಿಸುತ್ತಿದ್ದೀಯೇ? ಇದರಿಂದ ಪ್ರಯೋಜನವಿಲ್ಲ. ನಾನು ಹೃತ್ಪೂರ್ವಕವಾಗಿ ಮಾಧುರಿಯನ್ನು ಪ್ರೇಮಿಸುತ್ತಿದ್ದೇನೆ.ಅವಳನ್ನೆ ವಿವಾಹವಾಗುತ್ತೇನೆ. ಹೋಗು...ಹೋಗು......ನಿನ್ನ ನನ್ನ ಸಂಬಂಧ ಎಂದೋ ಕಡಿದು ಹೋಗಿದೆ."

ಟ್ರಿಣ್......ಟ್ರಿಣ್‌ಣ್......!

ಅನಿರೀಕ್ಷಿತವಾಗಿ ಬಂದ ಸೈಕಲೊಂದು ಇನ್ನೇನು ವಿಜಯನ ಮೇಲೆ ಹರಿಯಬೇಕು, ಅಷ್ಟರಲ್ಲಿ ಆತ ತನ್ನ ಯೋಗಸಮಾಧಿಯಿಂದ ಹೊರಬಂದ.

''ರಸ್ತೆಯಲ್ಲಿ ಹೋಗುವಾಗ ಮೈಮೇಲೆ ಪ್ರಜ್ಞೆ ಇರಬೇಕು" ಎಂದು ಆ ಸೈಕಲ್ ಸವಾರ ಕಟುವಾಗಿ ವಿಜಯನನ್ನು ನಿಂದಿಸಿ ತನ್ನ ಇಳಿಮುಖವಾದ ವಾಹನವನ್ನು ಸರಿಪಡಿಸಿಕೊಳ್ಳುತ್ತಾ ಹೇಳಿದ.

ತಪಿತಸ್ತನಾದ ವಿಜಯನಿಗೆ ಪ್ರತಿ ಮಾತನಾಡಲು ಸಂದರ್ಭವಿಲ್ಲದುದರಿಂದ ಅವನನ್ನು ಕೆಂಗಣ್ಣುಗಳಿಂದಷ್ಟೇ ನೋಡಿ ಸುಮ್ಮಗಾದ.

ವಿಜಯನ ಮನೆ ಸಮೀಪಿಸುತ್ತಿತ್ತು.

ಪುನಃ ವಿಜಯ ಅದೇ ತನ್ನ ಪೂರ್ವಾವಸ್ಥೆಯಲ್ಲಿಯೇ ನಿಧಾನವಾಗಿ ನಡೆದಿದ್ದ.

ಈಗವನ ಬಗೆಗಣ್ಣಿನೆದುರು ಮಾಧುರಿಯ ಪ್ರತಿಬಿಂಬ ಕಾಣುತ್ತಿತ್ತು.

ವಿಜಯ ಆ ಪ್ರತಿಬಿಂಬವನ್ನೇ ದೃಷ್ಟಿಸುತ್ತಿದ್ದ.

"ಅಹ್ಹಹ್ಹಾ....!"

ಮಾಧುರಿಯ ಆ ವ್ಯಂಗ್ಯ ನಗೆಯ ಕೋಲಾಹಲದಿಂದ ವಿಜಯನಿಗೆ ಸಿಟ್ಟು ಬರುವಂತಾಯ್ತು.

'ಮಾಧುರಿ, ಏಕೆ ಹಾಗೆ ಹುಚ್ಚಳಾಗಿ ನಗಾಡುತ್ತಿ?'

'ನಿಮ್ಮ ವರ್ತನೆಯೆ ನನ್ನ ಈ ನಗೆಗೆ ಕಾರಣ'

"ನನ್ನ ವರ್ತನೆ!"

'ಹೌದು '

'ಏನಾಯಿತು?'

'ನೀವು ದಾರಿಯಲ್ಲಿ ನಡೆಯುವಾಗ ಮೈಮೇಲೆ ಪ್ರಜ್ಞೆ ಇಲ್ಲದೇ ನಡೆವಿರಿ."

'ಹಹ್ಹ......ಹಹ್ಹ ಹ್ಹಾಹ್ಹಾ....!' ಮೊದಲಿನಂತೆಯೇ ಹುಚ್ಚಳಾಗಿ ನಗುತ್ತಾ, ಉತ್ತರಿಸದೇ ಮಾಧುರಿಯ ಪ್ರತಿಬಿಂಬ ಅದೃಶ್ಯವಾಯಿತು. ವಿಜಯನಿಗೆ ಮಾಧುರಿಯ ಆ ನಗೆಯಿಂದ ಮರ್ಮಾಘಾತವಾದಂತಾಯಿತು.

ಮನೆ ಬಂದುದರಿಂದ ಅವನ ಆಂತರಿಕ ತುಮುಲವೂ ಕೊನೆಗೊಂಡಿತು. ಬಾಗಿಲಿಗೆ ಹಾಕಿದ್ದ ಬೀಗವನ್ನು ತೆರೆದು ಒಳನಡೆದ.

ಅಮೆರಿಕೆಯ ಬಾಹ್ಯಾಂತರಿಕ್ಷ ಸಂಚಾರಿ ಶ್ರೀ ಜೋನ್ ಗ್ಲೆನ್ ಅವರನ್ನು ಪತ್ನೀ ಪುತ್ರರೊಂದಿಗೆ ಕಾಣಬಹುದು.

ಹೊಸ್ತಿಲು ದಾಟುವಾಗಲೇ ಅಲ್ಲಿ ಬಿದ್ದಿದ್ದ, ಯಾರದೋ ವಿವಾಹದ ಆಹ್ವಾನ ಪತ್ರಿಕೆ ಅವನ ಕಣ್ಣನ್ನು ಸೆಳೆಯಿತು. ಯಾರದೋ ಎಂದುಕೊಳ್ಳುತ್ತಾ ಕೆಳಗೆ ಬಿದ್ದಿದ್ದ ಆ ಪತ್ರಿಕೆಯನ್ನು ಬಾಗಿ ತೆಗೆದುಕೊಂಡು ಅದರ ಒಂದು ಭಾಗವನ್ನು ಹರಿದು ಓದ ತೊಡಗಿದ.

ಇನ್ನೂ ಮೇಲಿನ ಒಂದೆರಡು ಅಕ್ಷರಗಳನ್ನು ಓದಿದನೋ ಇಲ್ಲವೋ ಕೂಡಲೇ ಅವನ ಮನ ಅದನ್ನು ಮುಂದೆ ಓದಲು ಅನುಮತಿಯೀಯಲಿಲ್ಲ.

ವಿಜಯನಿಗೆ ಮಾಧುರಿ ರಜೆ ಹಾಕಿ ಹೋಗಿರುವ ಉದ್ದೇಶ ಅರ್ಥವಾಯಿತು.

ನಿಶ್ಚಿಂತ ಜೀವಿ

'ಬೆಡ್‌ಟೀ' ಬಂದಿತಲ
ಬೆಳಗಾಯಿತೆಂದೆ!
ಗಂಜಿತಾಟೊದರಿತಲ
ಹಸಿವಾಯಿತೆಂದೆ!
ಹೊತ್ತೆರಡುಮಾರೇರೆ,
'ಆಫೀಸಿ'ಗೆಂದೆ!
ಹತ್ತು ಘಂಟೆಗೆ
ತಿರುಗಿ 'ಕಾಫಿ'ಗೆಂದೆ!
ಬರೇ 'ಕಾಫಿ' ವ್ಯರ್ಥ
ಕಾಯ್ಕೊಂಡೆ ದರ್ಜೆ,
ಹಣವಿಲ್ಲದಿರೆ ಕೊಟ್ಟೆ
ಅಡ್ವಾನ್ಸಿ ಗರ್ಜೆ,
ಅಂತೂ ಕಾಫಿಯ ಪಾಠ
ನೀ ಬಿಡಲು ಬೇಡ
ಮೇಲೊಂದು ಸಿಗರೇಟು—
ಬೊಂಬಾಯಿಬೀಡ!
ಹನ್ನೆರಡು ಹೊಡೆದುದಲ
ಹೊರಡು ಮಜ್ಜನಕೆ—
ಊಟಗೈಯುವ ಸಮಯ
ಮನೆಯುಸ್ತ್ರಿ ಜನಕೆ.
ಕೈಬಾಯಿ ಕೆಲಸಕ್ಕೆ
ಹೊಟ್ಟೆಯನುಮತಿಬೇಕೆ?
ರುಚಿ-ರುಚಿಯ ವಿಷಯ
ನಾಲಗೆಯ ಬಯಕೆ.
ಹೊತ್ತು ತಿರುಗಿತೆ ಮತ್ತೆ—
ಎಂದಿನಂತೋಟ
ಗೆಳೆಯರೊಂದಿಗೆ ಹೋಟ್ಲೆ
''ಗ್ರೀನ್ ರೂಮ್" ಕೂಟ,
ಗಿಟ್ಟಿಸುತಲೆರಡೆಡು
ಬಗೆ 'ಸ್ವೀಟು' ಖಾರ—
ಮತ್ತೆ ಮೇಲ್ಮೂರು
ರಸಬಾಳೆ ವೀರ—
'ಬ್ಯಾರ್'ನಲಿ ಹಾಯುತ್ತ
ಅತ್ತಿತ್ತ ನೋಟ!
ಯಾನರಸುವೆ ಸುತ್ತಿ
ರಸ್ತೆಯ ಕೂಟ?
ರಾತ್ರಿ ಬಹುಹೊತ್ತಾಯ್ತು
ನೀ ಮನೆಯ ಸೇರು.
ರಾತ್ರಿ ಮಾಡಿಕೊ ಊಟ
ಬಿಸಿ ಅನ್ನಸಾರು.
ನೆನಸಿಡುತ ಮನದಲ್ಲಿ
ನಾಳೆಯ ರೀವಿ.
ಕಣ್ಮುಚ್ಚಿ ಮಲಗಿ ಬಿಡು
ನಿಶ್ಚಿಂತ ಜೀವಿ.

ಸಿರಿಪತಿ

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್‌ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ. 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA, UDIPI.
REGD. NO.BG. 176

5-4-1962

LICENSE NO. 31
Licensed to Post without Prepayment

ತೃತೀಯ ಯೋಜನೆಯಲ್ಲಿ

ಸಂತಾನ ನಿಯಂತ್ರಣಕ್ಕೆ ಪ್ರಯತ್ನ

ಭಾರತ ರಾಷ್ಟ್ರೀಯ ಕಾಂಗ್ರೆಸ್ ೧೯೩೮ರಲ್ಲಿ ಶ್ರೀ ಜವಾಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಯೋಜನಾ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿಯು ಕುಟುಂಬ ಯೋಜನೆಗೆ ಹೆಚ್ಚು ಬೆಂಬಲ ನೀಡಿತು. ೧೯೪೯ರಲ್ಲಿ ಮುಂಬೈಯಲ್ಲಿ, ಶ್ರೀಮತಿ ಧನವಂತಿ ರಾಮರಾವ್‌ರವರ ಅಧ್ಯಕ್ಷತೆಯಲ್ಲಿ ಭಾರತದ ಕುಟುಂಬ ಯೋಜನಾ ಸಂಘ ರಚನೆಗೊಂಡಿತು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ಜನತೆಯ ಜೀವನ ಮಟ್ಟವನ್ನು ಸುಧಾರಿಸಲು ಅನೇಕ ಮುಖ್ಯ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ರಾಷ್ಟ್ರದ ಸಾಧನ ಸಂಪತ್ತುಗಳಿಗೆ ಹೊಂದಿಕೊಳ್ಳುವಂತೆ ಜನಸಂಖ್ಯೆಯನ್ನು ಸ್ಥಿರಪಡಿಸುವ ನೀತಿಯು ಈ ಮುಖ್ಯವಾದ ನಿರ್ಧಾರಗಳಲ್ಲೊಂದಾಗಿದೆ.

ಯೋಜನಾ ಆಯೋಗದ ಶಿಫಾರಸುಗಳನ್ವಯ ಜನ ಸಂಖ್ಯಾ ನೀತಿ ಮತ್ತು ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಹಾಗೂ ಸಂಶೋಧನಾ ಸಮಿತಿಗಳನ್ನು ನೇಮಿಸಲಾಯಿತು ತತ್ಫಲವಾಗಿ ಭಾರತ ಸರಕಾರದವರು ಕುಟುಂಬ ಯೋಜನಾ ಕಾರ್ಯಕ್ರಮವನ್ನು ಕೈಗೊಂಡರು.

ಕೇಂದ್ರ ಕುಟುಂಬ ಯೋಜನಾ ಮಂಡಲಿಯು ೧೯೫೬ರ ಸಪ್ಟೆಂಬರದಲ್ಲಿ ಸ್ಥಾಪನೆಗೊಂಡಿತು. ಭಾರತ ಸರಕಾರದವರು ಕುಟುಂಬ ಯೋಜನಾ ಡೈರೆಕ್ಟರ ಎಂಬ ಅಧಿಕಾರಿಯೊಬ್ಬರನ್ನು ನೇಮಿಸಿದರು. ರಾಜ್ಯ ಮಟ್ಟದ ಕುಟುಂಬ ಯೋಜನಾ ಅಧಿಕಾರಿಗಳನ್ನು ನೇಮಿಸಲು ರಾಜ್ಯ ಸರಕಾರಗಳಿಗೆ ಕೇಂದ್ರದ ನೆರವೀಯಲಾಯಿತು. ಇದರಿಂದ ರಾಜ್ಯಗಳಲ್ಲಿ ಕುಟುಂಬ ಯೋಜನಾ ಮಂಡಲಿಗಳು ರೂಪುಗೊಂಡು, ಕುಟುಂಬ ಯೋಜನಾ ಅಧಿಕಾರಿಗಳ ನೇಮಕವಾಯಿತು.

ಕಳೆದ ಒಂದು ದಶಕದಲ್ಲಿ ಕುಟುಂಬದ ಸದಸ್ಯರ ಸಂಖ್ಯೆಯ ಮಿತಿಯನ್ನು ಸಾಧಿಸಲು, ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. ಕುಟುಂಬ ಯೋಜನೆಯ ಬಗ್ಗೆ ಶಿಕ್ಷಣ, ಸಂತಾನಶಕ್ತಿ ಹರಣ ಸೌಲಭ್ಯಗಳು, ತರಬೇತಿ ಮತ್ತು ಸಂಶೋಧನೆಗಳನ್ನೊಳಗೊಂಡ ನಾಲ್ಕು ಅಂಶಗಳ ಕುಟುಂಬಯೋಜನಾ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು.

೧೯೬೦ರ ಅಕ್ಟೋಬರ್ ವೇಳೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ೩,೧೫೫ ಕುಟುಂಬ ಯೋಜನಾ ಕೇಂದ್ರಗಳೂ ನಗರ ಪ್ರದೇಶಗಳಲ್ಲಿ ೧೦೨೮ ಕೇಂದ್ರಗಳೂ ಇದ್ದವು. ಈ ಕೇಂದ್ರಗಳಲ್ಲಿ ಗರ್ಭನಿರೋಧಕಗಳು ದೊರೆಯುತ್ತಿದ್ದವು. ಈ ಕೇಂದ್ರಗಳ ಸಂಖ್ಯೆ ಪ್ರಥಮ ಯೋಜನೆಯ ಕೊನೆಯಲ್ಲಿ ಕ್ರಮವಾಗಿ ೩೦ ಮತ್ತು ೧೨೫ ಇತ್ತು. ಈ ಚಿಕಿತ್ಸಾಲಯಗಳ ಜೊತೆಗೆ ದ್ವಿತೀಯ ಯೋಜನೆಯ ಕೊನೆಯ ವೇಳೆಗೆ ೧೮೬೪ ಗ್ರಾಮಾಂತರ ಹಾಗೂ ೩೩೦ ನಗರ ಪ್ರದೇಶದ ವೈದ್ಯಕೀಯ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಕುಟುಂಬ ಯೋಜನಾ ಸೌಲಭ್ಯಗಳನ್ನು ಒದಗಿಸಲಾಗಿತ್ತು.

ದ್ವಿತೀಯ ಯೋಜನಾವಧಿಯಲ್ಲಿ ಸಂತಾನ ಶಕ್ತಿಹರಣ ಕೇಂದ್ರಗಳ ಸಂಖ್ಯೆಯನ್ನೂ ಹೆಚ್ಚಿಸಲಾಯಿತು ಈ ಕೇಂದ್ರಗಳ ಸಂಖ್ಯೆ ೧೯೫೬ರಲ್ಲಿ ೭,೮೫೫ ಇದ್ದದು ೧೯೬೦ರಲ್ಲಿ ೪೬,೫೬೫ಕ್ಕೆ ಏರಿತು.

ಮುಂಬೈನಲ್ಲಿರುವ ಸಂತಾನ ವಿರೋಧಕಗಳ ಪರಿಶೀಲನಾ ವಿಭಾಗದಲ್ಲಿ ಕ್ರಮಬದ್ಧ ಶೋಧನೆ ನಡೆಸಲಾಯಿತು. ಇತರ ಸಂಸ್ಥೆಗಳಲ್ಲಿ ಜನಾಂಗ ಸ್ಥಿತಿ ವಿವರಣೆ, ವೈದ್ಯಕೀಯ ಜೀವ ವಿಜ್ಞಾನ ಮತ್ತು ಸಂಸರ್ಗ ಇತ್ಯಾದಿಗಳ ಬಗೆಗೆ ಸಂಶೋಧನೆ ನಡೆಯಿತು. ಈ ಬಗ್ಗೆ ಸವಿಸ್ತಾರವಾದ ತರಬೇತಿ ಕಾರ್ಯಕ್ರಮವೊಂದು ರೂಪುಗೊಂಡಿತು. ಇದರಲ್ಲಿ ಶಿಕ್ಷಕರ ತರಬೇತಿಗಾಗಿ ಕೇಂದ್ರಗಳು, ಗ್ರಾಮಾಂತರ ಪ್ರದೇಶದಲ್ಲಿ ಪ್ರತ್ಯಕ್ಷ ಪ್ರದರ್ಶನ ಹಾಗೂ ಪ್ರಾಯೋಗಿಕ ತರಬೇತಿ ಕೇಂದ್ರ ಪ್ರಾದೇಶಿಕ ತರಬೇತಿ ಕೇಂದ್ರಗಳಾಗಿ ತರಬೇತಿ ಚಿಕಿತ್ಸಾಲಯಗಳ ಅಭಿವೃದ್ಧಿ, ತರಬೇತಿ ತಂಡಗಳ ಪ್ರವಾಸ ಮತ್ತು ತಾತ್ಕಾಲಿಕ ತರಬೇತಿ ವರ್ಗಗಳು ಇತ್ಯಾದಿ ಸೇರಿವೆ.

ಪ್ರಥಮ ಯೋಜನಾವಧಿಯಲ್ಲಿ ಕುಟುಂಬ ಯೋಜನೆ ಬಗ್ಗೆ ತಾತ್ಕಾಲಿಕ ತರಗತಿಗಳ ಮೂಲಕ ೬೭ ಮಂದಿಗೆ ಶಿಕ್ಷಣ ನೀಡಲಾಯಿತು. ಈಗ ತರಬೇತಿ ಪಡೆದವರ ಸಂಖ್ಯೆ ೪,೧೦೩.

ಸರಕಾರದವರು ೪೫೧ ಕುಟುಂಬ ಯೋಜನೆ ನಿರ್ದೇಶನಾ ಶಿಬಿರಗಳಿಗೆ ಮಂಜೂರಾತಿ ನೀಡಿರುವರು. ಇದುವರೆಗೆ ನಡೆದ ಶಿಬಿರಗಳಲ್ಲಿ ೯೨೭ ಮಂದಿ ಭಾಗವಹಿಸಿರುವರು. ಗ್ರಾಮಾಂತರ ಪ್ರದೇಶಗಳಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಪ್ರಚಾರ ಮಾಡಲು ಈ ಶಿಬಿರಗಳು ಪರಿಣಾಮಕಾರಿಯಾಗಿರುವುದು ವ್ಯಕ್ತಪಟ್ಟಿದೆ.

ದ್ವಿತೀಯ ಯೋಜನೆಯಲ್ಲಿ ಕುಟುಂಬ ಯೋಜನೆಯಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ೫ ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ಪ್ರಥಮ ಯೋಜನೆಯಲ್ಲಿ ಒದಗಿಸಲಾಗಿದ್ದ ಹಣ ೬೫ ಲಕ್ಷ ರೂ.ಗಳು. ತೃತೀಯ ಯೋಜನೆಯಲ್ಲಿ ಸುಮಾರು ೨೫ ಕೋಟಿ ರೂ.ಗಳನ್ನು ಒದಗಿಸಲಾಗುವುದು

ತೃತೀಯ ಯೋಜನೆಯಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮವು ಕುಟುಂಬ ಯೋಜನೆ ಬಗ್ಗೆ ಶಿಕ್ಷಣ ಮತ್ತು ಅದರ ಉದ್ದೇಶ. ಕುಟುಂಬ ಯೋಜನಾ ಸೇವೆಗಳ ಅವಕಾಶ, ತರಬೇತಿ, ಪೂರೈಕೆ, ಸಂಸರ್ಗ ಮತ್ತು ಉದ್ದೇಶ ಸಂಬಂಧ ಸಂಶೋಧನೆ ಜನಾಂಗ ಸ್ಥಿತಿ ವಿವರಣೆ ಸಂಶೋಧನೆ, ವೈದ್ಯಕೀಯ ಮತ್ತು ಜೀವ ವಿಜ್ಞಾನ ಸಂಶೋಧನೆಗೆ ಅವಕಾಶ ನೀಡುವುದು.

ತೃತೀಯ ಯೋಜನಾವಧಿಯಲ್ಲಿ ಸಂತಾನಶಕ್ತಿ ಹರಣಕ್ಕಾಗಿ ಸೌಲಭ್ಯಗಳನ್ನು ಜಿಲ್ಲಾ ಆಸ್ಪತ್ರೆಗಳು ಸಬ್ ಡಿವಿಜನಲ್ ಆಸ್ಪತ್ರೆಗಳು ಶಸ್ತ್ರಚಿಕಿತ್ಸೆಗೆ ಸೌಲಭ್ಯಗಳಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿಸ್ತರಿಸಲಾಗುವುದು. ಹೆಚ್ಚು ವ್ಯಾಪಕವುಳ್ಳ ತರಬೇತಿ ಮತ್ತು ಸಂಶೋಧನೆ ಹಾಗೂ ಗರ್ಭನಿರೋಧಕಗಳ ತಯಾರಿಕೆ ಸಂಬಂಧ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.

ಅಮೆರಿಕೆಯ ದ್ವಿತೀಯ ಗಗನಯಾತ್ರಿ ಗ್ರಿಸಂರವರು ಆಕಾಶಬಾಣಾರೋಹಣವನ್ನು ಮಾಡುತ್ತಿರುವ ದೃಶ್ಯ.

ಎರಡು ಹೆಚ್ಚಿನ ವಿಶ್ವವಿದ್ಯಾಲಯಗಳು

(೧ನೇ ಪುಟದಿಂದ)

ಸುವಂತೆ ಅಧ್ಯಾಪಕರ ವೇತನ ಹಾಗೂ ಇನ್ನಿತರ ಸೌಲಭ್ಯಗಳನ್ನೂ ಹೆಚ್ಚಿಸಬೇಕು. ಹೀಗೆಯೇ ಮಾಧ್ಯಮಿಕ ಹಾಗೂ ವಿಶ್ವವಿದ್ಯಾಲಯ ಶಿಕ್ಷಣಗಳ ಹೊಣೆಗಾರಿಕೆಯೂ ಇದೆ. ರಾಜ್ಯಸರಕಾರವು ತನ್ನ ಕಕ್ಷೆಯಲ್ಲಿ ವಿಶ್ವವಿದ್ಯಾಲಯಗಳು ಬರುವುದಿಲ್ಲವೆಂದುಜಾರುವಂತಿಲ್ಲ ವಿವಿಧ ಕಾಲೇಜುಗಳಿಗೆಸಹಾಯಧನವನ್ನು ನೀಡಬೇಕಾಗುತ್ತದೆ. ವಿಶ್ವವಿದ್ಯಾಲಯ ಸಹಾಯ ಧನ ಆಯೋಗವಾದರೂ ರಾಜಕೀಯಗತ್ತುಗಾರಿಕೆಗೆಬಲಿಬೀಳದೆ ಪ್ರದೇಶದ ಪರಿಸ್ಥಿತಿಯನ್ನು ಸರಿಯಾಗಿ ತೂಗಿಸಿ ನೋಡಿಮುನ್ನಡೆಸುವುದು ಅಗತ್ಯವಿದೆ.

ಉಪಸಂಹಾರ

ನಮ್ಮ ರಾಜ್ಯ ಸರಕಾರವು ರಾಜ್ಯದ ಆವಶ್ಯಕತೆಯನ್ನು ಮೊದಲು ಕಂಡುಕೊಳ್ಳಬೇಕು. 'ತಾನೂ ಮಾಡ, ಮಾಡುವವರಿಗೂ ಬಿಡ" ಎಂಬಂತೆ ನಡೆಸುಕೊಳ್ಳಬಾರದು. ಒಳ್ಳೆಯ ಕಾರ್ಯ ಮಾಡಲು ಮುಂದೆ ಬರುವವರು ಯಾರೇ ಇರಲಿ, ಅವರಿಗೆ ಉತ್ಸಾಹ ಹೆಚ್ಚುವಂತಹ ವರ್ತನೆಯನ್ನು ತೋರಬೇಕು; ಹಾಗೆಯೇ ನಮ್ಮ ವಿಶ್ವವಿದ್ಯಾಲಯಗಳು ಕೂಡ ಪೂರ್ವಗ್ರಹ ಪೀಡಿತರಂತೆ ನಡೆದು ಅವರ ಉತ್ಸಾಹಭಂಗ ಮಾಡಬಾರದು? ರಾಜ್ಯದಲ್ಲಿ ಹೆಚ್ಚಿನ ವಿಶ್ವವಿದ್ಯಾಲಯ ರಚನೆಯಲ್ಲಿ ಸರಕಾರ ಉತ್ಸಾಹ ತಳೆದು, ಅವಶ್ಯಕತೆಗಳನ್ನು ಅಭ್ಯಸಿಸಿ, ಮುಂದೆ ಅವನ್ನು ಸಂಬಂಧಪಟ್ಟವರೊಡನೆ ಪ್ರತಿಪಾದಿಸಿ ಯಶಸ್ಸುಗಳಿಸಬೇಕು. ನಮ್ಮ ರಾಜ್ಯದಲ್ಲಿ ಇನ್ನೂ ಎರಡು ವಿಶ್ವವಿದ್ಯಾಲಯಗಳು ಈ ಯೋಜನಾಂತ್ಯದೊಳಗೆ ಅವಶ್ಯ ರಚನೆಗೊಳ್ಳಬೇಕು.

— ರಾಶಿ.

ಉಡುಪಿ ಡಿ ಮು ಕೋರ್ಟನಲ್ಲಿ

ಕ್ರಮನಂ. 468/1961
R. I. A. 306/1962.

ಹೊನ್ನಯ ಹೆಗಡೆ — ವಾದಿ.

ಮತ್ತು

1 ಕೃಷ್ಣಯ ಸೆಟ್ಟಿ ಮುತ್ತಣ್ಣ ಸೆಟ್ಟಿ ಮಗ ಉಡುಪಿ ತಾಲೂಕು ಹೊಸೂರು ಗ್ರಾಮದ ಕರ್ಜೆ — 1ನೇ ಪ್ರತಿವಾದಿ.

ವಾದಿ ವ 1ನೆ ಪ್ರತಿವಾದಿ ಸಹಾ ತಾರೀಕು 13—7—1950 ರಲ್ಲಿ ರಿಜಿಸ್ಟ್ರ ಸಹಿ ಮಾಡಿ ಕೊಂಡ ಮೂಲಗೇಣಿ ಚೀಟು ಪ್ರಕಾರ ಮನ್ಮಥ ಸಂ। ರದ ಲಾಗಾಯ್ತು ವಿಳಂಬಿ ಸಂವತ್ಸರದ ವರೆಗಿನ ಗೇಣಿಯಲ್ಲಿ ಬಾಕಿಯಾದ ರೂ. 99—2—0 ವಿಷಾರಿ ವ, ಶಾರ್ವರಿ ಸಂವತ್ಸರಗಳ ಪೂರಾ ಗೇಣಿ ಬಡ್ಡಿಗೆ ಸಹಾ ಮಾಡಿದ ಸಿದ್ರಿ ವ್ಯಾಜ್ಯದಲ್ಲಿ 1ನೆ ಪ್ರತಿವಾದಿಗೆ ನೋಟೀಸ್ ಮಾಡಿಸುವ ಬಗ್ಗೆ ತಾರೀಕು 12—4—1962ಕ್ಕೆ ಯಿಟ್ಟದೆ ಅತನಿಗೆ ಆಕ್ಷೇಪ ಯಿರುವುದಾದರೆ ಸದರಿ ತಾರೀಕು ಬೆಳಿಗ್ಗೆ 11 ಗಂಟೆಗೆ ಸದರಿ ಕೋರ್ಟು ಮುಂದೆ ಖಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲಕ ತಿಳಿಸಿಯದೆ

K. Laxminarayana Aithal
Vakil for Plff.

ಉಡುಪಿ ತಾ 2—4—1962.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೩೧ | ಉಡುಪಿ 12—4—1962 ಗುರುವಾರ | Vol. 41 No. 31

...ವ್ಯ ಯಾವತ್ತೂ
...ದ್ರಣ ಕೆಲಸಗಳಿಗೆ
...ಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಭಾರತೀಯರಿಗೆ ಮರಳಿ ಪಂಡಿತ ನೆಹರುಗಳ ಧುರೀಣತೆ

ಲೋಕ ಸಭೆಯಲ್ಲಿಯೂ ಸಾಕಷ್ಟು ಬಹುಮತವನ್ನು ಪಡೆದ ಕಾಂಗ್ರೆಸ್ಸು ಮುಂದಿನ ಐದು ವರ್ಷಗಳ ವರೆಗೆ ಸರಕಾರವನ್ನು ರಚಿಸುತ್ತದೆ. ಇದಕ್ಕಾಗಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸಭೆ ಸೇರಿ ಪಂಡಿತ ಜವಾಹರಲಾಲರನ್ನೇ ಮರಳಿ ಐದು ವರ್ಷಗಳ ವರೆಗೆ ಒಮ್ಮತದಿಂದ ನಾಯಕರನ್ನಾಗಿ ಆರಿಸಿದರು. ನೆಹರು ಎಂದರೆ ಭಾರತವೆಂಬಂತಿರುವುದರಿಂದ ಅವರ ಧುರೀಣತ್ವವು ಮುಂದುವರಿಯುವುದೆಂಬುದು ಮೊದಲೇ ತಿಳಿದಿದ್ದರೂ ಆಯ್ಕೆಯಾಗಬೇಕಾದುದು ಸಾಂವಿಧಾನಿಕವಿರುವುದರಿಂದ ಇದು ಸುದ್ದಿಯಾಗಿ ಪರಿಣಮಿಸಿದೆ.

ಕೇಂದ್ರ ಸಚಿವ ಸಂಪುಟ

ನಮ್ಮ ಸಂವಿಧಾನದನ್ವಯ ಲೋಕ ಸಭೆಯ ನಾಯಕನು ಪ್ರಧಾನ ಮಂತ್ರಿಯಾಗಿ ರಾಷ್ಟ್ರಪತಿಗಳಿಂದ ನೇಮಿಸಲ್ಪಡುವನು. ಅವನ ಸಲಹೆಯನ್ನು ಪಡೆದು ಅವರು ಇತರ ಮಂತ್ರಿಗಳನ್ನು ನೇಮಿಸುವರು. ಎಂದರೆ, ಪ್ರಧಾನ ಮಂತ್ರಿಯು ತನ್ನ ಸಹೋದ್ಯೋಗಿಗಳಾಗಬಹುದೆಂಬುದನ್ನು ಆಯ್ದು ಅವರನ್ನು ಮಂತ್ರಿಗಳನ್ನಾಗಿ ನೇಮಿಸುವಂತೆ ರಾಷ್ಟ್ರಪತಿಗಳಿಗೆ ಸಲಹೆ ನೀಡುತ್ತಾನೆ; ಅವರು ಸಾಮಾನ್ಯವಾಗಿ ಈ ಸಲಹೆಯನ್ನು ಅಂಗೀಕರಿಸಿ ಅವಶ್ಯಕ ಘೋಷಣೆಯೊಯ್ಯುತ್ತಾರೆ. ರಾಷ್ಟ್ರಪತಿಗಳ ಸ್ಥಾನವು ಕೇವಲ ಅಲಂಕಾರಿಕವೆನ್ನುವುದಕ್ಕೆ ಇದೂ ಒಂದು ಕಾರಣವಿರಬಹುದು

ಹಿರಿಯ ವ್ಯಕ್ತಿತ್ವ

ಪಂಡಿತ ನೆಹರು ಕಳೆದ ೧೫ ವರ್ಷಗಳಿಂದ ಅವಿಚ್ಛಿನ್ನವಾಗಿ ನಮ್ಮ ಪ್ರಧಾನಿಗಳಾಗಿ ಸೇವೆಸಲ್ಲಿಸಿದ್ದಾರೆ; ಇನ್ನೂ ಐದು ವರ್ಷಗಳ ವರೆಗೆ ಇದೇ ಹುದ್ದೆಯಲ್ಲಿ ಮುಂದುವರಿಯುವ ಸದವಕಾಶ ಅವರಿಗೆ ಪ್ರಾಪ್ತವಾಗಿದೆ. ಒಬ್ಬ ವ್ಯಕ್ತಿಯು ತಾನು ಗಳಿಸಿದ ಜನತೆಯ ವಿಶ್ವಾಸವನ್ನು ಇಷ್ಟೊಂದು ದೀರ್ಘಕಾಲದ ವರೆಗೆ ಉಳಿಸಿಕೊಂಡಿರುವುದೂ ಒಂದು ವಿಶಿಷ್ಟತೆಯೆನ್ನಬಹುದು. ನಿರಂತರವಾಗಿ ಈ ಪರಿಮಿತಿಯ ಸುದೀರ್ಘಾವಧಿಯಲ್ಲಿ ಇಂತಹ ಜನಾದರಣೆಯನ್ನು ಉಳಿಸಿಕೊಂಡ ರಾಷ್ಟ್ರನಾಯಕರು ಇಡಿಯ ಜಗತ್ತಿನ ಇತಿಹಾಸದಲ್ಲಿ ಕಾಣಲಾರರು. ಜವಾಹರರ ವ್ಯಕ್ತಿತ್ವ ಅವರೆಲ್ಲರಿಗಿಂತಲೂ ಹಿರಿದು; ಅವರ ದೇಶಪ್ರೇಮ ಮತ್ತು ನಿಷ್ಠೆಗಳ ಪರಿಚಯವಿಲ್ಲದವರಿಲ್ಲ. ಭಾರತದ ಜನಜನದ ಹೃದಯದಲ್ಲಿ ರೋಮರೋಮದಲ್ಲಿ ಜವಾಹಿರರ ನೆನಪು ಯಾವಜ್ಜೀವ ಮಾರುಕೊಳಿಸುತ್ತ ಇರುವುದು.

ನೆಹರು ಸಂದೇಶ

ತಮ್ಮ ಅಸ್ವಾಸ್ಥ್ಯದ ದೆಸೆಯಿಂದ ಸಂಸತ್ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಉಪಸ್ಥಿತರಿರದ ನೆಹರು ಒಂದು ಸಂದೇಶವನ್ನು ಸಭೆಗೆ ಕಳಿಸಿದ್ದಾರೆ. ಈ ಸಂದೇಶದಲ್ಲಿ ಅವರು “ಚುನಾವಣೆಯಲ್ಲಿ ಕಾಂಗ್ರೆಸ್ಸು ಜಯ ಗಳಿಸಿದೆ. ಜನತೆಯು ಕಾಂಗ್ರೆಸ್ ಪಕ್ಷದ ನೀತಿಯನ್ನೂ ಒಪ್ಪಿಕೊಂಡಿದೆ. ಕಾಂಗ್ರೆಸ್ ಪಕ್ಷದ ಮೂಲಕ ಆರಿಸಿ ಬಂದಿರುವ ಎಲ್ಲ ಸದಸ್ಯರೂ ಈ ಧೋರಣೆಗಳನ್ನು ಮುಂದುವರಿಸಿಕೊಂಡು ಚುನಾವಣಾ ಘೋಷಣೆಯಲ್ಲಿ ಜನತೆಗಿತ್ತಿರುವ ಆಶ್ವಾಸನಗಳನ್ನು ಪೂರ್ಣ ಮಾಡಿಕೊಡಲು ಬದ್ಧಕಟಿಯಾಗಬೇಕು” ಎಂದು ಹೇಳಿದ್ದರು. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಗಿಂತ ಪಕ್ಷದ ಬಲ ಹೆಚ್ಚು ಮಾತ್ರವಲ್ಲ, ಪಕ್ಷದ ನೀತಿಯೇ ವ್ಯಕ್ತಿಯ ನೀತಿಗಿಂತ ಅಧಿಕವಾದುದು. ಭಾರತೀಯ ಅಪಾರ ಜನತೆಯು ಕಾಂಗ್ರೆಸ್ ಪಕ್ಷದ ಸಮಾಜವಾದಿ ಮಾದರಿಯ ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಮತ್ತು ಈ ಉದ್ದೇಶದತ್ತ ಮುನ್ನುಗ್ಗಲು ಅದು ಅನುಸರಿಸುತ್ತಿರುವ ನೀತಿಯನ್ನು ಪ್ರತ್ಯಕ್ಷವಾಗಿ ಒಪ್ಪಿಕೊಂಡಿದೆ. ಜನತೆಯು ಕಾಂಗ್ರೆಸ್ಸಿನಲ್ಲಿ ಇಟ್ಟಿರುವ ವಿಶ್ವಾಸವನ್ನು ಕಾಂಸ್ ಸದಸ್ಯರು ಉಳಿಸಿಕೊಡಬೇಕಾದುದು ಅತ್ಯವಶ್ಯವಿದೆ.

ಜಗನ್ನಾಯಕ ನೆಹರು

ಜವಾಹಿರಲಾಲರು ಇಂದು ಕೇವಲ ಭಾರತದ ನಾಯಕರು ಮಾತ್ರವಲ್ಲ. ಅಂತರಾಷ್ಟ್ರೀಯ ರಾಜಕಾರಣದಲ್ಲಿ ಅವರಿಗೆ ಅಗ್ರಗಣ್ಯ ಸ್ಥಾನವಿದೆ. ಜಗತ್ತಿನ ಮುಂದೆ ಯಾವುದೇ ಸಮಸ್ಯೆ ಮುಂದೆ ಬಂದಾಗ, ಈ ಸಂಬಂಧದಲ್ಲಿ ಭಾರತದ ನೆಹರು ಏನನ್ನುತ್ತಾರೆ ಎಂದು ಜಗನ್ನಾಯಕರು ನಿರೀಕ್ಷಿಸುತ್ತಾರೆ. ನೆಹರು ನೀತಿಯು ಬರೇ ಭಾರತದ ಕಲ್ಯಾಣವನ್ನು ಸಾಧಿಸುವಲ್ಲಿ ಮಾತ್ರ ಪರಿಮಿತವಾಗಿಲ್ಲ; ಜಾಗತಿಕ ಶಾಂತಿ, ಭದ್ರತೆಯತ್ತಲೂ ಅದು ಹರಡಿದೆ; ಅಲ್ಲಿ ಜಯಭೇರಿಯನ್ನು ಮೊಳಗಿಸಿದೆ. ಇಂತಹ ಆದರ್ಶ ವ್ಯಕ್ತಿ, ಜಗದ್ವಂದ್ಯ ನಮ್ಮ ನಾಯಕರಾಗಿ ದೊರೆತುದು ನಮ್ಮ ಮಹಾಭಾಗ್ಯ.

ನೆಹರು ನಿವೃತ್ತರಾಗಬೇಕೆ?

ಆದರೆ, ಒಳ್ಳೆಯವರನ್ನೂ ದೂರುವವರಿರುತ್ತಾರೆ, ರಸದಲ್ಲಿಯೂ ಕಸವನ್ನು ಅರಸುವವರಿದ್ದಾರೆ. ಅಂತೆಯೇ ಪಂಡಿತ ಜವಾಹಿರಲಾಲರ ಮೇಲೂ ಟೀಕೆಯ ಸುರಿಮಳೆ ಸುರಿದರೆ ಆಶ್ಚರ್ಯವಿಲ್ಲ. ನೆಹರುರವರು ಮತ್ತೂ ಮತ್ತೂ ಪ್ರಧಾನಿ ಪಟ್ಟಕ್ಕೆ ಅಂಟಿಕೊಂಡಿರುವುದು ಸರಿಯಲ್ಲವೆನ್ನುವವರೂ ಇಲ್ಲದಿಲ್ಲ. ಈಗಾಗಲೇ ೭೩ರ ಗಡಿ ಮುಟ್ಟುತ್ತಿರುವ ಇವರು ತನ್ನ ನಂತರ ತನ್ನಂತೆಯೇ ಸರ್ವ ಸಮರ್ಥನಾದ, ಅಖಿಲ ಭಾರತಪ್ರಿಯನಾದವನು ನಾಯಕತ್ವವನ್ನು ವಹಿಸುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು; ಇದಕ್ಕಾಗಿ ಅವರು ಮಂತ್ರಿಮಂಡಳಿಯಿಂದ ಹೊರನಿಂತು ಇನ್ನೊಬ್ಬನಿಗೆ ತಕ್ಕ ತರಬೇತಿ ನೀಡಬೇಕು ಎಂಬ ಅಭಿಪ್ರಾಯ ಕೆಲವರದು. ದಿನದಿಂದ ದಿನಕ್ಕೆ ಛಿದ್ರಗಳು ಹೆಚ್ಚಿ ಭಿನ್ನ ಭಿನ್ನವಾಗುತ್ತಿರುವ ಕಾಂಗ್ರೆಸ್ ಪಕ್ಷದ ಐಕ್ಯ ಸಂವರ್ಧನೆಗೆ ನೆಹರು ಮುಂದಾಗಬೇಕು; ರಾಜಕಾರಣ ಪಟುಗಳಾದ ಇವರು ಸರಕಾರದಿಂದ ದೂರವಿರಬೇಕು ಎನ್ನುವವರು ಇನ್ನು ಕೆಲವರು. ಹೀಗೆಯೇ ಒಂದೊಂದು ಕಾರಣವನ್ನು ಮುಂದಿಟ್ಟು, ನೆಹರು ಪ್ರಧಾನಿತನವನ್ನು ಬಿಟ್ಟುಬಿಡುವುದನ್ನು ಬಯಸುವ ವ್ಯಕ್ತಿಗಳು ಬೆರಳೆಣಿಕೆಯಲ್ಲಾದರೂ ಇದ್ದಾರೆ.

ಮಹಾಶಿಲ್ಪಿಯ ಮಾರ್ಗದರ್ಶನ

ಈ ಹಿಂದೆಯೇ ಒಂದೆರಡು ಬಾರಿ ನೆಹರು ನಿವೃತ್ತರಾಗುವ ತಮ್ಮ ಬಯಕೆಯನ್ನು ಮುಂದಿಟ್ಟಿದ್ದರು. ಆದರೆ, ಕಾಂಗ್ರೆಸು ಅವರ ನಾಯಕತ್ವವನ್ನೇ ಅಪೇಕ್ಷಿಸಿತು. ದೇಶದ ಪುನಾರಚನೆಯ ಕಾರ್ಯದಲ್ಲಿ ಅವರು ತೋರಿಸುತ್ತಿರುವ ಆಸಕ್ತಿ ಮತ್ತು ದಕ್ಷತೆಗಳ ಮಾರ್ಗದರ್ಶನ ತಮಗೆ ಮುಂದಕ್ಕೂ ಬೇಕೆಂದು ಬಯಸಿತು. ಅವರನ್ನು ವಿನಂತಿಸಿಕೊಂಡಿತು. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತ ನಮ್ಮ ಪ್ರಜಾಸತ್ತೆಯು ಇನ್ನೂ ಚಿಕ್ಕ ಪ್ರಾಯದಲ್ಲಿದೆ. ಜಗತ್ತು ನಮಗಿಂತ ಹಲವು ಶತಮಾನಗಳಷ್ಟು ಮುಂದೆ ಧಾವಿಸುತ್ತಿರುವಾಗ, ನಾವೂ ಅದರ ಸಹಯಾತ್ರಿಗಳಾಗುವುದು ಅತ್ಯಗತ್ಯ. ಆದಕ್ಕಾಗಿ, ದೇಶದ ಪುನಾರಚನೆಯ ಸಲುವಾಗಿ ದೇಶ ವಿದೇಶಗಳಿಂದ ಸಂಪತ್ತನ್ನು ಕೂಡಿಸಿ ಅವುಗಳ ಮೂಲಕ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸುವಲ್ಲಿ ನೆಹರು ವಹಿಸಿದ ಪಾತ್ರ ಅತ್ಯಮೋಘವಾದುದು. ಅವರ ನಾಯಕತ್ವದ ೧೫ ವರ್ಷಗಳಲ್ಲಿ ಭಾರತವು ೧೫ ದಶಕಗಳಷ್ಟು ಪ್ರಗತಿ ಸಾಧಿಸಿದೆ. ನಮ್ಮೊಡನೆಯೇ ಸ್ವತಂತ್ರವಾದ ಪಾಕಿಸ್ತಾನವನ್ನು ನೋಡಿದರೆ, ಅದು ಪರಸ್ಪರ ಅನೈಕ್ಯ—ಸ್ವಾರ್ಥ, ಅಧಿಕಾರ ಮದಗಳಿಂದಾಗಿ ಇದ್ದಕ್ಕಿದ್ದಂತೆಯೇ ಇದ್ದರೆ, ನಮ್ಮ ದೇಶವು ಮಾಡಿದ ಪ್ರಗತಿಯ ಬಗ್ಗೆ ನಾವು ಹೆಮ್ಮೆ ಪಡಬೇಕು. ಈ ಪ್ರಗತಿ ಸಾಧನೆಯ ಮಹಾಶಿಲ್ಪಿ ನೆಹರು ಎಂದರೆ ಅತಿಶಯೋಕ್ತಿಯಲ್ಲ.



ಅವಿಶ್ರಾಂತ ದುಡಿಮೆಗಾರ

ನೆಹರುರವರ ಸಹೋದರಿ ವಿಜಯಲಕ್ಷ್ಮಿ ಪಂಡಿತರು ಮೊನ್ನೆ ಮೊನ್ನೆ ಅಮೆರಿಕೆಯ ಸಂಚಾರದ ವೇಳೆ ಒಂದೆಡೆ ನುಡಿದಿದ್ದರು. “ನನ್ನ ಸೋದರನಿಗೆ ಸೌಖ್ಯವಿಲ್ಲ. ಈ ಕಾರಣದಿಂದ ನಾನು ಉಳಿದ ಸಮಯದಲ್ಲಾಗುತ್ತಿದ್ದರೆ, ಖಂಡಿತ ಪ್ರವಾಸಕ್ಕೆ ತೊಡಗುತ್ತಿರಲಿಲ್ಲ. ಆದರೆ, ನಿಶ್ಚಿತ ಕಾರ್ಯಕ್ರಮಗಳನ್ನು ತಪ್ಪಿಸಬಾರದು ಎಂಬ ಉದ್ದೇಶದಿಂದ ಮಾತ್ರ ಹೊರಟಿದ್ದೇನೆ” ಎಂದು. ನೆಹರುರವರ ಅಸ್ವಾಸ್ಥ್ಯದ ಕಾರಣವನ್ನೂ ಅವರು ಪರ್ಯಾಯವಾಗಿ ಅದೇ ಸಂದರ್ಭದಲ್ಲಿ ತಿಳಿಸಿದರು: “ಕಳೆದ ಹದಿನೈದು ವರ್ಷಗಳಿಂದ ಅವನಿಗೆ ವಿರಾಮವೆಂಬುದಿಲ್ಲ. ಇದರಿಂದ ದುಡಿದುಡಿದು ಸೋತ ಅವನ ದೇಹವು ತುಸು ವಿರಾಮವನ್ನು ಬಯಸುತ್ತದೆ”.

ಗುರಿ ಸಾಧನೆಯತ್ತ ಮುನ್ನಡೆ

ಶ್ರೀಮತಿ ಪಂಡಿತರ ಉದ್ಗಾರ ಸಹಜವಾದುದು. ಕಳೆದ ಹದಿನೈದು ವರ್ಷಗಳಲ್ಲಿ ನೆಹರು ಅಹರ್ನಿಶಿ ರಾಷ್ಟ್ರಕ್ಕಾಗಿ ಜೀವ ತೇದಿದ್ದಾರೆ. ತಾನು ಕಟ್ಟಲು ಉದ್ದೇಶಿಸಿದ ಭಾರತದ ಭವ್ಯ ಚಿತ್ರವನ್ನು ನೋಡುತ್ತ ಅದನ್ನು ಕೃತಿಯಲ್ಲಿ ಇಳಿಸಲು ಅವರು ಸೊಂಟಕಟ್ಟಿದ್ದಾರೆ. ಈ ಹಿಂದೆ ಅವರೇ ಒಂದೆಡೆ ಅಂದಿದ್ದರು: “ಭಾರತದ

(೯ನೇ ಪುಟ ನೋಡಿರಿ)

ಒಂದು ಮನೋವೈಜ್ಞಾನಿಕ ಕಥೆ—

ಅಂಧಕಾರದ ಅಂಜಿಕೆ

ಶ್ರೀ "ಗೋರಾ"

ಲಲಿತೆಗೆ ಕತ್ತಲೆಂದರೆ ಆಗದು. ಕಣ್ಣುಗಳಿಗೆ ಕತ್ತಲೆ ಕವಿದೊಡನೆಯೇ ಆಕೆಯ ಹೃದಯದಲ್ಲಿ ಹೆದರಿಕೆಯು ಹರಡಿ ಬಿಡುತಿತ್ತು. ಇದರಿಂದಾಗಿ ಗಟ್ಟಿಯಾಗಿ ಕಿರುಚಿಕೊಳ್ಳುತಿದ್ದಳು. ಸಂಜೆಯು ಸಮೀಪಿಸುತ್ತಲು ಹರಡುತ್ತಲೇ ಆಕೆಯು ಮನೆಯ ಕಿಟಕಿ ಬಾಗಿಲುಗಳನ್ನು ಮುಚ್ಚಿ ಬಿಡುತಿದ್ದಳು. ವಿದ್ಯುದ್ದೀಪಗಳನ್ನು ಹಚ್ಚುತಿದ್ದಳು. ಆದರೂ ಕೆಲವೊಮ್ಮೆ ಮುಚ್ಚಿದ ಕಿಟಕಿ ಬಾಗಿಲುಗಳತ್ತ ತೀವ್ರ ದೃಷ್ಟಿಯಿಂದ ನೋಡುತ್ತ ಗಡಗಡನೆ ನಡುಗುತಿದ್ದಳು. ಆಗಾಗ ವಿಲಕ್ಷಣವಾಗಿ ಕೂಗುತಿದ್ದಳು. ಗಂಟಲನ್ನು ಯಾರೋ ಹಿಡಿದು ಅದುಮುತ್ತಿರುವಂತೆ ಆಕೆ ಬಿಕ್ಕಳಿಸಿ ಬೊಬ್ಬಿಡಲು ಪ್ರಯತ್ನಿಸುತಿದ್ದಳು. ಕೆಲವು ಕ್ಷಣಗಳ ವರೆಗೆ ನಿಶ್ಚೇಷ್ಟಿತಳಾಗಿ ಬಿದ್ದು ಬಿಡುತಿದ್ದಳು. ಇಂತಹ ವಿಚಿತ್ರ ಕಾಯಿಲೆ ಲಲಿತೆಗೆ ಕಾಣಿಸಿದುದು ಇಂದು ನಿನ್ನೆಯಲ್ಲ; ಸುರೇಶ ಆಕೆಯನ್ನು ವಿವಾಹವಾದಂದಿನಿಂದಲೂ ಹೆದರಿಕೆಯ ಭಯಾನಕ ರೋಗ ಆಕೆಯನ್ನು ಕಾಡುತಿತ್ತು. ಅದಕ್ಕೂ ಮೊದಲೂ ಇದ್ದಿರಬಹುದು; ಯಾರಿಗೆ ಗೊತ್ತು?

ಸುರೇಶನೊಡನೆ ಲಲಿತೆ ಪದೇ ಪದೇ ಅಂದಿದ್ದಳು:—ಕತ್ತಲೆಯಲ್ಲಿ ನನ್ನನ್ನೊಬ್ಬಾಕೆಯನ್ನೇ ಬಿಟ್ಟು ಹೋಗಬೇಡಿ. ನನಗೆ ಹೆದರಿಕೆಯಾಗುತ್ತದೆ ಯಾರೋ ನನ್ನನ್ನು ಕುತ್ತಿಗೆ ಹಿಸುಕಿ ಅದುಮುತ್ತಿರುವಂತೆ ಭಾಸವಾಗುತ್ತದೆ" ಎಂದು. ಸುರೇಶನಾದರೂ ಆಕೆಯ ಹೇಳಿಕೆಯನ್ನು ಮೀರುತ್ತಿರಲಿಲ್ಲ. ರಾತ್ರಿಯಿಡಿ ಕೋಣೆಯೊಳಗೆ ವಿದ್ಯುದ್ದೀಪವುರಿಯುತಿತ್ತು. ಅಪ್ಪಿತಪ್ಪಿಯಾದರೂ ಅದನ್ನು ನಂದಿಸುವಂತಿಲ್ಲ. ಕರೆಂಟು ಬಂದಾಗಿ ದೀಪ ಆರಿ ಹೋದರೆ ಲಲಿತೆಯ ಚೀತ್ಕಾರ ಸುತ್ತಲಿನವರನ್ನು ಎಬ್ಬಿಸುತಿತ್ತು. ಇದಕ್ಕಾಗಿ ಆಪತ್ಕಾಲಕ್ಕೆಂದು ನಾಲ್ಕಾರು ಮೇಣದ ಬತ್ತಿಯನ್ನೂ ಬೆಂಕಿ ಪೆಟ್ಟಿಗೆಗಳನ್ನೂ ಸುರೇಶ ಹಾಸಿಗೆಯ ಪಕ್ಕದಲ್ಲಿರಿಸುತಿದ್ದ.

ಅಸಹಾಯಕನಾದ ಸುರೇಶನಿಗೆ ಈ ಅಂಜಿಕೆಯ ಅಂಟು ರೋಗವು ವಿಲಕ್ಷಣವಾಗಿ ಕಂಡುದು ಸ್ವಾಭಾವಿಕ. ಆತ ಹೆದರುವ ಕಾರಣವಿಲ್ಲವೆಂದು ಅದೆಷ್ಟು ಸಮಜಾಯಿಸಿದರೂ, ತಿಳಿಸಿ ಹೇಳಿದರೂ ಆಕೆಯ ರೋಗ ವಾಸಿಯಾಗುವಂತಿರಲಿಲ್ಲ. ಒಮ್ಮೊಮ್ಮೆ ಲಲಿತೆ ಮುಚ್ಚಿದ ಕಿಟಕಿಯತ್ತಲೇ ನೋಡುತಿದ್ದಳು ಇದ್ದಕ್ಕಿದ್ದಂತೆ 'ಅಯ್ಯಯ್ಯೋ' ಎಂದು ಬೆಚ್ಚಿಬಿದ್ದು ಆರ್ಭಟಿಸುತಿದ್ದಳು. 'ಯಾರೋ ಬಂದರು; ಬಂದರು; ಒಳಬರಲು ಬಿಡಬೇಡಿ, ಬಿಡಬೇಡಿ ನನಗೆ ಹೆದರಿಕೆಯಾಗುತ್ತದೆ'ಯೆಂದು ಕೂಗಿಕೊಳ್ಳುತಿದ್ದಳು. ಸುರೇಶ ಸುತ್ತಮುತ್ತ ದೃಷ್ಟಿ ಹಾಯಿಸುತಿದ್ದ; ಮುಚ್ಚಿದ್ದ ಕಿಟಕಿ ಬಾಗಿಲುಗಳು ಮುಚ್ಚಿಯೇ ಇರುತಿದ್ದುವು; ಉರಿಯುವ ದೀಪ ಉರಿಯುತ್ತಲೇ ಇರುತಿತ್ತು. ಇಂತಹ ಹೊಸ ರೋಗವನ್ನು ವಾಸಿ ಮಾಡುವುದು ಹೇಗೆಂಬುದೇ ಆತನಿಗರಿಯದಾಗಿತ್ತು.

ತನ್ನ ಸ್ನೇಹಿತರ, ಹಿತಚಿಂತಕರ ಸಲಹೆಯಂತೆ ಪ್ರಸಿದ್ಧರಲ್ಲಿ ಪ್ರಸಿದ್ಧರಾದ ಡಾಕ್ಟರರನ್ನು ಕಂಡಾಯಿತು. ಸ್ವಯಂ ರೋಗಿಯೇ ತಿಳಿಯದ ರೋಗಕ್ಕೆ ಅವರೇನು ಮದ್ದು ಕೊಟ್ಟಾರು? ಸಮಾಧಾನಕ್ಕಾಗಿ ನೀರು ಕುಡಿಸಿದರು; ಬಿಲ್ಲೆಗಳನ್ನು ತಿನ್ನಿಸಿದರು. ಚುಚ್ಚುಮದ್ದಿನ ಪ್ರಯೋಗವೂ ನಡೆಯಿತು. ಸುರೇಶನು ಸುರಿದ ಹಣವೇನೋ ನೀರಿನಂತೆ ಹರಿಯಿತೇ ಹೊರತು ಲಲಿತೆಯ ಬೇನೆ ಹರಿಯಲೇ ಇಲ್ಲ. ವೈದ್ಯರಿಂದಾಗಲಿಲ್ಲವೆಂದಾದ ಮೇಲೆ ಭೂತ ಪ್ರೇತಗಳತ್ತ ಮನಸ್ಸು ಓಡುವುದರಲ್ಲಿ ಆಶ್ಚರ್ಯವಿಲ್ಲ. ಮಾಯ, ಮಂತ್ರ, ಮೋಡಿ, ಎಂದು ಮುಂತಾಗಿ ಜ್ಯೋತಿಷ್ಯರಿಗೆ ಹಣ ಸುರಿದಾಯಿತು; ಅಮವಾಸ್ಯೆಯ ಶುಭದಿನಗಳಲ್ಲಿ ಸಮುದ್ರ ಸ್ನಾನ ಮಾಡಿಯಾಯಿತು; ಉತ್ತಮ-ನೀಚ ದಾನ ನಡೆಯಿತು; ಸಂತರ್ಪಣೆ ಸಾಂಗವಾಗಿ ಮುಗಿಯಿತು. ಕುಟುಂಬದಲ್ಲಿ ಸತ್ತು ಹೋದವರಿಗೆಲ್ಲಾ ಪಿಂಡದಾನ ನೀಡಿಯಾಯಿತು. ಅಶ್ವತ್ಥ ಪ್ರದಕ್ಷಿಣೆ, ದೇವದರ್ಶನ, ನಾಗತಂಬಿಲ ಯಾವುದನ್ನು ಬಾಕಿ ಬಿಡಲಿಲ್ಲ. ಏನಾದರೂ ಈ ಭಯಾನಕ ಚಾಡ್ಯ ವಾಸಿಯಾದರೆ ಸಾಕೆಂದು ಹೇರಾಟ ನಡೆಯಿತು. ಆದರೆ, ಯಾವುದೇ ಲಾಭ ಮಾತ್ರ ಇವುಗಳಿಂದ ದೊರೆತಂತೆ ತಿಳಿಯಲಿಲ್ಲ.

ತನ್ನ ಸಕಲ ಪ್ರಯತ್ನಗಳೂ ನೀರಲ್ಲಿ ಮಾಡಿದ ಹೋಮವೆನಿಸಿದಾಗ ಮಾನವನು ನಿರಾಶನಾಗುವುದರಲ್ಲಿ ಆಶ್ಚರ್ಯವಿಲ್ಲ. ಸುರೇಶನಾದರೂ ಜುಗುಪ್ಸೆಗೊಂಡ. ವೈದ್ಯರಿಗೆ ಕಾಣಸಿಗದ, ಮಂತ್ರ-ಯಂತ್ರಗಳಿಗೆ ಒಗ್ಗದ, ದೇವರಿಗೆ ಹೆದರದ ರೋಗವಿದು ಯಾವುದು? ಎಂಬ ಯೋಚನೆಯಲ್ಲಿ ಆತ ತಲೆ ಕೆಡಿಸಿಕೊಳ್ಳಲೇಬೇಕಾಗಿತ್ತು. ಕೈಹಿಡಿದ ಮಡದಿಯನ್ನು ಕೈಬಿಡುವುದರಲ್ಲಿ ಯಾವ ನ್ಯಾಯವೂ ಇರಲಿಲ್ಲ.

ತನ್ನ ಮನಸ್ಸಿಗೆ ಒಪ್ಪದ ಮಾತು, ಮನಸ್ಸಿನಂತೆ ನಡೆಯದ ವ್ಯಕ್ತಿಗಳ ಕಡೆಗೆ ಮಾನವ ಮೊದಮೊದಲು ತೀರ ಗಮನವೀಯುತ್ತಾನೆ; ಕ್ಷೋಭೆಗೊಳ್ಳುತ್ತಾನೆ; ಹಾಗಿದ್ದರೂ ಸಹನೆಯಿಂದ ವರ್ತಿಸುತ್ತಾನೆ. ಆದರೆ, ಇದು ಪುನರಾವರ್ತನೆಯಾಗುತ್ತ ನಡೆದರೆ, ಆತನಾದರೂ ತಾಳ್ಮೆಗೆಡುತ್ತಾನೆ. ಸಾಮಾನ್ಯ ಮನುಷ್ಯನಾದ ಸುರೇಶನಾದರೂ ಇದಕ್ಕೆ ಹೊರತಾದವನಲ್ಲ. ಮೊದಮೊದಲಿಗೆ ಆತ ಹೆಂಡತಿಯ ವಿಲಕ್ಷಣ ವರ್ತನೆಯನ್ನು ಸಹಿಸಿಕೊಳ್ಳುತಿದ್ದ; ಆಕೆಯಲ್ಲಿ ಧೈರ್ಯ ತುಂಬುತಿದ್ದ; ತಾನಿರುವೆನೆಂದು ಅಭಯ ಪ್ರದಾನ ಮಾಡುತಿದ್ದ; ಆದರೆ, ದಿನಗಳೆದಂತೆ, ಆತನಾದರೂ ಮಡದಿಯ ಬಗೆಗೆ ನಿರಾದರ ತೋರಿಸಲೇ ಬೇಕಾಗಿತ್ತು; ಪ್ರಕೃತಿಯ ನಿಯಮವಿದು; ಮಾನವನ ಮನಸ್ಸು!

ಸುರೇಶನಿಗೊಬ್ಬ ಮನೆಯಾಳಿಯನಿದ್ದ, ಕಿಟ್ಟು ಎಂಬಾತ. ವರುಷ ಹದಿನೆರಡು ದಾಟದೆ ಇದ್ದಿದ್ದರೂ ಆತನು ತಿಗರ ತರುಣರ ಕಾರ್ಯಭಾರವೆಲ್ಲವನ್ನೂ ನಿರ್ವಹಿಸುತಿದ್ದ. ಸೋಲಿ ಹುಡುಗರೊಡನೆ ಬೆರೆಯುವುದು, ಅವರೊಡನೆ ತಿರುಗಾಡುವುದು, ಕುಣಿಯುವುದು—ಇದೇ ಅವನ ದಿನಚರ್ಯೆಯಾಗಿತ್ತು. ಹತ್ತು ವರ್ಷಗಳಿಗೆ ಮೊದಲು ಆತನ ತಂದೆ ಸತ್ತು ಹೋಗಿದ್ದ; ಹಿಂದಿನ ವರ್ಷ ತಾಯಿಯೂ ಇಹಲೋಕ ತ್ಯಾಗ ಮಾಡಿದ್ದಳು. ಇದರಿಂದಾಗಿ ಲಗಾಮಿಲ್ಲದ ಕುದುರೆಯೆನಿಸಿದ ಕಿಟ್ಟುವನ್ನು ಸುರೇಶನೇ ರಕ್ಷಿಸಬೇಕಾಯಿತು ಅನಾಥನಾದ ಕಿಟ್ಟುವನ್ನು ಕಂದಾರಿಗೆ ತರುವಲ್ಲಿ ಸುರೇಶನಿಗಿಂತಲೂ ಲಲಿತೆ ಪ್ರಯಾಸಪಟ್ಟಿದ್ದಳು. ಹಗಲಿಡಿ ಆಕೆ ಕಿಟ್ಟುವನ್ನು ಮನೆಯಲ್ಲುಳಿಸಲು ಪ್ರಯತ್ನಿಸಿದ್ದಳು ಆದರೂ ತಲೆತಪ್ಪಿಸಿ ಓಡುತಿದ್ದ ಕಿಟ್ಟು ಸಂಜೆಯಾಗುತ್ತಲೇ ಮನೆ ಸೇರುತಿದ್ದ. ಸುರೇಶ ಆಫೀಸು ಮುಗಿಸಿ ಬರುವಾಗ ತುಸು ತಡವಾದರೆ, ಆಕೆ ಕಿಟ್ಟುವನ್ನು ತನ್ನ ಬಳಿಯೇ ಇರಿಸಿಕೊಳ್ಳುತಿದ್ದಳು. ಇದರಿಂದ ಸುರೇಶನಿಗೂ ತುಸು ಸಮಾಧಾನ.

ಒಂದುದಿನ ಸುರೇಶ—ಲಲಿತೆಯರು ಮಲಗಿದ್ದರು. ಕಿಟ್ಟುವಾದರೂ ಪಕ್ಕದ ಕೋಣೆಯಲ್ಲಿ ನಿದ್ರಿಸಿದ್ದ. ವಿದ್ಯುತ್ತಿನ ದೀಪ ಒಂದೇ ಸಮನೆ ಉರಿಯುತಿತ್ತು. ದೇಹಾಲಸ್ಯಗೊಂಡ ಸುರೇಶ ಅತ್ತಿತ್ತ ಹೊರಳಿದ; ನಿದ್ದೆ ಬರಲಿಲ್ಲ. ದೀಪಕ್ಕೆ ಹಾತೆಗಳು ಮುತ್ತುತಿದ್ದುವು; ಅವುಗಳ ಹಾರಾಟದಲ್ಲಿ ನಿದ್ರೆ ಬೀಳುವುದಾದರೂ ಹೇಗೆ? ಆತ ಲಲಿತೆಯತ್ತ ನೋಡಿದ. ಆಕೆಗೆ ನಿದ್ರೆಯ ಅಮಲು ಹಿಡಿದಿರಬೇಕೆನ್ನಿಸಿತು. ಮೆಲ್ಲನೆ ನಡೆದು ದೀಪದ ಗುಂಡಿಯೊತ್ತಿದ. 'ಟಕ್' ಎಂಬ ಶಬ್ದ ಕೇಳುವಷ್ಟರಲ್ಲೇ 'ಅಯ್ಯಯ್ಯೋ' ಎಂಬ ಚೀತ್ಕಾರ ಕೋಣೆಯಲ್ಲಿ ಗಟ್ಟಿಯಾಗಿ ಪ್ರತಿಧ್ವನಿಸಿತು. ಅದೇನೆಂದು ಸುರೇಶ ಯೋಚಿಸುತ್ತಿದ್ದನಷ್ಟೇ ಮಂಚದ ಮೇಲಿಂದ ಯಾರೋ ನೆಲಕ್ಕುರುಳಿದ ಸದ್ದಾಯಿತು, ಅದರ ಜತೆಗೆ 'ಬಂದ, ಬಂದ, ಕುತ್ತಿಗೆ ಹಿಡಿದ; ಬದುಕಿಸಿರಿ ಬದುಕಿಸಿರಿ' ಎಂಬ ಕೂಗು! ಇದು ಲಲಿತೆ

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ಕನ್ನಡದಲ್ಲಿ

ಗದ್ಯ ಸಾಹಿತ್ಯ ಪ್ರಭೇದಗಳು

ಶ್ರೀ ಯು. ಪದ್ಮನಾಭ ಭಟ್

ಒಮ್ಮೆ ಕೆಲವು ಜನ ಹುಡುಗರು ಒಟ್ಟು ಸೇರಿ, 'ಭೀಕರ ಕಗ್ಗತ್ತಲೆಯ ಕಾಳರಾತ್ರಿಯಲ್ಲಿ' ಒಂದು ಬೇಂಕಿನ ಬಾಗಿಲನ್ನೊಡೆದು ದಾಳಿಯಿಟ್ಟು ಸಿಕ್ಕಿಬಿದ್ದರು. ವಿಚಾರಿಸಲಾಗಿ ಅವರು ಪತ್ತೇದಾರಿ ಕಾದಂಬರಿಗಳನ್ನು ಓದಿ ಅವುಗಳಿಂದ ಪ್ರಭಾವಿತರಾಗಿ ಈ ಕೆಲಸಕ್ಕೆ ಕೈ ಹಾಕಿದ ರೆಂಬುದಾಗಿ ತಿಳಿದು ಬಂತು.

ಎಳೆಯ ತಿಳಿ ಹೃದಯಗಳು ಬಹು ಬೇಗ ಕಲಕಲ್ಪಡುತ್ತವೆ. ಗೊಂದಲಗೊಳ್ಳುವುದು ಬಹಳ ಬೇಗ. ಅವುಗಳ ಗ್ರಹಣ ಶಕ್ತಿ ಅತಿ ಚುರುಕು. ಒಳ್ಳೆಯದಿರಲಿ, ಕೆಟ್ಟದೇ ಇರಲಿ—ವಿವೇಚನೆಯ ವಿವೇಕ ಅವಕ್ಕಿರುವುದಿಲ್ಲ— ಅನುಕರಣೆಯೊಂದೇ ಅವುಗಳ ಸ್ವಭಾವ ಸಹಜವಾದ ಗುಣವಾಗಿರುತ್ತದೆ.

ಹೊಸಗನ್ನಡದ ವಾಙ್ಮಯದಲ್ಲಿ ಕತೆ ಕಾದಂಬರಿಗಳೇ ತುಂಬಿ ಹೋಗಿವೆ. ಎಲ್ಲೋ ಮಧ್ಯೆ ಮಧ್ಯೆ ಕವಿತೆಗಳು ಪ್ರಬಂಧಗಳು ತಾವೂ ಇದ್ದೇವೆ ಎಂದು ತಲೆಯೆತ್ತುತಿದ್ದರೂ ಅವುಗಳ ಬಗ್ಗೆ ಜನತೆ ತೋರಿಸುವ ಉಪೇಕ್ಷೆಯಿಂದಾಗಿ ನಿರಾಶೆ ಹೊಂದಿ ಕತ್ತು ತಗ್ಗಿಸುತ್ತಿವೆ! ಜನತೆ ಹೆಚ್ಚು ಹೆಚ್ಚಾಗಿ ಕತೆ ಕಾದಂಬರಿಗಳನ್ನೂ ಬಯಸುತ್ತಿದೆ. ಕೆಲವು ಕಾದಂಬರಿಕಾರರು ತಮ್ಮೊಳಗೆ ಪರಸ್ಪರ ಪೈಪೋಟಿಯೋ ಎಂಬಂತೆ ತಲಾ ಒಂದರ ನೂರಾರು ಕಾದಂಬರಿಗಳನ್ನು ಹೆಣೆದು ಜನತೆಯ ಮುಂದೆ ಎಸೆಯಲು ಪಣ ತೊಟ್ಟಿರುತ್ತಾರೆ. ಅಂತಹ ಅಪ್ರತಿಮ ಮೇಧಾವಿಗಳಾದ ಸಾಹಿತ್ಯ ಸೇವಕರೆಲ್ಲರಿಗೂ ಜನತೆ ಕೃತಜ್ಞತೆ ಸಲ್ಲಿಸುತ್ತಿರುವುದು ಸಹಜವಾದುದೇ!

ಕನ್ನಡ ಸಾಹಿತ್ಯ ಕ್ಷೇತ್ರ ಬಹಳ ವಿಶಾಲವಾದುದು. ಕ್ರಿ. ಶ. ೫ನೆಯ ಶತಮಾನದಿಂದಲೇ ಅದು ಬೆಳೆದು ಬಂದಿದೆ ಎಂಬುದಾಗಿ ಊಹಿಸಿದ್ದಾರೆ. ಅಂತಹ ವಿಶಾಲವಾದ ಭೂಮಿಕೆಯಲ್ಲಿ ಗದ್ಯಕ್ಕೆ ಮನಸೋತ ಕಾಲ ಈಗಿನದೇ—ಈ ಹೊಸಗನ್ನಡದ ಕಾಲವೇ—ಎಂಬುದು ನಿರ್ವಿವಾದ.

ಕನ್ನಡದ ಪ್ರಾಚೀನ ಸಾಹಿತ್ಯಗಳಲ್ಲಿ ಮಹಾಕೃತಿ ಎಂದು ಪರಿಗಣಿಸಲ್ಪಟ್ಟ ಕಾವ್ಯಗಳು ಕೆಲವೇ— ಕುಮಾರವ್ಯಾಸ ಭಾರತ, ಪಂಪ ಭಾರತದಂಥ ಕೈಬೆರಳೆಣಿಕೆಯ ಕಾವ್ಯಗಳು. ಆದರೆ ಇಂದಿನ ಕಾದಂಬರೀ ಯುಗದಲ್ಲಿ ಮಹಾಕೃತಿ ಎಲ್ಲವೂ ಆಗಿಬಿಟ್ಟಿದೆ—ಎಲ್ಲ ಕಾದಂಬರಿಗಳೂ ಮಹಾಕೃತಿಗಳೇ ಎಂದು ಹೇಳಿಬಿಟ್ಟರೆ ವಾದವೇ ಮುಗಿದು ಹೋಯಿತು.

ಆ ವಿಚಾರ ಬದಿಗಿರಲಿ. ಇಂದಿನ ಗದ್ಯ ವಾಙ್ಮಯದ ಸ್ವರೂಪವನ್ನು ನೋಡುವ. ಸಣ್ಣ ಕಥೆ, ನೀಳ್ಗತೆ, ಕಾದಂಬರಿ, ಪ್ರಬಂಧ, ವಿಮರ್ಶೆ ಮುಂತಾದ ನಾನಾ ರೂಪಗಳಲ್ಲಿ ಪ್ರವಹಿಸುವ ಗದ್ಯ ನಿರ್ಝರಿಯಲ್ಲಿ ಪ್ರಕೃತ ಮೊದಲಿನ ಮೂರು ಸ್ವರೂಪಗಳನ್ನು ಮಾತ್ರ ವಿವೇಚಿಸಬೇಕಾಗಿದೆ.

ಮುದುಕಿ ಮೊಮ್ಮಗನನ್ನು ಬಳಿಯಲ್ಲಿ ಮಲಗಿಸಿಕೊಂಡು ಕತೆ ಪ್ರಾರಂಭಿಸುತ್ತಾಳೆ—"ಒಂದೂರಿನಲ್ಲಿ ಒಬ್ಬ ರಾಜನಿದ್ದ. ಆತನಿಗೊಬ್ಬ ಮಗನಿದ್ದ... " ಎಂದು! 'ಹೊಂ'ಗುಟ್ಟುತಿದ್ದ ಮಗುವಿಗೆ ಬೇಗನೆ ನಿದ್ದೆ ಬಂದುಬಿಟ್ಟಿತಾದರೆ, ಅದು ಸಣ್ಣ ಕಥೆಯಾಯಿತು. ಯಾಕೋ— ಯಾವುದೋ ಗ್ರಹಚಾರ ಕೆಟ್ಟು ನಿದ್ರೆ ಸ್ವಲ್ಪ ಸಾವಕಾಶವಾಗಿ ಬಿಟ್ಟಿತಾದರೆ ಅದು ನೀಳ್ಗತೆಯಾಯಿತು. ಆ ರಾತ್ರಿ ನಿದ್ರೆಯೇ ಬರದಿದ್ದರೆ ಆಗ ಕಾದಂಬರಿಯುಂಟಾಯಿತು! ಹೀಗಾಗಿ ಬಿಟ್ಟಿದೆ, ಆ ಮೂರು ಗದ್ಯ ಪ್ರಭೇದಗಳ ಉತ್ಪತ್ತಿ!

ಆದರೆ ಅದು ಸಮಂಜಸವಲ್ಲ. ಸಾವಿರ ಪುಟಗಳ ಬೃಹತ್ಕಾದಂಬರಿಯೊಂದರಲ್ಲಿ ಕಾದಂಬರಿಯ ಲಕ್ಷಣಗಳೇನೂ ಕಂಡು ಬಾರದೆ ಬರಿಯ ನೀಳ್ಗತೆ ಎಂಬ ಬಿರುದಿಗೆ ಮಾತ್ರ ಅದು ಯೋಗ್ಯವಾಗಿರಬಹುದು. ಐವತ್ತು ಪುಟಗಳ ನೀಳ್ಗತೆ ಸಣ್ಣ ಕಥೆಯಂತಿರಬಹುದು. ಎಂಭತ್ತು ಅಡಿ ಎತ್ತರದ ಈಚಲು ಮರವನ್ನು ಕಟ್ಟಿಗೆಗಾಗಿ ಉಪಯೋಗಿಸಬಹುದು. ಆದರೆ ಅರಿತಪ್ರಾಣದ ಮಲ್ಲಿಗೆಯ ಬಳ್ಳಿ ಉದ್ಯಾನದಲ್ಲಿ ನೆಟ್ಟು ಬೆಳೆಸಬಹುದು. ಗಾತ್ರದಲ್ಲಿಲ್ಲ ಗುಣ ದೈತ್ಯನಂತೆ ಲಂಗು ಲಗಾಮಿಲ್ಲದೆ ಬೆಳೆದು ಬಿಟ್ಟರೆ ಸಾಲದು. ರಕ್ತ ಬೀಜಾಸುರನ ರಕ್ತ ಬಿಂದುವಿಗೆ ಸಾವಿರಾರು ದೈತ್ಯರನ್ನು



ಹವಾಮಾನ ಪರಿಶೀಲಕ ಉಪಗ್ರಹವಿದು. ಟ್ಯಾರೊ ೩ ಎಂಬುದಿದರ ಹೆಸರು.

ಹುಟ್ಟಿಸುವ ಶಕ್ತಿಯಿತ್ತಂತೆಯಂತೆ; ಆದುದರಿಂದ ಸಂಖ್ಯೆಯಲ್ಲಿಯೂ ಪ್ರಯೋಜನವಿಲ್ಲ.

ಸಣ್ಣ ಕಥೆಯೆಂದರೆ ಒಂದು ಸುಂದರ ಕವಿತೆಯಂತಿರಬೇಕು. ಶಬ್ದ ಶಬ್ದಗಳಲ್ಲಿ ಝೇಂಕಾರ ಮೊಳಗಬೇಕು. 'ಸಣ್ಣ ಕಥೆ' ಎಂಬ ಶಬ್ದವೇ ಅದರ ಗಾತ್ರವನ್ನು ಸೂಚಿಸುತ್ತಿದೆ. ಎಷ್ಟು ಸಣ್ಣದಾಯಿತೋ ಅಷ್ಟು ಒಳ್ಳೆಯದು- ಅದರಲ್ಲಿ ಪ್ರತಿಪಾದಿಸಲ್ಪಡುವ ಯಾವುದಾದರೂ ಒಂದು ಗುರಿ, ಉದ್ದೇಶ— ಅದನ್ನು ಹಿಂಜಿ ಬಿಡಿಬಿಡಿಯಾಗಿ ಬಿಡಿಸಿ ವಾಚಕರಿಗೆ ಅದರ ಸಂಪೂರ್ಣ ಅನುಭವಮಾಡಿ ಕೊಟ್ಟು ಆ ಸಮಸ್ಯೆಯನ್ನು ಯುಕ್ತ ರೀತಿಯಲ್ಲಿ ಬಗೆಹರಿಸಬೇಕು. ಹಾಗೆ ಪ್ರಧಾನ ಸಮಸ್ಯೆಯೊಂದನ್ನು ಹಿಡಿದು ಅದನ್ನು ವಿವೇಚಿಸಿ ಬಗೆಹರಿಸುವುದೇ ಸಣ್ಣ ಕಥೆಯ ಉದ್ದೇಶವಾಗಿರಬೇಕು. ಮಗು ನಿದ್ರೆ ಹೋಗುವುದು ಉದ್ದೇಶವಲ್ಲ. ಆ ಸಮಸ್ಯೆಯ ಪೂರ್ತಿಗೆ ಎಷ್ಟು ಅವಶ್ಯವೋ ಅಷ್ಟು ಮಾತ್ರ ಕಥೆಗಾರ ಕೈ ಚಾಚಬೇಕು ಅನಾವಶ್ಯಕ ವಿಚಾರಗಳ ಕಡೆಗೆ ಕಣ್ಣೆತ್ತಿಯೂ ನೋಡಬಾರದು ಪ್ರಧಾನ ಸಮಸ್ಯೆಗೆ ಪುಷ್ಟಿ ದೊರೆಯಲೆಂದೋ ಪಾತ್ರ ಚಿತ್ರಣದ ಸಹಾಯಕ್ಕೆಂದೋ ಅಪ್ರಸ್ತುತ ಘಟನೆಗಳನ್ನೂ ಸನ್ನಿವೇಶಗಳನ್ನೂ ಕಲ್ಪಿಸಿ ತರಬಹುದು. ಆದರೆ ಅದಿಲ್ಲದೆಯೂ ಸಮಸ್ಯೆ ವಿಕಸಿತ ವಿವೇಚನೆಯಾಗುವುದಾದರೆ, ಆ ಘಟನೆಗಳೂ ಸನ್ನಿವೇಶಗಳೂ ಅನಾವಶ್ಯಕವೆಂದು ಕಂಡು ಬರುವುದಾದರೆ,—ಏನೇನೂ ದಾಕ್ಷಿಣ್ಯಬೇಡ--ಉದ್ದನೆಯ ಗೆರೆಯಿಂದ ಆ ಭಾಗಗಳನ್ನು ಹೊಡೆದೇ ಹಾಕಿ ಬಿಡಬಹುದು. ನಿರೂಪಿತ ಕಥಾ ಭಾಗಗಳಲ್ಲೂ ಶೈಲಿ ಚೊಕ್ಕಟವಾಗಿರಬೇಕು. ಅಸಂದಿಗ್ಧ ಮತ್ತು ಅನಾವಶ್ಯಕ ಹಾಗೂ ಪುನರುಕ್ತಿಯ ವಾಕ್ಯಗಳು ಒಂದೇ ಒಂದು ಕೂಡಾ ಬರಬಾರದು! ಪಾತ್ರ ಚಿತ್ರಣ ಪರಿಪೂರ್ಣವಾಗಿರಬೇಕಲ್ಲದೆ ನೈಸರ್ಗಿಕವಾಗಿರಬೇಕು. ಹೀಗೆ ಕೆತ್ತಿ ಮೆತ್ತಿ ಸೂಕ್ಷ್ಮ ಕುಂದಣ ಕೆಲಸಗಳಿಂದ ಅಲಂಕೃತವಾದ ದಿವ್ಯ ಕಲಾಕೃತಿಯೇ ಸಣ್ಣ ಕಥೆ.

ಇವು ಬಹಳ ಅಪೂರ್ಣ. ಆದರೆ ಉಪಾಯವಿಲ್ಲ. ಇಂತಹ ಸಣ್ಣ ಕಥೆಗಳಲ್ಲಿ ಯಾವುದಾದರೂ ಒಂದು ಸಮಸ್ಯೆ ಮಾತ್ರ ಚೆನ್ನಾಗಿ ಬಿಡಿಸಲ್ಪಟ್ಟಿರುತ್ತದೆ. ಅಲ್ಲಿ ಬರಬಹುದಾದ ಉಳಿದೆಲ್ಲ ಸಮಸ್ಯೆಗಳೂ ಗೌಣ. ಅಂತಹ ಗೌಣ ಸಮಸ್ಯೆಗಳನ್ನು ಬಿಡಿಸುವ ಗೋಜಿಗೆ ಕತೆಗಾರ ಹೋಗುವುದಿಲ್ಲ.

(೧೦ನೇ ಪುಟ ನೋಡಿರಿ)

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;

ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ

ಆಡಳಿತ ಆಫೀಸು: ಮಂಗಳೂರು-1.

ಕರ್ನಾಟಕ ರಾಜ್ಯದಲ್ಲಿ

ಮಂತ್ರಿ ಮಂಡಳದ ವಿಸ್ತರಣೆ ಬೇಡ

ಎ. ಜಿ. ರಾಮಚಂದ್ರರಾವ್ ಸಮಿತಿಯು ಕರ್ನಾಟಕದ ಸಂಪನ್ಮೂಲಗಳು ಮತ್ತು ಉಳಿತಾಯದ ಬಗ್ಗೆ ನೇಮಿತವಾಗಿದ್ದು ಅದು ತನ್ನ ವರದಿಯನ್ನು ಈಗಾಗಲೇ ರಾಜ್ಯ ಸರಕಾರಕ್ಕೆ ಅರ್ಪಿಸಿದೆ. ಈ ವರದಿಯಲ್ಲಿ ಸಂಪನ್ಮೂಲಗಳನ್ನು ಹೆಚ್ಚಿಸಲು ಕೆಲವೊಂದು ಕರಾಕರಣೆಯ ಸಲಹೆಯನ್ನು ಮಾಡಿರುತ್ತದೆ. (ಮುಖ್ಯವಾಗಿ, ನೀರಾವರಿ ತೆರಿಗೆ, ಭೂಕಂದಾಯ ತೆರಿಗೆಗಳ ಹೆಚ್ಚಳ ಇತ್ಯಾದಿ)·

ಇಡಿಯ ಭಾರತದಲ್ಲಿ ಎರಡು ಪಂಚವಾರ್ಷಿಕ ಯೋಜನೆಗಳು ನಡೆದಿದ್ದು ದೇಶದ ಆರ್ಥಿಕ ಮಟ್ಟವು ಬಹಳಷ್ಟು ಹೆಚ್ಚಿರುವುದಾದರೂ ನಮ್ಮ ರಾಜ್ಯದಲ್ಲಿ ಮಾತ್ರ ಅದು ೩॥ ಸೇಕಡಾದಷ್ಟು ಮಾತ್ರ ಹೆಚ್ಚಿರುವುದನ್ನು ಸಮಿತಿಯು ಕಂಡು ಹಿಡಿದಿದೆ. ಎಂದರೆ, ಈ ಎರಡು ಯೋಜನೆಗಳಿಂದ ರಾಜ್ಯದ ಆರ್ಥಿಕ ಅಭಿವೃದ್ಧಿಯ ವೇಗವನ್ನು ಅಖಿಲ ಭಾರತೀಯ ಮಟ್ಟಕ್ಕೆ ಏರಿಸುವುದು ನಮಗೆ ಸಾಧ್ಯವಾಗಿಲ್ಲ. ಇದು ನಮ್ಮ ದುರದೃಷ್ಟ.

ಇದಕ್ಕೆ ಕಾರಣವೇನು? ನಮ್ಮ ರಾಜ್ಯದಲ್ಲಿಯೂ ಉಳಿದ ರಾಜ್ಯಗಳಂತೆಯೇ ಯೋಜನೆಯ ಹೆಸರಿನಲ್ಲಿ ಹಣವು ಖರ್ಚಾಗಿದೆ; ಆದರೆ; ಸುರಿದ ರೂಪಾಯಿಗಳಿಂದ ಆರ್ಥಿಕೋನ್ನತಿ ಮಾತ್ರ ಗಣನೀಯವಾಗಿ ಆಗಿಲ್ಲ. ಎಂದರೆ, ಯೋಜನೆಗಳಿಗಾಗಿ ಹಣ ತೊಡಗಿಸುವಾಗ, ಆ ಯೋಜನೆಗಳಿಂದ ದೊರೆಯಬಹುದಾದ ಲಾಭ-ಪ್ರಯೋಜನಗಳನ್ನು ನಾವು ಗಮನಿಸಿದಂತೆ ತೋರಿ ಬರುವುದಿಲ್ಲ· ದೊಡ್ಡ ದೊಡ್ಡ ಯೋಜನೆಗಳು ಅತ್ಯಧಿಕ ವೆಚ್ಚದಿಂದ ನಡೆಯುತ್ತಿರುವುದು ನಿಜವಾದರೂ ಅವು ಲಾಭವನ್ನು ತೋರಿಸಬೇಕಾದರೆ ಬಹಳಷ್ಟು ಸಮಯವು ಬೇಕಾಗುವುದು. ಆದುದರಿಂದ ಬೃಹದ್ಯೋಜನೆಗಳೊಡನೆ ಚಿಕ್ಕ ಪುಟ್ಟವುಗಳಿಗೂ ಪ್ರಾಶಸ್ತ್ಯವಿತ್ತು, ತತ್ಕಾಲದಲ್ಲಿಯೇ ಆರ್ಥಿಕ ಲಾಭವು ದೊರೆಯುವಂತೆ ಮಾಡುವುದು ಅತ್ಯಗತ್ಯ. ಬೃಹದ್ರೂಪದ ಅಣೆಕಟ್ಟು, ವಿದ್ಯುದ್ಯೋಜನೆ, ಕೈಗಾರಿಕೆಗಳು ಸ್ಥಾನ ಗಳಿಸುವಂತೆಯೇ ಅಲ್ಪ ವೆಚ್ಚದಿಂದ ಲಾಭ ತೋರಿಸುವ ಸಣ್ಣ ನೀರಾವರಿ ಯೋಜನೆಗಳು, ಗುಡಿ ಕೈಗಾರಿಕೆಗಳು ಮೊದಲಾದುವು ಯೋಜನೆಗಳಲ್ಲಿ ಹೆಚ್ಚು ಹೆಚ್ಚಾಗಿ ಅಡಕವಾಗಿರಬೇಕು. ಇದರಿಂದ ರಾಜ್ಯದ ಆರ್ಥಿಕ ಮಟ್ಟವು ಉನ್ನತವಾಗುವುದು ಖಂಡಿತ.

ಉಳಿತಾಯದ ಬಗ್ಗೆ ವಿಮರ್ಶಿಸಿದ ಎ. ಜಿ. ಆರ್. ಸಮಿತಿಯ ವರದಿಯು ತುಸು ಕಟುವಾಗಿಯೂದರೂ ಯಥಾರ್ಥವಾದುದನ್ನೇ ಹೇಳಿದೆ. ನಮ್ಮ ರಾಜ್ಯಕ್ಕೆ ಹಿಂದಿನ ವರ್ಷದಲ್ಲಿ ೧೦ ಮಂತ್ರಿಗಳೂ ೬ ಉಪಮಂತ್ರಿಗಳೂ ಇದ್ದರು· ಈ ಬಾರಿ ೧೪ ಮಂತ್ರಿವರ್ಯರೂ ೧೦ ಉಪಮಂತ್ರಿ ಮಹಾಶಯರೂ ಆಗುವರೆಂದು ನಿರ್ಧಾರವಾಗಿದೆ. ಆದರೆ, ಸಮಿತಿಯು ಮಾತ್ರ ಕೇವಲ ಎಂಟೇ ಸದಸ್ಯರಿರುವ ಮಂತ್ರಿ ಮಂಡಳಿಯು ನಮ್ಮ ರಾಜ್ಯಕ್ಕೆ ಸಾಕೆಂದೂ ಉಪಮಂತ್ರಿಗಳು ಅನವಶ್ಯವೆಂದೂ ಅಭಿಪ್ರಾಯಕ್ಕೆ ಬಂದಿದೆ. ಇಷ್ಟು ಮಾತ್ರವಲ್ಲದೆ ಮಂತ್ರಿಗಳು ತಮ್ಮ ಖಾಸಗಿ ಸಿಬ್ಬಂಧಿಯ ಪ್ರವಾಸ ಮತ್ತು ವೆಚ್ಚ, ಇತರ ವೆಚ್ಚಗಳು, ತೋಟಗಳನ್ನು ಸರಿಯಾಗಿಡಲು ವೆಚ್ಚ ಮಾಡುವುದರಲ್ಲಿ ಒಂದು ಪರಿಮಿತಿಯನ್ನು ಹಾಕಿಕೊಳ್ಳಬೇಕು—ಎಂದು ಸಮಿತಿಯು ಹೇಳಿದೆ ಎಂದರೆ, ಈ ಬಾಬುಗಳಲ್ಲಿ ಮಂತ್ರಿಗಳು ಈಗ ಉದಾರರಾಗಿ ವರ್ತಿಸಿ, ಕುಬೇರರಂತೆ ನಡೆದುಕೊಳ್ಳುತ್ತಿರುವರು ಎಂದಂತಾಯಿತು.

ಮಂತ್ರಿಗಳ ಕರ್ತವ್ಯದ ಬಗ್ಗೆ ಅಭಿಪ್ರಾಯ ನೀಡಿದ ಸಮಿತಿಯು ಸರಕಾರದ ಧೋರಣೆಯನ್ನು ರೂಪಿಸುವುದು ಮಾತ್ರ ಇವರ ಕೆಲಸವಾಗಿರಬೇಕು; ಅವನ್ನು ಕಾರ್ಯಕ್ಕಿಳಿಸುವ ಪ್ರಕ್ರಿಯೆಯನ್ನು ಆಯಾಯ ಸರಕಾರಿ ಶಾಲೆಗಳಿಗೆ ಬಿಟ್ಟುಕೊಡಬೇಕು ಎಂದು ಹೇಳುತ್ತದೆ. ಮಂತ್ರಿಗ ಜನಾಭಿಪ್ರಾಯವನ್ನು ತಿಳಿದುಕೊಂಡು, ಅದನ್ನು ಮಥಿಸಿ ಸರಕಾರದ ನೀತಿಯನ್ನು ನಿರ್ಧರಿಸಿ ಕಾರ್ಯದರ್ಶಿಯವರಿಗೆ ತಿಳಿಸುವುದು ಮಾತ್ರವಲ್ಲದೇ ಅವನ್ನು ಕೃತಿಗಿಳಿಸುವಲ್ಲಿ ಕೂಡ ತಮ್ಮ ಕೈ ಹಸರಿಸುವ ಕ್ರಮವೀಗ ಇದೆಯೆಂದಾಯಿತು. ಇದರಿಂದಾಗಿಯೇ ಸರಕಾರದ ಇಲಾಖೆಗಳಲ್ಲಿ ಅಸಮರ್ಥತೆ ಮತ್ತು ಅಶಕ್ತತೆಗಳು ತೋರಿಬಂದುವೆಂದರೆ ತಪ್ಪಾಗಲಾರದು.

ಎ. ಜಿ. ಆರ್. ಸಮಿತಿಯು ಮಂತ್ರಿಗಳ ಬಗ್ಗೆ ವ್ಯಕ್ತಪಡಿಸಿದ ಮೂರೂ ದಭಿಪ್ರಾಯಗಳ ಸಾಧುತ್ವದ ಬಗ್ಗೆ ಆಕ್ಷೇಪಣೆಯಿಲ್ಲ. ಆದರೆ ಮಂತ್ರಿಯಾದವರಿಗೆ ಗುವ ಕನಸು ಕಾಣುತ್ತಿರುವವರಿಗೆ ಮಾತ್ರ ಇವು ಪಥ್ಯವೆನಿಸಲಾರವು ವಿಶಾಲ ಳಹದಿಯ ಹೆಸರಿನಲ್ಲಿ ಸಂಪುಟ ವಿಸ್ತರಣೆಯ ಕಾರ್ಯ ಎಲ್ಲೆಲ್ಲಿಯೂ ನಡೆಯುತ್ತಿರುವ ಈ ಅವಸರದಲ್ಲಿಯೇ ಇದನ್ನು ವಿರೋಧಿಸುವ ಈ ವರದಿಯ ಸಿಫಾರಸು ಅಕಾಲಿಕವೆಂದು ಸರಕಾರ ತೀರ್ಮಾನಕ್ಕೆ ಬಂದರೆ, ಆಶ್ಚರ್ಯವಿಲ್ಲ. ಒಂದು ತಿಂಗಳಾದರೂ ಸಂಪೂರ್ಣ ಮಂತ್ರಿ ಮಂಡಳ ರಚನೆ ಮಾಡುವಲ್ಲಿ ಅಸಮರ್ಥರಾದ ನಮ್ಮ ಮುಖ್ಯ ಮಂತ್ರಿಯವರು ಈಗಾಗಲೇ ೮ ಮಂತ್ರಿಗಳು ಮತ್ತು ೨ ಉಪಮಂತ್ರಿಗಳನ್ನು ನೇಮಿಸಿಕೊಂಡಿರುವುದೇ ಹೆಚ್ಚಾಯಿತು. ಜತೆಗುಂಪಿನವರನ್ನು ಸೇರಿಸಲೇ ಬೇಕೆಂದಿದ್ದರೆ, ಇದ್ದವರಲ್ಲಿಯೇ ಒಬ್ಬಿಬ್ಬರನ್ನು ಕಿತ್ತು ಹಾಕಿ ಸೇರ್ಪಡಿಸಿಕೊಳ್ಳಬೇಕು· ಮಂತ್ರಿ—ಉಪಮಂತ್ರಿಗಳ ಸಂಬಳ-ಭತ್ತೆಯೆಂದು ವೆಚ್ಚವಾಗುವ ಅತಿ ದೊಡ್ಡದಾದ ಮೊತ್ತವನ್ನು ಉಳಿಸಬೇಕು. ಮುಖ್ಯವಾಗಿ ಮಂತ್ರಿಗಳು 'ನಾರದ ಸಂಚಾರ'ವನ್ನು ನಿಲ್ಲಿಸಿ ಬಿಟ್ಟರೆ ಎ. ಜಿ. ಆರ್. ಸಮಿತಿಯ ಸಿಫಾರಸೊಂದು ಸಾರ್ಥಕವಾಗುವುದು. ಜನತೆಯು ಕಷ್ಟದಿಂದ ತೆರುತ್ತಿರುವ ಕರರೂಪದ ಹಣವು ಅನವಶ್ಯವೆಂಬಂತೆ ಪೋಲಾಗದಂತೆ ನೋಡಿಕೊಳ್ಳುವುದು ಸರಕಾರದ ಆದ್ಯ ಕರ್ತವ್ಯವಿರುತ್ತದೆ. ಇದಕ್ಕೆ ತಪ್ಪಿದರೆ ಜನತೆಯಿಂದಲೇ ಬುದ್ಧಿ ಕಲಿಯಬೇಕಾಗುವುದು.

—ರಾಶಿ.

ಪ್ರಕಟಣೆ

ಉಡ್ಪಿ ತಾಲ್ಲೂಕು ನಂಬ್ರ ೭೮ನೆ ಬಡಗಬೆಟ್ಟು ಗ್ರಾಮದ ಚಿಟ್ಪಾಡಿ ಹೊಸಮನೆಯಲ್ಲಿರ್ವ ವೆಂಕಪ್ಪ ಸೆಟ್ರ ಅಳಿಯಂದಿರು ಬೊಗ್ರ ಯಾನೆ ಭೋಜ ಸೆಟ್ಟಿ, ರಾಮ ಸೆಟ್ಟಿ ಶಂಕರ ಸೆಟ್ಟಿ ಇವರ ಅಳಿಯ ಸುಂದರ ಸೆಟ್ಟಿ, ಕೂಡಾ 4 ಜನರು ಸರ್ವ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ; ನಾವು ಮತ್ತು 1ರಿಂದ 3ನೆ ವರೆಗಿನವರ ಅಣ್ಣ ಕೊರಗ ಸೆಟ್ಟಿ ಸಹ ಒಂದೇ ಅಳಿಯಸಂತಾನದ ಅವಿಭಕ್ತ ಕುಟುಂಬದ ಮೆಂಬರರಾಗಿರುತ್ತೇವೆ. ಕುಟುಂಬದ ಸಕಲ ಆಡಳ್ತೆಯನ್ನು ನಮ್ಮ ಪೈಕಿ 1ನೆ ಭೋಜ ಸೆಟ್ಟಿಯು ನೋಡಿಕೊಂಡು ಬರ್‍ರುವಂತಾಗಿರುತ್ತದೆ. ನಮ್ಮ ಕುಟುಂಬಕ್ಕೆ ಈ ವರೆಗೆ ಯೇನೂ ಸಾಲವಿರುವುದಿಲ್ಲ ಸಾಲಮಾಡುವ ಅಗತ್ಯ ಕೂಡಾ ಇರುವುದಿಲ್ಲ ನಮ್ಮ ಕುಟುಂಬಕ್ಕೆ ನಷ್ಟ ಉಂಟುಪಡ್ಸಿ ಕೆಡಕು ಮಾಡುವ ಇರಾಧೆಯಿಂದ್ಲೊ ತಾನು ಅಕ್ರಮ ಲಾಭ ಪಡೆಯುವ ಇರಾಧೆಯಿಂದ್ಲೊ ಸದ್ರಿ ಕೊರಗ ಸೆಟ್ಟಿ ಸಾಲಮಾಡುವ ಅಭಿಪ್ರಾಯದಲ್ಲಿದ್ದರಾಗಿ ನಮಗೆ ತಿಳಿದುಬಂದಿದೆ ನಮ್ಮ ಕುಟುಂಬದ ಬಗ್ಗೆ ಯೇನೂ ಸಾಲಮಾಡುವ ಅವಶ್ಯಕತೆ ಇರುವುದಿಲ್ಲವಾದ್ರಿಂದ ನಾವೆಲ್ಲರೂ ಸೇರದೆ ಸದ್ರಿ ಕೊರಗ ಸೆಟ್ರು ಒಬ್ಬರೇ ಯೇನಾದರೂ ಸಾಲಮಾಡಿದ್ರೆ, ಅವುಗಳು ನಮ್ಮ ಕುಟುಂಬದ ಮೇಲಾಗಲಿ ಕುಟುಂಬದ ಆಸ್ತಿಗಳ ಮೇಲಾಗಲಿ, ಬದ್ಧಪಡಿಸತಕ್ಕದ್ದಲ್ಲವೆಂತ್ಲೂ ಸದ್ರಿ ಕೊರಗ ಸೆಟ್ರಿಗೆ ಯಾರೂ ಸಾಲ ಕೊಡಕೂಡದೆಂತ್ಲೂ ಸರ್ವ ಜನರಿಗೂ ಈ ಮೂಲಕ ತಿಳಿಸಿರುತ್ತೇವೆ. ಇದಕ್ಕೆ ವಿರೋಧವಾಗಿ ಸದ್ರಿ ಕೊರಗ ಸೆಟ್ರಿಗೆ ಯಾರಾದರೂ ಸಾಲ ಕೊಟ್ಟಲ್ಲಿ ಅಥವಾ ನಮ್ಮ ಕುಟುಂಬದ ಆಸ್ತಿಗಳನ್ನು ಸಾಲಗಳಿಗೆ ಜೊತೆಪಡ್ಸಿದಲ್ಲಿ ಯಾ ಪರಾಧೀನ ಮಾಡಿದ ಸಂದರ್ಭದಲ್ಲಿ ಅವುಗಳೆಲ್ಲ ಸಿಂಧಾಗತಕ್ಕದ್ದಲ್ಲ ವ ನಮ್ಮನ್ನಾಗಲಿ ನಮ್ಮ ಕುಟುಂಬವನ್ನಾಗಲಿ-ಕುಟುಂಬದ ಆಸ್ತಿಗಳನ್ನಾಗಲಿ ಬದ್ಧಪಡಿಸತಕ್ಕದ್ದಲ್ಲವೆಂಬ ಸಂಗ್ತಿ ಸರ್ವ ಜನರಿಗೂ ಈ ಮೂಲಕ ತಿಳಿಸಿರುತ್ತೇವೆ.

ಭೋಜ ಶೆಟ್ಟಿ ರುಜು
ರಾಮ ಶೆಟ್ಟಿ ರುಜು
ಶಂಕರ ಶೆಟ್ಟಿ ರುಜು
Sundar Shetty C·

ಉಡ್ಪಿ, 31-3-62.

ಕೃಷ್ಣ ಮೆನನ್ನರು ಭಾರತದಲ್ಲಿ ಮನೆ ಮಾತಾಗಿದ್ದಾರೆ.

ಅವರ ಆರಂಭದ ಜೀವನ, ಇಂಗ್ಲೆಂಡಿನಲ್ಲಿ ಕಳೆದ ಜೀವನ, ನೆಹರೂ ಮತ್ತು ಮೆನನ್, ಗೋವಾ ಮತ್ತು ಮೆನನ್, ರಾಜಕೀಯ ಆಧ್ಯಾತ್ಮಿಕಗಳ ನಡುವೆ ನಮ್ಮ ರಕ್ಷಣಾ ಮಂತ್ರಿ ಮೆನನ್,

ಇವೆಲ್ಲವುಗಳ ಜೊತೆಗೆ ಪ್ರಧಾನಿ ನೆಹರೂ ಅವರ ಅಭಿಪ್ರಾಯ.

ಎಪ್ರಿಲ್ ತಿಂಗಳ **ತಾಯಿನುಡಿ** ವಿಶೇಷ ಸಂಚಿಕೆಯಲ್ಲಿ

ಸರ್ವಶ್ರೀ ವ್ಯಾಸರಾಯ ಬಲ್ಲಾಳ, ಬಲರಾಜ ಸಹಾನಿ, ಕೆ. ಎ. ಅಬ್ಬಾಸ್, ಶ್ರೀನಿವಾಸ ಹಾವನೂರ, ನಿರಂಜನ, ರಾಮಚಂದ್ರ ಉಚ್ಚಿಲ್, ಕುಲಮರ್ವ ಬಾಲಕೃಷ್ಣ, ಸಿ. ಯ. ಕುಲಕರ್ಣಿ, ಭೋಜರಾಜ ಶೆಟ್ಟಿ, ವೆಂಕಟರಾಜ ಪಾನಸೆ, ಸಿ. ಆರ್. ರಾವ್, ಶಮ್‌ಸುದ್ದೀನ್, ಅನಂತರಾಮ ಯೇತಡ್ಕ ಹಾಗೂ ಇತರ ಹಿರಿಯ ಕಿರಿಯ ಲೇಖಕರ ಬರೆಹಗಳು,

ರೂ. 3-50 ನ.ಪೈ. ಕಳಿಸಿ ಚಂದಾದಾರರಾಗುವವರಿಗೆ ಈ ವಿಶೇಷ ಸಂಚಿಕೆಯನ್ನು ಉಚಿತವಾಗಿ ಕಳಿಸಲಾಗುವುದು. ಬಿಡಿ ಪ್ರತಿ ಬೇಕಾದವರು 75 ನ. ಪೈಸೆ ಕಳಿಸಬೇಕು.

ಜಾಹಿರಾತು ದರ, ಇತರ ಮಾಹಿತಿಗಳಿಗೆ ಬರೆಯಿರಿ:

Business Manager, Tainudi
Prospect Building, 321, Frere Road, Fort, Bombay.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

'ಖೀರಾ' ಉಕ್ಕಿನ ಫರ್ನಿಚರುಗಳು, ಮಂಚ-ಸೋಫಾಗಳು, ವೈವಿಧ್ಯಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮಗ್ರಿಗಳು ಇತ್ಯಾದಿ ಇತ್ಯಾದಿಗಳಿಗೆ ವಿಚಾರಿಸಿರಿ —

ಶಾಸ್ತ್ರಿ & ಕೊ

ಹಂಪನಕಟ್ಟೆ,
ಮಂಗಳೂರು—1

ನವಯುಗ

ವರುಷ ೪೧ | ಉಡುಪಿ ೧೨.೪.'೬೨ | ವಾರ ೫೧

ಕೇಂದ್ರ ಸಚಿವ ಸಂಪುಟ

ಪ್ರಧಾನ ಮಂತ್ರಿಯಾಗಿ ಆಯ್ಕೆಗೊಂಡ ಪಂ| ನೆಹರುರವರ ಸಲಹೆಯಂತೆ ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಕೇಂದ್ರ ಸರಕಾರದ ಕ್ಯಾಬಿನೆಟ್ ಮತ್ತು ರಾಜ್ಯ ಮಟ್ಟದ ಮಂತ್ರಿಗಳನ್ನು ನೇಮಿಸಿದ್ದಾರೆ. ಈ ಬಾರಿ ಕ್ಯಾಬಿನೆಟ್ ಮಂತ್ರಿಗಳ ಸಂಖ್ಯೆಯು ಹಿಂದಿನೆರಡು ಬಾರಿಯವುಗಳಿಗಿಂತಲೂ ಹೆಚ್ಚಾಗಿದ್ದು ೧೭ ಆಗಿದೆ ರಾಜ್ಯಮಟ್ಟದಲ್ಲಿ ಈಗ ಕೇವಲ ಆರು ಜನರ ಹೆಸರಿದ್ದು. ಉಳಿದ ಕೆಲವು ಹಾಗೂ ಉಪ ಮಂತ್ರಿಗಳ ಹೆಸರುಗಳನ್ನು ಮುಂದಕ್ಕೆ ಪ್ರಕಟಿಸಲಾಗುವುದೆಂದು ತಿಳಿಯುತ್ತದೆ. ಪ್ರಧಾನಿಯವರ ಹೇಳಿಕೆಯಂತೆ ಸಂಸತ್ತಿನ ಅಧಿವೇಶನವು ಪ್ರಾರಂಭವಾದ ಬಳಿಕ ಸದಸ್ಯರ ಚಟುವಟಿಕೆಗಳನ್ನು ವೀಕ್ಷಿಸಿ, ಅವರಲ್ಲಿ ಸಮರ್ಥರಾದ ಹೊಸ ರಕ್ತದವರನ್ನು ಈ ಸ್ಥಾನಗಳಿಗೆ ನೇಮಿಸಿಕೊಳ್ಳಲಾಗುವುದು ನೆಹರೂರವರು ಮೊದಲೇ ಹೇಳಿದ್ದ ಹೊಸ ರಕ್ತದ ಹೊಸ ಸದಸ್ಯರಿಗೆ ನೀಡುವ ಪ್ರಾತಿನಿಧ್ಯವೆಂದರೆ, ಪ್ರಾಯಃ ಉಪ ಮಂತ್ರಿಗಳ ಸ್ಥಾನವೆಂದು ತೋರುತ್ತದೆ; ಇದು ಉಚಿತವೂ ಹೌದು. ಹಾಗಾದಲ್ಲಿ ಮೇ ಮಧ್ಯಾವಧಿಯಲ್ಲಷ್ಟೇ ಈ ಹೆಸರುಗಳೆಲ್ಲವೂ ಪ್ರಕಟಗೊಳ್ಳುವುದು ಸಾಧ್ಯವೆನಿಸಬಹುದು.

ಕಳೆದ ಬಾರಿ ೧೩ ಜನರಿದ್ದ ಕ್ಯಾಬಿನೆಟ್ ಇಂದು ೧೭ ಜನರಿಂದ ಕೂಡಿದೆ. ಇದಕ್ಕೆ ಕೆಲವೊಂದು ಕಾರಣಗಳೂ ಇಲ್ಲದಿಲ್ಲ. ತನ್ನ ಮಂತ್ರಿ ಮಂಡಳಿಯಲ್ಲಿ ಎಲ್ಲ ರಾಜ್ಯಗಳಿಗೂ ಪ್ರಾತಿನಿಧ್ಯ ನೀಡಬೇಕೆಂದು ಪ್ರಧಾನಿಯವರ ಅಪೇಕ್ಷೆ. ಅದಕ್ಕಾಗಿ ಸಂಖ್ಯೆಯನ್ನು ಹೆಚ್ಚಿಸಬೇಕಾಯಿತು. ರಾಜ್ಯಪಾಲರಾಗಿ ಹೋದ ಡಾ| ಸುಬ್ಬರಾಯನ್ನರನ್ನು ಬಿಟ್ಟು ಉಳಿದ ಹಿಂದಿನ ೧೧ ಮಂತ್ರಿಗಳು, ಹಿಂದಿನ ರಾಜ್ಯಮಟ್ಟದ ೫ ಮಂತ್ರಿಗಳು ಈ ಬಾರಿಯ ಕ್ಯಾಬಿನೆಟ್‌ನಲ್ಲಿ ಸೇರಿಕೊಂಡಿದ್ದಾರೆ. ಇವರಲ್ಲದೆ ಮದ್ರಾಸದ ಅರ್ಥ ಮಂತ್ರಿಗಳಾಗಿ ಹೆಸರುಗಳಿಸಿದ ಶ್ರೀ ಸುಬ್ರಹ್ಮಣ್ಯಂರವರು ಕ್ಯಾಬಿನೆಟ್ ಮಟ್ಟದ ಮಂತ್ರಿಯಾಗಿದ್ದಾರೆ. ೧೪ ರಾಜ್ಯ ಮಂತ್ರಿಗಳ ಪೈಕಿ ಶ್ರೀ ಕೇಸ್ಕರರು ಚುನಾವಣೆಯಲ್ಲಿ ಸೋತಿದ್ದಾರೆ. ಉಳಿದವರಲ್ಲಿ ಐವರು ಕ್ಯಾಬಿನೆಟ್ ಮಂತ್ರಿಗಳಾಗಿ ಮುಂಬಡ್ತಿ ಪಡೆದರೆ, ಐವರು ಹಿಂದಿನಂತೆಯೇ ಮುಂದುವರಿದಿದ್ದಾರೆ. ಮತ್ತುಳಿದ ಶ್ರೀಗಳಾದ ಬಿ. ಎನ್. ದಾತಾರ್, ದ. ಕ. ಕರಮರಕರ ಮತ್ತು ಪಂಜಾಬರಾವ ದೇಶಮುಖರನ್ನು ಕೈಬಿಡಲಾಗಿದೆ. ಆದರೂ ಇವರಲ್ಲಿ ದಾತಾರರನ್ನು ಮರಳಿ ಸೇರಿಸುವ ಆಲೋಚನೆಯಿದೆಯೆಂದೂ ತಿಳಿಯುತ್ತದೆ. ಹೊಸ ದಿಲ್ಲಿಯ ಡಾ| ಸುಶೀಲಾ ನಾಯರರ ಆಯ್ಕೆಯೊಂದನ್ನು ಬಿಟ್ಟರೆ ಉಳಿದೆಲ್ಲ ನೇಮಕವೂ ಸರ್ವಸಾಮಾನ್ಯವಾಗಿ ನಿರೀಕ್ಷಿತವೆಂಬಂತೆಯೇ ಇವೆ. ಕರಮರಕರರಿಗೆ ಲೋಕಸಭೆಯ ಟಿಕೇಟು ನೀಡುವಾಗ ಉಂಟಾದ ವಾದಪ್ರತಿವಾದಗಳಿಂದ ಅವರು ಬಿಟ್ಟುಹೋದುದು ಆಶ್ಚರ್ಯವೆಂಬಂತಿಲ್ಲವಾದರೂ ದಾತಾರರ ಹೆಸರು ರಾಜ್ಯಮಂತ್ರಿಗಳ ಮೊದಲಿನ ಯಾದಿಯಲ್ಲಿಲ್ಲದಿರುವುದು ಖೇದಾಸ್ಪದವಿರುತ್ತದೆ. ಮಂತ್ರಿಗಳು ಹಂಚಿಕೊಂಡಿರುವ ಶಾಖೆಗಳಲ್ಲಿಯಾದರೂ ಹೆಚ್ಚಿನ ಬದಲಾವಣೆಗಳಾಗಿರುವುದಿಲ್ಲ, ಶ್ರೀ ಜಗಜ್ಜೀವನ ರಾಮರ ರೇಲ್ವೆ ಖಾತೆಯನ್ನು ಸರ್ದಾರ ಸ್ವರ್ಣ ಸಿಂಗರಿಗೆ; ಸಾರಿಗೆ ಸಂಪರ್ಕ ಶಾಖೆಯನ್ನು (ಡಾ| ಸುಬ್ಬರಾಯನರದು) ಜಗಜ್ಜೀವನ ರಾಮರಿಗೂ ನೀಡಿರುವುದು ವಿಶೇಷವೆನಿಸಿದೆ. ಸೋತ ಮಂತ್ರಿ ಕೇಸ್ಕರರ ಬಾನುಲಿ ವಾರ್ತಾ ಶಾಖೆಯನ್ನು ಗೋಪಾಲ ರೆಡ್ಡಿಯವರಿಗೂ ಹೊಸತಾದ ಉಕ್ಕು ಮತ್ತು ಭಾರ ಉದ್ದಿಮೆಯ ಶಾಖೆಯನ್ನು ಸುಬ್ರಹ್ಮಣ್ಯಂರಿಗೂ ಕೊಡಲಾಗಿರುವುದು ಮತ್ತೊಂದು ವಿಶೇಷವೆನ್ನಬಹುದು.

ನೆಹರುಗಳ ಈ ಬಾರಿಯ ಮಂತ್ರಿಮಂಡಳವು ಹಿಂದಿನವುಗಳಿಗಿಂತ ಗಾತ್ರದಲ್ಲಿ ದೊಡ್ಡದೆಂದು ಯಾರೂ ಬೇಕಾದರೂ ಹೇಳಬಹುದು. ರಾಜ್ಯಗಳೆಲ್ಲವುಗಳಿಗೆ ಪ್ರಾತಿನಿಧ್ಯ ನೀಡುವ ಹಾಗೂ ಇನ್ನಿತರ ಕಾರಣಗಳಿಂದ ಅವರಿಗೆ ಕ್ಯಾಬಿನೆಟ್ ಮಂತ್ರಿ ಸಂಖ್ಯೆಯನ್ನು ಹೆಚ್ಚಿಸಬೇಕಾಯಿತು; ಇದಕ್ಕಾಗಿ ಹಿಂದಿನ ಸಲ ರಾಜ್ಯ ಮಂತ್ರಿಗಳೇ ನೋಡಿಕೊಳ್ಳುತ್ತಿದ್ದ ಕೆಲವೊಂದು ಶಾಖೆಗಳನ್ನು ಕ್ಯಾಬಿನೆಟ್ ದರ್ಜೆಗೆ ಎತ್ತರಿಸಲಾಯಿತು. ಭಾರತದಂತಹ ಹಿರಿಯ ರಾಜ್ಯಕ್ಕೆ ಈ ಸಂಪುಟವು ದೊಡ್ಡದೆನ್ನುವಂತಿಲ್ಲವಾದರೂ ಕೆಲವೊಂದು ವ್ಯಕ್ತಿಗಳಿಗಾಗಿ ಕೆಳಮಟ್ಟದ ಮಂತ್ರಿಗಳಿಂದಲೇ ಸರಿಯಾಗಿ ಕಾರ್ಯ ನಡೆಯುತ್ತಿದ್ದರೂ ಒಂದೆರಡು ಶಾಖೆಗಳ ಮಟ್ಟವನ್ನೂ ಎತ್ತರಿಸಲಾದುದು ಅಪೇಕ್ಷಣೀಯವೆನ್ನುವಂತಿಲ್ಲ. ಆದರೂ ೧೭ ಜನರ ಈ ಸಂಪುಟವನ್ನು ಸ್ವಾಗತಿಸುವುದು ಅವಶ್ಯವಿದೆ. ಈ ಸಲ ಮಂತ್ರಿಗಳ ಹೆಸರು ಪ್ರಕಟಣೆಯಾದ ಕ್ರಮವಾದರೂ ತುಸು ಮಹತ್ವಪೂರ್ಣವಾಗಿದೆಯೆನ್ನಬಹುದು. ಕಾಂಗ್ರೆಸ್‌ನ ಉಪಧುರೀಣ ಪದವಿಗೆ ಹೋರಾಡಲು ಮುಂದಾದ ಜಗಜ್ಜೀವನ ರಾಮ ಮತ್ತು ಮುರಾರ್ಜಿ ದೇಸಾಯಿಯವರ ಹೆಸರು ಮೊತ್ತ ಮೊದಲಿಗಿರುವುದರಿಂದ ಅವರ ಸ್ಥಾನಮಾನಗಳಿಗೆ ಮಹತ್ವವನ್ನು ತಂದಿದೆ. ನೆಹರು ಅವರ ಉತ್ತರಾಧಿಕಾರಿಯು ಶ್ರೀ ದೇಸಾಯಿಯವರೇ ಎಂಬ ಸಂದೇಹಕ್ಕೆ ಆಸ್ಪದವು ದೊರೆತಿದೆ ನೆಹರುರವರಿಗೆ ಅತಿ ಪ್ರಿಯರಾಗಿ ಅವರ ಪ್ರಬಲ ಸಮರ್ಥಕರಲ್ಲೊಬ್ಬರಾದ ಶಾಸ್ತ್ರಿಗಳು ನಾಲ್ಕನೆಯ ಸ್ಥಾನ ಗಳಿಸಿದರೆ, ದೀರ್ಘ ಕಾಲದ ಅನುಭವವಿರುವ ಮುರಾರ್ಜಿ ಪ್ರತಿಸ್ಪರ್ಧಿ ಜಗಜ್ಜೀವನ ರಾಮರು ತೃತೀಯ ಸ್ಥಾನವನ್ನು ಪಡೆದಿದ್ದಾರೆ.

'ಸಚಿವ ಸಂಪುಟದ ಇನ್ನೊಂದು ವೈಲಕ್ಷಣ್ಯವೆಂದರೆ, ಕೃಷ್ಣಮಾಚಾರಿಯವರದು. ಮದ್ರಾಸಿನಿಂದ ಅವಿರೋಧವಾಗಿ ಆಯ್ಕೆಗೊಂಡ ಇವರನ್ನು ಸಂಪುಟದಲ್ಲಿ ಸೇರಿಸಲು ಬಹಳಷ್ಟು ಪ್ರಯತ್ನಿಸಲಾಯಿತೆಂದೂ ಆದರವರು ತನಗೆ ಅರ್ಥ ಶಾಖೆಯನ್ನೇ ಕೊಡಬೇಕೆಂದು ಪಟ್ಟು ಹಿಡಿದುದರಿಂದ ಮತ್ತು ನೆಹರುಗಳಿಗೆ ಇದು ಒಪ್ಪಿಗೆಯಿಲ್ಲವಾದುದರಿಂದ ಅವರ ನೇಮಕವಿಲ್ಲವೆಂದೂ ತಿಳಿಯುತ್ತದೆ. ಮುರಾರ್ಜಿ ದೇಸಾಯಿಯವರು ದ್ವಿತೀಯ ಯೋಜನೆಯ ಅಂತ್ಯದ ವರ್ಷಗಳಿಗೆ ಸಂಪತ್ತನ್ನು ಕಂಡುಹಿಡಿಯಲು ತೋರಿಸಿದ ಬುದ್ಧಿ ಚಾತುರ್ಯದಿಂದ ಅವರಿಂದ ಆ ಶಾಖೆ ತಪ್ಪಿಸಲು ಮನಸ್ಸಿರಲಿಲ್ಲವೆಂದೂ ಗೊತ್ತಾಗಿದೆ. ಇದೇ ರೀತಿಯ ಹಠವನ್ನೂ ಜಗಜ್ಜೀವನರಾಮರು ತೋರಿಸಿದ್ದರೂ ಕೊನೆಗೆ ಸಾರಿಗೆ ಸಂಪರ್ಕಗಳನ್ನು ನೋಡಿಕೊಳ್ಳಲು ಒಪ್ಪಿದರು ಒಂದೇ ಮಾತಿನಲ್ಲಿ ಹೇಳುವುದಾದರೆ, ಹೊಸ ಮಂತ್ರಿ ಮಂಡಳವು ಮರಳಿ ಹಳೆಯ ರಕ್ತದಿಂದಲೇ ಸೇರಿ, ತಮ್ಮ ಹಳೆಯ ಖಾತೆಗಳನ್ನು ಹಳೆಯ ಮಾದರಿಯಲ್ಲಿಯೇ ಮತ್ತೈದು ವರ್ಷ ನೋಡಿಕೊಳ್ಳುವುದು. ಯುವದಜನರಿಗೆ ಅವಶ್ಯಕ ತರಬೇತಿಯನ್ನು ನೀಡುವ ಉದ್ದೇಶದಿಂದ ಸೇರಿಸಿಕೊಳ್ಳಲಾಗುವ ಉಪಮಂತ್ರಿಗಳಲ್ಲಿ ಹೊಸಬರಿಗೆ ಅವಕಾಶವನ್ನು ಮಾಡಿಕೊಡುವಲ್ಲಿ ಪ್ರಧಾನಿ ನೆಹರು ಹಿಂದೆ ಬೀಳಲಾರರು ಎಂದು ನಂಬಬಹುದು.

ಕರ್ನಾಟಕದ ರಾಜಕೀಯ

ಗುಂಪಿನ ರಾಜ್ಯ ಕಾರಣಕ್ಕೆ ಹೆಸರಾದ ಕರ್ನಾಟಕದ ಕಾಂಗ್ರೆಸ್ಸು 'ಕ್ರೂರನಕ್ರ ಕುಲದೊಳಿಡಿದಿರ್ದ ಪೆರ್ಮಡು ಗಭೀರ ನಿರ್ಮಲ ಜಲದೊಳೆಸೆವಂತೆ' ಮನಸ್ಸಿನಲ್ಲಿ ಕಠೋರತರ ಭಾವವನ್ನು ತಳೆದು, ಬಹಿರಂಗದಲ್ಲಿ ವಿನಯವುಳ್ಳಂತೆ ತೋರ್ಪಡಿಸುತ್ತ ಗುಂಪುಗಾರಿಕೆಯನ್ನೇ ಹೆಚ್ಚಿಸಿತು. ಇದರ ಪರಿಣಾಮವಾಗಿಯೇ ಇಂದು ಈ ಗುಂಪುಗಾರಿಕೆಯು ಅದರ ಒಡಕನ್ನು ಹೆಚ್ಚಿಸಿದುದು ಮಾತ್ರವಲ್ಲ, ಜನತೆಯ ಕಟುಟೀಕೆಗಳಿಗೂ ಗುರಿಯಾಗಿದೆ. ವಿಶಾಲ ತಳಹದಿಯ ಸಚಿವ ಸಂಪುಟ ರಚನೆಗೆ ಆಸ್ಪದವಿದ್ದರೂ ಇದು ಇಂದಿಗೂ ಸಾಧ್ಯವೆನ್ನಿಸಲಿಲ್ಲ. ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕಂಠಿಯವರು ಒಂದು ಗುಂಪಿನ ಆಟಿಕೆಯಂತೆ ವರ್ತಿಸುತ್ತಿದ್ದಾರೆ. ಶ್ರೀ ಕೃಷ್ಣಪ್ಪನವರು ಅವರನ್ನು ಆಡಿಸುತ್ತಿರುವವರಂತೆ ತೋರುತ್ತಾರೆ. ಹೀಗೆ ರಾಜ್ಯದ ರಾಜಕೀಯ ಕೊಳೆತುನಾರತೊಡಗಿದೆ. ಶ್ರೀ ನಿಜಲಿಂಗಪ್ಪನವರು ಮರಳಿ ಆಯ್ಕೆಗೊಂಡು ಬರುವುದು ಅನಂತರ ನಾಯಕತ್ವದಲ್ಲಿ ಮರಳಿ ಬದಲಾವಣೆಯಾಗುವುದು ಮಾಲಿ ಚೆನ್ನಪ್ಪನವರ ರಾಜೀನಾಮೆಯಿಂದ ಮತ್ತಷ್ಟು ಸತ್ಯವೆಂಬಂತೆ ತೋರುತ್ತಿದೆ. ಆದರೆ, ಅವರ ಕ್ಷೇತ್ರದ ಜನರ ವಿರೋಧವಿರುವುದರಿಂದಾಗಿ ನಿಜಲಿಂಗಪ್ಪನವರಿಗೆ ಅಲ್ಲಿ ನಿಲ್ಲಲು ಹೆದರಿಕೆಯಾದರೂ ಆಗಬಹುದು. ಈ ನಡುವೆ ಕಾಂಗ್ರೆಸ್ ಅಧ್ಯಕ್ಷ ಸಂಜೀವ ರೆಡ್ಡಿಯವರು ಇಲ್ಲಿನ ಭಿನ್ನಾಭಿಪ್ರಾಯವನ್ನು ದೂರ ಮಾಡಿ ಎರಡೂ ಗುಂಪುಗಳ ನಡುವೆ ಸಮರಸವನ್ನುಂಟುಮಾಡಿ, ಮಂತ್ರಿ ಮಂಡಳಿಯ ರಚನೆಯನ್ನು ಸಂಪೂರ್ಣಗೊಳಿಸುವಲ್ಲಿ ನೆರವಾಗಲು ಬಂದಿದ್ದಾರೆ. ಕೇಂದ್ರ ಗೃಹಮಂತ್ರಿ ಶಾಸ್ತ್ರಿಯವರಿಂದಲೂ ತೀರಿಸಲಾರದ ಈ ಗುಂಪುಗಾರಿಕೆಯು ಸಂಜೀವಯ್ಯನವರನ್ನು ತಮ್ಮ ಸಂಪುಟದಲ್ಲಿ ಸೇರಿಸಿಕೊಳ್ಳುವ ಪ್ರಯತ್ನದಲ್ಲಿ ಅಯಶಸ್ವಿಯಾದ ರೆಡ್ಡಿಯವರಿಂದ ಕೊನೆಗಾಣಿಸಲ್ಪಡುವುದಿರಲಿ, ಸದ್ಯಕ್ಕಾದರೂ ಒಂದು ಹೊಂದಾಣಿಕೆಯು ಸಾಧಿಸಲ್ಪಡುವುದೆಂಬುದರಲ್ಲಿ ವಿಶ್ವಾಸ ಹುಟ್ಟುವುದಿಲ್ಲ. ಆದರೆ, ಗುಂಪಿನ ಮನೋಭಾವ ರಾಜ್ಯದ ಕಾಂಗ್ರೆಸಿಗೆ ಮಾತ್ರವಲ್ಲ, ಆಡಳಿತೆಗೂ ಮುಳುವು ಎಂಬುದನ್ನು ಮನಗಂಡು, ಅದನ್ನು ದೂರಮಾಡುವುದೇ ಇಂದು ಕಾಂಗ್ರೆಸ್ಸಿನ ಆದ್ಯ ಕರ್ತವ್ಯವಾಗಿದೆ.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್ ಇದರ ೧೯೬೧ನೆ ವರ್ಷಕ್ಕೆ ಸಂಬಂಧಿಸಿದ ಸಾಲ ಮೂಲ ಮತ್ತು ಆಯ ವ್ಯಯಗಳ ಲೆಕ್ಕಪತ್ರಗಳೊಡನೆ ಡೈರೆಕ್ಟರರ ವರದಿಯು ನಮ್ಮ ಕೈಸೇರಿದೆ. ವರದಿ ವರ್ಷಾಂತ್ಯದಲ್ಲಿ ಬೇಂಕು ೧೯ ಶಾಖೆಗಳ ಮೂಲಕ ಸೇವೆ ಸಲ್ಲಿಸುತ್ತಿತ್ತು. ಬೇಂಕಿನ ಅಧಿಕೃತ ಪಾಲು ಬಂಡವಳವನ್ನು ರೂ. ೫ ಲಕ್ಷದಿಂದ ರೂ. ೨೦ ಲಕ್ಷಕ್ಕೆ ಏರಿಸಲಾಗಿದ್ದು ಹೊಸತಾಗಿ ರೂ. ೫ ಲಕ್ಷಗಳ ಪಾಲು ಬಂಡವಳದ ಬಗ್ಗೆ ಚಂದಾ ಎತ್ತಲಾಗಿದೆ ಇದರಿಂದಾಗಿ ಬೇಂಕಿನ ತೆತ್ತ ಬಂಡವಾಳವು ವರ್ಷಾಂತ್ಯದಲ್ಲಿ ರೂ. ೬,೯೩,೪೦೦ ಆಗಿದೆ. ವರದಿ ವರ್ಷದ ಲಾಭಾಂಶದಲ್ಲಿ ಸೇರಿಸಲಾದ ರೂ. ೪೦ ಸಾವಿರವನ್ನು ಸೇರಿಸಿ ಬೇಂಕಿನ ರಿಜರ್ವ ಫಂಡು ರೂ. ೩,೨೭,೫೦೦ನ್ನು ಮುಟ್ಟಿದೆ. ಚಲಾವಣೆಯ ಬಂಡವಳವು ರೂ. ೧,೪೪,೨೦,೬೦೩-೫೮ ಆಗಿದ್ದು ಇದು ಹಿಂದಿನ ವರ್ಷಕ್ಕಿಂತ ೧೩ ಲಕ್ಷದಷ್ಟು ಹೆಚ್ಚಾಗಿದೆ. ಒಟ್ಟು ಠೇವಣಾತಿಯು ರೂ. ೧೨೨ ಲಕ್ಷವಿದ್ದು ಇದು ಹಿಂದಿನ ವರ್ಷಕ್ಕಿಂತ ರೂ. ೪ ಲಕ್ಷದಷ್ಟು ಹೆಚ್ಚುವರಿಯನ್ನು ತೋರಿಸುತ್ತದೆ. ಬೇಂಕು ವರದಿ ವರ್ಷದಿಂದ ತನ್ನ ನೌಕರರಿಗೆ ಬೇಂಕ್ ಎವಾರ್ಡ ವೇತನ ಮಟ್ಟವನ್ನು ಅನ್ವಯಿಸಿದುದರಿಂದ ಸಿಬ್ಬಂದಿಯ ವೆಚ್ಚದಲ್ಲಿ ರೂ. ೯೫,೦೦೦ದಷ್ಟು ಏರಿಕೆಯಾಗಿದ್ದು ವಾಸ್ತವಿಕವಾಗಿ ಕಳೆದ ವರ್ಷಕ್ಕಿಂತ ವರದಿ ವರ್ಷದಲ್ಲಿ ಅಧಿಕ ಲಾಭವನ್ನು ಪಡೆದಿದ್ದರೂ ನಿವ್ವಳ ಲಾಭವು ರೂ. ೧,೧೩,೪೩೬-೩೨ ಮಾತ್ರ ಆಗಿರುತ್ತದೆ. ಇದರಲ್ಲಿ ಶಾಸನಬದ್ಧ ನಿಧಿ ಹಾಗೂ ಆದಾಯ ತೆರಿಗೆಗಳಿಗಾಗಿ ರೂ. ೫೦,೪೪೬-೯೬ನ್ನು ಪ್ರತ್ಯೇಕಿಸಿ, ಪಾಲಿಯೂನ ಸೇಕಡಾ ಆರರಂತೆ (ಆದಾಯ ತೆರಿಗೆಗೊಳಪಟ್ಟು) ಡಿವಿಡೆಂಡ್ ಹಂಚಲು ಡೈರೆಕ್ಟರರು ನಿರ್ಧರಿಸಿದ್ದಾರೆ. ಬೇಂಕು ನೀಡಿರುವ ಸಾಲಗಳೆಲ್ಲವೂ ಉತ್ತಮ ಭದ್ರತೆಯ ಮೇಲಿದ್ದು ಒಟ್ಟಿನಲ್ಲಿ ತನ್ನ ಸ್ಥಿತಿಗತಿಗಳಲ್ಲಿ ತೃಪ್ತಿಕರವಾದ ಪ್ರಗತಿಯನ್ನು ಸಾಧಿಸಿದೆಯೆಂದು ಹೇಳಬಹುದು. ಈ ವರ್ಷವಲ್ಲಿ ಬೇಂಕು ಮತ್ತಷ್ಟು ಪ್ರಗತಿಯನ್ನು ಸಾಧಿಸುವುದೆಂದು ಆಶಿಸಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಶಾಖೆಗಳನ್ನು ತೆರೆದು ತನ್ಮೂಲಕ ಅಲ್ಲಿನ ಜನತೆಯಲ್ಲಿ ಬೇಂಕಿಂಗ್ ಪ್ರವೃತ್ತಿಯನ್ನು ಬೆಳೆಸುತ್ತ ಬಂದಿರುವ ೪೩ ವರ್ಷ ಪ್ರಾಯದ ಈ ಬೇಂಕು ಇನ್ನೂ ನಾನ್ ಶೆಡ್ಯೂಲ್ಡ್ ಬೇಂಕಾಗಿಯೇ ಉಳಿದಿರುವುದಾದರೂ ಡೈರೆಕ್ಟರರ ಪರಿಶ್ರಮದಿಂದ ಸಧ್ಯದಲ್ಲಿಯೇ ಶೆಡ್ಯೂಲ್ಡ್ ಆಗುವುದೆಂದು ಹಾರೈಸುತ್ತೇವೆ. ಚಿಕ್ಕದಾದರೂ ಚೊಕ್ಕ ವ್ಯವಹಾರಕ್ಕೆ ಹೆಸರಾದ ಈ ಬೇಂಕಿನ ಜನರಲ್ ಮೆನೇಜರ್ ಶ್ರೀ ಕೆ. ಎಸ್. ಕಾಮತ್. ಡೈರೆಕ್ಟರ ಮಂಡಳಿಯ ಅಧ್ಯಕ್ಷ ಶ್ರೀ ಕೆ. ಸಿ. ರಾಮದಾಸ ನಾಯಕ್ ಮತ್ತಿತರ ಡೈರೆಕ್ಟರರು ಅಭಿನಂದನಾರ್ಹರು

ರೂ. ೫೦ ಲಕ್ಷದ ಬಂಡವಾಳದ ಹೊರಡಿಸುವಿಕೆ—ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್ ತನ್ನ ಬಂದು ಇಲ್ಲವೇ ಎಲ್ಲಾ ಬಗೆಯ ಶೇರುಗಳನ್ನು ಹೊಂದಿದ ಮತ್ತು ಮಾರ್ಚ ೧, ೧೯೬೨ರಂದು ಅವರ ಶೇರ ರಿಜಿಸ್ಟರದಲ್ಲಿ ನೋಂದಾಯಿಸಿದ ಶೇರುದಾರರಿಗೆ ರೂ. ೫೦ ಲಕ್ಷದ ಇಕ್ವಿಟಿ ಬಂಡವಾಳವನ್ನು ಈ ಕೆಳಗಿನ ಪ್ರಮಾಣದಲ್ಲಿ ಕೊಡಮಾಡಲು ನಿರ್ಧರಿಸಿದೆ: ೧-೩-೬೨ರಂದು ತಾನು ಹೊಂದಿರುವ ಎಲ್ಲಾ ಬಗೆಯ ಶೇರುಗಳ ಮುಖ ಮೌಲ್ಯದ ಮೊತ್ತದಷ್ಟು ಮುಖ ಮೌಲ್ಯವಿರುವ ಶೇರುಗಳನ್ನು ಈ ಹೊಸ ಕೊಡುಗೆಯಲ್ಲಿ ಪಡೆಯಲು ಪ್ರತಿ ಶೇರುದಾರನು ಹ

ಕ್ಕುದಾರನಾಗುವನು. ರೂ. ೧೦ರ ಅಂಶವನ್ನು ಮಾತ್ರ ಕಡೆಗಣಿಸಲಾಗುವುದು. ಈ ಹೊಸ ಶೇರುಗಳು ಪ್ರತಿಯೊಂದು ರೂ. ೧೦ ಮುಖ ಬೆಲೆಯುದಾಗಿದ್ದು ಪ್ರತಿ ಶೇರೊಂದರ ಮೇಲೆ ರೂ. ೧ರಂತೆ ಪ್ರೀಮಿಯಮನ್ನು ಆಕರಿಸಲಾಗುವುದು. ಬೇಂಕು ನೀಡಿದ ಈ ಕೊಡುಗೆಯನ್ನು ಪಡೆಯಲು ೩೦-೪-೬೨ರ ವರೆಗೆ ಸಮಯಾವಕಾಶವಿರುವುದು.

ರೂ ೧೦ರ ಮುಖ ಬೆಲೆಯಲ್ಲಿ ರೂ ೨.೫೦ ಮತ್ತು ಶೇರ್ ಪ್ರೀಮಿಯಂ ರೂ. ೧.೦೦ನ್ನು ಬೇಡಿಕೆಯ ಅರ್ಜಿಯೊಡನೆ, ರೂ ೨.೫೦ನ್ನು ೩೦—೧೧—೬೨ರ ಒಳಗೆ ಮತ್ತು ಳಿದುದನ್ನು ಎರಡು ಕಂತುಗಳಲ್ಲಿ ೧೯೬೪ ಮತ್ತು ೧೯೬೫ರಲ್ಲಿ ತೆರಬೇಕಾಗುವುದು. ತನ್ನ ಅಧಿಕಾರವನ್ನು ಬೇರೆಯವರಿಗೆ ಒಪ್ಪಿಸಿಕೊಡುವ ಸೌಲಭ್ಯ ಶೇರುದಾರರಿಗಿದೆ. ಈ ಅಧಿಕಾರವು ಮೂರು ಕಟ್ಟಿಯಲ್ಲಿಯೂ ದೊರೆಯುತ್ತದೆ. ೧೬—೨—೧೯೬೨ರಲ್ಲಿ ನಡೆದ ಶೇರುದಾರರ ಸಭೆಯಲ್ಲಿ ನಿಶ್ಚಿತಗೊಳಿಸಲಾದ ಕ್ರಮ ನಿಬಂಧನೆಗಳೊಡನೆ ಪ್ರತಿ ಶೇರುದಾರರಿಗೂ ಅಧಿಕಾರ ಪತ್ರ ಮತ್ತು ಬೇಡಿಕೆ ಹಾಗೂ ಹಸ್ತಾಂತರೀಕರಣದ ಅರ್ಜಿಗಳಿಂದ ಕೂಡಿದ ಸರ್ಕ್ಯುಲಾರುಗಳನ್ನು ಎಪ್ರಿಲ್ ಮಧ್ಯಾವಧಿಯ ವೇಳೆಗೆ ಕಳಿಸಿ ಕೊಡಲಾಗುವುದು.

೧೯೬೧ರ ಲಾಭಾಂಶದಲ್ಲಿ ರೂ. ೧೧ ಲಕ್ಷವನ್ನು ಸ್ಟೇಚ್ಯುಟರಿ ರಿಜರ್ವ ಫಂಡಿಗೆ ಸೇರಿಸಲಾಗಿ ಸಿಂಡಿಕೇಟ್ ಬೇಂಕಿನ ಒಟ್ಟು ರಿಜರ್ವ ಫಂಡು ರೂ. ೫೩,೫೦,೪೭೧ ಆಗಿದ್ದು (ಶೇರ್ ಪ್ರೀಮಿಯಂ ಸೇರಿ) ಸಿಂಡಿಕೇಟಿನ ಇತಿಹಾಸದಲ್ಲಿಯೇ ಮೊತ್ತಮೊದಲನೆಯ ಬಾರಿಗೆ ತೆತ್ತ ಬಂಡವಾಳವನ್ನೂ ಮೀರಿಸಿದೆ ಬೇಂಕಿನ ತೆತ್ತ ಬಂಡವಳ, ರಿಜರ್ವ ಮತ್ತು ಶೇರ್ ಪ್ರೀಮಿಯಂಗಳ ಒಟ್ಟು ಮೊತ್ತವು ಇಂದು ರೂ. ೧,೦೧,೫೭,೩೪೩ ಆಗಿರುತ್ತದೆ.

ಅಲ್ಲಲ್ಲಿಯ ಸುದ್ದಿಸಾರ

ದ. ಕನ್ನಡ ವಿಧಾನ ಮಂಡಳದ ಸದಸ್ಯರಿಗೆ ಸತ್ಕಾರ— ದ. ಕನ್ನಡ ಜಿಲ್ಲೆಯಿಂದ ಹೊಸತಾಗಿ ಚುನಾಯಿತರಾದ ಎಮ್. ಎಲ್. ಎ.ಗಳಿಗೂ ದ. ಕನ್ನಡದ ಎಮ್. ಎಲ್. ಸಿ.ಗಳಿಗೂ ಕೆನರಾ ಬ್ಯಾಂಕ್ ಲಿಮಿಟೆಡ್‌ನ ಚೇರ್‌ಮೇನ್ ಶ್ರೀ ಎ. ದಾಮೋದರ ಪೈಯವರು ತಾ. 2-4-62ನೇ ಸಂಜೆ ಬೆಂಗಳೂರಿನ ಮದ್ರಾಸ್ ವುಡ್‌ಲೇಂಡ್ಸ್ ಹೋಟೇಲಿನಲ್ಲಿ ಅಭಿನಂದನಾ ಕೂಟವನ್ನೇರ್ಪಡಿಸಿದ್ದರು. ಅತಿಥಿಗಳಲ್ಲಿ ಮೈಸೂರು ಲೆಜಿಸ್ಲೇಟಿವ್ ಎಸೆಂಬ್ಲಿಯ ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗ, ಮೈಸೂರು ಸರಕಾರದ ಆರೋಗ್ಯ ಮಂತ್ರಿ ಡಾ| ಕೆ ನಾಗಪ್ಪ ಆಳ್ವ, ಜಸ್ಟೀಸ್ ಶ್ರೀ ಕೆ ಸದಾನಂದ ಹೆಗ್ಡೆ ಮತ್ತು ದ. ಕನ್ನಡಕ್ಕೆ ಸಂಬಂಧಿಸಿದ ಇತರ ಪ್ರಮುಖರೂ ಸೇರಿದ್ದರು.

ಶ್ರೀ ಎ. ದಾಮೋದರ ಪೈಯವರು ಅತಿಥಿಗಳನ್ನು ಸ್ವಾಗತಿಸುತ್ತಾ ಹೊಸತಾಗಿ ಚುನಾಯಿತರಾದ ದ. ಕನ್ನಡದ ಎಮ್ ಎಲ್. ಎ. ಗಳನ್ನು ಅಭಿನಂದಿಸಿದರು. ಮತ್ತು ಭಿನ್ನ ಭಿನ್ನ ಆದರ್ಶದ ಸದಸ್ಯರು ಒಂದೇ ವೇದಿಕೆಯಲ್ಲಿ ಸೇರಿರುವುದು ಅಪೂರ್ವ ಸಂದರ್ಭವೆಂದರು.

ಈ ಸಂದರ್ಭದಲ್ಲಿ ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರು ಮಾತನಾಡುತ್ತಾ ಕೆನರಾ ಬ್ಯಾಂಕಿಗೆ ಧನ್ಯವಾದಗಳನ್ನರ್ಪಿಸಿ ಬ್ಯಾಂಕಿನ ಆಡಳಿತ ಮಂಡಳದವರು ರಾಜ್ಯದ ಅಭಿವೃದ್ಧಿ ಚಟುವಟಿಕೆಗಳಲ್ಲಿ ವಹಿಸಿರುವ ಪಾತ್ರಕ್ಕಾಗಿ ಅಭಿನಂದಿಸಿದರು, ಬ್ಯಾಂಕಿನ ವಿವಿಧ ಸಾಮಾಜಿಕ ಚಟುವಟಿಕೆಗಳಿಗಾಗಿ ಅವರು ತುಂಬಾ ಮೆಚ್ಚುಗೆಯನ್ನು ಸೂಚಿಸಿದರು

ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರು ಕೆನರಾ ಬ್ಯಾಂಕಿನ ಅಧಿಕಾರಿಗಳು ದ. ಕನ್ನಡದ ಶಾಸಕರಿಗೆ ಕೊಟ್ಟ ಗೌರವಕ್ಕಾಗಿ ಕೃತಜ್ಞತೆಗಳನ್ನರ್ಪಿಸಿದರು. ಕೆನರಾ ಬ್ಯಾಂಕಿನವರು ಬೇರೆ ಬೇರೆ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿ ಜನರು ಬ್ಯಾಂಕ್ ಚಿತ್ತರಾಗುವಂತೆ ಮಾಡುವ ಬ್ಯಾಂಕಿನ ಉದ್ದೇಶ ಸಾಫಲ್ಯದ ಪ್ರಚಾರ ವೈಖರಿಯನ್ನು ಮೆಚ್ಚಿ ಮಾತನಾಡಿದರು. ಮಾತ್ರವಲ್ಲದೆ ಶಾಸಕರು ಜಿಲ್ಲೆಯ ಅಭಿವೃದ್ಧಿಗಾಗಿ ಸಾಧ್ಯವಾದಷ್ಟು ದುಡಿಯುವ ಭರವಸೆಯಿತ್ತರು. ಬ್ಯಾಂಕಿನ ಡೈರೆಕ್ಟರ್ ಶ್ರೀ ಜೀನ ಬ್ಯಾ ದೇವಿದಾಸರು ಧನ್ಯವಾದಗಳನ್ನಿತ್ತರು.

ನ್ಯೂಯೋರ್ಕಿನಲ್ಲಿ ನಡೆಯುವ ಕ್ರೆಡಿಟ್ ವಿಚಾರ ವಿನಿಮಯ ಗೋಷ್ಠಿಗೆ ಶ್ರೀ ಸಿ. ಜಿ. ಶೆಣೈ— ನ್ಯೂಯೋರ್ಕಿನ ಪ್ರಸಿದ್ಧ ಛೇಸ್ ಮ್ಯಾನ್‌ಹ್ಯಾಟನ್ ಬ್ಯಾಂಕಿನವರು ಗಣ್ಯ ಕಮರ್ಷಿಯಲ್ ಬ್ಯಾಂಕ್‌ಗಳ ಪ್ರಯೋಜನಕ್ಕಾಗಿ ಕ್ರೆಡಿಟ್ ವಿಷಯದ ಬಗ್ಗೆ ಒಂದು ವಿಶೇಷ ವಿಚಾರ ವಿನಿಮಯ ಗೋಷ್ಠಿಯನ್ನು ವ್ಯವಸ್ಥೆಗೊಳಿಸಿದ್ದಾರೆ.

ಈ ಗೋಷ್ಠಿಯಲ್ಲಿ ಭಾಗವಹಿಸಲು ಛೇಸ್ ಮ್ಯಾನ್‌ಹ್ಯಾಟನ್ ಬ್ಯಾಂಕಿನವರು ಬೆಂಗಳೂರ್ರು ಕೆನರಾ ಬ್ಯಾಂಕ್ ಲಿಮಿಟೆಡ್‌ನವರಿಗೆ ಆಹ್ವಾನವನ್ನು ನೀಡಿದ್ದಾರೆ.

ಕೆನರಾ ಬ್ಯಾಂಕಿನ ಪ್ರತಿನಿಧಿಯಾಗಿ ಅಡ್ವಾನ್ಸ್ ಶಾಖೆಯ ಡೆಪ್ಯುಟಿ ಜನರಲ್ ಮ್ಯಾನೇಜರ್ ಶ್ರೀಯುತ ಸಿ. ಜಿ. ಶೆಣೈ ಅವರು ಈ ವಿಚಾರ ವಿನಿಮಯ ಗೋಷ್ಠಿಯಲ್ಲಿ ಭಾಗವಹಿಸಲು ಬುಧವಾರ ತಾ. ೨೮-೩-೬೨ರಂದು ನ್ಯೂಯೋರ್ಕಿಗೆ ವಿಮಾನದಲ್ಲಿ ಪ್ರಯಾಣ ಮಾಡಿರುತ್ತಾರೆ.

ಈ ವಿಚಾರ ವಿನಿಮಯ ಗೋಷ್ಠಿಯಲ್ಲಿ ಏಷಿಯಾ ಮತ್ತು ಮಧ್ಯಪೂರ್ವ ರಾಷ್ಟ್ರಗಳ ಪ್ರಸಿದ್ಧ ಬ್ಯಾಂಕುಗಳು ಭಾಗವಹಿಸುವುವೆಂದು ನಿರೀಕ್ಷಿಸಲಾಗಿದೆ.

ಉಡುಪು ವಿತರಣೆ— ಕುದಿ ಗ್ರಾಮದ ಕೊಡಿಬೆಟ್ಟು ಕುದಿ ಗ್ರಾಮ ಯೈಡೆಡ್ ಎಲಿಮೆಂಟರಿ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಶ್ರೀ ಟಿ. ಎ. ಪೈಗಳವರು ಕೊಟ್ಟ 26 ಮಂದಿ ಬಡ ವಿದ್ಯಾರ್ಥಿಗಳಿಗೆ ಮತ್ತು ಶಾಲಾ ವತಿಯಿಂದ ಐದು ಮಂದಿಗೆ ಉಡುಪು ವಿತರಣೆಯನ್ನು ತಾ 7-4-62ರಂದು ಉಡುಪಿ ಕ್ಷೇತ್ರದ ಎಂ. ಎಲ್. ಎ. ಗಳಾದ ಶ್ರೀ ಎಮ್. ಮಧ್ವರಾಜರು ನೆರವೇರಿಸಿದರು. ಸ್ವಾಗತಭಾಷಣವನ್ನು ಶಾಲಾ ಮುಖ್ಯೋಪಾಧ್ಯಾಯರು ಮಾಡಿದರು. ಶಾಲಾ ಮೆನೇಜರರು ಶಾಲಾ ಅಭಿವೃದ್ಧಿಯ ಮನವಿಯನ್ನರ್ಪಿಸಿದರು. ಕಡೆಗೆ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

ವಾರ್ಷಿಕೋತ್ಸವ— ತಾ. 8-4-62ರಂದು ಶಿರ್ವ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕೋತ್ಸವವು ಉಡುಪಿ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಚೀಫ್ ಎಕ್ಸಿಕ್ಯೂಟೀವ್ ಆಫೀಸರರಾದ ಶ್ರೀ ಎ. ಕೊರಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಡಾ. ವೈ. ಆರ್. ಶೆಟ್ಟರು ಸ್ವಾಗತಭಾಷಣ ಮಾಡಿದರು. ಬಳಿಕ ಡಾ. ಯು. ಕೆ. ಆಚಾರ್ ಇವರು ಕ್ಲಬ್ಬಿನ ವಾರ್ಷಿಕ ವರದಿಯನ್ನು ಓದಿದರು. ಕ್ಲಬ್ಬಿನ ಕಾರ್ಯಕಾರಿ ಸಮಿತಿಯ ಸದಸ್ಯ ಡಾ. ವೆಂಕಟಕೃಷ್ಣ ಅವರು ವಿವಿಧ ಮಹನೀಯರಿಂದ ಬಂದ ಸಂದೇಶಗಳನ್ನು ವಾಚಿಸಿದರು. ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರು ಕ್ಲಬ್ಬಿನ ಕಾರ್ಯಕ್ರಮಗಳ ಕುರಿತಾಗಿ ಪ್ರಶಂಸೆಯಿತ್ತರು. ಅಮೇರಿಕದ 44 ಕ್ಲಬ್ಬುಗಳಂತೆ ಈ ಕ್ಲಬ್ಬೂ ಜನತೆಗೆ ನೆರವು ನೀಡಲಿ ಎಂದು ಹಾರೈಸಿದರು. ಬಳಿಕ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಪರಿಚಯ ಮಾಡಿಕೊಟ್ಟರು. ಕ್ಲಬ್ಬುಗಳಿಗೆ ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಸಿಗಬಹುದಾದ ಸಹಾಯಗಳ ವಿಷಯ ತಿಳಿಸಿದರು.

ಬಳಿಕ ಹೊಸ ಕಾರ್ಯದರ್ಶಿಗಳಾಗಿ ಚುನಾಯಿತರಾದ ಶ್ರೀ ಗಣೇಶ ಮಲ್ಯರು ಧನ್ಯವಾದಗಳನ್ನಿತ್ತರು.

ವಿವಿಧ ವಿನೋದಾವಳಿಗಳ ಅಂಗವಾಗಿ ಮಾಸ್ಟರ್ ಕಮಲ್‌ದಾಸ್ ಕುಡುವರಿಂದ ಸಂಗೀತ ಕಚೇರಿಯಿತ್ತು. ಬಳಿಕ “ಶಿವಳ್ಳಿ ಸಿಂಗ್ಲೀಶ್” ಎಂಬ ನಗೆ ನಾಟಕವು ಉತ್ತಮವಾಗಿ ಅಭಿನಯಿಸಲ್ಪಟ್ಟಿತು.

ತಾ. 7-4-62ರಂದು ನಡೆದ ಕ್ಲಬ್ಬಿನ ವಾರ್ಷಿಕ ಮಹಾಸಭೆಯಲ್ಲಿ ಈ ಕೆಳಗಿನ ಹೊಸ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಚುನಾಯಿಸಲ್ಪಟ್ಟಿತು.

ಅಧ್ಯಕ್ಷ: ಡಾ| ವೈ. ಆರ್. ಶೆಟ್ಟಿ ಉಪಾಧ್ಯಕ್ಷ: ಡಾ| ಯು. ಕೆ. ಆಚಾರ್, ಕಾರ್ಯದರ್ಶಿ ಮತ್ತು ಕೋಶಾಧಿಕಾರಿ— ಶ್ರೀ ಗಣೇಶ ಮಲ್ಯ. ಉಪಕಾರ್ಯದರ್ಶಿ— ಶ್ರೀ ಬಿ. ಯತೀಂದ್ರನಾಥ್. ಕಾರ್ಯಕಾರಿ ಸಮಿತಿಯ ಸದಸ್ಯರು— ಶ್ರೀ ಪಿ ಯೆಸ್. ರಾವ್, ಶ್ರೀ ಕೆ. ವಿ. ಶೆಟ್ಟಿ, ಡಾ. ಕೆ. ಆರ್. ವಿ. ಕೃಷ್ಣ

ವಿವಾಹ ಸಮಾರಂಭಗಳು— ದಿ| ಮುದ್ರಾಡಿ ಸಿದ್ದಯ್ಯ ಸೆಟ್ರ ಪುತ್ರಿ ಸೌ. ಸುಮತಿ ಮತ್ತು ನಿಂಜೂರು ಅಡಪರಬೆಟ್ಟು ನಾಗಣ್ಣ ಸೆಟ್ರ ಪುತ್ರ ಶ್ರೀ ವಿಟ್ಠಲ ಸೆಟ್ಟಿ ಇವರ ವಿವಾಹವು ತಾ. 5-4-62ರಂದು ಕಾರ್ಕಳ ಜೈಹಿಂದ್ ಟಾಕೀಸಿನಲ್ಲಿ ವಿಜೃಂಭಣೆಯಿಂದ ಜರಗಿತು.

ಅಂಬಾಡಿ ಬೀಡು ದಿ| ಶ್ಯಾಮರಾಯ ಸೆಟ್ರ ಪುತ್ರ ಶ್ರೀ ಶಂಕರ ಹೆಗ್ಡೆ ಮತ್ತು ಪಾಡೆಬೆಟ್ಟು ಶಿ. ಮಾಗಂಣ್ತಾಡಿ ನಾಗಪ್ಪ ಸೆಟ್ರ ಪುತ್ರಿ ಸೌ. ಶ್ರೀಮತಿ ಇವರ ವಿವಾಹ ಸಮಾರಂಭವು ತಾ. 6-4-62ರಂದು ಕಾಪು ಶ್ರೀ ಜನಾರ್ಧನ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಟೀಪಾರ್ಟಿ— ಉಡುಪಿ ಮಿತ್ರ ಸಮಾಜದ ಶ್ರೀ ಎನ್. ಗೋಪಾಲ ಹೊಳ್ಳರು ಉಡುಪಿ ಚಿಟ್ಪಾಡಿಯಲ್ಲಿ ಹೊಸದಾಗಿ ಕಟ್ಟಿಸಿದ ಸತ್ಯಸದನ ಗೃಹ ಪ್ರವೇಶ ಸಮಾರಂಭದ ಸಲುವಾಗಿ ತಾ. 9-4-62ನೇ ಸಂಜೆ ಟೀಪಾರ್ಟಿ ಸಮಾರಂಭವೊಂದನ್ನು ಏರ್ಪಡಿಸಿದ್ದರು.

ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ— ಉಡುಪಿ ಬೋರ್ಡ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇದೇ ತಾ. 7ರಂದು ಶ್ರೀ ಎಮ್. ಮಧ್ವರಾಜ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಘದ ಅಧ್ಯಕ್ಷ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದ ಬಳಿಕ ಎಡ್ವೊಕೇಟ್ ವಿ. ಜಿ ಕೆದ್ಲಾಯರೂ ಶ್ರೀ ರೈಮೊಂಡ್ ಮಾರ್ಟೀಸರೂ ಮಾತನಾಡಿದರು. ಅಧ್ಯಕ್ಷ ಶ್ರೀ ಮಧ್ವರಾಜರು ಹಳೆ ವಿದ್ಯಾರ್ಥಿಗಳ ಸಂಘಟನೆ ಸಾರ್ವಜನಿಕ ಸೇವೆ ಮೊದಲಾದುವನ್ನು ಪ್ರಸ್ತಾಪಿಸಿ ಈ ಬೋರ್ಡ್ ಹೈಸ್ಕೂಲು ತಾಲೂಕು ಬೋರ್ಡಿನ ಸ್ವಾಧೀನಕ್ಕೆ ಬರುವಾಗ ಎಲ್ಲರೂ ಸಹಕರಿಸಬೇಕೆಂದರು. ಆ ಬಳಿಕ ಹೊಸ ವರ್ಷಕ್ಕೆ ಕಾರ್ಯಕಾರಿ ಮಂಡಳಿಯ ರಚನೆಯೂಯಿತು. ಮನೋರಂಜನಾ ಕಾರ್ಯಕ್ರಮಗಳಾದ ಮೇಲೆ ಕಾರ್ಯದರ್ಶಿ ಶ್ರೀ ಯು. ದಾಮೋದರರವರು ವಂದನೆಗಳನ್ನರ್ಪಿಸಿದರು.

ಸಂಗೀತಕಚೇರಿ— ಉಡುಪಿ ಸಂಗೀತ ಸಭೆಯ ಆಶ್ರಯದಲ್ಲಿ ಇದೇ ತಾ. 8ರಂದು ಶ್ರೀಮತಿ ಗಂಗೂಬಾಯಿ ಹಾನಗಲ್ ಅವರ ಅತ್ಯಮೋಘ ಸಂಗೀತಕಚೇರಿಯು ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಸಭಾಂಗಣದಲ್ಲಿ ನೆರವೇರಿತು. ಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ಸ್ವಾಗತಭಾಷಣ ಮಾಡಿ ಸಂಗೀತ ಸಭೆಯ ಉದ್ದೇಶಗಳನ್ನು ತಿಳಿಸಿದರು. ಶ್ರೀ ಮನೋಹರ ಪ್ರಭುಗಳಿಂದ ಸಂದೇಶವಾಚನವಾದ ಮೇಲೆ ಶ್ರೀ ಟಿ ಎ. ಪೈಗಳು ಉದ್ಘಾಟನಾ ಭಾಷಣ ಮಾಡುತ್ತಾ ಸಂಸ್ಥೆಯು ಆದರ್ಶನೀಯವಾಗಿ ಬೆಳೆಯುವಂತೆ ಸಾರ್ವಜನಿಕರು ಸಹಕರಿಸಬೇಕೆಂದರು. ಸಂಗೀತ ಕಾರ್ಯಕ್ರಮಗಳಾದ ಮೇಲೆ ಶ್ರೀ ಎಚ್ ರಾಧಾಕೃಷ್ಣ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಜಗತ್ಪರ್ಯಟನ

ಸುಬ್ರಹ್ಮಣ್ಯಂ

ಮದ್ರಾಸಿನಲ್ಲಿ ಸಮರ್ಥ ಮಂತ್ರಿಯೆಂದು ಹೆಸರು ಪಡೆದ, ಮುಖ್ಯ ಮಂತ್ರಿ ನಾಡಾರ್‌ರ ಬಲಗೈಯಂತಿದ್ದ ಸುಬ್ರಹ್ಮಣ್ಯಂ ಕ್ಯಾಬಿನೆಟ್‌ನಲ್ಲಿ ಮದ್ರಾಸ ರಾಜ್ಯವನ್ನು ಪ್ರತಿನಿಧಿಸುತ್ತಾರೆ. ಉಕ್ಕು ಮತ್ತು ಭಾರ ಉದ್ದಿಮೆಗಳ ಹೊಸತೊಂದು ಶಾಖೆಯು ನಿರ್ಮಾಣವಾಗಿ ಅವರ ಕೈ ಸೇರಿದೆ. ೬೩ ವರ್ಷದ ಸುಬ್ರಹ್ಮಣ್ಯಂ ೩೩ನೆ ವರ್ಷದಲ್ಲಿಯೇ ಮಂತ್ರಿಯಾಗಿದ್ದರು. ಸ್ವಸಮರ್ಥರೆನಿಸಿದ ಇವರ ಯೋಗ್ಯತೆಯನ್ನು ಅರಸಿ, ರಾಜ್ಯಕೀಯದಲ್ಲಿ ಗಣನೀಯ ಸ್ಥಾನ ಗಳಿಸುವಂತೆ ಮಾಡಿದ ರಾಜಾಜಿಯವರಿಂದು ಸ್ವತಂತ್ರ ಪಕ್ಷ ಸಂಘಟಿಸಿದರು. ಶಿಷ್ಯಾದಿಚ್ಛೇತ್ ಪರಾಭವಂ ಎಂಬಂತೆ ರಾಜಕಾರಣದ ತಂತ್ರಗಳಲ್ಲಿ ಸುಬ್ರಹ್ಮಣ್ಯಂ ಒಂದುದಿನ ರಾಜಾಜಿಯವರನ್ನೂ ಮೀರಿಸುವ ಯೋಗ್ಯತೆಯುಳ್ಳವರು.

ಮೊರಾರ್ಜಿ ದೇಸಾಯಿ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನೆಹರುಗಳ ಉತ್ತರಾಧಿಕಾರಿಯೆಂದು ಹೆಸರು ಗಳಿಸಿದ ಮೊರಾರ್ಜಿ ದೇಸಾಯಿಯವರು ಯೋಜನೆಗೆ ಹಣ ಕೂಡಿಸುವಲ್ಲಿ ಯಶಸ್ವಿಯಾಗಿ ಪ್ರಧಾನಿಯವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇದರಿಂದಲೇ ಟಿ. ಟಿ. ಕೆ. ಯವರು ಮಂತ್ರಿ ಪದವಿಯ ಆಹ್ವಾನ ಬಂದಾಗ, ತನಗೆ ಅರ್ಥ ಖಾತೆಯೇ ಬೇಕೆಂದು ಹಠ ಹಿಡಿದುದರಿಂದ ಅವರು ಮಂತ್ರಿಯೆನಿಸಲೇ ಇಲ್ಲ. ಮೊರಾರ್ಜಿಯವರ ಕೈಗಳಲ್ಲಿ ಅರ್ಥ ಶಾಖೆಯಿರಬೇಕು ಎಂದು ನೆಹರೂ ಇಂಗಿತ. ಅಲ್ಲದೆ ಸಹ ಮಂತ್ರಿಗಳ ಸಾಲಿನಲ್ಲಿ ಮೊದಲನೆಯವರೇ ದೇಸಾಯಿಯವರು. ಇದರಿಂದ ನೆಹರುರವರ ಉತ್ತರಾಧಿಕಾರಿಯಾಗುವವರೂ ಇವರೇ ಎಂದು ಊಹಿಸಿದರೂ ಊಹಿಸಬಹುದು.

ಮಂಜುನಾಥ ರೈ

ಡಾ| ಮಂಜುನಾಥ ರೈ ಮದ್ರಾಸದಲ್ಲಿ ಸುಪ್ರಸಿದ್ಧ ರೇಡಿಯೊಲಿಜಿಸ್ಟರಾದರೂ ಮೂಲತಃ ದಕ್ಷಿಣಕನ್ನಡದವರು. ಹುಬ್ಬಳ್ಳಿಯ ಮೆಡಿಕಲ್ ಎಸೋಸಿಯೇಶನಿನ ಬೆಳ್ಳಿ ಹಬ್ಬದ ಅಧ್ಯಕ್ಷತೆಯನ್ನು ವಹಿಸಿದ ಇವರು ಕ್ಯಾನ್ಸರ ರೋಗದ ಬಗ್ಗೆ ವಿದ್ವತ್ಪೂರ್ಣ ಭಾಷಣಮಾಡಿದರು. ನೂರಕ್ಕೆ ೭೫ರಷ್ಟು ಕ್ಯಾನ್ಸರ್ ರೋಗಿಗಳನ್ನು ಗುಣಪಡಿಸುವುದು ಸಾಧ್ಯವಿದೆ. ಈ ರೋಗದ ಕಾರಣವೇನೆಂಬುದನ್ನು ಸರಿಯಾಗಿ ಸಂಶೋಧಿಸಲಾಗದ್ದರಿಂದ ಚಿಕಿತ್ಸೆಯು ಪರಿಣಾಮಕಾರಿಯಾಗಲಾರದೆಂದು ತಿಳಿಯಲಾಗುತ್ತಿದೆ; ರಕ್ತದ ಅಶುದ್ಧತೆ ಮತ್ತು ಚರ್ಮದ ಮಾಲಿನ್ಯಗಳಿಂದ ಉಂಟಾಗುವ ಈ ಒಂದು ವಿಧದ ಚರ್ಮರೋಗವನ್ನು ಗುಣಪಡಿಸುವುದು ಸಾಧ್ಯವಿದೆ. ಈ ಬಗ್ಗೆ ಡಾಕ್ಟರರ ಜವಾಬ್ದಾರಿಯು ಹೆಚ್ಚಿದೆ. ರೋಗಿಗಳಿಗೆ ಯೋಗ್ಯ ತಿಳುವಳಿಕೆಯಿತ್ತು ಸರಿಯಾದ ಮಾರ್ಗದರ್ಶನ ಮಾಡಬೇಕು ಸಲಹೆ ನೀಡಿದ್ದಾರೆ, ಅನುಭವಶಾಲಿಗಳಾದ ಡಾ| ರೈಯವರ ಸಲಹೆ ಎಲ್ಲರಿಗೂ ಉಪಾದೇಯವಿರುವುದು.

ಈ ಸಂಚಿಕೆಯಲ್ಲಿ— ೧೨ ಪುಟಗಳಂತೆ ಪುಟ ಸಂಖ್ಯೆ ಕೊಟ್ಟದ್ದರೂ ಬರೇ ೧೦ ಪುಟಗಳನ್ನು ಮಾತ್ರ ಕೊಡುವಂತಾದುದಕ್ಕೆ ವಿಷಾದಿಸುತ್ತೇವೆ. —ಸಂ. ನ.

ಮರಳಿ ಪಂಡಿತ ನೆಹರುಗಳ ಧುರೀಣತೆ

(೧ನೇ ಪುಟದಿಂದ)

ಪುನಾರಚನೆ ನನ್ನ ಕಾಲದಲ್ಲೇ ಆಗಬೇಕು" ಎಂದು ತನ್ನನಂತರ ಭಾರತ ಹಾಳಾಗಿ ಹೋಗುವುದೆಂದಿದರ ಅರ್ಥನಲ್ಲ, ಇಲ್ಲವೇ ತನ್ನಂತಹ ಪ್ರತಿಭಾಸಂಪನ್ನ ಮೇಧಾವೀ ನಾಯಕ ಇನ್ನು ಮುಂದೆ ಬರಲಾರನೆಂಬ ಜಂಬದ ಉದ್ಗಾರವೂ ಇದು ಅಲ್ಲ ಹೊಸತಾಗಿ ರೂಪುಗೊಂಡ ಒಂದು ದೇಶ ಯಾವ ದಾರಿಯನ್ನು ಮೆಟ್ಟಿದರೆ ಉನ್ನತವಾದೀತು ಎಂಬುದನ್ನು ಕಂಡುಕೊಂಡು,ಆ ದಾರಿಯನ್ನು ಹಿಡಿಯುವುದೇದೊಡ್ಡ ಕಷ್ಟ. ಪಾಕಿಸ್ತಾನಕ್ಕಿನ್ನೂ ತನ್ನ ಪ್ರಗತಿಯ ಮಾರ್ಗ ಆಗೋಚರವಿರುವುದರಿಂದಲೇ ಅಲ್ಲಿ ಅಶಾಂತಿ-ಅರಾಜಕತೆ ತಾಂಡವವಾಡುತ್ತಿದೆ. ನಮ್ಮ ನಾಯಕ ಮಣಿ ನೆಹರು ಆ ದೀಸ ಮುಟ್ಟುವ ದಾರಿಯನ್ನು ಅರಸಿ, ಅದರತ್ತ ದೇಶವನ್ನು ನಡೆಯಿಸುತ್ತಿದ್ದಾರೆ ತನ್ನ ನಂತರ ಬಂದವರಾದರೂ ಇದೇ ದಾರಿಯಲ್ಲಿ ಮುನ್ನಡೆಯಬಹುದುಎಂದು ಅಭಯ ನೀಡಿದ್ದಾರೆ

ನೀತಿ ಒಲ್ಲದ ಕಾಂಗ್ರೆಸಿಗರ.

ಭಾರತವನ್ನು ಅರಿತು ಭಾರತೀಯರ ಸಂಕಷ್ಟ ವಿಮೋಚನೆ ಮಾಡುವುದರಲ್ಲಿ ನೆಹರು ಅದೆಷ್ಟು ಕಳಕಳಿ ವಹಿಸುತ್ತಿರೋ ಅಷ್ಟನ್ನು ಅವರ ಸಹಕಾರಿಗಳು ತೋರಿಸುತ್ತಿಲ್ಲ. ನೆಹರುರವರ ನೀತಿಯನ್ನು ಒಪ್ಪದಿರುವವರೆಷ್ಟೋ ಮಂದಿ ಇಂದು ಕಾಂಗ್ರೆಸ್ಸಿನಲ್ಲಿದ್ದಾರೆ. ಕಾರಣಾಂತರದಿಂದ ಅವರು ಕಾಂಗ್ರೆಸ್ ಪಕ್ಷದಿಂದ ಹೊರ ಬರಲು ಮಾತ್ರ ಸಿದ್ಧರಿಲ್ಲವಾಗಿದ್ದಾರೆ. ಆದರೆ ಇಂತಹವರಾದರೂ ನೆಹರು ನೀತಿಯನ್ನು, ಕಾಂಗ್ರೆಸ್ಸು ಅಂಗೀಕರಿಸಿದ ಸಮಾಜವಾದದ ನೀತಿಯನ್ನು ಅರ್ಥವಿಸಿಕೊಳ್ಳುವುದು ಮತ್ತು ಪಕ್ಷದ ಧೋರಣೆಯನ್ನು ಮನೋಪೂರ್ವಕವಾಗಿ ಬೆಂಬಲಿಸುವುದು ಅತ್ಯಗತ್ಯವಿದೆ. ಇದರಿಂದ ಪಕ್ಷದ ಬಲವೂ ಹೆಚ್ಚುವುದು; ನೆಹರುಗಳ ಶಕ್ತಿಯೂ ಹೆಚ್ಚುವುದು.

ಭಾರತೀಯರ ಮಹಾಭಾಗ್ಯ

ಮುಂದಿನ ಐದು ವರ್ಷಗಳ ಕಾಲ ನೆಹರು ಮರಳಿ ಧುರೀಣತ್ವವನ್ನು ವಹಿಸಲು ಒಪ್ಪಿದ್ದರೆ, ಅದು ಭಾರತೀಯರ ಭಾಗ್ಯ ತನ್ನ ಅಪರ ವಯಸ್ಸಿನಲ್ಲಿಯೂ ೪೫ ಕೋಟಿ ಜನತೆಯನ್ನು ಮುನ್ನಡೆಸುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಅವರಿಗೆ ಹೆಚ್ಚಿನ ದೈಹಿಕ—ಮಾನಸಿಕ ಶ್ರಮವಾಗದಂತೆ ನೋಡಿಕೊಳ್ಳುವುದು ಅವರ ಸಹಕಾರಿಗಳ ಕರ್ತವ್ಯ. ಸಂಪುಟದಲ್ಲಿ ಸೇರಲಿರುವ ಮಂತ್ರಿಗಳು ಯಾರೆಂಬುದು ಈಗಾಗಲೇ ಪ್ರಸಿದ್ಧವಾಗತೊಡಗಿದೆ. ಇವರೆಲ್ಲರೂ ತಮ್ಮ ತಮ್ಮ ಖಾತೆಗಳನ್ನು ಸಮರ್ಥ ರೀತಿಯಲ್ಲಿ ನಡೆಯಿಸಿ ದೇಶ ಹಿತಚಿಂತನೆಯಲ್ಲಿ ನೆಹರುರವರಿಗೆ ಸಹಕಾರ ನೀಡುತ್ತ ಬರಲಿ, ನೆಹರೂ ನಾಯಕತ್ವ ಅಭಿವೃದ್ಧ ಭಾರತವನ್ನು ಸಮೃದ್ಧಿಯತ್ತ ಒಯ್ಯುವಲ್ಲಿ ಯಶಸ್ವಿಯಾಗಲಿ.

ತನ್ನ ಕರ್ತವ್ಯಗಳನ್ನು ನಿರ್ವಂಚನೆಯಿಂದ ನಿರ್ವಹಿಸುವಂತೆ ಪಂಡಿತ ಜವಾಹರಲಾಲರಿಗೆ ಆಯುರಾರೋಗ್ಯಾದಿಗಳನ್ನೀಯುವಂತೆ ೪೫ ಕೋಟಿ ಕಂಠಗಳ ಆ ನನ್ನ ಮನಸ್ಸಿನಿಂದ ಬೇಡಿಕೊಳ್ಳುತ್ತವೆ

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ ಸ]

ಯಯಾತಿ—(ಒಂದು ಹೊಸ ದೃಷ್ಟಿಯ ನಾಟಕ) ಬರೆದವರು ಶ್ರೀ ಗಿರೀಶ ಕಾರ್ನಾಡ ಪ್ರಕಾಶಕರು: ಮನೋಹರ ಗ್ರಂಥಮಾಲಾ, ದಾರವಾಡ ಪುಟಗಳು: ೮೭ ಬೆಲೆ: ಸಾದಾ ಪ್ರತಿ ರೂ ೨.೦೦. ಕ್ಯಾಲಿಕೋ ಪ್ರತಿ ರೂ ೩.೦೦.

ಭೋಗಲಾಲಸೆಯಿಂದ ತನ್ನ ಕೈಹಿಡಿದ ಮಡದಿ ಶುಕ್ರಾಚಾರ್ಯರ ಪುತ್ರಿ ದೇವಯಾನಿಯ ಪರೋಕ್ಷದಲ್ಲಿ ಆಕೆಯ ದಾಸಿ ವೃಷಪರ್ವನ ಮಗಳು ಶರ್ಮಿಷ್ಠೆಯಲ್ಲಿ ಕೂಡಿದ ಅಪರಾಧಕ್ಕಾಗಿ ದೈತ್ಯಗುರುವಿಂದ ಶಪಿತನಾದ ಯಯಾತಿ, ಉಃಶಾಪದ ಬಲದಿಂದ ತನ್ನ ಮಮತೆಯ ಮಗ ಪುರುವಿನಿಂದ ಯೌವನವನ್ನು ಪಡೆದು ಒಂದು ಸಾವಿರ ವರ್ಷ ಭೋಗ ತೃಪ್ತಿಯಲ್ಲಿ ಕಳೆದು ಮುಂದೆ ಆ ಯೌವನವನ್ನು ಮರಳಿಸಿ ಶರ್ಮಿಷ್ಠೆಯೊಡನೆ ವಾನ ಪ್ರಸ್ತಕ್ಕೆ ಹೋದನು. ರಾಜ್ಯವು ಅತಿವಿಧೇಯನಾದ ಪುರುವಿಗೆ ಸೇರಿತು, ಉಳಿದ ನಾಲ್ವರು ಪುತ್ರರು ಶಪ್ತರಾಗಿ ದಸ್ಯುಗಳಾದರು—ಈ ಪೌರಾಣಿಕ ಕತೆಗೆ ಆಧುನಿಕತೆ ಮತ್ತು ನಾಟಕೀಯ ಮೆರುಗನ್ನು ನೀಡಿದ ಕೃತಿಯೇ ಈ 'ಯಯಾತಿ' ಎಂಬ ಹೊಸ ದೃಷ್ಟಿಯ ನಾಟಕ.

ದೇವಯಾನಿ ಯಯಾತಿಯರ ಮದುವೆಯ ನಂತರದ ಕಥೆಯನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಶರ್ಮಿಷ್ಠೆಯಲ್ಲಿ ಅನುರಾಗ ತಾಳಿದ ಯಯಾತಿಯ ವರ್ತನೆಯಿಂದ ರೊಚ್ಚಿಗೆದ್ದ ದೇವಯಾನಿ ಪುರುವಿನ ರಾಜಗೃಹ ಪ್ರವೇಶೋತ್ಸವಕ್ಕೆ ಆಗಮಿಸಿದ್ದ ತಂದೆಯನ್ನು ಕುಪಿತಗೊಳಿಸಿ ಮುಪ್ಪು ತಲೆದೋರುವಂತೆ ಶಾಪವಿತ್ತರೂ ಮುಂದೆ ಉಃಶಾಪವನ್ನೂ ನೀಡಿದರು. ಪುರುವಿನ ತ್ಯಾಗದಿಂದಾಗಿ ಯಯಾತಿಯು ಯೌವನಾವಸ್ಥೆ ಪಡೆದನೇನೋ ನಿಜ ಆದರೆ, ಪುರುವಿನ ರಾಣಿ ಚಿತ್ರಲೇಖೆ ವಿಷ ಸೇವನೆಮಾಡಿ ಸಾವನ್ನಪ್ಪುವುದರಿಂದ ಯಯಾತಿಯು ಕಾಮುಕ ವೃತ್ತಿಗೆ ಜ್ಞಾನೋದಯವಾಗುತ್ತದೆ; ತಾನ್ ವಾನಪ್ರಸ್ಥಕ್ಕೆ ತೆರಳುತ್ತಾನೆಂಬಂತೆ ಕಥೆಯು ಪರಿವರ್ತಿತಗೊಂಡಿದೆ. ನಾಟಕೀಯ ಪದ್ಧತಿಗೆ ಮೂಲದಲ್ಲಿಲ್ಲದ ಚಿತ್ರಲೇಖೆ ಮತ್ತು ದೇವಯಾನಿಯ ದಾಸಿ ಸ್ವರ್ಣಲತೆಯರ ಪಾತ್ರವು ವಿಶೇಷ ಕಳೆಯನ್ನು ತಂದಿವೆ ಯಯಾತಿಯ ಅಮಂತ್ವದ ಆಕಾಂಕ್ಷೆ, ದೇವಯಾನಿಯ ಪ್ರೀತಿಯ ಹಂಬಲ, ಶರ್ಮಿಷ್ಠೆಯ ಮನುಷ್ಯತ್ವದ ಆಸೆ, ಪುರುವಿನ ವ್ಯಕ್ತಿತ್ವದ ಶೋಧಗಳು ತಾತ್ವಿಕ ಕಾಮನೆಗಳಾಗಿದ್ದರೂ ಅವರವರ ದ ದುರ್ಬಲತೆಗಳಾಗಿ ಕಾಡುತ್ತವೆ ಇದರ ಚಿತ್ರಣವು ಹೃದಯಸ್ಪರ್ಶಿಯಾಗಿದೆ ನಾಟಕದಲ್ಲಿ ಬರುವ ಎಲ್ಲ ಪಾತ್ರಗಳೂ ತಮ್ಮ ಸುಖ-ದುಃಖಗಳನ್ನು, ವೃತ್ತಿಪ್ರವೃತ್ತಿಗಳನ್ನು ಸರಿಯಾಗಿ ವ್ಯಕ್ತಪಡಿಸುತ್ತವೆ ಆದರೆ, ಇಡಿಯ ನಾಟಕದ ಎಲ್ಲಪಾತ್ರಗಳೂ ಒಂದುಗೂಡಿ ದುರಂತನಾಟಕವನ್ನಾಗಿ ಇದನ್ನು ರೂಪಿಸಿದೆ ಇದರಿಂದಾಗಿ ಪರಿಹಾರದ ಬಾಗಿಲುಗಳು ಮುಚ್ಚಿಹೋಗಿವೆ 'ಇವೆಲ್ಲವರ ಅರ್ಥವೇನು ದೇವರೇ?' ಎಂಬ ಪುರುವಿನ ಅಂತಿಮೋದ್ಗಾರವು ಆತ ಜೀವನದ ಕತ್ತಲೆಯಾಚೆ ಬೆಳಕಿದ್ದರೂ ಇರಬಹುದೆಂಬ ಅಸ್ಪಷ್ಟ ನಂಬಿಕೆಯನ್ನು ಹುಟ್ಟಿಸುತ್ತಾನೆ.

ಪ್ರಾರಂಭದಿಂದ ಕೊನೆಯ ವರೆಗೂ ಓಶ ಪ್ರೋತವಾಗಿ ರೂಪಿತವಾದ ಪಾತ್ರ ಚಿತ್ರಣ ಮತ್ತು ಬೆಳವಣಿಗೆ, ಸರಳ ಸುಂದರವಾದ ಸಂಭಾಷಣೆ, ಲಲಿತವಾದ ಭಾಷಾ ಶೈಲಿಗಳು ಆಂತರಿಕ ಗುಣವನ್ನು ಹೆಚ್ಚಿಸಿದರೆ, ಅಂದವಾದ ಹಾಳೆಯಾಗದ ಮತ್ತು ಮುದ್ರಣ ಹಾಗೂ ರಚನೆಯು ಬಾಹ್ಯ ಸ್ವರೂಪಕ್ಕೆ ಕಳಶವಿಟ್ಟಿದೆ. ಶ್ರೀ ಗಿರೀಶ ಕಾರ್ನಾಡರ ಈ ಚೊಚ್ಚಲ ಕೃತಿಯು ಕನ್ನಡದಲ್ಲಿಯೇ ಹೊಸ ಪ್ರಯೋಗ ಮಾತ್ರವಲ್ಲ ಅನರ್ಘ್ಯ ಮಣಿಯೆಂಬುದರಿಂದಲೇ ರಾಜ್ಯ ಸರಕಾರದ ಪಾರಿತೋಷಕವನ್ನೂ ಅದು ಪಡೆಯುವಂತಾಯ್ತೆಂದು ಹೇಳಬಹುದು. ಶ್ರೀ ಗಿರೀಶರು ಇಟ್ಟಿದಿಟ್ಟ ಹೆಜ್ಜೆಯು ಅಭಿನಂದನಾರ್ಹವಿದೆ. ಶ್ರೀಯುತರಿಂದ ಕನ್ನಡ ಸಾಹಿತ್ಯಕ್ಕೆ ಇನ್ನೂ ಅಪಾರವಾದ ಸೇವೆಯು ಸಲ್ಲುವಂತಾಗಲೆಂದು ಆಶಿಸುತ್ತೇನೆ. ಶ್ರೀ ಕೀರ್ತಿನಾಥ ಕುರ್ತಕೋಟಿಯವರು ಬರೆದ ವಿಮರ್ಶಾತ್ಮಕ ಮುನ್ನುಡಿ ಮನನೀಯವಿದೆ.

—ಗೋರಾ.

ನೂತನ ವಧೂವರರಿಗೆ ಶುಭಾಶಯಗಳು

ಸೌ. ವಸಂತಿ

ಶ್ರೀ ವಿಶ್ವನಾಥ ಶೆಣೈ

ಶ್ರೀ ವಿ ವಿ. ಶೆಣೈ, ಕಾರ್ಕಳ ಇವರ ಪುತ್ರ ಶ್ರೀ ವಿಶ್ವನಾದ ಶೆಣೈ ಮತ್ತು ದಿ. ಸೋಮಯ್ಯ ರಾಯ ಪುರಾಣಿಕರ ಪುತ್ರಿ ಸೌ। ವಸಂತಿ ಇವರ ವಿವಾಹ ಸಮಾರಂಭವು ತಾ 9—4—62ರಂದು ಕಾರ್ಕಳದ ಶ್ರೀ ವೆಂಕಟ್ರಮಣ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನೆರವೇರಿತು

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಅದನ್ನು ಅದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕೆಂತೆ ಅಪೇಕ್ಷಿಸುತ್ತೇವೆ.

—ಮೆನೇಜರ್ ನವಯುಗ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ
ಬೆಲೆ ರೂ 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ
ನವಭಾರತ ಬುಕ್ ಡಿಪೊ, ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ
ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ
ವಿಜಯ ಬೇಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್ — ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd 1931
Phone No 240
— ಮಂಗಳೂರು—3

ಗದ್ಯ ಸಾಹಿತ್ಯದ ಪ್ರಭೇದಗಳು

(೩ನೇ ಪುಟದಿಂದ)

ಆದರೆ ಕಾದಂಬರಿಕಾರನದು ಅತಿ ದೊಡ್ಡ ಸಾಹಸ ಅವನೂ ಕೂಡಾ ಕತೆಗಾರನಂತೆಯೇ ಪಾತ್ರ ಚಿತ್ರಣವನ್ನು ಉತ್ತಮ ರೀತಿಯಲ್ಲಿಯೇ ಮಾಡಿ ಶೈಲಿ, ನಿರೂಪಣಾ ಕ್ರಮದಲ್ಲಿ ತನ್ನ ಚಾಣಾಕ್ಷ ಪ್ರತಿಭೆಯನ್ನೂ ಮೆರೆಯುತ್ತಾನೆ. ಆದರೆ ವ್ಯತ್ಯಾಸವಿಷ್ಟೆ—ಸಣ್ಣ ಕಥೆಯಲ್ಲಿ ಪ್ರತಿಪಾದಿಸಲ್ಪಡುವ ಸಮಸ್ಯೆ ಒಂದೇ, ಆದರೆ ಕಾದಂಬರಿಯಲ್ಲಿ ಹಲವು! ಒಬ್ಬ ಮನುಷ್ಯನಿಗೆ ಹಲವಾರು ಕಡೆಗಳಿಂದ ಹಲವಾರು ಸಮಸ್ಯೆಗಳು ಒದಗಿಬರುತ್ತವೆ. ಅಂತಹ ಬಹುಮುಖ ಸಮಸ್ಯೆಗಳನ್ನು ವ್ಯವಸ್ಥಿತ ರೂಪದಲ್ಲಿ ಕಲೆಹಾಕಿ ಯುಕ್ತ ರೀತಿಯಲ್ಲಿ ವಿವೇಚಿಸುವುದು ಕಾದಂಬರಿಕಾರನ ಲಕ್ಷಣ. ಯಾವುದಾದರೂ ಒಂದೊಂದು ಸಮಸ್ಯೆಗಳನ್ನು ಹಿಡಿದುಕೊಂಡು ರೀಮುಗಟ್ಟಲೆ ಕಾಗದಗಳನ್ನು ಮಸಿ ಮಾಡುವುದು ಕಾದಂಬರಿಕಾರನ ಲಕ್ಷಣ ಎಂದು ಬಗೆದಿರುವವರು ಇತ್ತ ಗಮನಿಸಬೇಕು. ಅದು ಕಾದಂಬರಿಯಲ್ಲ. ಗದ್ಯ ವಾಙ್ಮಯದಲ್ಲಿ ಅಂಥವಕ್ಕೆ ಪ್ರತ್ಯೇಕ ಸ್ಥಾನವನ್ನು ದೊರಕಿಸಿಕೊಡಬಹುದು, ಅಂತೂ ಕಾದಂಬರಿ ಅವುಗಳಲ್ಲ.

ಕಾರಂತರ ಚೋಮನ ದುಡಿಯನ್ನು ಕಾದಂಬರಿಗೆ ಉದಾಹರಿಸಬಹದು. ಅದರಲ್ಲಿ ಚೋಮ ನಮ್ಮ ಕಣ್ಣಿಗೆ ಕಟ್ಟಿ ನಿಲ್ಲುವ ಕಥಾನಾಯಕ. ನಾವು ದಿನನಿತ್ಯವೂ ಅನೇಕ ಚೋಮರನ್ನು ಕಾಣುತಿದ್ದೇವೆ ಅಂತಹ ಚೋಮರಲ್ಲಿ ಇವನೂ ಒಬ್ಬ ಸಜೀವ ಚೋಮ. ಇವನಿಗೆ ಬಂದೊದಗಿದ ಸಮಸ್ಯೆಗಳೂ ಒಂದೆರಡಲ್ಲ. ಅವನ್ನೆಲ್ಲ ಯುಕ್ತ ರೀತಿಯಲ್ಲಿ ಪರಿಹರಿಸಿ ನಮ್ಮ ಕಣ್ಣೆದುರಿನಲ್ಲಿ ನಿಲ್ಲಿಸಿದ್ದಾರೆ ಅವನನ್ನು. ಇದು ಕಾದಂಬರಿ ಗಾತ್ರದಲ್ಲಿ ಇದೇನೂ ದೊಡ್ಡದಾಗಿಲ್ಲ. ಆದರೆ ಜೀವನ ದರ್ಶನದ ಅಪೂರ್ವ ರನ್ನಗನ್ನಡಿಯಾಗಿ ಕಾದಂಬರಿಯೆನಿಸಿಕೊಂಡಿದೆ ಇಂತಹ ಕಾದಂಬರಿಗಳು ಸಣ್ಣ ಕಥೆಗಳಂತೆಯೇ ಸೂಕ್ಷ್ಮ ಕಲಾಕೃತಿಯಾಗಿರಬೇಕು. ಸಣ್ಣ ಕಥೆ ಎಂಬುದೊಂದು ಸೂಕ್ಷ್ಮ ಕೆತ್ತನೆಯ ಚುರುಕುತನವಿರುವ ಮಣಿಹಾರವಾದರೆ ಕಾದಂಬರಿಯೆನ್ನುವುದು ಅಷ್ಟೇ ಕುಂದಣದ ಕೌಶಲ್ಯವಿರುವ ಪೂರ್ಣ ಕವಚವಾಗಿದೆ. ಸಣ್ಣ ಕಥೆ ಏಕ ಮುಖಿಯಾಗಿದ್ದು ಒಂದೇ ಅಂಗವನ್ನಲಂಕರಿಸುತಿದ್ದರೆ ಕಾದಂಬರಿಯು ಬಹುಮುಖಿಯಾಗಿದ್ದು ಇಡೀ ಜೀವನದ ಸಂಪೂರ್ಣ ದರ್ಶನವನ್ನೊದಗಿಸಿ ಸರ್ವಾಂಗ ಸುಂದರವಾದ ಅಲಂಕಾರವೆನ್ನಬಹುದು.

ಹೀಗೆ ಗದ್ಯ ವಾಙ್ಮಯವನ್ನು ಎರಡೇ ಎರಡು ವಿಭಾಗವನ್ನಾಗಿ ಹೇಳಬಹುದು. ಆದರೆ ಇಷ್ಟೇ ಹೇಳಿ ಮುಂದೆ ಹೋಗಲಾರದಾಗಿದ್ದೇವೆ. ಉತ್ತಮ ಸಣ್ಣ ಕಥೆಗಳನ್ನು ಸುಲಕ್ಷಣ ಕಾದಂಬರಿಗಳನ್ನೂ ಪ್ರತ್ಯೇಕಿಸಿ ತೆಗೆದ ನಂತವೂ ಅಲ್ಲಿ ರಾಶಿಗಟ್ಟಲೆ ಗದ್ಯರಾಶಿ ನಮ್ಮ ಕಾಲುಗಳನ್ನು ಕಟ್ಟುತ್ತವೆ. ಸತ್ಯ. ಅವಕ್ಕೆಲ್ಲ ಒಂದು ಗತಿಬೇಕು. ಅವುಗಳಲ್ಲೂ ಒಂದೊಂದು ಮುಖದ ಸತ್ಯ ದರ್ಶನವಿರುತ್ತದೆ. ಅವುಗಳೂ ಕತೆ ಕಾದಂಬರಿ ಎಂಬ ಹೆಸರಿನಿಂದ ವಾಙ್ಮಯದಲ್ಲಿ ಬೆರೆತುಹೋಗಿದ್ದಾವೆ. ಆದರೆ ಹಿಂದೆ ಹೇಳಿದ ಸಣ್ಣ ಕತೆಯ ಹಾಗೂ ಕಾದಂಬರಿಯ ಲಕ್ಷಣ ಅವಕ್ಕಿಲ್ಲ. ಆದುದರಿಂದ ಅವು ಪ್ರತ್ಯೇಕ ಜಾತಿಯವು. ಸಾಮಾನ್ಯವಾಗಿ ಅವುಗಳನ್ನು 'ನೀಳ್ಗತೆ' ಎಂದು ಕರೆಯಬಹುದು.

ಅವುಗಳಲ್ಲಿ ಹಲವೆಡೆಯಲ್ಲಿ ನಾವು ನೀರಸತೆಯನ್ನು ಕಾಣುತ್ತೇವೆ. ಅವುಗಳೆಲ್ಲ ಹತ್ತರೊಂದಿಗೆ ಹನ್ನೊಂದು ಎಂಬಂತೆ ಕನ್ನಡ ವಾಙ್ಮಯದಲ್ಲಿ ಸೇರಿಹೋಗಿವೆ. ದಿನ ದಿನಕ್ಕೂ ಅಂತಹ ನೀಳ್ಗತೆಗಳೇ ಕನ್ನಡದ ಬಸಿರಿನಿಂದ ಬೆಳಕು ಕಾಣುವುದಾದರೆ ನಿಜವಾಗಿಯು ಅದು ನಮ್ಮ ದುರ್ದೈವ ಎನ್ನಬೇಕಾಗುತ್ತದೆ.

ನೀಳ್ಗತೆಗಳಲ್ಲಿ ಪ್ರತಿಪಾದಿಸಲ್ಪಡುವ ಸಮಸ್ಯೆ ಒಂದೇ! ಒಂದೇ ಸಮಸ್ಯೆಯನ್ನು ಹಿಡಿದುಕೊಡು ಬೇಕಾದ ಬೇಡವಾದ ಎಲ್ಲಾ ಘಟನೆಗಳನ್ನೂ ಸನ್ನಿವೇಶಗಳನ್ನೂ (ಪುಟ ಸಂಖ್ಯೆ ಹೆಚ್ಚಿಸುವ ಉದ್ದೇಶದಿಂದ!) ಬಲಾತ್ಕಾರವಾಗಿ ಕೀಲಿಸಿ ತುಂಬಿ ಕೃತಿಯನ್ನು ಬೆಳಸಿ ಜನತೆಯ ಮುಂದಿರಿಸಿದ ಮಾತ್ರಕ್ಕೆ ಅದು ಕಾದಂಬರಿಯಾಗಲಾರದು. ಅದರಲ್ಲಿ ಮೋಹಕವಾದ ಶೈಲಿಯೂ, ಹಾಸ್ಯ ಶೃಂಗಾರಾದಿ ರಸಗಳ ಉನ್ನತ್ತತೆಯೂ ಮನ ಸೆಳೆಯುವ ಪಾತ್ರ ಚಿತ್ರಣವೂ ಇದ್ದಿರಬಹುದು, ಆದರೆ ಪ್ರಯೋಜನವಿಲ್ಲ. ಆ ಪಾತ್ರದ ಬಹುಮುಖ ವಿವರಣೆ ಬಹುಮುಖ ವಿಸ್ತಾರ ಅದರಲ್ಲಿಲ್ಲ. ಇದೊಂದೇ ನ್ಯೂನತೆಯೂ ಅಲ್ಲ ಅಂತಹ ಕಾದಂಬರಿಗಳಲ್ಲಿ "ಅನಾವಶ್ಯಕ" ಎಂದು ಕತ್ತರಿಹಾಕಬಹುದಾದ ನೀರಸ ಭಾಗಗಳು ತುಂಬಿಕೊಂಡಿರುತ್ತವೆ ಅದು ಉತ್ತಮ ಕಲಾಗಾರನ ಉತ್ತಮ ಕಲೆಯಲ್ಲ. ಅದೊಂದು ಕೊರಕು ಬಂಡೆಯದೊಂದು (Rough) ಮೂರ್ತಿಯಾದೀತು. ಅದರಲ್ಲಿ ಸೂಕ್ಷ್ಮತೆಯನ್ನು ಅರಸಿದರೂ ಕಾಣಲಾರೆವು. ಅಂತಹ ಗದ್ಯಸಾದನಗಳನ್ನು ಇಂದು ಕನ್ನಡ ವಾಙ್ಮಯದಲ್ಲಿ ಧಾರಾಳವಾಗಿ ಕಾಣುತ್ತಿದ್ದೇವೆ. ಅವು ಕಾದಂಬರಿಯೆನಿಸಲಾರವು, ಬೇಕಿದ್ದರೆ ಸಾವಿರ ಪುಟಗಳೇ ಆಗಲಿ, ಅವು ನೀಳ್ಗತೆಗಳೇ ಹೊರತು ಕಾದಂಬರಿಯು ಪಟ್ಟವೇರಲಾರದು.

(೧೨ನೇ ಪುಟ ನೋಡಿರಿ)



ಹಿಂದುಸ್ಥಾನ್ ನೌಕಾಂಗಣದಲ್ಲಿ ಕಟ್ಟಲಾದ ಎಂ ವಿ. ರಾಜಕುಮಾರ ಹಡಗು.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಕರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್‌ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ. 1-4-0 (1=25).
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ಉಡ್ಪಿ. ಡಿ ಮು ಕೋರ್ಟಿನಲ್ಲಿ

O S. 451/1961

ಪದ್ಮಾವತಿಯಮ್ಮ —ವಾದಿ

ಮತ್ತು

ಕಮಲ ಯಾನೆ ರಾಧಾ ಹೆಂಗ್ಸು ಕೂಡಾ— ಪ್ರತಿವಾದಿರು

ಇವರೊಳಗೆ

1ನೇ ಪ್ರತಿವಾದಿ ಕಮಲಯಾನೆ ರಾಧಾ ಹೆಂಗ್ಸು— ಎಕ್ಸ್ ಪಟೇಲ್ ಗೋವಿಂದನವರ ವಿಧವೆ—ಉಡ್ಪಿ ತಾಲೂಕು ಮಣಿಪುರ ಗ್ರಾಮದ ಕಸರಾಡಿಯಲ್ಲಿರುವವಳು ಮತ್ತು 3ನೇ ಪ್ರತಿವಾದಿ ಪರಮೇಶ್ರಿ ಹೆಂಗ್ಸು ಎಕ್ಸ್ ಪಟೇಲ ಗೋವಿಂದನವರ ಸೊಸೆ— ಉಡ್ಪಿ ತಾಲೂಕು ಬಡಗು ಬೆಟ್ಟು ಗ್ರಾಮದ ಪಟೇಲರ ಮನೆಯಲ್ಲಿರುವವಳು— ಇವರಿಬ್ಬರಿಗೆ ತಿಳಿಯ ಪಡಿಸುವುದೇನೆಂದರೆ:—

ಪ್ಲೆಯಿಂಟು ಸ್ತಿರಾಸ್ತಿಗಳ ಬಾಬ್ತು ಕಳೆದ ವಿಳಂಬಿ, ವಿಕಾರಿ ಮತ್ತು ಶಾರ್ವರೀ ಸಂವತ್ಸರಗಳ ಬಾಬ್ತು ನಿಮ್ಮಿಂದ ಬರಾ ಮೂಲಗೇಣಿ ಬಡ್ಡಿ ವಗೈರೆ ಸೇರಿ ರೂಪಾಯಿ 87=71 ವಸೂಲಿಗೆವಾದಿಯು ನಿಮ್ಮ ಮೇಲೆ ಮಾಡಿದ ಫಿರ್ಯಾದ್ಯವು ತಾರೀಕು 6 6—62ಕ್ಕೆ ತನಿಖೆಗೆ ಯಿಟ್ಟದ್ದರೆ ಆ ಬಗ್ಗೆ ನಿಮ್ಮದೇನಾದರೂ ಆಕ್ಷೇಪಯಿದ್ದಲ್ಲಿ ಆ ದಿವಸ ಬೆಳಿಗ್ಗೆ 10 ಗಂಟೆಗೆ ನೀವಿಬ್ಬರೂ ಈ ಕೋರ್ಟುಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಈ ದಾವಾವು ತೀರ್ಮಾನಿಸಲ್ಪಡುವುದು.

P N. Krishnamoorthi Rao
Advocate for Plaintiff.

ಉಡ್ಪಿ ತಾ.4—4—62

ಅಂಧಕಾರದ ಅಂಜಿಕೆ

(೩ನೇ ಪುಟದಿಂದ)

...ವುದೆಂದು ತಿಳಿಯಲು ಆತನಿಗೆ ಹೆಚ್ಚು ಸಮಯ ಹಿಡಿಯಲಿಲ್ಲ. ಕೂಡಲೇ ಗುಂಡಿ ...ತ್ತಿ ದೀಪ ಉರಿಸಿ ಧಾವಿಸಿದ. ಎಲ್ಲ ... ಒಂದು ಕ್ಷಣದಲ್ಲಿ ನಡೆದು ಹೋಗಿ ... ಆತ ಲಲಿತೆಯನ್ನೆತ್ತಿ ನೇವರಿಸುತ್ತ ...ರ್ಯ ಹೇಳ ತೊಡಗಿದ.

ಸುರೇಶ ಏನೇನೋ ಹೇಳುತ್ತ ಲಲಿತೆ...ಯನ್ನು ಸಮಾಧಾನಗೊಳಿಸುತಿದ್ದ. ಆಗ, "ಏನದು ಗಲಾಟೆ? ಏನಾಯಿತು?" ಎಂದು ಕಿಟ್ಟು ತನ್ನ ಕೋಣೆಯೊಳಗಿನಿಂದ ಬಾಗಿಲು ತೆಗೆದು ಹೊರ ಬಂದ.

"ಯಾರೂ ಇಲ್ಲ. ನಾವೇ. ನೀನು ಹೋಗಿ ಮಲಗು" ಎಂದು ಗದರಿಸಿದ ಸುರೇಶ.

"ಇಲ್ಲ, ಏನೋ ಕೂಗು ಕೇಳಿಸಿತು. ಏನಾಯಿತು? ಅತ್ತಿಗೆಗೆ ಏನಾಯಿತು?" ಪ್ರಶ್ನಿಸಿದ ಕಿಟ್ಟು.

"ಏನೂ ಆಗಿಲ್ಲ; ನೀನು ಹೋಗಿ ಮಲಗು".

"ಏನಾಯಿತು, ಅಂದರೆ?"

"ಏನಾಗಿಲ್ಲ. ನಿನ್ನದಯ. ಹೋಗಿ ಮಲಗುವಷ್ಟು ಉಪಕಾರಮಾಡು"--ಸುರೇಶ ...ತನನ್ನು ದೂರ ಕಳಿಸಲು ಪ್ರಯತ್ನಿಸಿದ. ...ದರೆ, ಆತ ಬಿಡಬೇಕೆ?" ಏನಾಯಿತು ...ತ್ತಿ?" ಎಂದು ನೇರವಾಗಿ ಕೇಳಿಯೇ ...ಟ್ಟ.

ಕಿಟ್ಟುವಿನ ಒಂದೊಂದು ಪ್ರಶ್ನೆ ಮೊದ...ಲೇ ಕೆಟ್ಟಿದ್ದ ಸುರೇಶನ ತಾಳ್ಮೆಯನ್ನು ...ತ್ತಷ್ಟು ಕೆಡಿಸುತಿತ್ತು. ಮೊದಲೇ ಸೋ... ಶರೀರದಿಂದ ಆತನ ಮನಸ್ಸು ಹತೋ...ಯಲ್ಲಿರಲಿಲ್ಲ. "ಸುಮ್ಮನೆ ಹೋಗು ಎಂ...ರೆ...." ಎಂದು ದುರಗುಟ್ಟಿ ನೋಡಿದ. ...ದಲೇ ಕೆಂಪಾಗಿದ್ದ ಆತನ ಕಣ್ಣುಗ...ಗ ಮತ್ತಷ್ಟು ಆ ರಕ್ತವಾಗಿದ್ದವು.

"ನಿಮ್ಮೊಡನೆ ನಾನು ಕೇಳಲಿಲ್ಲ. ಅ...ತ್ತಿಯೊಡನೆ ಕೇಳಿದೆ. ನೀವೇಕೆ ರೇಗು...ತ್ತೀರಿ?" ಎಂದ ಆ ಉದ್ದಂಡ ಬಾಲಕ. ...ತಾಳ್ಮೆಗೆಟ್ಟ ಸುರೇಶ ಆಳಿಯನ ದವಡೆ...ರಡು ಬಾರಿಸಿಯೇ ಆತನನ್ನು ಹೊರ...ಟ್ಟಬೇಕೆಂದಿದ್ದ- ದೀಪ ಆರಿದಾಗ ಕಂ...ಟ್ಟು ಅಧೀರಳಾಗಿ ಬಿದ್ದುಬಿಟ್ಟಿದ್ದ ಲಲಿ... ಈಗ ತುಸು ಸಮಾಧಾನಗೊಂಡಿದ್ದಳು. "ಪಾಪ, ಅನಾಥ ಹುಡುಗ, ಅವನನ್ನೇಕೆ ಹೊಡೆಯುತ್ತೀರಿ?" ಎಂದು ಆಕೆ ತಡೆ...ಳು. ಕಿಟ್ಟು ಮೌನನಾಗಿ ತನ್ನ ಕೋಣೆ...ಯೊಳಕ್ಕೆ ಹೋಗಿ ದಢಾರನೆ ಬಾಗಿಲು ...ಹಾಕಿಕೊಂಡು ಮಲಗಿದ.

ಇದೇ ಮಾದರಿಯ ಒಂದಲ್ಲ ಒಂ...ದು ದುರ್ಘಟನೆಗಳು ಪದೇ ಪದೇ ನ...ಡೆಯುತಿದ್ದುವು. ಒಂದು ದಿನ ಕರೆಂಟ್ ...ಹೋದಾಯ್ತು- ಲಲಿತೆಯು ಕಂಗಾಲಾಗಿ ...ಕಿರಚಿಕೊಂಡಳು. ಮೋಂಬತ್ತಿಯನ್ನು ಹ...ಚ್ಚಿದ ನಂತರ ಆಕೆ ಯಥಾಸ್ಥಿತಿಗೆ ಬಂ...ದಳು. ಕಿಟ್ಟು ಕೇಳಿದ: "ಏನದು ಅತ್ತಿ? ಏನಾಯಿತು?"

ಕೈಮಗ್ಗಗಳಿಂದ ತಯಾರಿಸಿದ ಸುಂದರ ಪರದೆಗಳು, ಮೇಜುಬಟ್ಟೆಗಳು, ಹಾಸುಗೆ-ದಿಂಬುಗಳಿಗೆ ಉಪಯುಕ್ತವಾದ ಬಟ್ಟೆಗಳ ವಿವಿಧ ಮಾದರಿಯನ್ನು ಇಲ್ಲಿ ಪ್ರದರ್ಶಿಸಲಾದುದನ್ನು ನೋಡಬಹುದು.

"ನನಗೆ ಹೆದರಿಕೆಯಾಯಿತು ಮಗು...

"ಹೆದರಿಕೆ? ಏತಕ್ಕೆ"

"ಸುತ್ತ ಕತ್ತಲೆ ಹರಡಿತ್ತಲ್ಲ; ಅದರಿಂದಲೇ ನಾನು ಬೆಚ್ಚಬಿದ್ದೆ."

"ಅಯ್ಯೋ ಅತ್ತೆ, ಹನ್ನೆರಡು ವರ್ಷದ ನಾನು ರಾತ್ರೆ ಸಹ ನಿರ್ಭಯದಿಂದ ತಿರುಗಾಡಬಲ್ಲೆ, ನೀವು ಮಾತ್ರ...."

"ಹೋಗೋ ಮುಟ್ಠಾಳ.... ಹೋಗಿ ಮಲಗುತ್ತೀಯೋ ಇಲ್ಲ..." ಸುರೇಶ ಕೈಯೆತ್ತಿದ.

"ಅಯ್ಯೋ ಪಾಪ, ನಿಮಗೇನು ಆತನನ್ನು ಕಂಡರೆ ಸಿಟ್ಟು? ಅವನನ್ನೇನು ಹೊಡೆದು ಕೊಂದೇ ಬಿಡುತ್ತೀರಾ?" ಲಲಿತೆ ನಡುವೆ ಬಂದಳು.

"ಅವರು ಹಾಗೆಯೇ ಅತ್ತೆ, ನನ್ನನ್ನು ಕಂಡೊಡನೆಯೇ ಹಾವು ಕಂಡ ಗರುಡರಾಗುತ್ತಾರೆ. ನೀವಲ್ಲವಾದರೆ, ಇಷ್ಟರಲ್ಲಿ ನಾನೆಲ್ಲಿರುತಿದ್ದೆನೋ."

ಸುರೇಶನ ಸಿಟ್ಟು ಇಳಿಯಿತು. ಆತ ಕಿಟ್ಟುವನ್ನು ಸಾಂತ್ವನಗೊಳಿಸಿ ಕಳುಹಿಸಿದ.

ಯಾವ ರೀತಿಯಿಂದಲೂ ಗುಣವಾಗದ ಹೆದರಿಕೆಯ ರೋಗಕ್ಕೆ ಯಾರೊಬ್ಬರೂ ಪರಿಣಾಮಕಾರಿ ಔಷಧಿ ನೀಡಲು ಅಸಮರ್ಥರಾದರು. ಇದರಿಂದ ಸುರೇಶ ಸಂಪೂರ್ಣ ಅಧೀರನಾದ. ತನ್ನ ಪಡೆದು ಬಂದ ಭಾಗ್ಯವಿದು. ಇದಕ್ಕಾಗಿ ಯಾರನ್ನು ದೂರಿಯೇನು ಪ್ರಯೋಜನವೆಂದು ಹಲುಬುತಿದ್ದ. ಮತ್ತೆ ಆತ ಮಾಡಬಹುದಿತ್ತಾದರೂ ಏನನ್ನು?

ಕೆಲವು ಸಮಯ ಕಳೆಯಿತು. ಲಲಿತೆಯ ಪರಿಸ್ಥಿತಿಯೇನೂ ಸುಧಾರಿಸಲಿಲ್ಲ. ಸುರೇಶನಿಗಾದರೂ ಈ ರೋಗ ರಕ್ತಕ್ಕಂಟಿದುದೆಂದು ಖಾತ್ರಿಯಾದುದರಿಂದ ತನ್ನ ಕಳವಳವನ್ನು ಮರೆಯಲು ಯತ್ನಿಸುತಿದ್ದ ಹಾಗಿರುವಷ್ಟರಲ್ಲಿ ತನ್ನ ಗೆಳೆಯನೊಬ್ಬನ 'ಇದು ಶಾರೀರಿಕ ಇಲ್ಲವೇ ಭೌತಿಕ ರೋಗವಲ್ಲ; ಮಾನಸಿಕವಾದುದು. ಆದುದರಿಂದ ಇದಕ್ಕೆ ಮಾನಸಿಕ ಚಿಕಿತ್ಸೆ ಬೇಕಾಗಿದೆ' ಎಂಬ ಸಲಹೆಯು ಅವನಿಗೆ ಸರಿಕಂಡಿತು. ಅದಕ್ಕಾಗಿ ಪ್ರಸಿದ್ಧ ಮನಶ್ಶಾಸ್ತ್ರಿಯ ಬಳಿಗೆ ಹೋದನಾತ. ಅಲ್ಲಿ ವಿವಾಹಾನಂತರದ ಸಕಲ ವೃತ್ತಾಂತಗಳನ್ನೂ ತಿಳಿಸಿದ. ಮಾನಸಿಕ ತಜ್ಞರು ಹಲವಾರು ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆದರು. ಇದರಿಂದ ಲಲಿತೆಗೆ ಅಂಟಿರುವುದು ಮಾನಸಿಕ ವ್ಯಾಧಿಯೆಂಬುದು ವೈದ್ಯರಿಗೆ ಖಚಿತವಾಯಿತು. ಅವರು ಪರಿಹಾರವನ್ನ ಸೂಚಿಸಿದರು: "ಇನ್ನು ಮುಂದೆ ಯಾವ ವಿಶೇಷ ಚಿಕಿತ್ಸೆಯೂ ಬೇಡ. ರೋಗಿಯ ಮನಸ್ಸಿನಲ್ಲಿ ಹೆದರಿಕೆ ಹುಟ್ಟಿಕೊಂಡಿದೆ; ಅದನ್ನು ಹೋಗಲಾಡಿಸಬೇಕು".

"ಯಾವುದರ ಹೆದರಿಕೆ ಡಾಕ್ಟರ್?"

'ಪ್ರಾಯಃ ಆಕೆ ಚಿಕ್ಕವಳಿರುವಾಗ ರಾತ್ರೆ ಹೊತ್ತು ಭೂತಗಳ ಕತೆಗಳನ್ನು ಕೇಳುತ್ತಿರಬೇಕು. ಸಾಮಾನ್ಯವಾಗಿ ಮಕ್ಕಳನ್ನು ನಿದ್ರೆ ಬರಿಸಲು ಇಂತಹ ಪ್ರಯತ್ನ ನಡೆಸುತ್ತಾರೆ, ಆ ಭೂತದ ಅಂಜಿಕೆ ಆಕೆಯಲ್ಲಿ ಬೇರೂರಿ ರಕ್ತವೆಲ್ಲ ತುಂಬಿದೆ. ಇದರಿಂದಾಗಿಯೇ ಹಗಲು ನಿರ್ಭಯಳಾಗಿದ್ದವಳು ಕತ್ತಲು ಹರಡಿದೊಡನೆಯೇ ಹೆದರುತ್ತಾಳೆ.,,

"ಹಾಗಾದರೆ, ಇದಕ್ಕೆ ಯಾವ ಚಿಕಿತ್ಸೆ ಮಾಡಬೇಕು? ,,

"ಹೃದಯದಲ್ಲಿ ಬಿದ್ದಿರುವ ಹೆದರಿಕೆಯು ನಿರಾಧಾರವೆಂದು ಮನವರಿಕೆ ಮಾಡಿಕೊಡಬೇಕು. ,,

"ಅದು ಹೇಗೆ? ,,

'ರಾತ್ರೆ ಮಲಗಿರುವಾಗ, ಒಂದು ಬಾರಿ ದೀಪ ಆರಿಸಿರಿ. ಆಗ, ಆಕೆ ಕೂಗುತ್ತಾಳೆ, ಬೀಳುತ್ತಾಳೆ. ನೀವು ಆಕೆಯನ್ನು ಏನೂ ಇಲ್ಲವೆಂದು ಸಮಾಧಾನ ಹೇಳಬೇಕು. ಆಕೆ ಒಪ್ಪುವುದಿಲ್ಲ. ಬಹುಪರಿಯಾಗಿ ಹೇಳಿದ ನಂತರವೂ ಆಕೆ ಅದಕ್ಕೆ ತಲೆದೂಗುವುದಿಲ್ಲ, ಆ ಮೇಲೆ ದೀಪವಿಂಸಿ ಏನೂ ಇಲ್ಲವೆಂಬುದನ್ನು ತೋರಿಸಿಕೊಡಬೇಕು. ಒಮ್ಮೆ ತನ್ನ ಭಯವು ನಿರಾಧಾರ ಅಪ್ರಾಮಾಣಿಕವೆಂದು ಆಕೆಯ ಮನಸ್ಸಿಗೆ ನಾಟಿತೆಂದರೆ, ಮತ್ತೆ ಅಂತಹ ಪ್ರಸಂಗ ಬರಲಾರದು. ಆಕೆ ಸಂಪೂರ್ಣ ಗುಣ ಮುಖವಾಗುತ್ತಾಳೆ...."ಆದರೆ....ಆದರೆ...."

"ಆದರೆ, ಏನು ಡಾಕ್ಟರ್? ಆಕೆಗಾಗಿ ಏನನ್ನು ಮಾಡುವುದಕ್ಕೂ ನಾನು ಬದ್ಧಕಟಿಯಾಗಿದ್ದೇನೆ."

"ಮತ್ತೇನೂ ಇಲ್ಲ....ಆದರೆ, ಇಷ್ಟಾಗುವಷ್ಟರಲ್ಲಿ ಆಕೆ ವ್ಯತ್ಯಾ ಮುಖಳಾಗುವುದೂ ಸಾಧ್ಯವಿದೆ!"

ಅದಿನ ರಾತ್ರೆ ಸುರೇಶ ಮಲಗಿದಾಗ ತನ್ನ ಮಡದಿಗೆ ಆಕೆಯ ಹೆದರಿಕೆಯ ಕುರಿತು ಉಪದೇಶಿಸಿದ. ಅದು ನಿರಾಧಾರವೆಂದು ಆತ ಸ್ಪಷ್ಟವಾಗಿ ಹೇಳುವಂತಿರಲಿಲ್ಲ. ಆದುದರಿಂದ ಸುತ್ತು ಬಳಸಿ ತೊಡಗುತ್ತ ಹೇಳಿದ: "ನಾನು ಚಿಕ್ಕವನಿರುವಾಗ ನನ್ನ ತಾಯಿ ಮಲಗದಿದ್ದರೆ ಭೂತ ಬಂದು ನಿನ್ನನ್ನು ಹಿಡಿಯುವುದು ಎಂದು ಹೇಳುತಿದ್ದಳು".

"ಬೇಡ, ಬೇಡ. ನನಗೆ ಹೇಳಬೇಡಿ, ಹೇಳ ಬೇಡಿ' ಆಕೆ ಕೂಗ ತೊಡಗಿದಳು. ದಿಂಬಿನ ಮೇಲೆ ಮುಖವಿಟ್ಟು ಅಳತೊಡಗಿದಳು. ಆಕೆಯ ಇಡಿಯ ಶರೀರ ನಡುಗುತಿತ್ತು. ಸುರೇಶನೆದ್ದು ತನ್ನ ಸತ್ನಿಯ ಬಳಿ ಕುಳಿತ. ಪ್ರೇಮ ಭರಿತ ಭಾವದಿಂದ ಶಾಂತಗೊಳಿಸಲೆತ್ನಿಸಿದ. "ಮೇಣದ ಬತ್ತಿ-ಬೆಂಕಿ ಪೆಟ್ಟಿಗೆ ಇವೆಯಲ್ಲಾ, ಆಕೆ ಕೇಳಿದ

Tel: 'BLUEYAGAR'. — ಚಿನ್ನ ಮುತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜು ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA, UDIPI.
REGD. NO.BG. 176

12-4-1962

LICENSE NO. 31
Licensed to Post without Prepayment

ಟ್ಟು ಹಷ್ಟೊಪದರ ಬೇಡ ನಾನಿಲ್ಲಿಯೇ ನಿನ್ನ ಜೊತೆಗಿದ್ದೇನೆ. ಎಂದ ಆತ ಯೋಚಿಸ ತೊಡಗಿದ ಲಲಿತೆ ಭೂತಕ್ಕೆ ಹೆದರುತ್ತಾ ಳೆಂಬುದರಲ್ಲಿ ಇನ್ನೇನೂ ಸಂಶಯ ಉಳಿ ಯಲಿಲ್ಲ ವೈದ್ಯರೆಂದಿದ್ದರು; 'ದೀಪ ನಂ ದಿಸು, ಪ್ರತಿಕ್ರಿಯೆಯೇನೆಂಬುದನ್ನು ಕಾ ಣು, ಎಂದು ಆಕೆ ಬೊಬ್ಬಿಡುವಳೆಂಬುದು ಇದುವರೆಗಿನ ಅನುಭವ

ಸುರೇಶ ತನ್ನ ಪತ್ನಿಯ ಕಡೆಗೆ ನೋಡಿ ದ. ದುರ್ಬಲ ಶರೀರದ ನಿಶ್ಯಕ್ತಳು ಹಾಸಿ ಗೆಯಲ್ಲಿ ಬಿದ್ದುಕೊಂಡಿದ್ದಳು ಸುರೇಶನಿ ಗೆ ಏನು ಮಾಡಬೇಕೆಂದು ತೋರಲಿಲ್ಲ. ಅವನ ತಲೆಯೊಳಗೆ ದೊಡ್ಡ ವಿದ್ರೋಹ ವೊಂದು ನಡೆಯುತಿತ್ತು. ಮೆಲ್ಲನೆ ಗಡಿ ಯಾರದತ್ತ ದೃಷ್ಟಿಹಾಯಿಸಿದ ಹನ್ನೆರ ಡು ಬಡಿಯುವುದರಲ್ಲಿತ್ತು. ನಿದ್ದೆಗಾಣದ ಕಣ್ಣು ಅರೆ ಮುಚ್ಚುತಿತ್ತು, ಆತ ಅಂತೆ ಯೇ ಭಾವ ಸಮಾಧಿಯಲ್ಲಿದ್ದ.

ಅಷ್ಟರಲ್ಲಿಯೇ ರಸ್ತೆಯ ಪಕ್ಕದಲ್ಲೊಂ ದು ಕರ್ಕಶ ಶಬ್ದ ಕೇಳಿ ಬಂತು. ಕಾರಿಗೆ ಜೋರಾಗಿ ಬ್ರೇಕು ಹಾಕಿದ ಧ್ವನಿಯೂ ಅ ದರೊಡನೆ ಕೇಳಿಸಿತು. ಸುರೇಶ ಕಂಬಳಿ ಹೊದ್ದು ಪಕ್ಕಕ್ಕೆ ತಿರುಗಿ ಮಲಗಿದ ದೀ ಪದ ಬೆಳಕಿನಿಂದ ನಿದ್ದೆ ಬರದಿರಲು ಪ್ರ ಕಾಶ ಮರೆಮಾಡಲು ಈ ಉಪಾಯ ಹೂ ಡಿದ್ದ. ಕಂಬಳಿಯಿಂದ ಸೆಖೆ ಹೆಚ್ಚಲು ಉ ಸಿರು ಕಟ್ಟಿದಂತಾಗಲು ಅದನ್ನು ದೂರವೆ ಸೆದ. ಅದೇ ಹೊತ್ತಿನಲ್ಲಿ ಕೋಣೆಯ ದೀ ಪವೂ ನಂದಿತು. ಲಲಿತ ಚೀತ್ಕರಿಸಿದಳು. ಸುರೇಶ ನೆದ್ದು ಬೆಂಕಿ ಪೆಟ್ಟಿಗೆ ಅರಸ ತೊ ಡಗಿದ. ಕತ್ತಲೆಯಲ್ಲಿ ಆದೆಷ್ಟು ಕೈಹರಡಿ ಸಿದರೂ ಪೆಟ್ಟಿಗೆ ಕೈಗೆಟಕಲಿಲ್ಲ. ಲಲಿತೆ ಮತ್ತೂ ಕೂಗಿದಳು: "ಒಳಗೆ ಬರಲು ಬಿಡಬೇಡಿರಿ; ಅದನ್ನು ತಡೆಯಿರಿ; ಕಟ್ಟಿ ಹಾಕಿರಿ. ಅಯ್ಯಯ್ಯೋ ...ಅದು ನನ್ನ ಕು ತ್ತಿಗೆಯನ್ನು ಅದುಮುತ್ತಿದೆ......" ಇ ನ್ನೊಂದೆಡೆ ಭಯಾನಕ ಚೀತ್ಕಾರ!

ಸುರೇಶ ಒಂದೇ ನೆಗೆತಕ್ಕೆ ಆಕೆಯ ಬಳಿ ಬಂದುಬಿದ್ದ. ಅಷ್ಟರಲ್ಲಿ ದೀಪ ಮರಳಿ ಉ ರಿಯ ತೊಡಗಿತು. ಇಡಿಯ ಕೋಣೆಯಲ್ಲಿ ಬೆಳಕು ಹರಡಿತು. ಸುರೇಶನ ಕಣ್ಣುಗ ಳು ಉರಿದಂತಾದುವು. ಆತ ಕಣ್ಣೊರಸಿ ಕೊಳ್ಳುತ್ತ ತನ್ನ ಪತ್ನಿಯನ್ನು ವೀಕ್ಷಿಸಿದ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರ ಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

(೧೦ನೇ ಪುಟದಿಂದ)

ಇನ್ನು ಕಥಾ ಪ್ರತಿಪಾದನೆಯ ಕ್ರಮ ಅವರವರ ಪ್ರತಿಭೆಗೆ ಸೇರಿದ ವಿಚಾರ. ಪಾತ್ರ ಸೃಷ್ಟನೆಯ ಸೂಕ್ಷ್ಮ ಕಲೆ, ಶೈಲಿ ಯ ಸೊಗಸು—ಇವೆಲ್ಲವೂ ಕತೆಗಾರ ಅ ಥವಾ ಕಾದಂಬರೀಕಾರನಲ್ಲಿ ಸ್ವಭಾವತಃ ಇರುವ ಶಕ್ತಿಯಾಗಿದೆ. ಆದ್ದು ಆತನ ಪ್ರತಿ ಭೆಗೆ ನಿದರ್ಶನೆಗಳಾಗಿವೆ.

ಹೀಗೆ ಕನ್ನಡದ ಗದ್ಯ ವಾಙ್ಮಯವ ನ್ನು ಸಣ್ಣ ಕಥೆ, ನೀಳ್ಗತೆ, ಕಾದಂಬರಿ— ಎಂಬುದಾಗಿ ಮೂರು ವಿಭಾಗಗಳಾಗಿ ವಿಂಗಡಿಸಿ ಹಾಕಬಹುದು. ಅವುಗಳಲ್ಲಿ ಶ್ರೀ ಆನಂದರ "ನಾನು ಕೊಂದ ಹುಡು ಗಿ" ಎಂಬ ಕಥೆ ಸಣ್ಣ ಕಥೆಗಳಿಗೆ ಅತ್ಯುತ್ತ ಮ ಉದಾಹರಣೆಯಾಗಿದೆ ಜೋಮನ ದುಡಿ, ಮರಳಿ ಮಣ್ಣಿಗೆ, ಕಾನೂ ರು ಸುಬ್ಬಮ್ಮ ಹೆಗ್ಗಡಿತಿ, ವಿಪ್ರದಾಸ ಮುಂತಾದ ಬಂಗಾಳೀ ಕಾದಂಬರಿಯ ಭಾಷಾಂತರ— ಇವೇ ಮೊದಲಾದ ಕೈ ಬೆರಳೆಣಿಕೆಯ ಕಾದಂಬರಿಗಳು ಕನ್ನಡದ ಲ್ಲಿದ್ದಾವೆ. ಅವು ಹೊರತಾಗಿ ಉಳಿದೆಲ್ಲವೂ ನೀಳ್ಗತೆಗಳೇ ಆಗಿವೆ.

ಕಾದಂಬರಿ—ನೀಳ್ಗತೆ ಇವುಗಳ ಭೇದ ವನ್ನು ನೀವೇ ನಿರ್ಣಯಿಸಬಹುದು. ಒಂ ದು ಕಾದಂಬರಿಯನ್ನು ಓದಿ ಮುಗಿಸಿ ಅದ ರಲ್ಲಿ ಪ್ರತಿಪಾದಿತವಾದ ಎಲ್ಲ ಸಮಸ್ಯೆಗಳ ನ್ನೂ ಬರೆದಿಡಿ. ಆ ಸಮಸ್ಯೆಗಳು ಯಾವ ಯಾವ ವ್ಯಕ್ತಿಗಳಿಗೆ ಬಂದು ಮುತ್ತಿಕೊಂ ಡಿವೆ ಎಂಬುದನ್ನು ಗುರುತಿಸಿ. ಅಂತಹ ವ್ಯಕ್ತಿಗಳನ್ನು ನಿಮ್ಮ ಸಮಾಜದಲ್ಲಿದ್ದಾರೆ ಯೇ ಎಂದು ಹುಡುಕಿ ನೋಡಿ ಸಿಕ್ಕಿದರೆ ನಿಮ್ಮ ಪುಣ್ಯ. ಸಿಕ್ಕದಿದ್ದರೂ ಚಿಂತಿಸ ಬೇಕಾಗಿಲ್ಲ; ಅಂತಹ ಒಂದು ವ್ಯಕ್ತಿ ಇರ ಲಿಕ್ಕೆ ಸಾಧ್ಯವೇ ಎಂಬುದನ್ನು ಚಿಂತಿಸಿ.

ಅದೂ ಅಲ್ಲದೆ ನೀವು ಓದಿದ ಆ ಕಾ ದಂಬರಿಯಲ್ಲಿ ನೀರಸ ಭಾಗಗಳಿದ್ದರೆ ಅವ ನ್ನು ಗುರುತಿಸಿ. ಬಗೆಹರಿಸದೆ ಬಿಟ್ಟ ಸಮ ಸ್ಯೆಗಳಿದ್ದರೆ ಅವನ್ನೂ ಗಮನಿಸಿ. ಆ ಮೇ ಲೆ ಆ ಕಾದಂಬರಿಯಿಂದಾಗಿ ಸಮಾಜದ ಮೇಲಾಗುವ—(ನಿಮ್ಮ ವಿಷಯದಲ್ಲಿ ಅ ಪವಾದವಿರಬಹುದು,) ಪ್ರತಿಕ್ರಿಯೆಯ ನ್ನು ನೀವೇ ಊಹಿಸಿ ನೋಡಿ. ಆಗ ನಿ ಮಗೇ ಹೊಳೆಯುವುದು, ಅದು ಕಾದಂ ಬರಿಯೋ ನೀಳ್ಗತೆಯೋ ಎಂಬ ವಿಚಾರ!

"ನಿರಂಕುಶಾಃ ಕವಯಃ" ಎಂಬ ಮಾತನ್ನು ಹಿಂದಿನವರು ಯಾವ ಅರ್ಥ ದಲ್ಲಿ ಹೇಗೆ ಹೇಳಿದರೋ ತಿಳಿಯದು. ಆ ದರೆ ಕವಿಗಳೂ ಬದ್ಧರು; ಅವರೇನು ಸಂ ಪೂರ್ಣ ಮುಕ್ತರಲ್ಲ—ಎಂಬ ವಿಚಾರ ಗ ಮನಿಸಬೇಕಾದುದೇ. ಎಂದಿನ ತನಕ ಕ ವಿ ನಿರ್ಮಲ ಹೃದಯದ ಸರಳ ಹಾಗೂ ಸತ್ಯ ಮಾರ್ಗದ ದೈವೀ ಪುರುಷನಾಗುವು ದಿಲ್ಲವೋ ಅಂದಿನ ವರೆಗೆ ಆತ ಬದ್ಧನೇ! ಆತ ಸಾಮಾನ್ಯ ಮನುಷ್ಯನಂತಿದ್ದರೆ ಆತ ನಲ್ಲೇನು ವಿಶೇಷ ಬಂತು? ಕಥನ ಕಲೆ ಯೊಂದಿದ್ದ ಮಾತ್ರಕ್ಕೆ ಆತ ಕವಿಯಾಗ ಲಾರ; ಸಾಹಿತಿಯೆನಿಸಲಾರ. ಹರಿತವಾದ ಲೇಖನಿ ಉತ್ತಮ ಕೃತಿಗಳಿಗೆ ಕಾರಣವಾ ಗಲಾರದು. ಪರಿಪಕ್ವವಾದ ಬೌದ್ಧಿಕ ಹಿ ನ್ನೆಲೆ ಅದಕ್ಕೆ ಬೇಕು. ಹಾಗಿದ್ದಲ್ಲಿ ಮಾತ್ರ ಆತನ ಲೇಖನಿಯಿಂದ ಅಮೃತದ ಕಾರಂ ಜಿ ಚಿಮ್ಮೀತು. ಇದಕ್ಕೆ ವಿರುದ್ಧವಾದಾಗ ಲೇಖನಿಯಿಂದ ಹೊಮ್ಮುವುದು ಕಾಳಕೂ ಟ! ಸಮಾಜವನ್ನು ಮರೆದೊರಗಿಸುವ ಕ ಳ್ಳನ ಹೊಳೆ!

ಇದನ್ನು ನಮ್ಮ ಪೂರ್ವಿಕರು ಅರಿತಿ ದ್ದರು. ಕವಿಗೆ ನಿರಂಕುಶತ್ವವನ್ನು ಕೊಡು ವ ಮುಂಚೆ ಕವಿ ಎಂದರೆ ಯಾರೆಂಬುದ ನ್ನೂ ಹೇಳಿಯೇ ಇದ್ದಾರೆ. "ನಾನೃಷಿಃ ಕುರುತೇ ಕಾವ್ಯಂ" ಬೌದ್ಧಿಕ ಪರಿಪಾಕ ಬೇಕೆಂಬುದೇ ಇವರ ತಾತ್ಪರ್ಯ!

ಆಕೆಯ ಮುಖ ವಿವರ್ಣವಾಗಿತ್ತು; ಕ್ಷಿ ಬ್ಧವಾಗಿತ್ತು, ಕಳಾಹೀನವೆನಿಸಿತ್ತು.

ಅಷ್ಟರಲ್ಲಿ ಕಿಟ್ಟುವಿನ ಕೋಣೆಯ ಬಾ ಗಿಲು ತೆರೆಯುವ ಸದ್ದು ಆಯಿತು. ಕಿ ಟ್ಟು ಬಾಗಿಲಲ್ಲಿ ನಿಂತನು. ಆತನ ಮುಖ ದಲ್ಲಿ ಗಂಭೀರತೆಯು ತುಂಬಿ ತುಳುಕುತಿ ತ್ತು. "ನನ್ನಿಂದ ತಪ್ಪಾಯಿತು; ಕ್ಷಮಿಸಿ ರಿ. ಅತ್ತೆಯೇನು ಹೆದರಿ ಬಿಟ್ಟರೆ? ನಾನೇ ನೋ ತಮಾಷೆಗೆಂದು ಮೈನ್ ಸ್ವಿಚ್ಚನ್ನು ತೆಗೆದು ಬಿಟ್ಟೆ...." ಆತ ಹೇಳಿದ. ನೈಜ ಅಪರಾಧಿಯ ಮನೋಭಾವ ಅವನ ಮು ಖದಲ್ಲಿ ಎದ್ದು ತೋರುತಿತ್ತು.

ಲಲಿತೆಯು ಆ ವೇಳೆ ಕೂಗಲು ಉಳಿ ಯಲಿಲ್ಲ; ವೈದ್ಯರು ಹೇಳಿದ್ದ ಎರಡನೆಯ ಮಾತು ನಿಜವಾಗಿತ್ತು ಕಿಟ್ಟು ನಿಜವಾ ಗಿಯೂ ಅಪರಾಧಿಯೇ ಆಗಿದ್ದ.

(ಮಾರ್ವಿನ್ ಡ್ರ್ಯಾವರರ ಕಥೆಯೊಂದ ರಿಂದ ಪ್ರೇರಿತ.)

ಅಮೇರಿಕದ ಪ್ರವಾಸ ಕೈಕೊಂಡ ಶ್ರೀಮತಿ ಇಂದಿರಾ ಗಾಂಧಿ.

ಸುಭದ್ರ ಮತ್ತು ಸಮರ್ಥ
ಬ್ಯಾಂಕಿಂಗ್
ವ್ಯವಹಾರಗಳಿಗೆ:



ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

Edited Printed & Published by K, H, Shetty, at the Navayuga Press, Udipi, S. India.

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೩೨ | ಉಡುಪಿ 19—4—1962 ಗುರುವಾರ | Vol. 41 No. 32

ಕರ್ನಾಟಕ ರಾಜ್ಯದ

ಸೌಭಾಗ್ಯರವಿ ಎಂ. ವಿ.ಯವರ ನಿಧನ

ಕರ್ನಾಟಕದ ಸುಪ್ರಸಿದ್ಧ ಇಂಜಿನಿಯರ, ಆಡಳಿತಗಾರ, ರಾಜಕಾರಣಿ ಮತ್ತು ಅರ್ಥಶಾಸ್ತ್ರಜ್ಞರೆಂದು ಹೆಸರಾದ ಭಾರತರತ್ನ ಎಂ. ವಿ. ವಿಶ್ವೇಶ್ವರಯ್ಯನವರು ತಮ್ಮ ೧೦೨ನೆಯ ವಯಸ್ಸಿನಲ್ಲಿ ತಾ. ೧೪ರಂದು ಇಹಲೋಕ ತ್ಯಾಗ ಮಾಡಿದರೆಂಬ ವಾರ್ತೆಯು ಸಮಸ್ತ ದೇಶವಾಸಿಗಳನ್ನೂ ಶೋಕ ಸಾಗರದಲ್ಲಿ ಅದ್ದಿತು. ಈಗ್ಗೆ ಕೆಲವೊಂದು ತಿಂಗಳುಗಳಿಂದ ಅಸ್ವಸ್ಥಕ್ಕೆ ಗುರಿಯಾದ ಇವರು ಶತಾಯುಷಿಯಾಗಿ ಸಫಲ ಜೀವನವನ್ನು ಬಾಳಿ ಬಂದವರು. ನಿಯಮಬದ್ಧ ದಿನಚರ್ಯೆಯನ್ನು ನಡೆಸುತ್ತ ಬಂದುದರ ಸತ್ಫಲವೆಂಬಂತೆ ಇವರು ಕೊನೆಯ ವರೆಗೂ ತಮ್ಮ ಕಾರ್ಯಕ್ರಮಗಳನ್ನು ಅನೂಚಾನವಾಗಿ ಸಾಗಿಸಿಕೊಂಡು ಬರುವಲ್ಲಿ ಯಶಸ್ವಿಯಾದರು. ಇಂತಹ ಆದರ್ಶ ವ್ಯಕ್ತಿಯು ಸದಾ ದೇಶದ ಹಿತಚಿಂತನೆಯಲ್ಲಿಯೇ ವ್ಯಸ್ತವಾಗಿದ್ದು, ಅದಕ್ಕಾಗಿ ಶ್ರಮಿಸುತ್ತ ಬಂದು ಸರ್ವ ಜನಾದರಣೆಗೆ ಪಾತ್ರರಾಗಿರುವುದರಿಂದಲೇ ಅವರದು ತುಂಬು ಜೀವನವಾಗಿರುವುದಾದರೂ ದೇಹಾಂತವಾದುದರಿಂದ ಕಣ್ಣೀರ್ಮಿಡಿಯುವುದು ಸ್ವಾಭಾವಿಕ.

ಸರ್ ವಿಶ್ವೇಶ್ವರಯ್ಯನವರದು ಬಹುಮುಖ ಕ್ಷೇತ್ರ ಆದರೆ, ಏಕಮುಖ ಜೀವನ. ಹಳೆಯ ಮಾದರಿಯಲ್ಲಿ ನಡೆದುಬರುತ್ತಿದ್ದ ಮೈಸೂರು ರಾಜ್ಯವನ್ನು ಆಧುನಿಕ ರೀತಿ ವಿಧಾನಗಳನ್ನು ಅಳವಡಿಸುವಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು ಅದನ್ನು 'ಮಾದರಿಯ ಸಂಸ್ಥಾನ'ವನ್ನಾಗಿ ಪುನಾರಚಿಸುವಲ್ಲಿ ಅವರು ತೋರಿದ ಸಾಹಸ, ಕಾರ್ಯದಕ್ಷತೆಗಳು ಇಡಿಯ ಮೈಸೂರಿಗೇನೇ ಅಖಿಲ ಭಾರತ ದೃಷ್ಟಿಯಲ್ಲಿ ಪ್ರಾಶಸ್ತ್ಯವನ್ನು ತಂದುಕೊಟ್ಟಿವೆ. ಇದರಿಂದಾಗಿಯೇ ಆಧುನಿಕ ಮೈಸೂರಿನ ನಿರ್ಮಾಪಕರೆಂಬ ಹೆಸರಿಗಿವರು ಭಾಗಿಯಾಗಿದ್ದಾರೆ. ಇಂಜಿನಿಯರಿಂಗ ನಿಪುಣತೆಯಿಂದ ಅವರು ಕೆಲವರ ಹೊಗಳಿಕೆಗೆ ಪಾತ್ರರಾಗಿದ್ದರು; ಆಡಳಿತದಲ್ಲಿ ಸರ್ವ ದಕ್ಷತೆಯಿಂದ ಪ್ರಶಂಸೆಗೆ ಗುರಿಯಾಗಿದ್ದರು; ಉನ್ನತ ಮಟ್ಟದ ರಾಜಕಾರಣಿಯೆಂದಿವರನ್ನು ಬೇರೆ ಕೆಲವರು ಹೊಗಳುತ್ತಿದ್ದರು; ಔದ್ಯಮಿಕರಂಗದ ಬ್ರಹ್ಮನೆಂಬ ಕೀರ್ತಿಯನ್ನು ಇವರು ಗಳಿಸಿದ್ದರು. ಆದರೆ, ತಮ್ಮ ಸುಗುಣಗಳಿಂದ, ತಮ್ಮ ಸದಾಚಾರದಿಂದ ತಮ್ಮ ಸೇವಾತತ್ಪರತೆಯಿಂದ ವಿಶ್ವೇಶ್ವರಯ್ಯನವರಂತೆ ಸಮಸ್ತರೆಲ್ಲರ ಗೌರವಾದರಗಳನ್ನು ಗಳಿಸಿಕೊಂಡಿರುವವರು ಅವರೊಬ್ಬರೇ ಎಂದು ನಿರ್ವಿವಾದವಾಗಿ ಹೇಳಬಹುದು.

ಭಾರತೀಯರ ಬಡತನವನ್ನು ಹೋಗಲಾಡಿಸಲು ಚರಕದಲ್ಲಿ ನೂಲುವುದೇ ತಾರಕವೆಂದು ಮಹಾತ್ಮಾ ಗಾಂಧೀಜಿಯವರು ತೋರಿಸಿಕೊಟ್ಟರು; ಬ್ರಿಟಿಷರ ನೊಗದಿಂದ ತಪ್ಪಿಸಿಕೊಳ್ಳಲು ಅಹಿಂಸಾರೂಪದ ಅಸಹಕಾರ ಆಂದೋಲನವೇ ಫಲದಾಯಕವೆಂದವರು ಸಾರಿ ಹೇಳಿದರು; ದೇಶವನ್ನು ಬಂಧವಿಮೋಚನೆಗೊಳಿಸಿದರು ಭಾರತೀಯರಿಗೆ ರಾಷ್ಟ್ರಪಿತನೆಂದೆನಿಸಿದರು. ಡಾ। ವಿಶ್ವೇಶ್ವರಯ್ಯನವರು ಸ್ವತಂತ್ರ ಭಾರತವಿಂದು ಅನುಸರಿಸಿದ ಯೋಜನಾ ನೀತಿಯನ್ನು ಬಹಳ ಮುಟ ಹಿಂದೆಯೇ ವ್ಯವಹಾರಕ್ಕೆ ತಂದು ಯೋಜನೆಗಳೇ ಇಲ್ಲದ ಆ ಕಾಲದಲ್ಲಿ ಮಹಾ ಕ್ರಾಂತಿಯನ್ನೇ ಎಸಗಿ ಯೋಜನಾಪಿತರೆಂಬ ಹೆಸರಿಗೆ ಪಾತ್ರರೆನಿಸಿದರು. ದೇಶದಲ್ಲಿ ಔದ್ಯಮಿಕ ರಂಗವು ಬೆಳೆಯದೆ ದೇಶವಾಸಿಗಳ ಉದ್ಧಾರವಾಗುವುದು ಅಸಾಧ್ಯವೆಂದರಿತ ಇವರು ಸಣ್ಣ ಮಟ್ಟದ ಕೈಗಾರಿಕೆಗಳು ಸ್ಥಾಪನೆಯಾಗುವಂತೆ, ಅವು ಬೆಳೆದುಬರುವಂತೆ ತಮ್ಮ ಆಡಳಿತಾವಧಿಯಲ್ಲಿಯೂ ಅನಂತರದಲ್ಲಿಯೂ ಪ್ರಯತ್ನಿಸಿ ಬಹು ಪಾಲಿಗೆ ಯಶಸ್ವಿಯೆನಿಸಿದ್ದರು.

ಕೈಗಾರಿಕೆಗಳ ಬಗ್ಗೆಯೇ ಅಹರ್ನಿಶಿ ಯೋಚಿಸುತ್ತಿದ್ದ ವಿಶ್ವೇಶ್ವರಯ್ಯನವರು ಅದರಿಂದಲೇ ದೇಶೋನ್ನತಿಯೆಂದು ತಿಳಿದಿದ್ದರು. ಖಾಯಿಲೆಯಲ್ಲಿರುವಾಗಲೂ ಅವರು ಈ ಬಗ್ಗೆಯೇ ಆಲೋಚನಾಮಗ್ನರಾಗಿರುತ್ತಿದ್ದರು. ಮರಣ ಕಾಲಕ್ಕೆ ಕೆಲವು ದಿನಗಳಿಗೆ ಮೊದಲಿಂದ ಅವರ ಸ್ಮೃತಿಶಕ್ತಿಯೂ ತುಸು ಕುಂದುತ್ತ ಬರುತಿತ್ತು. ಅಂತಹ ವೇಳೆಯಲ್ಲಿ ಕೂಡ ಕೆಲವೊಮ್ಮೆ ತಮ್ಮ ಆಪ್ತ ಕಾರ್ಯದರ್ಶಿಯನ್ನು ಕರೆದು ಬರಿಗೈಯನ್ನೇ ಮುಂದೆ ಚಾಚಿ, 'ಇಗೊ, ಕೈಗಾರಿಕೆಗಳ ಬಗ್ಗೆ ಹಲವು ವಿಷಯಗಳಿವೆ. ಬೇಗನೆ, ಇದರ ಕೆಲವು ಪ್ರತಿಗಳನ್ನು ಟೈಪ್ ಮಾಡಿ ತನ್ನಿರಿ. ನೀವು ಎಷ್ಟು ಹೊತ್ತಿಗೆ ಬರುತ್ತೀರಿ?" ಎಂದು ಪ್ರಶ್ನಿಸುತ್ತಿದ್ದರು. ಪ್ರಾರಂಭದ ಕೆಲವು ಸಲ ಕಾರ್ಯದರ್ಶಿಯು ಗೊಂದಲಕ್ಕೆ ಗುರಿಯಾದರೂ ಕೊನೆಗೆ, ವಿಶ್ವೇಶ್ವರಯ್ಯನವರ ಹೃದಯದ ಇಂಗಿತವನ್ನು ಅರಿತುಕೊಂಡ ಕಾರ್ಯದರ್ಶಿಯು ಇಂತಹ ಸ್ಥಿತಿಯಲ್ಲಿ ಕಣ್ಣೊರಸಿಕೊಂಡಿರಬಹುದು. ಅವರ ಹೃದಯದಲ್ಲಿ ಕೈಗಾರಿಕೋದ್ಯಮದ ಅಭಿವೃದ್ಧಿಯ ಚಿಂತನೆಯು ಅದೆಷ್ಟು ಗಾಢವಾಗಿತ್ತೆಂದು ಇದರಿಂದ ತಿಳಿಯಬಹುದು.

ಎರಡು ವರ್ಷಗಳಿಗೆ ಮೊದಲು ಕರ್ನಾಟಕ ರಾಜ್ಯದಲ್ಲಿ ವಿಶ್ವೇಶ್ವರಯ್ಯನವರ ಶತಮಾನೋತ್ಸವವನ್ನು ಆಚರಿಸಲಾಯಿತು. ಮೂಲೆ ಮೂಲೆಯಲ್ಲೂ ಅವರ ವ್ಯಕ್ತಿತ್ವದ ದರ್ಶನವನ್ನು ಮಾಡಿಕೊಟ್ಟು, ಕನ್ನಡಾಂಬೆಯ ವರಪುತ್ರನಿಗೆ ಆಯುರಾರೋಗ್ಯಗಳನ್ನು ನೀಡುವಂತೆ ಪ್ರಾರ್ಥಿಸಲಾಯಿತು. ತಮ್ಮ ಅಪರ ವಯಸ್ಸಿನಲ್ಲೂ ಕ್ರಮಬದ್ಧ ಜೀವನಕ್ಕೆ ಅಂಟಿಗೊಂಡ ವಿಶ್ವೇಶ್ವರಯ್ಯನವರು ಅಸ್ವಸ್ಥಿಯಿಂದ ಮಲಗಿ ಪ್ರಾಣತ್ಯಾಗ ಮಾಡುವುದನ್ನು ಬಯಸುತ್ತಿರಲಿಲ್ಲ. ಕರ್ಮಯೋಗವೀರರಾಗಿಯೇ ಮೃತ್ಯುವನ್ನಪ್ಪಬೇಕೆಂದು ಅವರ ಅಭಿಲಾಷೆಯಾಗಿತ್ತು. ಆದರೆ, ಒಂದೊಂದನ್ನು ಉಳಿದರೆ ವಿಶ್ವೇಶ್ವರಯ್ಯನವರ ಜೀವನ ಅವರು ಬಯಸಿದಂತೆಯೇ ಸಾಗಿದೆ; ಅವರು ಕಂಡಿದ್ದ ಕನಸುಗಳು ಇಂದು ನನಸಾಗುತ್ತ ಬರುತ್ತಿವೆ; ಅವರ ಅಪ್ರತಿಮ ವ್ಯಕ್ತಿತ್ವದಿಂದ ಸ್ಫೂರ್ತಿಗೊಂಡ ದೇಶದ ನಾಯಕರು ಅವರು ತುಳಿಯಲುದ್ದೇಶಿಸಿದ ದಾರಿಯನ್ನೇ ತುಳಿಯುತ್ತ ಭಾರತವನ್ನು ಸಂಪತ್ಸಮೃದ್ಧಿಯ ತುತ್ತತುದಿಗೇರಿಸಲು ಕಂಕಣ ಬದ್ಧರಾಗುತಿದ್ದಾರೆ

(೧೨ನೇ ಪುಟ ನೋಡಿರಿ)

ಮಾರಕಾಸ್ತ್ರಗಳು ನಮ್ಮನ್ನು ಸದೆಬಡಿಯುವುದಕ್ಕೆ ಮೊದಲು ನಾವೇ ಅದನ್ನು ನಷ್ಟಮಾಡಬೇಕು ಎನ್ನುವ, ನಿಶ್ಶಸ್ತ್ರೀಕರಣದಲ್ಲಿ ಆಸಕ್ತಿ ವಹಿಸುವ ಅಮೇರಿಕನ್ ಅಧ್ಯಕ್ಷ ಜಾನ್ ಕೆನ್ನೆಡಿ.

ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ ?
ಫರ್ನಿಚರುಗಳಲ್ಲೆಲ್ಲ 'ಹೀರಾ' ತಿಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ ?
ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಓರಣಕ್ಕಾಗಿ— ತಾಳಿಕೆ ಬಾಳಿಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ದೇಶ ವಿಖ್ಯಾತವಾದ 'ಹೀರಾ' ಉತ್ಕೃಷ್ಟ ಫರ್ನಿಚರುಗಳನ್ನೆ ಉಪಯೋಗಿಸಿರಿ. ವಿಚಾರಿಸಿರಿ, ಯಾ, ಶೋ ರೂಮನ್ನು ಸಂದರ್ಶಿಸಿರಿ.

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಹಳೆಯದಾದರೂ ಹೊಚ್ಚ ಹೊಸ ಕಥೆ

ಉತ್ತರನ ಪೌರುಷ ಒಲೆಯ ಮುಂದೆ

ವೆಂಕಟ ಸುಬ್ಬಯ್ಯನವರು ತಮ್ಮ ನೋಟವನ್ನು ನದಿಯ ತುದಿಯ ತನಕ ಬೀರಿ ಮತ್ತೆ ಮುಖ ತಗ್ಗಿಸಿದರು. ಬರೇ ಕರಿಯ ಪರದೆಯನ್ನು ಪಸರಿಸಿನಂತಲ್ಲದೆ ಬೇರೇನೂ ಕಣ್ಣಿಗೆ ಕಾಣಿಸದು.

"ಥೂ ಹಾಳಾಗಿ ಹೋಗಲಿ ಆ ಸೂಳೆ ಮಗ."

ತೆಂಗಿನ ಒಣಗಿದ ಗರಿಗಳ ಒಳಗೆ ಅಡಗಿತ್ತೊಂದು ಅಕ್ಕಿ ಮುಡಿ! ಅವರನ್ನು, ಆವರೊಡತಿ ಮಹಾಲಕ್ಷ್ಮಮ್ಮನವರನ್ನು, ಮತ್ತು ಆರು ಚಿಕ್ಕ ಮಕ್ಕಳನ್ನು ಇನ್ನೂ ಬದುಕಲು ಬಿಡುತಿದ್ದ ಯಮರಾಯ ಹುಡುಕಿ ಹುಡುಕಿ; ಗಂಡು ಸಿಗದೆ ತೊಳಲಾಡುವ ಹೆಣ್ಣಿನ ಪಿತರಂತೆ, ವೆಂಕಟ ಸುಬ್ಬಯ್ಯನವರು ಒಂದು ತಿಂಗಳಿಂದಲೇ ಅಕ್ಕಿಯ ಶೋಧನೆಯಲ್ಲಿದ್ದರು. ಅಂತೂ ಸಾಹಸದ ಫಲ, ನಾಲ್ವತ್ತೈದು ರೂಪಾಯಿಗೆ ಸಿಕ್ಕಿತೊಂದು ಅಕ್ಕಿ ಮುಡಿ. ಆದರೆ ಆ "ಸೂಳೆಮಗ"ನ "ಸಾಸ್ತ್ರ"ಯಿಂದಾಗಿ ಇವರಿಗೆ ಸುಖವಾದ ದೀರ್ಘಾಸ್ತ ದೊರೆಯದಂತಾಗಿದೆ ಆವರ ಮೈ ನವಿರೆದ್ದಿತ್ತು; ಮುಖ ಬಿಳುಪೇರಿತು; ಹೃದಯ ಬಡಬಡಿಸತೊಡಗಿತು; ಅವರಂತೆಯೇ ರೇಶನ್ ಸಾಲದ ಎಷ್ಟೋ ಮಂದಿ ಹೀಗೆ 'ಸಂಯುಕ್ತೆ'ಯನ್ನು ಹಾರಿಸಿಕೊಂಡು ಬರುವಂತೆ ಬಂದೂ ಎಷ್ಟು ಜನ ರಾಗಿ ಮುದ್ದೆ ನುಂಗುತ್ತಿದ್ದಾರೆ. ತಾನು ಹಾಗೆಲ್ಲಾದರೂ ಆದರೆ........

ತನ್ನ ಹೆಂಡತಿ ಮಕ್ಕಳ ಗತಿಯೇನು? ತಾನು ಮಕ್ಕಳನ್ನು ಓದಿಸುವ ಶಾಲೆ ಗತಿಯೇನು? ಆದರ ಬಾಗಿಲು ತೆರೆದು ೧೦ ಗಂಟೆಗೆ ಮಕ್ಕಳನ್ನು ಒಳಕಳಿಸಿ ಕಸ ಗುಡಿಸುವವರಾರು? ತಾನು ಮಾಡುವ ದಿನದ ಮಹತ್ಕಾರ್ಯಗಳಿಗೆಲ್ಲ "ಏನ್ಸಾರು" ಎಂಬ ಪ್ರಶ್ನಾರ್ಥಕದ ಪದ ಜೋಡಣೆ ಉತ್ತರ "ಇಲ್ಲ" ಎಂಬೊಂದೇ ಶಬ್ದ. ಅವರ ಯೋಚನಾಗಾರಕ್ಕೆ ಪಾಯ ಬಿದ್ದಿದೇ ತಡ, ಗೋಪುರ ತನ್ನಿಂದ ತಾನೇ ನಿರ್ಮಾಣಗೊಳ್ಳತೊಡಗಿತು!

'ಅಯ್ಯೋ" ಬಂದುಎಷ್ಟೊತ್ತಾಯ್ತು.... ಈಗಾಗಲೇ ಬಂದ್ರ್ಯಾ... ಅಕ್ಕಿ ಮುಡಿ ಒಂದು ಎರ...."

"ನಿನ್ನ ರಾಮಾಯಣ ಪ್ರವಚನ ಈಗ ಬೇಡ. ಸುಮ್ಮನೆ ಅಕ್ಕಿ ಸಾಗಿಸಿ ದೋಣಿಗೆ ಹಾಕು. ಬಾಕೂರ ಕಡವಿಗಿಂತ ಎರಡು ಮೈಲು ಮೇಲೇ ಇಲ್ಲ. ಒಳದಾರೀಲಿ ಮನೆ ಹಿತ್ತಿಲ ಬಾಗಿಲಿಗೆ ಹೋಗಿ. ತಿಳಿತೇನು?"

ತನಿಯ ಎಳೆವರೆಯದ ಹುಡುಗ- ತುಂಬಿದ ಮೈ. ಗುಜ್ಜುಗುಜ್ಜಾದ ದೇಹ. ಜಗಜಟ್ಟಿಯಂತಹ ಶಕ್ತಿವಂತ. ಒಂದೇ ಉಸುರಿಗೆ ಅಕ್ಕಿ ಮುಡಿ ದೋಣಿಯ ಮೂಲೆ ಸೇರಿತು ವೆಂಕಟ ಸುಬ್ಬಯ್ಯ ತಾವೂ ದೋಣಿಯೇರಿ ಕುಳಿತರು. ಅವರನ್ನು ಮುಂದೆ ಮಾಡಿಕೊಂಡು ತನಿಯ ಜಲ್ಲೆಯನ್ನು ಕೈಗೆ ತೆಗೆದುಕೊಂಡ. ದೇಹವೆಂಬ ಯಂತ್ರ ಯಾವ ಎಡೆತಡೆಗಳಲ್ಲದೆ ಒಂದೇ ಮನಸಿನಿಂದ ಕೆಲಸ ಮಾಡತೊಡಗಿತು.

"ತಡವಾದದ್ದು ಏನಂತೀರಿ, ಮಾಸ್ತರೇ. ನನ್ನ ಸ್ನೇಹಿತ ಒಂದು ಪುಸ್ತಕ ಓದ್ತಾ ಇದ್ದ. 'ಯಾವ ಪುಸ್ತಕ' ಎಂದೆ. ಒಳ್ಳೆ ಚೆನ್ನಾಗಿದೆ. ಓದಿಕೊಳ್ಳಬೇಕಾದ್ರೆ, ಬೇಕಾದ್ರೆ ನಾಳೆ ಸಂಜೆ ತಾ ಎಂದ. ಈಗ ಹೋಗಿ ತಗೊಂಡು ಬಂದೆ, ಬರುತ್ತಲೇ ಓದಿ ಮುಗಿದ್ದು ಆಯ್ತು. ಆಗೊಳ್ಳಿ ನಿಮ್ಮಡಿಯಲ್ಲಿ ಮಡಲಿನ ಕೆಳಗಡೆಯಿದೆ. ನೀವು ಕಂಡಿದ್ದೀರಾ ಅದನ್ನು......"

ವೆಂಕಟ ಸುಬ್ಬಯನವರು ಅರ್ಧ ಭಾಗಕ್ಕೆ ಭಾರ ಸರಿಸ, ಪುಸ್ತಕವನ್ನು ಎತ್ತಿ ತೆಗೆದರು. ಬೆಟರಿಯಿಂದ ಬೆಳಕು ಮಾಡಿ ನೋಡಿದರು ...

ತನಿಯನು ನೋಡುತ್ತಿದ್ದ ವೆಂಕಟ ಸುಬ್ಬಯನವರನ್ನು

"ದಾಂಪತ್ಯ ಜೀವನ ಸುಗಮವಾಗಿಸಲು ಸಹಾಯಕವಾದ ಮಾಸಪತ್ರಿಕೆ" ವೆಂಕಟ ಸುಬ್ಬಯನವರು ಪುಸ್ತಕದ ವಿಷಯ ತಿಳಿಯುತ್ತಲೇ ಮೂಗುಮುರಿದು, 'ಹಾಂ' ಎಂದು ತಾತ್ಸಾರದ ನಿಟ್ಟುಸಿರನ್ನು ಹೂರ ಸೂಸಿದರು.

"ನೋಡು ತನಿಯ, ನಮ್ಮ ಕಾಲದಲ್ಲಿ ಇಂತಹ ಪುಸ್ತಕಗಳು ಕಣ್ಣಿಗೆ ಕಾಣಲಿಕ್ಕೂ ಸಿಕ್ಕುತ್ತಿರಲಿಲ್ಲ. ಈಗ ಎಲ್ಲಿ ನೋಡಿದರೂ, ಮನೆಮಕ್ಕಳ ಹಾಸಿಗೆಯಡಿಯಿಂದ ಹಿಡಿದು ಕಸದ ಬುಟ್ಟಿಯ ತನಕವೂ ಇದೂ ಅಡಗಿ ಕುಳಿತಿವೆ. ಎಲ್ಲಾ ಮಕ್ಕಳೂ ಓದ್ತಾರೆ, ಹಾಳಾಗಿ ಹೋಗ್ತಾರೆ"

"ಯಾಕೆ ಹಾಳಾಗೋದು? ನಾನಿಲ್ಲೇನು ಸರಿಯಾಗಿ" ಧೈರ್ಯದ ಗದರಿಕೆಯ ನುಡಿ.

"ನೀನು ಈಗ ಓದಲಿಕ್ಕೆ ತೊಡಗಿದ್ದಿ ಹದಿನಾರು ವರ್ಷದವ. ಅಂತೆಯೇ ಎಲ್ಲರೂ ಓದಿದರೆ ಹದಿನಾಲ್ಕು ವರ್ಷದ ಗಂಡು ಮಕ್ಕಳಿಗೆ ಮದುವೆ ಮಾಡ್ಬೇಕು. ೨೫ರಲ್ಲಿ ಹಿಂದಿನವರು ಪಡೆದ ಅನುಭವ ಈಗಿನವರು ಹದಿನಾರರಲ್ಲೇ ಗಳಿಸಿಕೊಳ್ಳುತ್ತಾರೆ. ಹೀಗೆ ಮತ್ತು ಪ್ರತ್ಯಕ್ಷಾನುಭವಕ್ಕಿಳಿಸುತ್ತಾರೆ. ಜಗತ್ತು ಕೆಟ್ಟು ಹೋಗುತ್ತೆ. ಎಲ್ಲಿ ನೋಡಿದರೂ ಅತ್ಯಾಚಾರ. ಅನಾಚಾರ. ಸೂಳೇರ ಕೊಂಪೆ ..." ವೆಂಕಟ ಸುಬ್ಬಯ್ಯನವರ ಆವೇಶಕ್ಕೆ ಆಕಾಶದಲ್ಲಿ ನಕ್ಷತ್ರ ಒಂದು ಜಿಗುಳಿಬಿತ್ತು.

ಮೂರನೆಯವರು ಕೇಳುವವರು ಇಲ್ಲದ್ದರಿಂದಲೋ ಏನೋ ವೆಂಕಟ ಸುಬ್ಬಯ್ಯನವರ ವಾಗ್ಧಾರೆ ಸರಾಗವಾಗಿ ಹರಿಯತೊಡಗಿತು. ಸರಿ ತೋರದಾಗ "ಅದು ಸರಿಯಲ್ಲ, ಅದು ಹೇಗಾಗುತ್ತೆ' ಎಂದು ತನ್ನ ಕೆಲಸ ತಾನು ಸಾಗಿಸುತ್ತ, ಎನ್ನುತ್ತಿದ್ದ ತನಿಯ ಮಾಸ್ತರ್ರು ಅವನನ್ನು ಸರಿ ದಾರಿಗೆ ಎಳೆದು ತಂದು ತಮ್ಮ ಮಾತಿಗೆ ಒಪ್ಪಿಗೆ ಪಡೆದು ಮುಂದರಿಯುತ್ತಿದ್ದರು.

"ಹೌದು ಅಯ್ಯಾ.... ೨೫ ವರುಷದ ಮೊದಲಿನವರು ಓದಿದರೆ ಹಾಳಾಗೋದು ನಿಜ.... ಆದಕ್ಕೆ ಈಗಿನ ಶಾಲೇ ಹುಡುಗ್ರ ನೋಡಿ...... ,, ಎನ್ನುವಾಗ ವೆಂಕಟ ಸುಬ್ಬಯ್ಯನವರ ಎದೆ ಧಸಕ್ಕೆಂದಿತ.

ಆತ ಶಾಲೆ ಹುಡುಗರನ್ನು ಹೀಯಾಳಿಸಿದುದಕ್ಕಲ್ಲ. ತಮ್ಮ ದೋಣಿ ಬಾವ್ಕರು ಕಡವಿಗೆ ಬಂದುದಕ್ಕೆ!

"ಕೇಳ್ತಾ ಕೇಳ್ತಾ ಎಲ್ಲಿ ವರೆಗೆ ಒತ್ತ್ಕೊಂಡು ಬಂದ್ಬಿಟ್ಟೆ ತನಿಯ? ,,

"ನೀವು ಹೇಳ್ತಾ ಹೇಳ್ತಾ ಎಲ್ಲಿ ವರೆಗೆ .... ,, ತನಿಯ ನಕ್ಕ. ವೆಂಕಟ ಸುಬ್ಬಯ್ಯನವರದು ನಗುವ ಪರಿಸ್ಥಿತಿಯಲ್ಲಿರಲಿಲ್ಲ ಆದ ಪ್ರಮೇಯ ಮನ ಬೇಯುತಿತ್ತು. "ಇನ್ನೇನು ಮಾಡೋದು ,, ದಿಕ್ಕು ಕಾಣದ ಮಾಸ್ತರರ ಉದ್ಗಾರ.

'ಮತ್ತೇನು. ತಿಂಗಳು ಬೆಳಕಿಲ್ಲದ ರಾತ್ರಿ ದಾರಿ ಕಾಣೋದಿಲ್ಲ. ರಸ್ತೇಲಿ ಹೋಗೋಣ ಯಾರು ಕಾಣ್ತಾರೆ? ,,

ಹೊತ್ತು ಮೀರಿತ್ತು. ವೆಂಕಟ ಸುಬ್ಬಯ್ಯನಿಗೆ ತನಿಯನೊಡನೆ ದೋಣಿ ತಿರುಗಿಸು ಎಂದು ಹೇಳುವ ಮನಸ್ಸಿತ್ತು. ಆದರೆ ಹಿಂದಿನ ಒಳದಾರಿಗಿಂತ ರಸ್ತೇ ದಾರಿಯೇ ಒಂದು ಮೈಲು ಹತ್ತಿರ. ಮತ್ತು ಸುತ್ತು ಸುತ್ತು ಸುತ್ತುವುದೇಕೆ? ರಾತ್ರಿ ಯಾರು ಬರ್ತಾರೆ....? ,, ಸುಬ್ಬಯ್ಯನವರ ತಲೆ ತೂಗಿತು.

ತನಿಯ ಮುಡಿಯನ್ನು ತಲೆಗೇರಿಸಿದ. ವೆಂಕಟ ಸುಬ್ಬಯ್ಯನವರು ಬೆಳಕು ಹಿಡಿದು ಹಿಂದೆ ನಿಂತರು, ಎರಡು ಹೆಜ್ಜೆ ಕಿತ್ತಿದ್ದರಷ್ಟೆ, "ಯಾರದು ತನಿಯನಾ" ಎಂದಿತು ಪಕ್ಕದ ನಾಯಿ ಬ...

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ
NAVAYUGA
KANNADA WEEKLY, UDIPI.
Founder:
Late Sri A. B. Shetty
Former Minister for Public Health, Govt. of Madras & Govt. of Mysore.
ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ
ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.
ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.
ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50
ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾಪೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣೆ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920



ಸಮಾಜ ರಚನೆಯಲ್ಲಿ

ಲೇಖಕರ ಗಣನೀಯ ಪಾತ್ರ

ಶ್ರೀ ಯು ಪದ್ಮನಾಭ ಭಟ್,

ಪ್ರತಿಯೊಬ್ಬ ಲೇಖಕನೂ ಗಮನಿಸಬೇಕಾದ ಮುಖ್ಯ ವಿಚಾರವೇನೆಂದರೆ ತನ್ನ ಕೃತಿಯಿಂದಾಗಿ ಸಮಾಜದಲ್ಲಾಗುವ ಪರಿಣಾಮವೇನು ಎಂದು. ಕಾದಂಬರಿಗಳನ್ನು ಓದಿ ಹುಚ್ಚರಾದವರಷ್ಟು ಮಂದಿ! ಸಿನೇಮಾ ನೋಡಿ ಬೀದಿಯ ಹೆಂಗಳೆಯರ ಬೆನ್ನಟ್ಟಿ ನಡೆವ 'ಬಸವ'ಗಳಂತೆ ಕಾದಂಬರೀ ಪ್ರೇಮಿಗಳೂ ತಮ್ಮ ದಿನದಿನದ ನಡತೆಯಲ್ಲಿ ಬದಲಾಗುತ್ತಿದ್ದಾರೆ. ಪತ್ತೇದಾರಿ ಕಥೆಗಳನ್ನು ಓದಿ ಬಾಗಿಲು ಒಡೆಯಲು ತೊಡಗುತ್ತಾರೆ. ಆ ನೀಳ್ಗತೆಗಳೋ ಕಾದಂಬರಿಗಳೋ ಸಮಾಜಕ್ಕೆ ಕಳ್ಳು ಕುಡಿಸಿ ಎಳೆ ತರುಣರನ್ನು ರಸಾತಳಕ್ಕೆ ನೂಕಿ ಬಿಟ್ಟಿತಾದರೆ ಆ ಲೇಖಕರು ಆ ಮೇಲೆ ಅಲ್ಲಿ ಹೋಗಿ ಮಸಣ ಶಿಲೆಯನ್ನೂ ನೆಟ್ಟು ಬರಲಿ! ಸಾರ್ಥಕವಾಯಿತು, ಅವರ ಸಾಧನೆ!

ಸಮಾಜವನ್ನು ಆದರ್ಶಕ್ಕೊಯ್ಯುವ ಕೃತಿಗಳು ಜನಿಸಬೇಕು. ಇದನ್ನು ಸಾಧಿಸಿದವರು ಕೆಲವೇ ಮಂದಿ. ಸಾಹಿತ್ಯದ ಉದ್ದೇಶ ಕೇವಲ ಮನೋರಂಜನೆಯಲ್ಲ. ಮನೋರಂಜನೆಯೇ ಉದ್ದೇಶವಾದರೆ ಅದಕ್ಕೆ ಸಾಹಿತ್ಯ ಬೇಕಾಗಿಲ್ಲ, ಬೀದಿಯ ಡೊಂಬರಾಟದಿಂದಲೂ ಮನೋರಂಜನೆಯಾಗುವುದು. ಸಾಹಿತ್ಯ ಕಾಂತಾಸಮ್ಮಿತವಾಗಿ ಉಪದೇಶಿಸುವುದು ಎನ್ನುತ್ತಾರೆ. ಇದನ್ನು ಒಪ್ಪಬಹುದಾಗಿ ಕಾಣಿಸುತ್ತದೆ. ವಿಪ್ರದಾಸ ಕಾದಂಬರಿಯನ್ನೋದಿ, "ನಾನೊಬ್ಬ ವಿಪ್ರದಾಸನಾಗಬೇಕು", ಎಂದುಕೊಂಡವರೆಷ್ಟೋ ಮಂದಿ. ಚೋಮನ ದುಡಿಯನ್ನೋದಿ ತನ್ನ ಒಕ್ಕಲಾದ ಹೊಲೆಯನನ್ನು ಪ್ರೀತಿಯಿಂದ ಕಂಡುಕೊಂಡ ಧನಿಗಳೆಷ್ಟೋ ಮಂದಿ. "ದೇವದಾಸ ಕಾದಂಬರಿಯನ್ನೋದಿ, ನಾನು ಆ ವನಂತಾಗಬಾರದು", ಎಂಬ ಬುದ್ಧಿ ಮೊಳೆದೋರಿದುದು ಎಷ್ಟೋ ಕಡೆ!

ನಮ್ಮ ಕಣ್ಮುಂದಿನ ಸಮಾಜ ಹಾಳಾಗಬಾರದು. ಆದುದರಿಂದಲೇ ಕೃತಿಗಳಿಗೆ ಇಷ್ಟೆಲ್ಲ ನಿಬಂಧನೆ. ಇಂದ ಮುಂದುವರಿದ ವಿಜ್ಞಾನ ಯುಗ. ಒಂದು ಕೃತಿಯನ್ನೂ ಒಂದೇ ಕಾಲದಲ್ಲಿ ಸಾವಿರಾರು ಜನರು ಕೈಗೆತ್ತಿಕೊಂಡು ಓದಬಹುದಾದ ಕಾಲ. ಹೀಗಿರುವಲ್ಲಿ ಜನಸಾಮಾನ್ಯರ ಕೈಗೆ ದೊರಕುವ ಪುಸ್ತಕಗಳು ಅವರ ಉತ್ಕರ್ಷಕ್ಕೆ ಕಾರಣವಾಗಿರದಿದ್ದರೆ ಅದರಿಂದಾಗಬಹುದಾದ ಅನಾಹುತಗಳನ್ನು ಬಾಲಕನು ಊಹಿಸಬಹುದು.

ಕಾದಂಬರಿ ಗದ್ಯಗಳನ್ನು ಇಂದು ಓದುವವರಾರು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ. ಶಾಲೆಗೆ ಹೋಗುವ ಬಾಲಕನ ಕೈಯಲ್ಲಿ "ಶನಿ ಸಂತಾನ', ಚೊಚ್ಚಲ ಹೆರಿಗೆಗಾಗಿ ತವರಿಗೆ ಬಂದ ತುಂಬು ಬಸಿರಿಯಾದ ಹೆಣ್ಣು ಮಗಳ ಕೈಯಲ್ಲಿ 'ಬೇಡದ ಮಗು', ವಿದ್ಯೆಗಾಗಿ ತಂದೆ ತಾಯಿಗಳನ್ನಗಲಿ ದೂರದ ಪಟ್ಟಣದ ಬಾಡಿಗೆ ರೂಮಿನಲ್ಲಿರುವ ಕಾಲೇಜು ಹುಡುಗನ ಕೈಯಲ್ಲಿ 'ನಗ್ನ ಸತ್ಯ' ಸಾಹಿತ್ಯ ಕಲೆಯಲ್ಲಿ ತಪ್ಪು ಹೆಜ್ಜೆಯನ್ನಿಡುತ್ತಿದ್ದ ಪ್ರತಿಭಾವಂತನೊಬ್ಬನ ಕೈಯಲ್ಲಿ 'ರಾಜ ರಹಸ್ಯ' ಕಾಡಿನ ಬುದ್ಧಿಯ ಅಂಕೆಯಿಲ್ಲದ ಕಪಿಯ ಕೈಯಲ್ಲಿ ಬೆಂಕಿಯ ಚೂರು!

ಇಂದು ಕಣ್ತೆರೆದು ನೋಡಬೇಕಾದುದು ಇದನ್ನೇ! ಹಲವಾರು ಕಾದಂಬರಿಗಳನ್ನು ನೋಡುತ್ತಿದ್ದೇವೆ— ಸಮಾಜದಲ್ಲಿರುವ ಯಾವುದಾದರೊಂದು ಸಮಸ್ಯೆಯನ್ನು ತೆಗೆದುಕೊಂಡು ಆದರ್ಶ ನೈಜ ಚಿತ್ರಣವನ್ನು, ಕೆಲವೊಮ್ಮೆ ಅದರ ವಿಶಾಲ ವಿಕೃತ ರೂಪದ ಸಂದರ್ಶನವನ್ನು ನಮಗೆ ಮಾಡಿಸಿಕೊಡುತ್ತಾರೆ. ಆದರೆ ಅದರ ಪರಿಹಾರವನ್ನು ತೋರಿಸುವುದಿಲ್ಲ. ಅವರಿಗೆ ತಿಳಿದಿದ್ದರೆ ತಾನೇ ತೋರಿಸುವುದು? ಅಥವಾ ನೈಜ ಚಿತ್ರಣದ ನಿರೂಪಣೆಯನ್ನು ಮಾಡುವಾಗ ತೋರಿದ ಚಾಣಾಕ್ಷ ಪ್ರತಿಭೆಯನ್ನು ಆ ಸಮಸ್ಯೆಯ ಪರಿಹಾರದ ಕಾಲದಲ್ಲಿ ಕೃತಿಕಾರರು ತೋರುವುದಿಲ್ಲ. ಇದು ಆಗತಕ್ಕ ದೋಷ. ಅಂತಹ ಪರಿಣಾಮ ಕಾಣದ ಸಾಮರ್ಥ್ಯವಿಲ್ಲದ ಸಂದರ್ಭದಲ್ಲಿ ಆ ಚಿತ್ರಣದ ವಿವರಣೆಯನ್ನೂ ಮಾಡಬಾರದಾಗಿತ್ತು. ಆ ಚಿತ್ರಣದ ಅಭ್ಯಾಸವನ್ನು ಅರಿಯದ ಜನತೆ ಎಷ್ಟೋ ಇದೆ. ಉದಾಹರಣೆಗಾಗಿ ವೇಶ್ಯಾ ಸಮಸ್ಯೆ. ಅದರ ಗಂಡ ಗಾಳಿಯ ಪರಿಚಯವಿಲ್ಲದ ಬಾಲಕರಿಗೆ ಅದರ ಅರಿವನ್ನುಂಟು ಮಾಡುವ ಸಾಹಸಕ್ಕಿಳಿದು ದಸ್ಯರೆನ್ನಿಸಿಕೊಳ್ಳುವುದು ಆತ್ಮಘಾತಕ ಮಾತ್ರವಲ್ಲ, ಸಮಾಜ ಘಾತಕ!

ಗಗನ ಯಾತ್ರೆಗನುಕೂಲವಾದ ಉಡುಗೆ-ಕವಚಗಳಿಂದ ಅಲಂಕೃತರಾದ ಆಸ್ಟ್ರೊನೆಟ್ ಜಾನ್ ಗ್ಲೆನ್.

ಹಿಂದಿನ ಹಳೆಗನ್ನಡದ ಸಾಹಿತ್ಯದಲ್ಲೂ ಸಂಸ್ಕೃತ ಕಾವ್ಯಗಳಲ್ಲೂ ನಾವು ಧಾರಾಳವಾಗಿ ವೇಶ್ಯಾವಾಟವರ್ಣನೆ ಮುಂತಾದ ಅಶ್ಲೀಲಗಳನ್ನು ಕಾಣುತ್ತೇವೆ. ಇಂದಿನ ಅಶ್ಲೀಲ ಸಾಹಿತ್ಯವನ್ನು ಮೀರಿಸುವ ಅಶ್ಲೀಲಗಳು ಹಿಂದಿನ ಕಾವ್ಯಗಳಲ್ಲಿ ಇವೆ ಮಾತ್ರವಲ್ಲ ಅವುಗಳಲ್ಲಿ ಕೆಲವನ್ನು ಮಹಾಕಾವ್ಯ ಎಂತಲೂ ಪರಿಗಣಿಸಿದ್ದೇವೆ. ನೇಮಿಚಂದ್ರನ ಲೀಲಾವತಿ ಕೇವಲ ಶೃಂಗಾರಕ್ಕಾಗಿ ಮೀಸಲಾಗಿರಿಸಿದ ಗ್ರಂಥ. ರತ್ನಾಕರ ವರ್ಣಿಯ ಭಾರತೇಶ ವೈಭವವೂ ಶೃಂಗಾರ ಪ್ರಧಾನವಾದುದು. ಮಾತ್ರವಲ್ಲ ಅದೊಂದು ಮಹಾಕೃತಿ ಎಂದು ಪರಿಗಣಿಸಲ್ಪಟ್ಟಿದೆ. ಅಶ್ಲೀಲ ವರ್ಣನೆ ಬಂದೊಡನೆ ಕೃತಿ ನಿಕೃಷ್ಟವಾಗುವುದು ಎಂದು ಯಾರೂ ಹೇಳಲಾರರು. ಬಂಗಾಳಿಯ 'ಭಾರತಚಂದ್ರ' ಅಶ್ಲೀಲದ ಭಕ್ತನಾದನೆ ಮಾತ್ರ ಶುದ್ಧ ಆಭಾಸ. ಕನ್ನಡದ ಕೃತಿಕಾರರಲ್ಲಿ ಕೆಲವರಿಗೂ ಆ ಚಾಳಿ ಬೆಳೆದಿದೆ. ಅವರು ಅಶ್ಲೀಲವನ್ನು ಕೃತಿಗಳಲ್ಲಿ ತಂದರೆಂದ ಮಾತ್ರಕ್ಕೇ ಅವರದು ಅನ್ಯಾಯವೆಂದು ಹೇಳುವಂತಿಲ್ಲ. ಅವರು ತಂದ ಅಶ್ಲೀಲಕ್ಕೂ ಮಿಕ್ಕಿದ ಅಶ್ಲೀಲ ನಮ್ಮ ಹೃದಯಗಳಲ್ಲಿದ್ದೀತು. ಆದರೆ ಅವರು ಅಶ್ಲೀಲದ ಸೋಂಕು ಕೂಡಾ ಇಲ್ಲದ ತಿಳಿ ಹೃದಯದಲ್ಲಿ ಅದನ್ನು ಬಲಾತ್ಕಾರವಾಗಿ ಕೀಲಿಸಿ ತುಂಬಿಸುತ್ತಿದ್ದಾರೆ. ಇದು ಮಾತ್ರ ಘಾತಕತನ!

ಮನುಷ್ಯನ ಮನಸ್ಸು ಸ್ವಭಾವತಃ ಚಂಚಲ. ಅದರ ಹಿಡಿತ ಸಾಮಾನ್ಯನಿಗೆ ಅಸಾಧ್ಯ. ಆ ಹುಚ್ಚು ಮನಸ್ಸಿನಲ್ಲಿ ಎಲ್ಲಾ ಭಾವಗಳೂ ಸೂಕ್ಷ್ಮ ರೂಪದಲ್ಲಿ ನೆಲಸಿಕೊಂಡಿವೆ. ಅದಕ್ಕೆ ಹೊರಗಿನಿಂದ ಕಾದಂಬರಿಯ ಗಾಳಿ ಬೀಸಿದೊಡನೆ ಆ ಭಾವ ಇದ್ದಕ್ಕಿದ್ದಂತೆ ಪ್ರಜ್ವಲಿಸುವುದರಿಂದಾಗಿ ಆ ಮನುಷ್ಯನ ಮನಸ್ಸು ತಾಳ ತಪ್ಪುತ್ತದೆ. ಇದು ಸಾಮಾನ್ಯ ಜನತೆಯ ಅವಸ್ಥೆ. ಈ ವಿಷಯದಲ್ಲಿ ಪಂಡಿತರು, ವಿವೇಕಿಗಳು ಬದಲಾವಣೆ ಹೊಂದದೆ ತಾಟಸ್ಥ್ಯವನ್ನು ಕಾದುಕೊಳ್ಳಬಹುದು. ಆ ವಿಚಾರ ಬೇರೆ. ಅಂತೂ ಒಬ್ಬ ಸಾಮಾನ್ಯ ಹುಚ್ಚೇಳುತ್ತಾನೆ!

ಹಿಂದಿನ ಕಾವ್ಯಗಳಿಂದ ಹುಟ್ಟೇಳುವ ಪಂಕ್ತಿಯೇ ಎಂಬ ಪ್ರಶ್ನೆ ಇಲ್ಲಿ ಉದಿಸುವು

(೧೦ನೇ ಪುಟ ನೋಡಿರಿ)

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;
ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ
ಆಡಳಿತ ಆಫೀಸು: ಮಂಗಳೂರು 1.

Tel 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone 374
ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ ಕೆ ಕೆ ಆರ್.ಶೇಟ್

ಭಾರತೀಯರಲ್ಲಿ
ಅಂಧಾನುಕರಣೆಯ ದುಷ್ಪ್ರವೃತ್ತಿ

. ಒಂದು ದೇಶವು ಇಂದಿನ ಸ್ಥಿತಿ ಮುಟ್ಟುವುದಕ್ಕೆ ಅನೇಕ ಸಮಯವು ಬೇಕಾಗುವುದು: ಈ ಅವಧಿಯಲ್ಲಿ ಸಹಸ್ರಾರು ಘಟನೆಗಳು ನಡೆಯುತ್ತವೆ; ಹರಿಯುತ್ತಿರುವ ಸಮಯವನ್ನು ಮತ್ತಷ್ಟು ತೀವ್ರವಾಗಿ ಮುನ್ನಡೆಸುವ ಕೆಲವೊಂದು ಮಹಾ ವ್ಯಕ್ತಿಗಳಿಗೂ ಇಂತಹ ಘಟನೆಗಳಿಗೂ ನಿಕಟ ಸಂಬಂಧವಿರುತ್ತದೆ ಕೆಲವೊಮ್ಮೆ ಘಟನಾ ಚಕ್ರವು ಸ್ತಬ್ಧವಾಗುವುದ; ಸಮಯವು ಸಂಕುಚಿತಗೊಳ್ಳುವುದು; ಆದರ ಗತಿಯಲ್ಲಿ ಆತಂಕಗಳು ತಲೆದೋರುವುವು. ಮಹಾತ್ಮರು ತಮ್ಮ ಕಾಲದ ಚಿಕಿತ್ಸಕರಂತಿರುತ್ತಾರೆ; ಅವರು ಸಮಯ ಪ್ರವಾಹಕ್ಕಿದಿರಾದ ಅಡೆತಡೆಗಳನ್ನು ಕಿತ್ತು ದೂಕ್ಕೆಸೆದು ಅದನ್ನು ಮರಳಿ ಹರಿಯುವಂತೆ ಮಾಡುತ್ತಾರೆ, ನಮ್ಮ ದೇಶದಲ್ಲಿ ಇಂತಹ ಮಹಾಪುರುಷರ ಸಂಖ್ಯೆಗೇನೂ ಕಡಿಮೆಯಿರುವುದಿಲ್ಲ ಇತಿಹಾಸವೆಂದರೆ ಒಂದು ದೀರ್ಘವಾದ ಕಥೆ; ಭಾರತದ ಈ ಕಥೆಯು ಸುಮಾರು ಆರು ಸಾವಿರ ವರ್ಷಗಳಿಗೂ ಮೀರಿದ ಸಮಯದ ಕಥೆ ಇದರಲ್ಲಿ ಬರುವ ಘಟನೆಗಳಾದರೂ ಪ್ರಭಾವಶೀಲವಾದುವುಗಳು.

ಪಾಶ್ಚಾತ್ಯ ರಾಷ್ಟ್ರಗಳಿಗೂ ತಮ್ಮದೇ ಆದ ಸ್ವತಂತ್ರ ಇತಿಹಾಸವೇನೋ ಇದೆ, ಆದರೆ, ಭಾರತೀಯ ಇತಿಹಾಸದೊಡನೆ ಹೋಲಿಸಿದರೆ, ಈ ಇತಿಹಾಸವು ಇಂದು ನಿನ್ನೆಯದೆನ್ನಬಹುದು. ಯುರೋಪಿನ ದೇಶಗಳ ಆಧುನಿಕ ಇತಿಹಾಸವು ಕ್ರಿಸ್ತಶಕ ೧೧ನೆಯ ಶತಮಾನದಿಂದ ಪ್ರಾರಂಭವಾಗುತ್ತದೆ. ಇದಕ್ಕೆ ಮೊದಲು ರೋಮ್ ಮತ್ತು ಗ್ರೀಸ್‌ಗಳ ನಾಗರಿಕತೆಗಳು ಇದ್ದುವು, ಆದರೆ, ಅವು ವಿಕಸಿತವಾಗಿ ಪರಿಪಕ್ವಗೊಂಡು, ಸಮಯದ ಗರ್ತದಲ್ಲಿ ಬಿದ್ದು ಬಿಟ್ಟುವು ಪ್ರಾಚೀನ ಭಾರತೀಯ ನಾಗರಿಕತೆ ಮತ್ತು ರೋಮ ಗ್ರೀಸ್‌ಗಳ ನಾಗರಿಕತೆಗಳ ನಡುವೆ ಬಹಳ ಸಾಮ್ಯವಿತ್ತು, ಅಲ್ಲಿನ ದೊಡ್ಡ ದೊಡ್ಡ ಚಿಂತಕರೂ ವಿದ್ವಾಂಸರೂ ಭಾರತೀಯ ಚಿಂತನಪರಂಪರೆಯನ್ನು ಅರಿತುಕೊಂಡಿದ್ದರು. ಆ ಕಾಲದಲ್ಲಿ ಭಾರತವು ಸ್ವತಂತ್ರವಿತ್ತು; ಸಮರ್ಥವಿತ್ತು. ನಮ್ಮ ವ್ಯಾಪಾರಿಗಳೂ ವಿದ್ವಾಂಸರೂ ದೂರ ದೂರದ ದೇಶಗಳನ್ನು ಸಂದರ್ಶಿಸುತ್ತಿದ್ದರು; ಅಲ್ಲಿನ ವಿದ್ವಾಂಸರೊಳಗೆ ವಿಚಾರ ವಿನಿಮಯ ನಡೆಸುತ್ತಿದ್ದರು. ಆದರೆ, ಹತ್ತನೆಯ ಶತಮಾನದಲ್ಲಿ ಬೆಳೆದುಬಂದ ನವೀನ ಐರೋಪ್ಯ ನಾಗರಿಕತೆಯು ಭಾರತೀಯ ವಿಚಾರಧಾರೆಯಿಂದ ಬಹಳ ದೂರವಾಯಿತು; ಹಾಗಿದ್ದರೂ ಈ ಸಮಯದಲ್ಲೂ ಐರೋಪ್ಯ ಮತ್ತು ಭಾರತೀಯ ಚಿಂತಕರ ನಡುವೆ ವಿಚಾರ ಮತ್ತು ಭಾವಗಳ ಆದಾನ—ಪ್ರದಾನಗಳು ಕಡಿಮೆಯಾದರೂ ನಡೆಯುತ್ತಿದ್ದುವೆಂದು ಇತಿಹಾಸದಿಂದ ವ್ಯಕ್ತವಾಗುತ್ತದೆ. ಅರಬರು ಭಾರತವನ್ನು ಆಕ್ರಮಿಸತೊಡಗಿದುದೇ ಇದಕ್ಕೆ ಕಾರಣವೆನ್ನಬಹುದು. ಎಂಟನೆಯ ಶತಮಾನದಿಂದ ತೊಡಗಿದ ಇವರ ಆಕ್ರಮಣವು ಪ್ರೇಮ, ದಯೆ, ಕರುಣೆ ಮತ್ತು ಅಹಿಂಸೆಗಳನ್ನು ಆದರಿಸುತ್ತಿದ್ದ ಭಾರತೀಯರ ಹೃದಯದಲ್ಲಿ ಕೋಲಾಹಲವನ್ನೇ ಎಬ್ಬಿಸಿತು ನಾಗರಿಕತೆಯ ಪರಾಕಾಷ್ಠೆಯೇ ಭಾರತೀಯರ ಬೌದ್ಧಿಕ ಮತ್ತು ರಾಜ್ಯಕೀಯ ಪತನಕ್ಕೆ ಕಾರಣವಾಯಿತು ಅವರು ಮುಸಲ್ಮಾನರ ಅಧೀನಕ್ಕೆ ಬಂದರು. ಇದರಿಂದಾಗಿ ಯುರೋಪಿನ ಸ್ವತಂತ್ರ ದೇಶಗಳೊಡನೆ ವಿಚಾರ ವಿನಿಮಯದ ದಾರಿಗೆ ಕಲ್ಲುಬಿತು, ಇದರ ನಂತರವೇ ಪೂರ್ವ ಮತ್ತು ಪಶ್ಚಿಮಗಳ ವಿಚಾರ ಧಾರೆಯು ಬೇರೆ ಬೇರೆಯಾಗಿ ಸ್ಪಷ್ಟವಾಗಿ ಹರಿಯತೊಡಗಿತು.

ಐರೋಪ್ಯ ನಾಗರಿಕತೆಯಲ್ಲಿ ಭೌತಿಕವಾದಕ್ಕೆ ಈ ಕಾಲದಲ್ಲಿ ಅಗ್ರಗಣ್ಯ ಸ್ಥಾನವಿತ್ತು. ಭಾರತದ ವಿದ್ವಾಂಸರೂ ಚಿಂತನಶೀಲರೂ ಭೌತಿಕ ಪದಾರ್ಥಗಳನ್ನು ಉಪಯೋಗಿಸುತ್ತ ಪಾರಭೌತಿಕ ಆಧ್ಯಾತ್ಮಿಕ ತತ್ವಗಳ ಚಿಂತನೆ ಮತ್ತು ಪರೀಕ್ಷಣೆಯಲ್ಲಿ ತೊಡಗಿದ್ದರು ಮಾತ್ರವಲ್ಲ ಇವನ್ನೇ ಸತ್ಯವೆಂದು ತಿಳಿಯುತ್ತಿದ್ದರು. ಯುರೋಪಿನ ರಾಜ್ಯಗಳು ಭೌತಿಕ ಶಕ್ತಿ ಮತ್ತು ರಾಜನೈತಿಕಶಕ್ತಿಯ ವಿಕಾಸದಲ್ಲೇ ವ್ಯಸ್ತವಾಗಿದ್ದುವು. ವಸಾಹತುವಾದದ ರೂಪದಲ್ಲಿ ಪಾಶ್ಚಾತ್ಯ ಜನಾಂಗಗಳು ಭೌತಿಕವಾದದ ಭಯಾನಕ ಸ್ವರೂಪವನ್ನು ತೋರಿಸುತ್ತಿದ್ದುವು. ೧೬ನೆ ಶತಮಾನದ ವರೆಗೆ ಭಾರತದ ಉದಾತ್ತ ಕರುಣೆ ಮತ್ತು ಅಹಿಂಸೆಯ ನೀತಿಗಳು ಆಕ್ರಮಣಕಾರರ ಮನಸ್ಸನ್ನೂ ಮೆದುಳನ್ನೂ ಗೆದ್ದುಕೊಂಡಿದ್ದುವು. ಅಕ್ಬರ, ಶಹಜಹಾನರಂತಹ ತಮ್ಮನ್ನು ಸಂಪೂರ್ಣ ಭಾರತೀಯರೆಂದು ತಿಳಿಯುತ್ತಿದ್ದ ಮತ್ತು ಇಲ್ಲಿಯೇ ಹುಟ್ಟಿ ಬೆಳೆದಿದ್ದ ರಾಜರು ಆಗಿ ಹೋಗಿದ್ದರು ಅವರನ್ನು ವಿದೇಶೀಯರೆಂದು ಯಾರೂ ಅನ್ನುವಂತಿರಲಿಲ್ಲ. ಭಾರತದ ಸಮನ್ವಯಪರ ನೀತಿ, ಕರುಣೆ, ಅಹಿಂಸೆ ಮತ್ತು ಪ್ರೇಮಪೂರ್ಣ ವ್ಯವಹಾರಗಳ ಅಪೂರ್ಣ ವಿಜಯವದನ್ನು ಮಂತಿತ್ತು ಆದರೆ, ಅಸ್ವಾದ ಇತರ ರಾಷ್ಟ್ರಗಳೊಂದಿಗೆ ಭಾರತವೂ ಪಾಶ್ಚಾತ್ಯರ ಜಡಭೌತಿಕ ವಾದದ ಜಾಲದಲ್ಲಿ ಬಿದ್ದುಬಿಟ್ಟಿತು ಯುರೋಪು ಮತ್ತು ಆಸ್ಯಗಳ ಆ ಕಾಲದ ಇತಿಹಾಸವೇ ಅದಕ್ಕೊಂದು ಜ್ವಲಂತನಿದರ್ಶನ

ನಮ್ಮ ದೇಶದಲ್ಲಿ ವಸಾಹತು ವಾದದ ನೆಲೆಯಲ್ಲಿ ಪಾದಾರ್ಪಣ ಮಾಡಿದ ಬ್ರಿಟಿಷರು ನಮ್ಮವರನ್ನು ಕೊತ್ತಳದುಳಿಯುವ ಪ್ರಯತ್ನ ಮಾಡಿದರು. ಭಾರತೀಯ ಸಂಸ್ಕೃತಿಯನ್ನು ಮೆಟ್ಟಿ ಪಾಶ್ಚಾತ್ಯ ಸಂಸ್ಕೃತಿಯ ಬೀಜವನ್ನು ಬಿತ್ತಿದರು. ನಮ್ಮ ಉಡುಗೆ-ತೊಡುಗೆ, ಆಹಾರ—ವಿಹಾರ, ಆಚಾರ—ವಿಚಾರ ಎಲ್ಲವುಗಳಲ್ಲಿಯೂ ಇದು ಇಂದಿಗೂ ಉಳಿದುಬಂದಿದೆ. ಪ್ರಶಾಸನ, ನ್ಯಾಯಾಲಯ ಮತ್ತು ಉಚ್ಚವರ್ಗದ ಭಾಷೆಯಾಗಿ ಇಂಗ್ಲಿಷ್ ಗದ್ದುಗೆಗೇರಿತು. ಸಮಸ್ತ ಭಾರತೀಯ ಸಾಹಿತ್ಯವು ಇಂಗ್ಲಿಷ್ ಭಾಷೆಯ ಸಾಹಿತ್ಯದ ಮುಂದೆ ತೃಣಸಮಾನವೆಂಬ ಭಾವನೆಯು ಎಲ್ಲರಲ್ಲಿಯೂ ಮೂಡಿಸಲ್ಪಡುತಿತ್ತು ಇಂಗ್ಲಿಷ್ ಭಾಷೆಯನ್ನು ಕಲಿಯದೆ ಹೋದ ವ್ಯಕ್ತಿಗೆ ಭವಿಷ್ಯವೇ ಇಲ್ಲವೆಂಬ ಅಂಧ ವಿಶ್ವಾಸ ನಮ್ಮವರಲ್ಲಿ ಮೂಡಿಬಿಟ್ಟಿತ್ತು. ಇದರಿಂದಾಗಿ ದೇಶದ ಅತಿ ದೊಡ್ಡ ಬುದ್ಧಿಜೀವಿಗಳ ಮನೆಗಳಲ್ಲಿಯೂ ಇಂಗ್ಲಿಷಿನ ಸಾಮ್ರಾಜ್ಯ ಸ್ಥಾಪಿತವಾಗಿತ್ತು. ಇಂತಹ ಕೃತ್ರಿಮ ಪರಿಸ್ಥಿತಿಗಳಿಂದಾಗಿ ಸ್ವದೇಶಿ ವಸ್ತುಗಳೆಲ್ಲವುಗಳ ಕಡೆಗೂ ನಮ್ಮ ಅನಾಸ್ಥೆಯ ಭಾವನೆ ಪ್ರಕಟವಾಗತೊಡಗಿತು. ಭಾರತೀಯ ಸಂತರು, ವಿಚಾರಶೀಲರು, ಲೇಖಕರು ಎಲ್ಲರೂ ಪ್ರಾಚೀನ ಸಂಪ್ರದಾಯ ಶೀಲರೆಂದೂ ತಿರಸ್ಕಾರ ಪಾತ್ರರಾದರು. ಆಂಗ್ಲ ಇತಿಹಾಸಕಾರರು ಪ್ರಾಚೀನ ಭಾರತೀಯ ರಾಜರೆಲ್ಲ ಸ್ವೇಚ್ಛಾಪರರೂ ಕ್ರೂರರೂ ಆ

(೯ನೇ ಪುಟ ನೋಡಿರಿ)



ಸಾಗರ ಮಧ್ಯದಲ್ಲಿ ಹವಾಮಾನದ ವಿವರಗಳನ್ನು ತಿಳಿಸುವ ಸಾಧನಗಳಿರುವ ನೌಕೆಯಿದು. ಸಾಮಾನ್ಯ ಪರಿಸ್ಥಿತಿಯಲ್ಲಿ ಆರು ತಾಸಿಗೊಮ್ಮೆ, ಬಿರುಗಾಳಿಗಳ ವೇಳೆ ತಾಸಿಗೊಮ್ಮೆ ಇದು ಸುದ್ದಿ ಕಳಿಸುವುದು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ನೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಉಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ ಕೆ ಎಲ್ ಐತಾಳ, ಎಂ. ಬಿ. ಬಿ ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು
ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ

ದೇವವಾಣಿ

ಮೇ ಭಕ್ತಃ ಮಮಪ್ರಿಯಃ

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ದೃಢವಾದ ನಂಬಿಕೆಯಿಂದಲೂ, ನಿಶ್ಚಲವಾದ ಬುದ್ಧಿಯಿಂದಲೂ ಅಭ್ಯಾಸ ಮಾಡಿದ ಗೀತೆಯ ಲಕ್ಷಣ ಧ್ಯೇಯವು ಪರಮಾತ್ಮನ ಸಂಕಲ್ಪದಲ್ಲಿ ಮರೆಹೋಗುವ ಒಂದೇ ಪಥವಾಗಿದೆ. ಪುರಾಣಗಳಲ್ಲಿ ಈ ಧ್ಯೇಯದ ಅನೇಕಾನೇಕ ನಿದರ್ಶನಗಳಿವೆ. ಪುರಾಣಗಳ ಹೊರಗೂ ದೃಷ್ಟಾಂತಗಳು ಕಡಿಮೆಯಿಲ್ಲ. ಸ್ವಾಮಿ ವಿವೇಕಾನಂದರ ಜೀವನ ಚರಿತೆಯಿಂದ ದಿವ್ಯ ದೇವಾನುಗ್ರಹದ ಕುರಿತು ಒಂದು ಪುಟ್ಟ ನಿದರ್ಶನವನ್ನು ಈ ಕೆಳಗೆ ನಿರೂಪಿಸುತ್ತೇನೆ.

ವೈಶಾಖ ಮಾಸದ ಕಡು ಬಿಸಿಲಲ್ಲಿ ಸನ್ಯಾಸಿಯ ಉಡುಪನ್ನು ತೊಟ್ಟು, ರೈಲ್ವೆ ಬಂಡಿಯ ಮೂರನೆಯ ದರ್ಜೆಯಲ್ಲಿ ಸ್ವಾಮಿಜಿಯವರು ಪಯಣ ಮಾಡುತಿದ್ದರು. ಕೈಯಲ್ಲಿ ಕಮಂಡಲು ಇರಲಿಲ್ಲ. ಮುಖದಲ್ಲಿ ಮಾತ್ರ ಸ್ಫೂರ್ತಿದಾಯಕವಾದ ತೇಜಸ್ಸು ತೋರುತಿತ್ತು. ರೈಲು ಬಂಡಿಯು ಬರುವ ತನಕ ಅವರು ಸ್ಟೇಶನ್ ಪ್ಲಾಟ್‌ಫೋರ್ಮಿನ ನೆಲದಲ್ಲಿ ಮಂಡಿಸಿದ್ದರು. ರೈಲ್ವೇ 'ವೈಟಿಂಗ್' ಕೋಣೆಯಲ್ಲಿ ಮಂಡಿಸಲು ಪೋರ್ಟರನ ಅಪ್ಪಣೆ ಲಭಿಸಲಿಲ್ಲ. ಅದು ಆ ಕಾಲದ ಪೋರ್ಟರನ ಹೆಮ್ಮೆಯಿರಬಹುದು ಕೊಂಚ ಸಮಯದಲ್ಲಿ ಬಂಡಿಯು ಸ್ಟೇಶನಿಗೆ ಬಂದು ತಂಗಿತು. ಅನೇಕ ಪ್ರಯಾಣಿಕರ ಜೊತೆಯಲ್ಲಿ ವಿವೇಕಾನಂದರು ಮೂರನೆಯ ತರಗತಿಯ ಟಿಕೇಟನ್ನು ಕೈಯಲ್ಲಿ ಹಿಡಕೊಂಡು ಆ ದರ್ಜೆಯ ಬಂಡಿಯಲ್ಲಿ ಮಂಡಿಸಿದರು. ಬಂಡಿಯು ಕಾಲಪಟ್ಟಿಯನ್ನು ಅನುಸರಿಸಿ ಮುಂದೊತ್ತಿ ಹೋಯಿತು. ಸ್ವಾಮೀಜಿಯವರ ಪಕ್ಕದಲ್ಲಿ ಮಧ್ಯ ವಯಸ್ಸಿನ ಒಬ್ಬ ವರ್ತಕ ಶಿಖಾಮಣಿಯು ದೊಡ್ಡ ಮುಂಡಾಸನ್ನು ಧರಿಸಿ ಕುಳಿತಿದ್ದ. ಆತನು ಧರಿಸಿದ್ದ ಉಂಗುರಗಳಿಂದ ಆವನು ಬಹಳ ಧನವಂತನಿರಬಹುದು ಎಂಬ ಭಾವನೆಯು ಅಲ್ಲಿದ್ದವರಿಗೆಲ್ಲ ಬಂದಿರಬಹುದು. ಮುಂದಿನ ಸ್ಟೇಶನು ಬಂದಾಗ ಹಲವರು ತಂಪು ಪಾನೀಯಗಳನ್ನು ಹಣ ಕೊಟ್ಟು ಕುಡಿದು ಬೇಸಗೆಯ ಬಿಸಿಲಿನ ದಾಹವನ್ನು ತಣಿಸಿಕೊಂಡರು. ಸ್ವಾಮಿಜಿಯವರಲ್ಲಿ ಒಂದು ಚಿಕ್ಕಾಸು ಕೂಡ ಇಲ್ಲದುದರಿಂದ ಅವರು ದಾಹದ ಶ್ರಮವನ್ನು ಸಹಿಸುತ್ತ ಮೌನಿಗಳಾಗಿ ಕುಳಿತಿದ್ದರು. ಆಗ, ಹತ್ತಿರದಲ್ಲಿ ಮಂಡಿಸಿದ್ದ ವರ್ತಕನು ಸ್ವಾಮಿಯವರ ಕಡೆಗೆ ಮುಖವೆತ್ತಿ "ಸನ್ಯಾಸಿಯೇ, ನಿನ್ನ ಉಡುಪು ನಿನಗೆ ಆಹಾರವನ್ನು, ಪಾನೀಯಗಳನ್ನು ಕೊಡಲಾರದು. ನನ್ನಂತೆ ವ್ಯಾಪಾರ ಮಾಡಿ ಧನ ಗಳಿಸಿದರೆ ಮಾತ್ರ ಸಾಕಷ್ಟು ಸುಖವನ್ನು ಅನುಭವಿಸಬಹುದು." ಎಂದು ಉದ್ಗರಿಸಿ ಉತ್ತಮವಾದ ಆಹಾರ ಪಾನೀಯಗಳನ್ನು ಭುಂಜಿಸಿ ಕುಡಿದು ವಿವೇಕಾನಂದರನ್ನು ಹಾಸ್ಯ ಭಾವದಿಂದ ಮಾತನಾಡಿಸುವರೆ ಯತ್ನಿಸಿದನು. ಪೂರಿ ಲಡ್ಡುಗಳನ್ನು ಅವರಿದಿರಿನಲ್ಲಿಯೇ ತಿಂದು ತೇಗಿದನು. ಬಂಡಿಯು ಹೊರಟಿತು. ಕೆಲವು ನಿಮಿಷಗಳಲ್ಲಿಯೇ ಹತ್ತಿರದ ಮತ್ತೊಂದು ಸ್ಟೇಶನು ಬಂದಾಗ ಬಂಡಿಯು ನಿಂತುಬಿಟ್ಟಿತು. ಅಪರಿಚಿತ ವ್ಯಕ್ತಿಯೊಬ್ಬನು ಉತ್ತಮವಾದ ಕೆಲವು ತಿಂಡಿಗಳನ್ನು ಪಾನೀಯಗಳನ್ನು ಹಿಡಕೊಂಡು ವಿವೇಕಾನಂದರು ಕೂತ ಸ್ಥಳಕ್ಕೆ ಬಂದು ಅವನ್ನು ಅವರಿಗೆ ಸಮರ್ಪಿಸಿದನು. ಈತನನ್ನು ನೋಡಿ ಸ್ವಾಮೀಜಿಯವರಿಗೆ ವಿಸ್ಮಯವಾಯಿತು. ಪಕ್ಕದಲ್ಲಿ ಕೂತ ಅಹಂಕಾರಿ ವ್ಯಾಪಾರಿಗೂ ಆಶ್ಚರ್ಯವು ಮೂಡಲಾರಂಭಿಸಿತು. ಅಪರಿಚಿತ ವ್ಯಕ್ತಿಯು ವಿವೇಕಾನಂದರಿಗೆ ನಮಸ್ಕರಿಸಿ "ಸ್ವಾಮೀ, ಪ್ರೇಮ-ಭಾವದಿಂದ ನಾನು ತಂದ ತಿಂಡಿಯನ್ನು ಭುಂಜಿಸಿ, ಪಾನೀಯವನ್ನು ಕುಡಿದು ವಿಶ್ರಮಿಸಿ" ಎಂದು ನಮ್ರತೆಯಿಂದ ಬೇಡಿಕೊಂಡನು. ಸ್ವಾಮಿಯವರಿಗೆ ಆತನ ಪರಿಚಯ ಎಳ್ಳಿನಷ್ಟಾದರೂ ಇರಲಿಲ್ಲ. "ನಿನಗೆನ್ನ ಗುರುತೆಲ್ಲಿ? ಎಂಬುದಾಗಿ ವಿವೇಕಾನಂದರು ಪ್ರಶ್ನಿಸಿದರು. ಆಗ ಆ ಅಪರಿಚಿತ ಮಾನವನು 'ನಾನು ಮಿಠಾಯಿಗಾರಮಾತ್ರವಲ್ಲ ಶ್ರೀ ರಾಮಚಂದ್ರನ ಉಪಾಸಕ ಈ ದಿನ ಮಧ್ಯಾಹ್ನದ ಊಟವನ್ನು ಮುಗಿಸಿ ಬಿಸಿಲಿನ ಬೇಗೆಯನ್ನು ತಾಳಲಾರದೆ ಸುಮ್ಮನೆ ಮಲಗಿದ್ದೆ. ಆಗೊಂದು ಕನಸ್ಸು ತಗಲಿತು. ಆ ಹಗಲಿನ ನಿದ್ರೆಯ ಕನಸಿನಲ್ಲಿ ಶ್ರೀ ರಾಮನು ನನ್ನ ಕಣ್ಣುಗಳ ಎದುರು ನಿಂತು ಈ ಮಾತುಗಳನ್ನು ಮೆಲ್ಲನೆ ಉಚ್ಚರಿಸಿದನು. "ಮಿಠಾಯಿವಾಲನೇ, ಪರಮಪವಿತ್ರ ಸ್ವಾಮಿ ವಿವೇಕಾನಂದರು ನಿನ್ನ ಊರಿನ ರೈಲ್ವೆಸ್ಟೇಶನಿನ ಮೂರನೆಯ ದರ್ಜೆಯ ಬಂಡಿಯಲ್ಲಿ ಇರುವರು. ನಿರಾಹಾರದಿಂದ ಬಹಳವಾಗಿ ದಣಿದಿರುವರು. ಕೈಯಲ್ಲಿ ಹಣಕಾಸಿಲ್ಲದೆ ದಾಹವನ್ನು ಸಹಿಸುತ್ತ ಕುಳಿತಿರುವರು. ನೀನೇಕೆ ಅವರ ಬಳಲಿಕೆಯನ್ನು ತಪ್ಪಿಸಬಾರದು?" ಈ ಮಾತುಗಳನ್ನು ಹೇಳಿ ಶ್ರೀ ರಾಮನು ಅದೃಶ್ಯನಾದಾಗ ನಾನು ನಿದ್ದೆಯಿಂದ ಎದ್ದು ನಿಂತೆನು. ಮನೆಯಲ್ಲಿ ವ್ಯಾಪಾರಕ್ಕಾಗಿ ಸಿದ್ಧಮಾಡಿಟ್ಟ ಉತ್ತಮ ಸವಾಸನೆಯ ಮಿಠಾಯಿಯನ್ನೂ, ಕುಡಿಯಲಿಕ್ಕೆ ಯೋಗ್ಯವಾದ ಪಾನೀಯವನ್ನು ಹಿಡಕೊಂಡು ಸನ್ಯಾಸಿ ಉಡುಪಿನಲ್ಲಿದ್ದ ತಾವೇ ವಿವೇಕಾನಂದರೆಂದು ಧೃಢವಾಗಿ ನಿಶ್ಚಯಿಸಿ ಈ ಚಿಳಿಲು ಸೇವೆಯನ್ನು ಮಾಡಿರುತ್ತೇನೆ. ಶ್ರೀ ರಾಮಚಂದ್ರನ ವಿಧೇಯ ಭಕ್ತನಾಗಿರುವ ನಾನು ಈ ದಿನ ಆ ಪರಮಾತ್ಮನ ಸೇವೆಯನ್ನು ಮಾಡುತಿದ್ದೇನೆ. ತಾವುಗಳು ನನ್ನ ಮೇಲೆ ಪ್ರೀತಿಯಿಟ್ಟು ನಾನು ತಂದಿರಿಸಿದ ಉತ್ತಮ ವರ್ಗದ ಆಹಾರವನ್ನು ಭುಂಜಿಸಿ, ಪಾನೀಯವನು ಕುಡಿದು ತಮ್ಮ ಹಸಿವೆ, ಬಾಯಾರಿಕೆಗಳನ್ನು ನೀಗಿಸಬೇಕಾಗಿ ಕೈ ಜೋಡಿಸಿ ಬೇಡಿಕೊಳ್ಳುತ್ತೇನೆ. ನನಗೆ ತಮ್ಮಿಂದ ಬೇರೇನೂ ಬೇಕಿಲ್ಲ ಎಂಬುವಾಗಿ ನುಡಿದು ವಿವೇಕಾನಂದರನ್ನು ಅಚ್ಚರಿಕಡಲಿನಲ್ಲಿ ತೇಲಿಸಿಬಿಟ್ಟನು. ಹಸಿವು ದಾಹಗಳಿಂದ ಬಹಳವಾಗಿ ಬಳಲಿದ ಸ್ವಾಮಿಯವರು ಬಹಳ ಸಂತೋಷದಿಂದ ಮಿಠಾಯಿಗಾರನು ಸಕಾಲದಲ್ಲಿ ತಂದ ಆಹಾರವನ್ನು ತಿಂದು, ಪಾನೀಯವನ್ನು ಕುಡಿದು ಆತನನ್ನು ಆಶೀರ್ವದಿಸಿದರು. ಸ್ವಾಮೀಜಿಯವರ ನೇತ್ರಗಳಿಂದ ಆನಂದ ಭಾಷ್ಪವು ಧಾರಾಕಾರವಾಗಿ ಸುರಿಯಿತು. ದಿವ್ಯ ದೇವಾನುಗ್ರಹದ ಸವಿಯು ಸತ್ಯವಾದುದಾಗಿದೆ ಎಂಬುದನ್ನು ನೋಡಲೇ ಅರಿತುಕೊಂಡ ಅವರು "ನಿನಗೆ ನನ್ನ ಪ್ರೇಮಪೂರ್ವಕದ ವಂದನೆಗಳನ್ನು ಸಮರ್ಪಿಸುತ್ತೇನೆ" ಎಂದು ಮಿಠಾಯಿ ಮಾರಾಟಗಾರನೊಡನೆ ಹೇಳಿದಾಗ ಆತನು "ಮಹಾನುಭಾವರೇ, ತಮ್ಮ ಸೇವೆಯನ್ನು ಈ ರೀತಿ ಯುಕ್ತಕಾಲದಲ್ಲಿ ಮಾಡುವ ಅವಕಾಶವನ್ನು ಕೊಟ್ಟ ಪರಮಾತ್ಮ ಶ್ರೀ ರಾಮಚಂದ್ರನಿಗೆ ನಿಮ್ಮ ವಂದನೆಗಳನ್ನು ಸಮರ್ಪಿಸಿರಿ" ಎಂದು ಮೆಲ್ಲನೆ ನುಡಿದ. ಆ ಸ್ವಾಮಿಭಕ್ತ ಮಿಠಾಯಿ ವ್ಯಾಪಾರಿಯು ಅಲ್ಲಿಂದ ತಟ್ಟನೇ ಹೊರಟು ಹೋದನು.

ತಮಾಷೆ ನೋಡಿದ ಧನವಂತ ವ್ಯಾಪಾರಿಯು ಕೂತಲ್ಲಿಯೇ ಕಪ್ಪಾದನು. ಆವನ ದರ್ಪವು ಮುರಿದು ಚೂರಾಯಿತು. ಹತ್ತಿರ ಮಂಡಿಸಿದ ಸ್ವಾಮಿ ವಿವೇಕಾನಂದರ ಪಾದಗಳನ್ನು ಮುಟ್ಟಿ ಕ್ಷಮೆಯನ್ನು ಯಾಚಿಸಿದನು. ದಯಾಶೀಲರಾದ ವಿವೇಕಾನಂದರು ಆ ಮೂರ್ಖನಿಗೆ ಕ್ಷಮೆಯ ದಾನವನ್ನು ಇತ್ತರು.

ಆತ್ಮಶೋಧನೆಯಲ್ಲಿ

ಕವಲು ದಾರಿ—ಕೆಂಪು ದೀಪ

ಶ್ರೀ "ಸಂದಾಸ"

ಜಾತ್ಯತೀತ ಸರಕಾರ ನಮ್ಮದು. ನಾವು ಎಲ್ಲರನ್ನೂ ಪ್ರೀತಿಸುತ್ತೇವೆ; ಆದರಿಸುತ್ತೇವೆ. ಗೌಡಲಿಂಗಾಯತರು ನಮ್ಮವರು ಶೈವ, ವೀರಶೈವರು ನಮ್ಮವರು. ಶೆಟ್ಟಿ, ಭಟ್ಟರು ನಮ್ಮವರು ಈ ಮಾದರಿ ಜಾತ್ಯತೀತ ಸರಕಾರ ನಮ್ಮದು. ಹಿಂದುಳಿದ ವರ್ಗ ಮುಂದೆ ನೋಡುತ್ತಿದೆ. ಮುಂದುಳಿದ ವರ್ಗ ಹಿಂದೆ ನೋಡುತ್ತಿದೆ ಮುಂದುಳಿದ ವರ್ಗದಲ್ಲಿ ಬಡವರಿದ್ದಾರೆ. ಸಮಸ್ಯೆಗಳಲ್ಲಿ ಕಂಗಾಲರಾಗಿ ಬಳಲುವವರಿದ್ದಾರೆ. ಅವರು ಹುಟ್ಟಿ ಬೆಳೆದುದು ಮುಂದುಳಿದ ವರ್ಗದಲ್ಲಿ. ಅದು ಪಾಪ ಅವರಿಗೆ. ಹಿಂದುಳಿದ ವರ್ಗದಲ್ಲಿ ಸಾಕಷ್ಟು ಉಳ್ಳವರಿದ್ದಾರೆ. ಆದರೆ ಇವರಿಗೆಲ್ಲ ಸೌಲಭ್ಯಗಳು ಸಿಗುತ್ತಿವೆ. ಅಂತೆಯೇ ಹಿಂದುಳಿದ ವರ್ಗದಲ್ಲಿ ಹುಟ್ಟಿದ ಕಾರಣ, ವರದಾನ ಇವರಿಗೆ. ಕಾಲ ಅತ್ತೆಗೊಂದು ಸೊಸೆಗೊಂದು.

ಹಾಗೆಂದೇ ಸ್ವತಂತ್ರ ಪಕ್ಷ ಸಾರುತ್ತಿದೆ. ಮರಳಿ ಆತ್ರೇಯಕಾಲ ಬರುತ್ತಿದೆಯೆಂದು ಹೇಳುತ್ತಿದೆ. ರಾಮರಾಜ್ಯವನ್ನು ಕಾಣಬೇಕೆಂದಿದೆಯೇ? ಸುಖದ ಬದುಕನ್ನು ಕಾಣಬೇಕೆಂದಿದೆಯೇ? ಸ್ವತಂತ್ರ ಪಕ್ಷವನ್ನು ಬಲಗೊಳಿಸಿರಿ ಎನ್ನುತ್ತಿದೆ. ಸುಖವಾಗಿ ಬದುಕಲು ಯಾರು ಇಚ್ಛಿಸುತ್ತಿಲ್ಲ! ಆದರೆ ಮರಳಿ ರಾಜರುಗಳ ದರ್ಬಾರು ನಮಗೆ ಬೇಡ ಎಂದು ವಿರೋಧಿ ಪಕ್ಷಗಳು ಸಾರುತ್ತಿವೆ. ಜನತೆ ಪ್ರಶ್ನಿಸುತ್ತಿದೆ. ಸ್ವತಂತ್ರ ಪಕ್ಷದಲ್ಲಿ ವಿರಾಜಮಾನರಾಗಿರುವವರ ಅಂತರಂಗದಲ್ಲೇನಿದೆ ಎಂದು ವಿಚಾರವಾದಿಗಳು ಚೆನ್ನಾಗಿ ತಿಳಿದಿದ್ದಾರೆ. ಆದರೂ ಸ್ವತಂತ್ರ ಪಕ್ಷ ಪ್ರಬಲ ವಿರೋಧಿ ಪಕ್ಷವಾಗಿದೆ ಎಂದು ಅದರ ಮುಖಂಡರುಗಳು ಕೂಗಿಕೊಳ್ಳುತ್ತಿದ್ದಾರೆ. ಜನಬಲದಿಂದಲೇ, ಧನಬಲದಿಂದಲೇ ಎಂದು ಕೇಳುವ ಅಗತ್ಯವಿಲ್ಲ. ಸರಿಯಾದ ವಿರೋಧಿ ಪಕ್ಷವಿನ್ನೂ ಬೆಳೆದಿಲ್ಲವೆನ್ನುತ್ತಿದೆ ಕಾಂಗ್ರೆಸ್. ಕಾಂಗ್ರೆಸ್ಸನ್ನು ಬಲಗೊಳಿಸಿರಿ. ಯೋಜನೆಗಳ ಮೂಲಕ ರಾಮರಾಜ್ಯ ನಿಮ್ಮ ಕೈ ಸೇರುತ್ತಿದೆ ಎನ್ನುತ್ತಾರೆ ಕಾಂಗ್ರೆಸಿಗರು. ಗಾಂಧಿಟೊಪ್ಪಿಗೆ ಧಾರಣೆಯನ್ನೂ ಇಳಿಮುಖವಾಗಿಲ್ಲವೆನ್ನುವುದೂ ಜನತೆಗೆ ತಿಳಿದಿದೆ. ಅಕಾರಣ ಕಾಂಗ್ರೆಸ್ಸನ್ನು ಅಂಟಿಕೊಂಡೇ ಇರಲು ಬಯಸುವವರೂ ಇದ್ದಾರೆ ಯಾಕೆ ಎಂದು ಪ್ರಶ್ನಿಸುತ್ತಾರೆಯೇ ಯಾರಾದರೂ? ಎಂತಹ ಹುಚ್ಚು ಪ್ರಶ್ನೆ

ಪಕ್ಷ ಪಕ್ಷಗಳ ಕಚ್ಚಾಟದಲ್ಲಿ ಒಂದು ವಿಶಿಷ್ಟ ಗುಣವಿದೆ. ತಾವೇನು ಮಾಡಿದ್ದೇವೆ ಎಂದು ಅವರೇನೂ ಹೇಳಿಕೊಳ್ಳುವುದಿಲ್ಲ. ಅಂತೆಯೇ ಸ್ಪರ್ಧಿಗಳಾದ ಪಕ್ಷಗಳನ್ನು ಟೀಕಿಸುವುದೊಂದೇ ಭಿನ್ನ ಪಕ್ಷಗಳ ಹೊಣೆಗಾರಿಕೆಯಾಗಿದೆ, (ಅಂತೆ) ನೆಹರು ಅವರಿಗಾಗಿ ಅಶೋಕ ಹೋಟೆಲ್ ರೂಪುಗೊಂಡಿದೆ ಎಂದು ಕಳೆದ ಚುನಾವಣೆಯಲ್ಲಿ ಜನಸಂಘ ಘಂಟಾಘೋಷವಾಗಿ ಸಾರಿದೆ. ಏಕೆ ಗೊತ್ತೇ? ಅವರಿಗಾಗಿ ಇಷ್ಟ ಮಾಂಸದ ಊಟ ತಯಾರಾಗುತ್ತಿದೆ. ಎಂತಹ ಮಾಂಸ? ದನದ ಮಾಂಸವೂ ಅಲ್ಲ, ಒಂ

(೮ನೇ ಪುಟ ನೋಡಿರಿ)

ಉದಯೋನ್ಮುಖ ಲೇಖಕ ಶ್ರೀ. ಪಿ ನ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ,ಎಂ.ಬಿ.,ಬಿ.ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ನೈಜ ಘಟನೆಗಳ ಆಧಾರದ ಮೇಲೆ ನೇಯ್ದು ವರ್ಣನಾತ್ಮಕ ಪ್ರಬಂಧಗಳಾದವೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ 2=00

ರೂ. 2=25 ನ.ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೧೯-೪-'೬೨	೩೨

ರಾಷ್ಟ್ರಪತಿ ಚುನಾವಣೆ

ಮೇ ತಿಂಗಳ ಮಧ್ಯಾವಧಿಯಲ್ಲಿ ಪ್ರಸಕ್ತ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳ ಅಧಿಕಾರವು ಅಂತ್ಯಗೊಳ್ಳುವುದರಿಂದ ಆ ಸ್ಥಾನಗಳಿಗೆ ಚುನಾವಣೆಯ ಕಾರ್ಯಕ್ರಮಗಳು ಸಿದ್ಧವಾಗಿವೆ. ಎಪ್ರಿಲ್ ೧೬ನೆಯ ತಾರೀಕು ನಾಮಪತ್ರಗಳನ್ನು ಸಲ್ಲಿಸಲು ಕೊನೆಯದಾಗಿತ್ತು. ತಾ. ೧೮ರಂದು ಅವುಗಳ ಪರಿಶೀಲನೆಯು ನಡೆಯುವುದು. ಸಲ್ಲಿಸಿದ ನಾಮಪತ್ರಗಳನ್ನು ಹಿಂತೆಗೆಯಲು ೨೧ನೆ ತಾರೀಕು ಕೊನೆಯ ದಿನವಾಗಿದೆ. ಅವಶ್ಯಕತೆ ಕಂಡು ಬಂದರೆ, ಮೇ ೭ರಂದು ಚುನಾವಣೆಯು ನಡೆಯುವುದು. ಮೇ ೧೩ನೆಯ ದಿನಾಂಕದಂದು ಹೊಸ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳು ಅಧಿಕಾರ ಸ್ವೀಕರಿಸುವರು. ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಪಕ್ಷೀಯ ಪದ್ಧತಿಯಂತೆ ಆಡಳಿತೆಯು ನೆರವೇರುವುದರಿಂದ, ರಾಷ್ಟ್ರಪತಿಗಳ ಸ್ಥಾನದ ಮಹತ್ವವು ಅಮೇರಿಕೆಯ ಅಧ್ಯಕ್ಷರಂತಿರುವುದಿಲ್ಲವಾದರೂ ರಾಷ್ಟ್ರದ ಪ್ರಥಮ ನಾಗರಿಕನೆನಿಸುವ ಆ ಪದವಿಯು ಗೌರವದ್ದಾಗಿದೆ; ತನ್ನ ಮಹತ್ವವನ್ನು ಪಡೆದೇ ತೀರುತ್ತದೆ. ತೋರಿಕೆಯ ಮಟ್ಟಿಗದು ಅಲಂಕಾರಿಕವೆಂಬಂತಿದ್ದರೂ ಅದು ಕೇವಲ ಅಲಂಕಾರಿಕವಲ್ಲವೆಂಬುದು ಮನವರಿಕೆಯಾಗದಿರದು.

ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಾಳುಗಳ ಸಂಖ್ಯೆಯಂತೆಯೇ ಮೂರನೆಯ ಬಾರಿಗೆ ನಡೆಯಲಿರುವ ಈ ಚುನಾವಣೆಗಳಲ್ಲಿಯೂ ಸ್ಪರ್ಧೆಗಿಳಿಯುವವರ ಸಂಖ್ಯೆಯು ಹೆಚ್ಚಾಗಿರುವುದು ಗಮನೀಯವಿದೆ. ಪ್ರಥಮ ಮತ್ತು ದ್ವಿತೀಯ ಚುನಾವಣಾವೇಳೆ ರಾಷ್ಟ್ರಪತಿಗಳ ಹುದ್ದೆಗೆ ಡಾ। ರಾಜೇಂದ್ರ ಪ್ರಸಾದರು ಮಾತ್ರವಲ್ಲದೆ, ಹರಿರಾಮ ಚೌಧರಿಯವರೂ ಸ್ಪರ್ಧಿಸಿದರು. ಆದರೆ, ಉಪರಾಷ್ಟ್ರಪತಿಗಳಾಗಿ ಡಾ। ರಾಧಾಕೃಷ್ಣನರು ಅವಿರೋಧವಾಗಿ ಆಯ್ಕೆಗೊಂಡಿದ್ದರು. ಈ ಸಲ ರಾಜೇಂದ್ರ ಪ್ರಸಾದರು ರಾಷ್ಟ್ರಪತಿಗಳಾಗಿ ಮುಂದುವರಿಯಲು ತಮ್ಮ ಅನಿಚ್ಛೆಯನ್ನು ವ್ಯಕ್ತಪಡಿಸಿರುವುದರಿಂದ ಡಾ। ರಾಧಾಕೃಷ್ಣನರನ್ನು ಕಾಂಗ್ರೆಸ್ ಪಕ್ಷವು ತನ್ನ ಹುರಿಯಾಳನ್ನಾಗಿ ಆರಿಸಿದೆ. ಪ್ರಜಾ ಪಕ್ಷವೂ ಇದನ್ನು ಬೆಂಬಲಿಸಲು ನಿರ್ಧರಿಸಿದೆ. ಈ ಸಲ ಇವರನ್ನು ಹೊರತು, ಮೊದಲಿನೆರಡು ಸಲವೂ ಸೋಲನ್ನುಂಡ ಹರಿರಾಮ ಚೌಧರಿಯವರೂ, ಯಮುನಾ ಪ್ರಸಾದ ತ್ರಿಶೂಲಿಯೂ ಮತ್ತು ಶ್ರೀಮತಿ ಸುಶೀಲಾ ದೇವಿ ಈ ಇರ್ವರು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ತಮ್ಮ ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಇವರಲ್ಲಿ ಸುಶೀಲಾ ದೇವಿ ಇವರ ನಾಮಪತ್ರಕ್ಕೆ ಸೂಚಕರು ಮತ್ತು ಅನುಮೋದಕರ ಹೆಸರೂ ಇಲ್ಲದೆ ಇರುವುದು ಸೋಜಿಗವೆನ್ನಬೇಕು. ಹಾಗೆಯೇ ಸದ್ಯ ಬಿಹಾರದ ರಾಜ್ಯಪಾಲರಾಗಿರುವ ಡಾ। ಝಾಕೀರ ಹುಸೇನರನ್ನು ಉಪರಾಷ್ಟ್ರಪತಿಗಳ ಸ್ಥಾನಕ್ಕೆ ಕಾಂಗ್ರೆಸ್ ನಿಲ್ಲಿಸಿದೆ; ಶ್ರೀ. ಎಸ್. ಸಿ. ಸಾಮಂತ ಸಿಂಹರ್ ಇವರೂ ಈ ಸ್ಥಾನಕ್ಕೆ ನಾಮಪತ್ರಗಳನ್ನು ಸಲ್ಲಿಸಿದ್ದಾರೆಂದು ತಿಳಿಯುತ್ತದೆ. ಹೀಗೆ ಒಟ್ಟಿನಲ್ಲಿ ಚುನಾವಣೆಗಳ ಮೂಲಕವೇ ಇಂತಹ ವರಿಷ್ಠ ಸ್ಥಾನಗಳು ಭರ್ತಿಗೊಳ್ಳುವುದೊಂದು ಈ ೧೯೬೨ರ ವೈಶಿಷ್ಟ್ಯವೆನ್ನಬಹುದು. ನಡೆಯಬಹುದಾದ ಚುನಾವಣೆಗಳಲ್ಲಿ ಯಾರು ಆರಿಸಿ ಬರುವರೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಪ್ರಜಾರಾಜ್ಯ ಭಾರತದ ಉಪರಾಷ್ಟ್ರಪತಿಗಳಾಗಿ ೧೯೫೦ರಿಂದ ನಿರಂತರವಾಗಿ ಸೇವೆಸಲ್ಲಿಸಿಕೊಂಡು ಬಂದಿರುವ ಡಾ. ರಾಧಾಕೃಷ್ಣನ್ ದಕ್ಷಿಣ ಭಾರತದವರು. ದೇಶದಲ್ಲಿ ಬೆಳೆಯುತ್ತಿರುವ ಉತ್ತರ ದಕ್ಷಿಣಗಳೆಂಬ ಅವಾಂಛನೀಯ ಪ್ರಶ್ನೆಯನ್ನು ತೊಡೆದು ಹಾಕುವ ಉದ್ದೇಶದಿಂದ ಮಾತ್ರವಲ್ಲ, ಡಾ. ರಾಧಾಕೃಷ್ಣನರು ತಮ್ಮ ಕರ್ತವ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಕರ್ತವ್ಯ ಪರಾಯಣತೆಯಿಂದಲೂ ಅವರು ರಾಷ್ಟ್ರಪತಿಗಳ ಸ್ಥಾನಕ್ಕೆ ಅರ್ಹರಾಗಿದ್ದಾರೆ. ಪೂರ್ವ—ಪಶ್ಚಿಮ ಸಂಸ್ಕೃತಿಯ ಸಂಗಮವೆನಿಸಿದ ಅವರು ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಭಾರತದ ವರಿಷ್ಠಾಧಿಕಾರಿಯಾಗಿ ಆದರ ಕ್ಷೇಮಕ್ಕೆ ಮಾರ್ಗದರ್ಶನ ಮಾಡಬಲ್ಲವರು. ಲಂಡನ್ನಿನ ಟಾಯಮ್ಸ ಪತ್ರಿಕೆಯ ಅಭಿಪ್ರಾಯದಂತೆ ಇಂದು ಭಾರತದಲ್ಲಿ ಈ ಹುದ್ದೆಯನ್ನಡರಲು ಇವರಿಗಿಂತ ಸಮರ್ಥನಾದ ಬೇರೊಬ್ಬ ವ್ಯಕ್ತಿಯಿಲ್ಲ. ಇವರನ್ನು ನಾಮಕರಣ ಮಾಡುವಲ್ಲಿ ಮೊದಮೊದಲು ತುಸು ಮೀನ ಮೇಷ ಎಣಿಸಲಾಯಿತಾದರೂ ಕೊನೆಯ ದಿನಗಳಲ್ಲಿ ಕಾಂಗ್ರೆಸು ನಿರ್ಧಾರಕ್ಕೆ ತೀವ್ರವಾಗಿ ಬಂದುದು ರಾಧಾಕೃಷ್ಣನರ ವ್ಯಕ್ತಿತ್ವದ ಹಿರಿಮೆಯನ್ನು ಎತ್ತಿ ತೋರಿಸುತ್ತದೆ. ಆಧುನಿಕ ಭಾರತದ ಮಹಾ ದಾರ್ಶನಿಕರಾದ ಇವರು ರಾಜಕಾರಣದಲ್ಲೂ ಪಳಗಿದವರು; ಪೂರ್ವ ಪಶ್ಚಿಮ ದೇಶಗಳ ಸಂಸ್ಕೃತಿ—ನಾಗರಿಕತೆ—ದರ್ಶನಗಳನ್ನು ಆಳವಾಗಿ ಅಭ್ಯಾಸ ನಡೆಸಿದವರು; ದರ್ಶನ ಶಾಸ್ತ್ರದ ಪ್ರಾಧ್ಯಾಪಕರಾಗಿ ಉಪಜೀವನಕ್ಕೆ ತೊಡಗಿದ ಇವರು ಇಂದು ವಿಶ್ವದ ವ್ಯಕ್ತಿಯಾಗಿದ್ದಾರೆ. ಹೀಗಿರುವಾಗ ಇವರ ಜನಪ್ರಿಯತೆಯೇ ಇವರ ಆಯ್ಕೆಯು ಆಗಿಯೇ ಆಗುವುದೆಂಬುದನ್ನು ಸಾರಿ ಹೇಳುತ್ತದೆ.

ನಮ್ಮ ನೆರೆಯ ಪಾಕಿಸ್ತಾನದಲ್ಲಿ ಮುಸಲ್ಮಾನನಲ್ಲದವನಿಗೆ ರಾಷ್ಟ್ರದ ವರಿಷ್ಠಾಧಿಕಾರಿಯಾಗುವ ಅವಕಾಶವನ್ನು ಕೊಡಲಾಗಿಲ್ಲ. ಅಲ್ಲಿ ಇಸ್ಲಾಂ ಧರ್ಮವನ್ನೇ ರಾಷ್ಟ್ರೀಯ ಧರ್ಮವೆಂದು ಸಾಂವಿಧಾನಿಕವಾಗಿ ಅಂಗೀಕರಿಸಿರುವುದರಿಂದ ಹಾಗಾಗುವುದು ಅನಿವಾರ್ಯವೂ ಆಗಿದೆಯೆನ್ನಬಹುದು. ಆದರೆ, ಭಾರತದಲ್ಲಿ ಯಾವುದೇ ಧರ್ಮದ ಪ್ರಾಧಾನ್ಯವಿಲ್ಲ; ನಮ್ಮದು ಸೆಕ್ಯುಲರ್ ಸ್ಟೇಟ್ ಇಲ್ಲಿ ಯಾವುದೇ ಧರ್ಮಾವಲಂಬಿಗೆ, ಯಾವುದೇ ಮತಾನುಯಾಯಿಗೆ, ಯಾವುದೇ ಜಾತಿಯವನಿಗೆ ಸಮಾನಾಧಿಕಾರವಿದೆ. ಇದು ವರೆಗಿನ ನಮ್ಮ ರಾಷ್ಟ್ರಾಡಳಿತೆಯಲ್ಲಿಯೇ ಇದು ವ್ಯಕ್ತಪಟ್ಟಿದೆ. ರಾಯಭಾರಿ, ರಾಜ್ಯಪಾಲ, ಮಂತ್ರಿಪಟ್ಟಗಳಲ್ಲಿ ಸಮರ್ಥರಾದವರು ಪ್ರಾತಿನಿಧ್ಯವನ್ನು ಪಡೆದಿದ್ದಾರೆ. ಈಗ ನಮ್ಮ ಸಂವಿಧಾನದ ಉದಾರ ನೀತಿಯನ್ನು ಲೋಕಕ್ಕೆ ಎತ್ತಿ ತೋರಿಸುವ ಕಾರಣದಿಂದ ಡಾ। ಝಾಕೀರ ಹುಸೇನರನ್ನು ಉಪರಾಷ್ಟ್ರಪತಿ ಸ್ಥಾನಕ್ಕೆ ನಿಲ್ಲಿಸಲಾಗಿದೆಯೆನ್ನಬಹುದು. ಸರಕಾರದ ನಾನಾ ವಿಭಾಗಗಳಲ್ಲಿ ದಕ್ಷತೆಯಿಂದ ದುಡಿದು, ಸದ್ಯ ಅಲಂಕರಿಸಿರುವ ರಾಜ್ಯಪಾಲ ಪದವಿಯನ್ನೂ ಸಮರ್ಥ ರೀತಿಯಿಂದ ನಿರ್ವಹಿಸಿದ ಇವರು ಇಂತಹ ಹುದ್ದೆಗೆ ಯೋಗ್ಯರೆಂದು ಬೇರೆ ಹೇಳುವ ಅಗತ್ಯವಿಲ್ಲ. ದಿನದಿಂದ ದಿನಕ್ಕೆ ಪಾಕಿಸ್ತಾನದೊಡನಿರುವ ಭಾರತದ ಸಂಬಂಧವು ಕ್ಷೋಭಕಾರಕವಾಗುತ್ತ ಹೋಗುತ್ತಿದ್ದು ಅದು ಸುಧಾರಿಸುವಲ್ಲಿ ಭಾರತದ ಅತಿ ಉದಾರ ನೀತಿ ಯಶಸ್ವಿಯಾಗುವಂತೆ ಅವಕಾಶವೊದಗಿಸುವಲ್ಲಿಯೂ ಇಂತಹ ಆಯ್ಕೆಯು ಸಮಯೋಚಿತವೆಂದೇ ಹೇಳಬೇಕು.

ಹೀಗೆ ಪ್ರಧಾನಿ ನೆಹರೂರವರು ತಮ್ಮ ಸಚಿವ ಸಂಪುಟದ ಆಯ್ಕೆಯಲ್ಲಿ ತೋರಿಸಿರುವ ಚಾಣಾಕ್ಷತೆ ಮತ್ತು ಭವಿಷ್ಯ ನಿರ್ಮಾಣದ ಹೆಜ್ಜೆಗೆ ಅನುಕೂಲವಾಗಿಯೇ ಈ ರಾಷ್ಟ್ರಪತಿ—ಉಪರಾಷ್ಟ್ರಪತಿಗಳ ಸ್ಥಾನಕ್ಕೂ ಹುರಿಯಾಳುಗಳನ್ನು ಆರಿಸಿಕೊಳ್ಳುವಲ್ಲಿ ತುಂಬ ದೂರಾಲೋಚನೆ ಮಾಡಿದ್ದಾರೆ. ಅವರು ನಿರ್ದೇಶಿಸಿದ ರಾಷ್ಟ್ರನಾಯಕರು ಚುನಾವಣೆ ನಡೆದರೆ ಗೆದ್ದು ಬರುವುದು, ನಡೆಯದಿದ್ದರಂತೂ ಅವಿರೋಧ ಆಯ್ಕೆಗೊಳ್ಳುವುದು, ಹಗಲಿನಷ್ಟು ಬೆಳ್ಳಗಾಗಿದೆ.

ಚೀನದ ಆರೋಪ

ಇದೇ ಜೂನ್ ತಿಂಗಳಲ್ಲಿ ಅವಸಾನಗೊಳ್ಳುವ ಭಾರತ-ಟಿಬೇಟುಗಳ ನಡುವಣ ವ್ಯಾಪಾರದ ಒಡಂಬಡಿಕೆಯನ್ನು ಪುನರುಜ್ಜೀವನಗೊಳಿಸಬೇಕೆಂಬ ಚೀನದ ಬೇಡಿಕೆಯನ್ನು ಪರಿಶೀಲಿಸುವುದಕ್ಕೆ ಮೊದಲು ಅದು ಆಕ್ರಮಿಸಿರುವ ಭಾರತದ ಭೂಮಿಯಿಂದ ಕಾಲ್ತೆಗೆಯಬೇಕೆಂದು ಕೇಳಿಕೊಂಡದ್ದಕ್ಕೆ ಚೀನ ಸರಕಾರವಿತ್ತ ಉತ್ತರವು ಪ್ರಚಾರಾತ್ಮಕವಾಗಿ ಬಂದಿರುವುದು ವರದಿಯಾಗಿದೆ. ಮೊದಲೇ ಊಹಿಸಲಾಗಿದ್ದಂತೆ ಸೀಮಾ ವಿವಾದವೂ ವ್ಯಾಪಾರ ಒಡಂಬಡಿಕೆಯೂ ಪ್ರತಿ ಪ್ರತ್ಯೇಕ ವಿಷಯಗಳೆಂದು ಹೇಳಿದುದು ಮಾತ್ರವಲ್ಲದೆ, ಮಾತುಕತೆಗಳ ಮೂಲಕ ಶಾಂತ ವಿಧಾನಗಳಲ್ಲಿ ಸೀಮಾ ವಿವಾದವನ್ನು ಬಗೆಹರಿಸಲು ಭಾರತವು ನಿರಾಕರಿಸುತ್ತಿದೆ ಎಂಬ ಆರೋಪವನ್ನೂ ಅದು ಹೊರಿಸಲು ಪ್ರಯತ್ನಿಸುತ್ತಿದೆ. ಚೀನವು ಪ್ರಕಟಿಸಿರುವ ನಕ್ಷೆಯು ಚಾರಿತ್ರಿಕ ಹಿನ್ನಲೆಯದೆಂದೂ ಭಾರತದಲ್ಲಿ ಪ್ರಚಾರದಲ್ಲಿರುವುದು ಚೀನದ ಮೇಲೆ ಬ್ರಿಟಿಷರು ಆಕ್ರಮಣ ಮಾಡಿದಾಗ ರಚಿಸಿರುವ ನಕ್ಷೆಯೆಂದೂ ಅದು ಈಗ ವಾದಿಸತೊಡಗಿದೆ; ಚೀನಾದ ವಾಯು ಸರಹದ್ದನ್ನು ಭಾರತವು ಅನೇಕ ಬಾರಿ ಉಲ್ಲಂಘಿಸಿದ ಘಟನೆಗಳವೆಯೆಂದು ಅದು ಉಲ್ಲೇಖಿಸಿದೆ. ಭಾರತದ ವರ್ತನೆ ಹೇಗೂ ಅದು ಅನುಸರಿಸಿರುವ ನೀತಿಯು ತನಗೆ ಅನುಕೂಲವಿಲ್ಲವಾದುದರಿಂದ ಚೀನವು ತಾನು ಮಾಡಿದ ಮತ್ತು ಇನ್ನೂ ಮಾಡುತ್ತಿರುವ ಅನಾಚಾರ, ಆಕ್ರಮಣಗಳನ್ನು ಭಾರತದ ಹಣೆಗೆ ಹಚ್ಚುವ ದುಸ್ಸಾಹಸ ಮಾಡುತ್ತಿದೆಯೆಂದು ಇದರಿಂದ ಸ್ಪಷ್ಟವಾಗುವುದು. ಚೀನಾದ ಇಂತಹ ದುರ್ನೀತಿಯಿಂದಾಗಿಯೇ ಅದು ಜಗತ್ತಿನಲ್ಲಿ ತನ್ನ ಸ್ಥಾನಮಾನಗಳನ್ನು ಕಳೆದುಕೊಳ್ಳುತ್ತ ಬರುತ್ತಿದೆ. ದಿನದಿಂದ ದಿನಕ್ಕೆ ತನ್ನ ಶತ್ರುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತ ಬರುತ್ತಿದೆ. ಅನ್ಯಾಯವಾಗಿ ಆಕ್ರಮಿಸಿದ ತನ್ನ ಭೂಭಾಗದಿಂದ ಹೊರಗೆ ಹೋಗಿ ಎಂದು ಭಾರತ ಹೇಳುವುದು ತಪ್ಪು, ವಿಷದ ಹಾವನ್ನು ಮನೆ ಬಾಗಿಲಲ್ಲಿಟ್ಟು ಅದರೊಡನೆ ಸರಸವಾಡಿರಿ ಎಂದು ಚೀನ ಬುದ್ಧಿ ಹೇಳುವುದು ಮಾತ್ರ ಸರಿ—ತನ್ನ ಬೇಳೆ ಬೇಯಿಸಿಕೊಳ್ಳಬೇಕಾದರೆ, ಪೇಕಿಂಗ್ ಸರಕಾರ ಏನನ್ನೂ ಹೇಳೀತು; ಮಾಡೀತು. ಆದರೆ, ಇದರ ಗುಣಾವಗುಣಗಳನ್ನು ಕಡೆಗಣಿಸುವಷ್ಟು ಮೂರ್ಖ ರಾಜಕಾರಣಿಗಳು ನಮ್ಮಲ್ಲಿಲ್ಲ; ಎಲ್ಲಿಯೂ ಇರಬಾರದು.

ಸಿಂಡಿಕೇಟ್ ಬೇಂಕ್‌ನ ಅದ್ಭುತ ಪ್ರಗತಿ

೧೯೬೧ನೆ ದಶಂಬರ ೩೧ಕ್ಕೆ ಕೊನೆಗೊಂಡ ಬೇಂಕಿನ ೩೬ನೆಯ ವರ್ಷಕ್ಕೆ ಸಂಬಂಧಿಸಿದ ಸಾಲ ಮೂಲಗಳ ಮತ್ತು ಆಯ ವ್ಯಯಗಳ ಪರಿಶೋಧಿತ ವರದಿಯು ಸಿಂಡಿಕೇಟ್ ಬೇಂಕಿನ ಜನಸೇವಾ ಕಾರ್ಯದ ದಾರಿಯಲ್ಲೊಂದು ಮೈಲುಗಲ್ಲೆಂಬಂತಿದೆ. ಬೇಂಕಿನ ಇತಿಹಾಸದಲ್ಲಿ ಮೊತ್ತ ಮೊದಲಿಗೆ ಪಾವತಿಯಾದ ಬಂಡವಳವನ್ನು ಕಾಯ್ದಿಟ್ಟ ನಿಧಿಯು ಮೀರಿಸಿದ ದಾಖಲೆಯು ಈ ವರ್ಷದಲ್ಲಿ ಎದ್ದು ತೋರುತ್ತದೆ. ೪೮ ಲಕ್ಷ ರೂಪಾಯಿಗಳ ಪಾವತಿಯಾದ ಬಂಡವಳವಿರುವ ಬೇಂಕಿನಲ್ಲಿ ೨೫ ಕೋಟಿ ರೂಪಾಯಿಗಳ ಠೇವಣಾತಿಯು ಇರುವುದೆಂದರೆ, ಇದು ಜನಾದರದ ದ್ಯೋತಕ; ಬೇಂಕಾದರೂ ಒಟ್ಟು ೩೦ ಕೋಟಿ ರೂಪಾಯಿಗಳ ವ್ಯವಹಾರವನ್ನು ಮಾಡಿ ವರದಿ ವರ್ಷಾಂತ್ಯದಲ್ಲಿ ರೂ. ೩೨ ಲಕ್ಷಗಳಷ್ಟು ಲಾಭವನ್ನು ಗಳಿಸಿದೆ. ಈ ಲಾಭಾಂಶವು ಹಿಂದಿನ ವರ್ಷಕ್ಕಿಂತ ಏಳು ಲಕ್ಷ ರೂಪಾಯಿಗಳಷ್ಟು ಹೆಚ್ಚು. ಇದರಲ್ಲಿ ರೂ. ೧೧ ಲಕ್ಷವನ್ನು ಕಾಯ್ದಿಟ್ಟ ನಿಧಿಗೂ ರೂ. ೧೩। ಲಕ್ಷವನ್ನು ತೆರಿಗೆಗಳಿಗಾಗಿಯೂ ರೂ. ೨। ಲಕ್ಷವನ್ನು ನೌಕರರಿಗೆ ಬೋನಸ್ ನೀಡುವುದಕ್ಕಾಗಿಯೂ ತೆಗೆದಿರಿಸಿದ ನಂತರ ತನ್ನ ಪಾಲು ಬಂಡವಳದಾರರಿಗೆ ಈಕ್ವಿಟಿ ಶೇರುಗಳ ಮೇಲೆ ಸೇ. ೧೧ರಂತೆ ಡಿವಿಡೆಂಡ್ ಮತ್ತು ಸೇ. ೧೧ರಂತೆ ಬೋನಸನ್ನು ಸೇ. ೬ರ ಪ್ರಿಫರೆನ್ಸ್ ಶೇರುಗಳ ಮೇಲೆ ಸೇ. ೮.೫೭ರಂತೆ ಮತ್ತು ಸೇ. ೫ರ ಪ್ರಿಫರೆನ್ಸ್ ಶೇರುಗಳ ಮೇಲೆ ಸೇ. ೭.೧೫ರಂತೆಯೂ (ಆದಾಯಕರಕ್ಕೆ ಒಳಗಾಗಿ) ಡಿವಿಡೆಂಡ್

ಕಳೆದ ನಾಲ್ಕೈದು ವರ್ಷಗಳಲ್ಲಿ ಬೇಂಕು ಅಸಾಧಾರಣವಾದ ಪ್ರಗತಿಯನ್ನು ಸಾಧಿಸಿದೆಯೆಂಬುದು ಎಲ್ಲರೂ ಅಭಿಮಾನ ಪಡಲೇಬೇಕಾದ ವಿಚಾರ. ೧೯೫೭ರಲ್ಲಿ ರೂ. ೧೦ ಕೋಟಿಯಷ್ಟಿದ್ದ ಬೇಂಕಿನ ಒಟ್ಟು ಠೇವಣಾತಿಯು ವರದಿ ವರ್ಷಾಂತ್ಯದಲ್ಲಿ ಇಮ್ಮಡಿಗೂ ಹೆಚ್ಚಿದೆ. ಇದೇ ಪ್ರಮಾಣದಲ್ಲಿ ಅದು ನೀಡಿದ ಸಾಲಗಳೂ ಅವರ ಹಣತೊಡಗಿಸುವಿಕೆಗಳೂ ಗಣನೀಯವಾಗಿ ಏರಿ ಹೋಗಿವೆ. ರಿಜರ್ವ ಬೇಂಕಿನ ಆದೇಶದಂತೆ ದಿ ಮಾಲ್ಕಿ ಬೇಂಕ್, ದಿ ಪೈಮನಿ ಬೇಂಕ್, ದಿ ಕೆಥೋಲಿಕ್ ಬೇಂಕ್ ಮತ್ತು ದಿ ಪೀಪಲ್ಸ್ ಬೇಂಕ್‌ಗಳನ್ನು ತನ್ನಲ್ಲಿ ವಿಲೀನಗೊಳಿಸಿದ ನಂತರ ವರದಿ ವರ್ಷಾಂತ್ಯದಲ್ಲಿ ಬೇಂಕು ೧೫೯ ಶಾಖೆಗಳ ಮೂಲಕ ಜನತೆಯಲ್ಲಿ ಬೇಂಕಿಂಗ್ ಮನೋವೃತ್ತಿಯನ್ನು ಬೆಳೆಸಿ ತನ್ಮೂಲಕ ರಾಷ್ಟ್ರಾಭ್ಯುದಯ ಕಾರ್ಯದಲ್ಲಿ, ಆರ್ಥಿಕ ಪುನಾರಚನೆಯ ಮಹಾ ಸಾಧನೆಯಲ್ಲಿ ಸೇವೆ ಸಲ್ಲಿಸುತ್ತಿದೆ. ಬೇಂಕಿನ ಬಂಡವಳ ಮತ್ತು ಕಾಯ್ದಿಟ್ಟ ನಿಧಿಗಳ ಮೊತ್ತವು ಒಟ್ಟು ಠೇವಣಾತಿಯ ಸೇ. ೬ರಷ್ಟಾದರೂ ಇರಬೇಕಾದುದು ಸಮಯೋಚಿತವೆಂಬುದ

...ಂದಬೇಂಕಿನ ಅಧಿಕೃತ ಬಂಡವಳವನ್ನು ೨೫ ಲಕ್ಷಕ್ಕೂ ತೆತ್ತ ಬಂಡವಳವನ್ನು ೧೨ ಲಕ್ಷಕ್ಕೂ ಏರಿಸಲು ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬೇಂಕಿನ ಅಭಿವೃದ್ಧಿಗಾಗಿ ಅಹರ್ನಿಶಿ ದುಡಿಯುತಿದ್ದ ಡಾ| ಟಿ. ಮಾಧವ ಪೈಯವರು ೩೨ ವರ್ಷಗಳ ಅನವರತ ಸೇವೆಯನ್ನು ಸಲ್ಲಿಸಿ ಮೆನೇಜಿಂಗ್ ಡೈರೆಕ್ಟರ ಪದವಿಯಿಂದ ನಿವೃತ್ತರಾಗಿ ಮೊದಲು ಡಿಪ್ಯುಟಿ ಚೀಫ್ ಆಫೀಸರರಾಗಿದ್ದ ಶ್ರೀ ಟಿ. ಎ. ಪೈ ಅವರು ಆ ಪದಕ್ಕೆ ನಿಯುಕ್ತರಾಗಿದ್ದಾರೆ. ಚೇಯರ್‌ಮೆನ್ ಆಗಿ ಮುಂದುವರಿಯುವ ಡಾ| ಪೈಯವರ ಮಾರ್ಗದರ್ಶನದಲ್ಲಿ ತರುಣ ಮೆನೇಜಿಂಗ್ ಡೈರೆಕ್ಟರ್ ಶ್ರೀ ಪೈಯವರ ಆಡಳಿತಾವಧಿಯಲ್ಲಿಯೂ ಬೇಂಕು ತಾನು ಇದುವರೆಗೆ ಸಾಧಿಸಿದ ಉನ್ನತ ಆದರ್ಶದ ಪರಂಪರೆಗಳನ್ನು ಉಳಿಸಿಕೊಳ್ಳುವುದು ಮಾತ್ರವಲ್ಲ, ಮತ್ತೂ ಮುಂದುವರಿಸುವುದೆಂದು ವಿಶ್ವಾಸ ಪಡಬಹುದು.

ದಕ್ಷಿಣ ಭಾರತದ ತುಂಬ ಶಾಖೆಗಳನ್ನು ಹರಡಿಸಿ, ಜನಮನದಲ್ಲಿ ಬೇಂಕಿಂಗ್ ಅಭಿರುಚಿಯನ್ನು ಹುಟ್ಟಿಸುವಲ್ಲಿ ಸಮರ್ಥವಾದ ಸಿಂಡಿಕೇಟ್ ಬೇಂಕು ಉದಿತೋದಿತವಾಗಲೆಂದು ಬಯಸುತ್ತೇವೆ.

ಅಲ್ಲಲ್ಲಿಯ ಸುದ್ದಿಸಾರ

ಜಿಲ್ಲಾ ಸಹಕಾರಿ ಪರಿಷತ್ತು— ಹೊಸತಾಗಿ ಘಟಿಸಲ್ಪಟ್ಟ, ದ. ಕ. ಜಿಲ್ಲಾ ಕೋಪರೇಟಿವ್ ಎಡ್ವಾನ್ಸ್‌ಮೆಂಟ್ ಸೊಸೈಟಿಯನ್ನು ಪ್ರತಿನಿಧೀಕರಿಸುವ ದ. ಕ. ಜಿಲ್ಲಾ ಕೋಪರೇಟಿವ್ ಯೂನಿಯನ್, ಮಂಗಳೂರು ಇವರ ಆಡಳಿತ ಮಂಡಳಿಯ ಪ್ರಥಮ ಸಭೆಯು ಅಧ್ಯಕ್ಷ ಶ್ರೀ ಬಿ. ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಇದೇ ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ತಾಲೂಕು ಮಟ್ಟದ ಯೂನಿಯನ್ ಪರಿಷತ್ತುಗಳನ್ನೂ ಜಿಲ್ಲಾ ಸಹಕಾರಿ ಪರಿಷತ್ತನ್ನೂ ಜರಗಿಸಬೇಕೆಂದು ನಿರ್ಣಯಿಸಿದೆ. ಮಾತ್ರವಲ್ಲದೆ ಸಹಕಾರಿ ಮಾಸಿಕವಾದ ಕನ್ನಡ ಸಹಕಾರಿ ಪತ್ರಿಕೆಯನ್ನು ಪುನರಾವರ್ತಿಸಬೇಕೆಂದೂ ಠರಾಯಿಸಿದೆ. ಜಿಲ್ಲಾ ಕೋಪರೇಟಿವ್ ಯೂನಿಯನಿಗೆ ಶ್ರೀ ಬಿ. ಪ್ರಭಾಕರ ರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಬಿ. ಆನಂದ ರೈಯವರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ ಬಿ. ನಾರಾಯಣ ನಾಯ್ಕರನ್ನು ಕಾರ್ಯದರ್ಶಿಯವರನ್ನಾಗಿಯೂ, ಮತ್ತು ಶ್ರೀ ಕೆ. ವಿಶ್ವನಾಥ ಕಾಮತರನ್ನು ಖಜಾನ್ಜಿಯಾಗಿಯೂ ಆರಿಸಲಾಯಿತು.

ಉಡುಪಿ ರೋಟರಿ ಕ್ಲಬ್-1962-63ನೇ ಸಾಲಿಗೆ ಈ ಕೆಳಗಿನವರು ಈ ಕ್ಲಬ್ಬಿನ ಪದಾಧಿಕಾರಿಗಳಾಗಿ ಆರಿಸಲ್ಪಟ್ಟಿದ್ದಾರೆ. ಶ್ರೀ ಟಿ. ರಮೇಶ ಯು. ಪೈ ಅಧ್ಯಕ್ಷ, ಶ್ರೀ ಕೆ. ಕೆ. ಪೈ ಮತ್ತು ಡಾ| ಕೆ. ಎಲ್. ಪಠಾಳೆ, ಉಪಾಧ್ಯಕ್ಷರು, ಡಾ| ಎ. ಕೃಷ್ಣ ರಾವ್, ಕಾರ್ಯದರ್ಶಿ, ಶ್ರೀ ಎ. ಜೆ. ಆಲ್ಸೆ ಜತೆಕಾರ್ಯದರ್ಶಿ, ಡಾ| ಕೆ. ಕೃಷ್ಣ ಸ್ವಾಮಿ, ಕೋಶಾಧಿಕಾರಿ, ಶ್ರೀ ಎಸ್. ಬಾಲಸುಬ್ರಮಣ್ಯನ್, ಮತ್ತು ಶ್ರೀ ಎನ್. ಎಸ್. ಪ್ರಭು ಡೈರೆಕ್ಟರರು.

ಶಾಲಾ ವರ್ಧಂತಿ ಮತ್ತು ಕಟ್ಟಡದ ಉದ್ಘಾಟನೆ—ಉಡುಪಿ ಸಮೀಪದ ಬಡಗಬೆಟ್ಟು ಜೂನಿಯರ್ ಬೇಸಿಕ್ ಮತ್ತು ಹಾ. ಎ. ಶಾಲಾ ವಾರ್ಷಿಕೋತ್ಸವವೂ ಅಮೇರಿಕಾ ಮಿಯೊಮಿಯ ಶ್ರೀ ಫಿಲಿಪ್ ಮಾಕೋರ್ವಿಚ್ಸ್ ಅವರ ಸಹಾಯದಿಂದ ಕಟ್ಟಿಸಲಾದ ಫಿಲಿಪ್ ಮಾಕೋರ್ವಿಚ್ಸ್ ಸ್ಮಾರಕ ಕಟ್ಟಡದ ಉದ್ಘಾಟನೆಯೂ ಗ್ರಾಮಸ್ಥರಿಂದ ಕೊಡಲಾದ ವಿದ್ಯುದ್ದೀಪ ಮತ್ತು ಶ್ರೀ ಫಿಲಿಪ್ ಮಾಕೋರ್ವಿಚ್ಸ್‌ರಿಂದ ಕೊಡಲಾದ ರೇಡಿಯೊದ ಉದ್ಘಾಟನಾ ಸಮಾರಂಭವೂ ತಾ. 13-4-62 ರಂದು ಉಡುಪಿಯ ಸಬ್‌ಜಡ್ಜ್ ಶ್ರೀ ಜಿ. ಬಿ. ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಪ್ರಧಾನ ಅಧ್ಯಾಪಕ ಶ್ರೀ ಬಿ. ಶಂಕರ ಸೆಟ್ಟರು ಸ್ವಾಗತಿಸುತ್ತಾ ಮಾಕೋರ್ವಿಚ್ಸ್‌ರ ಔದಾರ್ಯಕ್ಕೆ ಧನ್ಯವಾದ ಸೂಚಿಸಿದರು. ಶ್ರೀ ಬಿ. ನಾರಾಯಣ ಸೆಟ್ಟರು ಸ್ತುತಿಪಾಠನಗೈದರು. ಹೊಸ ಕಟ್ಟಡದ ಉದ್ಘಾಟನೆಯನ್ನು ಶ್ರೀ ಟಿ. ಎ. ಪೈಯವರು ನೆರವೇರಿಸುತ್ತಾ ಮಾಕೋರ್ವಿಚ್ಸ್‌ರ ಔದಾರ್ಯದ ಮಾದರಿಯನ್ನು ನಾವು ಅನುಸರಿಸುವಂತಾಗಬೇಕೆಂದೂ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಡಲಾದ ಶೈಕ್ಷಣಿಕ ಸೌಕರ್ಯಗಳನ್ನು ಪಡೆದುಕೊಳ್ಳಬೇಕೆಂದೂ ಹೇಳಿದರು. ಮೈಸೂರಿನ ಡಿಪ್ಯುಟಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನರಾದ ಶ್ರೀ ಎಚ್. ಶ್ರೀರಂಗರಾಜರು ವಿದ್ಯುದ್ದೀಪ ಮತ್ತು ರೇಡಿಯೊದ ಉದ್ಘಾಟನೆಗೈಯುತ್ತಾ ಆದರ ಪ್ರಯೋಜನಗಳನ್ನು ವಿವರಿಸಿ ನಾವು ನಮ್ಮ ಹಕ್ಕಿಗೆ ಪ್ರಾಮುಖ್ಯತೆ ಕೊಡದೆ ನಮ್ಮ ಹೊಣೆಗಾರಿಕೆಯನ್ನು ನೆರವೇರಿಸಬೇಕೆಂದೂ ನಮ್ಮ ಕರ್ತವ್ಯವನ್ನು ನಿಷ್ಠೆ ಹಾಗೂ ಪ್ರೀತಿಯಿಂದ ನಿರ್ವಹಿಸಬೇಕೆಂದೂ ಹೇಳಿದರು. ಅಧ್ಯಕ್ಷ ಶ್ರೀ ಕುಲಕರ್ಣಿಯವರು ಮಾಕೋರ್ವಿಚ್ಸ್‌ರ ಭಾವಚಿತ್ರವನ್ನು ಅನಾವರಣ ಮಾಡಿ ಅವರ ಉದಾರ ಸೇವಾಭಾವ ಎಲ್ಲರಲ್ಲೂ ಪ್ರತಿಬಿಂಬಿಸುವಂತಾಗಲೆಂದರು. ಮನೋರಂಜನಾ ಕಾರ್ಯಕ್ರಮಗಳಾದ ಮೇಲೆ ಶ್ರೀ ಬಿ. ಶಂಕರ ಸೆಟ್ಟರು ಧನ್ಯವಾದಗಳನ್ನು ಸಮರ್ಪಿಸಿದರು. ಬೆಳಗ್ಗೆ ಶಿವಳ್ಳಿ ಪಂಚಾಯತಿನ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳು ಧ್ವಜಾರೋಹಣ ಮಾಡಿದ್ದರು.

ಸುರಕ್ಷಿತ ಶಸ್ತ್ರಕ್ರಿಯೆಯ ಸೌಕರ್ಯ— ಮಣಿಪಾಲದ ಕಸ್ತೂರ್ಬಾ ಜನರಲ್ ಹೊಸ್ಪಿಟಲ್‌ಗೆ ಹೃದಯ ಅಥವಾ ದೊಡ್ಡ ರಕ್ತನಾಳಗಳ ಶಸ್ತ್ರಕ್ರಿಯೆಗಳಿಗೆ ಒಳಪಡಿಸುವ ರೋಗಿಯ ದೇಹದ ಉಷ್ಣತೆಯನ್ನು ಆಗತ್ಯವಿರುವ ಉಷ್ಣತೆಗಿಂತ ಹಲವು ಡಿಗ್ರಿಗಳಷ್ಟು ಕಡಿಮೆಗೊಳಿಸಿ ಶಸ್ತ್ರಕ್ರಿಯೆಯನ್ನು ಯಶಸ್ವಿಯಾಗಿ ಮಾಡುವ ಆಧುನಿಕ ಸಲಕರಣೆಯನ್ನು ತರಿಸಲಾಗಿರುವುದಾಗಿ ತಿಳಿದುಬರುತ್ತದೆ.

ಹೃದಯದೊಳಗೆ ಸೂಕ್ಷ್ಮ ತರದ ಶಸ್ತ್ರಕ್ರಿಯೆಯನ್ನು ನಡೆಸುವಾಗ ರಕ್ತದ ಹರಿಯುವಿಕೆಯು ತಾತ್ಕಾಲಿಕವಾಗಿ ನಿಲ್ಲಿಸಲ್ಪಡುವುದರಿಂದ ಮೆದುಳು ಅಥವಾ ನರಮಂಡಲಕ್ಕೆ ಯಾವುದೇ ತರದ ತೊಂದರೆಯುಂಟಾಗುವುದನ್ನು ಈ ಶೀತಲೀಕರಣ ಪದ್ಧತಿಯಿಂದ ತಪ್ಪಿಸಬಹುದಾಗಿದೆ.

ಇಂತಹ ಶಸ್ತ್ರಕ್ರಿಯೆಗಳಲ್ಲಿ ದೇಹದ ಉಷ್ಣತೆಯನ್ನು ಸುಮಾರು 8 ನಿಮಿಷಗಳವರೆಗೆ ಕಡಿಮೆ ಮಾಡಬಹುದು. ವಾಡಿಕೆಯಂತೆ ಹೃದಯದ ಶಸ್ತ್ರಕ್ರಿಯೆಗಳು ಮೂರು ಅಥವಾ ನಾಲ್ಕು ನಿಮಿಷಗಳಲ್ಲಿ ಪೂರ್ಣವಾಗುವುದರಿಂದ ಈ ಉಪಕರಣವು ಹೆಚ್ಚಿನ ಪ್ರಯೋಜನಕಾರಿಯಾಗಬಹುದೆಂದು ನಿರೀಕ್ಷಿಸಲಾಗಿದೆ

ಮಂತ್ರಿ ಡಾ| ನಾಗಪ್ಪ ಆಳ್ವರ ಜಿಲ್ಲಾ ಸಂಚಾರ— ಮೈಸೂರು ಸರಕಾರದ ಆರೋಗ್ಯ ಮಂತ್ರಿಗಳಾದ ಡಾ| ನಾಗಪ್ಪ ಆಳ್ವರು ಇದೇ ತಾ. 12ರಿಂದ ತಾ 19ರ ವರೆಗೆ ದ. ಕ. ಜಿಲ್ಲಾ ಸಂಚಾರವನ್ನು ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಮಡಿಕೇರಿ ಮಾರ್ಗವಾಗಿ ಬರುತ್ತ ಸುಳ್ಯ, ಪುತ್ತೂರು, ಪಾಣೆಮಂಗಳೂರು ಮೊದಲಾದ ಊರುಗಳಲ್ಲಿ ಜನರು ನೀಡಿದ ಹಾರ್ದಿಕ ಸ್ವಾಗತವನ್ನು ಸ್ವೀಕರಿಸಿ ಮಂಗಳೂರಿಗೆ ಬಂದರು. ಮಂಗಳೂರು ಪ್ರವಾಸಿ ಬಂಗಲೆಯಲ್ಲಿ ಅವರನ್ನು ಜಿಲ್ಲಾಧಿಕಾರಿಗಳೂ ಪುರಪ್ರಮುಖರೂ ಎದುರ್ಗೊಂಡು ಸ್ವಾಗತವಿತ್ತರು. ತಾ. 13ರಂದು ಡಾ| ಆಳ್ವರು ಮಂಗಳೂರು ಬಂದರ, ವೆನ್‌ಲೋಕ್ ಆಸ್ಪತ್ರೆ, ಹೆರಿಗೆ ಆಸ್ಪತ್ರೆಗಳನ್ನು ಸಂದರ್ಶಿಸಿ ಮಧ್ಯಾಹ್ನ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಭೇಟಿ ಇತ್ತರು ಸಂಜೆ ಮೂಡುಶೆಡ್ಡೆ ಕ್ಷಯರೋಗ ಸೆನಿಟೋರಿಯಮ್ ಸಂದರ್ಶಿಸಿದರು. ಜಪ್ಪುವಿನ ಜೈ ಹಿಂದ್ ನಾಟಕ ಸಭೆ ಮತ್ತು ನವಭಾರತ ರಾತ್ರಿ ಶಾಲೆಗಳಿಗೆ ಭೇಟಿ ಇತ್ತು ರಾತ್ರಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವತಿಯಿಂದ ಏರ್ಪಡಿಸಲಾದ ಭೋಜನ ಸತ್ಕಾರ ಕೂಟದಲ್ಲಿ ಭಾಗವಹಿಸಿದರು. ಭೋಜನಾನಂತರ ಕಾಲೇಜಿನ ಆಡಳಿತ ಮಂಡಳಿಯ ವತಿಯಿಂದ ಶ್ರೀ ಟಿ. ರಮೇಶ ಪೈಯವರು ಮಾನ್ಯ ಮಂತ್ರಿಗಳನ್ನು ಸ್ವಾಗತಿಸುತ್ತಾ ಕಾಲೇಜಿನ ಪ್ರಗತಿಯ ಸೂಕ್ಷ್ಮ ವಿವರಗಳನ್ನಿತ್ತರು. ಡಾ| ಎ. ಕೃಷ್ಣರಾವ್ ... ಕ್ಕರೆ ಪ್ರಾಮಾಣಿಕತೆ, ಯೋಗ್ಯತೆ ಸೇವೆಗಳನ್ನು ಪ್ರಸ್ತಾಪಿಸಿ ಅವರು ತಡವಾಗಿಯಾದರೂ ಮಂತ್ರಿ ಸ್ಥಾನ ಪಡೆದುದಕ್ಕೆ ಸಂತೋಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದರು. ವೈಸ್ ಪ್ರಿನ್ಸಿಪಾಲ್ ಡಾ| ಎಂ. ವಿ. ಚಾರಿಯವರು ಸಚಿವರನ್ನು ಸ್ವಾಗತಿಸಿ ಕಾಲೇಜು ಆರು ವರ್ಷಗಳಲ್ಲಿ ಸಾಧಿಸಿದ ಅಭಿವೃದ್ಧಿಗಳನ್ನು ವಿವರಿಸಿದರು. ಮಂತ್ರಿ ಆಳ್ವರು ಮಾತನಾಡುತ್ತಾ ವೈದ್ಯಕೀಯ ಶಿಕ್ಷಣದ ಅಭಿವೃದ್ಧಿಯ ಆವಶ್ಯಕತೆಯನ್ನು ಪ್ರಸ್ತಾಪಿಸಿ ಡಾ| ಮಾಧವ ಪೈಯವರು ಸಣ್ಣ ಮಟ್ಟದಲ್ಲಿ ಪ್ರಾರಂಭಿಸಿದ ಈ ಕಾಲೇಜು ಇಂದು ಉನ್ನತ ಮಟ್ಟದ ಉತ್ತಮ ಸಂಸ್ಥೆಯಾಗಿರುವುದೆಂದೂ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳಿಂದ ತಕ್ಕ ಮಂಜೂರಾತಿ ಸಿಕ್ಕಿರುವುದೆಂದೂ ಇದು ಇನ್ನಷ್ಟು ಪ್ರಗತಿ ಹೊಂದಿ ಅತ್ಯಾದರ್ಶ ಸಂಸ್ಥೆಯಾಗಲೆಂದೂ ಯೋಗ್ಯ ಶಿಕ್ಷಕರಿಂದ ಸಮರ್ಥರೂ, ಸುಶಿಕ್ಷಿತರೂ, ಆದ ವೈದ್ಯರನ್ನು ತಯಾರಿಸುವ ಈ ಸಂಸ್ಥೆಯನ್ನು ಪಡೆದಿರುವ ನಮ್ಮ ಜಿಲ್ಲೆಯು ಅಭಿಮಾನಪಡಬೇಕಾಗಿದೆ ಎಂದೂ ಹೇಳಿ ಕಾಲೇಜಿನವರು ತನ್ನನ್ನು ಗೌರವಿಸಿದುದಕ್ಕಾಗಿ ಧನ್ಯವಾದಗಳನ್ನರ್ಪಿಸಿದರು ಅಂತ್ಯದಲ್ಲಿ ಡಾ. ಕೆ. ಪಿ. ಗಣೇಶನ್ ಅವರು ವಂದನೆಗಳನ್ನು ಅರ್ಪಿಸಿದರು.

ತಾ. 14ನೇ ಸಂಜೆ ಮಂತ್ರಿಗಳು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ವ್ಯಕ್ತಿಗಿಂತ ಸಂಸ್ಥೆ ಮೇಲೆಂದು ತಿಳಿದು ಎಲ್ಲರೂ ಪಕ್ಷವನ್ನು ಬಲಪಡಿಸುವುದು ಅತ್ಯಾವಶ್ಯಕವೆಂದರು. ಜಿಲ್ಲಾ ಕಾಂಗ್ರೆಸಿಗೆ ಒಂದು ಸ್ವಂತ ಕಟ್ಟಡ ರಚನೆಯ ಪ್ರಯತ್ನ ನಡೆಯಬೇಕಾದುದು ಸೂಕ್ತವೆಂದರು. ಆರಂಭದಲ್ಲಿ ಜಿಲ್ಲಾ ಕಾಂಗ್ರೆಸಿನ ಉಪಾಧ್ಯಕ್ಷ ಶ್ರೀ ಕೆ.ಕೆ. ಶೆಟ್ಟಿ ಎಂ. ಎಲ್. ಸಿ. ಯವರು ಸ್ವಾಗತಿಸಿ ಅಂತ್ಯದಲ್ಲಿ ಧನ್ಯವಾದಗಳನಿತ್ತರು.

ದಿಲ್ಲಿ ಕರ್ನಾಟಕ ಸಂಘ—ಇದರ ಸಾಂಸ್ಕೃತಿಕ ಕಾರ್ಯಕ್ರಮವು ತಾರೀಕು 15—4—62ರಂದು ಮೈಸೂರಿನ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ ಎಂ. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಬಿ. ಕೃಷ್ಣಾನಂದ ಹೆಗ್ಡೆಯವರು ಬರೆದ ಸ್ಮಾರಕ ಸಂಚಿಕೆಯೊಂದನ್ನು ಪ್ರಕಟಿಸಲಾಯಿತು.

ರಾಷ್ಟ್ರೀಯ ಸಿಡುಬುರೋಗ ನಿರ್ಮೂಲನಾ ಯೋಜನೆ—ಯಂತೆ ಉಡುಪಿ ನಗರ ಸಭಾ ಕ್ಷೇತ್ರದಲ್ಲಿ ತಾರೀಕು 18—4—62ರಿಂದ ಸಿಡುಬು ಪ್ರತಿಬಂಧಕ ದಾಕುಹಾಕುವ ಕಾರ್ಯಕ್ರಮವು 3-5-62ರ ವರೆಗೆ ನಡೆಯಲಿದೆ. ಸಾರ್ವಜನಿಕ ಆರೋಗ್ಯ ಇಲಾಖೆಯ ಅಂಗವಾದ ಈ ಯೋಜನೆಯವರು ನುರಿತ ಆರೋಗ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ದಾಕುಹಾಕುವ ದಕ್ಷ ಸಿಬಂಧಿಗಳು ಮನೆ ಮನೆಗೂ ಬಂದು ದಾಕು ಹಾಕುತ್ತಾರೆಂದೂ ಸರ್ವರೂ ದಾಕು ಹಾಕಿಸಿಕೊಂಡು ಈ ರೋಗ ಪ್ರತಿಬಂಧಕ ಕಾರ್ಯದಲ್ಲಿ ಸಹಕರಿಸಬೇಕೆಂದೂ ಉಡುಪಿ ಮುನಿಸಿಪಾಲಿಟಿಯ ಕಮಿಶನರ್ ಶ್ರೀ ಎ. ಜೋಶುವಾರವರು ವಿನಂತಿಸುತ್ತಾರೆ.

ಜಗತ್ಪರ್ಯಟನ

ಸಂಪುಟ ರಚಕ—ನೆಹರು

ತನ್ನ ಮಂತ್ರಿ ಮಂಡಳ ರಚಿಸುವಲ್ಲಿ ಪ್ರಧಾನಿ ನೆಹರು ಬಹಳಷ್ಟು ಯೋಚನೆಯನ್ನು ಮಾಡುತಿದ್ದಾರೆ. ಇದು ವರೆಗೆ ಅವರು ೧೭ ಕ್ಯಾಬಿನೆಟ್ ಮಟ್ಟದ, ೯ ರಾಜ್ಯ ಮಟ್ಟದ ಮತ್ತು ೧೧ ಉಪ ಮಂತ್ರಿಗಳನ್ನು ಮಾತ್ರ ಆರಿಸಿಕೊಂಡಿದ್ದಾರೆ. ಹಿಂದಿನ ಬಾರಿ ಎಲ್ಲರೂ ಸೇರಿ ಸಂಖ್ಯೆಯಲ್ಲಿ ೪೭ ಜನ ಮಂತ್ರಿಗಳಿದ್ದರು. ಇಂದವರ ಸಂಖ್ಯೆ ಕೇವಲ ೩೭. ಇವರಲ್ಲಿ ಸಿ. ಸುಬ್ರಹ್ಮಣ್ಯಂ ಮತ್ತು ಡಾ| ಸುಶೀಲಾ ನಾಯರರನ್ನುಳಿದರೆ ಉಳಿದವರೆಲ್ಲರೂ ಹಳೆಯವರೇ. ಹೊಸ ರಕ್ತಕ್ಕೆ ಅವಕಾಶ ಕಲ್ಪಿಸುವ ಇಂಗಿತವಿರುವ ನೆಹರೂರವರು ಜೂನ್ ಜುಲೈ ಸಮಯದಲ್ಲಿ ಹೆಚ್ಚಿನ ಸದಸ್ಯರನ್ನು ಆರಿಸಿಕೊಳ್ಳಲಿರುವರೆಂದು ತಿಳಿಯುತ್ತದೆ. ಆಗ ಹೊಸ ರಕ್ತದ ಪ್ರವೇಶಕ್ಕೆ ಪ್ರಾಧಾನ್ಯ ನೀಡಲಾಗುವುದೆಂದು ನಿರೀಕ್ಷಿಸಬಹುದು.

ಮನೂಭಾಯಿ ಶಹ

ಕೇಂದ್ರ ಸರಕಾರದ ವಾಣಿಜ್ಯೋದ್ಯಮ ಶಾಖೆಯಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ಸಂಬಂಧದ ರಾಜ್ಯ ಮಂತ್ರಿಯಾಗಿ ನಿಯುಕ್ತರಾದ ಮನೂಭಾಯಿ ಶಹ ಮೊದಲು ಅದಕ್ಕೆ ಒಪ್ಪದಿದ್ದರೂ ಪ್ರಧಾನಿಯವರು ನೀಡಿದ ಸಮಾಧಾನದಿಂದ ತೃಪ್ತರಾದರು. ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಅಂತಾರಾಷ್ಟ್ರೀಯ ವ್ಯಾಪಾರವು ಪ್ರಧಾನ ಸ್ಥಾನವನ್ನು ಪಡೆಯುವುದರಿಂದ, ಅಂತಹ ಗುರುತರ ಜವಾಬ್ದಾರಿ ಹೊರುವ ಶಕ್ತಿ ತನ್ನಲ್ಲಿಲ್ಲವೆಂದವರು ವಿನಯದಿಂದ ತೋಡಿಕೊಂಡರು. ಆದರೆ, ಕೊನೆಗೆ ಆ ಪದವನ್ನು ಸ್ವೀಕರಿಸಿದುದರಿಂದ ಪ್ರತಿಜ್ಞಾವಿಧಿಯನ್ನೂ ಇತರರೊಡನೆ ತೀರಿಸಿಕೊಂಡರು ಎದ್ದ ಕುತೂಹಲ ಅಲ್ಲಿಯೇ ತಣ್ಣಗಾಯಿತು.

ಜಯಚಾಮ ರಾಜ

ಕರ್ನಾಟಕ ರಾಜ್ಯಕ್ಕೆ ಮೈಸೂರಿನ ಮಹಾ ರಾಜ ಜಯಚಾಮ ರಾಜರು ರಾಜ್ಯಪಾಲರಾಗಿ ಮುಂದುವರಿಯುವಂತೆ ರಾಷ್ಟ್ರಪತಿಗಳು ಕೇಳಿಕೊಂಡರೂ ಅವರದನ್ನು ವಿನಯದಿಂದ ನಿರಾಕರಿಸಿರುವುದಾಗಿ ತಿಳಿಯುತ್ತದೆ. ರಾಜ್ಯದ ಕೆಲವೆಡೆಯೂ ಅವರ ಮುಂದುವರಿಕೆಯ ಬಗ್ಗೆ ಭಿನ್ನಾಭಿಪ್ರಾಯವು ಹುಟ್ಟಿರುವುದೂ ಈ ನಿರಾಕರಣೆಗೆ ಕಾರಣವಿರಬಹುದು. ಸದ್ಯವೇ ವಿದೇಶ ಸಂಚಾರ ಮಾಡಲಿರುವ ಜಯಚಾಮ ರಾಜರು ಮರಳಿದ ಬಳಿಕ, ಕರ್ನಾಟಕದ ರಾಜ್ಯಪಾಲರಾಗಿ ಅವರ ಸ್ಥಾನದಲ್ಲಿ ಶ್ರೀ ವಿಜಯಲಕ್ಷ್ಮಿ ಪಂಡಿತರು ನಿಯುಕ್ತರಾಗುವುದು ಹೆಚ್ಚು ಸಂಭವನೀಯವೆಂದು ತೋರುತ್ತದೆ

ಡಾ| ಬಿ. ಸಿ. ರಾಯ್

ರಾಜ್ಯದ ಮುಖ್ಯಮಂತ್ರಿಗಳೆಲ್ಲರೂ ಒಂದು ತೆರವಾದರೆ ಬಂಗಾಳದ ಬಿ. ಸಿ. ರಾಯ್ ಇನ್ನೊಂದು ತೆರ. ಕಮ್ಯುನಿಷ್ಟರ ಪ್ರಾಬಲ್ಯವು ದಿನದಿಂದ ದಿನಕ್ಕೆ ಅಲ್ಲಿ ಇಳಿಯುತ್ತ ಬರುವುದಕ್ಕೆ ಇವರ ಸಮರ್ಥ ನಾಯಕತ್ವವೇ ಕಾರಣ. ಮಂತ್ರಿ ಮಂಡಳಿಯ ರಚನೆಯಲ್ಲಿ ವರಿಷ್ಟ ಸಹಾಯವನ್ನು ಪಡೆದೂ ಕಾರ್ಯದಲ್ಲಿ ಅಸಫಲರಾದ ಮುಖ್ಯಮಂತ್ರಿಗಳು ಕೆಲವಡೆ ಇದ್ದರೆ, ಬಿ. ಸಿ. ರಾಯ್ ಅಸಹಾಯಕ ಶೂರರಂತೆ ಯಾರ ಸಲಹೆಯನ್ನೂ ಪಡೆಯಲಿಲ್ಲ. ಸುಪ್ರಸಿದ್ಧ ವೈದ್ಯರಾಗಿ, ನೆಹರೂ ಸಂಪೂರ್ಣ ಆರೋಗ್ಯವಂತರಿರುವರೆಂದು ಸಾರಿದ ಇವರು ರಾಜಕೀಯ ಖಾಯಿಲೆಗಳಿಗೂ ಮದ್ದೀಯಬಲ್ಲ ನಿಸ್ಸೀಮರು.

ಕನ್ನಡ ಪುಸ್ತಕಗಳಿಗೆ—
ಮತ್ತು
ಕಥೆಕಾದಂಬರಿ ಇತ್ಯಾದಿಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ]

ಸಾಂಖ್ಯ ಶಬ್ದಮಂಜರೀ—(೧ರಿಂದ ೧೦ರ ತನಕ) ಸಂಗ್ರಹಕರ್ತರು ಮತ್ತು ಪ್ರಕಾಶಕರು: ಡಾ| ಐ. ಕೆ. ಪಿ. ಶರ್ಮಾ, ಮಂಗಳೂರು, ೬. ಪುಟಗಳು ೭೭. ಬೆಲೆ: ರೂ. ೦—೫೦.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸಂಖ್ಯೆಗಳ ಸ್ಥಾನ ವಿಶೇಷವಾದುದು. ಆದುದರಿಂದಲೇ ಶಾಸ್ತ್ರಜ್ಞರು ಲೌಕಿಕ, ವೈದಿಕ ವಾಙ್ಮಯದಲ್ಲಿ ಬರುವ ಅನೇಕ ಅಸಾಧಾರಣ ಶಬ್ದಗಳನ್ನು ಸಂಖ್ಯೆಯ ಸಂಜ್ಞೆಯಿಂದಲೇ ನಿರೂಪಿಸುವ ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾರೆ. ನಮ್ಮ ಧಾರ್ಮಿಕ ಹಾಗೂ ಲೌಕಿಕ ಸಾಹಿತ್ಯದಲ್ಲಿ ಎದ್ದುತೋರುವ ಸಾಂಖ್ಯ ಸಂಜ್ಞೆಗಳ ವಿವರವನ್ನು ತಿಳಿಯದೆ, ಸಾಹಿತ್ಯ ಮನನವಾಗುವಂತಿಲ್ಲ ಈ ಕಾರಣದಿಂದ ಇವುಗಳನ್ನು ಕನ್ನಡಿಗರಿಗೆ ಸರಳವಾಗಿ ತಿಳಿಯುವಂತೆ ಏಕದಿಂದ ದಶದ ವರೆಗಿನ ಶಬ್ದಮಂಜರಿಯನ್ನು (ಒಟ್ಟು ೬೦೪ ಶಬ್ದಸಂಕೇತಗಳು ಅಂದರೆ, ೩,೪೪೫ ಬಿಡಿ ಶಬ್ದಗಳನ್ನು) ಸಂಗ್ರಹಿಸಿ ವಿದ್ಯಾರ್ಥಿಗಳಿಂದ ಹಿಡಿದು ಪಂಡಿತೋತ್ತಮರ ವರೆಗೂ ಉಪಯುಕ್ತವಾಗುವಂತೆ ಪ್ರಕಾಶಿಸಿ, ಡಾ| ಶರ್ಮಾ ಅವರು ಸತ್ಸಾಹಸವನ್ನು ತೋರಿಸಿದ್ದಾರೆ. ಮುನ್ನುಡಿಕಾರ ಶ್ರೀ ಆದಿದೇವಾನಂದರು ಆಶಿಸುವಂತೆ ಈ ಮಂಜರಿಯು ನೂರರ ಸಂಕೇತ ಶಬ್ದಗಗಳನ್ನೂ ಮುಟ್ಟುವಂತೆ ಅವರನ್ನು ಕನ್ನಡಿಗರು ಪ್ರೋತ್ಸಾಹಿಸುವುದು ಅಗತ್ಯವಿದೆ. ಈ ಗ್ರಂಥ ರಚನೆಯ ಕ್ರಮವನ್ನು ತಿಳಿಯಲು ಒಂದು ಉದ್ಧರಣೆಯನ್ನು ಉಲ್ಲೇಖಿಸಬಹುದು.

ನರಕದ್ವಾರತ್ರಯ—ಕಾಮ, ಕ್ರೋಧ, ಲೋಭ (ಗೀತಾ)"

ಸಂಕೇತಗಳ ಉಲ್ಲೇಖವು ಯಾವ ಗ್ರಂಥದಲ್ಲಿ ಬಂದಿದೆಯೆಂಬುದನ್ನೂ ಅಲ್ಲಲ್ಲಿ ಬಿಡಿ ಶಬ್ದಗಳ ಅರ್ಥ ವಿವರಣೆಯನ್ನೂ ನೀಡಿರುವುದು ಈ ಮಂಜರಿಯ ವೈಶಿಷ್ಟ್ಯ.

ಅಶ್ರು ("ಆಂಸೂ" ಕಾವ್ಯದ ಕನ್ನಡ ಭಾವಾನುವಾದ)— ಅನುವಾದಕರು: "ನಾಣಿ". ಪ್ರಕಾಶಕರು: ಶ್ರೀ ರಾಘವೇಂದ್ರ ಪ್ರೆಸ್, ತುಮಕೂರು. ಪುಟಗಳು: ೪೦ ಬೆಲೆ: ರೂ. ೦—೫೦.

ಆಧುನಿಕ ಹಿಂದೀ ಸಾಹಿತ್ಯ ಸಾಮ್ರಾಟರೆನಿಸಿದ ಶ್ರಿ ಜೈಶಂಕರ ಪ್ರಸಾದರು ಸಾಹಿತ್ಯದ ಸರ್ವ ಪ್ರಕಾರಗಳಲ್ಲಿಯೂ ಪಳಗಿದವರು. ಅವರ ಸುಪ್ರಸಿದ್ಧ ಖಂಡಕಾವ್ಯ (?) 'ಆಂಸೂ'ವಿನ ಕನ್ನಡ ಭಾವಾನುವಾದವನ್ನು 'ಅಶ್ರು'ವೆಂಬ ಹೆಸರಿನಿಂದ ಪಂಡಿತ ಮಾಲೂರು ವೆಂಕಟರಾವ್‌ನಾರಾಯಣ ರಾವ್ ಅವರು ಮಾಡಿದ್ದಾರೆ. ಹಿಂದೀ ಪದ್ಯಕಾವ್ಯಗಳಲ್ಲಿ ತನ್ನ ಸ್ಥಾನವನ್ನು ಪಡೆದಿರುವ ಆಂಸೂವಿನ ಸರ್ವಗುಣಗಳನ್ನೂ, ಭಾವಗಳನ್ನೂ ಉಳಿಸಿಕೊಳ್ಳಲು ಅನುವಾದಕರು ಪ್ರಯತ್ನಿಸಿದ್ದಾರೆ. ವಿಪ್ರಲಂಭ ಶೃಂಗಾರವೇ ಇಲ್ಲಿನ ಪ್ರಧಾನ ರಸ. ಆಲಂಗನ ವಿಭಾವವು ಪ್ರೇಯಸಿಯಿರಬಹುದು; ಪರಮಾತ್ಮನೂ ಇರಬಹುದು. ಕಾಲಿದಾಸದ ಮೇಘ ಸಂದೇಶದಂತೆ ಭಾವನಾ ಪ್ರಧಾನವಾದ ಈ ಕಾವ್ಯದ ಅನುವಾದವು ಕ್ಲಿಷ್ಟವೆನಿಸಿದರೂ ಶ್ರೀ ನಾಣಿಯವರು ತಮ್ಮ ಚಿರಂತನಾಭ್ಯಾಸದಿಂದ ಅದನ್ನು ಸರಳವಾಗಿಸಿ ಕನ್ನಡಿಗರಿಗೂ ಆ ನುಂಡ.ಂಡ ಕಾವ್ಯ ರಸಾಮೃತವನ್ನು ಉಣಿಸುವಲ್ಲಿ ಕೃತಕೃತ್ಯರಾಗಿದ್ದಾರೆ. ಅನುವಾದಕರು ಮೂಲದ ಗುಣ, ಅಲಂಕಾರ. ಭಾವವೆಲ್ಲವನ್ನೂ ಕನ್ನಡದ ಚೆಲುನುಡಿಯಲ್ಲಿ ಅಳವಡಿಸುವ ಪ್ರಯತ್ನದಲ್ಲಿ ಹೆಚ್ಚಿನೆಡೆ ಯಶಸ್ವಿಯಾಗಿದ್ದಾರೆ. ಕೈ ಪಳಗಿದಂತೆ ಇವರ ರಚನೆಯು ಮತ್ತಷ್ಟು ಪ್ರಭಾವಕಾರಿಯಾಗುವುದೆಂದು ಹೇಳಬಹುದು.

ಸಾದರ ಸ್ವೀಕಾರ

ಶುಭಕೃತ್ ಸಂವತ್ಸರದ ಈ ಕೆಳಗಿನ ಪಂಚಾಂಗಗಳನ್ನು ಸ್ವೀಕರಿಸುತ್ತೇವೆ.

೧. **ಶಾಸ್ತ್ರಸಿದ್ಧ ಶ್ರೀಕೃಷ್ಣ ಪಂಚಾಂಗ**— ಸಂಪಾದಕರು: ಕರಿಂಕ ಕೃಷ್ಣ ಬನ್ನಿಂತಾಯ ಮತ್ತು ಮರಕೂರು ರಾಮಚಂದ್ರಾಚಾರ್ಯ, ವಿಟ್ಲ ಪೋಸ್ಟ್. ಪರಿಶೋಧಕರು: ಯಮ್ಮಂಜ ಶಂಕರ ಜೋಯಿಸರು. ಬೆಲೆ: ರೂ. ೦—೫೦

೨. **ಶುಭಕೃತ್ ಸಂವತ್ಸರದ ಪಂಚಾಂಗ**— ಪಂಡಿತ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಇವರಿಂದ ಗಣಿಸಿ ಪರಿಶೋಧಿತ. ಪ್ರಕಾಶಕರು: ಸುಜ್ಞಾನಾಮೃತ ಕಾರ್ಯಾಲಯ, ಎಲ್ಲೂರು. ಬೆಲೆ: ರೂ. ೦—೫೦.

೩. **ಸುರಪುರದ ಶ್ರೀ ಭುವನೇಶ್ವರೀ ಪಂಚಾಂಗ**— ಕರ್ತರು: ಶ್ರೀಶೇಷ ಶಾಸ್ತ್ರೀ. ಪ್ರಕಾಶಕರು: ಆರ್ಯ ವೈಶ್ಯ ಸಂಘ, ರಂಗಂ ಪೇಟೆ, ಸುರಪುರ. ಬೆಲೆ: ರೂ. ೧—೦೦.

ಮೊದಲನೆಯದರಲ್ಲಿ ಎಂದಿನಂತೆ ಗ್ರಹಣ ಮೌಢ್ಯಾದಿಗಳನ್ನಲ್ಲದೆ ತಿಥಿ ನಕ್ಷತ್ರಾದಿ ಗಣನೆಯಲ್ಲೂ ನೂತನ ದೃಗ್ಗಣಿತ ಸಿದ್ಧಾಂತವನ್ನೇ ಉಪಯೋಗಿಸಿರುವುದರಿಂದ ಅತ್ಯಾಧುನಿಕ ರೀತಿಯ ಪಂಚಾಂಗವೆಂದಿದು ಹೆಸರು ಪಡೆದಿದೆ. ದ್ವಾದಶ ರಾಶಿಯ ವರ್ಷಭವಿಷ್ಯವೂ ಇದರಲ್ಲಿದೆ. ಎರಡನೆಯದರಲ್ಲಿ ೧೦೫ ವರ್ಷಗಳ ಕೆಲೆಂಡರ್ ಇರುವುದೊಂದು ವೈಶಿಷ್ಟ್ಯ. ಮೂರನೆಯದು ಸುವಿಸ್ತೃತವಾದ ದ್ವಾದಶ ರಾಶಿಯವರ ವರ್ಷಭವಿಷ್ಯ, ಭಾರತ ಹಾಗೂ ಪಾಕಿಸ್ತಾನ, ಚೀನ, ಅಮೇರಿಕೆ ಮೊದಲಾದ ಜಗತ್ತಿನ ಇತರ ಹಲವು ರಾಷ್ಟ್ರಗಳ ಭವಿಷ್ಯಗಳಿಂದಲೂ ಕೂಡಿದೆ. ನಿತ್ಯೋಪಯೋಗಕ್ಕೆ ಅವಶ್ಯಕವಾದ ಇತರ ಎಲ್ಲ ಪಂಚಾಂಗ ವಿಷಯಗಳಿಂದ ಕೂಡಿರುವ ಈ ಪಂಚಾಂಗಗಳು ಧಾರ್ಮಿಕರಿಗೆ ಉಪಯುಕ್ತವೆನಿಸಬಲ್ಲವು. ಹಲವಾರು ವರ್ಷಗಳಿಂದಲೂ ಪಂಚಾಂಗ ರಚನೆ ಮಾಡುತ್ತ ಬರುತ್ತಿರುವ ಈ ಎಲ್ಲ ಜ್ಯೋತಿಷ್ಕರನ್ನು ಅಭಿನಂದಿಸುತ್ತೇವೆ. —ಗೋರಾ.

ಕವಲು ದಾರಿ—ಕೆಂಪು ದೀಪ

(೫ನೇ ಪುಟದಿಂದ)

ದೊಂದು ಗರ್ಭಿಣಿ ದನವನ್ನು ದಿನನಿತ್ಯ ಇಲ್ಲಿ ತರಲಾಗುತ್ತಿದೆ. ಅದನ್ನು ಕೊಯ್ದು ಅದರೊಳಗಿನ ಕರುವನ್ನು ಹೊರ ತೆಗೆಯಲಾಗುತ್ತಿದೆ. ಅದನ್ನೇ ಕರಿದು ನೆಹರೂ ಅವರಿಗೆ ಬಡಿಸಲಾಗುತ್ತಿದೆ. ಎಂತಹ ಪ್ರಚಾರ!

ಭಾಷೆಯ ದುರ್ವ್ಯಾಮೋಹವಿಲ್ಲದ ಸರಕಾರ ನಮ್ಮದು. ಬಂದಿದ್ದೀರೇನು ಬೆಂಗಳೂರಿಗೆ? ಬಂದಿದ್ದೀರೇನು ಮಂಗಳೂರಿಗೆ? ಬಂದಿದ್ದೀರೇನು? ಕಾರವಾರ, ಹುಬ್ಬಳ್ಳಿ, ಬೆಳಗಾಂವಿಗೆ? ಕಂಡಿದ್ದೀರೇನು ಕನ್ನಡವನ್ನು? ಕೇಳಿದ್ದೀರೇನು ಚೆಲುಗನ್ನಡವನ್ನು? ತಮಿಳು, ತೆಲುಗು, ಮರಾಠಿ, ಮಲೆಯಾಳ ರಾಜ್ಯದ ತುಂಬ ಹರಡಿದೆಯೇ? ಕನ್ನಡ? ಎಲ್ಲಿದೆ ಕನ್ನಡದಲ್ಲಿ? ಇದು ಕನ್ನಡ ನುಡಿಯ ದುರ್ದೆಶೆಯ ಜೀವಂತ ಸಾಕ್ಷಿ. ನಮ್ಮ ಸೌಹಾರ್ದತೆಯ, ಭಾಷಾತೀತ ಭಾವನೆಯ ಜೀವಂತ ಸಂಕೇತ. ಕಾಸರಗೋಡು ಹೋಯಿತೆಂದು ಅಳಬೇಕಾಗಿಲ್ಲ ಆಲೂರು, ರಾಯದುರ್ಗ ಕೈಬಿಟ್ಟಿತೆಂದು ಕೊರಗಬೇಕಾಗಿಲ್ಲ. ಕಾರವಾರ, ಬೆಳಗಾಂವ್ ಹೋದರೂ ಪರವಾಯಿಲ್ಲ. ನಾವೆಲ್ಲ ಭಾರತೀಯರು. ವಿಶ್ವಬಾಂಧವ್ಯದ ವಿಶಾಲ ಮಮತೆಯ ಉದಾರತೆ ನಮ್ಮದು! ತಮಿಳರಿಗೆ ಸುಸ್ವಾಗತ. ಮರಾಠಿಗರಿಗೆ ಬಾಗಿಸುವೆ ಶಿರವ ತೆಲುಗರಂತೂ ನಮ್ಮವರೆ ಬಿಡಿ! ಇನ್ನು ಕೇರಳಿಗರು, ಸವಿಮಾತಿನವರು. ನಾವು — ಕನ್ನಡಿಗರು? ಹುತಾತ್ಮರು!

ಮಾದರಿ ಸರಕಾರ ನಮ್ಮದು. ಬೆಳಗಾಂವು ಕಾರವಾರಕ್ಕೆ ಒಂದು ಮುಖ ಗುಲ್ಬರ್ಗ ಬಿಜಾಪುರಕ್ಕೆ ಇನ್ನೊಂದು ಮುಖ. ಬೆಂಗಳೂರು ಮೈಸೂರಿಗೆ ಮತ್ತೊಂದು ಮುಖ. ಕೊಡಗಿಗೆ ಬೇರೆಯೇ ಒಂದು ಮುಖ ದಕ್ಷಿಣ ಕನ್ನಡಕ್ಕೆ ಪ್ರತ್ಯೇಕ ಮುಖ ಪಂಚಮುಖಿ ಸರಕಾರ ನಮ್ಮದು ನಾವೆಲ್ಲರೂ ಕನ್ನಡಿಗರು. ಆಡುವ ಮಾತು ಬೇರೆ ಮಾಡುವ ನೀತಿ ಬೇರೆ. ಆದರೂ ನಾವು ಕನ್ನಡಿಗರು. ಎರಡೂವರೆ ಕೋಟಿ ಕನ್ನಡಿಗರು, ಎಣಿಕೆಗೆ ಒಬ್ಬರೂ ಎಣಿಕೆಗೆ ನಿಲುಕರು! ಅಳಿದು ಹೋಯಿತೇ ಕನ್ನಡ? ಎಂದು ಪ್ರಶ್ನಿಸುವವರೂ ಇದ್ದಾರೆ. ಇಂತಹ ಮೂರ್ಖ ಪ್ರಶ್ನೆಯನ್ನು ಉತ್ತರಿಸಲು ನಾವಿನ್ನೂ ಕನ್ನಡಕ್ಕೆ ಒಲಿದಿಲ್ಲ ಎನ್ನುವ ಭಾಷಾ ಪ್ರೇಮಿಗಳೂ ಇದ್ದಾರೆ, ಮಾದರಿ ಮೈಸೂರಿನಲ್ಲಿ.

ತಮಿಳರು ಎಲ್ಲಿದ್ದರೂ ತಮಿಳನ್ನೇ ಆಡುತ್ತಾರೆ. ಕೇರಳೀಯರಿಗೆ ತಮ್ಮ ಭಾಷೆಯೇ ವಿಶೇಷತಃ ರುಚಿಸುತ್ತದೆ. ಮರಾಟಿಗರಂತೂ ಮರಾಠಿಯ ಹೊರತು ಬೇರೇನೂ ಬೇಡವೆನ್ನುತ್ತಾರೆ. ಆದರೆ ನಾವು—ಕನ್ನಡಿಗರು? ಕನ್ನಡ ಒಂದನ್ನು ಬಿಟ್ಟು ಉಳಿದುದೆಲ್ಲಾ ಇರಲಿ ಎನ್ನುತ್ತೇವೆ. ಅಷ್ಟು ವಿಶಾಲ ಹೃದಯ ನಮ್ಮದು? ಅಷ್ಟು ಕನ್ನಡದ ಅಭಿಮಾನ ನಮ್ಮದು? ಇದನ್ನೆಲ್ಲಾ ಕಣ್ಣಾರೆ ಕಾಣುವ ಕುತೂಹಲವೇ? ಬನ್ನಿ ಮೈಸೂರಿಗೆ ಬನ್ನಿ ಮಾದರಿ ಮೈಸೂರಿಗೆ.

ಅನಭಿವೃದ್ಧ ರಾಷ್ಟ್ರಗಳ ಅಭಿವೃದ್ಧಿಗಾಗಿ ಅಮೇರಿಕೆಯು ಉದಾರ ರೀತಿಯಲ್ಲಿ ಸಾಲಗಳನ್ನೂ ಸಹಾಯವನ್ನೂ ನೀಡುತ್ತಿದೆ. ಸರಕಾರದ ಈ ವಿಭಾಗಕ್ಕೆ ಮುಖ್ಯಸ್ಥರನ್ನಾಗಿ ಅಧ್ಯಕ್ಷ ಕೆನ್ನಡಿಯವರಿಂದ ನಾಮಕರಣಗೊಂಡ ಫೊಲ್ಲರ್ ಹೆಮಿಲ್ಟನ್.

ಕೃಷ್ಣ ಮೆನನ್ನರು ಭಾರತದಲ್ಲಿ ಮನೆ ಮಾತಾಗಿದ್ದಾರೆ.

ಅವರ ಆರಂಭದ ಜೀವನ, ಇಂಗ್ಲೆಂಡಿನಲ್ಲಿ ಕಳೆದ ಜೀವನ, ನೆಹರೂ ಮತ್ತು ಮೆನನ್, ಗೋವಾ ಮತ್ತು ಮೆನನ್, ರಾಜಕೀಯ ಆಧ್ಯಾತ್ಮಿಕಗಳ ನಡುವೆ ನಮ್ಮ ರಕ್ಷಣಾ ಮಂತ್ರಿ ಮೆನನ್,

ಇವೆಲ್ಲವುಗಳ ಜೊತೆಗೆ ಪ್ರಧಾನಿ ನೆಹರೂ ಅವರ ಅಭಿಪ್ರಾಯ.

ಎಪ್ರಿಲ್ ತಿಂಗಳ **ತಾಯಿ ನುಡಿ** ವಿಶೇಷ ಸಂಚಿಕೆಯಲ್ಲಿ

ಸರ್ವಶ್ರೀ ವ್ಯಾಸರಾಯ ಬಲ್ಲಾಳ, ಬಲರಾಜ ಸಹಾನಿ, ಕೆ. ಎ. ಅಬ್ಬಾಸ್, ಶ್ರೀನಿವಾಸ ಹಾವನೂರ, ನಿರಂಜನ, ರಾಮಚಂದ್ರ ಉಚ್ಚಿಲ್, ಕುಲಮರ್ವ ಬಾಲಕೃಷ್ಣ, ಸಿ. ಯಂ. ಕುಲಕರ್ಣಿ, ಭೋಜರಾಜ ಶೆಟ್ಟಿ, ವೆಂಕಟರಾಜ ಪಾನಸೆ, ಸಿ. ಆರ್. ರಾವ್, ಶಮ್‌ಸುದ್ದೀನ್, ಅನಂತರಾಮ ಯೇತಡ್ಕ ಹಾಗೂ ಇತರ ಹಿರಿಯ ಕಿರಿಯ ಲೇಖಕರ ಬರೆಹಗಳು.

ರೂ. 3-50 ನ.ಪೈ. ಕಳಿಸಿ ಚಂದಾದಾರರಾಗುವವರಿಗೆ ಈ ವಿಶೇಷ ಸಂಚಿಕೆಯನ್ನು ಉಚಿತವಾಗಿ ಕಳಿಸಲಾಗುವುದು. ಬಿಡಿ ಪ್ರತಿ ಬೇಕಾದವರು 75 ನ ಪೈಸೆ ಕಳಿಸಬೇಕು.

ಜಾಹಿರಾತು ದರ, ಇತರ ಮಾಹಿತಿಗಳಿಗೆ ಬರೆಯಿರಿ:

Business Manager, **Tainudi**
Prospect Building, 321, Frere Road, Fort, Bombay.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ನವಯುಗ'ಕ್ಕೆ

ಚಂದಾದಾರರಾಗಿ

ಪ್ರೋತ್ಸಾಹಿಸಿರಿ

ಕರ್ನಾಟಕ ರಾಜ್ಯದಲ್ಲಿ

ಮಂತ್ರಿಮಂಡಳ ವಿಸ್ತರಣೆಯಿಲ್ಲ

ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಸಂಜೀವಯ್ಯನವರನ್ನು ತನ್ನ ಮಂತ್ರಿ ಮಂಡಳದಲ್ಲಿ ಸೇರುವಂತೆ ಮನವೊಲ್ಪಿಸಲು ಅಸಮರ್ಥರಾದ ಆಂಧ್ರದ ಸದ್ಯ ಮುಖ್ಯ ಮಂತ್ರಿ ಹಾಗೂ ಕಾಂಗ್ರೆಸ್ ಅಧ್ಯಕ್ಷ ಸಂಜೀವ ರೆಡ್ಡಿಯವರು ತನಗೆ ಮನಸ್ಸಿಲ್ಲದಿದ್ದರೂ ಕಾಂಗ್ರೆಸ್ ವರಿಷ್ಠರ ಒತ್ತಾಯದಿಂದಾಗಿ ಬೆಂಗಳೂರಿಗೆ ಬಂದರು ಅವರ ಆಗಮನದ ಮುಖ್ಯೋದ್ದೇಶ ಕರ್ನಾಟಕದ ಮಂತ್ರಿ ಮಂಡಳಿಯ ವಿಸ್ತರಣೆಯಲ್ಲಿ ತಲೆದೋರಿದ ಜತ್ತಿ-ನಿಜಲಿಂಗಪ್ಪನವರ ಜಂಟಿ ಕಾಳಗವೇ ಕಾರಣವೆಂದೂ ಅವರ ರಾಯಭಾರಿತನವು ನಿರರ್ಥಕವಾಗುವುದೆಂದೂ ಮೊದಲೇ ತಿಳಿಯಲಾಗಿತ್ತು ಅವರು ಬಂದುದರಿಂದ ಸಂಭವಿಸಿದ ಪರಿಣಾಮವಾದರೂ ಇದರಿಂದ ಭಿನ್ನವಾಗಿಲ್ಲ.

ಕರ್ನಾಟಕದಲ್ಲಿ ಸರಕಾರ ರಚಿಸಿದ ಕಂರಿಯವರು ತನ್ನ ಆಯ್ಕೆ ನಡೆದಾಗಲೇ ತನ್ನದು ತಾತ್ಕಾಲಿಕ ನಾಯಕತ್ವವೆಂಬುದನ್ನು ಪರ್ಯಾಯವಾಗಿ ವ್ಯಕ್ತಪಡಿಸಿದ್ದಾರೆ. ಇದರಿಂದಾಗಿ ಕಂರಿಯವರ ಮಂತ್ರಿ ಮಂಡಳಿಯಾದರೂ ಕೇವಲ ತಾತ್ಕಾಲಿಕವೆಂಬ ಅಭಿಪ್ರಾಯವು ಜನತೆಯಲ್ಲಿ ಮೂಡಿತ್ತು ತನ್ನ ಮಂಡಳಿಯ ಕೆಲವು ಸದಸ್ಯರನ್ನು ಮಾತ್ರ ನೇಮಿಸಿ ಉಳಿದವರನ್ನು ಸದ್ಯದಲ್ಲಿಯೇ ನೇಮಿಸುವೆನಾಗಿ ಹೇಳುತ್ತ ಬಂದ ಕಂರಿಯವರು ಇನ್ನು ಸಂಪುಟವನ್ನು ವಿಸ್ತರಿಸುವ ಗೋಜಿಗೆ ಹೋಗುವಂತಿಲ್ಲ. ಸಾರ್ವತ್ರಿಕ ಚುನಾವಣೆಯಲ್ಲಿ ಸೋಲುಂಡ ನಿಜಲಿಂಗಪ್ಪನವರು ಮರು ಚುನಾವಣೆಯಲ್ಲಿ ಸ್ಪರ್ಧಿಸಲು ಪರವಾನಿಗೆ ಪಡೆದುದರಿಂದ ಅವರು ಗೆದ್ದು ಬಂದರೆಂದರೆ, ವಿಧಾನ ಸಭಾ ಕಾಂಗ್ರೆಸ್ಸಿನ ನಾಯಕತ್ವದಲ್ಲಿ ಮರಳಿ ಬದಲಾವಣೆಯಾಗುವುದು ಹೆಚ್ಚು ಸಂಭವನೀಯವೆಂದು ಹೇಳಬಹುದು.

ಸಂಜೀವ ರೆಡ್ಡಿಯವರ ಬೆಂಗಳೂರು ಸಂದರ್ಶನ ಒಂದು ವಿಧದಿಂದ ವ್ಯರ್ಥವೆನ್ನಿಸಿದರೂ ಇನ್ನೊಂದು ವಿಧದಿಂದ ಅರ್ಥಪೂರ್ಣವಾಗಿದೆ ಸಚಿವ ಸಂಪುಟವು ಈಗಾಗಲೇ ಸಾಕಷ್ಟು ವಿಸ್ತೃತವಿರುವುದೆಂದೂ ಸದ್ಯ ಅದರ ವಿಸ್ತರಣೆಯಿಲ್ಲವೆಂದೂ ಖಚಿತವಾಗಿ ಸ್ಪಷ್ಟಪಡಿಸುವಲ್ಲಿ ಅವರ ಭೆಟ್ಟಿಯು ಯಶಸ್ವಿಯಾಗಿದೆ. ಆದುದರಿಂದ ಇನ್ನಾದರೂ ಸಚಿವರು ತಮ್ಮ ಪಾಲಿಗೆ ಬಂದಿರುವ ಶಾಖೆಗಳ ಉಸ್ತುವಾರಿಯನ್ನು ಸರಿಯಾಗಿ ನೋಡಿಕೊಳ್ಳುವಂತಾಗಲಿ ಎಂದು ಜನತೆ ಬಯಸುತ್ತದೆ

ಮಂತ್ರಿಮಂಡಳಿಯ ವಿಸ್ತರಣೆಯ ಕಾರ್ಯವು ಸದ್ಯ ಸ್ಥಗಿತಗೊಂಡರೂ ಮುಂದೆ ಅವಶ್ಯವೆಂದು ಕಂಡು ಬಂದಾಗ ಅದನ್ನು ವಿಸ್ತರಿಸಬಹುದೆಂದ ರೆಡ್ಡಿಯವರೇ ಘೋಷಿಸಿರುವುದರಿಂದ, ನಿಜಲಿಂಗಪ್ಪನವರು ನಾಯಕತ್ವವಹಿಸಿದಾಗ, ಮಂಡಳಿಯ ಸದಸ್ಯರ ಸಂಖ್ಯೆಯು ಹೆಚ್ಚುವುದು ಅಸಂಭವವಲ್ಲ. ಆದರೆ, ಎ ಜಿ. ರಾಮಚಂದ್ರರಾವ್ ಸಮಿತಿಯು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ರಾಜ್ಯ ಸರಕಾರವು ಮನ್ನಣೆ ನೀಡುವುದಾಗಿದ್ದರೆ, ಈ ವಿಸ್ತರಣೆಯ ಪ್ರಶ್ನೆಯನ್ನು ಎತ್ತಿಕೊಳ್ಳುವುದು ಎಂದಿಗೂ ಸಾಧ್ಯವಿಲ್ಲ ನೆರೆಯರಾಜ್ಯ ಮದ್ರಾಸದಲ್ಲಿ ಹಾಗೂ ಆಂಧ್ರದಲ್ಲಿ ಕೂಡ ಅಲ್ಪ ಸಂಖ್ಯೆಯ ಮಂತ್ರಿಗಳು ಆಡಳಿತೆಯನ್ನು ಸುಸೂತ್ರವಾಗಿ ನಡೆಸುತ್ತಿರುವಾಗ, ಕರ್ನಾಟಕಕ್ಕೆ ಮಾತ್ರ ಬಹು ಮಂತ್ರಿಗಳು ಬೇಕೆಂಬ ವಾದವು ಜನತೆಯ ದೃಷ್ಟಿಯಿಂದ ವಿಲಕ್ಷಣವೆನ್ನಿಸುತ್ತದೆ ಗುಂಪಿನ ರಾಜಕಾರಣಕ್ಕೆ ಹೆಸರಾದ ನಮ್ಮ ರಾಜ್ಯದಲ್ಲಿ ಗುಂಪುಗಳಿಗೆ ಪ್ರಾತಿನಿಧ್ಯ ನೀಡುವ ಹಂಬಲ ಪ್ರಾರಂಭದಲ್ಲಿ ಎದ್ದು ತೋರುತಿದ್ದರೂ ಕಾಂಗ್ರೆಸ್ಸಿನೊಳಗಣ ಬಣಗಳನ್ನು ತೃಪ್ತಿಪಡಿಸುವುದಕ್ಕಾಗಿ ಸಚಿವ ಸಂಪುಟವನ್ನು ವಿಸ್ತರಿಸುವುದಲ್ಲವೆಂಬ ಸೋಗನ್ನು ಈಗ ಹಾಕಿಕೊಳ್ಳಲಾಗಿದೆ; ಅದನ್ನು ಸಾಧಿಸಿಕೊಳ್ಳುವುದಕ್ಕಾಗಿಯೇ ವಿಸ್ತರಣೆಯ ಕಾರ್ಯವನ್ನು ಮುಂದೂಡಲಾಗಿದೆ

ಜನತೆಗಿಂದು ಬೇಕಾಗಿರುವುದು ಮಂತ್ರಿಗಳ ಸಂಖ್ಯೆಯಲ್ಲಿ ಹೆಚ್ಚಳವಲ್ಲ, ಸಮರ್ಥ ಆಡಳಿತೆ. ಕಾಯದೆ ಕಾನೂನುಗಳ ನ್ಯಾಯವಾದ ವ್ಯವಹರಣೆ, ಸರಕಾರದ ಕಾರ್ಯಕಲಾಪಗಳಲ್ಲಿ ಚುರುಕತನ. ಆಯಾ ಶಾಖೆಯ ಮಂತ್ರಿಗಳು ಸರಕಾರದ ಕಾರ್ಯಾಚರಣೆಯಲ್ಲಿ ಕೈ ಹಾಕದೆ ಸರಕಾರದ ಧ್ಯೇಯ ಮತ್ತು ನೀತಿಗಳನ್ನು ರೂಪಿಸಿ ಅವನ್ನು ಕೃತಿಗಿಳಿಸುವ ಹೊಣೆಗಾರಿಕೆಯನ್ನು ಕಾರ್ಯದರ್ಶಿಗಳಿಗೆ ವಹಿಸಿಕೊಡಬೇಕು. ಮಂತ್ರಿಗಳಾದವರು ತಮ್ಮ ಸಂಚಾರದ ಕಾರ್ಯಕ್ರಮಗಳನ್ನು ಘನತೆಗೆ ಸರಿಯಾಗಿ ಮಿತಗೊಳಿಸಿ ಮಂತ್ರಿ ಕಾರ್ಯಗಳಲ್ಲಿಯೇ ಹೆಚ್ಚು ಆಸಕ್ತಿ ವಹಿಸಬೇಕು ತಮ್ಮ ಅಧಿಕಾರವು ಅಸ್ಥಿರವಾದುದೇ ಇರಬಹುದು, ಆದರೂ ಅಧಿಕಾರಾವಧಿಯಲ್ಲಿ ಮತದಾರರು ತೃಪ್ತಿಪಡುವಂತೆ ಕಾರ್ಯಸಾಧನೆ ಮಾಡಬೇಕು ಜನತೆಯ ಸುಖದುಃಖಗಳನ್ನು ಮನನಮಾಡಿ ಅವರ ಆಶಯವನ್ನು ಅರಿತುಕೊಂಡು ನಿಷ್ಪಕ್ಷಪಾತತನದಿಂದ ಕಾರ್ಯನಿರ್ವಹಿಸಬೇಕೇ ಹೊರತು, ದೊರೆತ ಅಧಿಕಾರವನ್ನು ಭದ್ರಪಡಿಸಲು ಮತ್ತು ಅದ್ರಿಂದ ಲಾಭಗಳಿಸಲು ಎಂದಿಗೂ ಪ್ರಯತ್ನಿಸಬಾರದು.

ನಾಯಕರು ಯಾರೇ ಆಗಲಿ, ಮಂತ್ರಿಗಳು ಯಾರೇ ಇರಲಿ, ಸರಕಾರವನ್ನು ರಚಿಸುವುದು ಕಾಂಗ್ರೆಸ್ ಪಕ್ಷ. ಕಾಂಗ್ರೆಸ್ಸು ಚುನಾವಣಾ ವೇಳೆ ಮಾಡಿದ ಘೋಷಣೆಯಲ್ಲಿ ಜನತೆಗೆ ನೀಡಿದ ಆಶ್ವಾಸನೆಗಳನ್ನು ಭರದಿಂದ ಕಾರ್ಯರೂಪಕ್ಕೆ ಇಳಿಸಿದರೆ ಮಾತ್ರ ಅದು ತನ್ನನ್ನು ಅಧಿಕಾರ ಗದ್ದುಗೆಗೇರಿಸಿದುದು ಸಾರ್ಥಕವಾಗುವುದೆಂಬುದನ್ನು ಅವಶ್ಯ ತಿಳಿದುಕೊಂಡು ಮಾತಿಗಿಂತ ಹೆಚ್ಚಾಗಿ ಕೃತಿಗೆ ಮಹತ್ವ ನೀಡಬೇಕು.



೨೦ ಸಾವಿರ ಜನಸಂಖ್ಯೆಯಿರುವ ಪ್ರದೇಶಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸಬಲ್ಲ ನೌಕೆಯ ಚಿತ್ರವಿದು. ಅಣು ವಿದ್ಯುತ್ತನ್ನು ತಯಾರಿಸುವ ಯಂತ್ರೋಪಕರಣಗಳಿರುವ ಈ ನೌಕೆಯು ಜೀಕೆಂಬಲ್ಲಿ ಸಂಚರಿಸಬಲ್ಲದು. ಅಮೇರಿಕೆಯ ಮಾರ್ಟಿನ್ ಕಂಪೆನಿಯು ಇದನ್ನು ನಿರ್ಮಿಸಿದೆ

ಅಂಧಾನುಕರಣೆಯ ದುಷ್ಪ್ರವೃತ್ತಿ

(೪ನೇ ಪುಟದಿಂದ)

ಗಿದ್ದರೆಂದು ವರ್ಣಿಸತೊಡಗಿದರು ಆದರೆ, ಭಾರತೀಯ ಸಂಪ್ರದಾಯವು ಇದಕ್ಕೆ ವಿರೋಧವಾಗಿತ್ತು. ಹಿಂದಿನ ಕಾಲದಲ್ಲಿ ನಮ್ಮ ದೇಶದಲ್ಲಿ ಜನತೆಯೇ ತನ್ನ ರಾಜನನ್ನು ಆರಿಸುತಿತ್ತು. ರಾಮಾಯಣ ಕಾಲದಿಂದ ಮಧ್ಯ ಕಾಲದ ವರೆಗಿನ ಇತಿಹಾಸವೇ ಇದಕ್ಕೆ ಸಾಕ್ಷಿಯಾಗಿನಿಂತಿದೆ ನಿಜವಾಗಿ ಹೇಳುವುದಾದರೆ, ದುರಾಚಾರ ಮತ್ತು ಕ್ರೂರತೆಗಳು ಪ್ರಾರಂಭದ ಐರೋಪ್ಯ ರಾಜರಾಣಿಯರ ಗುಣಗಳು. ಇವನ್ನು ಕಣ್ಣು ಮುಚ್ಚಿ ಭಾರತದ ಮೇಲೆ ಆರೋಪಿಸಲಾಗುತಿತ್ತು. ತಾವು ಆರ್ಯಸಂತಾನಕ್ಕೆ ಸೇರಿದವರಾದುದರಿಂದ ಭಾರತೀಯರ ಸಹಾನುಭೂತಿಯನ್ನು ಗಳಿಸಲು ಅವರು ಭಾರತದ ಇತಿಹಾಸವು ಆರ್ಯರ ಕಾಲದಿಂದ ತೊಡಗುವುದೆಂದು ಪ್ರಚಾರ ಮಾಡತೊಡಗಿದರು.

ಈ ವಿಷಯದ ಮೇಲೆ ವೈದಿಕ ಧಾರಾ' ಎಂಬ ಪುಸ್ತಕದಲ್ಲಿ ಡಾ| ಮಂಗಲದೇವ ಶಾಸ್ತ್ರಿಯವರು ಪ್ರಕಾಶ ಬೀರಿದ್ದಾರೆ ಹಿಂದೂಧರ್ಮವನ್ನು "ನಿಗಮಾಗಮ ಸಂಭೂತ"ವೆಂದ ನಮ್ಮಲ್ಲಿ ತಿಳಿಯುತ್ತಾರೆ. ವೇದಗಳಿಗೆ ನಿಗಮವೆಂದೂ ವೇದಪೂರ್ವದ ಭಾರತೀಯರ ಸಮಸ್ತ ಸಂಸ್ಕೃತಿಯನ್ನು ಆಗಮವೆಂದೂ ಕರೆಯುತ್ತಾರೆ. ತ್ಯಾಗ, ದಯೆ, ಅಹಿಂಸೆಯ ಭಾವನೆಗಳು ಈ ನಿಗಮಾಗಮಗಳಲ್ಲಿ ತುಂಬಿವೆ ಇವೆರಡರ ಸಮನ್ವಯದಿಂದ ಭಾರತೀಯ ಸಂಸ್ಕೃತಿ ಅಥವಾ ಹಿಂದೂ ಸಂಸ್ಕೃತಿಯ ಜನನವಾಯಿತು. ವಿಭಿನ್ನ ಭಾಷೆ, ವೇಷ ಭೂಷಣ ಮತ್ತು ಆಹಾರ ಸೇವನಾಕ್ರಮಗಳಿದ್ದೂ ಎಲ್ಲ ಭಾರತೀಯರೂ ಏಕ ಸಂಸ್ಕೃತಿಯ ಸೂತ್ರದಲ್ಲಿ ಬಂಧಿತರಾಗಿದ್ದರು, ಎಲ್ಲರ ವಿಚಾರವು ಒಂದೇ ಆಗಿತ್ತು. ತಮ್ಮ ಸ್ವಾರ್ಥಕ್ಕಾಗಿ ಆಂಗ್ಲೇಯರು ಭಾರತವನ್ನು ಆರ್ಯ-ಅನಾರ್ಯ, ಆರ್ಯ ದ್ರವಿಡಗಳೆಂದು ವಿಭಕ್ತಗೊಳಿಸಿ ಇಂದು ಉತ್ತರ-ದಕ್ಷಿಣ ಭಾರತಗಳ ಸಮಸ್ಯೆಯನ್ನು ಸೃಷ್ಟಿಸಿದರು. ಈ ಪ್ರಶ್ನೆಯು ಇದೀಗ ಬಂತು ಮದ್ರಾಸದಲ್ಲಿ ದ್ರವಿಡ ಸ್ಥಾನದ ಹುಚ್ಚು ಕಲ್ಪನೆಯ ಕನಸು ಕಾಣುತ್ತಿರುವ ದ್ರವಿಡ ಮುನ್ನೇತ್ರ ಕಳಗಂ ರೂಪಕ್ಕೆ ಬಂದಿದೆ. ಆಂಗ್ಲರು ಮುಂದೆ ತಂದಿಟ್ಟ ತತ್ವವನ್ನು ದೂರೀಕರಿಸಿದವೆಂದರೆ, ನಮ್ಮಲ್ಲಿ ಮತ್ತೆ ಈ ಸಮಸ್ಯೆ ಮುಂಬರಲಾರದು—ಎಂದು ಡಾ| ಮಂಗಲ ದೇವರು ಹೇಳುತ್ತಾರೆ

ಭಾರತೀಯ ವಿಚಾರಗಳನ್ನೂ ವೇಷಭೂಷಣಗಳನ್ನೂ ಹಿತಚಿಂತನೆಯನ್ನೂ ಹೀನವೆಂದೂ ನಿರುಪಯುಕ್ತವೆಂದೂ ಭಾವಿಸಿ, ಪ್ರಾಣ ಪಣಾವಿಟ್ಟು, ವಿದೇಶೀ ನಾಗರಿಕತೆ ಮತ್ತು ಭಾಷೆಗಳನ್ನು ಸ್ವೀಕರಿಸುವ ಪ್ರವೃತ್ತಿಯು ಇನ್ನೊಂದು ಗಂಡಾಂತರ ಸ್ವರೂಪದ್ದಿದೆ. ಪ್ರಪಂಚದ ಯಾವುದೇ ಬೇರೆ ರಾಷ್ಟ್ರದ ಇತಿಹಾಸದಲ್ಲಿ ಇಂತಹ ಅಂಧಾನುಕರಣೆಗೆ ಉದಾಹರಣೆಯು ಸಿಗಲಾರದು ೧೯ ಶತಮಾನದಲ್ಲಿ ಭರದಿಂದ ಸಾಗುತಿದ್ದ ಕ್ರೈಸ್ತ ಮತಪ್ರಚಾರದಿಂದಾಗಿ ಇಂತಹ ತುಚ್ಛ ಪ್ರವೃತ್ತಿಯು ಬೆಳೆಯುತ್ತ ಬರುವುದಕ್ಕೆ ಸಾಕಷ್ಟು ಬಲವು ದೊರೆಯಿತು

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ — ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd 1931
Phone No 240 — ಮಂಗಳೂರು—3

ಲೇಖಕರ ಗಣನೀಯ ಪಾತ್ರ

(೪ನೇ ಪುಟದಿಂದ)

ದು ಸಹಜ. ಆದರೆ ಅದಕ್ಕೆ ಇಷ್ಟೇ ಉತ್ತರ. ಹಿಂದಿನ ಕಾವ್ಯಗಳೆಲ್ಲ ಪ್ರೌಢವಾಗಿದ್ದುವು. ಅವು ವಿದ್ವಾಂಸರ ಸೊತ್ತಾಗಿದ್ದುವು ವಿದ್ವಾಂಸರು ತಮ್ಮನ್ನು ಆ ಕಾವ್ಯಗಳಿಗೆ ಮಾರುಗೊಡುತ್ತಿರಲಿಲ್ಲ. ಗಂಭೀರವಾದ ನಗೆಯಲ್ಲಿಯೇ ಅವರ ಪ್ರತಿಕ್ರಿಯೆ ಮುಗಿದು ಹೋಗುತ್ತಿತ್ತು . ಆದರೆ ಇಂದಿನ ಕಾದಂಬರಿಗಳ ಅವಸ್ಥೆ ಹಾಗಲ್ಲ ನಾಲ್ಕಕ್ಷರ ಬಲ್ಲ ಕೂಲಿಯವನೂ ಎಂಟು ಕಾದಂಬರಿಗಳನ್ನು ನೊಗಚಿ ಹಾಕುತ್ತಾನೆ. ಅವನಲ್ಲಿ ಪಾಂಡಿತ್ಯವಿಲ್ಲ. ಆಗ ಅಂತಹ ಸಂದರ್ಭಗಳಲ್ಲಿ ಚಂಚಲ ಮನಸ್ಸು ಸೂರೆ ಹೋಗುವುದರಲ್ಲಿ ಆಶ್ಚರ್ಯವೇ ಇಲ್ಲ. ಹೀಗೆ ಇಂದು ಕಾದಂಬರಿ ಸಂಪೂರ್ಣ ದೇಶನಿಷ್ಠವಾಗಿ ಬಿಟ್ಟುದರಿಂದ ಕೃತಿಕಾರ ಎಷ್ಟು ಜಾಗ್ರತೆಯಿದ್ದರೂ ಸಾಲದು! ಎಳ್ಳಿನಷ್ಟು ತಪ್ಪಿದರೂ ಪರಿಣಾಮ ಮಾತ್ರ ಬೃಹದಾಕಾರವಾಗಿ ಬಿಡುತ್ತದೆ.

ಇಂದಿನ ಸಾಹಿತ್ಯದಲ್ಲಿ ಶೃಂಗಾರಕ್ಕೆ ಎಷ್ಟರ ಮಟ್ಟಿಗೆ ಸ್ಥಾನ ದೊರೆಯಬೇಕು ಎಂಬ ವಿಷಯ ವಿಚಾರಣೀಯವೇ- ಕಥಾ ಸನ್ನಿವೇಶಕ್ಕೆ ಎಷ್ಟು ಆಗತ್ಯವೋ ಅಷ್ಟು; ಬಳಸುವುದರಲ್ಲಿಯೂ ಬಿಗುವು ಬೇಕು. ಹಿತಮಿತವಾಗಿ ಬಳಸುವುದರಲ್ಲಿ ಯಾವ ದೋಷವೂ ಕಾಣಿಸುವುದಿಲ್ಲ- ಇಂಥ ಎಡೆಗಳಲ್ಲಿಯೇ ನಾವು ಕೃತಿಕಾರನ ಚಾತುರ್ಯವನ್ನೂ ಪರೀಕ್ಷಿಸಬಹುದು. ಮಾನನೀಯ ಮರ್ಯಾದೆಯನ್ನು ಮೀರದೆ ಮನಮುಟ್ಟುವಂತೆ ಮೋಹಕವಾಗಿ ಸೂಚಿಸಿದರೆ ಸಾಕು. ಅದನ್ನೇ ಶೃಂಗಾರದ ಮನೆಯ ಪ್ರೇಮದ ಹೊಸಲಿನಲ್ಲಿ ಕಾಲಿರಿಸಿದ ನವತರುಣ ಧಾರಾಳವಾಗಿ ಗ್ರಹಿಸಿಕೊಂಡು ಆನಂದಿಸುವುದರಲ್ಲಿ ಕೃತಿಕಾರನ ಅಭಿಲಾಷೆ ಈಡೇರುವುದು. ತಾರುಣ್ಯದ ಸವಿಯನ್ನುಂಡು ಮುಗಿಸಿದ ವೃದ್ಧನ ಮುಖದಲ್ಲಿ ಆಗ ಮಿಂಚುವ ಸ್ವಾನುಭವದ ಎಳನಗೆಯಿಂದಾಗಿ ಕೃತಿಕಾರ ಧನ್ಯನಾದಾನು. ಅಷ್ಟೇ ಸಾಕು. ಏನೂ ಅರಿಯದ ಮುಗ್ಧ ಬಾಲಕ ಆ ಸಂದರ್ಭದಲ್ಲಿ ಮಿಕಿ ಮಿಕಿ ನೋಡುತ್ತಿರಲಿ. ಅವನಿಗೆ ಅರ್ಥವಾಗಬೇಕಿಲ್ಲ. ಅವನೋದುವ ಶಿಬಿ, ದಧೀಚಿ, ಶಿವಾಜಿ, ಪನ್ನಾದಾಸಿಯರ ಕಥೆಗಳು ಪ್ರತ್ಯೇಕ ಇವೆ. ಬಾಲ ಸಾಹಿತ್ಯ ಆ ಮುಖದಿಂದ ಬೆಳೆಯುತ್ತಿರಲಿ.

ಸಣ್ಣ ಕಥೆ ಕಾದಂಬರಿಗಳ ಲಕ್ಷಣಗಳಿಗೆ ಸಿಲುಕದಾ ಹೇರಳ ಗದ್ಯ ಕೃತಿಗಳನ್ನೂ ನಾವು ನೀಳ್ಗತೆಗಳ ಗುಂಪಿಗೆ ಸೇರಿಸಬೇಕಾಗುತ್ತದೆ ಆದರೆ ಇದರಲ್ಲಿ ಒಂದು ಗಮನೀಯ ವಿಚಾರ- ಈ ನಿಯಮಗಳು ಸಾಮಾನ್ಯ ನಿರ್ದೇಶಕಗಳೇ ಹೊರತು ಸಂಪೂರ್ಣ ತೀರ್ಮಾನವಿದು ಎಂದು ಹೇಳಬೇಕಾಗಿಲ್ಲ.

ಇಲ್ಲಿ ಆ ಮೂರು ಗದ್ಯ ಪ್ರಭೇದಗಳಿಗೆ ಸಣ್ಣ ಕಥೆ, ನೀಳ್ಗತೆ, ಕಾದಂಬರಿ ಎಂಬುದಾಗಿ ಕರೆದುದು ಕೇವಲ ಸಾಂಕೇತಿಕವಾಗಿಯೇ ಹೊರತುಬೇರಾವ ಕಾರಣದಿಂದಲೂ ಅಲ್ಲ. ಆ ಮೂರು ಗದ್ಯ ಪ್ರಭೇದಗಳಂತೂ ಇಂದಿನ ವಾಙ್ಮಯದಲ್ಲಿ ನಾವು ಕಾಣುತಿದ್ದೇವೆ ಎಂಬ ಮಾತನ್ನು ಪ್ರತಿಯೊಬ್ಬ ವಿವೇಕಿಯೂ ಅರಿಯದಿರಲಾರ.

ಹಿಂದೆ ಸಾಹಿತ್ಯ ಜನಮನೋರಂಜಕವಾಗಿತ್ತು ಮಾತ್ರ! ಆದರೆ ಈಗ ಅದು ಜನ ಜೀವನದೊಂದಿಗೆ ಸಮರಸವಾಗಿ ಬೆರೆತಿದೆ. ಹಾಗಾಗಿ ಮೊದಲಿನ ಉದ್ದೇಶ ಮಾತ್ರವನ್ನು ಈಗಿನ ಸಾಹಿತ್ಯಕ್ಕೆ ಹಚ್ಚಿದರೆ ಸಾಲದು. ಜನತೆಯ ಉತ್ಕರ್ಷವನ್ನೂ ಅದರಲ್ಲಿ ಹಾರೈಸಬೇಕು ಜನತೆ ಮೆಚ್ಚಿದರೆ ಸಾಲದು. ಔಷಧ ಕಹಿಯಾಗಿಯೇ ಇರುವುದು ಆದರೂ ಪ್ರಯತ್ನಪೂರ್ವಕವಾಗಿ ಅದನ್ನು ಜನತೆಗೆ ಉಣ್ಣಿಸುವ ತಾಯ್ತನದ ಹಿರಿಮೆ ಕನ್ನಡ ಕೃತಿಕಾರರಲ್ಲಿರಬೇಕು. ನೂರಾರು ಕಾದಂಬರಿಯ ಜಿಂಕೆಯ ಜಿಗಿತದ ಹುಚ್ಚು ಬಿಡಬೇಕು. ಚಿರನೂತನವಾದ ಒಂದೇ ಒಂದು ಕಾದಂಬರಿಯ ರಚಕನಾದರೂ, ಅಖಿಲ ಕರ್ನಾಟಕದಲ್ಲೇ ಏಕೆ, ಇಡಿ ಜಗತ್ತಿನಲ್ಲೇ ಬೆಳಕು ಚೆಲ್ಲುವ ಆದರ್ಶ ಜೀವನದ ಪ್ರತೀಕನಾಗಿರಬೇಕು ಕೃತಿಕಾರ.

ಸಾಮಾನ್ಯ ಜನತೆ ಮೆಚ್ಚಲಾರದು- ಅಶ್ಲೀಲವಾಚ್ಯ ರೂಪದಲ್ಲೇ ತೃಪ್ತಿ ಹೊಂದುವುದು ಅದರ ಸ್ವಭಾವವಾಗಿದ್ದರೂ ಕೂಡ ಋಷಿಪ್ರಾಯನಾದ ಕೃತಿಕಾರ ಆ ವಿಷ ಗಾಳಿಯ ಸೆಳೆತಕ್ಕೆ ಸಿಕ್ಕಿ ಹಾರಿ ಹೋಗುವುದು ನಾಚಿಕೆಗೇಡೇ ಸರಿ. ಪ್ರಾಯಃ ಅಂಥವರು ನಿದ್ರೆಯ ಮೋಹಕ್ಕೆ ಸಿಲುಕಿರಬೇಕು. ಕನ್ನಡಮ್ಮನ ಭಾಗ್ಯ ಬಲವತ್ತರವಾಗಿದ್ದರೆ ಹೊಸ ಸಮಾಜವನ್ನು ರೂಪಿಸುವ ಅಮೃತವನ್ನು ಕೃತಿಕಾರರ ಲೇಖನಿ ಜನತೆಯ ಮೇಲೆ ಚಿಮುಕಿಸೀತು ಎಂದು ಹಾರೈಸಬಹುದು,

ಕೃತಿಕಾರ ಸಂಪೂರ್ಣ ತನ್ನ ಕೃತಿಯ ದರ್ಶನವನ್ನು ಪಡೆಯಲಾರ. ಆದರೆ ಆತನಲ್ಲಿರುವ ಸಹಜ ಪ್ರತಿಭೆಯ ಫಲವಾಗಿ ರಚನೆಯಲ್ಲಿಯೇ ತನ್ನ ಭಕ್ತಿಯನ್ನು ಮೆರೆಯುತ್ತಾನೆ ಎಂಬುವುದು ಸತ್ಯ ಸಂಗತಿ.

ಕವಿತಾನೊರೆವಂ ಕೃತಿಗಳ
ನವುಗಳ ರಸ ಕಸದ ಗೊಡವೆ ಪಂಡಿತ
ಜನರೊಳ್

ಕರ್ನಾಟಕ ವಿಶ್ವವಿದ್ಯಾಲಯದಿಂದ

ಸಮಗ್ರ ವಚನ ವಾಙ್ಮಯ ಪ್ರಕಟಣೆ

ಕನ್ನಡ ನಾಡು-ನುಡಿ, ಸಾಹಿತ್ಯ-ಸಂಸ್ಕೃತಿಗಳ ದೃಷ್ಟಿಯಿಂದ ವಚನ ವಾಙ್ಮಯವು ಅತಿ ಮಹತ್ವವಾದುದೆಂದು ಹೇಳುವ ಆವಶ್ಯಕತೆಯಿಲ್ಲ. ಈ ವಾಙ್ಮಯದ ವ್ಯಾಪ್ತಿ ಅಪಾರವಾಗಿದ್ದಿತೆಂದು ಅಲ್ಲಲ್ಲಿಯ ಉಲ್ಲೇಖಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಆದರೆ ಈ ಬಗೆಗೆ ಸಮಗ್ರವಾಗಿ ಸಂಶೋಧನೆ ಮಾಡುವ ಕಾರ್ಯವು ಇದು ವರೆಗೂ ಸುವ್ಯವಸ್ಥಿತವಾದ ಯೋಜನಾಬದ್ಧ ರೀತಿಯಲ್ಲಿ ನಡೆದಂತೆ ಕಂಡು ಬರುವದಿಲ್ಲ. ಅಲ್ಲಲ್ಲಿ ಕೆಲವು ಸಂಘ ಸಂಸ್ಥೆಗಳೂ ಹಲವು ಜನ ತಜ್ಞ ಸಂಶೋಧಕರೂ ಈ ವಾಙ್ಮಯದ ಸಂಶೋಧನ-ಪ್ರಕಟನಗಳಿಗಾಗಿ ತಮ್ಮ ಶಕ್ತಿಮೀರಿ ಪರಿಶ್ರಮಪಟ್ಟಿರುವದು ಸ್ತೋತ್ರಾರ್ಹವಾಗಿದೆ. ಆದರೂ ಇದು ವರೆಗೂ ಬೆಳಕು ಕಂಡಿರುವ ವಚನ ವಾಙ್ಮಯಕ್ಕಿಂತ ಬೆಳಕು ಕಾಣದಿರುವ ಭಾಗವೇ ಹೆಚ್ಚಾಗಿದೆ. ಇಂಥ ಕಾರ್ಯಗಳನ್ನು ವೈಯಕ್ತಿಕವಾಗಿ ನಿರ್ವಹಿಸಿ ಪೂರ್ತಿಗೊಳಿಸುವದು ಸಾಧ್ಯವಿಲ್ಲ. ವಿಶ್ವವಿದ್ಯಾಲಯದಂಥ ಮಹಾ ಸಂಸ್ಥೆಗಳು ಮುಂದೆ ಬಂದರೆ ಮಾತ್ರ ಈ ಕಾರ್ಯ ಸಾಧ್ಯವಾಗಬಹುದು. ಇದನ್ನು ಮನದಂದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದವರು ವಿಶ್ವವಿದ್ಯಾಲಯ ಧನಸಹಾಯಆಯೋಗದ ಸಹಾಯವನ್ನು ಪಡೆದು, ಕರ್ನಾಟಕ ವಿಶ್ವ ವಿದ್ಯಾಲಯದ ಉದಾರವಾದ ಆಶ್ರಯದಲ್ಲಿ ಸಮಗ್ರ ವಚನ ವಾಙ್ಮಯದ ಸಂಶೋಧನ, ಸಂಸ್ಕರಣ ಹಾಗೂ ಪ್ರಕಟನ ಯೋಜನೆಯನ್ನು ಕೈಕೊಂಡಿರುವರು. ಈ ಯೋಜನೆಯನ್ವಯ ಕನ್ನಡನಾಡಿನ ನಾನಾ ಮೂಲೆಗಳಲ್ಲಿದ್ದ ಮನೆಮಠಗಳಲ್ಲಿ ಪೂಜೆಗೊಳ್ಳುತ್ತಲಿದ್ದ ವಚನ ವಾಙ್ಮಯಕ್ಕೆ ಸಂಬಂಧಪಟ್ಟ ತಾಡಓಲೆಯ, ಕೋರಿಕಾಗದದ ಹಾಗೂ ಇತರ ಕೈಬರೆಹದ ಗ್ರಂಥಗಳನ್ನು ಶೇಖರಿಸಲಾಗುವುದು. ಈ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದವರು ಇಬ್ಬರು ಸಂಶೋಧಕರನ್ನು ನಿಯಮಿಸಿರುವರು. ಅವರು ಊರೂರಿಗೆ, ಮನೆಮಠಗಳಿಗೆ ಹೋಗಿ, ವಿಶ್ವವಿದ್ಯಾಲಯದ ಈ ಯೋಜನೆಯನ್ನು ಜನತೆಯ ಮುಂದಿರಿಸಿ, ಅವರಲ್ಲಿರುವ ಹಸ್ತಪ್ರತಿಗಳನ್ನು ಕೊಟ್ಟು ಸಹಕರಿಸುವಂತೆ ಪ್ರಾರ್ಥಿಸುವರು. ನಾಡಿನ ಮಹಾಜನಗಳು ಈ ಕಾರ್ಯದಲ್ಲಿ ಸಹಕರಿಸದೆ ಹೋದರೆ ಇಂಥ ಯೋಜನೆಗಳು ಯಶಸ್ವಿಯಾಗಲಾರವು. ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯ ಧನಸಹಾಯ ಆಯೋಗಗಳು ಇಂಥ ಬೃಹತ್ಕಾರ್ಯಕ್ಕಾಗಿ ಧನ ಸಹಾಯ ಮಾಡಲು ಮುಂದೆ ಬಂದಿರುವಾಗ, ಮಹಾಜನಗಳು ಈ ಪವಿತ್ರ ಕಾರ್ಯದಲ್ಲಿ ಹೃತ್ಪೂರ್ವಕವಾಗಿ ಸಹಕರಿಸಿ ತಮ್ಮಲ್ಲಿರಬಹುದಾದ ಗ್ರಂಥಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿನಿಧಿಗಳಿಗೆ ಒಪ್ಪಿಸುವರೆಂದು ಕೋರಲಾಗಿದೆ. ಗ್ರಂಥಗಳನ್ನು ಕೊಟ್ಟವರು ಆ ಬಗೆಗೆ ಅವರಿಂದ ಪಾವತಿಯನ್ನು ಪಡೆಯಬಹುದು ಅವರು ಕೊಟ್ಟ ಗ್ರಂಥಗಳನ್ನು ಯೋಗ್ಯ ರೀತಿಯಿಂದ

(೧೩ನೇ ಪುಟ ನೋಡಿರಿ)

ಭವಿಸಿರ್ಪಂ ತನ್ನುದರದ
ಕುವರಿಯ ನೆರೆ ಸುಸಿಲನೆಂತು ಬಲ್ಲಂ
ಜನಕಂ



ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ ಹರಿದಾಸ ಭಟ್ಟ, ಎಂ ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉತ್ತರನ ಪೌರುಷ ಒಲೆಯ ಮುಂದೆ

(೩ನೇ ಪುಟದಿಂದ)

ಜಗಲಿಯಿಂದ. "ಹೌದು ವೆಂಕಣ್ಣನಾ ಅಲ್ಲೀನು............, ತನಿಯನಿಗೆ ಖಾಕಿ ಅಂಗಿ ಚಡ್ಡಿಯ ಮೇಲೆ ಟಿಪ್ರಿ ಹಾಕಿದ. 'ಜಟಾಪಟ್' ವ್ಯಕ್ತಿಯೊಂದು. ಸುಬ್ಬನವರ ಟಿಪ್ರಿ ತೋರಿಸಿತು. ಬಾಯಿ ಬೀಗವಿಕ್ಕಿತು.

"ನಾನೂ ಬರ್ತೀನೆ ಹೋಗೋಣ" ಎಂದು ಆತನೂ ತನಿಯನನ್ನು ಸೇರಿದ. ಜವಂಬ್ಬರ ಹೆಜ್ಜೆ ಪುನಃ ಒಂದೇ ಗತಿಯಿಂದ ಸಾಗತೊಡಗಿತು. ವೆಂಕಟ ಸುಬ್ಬಯ್ಯನವರು ಹುಲಿಯಿದೆಯೆಂದು ಹೆದರಿ ಬೇರೆ ದಾರಿಯಿಂದ ಬರುವವನಿಗೆ ಹುಲಿಯೇ ತಲೆಯ ಮೇಲೆ ಹಾರಿದವನ ಸ್ಥಿತಿಯಲ್ಲಿದ್ದರು. ಧೈರ್ಯ ಉಡುಗಿ ಹೋಯಿತು. ಕಾಲುಗಳನ್ನು ಬಿಟ್ಟು ಉಳಿದ ದೇಹ ಕಲ್ಲ ಮೂರ್ತಿಯಂತಿತ್ತು.

ನಾಲ್ಕನೆಯ ವ್ಯಕ್ತಿ ಚಟ್ ಪಟ್ ಎಂದು ವೆಂಕಟ ಸುಬ್ಬಯ್ಯನವರ ಬಲಕ್ಕೆ ಬರುತ್ತಿತ್ತು. ಮುಂದೆ ತನಿಯ, ವೆಂಕಣ್ಣ ಹಿಂದೆ ವೆಂಕಟ ಸುಬ್ಬಯ್ಯ. ಬಲದಲ್ಲಿ 'ಹುಲಿ' ಪೋಲಿಸ್.

"ಮಾತನಾಡಲಿಕ್ಕೆ ಜನವಿಲ್ಲದಿದ್ದರೆ ದಾರಿ ಸಾಗೋದಿಲ್ಲ" ಎಂತಾರೆ! ಅರೆ ಗಳಿಗೆಯಲ್ಲೇ ಅವರು ಪೋಲಿಸ್ ಸ್ಟೇಶನ್ನ ಹತ್ತಿರದಲ್ಲಿದ್ದರು. ಮೆಲ್ಲಮೆಲ್ಲನೆ ಧೈರ್ಯರಂಗಕ್ಕಿಳಿದ ಮನಸ್ಸು ಮತ್ತೆ ಮೇಲೆ ಭಯದ ಮಹಲಿಗೆ ಹಾರತೊಡಗಿತು.

"ನೀನು ಮುಂದೆ ಹೋಗು. ನಾನು ಸ್ಟೇಶನ್ನಿಗೆ ಹೋಗಿ ಬರುತ್ತೇನೆ" ಎಂದು ಪೋಲೀಸ್ ಬಲಕ್ಕೆ ತಿರುಗಿ ನಡೆದ. ಕನಿಕರ ತೋರಲು ವೆಂಕಟ ಸುಬ್ಬಯ್ಯನವರು ಅವರತ್ತ ಟಿಪ್ರಿ ಮುಖವನ್ನು ಸರಿಸಿದರು. ಆ ವ್ಯಕ್ತಿ ತಿರುಗಿ ನಿಂತು—

"ನೀವು ಸ್ವಲ್ಪ ಇಲ್ಲಿ ಬನ್ನಿ" ಎಂದು ಕರೆಯಿತು.

ಮಾತೇನೋ ಮೃದುವಾಗಿತ್ತು, ಆದರೆ ಅದರೊಳಡಗಿರುವ ವಿಚಾರ ವೆಂಕಟಸುಬ್ಬಯ್ಯನವರನ್ನು ಭಯದಿಂದ ತತ್ತರಿಸಿತು. ಪೋಲೀಸ್ ಮತ್ತೊಮ್ಮೆ ಕರೆದ ಮೇಲೆ "ಇಲ್ಲೇ ಇರು" ಎಂದು ವೆಂಕಟ ಸುಬ್ಬಯ್ಯ ಪೋಲೀಸನನ್ನು ಅನುಕರಿಸಿದರು ಬೇರೆ ವಿಧಿಯಿರಲಿಲ್ಲ.

ಆತ ಬಾಗಿಲು ತೆರೆದು, ಒಳನಡೆದು ದೀಪ ದೊಡ್ಡದು ಮಾಡಿದ.

ವೆಂಕಟಸುಬ್ಬಯ್ಯನವರಿಗೆ "ಕುಳಿತುಕೊಳ್ಳಿ" ಎಂದು ಕುರ್ಚಿ ತೋರಿಸಿ, ತಾನೂ ಕುಳಿತುಕೊಂಡು, "ನಿಮಗೆ ತಡವಾಗುವುದಿಲ್ಲವಲ್ಲ"ವೆಂದು ಹೇಳಿದ.

ವೆಂಕಟಸುಬ್ಬಯ್ಯ ನೆಟ್ಟಗಿದ್ದ ದೇಹವನ್ನು ಮಧ್ಯೆ ಮುರಿದು, ಕುಳಿತರು. ಕೈಕಾಲು ಚಳಿಗಾಲದಲ್ಲಿ ಬೆಳಿಗ್ಗೆ ಗದ್ದೆಹುಣಿಯಲ್ಲಿ ನಡೆದ ಮುದುಕನಂತೆ ಗಡಗಡ ನಡುಗುತಿತ್ತು.

"ನಿಮ್ಮ ಹೆಸರೇನು?' ಆತ ಪೆನ್ನು ಪುಸ್ತಕ ಹುಡುಕ ತೊಡಗಿದ.

ತುಟಿ ಅಂಟಿಕೊಂಡಿತ್ತು! "ವೆಂಕಟ ಸುಬ್ಬಯ್ಯ" ಅನ್ನುವುದಕ್ಕೆ ಮುಸ್ಸಂಜೆ ಕೂಡಿತ್ತು.

ನಿಮ್ಮ ಹೆಸರೇನು'? ಇನ್ನೊಮ್ಮೆ ಪ್ರಶ್ನೆ ಉತ್ತರಕ್ಕಾಗಿ ಬಂತು. ಆ ಆರೆಕ್ಷಣದಲ್ಲಿ ವೆಂಕಟಸುಬ್ಬಯ್ಯನವರು ದೃಷ್ಟಿಪಥದಲ್ಲಿ ಹಾದುಹೋದ ದಾರುಣ ಚಿತ್ರಗಳ ಸಂಖ್ಯೆಗೆ ಪರಿಮಿತಿಯಿಲ್ಲ. ಅವನಲ್ಲಿ ಕಂಡುದರ ಪರಿಣಾಮವಾಗಿ ಬಂತು 'ಶಂಕರರಾಯರು" ಎಂದು. ಆದರೆ ಅದರ ಅವರಿಗೆ ಅರಿವು ಇದ್ದಂತಿಲ್ಲ

ಆತ ಬರೆದುಕೊಳ್ಳುತ್ತಿರುವಾಗ 'ಶಂಕರರಾಯರು' ಎಂದಾಗ ಮಾತ್ರ ಹಾವು ಮೆಟ್ಟಿದವನಂತಾದರು.

'ಹೂಂ. ನಿಮ್ಮ ಮನೆ ಹತ್ತಿರ ಮನೆಗಳಿವೆಯೇ....' ಇಲ್ಲ...' ನಿಮಗೆ ಈ ಊರಲ್ಲೇ ಏನು ಕೆಲಸ ಉಪಾಧ್ಯಾಯ ವೃತ್ತಿ' 'ಸಂಬಳ'....'49 ರೂ."...

ಆತ ಏನೋ ಲೆಕ್ಕಿಸುವರಂತಿದ್ದ! ತುಂಬಾ ಹೊತ್ತು ಕಾದ ಮೇಲೆ ವೆಂಕಟಸುಬ್ಬಯ್ಯನವರು "ನನಗೆ ತಡವಾಗುತ್ತಿದೆ ಹೋಗಲೇ...' ಎಂದರು. 'ಹಾಂ ಹೋಗಿ' ಎಂದು ನಿಂತನಾತ. ಹೊರಟು ಒಂದೇ ಭರಕ್ಕೆ ರಭಸದಿಂದ ರಸ್ತೆಗೆ ಬಂದ, 'ಹೊರಡು' ಎಂದರು. 'ಶಂಕರರಾಯರು, ಉಪಾಧ್ಯಾಯರು, ಶಂಕರರಾಯ'. ಆತನ ಪುನರುಚ್ಚಾರಣೆಯ ಶಬ್ದ ವೆಂಕಟ ಸುಬ್ಬಯ್ಯನವರ ಕಿವಿಗೆ ಕಾಸಿದ ಶೂಲ ಹಾಕಿದಂತಿತ್ತು.

"ಏನು ಮಾಡಿದಿರಿ ಎಂದ ತನಿಯ.

ನಾಯೊಂದು ದೂರದಲ್ಲಿ ಬೊಗಳಿತು. ಪ್ರತಿಯಾಗಿ ನಾಲ್ಕಾರು ನಾಯಿಗಳ ಕೂಗಾಟ ಒಮ್ಮೆಲೇ ಕೇಳಿ ಬಂತು. 'ಅವರಿಗೆಲ್ಲಾ ಆತ ಹೋಗಿ ಎಚ್ಚರಿಸಿ ಕರೆತರುತ್ತಾನೋ ಏನೋ, ಮಾತಾಡದೆ ಓಡುವ ಮುಹೂರ್ತವೂ.' ಎಂದು ಓಡಿ ಅಂದು ರಾತ್ರಿ ಸುರಕ್ಷಿತರಾಗಿ ಮನೆಯ ಮೆಟ್ಟಲ ಸ್ಪೇರಿದರು. ಹೃದಯ ಮಾತ್ರ ಗಾಳಕ್ಕೆ ಸಿಕ್ಕಿ ಬಿದ್ದ ಮೀನಿನಂತೆ ಒದ್ದಾಡುತಿತ್ತು!

ಮರುದಿನ ಅವರು ನಡೆಸಿದ ರಾಯಭಾರತ್ವದ ಫಲವಿದು. ಇದನ್ನು ಕೇಳಿ ವೆಂಕಟಸುಬ್ಬಯ್ಯನವರ ಹೃದಯಕ್ಕೆ ತುಸು ಶಾಂತಿ ದೊರೆತು. ಆದರೆ ಸಂಪೂರ್ಣವಲ್ಲವೆನ್ನಿ....

ಆತ ಕೆಲದಿನಗಳಿಂದ ಅಲ್ಲಿಗೆ ವರ್ಗಾಯಿಸಲ್ಪಟ್ಟ ಪೋಲೀಸ್. ಅವನ ಸಂಸಾರವೂ ದೊಡ್ಡದು. ಆದ್ದರಿಂದ ಆ ರೇಶನ್ ಅಕ್ಕಿ ಮೂರು ದಿನಕ್ಕೆ ಖಾಲಿ. ಅದಕ್ಕಾಗಿ ಆತನಿಗೆ ಹೀಗೆ ಅಕ್ಕಿ ಬೇಕಾಗುತ್ತದೆಂದೂ, ಆದರೆ ಅಧಿಕಾರಿಯೊದ್ದರಿಂದ ತರುವುದು ತಪ್ಪೆಂದೂ ತಿಳಿದು ವೆಂಕಟಸುಬ್ಬನವರನ್ನ ಹಿಡಿದರೆ ತಂದುಕೊಟ್ಟಾರೆಂದೂ, ಹಾಗೆ ಹೆಸರು ಕೇಳಿದನಂತೆ ಪರಿಚಯ ಮಾಡಿಕೊಂಡನಂತೆ. 'ಉಸ್ಸಪ್ಪ, ಎಂದರು ರಾಯಭಾರತ್ವದ ಫಲ ಕೇಳಿ ಆದರೆ ಕೊರಗೊಂದು ತಿಳಿನೀರಿನ ತಳದಲ್ಲಿದ್ದ ಕೆಸರಿನಂತಿತ್ತು. ನೀರು ಅಲುಗಾಡಿದರೆ ಕೆಸರು ಮೇಲೆ ಬಂದು, ನೀರನ್ನು ಕದಡಿ ಹಾಳು ಮಾಡುತ್ತದೆ—

ಇಂತಹ ಸಾಹಸದ ಹಲವಾರು ಕಥೆಗಳನ್ನು ಕೇಳಿ ಸವಿಯ ಬೇಕಾದರೆ ವೆಂಕಟ ಸುಬ್ಬನವರ ಮನೆಗೆ ಸಂಜೆ ಹೋಗಬೇಕು. ಅಭ್ಯಾಗತನ ಹಿಂದೆ ಮಕ್ಕಳನ್ನೂ ಕುಳ್ಳಿರಿಸಿ, ಕಥೆಯನ್ನು ರಸವತ್ತಾಗಿ ಹೇಳುತ್ತಾರೆ.

ಮುಗಿಯುತ್ತಲೇ, ಅರ್ಧ ಕುಂಕುಮದ ಬಾಗು ಬೆನ್ನಿನ ಅವರ ಧರ್ಮಪತ್ನಿ, ಎರಡು ಕೈಯಲ್ಲಿ ಎರಡು ಲೋಟಾ ಕಾಫಿ ಹಿಡಿದು ಒಂದು ಮೆಟ್ಟಲು ಇಳಿದು, ಅಂಗಳಕ್ಕೆ ಕಾಲಿಡುತ್ತಲೆ, "ಉತ್ತರನ ಪೌರುಷ ಒಲೆಯ ಮುಂದೆ" ಎಂದು ಹಳೆ ಗಾದೆಯ ಮಾತನ್ನು ಹೊಸತುಗೊಳಿಸಿ ಅದರ ತಲೆ ತೂಗುತ್ತಾರೆ. ಇವರೂ ಹೆಮ್ಮೆ ಮುಗುಳ್ನಗೆಯಿಂದ, ತೃಪ್ತಿಯ ಆಳದಿಂದ ತಾವೂ ಅದಕ್ಕೆ ತಾಳವಿಕ್ಕುತ್ತಾರೆ, ತಲೆತೂಗಿ!

ಪ್ರಕಟಣೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 25/1962.

1) ಪದ್ಮಾಕ್ಷಿ, 2) ಚಂದ್ರಮೋಹನ, 3) ಜೈರಾಜ, 4) ಪ್ರದೀಪ 5) ಜಗದೀಶ- ಮೈನರ್ರು U. ತನಿಯಪ್ಪನ ಮಕ್ಕಳು, ಕುಂದಾಪುರ ತಾಲ್ಲೂಕು ಕೋಟೇಶ್ವರದಲ್ಲಿರುವವರು ಇವರ ಗಾರ್ಡಿಯನ್ ವ ರಕ್ಷಕ ಕೊಂದಾಳಿ ಕೃಷ್ಣ- ಕುಂದಾಪುರ ತಾಲ್ಲೂಕು, ಕೋಟೇಶ್ವರ.
— ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೂ ತಿಳಿಸುವದೇನಂದ್ರೆ—

ಮೇಲ್ಕಂಡ ಅರ್ಜಿಯಲ್ಲಿ A ಶೆಡ್ಯೂಲಿನಲ್ಲಿ ವಿವರಿಸಿದ ಐವೇಜುಗಳನ್ನು ಬರಮಾಡಿಕೊಳ್ಳುವರೆ ಅರ್ಜಿದಾರರ ಬಗ್ಗೆ ಅವರ ಗಾರ್ಡಿಯನ್ ಮತ್ತು ಚಿಕ್ಕ ತಂದೆ ಕೊಂದಾಳಿ ಕೃಷ್ಣನವರ ಹೆಸರಿನಲ್ಲಿ Succession Certificate ಕೊಡಿಸುವಂತೆ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿದಾರರು ಅರ್ಜಿ ಕಸಟ್ಟಿರುವದ್ರಿಂದ ಆ ಕುರಿತು ಯಾರಿಗೇನಾದರೂ ಆಕ್ಷೇಪಣೆಯಿದ್ದಲ್ಲಿ ಅದನ್ನು ಮೇಲ್ಕಂಡ ಕೋರ್ಟಿನಲ್ಲಿ ತಾ. 28—6—1962ನೆ ಪಗಲು ಗಂಟೆ 11ಕ್ಕೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲಕ ಸಮಸ್ತರಿಗೂ ತಿಳಿಸೋಣಾಗಿಯದೆ.

K. Varadaraya Pai,
Advocate for petitioner.

ಉಡುಪಿ, ತಾ. 12-4-1962.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೌಭಾಗ್ಯರವಿ ಎಂ. ವಿ. ಯವರ ನಿಧನ

(೧ನೇ ಪುಟದಿಂದ)

ಭೂತಪೂರ್ವ ಗವರ್ನರ ಜನರಲ್ ಹಾಗೂ ಸದ್ಯ ಸ್ವತಂತ್ರ ಪಕ್ಷದ ನಾಯಕರಾದ ರಾಜಾಜಿಯವರು ಎನ್ನುವಂತೆ ವಿಶ್ವೇಶ್ವರಯ್ಯ ಭಾರತದ ಒಬ್ಬ ಮಹಾ ವ್ಯಕ್ತಿ. ಕರ್ನಾಟಕ ಜನಪ್ರಿಯ ಮತ್ತು ಗೌರವ ಪಾತ್ರರು. ಸಾತ್ವಿಕ ವಿಚಾರವಂತರು, ಸ್ವಚ್ಛ ಜಿಜ್ಞಾಸು, ಸಕ್ರಿಯಾತ್ಮರು, ದೇಶಕ್ಕಾಗಿ ತನ್ನ ಜೀವನವನ್ನೇ ಮುಡುಪಿಟ್ಟು ಅರ್ಪಿಸಿದ ಮಹಾತಪಸ್ವಿಗಳು ಇಂತಹ ಸಾರ್ವದೇಶಿಕ ವ್ಯಕ್ತಿ ನಿರಂತರ ಕಾರ್ಯ ಶೀಲತೆಯಿಂದಲೇ ಸಂಪೂರ್ಣ ಜೀವನವನ್ನು ಒದುಕಿ, ಪ್ರಪಂಚದಿಂದ ತೊಲಗಿ ಹೋದರು. ಇಡಿಯ ಕರ್ನಾಟಕ ರಾಜ್ಯದ ಅಭಿವೃದ್ಧಿ ಯೋಜನೆಗಳೇ ಅವರ ಚಿರಸ್ಮಾರಕಗಳು.

ಬೆಂಗಳೂರಿನಲ್ಲಿ ವಿಶ್ವೇಶ್ವರಯ್ಯನವರ ಶತಮಾನೋತ್ಸವದ ಸವಿನೆನಪಿಗಾಗಿ ಒಂದು ವಸ್ತು ಸಂಗ್ರಹಾಲಯವನ್ನು ನಿರ್ಮಿಸಲಾಗುತ್ತಿದೆ. ಇದನ್ನು ಇದೇ ತಿಂಗಳ ೨೦ನೆ ದಿನಾಂಕದಂದು ಪ್ರಧಾನಿ ನೆಹರು ಅವರು ಉದ್ಘಾಟಿಸಬೇಕಾಗಿತ್ತು. ಆದರೆ, ಕಾರಣಾಂತರದಿಂದ ಪ್ರಧಾನಿಯವರ ಕಾರ್ಯಕ್ರಮವು ಮುಂದೆ ಬಿತ್ತು. ಒಂದು ದೃಷ್ಟಿಯಿಂದ ಹೀಗಾದುದೂ ಸರಿಯಾಯಿತು. ಇಲ್ಲವಾಗುತ್ತಿದ್ದರೆ, ಸೂತಕದಲ್ಲಿಯೇ ಕಾರ್ಯಕ್ರಮ ನಡೆದು ಹೋಗಬೇಕಾಗುತ್ತಿತ್ತು.

ರಾಜ್ಯದ ಮಹಾಶಿಲ್ಪಿ ಭಾರತರತ್ನ ವಿಶ್ವೇಶ್ವರಯ್ಯನವರನ್ನು ಅಂತಿಮ ಕಾಲದಲ್ಲಿ ಉಪಚರಿಸುತ್ತಿದ್ದ ಡಾಕ್ಟರರು 'ಅವರ ಪ್ರಾಣಪಕ್ಷಿಯು ಬಹು ಮೊದಲೇ ಹಾರಿ ಹೋಗುತ್ತಿತ್ತು; ಆದರೆ, ಇಚ್ಛಾಶಕ್ತಿಯ ಬಲದಿಂದ ಅವರ ಹೃದಯದ ಗತಿಯು ಮುಂದುವರಿಯಿತು' ಎಂದು ಹೇಳಿದ್ದಾರೆ. ಇದರಿಂದ ಅವರ ಹೃದಯದ ಶಕ್ತಿಯ ಅರಿವು ನಮಗಾಗುವುದು. ದಿವಂಗತರು ತಮ್ಮ ಅಂತಿಮ ಸಂಸ್ಕಾರವು ತಮ್ಮ ಜನ್ಮಸ್ಥಳವಾದ ಮುದ್ದೇನಹಳ್ಳಿಯಲ್ಲಿ ಆಗಬೇಕೆಂದು ಬಯಸಿದ್ದರು. ನಿಸರ್ಗ ಸುಂದರವಾದ ನಂದಿ ಬೆಟ್ಟಗಳ ಸಮೀಪದಲ್ಲಿರುವ ಈ ಹಳ್ಳಿಯು ಬೆಂಗಳೂರಿನಿಂದ ೩೭ ಮೈಲು ದೂರದಲ್ಲಿದೆ. ಅಲ್ಲಿ ಚಂದನದ ಚಿತೆಯಲ್ಲಿಟ್ಟು ಮೃತರ ಕಳೇಬರವನ್ನು ರಾಜ ವೈಭವದೊಂದಿಗೆ ಸಂಸ್ಕರಿಸಲಾಯಿತು.

ವಿಶ್ವೇಶ್ವರಯ್ಯನವರ ಮೃತ್ಯುವು ನಡೆದ ದಿನ ಮತ್ತು ಸಮಯವಾದರೂ ವಿಶಿಷ್ಟವಾದುದು. ಚೈತ್ರ ಮಾಸದ ದಶಮಿಯ ದಿನದಂದೇ ಅವರ ತಂದೆಯವರೂ ದೇಹಾಂತಗೊಂಡಿದರಂತೆ! ತಂದೆಯವರ ಶ್ರಾದ್ಧಕರ್ಮವು ನಡೆಯಬೇಕಾದ ದಿನವೇ ಶ್ರಾದ್ಧಕರ್ತೃವೂ ಚಿರಲೋಕವನ್ನು ಸೇರಿದ ಘಟನೆಯು ಅತ್ಯಪರೂಪವೆನ್ನಬಹುದು. ಮೂಡುಗಿರಿಯಲ್ಲಿ ಸೂರ್ಯೋದಯವಾಗುತ್ತಿರುವಂತೆಯೇ ಕರ್ನಾಟಕದ ಭಾಗ್ಯರವಿಯು ಅಸ್ತಂಗತನಾದುದು ಇನ್ನೊಂದು ವಿಶೇಷ.

ಅನುಪಮ ವ್ಯಕ್ತಿತ್ವವನ್ನು ಗಳಿಸಿದ ಭಾರತ ಮಾತೆಯ ಅನುಗ್ರಹದಿಂದ ಜನಿಸಿದ ವಿಶ್ವೇಶ್ವರಯ್ಯನವರ ಸ್ಮಾರಕವೊಂದನ್ನು ರಚಿಸುವತ್ತ ಕೆಲವರ ಮನಸ್ಸು ಹರಿಯುತ್ತಿರಬಹುದು. ಇದು ಸ್ವಾಭಾವಿಕವೇ. ಕ್ರಮಬದ್ಧ ಜೀವನದಿಂದ ಸಕಲ ಜನಕೋಟಿಗೆ ಮಾದರಿಯಾಗಿ ನಡೆದುಬಂದ ವಿಶ್ವೇಶ್ವರಯ್ಯನವರಿಗೆ ಆಡಳಿತದಲ್ಲಿ ಕಾರ್ಯಕುಶಲತೆಯನ್ನು ತರುವುದೇ ನಿಜವಾದ ಸ್ಮಾರಕವೆಂದು ರಾಜಾಜಿ ಹೇಳುತ್ತಾರೆ. ಇಂದು ಸಮಯದ ಬೆಲೆಯರಿಯದೆ ಪ್ರಶಾಸನದ ಕಾರ್ಯವು ದಿನದಿಂದ ದಿನಕ್ಕೆ ನಿಧಾನವಾಗುತ್ತ ಬರುತ್ತಿದೆ. ಇಂತಹ ಸಂದರ್ಭದಲ್ಲಿ ರಾಜಾಜಿಯವರು ಸೂಚಿಸಿದ ಸ್ಮಾರಕವು ಅತ್ಯವಶ್ಯವೆನಿಸುತ್ತದೆ.

ವಿಶ್ವೇಶ್ವರಯ್ಯನವರ ಆತ್ಮವು ಮೇರುವಿನಷ್ಟು ದೊಡ್ಡದು; ಅವರ ಹೃದಯವು ದೇವಗಂಗೆಯ ನೀರಿನಂತೆ ನಿರ್ಮಲವಾದುದು; ಅವರ ಜೀವವು ದೇಶದ ಸೇವೆಗಾಗಿ ಹಂಬಲಿಸುವಂತಹ, ಅಧಿಕಾರದ ಆಮಿಷಕ್ಕೆ ಬಲಿ ಬೀಳದೆ, ಸಂಪತ್ತಿಗಾಗಿ ಬಾಯ್ಬಿಡದೆ ತನ್ನ ತನವನ್ನು ಎಂದೆಂದಿಗೂ ಬಿಟ್ಟುಬಿಡದೆ ನಾಡಿಗಾಗಿ, ನಾಡಿನವರಿಗಾಗಿ ತನ್ನ ಜೀವನವನ್ನೇ ತೇದ ಅಮರ ವ್ಯಕ್ತಿತ್ವ ಅವರದು.

ಪಾರಿಜಾತದ ಹೂವು ಅರಳಿ ಒಂದು ರಾತ್ರಿ ಪರಿಸರ ತುಂಬ ಸುಗಂಧವನ್ನು ಬೀರಿ ಮರುಮುಂಜಾನೆ ಉದುರಿಹೋಗುತ್ತದೆ. ಆದರೆ, ಗುಲಾಬಿ ಹೂ ಹಾಗಲ್ಲ ಅದು ಸುಗಂಧಿಯೂ ಹೌದು, ಔಷಧೋಪಯೋಗಿಯೂ ಹೌದು; ಪಾರಿಜಾತದ ಹೂವಿನಂತೆ ಅಸ್ಥಿರವೂ ಅಲ್ಲ. ದಿವಂಗತ ವಿಶ್ವೇಶ್ವರಯ್ಯನವರು ಕರ್ನಾಟಕದ ಉದ್ಯಾನದಲ್ಲಿ ಅರಳಿದ ಗುಲಾಬಿಯ ಹೂವೊಂದು. ಒಂದು ಹೂ ಉದುರಿಹೋದರೆ, ಮತ್ತೊಂದು ಅರಳುವಂತೆ ಗಿಡಕ್ಕೆ ಗೊಬ್ಬರ ನೀರು ಹಾಕುವುದು ಅತ್ಯವಶ್ಯ. ಇಂತಹ ಉಪಯುಕ್ತ ಮಾದರಿಯ ಸ್ಮಾರಕ ಡಾ| ವಿಶ್ವೇಶ್ವರಯ್ಯನವರಿಗೆ ಏರ್ಪಡುವುದು ಅಪೇಕ್ಷಣೀಯವೆಂಬಂತಿದೆ.

—ಗೋರಾ.

ಸೂರ್ಯತಾಪವನ್ನೇ ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸುವ ಈ ಯಂತ್ರವನ್ನು ಅಮೆರಿಕೆಯ ವೆಸ್ಟಿಂಗ್ ಹೌಸ್ ಕಂಪೆನಿಯು ನಿರ್ಮಿಸಿದೆ ಇದರಿಂದ ಸಣ್ಣ ಹಳ್ಳಿಯೊಂದರ ನೀರಾವರಿಗೆ ಅಥವಾ ಗೃಹೋಪಯೋಗಕ್ಕೆ ಸಾಕಷ್ಟು ಶಕ್ತಿಯು ದೊರೆಯುವುದು.

ಸಮಗ್ರ ವಚನ ವಾಙ್ಮಯ ಪ್ರಕಟಣೆ

(೧ನೇ ಪುಟದಿಂದ)

ಕಾಯ್ದಿಟ್ಟು, ಅವುಗಳಿಂದ ಯೋಗ್ಯ ಪ್ರಯೋಜನವನ್ನು ಪಡೆದು—ಅವುಗಳ ಒಡೆಯರು ಬಯಸಿದರೆ—ಅವರಿಗೆ ಮರಳಿ ಕೊಡುವ ಯೋಜನೆಯನ್ನು ಇಟ್ಟುಕೊಳ್ಳಲಾಗಿದೆ.

ಇಂಥ ಸಂಸ್ಕರಣ ಕಾರ್ಯಗಳನ್ನು ಮೇಲಿಂದ ಮೇಲೆ ಮಾಡುವದು ಸಾಧ್ಯವಿಲ್ಲ. ಒಮ್ಮೆ ಮಾಡುವಾಗ ಉಪಲಬ್ಧವಾಗಬಹುದಾದ ಎಲ್ಲ ಗ್ರಂಥಗಳನ್ನೂ ಸಂಗ್ರಹಿಸಿ, ಶಾಸ್ತ್ರೀಯವಾಗಿ ಸಂಸ್ಕಾರಗೊಳಿಸಿ ವಚನಗಳನ್ನು ಮುದ್ರಿಸಬೇಕಾಗುವದು. ಇಂಥ ಸಮಯಲ್ಲಿ ತಮ್ಮ ತಮ್ಮ ಮನೆಗಳಲ್ಲಿದ್ದ ವಚನ ಗ್ರಂಥಗಳು ಉಪಯೋಗವಾಗದೆ ಹೋದರೆ, ಅವು ಹೆಚ್ಚಾಗಿ ಹುಳುಗಳ ಪಾಲಾಗುತ್ತವೆ. ತಾಡ ಓಲೆಯ ಗ್ರಂಥಗಳನ್ನು ಕೆಡದಂತೆ ಕಾಪಾಡುವದಕ್ಕಾಗಿ ಈಗ ರಾಸಾಯನಿಕ ದ್ರವ್ಯಗಳನ್ನು ತಯಾರಿಸಿರುವರು. ವಿಶ್ವವಿದ್ಯಾಲಯಕ್ಕೆ ಕೊಡಲ್ಪಟ್ಟ ತಾಡ ಓಲೆಯ ಗ್ರಂಥಗಳನ್ನು, ಈ ರಸಾಯನದ ಮೂಲಕ ಚೆನ್ನಾಗಿ ಜತನ ಮಾಡಲಾಗುವದು. ಮನೆಯಲ್ಲಿ ದಿನ ದಿನಕ್ಕೂ ಗಾಳಿ ಬೆಳಕುಗಳನ್ನು ಕಾಣದೆ ಖಿಲವಾಗಿ ಹೋಗುತ್ತಿರುವ ಈ ಗ್ರಂಥಗಳನ್ನು ಉದಾರವಾದ ಮನಸ್ಸಿನಿಂದ ವಿಶ್ವವಿದ್ಯಾಲಯದಂಥ ಮಹಾ ಸಂಸ್ಥೆಗಳಿಗೆ ನೀಡಿದರೆ ಪವಿತ್ರವಾದ ಕಾರ್ಯದಲ್ಲಿ ಅವರೂ ಭಾಗಿಗಳಾದಂತಾಗುತ್ತದೆ.

ಪ್ರಾಯಶಃ ವಿಶ್ವವಿದ್ಯಾಲಯದವರು ನಿಯಮಿಸಿದ ಸಂಶೋಧಕರಿಗೆ ಎಲ್ಲ ಊರುಗಳನ್ನೂ ಎಲ್ಲ ಜನರನ್ನೂ ಕಾಣುವುದು ಶಕ್ಯವಾಗಲಿಕ್ಕಿಲ್ಲ. ಆದುದರಿಂದ ಮೇಲ್ಕಂಡ ಗ್ರಂಥಗಳು ತಮ್ಮಲ್ಲಿ ಉಳ್ಳವರು ನಮಗೆ ಪತ್ರ ಮುಖಾಂತರ ತಿಳಿಸುವಕೃಪೆ ಮಾಡಿದರೆ ತುಂಬಾ ಸಹಾಯ ಮಾಡಿದಂತಾಗುತ್ತದೆ.

ಒಂದು ವ್ಯಕ್ತಿಯಿಂದಾಗದ ಕೆಲಸಗಳು ಸಾವಿರ ಶಕ್ತಿಗಳು ಕೈಗೂಡಿದರೆ ಅವಶ್ಯವಾಗಿ ಈಡೇರಬಲ್ಲವು. ಈಗ ಕೈಗೊಂಡಿರುವ ವಚನ ವಾಙ್ಮಯದ ಕಾರ್ಯವು ನಾಡಿನ ಸಮಗ್ರ ಜನತೆಯ ಉದಾರವಾದ ಸಹಾಯದಿಂದಲೇ ನೆರವೇರಬಲ್ಲದೆಂಬ ಅರಿವು ನಮಗೆ ಪೂರ್ತಿಯಾಗಿ ಇದೆ. ಅಂತೆಯೇ ಅವರ ಮುಂದೆ ಈ ಪ್ರಾರ್ಥನೆಯನ್ನು ನಿವೇದಿಸಿದ್ದೇವೆ. ದಯವಿಟ್ಟು ಎಲ್ಲರೂ ಈ ದಿಸೆಯಲ್ಲಿ ಸಹಾಯ ಸಹಕಾರಗಳನ್ನು ನೀಡಬೇಕೆಂದು ಇನ್ನೊಮ್ಮೆ ಬಿನ್ನವಿಸಿಕೊಳ್ಳುತ್ತೇವೆ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

Edited Printed & Published by K. H. Shetty, at the Navayuga Press, Udipi, S, India.

ಲಂಚ್ಟೀಯ ವಾರಪತ್ರಿಕೆ.

ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೩೩ | ಉಡುಪಿ 26—4—1962 ಗುರುವಾರ | Vol 41 No 33

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ ಉಡುಪಿ

ಪಾಕ್ ಶಾಸಕರಿಂದ
ಭಾರತಕ್ಕೆ ಮರಳಿ ವಿಶ್ವಾಸಘಾತ

ನೆರೆಯ ರಾಜ್ಯ ಪಾಕಿಸ್ತಾನಕ್ಕೂ ಭಾರತಕ್ಕೂ ದಾಯಾದಿ ಮತ್ಸರವಿದೆಯೆಂಬುದು ಜಗಜ್ಜನಿತ ವಿಚಾರ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಸಲುವಾಗಿ ಪಾಕಿಸ್ತಾನ ಭಾರತವನ್ನು ಲೋಕದ ಮುಂದೆ ಸಣ್ಣದು ಮಾಡುವ ತೀವ್ರ ಅಭಿಲಾಷೆಯಿಟ್ಟು ಏನಾದರೊಂದು ಹಂಚಿಕೆಯನ್ನು ಹೂಡುತ್ತ ನಡೆದಿದೆ; ನಡೆಯುತ್ತಿದೆ ಭಾರತವು ಪ್ರಜಾಪ್ರಭುತ್ವದ ಆದರ್ಶ ಸಂವಿಧಾನದ ತಳಹದಿಯಲ್ಲಿ ಮುನ್ನಡೆಯುತ್ತ ಜಗತ್ತಿನ 'ಜ್ಯೋತಿ'ಯಾಗಿ ರೂಪಾಂತರಗೊಳ್ಳುತ್ತ ನಡೆದಿರುವಾಗ, ಪಾಕಿಸ್ತಾನವು ಅಸ್ಥಿರ ರಾಜಕೀಯರಂಗದ ಬೀಡಾಗಿ, ದೌರ್ಜನ್ಯಗಳನ್ನು ನಡೆಸುತ್ತ ಬರುತ್ತಿದೆ. ಕಾಶ್ಮೀರದ ಪ್ರಶ್ನೆಯನ್ನು ಮತ್ತೂ ಮತ್ತೂ ಜಗಿಯುತ್ತ ಭಾರತದ ಸುಕೀರ್ತಿಗೆ ಕಳಂಕ ಹಚ್ಚುವ ಮಹಾ ಸಾಹಸವನ್ನದು ಮಾಡುತ್ತಿದೆ. ಇದರ ಮೇಲೆ ಅಂತರಾಷ್ಟ್ರೀಯ ನ್ಯಾಯವನ್ನು ಮೀರಿ, ಭಾರತದ ಸಾರ್ವಭೌಮಾಧಿಕಾರವನ್ನು ತಾನೇ ಮಾಡಿ ತನ್ನ ಇತ್ತ ವಿಶ್ವಾಸವನ್ನು ಗಾಳಿಗ ತೂರಿ ಅದು ಮಹಾ ಅನ್ಯಾಯವನ್ನು ಮಾಡಿದೆ. ಇಂತಹ ಅನ್ಯಾಯ—ಅಂತರಾಷ್ಟ್ರೀಯ ನ್ಯಾಯೋಲ್ಲಂಘನೆಗೊಂದು ನಿದರ್ಶನವಾಗಿ ನಿಂತಿದೆ ಅದು ಕಟ್ಟಿಸಿದ ಕರ್ಣಫೂಲಿ ಅಣೆಕಟ್ಟು.

ಕರ್ಣಫೂಲಿ ಅಣೆಕಟ್ಟು

ಪೂರ್ವ ಪಾಕಿಸ್ತಾನದಲ್ಲಿ ಭಾರತದ ಸೀಮೆಯಿಂದ ಅನತಿ ದೂರದಲ್ಲಿರುವ ಕರ್ಣಫೂಲೀ ಅಣೆಕಟ್ಟನ್ನು ಪಾಕ್ ಸರಕಾರವು ೧೯೫೦ರ ಸುಮಾರಿನಲ್ಲಿಯೇ ಕಟ್ಟಲು ಆಲೋಚಿಸಿತ್ತು. ಅದರಿಂದ ೧೨೦ ಸಾವಿರ ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ತಯಾರಿಸುವ ಉದ್ದೇಶವಿಟ್ಟುಕೊಂಡು ಈ ಕಟ್ಟಿನ ರಚನೆಯನ್ನು ಅದು ಮುಂದ ತಂದಿತ್ತು. ಕಳೆದ ಮಾರ್ಚಿ ಕೊನೆಯ ದಿನಾಂಕದಂದು ಈ ಕಟ್ಟೆಯ ನಿರ್ಮಾಣವು ಕೊನೆಗೊಂಡು, ಅದರ ಉದ್ಘಾಟನೆಯ ಕಾರ್ಯವೂ ನಡೆದಿದೆಯೆಂದು ತಿಳಿಯುತ್ತದೆ ಈ ಅಣೆಕಟ್ಟಿನ ಜಲಾಶಯದ ಪ್ರದೇಶದಲ್ಲಿ ಭಾರತದ ಭಾಗವಾಗಿರುವ ಲುಶಾಯಿ ಪರ್ವತಕಣಿವೆಯ ಬಹುಭಾಗವು ಸೇರುವುದರಿಂದ ಅಲ್ಲಿನ ನಾಗರಿಕರು ಸಂಕಷ್ಟದಲ್ಲಿ ಬೀಳುವಂತಾಯಿತು.

ಅಕ್ಷಮ್ಯ ಅಪರಾಧ

ಇಂತಹ ಅಕ್ಷಮ್ಯ ಅಪರಾಧನೆಸಗಿದ ಪಾಕಿಸ್ತಾನವು ಅಣೆಕಟ್ಟಿನ ಉದ್ಘಾಟನೆಗೆ ಕೇವಲ ೨೪ ತಾಸು ಕಾಲಾವಧಿಯಿರುವಾಗ ಈ ಸಂಬಂಧದ ಸುದ್ದಿಯನ್ನು ಭಾರತೀಯ ರಾಯಭಾರಿಗೆ ತಿಳಿಸಿತು ಇದಕ್ಕೆ ಉತ್ತರ ರೂಪವಾಗಿ ಭಾರತ ಸರಕಾರವು ಕಠೋರವಾದ ಶಬ್ದಗಳಿಂದ ಪತ್ರ ಬರೆದಿದೆಯಲ್ಲದೆ, ಅದರಲ್ಲಿ ಅಂತರಾಷ್ಟ್ರೀಯ ನ್ಯಾಯವನ್ನು ಮೀರಿದು, ವಿಶ್ವಾಸಘಾತವನ್ನು ಮಾಡಿದ ಪಾಕ್ ಪ್ರಕ್ರಿಯೆಗೆ ತೀವ್ರವಾದ ಪ್ರತಿಭಟನೆಯನ್ನು ಮಾತ್ರವಲ್ಲ, ಅವಕಾಶವೊದಗಿದಾಗ, ಇದಕ್ಕೆ ತಕ್ಕ ಪ್ರತೀಕಾರವನ್ನೂ ಮಾಡುವುದೆಂದು ತಿಳಿಸಿದೆ ಆದರೆ, ಭಾರತವು ಕೈಗೊಳ್ಳಬಹುದಾದು ಪ್ರತೀಕಾರ ಕಾರ್ಯ ಯಾವುದು ಎಂಬುದಿನ್ನೂ ಬಹಿರಂಗವಾಗಿಲ್ಲ ಪಾಕ್ ಸರಕಾರವು ತನ್ನ ಏಕಪಕ್ಷೀಯ ಕಾರ್ಯಕ್ರಮವನ್ನು ಕೈಗೊಂಡುದರಿಂದ ಎರಡು ಪ್ರಶ್ನೆಗಳು ಏಳುತ್ತವೆ ಮೊದಲನೆಯದಾಗಿ, ಅಣೆಕಟ್ಟಿನ ಕಾರ್ಯವು ನಡೆದುದು ವಿಶ್ವಾಸಘಾತದಿಂದ, ಮತ್ತು ಎರಡನೆಯದಾಗಿ, ಭಾರತಕ್ಕೆ ಯಾವುದೇ ಮೂರ್ವ ಸೂಚನೆ ಕೊಡದೇನೇ ಇದರ ನಿರ್ಮಾಣವ ಗಿದೆ.

ಎರಡು ಪ್ರಶ್ನೆಗಳು

ಅಣೆಕಟ್ಟು ನಿರ್ಮಾಣಗೊಂಡುದು ಆಜ್ಞಾತದಲ್ಲಿಯೇ ನದಿಗೆ ಅಡ್ಡವಾಗಿ ಕಟ್ಟೆ ಕಟ್ಟುವಾಗ, ಅದರಿಂದಾಗಿ ಎಷ್ಟು ಭೂಮಿಯು ನೀರಿನಡಿ ಮುಳುಗುವುದು ಎಂಬುದರ ಪಂಚಶೀಲನೆಯೂ ಆಗ ನಡೆಯದಿರುವ ಸನ್ನಿವೇಶದಲ್ಲಿ ಹಾಗಿರುವಾಗ ಒದಗ ಬಹುದಾದ ನಷ್ಟವನ್ನು ತುಂಬಿ ಕೊಡುವುದು ಮತ್ತು

ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಇತ್ತೀಚೆಗೆ ರಾಷ್ಟ್ರಪತಿ ಭವನದಲ್ಲಿ ಶ್ರೀ ವಿಶ್ವೇಶ್ವರಯ್ಯನವರಿಗೆ 'ಭಾರತರತ್ನ' ಪ್ರಶಸ್ತಿಯನ್ನಿತ್ತು ಸನ್ಮಾನಿಸಿದಾಗಿನ ಚಿತ್ರ

ವಿದ್ಯುತ್ತನ್ನು ಒದಗಿಸುವ ಸಂಬಂಧದಲ್ಲಿ ಒಡಂಬಡಿಕೆಯ ಮಾತುಕತೆಗಳು ಜರುಗದ ಸಮಯದಲ್ಲಿ ಭಾರತ ಸರಕಾರಕ್ಕೆ ಅಧಿಕೃತವಾಗಿ ಯಾವುದೇ ಸೂಚನೆಯೀಯದ ತಾನೇ ತಾನಾಗಿ ಪಾಕಿಸ್ತಾನವು ಕಟ್ಟಿಸಿಕೊಂಡ ಕಟ್ಟಿದು ಎಂಬುದು ಎರಡನೆಯ ದೋಷ

ಏಕಪಕ್ಷೀಯ ಕಾರ್ಯ

ಹನ್ನೆರಡು ವರ್ಷಗಳಿಗೆ ಮೊದಲು, ೧೯೫೦ರ ಫೆಬ್ರವರಿಯಲ್ಲಿ ಈ ಸಂಬಂಧದ ಪತ್ರವ್ಯವಹಾರಗಳು ಉಭಯ ಸರಕಾರಗಳ ನಡುವೆ ಮೊದಲಾಗಿದ್ದುವು. ಕರ್ಣಫೂಲಿಯ ಅಣೆಕಟ್ಟು ಕೇವಲ ೧೧೦ ಅಡಿ ಮಾತ್ರ ಎತ್ತರವಿರುವುದೆಂದು ಪಾಕ್ ಆಗ ತಿಳಿಸಿತ್ತು. ಆದರೆ ಅದೇ ಕಾಲಕ್ಕೆ ಈ ಕಟ್ಟೆಯ ರಚನೆಯಿಂದಾಗಿ, ಲುಶಾಯಿ ಪರ್ವತ ಪ್ರದೇಶದ ಬಹುಭಾಗವು ಮುಳುಗಡೆ ಹೊಂದುವುದೆಂಬ ಕಾರಣದಿಂದ ತನ್ನ ಉಗ್ರಪ್ರತಿಭಟನೆಯನ್ನು ಭಾರತ ಸರಕಾರವು ಕಳಿಸಿತ್ತು. ಆದರೂ ಪಾಕಿಸ್ತಾನವು ಇತ್ತ ಗಮನಿಸದೆ ಕೆರೆಯ ಮರೆಯಲ್ಲಿಯೇ ತನ್ನ ಕೆಲಸವನ್ನು ಮುಂದೊತ್ತುತ್ತ ಬಂದಿತು. ಇವನ್ನು ತಿಳಿದ ಭಾರತ ಸರಕಾರವು ಕಳೆದ ಸಪ್ಟಂಬರದಲ್ಲಿ ಒಂದು ಪತ್ರ ಬರೆದು, ಕಟ್ಟವು ೧೯೬೦ರ ಹೊತ್ತಿಗೆ ಪೂರ್ಣವಾಗುವುದೆಂದು ತಿಳಿದುದರಿಂದ, ಅದು ಮುಗಿಯುವುದಕ್ಕೆ ಮೊದಲೇ ಎದ್ದಿರುವ ಕೆಲವೊಂದು ಪ್ರಶ್ನೆಗಳನ್ನು ಉತ್ತರಿಸಬೇಕು ಎಂದು ತಿಳಿಸಿತ್ತು. ಎರಡೂ ದೇಶಗಳ ಇಂಜಿನಿಯರರು ಈ ಸಂಬಂಧದಲ್ಲಿ ಸರ್ವೆ ನಡೆಸಬೇಕೆಂದೂ ನೀರಿನಡಿ ಮುಳುಗಬಹುದಾದ ಭೂಮಿಯ ಕುರಿತಾದ ಮಾಹಿತಿ ನಡೆಯಬೇಕು; ಏಕೆಂದರೆ, ತನಗೆ, ತನ್ನ ನಾಗರಿಕರಿಗೆ ಸಂಭವಿಸುವ ಹಾನಿಗಳ ಬಗ್ಗೆ ಆವಶ್ಯಕ ಕಾರ್ಯಕ್ರಮ ನಡೆಸಲು ತನಗೆ ಅಧಿಕಾರವಿರುವುದೆಂದೂ ಭಾರತವು ತಿಳಿಸಿತ್ತು.

ವಿಶ್ವಾಸಘಾತ

ಹಿಂದಿನಿಂದಲೂ ಪಾಕಿಸ್ತಾನವು ಯಾವ ಸೂಚನೆಯನ್ನೂ ಕೊಡಲಿಲ್ಲ. ಆದರೆ, ಉದ್ಘಾಟನೆಗೆ ಹಿಂದಿನ ದಿನ ಮಾತ್ರ ಕರಾಚಿಯಲ್ಲಿರುವ ಭಾರತೀಯ ಹೈಕಮಿಶನರರಿಗೆ ಒಂದು ಸೂಚನೆಯಿತ್ತಿತು ಈ ಪತ್ರದಲ್ಲಾದರೂ ಕ್ಷತಿಪೂರ್ತಿ ಮತ್ತು ವಿದ್ಯುಚ್ಛಕ್ತಿಯ ಸಂಬಂಧದಲ್ಲಿ ಒಡಂಬಡಿಕೆ ಮಾಡುವುದನುಚಿತವೆಂದೂ ಅದು ತಿಳಿಸಿತ್ತು. ಭಾರತ ಮತ್ತು ಪಾಕಿಸ್ತಾನ ಇಂಜಿನಿಯರರುಗಳು ಕಳೆದ ಅಕ್ಟೋಬರ ೧೯ರಿಂದ ೩೦ರ ವರೆಗೆ ಒಟ್ಟು ಸೇರಿ ಕೇವಲ ೨೫ರಷ್ಟು ವಿದ್ಯುತ್ತನ್ನು ಭಾರತಕ್ಕೆ ನೀಡುವುದೆಂದು ಗೊತ್ತಾಗಿತ್ತು.

ಪಾಕಿನ ಮತ್ತೊಂದು ವಾದ

ಅಣೆಕಟ್ಟಿನ ಎತ್ತರವು ಕೇವಲ ೧೧೦ ಅಡಿಗಳೆಂದೂ ಇದಕ್ಕಿಂತ ಎತ್ತರಿಸಲಾಗುವುದಿಲ್ಲವೆಂದೂ ಇದರಿಂದ ಭಾರತದ ಭೂಮಿಯು ನೀರಿನಡಿ ಮುಳುಗುವುದೆಂಬುದು ನಿರಾಧಾರವಾದುದೆಂದೂ ಪಾಕ್ ಸರಕಾರದ ವಾದವಿದೆ. ೧೯೫೦ರಿಂದ

(೩ ನೇ ಪುಟ ನೋಡಿರಿ)

ಭವ್ಯ ಕಟ್ಟಡಗಳಿಗೆ ಬೇಕಾಗುವ—
ಕಿಟಿಕಿ-ಬಾಗಿಲು, ವೆಂಟಿಲೇಟರು
ರೋಲಿಂಗ್ ಶಟರು, ಗೇಟುಗಳಿಗೆ

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಆಫೀಸು-ಮನೆಗಳಿಗೆ ಬೇಕಾಗುವ—
ವಿವಿಧ ಕಪಾಟುಗಳು, ಮೇಜು
ಕುರ್ಚಿಗಳು, ಮಂಚ, ಸೋಫಾಗಳಿಗೆ

ಕಾಯದೆ ಒಪ್ಪದ ಸಂಪತ್ತು

ಶ್ರೀ "ಗೋರಾ"

ನದಿಯ ಕಿನಾರೆಯಲ್ಲಿ ಅಂಬಿಗ ಅಚ್ಚಣ್ಣ ಇನ್ನೂ ಕಾಯುತ್ತಿದ್ದ. ಗಂಟೆ ಎಂಟು ದಾಟಿರಬೇಕು; ಆಕಾಶದಲ್ಲಿ ಚಂದ್ರ ಉದಿಸಿ ಮಾರು ಮೇಲೇರಿದ್ದರೂ ಭಟ್ಟರ ಉದಯವಿನ್ನೂ ಹೊಳೆದಂಡೆಯಲ್ಲಿ ಆಗಿರಲಿಲ್ಲ. ದಿನವೂ ಇಷ್ಟು ಹೊತ್ತಿನೊಳಗೆ ಅವರು ಬಂದು "ಅಚ್ಚಣ್ಣಾ" ಎಂಬ ಮಾತ್ರಕ್ಕೆ ಮೂರು ನಯೇ ಪೈಸೆ ಮಾತ್ರವಲ್ಲ ಒಂದು ಬೀಡವೂ ಬಾಯಿಗೆ ಬಿತ್ತು ಎಂದು ಆತ ನಿಶ್ಚಯಿಸುತ್ತಿದ್ದ. ಎಂದರೆ, ಭಟ್ಟರು ಆತನ ಸೇವೆಗೆ ತುಸು ಮಿಗಿಲಾಗಿಯೇ ಪ್ರತಿಫಲವೀಯುತ್ತಿದ್ದರು. ಪೈಸೆಯ ಆಸೆಗಲ್ಲವಾದರೂ ಎಲೆಯಡಿಕೆಯ ವ್ಯಾಮೋಹ ಆತನನ್ನು ಇಂದು ಅಲ್ಲಿ ಕುಳಿತಿರುವಂತೆಸಗಿತ್ತು. ಇಲ್ಲವಾದರೆ, ತನ್ನನ್ನು ಕರೆಯಬಂದ, ಅಪ್ಪು, ಐಸರ, ದೂಜ ಮೊದಲಾದ ತನ್ನ ಸನ್ಮಿತ್ರರನ್ನು ಆತನೇಕೆ ಮುಂದಾಗಿ ಕಳಿಸುತ್ತಿದ್ದ? ಭಟ್ಟರು ಒಂದು ರೀತಿಯಿಂದ ಆತನ ಧನಿಯೂ ಹೌದು; ಇನ್ನೊಂದು ದೃಷ್ಟಿಯಲ್ಲಿ ಉಳಿದ ಯಾತ್ರಿಕರಂತೆ ಮಾಮೂಲು ಗಿರಾಕಿಗಳೂ ಹೌದು.

ಅಚ್ಚಣ್ಣನಿಗೆ ಭಟ್ಟರ ಮೇಲೆ ಒಂದು ತರದ ಅವರ್ಣನೀಯ ಗೌರವ. ಅದು ಹುಟ್ಟುವುದಕ್ಕೂ ಒಂದು ಕಾರಣವಿದೆ. ಒಂದು ದಿನ ಆತ ತನ್ನ ದೋಸ್ತಿ ದೂಜ ಸೋಜನೊಡನೆ ತಿರುಗಾಡುತ್ತ ಇರುವಾಗ, ಮಾತಿಗೆ ಮಾತು ಬಂತು. ದೂಜ ಸೋಜ ಕಡವನ್ನು ಏಲಂನಲ್ಲಿ ವಹಿಸುತ್ತ ಬಂದು ಅಂದಿಗೆ ಇಪ್ಪತ್ತು ವರ್ಷಗಳಾಗಿದ್ದುವು. ಅದೇ ಆಗ ಹೊಸತಾಗಿ ಏಲಂ ಆಗುವುದೆಂದೂ ಸಾರಲಾಗಿತ್ತು. ಎಷ್ಟೋ ಹಾಕಿಕೊಂಡಿದ್ದ 'ದಂ' ತುಸು ಜಾಸ್ತಿಯಾದುದರಿಂದ ಮಾತಿಗೆ ಮಾತು ತಾಗಿ ದೂಜನಲ್ಲಿ ಪಂಥಕ್ಕೆ ನಿಂತೇ ಬಿಟ್ಟ. ಏನೂ ಹೆಚ್ಚಿನ ಪದವು ಇಲ್ಲದ ಕಡವು ಅದು; ಹೋದರೆ ಹೋಗಲಿ ಎಂದುಕೊಂಡ ಸೋಜ ಆದರೂ 'ಆ ಪೂಜಾರಿಗೆ ಸೊಕ್ಕು ನೆತ್ತಿಗೇರಿದೆ' ಎಂದು ತನ್ನ ದರ್ಪ ತೋರಿಸದೆ ಉಳಿಯಲಿಲ್ಲ. ಅಂತೂ ಆ ವರ್ಷ ಕಡವಿನ ಕಾವಲು ಅಚ್ಚಣ್ಣನ ತಲೆಗೆ ಬಿತ್ತು. ಆದರೆ, ದೋಣಿ ಬೇಕಲ್ಲಾ! ಕೊನೆಗೆ ಭಟ್ಟರನ್ನೇ ಮರೆಹೋಗಬೇಕಾಯ್ತು. ಪರೋಪಕಾರ ಬುದ್ಧಿಯ ಭಟ್ಟರು ಆತನ ಸಹಾಯಕ್ಕೆ ನಿಂತರು ಆ ಹಣದಲ್ಲಿ ಅಚ್ಚಣ್ಣ ಅಸಲನ್ನು ತೀರಿಸಿರದಿದ್ದರೂ ಪ್ರತಿ ವರ್ಷ ಬಡ್ಡಿಯಷ್ಟನ್ನು ಅವಶ್ಯ ಮುಟ್ಟಿಸಿದ್ದ. ಭಟ್ಟರು ಈ ಬಗ್ಗೆ ಪ್ರಸ್ತಾಪಿಸುತ್ತಿರಲಿಲ್ಲ; ಆದರೂ ಸಾಲಗಾರನನ್ನು ಸಾಲದ ಶೂಲ ಕಾಡದಿರುವುದೇ? ಮೊದಲೆರಡು ವರ್ಷ ಇದೇ ಸಂಕಟ ಆತನನ್ನು ಕಾಡುತಿತ್ತು; ಮುಂದೆ ದೋಣಿಯೇ ಅವರದು; ತಾನು ನಡೆಸುವ ಕಡವಿನ ಕಾಸು ತನ್ನ ಸಂಬಳದ್ದು ಎಂದು ತಿಳಿದುಕೊಂಡ. ಇದನ್ನೇ ಒಂದು ಬಾರಿ ಭಟ್ಟರೊಡನೆಯೂ ಸೂಚಿಸಿದ. ಇದನ್ನು ಕೇಳಿದ ಅವರ ತಾಂಬೂಲ ತುಂಬಿದ ಬಾಯಲ್ಲಿ ಮುಗುಳ್ನಕ್ಕರು. ಈ ನಗುವು ಏನು ಸೂಚಿಸುತಿತ್ತೊ, ಅಚ್ಚಣ್ಣನಂತೂ ಭಟ್ಟರು ಹೌದೆಂದರೆಂದೇ ತಿಳಿದುಕೊಂಡ.

ಇದುವರೆಗೂ ಬಾರದಿದ್ದ ಭಟ್ಟರನ್ನು ಬಿಟ್ಟು ಅಚ್ಚಣ್ಣ ಮುಂದೆ ಹೋಗುವಂತಿಲ್ಲ. ಆತ ಅಲ್ಲೇ ದೋಣಿಯ ಕೊಂಬಿನಲ್ಲೇ ಕೂತು ಕಣ್ಣು ಕೂರತೊಡಗಿದ. ಅದೆಷ್ಟು ಸಮಯ ಆತನಲ್ಲಿ ಕೂತಿದ್ದನೋ, "ಯಾರದು ದೋಣಿಯಲ್ಲಿ?" ಎಂಬ ಚಿರಪರಿಚಿತ ದನಿಗೇಳಿ ದಿಗ್ಗನೆ ಎದ್ದು 'ಬನ್ನಿ, ಹತ್ತಿ' ಎಂದ ತನ್ನ ಮಾಮೂಲು ಒರಟು ಸ್ವರದಲ್ಲಿ. 'ಅಚ್ಚಣ್ಣನೊ? ಏನು, ಇನ್ನೂ ಹೋಗಿಲ್ಲ? ಅಲ್ಲಿಯೇ ಮಲಗಿಬಿಟ್ಟೆಯೋ?' ಎಂಬ ಭಟ್ಟರ ಮಾತಿನಿಂದ, ಸರಿಯಾಗಿ ಕಣ್ಣು ತೆರೆದ ಅಚ್ಚಣ್ಣ ಆಕಾಶವನ್ನೊಮ್ಮೆ ನೋಡಿದ.

ಕೃಷ್ಣಪಕ್ಷದ ಪ್ರಾರಂಭದ ದಿನವಾದುದರಿಂದ ಚಂದ್ರ ಕುಂದಿರಲಿಲ್ಲ. ಆತನ ಆ ಶುಭ್ರ ಬಿಂಬ ನಸು ಬಿಳಿಯ ಮೋಡಗಳೆಡೆ ಅತಿ ವೇಗವಾಗಿ ಧಾವಿಸುತ್ತಿರುವಂತೆ ಭಾಸವಾಗುತಿತ್ತು. ನಾನಾಕಾರದ ಮೋಡಗಳ ಸೌಂದರ್ಯ ಅವರ್ಣನೀಯವಾಗಿತ್ತು. ತಲೆ ತಗ್ಗಿಸಿದಾಗ, ಕಟ್ಟಿದ ನೀರು ತುಂಬಿದ್ದುದರಿಂದ ಆ ಅಲ್ಪ ವಿಶಾಲವಾದ ನದಿಯ ನೀರನ್ನು ಚಂದ್ರನ ಕಿರಣಗಳು ಸ್ವರ್ಣರಸವನ್ನಾಗಿ ಮಾರ್ಪಡಿಸಿದ್ದುವು. ಆ ನಡುವೆ ತೇಲುವ ಬಂಗಾರದ ಮುದ್ದೆಯಂತಹ ಚಂದ್ರಬಿಂಬ ಕುಣಿಯುತಿತ್ತು. ಅಕ್ಕ ಪಕ್ಕ ಬೆಳೆದಿದ್ದ ಬಿದಿರ ಹಿಂಡಿಲುಗಳಲ್ಲಿ ಹಕ್ಕಿಗಳು ಕಿರಿ ಕಿರಿ ಗುಟ್ಟಿ ಹಿನ್ನೆಲೆಯೊಯುತಿದ್ದುವು. ದೂರದಲ್ಲಿ ನಾಯಿಗಳು ಈ ಹಿಮ್ಮೇಳಕ್ಕೆ ಸರಿಯಾಗಿ ರಾಗವೆಳೆಯುತಿದ್ದುವು. ಅಚ್ಚಣ್ಣ ತುಂಬ ಹೊತ್ತಾಗಿಂಬೇಕು ಎಂದು ತಿಳಿದು, 'ಧನಿಯರಿಗೆ ತಡವಾಯಿತೆಂತ ತೋರುತ್ತದೆ ಅದೇನೋ ಕಾರ್ಯಭಾರ....." ಎಂದು ರಾಗವೆಳೆದು ಕೈಮುಂದೆ ಚಾಚಿದ. ಯಾವಾಗಲೂ ಸರಿಯಾಗಿ ಮಾತಾಡುತಿದ್ದ ಭಟ್ಟರು ಇಂದು ಕಿಸೆಗೆ ಕೈಹಾಕಿ ತಾಂಬೂಲ ದಕ್ಷಿಣೆಯನ್ನು ಆ ಕೈಗಳಿಗೆಸೆದು ಮಾತಾಡದೆ ದೋಣಿ ಹತ್ತಿದರು. ಅಚ್ಚಣ್ಣ ಬೀಡ ಬಿಡಿಸಿ, ಅಡಿಕೆ ಬಾಯಿಗೆಸೆದು ತಲೆಗೆ ಸುತ್ತಿದ ಅಂಗವಸ್ತ್ರದಿಂದ ಎಲೆಗಳನ್ನು ಒಂದೊಂದಾಗಿ ಒರಸಿ, ಅವುಗಳ ತೊಟ್ಟಿನ ತುದಿಯನ್ನು ಉಗುರಿನಿಂದ ಕತ್ತರಿಸಿ ಸುಣ್ಣವನ್ನು ಹಚ್ಚಿ ಮಡಚಿ ಬಾಯಿಗಿಟ್ಟು ಜಗಿಯುತ್ತ ಹೊಗೆಸೊಪ್ಪಿಗೆ ಸುಣ್ಣ ಹಚ್ಚುತ್ತ ದೋಣಿಯನ್ನು ಕಟ್ಟಿದ ಹಗ್ಗವನ್ನು ಸಡಿಲಿಸಿದ. ಹೊಗೆಸೊಪ್ಪನ್ನು ಬಾಯಿಗೆಸೆದು ಎರಡೂ ಕಾಲುಗಳನ್ನು ಆಡಿಯಾಳದ ನೀರಿನಡಿ ಬಲವಾಗಿ ಊರಿ ಕೈಗಳಿಂದ ದೋಣಿಯನ್ನು ಮುಂದಕ್ಕೆ ದೂಡಿದ. ತಾನೂ ಹತ್ತಿ ಕುಳಿತು ಹುಟ್ಟುಹಾಕತೊಡಗಿದ ಆ ಜ್ಯೋತ್ಸ್ನೆಯ ನೀರನ್ನು ಸೀಳುತ್ತ ಕಲಕಲ ನಾದದೊಡನೆ ನದಿ ಆಚೆ ದಡವನ್ನು ಸೇರಿತು. ಭಟ್ಟರು ಇಳಿದು ಹೊರಟುಹೋದರು. ಅಚ್ಚಣ್ಣನು ಮುಖ ಮುಖ ನೋಡತೊಡಗಿದ. ಯಾವಾಗಲೂ ಬಾಯಿ ತುಂಬ ಆಡಿಕೊಳ್ಳುತಿದ್ದ ಭಟ್ಟರ ಮೌನದ ಕಾರಣ ಆತನಿಗೆ ತಿಳಿಯಲಿಲ್ಲ. ಆದರೂ ಆ ಬಗ್ಗೆ ಆತನಿಗೆ ಹೆಚ್ಚು ಯೋಚಿಸಲು ಅವಕಾಶವೇ ಉಳಿದಿರಲಿಲ್ಲ; ಇನ್ನು ಒಂದು ಮೈಲು ಒಬ್ಬನೇ ನಡೆದು ಇನಾಸ ಸೋಜನ ಮನೆಗೆ ಹೋಗಬೇಕಿತ್ತು. ಅಲ್ಲಿ ಆತನ ಸ್ನೇಹಿತರು ಇವನ ಬರವನ್ನೇ ಕಾದು ಕುಳಿತಿದ್ದರು. ಏನೋ, ಮಿಲ್ಲಿನ ಗಿರಣಿ ಕೆಟ್ಟುಹೋಗಿರಬಹುದು ಅದೇ ಚಿಂತೆಗೆ ಕಾರಣವಿರಬಹುದು ಎಂದುಕೊಂಡು ಆತ ದೋಣಿಯನ್ನು ಬಂಧಿಸಿ ಅಲ್ಲಿಂದ ಕಂಬಿಕಿತ್ತ.

ಮಲೆಬೆಟ್ಟು ರಾಮಭಟ್ಟರೆಂದರೆ, ಅಲ್ಲಿ ಮಾತ್ರವಲ್ಲ ಸುತ್ತಲಿನ ನಾಲ್ಕು ಹಳ್ಳಿಯ ಜನರಿಗೂ ಗೊತ್ತು. ಇವರ ಮಾವ ಅನಂತಭಟ್ಟರು ಅಪುತ್ರರಾದುದರಿಂದ ತಂಗಿಯನ್ನೊಲಿಸಿ ಇವರನ್ನು ದತ್ತಕ್ಕೆ ಕೊಂಡುಕೊಂಡಿದ್ದರು. ಮಾವನ ಆಸ್ತಿಯಾಗಿ ಒಂದಷ್ಟು ಭೂಮಿ ಮಾತ್ರವಲ್ಲ, ಆಯುರ್ವೇದ ವೈದ್ಯ, ಪೌರೋಹಿತ್ಯ ಹಾಗೂ ಊರ ಉಮಾಮಹೇಶ್ವರ ದೇವಾಲಯದ ಅರ್ಚಕತನವಿಷ್ಟು ಅವರಿಗೆ ಬಂದಿದ್ದುವು. ಮಾವನ ಮರಣಾನಂತರ ಇವಕ್ಕೆಲ್ಲ ಉತ್ತರಾಧಿಕಾರಿಯಾದ ರಾಮ ಭಟ್ಟರು ಕೆಲ ಸುಧಾರಿತ ತರುಣರ ಕಿವಿಮಾತಿನಿಂದ ಉಬ್ಬಿ ಆಯುರ್ವೇದ—ಪೌರೋಹಿತ್ಯಗಳಿಗೆ ತಿಲಾಂಜಲಿಯಿತ್ತರು. ನಗದಿ ಹಣದಿಂದ ಒಂದು ಮಿಲ್ಲನ್ನು ಇಟ್ಟರು. ವರ್ಷದಲ್ಲಿ ಆರು ತಿಂಗಳು ನಡೆಯುತಿದ್ದ ಈ ಅಕ್ಕಿ ಮಾಡುವ ಮಿಲ್ಲು ಅವರಿಗೇನೂ ನಷ್ಟಮಾಡಲಿಲ್ಲ. ಆದರೆ, ಅವರ ಅರ್ಚಕತನಕ್ಕೆ ಮಾತ್ರ ಇದು ಹೊಂದಿಕೊಳ್ಳುತ್ತಿರಲಿಲ್ಲ. ಎಂತಲೆ, ಊರಿನ ಪ್ರಮುಖರಾದ ಪಡುಮನೆ ವ್ಯಾಸ ಭಟ್ಟರನ್ನು ಇದಕ್ಕೆ ನಿಯಮಿಸಿದರು. ದೇವರಿಗೇನು, ಯಾರು ಕೊಟ್ಟರೂ ತಿನ್ನುತ್ತಾನೆ; ಆದರೆ, ಅಕ್ಕಿ ಮಿಲ್ಲಿನಲ್ಲಿ ಯಾರು ಯಾರು ಬಂದು ಕಾರಭಾರು ಮಾಡುವುದಕ್ಕಾಗುತ್ತದೆಯೆ' ಎಂದು ಮೊದಮೊದಲು ಅತೀವ ವಿಶ್ವಾಸದಿಂದ ನಡೆದುಕೊಳ್ಳುತಿದ್ದ ವ್ಯಾಸ ಭಟ್ಟರು ಇಂದಿಗೂ ಆ ವಿಶ್ವಾಸವನ್ನು ಉಳಿಸಿಕೊಂಡಿದ್ದರು. ಆದರೆ, ಇಂದು ಅವರ ಕಿವಿಗೆ ಅಬ್ದುಲ್ ಸಾಹೇಬನು ಹಾಕಿದ ವರ್ತಮಾನವೊಂದು ತಾನು ಅಚಲವಾಗಿ ನಂಬಿದ್ದ ಆ ವ್ಯಕ್ತಿಯ ಮೇಲೆ ಸಂದೇಹ ಮೂಡುವಂತೆಸಗಿತ್ತು.

"ವ್ಯಾಸ ಹಾಗೆ ಮಾಡಿಯಾನೆ?" ಎಂಬ ಪ್ರಶ್ನೆ ಅವರನ್ನು ಕಾಡಿತ್ತು. 'ಇಲ್ಲ, ಅಷ್ಟು ಧೈರ್ಯ ಇವನಿಗೆ ಬರಲಾರದು. ಅದರಲ್ಲೂ ಗರ್ಭ ಗುಡಿಯ ಒಳಗಿನ ಕಲ್ಲಿನ ಚತ್ತಲೆಯ ಸುತ್ತಲಿನಲ್ಲಿ ರಾಶಿ ಹಾಕಿದ್ದ ಆ ತಾಮ್ರಕ್ಕೆ ಕೈಕೊಡುವಷ್ಟು ಎದೆಗಾರಿಕೆ ಅವನಿಗೆ ಖಂಡಿತಕ್ಕೂ ಇಲ್ಲ. ದೇವರ ವಸ್ತುವನ್ನು ತೆಗೆಯುವುದೆಂದರೆ...!' ಎಂದು ಸಮಾಧಾನ ತಾಳಲು ಪ್ರಯತ್ನಿಸುತಿದ್ದರವರು. ಆದರೆ, ಅಬ್ದುಲ್ಲನಿಗೆ ಅವ

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿರಿ: ಬಡ್ಡಿ ಸೇಕಡಾ 5ರಂತೆ; ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ವಿನೋದಕ್ಕೆ ಕಾರಣನಾದ

ಸತ್ತವನ ಮಿದುಳು ಹೊತ್ತ ಮಾನವ—ಹುಚ್ಚ

" ರಂಜನೆ "

ಮಾನವನ ಇಚ್ಛೆಗೆ ವಿರುದ್ಧವಾಗಿ ಒಂದು ವ್ಯಕ್ತಿ ನಡೆಸುವ ಚರ್ಯೆಗಳಿಂದ ಆತನಿಗೆ ಹುಚ್ಚು ಹಿಡಿದಿದೆಯೆನ್ನುತ್ತಾರೆ. ವಾಸ್ತವದಲ್ಲಿ ಮಾನವ ಯಾವೊಂದು ಕಾರ್ಯದ ಅತಿರೇಕಕ್ಕೆ ಮುಟ್ಟಿದರೂ ಹುಚ್ಚಿನ ಯಾ ಉನ್ಮಾದದ ಹಂತದಲ್ಲಿರುತ್ತಾನೆ.

ಉನ್ಮಾದಕ್ಕೂ ಹುಚ್ಚಿಗೂ ಲೆಕ್ಕವಿಲ್ಲದಷ್ಟು ಮಂದಿ ಅಂತರವಿಲ್ಲವೆಂದರೂ ಉನ್ಮಾದವನ್ನು ಪ್ರೇಮಕ್ಕೂ ಹುಚ್ಚನ್ನು ಜೀವನದಲ್ಲಿ ಬಲವಾಗಿ ನಿರಾಶೆ ಹೊಂದಿದವರಿಗೂ ಅನ್ವಯಿಸುವುದುಂಟು.

ಪ್ರಸಿದ್ಧ ತತ್ವಶಾಸ್ತ್ರಜ್ಞ, ಜ್ಞಾನಿ, ಹಾಗೂ ಕವಿಗಳನೇಕರು "ಜಗತ್ತೇ ಹುಚ್ಚರ ಕೂಟ'ವೆಂದು ಹೇಳಿದಾಗ ಅಂದಿನ ಸಮಾಜ—ಸುತ್ತಮುತ್ತಣ ಜನತೆ ಅವರನ್ನೇ ಹುಚ್ಚರೆಂದು ಅವರಿಗೆ ಚಿತ್ರ-ವಿಚಿತ್ರ ಹಿಂಸೆಕೊಟ್ಟಿತು. ಅವರ ಅವಸಾನದ ನಂತರ ಜಗತ್ತಿನ ಶ್ರೇಷ್ಠರೆಂದು ಪರಿಗಣಿಸಿತು.

ಮಹಮುದ್ ಬಿನ್ ತೊಗಲಕ್ ತನ್ನ ಕಾಲದಲ್ಲಿ 'ಬಿಲು ದೊರೆ' ಅಥವಾ 'ಹುಚ್ಚು ದೊರೆ' ಎಂದು ಹೆಸರು ಪಡೆದರೂ ಅಂಕಿ ಅಂಶಗಳ ಕೂಡಿಸಿಕೊಂಡ ಚರಿತ್ರಕಾರರ ಪ್ರಕಾರ ಆತ ನಿಜವಾಗಿಯೂ ಬಿಲು ದೊರೆಯಲ್ಲವೆಂದೂ, ಆಗಿನ ಕಾಲಕ್ಕೆ ಆತನಷ್ಟು ಜ್ಞಾನಿ, ಆತನಷ್ಟು ವಿಧ್ಯಾವಂತ ಬೇರಾರು ಇರಲಿಲ್ಲವೆಂದು ಹೇಳುತ್ತಾರೆ.

ಮೆದುಳಿನ ಕೆಲವು ಭಾಗಗಳ ಅವ್ಯವಸ್ಥೆಯಿಂದ ಹುಚ್ಚು ಬರುವುದೆಂದು ವಿಜ್ಞಾನಿಗಳು ಹೇಳಿದರೂ, "ಮೆದುಳೇ ಏಕೆ? ದೇಹದ ಎಲ್ಲ ಭಾಗಗಳೂ ಸಮಂಜಸವಾಗಿ ಕೆಲಸ ಮಾಡುತ್ತಿದ್ದರೂ ತಮಗೇ ವಿಚಿತ್ರವಾಗಿ ತೋರುವ 'ಹುಚ್ಚ'ರನ್ನು ಪರೀಕ್ಷಿಸಬೇಕಾದಾಗ ಅವರೇ ಯೋಚಿಸಬೇಕಾಗುತ್ತದೆ. "ಏಕೆ ಹೀಗಾಯಿತು? ಆತ ಹುಚ್ಚನೋ ಇಲ್ಲ, ನಾನು ಹುಚ್ಚನೋ?'—ಎಂದು ಕಾರಣ ಅವನಿಗೆ ಹುಚ್ಚೆಂದು ಸೂಚಿಸಬಹುದಾದ ಯಾವೊಂದು ವಿವರಗಳು ಅವರಿಗೆ ಅವನಲ್ಲಿ ಕಂಡು ಬರುವುದಿಲ್ಲ.

ಹುಚ್ಚು ಬಹಳಂಶಗಳಲ್ಲಿ ಮಾನವನಿಗೆ ದೇವರಿತ್ತ ಶಾಪವೂ ಅಹುದು. ಆದರೆ ಕೆಲವಂಶಗಳಲ್ಲಿ ವರವೂ ಹೌದು.

ಹುಚ್ಚು ಹಿಡಿದ ಮಾನವನು ಶೇ೯೯ ಭಾಗ ಬೇರಾರಿಗೂ ಸಹಾಯಕ್ಕೆ ಬರಲಾರ. ಕೆಲವು ಸಂದರ್ಭಗಳಲ್ಲಿ ನಷ್ಟವನ್ನೂ ಉಂಟು ಮಾಡಬಹುದು ತನ್ನವರಿಗೆ ಹೊರೆಯಾಗಬಹುದು. ಆದರೂ ಹುಚ್ಚರನೇಕರು ಜಗತ್ತಿಗೆ ಕಲ್ಯಾಣ ಸಾಧಕ ಕೃತಿಗಳನ್ನೂ, ಪ್ರಯೋಗಗಳನ್ನೂ ತಿಳಿಸಿ ಹೋಗಿದ್ದಾರೆ.

ಷೇಕ್ಸ್‌ಪಿಯರನ ಕತೆಗಳನ್ನು ಬರೆದ ಚಾರ್ಲ್ಸ್ ಲ್ಯಾಂಬನು ಹುಚ್ಚಿಗೆ ಬಲಿಯಾಗಿದ್ದ. ಆತನದು ಹುಚ್ಚರ ವಂಶವೇ ಆಗಿತ್ತು. ತಂದೆ, ತಾಯಿ, ತಂಗಿಯರೆಲ್ಲಾ ಹುಚ್ಚರಾಗಿದ್ದರು. ಹುಚ್ಚಿನ ಭರದಲ್ಲಿ ತಂಗಿ, ತಂದೆ—ತಾಯಿಯರನ್ನು ಥಳಿಸಿ ಗಾಯಗೊಳಿಸಿದಳು ಇದರಿಂದಲೇ ತಂದೆ ತಾಯಿಯರು ಸತ್ತರು

ಪ್ರಖ್ಯಾತ ಆಂಗ್ಲ ಲೇಖಕ ಹಾಗೂ ಕವಿ ವಿಲಿಯಂ ಕೌಪರನು, ಲೆಕ್ಕವಿಲ್ಲದಷ್ಟು ಕಾಲ ಹುಚ್ಚರ ಆಸ್ಪತ್ರೆಯಲ್ಲಿದ್ದ.

ಲಂಡನ್ನಿನ ಹುಚ್ಚರ ಆಸ್ಪತ್ರೆಯಲ್ಲಿ ಒಬ್ಬ ಹುಚ್ಚನಿದ್ದ ಕಂಡ ಕಂಡವರ ಕೈ ಹಿಡಿದು ನೋಡಿ ಭೂತಭವಿಷ್ಯತ್ ಹೇಳುತ್ತಿದ್ದ ಆತ ೧೯೩೯ರಲ್ಲಿ ಸಾಯುವ ಮುನ್ನ ಹೇಳಿದ್ದ.

"ಮತ್ತೆ ೩೦ ವರುಷಗಳಲ್ಲಿ ಜಗತ್ತಿನಲ್ಲಿ ಭಾರಿ ಯುದ್ಧಗಳಾಗುವುವು."



ಹವಾಮಾನ ಪರಿಶೀಲಕ ಉಪಗ್ರಹದ ಮೂಲಕ ತೆಗೆದ ಪ್ಲೋರಿಡಾ ಕರ್ಯೊಯ ಟ್ರೇಜ ಮತ್ತು ಮೆಕ್ಸಿಕೋ ಕೊಲ್ಲಿಯ ಚಿತ್ರವಿದು. ಅಸ್ಪಷ್ಟ ಬಿಳಿಯು ಗುಡುಗಿನಿಂದ ಕೂಡಿದ ಬಿರುಗಾಳಿಯನ್ನು ಸಂಕೇತಿಸುತ್ತದೆ.

ಇವರೆಲ್ಲಾ ಹುಚ್ಚಿನಲ್ಲೂ ಉತ್ತಮ ಕಾರ್ಯ ನಡೆಸಿದ್ದರೆ ಜನರಿಗೆ ಅಪಕಾರವೆಸಗಿದ ಹುಚ್ಚರೂ ಇದ್ದಾರೆ.

ಫ್ರಾನ್ಸಿನ ಶಾಂತ ವಾತಾವರಣದಲ್ಲಿ ಇದ್ದಕ್ಕಿದ್ದಂತೆ ಒಂದು ಮನೆಯಿಂದ

"ಸಹಾಯ! ...ಸಹಾಯ!!",

—ಎಂಬ ಕೂಗು ಕೇಳಿಸಿತು. ಮನೆ ಹತ್ತಿ ಉರಿಯುತ್ತಿತ್ತು ಎರಡನೇ ಅಂತಸ್ತಿನಲ್ಲಿ ಜನ ಕಿರುಚುತ್ತಿದ್ದರು. ಜನ ಸುತ್ತ ನೆರೆದರು ಏಣಿಗಳನ್ನು ಹಾಕಿಕೊಂಡು ಮೇಲೇರಿದವರು ಒಳಗಣ ದೃಶ್ಯ ನೋಡಿದಾಗ ಅಗ್ನಿಶಾಮಕ ದಳದವ ಪೋಲೀಸರಿಗೆ ತಿಳಿಸಲು ತಕ್ಷಣ ಓಡಿದ.

ಒಳಗಡೆ ಮೂರು ಜನ ಗಂಡಸರೂ ಒಬ್ಬ ಹೆಂಗಸೂ ೨ ಮಕ್ಕಳೂ ಒಬ್ಬ ಹುಚ್ಚನ ಕೈಯಲ್ಲಿ ಸಿಕ್ಕಿ ಹಾಕಿಕೊಂಡಿದ್ದರು ಆತನ ಕೈಯಲ್ಲಿ ಸಿಕ್ಕಿದ್ದ ಬೆಂಕಿಯಿಂದ ಅವರು ತಪ್ಪಿಸಿಕೊಂಡು ಹೋಗಲಾಗದಂತೆ ಬಾಗಿಲಿನಲ್ಲಿ ಹುಚ್ಚ ನಗುತ್ತಾ ಕುಣಿಯುತ್ತಾ ನಿಂತಿದ್ದ.

ಇಂಗ್ಲೇಂಡಿನ ಹಳ್ಳಿಯೊಂದರಲ್ಲಿ ಒಬ್ಬ ಹುಚ್ಚಳಿದ್ದಳು. ಆದೇನು ಹುಚ್ಚೋ ಏನೋ? ದಾರಿಯಲ್ಲಿ ಸಿಕ್ಕ ಮಕ್ಕಳನ್ನೆಲ್ಲಾ ಮುದ್ದಿಸಿ, ಮುದ್ದಿಸಿ, ಬಿಡುತ್ತಿದ್ದಳು. ಕೆಲವೊಮ್ಮೆ ಎತ್ತಿಕೊಂಡು ಊರೆಲ್ಲಾ ಸುತ್ತಿಸಿ ಬರುತ್ತಿದ್ದ ಅವಳ, ಕಾಳಿಕಾ ಬಟ್ಟೆಗಳನ್ನು ನೋಡಿ, ಅವಳಿಗೆ ಹೆದರಿ ಕ್ರಮೇಣ ಮಕ್ಕಳನ್ನು ಅವಳ ಬಳಿಗೆ ಜನರು ಬಿಡುತ್ತಿರಲಿಲ್ಲ.

ಇದ್ದಕ್ಕಿದ್ದಂತೆ ಮಕ್ಕಳು ಕಾಣೆಯಾಗತೊಡಗಿದವು. ಎಲ್ಲೆಲ್ಲಿ ಹುಡುಕಿದರೂ ಸಿಗುತ್ತಿರಲಿಲ್ಲ ಹುಚ್ಚಳೂ ಕಾಣಬರುತ್ತಿರಲಿಲ್ಲ. ಒಮ್ಮೆ ಈಕೆಯನ್ನು ಕಂಡು ಅನುಮಾನಗೊಂಡ ಒಬ್ಬಾತ ಅವಳನ್ನು ಹಿಂಬಾಲಿಸಿದ ಹಳೆಯ ಇಗರ್ಜಿಯನ್ನು ಹೊಕ್ಕ ಆಕೆ ಕಲಕಾಲದ ನಂತರ ಹೊರ ಬಂದಳು ಆತ ಒಳ ಹೊಕ್ಕು ಸುಮಾರು ಜಾಗ ಸುತ್ತಿದ ಮೇಲೆ ಕೊನೆಗೆ ಬಹು ಹಳೆಯ ಉಪಯೋಗಿಸದೇ ಬಿಟ್ಟಿದ್ದ ಕೊಟಡಿಯಲ್ಲಿ ಸುಮಾರು ಮಕ್ಕಳ ಸಂಗ್ರಹವನ್ನು ಕಂಡು ಹಾ ಹಾರಿದ. ಕೂಡಲೇ ಆ ಮಕ್ಕಳನ್ನು ಊರಿಗೆ ಸಾಗಿಸಿದ. ಆ ಹುಚ್ಚಿಯನ್ನು ಹುಚ್ಚರ ಆಶ್ರಮಕ್ಕೆ ಕಳುಹಿಸಲಾಯಿತು

ಅಲ್ಲೊಬ್ಬ ಹುಚ್ಚನಿದ್ದ ಆತನೇನೂ ಯಾರಿಗೂ ತೊಂದರೆ ಮಾಡುತ್ತಿರಲಿಲ್ಲ ಕೆಲವು ಕಾಲದ ನಂತರ ಆತ ಸತ್ತನೆಂದು ತಿಳಿದು ಆತನ ಸಂಬಂಧಿಗಳು ಬಂದರು ಅವರು ತಿಳಿದ ವಾರ್ತೆ.

ಆ ಹುಚ್ಚ ಸುಮಾರು ತಿಂಗಳ ಕಾಲ ಊಟ ಮಾಡದೇ ಸತ್ತಿದ್ದ. ಆತನ ಬ್ಯಾಂಕಿನ ಖಾತೆಯಲ್ಲಿ ೮೦,೦೦೦ ಪೌಂಡುಗಳಿದ್ದವು

ಶಾಖ್ಯವಾಗಿದ್ದ ಬಹಳಷ್ಟು ಜನ ಇದ್ದಕ್ಕಿದ್ದಂತೆ ಹುಚ್ಚರಾಗಿ ಬಿಳುವುದುಂಟು, ಆದೇನು ಕಾರಣವೋ ಹೇಳಲಿಕ್ಕೆ ಬರದಿದ್ದರೂ ಒಮ್ಮತದಿಂದ ಒಪ್ಪಿಕೊಳ್ಳಬಹುದಾದ ಕಾರಣಗಳು ಕೆಲವಿವೆ. ಒಮ್ಮೆಗೇ

(೩ನೇ ಪುಟ ನೋಡಿರಿ)

ಕ್ರಮವಾಗಿ
ಹಣ ಉಳಿಸುವ
ಸ್ತ್ರೀಯರು
ಮತ್ತು
ಪುರುಷರು

"ಕೆನರಾ ಬ್ಯಾಂಕ್"ನಲ್ಲಿ
ತಮ್ಮ ಹಣವನ್ನು ಕೂಡಿಡುತ್ತಾರೆ.
ಕೆನರಾ
ಬ್ಯಾಂಕ್ ಲಿಮಿಟೆಡ್
ಸ್ಥಾಪನೆ 1906
ಸಮಗ್ರ ಸೇವೆ—
ಸಂಪೂರ್ಣ ಭದ್ರತೆ

ಪಾಕಿಸ್ತಾನದಲ್ಲಿ

ಹೊಸ ರೀತಿಯ ಚುನಾವಣಾ ಪ್ರಚಾರ

ಮೂರು ವರ್ಷಗಳಿಗೂ ಮಿಕ್ಕಿದ ಮಿಲಿಟರಿ ಆಡಳಿತೆಯಲ್ಲಿ ನವೆದು ಬಂದಿರುವ ಪಾಕಿಸ್ತಾನದಲ್ಲಿ ರಾಷ್ಟ್ರೀಯ ಸಭೆ ಮತ್ತು ಪ್ರಾಂತೀಯ ಸಭೆಗಳಿಗೆ ಪರೋಕ್ಷ ಮತದಾನದ ಮೂಲಕ ಕ್ರಮವಾಗಿ ಮೇ ೬ ಮತ್ತು ಎಪ್ರಿಲ್ ೨೮ರಂದು ಚುನಾವಣೆಗಳು ನಡೆಯಲಿರುವುವು. ದಂಡಿನಾಡಳಿತೆಯ ಅಧ್ಯಕ್ಷ ಅಯೂಬಖಾನರು ಪ್ರಕಟಿಸಿದ ಸಂವಿಧಾನದನ್ವಯ ಈ ಚುನಾವಣೆಗಳು ನೆರವೇರುವುವು. ರಾಷ್ಟ್ರೀಯ ಸಭೆಯ ೧೫೦ ಸ್ಥಾನಗಳಿಗೆ ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳಲ್ಲಿ ಪ್ರತಿಯೊಂದರಿಂದ ೭೫ ಸದಸ್ಯರನ್ನೂ ಪ್ರಾಂತೀಯ ಸಭೆಗಳಲ್ಲಿ ಪ್ರತಿಯೊಂದಕ್ಕೆ ೧೫೦ ಸದಸ್ಯರನ್ನೂ ಆರಿಸಬೇಕಾಗಿದೆ.

ಪಾಕಿಸ್ತಾನದ ಹೊಸ ಸಂವಿಧಾನವು ಪಕ್ಷೀಯ ಆಡಳಿತೆಗೆ ಆಸ್ಪದ ಕೊಡದೆ ಅಧ್ಯಕ್ಷೀಯ ಪ್ರಶಾಸನವನ್ನೇ ಸ್ಥಿರಗೊಳಿಸುವುದರಿಂದ ಪೂರ್ವ ಪಾಕಿಸ್ತಾನದಲ್ಲಿ ಪ್ರಬಲ ವಿರೋಧವನ್ನೂ ಎದುರಿಸಬೇಕಾಯಿತು. ಪ್ರಜಾಸತ್ತಾತ್ಮಕ ಪ್ರಣಾಳಿಯ ಆಡಳಿತೆಯನ್ನು ಬಯಸುವ ಈ ಪ್ರದೇಶದ ಜನತೆಯು ಅಯೂಬಖಾನರ ವರ್ತನೆಯಲ್ಲಿ ಸಾರ್ವಜನಿಕವಾಗಿಯೇ ಪ್ರತಿಭಟಿಸಿತ್ತು. ಆದರೆ, ಚೌಧರಿ ಖಾಲಿಕ್ವಿಜಾಮನರು ಹೇಳುವಂತೆ ಈ ಜನತೆಯು ಸಂವಿಧಾನವನ್ನು ಒಪ್ಪಿಕೊಳ್ಳದೆ ಹೋದರೆ, ಎಂದೆಂದಿಗೂ ಮಾರ್ಶಲ್ ಲಾಗಳ ಪಂಜರದೊಳಗೇನೆ ಸಿಲುಕಬೇಕಾಗುವುದು. ಇದರಿಂದಾಗಿ ಕೈಗೂಡಿದ ಸದ್ಯದ ಅವಕಾಶವನ್ನು ಸದುಪಯೋಗಪಡಿಸಲು ಇವರು ಮುಂದೆ ಬರುತ್ತಿರುವರು. ಪಾರ್ಲಿಮೆಂಟರಿ ಪದ್ಧತಿಯನ್ನೇ ಸ್ಥಾಪಿಸುವ ಧ್ಯೇಯ-ಗುರಿಯನ್ನಿಟ್ಟುಕೊಂಡು ಚುನಾವಣೆಯಲ್ಲಿ ಹುರಿಯಾಳುಗಳಾದವರೂ ಕೆಲವರಿದ್ದಾರೆ.

ಚುನಾವಣೆಯ ಹೊಸ ಪದ್ಧತಿಯಂತೆ ಖಾನ, ಮಲಿಕ್ ಮತ್ತಿತರ ಪಟ್ಟಬದ್ಧ ವ್ಯಕ್ತಿಗಳು ರಾಷ್ಟ್ರೀಯ ಮತ್ತು ಪ್ರಾಂತೀಯ ಶಾಸನ ಸಭೆಗಳಿಗೆ ಈ ಬಾರಿಯೂ ಆರಿಸಿ ಬರುವಂತಾಗುವುದಿಲ್ಲವೆಂಬ ಆಶಯವನ್ನು ಅಧ್ಯಕ್ಷರೂ ಮಂತ್ರಿಗಳೂ ಪ್ರಾಥಮಿಕ ಪ್ರಜಾಸತ್ತೆಯ ಕುರಿತು ಮಾತಾಡುವ ಸಂದರ್ಭಗಳಲ್ಲಿ ವ್ಯಕ್ತಪಡಿಸಿದ್ದಾರೆ. ಆದರೆ, ಈಗಾಗಲೇ ಅವಿರೋಧವಾಗಿ ಆಯ್ಕೆಗೊಂಡವರಲ್ಲಿ ೭ ಜನರಲ್ಲಿ ಮೂವರು ಇಂತಹರೇ ಇದ್ದಾರೆಂಬುದರಿಂದ ಅಧಿಕಾರಾರೂಢರಿಗೆ ಈ ಕನಸು ಕೇವಲ ಗಗನ ಕುಸುಮ ಮಾತ್ರವೆಂದು ಹೇಳಬಹುದು.

ಪಾಕಿಸ್ತಾನದ ಹೊಸ ಸಂವಿಧಾನವನ್ನು ಸಹಿ ಮಾಡುವುದಕ್ಕೆ ಒಂದೆರಡು ದಿನ ಮೊದಲು ಅಯೂಬಖಾನರು ಪೂರ್ವ ಭಾಗದ ಪಾರ್ಲಿಮೆಂಟರಿ ಪದ್ಧತಿಯ ಬೇಡಿಕೆಯು ರಾಷ್ಟ್ರ ವಿಭಜನೆಗೆ ಕಾರಣವಾಗುವುದು ಎಂದಿದ್ದರು. ಒಂದೊಂದು ಭಾಗದ ಜನರು ಒಂದೊಂದು ತೆರದ ಆಡಳಿತೆಯನ್ನು ಬಯಸುವುದೆಂದರೆ, ದೇಶವನ್ನು ಒಡೆದಂತೆಯೇ ಸರಿ ಎಂದಿವರು ಖಚಿತವಾಗಿ ಹೇಳಿದ್ದರು. ಇದರಿಂದ ಪೂರ್ವ ಪಾಕಿಸ್ತಾನದ ಜನತೆಯು ಅಯೂಬಖಾನರ ಸರಕಾರ ಮತ್ತವರ ಸಂವಿಧಾನಗಳಿಂದ ಅತೃಪ್ತವಾಗಿದೆ ಎಂದು ಖಂಡಿತ ತಿಳಿಯಬಹುದು.

ಪೂರ್ವ ಪಾಕಿಸ್ತಾನಿಗಳಿಗೆ ಹಿಂದಿನ ಆಡಳಿತೆಯವರು ನೀಡಲು ನಿರಾಕರಿಸಿದ ಒಂದೆರಡು ಸವಲತ್ತುಗಳನ್ನು ಹೊಸ ಸಂವಿಧಾನವು ನೀಡಿರುತ್ತದೆ. ಮುಖ್ಯವಾಗಿ, ರಾಜ್ಯದ ಭಾಷೆಗಳಲ್ಲಿ ಬಂಗಾಳಿಯನ್ನು ಒಂದಾಗಿ ಮಾನ್ಯಮಾಡಿರುವುದು ದೊಡ್ಡ ಉಪಕಾರವಾಗಿದೆ. ರಾಜ್ಯಗಳಿಗೆ ಕೆಲವೊಂದು ಹೆಚ್ಚಿನ ಅಧಿಕಾರವನ್ನೂ ಒಪ್ಪಿಸಿಕೊಟ್ಟಿರುವುದು ಇನ್ನೊಂದು ಮುಖ್ಯಾಂಶ.

ಅಪ್ರತ್ಯಕ್ಷ ಮತದಾನ ಪದ್ಧತಿಯೂ ಪಾಕಿಸ್ತಾನಕ್ಕೆ ಹೊಸತೆನಿಸುವುದಿಲ್ಲ. ೧೯೫೮ರಲ್ಲಿ ಗುಲಾಂ ಮಹಮ್ಮದರು ನ್ಯಾಯ ವಿಧಾಯಕ ಸಭೆಯನ್ನು ರದ್ದುಗೊಳಿಸಿದಾಗ, ಕೇಂದ್ರ ಸಭೆಗೆ ರಾಜ್ಯ ವಿಧಾನ ಸಭೆಗಳ ಮೂಲಕವೇ ಸದಸ್ಯರನ್ನು ಆರಿಸಿಕೊಂಡಿದ್ದರು. ಅಂದು ಸೀಮಿತವಾಗಿದ್ದ ಮತದಾರರ ಸಂಖ್ಯೆಯು ಇಂದು ಕ್ಷೇತ್ರ ವಿಸ್ತಾರಗೊಂಡುದರಿಂದ, ಹೆಚ್ಚಾಗಿದೆ. ಅಧಿಕಾರಿಗಳ ಹೆಂಡಂದಿರು ಚುನಾವಣೆಯಲ್ಲಿ ಭಾಗವಹಿಸುವುದನ್ನು ಮಾತ್ರ ಹೊಸ ಸಂವಿಧಾನವು ನಿರೋಧಿಸುತ್ತದೆ. ಕ್ರಾಂತಿಪೂರ್ವ ಸರಕಾರದಲ್ಲಿ ಮಂತ್ರಿಯಾಗಿದ್ದ ಒಬ್ಬಾಕೆ ರಾಜಕಾರಣದಲ್ಲಿಯೇ ಆಯುಷ್ಯ ಕಳೆದವಳು. ಅವಳ ಗಂಡ ಪಶ್ಚಿಮ ಪಾಕಿಸ್ತಾನದ ಪ್ರಧಾನ ಕಾರ್ಯದರ್ಶಿಯಾಗಿದ್ದಾನೆ. ಕರಾಚಿ ನಗರ ಸಭೆಯ ಇಂಜನಿಯರೊಬ್ಬರ ಹೆಂಡತಿಯೂ ಇವಳ ಸಾಲಿಗೆ ಸೇರಿದವಳು. ಅಖಿಲ ಪಾಕಿಸ್ತಾನ ಮಹಿಳೆಯರ ಸಂಸ್ಥೆಯ ಪಶ್ಚಿಮದ ಶಾಖೆಯು ಇಂತಹ ಬಹಿಷ್ಕಾರವನ್ನು ಕಿತ್ತೊಗೆಯಬೇಕೆಂದು ಸರಕಾರವನ್ನು ಒತ್ತಾಯಿಸಿದೆ. ಆದರೆ, ಇದು ಸಫಲವಾಗುವಂತಿಲ್ಲ.

ಪಾಕಿಸ್ತಾನದಲ್ಲಿ ನಡೆಯಲಿರುವ ಈ ಚುನಾವಣೆಯಲ್ಲಿ ಯಾವ ರಾಜಕೀಯ ಪಕ್ಷಗಳಿಗೂ ಪ್ರವೇಶವಿಲ್ಲ. ಉಮೇದ್ವಾರರೆಲ್ಲರೂ ಸ್ವತಂತ್ರ ನೆಲೆಯಲ್ಲಿಯೇ ಸ್ಪರ್ಧಿಸಬೇಕು. ಪ್ರತಿ ಹುರಿಯಾಳುವೂ ಒಂದೇ ವೇದಿಕೆಯ ಮೇಲೆ ನಿಂತು ಹತ್ತು ನಿಮಿಷಗಳ ತನಕ ತಮ್ಮ ಚುನಾವಣಾ ಘೋಷಣೆಯನ್ನು ಜನತೆಯ ಮುಂದಿಡಬೇಕು. ಅನಂತರ ಐದು ನಿಮಿಷಗಳವರೆಗೆ, ಈ ಬಗ್ಗೆ ಆತನನ್ನು ಮತದಾರರು ಪ್ರಶ್ನಿಸಬಹುದು. ರಾಜಕೀಯ ಪಕ್ಷಗಳು ತಾನು ಅಧಿಕಾರ ತೆಗೆದುಕೊಳ್ಳುವುದಕ್ಕೆ ಮೊದಲು ಮಾಡಿರುವ ಅನಾಚಾರಗಳೇ ಅವುಗಳಿಗೆ ಹಾಕಿದ ಬಹಿಷ್ಕಾರಕ್ಕೆ ಕಾರಣವೆಂದು ಅಯೂಬಖಾನರನ್ನುತ್ತಾರೆ.

ಚುನಾವಣಾ ಆಯೋಗವು ಪ್ರಾಥಮಿಕ ಮತದಾರರನ್ನೆಲ್ಲಾ ಒಂದೇ ಕಡೆ ಕೂಡಿಸುವ ವ್ಯವಸ್ಥೆ ಮಾಡಿರುವುದರಿಂದ ಹುರಿಯಾಳುಗಳಿಗೆ ವಿಶೇಷ ಪ್ರಯಾಸವೆನಿಸುವುದಿಲ್ಲ. ಇಂತಹ ಸಾರ್ವತ್ರಿಕ ಕೂಟಗಳನ್ನಲ್ಲದೆ ಪ್ರತ್ಯೇಕವಾಗಿ ಅವರು ಯಾವ ಸಭೆಯನ್ನೂ ಏರ್ಪಡಿಸುವ ಅಧಿಕಾರ ಪಡೆದಿಲ್ಲ. ಆದರೂ ಉಮೇದ್ವಾರರು ವೈಯಕ್ತಿಕವಾಗಿ ಮತದಾರರನ್ನು ಭೆಟ್ಟಿ ಮಾಡಬಹುದು, ತಮ್ಮ ಹುರಿಯಾಳುತನವನ್ನು ಸಮರ್ಥಿಸುವ ಕರಪತ್ರಗಳನ್ನು ಹಂಚಬಹುದು. ಇಡಿಯ ರಾಷ್ಟ್ರದಲ್ಲಿ ಮೌಲಿಕ ಅಧಿಕಾರಗಳನ್ನು ಮರಳಿ ದೊರಕಿಸುವ ಮತ್ತು ವಯಸ್ಕ ಮತದಾನದ ಪದ್ಧತಿಯನ್ನು ತರುವ ಉದ್ದೇಶಕ್ಕೆ ಕಟ್ಟುಬಿದ್ದ ಕೆಲವೊಬ್ಬರು ಹುರಿಯಾಳುಗಳೂ ಚುನಾವಣೆಯಲ್ಲಿ ಭಾಗವಹಿಸಿದ್ದಾರೆ.

ಒಟ್ಟಿನಲ್ಲಿ ದಂಡಿನಾಡಳಿತೆಯ ಅಧ್ಯಕ್ಷ ಅಯೂಬಖಾನರು ತಮ್ಮ ಅಧಿಕಾರವನ್ನೇ ತಾರಕವನ್ನಾಗಿ ಮಾಡುವ ಪ್ರಯತ್ನದಲ್ಲಿ ಸಾಮಾನ್ಯ ಮಟ್ಟಿಗೆ ಯಶಸ್ವಿಯಾದರು. ಆದರೆ, ದೇಶದೊಳಗೆ ಹಬ್ಬಿರುವ ಅಶಾಂತಿಯ ಜ್ವಾಲೆಯ ವೇಗದಿಂದ ಈಗ ಪ್ರಾರಂಭವಾಗುವ ಪ್ರಜಾಪ್ರಭುತ್ವ ಪದ್ಧತಿಯಾದರೂ ಬಹುಕಾಲ ಮುಂದುವರಿಯುವುದೆಂದು ಹೇಳುವುದು ಕಷ್ಟ.

ಅಂಕಲೇಶ್ವರದ ಟಾಂಕಿಯಿಂದ ಎಣ್ಣೆ ಹರಿಯುವುದಕ್ಕೆ ಮೊದಲಾಯಿತು. ಈ ಸಮಾರಂಭವನ್ನು ಆರ್. ಡಿ. ವರ್ಮರು ನೆರವೇರಿಸಿದರು.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು

(ಡಾ ಕೆ ಎಲ್ ಐತಾಳ, ಎಂ. ಬಿ ಬಿ ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಎಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಣದ ಜೋಪಾಸನೆಗೆ....

ಅಂಗಿಯ ಕಿಸೆಗಿಂತ ಮನೆ ಮೇಲು;

ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ

ಆಡಳಿತ ಆಫೀಸು. ಮಂಗಳೂರು-1.

ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಮಂತ್ರಮಯ ನೀರು

ಭಾರತೀಯ ನೀರಿನ ಪವಾಡ ಶಕ್ತಿ

("ಗೋರಾ"ರಿಂದ ಸಂಗ್ರಹಿತ)

ಭಾರತದ ಎಲ್ಲೆಡೆಯಲ್ಲಿಯೂ ಪವಿತ್ರವೆಂದು ಪರಿಗಣಿತವಾದ ಬಾವಿಗಳು, ಸರೋವರಗಳು ಇಲ್ಲವೇ ನದೀನದಗಳು ಇವೆ. ಇಂತಹ ಆಶ್ರಯಗಳ ಜಲವನ್ನು ಸೇವಿಸುವುದರಿಂದ ಅನೇಕ ಪ್ರಕಾರದ ರೋಗಗಳು ದೂರವಾಗುತ್ತವೆಯೆಂಬ ವಿಶ್ವಾಸ ಬಹಳ ಹಿಂದಿನ ಕಾಲದಲ್ಲಿಯೂ ಇತ್ತು; ಈ ವಿಶ್ವಾಸ ಇಂದಿಗೂ ಉಳಿದುಕೊಂಡಿದೆ.

ಅಸಾಧ್ಯದಲ್ಲಿ ಅಸಾಧ್ಯವಾದ ರೋಗಗಳನ್ನು ನಿರ್ಮೂಲಗೊಳಿಸುತ್ತವೆಯೆಂಬ ವಿಶ್ವಾಸಕ್ಕೆ ಕಾರಣವಾದ ಸ್ಥಾನಗಳು ನಮ್ಮ ದೇಶದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಪ್ರಖ್ಯಾತವಿವೆ. ಕರ್ನಾಟಕದ ಕರಾವಳಿಯಲ್ಲಿರುವ ನಮ್ಮ ಜಿಲ್ಲೆಯಲ್ಲಿಯೇ ಇಂತಹ ಅಸಮಾನ ಶಕ್ತಿಯುಳ್ಳ ನೀರು ತುಂಬಿದ ನದಿಯೊಂದಿದೆ. ಪಶ್ಚಿಮ ಘಟ್ಟಗಳ ಮರೆಯಲ್ಲಿರುವ ಸುಬ್ರಹ್ಮಣ್ಯವು ಹೆಸರಾಂತ ತೀರ್ಥಸ್ಥಾನ. ಇಲ್ಲಿನ ದೇವಾಲಯದ ಸಮೀಪದಲ್ಲಿಯೇ ಕುಮಾರ ಧಾರಾ ನದಿಯು ಹರಿಯುತ್ತದೆ ಇದರ ನೀರು ಸ್ಫಟಿಕದಂತೆ ಅತ್ಯಂತ ಸ್ವಚ್ಛವಾಗಿದೆ; ಎಲ್ಲ ಕಾಲಗಳಲ್ಲಿಯೂ ಇದು ಶೀತಲವಾಗಿದೆ ಈ ನದಿಯು ತಾರಕಾಸುರ ಸಂಹಾರಕ್ಕಾಗಿ ಕುಮಾರನಿಗೆ ದೇವತೆಗಳ ಸೇನಾಧಿಪತಿ ಪಟ್ಟಾಭಿಷೇಕ ಮಾಡಿದ ನೀರಿನಿಂದ ರಚಿತವಾದುದೆಂದು ಪ್ರತೀತಿಯಿರುವುದರಿಂದ ಅತ್ಯಂತ ಪವಿತ್ರವೆಂದು ತಿಳಿಯಲಾಗುತ್ತದೆ ಈ ನದಿಯ ನೀರಿನಲ್ಲಿ ಮಾನವ ಶರೀರದ ದೋಷಗಳನ್ನು ನಿವಾರಣೆ ಮಾಡುವ ಅಲೌಕಿಕ ಶಕ್ತಿಯಿದೆ ಈ ಸಂಬಂಧದಲ್ಲಿ ಒಂದು ಕಥೆಯು ಪ್ರಚಲಿತವಿದೆ.

ಶ್ರೀಕೃಷ್ಣನ ಪುತ್ರ ಸಾಂಬನು ಕುಷ್ಠರೋಗದಿಂದ ನರಳಿದನಂತೆ. ಇದರಿಂದ ಆತನು ಬಹುವಾಗಿ ನೊಂದುಕೊಂಡನು. ತನ್ನ ರೋಗ ನಿವಾರಣೆಯ ಪ್ರಯತ್ನದಲ್ಲಿ ಆತನು ಒಂದೂರಿನಿಂದ ಇನ್ನೊಂದೂರಿಗೆ ಯಾತ್ರೆ ಮಾಡುತ್ತ ತಿರುಗುತಿದ್ದನು. ಸಂಯೋಗವಶದಿಂದ ಅವನು ಕುಮಾರ ಧಾರಾನದಿಯ ದಂಡೆ ಸೇರಿದನು. ಆತನಿಗೆ ನದೀ ನೀರಿನ ಗುಣಗಳ ಪರಿಚಯವೇನೂ ಇರಲಿಲ್ಲ. ಬಿಸಿಲು ಹೊಳೆಯುತಿತ್ತು ಉರಿಯನ್ನು ತಾಳದ ಸಾಂಬನು ನದೀ ನೀರಿನಲ್ಲಿ ಸ್ನಾನ ಮಾಡಿದನು. ನೀರಿನಿಂದ ಮೇಲೆದ್ದು ನೋಡಿದಾಗ ಆತನು ತನ್ನ ಕಣ್ಣುಗಳನ್ನೇ ನಂಬಲಿಲ್ಲ; ಶರೀರವನ್ನಾಕ್ರಮಿಸಿದ್ದ ಮಹಾ ವ್ಯಾಧಿಯು ಸಂಪೂರ್ಣ ಮಾಸಿಯಾಗಿತ್ತು.

ದರ್ಭಾಂಗ ಜಿಲ್ಲೆಯ ಸಮಸ್ತೀಪುರ ಸಬ್ ಡಿವಿಜನ್ನಿನಲ್ಲಿ ಅವಧ-ತಿರಹುತ ರೇಲ್ವೆದಾರಿಯಲ್ಲಿ ಡಾಲಸಿಂಹ ಸ್ಟೇಶನ್ ಬಹು ಪ್ರಸಿದ್ಧಿ ಪಡೆದಿದೆ. ಭಾರತದ ಬಿಸ್ತಾಂತ ಪ್ರದೇಶಗಳಿಂದ ಪ್ರತಿ ದಿನವೂ ೧೫ರಿಂದ ೨೦ ಸಾವಿರ ಜನರು ಅಲ್ಲಿ ಇಳಿಯುತ್ತಾರೆ. ಆ ಗ್ರಾಮದ ಒಂದು ಬಾವಿಯ ನೀರಿನಲ್ಲಿ ರೋಗ ನಾಶಕ ಗುಣವಿದೆಯೆಂಬುದೇ ಇದಕ್ಕೆ ಕಾರಣ.

ಕೆಲವು ದಿವಸಗಳಿಗೆ ಮೊದಲು ಅಲ್ಲಿಗೊಬ್ಬ ಸಾಧು ಬಂದಿದ್ದನು. ಆ ಗ್ರಾಮದಲ್ಲಿ ಹಳೆಯ ರೋಗಿಯೊಬ್ಬನಿದ್ದನು. ಸಾಧುವಿಗೆ ಆತನನ್ನು ಕಂಡು ಹೃದಯ ಕರಗಿತು. ಆದುದರಿಂದ ಒಂದು ಬಾವಿಯ ನೀರನ್ನು ಕುಡಿಯುವಂತೆ ಸಲಹೆಯಿತ್ತನು. ನೀರು ಕುಡಿದುದೇ ತಡ, ಆ ವ್ಯಕ್ತಿ ನೀರೋಗಿಯಾದನು. ಈ ಸುದ್ದಿ ತ್ವರಿತದಲ್ಲಿಯೇ ಎಲ್ಲೆಲ್ಲೂ ಹರಡಿತು. ಜನರ ಗುಂಪಿಗೆ ಗುಂಪೇ ಆ ಬಾವಿಗೆ ನೀರು ಕುಡಿಯಲು ಧಾವಿಸಿ ಬರತೊಡಗಿತು. ಇಂದಿಗೂ ಹೀಗೆ ಬರುತ್ತಿರುವವರ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚುತ್ತ ಇದೆ.

ಒರಿಸ್ಸಾ ರಾಜ್ಯದ ರಾಜಧಾನಿ ಭುವನೇಶ್ವರದಲ್ಲಿ ಬಿಂದುಸಾಗರವೆಂಬ ಒಂದು ಸರೋವರವಿದೆ ಇದರ ನೀರಿನಲ್ಲಿಯೂ ರೋಗ ನಿವಾರಕ ಗುಣವಿದೆಯೆಂದು ತಿಳಿಯುತ್ತಾರೆ. ಆದುದರಿಂದಲೇ ದೂರದೂರ ಪ್ರದೇಶಗಳಿಂದ ರೋಗಗ್ರಸ್ತ ಜನರು ನಿರೋಗಿಯಾಗುವ ಆಶೆಯನ್ನಿಟ್ಟುಕೊಂಡು ದಿನಂಪ್ರತಿ ಈ ಸರೋವರದಲ್ಲಿ ಮೀಯುತ್ತಾರೆ.

ಬಡೋದೆ ಮತ್ತು ಬಲಸಾಡಗಳ ಸೀಮೆಯಲ್ಲಿ ಉನಾಯಿ ಎಂಬ ಹೆಸರಿನ ಬಿಸಿನೀರಿನ ಒಂದು ಹಳ್ಳವಿದೆ ಇಲ್ಲಿ ಗಂಟು ನೋವು, ವಾತರೋಗ ಮತ್ತು ಸೊಂಟವಾಯುಗಳಿಂದ ನವೆಯುತ್ತಿರುವ ಸಹಸ್ರಾರು ಜನರು ಬರುತ್ತಾರೆ. ಹೀಗೆ ಬಂದವರಲ್ಲಿ ಅನೇಕರ ರೋಗವು ನಿವಾರಣೆ ಹೊಂದಿದೆಯೆಂದು ಹೇಳುತ್ತಾರೆ. ಈ ಹಳ್ಳದ ನೀರಿನಲ್ಲಿ ಗಂಧಕದ ತೀವ್ರ ವಾಸನೆ ಇದೆ ನೀರಿನಲ್ಲಿ ಸುಣ್ಣ, ಸಲ್ಫೇಟಿನಿಂದ ಕೂಡಿದ ಅಮೋನಿಯಾ, ಕ್ಲೋರೈಡ್ ಮತ್ತು ನೀರಿನಲ್ಲಿ ಕರಗಿಕೊಂಡಿರುವ ಖನಿಜಗಳು ಬಹು ಪ್ರಮಾಣದಲ್ಲಿವೆ ಇದರ ಸಂಬಂಧದಲ್ಲಿ ಒಂದು ಮನೋರಂಜಕ ಕಥೆಯಿರುವುದು. ಈ ಕಥೆಯು ಶ್ರೀ ರಾಮಚಂದ್ರನ ಕಾಲಕ್ಕೆ ಸಂಬಂಧಿಸಿದೆ. ದಂತಕಥಾನುಸಾರ ಭಗವಾನ್ ಶ್ರೀರಾಮಚಂದ್ರನು ಲಂಕಾಧೀಶ ರಾವಣನನ್ನು ಕೊಂದು ಸೀತಾಮಾತೆಯೊಡನೆ ಪುಷ್ಪಕ ವಿಮಾನದಲ್ಲಿ ಬರುತ್ತಿದ್ದನು. ಆಗ, ಅಂಬಿಕಾ ನದಿಯ ದಡದಲ್ಲಿರುವ ಅಗಸ್ತ್ಯಮುನಿಯ ಆಶ್ರಮದತ್ತ ಅವನ ದೃಷ್ಟಿಬಿತ್ತು. ಅವನು ವಿಮಾನವನ್ನು ಇಳಿಸಿದನು; ಮಹರ್ಷಿ ದರ್ಶನಾಭಿಲಾಷೆಯಿಂದ ಆಶ್ರಮವನ್ನು ಹೊಕ್ಕನು. ರಾವಣ ಹತ್ಯೆಯ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಮುನಿಯು ಹೇಳಿದನು. ಶ್ರೀರಾಮನಿದಕ್ಕೆ ಒಪ್ಪಿಗೆಯಿತ್ತನು. ಅನುಷ್ಠಾನಕ್ಕಾಗಿ ಅನಾವಿಲದ ಸ್ಥಾನವನ್ನು ಆರಿಸಲಾಯಿತು. ಆದರೆ, ಸಂಸ್ಕಾರ ಮಾಡಿಸುವುದಕ್ಕಾಗಿ ಅಲ್ಲಿ ಯಾರೊಬ್ಬ ಬ್ರಾಹ್ಮಣನೂ ಇರಲಿಲ್ಲ. ಆವನ ಪ್ರದೇಶದಲ್ಲಿ ಭಿಲ್ಲನೊಬ್ಬನ ಹೊರತು ಮತ್ತಾರೂ ಇರಲಿಲ್ಲ ಈ ಭಿಲ್ಲನ ಹೆಸರು ಮೂಕನೆಂದು. ಆದುದರಿಂದ ಹಿಮಾಲಯದಲ್ಲಿ ಅಂತರ್ಗತವಾದ ಗಂಗಾಕುಲಗಿರಿಯಿಂದ ಬ್ರಾಹ್ಮಣರನ್ನು ಕರೆಸಲಾಯಿತು. ಇವರಿಗಾಗಿ ಶ್ರೀರಾಮನು ಬಿಸಿ ಗಂಗಾ ಜಲದ ಹಳ್ಳವನ್ನು ನಿರ್ಮಿಸಿದನು. ಭೂಮಿಗೆ ಬಾಣವನ್ನು ನಾಟಿ ಇದನ್ನು ಮೇಲಕ್ಕೆ ತರಿಸಲಾಗಿತ್ತು. ಉನಾಯಿಯ ಬಿಸಿ ನೀರಿನ ಹಳ್ಳದ ಇತಿಹಾಸವೇ ಇದು.

ದಕ್ಷಿಣ ಭಾರತದಲ್ಲಿ ಶೈವರ ಅನೇಕ ಪ್ರಸಿದ್ಧ ತೀರ್ಥಸ್ಥಾನಗಳಿವೆ ಇವುಗಳಲ್ಲಿ ತಿರುಚೆಂದೂರು ಒಂದು. ಇದರ ಮುಂದಿರುವ ಸಮುದ್ರದಲ್ಲಿ ಸ್ನಾನ ಮಾಡುವುದರಿಂದ ಚರ್ಮ ರೋಗಗಳು ವಾಸಿಯಾಗುತ್ತವೆನ್ನಲಾಗುತ್ತದೆ. ರೋಗನಾಶಕ ಗುಣವು ಅಲ್ಲಿನ ನೀರಿನಲ್ಲಿದೆಯೆಂಬುದಕ್ಕೆ ನಿದರ್ಶನಗಳೂ ಇವೆ. ಭಾರತದ ಸಮುದ್ರ ತಟದಲ್ಲಿ ಅನೇಕ ಕಡೆ ಬಹಳ ಖನಿಜ ಪದಾರ್ಥಗಳು ತುಂಬಿವೆ. ಸಾಗರದ ತೆರೆಗಳು ಈ ಬಹುಮೂಲ್ಯವಾದ ಪದಾರ್ಥಗಳನ್ನು ತೊಳೆಯುತ್ತ ಇರುತ್ತವೆ. ಕನ್ಯಾಕುಮಾರಿ ಭೂಶಿರದ ಆಸುಪಾಸಿನಲ್ಲಿ ಇವು ಮತ್ತಷ್ಟು ಹೆಚ್ಚಾಗಿ, ತಿರುಚೆಂದೂರು ದೇವಮಂದಿರದ ಪೂರ್ವದಲ್ಲಿ ಒಂದು ಫರ್ಲಾಂಗು ದೂರದಲ್ಲಿಯೇ ಮಳಲಿನಲ್ಲಿ ಒಂದು ಊಟೆ ಭೂಗರ್ಭದಿಂದ ಚಿಮ್ಮಿ ಹರಿಯುತ್ತದೆ. ಇದನ್ನೇ ವೃತ್ತಾಕಾರಕ್ಕೆ ಪರಿವರ್ತಿಸಿದ್ದಾರೆ ಇದರಿಂದಾಗಿ ಉಂಟಾದ ಹಳ್ಳದಲ್ಲಿ ಇಳಿದು ಜನರು ಸ್ನಾನಮಾಡುತ್ತಾರೆ. ನೀರನ್ನೂ ಕುಡಿಯುತ್ತಾರೆ. ಈ ನೀರಿನಲ್ಲಿ ಚರ್ಮರೋಗಕ್ಕೆ ರಾಮಬಾಣವಾದಂತಹ ಒಂದು ಖನಿಜ ಪದಾರ್ಥವಿದೆ

ಮಧ್ಯ ಪ್ರದೇಶದ ಅಂಬಾಲಾದಲ್ಲಿ ಅಂಬಾ ಸರೋವರವಿದೆ. ಇದರ ನೀರು ಪವಿತ್ರ ಭಗವತಿ ಅಥವಾ ಪಾತಾಳ ಗಂಗೆಯಿಂದ ಬರುತ್ತದೆನ್ನುತ್ತಾರೆ. ಈ ಸರೋವರದಲ್ಲಿಯೂ ರೋಗಿಗಳು ಸ್ನಾನಮಾಡುತ್ತಾರೆ. ಒಂದು ಕಾಲದಲ್ಲಿ ಅಂಬಾ ಎಂಬ ಹೆಸರಿನ ರಾಜಪೂತ ಸರದಾರನಿದ್ದನು. ಅವನಿಗೆ ದುರ್ಭಾಗ್ಯವಶದಿಂದ ಕುಷ್ಠರೋಗವಂಟಿತು. ಇದರ ನಿವಾರಣೆಗಾಗಿ, ಆತನು ಊರೂರು ಅಲೆದಾಡ ತೊಡಗಿದನು. ಒಂದು ದಿನ ಅವನು ಕುದುರೆಯ ಮೇಲೆ ಕೂತುಕೊಂಡು, ರಾಮಟೇಕದತ್ತ ಬರುತ್ತಲಿದ್ದನು; ಆಗ ಅವನಿಗೊಂದೆಡೆ ಒಂದು ಗುಹೆಯಿಂದ ತೆಳ್ಳಗಿನ ಧಾರೆಯಲ್ಲಿ ನೀರು ಬೀಳುತ್ತಿರುವುದು ಕಂಡಿತು. ನೀರಡಿಕೆ ನೀಗಿಸುವುದಕ್ಕೋಸ್ಕರ ಆತನು ಕುದುರೆಯಿಂದಿಳಿದನು. ಹರಿಯುವ ನೀರಧಾರೆಯನ್ನು ತೋರವಾಗಿಸಲು ತುಸು ಮಣ್ಣನ್ನು ತೆಗೆದನು. ನೀರು ತಾಗಿದ ಸ್ಥಳದಲ್ಲಿ ಕುಷ್ಠದ ಕಲೆಗಳು ಮಾಯವಾದುದನ್ನು ಕಂಡು ಆತನ ಆನಂದಕ್ಕೆ ಪಾರವೇ ಉಳಿಯಲಿಲ್ಲ ತತ್‌ಕ್ಷಣ ಅವನು ಅಲ್ಲಿಯೇ ಒಂದು ಹಳ್ಳವನ್ನು ತೋಡಿದನು. ಅದರಲ್ಲಿ ಮಿಂದು ಹೊರಬಂದುದೇ ತಡ, ಅವನ ಶರೀರ ನೀರೋಗಿಯಾಗಿ ಬಿಟ್ಟಿತು ಆಗ ಅತಿ ಎಳೆಯದಾಗಿದ್ದ ಆ ಹಳ್ಳವನ್ನಿಂದು ಆಯತಾಕಾರದ ಸರೋವರವನ್ನಾಗಿ ಕಟ್ಟಿದ್ದಾರೆ. ನಾಲ್ಕು ಸುತ್ತಲೂ ಕಲ್ಲಿನ ಮೆಟ್ಟಲುಗಳಿವೆ. ಇಲ್ಲಿ ಸ್ನಾನಕ್ಕೋಸ್ಕರ ಬರುವವರು ಕಾಣಿಕೆಯೆಂದು ಹಣವನ್ನೆಸೆಯುತ್ತಾರೆ ಜನರು ಆಳಕ್ಕೆ ಮುಳುಗಿ ಬುಟ್ಟಿ ಬುಟ್ಟಿ ಕೆಸರು ತೆಗೆದು ನಾಣ್ಯಗಳನ್ನು ಹೆಕ್ಕುತ್ತಾರೆ.

ಮದ್ರಾಸದಲ್ಲಿ ಸೈಂಟ್ ಥಾಮಸ್ ಮೌಂಟ್ ರೇಲ್ವೆ ಸ್ಟೇಶನ್‌ನಿಂದ ಸುಮಾರು ಒಂದು ಮೈಲು ದೂರದಲ್ಲಿ ಬೃಂಗುಮಕಾಯ್ ಕ್ಷೇತ್ರ ಒಂದು ಪರ್ವತ ಮೇಲಿದೆ. ಅಲ್ಲಿ ಆಳುತಿದ್ದ ಉಪವನನೆಂಬ ಚೋಳ ಅರಸನಿಗೆ ಒಮ್ಮೆ ಕಠಿಣವೆನಿಸಿದ ಉದರ ರೋಗ ತಲೆದೋರಿತು. ಜತೆಯಲ್ಲಿಯೇ ಶರೀರದಲ್ಲಿ ರಕ್ತದ ಪರಿಮಾಣವೂ ಕಡಿಮೆಯಾಯಿತು. ದಕ್ಷಿಣ ಭಾರತದ ಮೂರು ರಾಜ್ಯಗಳ ಸುವಿಖ್ಯಾತ ವೈದ್ಯರು ಚಿಕಿತ್ಸೆ ನಡೆಸಿದರೂ ಅವರು ಯಶಸ್ವಿಯಾಗಲಿಲ್ಲ ಕೊನೆಗೆ ಅವನಿಗೆ ಬೃಂಗುಮಕಾಯ್ ಕ್ಷೇತ್ರಕ್ಕೆ ಹೋಗುವಂತೆ ಸಲಹೆಯಿತ್ತರು. ಅಲ್ಲಿ ದೇವಪೂಜೆಯನ್ನು ಮಾಡಿ ದೇವಾಲಯದ ಮುಂದಿರುವ ಬಾವಿಯ ನೀರನ್ನು ಕುಡಿಯುವಂತೆ ಆದೇಶವಿತ್ತರು. ಅವನು ಹಾಗೆಯೇ ಮಾಡಿ ನಿರೋಗಿಯೆನಿಸಿದನು. ಯಕೃತ್ತು, ವಾತರೋಗ, ಗಂಟುನೋವು ಮೊದಲಾದ ವ್ಯಾಧಿಗಳು ಇಲ್ಲಿ ನಿವಾರಣೆ ಹೊಂದುತ್ತವೆ.

ಗಂಗಾ ಮತ್ತು ಸಿಂಧುಗಳನ್ನುಳಿದರೆ, ಗೋದಾವರಿಯೇ ಭಾರತೀಯ ನದಿಗಳಲ್ಲಿ ದೊಡ್ಡದು. ಇದು ದಕ್ಷಿಣ ಭಾರತದ ಪಶ್ಚಿಮದಲ್ಲಿ ಬ್ರಹ್ಮಪುರಿ ಪರ್ವತಮಾಲೆಯ ತ್ರ್ಯಂಬಕವೆಂಬಲ್ಲಿ ಹುಟ್ಟುತ್ತದೆ. ಈಗ ತ್ರ್ಯಂಬಕವು ಮಹಾರಾಷ್ಟ್ರಕ್ಕೆ ಸೇರಿದೆ. ಗೋದಾವರಿ ನದಿಯು ೯೦೦ ಮೈಲುದ್ದವಿದೆ. ಮಕ್ಕಳಿಲ್ಲದವರು ಮತ್ತು ಮಕ್ಕಳನ್ನು ಬಯಸುವವರು ಗೋದಾವರಿಯನ್ನು ಆರಾಧಿಸುತ್ತಾರೆ. ಗೋದಾವರಿ ನದಿಯು ಸಂತಾನ ಪ್ರದಾಯಿನಿಯೆಂಬುದಕ್ಕೆ ಅಲ್ಲಿ ನಡೆಯುವ ಪುಷ್ಕರ ಸ್ನಾನವೇ

(೮ನೇ ಪುಟ ನೋಡಿರಿ)

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುವುದು

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.**

ಮಾರಾಟಗಾರರು: **ನವಭಾರತ ಬುಕ್ ಡಿಪ್ಪೊ, ಉಡುಪಿ.**

ನವಯುಗ

ವರುಷ	ಉಡುಪಿ	ವಾರ
೪೧	೨೬-೪-'೬೨	೩೩

ಕೇಂದ್ರದ ಮುಂಗಡಪತ್ರ

ಕೇಂದ್ರದ ಮುಂಗಡ ಪತ್ರವನ್ನು ಹಿಂದಿನ ಸಂಸತ್ತಿನಲ್ಲೇ ಸಾಂಪ್ರದಾಯಿಕವಾಗಿ ಮಂಡಿಸಲಾಗಿದ್ದರೂ ಅದನ್ನು ಸ್ವೀಕರಿಸುವ ಹೊಣೆಯು ಹೊಸ ಸಂಸತ್ತಿನ ಮೇಲಿರುವುದರಿಂದ ಮರಳಿ ಅರ್ಥ ಮಂತ್ರಿಯಾಗಿ ನಿಯುಕ್ತರಾದ ಮುರಾರ್ಜಿ ದೇಸಾಯಿಯವರು ೨೩ನೆ ದಿನಾಂಕದಂದು ಮಂಡಿಸಿದರು. ಇದರೊಡನೆ ಹೊಸತಾಗಿ ಆಕರಿಸಲಾಗುವ ಕರಗಳ ವಿವರವನ್ನೂ ಹೊರಗೆಡಹಿದರು. ಮೊದಲು ಮಂಡಿಸಿದ್ದ ಮುಂಗಡ ಪತ್ರದಲ್ಲಿ ರೆವೆನ್ಯೂ ಬಾಬಿನಲ್ಲಿ ೬೩|| ಕೋಟಿ ರೂಪಾಯಿಗಳಷ್ಟು ಕೊರತೆಯು ಇದ್ದಿದ್ದರೆ, ಇಂದು ಅದು ೬೦|| ಕೋಟಿ ರೂಪಾಯಿಗಳಿಗೆ ಇಳಿದಿದೆ. ಹೊಸತಾಗಿ ಹೇರಲಾಗುವ ಹೊಸ ಕರಗಳಿಂದಾಗಿ ಈ ಕೊರತೆಯನ್ನು ತುಂಬಿಸಿಕೊಳ್ಳಲಾಗುವುದು. ಆದರೆ ಬಂಡವಳ ವೆಚ್ಚದಲ್ಲಿ ಕಾಣುತ್ತಿದ್ದ ರೂ. ೭೯ ಕೋಟಿಗಳ ಕೊರತೆಯು ಹಾಗೆಯೇ ಉಳಿದಿದ್ದು ಇದನ್ನು ಕೊರತೆ ಧನ ವಿನಿಯೋಗದ ಮೂಲಕ ತುಂಬಿಕೊಳ್ಳಲಾಗುವುದು. ಹೀಗೆ ಆಯ ಮತ್ತು ವ್ಯಯಗಳ ಬಾಯಿಗಳನ್ನು ಒಂದುಗೂಡಿಸುವಲ್ಲಿ ದೇಸಾಯಿಯವರು ಬಹು ಚಾಣಾಕ್ಷತೆಯನ್ನು ತೋರಿಸಿದ್ದಾರೆ ಎಂದು ಹೇಳಬಹುದು.

ಮುಂಗಡ ಪತ್ರದ ಅಧಿವೇಶನವೆಂದೊಡನೆಯೇ ಕರಭಾರ ಯಾವ್ಯಾವುಗಳ ಮೇಲೆಂದು ಎಲ್ಲರೂ ಇದಿರು ನೋಡುತ್ತಾರೆ. ಮೊದಲು ತೋರಿಸಲಾಗಿದ್ದ ೬೪ ಕೋಟಿ ರೂಪಾಯಿಗಳ ಕೊರತೆಯ ಮೇಲೆ, ನಿರ್ಯಾತವನ್ನು ಪ್ರೋತ್ಸಾಹಿಸುವಂತೆ ಶಿಫಾರಸು ಮಾಡಿದ್ದ ಮುದಲಿಯಾರ ಸಮಿತಿಯ ವರದಿಯನ್ನು ಸ್ವೀಕರಿಸಿದುದರಿಂದ ಮತ್ತು ಕೇಂದ್ರ ಸರಕಾರಿ ನೌಕರರಿಗೆ ತುಟ್ಟಿ ಭತ್ತೆಯಲ್ಲಿ ಹೆಚ್ಚಳವನ್ನು ಘೋಷಿಸಿರುವುದರಿಂದ ಹೊಸತಾಗಿ ಮುಂದೆ ಬರುವ ಮುಂಗಡ ಪತ್ರದಲ್ಲಿ ಸಾಮಾನ್ಯ ೧೦೦ ಕೋಟಿ ರೂಪಾಯಿಗಳ ಹೊಸ ಕರಗಳು ಹೇರಲ್ಪಡುವುವೆಂದು ಊಹಿಸಲಾಗಿದುದು ಈಗ ಸುಳ್ಳಾಗಿ ಪರಿಣಮಿಸಿದೆ. ಆಕರಿಸಲಾಗುವ ಕರದ ಮೊತ್ತವು ಕಡಿಮೆಯಾಗಿಸಿ, ರಾಷ್ಟ್ರದ ಆಯ ಮತ್ತು ವ್ಯಯಗಳನ್ನು ಸರಿಯಾಗಿ ತೂಗಿ ನೋಡಿ ಅವನ್ನು ಹೊಂದಿಸಿಕೊಳ್ಳುವಲ್ಲಿ ದೇಸಾಯಿಯವರು ಚತುರತೆಯನ್ನು ಪ್ರದರ್ಶಿಸಿ, ವ್ಯಾಪಾರಿಗಳನ್ನು ಕಂಗಾಲು ಗೊಳಿಸಿದ್ದಾರೆ. ನಿರ್ಯಾತ ಪ್ರೋತ್ಸಾಹದ ನಲುವಾಗಿ ಮೀಸಲಾಗಿಟ್ಟ ಹಣವನ್ನು ಕಡಿಮೆ ಮಾಡಿದುದು ಮಾತ್ರವಲ್ಲ, ಕೇಂದ್ರ ನೌಕರರ ತುಟ್ಟಿ ಭತ್ತೆಯ ಹೆಚ್ಚಳದಿಂದ ಆಗುವ ಹೆಚ್ಚಿನ ವ್ಯಯವನ್ನೂ ಸಾಮಾನ್ಯವಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ. ಹಾಗಾಗಿ ಮೂಲತಃ ಬಿದ್ದಿರುವ ಕೊರತೆಯು ಊಹೆಗಿಂತ ಕಡಿಮೆಯಾಯಿತು. ವೆಚ್ಚದ ಮೇಲೆ ಐದು ವರ್ಷಗಳಿಗೆ ಮೊದಲು ಹೇರಲಾಗಿದ್ದ ಕರವನ್ನು ಈಗ ಕಿತ್ತು ಹಾಕಿದುದು ಈ ಸಲದ ಮುಂಗಡ ಪತ್ರದ ವೈಶಿಷ್ಟ್ಯ. ಇದಕ್ಕೆ ಕಾರಣವೂ ಇಲ್ಲಗಿಲ್ಲ. ಈ ಬಾಬಿನಲ್ಲಿ ಬರುವ ಹಣ ಕೇವಲ ವಾರ್ಷಿಕ ೮೦ ಲಕ್ಷ ರೂಪಾಯಿಗಳು. ಇದರಲ್ಲಿ ಸೇ. ೭೫ರಷ್ಟು ಮಾಜಿ ಅರಸರಿಂದಲೇ ಬರುತಿತ್ತು, ಆದರೆ, ಇದರ ವಸೂಲಿಯಲ್ಲಿ ಮಾತ್ರ ಬಹಳಷ್ಟು ಖರ್ಚು ತಗಲುತಿತ್ತು. ಆದುದರಿಂದ ಆದಾಯ ಹೆಚ್ಚು ಬರುವಂತೆ ನೋಡಿಕೊಳ್ಳುವುದಕ್ಕಾಗಿ ಮಾನ್ಯ ಮಂತ್ರಿಗಳು ಹೀಗೆ ಮಾಡಿದುದು ನಿರೀಕ್ಷಿತವೆನ್ನುವಂತಿಲ್ಲವಾದರೂ ಆಶ್ಚರ್ಯಕರವಾದುದಲ್ಲ. ಜನತೆಯ ಮೇಲೆ ವಿಶೇಷ ಪರಿಣಾಮವಾಗದಂತೆ ಬೆಂಕಿ ಪೆಟ್ಟಿಗೆ, ಚಾ, ಸಿಗರೇಟು, ತಂಬಾಕು, ಆಯಾತ ಮೊದಲಾದ ಕೆಲವು ಬಾಬುಗಳ ಮೇಲೆ ತುಸು ತುಸುವಾಗಿ ಕರವನ್ನು ಈ ಬಾರಿ ಹೆಚ್ಚಿಸಲಾಗಿದೆ. ಗೃಹಕರ ವಸ್ತುಗಳ ಮೇಲೆ ನೇರವಾಗಿ ಪರಿಣಾಮ ಬೀಳದಂತೆ ಕರಗಳ ಸೂಚನೆಯನ್ನು ರೂಪಿಸುವಲ್ಲಿ ತೋರಿಸಲಾದ ವಿಶೇಷ ಜಾಗ್ರತೆ ಪ್ರಶಂಸನೀಯವಿರುತ್ತದೆ.

ಮುಂಗಡ ಪತ್ರವನ್ನೂ ಹೊಸಕರಗಳ ಸೂಚನೆಗಳನ್ನೂ ಲೋಕಸಭೆಯ ಮುಂದಿಡುತ್ತ, ಅರ್ಥ ಮಂತ್ರಿ ದೇಸಾಯಿಯವರು ಹೊಸಕರಗಳನ್ನು ಹೇರಿಸುವ ಆವಶ್ಯಕತೆಯನ್ನು ನಿರೂಪಿಸುತ್ತ, "ಹೆಚ್ಚಿನ ಕರಭಾರದಿಂದಾಗಿ ನಮ್ಮ ಜನತೆಯು ಹೆಚ್ಚು ತ್ಯಾಗಮಾಡ ಬೇಕಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಆದರೆ, ಈ ರೀತಿ ಕರವನ್ನು ಹೇರದೆ ಹೋದರೆ ನಾವು ಅತಿಪ್ರಸರಣ ಇಲ್ಲವೇ ವಿನಾಶಕ್ಕೆ ಗುರಿಯಾಗುತ್ತೇವೆ, ಎಂದು ಹೇಳಿದರು. ಬೆಲೆಗಳ ಏರಿಕೆಯನ್ನಾಗಲೀ, ಅಭಿವೃದ್ಧಿ ಕೆಲಸಗಳ ನಿಧಾನಗತಿಯಿಂದಾಗಿ ದಾರಿದ್ರ್ಯವನ್ನಾಗಲೀ ನಾವು ಅಪ್ಪದಿರ ಬೇಕಾದರೆ ಕರಗಳ ಏರಿಕೆ ಅನಿವಾರ್ಯ, ಎಂದವರು ನುಡಿದರು. ನಮ್ಮ ಅರ್ಥವ್ಯವಸ್ಥೆಯು ಯೋಜನಾ ಬದ್ಧವಾಗಿ ಮುನ್ನಡೆಯುತ್ತಿದೆಯೆಂಬುದು ಎಲ್ಲರಿಗೂ ತಿಳಿದ ವಿಚಾರ, ಹಾಗಿರುವಾಗ ಸರಕಾರದ ಬೊಕ್ಕಸ ತುಂಬಿಸುವುದು ಮಾತ್ರ ಕರ ಹೇರುವುದರ ಉದ್ದೇಶವೆನ್ನಲಾಗದು. ದೇಶದಲ್ಲಿ ಉಳಿತಾಯವನ್ನು ಹೆಚ್ಚಿಸುವುದಕ್ಕೆ, ನಿರ್ಯಾತಕ್ಕೆ ಪ್ರೋತ್ಸಾಹ ನೀಡುವುದಕ್ಕೆ, ಪ್ರತಿ ಒಂದು ವಸ್ತುವಿನ ಬೇಡಿಕೆ, ಪೂರೈಕೆಗಳ ಸಮತೋಲನೆಯನ್ನು ಕಾಪಾಡುವುದಕ್ಕೆ ಇದು ಅಗತ್ಯ. ಅಭಿವೃದ್ಧಿಯ ತ್ಯಾಗ ಮತ್ತು ಅದರ ಫಲಗಳ ಹಂಚುವಿಕೆಯಲ್ಲಿಯೂ ಸಮಾನತೆಯನ್ನುಳಿಸುವುದು ಅತ್ಯವಶ್ಯವಿರುವುದು. ಮಂತ್ರಿವರ್ಯರ ಈ ಅಭಿಪ್ರಾಯಗಳು ವಾಸ್ತವಿಕವಾದುವೇ. ದೇಶದ ಅಭಿವೃದ್ಧಿ ಕಾರ್ಯಗಳು ಮುನ್ನಡೆಯ ಬೇಕಾದರೆ, ಅಂತರಿಕ ಸಂಪತ್ತನ್ನು ಸಾಧ್ಯವಾದಷ್ಟು ಒಗ್ಗೂಡಿಸುವ ಅಗತ್ಯವಿದೆ. ಇಷ್ಟೆಲ್ಲ ಕರ ಹೇರಿದರೂ ಬಂಡವಳ ವೆಚ್ಚಕ್ಕಾಗಿ ೭೯ ಕೋಟಿ ರೂಪಾಯಿಗಳಷ್ಟನ್ನು ಕೊರತೆಯ ಧನದಿಂದ ತೆಗೆದುಕೊಳ್ಳಬೇಕಾಗುವುದೆಂಬುದನ್ನು ನಾವು ಅಲಕ್ಷಿಸುವಂತಿಲ್ಲ. ಆದರೆ, ಈ ಕೊರತೆಯ ಧನ ವಿನಿಯೋಗವು ಹಿಂದಿನ ವರ್ಷದಂತೆಯೇ ಪರಿಮಿತವಾಗಿದೆಯೆಂಬುದನ್ನು ಮರೆಯಬಾರದು.

ದೇಸಾಯಿಯವರ ಮುಂಗಡ ಪತ್ರಗಳಲ್ಲಿ ಸಾಮಾನ್ಯವಾಗಿ ಒಂದು ವೈಶಿಷ್ಟ್ಯವಿರುತ್ತದೆ. ಆದಾಯವನ್ನು ನಿಜವಾದುದಕ್ಕಿಂತ ಕಡಿಮೆ ತೋರಿಸಿ, ವ್ಯಯವನ್ನು ಹೆಚ್ಚಾಗಿ ಕಾಣಿಸಿ ಪ್ರಾರಂಭದಲ್ಲಿ ಕೊರತೆಯನ್ನೇ ಸೂಚಿಸಿದರೂ ಮುಂದೆ ವಾಸ್ತವಿಕವಾಗಿ ಉಳಿತಾಯದಲ್ಲಿ ಕೊನೆಗೊಳ್ಳುವುದೇ ಈ ವಿಶೇಷತೆ. ಇದಕ್ಕೆ ಅವರ ಹಿಂದಿನ ಮುಂಗಡ ಪತ್ರಗಳೇ ನಿದರ್ಶನ. ೧೯೬೧-೬೨ರ ಮುಂಗಡ ಪತ್ರವು ೫|| ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸಿದ್ದರೂ ಪುನರ್ವಿಮರ್ಶಿತ ಅಂದಾಜಿನಂತೆ ರೂ ೩೪ ಕೋಟಿಗಳ ಉಳಿತಾಯವಾಗುವುದು. ಹಾಗೆಯೇ ಸದ್ಯ ಅಲ್ಲಿಂದಲ್ಲಿಗೆ ತೂಗಿ ಬಂದ ಈ ಬಾರಿಯ ಮುಂಗಡ ಪತ್ರವಾದರೂ ವಾಸ್ತವಿಕವಾಗಿ ಉಳಿತಾಯದಲ್ಲಾಗುವುದೆಂದು ನಿರೀಕ್ಷಿಸಿದರೆ, ತಪ್ಪಾಗಲಾರದು. ಆದರೂ ಪ್ರತಿ ಬಾರಿಯೂ ಒಂದಲ್ಲ ಒಂದು ರೀತಿಯಿಂದ ಕರಭಾರವು ಏರುವ ನಮ್ಮ ದೇಶದಲ್ಲಿ ಕರಗಳು ಜನತೆಯಲ್ಲಿ ಬೇಸರವನ್ನು ತಂದೊಡ್ಡಿವೆಯೆಂದು ನಿರ್ವಿವಾದವಾಗಿ ಹೇಳಬಹುದು. ದೇಶ ಪುನಾರಚನೆಯ ಪವಿತ್ರಕಾಲದಲ್ಲಿ ಇದು ಅನಿವಾರ್ಯವಾದುದೆನಿಸಿದರೂ, ಜನತೆಯ ಜೀವನದ ಮಟ್ಟವು ಏರುತ್ತಿರುವಾಗ ಕರ ಹೊರೆಯಾಗಿ ಕಂಡು ಬಂದರೂ, ಸಾಮಾನ್ಯರಿಗೇನೂ ಹಾನಿ ತಟ್ಟದಿರಲಾರದು ನಮ್ಮ ಅರ್ಥ ಮಂತ್ರಿಯವರು ಈ ರೀತಿಯಲ್ಲಿ ಕೊರತೆ ತುಂಬಿಸಿಕೊಳ್ಳುವುದಕ್ಕಿಂತ ಕೊರತೆಯೇ ಇಲ್ಲದ ಮುಂಗಡ ಪತ್ರಗಳನ್ನು ಮುಂದೆ ಪ್ರಕಟಿಸಲು ಪ್ರಯತ್ನಿಸುವುದು ಅಪೇಕ್ಷಣೀಯವಿದೆ.

ನೇಪಾಳದ ಸಂಬಂಧ

ನೇಪಾಲದಲ್ಲಿ ಭಾರತದ ಬಗ್ಗೆ ತೀವ್ರ ರೀತಿಯ ಅಪಪ್ರಚಾರವು ನಡೆದುದರಿಂದ ಈ ಎರಡು ರಾಷ್ಟ್ರಗಳ ನಡುವಣ ಸಂಬಂಧವು ಇರಬೇಕಾದಷ್ಟು ಉತ್ತಮವಾಗಿಲ್ಲ. ಪ್ರಜಾತಾಂತ್ರಿಕ ಸರಕಾರವನ್ನು ಕಿತ್ತೊಗೆದು ತನ್ನ ಕೈಗಳಿಗೆ ಅಧಿಕಾರ ಸೂತ್ರವನ್ನು ತೆಗೆದುಕೊಂಡಿರುವ ಅರಸ ಮಹೇಂದ್ರರು ದೇಶದಲ್ಲಿ ಜನಪ್ರಿಯವಾಗಿ ರಾಜ್ಯಭಾರ ಮಾಡುವಲ್ಲಿ ಇನ್ನೂ ಯಶಸ್ಸು ಗಳಿಸಲಿಲ್ಲ. ಈ ಕಾರಣದಿಂದಾಗಿಯೇ ನೇಪಾಳದ ಜನತೆಯು ಕ್ಷೋಭೆಗೆ ಗುರಿಯಾಗಿದೆ. ಇದರಿಂದ ನೇಪಾಳದಲ್ಲಿ ಆಂತರಿಕ ಶಾಂತಿ ಕೂಡ ಇಲ್ಲವೆಂಬಂತಾಗಿದೆ. ಭಾರತದ ನೀತಿ-ಧೋರಣೆಗಳ ಕುರಿತು ಅಸ್ಪಷ್ಟವಾದ ಕಲ್ಪನೆಯಿರುವ ನೇಪಾಲಿಗಳು ಅವನ್ನು ತಪ್ಪು ತಿಳಿದುಕೊಂಡು, ಭಾರತವು ನೇಪಾಲದ ಆಂತರಿಕ ವ್ಯವಹಾರಗಳ ಮೇಲೆ ಪ್ರಭಾವ ಬೀರುತ್ತದೆಯೆಂದು ಹೇಳಿಕೆ—ಪ್ರಕಟಣೆಗಳನ್ನು ನೀಡುತ್ತಾರೆ. ಇಂತಹ ಅನಪೇಕ್ಷಿತ ವ್ಯವಹಾರಗಳಿಂದಾಗಿಯೇ ಉಭಯ ರಾಷ್ಟ್ರಗಳ ಮೈತ್ರಿಯು ಕುಸಿಯುವುದೆಂಬುದು ಈಗ, ಅರಸು ಮಹೇಂದ್ರರಿಗೆ ಸರಿಯಾಗಿ ಮನವರಿಕೆಯಾಗಿದೆ. ಆದುದರಿಂದಲೇ ಅವರು ಪ್ರಧಾನಿ ನೆಹರುಗಳೊಂದಿಗೆ ಸಮಾಲೋಚನೆ ನಡೆಸಲು ಧಾವಿಸಿ ಬಂದರು. ಉಭಯತರರ ನಡುವೆ ಸೌಹಾರ್ದಯುತವಾಗಿ ಮಾತುಕತೆ ನಡೆಯಿತೆಂದೂ ಈ ಮಾತುಕತೆಗಳು ತನಗೆ ತೃಪ್ತಿಯನ್ನು ತಂದುವೆಂದೂ ಮಹೇಂದ್ರರು ಉದ್ಗರಿಸಿದರು. ಮುಖ್ಯವಾಗಿ ಭಾರತದಂತಹ ಬೃಹತ್ ರಾಷ್ಟ್ರದ ಮೇಲೆಯೇ ಸಾಮ್ರಾಜ್ಯವಾದಿ ಚೀನವು ಕಣ್ಣಿಟ್ಟಿರುವಾಗ ಇನ್ನು ನೇಪಾಲದಂತಹ ಅಂಗೈಗಾತ್ರದವುಗಳ ಪಾಡೇನು? ತೋರಿಕೆಯ ಮಟ್ಟಿಗೆ ಚೀನವು ಅದರೊಡನೆ ಸೀಮಾ ಒಡಂಬಡಿಕೆಯನ್ನು ಮಾಡಿಕೊಂಡಿದ್ದರೂ ಯಾವ ಒಡಂಬಡಿಕೆಯನ್ನೂ ಮನ್ನಿಸುವಲ್ಲಿ ಆಕ್ಷೇಪವೆತ್ತುವ ಪೇಕಿಂಗ್ ಸರಕಾರ ನೇಪಾಲದ ಮೇಲೆ ವಕ್ರದೃಷ್ಟಿ ಬೀರಲಾರದೆಂದು ಧೈರ್ಯದಿಂದಿರುವುದು ಸಾಧ್ಯವಿಲ್ಲ. ಇದರಿಂದಾಗಿ ಹಾಗೂ ತಾನು ನಿಯೋಜಿಸಿದ ದೇಶದ ಯೋಜನೆಯ ಯಶಸ್ಸಿಗಾಗಿ ತನ್ನ ನಾಗರಿಕರ ಸುಖಕ್ಕಾಗಿ ಭಾರತದ ಸ್ನೇಹ ಮತ್ತು ಸಹಾಯವು ಅತ್ಯವಶ್ಯವಾಗಿದೆ. ಈ ದಿಸೆಯಲ್ಲಿ ಉಭಯ ನಾಯಕರ ಭೆಟ್ಟಿಯು ಒಂದು ಪಥಪ್ರದರ್ಶಕವಾಯಿತೆಂದೂ, ಭಿನ್ನಾಭಿಪ್ರಾಯ ನಿವಾರಣೆ ಹಾಗೂ ಸಂದೇಹ ದೂರೀಕರಣಕ್ಕಾಗಿ ಸಹಕಾರಿಯಾಗುವುದೆಂದೂ ನಂಬಬಹುದು.

ಅಲ್ಲಲ್ಲಿಯ ಸುದ್ದಿಸಾರ

ಬೆಂಗಳೂರಿಗೆ ಶಿಷ್ಟ ಮಂಡಳ— ತಾ 7—4—62ರಲ್ಲಿ ಜರಗಿದ ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಆಡಳಿತೆ ಮಂಡಳಿಯಲ್ಲಿ ನಿರ್ಣಯವಾದ ಮೇರೆಗೆ ಸಂಘದ ಅಧ್ಯಕ್ಷರಾದ ಶ್ರೀ ಟ. ಎ. ಪೈಯವರ ಮುಂದಾಳುತನದಲ್ಲಿ ಶ್ರೀ ಕುರುಕಾಲು ಗಣಪಯ್ಯ ಶೆಟ್ಟಿ, ಶ್ರೀ ಕೋಟಿಕಾರ್ ರಮೇಶರಾವ್ ಕೂಡಾ ತ್ರಿಸದಸ್ಯರ ನಿಯೋಗವು ತಾ. 11—4—62ರಲ್ಲು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಎಸ್. ಆರ್. ಕಂಠಿಯವರ ಭೇಟಿಯನ್ನು ಮಾಡಿ ಈ ಕೆಳಗಿನ ಮನವಿಯನ್ನು ಅರ್ಪಿಸಲಾಯ್ತು.

ಮೈಸೂರು ಪ್ರಾಂತ್ಯಕ್ಕೆ ಏಕರೂಪವಾದ ವಿದ್ಯಾ ಮಸೂದೆಯನ್ನು ಜ್ಯಾರಿಗೆ ತರುವವರೆಗೆ, ಮದ್ರಾಸು ವಿದ್ಯಾ ಮಸೂದೆಯಲ್ಲಿ ಸರಕಾರವು ತಾ. 19—5—61ರಲ್ಲು ಅನಿರೀಕ್ಷಿತವಾಗಿ ಮಾಡಿದ ತಿದ್ದುಪಡಿಗಳನ್ನು ಅಮಾನತುಗೊಳಿಸಬೇಕು, ಶಾಲೆಗಳ ಆಡಳಿತೆ ಖರ್ಚಿನ ಬಗ್ಗೆ ಮೆನೇಜುಮೆಂಟುಗಳಿಗೆ 1961ನೆ ಇಸವಿಗೆ ಕೊಡಬೇಕಾಗಿದ್ದ ಮೈಂಟೆನೆನ್ಸು ಗ್ರಾಂಟಿನಲ್ಲಿ ⅓ ಅಂಶ ಕಡಿತಮಾಡಿದ ಮೊಬಲಗು ತಿರುಗಿ ಕೊಡಿಸಬೇಕು. ಬಳ್ಳಾರಿ ಜಿಲ್ಲೆಯಲ್ಲಿ ತಾ. 1—4—57ರಿಂದ ಅಧ್ಯಾಪಕರ ಏರಿದ ದರದ ಸಂಬಳದ ಮೇಲೆ ಮೈಂಟೆನೆನ್ಸು ಗ್ರಾಂಟನ್ನು ಲೆಕ್ಕಿಸಿ ಕೊಡುತ್ತಿರುತ್ತಾ ದ. ಕ. ಜಿಲ್ಲೆಯಲ್ಲಿ ಅಂದಿನಿಂದ ಹಳೇ ಸಂಬಳದ ದರದ ಮೇಲೆ ಮೈಂಟೆನೆನ್ಸು ಗ್ರಾಂಟು ಕೊಡುತಿದ್ದ ಪಕ್ಷಪಾತವನ್ನು ಸರಿಗೊಳಿಸಬೇಕು.

ವೃತ್ತಿಪರ ಶಿಕ್ಷಕರಿಗೆ ಬಳ್ಳಾರಿ ಜಿಲ್ಲೆಯಲ್ಲಿ ತಾ. 1-4-57ರಿಂದ ಈ ವರೆಗೂ ಏರಿದ ದರದ ಸಂಬಳ ಕೊಡುತ್ತಿರುವಾಗ ದ. ಕ. ಜಿಲ್ಲೆಯಲ್ಲಿ ಸದ್ರಿ ಏರಿದ ದರದಂತೆ ತಾ 31-5—60ರ ವರೆಗೆ ಸಂಬಳವನ್ನು ಕೊಡುತಿದ್ದು ಆ ಬಳಿಕ ಹಿಂದಿನ ಹಳೇಸ್ಕೇಲಿನಂತೆ ಸಂಬಳ ಕೊಡುತ್ತಿರುವುದರಿಂದ ಉಂಟಾದ ಅನ್ಯಾಯವನ್ನು ಸರಿಗೊಳಿಸುವುದು. ತಾ. 1—4—57ರಿಂದ ಅಧ್ಯಾಪಕರಿಗೆ ಏರಿದ ದರದಲ್ಲಿ ಸಂಬಳ ನಿರ್ಣಯಿಸಿ ಎಲೋಕೇಶನ್ ಸ್ಟೇಟ್‌ಮೆಂಟುಗಳನ್ನು ಮಂಜೂರು ಮಾಡಿವಾಗಲೂ ತಾ 1. 6—61ರಿಂದ ಪರಿಷ್ಕೃತ ವೇತನ ದರದಲ್ಲಿ ಸಂಬಳವನ್ನು ನಿರ್ಧರಿಸುವಾಗಲೂ ಅಧ್ಯಾಪಕರ ಸರ್ವೀಸುಗಳಲ್ಲಿ ಕಡಿತವಿದ್ದರೆ ಸದ್ರಿ ಕಡಿತಗಳನ್ನು ಕ್ಷಮಾಯಿತಗೊಳಿಸುವುದಲ್ಲದೆ ಅವರ ಬೇರೆ ಬೇರೆ ಶಾಲೆಗಳ ಸರ್ವೀಸುಗಳನ್ನು ಕೂಡಾ ಗಣನೆಗೆ ತೆಗೆದುಕೊಂಡು ಭತ್ತೆಯನ್ನು ಕೊಡಬೇಕು. ಪ್ರಾಥಮಿಕ ಶಾಲೆಗಳ ಮುಖ್ಯ ಅಧ್ಯಾಪಕರುಗಳಿಗೆ ಅತ್ಯಧಿಕ ಕೆಲಸ ಮತ್ತು ಜವಾಬ್ದಾರಿಗಳಿರುವುದರಿಂದ ಅವರಿಗೆ ಪ್ರತ್ಯೇಕ ಸಂಬಳದ ವರ್ಗವನ್ನು ನಿರ್ಮಿಸಬೇಕು. ಸ

ರಕಾರವು ಅಖಿಲ ಮೈಸೂರು ಪ್ರಾಂತ್ಯಕ್ಕೆ ಏಕರೂಪವಾದ ವಿದ್ಯಾಪದ್ಧತಿಯನ್ನು ಜ್ಯಾರಿಗೆ ತರುವ ಮೊದಲು ಅದರ ಕರಡು ಪ್ರತಿಯೊಂದನ್ನು ದ. ಕ. ಜಿಲ್ಲಾ ಮೆನೇಜರರ ಸಂಘದ ಅಭಿಪ್ರಾಯ ವ ಸೂಚನೆಗಳನ್ನು ಕೊಡುವರೆ ಅನುಕೂಲವಾಗುವಂತೆ ಮುಂಚಿತವಾಗಿ ಒದಗಿಸಿ ಕೊಡಬೇಕು.

ಈ ಮೇಲಿನ ವಿಷಯಗಳ ವಿವರಣೆ ಸಮೇತ ಮುಖ್ಯ ಮಂತ್ರಿಯವರು ಶಾಂತ ಚಿತ್ತರಾಗಿ ಕೇಳಿ ಈ ತರದ ಅವ್ಯವಸ್ಥೆಗಳನ್ನು ತಾವು ಸರಿಪಡಿಸುತ್ತೇವಾಗಿ ಭರವಸೆಯನ್ನಿತ್ತರು ಮಾತ್ರವಲ್ಲದೆ ನಮ್ಮ ಜಿಲ್ಲೆಯ ಮಾನ್ಯ ಆರೋಗ್ಯ ಮಂತ್ರಿ ಡಾ. ಕೆ. ನಾಗಪ್ಪ ಆಳ್ವರನ್ನೂ ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರನ್ನೂ ಭೇಟಿಯಾಗಿ ಈ ಮನವಿಗಳನ್ನು ಅರ್ಪಿಸಿದ್ದಲ್ಲಿ ಅವರು ಕೂಡಾ ಈ ವಿಚಾರದಲ್ಲಿ ತಮ್ಮಿಂದ ಸಾಧ್ಯವಾದ ಪ್ರಯತ್ನಗಳನ್ನು ಮಾಡುತ್ತೇವಾಗಿ ಆಶ್ವಾಸನೆಯಿತ್ತರು ಎಂಬುದಾಗಿ ಕಾರ್ಯದರ್ಶಿ ಕುರುಕಾಲು ಗಣಪಯ್ಯ ಶೆಟ್ಟರು ತಿಳಿಸುತ್ತಾರೆ.

ಸಂಯುಕ್ತ ವರ್ಧಂತ್ಯುತ್ಸವ-ಕುಂಜಾರು ಗಿರಿಜಾ ಹಾ. ಎ. ಶಾಲೆ ಮತ್ತು ಗಣಪತಿ ಎ. ಶಾಲೆಗಳ ಸಂಯುಕ್ತ ವರ್ಧಂತ್ಯುತ್ಸವವು ತಾ. 28—4—62ರಂದು ಶ್ರೀ ಎಂ. ಮಧ್ವರಾಜ್, ಎಂ. ಎಲ್. ಎ.,ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಬಹುಮಾನ ವಿತರಣಾ ಭಾಷಣವನ್ನು ಶ್ರೀ ಟಿ ಎ. ಪೈಯವರು ಮಾಡಲಿರುವರು. ಮರುದಿನ ಹಳೆ ವಿದ್ಯಾರ್ಥಿ ಸಂಘದ ಮಹಾ ಸಭೆಯೂ ವಾರ್ಷಿಕೋತ್ಸವವೂ ಇನ್ನಂಜೆ ಹೈಸ್ಕೂಲ್ ಹೆ. ಮಾ. ಪಿ. ವಿಟ್ಠಲ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಲಿದೆ.

ಆರೋಗ್ಯ ಮಂತ್ರಿ ಡಾ. ಆಳ್ವರ ಜಿಲ್ಲಾ ಸಂಚಾರ—ತಾ. 15ರಂದು ಮಂಗಳೂರು ಯುವಕ ಕಾಂಗ್ರೆಸ್ಸಿನ ಆಶ್ರಯದಲ್ಲಿ ಡಾ. ಯು. ಪಿ. ಮಲ್ಯರ ತೈಲ ಚಿತ್ರವನ್ನು ಶ್ರೀ ಕೆ. ಕೆ. ಶೆಟ್ಟಿ, ಎಂ ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಸಚಿವ ಡಾ. ಆಳ್ವರು ಅನಾವರಣ ಮಾಡುತ್ತ ದಿವಂಗತ ಮಲ್ಯರ ವ್ಯಕ್ತಿತ್ವವನ್ನು ಕೊಂಡಾಡಿದರು. ಬಳಿಕ ಶ್ರೀ ಮನೇಲ್ ಶ್ರೀನಿವಾಸ ನಾಯಕ್, ಎಂ. ಎಲ್. ಎ., ಶ್ರೀ ಎಫ್. ಎಕ್ಸ್. ಡಿ. ಪಿಂಟೊ, ಶ್ರೀ ಬಿ. ಎಂ. ಇದಿನಬ್ಬ, ಡಾ. ಎ. ಎಫ್. ಕೊಯಿಲೊ, ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಶ್ರೀ ಎಚ್. ಕೆ. ಶಿಂಗಳಾಯ ಮೊದಲಾದವರು ದಿವಂಗತ ಮಲ್ಯರು ಸಲ್ಲಿಸಿದ ಬಹುಮುಖ ಸೇವೆಯನ್ನು ವಿವರಿಸಿದರು.

ತಾ. 18ನೇ ಬೆಳಿಗ್ಗೆ ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರು ಮೂಲ್ಕಿಗೆ ಬಂದು ಲೋಕಲ್ ಫಂಡ್ ಆಸ್ಪತ್ರೆಯನ್ನು ಸಂದರ್ಶಿಸಿ, ಸಾರ್ವಜನಿಕರನ್ನು ಭೇಟಿಯಾಗಿ, ಮಂಗಳೂರು ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಬಿ ರಾಜೀವ ಭಂಡಾರಿ ಡಾ| ಸಂಜೀವನಾಥ ಎಂ. ಎಲ್. ಎ. ಮೊದಲಾದವರ ಮನವಿಗಳನ್ನು ಸ್ವೀಕರಿಸಿದರು. ಡಾ| ಕೆ. ಬಾಬು ಸೆಟ್ಟರು ಕೃತಜ್ಞತೆಗಳನ್ನರ್ಪಿಸಿದರು.

ಅನಂತರ ಮಂತ್ರಿಗಳು ಪಡುಬಿದ್ರೆಯಲ್ಲಿ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿದ ಸಮಾರಂಭದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಉದ್ಘಾಟಿಸಿದರು. ಶ್ರೀ ಕರಿಯಣ್ಣ ಶೆಟ್ಟರು ಸ್ವಾಗತಿಸಿದ ಬಳಿಕ ಶ್ರೀ ಎಂ. ಜಿ. ಪ್ರಭುಗಳು ಸಂದೇಶಗಳನ್ನು ಓದಿದರು. ಶ್ರೀ ಎಂ. ಮಧ್ವರಾಜ್ ಎಂ. ಎಲ್. ಎ. ರವರು ಸ್ವಾಗತಿಸಿ ಕೇಂದ್ರದ ವರದಿಯನ್ನೊಪ್ಪಿಸಿದರು ಮಂತ್ರಿಗಳು ಈ ಕೇಂದ್ರದ ಮೂಲಕ ಜನರ ಆರೋಗ್ಯ ಸುಖಸಂಪತ್ತು, ಹೆಚ್ಚಾಗಲೆಂದರು. ಯ ಡಾ| ಕೆ. ಕೆ. ಸೆಟ್ಟರು ಡಾ| ಮಂತ್ರಿಗಳಿಗೆ ಮಾನಪತ್ರವನ್ನು ಒಪ್ಪಿಸಿದರು. ಬಳಿಕ ಮಂತ್ರಿಗಳು ಕಾಪು ಹೆರಿಗೆ ಕೇಂದ್ರವನ್ನು ಸಂದರ್ಶಿಸಿ ಉಡುಪಿಗೆ ಬಂದು ಬಂಟ್ಸ್ ವೆಲ್‌ಫೇರ್ ಸೊಸೈಟಿಯವರು ಶ್ರೀ ರಾಮ ವಿದ್ಯಾರ್ಥಿ ಭವನದಲ್ಲಿ ಏರ್ಪಡಿಸಿದ ಭೋಜನ ಸತ್ಕಾರ ಕೂಟದಲ್ಲಿ ಭಾಗವಹಿಸಿದರು.

ಮಣಿಪಾಲದಲ್ಲಿ—ಸಂಜೆ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಟ್ರಸ್ಟ್ ಮತ್ತು ಮೆಡಿಕಲ್ ರಿಲೀಫ್ ಟ್ರಸ್ಟ್ ಇವುಗಳ ವತಿಯಿಂದ ಸ್ಕೂಲ್ ಓಫ್ ನರ್ಸಿಂಗ್‌ನ ಉದ್ಘಾಟನೆಯನ್ನೂ ದಿ| ಡಾ| ಯು ಸುಂದರ ರಾಮ ಪೈಗಳ ತೈಲ ಚಿತ್ರದ ಅನಾವರಣವನ್ನು ಕೆ. ಎಮ್. ಸಿ. ಸಭಾ ಸದನದಲ್ಲಿ ಏರ್ಪಡಿಸಲಾದ ಸಭೆಯಲ್ಲಿ ಮಂತ್ರಿ ಡಾ| ನಾಗಪ್ಪ ಆಳ್ವರು ನೆರವೇರಿಸಿದರು. ಸಭಾಧ್ಯಕ್ಷತೆಯನ್ನು ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ. ರವರು ವಹಿಸಿದ್ದರು. ಶಿವಳ್ಳಿ ಪಂಚಾಯತದ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳು ಮಣಿಪಾಲ ವಿಶ್ವವಿದ್ಯಾನಿಲಯದ ಯೋಜನೆಗೆ ಬೆಂಬಲಿಸಬೇಕೆಂದೂ ಉಡುಪಿ ನಳ್ಳಿನೀರಿನ ಯೋಜನೆಯೊಂದಿಗೇ ಈ ಗ್ರಾಮಕ್ಕೂ ನಳ್ಳಿನೀರಿನ ಸವಲತ್ತನ್ನು ಒದಗಿಸಬೇಕೆಂದೂ ಕೇಳಿಕೊಳ್ಳುವ ಮನವಿ ಪತ್ರವನ್ನು ಒಪ್ಪಿಸಿದರು.

ಡಾ. ಟಿ. ಎಂ ಪೈಯವರು ಸ್ವಾಗತಭಾಷಣವೀಯುತ್ತಾ ಇಂತಹ ಸಂಸ್ಥೆ ಭಾರತದಲ್ಲಿ ಮಾತ್ರವಲ್ಲ ವಿದೇಶ ಸರ್ವತ್ರ ಮೆಚ್ಚುಗೆಪಡೆದಿರುವ ಅಲ್ಲದೆ ಸುಸಜ್ಜಿತವೂ ಮೇಲ್ತರಗತಿಯದ್ದೂ ಅದ ಈ ಕಾಲೇಜಿಗೆ ಎರಡುವರೆ ಕೋಟಿ ರೂ. ಬೇಕಾಗಿದ್ದು ವಿದ್ಯಾರ್ಥಿಗಳಿಂದ ಈ ವರೆಗೆ ಬರೇ 45 ಲಕ್ಷ ರೂ. ಬಂದಿರುವುದೆಂದೂ ಪರಿಸ್ಥಿತಿ ಹೀಗಿರುತ್ತ ಇದನ್ನು ನಡೆಸಿಕೊಂಡು ಹೋಗುವುದು ಬಹು ದೊಡ್ಡ ಸಮಸ್ಯೆಯಾಗಿರುವುದೆಂದೂ ದಿ. ಡಾ. ಯು. ಸುಂದರ ರಾಮ ಪೈಗಳು ಈ ಸಂಸ್ಥೆಗಳಿಗೆ ಕೊಟ್ಟ ಸಹಕಾರವನ್ನು ಪ್ರಸ್ತಾಪಿಸಿದರು.

ಮಾನ್ಯ ಮಂತ್ರಿಗಳು ಭಾಷಣ ಮಾಡುತ್ತಾ ನಾನು ಸಾಮೂಹಿಕ ಸೇವೆ ಮತ್ತು ಚಟುವಟಿಕೆಗಳಲ್ಲಿ ಆಸಕ್ತಿ ಇರುವವ. ಅಸಮಾನ್ಯವೂ ವಿಧಾಯಕವೂ ಆದ ಕಾರ್ಯಕ್ರಮಗಳು ಇಲ್ಲಿ ಡಾ. ಪೈಗಳಿಂದ ಯಶಸ್ವಿಯಾಗಿ ನಡೆದಿವೆ. ಇಲ್ಲಿಯ ಪ್ರಗತಿಯನ್ನು ಕಂಡು ಆನಂದವಾಗಿದೆ. ಉತ್ತಮ ಆಡಳಿತ ದಕ್ಷ ಡಾಕ್ಟರುಗಳಿಂದ ಈ ಕಾಲೇಜು ಪ್ರಗತಿದಾಯಕವಾಗಿ ಬೆಳೆದು ನಮ್ಮ ರಾಷ್ಟ್ರಕ್ಕೆ ಮಾತ್ರವಲ್ಲ ವಿದೇಶಕ್ಕೂ ಒಂದು ಮಾದರಿಯಾಗಿದೆ ಡಾ. ಮಾಧವ ಪೈಗಳು ದೇಶದ ಹಾಗೂ ಜನತಾ ಕಲ್ಯಾಣವನ್ನು ಸಾಧಿಸುವ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ ಎಂದರು. ದೇಶದಲ್ಲಿ ದಾದಿಯರ ಕೊರತೆ ಸ್ವಂಟಃ ಇರುವುದರಿಂದ ಈ ನರ್ಸಿಂಗ್ ಸ್ಕೂಲ್ ಮಹತ್ವಾಸ್ಪದನೆಯಾಗಿದೆ. ನಾಲ್ಕು ವರ್ಷಗಳ ತರಬೇತಿಯಲ್ಲಿ ದಾದಿಯರು ಮೇಲ್ಪಟ್ಟದಲ್ಲಿ ತರಬೇತಾಗಿ ದೇಶ ಸೇವೆ ಸಲ್ಲಿಸುವಂತಾಗಲೆಂದು ಹೇಳಿ ಕೇಂದ್ರ ಸರಕಾರದಂತೆ ರಾಜ್ಯ ಸರಕಾರವೂ ಸಾಧ್ಯವಾದ ಸಹಾಯವೀಯುವುದೆಂದರು ಡಾ. ಸುಂದರ ರಾಮ ಪೈಗಳ ಕುರಿತು ಮಾತನಾಡುತ್ತಾ ಅವರ ವ್ಯಕ್ತಿತ್ವವನ್ನು ಕೊಂಡಾಡಿದರು ಅಧ್ಯಕ್ಷ ಶ್ರೀ ಮಧ್ವರಾಜರು ಜಿಲ್ಲೆಯ ಎಂ ಎಲ್. ಎ. ಗಳು ಈ ವಿಭಾಗಕ್ಕೆ ಒಂದು ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಪ್ರಯತ್ನಿಸುವ ಸಂದರ್ಭದಲ್ಲಿ ಆರೋಗ್ಯ ಮಂತ್ರಿಗಳು ಸಂಪೂರ್ಣ ಸಹಕಾರ ಕೊಡಬೇಕೆಂದೂ ಆರೋಗ್ಯ ಮಂತ್ರಿಗಳು ಉತ್ತಮ ಕಾರ್ಯವೆಸಗಿ ಹೆಸರುಗಳಿಸುವಂತಾಗಲೆಂದೂ ಹೇಳಿದರು. ಕೊನೆಗೆ ಶ್ರೀ ಟಿ. ಎ. ಪೈಗಳು ಧನ್ಯವಾದಗಳನ್ನು ಅರ್ಪಿಸುತ್ತಾ ವಸ್ತುಸ್ಥಿತಿಯನ್ನರಿಯದೆ ಕಲ್ಪನಾತ್ಮಕ ಟೀಕೆ ಸರಿಯಲ್ಲವೆಂದೂ ಜನತಾ ಪ್ರತಿನಿಧಿಗಳು ನೈಜ ಚಿತ್ರವನ್ನು ಕಂಡುಕೊಳ್ಳಬೇಕೆಂದೂ ಹೇಳಿದರು. ರಾತ್ರಿ ಕಾಲೇಜಿನ ವತಿಯಿಂದ ಏರ್ಪಡಿಸಿದ ಭೋಜನ ಕೂಟದಲ್ಲಿ ಮಂತ್ರಿಗಳು ಭಾಗವಹಿಸಿದರು.

ಮಂಗಳೂರಲ್ಲಿ ಸತ್ಕಾರ—ಜಿಲ್ಲಾ ಕಾಂಗ್ರೆಸ್ಸಿನ ಆಶ್ರಯದಲ್ಲಿ ರಚಿಸಲಾದ ಸತ್ಕಾರ ಸಮಿತಿಯ ಕಡೆಯಿಂದ ತಾ. 19ನೇ ರಾತ್ರಿ ಮಂಗಳೂರು ವುಡ್‌ಲೇಂಡ್ಸ್ ಹೋಟೆಲ್‌ನಲ್ಲಿ ಮಂತ್ರಿ ಡಾ ಆಳ್ವರನ್ನು ಗೌರವಿಸಲು ಭೋಜನಾ ಕೂಟವೊಂದು ಜರಗಿತು. ಭೋಜನಾನಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಸ್ವಾಗತಿಸುತ್ತಾ ಡಾ. ನಾಗಪ್ಪ ಆಳ್ವರ ಜನಪ್ರಿಯತೆ ಯೋಗ್ಯತೆಗಳನ್ನು ಪ್ರಸ್ತಾಪಿಸಿ ಅವರು ಮಂತ್ರಿಗಳಾದುದಕ್ಕಿಂತಲೂ ಡಿಪ್ಯುಟಿ ಲೀಡರ್ ಆಗಿ ಆಯ್ಕೆ ಹೊಂದಿದುದು ಅಭಿಮಾನಾಸ್ಪದವೆಂದರು. ಮಂಗಳೂರು ನಗರದ ವೆನ್‌ಲೋಕ್ ಆಸ್ಪತ್ರೆಯನ್ನು ಉನ್ನತ ಮಟ್ಟದ ಆಸ್ಪತ್ರೆಯನ್ನಾಗಿ ಮಾರ್ಪಡಿಸ ಬೇಕೆಂದರು. ಮಂತ್ರಿ ಡಾ. ಆಳ್ವರು ಸತ್ಕಾರಕ್ಕಾಗಿ ವಂದನೆಗಳನ್ನರ್ಪಿಸುತ್ತಾ ಕಿದಿವಸಗಳಿಂದ ಜಿಲ್ಲೆಯ ವಿವಿಧ ಭಾಗಗಳನ್ನು ಸಂದರ್ಶಿಸಿ ಜನತೆಯ ಆವಶ್ಯಕತೆಗಳನ್ನೂ ಆಡಳಿತದ ತೊಂದರೆಗಳಿಂದಾಗುವ ಅನಾನುಕೂಲತೆಗಳನ್ನೂ ತಿಳಿಯಲು ಯತ್ನಿಸಿದ್ದೇನೆ. ಜನತೆಯ ಸರ್ವಾಂಗೀಣ ಅಭಿವೃದ್ಧಿ ಸಾಧಿಸಬೇಕಾದುದು ಸರಕಾರದ ಕರ್ತವ್ಯ. ವೆನ್‌ಲೋಕ್ ಆಸ್ಪತ್ರೆಯನ್ನು ಉನ್ನತಗೊಳಿಸುವ ಕುರಿತು ಆಲೋಚಿಸಲಾಗುವುದು ಎಂದು ಹೇಳಿ ಜನರು ತೋರಿಸಿದ ಪ್ರೀತಿ ವಿಶ್ವಾಸಗಳಿಗೆ ಕೃತಜ್ಞತೆಯನ್ನು ಸೂಚಿಸಿದರು. ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅಂತ್ಯದಲ್ಲಿ ವಂದನೆಗಳನ್ನರ್ಪಿಸಿದರು.

ರಾಜಾಪುರ ಸಾರಸ್ವತ ಸಂಘ—ಬೊಂಬಾಯಿಯ ಈ ಸಂಘದ ಮಹಾ ಸಭೆಯು 13—4—62ರಂದು ಶ್ರೀ ಕೆ. ಅಪ್ಪು ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಡಿ. ಡಿ. ಪ್ರಭುಗಳು ಓದಿದ ವರದಿಯನ್ನೂ ಕೋಶಾಧಿಕಾರಿ ಎಸ್. ಎಸ್ ನಾಯಕರು ಸಭೆಯ ಮುಂದಿಟ್ಟ ಲೆಕ್ಕ ಪತ್ರಗಳನ್ನೂ ಮಂಜೂರುಮಾಡಲಾಯಿತು. ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮರುಪಾವತಿ ಶರ್ತದ ಮೇರೆಗೆ 1,600 ರೂಪಾಯಿಯನ್ನು ವಿದ್ಯಾರ್ಥಿ ವೇತನವನ್ನಾಗಿ, ಮತ್ತು ವಿದ್ಯಾರ್ಥಿನಿಯರಿಗೆ ನೂರು ಧರ್ಮಾರ್ಥ ವಿದ್ಯಾರ್ಥಿ ವೇತನ ಕೊಡುವ ನಿರ್ಣಯವಾಯಿತು. ಸಂಘಕ್ಕೆ ಸ್ವಂತ ಕಟ್ಟಡ ಕಟ್ಟುವರೇ ಶ್ರೀಗಳಾದ ವಿಠೋಬ ಎಸ್ ಪ್ರಭು, ಲಕ್ಷ್ಮೀನಾರಾಯಣ ಭಟ್, ಅನಂತ ಆರ್. ಕಾಮತ್ ಈ ಮೂರು ಸದಸ್ಯರ ಸಮಿತಿಯನ್ನು ನೇಮಿಸಲಾಯಿತು.

ಬೆಳ್ಳಿಹಬ್ಬ— ಸೂರತ್ಕಲ್ ವಿದ್ಯಾದಾಯಿನಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ಬೆಳ್ಳಿಹಬ್ಬದ ಸಲುವಾಗಿ ಕಟ್ಟುವ ಬಯಲು ರಂಗಮಂಟಪದ ಶಂಕುಸ್ಥಾಪನೆಯನ್ನು ಶ್ರೀ ಯು. ಹಯಗ್ರೀವಾಚಾರ್ಯರು ನೆರವೇರಿಸಿ ರೂ 501 ಸಹಾಯ ಧನವಿತ್ತರು. ಹೆಡ್‌ಮಾಸ್ಟರ್ ಶ್ರೀ ಎಮ್ ವಾಸುದೇವ ರಾಯರು ಶಾಲೆಯ ಪ್ರಗತಿಯನ್ನು ವಿವರಿಸಿದರು. ಸಂಜೆ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಭಾಧ್ಯಕ್ಷರಾಗಿ 'ಕಾಣಿಕೆ' ಪುಸ್ತಕವನ್ನು ಉದ್ಘಾಟಿಸುತ್ತಾ ವಿಚಾರ ಸಾಹಿತ್ಯದ ಆವಶ್ಯಕತೆಯನ್ನು ಸೂಚಿಸಿದರು. ಬೆಳ್ಳಿಹಬ್ಬದ ಸಮಾರಂಭದ ಸಲುವಾಗಿ ಜರಗಿದ ನಾಲ್ಕು ದಿನಗಳ ವಸ್ತುಪ್ರದರ್ಶನವನ್ನು ತಾ. 12ರಂದು ಡಾ. ಎಮ್. ಪಿ. ಕಾಮತರು ಉದ್ಘಾಟಿಸಿದರು.

ಬಡಗಬೆಟ್ಟು—ಈ ಕೇಂದ್ರಕ್ಕೆ ವಿದ್ಯುತ್ ಸಂಪರ್ಕವನ್ನು ಕೊಡುವ ಕೆಲಸವು ಪೂರ್ತಿಯಾಗಿದ್ದು ಅದರ ಉದ್ಘಾಟನಾ ಸಮಾರಂಭವು ವಿದ್ಯುತ್‌ದೀಪ ಸಮಿತಿಯ ನೇತೃತ್ವದಲ್ಲಿ ಇನೇ ತಾ. 24ರಂದು ಡಾ| ಪಿ. ಆರ್. ನಾಯಕರ ಅಧ್ಯಕ್ಷತೆಯಲ್ಲಿ ನೆರವೇರಿತು. ಉಪಾಹಾರವಾದ ಬಳಿಕ ಸಮಿತಿಯ ಅಧ್ಯಕ್ಷ ಶ್ರೀ ಬೇಳಂಜೆ ವಿಠಲ ಹೆಗ್ಡೆಯವರು ಸ್ವಾಗತಿಸುತ್ತ ಸಮಿತಿಯ ವರದಿಯನ್ನಿತ್ತು ನೆರವಾದವರಿಗೆಲ್ಲ ಕೃತಜ್ಞತೆಗಳನ್ನರ್ಪಿಸಿದರು. ಶ್ರೀ ಟಿ. ಎ. ಪೈಯವರು ವಿದ್ಯುತ್‌ದೀಪಗಳನ್ನು ಉದ್ಘಾಟಿಸಿ ಲಕ್ಷಾಂತರ ಹಳ್ಳಿಗಳಿಗೆ ಇನ್ನೂ ವಿದ್ಯುತ್ ಸಂಪರ್ಕ ಸಿಗದಿರುವಾಗ ಈ ಕೇಂದ್ರದವರು ಶೀಘ್ರದಲ್ಲಿ ಅದನ್ನು ಹೊಂದುವಂತಾದುದು ದೊಡ್ಡ ಭಾಗ್ಯವೆಂದರು. ಸಭಿಕರಲ್ಲಿ ಶ್ರೀ ಮಂಜುನಾಥ ಶೆಣೈ, ಶ್ರೀನಿವಾಸ ಆಚಾರ್ ರು ಮಾತನಾಡಿದ ಬಳಿಕ ಅಧ್ಯಕ್ಷ ಡಾ| ನಾಯಕ್‌ರು ವಿದ್ಯುತ್ ಶಕ್ತಿಯ ಪ್ರಯೋಜನವನ್ನು ವಿವರಿಸಿ ಈ ಗ್ರಾಮದವರು ಇದರ ಉಪಯೋಗದಿಂದ ಸುಖ ಸಮೃದ್ಧಿ ಪಡೆಯುವಂತಾಗಲೆಂದು ಶ್ರೀ ಬೇಳಂಜೆ ವಿಟ್ಠಲ ಹೆಗ್ಡೆಯವರ ಪ್ರಯತ್ನವನ್ನು ಕೊಂಡಾಡಿದರು. ಕೊನೆಗೆ ಶ್ರೀ ಕಬಿಯಾಡಿ ಜೋಯಿಸರು ವಂದನೆಗಳನ್ನು ಅರ್ಪಿಸಿದರು.

ಉಡುಪಿ ರೋಟರಿ ಕ್ಲಬ್‌ನ—ಭೋಜನ ಸಹಿತ ಸಭೆಯು ತಾ. 24ರಂದು ಮಣಿಪಾಲದಲ್ಲಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಬೆಂಗಳೂರಿನ ಎಡ್ವಕೇಟ್ ಶ್ರೀ ಬಿ. ಬಿ. ಶೆಟ್ಟಿಯಿಂದ 'ಅಪಾರ್ಥ ಮಾಡಿದ ಪ್ರಜಾಪ್ರಭುತ್ವ'ದ ಕುರಿತು ವಿಚಾರಪೂರ್ಣ ಭಾಷಣವಾಯಿತು. ಆರಂಭದಲ್ಲಿ ಡಾ. ಟಿ. ಎಂ. ಎ ಪೈಗಳು ಪರಿಚಯ ಭಾಷಣಮಾಡಿದರು. ಅಂತ್ಯದಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಅಭಾರ ಸೂಚಿಸಿದರು.

ಜಗತ್ಪರ್ಯಟನ

ಪ್ರಧಾನಿ ನೆಹರು

ಜನತೆಯ ಮನಸ್ಸನ್ನು ಜನನಾಯಕನು ತಿಳಿದು ಅದರಂತೆ ವರ್ತಿಸುವುದು ಅನಿವಾರ್ಯ. ಆದರೆ, ಕೆಲವೊಬ್ಬರು ಜನತೆಯನ್ನು ಅರಿತುಕೊಳ್ಳುವುದೇ ಕಷ್ಟವೆಂದು ಗಣಿಸಿರುವಾಗ, ಪ್ರಧಾನಿ ನೆಹರು ಪ್ರಜಾಭಿಪ್ರಾಯವನ್ನು ಕಾಡುಕೊಂಡು ಅದರಂತೆ ನಡೆದಿದ್ದಾರೆ. ಚೀನದ ವಿಶ್ವಾಸಘಾತದಿಂದಾಗಿ ಭಾರತೀಯ ಜನತೆಯು ಅದರ ಮೇಲೆ ರೊಚ್ಚಿಗೆದ್ದಿರುವಾಗ, ಟಿಬೇಟು—ಚೀನಗಳ ನಡುವಣ ವ್ಯಾಪಾರ ಒಡಂಬಡಿಕೆಯು ಪುನರುಜ್ಜೀವನವಾಗಬೇಕಾದರೆ, ಮಾಡಿದ ಆಕ್ರಮಣವು ಹಿಂತೆಗೆಯಲ್ಪಡಬೇಕೆಂದು ಬಲವಾಗಿ ಹೇಳಿದ್ದಾರೆ. ಇಂತಹ ಆದರ್ಶ ನಾಯಕನ ಭಾರತಕ್ಕೆ ಲಭಿಸಿರುವುದು ಪೂರ್ವ ಸೌಭಾಗ್ಯ.

ಎಸ್. ಆರ್. ಕಂಠಿ

ಕರ್ನಾಟಕದ ಮುಖ್ಯ ಮಂತ್ರಿ ಎಸ್ ಆರ್ ಕಂಠಿಯವರಿಗೆ ತನ್ನ ಮಂತ್ರಿಮಂಡಲ ಅದೆಷ್ಟುಕಾಲ ಅಧಿಕಾರದಲ್ಲಿರುವುದೆಂದೇ ತಿಳಿದಿಲ್ಲ. ಈ ಸಂಗತಿಯನ್ನು-ರಹಸ್ಯವನ್ನು ಹೋದಲ್ಲಿ ಬಂದಲ್ಲಿ ಡಣಾಡಂಗುರವಾಗಿ ಸಾರುತ್ತ ಬಂದಿದ್ದಾರೆ ಬೆಂಗಳೂರಿನಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಬಯಸುವ ಅರಿಯವರನ್ನು ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯಗಳನ್ನು ವಿಲೀನ ಗೊಳಿಸಿ ಒಂದನ್ನಾಗಿ ಮಾಡುವ ಯೋಚನೆಯಲ್ಲಿದ್ದಾರೆ. ದೇಶದಲ್ಲಿ ಪ್ರಭಾವಕಾರಿ ಶಿಕ್ಷಣ ನೀಡಲು ಚಿಕ್ಕ ಚಿಕ್ಕ ವಿಶ್ವವಿದ್ಯಾಲಯಗಳು ಬೇಕೆಂದು ಅಭಿಪ್ರಾಯ ಬೆಳೆಯುತ್ತಿರುವಾಗ, ನಮ್ಮ ರಾಜ್ಯದಲ್ಲಿ ಮಾತ್ರ ಅದಕ್ಕೆ ಪ್ರತಿಕೂಲವಾಗಿ ನಡೆಯುವುದು ಆಶ್ಚರ್ಯದಲ್ಲಿ ಆಶ್ಚರ್ಯವೆನಿಸುವುದು ಎರಡನ್ನು ಒಂದು ಮಾಡುವ ಔಚಿತ್ಯ ವೇನೋ ಸಾಮಾನ್ಯರಿಗೆ ತಿಳಿಯದು-

ಕೃಷ್ಣ ಮೂರ್ತಿ ರಾವ್

ರಾಜ್ಯ ಸಭೆಯ ಉಪಾಧ್ಯಕ್ಷರಾದ ಕರ್ನಾಟಕದ ಎಸ್ ವಿ ಕೃಷ್ಣ ಮೂರ್ತಿರಾಯರು ಈ ಸಾರಿ ಶಿವಮೊಗ್ಗ ಜಿಲ್ಲೆಯಿಂದ ಲೋಕ ಸಭೆಗೆ ಆಯ್ಕೆ ಹೊಂದಿದ್ದರು. ಸದ್ಯ ಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾದರು. ರಾಜ್ಯ ಸಭೆಯಲ್ಲಿ ಸಾಕಷ್ಟು ಅನುಭವಗಳಿಸಿರುವ ಕೃಷ್ಣಮೂರ್ತಿಯವರು ಎಲ್ಲ ಪಕ್ಷಗಳ ಹಿತರಕ್ಷಣೆಯನ್ನು ಮಾಡಿ, ಲೋಕ ಸಭೆಯ ಸತ್-ಸಂಪ್ರದಾಯಗಳನ್ನು ಮುಂದುವರಿಸಿಕೊಳ್ಳುವಲ್ಲಿ ಸಹಾಯಕರಾಗುವರೆಂದು ನಂಬಬಹುದು.

ಕನ್ನಡ ಪುಸ್ತಕಗಳಿಗೆ—
ಮತ್ತು
ಕಥೆಕಾದಂಬರಿ ಇತ್ಯಾದಿಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ನೋಟೀಸು

+++ +++ +++

ಬಂಟರ ಯಾನೆ ನಾಡವರ ಸಂಘದ ಆಡಳಿತೆ ಸಮಿತಿಯು ಮೈಸೂರು ಸೊಸ್ಯಾಟೀಸ್ ರಿಜಿಸ್ಟ್ರೇಶನ್ ಆಕ್ಟ್ 1960 ಮತ್ತು ಇನ್‌ಕಂ ಟೇಕ್ಸ್ ಆಕ್ಟು 1961, ಇವುಗಳಿಗೆ ಅನ್ವಯ ಆಗುವ ರೀತಿಯಲ್ಲಿ ಸಂಘದ ಮೆಮೋರಾಂಡಮ್ ಆಫ್ ಎಸೋಸಿಯೇಶನ್ ಮತ್ತು ನಿಯಮಗಳಲ್ಲಿ ಕೆಳಗೆ ಕಾಣಿಸಿದ ತಿದ್ದುಪಡಿಗಳನ್ನು ಮಾಡಬೇಕೆಂದು ಅಭಿಪ್ರಾಯಪಡುವದರಿಂದ ಸದ್ರಿ ತಿದ್ದುಪಡಿಗಳ ವಿಷಯ ಆಲೋಚಿಸುವರೇ ಒಂದು ನೈಮಿತ್ತಿಕ ವಿಶೇಷ ಮಹಾಸಭೆ ಕರೆಯಬೇಕಾಗಿರುವುದರಿಂದ ಸದ್ರಿ ಮಹಾಸಭೆಯನ್ನು ತಾ. 13—5—1962 ರಲ್ಲುಸಾಯಂಕಾಲ ಘಂಟೆ 3ಕ್ಕೆಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿಸುವುದಾಗಿ ನಿಶ್ಚೈಸಿರುತ್ತದೆ.

ಸಂಘದ ಎಲ್ಲಾ ತರಗತಿಯ ಮೆಂಬರರು ತಪ್ಪದೆ ಬರಬೇಕಾಗಿ ಕಾರ್ಯನಿರ್ವಾಹಕ ಸಮಿತಿಯು ಅಪೇಕ್ಷಿಸುತ್ತದೆ.

ಮಂಗಳೂರು,
ತಾ. 14—4—1962.

ಕೆ. ಸುಂದರರಾಮ ಶೆಟ್ಟಿ,
ಸಂಘದ ಕಾರ್ಯದರ್ಶಿ.

ಮೆಮೊರಾಂಡಂ ಆಫ್ ಎಸೋಸಿಯೇಶನಿನ ತಿದ್ದುಪಡಿಕೆ ಆಗಿರುವ ಸೂಚನೆಗಳು

●

ಮುಖ್ಯ ಧ್ಯೇಯಗಳು

1. ಈಗ ಇರುವ ಉಪನಿಬಂಧನೆ (*a*)ಯನ್ನು ಲೋಪಪಡಿಸಿ ಈ ಕೆಳಗಿನದನ್ನು ಸೇರಿಸಬೇಕು.

(*a*) 'ಬಂಟರ ಯಾನೆ ನಾಡವರ ಜಾತಿಯ ಮತ್ತು ಸಂಘದ ಆಡಳಿತೆ ಸಮಿತಿಯು ಆಗಿಂದಾಗ್ಗೆ ನಿರ್ಧರಿಸಬಹುದಾದ ಇತರ ಜಾತಿಯ ವಿದ್ಯಾರ್ಥಿಗಳ ಉಪಯೋಗದ ಬಗ್ಗೆ ಮಂಗಳೂರ. ನಗರದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲಿಕ್ಕೆ ಮತ್ತು ಅದರ ವ್ಯವಸ್ಥೆ ಮಾಡಲಿಕ್ಕೆ."

2. ಈಗ ಇರುವ ಉಪನಿಬಂಧನೆ (*b*)ಯನ್ನು ಲೋಪಪಡಿಸಿ ಈ ಕೆಳಗಿನದನ್ನು ಸೇರಿಸಬೇಕು.

(b) 'ನಿಧಿಯು ಸಾಕಷ್ಟು ಇರುವ ಸಂದರ್ಭದಲ್ಲಿ ಮೇಲಿನ (a) ಉಪನಿಬಂಧನೆಯಲ್ಲಿ ಉಲ್ಲೇಖಿಸಲ್ಪಟ್ಟ ವಿದ್ಯಾರ್ಥಿಗಳ ಉಪ-ನಿವಾಸಗಳನ್ನು, ಸಂಘದ ಆಡಳಿತೆ ಸಮಿತಿಯು ನಿರ್ಧರಿಸುವ ಆಯಾ ಕಡೆಗಳಲ್ಲಿ ಮತ್ತು ಆಯಾ ಕಾಲಗಳಲ್ಲಿ ಸ್ಥಾಪಿಸಲಿಕ್ಕೆ ಮತ್ತು ವ್ಯವಸ್ಥೆ ಮಾಡಲಿಕ್ಕೆ."

3. ಈಗ ಇರುವ(c)ಉಪ-ನಿಬಂಧನೆಯನ್ನು ಲೋಪಪಡಿಸಿ ಈ ಕೆಳಗಿನ (c) ಮತ್ತು (d) ಉಪ-ನಿಬಂಧನೆಗಳನ್ನು ಸೇರಿಸಬೇಕು.

(c) 'ಮಂಗಳೂರು ನಗರದಲ್ಲಿ ಬಂಟರ ಯಾನೆ ನಾಡವರ ಮತ್ತುಉಪನಿಬಂಧನೆ (a) ಪ್ರಕಾರ ಪ್ರವೇಶಿಸಲ್ಪಟ್ಟವರ ಪ್ರಯೋಜನಾರ್ಥವಾಗಿ ಒಂದು ಗ್ರಂಥ ಭಂಡಾರ ಮತ್ತು ಅಥವಾ ಒಂದು ವಾಚನಾಲಯವನ್ನು ಸ್ಥಾಪಿಸಲಿಕ್ಕೆ ಮತ್ತು ವ್ಯವಸ್ಥೆ ಮಾಡಲಿಕ್ಕೆ'

(*d*) 'ಸಂಘದ ಧ್ಯೇಯಗಳನ್ನು ಕಾರ್ಯಗತಗೊಳಿಸಲು ಅವಶ್ಯವಿರುವ ಕಟ್ಟಡ ಅಥವಾ ಕಟ್ಟಡಗಳನ್ನು ನಿರ್ಮಿಸಲಿಕ್ಕೆ."

ಸಹಾಯಕ ಧ್ಯೇಯಗಳು

4. 2ನೇ ನಿಬಂಧನೆಯ (*a*) ಉಪನಿಬಂಧನೆಯಿಂದ "ಆ ಜಾತಿಯಲ್ಲಿ" ಎಂಬುದನ್ನು ಲೋಪಪಡಿಸಬೇಕು.

5. 2ನೇ ನಿಬಂಧನೆಯ (*b*) ಉಪನಿಬಂಧನೆಯಲ್ಲಿ "ಆ ಜಾತಿಯಲ್ಲಿ" ಎಂಬುದನ್ನು ಲೋಪಪಡಿಸಿ ಈ ಕೆಳಗಿನದನ್ನು ಸೇರಿಸಬೇಕು.

"ಆ ಜಾತಿಯಲ್ಲಿ ಅಥವಾ ಆಗಿಂದಾಗ್ಗೆ ಆಡಳಿತೆ ಸಮಿತಿಯು ನಿರ್ಧರಿಸಬಹುದಾದ ಇತರ ಜಾತಿಗಳಲ್ಲಿ."

6. 2ನೇ ನಿಬಂಧನೆಯ (*c*) ಉಪನಿಬಂಧನೆಯಲ್ಲಿ "ಆ ಜಾತಿಯಲ್ಲಿ" ಎಂಬುದನ್ನು ಲೋಪಪಡಿಸಬೇಕು.

7. 2ನೇ ನಿಬಂಧನೆಯ (*d*) ಉಪನಿಬಂಧನೆಯಲ್ಲಿ "ಆ ಜಾತಿಯಲ್ಲಿ" ಎಂಬುದನ್ನು ಲೋಪಪಡಿಸಬೇಕು.

ಸಂಘದ ನಿಯಮಾವಳಿಗಳಲ್ಲಿ ಸೂಚಿಸಲ್ಪಟ್ಟಿರುವ ಬದಲಾವಣೆಗಳು

1. 1ನೇ ನಿಯಮದ (*d*) ಉಪನಿಯಮದ ನಂತರ ಈ ಕೆಳಗಿನದನ್ನು (e) ಉಪನಿಯಮವನ್ನಾಗಿ ಸೇರಿಸಬೇಕು."

(a) 15—6—1961ರ ಬಳಿಕ ಸಂಘದ ಸದಸ್ಯನಾಗಿ ಸೇರಿಸಲ್ಪಟ್ಟ ವ್ಯಕ್ತಿಯು ಸದಸ್ಯರ ಪಟ್ಟಿಯಲ್ಲಿ ಸಹಿ ಹಾಕಬೇಕು'

2. 7ನೇ ನಿಬಂಧನೆಯ ಮೊದಲ ವಾಕ್ಯವನ್ನು ಲೋಪಪಡಿಸಿ ಈ ಕೆಳಗಿನದನ್ನು ಆ ಜಾಗದಲ್ಲಿ ಸೇರಿಸಬೇಕು.

"ಸಾಮಾನ್ಯವಾಗಿ ವಾರ್ಷಿಕ ಮಹಾಸಭೆಯನ್ನು ಪ್ರತಿವರ್ಷ ಸಪ್ಟಂಬರ 30ರಂದು ಅಥವಾ ಅದರ ಮುಂಚೆ ಜರಗಿಸಬೇಕು ಮತ್ತು ಏನಾದರೂ ವಿಶೇಷ್ಟ ಕಾರಣಗಳಿದ್ದರೆ ಬೆಂಗಳೂರಿನ ಮೈಸೂರು ರಿಜಿಸ್ಟ್ರಾರ್ ಆಫ್ ಸೊಸ್ಯಾಟೀಸ್‌ರ ಅನುಮತಿಯಿಂದ ಆ ಬಳಿಕ ಸಭೆಯನ್ನು ಜರಗಿಸಬಹುದು."

3. 7ನೇ ನಿಯಮದ ನಾಲ್ಕನೇ ವಾಕ್ಯದ ನಂತರ ಈ ಕೆಳಗಿನದನ್ನು ಸೇರಿಸಬೇಕು.

"ಒಬ್ಬ ಸದಸ್ಯನಿಗೆ ಭಾರತದಲ್ಲಿ ನಿರ್ದಿಷ್ಟ ವಿಳಾಸವಿಲ್ಲದಿದ್ದರೆ ಮತ್ತು ಭಾರತದೊಳಗಿನ ತನ್ನ ವಿಳಾಸವನ್ನು ಅವನು ಸಂಘಕ್ಕೆ ನೋಟೀಸು ಕೊಟ್ಟು ತಿಳಿಸಿರದಿದ್ದರೆ, ಸಂಘದ ರಿಜಿಸ್ಟರ್ಡ್ ಕಚೇರಿಯ ಪರಿಸರದಲ್ಲಿ ಪ್ರಸರಣವಿರುವ ಒಂದು 'ಕನ್ನಡ' ಪತ್ರಿಕೆಯಲ್ಲಿ ಮತ್ತು ಇಂಗ್ಲಿಷ್ ಅಥವಾ ಇತರ ಭಾಷೆಯ ಪತ್ರಿಕೆಯಲ್ಲಿ ಜಾಹೀರಾತು ಮಾಡಲ್ಪಡುವ ನೋಟೀಸು, ಅಂಥ ಸದಸ್ಯನಿಗೆ ಅಥವಾ ಸದಸ್ಯಳಿಗೆ ಆ ಜಾಹೀರಾತು ಪತ್ರಿಕೆಗಳಲ್ಲಿ ಪ್ರಕಟವಾದ ದಿನ ಜಾರಿಯಾಗಿದೆಯೆಂದು ಪರಿಗಣಿಸಲ್ಪಡಬೇಕು."

4. 10 ಮತ್ತು 11ನೇ ನಿಯಮಗಳನ್ನು ಲೋಪಪಡಿಸಿ ಈ ಕೆಳಗಿನವುಗಳನ್ನು ಸೇರಿಸಬೇಕು.

"ಅಧ್ಯಕ್ಷರು, ಅಥವಾ ಆಡಳಿತ ಸಮಿತಿಯ ಮೂರನೆ ಒಂದಂಶಕ್ಕಿಂತ ಕಡಿಮೆಯಾಗದಷ್ಟು ಮಂದಿ ಸದಸ್ಯರು, ಅಥವಾ ಮತದಾನದ ಹಕ್ಕಿರುವ ಸಂಘದ ಒಟ್ಟು ಸದಸ್ಯರಲ್ಲಿ ಹತ್ತನೇ ಒಂದಂಶ ಸದಸ್ಯರು; ವಿಶೇಷ ಮಹಾಸಭೆಯನ್ನು, ಬರಹ ಮೂಲಕ ಅದರ ಕಾರ್ಯಕಲಾಪಗಳನ್ನು ತಿಳಿಸಿ ಕರೆಸಲು ಸೂಚಿಸಬಹುದು ಮತ್ತು ಅಂಥ ಸೂಚನೆ ಬಂದ 10 ದಿನಗಳೊಳಗೆ ಆಡಳಿತೆ ಸಮಿತಿಯು ಆ ಕಾರ್ಯಕಲಾಪಗಳ ಪರಿಶೀಲನೆಗೆ ಸಭೆಯ ಸೂಚನೆ ತಲುಪಿದ 40 ದಿನಗಳೊಳಗೆ ಜರಗುವಂತೆ ಏರ್ಪಾಡು ಮಾಡಬೇಕು."

5. 26ನೇ ನಿಯಮವನ್ನು ಲೋಪಪಡಿಸಿ ಈ ಕೆಳಗಿನದನ್ನು ಸೇರಿಸಬೇಕು.

"ಬಂಟರ ಯಾನೆ ನಾಡವರ ಜಾತಿಯವರು ಮತ್ತು ಆಡಳಿತೆ ಸಮಿತಿಯು ಆಗಿಂದಾಗ್ಗೆ ನಿರ್ಧರಿಸಬಹುದಾದ ಇತರ ಜಾತಿಯವರೂ ಸಂಘದ ಸದಸ್ಯರಾಗಲು ಅರ್ಹರು."

———

ಭಾರತೀಯ ನೀರಿನ ಪವಾಡ ಶಕ್ತಿ

(೫ನೇ ಪುಟದಿಂದ)

ಲ್ಲಿ ಭಾಗವಹಿಸುವವರ ಸಂಖ್ಯೆಯೇ ಸಾಕ್ಷಿ ಗುರುವು ಸಿಂಹ ರಾಶಿಗೆ ಬರುವ ಸಂದರ್ಭದಲ್ಲಿ ಈ ಜಾತ್ರೆಯು ನಡೆಯುತ್ತದೆ. ಇದನ್ನೇ ಸಪ್ತಸಾಗರ ಯಾತ್ರೆಯೆಂದೂ ಹೇಳುತ್ತಾರೆ.

ತುಲ್ಯಾಯೆಂಬುದು ಗೋದಾವರೀ ನದಿಯ ಒಂದು ಉಪನದಿ. ಚಂದ್ರನಿಗೆ ೨೭ ಪತ್ನಿಯರು ಆದರೆ, ಆತ ಅವರಲ್ಲಿ ಒಬ್ಬಾಕೆಯನ್ನು ಮಾತ್ರ ಬಹುವಾಗಿ ಪ್ರೀತಿಸುತಿದ್ದ. ಈ ಪಕ್ಷಪಾತದಿಂದ ನೊಂದ ಅವನ ಮಾವ 'ನಿನಗೆ ಯಕ್ಷ್ಮರೋಗವಾಗಲೆಂ'ದು ಶಾಪವಿತ್ತನು. ಚಂದ್ರನು ಈ ಶಾಪದಿಂದ ನವೆದು ಕೊನೆಗೆ ತುಲ್ಯಾನದಿಯಲ್ಲಿ ಮಿಂದು, ಶಾಪ ವಿಮೋಚನೆ ಮಾಡಿಕೊಂಡನು. ಭಾರದ್ವಾಜರ ತಂಗಿ ರೇವತಿ. ಆಕೆ ಅತೀವ ಕುರೂಪಿ. ಆಕೆಯು ವಿವಾಹ ಯೋಗ್ಯ ವಯಸ್ಕೆಯಾದಳು. ಆದರೆ, ಆಕೆಯ ಭಯಾನಕ ರೂಪದಿಂದಾಗಿ ಯಾವ ಯುವಕನೂ ಮದುವೆಯಾಗಲು ಮುಂದೆ ಬರುತ್ತಿರಲಿಲ್ಲ. ಕಟನೆಂಬ ಬ್ರಾಹ್ಮಣ ಕುಮಾರನು ಋಷಿಯಲ್ಲಿಗೆ ಶಾಸ್ತ್ರ ಕಲಿಯಲು ಹೋಗುತಿದ್ದನು. ಮುನಿಯು ರೇವತಿಯನ್ನು ವಿವಾಹವಾಗುವಂತೆ ಆತನನ್ನು ಒತ್ತಾಯಿಸುತಿದ್ದನು. ಕೊನೆಗೆ ಅವನು ಒಪ್ಪಿದನ. ಒಂದು ದಿನ ಆವನು ತನ್ನ ಮಡದಿಯೊಡನೆ ಗೋದಾವರಿಯ ಉಪನದಿ ಭಾರದ್ವಾಜದಲ್ಲಿ ಸ್ನಾನ ಮಾಡುವಂತೆ ಮಡದಿಗೆ ತಿಳಿಸಿದನು. ಆಕೆ ಮಿಂದು ಹೊರ ಬರುವಾಗ, ಅಪ್ಸರೆಯನ್ನೂ ನಾಚಿಸುವಂತಾದಳು.

ಗೌತಮ ಋಷಿಗೊಬ್ಬ ಮಗನಿದ್ದನು. ಅವನನ್ನೂ ಗೌತಮನೆಂದು ಕರೆಯುತ್ತಾರೆ. ಅವನಿಗೆ ಮಾಗೇ ಇರಲಿಲ್ಲ. ತಿರುಗಾಡುತಿದ್ದ ಗೌತಮನು ಗಿರಿಪರ್ವತದ ಒಂದು ಗುಹೆಗೆ ಬಂದನು. ಇಲ್ಲಿ ಒಬ್ಬಾಕೆ ಮುದುಕಿ ಆತನನ್ನು ಸ್ವಾಗತಿಸಿದಳು. 'ಈ ಗುಹೆಯೊಳಗೆ ಬರುವವನೇ ನಿನ್ನ ಪತಿಯೆಂದು ವಿಧಾತನು ಹೇಳಿದ್ದಾನೆ'ಂದು ಆಕೆ ತಿಳಿಸಿ ತನ್ನನ್ನು ಮದುವೆಯಾಗುವಂತೆ ಗೌತಮನನ್ನು ಒತ್ತಾಯಿಸಿದಳು. ಆದರೆ, ಗೌತಮನು ಈ ರೀತಿಗೆ ಒಪ್ಪಲಿಲ್ಲ. ಆ ಮುದುಕಿ ಕೂಗಿದಳು, ಅರಚಿಕೊಂಡಳು. ಆಗ ತನ್ನ ಇಚ್ಛೆಗೆ ಪ್ರತಿಕೂಲವಾಗಿ ಆಕೆಯನ್ನು ಮದುವೆನಿಲ್ಲಲೇ ಬೇಕಾಯಿತು. ಪತಿ ಯುವಕನಾಗಿದ್ದರೆ, ಪತ್ನಿ ಮುದುಕಿಯಿದ್ದಳು. ಈ ಅಸಮಾನ ದಂಪತಿಗಳನ್ನು ಕಂಡು ಎಲ್ಲರೂ ನಗುತಿದ್ದರು. ಪತಿಪತ್ನಿಯರಿಬ್ಬರೂ ಅಗಸ್ತ್ಯಮುನಿಯ ಸಲಹೆಯಂತೆ ಗೋದಾವರೀ ನದಿಯಲ್ಲಿ ಸ್ನಾನಮಾಡಿದರು; ಇವರು ಸುಂದರ ತರುಣ ತರುಣಿಯರಾಗಿ ಎದ್ದು ಬಂದರು.

ಹನ್ನೊಂದನೆಯ ಶತಮಾನದಲ್ಲಿ ನರಹರರಾವ್ ಎಂಬ ರಾಜನು ಬೇಟೆಯಾಡುತ್ತ ನೀರಡಿಕೆಯಿಂದ ಕಂಗೆಟ್ಟು, ನೀರು ಕುಡಿಯಲು ಪುಷ್ಕರ ಸರೋವರದ ಬಳಿ ನಿಂತನು. ಆಗ ಅದು ಬಹುಸಣ್ಣದಾಗಿತ್ತು. ಅದರ ನೀರನ್ನು ಮುಟ್ಟಿದೊಡನೆಯೇ ಬಹು ಹಳೆಯದೆನಿಸಿದ ಆತನ ಚರ್ಮವ್ಯಾಧಿ ಗುಣವಾಯಿತ್ತು. ಹಳ್ಳದ ನೀರಿನಲ್ಲಿ ಇಂತಹ ಅಲೌಕಿಕ ಶಕ್ತಿಯನ್ನು ಕಂಡು, ಆತನು ಹಳ್ಳವನ್ನು ಸಂಸ್ಕರಿಸಿ, ದೊಡ್ಡದನ್ನಾಗಿಸಿದನು; ಇಳಿದು ಹತ್ತಲು ಮೆಟ್ಟಲುಗಳನ್ನು ಕಡಿಸಿದನು. ಇಂದು ಪುಷ್ಕರರಾಜ ತೀರ್ಥವೆನ್ನುವ ಪವಿತ್ರ ಸ್ಥಳವೇ ಇದು.

(ವಿವಿಧ ದಂತಕತೆಗಳ ಆಧಾರದಿಂದ)

———

ಲೋಕ ಸಭಾಧ್ಯಕ್ಷ

ಸರದಾರ ಹುಕುಮ್ ಸಿಂಗ್

ಮೂವತ್ತು ೪೦ ವರ್ಷಗಳ ಹಿಂದಿನ ಮಾತು. ಸರಕಾರವು ಶಿರೋಮಣಿ ಗುರುದ್ವಾರದ ವ್ಯವಸ್ಥಾಪಕ ಸಮಿತಿಯನ್ನು ಕಾನೂನು-ಕಾಯದೆಗಳಿಗೆ ವಿರುದ್ಧವಾದುದೆಂದು ಘೋಷಿಸಿತು; ಸಮಿತಿಯ ಸದಸ್ಯರನ್ನು ಸೆರೆ ಹಿಡಿಯುವ ನಿರೂಪವನ್ನು ಹೊರಡಿಸಿತು. ಅಮೃತಸರದ ಆ ಕಾಲದ ಪೋಲೀಸ್ ಸುಪರಿಂಟೆಂಡೆಂಟರಾದ ಶ್ರೀ ಶ್ರೇಯುವರು ನಾಯಕಮಣಿಗಳನ್ನು ಕೈವಶಗೊಳಿಸಲು ತಮ್ಮ ಚಪ್ಪಲಿಗಳನ್ನು ಮೆಟ್ಟಿಕೊಂಡೇ ಸ್ವರ್ಣ ಮಂದಿರವನ್ನು ಹೊಕ್ಕರು. ಸಿಕ್ಖರು ಈ ಉದ್ಧಟತನವನ್ನು ಸಹಿಸುವುದಾದರೂ ಹೇಗೆ? ಅವರು ಪೋಲೀಸ್ ಅಧಿಕಾರಿಯನ್ನು ಎತ್ತಿ ಮಂದಿರದ ಹೊರಗೆ ಎಸೆದು ಬಿಟ್ಟರು!

ಇದಾದನಂತರ ಸಿಕ್ಖ ನಾಯಕರು ಕೈದಾಗುವ ನಿರ್ಣಯ ಮಾಡಿದರು. ಸರಕಾರವು ಯಾರನ್ನು ಸೆರೆಹಿಡಿಯಲು ಬಯಸುತ್ತಿತ್ತೋ, ಅವರ ಹೆಸರು ಕೂಗುತ್ತಿತ್ತು. ತತ್‌ಕ್ಷಣ ಆ ಹೆಸರಿನವರು ಮುಂದೆ ಬರತೊಡಗಿದರು. ಆದರೆ, ಆ ಸಮಯ ಅಲ್ಲಿ ಬಂದು ಸೇರಿದ್ದ ಜನಸಮುದಾಯವನ್ನು ಕಂಡು ಪೋಲೀಸರಿಗೂ ಹೆದರಿಕೆಯಾಯಿತು. ಆದುದರಿಂದ ಅವರು ಕೈದುಮಾಡಲು ಹಿಂಜರಿದರು.

ಈ ಕಾಂಡದಿಂದ ಒಂದು ವಿಷಯ ಪ್ರಕಟವಾಯಿತು. ತಮ್ಮ ಪ್ರಾಣಪಣವಿಟ್ಟಾದರೂ ಸಿಕ್ಖರು ಧಾರ್ಮಿಕ ನಿಷ್ಠೆಯನ್ನು ಉಳಿಸಿಕೊಳ್ಳುವರು; ಇಂತಹ ಸಂದರ್ಭಗಳಲ್ಲಿ ಅವರು ಕಾನೂನಿಗೆ ಹೆದರಿ ಅಡಗಿಕೊಳ್ಳುವುದಿಲ್ಲವೆಂಬುದು ಲೋಕಕ್ಕೆ ಮನದಟ್ಟಿಕೆಯಾಯಿತು. ಸಿಕ್ಖ ಜನಾಂಗದ ಧಾರ್ಮಿಕ ಶ್ರದ್ಧೆಯ ಪರಿಚಯ ನೀಡುವ, ಅವರ ಧೈರ್ಯವನ್ನೂ ಸಾಹಸವನ್ನೂ ಮೆರೆಸುವ ಈ ಘಟನೆ ನಡೆದಾಗ ಅವರ ನಾಯಕತ್ವವನ್ನು ವಹಿಸಿದವರು ಸರ್ದಾರ ಹುಕುಂ ಸಿಂಗ್! ತಾವು ಸ್ವತಃ ಕೈದಾಗಿ ಎರಡು ವರ್ಷಗಳ ನಂತರ ಮುಕ್ತರಾದ ಮಹನೀಯರಿವರು.

ಸಂಸದೀಯ ವಿಷಯಕ ಮಂತ್ರಿ ಶ್ರೀ ಸತ್ಯನಾರಾಯಣಸಿಂಹ ಅವರು ಲೋಕ ಸಭಾಧ್ಯಕ್ಷ ಸ್ಥಾನಕ್ಕೆ ಸರದಾರ ಹುಕುಂಸಿಂಗರ ಹೆಸರನ್ನು ಸೂಚಿಸಿ, ಪ್ರಕಾರಾಂತರವಾಗಿ, ಜೀವನದಲ್ಲಿ ನಿಷ್ಠೆ, ಮತ್ತು ನಿಯಮ ಪಾಲನೆಗಳಿಗೆ ಸರ್ವೋಚ್ಚ ಸ್ಥಾನಕೊಡುವ ಪ್ರವೃತ್ತಿಯನ್ನೇ ಸಂಮಾನಿಸಿದರೆಂದು ಹೇಳಬೇಕು.

ಮೇಲೆ ಹೇಳಿದ ಸ್ವರ್ಣ ಮಂದಿರ ಕಾಂಡದ ಅನಂತರವೇ ಹುಕುಂ ಸಿಂಗರು ಸಕ್ರಿಯವಾಗಿ ರಾಜಕಾರಣದಲ್ಲಿ ಪ್ರವೇಶಿಸಿದರು. ಹಾಗೆ ಒಳ ಹೊಕ್ಕವರು ದಿನದಿಂದ ದಿನಕ್ಕೆ ಅದರಲ್ಲಿಯೇ ಮುಂದುವರಿಯುತ್ತ ಬಂದರು. ೧೯೪೭ರಲ್ಲಿ ವಿಭಜನಾನಂತರ ಪಂಜಾಬ ಹಾಗೂ ಹುಕುಂ ಸಿಂಗರ ನಿಜ ಗ್ರಾಮಗಳಲ್ಲಿ ಬೆಂಕಿಯ ಕಿಡಿ ಎದ್ದು ಪರಿಸ್ಥಿತಿಯು ಉಲ್ಬಣಾವಸ್ಥೆಗೇರಿದಾಗ, ಇವರ ಜೀವನದಲ್ಲಿ ಹರಡಿದ ಮಾನವೀಯತೆ, ಕರ್ತವ್ಯ ನಿಷ್ಠೆ ಮತ್ತು ಬುದ್ಧಿ ಚಾತುರ್ಯಗಳು ಒಂದು ಕಠೋರ ಪರೀಕ್ಷೆಯನ್ನೆದುರಿಸಬೇಕಾಗಿ ಬಂತು.

ಸಾಂಪ್ರದಾಯಿಕ ಐಕ್ಯ ಮತ್ತು ಶಾಂತಿ ಸ್ಥಾಪನೆಗಾಗಿ, ಸರದಾರ ಹುಕುಂ ಸಿಂಗರು ತಮ್ಮ ಪ್ರಾಣಪಣವಿಟ್ಟು ಪ್ರಯತ್ನಿಸ ತೊಡಗಿದರು. ನಾಲ್ಕೂ ಸುತ್ತಿನಲ್ಲಿ ಮೃತ್ಯುತಾಂಡವವಾಡುತ್ತಿರುವಾಗ, ಅಸುರಕ್ಷಿತ ಸ್ಥಾನಗಳಿಂದ ಜನರನ್ನು ಹೊರಡಿಸುವಲ್ಲಿ, ಗಾಯಾಳುಗಳನ್ನು ಆಸ್ಪತ್ರೆಗಳಿಗೆ ಸಾಗಿಸುವಲ್ಲಿ, ಮೃತರನ್ನು ಅಂತ್ಯೇಷ್ಟಿಗೊಳಿಸುವಲ್ಲಿ ಇವರು ದುಡಿದರು. ಈ ಎಲ್ಲ ಕಾರ್ಯಗಳನ್ನಾದರೂ ಅವರು ತೆರೆಯ ಮರೆಯಲ್ಲಿಯೇ ಮಾಡಬೇಕಾಗಿತ್ತು. ಸರಕಾರದವರು ಇವರ ಈ ಕೆಲಸಗಳಿಂದ ಕುಪಿತರಾಗಿದ್ದರು. ಅಲ್ಲದೆ ಸರ್ದಾರ ಹುಕುಂ ಸಿಂಗರನ್ನು ಸೆರೆ ಹಿಡಿದು ಕೊಟ್ಟವರಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ಬಹುಮಾನವನ್ನೂ ಅವರು ಘೋಷಿಸಿದ್ದರು.

ಸಿಕ್ಖ ಜನಾಂಗವು ಸರದಾರ ಹುಕುಂ ಸಿಂಗರನ್ನು ಗೌರವ ಭಾವನೆಯಿಂದ ನೋಡುತ್ತದೆ. ಸಾಂಪ್ರದಾಯಿಕ ಉಪದ್ರವಗಳ ಸಮಯ ಅವರ ನಿವಾಸ ಸ್ಥಾನವು ಹಿಂದೂ ಮುಸಲ್ಮಾನ ಮತ್ತು ಆಡಳಿತ ಅಧಿಕಾರಿಗಳಿಗೆ ಏಕಸಮ ವಿಚಾರ ವಿನಿಮಯದ ಹಾಗೂ ಸಲಹೆಕೊಡುವ ಮತ್ತು ಪಡೆಯುವ ಕೇಂದ್ರವಾಗಿತ್ತು.

ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕ್ ನಿಶ್ಶಸ್ತ್ರೀಕರಣ ಸಾಧನೆಗೆ, ಅಣ್ವಸ್ತ್ರ ಪರಿಶೀಲನೆಗೆ ತಡೆ ಹಾಕುವುದು ಅಗತ್ಯವೆಂದು ಹೇಳುತ್ತಾರೆ

೧೯೫೦ರಲ್ಲಿ ಅಮೃತ ಸರದಲ್ಲಿ ಸೇರಿದ ವಿಶ್ವ ಸಿಕ್ಖ ಧರ್ಮ ಸಮ್ಮೇಳನದಲ್ಲಿ ಸರದಾರ ಹುಕುಂಸಿಂಗರು ಶಿರೋಮಣಿ ಅಕಾಲೀ ದಳದ ಅಧ್ಯಕ್ಷರೆಂದು ನಿಯುಕ್ತರಾದರು. ಮೂರು ವರ್ಷಗಳ ವರೆಗೆ, ಅವರು, ತಮ್ಮ ಸಮಾಜಕ್ಕೆ ಬಹುಪರಿಯಾಗಿ ಸೇವೆ ಸಲ್ಲಿಸಿದರು. ೧೯೫೧ರಲ್ಲಿ ಅಕಾಲಿ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಮಾಡಿದ ಹುಕುಂಸಿಂಗರ ಭಾಷಣವು ಇಂದಿಗೂ ಮಾರ್ಗ ಪ್ರದರ್ಶಕದಂತಿದೆ.

ಆರು ವರ್ಷಗಳಿಗೆ ಮೊದಲು ಲೋಕ ಸಭೆಯ ಉಪಾಧ್ಯಕ್ಷ ಪದವಿಗೆ ಸರದಾರ ಹುಕುಂ ಸಿಂಗರು ಏರಿದ್ದರು. ಆಗ, ಪ್ರಧಾನ ಮಂತ್ರಿ ನೆಹರು ಅವರು 'ನನಗೊಬ್ಬ ವಿಶ್ವಾಸಪಾತ್ರ ಸಂಗಡಿಗ ದೊರತಂತಾಯಿತು' ಎಂದಿದ್ದರು. ಅಂದು ನೆಹರು ಇಟ್ಟುಕೊಂಡ ಆಶೆ—ಆಕಾಂಕ್ಷೆಗಳನ್ನು ಸರ್ದಾರ ಹುಕುಂ ಸಿಂಗರು ತನ್ನ ವರ್ತನೆಯಿಂದ ಸತ್ಯವೆಂದು ಸಿದ್ಧಮಾಡಿ ಕೊಟ್ಟಿದ್ದಾರೆ.

ಮೊನ್ನೆ ಮೊನ್ನೆಯ ವರೆಗೆ ಲೋಕ ಸಭಾಧ್ಯಕ್ಷರಾಗಿದ್ದ ಅನಂತ ಶಯನಂ ಐಯ್ಯಂಗಾರರು ಈಗ ರಾಜ್ಯಪಾಲರಾಗಿ ನಿಯುಕ್ತರಾದುದರಿಂದ, ಉಪಾಧ್ಯಕ್ಷ ಹುಕುಂ ಸಿಂಗರೇ ಆ ಪದವನ್ನಲಂಕರಿಸುವುದು ಉಚಿತವಾಗಿದೆ. ಭಾರತೀಯ ಲೋಕ ಸಭೆಯು ಇದುವರೆಗೆ ಕಾಯ್ದುಕೊಂಡು ಬಂದ ಉನ್ನತ ಪರಂಪರೆಗಳನ್ನು ಮುಂದಕ್ಕೂ ಉಳಿಸಿಕೊಳ್ಳುವಂತೆ ಇವರು ನೋಡಿಕೊಳ್ಳುವಲ್ಲಿ ಸಮರ್ಥರಾಗುವರು ಎಂಬ ನಿರೀಕ್ಷೆಯಿದೆ. ಸಂಸತ್ತಿನ ಪ್ರಥಮಾಧಿವೇಶನದ ಪ್ರಥಮ ದಿನದಂದು ನಿಲುವಳಿ ಸೂಚನೆಗಳನ್ನು ತರಬಾರದೆಂಬ ಹೊಸ ಸಂಪ್ರದಾಯವನ್ನಿವರು ಮೊದಲಿಗೆ ಹಾಕಿಕೊಟ್ಟುದು ಈ ಆಶಯ ಪೂರೈಸುವುದೆಂಬುದಕ್ಕೆ ನಾಂದಿಯಾಗಿದೆ

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—

ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ. ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ -50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ. ೯೦ ನ. ಪೈಸೆ.

(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1—25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸತ್ತವನ ಮಿದುಳು ಹೊತ್ತ ಮಾನವ—ಹುಚ್ಚ

(೩ನೇ ಪುಟದಿಂದ)

ಮನಸ್ಸಿನ ಮೇಲೆ ಆಘಾತವಾಗಬಹುದಾದ ಪ್ರೀತಿಪಾತ್ರರು ಅಗಲುವಿಕೆ, ಅಧಿಕವಾಗಿ ಪ್ರೀತಿಸುತ್ತಿದ್ದ ಪದಾರ್ಥಗಳ ನಾಶ ಅಲ್ಲದೇ ದೇಹದ ಮೇಲೆಯೇ ಆಗಲಿ ತಲೆಗೇ ಆಗಲಿ ಮಿದುಳಿನ ಸಂಪರ್ಕವನ್ನು ಕಲ್ಪಿಸುವ ನರಗಳ ಸ್ಥಾನಪಲ್ಲಟ ಇವುಗಳೇ ಆಗಿದೆ.

ಇವಾವುವೂ ಅಲ್ಲದೇ ಇದಕ್ಕಿದ್ದಂತೆ ಹುಚ್ಚರಂತಾಗುವ ಬೇರೊಂದು ಜಾತಿಯುಂಟು ಅದನ್ನು ಗುಣಪಡಿಸ ಬೇಕಾದರೆ ಯಾವ ವಿಧದ ಔಷಧವೂ ಸಾಧ್ಯವಿಲ್ಲ ಹುಚ್ಚರಂತೆ ನಟಿಸುವ ಜಾತಿಯದು. ತಾನು ಮಾಡುವ ಕೆಟ್ಟ ಕೆಲಸದಲ್ಲಿ ಸಿಕ್ಕಿಹಾಕಿಕೊಂಡಾಗ ನಟಿಸುವ ಈ ಸ್ಥಿತಿಗೆ "ಹುಚ್ಚು ಎನ್ನುವ ಹೆಸರು ಕೊಡಲೆಂದು ಆತ ಬಹಳಷ್ಟು ಆಶಿಸುತ್ತಾನೆ, ಹಾಗೂ ಆ ರೀತಿ ಅವರ ಕನಿಕರಕ್ಕೆ ಪಾತ್ರವಾಗಲೂ ಬಹಳಷ್ಟು ಆಶಿಸುತ್ತಾನೆ.

ಅಂದು ಬೆಂಗಳೂರಿನ ಬಸ್ ನಿಲ್ದಾಣದಲ್ಲಿ ಬಹಳಷ್ಟು ಗಲಾಟೆಯೆದ್ದಿತು. ಒಬ್ಬನ ಪರ್ಸ್ ಮಾಯವಾಗಿತ್ತು. ಅನುಮಾನಗೊಂಡು ಒಬ್ಬಾತನನ್ನು ಹಿಡಿದಾಗ ಆತ ಹುಚ್ಚನಾಗಿದ್ದ. ಪರ್ಸ್ ಕಳೆದುಕೊಂಡವನು ಆತನಿಗೆ ಏನೊಂದು ತೊಂದರೆ ಮಾಡದೇ ಪರ್ಸ್ ಮಾತ್ರ ಸ್ವೀಕರಿಸಿ ನಡೆದಿದ್ದ.

ಹುಚ್ಚರ ವಿಚಿತ್ರ ನಡತೆಗಳು ನೋಡಲು ಕೇಳಲು ವಿನೋದವೆನಿಸುತ್ತವೆ.

ಅಮೇರಿಕಾದ ಹ್ಯಾರಿ ಲೇಟನಲ್ಲಿ ಒಂದು ಮೊಲವಿತ್ತು. ಅದನ್ನು ಬಹು ಪ್ರೀತಿಸುತ್ತಿದ್ದ. ಆತನ ಪ್ರೀತಿ ಅತಿರೇಕಕ್ಕೆ ಮುಟ್ಟಿತ್ತು. ಅಂತೆಯೇ ಆತ ಅದರ ಕುತ್ತಿಗೆ ಹಾಗೂ ತನ್ನ ಕೈಗೆ ಸೇರಿಸಿ ಕಬ್ಬಿಣದ ಸರಪಣಿ ಹಾಕಿ ಬಿಗಿಸಿಕೊಂಡಿದ್ದ ಬೀಗದ ಕೈ ತನ್ನಲ್ಲಿದ್ದರೆ ಅಕಸ್ಮಾತ್ ತೆಗೆಯುವ ಮನಸ್ಸು ಬರಬಹುದೆಂದು ಬೀಗದ ಕೈಯನ್ನು ನುಂಗಿದ್ದ ಭೂಪನವ.

ಹುಚ್ಚರ ವಿಚಿತ್ರ ಗುಣಕ್ಕೆ ಮಾರನೇ ನೆಪೋಲಿಯನ್ ಹೊರತಾಗಿಲ್ಲ. ಆತ ತನ್ನ ರಾಜ್ಯದ ಅಧಿಕಾರದಿಂದ ವಿರಕ್ತನಾಗಿ ಹೊರಬಿದ್ದು ಸನ್ಯಾಸಿಯಾದ. ಆಗ ಟ್ರನಿಡಾಡ್‌ನ ಸ್ವಾಮಿತ್ವಕ್ಕಾಗಿ ಪೋರ್ತುಗಾಲ್ ಹಾಗೂ ಇಂಗ್ಲೇಂಡ್‌ನ ನಡುವೆ ಯುದ್ಧ ನಡೆದಿತ್ತು. ನೆಪೋಲಿಯನ್ ತಾನೇ ಟ್ರನಿಡಾಡ್‌ನ ಅರಸು ಪ್ರಥಮ ಜೇಮ್ಸ್ ಎಂದು ಹೇಳಿಕೊಳ್ಳ ತೊಡಗಿದ. ನ್ಯೂಯಾರ್ಕಿಗೆ ತನ್ನ ರಾಯಭಾರಿಯನ್ನೂ ಕಳುಹಿಸಿದ. ಇಂಗ್ಲೇಂಡ್ ಆತನನ್ನು ಓಡಿಸಿದ ನಂತರ ಆತ ಆತ್ಮಹತ್ಯೆ ಮಾಡಿಕೊಂಡ.

ಹುಚ್ಚರ ಕಾರುಬಾರು ನಿರ್ವಿಘ್ನವಾಗಿ ನಡೆಯಲು ಲೆಕ್ಕವಿಲ್ಲದಷ್ಟು ಸಂಘಗಳಿವೆ.

ಸತ್ತ ಮಿದುಳನ್ನು ಹೊತ್ತ ಈ ಮಾನವರನ್ನು ಕಂಡಾಗ ಎಲ್ಲ ಜನರಿಗೂ ಕನಿಕರ ಬರದೇ ಇಲ್ಲ ಇವರನ್ನು ಕಂಡಾಗ ಹೆದರಿ ಹಿಮ್ಮೆಟ್ಟಿದರೂ ಲೆಕ್ಕವಿಲ್ಲದಷ್ಟು ಜನರಿಗೆ ಹುಚ್ಚರನ್ನು ಗಮನಿಸುವುದು ಒಂದು ವಿನೋದವೇ ಆಗಿರುವುದು. ಅವರ ಚರ್ಯೆಗಳು ಅವರಿಗೇ ವಿಚಿತ್ರವಾಗಿ ತೋರುವುದು. ಅವರು ಯೋಚಿಸುವರು.

"ಅವರೇಕೆ ಆ ರೀತಿ ಮಾಡುವರು? ಅವರಿಗೆ ಮೂಲತಃ ಏನಾಗಿದೆ?"

—ಈ ಪ್ರಶ್ನೆಗಳು ಬಗೆಹರಿಸಲಾರದವಿದ್ದರೂ "ಮಲಗಿದ್ದಾಗ ನೀನೇಕೆ ಕನವರಿಸಿದೆ?"—ಎಂದು ಮನೆಯವರು ಕೇಳಿದಾಗ ನಿಜವೆನಿಸುತ್ತದೆ.

"ನಾನೆಲ್ಲಿ ಕನವರಿಸಿದೆ?"

—ಅಂತೆಯೇ ಹುಚ್ಚರದೂ ಇರುತ್ತದೆ ಅವರೇನು ಮಾಡುವರೆಂದು ಅವರಿಗೇ ತಿಳಿದಿರುವುದಿಲ್ಲ. ಹಾಗೆ ತಿಳಿದರೂ ಅದು ತಪ್ಪೆ? ಸರಿಯೆ? ವಿಚಾರಿಸುವ ಶಕ್ತಿ ಹಾಗೂ ವ್ಯವಧಾನ ಅವರಲ್ಲಿರುವುದಿಲ್ಲ. ಕೆಲವು ಹುಚ್ಚರು ಸಕಲ ಗುಣಗಳಲ್ಲೂ ಹಸು ಮಕ್ಕಳನ್ನು ಹೋಲುವರೆಂದರೆ ಸುಳ್ಳಲ್ಲ.

A person in an motional state is like a child an infant; he does not consider how busy mother is...he



ಅಂಡಮಾನದ ಪೋರ್ಟ್ ಬ್ಲೇರ್‌ನ ಛತಂ ಜೆಟ್ಟಿಯ ದೃಶ್ಯ.

just cries or screams for her and if she is a good, kind, loving, sympathetic mother she should go at once.

ಇದು ನಿಜಕ್ಕೂ ವಾಸ್ತವ ಜಗತ್ತಿನಲ್ಲಿ ಮಾನವ ಗಮನಿಸಬೇಕಾದ ಅಂಶ.

ಹುಚ್ಚರನ್ನು ಗುಣಪಡಿಸುವಿಕೆ ಸುಲಭದ ಮಾತಲ್ಲ, ಲೆಕ್ಕವಿಲ್ಲದಷ್ಟು ಪರಿಣತರು, ಡಾಕ್ಟರರು, ಔಷಧಗಳು ಹಾಗೂ ಸಲಕರಣೆಗಳು ಈಗ ಬೆಳೆದು ಬಂದಿದ್ದರೂ ಹುಚ್ಚರ ಸರಾಸರಿ ಕಡಿಮೆಯಾಗದೆ ಹೆಚ್ಚುತ್ತಿರುವುದು ಏಕೆಂದು ಇನ್ನೂ ಮಾನವನ ತಲೆಗೆ ಹತ್ತಿಲ್ಲ.

ಹುಚ್ಚರನ್ನು ಗುಣಪಡಿಸುವ ಡಾಕ್ಟರರಿಗೂ ಚಿಕ್ಕ ಮಕ್ಕಳನ್ನು ಸಾಕುವ ತಾಯಿಗೂ ಹೆಚ್ಚು ಸಹನೆ, ಧೈರ್ಯ, ಬುದ್ಧಿವಂತಿಕೆ ಹಾಗೂ ಜ್ಞಾನ ಬೇಕು.

ಒಂದು ಹುಚ್ಚರ ಆಶ್ರಮದಲ್ಲಿ ಅತಿ ಉನ್ಮಾದರ ಗುಂಪಿನಲ್ಲಿ ಸೇರಿದ್ದ ಒಬ್ಬನನ್ನು ಉಳಿಸಬೇಕಾದರೆ ಎಲ್ಲ ಡಾಕ್ಟರರ ಕಲಿತ ಬುದ್ಧಿ ಕೈಗೆ ಬರಬೇಕಾಯಿತು.

ಆ ಹುಚ್ಚ ತಾನು ಸತ್ತಿರುವೆನೆಂದೂ, ಸತ್ತ ಜನರು ಊಟ ಮಾಡುವುದಿಲ್ಲನೆಂದು ಹಟ ತೊಟ್ಟು ಊಟ, ತಿಂಡಿ ನೀರಿಲ್ಲದೆ ಸಾಯುವುದರಲ್ಲಿದ್ದ, ಈ ಘಟನೆಯಿಂದಾಗಬಹುದಾದ ಗಂಡಾಂತರವನ್ನು ಮನಗಂಡ ಡಾಕ್ಟರರು ಆತನನ್ನು ಬದುಕಿಸಲು ಬಹಳ ಪೇಚಾಡಿದರು. ಕೊನೆಗೆ ಒಬ್ಬ ಡಾಕ್ಟರರ ಉಪಾಯದಿಂದ ಅವರೆಲ್ಲ ಕುತ್ತಿನಿಂದ ಪಾರಾದರು.

ಆ ಡಾಕ್ಟರರು ಸುಮಾರು ಆರು ಜನರನ್ನು ಸಂಗ್ರಹಿಸಿದರು. ಅವರಿಗೆಲ್ಲಾ ಪೂರ್ತಿ ಬೆಳೆಯ ಪುಷಾಕನ್ನೂ, ಅವರ ಮುಖ, ಕೈ, ಕಾಲುಗಳನ್ನು ಸೀಮೆ ಸುಣ್ಣದಿಂದ ಬೆಳ್ಳಗೆ ಮಾಡಿ, ಅವರನ್ನು ಒಬ್ಬರ ಹಿಂದೆ ಒಬ್ಬರಂತೆ ಸಂಪೂರ್ಣ ನಿಶ್ಶಬ್ದತೆಯಿಂದ ಆ ಹುಚ್ಚ ಊಟದ ತಟ್ಟೆಯೊಡನೆ ಕುಳಿತಿದ್ದ ಪಕ್ಕದ ಕೊಟಡಿಗೆ ಹೋಗುವಂತೆ ಹೇಳಿದರು. ಆ ಕೋಣೆಯಲ್ಲಿ ಅವರಿಗೆ ಸುಖಕರವಾದ ಊಟ ತಯಾರಾಗಿತ್ತು. ಬಾಗಿಲು ಬೇಕಾಗಿಯೇ ತೆಗೆದಿಡಲ್ಪಟ್ಟಿತ್ತು. ಇವರನ್ನು ಕಂಡ ಆ ಹುಚ್ಚ ಸೇವಕನನ್ನು ಕುರಿತು ಕೂಗಿದ.

"ಲೋ ಇವರೆಲ್ಲಾ ಯಾರು?

"ಮೃತ ಮನುಷ್ಯರು! ಸೇವಕ ಉತ್ತರಿಸಿದ.

"ಏನು!,, ಹುಚ್ಚ ಆಶ್ಚರ್ಯದಿಂದ ಕೇಳಿದ.

"ಸತ್ತವರು ತಿನ್ನುತ್ತಾರೆಯೇ?

"ನಂಬಿಕೆಯಿಲ್ಲದಿದ್ದರೆ ನೀನೆ ಕಣ್ಣಾರೆ ನೋಡು,,

—ಎನ್ನುತ್ತಾ ಸೇವಕ ಹೊರ ಹೊರಟ

"ವಿಷಯ ಹಾಗಿದ್ದರೆ.........,

—ಕಿರಿಚಿದ ಆ ಹುಚ್ಚ.

"ನಾನೂ ಅವರ ಜತೆಯಾಗುವೆ. ಏಕೆಂದರೆ ನಾನು ಹಸಿವಿನಿಂದ ಸಾಯುತ್ತಿದ್ದೇನೆ,.

—ಎಂದು ಹೇಳುತ್ತಾ ಗಬ ಗಬನೆ ಊಟ ಮಾಡತೊಡಗಿದ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).
ಪಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.



ಕಾಯದೆ ಒಪ್ಪದ ಸಂಪತ್ತು

(೨ನೇ ಪುಟದಿಂದ)

ರ ಮೇಲೆ ದ್ವೇಷವೇನು? ಅವನೇಕೆ ಸುಳ್ಳು ಹೇಳಬೇಕು? ತನ್ನಲ್ಲಿಗೇನೇ ಒಂದು ಬಾರಿ ಒಂದು ಮಣಕಂದು ಮಾರಿದ್ದರಿಂದಾ, ಮುಂದೆ ತಂದಾಗ ತನಗೆ ಸಂದೇಹ ಬಂದು ಬೇಡವೆಂದು ಹಿಂದಿರುಗಿಸಿದ್ದೆನೆಂದೂ ಆತ ಹೇಳುತ್ತಾನೆ. ಈಗ ನಾಲ್ಕಾರು ತಿಂಗಳುಗಳಲ್ಲಿ ಕಡಿಮೆ ಪಕ್ಷ ಐವತ್ತು ಅರುವತ್ತು ಮಣ ತಾಮ್ರವನ್ನು ವ್ಯಾಸ ಭಟ್ಟರು ಪೇಟೆಗೆ ತಂದಿದ್ದಾರೆ — ಎನ್ನುತ್ತಾನೆ ಆತ!

ದೇವಾಲಯದ ಗರ್ಭಗುಡಿಗೆ ಒಂದು ಕಾಲದಲ್ಲಿ ತಾಮ್ರ ಹೊದಿಸಿದ್ದರಂತೆ. ಮುಂದೆ ಅದರ ರಿಪೇರಿಯಾಗುವಾಗ, ಅದನ್ನು ಕಿತ್ತು ಹಾಕಿದ್ದರಂತೆ ತಾಮ್ರದ ಬೆಲೆಯೇರುತ್ತ ಬಂದುದರಿಂದ ಇದ್ದ ತಾಮ್ರ ಸಾಲದುದರಿಂದ, ತುಸು ಅಗ್ಗವಾದ ಪೇಲಿ ಕೊಂಡುಕೊಂಡು ಹಾಕೋಣವೆಂದು ಮುಕ್ತೇಸರ ತಿಮ್ಮಣ್ಣ ಶೆಟ್ಟರು ಹೇಳಿದರಂತೆ, ಅದರಂತೆ ದೇವಸ್ಥಾನಕ್ಕೆ ಕಳ್ಳರು ಬರಲಾರರೆಂಬ ವಿಶ್ವಾಸದಿಂದ ಅಲ್ಲಿಯೇ ಕತ್ತಲೆಯ ಸುತ್ತಿನಲ್ಲಿ ರಾಶಿಯೊಡ್ಡಿದ್ದರಂತೆ ಇಲಿ ಬಾವಲಿಗಳು ಮಾತ್ರವಲ್ಲ ಹಾವುಗಳೂ ಅದನ್ನು ತಮ್ಮ ನಿಧಾನವನ್ನಾಗಿ ಮಾಡಿಕೊಂಡು ಕಾಯುತ್ತಿರುವುವಂತೆ! ತಿಮ್ಮಣ್ಣ ಶೆಟ್ಟರು ಇಹಲೋಕ ಕಾರ್ಯಭಾರವನ್ನು ಮುಗಿಸಿದ ಮೇಲೆ ಅವರ ಅಳಿಯಂದಿರು ಹೂಡಿದ ಪಾಲು ಪಟ್ಟಿಗಳ ಜಟಾಪಟಿಯಲ್ಲಿ ಎಲ್ಲವನ್ನು ಕಳೆದುಕೊಂಡು ದಿನಯಾಪನೆಗಾಗಿ ಒದ್ದಾಡುವ ಕಾಲ ಬಂದಿದೆಯಂತೆ. ದೇವಮಂದಿರದ ಶಿವರಾತ್ರಿಯ ದಿನ ಒಡೆದ ಹಂಚನ್ನು ಬದಲಿಸಲು ಶಕ್ತನಾಗದ ಮುಕ್ತೇಸರ ಮಹಾಬಲ ಶೆಟ್ಟಿ ತಾಮ್ರ ಹೊದಿಸುವುದುಂಟೆ? ಆತನಿಗೂ ಈ ತಾಮ್ರದ ಗುಟ್ಟು ಗೊತ್ತಾಗಿ ಅದನ್ನು ತೆಗೆಯಲು ಆಜ್ಞಾಪಿಸಿದ್ದನಂತೆ-ತನ್ನ ಯೌವನದ ಕಾಲದಲ್ಲಿ! ಆದರೆ ಸರ್ಪ ಭಾಧೆಯಿಂದ ಆತ ಅಸಮರ್ಥನಾದನಂತೆ!— ಈ ಎಲ್ಲ ಕಥೆ ರಾಮುಭಟ್ಟರು ಎಳೆಯ ಹುಡುಗನಾಗಿದ್ದಾಗ ಅವರ ಅತ್ತೆಯ ಬಾಯಿಯಿಂದ ಕೇಳಿದುದು. ಈಗ ಅತ್ತೆ ತೀರಿ ಹೋಗಿ ವರ್ಷ ಮೂವತ್ತಾಯಿತು! ಅಲ್ಲಿ ತಾಮ್ರ ಇದ್ದದ್ದಂತೂ ನಿಜವೇ. ಆದರೆ, ಎಷ್ಟಿತ್ತು ಎಂದು ಯಾರಿಗೆ ಗೊತ್ತು? ಅದನ್ನು ನೋಡಿದವರೇ ಈಗಿನವರಲ್ಲಿ ಇಲ್ಲದಿರುವಾಗ, ಅಲ್ಲಿದ್ದದು ಇತ್ತು ಎಂದು ಕಾನೂನಿನ ಪ್ರಕಾರ ನಂಬುವುದು ಹೇಗೆ? ತಾನು ಅಧಿಕಾರ ಸ್ವೀಕರಿಸುವಾಗಲಾದರೂ ಒಂದು ಬಾರಿ ನೋಡಬಾರದಾಗಿತ್ತೆ-ಎನಿಸಿತು ಅವರಿಗೆ. ಇದೇ ಚಿಂತೆಯಿಂದ ಅವರು ಹೇಗೋ ಹೇಗೋ ನಡೆದು ಮನೆ ಸೇರಿದರು. ರಾತ್ರಿ ಮಲಗಿದರೆ ವಿಚಿತ್ರ ಕನಸು. ಮಾವ ಅನಂತ ಭಟ್ಟರು ಹಾಗೂ ಹಿಂದಿನ ಮುಕ್ತೇಸರ ತಿಮ್ಮಣ್ಣ ಶೆಟ್ಟರು ರುದ್ರಾಕಾರ ತಾಳಿ ಇವರನ್ನು ಕಾಡುತಿದ್ದರು. ಉಮಾಮಹೇಶ್ವರನ ತಾಮ್ರವನ್ನು ತಿಂದೆ ಎಂದು ಗರ್ಜಿಸುತಿದ್ದರು.

"ಇಲ್ಲ....ನಾನು ಮುಟ್ಟಿಲ್ಲ....ನನಗೆ ಗೊತ್ತೂ ಇಲ್ಲ...." ತೊದಲುತ್ತ ಉತ್ತರಿಸಿದರು ಭಯಭೀತರಾಗಿ, ಮುಕುಲಿತರ ಪುಟಗಾಗಿ ರಾಮು ಭಟ್ಟರು

"ದೇವಾಲಯದ ಪೂಜಾರಿಯಾಗಿ ನೀನು ಗೊತ್ತಿಲ್ಲ ಎಂದರಾಗುತ್ತದೆಯೆ?' ಗಟ್ಟಿಯಾಗಿ ಹೂಂಕರಿಸಿ ಕೇಳಿದರವರು.

"ನಾನು...ನಾನು...ವ್ಯಾಸನಿಗೆ ಒಪ್ಪಿಸಿದ್ದೇನೆ...."

"ನೀನು ವ್ಯಾಸನಿಗೆ ಕೊಟ್ಟಿದ್ದಿ; ಆತ ಕದ್ದಿದ್ದಾನೆ. ಉಮಾ ಮಹೇಶ್ವರನ ಸೊತ್ತು ಕದ್ದು ಪೇಟೆಯಲ್ಲಿ ಆದಾಂ ಬ್ಯಾರಿಗೆ ಸಿಕ್ಕಿದ ಬೆಲೆಗೆ ಮಾರಿದ್ದಾನೆ. ಮಾರಿ ಬಂದ ಹಣವನ್ನು ಬೇಂಕಿನಲ್ಲಿಟ್ಟಿದ್ದಾನೆ."

"ಅದಕ್ಕೆ....ನನ್ನ ಅಪರಾಧವೇನು?"

ನಿಮ್ಮ ಅಪರಾಧವೆ? ಭಟ್ಟರೆ, ದೇವರ ಪೂಜೆಯ ಅಧಿಕಾರ ಕೊಟ್ಟದ್ದು ನಿಮಗೆ; ಆ ಮುಟ್ಠಾಳ ವ್ಯಾಸನಿಗಲ್ಲ. ದೇವರ ಪಟ್ಟಿ ಉತ್ತಾರ ಬಿಟ್ಟದ್ದು ನಿಮಗೆ; ಆ ಕಳ್ಳ ವ್ಯಾಸನಿಗಲ್ಲ. ಪೂಜೆ ವಿನಿಯೋಗ ಕಾವಲು ಮಾಡಬೇಕಾದವರು ನೀವು. ನಿಮ್ಮ ಕರ್ತವ್ಯಕ್ಕೆ ತಪ್ಪಿಸಿ ಇನ್ನೊಬ್ಬನನ್ನು ತೋರಿಸಿದರೆ ಪ್ರಯೋಜನವೇನು? ಉಮಾಮಹೇಶ್ವರನ ಗಂಟು ಬೇಗನೆ ತುಂಬಿಸಿ, ಹೂಂ, ತುಂಬಿಸಿ... "

"ಅಯ್ಯೋ....' ಎಂದು ಆರ್ಭಟಿಸಿದರು ರಾಮು ಭಟ್ಟರು. 'ಏನಾಯಿತು. ಏನಾಯಿತು' ಎಂದು ದಿಗಿಲಿನಿಂದ ಕೇಳಿದರು ಅವರ ಪತ್ನಿ. ತೊಟ್ಟಿಲಲ್ಲಿ ಸುಖನಿದ್ರೆ ಮಾಡುತಿದ್ದ ಪುಟ್ಟ ಬಾಲ ದಿಗ್ಗನೆ ಎದ್ದು ಕೂಗತೊಡಗಿತು ಗಾಬರಿಯಿಂದ. ದೂರದಲ್ಲಿ ನಾಯಿಗಳ ಬೊಗಳಾಟ—ನರಿಗಳ ಕೂಗಾಟ ಕಿವಿಗಳಿಗೆ ಬಡೆಯುತಿತ್ತು

'ಏನಿಲ್ಲ....ಏನೋ ಕನಸ್ಸು ..ಕೆಟ್ಟ ಕನಸು..." ಎಂದು ಸಾವರಿಸಿಕೊಂಡೆದ್ದು ಅಂಗಳದಲ್ಲಿ ಕಾಲಿಕ್ಕಿದರು, ಅಲ್ಲಿ ಚಂದ್ರನ ಬೆಳಕಿನಷ್ಟು ಇರಲಿಲ್ಲ. ಮೇಲಕ್ಕೆ ನೋಡಿದರು. ಅಕ್ಷಿನಿಮೀಳನ ಮಾಡದಿರ ಬೇಕಾದ ನಕ್ಷತ್ರಗಣವನ್ನೂ ಚಂದ್ರನನ್ನೂ ಭಯಾನಕವಾದ ಕರ್ಮೋಡವೊಂದು ಆವರಿಸಿತ್ತು, ಹೌದೂ ಚಂದ್ರನಿಗೂ ಮೋಡ ಕವಿಯುತ್ತದೆ; ಪಕ್ಷ ಬದಲುತ್ತದೆ; ಎಂದು ಎಂದುಕೊಂಡರು. ತನ್ನ ತಾನೆ ನಾಳೆ ಏನಾದರೂ ಆಗಲಿ, ಈ ಬಗ್ಗೆ ವಿಚಾರ ಮಾಡಲೇ ಬೇಕು ಎಂದಿತು ಅವರ ಅಂತರಾತ್ಮ.

ನೇಸರು ಮೂಡಲು ಇನ್ನೂ ಜಾಮ ಹೊತ್ತಿರಬೇಕು. ಬೆಳ್ಳಿ ಮೂಡಿ ತುಸು ಮೇಲಕ್ಕೆ ಬಂದಿತು ಬೆಳುದಿಂಗಳ ಇರುಳನ್ನು ಹಗಲೆಂದು ಭ್ರಮಿಸಿ ಕಾಗೆಗಳು ಆಗಲೇ ಕಾಕಾ ಎನ್ನುತಿದ್ದುವು. ಕೋಳಿಗಳು ಬೆಳಗಾಗ ತಯಾರಾಗುತ್ತಿದಿಯೆಂಬದನ್ನು ಕೂಗಿ ಸಾರುತಿದ್ದುವು. ಪಡುವಣೆಯಿಂದ ತಂಗಾಳಿ ಮೆಲ್ಲಮೆಲ್ಲನೆ ಬೀಸಿ ನಿದ್ರೆ ಬಾರದವರಿಗೂ ನಿದ್ರೆಯ ಅಮಲನ್ನು ಕುಡಿಸುತಿದ್ದುವು. ನದಿ ದಂಡೆಯ ಬಕಪಕ್ಷಿಗಳೂ ಕಿರಿಕಿರಿ ಹಕ್ಕಿಗಳೂ ನಿದ್ರೆಯಿಂದೆದ್ದು ಬೆಳದಿಂಗಳು ಸವಿಯುವುದರಲ್ಲಿ ಚಕೋರವನ್ನು ಸ್ಪರ್ಧಿಸುತಿದ್ದುವು. ರಾಮು ಭಟ್ಟರು ಎದ್ದು ಮುಖಮಾರ್ಜನಾದಿ ಪ್ರಾತರ್ವಿಧಿಗಳನ್ನೂ ಸ್ನಾನ ಸಂಧ್ಯಾವಂದನೆಗಳನ್ನು ಪೂರಯಿಸಿದರು. ಇಂದಿನ ದಿನಚರ್ಯೆಯು ಎಂದಿನಂತೆ ನಿಶ್ಚಯವಿಲ್ಲದ ಕಾರಣ ಎಲ್ಲ ಮುಗಿಯುವಾಗ ಹೊತ್ತು ಬೆಳಗಾಗಿತ್ತು.

ರಾಮು ಭಟ್ಟರು ಯೋಚಿಸುತ್ತಾ ತಲೆ ತುರಿಸಿಕೊಂಡರು. ಸತ್ಯಶೋಧನೆಯು ಸಾಮಾನ್ಯ ಸಾಹಸವಲ್ಲ. ತನ್ನವನು, ತನ್ನ ನಿಕಟ ಸಂಬಂಧಿಕನು, ತನ್ನ ನೆರೆಮನೆಯಲ್ಲೇ ವಾಸಿಸಿ ಪ್ರತಿನಿತ್ಯ ತನ್ನ ಮುಖ ನೋಡಿ ದಿನದೂಡುತ್ತಿರುವ ವ್ಯಾಸ ಹೀಗೆ ದೇವರ ಸೊತ್ತನ್ನು ಅಪಹರಿಸಿದನೆಂದು ಯಾರಾದರೂ ಅಂದಿದ್ದರೆ, ಅವರನ್ನೇ ಗದರಿಸುತಿದ್ದರು. ಆದರೆ, ಈಗ ತನ್ನ ಕಿವಿಗೆ ಹಾಕಿದ ಬ್ಯಾರಿಯೂ ತನ್ನ ವಿಶ್ವಾಸಕ್ಕೆ ಪಾತ್ರನಾದವನೇ. ವ್ಯಾಸನ ಇತ್ತೀಚೆಗಿನ ಜೀವನ—ವ್ಯವಹಾರ ಸುಧಾರಿಸಿತು ನಿಜ ಆತನ ಇಬ್ಬರು ಮಕ್ಕಳು ಪರವೂರಲ್ಲಿ ಬಿಸಿನೀರು ಮಾರಿ ಹಣಗಳಿಸುತಿದ್ದಾರೆ ಅವರಲ್ಲಿ ಸ್ವಲ್ಪ ತಂದೆಗೂ ಕಳಿಸಿದರೆ ಅದರಲ್ಲಿ ಆಶ್ಚರ್ಯವೇನು? ಅಸಹಜತೆಯೇನು? ಎಂದುಕೊಂಡು ಭಟ್ಟರು ವ್ಯಾಸನನ್ನೇ ಗೋಪ್ಯವಾಗಿ ಪ್ರಶ್ನಿಸುವುದು ಉಚಿತವೆಂದು ಮಗ ಶ್ಯಾಮನನ್ನು ಆತನಲ್ಲಿಗೆ ಅಟ್ಟಿದರು. ಶ್ಯಾಮ ವ್ಯಾಸ ಭಟ್ಟರನ್ನು ಕರೆತಂದ.

ಬೆಳಗ್ಗಿನ ಜಾವದಲ್ಲಿ ಏಕಾಏಕಿಯಾಗಿ 'ಅಪ್ಪ ಕರೆಯುತ್ತಾರೆ' ಎಂಬ ಸಂದೇಶ ತಂದ ಶ್ಯಾಮನನ್ನು ಕಂಡು ಅವರು ತುಸು ಬೆಚ್ಚಿಬಿದ್ದರು. ಆದರೂ ಸ್ವಾಮಿ ಸೇವಕ ಸಂಬಂಧ ಕಡಿದುಕೊಳ್ಳಲಾರದೆ ಅವರು ಉಟ್ಟ ಬಟ್ಟೆಯಲ್ಲೇ ಹೊಂಟುಬಿಟ್ಟದ್ದರು. ಬಂದವರಿಗೆ ಆಸನ ತೋರಿಸಿ, ಗಂಗಾಮೃತ-ವೀಳೆಯ ಕೊಡಿಸಿ ಮೆಲ್ಲನೆ ವಿಷಯದತ್ತ ನಾಲಿಗೆ ಹರಿಸಿದರು-ರಾಮು ಭಟ್ಟರು.

"ಹೌದೋ ವ್ಯಾಸ, ಒಂದು ವಿಚಾರ ಕೇಳೋಣ ಎಂದು ಕರೆದೆ' ವ್ಯಾಸಭಟ್ಟರ ಎದೆಗೆ ಶೂಲಗಿನಿಂದ ಇರಿದಂತಾಯಿತು. ಆದರೂ ಅದನ್ನು ತೋರಿಸದೆ, ತಮ್ಮ ಸೇವಕನಲ್ಲಿ ಆಜ್ಞಾಪಿಸಬೇಕು' ಎಂದೊಂದು ಬಾರಿ ಮತ್ತಮತ್ತ ನೋಡಿದರು. ಯಾರೂ ಇಲ್ಲದುದನ್ನು ಗಮನಿಸಿ ರಾಮುಭಟ್ಟರು ತುಸು ಧೈರ್ಯದಿಂದಲೇ ಅಂದರು. 'ಅಲ್ಲ, ನಮ್ಮ ದೇವರ ಗರ್ಭಗುಡಿ ತೀರ ಜೀರ್ಣಿಸಿ ಹೋಗಿದೆಯಲ್ಲಾ; ಅದೇನು ಇಂದೊ ನಾಳೆಯೋ ಬೀಳುವಂತಿದೆ. ಆದುದರಿಂದ ಅದನ್ನು ಈ ವರ್ಷ ರಿಪೇರಿ ಮಾಡಲೇಬೇಕು. ಆದರೆ ನೋಡು, ಶೆಟ್ಟರು ಸದ್ಯ ಚಿಕ್ಕಾಸೂ ಬಿಡುವಂತಿಲ್ಲ ಮತ್ತೇನು ಮಾಡಬಹುದು?'

"ಊರವರ ಸಹಾಯ.....

"ಅದು ಇದ್ದೇ ಇದೆ ಎನ್ನುವ. ಆದರೂ ನನಗೊಂದು ನಿನ್ನೆ ರಾತ್ರಿ ಉಪಾಯ ಹೊಳೆಯಿತು. ಒಬ್ಬರಿಗಿಂತ ಇಬ್ಬರು ಮೇಲು ಎಂಬಂತೆ ನಿನ್ನನ್ನು ಕೇಳುವ ಎಂದು ಕರೆದೆ ಹೇಗೂ ದೇವರಿಗೆ ಉಣಿಸುವವನು ನೀನೇ ಆಗಿದ್ದಿ ತಾನೆ?" ಎಂದು ಪ್ರಸಂಗಕ್ಕೆ ಬಂದರು ರಾಮು ಭಟ್ಟರು.

"ತಮ್ಮ ಅಪ್ಪಣೆಯನ್ನು ಪಾಲಿಸಲು ಸಿದ್ಧ...."

"ನೋಡು ವ್ಯಾಸ, ನಮ್ಮ ಅತ್ತೆ ಹೇಳುತಿದ್ದ ಕಥೆ ಮುಂದಿರುವ ಕಲ್ಲುಸುತ್ತಿನಲ್ಲಿ ತಾಮ್ರ ಇದೆಯಂತೆ ಅದನ್ನು ಮಾರಿ ಉಪಯೋಗಿಸಿದರೆ ಹೇಗೆ? ಎಂದ ರಾಮು ಭಟ್ಟರು ವ್ಯಾಸನ ಮುಖವನ್ನು ಓರೆಗಣ್ಣಿನಿಂದ ನೋಡಿದರು. ಪಾಪ, ವ್ಯಾಸನ ಎದೆಯಲ್ಲಿ ಎಂಟು ಒನಕೆಗಳ ಬಡಿದಾಟವು ನಡೆಯಿತು. ಆವರೂ ತನ್ನ ಮೇಲಾವರ ನಗೆ ನಗುತ್ತಾ ಇವೆಯಂತೆ; ಆದರೆ ನೋಡಿದವರು ಯಾರು ಇಲ್ಲದೆ ನಿಧಾನಗಳನ್ನು ಭೂತಗಳು ಕಾಯುತ್ತವಂತೆ. ಅದನ್ನೆಲ್ಲ ತೆಗೆಯುವವರು ಬೇಕಲ್ಲಾ?" ಇನ್ನು ಅದೆಷ್ಟೋ ವರ್ಷಗಳ ಹಿಂದೆ ಹಾಕಿಟ್ಟದ್ದ ಆ ತಾಮ್ರ ಈಗಲೂ ಹಾಗೆಯೇ ಇದೆ ಎಂದು ಹೇಳುವುದು ಸಾಧ್ಯವೆ? ಅವರೆಷ್ಟು ಇಟ್ಟಿದ್ದರೊ ಇವರೆಷ್ಟು ಹೇಳಿದರೊ!' ಎಂದರು.

"ಅದೆಲ್ಲ ಸರಿಯೇ. ಆದರೂ ಅದರಲ್ಲಿ ತಾಮ್ರವಿದೆಯಲ್ಲಾ ಅದನ್ನು ಇಂದು ಹೊರಗೆ ಹಾಕಿಸಬೇಕು. ಶೆಟ್ಟರನ್ನೂ ಬರಹೇಳುವ. ಎಷ್ಟಿದೆ ಎಂದಾದರೂ ಗೊತ್ತಾದೀತು. ಈಗ, ಹೋಗು, ಪೂಜೆಗೆ ಹೊತ್ತಾಯಿತು ತಾನೆ?'

"ಸರಿ, ನಾನಿನ್ನು ಮೀಯಲು ಹೋಗಲೇ?' ಎಂದು ಅನುಮತಿ ಯಾಚಿಸಿದ ವ್ಯಾಸ ಭಟ್ಟರ ಕಳ್ಳ ಮನಸ್ಸಿನ ಸುಳಿವು ಹೊರಪಡದಿರಲಿಲ್ಲ.

(ಮುಂದುವರಿಯುವುದು)

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿ ಹೊಂದುವುದು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

Estd. 1931. — ಮಂಗಳೂರು — 3
Phone No. 240

Tel: 'BLUEYAGAR'. — ಚಿನ್ನ ಮುತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು(ಗವರ್ನ್‌ಮೆಂಟ್ ಕಾಲೇಜು ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA, UDIPI.
REGD. NO.BG. 176

LICENSE NO. 31
Licensed to Post without Prepayment

ಭಾರತಕ್ಕೆ ಮರಳಿ ವಿಶ್ವಾಸಘಾತ

(೧ನೇ ಪುಟದಿಂದ)

೫೯ರ ವರೆಗಿನ ಕಾಲಾವಧಿಯಲ್ಲೂ ಅದು ಹೇಳುತಿದ್ದುದು ಹೀಗೆಯೇ. ನೀರಿನ ಮಟ್ಟವು ಕೆಲವು ತಾಸು ಇಲ್ಲವೇ ದಿನಗಳ ವರೆಗೆ ಏರುವುದಾದರೂ ಮರುಕ್ಷಣದಲ್ಲೇ ಅದು ಇಳಿಯುವುದೆಂದಾಗ ಅದು ವಾದಿಸುತಿತ್ತು. ಇದರಿಂದ ಭಾರತದ ಭೂಭಾಗವು ಮುಳುಗುವುದೆಂಬುದು ಸಂಪೂರ್ಣ ನಿರಾಧಾರವೆಂದು ಅದರ ಅಂಬೋಣ. ಆದರೆ, ಭಾರತವು ಕಂಡುಕೊಂಡಂತೆ ೨೦ ಅಡಿಗಳಷ್ಟು ನೀರು ಮೇಲೇರುವುದರಿಂದ, ಭಾರತದ ನೆಲವು ಜಲಮಯವಾಗುವುದು ಈಗಾಗಲೇ ಮುಳುಗಡೆ ಹೊಂದಿದ ಪ್ರದೇಶಗಳ ವಿಸ್ತೀರ್ಣವೆಷ್ಟೆಂಬುದನ್ನು ಪರಿಶೀಲನೆ ಸರಿಯಾಗಿ ತಿಳಿದುಕೊಳ್ಳುವುದೂ ಅಸಾಧ್ಯ. ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸಿದಾಗ ಮಾತ್ರ ಪರಿಹಾರದ ಪ್ರಶ್ನೆ ಮುಂದೆ ಬರುವುದು ಎಂದು ಪಾಕಿಸ್ತಾನವು ಅಂದಿದೆ.

ಭಾರತದ ಸ್ಪಷ್ಟೋಕ್ತಿ

ಗಡಿ ರೇಖೆಯನ್ನು ಗುರುತಿಸುವ ಉದ್ದೇಶದಿಂದ ಗಡಿಯ . ಇಕ್ಕಡೆಗಳಲ್ಲಿಯೂ ಒಂದೊಂದು ಮೈಲಿನ ವರೆಗಣ ಪ್ರದೇಶವನ್ನು ಸರ್ವೇಕ್ಷಣೆಗಾಗಿ ನಿಯತಗೊಳಿಸಲಾಗಿದೆ. ಇಂದಿಗೂ ಗಡಿರೇಖೆಯನ್ನು ಗುರುತಿಸುವ ಕೆಲಸವು ಪೂರ್ತಿಯಾಗಿರುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪಾಕಿಸ್ತಾನವು ಅಣೆಕಟ್ಟನ್ನು ಕಟ್ಟಿ ಸರ್ವೇಕ್ಷಣಾ ಕಾರ್ಯಕ್ಕೆ ಬಾಧೆಯನ್ನು ತಂದೊಡ್ಡಿತು ಮಾತ್ರವಲ್ಲ ಭಾರತದ ನೆಲವನ್ನು ಜಲಮಯವನ್ನಾಗಿ ಮಾಡಿ ಭೂಮಿಯ ಸರ್ವೇಕ್ಷಣೆಯ ಕೆಲಸವನ್ನು ನಡೆಯಗೊಡದಂತೆ ಮಾಡಿತು. ಇಂತಹ ಕೃತಘ್ನತೆ ಹಾಗೂ ವಂಚನೆಗೆ ತಕ್ಕ ಪ್ರತೀಕಾರವ ಭಾರತವು ಮಾಡದೆ ಉಳಿಯುವುದು ಸರ್ವಥಾ ಅಸಾಧ್ಯವೆಂದು ಭಾರತ ಸರಕಾರವು ಪಾಕಿಸ್ತಾನ ಸರಕಾರಕ್ಕೆ ಸ್ಪಷ್ಟವಾಗಿ ತಿಳಿಸಿದೆ.

ಮಂತ್ರಿಗಳ ಹೇಳಿಕೆ

ಭಾರತ ಸರಕಾರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳಾದ ಶ್ರೀ ಹಾಫಿಜ್ ಮಹಮ್ಮದ್ ಇಬ್ರಾಹಿಮರು ಲೋಕ ಸಭೆಯಲ್ಲಿ ಕರ್ಣಫೂಲೀ ಅಣೆಕಟ್ಟಿನ ಸಂಬಂಧದ ಹೇಳಿಕೆಯನ್ನಿತ್ತು ಪಾಕಿಸ್ತಾನದ ಈ ಏಕ ಪಕ್ಷೀಯ ಪ್ರವರ್ತನೆಗೆ ಭಾರತೀಯ ಜನತೆಯು ತೀವ್ರ ಪ್ರತಿಕ್ರಿಯೆಯ ಭಾವನೆಯನ್ನು ತಳೆದಿದೆಯೆಂದರು. ಈ ಅಣೆಕಟ್ಟಿನಲ್ಲಿ ನೀರು ಯಾವ ಮಟ್ಟದಲ್ಲಿದೆಯೆಂದು ಪಾಕಿಸ್ತಾನವು ಸೂಚಿಸಿರುವುದಿಲ್ಲವಾದರೂ ಲುಹಾಯಿ ಬೆಟ್ಟದ ದೀಮಾಗಿರಿಯ ಸಮೀಪದಲ್ಲಿರುವ ಜಲಮಾಪಕ ಯಂತ್ರವು ಸಾಮಾನ್ಯವಾಗಿ ನಿಲ್ಲಬೇಕಾದುದಕ್ಕಿಂತ ೨೦ ಅಡಿಗಳಷ್ಟು ಎತ್ತರದಲ್ಲಿ ನೀರಿದೆ ಎಂದು ಸೂಚಿಸುತ್ತದೆ. ಈ ಗಣನೆಯು ಕಳೆದ ಹಲವು ತಿಂಗಳುಗಳಿಂದಲೂ ಇದೆ. ಇದರಿಂದಾಗಿ ಅಣೆಕಟ್ಟಿನಲ್ಲಿ ನೀರು ಏರಿರುವುದೆಂದೂ, ಭಾರತದ ಭೂಭಾಗವು ಏರಿದ ನೀರಿನಡಿಯಲ್ಲಿ ಮುಳುಗಿರುವುದೆಂದೂ ಸ್ಪಷ್ಟವಾಗುತ್ತದೆ-ಎಂದವರು ಘೋಷಿಸಿದರು.

ಕುರುವಿನ ಮೇಲೆ ಬೊಕ್ಕೆ

ಪಾಕಿಸ್ತಾನದ ಈ ಕುಕೃತ್ಯವು ಖೇದಾಸ್ಪದವಿರುವುದು ಉಭಯ ರಾಷ್ಟ್ರಗಳ ನಡುವೆ ಸ್ನೇಹಮಯ ಸಂಬಂಧವು ಬೆಳೆಯಬೇಕೆಂದು ಭಾವಿಸುತ್ತಿರುವಾಗ ಕುರುವಿನ ಮೇಲೆ ಬೊಕ್ಕೆಯೆಂಬಂತೆ ಮೊದಲೇ ತನ್ನ ದುರ್ವ್ಯವಹಾರಗಳಿಂದ ಸಂಬಂಧವನ್ನು ಕೆಡಿಸಿಕೊಳ್ಳುತ್ತಿರುವ ಪಾಕಿಸ್ತಾನವು ಆ ದಿಸೆಯಲ್ಲೇ ಮತ್ತೊಂದು ಹೆಜ್ಜೆಯನ್ನಿಟ್ಟಂತಾಯಿತು. ತಾನು ಮಾಡುವ ಪ್ರತಿಯೊಂದೂ ಕೆಟ್ಟ ಕೆಲಸವನ್ನು ಸರಿಯೆಂದು ವಾದಿಸುತ್ತ ಬರುತ್ತಿರುವ ಪಾಕಿಸ್ತಾನದ ಇಂತಹ ಭಯಾನಕ ವರ್ತನೆಗೆ ತಕ್ಕ ಶಾಸ್ತಿ ಮಾಡುವುದು ಅನಿವಾರ್ಯವೇ ಆಗಿದೆ. ಭಾರತದ್ದಾಗಿರುವ ಗಡಿಯ ಪ್ರಶ್ನೆಯನ್ನು ಚೀನದೊಂದಿಗೆ ಸಮಾಲೋಚಿಸಲು ಮುಂದಾದ, ಆಕ್ರಮಣಕಾರನಾಗಿದ್ದು ಕಾಶ್ಮೀರವನ್ನು ಕಬಳಿಸಲು ಹವಣಿಸುವ ಪಾಕ್ ನಾಯಕರ ಮೋಸಕ್ಕೆ ಭಾರತ ಸರಕಾರವು ಎಂದಿಗೂ ಬೀಳಲಾರದು.

— —

31-12-1961ರಂದು
ಸಿಂಡಿಕೇಟ್ ಬ್ಯಾಂಕ್

ಅಧೀಕೃತ ಭಂಡವಾಳ	ರೂ.	1,00,00,000
ತೆತ್ತ ಮತ್ತು ಪಾಲು ಭಂಡವಾಳ	ರೂ.	50,00,000
ಪಾವತಿಯಾದ ಭಂಡವಾಳ	ರೂ.	48,06,872
ರಿಜರ್ವ್ ಫಂಡ್ ಮತ್ತಿತರ ರಿಜರ್ವ್ಸ್	ರೂ	53,50,471

ಠೇವಣಾತಿಗಳು ರೂ. **24** ಕೋಟಿಗೂ ಮಿಕ್ಕಿವೆ.

ಒಟ್ಟು ವ್ಯವಹಾರ ಸಂಪತ್ತು ರೂ. 30 ಕೋಟಿಗೂ ಮಿಕ್ಕಿದೆ.

ಶಾಖೆಗಳು: **159**



ಟಿ. ಎ. ಪೈ, ಬಿ. ಕಾಂ. (ಬೊಂ.) ಎ. ಐ. ಐ. ಬಿ.
ಮೆನೇಜಿಂಗ್ ಡೈರೆಕ್ಟರ್

ಡಾ| ಟಿ. ಮಾಧವ ಪೈ, ಯಂ ಡಿ, ಬಿ ಯಸ್,
ಚೆಯರ್‌ಮ್ಯಾನ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.
ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ ಉಡುಪಿ.
ಸ್ಥಾಪನೆ: 1925.

ಅಮೃತ ಬಿಂದು

ಮನುಷ್ಯನು ಸರ್ವ ಐಶ್ವರ್ಯ, ಜ್ಞಾನ, ಕುಶಲತೆಗಳನ್ನು ಪಡೆದಿರಬಹುದು; ಆದರೆ ಒಳ್ಳೆಯ ಹೆಂಡತಿ ಇಲ್ಲದಿದ್ದರೆ ಅವನಂಥಾ ದುರ್ದೈವಿ ಬೇರಿಲ್ಲ.

o o o

ಕಾರಣವಿಲ್ಲದೆ ಕೋಪಮಾಡುವದು, ಪ್ರಯೋಜನಕ್ಕೆಬಾರದ ಮಾತಾಡುವದು, ಅಪರಿಚಿತರಲ್ಲಿ ವಿಶ್ವಾಸವಿಡುವದು ಮೂರ್ಖರ ಲಕ್ಷಣ.

o o o

ಗಂಡಸು ಮಾಡುವ ನೂರು ಅಪರಾಧಗಳನ್ನು ಸಮಾಜ ಕ್ಷಮಿಸಿದರೂ ಹೆಂಗಸಿನ ಒಂದೇ ಅಪರಾಧವನ್ನು ಕ್ಷಮಿಸುವದಿಲ್ಲ.

o o o

ಹೆಂಗಸಿಲ್ಲದ ಮನೆ ತಂತಿ ಇಲ್ಲದ ವೀಣೆಯಂತೆ!

o o o

ನಾವು ಎಲ್ಲಿ ಹೋದರೂ ನಮ್ಮ ಸ್ಥಾನದಲ್ಲಿ ಕೂತುಕೊಂಡರೆ ನಮ್ಮನ್ನು ಯಾರೂ ಎಬ್ಬಿಸುವದಿಲ್ಲ.

o o o

ಅಗ್ನಿಯು ಹತ್ತಿರ ಬಿದ್ದವರನ್ನು ಮಾತ್ರ ಸುಡುತ್ತದೆ. ಸುಂದರಿ ಸ್ತ್ರೀ ದೂರವಿದ್ದವರನ್ನೂ ಸುಡಬಲ್ಲಳು.

o o o

ಜೀವನವನ್ನು ಚಂದ್ರನಿಗೆಹೋಲಿಸಬಹುದು. ಕೆಲಭಾಗ ಬೆಳಗಿದ್ದರೆ ಕೆಲಭಾಗ ಕಪ್ಪಾಗಿರುತ್ತದೆ.

o o o

ಸುಳ್ಳು, ಪೊಳ್ಳು, ಪೋಕರಿಗಳನ್ನು ಜಗತ್ತಿನಿಂದ ತೆಗೆದು ಬೇರಿಂಸಿದರೆ ಜಗತ್ತಿನಲ್ಲಿ ಹೆಚ್ಚೇನೂ ಉಳಿದಿರಲಾಗದು!

o o o

ತನಗಿಂಥಾ ಇನ್ನೊಬ್ಬನನ್ನು ಶ್ರೇಷ್ಠನನ್ನಾಗಿ ಮಾಡುವವನಿಗಿಂಥಾ ಒಳ್ಳೆಯವರು ಜಗದಲ್ಲಿಲ್ಲ.

o o o

ದರಿದ್ರನಿಗೆ ಸಮ್ಮಂಧಿಕರೂ ವೈರಿಗಳಾಗುತ್ತಾರೆ. ಶ್ರೀಮಂತರಿಗೆ ವೈರಿಗಳೂ ಸಂಬಂಧಿಕರಾಗುತ್ತಾರೆ.

— —

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ: ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ ಉಡುಪಿ

ಸಂಪುಟ ೪೧ ಸಂಚಿಕೆ ೩೪ | ಉಡುಪಿ 3—5—1962 ಗುರುವಾರ | Vol. 41 No. 34

ನಿಶ್ಶಸ್ತ್ರೀಕರಣ ಬಯಸಿದರೂ
ಅಸಫಲತೆಯತ್ತ ಜಿನೇವಾ ಸಮ್ಮೇಳನ

ಪೂರ್ವ ಪಶ್ಚಿಮ ಮತ್ತು ತಟಸ್ಥ ವರ್ಗಗಳಿಗೆ ಸೇರಿದ ೧೮ ರಾಷ್ಟ್ರಗಳು ಕಳೆದ ಕೆಲವಾರು ದಿನಗಳಿಂದ ನಿಶ್ಶಸ್ತ್ರೀಕರಣ ಪ್ರಶ್ನೆಯ ಬಗ್ಗೆ ಪರ್ಯಾಲೋಚನೆ ನಡೆಸತೊಡಗಿವೆ. ಮಾತುಕತೆಗಳು ನಡೆದಂತೆ ಈ ಪ್ರಶ್ನೆಯು ಮತ್ತೂ ಮತ್ತೂ ಜಟಿಲವಾಗುತ್ತ ಹೋಗುತ್ತಿರುವುದೇ ಅನುಭವಕ್ಕೆ ಬರುತ್ತಿದೆ. ಪರಿಹಾರದ ಮಾರ್ಗವನ್ನೂ ಅಗೋಚರವಿದೆ. ರಶ್ಯ ಮತ್ತು ಅಮೆರಿಕೆಗಳು ನಿಶ್ಶಸ್ತ್ರೀಕರಣದ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಅನುಕೂಲಾಭಿಪ್ರಾಯ ವ್ಯಕ್ತಪಡಿಸಿದಾಗ ಉಂಟಾಗಿದ್ದ ಆನಂದವೀಗ ಅದರ ನಿಷ್ಕ್ರಿಯತೆಯು ಮನವರಿಕೆಯಾಗುತ್ತ ಬಂದಂತೆ ದೂರವಾಗ ತೊಡಗಿದೆ. ಇದು ಹೀಗೆಯೇ ಮುಂದುವರಿಯಿತೆಂದರೆ, ಸಮ್ಮೇಳನದ ಉದ್ದೇಶ ಮತ್ತು ಸಾಧನೆಗಳ ನಡುವೆ ಅಜಗಜಾಂತರವು ಉಳಿದಂತೆಯೇ ಸರಿ. ಯಾವ ಮಹೋನ್ನತ ಆಶಯಿಟ್ಟು ಈ ಸಮ್ಮೇಳನವನ್ನು ಕೂಡಿಸಲಾಗಿದೆಯೋ ಅದು ಮಣ್ಣುಪಾಲಾದಂತೆಯೇ ಎಂಬುದು ಖಂಡಿತ. ಗಂಭೀರವಾದ ಪ್ರಶ್ನೆಗೆ ಗಂಭೀರವಾಗಿ ಪರ್ಯಾಲೋಚನೆ ನಡೆಸಿ ಗಂಭೀರ ಸ್ವರೂಪದ ಪರಿಹಾರವನ್ನರಸುವುದು ಸಾಧ್ಯವಾಗಬಹುದೆಂದು ನಂಬಿರುವವರು ನಿರಾಶರಾಗುವ ಸಂಭವವೇ ಅಧಿಕವೆಂಬುದು ಇದೀಗ ನಿಸ್ಸಂಶಯವೆನಿಸಿದೆ.

ಧ್ರುವಮಿಲನ ಸಾಧ್ಯವೆ?

ಇಟ್ಟುಕೊಂಡ ಆಶೆ ನೀರುಪಾಲಾಗಲು ಕಾರಣವೇನು? ಜಾಗತಿಕ ದ್ವೇಷವು ಶಮನವಾಗುವುದಕ್ಕೆ ಬದಲು ಮತ್ತಷ್ಟು ಹೆಚ್ಚುವಂತೆ ಪ್ರೇರಕವೆನಿಸಿದುದು ಯಾವುದು? ಪರಿಹಾರವರಸುವ ಸದಾಶಯದಿಂದ ನೆರೆದಿರುವ ಹದಿನೆಂಟು ರಾಷ್ಟ್ರಗಳ ಪ್ರತಿನಿಧಿಗಳು ಈಗ ಪರಿಹಾರ ಮಾರ್ಗವನ್ನೇ ಎಸ್ತಿತಿಲ್ಲವೆ? ಎಂದು ಮುಂತಾದ ಪ್ರಶ್ನೆಗಳು ಏಳುವುದು ಸ್ವಾಭಾವಿಕ; ಸಹಜ. ಉಳಿದೆಲ್ಲ ರಾಷ್ಟ್ರಗಳ ಮಾತೆತ್ತುವುದಕ್ಕೆ ಮೊದಲೇ ಚತುರ್ಮಹಾರಾಷ್ಟ್ರಗಳಲ್ಲಿ ಶಾಶ್ವತ ಸ್ಥಾನಗಿಟ್ಟಿಸಿಕೊಂಡು, ಜಗತ್ತಿನ ನಾಯಕ ಮಣಿಗಳಂತಿರುವ ಅಮೆರಿಕ—ರಶ್ಯಗಳಿಗೆ ಪರಿಹಾರ ಬೇಕಾಗಿದೆಯೇ ಎಂಬುದು ಮೊದಲ ಪ್ರಶ್ನೆ. ಈ ರಾಷ್ಟ್ರಗಳು ವಾಸ್ತವಿಕವಾಗಿ ನಿಶ್ಶಸ್ತ್ರೀಕರಣವನ್ನು ಬಯಸುವುದಾದರೆ, ಕೊನೆಯ ಪಕ್ಷ ಅವುಗಳಾದರೂ ಈ ಮಾತುಕತೆಗೆ ಸಹಾಯಕವೆನಿಸಿದ ಮಾತುಗಳನ್ನಾಡಬೇಕಾಗಿತ್ತು, ಅದರಂತೆ ವರ್ತಿಸಬೇಕಾಗಿತ್ತು.

ಸಾಧನೆಯಲ್ಲಿ ಮತಬೇಧ

ಇದುವರೆಗೆ ನಡೆದ ಘಟನೆಗಳನ್ನು ವೀಕ್ಷಿಸುವಾಗ, ಅಮೆರಿಕೆ ಮತ್ತು ರಶ್ಯಗಳ ಆಂತರ್ಯವು ಬೇರೆಯೇ ಇರುವುದು ವ್ಯಕ್ತವಾಗುತ್ತದೆ. ಸಮ್ಮೇಳನಾರಂಭಕ್ಕೆ ಮೊದಲೇ ಈ ಎರಡು ರಾಷ್ಟ್ರಗಳು ರೂಪಿಸಿದ ನಿಶ್ಶಸ್ತ್ರೀಕರಣ ಒಡಂಬಡಿಕೆಯ ರೂಪರೇಷೆಗಳಲ್ಲಿ ಹೇಳಬೇಕೆನ್ನಿಸುವಷ್ಟು ಅಂತರಗಳಿದ್ದುದನ್ನು ನಾವು ಕಡೆಗಣಿಸುವಂತಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಮೇಲ್ವಿಚಾರಣೆಯಲ್ಲಿ ಅಣ್ವಸ್ತ್ರ ಸ್ಫೋಟ ಪ್ರತಿಬಂಧನದಿಂದ ತೊಡಗಿದ ವಿಚಾರಗಳು ಸಂಪೂರ್ಣ ನಿಶ್ಶಸ್ತ್ರೀಕರಣದಲ್ಲಿ ಪರ್ಯವಸಾನ ಹೊಂದಿದ ನೀತಿಯದು. ಆದರೆ, ಈ ರೂಪರೇಷೆಯಲ್ಲಿಯೂ ಉಭಯ ರಾಷ್ಟ್ರಗಳಲ್ಲಿ ಒಮ್ಮತವಿರಲಿಲ್ಲ. ಗುರಿಯೊಂದಾದರೂ ಅದನ್ನು ಸಾಧಿಸುವ ಭಿನ್ನ ಮಾರ್ಗಗಳನ್ನೇ ಎರಡೂ ರಾಷ್ಟ್ರಗಳು ಗಟ್ಟಿಯಾಗಿ ಹಿಡಿದುಕೊಂಡವು; ಪರಿವರ್ತನೆಗೆ ಯಾರೊಬ್ಬರೂ ಒಪ್ಪಲಿಲ್ಲ; ಒಪ್ಪುವುದೂ ಇಲ್ಲ.

ನಾಯಕತನದ ಹೋರಾಟ

ಅಮೆರಿಕೆ ಮತ್ತು ರಶ್ಯಗಳಲ್ಲಿ ನಡೆಯುತ್ತಿರುವ ಆಂತರಿಕ ಹೊಯ್ದಾಟದ ಅರಿವು ಎಲ್ಲರಿಗೂ ಗೋಚರವಾಗುತ್ತಿದೆ. ಜಾಗತಿಕ ನಾಯಕತ್ವಕ್ಕಾಗಿಯೇ ಈ ಹೋರಾಟ ಒಳಗಿಂದೊಳಗೆ ನಡೆಯುತ್ತಿದೆ ಎಂದು ಯಾರೊಬ್ಬರೂ ಊಹಿಸಬಲ್ಲರು. ಇದುವರೆಗೆ ಅಮೆರಿಕೆಯು ತಾನು ಉಳಿಸಿಕೊಂಡ ಈ ಗತ್ತುಗಾರಿಕೆಯನ್ನು ನಿಶ್ಶಸ್ತ್ರೀಕರಣದ ಹೆಸರಿನಲ್ಲಿ ಬಿಟ್ಟುಬಿಡಲು ಸಿದ್ಧವಿಲ್ಲ. ರಶ್ಯದ ನೀತಿಯಂತೆ ನಿಶ್ಶಸ್ತ್ರೀಕರಣವಾಯಿತೆಂದಾದರೆ, ಅಮೆರಿಕೆಯ ಪ್ರಭಾವಕ್ಕೂ ಧಕ್ಕೆ ಬಾರದೆ ಉಳಿಯದು, ಆದರೆ, ರಶ್ಯವು ಸಂಪೂರ್ಣ ನಿಶ್ಶಸ್ತ್ರೀಕರಣದ ಆದರ್ಶವನ್ನು ಮುಂದೆಮಾಡಿ, ರಾಷ್ಟ್ರಗಳ ಬಲವನ್ನು ಸಂಪಾದಿಸಿ, ಅದು ಯಶಸ್ವಿಯಾಯಿತೆಂದರೆ, ತಾನೇ ಅಗ್ರಪಟ್ಟವೇರುವ ಹಂಬಲವಿರಿಸಿಕೊಂಡಿದೆ. ಹೋರಾಡುತ್ತಿರುವ ಈ ಎರಡು ಕೋಣಗಳ ಹೊಯ್ದಾಟದಿಂದಾಗಿ ಜಗತ್ತಿನ ಸಮಸ್ಯೆಗಳು ಮತ್ತೂ ಸಮಸ್ಯೆಗಳಾಗಿಯೇ ಉಳಿಯುವಂತಾಗಿದೆ.

ಅಮೆರಿಕೆಯ ಹೇಯ ವರ್ತನೆ

ಜಿನೇವಾದಲ್ಲಿ ನಿಶ್ಶಸ್ತ್ರೀಕರಣ ಮಾತುಕತೆಗಳು ನಡೆಯುತ್ತಲಿವೆ. ಅಣ್ವಸ್ತ್ರಸ್ಫೋಟ ನಿರೋಧವು ಈ ಮಾತುಕತೆಯ ಒಂದು ಪ್ರಧಾನಾಂಗ. ಅಣ್ವಸ್ತ್ರಪರಿಶೀಲನೆ ಇಲ್ಲವೇ ಸ್ಫೋಟಗಳನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂಬುದೇ ಈ ಒಡಂಬಡಿಕೆಯ ಪ್ರಥಮ ಶರ್ತ. ಆದರೆ, ಅಮೆರಿಕೆಯು ಅವುಗಳ ಪರಿಶೀಲನೆಯ ಕಾರ್ಯವನ್ನು ಇನ್ನೂ ಮುಂದುವರಿಸುತ್ತಲಿದೆ. ಇದಕ್ಕಿಂತಲೂ ದುಃಖಕರ ಘಟನೆ ಬೇರೆಯಿದೆಯೆ? ವಾತಾವರಣವನ್ನು ಪರಿಶೀಲಿಸುವ ಹೊಸ ಅಣೂಪಕರಣವನ್ನದು ಶಾಂತ ಸಾಗರದ ಬ್ರಿಟಿಷ್ ಕ್ರಿಸ್‌ಮಸ್ ದ್ವೀಪದ ಬಳಿ ಸ್ಫೋಟಗೊಳಿಸಿ, ಹೊಸ ಸ್ಫೋಟ ಮಾಲೆಗೆ ನಾಂದಿಯಿಕ್ಕಿತು. ಅಂತೆಯೇ ಧ್ರುವ ಪ್ರದೇಶದ ಪಂಶೀಲನೆಗಾಗಿ ಅದರ ನೌಕೆಗಳು ನೆಲದಡಿಯ ಹಿಮವನ್ನು ಕೊರೆದು ಸಂಚಾರಕ್ಕೆ ತೊಡಗಿವೆ.

ಪ್ರಪಂಚದಾದ್ಯಂತ ಪ್ರತಿಭಟನೆ

ಭಾರತದ ಪ್ರಧಾನಿ ನೆಹರುರವರು ಅಮೆರಿಕೆಯ ಆಶಯವನ್ನು ತಿಳಿದೊಡನೆಯೇ ನಿಶ್ಶಸ್ತ್ರೀಕರಣ ಸಮ್ಮೇಳನ ನಡೆಯುತ್ತಿರುವಾಗಲಾದರೂ ಅಣ್ವಸ್ತ್ರಪ್ರಯೋಗ ಮಾಡಬಾರದೆಂದು ಕಳಕಳಿಯಿಂತ ವಿನಂತಿಸಿಕೊಂಡಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘದ ತಾತ್ಕಾಲಿಕ ಪ್ರಧಾನ ಕಾರ್ಯದರ್ಶಿಯು ಥಾಂಟ ಮತ್ತು ಜಪಾನದ ಪ್ರತಿನಿಧಿಯು ಈ ಸ್ಫೋಟಗಳಿಗೆ ಪ್ರತಿಷೇಧವನ್ನು ಸೂಚಿಸಿದ್ದಾರೆ. ಆದರೆ, ಇವೆಲ್ಲ ಪ್ರತಿಭಟನೆಗಳು ಏನೇ ಇದ್ದರೂ ಅಧ್ಯಕ್ಷ ಕೆನ್ನೆಡಿಯವರು ಮಾರ್ಚ್ ಎರಡನೆ ದಿನಾಂಕದಂದು ನೀಡಿದ ಅಣ್ವಸ್ತ್ರಸ್ಫೋಟಕ್ಕೆಸಂಬಂಧಿಸಿದ ಹೇಳಿಕೆಯಂತೆ ಈ ಅಣ್ವಸ್ತ್ರ ಪರಿಶೀಲನಾ ಮಾಲೆಯನ್ನು ಪ್ರಾರಂಭಿಸಲಾಗಿದೆಯೆಂದು ಅಮೆರಿಕೆಯು ಹೇಳುತ್ತದೆ. ಅಸ್ತ್ರಗಳನ್ನು ಕೂಡಿಹಾಕುವುದರಲ್ಲಿ ಹೊಸ ಹೆಜ್ಜೆಯೊಂದನ್ನು ಇಟ್ಟಂತಾಯಿತು ಎಂದು ಅಮೆರಿಕೆಯು ಈ ಕೃತ್ಯದ ಮೇಲೆ ರಶ್ಯ ಟೀಕೆ ಬರೆದಿದೆ. ಜಪಾನಿನಲ್ಲಿ ಕೆಲವೊಂದು ವಿದ್ಯಾರ್ಥಿಗಳು ಪ್ರತಿಷೇಧ ರೂಪದ ಬರವಣಿಗೆ ತೆಗೆದರೆ, ಅಮೆರಿಕೆಯ ಮಹಿಳೆಯರು ಮತ್ತೊಂದ ವಿಧಾನದಲ್ಲಿ ತಮ್ಮ ಅಸಭಿರುಚಿಯನ್ನು ವ್ಯಕ್ತಪಡಿಸಿದ್ದಾರೆ.

ಹಾಲು ಕುಡಿಯಬೇಡಿರಿ.

'ಶಾಂತಿಗಾಗಿ ಮಹಿಳೆಯರು' ಎಂಬ ಹೆಣ್ಣುಮಕ್ಕಳ ಸಂಸ್ಥೆಯೊಂದು ಅಮೆರಿಕೆಯಲ್ಲಿದೆ. ಇದು ಹೇಳಿಕೆಯನ್ನು ಹೊರಡಿಸಿ, ಅಣ್ವಸ್ತ್ರ ಸ್ಫೋಟಗೊಂಡಂದಿನಿಂದ ಎಂಟು ದಿನಗಳ ವರೆಗೆ ಹಾಲನ್ನು ಕುಡಿಯಬೇಡಿರಿ ಎಂದು ಅಮೆರಿಕನ್ ಜನತೆಯನ್ನು ವಿನಂತಿಸಿದೆ. ಸ್ಫೋಟಗಳಿಂದ ಹೊರಬೀಳುವ ಸ್ಟ್ರಾಂಟಿಯಂ ೯೦ ಎಂಬುದು ನೇರವಾಗಿ ಹಾಲನ್ನು ಪ್ರವೇಶಿಸುವುದೆಂದೂ ಆದರಿಂದಾಗಿ, ಅದು ಕೆಟ್ಟುಹೋಗಿ ಕುಡಿಯುವುದಕ್ಕೆ ಅಹಿತಕರವಾಗುವುದೆಂದೂ ಅದು ಹೇಳುತ್ತದೆ. ಕ್ಷೀರ ಪ್ರತಿಭಟನೆಯು ರಾಜ್ಯದ ರೈತರಿಗೆ ಮನವರಿಕೆಯಾಗಿ ಅವರೆಲ್ಲರೂ ಒಂದು ಸೇರಿ, ಸರಕಾರದ ಮೇಲೆ ಅಣ್ವಸ್ತ್ರ ಪರಿಸ್ಫೋಟನೆಯನ್ನು ತಡೆ ಹಿಡಿಯುವಂತೆ ಒತ್ತಾಯ ತರಲು ಶಕ್ತರಾಗ ಬಹುದೆಂದು ಈ ಮಹಿಳೆಯರ ಆಶಯವಿದೆ. 'ಬಾಂಬನ್ನು ಬಹಿಷ್ಕರಿಸಿರಿ' ಎಂಬ ನೀತಿಯ ಸುಮಾರು ೫೦ ಜನರು ಕೋಪನ್ ಹೇಗನ್ನಲ್ಲಿಯೂ ಅಮೆರಿಕೆಯ ನೀತಿಯನ್ನು ಪ್ರತಿಭಟಿಸಿದರು.

ಲಂಡನ್ನಿನಲ್ಲಿ ವಿರೋಧ

ಲಂಡನ್ ಮಹಾ ನಗರದಲ್ಲಿಯಾದರೂ ಅಣ್ವಸ್ತ್ರ ವಿರೋಧಿ ಸಮಿತಿಯು ಅಣು ಪರಿಶೀಲನೆಗೆ ಗುರಿಯಾದ ಕ್ರಿಸ್‌ಮಸ್ ದ್ವೀಪಗಳ ಕಡೆಗೆ ಪರಿಶೀಲನಾ ನೌಕೆಗಳನ್ನು ಅಟ್ಟಬೇಕೆಂದು ಹೇಳಿತು. ಅದರ ಸದಸ್ಯರು ಲಂಡನ್ನಿನಲ್ಲಿರುವ ತಟಸ್ಥ ರಾಷ್ಟ್ರಗಳಾದ ಘಾನ, ಭಾರತ, ಈಜಿಪ್ಟ್, ಯುಗೊಸ್ಲಾವಿಯ, ಇಂಡೊನೇಶಿಯಾ, ಸ್ವೀಡನ್, ಮೆಕ್ಸಿಕೋ ಮತ್ತು ಬ್ರೆಜಿಲ್‌ಗಳ ರಾಯಭಾರಿ ಕಛೇರಿಗಳನ್ನು ಸಂದರ್ಶಿಸಿದರು.

(೧೦ನೇ ಪುಟ ನೋಡಿರಿ)

'ಖೀರಾ' ಉಕ್ಕಿನ ಫರ್ನಿಚರುಗಳು, ಮಂಚ-ಸೋಫಾಗಳು, ವೈವಿಧ್ಯಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮಗ್ರಿಗಳು ಇತ್ಯಾದಿ ಇತ್ಯಾದಿಗಳಿಗೆ ವಿಚಾರಿಸಿರಿ —

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಕಾಯದೆ ಒಪ್ಪದ ಸಂಪತ್ತು

೬

ಶ್ರೀ "ಗೋರಾ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಎಲೆಯಡಿಕೆ ಜಗಿಯುತ್ತ ರಾಮ ಭಟ್ಟರು ನಾಲ್ಕು ಕೂಗಳತೆಯಲ್ಲಿದ್ದ ಶೆಟ್ಟರ ಮನೆಯನ್ನು ಮುಟ್ಟಿದರು. ತಮ್ಮಲ್ಲಿಗೆ ಬಂದ ಭಟ್ಟರನ್ನು ಗೌರವಾದರದಿಂದ ಬರಮಾಡಿ ಕುರ್ಚಿಯಲ್ಲಿ ಕೂರಿಸಿ ಎಳನೀರು ತೆಗೆಯಲು ಹೇಳಿ ತಾನೂ ಕುಳಿತುಕೊಂಡರು. ಉಭಯ ಕುಶಲೋಪರಿಯಾದ ತರುವಾಯ ಭಟ್ಟರು ತಾನು ಕೇಳಿದ ವಿಚಾರವನ್ನು ಪಿಸು ಮಾತಿನಲ್ಲಿ ತಿಳಿಸಿದರು. ಆದರೆ, ಶೆಟ್ಟರು ಅದಕ್ಕೆ ಹೆಚ್ಚಿನ ಮಹತ್ವವಿತ್ತಂತೆ ಅನಿಸಲಿಲ್ಲ. ಭಟ್ಟರೆ, ನಮಗೀಗ ದೇವಾಲಯದ ಬಗ್ಗೆ ವಿಶೇಷ ಆಸಕ್ತಿಯಿಲ್ಲ. ನಮ್ಮ ಕುಟುಂಬದವರು ವರ್ಷಕ್ಕೆ ರೂ. ೨೦೦ ಇದಕ್ಕಾಗಿ ತೆಗೆದಿರಿಸಿದ್ದಾರೆ. ಅದು ದೈನಂದಿನ ಕಾರ್ಯಕ್ಕೇನೇ ಸಾಕಾಗುವುದಿಲ್ಲವೆನ್ನುವಾಗ, ಮುಂದಿನ ಕತೆಯೇನು? ಆದರೂ ನೋಡಿ ದೇವರ ತಾಮ್ರ ಇತ್ತು ಎನ್ನುತ್ತಾರೆ; ನಾನೂ ನೋಡಿಲ್ಲ; ಕೇಳಿದ್ದು ಮಾತ್ರ. ಅಷ್ಟರಿಂದಲೇ ಆಗುವುದಾದರೆ, ನನ್ನಿಂದ ಅಭ್ಯಂತರವಿಲ್ಲ. ನೀವೇ ಈ ಕಾರ್ಯಕ್ಕೆ ಇಳಿದು ಮುನ್ನಡೆಸಿಕೊಂಡು ಹೋಗಿ ನನಗಂತೂ ಪ್ರಿಯವಾಯಿತು" ಎಂದು ಮುಕ್ತೇಸರಿಕೆಯನ್ನೇ ಬಾಯ್ಮಾತಿನಲ್ಲಿ ಇವರ ಕುತ್ತಿಗೆಗೆ ಕಟ್ಟಿಬಿಟ್ಟರು.

ಪೇಚಿನಲ್ಲಿ ಬಿದ್ದಂತಾದ ಭಟ್ಟರು ಆ ಮಾತನ್ನು ಅಲ್ಲಿಯೇ ಬಿಟ್ಟು ಇಂದು ಸಂಜೆ ಒಳಗಿನ ತಾಮ್ರವನ್ನು ಹೊರ ಹಾಕುವ ಆಗದೆ? ಊರ ನಾಲ್ವರು ಹೆಳಿಯರನ್ನೂ ಕರೆತರುವ ಸತ್ಯ ಸಂಗತಿ ತುಸುವಾದರೂ ಹೊರಪಟ್ಟೀತು" ಎಂದು ಪೀಠಿಕೆ ಹಾಕಿದರು. ಆದೀತು. ಮೂರು ಘಂಟೆಯ ಹೊತ್ತಿಗೆ ಬರುತ್ತೇನೆ. ಬೇರೆ ಮನೆಗೆ ಕಳಿಸಲು ನಮ್ಮ ಸುಬ್ಬನನ್ನು ಕರೆದುಕೊಂಡು ಹೋಗಿ ಆಗದೆ," ಎಂದು ಸವಿಮಾತಾಡಿ ಆಳನ್ನು ಕರೆದು ಆತನಿಗೆ ರಾಮ ಭಟ್ಟರೆಂದಂತೆ ನಡೆಯಲು ಆಜ್ಞಾಪಿಸಿದರು.

'ನಾನು ಬರುತ್ತೇನೆ ಹಾಗಾದರೆ....' ಎಂದು ಭಟ್ಟರು ಕೈ ಮುಗಿದು ಎದ್ದು ನಿಂತರು. ಸೆಟ್ಟರೂ ಪ್ರತಿ ನಮಸ್ಕಾರಗೈದು ಮಂದಹಾಸ ಬೀರುತ್ತ ಹೊರಬಾಗಿಲ ತನಕ ಬಂದು ಬೀಳ್ಕೊಟ್ಟರು.

ಭಟ್ಟರು ಶೆಟ್ಟರ ಮಾತಿನಲ್ಲಿ ಊರ ಪ್ರಮುಖರಾದ ಸೀನ ಸೆಟ್ಟಿ, ಅನಂತಾಚಾರಿ, ಜನಾರ್ಧನಯ್ಯ ಮೊದಲಾದವರಿಗೆ ದೇವಾಲಯಕ್ಕೆ ಬರಲು ಹೇಳಿ ಕಳಿಸಿದರು ಎಂದೋ ಆಗಬೇಕಾಗಿದ್ದ ಜೀರ್ಣೋದ್ಧಾರ ಕಾರ್ಯ ಇಂದಾದರೂ ಆಗುವುದಲ್ಲಾ ಎಂದು ಹಿಗ್ಗಿದವರೆಂದರೆ ಯಮನೂರಿಗೆ ಹತ್ತಿರದವನಾದ ಅನಂತಾಚಾರಿ ಮಾತ್ರ. ಆ ಗರ್ಭಗುಡಿಯೊಳಗಿನ ಕಲ್ಲುಸುತ್ತಿನಲ್ಲಿ ತಾಮ್ರ ಹಾಕಿದುದನ್ನು ಕಂಡವನು ಆವನೊಬ್ಬನೇ ಅಂತೆ! ಆಗ ಆತನಿಗೆ ಆರೋ, ಏಳೋ ವರ್ಷ ಪ್ರಾಯವಾಗಿದ್ದಿರಬಹುದಂತೆ! ಆ ಸಣ್ಣ ಪ್ರಾಯದಲ್ಲಿ ಏನು ಅರಿತಿದ್ದನೆಂಬುದು ಆತನಿಗೇನೇ ಅರಿಯದು. ಆದರೂ ಹಳೆಯ ಹುಲಿಯೆಂಬ ಅಭಿಮಾನ ಆತನಿಗೆ ಮಾತ್ರವಲ್ಲ ರಾಮ ಭಟ್ಟರಿಗೂ ಇತ್ತು.

ಅಪರಾಹ್ನದ ಸಮಯ ಭಗವಾನ್ ಭಾಸ್ಕರ ಪಡುದಿಗಂಗನೆಯ ಮನೆಯತ್ತ ತೀವ್ರವಾಗಿ ಓಡುತಿದ್ದ. ಊರ ಪ್ರಮುಖರೂ ದೇವಾಲಯದ ಅಂಗಳದಲ್ಲಿ ಒಟ್ಟು ಸೇರಿದರು. ಆದರೆ, ವ್ಯಾಸ ಭಟ್ಟರ ಸವಾರಿಯಿನ್ನೂ ಚಿತ್ತಯಿಸಲಿಲ್ಲ. ನಿಧಾನವಾಗಿ ತಾಂಬೂಲ ಜಗಿಯುತ್ತ ತಿಮ್ಮಣ್ಣ ಶೆಟ್ಟರು ಕೇಳಿದರು: 'ಭಟ್ಟರೆ, ಊರ ಹತ್ತು ಸಮಸ್ತರು ಬಂದಂತಾಯ್ತು. ಇನ್ನು ತಡೆಯುವ ಆಗತ್ಯವಿಲ್ಲ; ಯಾರೂ ಬರುವಂತೆ ಕಾಣಿಸುವುದಿಲ್ಲ. ಆದುದರಿಂದ ನಮ್ಮ ಕಾರ್ಯಕ್ಕೆ ಕೈಹಾಕಬಹುದಲ್ಲ?" ಇದಕ್ಕೆ ಎಲ್ಲರೂ ಒಪ್ಪಿದಂತೆ ಕಂಡಿತು. ಭಟ್ಟರು ಒಂದು ಬಾರಿ ಸುತ್ತ ನೋಡಿದರು ವ್ಯಾಸ ಭಟ್ಟರ ಸುಳಿವು ಎಲ್ಲೂ ಹತ್ತಲಿಲ್ಲ. ಅನಂತಾಚಾರಿ ಇದನ್ನು ಗಮನಿಸಿಯೋ ಎಂಬಂತೆ ಕೇಳಿಯೇ ಬಿಟ್ಟ— "ಭಟ್ಟರೇ, ನಮ್ಮ ವ್ಯಾಸ ಭಟ್ಟರು ಕಾಣುವುದಿಲ್ಲವಲ್ಲ! ನನ್ನ ದೃಷ್ಟಿಗೆ ಮಾತ್ರವೇ ಅಥವಾ ನಿಜವಾಗಿಯೂ ಬಂದಿಲ್ಲವೆ?"

ರಾಮ ಭಟ್ಟರು 'ನಾನೂ ಅವನನ್ನೇ ಎದುರು ನೋಡುತ್ತಿದ್ದೆ. ಇಲ್ಲ ಆತನೇನೋ ನುಣುಚಿಕೊಳ್ಳುವಂತೆ ತೋರುತ್ತದೆ. ಇಲ್ಲವಾದರೆ " ಎಂದು ತಲೆ ತುರಿಸಿಕೊಳ್ಳತೊಡಗಿದರು. ತಿಮ್ಮಣ್ಣ ಶೆಟ್ಟರ ಅಪೇಕ್ಷೆಯಂತೆ ಆಳನ್ನಟ್ಟಿದಾಗ, ಅವರು ಪೇಟೆಗೆ ಹೋಗಿದ್ದಾರೆಂದು ತಿಳಿಯಿತು. ರಾಮ ಭಟ್ಟರಿಗೂ ಮುಕ್ತೇಸರ ಸೆಟ್ಟರಿಗೂ ಇದ್ದ ಸಂದೇಹ ಬಲವಾಗತೊಡಗಿತು ಇನ್ನು ತಡೆಯುವುದು ಸಾಧ್ಯವೆ? ಯಾರು ಕಲ್ಲುಸುತ್ತಿಗೆ ಹೋಗುವುದೆಂದು ಪಿಸು ಮಾತು ತೊಡಗಿತು. ಪಾತಾಳಿ ಪರಮೇಶ್ವರನೇ ಸರಿ ಎಂಬ ತೀರ್ಮಾನಕ್ಕೆ ಬಂದು ಅವನನ್ನು ಮುಂದಿಟ್ಟು, ತಾಮ್ರ ತರಲು ಹೋದವರು ಅಲ್ಲಿ ಕಂಡುದೇನು? ಮಣ್ಣಿನ ದೊಡ್ಡ ರಾಶಿ! ಇಲ್ಲವೆಂಬುದಕ್ಕೆ ತಾಮ್ರದ ಚೂರು ವಾರುಗಳನ್ನು ಕೂಡಿಸಿ ಹೊರಗೆ ತಂದರೆ, ನಾಲ್ಕೈದು ಮಣಕ್ಕಿಂತ ಹೆಚ್ಚಿನದಿರಲಿಲ್ಲ! ಅನಂತಾಚಾರಿಗೆ ಇದನ್ನು ಕಂಡು ಹೃದಯಸ್ತಂಭನವಾಗದಿದ್ದುದು ಊರವರ ಪುಣ್ಯ. "ಅಯ್ಯೊ, ನಾನು ಹೇಳುತ್ತೇನೆ. ಕಡಿಮೆ ಪಕ್ಷ ೫೦—೬೦ ಮಣದಷ್ಟಾದರೂ ಇತ್ತು. ಕಲ್ಲ ಸುತ್ತಿನಲ್ಲಿ ತುಂಬ ಇದ್ದುದನ್ನು ಕಂಡಿದ್ದೇನೆ. ಅಲ್ಲಿ ಈಗ ಹೊಸ ಮಣ್ಣು ಇರಬೇಕಾದರೆ, ಏನೋ ಆಗಿರಲೇ ಬೇಕು. ಯಾರೋ ದೇವಸ್ವವನ್ನು ಅಪಹರಿಸಿ, ದೇವರ ಕಣ್ಣಿಗೆ ಮಣ್ಣೆರೆಚಲು ಹವಣಿಸಿದಂತೆ ತೋರುತ್ತದೆ. ಅಂತಹ ದುಷ್ಟವಂಚಕನಿಗೆ ತಕ್ಕ ಶಾಸ್ತಿಯನ್ನು ಮಾಡಲೇಬೇಕು." ಎಂದು ಬಿಗಿ ಆಡಿದ.

'ತಾಮ್ರವು ಕಾಣೆಯಾದುದಕ್ಕೂ ವ್ಯಾಸಭಟ್ಟರು ಬಾರದಿದ್ದುದಕ್ಕೂ ಏನಾದರೂ ಸಂಬಂಧವಿರಬಹುದೆ? ಅವರನ್ನು ಸಂಪೂರ್ಣ ನಂಬುವುದು ಕಷ್ಟ." ಸೀನ ಸೆಟ್ಟರು ಬಾಯಿ ಹಾಕಿದರು. ಹೀಗೆಯೇ ಒಬ್ಬೊಬ್ಬರು ಒಂದೊಂದು ರೀತಿಯಾಗಿ ವ್ಯಾಸಭಟ್ಟರನ್ನು ಟೊಪ್ಪಿ ಮಾಡಿದಾಗ, ತಿಮ್ಮಣ್ಣ ಸೆಟ್ಟರು, ರಾಮ ಭಟ್ಟರ ಸನ್ನೆಯರಿತು ಮಾತಿಗೆ ತೊಡಗಿದರು ವ್ಯಾಸ ಭಟ್ಟರ ಬಗ್ಗೆ ಇದು ವರೆಗೆ ತಿಳಿದು ಬಂದ ಸಂಗತಿಗಳನ್ನು, ಅದಕ್ಕಾಗಿಯೇ ಇಂದಿನ ಸಭೆ ಸೇರಿದುದನ್ನು ವಿಶದವಾಗಿ ತಿಳಿಸಿ, ಮುಂದೇನು ಮಾಡಬೇಕೆಂದು ಪ್ರಶ್ನಿಸಿದರು. ವ್ಯಾಸ ಭಟ್ಟರನ್ನು ಮುಂದಿಟ್ಟು ಅವರೊಡನೆ ಕೇಳಿ ತಿಳಿದುಕೊಳ್ಳಬೇಕೆಂದು ಒಮ್ಮತದಿಂದ ನಿರ್ಧರಿಸಲಾಯ್ತು.

ಮರುದಿನ ಮುಂಜಾನೆ ವ್ಯಾಸ ಭಟ್ಟರ ಮನೆ ಬಾಗಿಲಲ್ಲಿ ಸಮಸ್ತರೆಲ್ಲರೂ ಸೇರಿದರು. ನಾನಾಪರಿಯಾಗಿ ಅವರ ಬಾಯಿ ಬಿಡಿಸಲು ಪ್ರಯತ್ನಿಸಿದರು. ಮೆತ್ತಗೆಯ ಮಾತುಗಳಿಗೆ ಬಗ್ಗದಿರಲು ಗದರಿಕೆಯ ಬೆದರಿಕೆಯ ಮಾತುಗಳು ಹೊರಟುವು. ಅಂತೂ ತಾನು ಒಂದು ಆರು ಮಣ ಮಾರಿದುದು ದಿಟವೆಂದೂ ಅದರ ಮೌಲ್ಯವನ್ನು ಕೊಡುವೆನೆಂದೂ ಆದರೆ, ತನ್ನೊಡನೆ ಸದ್ಯ ಹಣವಿಲ್ಲದುದರಿಂದ ನೋಟು ಬರೆದು ಕೊಡುವುದೆಂದೂ ತಿಳಿಸಿದರು. ಸಮಸ್ತರಿಗೆ ಏನೂ ಸಮಾಧಾನವಾದಂತಾಗಲಿಲ್ಲ. ಕಾಣೆಯಾದುದು ೫೦ ಮಣ—ಮಾರಿದುದು ೩ ಮಣ ಮಾತ್ರ! ಉಳಿದುದು ಎಲ್ಲಿ ಹೋಯಿತು? ಎಲ್ಲರೂ ಒಂದು ಸೇರಿ ಪೋಲೀಸು ಕಂಪ್ಲೈಂಟ್ ಕೊಡುವುದಾಗಿ ಬೆದರಿಕೆ ಹಾಕಿದರು. ಆದರೆ, ಕೋರ್ಟ ಕಛೇರಿಗಳ ಮೆಟ್ಟಲು ತುಳಿದು, ಫ್ರೂಟ್ ಲಾಯರ್ ಆಗಿ ಪಳಗಿದ ವ್ಯಾಸ ಭಟ್ಟರು ಇದಕ್ಕೆ ಭಯ ಪಡಲಿಲ್ಲ ನೀವು ಏನು ಬೇಕಾದರೂ ಮಾಡಿ, 'ಇದ್ದುದನ್ನು ಇದ್ದಂತೆ ಹೇಳಿದ್ದೇನೆ. ನಾನು ಮಾಡಿದುದು ತಪ್ಪು ಎಂಬುದನ್ನು ಒಪ್ಪಿದ್ದೇನೆ. ಏನೋ ತುಸು ಗರ್ಜಿ ಬಿತ್ತು. ಉಪಯೋಗಕ್ಕೆ ಬಾರದಿದ್ದುದೊತ್ತು, ಬೇಕಾದಾಗ ಕೊಡೋಣವೆಂದು ತೆಗೆದೆ. ನಾನಾಗಿಯೇ ಹೇಳಬೇಕೆಂತ ಇದ್ದೆ; ಆದರೆ, ಅದಕ್ಕೆ ಮೊದಲೇ ನೀವು ಕೇಳಿದಿರಿ. ಇನ್ನು ನೀವು ಇಷ್ಟ ಕಂಡಂತೆ ಮಾಡಿ' ಎಂದು ಕಡಾ ಖಂಡಿತವಾಗಿ ಹೇಳಿದರು.

ಹೋದವರೆಲ್ಲರೂ ಏನು ಮಾಡುವುದೆಂದು ತಿಳಿಯದೆ ತಮ್ಮ ತಮ್ಮಲ್ಲೆ ಮಾತಾಡಿಕೊಳ್ಳುತ್ತ ಮರಳಿದರು. ಮುಂದು ವಿಚಾರಿಸಿದಾಗ ದೇವಾಲಯದಲ್ಲಿ ತಾಮ್ರವಿದ್ದ ಬಗ್ಗೆ ದಾಖಲೆಯೇ ಇಲ್ಲವಾದುದರಿಂದ, ಇದ್ದುದನ್ನು ನೋಡಿದವರು ಕೆಲ ಮಂದಿಯಾದರೂ ಇಲ್ಲವಾದುದರಿಂದ ಮೊಕದ್ದಮೆ ಹೂಡಿದರೆ, ಸಾರ್ಥಕವಾಗದು ಎಂದು ತಿಳಿಯಿತು. ಭಾಷೆ ಮಾತು ದೃಷ್ಟಿಗಳಿಗೆ ಪ್ರಾಧಾನ್ಯವಿದ್ದ ಕಾಲದ ತಾಮ್ರಕ್ಕೆ ಲಿಖಿತ ದಾಖಲೆಯು ಈ ಯುಗದಲ್ಲಿ ಅಸ್ತಿತ್ವವಿಲ್ಲವೆನ್ನುವುದೂ ಸಿದ್ಧವಾಯ

(೯ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾದಾರರನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ಆದರ್ಶದ ಸಾಧನೆಗೆ

ಪೂರ್ವ ಪ್ರಾಥಮಿಕ ಶಿಕ್ಷಣ ಶಾಲೆಗಳು

ಕರ್ನಾಟಕದ ಶಿಕ್ಷಣ ತಜ್ಞರಲ್ಲಿ ಒಬ್ಬರಾದ ಶ್ರೀ ಜೆ. ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ನಿಯುಕ್ತವಾದ ಸಮಿತಿಯೊಂದು ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ಸಂಬಂಧದಲ್ಲಿ ತನ್ನ ವರದಿಯನ್ನು ಒಪ್ಪಿಸಿದೆ. ಮೂರು ಮತ್ತು ಆರು ವರ್ಷಗಳ ನಡುವಣ ಹರೆಯದ ಮಕ್ಕಳಿಗಾಗಿ ಇಡಿಯ ರಾಜ್ಯದಲ್ಲಿ ಶಾಲೆಗಳನ್ನು ತೆರೆಯುವಂತೆ ಸಮಿತಿಯಿತ್ತ ಸಲಹೆಯು ಅತಿ ಪ್ರಾಮುಖ್ಯದ್ದಾಗಿದೆ. ಇದನ್ನು ಕಾರ್ಯಗತಗೊಳಿಸಬೇಕಾದರೆ, ಈ ಯೋಜನೆಯನ್ನು ಅತಿ ಶೀಘ್ರದಲ್ಲಿ ವಿಸ್ತರಿಸಬೇಕಾಗಿದೆ ಈಗ, ನಮ್ಮ ರಾಜ್ಯದಲ್ಲಿ ೨೧೨ ನರ್ಸರಿ ಶಾಲೆಗಳಿವೆ. ಇವುಗಳಲ್ಲಿ ಒಟ್ಟು ೧೩,೦೦೦ ಮಕ್ಕಳು ಬಂದು ಸೇರುತ್ತಾರೆ. ಈ ಶಾಲೆಗಳು ನಗರಗಳಲ್ಲಿ ಮಾತ್ರವಿರುವುದರಿಂದ ಅಲ್ಲಿನ ಕೆಲವೊಂದು ಮಕ್ಕಳಿಗೆ ಮಾತ್ರ ಉಪಯುಕ್ತವಾಗುವುವು. ಕೇಂದ್ರ ಸಾಮಾಜಿಕ ಅಭಿವೃದ್ಧಿ ಮಂಡಳದ ಮೂಲಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ೧೯೬ ಬಾಲವಾಡಿಗಳು ಪ್ರಾರಂಭವಾಗಿದ್ದು ಇವುಗಳಲ್ಲಿ ಸುಮಾರು ೫೦೦೦ ಎಳೆಯರು ಪ್ರಯೋಜನ ಪಡೆಯುತ್ತಾರೆ. ಸದ್ಯಕ್ಕೆ ರಾಜ್ಯದಲ್ಲಿ ೩–೬ ವರ್ಷ ಪ್ರಾಯದ ಮಕ್ಕಳ ಸಂಖ್ಯೆ ೨೩ ಲಕ್ಷಗಳಷ್ಟಿದೆಯೆನ್ನುವಾಗ, ಇವರಲ್ಲಿ ಈಗ ನರ್ಸರಿ ಶಾಲೆಗಳು ಮತ್ತು ಬಾಲವಾಡಿಗಳಿಂದ ಪ್ರಯೋಜನ ಪಡೆಯುವವರು ಕೇವಲ ೧೮ ಸಾವಿರ ಮಕ್ಕಳೆಂಬುದು ಅಪಮಾನಾಸ್ಪದವಿದೆ.

ಇದಕ್ಕಾಗಿಯೇ ಮುಂದಿನ ಐದು ವರ್ಷಗಳಲ್ಲಿ ಹೊಸತಾಗಿ ತೆರೆಯಬೇಕಾದ ನರ್ಸರಿ ಶಾಲೆ ಇಲ್ಲವೇ ಬಾಲವಾಡಿಗಳ ಸಂಖ್ಯೆಯು ಭೀಮಾಕಾರ ತಳೆಯಬೇಕು. ಶಾಲಾಪ್ರಾಯಕ್ಕೆ ಮಕ್ಕಳು ಪಾದಾರ್ಪಣ ಮಾಡುವುದಕ್ಕೆ ಮೊದಲೇ ಆವಶ್ಯಕ ಮಾರ್ಗದರ್ಶನವಿತ್ತು ಅವರು ಸಾಮಾಜಿಕ ನಡವಳಿಕೆಗಳನ್ನು ಯಶಸ್ವಿಯಾಗಿ ಕಲಿತುಕೊಳ್ಳಬಲ್ಲರು ಎಂಬುದು ಸರ್ವಮಾನ್ಯವಾಗಿದೆ. ಈ ಕಾರಣದಿಂದಾಗಿಯೇ ಭಾರತದ ಯೋಜನಾ ಆಯೋಗವು ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಕಡೆಗಣಿಸಬಾರದು ಎಂಬುದಕ್ಕೆ ಬಲವೀಯುತ್ತಿದೆ. ರಾಜ್ಯ ಸರಕಾರವಾದರೂ ಈ ಕಡೆಗೆ ಆಸಕ್ತಿ ಪ್ರದರ್ಶಿಸುತ್ತ ಬರುತ್ತಿದೆ. ರಾಜ್ಯದ ಬೇರೆ ಬೇರೆ ಹಳ್ಳಿಗಳಲ್ಲಿ ಈಗಾಗಲೇ ತೆರೆಯಲಾಗಿರುವ ಬಾಲವಾಡಿಗಳಲ್ಲಿ ಉನ್ನತ ತರಬೇತಿ ಪಡೆದ ಅಧ್ಯಾಪಕರು ಇಲ್ಲವಾದರೂ ಅವುಗಳು ಸರ್ವ ಜನಾದರಣೀಯವಾಗಿವೆಯೆಂದು ತಿಳಿದು ಬರುತ್ತದೆ.

ಪ್ರಚಲಿತ ಪರಿಸ್ಥಿತಿಯಲ್ಲಿ ಎಲ್ಲ ಮಕ್ಕಳಿಗೂ ಇಂತಹ ಶಿಕ್ಷಣವನ್ನು ಪಡೆಯುವ ಅವಕಾಶ ಕಲ್ಪಿಸಿ ಕೊಡುವುದು ಸಾಧ್ಯವಿಲ್ಲ. ಇದಕ್ಕೆ ಆರ್ಥಿಕ ಅಭಾವ ಮಾತ್ರವಲ್ಲ ಶಿಕ್ಷಕರ ಕೊರತೆಯೂ ಕಾರಣವಾಗಿ ಅಡ್ಡ ಬರುತ್ತವೆ ಆದರೂ ಈ ದಿಸೆಯಲ್ಲಿ ದಿಟ್ಟ ಹೆಜ್ಜೆಯನ್ನಿಡುವ ಎದೆಗಾರಿಕೆ ಬೇಕು ಎಂಬುದನ್ನು ಮಲ್ಲಾರಾಧ್ಯ ಸಮಿತಿಯು ಎತ್ತಿ ತೋರಿಸುತ್ತದೆ. ಮುಂದಿನ ಐದು ವರ್ಷಗಳಲ್ಲಿ ೧೬,೬೮೦ ಇಂತಹ ಶಾಲೆಗಳನ್ನು ತೆಗೆದು ತನ್ಮೂಲಕ ೮೩,೦೦೦ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣದ ಅವಕಾಶ ಕಲ್ಪಿಸಬೇಕೆಂದು ಈ ಸಮಿತಿಯ ಅಭಿಪ್ರಾಯವಾಗಿದೆ. ಹೀಗೆಯೇ ಪ್ರತಿ ಬಾರಿಯೂ ಹೊಸತಾಗಿ ಶಾಲೆಗಳನ್ನು ತೆರೆಯುತ್ತ ಹೋದರೆ, ತುಸು ತಡವಾಗಿಯೆನಿಸಿದರೂ ಪೂರ್ವ ಪ್ರಾಥಮಿಕ ಶಿಕ್ಷಣವು ರಾಜ್ಯದ ಪ್ರತಿ ಮಗುವಿಗೂ ಸಿಕ್ಕೇ ಸಿಕ್ಕುತ್ತದೆಯೆಂದು ಹೇಳಬಹುದು.

ಸೂಚಿಸಲಾದ ೧೬೬೮೦ ಶಾಲೆಗಳನ್ನು ತೆರೆಯಬೇಕಾದರೆ ರೂ. ೨೨½ ಲಕ್ಷಗಳ ಮೂಲವೆಚ್ಚ ಬೀಳುವುದೆಂದು ತಿಳಿಯುತ್ತದೆ. ಈ ಶಾಲೆಗಳಲ್ಲಿ ನೂರಕ್ಕೆ ೭೫ರಷ್ಟನ್ನು ಗ್ರಾಮೀಣ ಪ್ರದೇಶಗಳಲ್ಲಿಯೇ ತೆರೆಯಬೇಕೆಂದು ಸಮಿತಿಯ ಅಭಿಪ್ರಾಯವಿರುವುದು. ಗ್ರಾಮಗಳ ಪಂಚಾಯತ ಬೋರ್ಡುಗಳು ಶಾಲೆಯ ಕಟ್ಟಡ ಮತ್ತಿತರ ಸಾಧನೋಪಕರಣಗಳು ಹಾಗೂ ಮಕ್ಕಳಿಗೆ ಉಚಿತ ಭೋಜನದ ಏರ್ಪಾಡನ್ನು ಮಾಡಬೇಕು ಎಂದು ಮಲ್ಲಾರಾಧ್ಯ ವರದಿಯು ಹೇಳುತ್ತದೆ. ಗ್ರಾಮಪಂಚಾಯತುಗಳ ಅಧಿಕಾರ ವ್ಯಾಪ್ತಿಯು ಹೆಚ್ಚುತ್ತ ಬಂದಿರುವುದರಿಂದ ಮತ್ತು ಅವುಗಳ ಆರ್ಥಿಕ ಅಭ್ಯುದಯದಲ್ಲಿಯೂ ಹೆಚ್ಚುವರಿಯಾಗುತ್ತಿರುವುದರಿಂದ ಈ ಆವಶ್ಯಕತೆಗಳ ಪೂರೈಕೆ ಮಾಡುವ ಹೊಣೆಗಾರಿಕೆ ಹೊರಲು ಅವು ಮುಂದೆ ಬರಬೇಕೆಂದು ಬಯಸಿದರೆ, ಅದು ಆಶ್ಚರ್ಯವಾಗಲಾರದು

ರಾಜ್ಯ ಸರಕಾರವು ನರ್ಸರಿ ಶಾಲೆಗಳ ಅಧ್ಯಾಪಕರನ್ನೂ ಅವರ ಸಹಾಯಕರನ್ನೂ ತರಬೇತಿಗೊಳಿಸಬೇಕು; ಮತ್ತು ಅವರ ವೇತನವನ್ನು ಕೊಡುತ್ತ ಬರಬೇಕು. ೪೦ ಮಕ್ಕಳುಳ್ಳ ಒಂದು ಶಾಲೆಯಲ್ಲಿ ಒಬ್ಬರು ಅಧ್ಯಾಪಕರು ಮತ್ತೊಬ್ಬರು ಅವರ ಸಹಾಯಕರಿರಬೇಕೆಂದು ವರದಿಯು ಹೇಳುತ್ತದೆ. ಶಾಲೆಯು ಪ್ರತಿದಿನ ಎರಡು ಹೊತ್ತುಗಳಲ್ಲಿ ಪ್ರತಿಯೊಂದು ಹೊತ್ತು ಮೂರು ತಾಸು ಕಾಲಾವಧಿಯಿರುವಂತೆ, ನಡೆಯಬೇಕು. ಮೆಟ್ರಿಕ್ಯುಲೇಟ್‌ಗಳಿಗೆ ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಂದ ಕೂಡಿದ ಒಂದು ವರ್ಷದ ತರಬೇತಿ ಕೊಟ್ಟು ಅವರನ್ನು ಇಲ್ಲಿಗೆ ಅಧ್ಯಾಪಕರೆಂದು ನಿಯುಕ್ತಗೊಳಿಸಬೇಕು ಈ ವಿಧದ ವಿಶೇಷ ತರಬೇತಿಯಿಂದ ಅಧ್ಯಾಪಕರು ಗ್ರಾಮಗಳಲ್ಲಿ ಮಾತೆಯರ ಸಂಘಗಳನ್ನು ಸಂಘಟಿಸಲು ಸಮರ್ಥರಾಗುವರು. ಸಾಮಾಜಿಕಾಭಿವೃದ್ಧಿ ಮಂಡಳವು ಈಗಾಗಲೇ ಈ ವಿಧದ ಶಾಲೆಗಳನ್ನು ತೆರೆದು, ನಡೆಸುತ್ತ ಬರುವಲ್ಲಿ ಸಾಕಷ್ಟು ಅನುಭವ ಗಳಿಸಿರುವುದರಿಂದ ಮುಂದಕ್ಕೂ ಶಾಲೆಗಳನ್ನು ಈ ಮಂಡಳವೇ ತೆರೆಯಬೇಕೆಂದೂ ರಾಜ್ಯ ಸರಕಾರದ ವಿದ್ಯಾಭ್ಯಾಸ ಇಲಾಖೆಯು ಇವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತ ಆವಶ್ಯಕ ಅಧ್ಯಾಪಕರನ್ನು ನೇಮಿಸಬೇಕೆಂದೂ ವರದಿಯು ಸಲಹೆ ಮಾಡಿದೆ,

ಗ್ರಾಮದ ಪ್ರಾಥಮಿಕ ಶಾಲೆಗಳಿಗೆ ಈ ಪೂರ್ವ ಪ್ರಾಥಮಿಕ ಶಾಲೆಗಳನ್ನು ಸೇರ್ಪಡೆಗೊಳಿಸಬೇಕು ಎಂಬ ಸಮಿತಿಯ ಸೂಚನೆ ಮಾತ್ರ ಗಂಭೀರ ಪರ್ಯಾಲೋಚನೆಗೆ ಒಳಗಾಗಬೇಕಾಗಿದೆ. ಪ್ರಾಥಮಿಕ ಶಾಲೆಯ ವಾತಾವರಣವೇ ನಾದಮಯವಾದುದು. ಆರರಿಂದ ಹನ್ನೊಂದು ಇಲ್ಲವೇ ಹದಿನಾಲ್ಕು ವರ್ಷದ ಮಕ್ಕಳು ಒಂದೆಡೆಯಲ್ಲಿ ಗುಲ್ಲು ನಡೆಸುತ್ತಿರುವುದ. ಸ್ವಾಭಾವಿಕ ಅಂತಹ ಎಡೆಗಳಲ್ಲಿಯೇ ಮೂರು—ಆರು ವರ್ಷದ ಹಸುಳೆಗಳನ್ನೂ ತುಂಬಿದರೆ, ಅಲ್ಲಿನ ಗದ್ದಲವು ಮತ್ತಷ್ಟು ಹೆಚ್ಚುವುದು. ಇದರಿಂದಾಗಿ ವಾತಾವರಣವು ಇನ್ನಷ್ಟು ಕೆಟ್ಟು ಹೋಗುವುದು ಹೀಗಾದಲ್ಲಿ ಉದ್ದೇಶ ಸಾಧನೆಯು ಯಶಸ್ವಿಯಾಗುವುದೆಂದು ಹೇಳುವಂತಿಲ್ಲ. ಪೂರ್ವ ಪ್ರಾಥಮಿಕ ಶಾಲೆಯ ಮಕ್ಕಳು ನಾನಾ ವಿಧದ ಚಟುವಟಿಕೆಯುಳ್ಳವರು. ಆದುದರಿಂದ ಅವರನ್ನು ಅನಿವಾರ್ಯ ಶಿಕ್ಷಣವೀಯುವ ಪ್ರಾಥಮಿಕ ಶಾಲೆಗಳೊಡನೆ ಸಂಬಂಧಪಡಿಸುವಂತೆ ಮಾಡಬೇಕೋ ಬೇಡವೋ ಎಂಬುದು ವಿಚಾರಣೀಯವೆಂದು ಮಾತ್ರ ಹೇಳಬಹುದು. ಪ್ರಾಯಶಃ ಪ್ರತ್ಯೇಕತೆಯೇ ಪ್ರಯೋಜನಕಾರಿಯೆನ್ನುವುದೂ ತಪ್ಪಾಗಲಾರದು.

ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಓದು, ಬರಹ, ಗಣಿತಗಳು ಅನಿವಾರ್ಯವೇ? ಎಂಬ ಪ್ರಶ್ನೆಯೊಂದಿದೆ. ಪ್ರಾಥಮಿಕ ಶಿಕ್ಷಣವನ್ನು ಮಕ್ಕಳು ಸುಲಭವಾಗಿ ಗ್ರಹಿಸುವಂತೆ ಇವನ್ನೂ ಅಳವಡಿಸಿಕೊಳ್ಳಬೇಕೆಂಬುದು ವಾಸ್ತವಿಕಾಂಶವೆಂದು ಹೇಳುವುದು ಸಾಧ್ಯವಿಲ್ಲ. ಓದು-ಬರಹ ಮೊದಲಾದುವುಗಳನ್ನು ಮಗುವು ಗ್ರಹಿಸಬೇಕಾದರೆ, ಅದರ ಮನಸ್ಸು ಒಂದು ಪಕ್ವಸ್ಥಿತಿಗೆ ಬರಬೇಕಾಗಿದೆ. ಆದರೆ, ೩-೫ ವರ್ಷದ ಮಕ್ಕಳ ಮನಸ್ಸು ಸುಕೋಮಲವಿರುವಾಗ, ಇಂತಹವುಗಳ ಅಭ್ಯಾಸವು ಅವುಗಳಿಗೆ ರುಚಿಸುವುದೂ ಇಲ್ಲ; ಮತ್ತು ಅವುಗಳ ಕಡೆಗೆ ಮಕ್ಕಳು ಆಸ್ಥೆವಹಿಸುವುದೂ ಸಾಧ್ಯವಿಲ್ಲ. ಹಾಗಿದ್ದರೂ ಕೆಲವೊಂದು ಬಗೆಯ ಕೈಕೆಲಸಗಳನ್ನು, ಹಾಡುಗಾರಿಕೆಯನ್ನು ನಾವು ಆಟದ ರೂಪದಲ್ಲಿಯೇ ಕಲಿಸುವುದು ಸಾಧ್ಯವಿದೆ. ಆಟಿಕೆಗಳ ಮೂಲಕವಾಗಿಯೇ ನರ್ಸರಿ ಶಾಲೆಗಳ ಅಭ್ಯಾಸವು ಮುಂದೆ ಸಾಗಬೇಕೇ ಹೊರತು ಪುಸ್ತಕಗಳ ಆಧಾರದಿಂದಲ್ಲ.

ಅಧಿಕ ಸಂಖ್ಯೆಯಲ್ಲಿ ಇಂತಹ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕಾಗಿರುವಾಗ, ಅವುಗಳಲ್ಲಿರಬೇಕಾದ ಸಲಕರಣೆಗಳ ಪೂರೈಕೆಯ ಪ್ರಶ್ನೆ ಎದ್ದು ಬರುತ್ತದೆ. ಈಗೀಗ ಇಂತಹ ಸಾಧನೋಪಕರಣಗಳ ಬೆಲೆಯೇರುತ್ತ ಬರುವುದರಿಂದ, ಇವನ್ನು ಪೂರೈಸುವಲ್ಲಿ ಅಧಿಕ ವೆಚ್ಚ ಬರುವುದು ಸ್ವಾಭಾವಿಕ. ಹಾಗಿದ್ದರೂ ರಾಜ್ಯದಲ್ಲಿರುವ ಪೊಲಿಟೆಕ್ನಿಕ್ ಮತ್ತು ವೃತ್ತಿಪರ ಶಾಲೆಗಳಲ್ಲಿ ಬಾಲವಾಡಿಗಳಿಗೆ ಉಪಯುಕ್ತವಾದ ಉಪಕರಣಗಳನ್ನು ತಯಾರಿಸುವುದು ಅಸಾಧ್ಯವೆನ್ನುವಂತಿಲ್ಲ. ಹೀಗೆ ಇಲ್ಲಿ ಸಿದ್ಧಪಡಿಸಿದ ಉಪಕರಣಗಳ ಮೌಲ್ಯವೂ ಕಡಿಮೆ ಬೀಳುವುದು ಶಕ್ಯವಿದೆ. ಮಲ್ಲಾರಾಧ್ಯ ಸಮಿತಿಯು ಇಂತಹ ಸಲಹೆಯನ್ನೂ ಮಾಡಿದೆ.

ಆದರೆ, ಒಂದು ಮಾತನ್ನು ಇಲ್ಲಿ ಅವಶ್ಯ ಹೇಳಬೇಕು. ನಮ್ಮ ರಾಜ್ಯದಲ್ಲಿ ಪ್ರಾ

(೬ನೇ ಪುಟ ನೋಡಿ)

ಕ್ರಮವಾಗಿ
ಹಣ ಉಳಿಸುವ
ಸ್ತ್ರೀಯರು
ಮತ್ತು
ಪುರುಷರು

"ಕೆನರಾ ಬ್ಯಾಂಕ್"ನಲ್ಲಿ
ತಮ್ಮ ಹಣವನ್ನು ಕೂಡಿಡುತ್ತಾರೆ.
ಕೆನರಾ
ಬ್ಯಾಂಕ್ ಲಿಮಿಟೆಡ್
ಸ್ಥಾಪನೆ: 1906
ಸಮಗ್ರ ಸೇವೆ—
ಸಂಪೂರ್ಣ ಭದ್ರತೆ

ಭಾವನಾತ್ಮಕ ಐಕ್ಯಕ್ಕೆ

ಆರ್ಥಿಕ ಪುನಾರಚನೆಯೇ ತಾರಕೋಪಾಯ

ರಾಷ್ಟ್ರದ ಸರ್ವತೋಮುಖ ಉನ್ನತಿಗೆ ಭಾವನಾತ್ಮಕ ಐಕ್ಯವು ಅತ್ಯಂತಾವಶ್ಯಕವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ದೇಶವು ಅಭಿವೃದ್ಧಿಗೊಂಡಿತೆಂದರೆ, ಅದರಿಂದ ವ್ಯಕ್ತಿಯು ಉನ್ನತಿಯಾಗುವುದು; ಅತನ ಮಾನಮರ್ಯಾದೆಗಳು ಹೆಚ್ಚುವುವು; ಮತ್ತು ಅತನ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುವುದು ಎಂಬುದರಲ್ಲಿ ಯಾರೂ ಅನುಮಾನ ಪಡುವುದಿಲ್ಲ. ಆದರೆ, ರಾಷ್ಟ್ರದ ಐಕ್ಯ ಸಾಧನೆಗೆ ಘಾತಕವೆನಿಸುವ ಕ್ರಮಗಳನ್ನು ಜನತೆಯೇಕೆ ಕೈಗೊಳ್ಳುತ್ತಿದೆ? ಭಾಷೆಯ ಪ್ರಶ್ನೆಯನ್ನೆತ್ತಿ ಕೆಲವೊಮ್ಮೆ ಜಗಳವೆತ್ತುತ್ತದೆ; ರಾಜ್ಯ ಹಿತದ ಪ್ರಶ್ನೆಗಳನ್ನು ಎತ್ತಿ ಕಟ್ಟಿ ಹೊಡೆದಾಡಲು ತೊಡಗುತ್ತದೆ; ಧರ್ಮ ಇಲ್ಲವೇ ಸಂಪ್ರದಾಯಗಳ ಮರೆಯಲ್ಲಿ ವಿದ್ವೇಷದ ಬೆಂಕಿಯನ್ನು ಹೊಗೆಸುತ್ತಿದೆ. ಭಾಷೀಯತೆ—ಪ್ರಾಂತೀಯತೆಗಳ ಸಂಕುಚಿತ ವಿಚಾರಗಳನ್ನು ಕೆರಳಿಸಿ ಸಮಾಜದಲ್ಲಿ ಬಿರುಕು ಹುಟ್ಟುವಂತೆ ಮಾಡುತ್ತದೆ. ಇದು ಏಕೆ?

ರಾಷ್ಟ್ರದಲ್ಲಿ ಐಕ್ಯವನ್ನು ಸುದೃಢಗೊಳಿಸಬೇಕಾದರೆ, ದೇಶದಲ್ಲಿ ಹರಡಿರುವ ವಿಘಟನಾಕಾರಿ ಶಕ್ತಿಗಳ ಮೂಲ ಕಾರಣವನ್ನು ಅರಸಿ, ಅದನ್ನು ಆಮೂಲಾಗ್ರವಾಗಿ ನಾಶಗೊಳಿಸುವ ಉಪಾಯಗನ್ನು ಅರಸಿಕೊಳ್ಳಬೇಕು.

ರಾಷ್ಟ್ರದ ಭಾವನಾತ್ಮಕ ಐಕ್ಯವನ್ನು ಪೃಥಗೊಳಿಸುವುದಕ್ಕೆ ದೇಶದ ಸದ್ಯದ ಸ್ಥಿತಿಗತಿ ಮತ್ತು ಪರಿವರ್ತಿತ ಸಮಯದ ಬೇಡಿಕೆಗಳನ್ನು ಗಮನಿಸದೆ ಕೆಲವೊಂದು ಹಳೆಯ ವಿಧಾನದ ಸಲಹೆಗಳನ್ನು ನೀಡುವವರಿದ್ದಾರೆ. ನಮ್ಮ ದೇಶದಲ್ಲಿ ಪ್ರಾಚೀನ ಪರಂಪರೆಗಳು, ಮಾನ್ಯತೆಗಳು, ಮತ್ತು ಧಾರ್ಮಿಕ ವಿಶ್ವಾಸಗಳ ಕಡೆಗೆ ಶ್ರದ್ಧಾಸಕ್ತಿಯನ್ನು ಹುಟ್ಟಿಸುವುದರಿಂದ ಇದು ಸಾಧ್ಯವೆನ್ನುವವರೂ ಇದ್ದಾರೆ. ಹಾಗೆಯೇ ಋಷಿ ಮುನಿಗಳ ಧಾರ್ಮಿಕ ಗ್ರಂಥಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಡಬೇಕು ದೇಶದ ಪ್ರಾಚೀನ ಸಂಸ್ಕೃತಿ ಮತ್ತು ಆಚಾರ ಸಂಹಿತೆಗಳನ್ನು ಪ್ರಚಾರಕ್ಕೆ ತರಬೇಕು ಎಂದು ಮುಂತಾಗಿ ಅನ್ನುವವರಿಗೂ ಕೊರತೆಯಿಲ್ಲ. ಆದರೆ, ಈ ಸಲಹೆಗಳಿಂದ ರಾಷ್ಟ್ರವ್ಯಾಪಿ ಅಸಂತೋಷಕ್ಕೆ ಕಾರಣ ಹುಡುಕಿದಂತಾಗಲಿಲ್ಲ. ಒಂದೇ ಧರ್ಮದ, ಸಮಾನ ಸಂಸ್ಕೃತಿಯ, ಒಂದೇ ಆಚಾರಸಾಹಿತ್ಯವಿರುವ ಒಂದೇ ಪರಂಪರೆಯ ಜನರೂ ಪರಸ್ಪರ ಹೊಡೆದಾಡಿಕೊಳ್ಳುತ್ತಿರುವುದನ್ನು ಕಾಣುವಾಗ, ಈ ಸಲಹೆಗಳಿಂದ ಪ್ರಯೋಜನವಿಲ್ಲವೆಂಬುದು ಮನವರಿಕೆಯಾಗುವುದು. ಕೆಲವೊಂದು ಸ್ವಾರ್ಥಪೂರ್ತಿಗಾಗಿಯೇ ಸಮಾಜದಲ್ಲಿ ಹಿಂಸೆ ಮತ್ತು ಒಡಕುಗಳು ಹುಟ್ಟಿಕೊಳ್ಳುತ್ತವೆ. ಇದು ಒಂದು ಧರ್ಮ, ಒಂದು ಸಂಸ್ಕೃತಿ ಅಥವಾ ಒಂದು ಪರಂಪರೆಗೆ ಮಾತ್ರ ಮೀಸಲಾದುದಲ್ಲ.

ಈ ಗುಪ್ತ ಸ್ವಾರ್ಥ ಯಾವುದು? ವ್ಯಕ್ತಿಯಲ್ಲಿ ದ್ವೇಷವನ್ನು ಹುಟ್ಟಿಸುವಂತಹ ಈ ಸ್ವಾರ್ಥವನ್ನು ಹೇಗೆ ನಿವಾರಿಸಬಹುದು?

ನಮ್ಮ ಧಾರ್ಮಿಕ, ಪ್ರಾಂತಿಕ, ಭಾಷಾಸಂಬಂಧದ, ಜಾತಿ-ನೀತಿಯ ಪ್ರಶ್ನೆಗಳ ಹಿಂದೆ ನಮ್ಮ ಆರ್ಥಿಕ ಹಿತವೂ ಇಣಿಕಿ ನೋಡುತಿದೆ ಎಂಬುದು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸುವವರಿಗೆ ಗೋಚರವಾಗದುಳಿಯದು. ನಮ್ಮ ದೇಶದಲ್ಲಿ ಜೀವನ ಯಾಪನೆಯ ಪ್ರಶ್ನೆಯು ಬಹಳಷ್ಟು ಜಟಿಲವಾಗಿದೆ ಪ್ರಾಕೃತಿಕ ಸಂಪತ್ತಿನ ಸಂಪೂರ್ಣ ಪ್ರಯೋಜನವನ್ನು ನಾವು ಮಾಡಿಕೊಳ್ಳುತ್ತಿಲ್ಲ. ಸರಕಾರಿ ನೌಕರಿಗಳ ಅಭಾವದೊಡನೆ ದೇಶದ ಜನಸಂಖ್ಯೆಯು ಹೆಚ್ಚುತ್ತ ಬಂದ. ನಿರುದ್ಯೋಗ ಪ್ರಶ್ನೆಯು ಬೃಹದ್ರೂಪ ತಳೆಯುತ್ತಿದೆ. ದೊಡ್ಡ ದೊಡ್ಡ ಕಾರಖಾನೆಗಳು ತೆರೆಯಲ್ಪಡುತ್ತವೆಯೇನೋ ನಿಜ; ಆದರೆ, ಇವುಗಳಲ್ಲಿ ಹೆಚ್ಚು ಜನರಿಗೆ ನೌಕರಿ ಲಭಿಸುವುದಿಲ್ಲ; ಯಂತ್ರಗಳ ಮೂಲಕವೇ ಉತ್ಪಾದನೆಯು ಹೆಚ್ಚುವುದರಿಂದ, ಬಡವರು ಮತ್ತು ಧನಿಕರ ನಡುವಣ ಅಂತರವು ಮತ್ತಷ್ಟು ಹೆಚ್ಚುತ್ತ ಬರುವುದು. ಇಂದಿನ ಅರ್ಥವ್ಯವಸ್ಥೆಯಲ್ಲಿ ಕೆಲವೊಂದು ಜನರು ಅಧಿಕಾಧಿಕ ಶ್ರೀಮಂತರಾಗುತ್ತ ಬಂದರೆ, ಹಲವರು ದರಿದ್ರರಾಗುತ್ತ ಬರುತ್ತಾರೆ. ಧರ್ಮ ಮತ್ತು ಅದೃಷ್ಟದ ಹೆಸರಿನಲ್ಲಿ ಶ್ರೀಮಂತರು ಬಡವರಿಗೆ ಸಹಾಯ ಮಾಡುತಿದ್ದ ಕಾಲವೊಂದಿತ್ತು; ಮುಂದೆ ತಮ್ಮ ಭಾಗ್ಯವೆಂದು ಹಿಗ್ಗಿ, ಎಲ್ಲರನ್ನೂ ಮರೆತು ಬಿಡುವ ಸಮಯ ಬಂತು. ಆದರೆ, ಇಂದು ಪ್ರಜಾತಂತ್ರ, ರಾಜನೀತಿ ಮತ್ತು ಸಾಮಾಜಿಕ ಚೇತನದ ಯುಗ. ಈಗ ಹಿಂದಿನಂತಾಗುವುದು ಸಾಧ್ಯವಿಲ್ಲ.

ನಮ್ಮೆದುರಾಗುವ ಜಗಳಗಳಲ್ಲಿಯೂ ಇದೇ ಆರ್ಥಿಕ ಸ್ವಾರ್ಥದ ಕೈವಾಡವಿದೆ. ಆಹಾರ ಮತ್ತು ನೌಕರಿಯ ಬೇಡಿಕೆಯ ಆಧಾರದಿಂದ ಸಮಾಜದ ಒಂದು ಪಂಗಡ ಇನ್ನೊಂದು ಪಂಗಡದೊಡನೆ ಹೋರಾಟಕ್ಕೆ ನಿಲ್ಲಬಲ್ಲುದು; ಇನ್ನೊಬ್ಬರ ಕೈಯಲ್ಲಿರುವ ಆರ್ಥಿಕ ಸಂಪತ್ತನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳಬೇಕೆಂಬ ಅವ್ಯಕ್ತ ಭಾವನೆ ಮನಸ್ಸಿನಲ್ಲಿ ಹೊಯ್ದಾಡುತ್ತದೆ. ಇಂದು ಸಮಸ್ತ ಭಾರತೀಯರಿಗೂ ಸಮಾನ ರೂಪದ ನಾಗರಿಕಾಧಿಕಾರವಿದೆ. ಒಬ್ಬ ಭಾರತೀಯನು ಭಾರತದ ಯಾವುದೇ ರಾಜ್ಯದಲ್ಲಿ ನೆಲಸಲು ಮತ್ತು ವ್ಯವಹಾರ ನಡೆಸಲು ಸ್ವತಂತ್ರನಿದ್ದಾನೆ. ಹೊಸ ರಾಜ್ಯಗಳ ನಿರ್ಮಾಣ, ಅಥವಾ ಅವುಗಳ ಸೀಮೆಯಲ್ಲಿ ಅಲ್ಪಸ್ವಲ್ಪ ಹೊಂದಾಣಿಕೆಗಳನ್ನು ಮಾಡಿಕೊಂಡರೆ, ನಾಗರಿಕರ ಸ್ವಾತಂತ್ರ್ಯಕ್ಕೆ ಅಧಿಕಾರಕ್ಕೆ ಚ್ಯುತಿ ಬರುವುದಿಲ್ಲ. ಕೆಲವೊಂದು ಜನರಿಗೆ ಉದ್ಯೋಗ, ಅಧಿಕಾರ ಪ್ರಾಪ್ತಿಯ ಸಾಧನಗಳು ಸಿಗುವುವು; ಇದಕ್ಕಾಗಿ ಜನತೆಯ ನಿಮ್ನ ಭಾವನೆಗಳನ್ನು ಉದ್ರಿಕ್ತಗೊಳಿಸಿ, ಅದನ್ನು ತಮಗೆ ಅನುಕೂಲವಾಗುವಂತೆ ಉಪಯೋಗಿಸಿ; ಮಂತ್ರಿ ಪದವಿ ಇಲ್ಲವೇ ಶಾಸನ ಸಭಾ ಸದಸ್ಯತ್ವ ಪಡೆದು, ತಮ್ಮ ಮಹತ್ವಾಕಾಂಕ್ಷೆಯನ್ನು ಸಾಧಿಸಿಕೊಳ್ಳುತ್ತಾರೆ. ಈ ಪ್ರವೃತ್ತಿ ಕ್ಷುದ್ರವಲ್ಲವೆ?

ಉತ್ತರ ಭಾರತದ ಜನತೆಯು ಪ್ರಭುತ್ವದ ನೀತಿ ಅಥವಾ ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಮಾಡುವುದರ ಮೇಲೆ ದಕ್ಷಿಣ ಭಾರತೀಯರು ವಿರೋಧ ಭಾವನೆಯನ್ನು ಪ್ರದರ್ಶಿಸಿದರೆ, ಅದರಿಂದ ಹಿಂದಿಯ ಉಪಯೋಗಿತೆ ಮತ್ತು ವ್ಯಾಪಕತೆಯ ವಿಷಯದಲ್ಲಿ ಅವರು ಮತ್ಸರಗೊಂಡಿದ್ದಾರೆಂದರ್ಥವಲ್ಲ; ಹಿಂದಿಯ ಶಿಕ್ಷಣ ಮತ್ತು ಅದರಲ್ಲಿಯೇ ಸರಕಾರಿ ವ್ಯವಹಾರಗಳು ನಡೆಯುವುದರಿಂದ ತಮಗೆ ಸುಲಭದಲ್ಲಿ ನೌಕರಿ ಸಿಗಲಾರದೆಂದು ಅವರು ಅಂಜುವುದೇ ಕಾರಣ. ಹೀಗೆಯೇ ಒಂದು ರಾಜ್ಯ ಇಲ್ಲವೇ ಜಿಲ್ಲೆಯ ಹಿತದ ಪ್ರಶ್ನೆ ಮುಂದೆ ಬರುವಾಗಲೂ ನಮ್ಮಲ್ಲಿ, ರಾಷ್ಟ್ರಹಿತ ಮುಳುಗಿ ಹೋಗಲಿ; ನಮ್ಮ ಪ್ರಯೋಜನ ಸಾಧಿಸಿಕೊಂಡರೆ ಸಾಕು ಎಂಬ ಹೀನ ಪ್ರವೃತ್ತಿಯು ಮುಂದೆ ಬರುವುದು ಇದಕ್ಕೆ ಒಂದು ಉತ್ತಮ ನಿದರ್ಶನ ಕೊಡಬಹುದು. ಸಮಾಜದಲ್ಲಿ ಹಿಂದುಳಿದ ವರ್ಗಗಳನ್ನು ಮುಂದುವರಿದವರ ಸಮಾನತೆಗೆ ತರುವ ಉದ್ದೇಶದಿಂದ ವಿಶೇಷ ಸೌಕರ್ಯಗಳನ್ನು ಒದಗಿಸಬೇಕೆಂಬ ಪ್ರಶ್ನೆ ಸರಕಾರದ ಮುಂದೆ ಬಂದಾಗ, ೧೯೫೩ರಲ್ಲಿ ಕಾಕಾಕಾಲೇಲಕರರ ಅಧ್ಯಕ್ಷತೆಯಲ್ಲಿದ್ದ ಸಮಿತಿಯ ಮುಂದೆ ತಮ್ಮ ಮಾನಮರ್ಯಾದೆಗಳ ಪ್ರಶ್ನೆಯನ್ನು ಬದಿಗಿಟ್ಟು ೨೫೦೦ ವರ್ಗಗಳು ತಮ್ಮನ್ನು ಹಿಂದುಳಿದವರೆಂದು ಕರೆದುಕೊಳ್ಳಲು ಮುಂದೆ ಬಂದುವು. ನಮ್ಮ ರಾಜ್ಯದಲ್ಲಾದರೂ ನಾಗನ ಗೌಡ ಸಮಿತಿಯ ಮುಂದೆ ಸಲ್ಲಿಸಲಾದ ಅರ್ಜಿಗಳ ಸಂಖ್ಯೆಯೆಷ್ಟು? ಈ ಯೆಲ್ಲ ವರ್ಗಗಳ ಬೇಡಿಕೆಗಳನ್ನೂ ಮನ್ನಿಸಿದರೆ, ಭಾರತದಲ್ಲಿ ನೂರಕ್ಕೆ ಎಂಬತ್ತು ಜನರು ಹಿಂದುಳಿದವರಾಗಿದ್ದಾರೆ, ನಮ್ಮ ಕರ್ನಾಟಕದಂತೆ ಹಿಂದುಳಿಯುವಿಕೆಯೂ ಒಂದು ಭೂಷಣ—ಸ್ವಾರ್ಥಸಾಧನೆಗೆ ಸೋಗು!

ಆದುದರಿಂದ, ದೇಶದ ಐಕ್ಯವನ್ನು ಉಳಿಸಲು ವಿಘಟನಕಾರಿ ಮತ್ತು ಸಂಕುಚಿತ ಸ್ವಾರ್ಥಗಳನ್ನು ಎದುರಿಸಿ, ಅವುಗಳ ಮೂಲರೂಪವಾದ ಆರ್ಥಿಕ ವಿಕಾಸವು ಸಾಧಕವಾಗುವಂತೆ ಮಾಡಬೇಕು. ದೇಶದ ಜನತೆಗೆ ಅನ್ನಾಹಾರಗಳನ್ನು ಪೂರಯಿಸಿದರೆ, ಜೀವನಯಾಪನೆಗೆ ಅನುಕೂಲತೆಯು ಒದಗಿದರೆ, ಬಡವರ ಧನಿಕರ ನಡುವಣ ಅಂತರವನ್ನು ದೂರ ಮಾಡಿ ಸಮಾಜವಾದದ ಮಾದರಿಯಲ್ಲಿ ಮುಂದುವರೆದರೆ, ಆಗ, ಐಕ್ಯವು ತಾನಾಗಿಯೇ ಕಾಣಿಸ ತೊಡಗುವುದು.

ಇದಕ್ಕಾಗಿಯೇ ಸಮಾಜವಾದ ಮಾದರಿಯ ಸಮಾಜ ನಿರ್ಮಾಣದ ಉದ್ದೇಶ ನಮ್ಮ ಸರಕಾರದ ಮುಂದಿದೆ. ನಮ್ಮ ಪಂಚವಾರ್ಷಿಕ ಯೋಜನೆಗಳೂ ಇವೇ ಉದ್ದೇಶಗಳಿಂದ ರೂಪಿತವಾಗಿವೆ; ಪ್ರಯತ್ನಶೀಲವಾಗಿವೆ. ಆದುದರಿಂದ ನಮ್ಮ ಯೋಜನೆಗಳೂ ನಮ್ಮ ಐಕ್ಯಪೋಷಕಗಳೆನ್ನಬಹುದು. ದೇಶದಲ್ಲಿ ದ್ರುತಗತಿಯಲ್ಲಿ ಆರ್ಥಿಕ ವಿಕಾಸವಾಗಬೇಕು; ಉತ್ಪಾದನೆ ಹೆಚ್ಚಬೇಕು; ಇದರಿಂದ ನಿರುದ್ಯೋಗ ಮತ್ತು ಬಡತನಗಳು ಕೊನೆಗೊಳ್ಳಬೇಕು; ಆರ್ಥಿಕ ಅಸಮಾನತೆಗಳು ದೂರವಾಗಬೇಕು— ಎಂಬ ಆದರ್ಶಗಳನ್ನು ನಮ್ಮ ಯೋಜನೆಗಳನ್ನು ರೂಪಿಸುವಾಗ ಇಟ್ಟುಕೊಳ್ಳಲಾಗಿದೆ

ಇದು ವರೆಗಿನ ನಮ್ಮ ಯೋಜನೆಗಳು ಈ ಉದ್ದೇಶ ಸಾಧನೆಯಲ್ಲಿ ಸಂಪೂರ್ಣ ಫಲಕಾರಿಯಾಗಿಲ್ಲ ಪ್ರತ್ಯೇಕತೆಯ ಭಾವನೆಯನ್ನು ಎದುರಿಸುವಲ್ಲಿಯೂ ಇವು ಅಸಫಲಗೊಂಡಿವೆ. ತನ್ನ ಕ್ಷೇತ್ರದಲ್ಲಿ ವಿಶೇಷ ಸುಧಾರಣೆಗಳು ನಡೆಯ ಬೇಕು; ದೊಡ್ಡ ದೊಡ್ಡ ಕಾರಖಾನೆಗಳು, ವಿದ್ಯುತ್ ನೀರಾವರಿ ಸೌಕರ್ಯಗಳು ನಮಗೇನೆ ಬೇಕು. ಎಂದು ಮುಂತಾದ ವಾದಗಳನ್ನು ಪ್ರತ್ಯೇಕ ಗ್ರಾಮೀಣನೂ ಎತ್ತುತ್ತಾನೆ. ದೇಶದ ಯೋಜನೆಗಳನ್ನು ಯಶಸ್ವಿಗೊಳಿಸುವಲ್ಲಿ ನಾವು ಪ್ರಯತ್ನಶೀಲರಾಗಬೇಕಾಗಿದೆ. ಪ್ರಾಂತ ಪ್ರಾಂತ, ಕ್ಷೇತ್ರ ಕ್ಷೇತ್ರ ನಗರ ನಗರ, ಗ್ರಾಮಗಳ ಆರ್ಥಿಕ ವಿಕಾಸದಲ್ಲಿ ಯಾವುದೇ ವಿಧದ ಭೇದಭಾವಗಳಿಗೆ ಆಸ್ಪದ ನೀಡಬಾರದು. ಎಲ್ಲರಿಗೂ ಉನ್ನತಿಯಾಗುವ ಅವಕಾಶವಿರಬೇಕು. ಪ್ರತಿಯೊಬ್ಬನಿಗೂ ಉದ್ಯೋಗ ಹಾಗೂ ವೈಯಕ್ತಿಕ ವಿಕಾಸದ ಸಂದರ್ಭಗಳು ದೊರೆಯುವಂತಾಗ ಬೇಕು. ರಾಷ್ಟ್ರದ ಭಾವನಾತ್ಮಕ ಐಕ್ಯಕ್ಕೆ ಸ್ಥಾಯಿರೂಪ ಕೊಡುವುದಕ್ಕೆ ಇದೇ ಸೂಕ್ತ ಮಾರ್ಗವಾಗಿದೆ.

ಪರಿಪೂರ್ಣ ಬೇಂಕಿಂಗ್ ಸೇವೆಗೆ

— ಕೋಪೊರೇಶನ್ ಬೇಂಕ್ —

78 ಶಾಖೆಗಳು | ದೇಶದಾದ್ಯಂತ ಏಜನ್ಸಿಗಳು

ದಿ ಕೆನರಾ ಬೇಂಕಿಂಗ್ ಕೋಪೊರೇಶನ್ ಲಿಮಿಟೆಡ್

(ರಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಸುಲಭ ದರದಲ್ಲಿ

ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ ಹಾಜರಿ ರಜಿಸ್ಟರುಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೩-೫-'೬೩	೩೪

ಹೊಸ ಬಾಟಲಿ ಹಳೆ ಮದ್ದು

ಕೆಲವು ಹಿರಿಯ ರಾಷ್ಟ್ರಗಳ ಅಪ್ರತ್ಯಕ್ಷ ಬೆಂಬಲದಿಂದ ಮತ್ತು ತನ್ನ ಮಿಥ್ಯಾವಾದಿತನದಿಂದ ಪಾಕಿಸ್ತಾನವು ಕಾಶ್ಮೀರದ ಸಂಬಂಧದಲ್ಲಿ ತಾನು ಕಳೆದ ಹದಿನಾಲ್ಕು ವರ್ಷಗಳಿಂದಲೂ ಅನುಸರಿಸಿಕೊಂಡು ಬಂದ ಕುಟಿಲ ನೀತಿಯನ್ನು ಮತ್ತೊಂದು ಹೆಜ್ಜೆ ಮುಂದುವರಿಸುವ ಗತ್ತುಗಾರಿಕೆಯನ್ನು ತೋರಿಸಿದೆ. ಭದ್ರತಾ ಮಂಡಳದಲ್ಲಿ ಅದರ ಪ್ರತಿನಿಧಿ ಜಫರುಲ್ಲಾ ಖಾನರು ಈ ಹಿಂದೆಯೇ ತಾವು ಮಂಡಿಸಿದ್ದ ತನ್ನ ವಾದವನ್ನು ಮತ್ತೊಮ್ಮೆ ಉಚ್ಚರಿಸಿದರು. ಆದರೆ, ಈ ಬಾರಿಯಲ್ಲಿ ಅವರ ಮಾತಿನ ಸರಣಿಯಲ್ಲಿ ಮತ್ತು ಸ್ವರದಲ್ಲಿ ಮಾತ್ರ ಬದಲಾವಣೆಯು ಕಂಡು ಬಂದಿತೇ ಹೊರತು, ವಾದದಲ್ಲಿ ಮಾತ್ರ ಹುರುಳಿರಲಿಲ್ಲವೆನ್ನಬೇಕು. ಕಾಶ್ಮೀರವು ಮುಸ್ಲಿಮ ಬಹುಸಂಖ್ಯಾಕರ ರಾಜ್ಯ ಮತ್ತು ಅದು ಪಾಕಿಸ್ತಾನಕ್ಕೆ ಹತ್ತಿರವಿರುವುದರಿಂದ ತನಗೆ ಸೇರಬೇಕೆಂಬ ಅದರ ವಾದವು ಬೆಲೆಯಿಲ್ಲದುದೆನ್ನಲೇ ಬೇಕು. ಭಾರತಕ್ಕೂ ಅದು ದೂರವಿರುವುದಿಲ್ಲ. ಮೇಲಾಗಿ, ಬ್ರಿಟಿಷ ಪ್ರಜಾಪ್ರಭುತ್ವದಿಂದ ಹೊರಬಂದ ಬಳಿಕ ಕಾಶ್ಮೀರದ ಜನತೆಯು ಭಾರತದೊಡನೆ ಸೇರಿಕೊಳ್ಳಲು ಆಶಿಸಿದರು; ಜನತೆಯ ಇಚ್ಛೆಗೆ ವಿರುದ್ಧವಾಗಿ, ಪಾಕಿಸ್ತಾನವಾಗಲಿ, ಅದರ ಸಮರ್ಥಕರಾಗಲಿ ಇಲ್ಲವೇ ಭದ್ರತಾ ಸಮಿತಿಯಾಗಲೀ ಏನನ್ನೂ ಮಾಡುವುದು ಸಾಧ್ಯವಿಲ್ಲವೆಂಬುದನ್ನು ಪಾಕ್ ಪ್ರತಿನಿಧಿಗಳು ಅವಶ್ಯ ತಿಳಿದುಕೊಳ್ಳಬೇಕು.

ಕಳೆದ ಹಲವಾರು ವರ್ಷಗಳಿಂದಲೂ ಕಾಶ್ಮೀರದ ಪ್ರಶ್ನೆಯನ್ನು ಪಾಕಿಸ್ತಾನದ ಶಾಸಕರು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತ ಬಂದಿದ್ದಾರೆ. ಅಲ್ಲಿ ಸರಕಾರಗಳು ಬದಲಾಗಿರಬಹುದು ; ಆದರೆ, ಕಾಶ್ಮೀರದ ಪ್ರಶ್ನೆಯಿಂದ ಅನುಚಿತ ಲಾಭ ಗಳಿಸುವ ನೀತಿ ಮಾತ್ರ ಕೊನೆಗಾಣಲಿಲ್ಲ. ಅಪ್ಪ ಒಂದು ಸೇರಾದರೆ ಮಗ ಒಂದೂಕಾಲು ಸೇರು ಎನ್ನುವಂತೆ ಅಲ್ಲಿ ಕಾಲಕಾಲಕ್ಕೆ ಅಧಿಕಾರ ಸೂತ್ರಗಳಿಸಿದ ಮಹಾನುಭಾವರು ದೇಶದ ಆಂತರಿಕ ಪರಿಸ್ಥಿತಿ ಕೆಡುತ್ತ ಬಂದಾಗ, ಅದನ್ನು ಅಂಕಿತದಲ್ಲಿಟ್ಟುಕೊಳ್ಳಲು ಕೈಲಾಗದಾಗ, ಜನರ ಗಮನವನ್ನು ಬೇರೆ ಕಡೆ ಸರಿಸಲು ಈ ಸತ್ತ ಪ್ರಶ್ನೆಗೆ ಮರಳಿ ಜೀವದಾನ ಮಾಡುವ ಮಾಯಾ ಸಹಸ ತೋರಿಸುತಿದ್ದಾರೆ. ಪಾಕಿಸ್ತಾನದಲ್ಲೀಗ 'ಪ್ರಾಥಮಿಕ ಪ್ರಜಾಪ್ರಭುತ್ವ" ಸ್ಥಾಪನೆಯ ಹೆಸರಿನಲ್ಲಿ ವಿಚಿತ್ರ ರೀತಿಯ ಚುನಾವಣೆಗಳು ನಡೆಯುತ್ತಿರುವಾಗಲೇ ಅತ್ತ ಭದ್ರತಾ ಸಮಿತಿಯಲ್ಲಿ ಆಕ್ರೋಶ ಹೊರಡಿಸುವುದರ ಮೂಲೋದ್ದೇಶವೇನೆಂಬುದನ್ನು ಎಲ್ಲರೂ ಅರಿತುಕೊಳ್ಳಬಲ್ಲರು. ಕಾಶ್ಮೀರವು ಏನೇ ಆಗಲಿ, ತನಗೆ ಸೇರಬೇಕು ; ಇದಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ತನಗೆ ಬೆಂಬಲ ನೀಡಬೇಕು; ಇಲ್ಲವೆ ಹೋದರೆ, ತನ್ನ ವಿಶೇಷ ನೀತಿಯನ್ನೇ ಬದಲಿಸಬೇಕಾಗಿ ಬರಬಹುದು ಎಂಬ ಪಾಕಿಸ್ತಾನವು ನ್ಯಾಯಾನ್ಯಾಯಗಳ ಎಲ್ಲೆಗಳನ್ನು ಮೂಲೆಗೆ ತೂರುವಲ್ಲಿ ಇನ್ನೂ ಒಂದು ಹೆಜ್ಜೆ ಮುಂದುವರಿದಿಸೆಯನ್ನಬಹುದು. ಮಾತ್ರವಲ್ಲ, ಕಾಶ್ಮೀರದಲ್ಲಿ ಆಕ್ರಮಣ ನಡೆಯುವುದೆಂದೂ ಚೀನಾದ ಸ್ನೇಹಸಂಪಾದಿಸಿ ಭಾರತವನ್ನು ಬಗ್ಗು ಬಡಿಯುವೆವೆಂದೂ ಅಲ್ಲಿನ ಸರಕಾರದ ಮನಸ್ಸಿನ ಒಳಗಿನಿಂದ ಹೊರಬಂದ ಉದ್ಗಾರಗಳಾಗಿವೆ. ಆದರೆ ಜನಾಭಿಪ್ರಾಯಕ್ಕೆ ಪ್ರತಿಕೂಲವಾಗಿ ಪಾಕಿಸ್ತಾನ ಏನನ್ನೂ ಮಾಡಲು ಅಸಾಧ್ಯ. ಅದು ತನ್ನ ಕಂಠಶೋಷಣೆಯನ್ನು ಮಾಡಿಕೊಳ್ಳುವುದಷ್ಟೇ ಆದೀತು. ಕಾಶ್ಮೀರದ ಪ್ರಶ್ನೆಯು ಪೆಟ್ಟೊಂದು ತುಂಡೆರಡು ಎನ್ನುವಂತೆ ಇತ್ಯರ್ಥಕ್ಕೆ ಬರಬೇಕೆಂದು ಪಾಕಿನಂತೆ ಭಾರತವೂ ಬಯಸುತ್ತದೆ. ಕಾಶ್ಮೀರದ ಜನಮತದಂತೆ ಅದು ನಡೆಯಬೇಕು ಎಂದು ಭಾರತದವಾದ. ಕಾಶ್ಮೀರದಲ್ಲಿ ೧೯೫೭ರಲ್ಲಿ ಸಂವಿಧಾನವೊಂದು ರಚಿತವಾಗಿ, ಅದರಲ್ಲಿ ಅದು ಭಾರತದೊಂದಿಗೆ ವಿಲೀನವಾಗಿದೆಯೆಂಬುದನ್ನು ಸುಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆ ಸಂವಿಧಾನದಂತೆ ಅಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಪ್ರಜಾಸತ್ತಾತ್ಮಕ ಸರಕಾರವು ರಚಿತವಾಗಿದೆ. ಹಾಗಿರುವಾಗ, ಈ ದಿಸೆಯಲ್ಲಿ ಕಾಶ್ಮೀರಿಗಳ ಅಭಿಪ್ರಾಯವೇನೆಂದು ಮತ್ತೆ ತಿಳಿಯುವ ಅಗತ್ಯವಿರುವುದಿಲ್ಲ. ಭಾರತದ ಸಹಾಯದಿಂದ ಹಿಂದುಳಿದಿದ್ದ ಕಾಶ್ಮೀರವೂ ಪ್ರಗತಿ ಪಥಭ್ರಮಣ ಮಾಡುತ್ತಿದೆ; ಭಾರತದ ಸರ್ವೋಚ್ಚ ನ್ಯಾಯಾಲಯ, ಚುನಾವಣಾ ಆಯೋಗ ಮೊದಲಾದ ಅಖಿಲ ಭಾರತೀಯ ಸಂಬಂಧವು ಕಾಶ್ಮೀರದ ಜನತೆಗೂ ಇರುವುದು. ಮದ್ರಾಸ, ಉತ್ತರ ಪ್ರದೇಶ ಮೊದಲಾದ ರಾಜ್ಯಗಳು ಹೇಗೆ ಭಾರತದ ಅವಿಭಾಜ್ಯ ಅಂಗಗಳಾಗಿರುವವೋ ಅಂತೆಯೇ ಜಮ್ಮೂ ಮತ್ತು ಕಾಶ್ಮೀರವೂ ಭಾರತ ಒಕ್ಕೂಟದಲ್ಲಿ ಶಾಶ್ವತವಾಗಿ ಸೇರಿದ ರಾಜ್ಯವಾಗಿದೆ.

ಸಂಯುಕ್ತ ರಾಷ್ಟ್ರ ಸಂಘವು ೧೯೪೮ರ ಇಸವಿಯ ಗೊತ್ತುವಳಿಯೊಂದನ್ನು ತನಗೆ ಬೆಂಬಲವಾಗಿ ಹಿಡಿದುಕೊಂಡು ಪಾಕಿಸ್ತಾನವು ಒಂದೇ ಸವನೆ ಕುಣಿದಾಡುತ್ತಿದೆ. ಆದರೆ ಈ ಗೊತ್ತುವಳಿಯಲ್ಲಿ ಎರಡಂಶಗಳು ಇದ್ದುವೆಂಬುದನ್ನು ಗಮನಿಸಬೇಕು. ಕಾಶ್ಮೀರದಲ್ಲಿ ತಾನು ಮಾಡಿದ್ದ ಆಕ್ರಮಣವನ್ನು ಹಿಂತೆಗೆಯಬೇಕು; ಮತ್ತು ಅನಂತರ ಅಲ್ಲಿ ಮತಗಣನೆ ನಡೆಯಬೇಕು ಎಂಬುವೇ ಆ ಗೊತ್ತುವಳಿ. ಇದರಲ್ಲಿ ತಾನು ಆಕ್ರಮಣವನ್ನು ಹಿಂತೆಗೆದುಕೊಳ್ಳುವ ಪ್ರಥಮ ಭಾಗವನ್ನೇ ಅದು ಈ ೧೪ ವರ್ಷಗಳಲ್ಲಿ ಕಾರ್ಯಾನ್ವಿತಗೊಳಿಸಲಿಲ್ಲ; ಹಾಗಿರುವಾಗ, ಎರಡನೆಯ ಭಾಗವು ವ್ಯವಹಾರ್ಯವಾಗುವ ಅವಕಾಶವೆಲ್ಲಿಂದ ಬರಬೇಕು? ಆದರೆ, ಪಾಕ್ ನಾಯಕರ ಮಂದಮತಿಗೆ ಈ ಸತ್ಯಾಂಶ ನಾಟುವುದಿಲ್ಲ. ನಾಟಿತೆಂದರೆ ಕಾಶ್ಮೀರ ಅವರಿಗೆ ದಕ್ಕುವುದೇ ಇಲ್ಲ. ಆದುದರಿಂದಲೇ ಅವರು ಮತಗಣನೆಯ ವಾದವೊಂದನ್ನೇ ಬಲವಾಗಿ ಹಿಡಿದುಕೊಂಡಿದ್ದಾರೆ. ಈ ಮೊದಲೇ ಹಲವಾರು ಬಾರಿ ಭಾರತವು ಹೇಳಿರುವಂತೆ, ಪಾಕಿಸ್ತಾನವು ತನ್ನ ಸೈನ್ಯದ ದಳವನ್ನು ತನ್ನ 'ಅಜಾದ ಕಾಶ್ಮೀರ'ದಿಂದ ಹಿಂದೆ ಕರೆದುಕೊಳ್ಳುವ ವರೆಗೆ ಇಡಿಯ ರಾಜ್ಯದಲ್ಲಿ ಜನಮತ ತೆಗೆಯಬೇಕೆನ್ನುವ ಅಧಿಕಾರವೇ ಅದಕ್ಕೆ ದೊರೆಯುವುದಿಲ್ಲ. ೧೪ ವರ್ಷಗಳ ಹಿಂದಿನ ಈ ಗೊತ್ತುವಳಿಯಿಂದು ಸತ್ವಹೀನವಾಗಿದೆ. ಈ ಅಭಿಪ್ರಾಯವನ್ನು ಐದು ವರ್ಷಗಳಿಗೆ ಮೊದಲೇ ಸಂ. ರಾ. ಸಂಘದ ಪ್ರತಿನಿಧಿ ಜಾರಿನ್ನರು ವ್ಯಕ್ತಪಡಿಸಿದ್ದಾರೆ. ೧೯೪೮ರಲ್ಲಿ ಕಾಶ್ಮೀರದ ಸ್ಥಿತಿಗತಿಗಳು ಇಂದಿಗೆ ಇಲ್ಲ. ಆದುದರಿಂದ ಆ ಗೊತ್ತುವಳಿಗಳು ಕಾರ್ಯಕೃತವಾಗದೆ ಇದ್ದುದರಿಂದ ಅವುಗಳ ಮೂಸದಂತ ಇಂದಿಗೆ ನಿಷ್ಕ್ರಿಯವೆನಿಸಿದೆ. ಆದುದರಿಂದ ಈ ಪ್ರಶ್ನೆಯನ್ನು ಬಗೆಹರಿಸಬೇಕಾದರೆ, ಕಾಶ್ಮೀರದ ಜನತೆಯ ಅಭಿಪ್ರಾಯವನ್ನು ಮನ್ನಿಸುವುದೇ ಆಗಿದೆ. ಕಾಶ್ಮೀರಿಗಳು ಈ ಮೊದಲೇ ತಮ್ಮ ಅಭಿಪ್ರಾಯವನ್ನು ಜಗತ್ತಿನ ಮುಂದೆ ಸಾರಿರುವಂತೆ ಭಾರತದೊಡನೆ ಅದರ ವಿಲೀನವು ಸುದೃಢವಾಗಿದೆ. ಇದನ್ನು ಬೇರ್ಪಡಿಸಲು ಯಾರಿಂದಲೂ ಸಾಧ್ಯವಿಲ್ಲ. ಇದನ್ನು ಮೀರಿ, ಪಾಕಿಸ್ತಾನವು ಚೀನದೊಡನೆ ಕೂಡಿ ಕಾಶ್ಮೀರಿಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಆಕ್ರಮಣ ನಡೆಸಿದರೆ ಅದರ ಪರಿಣಾಮ ನೆಟ್ಟಗಾಗದು. ಕಾಶ್ಮೀರದ ಮೇಲೆ ಪಾಕಿಸ್ತಾನ ಆಕ್ರಮಣ ಗೈದರೆ ಅದನ್ನು ಎದುರಿಸಲು ಭಾರತ ಸರಕಾರವು ಸಿದ್ಧವಿದೆ. ಅನ್ಯಾಯವನ್ನು ಪ್ರತಿಭಟಿಸಿ, ನ್ಯಾಯಕ್ಕೆ ಜಯ ತಂದು ಕೊಡುವುದು ಜನತೆಯ ಕರ್ತವ್ಯ. ಈ ಕಾರ್ಯದಲ್ಲಿ ಭಾರತವೆಂದಿಗೂ ಹಿಂದುಳಿಯದು. ತನ್ನ ಸಾರ್ವಭೌಮತೆಗೆ ಬರಬಹುದಾದ ಆಹ್ವಾನವನ್ನು ಸ್ವೀಕರಿಸಲು ಭಾರತವು ಸದಾ ಸಿದ್ಧವಿದೆಯೆಂದು ಪ್ರಧಾನಿ ನೆಹರು ಅವರ ದೃಢ ವಿಶ್ವಾಸದಲ್ಲಿ ಭಾರತೀಯರೂ ದೃಢ ವಿಶ್ವಾಸವಿಟ್ಟಿದ್ದಾರೆ.

ರಾಜ್ಯಕ್ಕೆ ರೈಲುದಾರಿ

ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ರೈಲುದಾರಿಗಳು ರಚನೆಗೊಂಡರೂ ಕರ್ನಾಟಕವು ಇದಕ್ಕೆ ಅಪವಾದವಾಗಿತ್ತು. ಮೂರನೆಯ ಯೋಜನೆಯಲ್ಲಾದರೂ ಹಾಸನ-ಮಂಗಳೂರು, ಹುಬ್ಬಳ್ಳಿ-ಕಾರವಾರ, ಬೆಂಗಳೂರು, ಸೇಲಂ, ಮೈಸೂರು-ವಿರಾಜಪೇಟೆ, ಗದಗ-ರಾಯಚೂರು ರೈಲುಮಾರ್ಗಗಳನ್ನು ಸೇರಿಸಬೇಕೆಂಬ ಸೂಚನೆ ಬಂದಿದ್ದರೂ ಬೆಂಗಳೂರು ಸೇಲಂ ದಾರಿಯ ರಚನೆಯು ಈಗಾಗಲೇ ಪ್ರಾರಂಭವಾಗಿದೆ. ಅಗ್ರಪ್ರಶಸ್ತ್ಯ ನೀಡಲಾದ, ಹಾಸನ—ಮಂಗಳೂರು ದಾರಿಯು ಯೋಜನೆಯಲ್ಲಿ ಕೂಡಿದ್ದರೂ ಅದರ ಕಾರ್ಯಾಚರಣೆಯಲ್ಲಿ ತೊಡಕು ಕಂಡು ಬಂದಿದೆ. ಮಂಗಳೂರು ಬಂದರದ ಅಭಿವೃದ್ಧಿ ಕಾರ್ಯಕ್ಕೂ ಹಾಸನ — ಮಂಗಳೂರು ರೈಲು ದಾರಿಗೂ ಸಂಬಂಧವನ್ನು ಕಲ್ಪಿಸಿ, ಈ ಕೆಲಸವನ್ನು ಹಿಂದೆ ಹಾಕುತ್ತಿರುವಂತೆ ತೋರುತ್ತದೆ. ಆದರೂ ಅಂತಿಮ ಪರಿಶೀಲನೆಯ ಆಜ್ಞೆಯು ಹೊರಟಿರುವುದರಿಂದ, ಈ ಯೋಜನಾಂತ್ಯದ ವೇಳೆಗಾದರೂ ರೈಲುದಾರಿ ನಿರ್ಮಾಣದ ಕೆಲಸ ಪ್ರಾರಂಭವಾಗಬಹುದು. ಅಷ್ಟು ಹೊತ್ತಿನಲ್ಲಿ ಬಂದರದ ಅಭಿವೃದ್ಧಿಯ ಕಾರ್ಯವೂ ಮುಂದುವರಿಯುವ ನಿರೀಕ್ಷೆಯಿದೆ.

ಈಗ ತಿಳಿದು ಬಂದಂತೆ ಸಾಗರ—ತಾಳಗುಪ್ಪಗಳ ನಡುವಣ ದಾರಿಯನ್ನು ಲಾಭಕರವಲ್ಲವೆಂಬುದರಿಂದ ಕಿತ್ತು ಹಾಕುವ ಯೋಚನೆ ಕೇಂದ್ರ ಸರಕಾರಕ್ಕಿದೆ. ಆದರೆ, ಹೀಗೆ ಮಾಡುವುದಕ್ಕಿಂತ ಅದೇ ದಾರಿಯನ್ನು ಮುಂದುವರಿಸಿ ಗೋವೆ ಇಲ್ಲವೇ ಉತ್ತರ ಕನ್ನಡದ ಭಟ್ಕಳಕ್ಕೆ ಮುಟ್ಟಿಸಬೇಕೆಂದು ರಾಜ್ಯದ ಲೋಕೋಪಯೋಗಿ ಮಂತ್ರಿ ವೀರೇಂದ್ರ ಪಾಟೀಲರು ಕೇಳಿಕೊಂಡಿದ್ದಾರೆ. ರೈಲುದಾರಿಯ ಮುಂದುವರಿಕೆಯ ಪ್ರಶ್ನೆಯಂತೂ ಸದ್ಯಕ್ಕಿರುವುದಿಲ್ಲ; ಆದರೆ ಇರುವ ದಾರಿಯಾದರೂ ಉಳಿದರೆ, ಅಷ್ಟರಿಂದಲೇ ತೃಪ್ತರಾಗಬೇಕು.

ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಕೋಟ್ಯಂತರ ರೂಪಾಯಿಗಳ ವೆಚ್ಚದಲ್ಲಿ ಹೊಸ ಹೊಸ ರೈಲು ದಾರಿಗಳ ನಿರ್ಮಾಣವಾಗುವಾಗ, ನಮ್ಮ ರಾಜ್ಯದಲ್ಲಿ ಇದುವರೆಗೆ ಒಂದೇ ಒಂದು ರೈಲು ದಾರಿ ಹೆಚ್ಚಾಗಿಲ್ಲವೆಂಬುದು ದುಃಖಾಸ್ಪದವಾದುದು. ನಮ್ಮ ರಾಜ್ಯ ಸರಕಾರ ಹಾಗೂ ಕೇಂದ್ರದಲ್ಲಿರುವ ನಮ್ಮ ಪ್ರತಿನಿಧಿಗಳು ಈ ಕಡೆಗೆ ತೀವ್ರ ಗಮನವೀಯಬೇಕು. ತೃತೀಯ ಯೋಜನಾಂತ್ಯದಲ್ಲಿ ಈಗಿನ ಎಲ್ಲ ದಾರಿಗಳನ್ನೂ ಉಳಿಸಿಕೊಂಡು ಹಾಸನ—ಮಂಗಳೂರುಗಳ ನಡುವಣ ದಾರಿಯ ರಚನೆಯು ಸಂಪೂರ್ಣವಾಗುವಂತೆ ನೋಡಿಕೊಳ್ಳಬೇಕು. ಹೀಗಾದರೆ ಮೊತ್ತ ಮುಂದಿನ ಯೋಜನೆಯಲ್ಲಿ ಉಳಿದ ದಾರಿಗಳಲ್ಲಿ ಒಂದೆರಡನ್ನಾದರೂ ಸೇರಿಸುವ ಅವಕಾಶ ಪ್ರಾಪ್ತವಾಗುತ್ತದೆ. ಇಲ್ಲದೆ ಹೋದರೆ ಹಾಸನ—ಮಂಗಳೂರು ರೈಲು ದಾರಿ ನಾಲ್ಕನೆಯ ಯೋಜನೆಗೇನೇ ಸರಿಹೋದೀತು!

ಜಗತ್ಪರ್ಯಟನ

ಜವಾಹರಲಾಲ

ತನ್ನ ಪಕ್ಷದ ಜನರು ಬಯಸದೆ ಇದ್ದರೂ ಸಮಾಜವಾದ ಮಾದರಿಯ ಸಮಾಜ ರಚನೆಯತ್ತ ದಿಟ್ಟ ಹೆಜ್ಜೆಯನ್ನಿಟ್ಟ ಪ್ರಧಾನಿ ನೆಹರು ಹೆದರಿಸಿದರೂ ಹೆದರುವ ವ್ಯಕ್ತಿಯಲ್ಲ. ಗೋವಾ ವಿಮೋಚನೆಗೆ ಮೊದಲಿಗೂ ಅವರನ್ನು ಅನೇಕರು ಬೆದರಿಸಿದ್ದರು. ಆದರೆ, ಅವರು ಕೈಗೊಂಡ ನೀತಿಯನ್ನು ಕೈಬಿಡಲಿಲ್ಲ. ಈಗ, ಪಾಕಿಸ್ತಾನವೊಳ್ಳು ಬೆದರಿಕೆಯ ಮಾತಿಗೆ ಉತ್ತರ ರೂಪವಾಗಿ, ಪಾಕಿಸ್ತಾನವು ಮೂಢಮಯದಾದ ಆಕ್ರಮಣವನ್ನು ಎದುರಿಸಲು ಸದಾ ಸಿದ್ಧರಿದ್ದೇವೆ ಎಂದ ನೆಹರೂರವರ ಗಂಭೀರವಾಣಿ ರಾಜ್ಯಸಭೆಯಲ್ಲಿ ಹರ್ಷೋದ್ಗಾರಕ್ಕೆ ಕಾರಣವಾಯಿತು

ಕೃಷ್ಣಮೆನನ್

ಕೃಷ್ಣಮೆನನ್ ಭಾರತದ ಸಂರಕ್ಷಣಾ ಮಂತ್ರಿಗಳೆಂದು ಕೀರ್ತಿಗಳಿಸಿಲ್ಲ. ಭಾರತದ ಪ್ರವಾದಿಯೆಂದು ಯುಕ್ತರಾಷ್ಟ್ರ ಸಂಘದಲ್ಲಿ ಹೆಸರುಗಳಿಸಿದ್ದಾರೆ. ಅವರು ಸಭೆಯಲ್ಲಿರುವುದೇ ಒಂದು ಭೂಷಣ. ಅಲ್ಲಿ ಮಾತಾಡಿದರೆಂದರೆ, ಚಿನ್ನಕ್ಕೆ ಪರಿಮಳ ಬಂದಂತೆ. ಕಾಶ್ಮೀರ ಪ್ರಶ್ನೆಯ ಮೇಲೆ ಜಫರುಲ್ಲಾ ಖಾನರು ಮಾತಾಡಿದಾಗ, ಅನಾನುಕೂಲತೆಯಿಂದ ಮೆನನ್ನರು ಅನುಪಸ್ಥಿತರಾದರು. ಅವರಿಲ್ಲದ ಸಭೆಯು ಶೂನ್ಯವೆಂದುಕೊಂಡು ಹಲವಾರು ಮಂದಿ ಬಂದು ಮರಳಿಹೋದರು.

ಆಯೂಬ ಖಾನ್

ಆಯೂಬ ಖಾನರು ಪಾಕಿಸ್ತಾನದಲ್ಲಿ ಶಾಶ್ವತವಾಗಿ ಆಡಳಿತೆ ನಡೆಸಬೇಕಾದರೆ, ಹೊಂಡ ತೋಡುತ್ತ ಇರಬೇಕೆಂದು ಬಲ್ಲ ರಾಜಕಾರಣಿಗಳು. ಭಾರತದ ವಿರುದ್ಧ ಪಾಕಿಸ್ತಾನಿಗಳನ್ನು ಎತ್ತಿಕಟ್ಟಿ ತನ್ನ ಬೇಳೆ ಸಾಧಿಸ ಬಯಸುವ ಪ್ರವೀಣರು. ನೆಹರು ಸತ್ತ ನಂತರ ಭಾರತ ಅರಾಜಕವಾಗುವುದೆಂದೂ ಆಗ, ತಮಗೆ ಅನುಕೂಲವಾಗುವುದೆಂದೂ ದೂರದೃಷ್ಟಿಯಿಂದ ಅರಿತುಕೊಂಡ ಮಹಾನುಭಾವರಿವರು. ಇವರಿಗಿಂತಲೂ ದೂರದೃಷ್ಟಿಯುಳ್ಳ ರಾಜಕಾರಣಿಗಳು ಭಾರತದಲ್ಲಿ ಇಲ್ಲದಿಲ್ಲವಾದರು ಆಯೂಬ ಖಾನರ ದುರಾಸೆ ಕೊನೆಯ ವರೆಗೂ ದುರಾಸೆಯಾಗಿಯೇ ಉಳಿಯದಿರದು.

ಕ್ವಾಮೇ ಎನ್‌ಕ್ರೂಮಾ

ಘಾನಾದ ಅಧ್ಯಕ್ಷ ಎನ್‌ಕ್ರೂಮಾ ಧೈರ್ಯವಂತರು. ಇದರಿಂದಾಗಿಯೇ ಅವರು ವರ್ಣಭೇದ ನೀತಿಯ ಮೇಲೆ ಪಟ್ಟು ಹಿಡಿದು ಕಾಮನ್‌ವೆಲ್ತಿನಿಂದ ದಕ್ಷಿಣ ಆಫ್ರಿಕವನ್ನು ಹೊರಗೆ ಹಾಕಿಸಿದರು. ನೆಹರೂರವರ ಶಿಷ್ಟನಲ್ಲಿಯೇ ತನ್ನ ರಾಷ್ಟ್ರವನ್ನು ಮುಂದೊಯ್ಯುವ ಈ ಆಫ್ರಿಕನ್ ನಾಯಕರು ರಶಿಯಾದ ಲೆನಿನ್ ಶಾಂತಿ ಬಹುಮಾನವನ್ನೂ ಪಡೆದರು. ಈ ಬಹುಮಾನ ವ್ಯಕ್ತಿಯನ್ನು ನೋಡಿಕೊಟ್ಟುದಲ್ಲ; ವ್ಯಕ್ತಿತ್ವವನ್ನು ಕಂಡು ಇತ್ತುದು.

ಆರ್. ಎಂ ಪಾಟೀಲ

ಮಾತಿನಿಂದ ಜಾಣರಾದವರು ಕೃತಿಯಲ್ಲಿ ಕಡಿಮೆಯೆನ್ನುತ್ತಾರೆ. ರಾಜ್ಯದ ಗೃಹಮಂತ್ರಿ ಆರ್. ಎಂ ಪಾಟೀಲರೊಂದು ಮಾತೂ ಕೃತಿಯಲ್ಲಿ ಬರುವುದು ಕಷ್ಟ. ಅಸ್ಪೃಶ್ಯತೆಯಂತೆ ಕುಡಿತವೂ ಒಂದು ಸಾಮಾಜಿಕ ಕುಂದು ಎಂದು ಹೇಳುವ ಇವರು ಕುಡುಕರಿಗೆ ಸಮಾಜ ಬಹಿಷ್ಕಾರ ಹಾಕಬೇಕೆಂದು ಸಲಹೆಯಿತ್ತಿದ್ದಾರೆ. ಸಮಾಜದಲ್ಲಿರುವ ಪ್ರತಿಷ್ಠಾವಂತರೆಲ್ಲರೂ ಸ್ವಯಂ ಕುಡುಕರಾಗಿ, ಇಲ್ಲವೇ ಕುಡುಕರಿಗೆ ಪ್ರೇರಕವಾಗಿರುವಾಗ, ಪೋಲೀಸು ಪಡೆಯೇ ಕುಡುಕರ ಕೈಗೊಂಬೆಯಂತಿದೆಯೆನ್ನುವವರಿರುವಾಗ, ಈ ಬಹಿಷ್ಕಾರ ಯಾರು ಯಾರಿಗೆ ಹಾಕಬೇಕೋ? ಈ ಸಲಹೆಯನ್ನು ಕಾರ್ಯರೂಪಕ್ಕಿಳಿಸಿದರೆ ಹಿಂದುಳಿದವರ ಯಾದಿಯಂತೆ ಬಹಿಷ್ಕೃತರ ಯಾದಿಯೂ ಹನುಮಂತನ ಬಾಲವಾದೀತು,

ಜಾನ್ ಕೆನ್ನೆಡಿ

ನಿಶ್ಶಸ್ತ್ರೀಕರಣವನ್ನು ಎಲ್ಲರೂ ಬಯಸುತ್ತ ಬಂದರೂ ಅದರ ಸಾಧನೆಯಲ್ಲಿ ಮಾತ್ರ ಒಮ್ಮತವಿನ್ನೂ ಲಭ್ಯವಾಗಿಲ್ಲ. ಅಮೆರಿಕೆ ಮತ್ತು ರಶ್ಯಗಳ ನಡುವೆ ತೋರುತ್ತಿರುವ ಬಿರುಕು ಮತ್ತು ಅವು ಮುಂದುವರಿಸುತ್ತಿರುವ ಅಣ್ವಸ್ತ್ರ ಸ್ಫೋಟನಗಳು ಕಂಗಾಲುಗೊಳಿಸಿವೆ. ಈ ನಡುವೆ ಪೂರ್ವ—ಪಶ್ಚಿಮಗಳ ನಡುವೆ ಕೆಟ್ಟಂತೆ ಕಾಣಿಸುವ ಪರಿಸ್ಥಿತಿಯನ್ನು ತಿಳಿಗೊಳಿಸಲು ಶಿಖರ ಸಭೆ ಸೇರಿಸಲು ತಾನು ಸಿದ್ಧವೆಂದು ಕೆನ್ನೆಡಿ ಹೇಳಿದ್ದಾರೆ ಆದರೆ, ಸಭೆಯನ್ನು ಸೇರಿಸುವ ಬಗ್ಗೆ ಮಾತ್ರ ಅವರೇನೂ ಹೇಳುವುದಿಲ್ಲ.

ಸುಕರ್ಣ

ಇಂಡೊನೇಶ್ಯದ ಅಧ್ಯಕ್ಷ ಸುಕರ್ಣರು ಮಾತಿನ ಗುಂಡುಗಳನ್ನೇ ಹಾರಿಸಿದರು. ಭಾರತವು ಗೋವೆಯನ್ನು ವಿಮೋಚನಗೊಳಿಸಿದಂತೆ ರಾತ್ರಿ ಬೆಳಗಿನೊಳಗೆ ಪಶ್ಚಿಮ ಈರಿಯನನ್ನು ಬಿಡುಗಡೆಗೊಳಿಸುವೆನೆಂದು ಕೂಗಾಡಿದರು. ಈಗ ಕೆಲಕಾಲ ಅದರ ಆಡಳಿತೆಯನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಕೊಟ್ಟು ಮುಂದೆ ಇಂಡೊನೇಶ್ಯಕ್ಕೆ ನೇರವಾಗಿ ಹಸ್ತಾಂತರಿಸುವ ಸೂಚನೆಯನ್ನವರು ಒಪ್ಪಿದಂತೆ ತೋರುತ್ತದೆ.

ಪ್ಲೋವರ್ ಹಾಮಿಲ್ಟನ್

ಭಾರತದ ಪುನಾರಚನೆಗೆ ಅವಶ್ಯವಾದ ಉಕ್ಕಿನ ತಯಾರಿಕೆಗಾಗಿ ದೊಡ್ಡ ದೊಡ್ಡ ಕಾರಖಾನೆಗಳನ್ನು ರಚಿಸಲು ಬ್ರಿಟನ್, ರಶ್ಯ, ಜಪಾನಗಳು ನೆರವಿತ್ತುವು. ಈಗ ಬಾಕಾರೋದಲ್ಲಿ ನಾಲ್ಕನೆಯ ಉಕ್ಕಿನ ಬೃಹತ್ ಕಾರಖಾನೆಯ ರಚನೆಗೆ ಅವಶ್ಯಕ ಬಂಡವಾಳವನ್ನು ನೀಡಲು ಅಮೆರಿಕೆಯು ಮುಂದೆ ಬಂದಿದೆ. ಅಮೆರಿಕೆಯ ಅಂತರಾಷ್ಟ್ರೀಯ ಅಭಿವೃದ್ಧಿ ಮಂಡಳದ ಪ್ರಧಾನರಾದ ಪ್ಲೋವರ್ ಹಮಿಲ್ಟನ್ನರು ಈ ಸಂಬಂಧದಲ್ಲಿ ಉತ್ಸಾಹ ತೋರಿಸಿ ಕಾರಖಾನೆಯ ಗಾತ್ರ, ವೆಚ್ಚಗಳನ್ನು ನಿರ್ಧರಿಸಲಿದ್ದಾರೆ.

ಅಲ್ಲಲ್ಲಿಯ ಸುದ್ದಿಸಾರ

ಬಂಟರ ಯಾನೆ ನಾಡವರ ಸಂಘ—ಇದರ ವಾರ್ಷಿಕ ಮಹಾಸಭೆಯು ಇದೇ ಮೇ ತಿಂಗಳ ತಾ. 13ನೇ ಆದಿತ್ಯವಾರ ಅಪರಾಹ್ನ ಗಂಟೆ 4ಕ್ಕೆ ಶ್ರೀ ಮೂಲ್ಕಿ ರಾಮಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದು. ತಾವು ಸಭೆಗೆ ದಯಮಾಡಿ ಬರಬೇಕಾಗಿ ಸಂಘದ ಆಡಳಿತೆ ಕಮಿಟಿಯ ಪರವಾಗಿ ಕಾರ್ಯದರ್ಶಿ ಶ್ರೀ ಕೆ. ಸುಂದರರಾಮ ಶೆಟ್ಟರು ವಿನಂತಿಸುತ್ತಾರೆ

ಶ್ರೀ ಮಧ್ವರಾಜರಿಗೆ ಸತ್ಕಾರ—ಮುಂಬಾಯಿಯ ಕೊಡವೂರು ಬಿಲ್ಲವ ಯುವಕ ಸಂಘದವರು ಉಡುಪಿ ಕ್ಷೇತ್ರದ ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ಮಧ್ವರಾಜರನ್ನು ಗೌರವಿಸಲು ಸತ್ಕಾರ ಕೂಟವೊಂದನ್ನು ಇತ್ತೀಚೆಗೆ ಬೊಂಬಾಯಿಯಲ್ಲಿ ಏರ್ಪಡಿಸಿದ್ದರು. ಶ್ರೀ ಕೃಷ್ಣಪ್ಪ ಮಲ್ಪೆಯವರು ಸ್ವಾಗತಿಸಿ ಶ್ರೀ ಮಧ್ವರಾಜರು ಚುನಾವಣೆಯಲ್ಲಿ ಗಳಿಸಿದ ಪ್ರಚಂಡ ಯಶಸ್ಸಿಗಾಗಿ ಅವರನ್ನು ಅಭಿನಂದಿಸಿದರು. ಸಭಿಕರ ಭಾಷಣಗಳಾದ ಬಳಿಕ ಶ್ರೀ ಮಧ್ವರಾಜರು ಜಾತ್ಯಾತೀತ ರಾಷ್ಟ್ರ ನಿರ್ಮಾಣಕ್ಕಾಗಿ ಸರ್ವರೂ ಕಾಂಗ್ರೆಸ್ಸಿಗೆ ಬೆಂಬಲಕೊಡಬೇಕೆಂದರು.

ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ— "ಶಾರೀರಕ ಶಿಕ್ಷಣದ ಸ್ಥಾನಮಾನಗಳು ಹಿಂದಿನ ಕಾಲದಲ್ಲಿ ಇಂದಿಗಿಂತ ಉನ್ನತವಾಗಿದ್ದುವು. ರಾಜರ ಆಸ್ಥಾನಗಳಲ್ಲಿ ರಾಜಕವಿಗಳಿದ್ದಂತೆಯೇ ಗರಡಿ ಸಾಧಕರೂ ಇರುತ್ತಿದ್ದರು. ಧಾರ್ಮಿಕಾಚರಣೆಯಲ್ಲಿಯೂ ಇದಕ್ಕೆ ಮಹತ್ವ ಇತ್ತು. ಆದರೆ ಈಚೆಗೆ ಸಾಯಂಕಾಲದ ಬಿಸಿಲಲ್ಲಿ ತಮ್ಮ ಮಕ್ಕಳು ಆಡುವುದು ಸರಿಯಲ್ಲವೆಂಬ, ಹೆತ್ತವರಿಂದಾಗಿ ಶಾರೀರಿಕ ಶಿಕ್ಷಣವು ಅಧೋಗತಿಗಿಳಿಯಿತು. ಶಾಲೆಗಳಲ್ಲಾದರೂ ಆಟದ ಪಿರೇಡಿಗೆ ಅಶಕ್ತತೆಯ ಬಗ್ಗೆ ಮೆಡಿಕಲ್ ಸರ್ಟಿಫಿಕೇಟು ಕೊಟ್ಟು ತಪ್ಪಿಸುವವರೂ ಕಡಿಮೆಯಿಲ್ಲ. ದೇಶದಲ್ಲಿ ಆರೋಗ್ಯ ಸೌಕರ್ಯಗಳಿಂದ ಜನರ ಆಯುಷ್ಯವು ಹೆಚ್ಚುತ್ತ ಹೋದರೂ ಶಾರೀರಿಕ ಶಿಕ್ಷಣದ ಕಡೆಗೆ ಅನಾಸ್ಥೆ ತೋರಿಸುವುದರಿಂದ ದೌರ್ಬಲ್ಯವು ಹೆಚ್ಚುತ್ತಾ ಇದೆ. ಶಾರೀರಿಕ ಶಿಕ್ಷಣದಲ್ಲಿ ತರಬೇತು ಹೊಂದುವ ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಅದರ ಮಹತ್ವವನ್ನು ಪ್ರತಿಬಿಂಬಿಸಿ ಶಾರೀರಿಕ ದೌರ್ಬಲ್ಯ ನಿವಾರಣೆ ಮಾಡುವುದರ ಮೂಲಕ ಶಿಸ್ತು ಸಂಯಮಗಳ ಅಭ್ಯಾಸವನ್ನು ಮುಟ್ಟಿಸಬೇಕು ಎಂಬುದಾಗಿ ಉಡುಪಿ ಸ್ಪೋರ್ಟ್ಸ್ ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಕೆ. ಕೆ. ಪೈಗಳು ಕಡಿಯಾಳಿ ಪ್ರಾಥಮಿಕ ಶಾಲಾ ಶಿಕ್ಷಕರ ಶಾರೀರಿಕ ಶಿಕ್ಷಣ ತರಬೇತಿ ಶಿಬಿರವನ್ನು ತಾ. 23–4–62ರಂದು ಉದ್ಘಾಟಿಸುತ್ತಾ ನುಡಿದರು.

ಆರಂಭದಲ್ಲಿ ಅಧ್ಯಾಪಕ ಕೇಂದ್ರದ ಕಾರ್ಯದರ್ಶಿ ವಿದ್ವಾನ್ ಶ್ರೀ ಗೋಪೀ ಚಂದ ರಾವ್‌ರವರು ಸ್ವಾಗತಿಸಿದರು. ಶಾರೀರಿಕ ಶಿಕ್ಷಣಾಧಿಕಾರಿ ಶ್ರೀ ಜಿ. ಡಿ. ದೇವಪ್ಪನವರ ತರಬೇತಿ ಶಿಬಿರದ ಉದ್ದೇಶಗಳನ್ನು ವಿವರಿಸಿದರು ಶಾಲಾ ಪರೀಕ್ಷಾಧಿಕಾರಿ ಶ್ರೀ ವೈ. ಗೋಪಾಲ್‌ರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಸರಕಾರದ ಆರ್ಥಿಕ ಸಹಾಯವಿಲ್ಲದೆ ಈ ಶಿಬಿರವು ನಡೆಯುವುದಾದರೂ 40 ಜನ ಉಮೇದ್ವಾರರು ಉಡುಪಿ ಮತ್ತು ಆಸುಪಾಸುಗಳಿಂದ ಬಂದಿರುವುದಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಈ ಶಿಬಿರವು ಎಪ್ರಿಲ್ ತಾ. 23ರಿಂದ ಮೇ ತಾ. 3ರ ವರೆಗೆ ಕಡಿಯಾಳಿ ಹಾ. ಪ್ರಾ. ಶಾಲಾ ವಠಾರದಲ್ಲಿ ನಡೆಯುವುದು. ಶ್ರೀ ಜಿ. ಡಿ. ದೇವಪ್ಪನವರು ತರಬೇತಿ ನೀಡುತ್ತಿದ್ದಾರೆ.

ಸಿಂಡಿಕೇಟ್ ಬೇಂಕಿನ ಮುಂಡ್ಕೂರು ಶಾಖೆಯ ಪ್ರಾರಂಭೋತ್ಸವ—

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್‌ನ ಹೊಸ ಶಾಖೆಯೊಂದು ಮಂಗಳೂರು ತಾಲೂಕಿನ ಮುಂಡ್ಕೂರಲ್ಲಿ ತಾ. 27—4—62ರಂದು ತೆರೆಯಲ್ಪಟ್ಟಿತು. ಈ ಸಂಬಂಧವಾಗಿ ಸನ್ನಾಹದಲ್ಲಿ ಏರ್ಪಡಿಸಲಾದ ಸಮಾರಂಭದಲ್ಲಿ ಸಿಂಡಿಕೇಟ್ ಬೇಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ ಪೈಗಳು ಸ್ವಾಗತಿಸುತ್ತಾ ಆರಂಭದಿಂದಲೂ ಗ್ರಾಮಗಳಲ್ಲಿ ಸಹ ಶಾಖೆಗಳನ್ನು ತೆರೆಯುವುದು ಸಿಂಡಿಕೇಟ್ ಬೇಂಕಿನ ಧ್ಯೇಯವಾಗಿತ್ತು. ಜನರು ಬೇಂಕ್ ಚಿತ್ತರಾಗಿ ಉಳಿಸುವ ಅಭ್ಯಾಸವನ್ನು ಬೆಳೆಸಬೇಕೆಂದು ವಿನಂತಿಸಿಕೊಂಡರು. ಮುಂದುವರಿಸುತ್ತಾ ಶ್ರೀ ಪೈಗಳು ಮನುಷ್ಯನ ಸಂಪತ್ತು ಅವನ ಸಂಪಾದನೆಯನ್ನು ಹೊಂದಿಕೊಂಡಿಲ್ಲವೆಂದೂ ಅವನು ಉಳಿಸುವ ಹಣವನ್ನು ಹೊಂದಿಕೊಂಡಿರುವುದೆಂದೂ ಹೇಳಿ ಜನರು ಈ ಶಾಖೆಯ ಸೇವೆಯನ್ನು ಉಪಯೋಗಿಸಿ ಕೊಳ್ಳಬೇಕೆಂದರು. ಶ್ರೀಮತಿ ಪ್ರೇಮಾ ಎ. ಪೈ ಮತ್ತು ಶ್ರೀ ಕೆ. ಶಿವರಾಮ ಹೆಗ್ಡೆ ಇವರು ಸಭಿಕರ ಪರವಾಗಿ ಮಾತನಾಡಿ ಇಲ್ಲಿ ಶಾಖೆಯನ್ನು ತೆರೆಯಬೇಕೆಂಬ ತಮ್ಮ ಬಯಕೆಯನ್ನು ಈಡೇರಿಸಿದಕ್ಕಾಗಿ ಬೇಂಕಿನ ಆಡಳಿತ ವರ್ಗದವರನ್ನು ಅಭಿನಂದಿಸಿದರು. ಮುಂಡ್ಕೂರು ಶಾಖೆಯ ಮೆನೇಜರ್ ಶ್ರೀ ಎನ್. ಎ ಕಾಮತರು ಆಭಾರ ಸೂಚಿಸಿದರು.

ಉಡುಪಿ ಲಯನ್ಸ್ ಕ್ಲಬ್‌ನ ಸಭೆಯು ಕಳೆದ ತಾ. 27ರಂದು ಕ್ಲಬ್ಬಿನ ಅಧ್ಯಕ್ಷ ಶ್ರೀ ಕೆ. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ಜರಗಿದಾಗ ಪ್ರಮುಖ ಅತಿಥಿ ಶ್ರೀ ಪಿ. ಎಮ್. ನಾಯಕರು ಸ್ವೀಮರ್ಸ್ ಕೈಗಾರಿಕೆಯ ಕುರಿತು ಭಾಷಣವಿತ್ತರು ಕೊನೆಗೆ ಹೊಸ ವರ್ಷಕ್ಕೆ ಈ ಕೆಳಗಿನಂತೆ ಪದಾಧಿಕಾರಿಗಳು ಆರಿಸಲ್ಪಟ್ಟರು. ಶ್ರೀಗಳಾದ ಟಿ. ಎ. ಪೈ—ಅಧ್ಯಕ್ಷ, ಕು. ಶಿ. ಹರಿದಾಸ ಭಟ್, ಬಿ. ಜಗನ್ನಾಥ ಹೆಗ್ಡೆ ಮತ್ತು ಜೆ. ಎಸ್. ನಗರ್‌ಕಾರ್ ಉಪಾಧ್ಯಕ್ಷರು, ಎನ್. ವಿ. ಕಾಮತ್ ಕಾರ್ಯದರ್ಶಿ. ಪಿ. ಮೋಹನ್ ಕುಡ್ವ ಕೋಶಾಧ್ಯಕ್ಷ, ಎಚ್. ಕೆ. ಪೈ ಲಯನ್ ಟೇಮರ್, ಮತ್ತು ಸಿ. ರಮೇಶ್ ನಾಯಕ್ ಲಯನ್ ಟುಸ್ಕ್ವರ್.

ವಿದಾಯ ಸತ್ಕಾರ:— ಶಂಕರನಾರಾಯಣದ ಕರುಣ ವೃಂದದವರು ಅಲ್ಲಿ ಪೋಸ್ಟುಮಾಸ್ತರಾಗಿದ್ದ ಶ್ರೀ ಕೆ. ಕೃಷ್ಣಯ್ಯನವರಿಗೆ ಕುಂದಾಪುರಕ್ಕೆ ವರ್ಗವಾದ ಪ್ರಯುಕ್ತ ಕಳೆದ ತಾ. 22ರಂದು ಬೀಳ್ಕೊಡುವ ಸಮಾರಂಭವನ್ನು ಸಬ್ ರಿಜಿಸ್ಟ್ರಾರ್ ಶ್ರೀ ಕೆ. ರಘುನಾಥ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಶ್ರೀಗಳಾದ ಪಿ. ಎ. ಚಡಗ ಮತ್ತು ಬಿ. ಸಿ. ಸದಾಶಿವನವರು ಶ್ರೀಯುತರ ಗುಣಗಾನ ಗೈದರು. ಶ್ರೀ ಕೃಷ್ಣಯ್ಯನವರು ತನ್ನ ಸೇವೆಗೆ ಜನರ ಸಹಕಾರವೇ ಕಾರಣವೆಂದರು. ಬದಲಿಗೆ ಬಂದಿದ್ದ ಶ್ರೀ ಆರ್. ಎನ್. ಶ್ಯಾನುಭಾಗರೂ ಸಭೆಯಲ್ಲಿ ಉಪಸ್ಥಿತರಿದ್ದು ತಾನು ಜನತೆಗೆ ಶಕ್ತಿಮೀರಿ ಸಹಕರಿಸುವುದಾಗಿ ಆಶ್ವಾಸನೆಯಿತ್ತರು. ಕೊನೆಯಲ್ಲಿ ಶ್ರೀ ಎಚ್. ರಾಮಕೃಷ್ಣ ಅಡಿಗರು ಧನ್ಯವಾದವಿತ್ತರು.

ತಿದ್ದುಪಡಿ:— ತಾ. 19–4–1962ರ ನವಯುಗದಲ್ಲಿ ಕಥೆಗಾರರ ಹೆಸರಿಲ್ಲದೆ ಪ್ರಕಟವಾದ ‹ಉತ್ತರನ ಪೌರುಷ ಒಲೆಯ ಮುಂದೆ› ಎಂಬ ಕಥೆಯನ್ನು ಬರೆದವರು ಶ್ರೀ ಎಚ್. ರಾಮಕೃಷ್ಣ ಅಡಿಗ, ಶಂಕರನಾರಾಯಣ ಎಂದು ಕೂಡಿಸಿ ಓದಿಕೊಳ್ಳಬೇಕಾಗಿ ಪ್ರಾರ್ಥನೆ. ಸಂ. ಸ.

ಸ್ಥಾಪಕ ದಿನಾಚರಣೆ:— ಮಣಿಪಾಲದ ಎಕೇಡೆಮಿ ಆಫ್ ಜನೆರಲ್ ಎಜ್ಯುಕೇಶನಿನ ಬೇರೆ ಬೇರೆ ಸಂಸ್ಥೆಗಳನ್ನು ಸ್ಥಾಪಿಸಿದ ಡಾ. ಟಿ. ಎಂ ಎ. ಪೈಗಳವರ 65ನೇ ಹುಟ್ಟು ಹಬ್ಬದ ದಿನಾಚರಣೆಯು ಎಪ್ರಿಲ್ 30ರಂದು ಎಕೇಡೆಮಿ ಮತ್ತು ಸತ್ಕಾರ ಸಮಿತಿಯ ವತಿಯಿಂದ ಮುಕುಂದ ನಿವಾಸದಲ್ಲಿ ಹೊನ್ನಾವರದ ಶ್ರೀ ಎಲ್. ಎಚ್ ಪ್ರಭುಗಳ ಹಿರಿತನದಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ವಿವಿಧ ಸಂಘ ಸಂಸ್ಥೆಗಳಿಂದ ಡಾ. ಪೈಗಳಿಗೆ ಹಾರಾರ್ಪಣೆ ನಡೆದ ಬಳಿಕ ಶ್ರೀ ಎಲ್ ಎಚ್. ಪ್ರಭುಗಳು ಮಾತನಾಡುತ್ತ 3 ದಶಕಗಳ ಡಾ। ಪೈಗಳ ಸಂಪರ್ಕದಿಂದ ಕಂಡುಕೊಂಡ ಅವರ ಸಾಹಸ ಮತ್ತು ಸರಳ ಜೀವನದ ಆದರ್ಶಗಳನ್ನು ಪ್ರಸ್ತಾಪಿಸಿ ಅವರೊಬ್ಬರು ಕರ್ಮಯೋಗಿ ಎಂದರು. ಮಂಗಳೂರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಜಿ. ಡಿ. ವೇಲಿಯತರು ಡಾ। ಪೈಗಳ ಕಾರ್ಯ ಕುಶಲತೆ ಗುಣ ಸಂಪನ್ನತೆಗಳನ್ನು ಕೊಂಡಾಡಿ ಆಯುರಾರೋಗ್ಯವನ್ನು ಬಯಸಿದರು. ಮುಖ್ಯ ಭಾಷಣಗಾರರಾಗಿ ಆಗಮಿಸಿದ ಬೆಂಗಳೂರಿನ ಎಂ. ಪಿ. ಎಲ್. ಶಾಸ್ತ್ರಿ ಎಂ. ಎಲ್. ಸಿ.ಯವರು ಡಾ. ಪೈಗಳ ಧೈರ್ಯ ಸ್ಥೈರ್ಯ, ವಿಶಾಲ ಮನೋಭಾವ ವ್ಯವಹಾರ ಚಾತುರ್ಯ ಚಕಿತಗೊಳಿಸುವ ಕಾರ್ಯಪಟುತ್ವಗಳನ್ನು ಕೊಂಡಾಡಿ, ಶಿಕ್ಷಣದಲ್ಲಿ ಗೊಂದಲವೆಂಟ ಕುರಿತು ಮಾತನಾಡುತ್ತ ಅನನುಭವಿಕರು ಶಿಕ್ಷಣ ಕ್ರಮದಲ್ಲಿ ಆಗಾಗ್ಗೆ ಮಾಡುತ್ತಿರುವ ಬದಲಾವಣೆಗಳಿಂದ ಆಗುತ್ತಿರುವ ತೊಂದರೆಗಳನ್ನೂ ಸ್ವಾತಂತ್ರ್ಯ ದೊರೆತರೂ ನಿರ್ಭೀತಿಯಿಂದ ಅಭಿಪ್ರಾಯವನ್ನು ಕೊಡುವ ಮನೋಭಾವ ನಮ್ಮಲ್ಲಿ ಇನ್ನೂ ಬಂದಿಲ್ಲವೆಂದೂ ವಿಚಾರಪೂರ್ಣ ಭಾಷಣವಿತ್ತರು. ಇಂದಲ್ಲದಿದ್ದರೆ ಕೆಲವು ವರ್ಷಗಳೊಳಗಾದರೂ ಮಣಿಪಾಲವು ಡಾ. ಪೈಗಳ ಪ್ರತಿಭೆಯಿಂದ ವಿಶ್ವವಿದ್ಯಾನಿಲಯವಾಗುವುದೆಂದರು. ಡಾ. ಮಾಧವ ಪೈಗಳು ಉತ್ತರಿಸುತ್ತ ಜನರು ತಮ್ಮಲ್ಲಿಟ್ಟಿರುವ ಪ್ರೀತಿ ವಿಶ್ವಾಸಗಳಿಗೂ ಈ ಸತ್ಕಾರವನ್ನು ಏರ್ಪಡಿಸಿದ್ದಕ್ಕೂ ಕೃತಜ್ಞತೆಗಳನ್ನು ಸೂಚಿಸಿದರು. ಶ್ರೀ ಟಿ. ಎ. ಪೈಗಳು ಧನ್ಯವಾದಗಳನ್ನರ್ಪಿಸುತ್ತಾ ಡಾ. ಪೈಗಳ ಸಂಸ್ಥೆಗಳ ಕುರಿತು ಉಂಟಾದ ಪ್ರತಿಕ್ರಿಯೆ ಜನರ ವಿಚಿತ್ರ ಮನೋವೃತ್ತಿ ಮೊದಲಾದುವನ್ನು ಪ್ರಸ್ತಾಪಿಸಿ ಶಿಕ್ಷಣವೂ ಒಂದು ವ್ಯವಹಾರವಾಗಿ ಪರಿಣಮಿಸಿದೆಯೆಂದು ಉದಾಹರಣೆ ಸಹಿತ ವಿವರಿಸಿದರು. ಶ್ರೀ ಟಿ. ರಮೇಶ ಪೈಗಳ ಸೂತ್ರಧಾರಿತ್ವದಿಂದ ಕಾರ್ಯಕ್ರಮಗಳು ಕಲಾಪೂರ್ಣವಾಗಿ ನೆರವೇರಿದುವು.

ಎಕೇಡೆಮಿ ಆಫ್ ಜನರಲ್ ಎಜ್ಯುಕೇಶನಿನ ಸುಪ್ರೀಂ ಗವರ್ನಿಂಗ್ ಬಾಡಿ ಸಭೆಯು ಕಳೆದ ತಾ. 30ರಂದು ಮುಕುಂದ ನಿವಾಸದಲ್ಲಿ ಜರಗಿತು ರಿಜಿಸ್ಟ್ರಾರ್ ಡಾ. ಟಿ ಎಂ. ಎ. ಪೈಯವರು ಎಕೆಡೆಮಿ ಸಂಸ್ಥೆಗಳ ಪ್ರಗತಿಪರ ವರದಿಯನ್ನು ಓದಿದರು. ಶ್ರೀಗಳಾದ ಎ. ಜೆ. ಅಲ್ಸೆ ಪುಂಡಲೀಕ ಶೆಣೈ, ಟಿ. ಎ. ಪೈ, ಟಿ. ರಮೇಶ ಪೈ ಮೊದಲಾದವರು ಕೆಲವು ಸೂಚನೆಗಳನ್ನಿತ್ತ ಮೇಲೆ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಕನ್ನಡ ಪುಸ್ತಕಗಳಿಗೆ—
ಮತ್ತು
ಕಥೆಕಾದಂಬರಿ ಇತ್ಯಾದಿ ಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಬೇಳೆ ಬೇಯಿಸಲು

ಪಾಕಿಸ್ತಾನ ಚೀನವನ್ನು ಸೇರಿಕೊಳ್ಳುವುದು

ಯುಕ್ತ ರಾಷ್ಟ್ರ ಸಂಘದ ಇತಿಹಾಸದಲ್ಲಿ ಕಾಶ್ಮೀರದ ಸಂಬಂಧದಲ್ಲಿ ನಡೆದಷ್ಟು ಬಾರಿ ಮತ್ತಾವ ವಿಷಯದ ಮೇಲೂ ಚರ್ಚೆ ನಡೆದಿಲ್ಲವೆನ್ನಬೇಕು. ಮೊನ್ನೆ ೧೧೦ ನೆಯ ಬಾರಿಗೆ ಈ ವಿಷಯದ ಮೇಲೆ ಮರಳಿ ಚರ್ಚಾರಂಭವಾಯಿತು. ಪಾಕ್ ಪ್ರತಿನಿಧಿ ಜಫರುಲ್ಲಾ ಖಾನರು ೩|| ತಾಸುಗಳಷ್ಟು ಸುದೀರ್ಘಾವಧಿಯವರೆಗೆ ಭಾಷಣ ಮಾಡಿದರು. ಇವರ ಮಾತುಗಾರಿಕೆಯಲ್ಲಿ ತೀಕ್ಷ್ಣತೆಯಿತ್ತು. ಜಫರುಲ್ಲಾ ಖಾನರ ಭಾಷಣದ ದ್ವಿತೀಯ ಭಾಗವು ಮುಂದಿನ ಗುರುವಾರ ನಡೆಯುವುದು.

ಈ ಸಂಬಂಧದಲ್ಲಿ ಭಾರತೀಯ ಪ್ರತಿನಿಧಿ ಮಂಡಳದ ನಾಯಕರಾಗಿ ಸಂರಕ್ಷಣಾ ಮಂತ್ರಿ ಕೃಷ್ಣ ಮೆನನ್ನರು ಸಭೆಯಲ್ಲಿ ಉಪಸ್ಥಿತರಿರಬೇಕಾಗಿತ್ತು. ಆದರೆ, ವಿವಿಧ ಕಾರ್ಯಕ್ರಮಗಳಿಂದಾಗಿ ತನಗೆ ಆ ದಿನ ಬರಲಾಗುವುದಿಲ್ಲವೆಂದು ಸಂ. ರಾ ದಲ್ಲಿ ಭಾರತದ ಶಾಶ್ವತ ಪ್ರತಿನಿಧಿ ಶ್ರೀ ಚಂದ್ರಶೇಖರ ಝಾ ಅವರಿಗೆ ತಿಳಿಸಿದ್ದರು. ಮೆನನ್ನರ ಅನುಪಸ್ಥಿತಿಯಲ್ಲಿ ಚರ್ಚೆ ಪ್ರಾರಂಭವಾಗಲು ಯಾವ ತರದ ಅಭ್ಯಂತರವೂ ಇಲ್ಲವಾದುದರಿಂದ ಜಫರುಲ್ಲಾ ಖಾನರು ಕಟು ವಾಕ್ಯಗಳಿಂದ ತಮ್ಮ ಮಾತಿನ ಚಮತ್ಕಾರವನ್ನು ಪ್ರದರ್ಶಿಸಿದರು.

“ಕಾಶ್ಮೀರದಲ್ಲಿ ಮುಸಲ್ಮಾನರ ಬಹುಮತವಿದೆ; ಅದು ಪಾಕಿಸ್ತಾನಕ್ಕೆ ಅತಿ ಸಮೀಪವಿದೆ. ಆದುದರಿಂದ ಭಾರತದೊಡನೆ ಅಸ್ಥಾಯಿಯಾಗಿ ಸೇರ್ಪಡೆಹೊಂದಿದ್ದ ಕಾಶ್ಮೀರವನ್ನು ಪಾಕಿಸ್ತಾನದೊಡನೆ ಸೇರಿಸಬೇಕೆಂದು ಕೇಳುವ ಅಧಿಕಾರ ತನಗಿದೆ. ಕಾಶ್ಮೀರದ ಸಮಸ್ಯೆಯು ಬೇಗನೆ ಪರಿಹಾರಗೊಳ್ಳದೆ ಹೋದರೆ, ಅಲ್ಲಿ ೧೯೪೭ರಲ್ಲಿ ನಡೆದಂತೆಯೇ ಸಂಘರ್ಷಣೆಯು ಸಂಭವಿಸಬಹುದು; ಮತ್ತು ಈ ಕ್ರಾಂತಿಯು ಜಮ್ಮು ಮತ್ತು ಕಾಶ್ಮೀರಗಳ ಹೊರಗೂ ವ್ಯಾಪಿಸಿಬಿಡುವುದು. ಮುಂದಿನ ಬಾರಿ ಭಾಷಣ ಮಾಡುವಾಗ ಸಮಸ್ಯಾ ಪರಿಹಾರಕ್ಕೆ ಎರಡು ಯಾ ಮೂರು ಮಾರ್ಗಗಳನ್ನು ಉಲ್ಲೇಖಿಸುವೆ.

“೧೯೪೭ರ ಸ್ವಾತಂತ್ರ್ಯ ಕಾನೂನಿನನ್ವಯ, ದೇಶೀಯ ರಾಜ್ಯಗಳ ಮೇಲೆ ಇದ್ದ ಬ್ರಿಟಿಷ್ ಸರ್ವೋಚ್ಚಾಧಿಕಾರವು ರದ್ದಾಯಿತು; ಬ್ರಿಟಿಷ್ ಸರಕಾರ ಮತ್ತು ದೇಶೀಯ ರಾಜರೊಡನೆ ಆಗಿರಬಹುದಾದ ಎಲ್ಲ ಪ್ರಕಾರದ ಒಡಂಬಡಿಕೆಗಳೂ ಸಮಾಪ್ತಗೊಂಡವು. ಭಾರತ ಸರಕಾರವು ೧೯೪೭ರ ಆಗಸ್ಟ ೧೫ರಂದು ಒಂದು ಶ್ವೇತಪತ್ರವನ್ನು ಹೊರಡಿಸಿ ಅದರಲ್ಲಿ ಭಾರತದ ನೀತಿಯನ್ನು ವಿವರಿಸಿತು. ಬ್ರಿಟಿಷ ಸರ್ವೋಚ್ಚಾಧಿಕಾರವು ಕೊನೆಗೊಂಡ ಬಳಿಕ, ರಾಜ್ಯಗಳ ಜನತೆಯ ಕೈಗೆ ಅಧಿಕಾರ ದೊರಿತಿದೆ; ಪ್ರತಿ ರಾಜ್ಯದಲ್ಲಿಯೂ ಅಲ್ಲಿನ ಜನತೆಯು ಸ್ವತಂತ್ರವಾಗಿ ತಮ್ಮ ಅಧಿಕಾರವನ್ನು ಉಪಯೋಗಿಸುವಂತಹ ಅವಕಾಶ ಪ್ರಾಪ್ತವಾಗಬೇಕೆಂಬುದು ಭಾರತದ ದೃಢ ಆಶಯವಾಗಿದೆ ಎಂದು ಆ ಶ್ವೇತಪತ್ರದಲ್ಲಿ ಉಲ್ಲೇಖಿಸಲಾಗಿತ್ತು.”

ಸರ್ ಮಹಮ್ಮದ ಜಫರುಲ್ಲಾ ಖಾನರ ತರ್ಕದಲ್ಲಿ ಕಳೆದ ಫೆಬ್ರವರಿಯಲ್ಲಿ ಮುಂದಿಟ್ಟಿದ್ದ ವಿಚಾರಗಳೇ ಹೆಚ್ಚಾಗಿದ್ದುವು. ಈ ಬಾರಿ ಪುನರಾವೃತ್ತಿ ಮಾತ್ರ ನಡೆಯಿತು. ಪಾಕಿಸ್ತಾನವು ಕಾಶ್ಮೀರದಲ್ಲಿ ಆಕ್ರಮಣ ಮಾಡಿದೆ ಮತ್ತು ಕಳೆದ ೧೩ ವರ್ಷಗಳಿಂದಲೂ ಅದು ಆಕ್ರಮಣವನ್ನು ಮುಂದೆಸೆಯಲು ಹಲವು ನೆವನಗಳನ್ನು ಹೇಳುತ್ತಿದೆ ಎಂಬುದನ್ನು ನಿರಾಧಾರವೆನ್ನಲು ಶ್ರೀ ಜಫರುಲ್ಲಾರು ಬಹು ಸಮಯ ಕಳೆದರು. ಬಾರಾಮುಲಾ ಮತ್ತು ರಜೋರಿಗಳಲ್ಲಿ ನಡೆಸಿದ್ದ ಪಾಕ್ ಅತ್ಯಾಚಾರಗಳನ್ನು ತನ್ನ ಸುದೀರ್ಘ ಭಾಷಣದಲ್ಲಿ ಖಾನರು ಪ್ರಸ್ತಾಪಿಸಿಲ್ಲ ಮಾತ್ರವಲ್ಲ, ತಪ್ಪಿಯೂ ದರೂ ಆ ಘಟನೆಗಳ ಉಲ್ಲೇಖಬಾರದಂತೆ ಎಚ್ಚರ ವಹಿಸಿದ್ದರು.

ಹಿಂದಿನಂತೆಯೇ ಒಂದೆಡೆ ಗದರಿಕೆ ಮತ್ತೊಂದೆಡೆ ಶಾಂತಿಯ ಭಾವನೆಗಳನ್ನು ಜಫರುಲ್ಲಾರು ಹೊರಗೆಡಹಿದರು. ಹೊಸ ಅಂಶಗಳು ಮಾತ್ರ ಏನೂ ಇರಲಿಲ್ಲ. ಇದ್ದಿತೆನ್ನುವುದಾದರೆ, ಗದರಿಕೆ ಮತ್ತು ಬೆದರಿಕೆಯ ಶಬ್ದ ಪ್ರಯೋಗ ಮಾತ್ರ. ಭಾರತಕ್ಕೆ ಬೆದರಿಕೆ ಹಾಕುತ್ತಿರುವಂತೆಯೇ ತನ್ನ ಸೀಟೋ ಮತ್ತು ಸೆಂಟೋ ಮಿತ್ರ ರಾಷ್ಟ್ರಗಳನ್ನೂ ಪಾಕಿಸ್ತಾನವು ಗದರಿಸಲು ಪ್ರಯತ್ನ ಮಾಡಿದೆ.

ಪಾಕ್ ಪ್ರತಿನಿಧಿಯು ಕಾಶ್ಮೀರದ ಪ್ರಶ್ನೆಯು ತಮಗನುಕೂಲವಾಗಿ ಇತ್ಯರ್ಥಗೊಂಡಿಲ್ಲವಾದರೆ, ಇತರ ಸ್ನೇಹಿತರೊಡನೆ ಕೂಡಿಕೊಳ್ಳುವ ನಿರ್ಧಾರ ಮಾಡಬೇಕಾಗುವುದೆಂದರು. ತಮ್ಮ ವಿದೇಶ ನೀತಿಯನ್ನು ಪುನರ್ಪರಿಶೀಲಿಸುವುದು ಅವಶ್ಯವಾಗಿ ಪರಿಣಮಿಸ ಬಹುದು. ತನ್ನ ಇತರ

ಸಂ. ರಾ. ದಲ್ಲಿ ಕಾಶ್ಮೀರದ ಸಂಬಂಧ ಚರ್ಚೆಯಲ್ಲಿ ಭಾಗವಹಿಸಲು ತೆರಳಿದ ಭಾರತದ ಪ್ರತಿನಿಧಿ ಮಂಡಲದ ನಾಯಕ ಶ್ರೀ ಕೃಷ್ಣ ಮೆನನ್ನರು

ಸ್ನೇಹಿತರು ಯಾರೆಂದು ಸ್ಪಷ್ಟವಾಗಿ ಹೇಳದೆ ಹೋದರೂ ಚೀನ ಮತ್ತು ರಷ್ಯಗಳೇ ಈ ಸ್ನೇಹಿತರೆಂದು ಹೇಳಬಹುದು. ಪಾಕಿಸ್ತಾನದ ಅನುಕೂಲಕ್ಕೆ ಪರಮವೆಂದು ಹೇಳಲಾದ ಈ ವಿದೇಶ ನೀತಿಯನ್ನು ಅದು ಪರಿವರ್ತಿಸುವುದೆಂದರೆ, ಕಮ್ಯುನಿಸ್ಟ್ ರಾಷ್ಟ್ರಗಳ ಸ್ನೇಹ ಹಾಗೂ ಸಹಕಾರವನ್ನು ಕೈಗೊಳ್ಳುವುದೆಂದು ಅರ್ಥ.

ಜಫರುಲ್ಲಾ ಖಾನರ ಭಾಷಣದ ಪ್ರತಿಕ್ರಿಯೆಯು ದೊಡ್ಡ ರಾಷ್ಟ್ರಗಳ ಮೇಲೆ ಏನೂ ಆದಂತಿಲ್ಲ. ಈ ಭಾಷಣದ ಕಡೆಗೆ ಈ ರಾಷ್ಟ್ರಗಳ ಪ್ರತಿನಿಧಿಗಳು ಉದಾಸೀನರಾಗಿದ್ದಂತೆ ಕಂಡುಬರುತಿತ್ತು. ಕೃಷ್ಣಮೆನನ್ನರು ಅನುಪಸ್ಥಿತರಿದ್ದುದರಿಂದ ಭದ್ರತಾ ಮಂಡಳದ ಸಭೆಗೆ ಕಳೆಯೇ ಒಂದಂತಿಲ್ಲ. ಪ್ರತಿನಿಧಿಗಳ ಖುರ್ಚಿಗಳೂ ಖಾಲಿಯಿದ್ದುವು. ಪತ್ರಿಕಾ ಪ್ರತಿನಿಧಿಗಳೂ ಅಲ್ಪಸಂಖ್ಯೆಯಲ್ಲಿ ಹಾಜರಿದ್ದರು. ಇನ್ನು ಬಂದವರೂ ಕೆಲವರು ಕೃಷ್ಣಮೆನನ್ನರು ಗೈರು ಹಾಜರಿಯಾದುದರಿಂದ ಮರಳಿ ಹೋದರು.

ಕಾಶ್ಮೀರದ ಪ್ರಶ್ನೆಯು ಇತ್ಯರ್ಥಗೊಳ್ಳಬೇಕೆಂದು ಭಾರತ-ಪಾಕಿಸ್ತಾನಗಳೆರಡೂ ಬಯಸುತ್ತಿವೆ ಆದರೆ, ಕಾಶ್ಮೀರದ ಜನತೆಯು ಸ್ವೇಚ್ಛೆಯಿಂದಲೇ ಭಾರತದಲ್ಲಿ ತಮ್ಮ ರಾಜ್ಯವನ್ನು ವಿಲೀನಗೊಳಿಸಿದ್ದಾರಂಬುದರಿಂದ ಪಾಕಿಸ್ತಾನದ ವಾದದಲ್ಲಿ ಯಾವ ಹುರುಳೂ ಇರುವುದಿಲ್ಲ. ಜನತೆಯ ಅಭಿಲಾಷೆಗೆ ವಿರುದ್ಧವಾಗಿ ಅವರನ್ನು ಹತ್ತಿಕ್ಕುವುದು ಯಾರಿಂದಲೂ ಸಾಧ್ಯವಿಲ್ಲ.

ಪೂರ್ವ ಪ್ರಾಥಮಿಕ ಶಿಕ್ಷಣ ಶಾಲೆಗಳು

(೩ನೇ ಪುಟದಿಂದ)

ಥಮಿಕ ಶಿಕ್ಷಣದ ಮಟ್ಟವು ಹೇಳಿಕೊಳ್ಳುವಷ್ಟು ಉತ್ತಮವಿಲ್ಲ. ಇದಕ್ಕೆ ಒಂದಲ್ಲ ಹತ್ತು ಕಾರಣಗಳಿರುವುವು. ಅಧಿಕ ಸಂಖ್ಯೆಯ ಮಕ್ಕಳಿದ್ದರೂ ಅವಶ್ಯಕ ಸಂಖ್ಯೆಯ ಅಧ್ಯಾಪಕರಿಲ್ಲದ ಶಾಲೆಗಳೆಷ್ಟೋ ಇವೆ. ಇಂತಹ ಶಾಲೆಗಳ ಶಿಕ್ಷಣದ ಮಟ್ಟ ಎತ್ತರಿಸುವುದಾದರೂ ಹೇಗೆ? ಅಧ್ಯಾಪಕ ವಿದ್ಯಾರ್ಥಿ ದಾಮಾಶಯವು ಉದಾರವಾಗಿರದೆ ಹೋದರೆ, ಶಿಕ್ಷಣದ ಸ್ಥಿತಿ ಸುಧಾರಿಸಲಾರದು. ಒಬ್ಬ ಅಧ್ಯಾಪಕನು ನೋಡಿಕೊಳ್ಳಬೇಕಾದ ತರಗತಿಗಳ ಸಂಖ್ಯೆಯಲ್ಲಿಯೂ ಮಿತಿಯಿರಬೇಕು. ಶಿಕ್ಷಣ ಪ್ರಸಾರದ ಆದರ್ಶದಲ್ಲಿ ಸ್ಥಾಪಿತವಾದ ಏಕೋಪಾಧ್ಯಾಯ ಶಾಲೆಗಳಲ್ಲಿ ನಾಲ್ಕು ತರಗತಿಗಳೂ ಇರುವುದುಂಟು ಒಬ್ಬಾತ ಅವೆಲ್ಲವನ್ನು ನೋಡಿಕೊಳ್ಳುವುದಾದರೆ, ಆತ ಒಂದೊಂದು ತರಗತಿಗೆ ೧| ತಾಸು ಮಾತ್ರ ಪಾಠ ಮಾಡಬಲ್ಲ. ಹೀಗಾದಲ್ಲಿ ಶಿಕ್ಷಣ ಉನ್ನತವಾಗುವುದು ಸಾಧ್ಯವೆ? ವೈಯಕ್ತಿಕ ಗಮನ ನೀಡುವುದಂತೂ ಸರ್ವದಾ ಅಸಾಧ್ಯ. ಇಷ್ಟು ಮಾತ್ರವಲ್ಲದೆ, ಶಾಲೆಯಲ್ಲಿ ಬೆಂಚು-ಮೇಜುಗಳ ಅಭಾವ, ಅವಶ್ಯಕ ನಕ್ಷೆ-ಚಿತ್ರಗಳ ಕೊರತೆ, ಕಟ್ಟಡದ ದುಸ್ಥಿತಿ ಮೊದಲಾದವುಗಳೂ ಪ್ರಗತಿಗೆ ಅಡ್ಡಬರುತ್ತವೆ. ಇವೆಲ್ಲವನ್ನು ನೀಗಿಸದೆ ಹೋದರೆ, ಶಿಕ್ಷಣದಲ್ಲಿ ಪ್ರಗತಿ ವಾಸ್ತವವಾಗಿ ಸಾಧಿಸಲಾಗಲಾರದು.

ನರ್ಸರಿ ಶಾಲೆ ಇಲ್ಲವೇ ಬಾಲವಾಡಿಗಳಲ್ಲಿ ಅವಶ್ಯವಾದ ಸಾಧನೋಪಕರಣಗಳು ಒಂದೆಡೆಯಲ್ಲ ಮಕ್ಕಳ ಮುಗ್ಧ ಮನಸ್ಸನ್ನು ಆಕರ್ಷಿಸುವಂತೆ ಇವುಗಳ ಏರ್ಪಾಡಿರಬೇಕು. ಅಧ್ಯಾಪಕರ ಒತ್ತಾಯದಿಂದಲೇ ಅವು ಅಲ್ಲಿ ಕಲೆಯುವಂತಾಗಬಾರದು; ಸ್ವಯಂ ಪ್ರೇರಣೆಯಿಂದಲೇ ಒಂದ ಹೋಗುವಂತಿರಬೇಕು ಇದಕ್ಕಾಗಿ ಅವಶ್ಯಕ ವೆಚ್ಚಮಾಡದೆ ಹೋದರೆ ಶಾಲೆಗಳ ಸಂಖ್ಯೆಯೇನೋ ಹೆಚ್ಚಾದೀತು; ಆದರೆ, ಅದರಿಂದ ಯಾವ ಪುರುಷಾರ್ಥವನ್ನು ಸಾಧಿಸಿದಂತಾಗಲಿಲ್ಲ.

ಮುಂದಿನ ಜನಾಂಗವನ್ನು ರೂಪಿಸುವ ಯೋಜನೆಗಳನ್ನು ಕೈಗೊಳ್ಳುವಾಗ, ಅದೆಷ್ಟು ಎಚ್ಚರಿಕೆ ವಹಿಸಿದರೂ ಸಾಲದು. ಸ್ವಸಾತಂತ್ರ್ಯ ಭಾರತದಲ್ಲಿ ಅಭ್ಯುದಯಕ ಪ್ರಜೆಗಳ ನಿರ್ಮಾಣದಿಂದ ದೇಶ ಏಳಿಗೆ ಕಾಣದು. ಸಮರ್ಥ ಬುದ್ಧಿವಂತ ಪ್ರಜೆಯಿಂದಲೇ ದೇಶ ಕಲ್ಯಾಣ ಸಾಧ್ಯ. ಅದು ದರಿಂದ ನೀಡಲಾಗುವ ಶಿಕ್ಷಣವು ಯಶಸ್ವಿಯಾಗಬೇಕು; ಇದು ಪೂರ್ವ ಪ್ರಾಥಮಿಕ ಶಿಕ್ಷಣಕ್ಕೂ ಹೊರಗಿನದಲ್ಲ. ನಮ್ಮ ಸರಕಾರ ಈ ಕಡೆಗೆ ವಿಶೇಷ ಕಳಕಳಿ ವಹಿಸಬೇಕಾಗಿದೆ

ಕವಲು ದಾರಿ — ಕೆಂಪು ದೀಪ

ಉಂಡುಡಲಿರದಿದ್ದರೂ ಇವರಿಗೆಷ್ಟು ಸೊಕ್ಕು!

"ಸುದಾಸ"ರಿಂದ

ಅತಿ ಹೆಚ್ಚಿಗೆ ನಮಸ್ಕಾರ ಸ್ವೀಕರಿಸುವ ವ್ಯಕ್ತಿಯನ್ನು ನೀವು ಬಲ್ಲಿರಾ? ಎನ್ನುವ ಪ್ರಶ್ನೆಯನ್ನು ನಿಮ್ಮ ಮುಂದಿರಿಸಿದೊಡನೆ ನೀವು ಉತ್ತರಿಸುವಿರೇನನ್ನು ಎನ್ನುವದನ್ನು ನಾನು ಬಲ್ಲೆ. 'ಮಂತ್ರಿಗಳು' ಎಂದು ಅಂದುಬಿಡುತ್ತೀರಿ ಅಲ್ಲವೆ? ಅವರಲ್ಲ ಎಂದೊಡನೆ ನಿಮ್ಮ ಉಪ ಪ್ರಶ್ನೆಗಳ ಮಾಲೆಯೇ ಸಜ್ಜುಗೊಳ್ಳುತ್ತದೆ. ಎಂ ಎಲ್. ಎ. ಗಳೇ, ಚುನಾವಣಾ ಸ್ಪರ್ಧಿಗಳೇ, ರಾಜಕೀಯ ಮುಂದಾಳುಗಳೇ, ದೇಶಸೇವಕರೇ, ಇವರಾರೂ ಅಲ್ಲವಾದರೆ ಮತದಾರರೇ ಎಂದು, ನೀವು, ರಾಜಕೀಯ ರಂಗದ ತ್ರಿಥಾಳಿಯನ್ನೇ ನಡೆಸುವಿರಿ ಎನ್ನುವದನ್ನೂ ನಾನು ಬಲ್ಲೆ. ಸದ್ಯ ಅವರಾರೂ ಅಲ್ಲ. ರಾಜಕೀಯ ಕಚ್ಚಾಟ, ಮುಂದಾಳುಗಳ ಪಾಲಿಗೇನೇ ಇರಲಿ ನಾನು ಹೇಳಲಿರುವದು ಆ ಪುಣ್ಯಾತ್ಮನ ವಿಷಯವನ್ನ್-ಜ್ಞಾನದೀವಿಗೆ ಹಿಡಿದು ನಿಂತಿರುವ, ಆದರ್ಶ ಗೋಪುರವನ್ನು ಹೊರಲಾರದೆ ಹೊತ್ತಿರುವ ಎರಡು ಹೊತ್ತು ಅನ್ನ ಪುನ್ನುವ ಅದೃಷ್ಟವನ್ನು ಪಡೆಯದಿರುವ, ಸಂಸಾರ ಸಾಗಿಸಲು ಅನರ್ಹನೆಂದು ಸರ್ವರಿಂದ ಅಲಿಖಿತ ಪ್ರಶಸ್ತಿ ಪತ್ರ ಪಡೆದಿರುವ ವ್ಯಕ್ತಿಯ ವಿಷಯವನ್ನೇ ನಾನಿಲ್ಲಿ ಪ್ರಸ್ತಾಪಿಸಲಿರುವದು.

ಈಗಲಾದರೂ ತಿಳಿಯಿತೇ ಆತ ಯಾರು ಎಂದು? ಇಲ್ಲ? ಸರಿ. ನಿಮಗೇಕೆ ವ್ಯಥಾ ತಲೆ ಕೆರೆದುಕೊಳ್ಳುವ ಕೆಲಸ? ನಾನೇ ತಿಳಿಸುತ್ತೇನೆ. ಈ ಮಹಾ ಪುರುಷ ಉಪಾಧ್ಯಾಯ! ಹೌದು. ಎರಡು ಹೊತ್ತು ಅನ್ನವೂ ಸರಿಯಾಗಿ ಸಿಗುತ್ತಿಲ್ಲ. ಮಕ್ಕಳ ಶಿಕ್ಷಣಕ್ಕೆ ದಾಸೋ ಹಂಗತಿ ಎಂದು ತಿಳಿದವನು ಈತ. ಇನ್ನು ಬೀಡಿಯೋ, ಎಲೆಯೋ ನಶ್ಯವೋ ಇವೆಲ್ಲ ದುರಾಭ್ಯಾಸಗಳು. ಗುರುವೇ ಇಂತಹ ದುಶ್ಚಟಗಳನ್ನು ಸ್ವೀಕರಿಸಬಾರದು.!) ಸೇದುವ ಅಭ್ಯಾಸವಿದ್ದರಂತೂ ಅವನ ತಾಪತ್ರಯ ಕೇಳಬೇಡಿ.

ಸ್ವಲ್ಪ ಇತ್ತ ತಿರುಗಿ—ಈ ಬದಿಗೆ?

ಆದರ್ಶದ ಹೊಂಗನಸಿನಲ್ಲಿ ಲೀನವಾಗಿರುವ ಈ ಪ್ರಸನ್ನ ಮುಖ ತೇಜಃಪೂರ್ಣ ಕಣ್ಣುಗಳು, ಹುರುಪು—ಉತ್ಸಾಹದ ತಿಳಿನಗೆ—ನೋಡಿದೊಡನೆ ಸದ್ಭಾವನೆ ಸಂಚಾರವಾಗುತ್ತಿದೆ ಹೃದಯದಲ್ಲೆಲ್ಲ, ಅಲ್ಲವೆ ಎಳೆಯ ಜೀವ. ನಾಡಿನ ಸುಂದರ ಭವಿಷ್ಯ ರಚನೆಗಾಗಿ, ಮಕ್ಕಳನ್ನು ತರಬೇತಿಗೊಳಿಸುವೆ, ಎಂಬ ಹುಚ್ಚು ಬೇರೆ ಈತನಿಗಂಟಿದೆ ಎಂದೂ ಅನ್ನಬಹುದು ಬೇಕಾದರೆ!

ಅವನು ವೃತ್ತಿಯಲ್ಲಿ ಪಳಗಿದ. ಏನಾದವು ಅವನ ಆದರ್ಶಗಳು ಏನಾಯಿತು.. ಅವನ ಹೊಂಗನಸು? ಎಲ್ಲಿದೆ ಅವನ ಭವ್ಯ ಭವಿಷ್ಯ ರಚನೆ? ಮಣ್ಣು ಪಾಲು. ಹೌದು, ಮಣ್ಣು ಪಾಲಾದವು ಅವೆಲ್ಲ. ಅಂದು ಆತನಿಗೆ ಈ ವೃತ್ತಿ, ಸಂದರ್ಭವಶಾತ್ತಾಗಿ ದೊರಕಿದ ಒಂದು ವರದಾನ. ಇಂದು ಅದು ಶಾಪ.

ವರದಾನ--ಶಾಪ!

ಎಷ್ಟು ಅಂತರ—ಎಷ್ಟು ಅಸಹ್ಯ!

ಎಲ್ಲರಿಗೂ ಅವನ ಬಗ್ಗೆ ಅನುಕಂಪವಿದೆ. ಸಹಾನುಭೂತಿಯಿದೆ, ಆದರವಿದೆ. ಗೌರವವೂ ಇದೆ; ಮಾತಿನಲ್ಲಿ. ಅಂದ ಮಾತನ್ನು ನಡೆಸಿ ಕೊಡಲು 'ಇದೇನು ಸತ್ಯ ಹರಿಶ್ಚಂದ್ರನ ಕಾಲದಂತೆ ಗತಿಕೆಟ್ಟ ಕಾಲವೇ?

ಉಪ ಅಧ್ಯಾಯ! ಜೀವನ, ಉಪ ಜೀವನ. ಬಟ್ಟೆ ಮಾಸಿದ ಜೀರ್ಣ-ಶೀರ್ಣ ಉಪಬಟ್ಟೆ! ಮಕ್ಕಳ ವಿದ್ಯೆ ಉಪವಿದ್ಯೆ (ಅಪೂರ್ಣ ವಿದ್ಯೆ; ಅವರ ಓದಿಗೆ ಬೇಕಾಗುವ ಪುಸ್ತಕಗಳನ್ನು ಒದಗಿಸಿ ಕೊಡುವ ಅದೃಷ್ಟವೂ ಇವನ ಹಣೆಯಲ್ಲಿ ಬರೆದಿಲ್ಲವಲ್ಲ!) ಇನ್ನು ಆಹಾರ. ಯಾವಾಗಲೂ ಉಪಾಹಾರದಲ್ಲೇ ತೃಪ್ತನಾಗಬೇಕು. ಸಂಸಾರವಲ್ಲೂ... (ಛೆ! ಎಷ್ಟಯ ಮಾತು? ದಯವಿಟ್ಟು ಆ ಪ್ರಶ್ನೆ ಎತ್ತಬೇಡಿ. ಸ್ವಸಂಸಾರದಲ್ಲಿ ಏಗುವುದೇ ಕಷ್ಟವಾಗಿರುವಾಗ ಉಪ ಸಂಸಾರದ ಮಾತೆಲ್ಲಿ! ಅದೊಂದರಲ್ಲಿ ಆತ ಮಹಾ ಭಾಗ್ಯಶಾಲಿ!)

ಕಲಿಸುವ ವಿದ್ಯೆಯೂ ಉಪವಿದ್ಯೆ ಅನ್ನುತ್ತಾರಲ್ಲ ಕೆಲವರು... ತುಸು ಮಟ್ಟಿಗೆ ಆ ಮಾತು ನಿಜ. ತುಸು ಮಟ್ಟಿಗೆ ಅಲ್ಲ ಯೋಗ್ಯ ಅವಕಾಶ ಕೊಡುತ್ತಿದ್ದರೆ, ಊರಿನ ನಾಡಿನ ದೇಶದ ಸಾರೋದ್ಧಾರಕ್ಕಾಗಿ ಹೋರಾಟ ನಡೆಸಬಲ್ಲ ವ್ಯಕ್ತಿ ಇಂದು ಸಂಬಳಕ್ಕೆ ತಕ್ಕಷ್ಟು ಕೆಲಸ ಮಾಡುತ್ತಿರಲಿಲ್ಲ.

ಹೊರೆಯ ಮೇಲೆ ಹೊರೆಹೊತ್ತು ಕುಳಿತ ಅಧ್ಯಾಪಕರಲ್ಲಿ ಹಲಕೆಲವರಿಗೆ ಈಗ ಮತ್ತೊಂದು ಸೌಭಾಗ್ಯ ಪ್ರಾಪ್ತವಾಗುತ್ತಿದೆ. ಗಂಜಿ ಊಟದ ವ್ಯವಸ್ಥೆ! ಜನಗಣನೆಯ ಹೊತ್ತಿಗೆ ಈತ ಓಡಾಡಬೇಕು! ಎಂತಹ ಉದಾರ ವೈಶಾಲ್ಯ ಮನಸ್ಸನ್ನು ಈ ಪ್ರಾಣಿ ಹೊತ್ತು ಕೊಂಡಿದೆಯೋ ಎಂದೆನಿಸುತ್ತಿದೆ, ಒಮ್ಮೊಮ್ಮೆ.

ನಾವು ಸ್ವಲ್ಪ ಪೂರ್ವಜರ ಕಾಲಕ್ಕೆ ಹೋಗೋಣ. (ಅನಾಗರಿಕರ ಕಾಲಕ್ಕೆ ಅಲ್ಲ!) ಈತ ಗುರು ಮಹಾ ಗುರು. ಇವನ ಆಜ್ಞೆ ದೈವಾಜ್ಞೆ. ಇದನ್ನು ರಾಜನೂ ಉಲ್ಲಂಘಿಸಲಾರ. ಬೇಕಾಗುವ ಸೌಕರ್ಯಗಳು ರಾಜನಿಂದ ಒದಗಿಸಲ್ಪಡುತ್ತಿವೆ. ಪುರ ಜನರು ಒದಗಿಸಿಕೊಡುತ್ತಾರೆ. ಆತ ಸಂತೃಪ್ತ, ಯೋಗ್ಯ ಶಿಷ್ಯರಿಗೆ ತನ್ನ ಜ್ಞಾನ ಭಂಡಾರವನ್ನು ಧಾರೆಯೆರಲು ಆತ ಸದಾ ಸಿದ್ಧನಾಗಿರುತ್ತಾನೆ ಶಿಷ್ಯರನ್ನು ಯೋಗ್ಯರನ್ನಾಗಿ ಮಾಡುವದೇ ಅವನ ಕರ್ತವ್ಯ ಎಂದೂ ಕರ್ತವ್ಯದಿಂದ ವಿಮುಖನಾಗಲಾರನಾತ—ಅಂತೆಯೇ ಗುರು ಆಜ್ಞೆಯನ್ನು ಮೀರುವುದು ಮಹಾ ಪಾಪವಾಗಿತ್ತು, ಅಂದು ಗುರು ಆಜ್ಞಾಪಾಲನೆಯೇ ಪರಮಪಾತಕವಾಗಿದೆ ಇಂದು!

ಇದೇ ನಮ್ಮ ನಾಗರಿಕತೆ: ಇದೇ ನಮ್ಮ ಸುಸಂಸ್ಕೃತಿ "ಏನ್ರೀ, ಬಿಟ್ಟಿಗೆ ಕಲ್ಸತ್ತೀರೇನ್ರೀ? ಮೇಲೆ ಕಂಪ್ಲೇಂಟ್ ಬರ್‍ದು ಒಗೆದ್ ಬಿಟ್ಟೇನಂದ್ರೆ...." ಅವರು ನಮ್ಮ ಮಾನ ಕಡೆಯುವರು. ಸ್ವಲ್ಪ ಜ್ಞಾಪಕವಿರಲಿ. ಒಂದು ಕಾಗದ ಬರೆವೆನೆಂದರೆ, ನಿಮ್ಮ ಅವಸ್ಥೆ ಮುಗಿಯಿತು. ಈ ರೀತಿ ಅನ್ನುವ ಮಹಾನುಭಾವರು ಇದ್ದಾರೆ ಈ ಯುಗದಲ್ಲಿ

ನಾವು ಪ್ರಜಾಪ್ರಭುತ್ವ ಸರಕಾರದ ಪ್ರಜೆಗಳು. ಸರಕಾರವೇ ಎಲ್ಲವನ್ನು ಮಾಡಲಿ ಎನ್ನುವುದು ಅಭಾವ ವಿಚಾರದ ಮಾತಾಗಬಹುದು. ಸಾಕಷ್ಟು ಉಳ್ಳವರು ವಿಚಾರವಂತರು ಸೇರಿಕೊಂಡು ಅಧ್ಯಾಪಕರುಗಳ ಬಗೆಗೆ ಯೋಗ್ಯ ವಿಚಾರ ಮಾಡುವುದರಲ್ಲಿ ಹಾನಿ ಇದೆಯೇ. ಅವರು ತಮ್ಮ ಆದರ್ಶದ ದಾರಿಯಲ್ಲೇ ಸಾಗುವ ಹಾಗೆ ನಾವು ಪ್ರಯತ್ನಿಸುತ್ತ ಅವರೊಡನೆ ಸಹಕರಿಸಲಾಗದೆ? ಅಸಾಧ್ಯವಾದುದೇನಿದೆ ಇದರಲ್ಲಿ? ಆದರೆ ಅಧ್ಯಾಪಕರುಗಳ ಚಿತ್ರದ ರಚಿಯನ್ನು ಕಂಡವರೆನ್ನುತ್ತಾರೆ "ತಿನ್ನಲು ಸರಿಯಾಗಿಲ್ಲದ್ದೇನೆ ಅವರಿಗೆ ಇಷ್ಟು ಸೊಕ್ಕು. ಇನ್ನೂ ಹೆಚ್ಚಿನ ವ್ಯವಸ್ಥೆ ಮಾಡಿದಲ್ಲಿ ನಡುಹಗಲಲ್ಲೇ ಚಿತ್ತ ಹಿಡಿದು ಊರು ತುಂಬಾ ತಿರುಗಿ ಯಾರು ಎಂದು" ಈ ಮಾತನ್ನು ನೀವು ಸಮರ್ಥನೆ ಮಾಡುವಿರೋ, ಇಲ್ಲ ಪ್ರತಿ ಭಟಿಸುವಿರೋ, ನನಗೆ ತಿಳಿಯದು. ಆದರೆ ಸುದೀರ್ಘ ಕಾಲನಿಂದಲೂ ಅಧ್ಯಾಪಕರ ಜೀವನದ ಮಟ್ಟ ಇಳಿತದ ವಿರುದ್ಧವಾಗಿ ಹರಿದಿಲ್ಲ ಎಂಬ ಮಾತೇನೋ ನಿಜ.

ಅಂತರಿಕ್ಷ ಯಾತ್ರೆಯಲ್ಲಿದ್ದ ಗ್ಲೆನ್‌ರವರು ಕಳುಹಿಸಿದ ವಾರ್ತೆಗಳನ್ನು ಟೇಪು ರೆಕಾರ್ಡು ಮಾಡುತ್ತಿರುವುದು.

ತಾಯಿ ನುಡಿ ಮೆನನ್ ಸಂಚಿಕೆ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಸಂಚಿಕೆಗೆ ಏಜಂಟರಿಂದ ಸಿಗುತ್ತಿರುವ ಪುರಸ್ಕಾರ, ಪ್ರೋತ್ಸಾಹಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತ ಅವರ ಬೇಡಿಕೆಗಳನ್ನು ಪೂರೈಸುವ ಸಲುವಾಗಿ, ಮೇ ತಿಂಗಳಲ್ಲಿ

ತಾಯಿ ನುಡಿಯ 6ನೆಯ ಹುಟ್ಟುಹಬ್ಬದಂದು

ಪ್ರಕಟಿಸಲಿರುವೆವು:

ರೂ 3·50 ನ. ಪೈಸೆ ಕೊಟ್ಟು ವಾರ್ಷಿಕ ಚಂದಾದಾರರಾಗುವವರಿಗೆ 6ನೆ ಹುಟ್ಟು ಹಬ್ಬದ ಉಡುಗೊರೆಯಾಗಿ ಈ ಸಂಚಿಕೆಯನ್ನು ಕಳಿಸಲಾಗುವುದು ಬಿಡಿ ಪ್ರತಿ: 75 ನ ಪೈಸೆ.

ವ್ಯವಹರಿಸಿರಿ: ವ್ಯವಸ್ಥಾಪಕರು,
ತಾಯಿ ನುಡಿ, 321, ಪ್ರೊಸ್ಪೆಕ್ಟ್ ಬಿಲ್ಡಿಂಗ್,
ಫ್ರಿಯರ್ ರೋಡ್, ಮುಂಬಾಯಿ-1.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಕಾಯದೆ ಒಪ್ಪದ ಸಂಪತ್ತು

(೨ನೇ ಪುಟದಿಂದ)

ತು. ಬಂದದ್ದಾದರೂ ಬರಲಿ ಎಂದು ವ್ಯಾಸ ಭಟ್ಟರ ಮಾತಿನಂತೆ ಅನರೊಪ್ಪಿದ್ದಕ್ಕೆ ನೋಟನ್ನಾದರೂ ಬರೆದುಕೊಳ್ಳುವ ಎಂದರೆ, ಅವರು ಮತ್ತೂ ಬುದ್ಧಿವಂತರಾಗಿದ್ದರು. ತಾಮ್ರದ ಕಥೆಯು ತನಗೆ ತಿಳಿದಿಲ್ಲವೆಂಬಂತೆ ಅವರು ಸಂಪೂರ್ಣ ನಿರಪರಾಧಿತನವನ್ನೇ ರುಜುಪಡಿಸ ಹೊರಟರು. ಇನ್ನೂ ಕೀಟಲೆ ಕೊಡುವುದಾದರೆ, ಮಾನನಷ್ಟ ಧಾವೆ ಹೂಡುವುದಾಗಿ ಬೆದರಿಸಿದರು. ಅಂತೂ ಇದ್ದಿತೆಂದು ಹೇಳಲಾದ ತಾಮ್ರ ಇಲ್ಲವೆಂದಾಗುವುದಕ್ಕೆ ಕಾರಣರಾರೆಂದು ತಿಳಿದೂ ಜನತೆ ದೇವರು ನೋಡಿಕೊಳ್ಳುತ್ತಾನೆ ಎಂದು ಕೈಕಟ್ಟಿ ಕೂರಬೇಕಾಯ್ತು.

ನಡೆದ ತಾಮ್ರ ಪ್ರಕರಣದಿಂದ ವಿಚಿಂತೆಗೀಡಾದವರೆಂದರೆ ರಾಮ ಭಟ್ಟರು ಮಾತ್ರ. ಅವರಾದರೂ ಮಾಡುವುದೇನು? ಅಪರಾಧ ತನ್ನದೇ ವ್ಯಾಸಭಟ್ಟರ ಬಗ್ಗೆ ಅವರಿಗೆ ಮೊದಲೂ ಸದಭಿಪ್ರಾಯವಿತ್ತು ಎಂಬುವಂತಿಲ್ಲ. ಆದರೂ ದೇವಾಲಯದಲ್ಲಿ ಏನಿದೆ? ಎಂಬ ಭಾವನೆಯಿಂದ ಆತನನ್ನು ಪೂಜೆಗೆ ಕರೆದಿದ್ದರು. ಅಂತೂ ಆತ ತನ್ನ ಹೆಸರಿಗೇನೇ ಕಳಂಕ ತವರಿದ; ನನ್ನ ಕರ್ತವ್ಯದ ಭಾರವನ್ನು ಅನ್ಯರ ತಲೆ ಮೇಲೆ ಹೇರಿದರೆ ಆಗುವುದು ಹೀಗೇ" ಎಂದು ರಾಮಭಟ್ಟರೆಂದುಕೊಂಡರು.

"ವ್ಯಾಸ ನಿನ್ನಿಂದ ನನಗೆ ಬಹಳ ಉಪಕಾರವಾಯ್ತು. ಮಿಲ್ಲಿನಲ್ಲಿ ಯಾರನ್ನಾದರೂ ಕೂರಿಸಿದರೆ ವ್ಯವಹಾರ ನಡೆಯದು ಎಂದು ನಾನೇ ಕುಳಿತೆ. ಇಲ್ಲಿ ಅಂತಹ ವ್ಯವಹಾರವಿಲ್ಲವೆಂದು ನಿನ್ನನ್ನು ನಂಬಿದೆ. ನಿಜವಾಗಿಯೂ ನೀನು ನನಗೆ ಕರ್ತವ್ಯದ ಪಾಠವನ್ನು ಕಲಿಸಿದೆ. ಈಗ, ನಿನ್ನ ಕೆಲಸವಾಯಿತು. ನನ್ನ ಗುರುವೆನಿಸಿದ ನಿನಗೆ ಇದೋ ಗುರುಕಾಣಿಕೆಯಾಗಿ ಹತ್ತು ಕ್ರೋಲು ಗದ್ದೆ ನಿನ್ನ ಹೆಸರಿಗೆ ಬರೆಯುತ್ತೇನೆ. ಇನ್ನು ನೀನು ಹೋಗಬಹುದು. ನನ್ನ ಅಪರಾಧಕ್ಕೆ ತಕ್ಕಂತೆ ಶಿಕ್ಷೆ ಈಗಲೇ ನನಗೆ ಸಿಕ್ಕಿತು. ಊರವರನ್ನು ತಲೆಯೆತ್ತಿ ನೋಡುವ ಭಾಗ್ಯ ದೂರವಾಯಿತು. ಇನ್ನು ಏನಾದರೂ ಅಪರಾಧ ವೆಸಗಿದ್ದರೆ ಉಮಾಮಹೇಶ್ವರನು ಕ್ಷಮಿಸಲಿ" ಎಂದು ಕಣ್ಣೊರಸಿಕೊಂಡರು. ವ್ಯಾಸ ಭಟ್ಟರ ಕಂಗಳಲ್ಲಿಯೂ ನೀರೊಸರುವಂತಿತ್ತು; ಆದರೆ, ತತ್‌ಕ್ಷಣ ಅವರು ಅಲ್ಲಿ ನಿಲ್ಲದೆ ಹೊರಟುಹೋದುದರಿಂದ ಅವರ ಅರೆದೆರೆದ ಹೃದಯದ ಬಾಗಿಲು ತಿರುಗಿ ಮುಚ್ಚಿತು.

○ ○ ○

ಸುಮಾರು ಎಂಟು ವರ್ಷಗಳೇ ಕಳೆದುವು. ರಾಮ ಭಟ್ಟರ ಮಿಲ್ಲು ಬಂದಾಯಿತು. ಅವರು ಮನೆ-ದೇವಸ್ಥಾನಗಳ ವರೆಗೆ ಮಾತ್ರ ಪಾದಯಾತ್ರೆ ಬೆಳೆಸುತ್ತಿದ್ದರು. ಒಂದು ದಿನ ಅವರು ಮನೆ ಚಾವಡಿಯಲ್ಲಿ ಕುಳಿತಿದ್ದಾಗ, ತಿಮ್ಮಣ್ಣ ಶೆಟ್ಟರ ಆಳು ಬಂದು, ‘ಅಯ್ಯಾ, ಯಜಮಾನರಿಗೆ ದೇವರ ತೀರ್ಥ ಬಿಡಬೇಕಂತೆ......ಕಿರಿಯಜಮಾನರು ಹೇಳಿದರು" ಎಂದು ವಿನಂತಿಸಿದ. ಮುಕ್ತೇಸರರು ಜಡ್ಡು ಬಿದ್ದು ಬಹುದಿನವಾಗಿತ್ತು. ಈಗ-ಮರುಕ್ಷಣವೆಂಬಂತೆ ಅವರ ಪ್ರಾಣ ಪಕ್ಷಿ ಜೀವನ ಮರಣಗಳೊಡನೆ ಹೊಯ್ದಾಡುತಿತ್ತು. ಭಟ್ಟರು ತಡ ಮಾಡದೆ ದೇವಾಲಯಕ್ಕೆ ತೆರಳಿ, ಪ್ರಾರ್ಥನೆ ಸಲ್ಲಿಸಿ ತೀರ್ಥದ ಕೌಳಿಗೆ ಹಿಡಿದು ಶೆಟ್ಟರ ಮನೆ ಮುಟ್ಟಿದರು. ನಿಶ್ಚೇಷ್ಟಿತರಾಗಿ ಮಲಗಿದ್ದ ಶೆಟ್ಟರು ಭಟ್ಟರ ಆಗಮನವನ್ನೇ ಪ್ರತೀಕ್ಷಿಸುತ್ತಿದ್ದಂತೆ ಕಂಡಿತು. ಭಟ್ಟರು ಹತ್ತಿರ ಹೋಗಿ ಮಂತ್ರ ಹೇಳಿ ಒಂದು ಸೌಟು ತೀರ್ಥ ಬಾಯಿಗೆ ಸುರಿದರು. ಅದನ್ನು ಕುಡಿದ ಶೆಟ್ಟರು ದೇವಾಲಯದತ್ತ ಕೈಸನ್ನೆ ಮಾಡಿ ತಮ್ಮ ಹಣೆಯನ್ನು ಮುಟ್ಟಿಕೊಂಡರು—ಎಲ್ಲವೂ ನನ್ನ ಅದೃಷ್ಟವೆಂಬಂತೆ ಶೆಟ್ಟರ ಕಳವಳವನ್ನು ಊಹಿಸಿದ ಭಟ್ಟರು, "ಶೆಟ್ಟರೆ, ದೇವರು ಇದ್ದಾನೆ ಎಂಬುದು ನಿಜತಾನೆ? ಇಲ್ಲವಾದರೆ, ಆ ವ್ಯಾಸ ಹೀಗೆ ಏಕಾಗುತ್ತಾನೆ ದೇವಸ್ವವನ್ನು ಅಪಹರಿಸಿದವರು ಎಂದಿಗೂ ಸುಖ ಭೋಗಿಸಲಾರ. ಇಂದು ಆತ ಎಲ್ಲವನ್ನೂ ಜರಳೆ ಧಾರಣೆಯಲ್ಲಿ ಕಳೆದುಕೊಂಡು ಏಕಾಕಿಯಾಗಿ ತಿರುಪೆಯೆತ್ತುವವನಂತಾಯಿತು. ಹೆಂಡತಿಯೇನೋ ಮುತ್ತೈದೆಯಾಗಿ ಕಣ್ಣು ಮುಚ್ಚಿದಳು ಇಲ್ಲವಾದರೆ ಇದನ್ನೆಲ್ಲ ಯಾರು ನೋಡಬೇಕು?" ಎಂದರು.

ಶೆಟ್ಟರು ಹೌದು ಎನ್ನುವಂತೊಮ್ಮೆ ಉಸಿರುಬಿಟ್ಟರು. ಅವರು ಆಗ ಬಿಟ್ಟ ಉಸಿರೇ ಕಡೆಯದಾಯಿತು. ಆ ಕ್ಷಣದಲ್ಲಿಯೇ ಜನರ ಗುಂಪನ್ನು ಭೇದಿಸುತ್ತ ಒರ್ವ ಮುದಿಯ ನುಗ್ಗಿ ಬಂದ. "ಶೆಟ್ಟರೇ ನಾನು ಮಾಡಿದುದು ಸರ್ವಾಪರಾಧನಾಯ್ತು; ನನ್ನನ್ನು ಕ್ಷಮಿಸಿಬಿಡಿ ನನ್ನನ್ನು ಕ್ಷಮಿಸಿಬಿಡಿ. ಉಂಡ ಮನೆಗೆರಡು ಬಗೆದ ಪಾಪಿ ನಾನು. ನನ್ನ ತಪ್ಪಿಗೆ ಉಮಾಮಹೇಶ್ವರ ಶಿಕ್ಷೆಕೊಟ್ಟ; ನಾನೂ ಅನುಭವಿಸುತ್ತಿದ್ದೇನೆ. ನೀವು ದೇವರ ಪ್ರತಿನಿಧಿಯಾಗಿ ಕ್ಷಮಿಸಿದ್ದೇನೆ ಎನ್ನಿ. ಆಗ ಸುಖದಿಂದ ಸಾಯುತ್ತೇನೆ" ಎಂದು ಕಳೇವರದ ಕಾಲಿಗೆ ಬಿದ್ದ. ಇದನ್ನೆಲ್ಲಾ ಅನತಿದೂರದಲ್ಲೇ ನೋಡುತ್ತಿದ್ದ ರಾಮ ಭಟ್ಟರು ಮೃತ ಶೆಟ್ಟರ ಮುಖದಲ್ಲಿ ಅಪೂರ್ವ ತೇಜಸ್ಸೊಂದು ತೋರಿ ಮಾಯವಾದಂತೆ ಕಂಡರು. ನಿಜವಾಗಿಯೂ ಮಾಡಿದ ತಪ್ಪಿಗೆ ಪಶ್ಚಾತ್ತಾಪವೇ ಪ್ರಾಯಶ್ಚಿತ್ತವೆಂಬುದಕ್ಕೆ ಬೇರೆ ನಿದರ್ಶನ ಬೇಡವೆಂದವರು ‘ವ್ಯಾಸ’ ಎಂದು ಆತನನ್ನು ಎತ್ತಿದರು. "ಅಣ್ಣಾ" ಎಂದ ಆ ವ್ಯಕ್ತಿ ಭಟ್ಟರನ್ನು ಬಿಗಿಯಾಗಿ ಅಪ್ಪಿತು. ಇದನ್ನು ನೋಡುತ್ತ ನಿಂತವರು ನೋಡುತ್ತಲೇ ನಿಂತರು.



ಶಿವಾನಂದ ವಾಣಿ

ವಿಶ್ವಾಸೋ ಫಲದಾಯಕಃ

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ರಿಟಾಯರ್ಡ್)

ಚಿಕ್ಕ ವಯಸ್ಸಿನ ರಾಜಕುಮಾರನೊಬ್ಬನು ಹಲವು ರತ್ನಾಭರಣಗಳನ್ನು ತೊಟ್ಟುಕೊಂಡು ಅಲಂಕೃತನಾಗಿ ಒಂದಾನೊಂದು ಸರೋವರದ ದಡದಲ್ಲಿ ನಿಂತುಕೊಂಡಿದ್ದನು. ವೃದ್ಧ ದರೋಡೆಗಾರನೊಬ್ಬನು ಸನ್ಯಾಸಿ ವೇಷವನ್ನು ಧರಿಸಿ ರಾಜಕುಮಾರನ ರತ್ನಾಭರಣಗಳನ್ನು ಮೋಸದಿಂದ ಅಪಹರಿಸುವ ಉದ್ದೇಶದಿಂದ ಆ ಸರೋವರದ ಸಮೀಪ ಹಠಾತ್ತಾಗಿ ಬಂದು ಮೌನಿಯಾಗಿ ನಿಂತನು. ಕ್ಷಣವೊಂದರಲ್ಲಿ "ಅಯ್ಯೋ, ಅಯ್ಯೋ" ಎಂದು ನಟನೆಯ ಕೂಗನ್ನೆಬ್ಬಿಸಿ ನೆಲದ ಮೇಲೆ ಉರುಳಾಡಿದನು. ಆಗ ದಯಾಳುವಾದ ಅರಸುಮಗನು ಈ ವೃದ್ಧನನ್ನು ಶುಶ್ರೂಷೆ ಮಾಡತೊಡಗಿದನು.

ಕಪಟ ಸನ್ಯಾಸಿಯು ರಾಜಪುತ್ರನನ್ನು ದಿಟ್ಟಿಸಿ— "ಮಗನೇ, ನನಗೆ ಬಹುತರ ದಾಹವಾಗಿದೆ— ಈ ಕೊಳದ ನೀರನ್ನು ತಂದುಕೊಡು." ಎಂದಾಗ ರಾಜಕುಮಾರನು ಕೊಳದ ಬಳಿ ಓಡಿಬಂದಾಗ, ಸನ್ಯಾಸಿಯು ಆತನನ್ನು ಕರೆದು —"ಮಗನೇ, ಇನ್ನು ಕೆಲವು ನಿಮಿಷಗಳಲ್ಲಿ ನಾನು ನನ್ನ ಈ ದೇಹವನ್ನುಳಿದು ಪರಲೋಕಕ್ಕೆ ಸಾಗುವೆನು. ನನ್ನಲ್ಲಿ ಮಾಂತ್ರಿಕ ಶಕ್ತಿಯು ಅಗಾಧವಾಗಿ ಫಲಿಸಿದೆ. ನೀನು ಈ ಸರೋವರದಲ್ಲಿ ಮುಳುಗಿ ದೇವಧ್ಯಾನ ಮಾಡುತ್ತಾ ಇರಬೇಕು. ನಾನು ನಿನ್ನನ್ನು ಕರೆದಾಗ ಮಾತ್ರ ನೀನು ಉದಕದಿಂದ ನಿನ್ನ ಶಿರವನ್ನು ಮೇಲೆ ಎತ್ತಿ ಉದಕಸಹಿತ ನನ್ನಲ್ಲಿ ಬಂದರೆ ನನ್ನ ಮಂತ್ರಬಲದಿಂದ ನಿನಗೆ ಶ್ರೀಮನ್ನಾರಾಯಣ ದೇವರ ದರ್ಶನವಾಗುವುದು, ಮಾತ್ರವಲ್ಲ ನೀನು ಕೊಳದಲ್ಲಿ ಮುಳುಗುವ ಮೊದಲು ನೀನು ಧರಿಸಿರುವ ಎಲ್ಲಾ ರತ್ನಾಭರಣಗಳನ್ನು ಕೊಳದ ದಡದ ಮೇಲೆ ಇಡಬೇಕು. ಮತ್ತು ಕಣ್ಣುಮುಚ್ಚಿ ಧ್ಯಾನಮಾಡಬೇಕು"— ಎಂದು ಎಚ್ಚರಿಸಿದನು. ಸಾಧು ಸ್ವಭಾವದ ರಾಜಕುಮಾರನು ಸನ್ಯಾಸಿಯ ಮಾತನ್ನು ಸಂಪೂರ್ಣ ಭಕ್ತಿವಿಶ್ವಾಸದಿಂದ ನಂಬಿ ಸನ್ಯಾಸಿಯು ಹೇಳಿದಂತೆ ಆಭರಣಗಳನ್ನು ಕೊಳದ ದಡದ ಮೇಲಿಟ್ಟು, ಕಣ್ಣು ಮುಚ್ಚಿ ನೀರಲ್ಲಿ ಮುಳುಗಿದನು.

ಹಲವು ತಾಸುಗಳು ಕಳೆದರೂ ಕಪಟ ಸನ್ಯಾಸಿಯು ಹುಡುಗನನ್ನು ಕರೆಯಲಿಲ್ಲ—ಹುಡುಗನಲ್ಲಿ ವಿಶೇಷವಾದ ಧೈರ್ಯ, ಸ್ಥೈರ್ಯ ಮತ್ತು ಹೃದಯಬಲವಿದ್ದವು. ಗುರುವು ಕರೆಯದೆ ತಾನೆಂದಿಗೂ ನೀರಿನಿಂದ ಶಿರವನ್ನೆತ್ತಲಾರೆನೆಂದು ದೃಢಚಿತ್ತಭಾವದಿಂದ ನೀರಲ್ಲೇ ಮುಳುಗಿ ನಾರಾಯಣ ಸ್ವಾಮಿಯ ಧ್ಯಾನವನ್ನು ಭಕ್ತಿಯಿಂದ ಮಾಡುತ್ತಿದ್ದನು. ಅನಂತರ ಸರೋವರದ ಅಡಿಯಲ್ಲಿ ಮೂರ್ಛಿತನಾಗಿ ಬಿದ್ದುಬಿಟ್ಟನು.

ರಾಜಪುತ್ರನ ನಿಶ್ಚಲ ವಿಶ್ವಾಸವನ್ನು ಪರಮಾತ್ಮನು ಕಂಡು ತಾನು ಕೊಳದ ಬಳಿ ಸುಂದರ ರೂಪದಲ್ಲಿ ಬಂದು ಆತನನ್ನು ಕರೆದಾಗ ಹುಡುಗನು ಸರೋವರದಿಂದ ಹೊರಗೆ ಬರಲು ನಿರಾಕರಿಸಿ-ತನ್ನ ಗುರುವಾದ ಆ ಸಂತ ವೃದ್ಧ ಸನ್ಯಾಸಿಯು ತನ್ನನ್ನು ಕರೆಯದೆ ತಾನು ಹೊರಗೆ ಎಂದೂ ಬರಲಾರೆನೆಂದು ಮನೋಕಲ್ಪನೆಯಿಂದ ವ್ಯಕ್ತಪಡಿಸಿದನು.

ಭಕ್ತರದಾಸನಾದ ಪರಮಾತ್ಮ ಶ್ರೀಮನ್ನಾರಾಯಣನು ಪೋಲೀಸ್ ಅಧಿಕಾರಿಯ ವೇಷವನ್ನು ಧರಿಸಿ ಕಪಟ ಸನ್ಯಾಸಿಯಾದ ದರೋಡೆಗಾರನಲ್ಲಿ ಬಂದು ಆ ಕಳ್ಳನನ್ನು ಕೈದು ಮಾಡಿದನು ಮಾತ್ರವಲ್ಲ ನೀರಲ್ಲಿ ಮುಳುಗಿದ ಕುವರನು ತನ್ನ ಮಗನೆಂದೂ, ಆತನನ್ನು ಕೊಳದ ಬಳಿ ಬಂದು ಕೊಳದ ಹೊರಗೆ ಬರುವಂತೆ ಕೂಗಿ ಕರೆಯಬೇಕೆಂದೂ ನಿರ್ಬಂಧಿಸಿದನು. ವೃದ್ಧ ದರೋಡೆಗಾರನು ಹೆದರಿ ಕಂಗಾಲಾಗಿ ಪೋಲೀಸ್ ವೇಷಧಾರಿಯಿಂದ ಶ್ರೀಮನ್ನಾರಾಯಣ ಸ್ವಾಮಿಯ ಜೊತೆಯಲ್ಲಿ ಸರೋವರದ ಬಳಿ ಬಂದು ನಿಂತು "ಪ್ರಿಯ ಮಗನೇ ಈಗ ನೀರಿನಿಂದ ಹೊರಗೆ ಬಂದು ಬಿಡು" ಎಂದನು. ಬಹಳ ಉಲ್ಲಾಸದಿಂದ ರಾಜಪುತ್ರನೂ ಸರೋವರದಿಂದ ಬೊಗಸೆ ಉದಕ ಸಮೇತ ಬಂದು ಕಪಟ ಸನ್ಯಾಸಿಯನ್ನು ನಮಸ್ಕರಿಸಿದನು. ಕ್ಷಣವೊಂದರಲ್ಲಿ ಕಪಟ ಸನ್ಯಾಸಿ ದರೋಡೆಗಾರನು ಮೃತನಾಗಿ ನೆಲದ ಮೇಲೆ ಬಿದ್ದುಬಿಟ್ಟನು. ಪೋಲೀಸ್ ವೇಷಧಾರಿಯಾದ ಭಗವಾನ್ ನಾರಾಯಣನು ಮಾಯವಾಗಿದ್ದನು. ಆಭರಣಗಳೆಲ್ಲವೂ ಕೊಳದ ದಡದಲ್ಲಿ ಸುರಕ್ಷಿತವಾಗಿ ಬಿದ್ದಿದ್ದವು.

ಪರಮಾತ್ಮನಲ್ಲಿ ದೃಢ ವಿಶ್ವಾಸವಿರಿಸಿದ ಯುವಕ ರಾಜಪುತ್ರನಿಗೆ— ಪ್ರತಿಫಲವಾಗಿ ಭಗವಂತನ ದರ್ಶನವಾಯಿತು. ಮಾತ್ರವಲ್ಲ ಕಪಟ ಸನ್ಯಾಸಿಯು ತನ್ನ ಮೋಸ ಕೃತ್ಯದ ದುಷ್ಫಲವನ್ನು ಕ್ಷಿಪ್ರ ಭುಂಜಿಸಬೇಕಾಯಿತು.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು — 3

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ನಿಮಗೂ ಗೊತ್ತಿರಲಿ

ವಿಜ್ಞಾನದ ಅದ್ಭುತ ಸಂಶೋಧನೆಗಳು

ಭೂಮಿಗೆ ಹೊಸ ಉಪಗ್ರಹಗಳು-

ಚಂದ್ರನು ಮಾತ್ರ ಭೂಮಿಗೆ ಸುತ್ತು ಬರುವ ಉಪಗ್ರಹವೆಂದು ಮೊದಲು ತಿಳಿಯಲಾಗುತಿತ್ತು. ಈಗ್ಗೆ ಕೆಲವು ದಿನಗಳಿಗೆ ಮೊದಲು ಇನ್ನೆರಡು ಗ್ರಹಗಳೂ ಪೃಥ್ವಿಗೆ ಪ್ರದಕ್ಷಿಣೆ ಬರುತ್ತವೆಂದು ಕಂಡುಹಿಡಿದಿದ್ದಾರೆ. ಪೋಲೇಂಡಿನ ಕ್ರಾಕೋವ್ ವೇಧ ಶಾಲೆಯ ಡಾ| ಕಾರ್ಡಿಲೆವಸ್ಕಿಯೆಂಬ ವಿಶೇಷಜ್ಞನು ಕಳೆದ ಹತ್ತು ವರ್ಷಗಳ ವರೆಗೆ ನಿರಂತರ ಪರಿಶ್ರಮಪಟ್ಟು ಈ ಉಪಗ್ರಹಗಳನ್ನು ಸಂಶೋಧಿಸಿದನು. ಭೂಮಿ ಮತ್ತು ಚಂದ್ರಗಳ ನಡುವಿರುವಷ್ಟೇ ಅಂತರವು ಭೂಮಿ ಮತ್ತು ಈ ಉಪಗ್ರಹಗಳ ನಡುವಿದೆ. ನೋಡುವಾಗ ಈ ಉಪಗ್ರಹಗಳು ಮೋಡದಂತೆ ಕಾಣುತ್ತವೆ. ಅಸಂಖ್ಯ ಉಲ್ಕೆಗಳು ಒಂದು ಸೇರಿಯೇ ಈ ಉಪಗ್ರಹಗಳಾಗಿವೆಯೆಂದು ವೈಜ್ಞಾನಿಕರು ಹೇಳುತ್ತಾರೆ. ಆಕಾಶವು ನಿರ್ಮಲವಾಗಿರುವಾಗ, ಚಂದ್ರನ ಹಿಂದೆ ೬೦ ಡಿಗ್ರಿ ಕೋಣದಲ್ಲಿ ಪ್ರಕಾಶಯುಕ್ತ ಡಬ್ಬಿಗಳಂತೆ ಈ ಎರಡೂ ಗ್ರಹಗಳು ಬರಿಯ ಕಣ್ಣಿಗೆ ಕಾಣುತ್ತವೆ. ಕಳೆದ ವರ್ಷ ವಸಂತ ಋತುವಿನಲ್ಲಿ ಒಂದು ವಿಶೇಷ ಕೆಮರಾದ ಸಹಾಯದಿಂದ ಈ ಉಪಗ್ರಹಗಳ ಛಾಯಾ ಚಿತ್ರ ತೆಗೆಯುವುದರಲ್ಲಿ ಡಾ| ಕಾರ್ಡಿಲೆವಸ್ಕಿಯವರು ಯಶಸ್ವಿಯಾಗಿದ್ದಾರೆ.

ಜೀವಾಣುಗಳ ಆಯುಷ್ಯ

ಮಾನವನು ಸಾಯಬಲ್ಲನು; ಆದರೆ, ಕೀಟಾಣುಗಳು ಲಕ್ಷಾಂತರ ವರ್ಷಗಳ ಕಾಲ ಜೀವಂತವಿರುತ್ತವೆ. ಪಶ್ಚಿಮ ಜರ್ಮನಿಯ ಒರ್ವ ಕೀಟಾಣು ವಿಶೇಷಜ್ಞ ಡಾ| ಹಾಯಿನ್ಸ್ ದೊಂಬ್ರವಸ್ಕಿಯವರು ೧೮ ಕೋಟಿ ವರ್ಷಗಳ ಹಳೆಯದಾದ (ಪಾರ್ಮಿಯನ್ ಕಾಲದ ಅತಿಸೂಕ್ಷ್ಮ ಜಂತುಗಳು ಉಪ್ಪಿನಲ್ಲಿ ಸೇರಿಕೊಂಡಿರುವುದನ್ನೂ ಅವು ಜೀವಂತವಿರುವುದನ್ನೂ ಕಂಡು ಹಿಡಿದಿದ್ದಾನೆ. ವಾಡನ್ ಹೇಮ್ ಎಂಬಲ್ಲಿ ಭೂಗರ್ಭದೊಳಗೆ ಆರುನೂರು ಅಡಿ ಆಳದಿಂದ ತೆಗೆದ ಉಪ್ಪು ನೀರಿನಲ್ಲಿ ಮೊದಲ ಬಾರಿಗೆ ಈ ಅಣುಗಳಿರುವುದು ಗೊತ್ತಾಯಿತು. ಡಾ| ದೊಂಬ್ರಾವಸ್ಕಿಯು ಉಪ್ಪಿನ ಈ ಗಣಿಗಳಲ್ಲಿ ಮತ್ತೂ ಆಳಕ್ಕೆ ಶೋಧಿ ಉಪ್ಪು ಪಡೆಯುವ ಪ್ರಯತ್ನ ಮಾಡಿದನು. ಇದರಿಂದ ಜೀವಾಣುಗಳ ಆಯುಷ್ಯದ ಬಗ್ಗೆ ಜ್ಞಾನವುಂಟಾಯಿತು. ಸೂಕ್ಷ್ಮಾತಿ ಸೂಕ್ಷ್ಮವಾದ ಬಾಹ್ಯ ಜಂತುಗಳು ಈ ಉಪ್ಪಿನಲ್ಲಿ ಪ್ರವೇಶ ಪಡೆಯಲಾರವು. ಆದುದರಿಂದ, ಈ ಉಪ್ಪನ್ನು ಆತನು ತನ್ನ ಪ್ರಯೋಗ ಶಾಲೆಗೆ ಒಯ್ದು ನಿರೀಕ್ಷಣೆಗೆ ಗುರಿಮಾಡಿದಾಗ, ಸ್ಯೂಡೊ ಮೊನಾಸ್ ಎಂಬ ಜಂತುಗಳಿರುವುದು ಕಂಡುಬಂತು. ಡಾಕ್ಟರನು ಮೊದಲೇ ಆ ಜಂತುಗಳ ಆಹಾರ ಪದಾರ್ಥ ಮಿಶ್ರಣಗೈಯ್ದಿರುವ ಇನ್ನೊಂದು ದ್ರವದಲ್ಲಿ ಹಾಕಿಟ್ಟನು. ಕೆಲವು ದಿನಾ ನಂತರ ಮರಳಿ ನೋಡಿದಾಗ, ಜಂತುಗಳ ಸಂಖ್ಯೆಯು ವೃದ್ಧಿಯಾದುದು ತೋರಿಬಂತು. ಈ ಪ್ರಯೋಗವನ್ನವನು ೧೮೦ ಸಲ ಮಾಡಿದನು; ಅನಂತರವೇ ಈ ನಿಷ್ಕರ್ಷೆಯನ್ನವನು ಹೊರಗೆಡಹಿದನು.

ಕಳೆದ ನವಂಬರದಲ್ಲಿ ಕೆನೆಡಾದ ಮೋಂಟ್ರೀಲ್‌ನ ವಿಶ್ವವಿದ್ಯಾಲಯದ ಮೂಲಕ ಸಸ್ಕೆಚುವಾನ್ ಎಂಬಲ್ಲಿ ದೊರೆತ ಉಪ್ಪಿನ ಮಾದರಿಯನ್ನು ಡಾ| ದೊಂಬ್ರಾವಸ್ಕಿಯವರಿಗೆ ಕಳುಹಿಸಲಾಯಿತು. ಇದರಲ್ಲಿಯೂ ಅತಿ ಸೂಕ್ಷ್ಮ ಜೀವಿಗಳಿದ್ದುವು. ಡಾ| ದೊಂಬ್ರಾವಸ್ಕಿಯು ವಿಶ್ವವಿದ್ಯಾಲಯ ಮತ್ತು ವೈಜ್ಞಾನಿಕರೆಲ್ಲರಿಗೂ ಒಂದು ಪ್ರಾರ್ಥನೆ ಮಾಡಿಕೊಂಡು, ೭೫ ಕೋಟಿ ವರ್ಷ ಹಳೆಯದಾದ, ಎಂದರೆ ಕೇಂಬ್ರಿಯನ್ ಕಾಲಕ್ಕೆ ಹಿಂದಿನ ಉಪ್ಪು ಎಲ್ಲಿಯಾದರೂ ಸಿಕ್ಕಿದರೆ, ಅದನ್ನು ತನ್ನ ಬಳಿಗೆ ಕಳಿಸಿಕೊಡುವಂತೆ ಕೇಳಿಕೊಂಡಿದ್ದಾನೆ. ಕೇಂಬ್ರಿಯಲ್ ಕಾಲಕ್ಕೆ ಹಿಂದಿನ ಯಾವುದೆ ಬಂಡೆಯಲ್ಲಿ ದೊಡ್ಡ ಆಕಾರದ ಯಾವ ಜೀವಾವಶೇಷವೂ ದೊರೆಯುವುದಿಲ್ಲ.

ಒಂದು ಚಮಚ ಜೇನು

ಜೇನು ನೊಣವು ಹೂವಿಂದ ಹೂವಿಗೆ ನೆಗೆದು, ಅಲ್ಲಿ ಜೇನನ್ನು ಹೀರಿ ತನ್ನ ಗೂಡಿನಲ್ಲಿ ಸಂಗ್ರಹಿಸಿಡುವುದೆಂದು ಸಾಮಾನ್ಯವಾಗಿ ಎಲ್ಲರೂ ತಿಳಿದಿದ್ದಾರೆ. ಆದರೆ, ನೊಣವು ಹೂವಿನಿಂದ ಅಪಹರಿಸಿಕೊಂಡು ಬರುವ ಪದಾರ್ಥವು ಜೇನಲ್ಲ; ಅದು ಜೇನಿಗೆ ಆಧಾರ ಪದಾರ್ಥ ಮಾತ್ರ. ಹಣ್ಣುಗಳಲ್ಲಿರುವ ಸಿಹಿಯಾದ ದ್ರವರೂಪದ ಸಕ್ಕರೆಯ ನೀರು, ಕಬ್ಬಿನ ರಸ ಇವನ್ನೇ ಈ ಮಕರಂದವು ಹೋಲುತ್ತದೆ. ಹೀಗೆ ತಂದ ಮಕರಂದವನ್ನು ಜೇನಾಗಿ ಮಾರ್ಪಡಿಸುವ ಭಯಂಕರ ರೂಪದ ಕಾರಖಾನೆಯು ನೊಣದ ಹೊಟ್ಟೆಯೊಳಗೆ ಇರುತ್ತದೆ.

ಜೇನು ನೊಣದ ಹೊಟ್ಟೆಯಲ್ಲಿ ಎರಡು ಭಾಗಗಳಿವೆ. ಮೊದಲನೆಯದು ಮಧು ಸಂಗ್ರಹಿಸುವ ಚೀಲ ಮತ್ತೊಂದು ಹೊಟ್ಟೆ. ಚೀಲದಲ್ಲಿ ಸಂಗ್ರಹಿಸಿದ ಸ್ವಾದಿಷ್ಟವಾದ ಪುಷ್ಪರಸವನ್ನು ಜೇನಾಗಿ ಪರಿವರ್ತಿಸುವ ರಾಸಾಯನಿಕ ಕ್ರಿಯೆಯ ರಹಸ್ಯವೇ ನೊಣದ ವೈಶಿಷ್ಟ್ಯ. ಚೀಲ ಹೊಟ್ಟೆಗಳ ನಡುವೆ ಒಂದು ನಾಳವಿದೆ. ಇದರಲ್ಲಿ ಒಂದು ಕವಾಟವಿದೆ. ನೊಣ ಬಯಸಿದಾಗ, ಚೀಲದೊಳಗಿನ ಮಧುರಸವು ಕವಾಟದ ಬಾಗಿಲನ್ನು ತೆರೆದು ನಾಳವನ್ನು ಹಾದು ಹೊಟ್ಟೆ ಸೇರುತ್ತದೆ. ಈ ನಾಳವೇ ರಸವನ್ನು ಅದಕ್ಕೆ ಜೇನಾಗಿ ರೂಪಾಂತರಿಸುತ್ತದೆ.

ಆಹಾರದ ಮೇಲೆ ಜೇನು ಸುರಿಸಿದಾಗ ನಮಗೆ ಈ ಕಲ್ಪನೆಯೇ ಬರುವುದಿಲ್ಲ. ನೂರಾರು ಮೈಲು ಸುತ್ತಾಡಿ ಸಾವಿರಾರು ಹೂಗಳಿಂದ ಮಕರಂದಾಪಹರಣಗೈದ ನೊಣಗಳ ಹೊಟ್ಟೆಯ ರಾಸಾಯನಿಕ ಪ್ರಕ್ರಿಯೆಯಿಂದ ನಮಗೆ ಒಂದು ಚಮಚ ಜೇನು ಸಿಗುತ್ತದೆ!

ಗ್ಲೆನ್ನರ ಅಂತರಿಕ್ಷ ನೌಕೆಯನ್ನು ಅಧ್ಯಕ್ಷ ಕೆನಡಿಯವರು ನೋಡುತ್ತಿರುವರು.

ಅಸಫಲತೆಯತ್ತ ಜಿನೇವಾ ಸಮ್ಮೇಳನ

(೧ನೇ ಪುಟದಿಂದ)

ಎತ್ತು ಏರಿಗೆ, ಕೋಣ ನೀರಿಗೆ

ಅಮೆರಿಕೆಯು ಶಾಂತ ಸಾಗರದಲ್ಲಿ ಅಣುಪರಿಶೀಲನೆಯನ್ನು ಮುಂದುವರಿಸಿದರೆ, ರಶ್ಯವು ನೆಲದಡಿಯಲ್ಲಿಯೇ ಇಂತಹ ಪರಿಶೀಲನೆಯನ್ನು ಮಾಡುತ್ತದೆ. ಹೀಗೆ ಎರಡೂ ರಾಷ್ಟ್ರಗಳು ನಿಶ್ಶಸ್ತ್ರೀಕರಣವೆಂದು ಹೇಳುತ್ತಾ ಅಣ್ವಸ್ತ್ರ ಪರಿಶೀಲನೆಯನ್ನು ನಿಯಂತ್ರಿಸಬೇಕೆಂದು ವಾದಿಸುತ್ತಿರುವುದಾದರೂ ತಾವೇ ಈ ಪರಿಶೀಲನೆಯನ್ನು ನಿಲ್ಲಿಸುವಲ್ಲಿ ಆಸಕ್ತಿಯನ್ನು ತೋರಿಸುವಂತಿಲ್ಲ. ಇಬ್ಬರೂ ತಂತಮ್ಮ ಸ್ವಾರ್ಥಸಾಧನೆಗಾಗಿ, ತಂತಮ್ಮ ಪ್ರಭಾವವನ್ನು ಚಿರಸ್ಥಾಯಿಯಾಗಿಸುವ ಸಲುವಾಗಿಯೇ ಜಿನೇವಾ ಸಮ್ಮೇಳನವನ್ನು ಉಪಯೋಗಿಸುವ ಇರಾದೆಯುಳ್ಳವರಾಗಿದ್ದಾರೆಂಬುದು ಯಾರಿಗಾದರೂ ಅರಿವಾಗುವುದು. ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತೆಂಬಂತೆ ಈ ಸಮ್ಮೇಳನದ ಪಾಡಾಗಿದೆ.

ತಟಸ್ಥರ ಪಾತ್ರ

ಪಾಶ್ಚಾತ್ಯ ರಾಷ್ಟ್ರಗಳು ಅಮೆರಿಕೆಯ ಗುಂಪನ್ನು ಬಿಡಲಾರವು. ಹಾಗೆಯೇ ರಶ್ಯವೂ ತನ್ನದೇ ಆದ ಹಿಂಬಾಲಕರನ್ನು ಪಡೆದಿದೆ. ಈ ಎರಡೂ ಬಣಗಳು ತಮ್ಮ ನಾಯಕ ರಾಷ್ಟ್ರವಿಟ್ಟ ಹೆಜ್ಜೆಯನ್ನು ಸಮರ್ಥಿಸುತ್ತ ಬರುವುದನ್ನು ಮಾತ್ರ ತಮ್ಮ ಕರ್ತವ್ಯವೆಂದು ತಿಳಿದರೆ ವಿಸ್ಮಯಪಡಬೇಕಾಗಿಲ್ಲ. ಇಲ್ಲಿ ತಟಸ್ಥ ರಾಷ್ಟ್ರಗಳಿಗೇನೇ ಆದುದರಿಂದ ಜವಾಬ್ದಾರಿಯು ಹೆಚ್ಚು ಬೀಳುತ್ತದೆ. ನಿಶ್ಶಸ್ತ್ರೀಕರಣವೆಂಬುದು ಕೇವಲ ಅಮೆರಿಕೆಯ ಇಲ್ಲವೇ ರಶ್ಯದ ಪ್ರಶ್ನೆಯಲ್ಲ; ಅವುಗಳ ಕೈಗೊಂಬೆಗಳೆನಿಸಿದ ರಾಷ್ಟ್ರಗಳ ಪ್ರಶ್ನೆಯೂ ಅಲ್ಲ. ಜಾಗತಿಕ ಪ್ರಶ್ನೆಯಿದು. ಬಹು ದಿನಗಳ ಪೂರ್ವಸಿದ್ಧತೆಯ ನಂತರ ಬಂದು ಸೇರಿದ್ದ ನಿಶ್ಶಸ್ತ್ರೀಕರಣ ಸಮ್ಮೇಳನವು ಯಶಸ್ವಿಯಾಯಿತೆಂದರೆ, ಜಗತ್ತಿಗೆ ಲಯಕಾಲ ಅತಿ ನಿಕಟವಾಯಿತೆಂದರ್ಥ. ಆದುದರಿಂದ ಎಲ್ಲರೂ ಸಹಕಾರದಿಂದ ವರ್ತಿಸಿ ಈ ಜಗತ್ತಿನ ಪ್ರಥಮಾವಶ್ಯಕತೆಯನ್ನು ಸಾಧಿಸುವಲ್ಲಿ ತಂತಮ್ಮ ಶಕ್ತಿ ಸರ್ವಸ್ವವನ್ನು ಕೇಂದ್ರೀಕರಿಸಬೇಕು. ಪರಸ್ಪರ ಪೂರ್ವಗ್ರಹಕ್ಕೆ ಒಳಗಾಗಿ ಏಕಪಕ್ಷೀಯರಂತೆ ವರ್ತಿಸುವ ಅಮೆರಿಕೆ-ರಶ್ಯಗಳ ನಾಯಕಾಗ್ರಣಿಗಳಲ್ಲಿ ಒಮ್ಮತವುಂಟಾಗುವಂತೆ ಶ್ರಮಿಸುವುದು, ಎತ್ತು ಅಣ್ವಸ್ತ್ರ ಪ್ರತಿಬಂಧನವನ್ನಾದರೂ ಸದ್ಯ ಸಾಧಿಸುವುದು ತಮ್ಮ ಪ್ರಥಮ ಕರ್ತವ್ಯವೆಂದು ತಿಳಿಯಬೇಕು. ಈ ದಿಸೆಯಲ್ಲಿ ಭಾರತವು ತುಂಬ ಆಸಕ್ತಿಯನ್ನು ವಹಿಸುತ್ತದೆ. ಈ ಆಸಕ್ತಿಯು ಪ್ರಯೋಜನಕಾರಿಯಾಗಿ ಸಫಲವಾಗಲೆಂಬುದರಲ್ಲಿ ಜಗತ್ತಿನ ೩೦೦ ಕೋಟಿ ಕಂಠಗಳು ಸಮಾವೇಶಗೊಂಡಿವೆ.



ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ: ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ (ಆಂಗ್ಲ ಸ್ವಯಂಬೋಧಿನಿ) ನವಭಾರತ ಪುಸ್ತಕ ಭಂಡಾ[ರ] ಉಡುಪಿ

ಸಂಪುಟ ೪೧ ಸಂಚಿಕೆ ೩೫ | ಉಡುಪಿ 10—5—1962 ಗುರುವಾರ | Vol. 41 No. 35

ಭಾರತ ಪ್ರಜಾಪ್ರಭುತ್ವದ

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ

ಕಳೆದ ಹನ್ನೆರಡು ವರ್ಷಗಳಿಂದ ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವದ ಅತ್ಯುಚ್ಚ ಪದವಿಯನ್ನು ಅಲಂಕರಿಸಿದ ರಾಜೇಂದ್ರ ಬಾಬುರವರು ಇದೇ ಹದಿಮೂರನೆಯ ದಿನಾಂಕದಂದು ಹೊಸದಾಗಿ ಆಯ್ಕೆ ಹೊಂದುವವರಿಗೆ ಅಧಿಕಾರವನ್ನು ಒಪ್ಪಿಸಿ ನಿವೃತ್ತರಾಗುವರು. ಭಾರತವು ಡೊಮಿನಿಯನ್ ರಾಷ್ಟ್ರ ಸಂಸ್ಥೆಯಿಂದ ಹೊರ ನಡೆದು ಸಂಪೂರ್ಣ ಪ್ರಜಾಸತ್ತೆಯಾಗಿ ರೂಪಾಂತರ ಹೊಂದಿದಾಗ ರಾಷ್ಟ್ರದ ಪ್ರಥಮ ಪ್ರಜೆಯೆನಿಸುವ ಗೌರವವನ್ನು ಸಂವಿಧಾನ ನಿರ್ಮಾಣ ಸಮಿತಿಯ ಅಧ್ಯಕ್ಷರೂ ಆಗಿದ್ದ ಇವರಿಗೆ ಇತ್ತುದರಲ್ಲಿ ಆಶ್ಚರ್ಯವಿರಲಿಲ್ಲ. ತನ್ನ ಸಹನಾಶೀಲಸಹಿತವಾದ ಶಾಂತ ಮನೋಭಾವಯುಕ್ತವಾದ ಪ್ರಜಾಭಿಪ್ರಾಯವನ್ನು ಕಡೆಗಣಿಸದೆ ಇರುವ ಉದಾರತೆಯಿಂದ, ರಾಷ್ಟ್ರಕ್ಕಾಗಿ ಸಲ್ಲಿಸಿದ ಸೇವೆ, ಪಟ್ಟ ಶ್ರಮಗಳಿಂದ ರಾಜೇಂದ್ರ ಪ್ರಸಾದರು ಭಾರತದ ರಾಷ್ಟ್ರಪತಿ ಸ್ಥಾನಕ್ಕೆ ಯೋಗ್ಯರಾದ ವ್ಯಕ್ತಿಯಾಗಿದ್ದರು. ಮುಂದೆ ನಡೆದ ಎರಡು ಸಾರ್ವತ್ರಿಕ ಚುನಾವಣೆಗಳ ನಂತರವೂ ಇವರನ್ನೇ ಮರಳಿ ಆಯ್ಕೆಮಾಡಿ ಭಾರತೀಯರು ಅವರಲ್ಲಿ ತಮಗಿರುವ ವಿಶ್ವಾಸವನ್ನು ಪ್ರದರ್ಶಿಸಿದರು

ತನ್ನ ಹರೆಯದ ಕಾರಣದಿಂದ ಮತ್ತು ಅಸ್ವಾಸ್ಥ್ಯದ ಹೇತುವಿನಿಂದಾಗಿ ರಾಜೇಂದ್ರ ಪ್ರಸಾದರು ತಮ್ಮ ಕರ್ತವ್ಯವನ್ನು ಪೂರೈಸುವಲ್ಲಿ ತಪ್ಪಲಿಲ್ಲ. ಪ್ರಜಾಕೋಟಿ ತನ್ನಲ್ಲಿಟ್ಟಿರುವ ವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ. ಆಪತ್ಕಾಲದಲ್ಲಿ ಸಂವಿಧಾನವು ತನಗಿತ್ತ ಅಧಿಕಾರ ಮಿತಿಗೊಳಪಟ್ಟು ಭಾರತವನ್ನು ಮುನ್ನಡೆಸುವಲ್ಲಿ ಹಿಂದೇಟು ಹಾಕಲಿಲ್ಲ. ರಶ್ಯ, ಸಿಂಹಳ, ಬರ್ಮ ಮೊದಲಾದ ಕೆಲವೊಂದು ಏಶ್ಯನ್ ರಾಷ್ಟ್ರಗಳನ್ನು ಸಂಚಾರಮಾಡಿ, ಅಲ್ಲಿ ಭಾರತದ ಸಂಸ್ಕೃತಿಯ ಪ್ರಚಾರ ಕಾರ್ಯವನ್ನೂ ಇವರು ಗೈದ್ದರು. ಅಲ್ಲಿನ ಜನತೆಯ ಪರಿಚಯ ಮಾಡಿಕೊಂಡರು. ದೇಶದೊಳಗಾಗಲೀ ಹೊರಗಾಗಲೀ ಅವರು ಮಾಡಿದ ಸಂಚಾರವು ಅತ್ಯಲ್ಪವೆಂಬಂತಿದ್ದರೂ ತನ್ನ ಪದವಿಯ ಗೌರವವನ್ನು ಅವರು ಕಳೆದುಕೊಳ್ಳಲಿಲ್ಲ. ತನ್ನ ಅನಾರೋಗ್ಯದ ಕಾರಣದಿಂದ ೧೯೫೭ರಲ್ಲಿಯೇ ಇವರು ನಿವೃತ್ತರಾಗಲು ಬಯಸಿದ್ದರೂ ಅಂದಿನ ಭಾರತದ ಪರಿಸ್ಥಿತಿಯಲ್ಲಿ ಅವರೇ ರಾಷ್ಟ್ರಪತಿಯಾಗಿ ಮುಂದುವರಿಯಬೇಕೆಂದು ಒತ್ತಾಯ ಬಂದಾಗ, ರಾಷ್ಟ್ರದ ಕರೆಯನ್ನು ಕೇಳಗಿವಿಗೇಳದೆ ತನಗೆ ತ್ರಾಸದಾಯಕವೆನಿಸಿದರೂ ಜನರ ಇಷ್ಟಾರ್ಥವನ್ನು ಪೂರೈಸಿದ ಮಹಾ ವ್ಯಕ್ತಿಯಿವರು.

ರಾಜೇಂದ್ರ ಪ್ರಸಾದರು ಇತ್ತೀಚೆಗೆ ತೀವ್ರ ಅನಾರೋಗ್ಯಕ್ಕೆ ಬಲಿಯಾದುದೂ ಆ ಕಾಲದಲ್ಲಿ ಉಪರಾಷ್ಟ್ರಪತಿಗಳಿಗೆ ತನ್ನ ಅಧಿಕಾರವನ್ನು ಒಪ್ಪಿಸಿಕೊಟ್ಟುದೂ ಜಗಜ್ಜನಿತವಿದೆ. ಇಂತಹ ಅವಕಾಶ ಉಪರಾಷ್ಟ್ರಪತಿ ಡಾ ರಾಧಾಕೃಷ್ಣನ್ನರಿಗೆದೊರೆತಾಗಲೇ ಇವರು ಆ ಅಧಿಕಾರವನ್ನೂ ಜವಾಬ್ದಾರಿಯನ್ನೂ ನಿರ್ವಹಿಸಲು ತರಬೇತಿಯನ್ನು ಪಡೆದರೆನ್ನಬಹುದು ಗಾಂಧೀಜಿಯವರ ನಿಕಟ ವರ್ತಿಗಳಾದ ರಾಜೇಂದ್ರ ಪ್ರಸಾದರೂ ಗಾಂಧೀವಾದಿಗಳು. ಮಹಾತ್ಮರು ತೋರಿಸಿ ಕೊಟ್ಟ ದಾರಿಯಲ್ಲಿ ಮುನ್ನಡೆಯುವುದರಿಂದಲೇ ಭಾರತವು ಬಲಿಷ್ಠ ರಾಷ್ಟ್ರವಾಗುವುದು ಎಂಬ ವಿಶ್ವಾಸವುಳ್ಳವರು; ಮತ್ತು ಈ ನಿಟ್ಟಿನಲ್ಲಿಯೇ ಮುಂದುವರಿದವರು; ಮುಂದಕ್ಕೂ ಸಾಗವರು' 'ಸರ್ವೋದಯ'ದಲ್ಲಿ ಆಸಕ್ತಿ ತೋರಿಸುವ ಇವರು ಈ ಧ್ಯೇಯಸಾಧನೆಗೂ ದುಡಿಯಬೇಕೆಂಬ ಆಶೆಯನ್ನಿಟ್ಟುಕೊಂಡವರು. ಉತ್ತಮ ವರ್ಗದ ಲೇಖಕರಾದ ಪ್ರಸಾದರು ನಿವೃತ್ತರಾದ ಮೇಲೆ ಈ ಕಾರ್ಯವನ್ನೂ ಮುಂದುವರಿಸುವ ಅಭಿಲಾಷೆಯಿಂದಿರುವರು.

ಪ್ರಸಾದರು ಅವಿಚ್ಛಿನ್ನವಾಗಿ ಹನ್ನೆರಡು ವರ್ಷಪರ್ಯಂತರ ಭಾರತದ ರಾಷ್ಟ್ರಪತಿಯಾಗಿದ್ದರೆಂದು ಸರಕಾರದ ಧೋರಣೆ ಹಾಗೂ ನೀತಿಗಳನ್ನು ಕಣ್ಣುಮುಚ್ಚಿ ಒಪ್ಪಿದವರೆನ್ನುವಂತಿಲ್ಲ. ಭಾರತ ಸರಕಾರದ ಸಹಕಾರಿ ಬೇಸಾಯದ ಧೋರಣೆಯಲ್ಲಿ ರಾಷ್ಟ್ರಪತಿ-ಪ್ರಧಾನ ಮಂತ್ರಿಗಳ ನಡುವೆ ಭಿನ್ನಾಭಿಪ್ರಾಯವಿತ್ತು ಎಂಬುದು ಅವರಿಬ್ಬರ ನಡುವಣ ಪತ್ರವ್ಯವಹಾರದಿಂದ ವ್ಯಕ್ತವಾಗುತ್ತದೆ ಈ ಸಂಬಂಧದಲ್ಲಿ ಸರಕಾರದ ನೀತಿಯಲ್ಲಿ ತುಸು ಪರಿವರ್ತನೆಯೂ ಅದರ ಕಾರ್ಯಾಚರಣೆಯಲ್ಲಿ ಕಾಲವಿಳಂಬವೂ ಆದುದು ಈ ಕಾರಣದಿಂದಾಗಿಯೇ ಎಂದು ಎಲ್ಲರೂ ಬಲ್ಲರು ನಿಷ್ಟುರ ಗಾಂಧೀವಾದಿ ಪ್ರಸಾದರಿಗೆ ಈ ವಿಧದ ಬೇಸಾಯವು ಸರಿಯೆಂದು ಕಂಡು ಬರಲಿಲ್ಲ.

ರಾಜ್ಯಪಾಲರ ನೇಮಕ, ವರಿಷ್ಠ ನ್ಯಾಯಾಧೀಶರ ನಿಯುಕ್ತಿ ಕೇಂದ್ರ ಮಂತ್ರಿ ಮಂಡಳದ ನಿರ್ಮಾಣ—ಮೊದಲಾದ ತಾನು ಸರಕಾರದ ಇಲ್ಲವೇ ಪ್ರಧಾನ ಮಂತ್ರಿಯ ಸಲಹೆಯಂತೆ ನಿರ್ವಹಿಸುವ ಕರ್ತವ್ಯಗಳಲ್ಲಿ ಯಾದರೂ ರಾಜೇಂದ್ರ ಪ್ರಸಾದರು ಉತ್ತಮ ಪರಂಪರೆಯನ್ನು ಹಾಕಿಕೊಟ್ಟಿದ್ದಾರೆ. ರಾಷ್ಟ್ರದ ಪ್ರಪ್ರಥಮ ಅಧ್ಯಕ್ಷರಾದುದರಿಂದ ಇವರು ಮೆಟ್ಟಿದ ದಾರಿಯನ್ನೇ ಮುಂದಿನವರೂ ತುಳಿಯಲಿರುವರು. ತನ್ನ ಕರ್ತವ್ಯಗಳಿಗೆ ಚ್ಯುತಿ ತಂದುಕೊಳ್ಳದೆ, ತನ್ನ ಮುಂದಿನವರಿಗೆ ಮಾರ್ಗದರ್ಶನವಾಗುವಂತೆ ನಡೆದು ಬಂದ ಪ್ರಸಾದರ ವರ್ತನೆಯು ಆದರ್ಶಪ್ರಾಯವಾಗಿದೆ.

ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿದ ಉಪರಾಷ್ಟ್ರಪತಿ ಡಾ। ರಾಧಾಕೃಷ್ಣನ್.

ಅಧಿಕಾರವನ್ನು ಒಪ್ಪಿಸಿ ಕೊಡುವಲ್ಲಿಯೂ ರಾಜೇಂದ್ರ ಪ್ರಸಾದರು ಒಂದು ಉನ್ನತಾದರ್ಶವನ್ನು ಹಾಕಿಕೊಡಲಿದ್ದಾರೆ ಬ್ರಿಟಿಷರ ಕಾಲದಲ್ಲಿ ವೈಸರಾಯಿಗಳಲ್ಲಿ ಅಧಿಕಾರ ಕೊಡುವವರು ತೆಗೆದುಕೊಳ್ಳುವವರನ್ನು ನೋಡುವ ಸಂಪ್ರದಾಯವೂ ಉಳಿಯಲಿಲ್ಲ ನಿವೃತ್ತರಾಗುವ ವೈಸರಾಯಿಯವರು ನಿಶ್ಚಿತ ದಿನಕ್ಕೆ ಹಿಂದಿನ ರಾತ್ರಿಯೇ ವೈಸರಾಯಿ ಭವನದಿಂದ ಪೆಟ್ಟಿಗೆ ಹೊತ್ತು ಹೋಗಿರುತ್ತಿದ್ದರು. ನಿಯುಕ್ತರಾದವರು ನಿಶ್ಚಿತದಿನ ಪೂರ್ವಾಹ್ನ ಬಂದು ಗದ್ದುಗೆಯೇರುತ್ತಿದ್ದರು ಆದರೆ, ಭಾರತೀಯ ಸಂಪ್ರದಾಯಕ್ಕೆ, ಸಂಸ್ಕೃತಿಗೆ ಇಂತಹ ವರ್ತನೆಯು ಶೋಭಾಕರವಲ್ಲವೆಂಬುದರಿಂದ ಪ್ರಸಾದರು ಹೊಸತೊಂದು ಮಾರ್ಗದರ್ಶನ ಮಾಡಲಿದ್ದಾರೆ.

ಮೇ ತಿಂಗಳ ಹದಿಮೂರರಂದು ಚುನಾಯಿತರಾದ ಹೊಸ ರಾಷ್ಟ್ರಪತಿಗಳನ್ನು ರಾಷ್ಟ್ರಪತಿ ಭವನದ ಮುಂದೆ ಸ್ವಾಗತಿಸಿ ಅವರನ್ನು ಒಳಗೆ ಕರೆದೊಯ್ದು, ಗದ್ದುಗೆಯನ್ನೇರಿಸುವ ಸಾಂಪ್ರದಾಯಿಕ ಸಮಾರಂಭದಲ್ಲಿ ಅವರು ಭಾಗ ವಹಿಸಲು ನಿರ್ಧರಿಸಿದ್ದಾರೆ ಇದೇ ಮಾದರಿಯು ಮುಂದಿನವರಿಗೂ ಸರಿಕಂಡೀತು. ನಮ್ಮ ನಾಗರಿಕತೆಗೆ ಹೊಂದಿಕೊಳ್ಳುವ ಇಂತಹ

(೫ನೇ ಪುಟ ನೋಡಿರಿ)

ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ ?
ಫರ್ನಿಚರುಗಳಲ್ಲೆಲ್ಲ 'ಹೀರಾ' ತಿಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ ?
ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಓರಣಕ್ಕಾಗಿ— ತಾಳಿಕೆ ಬಾಳಿಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ದೇಶ ವಿಖ್ಯಾತವಾದ 'ಹೀರಾ' ಉಕ್ಕಿನ ಫರ್ನಿಚರುಗಳನ್ನೆ ಉಪಯೋಗಿಸಿರಿ. ವಿಚಾರಿಸಿರಿ, ಯಾ, ಶೋ ರೂಮನ್ನು ಸಂದರ್ಶಿಸಿರಿ.

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಪೂರ್ವ ಜನ್ಮದ ಕರ್ಮ

ಕುಮಾರಿ ಅಹಲ್ಯಾ

ದೇವರ ಕೋಣೆಯಲ್ಲಿ ಪೂಜಾ ಕಾರ್ಯ ನಿರತರಾಗಿದ್ದರು ಗೋಪಾಲಾಚಾರ್ಯರು. ಅವರ ಗಂಭೀರ ಕಂಠದಿಂದ ರಾಗಬದ್ಧವಾಗಿ ಹೊರಟ ಮಂತ್ರದ ಧ್ವನಿ ಸುತ್ತಲ ವಾತಾವರಣವನ್ನು ತುಂಬಿಕೊಂಡಿತ್ತು. ದೇವರ ಪೀಠದಿದಿರಲ್ಲಿ ಉರಿಯುತ್ತಿದ್ದ ಚಿಕ್ಕ ಕಾಲು ದೀಪಗಳೆರಡರ ಮಂದ ಪ್ರಕಾಶ ಆ ಜಾಲಾಂಧ್ರರಹಿತವಾದ ಪುಟ್ಟ ಕೋಣೆಯೊಳಗೆ ತಕ್ಕ ಮಟ್ಟಿಗೆ ಬೆಳಕನ್ನು ಹರಡಿತ್ತು. ಅಗರುಬತ್ತಿ, ಶ್ರೀಗಂಧ, ತುಳಸಿ, ಪುಷ್ಪಗಳ ಪರಿಮಳ ಅಲ್ಲಿನ ದೃಶ್ಯಕ್ಕೆ ಒಪ್ಪವಿಟ್ಟಂತಿತ್ತು. ಪೀಠಾಲಂಕಾರದಲ್ಲಿ ತೊಡಗಿದ ಆಚಾರ್ಯರ ಕಣ್ಣು, ಅಲ್ಲೇ, ಪೀಠದ ಮೇಲ್ಭಾಗದಲ್ಲಿ, ಅಕ್ಷತೆಯನ್ನು ಧರಿಸುವಾಗ ನೋಡಿಕೊಳ್ಳಲೆಂದು ಗೋಡೆಗೆ ತೂಗು ಹಾಕಿದ್ದ ಕನ್ನಡಿಯೆಡೆಗೆ ಹೋದಾಗ, ಅಲ್ಲಿ ಕಂಡ ದೃಶ್ಯ, ಅವರಿಗರಿವಿಲ್ಲದಂತೆ ಅವರ ಕತ್ತನ್ನು ಬಾಗಿಲಿನೆಡೆಗೆ ತಿರುಗಿಸಿತು. ತಮಗೆ ಕನಸೇನೋ ಎಂದುಕೊಂಡಿದ್ದ ಅವರ ಮನಸ್ಸಿಗೆ, ಅತ್ತ ತಿರುಗಿದ ಮೇಲೆ ಅದು ಕನಸಲ್ಲವೆಂದು ಮನದಟ್ಟಾಯಿತು. ಆ ಬಾಗಿಲ ಒಂದು ಪಕ್ಕಕ್ಕೊರಗಿ ನಿಂತಿತ್ತು ಕನ್ನಡಿಯಲ್ಲಿ ಪ್ರತಿಬಿಂಬವನ್ನು ಮೂಡಿಸಿದ ವೃದ್ಧ ಸ್ತ್ರೀ ವ್ಯಕ್ತಿ.

ಅಸ್ಥಿಪಂಜರದ ಮೇಲೆ ಜೋತು ಬಿದ್ದಂತಿದೆ. ಸುಂಗಟ್ಟಿದ ಬಣ್ಣಗೆಟ್ಟ ಚರ್ಮ; ಉಟ್ಟುಕೊಂಡಿದ್ದ ಸೀರೆಯೆನ್ನಬಹುದಾಗಿದ್ದ ಬಟ್ಟೆ ಮಾಸಿ, ಮಲಿನವಾಗಿ, ಜೀರ್ಣವಾಗಿದೆ; ಆ ಕಟ್ಟಿಗೆಯಂಥಾ ಶರೀರದಲ್ಲೂ ಜೀವವಿದೆಯೆಂಬುದನ್ನು ತೋರಿಸಲು ಹೆಣಗುತ್ತಿವೆಯೋ ಎಂಬಂತೆ ತೋರುತ್ತಿರುವ, ಗುಳಿಬಿದ್ದು, ಅನಾರೋಗ್ಯದಿಂದ ವಿಕಾರಗೊಂಡ ಕಣ್ಣುಗಳು; ಬಹಳ ವಿರಳವಾಗಿ, ಅಲ್ಲೊಂದು ಇಲ್ಲೊಂದರಂತೆ ಕೂದಲನ್ನು ಉಳಿಸಿಕೊಂಡ ತಲೆ; ಬರಿದಾಗಿದ್ದ ಕಿವಿ, ಮೂಗು, ಕೊರಳು, ಕೈಗಳು. ಈ ವೇಷದಲ್ಲಿದ್ದ ವ್ಯಕ್ತಿಯೊಂದು ಅಲ್ಲಿ ನಿಂತಿದ್ದು ಅವರು ಕಾಣುತ್ತಿರುವುದು ಕನಸಲ್ಲ, ದಿಟ, ಎಂಬುದನ್ನು ರುಜು ಪಡಿಸುವಂತಿತ್ತು. ಅದರಲ್ಲೂ ಆ ಕಣ್ಣುಗಳ ನೋಟ ಆಚಾರ್ಯರ ಮೇಲೆಯೇ ನೆಟ್ಟಿದ್ದು, ಏನೋ ಒಂದು ಅಸ್ಪಷ್ಟ ವೇದನೆ ಅವುಗಳಿಂದ ಹೊರ ಸೂಸುವಂತಿತ್ತು. ಆಕೆಯ ಮೊಗದ ಮೇಲಿನ ದೃಷ್ಟಿಯನ್ನು ಕೀಳಲಾಗಲಿಲ್ಲ ಆಚಾರ್ಯರಿಗೆ. ಬದಲಾಗಿ ಏನೋ ಒಂದು ವಿಧದ ಅಪಾರ ಸಂಕಟದ ಅರಿವಾಯಿತವರಿಗೆ ತನ್ನ ಅಂತರಾಳದಲ್ಲಿ. ಆದರೆ ಅದೇಕೆಂದು ಅವರಿಗೆ ತಿಳಿಯಲಿಲ್ಲ ಅವರ ಮನಸ್ಸು ಹೊಯ್ದಾಡತೊಡಗಿತು. ಒಂದು ಕ್ಷಣದಲ್ಲೇ ನೂರಾರು ಆಲೋಚನೆಗಳು ಅವರ ಮನಸ್ಸಿನಲ್ಲಿ ಹೊಳೆದು ಹೋದುವು. ಈಕೆ ಯಾರು, ಇಲ್ಲೇಕೆ ಬಂದಳು, ಜಗಲಿಯಿಂದ ಚಾವಡಿಗಾಗಿ, ನಡುಮನೆಯನ್ನು ಹಾದು, ಪೂಜಾ ಗೃಹದೆಡೆಗೆ ಬರುವ ತನಕವೂ ತನ್ನ ಮನೆಯವರಾರೂ ನೋಡಿ ವಿಚಾರಿಸಲಿಲ್ಲವೆ? ಎಷ್ಟು ಹೊತ್ತಿನಿಂದ ಆಕೆ ಅಲ್ಲಿ ನಿಂತಿದ್ದಿರಬಹುದು? ಹೀಗೆ ಪ್ರಶ್ನೆಗಳ ಸರಣಿ ಒಂದರ ಹಿಂದೊಂದಾಗಿ ಅವರ ಮನಸ್ಸಿನಲ್ಲಿ ಮೂಡಿ ಮಾಯವಾದುವು ಆದರೆ ಪೂಜೆಯಲ್ಲಿದ್ದ ಕಾರಣ ಅವರು ಯಾರನ್ನೂ ವಿಚಾರಿಸುವಂತಿರಲಿಲ್ಲ. ಆದುದರಿಂದ ಸಾವರಿಸಿಕೊಂಡು ಆಕೆಯನ್ನೇ ಉದ್ದೇಶಿಸಿ, ‘ಹೊರಗೆ ಜಗುಲಿಯಲ್ಲಿ ಕುಳ್ಳಿರಿ ತಾಯಿ, ಇದೀಗ ಪೂಜೆ ಮುಗಿಸಿ ಬರುವೆ ,, ಎಂದರು. ಆಕೆ ಮತ್ತೂ ಒಂದರೆಕ್ಷಣ ಅಲ್ಲೇ ನಿಂತು ತನ್ನನ್ನೇ ದಿಟ್ಟಿಸಿ ನೋಡಿ, ನಿಧಾನವಾಗಿ ಕಾಲೆಳೆದುಕೊಂಡು ಹೊರಗೆ ಹೋಗುವುದನ್ನು ಆಚಾರ್ಯರ ಕಣ್ಣುಗಳು ತದೇಕ ಚಿತ್ತವಾಗಿ ನೋಡುತ್ತಿದ್ದುವು.

ಸಂಪ್ರದಾಯಸ್ಥ ಬ್ರಾಹ್ಮಣರಲ್ಲಿ ಸಹಜವಾಗಿ ಉದಯಿಸಬಹುದಾಗಿದ್ದ “ಯಾವ ಜಾತಿಯೋ, ಯಾವ ಕುಲವೋ, ಹೀಗೆ ನೇರಾಗಿ ಮನೆಯೊಳಗೆ ಬಂದು ಬಿಟ್ಟಳಲ್ಲ ,, ಎಂಬ ಭಾವನೆಯು, ಆಚಾರ್ಯರಲ್ಲಿ ಇತರ ಸಂದರ್ಭಗಳಲ್ಲಿ ಮೂಡಬಹುದಾಗಿದ್ದರೂ, ಇಂದೇಕೋ ಆ ಯೋಚನೆಯೇ ಅವರ ತಲೆಯಲ್ಲಿ ಹೊಳೆದಿರಲಿಲ್ಲ. ಉಡುಪು ತೊಡುಪುಗಳಿಂದ ಆಕೆಯ ಬಗ್ಗೆ ಏನನ್ನೂ ತಿಳಿದುಕೊಳ್ಳಲಾಗದಿದ್ದರೂ, ಇದರಲ್ಲೇನೋ ಗೂಢವಡಗಿರಬೇಕೆಂದು ಅವರ ಹೃದಯ ಮತ್ತೆ ಮತ್ತೆ ಒತ್ತಿ ಹೇಳುತಿತ್ತು. ಅದೇನೆಂದು ಭಾವಿಸಲು ಮಾತ್ರ ಅವರಿಂದ ಸಾಧ್ಯವಾಗಿರಲಿಲ್ಲ. ಹೀಗಿದ್ದುದರಿಂದಲೇ ಆಕೆಯನ್ನು ಬಹುವಚನದಲ್ಲಿ ಸಂಬೋಧಿಸಿದ್ದರು.

ಈ ಪರಿಸ್ಥಿತಿಯಲ್ಲಿ ಅವರ ಶಾಂತ ಚಿತ್ತ ಕಲಕಿ ಹೋಗಿತ್ತು, ಮುಂದಣ ಪೂಜಾಕಾರ್ಯ ಸಾಂಗವಾಗಿ ನೆರವೇರಲಿಲ್ಲ. ದೃಢತೆಯನ್ನು ತರಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗದಂತೆ ಮನಸ್ಸು ಮುಲು ಮುಲು ಮರುಗುತಿತ್ತು. ಹೇಗ ಹೇಗೋ ಪೂಜೆಯ ಶಾಸ್ತ್ರವನ್ನು ಮುಗಿಸಿ ದೇವರ ಮನೆಯಿಂದ ಹೊರಕ್ಕೆ ಬಂದರು. ನಡುಮನೆಯಲ್ಲಿ ಚಾವಡಿಗೆ ಹೋಗುವ ಬಾಗಿಲ ಪಕ್ಕದಲ್ಲಿ ಗೋಡೆಗೊರಗಿ ಕುಳಿತ ಆಕೆಯನ್ನು ಕಂಡು ಆಚಾರ್ಯರಿಗೆ ತನ್ನ ತಾಯಿಯ ನೆನಪಾಗಿ ಕಣ್ಣಲ್ಲಿ ನೀರೂರಿತು, ಹಿಂದೆ ಅದೇ ಸ್ಥಳದಲ್ಲಿ ಅವರ ತಾಯಿ, ಮನೆಯ ಕೆಲಸ ಮೊಗಸೆಗಳನ್ನೆಲ್ಲಾ ತೀರಿಸಿದ ಬಳಿಕ, ರಾಮನಾಮ ಜಪಿಸುತ್ತಾ ಕುಳಿತುಕೊಳ್ಳುತ್ತಿದ್ದರು. ಆ ವೃದ್ಧೆಯ ಸಮೀಪಕ್ಕೆ ಹೋಗಿ ಕುಳಿತುಕೊಳ್ಳುತ್ತಾ ಯಾವ ವಿಧದಲ್ಲಿ ಮಾತು ಪ್ರಾರಂಭಿಸಲಿ ಎಂದು ಎಣಿಕೆ ಹಾಕುತ್ತಿರುವಾಗಲೇ ಆಕೆಯು ಬಲಗೈ ತಮ್ಮ ತಲೆಯನ್ನು ತಡವಿದ ಅನುಭವವಾಯಿತವರಿಗೆ. ಆ ಗುಳಿ ಬಿದ್ದ ಕಣ್ಣುಗಳಿಂದ ವಾತ್ಸಲ್ಯದ ಕುರುಹಾಗಿ ಕಣ್ಣೀರು ತೊಟ್ಟಿಕ್ಕಿತು. ಕಣ್ಣಿನಿಂದ ಗುರುತಿಸಲಾಗದಿದ್ದರೂ ಹೃದಯ ಆಚಾರ್ಯರಿಗೆ ಇದಿರಿದ್ದ ವ್ಯಕ್ತಿಯ ಪರಿಚಯ ಮಾಡಿಸಿತು. ಆ ಪ್ರೇಮಮಯ ಸ್ಪರ್ಶದಿಂದ ದೇಹದಲ್ಲೆಲ್ಲಾ ವಿದ್ಯುತ್ಸಂಚಾರವಾದಂತಾಯಿತು. ಕೂಡಲೇ ಆಕೆಯ ಪಾದಗಳ ಮೇಲೆ ತಲೆಯಿಟ್ಟು, “ಅಮ್ಮಾ ಅಯ್ಯೋ ನಿನ್ನ ಅವಸ್ಥೆಯೆ ,, ಎಂದು ಗಟ್ಟಿಯಾಗಿ ರೋದಿಸಿದರು ಉದ್ವೇಗದಿಂದ ಗಟ್ಟಿಯಾಗಿ ಹೊರಟ ಕೂಗನ್ನು ಕೇಳಿಸಿಕೊಂಡ ಅವರ ಗೃಹಿಣಿ ಅಡುಗೆಯ ಮನೆಯಿಂದ ಧಾವಿಸಿ ಬಂದು ಅಲ್ಲಿನ ದೃಶ್ಯವನ್ನು ಕಂಡು ಸ್ತಂಭೀಭೂತಳಾಗಿ ನಿಂತುಬಿಟ್ಟಳು. ದುಃಖಾವೇಗದಿಂದ ಚೇತರಿಸಿಕೊಂಡ ಬಳಿಕ ಮಗ-ಸೊಸೆ ಇಬ್ಬರೂ ಸೇರಿ ಆಕೆಯನ್ನು ಉಪಚರಿಸಿದರು. ಚೇತರಿಸಿಕೊಂಡ ತಾಯಿಯಿಂದ ವಿಷಯವನ್ನು ತಿಳಿಯಲು ಕುತೂಹಲಿಗಳಾದ ಆಚಾರ್ಯರು ಆ ಪ್ರಯತ್ನದಲ್ಲಿ ತೊಡಗಿದಾಗಲೇ ಗಮನಕ್ಕೆ ಬಂದುದು ಅವರ ಮೂಕತನ. ಮೊದಲೊಮ್ಮೆ ಸಿಡಿಲೆರಗಿದಂತಾದರೂ ಧೈರ್ಯಗೆಡದೆ, ತಾಯಿಯ ಅಡ್ಡಿ ಆತಂಕಗಳೊಂದನ್ನೂ ಗಣಿಸದೆ, ಆಕೆಗೆ ಯೋಗ್ಯ ಚಿಕಿತ್ಸೆಯನ್ನು ನಡೆಯಿಸಲಾರಂಭಿಸಿದರು.

ಂ ಂ

ಕೆಲವು ತಲೆಮಾರುಗಳ ಹಿಂದೆಯೇ ಆಚಾರ್ಯರ ಮನೆತನ ಉಡುಪಿಗೆ ಸಮೀಪದ ಆ ಹಳ್ಳಿಯಲ್ಲಿ ತಳವೂರಿತ್ತು. ತಮ್ಮ ಸದ್ಗುಣ ಸಹಾನುಭೂತಿಗಳಿಂದ ಆ ಹಳ್ಳಿಯವರ ಮತ್ತು ಸುತ್ತುಮುತ್ತಲ ನಾಲ್ಕಾರು ಹಳ್ಳಿಯವರ ಆದರ ವಿಶ್ವಾಸಗಳನ್ನು ಗಳಿಸಿಕೊಂಡಿದ್ದರು. ಅವರ ಸಂಪ್ರದಾಯ, ನೇಮ, ನಿಷ್ಠೆಗಳೆಲ್ಲಾ ಎಲ್ಲರಿಗೂ ತಿಳಿದ ವಿಷಯವೇ. ಕಾಲ ಬದಲಾಯಿಸಿ ಆಧುನಿಕ ಯುಗ ಪ್ರಾರಂಭವಾದರೂ, ಆ ಮನೆಯಲ್ಲಿ ನಡೆಯತಕ್ಕ ಹಬ್ಬ ಹರಿದಿನ, ಪೂಜೆ ಪುರಸ್ಕಾರಗಳಾವುದಕ್ಕೂ ಲೋಪ ಚ್ಯುತಿ ಒದಗಿರಲಿಲ್ಲ. ಇದೇ ಅವರ ಗೌರವವನ್ನು ಇನ್ನಷ್ಟು ಹೆಚ್ಚಿಸಿತ್ತು.

ಸಾಧಾರಣ ಒಂದು ವರ್ಷದ ಹಿಂದಿನ ಸಂಗತಿ. ಅಂದು ಗೋಪಾಲಾಚಾರ್ಯರ ತೀರ್ಥರೂಪರಾದ ಶ್ರೀಧರಾಚಾರ್ಯರು ತಮ್ಮ ಪತ್ನಿಯೊಡನೆ ಕಾಶೀಯಾತ್ರೆಗಾಗಿ ಹೊರಡಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು. ತಮ್ಮ ಆಪ್ತರು, ಹಿತೈಷಿಗಳು, ಬಂಧುಗಳು, ಒಕ್ಕಲಿಗರು, ಹೀಗೆ ಎಲ್ಲರಿಂದಲೂ ಬೀಳ್ಕೊಂಡು, ತಮಗೆ ಪರಿಚಯವಿದ್ದ ಅಕ್ಕಪಕ್ಕದ ಗ್ರಾಮಗಳಿಂದ ಹೊರಟಿದ್ದ ಯಾತ್ರಿಕರ ಒಂದು ಚಿಕ್ಕ ಗುಂಪಿನೊಂದಿಗೆ ಸೇರಿಕೊಂಡಿದ್ದರು. ಗೋಪಾಲಾಚಾರ್ಯರಿಗೆ ತಮ್ಮನ್ನಾಗಲೀ ಇಲ್ಲವೆ ತಮ್ಮ ಸಹೋದರ ಕಿಟ್ಟಣ್ಣನನ್ನಾಗಲೀ ತಂದೆ ಸಂಗಡ ಕರೆದೊಯ್ಯಲಿ ಎಂಬ ಇಚ್ಛೆಯಿತ್ತು. ಆದರೆ ಗುರುತು ಪರಿಚಯವಿರುವವರೊಡನೆಯೇ ಹೊರಟುದರಿಂದ ಅದರ ಅಗತ್ಯವಿಲ್ಲವೆಂದು ಖಡಾಖಂಡಿತವಾಗಿ ತಂದೆ ಹೇಳಿದುದರಿಂದ ಮಕ್ಕಳಿಬ್ಬರೂ ಸುಮ್ಮನಾಗಬೇಕಾಯಿತು.

ದೀರ್ಘ ಕಾಲದ ಪ್ರಯಾಣದ ಬಳಿಕ

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ ‘ನವಯುಗ’ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ವಿಷ ಬೀಜವೆನಿಸಿದ

ದ್ರವಿಡ ಸ್ಥಾನದ ಮರುಳು ಕಲ್ಪನೆ

ಸ್ವತಂತ್ರ ಭಾರತದಲ್ಲಿ ನಡೆದ ತೃತೀಯ ಸಾರ್ವತ್ರಿಕ ಚುನಾವಣೆಗಳ ಒಂದು ವೈಶಿಷ್ಟ್ಯವೆಂದರೆ, ಮದ್ರಾಸ ರಾಜ್ಯದಲ್ಲಿ ದ್ರವಿಡ ಮುನ್ನೇತ್ರ ಕಳಗಂನ ಜಯಭೇರಿ. ಮದ್ರಾಸದ ಮುಖ್ಯ ಮಂತ್ರಿ ಕಾಮರಾಜ ನಾಡರರೇ ಈ ಜಯಭೇರಿ ನಿನಾದದಿಂದ ಪೆಚ್ಚುಕಟ್ಟಿ ಹೋದರೆನ್ನುವಾಗ, ವರಿಷ್ಠರೆಲ್ಲರೂ ದಂಗುಬಡಿದರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಮದ್ರಾಸದ ಶಾಸನ ಸಭೆಯಲ್ಲಿ ೫೦ ಸ್ಥಾನಗಳನ್ನು ಗಳಿಸಿ ಪ್ರಬಲ ವಿರೋಧಿಪಕ್ಷವಾದ ಇದು ಲೋಕಸಭೆಯಲ್ಲಿಯೂ ಕೆಲವೊಂದು ಸ್ಥಾನಗಳನ್ನು ಪಡೆದಿದೆ. ಕೇವಲ ಪ್ರಾದೇಶಿಕ ಪಕ್ಷವೆನಿಸಿದ ಕಳಗಂನ ಬಲ ಅಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿರುವುದು ತೀರ ವಿವಂಚನೆಗೆ ಕಾರಣವಾಗಿದೆ.

ಚುನಾವಣಾ ಕ್ಷೇತ್ರದ ಜನರು ಸುಸಂಸ್ಕೃತ ನಾಗರಿಕರಂತೆ ವರ್ತಿಸಿದರೆ, ತಮಗೆ ಬೇಕಾದಂತಹ ವ್ಯಕ್ತಿಯನ್ನು ಆರಿಸಿ ಶಾಸನ—ಲೋಕಸಭೆಗಳಿಗೆ ಕಳಿಸಬಲ್ಲರು. ಅಂದರೆ, ಆ ಕ್ಷೇತ್ರದ ಜನತೆಯ ಅಭಿಪ್ರಾಯವೇನೆಂಬುದನ್ನು ಅಲ್ಲಿನ ಜನತೆ ಆರಿಸುವ ಪ್ರತಿನಿಧಿಯನ್ನು ಕಂಡು ತಿಳಿದುಕೊಳ್ಳಬಹುದು. ಮದ್ರಾಸದಲ್ಲಿ ಸುಮಾರು ನೂರಕ್ಕೆ ೫೦ರಷ್ಟು ಕಳಗಂನ ಅಭ್ಯರ್ಥಿಗಳೇ ಆರಿಸಿ ಬಂದುದರಿಂದ, ಅಲ್ಲಿನ ಜನತೆಯು ದ್ರಾವಿಡಕಳಗಂನ ಧ್ಯೇಯ—ಧೋರಣೆಗಳತ್ತ ಒಲಿದಿದ್ದಾರೆ ಎನ್ನ ಬೇಕಾಗುತ್ತದೆ. ಉತ್ತರ ಭಾರತೀಯರು ದಾಕ್ಷಿಣಾತ್ಯರ ಮೇಲೆ ಅಧಿಕಾರ ಚಲಾಯಿಸಲು ಮತ್ತದನ್ನು ಸದಾ ತಮ್ಮ ಮುಂಗ ಮುಷ್ಟಿಯಲ್ಲಿರಿಸಲು ಯತ್ನಿಸುತಿದ್ದಾರೆನ್ನುವ ಕಳಗಂ ಪ್ರತ್ಯೇಕ ದ್ರವಿಡಸ್ಥಾನದ ಮಾತನ್ನು ಎತ್ತಿ ಘೋಷಿಸುತ್ತದೆ. ಇದರ ಪ್ರತಿನಿಧಿ ಅಣ್ಣಾದೊರೈ ಅವರು ಸಂಸತ್ತಿನಲ್ಲಿ ಮಾಡಿದ ಮೊತ್ತ ಮೊದಲ ಭಾಷಣವೇ ಇದಕ್ಕೊಂದು ಜ್ವಲಂತ ನಿದರ್ಶನ.

ಕನ್ನಡ ಮಾತನಾಡುವವರ ಕರ್ನಾಟಕ, ತೆಲುಗರ ಆಂಧ್ರ ಪ್ರದೇಶ, ತಮಿಳರ ತಮಿಳುನಾಡು ಮತ್ತು ಮಲೆಯಾಳಿಗಳ ಕೇರಳಗಳಿಂದ ಕೂಡಿದ ದ್ರವಿಡಸ್ಥಾನವನ್ನು ಸ್ಥಾಪಿಸಬೇಕೆಂಬ ಅವರ ವಾದದಲ್ಲಿ ಎಳ್ಳಷ್ಟು ಹುರುಳಿರುವುದಿಲ್ಲ. ತಮ್ಮ ಚಾತುರ್ಯವೆಲ್ಲವನ್ನೂ ಉಪಯೋಗಿಸಿ ತಮ್ಮ ಇಷ್ಟಾರ್ಥವನ್ನು ಸಾಧಿಸುವ ಹವಣಿಕೆಯಲ್ಲಿದ್ದ ಅಣ್ಣಾದೊರೈ ವಿಚಿತ್ರ ವಿಧಾನದಲ್ಲಿ ತಮ್ಮ ಬೇಡಿಕೆಯನ್ನು ಮಂಡಿಸಿದರು. 'ದ್ರಾವಿಡರಿಗೆ ಸ್ವಯಂ ನಿರ್ಣಯಾಧಿಕಾರ ನೀಡುವುದರಿಂದ ಭಾರತವೇನೂ ಬಡವಾಗುವುದಿಲ್ಲ; ಬದಲಿಗೆ ಅದರ ಘನತೆಯು ಮತ್ತೂ ಹೆಚ್ಚುವುದು. ಭಾರತವು ಒಂದು ಉಪಖಂಡ; ಒಂದು ರಾಷ್ಟ್ರವಲ್ಲ. ಈ ಪ್ರತ್ಯೇಕತಾ ಬೇಡಿಕೆಯು ದಕ್ಷಿಣ ಭಾರತದಲ್ಲೆಲ್ಲ ಪುನರುಜ್ಜೀವನಗೊಂಡಿದೆ. ಪರಸ್ಪರ ಒಪ್ಪಿಗೆಯಿಂದಲೇ ನಾವು ಬೇರೆಯಾಗೋಣ. ಪಾಕಿಸ್ತಾನದ ವಿಷಯದಲ್ಲಾದಂತೆ ಇದರಿಂದ ವಲಸೆ ಹಾಗೂ ನಿರಾಶ್ರಿತರ ಸಮಸ್ಯೆ ಏನೂ ಏಳುವುದಿಲ್ಲ. ಇದರಿಂದ ಭಾರತವು ಅನೇಕ ಸ್ವತಂತ್ರ ಘಟಕಗಳ ಕಲಬೆರಕೆಯಾಗಿ ಉಳಿಯದೆ ರಾಷ್ಟ್ರ ಕೂಟವಾಗುವುದು,, ಎಂದು ವಾದಿಸಿದರು.

ಅಣ್ಣಾ ದೊರೈಯವರ ಈ ಪ್ರತ್ಯೇಕತಾ ವಾದವು ಮೊತ್ತಮೊದಲಿಗೆ ಸಂಸತ್ತಿನ ಮುಂದೆ ಬಂದಿದ್ದು, ಇದನ್ನು ಇಲ್ಲಿಗೇನೇ ಬಿಟ್ಟುಬಿಟ್ಟರೆ, ಅದು ಮುಂದಕ್ಕೂ ಮುಂದುವರಿಯುತ್ತ ಬರುವುದು. ಭಾರತದಿಂದ ಪಾಕಿಸ್ತಾನವನ್ನು ಪ್ರತ್ಯೇಕಿಸಿಯೇ ನಾವಿಂದು ಬಹುದೊಡ್ಡ ಸಮಸ್ಯೆಯನ್ನು ನಿರ್ಮಿಸಿಕೊಂಡಿದ್ದೇವೆ. ಪಾಕಿಸ್ತಾನದ ಕಾರತಂತ್ರದಿಂದ ಭಾರತೀಯರಾದ ನಾವು ಪಡಬೇಕಾಗಿ ಬಂದಿರುವ ಬನ್ನವನ್ನೂ ನಾವು ಅರಿಯದವರಲ್ಲ. ದೊರೈಯವರು ದ್ರವಿಡ ಭಾಷಾ ಪ್ರದೇಶಗಳ ಪ್ರತ್ಯೇಕ ರಾಷ್ಟ್ರವನ್ನು ಬೇಡುವುದರಿಂದ ದೇಶದ ಐಕ್ಯಕ್ಕೆ ಭಂಗ ತಂದು ಕೊಂಡಂತೆ. ಭಾರತವೊಂದು ಉಪಖಂಡವೆಂಬುದನ್ನು ಒಪ್ಪಬಹುದಾದರೂ ಅದೀಗ ಏಕದೇಶವಾಗಿರುವಂತೆಯೇ ಮುಂದಕ್ಕೂ ಉಳಿಯುವುದು ಅಪೇಕ್ಷಣೀಯವಲ್ಲವೇ? ಹಿಂದಿನ ಕಾಲದಲ್ಲಿ ಈ ಉಪಖಂಡವು ಛಿನ್ನವಿಚ್ಛಿನ್ನವಾಗಿ ಹರಿಹಂಚಾಗಿ ಹೋಗಿತ್ತು. ಈ ಕಾರಣದಿಂದಲೇ ಇದು ಯುದ್ಧಗಳ ತವರೂರಾಗಿತ್ತು. ಇಂದು ಇಡೀಯ ವಿಶ್ವವನ್ನೇ ಒಂದನ್ನಾಗಿ ಕಾಣಬೇಕೆಂಬ ವಿಶ್ವಮನೋವೃತ್ತಿಯು ಬಲಿಯುತ್ತಿರುವಾಗ, ಒಂದಾಗಿದ್ದ ಭಾರತವನ್ನು ವಿಭಜಿಸುವುದು ಮೂರ್ಖತನದ್ದಾಗುವುದು.

ಅಣ್ಣಾದೊರೈಯವರೇನೋ ದ್ರವಿಡ ಸ್ಥಾನದಬಗ್ಗೆ ದಕ್ಷಿಣ ಭಾರತದಲ್ಲಿ ಆಸಕ್ತಿಯಿದೆ ಎಂದರು. ನಿಜ ಹೇಳುವುದಾದರೆ, ಮದ್ರಾಸ ರಾಜ್ಯದ ದ್ರವಿಡ ಮುನ್ನೇತ್ರ ಕಳಗಂ ಮಾತ್ರ ಈ ವಾದವನ್ನು ಒಪ್ಪುತ್ತದೆ. ಪಂಜಾಬ ರಾಜ್ಯದ ವಿಭಜನೆಯಲ್ಲಿ ಮಾಸ್ಟರ್ ತಾರಾಸಿಂಗರಿಗೆ ಬೆಂಬಲ ನೀಡುವ ಸ್ವತಂತ್ರ ಪಕ್ಷದ ರಾಜಾಜಿಯವರು ಹಿಂದೀ ಭಾಷೆಯನ್ನು ವಿರೋಧಿಸುತ್ತ ಬಂದಿರುವುದಾದರೂ ದ್ರವಿಡ ಸ್ಥಾನಕ್ಕೆ ಪ್ರತ್ಯಕ್ಷವಾಗಿ ಬೆಂಬಲ ನೀಡಿದವರಲ್ಲ. ಅಥವಾ ಯಾವುದೇ ಇತರ ರಾಜಕೀಯ ಪಕ್ಷವಿರಲಿ ಇಂತಹ ಭಾವನೆಗೆ ಅನುಕೂಲಾಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ. ಇದಕ್ಕೆ ಸಂಸತ್ತಿನಲ್ಲಿ ನಡೆದ ಭಾಷಣಗಳೇ ಸಾಕ್ಷಿ.

ಪಕ್ಷದಲ್ಲಿ ಕಮ್ಯುನಿಸ್ಟರಾದರೂ ಭೂಪೇಶ ಗುಪ್ತರು ರಾಷ್ಟ್ರೀಯ ವಾದಿಗಳೆಂದು ಹೆಸರು ಪಡೆದವರು. "ಭಾರತವು ಒಂದು ರಾಷ್ಟ್ರ. ವಿವಿಧ ಪಕ್ಷಗಳ ನಡುವಣ ಜಗಳವೇನೇ ಇದ್ದರೂ ಎಷ್ಟೇ ಕಷ್ಟ ಬಂದರೂ ಭಾರತದ ಏಕತೆಯನ್ನು ಕಾಯ್ದುಕೊಂಡು ಹೋಗುವುದು ಅವಶ್ಯ. ಈ ಪ್ರತ್ಯೇಕತೆಯ ಸಿದ್ಧಾಂತವು ಅತ್ಯಂತ ಮಾರಕವಾದುದು. ವಿಪತ್ಕಾರಿಯೂ ಭಯಂಕರವೂ ಆದ ಈ ವಿಚಾರವನ್ನು ಪ್ರಚಾರ ಮಾಡಲು ಸಂಸತ್ತಿನ ವೇದಿಕೆಯನ್ನು ಉಪಯೋಗಿಸಲು ಬಿಡಬಾರದು" ಎಂದ ಇವರ ವಿಚಾರ ಧಾರೆಯು ನ್ಯಾಯವಾಗಿದೆ.

"ಈ ಭಯಂಕರ ವಿಚಾರಕ್ಕೆ ಬೆಂಬಲವಿತ್ತವರು ಇದರಿಂದ ದೂರವಾಗಬೇಕು. ಭಾರತವು ಒಕ್ಕಟ್ಟಾಗಿದ್ದರೆ, ನಾವು ಉಳಿಯುತ್ತೇವೆ. ಭಾರತವು ಒಡೆದು ಹೋದರೆ, ನಾವೆಲ್ಲರೂ ನಾಶವಾಗುತ್ತೇವೆ. ಇತಿಹಾಸದ ಶಕ್ತಿಯನ್ನು ಧಿಕ್ಕರಿಸಿ ಬೇರೆ ಬೇರೆಯಾಗುವ ಗಂಡಾಂತರಕಾರಕ ಮಾರ್ಗವನ್ನು ಕ್ರಮಿಸ ಬೇಕೆ? ಅಥವಾ ಐಕ್ಯ ಮತ್ತು ರಾಷ್ಟ್ರೀಯ ಸಮನ್ವಯಗಳ ದಾರಿ ಹಿಡಿದು ರಾಷ್ಟ್ರದ ಐಕ್ಯವನ್ನು ಜೀವನದ ಪ್ರತಿಯೊಂದು ರಂಗದಲ್ಲೂ ಹೆಚ್ಚು ಭದ್ರವೂ ಅವಿಭಾಜ್ಯವೂ ಸುಂದರವೂ ಗೌರವಯುತವೂ ಆಗುವಂತೆ ಮಾಡಬೇಕೆ?" ಎಂದ ಭೂಪೇಶ ಗುಪ್ತರವಾದವನ್ನು ಪಕ್ಷ ಭೇದವಿಲ್ಲದೆ ಎಲ್ಲ ಸದಸ್ಯರೂ ಸಮರ್ಥಿಸಿದರು.

ಮಧ್ಯ ಪ್ರದೇಶದ ಓರ್ವ ಪಕ್ಷಾತೀತ ಸದಸ್ಯ ಎ. ಡಿ. ಮಣಿಯವರು "ದೇಶದಲ್ಲಿ ಪ್ರತ್ಯೇಕ ಸ್ಥಾನವನ್ನು ಕೇಳುವುದು ಸಂವಿಧಾನಕ್ಕೆ ವಿರೋಧವೆಂಬ ತಿದ್ದುಪಡಿಯಾಗಬೇಕೆಂದೂ, ಇಲ್ಲವಾದರೆ, ಈ ಕೇಳಿಕೆ ಹಲವು ಮುಖಗಳಲ್ಲಿ ವ್ಯಕ್ತವಾಗಬಹುದೆಂದೂ ಭೀತಿಯನ್ನೂ ವ್ಯಕ್ತಪಡಿಸಿದರು.

ಜನಸಂಘದ ಸದಸ್ಯ ಶ್ರೀ ಅಟಲ ಬಿಹಾರಿ ವಾಜಪೇಯಿಯವರು 'ಪ್ರತ್ಯೇಕ ರಾಜ್ಯದ ಮಾತನ್ನಿಂದು ದೇಶವು ಪ್ರೋತ್ಸಾಹಿಸುವುದಿಲ್ಲ. ಪ್ರತ್ಯೇಕ ರಾಜ್ಯವೆಂದರೆ, ಭಾರತ ರಾಷ್ಟ್ರದ ನಾಶ. ದ್ರವಿಡ ಮುನ್ನೇತ್ರ ಕಳಗಂನ ಧುರೀಣ ಅಣ್ಣಾದೊರೈಯವರ ಕೇಳಿಕೆಯಲ್ಲಿ ಯಾವುದೇ ನ್ಯಾಯವಿದ್ದರೂ ಅದು ಸ್ವಾತಂತ್ರ್ಯ ಪೂರ್ವದಲ್ಲಿ ಮುಸ್ಲಿಂ ಲೀಗಿನ ದ್ವಿರಾಷ್ಟ್ರ ಸಿದ್ಧಾಂತಕ್ಕೆ ಹೋಲುವಂತಹುದು. ಭಾರತದ ಐಕ್ಯ ಮತ್ತು ಸಮಗ್ರತೆಗೆ ಧಕ್ಕೆ ತರುವ ಯಾವುದೇ ಕೇಳಿಕೆಯೊಂದಿಗೆ ಒಪ್ಪಂದ ಕೂಡದು. ಅಖಿಲ ಭಾರತವು ಇಂತಹ ಅಪಾಯಕರ ಪ್ರವೃತ್ತಿಯನ್ನು ಹತ್ತಿಕ್ಕಲು ಎದ್ದು ನಿಲ್ಲಬೇಕು' ಎಂದರು.

'ದ್ರವಿಡಸ್ಥಾನದ ಬೇಡಿಕೆಗೆ ಕಾರಣವಾದ ವಿಶುದ್ಧ ಆರ್ಯ—ದ್ರಾವಿಡರೆಂಬವರೇ ಇಂದು ನಮ್ಮಲ್ಲಿಲ್ಲ. ಭಾರತದಲ್ಲಿ ಈ ಎರಡು ಸಂಸ್ಕೃತಿಯ ಜನರು ಒಬ್ಬರಿನ್ನೊಬ್ಬರೊಡನೆ ಕಲೆತು ವಿಶಿಷ್ಟರೂಪದ ಭಾರತೀಯ ಸಂಸ್ಕೃತಿಯೆನಿಸಿದೆ. ಇದರಿಂದಾಗಿ ಅಣ್ಣಾದೊರೈಯವರ ಹೇಳಿಕೆಯು ಉಚಿತವೂ ಅಲ್ಲ, ನ್ಯಾಯವೂ ಅಲ್ಲ; ಸತ್ಯವೂ ಅಲ್ಲ. ದ್ರವಿಡಸ್ಥಾನದ ಕೇಳಿಕೆಯು ಒಂದು ವಿಶಿಷ್ಟ ರಾಜ್ಯದ ಒಂದು ವಿಶಿಷ್ಟ ಪಂಗಡದ ಬೇಡಿಕೆ ಮಾತ್ರ. ಅದನ್ನು ಮತ್ತಾರೂ ಬೆಂಬಲಿಸುವುದಿಲ್ಲ" ಎಂದು ಕರ್ನಾಟಕದ ಶ್ರೀ ರಂ. ರಾ. ದಿವಾಕರರು ಯಥಾರ್ಥವಾದುದನ್ನೇ ನುಡಿದರು.

ಭಾರತದ ವಿಭಜನೆಗೆ ಸರ್ವತ್ರ ವಿರೋಧವಿದೆ; ಆದುದರಿಂದ ಅಣ್ಣಾದೊರೈಯವರ ಕನಸಿನ ದ್ರವಿಡಸ್ಥಾನವು ನನ

(೧೦ನೇ ಪುಟ ನೋಡಿರಿ)

31-12-1961 ರಂದು

ಕೆನರಾ ಬ್ಯಾಂಕ್

ಅಧಿಕೃತ ಮೂಲಧನ	ರೂ. 1 ಕೋಟಿ
ಚಂದಾ ಅರ್ಪಿಸಿದ ಮೂಲಧನ	ರೂ. 75 ಲಕ್ಷ
ಪಾವತಿಯಾದ ಮೂಲಧನ	ರೂ. 50 ಲಕ್ಷ
ಕ್ಷೇಮನಿಧಿ(ಶೇರ್ ಪ್ರೀಮಿಯಂ ಸಹಿತ)	ರೂ. 63 ಲಕ್ಷ
ಠೇವಣಾತಿಗಳು	ರೂ. 37·56 ಕೋಟಿ

ಶಾಖೆಗಳು 115

ನೌಕರರ ಸಂಖ್ಯೆ 2706

3,00,000 ಮೀರಿ ಠೇವಣಿ ಖಾತೆದಾರರು

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ ಸಂಪೂರ್ಣ ಭದ್ರತೆ

ನೀರಿನೊಳಗಿನ
ಮೀನುಗಳು ಸಿಳ್ಳು ಹಾಕುತ್ತವೆ!

ಮನುಷ್ಯನ ಮುಖ್ಯ ಆಹಾರ ವಸ್ತುಗಳಲ್ಲೊಂದಾಗಿರುವ ಮೀನಿನಿಂದ ಅಧಿಕ ಮೇಧಸ್ಸು ದೊರಕುವುದು ಎಂಬುದು ಈಗಾಗಲೇ ಎಲ್ಲರಿಗೂ ತಿಳಿದ ವಿಷಯ. ಹಾಗಿದ್ದೂ ವಿಶ್ವದ ಅನೇಕ ಭಾಗಗಳಲ್ಲಿ ಮೀನುಗಾರಿಕೆಯು ಪರಿಪೂರ್ಣವಾಗಿ ಅಭಿವೃದ್ಧಿಯಾಗದಿರುವುದು ಶೋಚನೀಯ. ಜರ್ಮನಿಯಲ್ಲಿನ ಮೀನುಗಾರಿಕೆಯ ತಜ್ಞ ಸಮಿತಿಯು ಬಾಲ್ಟಿಕ್ ಸಮುದ್ರವನ್ನು ಈ ವಿಷಯವಾದ ಸಂಶೋಧನೆಗಾಗಿ ಉಪಯೋಗಿಸಿಕೊಳ್ಳುತ್ತಿದೆ.

ಜಗತ್ತಿನ ಜನಸಂಖ್ಯೆಯಲ್ಲಿ ಸೇಕಡಾ ಎಂಬತ್ತು ಮಂದಿಗೆ ಅವರು ತಿನ್ನುವ ಆಹಾರದಲ್ಲಿ ಪ್ರಾಣಿಸಂಬಂಧವಾದ ಮೇಧಸ್ಸು ಅಧಿಕಾಂಶದಲ್ಲಿ ದೊರಕುತ್ತಿಲ್ಲ. ನಾಗರಿಕತೆಯು ಒಂದು ಹಂತವನ್ನು ಮುಟ್ಟಿದೆಯೆಂದು ಹೇಳಬಹುದಾದಂತಹ ನಾಡುಗಳಲ್ಲಿನ ಸುಮಾರು ೧೫೦ ಕೋಟಿ ಜನರಿಗೆ ಮೇದಸ್ಸನ್ನು ನೀಡುವ ಮುಖ್ಯ ಆಹಾರವೆಂದರೆ ಮೀನೆಂದೇ ಹೇಳಬಹುದು. ಮೀನಿಗೆ ಎಷ್ಟು ಮುಖ್ಯ ಸ್ಥಾನವಿದ್ದರೂ ಮೀನುಗಾರಿಕೆಯು ಎಷ್ಟೋ ದೇಶಗಳಲ್ಲಿ ಸಾಕಷ್ಟು !ಮುಂದುವರಿದಿಲ್ಲವೆಂದು ತಿಳಿದುಬಂದಿದೆ. ಆದರೆ ಜರ್ಮನಿಯು ಮಾತ್ರ ಈ ವಿಷಯದಲ್ಲಿ ಅನೇಕ ಸಂಶೋಧನೆಗಳನ್ನು ನಡೆಸಿ, ಮೀನುಗಾರಿಕೆಯಲ್ಲಿ ಮುನ್ನಡೆಯುತ್ತಿದೆ. ಸಾಗರ ಸಂಶೋಧಕ, ಜಲಚರ ಪ್ರಾಣಿಶಾಸ್ತ್ರಪಾರಿಶ್ರಮಿಕ ಸಮಿತಿ ಹೆಸರುವಾಸಿಯಾಗಿದ್ದು, ಇದೇ ಇತ್ತೀಚಗೆ ತನ್ನ ಮೂವತ್ತನೆಯ ವಾರ್ಷಿಕೋತ್ಸವವನ್ನು ಆಚರಿಸಿಕೊಂಡಿತು. ಈ ಸಮಿತಿಯು ಈಚೆಗೆ ಬಾಲ್ಟಿಕ್ ಕಡಲಿನಲ್ಲಿ ನಡೆಸಿದ ಎರಡು ಮುಖ್ಯ ಸಂಶೋಧನೆಗಳೆಂದರೆ, ಬಲೆಗಳ ಸಹಾಯದಿಂದ ಮೀನು ಹಿಡಿಯುವಿಕೆ ಮತ್ತು ಸಮುದ್ರದಲ್ಲಿ 'ಕಾಡ್' ಎಂಬ ಮೀನಿನ ಜಾತಿಯನ್ನು ಅಭಿವೃದ್ಧಿಗೊಳಿಸುವಿಕೆ, ಎನ್ನಬಹುದು.

ಈಗ ಕೀಲ್‌ನ ಮತ್ಸ್ಯಸಂಬಂಧಕ ಸಂಸ್ಥೆಯ ಮುಂದಿರುವ ಮತ್ತೊಂದು ಮುಖ್ಯ ವಿಷಯವೆಂದರೆ 'ಸಾಲ್‌ಮನ್'; ಜಾತಿಯ ಮೀನುಗಳನ್ನು ಹೇಗೆ ಹೆಚ್ಚಿಸುವುದೆಂಬುದೆನ್ನಬಹುದು. ಇವುಗಳ ಬಗ್ಗೆ ಸಂಶೋಧನೆ ತತ್ಸಮಯದಲ್ಲಿ ಬಾಲ್ಟಿಕ್ ಸಮುದ್ರದಲ್ಲಿ ನಡೆಯುತ್ತಿದೆ. ಇತ್ತೀಚೆಗೆ ಕಂಡು ಹಿಡಿಯಲ್ಪಟ್ಟ ಒಂದು ಹೊಸ ಸಂಶೋಧನೆಯಿಂದ ಮೀನುಗಾರಿಕೆಯಲ್ಲಿ ಒಂದು ಹೊಸ ಹೆಜ್ಜೆ ಇಟ್ಟಂತಾಗುತ್ತದೆಯೆಂದು ಹೇಳಲಾಗುತ್ತದೆಯೆಂದು ಹೇಳಲಾಗುತ್ತಿದೆ.

ಮೀನು ಸಂಬಂಧದ ವಿಷಯಗಳಲ್ಲಿ ಅತಿ ಹೆಚ್ಚಿನ ಮೇಧಾವಿಗಳಲ್ಲೊಬ್ಬರಾದ ಜರ್ಮನಿಯ ಡಾ॥ ಫ್ರೇಟಾಗ್ ಈಗ ಕೆಲ ಕಾಲದಿಂದ ನೀರಿನೊಳಗೆ ನಡೆಸುತ್ತಿರುವ ಸೂಕ್ಷ್ಮದರ್ಶಕ ಯಂತ್ರ ಸಂಶೋಧನೆಗಳಿಂದ ಮೀನುಗಳು ಸಿಳ್ಳು ಹೊಡೆಯುತ್ತವೆಯೆಂಬುದನ್ನು ಕಂಡುಹಿಡಿದಿದ್ದಾರೆ. ಈ ವಿಷಯ ತಿಳಿದು ಬಂದುದರಿಂದಾಗಿ ಇನ್ನೂ ಅನೇಕ ಹೊಸ ವಿಷಯಗಳನ್ನು ತಿಳಿಯಲು ಸಾಧ್ಯವಾದೀತೆಂದು ನಂಬಲಾಗಿದೆ.

ಹೆಚ್ಚು ಮಾತನ್ನೇ ಆಡದೆ ಮೌನವಾಗಿರುವವರನ್ನು ನೀರಿನಲ್ಲಿರುವ ಮೀನಿನಂತೆ ಬಾಯಿ ಸತ್ತವನು ,, ಎಂದು ಜರ್ಮನಿಯಲ್ಲಿ ಹೇಳುವುದುಂಟು. ಈಗ ಕಂಡು ಹಿಡಿಯಲ್ಪಟ್ಟಿರುವ ವಿಷಯದಿಂದ ಇನ್ನು ಮುಂದೆ ಈ ಮೇಲೆ ಹೇಳಿದ ಹೋಲಿಕೆ ಪ್ರಯೋಜನ ವಿಲ್ಲದಾಯಿತೆನ್ನಬಹುದು. ಇದುವರೆಗೂ ಮೀನುಗಳ ಬಗ್ಗೆ ಅತಿ ಪ್ರವೀಣರೆನಿಸಿಕೊಂಡವರು ಸಹ ಮೀನುಗಳು ಯಾವ ಬಗೆಯ ಸದ್ದನ್ನೂ ಮಾಡುವುದಿಲ್ಲವೆಂದೇ ತಿಳಿದಿದ್ದರು. ಕಡಲಿನಾಳದಲ್ಲಿ ಮೌನ ತಾಂಡವವಾಡುತ್ತಿಲ್ಲವೆಂದೂ, ಅಲ್ಲಿಯೂ ಏನೇನೋ ಶಬ್ದೋತ್ಪತ್ತಿಯಾಗುತ್ತಿದೆಯೆಂದೂ ಅವರೂ ಈಗ ಒಪ್ಪಿಕೊಂಡಿರುತ್ತಾರೆ.

ಹೆರ್ರಿಂಗ್ ಎಂಬ ವರ್ಗಕ್ಕೆ ಸೇರಿದ ಮೀನುಗಳಿರುವೆಡೆ ಇಂತಹ ಸಿಳ್ಳಿನ ಶಬ್ದ ಅಧಿಕವಾಗಿ ಕೇಳಿಬರುತ್ತಿದೆಯೆಂದು ೧೯೫೦ರಲ್ಲೇ ಇಸವಿಯಲ್ಲಿ ಕಂಡು ಹಿಡಿಯಲಾಯಿತು. ಕೆಲವು ವರ್ಷಗಳ ನಂತರ ಈ ವಿಷಯವು ವಿಜ್ಞಾನದ ರೀತಿಯಲ್ಲಿ ವಿಮರ್ಶಿಸಲ್ಪಟ್ಟಿತು. ಉತ್ತರ ಅಟ್ಲಾಂಟಿಕ್ ಸಾಗರದಲ್ಲಿಯೂ, ಪೆಸಿಫಿಕ್ ಮಹಾ ಸಾಗರದಲ್ಲಿಯೂ ಅನೇಕ ಸಂಶೋಧನೆಗಳು ನಡೆಸಲ್ಪಟ್ಟುವು. ಅಲ್ಲಿ ಸಿಕ್ಕಿರುವ ಸುಮಾರು ಅರುವತ್ತು ಬಗೆಯ ಮತ್ಸ್ಯಗಳಲ್ಲಿ ಇಪ್ಪತ್ತೆರಡು ಜಾತಿಯ ಮೀನುಗಳು ಒಂದು ಬಗೆಯ ಶಬ್ದವನ್ನು ಮಾಡುವುದೆಂದು ಕಂಡುಹಿಡಿಯಲಾಗಿದೆ. ಈ ಸಿಳ್ಳು ಹೊಡೆಯುವ ಶಬ್ದದಿಂದಲೇ ಮೀನುಗಳು ಪರಸ್ಪರ ಸಂಭಾಷಿಸುವುದೆಂದು ತಿಳಿದು ಬಂದಿದೆ.

ದೇಶದಿಂದ ದೇಶಕ್ಕೆ ಹಾರಿ ಹೋಗುವ ಪಕ್ಷಿ ಜಾತಿಯು ಮಾಡುವ ಸದ್ದಿಗೆ, ಈ ಮೀನುಗಳ ಸಿಳ್ಳಿನ ಸದ್ದನ್ನು ಒಪ್ಪಿಟ್ಟಿದ್ದಾರೆ, ಡಾ॥ ಫೇಟಾಗ್. ಈ ಶಬ್ದಗಳು ಬರುವ ದಿಕ್ಕನ್ನು ಯಂತ್ರ ಸಹಾಯದಿಂದ ತಿಳಿದುಕೊಂಡು ಆ ಸ್ಥಳದಲ್ಲಿ ಬಲೆ ಹರಡಿದ್ದರಿಂದ, ಬೇಕಾದಂತೆ ಮೀನುಗಳು ದೊರೆತವೆಂದು ಹೇಳಲಾಗಿದೆ. ಫ್ರೇಟಾಗ್ ಅವರು, ತಾವು ಸಹ ಮೀನುಗಳ ಸಿಳ್ಳು ಹೊಡೆಯುವ ಶಬ್ದವನ್ನೇ ಅನುಕರಿಸಿದರೆ, ಆದಕ್ಕೆ ಮೀನುಗಳ ಪ್ರತಿಕ್ರಿಯೆ ಏನಿರಬಹುದೆಂಬುದನ್ನು ಕಂಡುಹಿಡಿಯುತ್ತಿದ್ದಾರೆ. ಇದು ತಿಳಿಯಲು ಸಾಧ್ಯವಾಯಿತೆಂದರೆ ಕೇವಲ ಶಬ್ದದ ಸಹಾಯದಿಂದಲೇ ಇನ್ನು ಮುಂದೆ ಹೇರಳವಾಗಿ ಮೀನುಗಳನ್ನು ಕಂಡ-ಹಿಡಿಯಬಹುದು.

———



ASP/LIC-15

ಉಡ್ಪಿ ಡಿ. ಮುಂ. ಕೋರ್ಟಿನಲ್ಲಿ

O. P. No. 16/1962.

1) Mrs. Magadalene Mendonsa 2) Alexander Mendonsa 3) Mrs. Christine Lasrado 4) Mrs. Euphrosine D'Mello 5) Mrs. Lilly Pinto 6) Louis Mendonsa

—Petitioners.

And

1) Mrs. Piadade Noronha 2) Mrs. Cecclia Goveas —Respondents

ಈ ಮೂಲಕ ಸಮ್ಮಂದಪಟ್ಟವರೀಗೆ ತಿಳಿಯಪಡಿಸುವುದೇನೆಂದ್ರೆ, ಮೇಲಿನ ಅರ್ಜಿಯ 1ನೇ ಅರ್ಜಿದಾರರ ಗಂಡ ಮಿಕ್ಕ ಅರ್ಜಿದಾರರ ಮತ್ತು ಎದ್ರಿರ ತಂದೆ ಈಗ ಮೃತ ಜೋನ್ B. ಮೆಂಡೊಸರೀಗೆ ಗವರ್ನಮೆಂಟಿನಿಂದ ಪ್ರೊಮಿಸರಿ ನೋಟುಗಳ ಪ್ರಕಾರ ಬರತಕ್ಕ ಅಸಲು ಬಡ್ಡಿ ಕೂಡಾ ರೂಪಾಯಿ 3,060/—ನ್ನು ವಸೂಲು ಬಗ್ಗೆ ಅರ್ಜಿದಾರರ ಮತ್ತು ರೆಸ್ಪೊಂಡೆಂಟರ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾರೀಕು 6-6-62ಕ್ಕೆ ಮೇಲಿನ ಕೋರ್ಟಿನಲ್ಲಿ ಇಡೋಣಾಗಿಯದೆ, ಆಕ್ಷೇಪ ಹೇಳತಕ್ಕವರು ಸದರಿ ತಾ. 6-6-62 ನೇ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸದ್ರಿ ಅರ್ಜಿಯಲ್ಲಿ ಹಾಜರಾಗಿ ಮನವಿಮಾಡಿಕೊಳ್ಳಬೇಕೆಂಬುದಾಗಿ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸೋಣಾಗಿಯದೆ.

(*Sd*) Gratian C. Rego,
Vakil for Petitioners.

ಉಡ್ಪಿ, ತಾ. 5—5—62.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ

(೧ನೇ ಪುಟದಿಂದ)

ಆದರ್ಶರೂಪಣೆಯು ಅವರಿಗೂ ಹಿತವೆನಿಸಬೇಕು.

'ಭಾರತ ರತ್ನ' ಪ್ರಶಸ್ತಿಗಳಿಸದೆ ಹೋದರೂ ಸ್ವಯಂ 'ಭಾರತ ರತ್ನ'ರಾದ ರಾಜೇಂದ್ರಬಾಬು ರಾಷ್ಟ್ರಪತಿ ಪದವಿಯಿಂದ ನಿವೃತ್ತರಾದರೂ ಭಾರತೀಯರ ಹಿತಚಿಂತನೆಯಿಂದ ದೂರವಾಗಲಾರರು. ಅವರು ಮುಂದೆ ಕೈಗೊಳ್ಳಲಿರುವ ಲೇಖನ ವ್ಯವಸಾಯವೋ ಸರ್ವೋದಯ ಪ್ರಚಾರವೋ ಮತ್ತೇನೋ ಇರಲಿ, ಅವೆಲ್ಲವನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಿಕೊಳ್ಳಲು ಅನುಕೂಲವಾದ ಆಯು ಮತ್ತು ಆರೋಗ್ಯವನ್ನು ಪರಮಾತ್ಮನು ಅನುಗ್ರಹಿಸಲಿ. ತನ್ನ ನಿಷ್ಕಲಂಕವಾದ ಉದಾರನಾದ ನೀತಿಯಿಂದ ದೇಶಕಲ್ಯಾಣ ಮಾರ್ಗದಲ್ಲಿ ಪಥಪ್ರದರ್ಶಕರಾಗಿರಲಿ-ಎಂದು ಈ ಸಂದರ್ಭದಲ್ಲಿ ಪ್ರತಿಯೊಬ್ಬನೂ ಬಯಸುತ್ತಾನೆ.

೦೦ ೦೦

ಇಂದಿಗೆ ೬೧ ವರ್ಷಗಳಿಗೆ ಮೊದಲು ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಓದುತಿದ್ದ ೧೭ ವರ್ಷದ ಹುಡುಗನು ಒಂದು ಸಮಸ್ಯೆಯನ್ನು ಎದುರಿಸಬೇಕಾಯ್ತು: ದರ್ಶನ, ಇತಿಹಾಸ, ಗಣಿತ, ವಿಜ್ಞಾನ ಮತ್ತು ಜೀವ ವಿಜ್ಞಾನಗಳಲ್ಲಿ ಓದಲು ಯಾವುದನ್ನು ಆರಿಸಿಕೊಳ್ಳಬೇಕು ಎಂಬ ಪ್ರಶ್ನೆ ಆತನನ್ನು ಕಾಡುತಿತ್ತು. ಆಗಾಗಲೇ ಆತನ ಮಿತ್ರರೊಬ್ಬರು ದರ್ಶನ ಶಾಸ್ತ್ರವನ್ನು ತೆಗೆದುಕೊಂಡು ಬಿ.ಎ. ಉತ್ತೀರ್ಣರಾಗಿದ್ದರು; ಅವರು ತಮ್ಮ ಪುಸ್ತಕವನ್ನು ಈ ಬಾಲಕನಿಗೆ ಇತ್ತರು. ಭಾರತದ ಯುಗ ಮನೀಷಿ ಸರ್ವಪಲ್ಲಿ ರಾಧಾಕೃಷ್ಣನ್ನರು ದರ್ಶನದ ಅಧ್ಯಯನಕ್ಕೆ ಹೀಗೆ ತೊಡಗಿದರು. ಆದರೆ, ಈ ಆಕಸ್ಮಿಕ ಸನ್ನಿವೇಶ ದೈವಸಂಕಲ್ಪವೆಂದವರು ತಿಳಿಯುವುದಿಲ್ಲ; ಬದಲಿಗೆ ತನ್ನ ಪೂರ್ವಜನ್ಮದ ಕರ್ಮಫಲವೆನ್ನುತ್ತಾರೆ. ಉದ್ದೇಶವನ್ನು ವಾಸ್ತವಿಕತೆಯ ರೂಪದಲ್ಲಿ ಸ್ವೀಕರಿಸುವ, ಅನ್ನಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡ ಬಳಿಕವೇ ಜ್ಞಾನಬ್ರಹ್ಮನ ಸಾಕ್ಷಾತ್ಕಾರವು ಸುಲಭವಾಗುವುದೆಂದು ತಿಳಿದುಕೊಂಡ ಕುಟುಂಬವೊಂದರಲ್ಲಿ ಇವರು ಜನಿಸಿದರು.

ಗೀತೆ, ಉಪನಿಷತ್ತು ರಾಮಾನುಜ, ಶಂಕರಾಚಾರ್ಯ, ಪ್ಲೇಟೋ, ವರ್ಗಮನ್, ಬುದ್ಧ ಟಾಗೋರ, ಅರವಿಂದ ಮತ್ತು ಗಾಂಧೀಜಿಯವರು ರಾಧಾಕೃಷ್ಣನ್ನರ ಜೀವನ ದರ್ಶನದ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದಾರೆ. ಇವರು ಉಪಯುಕ್ತರಲ್ಲಿ ಯಾರೊಬ್ಬರ ಅನುಯಾಯಿಗಳೂ ಆಗಿಲ್ಲ; ಆದರೆ, ಎಲ್ಲರಲ್ಲಿಯೂ ಆದರ ಭಾವವನ್ನು ಮಾತ್ರ ಸಂಪೂರ್ಣ ಇಟ್ಟುಕೊಂಡಿದ್ದಾರೆ.

'ದಾರ್ಶನಿಕನು ಸತ್ಯ ಪ್ರಾಪ್ತಿಯನ್ನು ಬಯಸುವುದಿಲ್ಲ'ವೆಂದು ಬರ್ಟ್ರೆಂಡ್ ರಸ್ಸೆಲ್ಲರು ಒಂದೆಡೆ ಅಂದಿದ್ದಾರೆ. ಆದರೆ, ಡಾ| ರಾಧಾಕೃಷ್ಣನ್ ಇದಕ್ಕೆ ಅಪವಾದ. "ಉನ್ನತ ಆದರ್ಶವೊಂದಿದ್ದರೆ ಸಾಲದು; ಅದನ್ನು ಕಾರ್ಯಕೃತಗೊಳಿಸುವ ಪ್ರಣಾಳಿಯೂ ಉನ್ನತವಿರಬೇಕು." ಎನ್ನುತ್ತಾರೆ ಇವರು. 'ಜೀವನಕ್ಕೆ ವ್ಯಾಖ್ಯಾನ ಮಾಡುವುದೇ ದರ್ಶನ ಶಾಸ್ತ್ರದ ಕೆಲಸವಲ್ಲ; ಜೀವನ ಪರಿವರ್ತನೆ ಮಾಡುವುದು ಅದರ ಕರ್ತವ್ಯ. ನನ್ನ ಅಭಿಪ್ರಾಯದಲ್ಲಿ ದರ್ಶನವು ತರ್ಕ ಮತ್ತು ಶಬ್ದ ವಿಲಾಸಗಳಲ್ಲಿಯೇ ಕೊನೆಮುಟ್ಟುವುದಿಲ್ಲ' ಎಂದು ಇವರ ಮತ. ಇಂದು ಇಡಿಯ ವಿಶ್ವದಲ್ಲಿ ಹರಡಿರುವ ಕಳವಳದ ಬಗ್ಗೆ ಇವರು 'ಒಡಂಬಡಿಕೆಗಳು, ರಾಜಕೀಯ ಐಕ್ಯರಚನೆ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳು ಆವೇಶವನ್ನು ಸ್ವಲ್ಪ ಹೊತ್ತಿನ ವರೆಗೆ ತಡೆ ಹಿಡಿಯಬಲ್ಲವು; ಆದರೆ ಭಯನಿವಾರಣೆಯು ಇವುಗಳಿಂದ ಅಸಾಧ್ಯ. ಹೆದರಿಕೆಯು ದೂರವಾಗಬೇಕಾದರೆ, ಜಗತ್ತು ಪ್ರೇಮದ ವ್ಯವಹಾರಕ್ಕೆ ತೊಡಗಬೇಕು; ಇಂದು ನಮಗೆ

(೧೨ನೇ ಪುಟ ನೋಡಿರಿ)

ಅಧ್ಯಕ್ಷಸ್ಥಾನದಿಂದ ನಿವೃತ್ತಿಹೊಂದಲಿರುವ ಡಾ| ರಾಜೇಂದ್ರ ಪ್ರಸಾದ್

ಭಗವತ್ತತ್ವಗಳು

ಮಾನವನ ಆಸುರೀ ಗುಣ ನಿವಾರಣಾ ಹೇತು

ವಿಶ್ವದಲ್ಲಿರುವ ಅದ್ವೈತ ಜ್ಞಾನಮಯ ಶಕ್ತಿಯನ್ನು ಬ್ರಹ್ಮ, ಪರಮಾತ್ಮ ಅಥವಾ ಭಗವಂತನೆಂದು ಕರೆಯುತ್ತಾರೆ.

ವದಂತಿ ತತ್ತತ್ವವಿದಸ್ತತ್ವಂ
ಯಜ್ಜ್ಞಾನಮದ್ವಯಂ
ಬ್ರಹ್ಮೇತಿ ಪರಮಾತ್ಮೇತಿ
ಭಗವಾನಿತಿ ಶಬ್ದ್ಯತೇ ||

ಭಗವತ್ತತ್ವವು ಸರ್ವಾತಿಶಾಯಿ, ಸರ್ವವ್ಯಾಪಕ, ನಿತ್ಯಸ್ವರೂಪವಾಗಿದೆ. 'ಭಗ' ಶಬ್ದದ ಪರಿಭಾಷೆಯು ವಿಷ್ಣು ಪುರಾಣದಲ್ಲಿ ಹೀಗೆ ದೊರೆಯುತ್ತದೆ:

ಐಶ್ವರ್ಯಸ್ಯ ಸಮಗ್ರಸ್ಯ
ವೀರ್ಯಸ್ಯ ಯಶಸಃ ಶ್ರಿಯಃ
ಜ್ಞಾನವೈರಾಗ್ಯಯೋಶ್ಚೈವ
ಷಣ್ಣಾಂ ಭಗ ಇತೀರಣಾ ||

ಐಶ್ವರ್ಯ, ವೀರ್ಯ ಅಥವಾ ಕರ್ಮಶಕ್ತಿ, ಯಶ, ಶ್ರೀ-ಲಕ್ಷ್ಮಿ, ಜ್ಞಾನ ಮತ್ತು ವೈರಾಗ್ಯಗಳೆಂಬ ಗುಣಗಳಿಗೆ 'ಭಗ'ವೆಂದು ಹೆಸರು. ಈ ಆರೂ ತಮ್ಮ ಪರಿಪೂರ್ಣರೂಪದಲ್ಲಿ ನಿವಾಸ ಮಾಡಿರುವ ಮಹಾ ಶಕ್ತಿಸಂಪನ್ನ ಪರಮ ಪುರುಷನೇ ಭಗವಂತನು. ಈ ಪ್ರಕಾರದ ಭಗವತ್ತತ್ವಗಳು ಮಾನವನಾದವನಿಗೆ ಪದೇ ಪದೇ ಬೇಕಾಗುವುವು. ನಮಗೆ ಭಗವಂತನು ಏಕೆಬೇಕು? ಆತನ ಹೊರತು ನಾವು ಜೀವಿಸಬಲ್ಲೆವೆ? — ಇವು ಮಾರ್ಮಿಕ ಪ್ರಶ್ನೆಗಳು. ಜೀವನಕ್ಕೆ ಭಗವಂತನ ಆವಶ್ಯಕತೆಯೆಲ್ಲಿದೆಯೆಂಬುದನ್ನು ತಿಳಿದುಕೊಂಡರೆ, ವ್ಯಕ್ತಿ ಮತ್ತು ಭಗವಂತನ ಪಾರಸ್ಪರಿಕ ಸಂಬಂಧದ ಸ್ಪಷ್ಟರೂಪವು ನಮಗೆ ಮನವರಿಕೆಯಾಗುವುದು. ಮೇಲೆ ಹೇಳಿದ ಪರಮಾತ್ಮನ ಆರು ಗುಣಗಳು ನಮ್ಮಲ್ಲಿ ಪ್ರತಿಯೊಬ್ಬನ ಜೀವನವನ್ನು ಸ್ವಚ್ಛಗೊಳಿಸುವುದಕ್ಕೆ, ಅದರ ಮಲ ಮತ್ತು ಅಂಧಕಾರವನ್ನು ದೂರವೋಡಿಸುವುದಕ್ಕೆ ಮತ್ತು ಅದನ್ನು ಶಕ್ತಿ ಮತ್ತು ಆನಂದಮಯವಾಗಿಸುವುದಕ್ಕೆ ಆವಶ್ಯಕವಿವೆ. ಭಗವಂತನ ಈ ಆರು ಗುಣಗಳಿಲ್ಲದೆ ನಮ್ಮ ಕಾರ್ಯವೊಂದೂ ನಡೆಯದೆಂದು ತಿಳಿದುಕೊಂಡರೆ, ಭಗವಂತನು ನಮ್ಮ ಹೃದಯದಲ್ಲಿ ನೆಲಸಲಿ, ಆತನ ಗುಣಗಳ ಪ್ರಕಾಶ ಅದರಲ್ಲಿ ಬೀರಲಿ ಎಂದು ನಾವು ಆಶಿಸುತ್ತೇವೆ. ಜೀವನವೆಂಬುದು ದೇವತತ್ವ ಮತ್ತು ಭೂತತತ್ವಗಳ ಸಮ್ಮಿಳನ ರೂಪ. ದೇವತತ್ವವು ಭಗವಂತನ ರೂಪ; ಪಂಚಭೂತಗಳು ಆಸುರೀ ಸ್ವರೂಪ. ದೇವ ಮತ್ತು ಅಸುರಗಳು ಒಂದಾಗಿ ಸೇರಿರಲಾರವು. ಕತ್ತಲೆ ಮತ್ತು ಬೆಳಕುಗಳ ಹೊಡೆದಾಟದಂತೆ ದೇವ ಮತ್ತು ಅಸುರ ತತ್ವಗಳ ನಡುವೆ ಕಾದಾಟ ನಡೆಯುತ್ತಿರುತ್ತದೆ. ಅಸುರರೊಡನೆ ಭಗವಂತನು ಸಂಗ್ರಾಮ ಹೂಡುವುದು ಸ್ವಾಭಾವಿಕ. ಅಸುರರು ಸೋತು ಹೋಗದೆ ಭಗವಂತನ ಮಂಗಲಮಯ ಸ್ವರೂಪದ ಪ್ರತಿಷ್ಠೆಯಾಗಲಾರದು. ತನ್ನ ಜೀವನದಲ್ಲಿ ಅಸುರರನ್ನು ಯುದ್ಧ ಮತ್ತು ಸಂಘರ್ಷಗಳ ಮೂಲಕ ದೂರಗೊಳಿಸದಿರುವವನು ಭಗವಂತನ ಉಪಾಸನೆಗೆ ಅಧಿಕಾರಿಯೆನಿಸಲಾರನು. ಅಸುರ ಮತ್ತು ದೇವತತ್ವಗಳನ್ನು ಏಕಕಾಲದಲ್ಲಿ ಪೂಜಿಸುವುದು ಸಾಧ್ಯವಿಲ್ಲ. ಜ್ಯೋತಿಯನ್ನುಗಳಿಸುವುದಕ್ಕೆ ಅಂಧಕಾರವನ್ನು ಹೋಗಲಾಡಿಸಲೇ ಬೇಕು. ನಾವು ಸಾಮಾನ್ಯವಾಗಿ ಅಂಧಕಾರವಲ್ಲಿಯೇ ಉಳಿದುಕೊಂಡು ಜ್ಯೋತಿಯತ್ತ ನಡೆಯಲುಪಕ್ರಮಿಸುತ್ತೇವೆ. ಜೀವನದಲ್ಲಿ ಒಂದು ವ್ಯಾಪಾರ ಇಲ್ಲವೇ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತ ಕಾರ್ಯ ಪೂರೈಸುವ ನೀತಿಯನ್ನು ಮೆಚ್ಚಿಕೊಳ್ಳುತ್ತೇವೆ. ಆದರೆ, ಹೀಗೆಸಗುವುದರಿಂದ ಆಸುರೀಗುಣಗಳು ನಮ್ಮನ್ನು ಬಿಡುವುದಿಲ್ಲ; ಇದರಿಂದಾಗಿ ಭಗವಂತನೂ ನಮಗೆ ಸಿಗುವುದಿಲ್ಲ.

ಆರು ವಿಧದ ಅಸುರ ಇಲ್ಲವೇ ಅಂಧಕಾರಗಳು ಜೀವನದಲ್ಲಿ ಸುಳಿಯುತ್ತವೆ. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಅಹಂಕಾರಗಳೆಂದು ಅವನ್ನು ಹೆಸರಿಸುತ್ತಾರೆ. ಶಾಂತ ಚಿತ್ತವನ್ನು ಇವು ಆಕ್ರಮಿಸಿ ಅಶಾಂತಗೊಳಿಸುತ್ತವೆ. ರಸವನ್ನು ಕೆಡಿಸಿ ಕುರಸವನ್ನಾಗಿ ಮಾರ್ಪಡಿಸುತ್ತವೆ. ಆನಂದವನ್ನು ಅಪಹರಿಸಿ ದುಃಖವನ್ನುಂಟುಮಾಡುತ್ತವೆ. ಅಸುರರ ಈ ವಿಧದ ಆಕ್ರಮಣವು ನಮ್ಮ ಮನಸ್ಸಿನ ಮೇಲೆ ಆಗಾಗ ಆಗುತ್ತ ಇರುತ್ತದೆ. ಇವುಗಳು ದೇಶ ಕಾಲಾತೀತಗಳು. ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಲ್ಲಿ ಪ್ರಕಟವಾಗುತ್ತವೆ. ಇವನ್ನು ಹೇಗೆ ಗೆಲ್ಲಬಹುದು ಎಂಬುದೇ ಮಾನವನ ಅತಿ ಹಳೆಯದಾದ ಸಮಸ್ಯೆಯಾಗಿಯೇ ಉಳಿದಿದೆ.

ಮೇಲೆ ಹೇಳಿದ ಆರು ಭಗವಂತನ ಗುಣಗಳೇ ಈ ಆರು ಅಸುರರನ್ನು ಗೆಲ್ಲುವಲ್ಲಿ ಸಫಲವಾಗುವುವು. ಮನುಷ್ಯನಲ್ಲಿ ಇದು ಅಸಂಭವ. ಪರಮಾತ್ಮನ ಕೃಪೆಯಿಂದ ಚಿತ್ತದಲ್ಲಿ ವೈರಾಗ್ಯೋದಯವಾಗುವಾಗ, ಕಾಮ ವಾಸನೆಯು ಸಂಪೂರ್ಣ ದೂರ ಸರಿದುಹೋಗುತ್ತದೆ. ವೈರಾಗ್ಯವೆಂದರೆ ಚಿತ್ತವು ವಿಷಯಗಳಲ್ಲಿ ಉಳಿದುಕೊಂಡೂ ಅವುಗಳಲ್ಲಿ ಲಿಪ್ತವಾಗಿರದ ಅಸಂಗಭಾವ. ಕಾಮವನ್ನು ರಾಗವೆನ್ನುತ್ತಾರೆ. ರಾಗವನ್ನು ದೂರ ಮಾಡುವುದು ಅಥವಾ ವೈರಾಗ್ಯವೇ ಕಾಮನಾಶಕ್ಕೆ ದಿವ್ಯೌಷಧ. ಯಾರು ವೀತರಾಗಿಯಾಗ ಬಲ್ಲರು? ಭಗವಂತನ ವೈರಾಗ್ಯಗುಣವನ್ನು ಆರಾಧಿಸುವವರು ಮಾತ್ರ. ಸ್ವಯಂ ಭಗವಾನ್ ಶ್ರೀಕೃಷ್ಣನು ಮಹಾರಾಸದ ವೇಳೆ ಅಂತರ್ಧಾನನಾಗಿ ವೈರಾಗ್ಯದ ವಿಲಕ್ಷಣ ಪರಿಚಯವಿತ್ತನು.

(೬ನೇ ಪುಟ ನೋಡಿರಿ)

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು—3

ನವಯುಗ

ವರುಷ	ಉಡುಪಿ	ವಾರ
೪೧	೧೦-೫-೬೨	೩೫

ಆಡಳಿತೆಯ ತೀವ್ರತೆ

ನಮ್ಮ ಪ್ರಧಾನ ಮಂತ್ರಿ ನೆಹರುರವರು ಇತ್ತೀಚೆಗೆ ಲೋಕ ಸಭೆಯಲ್ಲಿ ಮಾತನಾಡಿದ ಸಂದರ್ಭದಲ್ಲಿ ಭಾರತದಲ್ಲಿ ಲಂಚದ ಪ್ರಭಾವವು ಬಹಳ ಕಡಿಮೆಯಿರುವುದು ಎಂದು ಉದ್ಗರಿಸಿದರು. ವ್ಯಾವಹಾರಿಕ ದೃಷ್ಟಿಯಿಂದ ನೋಡುವಾಗ ಪ್ರಧಾನಿಯವರ ಈ ಮಾತಿನಲ್ಲಿ ವಿಶ್ವಾಸ ಹುಟ್ಟುವುದು ಕಷ್ಟಸಾಧ್ಯವಾದರೂ ಅವರೇ ಹೇಳುವಂತೆ ಪ್ರಪಂಚದ ಇತರ ದೇಶಗಳೊಡನೆ ಹೋಲಿಸಿ ನೋಡುವುದಾದರೆ, ನಮ್ಮಲ್ಲಿ ಲಂಚ ನೀಡುವ ಮತ್ತು ಅದನ್ನು ಸ್ವೀಕರಿಸುವ ಪ್ರಸಂಗಗಳು ಕಡಿಮೆಯೆಂದು ತಿಳಿಯಬೇಕಾಗುತ್ತದೆ. ನಮ್ಮ ದೇಶದಲ್ಲಿಯೂ ಲಂಚ ರುಷುವತ್ತುಗಳು ಕಾರುಭಾರು ನಡೆಸುತ್ತವೆಂಬ ಆರೋಪ ಬಂದುದರಿಂದ ಸರಕಾರವು ಇಂತಹ ದುರ್ವ್ಯವಹಾರ ನಡೆಸುವವರನ್ನು ಕಂಡು ಹಿಡಿದು ಅವರ ಮೇಲೆ ಖಟ್ಲೆ ಹೊರಿಸಲು ಒಂದು ವಿಶೇಷ ಪೋಲೀಸು ಪಡೆಯನ್ನು ಕೆಲವು ವರ್ಷಗಳಿಗೆ ಮೊದಲು ಸ್ಥಾಪಿಸಿತ್ತು. ಲಂಚಸ್ವೀಕಾರ ಅಪ್ರಾಮಾಣಿಕ ವ್ಯವಹಾರವೇ ಮೊದಲಾದುವನ್ನು ಕಂಡು ಹಿಡಿದು, ಕಟ್ಲೆ ಹೊರಿಸುವುದು ಇಲ್ಲವೇ ಡಿಪಾರ್ಟ್‌ಮೆಂಟಲ್ ಕ್ರಮ ಕೈಗೊಳ್ಳಲು ಶಿಫಾರಸು ಮಾಡುವುದು ಇದರ ಕೆಲಸ.

ಈ ವಿಶೇಷ ಪೋಲೀಸು ಪಡೆಯು ೧೯೫೮ರಲ್ಲಿ ೫೫೧ ಕೆಟ್ಟ ಪ್ರಸಂಗಗಳನ್ನು ಕಂಡು ಹಿಡಿಯಿತು. ಮುಂದಿನ ವರ್ಷಗಳಲ್ಲಿ ಈ ಸಂಖ್ಯೆಯು ಬೆಳೆಯುತ್ತ ಒಂದು, ೧೯೫೯ರಲ್ಲಿ ೯೧೭, ೬೦ರಲ್ಲಿ ೧,೦೪೬ ಮತ್ತು ೬೧ರಲ್ಲಿ ೧,೧೨೪ ಪ್ರಸಂಗಗಳನ್ನು ಬೆಳಕಿಗೆ ತಂದಿತು. ಈ ಅಂಕಸಂಖ್ಯೆಗಳು ಪೋಲೀಸು ಪಡೆಯ ಕಾರ್ಯದಕ್ಷತೆಯನ್ನು ತೋರಿಸಲೂ ಬಹುದು; ಲಂಚ ಸ್ವೀಕರಣೆಯ ಚಟವು ಬೆಳೆಯುತ್ತಿರುವುದನ್ನೂ ಸೂಚಿಸಬಹುದು. ಆದರೆ, ಒಂದು ಮಾತು ಮಾತ್ರ ಸತ್ಯ. ಈ ಪಡೆಯು ಕಟ್ಲೆ ಹೊರಿಸಿದವರಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳೂ ಇದ್ದಾರೆ. ೧೯೬೧ರಲ್ಲಿಯೇ ಹಲವಾರು ಗಜೆಟೆಡ್ ಅಧಿಕಾರಿಗಳೂ ಇಂತಹ ಖಟ್ಲೆಗಳಿಗೆ ಬಿದ್ದು ಬಿಟ್ಟಿದ್ದಾರೆ. ರೈಲ್ವೆ ಸೆಂಟ್ರಲ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್, ಅಂಚೆತಂತಿ ಇಲಾಖೆಗಳ ಇಂಜಿನಿಯರರು ವಿವಿಧ ಡಿಪಾರ್ಟ್‌ಮೆಂಟುಗಳ ಉನ್ನತಾಧಿಕಾರಿಗಳು ಆಯಾತನಿರ್ಯಾತ ಕಮಿಶನರರು ಮೊದಲಾದವರೂ ಗುರಿಯಾದುದನ್ನು ಕಾಣುವಾಗ, ವಿಶೇಷ ಪೋಲೀಸು ಪಡೆಯ ಕಾರ್ಯವು ಪ್ರಶಂಸನೀಯವಾಗಿದೆಯೆಂದು ಹೇಳಬಹುದು. ಅದರೊಡನೆಯೇ ಲಂಚದ ಪ್ರಕರಣಗಳೂ ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿವೆಯೆಂದು ಊಹಿಸುವುದು ಸಾಧ್ಯ. ಅದೇನೇ ಇರಲಿ, ಲಂಚ ಕೊಡುವುದಾಗಲೀ ತೆಗೆದುಕೊಳ್ಳುವುದಾಗಲಿ ಅನ್ಯಾಯ, ಪಾಪ. ಇದು ಸಾಮಾಜಿಕ ಅಪರಾಧ. ಇಂತಹ ಅಪರಾಧಗಳನ್ನು ಕಂಡು ಹಿಡಿಯುವ ಪ್ರಯತ್ನ ನಡೆಯುತ್ತಿರುವಂತೆಯೇ ಇವು ನಡೆಯದಂತೆ ನೋಡಿಕೊಳ್ಳಲು ಮುಂಜಾಗ್ರತೆಗಳನ್ನೂ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲವಾದರೆ, ಅಂಟು ರೋಗದಂತೆ ಇದು ದೇಶವನ್ನು ತನ್ನ ಗುತ್ತಿಗೆಗೆ ತಂದುಕೊಳ್ಳುತ್ತದೆ. ಲಂಚ ರುಷುವತ್ತುಗಳ ಪ್ರಭಾವವಿರುವಲ್ಲಿ ದೇಶದ ಪ್ರಶಾಸನ ಶುಚಿಯಾಗಿರುವುದು ಎಂದಿಗೂ ಸಾಧ್ಯವಿಲ್ಲ. ಆದುದರಿಂದ ಈ ಸಾಮಾಜಿಕ ಅನ್ಯಾಯ ನಡೆಯದಂತೆ ನೋಡಿಕೊಳ್ಳಬೇಕು,

ಲಂಚ ಕೊಡುವವರು ಇರುವಾಗ, ತೆಗೆದುಕೊಳ್ಳಬಾರದೇಕೆ ಎಂಬ ಪ್ರಶ್ನೆ ಬರುತ್ತದೆ. ಇತ್ತೀಚೆಗೊಂದು ಪ್ರಸಂಗದಲ್ಲಿ ಒಬ್ಬನು ಲಂಚ ತೆಗೆದುಕೊಂಡದ್ದಲ್ಲ, ಭಕ್ಷೀಸು ಪಡೆದದ್ದು; ಇದು "ಲಂಚ" ಶಬ್ದದ ಅರ್ಥದಲ್ಲಿ ಕೂಡ ಬರುವುದಿಲ್ಲವೆಂದು ಉಚ್ಚ ನ್ಯಾಯಾಲಯವೊಂದು ತೀರ್ಪು ಕೊಟ್ಟಿತ್ತು. ಆದರೆ, ಸರಕಾರಿ ನೌಕರನು ತನ್ನ ಕರ್ತವ್ಯವನ್ನು ಮಾಡುವುದಕ್ಕೆ ಲಂಚವನ್ನಾಗಲೀ ಭಕ್ಷೀಸನ್ನಾಗಲೀ ಏತಕ್ಕೆ ಪಡೆಯಬೇಕು? ಇವನ್ನು ಕೊಡುವವರಾದರೂ ಸುಮ್ಮನೆ ಕೊಡುವುದಿಲ್ಲ. ತಮ್ಮ ಕಾಗದ ಪತ್ರಗಳಿಗೆ ಬೇಗನೆ ಉತ್ತರ ಬರಬೇಕು—ಆದರಿಂದಾಗಿ ತಾವು ಬೇಗನೇ ವ್ಯಕ್ತಿಗತ ಲಾಭ ಗಳಿಸಬೇಕು ಎಂಬ ಆಶಯದಿಂದ ಇದರ ಸಾಧನೆಗಾಗಿ ಲಂಚವೀಯುವವರು ಅನೇಕ ಮಂದಿಯಿದ್ದಾರೆ. ಇಂದಿನ ಆಡಳಿತದ ವಿಧಾನದಲ್ಲಿ ಸಾಮಾನ್ಯ ನಾಗರಿಕ ಮತ್ತು ಸರಕಾರಿ ಕಛೇರಿಯ ಸಂಬಂಧವು ಅತಿ ನಿಕಟವಾದುದು. ಅವರಲ್ಲಿಯೂ ಪ್ರಶಾಸನ ಪ್ರಚಲನದಲ್ಲಿ ಅಧಿಕಾರ ಕೇಂದ್ರೀಕರಣದಿಂದಾಗಿ ಇವು ಮತ್ತಷ್ಟು ಗಡಚೇ ಆಗುವುದು. ಲಂಚ ನಿರ್ಮೂಲನಕ್ಕೆ ಸಾಮಾಜಿಕ ನಡಾವಳಿಯು ಉನ್ನತವಾಗುವುದು ಅತ್ಯವಶ್ಯವೆನ್ನುವುದಾದರೂ ಸರಕಾರದ ಆಡಳಿತ ಯಂತ್ರವೂ ತೀವ್ರಗತಿಯಲ್ಲಿ ದುಡಿಯುವುದು ಮತ್ತಷ್ಟು ಅಗತ್ಯವೆನ್ನಲೇಬೇಕು. ಸರಕಾರಿ ಕಛೇರಿಗಳಲ್ಲಿ ಕಾಗದ ಪತ್ರಗಳಿಗೆ ಶೀಘ್ರ ವಿಲೆವಾರಿಯಾಯಿತೆಂದರೆ, ಜನತೆಯಲ್ಲಿ ತನ್ನ ಇಷ್ಟಾರ್ಥ ಬೇಗನೇ ಪೂರೈಸುವುದೆಂಬ ವಿಶ್ವಾಸ ಮೂಡುತ್ತದೆ; ತನ್ನ ಕಾರ್ಯ ತ್ವರಿತವಾಗಿ ಕೈಗೂಡುತ್ತದೆ ಎಂಬ ಭಾವನೆಯು ಉದಯಿಸುತ್ತದೆ. ಹೀಗಾದಲ್ಲಿ ಲಂಚ ಕೊಡುವುದಕ್ಕೆ ಯಾರೊಬ್ಬನೂ ಹೋಗುವುದಿಲ್ಲ. ಆದುದರಿಂದ ಸರಕಾರಿ ವಲಯದ ಮಂದ ನೀತಿ ಮತ್ತು ಮಂದ ಗಮನವೇ ಈ ಲಂಚಕ್ಕೆ ಮೂಲ ಪ್ರೇರಕವೆನ್ನಲೇಬೇಕು. ಸರಕಾರವು ಆಡಳಿತೆಯ ಕ್ರಮವನ್ನು ಆಮೂಲಾಗ್ರ ಪರಿಶೀಲಿಸಬೇಕು. ಜನತೆಯ ಹಾಲಹವಾಲೆಗಳಿಗೆ ಏನಾದರೊಂದು ಉತ್ತರ ಬೇಗನೇ ದೊರೆಯುವಂತೆ ಮಾಡಬೇಕು. ಅರ್ಥಾತ್ ಆಡಳಿತೆಯ ಯಂತ್ರವು ತೀವ್ರಾತಿತೀವ್ರವಾಗಿ ಕಾರ್ಯವೆಸಗುವಂತೆ ಮಾಡಬೇಕು; ಅಧಿಕಾರ ವಿಕೇಂದ್ರೀಕರಣವನ್ನು ಮಾಡಿ ಸ್ಥಳೀಯ ಅಧಿಕಾರಿಯು ನಾಗರಿಕರ ಕಷ್ಟಗಳಿಗೆ ಸೂಕ್ತ ಸಮಯದಲ್ಲಿ ಪರಿಹಾರ ಸೂಚಿಸಲು ಅಧಿಕಾರ ಪಡೆದಿರಬೇಕು. ವಿ. ಟಿ ಕೃಷ್ಣಮಾಚಾರಿಯವರು ನೀಡಲಿರುವ ವರದಿಯಿಂದ ಇದು ಸಾಧ್ಯವಾಗಲೂ ಬಹುದು. ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಮಾತ್ರ ಈ ಕೆಲಸ ನಡೆಯುವುದಿಲ್ಲ. ಕಾರ್ಯವಿಧಾನವನ್ನು ತೀವ್ರಗೊಳಿಸುವುದಕ್ಕೋಸ್ಕರ ಸರಕಾರವು ಆಡಳಿತದ ವ್ಯವಸ್ಥೆಯನ್ನು ಪುನರ್ವಿಮರ್ಶಿಸಬೇಕು. ಲಂಚ ನೀಡುವಂತಹ ಸಂದರ್ಭವೇ ಒದಗಿ ಬರಬಾರದು. ನಮ್ಮ ನೆರೆಯ ರಾಷ್ಟ್ರಗಳಲ್ಲಿ ದಂಡಿನಾಡಳಿತೆಯು ಬರುವುದಕ್ಕೆ ಅಲ್ಲಿ ಲಂಚ ಪ್ರಪಂಚವು ನಿರ್ಮಾಣವಾದುದೇ ಒಂದು ಕಾರಣವೆಂಬುವಾಗ, ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಡುವ ನಾವು ಲಂಚದ ಸಾಮ್ರಾಜ್ಯ ನಿರ್ಮಾಣವಾಗದಂತೆ ನೋಡಿಕೊಳ್ಳಬೇಕು; ಈ ದಿಸೆಯಲ್ಲಿ ಜನತೆಯೂ ದೃಢ ಮನಸ್ಸು ಮಾಡಬೇಕೆಂಬುದನ್ನು ಒಪ್ಪಿಕೊಳ್ಳಬೇಕಾದರೂ ಸರಕಾರಿ ವಲಯದ ಪಾತ್ರ ಹೆಚ್ಚಿನದು ಎಂದು ಎನ್ನಲೇ ಬೇಕಾಗುತ್ತದೆ. ಸರಕಾರಿ ಕಛೇರಿಯು ಯಮದೂತರ ಆವಾಸಸ್ಥಾನವಾಗದಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಈ ದಿಸೆಯಲ್ಲದು ಕಾರ್ಯ ಪ್ರವೃತ್ತವಾಗಬೇಕು,

ನಾಗಾ ಬಂಡುಗಾರರು

ನಾಗಾ ಜನರಿಗೆ ಪ್ರತ್ಯೇಕ ರಾಜ್ಯವನ್ನು ಕೊಡುವುದಿಲ್ಲವೆಂದು ಘೋಷಿಸಿದ ಪ್ರಧಾನಿ ನೆಹರು ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಕಾಯ್ದುಕೊಳ್ಳುವಲ್ಲಿ ಸಂರಕ್ಷಣಾ ಪಡೆಗಳು ಆಸಕ್ತಿಯಿಂದ ಕೆಲಸ ಮಾಡುತ್ತವೆಯೆಂದರು. ನಾಗಾ ಪ್ರದೇಶದ ಒಳಗಡೆ ನಮ್ಮ ಸಂರಕ್ಷಣಾ ಕಾರ್ಯಕ್ರಮಗಳಿಂದ ಅಶಾಂತಿಯ ವಾತಾವರಣವು ಕಡಿಮೆಯಾಗಿದೆ; ಅಲ್ಲಿನ ಬಂಡುಗಾರರಿಗೆ ಶಸ್ತ್ರಾಸ್ತ್ರಗಳ ಪೂರೈಕೆಯಾಗ ನಿಂತಿದೆ; ಆದುದರಿಂದ ನಾಗಾ ಪ್ರದೇಶದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವುದು ಸಾಧ್ಯವಾದೀತು. ಆದರೂ ಇತ್ತೀಚೆಗೆ ಬಂದಿರುವ ಸುದ್ದಿಯಂತೆ ಕೆಲವು ನಾಗಾ ಬಂಡುಗಾರರು ಭಾರತದ ಗಡಿಯನ್ನು ಮೀರಿ ಪಾಕಿಸ್ತಾನದತ್ತ ತಪ್ಪಿಸಿಕೊಂಡು ಹೋಗಿದ್ದಾರೆ. ಬರ್ಮಾವನ್ನೂ ಪ್ರವೇಶಿಸಿರಬಹುದು. ಪಾಕಿಸ್ತಾನವನ್ನು ಹೊಕ್ಕ ನಾಗಾ ಬಂಡುಗಾರರಿಂದ ಭಾರತಕ್ಕೆ ಧಕ್ಕೆ ತಗಲುವುದಿಲ್ಲವೆಂದು ಸುಮ್ಮನೆ ಕೂತುಕೊಳ್ಳುವಂತಿಲ್ಲ. ಇಂದು ಭಾರತ—ಪಾಕಿಸ್ತಾನಗಳ ನಡುವಣ ಸಂಬಂಧ ಕೆಟ್ಟಿರುವಷ್ಟು ಪ್ರಾಯಃ ಹಿಂದೆಂದೂ ಕೆಟ್ಟಿರಲಿಲ್ಲ. ಕಾಶ್ಮೀರವನ್ನು ಕಬಳಿಸುವ ಏಕಮಾತ್ರ ಹಂಬಲದಿಂದ ಅದು ಭಾರತ ವಿರೋಧಿಗಳಿಗೆ ತನ್ನ ಸಹಾನುಭೂತಿಪರ ಸಹಕಾರ ಹಸ್ತವನ್ನು ನಿರಾತಂಕವಾಗಿ ನೀಡುವ ಪರಿಪಾಠವಿಟ್ಟುಕೊಂಡಿದೆ. ಚೀನ-ಭಾರತಗಳ ಸೀಮಾ ವಿವಾದದಿಂದ ದುರ್ಲಾಭಪಡೆಯಲು ಹವಣಿಸುವ ಪಾಕಿಸ್ತಾನವು ಈಗ ತನ್ನ ದೇಶವನ್ನು ಹೊಕ್ಕ ನಾಗಾ ಬಂಡುಗಾರರಿಗೆ ಸಹಕಾರ ಉತ್ತೇಜನವಿತ್ತು ಅವರನ್ನು ಭಾರತ ಸೀಮೆಯೊಳಗೂ ಕಳಿಸಿ, ಅಶಾಂತಿ ಹರಡಿಸುವ ಶತ ಪ್ರಯತ್ನ ಮಾಡದುಳಿಯದು. ನಾಗಾ ಬಂಡುಗಾರರು ನಮ್ಮ ಗಡಿ ದಾಟದಂತೆ ನೋಡಿಕೊಳ್ಳಬೇಕಿತ್ತಾದರೂ ಅದು ನಮ್ಮ ಪಡೆಗಳಿಂದ ಅಸಾಧ್ಯವಾಯಿತು. ಆದುದರಿಂದ ಹೊರಗೆ ಓಡಿದವರು ಮರಳಿ ಒಳಗೆ ಬರುವಾಗ, ಅವರನ್ನು ತಡೆದು ಹಿಡಿಯುವುದು ಅಗತ್ಯವಿದೆ. ಸೀಮೆಯ ಭದ್ರತೆಯನ್ನು ಅತೀವ ಎಚ್ಚರಿಕೆಯಿಂದಉಳಿಸಿಕೊಳ್ಳಬೇಕಾದುದು ಅತ್ಯಗತ್ಯವಿದೆ.

ಕರ್ನಾಟಕ ಬೇಂಕ್, ಲಿಮಿಟೆಡ್

ಕರ್ನಾಟಕ ಬೇಂಕ್, ಲಿಮಿಟೆಡ್, ಮಂಗಳೂರು ಇದರ ೧೯೬೧ನೆ ಕೆಲೆಂಡರ್ ವರ್ಷಾಂತ್ಯದ ಡೈರೆಕ್ಟರರ ವರದಿ, ಪಾಲ ಮೂಲ ಮತ್ತು ಆಯವ್ಯಯಗಳ ಲೆಖ್ಖಪತ್ರಗಳು ನಮ್ಮ ಕೈ ಸೇರಿವೆ. ವರದಿ ವರ್ಷದಲ್ಲಿ ಬೇಂಕು ತನ್ನ ೨೭ ಶಾಖೆಗಳ ಮೂಲಕ ಬೇಂಕಿಂಗ್ ವ್ಯವಹಾರವನ್ನು ನಡೆಸಿ ಒಟ್ಟು ರೂ. ೨,೧೯,೬೬೬-೬೭ ಲಾಭವನ್ನು ಗಳಿಸಿದೆ. ಇದರಿಂದ ರೂ. ೬೮,೧೫೭-೨೩ನ್ನು ಕ್ಷೇಮ ನಿಧಿಗೆ, ರೂ. ೮೮,೮೦೨-೪೧ನ್ನು ಕರಗಳಿಗೆ ತೆಗೆದಿರಿಸಿ ಶೇರುದಾರರಿಗೆ ಸೇ. ೧೦ರಂತೆ ಡಿವಿಡೆಂಡನ್ನು ನೀಡಲು ಡೈರೆಕ್ಟರರು ನಿರ್ಧರಿಸಿದ್ದಾರೆ. ಬೇಂಕಿನ ಒಟ್ಟು ಸೊತ್ತುಗಳು ರೂ. ೩ ಕೋಟಿಗೂ ಮಿಕ್ಕಿದ್ದು, ಒಟ್ಟು ಠೇವಣಾತಿಗಳು ರೂ. ೨೬೧½ ಲಕ್ಷಗಳಷ್ಟಿದೆ, ಕಳೆದ ಮೂರು ವರ್ಷಗಳಲ್ಲಿ ಬೇಂಕು ತೀವ್ರವಾಗಿ ಪ್ರಗತಿಯತ್ತ ಧಾವಿಸುತ್ತಿದೆ ಎಂದು ಹೇಳಬಹುದು. ಠೇವಣಾತಿ ಮತ್ತು ಹೊರಗೆ ಕೊಟ್ಟಿರುವ ಸಾಲಗಳ ದಾಮಾಶಯವು ನೂರಕ್ಕೆ ೬೦ಕ್ಕಿಂತಲೂ ಕಡಿಮೆಯಿರುವುದು ಬೇಂಕಿನ ವೈಶಿಷ್ಟ್ಯವೆನ್ನಬಹುದು. ವರದಿ ವರ್ಷದಲ್ಲಿ ಕೂಡಿಸಲು ನಿರ್ಧರಿಸಿದ ಮೊಬಲಗನ್ನು ಸೇರಿಸಿ, ಬೇಂಕಿನ ಕ್ಷೇಮನಿಧಿಯು ರೂ. ೩,೯೫,೨೫೦ ಇರುತ್ತದೆ. ಬೇಂಕಿನ ವ್ಯವಹಾರವನ್ನು ಇನ್ನೂ ಸುವಿಸ್ತೃತಗೊಳಿಸುವ ಆಶೆಯಿಂದ ಕರೆಯದುಳಿದ ಶೇರು ಹಣವನ್ನು ಪಾವತಿ ಮಾಡುವಂತೆ ಶೇರುದಾರರನ್ನು ಪ್ರಚಲಿತ ವರ್ಷದಲ್ಲಿ ಕೇಳಿಕೊಳ್ಳಲು ಡೈರೆಕ್ಟರರು ನಿಶ್ಚಯಿಸಿದ್ದಾರೆ. ಆಗ ವರದಿ ವರ್ಷದಲ್ಲಿದ್ದ ಪಾವತಿಯಾದ ಬಂಡವಳ ರೂ. ೬½ ಲಕ್ಷವು ರೂ. ೧೦ ಲಕ್ಷಗಳಿಗೇರುವುದು. ಸೌಮ್ಯವಾಗಿ ಬೇಂಕಿಂಗ್ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಮುಂದುವರಿಯುತ್ತಿರುವ ಈ ಬೇಂಕು ಡೈರೆಕ್ಟರ ಮಂಡಳ, ಅಧ್ಯಕ್ಷರಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಮತ್ತು ಜನರಲ್ ಮೆನೇಜರ್ ಶ್ರೀ ಕೆ.ಎನ್. ಬಾಸ್ರಿಯವರ ಚಾಣಾಕ್ಷತೆಯಿಂದ ಪ್ರಚಲಿತ ವರ್ಷದಲ್ಲಿ ಮತ್ತಷ್ಟು ಪ್ರಗತಿಗಳಿಸುವುದೆಂದು ಹಾರೈಸಬಹುದು.

TB SEAL DESIGN

DELHI ARTIST WINS THE PRIZE AGAIN

Design for the TB Seal for the 13th TB Seal Sale Campaign, organised by the Tuberculosis Association of India, has now been selected. Out of the 181 entries received from 84 artists, the design submitted by Shri Susanta Banerjee of New Delhi, has been selected as the suitable one. The design is the picture of a 'woman fondling a doe" and the theme indicates the quality of kindness. The prize amount of the seal design is Rs. 500/-.

The 13th TB Seal Sale Campaign will commence on October 2, 1962. As usual a TB Seal costs 10 Naye Paise.

ಅಲ್ಲಲ್ಲಿಯ ಸುದ್ದಿಸಾರ

ಸತ್ಕಾರ ಸಮಾರಂಭ— ಉಡುಪಿ ಮತ್ತು ಬ್ರಹ್ಮಾವರ ಮತದಾರ ಕ್ಷೇತ್ರಗಳಿಂದ ವಿಧಾನ ಸಭೆಗೆ ಚುನಾಯಿಸಲ್ಪಟ್ಟ ಶ್ರೀ ಎಂ. ಮಧ್ವರಾಜ ಹಾಗೂ ಶ್ರೀ ಎಸ್. ಧರ್ಮಸಾಮ್ರಾಜ್ಯ ಇವರನ್ನು ಸತ್ಕರಿಸಲು ತಾ. 29-4-62ರಂದು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ವತಿಯಿಂದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಮಾರಂಭವೊಂದು ಜರಗಿತು. ತಾಲೂಕು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎ.ಜೆ.ಆಲ್ಸೆಯವರು ಸ್ವಾಗತಿಸುತ್ತಾ ಇಂದಿನ ಅತಿಥಿಗಳು ತಮ್ಮ ತಮ್ಮ ಕ್ಷೇತ್ರಗಳ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ದುಡಿಯುವರೆಂಬ ಭರವಸೆ ಇದೆ ಎಂದರು. ಅನಂತರ ಶ್ರೀಗಳಾದ ಕೆ. ರಾಮರಾವ್, ಡಾ. ಪಿ. ಜಿ ಆಚಾರ್, ದೇವೇಂದ್ರ ಸಜತ್ತಾಯ, ಪಿ. ಶಿವಾಜಿ ಶೆಟ್ಟಿ, ಪಿ. ರಂಗನಾಥ ಶೆಣೈ, ಕೆ. ಕೆ. ಪೈ. ಯು. ರಾಘವೇಂದ್ರ ಕೃಷ್ಣ ಭಟ್ ಮೊದಲಾದವರು ಮಾತನಾಡಿ ಕಾಂಗ್ರೆಸ್ಸನ್ನು ಬಲಗೊಳಿಸುವುದೇ ಮೊದಲಾದ ಕುರಿತು ಸೂಚನೆಗಳನ್ನಿತ್ತರು. ಅಧ್ಯಕ್ಷ ಶ್ರೀ ಪೈಗಳು ಮಾತನಾಡುತ್ತಾ ಕಾಂಗ್ರೆಸ್ ಮಂತ್ರಿಗಳು ಕಾಂಗ್ರೆಸ್ ಕೆಲಸಗಾರರೊಡನೆ ಸಂಪರ್ಕವಿಟ್ಟುಕೊಂಡು ಅವರು ವಿನಂತಿಸುವ ಹಾಲಹವಾಲೆಗಳನ್ನು ಗಮನಿಸಬೇಕು. ನಾವು ಸಮರ್ಥ ಮುಂದಾಳುಗಳನ್ನು ರೂಪಿಸುವಂತಾಗಬೇಕು ಸರಕಾರದ ಕುಂದುಕೊರತೆಗಳನ್ನು ಕಾಂಗ್ರೆಸಿಗರು ನಿರ್ಭೀತಿಯಿಂದ ಹೇಳುವಂತಾಗಬೇಕೆಂದಲ್ಲದೆ ನಮ್ಮ ಶಾಸಕರು ಮಾಡಬೇಕಾದ ಸ್ಥಳೀಯ ಸಮಸ್ಯೆಗಳೇನೆಂಬುದನ್ನು ವಿವರಿಸಿದರು. ಅತಿಥಿಗಳಿಬ್ಬರೂ ಮಾತನಾಡುತ್ತಾ ತಾವು ಜನತೆಯ ಸಂಪರ್ಕದಿಂದ ಅವರ ಸಮಸ್ಯೆಗಳನ್ನು ಮನಗಂಡಿದ್ದೇವೆಂದೂ ಈ ಕುರಿತು ಸಾಧ್ಯವಾದಷ್ಟು ಸೇವೆ ಸಲ್ಲಿಸಲಿರುವೆವೆಂದೂ ಭರವಸೆ ಇತ್ತರು. ಶ್ರೀ ಎ. ಜೆ. ಆಲ್ಸೆಯವರ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಶಾಲಾವರ್ಧಂತ್ಯುತ್ಸವ— ಕುರುಕಾಲು ಶ್ರೀ ಕುಂಜಾರು ಗಿರಿಜಾ ಹಾ. ಎ. ಮತ್ತು ಶ್ರೀ ಗಣಪತಿ ಎ ಶಾಲೆಗಳ ಸಂಯುಕ್ತ ವರ್ಧಂತ್ಯುತ್ಸವವು ತಾ. 28-4-62ರಲ್ಲು ಶ್ರೀ ಯಂ. ಮಧ್ವರಾಜ್ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಬಹುಮಾನ ವಿತರಣೆಯನ್ನು ಶ್ರೀ ಟಿ. ಎ ಪೈಯವರು ನೆರವೇರಿಸಿದರು. ಆರಂಭದಲ್ಲಿ ಶಾಲಾ ಮೆನೇಜರ್ ಶ್ರೀ ಕುರುಕಾಲು ಗಣಪಯ್ಯ ಸೆಟ್ಟಿ ಅತಿಥಿಗಳ ಪರಿಚಯವನ್ನು ಮಾಡಿ ಶಾಲೆಗಳ ಮ-ಗ್ರಾಮದ ಕೆಲವು ಅವಶ್ಯಕತೆಗಳನ್ನು ಕೋರಿ ಸ್ವಾಗತ ಭಾಷಣ ಮಾಡಿದರು. ಶ್ರೀ ಕುಂಜಾರು ಗಿರಿಜಾ ಹಾಯರ್ ಎಲಿಮಂಟರಿ ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ವಾಸು ಶೆಟ್ಟರೂ ಶ್ರೀ ಕುರುಕಾಲು ಗಣಪತಿ ಎ ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ಶಿವರಾಮ ಶೆಟ್ಟರೂ ತಂತಮ್ಮ ಶಾಲೆಗಳ ಉತ್ತಮ ಅಭ್ಯುದಯದ ವರದಿಗಳನ್ನು ಓದಿದರು. ಕಾರ್ಕಳ ಭುವನೇಂದ್ರ ಕಾಲೇಜಿನ ಲೆಕ್ಚರರಾದ ಶ್ರೀ ಕೆ. ಸುಬ್ರಹ್ಮಣ್ಯ ಭಟ್ಟರು ಸ್ವಸ್ತಿ ವಾಚನಮಾಡಿದರು. ಶ್ರೀ ಕೆ. ವೆಂಕಟರಮಣ ಭಟ್ಟರು ಸಂದೇಶಗಳನ್ನು ವಾಚಿಸಿದರು.

ಉಭಯ ಅತಿಥಿಗಳು ಶಾಲೆಗಳ ಅಭಿವೃದ್ಧಿಯನ್ನು ಮೆಚ್ಚಿ ಕುರುಕಾಲು ಗಣಪಯ್ಯ ಶೆಟ್ಟರು, ಗ್ರಾಮದಲ್ಲಿ ಸ್ಥಾಪಿಸಿದ ಹಲವು ಸಂಘ ಸಂಸ್ಥೆಗಳ ಸೇವಾ ಭಾಗವನ್ನು ಪ್ರಶಂಸಿಸಿ ಶಾಲೆಗಳಿಗೆ ಆಗತ್ಯವುಳ್ಳ ಕಟ್ಟೋಣ ವಿಸ್ತರಣೆ, ಹೆಚ್ಚಿನ ಸಾಮಾಗ್ರಿಗಳ ಸಲಕರಣೆ, ಆಟದ ಮೈದಾನಿನ ದುರಸ್ತಿ, ಮತ್ತು ಗ್ರಾಮಕ್ಕೆ ಸಮ್ಬಂಧಪಟ್ಟ ರೂರಲ್ ಡಿಸ್ಪೆನ್ಸರಿ. ಶಾಲಾ ಮುಂಭಾಗದಲ್ಲಿ ಹಾದುಹೋಗುವ ಪಾದುಕಾಕ್ಷೇತ್ರ ರಸ್ತೆಗೆ ಡಾಮರು ಹಾಕುವಿಕೆ ಇನ್ನಿತರ ಕಾಮಗಾರಿಗಳಿಗೆ ಅಗತ್ಯವುಳ್ಳ ಅನುಕೂಲತೆಯನ್ನು ಒದಗಿಸಿ ಕೊಡುತ್ತೇವಾಗಿ ಆಶ್ವಾಸನೆ ಕೊಟ್ಟು ಭಾಷಣಗಳನ್ನಿತ್ತರು. ಬಳಿಕ ಕುರುಕಾಲು ಶಾಲಾ ವಿದ್ಯಾರ್ಥಿಗಳಿಂದ "ಭರತನ ಭ್ರಾತೃಪ್ರೇಮ" ಎಂಬ ಪೌರಾಣಿಕ ನಾಟಕವೂ ಕುಂಜಾರು ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳಿಂದ "ಪದ್ಮಿನಿ" ಎಂಬ ಚಾರಿತ್ರಿಕ ನಾಟಕವೂ ಅತ್ಯುತ್ತಮವಾಗಿ ಪ್ರದರ್ಶಿಸಲ್ಪಟ್ಟ ಬಳಿಕ ಧನ್ಯವಾದ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯ್ತು.

ಮರುದಿನ ತಾ. 29ರಲ್ಲು ಎರಡು ಶಾಲೆಗಳ ಸಂಯುಕ್ತ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇನ್ನಂಜೆ ಹೈಸ್ಕೂಲಿನ ಮುಖ್ಯ ಅಧ್ಯಾಪಕರಾದ ಶ್ರೀ ಪಿ. ವಿಠಲ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಕೆ. ವಾಸು ಶೆಟ್ಟರಿಂದ ಸ್ವಾಗತ ಭಾಷಣವೂ ಕಾರ್ಯದರ್ಶಿ ಕೆ. ಭುಜಂಗ ಶೆಟ್ಟರಿಂದ ವರದಿ ವಾಚನವಾಗಿ ಬಹುಮಾನ ವಿತರಣೆಯಾದ ತರುವಾಯ ಸಭಿಕರ ಪರವಾಗಿ ಮಂಗಳೂರು ಸೈಂಟ್ ಎಗ್ನೆಸ್ ಕಾಲೇಜಿನ ಲೆಕ್ಚರರ್ ಶ್ರೀ ಯಮ್. ಮೋಹನ ಶೆಟ್ಟಿ ಮತ್ತು ಕುರುಕಾಲು ಗಣಪಯ್ಯ ಶೆಟ್ರು ಇವರಿಂದ ಹಳೆ ವಿದ್ಯಾರ್ಥಿ ಸಂಘದ ಶ್ರೇಯಸ್ಸಿನ ಕುರಿತು ಭಾಷಣಗಳಾದುವು. ಅಧ್ಯಕ್ಷರು ಹಳೆ ವಿದ್ಯಾರ್ಥಿ ಸಂಘದ ಆವಶ್ಯಕತೆ, ಉದ್ದೇಶ ಮತ್ತು ಕಾರ್ಯಕ್ರಮಗಳ ಕುರಿತು ಬೋಧಪ್ರದವಾದ ಭಾಷಣವನ್ನಿತ್ತರು ತರುವಾಯ ಕುಂಜಾರು ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳಿಂದ "ಛಾಯಾ" ಎಂಬ ಚಾರಿತ್ರಿಕ ನಾಟಕವೂ ಸಂಘದ ಯುವಕರಿಂದ "ಮದ್ಮೆದ ಮಲ್ಕ" ಎಂಬ ತುಳು ನಾಟಕವೂ ಅತ್ಯುತ್ತಮವಾಗಿ ಪ್ರದರ್ಶಿಸಲ್ಪಟ್ಟವು.

ತರಬೇತಿ ಶಿಬಿರದ ಸಮಾರೋಪ.

ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘ, ಕಡಿಯಾಳಿ ಕೇಂದ್ರದ ಆಶ್ರಯದಲ್ಲಿ ಕಳೆದ ತಿಂಗಳ ತಾ. 23ರಂದು ಉದ್ಘಾಟನೆಗೊಂಡ ಶಾರೀರಿಕ ಶಿಕ್ಷಣ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಉಡುಪಿಯ ಎ. ಇ. ಒ. ಶ್ರೀ ಪಿ. ಆರ್ ನಾಯಕರ ಅಧ್ಯಕ್ಷತೆಯಲ್ಲಿ ತಾ. 3ರಂದು ನಡೆಯಿತು ಕಾರ್ಯದರ್ಶಿ ಶ್ರೀ ಎಸ್. ಗೋಪಿಚಂದ ರಾವ್ ಅವರು ಸ್ವಾಗತ ಭಾಷಣ ಮಾಡಿದ ಬಳಿಕ ಶಿಬಿರದ ಸಹನಿರ್ದೇಶಕ ಶ್ರೀ ಜಿ. ಡಿ. ದೇಸಪ್ಪನವರು ವರದಿಯೋದಿದರು. ತರಬೇತಿದಾರರ ಪರವಾಗಿ ಶ್ರೀಗಳಾದ ಅಂಗರ ಕೋಟಿಯಾನ್ ಮತ್ತು ಮಹಾಬಲ ಶೆಟ್ಟರು ತಮ್ಮ ಅನುಭವಗಳನ್ನು ವಿವರಿಸಿದ ಬಳಿಕ ತರಬೇತಿದಾರ ಅಧ್ಯಾಪಕರು ಹಲವು ಪ್ರದರ್ಶನಗಳನ್ನು ತೋರಿಸಿದರು. ಅನಂತರ 'ಪ್ರಕಾಶ' ವಾರಪತ್ರಿಕೆಯ ಸಂಪಾದಕರಾದ ಶ್ರೀ ಎ. ಜಿ ಆಲ್ಸೆ ಅವರು ಸಮಾರೋಪಭಾಷಣ ಮಾಡುತ್ತ ಇಲ್ಲಿ ತರಬೇತಿ ಹೊಂದಿದ ಪ್ರಾಥಮಿಕ ಶಿಕ್ಷಕರು ಕೇವಲ ೪೦ ಆದರೂ ಇವರು ತಮ್ಮ ಅನುಭವಗಳಿಂದ ಸಾವಿರಾರು ಎಳೆಯರ ಶಾರೀರಿಕ ದೌರ್ಬಲ್ಯವನ್ನು ಹೋಗಲಾಡಿಸಲು ಸಮರ್ಥರೆಂದು ಹೇಳಿ, ಇಂತಹ ಅವಕಾಶವನ್ನು ಒದಗಿಸಿದ ಕಡಿಯಾಳಿ ಅಧ್ಯಾಪಕ ಕೇಂದ್ರವನ್ನು ಪ್ರಶಂಸಿಸಿದರು. ತರಬೇತಿದಾರರಿಗೆ ಪ್ರಶಸ್ತಿಪತ್ರವನ್ನು ವಿತರಿಸಲಾದ ಬಳಿಕ, ಅಧ್ಯಕ್ಷರು ಶಾರೀರಿಕ ಶಿಕ್ಷಣದ ಮಹತ್ವವನ್ನು ತಿಳಿಸಿ, ಬೊಂಬಾಯಿ ಕರ್ನಾಟಕವು ಈ ದಿಸೆಯಲ್ಲಿ ಮಾಡಿದ ಪ್ರಗತಿಯನ್ನು ವಿವರಿಸಿದರು. ಶಿಬಿರದ ನಿರ್ದೇಶಕ ಶ್ರೀ ವೈ. ಗೋಪಾಲರು ಧನ್ಯವಾದಾರ್ಪಣೆಗೈದರು. ಜಿಲ್ಲೆಯ ಶಾರೀರಿಕ ಶಿಕ್ಷಣಾಧಿಕಾರಿ ಶ್ರೀ ಜೆ. ಡಿ. ದೇವಪ್ಪನವರು ಮಲ್ಪೆ ಸರಕಾರಿ ಫಿಶರೀಸ್ ಹೈಸ್ಕೂಲಿನ ಶ್ರೀ ಯು. ವಾದಿರಾಜ ಆಚಾರ್ಯರ ಸಹಾಯದಿಂದ ಈ ಶಿಬಿರದಲ್ಲಿ ತರಬೇತಿ ನೀಡಿದ್ದರು.

ಪೆರ್ಡೂರು— ತಾ. 29-4-62ರಂದು ಅ. ರಿಜಿಸ್ಟ್ರಾರ್ ಶ್ರೀ ಎಂ ಎಸ್. ದೇವರಾಯರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈಯವರು ಪೆರ್ಡೂರು ಕೋಅಪರೇಟಿವ್ ಎಗ್ರಿಕಲ್ಚರಲ್ ಬ್ಯಾಂಕನ್ನು ಉದ್ಘಾಟಿಸಿದರು.

ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು ಸ್ವಾಗತಿಸಿದರು ಕಾರ್ಯದರ್ಶಿ ಶ್ರೀ ಕೆ. ಆನಂದ ಶೆಟ್ಟರು ವರದಿವಾಚನ ಮಾಡಿದರು ಸಭಿಕರ ಪರವಾಗಿ ಶ್ರೀ ರಾಮರಾಯರು ಮಾತನಾಡಿದರು. ಅಧ್ಯಕ್ಷರ ಭಾಷಣದ ಬಳಿಕ ಕಾರ್ಯದರ್ಶಿಗಳು ಧನ್ಯವಾದವಿತ್ತರು.

ಸುಬ್ರಹ್ಮಣ್ಯಂ— ಶ್ರೀ ಸುಬ್ರಮಣ್ಯ ಮಠದಲ್ಲಿ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ. 15-5-62ರಿಂದ 20-5-62ರವರೆಗೆ ಜರಗಲಿರುವುದೆಂದೂ ಸರ್ವರೂ ಬಂದು ತೀರ್ಥಪ್ರಸಾದಾದಿಗಳನ್ನು ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾಗಬೇಕೆಂದೂ ಶ್ರೀ ಸುಬ್ರಮಣ್ಯ ಮಠದ ಶ್ರೀ ಮದ್ವಿದ್ಯಾಪ್ರಜ್ಞ ತೀರ್ಥ ಶ್ರೀಪಾದಂಗಳವರು ಅಪೇಕ್ಷಿಸುತ್ತಾರೆ.

ಹಿಂದೀ ಪ್ರಚಾರ ಸಮಿತಿ, ಉಡುಪಿ— ಇದರ ಮಹಾ ಸಭೆಯು ತಾರೀಕು 6-5-1962ರಂದು ಶ್ರೀ ಎ. ಜೆ. ಆಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿ, 1961ರ ವಾರ್ಷಿಕ ವರದಿ, ಪರಿಶೋಧಿತ ಆಯವ್ಯಯ ಮತ್ತು ಮುಂಗಡ ಪತ್ರಗಳ ಸ್ವೀಕಾರಾನಂತರ ಮುಂದಿನ ವರ್ಷದ ಕಾರ್ಯಕಾರಿಣೀ ಸಮಿತಿಯ ಆಯ್ಕೆಯಾಯಿತು

ಶ್ರೀ ಟಿ. ಎ ಪೈ, ಅಧ್ಯಕ್ಷ, ಎ. ಕೃಷ್ಣರಾವ್ ಮತ್ತು ಪಿ. ಮುಖ್ಯಪ್ರಾಣ ತಂತ್ರಿ ಉಪಾಧ್ಯಕ್ಷರು ಶ್ರೀ ಸಿ. ಮಹಾಬಲ ನಾಯಕ್ ಕಾರ್ಯದರ್ಶಿ ಕುಮಾರಿ ಯು. ಚಂದ್ರಭಾಗಿ ಜತೆ ಕಾರ್ಯದರ್ಶಿಣಿ ಶ್ರೀ ಎ. ಜೆ. ಆಲ್ಸೆ ಕೋಶಾಧ್ಯಕ್ಷ ಮತ್ತಿತರರು ಸದಸ್ಯರಾಗಿ ಆರಿಸಲ್ಪಟ್ಟಾಗ ಗೌರವ ಲೆಕ್ಕ ಪರಿಶೋಧಕರನ್ನಾಗಿ ಈ ವರ್ಷವೂ ಶ್ರೀ ಎಚ್. ನರಹರಿ ರಾಯರನ್ನು ಆರಿಸಲಾಯಿತು.

ಮೇ ದಿನಾಚರಣೆ— ಮಲ್ಪೆ ಕಾಸ್ಮೋಪೊಲಿಟನ್ ಟೈಲ್ ಫೇಕ್ಟರಿ ವರ್ಕರ್ಸ್ ಯೂನಿಯನಿನ ಆಶ್ರಯದಲ್ಲಿ ಮೇ ದಿನವನ್ನು ವಿಜೃಂಭಣೆಯಿಂದ ಮೇ ೧ರಂದು ಶ್ರೀ ಬಿ. ಭಾಸ್ಕರ ಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಕಾರ್ಯದರ್ಶಿ ಶ್ರೀ ಬಿ. ಎಸ್. ಲೂಯಿಸರು ಸ್ವಾಗತಿಸಿದ ನಂತರ ಶ್ರೀಗಳಾದ ಸಿತಾರ್ಡಿ ವಿಲಿಯಂ ಪಿಂಟೊ, ರೈಮಂಡ್ ಮಾರ್ಟಿಸ್, ಮತ್ತು ನಾರಾಯಣ ಬೆಲ್ಚಡ ಇವರು ಮೇ ದಿನದ ಮಹತ್ವ, ಮಜೂರರ ಸಮಸ್ಯೆಗಳ ಕುರಿತು ಮಾತನಾಡಿದರು.

ಅಧ್ಯಕ್ಷರು ಭಾಷಣ ಮಾಡುತ್ತಾ ಮಜೂರರು ಸತ್ಯ, ನ್ಯಾಯ, ಮತ್ತು ಅಹಿಂಸಾ ಧರ್ಮಗಳಿಂದ ನಡೆಯಬೇಕೆಂದೂ, ಉತ್ಪಾದನೆಯನ್ನು ಹೆಚ್ಚಿಸಿ ದೇಶದ ಏಳಿಗೆಗಾಗಿ ದುಡಿಯಬೇಕೆಂದೂ ಅದಕ್ಕಾಗಿ ನ್ಯಾಯವಾದ ವೇತನ ಸಿಗಬೇಕಾದುದು ಅತ್ಯಾವಶ್ಯಕವೆಂದೂ ಹಿತೋಪದೇಶ ಮಾಡಿದರು.

ವಾರ್ಷಿಕೋತ್ಸವ—ಜೋಲಿ ಕ್ಲಬ್ ಅಂಬಲಪಾಡಿ ಇದರ ವಾರ್ಷಿಕೋತ್ಸವವು ತಾ. 6ರಲ್ಲು ಶ್ರೀ ಬಿ. ವಿಶ್ವನಾಥ ರೈ ಮುನ್ಸಿಫ್ ಕಂ. ಮೆಜಿಸ್ಟ್ರೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಲಬ್‌ನ ಅಧ್ಯಕ್ಷ ಶ್ರೀ ಜೆ. ಪಿ. ಫೆರ್ನಾಂಡಿಸರು ಸ್ವಾಗತಿಸಿದ ತರುವಾಯ ಕಾರ್ಯದರ್ಶಿ ಶ್ರೀ ಓಸ್ಕರ್ ಫೆರ್ನಾಂಡಿಸ್‌ರವರು ಗತವರುಷದ ವರದಿಯನ್ನೋದಿದರು. ಅಧ್ಯಕ್ಷರು ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿದರು. ಶ್ರೀ ಸಿತಾರ್ಡಿ ವಿಲಿಯಂ ಪಿಂಟೋರವರು ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ" ಮತ್ತು ಕ್ಲಬ್ಬಿನ ಅಗತ್ಯತೆಯನ್ನು ವಿವರಿಸಿ ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ "ಆಟಗಳ ಮಹತ್ವ"ವನ್ನು ವಿವರಿಸುತ್ತಾ ಸಮಾಜದಲ್ಲಿ "ಆಟದ ಬಯಲಲ್ಲಿ ಮಾತ್ರ ಶ್ರೀಮಂತ-ಬಡವ-ಸಣ್ಣವ-ದೊಡ್ಡವ, ಆ ಜಾತಿಯವ-ಈ ಜಾತಿಯವ, ತರುಣ-ಮುದುಕ ಎಂಬ ತಾರತಮ್ಯವಿಲ್ಲದೆ ಸಹೋದರತೆಯ ಪ್ರದರ್ಶನವಾಗುತ್ತದೆ ಎಂದು "ಜೋಲಿ ಕ್ಲಬ್"ನ ವಿವಿಧ ಚಟುವಟಿಕೆಗಳನ್ನು ಶ್ಲಾಘಿಸಿದರು. ಮನರಂಜನ ಕಾರ್ಯಕ್ರಮ, ಲಘು ಉಪಹಾರದ ನಂತರ ಶ್ರೀ ಎ. ಸೀತಾರಾಮ ಆಚಾರ್ಯರವರು ಧನ್ಯವಾದ ಸಮರ್ಪಿಸಿದರು.

ಕಡಿಯಾಳಿ ಮೈಲು ಬೋರ್ಡ್— ಕೊಡಿಯಾಲ ಬೈಲು ಬೋರ್ಡ್ ಎ. ಶಾಲಾ ನೂತನ ಕಟ್ಟಡದ ಪ್ರವೇಶೋತ್ಸವವು ತಾ 27-4-62ರಂದು ಶ್ರೀ ಎನ್. ಭಿಡೆಯವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಶ್ರೀ ವಿ. ರಾಯರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಶ್ರೀಗಳಾದ ರಾಘವೇಂದ್ರ ರಾವ್, ಬಿ ಕೆ ವೆಂಕಟಸುಬ್ಬ ರಾವ್, ಕೆ. ಎಸ್. ಭಟ್ ಶಿರಾಡಿಪಾಲ್ ಇವರು ಮಾತನಾಡಿದ ಬಳಿಕ ಅಧ್ಯಕ್ಷರು ಭಾಷಣವಿತ್ತರು. ಅದೇ ದಿನ ರಾತ್ರಿ ಡಾ| ಉಮಾನಾಥ ರಾಯರ ಅಧ್ಯಕ್ಷತೆಯಲ್ಲಿ ವಾರ್ಷಿಕೋತ್ಸವವು ಜರಗಿತು ಮುಖ್ಯೋಪಾಧ್ಯಾಯರಿಂದ ವರದಿವಾಚನ ಶ್ರೀಗಳಾದ ರವಿರಾಜ ಬಲ್ಲಾಳ್, ವಾಸುದೇವ ನಾಯ್ಕ, ಕೆ. ಎಸ್. ಭಟ್, ಶಿರಾಡಿಪಾಲ್, ಶೀನಪ್ಪ ಗೌಡ, ಶ್ರೀನಿವಾಸ ಪ್ರಭು ಮೊದಲಾದವರು ಮಾತನಾಡಿದ ಬಳಿಕ ಅಧ್ಯಕ್ಷರು ಶಾಲಾ ಅಭಿವೃದ್ಧಿಯ ಕುರಿತು ಭಾಷಣವಿತ್ತರು. ಬಳಿಕ ಮನೋರಂಜನಾ ಕಾರ್ಯಕ್ರಮಗಳು ಜರಗಿದುವು. ಶ್ರೀ ಅನಂತರಾಜ ಇಂದ್ರರು ಧನ್ಯವಾದ ಸಮರ್ಪಿಸಿದರು.

ಕಡೂರು— ಶ್ರೀಮತಿ ಮತ್ತು ಡಾ. ಎಂ. ಎಸ್. ಕೋಲ್ಕೆರೆಯವರು ರೈಲ್ವೆ ಸ್ಟೇಶನ್ ರೋಡಿನಲ್ಲಿ ನೂತನವಾಗಿ ಕಟ್ಟಿಸಿದ 'ಲಲಿತ ನಿಲಯ' ಗೃಹಪ್ರವೇಶ ಸಮಾರಂಭವು ತಾ. 7-5-62ರಂದು ಯಥಾಸಾಂಗವಾಗಿ ನೆರವೇರಿತು.

ಜಗತ್ಪರ್ಯಟನ

ಜಫರುಲ್ಲಾ ಖಾನ

ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಪಾಕಿಸ್ತಾನದ ಜಫರುಲ್ಲಾಖಾನರು ಕಾಶ್ಮೀರ ಸಂಬಂಧದಲ್ಲಿ ತಮ್ಮ ರಾಷ್ಟ್ರದ ಪರವಾಗಿ ಬಹುತುಂಬ ಮಾತಾಡಿದರು. ಕಾಶ್ಮೀರ ಪ್ರಶ್ನೆಯನ್ನು ಬಗೆಹರಿಸದಿದ್ದರೆ, ಗುಡ್ಡಗಾಡು ಜನರು ಅಲ್ಲಿಗೆ ಏರಿ ಹೋಗಬಹುದೆಂದು ಹೆದರಿಸಿದ ಅವರು ಅದಕ್ಕೆ ತನ್ನ ಸರಕಾರವು ಜೊಹೊಗಾರವಲ್ಲವೆಂದು ವಾದಿಸಿದರು. ಅಂತಾರಾಷ್ಟ್ರೀಯ ನ್ಯಾಯವಾದಿಗಳಾಗಿರುವ ಇಂತಹ ವ್ಯವಹಾರವನ್ನೂ ಮರೆತು ಬಿಡುವಷ್ಟು ಜಫರುಲ್ಲಾಖಾನರಿಗೆ ಮಂಕು ಕವಿದಿರುವುದು. ಪಾಕಿಸ್ತಾನದ ದೌರ್ಭಾಗ್ಯವೆನ್ನಬೇಕು.

ನಿಜಲಿಂಗಪ್ಪ

ಸಿದ್ದವ್ವನ ಹಳ್ಳಿ ನಿಜಲಿಂಗಪ್ಪನವರು ಅವಿರೋಧವಾಗಿ ಉಪ ಚುನಾವಣೆಯಲ್ಲಿ ಆರಿಸಿ ಬಂದುದರಿಂದ ಕೆಲವೊಂದು ಪ್ರಶ್ನೆಗಳು ಮರಳಿ ಏಳುತ್ತವೆ. ಅವರಿನ್ನು ಪ್ರಾದೇಶಿಕ ಕಾಂಗ್ರೆಸ್ಸ ಅಧ್ಯಕ್ಷ ಸ್ಥಾನವನ್ನು ಬಿಟ್ಟು, ಮುಖ್ಯ ಮಂತ್ರಿಯಾಗುವುದು ಪೂರ್ವನಿಯೋಜಿತ. ಆಗ, ಭರತ ಸದ್ಯದ ಮುಖ್ಯ ಮಂತ್ರಿ ಕಂಠಿಯವರು ಮತ್ತು ವಿಧಾನ ಸಭಾಧ್ಯಕ್ಷ ಬಿ.ವಿ.ಬಾಳಿಗಾ ಅವರು ತಮ್ಮ ಇಂದಿನ ಸ್ಥಾನಗಳಿಗೆ ಏನಾಗುವರೆಂದು ಊಹಿಸಲಾಗುತ್ತದೆ, ಇವರಿಬ್ಬರೂ ತಮ್ಮ ಹಿಂದಿನ ಸ್ಥಾನಗಳನ್ನೇ ಪಡೆಯುವುದು ಬಹುಪಾಲಿಗೆ ಸಂಭವನೀಯವೆನ್ನುತ್ತದೆ. ಅಂತೂ ಭರತನ ರಾಜ್ಯಭಾರಕ್ಕೊಂದು ಕೊನೆ ಬಂದಿತು ಎಂಬುದಿಷ್ಟೇ ಸಂತಸವೀಗ.

ಕೃಷ್ಣ ಮೆನನ್

ಕಾಶ್ಮೀರದ ಪ್ರಶ್ನೆ ಎದ್ದು ಬಂದಾಗ ಕೃಷ್ಣ ಮೆನನ್ನರ ಹೆಸರೂ ಮೇಲೆ ಬರುತ್ತದೆ. ಪಾಕಿಸ್ತಾನದ ವಾದಗಳೆಲ್ಲವೂ ನಿರಾಧಾರವೆಂದು ಸಾರಿದ ಮೆನನ್ನರು ಭಾರತದಲ್ಲಿ ಕಾಶ್ಮೀರದ ಸೇರ್ಪಡೆಯು ಪೂರ್ಣವೂ ಶಾಶ್ವತವೂ ಆಗಿದೆ; ಅಲ್ಲಿ ಜನಮತ ಗಣನೆ ನಡೆಸುವ ಪ್ರಶ್ನೆಯೇ ಇಲ್ಲ; ಒಂದು ವೇಳೆ ನಡೆಸುತ್ತೇವೆಂದೇ ಇಟ್ಟುಕೊಂಡರೂ ಅದರಲ್ಲಿ ಆಕ್ರಮಣಕಾರ ಪಾಕಿಸ್ತಾನವು ಪ್ರವೇಶಿಸಲಾರದು— ಎಂದು ಹೇಳಿದರು. ಕೃಷ್ಣಮೆನನ್ನರು ಕಾಶ್ಮೀರವನ್ನು ಸರಿಯಾಗಿ ಅಧ್ಯಯನ ಮಾಡಿದವರು ಎಂತಲೇ ಅವರಿಂದಾಗಿ ಪಾಕಿಸ್ತಾನದ ಭ್ರಮನಿರಸನವಾಗುವುದು ಸ್ವಾಭಾವಿಕ.

ಮಾನವನ ಆಸುರೀಗುಣ ನಿವಾರಣೋಪಾಯ

(೫ನೇ ಪುಟದಿಂದ)

ರಾಗವು ತನ್ನ ಪರಾಕಾಷ್ಠವನ್ನು ಮುಟ್ಟಿದಾಗಲೂ ಚಿತ್ತದಲ್ಲಿ ಪೂರ್ಣ ವೈರಾಗ್ಯದ ಸಮುದ್ರವು ಉಕ್ಕೇರಿ ಹರಿಯುವುದಾದರೆ, ಅಂತಹವನೇ ನಿಜವಾದ ಯೋಗಿಯು; ಆತನೇ ಕಾಮವನ್ನು ವಶದಲ್ಲಿರಿಸಿಕೊಳ್ಳಬಲ್ಲವನು. ಕಾಮವು ಸೃಷ್ಟಿಯ ದೊಡ್ಡ ಶಕ್ತಿ. ಬ್ರಹ್ಮನ ಆಜ್ಞೆಯಿಂದ ಆತನಿಗೆ ವಿಶ್ವದಲ್ಲಿ ಸ್ಥಾನ ಸಿಕ್ಕಿದೆ. "ಗೀತೆಯಲ್ಲಿ "ಪ್ರಜನಶ್ಚಾಸ್ಮಿ ಕಂದರ್ಪಃ" ಎಂದು ಭಗವಂತನು ಕಾಮವನ್ನು ತನ್ನ ಸ್ವರೂಪವೆಂದು ಹೇಳಿದ್ದಾನೆ ಇದು ಯಥಾರ್ಥವಾದುದು. ವೇದಗಳಲ್ಲಿ ಕಾಮವನ್ನು ಸೃಷ್ಟಿಯ ಮೂಲವೆಂದು ಹೇಳಿದೆ. ಪ್ರಜಾಪತಿಯ ಮನಸ್ಸಿನಲ್ಲಿ ಸರ್ವ ಪ್ರಥಮ ಉದಯವಾದ ಕಾಮನೆಯೇ ಕಾಮ. ಈ ವಿಶ್ವವು ಪ್ರಜಾಪತಿಯ ಕಾಮ ಪ್ರಯಜ್ಞ. ಈ ವಿಶ್ವದ ರಚನೆಯಾಗುತ್ತ ಬಂದಂತೆ ಆತನ ಕಾಮ ಪೂರ್ತಿ ಮಾಡುವ ಈ ಯಜ್ಞವು ಹೊಸ ಹೊಸ ರೂಪಗಳಲ್ಲಿ ನಮ್ಮ ಮುಂದೆ ಬರುತ್ತಿರುತ್ತದೆ. ಹೀಗೆ ಮಹಾಶಕ್ತಿರೂಪವಾದ ಕಾಮವು ಒಂದೆಡೆ ಜೀವನಕ್ಕೆ ಆವಶ್ಯಕವಾಗಿದೆ; ಪ್ರತಿಯೊಬ್ಬನ ಜೀವನದಲ್ಲಿಯೂ ಮಹತ್ವಪೂರ್ಣ ಸ್ಥಾನ ಗಳಿಸಿದೆ. ಇನ್ನೊಂದೆಡೆ, ಅದು ಜೀವನದ ಅತಿಬಲಿಶಾಲಿಯಾದ ಒಂಧನ. ಅದನ್ನು ವಶದಲ್ಲಿರಿಸಲು ಅಥವಾ ಪರಿಮಿತಿಯಲ್ಲಿ ಇಟ್ಟುಕೊಳ್ಳಲು ವೈರಾಗ್ಯವು ಏಕ ಮಾತ್ರ ಸಾಧನ ಎಷ್ಟೊಂದು ಪ್ರಯತ್ನ ಮಾಡಿದರೂ ವೈರಾಗ್ಯ ಭಾವನೆಯಿಲ್ಲದೆ ಕಾಮವನ್ನು ಗೆಲ್ಲುವುದು ಅಸಾಧ್ಯ. ಪರಮೇಶ್ವರನ ಪ್ರಭುತ್ವವು ಸರ್ವತ್ರ ಅಖಂಡವಿದ್ದರೂ ಅದೆಷ್ಟು ರಾಗರಹಿತವಾಗಿದೆಯೆಂದು ತಿಳಿದುಕೊಳ್ಳುವುದರಿಂದ ಚಿತ್ತವು ವೈರಾಗ್ಯ ಗುಣದತ್ತ ಹೊರಳುವುದು. ಭಗವಂತ ಶ್ರೀಕೃಷ್ಣನು ಶರದೃತುವಿನ ಪ್ರಫುಲ್ಲಿತ ರಾತ್ರಿಗಳಲ್ಲಿ ಮಹಾರಾಸಲೀಲೆಯನ್ನು ಆಡಿದನು. ಆದರೆ, ಅದನ್ನು ವೈರಾಗ್ಯ ಸಂಪನ್ನಗೊಳಿಸುವುದು ಪರಮಾತ್ಮ ಶಕ್ತಿಯಿಂದ ಮಾತ್ರ ಸಾಧ್ಯ.

ಕ್ರೋಧರೂಪಿ ಅಸುರಗುಣವು ನಮ್ಮ ಪರಮ ವೈರಿ. ಈ ಕೋಪವು ನಮಗೆ ನಮ್ಮ ಮೇಲೆ ಬರುವುದೇ ಇಲ್ಲ; ಬೇರೆಯವರ ಮೇಲೆ ಮಾತ್ರ ಬರುತ್ತದೆ. ಇನ್ನೊಬ್ಬರಲ್ಲಿ ನಾವಿಡುವ ಕರ್ಮಶಕ್ತಿ ಇಲ್ಲವೇ ಕೌಶಲದ ಅಪೇಕ್ಷೆಯು ಪೂರ್ಣವಾಗದುದರಿಂದ ಅವರ ಮೇಲೆ ಕೋಪವು ಉದ್ಭವಿಸುವುದು. ಪರಮಾತ್ಮನ ಅನಂತ ಶಕ್ತಿಯನ್ನು ಧ್ಯಾನ ಮಾಡುವುದೇ ಇದರ ನಿರಾಕರಣ ಉಪಾಯ. ಇಡಿಯ ಜಗತ್ತಿನಲ್ಲಿ ಭಗವಂತನ ಕರ್ಮಗಳು ಅಪರಿಮಿತ ವಿಸ್ತಾರವಾಗಿವೆ.

ನಾವು ಆ ಕರ್ಮಗಳಿಂದ ಲಾಭಗಳಿಸಬಲ್ಲೆವು. ಅದರೊಡನೆ ಹೋಲಿಸುವುದಾದರೆ, ಮಾನವ ಕರ್ಮವು ಅತ್ಯಲ್ಪ. ಪ್ರತಿಯೊಬ್ಬನೂ ಒಂದು ಮಿತಿಗೊಳಪಟ್ಟು ಕರ್ಮವೆಸಗುತ್ತಾನೆ. ಆದರೆ, ಭಗವಂತನು ಅನಂತವೀರ್ಯ ಅಥವಾ ಪರಾಕ್ರಮಿ ಆತನೆದುರು ಮಾನವನು ಅತೀವ ನಿರ್ಬಲ, ನಿರ್ವೀರ್ಯ, ಇದನ್ನು ತಿಳಿದು ಬೇರೆಯವರ ಕರ್ಮಗಳ ಕಡೆಗೆ ಸಹಿಷ್ಣುತೆ ತೋರಿಸಬೇಕು ಈ ಸ್ವಭಾವವೊಮ್ಮೆ ನಮ್ಮದಾಯಿತೆಂದರೆ, ಮತ್ತೆ ಕ್ರೋಧದ ಕಾರಣ ನೆಲೆಯೂಲಾರದು.

ಲೋಭವು ಮಾನವನ ಮೂರನೆಯ ಶತ್ರು. ಎಲ್ಲರ ಮನಸ್ಸನ್ನೂ ಇದು ಕೆಣಕುತ್ತ ಇರುತ್ತದೆ. ಇದರಿಂದಾಗಿಯೇ ನಮ್ಮ ವ್ಯವಹಾರವೂ ಬೇರೊಂದು ಮಾರ್ಗ ಹಿಡಿಯುವುದು. ತ್ಯಾಗ, ಉದಾರತೆ ಮತ್ತು ಸಂಪತ್ ತ್ಯಾಗಬೇಕಾಗಿರುವಲ್ಲಿ ನಾವು ಸಂಪತ್ತನ್ನು ತಡೆದು ನಿಲ್ಲಿಸಲು ಬಯಸುತ್ತೇವೆ ಲೋಭ ವೃತ್ತಿಯು ಅದೆಷ್ಟು ಕಠಿನವೆಂದು ತನ್ನ ಮನಸ್ಸನ್ನೇ ಬಿಚ್ಚಿ ನೋಡಿದರೆ ತಿಳಿಯುವುದು. ಕಾಮವು ಯೌವನ ಕಳೆದ ಬಳಿಕ ಮಾಯವಾಗುವುದು; ಆದರೆ, ಲೋಭ ವೃತ್ತಿಯು ಓಡಿ ಹೋಗದು. ಪರಮಾತ್ಮನ ಶಕ್ತಿ ಲಕ್ಷ್ಮಿ ಅಥವಾ ಸಂಪತ್ತಿನ ಪರಿಮಿತಿ ತಿಳಿದರೆ ನಮ್ಮ ಲೋಭ ಗುಣವು ದೂರಾಗುವುದು ಸಾಧ್ಯ. ಮಾನವ ಚಿನ್ನ ಬೆಳ್ಳಿಯ ಸಣ್ಣ ಚೂರುಗಳಿಗೆ ಲಾಲಾಯಿತನಾಗುತ್ತಾನೆ; ಆದರೆ ಪರಮಾತ್ಮನ ಸಂಪತ್ತಿನೊಡನೆ ಇದನ್ನು ತೂಗುವುದಾದರೆ ಅದು ತೃಣ ಸಮಾನ. ಆತನ ಸೃಷ್ಟಿಯಾದ ಸಮಸ್ತ ಭೂಮಿಯೇ ವಸುಂಧರೆಯಲ್ಲವೆ?

ಮಾನವನ ನಾಲ್ಕನೆಯ ಶತ್ರು ಮೋಹ. ನಮ್ಮ ಆಧ್ಯಾತ್ಮಿಕ ವ್ಯಕ್ತಿತ್ವದ ಅತಿ ಕಠಿನ ಸಮಸ್ಯೆಯಿದು. ಬುದ್ಧಿಯ ಮೇಲೆ ಕವಿದ ಅಂಧಕಾರದ ಪರದೆಯೇ ಮೋಹ ಗೋಸ್ವಾಮಿ ತುಲಸಿದಾಸರು ರಾವಣನಿಗೆ ಮೋಹದ ರೂಪವನ್ನು ಹೇಳಿದ್ದಾರೆ. ಗುರುವಿನ ವಾಕ್ಯವೇ ಮೋಹರೂಪೀ ಅಂಧಕಾರವನ್ನು ದೂರೀಕರಿಸುವ ಸಾಧನವೆಂದಿದ್ದಾರೆ. ಹೃದಯದಲ್ಲಿ ಮೋಹವು ತುಂಬಿಬಂದಾಗ, ಸತ್ಯದರ್ಶನವಾಗುವುದಿಲ್ಲ. ಮೋಹದಿಂದಲೇ ವಿಷಯಗಳನ್ನು ಮಾನವ ಹಿತಕಾರಿಯೆಂದು ತಿಳಿಯುತ್ತಾನೆ. ಜ್ಞಾನ ಇಲ್ಲವೇ ವಿವೇಕ ಲಾಭದಿಂದ ಮೋಹವನ್ನು ಜಯಿಸಬಹುದು. ಸಂಸ್ಕೃತದಲ್ಲಿನ 'ಮೋಹರಾಜ ಪರಾಜಯ"ವೆಂಬ ನಾಟಕದ ಕಥಾವಸ್ತುವೇ ಇದು. ಇದರಲ್ಲಿ ಮೋಹ ಮತ್ತು ವಿವೇಕಗಳ ನಡುವಣ ಹೋರಾಟದ ವರ್ಣನೆಯಿದೆ; ಅಂತ್ಯದಲ್ಲಿ ವಿವೇಕವು ವಿಜಯ ಪಡೆಯುತ್ತದೆ ಜ್ಞಾನವು ಸೂರ್ಯ. ಇದು ಉದಯವಾದೊಡನೆಯೇ ಮೋಹಾಂಧಕಾರವು ನಾಮಾವಶೇಷವಾಗುವುದು.

ಐದನೆಯ ಶತ್ರು ಮದವೆನ್ನಬಹುದು. ಮದವು ಒಂದು ವಿಧದ ಬುದ್ಧಿಭ್ರಮಣೆ. ಇದು ಮೆದುಳಲ್ಲಿ ಹರಡುತ್ತದೆ, ಆಗ ಮಾನವ ತನಗೆ ಸಮಾನನೆಂದು ಯಾರನ್ನೂ ಬಗೆಯುವುದಿಲ್ಲ. ಎಲ್ಲೆಡೆಯೂ ತನ್ನ ಗುಣಗಾನ ನಡೆಯಬೇಕು; ತನ್ನ ಕೀರ್ತಿಲತೆ ಹಬ್ಬಬೇಕು; ತನ್ನನ್ನೇ ಎಲ್ಲರಿಗಿಂತ ಅಧಿಕನನ್ನಬೇಕು—ಎಂದು ಮುಂತಾದ ಮನೋವೃತ್ತಿಯೇ ಮದ. ಭಗವಂತನ ಯಶೋಗುಣವು ನಮ್ಮ ಮದವನ್ನು ದೂರಮಾಡಬಲ್ಲುದು. ಸೃಷ್ಟಿಯ ಆದಿಯಿಂದ ಅಂತ್ಯದ ವರೆಗೆ ವಿಶ್ವವ್ಯಾಪಿಯಾಗಿದೆ ಆತನ ಯಶಸ್ಸು. ಅದರ ಮುಂದೆ ಮಾನವ ಯಶಸ್ಸು ಎತ್ತಕ್ಕೂ ನಿಲ್ಲದು ಇದನ್ನು ತಿಳಿದನೆಂದರೆ, ಮಾನವನು ಮದದಿಂದ ಬಿಡುಗಡೆ ಹೊಂದುವನು. ಎಂದಾದರೂ ನಮ್ಮಲ್ಲಿ ಮದ ಸಂಚಾರವಾಗ ತೊಡಗಿದರೆ, ಭಗವಂತನ ಯಶವನ್ನು ನೆನೆಯಬೇಕು. ಆತನ ಯಶ ಮಹಿಮೆ ಅನಾದಿ—ಅನಂತವಿದೆ; ಸರ್ವತ್ರವಿದ್ಯಮಾನವಿದೆ. ಮಾನವ ಯಶವು ಸೀಮಿತ; ಏರುತಗ್ಗುಗಳಿಂದ ಕೂಡಿದುದು; ಆದರೆ ಭಗವಂತನದು ಅಸೀಮ, ನಿತ್ಯ ಮತ್ತು ಏಕರಸ.

ಮಾನವನ ಅಂತಿಮ ವೈರಿ ಅಹಂಕಾರ, ಎಲ್ಲವೂ ನಾನೇ; ನನಗೆ ಸಮಾನರು ಬೇರಾರು ಇಲ್ಲ—ಎನ್ನುವುದರ ಪ್ರವೃತ್ತಿಯೇ ಅಹಂಕಾರ ಇಲ್ಲವೇ ಅಭಿಮಾನ ಮತ್ಸರವೇ ಇದರ ವ್ಯಕ್ತರೂಪ. ಒಬ್ಬನು ತನ್ನೊಡನೆ ಸ್ಪರ್ಧಿಸುವುದನ್ನು ಕಂಡಾಗ, ಆತನ ಅಹಂಕಾರ ಪ್ರವೃತ್ತಿಗೆ ಏಟುಬೀಳುತ್ತದೆ. ಆತನು ಸ್ಪರ್ಧಾಳುವಿನೊಡನೆ ಮತ್ಸರ ಇಲ್ಲವೇ ಈರ್ಷ್ಯೆಯನ್ನು ಪ್ರದರ್ಶಿಸುತ್ತಾನೆ. ಅಹಂಕಾರದ ಲವಲೇಶವೂ ಇರಬಾರದು. ಅಹಂಕಾರದ ವಶದಲ್ಲಿ ಬಿದ್ದು ಮನುಷ್ಯ ಪ್ರಪಂಚದಲ್ಲಿ ಕವಿದುಕೊಳ್ಳುತ್ತಾನೆ; ಪರಮಾತ್ಮನ ಐಶ್ವರ್ಯಗುಣವನ್ನು ತಿಳಿದುಕೊಳ್ಳುವುದರಿಂದ ಆತ ಇದರಿಂದ ದೂರವಾಗಬಹುದು ಐಶ್ವರ್ಯವೆಂದರೆ, ಈಶ್ವರತೆ, ಒಡೆತನ- ಎಲ್ಲ ವ್ಯಕ್ತಿಗಳ ಅಹಂನ ಆದಿ ಮತ್ತು ಅಂತಿಮ ಆಧಾರ ಈಶ್ವರ. ಈತನೇ ಎಲ್ಲ ಭೂತಗಳ ಹೃದಯದಲ್ಲಿದ್ದು ಅವುಗಳ ಬೇರೆ ಬೇರೆ ಅಹಂಗಳನ್ನು ನಿರ್ಮಿಸುತ್ತಾನೆ. ಈಶ್ವರತೆ ಐಶ್ವರ್ಯ ಅಥವಾ ಒಡೆತನದ ನಿಜಾನುಭವ ಮಾಡಿಕೊಂಡರೆ, ನಮ್ಮ ಅಹಂಕಾರ ತ್ವರಿತದಲ್ಲಿ ಕರಗಿಹೋಗುವುದು. ಭಗವಂತನ ಸರ್ವವ್ಯಾಪಿ ಪ್ರಭುತ್ವದಲ್ಲಿ ನಮ್ಮ ಕ್ಷುದ್ರ ಶಕ್ತಿಯನ್ನು ಲೀನಗೊಳಿಸುವುದಕ್ಕಿಂತ ಸುಖ-ಶಾಂತಿಗಳು ಬೇರೆಯಿಲ್ಲ. ಇದರಿಂದಲೇ ನೈಜಭಕ್ತಿಯು ಉದಯವಾಗುವುದು. ಈಶ್ವರನ ಸ್ವರೂಪ, ಗುಣಗಳ ಆಂಶಿಕ ಪ್ರಾಪ್ತಿಯೇ ಭಕ್ತಿ. ಭಾಗಧೇಯ ಪಡೆಯುವುದೇ ಭಕ್ತಿ. ಜೀವವು ಈಶ್ವರನ ಕ್ಷೇತ್ರದಲ್ಲಿ ತನ್ನ ಭಾಗವನ್ನು ಗಳಿಸುವುದೇ ಪರಮ ಸೌಭಾಗ್ಯ. ಛಿನ್ನ ವಿಚ್ಛಿನ್ನವಾಗಿ ವಿಷಯಗಳತ್ತ ಭ್ರಮಿಸುತ್ತಿರುವ ಚಿತ್ತವು ಏಕತ್ರ ಸೇರಿ, ಏಕಾಗ್ರವಾಗಿ ತನ್ನ ಕೇಂದ್ರದಲ್ಲಿರುವುದೇ ಭಕ್ತಿಯ ಲಕ್ಷಣ. ಏಕೆಂದರೆ, ಪ್ರತಿಯೊಬ್ಬನ ಕೇಂದ್ರ ಅಥವಾ ಹೃದಯದಲ್ಲಿ ಪರಮಾತ್ಮನ ಪ್ರಭುತ್ವವಿದೆ. ಹೀಗೆ ಜೀವನದ ಸಮುದ್ಧಾರಕ್ಕಾಗಿ ಭಗವಂತನ ಆವಶ್ಯಕತೆ ಅನಿವಾರ್ಯವಾಗಿದೆ. ಭಗವತ್ತತ್ತ್ವ ನಮ್ಮ ಎಲ್ಲ ರೋಗಗಳಿಗೂ ಪರಮೌಷಧಿಯೆನಿಸಿದೆ.

೮೧ ಸಾವಿರ ಮೈಲುಗಳನ್ನು ಸುಮಾರು ೫ ತಾಸುಗಳಲ್ಲಿ ಕ್ರಮಿಸಿದ ಅಂತರಿಕ್ಷಯಾತ್ರಿ ೪೦ ವರ್ಷದ ಗ್ಲೆನ್ ಹಸನ್ಮುಖರಾಗಿದ್ದಾರೆ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಕಾಪು.

ಇದೇ ಸಂಚಿಕೆಯ ಹನ್ನೊಂದನೇ ಪುಟದಲ್ಲಿ ಪ್ರಕಟವಾದ ಏಲಂ ನೋಟೀಸಿನಲ್ಲಿ ಈ ಕೆಳಗಿನ ಹೆಸರುಗಳು ಬಿಟ್ಟು ಹೋಗಿವೆ. ಆ ಹೆಸರುಗಳನ್ನು ಸೇರಿಸಿ ಓದಬೇಕಾಗಿದೆ.

ಅಲ್ಲದೆ ಏಲಮಿನ ತಾರೀಕು 17-5-62ರ ಬದಲಿಗೆ 21—5—62 ಎಂತ ತಿದ್ದಿಕೊಳ್ಳಬೇಕಾಗಿದೆ. (ಸಂ. ನ.)

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31—5—1962ರ ವರೆಗಿನ ಬಡ್ಡಿ ಕೂಡಾ
99 / 3-2-1961	ಕೇಶವ ಕೆ. ಅಮೀನ್, ಕಾಂತಪ್ಪ ಸಾಹುಕಾರರ ಮಗ ಮೂಸಿನ ಪ್ಯಾಚಾರಿ, ಕೈಪುಂಜಾಲು, ಉಳಿಯಾರಗೋಳಿ ಗ್ರಾಮ, ಪೋಸ್ಟ್ ಉಳಿಯಾರಗೋಳಿ.	930=65
382 / 15-5-61	ಸಂಜೀವ ಕಾಂಚನ್, ಚಿನ್ನಯ ಪುತ್ರನರ ಮಗ, ಮೂಳೂರು ಗ್ರಾಮ, ಪೋಸ್ಟ್-ಉಚ್ಚಿಲ.	626=07

ನಿಮಗೂ ಗೊತ್ತಿರಲಿ

ನಾರಿಗೆ ಸರಿಸಮಾನರು ಇಲ್ಲ

ಅನು:— ಎಸ್. ಎಂ. ಶೆಟ್ಟಿ, ಶಿವಮುಂಜೆಸರಾರಿ.

ನಾರಿ ಎಂದರೆ ಏನು? ನಾರಿ ಒಂದು ಕಠಿಣವಾದ ಒಡೆಯಲಾರದ ಒಗಟು, ಈ ಒಗಟಿನ ಉತ್ತರ ತಿಳಿಯಲು ಪ್ರಯತ್ನಿಸಿದವರೆಲ್ಲರೂ ಸೋತುಹೋಗಿದ್ದಾರೆ! ಸಮುದ್ರದ ಆಳವನ್ನು ಅಳೆಯ ಬಹುದು; ಆದರೆ ನಾರಿಯ ವಿಶಾಲ ಹೃದಯದಾಳವನ್ನು ಊಹಿಸುವುದೂ ಅಸಂಭವ. ನಾರೀ ಹೃದಯದ ಆಳವನ್ನರಿಯುವಲ್ಲಿ ಹಿರಿ-ಹಿರಿಯ ಋಷಿ ಮುನಿಗಳು ಕೂಡಾ ಸೋಲನ್ನೊಪ್ಪಿ ಕೊಂಡಿರುವರು.

ಪ್ರಕೃತಿಯ ಸರ್ವಶ್ರೇಷ್ಠ ಕೃತಿ—ನಾರಿ! ಅಂತರ್ಯಾಮಿ ಈಶ್ವರನು ಸಮಸ್ತ ಸೌಂದರ್ಯ, ಸೌಮ್ಯತೆ- ಲಾವಣ್ಯಗಳನ್ನು ನಾರಿಯಲ್ಲಿ ತುಂಬಿದ್ದಾನೆ. ನಾರಿಯ ನಿರ್ಮಾಣದ ನಂತರ ತನ್ನ ಕೌಶಲ್ಯಕ್ಕೇ ಬೆರಗಾಗಿ, ತನ್ನ ಬೆರಳನ್ನು ತಾನೇ ಕಚ್ಚಿಕೊಂಡನಂತೆ ಬ್ರಹ್ಮ!

ನಾರಿಯನ್ನು ಜನನಿ ಎಂದನ್ನಲಾಗುತ್ತದೆ. ವಾಸ್ತವದಲ್ಲಿ ಆಕೆ ವಿಶ್ವಜನನಿಯೂ ಗಿರುವಳು. ನಾರಿಯ ಅನುಪಸ್ಥಿತಿಯಲ್ಲಿ ಬೆಳಗುತ್ತಿರುವ ದೇದೀಪ್ಯಮಯ ಪ್ರಪಂಚ ಅಂಧಃಕಾರ ಪೂರ್ಣವಾಗಿ ಗೋಚರಿಸುತ್ತದೆ. ನಾರಿಯರಿರದಿದ್ದಲ್ಲಿ ಜಗತ್ತಿನ ಕಲೆಯು ಶೂನ್ಯ ಮತ್ತು ವೈಭವ ಹೀನವಾಗಿರುತ್ತಿತ್ತು; ಏಕೆಂದರೆ ನಾರಿಯ ಪ್ರೇರಣೆಯಿಂದಲೇ ಕಲೆ, ಕವಿತೆ, ವೇದಾಂತ, ಮತ್ತು ವಿಶ್ವವಿಖ್ಯಾತ ಜ್ಞಾನ ಸಾರ್ಥಕಗಳು ಉದ್ಭವಿಸಿವೆ!

ನಾರಿಯು ಸಹನಶೀಲಳಾಗಿರುವಳು. ಹಿರಿ ಹಿರಿಯ ಕಷ್ಟ—ಆಪತ್ತುಗಳನ್ನವಳು ನಗು ನಗುತ್ತಾ ಸಹಿಸಬಲ್ಲಳು. ನಾರಿಯು ಧೈರ್ಯವಂತಳಾಗಿರುವಳು. ಅವಳ ವೀರತನವು ಸೀಮಾತೀತವಾದುದು. ಜೀವನ ಮಾರ್ಗದಲ್ಲಿ ಬರುವ ಅಡೆ-ತಡೆಗಳನ್ನವಳು ವೀರತನದಿಂದಲೇ ಎದುರಿಸಿ ಮುಂದು ವರಿದಿಲ್ಲವೇ? ಮುಂದುವರಿಯುತ್ತಿಲ್ಲವೇ? ನಾರಿಯಲ್ಲಡಗಿರುವ ಕ್ಷಮಾಧರ್ಮಗಳೆದುರು ಪರ್ವತಂತಿಯು ನತಮಸ್ತಕವಾಗುತ್ತದೆ. ನಾರಿಯ ಶೌರ್ಯದೆದುರು ನಿಲ್ಲುವ ಎಂಟೆದೆಯ ಕೆಚ್ಚು ಇನ್ನೂ ಆವಿರ್ಭವಿಸಿಲ್ಲ. ಇದೇ ಕಾರಣದಿಂದಾಗಿ ವಿಜಯವು ಕೂಡಾ ಅಂತ್ಯದಲ್ಲಿ ನಾರಿಯ ಕಾಲಿಗೇ ಮುತ್ತಿಡುತ್ತದೆ.

ನಾರಿಯು ಪುರುಷನಿಗೆ ನವೀನ ಚೇತನವನ್ನಿತ್ತಳು; ನೂತನ ಶಕ್ತಿಯನ್ನಿತ್ತಳು. ಪತಿಯನ್ನೇ ಪರಮೇಶ್ವರನೆಂದು ತಿಳಿಯುವ ನಾರಿಯು, ತನ್ನ ಪತಿಗಾಗಿ ಪ್ರಾಣ ಬಲಿಯೀಯಲೂ ಹಿಂಜರಿದಿಲ್ಲ.

ಮಹಾರಾಣಿ ಸೀತೆಯಂತಹ ಪತಿವ್ರತೆ (ಸತಿ) ಮತ್ತು ಸಾಧ್ವಿ, ದಮಯಂತಿಯಂತಹ ಶೀಲೆ ಮತ್ತು ತ್ಯಾಗಿ, ದ್ರೌಪದಿಯಂತಹ ಪತಿ ಪರಾಯಣೆ, ದುರ್ಗಾವತಿಯಂತಹ ವೀರ, ಲಕ್ಷ್ಮೀಬಾಯಿಯರಂತಹ ಸುಲಕ್ಷಣ ಮತ್ತು ನೀತಿಕುಶಲ ಹಾಗೂ ರಣ ಚಂಡಿಯ ಪ್ರತಿರೂಪ ಇತ್ಯಾದಿ ಅದೆಷ್ಟೋ ಮಹಾನ್ ವಿಭೂತಿಯರು ತಮ್ಮ ಪ್ರಾಣವನ್ನಿತ್ತು ತಮ್ಮ ಪದ ಧೂಳಿಯಿಂದ ಪೃಥ್ವಿಯನ್ನು ಪವಿತ್ರ ಗೈದಿರುವರು.

ಪೃಥ್ವಿಗಿಂತಲೂ ಹೆಚ್ಚಿನ ಸಹನ ಶೀಲ ಸಮುದ್ರಕ್ಕೂ ಮಿಕ್ಕಿದ ಗಾಂಭೀರ್ಯ, ಮಹಾನ್ ಪರ್ವತಕ್ಕಿಂತಲೂ ಹಿರಿಯ ಮಹಾನ್ ಆದರ್ಶಗಳನ್ನು ನಾರಿಯೇ ಸೃಜಿಸಲು ಸಮರ್ಥಳು. ಯಾವುದನ್ನನುಕರಿಸಿ ಪತಿತ ವ್ಯಕ್ತಿಯೂ ಸಫಲತೆಯ ಉಚ್ಚಶಿಖರವನ್ನೇರುವನೋ ಅಂತಹ ಅದ್ಭುತ ಪವಾಡ ಪೂರ್ಣಮಾರ್ಗವನ್ನು ನಾರಿಯೇ ತೋರಬಲ್ಲಳು!

(ಹಿಂದಿಯಿಂದ)

— ಅಮೃತ ಬಿಂದು —

ಜಗತ್ತು ಸತ್ತ ಪ್ರಾಣಿಯ ಮಾಂಸದಂತೆ. ಆದರಲ್ಲೇ ತೃಪ್ತಿ-ಸುಖಗಳನ್ನು ಪಡೆಯಲೆಳಸುವವರು ಆ ಮಾಂಸಕ್ಕಾಗಿ ಹೋರಾಡುವ ನರಿನಾಯಿಗಳಂತೆ.

o o o o

ದುಃಖದ ದುಮ್ಮಾನವನ್ನು ಮುಚ್ಚಿಡಬಲ್ಲವನಿಗಿಂತಲೂ ಸುಖದ ಉನ್ಮಾದವನ್ನು ಮುಚ್ಚಿಡಬಲ್ಲವನು ಶ್ರೇಷ್ಠ.

o o o o

ಮನುಷ್ಯನ ಹೃದಯ ವ್ಯವಸಾಯವಿಲ್ಲದ ಪಾಳುಭೂಮಿಯಂತೆ ಅಲ್ಲಿ ಹೊರಗಿನಿಂದ ಉತ್ತಮ ಭಾವನೆ—ವಿಚಾರಗಳ ಹೂ, ಹಣ್ಣುಗಳನ್ನು ತಂದು ನೆಡದಿದ್ದರೆ ಅಲ್ಲಿ ಕಾಡೇ ಬೆಳೆಯುತ್ತದೆ.

o o o o

ನಮ್ಮವರು ಆತ್ಮೀಯರು ಎಂಬುವವರಿಂದಲೇ ನಮ್ಮ ಜೀವನದಲ್ಲಿ ಸಹಿಸಲಾರದ ಪೆಟ್ಟುಗಳು ಒದಗುತ್ತವೆ.

ಚಿಕ್ ನುಡಿಚಿತ್ರ

ಸಂಗೀತದ ಮೇಲೆ ಪ್ರೇಮ

ನೀಲಾಕಾಶದಲ್ಲಿ ಸಂಜೆಯ ಕೆಂಬಣ್ಣ ಮುಸುಕಿತ್ತು. ಆ ಮೇಲೆ ಶರತ್ಕಾಲದಂತೆ ಬಾನಂಗಳದಲ್ಲಿ ಬೆಳಕು ತುಂಬಿತು. ಜಲತಲದಲ್ಲಿ ಆ ಹೊಂಕಿರಣಗಳು ಪ್ರತಿಬಿಂಬಿಸಿ ಮತ್ತೆ ಕತ್ತಲೆಯು ಹರಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟುವು.

ನಾವಿನ್ನೂ ನಡೆಯುತ್ತಲೇ ಇದ್ದೆವು. ಆ ಸಂಜೆ ನಮಗೆ ವಿಚಿತ್ರವಾಗಿತ್ತು ದೀಪಗಳು ಹೊತ್ತಿದುವು ಜಗತ್ತು ಗಂಭೀರವಾಯಿತು. ದಾರಿ ಹೋಕರ ಧ್ವನಿ ಕಡಮೆಯಾಯಿತು.

ಒಂದು ಹಳೆಯ ಮನೆಯ ಕಿಟಿಕಿಯಿಂದ ನಸುಗೆಂಪು ಬೆಳಕು ಹೊರಬರುತ್ತಿತ್ತು. ಕಿಟಕಿಯ ಹಿಂದೆ ಯಾರೋ ಪಿಯಾನೋ ನುಡಿಸುತ್ತಿದ್ದರು. ಮೊದಲು ಚೋಪಿನ್ ಭ್ರಮಣ ನೃತ್ಯ ಸಂಗೀತ. ಆ ಮೇಲೆ ಲಘು ನಿಶಾ ಸಂಗೀತ.

ನಾವು ಅಲ್ಲೇ ನಿಂತು ಸಂಗೀತ ಕೇಳತೊಡಗಿದೆವು. ಕಿರಿಯನಿಗೂ ಆಸಕ್ತಿ.

"ಅಪ್ಪಾ ಬೆಳಗಿನವರೆಗೂ ನಾವು ಇಲ್ಲೇ ಇರೋಣ!"

ಅದು ಸರಿಯೆಂದೆನಿಸಲಿಲ್ಲ...ಸಂಗೀತ ಮುಂದುವರಿಯಿತು. ಮಧುವಿನಂತೆ ಸಮೃದ್ಧ, ಮಧುರವಾಗಿತ್ತು ಅದು. ಕಿಟಕಿಯ ಬಳಿಯಲ್ಲೇ ನಿಂತೆವು.

"ಇದನ್ನು ಕೇಳು, ಇದು ಲಘು ನಿಶಾ ಸಂಗೀತ"

"ಲಘು-ಸಂಗೀತವೆಂದರೆ ಏನು?"

"ಸಣ್ಣ ಸಂಗೀತ"

"ಸಂಗೀತ ಯಾವಾಗ ದೊಡ್ಡದಪ್ಪಾ?"

"ಹಾಗೆಲ್ಲಾ ಕೇಳಬೇಡ. ಸಂಗೀತ ಕೇಳು. ಎಷ್ಟು ಚೆನ್ನಾಗಿದೆ! ಯಾರೋ ಮುಖವನ್ನು ಪ್ರೀತಿಯಿಂದ ನೇವರಿಸಿದಂತಿದೆಯಲ್ಲವೆ?"

"ಅಪ್ಪಾ, ನಾವಿಲ್ಲೇ ಇರೋಣ.... ಬೆಳಗಾಗುವ ವರೆಗೂ.?

ಸಂಗೀತ ನಿಂತಿತು. ಕಿಟಕಿಯಲ್ಲಿದ್ದ ಕೆಂಬೆಳಕೂ ನಂದಿತು ...ಆದರೂ ನಾವು ಮನೆಗೆ ಹೋಗಲಿಲ್ಲ.

"ಅಪ್ಪಾ, ಸಂಗೀತ ಸಣ್ಣದೆ ನನ್ನಷ್ಟು ಸಣ್ಣದೆ?"

"ಸಂಗೀತ ದೊಡ್ಡದಾಗುತ್ತದೆ ಕೂಡ ...ಕ್ರಮೇಣ."

"ಅದು ಸಣ್ಣದಾಗಿರುವಾಗ, ಮಕ್ಕಳು ಕೇಳಬಹುದಲ್ಲವೆ? ಅಪ್ಪಾ! ಸಂಗೀತ ಎಂದರೇನು?"

"ನಿನಗಿನ್ನೂ ತಿಳಿಯದೆ? ಸಂಗೀತವಾಗಿರುವಾಗಲೇ ಅದು ಸಂಗೀತ'

"ಹೌದು, ಹೋಗಿ ಬಾರಿಸಲೇ ಬೇಕಾದಾಗ ಸಂಗೀತವಾಗುತ್ತೆ"

ಕ್ಷಣ ಹೊತ್ತು ಸುಮ್ಮನಿದ್ದು "ಅಪ್ಪಾ ನಾವೂ ಹಾಡೋಣ ಸ್ವಲ್ಪ"—ಎಂದನು.

"ನಾನು ಹಾಡಲಾರೆ, ಮನೆಗೆ ಹೋಗಿ 'ರೇಡಿಯೋ ಹಾಕೋಣ"—ಎಂದೆ ನಾನು.

"ಇಲ್ಲಪ್ಪ ನಾನು ಹಾಡಲೇ ಬೇಕಾಗಿದೆ! ಇಬ್ಬರೂ ಹಾಡೋಣ."

ಇಬ್ಬರೂ ಹಾಡಿದೆವು, ರಾಗ—ತಾಳ ಲೆಕ್ಕಿಸದೆ,—ಸ್ವಲ್ಪ ಹೊತ್ತಿನ ವರೆಗೆ.

ಒಳಗಿನವರಿಗೆ ನಮ್ಮ ಸಂಗೀತ ಕೇಳಿಸಿರ ಬೇಕು. ಕಿಟಿಕಿಯಲ್ಲಿ ಕೆಂಪು ಬೆಳಕು ಮತ್ತೆ ಕಾಣಿಸಿಕೊಂಡು; ಅರಿತು ಅವರಿಗೂ ಆಶ್ಚರ್ಯವಾಗಿರಬೇಕು. ಇಂತಹ ಅನುಭವ ಅವರಿಗೂ ಎಂದೂ ಆಗಿರಲಾರದು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪರಿಪೂರ್ಣ ಬೇಂಕಿಂಗ್ ಸೇವೆಗೆ
— ಕೊರ್ಪೊರೇಶನ್ ಬೇಂಕ್ —
78 ಶಾಖೆಗಳು | **ದೇಶವ್ಯಾದ್ಯಂತ ಏಜನ್ಸಿಗಳು**
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ
ಭಾವಾರ್ಚನೆ
ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.
ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.**
ಮಾರಾಟಗಾರರು: **ನವಭಾರತ ಬುಕ್ ಡಿಪ್ಪೊ, ಉಡುಪಿ.**

ಕವಲು ದಾರಿ — ಕೆಂಪು ದೀಪ

ಕನ್ಯಾಪಿತೃಗಳ ಶೂಲ — ವರದಕ್ಷಿಣೆ

ಸುದಾಸ

ಜನಸಾಮಾನ್ಯರ ರಕ್ಷಣೆಯ ಹಿತ ದೃಷ್ಟಿ ಇರಿಸಿಕೊಂಡು, ಭಾರತ ಸರಕಾರ ಒಂದು ಕಾನೂನನ್ನು ಜ್ಯಾರಿಗೆ ತಂದು ಸ್ವಲ್ಪ ಸಮಯವಾಗಿದೆ. ಆ ಸಮಯದಲ್ಲೇ ಹೊಸ ಕಾನೂನಿನ ಕುರಿತು ಸುದೀರ್ಘ ಚರ್ಚೆಯೂ ನಡೆದಿತ್ತು. ಅದರ ಗುಣಾವಗುಣಗಳನ್ನು ಅನೇಕರು ಎತ್ತಿ ಹಿಡಿದಿದ್ದಾರೆ. ಅದೇನೇ ಇರಲಿ, ಈ ಹೊಸ ಕಾನೂನನ್ನು ಕೇಳಿದ ಎಷ್ಟೋ ತಂದೆ ತಾಯಿಗಳು ಹರ್ಷೋದ್ಗಾರ ತೆಗೆದರು ಆಗ. ಅದೆಷ್ಟೋ ಸೋದರಿಯರು, ಕುತೂಹಲಿಯರಾಗಿ ಈ ಹೊಸ ಕಾನೂನಿನತ್ತ ನಿರೀಕ್ಷಣಾ ದೃಷ್ಟಿ ಬೀರಿದರು, ಅಂದು.

ಕಠಿಣ ಸಜೆ, ವರದಕ್ಷಿಣೆ ಪಡೆಯುವವರಿಗೆ!

ಈ ವಿಷಯ ಜನಸಾಮಾನ್ಯರ ದೃಷ್ಟಿಯಲ್ಲಿ ಅತ್ಯಂತ ಗಂಭೀರವಾದುದು, ಗಹನವಾದುದು ವಿಧಿವಿಲಾಸವೆಂದು ಕರೆಯುವ ನಮ್ಮ ಪೂರ್ವಜರ ವಿಚಾರಕ್ಕೆ ಇದು ತೀವ್ರ ಹೊಡೆತ. ನವ ಸಮಾಜ ರಚನೆಯ ಯುವಕರಿಗೆ ಇದೇ ಸಂಧಾಹ್ವಾನ!

ಧನಬಲದಿಂದ ಏನೆಲ್ಲ ಸಾಧ್ಯ ಎನ್ನುವ ಬಗ್ಗೆ ಏನೇನೂ ವಿವರಿಸುವ ಅಗತ್ಯವಿಲ್ಲ. ಆವಶ್ಯಕ ವಿಷಯಗಳು ಪೊಳ್ಳು ವೇದಾಂತವೆನಿಸುತ್ತವೆ, ಹಣವಿಲ್ಲದಿದ್ದರೆ.

ಅಂತಿರುವಾಗ ಮದುವೆಯ ಮಾರುಕಟ್ಟೆಯಲ್ಲಿ "ಹಣವೇ ನಿನ್ನಯ ಗುಣ..." ದ ಹಾಡು ಹಾಡದಿರಲು ಸಾಧ್ಯವೇ! ಹೆಣ್ಣು ಕುರೂಪಿಯಾಗಿರಬಹುದು; ಕುಳ್ಳಿಯಾಗಿರಬಹುದು; ಅಂಗ ವಿಕಲೆಯಾಗಿರಬಹುದು; ಕುಬ್ಜೆಯಾಗಿರಬಹುದು; (ಚೆಲುವೆ ಆಗಿರಲೂ ಬಹುದು!) ಮದುವೆಯ ಮಾರುಕಟ್ಟೆಯಲ್ಲಿ ನಡೆಯುವ ವರ ವಿಕ್ರಯ 'ಲಿಲಾವಿನಲ್ಲಿ' ಆಕೆ ಬಯಸುವ ಗಂಡು ಸಿಕ್ಕಿಯೇ ಸಿಗುತ್ತಾನೆ. (ತುಸು ಧಾರಾಳ ಮನಸ್ಸನ್ನು ಇಂತಹ ಸಂದರ್ಭಗಳಲ್ಲಿ ಶ್ರೀಮಂತ ತಂದೆ ತನ್ನ ಮುದ್ದಿನ ಮಗಳಿಗಾಗಿ ಪ್ರದರ್ಶಿಸದೆ ಇರುವನಾದರೂ ಹೇಗೆ?)

ಆದರೆ ಬಡ ಕನ್ನೆಯರ ಅವಸ್ಥೆ? ಅವರ ತಂದೆ ತಾಯಿಯವರ ಪಾಡು?

ಅನಿವಾರ್ಯ ದುರಂತದ ಸನ್ನಿವೇಶ ರಚನೆಯ ಮಿಂಚು ಲಕಲಕಿಸ ತೊಡಗುವುದು ಇಲ್ಲಿ. ಯುವಕ ಜನಾಂಗದ ಪ್ರಗತಿಯ ದಾರಿ ವಿದೀರ್ಣಗೊಳ್ಳತೊಡಗುವದೂ ಈ ಸಂದರ್ಭದಲ್ಲೇ. ಆತ್ಮವಿಶ್ವಾಸದ ಕುಂಭ ನುಚ್ಚುನೂರಾದಾಗ ಅಸಹ್ಯ ವೇದನೆಯ ಕೂರಲಗು ಹೃದಯವನ್ನು ತಿವಿಯುತ್ತದೆ ಮತ್ತು ಪ್ರಶ್ನಿಸುತ್ತದೆ: ಎಂತಹ ಲಜ್ಜೆಗೇಡುತನದ ಕೆಲಸ ಮಾಡಿದೆ ನಾನು? ಈ ದುರಂತತೆಯ ಸೂತ್ರಧಾರಿಯಾದೆನೇಕೆ ಎಂದು.

ಎಲ್ಲಾ ಹಿರಿಯ ಸಾಹಿತಿಗಳೂ ಅನ್ನುತ್ತಿರುತ್ತಾರೆ, ಮದುವೆಯ ಬಂಧನದಿಂದ ಗಂಡು ಹೆಣ್ಣು ಒಂದಾಗಲಾರರು.ಎಂದು ವರದಕ್ಷಿಣೆಯ ದುರಾಗ್ರಹದ ಬೇಡಿಕೆಯೂ ಇದ್ದರೆ? ವರದಕ್ಷಿಣೆ ಒಂದು ಸ್ವಾರಸ್ಯಪೂರ್ಣ ವಿಷಯ ಚರ್ಚಾಕೂಟದಲ್ಲಿ. ಈ ಪೀಡೆಯಿಂದ ಸಮಾಜ ರಚನೆಗೆ ಆತಂಕವೇರ್ಪಡುತ್ತದೆ ಎನ್ನುವವರು ಬಹು ಮಂದಿ. ಮದುವೆಯೂ ಆಡಂಭರವಿಲ್ಲದೆ ನೆರವೇರಬೇಕೆಂದು ಬಿನ್ನವಿಸಿಕೊಳ್ಳುವವರೂ ಇದ್ದಾರೆ. ದಾಂಪತ್ಯ ಜೀವನಕ್ಕೆ ಕಾಲಿರಿಸುವ ಶುಭ ಸನ್ನಿವೇಶದಲ್ಲಿ ಸಾಲದ ಹೊರೆಯನ್ನು ಹೊತ್ತ ಒಂದು ಕುಟುಂಬ, ಕಂಗೆಟ್ಟ ಸ್ಥಿತಿಯನ್ನು ಅದುಮಿ ಹಿಡಿದು ಹರಸುವದು ಔಚಿತ್ಯ ಹೀನವಾಗದೆ ಎನ್ನುವ ಮಾತಿನಲ್ಲಿ ಸಮಾಜ ಕಲ್ಯಾಣದ ಶುಭಕಾಂಕ್ಷೆ ಇಲ್ಲ?

ನಾಳಿನ ಸಮಾಜದ ನಾಂದಿ, ಮದುವೆ. ಒಂದೆರಡು ದಿನಗಳ ಕೋಲಾಹಲ, ಸುಗ್ರಾಸಭೋಜನ, ಸಂಭ್ರಮದ ಗಳಿಗೆಯಲ್ಲ ಇದು. ಎರಡು ದೇಹಗಳ ಕೂಡುವಿಕೆಗಾಗಿ ಸೇರ್ಪಟ್ಟ ದಿನವೂ ಇದಲ್ಲ. ಭವ್ಯ ಭವಿಷ್ಯದ ಜನಾಂಗ ರಚನೆಗಾಗಿ ಎರಡು ಆತ್ಮಗಳ ಸಮ್ಮಿಲನದ ಪವಿತ್ರ ದಿನವಿದು. ಶುಭ್ರತೆಯಿರಬೇಕು ಇಲ್ಲಿ. ಆನಂದದ ಸ್ರೋತ ಎಲ್ಲೆಡೆಗಳಿಂದಲೂ ಹರಿದು ಬರಬೇಕು ಇಲ್ಲಿ. ಲಾಲಸೆಯ ಗುಲ್ಲು—ಗುದಾಟಕ್ಕೆ ಇದೇ ಸಮಯ ಕೆಲವು ಕಡೆಗಳಿಗೆ! ಸಹಸ್ರಾರು ರೂಪಾಯಿಗಳ ಕಾಣಿಕೆ ಒಪ್ಪಿಸಬೇಕು ಹೆಣ್ಣುಹೆತ್ತ ಅಪರಾಧಕ್ಕಾಗಿ!

ಸರಕಾರವೇನೋ ಜನಹಿತದ ದೃಷ್ಟಿಯಿಂದ ಇದಕ್ಕೆ ತಡೆಹಾಕಿತು. ಆದರೆ ಇದೇ ಒಂದು ಸದವಕಾಶವಾಯಿತು ಕಾಳಸಂತೆಯ ಪೋಷಕರಿಗೆ. ಈ ಹಿಂದೆ ಎಡ್ವಾನ್ಸ್ ಹಣ ಒಪ್ಪಿಸಿ, ಉಳಿದ ಹಣವನ್ನು ಕಲ್ಯಾಣ ಮಂಟಪದಲ್ಲಿ ಹಿಪ್ಪಿಸಲಾಗುತಿತ್ತು. ಮದುವೆಯ ಮಂಟಪದಲ್ಲಿ ಹೆಣ್ಣಿನ ಕಡೆಯವರು ವಾಗ್ದಾನ ಮಾಡಿದ್ದ ಹಣ ಸಿಗದೆ;ಎಷ್ಟೋ ವರ ಮಹಾಶಯರುಗಳು ಮೋಸ ಹೋಗಿದ್ದರು ಹಿಂದೆ ಈಗ ಅದಕ್ಕೆಡೆಯಿಲ್ಲ. ಎಲ್ಲಾ ಗುಟ್ಟಿನ ವ್ಯವಹಾರ. ಅವರಿಗೂ ಆತುರ, ಇವರಿಗೂ ಆತುರ. ತಮ್ಮ ಹುಡುಗನಿಗೆ ಎಷ್ಟು 'ಡಿಮಾಂಡ್' ಸಿಗಬಹುದು ಎಂದು ಗಂಡಿನ ಕಡೆಯವರ ನಿರೀಕ್ಷಣೆ ತಮ್ಮ ಹುಡುಗಿ ಗಂಡನ ಮನೆಗೊಮ್ಮೆ ಹೋದರೆ ಸಾಕೆನ್ನುವದು ಹೆಣ್ಣಿನ ಕಡೆಯವರ ಆಲೋಚನೆ. ಜೀವನದಲ್ಲಿ ನೂರಾರು ಬಾರಿ ಮದುವೆ ನಡೆಯುತ್ತದೆಯೇ? ಒಂದು ಬಾರಿಗೆ ಐದೋ, ಹತ್ತೋ, ಇಪ್ಪತ್ತೋ ಬಿಚ್ಚಿದರೆ ಯಾರಿಗೇನು ನಷ್ಟ? ಎನ್ನುವ ಬುದ್ಧಿವಂತಿಕೆಯ ವಿಚಾರ ಪ್ರಿಯರಿಗೆಷ್ಟು ಮಂದಿ ಇಲ್ಲ ನಮ್ಮಲ್ಲಿ,

ಸರಕಾರದ ಕಾನೂನು ಜನಸಾಮಾನ್ಯರಿಗೆ ಈಗ ಇನ್ನೂ ಗಡುಚಾಗಿದೆ. ಕಾನೂನಿನ ಜೊತೆಯಲ್ಲೇ ಸೌಲಭ್ಯತೆ! ಹಣ ಮಾತ್ರ ಸ್ವೀಕರಿಸಬಾರದು. ವಸ್ತು ಒಡವೆಗಳನ್ನು ಸ್ವೀಕರಿಸಬಹುದು. ನಮ್ಮ ಹುಡುಗನಿಗೆ ಕಾರ್ ಬೇಕಂತೆ (ಚಂದ್ರನೂ ಬೇಕೆಂದು ಹಟಹಿಡಿದಿದ್ದ ಚಿಕ್ಕವನಿರುವಾಗ!) ಕೈಗೆ ರಿಸ್ಟ್‌ವಾಚ್ ಬೇಕಂತೆ (ದುಡಿಮೆಯಿಂದ ಕೊಳ್ಳಲು ಶಕ್ತಿಯಿಲ್ಲ.) ಬಟ್ಟೆ ಬರೆ....(ಅಯ್ಯೋ ಪಾಪವೇ! ಆ ಸಾಮರ್ಥ್ಯವೂ ಇಲ್ಲ?) ಇತ್ಯಾದಿ ಇತ್ಯಾದಿ .

ಇದರ ವಿರುದ್ಧ ಹೋರಾಡುವ ಯುವಕರ ಆವಶ್ಯಕತೆಯಿದೆ. ಅವರ ಕಲ್ಯಾಣಕಾರೀ ಜಗತ್ತಿನತ್ತ ತಮ್ಮ ದೃಷ್ಟಿ ಹರಿಸಬೇಕಾಗಿದೆ, ಇಂದು. 'ನಾವು ನಾಗರಿಕರು' ಎಂದು ಹೇಳಿಕೊಳ್ಳುತ್ತ ಎದೆಯುಬ್ಬಿಸಿ ನಡೆಯುವ ಮಹಾಶಯರುಗಳು ವರದಕ್ಷಿಣೆಗೆ ಕೈಯೊಡ್ಡುವದು ಹೀನ ಕೆಲಸವೆಂದು ತಿಳಿದುಕೊಳ್ಳಲಾರರೇ?

ಸಹಜವಾಗಿ ತಿಳಿದುಕೊಳ್ಳುತ್ತಾರೆ ಇಂದಲ್ಲದಿದ್ದರೆ ನಾಳೆ. ಇಂದೇನೋ ಎಂದಿನಿಂದಲೋ ನಡೆಯುತ್ತ ಬಂದಿರುವ ಪರಂಪರಾಗತ ಪದ್ಧತಿ ಹೀಗೆಯೇ ಮುಂದುವರಿಯಲಿ ಎನ್ನುವವರಿರಬಹುದು. ಅದು 'ವಾ 'ಕಾಣಿಕೆ" ಸ್ವೀಕರಿಸುವದು ನಮ್ಮ ಜನ್ಮಸಿದ್ಧ ಹಕ್ಕು ಎನ್ನುವ ವೀರರೂ ಇರಬಹುದು ನಮ್ಮಲ್ಲಿ.

ನಾವು ನಾಳಿನ ಭವ್ಯ ಭವಿಷ್ಯದತ್ತ ನೋಡೋಣ. ಅದಕ್ಕಾಗಿ ಇಂದು ಕಾರ್ಯಬದ್ಧತೆಗಿಳಿಯೋಣ. ಯಶಸ್ಸು ನಮ್ಮದು ಎನ್ನುವ ಭರವಸೆ ನಮ್ಮ ಪಾಲಿಗುಳಿಯಲಿ. ಅಂತೆಯೇ ಹಿರಿಯರು ಮಾಡಿದ ತಪ್ಪಿಗೆ ನಾವು ಹೊಣೆಗಾರರಾಗುವದೂ ಬೇಡ. ನಾವು ಯುವಕರು— ಹೊಸ ಸಮಾಜವನ್ನು ರಚಿಸುವೆವು. ಸಮಾಜದ ದಯಾಹೀನ ವೃತ್ತಿಯನ್ನು ಮುರಿಯುವೆವು.

ಇದು ನಮ್ಮ ದೀಕ್ಷೆ; ಇದೇ ನಮ್ಮ ಹಾರೈಕೆ.

ದ್ರವಿಡ ಸ್ಥಾನದ ಮರುಳು ಕಲ್ಪನೆ

(೩ನೇ ಪುಟದಿಂದ)

ಸಾಗುವಂತಿಲ್ಲ; ಆಗಲೂಬಾರದು. ಆದರೆ, ಇಂತಹ ಸಂಕುಚಿತತೆಯ ಮನೋಭಾವನೆಯು ದಿನದಿಂದ ದಿನಕ್ಕೆ ಪ್ರಜ್ವಲಿಸುತ್ತ ಮುಂದುವರಿಯುವುದೂ ಅಸಾಧ್ಯವಲ್ಲ. ಹೀಗಾಯಿತೆಂದರೆ, ಐಕ್ಯದತ್ತ, ಸಮಗ್ರತೆಯತ್ತ ಮುಂದಡಿಯಿಡುತ್ತಿರುವ ನಾವು ಹಿನ್ನಡೆ ಗೆಯ್ದಂತೆ; ರಾಷ್ಟ್ರ ಬುನಾದಿಯನ್ನೇ ಕಳಚಿಬಿಟ್ಟಂತೆ. ನಮ್ಮ ಭವಿಷ್ಯದ ಮುಂದೆ ಅಂಧಕಾರ ಕವಿಸಿಕೊಂಡಂತೆ; ನಮ್ಮ ಕಾಲುಗಳನ್ನು ನಾವೇ ಕಡಿದುಕೊಂಡಂತೆ. ಹೀಗಾಗಬಾರದು. ಇದಕ್ಕಾಗಿ ಪ್ರತ್ಯೇಕತೆಯ ಇಂತಹ ಕ್ಷುಲ್ಲಕ ವಿಚಾರಧಾರೆಯನ್ನು ಪ್ರಾರಂಭದಲ್ಲಿಯೇ ತಡೆದುಬಿಡಬೇಕು. ವಿಷವೃಕ್ಷದ ಬೀಜವನ್ನೇ ಕಿತ್ತು ಬಿಸುಡದೆ ಹೋದರೆ, ಮುಂದೆ ಒಂದಲ್ಲ ಒಂದು ದಿನ ಅದರಿಂದ ವಿಘಟನೆ ನಡೆಯಲೂಬಹುದು.

— ಅಮೃತ ಬಿಂದು —

ಗಾಳಿ ವಿರೋಧ ಬೀಸಿದಾಗ ಮಾತ್ರ ಗಾಳಿಪಟ ಮೇಲೇರುತ್ತದೆ; ಶಕ್ತನಿಗೆ ಕಷ್ಟ ಎದುರಾದಾಗ ಮಾತ್ರ ಆತ ಮೇಲೇರುತ್ತಾನೆ.

० ० ० ०

ದೊಡ್ಡ ನಗರಗಳಲ್ಲಿರುವಂತೆ ಮನುಷ್ಯನ ಹೃದಯದಲ್ಲೂ ಕೂಡ ನಾರುವ ಚರಂಡಿಗಳೂ, ಬೆಳಕಿಲ್ಲದ ಗಲ್ಲಿಗಳೂ ಇವೆ.

० ० ० ०

ಮನುಷ್ಯ ಬದುಕಿರುವ ವರೆಗೆ ಜಗತ್ತು ಆತನ ವ್ಯಕ್ತಿತ್ವಕ್ಕೆ ಬೆಲೆ ಕಟ್ಟುತ್ತದೆ ಮನುಷ್ಯ ಸತ್ತ ಮೇಲೆ ಆತನ ಗುಣಗಳನ್ನೆಣಿಸುತ್ತದೆ.

० ० ० ०

ಸತತ ವ್ಯಾಯಾಮ ಮಾಡುವವನ ಸ್ನಾಯುಗಳು ಬಲಗೊಳ್ಳುವಂತೆ ಸತತ ಕಷ್ಟದಲ್ಲಿರುವವನ ಗುಣ ಬೆಳೆಯುತ್ತದೆ.

ತಾಯಿ ನುಡಿ ಮೆನನ್ ಸಂಚಿಕೆ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಸಂಚಿಕೆಗೆ ಏಜಂಟರಿಂದ ಸಿಗುತ್ತಿರುವ ಪುರಸ್ಕಾರ, ಪ್ರೋತ್ಸಾಹಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತ ಅವರ ಬೇಡಿಕೆಗಳನ್ನು ಪೂರೈಸುವ ಸಲುವಾಗಿ, ಮೇ ತಿಂಗಳಲ್ಲಿ

ತಾಯಿ ನುಡಿಯ 6ನೆಯ ಹುಟ್ಟುಹಬ್ಬದಂದು

ಪ್ರಕಟಿಸಲಿರುವೆವು:

ರೂ. 3·50 ನ. ಪೈಸೆ ಕೊಟ್ಟು ವಾರ್ಷಿಕ ಚಂದಾದಾರರಾಗುವವರಿಗೆ 6ನೆ ಹುಟ್ಟು ಹಬ್ಬದ ಉಡುಗೊರೆಯಾಗಿ ಈ ಸಂಚಿಕೆಯನ್ನು ಕಳಿಸಲಾಗುವುದು

ಬಿಡಿ ಪ್ರತಿ: 75 ನ ಪೈಸೆ.

ವ್ಯವಹರಿಸಿರಿ: ವ್ಯವಸ್ಥಾಪಕರು,
ತಾಯಿ ನುಡಿ, 321, ಪ್ರೊಸ್ಪೆಕ್ಟ್ ಬಿಲ್ಡಿಂಗ್,
ಫ್ರಿಯರ್ ರೋಡ್, ಮುಂಬಾಯಿ-1.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಆರ್.ಶೇಟ್

ಪೂರ್ವ ಜನ್ಮದ ಕರ್ಮ

(೨ನೇ ಪುಟದಿಂದ)

ಕಾಶಿಯನ್ನು ತಲಪಿದ ಆಚಾರ್ಯರಿಗೆ ಅಲ್ಲಿ, ತಮ್ಮ ಪರಿವಾರದಿಂದ ಬೇರ್ಪಡುವ ಸಂದರ್ಭವೊಂದು ಒದಗಿತು. ಕಾಶಿಯಷ್ಟು ದೂರಕ್ಕೆ ಬಂದನಂತರ ಬದರೀನಾಥಕ್ಕೂ ಹೋಗಿಯೇ ಬಿಡೋಣವೆಂದು ಶ್ರೀಧರಾಚಾರ್ಯರ ಬಯಕೆ. ವೈಷ್ಣವರಾದ ಅವರಿಗೆ ಬದರೀನಾಥದ ದರ್ಶನದ ಹಂಬಲ ಬಲವಾಗಿತ್ತು. ಆದರೆ ಅಲ್ಲಿಗೆ ಹೋಗಲು ವಾಹನ ಸೌಕರ್ಯವಿಲ್ಲವೆಂದೂ, ಕಾಲು ದಾರಿಯೂ ಸುಗಮವಿಲ್ಲವೆಂದೂ ಕೇಳಿದ ಬಳಿಕ ಆ ಪಂಗಡದ ಇತರರು ಹಿಂದೇಟು ಹೊಡೆದರು. ಅಪಾಯವನ್ನೆದುರಿಸಲು ಅವರು ಯಾರೂ ಸಿದ್ಧರಾಗಿರಲಿಲ್ಲ. ಕೆಲವರು ತಮ್ಮ ಮಕ್ಕಳು-ಮೊಮ್ಮಕ್ಕಳನ್ನು ನೆನೆದರೆ ಇನ್ನು ಕೆಲವರಿಗೆ ತಮ್ಮ ಸೊತ್ತು, ಗದ್ದೆ, ಜಾನುವಾರಗಳ ನೆನಪಾಗ ಹತ್ತಿತು. ಅಂತೂ ಆ ವರೆಲ್ಲರೂ ಕಾಶಿಯಿಂದ ಮರಳಿ ಊರಿಗೇ ಹೊರಡುವ ಸಿದ್ಧತೆಯನ್ನು ನಡೆಸಿದರು. ಶ್ರೀಧರಾಚಾರ್ಯರು ತಮ್ಮ ಕುಟುಂಬದೊಡನೆ ಇನ್ನೊಂದು ಗುಂಪನ್ನು ಸೇರಿಕೊಂಡು ಬದರಿಕಾಶ್ರಮದತ್ತ ತೆರಳಿದರು. ಕಾಶಿಯಿಂದ ಹರಿದ್ವಾರದ ತನಕ ಉಗಿ ಬಂಡಿಯಲ್ಲಿ ಪಯಣಿಸಿ ಮುಂದಿನ ಕೆಲವು ಮೈಲುಗಳ ದಾರಿಯನ್ನು ಬಸ್ಸಿನಲ್ಲಿ ಕ್ರಮಿಸಬೇಕಾಗಿತ್ತು. ಆ ಬಳಿಕ ಮುಂದೆ ಪ್ರಾರಂಭವಾಗುವುದು ಕಾಲು ನಡಿಗೆಯ ದಾರಿ.

ಶ್ರೀಧರಾಚಾರ್ಯರ ಅದೃಷ್ಟ ಚೆನ್ನಾಗಿರಲಿಲ್ಲ. ಕೆಲವು ದಿನಗಳಿಂದ ಸುರಿಯುತ್ತಿದ್ದ ವಿಪರೀತ ಮಳೆಯ ದೆಸೆಯಿಂದಾಗಿ ಕೆಟ್ಟು ಹೋದ ಮಾರ್ಗವು ಕುಸಿದು ಇವರು ಹೊರಟ ಬಸ್ಸು ಆಳವಾದೊಂದು ಕಣಿವೆಗೆ ಬಿತ್ತು. ಆ ಅಪಘಾತದಲ್ಲಿ ಜೀವ ಸಹಿತ ಉಳಿದ ಬೆರಳೆಣಿಕೆಯಷ್ಟು ಮಂದಿಯಲ್ಲಿ ಆಚಾರ್ಯರ ಕುಟುಂಬ ವೆಂಕಮ್ಮನೊಬ್ಬರು. ಆಚಾರ್ಯರೂ ಅವರ ಪರಿವಾರದ ಇತರರೂ ಅಪಘಾತ ಸಂಭವಿಸಿದ ಸ್ಥಳದಲ್ಲೇ ಮೃತ್ಯುವಶರಾಗಿದ್ದರು. ಹಲವಾರು ದಿನಗಳ ಒಳಿಕ ಆಸ್ಪತ್ರೆಯಲ್ಲಿ ಪ್ರಜ್ಞೆ ತಿಳಿದ ವೆಂಕಮ್ಮ ಸಂಪೂರ್ಣವಾಗಿ ಚೇತರಿಸಿಕೊಳ್ಳಬೇಕಾದರೆ ಹಲವು ತಿಂಗಳುಗಳೇ ಹಿಡಿದುವು. ಯಜಮಾನರೊಡನೆ ಯಾತ್ರೆಯ ಸಂಭ್ರಮಕ್ಕಾಗಿ ತನ್ನ ಊರು ಮನೆಯಿಂದ ಸಾವಿರಾರು ಮೈಲುಗಳಷ್ಟು ದೂರ ಬಂದಾಕೆ, ಗುರುತರಿಯದ, ಪರಭಾಷೆಯ ಪ್ರಾಂತದಲ್ಲಿ ಒಮ್ಮೆಲೇ ಏಕಾಂಗಿಯಾಗಿ ಬಿಟ್ಟಿದ್ದರು. ಆಕೆ ತನ್ನ ದೈವವನ್ನು ಹಳಿದುಕೊಂಡರೇನೋ, ಅವನಿಗೂ ಆ ಪರಮಾತ್ಮನಿಗೂ ಮಾತ್ರವೇ ಗೊತ್ತು. ತಾನೇ ಅಳಿದು, ತನ್ನ ಸರ್ವಸ್ವವಾಗಿದ್ದ ಯಜಮಾನರುಳಿದು ಕೊಂಡಿದ್ದರೆ? ಆದರೆ ಆ ಕೇವಲ ಒಂದಕ್ಷರವಾದ 'ರೇ'ಯೇ ಅವರ ಭೂತ ಭವಿಷ್ಯತ್ತುಗಳನ್ನೆಲ್ಲಾ ಸಂಪೂರ್ಣವಾಗಿ ಮಾರ್ಪಡಿಸಿತ್ತು. ಜಗನ್ನಿಯಾಮಕನ ಲೀಲಾಮಯವಾದ ಧರಿತ್ರಿಯಲ್ಲಿ ಅವರ ಪಾತ್ರವಿನ್ನೂ ಮುಗಿದಿರಲಿಲ್ಲ. ಆಸ್ಪತ್ರೆಯ ಅಧಿಕಾರಿಗಳು ಪ್ರಯಾಸಪಟ್ಟು ಅವರಿಂದ ವಿಷಯಗಳನ್ನು ತಿಳಿದುಕೊಂಡು, ಸಮಾನುಭೂತಿಯಿಂದ ಸ್ವಲ್ಪ ಹಣವನ್ನೂ ಕೊಟ್ಟು, ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಇನ್ನೊಂದು ಯಾತ್ರಿಕರ ಗುಂಪಿನೊಂದಿಗೆ ಇವರನ್ನು ಸೇರಿಸಿದರು.

ಬದುಕೇ ಭಾರವಾಗಿದ್ದ ವೆಂಕಮ್ಮ ಈ ಗುಂಪಿನೊಡನೆ ಪುನಃ ಕಾಶಿಯನ್ನು ತಲಪಿದರು. ಅಪಘಾತದಿಂದ ಬಲಗುಂದಿ, ಮನೋಘಾತದಿಂದ ಜರ್ಝರಿತರಾದ ಅವರು ಕಾಶಿಯ ಛತ್ರ ಒಂದರಲ್ಲಿ ತಂಗಿದ್ದಾಗ ಮಾರಿಕಾ ಬೇನೆಗೆ ತುತ್ತಾದರು. ಸಹ ಯಾತ್ರಿಕರು ಗಾಬರಿಗೊಂಡು ತಮ್ಮ ಜವಾಬ್ದಾರಿಯನ್ನು ನೀಗಿಸಿಕೊಳ್ಳಲು, ತಮಗೆ ಅವರ ಗುರುತು ಪರಿಚಯ ಯಾವುದೂ ಇಲ್ಲವೆಂದು ಛತ್ರದ ಅಧಿಕಾರಿಗಳೊಡನೆ ತಿಳಿಸಿಬಿಟ್ಟರು. ತಿರುಗೊಮ್ಮೆ ವೆಂಕಮ್ಮನವರು ಆಸ್ಪತ್ರೆಗೊಯ್ಯಲ್ಪಟ್ಟರು. ಈ ಬಾರಿ ನಿಶ್ಚಯವಾಗಿಯೂ, ತನಗೆ ಈ ಜೀವನದಿಂದ ಬಿಡುಗಡೆಯಾಗುವುದೆಂದು ಆಶೆಯಿಂದ ಮರಣವನ್ನೇ ಇದಿರು ನೋಡುತ್ತಿದ್ದರೂ ನಿರ್ದಯಿಯಾದ ದೈವ, ಬಹಳ ಸಮಯದ ವರೆಗೆ ಅವರನ್ನು ನರಳಿಸಿ ಪುನಃ ಒಡಕಿನ ಹಾದಿಗೇ ತಳ್ಳಿತು. ಬಸ್ಸಿನ ಅಪಘಾತದ್ದೇ ದಾದಾಗಲೇ ಅವರ ಒಡವೆಗಳನ್ನೆಲ್ಲಾ ಯಾರೋ ಅಪಹರಿಸಿಬಿಟ್ಟಿದ್ದರು. ಆಚಾರ್ಯರ ಹಣದ ಚೀಲದ ಗತಿ ಏನಾಗಿತ್ತೋ ಅದೂ ಇವರಿಗೆ ತಿಳಿದಿರಲಿಲ್ಲ. ಬೇನೆಯಿಂದ ಚೇತರಿಸಿಕೊಂಡು ಆಸ್ಪತ್ರೆಯಿಂದ ಹೊರಬಿದ್ದ ವೆಂಕಮ್ಮನವರ ಸ್ಥಿತಿ, ಯಾವ ಭಿಕಾರಿಯ ಸ್ಥಿತಿಗಿಂತಲೂ ಉತ್ತಮವಾಗಿರಲಿಲ್ಲ. ಸಾಲದುದಕ್ಕೆ ಈಗ ಅವರು ಮೂಕರಾಗಿ ಹೋಗಿದ್ದರು. ಆದರೆ ಈ ನಿಸ್ಸಹಾಯಕ ಸ್ಥಿತಿಯಲ್ಲೂ ಸಹಾಯ ಸ್ವರೂಪವಾಗಿ ಅವರ ಸುದೈವ ನೆರವಾಗಿತ್ತು. ಇವರಿದ್ದ ಚಿಕಿತ್ಸಾಲಯಕ್ಕೆ ಅದೇ ಜಾಡ್ಯದ ಪ್ರಭಾವದಿಂದ ದಾಖಲಾಗಿದ್ದ ಮೈಸೂರಿನತ್ತಕಡೆಯವರೊಬ್ಬರ ಕುಟುಂಬಿಕರ ಗಮನವನ್ನು ತನ್ನೆಡೆಗೆ ಸಂಜ್ಞೆಗಳ ಮೂಲಕವಾಗಿ ಸೆಳೆದುಕೊಂಡರು. ವೆಂಕಮ್ಮನವರ ಮೂಕ ಭಾಷೆಯನ್ನು ಸಂಪೂರ್ಣವಾಗಿ ಗ್ರಹಿಸಲಾಗದಿದ್ದರೂ, ಅವರನ್ನು ಕಂಡು ಕನಿಕರಗೊಂಡು, ತನ್ನೊಂದಿಗೆ ಮೈಸೂರಿಗೇ ಆ ಜನರು ಕರೆದೊಯ್ದರು. ಬೇರೆ ಯಾವ ಪರಿಹಾರೋಪಾಯವು ಕಂಡುಬಾರದುದರಿಂದಲೇ ಈ ದಾರಿಯನ್ನು ಹಿಡಿದಿದ್ದರು. ಯಾತ್ರೆಯ ಕೊನೆಯ ಘಟ್ಟವಾದ ಉಡುಪಿ ಕ್ಷೇತ್ರದ ದರ್ಶನವಿನ್ನೂ ಅಂಸಾರಕ್ಕೆ ಬಾಕಿ ಉಳಿದಿತ್ತು. ಆದರೆ ಅದನ್ನು ಕಾಶಿಯಿಂದ ಹಿಂದಿರುಗಿದೊಡನೆ ನೆರವೇರಿಸಲು ಅವರಿಗೆ ಅನಾನುಕೂಲವಾಗಿದ್ದುದರಿಂದ, ಮೈಸೂರಲ್ಲೇ ಎರಡು ಮೂರು ತಿಂಗಳುಗಳನ್ನು ಕಳೆದು ಮುಂದೆ ತಾವು ಹೊರಟಾಗ ವೆಂಕಮ್ಮನವರನ್ನೂ ಸಂಗಡಲೇ ಕರೆದುಕೊಂಡು ಬಂದಿದ್ದರು. ದೈವಯೋಗದಿಂದ ವೆಂಕಮ್ಮನವರ ಸಂಬಂಧಿಗಳಾಗಲೀ ಪರಿಚಿತರಾಗಲೀ ಭೆಟ್ಟಿಯಾದಲ್ಲಿ ಅವರೊಡನೆ ಕಳುಹಿಸಿ ಕೊಡಲೆಂದು. ಇದೆಂದೇ ಘಟನೆ ವೆಂಕಮ್ಮನವರ ಮೇಲಿನ ದೊಡ್ಡ ಹೊರೆಯೊಂದನ್ನು ಇಳಿಸಿದಂತಾಗಿತ್ತು. ಉಡುಪಿಯಿಂದ ತಮ್ಮ ಹಳ್ಳಿಗಿದ್ದ ಐದು ಎರಡೂವರೆ ಮೈಲಿಗಳಷ್ಟರ ದಾರಿಯನ್ನು ಅವರು ನಡೆದೇ ಕ್ರಮಿಸಿದ್ದರು.

ತಾಯಿಯ ಮೂಗಿತನವನ್ನು ಹೋಗಲಾಡಿಸಿದ ಬಳಿಕ ಆಕೆಯ ಬಾಯಿಯಿಂದಲೇ ಈ ಗೋಳಿನ ಕಥೆಯನ್ನು ಕೇಳಿದ ಗೋಪಾಲಾಚಾರ್ಯರಿಗಾದ ಸಂಕಟ ಅಷ್ಟಿಷ್ಟಲ್ಲ. ಈ ಮೊದಲು ಅವರಾಗಲೀ ಅವರ ತಮ್ಮ ಕಿಟ್ಟಣ್ಣಾಚಾರ್ಯರಾಗಲೀ ಯಾತ್ರೆಗೆಂದು ಹೋದ ತಮ್ಮ ಹಿರಿಯರನ್ನು ಮರೆತು ಕುಳಿತಿರಲಿಲ್ಲ. ಕಾಶಿಯಿಂದ ಹಿಂದಿರುಗಿದ ಆ ಯಾತ್ರಿಕ ಪರಿವಾರ ತಾವು ದಾರಿಯಲ್ಲಿ ಕೇಳಿದ, ಬದರೀನಾಥನ ಯಾತ್ರಿಕರಿಗೆ ಸಂಭವಿಸಿದ ಅಪಘಾತ ವಾರ್ತೆಯನ್ನು ಈ ಆಚಾರ್ಯ ಸಹೋದರರಿಗೆ ತಿಳಿಸಿದ್ದರು. ಸ್ವತಹ ಗೋಪಾಲಾಚಾರ್ಯರಿಗೆ ಅವರ ಶ್ರೀಧರರೂಪರಿಂದ ಬರೆಯಲ್ಪಟ್ಟ ಕಾಗದವೊಂದು ಕಾಶಿಯಿಂದ ಬಂದಿತ್ತು. ಅದರಲ್ಲಿ, ತಾವು ತಮ್ಮೂರವರಿಂದ ಬೇರ್ಪಟ್ಟು ಬದರೀನಾಥಕ್ಕೆ ಹೊರಡುವ ಸಂಕಲ್ಪವನ್ನು ತೊಟ್ಟುದಾಗಿ ಅವರು ಬರೆದಿದ್ದರು. ಮುಂದೆ ಅವರಿಂದ ಯಾವ ತರದ ವರ್ತಮಾನವೂ ಬಂದಿರಲಿಲ್ಲ. ಇದರಿಂದಾಗಿ ಗಾಬರಿಗೊಂಡು ಗೋಪಾಲಾಚಾರ್ಯರು ಬಹು ಪ್ರಯಾಸಪಟ್ಟು ಹಲವಾರು ವಿಧದಿಂದ ತಮ್ಮ ಹಿರಿಯರ ಬಗ್ಗೆ ವಿಚಾರಣೆ ನಡೆಸಿದರೂ ಕೂಡಾ ಯಾವ ವಿಧವೂ ಸುಳಿವೂ ಸಿಗದುದರಿಂದ ನಿರಾಶರಾಗಿ ಅವರಿಬ್ಬರೂ ಗತಿಸಿಯೇ ಹೋಗಿರಬೇಕೆಂದು ನಿರ್ಧರಿಸಿದ್ದರು. ಆದರೂ ಅವರ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ತಾಯಿಯ ಕರುಣ ಕಥೆಯನ್ನು ಕೇಳಿದ ಅವರು ತಮ್ಮ ಸಂಕಟವನ್ನು ತಡೆಯಲಾಗದೆ, "ನಾವೆಲ್ಲಾ ಜೀವದಿಂದಿದ್ದುಕೊಂಡೂ ನೀನಿಷ್ಟು ಅನುಭವಿಸಬೇಕಾಯಿತಲ್ಲಮ್ಮಾ" ಎಂದರು.

"ಅದಕ್ಕೇ ಎನ್ನುವುದು ನೋಡು, ಮಗು, ಪೂರ್ವ ಜನ್ಮದ ಕರ್ಮ ಎಂದು. ಎಷ್ಟೆಷ್ಟು ಅನುಭವಿಸಲಿಕ್ಕಿದೆಯೋ ಎಲ್ಲವೂ ಮುಗಿಯಬೇಕಲ್ಲ. ಅದಕ್ಕೆ ಯಾರೇನು ಮಾಡಿಯಾರು?"

ಮಾತಿನ ಕಥೆಯು ತೆರವಾಗಿ ಅವನನ್ನು ಸಮಾಧಾನಪಡಿಸುವ ಉದ್ದೇಶದಿಂದಲೇ ತಾಯಿ ಮರುತ್ತರ ಕೊಟ್ಟಿದ್ದರೂ ಹೃದಯಾಂತರಾಳದ ನೋವನ್ನು ಹತ್ತಿಕ್ಕಲಾರದೆ ನಿಟ್ಟುಸಿರು ಗರೆದರು.

ಎಂದೆಂದೂ ಮಾಸಿಹೋಗದ ದುಃಖ ಆ ತಾಯಿಯ ಹೃದಯದಲ್ಲಿದ್ದರೆ, ಆಕೆ ಪಟ್ಟಿದ್ದ ಕಷ್ಟಕ್ಕಾಗಿ, ಸಹಾನುಭೂತಿಯಿಂದ ಕೂಡಿದ ಅಡಿಕೋರಲಾಗದ ಕೊರಗು ಮಗನಲ್ಲಿಗುಂಟಾಗಿತ್ತು.

—

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲಗಳನ್ನು ಮರುಪಾವತಿ ನೋಡುವರೆ ರಿಜಿಸ್ಟರ್ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸಲು, ವ ಬಡ್ಡಿಯನ್ನು ಈ ತನಕವೂ ಬಾಕಿ ಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟರ್ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 17—5—1962ನೆ ಗುರುವಾರ ಮಧ್ಯಾಹ್ನ ಗಂಟೆ 4ಕ್ಕೆ ಸರಿಯಾಗಿಯೂ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31-3-1962ರ ವರೆಗಿನ ಬಡ್ಡಿ ಕೂಡಾ
797 / 11-11-59	ಕೆ ರಾಮರಾವು ಶೇಷಗಿರಿ ರಾವುರ ಮಗ, ಪಡುಗ್ರಾಮ ಪೋಸ್ಟು ಕಾಪು, C/o Canara Bank Ltd. Kalbadevi Branch, Bombay No 2	179 = 95
243 / 2-4-60	ಶಿವರಾಮ ಸೆಟ್ಟಿ, ದೂಜ ಸೆಟ್ರ ಮಗ, ಬ್ರಾಹ್ಮಣ ತೋಟ, ಪಡು ಗ್ರಾಮ, ಪೋಸ್ಟು ಕಾಪು.	35 = 75
86 / 1-2-60	ಮೈದಿನ್ ಸಹೇಬ, ಹಸನ್ ಸಹೇಬರ ಮಗ, ಮಲ್ಲಾರು ಗ್ರಾಮ, ಪೋಸ್ಟು ಮಲ್ಲಾರು	40 = 10
308 / 2-5-60	ಸುಂದರ ಸೆಟ್ಟಿ, ಸುಬ್ಬ ಸೆಟ್ರ ಮಗ, ಕಲ್ಲಪ್ಪ ಮನೆ, ಪಾದೂರು ಗ್ರಾಮ, ಪೋಸ್ಟು ಪಾದೂರು.	69 = 91
385 / 31-5-60	ಆಮ್ಬ್ರೋಸ್ ಬ್ಯಾರಿ, ಹಮ್ಮಬ್ಬ ಬ್ಯಾರಿಯವರ ಮಗ, ಕಲತ್ತೂರು ಪಯ್ಯಾರು, ಪೋಸ್ಟು ಪ್ರಂಬಿಲಕಾಡು.	66 = 20
399 / 2-11-60	ಕಿಟ್ಟ ಸೆಟ್ಟಿ, ವೆಂಕಪ್ಪ ಸೆಟ್ರ ಅಳಿಯ, ಕಟಪಾಡಿ ಪಡ ಮನೆ, ಪೋಸ್ಟು ಕಟಪಾಡಿ	115 = 65
198 / 9-3-61	ಎಸ್. ಸೋಮಸುಂದರ ಸಾಲಿಯಾನ್, ಎಮ್. ತಿಮ್ಮಪ್ಪರ ಮಗ, ಮೂಳೂರು ಗ್ರಾಮ, ಪೋ ಉಚ್ಚಿಲ.	276 = 65
339 / 2-5-61	ಕೆ ಶಶೀಧರ ನ್ಯಾಕ್, ರಾಮ ನ್ಯಾಕರ ಮಗ, ಉಳಿಯಾರಗೋಳಿ ಗ್ರಾಮ, ಪೋಸ್ಟು ಉಳಿಯಾರಗೋಳಿ.	176 = 50

Office of the Bank.
KAUP,
30—4—62

B. Bhaskara Shetty,
Agent.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

NAVAYUGA, UDIPI.
REGD. NO.BG. 176

10-5-1962

LICENSE NO. 31
Licensed to Post without Prepayment

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ

(೧ನೇ ಪುಟದಿಂದ)

ಸಂಧಿಗಳು ಬೇಡ; ಅವುಗಳ ಸ್ಥಾನಗಳಿಗೆ ಸೌಜನ್ಯವು ತುಂಬಿಬರಬೇಕು' ಎಂದು ನುಡಿಯುತ್ತಾರೆ.

ರಶ್ಯದಲ್ಲಿ ಭಾರತೀಯ ರಾಯಭಾರಿಯಾಗಿ ರಾಜಕೀಯಕ್ಕೆ ಇವರು ಇಳಿದರು. ಆಗ ಸ್ಟೇಲಿನ್ ಮಹಾಶಯರಾದರೂ ಇವರನ್ನು ಭೇಟಿಯಾಗಲು ಸಮ್ಮತಿಸಿದ್ದರು. ಅಲ್ಲಿ ಅವರು ಸಾಮ್ಯವಾದವನ್ನು ಮಾನವೀಯ ದೃಷ್ಟಿಯಿಂದ ನೋಡತೊಡಗಿದರು. 'ಸಾಮ್ಯವಾದದ ಕಡೆಗಿರುವ ತಮ್ಮ ದೃಷ್ಟಿಕೋಣವನ್ನು ಬದಲಿಸಿ, ವೈಯಕ್ತಿಕ ಸ್ವಾತಂತ್ರ್ಯದ ಆದರ್ಶಗಳನ್ನು ಅವರಲ್ಲಿ ತುಂಬ ಬೇಕು ಎಂದು ಸ್ಟಾಲಿನ್ನರಿಗೂ ತಿಳಿಸಿದ್ದರು.

ಮಕ್ಕಳೊಡನೆ ಆಡುವುದು ಮತ್ತು ತಿರುಗಾಡುವುದೆಂದರೆ ಇವರಿಗೆ ಅತ್ಯಂತಪ್ರಿಯ; ಗಂಭೀರ ಪ್ರಕೃತಿಯವರಾದ ರಾಧಾಕೃಷ್ಣನ್ ನಾಟಕ ಮತ್ತು ಕಾದಂಬರಿಗಳಲ್ಲಿ ತುಂಬ ಆಸಕ್ತಿ ತೋರಿಸುತ್ತಾರೆ. ಗಾಲ್ಸ್‌ವರ್ದಿ ಥಾಮಸ್ ಹಾರ್ಡಿ ಮತ್ತು ಬರ್ನಾರ್ಡ್ ಶಹ ಇವರ ನೆಚ್ಚಿನ ಲೇಖಕರು. ತಾನು ಕೂಡ ಇಂಗ್ಲಿಷಿನಲ್ಲಿ ಹಲವಾರು ಕಥೆಗಳನ್ನು ಬರೆದಿದ್ದಾರೆ; ಆದರೆ, ಅವರೆನ್ನುವಂತೆ 'ನನ್ನ ಸೌಭಾಗ್ಯದಿಂದ ಅವುಗಳಲ್ಲಿ ಒಂದಾದರೂ ಪ್ರಕಾಶಿತವಾಗಲಿಲ್ಲ."

ಮುಂಜಾನೆ ೬ ತಾಸಿನಿಂದ ೭ ಗಂಟೆಯ ವರೆಗೆ ಪ್ರಾರ್ಥನೆ ಮತ್ತು ಏಕಾಂತ ಚಿಂತನೆಯು ಅವರ ದಿನಚರ್ಯೆಯ ಅನಿವಾರ್ಯ ಅಂಗವೆನಿಸಿದೆ. ಅವರ ಲೇಖನ ಕಾರ್ಯವೆಲ್ಲವೂ ಬೆಳಗ್ಗಿನ ಸಮಯದಲ್ಲೇ ನಡೆಯುತ್ತದೆ. ಗಂಭೀರ ವಿಷಯಗಳ ಮೇಲೆ ತಾವೇ ಸ್ವಯಂ ಬರೆಯುತ್ತಾರೆ; ಉಳಿದ ವಿಷಯಗಳ ಡಿಕ್ಟೇಷನ್ ಕೊಡುತ್ತಾರೆ. "ನನ್ನನ್ನು ಕಾರ್ಯನಿರತ ಮಾಡಬೇಕಾದರೆ, ಆಶೆಯೊಂದಿರುವ ಅವಶ್ಯಕತೆಯಿಲ್ಲ; ಅಧ್ಯವಸಾಯಕ್ಕೆ ಸಫಲವಾಗಬೇಕೆಂದಿಲ್ಲ" ಸ್ಟೀಬ್ ಥೋಲ್ಡರನ ಈ ವಾಕ್ಯವನ್ನು ರಾಧಾಕೃಷ್ಣನ್ ಹೇಳಿ ತನ್ನ ಜೀವನದ ಸಾರವನ್ನು ಹೊರಗೆಡಹಿದ್ದಾರೆ.

ಸದ್ಯ ನಿವೃತ್ತರಾಗುವ ರಾಜೇಂದ್ರಪ್ರಸಾದರ ಅನಂತರ ಉಪರಾಷ್ಟ್ರಪತಿಗಳಾದ ರಾಧಾಕೃಷ್ಣನ್ ಅವರ ಹುದ್ದೆಯನ್ನಡರುತ್ತಾರೆ. ಲಂಡನ್ ಟಾಯಮ್ಸಿನ ಹೇಳಿಕೆಯಂತೆ ಈ ಹುದ್ದೆಗೆ ಇವರಿಗಿಂತ ಅರ್ಹವ್ಯಕ್ತಿ ಭಾರತದಲ್ಲಿ ಇನ್ನೊಬ್ಬನಿಲ್ಲ. ಕಾಂಗ್ರೆಸ್ ಹಾಗೂ ಹೆಚ್ಚಿನ ಉಳಿದ ಪಕ್ಷಗಳ ಬೆಂಬಲವು ಇವರಿಗೆ ದೊರೆಯುವ ನಿರೀಕ್ಷೆಯಿರುವುದರಿಂದ ಇವರ ಆಯ್ಕೆ ಖಂಡಿತವಾಗುವುದು. ರಾಜೇಂದ್ರ ಪ್ರಸಾದರು ಭಾರತದ ವರಿಷ್ಠರಾಗಿ ಹಾಕಿದ ದಾರಿಯನ್ನೇ ಇವರೂ ತುಳಿಯುವರೆಂದು ನಂಬಬಹುದು

೦೦ ೦೦

— ಹೊಸತಾಗಿ ಉಪರಾಷ್ಟ್ರಪತಿಗಳ ಸ್ಥಾನವನ್ನು ಅಡರಲಿರುವವರು ಡಾ| ಜಾಕೀರ ಹುಸೇನರೆಂಬುದೀಗ ಸುನಿಶ್ಚಯವಾಗಿದೆ. ಇವರಾದರೂ ರಾಧಾಕೃಷ್ಣನ್ನರಂತೆಯೇ ಜೀವನವನ್ನು ಸರಳವಾಗಿರಿಸುವುದು ಮತ್ತು ಉಚ್ಚ ವಿಷಯಗಳನ್ನು ವಿಚಾರಿಸುವುದು--ಇವುಗಳಿಗೇನೇ ಮೀಸಲಿಟ್ಟವರು. ಪ್ರಖ್ಯಾತ ಶಿಕ್ಷಣಜ್ಞರೆಂದೂ ವಕ್ತೃಗಳೆಂದೂ ಇವರು ಹೆಸರು ಗಳಿಸಿದ್ದಾರೆ. ಭಾಷಣ ಕಲೆಯಲ್ಲಿ ಇವರನ್ನು ಎದುರಿಸಬಲ್ಲವರು ಭಾರತದಲ್ಲಿಯೇ ಅಪರೂಪವೆನ್ನಬಹುದು. ಇವರು ಮಾಡಿದ ಅನೇಕ ಭಾಷಣಗಳು ಆಧುನಿಕ ಭಾರತೀಯ ಸಾಹಿತ್ಯಕ್ಕೆ ಬೆಲೆಬಾಳುವ ಕೊಡುಗೆಯೆನಿಸಿವೆ.

ಭಾರತೀಯ ಸೇನೆಗೆ ಸೈನಿಕರನ್ನು ಒದಗಿಸಿ ಕೊಟ್ಟ ಉತ್ತರ ಪ್ರದೇಶದ ಒಂದು ಹಳ್ಳಿಯಲ್ಲಿ ಜಾಕೀರ ಹುಸೇನರು ಜನಿಸಿದರು. ಇದೇ ಗ್ರಾಮದಲ್ಲಿ ಪ್ರಾರಂಭಿಕ ಶಿಕ್ಷಣವನ್ನು ಗಳಿಸಿ, ಅನಂತರ ಅಲೀಘಡ ವಿಶ್ವವಿದ್ಯಾಲಯದಲ್ಲಿ ಉಚ್ಚ ವಿದ್ಯಾಭ್ಯಾಸವನ್ನು ಅರ್ಜಿಸಿದರು. ಆಗ ಇವರು ಒಂದೇ ಒಂದು ಪುಸ್ತಕವನ್ನುಕೊಂಡುಕೊಳ್ಳಲಿಲ್ಲ. ಓದುವ ಅಗತ್ಯವೂ ಇವರಿಗೆ ಬೀಳಲಿಲ್ಲ. ತರಗತಿಯ ಅಗ್ರಣಿಗಳಾದ ವಿದ್ಯಾರ್ಥಿಗಳೊಂದಿಗಿರುತ್ತಿದ್ದ ಹುಸೇನರನ್ನು ವಿದ್ಯಾರ್ಥಿಗಳು ವಿಶ್ವಕೋಷದಂತೆ ಉಪಯೋಗಿಸಿಕೊಳ್ಳುತ್ತಿದ್ದರು.

ಗಾಂಧೀಜಿಯವರ ವಿಚಾರಗಳ ಪ್ರಭಾವವು ಜಾಕೀರ ಹುಸೇನರ ಮೇಲೆ ವಿಶ್ವವಿದ್ಯಾಲಯ ಶಿಕ್ಷಣಗಳಿಸುವಾಗ ಆಯಿತು. ಬರ್ಲಿನ್‌ನಲ್ಲಿ ಪಿ.ಎಚ್.ಡಿ.ಗಾಗಿ ಸಂಶೋಧನೆ ನಡೆಸುವಾಗ ಇವರು ಅಲ್ಲಿನ ಭಾರತೀಯ ವಿದ್ಯಾರ್ಥಿ ಸಂಘದ ನೇತಾರರಾಗಿದ್ದರು. ಭಾರತಕ್ಕೆ ಮರಳಿದ ನಂತರ ಮೊದಲಿಗೆ ಕೆಲಕಾಲ ಅಲೀಘಡ ವಿಶ್ವವಿದ್ಯಾಲಯದಲ್ಲಿ ಲೆಕ್ಚರರ್ ಆಗಿ ಸೇರಿಕೊಂಡರು. ಅನಂತರ ದೆಹಲಿಯ ಹಕೀಮ ಅಜಮುಲಖಾನರ ಆಗ್ರಹದ ಮೇಲೆ ಒಂದು ಹೊಸ ಮಾದರಿಯ ಶಿಕ್ಷಣ ಸಂಸ್ಥೆ ಜಾಮಿಯಾಮಿಲಿಯಾ ಇಸ್ಲಾಮಿಯಾದ ಪ್ರಿನ್ಸಿಪಲ್ ಆದರು. ಇದರಲ್ಲಿ ಅನೇಕ ವರ್ಷ ಸಂಬಂಧವಿರಿಸಿಕೊಂಡಿದ್ದರಿಂದ ಜಾಮಿಯಾ ಮಿಲಿಯಾ ಎಂದೊಡನೇ ಜಾಕೀರ ಹುಸೇನರ ಹೆಸರು ತನಗೆ ತಾನಾಗಿಯೇ ಪ್ರತಿಧ್ವನಿಸುತ್ತದೆ. ಜಾಮಿಯಾ ಮಿಲಿಯಾ ಇಸ್ಲಾಮಿಯಾ ಎಂಬುದು ಮೂಲ ಶಿಕ್ಷಣದ ಆದರ್ಶ ಶಾಲೆ.

ಮೂಲ ಶಿಕ್ಷಣದಲ್ಲಿ ಇವರ ವಿಚಾರಗಳನ್ನು ಆದರಿಸಿ ಮಹಾತ್ಮಾ ಗಾಂಧೀಜಿಯವರು ತಾನು ಮೂಲ ಶಿಕ್ಷಣದ ರೂಪರೇಖೆಗಳನ್ನು ರೂಪಿಸುವಾಗ ಜಾಕೀರ ಹುಸೇನರ ಸಹಕಾರವನ್ನು ಪಡೆದರು. ಕ್ರಮೇಣ ಈ ವಾರ್ಧಾ ಯೋಜನೆಯೇ ಭಾರತೀಯ ಮೂಲ ಶಿಕ್ಷಣ ಯೋಜನೆಯಾಗಿ ಪರಿಣಮಿಸಿತು. ಮಕ್ಕಳ ಪ್ರಾರಂಭಿಕ ಶಿಕ್ಷಣದ ಬಗ್ಗೆ ತಮ್ಮ ವಿಚಾರಗಳನ್ನು ಸಂಕ್ಷೇಪವಾಗಿ ಹೀಗೆ ಅವರು ವಿವರಿಸುತ್ತಾರೆ:

"ಬರಿದಾದ ಮೆದುಳನ್ನು ಒಕ್ಕಿ ಒಕ್ಕಿ ಪುಸ್ತಕ ವಿದ್ಯೆಯನ್ನು ತುಂಬಿಸುವುದೇ ಶಿಕ್ಷಣದ ಕಾರ್ಯವಲ್ಲ; ಅಥವಾ ಒಂದು ವ್ಯವಸಾಯವನ್ನು ಕಲಿಸಿಕೊಡುವುದಾಗಲೀ ಒಂದು ವಿಧದ ಪ್ರಶಾಸನದ ಬಗ್ಗೆ ತಿಳುವಳಿಕೆ ನೀಡುವುದಾಗಲೀ ಶಿಕ್ಷಣದ ಉದ್ದೇಶವಲ್ಲ. ಇಂದಿನ ಮಗು ಮುಂದಿನ ನಾಗರಿಕ; ಆತನ ವ್ಯಕ್ತಿತ್ವ ಮತ್ತು ಮೆದುಳುಗಳ ಸಮುಚಿತ ವಿಕಾಸದಲ್ಲಿಯೇ ಲೋಕತಂತ್ರದ ಯಶಸ್ಸು ಇದೆ ಎಂಬ ಮೂಲ ಸಿದ್ಧಾಂತದ ಆಧಾರದ ಮೇಲೆ ಶಿಕ್ಷಣ ರೂಪಿಸಲ್ಪಡಬೇಕು. ಪ್ರತ್ಯೇಕ ಮಗುವಿಗೂ ತಂತನ್ನ ಅಭಿರುಚಿ ಮತ್ತು ಪ್ರತಿಭೆಯನ್ನು ಗೊತ್ತುಹಚ್ಚಿ ಅವುಗಳ ಸಹಾಯದಿಂದ ತನ್ನ ವಿಕಾಸ ಸಾಧಿಸಿಕೊಳ್ಳುವ ಅವಕಾಶವೊದಗಿದಾಗಲೇ ಈ ಸಿದ್ಧಾಂತವು ಫಲಕಾರಿಯಾಗುವುದು."

ರಾಜಕೀಯ ರಂಗದಲ್ಲಿ ಜಾಕೀರ ಹುಸೇನರನ್ನು ತೆಗಳುವವರಿರಬಹುದಾದರೂ ಶಿಕ್ಷಣರಂಗದಲ್ಲಿ ಅವರೂ ಹೊಗಳುತ್ತಾರೆ. ಸಿಮ್ಲಾದಲ್ಲಿ ಭಾರತದ ಮಧ್ಯಾವಧಿ ಸರಕಾರ ರಚನೆಯ ಮಾತುಕತೆ ನಡೆಯುತ್ತಿರುವಾಗ, ಕಾಂಗ್ರೆಸ್ಸು ಹುಸೇನರನ್ನು ಶಿಕ್ಷಣಮಂತ್ರಿ ಸ್ಥಾನಕ್ಕೆ ಸೂಚಿಸಿತು. ಜಿನ್ನಾರವರು ಯಾವ ಸಂಕೋಚವೂ ಇಲ್ಲದೆ ಇದನ್ನು ಒಪ್ಪಿಬಿಟ್ಟರು. ಆದರೆ, ಸ್ವಯಂ ಡಾ| ಜಾಕಿರ ಹುಸೇನರೇ ಇದಕ್ಕೆ ಸಮ್ಮತಿಸಲಿಲ್ಲ. ೧೯೪೬ರಲ್ಲಿ ಜಾಮಿಯಾ ಮಿಲಿಯಾದ ರಜತೋತ್ಸವ ನಡೆದಾಗ, ಸಮಾಗಮಿಸಿದ ದೇಶೀಯರೂ ವಿದೇಶೀಯರೂ ಶಿಕ್ಷಣ ಕ್ಷೇತ್ರದಲ್ಲಿ ಅವರ ಅನುಭವವನ್ನು ಮೆಚ್ಚಿಕೊಂಡರು.

ಅಲೀಘಡ ವಿಶ್ವವಿದ್ಯಾಲಯದ ಉಪಕುಲಪತಿಯಾಗುವಾಗ ಮಾಡಿದ ಭಾಷಣವು ಇವರ ರಾಷ್ಟ್ರೀಯ ಭಾವನೆಯನ್ನು ಎತ್ತಿ ತೋರಿಸುತ್ತದೆ, "ಈ ವಿಶ್ವವಿದ್ಯಾಲಯವು ಭಾರತೀಯ ರಾಷ್ಟ್ರೀಯತೆಯ ಮುಖ್ಯ ಕೇಂದ್ರವಾಗುವುದೆಂದು ನನಗೆ ವಿಶ್ವಾಸವಿದೆ. ಈ ವಿಶ್ವಾಸ ನನಗಿಲ್ಲವಾಗಿದ್ದರೆ, ಜಾಮಿಯಾ ಮಿಲಿಯಾವನ್ನು ಬಿಟ್ಟು ಇಲ್ಲಿಗೆ ಬರುತ್ತಿರಲಿಲ್ಲ. ಇಲ್ಲಿ ಪಾಠ್ಯ ಪುಸ್ತಕಗಳ ಅಧ್ಯಯನ ಮಾಡಿದರೆ ಮಾತ್ರ ಸಾಲದು; ಭಾರತೀಯ ರಾಷ್ಟ್ರೀಯತೆಯ ಆಳವಾದ ಅಭ್ಯಾಸವೂ ಆಗಬೇಕು ಎಂದು ಉದ್ಗರಿಸಿದ್ದರು ಅವರು.

೧೯೫೭ರಲ್ಲಿ ಜಾಕೀರ ಹುಸೇನರು ಬಿಹಾರದ ರಾಜ್ಯಪಾಲರೆಂದು ನೇಮಕಗೊಂಡರು. ಉತ್ತಮ ಚಿತ್ರಕಾರರೂ ಆಟಗಾರರೂ ಆದ ಇವರು ಭಾರತದ ಉಪರಾಷ್ಟ್ರಪತಿಗಳಾಗುವರು.

ರಾಷ್ಟ್ರಪತಿಗಳಾಗಿ ಡಾ. ರಾಧಾಕೃಷ್ಣನ್, ಉಪರಾಷ್ಟ್ರಪತಿಯಾಗಿ ಡಾ. ಜಾಕೀರ ಹುಸೇನರು ಆಯ್ಕೆಗೊಂಡರೆಂದರೆ, ನಿವೃತ್ತ ಅಧ್ಯಾಪಕರ ಮಾರ್ಗದರ್ಶನಕ್ಕೆ ಭಾರತ ಬಂದಂತಾಗುವುದು.

ಸಂ. ರಾ. ಸಂಘದಲ್ಲಿ ಕಾಶ್ಮೀರ ಸಂಬಂಧದ ಚರ್ಚೆಯಲ್ಲಿ ಭಾಗವಹಿಸಿದ ಭಾರತದ ಪ್ರತಿನಿಧಿ ಶ್ರೀ ಕೃಷ್ಣ ಮೆನನ್ನರನ್ನು ಭಾಷಣದ ನಂತರ ಅಭಿನಂದಿಸಿದ ಅಮೇರಿಕದ ಪ್ರತಿನಿಧಿ ಎಡ್ಲಾಯ್ ಸ್ಟೀವನ್‌ಸನ್

ಭದ್ರತೆಯೊಂದಿಗೆ
ಹೆಚ್ಚು ಬಡ್ಡಿಯನ್ನು
ಸಹಾ ಪಡೆಯಿರಿ.

ಸೇವಿಂಗ್ಸ್ ಬ್ಯಾಂಕ್: (ಬಡ್ಡಿಯನ್ನು 6 ತಿಂಗಳಿಗೊಮ್ಮೆ ಜಮೆ ಮಾಡಲಾಗುವುದು.)	3%
ಕಾಯಂ ಠೇವಣಾತಿ: (ಐದು ವರುಷಗಳ ಅವಧಿಗೆ)	$5\frac{1}{4}\%$

ಹೆಚ್ಚಿನ ವಿವರಗಳಿಗೆ:

ನಮ್ಮ 159 ಶಾಖೆಗಳಲ್ಲೊಂದರೊಡನೆ ವ್ಯವಹರಿಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಹೊಸತಾಗಿ ತೆರೆದ ಎರಡು ಶಾಖೆಗಳು:

ಕದ್ರಿ, ಮುಂಡ್ಕೂರು.

ಸಿಂಡಿಕೇಟ್ ಬ್ಯಾಂಕ್

Edited Printed & Published by K. H. Shetty, at the Navayuga Press, Udipi, S. India

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ಬಂದು ವಿಚಾರಿಸಿ: ನವಯುಗ ಪ್ರೆಸ್, ಉಡುಪಿ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ (ಆಂಗ್ಲ ಸ್ವಯಂಬೋಧಿನಿ) ನವಭಾರತ ಪುಸ್ತಕ ಭಂಡಾರ ಉಡುಪಿ

ಸಂಪುಟ ೪೧ ಸಂಚಿಕೆ ೩೬ | ಉಡುಪಿ 17—5—1962 ಗುರುವಾರ | Vol. 41 No. 36

ಡಾ। ರಾಧಾಕೃಷ್ಣನ್

ಪಾಠಶಾಲೆಯಿಂದ ರಾಷ್ಟ್ರಪತಿಭವನಕ್ಕೆ

ಡಾ। ಸರ್ವಪಲ್ಲಿ ರಾಧಾಕೃಷ್ಣನ್ನರು ಪ್ರಚಂಡ ಬಹುಮತದಿಂದ ಭಾರತೀಯ ಗಣತಂತ್ರದ ಅಧ್ಯಕ್ಷರಾಗಿ ಆಯ್ಕೆಗೊಂಡು ಇದೇ ತಾ. ೧೩ರಂದು ಅವರು ಪ್ರಧಾನ ನ್ಯಾಯಾಧೀಶರ ಸಮ್ಮುಖದಲ್ಲಿ ಪ್ರತಿಜ್ಞಾವಿಧಿಯನ್ನು ಪೂರೈಸಿ ಡಾ। ರಾಜೇಂದ್ರ ಪ್ರಸಾದರಿಂದ ಅಧಿಕಾರವನ್ನು ಸ್ವೀಕರಿಸಿದರು. "ಡಾ। ರಾಧಾಕೃಷ್ಣನ್ನರು ತಮ್ಮ ಜೀವನವನ್ನು ಸರಸ್ವತೀ ದೇವಿಯ ಆರಾಧನೆಯಲ್ಲಿ ಕಳೆದಿದ್ದಾರೆ. ಭಾರತೀಯ ವಿಚಾರಧಾರೆ, ಚಿಂತನೆ ಮತ್ತು ಆಚಾರ ವ್ಯವಹಾರಗಳಲ್ಲಿ ಈ ಶತಮಾನದ ಸರ್ವಾಧಿಕ ಸಫಲ ವ್ಯಾಖ್ಯಾನಕಾರರು ಇವರು. ದೇಶವು ಸಂಕ್ರಮಣ ಕಾಲದಲ್ಲಿ ಮುನ್ನಡೆಯುತ್ತಿರುವಾಗ, ವ್ಯಾಪಕ ವಿಕಾಸ ಕಾರ್ಯಗಳಲ್ಲಿ ವ್ಯಸ್ತವಾಗಿರುವಾಗ ಇವರ ನೇತೃತ್ವವು ಭಾರತಕ್ಕೆ ದೊರೆತುದು ಮಹಾ ಭಾಗ್ಯ. ಇವರ ಬುದ್ಧಿ ಬಲ, ಪರಿಪಕ್ವ ಮತ್ತು ನಿರ್ಭೀತ ವಿಚಾರ, ರಾಜನೀತಿಜ್ಞತೆ ಮತ್ತು ದೇಶದ ತುಲನಾತ್ಮಕ ಉನ್ನತಿ ಹಾಗೂ ಐಕ್ಯಸಾಧನೆಗಳಿಗಾಗಿ, ಇವರ ಉತ್ಕಟ ತತ್ಪರತೆಯಿಂದ ದೇಶಕ್ಕೆ ಪ್ರೇರಣೆ ಲಭಿಸುವುದು ಸಾಧ್ಯ. ಇಂತಹರನ್ನು ರಾಷ್ಟ್ರಪತಿಗಳ ಗೌರವಪ್ರದ ಸ್ಥಾನಕ್ಕೆ ಆರಿಸಿಕೊಂಡುದು ಯೋಗ್ಯವಾಗಿದೆ. ನಿವೃತ್ತರಾದ ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರು ಡಾ। ರಾಧಾಕೃಷ್ಣನ್ನರ ಕುರಿತಾಡಿದ ಈ ಪ್ರಶಂಸಾತ್ಮಕ ವಾಕ್ಯಗಳು ಅಕ್ಷರಶಃ ನಿಜ.

ಭಾರತದ ದ್ವಿತೀಯ ರಾಷ್ಟ್ರಪತಿಯವರು ವಕೀಲರಲ್ಲ; ಅಧ್ಯಾಪಕರು. ಮದ್ರಾಸ್ ಪ್ರೊವಿನ್ಶಿಯಲ್ ಎಜುಕೇಶನ್ ಸರ್ವಿಸ್‌ನ ಮಾಸಿಕ ರೂ. ೧೦೦ರ ವೇತನದಿಂದ ಜೀವನಾರಂಭ ಮಾಡಿ, ಇಂದು ರಾಷ್ಟ್ರಪತಿ ಭವನಕ್ಕೆ ಬಂದಿದ್ದಾರೆ. ಇದು ಅವರ ಮಹತ್‌ಶಕ್ತಿ, ಪ್ರತಿಭೆ, ಮತ್ತು ಮಹಾನ್ ಸಾಧನೆಯ ದ್ಯೋತಕವಾಗಿದೆ. ಭಾರತದ ಪ್ರಥಮ ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರೂ ಅಧ್ಯಾಪಕರಾಗಿದ್ದರು; ಆದರೆ, ಕೆಲವೇ ಕಾಲದ ವರೆಗೆ. ನೂತನ ರಾಷ್ಟ್ರಪತಿಯವರ ಇಡಿಯ ಜೀವನವೇ ವಿದ್ಯಾದಾನಕ್ಕಾಗಿ ಮೀಸಲಾಗಿದೆ.

ಡಾ। ರಾಧಾಕೃಷ್ಣನ್ ಅಪೂರ್ವ ವಾಗ್ಮಿಗಳು; ಆಂಗ್ಲ ಭಾಷೆಯ ಮೇಲೆ ಅಧಿಕಾರವಿರಿಸಿಕೊಂಡವರು. ಪ್ರಾರಂಭದಿಂದಲೂ ಇವರ ಶಿಕ್ಷಣ ನಡೆದುದು ಮಿಶನರಿ ಶಾಲೆ ಮತ್ತು ಕಾಲೇಜುಗಳಲ್ಲಿ. ಇದರಿಂದ ಅವರು ಬೈಬಲನ್ನು ಓದಿದರು; ಅದರ ಪೂರ್ಣ ಜ್ಞಾನವನ್ನು ಗಳಿಸಿದರು; ಇಂಗ್ಲಿಷ್ ಭಾಷೆಯ ಮೇಲೂ ಪ್ರಭುತ್ವ ಜಮಾಯಿಸಿದರು. ಕ್ರೈಸ್ತ ಮಿಶನರಿಗಳು ಹಿಂದೂ ಧರ್ಮವನ್ನು, ಕರ್ಮಫಲವನ್ನು ಪುನರ್ಜನ್ಮವನ್ನು, ವೇದಾಂತವನ್ನು, ಅದ್ವೈತ ಮೊದಲಾದ ತತ್ವಗಳನ್ನು ಹೇಗೆ ತಿಳಿದುಕೊಂಡಿದ್ದರು, ಹಿಂದುಗಳ ವಿಶ್ವಾಸವನ್ನು ಹೇಗೆ ಗೇಲಿಮಾಡುತಿದ್ದರು ಎಂಬುದನ್ನವರು ಅರಿತುಕೊಂಡರು. ಆಗ ಅವರ ಹಿಂದುತ್ವದ ಭಾವನೆಯು ಪೋಷಿಸಿಕೊಳ್ಳುತಿತ್ತು; ಇದರಿಂದಾಗಿಯೇ ಅವರು ಹಿಂದೂ ದರ್ಶನವನ್ನು ಅಧ್ಯಯನ ಮಾಡುವುದಕ್ಕೆ ತೊಡಗಿದರು.

ಡಾ। ರಾಧಾಕೃಷ್ಣನ್ನರು ತಮ್ಮ ಎಳವೆ ಮತ್ತು ತಾರುಣ್ಯಗಳಲ್ಲಿ ಸ್ವಾಮಿ ವಿವೇಕಾನಂದರ ಅಪೂರ್ವ ವಾಗ್ಮಿತೆಯಿಂದ ಪ್ರಭಾವಿತರಾದರು; ಹಿಂದುತ್ವದ ಬಗ್ಗೆ ಅಭಿಮಾನ ಪಟ್ಟುಕೊಂಡರು. ಮಿಶನರಿಗಳ ಕುಚೇಷ್ಟೆಗಳಿಂದ ತಮ್ಮ ಈ ಅಭಿಮಾನಕ್ಕೆ ಮೇಲಿಂದ ಮೇಲೆ ಏಟು ಬಿದ್ದುದರಿಂದಲೇ 'ಇಂಡಿಯನ್ ಫಿಲಾಸಫಿ' ಎಂಬ ಗ್ರಂಥ ರಚನೆ ಮಾಡಿದರು. ಇದರಿಂದ ರಾಧಾಕೃಷ್ಣನ್ನರಿಗೆ ಜಾಗತಿಕ ದರ್ಶನ ಶಾಸ್ತ್ರಜ್ಞರ ಪಂಕ್ತಿಯಲ್ಲಿ ಸ್ಥಾನ ದೊರೆತುದು ಮಾತ್ರವಲ್ಲ; ಭಾರತೀಯ ದರ್ಶನ ಮತ್ತು ತತ್ವಜ್ಞಾನಗಳು ವಿಶ್ವದರ್ಶನಗಳಲ್ಲಿ ಸೇರಿಕೊಂಡುವು. ಈ ಒಂದು ಕಾರಣದಿಂದಲೇ ಇವರು ಪ್ರಾತಃಸ್ಮರಣೀಯರಿರುವರು.

"ಬ್ರಿಟಿಷ್ ಎನ್‌ಸೈಕ್ಲೋ ಪೀಡಿಯಾ"ದ ೧೪ನೆಯ ಸಂಸ್ಕರಣದಲ್ಲಿ ಭಾರತೀಯ ದರ್ಶನಕ್ಕೂ ಅವಕಾಶ ಲಭಿಸಿತು. ಈ ಸಂಬಂಧದ ಅಧ್ಯಾಯವನ್ನು ಬರೆದು ಕೊಡುವ ಗೌರವ ರಾಧಾಕೃಷ್ಣನ್ನರಿಗೆ ದೊರೆಯಿತು. ೧೮೮೮ರಲ್ಲಿ ತಿರುತ್ತಣಿಯ ಸಾಮಾನ್ಯ ಬ್ರಾಹ್ಮಣ ಬಾಲಕನಾಗಿ ಹುಟ್ಟಿದ ಇವರು ವಿಶ್ವವಿಖ್ಯಾತರಾಗಿ ಅಮರರಾಗಿ ಕೀರ್ತಿಭಾಜನರಾಗುವರೆಂದು ಯಾರು ತಿಳಿದಿದ್ದರು? ಈಶ್ವರಭಕ್ತರಾದ ಇವರು ದೇವಾಲಯ, ತೀರ್ಥಕ್ಷೇತ್ರಗಳೆಂದರೆ, ಜೀವ ಬಿಡುತಿದ್ದರು. ದಕ್ಷಿಣ ಕಾಶಿಯೆಂದು ಹೆಸರಾದ ತಿರುತ್ತಣಿ ಮತ್ತು ತಿರುಪತಿಗಳ ಧಾರ್ಮಿಕ ತೀರ್ಥಕ್ಷೇತ್ರಗಳಲ್ಲಿಯೇ ಇವರು ಎಳೆಯಲ್ಲಿ ಬೆಳೆದು ಬಂದರು. ಅವರು ದೂರದೂರದಿಂದ ಬರುತ್ತಿದ್ದ ಶ್ರದ್ಧಾಳು ಭಕ್ತರನ್ನೂ, ಅವರು ಮಾಡುತಿದ್ದ ಪೂಜೆಯನ್ನೂ ಆಸಕ್ತಿಯಿಂದ ನೋಡುತಿದ್ದರು. ಧರ್ಮ-ಈಶ್ವರ ಮೊದಲಾದುವುಗಳಲ್ಲಿ ಆಗಲೇ ಅವರ ಆಸಕ್ತಿ ಕೆರಳುತಿತ್ತು.

ವಿಶ್ವದರ್ಶನಗಳಲ್ಲಿ ಭಾರತೀಯ ದರ್ಶನಕ್ಕೂ ಸ್ಥಾನವನ್ನು ಕಲ್ಪಿಸಿಕೊಟ್ಟುದಲ್ಲದೆ ನೀರಸವಾಗಿದ್ದ ದರ್ಶನ ಶಾಸ್ತ್ರವನ್ನು ಸರಸವನ್ನಾಗಿಯೂ ಮಾಡಿದ ಶ್ರೇಯಸ್ಸು ಇವರದು. ದರ್ಶನ ಶಾಸ್ತ್ರವನ್ನು ಇವರು ವಿಜ್ಞಾನವಾಗಿ ರೂಪಾಂತರಿಸಿದರು. ವೈಜ್ಞಾನಿಕನಂತೆ ಅದನ್ನು ಅಧ್ಯಯನ ಮಾಡಿದರು; ಅವರು ಭಾಷಣ ಮಾಡುತ್ತಿರುವಾಗ ದರ್ಶನ ಪ್ರಭಾವದ ಛಾಯೆಯು ಅವಶ್ಯ ಪ್ರಕಟವಾಗುತ್ತದೆ. ಅವರು ಬಳಸುತಿದ್ದ ಪ್ರತಿ ಶಬ್ದ ಆಯ್ಕೆಗೊಂಡುದು, ಶುದ್ಧ ಮತ್ತು ಸುಂದರವಾದುದು. ಒಂದೆಡೆ ಇವರು ಕೇಳುತ್ತಾರೆ: "ಪಾಶ್ಚಾತ್ಯ ವಿಜ್ಞಾನವು ಆಕಾಶದಲ್ಲಿ ನಾವು ಹಕ್ಕಿಯಂತೆ ಹೇಗೆ ಹಾರಬೇಕು; ನೀರಿನಲ್ಲಿ ಮೀನಿನಂತೆ ಹೇಗೆ ಈಜಬೇಕು ಎಂಬುದನ್ನು ಕಲಿಸಿದೆ, ಆದರೆ ಈ ಭೂಮಿಯಲ್ಲಿ ಹೇಗೆ ಇರಬೇಕೆಂಬುದನ್ನು ಕಲಿಸಲಿಲ್ಲ!" ಭಾರತದ ಈ ಮಹಾ ದಾರ್ಶನಿಕರು ಹೂವಿನಂತೆ ಮೃದುವೂ ವಜ್ರದಂತೆ ಕಠೋರವೂ ಆದ ಶಬ್ದಗಳಿಂದ ಪಾಶ್ಚಾತ್ಯ ಸಂಸ್ಕೃತಿಯು ಟೊಳ್ಳು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಯುರೋಪ್, ಅಮೆರಿಕೆ ಮತ್ತು ಜಪಾನಗಳಲ್ಲಿ ಸಂಚರಿಸಿದಾಗ ಭಾರತೀಯ ವಿಚಾರ ಧಾರೆಗಳ ಕುರಿತು ಅಲ್ಲಿನವರಲ್ಲಿ ವಿಶ್ವಾಸ ಹುಟ್ಟಿಸಿದ್ದಾರೆ. ಕಳೆದ ೧೦ ವರ್ಷಗಳಿಂದ ನಮ್ಮ ಉಪರಾಷ್ಟ್ರಪತಿಗಳಾಗಿ ಇವರು ಮಾಡಿದ ಮಹಾಕಾರ್ಯವೆಂದರೆ, ಇದು;

ದರ್ಶನ ಮತ್ತು ಧರ್ಮಗಳ ಅಂತಿಮ ಸತ್ಯವನ್ನು ಕಲ್ಯಾಣಮಯಿ, ಆಹ್ಲಾದಮಯಿ ಮತ್ತು ಉಲ್ಲಾಸಪೂರ್ಣ ಭಾಷೆ

(೯ನೇ ಪುಟ ನೋಡಿರಿ)

ಕೀಟಾಣು ನಾಶಕ್ಕಾಗಿ ಆಹಾರ ಧಾನ್ಯ ತುಂಬಿದ ಗೋಣಿಗಳ ಮೇಲೆ ಹೊಗೆಯೂಡಿಸುತ್ತಿರುವ ದೃಶ್ಯ. ಹೀಗೆ ಹೊಗೆಯೂಡಿಸುವುದರಿಂದ ಧಾನ್ಯವು ಕೆಡುವುದಿಲ್ಲ.

ಭವ್ಯ ಕಟ್ಟಡಗಳಿಗೆ ಬೇಕಾಗುವ— ಕಿಟಕಿ-ಬಾಗಿಲು, ವೆಂಟಿಲೇಟರು ರೋಲಿಂಗ್ ಶಟರು, ಗೇಟುಗಳಿಗೆ

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಆಫೀಸು—ಮನೆಗಳಿಗೆ ಬೇಕಾಗುವ— ವಿವಿಧ ಕಪಾಟುಗಳು, ಮೇಜು ಕುರ್ಚಿಗಳು, ಮಂಚ, ಸೋಫಾಗಳಿಗೆ

ಮೃದು ಹೃದಯದ ಸತಿಯೊಬ್ಬಳ ಕಥೆ—

ಕೊನೆಯ ಬಯಕೆ ಸುಳ್ಳಾಗಲಿಲ್ಲ!

"ಲತಾ"

ಶೈಲಾ ಬಾಲ್ಯದಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡು ಕಷ್ಟ ಸುಖಗಳನ್ನನುಭವಿಸಿದ ಬೆಂದ ಜೀವಿ. ಆದರ್ಶವಾದಿ, ಧ್ಯೇಯವಾದಿ. ಇದರಿಂದಲೇ ಶಾಲೆಯಲ್ಲಿ ಎಲ್ಲರೂ ಆಕೆಯನ್ನು ಗೌರವಿಸುತ್ತಿದ್ದರು. ಅಣ್ಣನೊಬ್ಬನೇ ಆಕೆಯ ಬಂಧು. ರೂಪದಲ್ಲಿ ರತಿಯಲ್ಲದಿದ್ದರೂ ಕುರೂಪಿಯಲ್ಲ.

ಮೆಟ್ರಿಕ್ ಪರೀಕ್ಷೆ ಮುಗಿಯುತ್ತಲೇ ಹದಿನೈದರ ಕಿಶೋರಿ ಶೈಲಾಳಿಗೆ ಮದುವೆಯ ಸಿದ್ಧತೆ ನಡೆಯಿತು. ಬಿ. ಎ. ಓದಿ ಆಫೀಸೊಂದರಲ್ಲಿ ಕ್ಲಾರ್ಕನಾಗಿದ್ದ ಸುಕುಮಾರನೊಡನೆ ಆಕೆಯ ವಿವಾಹ ಬಡತನದಲ್ಲಾದರೂ ಕುಂದು ಕೊರತೆ ಇಲ್ಲದೆ ಜರಗಿತ್ತು.

ಶೈಲಾ ಅಗ್ನಿ ಸಾಕ್ಷಿಯಾಗಿ ತನ್ನನ್ನು ತನ್ನ ಸ್ವಾಮಿಗರ್ಪಿಸಿದಳು. ಇಂದು ಆತನೇ ದೈವ ದೇವರು ಎಲ್ಲಾ ಎಂಬ ಭಾವನೆ ತನ್ನಿಂದ ತಾನೇ ಉದ್ಭವಿಸಿದೆ. ಇನ್ನು ಹದಿನೈದು ದಿನಗಳಲ್ಲೇ ಅಣ್ಣನ ಮನೆ ಬಿಟ್ಟು ಗಂಡನ ಮನೆ ಸೇರಬೇಕಾಗಿದೆ. ತನ್ನ ಬಾಲ್ಯದ ಒಡನಾಡಿ ಅಣ್ಣನನ್ನು ಬಿಟ್ಟು ಹೋಗಲು ಮನಸ್ಸು ನೋಯುತ್ತಿದೆ. ಆದರೂ ಸ್ತ್ರೀಯ ಸ್ಥಾನ, ಅಲ್ಲ ಸರ್ವಸ್ವವಾದ ಪತಿಗೃಹಕ್ಕೆ ತೆರಳಲು ಅವ್ಯಕ್ತ ಆನಂದ. ಇವುಗಳ ಮಧ್ಯೆ ತೊಳಲಾಡುತ್ತಾ, ಮುಂದಿನ ಜೀವನದ ಕನಸು ಕಾಣುತ್ತಾ ಬೇಕಾದ ಸಲಕರಣೆ ಜೋಡಿಸುತ್ತಿದ್ದಾಳೆ ಶೈಲಾ.

ಇಂದು ಯಾಕೋ ಶೈಲಾ ಅಷ್ಟು ಉತ್ಸುಕಳಾಗಿಲ್ಲ. ಅಣ್ಣ ಅದೇನೆಂದು ಕೇಳಲು ಕೆಟ್ಟ ಕನಸೊಂದು ಬಿತ್ತು. ಭಯವಾಗುತ್ತಿದೆ ಎಂದಳು. ಅಣ್ಣನು ಕನಸುಗಳೆಲ್ಲಾ ನಿಜವಾಗುವುದಿಲ್ಲವೆಂದು ಸಮಜಾಯಿಸಿದನು. ಸಂಜೆ ಹೊತ್ತು ಸುಕುಮಾರನ ತಮ್ಮ ಗಿರೀಶ ಬಂದು 'ಅಣ್ಣನಿಗೆ ವಿಷಮ ಶೀತ ಜ್ವರ, ಅತ್ತಿಗೆ ಕೂಡಲೇ ಬರಬೇಕೆಂ"ದು ಹೊತ್ತಲ್ಲದ ಹೊತ್ತಿನಲ್ಲಿ ಶೈಲಾನನ್ನು ಕರೆದುಕೊಂಡು ಹೋದನು.

ಹೊರಗೂ ಕತ್ತಲೆ. ಶೈಲಾನ ಹೃದಯದಲ್ಲಿ ಭಯಂಕರ ಕತ್ತಲೆ. ಮನೆಯ ವಾತಾವರಣ ನಿಶ್ಶಬ್ದ. ಡಾಕ್ಟರ್ ಸುಕುಮಾರನ ಮಂಚದ ಪಕ್ಕ ನಿಂತುಕೊಂಡು ನಾಡೀ ನೋಡುತ್ತಿದ್ದರು. ಸುಕುಮಾರ ಮೇಲುಸಿರು ಬಿಡುತ್ತಿದ್ದನು. ಆತನ ತಾಯಿ ಸ್ಮೃತಿ ತಪ್ಪಿ ಬಿದ್ದಿದ್ದರು. ಶೈಲಾ.... ಕಣ್ಣು ಬಿಟ್ಟು ನೋಡಿದಳು... ತನ್ನ ಅದೃಷ್ಟದಾಟವನ್ನು! ಓಡಿ ಹೋಗಿ ತನ್ನ ಸ್ವಾಮಿಯ ಪಾದದ ಮೇಲೆ ತಲೆ ಇಟ್ಟು ಗಟ್ಟಿಯಾಗಿ ಕಿರುಚಿದಳು'....ಸ್ವಾಮಿ.." ಎಂದು.

ಸುಕುಮಾರ ಬಹಳ ಕಷ್ಟದಿಂದ ಶೈಲಾನನ್ನು ಹತ್ತಿರ ಕರೆದನು. "ಶೈಲಾ... ನಾನು ಪಾಪಿ.. ನಿನ್ನನ್ನು ಸಮಾಜದ ಕ್ರೂರ ದೃಷ್ಟಿಗೆ ಬಲಿಕೊಡುತ್ತಿದ್ದೇನೆ... ನಿನಗಾಗಿಯಾದರೂ ಬದುಕಬೇಕೆಂದಾಗುತ್ತದೆ .... ಆದರೆ ವಿಧಿಯಾಟ... ದೈವಲೀಲೆ... ನಿನ್ನನ್ನು ಒಂದು ಕೇಳಿಕೊಳ್ಳುತ್ತೇನೆ... ನೀನು..ಇನ್ನೊಂದು....ಮದುವೆಯಾಗಿ.. ಸುಖದಿಂದ... ಬಾಳಬೇಕು.... ಇದು.... ನನ್ನ...ಕೊನೆಯ... ಆಶೆ.... ನೆ...ರ.... ವೇ...ರಿ....ಸು. ,, ಆತನ ತಲೆ ಕಲ್ಲೇ ಕುಸಿದು ಬಿತ್ತು.

"ಇಲ್ಲ, ಅದೊಂದೂ ಸಾಧ್ಯವಿಲ್ಲ ಸ್ವಾಮಿ... ,, ಶೈಲಾ ಆವನ ಕಿವಿಯಲ್ಲಿ ಹೇಳಿದಳು. ಸುಕುಮಾರನ ಪ್ರಾಣಪಕ್ಷಿ ಅದನ್ನು ಕೇಳಲು ಅಲ್ಲಿರಲಿಲ್ಲ, ಹದಿನೈದರ ಶೈಲಾ... ಇನ್ನೂ ಜೀವನ ಏನೆಂದು ಅರಿಯದ ಮುಗ್ಧ ಪುಷ್ಪ ಬಾಡಿತು. ಮದುವೆಯಾದ ನಾಲ್ಕನೆ ದಿನನೇ ವಿಧವೆಯಾಗಿ ಅಣ್ಣನ ಮನೆ ಸೇರಿದಳು.

. ಅಣ್ಣನ ಮಮತೆಯು ತಂಗಿಯೇನೋ ನಿಜ. ಆದರೆ... ಅತ್ತಿಗೆಗೆ ಜೀವನವಿಡೀ ಇಲ್ಲೇ ಕಳೆಯುವ ನಾದಿನಿಯೊಡನೆ ಸಹನೆಯಾದೀತೇ? ಶೈಲಾನೇನೋ ದಿನವಿಡಿ ಸುಕುಮಾರನ ಭಾವಚಿತ್ರದ ಮುಂದೆ ಆಶೆ ನಿರಾಶೆಗಳ ಭಾವನೆಯನ್ನು ಸಮರ್ಪಿಸುತ್ತಿದ್ದಳು. ಭಾವನೆಯ ಲಹರಿ ಹರಿಯುತ್ತಿತ್ತು. ದಿನವಿಡಿ ಕೊರಗುವುದರಲ್ಲಿ ಸಾರ್ಥಕನಾದರೂ ಏನು? ತನ್ನ ಜೀವನ ಪರರ ಕಷ್ಟ ಸುಖಕ್ಕಾದರೂ ಮೀಸಲಾಗಲಿ ಎಂದಾಶಿಸಿದಳಾಕೆ.

ಕೊನೆಗೊಂದು ದಿನ ತಾನು ನರ್ಸಾಗಬೇಕೆಂಬ ಆಶೆಯನ್ನು ಅಣ್ಣನ ಮುಂದಿಟ್ಟಳು. ಮನಸ್ಸಿಲ್ಲದಿದ್ದರೂ ಮುದ್ದು ತಂಗಿಯ ತರ್ಕಕ್ಕೆ ಕಟ್ಟುಬಿದ್ದು ಒಪ್ಪಲೇಬೇಕಾಯ್ತು. ನಾಲ್ಕು ವರ್ಷದ ನರ್ಸ್ ಜೀವನವನ್ನು ಮುಗಿಸಿದಳು... ಮೊದಲೇ ಧ್ಯೇಯವಾದಿ ಶೈಲಾ ತನ್ನ ಕಾರ್ಯದಲ್ಲಿ ತನ್ಮಯಳಾಗುತ್ತಿದ್ದಳು. ರೋಗಿಗಳ ಕಷ್ಟ ಸುಖದಲ್ಲಿ ಬೆರೆತು ಅವರ ರಕ್ಷಣೆಗಾಗಿ ತನು ಮನವನ್ನು ಮುಡಿಪಾಗಿರಿಸುತ್ತಿದ್ದಳು.

ಶಾಂತಿಪುರದ ಪ್ರಸಿದ್ಧ ವಕೀಲ ಸತೀಶರಿಗೆ ಇಪ್ಪತ್ತು ದಿನಗಳಿಂದ ಕಠಿಣ ಜ್ವರ. ಮನೆಯಲ್ಲಿ ಅವರೊಬ್ಬರೇ ಇರುವುದರಿಂದ ಅವರ ಆರೈಕೆಗೂ ಸರಿಯಾದ ವ್ಯವಸ್ಥೆ ಇಲ್ಲ. ಶಾಂತಿಪುರದ ಡಾಕ್ಟರರು ಭ್ರಾಂತಾವಸ್ಥೆಯಲ್ಲಿರುವ ಅವರನ್ನು ಸರಕಾರಿ ಆಸ್ಪತ್ರೆಗೆ ಸೇರಿಸಿದರು. ಅಲ್ಲದೆ, ಅವರ ಆರೈಕೆಗಾಗಿಯೇ ಒಂದು ನರ್ಸನ್ನು ಇಡಬೇಕೆಂದು ಮುಖ್ಯ ಡಾಕ್ಟರರನ್ನು ಕೇಳಿಕೊಂಡರು. ಅಂತೆಯೇ ಶೈಲಾ ಸ್ಪೆಷಲ್ ಡ್ಯೂಟಿಯಲ್ಲಿ ನೇಮಕವಾದಳು.

ಜ್ವರವೇನೋ ಬಹಳವಾಗಿರುವುದರಿಂದ ಡಾಕ್ಟರರು ಶತಪ್ರಯತ್ನ ಪಡುತ್ತಿದ್ದರು. ಇನ್ನೊಂದು ಕಡೆಯಲ್ಲಿ ಶೈಲಾನ ಶ್ರಮವನ್ನು ಹೇಳಲಸಾಧ್ಯ. ರಾತ್ರಿ ಹಗಲೆನ್ನದೆ ಅದರೋಪಚಾರ ನಡೆಸುತ್ತಿದ್ದಳು. ಇವರೆಲ್ಲರ ಪ್ರಯತ್ನಕ್ಕೆ ದೇವರು ಕಣ್ಣುಬಿಟ್ಟನೋ ಎಂಬಂತೆ ಜ್ವರ ಇಳಿಮುಖವಾಗುತ್ತಾ ಬಂತು. ಕೆಲವೇ ದಿನಗಳಲ್ಲಿ ಸತೀಶರಾಯರಿಗೆ ಎದ್ದು ಕುಳಿತುಕೊಳ್ಳುವಷ್ಟು ಶಕ್ತಿ ಬಂದಿತು.

ಶೈಲನೇನೋ ತನ್ನ ಕರ್ತವ್ಯವೆಂಬಂತೆ ಅವರ ಶುಶ್ರೂಷೆ ಮಾಡುತ್ತಿದ್ದಳು. ಒಂದು ದಿನ ಆಕೆ ಕೋಣೆಯ ಒಳಗೆ ಬರುತ್ತಲೇ "ಸಿಸ್ಟರ್, ದಯಮಾಡಿ ಇಲ್ಲಿ ಬನ್ನಿ,, ಎಂಬ ಮೆಲುದನಿ ಕೇಳಿಸಿತು, ಏನೆಂದು ಹತ್ತಿರ ಹೋಗಿ ನಿಂತಳು. "ನನ್ನನ್ನೇಕೆ ಇಷ್ಟು ಆದರದಿಂದ, ಬದುಕಿಸಿದಿರಿ. ನನಗೇಕೋ ಬದುಕಬೇಕೆಂಬ ಆಶೆಯಿರಲಿಲ್ಲ,, ಎಂದರು.

"ನನ್ನ ಕರ್ತವ್ಯ ಮಾಡಿದೆನಷ್ಟೆ. ಆದರೆ ಯಾಕೆ ಬದುಕಬೇಕೆಂಬ ಆಶೆಯಿಲ್ಲ?,, ಎಂದಳು.

"ನನ್ನವರೆಂಬವರು ಯಾರೂ ಇಷ್ಟರವರೆಗೆ ಇರಲಿಲ್ಲ. ಈಗ ನಾನು ಒಂದು ಮಾತು ನಿಮ್ಮನ್ನು ಕೇಳುತ್ತೇನೆ ನನ್ನ ಜೀವ ನಿಮ್ಮ ಕೈಯಲ್ಲಿದೆ. ನಾನು ನಿಮ್ಮನ್ನು ಮದುವೆಯಾಗಬಯಸುತ್ತೇನೆ. ,,

ಇಷ್ಟರವರೆಗೆ ಮಂತ್ರಮುಗ್ಧಳಂತೆ ಅವರು ಹೇಳುವುದನ್ನೇ ಕೇಳುತ್ತಿದ್ದ ಶೈಲಾ ಮದುವೆಯೆಂಬ ವಾಕ್ಯ ಕಿವಿಗೆ ಬೀಳುತ್ತಲೇ ಕೆಂಡ ಮೆಟ್ಟಿದಂತೆ ಬೆಚ್ಚಿಬಿದ್ದು, "ಇಲ್ಲ ಅದೊಂದು ಸಾಧ್ಯವಿಲ್ಲ.... ನಾನು ವಿಧವೆ.... ನನ್ನ ಹೃದಯದಲ್ಲಿ ನನ್ನ ಸ್ವಾಮಿ ಸದಾ ವಾಸಿಸುತ್ತಿದ್ದಾರೆ. ದಯಮಾಡಿ ಆ ಮಾತು ಹೇಳಬೇಡಿ ,, ಎಂದು ಬಡಬಡಿಸಿದಳು.

"ಅದೆಲ್ಲಾ ನಾನು ಬೇರೆಯವರಿಂದ ತಿಳಿದಿರುವೆನು. ಆದರೆ ನನ್ನ ಜೀವ ನಿನ್ನ ಕೈಯಲ್ಲಿದೆ ಎಂಬುದನ್ನು ಮರೆಯಬೇಡ....ಶೈಲಾ. ,,

ಶೈಲಾ "ಕ್ಷಮಿಸಿ ,, ಎಂದವಳೇ ನೆಟ್ಟಗೆ ತನ್ನ ಕೋಣೆಗೆ ಹೋಗಿ ತನ್ನ ಸ್ವಾಮಿಯ ಫೋಟೋವಿನ ಮುಂದೆ ಕುಳಿತು, "ಸ್ವಾಮಿ.... ನನ್ನ ರಕ್ಷಣೆ ನಿಮ್ಮ ಭಾರ. ನೀವು ಎಲ್ಲಿದ್ದರೂ ನಾನು ನಿಮ್ಮವಳೇ. ನನನ್ನು ರಕ್ಷಿಸಿರಿ ,, ಎಂದು ಅತ್ತುಬಿಟ್ಟಳು. ಕೆಲಸಕ್ಕೆ ನಾಲ್ಕು ದಿನ ರಜೆ ಬರೆದು ಕೋಣೆಯಲ್ಲೇ ಹಗಲಿರುಳು ಕಳೆದಳು. ಎಲ್ಲಿ ತಾನು ಪರೋಪಕಾರಿಯಾಗಿ ತನ್ನ ಸ್ವಾಮಿಯನ್ನು ಮನದಲ್ಲೇ ಪೂಜಿಸುತ್ತಾ ದಿನಕಳೆಯಬೇಕೆಂದು ಬಂದಿರುವಳೋ, ಎಲ್ಲಿ ಯಾರ ಯಾವ ರೀತಿಯ ಭಯವಿಲ್ಲವೆಂದು ನಂಬಿಕೊಂಡಿದ್ದಳೋ ಅಲ್ಲೇ ಈ ದುರವಸ್ಥೆ. ಇದನ್ನೇ ಆಲೋಚಿಸುತ್ತಾ ಮೂರು ದಿನ ಕಳೆದುಹೋಯ್ತು. ಇನ್ನೊಂದೇ ದಿನ ಪುನಃ ತಾನು ಅದೇ ಮನುಷ್ಯನ ಆರೈಕೆ ಮಾಡಬೇಕೆ? ಅವರೀಗ ಗುಣವಾಗಿರುವುದರಿಂದ ಪುನಃ ಜನರಲ್ ಡ್ಯೂಟಿಗೆ ಹಾಕಿಕೊಳ್ಳುತ್ತೇನೆ ಎಂದು ಲೆಕ್ಕ ಹಾಕಿದಳು. ಮಾರನೇ ದಿನ ಸಂಜೆ ಶೈಲಾನ ದೋಸ್ತಿ ನರ್ಸ್ ವನಿತಾ ಅವಳ ಕೋಣೆಗೆ ಬಂದು ಲೋಕಾಭಿರಾಮ ಮಾತನಾಡುತ್ತಾ, ಸತೀಶ ರಾಯರಿಗೆ ಪುನಃ ಜ್ವರ ಮೇಲೇರಿ ಡಾಕ್ಟರರೆಲ್ಲಾ ಆಸೆಬಿಟ್ಟ ಸಂಗತಿಯನ್ನು ವಿವರವಾಗಿ ತಿಳಿಸಿದಳು. ಇದನ್ನು ಕೇಳಿದಾಗ ಏನು ಮಾಡುವುದೆಂದೇ ತಿಳಿಯದೆ

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ರಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK. LTD.
Estd: 1920

ರಾಘವಾಂಕನ

ಹರಿಶ್ಚಂದ್ರ ಕಾವ್ಯದ ಸೂತ್ರಧಾರ

ಶ್ರೀ ಕೂಡ್ಲು ತಿಮ್ಮಪ್ಪ ಗಟ್ಟಿ.

ಕಡುಮುಳಿದರಂತೆ ತೋರಿಸಿ ಸತ್ಯಶುದ್ಧನಪ್ಪನ್ನೆಗಂ ಕಾಡಿ ನೋಡಿ, ಕಡೆಯೊಳು ಹರಿಶ್ಚಂದ್ರ ರಾಯಂಗೆ ವ್ಯಥನೆಳಲ ತಂದಿತ್ತು ಆತನ ಕೀರ್ತಿ ಕಸ್ತೂರಿಯಂ ಮೂಜಗದೊಳಗೆ ಪಸರಿಸಿದ ಮುನಿವರೇಣ್ಯನು ವಿಶ್ವಾಮಿತ್ರನು. ಕವಿ ರಾಘವಾಂಕನು ಹರಿಶ್ಚಂದ್ರ ಕಾವ್ಯದ ಅಂತಿಮ ಭಾಗದಲ್ಲಿ ವಿಶ್ವಾಮಿತ್ರ ಮುನಿಯ ಪರವಾಗಿ ಈ ಸುಂದರ ಹಾಗೂ ಸಮಾಧಾನಕರವಾದ ವಿವರಣೆಯನ್ನು ಕೊಟ್ಟಿದ್ದಾನೆ. ಕಥಾರಂಭದಿಂದಲೇ ವಿಶ್ವಾಮಿತ್ರನ ಪ್ರತಿಯೊಂದು ಕೃತಿಗೂ ಉರಿದೇಳುವ ನಾವು ಈ ಕೊನೆಯ ಸಾರ ಸಂಗ್ರಹಾರ್ಥದಲ್ಲಿ ಶಾಂತರಾಗಬಹುದಾಗಿದೆ.

ವಿಶ್ವಾಮಿತ್ರನು ಅಪ್ರತಿಮ ಸಾಹಸಿ, ಅದ್ವಿತೀಯ ಛಲವಾದಿ. ಈ ಛಲದಿಂದಲೇ ರಾಜನಾಗಿ ಜನಿಸಿದ ವಿಶ್ವಾಮಿತ್ರನು ರಾಜರ್ಷಿಯಾದನು; ಬ್ರಹ್ಮರ್ಷಿ ಪದವಿಯನ್ನು ನೆಳೆದಿರಿಸಿಕೊಂಡನು ಐವತ್ತು ಕೋಟಿ ವರುಷದ ತಪದ ಸಂಪತ್ತು ಈತನ ಸಾಧನೆ ಹಾಗೂ ಸ್ಥಿರ ಪ್ರಯತ್ನಗಳಿಗೆ ನಿದರ್ಶನ.

ವಿಶ್ವಾಮಿತ್ರನೆಂದರೆ ಬೂದಿ ಮುಚ್ಚಿದ ಕೆಂಡ. ಆವನು ಋಷಿಶ್ರೇಷ್ಠನಾದರೂ ಗಂಭೀರವಾದ ಸಮುದ್ರಗರ್ಭದಲ್ಲಡಗಿರುವ ಬೆಂಕಿಯಂತೆ ಆತನ ಹೃದಯದಲ್ಲಿ ಕ್ರೋಧ ಧುಮು ಧುಮಿಸುತ್ತಲೇ ಇರುತ್ತದೆ ಈ ಕ್ರೋಧವು ಸರ್ವಶಕ್ತವೂ ಹೌದು. ತ್ರಿಶಂಕುವನ್ನು ಸ್ವರ್ಗಕ್ಕೇರಿಸುವ ಹಟಸಾಧನೆಯಲ್ಲಿ ಅಮರರೊಂದಿಗೆ ವಿರಸವುಂಟಾಗಿ ಬ್ರಹ್ಮನೆದುರಿಗೇ ಹೊಸ ಬ್ರಹ್ಮಾಂಡವೊಂದನ್ನು ಸೃಷ್ಟಿಸುವೆನೆಂದು ಹೊರಟ ಎರಡನೆಯ ಸೃಷ್ಟಿಕರ್ತನು ವಿಶ್ವಾಮಿತ್ರನು.

ಪುರಾಣ ಪ್ರಸಿದ್ಧನಾದ ವಿಶ್ವಾಮಿತ್ರನ ಪಾತ್ರವು ಹರಿಶ್ಚಂದ್ರ ಕಾವ್ಯದಲ್ಲಿ ತನ್ನ ಸರ್ವ ಲಕ್ಷಣದಿಂದ ಪ್ರಕಾಶಿಸುತ್ತದೆ. ಆತನ ವ್ಯಕ್ತಿಚಿತ್ರವು ಈ ಕಥಾವೃತ್ತಾಂತದಲ್ಲಿ ಪರಿಪೂರ್ಣವಾಗಿದೆ.

ದೇವೇಂದ್ರನ ಒಡ್ಡೋಲಗದ ಮಧ್ಯದಲ್ಲಿ ವಸಿಷ್ಠನಿಗೆಣೆಯಾಗಿ ಪ್ರತಿಷ್ಠನಾಗಿರುತ್ತಾ ಗಂಭೀರವಾಗಿ, ಈ ಕಾವ್ಯದಲ್ಲಿ ವಿಶ್ವಾಮಿತ್ರನ ಪ್ರವೇಶವಾಗುತ್ತದೆ. ಕಾಡನ್ನು ಸುಡುವ ಮೊದಲ ಕಿಚ್ಚಿನ ಕಿಡಿಯಂತೆ 'ಇಕ್ಷ್ವಾಕು ವಂಶದರಸುಗಳಲ್ಲಿ ಸತ್ಯವಂತರಾರೆ'ಂಬ ಪ್ರಶ್ನೆಯನ್ನು ಅಮರೇಂದ್ರನು ಮುಂದೊಡ್ಡುತ್ತಾನೆ.

ತುಂಬಿದ ಸಭೆಯಲ್ಲಿ ತನ್ನನ್ನು ಮೊದಲಾಗಿ ಮಾತಾಡಿಸದ ಮುನಿಸು, ವಸಿಷ್ಠನು ಏನನ್ನೇ ಹೇಳಲಿ ಅದನ್ನಲ್ಲೆಂದು ಸಾಧಿಸುವ ಪಣ, ಸರ್ವ ಜೀವರಾಶಿಯಲ್ಲಿ ತಪ್ಪನ್ನಲ್ಲದೆ ಒಪ್ಪನ್ನು ಕಾಣದಿರುವ ಸ್ವಭಾವ ಇವು ಮೂರೂ ಒಂದಾಗಿ ಬಲಗೊಂಡು ಕೋಪಾವಿಷ್ಟನಾಗಿ ವಿಶ್ವಾಮಿತ್ರನು ವಸಿಷ್ಠನ ಮಾತನ್ನು ತುಚ್ಛೀಕರಿಸಿ, ಆತನನ್ನು ಜರೆಯುತ್ತಾನೆ. ಸತ್ಯವು ಹರಿಶ್ಚಂದ್ರನಲ್ಲಿ ಇಲ್ಲ, ಆತನಾಳುವ ದೇಶದಲ್ಲಿ ಅದರ ಲವಲೇಶವೂ ಇಲ್ಲ ಎಂಬುದಾಗಿ ವಸಿಷ್ಠನ ಮಾತನ್ನು ಖಂಡರಿಸಲು ನೋಡುತ್ತಾನೆ. ಸತ್ಯವಂತನಲ್ಲ ಹುಸಿಗಬುದ್ಧಿ ಪತಿಯೆಂದು ಸಾರಿಹೇಳುತ್ತಾನೆ ಆತನ ತೀವ್ರ ವಾಗ್ಝರಿಗೆ ಕೋಪಾವೇಶದಿಂದೊಡಗೂಡಿದ ವಾದಕ್ಕೆ, ವಸಿಷ್ಠನು ಕೆಣಸುಡಲಿಚ್ಛಿಸದೆ ಹಲವು ಮಾತುಗಳೇಕೆ, ಹರಿಶ್ಚಂದ್ರನಲ್ಲಿ ಅಸತ್ಯವನ್ನು ಕಾಣಿಸಲು ಶಕ್ತರಾದವರು ಈ ತನಕ ಹುಟ್ಟಿಲ್ಲ, ಇನ್ನು ಹುಟ್ಟುವವರಿಲ್ಲವೆಂದು ನುಡಿದನು. ಈ ಮಾತು ಸ್ವಭಾವತಃ ಕ್ರೋಧ ಮೂರ್ತಿಯಾದ ವಿಶ್ವಾಮಿತ್ರನನ್ನು ಸಿಡಿದೆಬ್ಬಿಸುವುದು ಧರೆಗಗನವಹಸಿ ಕಾದುಡುವಂತೆ ವಾಗ್ಯುದ್ಧದಲ್ಲಿ ನಿರತರಾದ ಸುಟ್ಟು ಮರಳಿ ಹುಟ್ಟಿಸಬಲ್ಲ ಋಷಿಶ್ರೇಷ್ಠರಿಬ್ಬರ ಮಧ್ಯೆ ಶತನೇತ್ರನು ಬೆದರಿದ ಹುಲ್ಲೆಯಾಗಿದ್ದನು. ಅಂತೂ ಕೊನೆಗೆ ಮಹರ್ಷಿಗಳಿಗೆ ತಕ್ಕುದಾದ ಪ್ರತಿಜ್ಞೆಯಲ್ಲಿ ಸಮಸ್ಯೆಯು ತೀರ್ಮಾನವಾಗುವುದು ಈ ಪಣದಲ್ಲಿಯೂ ವಸಿಷ್ಠನೊಡ್ಡಿದ ಒಂದು ಪಣಕ್ಕೆ ತನ್ನ ಎರಡು ಪಣಗಳನ್ನು ಮುಂದೊಡ್ಡಿ ತನ್ನ ವಾಕ್ಚಾಪಲ್ಯ ಹಾಗೂ ಧಾರ್ಷ್ಟ್ಯವನ್ನು ವಿಶ್ವಾಮಿತ್ರನು ಪ್ರದರ್ಶಿಸುತ್ತಾನೆ ಇಷ್ಟರಲ್ಲೂ ತೃಪ್ತನಾಗದೆ ವಸಿಷ್ಠನನ್ನು ಮುಸವಾಗಿ ಅಣಕಿಸುತ್ತಾನೆ. ಮಾತಿನ ಬಾಣಗಳಿಂದ ಮತ್ತೂ ಮತ್ತೂ ಚುಚ್ಚುತ್ತಾನೆ; ಕೆಣಕಿ ಜರೆಯುತ್ತಾನೆ. ಇಲ್ಲಿ ವಿಶ್ವಾಮಿತ್ರನ ವರ್ತನೆಯು ಬಾಲಿಶವಾಗಿ ಕಾಣುತ್ತದೆ. ಆತನಿನ್ನೂ ಪ್ರಬುದ್ಧನಾಗಿಲ್ಲವೇನೋ ಅನ್ನಿಸುತ್ತದೆ. ವಸಿಷ್ಠನು ಸಹಿಸಲಾರದೆ "ಕುಲವನಾಲಗೆಯರುಹಿತು, ನೀ ರಾಜರ್ಷಿ, ಕೋಪಿಸದೆ ಘಟ್ಟಿಸದೆ, ಕೆಡೆನುಡಿಯದೆಂತುಳಿಯುವೆ,, ಎಂದು ನುಡಿದು ಆತನ ಕೋಪಾಗ್ನಿಗೆ ತುಪ್ಪವೆರೆಯುವನು. ಈ ಮಾತನ್ನು ಕೇಳಿ ಗಾಯಗೊಂಡ ಕೇಸರಿಯಂತೆ ಉರಿದೆದ್ದು "ರಾಜಋಷಿಯೆಂದೆನ್ನ ಕರೆದೆಯಲ್ಲವೆ, ನೋಡು, ನಿನ್ನೊಡೆಯ ಹರಿಶ್ಚಂದ್ರನನ್ನು ಹುಸಿಕನೆನಿಸಿ ನಿನ್ನನ್ನು ಸತ್ಯಭ್ರಷ್ಟನನ್ನಾಗಿ ಮಾಡಿ ತೋರಿಸುವೆ,, ನೆಂದು ಮೇಘದಿಂದ ಹೊರಡುವ ಸಿಡಿಲಿನಂತೆ ಸುರಪನೊಡ್ಡೋಲಗದಿಂದ ಹೊರಟು ಹೋಗುತ್ತಾನೆ.

ಅಸಾಮಾನ್ಯ ಪ್ರತಿಜ್ಞೆಯನ್ನು ತೊಟ್ಟ ಛಲಗಾರನಾದ ವಿಶ್ವಾಮಿತ್ರನು ಹರಿಶ್ಚಂದ್ರ ಮಹಾರಾಜನನ್ನು ಸತ್ಯಭ್ರಷ್ಟನನ್ನಾಗಿಸಲು ಸೆಣಸಾಟವಾರಂಭಿಸುತ್ತಾನೆ. ಮುನಿಗಳೆಲ್ಲರಿಗೂ ಬೋಧಿಸಿ ಹುರಿದುಂಬಿಸಿ "ಹೋಗಿ ಸುವರ್ಣ ಯಾಗವನ್ನು ಮಾಡುವಂತೆ ಹರಿಶ್ಚಂದ್ರರಾಯನಲ್ಲಿ ಭಿನ್ನವಿಸಿ,, ಎಂದು ಕಳಿಸಿಕೊಡುತ್ತಾನೆ.

ವಿಶ್ವಾಮಿತ್ರನ ಪ್ರಥಮ ಕುಟಿಲೋಪಾಯ ಸಫಲವಾಗುತ್ತದೆ. ಇದೇ ನಾಂದಿಯಾಗಿ ಹರಿಶ್ಚಂದ್ರನ ಸತ್ಯಪರೀಕ್ಷೆ ಆರಂಭವಾಗುತ್ತದೆ ಸರಿ, ಗೆದ್ದೆನೆಂದೆನ್ನುತ್ತ ಆತನ ಬಳಿಗೆ ಹೋಗಿ "ಕರಿಯಂ ಮೆಟ್ಟಿ ಕವಡೆಯೆಸೆದೆತ್ತರಕೆ ಸಮನುಳ್ಳ ಹೊನ್ನರಾಶಿಯ ನೀ,, ಯೆಂದು ಕೇಳುವನು. ಆ ಕೊಡುಗೈಯನನ್ನಿ ಕಾರನೆ ಗಲೇ ಇದೋ ಕೊಳ್ಳಿರೆಂದೆನಲು ವಿಶ್ವಾಮಿತ್ರನು ಚಿಂತೆಗೊಳಗಾಗಿ ಮರಳಿ ಹೋಗುವನು.

ಮರಳಿ ಬಂದವನೇ, ಮುಳಿದು, ದುಷ್ಟ ಮೃಗಗಳನ್ನು ಸೃಷ್ಟಿಸಿ ನಾಡನ್ನು ಬಟ್ಟಬಯಲಾಗುವಂತೆ ಮಾಡಿ ಜನರನ್ನು ಗೋಳಿಡಿಸಿ ಬೇಟೆಗೆಂದು ಬಂದರಸನನ್ನು ತನ್ನ ಬಳಿಗೆ ಬರುವಂತೆಸಗಿ ನೋಡುವೆನವನ ಸತ್ಯಗಿತ್ಯದ ಬಲುಹ ಎಂದೆನ್ನುತ್ತ ನಾನಾ ಮೃಗ ಪಕ್ಷಿ ಕ್ರಿಮಿಕೀಟ ಸಂಕುಲವನ್ನು ಸಮರ್ಪಿಸಿ ದೇಶವನ್ನೇ ತುಂಬಿಸಿ ಬಿಡುತ್ತಾನೆ.

ವಿಶ್ವಾಮಿತ್ರನ ಕುಟಿಲೋಪಾಯದಂತೆ ಬೇಟೆಗೆಂದು ಬಂದ ಹರಿಶ್ಚಂದ್ರನು ವಿಶ್ವಾಮಿತ್ರನ ಕಪಟ ಸೂಕರವನ್ನು ಬೆನ್ನಟ್ಟಿ ಆತನ ಆಶ್ರಮವನ್ನು ಅರಿಯದೆ ಪ್ರವೇಶಿಸುತ್ತಾನೆ. ಆತನನ್ನು ಸಂತೋಷಪಡಿಸಲು ವಿಶ್ವಾಮಿತ್ರನು ಸೃಷ್ಟಿಸಿದ ಮಾಯಾವನಿತೆಯರು ಬರುವರು. ಮುನಿಯ ಅತಿಕ್ರೋಧ, ಬದ್ಧವೈರವೆಂಬ ಹೊಲೆಯಲ್ಲಿ ಹುಟ್ಟಿದ ಈ ಹೊಲತಿಯರು ರಾಯನೆದುರು ಹಾಡಿ, ಕೀರ್ತಿಸಿ, ನರ್ತಿಸಿ ಆತನನ್ನು ಮೆಚ್ಚಿಸುವರು. ಆದರೆ ಆತನನ್ನು ಧರ್ಮ—ಸತ್ಯ—ಕುಲಭ್ರಷ್ಟನನ್ನಾಗಿಸಬೇಕೆಂದೊಡ್ಡಿದ ಅವರ ಅಸಾಧ್ಯ ಬೇಡಿಕೆಗಳು ಅಸಫಲವಾಗುವುವು. ಹೊಲತಿಯರು ತಮ್ಮ ಹೊಲೆ ಮಾತಿಗೆ ತಕ್ಕ ಸನ್ಮಾನವನ್ನು ಪಡೆದು ತಮ್ಮ ಜನಕನ ಕಾಲ್ಬಡದಲ್ಲಿ ಬಂದು ಬೀಳುವರು. ಇದನ್ನು ಕಂಡ ವಿಶ್ವಾಮಿತ್ರನು ಬಡಬಾಗ್ನಿಯಂತೆ ಮುಳಿದೇಳುವನು ಆತನ ಕೋಪಾವಿಷ್ಟ ರುದ್ರ ರೂಪವು ಜಡೆ ಹೊತ್ತ ಬಡಬಾನಲದಂತೆ, ಭಸ್ಮಭೂಷಿತವಾದ ಸಿಡಿಲಿನಂತೆ, ಕೃಷ್ಣಾಜಿನವನುಟ್ಟ ಕಾಡುಗಿಚ್ಚಿನಂತೆ ಮುನಿರೂಪ ಧರಿಸಿದ ಫಣೆಗಣ್ಣನ ಕೋಪದಂತೆ ಭೀಕರವಾಗಿರಲು ಹರಿಶ್ಚಂದ್ರನೆಡೆಗೆ ಧಾವಿಸುವನು.

ಹರಿಶ್ಚಂದ್ರನನ್ನು ತನ್ನ ಕಪಟ ಜಾಲಕ್ಕೆ ಸಿಲುಕಿಸಬೇಕೆಂಬ ಉದ್ದೇಶವಿಟ್ಟುಕೊಂಡೇ ಬಂದಿರುವ ವಿಶ್ವಾಮಿತ್ರನು ಅರಸನ ನಯಭಯಭಕ್ತಿಗಳಿಗೆಲ್ಲಾ ಗಮನವೀಯುವನೆ? ಹುಸಿಗತ್ತಲೆಗೆ ನೇಸರನಾದ ಹರಿಶ್ಚಂದ್ರನನ್ನು ಹಳಿದು, ಪಾಪಿ ಎಂದವನನ್ನು ನಿಂದಿಸುವನು. ನಿನ್ನ ನಾಡುಬೀಡುಗಳನ್ನೆಲ್ಲ ಸುಟ್ಟು ಬಿಟ್ಟುಡುವೆನೆಂದು ಅಬ್ಬರಿಸುವನು. ಆತನ ಪ್ರತಿಯೊಂದು ಮಾತೂ ತಮೋಗುಣದ ಪ್ರತಿಧ್ವನಿಯಾಗಿದೆ. ನಿಂದಿಸುವುದರಲ್ಲಿ ಆತನದು ಎತ್ತಿದಕೈ. ಆತ್ಮಸ್ತುತಿಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದು. ತನ್ನ ವೈರವೆಂದರೆ ಶಿವನ ಫಣೆಗಣ್ಣಿನ ಉರಿಯನ್ನೆ ನುರಿಸುವಂತೆ, ಪ್ರಳಯ ಸರ್ಪನ ಬಾಯ್ಗೆ ಕೈಯಿಕ್ಕಿದಂತೆ ಎಂದು ಸಾರುತ್ತಾನೆ. ನಿನ್ನ ಗುರುವಿನೊಡನೆ ಕೇಳಿ ನನ್ನಳವನ್ನು ಅರಿತುಕೋ ಆ ಬ್ರಹ್ಮಪುತ್ರನು ನನ್ನಿಂದ ಅನುಭವಿಸಿದ ಪಾಡನ್ನು ತಿಳಿದುಕೋ. ಎಂ

(೧೦ನೇ ಪುಟ ನೋಡಿರಿ)

ನಿಮ್ಮ ಬಾಲಕರಿಗಾಗಿ

ಈ ಕಾರ್ಯವೆಸಗಿರಿ

'ಕೆನರಾ ಬ್ಯಾಂಕ್' ಸೇವಿಂಗ್ಸ್ ಬ್ಯಾಂಕ್ ಪಾಸ್ ಪುಸ್ತಕವೊಂದನ್ನು ಅವನ ಕೈಗಿತ್ತು ಅವನು ಚಿಕ್ಕವನಾಗಿರುವಾಗಲೇ ಹಣ ಉಳಿಸುವ ಅಭ್ಯಾಸವನ್ನು ಆರಂಭಿಸಿರಿ.

ಇದರ ಪ್ರಾಮುಖ್ಯತೆ ತಿಳಿಯಲು ನೀವು ಬಾಲ-ಮನಶಾಸ್ತ್ರಜ್ಞರಾಗಬೇಕಾದ ಅವಶ್ಯಕತೆ ಏನೂ ಇಲ್ಲ. ಖಾತೆ ತೆರೆಯಲು ಬೇಕಾಗಿರುವ ಕೇವಲ ರೂ. 10 ಇದ್ದರೆ ಸಾಕು.

ಕೆನರಾ ಬ್ಯಾಂಕ್ ಠೇವಣಿದಾರರಿಗಾಗಿ ಅನೇಕ ಯೋಜನೆಗಳನ್ನು ಆರಂಭಿಸಿದೆ. ನಿಮ್ಮ ಮಕ್ಕಳಿಗಾಗಿ ಖಾತೆಯೊಂದನ್ನು ತೆರೆದು, ತಮ್ಮ ಮಕ್ಕಳಿಗಾಗಿ ಸೇವಿಂಗ್ಸ್ ಬ್ಯಾಂಕ್ ಖಾತೆ ತೆರೆದಿರುವ ಅನೇಕರನ್ನು ಕೂಡಿಕೊಳ್ಳಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1906

ಸಮಗ್ರ ಸೇವೆ ಸಂಪೂರ್ಣ ಭದ್ರತೆ

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾ ತರಹ ಸಿಡಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ

ಪಾಕೆಟ್ ಡಾಕ್ಟರ್

ಅಮೃತಾಂಜನ ಲಿ ಬೊಂಬಾಯಿ, ಮದ್ರಾಸು, ಕಲ್ಕತ್ತಾ

ಕರ್ನಾಟಕದ ನಾಯಕ

ಸಿದ್ಧವ್ವನಹಳ್ಳಿ ನಿಜಲಿಂಗಪ್ಪ

ಬಿಜಾಪುರ ಜಿಲ್ಲೆಯ ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದಿಂದ ಕರ್ನಾಟಕ ವಿಧಾನ ಸಭೆಗೆ ಆರಿಸಿಬಂದ ಸಿದ್ಧವ್ವನಹಳ್ಳಿ ನಿಜಲಿಂಗಪ್ಪನವರೂ ಮಧ್ಯ ಪ್ರದೇಶದ ಡಾ| ಕೈಲಾಸನಾಥ ಕಟ್ಜು ಅವರೂ ಒಂದೇ ರೀತಿಯ ಪರಿಸ್ಥಿತಿಯನ್ನು ಎದುರಿಸುತಿದ್ದಾರೆ. ಡಾ| ಕಟ್ಜುರವರಿಗೆ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ವಿತ್ತುದರಿಂದಲೇ ಶ್ರೀ ನಿಜಲಿಂಗಪ್ಪನವರಿಗೂ ಅನುಮತಿ ನೀಡಬೇಕಾಯ್ತು. ಉಪಚುನಾವಣೆಗಳು ಸಾರ್ವತ್ರಿಕ ಚುನಾವಣೆಗಳಷ್ಟೇ ಮಹತ್ವವಿರುವವಾದುದರಿಂದ ಒಮ್ಮೆ ಸೋಲುಂಡು ಜನತೆಯಿಂದ ತಿರಸ್ಕೃತರಾದವರು ಇವುಗಳಲ್ಲಿ ಸ್ಪರ್ಧಿಸಬಹುದೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ಅಭಿಪ್ರಾಯಪಟ್ಟಿದ್ದರು.

ನಿಜಲಿಂಗಪ್ಪನವರು ವಿಧಾನ ಸಭೆಯಲ್ಲಿ ಪ್ರತಿಜ್ಞಾವಿಧಿಯನ್ನು ಮುಗಿಸಿದ ನಂತರ ಕರ್ನಾಟಕದ ಸ್ಥಿತಿಗತಿಗಳನ್ನು ಅವಲೋಕಿಸುವಾಗ, ಇವರೇ ಮುಖ್ಯ ಮಂತ್ರಿಯಾಗುವರೆಂಬ ಅನುಮಾನಕ್ಕೆ ಆಸ್ಪದವಿದೆ. ಸದ್ಯದ ಮುಖ್ಯ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರು ತಮ್ಮ ಗುರು ಸದಸ್ಯರೆಂದು ಹೇಳಿಕೊಳ್ಳುವ ನಿಜಲಿಂಗಪ್ಪನವರಿಗಾಗಿ ಮುಖ್ಯ ಮಂತ್ರಿ ಪದವಿಗೆ ರಾಜಿನಾಮೆಯೊಯಲು ಸಿದ್ಧರಾಗಿದ್ದಾರೆ. ನಿಜಲಿಂಗಪ್ಪನವರಾದರೂ ಈ ಸಂಬಂಧದಲ್ಲಿ ಮಾತುಕತೆ ನಡೆಸಲು ನವದೆಹಲಿಗೆ ತೆರಳಿದ್ದಾರೆ.

ಒಬ್ಬ ಬಡ ರೈತ ಪರಿವಾರದಲ್ಲಿ ಹುಟ್ಟಿದ್ದ ೬೦ ವರ್ಷದ ನಿಜಲಿಂಗಪ್ಪನವರು ಬಿ. ಎ., ಎಲ್ ಎಲ್ ಬಿ. ಆಗಿದ್ದಾರೆ. ಇವರು ೧೯೨೬ರಲ್ಲಿ ಮೈಸೂರು ಉಚ್ಚ ನ್ಯಾಯಾಲಯದಲ್ಲಿ ಎಡ್ವೊಕೇಟರ ರೂಪದಲ್ಲಿ ತನ್ನ ಜೀವನವನ್ನು ಪ್ರಾರಂಭ ಮಾಡಿದರು. ೧೯೩೬ರಲ್ಲಿ ರಾಜಕೀಯ ಆಂದೋಲನದಲ್ಲಿ ಭಾಗವಹಿಸಿದುದರಿಂದ ಸೆರೆಮನೆಯನ್ನೂ ಸೇರಿದರು. ೧೯೪೦ರಲ್ಲಿ ಮತ್ತೊಮ್ಮೆ ಶಿಕ್ಷೆಗೆ ಗುರಿಯಾದರು. ಪ್ರಾರಂಭದಿಂದಲೂ ಕರ್ನಾಟಕ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರು. ೧೯೪೬ರಲ್ಲಿ ಇದರ ಅಧ್ಯಕ್ಷರಾದರು. ೧೯೪೭ರಿಂದ ೫೦ರ ವರೆಗೆ ತಾತ್ಕಾಲಿಕ ಲೋಕಸಭೆಯ ಸದಸ್ಯರಾಗಿದ್ದು, ೧೯೫೨ರಿಂದ ೫೬ರ ವರೆಗೆ ಲೋಕಸಭಾ ಸದಸ್ಯರಾಗಿದ್ದರು. ಅನಂತರ ರಾಜ್ಯದ ಮುಖ್ಯ ಮಂತ್ರಿಯಾದರು.

ಕರ್ನಾಟಕದ ನಾಯಕರಲ್ಲಿ ಮೃದು ಭಾಷಿ ಮತ್ತು ಉದಾರ ವಿಚಾರವಂತರಾದ ಶ್ರೀ ನಿಜಲಿಂಗಪ್ಪನವರು ಅಗ್ರಗಣ್ಯರು. ತಮ್ಮ ಉದಾರ ದೃಷ್ಟಿಕೋಣದಿಂದಾಗಿಯೇ ಅವರಿಗೆ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷ ಪದವಿಯು ಲಭಿಸಿದ್ದು ಸುಮಾರು ಹತ್ತು ವರ್ಷಕಾಲ ಅದನ್ನು ಉಳಿಸಿಕೊಂಡಿದ್ದರು. ಕರ್ನಾಟಕ ರಾಜ್ಯ ಸ್ಥಾಪನೆಯ ಉದ್ದೇಶಕ್ಕಾಗಿ ಇವರು ಅನುಸರಿಸಿದ ನೀತಿ ಮತ್ತು ಮಾಡಿದ ಕಾರ್ಯಗಳು ಚಿರಸ್ಮರಣೀಯವಿರುತ್ತವೆ. ರಾಜ್ಯ ನಿರ್ಮಾಣವಾಗುವ ಸಮಯದಲ್ಲಿ ಅವರು ಈ ಪದವಿಯನ್ನು ಕಳೆದುಕೊಂಡರೂ ಅವರ ಜನಪ್ರಿಯತೆಯು ದೂರವಾಗಲಿಲ್ಲ. ಕರ್ನಾಟಕ ರಾಜ್ಯ ರಚನೆಯಾದನಂತರ ಮತ್ತು ೧೯೫೭ರಲ್ಲಿ ಸಾರ್ವತ್ರಿಕ ಚುನಾವಣೆಗಳ ನಂತರ ಸುಮಾರು ಒಂದು ವರ್ಷದ ವರೆಗೆ ಅವರ ಮುಖ್ಯ ಮಂತ್ರಿಯಾಗಿಯೂ ಸೇವೆ ಸಲ್ಲಿಸಿದರು. ಈ ಬಾರಿಯ ಚುನಾವಣೆಯಲ್ಲಿ ಅವರು ಪ್ರಾರಂಭದಲ್ಲಿ ಸೋತು ಹೋಗದಿರುತಿದ್ದರೆ, ಮುಖ್ಯ ಮಂತ್ರಿ ಪದವಿಯು ಅವರ ಕೊರಳಿಗೆ ಮಾಲೆ ಹಾಕುತಿತ್ತು ಎಂದು ಎಲ್ಲರೂ ಬಲ್ಲರು. ಈ ಕಾರಣದಿಂದಲೇ ಉಪಚುನಾವಣಾ ನಂತರವಾದರೂ ಇವರು ರಾಜ್ಯದ ನಾಯಕತ್ವವನ್ನು ವಹಿಸುವ ಸಂಭವವು ಹೆಚ್ಚೆಂದು ಊಹಾಪೋಹ ನಡೆಯುತ್ತಿದೆ; ಈ ಊಹೆ ಸತ್ಯವಾಗುವುದು ಸಾಧ್ಯ.

ಶ್ರೀ ನಿಜಲಿಂಗಪ್ಪನವರು ಸಿದ್ಧಾಂತ ಮತ್ತು ಆದರ್ಶಗಳಿಗೆ ಆಶ್ರಯ ನೀಡುತ್ತ ಮೊದಲಿನಿಂದಲೂ ನಡೆದುಬಂದವರು. ಇವರು ಕಾಲೇಜಿನಲ್ಲಿ ಓದುತಿದ್ದಾಗ, ಒಂದು ವರ್ಷ, ಪ್ರಿನ್ಸಿಪಾಲರು ಲೋಕಮಾನ್ಯ ತಿಲಕರ ಜನ್ಮದಿನದಂದು ವಿರಾಮ ಕೊಡಲಿಲ್ಲ ಆ ದಿನ ಶಾಲೆಗ ತೆರಳದೆ ಮರುದಿನ ತರಗತಿಗೆ ಬಂದಾಗ, ಅವರ ಇಂಗ್ಲಿಷ್ ಪ್ರೊಫೆಸರರು ಕೇಳಿದರು: 'ತಿಲ್‌ಕಿಂಗ್ ಮಾಡಲು ಹೋಗಿದ್ದೀರಾ?' ಎಂದು. 'ರಾಷ್ಟ್ರದ ಓರ್ವ ಮಹಾ ನಾಯಕರಿಗೆ ಈ ರೀತಿಯ ಅಸಮಾನ ಮಾಡಿದುದಕ್ಕೆ ಕ್ಷಮಾಯಾಚನೆ ಮಾಡುವಂತೆ ಪ್ರೊಫೆಸರರೊಡನೆ ನಿಜಲಿಂಗಪ್ಪ ಹೇಳಿದರು. ಆದರೆ, ಇದಕ್ಕೆ ಪ್ರೊಫೆಸರರು ಒಪ್ಪಲಿಲ್ಲ. ಪರಿಣಾಮವಾಗಿ, ಕಾಲೇಜಿನಲ್ಲಿ ಒಂದು ಹರಿತಾಳವು ನಡೆಯಿತು. ಈ ಆಂಗ್ಲ ಪ್ರೊಫೆಸರರು ತಾನು ದೇಶದ ನಾಯಕಮಣಿಗೆ ಗೈಯ್ದ ಅಪಮಾನಕ್ಕಾಗಿ ಕ್ಷಮಾಯಾಚನೆ ಮಾಡಿದ ನಂತರವೇ ಈ ಹರಿತಾಳವು ಮುಕ್ತಾಯಗೊಂಡಿತು.

ತನ್ನ ಈ ಸಾಹಸ ಮನೋವೃತ್ತಿ ಮತ್ತು ಸಿದ್ಧಾಂತವಾದಿತನಗಳಿಂದಾಗಿಯೇ ಯುವಕ ನಿಜಲಿಂಗಪ್ಪನವರು ಮುಂದೆ ತನ್ನ ರಾಜ್ಯ ಕರ್ನಾಟಕದ ಪ್ರಥಮ ಮುಖ್ಯ ಮಂತ್ರಿಯಾದರು. ಹಿಂದಿನ ವರ್ಷ ಇವರು ಸರಕಾರಿ ಇಂಡಿಯನ್ ಆಯಿಲ್ ಕಂಪೆನಿಯ ಅಧ್ಯಕ್ಷರಾಗಿದ್ದಾಗ, "ಗುಂಪಿನ ರಾಜಕಾರಣವು ನನಗೆ ಇಷ್ಟವಿಲ್ಲ, ರಾಜನೀತಿಯೆಂಬುದು ಜನತಾ ಸೇವೆಯ ಒಂದು ಸಾಧನ ಮಾತ್ರ. ಅದನ್ನು ಸ್ವಾರ್ಥಸಾಧನೆಗಾಗಿ ಬಳಸಿಕೊಳ್ಳುವುದು ಅಪೇಕ್ಷಣೀಯವಲ್ಲ ನನ್ನ ಸಿದ್ಧಾಂತವನ್ನು ಬಿಟ್ಟುಕೊಡುವುದರ ಬದಲು ರಾಜಕೀಯ ಪದವಿಯನ್ನು ತ್ಯಜಿಸುವುದನ್ನು ಮೆಚ್ಚುತ್ತೇನೆ", ಎಂದಿದ್ದರು.

೧೯೬೦ರಲ್ಲಿ ಜತ್ತಿ ಪಂಗಡದವರು ವಿಜಯ ಗಳಿಸಿದ ನಂತರ, ನಿಜಲಿಂಗಪ್ಪನವರ ಮಂತ್ರಿಮಂಡಳವು ರಾಜಿನಾಮೆ ಈಯಬೇಕಾಯಿತು. ಇದರಿಂದ ಅವರು ನಿರಾಶರಾಗಲಿಲ್ಲ ಆ ಬಳಿಕ ಅವರಿಗೆ "ನೀವು ಮರಳಿ ಈ ಪದವಿಗೆ ಬರಬೇಕೆಂದಿರುವಿರಾ?", ಎಂದು ಪ್ರಶ್ನೆ ಕೇಳಲು, "ನಾನದನ್ನು ಎಂದೂ ಬೇಡಿಕೊಂಡು ಹೋಗುವುದಿಲ್ಲ; ಆದರೆ, ಅದನ್ನು ಸ್ವೀಕರಿಸಲೇ ಬೇಕಾಗಿ ಬಂದರೆ, ಕರ್ತವ್ಯಪಾಲನೆಯಿಂದ ವಿಮುಖನಾಗಲಾರೆ", ಎಂದು ಉತ್ತರಿಸಿದ್ದರು.

ಈ ಬಾರಿಯ ಚುನಾವಣೆಗೆ ಹುರಿಯಾಳುಗಳನ್ನು ಆರಿಸುತ್ತಿರುವಾಗಲೇ ನಿಜಲಿಂಗಪ್ಪನವರು ಭಾವೀ ಮುಖ್ಯ ಮಂತ್ರಿಯೆಂದು ತಿಳಿಯಲಾಗಿತ್ತು. ಆದರೆ, ದುರ್ದೈವ ವಶದಿಂದ ಚುನಾವಣೆಯಲ್ಲಿ ಅವರು ಪರಾಜಿತರಾದರು. ಮಧ್ಯ ಪ್ರದೇಶದಲ್ಲಿ ಸೋತ ಕಟ್ಜೂರವರು ವಿಧಾನ ಸಭೆಯ ನಾಯಕ ಸ್ಥಾನವನ್ನು ಸ್ವೀಕರಿಸಲು ಸಂಪೂರ್ಣ ನಿರಾಕರಿಸಿದಾಗ ವರಿಷ್ಠಮಂಡಳವು ಸೋತ ನಿಜಲಿಂಗಪ್ಪನವರೂ ನಾಯಕರಾಗಬಾರದು ಎಂಬ ವಾದಕ್ಕೆ ಬಲವಾಗಿ ಅಂಟಿಕೊಂಡಿತು ತತ್ಕಾರಣವಾಗಿ ಕಂಠಿಯವರ ಚೀಟಿ ಮೇಲೆ ಬಿತ್ತು. ಶ್ರೀ ಕಂಠಿಯವರಾದರೂ ತನ್ನನ್ನು ಭರತನೆಂದೂ ನಿಜಲಿಂಗಪ್ಪನವರನ್ನು ರಾಮನೆಂದೂ ಕಲ್ಪಿಸಿಕೊಂಡಿದ್ದಾರೆ. ಭರತನಿಂದ ರಾಜ್ಯ ಭಾರದ ಹೊರೆಯನ್ನು ಹೊರಲು ರಾಮ ಬರುತ್ತಾನೆ ಎಂದವರು ಪದೇ ಪದೇ ಆಡುತಿದ್ದರು. ರಾಮನು ವಿಧಾನ ಸಭೆಯ ಪ್ರವೇಶ ಮಾಡಿದ್ದಾನೆ; ಅವನ ಆಗಮನದಿಂದ ಭರತ ಹಸನ್ಮುಖನಾಗಿ ತನ್ನ ರಾಜಿನಾಮೆಯೀಯಲು ಆತುರದಿಂದಿದ್ದಾನೆ ರಾಮನ ಪಟ್ಟಾಭಿಷೇಕ ಸಮಾರಂಭ ನಡೆಯಲಿದೆ; ಆದರೆ, ರಾವಣ ಹತ್ಯೆಯಾಗದೆ ಉಳಿದುದರಿಂದ ರಾಮ ಪಟ್ಟಾಭಿಷೇಕ ಸಮಾರಂಭದಲ್ಲಿ ರಾವಣನ ಕೀಟಲೆ ಒದಗಲಾರದು ಎಂದು ನಂಬುವುದು ಕಷ್ಟ

ಬಾಲಕಲ್ಯಾಣದಲ್ಲಿ ಅಮೆರಿಕೆಯ "ಯು"ವೆಂಬ ಸಂಸ್ಥೆಯು ಉತ್ಸಾಹವನ್ನು ತೋರಿಸುತ್ತಿದೆ. ಜಗತ್ತಿನ ಇತರ ೧೬ ದೇಶಗಳಲ್ಲಿ ೧೪-೧೯ ವರ್ಷದವರು ಇದರ ಸದಸ್ಯರಿದ್ದಾರೆ. ಜಗತ್ತಿನ ಬಡ ಮಕ್ಕಳಿಗೆ ಸಹಾಯ ಮಾಡುವ ಭರವಸೆಯ ಪತ್ರಗಳನ್ನು ನಾದಿನಪೂ ಓದುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪರಿಪೂರ್ಣ ಬೇಂಕಿಂಗ್ ಸೇವೆಗೆ
— ಕೊರ್ಪೊರೇಶನ್ ಬೇಂಕ್ —
78 ಶಾಖೆಗಳು | ದೇಶದಾದ್ಯಂತ ಏಜನ್ಸಿಗಳು
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ತೃತೀಯ ಯೋಜನೆಗೆ
ಆಂತರಿಕ ಉಳಿತಾಯ ಅತ್ಯವಶ್ಯ

ಕಳೆದ ವರ್ಷ ದೇಶದ ಆರ್ಥಿಕ ಪರಿಸ್ಥಿತಿಗಳ ಸಿಂಹಾವಲೋಕನ ಮಾಡುತ್ತ ಸರಕಾರಿ ವಲಯದಲ್ಲಿ ದೇಶದಲ್ಲಿ ವಸ್ತುಗಳ ಬೆಲೆಯು ಏರುವುದಕ್ಕೆ ಅವುಗಳ ಬೇಡಿಕೆಯು ಹೆಚ್ಚಿರುವುದೇ ಕಾರಣವಾಗಿದೆ ಎಂದು ಹೇಳಲಾಯಿತು. ಬೇಡಿಕೆಯು ಹೆಚ್ಚಿದಾಗ, ವಸ್ತುಗಳ ಬೆಲೆಯಲ್ಲಿ ಹೆಚ್ಚಳವಾಗುವುದು ಆರ್ಥಿಕ ವಿಕಾಸದ ಒಂದು ಸಾಮಾನ್ಯ ನಿಯಮವೆಂದು ಅಭಿಪ್ರಾಯ ಪ್ರಕಟಿಸಲಾಯಿತು.

ಆದರೆ, ಸರಕಾರದ ಈ ಹೇಳಿಕೆಯನ್ನು ಸತ್ಯವೆಂದು ಸಂಪೂರ್ಣ ಹೇಳುವಂತಿಲ್ಲ. ಕೆನಡಾ, ಪಶ್ಚಿಮ ಜರ್ಮನಿ, ಮೆಕ್ಸಿಕೊ, ಇಟಲಿ, ಫ್ರಾನ್ಸ್ ಮತ್ತು ಜಪಾನ ಮೊದಲಾದ ದೇಶಗಳಲ್ಲಿ ಮಾತ್ರವಲ್ಲ, ನಮ್ಮ ದೇಶದಲ್ಲಿಯೂ ಮೇಲಿನ ಹೇಳಿಕೆಯು ಅರ್ಥಹೀನವಾದುದು ಎಂಬುದು ಅನುಭವಕ್ಕೆ ಬಂದಿದೆ. ಪಶ್ಚಿಮ ಜರ್ಮನಿಯಲ್ಲಿ ೧೯೫೩ರಿಂದ ೧೯೫೭ರ ವರೆಗೆ ಸೇಕಡಾ ೧೧.೨ರಂತೆ ಪ್ರತಿ ವರ್ಷ ಉತ್ಪತ್ತಿ ಹೆಚ್ಚಿತು, ಆದರೆ, ಅಲ್ಲಿ ವಸ್ತುಗಳ ಬೆಲೆಯಲ್ಲಿ ಪ್ರತಿ ವರ್ಷವೂ ಸೇಕಡಾ ಒಂದರಂತೆ ಮಾತ್ರ ಏರಿತು

ಜಪಾನದ ಸ್ಥಿತಿಯು ಇನ್ನೂ ಉತ್ತಮವೆನಿಸಿತು. ೧೯೫೩-೫೭ರ ಅವಧಿಯಲ್ಲಿ ಅಲ್ಲಿನ ರಾಷ್ಟ್ರೀಯ ಆದಾಯದಲ್ಲಿ ೫೩ ಪ್ರತಿಶತ ಏರಿಕೆಯಾಯಿತು, ಆದರೆ, ವಸ್ತುಗಳ ಬೆಲೆಯಲ್ಲಿ ನೂರಕ್ಕೆ ಎರಡರಷ್ಟು ಮಾತ್ರ ಹೆಚ್ಚುವರಿ ಕಂಡುಬಂತು. ಫ್ರಾನ್ಸ್ ಮತ್ತು ಇಟಲಿಗಳ ರಾಷ್ಟ್ರೀಯ ಆದಾಯವು ಕ್ರಮವಾಗಿ ನೂರಕ್ಕೆ ೭೩ ಮತ್ತು ೪೯ರಂತೆ ಏರಿತು, ಆದರೆ ಅಲ್ಲಿ ಬೆಲೆಯ ಹೆಚ್ಚಳವಾಗುವ ಬದಲು ಅದು ಕಡಿಮೆಯಾಯಿತು.

ನಮ್ಮ ಮೊದಲನೆಯ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ದೇಶದ ಆದಾಯವು ಪ್ರತಿ ನೂರಕ್ಕೆ ನಾಲ್ಕರಂತೆ ಹೆಚ್ಚಿದರೆ, ಬೆಲೆಯಲ್ಲಿ ನೂರಕ್ಕೆ ೧೪ರಂತೆ ಇಳುವರಿಯಾಯಿತು. ೧೯೫೫-೬೦ರ ವರೆಗೆ ಪ್ರತಿ ವರ್ಷ ಆದಾಯವು ನೂರಕ್ಕೆ ೩ರಂತೆ ಹೆಚ್ಚುತ್ತ ಹೋದರೂ ವಸ್ತುಗಳ ಬೆಲೆಯಲ್ಲಿ ಪ್ರತಿ ನೂರಕ್ಕೆ ೩.೨ರಂತೆ ಹೆಚ್ಚುತ್ತ ಬಂತು. ಕಳೆದ ಆರು ವರ್ಷಗಳಿಂದ ಬೆಲೆಯಲ್ಲಿ ನೂರಕ್ಕೆ ೪.೨ರಂತೆ ಏರುತ್ತ ಬರುತ್ತಿದೆ. ಇದರಿಂದ ಅಸ್ತಿತ್ವದಲ್ಲಿಲ್ಲದ ಹಣವನ್ನು ಯೋಜನೆಯಲ್ಲಿ ತೊಡಗಿಸಿದ್ದೇವೆಂದು ನಾವು ತಿಳಿಯಬಹುದು. ಪ್ರಾಪ್ತವಾದ ಸಾಧನಗಳು ಪರ್ಯಾಪ್ತವಾಗಿರುವುದಿಲ್ಲ. ಬಂಡವಳಕ್ಕಿಂತ ಹೆಚ್ಚು ಖರ್ಚು ಮಾಡುವುದರಿಂದ, ಹೀಗಾಗುತ್ತದೆ.

ಅಧಿಕಾಧಿಕ ರೂಪಾಯಿಗಳನ್ನು ಕೊಡಿಸುವುದು ಮತ್ತು ನಾಣ್ಯ ಸಮತೋಲಗಳ ನಡುವಣ ಸಂಬಂಧವನ್ನು ಸುಲಭದಲ್ಲಿ ತಿಳಿದುಕೊಳ್ಳಬಹುದು. ಯೋಜನೆಗಳಲ್ಲಿ ತೊಡಗಿಸಿದ ಹಣವು ಉಳಿತಾಯ ರೂಪದ್ದಾದುದರಿಂದ ನಿರಂತರ ಉಪಯೋಗ ಮತ್ತು ಉತ್ಪಾದನೆ ಮೊದಲಾದುವುಗಳಲ್ಲಿ ಎಣಿಕೆಗೆ ಸಿಗುತ್ತದೆ. ಆದುದರಿಂದ ದೇಶದ ಉಳಿತಾಯವೆಲ್ಲವನ್ನೂ ಉಪಯೋಗಕ್ಕೆ ಬೀಳುವಂತೆ ಯೋಜನೆಗಳಿಗೆ ಬಳಸಿಕೊಳ್ಳುವುದರಿಂದ ಅದು ಬಲಗೊಳ್ಳುತ್ತದೆ.

ಸಾಮಾನ್ಯವಾಗಿ ಹಳೆಯ ಬಂಡವಳ ಮತ್ತು ವಿದೇಶೀ ಸಹಾಯಗಳ ಹಣವು ಕೂಡಿ ಯೋಜನೆಗಳಲ್ಲಿ ತೊಡಗಿಸಲ್ಪಟ್ಟು ನಾಣ್ಯ ಸಮತೋಲದಲ್ಲಿ ಯಾವ ಬದಲಾವಣೆಯೂ ಆಗದೆ ಇದ್ದರೆ ಹೀಗಾಗುವುದು. ಆದಾಯಕ್ಕಿಂತ ಹೆಚ್ಚು ಖರ್ಚು ಆದಾಗ, ದೇಶೀಯ ಬಂಡವಳ ಮತ್ತು ವಿದೇಶೀ ಸಹಾಯವೆರಡನ್ನೂ ಅದು ಮೀರಿದಾಗ, ನಮ್ಮ ಮುಂಗಡ ಪತ್ರವು ಕೊರತೆಯನ್ನು ತೋರಿಸುತ್ತದೆ, ಆಗ ನಾಣ್ಯ ಸಮತೋಲವೂ ಶಿಥಿಲವಾಗುತ್ತದೆ; ಏಕೆಂದರೆ, ನಾವು ಕಾಗದದ ರೂಪಾಯಿಗಳಿಗೆ ಶರಣು ಹೋಗಬೇಕಾಗುತ್ತದೆ: ಇದರಿಂದ ಕಾಗದದ ನೋಟುಗಳನ್ನು ಮುದ್ರಿಸುವುದು ಅಗತ್ಯವೆನಿಸುತ್ತದೆ. ಹೀಗೆ ದೇಶದಲ್ಲಿ ರೂಪಾಯಿ ತುಂಬ ಚಲಾವಣೆಯಲ್ಲಿರುತ್ತದೆ, ಅತಿಪ್ರಸರಣವಾಗುತ್ತದೆ ಆದರೆ, ಉತ್ಪಾದನೆಯು ಮಾತ್ರ ಇರುವುದಿಲ್ಲ. ಇದರಿಂದಾಗಿ ಸ್ವಾಭಾವಿಕವಾಗಿ ವಸ್ತುಗಳ ಬೆಲೆಯು ಇಳಿಯುವುದಕ್ಕೆ ಬದಲಿಗೆ ಏರುತ್ತದೆ

ಕಳೆದ ಆರು ವರ್ಷಗಳಿಂದ ಸರಕಾರವು ಯೋಜನೆಗಳಿಗಾಗಿ ಆದಾಯಕ್ಕಿಂತ ಹೆಚ್ಚಿಗೆ ಖರ್ಚ ಮಾಡಿತು. ಇದರ ಪ್ರಭಾವವು ಖಾಸಗಿ ಬಂಡವಳ ಹಾಕುವವರ ಮೇಲೂ ಬೀರಿತು, ಏಕೆಂದರೆ, ಹೀಗೆ ಬಂಡವಳ ತೊಡಗಿಸುವವರು ಅದರ ಪ್ರಭಾವದಿಂದ ಮುಕ್ತರಾಗುವುದು ಸಾಧ್ಯವಿಲ್ಲ. ಕಳೆದ ಆರು ವರ್ಷಗಳಲ್ಲಿ ತೊಡಗಿಸಲಾದ ರೂ ೪,೬೦೦ ಕೋಟಿಯೆಂಬುದು ಪ್ರಥಮ ಪಂಚವಾರ್ಷಿಕ ಯೋಜನೆಯ ಒಟ್ಟು ಹಣಕ್ಕಿಂತ ಸೇಕಡಾ ೬೦ರಷ್ಟು ಹೆಚ್ಚು. ಆದುದರಿಂದ ವಿದೇಶೀ ಬಂಡವಾಳವನ್ನು ಉಳಿಸಿಕೊಳ್ಳಲಾಯಿತು; ಕೊರತೆಯ ಅಂದಾಜು ಪತ್ರಗಳು ತಯಾರಾದುವು; ನೋಟುಗಳನ್ನು ಅಚ್ಚುಮಾಡಿ ಹಣ ವೆಚ್ಚಮಾಡಲಾಯಿತು

೧೯೫೫—೬೦ರಲ್ಲಿ ಕೊನೆಗೊಂಡ ಪಂಚವಾರ್ಷಿಕ ಯೋಜನೆಯಲ್ಲಿ ೪೫೦ ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ವಿನಿಯೋಗಿಸಲಾಯಿತು. ಮೊದಲಿನ ಅಂದಾಜಿಗಿಂತ ಇದು ೧೫೦ ಕೋಟಿ ರೂಪಾಯಿಗಳಷ್ಟು ಅಧಿಕವಾಗಿತ್ತು. ಮೊದಲಿಗೆ ರೂ ೩೫೦ ಕೋಟಿ ಕೊರತೆಯುಂಟಾಗಬಹುದೆಂದೂ ಇದನ್ನು ಇತರ ಸಾಧನಗಳಿಂದ ಗಳಿಸಬಹುದೆಂದೂ ಊಹಿಸಲಾಗಿತ್ತು. ಇದಕ್ಕಾಗಿ ಬೇಂಕುಗಳಿಂದ ಸಾಲ ತೆಗೆದುಕೊಳ್ಳಲಾಯಿತು; ಅಥವಾ ಇರುವುದಕ್ಕಿಂತ ಹೆಚ್ಚಿನ ಹಣವನ್ನು ಪಡೆದುಕೊಳ್ಳಲಾಯಿತು. ಹೀಗೆ ಹಿಂದಿನ ವರ್ಷಗಳಲ್ಲಿ ೭೫೩ ಕೋಟಿ ರೂಪಾಯಿಗಳು ಹೆಚ್ಚಿಗೆ ವೆಚ್ಚವಾದುವು; ಇದರಿಂದ ವಸ್ತುಗಳ ಬೆಲೆ ಸೇಕಡಾ ೩೨ರಷ್ಟು ಏರಿತು.

ವಿದೇಶೀ ಸಹಾಯ ಮತ್ತು ಸರಕಾರಿ ಬಂಡವಾಳದಿಂದ ನಾಣ್ಯ ಸಮತೋಲವನ್ನು ಹೇಗೆ ಉಳಿಸಿಕೊಳ್ಳಬಹುದೆಂದು ಅರಿತುಕೊಳ್ಳುವುದು ಸುಲಭ. ೧೯೫೫—೬೦ರಲ್ಲಿ ಮುಗಿದ ಐದು ವರ್ಷಗಳಲ್ಲಿ ಕೇಂದ್ರ ಸರಕಾರವು ಕೊರತೆಯ ಮುಂಗಡ ಪತ್ರವನ್ನು ತಯಾರಿಸಿ, ೧೫೫೦ ಕೋಟಿ ರೂಪಾಯಿಗಳನ್ನು ತೊಡಗಿಸಿತು. ಇದರಲ್ಲಿ ರೂ ೬೧೪ ಕೋಟಿಗಳಷ್ಟು ವಿದೇಶೀ ಸಹಾಯದ ರೂಪದಲ್ಲಿ ರಿಜರ್ವ ಬೇಂಕಿನಲ್ಲಿರುವ ಸರಕಾರಿ ಲೆಖ್ಖಕ್ಕೆ ಜಮೆಯಾಯಿತು. ಹಾಗೆಯೇ ರೂ. ೪೩೩ ಕೋಟಿಗಳ ಮೊತ್ತವು ಸರಕಾರಿ ಅನುಭೋಗಗಳಿಗೋಸ್ಕರ ವಿದೇಶೀ ವಿನಿಮಯದ ರೂಪದಲ್ಲಿ ವೆಚ್ಚವಾಯಿತು. ೧೯೫೭—೫೮ರ ವರೆಗೆ ಸಂಪೂರ್ಣ ಬಂಡವಳವು ಮುಗಿದುದರಿಂದ, ವಿದೇಶೀ ಸಹಾಯದಿಂದಲೇ ನಮ್ಮ ನಾಣ್ಯ ಸಮತೋಲವು ಉಳಿದುಕೊಂಡಿತು

ನಮ್ಮ ಮೂರನೆಯ ಯೋಜನೆಯು ಎರಡನೆಯದಕ್ಕಿಂತ ದೊಡ್ಡದು. ಇದು ನಮ್ಮ ಮಹತ್ವಾಕಾಂಕ್ಷೆಯ ದ್ಯೋತಕವೆಂಬುದು ನಿಜ. ಆದರೆ ಅದರ ಸ್ವರೂಪವು ಅವ್ಯವಹಾರ್ಯವೆನಿಸುತ್ತದೆ. ಈ ವರೆಗಿನ ಅನುಭವದಿಂದ ಪ್ರತಿ ವರ್ಷ ಸೇಕಡಾ ೭.೫ರಷ್ಟು ಹೆಚ್ಚುತ್ತಿದ್ದ ರಾಷ್ಟ್ರೀಯ ಆದಾಯವು ಪ್ರತಿವರ್ಷವೂ ನೂರಕ್ಕೆ ೬.೫ರಷ್ಟು ಏರುವುದೆಂದು ಅಂದಾಜು ಮಾಡಿದ್ದಾರೆ. ಆಗ, ಅಂತಿಮ ವರ್ಷದಲ್ಲಿ ರಾಷ್ಟ್ರೀಯ ಆದಾಯವು ೧೩,೦೦೦ ಕೋಟಿ ರೂಪಾಯಿಗಳಿಂದ ರೂ. ೧೫,೪೦೦ ಕೋಟಿಗಳಷ್ಟಾಗುವುದು. ಆದರೆ, ಇದೂ ಅಸ್ಪಷ್ಟವಾಗಿಯೇ ಉಳಿಯುತ್ತದೆ. ವಿದೇಶೀ ಸಹಾಯವು ರೂ ೩,೨೦೦ ಕೋಟಿ ದೊರೆಯಬಹುದೆಂದು ಈಗ ತಿಳಿಯಲಾಗಿದೆ. ನಮ್ಮ ದೇಶದಲ್ಲಿನ ಸುರಕ್ಷಿತ ಬಂಡವಳವು ರೂ ೨೫೨ ಕೋಟಿಗಳು. ಯೋಜನಾಪೂರ್ತಿಗೆ ದೊಡ್ಡ ಮೊತ್ತವು ಕಡಿಮೆ ಬೀಳುವುದು. ಈ ಕೊರತೆಯು ಹೇಗೆ ತುಂಬುವುದೆಂಬುದಕ್ಕೆ ವ್ಯಾವಹಾರಿಕ ಸಮಾಧಾನವು ನಮ್ಮ ಮುಂದಿರುವುದಿಲ್ಲ

ವಿದೇಶೀ ಸಹಾಯ ಪಡೆಯುವಲ್ಲಿ ಅನೇಕ ಅಡೆತಡೆಗಳಿವೆ. ಅಮೆರಿಕೆಯ ಡಾಲರುಗಳ ಮೂಲ್ಯ ಸ್ಥಿರತೆಯು ಡೋಲಾಯಮಾನವಾಗಿದೆ. ಆಫ್ರಿಕದಲ್ಲಿನ ಸ್ವಾತಂತ್ರ್ಯಾಂದೋಲನದ ಕೂಗು ವಿದೇಶೀ ಸಹಾಯದ ಮೇಲೆ ಪ್ರಭಾವ ಬೀರುತ್ತದೆ. ನಾವು ನಮ್ಮ ದೊಡ್ಡ ದೊಡ್ಡ ಆವಶ್ಯಕತೆಗಳಿಗನುಸಾರವಾಗಿ ವಿದೇಶಗಳಿಂದ ಸಂಪೂರ್ಣ ಹಣವನ್ನು ಪಡೆಯಬಲ್ಲೆವೆ —ಎಂಬ ವಾಸ್ತವಿಕ ಪ್ರಶ್ನೆಗೆ ಸಹಜವಾದ ಉತ್ತರವಿಲ್ಲ. ಹಾಗಿರುವಾಗ ದೇಶದ ಸಾಧನಗಳನ್ನೇ ನಾವು ಹೊಂದಿಕೊಂಡಿರಬೇಕಾಗುತ್ತದೆ ರಾಷ್ಟ್ರೀಯ ಉಳಿತಾಯದಲ್ಲಿ ಅಧಿಕಾಧಿಕ ಹೆಚ್ಚುವರಿಯಾಗಬೇಕು; ಆದರೆ, ಉಳಿತಾಯದ ಪ್ರತಿಶತ ನಮ್ಮಲ್ಲಿ ಅತ್ಯಲ್ಪ. ೧೯೫೦-೫೧ರಲ್ಲಿ ಉಳಿತಾಯವು ನೂರಕ್ಕೆ ೬.೯ ಇದ್ದರೆ, ಇಂದು ಅದು ೭.೫ ಮಾತ್ರವಿದೆ

೧೯೫೧-೫೨ರಿಂದ ೧೯೫೯-೬೦ರ ವರೆಗೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಟ್ಟು ೫೯೭ ಕೋಟಿ ರೂಪಾಯಿಗಳ ಆಯವಾಯಿತು ಮತ್ತು ರೂ ೭೨೭ ಕೋಟಿ ವಾರ್ಷಿಕ ವೆಚ್ಚವೂ ಆಯಿತು. ಹೆಚ್ಚಿದ ಆಯವಾದರೂ ಬಂಡವಾಳವೆನಿಸಲಿಲ್ಲ. ಆದುದರಿಂದ ಅನೇಕ ಪ್ರಕಾರದ ತೆರಿಗೆಗಳನ್ನು ಹೇರಲಾಯಿತು

ಮೂರನೆಯ ಯೋಜನೆಯಲ್ಲಿ ನಾಣ್ಯ ಸಮತೋಲ ಮತ್ತು ಅದರ ದುಷ್ಪರಿಣಾಮಗಳ ಹೆದರಿಕೆ ತುಂಬ ಇದೆ. ನಾಣ್ಯ ಸಮತೋಲದ ಹೀನ ಸ್ಥಿತಿಯು ಕೊನೆಗೊಳ್ಳುವ ಲಕ್ಷಣಗಳು ಗೋಚರವಾಗುವುದಿಲ್ಲ. ಪರ್ಮಿಟ್, ಲೈಸೆನ್ಸ್ ಮತ್ತು ಕಂಟ್ರಾಕ್ಟುಗಳ ವ್ಯವಹಾರವು ವಿಭಿನ್ನ ಸ್ವಾರ್ಥಗಳಿಗೆ ಆಶ್ರಯ ಕೊಡುತ್ತದೆ. ಇದರಿಂದ ಲಂಚ ಪ್ರಪಂಚವು ಬೆಳೆಯುತ್ತದೆ; ಉತ್ಪಾದನೆಗೂ ಭಂಗ ಬರುತ್ತದೆ.

(೬ನೇ ಪುಟ ನೋಡಿರಿ)

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!
ಉಡುಪಿ ಕರ್ನಾಟಕ ಸಂಘದ ಮೂರು ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ
ಲೇಖಕರು: ರಾ. ರಾಘವೇಂದ್ರ ಆಚಾರ್ಯ, ಎಂ. ಎ.
ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು ಅವುಗಳ ಹಿಂದಿರುವ ತತ್ವಗಳು ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು
ಲೇಖಕರು ಡಾ| ಕೆ. ಎಲ್ ಐತಾಳ, ಎಂ. ಬಿ. ಬಿ ಎಸ್.
ಉಡುಪಿ ನಗರ ಸಭಾಧ್ಯಕ್ಷರು
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ
ಲೇಖಕರು ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್ ಬಿ
ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩=೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು
ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ
ವಿಚಾರಿಸಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೧೭-೫-'೬೭	೩೬

ನೂತನ ರಾಷ್ಟ್ರಪತಿ

ತತ್ವಜ್ಞಾನಿ ಪ್ಲೇಟೊವು ರಾಜ ಮಹಾರಾಜರು ತತ್ವಜ್ಞಾನಿಗಳಾಗಿರಬೇಕೆಂದು ಅಥವಾ ತತ್ವಜ್ಞಾನಿಗಳೂ ರಾಜ ಮಹಾರಾಜರಾಗಬೇಕೆಂದು ಹಲವು ಶತಮಾನಗಳಿಗೆ ಮೊದಲೇ ನುಡಿದಿದ್ದನು. ಅಂದಿನಿಂದ ಇಂದಿನ ವರೆಗೆ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ನೂರಾರು ರಾಜಮಹಾರಾಜರು ಆಗಿ ಹೋದರು. ಇವರಲ್ಲಿ ತತ್ವಜ್ಞಾನಿಗಳಾಗಿದ್ದವರು ಎಷ್ಟು ಮಂದಿ? ಇಂಗ್ಲೆಂಡಿನ ದೊಡ್ಡ ದರ್ಶನ ಶಾಸ್ತ್ರಜ್ಞರಾದ ಬರ್ಟ್ರೆಂಡ್ ರಸ್ಸೆಲರು ಹೇಳುವಂತೆ, ಮಹಾ ದಾರ್ಶನಿಕನೊಬ್ಬನನ್ನು ರಾಷ್ಟ್ರದ ಮಹೋನ್ನತ ಪದವಿಗೆ ಆಯ್ದುಕೊಂಡ ಕೀರ್ತಿಯು ಭಾರತದ ಜನತೆಗೆ ಸೇರಿದೆ. ಡಾ। ರಾಧಾಕೃಷ್ಣನ್‌ರವರು ದರ್ಶನ ಶಾಸ್ತ್ರಜ್ಞರು, ಮಹಾ ಮೇಧಾವಿಗಳು ಮತ್ತು ಉಚ್ಚ ಮಟ್ಟದ ರಾಜಕಾರಣಿಗಳು, ಬ್ರಿಟನ್ನಿನ ಮಾಜಿ ಪ್ರಧಾನಿ ಅರ್ಲ್ ಆಟ್ಲಿಯವರೆನ್ನುವಂತೆ, 'ಪೂರ್ವ ಮತ್ತು ಪಶ್ಚಿಮದ ದರ್ಶನ ಶಾಸ್ತ್ರಗಳ ನಡುವಣ ಸೇತು'ವೆನಿಸಿದ ಇವರ ಆಯ್ಕೆಗಿಂತ ಉತ್ತಮವಾದುದು ಪ್ರಸಕ್ತ ಭಾರತದಲ್ಲಿ ಇಲ್ಲವೆನ್ನಬಹುದು. ವಿಶ್ವದಾದ್ಯಂತದ ಹಲವಾರು ರಾಷ್ಟ್ರ ಪ್ರಮುಖರೆಲ್ಲರೂ ಡಾ। ರಾಧಾಕೃಷ್ಣನ್ನರು ಭಾರತದ ಅಧ್ಯಕ್ಷರಾಗಿ ಚುನಾವಣೆಗೊಂಡುದರಿಂದ ತೃಪ್ತರಾಗಿದ್ದಾರೆ

೧೯೫೦ರ ಜನವರಿ ೨೬ರಂದು ರೂಪಿತಗೊಂಡ ನಮ್ಮ ಪ್ರಜಾಸತ್ತೆಯ ಪ್ರಥಮ ರಾಷ್ಟ್ರಪತಿಗಳಾಗಿ ಆಯ್ಕೆಯಾದ ಡಾ। ರಾಜೇಂದ್ರ ಪ್ರಸಾದರು ಆ ಹುದ್ದೆಗೆ ಏರುವುದಕ್ಕೆ ಸ್ವಾತಂತ್ರ್ಯ ಪೂರ್ವದಲ್ಲಿ ಅವರು ನಾಡಿಗೆ ಸಲ್ಲಿಸಿದ ಅಪೂರ್ವ ಸೇವೆಯೇ ಕಾರಣವಾಗಿತ್ತು. ದೊಡ್ಡ ರಾಷ್ಟ್ರೀಯ ವಾದಿಗಳಾದ ಪ್ರಸಾದರು ತಮ್ಮ ೧೨ ವರ್ಷಗಳ ಅಧಿಕಾರಾವಧಿಯಲ್ಲಿ ತಮ್ಮ ಕರ್ತವ್ಯಗಳನ್ನು ಯಥೋಚಿತವಾಗಿ ನಿರ್ವಹಿಸಿದ್ದಾರೆ. ಇವರ ಉತ್ತರಾಧಿಕಾರಿಯಾಗಿ ಬಂದಿರುವ ಡಾ। ರಾಧಾಕೃಷ್ಣನ್ನರು ಪ್ರಸಿದ್ಧ ದಾರ್ಶನಿಕನೆಂದು ಮೊದಲೇ ಹೆಸರಾಗಿದ್ದರೂ ರಾಜಕೀಯದಲ್ಲಿ ಅವರು ಹೊಸಬರಿದ್ದರು. ಆದರೆ, ಕಾರಣಾಂತರದಿಂದ ರಾಜಕಾರಣದಲ್ಲಿ ಪಾದಾರ್ಪಣ ಮಾಡಿದ ಇವರು ದೇಶದ ಕೆಲವೇ ಮಂದಿ ಸಮರ್ಥ ರಾಜಕಾರಣಿಗಳಲ್ಲಿ ಒಬ್ಬರೆಂಬುದು ಅವರು ಉಪರಾಷ್ಟ್ರಪತಿಯಾಗಿ ದುಡಿದಾಗ ಸಿದ್ಧವಾಯಿತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಾಡಿನ ಸೇವೆಯನ್ನು ಸಲ್ಲಿಸುವಲ್ಲಿ ದೀಕ್ಷಾಬದ್ಧರಾದ ಇವರನ್ನು ಭಾರತೀಯರು ಉನ್ನತಾಧಿಕಾರಕ್ಕೆ ಏರಿಸಿ ತಮ್ಮ ಗೌರವಾದರಗಳನ್ನು ಪ್ರದರ್ಶಿಸಿದರೆನ್ನಬಹುದು. ಪ್ರಾಧ್ಯಾಪಕರ ಪದದಿಂದ ರಾಷ್ಟ್ರಪತಿ ಪದವಿಯನ್ನು ಏರಿದಂತಹ ಸಂದರ್ಭಗಳು ಪ್ರಾಯಃ ತೀರ ಅಪರೂಪ. ಸ್ವಾತಂತ್ರ್ಯ ಪೂರ್ವಾವಧಿಯಲ್ಲಿಯೇ ಪಾಶ್ಚಾತ್ಯರು ದಾರ್ಶನಿಕ ಮತ್ತು ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿಚಾರಧಾರೆಗಳ ಸಮದರ್ಶಿಯೆಂದು ಡಾ. ರಾಧಾಕೃಷ್ಣನ್ನರನ್ನು ತಿಳಿದುಕೊಂಡಿದ್ದರೆ, ಅವರನ್ನು ಉನ್ನತ ರಾಜಕಾರಣಿ, ಆದರ್ಶ ಪ್ರಜಾಪ್ರಭುತ್ವವಾದಿಯೆಂಬುದನ್ನು ಭಾರತವೀಗ ಸಾರಿಹೇಳಿದಂತಾಯಿತು. ಈಗ, ತನ್ನ ಪ್ರಜಾಜನರಿಂದ ನೀಡಲಾದ ರಾಷ್ಟ್ರಪತಿ ಭವನದ ಹುದ್ದೆಯನ್ನು ಸ್ವೀಕರಿಸಿ, ತನ್ನ ಅಧಿಕಾರಾವಧಿಯಲ್ಲಿ ತನ್ನ ಈ ಗುಣಗಳನ್ನು ಮತ್ತಷ್ಟು ಪ್ರದರ್ಶಿಸುವ ಅವಕಾಶವು ಅವರಿಗೆ ದೊರಕಿದೆ.

ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಅಧ್ಯಕ್ಷ ಪದವಿಗೆ ರಾಷ್ಟ್ರದ ಕಾರ್ಯಾಂಗದ ಪ್ರಮುಖನೆಂಬುದರಿಂದ ಎಲ್ಲ ಹೊಣೆಗಾರಿಕೆಗಳೂ ಸೇರಿಕೊಂಡಿವೆ. ನಮ್ಮಲ್ಲಿ ಹಾಗಿಲ್ಲವೆಂದ ಮಾತ್ರಕ್ಕೆ ಈ ಹುದ್ದೆಯು ಅಲಂಕಾರಿಕವೆನ್ನುವುದು ಸರಿಯಲ್ಲ. ರಾಷ್ಟ್ರದ ಪ್ರಥಮ ಪ್ರಜೆಯೆನ್ನುವ, ರಾಷ್ಟ್ರದ ಪ್ರತಿನಿಧಿಯೆನ್ನುವ ಸೈದ್ಧಾಂತಿಕ ಮಹತ್ವವು ಮಾತ್ರವಲ್ಲದೆ, ಗೌರವಪ್ರದವಾಗಿ ನಿರ್ವಹಿಸಬೇಕಾದ ಹಲವಾರು ಕರ್ತವ್ಯಗಳು ರಾಷ್ಟ್ರಪತಿಗಳಿಗಿವೆ. ಇಂಗ್ಲೆಂಡಿನ ರಾಜ ಇಲ್ಲವೇ ರಾಣಿಯರ ಸ್ಥಾನಮಾನಗಳೇ ಭಾರತದ ರಾಷ್ಟ್ರಪತಿಗಳಿಗಿವೆ. ಸಂವಿಧಾನದನ್ವಯ "ಮಾರ್ಗದರ್ಶನ ಮಾಡುವುದು' ಇವರ ಅಧಿಕಾರ ಕಕ್ಷೆಯಲ್ಲಿ ಸೇರುತ್ತದೆ. ಸಾಮಾನ್ಯವಾಗಿ ಲೋಕ ಸಭೆ ಇಲ್ಲವೇ ರಾಜ್ಯ ಸಭೆಯಲ್ಲಿಯ ಚರ್ಚೆಯಂತೆ ಅವರು ಈ ಅಧಿಕಾರವನ್ನು ಸಾರ್ವಜನಿಕವಾಗಿ ಬಳಸಿಕೊಳ್ಳುವುದಿಲ್ಲ; ಅವರ ಕಾರ್ಯಗಳು ತೆರೆಯ ಮರೆಯಲ್ಲಿಯೇ ನಡೆಯುತ್ತಿವೆಯಾದರೂ ಅವು ಮಹತ್ವಪೂರ್ಣವೆಂಬುದನ್ನು ಅಲ್ಲಗಳೆಯುವಂತಿಲ್ಲ. ನಿವೃತ್ತ ಅಧ್ಯಕ್ಷ ಪ್ರಸಾದರ ಮಾರ್ಗದರ್ಶನ ಮತ್ತು ಸಲಹೆಗಳು ತನಗೆ ಹೇಗೆ ಲಭಿಸಿದುವೆಂದು ಪ್ರಧಾನಿ ನೆಹರು ಬಹಿರಂಗಪಡಿಸಿದ್ದಾರೆ; ಇದೇ ರೀತಿ ಡಾ। ರಾಧಾಕೃಷ್ಣನ್ನರೂ ತಮ್ಮ ಸ್ವಯಂ ಪ್ರತಿಭೆ, ವಿಶಾಲ ಪ್ರವಾಸಾನುಭವ, ಯಾವುದೇ ಊರಿನ ಜನತೆಯೊಡನೆ ಗೆಳೆತನ ಬೆಳೆಸುವ ಸದಿಚ್ಛೆಗಳಿಂದ, ರಾಷ್ಟ್ರೀಯವಾಗಿ ಮತ್ತು ಅಂತಾರಾಷ್ಟ್ರೀಯವಾಗಿ ಸರಕಾರವನ್ನೂ ದೇಶವನ್ನೂ ಸನ್ಮಾರ್ಗದಲ್ಲಿ ಮುಂದೊಯ್ಯುವರೆಂದು ಆಶಿಸಬಹುದು.

ಕಳೆದ ಹದಿನೈದು ವರ್ಷಗಳಲ್ಲಿ ನಾವು ಅತ್ಯದ್ಭುತ ಸಾಧನೆಗಳನ್ನು ಮಾಡಿರುವುದು ನಿಜವಾದರೂ ಇಂದಿಗೂ ನಾವು ಒಂದಲ್ಲ ಹತ್ತು ಸಮಸ್ಯೆಗಳನ್ನು ಎದುರಿಸುತಿದ್ದೇವೆ. ಅಪ್ರಾಮಾಣಿಕತೆ, ಸ್ವಾರ್ಥಾಂಧತೆ, ಅಧಿಕಾರಕ್ಕಾಗಿ ಅನುಚಿತ ಸ್ಪರ್ಧೆ, ಪಕ್ಷ ವಿಪಕ್ಷಗಳ ತೀವ್ರ ಮೇಲಾಟ, ತಮ್ಮ ಪ್ರತಿಯೊಂದು ಆವಶ್ಯಕತಾ ಪೂರ್ತಿಗೂ ಸರಕಾರವನ್ನೇ ಎದುರು ನೋಡುತ್ತಿರುವ ಜನತೆಯ ಪರಾಙ್ಮುಖತೆ—ಮೊದಲಾದುವೆಂದು ದೇಶ ವ್ಯಾಪಿಯಾಗಿವೆ. ಸ್ವಾತಂತ್ರ್ಯ ಸಮರವನ್ನು ಹೂಡುತಿದ್ದಾಗ, ನಮ್ಮ ಜನತೆಯು ಪ್ರಾಮಾಣಿಕವಾಗಿ, ನಿಸ್ವಾರ್ಥವಾಗಿ, ಯಾವುದೇ ಭೇದಭಾವವಿಲ್ಲದೆ ಸ್ವೇಚ್ಛೆಯಿಂದ ಕರ್ತವ್ಯವೆಂದು ತಿಳಿದು ತಮ್ಮ ತಮ್ಮ ಕೆಲಸಗಳನ್ನು ಮಾಡುತಿತ್ತು. ಅಂತಹ ಒಂದು ಐಕ್ಯಕೂಟವನ್ನು ಮರಳಿ ಪುನರುಜ್ಜೀವನಗೊಳಿಸುವುದೇ ಇಂದು ನಮ್ಮ ಪ್ರಥಮಾವಶ್ಯಕತೆಯಿದೆ. ರಾಷ್ಟ್ರೀಯ ಐಕ್ಯದ ಮೂಕುಕತೆಯು ತೀವ್ರವಾಗುತ್ತ ಬರುತ್ತಿರುವ ಇಂದಿನ ದಿನಗಳಲ್ಲಿ ಭಾರತೀಯ ಜನತೆಯು ಈ ದಿಸೆಯಲ್ಲಿ ತನಗೆ ಮಾರ್ಗದರ್ಶನ ಮಾಡುವಂತೆ ಡಾ. ರಾಧಾಕೃಷ್ಣನ್ನರತ್ತ ದೃಷ್ಟಿಹರಿಸುವುದು ಸ್ವಾಭಾವಿಕ.

ದೇಶದಲ್ಲಿ ಐಕ್ಯವು ಸರ್ವತ್ರ ಮೂಡಿಬರಬೇಕಾದರೆ, "ಸಮಾಜದಲ್ಲಿಯ ಅಸಮಾನತೆ ಅಳಿಯಬೇಕು; ಪಂಗಡ ಮತ್ತು ಜಾತೀಯ ನಿಷ್ಠೆಗಳು ದೂರವಾಗಬೇಕು; ಜನತೆಯ ಎಲ್ಲ ವರ್ಗದವರಿಗೂ ಮುಂದುವರಿಯುವ ಸಮಾನಾವಕಾಶಗಳನ್ನು ಒದಗಿಸಬೇಕು; ಶಾಪ ಸದೃಶವಾದ ಬಡತನ ಮತ್ತು ನಿರುದ್ಯೋಗಗಳು ಮಾಯವಾಗುವಂತೆ ಶಕ್ತಿ ಮೀರಿ ಪ್ರಯತ್ನಿಸಬೇಕು „ ಎಂಬುದಾಗಿ ಡಾ। ರಾಧಾಕೃಷ್ಣನ್ ಹೇಳುತ್ತಾರೆ. ತಮ್ಮ ಬುದ್ಧಿಮತ್ತೆಯಿಂದ ಸಂಕ್ರಾಂತಿಯ ಗಡುವಿನಲ್ಲಿ ಮುನ್ನಡೆಯುವ ಭಾರತಕ್ಕೆ ಸೂಕ್ತ ಮಾರ್ಗದರ್ಶನ ಮಾಡುವರೆಂದು ನಂಬಬಹುದು. ಡಾ। ರಾಧಾಕೃಷ್ಣನ್ ಮತ್ತು ಪ್ರಧಾನಿ ನೆಹರು ಸಮವಯಸ್ಕರು. ಇವರಿಬ್ಬರ ದೂರದೃಷ್ಟಿಯಿಂದ ಭಾರತವು ಅಭಿವೃದ್ಧಿ ಪಥಗಾಮಿಯಾಗುವುದೆಂದು ಹಾರೈಸಿ, ನಿವೃತ್ತ ರಾಷ್ಟ್ರಪತಿ ರಾಜೇಂದ್ರ ಪ್ರಸಾದರನ್ನು ನೆನೆದು ನೂತನ ಅಧ್ಯಕ್ಷರನ್ನು ಅಭಿನಂದಿಸುತ್ತೇವೆ.

ಮರಾಠರ ದುರ್ವರ್ತನೆ

ಗೋವೆಯನ್ನು ಪೋರ್ಚುಗೀಸರ ಬಂಧನದಿಂದ ಬಿಡುಗಡೆಗೊಳಿಸಿದ ದಿನದಿಂದಲೇ ನಮ್ಮಲ್ಲಿ ಅದರ ಸಂಬಂಧದ ವಾದ ವಿವಾದಗಳು ಎದ್ದಿವೆ. ಅದು ನೆರೆಯ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ಯಾವುದಕ್ಕೆ ಸೇರಬೇಕೆಂದು ಯಾರೊಬ್ಬರೂ ಕೇಳಿರದಿದ್ದರೂ ಎರಡೂ ರಾಜ್ಯಗಳವರು ಅದು ತಮ್ಮದು ತಮ್ಮದು ಎಂದು ಹೇಳತೊಡಗಿದ್ದಾರೆ ಗೋವೆಯಲ್ಲಿ ನಡೆದು ಬರುತ್ತಿರುವ ವಿಶಿಷ್ಟ ಸಂಪ್ರದಾಯಗಳಿಂದಾಗಿ, ಅವನ್ನು ಉಳಿಸುವ ಸದುದ್ದೇಶದಿಂದ ಕೇಂದ್ರಾಡಳಿತವಿರುವ ಪ್ರತ್ಯೇಕ ರಾಜ್ಯವನ್ನಾಗಿ ಇರಿಸುವ ಆಶಯವನ್ನು ಪ್ರಧಾನಿಗಳು ಹೊರಗೆಡಹಿದ್ದಾರೆ. ಗೋಮಾಂತಕರಲ್ಲಿ ಹಲವರು ಪ್ರತ್ಯೇಕತೆಗೆ ಮನ್ನಣೆ ಕೊಟ್ಟವರಿದ್ದಾರೆ. ಅಲ್ಲಿ ಕೊಂಕಣಿ ಭಾಷೆಯನ್ನು ಸರಕಾರಿ ಭಾಷೆಯನ್ನಾಗಿ ಮಾಡಬೇಕೆಂದೂ ಕೇಳಿಕೊಂಡವರಿದ್ದಾರೆ; ಅದೇನೇ ಇದ್ದರೂ ಇನ್ನೂ ಯಥಾ ಸ್ಥಿತಿಗೆ ಅಲ್ಲಿನ ವ್ಯವಸ್ಥೆಯು ಸಂಪೂರ್ಣ ಬರುತ್ತಿರುವಾಗಲೇ ಮಹಾ ರಾಷ್ಟ್ರೀಯರು ದುಡುಕಿ, ಅದನ್ನು ಕಬಳಿಸಿಕೊಳ್ಳುವ ಹವಣಿಕೆಯಲ್ಲಿರುವುದು ನಿಜವಾಗಿ ಖಂಡನಾರ್ಹ. ಗೋಮಾಂತಕರ ಭವಿಷ್ಯವನ್ನು ಕರ್ನಾಟಕದವರಾಗಲಿ, ಮಹಾರಾಷ್ಟ್ರೀಯರಾಗಲೀ ರೂಪಿಸುವುದಲ್ಲ; ಸ್ವಯಂ ಗೋಮಾಂತಕರೂ ಕೇಂದ್ರ ಸರಕಾರವೂ ನಿರ್ಧರಿಸಬೇಕಾದ ಪ್ರಶ್ನೆಗಳಿಗೆ ಇತರರು ಕೈ ಹಾಕಿ ಅದನ್ನು ಮತ್ತಷ್ಟು ಬಿಗಟನ್ನಾಗಿ ಮಾಡುವುದು ಉಚಿತವಲ್ಲ.

ಜಗತ್ಪರ್ಯಟನ

ಝಾಕೀರ ಹುಸೇನ

ಉನ್ನತ ರಾಷ್ಟ್ರೀಯ ವಾದಿಗಳೆನಿಸಿದ ಡಾ। ಝಾಕೀರ ಹುಸೇನರ ಆಯುಷ್ಯವು ಶಿಕ್ಷಣ ಕ್ಷೇತ್ರದಲ್ಲಿಯೇ ಸವೆದಿದ್ದರೂ ಬಿಹಾರದ ರಾಜ್ಯಪಾಲರಾಗಿ ಅವರು ದಕ್ಷ ಆಡಳಿತಗಾರರೆಂದು ಹೆಸರು ಪಡೆದಿದ್ದಾರೆ. ಭಾರತದಲ್ಲಿ ಯೋಗ್ಯತೆಗೆ ಬೆಲೆಕೊಡಲಾಗುವುದು ಎಂಬುದನ್ನು ಸಿದ್ಧಮಾಡಿ ಕೊಡುವುದಕ್ಕೆ ಪೂರಕವಾಗಿ ಅವರು ದೇಶದ ಉಪರಾಷ್ಟ್ರಪತಿಯಾಗಿ ಆಯ್ಕೆಗೊಂಡು ಅಧಿಕಾರ ವಹಿಸಿಕೊಂಡಿದ್ದಾರೆ. ಸ್ಥಾನಬಲದಿಂದ ರಾಜ್ಯ ಸಭೆಯ ಅಧ್ಯಕ್ಷರೂ ಆಗಿರುವ ಇವರು ಡಾ। ರಾಧಾಕೃಷ್ಣನ್ನರ ಉತ್ತರಾಧಿಕಾರಿಯಾಗಿ ಸಂಪ್ರದಾಯವನ್ನು ಮುಂದುವರಿಸುವರೆಂಬುದರಲ್ಲಿ ಸಂಶಯವಿಲ್ಲ.

ಅನಂತಶಯನಂ

ದಕ್ಷಿಣ ಭಾರತೀಯರೊಬ್ಬರು ರಾಜ್ಯಪಾಲರಾಗುವುದು ಬಿಹಾರದಲ್ಲಿ ಮೊಟ್ಟಮೊದಲಿಗೆ ಆದರೂ ಅನಂತಶಯನಂ ಅಯ್ಯಂಗಾರರಂತಹ ಆದರ್ಶ ವ್ಯಕ್ತಿಯ ಮಾರ್ಗದರ್ಶನ ಪಡೆದುದು ಜನರ ಸೌಭಾಗ್ಯವೆನ್ನಬೇಕು. ನಿಷ್ಪಕ್ಷಪಾತತನಕ್ಕೆ ಹೆಸರಾದ ಐಯ್ಯಂಗಾರರು ಬಿಹಾರದ ರಾಜಧಾನಿ ಮುಟ್ಟುವಾಗಲೇ ಹೂಮಳೆ ಸುರಿಯಿತಂತೆ. ಪ್ರಶಾಸನದ ವ್ಯವಸ್ಥೆಯಲ್ಲಿರಬಹುದಾದ ಕೊಳಕುಗಳನ್ನೂ ಕಿತ್ತು ಬಿಡುವ ಶಕ್ತಿವಂತರಾದ ಇವರು ಮನಸ್ಸಿಲ್ಲದ ಮನಸ್ಸಿನಿಂದ ಈ ನಿಯುಕ್ತಿಯನ್ನು ಒಪ್ಪಿಕೊಳ್ಳಬೇಕಾಯಿತು. ದೇಶದ ಹಿತವನ್ನೆ ಸಾಧಿಸುವುದಕ್ಕೆ ಸದಾ ಉತ್ಸಾಹ ತೋರಿಸುವ ಐಯ್ಯಂಗಾರರು ನೆಹರುಗಳ ಮಾತಿನಂತೆ ರಾಜ್ಯಪಾಲ ಪದವಿಯನ್ನು ಸ್ವೀಕರಿಸಿದ್ದಾರೆ.

ಶಿವಪ್ಪ ರುದ್ರಪ್ಪ ಕಂಠಿ

ಕರ್ನಾಟಕದ ಮುಖ್ಯ ಮಂತ್ರಿ ಕಂಠಿಯವರಿಗೆ ತಮ್ಮ ಅಧಿಕಾರಾವಧಿಯು ಸಂಧ್ಯಾ ಕಾಲ ಪ್ರಾಪ್ತವಾಗಿದೆಯೆಂದು ಗೊತ್ತಾಗಿರುವುದಾದರೂ ಗೋವೆಯನ್ನು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸುವ ಆಶಯದಿಂದ ಅಲ್ಲಿ ಉಂಟಾಗಿರುವ ರಹಸ್ಯ ಪ್ರಯತ್ನಗಳನ್ನು ಪ್ರಧಾನಿ ನೆಹರುಗಳಿಗೆ ತಿಳಿಸಿ ತಮ್ಮ ಸರಕಾರದ ವಿರೋಧವನ್ನು ವ್ಯಕ್ತಪಡಿಸಿರುವುದು ಸ್ತುತ್ಯಾರ್ಹ. ಸದ್ಯದಲ್ಲಿಯೇ ನಾಗರಿಕ ಆಡಳಿತೆಯು ಸ್ಥಾಪಿತವಾಗಲಿರುವ ಗೋವೆಯು ಮಿಲಿಟರಿ ರಾಜ್ಯಪಾಲರ ಬದಲಿಗೆ ಲೆಪ್ಟಿನೆಂಟ ರಾಜ್ಯಪಾಲರನ್ನು ಪಡೆಯಲಿರುವ ಸಂದರ್ಭದಲ್ಲಿ ನಾಗರಿಕಾಧಿಕಾರಿಗಳ ನಿಯುಕ್ತಿಯ ಸಂಬಂಧದಲ್ಲಿಯೂ ಉಭಯ ರಾಷ್ಟ್ರಗಳಲ್ಲಿ ಅಭಿಪ್ರಾಯ ಭೇದವು ಕಂಡು ಬಂದಿದೆ. ಭಾವಿ ಮುಖ್ಯ ಮಂತ್ರಿ ನಿಜಲಿಂಗಪ್ಪನವರಿಗೆ ಮಾರ್ಗ ಸುಲಭವಾಗಲೆಂದು ಕಂಠಿಯವರು ಈಗಲೇ ಈ ಹೆಜ್ಜೆ ಇಟ್ಟಿದ್ದಾರೆಂದು ಹೇಳಬಹುದು.

ರಾಜೇಂದ್ರ ಪ್ರಸಾದ

ನಿವೃತ್ತ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಸದಕತ್ ಆಶ್ರಮವನ್ನು ಸೇರಿದರು. ಅಧಿಕಾರವನ್ನು ಸುಯೋಗ್ಯ ವ್ಯಕ್ತಿಯೊಬ್ಬನಿಗೆ ಒಪ್ಪಿಸಿಕೊಡುವ ಅವಕಾಶ ಅವರಿಗೆ ಪ್ರಾಪ್ತವಾಯಿತು. ಹನ್ನೆರಡು ವರ್ಷಗಳ ಕಾಲ ಉನ್ನತ ಪದವಿಯಲ್ಲಿ ವಿರಾಜಮಾನರಾದ ಪ್ರಸಾದರು ಇನ್ನು ಮುಂದೆ ಜನಸೇವೆಯಲ್ಲಿ ತೊಡಗುವರೆಂದು ತಿಳಿಯುತ್ತದೆ. ಹಿಂದಿನ ಎಲ್ಲ ಸಂಪ್ರದಾಯಗಳನ್ನು ಮುರಿದು ಹೊಸ ರಾಷ್ಟ್ರಪತಿಯವರಿಗೆ ಅಧಿಕಾರವನ್ನು ಒಪ್ಪಿಸಿಕೊಟ್ಟು ಅವರು ತೆರಳಿದರು; ಭಾರತೀಯ

(೭ನೇ ಪುಟಕ್ಕೆ)

ಅಲ್ಲಲ್ಲಿಯ ಸುದ್ದಿ ಸಾರ

ನಗಾದಿ ತಗಾದೆ ನಾಟಕ ಪ್ರದರ್ಶನೆ—ಉಡುಪಿಯ ಡಾ। ಸುಂದರರಾಜು ಸ್ಮೃತಿ ಸ್ಮಾರಕ ಬಯಲುರಂಗ ಮಂಟಪದಲ್ಲಿ ಇದೇ ತಾ. 5, 6 ಹಾಗೂ 7ರಂದು ನಗಾದಿ ತಗಾದೆ ಎಂಬ ನಗೆ ನಾಟಕವು ಶ್ರೀ ರಮಾನಂದ ಚೂರ್ಯರ ನಿರ್ದೇಶಕತ್ವದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು. ಜನಾದರಣೀಯವಾಗಿ ಹಾಗೂ ಕಲಾಪೂರ್ಣವಾಗಿ ಅಭಿನಯಿಸಲ್ಪಟ್ಟ ಈ ನಾಟಕದ ನಿರ್ದೇಶಕರಾದ ಮಂಗಳೂರಿನ ಶ್ರೀ ರಮಾನಂದ ಚೂರ್ಯರನ್ನು ಡಾ. ಕೆ. ಎಲ್. ಐತಾಳರು ಅಭಿನಂದಿಸಿ ಅಭಿನಯಪಟುಗಳಾದ ಶ್ರೀ ಚೂರ್ಯರು ಕರ್ನಾಟಕ ರಂಗಭೂಮಿಯ ಸೇವೆಯನ್ನು ವಿಶೇಷವಾಗಿ ಮಾಡುವಂತಾಗಲೆಂದರು. ಶ್ರೀ ಚೂರ್ಯರು ಉಡುಪಿಯ ಕಲಾಪ್ರಿಯರು ಕೊಟ್ಟ ಪ್ರೋತ್ಸಾಹ ಸಹಕಾರಗಳಿಗಾಗಿ ವಂದನೆಗಳನ್ನು ಸಲ್ಲಿಸಿದರು.

ಪ್ರಮಾಣಪತ್ರ ವಿತರಣೆ—ಉಡುಪಿಯ ಹಿಂದೀ ಪ್ರಚಾರ ಸಮಿತಿಯ ವಾರ್ಷಿಕೋತ್ಸವ ಮತ್ತು ಪ್ರಮಾಣಪತ್ರ ವಿತರಣೋತ್ಸವವು ಶ್ರೀ ವರದೇಂದ್ರ ಕಲಾ ಮಂದಿರದಲ್ಲಿ ಡಾ। ಪಿ. ಆರ್. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತಿಸಿ ಹಿಂದೀ ಪ್ರಚಾರದ ಬಗ್ಗೆ ಜಿಲ್ಲೆಯಲ್ಲಿ ನಡೆಯುತ್ತಿರುವ ಪ್ರಯತ್ನಗಳನ್ನು ವಿವರಿಸಿದರು. ಕಾರ್ಯದರ್ಶಿನಿ ಕು. ಯು. ಚಂದ್ರಭಾಗಿಯವರು ವರದಿವಾಚನ ಮಾಡಿದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ನಾಯ್ಕರು ಪ್ರಮಾಣಪತ್ರ ವಿತರಣೆ ಗೈದು ವಿಜಯಿಗಳಿಗೆ ಶುಭಾಕಾಂಕ್ಷೆ ಮಾಡಿದರು. ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಕಾರ್ಯದರ್ಶಿ ಶ್ರೀ ಶಿವರಾಯರು ಅಭಿಭಾಷಣ ಮಾಡಿದರು. ಅಧ್ಯಕ್ಷ ಡಾ। ನಾಯಕ್‌ರು ಭಾಷಣ ಮಾಡುತ್ತಾ ರಾಷ್ಟ್ರಭಾಷೆಯಾದ ಹಿಂದಿಯನ್ನು ಸರ್ವರೂ ಕಲಿಯಬೇಕಾದುದು ಅವಶ್ಯಕವೆಂದರಲ್ಲದೆ ಉಡುಪಿಯ ಸಮಿತಿಯು ಮಾಡುತ್ತಿರುವ ಪ್ರಯತ್ನಗಳನ್ನು ಕೊಂಡಾಡಿದರು. ಬಳಿಕ ಮನೋರಂಜನಾ ಕಾರ್ಯಕ್ರಮಗಳು ಜಯಶೀಲವಾಗಿ ನೆರವೇರಿದುವು. ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯಕರು ವಂದನೆಗಳನ್ನು ಸಲ್ಲಿಸಿದರು.

ಬೀಳ್ಕೊಡುವ ಸಮಾರಂಭ—ಉಡುಪಿಯ ಮೋಡರ್ನ್ ಸ್ಕೂಲ್ ಆಫ್ ಕೋಮರ್ಸ್ ಇದರ ಉಚ್ಚ—ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ಇದೇ ತಾ. 13ರಲ್ಲು ಮುಖ್ಯೋಪಾಧ್ಯಾಯ ಶ್ರೀ ಟಿ. ಎ. ವಾಸುದೇವನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ನಿಯೋಜಿತ ಭಾಷಣಗಾರರಾದ ಶ್ರೀ ಶಿರ್ಡಿ ವಿಲಿಯಂ ಪಿಂಟೋರವರು ಮಾನವನ ಜೀವನದಲ್ಲಿ ಶಿಸ್ತಿನ ಮಹತ್ವದ ಕುರಿತು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಶಾಲೆಯಗತ ಇತಿಹಾಸವನ್ನು ವಿವರಿಸಿ ಎದುರಿಸಿದ ಕಷ್ಟಗಳ ವಿವರಣೆ ಕೊಟ್ಟು ಹಳೆ ಮತ್ತು ಪ್ರಕೃತದ ವಿದ್ಯಾರ್ಥಿಗಳ ಸಹಾಯದಿಂದಲೇ ಇಂತಹ ಸ್ಥಿತಿಗೆ ಬಂದು ಮುಟ್ಟಲು ಸಾಧ್ಯವಾಯಿತೆಂದರು. ಶ್ರೀ ಎಸ್. ಸುಬ್ರಹ್ಮಣ್ಯಂ ಇವರು ಧನ್ಯವಾದ ಸಮರ್ಪಿಸಿದರು.

ಶಾಲಾ ವರ್ಧಂತ್ಯುತ್ಸವ—ಅಜೆಕಾರು ಬೋ. ಹಾ. ಎ. ಶಾಲಾ ವರ್ಧಂತ್ಯುತ್ಸವವು ಶ್ರೀ ಕೆ. ಬಿ. ಗೋವಿಂದರಾವ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಗೋಪಾಲ ಸೆಟ್ಟರು ಸ್ವಾಗತ ಭಾಷಣ ಮಾಡಿದರು. ಪ್ರಾಧ್ಯಾಪಕರಾದ ಶ್ರೀ ಎ. ಪಾಂಡುರಂಗ ಕಿಣಿಯವರು ಸಂದೇಶಗಳನ್ನು ಓದಿದರಲ್ಲದೆ ಶಾಲಾ ಪ್ರಗತಿಪರ ವರದಿಯನ್ನು ಒಪ್ಪಿಸಿದರು. ಶ್ರೀ ಜಸ್ಟಿನ್ ಪಿಂಟೋರವರು ಸ್ವಸ್ತಿವಾಚನ ಗೈದರು. ಶ್ರೀ ಬೇಸಿಲಿ ಪಿರೇರಾರವರು ಬಹುಮಾನ ಪಡೆದ ಮಕ್ಕಳ ಹೆಸರನ್ನು ಸಾರಿದ ಮೇಲೆ ಶ್ರೀಗಳಾದ ತಾಲೂಕು ಬೋರ್ಡ್ ಸದಸ್ಯ ಶ್ರೀ ಡಿ. ವೆಂಕಟೇಶ ಭಟ್, ಕೆ. ವಾಸು ಶೆಟ್ಟಿ ಮತ್ತು ಎಚ್. ಶಿವರಾಮ ಶೆಟ್ಟರು ಭಾಷಣ ಮಾಡಿದರು.

ಅಧ್ಯಕ್ಷರ ಭಾಷಣದ ಬಳಿಕ ನಾಟಕಾದಿ ವಿವಿಧ ವಿನೋದಾವಳಿಗಳಾದುವು. ಶ್ರೀ ಕೆ. ನಾರಾಯಣ ಸೆಟ್ಟರು ಧನ್ಯವಾದ ಅರ್ಪಿಸಿದರು. ಈ ಸಂದರ್ಭದಲ್ಲಿ ಮಕ್ಕಳ ಕೈಗಾರಿಕಾ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು.

ವಿಧಾನ ಪರಿಷತ್ತಿಗೆ ಉಮೇದ್ವಾರರು—ಮೈಸೂರು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನೊಳಗೊಂಡ ಪದವೀಧರ ಕ್ಷೇತ್ರದಿಂದ ಮೈಸೂರು ವಿಧಾನ ಪರಿಷತ್ತಿಗೆ ಜೂನ್ 3ರಂದು ನಡೆಯಲಿರುವ ಚುನಾವಣೆಗೆ ಶ್ರೀಗಳಾದ ಬಿ. ವಿ. ರಮಣ, ವಿ. ಶ್ರೀನಿವಾಸ ಶೆಟ್ಟಿ, ತುಕಾರಾಮ್ ಪೈ, ಬಿ. ನಾರಾಯಣ ಸ್ವಾಮಿ, ಎನ್. ಶ್ರೀನಿವಾಸ ಮೂರ್ತಿ, ಎಲ್. ಶ್ರೀ ಕಂಠಯ್ಯ ಇವರು ನಾಮ ಪತ್ರಗಳನ್ನು ಸಲ್ಲಿಸಿರುವರು.

ಪಕ್ಕಾಳ— ತಾ. 8—5—1962ರಲ್ಲಿ ಪಕ್ಕಾಳ ಜ್ಯೋತಿಷ್ಯರಾದ ಶ್ರೀ ಪಿ. ಗುರುರಾಜ ಆಚಾರ್ಯರ ಅಧ್ಯಕ್ಷತೆಯಲ್ಲಿ ಹೆಗ್ಗ ಕೋಪರೇಟಿವ್ ಎಗ್ರಿಕಲ್ಚರಲ್ ಬೇಂಕಿನ ಡೈರೆಕ್ಟರ್‌ರಾಗಿ ಚುನಾಯಿತರಾದ ಶ್ರೀಗಳಾದ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಎ. ಸಂಜೀವ ಹೆಗ್ಡೆ, ಕೆ. ಆನಂದ ಸೆಟ್ಟಿ, ಕೆ. ಗೋವಿಂದ ನಾಯಕ್, ಎಚ್. ರಾಮಚಂದ್ರ ಹೆಗ್ಡೆ, ಪಿ. ಗುರುರಾಜ ಆಚಾರ್ಯ, ಎಮ್. ಸೀತಾರಾಮ ಸೆಟ್ಟಿ, ಬಿ. ಓರಿಯಣ್ಣ ಹೆಗ್ಡೆ, ಬಿ. ಮಾಧವ ಹೆಗ್ಡೆ ಮತ್ತು ಕೆ. ಮಂಜುನಾಥ ನಾಯಕ್ ಇವರ ಸಭೆ ಜರಗಿ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಎ. ಸಂಜೀವ ಹೆಗ್ಡೆಯವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಕೆ. ಆನಂದ ಸೆಟ್ಟಿಯವರನ್ನು ಖಜಾಂಚಿಯರನ್ನಾಗಿಯೂ ಅವಿರೋಧವಾಗಿ ಆರಿಸಲಾಯಿತು.

ಅಭಿನಂದನಾ ಸಭೆ— ಕಾರ್ಕಳ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಚುನಾಯಿತರಾದ ಶ್ರೀ ದಯಾನಂದ ಕಲ್ಲೆಯವರನ್ನು ಅಭಿನಂದಿಸಲು ಅವರ ಬಿಲ್ಲವ ಸಮಾಜದ ಮಿತ್ರರು ಮಂಗಳೂರಲ್ಲಿ ಎಡ್ವೊಕೇಟ್ ಶ್ರೀ ಎನ್. ಎಸ್. ಸುವರ್ಣರ ಆಫೀಸಿನಲ್ಲಿ ಮತ್ತು ಅಧ್ಯಕ್ಷತೆಯಲ್ಲಿ ತಾ. 6-5-62ರಂದು ಸಭೆಯೊಂದನ್ನು ಏರ್ಪಡಿಸಿದ್ದರು. ಉಪಾಹಾರವಾದ ಬಳಿಕ ಶ್ರೀ ಎಚ್. ನಾಗಪ್ಪನವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಬಿಲ್ಲವ ಸಮಾಜದಿಂದ ಅವರೊಬ್ಬರಾದರೂ ಆರಿಸಿಬಂದುದಕ್ಕಾಗಿ ಸಂತೋಷ ವ್ಯಕ್ತಪಡಿಸಿ ಅವರು ತನ್ನ ಕ್ಷೇತ್ರಾಭಿವೃದ್ಧಿಗಾಗಿ ದುಡಿಯಲು ಯತ್ನಿಸಬೇಕೆಂದು ಕೇಳಿಕೊಂಡರು. ನಿವೃತ್ತ ಜಿಲ್ಲಾ ಜಡ್ಜ್ ಶ್ರೀ ಬಿ. ಕೊರಗಪ್ಪನವರು ಮಾತನಾಡುತ್ತಾ ನಮ್ಮ ಸಮಾಜದಲ್ಲಿ ಒಗ್ಗಟ್ಟು ಅಗತ್ಯವೆಂದೂ ಮುಂದಿನ ಚುನಾವಣೆಯಲ್ಲಾದರೂ ನಾವು ಐಕ್ಯತೆಯಿಂದ ಕೆಲಸ ಮಾಡಬೇಕೆಂದೂ ಸೂಚಿಸಿದರು.

ಅಧ್ಯಕ್ಷಸ್ಥಾನದಿಂದ ಶ್ರೀ ಸುವರ್ಣರು ಮಾತನಾಡುತ್ತಾ ನಾಲ್ಕು ಲಕ್ಷಕ್ಕೂ ಮೇಲ್ಪಟ್ಟಿರುವ ನಮ್ಮ ಸಮಾಜದವರನ್ನು ಬೇರೆ ಅಲ್ಪಸಂಖ್ಯಾಕ ಸಮಾಜದವರು ಯಾವ ಕುಟಿಲ ತಂತ್ರದಿಂದ ಕಾಂಗ್ರೆಸಿನಿಂದ ಹೊರಹಾಕಿದರೆಂದೂ ಕಾಂಗ್ರೆಸ್ಸಿಗರು ನಮಗೆ ತಕ್ಕ ಪ್ರಾತಿನಿಧ್ಯ ಕೊಡದೆ ನಮ್ಮ ಸಮಾಜಕ್ಕೂ ತಮಗೂ ಹೇಗೆ ಘಾತಕ ಮಾಡಿ ಕಾಂಗ್ರೆಸ್ಸಿನ ನಾಲ್ಕು ಹುರಿಯಾಳುಗಳು ಸೋಲುವಂತೆ ಮಾಡಿದರೆಂದೂ ವಿಶದ ಸೂಚಿಸಿ ಶ್ರೀ ಕಲ್ಲೆಯವರು ಜನಸಂಪರ್ಕವಿಟ್ಟುಕೊಂಡು ತನ್ನ ಕ್ಷೇತ್ರಕ್ಕೆ ಬೇಕಾದ ಸವಲತ್ತುಗಳನ್ನು ಒದಗಿಸಿ ಕೊಡಲು ಪ್ರಯತ್ನಿಸಬೇಕೆಂದರು. ಶ್ರೀ ಕಲ್ಲೆಯವರು ಉತ್ತರಿಸುತ್ತಾ ಹಿರಿಯ ವ್ಯಕ್ತಿಗಳ ಸೂಕ್ತ ಸಲಹೆಗಳಂತೆ ತನ್ನಿಂದಾದಷ್ಟು ತನ್ನ ಕ್ಷೇತ್ರದ ಏಳಿಗೆಗಾಗಿ ದುಡಿಯುವ ಭರವಸೆ ಇತ್ತರು. ಮಾತ್ರವಲ್ಲದೆ ತನ್ನನ್ನು ಸತ್ಕರಿಸಿ ಅಭಿನಂದಿಸಿದುದಕ್ಕಾಗಿ ಕೃತಜ್ಞತೆ ಸೂಚಿಸಿದರು. ಅಂತ್ಯದಲ್ಲಿ ಎಡ್ವೊಕೇಟ್ ಕುಮಾರಿ ವಿದ್ಯಾವತಿಯವರು ಧನ್ಯವಾದ ಸಮರ್ಪಿಸಿದರು.

ಶ್ರೀ ಯಕ್ಷಗಾನ ಪರಿಷತ್ತು—ಯಕ್ಷಗಾನ ಕಲೆಯ ಸೇವೆಗಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಸೇರಿಸಿಕೊಂಡು, ಉಡುಪಿಯ ಕಲಾಪ್ರೇಮಿಗಳು ಸ್ಥಾಪಿಸಿದ ಶ್ರೀ ಯಕ್ಷಗಾನ ಪರಿಷತ್ತು" ಇದರ ಮಹಾ ಸಭೆಯು ದಿನಾಂಕ ೯ರಂದು ಪಣಿಯಾಡಿ ಶಾಲೆಯಲ್ಲಿ ಜರಗಿಸಿದರು.

ಡಾ. ಪಿ. ಜಿ. ಆಚಾರ್ಯರು ಸಭೆಯ ಅಧ್ಯಕ್ಷತೆ ವಹಿಸಿದ ಈ ಕಾರ್ಯಕ್ರಮದಲ್ಲಿ ಪರಿಷತ್ತಿನ ಉದ್ದೇಶಗಳನ್ನು ಶ್ರೀ ಪಾ. ಲ. ನಾ. ಉಪಾಧ್ಯಾಯರು ವಿವರಿಸಿದರು. ಘಟನೆಯ ಕರಡು ಪ್ರತಿಯನ್ನು ಪರಿಷ್ಕರಿಸಲು ಐವರ ಜನರ ಸಮಿತಿಯನ್ನು ರಚಿಸಿದ ಬಳಿಕ, ಅಧ್ಯಕ್ಷರು ಕೆಲವು ಅಮೂಲ್ಯ ಸೂಚನೆಗಳನ್ನು ದೊರಕಿಸಿದರು. "ಶ್ರೀ ಯಕ್ಷಗಾನ ಪರಿಷತ್ತು" ಇದರ ಮುಂದಾಳುಗಳಾದ ಶ್ರೀ ಎ. ಜೆ. ಆಳ್ವ ಯವರು ಶ್ರೀ ಯಕ್ಷಗಾನ ಪರಿಷತ್ತಿನ ಭಾವಿ ಯೋಜನೆಗಳಿಗೆ ಸದಸ್ಯರು ವಹಿಸಬೇಕಾದ ಜವಾಬ್ದಾರಿಯನ್ನು ವಿವರಿಸಿದ ನಂತರ ಧನ್ಯವಾದಾರ್ಪಣ ಮಾಡಿದರು.

——

(೬ನೇ ಪುಟದಿಂದ)

ಸಂಸ್ಕೃತಿಯ ಪ್ರತೀಕವಾದ ಪ್ರಸಾದರು ಆಯುರಾರೋಗ್ಯವಂತರಾದರೆ, ಸರಕಾರದಿಂದ ಹೊರಗಿದ್ದು ಕೊಂಡೇ ಸೇವೆ ಸಲ್ಲಿಸುವವರು. ಅವರ ಸೇವೆ ಅನೂಚಾನವಾಗಿ ಲಭಿಸಲೆಂದು ಎಲ್ಲರೂ ಬಯಸುತ್ತಾರೆ.

ಜಾನ್ ಕೆನ್ನೆಡಿ

ಅಮೆರಿಕೆಯು ಹಿಂದಿನಿಂದಲೂ ಭಾರತಕ್ಕೆ ಉದಾರವಾಗಿ ಸಹಾಯ ನೀಡುತ್ತ ಬರುತ್ತಿದೆ ಜಾನ್ ಕೆನೆಡಿಯವರು ಅಧಿಕಾರ ಸೂತ್ರ ಹಿಡಿದ ಮೇಲಂತೂ ಈ ಉದಾರತೆಯು ಮತ್ತೂ ಉದಾರವಾಯಿತು. ಅದು ಈ ವರ್ಷಕ್ಕೆ ೭೨೭ ಮಿಲಿಯ ಡಾಲರ್‌ಗಳ ಸಹಾಯ ನೀಡಲು ಒಪ್ಪಿತ್ತು. ಆದರೆ, ವಿದೇಶಸಂಬಂಧದ ಸಮಿತಿಯು ಇದನ್ನು ಸೇಕಡಾ ೨೫ರಷ್ಟು ಕಡಿಮೆ ಮಾಡುವಂತೆ ಬಹುಮತದ ಶಿಫಾರಸು ಮಾಡಿದೆ. ಪಾಕಿಸ್ತಾನವು ಅಮೆರಿಕೆಯಿಂದ ಪ್ರಬಲವಾದ ಜೆಟ್ ಫೈಟರ್‌ಗಳನ್ನು ತರಿಸಿ ತನ್ನ ವಾಯು ಸೇನೆಯನ್ನು ಬಲಪಡಿಸುತ್ತಿದೆ. ತನ್ನ ವಾಯು ಸೇನೆಯ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಭಾರತವು ರಷ್ಯದಿಂದ ವಿಶೇಷ ರೀತಿಯ ಮಿಗ್ ವಿಮಾನಗಳನ್ನು ಕೊಂಡುಕೊಳ್ಳಲು ನಿರ್ಧರಿಸಿದೆ. ರಾಯಭಾರಿ ಗಾಲ್‌ಬ್ರೈಥರು ಹೇಳುವಂತೆ ಭಾರತದ ಈ ಕೃತ್ಯದಿಂದ ಅಮೆರಿಕೆಗೆ ದುಃಖವಾಗಿದೆ. ಈ ದುಃಖವೇ ಈಗ ಪ್ರಕಟವಾಯಿತೆಂದು ತಿಳಿಯ ಬಹುದೆ

ಕೃಷ್ಣಮಾಚಾರಿ

ಕೇಬಿನೆಟ್ ವರ್ಗದ ಮಂತ್ರಿ ಘೋಷಣೆಯಲ್ಲಿ, ಮುಂದೆ ರಾಜ್ಯ ಮಂತ್ರಿ, ಉಪ ಮಂತ್ರಿ ಮತ್ತು ಕೊನೆಯಲ್ಲಿ ಪಾರ್ಲಿಮೆಂಟರಿ ಕಾರ್ಯದರ್ಶಿಯವರ ನೇಮಕಗಳು ನಡೆಯುತ್ತ ಬಂದರೂ ಮಾಜಿ ಅರ್ಥ ಮಂತ್ರಿ ಟಿ. ಟಿ. ಕೆ. ಯವರ ಹೆಸರು ಘೋಷಿತವಾಗಲಿಲ್ಲ. ಪ್ರತಿಭಾವಂತ ಟಿ. ಟಿ. ಕೆ. ಯವರನ್ನು ದೇಶದ ಲಾಭಕ್ಕೆ ಉಪಯೋಗಿಸಿಕೊಳ್ಳುವ ಹಂಬಲ ಪ್ರಧಾನಿ ನೆಹರುಗಳಲ್ಲಿ ಪ್ರಬಲವಾಗಿದೆ. ಆದರೆ, ಅದೇನೋ ಕಾರಣದಿಂದ ಟಿ. ಟಿ. ಕೆ. ಹೊರಗಡೆಯೇ ನಿಂತಿದ್ದಾರೆ. ಮುಂದೆ, ಕೆಲವೇ ವಾರಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಕೇಂದ್ರ ಮಂತ್ರಿಗಳಲ್ಲಿ ಒಬ್ಬರನ್ನು ಆರಿಸಲಾಗುವುದೆಂದು ದಟ್ಟವಾದ ವಾರ್ತೆ ಹರಡಿದೆ. ಆಗ, ಟಿ. ಟಿ. ಕೆ. ಒಳ ಹೋಗುವುದೂ ಅಸಾಧ್ಯವಲ್ಲ, ಅಥವಾ ಇವರಿಗಾಗಿ ಇತರ ಯಾವುದಾದರೊಂದು ಸ್ಥಾನವನ್ನು ತೆರವು ಮಾಡಬೇಕು.

ಹನುಮಂತಯ್ಯ

ನಿಷ್ಪಕ್ಷ, ನಿರ್ಭೀತ ಆಡಳಿತೆಗೆ ಹೆಸರಾದ ಕೆಂಗಲ್ ಹನುಮಂತಯ್ಯನವರಿಗೆ ನ್ಯಾಯವಾಗಿ ಕೇಂದ್ರ ಸಂಪುಟದಲ್ಲಿ ಒಂದು ಸ್ಥಾನ ದೊರೆಯಬೇಕಿತ್ತು. ಅವರ ಕೆಚ್ಚೆದೆಯ ಪ್ರತೀಕವಾದ ವಿಧಾನ ಸೌಧವಿಂದು 'ಸತ್ಯಮೇವ ಜಯತೇ' ಎಂದು ಸಾರುತ್ತಿದೆಯಾದರೂ ಅದರೊಳಗೆ ಸತ್ಯದ ಲೇಶಾಂಶವೂ ಇಲ್ಲವೆಂದು ಎಲ್ಲರೂ ಬಲ್ಲರು. ಆದರೆ, ಪಂಡಿತ ನೆಹರು— ಹನುಮಂತಯ್ಯನವರ ವಿಚಾರಧಾರೆಯು ಒಂದೇ ಗುರಿಯಲ್ಲಿ ಕೊನೆಗೊಳ್ಳುವುದಾದರೂ ಅದನ್ನು ಮುಟ್ಟುವ ದಾರಿಯಲ್ಲಿ ಭಿನ್ನತೆಯಿದೆ. ಕಾಂಗ್ರೆಸ್ಸಿನ ಸಂವಿಧಾನದಲ್ಲಿ ಪರಿವರ್ತನೆಯನ್ನು ಬೇಡಿದ ಹನುಮಂತಯ್ಯನವರು ನೆಹರೂರವರ ಪ್ರಭಾವದಿಂದ ಮಂತ್ರಮುಗ್ಧರಾಗುವುದಿಲ್ಲ. ಎಂತಲೇ ಅವರು ಪಡೆಯಬೇಕಾದ ಸ್ಥಾನವನ್ನು ಇನ್ನೂ ಗಳಿಸಲಿಲ್ಲ. ಕರ್ನಾಟಕಕ್ಕೆ ಸಾಕಷ್ಟು ಪ್ರಾತಿನಿಧ್ಯವೀಗ ಕೇಂದ್ರ ಸರಕಾರದಲ್ಲಿಲ್ಲವೆಂದು ತಿಳಿಯಲಾಗುತ್ತಿದೆ. ಈ ಪ್ರಾತಿನಿಧ್ಯ ದೊರೆಯಬೇಕಾಗಲಾದರೂ ಇವರ ಚೀಟಿ ಮೇಲೆ ಬೀಳುವುದು ಕಷ್ಟ.

ಅದೃಷ್ಟಶಾಲಿ ಸುಕರ್ಣ

ಇಂಡೊನೇಶ್ಯದ ಅಧ್ಯಕ್ಷ ಸುಕರ್ಣರು ಧರ್ಮಾತೀತ ಸ್ವಭಾವದವರು. ಇದರಿಂದಾಗಿಯೇ ಅಲ್ಲಿ 'ಇಸ್ಲಾಂ ರಾಜ್ಯ'ವನ್ನು ಕಟ್ಟುವ ಕನಸು ಕಾಣುತ್ತಿದ್ದ ಕೆಲವರು ಇವರ ಮೇಲೆ ಉರಿದುಬೀಳುತ್ತಾರೆ. ಹಿಂದೊಮ್ಮೆ ಸರಕಾರದ ವಿರುದ್ಧ 'ಧರ್ಮಯುದ್ಧ'ವನ್ನು ಹೂಡುವುದಕ್ಕೂ ಈ ಕಿಡಿಗೇಡಿಗಳು ನಿರ್ಧರಿಸಿದ್ದರು. ಆದರೆ, ಸುಕರ್ಣರ ಸಮರ್ಥ ಆಡಳಿತೆಯಿಂದ ಅವರ ಕನಸು ಕನಸಾಗಿಯೇ ಉಳಿಯಿತು. ತಮ್ಮ ಸ್ವಾರ್ಥ ಸಾಧನೆಯನ್ನು ಮಾಡಬಯಸುತ್ತಿದ್ದ ಈ ಪಂಗಡಕ್ಕೆ ಸೇರಿದವನೊಬ್ಬನು ಅಧ್ಯಕ್ಷರಿಗೆ ಗುಂಡು ಹಾರಿಸಿ ಕೊಲ್ಲುವ ಪ್ರಯತ್ನ ಮಾಡಿದನು. ಸುದೈವದಿಂದ ಗುಂಡಿನೇಟಿನಿಂದವರು ಪಾರಾದರು; ಆದರೆ ಅವರ ಹತ್ತಿರವಿದ್ದ ಕೆಲವರು ಗಾಯಗೊಂಡರು. ಆದರ್ಶದ ಸಾಧನೆಯಲ್ಲಿ ತೊಡಗಿದ ರಾಷ್ಟ್ರಪ್ರಮುಖರ ಕೊಲೆಗಳಂಥ ಹವ್ಯಾಸವು ಇತ್ತೀಚೆಗೆ ಬೆಳೆಯುತ್ತ ಬರುತ್ತಿರುವುದು ವಿಷಾದಕರ.

ಅಜಿತಪ್ರಸಾದ ಜೈನ್

ಹಿಂದೊಮ್ಮೆ ಕೇಂದ್ರ ಸರಕಾರದಲ್ಲಿ ಆಹಾರ ಮಂತ್ರಿಯಾಗಿ ಮುಂದೆ ರಾಜಿನಾಮೆಯಿತ್ತ ಅಜಿತಪ್ರಸಾದ ಜೈನರು ಉತ್ತರಪ್ರದೇಶದ ಕಾಂಗ್ರೆಸ್ ಅಧ್ಯಕ್ಷರಾಗಿದ್ದರೂ ಅಲ್ಲಿ ತನಗೆ ಸ್ಥಾನ ಗಳಿಸಿಕೊಳ್ಳುವುದು ಸಾಧ್ಯವಾಗಲಿಲ್ಲ; ಅಥವಾ ರಾಜ್ಯ ಸಭೆಗೂ ಹೋಗುವುದಾಗಲಿಲ್ಲ. ಎಂ. ಪಿ. ಕೃಷ್ಣಪ್ಪನವರು ತುಮಕೂರಿನಿಂದ ಲೋಕ ಸಭೆಗೆ ದೊರೆತ ಪ್ರಾತಿನಿಧ್ಯಕ್ಕೆ ರಾಜಿನಾಮೆಯಿತ್ತಿದ್ದುದರಿಂದ ತೆರವಾದ ಸ್ಥಾನಕ್ಕೀಗ ಜೈನರು ಸ್ಪರ್ಧಿಸುವರೆಂದು ಗೊತ್ತಾಗಿದೆ. ಜೂನ್ ಮೊದಲನೆಯ ವಾರದಲ್ಲಿ ನಡೆಯುವ ಈ ಚುನಾವಣೆಯ ಪ್ರಚಾರಕಾರ್ಯವೀಗಲೇ ಆರಂಭವಾಗಿದೆ. ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಪ್ರಸಾದರು ಇಲ್ಲಿ ಚುನಾವಣೆಗೆ ನಿಲ್ಲಬೇಕೆಂದು ಕೇಳಿಕೊಂಡಿದ್ದರಂತೆ! ಪ್ರಧಾನಿಯವರು ಪ್ರಸಾದರಿಗೊಂದು ಸ್ಥಾನಕೊಡಲು ಬಯಸಿದ್ದಾರೆಂಬುದು ಖಂಡಿತ. ಆದರೆ, ಅದಾವ ಹುದ್ದೆಯೋ ತಿಳಿಯುದು ಇಲ್ಲವಾದರೆ. ಉತ್ತರದ ಉತ್ತರ ಪ್ರದೇಶದಿಂದ ದಕ್ಷಿಣದ ಕರ್ನಾಟಕಕ್ಕೇಕೆ ಅಜಿತ ಪ್ರಸಾದ ಜೈನರು ಬರಬೇಕಿತ್ತು? ಉತ್ತರ ಪ್ರದೇಶಕ್ಕೆ ಬೇಡಾದವರು ನಮಗೆ ಬೇಕಾಗಿದ್ದಾರೆಂದು ಕನ್ನಡಿಗರು ಸಿದ್ಧಮಾಡಿಕೊಡಬೇಕು ಈಗ.

ವ್ಯವಸಾಯಾಭಿವೃದ್ಧಿಗೆ

ಆಧುನಿಕ ರಾಸಾಯನಿಕ ಗೊಬ್ಬರ

ವ್ಯವಸಾಯದಲ್ಲಿ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿ ಉತ್ಪತ್ತಿಯನ್ನು ಬಹುವಾಗಿ ಹೆಚ್ಚಿಸಬಹುದೆಂಬುದನ್ನು ಜರ್ಮನ್ ರಸಾಯನಶಾಸ್ತ್ರಜ್ಞನಾದ ವಾನ್‌ಲಿಬಿಕ್ ಎಂಬವರು ಕಂಡುಹಿಡಿದರು. ರಾಸಾಯನಿಕವಸ್ತುಗಳಲ್ಲಿ ಮುಖ್ಯವಾದ ರಂಜಕ (Phosphorus) ವನ್ನು ಉತ್ಪತ್ತಿ ಮಾಡಲು ಇನ್ನು ಮುಂದೆ ಅನೇಕ ಮಾರ್ಗಗಳು ಕಂಡುಹಿಡಿಯಲ್ಪಡುವುವು ಇದನ್ನು ಹೆಚ್ಚಾಗಿ ಹೊಂದಿರುವ ಗೊಬ್ಬರದಿಂದ ಉತ್ಪತ್ತಿಯು ಬಹುವಾಗಿ ಹೆಚ್ಚುವುದೆಂದು ನಂಬಲಾಗಿದೆ.

ಈಚೆಗೆ ನಡೆದ ಒಂದು ಸಮ್ಮೇಳನದಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಶ್ರಮಿಸುತ್ತಿರುವ ವಿಜ್ಞಾನಿಗಳನೇಕರು ಒಂದುಗೂಡಿ ಪ್ರಕೃತ ವಿಜ್ಞಾನದಲ್ಲಾಗಿರುವ ಪ್ರಗತಿಯನ್ನು ಕುರಿತು ದೀರ್ಘವಾಗಿ ಚರ್ಚಿಸಿದರು. ತತ್ವ ಶಾಸ್ತ್ರದಲ್ಲಿ ಮಾತ್ರ ಹೆಚ್ಚು ಮುನ್ನಡೆಯಿರದೆ ನಿಂತೆಯೇ ಹೆಚ್ಚಾಗಿ ಕಂಡುಬಂದಿತು. ಆದರೆ, ಬೇರೆ ಇನ್ನುಳಿದ ವಿಭಾಗಗಳಲ್ಲಿ ವಿಜ್ಞಾನವು ತೀವ್ರವಾಗಿ ಮುನ್ನಡೆಯುತ್ತಿದ್ದು ಅವುಗಳ ಭವಿಷ್ಯದ ಬಗ್ಗೆ ಹೆಚ್ಚಿನ ನಂಬಿಕೆ ಹುಟ್ಟಿದೆ

ಸಸ್ಯ ಶಾಸ್ತ್ರವೇತ್ತರೂ ಭೂಮಿಯ ಗುಣವನ್ನು ಅರಿಯುವುದರಲ್ಲಿ ನಿಪುಣರೂ ಆದ ಡಾಕ್ಟರ್ ಕ್ರೋಡರ್‌ರವರು ತಮ್ಮ ಅಭಿಪ್ರಾಯವನ್ನು ವಿವರಿಸುತ್ತಾ ವಿಜ್ಞಾನವು ಈ ಯುಗದಲ್ಲಿ ಸಾಧಿಸುತ್ತಿರುವ ತೀವ್ರ ಪ್ರಗತಿಯು ಮಾನವ ಕುಲಕ್ಕೆ ಒಂದು ವರಪ್ರಸಾದವೆಂದು ತಿಳಿಸಿದರು. ಅಲ್ಲದೆ ಅಧಿಕಾಂಶದಲ್ಲಿ ಉತ್ತಮ ಜಾತಿಯ ಬೆಳೆಯನ್ನು ಪಡೆಯುವುದೇ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವ ಉದ್ದೇಶವೆಂದೂ ಅವರು ತಿಳಿಸಿದರು.

ಈ ವಿಶ್ವದಲ್ಲಿ ಎರಡು ಸಹಸ್ರ ವರ್ಷಗಳ ಹಿಂದೆ ಕೇವಲ ಐವತ್ತು ಲಕ್ಷ ಜನರು ಮಾತ್ರ ವಾಸಿಸುತ್ತಿದ್ದರು. ಆಗಿನ ಮನುಷ್ಯ ಬೇಟೆಯನ್ನಾಡಿಯೋ, ಕಂದಮೂಲಗಳನ್ನು ತಿಂದೋ ತನ್ನ ಹೊಟ್ಟೆಯನ್ನು ಹೊರೆದುಕೊಳ್ಳುತ್ತಿದ್ದ. ಅವನು ತನ್ನ ಆಹಾರಕ್ಕಾಗಿ ನೆಲವನ್ನು ನಂಬಿಕುಳಿತಿರಲಿಲ್ಲ. ಆದರೆ ಸದ್ಯದ ಪರಿಸ್ಥಿತಿ ಹಾಗಲ್ಲ. ಇಂದು ಜರ್ಮನಿಯ ೫೦ ಲಕ್ಷ ಪ್ರಜೆಗಳು ತಮ್ಮ ಆಹಾರಕ್ಕಾಗಿ ಯಾರೊಬ್ಬರ ಕೈಯನ್ನೂ ಕಾಯುತ್ತಿಲ್ಲ. ಬೇರಾವ ದೇಶದ ಸಹಾಯವೂ ಇಲ್ಲದೆ ಅವರು ಬದುಕಿರಬಲ್ಲರು. ಮನುಷ್ಯನು ಎಂದು ಭೂಮಿಯಲ್ಲಿ ವ್ಯವಸಾಯವನ್ನು ಆರಂಭಿಸಿದನೋ, ಅಂದಿನಿಂದಲೂ ಅವನ ಹಸಿವು ಇಂಗಿಯೇ ಇಲ್ಲ. ಆಹಾರ ಸಾಲದು ಎಂಬ ಕೂಗು ಎಲ್ಲೆಡೆಯೂ ಕೇಳಬರುತ್ತಿದೆ.

ವ್ಯವಸಾಯ ಮಾಡುವವರು ಭೂಮಿಗೆ ಸರಿಯಾದ ಪ್ರಮಾಣದಲ್ಲಿ ಗೊಬ್ಬರವನ್ನು ಸೇರಿಸಿದ್ದೇ ಆದರೆ ಈ ಜಗತ್ತಿನ ಸಾವಿರ ಕೋಟಿ ಜನರ ಆಹಾರ ಸಮಸ್ಯೆಯು ತೃಪ್ತಿಕರವಾಗಿ ನಿವಾರಿಸಲ್ಪಡಬಹುದೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ರಾಸಾಯನಿಕ ಗೊಬ್ಬರವನ್ನು ಉಪಯೋಗಿಸದೆ ಬೆಳೆಯನ್ನು ಹೆಚ್ಚಿಸುವುದೆನ್ನುವುದು ಸಾಧ್ಯವಿಲ್ಲದ ವಿಷಯ. ಮಣ್ಣಿನ ಗುಣವು ಯಾವಾಗಲೂ ಒಂದೇ ಸಮನಾಗಿರುವುದಿಲ್ಲ. ದಿನೇ ದಿನೇ ಅದರ ಶಕ್ತಿ ಕುಂಠಿತವಾಗುತ್ತಲೇ ನಡೆಯುತ್ತಿರುತ್ತದೆ ಅದು ಕಳೆದುಕೊಂಡ ಶಕ್ತಿಯನ್ನು ಪ್ರಕೃತಿಯಿಂದಲೇ ಮರಳಿ ಪಡೆಯುವುದೆನ್ನುವುದು ಆಗದ ಮಾತು. ಒಂದು ವೇಳೆ ಸಾಧ್ಯವೆಂದರೂ ಅದು ಬಲು ನಿಧಾನದ ವಿಷಯ.

ಹಳೆಯ ಮಾದರಿಯ ವ್ಯವಸಾಯವೇ ಕ್ರಿ. ಶ. ೧೮೦೦ರ ವರೆಗೂ ವಿಶ್ವದ ಜನತೆಯ ಆಹಾರವನ್ನೊದಗಿಸುತ್ತಾ ಬಂದಿತು. ಇದಾದ ನಂತರ ರಾಬರ್ಟ್ ಮಾಲ್‌ಥಸ್ ಎಂಬ ತಜ್ಞನ ಮಾತು ಫಲಿಸ ತೊಡಗಿತು. ಜನಸಾಂದ್ರತೆ ಹೆಚ್ಚುತ್ತಾ, ಹೆಚ್ಚುತ್ತಾ ಆಹಾರದ ಅಭಾವ ಅಧಿಕವಾಗಿಕೊಂಡೇ ಹೋಗುವುದೆಂದು ಅವರು ಮೊದಲೇ ಭವಿಷ್ಯ ನುಡಿದಿದ್ದರು. ಇದು ವರೆಗೆ ಜಗತ್ತಿನಲ್ಲಿ ಅನೇಕ ಕಡೆ, ಅನೇಕ ಬಾರಿ ಭೀಕರ ಕ್ಷಾಮವು ತಲೆದೋರಿದೆ. ಹತ್ತೊಂಬತ್ತನೆಯ ಶತಮಾನದ ಪೆಸರಾಂತ ವಿಜ್ಞಾನಿಯಾದ ಜಸ್ಟಿಸ್ ವಾನ್‌ಲಿಬಿಕ್‌ರವರು ಅನೇಕ ಸಂಶೋಧನೆಗಳನ್ನು ನಡೆಸಿ, ಪ್ರಕೃತಿಯಲ್ಲಡಗಿರುವ ಕೆಲವು ಸತ್ವಗಳ ಬಗ್ಗೆ ಸತ್ಯಾಂಶಗಳನ್ನು ಹೊರಗೆಡಹಿದ್ದಾರೆ. ದಿನೇ ದಿನೇ, ಭೂಮಿಯ ಶಕ್ತಿ ಕುಂಠಿತವಾಗುತ್ತಾ ಹೋಗುವುದೆಂದೂ ಹಾಗೆ ಕುಂಠಿತವಾದ ಶಕ್ತಿಯನ್ನು ಅದಕ್ಕೆ ರಸಾಯನಿಕ ಗೊಬ್ಬರಗಳನ್ನುಪಯೋಗಿಸುವುದರ ಮೂಲಕ ಮರಳಿ ಪಡೆಯಬಹುದೆಂದೂ ಕಂಡುಹಿಡಿದು ತಿಳಿಸಿದವರು ಇವರೇ.

ಮಧುರೆಯ ಮೀನಾಕ್ಷೀ ದೇವಾಲಯದ ಸಾವಿರ ಕಂಬದ ಭವನದಲ್ಲಿರುವ ವಿದ್ಯಾಧಿದೇವತೆ ವೀಣಾಪಾಣಿ ಸರಸ್ವತಿಯ ಕಲಾತ್ಮಕ ಶಿಲ್ಪ ಇದು ಸಾಧಾರಣ ಎರಡು ಸಾವಿರ ವರ್ಷಗಳ ಪ್ರಾಚೀನತೆಯುಳ್ಳದು

ಜಸ್ಟಿಸ್ ವಾನ್ ಲಿಬಿಕ್ ಜಗತ್ತಿನಲ್ಲಿಯೇ ಶ್ರೇಷ್ಠ ವ್ಯವಸಾಯ ಶಾಸ್ತ್ರ ನಿಪುಣರೆಂದು ಹೊಗಳಿಸಿಕೊಂಡರು ಇವರಿಂದಾಗಿ ವಿಶ್ವದಲ್ಲಿಯೇ ಮೊಟ್ಟಮೊದಲನೆಯ ಫಾಸ್ಫೇಟ್ ಉತ್ಪಾದನಾ ಕೇಂದ್ರವು ತೆರೆಯಲ್ಪಟ್ಟಿತು. ಈ ಕೇಂದ್ರದಲ್ಲಿ ಮೊದಲು ಪೊಟ್ಯಾಸಿಯಂ ಉತ್ಪತ್ತಿಯನ್ನು ಕೈಗೊಳ್ಳಲಾಯಿತು. ರಾಸಾಯನಿಕ ಗೊಬ್ಬರಕ್ಕೆ ಬೇಕಾಗುವ ಪೊಟ್ಯಾಶಿಯಂ ನೈಟ್ರೇಟನ್ನು ದಕ್ಷಿಣ ಅಮೇರಿಕಾದಲ್ಲಿರುವ ಚಿಲಿ ಎಂಬ ದೇಶದಿಂದ ಯೂರೋಪಿಗೆ ತರಿಸಿಕೊಳ್ಳಲಾಯಿತು. ಹೀಗೆ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿದ್ದರಿಂದ ೧೮೦೦ರ ನಂತರ ನೇಕಡಾ ಅರವತ್ತರಷ್ಟು ಹೆಚ್ಚಿನ ಬೆಳೆಯನ್ನು ಕಾಣಲು ಸಾಧ್ಯವಾಯಿತು

ಕೇವಲ ಪ್ರಕೃತಿಯಿಂದ ಮಾತ್ರವೇ ಅಲ್ಲದೆ, ಕೃತಕ ರೀತಿಯಲ್ಲಿಯೂ ಮಣ್ಣಿನ ಶಕ್ತಿಯನ್ನು ವೃದ್ಧಿಗೊಳಿಸಬಹುದೆಂಬುದನ್ನು ಕಂಡುಹಿಡಿದದ್ದು ನಿಜಕ್ಕೂ ಒಂದು ಮಹತ್ವ ಶೋಧನೆಯೆಂದೆನ್ನಬಹುದು. ವಿಶ್ವದ ಎಲ್ಲೆಡೆಯೂ ಮಣ್ಣಿನ ಶಕ್ತಿ ಕುಂದುತ್ತಲೇ ಬರುತ್ತಿರುತ್ತದೆ. ವಿಶ್ವದ ಪೂರ್ಣ ರಾಸಾಯನಿಕ ಗೊಬ್ಬರದ ಉಪಯೋಗದ ಸರಾಸರಿಯನ್ನು ಗಣನೆಗೆ ತೆಗೆದುಕೊಂಡರೆ ಒಂದು ಹೆಕ್ಟಾರಿಗೆ (ಜರ್ಮನ್ ಭೂಮಿಯ ಅಳತೆ) ಹನ್ನೊಂದು ಪೌಂಡುಗಳಂತಿದೆಯೆಂದೆನ್ನಬಹುದು, ಆದರೆ ಕೇವಲ ಜರ್ಮನಿಯನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಹೆಕ್ಟಾರೊಂದಕ್ಕೆ ಇನ್ನೂರ ಎಪ್ಪತ್ತೈದು ಪೌಂಡುಗಳ ಗೊಬ್ಬರವನ್ನು ಉಪಯೋಗಿಸಲಾಗುತ್ತಿದೆ.

ಮಣ್ಣಿನ ಸತ್ವವು ಕಮ್ಮಿಯಾಗದಂತೆ ಆಗಿಂದಾಗ್ಗೆ ಅದಕ್ಕೆ ರಾಸಾಯನಿಕ ಗೊಬ್ಬರಗಳಿಂದ ಚೇತನ ನೀಡುತ್ತಿರುವುದ ಆವಶ್ಯಕ. ವಾಯುವಿನಲ್ಲಿ ಸಾರಜನಕವು ಹೇರಳವಾಗಿದೆ. ಸಮುದ್ರದ ನೀರಿನಲ್ಲಿ ಪೊಟ್ಯಾಶಿಯಂ ಹೇರಳವಾಗಿ ದೊರಕುತ್ತದೆ ಇವುಗಳನ್ನು ಪಡೆಯುವುದಕ್ಕೆ ಸುಲಭ ಪ್ರಯೋಗಗಳನ್ನು ಮಾತ್ರ ಕಂಡುಹಿಡಿಯಬೇಕಾಗಿದೆ. ಪ್ರಕೃತಿ ಸಹಜವಾಗಿ ದೊರೆಯುವ ರಂಜಕವು ಜಗತ್ತಿನ ಆವಶ್ಯಕತೆಯನ್ನು ಇನ್ನು ಕೆಲವು ಶತಮಾನಗಳ ವರೆಗೆ ಮಾತ್ರ ಪೂರೈಸಬಲ್ಲುದು. ಅದರೊಳಗಾಗಿ ರಂಜಕವನ್ನು ಕೃತಕ ರೀತಿಯಲ್ಲಿ ತಯಾರಿಸುವುದನ್ನು ಕಂಡುಹಿಡಿದೇ ತೀರಬೇಕು ಬರಲಿರುವ ಕೆಲವು ದಶಕಗಳಲ್ಲಿ ರಂಜಕದ ಆವಶ್ಯಕತೆ ಇನ್ನೂ ಹೆಚ್ಚಲಿದೆ. ಸಮುದ್ರ ಜಲದಿಂದ ರಂಜಕವನ್ನು ಪಡೆಯಬಹುದು. ಸಮುದ್ರದಲ್ಲಿ ದೊರಕುವ ಸಿಲಿಕಾನ್‌ಗಳಲ್ಲಿ ನ್ಯೂಟ್ರಾನ್‌ಗಳನ್ನು ಪ್ರಯೋಗಿಸುವುದರ ಮೂಲಕ ಇದು ಸಾಧ್ಯವಾಗುವುದು ಮಾನವ ಕುಲಕ್ಕೆ ಉಪಕಾರ ಹೇತುವಾದ ಈ ಸಂಶೋಧನೆ ಜಯಗಳಿಸುವುದೆಂಬುದರಲ್ಲಿ ನಂಬಿಕೆಯಿಟ್ಟುಕೊಂಡು ಸಂಶೋಧನಾ ಕಾರ್ಯಗಳನ್ನು ತೀವ್ರಗತಿಯಿಂದ ಮುಂದುವರಿಸಲಾಗುತ್ತಿದೆ.

ಆಂತರಿಕ ಉಳಿತಾಯ ಅತ್ಯವಶ್ಯ

(೫ನೇ ಪುಟದಿಂದ)

ಹೀಗೆ ಆರ್ಥಿಕ ಮತ್ತು ನೈತಿಕವಾಗಿ ದೇಶವು ಪತನಗೊಂಡು ಹಿಂದುಳಿಯುತ್ತದೆ. ಒಂದು ಬಾರಿ ಈ ವಿಧದ ದುಷ್ಪರಿಣಾಮ ಪ್ರಾರಂಭವಾಯಿತೆಂದರೆ, ಮತ್ತದು ಕೊನೆಗೊಳ್ಳುವಂತಿಲ್ಲ.

ನಮ್ಮ ಯೋಜನೆಯು ದೊಡ್ಡದಾಗುತ್ತ ಹೋದಂತೆ ಅದರ ಕಾರ್ಯಾಚರಣೆಯಲ್ಲಿ ಅಪಾಯವೂ ಹೆಚ್ಚುತ್ತದೆ. ಅದುದರಿಂದ ಅರ್ಥಶಾಸ್ತ್ರಜ್ಞರ ವಿಶೇಷಜ್ಞರ ಸಲಹೆಯನ್ನು ಸರಕಾರ ಪಡೆದುಕೊಂಡು ಆಲೋಚಿಸಿ ಮುಂದಡಿಯಿಡಬೇಕಾದ ಅಗತ್ಯವಿದೆ ಇಲ್ಲವಾದರೆ, ದಿವಾಳಿಯಾಗುವ ಸಂಭವವೂ ಇಲ್ಲದಿಲ್ಲ ವಿದೇಶೀಯ ಸಹಾಯದಿಂದ ಪರಿಸ್ಥಿತಿಯನ್ನು ನಾವು ಇದುವರೆಗೆ ಅಂಕಿತದಲ್ಲಿಟ್ಟುಕೊಂಡಿದ್ದೇವೆ. ಇದೇ ರೀತಿಯಲ್ಲಿ ಮುಂದಕ್ಕೂ ಆರ್ಥಿಕ ಸಮತೋಲವನ್ನು ಕಾಪಾಡಬಹುದಾದರೂ, ನಮ್ಮಲ್ಲಿ ಸ್ವಾವಲಂಬನೆಯ ಭಾವವು ಕಡಿಮೆಯಾಗದಂತೆ ನೋಡಿಕೊಳ್ಳಬೇಕು. ಏಕೆಂದರೆ, ಇನ್ನೊಬ್ಬರ ಹೆಗಲುಗಳ ಮೇಲೆ ನಮ್ಮ ದೇಶ ಎಷ್ಟು ದಿನ ಮುನ್ನಡೆದೀತು?

ಕನ್ನಡ ಪುಸ್ತಕಗಳಿಗೆ—

ಮತ್ತು

ಕಥೆ ಕಾದಂಬರಿ ಇತ್ಯಾದಿ ಪುಸ್ತಕಗಳಿಗೆ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪಾಠಶಾಲೆಯಿಂದ ರಾಷ್ಟ್ರಪತಿ ಭವನಕ್ಕೆ

(೧ನೇ ಪುಟದಿಂದ)

ಯಲ್ಲಿ ಇವರು ಪ್ರಕಟಿಸುತ್ತಾರೆ ದರ್ಶನವನ್ನು ಧರ್ಮ ಮತ್ತು ನೀತಿ ಶಾಸ್ತ್ರಗಳ ರೂಪದಲ್ಲಿ ತಿಳಿಸದೆ, ವಿಜ್ಞಾನದ ರೂಪದಲ್ಲಿ ಓದುವ ಮತ್ತು ಈ ಸತ್ಯವನ್ನು ಸರಸ ಮತ್ತು ಲಲಿತ ಭಾಷೆಯಲ್ಲಿ ವ್ಯಕ್ತಪಡಿಸುವ ಅದ್ಭುತಶಕ್ತಿ ಇವರಲ್ಲಿದೆ. "ನಾವು ಸಹಜ ಬುದ್ಧಿಯಿಂದ ಸಂಶೋಧನೆ ನಡೆಸುತ್ತೇವೆ; ಇದನ್ನು ತರ್ಕ ಮತ್ತು ಯುಕ್ತಿಯಿಂದ ಸಿದ್ಧಮಾಡಿ ಪ್ರಾಮಾಣಿಕವೆನಿಸುತ್ತೇವೆ, ಅಜ್ಞಾನಿಯಾಗುವುದು ಮನುಷ್ಯನ ವಿಶೇಷಾಧಿಕಾರವಲ್ಲ, ಅವನು ಅಜ್ಞಾನಿಯೆಂದು ತಿಳಿಯುವುದೇ ಒಬ್ಬನಿಗಿರುವ ವಿಶೇಷಾಧಿಕಾರ" ಎಂದವರು ಹೇಳುತ್ತಾರೆ.

ಶಿಕ್ಷಕರ ಹುದ್ದೆಯಿಂದ ಸಹಾಯಕ ಪ್ರೊಫೆಸರ ಹಾಗೂ ಪ್ರೆಸಿಡೆನ್ಸಿ ಕಾಲೇಜಿನ ಪ್ರೊಫೆಸರರಾಗುವಲ್ಲಿ ಡಾ। ರಾಧಾಕೃಷ್ಣನ್ನರಿಗೆ ಸಮಯ ಹೆಚ್ಚು ಬೇಕಾಗಲಿಲ್ಲ. ೧೯೧೮ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ದಿವಂಗತ ವಿಶ್ವೇಶ್ವರಯ್ಯನವರು ಆಗ ಮೈಸೂರಿನ ದಿವಾನರಾಗಿದ್ದರು. ಆಗ ಮೂರು ವರ್ಷದ ಮಟ್ಟಿಗೆ ರಾಧಾಕೃಷ್ಣನ್ನರ ಸೇವೆಯನ್ನು ಈ ವಿಶ್ವವಿದ್ಯಾಲಯಕ್ಕೆ ಎರವಲು ತರಲಾಯಿತು ಮೈಸೂರಿಗೆ ತೆರಳಿದುದೇ ಇವರಿಗೆ ವರದಾನ ದೊರೆದಂತಾಯಿತು. ಪ್ರಸಿದ್ಧ ಶಿಕ್ಷಣತಜ್ಞರಾದ ಸರ್ ಅಶುತೋಷ ಮುಕರ್ಜಿಯವರ ಗಮನಕ್ಕಿವರು ಬಿದ್ದುದರಿಂದ ಮುಂದೆ ಕಲಕತ್ತೆಗೆ ತೆರಳಬೇಕಾಯಿತು. ಈ ಸಮಯದಲ್ಲಿ ಇವರ ಕೀರ್ತಿ ನಾರಕ ತುಂಬ ಹರಡತೊಡಗಿತ್ತು, ಆಕ್ಸ್ ಫರ್ಡ್ ಮತ್ತು ಚಿಕಾಗೊ ವಿಶ್ವವಿದ್ಯಾಲಯಗಳಲ್ಲಿಯೂ ಇವರು ಪ್ರೊಫೆಸರರಾಗಿದ್ದರು. ಇವರು ಮಾಡಿದ ಭಾಷಣಗಳು 'ಎನ್ ಐಡಿಯಲ್ ವ್ಯೂ ಆಫ್ ಲೈಫ್' ಮತ್ತು 'ಹಿಂದೂ ವ್ಯೂ ಆಫ್ ಲೈಫ್', ಎಂಬವು ಪುಸ್ತಕರೂಪದಲ್ಲಿ ಪ್ರಕಟಗೊಂಡುವು 'ಕಲ್ಕಿ, ಅಥವಾ ನಾಗರಿಕತೆಯ ಭವಿಷ್ಯ ಎಂಬುದಿವರ ಇನ್ನೊಂದು ಪುಸ್ತಕ ಉಪರಾಷ್ಟ್ರಪತಿಗಳಾದ ನಂತರವೂ ಇವರು ಮಾಡಿದ ಅನೇಕ ಭಾಷಣಗಳು ಮುದ್ರಣಗೊಂಡಿವೆ.

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಅದನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಅಪೇಕ್ಷಿಸುತ್ತೇವೆ.

—ಮೆನೇಜರ್ ನವಯುಗ.

'ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಕವಲು ದಾರಿ—ಕೆಂಪು ದೀಪ

ಯಾವ ಕನ್ನಡ ನಿಮ್ಮದು?

—ಸುದಾಸ

ಯಾವ ಕನ್ನಡ ನಿಮ್ಮದು ?

ಮೈಸೂರು ಕನ್ನಡವೇ, ಹುಬ್ಬಳ್ಳಿ ಧಾರವಾಡ ಕನ್ನಡವೇ, ಉತ್ತರ ಕನ್ನಡವೇ, ತುಳು ಕನ್ನಡವೇ, ಕೂರ್ಗಿ ಕನ್ನಡವೇ, ಕಾಸರಗೋಡ ಕನ್ನಡವೇ ಎಂದಲ್ಲ ನಾನು ಕೇಳಿದ್ದು.

ತನುಕನ್ನಡವೇ, ಮನಕನ್ನಡವೇ, ಧನಕನ್ನಡವೇ ಎಂದೇ?

ಅಹುದು ಇದೀಗ ನಾವು ವಿಚಾರ ವಿನಿಮಯ ಮಾಡಿಕೊಳ್ಳಬೇಕಾದ ಪ್ರಶ್ನೆ.

ಕರ್ನಾಟಕ ಏಕೀಕರಣದ ಕೂಗು ಬಹಳ ದಾಂಧಲೆ ನಡೆಸಿದ ಬಳಿಕ ಕನ್ನಡ ರಾಜ್ಯೋದಯವಾಯಿತು ಮೈಸೂರು ರಾಜ್ಯ ನಿರ್ಮಾಣವಾಗಿದೆ, ಕರ್ನಾಟಕ ರಾಜ್ಯೋದಯವಿನ್ನೂ ಆಗಿಲ್ಲ ಎನ್ನುವ ಕೂಗು ಈಗೀಗ ಕೇಳಿಸುತ್ತಿದ ಇಲ್ಲಲ್ಲಿ. ಕನ್ನಡ ನಾಡೇನೋ ಹರಿದು ಹಂಚಿಹೋಯಿತು. (ಹೋದರೆ ಹೋಗಲಿ ಬಿಡಿ. ನಮ್ಮದೇನು ಹೋಯಿತು?) ನೆರೆ ರಾಷ್ಟ್ರಗಳವರು ಕನ್ನಡಕ್ಕೆ ದಿಕ್ಕಿಲ್ಲ—ಗತಿಗೋತ್ರವಿಲ್ಲದ ನಾಡೆಂದು ಧಾರಾಳ ಸುಲಿಗೆಯನ್ನು ಮಾಡಿದರು ಕನ್ನಡ ತಾಯಿಯ ಎರಡೂವರೆ ಕೋಟಿ ಮಕ್ಕಳು (ಇನ್ನೂ ತೊಟ್ಟಿಲ ಕೂಸುಗಳೇ) ಈ ಕಣ್ಣಾಮುಚ್ಚೇ, ಕಾಡೇಗೂಡೇ ಆಟವನ್ನು ಕಣ್ಬಿಟ್ಟು ನೋಡುತ್ತ ಕುಳಿತರು ಕೆಲವರೇನೋ ಕರ್ನಾಟಕವನ್ನು ರಕ್ಷಿಸಲು ಟೊಂಕ ಕಟ್ಟಿದರು ನಿಜ. ಆದರೆ ಈ ವಿಜಯ-ದುಂದುಭಿ ಕೇಳಿ ಉಳಿದವರಂತಿರಲಿ, ನಮ್ಮವರಲ್ಲೇ ನಕ್ಕವರೆಷ್ಟೋ ಮಂದಿ. ಆಗಲೂ ಈ ತನುಕನ್ನಡ, ಮನಕನ್ನಡ, ಧನಕನ್ನಡ ಕಾಚಾಚಾರಿಗಳಿದ್ದರು.

ಈ ಮಾತಿಗೆ ವಿಶೇಷ ಪ್ರಭಾವ ದೊರಕುವದು ಚುನಾವಣೆಯ ಹೊತ್ತಿನಲ್ಲಿ. ಇಲ್ಲವೆ ನಿಧಿಸಂಗ್ರಹದ ಹೊತ್ತಿನಲ್ಲಿ ಇಲ್ಲವೆ ಯಾವುದಾದರೂಂದು ಸಮಾರಂಭಗಳ ಭಾಷದ (ಭಾಷಣ ಸ್ಫೂರ್ತಿ) ಹೊತ್ತಿನಲ್ಲಿ ನಿಸ್ಸ್ವಾರ್ಥ ಸೇವೆ ಸಲ್ಲಿಸಿದ್ದೇವೆನ್ನುತ್ತಾರೆ ಅವರು (ಸ್ವಾರ್ಥ ನಿಸ್ವಾರ್ಥಕ್ಕೆ ಇರುವ ಅಂತರ ಒಂದು ಅಕ್ಷರದಷ್ಟು) ತನು ಮನ ಧನದಿಂದ ಕನ್ನಡದ, ಕನ್ನಡದಬ್ಬೆಯ (ಸಧ್ಯ ನಗಾರಿ ಅಲ್ಲವಲ್ಲ!) ಸೇವೆ ಸಲ್ಲಿಸಿದ್ದಾರಂತೆ ಅವರು. ಇದನ್ನೇ ನಾನು ಬೇರೆ ರೀತಿಯ ರೂಪದಲ್ಲಿ ಕೇಳಿದ್ದು, ನಿಮ್ಮದು ತನು ಕನ್ನಡವೇ, ಮನಕನ್ನಡವೇ, ಧನಕನ್ನಡವೇ, ಎಂದು

ಶರೀರ ಶ್ರಮದ ದುಡಿಮೆಗೆ ತನು ಸೇವೆ ಎಂದೇನೋ ಕರೆಯಬಹುದು. ಆದರೆ ಈ ತನು ಕನ್ನಡದ ಮಹನೀಯರ ಸೇವೆಯ ಪೊಳ್ಳನ್ನು ಬಗೆದು ನೋಡೋಣ ಅವರು ಸಲ್ಲಿಸಿದ ಸೇವೆಯ ಅರಿವು ಕೂಡಲೇ ಆಗಬಲ್ಲುದು. ಏನಿಲ್ಲವೆಂದರೂ ಈ ಮಹನೀಯರುಗಳು ಇನ್ನೂರೈವತ್ತು ಪೌಂಡಿಗೆ ಕಡಿಮೆ ಇರುವುದಿಲ್ಲ ಅವರ ಬೆನ್ನ ಹಿಂದೆ ಅವರ ಸೇವೆಯ ಪ್ರಶಂಸೆ ಮಾಡುವ ಬಾಲ ಒಡಕರಂತೂ ಇರಲೇಬೇಕು. ಅಂಥ ಮರಿಲ್ಲದಿದ್ದರೆ ಅವರು ತನುಕನ್ನಡದವರಲ್ಲ ಇವರು ಹೆಚ್ಚಿಗೇನನ್ನೂ ಬಯಸುವದೂ ಇಲ್ಲ, ಏನಾದರೊಂದು ಸಮಾರಂಭ ವೇರ್ಪಡಿಸಿ ಅಧ್ಯಕ್ಷ ಸ್ಥಾನಕ್ಕೆ ಆಮಂತ್ರಣವಿತ್ತರೆ ಸಾಕು. ಅಷ್ಟರಲ್ಲೇ ಇವರಿಗೆ ತೃಪ್ತಿ

ಮನ ಕನ್ನಡದವರು ಇಬ್ಬಗೆಯ ಸ್ವಭಾವಿಗಳು. ಒಳಗೊಂದು ಹೊರಗೊಂದು ಅನ್ನುತ್ತಾರಲ್ಲ, ಹಾಗೆ! ನಿನಗೆ ಅವರಿಂದೇನಾದರೂ ಕೆಲಸವಾಗಬೇಕಿದ್ದರೆ, ಅವರ ಹುಬ್ಬೇರಿರುತ್ತದೆ. ಅವರ ಕೆಲಸ ನಿಮ್ಮಿಂದ ಮೂಲಕವಾಗುವಂತಿದ್ದರೆ, ನಗೆಯ ಹೊಳೆಯೇ ನಿಮ್ಮ ಬಾಗಿಲ ವರೆಗೆ ಹರಿದು ಬರುತ್ತದೆ ಕನ್ನಡಕ್ಕಾಗಿ ನಾನು, ನನಗಾಗಿ ಕನ್ನಡ ಎಂದು ಅವರು ಕೂಗಾಡುವ ಮಾತಿನಲ್ಲಿ ಸ್ವಲ್ಪ ಸತ್ಯವಿದೆ. ಈ ರೀತಿ ಕೂಗಾಡುವದರಿಂದ ಎರಡು ಹೊತ್ತೂ ಉಣ್ಣುವ ಭಾಗ್ಯ ಅವರ ಪಾಲಿಗುಳಿದಿದೆ. ಔಪಚಾರಿಕ ರೀತಿ ಮಾತಾಡುವದು ಹೇಗೆ ಎನ್ನುವ ತರಬೇತಿ ಇವರಿಂದ ಕಲಿತಿರಾದರೆ, ಯಾವದೇ ವ್ಯಾಪಾರ, ಉದ್ಯೋಗವಿಲ್ಲದೇನೇ ನೀವು ಸುಖವಾಗಿ ಬದುಕಬಲ್ಲಿರಿ.

ಕನ್ನಡದ ಸಿರಿ ಬೆಳೆಯಲು ಎನ್ನುವ ಧನ ಕನ್ನಡದವರ ಬಗ್ಗೆ ಮಾತ್ರ ಎಚ್ಚರಿಕೆಯಿರಲಿ. ನೀವು ನಿರ್ಧನರಾಗಿದ್ದರ ಏನೂ ಅಪಾಯವಿಲ್ಲ. ಶ್ರೀಮಂತರಿರುವೆಡೆಗಳಲ್ಲಿ ಮಾತ್ರ ಈ ಧನ ಕನ್ನಡದವರು ದರ್ಶನ ದಯಪಾಲಿಸುತ್ತಾರೆ ಇವರಿಗೂ ಬಡವರಿಗೂ ಉತ್ತರ ದಕ್ಷಿಣ ಇವರು ಕನ್ನಡಕ್ಕಾಗಿ ಸರ್ವಸ್ವ ಅರ್ಪಿಸಿದ್ದಾರೆ. ಇನ್ನೊಂದಡೆ ಅವರು ಕೂಡ ಹಾಕಿದ ಸಂಪತ್ತೆಲ್ಲಾ ಕನ್ನಡದ್ದೇ ಆಗದೆ ಅವರಾಡುವ ಮಾತಿನಲ್ಲಿ ತಿಲ ಅಂಶ ಸುಳ್ಳಾದರೂ ಇದೆಯೇ? ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ!

ಇದಕ್ಕೆ ಹೊರತಾಗಿ ಇನ್ನೂ ಕೆಲವರಿದ್ದಾರೆ ಅವರ ಪರಿಚಯ ಇಲ್ಲಿ ಬೇಕೋ ಬೇಡವೋ ತಿಳಿಯದು. ಆದರೆ ಇವರು ಕನ್ನಡಕ್ಕಾಗಿ ತಮ್ಮದೆಲ್ಲವನ್ನೂ ಅರ್ಪಿಸಿದ ಹುತಾತ್ಮರು. ಇಲ್ಲವೆ ಬಲಿಗಾಗಿ ಅಡ್ವಾನ್ಸ್ ಕೊಡುತ್ತಿರುವ ಹುತಾತ್ಮರು ಕನ್ನಡ—ಕನ್ನಡವೆಂದು ಅವರು ಸದಾ ಕನಲುತ್ತಿರುತ್ತಾರೆ ಅಪಾಯ ಸಂದರ್ಭಗಳಲ್ಲಿ ಸಿಡಿದೇಳುತ್ತಾರೆ... ಕೆರಳಿ ನಿಲ್ಲುತ್ತಾರೆ—ಗಂಭೀರ ಘರ್ಜನೆಯಿಂದ ನಾಡನ್ನು ಎಚ್ಚರಿಸಲೆತ್ನಿಸುತ್ತಾರೆ. ಅವರ ಮಾತುಗಳನ್ನು ಮೆಚ್ಚುವವರೆಷ್ಟು ಮಂದಿ? ಅವರ ಬಿಚ್ಚು ನುಡಿಯನ್ನು ಸ್ವಾಗತಿಸುವವರೆಷ್ಟು ಮಂದಿ? ಅವರ ವಿದ್ವತ್ಪ್ರತಿಭೆಗೆ ತಲೆ ಬಾಗುವವರೆಷ್ಟು ಮಂದಿ?

ಅಲ್ಪ ಸಂಖ್ಯಾಕರಿಗೆ ಪ್ರಜಾಪ್ರಭುತ್ವದಲ್ಲಿ ಬೆಲೆಯಿರುವುದಿಲ್ಲ. ಕನ್ನಡಮ್ಮನನ್ನು ಆಳಿಸಲು ಬಹು ಸಂಖ್ಯಾಕರು ಬೇಕು, ಬಹು ಸಂಖ್ಯಾಕರು ಆಳಿಸಬೇಕಾದರೋ ಬಹು ಮಂದಿ ದೊರೆ ತಾರು. ಆಳಿಸಲು?

ಅಂತೆಯೇ ಜನರು ಅಂಥವರನ್ನೇ ತಿರುಗಿ ಕೇಳುತ್ತಾರೆ. ಏನು ದರಿದ್ರ ಕನ್ನಡ? ಏನು ಸುಡುಗಾಡ ಕನ್ನಡ? ಎಂದು.

ಏನೇ ಇರಲಿ, ಆದರೆ ಅನಾಚಾರಕ್ಕಿಂತ ಚಿತ್ತ ಸ್ವಾಸ್ಥ್ಯ ಪ್ರಾಮುಖ್ಯವಾಗಿದೆ. ಅದಕ್ಕಾಗಿ ಈ ತನು ಮನ ಧನ ಕನ್ನಡದವರಿಂದ ಆದಷ್ಟು ದೂರವುಳಿಯಿರಿ, ಯೋಗ್ಯಾಯೋಗ್ಯ ವಿಚಾರ ತಿಳಿಯದೆ ಮೂಕಸ್ತುತಿಗೆ ಮರುಳಾಗದಿರಿ,

ಜಾಗರೂಕರಾಗುವಿರಲ್ಲ? ಬಲಿ ಬಿದ್ದೀರಿ ಮತ್ತೆ!

ವಿಧಾನ ಪರಿಷತ್ತಿನ ಸದಸ್ಯ ಹಾಗೂ ಮಾಸ್ಕೊವಿನಲ್ಲಿ ಭಾರತದ ರಾಯಭಾರಿಯಾಗುವುದಕ್ಕೆ ಮೊದಲು ಇವರ ಜೀವನವು ಶಿಕ್ಷಣಕ್ಷೇತ್ರದಲ್ಲೆ ಕಳೆದಿತ್ತು ಇವರು ಲೋಕಪ್ರಿಯ ಗುರು ಮತ್ತು ಅಧ್ಯಾಪಕರಾಗಿದ್ದರು.

ಇವರ ಪಾಠವನ್ನು ಕೇಳುವುದೆಂದರೆ, ವಿದ್ಯಾರ್ಥಿಗಳಿಗೆ ಬೇಸರ ಬರುತ್ತಿರಲಿಲ್ಲ. ವಾಲ್ಟೇರದಲ್ಲಿ ಆಂಧ್ರ ವಿಶ್ವವಿದ್ಯಾಲಯವು ಸ್ಥಾಪನೆಯಾದಾಗ, ಇವರೇ ಅದರ ಮೊತ್ತಮೊದಲಿನ ಉಪಕುಲಪತಿಯಾದರು ಮಾಲವೀಯರ ನಂತರ ಬೆನಾರಸ್ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಯೂ ಆದರು. ದಿಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಯಾದಾಗ, ಅವರು ಹೊಸ ಪದವೀಧರರಿಗೆ ಪ್ರಾಚೀನ ಗುರುಕುಲದ ಪದವೀ ದಾನ ಸಮಾರಂಭದಂತೆ, 'ಸತ್ಯಂ ವದ, ಧರ್ಮಂ ಚರ' ಎಂಬ ಋಷಿ ಉಪದೇಶ ಕೊಡುವ ಕ್ರಮವನ್ನು ತೊಡಗಿಸಿದರು.

ಆವಶ್ಯಕತೆಗಿಂತ ಹೆಚ್ಚಿಗೆ ಮಾತಾಡದಿರುವ ಪ್ರವೃತ್ತಿಯ ರಾಧಾಕೃಷ್ಣನ್ನರು ಕಿರಿದರಲ್ಲಿ ಪಿರಿದರ್ಥವನ್ನು ತುಂಬುವ ಔಚಿತ್ಯಪರಿಪೂರ್ಣ ಪದಗಳನ್ನು ಬಳಸಿಕೊಳ್ಳುವವರು ಪ್ರಾಚೀನ ಋಷಿಗಳ ಸಂಸ್ಕೃತಿಯನ್ನು ಪದೇ ಪದೇ ಜಾಗ್ರತಗೊಳಿಸುವವರು. ದರ್ಶನ ಕ್ಷೇತ್ರದಲ್ಲಿ ಡಾ| ರಾಧಾಕೃಷ್ಣನ್ನರು ಭಾರತಕ್ಕೆ ಗೌರವಯುತವಾದ ಸ್ಥಾನವನ್ನು ಗಳಿಸಿಕೊಟ್ಟಿದ್ದಾರೆ; ವಿಶ್ವಶಾಂತಿ ಸ್ಥಾಪನೆಯ ಮಹಾಪ್ರಯತ್ನದಲ್ಲಿಯೂ ಭಾರತದ ಈ ದಾರ್ಶನಿಕ ರಾಜನೀತಿಜ್ಞರು ಸಫಲರಾಗುವರೆಂದು ಆಶಿಸಬಹುದು.

"ರಾಷ್ಟ್ರದ ಆದೇಶಕ್ಕೆ ಅನುಗುಣವಾಗಿ ಹನ್ನೆರಡು ವರ್ಷಗಳಿಗೂ ಮಿಕ್ಕಿದ ಕಾಲಾವಧಿಯಲ್ಲಿ ನಾನು ನಿರ್ವಹಿಸುತಿದ ಭಾರತದ ರಾಷ್ಟ್ರಪತಿಯ ಪದವಿಯ ಭಾರವನ್ನು ಈಗ, ಸುಯೋಗ್ಯ ಮತ್ತು ಅನುಭವಿಗಳಾದವರ ಕೈಗಳಿಗ ಒಪ್ಪಿಸಿಕೊಡುತ್ತೇನೆ" ಎಂದ ಡಾ। ರಾಜೇಂದ್ರ ಪ್ರಸಾದರು ನೀಡಿದ ಸಂದೇಶವು ಯಥಾರ್ಥವಾಗಿ. ಅವರೇ ಹೇಳುವಂತೆ, ನಮ್ಮ ದೇಶವನ್ನು ವಿಕಸಿತಗೊಳಿಸುವತ್ತ, ಸಂವಿಧಾನಕ್ಕನುಸಾರವಾಗಿ, ರಾಜನೈತಿಕ ಮತ್ತು ಪ್ರಶಾಸನಾತ್ಮಕ ಕಾರ್ಯಗಳನ್ನು ಜನತಂತ್ರಾತ್ಮಕ ವಿಧಾನದಿಂದ ಮುನ್ನಡೆಸೋಣ."

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-35 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹರಿಶ್ಚಂದ್ರ ಕಾವ್ಯದ ಸೂತ್ರಧಾರ

(೩ನೇ ಪುಟದಿಂದ)

ದು ಹೇಳಿಕೊಳ್ಳುವನು. 'ನನ್ನ ಕುವರಿಯರನ್ನು ಹೊಡೆದ ಕೈಗಳ ಕಡಿವೆ, ನಿನ್ನ ಸಹಾಯಕನಾದ ಮುನಿಯನ್ನು ಮುರಿವೆ, ನಿನಗೆ ನೆರವೀಯಲು ಬರುವ ಅಮರ ಸೈನ್ಯವನ್ನು ಕಡಲೊಳದ್ದುವೆ, ಅರಿತುಕೊಳ್ಳೆನಳವನು' ಎಂದು ವಿಶ್ವಾಮಿತ್ರನು ತನ್ನ ಜನ್ಮ ಭಾಷೆಯಲ್ಲಿ ನೊರೆದು ಗರ್ಜಿಸುತ್ತಾನೆ.

ಕೋಪಾಗ್ನಿಯಿಂದ ಪ್ರಜ್ವಲಿಸುವ ಋಷಿಯೆದುರಿನಲ್ಲಿ ತೋರಿಸುವ ಅರಸನ ಭಯ, ವಿನಯ, ಗೌರವಾದರವು ಕಲ್ಲನ್ನೂ ಮೃದುವಾಗಿಸುವಂತಿದೆ. ಬೆಂಕಿಯನ್ನೂ ತಣ್ಣಗಾಗಿಸುವಂತಿದೆ. ಆದರೆ ವಿಶ್ವಾಮಿತ್ರನಿಗೆ ಶಾಂತಿ, ಸಮಾಧಾನವಲ್ಲ ಬೇಕಾದುದು, ಅರಸನು ಅನೃತವನ್ನು ನುಡಿದರೆ ಅವನ ಉದ್ದೇಶ ಫಲಿಸುವುದು. ಆತನ ಕುಲಧರ್ಮಗಳು ಮಲಿನವಾಗಲೆಂದು ತನ್ನ ಮಕ್ಕಳನ್ನು ಮದುವೆಯಾಗೆಂದು ಹೇಳುವನು. ಕಡೆಗೆ ಕೈಮುಗಿದು ಬೇಡಿ, ಮೋಸದಿಂದ ಮರುಳುಗೊಳಿಸಲು ನೋಡುವನು ಆದರೆ ಹರಿಶ್ಚಂದ್ರನು 'ಇಂತು ಬೇಡಿ ಕಾಡುವಿರಾದಡೆನ್ನ ಸರ್ವರಾಜ್ಯವನ್ನಾದರೂ ನೀಡುವೆ. ಹೊಲತಿಯರನ್ನು ವರಿಸೆ'ನೆನ್ನಲು, 'ಸರಿ, ನೀಡು ಸತ್ಯಸಂಪನ್ನ, ರಾಜ್ಯವನ್ನೇ ನೀಡು' ಎಂದು ವಿಶ್ವಾಮಿತ್ರನು ಅರಸನ ಮಾತಿಗೇ ಅಂಟಿಕೊಳ್ಳುವನು.

ಸರಿ ರಾಜ್ಯ ಸರ್ವಸ್ವವನ್ನು ಧಾರೆಯೆರೆದು ಕೊಟ್ಟಾಯಿತು. ಆದರೆ ಅಷ್ಟರಿಂದಲೂ ಆ ನಿಷ್ಕರುಣಿ ವಿಶ್ವಾಮಿತ್ರನಿಗೆ ತೃಪ್ತಿಯಿಲ್ಲ. "ನಿನ್ನ ವಸ್ತ್ರಾಭೂಷಣಗಳೊಂದಿಗೆ ಮಂತ್ರಿ, ಸತಿಸುತರ ತೊಡಿಗೆಗಳನ್ನೂ ತೆಗೆದಿರಿಸೆಂದು" ಕೇಳುವನು. ಸಾಮಾನ್ಯನೊಬ್ಬ ಸುಟ್ಟ ಹಣ್ಣರಿವೆಯನ್ನು ಆ ಭೂಮಂಡಲಾಧಿಪನಿಗೂ ಆತನ ಸತಿಸುತರಿಗೂ ನೀಡುವ ವಿಶ್ವಾಮಿತ್ರನ ಹೃದಯವು ಪಾಷಾಣವೇ ಸರಿ ಇಷ್ಟರಿಂದೇನು ಮುನಿಯ ಉದ್ದೇಶ ಫಲಿಸಿತೆ? ಇಲ್ಲ. "ಬಹುಸುವರ್ಣಯಾಗವ ಮಾಡಿದಂದು ಎನಗಿತ್ತ ದಕ್ಷಿಣೆಯ ಧನವನೆನ್ನ ಮುಂದಿರಿಸಿ ನಿನ್ನ ದಾರಿಗೆ ಹೋಗಿಬಿಡು", ಎನ್ನುವನು ತಂತ್ರ ಪ್ರವೀಣನಾದ ವಿಶ್ವಾಮಿತ್ರ.

ಯಥಾರ್ಥ ವಿಷಯವೊಂದೂ ವಿಶ್ವಾಮಿತ್ರನ ಕಿವಿಗೆ ಹೋಗುವುದಿಲ್ಲ. ಹರಿಶ್ಚಂದ್ರನನ್ನು ಅವನ ಸತಿಸುತರು ಸಹಿತ ರಾಜ್ಯಭ್ರಷ್ಟರನ್ನಾಗಿ ಮಾಡಿ, ಅದರ ಮೇಲೆ ಸಾಲಗಾರನನ್ನಾಗಿ ಮಾಡುವನು. ಸಾಲದ ಹಣವನ್ನು ಹುಟ್ಟಿಸಲು ವಾರಣಾಸಿ, ಹೇಮಕೂಟಗಳನ್ನು ಮಾತ್ರ ಅವನ ಪಾಲಿಗೆ ಬಿಡುವನು. ಆದರೂ ವಿಶ್ವಾಮಿತ್ರನ ತಂತ್ರಫಲಿಸದಿರಲು ಆತನು ನಿರ್ವಿಣ್ಣನಾಗುವನು. ತನ್ನ ಪ್ರತಿಜ್ಞೆಯು ಅಸಫಲವಾಗಿ ಅವಹೇಳನೆಗೆ ತುತ್ತಾಗಿ ಗತಿಹೀನನಾಗುವೆನೋ ಎಂದು ಬೆದರಿ ಮನದೊಳು ಮತ್ತೊಂದು ಮಾಯವನ್ನು ಚಿಂತಿಸುವನು. ಸರ್ವಸೌಭಾಗ್ಯದಿಂದೊಪ್ಪುವ ಪುರ, ದುರ್ಗಗಳನ್ನು ಭವ್ಯವಾದ ಅರಮನೆಯನ್ನು, ಶೃಂಗಾರಭರಿತ ವೃಂದಾವನ, ಚಿತ್ರ ಶಾಲೆಗಳನ್ನು ವರವನಿತೆಯರ ಕೂಟವನ್ನು, ನವರತ್ನ— ಧನಧಾನ್ಯ ಸಂಚಯವನ್ನು ಕಣ್ಣಾರೆಕಂಡು ಮನದೊಳಾಶೆಯುದ್ಭವಿಸಿ ತಾನಿತ್ತ ಮಾತಿಗೆ ಹರಿಶ್ಚಂದ್ರ ತಪ್ಪದಿರಲಾರನೆಂದು ಭಾವಿಸಿ "ನನ್ನೊಡನೆ ಬಂದು ಸರ್ವವನ್ನೂ ತೋರಿ, ಒಪ್ಪಿಸಿಕೊಟ್ಟು ಹೋಗಬೇಕೆಂ"ದು ಬೇಡಿಕೊಳ್ಳುವನು. ಈ ಪ್ರಲೋಭನಕ್ಕೆ ಅರಸ ಬಲಿಯಾಗುವುದಿಲ್ಲ; ತನ್ನ ಸತ್ಯಮಾರ್ಗದಿಂದ ವಿಚಲಿತನಾಗುವುದೂ ಇಲ್ಲ.

"ಕೊಡುವೊಡವೆ ಬರಲಿ, ಬಾರದೆ ಕೆಡಲಿ, ದಾರಿಯಲ್ಲಿ ಹರಿಶ್ಚಂದ್ರನನ್ನು ಹಿಂಸಿಸಿ, ಕಾಡಿಗೋಳಿಡಿಸಿ ಎಂತಾದರೂ ಹುಸಿಕನೆನಿಸೆಂದು ಅಸೂಯೆ, ನೀಚ ವೃತ್ತಿ, ನಿರ್ದಾಕ್ಷಿಣ್ಯ, ನಿಷ್ಕರುಣ ಮೊದಲಾದ ಸರ್ವ ದುರ್ನೀತಿಗಳಲ್ಲಿ ಪರಿಣತನಾಗಿದ್ದ ನಕ್ಷತ್ರಕನೆಂಬಾತನನ್ನು ವಿಶ್ವಾಮಿತ್ರನು ಹರಿಶ್ಚಂದ್ರನೊಂದಿಗಟ್ಟುವನು.

ವಿಶ್ವಾಮಿತ್ರನನ್ನು ಕಂಡು ಪುರಜನರಾಡುವ ನುಡಿಯಲ್ಲಿ ಆತನ ವ್ಯಕ್ತಿತ್ವವು ಲೋಕಕ್ಕೆ ಹೇಗೆ ತೋರಿತು ಎಂಬುದು ವ್ಯಕ್ತವಾಗುತ್ತದೆ. ಶ್ವೇತಚ್ಛತ್ರವನ್ನು ಬಿಡು ಬರಿಗಾಲಲ್ಲಿ ನಡೆದು ಬರುವ ತಮ್ಮ ಮಹಾರಾಜನನ್ನು ಕಂಡು ಜನಸ್ತೋಮವು ಶೋಕದಿಂದ ಬಾಯ್ಬಿಡುವುದು. ಕಟ್ಟರೆ ಗಂಡ, ಪಾಪಿ, ನಿಷ್ಕರುಣಿ ನಿರ್ದಯ, ಮೂರ್ಖ ನೀಚ, ನೀರಸ, ನಿರ್ಗುಣ ನೆರೆಕೊಂದೆ ನೆಚ್ಚಿರ್ದವೆಮ್ಮೊಡಲೊಳು ಇಳ್ಳಿರಿಯುತಿರ್ಪ ಅಳಲ ಬೆಂಕಿಯುರಿ ನಿನ್ನನಿರಿಯದೇ ಹೇಳು, ವಿಶ್ವಾಮೃತ್ಯುವಾದೆ ವಿಶ್ವಾಮಿತ್ರಾ ಎಂದು ಪ್ರಜೆಗಳು ಬೆಂದು ಬೇಗುದಿಗೊಂಡರು.

ವಿಶ್ವಾಮಿತ್ರನ ಪ್ರತಿ ಸೃಷ್ಟಿಯಂತಿದ್ದ ನಕ್ಷತ್ರಕನ ಹೃದಯವೂ ಕೊನೆಗೆ ಕಂಗಿದರೂ ವಿಶ್ವಾಮಿತ್ರನ ಕಲ್ಮನ ಕರಗಲಿಲ್ಲ ವಿಶ್ವಾಮಿತ್ರನ ಮಾಯೆಯ ಸರ್ಪ ರೋಹಿತಾಶ್ವನನ್ನು ಬಲಿ ತೆಗೆದುಕೊಳ್ಳುತ್ತದೆ. ಚಂದ್ರಮತಿಯ ವಿಲಾಪವು ಎಂಥ ಪಾಷಾಣ ಹೃದಯವನ್ನು ಕರಗಿಸದಿರದು. ಆದರೆ ಈ ಕಟ್ಟರೆ ಗಂಡ ವಿಶ್ವಾಮಿತ್ರ ಅಷ್ಟರಲ್ಲೇ ಸಮಾಧಾನಗೊಳ್ಳದೆ ಆ ಪರಮ ಸಾಧ್ವಿ ವಸುಧಾಪತಿಯ ಪಟ್ಟದ ಮಹಿಷಿ ಚಂದ್ರಮತಿಯನ್ನು, ಶೋಕ ವಿಹ್ವಲೆಯಾದ ಪುತ್ರ ವಿಹೀನೆಯನ್ನು ಕೊಲೆಗಡುಕಿಯೆಂದು ತೀರ್ಮಾನಿಸುವಂತೆ ಮಾಡುವನು. ತನ್ನ ಪಣವೆಂತು ಗೆಲ್ಲುವುದು ಎಂಬುದೊಂದೇ ಅವನ ಚಿಂತೆ. ಆದರೊಂದಿಗೆ, ಸೂತ್ರಧಾರನಾದ ವಿಶ್ವಾಮಿತ್ರನ ಯೋಜನೆಯಂತೆ ತನ್ನ ಧರ್ಮ ಪತ್ನಿಯನ್ನು ಕೈಯಾರೆ ಕತ್ತರಿಸುವ ವಿಷಮ ಯೋಗವು ಹರಿಶ್ಚಂದ್ರನ ಪಾಲಿಗೆ ಬಂತು! ಇನ್ನಾದರೂ ಈ ಹತ್ಯಾಕಾಂಡವನ್ನು ನಿಲ್ಲಿಸೆಂದು ಸುರಗಣವೂ ಕೂಡಾ ಶಶಿ ಮೌಳಿಯನ್ನು ಪ್ರಾರ್ಥಿಸುವುದು. ದುರ್ಮೋಹಿ ವಿಶ್ವಾಮಿತ್ರ ಪಾಪಿ! ಈತನಲ್ಲದೆ ಈ ಭೀಕರ ದೃಶ್ಯವನ್ನು ನೋಡಲು ಯಾರು ಮೆಚ್ಚುವರು?

ಸುತನ ದುರ್ಮರಣವನರಿತೂ, ತನ್ನ ಸತಿಯನ್ನು ಕೈಯಾರೆ ಕೊಲ್ಲುತ್ತಿರುವೆನೆಂದು ತಿಳಿದೂ ಪತಿಯಾಜ್ಞೆಯಾದರೆ ಸಾಕು ಎಂದು ಇನಿತೂ ಹೇವರಿಸದೆ ಖಡ್ಗವೆತ್ತಿದ ನೃಪತಿಯನ್ನು ನೋಡಿ "ಹೊಡೆಯ ಬೇಡೆನ್ನ ಕುವರಿಯರ ವರಿಸು ಸತ್ತ ಮಗನ ನೆತ್ತುವೆ, ಸತಿಯನ್ನ ರಕ್ಷಿಸಿಕೊಂಡ ಧನವನಿತ್ತು ರಾಜ್ಯದಲ್ಲಿ ಮುನ್ನಿನ ಪರಿಯೊಳಿರಿಸುವೆ"ನೆಂದು ಪ್ರಲೋಭನವನ್ನು ತೋರುವನು ತಂತ್ರಪ್ರವೀಣನಾದ ವಿಶ್ವಾಮಿತ್ರ! ಆದರೆ ಆ ಸತ್ಯಾತ್ಮನಾದ ಹರಿಶ್ಚಂದ್ರನು ಮುನಿಯ ಮಾತಿಗೆ ಲಕ್ಷ್ಯವನ್ನೀಯದೆ ಹೊಡೆಯಲನುವಾದನು.

ಸರಿ. ವಿಶ್ವಾಮಿತ್ರನ ಪರಾಭವದ ಕ್ಷಣ ಬಂತು. ಘನಸತ್ಯವೇ ಜೀವವೆಂದಿರ್ದ ಸತ್ಯ ಮೂರ್ತಿಯಾದ ಹರಿಶ್ಚಂದ್ರನ ಮುಂದೆ ವಿಶ್ವಾಮಿತ್ರನ ಯಾವ ಆಟವೂ ಸತ್ಪರಿಣಾಮ ಹೊಂದಲಿಲ್ಲ. ಆತನ ಬತ್ತಳಿಕೆ ಬರಿದಾಯಿತು; ಮೋಸಕೃತ್ಯವು ಬಯಲಾಯಿತು. ಆತನ ಕ್ರೋಧ, ಮಾಯೆ, ಸೇಡುಗಳೊಂದೂ ಫಲಕಾರಿಯಾಗಲಿಲ್ಲ. ಸತ್ಯದ ಮುಂದೆ ಜಗತ್ತನ್ನೆ ಸುಟ್ಟು ಮರಳಿ ಹುಟ್ಟಿಸಬಲ್ಲ ಮುನಿನಾಥನೂ ತಲೆ ಬಾಗಬೇಕಾಯಿತು. ತಾನೆಡೆಬಿಡದೆ ಐವತ್ತು ಕೋಟಿ ವರುಷ ಸಾಧಿಸಿದ ತಪಃ ಫಲದರ್ಧವನಿತ್ತು 'ಕಡುಪಾಳಿದು ಕಾಡಿ ನೋಡಿದೆ ನಿನ್ನ ಮೆಚ್ಚಿದೆ' ಎಂದು ಅರಸನನ್ನು ವಿಶ್ವಾಮಿತ್ರನು ಹರಸಿದನು.

ಹರಿಶ್ಚಂದ್ರನ ಸತ್ಯ ಶುದ್ಧತೆಯನ್ನು ತ್ರಿಭುವನದಲ್ಲಿ ಹರಡಿಸಿ, ಸಮಸ್ತ ದೇವರ್ಕಳನ್ನೂ ಆತನ ಬಳಿಗೆ ಬರಿಸಿ, ತ್ರಿಮೂರ್ತಿಗಳನ್ನೊಮ್ಮೆಲೇ ಎಳತಂದಿತ್ತ ತನ್ನ ಸೋಲನೊಪ್ಪಿಕೊಂಡ ವಿಶ್ವಾಮಿತ್ರನ ಬಗೆಗೆ ನಾವು ಕನಿಕರವನ್ನು ತಾಳಬಹುದಾಗಿದೆ, ಏಕೆಂದರೆ, ಅವನು ಕಥಾನಾಯಕನನ್ನು ಹರ್ಷಾಂತವನ್ನಾಗಿ, ಭವ್ಯವನ್ನಾಗಿ ಮಾಡುತ್ತಾನೆ ವಿಶ್ವಾಮಿತ್ರನಿಲ್ಲದಿದ್ದರೆ, ಅವನ ಪ್ರತಿಜ್ಞೆಯಿಲ್ಲದಿರುತ್ತಿದ್ದರೆ ಭೂಮಿಯಲ್ಲಿ ಆಳಿ ಅಳಿದುಹೋದ ಎಷ್ಟೋ ಸಾಮಾನ್ಯ ರಾಜರ ಸಾಲಿಗೆ ಹರಿಶ್ಚಂದ್ರನೂ ಸೇರಿ ಹೋಗುತ್ತಿದ್ದನು. ಅವನ ಕೀರ್ತಿಯನ್ನು ಅಜರಾಮರವಾಗಿಸಿ, ಸತ್ಯ ಹರಿಶ್ಚಂದ್ರನೆಂಬ ಹೆಸರನ್ನು ಮಾಜಗದ ಮೂಲೆಗೂ ಮುಟ್ಟಿಸಿ, ಆತನ ಕಥೆಯನ್ನು ಪುಣ್ಯಕಥೆ, ಸತ್ಯವಿಜಯದ ದಿವ್ಯಕಥೆಯಾಗಿಸಿದ ಹಿರಿಮೆ ವಿಶ್ವಾಮಿತ್ರನಿಗೆ ಸಲ್ಲಬೇಕು. ಅವನೇ ಕಥೆಗೆ ಕಾರಣ, ಕರ್ತೃ ಮತ್ತು ಸೂತ್ರಧಾರ.

ವಿಶ್ವಾಮಿತ್ರನೂ ಪರಾಭವ ಹೊಂದಿದ್ದೇ ಸರಿಯಾದರೂ, ಆತನ ತೇಜೋವಧೆಯಾಗುವುದನ್ನು ಕಾಣಲು ಯಾರೂ ಸಿದ್ಧರಿರಲಿಲ್ಲ. ಆತನ ದುಷ್ಕೃತ್ಯ ಸತ್ಕೃತಿಯಾಗಿ ಕೊನೆಗೊಂಡುದನ್ನು ನೋಡಿ ಸರ್ವರೂ ತೃಪ್ತರಾಗುತ್ತಾರೆ, ಶಾಂತರಾಗುತ್ತಾರೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931.
Phone No. 240. — ಮಂಗಳೂರು — 3

ವರ್ಗ — ಉಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ತ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ: 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು, (ಗವರ್ನಮೆಂಟ್ ಕಾಲೇಜ್ ಎದುರುಗಡೆ) ಮಂಗಳೂರು. ಮಾಲಿಕ: ಕೆ. ಕೆ. ಆರ್. ಶೇಟ್

೯ನೆಯ ಶತಮಾನದಲ್ಲಿ

ಟಾಂಗುಟ್‌ನಲ್ಲಿ ಮುದ್ರಣ ಕಲೆಯಿತ್ತು

ಮಧ್ಯ ಏಷ್ಯದ ಮಂಗೋಲಿಯಾದ ಮರುಭೂಮಿಯಲ್ಲಿ ಮರಳಿನಡಿ ಹೂತು ಹೋದ ನಗರದ ಅವಶೇಷಗಳನ್ನು ೧೯೦೮ರಲ್ಲಿ ಶೋಧಿಸಿ ಹೊರತೆಗೆಯಲಾಯಿತು. ಈ ನಗರವನ್ನು ಸಂಶೋಧಕ ಗಡರಿಯೊ ಅವರು ಕಾರಾಕೋತ ಎಂದು ಕರೆದರು. ಈ ನಗರವು ಒಂದು ಕಾಲದಲ್ಲಿ ಟಾಂಗುಟ್ ರಾಜ್ಯದ ರಾಜಧಾನಿಯಾಗಿತ್ತು. ಒಂಬತ್ತನೆಯ ಶತಮಾನದಲ್ಲಿದು ಉದಯಿಸಿತು. ಹದಿಮೂರನೆಯ ಶತಾಬ್ದಿಯಲ್ಲಿ ಚಂಗೇಜಖಾನನ ಆಕ್ರಮಣಗಳಿಂದ ಈ ನಗರವು ಪತನಗೊಂಡಿತು. ಮಂಗೋಲಿಯನರು ಮುನ್ನುಗ್ಗಿದ್ದರಿಂದ ಇಡಿಯ ದೇಶವು ಧ್ವಂಸವಾಯಿತು; ಅಧಿಕಾಂಶ ಜನರು ಕೊಲ್ಲಲ್ಪಟ್ಟರು ಮತ್ತು ಉಳಿದವರಾದರೂ ಕೈದಿಗಳಾಗಿ ಬಿಟ್ಟರು.

ಒಬ್ಬ ಪ್ರಸಿದ್ಧ ಸಂಶೋಧಕನಾದ ಕೋಜಲೋವನು ಈ ಅವಶೇಷಗಳ ನಡುವೆ ಒಂದು ಪುಸ್ತಕಾಲಯವನ್ನು ಆಯ್ದು ತೋರಿಸಿದನು. ಇಲ್ಲಿನ ಪುಸ್ತಕಗಳು ಅಜ್ಞಾತ ಭಾಷೆಯೊಂದರಲ್ಲಿ ಬರೆಯಲ್ಪಟ್ಟಿದ್ದವು. ತಾನು ಅಲ್ಲಿಂದ ತಂದ ಕೆಲವೊಂದು ಪುಸ್ತಕಗಳನ್ನು ಅವನು ಸೈಂಟ್ ಪೀಟರ್ಸ್‌ಬರ್ಗಿನ ಏಷ್ಯನ್ ವಿಜ್ಞಾನ ಮಂದಿರದಲ್ಲಿ ಇಟ್ಟನು. ೧೯೩೧ರಲ್ಲಿ ಈ ಐತಿಹಾಸಿಕ ಪುಸ್ತಕಗಳು ಹೊಸತಾಗಿ ನಿರ್ಮಿತವಾದ ಪ್ರಾಚ್ಯ ಅಧ್ಯಯನ ಸಂಸ್ಥಾನಕ್ಕೆ ಕೊಡಲ್ಪಟ್ಟವು.

ಈ ಪುಸ್ತಕಗಳ ಅಧ್ಯಯನ ಕಾರ್ಯವು ನಡೆಯುತ್ತ ಬಂದಂತೆ ಅವು ಟಾಂಗುಟೊ ಕಾಲದ ಸಾಮಗ್ರಿಗಳಿಂದ ಲಿಖಿತವಾದುವೆಂದು ತಿಳಿಯುತ್ತ ಬಂತು. ಹತ್ತೊಂಬತ್ತನೆಯ ಶತಮಾನಾಂತ್ಯದಲ್ಲಿ ಫ್ರಾನ್ಸ್, ಅಮೇರಿಕೆ ಮತ್ತಿತರ ದೇಶಗಳ ಪ್ರಾಚ್ಯ ವಿಶೇಷಜ್ಞರು ಚೀನೀ ನಗರವೊಂದರ ಬಾಗಿಲ ಕಲ್ಲಿನ ಲೇಖವನ್ನು ಅಧ್ಯಯನ ನಡೆಸಿದರು. ಈ ಶಿಲಾಲೇಖನ ವಿವರಣೆಯು ಟಾಂಗುಟ ಭಾಷೆಯನ್ನು ಸೇರಿಸಿ ಆರು ಭಾಷೆಗಳಲ್ಲಿ ಪ್ರಕಾಶಿತವಾಗಿತ್ತು. ಆ ಸಮಯದ ವರೆಗೆ ಟಾಂಗುಟ ಲಿಪಿಯನ್ನು ಸ್ಪಷ್ಟವಾಗಿಸುವುದು ಅಸಾಧ್ಯವಾಯಿತು.

ಈಗ ಆ ರಹಸ್ಯಮಯವಾದ ಭಾಷೆಯು ಸುಸ್ಪಷ್ಟವಾಯಿತು. ಅಲ್ಲದೆ ಈ ಲಿಪಿಗಾಗಿ ಮಾಡಿಕೊಂಡ-ಭಾಷೆಯ ಪರಿಚಯೂ ಆಯಿತು. ಟಾಂಗುಟ್ ಜನರು ಪ್ರಾಚೀನ ನಾಗರಿಕತೆಗೆ ಹೆಸರಾದ ಚೀನಾದ ನೆರೆಯವರಾದರೂ ಅವರ ಭಾಷೆಯನ್ನು ಕಲಿಯಲಿಲ್ಲ; ತಮ್ಮ ಮೂಲ ಲಿಪಿಯನ್ನೇ ಮುಂದುವರಿಸಿದರು. ಮರದ ಹಲಗೆಗಳಲ್ಲಿ ಪುಸ್ತಕ ಮುದ್ರಿಸುವ ಕಲೆಯನ್ನು ಚೀನೀಯರಿಂದ ಅರಿತುಕೊಂಡು ತಾವು ವಿಶಾಲ ಪರಿಮಾಣದಿಂದ ಮುದ್ರಣ ಮಾಡುತ್ತಿದ್ದರು. ನಾವಿಂದು ಸಾಮೂಹಿಕ ಸಂಸ್ಕರಣವೆನ್ನುವಂತಹ ಮಾದರಿಯ ಮುದ್ರಣವನ್ನೂ ಅವರು ಮಾಡುತ್ತಿದ್ದರು. ಯುರೋಪಿನಲ್ಲಿ ೧೫ನೆಯ ಶತಮಾನದ ಸುಮಾರಿಗೆ ಮುದ್ರಣ ಕಾರ್ಯವು ಪ್ರಾರಂಭವಾಗಿದ್ದರೆ ಇಲ್ಲಿ ಇದಕ್ಕೂ ನಾಲ್ಕಾರು ನೂರು ವರ್ಷಗಳಿಗೆ ಮೊದಲೇ ಮುದ್ರಣ ಯಂತ್ರವಿತ್ತು. ಯುರೋಪಿನವರಲ್ಲಿ ಆ ಕಾಲದಲ್ಲಿ ಕೆಲವು ನಿರ್ಣಯಗಳು, ನಿಯಮಗಳ ಪ್ರತಿಗಳು ಮಾತ್ರ ಮುದ್ರಿತವಾಗುತ್ತಿದ್ದರೆ, ಇದಕ್ಕೆ ಹಿಂದೆಯೇ ಟಾಂಗುಟೊದಲ್ಲಿ ದೊಡ್ಡ ದೊಡ್ಡ ಕಥೆಗಳು, ಕವಿತೆಗಳು ಅಚ್ಚಾಗುತ್ತಿದ್ದುವು- ಇವುಗಳ ಅನುವಾದ ಮತ್ತು ಸ್ಪಷ್ಟೀಕರಣವನ್ನು ನೆವ್ಸ್ಕೀ ಎಂಬವನು ಮಾಡಿದನು.

ನೇವ್ಸ್ಕೀಯ ಸಂಶೋಧನೆಯಿಂದ ಚಿಕ್ಕ ಪುಟ್ಟವರು ಸಂಸ್ಕೃತಿ ಮತ್ತು ಪ್ರಗತಿಯ ಮಾರ್ಗದಲ್ಲಿ ಮುಂದುವರಿಯುವರು ಎಂದು ತಿಳಿದು ಬಂದಿದೆ. ಅವರು ಮುಂದುವರಿಯುವುದು ಮಾತ್ರವಲ್ಲ, ಸಾಂಸ್ಕೃತಿಕ ವಿಕಾಸದ ಶಿಖರವನ್ನೂ ಮುಟ್ಟುವರೆಂದು ಗೊತ್ತಾಗಿದೆ. ನೇವ್ಸ್ಕೀಯವರ ಸಂಶೋಧನೆಗಳ ಜ್ಞಾನವು ವಿಶೇಷಜ್ಞರಿಗೆ ೩೫ ವರ್ಷಗಳಿಗೆ ಮೊದಲು ಆಯಿತು; ಆಗಲೇ ಟಾಂಗುಟೋದ ಕೃತಿಗಳು, ಅವರ ಭಾಷೆ ಮೊದಲಾದುವುಗಳು ಮೊತ್ತಮೊದಲಿಗೆ ಪ್ರಕಟವಾದುವು.

ಟಾಂಗುಟ್ ಲೇಖಗಳ ಸಂಶೋಧಕರು ಎರಡು ಅಜ್ಞಾತ ವಿಷಯಗಳಲ್ಲಿ ಕಾರ್ಯವೆಸಗಬೇಕಾಯಿತು. ಮೊದಲನೆಯದಾಗಿ ಭಾಷೆ, ಮತ್ತು ಎರಡನೆಯದಾಗಿ ಲಿಪಿಯ ಸಮಸ್ಯೆ. ಭಾಷೆಯನ್ನು ಆಡುವವರೂ ಈಗ ಇಲ್ಲವಾದುದರಿಂದ ಲೇಖನಗಳ ಮೂಲಕವೇ ರಹಸ್ಯೋದ್ಘಾಟನೆ ಸಾಧ್ಯ. ಈ ಲೇಖಗಳು ಶತಾಬ್ದಿಗಳ ಸಂಶೋಧನೆಗಳ ನಂತರ ಲಭಿಸಿದುವು ಆದರೆ, ಲೇಖನಗಳ ಸ್ಪಷ್ಟೀಕರಣವು ಭಾಷಾಜ್ಞಾನವನ್ನು ಹೊಂದಿಕೊಂಡಿದೆ. ಇದರಿಂದ ಕಷ್ಟಗಳು ಮತ್ತೂ ಹೆಚ್ಚಿದುವು ಲಿಪಿಯಿಂದಲಾದರೂ ಇದನ್ನು ವಿವರಿಸುವ ಯಾವುದೇ ಸಂಕೇತವಿಲ್ಲ. ಆದುದರಿಂದ ಟಾಂಗುಟ್ ಲಿಪಿಯನ್ನು ವಿವರಿಸುವ ಕೆಲಸವು ಎಲ್ಲಕ್ಕಿಂತ ಕಠಿಣವಾಯಿತು.

ಕೋಜಲೋವರ ಸಂಶೋಧನೆಗಳು ನೆವ್ಸ್ಕೀಯವರ ಈ ಸಮಸ್ಯೆಗಳನ್ನು ಸರಳಗೊಳಿಸುವಲ್ಲಿ ಸಫಲವಾದುವು. ಈ ಶೋಧನೆಗಳಲ್ಲಿ ಟಾಂಗುಟ್ ಪುಸ್ತಕ ಮತ್ತು ಹಸ್ತಲಿಪಿಗಳ ಬೆಲೆ ಬಾಳುವ ಪುಸ್ತಕಗಳಿವೆ. ಇಂತಹ ಎಂಟು ಸಾವಿರ ಪುಸ್ತಕಗಳಿವೆ. ಈ ಸಂಗ್ರಹ ಅದ್ವಿತೀಯವಿದೆ. ಬೌದ್ಧ ಸಾಹಿತ್ಯ, ಕಾನೂನು, ಇತಿಹಾಸ ಮತ್ತು ಕಲಾತ್ಮಕ ಕೃತಿಗಳ ವಿವರಣೆ ಮತ್ತು ಜ್ಞಾನ ಕೋಶಗಳಂತಹ ಸಂಕಲನಗಳೂ ಇವುಗಳಲ್ಲಿ ಸೇರಿವೆ. ಇದಲ್ಲದೆ ಟಿಬೇಟಿನ ಭಾಷೆಗಳಲ್ಲಿಯೂ ಪರ್ಯಾಪ್ತ ಸಾಮಗ್ರಿಗಳಿದ್ದು, ಅನುಸಂಧಾನ ಕರ್ತರಿಗೆ ಅತಿ ಉಪಯುಕ್ತವಾಗಿವೆ. ಈ ಕೃತಿಗಳಲ್ಲಿ ಟಾಂಗುಟ್ ಸ್ವರ ಸಂಬಂಧದ ಚಾರ್ಟು ಕೂಡ ಒಂದಿದೆ

ಟಾಂಗುಟ್ ಭಾಷೆಯನ್ನು ತಿಳಿದುಕೊಳ್ಳಬೇಕಾದರೆ, ಈ ಭಾಷೆಯು ಎಂಟು-ಹತ್ತು ಶತಮಾನಗಳ ಹಿಂದಿನ ರೂಪ ಯಾವುದು ಎಂದು ಅರಿತುಕೊಳ್ಳಬೇಕು. ಅಲ್ಲದೆ ಬೌದ್ಧ ಮತ್ತು ಚೀನೀ ಸಾಹಿತ್ಯದ ವ್ಯಾಪಕ ಜ್ಞಾನವೂ ಅವಶ್ಯಕ. ಸೌಭಾಗ್ಯವಶದಿಂದ ನೇವ್ಸ್ಕೀಯು ಇವೆಲ್ಲವನ್ನೂ ಬಲ್ಲವನಾಗಿದ್ದನು; ಆದುದರಿಂದಲೇ ಟಾಂಗುಟ್ ಸಾಹಿತ್ಯ ಸಂಶೋಧನೆಯಲ್ಲಿ ಅವನು ಸಫಲನಾದನು. ಇದರಿಂದಾಗಿ ಆತನು ಪ್ರಾಚೀನ ಸಾಹಿತ್ಯ ಸಂಶೋಧಕರ ಶ್ರೇಣಿಯಲ್ಲಿ ಅಗ್ರಗಣ್ಯ ಸ್ಥಾನ ಪಡೆದನು.

ಟಾಂಗುಟ್‌ನ ಸಂಬಂಧದಲ್ಲಿ ಚೀನೀ ಸೂತ್ರಗಳಿಂದಲೇ ಇದುವರೆಗೆ ನಮಗೆ ತಿಳುವಳಿಕೆ ಪ್ರಾಪ್ತವಾಗುತಿತ್ತು. ಈಗ ಆ ಭಾಷೆಯ ಪುಸ್ತಕಗಳಿಂದಲೇ ಟಾಂಗುಟ್‌ನ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನವು ಸಂಭವನೀಯವೆನಿಸಿದೆ.

ಕೊನೆಯ ಬಯಕೆ ಸುಳ್ಳಾಗಲಿಲ್ಲ!

(೩ನೇ ಪುಟದಿಂದ)

ಗರ ಬಡಿದವಳಂತೆ ಕೂತಳು ಶೈಲಾ. ಸೂಕ್ಷ್ಮಜೀವಿಯಲ್ಲಾದ ವನಿತಾ ಶೈಲಾ ನಲ್ಲನಾದ ಬದಲಾವಣೆ ತಿಳಿಯದೇ ತನ್ನ ಕೋಣೆಗೆ ಹೊರಟು ಹೋದಳು.

"ಶೈಲಾ.... ನನ್ನ ಜೀವ ನಿನ್ನ ಕೈಯಲ್ಲಿದೆ ಎಂಬುದನ್ನು ಮರೆಯಬೇಡ" ಎಂಬ ಸ್ವರ ಅವಳ ಕಿವಿಯಲ್ಲಿ ಗುಂಯ್‌ಗುಡುತಿತ್ತು. "ನಾನೇನು ಮಾಡಲಿ ನನ್ನ ಸ್ವಾಮಿ... ನೀನಲ್ಲದೆ ಇನ್ನೊಬ್ಬನನ್ನು ಸ್ವಾಮಿ ಎಂದು ಹೇಗನ್ನಲಿ.. ಸ್ತ್ರೀಗೆ ಪಾತಿವ್ರತ್ಯಕ್ಕಿಂತ ದೊಡ್ಡ ಭೂಷಣವಿಲ್ಲವೆಂದು ಕೇಳಿ ಬಲ್ಲೆ... ಈಗ ನನಗೇನು ಉಪಾಯ?" ಎಂದು ಫಟವನ್ನು ಕೈಯಲ್ಲಿ ಹಿಡಿದುಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಇದೆಲ್ಲಕ್ಕಿಂತಲೂ ಆತ್ಮಹತ್ಯವೇ ಮೇಲೆಂದು ಒಮ್ಮೆ ಯೋಚಿಸುತ್ತಾಳೆ. ಈ ಎಲ್ಲಾ ಚಿಕ್ಕಾಟಕ್ಕೆ ಒಂದೇ ಒಂದು ಮದ್ದು ಎಂಬಂತೆ ನಿದ್ರಾದೇವಿ ತನ್ನ ಮಡಿಲಲ್ಲಿ ಆಶ್ರಯ ನೀಡಿದಳು ಆಕೆಗೆ. ಮನಸ್ಸಿನಲ್ಲಿ ಕೊರೆಯುತ್ತಿದ್ದ ಕೊರತೆ ಕನಸಿನ ರೂಪದಲ್ಲಿ ಬಂತು. ಶೈಲಾ ಒಮ್ಮಿಂದೊಮ್ಮೆ ಬೆಚ್ಚಿಬಿದ್ದು ಎದ್ದಳು. ಕನಸಿನಲ್ಲಿ ಅವಳು ಸುಕುಮಾರನನ್ನು ಕಂಡಿದ್ದಳು. 'ಶೈಲಾ,... ನಿನ್ನ ಮೂಢ ನಂಬಿಕೆ, ಆಚಾರಗಳಿಗಾಗಿ ಒಬ್ಬ ವ್ಯಕ್ತಿಯನ್ನು ಬಲಿಗೊಡಬೇಡ. ನನ್ನ ಮರಣ ವಾಕ್ಯವನ್ನು ಅಲ್ಲಗಳೆಯಬೇಡ. ನಾನು ಬೇರೆ ಅಲ್ಲ, ಸತೀಶ ಬೇರೆ ಅಲ್ಲ. ಆತನೇ ನಾನು, ನಾನೇ ಆತನು. ಆತನಲ್ಲಿ ನನ್ನನ್ನು ಕಾಣಲಾರೆಯಾ... ಒಂದು ಸಲ ಕಣ್ಣು ತೆರೆದು ನೋಡು', ಎಂದು ಮಾಯವಾದನು.

ಶೈಲಾ ತನ್ನ ಅದೆಷ್ಟೋ ವಿಚಾರಗಳನ್ನು ಹೇಳಬೇಕೆಂದು ನೋಡುವಾಗ ತಾನು ಇಷ್ಟು ದಿನ ಪೂಜಿಸಿದ ಆರಾಧ್ಯ ದೇವತೆ ಮಾಯವಾಯ್ತೆಂದು ಬೆಚ್ಚಿಬಿದ್ದು ಎದ್ದಳು. ದೂರದಲ್ಲಿ ಸುಕುಮಾರನ ಛಾಯೆ ಮಾತ್ರ ಕಾಣಿಸುತಿತ್ತು. ಅದನ್ನು ಬೆನ್ನಟ್ಟಿ ಓಡಿದಳಾಕೆ; ಆದರೆ, ಅವನು ಮುಂದೆ ಮುಂದೆ ಸಾಗಿದನು. ಎಲ್ಲಿಗೆ ಏನೂ ಒಂದೂ ಗೊತ್ತಿಲ್ಲ. ಆದರೆ ಶೈಲಾ ಹಿಂಬಾಲಿಸುತ್ತ ಓಡಿದಳು. ಆಸ್ಪತ್ರೆಯ ಒಂದು ಮಂಚದ ಹತ್ತಿರ ಸುಕುಮಾರ ನಿಂತಂತೆ, ಅವಳು ನೋಡುತ್ತಿದ್ದಂತೆ ಸುಕುಮಾರ ಆ ಮಂಚದಲ್ಲಿ ಹೊದ್ದುಕೊಂಡು ಮಲಗಿದಂತೆ ಭಾಸವಾಗುತ್ತದೆ

"ಸ್ವಾಮೀ...ನೀನೇ ನನ್ನ ಸ್ವಾಮಿ."

"ಯಾರು.... ಶೈ...ಲಾ... ಸ್ವಲ್ಪ.. ನೀ....ರು... ", ಎಷ್ಟು ನೀರು ಕೊಟ್ಟ ಶೈಲಾ ಆ ಮುಖ ನೋಡುವಾಗ ತಾನಿದ್ದ ಅವಸ್ಥೆಯಿಂದ ಕಣ್ಣುಜ್ಜಿ ನೋಡುತ್ತಾಳೆ... ಯಾರದು.... ಯಾರು ಈ ವ್ಯಕ್ತಿ.... ಸತೀಶರಾಯರು. ಅವರೆ.. ಸುಕುಮಾರ.. ಅವನೇ ತಾನೆಂಬ ನಿದರ್ಶನ ತೋರಿಸಿದ ಮೇಲೆ ತಾನೇನು ಮಾಡಬೇಕು? ಶೈಲಾ ಎಚ್ಚೆತ್ತಳು. 'ನನ್ನ ಸ್ವಾಮಿಯ ಇಚ್ಛೆಯೇ ಇದಾದರೆ, ನಾನು ಅಲ್ಲಗಳೆಯಲಾರೆ. ಅವರ ಇಚ್ಛೆಯೇ ನನ್ನ ಇಷ್ಟ' ಎಂದು ಸತೀಶನನ್ನೇ ನೋಡಿದಳು. ಜ್ವರದ ತಾಪದಿಂದ ಅರೆಪ್ರಜ್ಞೆಯಲ್ಲಿದ್ದ ಮನುಷ್ಯನ ಹಣೆಗೆ ಕೈಹಾಕಿ ನೋಡಿದಳು. ಕೆಂಡದಂತೆ ಸುಡುತ್ತಿದೆ... ಇದೆಲ್ಲಾ ತನ್ನಿಂದ___ ಮುಂದೇನು... ಬಗ್ಗಿ ಮೆಲ್ಲ ಹೇಳಿದಳು: "ನಾನು, ನಿಮ್ಮನ್ನು ಮದುವೆಯಾಗುತ್ತೇನೆ" ಸತೀಶ ಕಣ್ಣು ತೆರೆದು 'ಹೌದೇ' ಎಂದನು. ಆತನ ಜ್ವರವು ಹಾರಿಹೋಗಿತ್ತು.

NAVAYUGA, UDIPI.
REGD. NO.BG. 176

17-5-1962

LICENSE NO. 31
Licensed to Post without Prepayment

ಕಾಶ್ಮೀರವಾದಕ್ಕೆ

ಭದ್ರತಾಸಮಿತಿ ಪ್ರಚಾರವೇದಿಕೆಯಲ್ಲಿ

ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಮತ್ತೊಮ್ಮೆ ಕೆದಕಿದ ಪಾಕ್ ಪ್ರತಿನಿಧಿ ಜಫರುಲ್ಲಾ ಖಾನರು ತಾವು ಅತಿ ಮಹತ್ವದ ವಿಚಾರವೊಂದನ್ನು ಮುಂದಿಟ್ಟೆವೆಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು. ಆದರೆ, ಇದರಿಂದಾಗಿ ವಾಸ್ತವಿಕವಾಗಿ ಅವರು ಸಾಧಿಸಿದುದು ಏನೂ ಇಲ್ಲವೆಂದು ಜಗತ್ತೇ ಬಲ್ಲದು ಕಾಶ್ಮೀರದಲ್ಲಿ ಜನಮತ ಗಣನೆಯಾಗಬೇಕೆಂಬ ಒಂದೇ ಒಂದು ಏಕಪಕ್ಷೀಯವಾದ ವಾದವನ್ನು ಮಾತ್ರ ಅವರು ಮುಂದಿಟ್ಟರು. ಆದರೆ, ತಮ್ಮ ಭವಿತವ್ಯವೇನೆಂಬುದನ್ನು ಕಾಶ್ಮೀರಿಗಳು ಈ ಮೊದಲೇ ವ್ಯಕ್ತಪಡಿಸಿದ್ದಾರೆ. ಭಾರತದೊಡನೆ ಸೇರ್ಪಡೆ ಹೊಂದಿ ಅವರು ತಮ್ಮ ಪ್ರಗತಿಯನ್ನು ಸಾಧಿಸಿಕೊಂಡಿದ್ದಾರೆ ಈ ಬಗ್ಗೆ ಸುಸ್ಪಷ್ಟವಾದ ದಾಖಲೆಗಳು ಈಗಾಗಲೇ ಸಾಕಷ್ಟಿವೆ.

ಭಾರತದ ಪರವಾಗಿ ಹೋದ ಪ್ರತಿನಿಧಿ ಮಂಡಳದ ನಾಯಕ ಶ್ರೀ ವಿ. ಕೆ ಕೃಷ್ಣ ಮೆನನ್ನರು ಕಾಶ್ಮೀರದ ಸೇರ್ಪಡೆಯು ಶಾಶ್ವತವಾದುದೆಂದೂ ಪಾಕಿಸ್ತಾನವು ಕಾಶ್ಮೀರದಲ್ಲಿ ಆಕ್ರಮಣವನ್ನು ನಡೆಸಿದೆಯೆಂದೂ ಆದುದರಿಂದ ಅದಕ್ಕೆ ಜನಮತ ಗಣನೆಯಾಗಬೇಕೆಂದು ಕೇಳುವ ಅಧಿಕಾರವಿಲ್ಲವೆಂದೂ ವಾದಿಸಿದರು. ಕಾಶ್ಮೀರವೆಂಬುದು ತಂಟೆಯ ವಿಷಯವೇ ಅಲ್ಲ; ಅದು ಎಂದೋ ಸಮಾಪ್ತಗೊಂಡಿದೆಯೆಂಬ ಭಾರತದ ಅಭಿಪ್ರಾಯವನ್ನು ಪುನರ್ಉಚ್ಚರಿಸಿದರು. ಭಾರತ-ಚೀನಾಗಳ ನಡುವಣ ಸೀಮಾ ವಿವಾದದಿಂದ ದುರ್ಲಾಭ ಪಡೆಯಲು ಹವಣಿಸುವ ಪಾಕಿಸ್ತಾನದ ವರ್ತನೆಯನ್ನು ಖಂಡಿಸಿ, ಒಂದು ವೇಳೆ ಚೀನಾ ಇಲ್ಲವೇ ಪಾಕಿಸ್ತಾನವು ಭಾರತದ ಮೇಲೆ ಒತ್ತಾಯವನ್ನು ತರುವ ಪ್ರಸಂಗ ಬಂದರೆ, ಭಾರತವು ಅದನ್ನು ಸಂಪೂರ್ಣ ಶಕ್ತಿಯಿಂದ ಪ್ರತಿಭಟಿಸುವುದು ಎಂದರು. ಭಾರತೀಯ ಲೋಕ ಸಭೆಯಲ್ಲಿ ಕೂಡ ಪ್ರಧಾನಿ ನೆಹರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನದ ಬಲವತ್ತರವಾದ ಕೇಳಿಕೆಯಂತೆ ಭದ್ರತಾ ಸಮಿತಿಯು ಕಾಶ್ಮೀರದ ಕುರಿತಾದ ವಿಚಾರವನ್ನು ಚರ್ಚಿಸಲು ಅವಕಾಶ ಕೊಟ್ಟಿತು. ಸಂಬಂಧಿತ ಉಭಯ ರಾಷ್ಟ್ರಗಳ ಅಭಿಪ್ರಾಯಗಳನ್ನು ಅದು ಕೇಳಿಕೊಂಡು ತನ್ನ ಸಭೆಯನ್ನು ಮುಂದುವರಿಸಿತು, ಹಳೆಯದಾದ ಈ ವಿಚಾರದಲ್ಲಿ ಭದ್ರತಾ ಸಮಿತಿಯು ಹೆಚ್ಚಿನ ಆಸಕ್ತಿ ವಹಿಸಿತ್ತೆಂದು ಹೇಳುವಂತಿಲ್ಲ, ಪಾಕಿಸ್ತಾನವು ಭದ್ರತಾ ಸಮಿತಿಯನ್ನು ತನ್ನ ಪ್ರಚಾರದ ಪ್ರಬಲಕೇಂದ್ರವನ್ನಾಗಿ ಬಳಸಿಕೊಂಡಿತಾದರೂ ಅದರ ಈ ವರ್ತನೆಯನ್ನು ಸದಸ್ಯರು ಮೆಚ್ಚಿದರೆಂದು ಹೇಳಲಾಗುವಂತಿಲ್ಲ, ಪಾಕಿಸ್ತಾನದ ಪ್ರತಿನಿಧಿಯ ಭಾಷಣದ ಸ್ವರೂಪ ಮತ್ತು ಶೈಲಿಗಳು ತನ್ನ ಅನ್ಯಾಯವನ್ನು ಬಚ್ಚಿಟ್ಟು ಭಾರತವನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿ, ಅದನ್ನು ಗದರಿಸುವಂತಿದ್ದುವೆಂಬುದನ್ನು ಎಲ್ಲರೂ ಗಮನಿಸಿದ್ದಾರೆ.

ಪ್ರಾರಂಭದಲ್ಲಿ ಅನೇಕಿಯೋ ಮೊದಲಾದ ಕೆಲವು ಪಾಶ್ಚಾತ್ಯ ರಾಷ್ಟ್ರಗಳು ಪಾಕಿಸ್ತಾನವನ್ನು ಬೆಂಬಲಿಸುವಂತೆ ತೋರಿದರೂ ಈ ಪ್ರಶ್ನೆಯನ್ನು ಎತ್ತಿಕೊಳ್ಳಲು ಅವಕಾಶ ಕಲ್ಪಿಸಿಕೊಡುವಲ್ಲಿ ಆಸ್ತೆ ವಹಿಸಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ ಅವು ಕೂಡ ಚರ್ಚೆಯನ್ನು ಮುಂದುವರಿಸಲು ಹೆಚ್ಚಿನ ಉತ್ಸಾಹ ತೋರಿಸುತ್ತಿಲ್ಲ. ಭದ್ರತಾ ಸಮಿತಿಯ ಹೆಚ್ಚಿನ ಸದಸ್ಯರು ಈ ಬಗ್ಗೆ ಸಹಾನುಭೂತಿಯನ್ನೂ ತೋರಿಸಿದಂತೆ ಕಾಣುತ್ತಿಲ್ಲ. ಪಾಕಿಸ್ತಾನವು ಈ ಪ್ರಶ್ನೆಯ ಚರ್ಚೆಗಾಗಿ ಇನ್ನೊಂದು ಸಲ ಮಂಡಳಿಯ ಸಭೆ ಕರೆಸಲು ಮತ್ತೂ ಪ್ರಯತ್ನ ನಡೆಸಿದರೂ ಸದ್ಯಕ್ಕೆ ಸಭೆಯು ಸೇರಬೇಕಾಗಿಲ್ಲವೆಂದು ಸದಸ್ಯರೆಲ್ಲರೂ ಅಭಿಪ್ರಾಯಪಡುವಂತೆ ಭಾಸವಾಗುತ್ತದೆ

ಕಾಶ್ಮೀರದ ಪ್ರಶ್ನೆಯು ತನ್ನ ಜೀವನ ಮರಣದ ಪ್ರಶ್ನೆಯೆಂದು ಪಾಕಿಸ್ತಾನವು ಹೇಳಿದರೆ, ಈ ವಿಷಯವನ್ನು ಬೇಗನೇ ಮುಕ್ತಾಯಗೊಳಿಸಬೇಕೆಂದು ಭಾರತವೂ ಆಶಿಸುತ್ತದೆ ಸರಿಯಾದ ಕಾರಣವನ್ನು ಈ ರಾಷ್ಟ್ರಗಳು ಕೊಟ್ಟಲ್ಲಿ ಈ ವಿಷಯದಲ್ಲಿ ಸಭೆ ಸೇರಲು ಮಂಡಳಿಯು ಸಿದ್ಧವಿರುವುದಾದರೂ, ಅಂತಹ ಸಮರ್ಪಕ ಕಾರಣವೇ ದೊರೆಯದಂತಾಗಿದೆ ಬಲವಾದ ಕಾರಣವಿಲ್ಲದೆ ಹೋದರೂ ಅನಿವಾರ್ಯ ಸಂದರ್ಭಗಳಲ್ಲಿ ಸಭೆ ಸೇರುವ ಆದರ್ಶ ಪರಿಪಾಠವನ್ನು ಭದ್ರತಾ ಸಮಿತಿಯು ಹಾಕಿ ಕೊಟ್ಟಿದೆ. ಇದನ್ನು ಮುಂದುವರಿಸಲು ಅದು ಸಿದ್ಧವೂ ಇದೆ. ಆದರೆ ಕಾಶ್ಮೀರದ ವಿಷಯದಲ್ಲಿ ಸಭೆ ಸೇರುವ ಪ್ರಶ್ನೆಗಿಂತಲೂ ಸಭೆ ಸೇರಿ ಮಾಡುವುದಾದರೂ ಏನು ಎಂಬ ಪ್ರಶ್ನೆಯೇ ಮುಖ್ಯವಾಗಿದೆ. ಕೇವಲ ಸಭೆ ಸೇರುವುದರಿಂದ ಯಾವ ವಿಧದ ಪ್ರಯೋಜನವೂ ದೊರೆಯಲಾರದೆಂದು ಸಾಮಾನ್ಯವಾಗಿ ಎಲ್ಲ ಸದಸ್ಯರೂ ಅಭಿಪ್ರಾಯ ಪಡುತ್ತಾರೆ ಸಭೆಯು ಕೇವಲ ಸಭೆಯಾಗಿಯೇ ಉಳಿಯಬಾರದು; ಏನಾದರೂ ಫಲ ದೊರೆಯುವಂತಾಗಿರಬೇಕು ಎಂದು ಅವರ ಅಂಬೋಣ.

ಭದ್ರತಾ ಮಂಡಳಿಯಲ್ಲಿ ಪಾಕಿಸ್ತಾನವು ತನ್ನ ದುಸ್ಸಾಹಸದ ಪ್ರಚಾರ ಕಾರ್ಯವನ್ನು ನಿರಾತಂಕವಾಗಿ ಮಾಡಿಕೊಂಡಿರುವುದರಿಂದ ಅದರ ಬಗ್ಗೆ ಸಹಾನುಭೂತಿ ತೋರಿಸುತಿದ್ದ ಕೆಲವು ರಾಷ್ಟ್ರಗಳೂ ಈಗ ಸಂಕೋಚಪಡುವಂತೆ ತೋರುತ್ತದೆ. ರಶ್ಯವು ಇದು ವರೆಗೂ ಕಾಶ್ಮೀರವನ್ನು ಭಾರತದ ಅಂಗವೆಂಬುದನ್ನು ಸಮರ್ಥಿಸುತ್ತ ಬಂದಿರುವ ಒಂದು ಮಹಾರಾಷ್ಟ್ರ ಈಗ ಅದರ ಮನಸ್ಸನ್ನು ಕೆಡಿಸಿ, ತನ್ನ ಬಲಿಗೆ ಹಾಕಿಕೊಳ್ಳಬೇಕೆಂಬ ವ್ಯರ್ಥ ಸಾಹಸವನ್ನು ಪಾಕಿಸ್ತಾನವು ಮಾಡತೊಡಗಿದೆ. ಆದರೆ, ರಶ್ಯವು ತಳೆದು ಬಂದ ದೃಢ ನಿಲುವಿನಿಂದಾಗಿ ರಶ್ಯವು ಭಾರತದ ವಿರುದ್ಧ ತುಟಿ ಬಿಚ್ಚುವ ಸಾಹಸ ಮಾಡುವುದಿಲ್ಲವೆಂದು ಖಚಿತವಾಗಿ ತಿಳಿದು ಬಂದಿದೆ.

ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಪ್ರಶ್ನೆಯು ಇತ್ಯರ್ಥವಾಗುವ ಸಲ್ಲಕ್ಷಣಗಳು ಗೋಚರಿಸುತ್ತಿಲ್ಲ ಆದುದರಿಂದ ಭಾರತ—ಪಾಕಿಸ್ತಾನಗಳ ನಡುವೆ ಸಂಧಾನವನ್ನು ಸಾಧಿಸಲು ನ್ಯೂಯೋರ್ಕಿನಲ್ಲಿನ ಪ್ರಚಾರ ರೂಪದ ಸರ್ಕಸ್ಸನ್ನು ನಿಲ್ಲಿಸಿ ಅವುಗಳ ಪಾಡಿಗೇ ಬಿಟ್ಟು ಕೊಡುವುದು ಒಳ್ಳೆಯದೆಂಬ ಭಾವನೆಯು ನ್ಯೂಯೋರ್ಕಿನಲ್ಲಿ ಬಲವಾಗುತ್ತಿದೆ ಅಂತೂ ಜಫರುಲ್ಲಾ ಖಾನರು ಮಾಡಿದ ಆಕ್ರೋಶವು ಬಿರುಗಾಳಿಯಂತೆ ಬೀಸಿ ತಣ್ಣಗಾಯಿತೆನ್ನಬಹುದು. ಈ ವಿಷಯದಲ್ಲಿ ಭದ್ರತಾ ಸಮಿತಿಯು ತಳೆದ ನಿಲುವೆಯು ಭಾರತವು ಕಾಶ್ಮೀರದ ವಿಚಾರದಲ್ಲಿ ತಳೆದಿರುವ ನೀತಿಯನು ಅವ್ಯಕ್ತವಾಗಿ ಸಮರ್ಥಿಸುತ್ತದೆ. ಪ್ರಜಾಸತ್ತಾತ್ಮಕ ಆಡಳಿತೆಯಡಿಯಲ್ಲಿ ಮುಂದುವರಿಯುವ ಕಾಶ್ಮೀರದ ಪಾಕ್ ಆಕ್ರಮಿತ ಭಾಗವನ್ನು ಕೂಡ ಅದರ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸುವ ಬಗ್ಗೆ ಗಂಭೀರವಾಗಿ ವಿಮರ್ಶಿಸುವ ಕಾಲ ಪರಿಪಕ್ವವಾಗುತ್ತಿದೆ; ಪಾಕಿಸ್ತಾನದ ದುಸ್ಸಾಹಸವೇ ಇದಕ್ಕೆ ನಾಂದಿಯಾಗಲಾರದೆಂದು ಹೇಳುವಂತಿಲ್ಲ.

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯ ಚಾಮರಾಜ ಒಡೆಯರು ಸೋವಿಯೆಟ್ ನಾಡಿನಲ್ಲಿ ವೈಜ್ಞಾನಿಕ ಸಂಶೋಧನೆ, ವಿಜ್ಞಾನ ಅಕಾಡೆಮಿಯ ಕಾರ್ಯ ಸೈಬೀರಿಯಾದಲ್ಲಿರುವ ನೂತನವಿಜ್ಞಾನನಗರ ಈ ವಿಷಯಗಳ ಕುರಿತು ಚರ್ಚಿಸಲು ಸೋವಿಯೆಟ್ ನಾಡಿಗೆ ತೆರಳಿದರು.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ ಎರಡು. ಉತ್ತಮ ಪ್ರತಿ. ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

Edited Printed & Published by K. H. Shetty, at the Navayuga Press, Udipi. S. India

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೩೭ | ಉಡುಪಿ 24—5—1962 ಗುರುವಾರ | Vol. 41 No. 37

ಕಾಶ್ಮೀರದ ಬಗ್ಗೆ

ಪಾಕಿಸ್ತಾನದ ಹೊಸ ಗತ್ತುಗಾರಿಕೆ

ವಿಷಮಯ ಬೀಜದ ಕಾರಣದಿಂದಲೇ ರೂಪಿತವಾದ ಪಾಕಿಸ್ತಾನವು ವಿಷವನ್ನೇ ಸರ್ವತ್ರ ಕಾರುತ್ತ ಬರುತ್ತಿರುವುದು ಆಶ್ಚರ್ಯವಲ್ಲವಾದರೂ ಇದರ ವಿಷಗಾಳಿಯು ಭಾರತವನ್ನು ಕೆಡಿಸುತ್ತಿದೆಯೆಂಬುದು ವಿವಂಚನೆಗೆ ಕಾರಣವಾಗಿದೆ. ತನ್ನ ಹುಟ್ಟಿನಿಂದ ಇಂದಿನ ವರೆಗೂ ಭಾರತ ವಿರೋಧಿ ಧೋರಣೆಯನ್ನು ಅನೂಚಾನವಾಗಿ ನಿರ್ವಹಿಸಿಕೊಂಡು ಬರುತ್ತಿರುವುದಾದರೂ ಪಾಶ್ಚಾತ್ಯರ ತಾಳಕ್ಕೆ ಸರಿಯಾಗಿ ಕುಣಿಯುತ್ತ ಬರುತ್ತಿದೆ. ಇದರಿಂದಾಗಿಯೇ ಪಶ್ಚಿಮದ ದೇಶಗಳಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಭಾರತದ ಮೇಲ್ಮೆ ಮತ್ತು ಕೀರ್ತಿಗಳಿಂದ ಕಂಗೆಟ್ಟು ಅದು ಭಾರತ ವಿರೋಧಿ ಪ್ರಚಾರವನ್ನು ಪ್ರಾರಂಭಿಸುತ್ತ ಬರುತ್ತಿರುವುದಿಂದು ಹಳೆಯ ಮಾತಾಗಿದೆ. ಈ ವಿಧದ ಅಪಪ್ರಚಾರಕ್ಕೆ ಕಿವಿಕೊಡುವ ಳಿಕೆಯುಳ್ಳವರೆಂದು ಹೇಳಲಾಗುತ್ತಿರುವ ಅಮೆರಿಕೆಯೇ ಮೊದಲಾದ ಕೆಲವು ಪಾಶ್ಚಾತ್ಯರಾಷ್ಟ್ರಗಳು ಕಿವಿಗೊಟ್ಟು ಭಾರತದ ಬಗ್ಗೆ ಇಟ್ಟುಕೊಂಡಿದ್ದ ಸದ್ಭಾವನೆಗಳನ್ನು ಅಲ್ಪ ಸ್ವಲ್ಪವಾಗಿ ಕಳೆದುಕೊಳ್ಳುವ ಪರಿಸ್ಥಿತಿಯೂ ಈಗ ತಲೆದೋರುವಂತಾಗಿದೆ.

ದೇಶದ ಆಂತರಿಕ ಪರಿಸ್ಥಿತಿ ಕಂಗೆಟ್ಟಾಗ, ಜನತೆಯ ಲಕ್ಷ್ಯವನ್ನು ಅನ್ಯತ್ರ ತಿರುಗಿಸಲು ಪಾಕ್ ನಾಯಕರು ಪರಿಶ್ರಮಪಡುತ್ತಿರುವುದು ಜಗಜ್ಜನಿತ. ಅದಕ್ಕಾಗಿಯೇ ಪದೇ ಪದೇ ಕಾಶ್ಮೀರದ ಕವಾಲನ್ನದು ಎತ್ತುವುದನ್ನೂ ಪರಿಪಾಠ ಮಾಡಿಕೊಂಡಿದೆ. ಭಾರತವನ್ನು ಕಷ್ಟಕ್ಕೀಡು ಮಾಡಲು ಮತ್ತು ಅದರ ಮುಖಕ್ಕೆ ಮಸಿ ತಾಗಿಸಲು ಪಾಕಿಸ್ತಾನ ಮಾಡುತ್ತಿರುವ ಕುತಂತ್ರ, ಕುಯುಕ್ತಿ ಮತ್ತು ಅನುಸರಿಸುತ್ತಿರುವ ದುರ್ನೀತಿಗಳನ್ನು ಎಲ್ಲರೂ ಬಲ್ಲರು. ನ್ಯಾಯಾನ್ಯಾಯಗಳ ಪ್ರಶ್ನೆಯನ್ನು ದೂರವಿಟ್ಟು ಕಾಶ್ಮೀರವನ್ನು ತಾನು ಕಬಳಿಸಿಯೇ ತೀರಬೇಕೆಂಬ ಹಠಸಾಧನೆಯಲ್ಲಿ ಅದೀಗ ವ್ಯಸ್ತವಾಗಿಬಿಟ್ಟಿದೆ.

ಪಾಕಿಸ್ತಾನದ ಕಾರಸ್ಥಾನ

ಪ್ರಾರಂಭದಿಂದಲೂ ಸೈನ್ಯಕ್ಕಾಗಿ ಬಹು ಹೆಚ್ಚಿನ ಮೊತ್ತವನ್ನು ವಿನಿಯೋಗಿಸುತ್ತ ಬಂದಿರುವ ಕೆಲವೇ ದೇಶಗಳಲ್ಲಿ ಪಾಕಿಸ್ತಾನವೂ ಒಂದು. ಕಾಶ್ಮೀರದ ಪ್ರಶ್ನೆಯು ಜಟಿಲವಾದಂತೆ, ಅದು ತನ್ನ ಸೈನ್ಯಬಲವನ್ನೂ ಹೆಚ್ಚಿಸುತ್ತ ಬಂದಿತು ಅಮೆರಿಕೆಯೊಡನೆ ಸೈನಿಕ ಒಡಂಬಡಿಕೆಮಾಡಿಕೊಂಡಿತು. ತನ್ನ ಸೇನೆಯನ್ನು ಬಲಪಡಿಸಿತು ಕಮ್ಯುನಿಸ್ಟ್ ಆಕ್ರಮಣದ ಬೆದರಿಕೆಯ ಹೆಸರಿನಲ್ಲಿ ಅದು ತನ್ನ ಸೇನೆಯನ್ನು ಉತ್ತಮ ರೀತಿಯ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತಗೊಳಿಸುತ್ತ ಬಂತು. ಗೋವೆಯ ಮೇಲೆ ಸೈನಿಕ ಕಾರ್ಯಾಚರಣೆಗೆ ಅನಿವಾರ್ಯವಾಗಿ ಇಳಿಯಬೇಕಾಗಿ ಬಂದ ಭಾರತವು ಕಾಶ್ಮೀರದಲ್ಲೂ ಪಾಕಿಸ್ತಾನ ಆಕ್ರಮಣಮಾಡಿದೆಯೆಂಬ ನೀತಿಯನ್ನು ಸಾರುತ್ತ ಬಂದುದರಿಂದ, ಅನಾಯಾಸವಾಗಿ ತಮಗೆ ಸೇರುವುದೆಂದಿದ್ದ ಕನಸಿನ ಕಾಶ್ಮೀರವು ಕೈಬಿಡುವುದು ಖಂಡಿತವೆಂದು ಅಂಜಿ, ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಕೆದಕಲು ಹವಣಿಸಿತು. ತನ್ನ ಗಡಿಯಲ್ಲಿ ಸೈನ್ಯಸಂಗ್ರಹಣೆಯು ತೀವ್ರವಾಗುತ್ತ ಬರುತ್ತಿರುವಾಗ ಭಾರತವಾದರೂ ಸುಮ್ಮನಿರುವುದು ಸಾಧ್ಯವಿಲ್ಲ. ಅದೂ ತನ್ನ ಸೈನಿಕ ವೆಚ್ಚವನ್ನು ಅನಿವಾರ್ಯವಾಗಿ ಹೆಚ್ಚಿಸಲೇಬೇಕಾಗಿ ಬಂತು. ತನ್ನ ಸೇನೆಯನ್ನೂ ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಿಡುವುದೂ ಅಗತ್ಯವಾಯಿತು.

ಹೊಸ ಯುದ್ಧ ವಿಮಾನಗಳು

ಇತ್ತೀಚೆಗೆ ಪಾಕಿಸ್ತಾನವು ಎಫ್. ೧೦೪ ಸುಪರ್ ಸಾನಿಕ್ ಜೆಟ್ ವಿಮಾನಗಳನ್ನು ಅಮೆರಿಕೆಯಿಂದ ಕೊಂಡುಕೊಳ್ಳ ನಿರ್ಧರಿಸಿತು. ಇದರಿಂದ, ತನ್ನ ಸೇನೆಯು ಬಲಯುತವಾಗುವುದೆಂದೂ ತನ್ಮೂಲಕ ಭಾರತದಿಂದ ಕಾಶ್ಮೀರವನ್ನು ಅಪಹರಿಸಲು ಸಾಧ್ಯವಾಗಬಹುದೆಂದೂ ಅದರ ಹವಣಿಕೆಯಿರಬೇಕು; ಇದನ್ನು ತಿಳಿದ ನಂತರ ಭಾರತವೂ ಸುಮ್ಮನಿರುವುದು ಸಾಧ್ಯವಿಲ್ಲ. ಅದು ತಾನು ಮಿಗ್ ವಿಮಾನಗಳನ್ನು ಕೊಂಡುಕೊಳ್ಳುವ ವಿಚಾರ ಮಾಡಹತ್ತಿತು. ಅಮೆರಿಕೆಯ ವಿಮಾನಗಳ ಬೆಲೆಯು ತೀವ್ರವಾಗಿ ಹೆಚ್ಚಿರುವುದರಿಂದ ರಶ್ಯದಿಂದ ಬೇಕಾದಷ್ಟು ಮಿಗ್ ವಿಮಾನಗಳನ್ನು ಖರೀದಿಸಲು ಆಲೋಚನೆ ಮಾಡಿತು: ಈ ಸಂಬಂಧದಲ್ಲಿ ಅಂತಿಮ ನಿರ್ಧಾರವಾಗಿರುವುದಿಲ್ಲವಾದರೂ ಮಾತುಕತೆ ನಡೆಸಲು ಪ್ರತಿನಿಧಿ ಮಂಡಳವು ಮೋಸ್ಕೋವಿಗೆ ಹೋಗಲಿದೆ.

ಅಮೆರಿಕೆಗೆ ಚಿಂತೆ

ಈ ಸಂಗತಿಯನ್ನು ತಿಳಿದ ಅಮೆರಿಕೆ ವಿಚಿಂತೆಗೀಡಾಯಿತು. ಭಾರತದ ಅಭಿವೃದ್ಧಿಯೋಜನೆಗಳಿಗೆ ಅದು ಮುಕ್ತಹಸ್ತದಿಂದ ಸಹಾಯವನ್ನು ಮಾಡುತ್ತಿದೆ; ಉದಾರ ಶರ್ತಗಳ ಮೇಲೆ ಸಾಲವನ್ನು ನೀಡುತ್ತಿದೆ. ಭಾರತದ ಯೋಜನೆಗಳ ಕಾರ್ಯಾಚರಣೆ ಮತ್ತು ಅದರ ಯಶಸ್ವಿತೆಯಲ್ಲಿ ತೀರ ಕಳಕಳಿ ವಹಿಸುತ್ತದೆ ಹಾಗಿರುವಾಗ, ಭಾರತವು ತನಗೆ ಆವಶ್ಯಕವಾದ ಶಸ್ತ್ರಾಸ್ತ್ರಗಳನ್ನು ಅಮೆರಿಕೆಯಿಂದಲೇ ಪಡೆಕೊಳ್ಳುವುದು ಅಪೇಕ್ಷಣೀಯ; ಅಮೆರಿಕೆಯ ಕಂಪೆನಿಗಳಾದರೂ ಭಾರತಕ್ಕವನ್ನು ಒದಗಿಸಿ ಕೊಡಲು ಉತ್ಸಾಹವನ್ನು ತಳೆದಿವೆ. ಹಾಗಿರುವಾಗ, ಭಾರತವು ಮಾತ್ರ ರಶ್ಯಾಗ ಜನ್ನು ಹತ್ತುವುದರಿಂದ ಅಮೆರಿಕೆಗೆ ಬೇಸರವುಂಟಾಗಿದೆ, ರಾಯಭಾರಿ ಗಾಲ್‌ಬ್ರೈಥ್‌ರ ಮಾತುಗಳಿಂದ ಈ ಅಭಿಪ್ರಾಯ ವ್ಯಕ್ತವಾಗುತ್ತದೆ.

ಭಾರತದ ವಿಚಾರಧಾರೆ

ಆದರೆ, ಭಾರತದ ವಿಚಾರ ಧಾರೆಯು ಪ್ರತ್ಯೇಕವಿದೆ. ಅಮೆರಿಕೆಯಿಂದ ತನ್ನ ಆವಶ್ಯಕ ವಿಮಾನಗಳನ್ನು ತರಿಸಲು ಅದು ಉತ್ಸಾಹ ತೋರಿಸದೆ ಇರಲು ಆರ್ಥಿಕ ಕಾರಣವಿರುವುದು ರಶ್ಯದಲ್ಲಿ ಈ ವಿಮಾನಗಳು ದೊರೆಯುವ ಬೆಲೆಗಿಂತ ಮೂರುಪಟ್ಟು ಅಮೆರಿಕೆಯಲ್ಲಿ ತೆರಬೇಕಾಗುತ್ತದೆ. ಸಾರ್ವಭೌಮಿಕವಾಗಿ ಸ್ವತಂತ್ರ ರಾಷ್ಟ್ರವಾದ ಭಾರತವು ತನಗೆ ಲಾಭಕರವೆಂದು ಕಂಡು ಬಂದ ದೇಶಗಳಿಂದ ಇವನ್ನು ತರಿಸಲು ಸ್ವತಂತ್ರವಿದೆ. ಅಗ್ಗದಲ್ಲಿ ದೊರೆಯುವಾಗ, ಹೆಚ್ಚಿನ ಹಣವನ್ನಾದರೂ ಏಕೆ ಖರ್ಚುಮಾಡಬೇಕು—ವಿದೇಶ ವಿನಿಮಯದ ಅಭಾವವಿರುವ ಈ ಕಾಲದಲ್ಲಿ! ಆದರೂ ಭಾರತವು ಈ ವಿಷಯದಲ್ಲಿ ಇನ್ನೂ ಅಂತಿಮ ತೀರ್ಮಾನಕ್ಕೆ ಬರಬೇಕಷ್ಟೆ.

(೧೨ನೇ ಪುಟ ನೋಡಿರಿ)

ಇಂಗ್ಲೆಂಡಿನಲ್ಲಿ ಭಾರತದ ಹೈಕಮಿಷನರಾಗಿ ಕೆಲವು ವರ್ಷ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿರುವ ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್.

'ಮೀರಾ' ಉಕ್ಕಿನ ಫರ್ನಿಚರುಗಳು, ಮಂಚ–ಸೋಫಾಗಳು, ವೈವಿಧ್ಯಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮುಗ್ರಿಗಳು ಇತ್ಯಾದಿ ಇತ್ಯಾದಿಗಳಿಗೆ ವಿಚಾರಿಸಿರಿ —

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಕೆಂಪು ಚೀನಾದ ಸತ್ಯದರ್ಶನ ಮಾಡಿಸುವ

ಪರ್ಲ್ ಎಸ್. ಬಕ್‌ರ ಮರ್ಮಭೇದಿ ಕತೆ—

ಬೆಳ್ಳಿಯ ಪಾತ್ರಗಿತ್ತಿ

— ಸಿರಿಪತಿ

ಆ ವ್ಯಕ್ತಿ ತನ್ನ ಚರಿತ್ರೆ ಪ್ರಾರಂಭಿಸುತ್ತಾ "ನಾನು ನನ್ನ ತಾಯಿಯ ವಿಷಯ ತಿಳಿಸುತ್ತೇನೆ....'

ನಾನು ಆ ವ್ಯಕ್ತಿಯ ಮುಖವನ್ನು ನೋಡಿರಲಿಲ್ಲ....! ನೋಡಲು ಸಾಧ್ಯವೂ ಇರಲಿಲ್ಲ! ಬೇಸಗೆಯ ಅಮಾವಾಸ್ಯೆಯ ಕಾಳರಾತ್ರಿಯಲ್ಲಿ ಹೊಂಗಕಾಂಗ ನಿದ್ರಿಸಿತ್ತು. ಕತ್ತಲಾಗುವ ಪೂರ್ವ ನನ್ನ ಕೋಣೆಗೆ ಬರುವದಿಲ್ಲವೆಂದು ಆ ವ್ಯಕ್ತಿ ಮೊದಲೇ ತಿಳಿಸಿದ್ದ! ಅವನು ಚೀನಾದ ಗಡಿ ದಾಟಿ ಓಡಿ ಬಂದಿದ್ದ! ಕೇವಲ ಅವನ ಶಬ್ದ ಸ್ವರವನ್ನಷ್ಟೇ ಕೇಳಲು ಸಮರ್ಥನಾಗಿದ್ದೆ! ಆದರೆ ಅಂದು ಅವನು ಹೇಳಿದ ಆ ಚರಿತ್ರೆ—ಅವನಾ ಮಾತುಗಳು ಇಂದಿಗೂ ನನ್ನ ಚಿತ್ತಭಿತ್ತಿಯಲ್ಲಿ ಪ್ರತಿಧ್ವನಿಸುತ್ತಿವೆ! ಅದೊಂದು ಚಲಚ್ಚಿತ್ರದಂತಿತ್ತು!

ಮಧ್ಯ ಚೀನಾದಲ್ಲಿಯ ಹಳ್ಳಿಗರು—ಯಾಂಗೆಜ್ ನದಿಯ ಮಗ್ಗಲಿನಲ್ಲಿ ಆ ಹಳ್ಳಿಯ ಮನೆಗಳು!—ಮನೆಯ ಸುತ್ತಲೂ ಹತ್ತೆಂಟು ಎಕ್ರೆ ಜಮೀನು. ಪ್ರತ್ಯೇಕವಾಗಿ ಜಮೀನುದಾರರು—ತಮ್ಮ ಸ್ಥಳಕ್ಕೆ ಬೇಲಿಯನ್ನು ಹಾಕಿಸಿ-ದನ ಹಂದಿಮರಿ ಕೋಳಿ—ಇವನ್ನು ಸಾಕಿ ತಮ್ಮ ಹಳ್ಳಿಯ ನೈಸರ್ಗಿಕ ಸೌಂದರ್ಯದ ರಕ್ಷಣೆ ನಡೆಯಿಸಿದ್ದ ದಿನವನ್ನು ಯಾರು ಮರೆಯಬಹುದು. ಅಲ್ಲಿಯೇ ನನ್ನ ಹೊಸ ಗೆಳೆಯನ ತಂದೆ ಇದ್ದುದು. ಊರಿನಲ್ಲಿಯೇ ದನಿಕರಾದ ಅವರು ಹಳ್ಳಿಗರೆಲ್ಲರಿಗೆ ಪರಿಚಿತರು. ಅಲ್ಲದೆ ಹಳ್ಳಿಗರಿಗೆ ತುಂಬಾ ಸಹಾಯಕರು!

ಬೆಳೆಯುತ್ತಿರುವ ಚೀನಾದ ಜನಸಂಖ್ಯೆಯಿಂದಾಗಿ ಮತ್ತು — ವೈರಿಗಳಿಂದ ದೇಶವನ್ನುಳಿಸಿಕೊಳ್ಳಲು— ಹಳ್ಳಿಪಟ್ಟಣಗಳಿಂದ ಹಲವು ತರುಣರು ಯುದ್ಧದಲ್ಲಿ ಭಾಗವಹಿಸಲು 'ಮಿಲಿಟರಿ' ಸೇರುತ್ತಿದ್ದರು—ಚೀನೀಯರೆಲ್ಲ ಯುದ್ಧ ಸೇರಿದ ನಂತರ ತಿರುಗಿ ಬರುವದೂ ತಮ್ಮ ಮನೆ—ತಾಯಿಯರನ್ನು ನೋಡುವದು ವಿರಳ!—

ಆ ವ್ಯಕ್ತಿಯೆಂದಿತು. "ನನ್ನ ತಾಯಿಯು ನನ್ನನ್ನು ಹಡೆದದ್ದು ಅವಳ ಅಂನೇಯ ವಯಸ್ಸಿನಲ್ಲಿ ನನಗೊಬ್ಬ ಅಣ್ಣನೂ ಇದ್ದನಂತೆ "ಆದರೆ ಅವನು ತನ್ನ ಹನೇ ವಯಸ್ಸಿನಲ್ಲಿ ನಾನು ಹುಟ್ಟುವ ಪೂರ್ವದಲ್ಲಿ ಮೃತಿಸಿದ್ದ. ನನ್ನ ತಾಯಿ ನನ್ನಣ್ಣನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದ್ದಳು. "ಅಂದಿಗೂ ಆ ವಯಸ್ಸಿನ ಯಾರಾದರೂ ಮಕ್ಕಳನ್ನು ಕಂಡರೆ ನನ್ನ ತಾಯಿ ಆ ಮಗುವನ್ನು ಮುದ್ದಾಡಿಸಿ ನಲಿಯುತ್ತಿದ್ದರು. ನಾನು ಇಳಿ ವಯಸ್ಸಿನಲ್ಲಿ ಹುಟ್ಟಿದ ಮಗುವಾದ್ದರಿಂದ ನನ್ನ ಮೇಲೆ ಏನೂ ಪ್ರೇಮವಿರಲಿಲ್ಲ., ನನ್ನ ತಂದೆ ಮಾತ್ರ ನನ್ನನ್ನು ಮಗುವಿನಂತೆಯೇ ಕಾಣುತ್ತಿದ್ದರು. ನನ್ನ ತಾಯಿಯ ಬಗ್ಗೆ ಜೀವನವಿಡೀ ನಾನು ಋಣಿಯಾಗಿಯೇ ಇದ್ದೇನೆ.

"ರಾಜ್ಯದಲ್ಲಿ ಕ್ರಾಂತಿಯಾಯಿತು. ಕಮ್ಯುನಿಸ್ಟ ಜನರಿದ್ದರು. "ಜಮೀನುದಾರಿ ನಿರ್ಮೂಲನ.—ನನ್ನ ತಂದೆಯವರನ್ನು ಅವರ ರೈತರೆ ಗುನ್ನೆಗೆ ಹಾಜರುಪಡಿಸಿದರು. ಸಾಗುವಳಿಯ ಜಮೀನು ಸೆಳೆದುಕೊಂಡರು ಅಂದು ದ್ವೇಷಾಶೂಯೆ ಬೆಳೆದಿತ್ತು—ಪಾರ್ಟಿಯ ಪ್ರಕೋಪದಿಂದಾಗಿ ಹಳ್ಳಿಗರು—ರೈತರು—ತಾವಾಗಿ ಕಮ್ಯೂನಿಸ್ಟರನ್ನು ಸೇರಬೇಕು ಇಲ್ಲದಿದ್ದರೆ ಅವರನ್ನೂ ದಂಡಿಸುತ್ತಿದ್ದರು. ಸತ್ತೆ ಅವರ ಹಸ್ತಗತವಾಗಿತ್ತು.. ಪ್ರತಿಗಾಮಿಯಾದವರನ್ನು ತಮ್ಮ ಮನಬಂದಂತೆ ದಂಡಿಸುತ್ತಿದ್ದರು. ನನ್ನ ತಂದೆಯವರೂ ಅವರ ಚಿತ್ರಹಿಂಸೆಯ ಪರಿಣಾಮದಿಂದಾಗಿ ನೇತುಹಾಕಿ ಬಿಟ್ಟರು ಹಾ ಹಾ ಎನ್ನುವುದರೊಳಗೆ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು. "ನಮ್ಮನ್ನು ಕೈಕಟ್ಟಿ ನಿಲ್ಲಿಸಿ—ನಮ್ಮ ಕಣ್ಮುಂದೆ ಈ ಅನಾಹುತ ನಡೆಸಿದ್ದರು. ಆ ಪೈಶಾಚಿಕ ಕೃತ್ಯ ಇಂದಿಗೂ ನನ್ನ ಕಣ್ಮುಂದೆ ಕಟ್ಟುತ್ತಿದೆ ನಾವು ಆ ಪಿಶಾಚಿ ಜನರ ಕೈಗೊಂಬೆಗಳಾಗಿದ್ದೆವು. ನಾನು ನನ್ನ ಹೆಂಡತಿ—ನನ್ನ ತಾಯಿ—ಮೂವರಿಗೆ ಒಂದು ಪ್ರತ್ಯೇಕ ಗುಡಿಸಲನ್ನು ವಾಸಕ್ಕಾಗಿ ಕೊಡಮಾಡಿದರು! ಅದರಲ್ಲಿದ್ದುದು ಒಂದೇ ಒಂದು ಕೋಣೆ! ಇದರಲ್ಲಿ—ಮೊದಲು ನಮ್ಮ ಮನೆಯ ಬಾಗಿಲು ಕಾಯುವ ಜವಾನ ವಾಸಿಸುತ್ತಿದ್ದ! ಹಳ್ಳಿಯಲ್ಲಿ ನಾನು ಕಲಿತವನಾಗಿದ್ದುದರಿಂದ ನನಗೆ ಅವರ ಸಂಘದ ಲೆಕ್ಕವನ್ನಿಡುವ ಕೆಲಸ ದೊರೆಯಿತು!—ಕಮ್ಯುನಿಸ್ಟರು ಬರುವ ಮೊದಲೂ ಹಳ್ಳಿಯ ಸಹಕಾರಿ ಸಂಘದಲ್ಲಿ ನಾನಿದ್ದೆ! ದಿನದಲ್ಲಿ ಎರಡು ಗಂಟೆ ಇಲ್ಲಿಯ ಕೆಲಸ ದೊರೆತಿತ್ತು! ನನ್ನ ದೈನಂದಿನ ಪ್ರಮುಖ ಕೆಲಸವೆಂದರೆ "ಯಾಂಗೆಜ್ ನದಿಯ ಸಂಕದ ಬುನಾದಿಯನ್ನು ಅಗಿಯುವ ಕೆಲಸವಾಯಿತು. ವು-ಹೇನ್—ಶಹರದಾಚೆಯಲ್ಲಿ ಈ ಕೆಲಸ ನಡೆದಿತ್ತು! ಹೊಟ್ಟೆಯ ಪಾಡಿಗೆ ಕೈಕೆಲಸ ಮಾಡದೆ ಗತ್ಯಂತರವಿರಲಿಲ್ಲ! "ಆ ಮೊದಲು ನನಗೆ ಕಲ್ಲು ಮಣ್ಣುಗಳ ಕೆಲಸದ ಅಭ್ಯಾಸವಿರಲಿಲ್ಲ! ನನ್ನ ಪತ್ನಿಯೂ ಅಭ್ಯಾಸವಿಲ್ಲದಿದ್ದರೂ ನನ್ನೊಡನೆ ದುಡಿಮೆಗೆ ಬರುತ್ತಿದ್ದಳು!—ಜೀವನದಲ್ಲಿ ತಾತ್ಸಾರಗೊಂಡ ನಾವು ದಿನವಿಡೀ—ಮಾತನ್ನೂ ಆಡದೆ ಮಂತ್ರಮುಗ್ಧರಾಗಿ ಹೊಟ್ಟೆಯ ಬಗ್ಗೆ ದುಡಿಯುತ್ತಿದ್ದೆವು—ನಮ್ಮ ಗುಡಿಸಲಿನಲ್ಲಿ ನನ್ನ ಮುದಿ ತಾಯಿಯೊಬ್ಬರೇ ಇರುತ್ತಿದ್ದರು!—ಪತಿಯನ್ನು ಕಳೆದುಕೊಂಡ ನಂತರ ನನ್ನ ತಾಯಿಯು ವಿಚಿತ್ರರಾಗಿದ್ದರು! ಅವಳ ಜೀವನವೇ ಮಲಿನವಾದಂತಾಗಿತ್ತು!

' "ನಮ್ಮಿಬ್ಬರ ದುಡಿಮೆಯಿಂದಲೂ ಹೊಟ್ಟೆಗೆ ಸಾಕಷ್ಟು ಆಹಾರ ದೊರೆಯುತ್ತಿರಲಿಲ್ಲ!—ನನ್ನ ತಾಯಿಗೆ ನಮ್ಮ ಪರಿಸ್ಥಿತಿಯ ಅರಿವಾಗುತ್ತಿರಲಿಲ್ಲ!—ನನ್ನ ತಾಯಿಯವರಿಗೆ ಹಳೇ ಜಮೀನುದಾರಿ ದರ್ಬಾರಿನಲ್ಲಿ ಖರ್ಚುಮಾಡಿ ರೂಢಿಯಾಗಿತ್ತು" ದಿನಾ ಮಾಂಸದ ಊಟದ ಅಭ್ಯಾಸವಾಗಿದ್ದ ಅವಳು" ಅಂತಹ ಜೀವನವು ನಮಗೆಲ್ಲಿಂದ ಬರಬೇಕು? ತಿಂಗಳೊಂದಕ್ಕೆ ನಮಗೆ ಮಾಂಸದ ಊಟ ಸಿಗುತ್ತಿತ್ತು". ನನ್ನ ತಾಯಿ ನಮ್ಮನ್ನು ತೆಗಳುತ್ತಿದ್ದಳು. ಒಂದು ಹಂದಿಯ ಮರಿಯನ್ನಾದರೂ ಸಾಕ ಬಾರದೆ? ನಾಲ್ಕು ಕೋಳಿಯನ್ನಾದರೂ ತರಬಾರದೇ?" ಎಂದವಳು ಕೇಳುತ್ತಲಿದ್ದಳು.

"ಅಂದು ನಮ್ಮ ಮನೆಯಲ್ಲಿದ್ದ—ಹಂದಿಮರಿ—ಕೋಳಿ—ಸೇರು. ಕೋಣ ದನಗಳನ್ನೆಲ್ಲ ಆವೇಶವೀ ಕಮ್ಯುನಿಷ್ಟರು ಕೊಂಡೊಯ್ದು ತಿಂದಿದ್ದರು. ನಮ್ಮ ವೇತನದಿಂದ ನಿರ್ವಹಣೆ ಕಠಿಣವಾಗಿತ್ತು" ನಮ್ಮ ರೈತರಿಗೂ ಅದೇ ಸ್ಥಿತಿಯಾಗಿತ್ತು!! ಅವರೆಣಿಸಿದ ಯಾವ ಸೌಲಭ್ಯವೂ ದೊರೆತಿದ್ದಿಲ್ಲ.

"ಮುಂದಿನ ದಿನಗಳಲ್ಲಿ ಆ ಗುಡಿಸಲು ಮನೆಯೂ ನಮ್ಮಿಂದ ಅಪಹರಿಸಲ್ಪಟ್ಟಿತು' ನಾನು ಬಹು ಜಾಗರೂಕತೆ ವಹಿಸ ಬೇಕಾಗಿತ್ತು" ಯಾಕಂದರೆ ನಾನೊಬ್ಬ ಜಮೀನುದಾರನಮಗನೆಂಬುದನ್ನೆಲ್ಲರೂ ಅರಿತಿದ್ದರು!! ನಾನೊಂದು ತಪ್ಪು ಮಾಡಿದರೂ ನಮ್ಮೆಲ್ಲರ ಚಿತ್ರಹಿಂಸೆಯಾಗುವದು ಖಂಡಿತವಾಗಿತ್ತು!!—ನನ್ನ ತಾಯಿಗೆ ಇದಾವುದೂ ತಿಳಿಯುತ್ತಿದ್ದಿಲ್ಲ! ಯಾರಾದರೂ ಆಫೀಸರು ಬಂದರೆ ಅವಳು ಹಿಂದಿನ ದರಬಾರೀ ದಿನದಂತೆಯೇ-ಅವರನ್ನು ಮೆಚ್ಚಿಸಿ ಆದರಾತಿಥ್ಯಕೊಟ್ಟು ಕಳುಹಿಸುತ್ತಿದ್ದಳು—ಅಂದು ನಾನು ನನ್ನ ಪತ್ನಿ ರಾತ್ರಿಯಲ್ಲಿ ಉಪವಾಸ ಮಾಡದೆ ಗತ್ಯಂತರವಿದ್ದಿಲ್ಲ" ನಮ್ಮಂತೆಯೇ ಎಲ್ಲಾ ಹಳೇ ಜಮೀನುದಾರರೂ ಕಷ್ಟದಲ್ಲಿದ್ದರು. ಆದರೆ ಅವರವರ ತಾಯ್ತಂದೆಗಳು ಯಾವಾಗಲೇ ಶಿಕ್ಷೆಗೊಂಡಿದ್ದರು" ಎಷ್ಟೋ ತಾಯಂದಿರು ಹೊಟ್ಟೆಗಿಲ್ಲದೆ ಪ್ರಾಣಾರ್ಪಣ ಮಾಡಿದ್ದರು"

"ಆಸ್ತಿಯುಳ್ಳ ದಿನಗಳನ್ನು ನಾವು ಮರೆತಿದ್ದೆವು,—ಜಮೀನನ್ನಂತೂ ಕಳೆದೇ ಹೋಗಿತ್ತು,, ಕಮ್ಯುನಿಷ್ಟ ಶಾಸಕರು ಎಲ್ಲವನ್ನೂ ಸೆಳೆದುಕೊಂಡಿದ್ದರು,, ಹೊಸ ಶಾಸಕರ ವಸತಿ ನಿರ್ಮಾಣವಾದದ್ದೇ ತಡ ಮನೆ ಮನೆಯಿಂದ—ಪಾತ್ರೆ—ಅಡಿಗೆ ಸಾಮಾನುಗಳನ್ನು ಕಸಿದರು,, ನಮ್ಮ ಗುಡಿಸಲು ಕೆಡವಲ್ಪಟ್ಟಿತು!! ನಮಗೆಲ್ಲರಿಗೂ ಏಕ-ಸ್ಥಳದಲ್ಲಿ ಊಟದ ವ್ಯವಸ್ಥೆಯಾಯಿತು. ಅಲ್ಲಿಯೇ ಕೆಲಸದ ಏರ್ಪಾಡಾಯಿತು,, ನನ್ನ ಪತ್ನಿಗೆ ಆ ಭೋಜನ ಗೃಹದ

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.



ಪರಿಪೂರ್ಣ ಬೇಂಕಿಂಗ್ ಸೇವೆಗೆ

— ಕೊರ್ಪೊರೇಶನ್ ಬೇಂಕ್ —

78 ಶಾಖೆಗಳು | ದೇಶದಾದ್ಯಂತ ಏಜನ್ಸಿಗಳು

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ರಾಷ್ಟ್ರಪತಿ ಉವಾಚ

ಪ್ರಪಂಚವೊಂದು ಪಾಲಿನ ವ್ಯಾಪಾರ

ಒಂದೊಮ್ಮೆ ಮಹರ್ಷಿ ಟಾಲ್‌ಸ್ಟಾಯ್‌ಯವರನ್ನು ಒಬ್ಬರು ಪ್ರಶ್ನಿಸಿದರು. "ನೀವು ಭೂತವನ್ನು ಕಂಡಿದ್ದೀರಾ?" ಟಾಲ್‌ಸ್ಟಾಯ್ ಇಲ್ಲವೆಂದು ಉತ್ತರಿಸಿದರು. ಆಗ, ಆ ವ್ಯಕ್ತಿಯು ಭೂತವನ್ನು ಕಾಣುವ ಸರಳ ಉಪಾಯವನ್ನು ತೋರಿಸಿ ಕೊಟ್ಟಿತು: "ಕನ್ನಡಿಯಲ್ಲಿ ನಿಮ್ಮ ಮುಖ ನೋಡಿರಿ; ಆಗ ಭೂತವು ನಿಮಗೆ ಗೋಚರಿಸುತ್ತದೆ.

ಇಂದು ಪ್ರಪಂಚದಲ್ಲಿ ಪರಸ್ಪರ ಸ್ಪರ್ಧೆಯನ್ನು ನಡೆಸುತ್ತ ಬಲಾಬಲ ಪರೀಕ್ಷೆಯಲ್ಲಿ ವ್ಯಸ್ತವಾಗುವ ರಾಷ್ಟ್ರಗಳು ಬೇಕಾಗಿಲ್ಲ. ಈ ಜಗತ್ತನ್ನು ಸರ್ವೋಚ್ಚವಾದ ಮಾನವತೆಯು ಮನೆಯನ್ನಾಗಿ ಮಾಡಬಲ್ಲ ಸ್ನೇಹಸಹಿತವಾದ ದೇಶಗಳು ಬೇಕಾಗಿವೆ. ನಾವೆಲ್ಲರೂ ಒಂದೇ ಉದ್ದೇಶವನ್ನಿಟ್ಟುಕೊಂಡ ಗೆಳೆಯರೇ ಹೊರತು ವಿಭಿನ್ನ ಮನೋಭಾವನೆಯನ್ನು ಪ್ರದರ್ಶಿಸುವ ಶತ್ರುಗಳಾಗ ಬಾರದು.

ನಾವು ತಂತ್ರಜ್ಞಾನ ಮತ್ತು ವಿಜ್ಞಾನಗಳಲ್ಲಿ ಸಾಧಿಸಿಕೊಂಡಿರುವ ಸಾಧನೆಗಳಿಂದ, ನಮ್ಮ ಮುಂದಿರುವ ವರ್ಗಗಳು ಅತೀವ ಭಯಾನಕವಾಗುತ್ತಿವೆ. ವೈಜ್ಞಾನಿಕ ಸಾಧನೋಪಕರಣಗಳು ಅವನ್ನು ಉಪಯೋಗಿಸುವ ನಮ್ಮನ್ನು ಹೊಂದಿಕೊಂಡು ಒಳಿತಿಗೂ ಬಳಸಲ್ಪಡಬಹುದು; ಇಲ್ಲವೇ ಕೆಡುಕಿಗೂ ಪ್ರಯೋಗಿಸಲ್ಪಡಬಹುದು. ಇವೆಲ್ಲವೂ ಮಾನವನ ಸೇವೆಗಾಗಿಯೇ ಉಪಯೋಗವಾಗುವುವೆಂದೂ ಮಾನವನ ಸರ್ವ ನಾಶಕ್ಕೆ ಅಸ್ಪದ ನೀಡಲಾರವೆಂದೂ ನಾವು ಬಯಸುತ್ತೇವೆ. ನಮ್ಮ ಸಂಕುಚಿತ ಮನೋವೃತ್ತಿಯಿಂದಾಗಿ ಅನ್ಯರ ಅಸಂತೋಷದ ಕಡೆಗ ಲಕ್ಷ್ಯ ಹರಿಸುವಷ್ಟಾದರೂ ನಮ್ಮ ಸಂತೋಷವನ್ನು ಗಮನಕ್ಕೆ ತಂದುಕೊಳ್ಳುವುದು ನಮಗೆ ಕೆಲವೊಮ್ಮೆ ಪ್ರಯಾಸವೆನಿಸುತ್ತದೆ. ಪರರು ಪ್ರಸನ್ನರಾಗಿರುವುದರಿಂದ, ನಮ್ಮ ಪ್ರಸನ್ನತೆಯ ಪ್ರಮಾಣವು ಹೆಚ್ಚುವುದೆಂಬುದನ್ನು ಅರಿತುಕೊಳ್ಳುವಷ್ಟಾದರೂ ನಮ್ಮ ಮನಸ್ಸು ವಿಶಾಲಗೊಳ್ಳಬೇಕು. ಅನ್ಯರನ್ನು ಸಂತುಷ್ಟಗೊಳಿಸುವ ಕೃತಿಗಳೆಲ್ಲವೂ ನಮ್ಮನ್ನೂ ಸಂತೃಪ್ತಗೊಳಿಸುವುವು.

ಮಾನವನು ಕೆಲವೊಂದು ಗುಣಗಳ ಮಿಶ್ರಜೀವಿ. ಆತನಲ್ಲಿ ಒಂದಷ್ಟು ಮಹನತೆಯಿದ್ದರೂ ಜತೆಗೆ ಸಂಕುಚಿತತೆಯಿದೆ, ಔದಾರ್ಯವೂ ಇದೆ; ನೀಚತೆಯೂ ಇದೆ ಉನ್ನತಿಕೆಯೂ ಇದೆ, ಲಘುತ್ವವೂ ಇದೆ. ಇವೆಲ್ಲವುಗಳ ಕಲಸು ಮೇಲೋಗರವೇ ಮಾನವ. ಮೇಲೆ ಹೇಳಿದಂತೆ ನಮ್ಮಲ್ಲಿಯೇ ದೇವತ್ವವೂ ಇದೆ, ಅಸುರತೆಯೂ ಇದೆ. ದಾನವತೆಯು ಮತ್ತು ದೇವತೆಯ ಗುಣಗಳು ಮಾನವನಲ್ಲಿ ಸಮಾವೇಶಗೊಂಡಿವೆ ನಾವು ನಮ್ಮಲ್ಲಿರಬಹುದಾದ ದಾನವತೆಯ ಭಾವನೆಗಳನ್ನು ಅದಷ್ಟು ಮೆಟ್ಟಿಹಾಕಿ, ಅವುಗಳ ಸ್ಥಾನದಲ್ಲಿ ಅಮರತೆಯ ಭಾವಗಳನ್ನು ಬೆಳೆಸಿಕೊಳ್ಳಬೇಕು. ಪ್ರಪಂಚದಲ್ಲಿ ನಡೆಯುತ್ತಿರುವ ಯಾವುದೇ ಘಟನೆಗಳಿಗೆ ಮಾನವ ಪ್ರವೃತ್ತಿಯೇ ಕಾರಣವಾಗುವುದರಿಂದ, ಅಸುರೀ ಗುಣಗಳಿಂದ ದೂರವಿದ್ದು ದೇವಗುಣಗಳನ್ನು ಗಳಿಸಿಕೊಳ್ಳುವುದು ಮಾನವನ ಆದ್ಯ ಕರ್ತವ್ಯ.

ಈ ಹಿಂದೆಯೂ ನಾವೆಲ್ಲರೂ ಸಾಕಷ್ಟು ಸಹಕಾರ ಬುದ್ಧಿಯನ್ನು ತೋರಿಸಿದ್ದೇವೆ. ಗತನೆಯ ಶತಮಾನದತ್ತ ದೃಷ್ಟಿ ಹಾಯಿಸಿದರೆ ಇದು ಸುವ್ಯಕ್ತವಾಗುವುದು. ಕೊಪರ್ನಿಕಸನು ಪೋಲೇಂಡಿನವನು, ಗೆಲಿಲಿಯೋ ಇಟೇಲಿಯನ್ನವನು, ಕೆಪ್ಲರನು ಜರ್ಮನಿಯವನು, ನ್ಯೂಟನ್ನನು ಇಂಗ್ಲೆಂಡಿನವನು— ಇವರೆಲ್ಲರೂ ವಿಜ್ಞಾನದ ಬೆಳವಣಿಗೆಗೆ ಸಹಕಾರವಿತ್ತರು ತಿಂಸೆಯ ಶತಮಾನದಲ್ಲಿರುವ ನಮ್ಮ ಆಧುನಿಕ ವಿಜ್ಞಾನವು ಪ್ರಪಂಚದ ಹಲವಾರು ದೇಶಗಳ ಜನರಿಗೆ ಕೃತಜ್ಞವಾಗಿದೆ ಪ್ರಪಂಚವಿಂದು ಅಂತಾರಾಷ್ಟ್ರೀಯವಾಗಿ ರೂಪಿತವಾಗುತ್ತಿದೆ. ಆರ್ಥಿಕವಾಗಿ ನಾವು ಪರಸ್ಪರ ಒಬ್ಬರನ್ನೊಬ್ಬರು ಹೊಂದಿಕೊಂಡಿದ್ದೇವೆ, ಹಲವಾರು ಸಾಂಸ್ಕೃತಿಕ ವಿಷಯಗಳಲ್ಲಿಯೂ ನಾವು ಸಂಬಂಧ ಬೆರಿಸಿಕೊಂಡಿದ್ದೇವೆ. ವಿಜ್ಞಾನವು ನಮ್ಮೆಲ್ಲರನ್ನೂ ಇಂದು ಒಂದಾಗಿ ಮಾಡಿದೆ; ಮಾನವನ ಅಧಿಕಾರವನ್ನು ಮನ್ನಿಸುವುದರೊಡನೆ ಪ್ರತಿಯೊಬ್ಬರಿಗೂ ಅಂತಹ ಅಧಿಕಾರವನ್ನು ದೊರಕಿಸುವಲ್ಲಿ ನಾವು ಪ್ರಯತ್ನಶೀಲರಾಗಬೇಕು ನಾವಿಂದು ನರಳುತ್ತಿರುವ ವಿವಿಧ ಅಶಕ್ತತೆಗಳಿಂದ ಸ್ವಾತಂತ್ರ್ಯ ಹೊಂದುವುದರಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಶಕ್ತತೆಗಳಿಂದ ಪ್ರತಿಯೊಬ್ಬನನ್ನೂ ಮುಕ್ತಗೊಳಿಸುವಲ್ಲಿ ನಮ್ಮ ಸಾಧನೆ ಬೇಕಾಗಿದೆ

ಜಗತ್ತು ಒಂದು ಸಹಕಾರ ಕ್ಷೇತ್ರವಿದ್ದಂತೆ. ಸ್ನೇಹಮಯ ವಿಶ್ವದಂತೆ ನಾವು ಇತರರನ್ನು ಪ್ರೀತಿಸುವುದಕ್ಕೆ ಇಲ್ಲಿ ಹುಟ್ಟಿ ಬಂದಿದ್ದೇವೆ; ದ್ವೇಷಿಸುವುದಕ್ಕಲ್ಲ. ಬೇರೆಯವರಿಗೆ ಸಹಾಯ ಮಾಡುವುದಕ್ಕಾಗಿ ಜನಿಸಿದ್ದೇವೆ; ಒಬ್ಬರಿನ್ನೊಬ್ಬರನ್ನು ಹಾಳುಗೆಡಹುವುದಕ್ಕಲ್ಲ. ಆದರೆ, ಒಂದು ಬಗೆಯ ಪ್ರಚಾರ ಜಾಲದಿಂದ ನಾವು ತಪ್ಪುಗ್ರಹಿಕೆಗಳು ಮತ್ತು ಉಳಿದವರೆಲ್ಲರೂ ಹೀನರು ಎಂಬ ಭಾವನೆಯು ನಮ್ಮಲ್ಲಿ ಉದಿಸುತ್ತದೆ ಇಂತಹ ವರ್ತನೆಯು ಮಾನವ ಸಹಜ ಸ್ವಭಾವಕ್ಕೆ ವಿರುದ್ಧವಾಗಿದೆ ಏಕೆಂದರೆ, ನೈಸರ್ಗಿಕವಾಗಿ ಮನುಷ್ಯ ಒಬ್ಬರಿನ್ನೊಬ್ಬರನ್ನು ಪ್ರೀತಿಸಲು ಹುಟ್ಟಿದ್ದಾನೆ; ಇದು ಸ್ವಭಾವಸಿದ್ಧ ಗುಣ ಇಂತಹ ಮನೋಭಾವದಿಂದಾಗಿ, ಮಾನವನು ತನ್ನ ಉದಾರತೆಯನ್ನು ಕಳೆದುಕೊಂಡು ಆತನು ಮರುಳಾಗುತ್ತಾನೆ, ತನ್ನ ಅನುಕಂಪ, ಸಹಕಾರತನ ಮೊದಲಾದ ದೈವಿಕ ಗುಣಗಳಿಗೆ ಎರವಾಗುತ್ತಾನೆ; ನಾವಿಂದು ಮುನ್ನಡೆಯುತ್ತಿರುವ ರೀತಿಯು 'ಇದೇ ಆಗಿದೆ.

ಉತ್ಪ್ರೇಕ್ಷಿಸುವುದು ಅಪ್ರತಿನಿಧಿಸುವುದು, ಪ್ರಚಾರದಲ್ಲಿ ಆಸಕ್ತಿ ತೋರಿಸುವುದು ನಮಗಿಂದು ಬೇಕಾಗಿಲ್ಲ. ಅದುದರಿಂದ ಇವು ನಮ್ಮ ಗುರಿಯಾಗಿರಬಾರದು ಸತ್ಯದ ಸ್ವರವನ್ನು ಕೇಳುವುದು ಮತ್ತು ಅನುಕಂಪದ ಕರೆಯನ್ನು ಮನ್ನಿಸುವುದೇ ನಮ್ಮ ಜೀವನದ ಉದ್ದೇಶವೆನಿಸಬೇಕು.

ನಾವು ಈ ಉದ್ದೇಶಸಾಧನೆಯಲ್ಲಿ ಸಫಲರಾದೆವೆಂದರೆ, ಪ್ರಪಂಚವು ಒಂದಾಗುವುದು; ಇದರಿಂದ, ನಮ್ಮ ಸಾಧನೆಯ ಬಗ್ಗೆ ನಾವು ಅಭಿಮಾನ ಪಟ್ಟುಕೊಳ್ಳಬಹುದು. ನಾವೆಲ್ಲರೂ ಗೆಳೆಯರಾಗಿರುವಂತೆಯೇ ಇಡಿಯ ಜಗತ್ತಿನ ಎಲ್ಲ ರಾಷ್ಟ್ರಗಳೂ ಗೆಳೆಯರೆನಿಸಬೇಕು ಇದು ಯಶಸ್ವಿಯಾದರೆ, ನಮ್ಮೆಲ್ಲರ ಕಳಕಳಿಪ್ರಾಯವಾದ ಅಪೇಕ್ಷೆಯು ಪೂರೈಸಿದಂತೆ. ಆದುದರಿಂದ ನಮ್ಮ ದೃಷ್ಟಿಯನ್ನು ಪ್ರಪಂಚದತ್ತ ಹರಿಸಿ, ನಾವೆಲ್ಲರೂ ಅದರ ಪಾಲುದಾರರೆಂಬ ಭಾವನೆಯನ್ನು ಬೆಳೆಸೋಣ ಈ ಪಾಲುಬಂಡವಾಳದಿಂದ ನಡೆಯುವ ಪ್ರಪಂಚದಲ್ಲಿ ನಾವೆಲ್ಲರೂ ಸ್ನೇಹಭಾವದಿಂದ ಪ್ರವರ್ತಿಸೋಣ



ಭಾರತದ ರಾಷ್ಟ್ರಪತಿ ಡಾ| ರಾಧಾಕೃಷ್ಣನ್

ಕೆನರಾ ಬ್ಯಾಂಕ್‌ನೊಡನೆ ವ್ಯವಹರಿಸುವುದೆಂದರೆ

ಎಲ್ಲರಿಗೂ ಅದೆಂತಹ ಉತ್ಸಾಹ!

ಎಲ್ಲ ವಿಧದ ಬ್ಯಾಂಕಿಂಗ್ ಸೇವೆ ಮತ್ತು ಎಲ್ಲರಿಗೂ ಸಹಾಯನೀಡಬೇಕೆಂಬ ಒಂದು ಅಭಿಲಾಷೆ-ಅಷ್ಟಲ್ಲದೆ ಈ ಸೇವೆಯೊಂದಿಗೆ ನಿಮಗೆ ದೊರೆಯುವ ಮಂದಹಾಸಕ್ಕಾಗಿ ನೀವೇನೂ ಹಣ ತೆರಬೇಕಾಗಿಲ್ಲ ಈ ಸೇವೆಯ ನೆಲೆ ರಕ್ತಗತವಾದ ಅಠಾವಣೆ ಮತ್ತು ನಿಮ್ಮನ್ನು ತೃಪ್ತಿಗೊಳಿಸುವ ಸಾಮರ್ಥ್ಯದ ಬಗ್ಗೆ ನಮಗಿರುವ ಅಚಲವಿಶ್ವಾಸ

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ 1906

ಸಮಗ್ರ ಸೇವೆ ಸಂಪೂರ್ಣ ಭದ್ರತೆ

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಅಂತಾರಾಷ್ಟ್ರೀಯ ಮಟ್ಟದಲ್ಲಿ

ಶಾಂತಿ ಮಾರ್ಗದ ಪ್ರಯೋಗ

—ಶಶಿಕಲಾ ತ್ರಿವೇದಿ.

ಗದ್ದೆಯೊಂದರಲ್ಲಿ ಮಹಿಳಾ ವಿದ್ಯಾರ್ಥಿಗಳು ಆಸಕ್ತಿಯಿಂದ ಕಾರ್ಯಮಗ್ನರಾಗಿದ್ದಾರೆ.

ಧ್ವನಿಗಿಂತ ವೇಗತರವಾಗಿ ಹೋಗುವ ವಿಮಾನಗಳೂ, ಇಡಿ ಭೂಮಂಡಲವನ್ನು ಕೇವಲ ಕೆಲವೇ ನಿಮಿಷಗಳಲ್ಲಿ ಸುತ್ತು ಹಾಕುವ ಕೃತಕ ಉಪಗ್ರಹಗಳೂ, ನಾವು ಈಗ ವಾಸ ಮಾಡುತ್ತಿರುವ ಪ್ರಪಂಚವು ನಿಜವಾಗಿಯೂ ತುಂಬ ಕಿರಿದಾದ್ದೆಂಬುದನ್ನು ತೋರಿಸುತ್ತವೆ. ಕಲ್ಪನಾತೀತವಾದ ಸಂಪರ್ಕ ಸಾಧನಗಳ ದೆಸೆಯಿಂದ, ಇಂದು ಪ್ರಪಂಚದಲ್ಲಿ ದೂರ ಪ್ರಾಚ್ಯವೆಂಬುದಾಗಲೀ, ದೂರ ಪಶ್ಚಿಮವೆಂಬುದಾಗಲೀ ಇಲ್ಲವಾಗಿದೆ. ಆದರೂ ನೆರೆಹೊರೆಯ ಎರಡು ರಾಷ್ಟ್ರಗಳ ಜನರು ಪರಸ್ಪರ ಮಾನಸಿಕವಾಗಿ ಇನ್ನೂ, ಅಪರಿಚಿತರಂತೆಯೇ ಜೀವಿಸುತ್ತಿದ್ದಾರೆ.

ಜನರ ನಡುವೆ ಇರತಕ್ಕ ಈ ಮಾನಸಿಕ ದೂರದ ಪರಿಣಾಮವಾಗಿಯೇ ಬಿಕ್ಕಟ್ಟುಗಳು ತಲೆದೋರುತ್ತವೆ. ಪ್ರತಿಯೊಬ್ಬರೂ ಇಂತಹ ಬಿಕ್ಕಟ್ಟುಗಳ ಬಗ್ಗೆ ಮಾತನಾಡುತ್ತಾರೆ. ಪ್ರತಿಯೊಂದು ದೇಶದ ಪ್ರತಿಯೊಬ್ಬ ನಾಯಕನೂ ಅವುಗಳ ಬಗ್ಗೆ ತನ್ನ ಕಳವಳವನ್ನು ವ್ಯಕ್ತಪಡಿಸುತ್ತಾನೆ. ಮಾನವರ ನಡುವೆ ಸದ್ಭಾವನೆಯನ್ನು ಹರಡುವ ಕಾರ್ಯವು ಮಾನವರ ಹೊಣೆಯೇ ಏಕಾಗಬಾರದು? ಇಂತಹ ಸದ್ಭಾವನೆ, ಸ್ನೇಹ ಮತ್ತು ತಿಳುವಳಿಕೆಯು ಸರಕಾರ ಸರಕಾರಗಳ ನಡುವಣ ಆಧಾರಕ್ಕಿಂತ, ವಿವಿಧ ಜನರ ನಡುವೆಯೇ ನೇರವಾಗಿ ಸ್ಥಾಪಿಸಲ್ಪಡುವುದು ಸಾಧ್ಯ.

ಪ್ರಯೋಗದ ಮೂಲತತ್ವ

ಜೀವನದ ಈ ಮೂಲಭೂತ ವಾಸ್ತವಾಂಶವನ್ನೇ ಅಂತರಾಷ್ಟ್ರೀಯ ಪ್ರಯೋಗವು ಅವಲಂಬಿಸಿದೆ. ಪ್ರಯೋಗದ ಮೂಲತತ್ವವು ಸರಳವಾದರೂ, ಮೂಲಭೂತವಾದದ್ದಾಗಿದೆ. ಒಟ್ಟಿಗೆ ಕೆಲಕಾಲ ವಾಸಮಾಡುವುದರ ಮೂಲಕ ಒಬ್ಬರನ್ನೊಬ್ಬರು ಅರಿತುಕೊಳ್ಳುವುದೂ, ಭಿನ್ನಾಭಿಪ್ರಾಯಗಳನ್ನು ಗೌರವಿಸುವುದನು ಕಲಿಯುವುದೂ, ಮಾನವೀಯ ಐಕ್ಯವನ್ನು ಕಂಡುಹಿಡಿಯುವುದೂ ಇದರ ಉದ್ದೇಶಗಳಾಗಿವೆ. ಈ ಅನುಭವದ ಮೂಲಕ ಜನರು ಮತ್ತೊಂದು ಸಂಸ್ಕೃತಿಯ ಬಗ್ಗೆ ಉತ್ತಮ ತಿಳುವಳಿಕೆ ಪಡೆಯುವುದು ಮಾತ್ರವಲ್ಲದೆ, ಇತರರ ಜೀವನ ವಿಧಾನ ಹಾಗೂ ಅವರ ದೃಷ್ಟಿಕೋನವನ್ನು ಅರಿಯುವುದಕ್ಕೂ ಸಾಧ್ಯವಾಗುತ್ತದೆ. ಜೊತೆಗೆ ತಮ್ಮದೇ ಆದ ಸಂಸ್ಕೃತಿ, ಜೀವನ ವಿಧಾನ ಮತ್ತು ದೃಷ್ಟಿಯ ಬಗ್ಗೆ ಹೆಚ್ಚು ಯೋಗ್ಯವೆನಿಸಿದ ತಿಳುವಳಿಕೆ ಪಡೆದು, ಏಕ ವಿಶ್ವದ ಅರ್ಥವನ್ನು ಪೂರ್ಣತರವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಭೂಮಿಯ ಮೇಲಿನ ಶಾಂತಿಯೂ, ಜನರ ನಡುವೆ ಸದ್ಭಾವನೆಯೂ ಪರಸ್ಪರ ಅಭೇದ್ಯವೆಂದು ಪ್ರಯೋಗವು ನಂಬುತ್ತದೆ. ಸದ್ಭಾವನೆ ಮಾತ್ರವೇ ಶಾಂತಿಗೆ ದಾರಿಮಾಡಿಕೊಡಬಲ್ಲುದು.

ಈ ಮೂಲ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡೇ, ಅಮೆರಿಕನ್ ಪ್ರಜೆಯಾದ ಡಾ. ಡೋನಲ್ಡ್‌ವಾಟ್ ಅವರು ೧೯೩೨ರಲ್ಲಿ ಅಂತಾರಾಷ್ಟ್ರೀಯ ಜೀವನದಲ್ಲಿನ ಪ್ರಯೋಗವನ್ನು ಪ್ರಾರಂಭಿಸಿದರು. ಮೂವತ್ತು ವರ್ಷಗಳ ಅವಧಿಯಲ್ಲಿ ಈ ಪ್ರಯೋಗವು ನಿಜವಾಗಿಯೂ ಅಂತಾರಾಷ್ಟ್ರೀಯವಾಗಿ ರೂಪು ತಾಳಿ, ಪ್ರಪಂಚದ ಐದು ಖಂಡಗಳ ೩೪ ದೇಶಗಳಲ್ಲಿ ರಾಷ್ಟ್ರೀಯ ಕಚೇರಿಗಳನ್ನೋ, ಪ್ರತಿನಿಧಿಗಳನ್ನೋ ಹೊಂದಿದೆ. ಈ ಪ್ರಯೋಗದ ಪ್ರಕಾರ ಇದುವರೆಗೆ ಪ್ರಪಂಚದ ವಿವಿಧ ಹಾಗೂ ದೂರ ದೂರದ ಭಾಗಗಳಿಗೆ ಸೇರಿದ ಒಂದು ಲಕ್ಷಕ್ಕೂ ಹೆಚ್ಚು ಯುವಕ ಯುವತಿಯರು, ಮತ್ತೊಂದು ಸಂಸ್ಕೃತಿಯೊಡನೆ ವೈಯಕ್ತಿಕ ನಿಕಟ ಸಂಬಂಧಗಳನ್ನು ಬೆಳಸಿಕೊಂಡು, ಉತ್ತಮ ಅನುಭವ ಪಡೆದಿದ್ದಾರೆ. ಪರದೇಶವೊಂದರಲ್ಲಿ, ವಿಶೇಷವಾಗಿ ಆಯಲ್ಪಟ್ಟ ಒಂದು ಕುಟುಂಬದೊಡನೆ ಹಣ ತೆರುವ ಅತಿಥಿಯಾಗಲ್ಲದೇ, ಕುಟುಂಬದ ಒಬ್ಬ ಸದಸ್ಯರಾಗಿ, ಅವರೆಲ್ಲರೂ ಆ ಅನುಭವವನ್ನು ಗಳಿಸಿದರು.

ಭಾರತದಲ್ಲಿ ಪ್ರಯೋಗ

ಈ ಪ್ರಯೋಗವು ಭಾರತವನ್ನು ಸ್ವಾತಂತ್ರ್ಯದ ನಂತರ ಮುಟ್ಟಿತು. ೧೯೪೯ರಲ್ಲಿ ಒಬ್ಬ ಹುಡುಗ ಒಬ್ಬಳು ಹುಡುಗಿ-ಹೀಗೆ ಇಬ್ಬರು ಯುವ-ಜನರು ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಭೇಟಿಕೊಟ್ಟು, ಡಾ ವಾಟ್ ಅವರನ್ನು ಸಂದರ್ಶಿಸಿ, 'ಪ್ರಯೋಗ ಚಳುವಳಿಯನ್ನು ಭಾರತಕ್ಕೆ ವಿಸ್ತರಿಸುವ ಸಾಧ್ಯತೆಯನ್ನು ಕುರಿತು ಚರ್ಚೆ ನಡೆಸಿದರು. ಇದರ ಫಲವಾಗಿ ಮೊದಲ ತಂಡವು ೧೯೫೦ರಲ್ಲಿ ಭಾರತಕ್ಕೆ ಬಂದಿತು ಅದು ಸ್ವೀಡನ್ ದೇಶದಿಂದ ಬಂದುದಾಗಿತ್ತು. ಆಗಿನಿಂದೀಚೆಗೆ ಅಮೆರಿಕೆ ಬ್ರಿಟನ್, ಆಸ್ಟ್ರೇಲಿಯಾ, ಸ್ವಿಜರ್ಲೆಂಡ್, ಸ್ವೀಡನ್ ಮತ್ತು ಫ್ರಾನ್ಸ್—ಇವೇ ಮೊದಲಾದ ಅನೇಕ ದೇಶಗಳಿಂದ ಹಲವಾರು ಪಂಗಡಗಳು ಈ ದೇಶಕ್ಕೆ ಭೇಟಿ ಕೊಟ್ಟಿವೆ.

ವ್ಯತ್ಯಸ್ಥ ಪ್ರವಾಸಿಗಳು

ಪ್ರಯೋಗಿಗಳು ಸಾಮಾನ್ಯ ರೀತಿಯ ಪ್ರವಾಸಿಗಳಲ್ಲವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದು ಅವರ ಗುರಿಯಲ್ಲ. ಭಾರತದ ಜನರೊಡನೆ ಜೀವಿಸಿ, ಅವರನ್ನು ಅರ್ಥಮಾಡಿಕೊಳ್ಳುವುದು. ಅವರ ಉದ್ದೇಶವಾಗಿದೆ. ಅವರು ಕುಟುಂಬಗಳೊಡನೆ, ತಮ್ಮ ಮನೆಗಳಲ್ಲಿ ಇದ್ದಂತೆಯೇ ವಾಸ ಮಾಡುತ್ತಾರೆ ಅವರಿಗಾಗಿ ವಿಶೇಷ ಸವಲತ್ತುಗಳಾಗಲೀ ಉಪಚಾರಗಳಾಗಲೀ ಇರುವುದಿಲ್ಲ. ಪ್ರಯೋಗಿಗಳು ಅತಿಥೇಯರಂತೆಯೇ ವಾಸಮಾಡಿ, ಅದೇ ದಿನಚರಿಯನ್ನು ಅನುಸರಿಸಿ, ಅದೇ ಆಹಾರವನ್ನು ಊಟಮಾಡುತ್ತಾರೆ.

ಕಾರ್ಯಕ್ರಮಗಳು

ಪಂಗಡ ಕಾರ್ಯಕ್ರಮದ ವಿಸ್ತರಣೆಯಾಗಿ ವಿಶೇಷ ಆಸಕ್ತಿಯ ತಂಡವಿರುತ್ತದೆ. ಇಂತಹ ತಂಡದ ಮೂಲಕ, ಅಧ್ಯಾಪಕರು, ಸಾಮಾಜಿಕ ಕಾರ್ಯಕರ್ತರು, ಪತ್ರಿಕೋದ್ಯೋಗಿಗಳು ಹಾಗೂ ಇತರ ವೃತ್ತಿಗಳ ಸದಸ್ಯರು, ಅದೇ ರೀತಿಯ ವೃತ್ತಿಗಳನ್ನು ಅನುಸರಿಸತಕ್ಕವರ ಕುಟುಂಬಗಳೊಡನೆ ಕೆಲವು ಕಾಲ ವಾಸಮಾಡುವಂತೆ ಏರ್ಪಡಿಸಲಾಗುವುದು. ಇದರಿಂದ ಸಮಾನ ವೃತ್ತಿಯವರೊಡನೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳುವುದು ಮಾತ್ರವಲ್ಲದೆ ಅಭಿಪ್ರಾಯ ಹಾಗೂ ಅನುಭವಗಳನ್ನು ಪಡೆದುಕೊಳ್ಳಲು ಸಂಪೂರ್ಣ ಅವಕಾಶವು ದೊರೆಯುತ್ತದೆ. ಈ ಎಲ್ಲ ಕಾರ್ಯಕ್ರಮಗಳ ಜೊತೆಗೆ ಒಬ್ಬ ವ್ಯಕ್ತಿಯು ಹಲವು ಕುಟುಂಬಗಳ ಅತಿಥಿಯಾಗುವ ಅವಕಾಶಗಳನ್ನು ಒದಗಿಸಲಾಗುತ್ತದೆ. ಅಮೆರಿಕನ್ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ದೊರಕಿಸಿಕೊಡುವುದು ಭಾರತೀಯ ವಿದ್ಯಾರ್ಥಿಗಳು ಅಮೆರಿಕಾಕ್ಕೆ ಹೋದರೆ ಅವರು ಈ ಅನುಭವ ಪಡೆಯುವ ಸೌಕರ್ಯವನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಇದರಿಂದ ಅವರು ಅಲ್ಲಿನ ನಡೆ ನುಡಿಗಳು ರೂಢಿಗಳು ಹಾಗೂ ಆ ದೇಶದ ಸಾಮಾನ್ಯ ವಾತಾವರಣ ಇವುಗಳಿಗೆ ಹೊಂದಿಕೊಂಡು ನಡೆಯಲು ಸಾಧ್ಯವಾಗುತ್ತದೆ.

ಪ್ರಯೋಗಿ ಯಾರು

ಪ್ರಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲು ಯಾರು ಯಾರು ಅರ್ಹರು? ಇಂಗ್ಲಿಷ್ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯ, ವಿದೇಶೀ ಜನರ ಜೀವನ ವಿಧಾನವನ್ನು ಅರಿತು ಅರ್ಥಮಾಡಿಕೊಳ್ಳುವ ಇಚ್ಛೆ, ಜೀವನದ ವಿಷಯದಲ್ಲಿ ವಿವಿಧ ದೃಷ್ಟಿಗಳ ಬಗ್ಗೆ ಸಹಿಷ್ಣುತೆ ಹಾಗೂ ಗೌರವದ ಭಾವನೆ, ಕಾರ್ಯಕ್ರಮದಿಂದ ಏನಾದರೂ ಅನುಕೂಲಗಳು ಒದಗಿದರೆ ಅವುಗಳನ್ನು ಸಹಿಸಿಕೊಳ್ಳುವ ಇಚ್ಛೆ, ತನ್ನ ದೇಶದಲ್ಲೇ ಉತ್ತಮ ರಾಯಭಾರಿಯಾಗಿ ನಡೆದುಕೊಳ್ಳುವ ಅಪೇಕ್ಷೆ ತನ್ನ ದೇಶದ ಸಂಸ್ಕೃತಿಯನ್ನು ಯೋಗ್ಯರೀತಿಯಲ್ಲಿ ವಿವರಿಸಬಲ್ಲ ಶಕ್ತಿ ಇವೇ ಪ್ರಯೋಗಿಯೊಬ್ಬನು ಹೊಂದಿರಬೇಕಾದ ಆಗತ್ಯ ಅರ್ಹತೆಗಳಾಗಿವೆ.

ಅತಿಥೇಯನು ಯಾರು?

ಮತ್ತೊಂದು ದೇಶಕ್ಕೆ ಭೇಟಿಕೊಡು ಪ್ರಯೋಗಿಯ ಆಯ್ಕೆಯನ್ನು ಮಾಡುದರಲ್ಲಿ ತುಂಬಾ ಜಾಗರೂಕತೆಯಿಂ ಕೂಡಿರುವುದು ಅವಶ್ಯಕವಾದರೆ, ಅತಿಥೇಯ ಕುಟುಂಬದ ಆಯ್ಕೆಯಲ್ಲೂ ಅಷ್ಟೆ

(೯ನೇ ಪುಟ ನೋಡಿರಿ)

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?
ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯ ಸೇವೆ.
ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.
ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಗೋವಾ ವಿಮೋಚನೆ

ಭಾರತದ ಅಹಿಂಸಾ ತತ್ವಕ್ಕೆ ವಿರೋಧಿಯೆ?

ಶ್ರೀ ವಿ. ವಿ. ಶೆಟ್ಟಿ, ಪೂನ.

ಅಶೋಕ ಚಕ್ರವರ್ತಿಯ ಕಾಲದಿಂದಲೂ ಅಹಿಂಸಾ ತತ್ವವನ್ನು ಅವಲಂಬಿಸಿಕೊಂಡು ಬಂದಿದ್ದ ನಮ್ಮ ದೇಶವು ಗಾಂಧೀಜಿಯವರ ನೇತೃತ್ವದಲ್ಲಿ ಜಗತ್ತಿಗೇ ಆದರ್ಶಪ್ರಾಯವಾಯಿತು. ಸ್ವಾತಂತ್ರ್ಯ ಸಮರದಲ್ಲಿ ಅಹಿಂಸಾ ತತ್ವದ ಶ್ರೇಷ್ಠತೆಯನ್ನು ಪ್ರಕಟಿಸಿ ಯುದ್ಧವಿಲ್ಲದೆ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವಂತೆ ಮಾಡಿರುವುದು. ದೇಶ ವಿದೇಶಗಳಲ್ಲಿ ಯಾರೊಬ್ಬನೂ ಮರೆಯಲಾರದ ವಿಷಯ. ಗಾಂಧೀಜಿಯವರ ನಂತರ ನೆಹರೂರವರು ಅಹಿಂಸಾ ತತ್ವವನ್ನು ಪ್ರತಿಪಾದಿಸಿಕೊಂಡು ಬರುತ್ತಿದ್ದರಲ್ಲದೆ ಇತರ ದೇಶಗಳೊಳಗೆ ತಿಕ್ಕಾಟ ಬಂದು ಜಾಗತಿಕ ಶಾಂತಿಗೆ ಹಾನಿಯಾಗುವ ಸಂದರ್ಭದಲ್ಲಿ ಅಹಿಂಸಾ ತತ್ವವನ್ನು ನಾಸೆರ್, ಕ್ರುಶ್ಚೇವ್ ಅಥವಾ ಕೆನೆಡಿಯೆನ್ನುವ ಭೇಧವಿಲ್ಲದೆ ಉಪದೇಶ ಮಾಡುತಿದ್ದರು. ಅವರು ಬರೇ ಮಾತಿನಲ್ಲಿ ಮಾತ್ರ ತತ್ವ ಬೋಧೆ ಮಾಡುತ್ತಿರುವುದಲ್ಲವೆಂಬುದನ್ನು ಸ್ಪಷ್ಟಪಡಿಸಲು ಚೀನ ಮತ್ತು ಭಾರತಗಳೊಳಗಣ ವಿವಾದವೇ ಉದಾಹರಣೆಯಾಗಿತ್ತು. ಹತ್ತಿಪ್ಪತ್ತು ಸಾವಿರ ಚದರ ಮೈಲುಗಳಷ್ಟು ನಮ್ಮ ದೇಶದ ಉತ್ತರ ಭಾಗವನ್ನು ಚೀನಾದವರು ಆಕ್ರಮವಾಗಿ ಆವರಿಸಿಕೊಂಡಿದ್ದರೂ, ದುಡುಕಿ ಅವರ ಮೇಲೆ ಯುದ್ಧಕ್ಕೆ ಹೋಗದೆ ಮಾತುಕತೆಯಿಂದಲೇ ಈ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಬೇಕೆಂದು ನೆಹರೂರವರು ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ. ನೆಹರೂ ಸರಕಾರದ ತಾಳ್ಮೆ ಮತ್ತು ಶಾಂತಿ ಬೋಧನೆಯಿಂದ ನಮ್ಮ ದೇಶದಲ್ಲೇ ಬಹುಮಂದಿ ಬೇಸತ್ತಿದ್ದರೂ, ಭಾರತವು ಜಾಗತಿಕ ಶಾಂತಿಯನ್ನು ಕೆಡಿಸಬಾರದೆಂಬ ನೆಹರೂರವರ ತರ್ಕವನ್ನು ಎಲ್ಲರೂ ಮೆಚ್ಚುತಿದ್ದರು. ಜಗತ್ತಿನ ಪ್ರತಿಯೊಬ್ಬ ನಾಯಕನೂ, ಪ್ರತಿಯೊಂದು ದೇಶದ ಜನರೂ ನಮ್ಮ ಪ್ರಧಾನಿಗೆ ಮನ್ನಣೆಕೊಟ್ಟು ಇವರೊಬ್ಬ ಆದರ್ಶ ವ್ಯಕ್ತಿಯೆಂದು ತಿಳಿದುಕೊಂಡಿದ್ದರೆ ಅದಕ್ಕೆ ಅವರು ಬೋಧಿಸುತ್ತಿದ್ದ ಅಹಿಂಸಾ ತತ್ವವೇ ಕಾರಣವಾಗಿತ್ತು.

೧೯೬೧ನೇ ದಶಂಬರ ೧೯ನೇ ತಾರೀಕಿನಂದು ಗೋವಾ, ದಮನ್ ಮತ್ತು ದೀವು ಪೋರ್ಚುಗೀಸರ ವಸಾಹತುಗಾರಿಕೆಯಿಂದ ವಿಮೋಚನೆಗೊಂಡು ಮಾತೃಭೂಮಿಯಾದ ಭಾರತವನ್ನು ಸೇರಿದವು. ನಮ್ಮ ದೇಶದ ಸೈನ್ಯವನ್ನು ಕಳುಹಿಸಿ, ಶಕ್ತಿ ಪ್ರಯೋಗದಿಂದಲ್ಲದಿದ್ದರೂ ಶಕ್ತಿ ಪ್ರದರ್ಶನದಿಂದಲೇ ಈ ಘಟನೆ ನಡೆಯಿತೆನ್ನುವ ವಿಚಾರವನ್ನು ಮುಚ್ಚಿಡಬೇಕಾಗಿಲ್ಲ. ಗೋವಾ ವಿಮೋಚನೆಯು ಪ್ರತಿಯೊಬ್ಬ ಭಾರತೀಯನನ್ನು ಹರ್ಷಗೊಳಿಸಿತಾದರೂ ವಿದೇಶೀಯರಲ್ಲಿ ಎರಡು ಪಂಗಡಗಳಾದವು. ನೆಹರೂರವರ ಈ ಕಾರ್ಯಕ್ಕೆ ಏಕಕಾಲದಲ್ಲಿ ಮನ್ನಣೆ ಮತ್ತು ಖಂಡನೆಗಳು ಆದುವು. ಬಹು ಮಟ್ಟಿನ ರಾಷ್ಟ್ರಗಳು ನಮ್ಮನ್ನು ಸಮರ್ಥಿಸಿದವು. ಅದೇಕೆಂದರೆ ಭಾರತದ ಸಹಜ ಭಾಗಗಳಾದ ಗೋವಾ, ದಮನ್ ಮತ್ತು ದೀವುಗಳನ್ನು ಪೋರ್ಚುಗಲ್ ತನ್ನ ವಸಾಹತುಗಳನ್ನಾಗಿರಿಸಿ ಸುಮಾರು ೪೫೦ ವರ್ಷಗಳ ಕಾಲ ಆಳಿದ್ದಲ್ಲದೆ ಅಲ್ಲಿಯ ಜನರನ್ನು, ಅವರು ಸ್ವಾತಂತ್ರ್ಯವನ್ನು ಬಯಸುತ್ತಾರೆನ್ನುವ ಒಂದೇ ತಪ್ಪಿನಿಂದ ಸೆರೆಯಲ್ಲಿಟ್ಟು ಹಿಂಸಿಸುತಿದ್ದುದಲ್ಲದೆ ಕನಿಕರವಿಲ್ಲದೆ ಕೊಲೆ ಮಾಡುತಿದ್ದರು. ಇದನ್ನು ನೋಡಿಕೊಂಡೂ, ಪೋರ್ಚುಗೀಸರೊಡನೆ ಸಂಧಾನದಿಂದಲೇ ಗೋವಾವನ್ನು ಬಿಡಿಸಿಕೊಳ್ಳಬೇಕೆಂದು ಮಾಡಿದ ಪ್ರಯತ್ನವೆಲ್ಲವೂ ನಿಷ್ಫಲವಾಗಿದ್ದುವು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ೧೪ ವರ್ಷಗಳ ತನಕ ಗೋವಾ ವಿಮೋಚನೆಗೆ ತಾಳ್ಮೆಯಿಂದ ಕಾದ ನೆಹರೂರವರು ಬೇರಾವ ಉಪಾಯವೂ ಇಲ್ಲದೆ ಶಕ್ತಿ ಪ್ರಯೋಗ ಮಾಡಿದುದರಲ್ಲಿ ಯಾವ ಅನ್ಯಾಯವೂ ಇಲ್ಲ ಆಫ್ರಿಕ ಮತ್ತು ಏಶ್ಯದ ಕೆಲವು ನಾಯಕರ ಅಭಿಪ್ರಾಯ ಪ್ರಕಾರ, ಅಂಗೋಲದಲ್ಲಿ ಲಕ್ಷಗಟ್ಟಳೆ ನಿರಪರಾಧಿ ಜನರನ್ನು ಕೊಲ್ಲಿಸಿದ ಸಲಝಾರರಿಗೆ ಬಲತ್ಕಾರವಲ್ಲದೆ ಬೇರಾವ ರೀತಿಯಿಂದಲೂ ಬುದ್ಧಿ ಕಲಿಸಲು ಬರುವಂತಿಲ್ಲ. ಹೀಗಿರುವಾಗ ಪೋರ್ಚುಗೀಸರನ್ನು ಓಡಿಸಲು ಭಾರತವು ಅನುಸರಿಸಿದ ದಾರಿ ಸರಿಯಾದುದು ಮಾತ್ರವಲ್ಲ ಶ್ಲಾಘನೀಯವಾದುದು.

ಆದರೆ ಇಷ್ಟು ವರ್ಷಗಳ ಕಾಲ ಸುಮ್ಮನಿದ್ದ ನೆಹರು ಇಂದು ಶಕ್ತಿ ಪ್ರಯೋಗಮಾಡಿದುದು ಅವರು ಅನುಸರಿಸಿಕೊಂಡು ಬಂದ ತತ್ವಕ್ಕೆ ಸರಿಬೀಳುವುದೇ? ಅಹಿಂಸಾ ತತ್ವದ ತಾಳ್ಮೆಗೂ ಮಿತಿಯಿದೆಯೇ? ೧೯೪೭ರಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗದಿದ್ದರೆ ಗಾಂಧೀಜಿಯವರು ತಮ್ಮ ಸತ್ಯಾಗ್ರಹದ ದಾರಿಯನ್ನು ಬಿಟ್ಟು ಸುಭಾಸ ಬೋಸರ ತರ್ಕವನ್ನು ಒಪ್ಪುತ್ತಿದ್ದರೇ? ಇವೇ ಮೊದಲಾದವರು ಪ್ರಶ್ನೆಗಳನ್ನು ಭಾರತವನ್ನು ವಿರೋಧಿಸಿದ ಕೇಳುತಿದ್ದಾರೆ. ಅಮೇರಿಕದ ಪ್ರಖ್ಯಾತ ಪ್ರತಿನಿಧಿ ಸ್ಟಿವನ್‌ಸನರು ಯುಕ್ತರಾಷ್ಟ್ರ ಸಂಘದಲ್ಲಿ, ಗೋವಾದ ಬಗ್ಗೆ ನಾವು ಕೈಕೊಂಡ ಧೋರಣೆಯನ್ನು ಕಟುವಾಗಿ ವಿರೋಧಿಸುತ್ತಾ, ಗಾಂಧಿಯವರ ಶಿಷ್ಯರಾದ ನೆಹರು ಹೀಗೆ ಬಲಾತ್ಕಾರಕ್ಕೆ ಮನಸ್ಸು ಮಾಡಬಾರದಿತ್ತೆಂದು ಉದ್ಗಾರ ತೆಗೆದರು. ಬ್ರಿಟನಿನ ಪತ್ರಿಕೆ ನಮ್ಮ ಪ್ರಧಾನಿಗಳ ಮೇಲೆ ವಿಪರೀತ ಉರಿಕಾರಿ ಕೊಂಡವು, ಹಲವ ಆರೋಪಗಳ ಸುರಿಮಳೆಗೈದುವು "ನೆಹರು, ಮೋಸಗಾರರ; ಅವರು ಇತರರಿಗೆ ಬೋಧಿಸುವುದೊಂದು ತಾವು ಅನುಸರಿಸುವುದು ಬೇರೊಂದು; ಇನ್ನು ಯಾವ ಮುಖವಿಟ್ಟು ಇವರು ಅಹಿಂಸಾ ತತ್ವದ ಕುರಿತು ಉಪದೇಶ ಮಾಡುವರು!" ಎನ್ನುವ ಕಟು ನುಡಿಗಳನ್ನು ಉಪಯೋಗಿಸಿರುವುವು ಈ ಮಾತುಗಳಲ್ಲಿ ಸತ್ಯಾಂಶವಿದೆಯೇ?

ಪಾಶ್ಚಾತ್ಯರ ಖಂಡನೆಗೆ ಹೆಚ್ಚಿನ ಮಹತ್ವವನ್ನು ಕೊಡುವ ಆಗತ್ಯವಿಲ್ಲ. ಅದೇಕೆಂದರೆ ಅವರಿಂದು ಬೊಬ್ಬಿಡುತ್ತಿರುವುದು, ನಿಜವಾಗಿ ನೋಡುವುದಿದ್ದರೆ, ಯಾವ ಒಂದು ತತ್ವಕ್ಕೆ ಭಂಗ ಬಂತೆನ್ನುವುದರಿಂದಲ್ಲ. ಬದಲು ತಮ್ಮ ಮಿತ್ರರಾದ ಪೋರ್ಚುಗೀಸರಿಗೆ ಸೋಲೊದಗಿತೆನ್ನುವುದೇ ಅವರಿಗೆ ಅತೀವ ಚಿಂತೆಯನ್ನುಂಟುಮಾಡಿದೆ. ಅಲ್ಲದೆ ನೆಹರೂರವರ ಮೇಲಿನ ಸೇಡು ತೀರಿಸಿಕೊಳ್ಳಲು ಸಿಕ್ಕಿದ ಸಂದರ್ಭವನ್ನು ಬಿಡಬಾರದೆಂದೂ ಅವರಿಗೆ ಅನ್ನಿಸಿರಬೇಕು. ಅಮೇರಿಕ, ಬ್ರಿಟನ್ ಮೊದಲಾದ ಪಾಶ್ಚಾತ್ಯ ದೇಶಗಳನ್ನು ಒಂದಲ್ಲ ಒಂದು ಸಂದರ್ಭದಲ್ಲಿ ನೆಹರೂರವರು ತೀವ್ರವಾಗಿ ಟೀಕಿಸಿದ್ದಾರೆ. ಅನ್ಯಾಯವಾಗಿ ಅಮೇರಿಕದವರು ಕ್ಯೂಬದ ಮೇಲೆ ಧಾಳಿ ನಡೆಸಿದಾಗ ಅವರು ತುಂಬಾ ರೇಗಿದ್ದರು. ಸುಯೇಜ್ ಪ್ರಕರಣದ ನಂತರ ಇತ್ತೀಚೆಗೆ ಬ್ರಿಟಿಷರು ಕಟಾಂಗಕ್ಕೆ ನೀಡುತ್ತಿರುವ ಪ್ರೋತ್ಸಾಹವನ್ನು ನೋಡಿ ನೆಹರೂರವರು ಸುಮ್ಮನುಳಿದಿರಲಿಲ್ಲ. ಭಾರತವು ಬಡದೇಶವಾಗಿದ್ದು ತಮ್ಮ ಆರ್ಥಿಕ ಸಹಾಯವನ್ನು ಹೊಂದಿಕೊಂಡಿದ್ದೂ ತಮ್ಮನ್ನು ಖಂಡಿಸಲು ಹೆದರದಿರುವುದು ಅವರಿಗೆ ಸಹಿಸಲಸಾಧ್ಯವಾಗಿರಬೇಕು. ಇಲ್ಲವಾದರೆ ನೆಹರೂರವರ ಕೀರ್ತಿಗೆ ಕಳಂಕವನ್ನು ತರುವ ಪ್ರಯತ್ನವನ್ನು ಅವರು ಮಾಡಲೆತ್ನಿಸುತಿದ್ದಿಲ್ಲ.

ಆದರೆ ಗೋವಾದ ವಿಮೋಚನೆಯ ಬಗ್ಗೆ ನಾವು ಅನುಸರಿಸಿದ ಧೋರಣೆಯನ್ನು ವಿರೋಧಿಸುತ್ತಿರುವುದು ಬರೇ ಪಾಶ್ಚಾತ್ಯರು ಮಾತ್ರವಲ್ಲ ನಮ್ಮ ದೇಶದ ಹಿರಿಯ ಮತ್ತು ಹೆಸರು ಪಡೆದ ನಾಯಕರಾದ ರಾಜಾಜಿಯವರೇಕೆ ತಮ್ಮ ಸಮ್ಮತಿ ನೀಡಲಿಲ್ಲ? ಗೋವಾದಲ್ಲಿ ನಾವು ಶಕ್ತಿ ಪ್ರಯೋಗ ಮಾಡಿರುವುದರಿಂದ ನಮ್ಮ ದೇಶದ ಗೌರವ ಮತ್ತು ಕೀರ್ತಿಗೆ ಕಳಂಕ ಬಂತೆಂದೂ, ಗಾಂಧೀಜಿಯವರು ಇದನ್ನು ಎಷ್ಟುಕ್ಕೂ ಒಪ್ಪುತ್ತಿರಲಿಲ್ಲವೆಂದೂ ಅವರು ಹೇಳಿಕೆಯಿತ್ತಿದ್ದಾರೆ. ರಾಜಾಜಿಯವರೀಗ ಸ್ವತಂತ್ರ ಪಕ್ಷದವರಾದ್ದರಿಂದ ಹೀಗೆ ಹೇಳುತಿದ್ದಾರೆಂದರೆ, ಅವರು ನಮ್ಮ ದೇಶಕ್ಕೆ ಸಲ್ಲಿಸಿದ ಸೇವೆ ಮತ್ತು ಗಾಂಧೀಜೀಯವರ ಮೇಲೆ ಅವರಿಗಿದ್ದ ಅಭಿಮಾನ, ಇವುಗಳನ್ನು ಅಲ್ಲಗಳೆದಂತೆ. ಅಲ್ಲದೆ, ಮಹಾತ್ಮರ ಅನುಯಾಯಿಗಳಲ್ಲೊಬ್ಬರಾದ ಮತ್ತು ನೆಹರೂ ಸರಕಾರದಲ್ಲಿ ಪ್ರಮುಖ ಮಂತ್ರಿಯಾಗಿರುವ ಮುರಾರ್ಜಿ ದೇಸಾಯಿಯವರೇ ತಮ್ಮ ಸೈನ್ಯವನ್ನು ಗೋವಾಕ್ಕೆ ಕಳುಹಿಸಲು ಒಪ್ಪಲಿಲ್ಲವೆಂಬುದು ತಿಳಿದ ವಿಷಯ. ಇಷ್ಟು ವರ್ಷಗಳ ಕಾಲ ಅವಲಂಬಿಸಿಕೊಂಡು ಬಂದ ಅಹಿಂಸಾ ತತ್ವಕ್ಕೆ ವಿರೋಧವಾಗುತ್ತದೆನ್ನುವದೇ ಅವರ ಅಭಿಪ್ರಾಯವಾಗುತ್ತದಲ್ಲದೆ ಮತ್ತಾವ ಕಾರಣವೂ ಕಂಡು ಬರುವುದಿಲ್ಲ.

ಬರೇ ಒಂದು ತತ್ವದ ದೃಷ್ಟಿಯಿಂದ ನೋಡುವುದಾದರೆ ರಾಜಾಜಿ ಮತ್ತು ಮುರಾರ್ಜಿಯವರು ಹೇಳುವ ಮಾತು ಸತ್ಯ. ಆದರೆ ಅಂತಹ ತತ್ವ ಬೋಧಕರಿಗೆ ಇಂದಿನ ಜಾಗತಿಕ ರಂಗದಲ್ಲಿ ರಾಜಕೀಯ ಬಿಕ್ಕಟ್ಟುಗಳ ಅರಿವಿಲ್ಲವೆನ್ನಬೇಕು. ಅದೇಕೆಂದರೆ ಒಂದು ದೇಶದ ನಾಯಕನು ಬರೇ ಯೋಗಿಯಾಗಿದ್ದುಕೊಂಡು ನೀತಿ ಬೋಧೆ ಮಾಡಲು ಸಾಧ್ಯವಿಲ್ಲ; ತನ್ನ ದೇಶದ ಜನರ ಹಿತ ಕಷ್ಟಗಳ ಜವಾಬ್ದಾರಿಯನ್ನು ಹೊರಲೂ ಸಿದ್ಧನಿರಬೇಕು. ಇಂದಿನ ಜಗತ್ತಿನಲ್ಲಿ ಸಲಝಾರರಂತಹ ನಾಯಕರು ಬಹು ಮಂದಿ ಇರುವರೆಂಬುದನ್ನು ಮರೆಯಲಾಗದು. ಅಂತಹರಿಗೆ ಅಹಿಂಸಾ ತತ್ವದ ಉಪದೇಶ ಮಾಡಿದರೆ ಮೂರ್ಖರಿಗೆ ನೀತಿ ವಚನ ನುಡಿದಷ್ಟೇ ಪ್ರತಿಫಲವೆಂಬುದು ಕಳೆದ ೧೪ ವರ್ಷಗಳಿಂದ ನಮಗೆ ಅನುಭವವಾಗಿದೆ. ಅಹಿಂಸಾ ತತ್ವವೆಂದು ನೆಹರೂರವರು ಗೋವಾದ ವಿಮೋಚನೆಗೆ ಕೈಮಾಡದಿದ್ದರೆ ನಮ್ಮವರೇ ಅವರನ್ನು ಕರ್ತವ್ಯ ಹೀನರೆಂದು ಕರೆಯುತಿದ್ದರು.

ಇಂದು ನೆಹರೂರವರನ್ನು ಖಂಡಿಸುವವರು ಜಾಗತಿಕ ರಂಗದಲ್ಲಿ ಅವರ ಪಾತ್ರವನ್ನು ತಪ್ಪು ತಿಳಿದುಕೊಂಡಂತಿದೆ. ವಿನಾಕಾರಣವಾಗಿ ಅಥವಾ ಮದೋನ್ಮತ್ತವಾಗಿ ಒಂದು ರಾಷ್ಟ್ರವು ಇನ್ನೊಂದು ದೇಶದ ಮೇಲೆ ಯುದ್ಧಮಾಡಬಾರದೆಂದು ಅವರು ಉಪದೇಶಿಸಿದಮಾತ್ರಕ್ಕೆ ತನ್ನ ಜನರ ರಕ್ಷಣೆಗಾಗಿ ಸೈನ್ಯವನ್ನು ಉಪಯೋಗಿಸಬಾರದೆಂದು ಅವರು ಹೇಳಿದಂತಾಗಲಿಲ್ಲ. ಲೋಕಶಾಂತಿಗಾಗಿ ಅವರು ಮಾಡುವ ಪ್ರಯತ್ನ ಗೋವಾ ವಿಮೋಚನೆಗೆ ಸೇನೆ ಕಳುಹಿಸಿದುದರಿಂದ ಕಡಿಮೆಯಾಗುವುದಿಲ್ಲ ಬದಲು, ಎಲ್ಲಿ ತನ್ನ ಜನರ ಸಂರಕ್ಷಣೆಗೆ ಅಥವಾ ಪರಕೀಯರ ಅತ್ಯಾಚಾರದಿಂದ ವಿಮೋಚನೆಗೊಳಿಸಲಿಕ್ಕೆ ಶಕ್ತಿ ಪ್ರಯೋಗವಲ್ಲದೆ ಬೇರಾವ ದಾರಿಯುಳಿವುದಿಲ್ಲವೋ ಅಲ್ಲಿ ಶಸ್ತ್ರ ಕಾರ್ಯ ಕೈಕೊಳ್ಳಲು ಅವರು ಹಿಂಜರಿಯುವುದಿಲ್ಲ. ಇದು ಸಾಮ, ದಾನ ಭೇಧ ಮತ್ತು ದಂಡವೆನ್ನುವ ಹಿಂದೂ ಧರ್ಮದ ಚತುರೋಪಾಯಕ್ಕೆ ಅನ್ವಯಿಸಿರುವ ರಾಜ ನೀತಿ ಇದನ್ನು ಗಾಂಧೀಜಿಯವರು ಒಪ್ಪುತಿದ್ದರು. ಕಾಶ್ಮೀರದ ಮಹಾರಾಜರ ಕರೆಗೆ ಅವರು ಒಪ್ಪಿದುದನ್ನು ಇಲ್ಲಿ ಸ್ಮರಿಸಬಹುದು.

“ನಮ್ಮ ದೇಶವು ಅಹಿಂಸಾ ತತ್ವವನ್ನೇ ಮುಖ್ಯವಾಗಿ ಅನುಸರಿಸುತ್ತದೆ; ಆದರೆ ಅಗತ್ಯಪಟ್ಟಾಗ ಶಕ್ತಿಯನ್ನು ಉಪಯೋಗಿಸಲು ಹಿಂಜರಿಯುವುದಿಲ್ಲ ಅದಕ್ಕಾಗಿಯೇ ನಾವು ಸೈನ್ಯವನ್ನು ಇಟ್ಟಿರುವುದು”. ಹೀಗೆಂದು ಕೃಷ್ಣ ಮೆನನ್ನರು ನಮ್ಮ ದೇಶದ ಧೋರಣೆಯನ್ನು ಸ್ಪಷ್ಟಪಡಿಸಿದ್ದಾರೆ. ಚೀನ ಮತ್ತು ಪಾಕಿಸ್ತಾನಗಳೊಡನೆ ವ್ಯವಹರಿಸ ಬೇಕಾದರೆ ಇದಕ್ಕಿಂತ ಹೆಚ್ಚಿನ ನ್ಯಾಯವಾದ ಮತ್ತು ಕಾಲೋಚಿತವಾದ ಧೋರಣೆ ಬೇರೊಂದಿಲ್ಲವೆನ್ನಬಹುದು.

— —

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನೆರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ
ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೨೪-೫-'೬೨	೩೭

ನಾಗರಿಕ ಪ್ರಶಾಸನ

ಇದೇ ಜೂನ್ ೭ನೆ ದಿನಾಂಕದಂದು, ಕಳೆದ ಆರು ತಿಂಗಳುಗಳಿಂದ ಗೋವೆ, ದಮನ ಮತ್ತು ದೀವುಗಳಲ್ಲಿ ಇರುವ ದಂಡಿನ ಆಡಳಿತೆಯು ಕೊನೆಗೊಂಡು, ಅಲ್ಲಿ ನಾಗರಿಕ ಪ್ರಶಾಸನವು ಪ್ರಾರಂಭವಾಗುವುದೆಂದೂ ಈಗ, ಕೇಂದ್ರದ ಕಾಮಗಾರಿ, ನಿವೇಶನ ಮತ್ತು ಪೂರೈಕೆ ಶಾಖೆಯ ಕಾರ್ಯದರ್ಶಿಯವರಾಗಿರುವ ಶ್ರೀ ಟಿ. ಶಿವಶಂಕರರು ಆ ದಿನ ಲೆಫ್ಟಿನೆಂಟ್ ಗವರ್ನರರಾಗಿ ಅಧಿಕಾರ ಸ್ವೀಕರಿಸುವರೆಂದೂ ತಿಳಿದು ಬಂದಿದೆ. ಇದಕ್ಕೆ ಪೂರ್ವಭಾವಿಯಾಗಿ, ಇದೇ ತಾ. ೨೬ರಂದು ವಿದೇಶ ಖಾತೆಯ ಶ್ರೀ ಬಿ. ಕೆ. ಸನ್ಯಾಲರು ಅಲ್ಲಿನ ಮುಖ್ಯ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸುವರೆಂದೂ ಗೊತ್ತಾಗಿದೆ. ಈ ಮೊದಲೇ ಯೋಜಿಸಿದ್ದಂತೆ ಆವಶ್ಯಕತೆಗಿಂತ ಹೆಚ್ಚು ದಿನ ಈ ವಿಮೋಚಿತ ಪ್ರದೇಶದಲ್ಲಿ ದಂಡಿನಾಡಳಿತೆಯನ್ನು ಮುಂದುವರಿಸುವ ಇಚ್ಛೆ ಕೇಂದ್ರ ಸರಕಾರಕ್ಕಿಲ್ಲ. ಪೋರ್ಚುಗೀಸ ಸ್ಥಾನಬದ್ಧರ ಪ್ರಶ್ನೆಯು ಈಗ ಇತ್ಯರ್ಥಗೊಂಡಿರುವುದಲ್ಲದೇ ಗೋವೆಯೊಳಗಿನ ವಿಕ್ಷುಬ್ಧ ಪರಿಸ್ಥಿತಿಯು ನಿಧಾನವಾಗಿ ಸಮಾಧಾನಗೊಳ್ಳುತ್ತ ಬಂದಿರುವುದರಿಂದ ಕೇಂದ್ರ ಸರಕಾರವು ನಿರ್ಧಾರಕ್ಕೆ ಬಂದಿದೆ.

ವಸಾಹತುಶಾಯಿಂದ ದಂಡಿನಾಡಳಿತೆಗೆ ಒಳಪಟ್ಟ ಗೋವೆಯಲ್ಲಿ ಇಷ್ಟೊಂದು ಶೀಘ್ರವಾಗಿ ಪೌರಪ್ರಶಾಸನವು ಸ್ಥಾಪಿತವಾದುದು ನಿಜವಾಗಿಯೂ ಸ್ವಾಗತಾರ್ಹ; ಮಾತ್ರವಲ್ಲದೆ ಈ ಕಾರ್ಯವು ಸಾಧಿತವಾಗುವಂತೆ ನೋಡಿಕೊಂಡ ಗೋಮಾಂತಕರ ಮನೋವೃತ್ತಿಯೂ ಪ್ರಶಂಸಾರ್ಹ. ನಾಗರಿಕಾಧಿಕಾರಕ್ಕೆ ಬಂದ ಬಳಿಕ, ಗೋವೆಯ ನಾಗರಿಕರು ತಮ್ಮ ಇತರ ಸಹೋದರರಂತೆಯೇ ಅಭಿವೃದ್ಧಿಯ ದಾರಿಯಲ್ಲಿ ಮುಂದುವರಿಯುವರೆಂದು ನಂಬಬಹುದು. ಗೋವೆಯು ಸದ್ಯಕ್ಕೆ ಕೇಂದ್ರ ಪ್ರಶಾಸಿತ ಪ್ರದೇಶವಾಗಿರುವುದಾದರೂ ಅದರ ಭವಿತವ್ಯದ ಬಗ್ಗೆ ನೆರೆಯ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳು ಈಗಾಗಲೇ ಕಾಂಬ ವಿಚಾರ ಮಾಡತೊಡಗಿವೆ. ಮಹಾರಾಷ್ಟ್ರೀಯರು ಗೋವೆಯ ಒಳಗೂ ಹೊರಗೂ ತಮ್ಮ ಪ್ರಭಾವವನ್ನು ಬೀರುವ ಪ್ರಯತ್ನವನ್ನು ನಡೆಸಿದ್ದು, ಈ ಸಂಬಂಧದಲ್ಲಿ ಕರ್ನಾಟಕ ಸರಕಾರವು ಕೇಂದ್ರ ಸರಕಾರಕ್ಕೆ ದೂರನ್ನಿತ್ತಿದೆ. ವಿಮೋಚನಾನಂತರದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳಿಂದ ಕೆಲವೊಂದು ಉನ್ನತಾಧಿಕಾರಿಗಳನ್ನು ಗೋವೆಯಲ್ಲಿ ನೇಮಿಸಲಾಗಿದ್ದರೂ ಈಗ ಕನ್ನಡಿಗ ಅಧಿಕಾರಿಗಳಲ್ಲಿ ಹೆಚ್ಚಿನವರನ್ನು ಮರಳಿ ಕಳುಹಿಸಲಾಗಿದ್ದೆ, ಆದರೆ, ಮಹಾರಾಷ್ಟ್ರೀಯರನ್ನು ಬಹುಸಂಖ್ಯೆಯಲ್ಲಿ ಉಳಿಸಿಕೊಳ್ಳಲಾಗಿದೆ ಎಂಬ ದೂರುಕೂಡ ಇವುಗಳಲ್ಲಿ ಒಂದು. ಗೋವೆಯು ಕೇಂದ್ರ ಪ್ರಶಾಸನದಡಿಯಲ್ಲೇ ಇನ್ನೂ ಕೆಲಕಾಲ ಉಳಿಯುವುದು ಅತ್ಯವಶ್ಯವಿರುವುದರಿಂದ ನೆರೆಯ ರಾಜ್ಯಗಳು ಈ ಸಂಬಧದಲ್ಲಿ ತಮ್ಮ ತಮ್ಮ ಪ್ರಭಾವವನ್ನು ಬೀರಲು ಉದ್ಯುಕ್ತವಾಗುವುದು ಉಚಿತವೆನ್ನುವಂತಿಲ್ಲ. ಕರ್ನಾಟಕದ ದೂರು ವಾಸ್ತವಿಕವಾದುದರಿಂದ, ಕೇಂದ್ರ ಸರಕಾರವು ಒದಗಬಹುದಾದ ವಿಷಮ ಸನ್ನಿವೇಶವನ್ನು ದೂರೀಕರಿಸುವುದಕ್ಕೆ ಮಹಾರಾಷ್ಟ್ರ ಕರ್ನಾಟಕೇತರ ರಾಜ್ಯಗಳಿಂದ ಆವಶ್ಯಕ ಅಧಿಕಾರಿಗಳನ್ನು ಆಯ್ದುಕೊಳ್ಳುವುದು ಅಸಮಂಜಸವೆನ್ನುವಂತಿಲ್ಲ. ಈ ಸಂಬಂಧದಲ್ಲಿ ಪ್ರಧಾನಿ ನೆಹರು ನೀಡಿದ ಭರವಸೆ ಮತ್ತು ಉಪದೇಶಗಳು ಈ ಎರಡೂ ರಾಜ್ಯಗಳು ಪ್ರಚಾರವನ್ನು ನಿಲ್ಲಿಸಿಬಿಡುವುದಕ್ಕೆ ಸಹಾಯಕವಾಗಿವೆಯೆನ್ನಬಹುದು.

ವಿಮೋಚನೆಯ ದೆಸೆಯಿಂದಾಗಿ ಗೋವೆಯಲ್ಲಿ ಬಿಡಿಸಬೇಕಾದ ಸಮಸ್ಯೆಗಳು ಹಲವಿವೆ. ಪೋರ್ಚುಗೀಸ ಆಳಿಕೆಯ ಅವಶೇಷಗಳನ್ನೆಲ್ಲಾ ಕಿತ್ತೆಸೆದು ಅಲ್ಲಿ ಭಾರತೀಯ ಸಾಂವಿಧಾನಿಕ ಆಡಳಿತೆಯು ಸ್ಥಾಪಿತವಾಗಬೇಕಾದರೆ, ಇನ್ನೂ ಬಹುಕಾಲ ಬೇಕಾಗುವುದು. ಇದು ಆಗದವರೆಗೆ ಗೋಮಾಂತಕರ ಹಿತದೃಷ್ಟಿಯಿಂದ ಮಾತ್ರವಲ್ಲ, ಇಡಿಯ ದೇಶದ ಒಳಿತಿಗಾಗಿ ಅದು ಮಹಾರಾಷ್ಟ್ರದಲ್ಲಿ ಸೇರಬೇಕೇ ಇಲ್ಲ, ಕರ್ನಾಟಕದಲ್ಲಿ ವಿಲೀನಗೊಳ್ಳಬೇಕೇ ಎಂಬ ಪ್ರಶ್ನೆ ಏಳಲೇ ಬಾರದು. ಪ್ರಧಾನಿ ನೆಹರೂರವರು ಗೋವಾ ನಾಗರಿಕರಿಗಿತ್ತ ಭರವಸೆ ಮತ್ತು ಲೋಕಸಭೆಯಲ್ಲಿ ಮಾಡಿದ ಭಾಷಣಗಳಾದರೂ ಇದೇ ಮಾತನ್ನು ಪುಷ್ಟಿಕರಿಸುತ್ತವೆ. ಪ್ರತ್ಯೇಕವಾದ ಗೋವಾ ರಾಜ್ಯವು ರಚಿತವಾಗುವುದು ಎಂದಿಗೂ ಸಾಧ್ಯವಿಲ್ಲ; ಏಕೆಂದರೆ, ಅದು ಅತೀವ ಕಿರಿದಾದುದು ಎಂಬವರ ಮಾತು ಅಕ್ಷರಶಃ ಸತ್ಯ. ಹಾಗಿದ್ದರೂ ಗೋವೆಯ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳುವುದು ಮತ್ತು ಅಲ್ಲಿನ ಹೆಚ್ಚಿನ ನಾಗರಿಕರ ಭಾಷೆಯಾದ ಕೊಂಕಣಿಯನ್ನು ಸಮ್ಮಾನಿಸುವುದು—ಈ ಬಗ್ಗೆ ಅವರು ಆಶ್ವಾಸನೆ ನೀಡಿದ್ದಾರೆ. ಈಗಾಗಲೇ ಗೋವೆಯಲ್ಲಿ ಮತದಾರರ ಪಟ್ಟಿಯು ತಯಾರಾಗುತ್ತಿದೆ. ಈ ವರ್ಷಾಂತ್ಯದೊಳಗೆ ಅಲ್ಲಿ ಪಂಚಾಯತು, ನಗರ ಸಭೆ ಮೊದಲಾದವುಗಳಿಗೆ ಚುನಾವಣೆಗಳು ನಡೆಯುವ ನಿರೀಕ್ಷೆಯಿದೆ. ಗೋಮಾಂತಕರು ಭಾರತೀಯ ಶಾಸನದಡಿಯಲ್ಲಿ ಸಾಮಾನ್ಯಮಟ್ಟವನ್ನು ಮುಟ್ಟುವಂತೆ ನೋಡಿಕೊಳ್ಳಬೇಕು. ಈ ನಡುವೆ ನೆರೆಯ ರಾಜ್ಯಗಳು ಅದಕ್ಕಾಗಿ ಹೋರಾಡುವುದು ನ್ಯಾಯವೆಂದು ಹೇಳಲಾಗದು. ಅಲ್ಲದೆ ಗೋವೆಯ ಭವಿಷ್ಯವನ್ನು ಪಾರ್ಲಿಮೆಂಟು ನಿರ್ಧರಿಸಬೇಕು; ಈ ವಿಷಯದಲ್ಲಿ ಗೋಮಾಂತಕರ ಅಭಿಪ್ರಾಯವೇನೆಂಬುದನ್ನು ಮೊತ್ತಮೊದಲು ತಿಳಿದುಕೊಳ್ಳಬೇಕು; ಇಡಿಯ ದೇಶದ ಆಸಕ್ತಿಯನ್ನೂ ಅನುಲಕ್ಷಿಸಬೇಕು. ಇದಕ್ಕೆ ವಿಪರೀತವಾಗಿ ಆ ಬಗ್ಗೆ ಹೊಡೆದಾಡತೊಡಗಿದರೆ, ಅದರಿಂದ ವಾತಾವರಣವು ಕಲಂಕಿತವಾಗುವುದು. ಭಾಷೆಯ ದೃಷ್ಟಿಯಿಂದ ಹಾಗೂ ವ್ಯವಹಾರದ ದೃಷ್ಟಿಯಿಂದ ಮರಾಠಿಗಳು ಅದು ತಮ್ಮದೆಂದೇ ವಾದಿಸಬಹುದು; ಅದರ ಇಂತಹ ವರ್ತನೆಯಿಂದ ಕರ್ನಾಟಕ ಕುಪಿತವಾಗಿ, ಬಂದರವಿರುವ ಗೋವೆ ತಮಗೆ ಬೇಕೆಂದೂ ವಾದಿಸಬಹುದು. ಉಭಯ ರಾಜ್ಯಗಳ ನಡುವಣ ಈ ವಾದ ವಿವಾದದಿಂದ ಗೋಮಾಂತಕರ ಹಿತಸಾಧನೆಯಾಗುವುದೂ ಇಲ್ಲ; ಪರಿಸ್ಥಿತಿ ತಿಳಿಗೊಳ್ಳುವುದೂ ಇಲ್ಲ. ಪ್ರಶ್ನೆಯನ್ನು ಜಗ್ಗಿ ಜಗ್ಗಿ ಮತ್ತಷ್ಟು ಜಟಿಲಗೊಳ್ಳುವಂತೆ ಯಾರೂ ಮಾಡಬಾರದು. ಸ್ವಲ್ಪ ಕಾಲ ಕಾದು ನೋಡಿ, ಗೋಮಾಂತಕರ ಆಶಯವೇನೆಂಬುದನ್ನು ಪರಿಪೂರ್ಣವಾಗಿ ಕಂಡುಕೊಂಡು, ಮತ್ತೆ ಮುಂದಿನದನ್ನು ಯೋಜಿಸುವುದು ಅಪೇಕ್ಷಣೀಯ.

ಶಕ್ತಿಯ ಅಭಾವ

ಒಂದು ದೇಶದಲ್ಲಿ ಕೈಗೊಳ್ಳಲಾಗುತ್ತಿರುವ ಔದ್ಯಮಿಕ ಯೋಜನೆಗಳು ಹೆಚ್ಚಾದಂತೆ ಅದು ಪ್ರಗತಿ ಹೊಂದುತ್ತ ಹೋಗುವುದು. ದೊಡ್ಡ ದೊಡ್ಡ ಉದ್ದಿಮೆಗಳಿಗೆ ಶಕ್ತಿಯ ಪೂರೈಕೆಯಾಗಬೇಕಾದರೆ, ವಿದ್ಯುದ್ಯೋಜನೆಗಳು ಅತ್ಯವಶ್ಯವೆಂಬುದರಿಂದಲೇ ನಮ್ಮ ದೇಶದ ಯೋಜನೆಗಳಲ್ಲಿಯೂ ಇವುಗಳಿಗೆ ಗಣನೀಯ ಸ್ಥಾನವನ್ನು ಕೊಡಲಾಗಿದೆ. ನಮ್ಮ ಮೂರನೆಯ ಯೋಜನಾಂತ್ಯದಲ್ಲಿ ಮೊದಲಿಗೆ ವಿದ್ಯುತ್ತಿನ ಬೇಡಿಕೆಯೆಲ್ಲವನ್ನೂ ಪೂರೈಸುವುದು ಸಾಧ್ಯವೆಂದು ಊಹಿಸಲಾಗಿದ್ದರೂ ಈಗ, ಬಿಹಾರ, ಪಶ್ಚಿಮ ಬಂಗಾಳ, ಆಂಧ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ವಿದ್ಯುತ್ತಿನ ಕೊರತೆಯು ಉಳಿಯುವುದು ಎಂದು ತಿಳಿಯುತ್ತದೆ. ಇದಕ್ಕಾಗಿ ಈ ರಾಜ್ಯಗಳಲ್ಲಿ ಹೊಸ ಹೊಸ ಯೋಜನೆಗಳನ್ನು ಕೈಗೊಳ್ಳುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸುವ ಅಗತ್ಯವಿದೆ. ಆಂಧ್ರ ಸರಕಾರವು ಈಗಾಗಲೇ ಪ್ರಯತ್ನ ನಡೆಸುತ್ತಿದೆ; ಪ, ಬಂಗಾಳ, ಬಿಹಾರಗಳು ಕೇಂದ್ರದ ಮೇಲೆ ಪ್ರಭಾವ ಬೀರಬಲ್ಲುವು. ನಮ್ಮ ರಾಜ್ಯದ ಶರಾವತಿ ಯೋಜನೆಯು ತೃತೀಯ ಯೋಜನೆಯಲ್ಲಿ ಕೂಡಿಕೊಳ್ಳಬೇಕಾದರೇನೇ ಆಕಾಶ ಪಾತಾಳಗಳನ್ನು ಒಂದು ಮಾಡಬೇಕಾಯಿತು. ನಮ್ಮ ರಾಜ್ಯವನ್ನು ಕೇಂದ್ರದಲ್ಲಿ ಪ್ರತಿನಿಧಿಸುವ ಮಹನೀಯರು ಈ ವಿಷಯದತ್ತ ತೀವ್ರ ಗಮನಹರಿಸಬೇಕು. ನಮ್ಮಲ್ಲಿ ನೈಸರ್ಗಿಕವಾದ ಜಲಸಂಪತ್ತು ಇದೆ; ಇದರ ಸದುಪಯೋಗವನ್ನು ನಾವು ಮಾಡಿಕೊಳ್ಳಬೇಕು. ಸಾರ್ವತ್ರಿಕವಾಗಿ ವಿದ್ಯುಚ್ಛಕ್ತಿಯ ಬೇಡಿಕೆಯು ದಿನದಿಂದ ದಿನಕ್ಕೆ ಹೆಚ್ಚುತ್ತ ಬರುವುದರಿಂದ, ಇದನ್ನು ಅಲಕ್ಷಿಸಿದರೆ, ದೇಶದ ರಾಜ್ಯದ ಪ್ರಗತಿಯು ಕುಂಠಿತವಾಗುವುದು. ವಿದ್ಯುತ್ಕೇಂದ್ರಗಳಿಗೆ ಬೇಕಾದ ಭಾರಿಯ ಯಂತ್ರಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದು ಅವಶ್ಯವಿರುವುದಾದರೂ, ಇದಕ್ಕೆ ವಿದೇಶ ವಿನಿಮಯದ ಕೊರತೆಯೆದುರು ಬರುವುದಾದರೂ, ನಮ್ಮ ಶಕ್ತಿಸರ್ವಸ್ವವನ್ನೂ ಕೇಂದ್ರೀಕರಿಸಿ, ಹೊಸ ಹೊಸ ವಿದ್ಯುತ್ಕೇಂದ್ರಗಳನ್ನು ತೆರೆದು ಉದ್ದಿಮೆಗಳಿಗೆ, ಬೇಸಾಯಕ್ಕೆ ಶಕ್ತಿಯ ಪೂರೈಕೆಯಾಗುವಂತೆ ನೋಡಿಕೊಳ್ಳುವುದರಲ್ಲೇ ನಮ್ಮ ಹಿತವಿದೆ. ನಮ್ಮ ರಾಜ್ಯದ ಬಗ್ಗೆ ನಮ್ಮ ಪ್ರತಿನಿಧಿಗಳು ಕಳಕಳಿವಹಿಸಿ ಹೋರಾಡುವುದು ಅತ್ಯಗತ್ಯವೆನ್ನಿಸುತ್ತದೆ.

ಜಗತ್ಪರ್ಯಟನ

ರಾಧಾಕೃಷ್ಣನ್

ಮೊಗಲ ಬಾದಶಹರನ್ನು ಪ್ರಜೆಗಳು ನೇರವಾಗಿ ಕಂಡು ತಮ್ಮ ಸುಖದುಃಖಗಳನ್ನು ತೋಡಿಕೊಳ್ಳ ಬಹುದಿತ್ತು. ಈ ಸಂಗತಿಯು ಅವರಿಗೊಂದು ಅಭಿಮಾನವೆನ್ನಿಸಿತ್ತು. ರಾಷ್ಟ್ರಪತಿ ರಾಧಾಕೃಷ್ಣನ್ನರೂ ವಾರದ ಎರಡು ದಿನ ಇದೇ ರೀತಿಯಲ್ಲಿ ಪ್ರಜೆಗಳನ್ನು ಯಾವ ಪೂರ್ವಾನುಮತಿಯೂ ಇಲ್ಲದೆ ಭೇಟಿ ಮಾಡಲು ನಿರ್ಧರಿಸಿದ್ದಾರೆ. ಇದರಿಂದಾಗಿ ಯಾರು ಬೇಕಾದರೂ ಆ ದಿನಗಳಲ್ಲಿ ಅವರನ್ನು ಕಂಡು ಮಾತಾಡಬಹುದು. ಇಂತಹ ಪ್ರಥಮ ಪ್ರಸಂಗದಲ್ಲಿಯೇ ಸುಮಾರು ಹಿಂಂಕ್ಕೂ ಮಿಕ್ಕಿದ ಪ್ರಜೆಗಳು ಅವರನ್ನು ಕಂಡು ತಮ್ಮ ತಮ್ಮ ಹಾಲಹವಾಲೆಗಳನ್ನು ತೋಡಿಕೊಂಡರು.

ಜವಾಹರಲಾಲ

ಅಹೋರಾತ್ರಿಯೆನ್ನದೆ ದೇಶದ, ವಿಶ್ವದ ಹಿತಕ್ಕಾಗಿ ದುಡಿಯುತ್ತಿರುವ ನೆಹರುರವರ ಆರೋಗ್ಯವಿನ್ನೂ ತೃಪ್ತಿಕರವೆನಿಸಿಲ್ಲ. ಡಾಕ್ಟರರು ಪರಿಶೀಲನೆ ನಡೆಸಿ ಅವರು ನೀರೋಗಿಗಳೆಂದು ಹೇಳಿದರೂ ಅವರ ಅಸ್ವಾಸ್ಥ್ಯ ಸಂಪೂರ್ಣವಾಗಿ ಗುಣಮುಖವಾಗಿಲ್ಲ. ಜಗತ್ತಿನ ಶ್ರೇಷ್ಠ ರಾಜಕಾರಣಿಗಳೆಂದು ಹೆಸರಾದ ಪ್ರಧಾನಿ ನೆಹರು ಒಂದು ಶಕ್ತಿ; ವ್ಯಕ್ತಿಯಲ್ಲ. ಈ ಶಕ್ತಿಯೀಗ ಕಾಶ್ಮೀರದ ಕೊಳ್ಳದಲ್ಲಿ ಹತ್ತು ದಿನಗಳ ವಿಶ್ರಾಂತಿ ಪಡೆಯುತ್ತಿದೆ. ೭೦ರ ಗಡಿ ಮುಟ್ಟಿ ೨೪ ತಾಸೂ ದುಡಿಯುತ್ತಿರುವ ನೆಹರುಗಳ ಮಾರ್ಗದರ್ಶನ ಭಾರತೀಯರಿಗೆ ಇನ್ನೂ ಬಹು ಕಾಲ ಬೇಕಾಗಿದೆ.

ಕೃಷ್ಣ ಮೆನನ್

ಕಮ್ಯುನಿಸ್ಟ್ ಪಕ್ಷಪಾತಿಯೆಂಬ ಆರೋಪಕ್ಕೆ ಗುರಿಯಾದ ಭಾರತದ ಸಂರಕ್ಷಣಾ ಮಂತ್ರಿ ಕೃಷ್ಣ ಮೆನನ್ ಈಗೀಗ ತಾನು ಕಮ್ಯುನಿಸ್ಟ್ ವಿರೋಧಿಯೆಂಬುವನ್ನು ಸ್ಪಷ್ಟವಾಗಿ ತೋರಿಸ ಹತ್ತಿದ್ದಾರೆ. ಚೀನ—ಭಾರತಗಳ, ಪಾಕಿಸ್ತಾನ-ಭಾರತಗಳ ವಿರಸವು ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿರುವಾಗ, ಅವನ್ನು ಆಕ್ರಮಕ ರಾಷ್ಟ್ರಗಳೆಂದು ಹೆಸರಿಸುವುದನ್ನು ಅವರು ಮರೆತಿಲ್ಲ. ಈ ರಾಷ್ಟ್ರಗಳು ಆಕ್ರಮಣವನ್ನು ಹಿಂದೆಗೆಯದಿದ್ದರೆ, ಅವನ್ನು ಓಡಿಸಲಾಗುವುದು ಎಂಬ ಗುಡುಗಿನ ಧ್ವನಿ ಈಗೀಗ ಎಲ್ಲೆಲ್ಲಿಯೂ ಪ್ರತಿಧ್ವನಿಸುತ್ತದೆ.

ನಿಜಲಿಂಗಪ್ಪ

ಕರ್ನಾಟಕ ಕಾಂಗ್ರೆಸ್ಸಿನ ಅಧ್ಯಕ್ಷ ನಿಜಲಿಂಗಪ್ಪನವರು ಶಾಸನ ಸಭೆಯ ನಾಯಕತ್ವವನ್ನು ಸ್ವೀಕರಿಸುವುದು ಈಗ ಹಾಲಿನಷ್ಟು ತಿಳಿಯಾಗಿದೆ. ಕಾಂಗ್ರೆಸ್ ವರಿಷ್ಠರೂ ಇದಕ್ಕೆ ಅನುಮತಿಯ ಮುದ್ರೆಯೊತ್ತಿದ್ದು ಇನ್ನೇನು, ಹೊಸ ಸಚಿವ ಸಂಪುಟವು ರಚನೆಗೊಳ್ಳಲಿದೆ. ಆದರೂ ಜತ್ತಿ ಗುಂಪಿನವರನ್ನು ಸೇರಿಸಿಕೊಳ್ಳುವ ಪ್ರಯತ್ನ ಮಾಡುವೆನೆಂದು ಹೇಳಿದ ನಿಜಲಿಂಗಪ್ಪನವರು ಇನ್ನೂ ಒಂದೆರಡು ವಾರ ತಮ್ಮ ಸಹಮಂತ್ರಿಗಳು ಯಾರೆಂದು ನಿರ್ಧರಿಸಲು ತೆಗೆಯುವುದು ಖಂಡಿತ. ಇದು ನಿಶ್ಚಯವಾದ ಬಳಿಕವೇ ಕಂಠಿಯವ

ರು ರಾಜೀನಾಮೆಯಿತ್ತಿಯುವರು; ನಿಜಲಿಂಗಪ್ಪನವರು ಆಯ್ಕೆಗೊಳ್ಳುವರು. ಸಾಮಾನ್ಯವಾಗಿ ಸಚಿವರ ಸಂಖ್ಯೆ ಮಾತ್ರ ಹೆಚ್ಚುವುದೆಂದೂ ಈಗಿನವರೆಲ್ಲಾ ಉಳಿಯುವರೆಂದೂ ಹೇಳಲಾಗುತ್ತದೆ.

ಶಿವಪ್ಪ ರುದ್ರಪ್ಪ

ಉಡುಪಿಯಲ್ಲೊಂದು ವಿಶ್ವವಿದ್ಯಾಲಯ ಸ್ಥಾಪನೆಯಾಗ ಬೇಕೆಂಬ ಮನವಿಯನ್ನು ಉತ್ತರಿಸುತ್ತ ರಾಜ್ಯದ ಮುಖ್ಯ ಮಂತ್ರಿ ಕಂಠಿಯವರು ಇದನ್ನು ಕಾರ್ಯರೂಪಕ್ಕೆ ತರಲು ಕೆಲವು ಕಾಲ ಹಿಡಿಯಬಹುದು ಎಂದರು. ಅಂತೂ ಮಂತ್ರಿವರ್ಯರು ಇಲ್ಲಿಗೊಂದು ವಿಶ್ವವಿದ್ಯಾಲಯ ಬೇಕೆಂಬುದನ್ನು ಒಪ್ಪಿಕೊಂಡಿರುವುದು ಸಂತೋಷ. ಬೆಂಗಳೂರಿನಲ್ಲಿ ವಿಶ್ವ ವಿದ್ಯಾಲಯ ರಚನೆಯಾಗ ಬೇಕೆಂಬ ಕೇಳಿಕೆಯ ನಡುವೆ ಉಡುಪಿಯ ಕೂಗು ಯಾರಿಗೂ ಕೇಳಿಸದು, ಅದುದರಿಂದಲೇ 'ಅಲ್ಲಿನವರ ಅರ್ಭಟಿಯನ್ನು ತಣಿಸದೆ ನಿಮ್ಮದಕ್ಕೆ ಕಿವಿಗೊಡುವುದು ಸಾಧ್ಯವಿಲ್ಲ ಎಂಬುದನ್ನೇ ಪರ್ಯಾಯವಾಗಿ ಮಂತ್ರಿಗಳು ಹೇಳಿರಬೇಕು.

ಸುಬ್ರಹ್ಮಣ್ಯಂ

ಮದ್ರಾಸಿನ ಖ್ಯಾತ ಮಂತ್ರಿಯೆನಿಸಿದ ಸುಬ್ರಹ್ಮಣ್ಯಂ ನೇರವಾಗಿ ಕೇಂದ್ರ ಕ್ಯಾಬಿನೆಟ್ ದರ್ಜೆಗೆ ಅಡರಿದ ಪ್ರತಿಭಾವಂತರು. ಭಾರ ಉದ್ದಿಮೆ ಮತ್ತು ಉಕ್ಕಿನ ಹೊಣೆಗಾರಿಕೆಯ ಖಾತೆಯನ್ನಿವರು ಪಡೆದಿದ್ದಾರೆ. ಮದ್ರಾಸದ ಅನಭಿಷಿಕ್ತ ದೊರೆಯೆನಿಸಿದ ಕಾಮರಾಜರ ವಿರುದ್ಧ ಸಹಸಂಗ್ರಹವಾಗುತ್ತಿದೆಯೆಂಬ ಸುದ್ದಿಯಿಂದವರು ಕಂಗಾಲಾದಂತೆ ನಟಿಸಿದ್ದಾರೆ. ಮದ್ರಾಸದಲ್ಲಿ ಗುಂಪಿನ ರಾಜಕೀಯವಿಲ್ಲವೆಂದವರು ಹೆಮ್ಮೆಯಿಂದ ಅಂದಿದ್ದರೂ ಭಿನ್ನಾಭಿಪ್ರಾಯಗಳಿವೆಯೆಂದು ಹೇಳಿದ್ದಾರೆ. ಈ ಭಿನ್ನಾಭಿಪ್ರಾಯವೇ ಮುಂದಿನ ಅನಿಷ್ಟಗಳಿಗೇಕೆ ನಾಂದಿಯಾಗಬಾರದು ಎಂಬುದಕ್ಕೆ ಯಾರೂ ಉತ್ತರ ಕೊಡಲಾರರು.

ಜಾನ್ ಕೆನ್ನೆಡಿ

ಲಾವೋಸಿನಲ್ಲಿ ಪರಿಸ್ಥಿತಿ ಉಲ್ಬಣಗೊಳ್ಳುವ ಲಕ್ಷಣಗಳೇ ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಅಧ್ಯಕ್ಷ ಕೆನ್ನೆಡಿಯವರು ಅಲ್ಲಿಗೆ ಸೈನ್ಯ ಪಡೆಯನ್ನು ಅಟ್ಟಿದ್ದಾರೆ; ಬ್ರಿಟನ್ನು ಸಿಂಗಾಪುರದ ತನ್ನ ವಾಯುಪಡೆಗೆ ತುದಿಗಾಲ ಮೇಲೆ ನಿಲ್ಲಲು ಆಜ್ಞೆಯಿತ್ತಿದೆ. ಅಲ್ಲಿ ಕಮ್ಯುನಿಸ್ಟರ ಕಾರಸ್ಥಾನವು ವಿಶೇಷವಾದುದೇ ಈ ಸೈನಿಕ ರವಾನೆಗೆ ಕಾರಣವೆನ್ನಲಾಗುತ್ತಿದೆ. ಅದರ ಜತೆಗೆ ಇಂಡೋನೇಶ್ಯದ ಸೇನೆಯೂ ಪಶ್ಚಿಮ ಈರಿಯನ್ನನ್ನು ನುಗ್ಗಿದೆಯೆಂದು ಹೇಳಲಾಗುತ್ತಿದೆ. ಜಾಗತಿಕ ವಾತಾವರಣವು ಕಲ್ಮಷಗೊಂಡಿದ್ದು ರಾಜಕಾರಣದಲ್ಲಿ ಯಾವ ಗಳಿಗೆಯಲ್ಲೂ ಏನೂ ನಡೆಯಬಹುದುಎಂಬುದನ್ನು ಸಾರುತ್ತಿದೆ.

ಅಯೂಬಖಾನ್

ಅಧ್ಯಕ್ಷ ಅಯೂಬ ಖಾನರು ತಮ್ಮ ಸರಕಾರದ ಮಂತ್ರಿಗಳನ್ನು ಆರಿಸಲು ತೊಡಗಿದ್ದಾರೆ ಎಸೆಂಬ್ಲಿಯ ಒಳಗೂ ಹೊರಗೂ ರಾಜಕೀಯ ಪಕ್ಷಗಳನ್ನು ಕಟ್ಟುವ ಅಧಿಕಾರವನ್ನು ಪಾಕಿಸ್ತಾನದಲ್ಲಿ ನಿರಾಕರಿಸಲಾಗಿದೆ. ರಾಷ್ಟ್ರೀಯ ಹಿತದ ದೃಷ್ಟಿಯಲ್ಲಿ ಒಂದೇ ಅಭಿಪ್ರಾಯವಿರುವವರು ಒಂದು ಸೇರಬಹುದಂತೆ. ಆದರೆ, ಎಸೆಂಬ್ಲಿಯಲ್ಲಿ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವುದು ಇವರಿಗೆ ಸಾಧ್ಯವಾದೀತೆ ಎಂಬುದಷ್ಟೇ ಹೆದರಿಕೆಯ ಅಂಶವೆನಿಸಿದೆ.

—

ಅಲ್ಲಲ್ಲಿಯ ಸುದ್ದಿಸಾರ

ಪೂರ್ಣಪ್ರಜ್ಞ ಕಾಲೇಜ್ ಹೊಸ ಕಟ್ಟಡಕ್ಕೆ ಶಂಕುಸ್ಥಾಪನೆ— ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಹೊಸ ಕಟ್ಟಡದ ಶಂಕುಸ್ಥಾಪನಾ ಸಮಾರಂಭವು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರಿಂದ ಇದೇ ತಾ 16ರಂದು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರು ಸ್ವಾಗತಿಸುತ್ತಾ ವಿದ್ಯಾದಾನವು ಮಹತ್ವದ್ದೆಂದೂ ಜ್ಞಾನ ವಿಕಾಸನವೇ ವ್ಯಕ್ತಿತ್ವದ ವಿಕಾಸವೆಂದೂ ಹೇಳಿದರು.

ಮುಖ್ಯ ಮಂತ್ರಿ ಶ್ರೀ ಕಂಠಿಯವರು ಶಂಕುಸ್ಥಾಪನೆಮಾಡಿ ವಿದ್ಯಾಕ್ಷೇತ್ರದಲ್ಲಿ ಉಡುಪಿಯು ಪ್ರಮುಖ ಸ್ಥಾನಪಡೆದಿದೆಯೆಂದೂ ಈ ಪೂರ್ಣಪ್ರಜ್ಞ ಕಾಲೇಜು ಮಠಗಳ ಆಶ್ರಯದಲ್ಲಿ ನಡೆಯುತ್ತಿದ್ದು ಇಲ್ಲಿಯ ಜನರಲ್ಲಿ ತೋರಿ ಬರುವ ಉತ್ಸಾಹಾಸಕ್ತಿಗಳು ಕರ್ನಾಟಕ್ಕೇ ಆದರ್ಶವಾಗಿವೆ ಎಂದೂ ಬೆಂಗಳೂರಲ್ಲಿಯೂ ದಕ್ಷಿಣ ಕನ್ನಡದಲ್ಲಿಯೂ ಎರಡು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ವಿಚಾರ ಪರಿಶೀಲನೆಯಲ್ಲಿದೆಯೆಂದೂ ಮುಂತಾಗಿ ಹೇಳಿ ಪೂರ್ಣಪ್ರಜ್ಞ ಕಾಲೇಜು ಆದರ್ಶ ಸಂಸ್ಥೆಯಾಗಲೆಂದು ಹಾರೈಸಿದರು. ಅಧ್ಯಕ್ಷ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರವರ ಭಾಷಣದ ಬಳಿಕ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ವಿ ಎಂ. ಇನಾಂದಾರರು ಧನ್ಯವಾದಗಳನ್ನರ್ಪಿಸಿದರು.

ಮಣಿಪಾಲ ಇಂಜಿನಿಯರಿಂಗ್ ಕಾಲೇಜ್ ಹೋಸ್ಟೆಲಿನ ದ್ವಿತೀಯ ಬ್ಲೋಕಿನ ಶಂಕು ಸ್ಥಾಪನೆಯು ತಾ 16ರಂದು ಮೈಸೂರು ಸರಕಾರದ ಪ್ರಧಾನ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರಿಂದ ಶ್ರೀ ವಿ. ಎಸ್. ಕುಡುವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶಿವಳ್ಳಿ ಪಂಚಾಯತಿನ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳು ಇಲ್ಲಿನ ಖಾಸಗೀ ಪ್ರಯತ್ನದ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ಸುರೆನಾಡಿನಲ್ಲೊಂದು ಯುನಿವರ್ಸಿಟಿ ಸ್ಥಾಪಿಸುವ ಅವಶ್ಯಕತೆ, ಅದನ್ನು ನಮ್ಮ ಜಿಲ್ಲೆಯಲ್ಲಿಯೇ ಸ್ಥಾಪಿಸಬೇಕೆಂಬುದನ್ನು ಕೇಳಿಕೊಳ್ಳುವ ಮಾನಪತ್ರವನ್ನು ಅರ್ಪಿಸಿದರು. ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಗಳವರು ಸ್ವಾಗತ ಭಾಷಣಗೈಯುತ್ತಾ ಇಲ್ಲಿನ ಶಿಕ್ಷಣ ಸಂಸ್ಥೆಗಳ ಮಾಹಿತಿಯನ್ನಿತ್ತು ದೇಶ ವಿದೇಶದಿಂದ ಮೆಚ್ಚುಗೆ ಪಡೆದ ಮೇಲ್ತರಗತಿಯ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಮೈಸೂರು ಸರಕಾರ ಸಹಾಯ ಮಾಡದಿರುವುದು ಶೋಚನೀಯವೆಂದರು. ಮುಖ್ಯ ಮಂತ್ರಿ ಶ್ರೀ ಕಂಠಿಯವರು ಭಾಷಣವೀಯುತ್ತಾ ಜನತೆಗೆ ಅಗತ್ಯವಿರುವ ಕಾಲೇಜುಗಳನ್ನೆಲ್ಲಾ ಸರಕಾರದಿಂದಲೇ ತೆರೆಯಲು ಸಾಧ್ಯವಾಗದ್ದರಿಂದ ಡಾ. ಮಾಧವ ಪೈಗಳು ಮಾಡಿರುವ ಸಾಹಸಪೂರ್ಣ ಮಾರ್ಗದರ್ಶನ, ಸೇವೆ, ಮಹತ್ವದ್ದು ಎಂದರು. ಎಕೆಡೆಮಿಯವರು ಸರಕಾರದ ಮುಂದಿರಿಸುವ ಯಾವ ಯೋಜನೆಯನ್ನಾದರೂ ಸಹಾನುಭೂತಿಯಿಂದ ಪರ್ಯಾಲೋಚಿಸಿ ಸರಕಾರ ಬೆಂಬಲ ಕೊಡುವುದೆಂದರು. ನನ್ನ ಮಂತ್ರಿ ಪದವಿಯು ಅಶಾಶ್ವತ ಆದರೆ, ಡಾ. ಮಾಧವ ಪೈಗಳ ದೇವಸತ್ತ ಜನತಾ ಕಲ್ಯಾಣ ಮಂತ್ರಿ ಪದವಿಯನ್ನು ತೆಗೆದುಹಾಕಲು ಯಾರಿಗೂ ಸಾಧ್ಯವಿಲ್ಲ. ಅವರಂತೆ ಅವಿರತ ಕೆಲಸ ಮಾಡುವ ದೃಷ್ಟಿ, ಮನೋಭಾವ ಅತ್ಯಾವಶ್ಯಕವೆಂದರು ಅಧ್ಯಕ್ಷ ಶ್ರೀ ಕುಡುವರು ಮಣಿಪಾಲ ವಿದ್ಯಾಸಂಸ್ಥೆಗಳ ಕುರಿತು ಎಲ್ಲರಲ್ಲೂ ಸದ್ಭಾವನೆ ಇದೆಯೆಂದೂ ನಾಲ್ಕು ವರ್ಷಗಳೊಳಗೆ ಇಲ್ಲೊಂದು ವಿಶ್ವವಿದ್ಯಾಲಯವಾಗಬೇಕೆಂಬ ಪ್ರಶ್ನೆಯು ಬೇಗನೆ ಕಾರ್ಯಗತವಾಗುವಂತಾಗಲೆಂದರು. ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಪಿ. ವೆಂಕಟರಮಣ ಭಟ್ಟರು ವಂದನೆಗಳನರ್ಪಿಸಿದರು.

ಮಂಗಳೂರು ಜಾನುವಾರು ಆಸ್ಪತ್ರೆಗೆ ಭೇಟಿ—ಭಾರತ ಸರಕಾರದ ಜಾನುವಾರು ಅಭಿವೃದ್ಧಿ ಎಡ್ವೈಸರ್ ಡಾ. ಮೋಹನ್‌ರವರು ಮೈಸೂರು ಸರಕಾರದ ಜಾನುವಾರು ಅಭಿವೃದ್ಧಿ ಇಲಾಖೆಯ ಡೈರೆಕ್ಟರ್ ಡಾ. ಕೆ. ಎಸ್. ಶೆಟ್ಟಿ ಇವರೊಂದಿಗೆ ತಾ. 19ರಂದು ಸಂದರ್ಶನವಿತ್ತು ಆಸ್ಪತ್ರೆಗೆ ಸಂಬಂಧಿಸಿದ ಕೋಳಿ ಸಾಕಣೆ, ಕೃತಕ ಗರ್ಭಧಾರಣೆ ಮೊದಲಾದ ಎಲ್ಲಾ ಅಭಿವೃದ್ಧಿ ಕೇಂದ್ರಗಳನ್ನು ಪರಿಶೀಲಿಸಿ ಡಾ. ಮೋಹನ್‌ರವರು ಜಾನುವಾರು ಅಭಿವೃದ್ಧಿಗಾಗಿ ಪ್ರೋತ್ಸಾಹ ನೀಡುತ್ತಿರುವ ಮೈಸೂರು ರಾಜ್ಯದಲ್ಲಿ ಮಂಗಳೂರು ಜಾನುವಾರು ಆಸ್ಪತ್ರೆಯು ಸರ್ವ ವಿಧದ ಚಟುವಟಿಕೆಗಳಿಂದಲೂ ಕೂಡಿ ಸುಧಾರಣೆಗೊಂಡು ಪ್ರಗತಿ ಹೊಂದುತಿದ್ದು ಭಾರತದಲ್ಲಿಯೇ ಒಂದು ಆದರ್ಶ ಜಾನುವಾರು ಆಸ್ಪತ್ರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು

ವಿದ್ಯಾದಾನ ಉಚಿತ ಪ್ರಸಾದ ನಿಲಯ— ಇದೇ ಬರುವ ಜೂನ್ ತಿಂಗಳ ೧೦ನೇ ತಾರೀಕಿನಿಂದ ಪ್ರತಿ ವರ್ಷದಂತೆ ಪುಟ್ಟೂರಿಯ ವಿದ್ಯಾ ದಾನ ಉಚಿತ ಪ್ರಸಾದ ನಿಲಯದಲ್ಲಿ ಉಚಿತ ವಸತಿ ದೀಪ, ಊಟ ಮೊದಲಾದ ಸೌಕರ್ಯಗಳನ್ನು ಒದಗಿಸಲಾಗುವುದು, ಸ್ಥಳೀಯ ಎಲ್ಲ ಶಾಲೆ ಕಾಲೇಜುಗಳಲ್ಲಿ ಕಲಿಯುತ್ತಿರುವ ಸರ್ವ ಮತದ ಬಡ ವಿದ್ಯಾರ್ಥಿಗಳಿಗೆ ಪ್ರವೇಶವುಂಟು. ಸೇರ ಬಯಸುವವರು ನಿಲಯದ ಸಂಚಾಲಕರಾದ ಶ್ರೀ ಸಿ ಎಸ್, ಪ್ರಗತಿ ಸ್ಟೀಜನ್ ಗೋಡೆ ಪುಟ್ಟೂರಿ ಇವರಿಗೆ ನಿರ್ದಿಷ್ಟವಾದ ಅರ್ಜಿ ಫಾರ್ಮುಗಳಲ್ಲಿ ವಿವರ ತುಂಬಿ ಮೇ 31ರೊಳಗಾಗಿ ಕಳಿಸಬೇಕು ಅರ್ಜಿ ಫಾರ್ಮುಗಳು ನಿಲಯದ ಆಫೀಸಿನಲ್ಲಿ ರೂಪಾಯಿಗೊಂದರಂತೆ ದೊರೆಯುತ್ತವೆ. ಈ ಮೊದಲೇ ನಿಲಯದಲ್ಲಿದ್ದ ವಿದ್ಯಾರ್ಥಿಗಳು ಮುಂದಿನ ವರ್ಷದ ಬಗ್ಗೆ ತಮ್ಮ ಪ್ರವೇಶವನ್ನು ಸ್ಥಿರಪಡಿಸಿಕೊಳ್ಳಬೇಕೆಂದು ಸಂಚಾಲಕರು ತಿಳಿಸಿತ್ತಾರೆ.

ಉಡುಪಿಯಲ್ಲಿ ಮಂತ್ರಿ ಶ್ರೀ ಮಲ್ಲಪ್ಪನವರು—ಮೈಸೂರು ಸರಕಾರದ ಕೈಗಾರಿಕಾ ಮಂತ್ರಿ ಶ್ರೀ ಕೆ ಮಲ್ಲಪ್ಪನವರು ಇದೇ ತಾ 22ನೇ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಬರುತ್ತಾ ಕಾಪಿನಲ್ಲಿರುವ ಭಾರತ್ ಫ್ರುಟ್ ಕೇನಿಂಗ್ ಇಂಡಸ್ಟ್ರಿಯನ್ನು ಸಂದರ್ಶಿಸಿ ಉಡುಪಿಗೆ ಆಗಮಿಸಿದರು. ಉಡುಪಿಯಲ್ಲಿ ತಾಲೂಕು ಬೋರ್ಡ್, ತಾಲೂಕು ಕಾಂಗ್ರೆಸ್ ಕಮಿಟಿ, ಆಲ್ ಇಂಡಿಯಾ ಮನ್ಯುಫೇಕ್ಚರರ್ ಎಸೋಸಿಯೇಶನ್ ದ. ಕನ್ನಡ ಶಾಖೆ ಇವರು ಜುಬಿಲೀ ಕ್ಲಬ್ಬಿನಲ್ಲಿ ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಭಾಗವಹಿಸಿದರು. ತಾಲೂಕು ಬೋರ್ಡಿನ ಪರವಾಗಿ ಉಪಾಧ್ಯಕ್ಷ ಡಾ. ಕೃಷ್ಣ ಆಚಾರ್ಯರೂ, ಎ. ಐ. ಎಮ್. ಎ. ಪರವಾಗಿ ಡಾ. ಟಿ. ಎಂ. ಎ ಪೈಯವರೂ ಹಾರಾರ್ಪಣೆಗೈದರು, ಬಳಿಕ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ ಪೈಯವರು ಸ್ವಾಗತ ಭಾಷಣ ಮಾಡುತ್ತಾ ಜಿಲ್ಲೆಯ ಪ್ರಾಕೃತಿಕ ಸಂಪತ್ತಿನ ಸದುಪಯೋಗವಾಗುವಂತೆ ಇಲ್ಲಿ ಆವಶ್ಯಕವಿರುವ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದೂ ಅವಷ್ಟು ಕೈಗಾರಿಕೆಗಳನ್ನು ಇಲ್ಲಿ ಪ್ರಾರಂಭಿಸದಿದ್ದರೆ ನಮ್ಮ ಜಿಲ್ಲೆಯಲ್ಲಿರುವ ತುಂಬಾ ಹೈಸ್ಕೂಲ್‌ಗಳಿಂದ ಹೊರ ಬರುವ ವಿದ್ಯಾರ್ಥಿಗಳು ಮುಂದೆ ನಿರುದ್ಯೋಗ ಸಮಸ್ಯೆಯನ್ನು ಎದುರಿಸಬೇಕಾಗುವುದೆಂದೂ ಸರಕಾರವು ಈ ಕುರಿತು ಶೀಘ್ರವಾಗಿ ಕಾರ್ಯಪ್ರವೃತ್ತವಾಗಬೇಕೆಂದೂ ಖಾಸಗೀ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಆರಂಭಿಸುವಾಗ ಉಂಟಾಗುವ ಎಡರು ತೊಡರುಗಳನ್ನು ತೊಡೆದು ಹಾಕಬೇಕೆಂದೂ ಹೇಳಿದರು. ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಂ. ಮಧ್ವರಾಜ,ಎಂ. ಎಲ್. ಎ. ಯವರು ತಾಲೂಕು ಬೋರ್ಡಿನ ಪರವಾಗಿಯೂ, ಎ. ಐ. ಎಂ. ಎ. ಪರವಾಗಿ ಅಧ್ಯಕ್ಷ ಡಾ. ಟಿ. ಎಂ. ಎ. ಪೈಯವರೂ ಮಂತ್ರಿಗಳಿಗೆ ಮನವಿ ಪತ್ರಗಳನ್ನು ಅರ್ಪಿಸಿ ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಯಾಗಬೇಕೆಂದೂ, ಅದಕ್ಕೆ ಸರಕಾರದಿಂದ ಯುಕ್ತ ಪ್ರೋತ್ಸಾಹ ದೊರೆಯಬೇಕೆಂದೂ ಕೇಳಿಕೊಂಡರು.

ಮಂತ್ರಿ ಶ್ರೀ ಮಲ್ಲಪ್ಪನವರು ಮಾತನಾಡುತ್ತಾ ಇಲ್ಲಿ ದೊಡ್ಡ ಮತ್ತು ಸಣ್ಣ ಮಟ್ಟದ ಕೈಗಾರಿಕೆಗಳನ್ನು ಸ್ಥಾಪಿಸುವುದು ಆವಶ್ಯಕ ಎಂಬ ಅರಿವು ತನಗಾಗಿರುವುದೆಂದೂ ನಮ್ಮ ಜನರು ಹೆಚ್ಚಾಗಿ ಕೃಷಿಯನ್ನೇ ಅವಲಂಬಿಸಿಕೊಂಡಿದ್ದು ಕೈಗಾರಿಕೆಯ ಕಡೆಗೆ ಹೆಚ್ಚಿನ ಗಮನ ಕೊಡುತ್ತಿಲ್ಲವೆಂದೂ ಸರಕಾರವು ಇಲ್ಲಿಯೂ, ಇತರ ಜಿಲ್ಲೆಗಳಲ್ಲಿಯೂ ಅದಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲಿದೆಯೆಂದೂ ಮಂಗಳೂರಲ್ಲಿ ಫರ್ಟಿಲೈಸರ್ಸ್ ಮತ್ತು ಅಲ್ಯೂಮಿನಿಯಮ್ ಫೇಕ್ಟರಿ ತೆರೆಯುವ ಕುರಿತು ಆಲೋಚಿಸುತ್ತಿದೆ ಯೆಂದೂ ಕೈಗಾರಿಕೆಗಳಿಗೆ ಸಾಧ್ಯವಾದ ಪ್ರೋತ್ಸಾಹವನ್ನು ನೀಡಲಾಗುವುದೆಂದೂ, ಹೇಳಿ ತನಗಿತ್ತ ಸತ್ಕಾರಕ್ಕಾಗಿ ಕೃತಜ್ಞತೆ ಸೂಚಿಸಿದರು. ಅಂತ್ಯದಲ್ಲಿ ತಾಲೂಕು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎ. ಜೆ ಅಲ್ಸೆಯವರು ಧನ್ಯವಾದಗಳನ್ನರ್ಪಿಸಿದರು ಅನಂತರ ತಾಲೂಕು ಬೋರ್ಡ್ ಸದಸ್ಯರೊಡನೆಯೂ ಮಹಿಳಾ ಸರಕಾರಿ ಗುಡಿಕೈಗಾರಿಕೆಯ ಸದಸ್ಯರೊಡನೆಯೂ ವಿಚಾರ ವಿನಿಮಯ ಮಾಡಿ ಮಲ್ಪೆಯ ಮೀನುಗಾರ ಸಹಕಾರಿ ಸಂಘ ಮತ್ತು ಫಿಶ್ ಕೇನಿಂಗ್ ಇಂಡಸ್ಟ್ರಿ ಇವುಗಳನ್ನೂ ಸಂದರ್ಶನವಿತ್ತು ಮಧ್ಯಾಹ್ನ ಮಣಿಪಾಲದ ವಿವಿಧ ವಿದ್ಯಾಸಂಸ್ಥೆಗಳನ್ನು ಸಂದರ್ಶಿಸಿದರು.

ಸಂಗೀತ ಕಛೇರಿ—ಉಡುಪಿಯ ಸಂಗೀತ ಸಭಾದ ವತಿಯಿಂದ ಇದೇ ತಾ. 20ರಂದು ಶ್ರೀ ಸುಕೃತೀಂದ್ರ ಸಭಾ ಸದನದಲ್ಲಿ ದಕ್ಷಿಣ ಕನ್ನಡಿಗರೇ ಆಗಿದ್ದು ಬೊಂಬಾಯಿ ಗ್ವಾಲಿಯರ್ ಮೊದಲಾದ ಕಡೆಗಳಲ್ಲಿ ಸಂಗೀತ ಅಭ್ಯಾಸವನ್ನು ಮಾಡಿ ಭಾರತದಲ್ಲೆಲ್ಲಾ ಸಂಚರಿಸಿ ಸಂಗೀತ ಕಛೇರಿಗಳನ್ನು ಜರಗಿಸಿ ವಿಖ್ಯಾತರಾದ ಈಗ ನವದೆಹಲಿಯಲ್ಲಿರುವ ಶ್ರೀ ವಾಸುದೇವ ಕಿಣಿಕರ್ ರವರ ಸಂಗೀತ ಕಛೇರಿಯೊಂದು ಸುಶ್ರಾವ್ಯವಾಗಿ ಜರಗಿತು.

ತಾಲೂಕು ಸಹಕಾರಿ ಅಧಿವೇಶನ- ಇದೇ ತಾ. 19ರಂದು ಉಡುಪಿ ಕ್ರಿಶ್ಚನ್ ಹೈಸ್ಕೂಲ್ ಸಭಾಂಗಣದಲ್ಲಿ ಉಡುಪಿ ತಾಲೂಕು ಸಹಕಾರಿ ಸಂಘಗಳ ಅಧಿವೇಶನವು ಜಿಲ್ಲಾ ಸಹಕಾರಿ ಯೂನಿಯನಿನ ನೇತೃತ್ವದಲ್ಲಿ ಉಡುಪಿ ಸಹಕಾರಿ ಸಂಘಗಳ ಕೂಟದ ಅಧ್ಯಕ್ಷರಾದ ಶ್ರೀ ಎಂ. ಮಧ್ವರಾಜ್ ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಶ್ರೀ ಟಿ ಎ. ಪೈಯವರಿಂದ ಉದ್ಘಾಟಿಸಲ್ಪಟ್ಟಿತು. ಉಡುಪಿ ಯೂನಿಯನಿನ ಅಧ್ಯಕ್ಷ ಶ್ರೀ ಸಿ. ವಿ ಆಚಾರ್ಯರು ಸ್ವಾಗತಿಸಿದ ನಂತರ ಜಿಲ್ಲಾ ಯೂನಿಯನ್ ಅಧ್ಯಕ್ಷ ಶ್ರೀ ಬಿ. ಪ್ರಭಾಕರ ರಾಯರು ಸಹಕಾರಿ ಚಳವಳಿಯ ಸಮಸ್ಯೆಗಳನ್ನು ತಿಳಿಸಿದರು. ಶ್ರೀ ಟಿ. ಎ. ಪೈಯವರು ಮಾತನಾಡುತ್ತಾ ಸಹಕಾರ ಚಳವಳಿಯ ಇತ್ತೀಚೆಗೆ ಅದರ ಉದ್ದೇಶವನ್ನು ಮರೆತಂತೆ ಆಗಿದೆಯೆಂದೂ ಕಾರ್ಯನಿರಂಬ, ಸರಕಾರಿ ಹಸ್ತಕ್ಷೇಪ ಹೋಗದೆ ಸಹಕಾರ ಚಳವಳಿಯು ಬೆಳೆಯಲಾರದೆಂದೂ ಹೇಳಿದರು. ಶ್ರೀ ಮಧ್ವರಾಜರು ಮಾತನಾಡುತ್ತಾ ಜಿಲ್ಲೆಯ ಸಹಕಾರಿ ಚಳವಳವು ಯಶಸ್ವಿಯಾಗಿ ನಡೆಯುತ್ತಿರುವುದಕ್ಕಾಗಿ ಮೆಚ್ಚುಗೆ ವ್ಯಕ್ತಪಡಿಸಿ ಸರಕಾರಿ ಅಧಿಕಾರಿಗಳೂ,ಸಂಘದ ಸದಸ್ಯರೂ ಪರಸ್ಪರ ಕೂಡಿಕೊಂಡು ನಡೆದರೆ ಮಾತ್ರ ಚಳವಳಿಯು ಜಯಶೀಲವಾಗುವುದೆಂದರು. ಆ ಮೇಲೆ ಚರ್ಚೆಯಾಗಿ ಸೆಂಟ್ರಲ್ ಬೇಂಕಿನ ಸಾಲದ ಬಡ್ಡಿ ಕಡಿಮೆ ಮಾಡಬೇಕೆನ್ನುವ, ಜಿಲ್ಲೆಗೆ ಒಂದು ತರಬೇತಿ ಕೇಂದ್ರ ತೆರೆಯಬೇಕೆನ್ನುವ, ಕಂಟ್ರೋಲು ಸಾಮಗ್ರಿಗಳನ್ನು ತಾಲೂಕು ಮಾರಾಟ ಸಂಘಗಳ ಮೂಲಕ ವಿತರಿಸಬೇಕೆಂದು ಕೇಳಿಕೊಳ್ಳುವದೇ ಮೊದಲಾದ ಠರಾವುಗಳನ್ನು ಉಡುಪಿ ಯೂನಿಯನ್ ಕಾರ್ಯದರ್ಶಿ ಶ್ರೀ ಪಿ. ವಿಠಲ ಶೆಟ್ಟರು ಸಭೆಯ ಮುಂದಿಡಲಾಗಿ ಅವು ಮಂಜೂರಾದವು ಅಂತ್ಯದಲ್ಲಿ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ವಂದನೆಗಳನ್ನರ್ಪಿಸಿದರು,

—

ಇಂಡೋನೇಶಿಯಾದ

ಜನಪ್ರಿಯ ಚುನಾಯಿತ ಅಧ್ಯಕ್ಷ—ಸುಕರ್ಣ

ಸುಮಾರು ಒಂದು ವಾರಕ್ಕೆ ಮೊದಲು ಇಂಡೋನೇಶ್ಯದ ಅಧ್ಯಕ್ಷ ಡಾ| ಸುಕರ್ಣರನ್ನು ಕೊಲೆ ಮಾಡುವ ಪ್ರಯತ್ನವೊಂದು ನಡೆಯಿತು. ಆದರೆ, ಸೌಭಾಗ್ಯವಶದಿಂದ ಈ ಮೊದಲಿನ ಮೂರು ವ್ಯರ್ಥ ಸಾಹಸಗಳೊಡನೆ ಇದೂ ನಾಲ್ಕನೆಯದಾಗಿ ಸೇರಿ ಹೋಯಿತು: ೧೯೫೭; ೧೯೬೦, ೬೨ರಲ್ಲಿ ಇಂತಹುದೇ ಸಾಹಸವು ನಡೆಯಿತಾದರೂ ಅವರ ಹೇಳಿಕೆಯಂತೆ 'ನಾನಿನ್ನೂ ಜೀವಂತನಿದ್ದೇನೆ'. ಕಳೆದ ಹದಿನೈದು ವರ್ಷಗಳಿಂದ ಇಂಡೋನೇಶ್ಯದ ಐಕ್ಯಕ್ಕಾಗಿ ಹೋರಾಡುತ್ತಿರುವ ಇವರ ನೀತಿಯನ್ನು ಒಪ್ಪದಿರುವವರೇ ಈ ವಿಧದ ಕೊಲೆಯ ಪ್ರಯತ್ನವನ್ನು ನಡೆಸಿದರೆಂದು ತಿಳಿದು ಬರುತ್ತದೆ.

ಪ್ರಪಂಚದಲ್ಲಿಯೇ ಅತಿ ದೊಡ್ಡ ಮುಸ್ಲಿಂ ರಾಷ್ಟ್ರವಾದ, ಜನಸಂಖ್ಯೆಯ ಗಣನೆಯಿಂದ ವಿಶ್ವದಲ್ಲಿ ಆರನೆಯ ಸ್ಥಾನದಲ್ಲಿ ನಿಲ್ಲುವ ಇಂಡೋನೇಶ್ಯದ ಚುನಾಯಿತ ಅಧ್ಯಕ್ಷರು ಸುಕರ್ಣರು.

ಮೂರು ಸಾವಿರ ದ್ವೀಪ ಸಮುದಾಯದ ೧೧ಳ ಭಾಷೆಗಳನ್ನಾಡುವ ಜನರಿರುವ ಇಂಡೋನೇಶ್ಯವು ವಿರೋಧಾಭಾಸಗಳ ತಾಯ್ನಾಡು. ಧರ್ಮದಲ್ಲಿ ಇಸ್ಲಾಮಿಗಳಾದರೂ ಇಲ್ಲಿಯ ಪ್ರಜೆಗಳು ರಾಮಾಯಣ ಮಹಾಭಾರತಗಳ ಕಾಲದ ಸಂಸ್ಕೃತಿಯನ್ನು ಪ್ರೀತಿಸುವವರು; ಈ ಎರಡೂ ಮಹಾ ಕಾವ್ಯಗಳ ಪಾತ್ರಗಳು ಇವರ ಜೀವನದ ಒಂದು ಅನಿವಾರ್ಯ ಅಂಗವೆಂಬಂತಾಗಿದೆ. ಇಲ್ಲಿಯ ಜನರು ಶಾಂತಿಪ್ರಿಯರಾದರೂ ಆಗಾಗ ದಂಗೆಗಳನ್ನು ಆಯೋಜನಗೊಳಿಸುವುದೂ ಇದೆ.

ಸುಕರ್ಣರು ಆತ್ಮಪ್ರಶಂಸಾಪ್ರಿಯರು ಎಂದು ಹೇಳುತ್ತಾರೆ. ಈ ಸಂಬಂಧದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಬಹಳಷ್ಟು ಬರೆದಿವೆ; ಹಾಗೂ ಹೇಳುತ್ತಿವೆ; ಆದರೆ, ಇವರ ರಾಜಕೀಯ ಗತ್ತುಗಾರಿಕೆಯನ್ನು ಕಂಡು ಅವು ವಿಸ್ಮಿತಗೊಳ್ಳುತ್ತಿವೆ. 'ನಿಯಂತ್ರಿತ ಪ್ರಜಾಪ್ರಭುತ್ವ'ದ ಪ್ರೇರಕ ಡಾ| ಸುಕರ್ಣರು ತಮ್ಮ ದೇಶದ ಜನತೆಯ ಪ್ರೇಮ, ಆದರ ಮತ್ತು ವಿಶ್ವಾಸಗಳನ್ನು ಸಂಪೂರ್ಣವಾಗಿ ಗಳಿಸಿದ್ದಾರೆ. ಈ ಸಂಬಂಧದಲ್ಲಿ ಇವರು ವಿಶ್ವದ ಜನಪ್ರಿಯ ನಾಯಕರ ಸಾಲಿನಲ್ಲಿ ನಿಲ್ಲುತ್ತಾರೆ. ಜನತೆಯನ್ನು ಒಂದೇ ಒಂದು ಕ್ಷಣದಲ್ಲಿ ತನ್ನ ಮುಷ್ಟಿಯೊಳಗೆ ತಂದುಕೊಳ್ಳುವಂತಹ ಉತ್ತಮ ವಕ್ತೃಗಳು ಇವರು. ಜನತೆಯು ತಮ್ಮ ಮೇಲೆ ಇಟ್ಟುಕೊಂಡಿರುವ ಗಹನವೆನಿಸುವ ಪ್ರೇಮವನ್ನು ಅವರೂ ಅರಿತಿರುವರು. 'ನನ್ನ ದೇಶದ ನಾಲಿಗೆಯಂತೆ ನಾನಿದ್ದೇನೆ. ನೀವು ಕಲ್ಲುಗಳ ಹೊಡೆತವನ್ನು ತಿನ್ನಿರಿಯೆಂದು ನಾನು ಹೇಳಿದರೆ, ಜನತೆಯೆಲ್ಲವೂ ತಪ್ಪದೆ ಅದನ್ನು ಅನುಭವಿಸಲು ಸಿದ್ಧವಾಗುವುದು' ಎಂದು ಬಹಿರಂಗವಾಗಿ ಅವರು ಹೇಳಿದ್ದಾರೆ. ಡಾ. ಸುಕರ್ಣರು ಸಂಯೋಗವಶದಿಂದ ಎಲ್ಲಾದರೂ ಬೀದಿಗಿಳಿದರೆಂದರೆ, ಜನತೆಯವರನ್ನು ಸಹೋದರ ಕರ್ಣ ಎಂದೇ ಕರೆಯುತ್ತದೆ. ಈ ಮೊದಲು ಕರೆಯುತಿದ್ದ ಹಲವಾರು ಹೆಸರುಗಳಿಗಿಂತ ಈ ರೀತಿಯಾಗಿ ಕರೆದರೆ ಸುಕರ್ಣರು ಹೆಚ್ಚು ಸಂತಸ ಪಡುತ್ತಾರೆ.

ಆರಂಭದಿಂದಲೇ ಇಂಡೋನೇಶ್ಯದ ಸಲುವಾಗಿ ತ್ಯಾಗ ಮಾಡುತ್ತ ಹೋರಾಟ ನಡೆಸಿದುದರಿಂದ ಅವರು ಲೋಕಪ್ರಿಯತೆಯನ್ನು ಗಳಿಸಿದರು. ಇನ್ನೂ ವಿದ್ಯಾರ್ಥಿ ದಸೆಯಲ್ಲಿರುವಾಗಲೇ ಅವರು ಸ್ವಾತಂತ್ರ್ಯ ಸಂಗ್ರಾಮರಂಗದಲ್ಲಿ ಸಿಗೆದರು. ಅವರ ಪ್ರಭಾವಶಾಲಿಯಾದ ಭಾಷಣವೊಂದನ್ನು ಕೇಳಿದ ನೊಂದ ಪೋಲೀಸರ ಸರ್ವೋಚ್ಚ ಅಧಿಕಾರಿಯು ವಿದ್ಯಾರ್ಥಿ ಸುಕರ್ಣರನ್ನು ವೇದಿಕೆಯಿಂದ ಕೆಳಗೆ ಎಳೆದು ತರಬೇಕಾಗಿ ಬಂತು. ನಡೆದ ಈ ಘಟನೆಯು ಅವರ ಪ್ರಾಧ್ಯಾಪಕರಿಗೆ ತಿಳಿದು ಬಂದಾಗ, ಅವರು ಎಚ್ಚರಿಸಿದ್ದರು—"ಮಗೂ, ನೀನು ವಿದ್ಯಾರ್ಥಿಯಾಗಿರುವಷ್ಟು ಕಾಲ ರಾಜಕೀಯ ಆಂದೋಲನದಿಂದ ದೂರವಿರಬೇಕು."

"ನಾನು ನನ್ನ ಅಧ್ಯಯನದಲ್ಲಿ ವ್ಯತ್ಯಯವಾಗದಂತೆ ಎಚ್ಚರಿಕೆ ವಹಿಸುವೆ"—ಧೈರ್ಯದಿಂದ ಸುಕರ್ಣರು ಭರವಸೆಯಿತ್ತರು.

"ನಾನು ಈ ಸಂಬಂಧದಲ್ಲಿ ಪ್ರಸ್ತಾಪ ಮಾಡಲೇ ಇಲ್ಲ" ಎಂಬ ಗುರುಗಳ ಮಾತಿಗೆ ಉತ್ತರವಾಗಿ ಸುಕರ್ಣರು ಹೇಳಿದ್ದರು: "ಆದರೆ, ನಾನು ಇಷ್ಟನ್ನು ಮಾತ್ರ ಹೇಳಬಲ್ಲೆ" ಎಂದು.

ತನ್ನ ವಿದ್ಯಾರ್ಥಿ ಜೀವನದಲ್ಲಿ ಸುಕರ್ಣರು ಇಂಡೋನೇಶ್ಯದ ಒಂದು ಪ್ರಮುಖ ಪತ್ರಿಕೆಯಲ್ಲಿ "ಭೀಮ" ಎಂಬ ಉಪನಾಮದಲ್ಲಿ ರಾಜಕೀಯ ಲೇಖನಗಳನ್ನು ಬರೆಯುತಿದ್ದರು.

೧೯೨೭ರಲ್ಲಿ ಬಾಂಡುಂಗ ಟೆಕ್ನಿಕಲ್ ವಿಶ್ವವಿದ್ಯಾಲಯದಿಂದ ಸಿವಿಲ್ ಇಂಜಿನಿಯರಿಂಗ್‌ನ ಪದವಿಯನ್ನುಗಳಿಸಿದ ಸುಕರ್ಣರು ಸಿವಿಲ್ ಇಂಜಿನಿಯರ್ ಆಗುವುದಕ್ಕೆ ಬದಲು, ರಾಷ್ಟ್ರನಿರ್ಮಾಣದ ಕಾರ್ಯದಲ್ಲಿ ಆಸಕ್ತಿ ತೋರಿಸತೊಡಗಿದರು. ೧೯೨೯ರಿಂದ ೩೧ರವರೆಗೆ ತನ್ನರಾಜಕೀಯ ಕಾರ್ಯಭಾರದಿಂದ ಕೈದಿಗಳಾಗಿರ ಬೇಕಾಯಿತು. ೧೯೩೨ರಲ್ಲಿ 'ಅಪಾಯಕಾರಿ' ಪುಸ್ತಕವೊಂದರ ಪ್ರಕಾಶನ ಮಾಡಿದರು ಎಂಬ ಅಪರಾಧದಿಂದ, ಮರಳಿ ಜೇಲಿಗೆ ಹೋಗಬೇಕಾಗಿ ಬಂದಿತು. ೧೯೩೨ರಿಂದ ೪೮ರ ತನಕ ಅವರು ಫ್ಲೋರೇಸ್‌ನಲ್ಲಿ ಬಂದಿಯಾಗಿ ಉಳಿದರು. ಮುಂದಿನ ನಾಲ್ಕು ವರ್ಷಗಳಿಂದ ಜಪಾನಿಯರಿಂದ ಬಿಡುಗಡೆ ಹೊಂದುವ ವರೆಗೆ ಅವರು ದಕ್ಷಿಣ ಸುಮಾತ್ರದಲ್ಲಿ ಇರಬೇಕಾಯಿತು.

ಜಪಾನೀಯರು ಸುಕರ್ಣರನ್ನು ಬಿಡುಗಡೆಗೊಳಿಸುವುದಕ್ಕೆ ಮೊದಲು ಒಂದು ಶರ್ತವನ್ನು ಹಾಕಿದರು. ಜಪಾನದ ಅಧೀನರಾಗಿ, ಇಂಡೋನೇಶ್ಯದ ಪ್ರಮುಖನಾಗಿರ ಬೇಕು ಎಂಬುದೇ ಈ ಶರ್ತವಾಗಿತ್ತು. ಇಂಡೋನೇಶ್ಯವನ್ನು ಸುಲಭದಲ್ಲಿ ಸ್ವತಂತ್ರಗೊಳಿಸುವ ಸಾಧ್ಯತೆಯನ್ನು ಮನಗಂಡು, ಇವರು ಅದನ್ನು ಒಪ್ಪಿಕೊಂಡರು. ಜಪಾನೀಯರ ಆಡಳಿತಾವಧಿಯಲ್ಲಿ ಸುಕರ್ಣರು ರಿಪಬ್ಲಿಕನ್ ಪಕ್ಷವನ್ನು ಬಲಪಡಿಸುತ್ತ ಬಂದರೆಂಬುದನ್ನು ಕೆಲವು ಮಂದಿ ಮಾತ್ರ ಅರಿತಿರುವರು.

ಜಪಾನೀಯರು ಆತ್ಮಸಮರ್ಪಣವೆಸಗಿದ ಎರಡು ದಿನಗಳಲ್ಲೇ ಡಾ. ಸುಕರ್ಣರು ಇಂಡೋನೇಶಿಯಾವನ್ನು ಪ್ರಜಾತಂತ್ರವೆಂದು ಘೋಷಿಸಿಬಿಟ್ಟರು; ತನ್ನ ನೇತೃತ್ವದಲ್ಲಿ ಒಂದು ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಿದರು ೧೯೪೮ರ ಆಗಸ್ಟ್ ೧೮ರಂದು ಅವರು ಚುನಾಯಿತ ಅಧ್ಯಕ್ಷರಾದರು.

೧೯೫೮ರಲ್ಲಿ ಡಾ. ಸುಕರ್ಣರು ಭಾರತ ಪ್ರವಾಸವನ್ನು ಮಾಡಿದ್ದರು. ಆಗ ಇವರಿಗೆ ಇಲ್ಲಿ ಭವ್ಯ ಸ್ವಾಗತ ದೊರಕಿತ್ತು. ೧೯೬೦ರಲ್ಲಿ ಸೋವಿಯತ್ ರಶ್ಯವು ಇವರಿಗೆ ಲೆನಿನ್ ಪಾರಿತೋಷಕವನ್ನು ನೀಡಿತ್ತು.

ಈಗ ಕೆಲವು ತಿಂಗಳುಗಳಿಂದ ಹೊಲ್ಲೆಂಡಿನ ಅಧೀನದಲ್ಲಿರುವ ಪಶ್ಚಿಮ ಈರಿಯವನ್ನು ವಿಮೋಚನೆಗೊಳಿಸುವಲ್ಲಿ ವ್ಯಸ್ತರಾಗಿದ್ದಾರೆ. ಭಾರತವು ಗೋವೆಯನ್ನು ವಿಮೋಚನೆಗೊಳಿಸಿದುದರಿಂದ ಪ್ರೇರಣೆ ದೊರೆತು, ಇವರು ಪಶ್ಚಿಮ ಈರಿಯವನ್ನು ಇಂಡೋನೇಶ್ಯದ ಭಾಗವೆಂದು ಘೋಷಿಸಿಬಿಟ್ಟರು. ೧೯೬೨ನೆ ಜನವರಿ ೩ನೆ ತಾರೀಕಿನಂದು ಹೊರಟ ಈ ಘೋಷಣೆಯ ನಂತರ ಅಲ್ಲಿ ಹೋರಾಟ ನಡೆಯುತ್ತ ಬರುತ್ತಲಿದೆ.

೧೯೦೧ನೆ ಇಸವಿಯ ಜೂನ್ ೬ನೆ ದಿನಾಂಕ ಡಾ| ಸುಕರ್ಣರ ಜನನವಾಯ್ತು. ಇವರ ತಂದೆ ಒಬ್ಬ ಮುಸ್ಲಿಂ, ಆದರೆ, ತಾಯಿ ಮಾತ್ರ ಒಬ್ಬಾಕೆ ಪ್ರಾಚೀನ ಹಿಂದೂ ವಂಶಕ್ಕೆ ಸೇರಿದ ಮಹಿಳೆ. ರಾಜಕೀಯ ಕ್ಷೇತ್ರಕ್ಕೆ ನೆಗೆಯುವುದಕ್ಕೆ ಮೊದಲು ಡಾ| ಸುಕರ್ಣರು ಒಬ್ಬ ಪ್ರಸಿದ್ಧ ಕಲಾವಿದರೆಂದು ಹೆಸರು ಪಡೆದಿದ್ದರು.



ಮದ್ರಾಸಿನ ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಯೋಗ ಶಾಲೆಯಲ್ಲಿ ವಿದ್ಯಾರ್ಥಿಯು ಸಂಶೋಧನಾಮಗ್ನನಾಗಿರುವುದನ್ನಿಲ್ಲಿ ಕಾಣಬಹುದು.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಅದನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕೆಂದು ಅಪೇಕ್ಷಿಸುತ್ತೇವೆ.

—ಮೆನೇಜರ್ ನವಯುಗ

ಶಾಂತಿ ಮಾರ್ಗದ ಪ್ರಯೋಗ

(೪ನೇ ಪುಟದಿಂದ)

ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಅಂತಹ ಒಂದು ಕುಟುಂಬದ ಆಯ್ಕೆಯಲ್ಲಿ ನಾಲ್ಕು ಮುಖ್ಯ ಅಂಶಗಳನ್ನು ಗಮನಿಸಬೇಕಾಗುತ್ತದೆ. ಅತಿಥಿಯನ್ನು ಅನ್ಯೋನ್ಯತೆಯಿಂದಲೂ, ಗೌರವದಿಂದಲೂ ಕಾಣಲು ಆ ಕುಟುಂಬವು ಹೊಂದಿರುವ ಇಚ್ಛೆಯು ಪ್ರಪ್ರಥಮ ಹಾಗೂ ಅಗ್ರಮಾನ್ಯ ಗುಣವಾಗಿರುತ್ತದೆ. ಕೇವಲ ಎಲ್ಲಾ ಅನುಕೂಲತೆಗಳನ್ನೂ ಒದಗಿಸಲು ಅದು ಹೊಂದಿರಬಹುದಾದ ಸಾಮರ್ಥ್ಯವೊಂದೇ ಮುಖ್ಯವಲ್ಲ; ಸಂಪೂರ್ಣವಾಗಿ ವಿದೇಶೀಯನಾದ ವ್ಯಕ್ತಿಯೊಬ್ಬನನ್ನು ತಾತ್ಕಾಲಿಕವಾಗಿ ಕುಟುಂಬದ ಒಬ್ಬ ಸದಸ್ಯನಂತೆಯೇ ಪರಿಗಣಿಸಿ ಅಳವಡಿಸಿಕೊಳ್ಳುವುದು ಬಹು ಮುಖ್ಯವಾದ ವಿಷಯ. ಎರಡನೆಯದಾಗಿ, ದೇಶದ ಸಂಸ್ಕೃತಿ, ಜೀವನದ ರೀತಿ ಹಾಗೂ ವರ್ತನೆಯ ಮಟ್ಟ—ಇವುಗಳ ಬಗ್ಗೆ ಅತಿಥಿಯ ಕುತೂಹಲವನ್ನು ವ್ಯಕ್ತಪಡಿಸಲು ಕುಟುಂಬಕ್ಕೆ ಸಾಮರ್ಥ್ಯವಿರಬೇಕು. ಅದು ಅಭಿಪ್ರಾಯಗಳ ವಿನಿಮಯವನ್ನೂ ಪರಸ್ಪರರ ದೃಷ್ಟಿಕೋನದ ಗ್ರಹಿಕೆಯನ್ನೂ ಪ್ರೋತ್ಸಾಹಿಸಬೇಕು. ಮೂರನೆಯದಾಗಿ ಅತಿಥೇಯ ಕುಟುಂಬದ ಸದಸ್ಯರು ಎಲ್ಲರೂ ಅಲ್ಲದಿದ್ದರೆ ಬಹುತೇಕ ಮಂದಿ ಇಂಗ್ಲಿಷ್ ಭಾಷೆಯನ್ನು ತಿಳಿದಿರುವುದು ಅಗತ್ಯ ಏಕೆಂದರೆ ಅತಿಥಿಗಳ ಪೈಕಿ ಅನೇಕರು ಈ ಭಾಷೆಯಲ್ಲಿ ಮಾತನಾಡ ಬಲ್ಲರು. ನಾಲ್ಕನೆಯದಾಗಿ ಕುಟುಂಬದಲ್ಲಿ ಪ್ರಯೋಗೀ ಹುಡುಗ ಅಥವಾ ಹುಡುಗಿಯ ವಯೋಮಿತಿಗೆ ಸೇರಿದ ಯಾರಾದರೂ ಕುಟುಂಬದಲ್ಲಿ ಇರುವುದು ಅಪೇಕ್ಷಣೀಯ. ಸಾಮಾನ್ಯವಾಗಿ ಹೇಳುವುದಾದರೆ, ಊಟ ಉಡುಪುಗಳಲ್ಲಿನ ವ್ಯತ್ಯಾಸಗಳು ಕೇವಲ ಬಾಹ್ಯವೆಂಬುದನ್ನೂ ಸ್ನೇಹಮಯವಾದ ಮಾನವ ವ್ಯಕ್ತಿಯು ಪ್ರಪಂಚದಾದ್ಯಂತ ಒಂದೇ ರೀತಿ ಇರುತ್ತಾನೆಂಬುದನ್ನೂ ಅತಿಥೇಯ ಪ್ರಯೋಗಿಯು ತಿಳಿದುಕೊಂಡಿರಬೇಕು.

ಶಾಂತಿ ಮಾರ್ಗ

ಶಾಂತಿ ಮಾರ್ಗವು ಸುದೀರ್ಘವೂ ಪ್ರಯಾಸಕರವೂ ಆದದ್ದಾಗಿದೆ. ಪರಸ್ಪರರ ಜೀವನ ವಿಧಾನಗಳ ಹಾಗೂ ಸಂಸ್ಕೃತಿಗಳ ಬಗ್ಗೆ ಅಜ್ಞಾನವೂ, ತಪ್ಪು ತಿಳುವಳಿಕೆಯೂ ಹೇಗೆ ಪರಸ್ಪರ ಅಪನಂಬಿಕೆಗಳಿಗೆ ಕಾರಣಗಳಾಗಿ ಕ್ರೂರ ಯುದ್ಧಗಳಿಗೆ ದಾರಿಮಾಡಿಕೊಟ್ಟವೆಂಬುದನ್ನು ಮಾನವ ಜನಾಂಗದ ಇತಿಹಾಸವು ಎತ್ತಿತೋರಿಸಿದೆ. ಕೌಟುಂಬಿಕ ಸ್ನೇಹಗಳ ಆಧಾರದ ಮೇಲೆ ಜನರ ಮನೆಗಳಿಗೇ ನೇರವಾಗಿ ವಿವಿಧ ದೇಶಗಳ ಸಂಸ್ಕೃತಿಗಳನ್ನು ಒಯ್ಯುವುದರ ಮೂಲಕ, ರಾಷ್ಟ್ರ-ರಾಷ್ಟ್ರಗಳ ನಡುವಣ ಮಾನಸಿಕ ಅಡಚಣೆಗಳನ್ನು ಕಡಿಮೆ ಮಾಡುವುದು ಅಂತರ ರಾಷ್ಟ್ರೀಯ ಜೀವನದಲ್ಲಿನ ಈ ಪ್ರಯೋಗದ ಉದ್ದೇಶವಾಗಿದೆ. ಕಾಲ ಕಳೆದಂತೆ ತನ್ನ ಪ್ರಯತ್ನಗಳು ಫಲಪ್ರದವಾಗುತ್ತವೆಂಬ ಆಸೆಯನ್ನೂ, ವಿಶ್ವಾಸವನ್ನೂ ಅದು ಹೊಂದಿದೆ. ಪ್ರಪಂಚದ ಆದ್ಯಂತವೂ ಮುಂದಿನ ಪೀಳಿಗೆಗಳ ಜನರು ರಾಷ್ಟ್ರೀಯ ಪ್ರತ್ಯೇಕತೆಯ ಬಗ್ಗೆ ವಿಚಾರ ಮಾಡುವುದನ್ನು ನಿಲ್ಲಿಸಿ, ಇತರ ರಾಷ್ಟ್ರಗಳ ಜನರು ಪರಸ್ಪರ ನೆರೆಹೊರೆಯವರೆಂಬುದನ್ನೂ ಏಕೈಕ ಮಾನವ ಭ್ರಾತೃತ್ವದ ಅರ್ಥಾತ್ ಒಂದೇ ಮಾನವ ಕುಟುಂಬದ ಸದಸ್ಯರೆಂಬುದನ್ನು ಮಾನ್ಯ ಮಾಡುತ್ತಾರೆಂಬ ಆಸೆ ಭರವಸೆಗಳನ್ನು "ಪ್ರಯೋಗ" ಬೆಳುವಳಿಯು ಹೊಂದಿದೆ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ]

ಮುಕ್ಕಣ್ಣ ದರ್ಶನ— (ಕುಮುದಾತನಯ, ಕು. ಸೀತಾರಾಮ ಅಡಿಗ ಮತ್ತು ಬನ್ನಂಜೆ ಗೋವಿಂದಾಚಾರ್ಯರ ಕವನಗಳ ಸಂಕಲನ) ಪ್ರಕಾಶಕರು: ಬನ್ನಂಜೆ ಗೋವಿಂದಾಚಾರ್ಯ, ಸುದರ್ಶನ ಕಾರ್ಯಾಲಯ, ಉಡುಪಿ. ಪುಟಗಳು: ೬೭. ಬೆಲೆ: ರೂ. ೧=೦೦.

ಇಂದಿನದು ಇನ್ನೊಂದು ಕ್ಷಣದಲ್ಲಿ ಹಳೆಯದಾಗುವ ಕಾಲವಿದು. ಜೀವನದ ಹೆಜ್ಜೆ ಹೆಜ್ಜೆಯಲ್ಲೂ ಪರಿವರ್ತನೆ ನಡೆಯುತ್ತಿರುವಾಗ, ಜೀವನದ ಒಂದಂಗವಾದ ಕಾವ್ಯ ಪರಂಪರೆಯಲ್ಲೂ ಬದಲಾವಣೆ ನಡೆಯಬಾರದೆನ್ನುವುದು ಮೂಢತನ, ಸಾಂಪ್ರದಾಯಿಕ ಮಹಾ ಕಾವ್ಯ, ಖಂಡಕಾವ್ಯಗಳು ದೂರವಾಗಿ ಭಾವಗೀತೆಗಳ ಜತೆಗೆ ನವ್ಯ ಕವಿತೆಗಳೂ ನಮ್ಮ ಮುಂದೆ ಬಂದಿವೆ. ಕವಿತೆಯು ಛಂದಸ್ಸು, ಪ್ರಾಸನಿಯಮಗಳಿದ್ದರೆ ಮಾತ್ರ ಉಪಾದೇಯವಲ್ಲ; ರಾಮಣೀಯಕ ಅರ್ಥವನ್ನು ಪ್ರತಿಪಾದಿಸುವ ಶಬ್ದಗಳನ್ನು ಅಂಗ್ಯುಒಪ್ಪವಾಗಿ ಜೋಡಿಸಿ ಕಾವ್ಯಗುಣವನ್ನು ತಂದು ಬಿಟ್ಟರೆ, ಅದು ಶ್ಲಾಘ್ಯವೇ ಆಗುತ್ತದೆ. 'ಮುಕ್ಕಣ್ಣ ದರ್ಶನ'ವೆಂಬುದು ಮೂವರು ಕವಿಗಳು ಕಂಡ ಸುಂದರ ದರ್ಶನವನ್ನು ನೀಡುವ ಪ್ರತಿಯೊಬ್ಬರ ಹತ್ತು ನವ್ಯ ಕವಿತೆಗಳ ಸಂಕಲನ

ಶ್ರೀ ಪುಲಿಮಾರು ಮರೆದ ಶ್ರೀಪಾದರು 'ಕುಮುದಾತನಯ' ಎಂಬ ಕಾವ್ಯನಾಮದಿಂದ ಸಾಹಿತ್ಯ ಕ್ಷೇತ್ರಕ್ಕೆ ನೀರು ಹೊಯ್ಯತೊಡಗಿದ್ದಾರೆ ಇವರ 'ನನ್ನ ಜೀವ'ವೆಂಬ ಕವಿತೆಯು ಆತ್ಮ ಪ್ರಬೋಧಕವಿದೆ. ನಶ್ವರವಾದ ದೇಹದಲ್ಲಿ ಹೊಕ್ಕ ಆತ್ಮವು ಜ್ಞಾನ ಮಾರ್ಗಗಾಮಿಯಾಗಿ ಮುಂದುವರಿದು ಪರಮಾತ್ಮನ ಆಶ್ರಯ ಪಡೆದು ಕಂಪು ಹೂವಾಗಿ ದಳದಳಸ ಬೇಕು ಎಂಬ ಹಂಬಲ ಇಲ್ಲಿ ಪ್ರಕಟವಾಗಿದೆ." ದ್ವಂದ್ವ"ಎಂಬುದರಲ್ಲಿ ಶಬ್ದಗತಿಯಿರುವುದರ ಮನವರಿಕೆಯಾಗುತ್ತದೆ; ಮನಸ್ಸಿನ ಹೊಯ್ದಾಟ ತೋರುತ್ತದೆ. ಲೋಕಾನುಭವವೂ ಸಾಧನೆಯೂ ಪರಿಪಕ್ವಗೊಳ್ಳುತ್ತ ಬಂದಾಗ ಇವರ ಕವಿತೆಗಳಿಗೆ ಗಣ್ಯಸ್ಥಾನ ದೊರೆಯಬಹುದು.

ಶ್ರೀ ಕು. ಸೀತಾರಾಮ ಅಡಿಗರ ಕವಿತೆಗಳಲ್ಲಿ ಹೆಚ್ಚಾಗಿ ವಿಚಾರಗಳು ಪ್ರಕಟವಾಗಿವೆ. 'ಕೀಪ್ ಲೆಫ್ಟ್', ಹೆಣ್ಣು ಹೊಟ್ಟೆ ಎಂಬೀ ಕವನಗಳು



ಬಿಹಾರದ ರಾಜ್ಯಪಾಲರಾಗಿ ನೇಮಕಗೊಂಡ ಶ್ರೀ ಅನಂತಶಯನಂ ಅಯ್ಯಂಗಾರರು

ಉನ್ನತ ಮಟ್ಟದಲ್ಲಿವೆ. ಕೆಲವೆಡೆ ವ್ಯಂಗ್ಯಾರ್ಥವನ್ನು ವಾಚ್ಯವನ್ನಾಗಿ ಮಾಡುವ ಗೋಜಿಗೆ ಕವಿಗಳು ಹೋಗಿದ್ದಾರೆ. ಭಾವಪ್ರಧಾನ ನವ್ಯಕಾವ್ಯಗಳಲ್ಲಿ ಇದೆಷ್ಟು ಉಚಿತವೋ ಹೇಳ ಬರುವುದಿಲ್ಲ. ಅಂತೂ ಮನಸ್ಸನ್ನು ಕೆದಕಿದ ಭಾವವನ್ನು ಲೇಖನಿಯಿಂದ ಮೂಡಿಸಬಲ್ಲ ಶಕ್ತಿ ಶ್ರೀ ಅಡಿಗರಿಗಿದೆ.

ಪುಸ್ತಕದ ಮೂರನೆಯ ಭಾಗ ಶ್ರೀ ಗೋವಿಂದಾಚಾರ್ಯರದು. ಇವರ ಕವನಗಳೆಲ್ಲವೂ ಉತ್ತಮವಾಗಿವೆ. 'ಪ್ರಕೃತಿ-ಪುರುಷ', 'ಶ್ವಾನೋಪನಿಷತ್', 'ಬೇಡ ಕಂದ' ಇವು ಒಳ್ಳೆಯವು. ಇಲ್ಲಿನ ಕೆಲ ಕವಿತೆಗಳು ನಿರಾಸೆಯಿಂದ ನೊಂದ ಕವಿ ಹೃದಯವನ್ನು ಬಿಚ್ಚಿ ತೋರಿಸುತ್ತಿವೆ ಎನ್ನಬಹುದು. ಈ ನಿರಾಶೆಗೆ ಉತ್ತರವಾದರೂ ಶಾಬ್ದರೂಪದಿಂದ ದೊರೆಯುವುದಿಲ್ಲ; "ನೂರು ನುಡಿಗಳೂ ಹೇಳದ ಹೊಸತನ್ನು ಮೌನದ ಮಯಿಲೇ ನುಡಿಯುತ್ತಿದೆ" ಆ ಮೌನವನ್ನು ಅರ್ಥಮಾಡಿಕೊಳ್ಳಬಲ್ಲವನಿಗೆ ಅದರ ಅರಿವಾಗುತ್ತದೆ. ಇದೇ ಕಾವ್ಯದ ಗುಣವಲ್ಲವೆ?

ಪುಸ್ತಕದ ಆದಿಯಲ್ಲಿ ಶ್ರೀ ಆಚಾರ್ಯರು ನವ್ಯ ಕವಿತೆಗಳ ಕುರಿತು ಅನುಸಂಧಾನಾತ್ಮಕ ಪ್ರಸ್ತಾವನೆ ಬರೆದಿದ್ದಾರೆ; ಕೊನೆಯಲ್ಲಿ ಕವಿತೆಗಳ ಸಂದರ್ಭಗಳನ್ನು ನೀಡಿದ್ದಾರೆ. 'ಮುಕ್ಕಣ್ಣ ದರ್ಶನ' ಸ್ವಾಗತಾರ್ಹ ಪ್ರಕಟಣೆಯೆಂದು ಧಾರಾಳವಾಗಿ ಹೇಳಬಹುದು.

—ಗೋರಾ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ನಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಸುಲಭ ದರದಲ್ಲಿ ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ಕವಲು ದಾರಿ — ಕೆಂಪು ದೀಪ

ಆಸಕ್ತಿಯುಳ್ಳವರು ಬೇಕಾಗಿದ್ದಾರೆ!

—ಸುದಾಸ.

ವಿಲಾಸಮಯ ಜೀವನ—ಬೆಲೆ ಬಾಳುವ ಕಾರು, ಪೂರ್ಣಾಲಂಕೃತದ ಮನೆ ಕುಳಿತಲ್ಲಿ, ನಿಂತಲ್ಲಿ ಸತ್ಕಾರ, ಮುಗುಳು ನಗೆಯ ಸ್ವಾಗತ—ಯಾರಿಗೆ ಬೇಡ? ಹಸ್ತಾಕ್ಷರಕ್ಕಾಗಿ ಕಾದು ನಿಂತಕ್ಕೂ ಕುಶಲವೇ, ಕ್ಷೇಮವೇ, ಎಂದಿಷ್ಟೇ ಕೇಳಿ ಉತ್ತರ ಪಡೆಯಲು ಕಾತರರಾಗಿರುವ ಜನತೆ ಸ್ವಪ್ನ ಸಾಮ್ರಾಜ್ಯವೇನೋ ಎನ್ನುವಂತಹ ಭ್ರಮೆ! ಈ ಸಂಭ್ರಮದ ಬದುಕು ಕಹಿಯಾಗುವದೆಂದು ಯಾರು ಅನ್ನುತ್ತಾರೆ? ಯಾರು ಬಯಸುವದಿಲ್ಲ, ಈ ವೈಭವಪೂರ್ಣ ಆಗರದಲ್ಲಿ ಮುಳುಗಲು?

ಆ ಬಿನ್ನಾಣಗಿತ್ತಿಯರ ಓರೆ ನೋಟ, ಮುದ್ದು ನಗೆಯ ಮಾತುಗಳು, ವೈಯಾರದ ನಡಿಗೆ—ಒಂದೊಂದೂ ಲಕ್ಷಾಂತರ ರೂಪಾಯಿ ಬೆಲೆ ಬಾಳಬಹುದು, ಹರಾಜು ಹಾಕಿದರೆ?

ಯುವಕರ ತುಂಟತನದ ಚೆಲ್ಲಾಟ ಮೈನವಿರೇಳಿಸುತ್ತದೆ? 'ನೀನಿಲ್ಲದಿರೆ ನಾನಿರಲಾರೆ' ಎಂಬ ವಿರಹದ ಪ್ರಸ್ತಾವನೆ, 'ನಿನ್ನನ್ನು ಕಂಡು ನಾನು ಹುಚ್ಚನಾಗಿದ್ದೇನೆ, ನಿನ್ನ ಪ್ರೇಮಾಂಬುಧಿಯಲ್ಲಿ ನನ್ನನ್ನು ಮುಳುಗಿಸು' ಎಂಬ ಪ್ರೇಮದ ಯಾಚನೆ. 'ಈ ಜಗತ್ತಿನಲ್ಲಿ ನಮ್ಮನ್ನು ಬೇರ್ಪಡಿಸುವವರು ಯಾರಿದ್ದಾರೆ' ಎಂಬ ಸಿಂಹ ಗರ್ಜನೆ—ಇಂತಹ ಪುರುಷನಿರದ ಹೆಣ್ಣಿನ ಬಾಳು ರೋಸಿ ಹೋಗದೆ ಇನ್ನೇನಾದೀತು? ಆ ದುರಂತದಲ್ಲೇ ಒಂದು ಸೊಬಗು, ಆ ಸುಖಾಂತದಲ್ಲೇ ಇನ್ನೊಂದು ಬೆಡಗು. ಇದು ಸಿನೆಮಾ ಪ್ರಪಂಚ.

ಬೇಕಾಗಿದ್ದಾರೆ! ಆಸಕ್ತಿಯುಳ್ಳವರು ಬೇಕಾಗಿದ್ದಾರೆ!! ಇನ್ನೆಂದೂ ಸಿಗಲಾರದ ಸುಸಂದರ್ಭ! ಇಂದೇ ಹತ್ತು ರೂಪಾಯಿ ಕಳಿಸಿ, ತಾರೆಯರಾಗಿ ಮಿನುಗಿರಿ! ನಿಮ್ಮ ಅದೃಷ್ಟವನ್ನು ನಾಶಗೊಳಿಸಬೇಡಿರಿ!!

ಸಹಸ್ರಾರು ರೂಪಾಯಿ ಸಂಭಾವನೆಯ ಸದವಕಾಶ. ನಾಯಕ-ನಾಯಿಕೆಯಾಗಿ ಮೆರೆದಾಡುವ ಸುಯೋಗ. ಹತ್ತಲ್ಲ ನೂರು ಕೊಡಬಹುದು, ಆದರೆ ಈ ಛಾನ್ಸ್ ಕೈತಪ್ಪಿ ಹೋಗಬಾರದು.

ಲಿಂಗಕ್ಕನುಸಾರವಾಗಿ ನೀವು ನಟರೋ ನಟಿಯೋ ಆಗುತ್ತೀರಿ, ನಿಜ. ಸಂಬಳ? (ಅದನ್ನು ಬೇಕಾಗಿದ್ದರೆ ಸಂಭಾವನೆಯೆಂದೇ ಕರೆದುಕೊಳ್ಳಿ.) ದಿನಕ್ಕೆ ಎರಡರಿಂದ ಐದು. ಅದೃಷ್ಟವಿದ್ದರೆ ಹತ್ತರವರೆಗೂ ಸಿಗಬಹುದು. ಆದರೆ ಕೆಲಸ ಮಾತ್ರ ತಿಂಗಳಲ್ಲಿ ಹದಿನೈದು ದಿನಕ್ಕಿಂತ ಹೆಚ್ಚಿಗೆಯಿಲ್ಲ. (ನಿಮ್ಮಂತೆಯೇ ಕಾದು ಕುಳಿತವರು ಎಷ್ಟು ಸಹಸ್ರ ಮಂದಿಯೋ? ಸಿಗಬೇಡವೇ ಅವರಿಗೂ ಅವಕಾಶ?) ಅಂತೆಯೇ ಈ ಹತ್ತು ಹದಿನೈದು ದಿನ ಅಭಿನಯಿಸುವ ಭರವಸೆಯೂ ಇರುವದಿಲ್ಲ. ಒಂದು ಸ್ಟುಡಿಯೋದಿಂದ ಇನ್ನೊಂದಕ್ಕೆ ಅಲೆದಾಟ. ಉಪವಾಸವಿದ್ದರೂ ಯಾರು ಕೇಳುತ್ತಾರೆ, ಅಲ್ಲಿ?

ಹೇಳಲು ಮರೆತೆ. ಹೆಣ್ಣು-ಹುಡುಗಿಯರಿಗೆ ಸ್ವಲ್ಪ ರಿಯಾಯಿತಿ ಇದೆ ಇಲ್ಲಿ. ಯಾಕೆಂದರೆ ಮುಂದಿನ ಭವಿಷ್ಯದ ಹಗಲುಗನಸಿಗಾಗಿ, ತಮ್ಮ ಮಾನದ ಬಲಿ ಒಪ್ಪಿಸುತ್ತಾರೆ ಅವರು. ಆದರೆ ಭವಿಷ್ಯದಲ್ಲಿ ಅವರ ಪಾಲಿಗುಳಿಯುವದೇನು? ಅಂದಗೆಟ್ಟ ಶರೀರ, ನರಕಪೂರಿತ ಬದುಕು, ಅವಹೇಳನೆಯ ಜೀವನ. ಈ ಸುಖಕ್ಕಾಗಿಯೇ ಅವರು ತಮ್ಮ ಮಾನದ ಪಣತೊಟ್ಟುದೇ? ಇದಕ್ಕಾಗಿಯೇ ಅವರು ಗೃಹತ್ಯಾಗ ಮಾಡಬೇಕಾಯಿತೇ? ಇವರಿಗೂ, ಅಧಃಪತನದ ಅಂತಿಮ ಘಟ್ಟದಲ್ಲಿ ನರಳುತ್ತಿರುವ ವೇಶ್ಯೆಯರಿಗೂ ಯಾವ ವ್ಯತ್ಯಾಸವಿದೆ? ಚಲಚಿತ್ರ ನಿರ್ಮಾಪಕರ ಉದಾರಕೃಪೆಯ ಫಲವಿದು. ಮಹಾ ಮಾನವತೆಯನ್ನು ಜಗತ್ತಿಗೆ ಸಾರುತ್ತಿರುವ ಮಹಾನುಭಾವರುಗಳ ಉದಾರತೆಯ ಅಡಿಯಲ್ಲಿ ರೂಪುಗೊಳ್ಳುತ್ತಿದೆ ಈ ನರಕ. ಮನೋಕಾಮನೆಯ ನುರುಳುತನದಲ್ಲಿ ಚಿಗುರೊಡೆಯುತ್ತಿದೆ ಈ ವಿಷಬೀಜ.

ಇದನ್ನು ತಡೆಗಟ್ಟಬೇಕು. ಈ ನರಕದ ದಾರಿಗೆ ಮುಳ್ಳು ಬೇಲಿಯನ್ನು ಕಟ್ಟಲೇಬೇಕು. ಈ ಹೊಲಸು ವ್ಯಭಿಚಾರ ಕೊನೆಗಾಣಲೇ ಬೇಕು. ಎಷ್ಟು ಹುಡುಗಿಯರೋ ತಮ್ಮ ಶರೀರ ಒಪ್ಪಿಸಿದವರು. ಎಷ್ಟು ಹುಡುಗಿಯರೋ ತಮ್ಮ ಹೃದಯ ಒಪ್ಪಿಸಿದವರು. ಮುಂದಿನ ಭವ್ಯ ಭವಿಷ್ಯಕ್ಕಾಗಿ ಹೀರೋಯಿನ್‌ಗಳಾಗಲಿಕ್ಕಾಗಿ ಮಾನದ ಪಣತೊಟ್ಟವರು ಅದೆಷ್ಟೋ ಮಂದಿ.

ಯುವಕರೆಲ್ಲಿ ಕಡಿಮೆಯಿದ್ದಾರೆ. ದಿನವಿಡೀ ಅಲೆದಾಡುವದು ಅವರಿಗೆ ಪ್ರಯಾಸವೆನಿಸುವದಿಲ್ಲ. ಅವಹೇಳನೆಯ ನುಡಿ ಕೇಳುವಾಗ ಲಜ್ಜಿತರಾಗುವದಿಲ್ಲ. ಅಂಗಲಾಚುವಿಕೆ ಅಪ್ರಿಯವೆನಿಸದು. ಸಹಸ್ರ ಸಹಸ್ರ ಮಂದಿ ಈ ದರಿದ್ರ ನರಕದ ಮಹಾದ್ವಾರದಲ್ಲಿ ಕಾದು ಕುಳಿತಿದ್ದಾರೆ.

ಅವರೆಲ್ಲರೂ ನಾಳಿನ—ಭವಿಷ್ಯದ ಹೀರೋ, ಹೀರೋಯಿನ್‌ಗಳು!

ಒಬ್ಬಾಕೆ ಕೇಳುತ್ತಾಳೆ: 'ನಾನು ತಾರೆಯಾಗಬೇಕೆಂದಿದ್ದೇನೆ. ನಿಮ್ಮ ಅಭಿಪ್ರಾಯವೇನು?' 'ನನ್ನಲ್ಲಿ ನಟನಾಕೌಶಲ್ಯವಿದೆ. ನಾನು ಸಿನೆಮಾಕ್ಕೆ ಸೇರಬಹುದೆ?' ಇದು ಇನ್ನೊಬ್ಬನ ಸಮಸ್ಯೆ. 'ಏರಿದ ಈ ಅಮಲು ಅಪಾಯಕಾರಿಯಾಗಿದೆ. ಚಿಕಿತ್ಸೆ ಮಾಡಿಸಿಕೊಳ್ಳಿ' ಎಂಬುದು ಈ ಪ್ರಶ್ನೆಗಳಿಗೆ ಸಂಪಾದಕರ ಉತ್ತರ.

ಆದರೂ ಈ ಹುಚ್ಚು ಬಿಟ್ಟು ಹೋಗುವಂತಹದಲ್ಲ. ಸಿನೇಮಾದಲ್ಲಿಯ ವಿಶಿಷ್ಟ ಪ್ರೇಮೋಪಾಸನೆಯನ್ನು ಬೀದಿಯಲ್ಲಾದರೂ ಸರಿಯೆ ಎಂದು ಆರಂಭಿಸುತ್ತಾರೆ. "ಅಯ್ಯಯ್ಯೋ ಹೋಗಯ್ಯ ಪ್ಯಾರ್ ಮಕ್ಕು ಸುಕ್ಕು" ಎಂಬ ಹಾಡು ಸಹಿತ ಚೇಷ್ಟೆ. ಇವತ್ತಿನ ಸುಧಾರಣಾ ಪ್ರಪಂಚದಲ್ಲಿ ಒಂದು ಫ್ಯಾಷನ್ ಆಗಿದೆ. ಅತೃಪ್ತ ಬಯಕೆಯನ್ನು ಹೇಗಾದರೂ ತೀರಿಸಿಕೊಳ್ಳಬಯಸುವ ಇಂದಿನ ನಮ್ಮ ನಾಗರಿಕ ಜೀವನ ಇಷ್ಟು ಕೆಳಮಟ್ಟಕ್ಕಿಳಿಯಬಾರದಿತ್ತು. ಆದರೆ ದಿನೇ ದಿನೇ ವೃದ್ಧಿಯಾಗುತ್ತಿರುವ ಈ ಕಾಹಿಲೆಗೆ ಇನ್ನೂ ಔಷಧಿ ಕಂಡುಹಿಡಿಯಲಾಗಿಲ್ಲ, ಪ್ರಪಂಚದ ವಿಜ್ಞಾನಿಗಳಿಗೆ! ಚಲನಚಿತ್ರ ಪ್ರಪಂಚವನ್ನು ಪ್ರವೇಶಿಸಿ, ನಾನು ಮೆರೆದಾಡುತ್ತೇನೆ. ಇಲ್ಲವೆ ಹೊರಗಿದ್ದುಕೊಂಡಾದರೂ, ಆ ಪುಣ್ಯಜೀವಿಗಳ ಅನುಕರಣೆ ಮಾಡಿ ಜೀವಿಸುತ್ತೇನೆ. ಎಂಬ ದಿಶೆಯಲ್ಲಿಯೇ ಬದುಕಿನ ಸಾರ್ಥಕತೆಯನ್ನು ಕಾಣಬಯಸುವ ತರುಣ-ತರುಣಿಯರ ಮೆರವಣಿಗೆಯನ್ನು ಕಂಡೇ ಹಿರಿಯರು ಕಾಲ ಬದಲಾಗಿದೆ ಎನ್ನುವ ಉದ್ಗಾರವೆತ್ತುತ್ತಾರೆ.

ಹೌದು. ಕಾಲ ಬದಲಾಗಿದೆ; ಬದಲಾಗುತ್ತಲೂ ಇದೆ. ಪರಿವರ್ತನೆಯೇ ಕಾಲದ ವಿಶಿಷ್ಟ ಗುಣ. ಅಂತೆಯೇ ಇಂದಿರುವ ಕಾಲವೂ ಕೊನೆಯುಸಿರೆಳೆಯುವದು ಒಂದು ದಿನ. ಈ ಉನ್ಮತ್ತ ಗುಣದ ಹುಚ್ಚು ಹೊಳೆ ಸ್ತಬ್ಧವಾಗುವ ದಿನವೂ ಒಂದಿದೆ. ಸಮಾಜಘಾತಕ ವಿಷಯಗಳನ್ನು ಪ್ರತಿಭಟಿಸಲು, ಜನತೆ ಎಚ್ಚರಗೊಳ್ಳುವ ದಿನ ಉದಯವಾಗುವದು ಮುಂದೊಮ್ಮೆ. ಆಗ—ನಮಗೆ ವಾಸ್ತವಿಕತೆ ಬೇಕಾಗಿದೆ ಎಂಬ ಸಿಡಿಲು ವಿಲಾಸೀ ಪ್ರಪಂಚದಲ್ಲಿ ಸಿಡಿಯುತ್ತದೆ. ಸಮಾಜ ಶೋಷಣೆಯ ಅರ್ಥಹೀನ ದಾರಿಯನ್ನು ನಾಳಿನ ಯುವಕರು ಮುಚ್ಚಿಬಿಡುವರು. ತನ್ನ ಸ್ವಾರ್ಥಕ್ಕಾಗಿ ಮುಗ್ಧ ಜೀವಿಗಳ ಹೃದಯವನ್ನು ಮಲಿನಗೊಳಿಸುವ ಶೋಷಕ ವರ್ಗ ನಿರ್ಮೂಲಗೊಳ್ಳುವ ಸುದಿನ ಸಮೀಪಿಸುತ್ತಿದೆ. ಅಬಲೆಯರುದ್ಧಾರಕ್ಕಾಗಿ, ಅಸಹಾಯರನ್ನು ಎತ್ತಿ ಹಿಡಿಯುವ ಸಲುವಾಗಿ ನಮಗಿಂದು ಬೇಕಾಗಿದೆ, ಉತ್ಸಾಹೀ ತರುಣವೃಂದ. ಪಾಶವೀ ಪ್ರವೃತ್ತಿಯನ್ನು ಹೊಸ ರಕ್ತ ಹಿಂದೆ ತಳ್ಳತೊಡಗಿದೆ. ಎಲ್ಲರೊಂದಾಗೋಣ ಮೊದಲು. ಇಂದಿನ ಜಾಗರಣೆ ನಾಳಿನ ನವೋದಯಕ್ಕಾಗಿ. ಒಮ್ಮುಖವಾದ ಜಾಗರಣೆ ಇಂದು. ನಾಡಿನ ಯುವಕರೇ, ಯುವತಿಯರೇ, ವಿಲಾಸದ ಸುಪ್ಪತ್ತಿಗೆಯಿಂದ ಎದ್ದು ಬನ್ನಿ-ಹಗಲುಗನಸುಗಳ ಮುಸುಕನ್ನು ಬದಿಗೊತ್ತಿ ಬನ್ನಿ—ಏಕತೆಯ ದಾರಿಗೆ—ನವಜನಾಂಗದ ನವ್ಯತೆಯ ಭವ್ಯತೆಯೆಡೆಗೆ.

ಅಮೃತ ಬಿಂದು

ಕಷ್ಟಗಳನ್ನು ಮನುಷ್ಯನಂತೆ ಎದುರಿಸುವುದಕ್ಕಿಂತ ಮನುಷ್ಯನಿಗೆ ಸಂತನಂತೆ ಉಪದೇಶ ನೀಡುವದು ಸುಲಭ.

೦೦ ೦೦

ಕಷ್ಟದಲ್ಲಿರುವ ಮನುಷ್ಯನ ಬೋಧನೆ ನಂಬಿಕೆ ಹುಟ್ಟಿಸದು; ಸುಖದಲ್ಲಿರುವವನ ಬೋಧನೆ ನಂಬಿಕೆಗನರ್ಹ.

೦೦ ೦೦

ಕತ್ತಲಾದಾಗ ಮಾತ್ರ ನಕ್ಷತ್ರಗಳು ಹೊಳೆಯುವಂತೆ ಕಷ್ಟದಲ್ಲಿ ಮಾತ್ರ ಮನುಷ್ಯನ ತೇಜಸ್ಸು ಬೆಳಗುವದು.

೦೦ ೦೦

ಯೌವನದಲ್ಲಿ ದಿನಗಳು ಚಿಕ್ಕವೆಂದೂ ವರ್ಷವು ದೀರ್ಘವೆಂದೂ (೬೦ ಇದ್ದವರು ೨೦ ಎನ್ನುತ್ತಾರೆ) ತೋರಿದರೆ ವೃದ್ಧಾಪ್ಯದಲ್ಲಿ ದಿನಗಳು ದೀರ್ಘವೆಂದೂ, ವರ್ಷಗಳು ಚಿಕ್ಕವೆಂದೂ (೫೦ ಆಗಿದ್ದರೆ ೭೦ ಎನ್ನುತ್ತಾರೆ) ತೋರುವವು.

೦೦ ೦೦

ಪ್ರತಿ ವರ್ಷ ವ್ಯವಸಾಯ ಮಾಡುವದರಿಂದ ಭೂಮಿ ಬರಡಾಗುತ್ತದೆ. ಶಕ್ತಿ ಮೀರಿ ಅನವರತ ಚಿಂತಿಸುವುದರಿಂದ ತಲೆ ಕಂಡಾಗುತ್ತದೆ.

೦೦ ೦೦

ಭೂಮಾತೆಗಿಂತ ದಯಾಪೂರಿತ ವಸ್ತು ಬೇರಿಲ್ಲ; ಭೂಮಿಯನ್ನು ಅಗೆದಷ್ಟೂ ಗಿಡವಾಗಿ ನಗುತ್ತಾಳೆ!

೦೦ ೦೦

ನನಗೊಪ್ಪಿದ ಗೆಳೆಯರೆಂದರೆ ನಮ್ಮ ಅಭಿಪ್ರಾಯಗಳಿಗೆಲ್ಲಾ ಒಪ್ಪುವವರು.

ಪುತ್ತೂರು ಡಿ. ಮುಂ. ಕೋರ್ಟಿನಲ್ಲಿ

S. C. 417/61

ಕೆ. ಪದ್ಮನಾಭ ನಾಯ್ಕ —ವಾದಿ

ಪುತ್ತಮ್ಮ ನಾಯ್ಕೆದಿ ಚಂಕು ನಾಯ್ಕನ ಮಗಳು ಬೆಳ್ತಂಗಡಿ ತಾಲೂಕು ಸವಣಾಲು ಗ್ರಾಮ. ಪ್ರತಿವಾದಿ

ಪ್ರತಿವಾದಿಗೆ ತಿಳಿಸುವುದೇನೆಂದರೆ—

ಚಾಲಗೇಣಿ ಬಾಕಿಯ ವಸೂಲಿ ಬಗ್ಗೆ ವಾದಿಯು ದಾಖಲು ಮಾಡಿದ ಈ ದಾವೆಯು ತಾ. 6-6-62ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for plaintiff.

ಪುತ್ತೂರು, ತಾ. 4—4—1962.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ಶೀಘ್ರವಾಗಿ ವೃದ್ಧಿ ಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು—3



ಬೆಳ್ಳಿಯ ಪಾತರಗಿತ್ತಿ

(೨ನೇ ಪುಟದಿಂದ)

ಲ್ಲಿ ಅಡುಗೆ ಮಾಡುವ ಕೆಲಸ ದೊರೆಯಿತು!! ನನ್ನ ಹೊಣೆ ಇನ್ನೂ ಹೆಚ್ಚಾಯಿತು ಮುಂಜಾನೆ ಕಚೇರಿ ಕೆಲಸ ಮುಗಿಸಿ—ಮಣ್ಣು ಅಗಿಯಲು ಹೋಗಿ ದಿನವಿಡೀ ದುಡಿದು ರಾತ್ರಿ—ಸಾರ್ವತ್ರಿಕ ಮೀಟಿಂಗ್ (ಪ್ರತಿ ದಿನ ೧೧ ಘಂಟೆ ತನಕ)—ಆದರೂ ನನಗೆ ಹೊಟ್ಟೆಯ ಪ್ರಶ್ನೆಯೇ ಬಗೆಹರಿಯುತ್ತಿದ್ದಿಲ್ಲ, ನಾನು ನನ್ನ ಹೆಂಡತಿ ಇಬ್ಬರೂ ಸಂಘದಲ್ಲಿ ದುಡಿಮೆ ಮಾಡುವ ಕಾರಣ ನಮಗೆ ಊಟದ ಪಾಸು—ದೊರೆತಿತ್ತು,, ಆದರೆ ನನ್ನ ತಾಯಿಯವರು ಏನೂ ಕೆಲಸ ಮಾಡುತ್ತಿದ್ದಿಲ್ಲವಾದ್ದರಿಂದ ಅವರಿಗೆ ಊಟದ ಟಿಕೇಟು ದೊರೆತಿದ್ದಿಲ್ಲ,, ನಮ್ಮ ಸೆಂಟ್ರಲ್ ಮಸ್ಸಿನ ಕಮಾಂಡರನ್ನು ಕಂಡು ಈ ಬಗ್ಗೆ ಪ್ರಸ್ತಾಪಿಸಿದೆ—ಕಮಾಂಡರ ಬೇರಾರೂ ಆಗಿರಲಿಲ್ಲ ನಮ್ಮೂರ ಕ್ಷೌರಿಕನ ಮಗನಾಗಿದ್ದ. ಇವರಿಗೆ ದೊಡ್ಡ ದೊಡ್ಡ ಹುದ್ದೆ ದೊರೆತಿತ್ತು ಇಂತಹ ಎಷ್ಟೋ ಕಮಾಂಡರರಿದ್ದರು ಎಲ್ಲರೂ ಹಳ್ಳಿಯ ರೈತರ ಯುವಕ ಮಕ್ಕಳು ದನ ಕಾಯುವವರ—ಕ್ಷೌರಿಕರು ಇವರಿಗೆಲ್ಲ ಜೀವನವೈಸರಸವಾಗಿತ್ತು ನನ್ನನ್ನು ಉದ್ದೇಶಿಸಿ ಕಮಾಂಡರನೆಂದ ನಿನ್ನ ತಾಯಿಯೂ ಕೆಲಸ ಮಾಡಲೇ ಬೇಕು, ಅವಳು ಬೇರಾವ ಕೆಲಸ ಮಾಡಲಾರದವಳಾದರೆ ಊರ ಬಾಲಸಂಗೋಪನ ಕೇಂದ್ರದಲ್ಲಿ ಮಕ್ಕಳ ಆರೈಕೆ ಮಾಡಲಿ' ಎಂದನು ಆಯಿತೆಂದು ನನ್ನ ತಾಯಿಯನ್ನ ಅಲ್ಲಿ ಸೇರಿಸಿದೆ!

“ಕೆಲದಿನ ವಿಶೇಷ ತೊಂದರೆಯಿಲ್ಲದೆ ದೂಡುತ್ತಿತ್ತೋ ಏನೋ! .ಆದರೆ ಊರಲ್ಲಿಯ ನಮ್ಮ ಹಿಂದಿನ ಮನೆಯನ್ನೇ ಸಾರ್ವಜನಿಕ ಶಿಶುಸಂಗೋಪನ ಕೇಂದ್ರವನ್ನಾಗಿ ಅರಿತಿದ್ದರು. ನನ್ನ ತಾಯಿಯವರು ಆ ಮನೆ ಸೇರಿದಂದಿನಿಂದ ಅವರಿಗೆ, ತಮ್ಮ ಗೃಹಿಣಿತನದ ಪ್ರತಿ ನಿಮಿಷವೂ ನೆನಪಾಗುತ್ತಿರಬೇಕು. ಮೊದಲಿದನ್ನು ಕಮ್ಯುನಿಸ್ಟರ ಕಚೇರಿಯನ್ನಾಗಿಯೂ, ತನ್ನಂತರ ಯೋಧರ ಬೀಡಾರವನ್ನಾಗಿ ಆ ಮೇಲೆ ಒಂದು ಬಂದಿಖಾನೆಯನ್ನಾಗಿಯೂ ಉಪಯೋಗಿಸಿ ಇದೀಗ ಶಿಶುಸಂಗೋಪನಕ್ಕೆಂದು ಅರಿಸಿದ್ದರು

“ಯಾವ ಮನೆಯಲ್ಲಿ ರಾಣಿಯಾಗಿ ಮೆರೆದಿದ್ದಳೋ ಅದೇ ಮನೆಯಲ್ಲಿ ನನ್ನಮ್ಮನು ಒಬ್ಬ ಗುಲಾಮಗಿಂತಲೂ ಕಡೆಯಾಗಿ ಜೀವಿಸಬೇಕಾದಾಗ ತಾಯಿಗೆ ಎಷ್ಟು ಬೇಸರವಾಗಿರಲಾರದು! ಆ ಶಿಶುಸಂಗೋಪನ ಕೇಂದ್ರದ ಅಧಿಕಾರಿಣಿಯಾಗಿದ್ದವಳು ನಮ್ಮದೇ ರೈತನೊಬ್ಬನ ಮಗಳು. ಅವಳಿಗೆ ಎಳ್ಳಷ್ಟೂ ತಾಳ್ಮೆ ಇರಲಿಲ್ಲ. ನನ್ನ ತಾಯಿಯು ಜಮೀನುದಾರನ ಹೆಂಡತಿಯಾದ್ದರಿಂದ ಅವಳಿಗೆ ಸಹ ಮೇಲ್ವಾಸಕರ ಅಂಜಿಕೆಯಿತ್ತು. ಕಾರಣ ನನ್ನ ತಾಯಿಯನ್ನು ಅವಳು ಕೆಂಗಣ್ಣಿನಿಂದಲೇ ನೋಡುತ್ತಿದ್ದಳು.

“ಈ ಪರಿಸ್ಥಿತಿಯಲ್ಲಿಯೂ ನಾವು ದಿನ ದೂಡಬಹುದಾಗಿತ್ತು ಆದರೆ ಒಂದು ದಿನ ಸುಮಾರು ಐದಾರು ವರ್ಷದ ಹುಡುಗನೊಬ್ಬನು ಆ ಶಿಶುಸಂಗೋಪನ ಕೇಂದ್ರದಲ್ಲಿ ಸೇರಿಸಲ್ಪಟ್ಟನು ಅವನು ಕೇಂದ್ರದಲ್ಲಿ ಸೇರಿಸುವಾಗ ಅಸಲು ಪಕ್ಕ ಪಿಸಿದ ನನ್ನ ತಾಯಿಯುವನನ್ನು ನೋಡಿದ್ದೇ ತತ್ಕ್ಷಣ ಅದೇ ವಯಸ್ಸಿನಲ್ಲಿ ತೀರಿದ ಮಗುವನ್ನು ನೆನಸಿಕೊಂಡಳು ಆ ಮಗುವನ್ನು ತನ್ನ ಕಳೆದ ಮಗುವೆಂದೇ ನಿಷ್ಕಲಂಕ ಪ್ರೀತಿಯಿಂದ ಸಲಹಲು ಉಪಕ್ರಮಿಸಿದಳು ಸಂಗೋಪನ ಕೇಂದ್ರದಲ್ಲಿ ಎಲ್ಲರಿಗೂ ಸಮಾನ ದೃಷ್ಟಿಯಿಂದ ನೋಡಬೇಕಾಗಿತ್ತು. ಇದಕ್ಕೂ ಒಂದು ದಾರಿ ಹುಡುಕಲಾಗಿತ್ತು. ಚಿಕ್ಕ ಮಕ್ಕಳಿಗೆ ತೋಟದಲ್ಲಿ ಹುಲ್ಲು ತೆಗೆಯುವ ಕಲಸವನ್ನೂ ದೊಡ್ಡವರಿಗ ಕಲ್ಲು ಮಣ್ಣು ಹೊರುವ ಕೆಲಸವನ್ನೂ ಕೊಟ್ಟು ಅವರನ್ನು ಕೆಲಸದಲ್ಲಿ ಪ್ರೇರೇಪಿಸಿ—ಹಟ ಕೂಗನ್ನು ಮರೆಯಿಸುತ್ತಿದ್ದರು. ಅವರಿಗೆ ದಿನಾ ಒಂದು ತಾಸು ಪಾಠವೂ ಒಂದು ತಾಸು ಆಟವೂ ಏರ್ಪಡಿಸಲ್ಪಟ್ಟಿತ್ತು

“ನನ್ನ ತಾಯಿಯು ಒಲುಮೆಗೊಂಡಿದ್ದ ಹುಡುಗನು ಕಿಡಿಗೇಡಿ ಕೆಲಸಗೇಡಿ—ಹಟಮಾರಿಗಳಲ್ಲೊಬ್ಬನಾಗಿದ್ದ ಅವನನ್ನು ಸಮಾಧಾನ ಪಡಿಸಲು ನನ್ನ ತಾಯಿಯು ಅವನ ಪಾಲಿನ ಕೆಲಸ ಮಾಡಿ ಕೊಡುತ್ತಿದ್ದಳು. ಆದರೆ ನನ್ನ ತಾಯಿಯು ಈ ಬಗ್ಗೆ ಕೇಂದ್ರದ ಶಾಸಕ ಮಹಿಳೆಯಿಂದ ಹಲವಾರು ಹೇಳಿಕೆ ಕೇಳಬೇಕಾಯಿತು, ಅಲ್ಲದೆ— ಎಲ್ಲಿಯಾದರೂ ಊಟಕ್ಕೆ ಕೃಚ್ಛ್ರ ಬಂದೀತೆಂದು ಹೆದರಿ ತನ್ನ ಒಲುಮೆಯನ್ನು ಬದಿಗೆ ಸರಿಸಿ—ಹಗಲು ಆ ಹುಡುಗನಿಂದ ದೂರವಿರಬೇಕಾಯಿತು ಆದರೆ ಅವಳು ಅವನ ಬಗ್ಗೆ ಇಟ್ಟಿದ್ದ ಮಾತೃ ಪ್ರೇಮವು ರಾತ್ರಿ ಅವಳನ್ನು ಅವನೆಡೆಗೆ ಒಯ್ಯುತ್ತಲೇ ಇತ್ತು ಅವನನ್ನ ತನ್ನ ಮಗ್ಗುಲಿನಲ್ಲಿಟ್ಟು ಮಲಗಿದಾಗಲೇ ಅವಳಿಗೆ ಮನಃಶಾಂತಿಯು ಸಿಗುತ್ತಿತ್ತು. ಇದರಿಂದಾಗಿ ನನ್ನ ತಾಯಿಯು ಉಳಿದ ಕೆಲಸಗಾರರ ಹಾಗೂ ಕೇಂದ್ರದ ಶಾಸಿಕೆಯಿಂದ ನಿಷ್ಠುರ ಕಟ್ಟಿಕೊಳ್ಳಬೇಕಾಯಿತು ಎಲ್ಲರೂ ಅವಳನ್ನು ತೆಗಳುತ್ತಿದ್ದರು

“ಈ ಬಾಲಸಂಗೋಪನ ಕೇಂದ್ರವು ನಮ್ಮದೇ ಮನೆಯಾಗಿದ್ದು, ಅದೇ ಮನೆಯೊಡತಿಯು ಇಂದು ಅದೇ ಮನೆಯ ಕಸ ತೆಗೆಯುವ ಕೆಲಸ ಮಾಡಬೇಕಾಗಿತ್ತು ಒಂದು ದಿನ ಕಸ ತೆಗೆಯುವಾಗ ಅವಳಿಗೆ ಪಕ್ಕನೆ ಒಂದು ವಿಷಯ ಹೊಳೆಯಿತು. ಕಟ್ಟಿಗೆ ಕೋಣೆಯೊಂದರ ಗೋಡೆಯ ಗುಳಿಯೊಂದರಲ್ಲಿ ಕೆಲ ಮುತ್ತುಗಳನ್ನೂ ಆಭರಣಗಳನ್ನೂ ಇಟ್ಟಿದ್ದಳು ಅವೇನೂ ಬೆಲೆಬಾಳುವಂಥವಾಗಿರದಿದ್ದರೂ ಹುಡುಗರನ್ನಾಡಿಸಲು ಉಪಯುಕ್ತನಾಗಿದ್ದುವು ಅವಳು ಈ ನೆನಪಾಗುತ್ತಲೆ ಆ ಸ್ಥಳದಲ್ಲಿ ಶೋಧಿಸಿದಳು ಸಿಕ್ಕಿದ ಮೂರು ವಸ್ತುಗಳಲ್ಲಿ ಕೊನೆಯದಾದ “ಬೆಳ್ಳಿಯ ಪಾತರಗಿತ್ತಿ,,ನೋಡಲು ಅಂದವಾಗಿತ್ತು



ಅಂತರಿಕ್ಷ ಯಾತ್ರೆ ಮಾಡುವ ಆಕಾಶ ಬಾಣದಲ್ಲಿ ಮಾನವನು ಕುಳಿತುಕೊಂಡಿರುವ ದೃಶ್ಯ

ಆದರ ಮಾಟವು ನಾಜೂಕಾಗಿದ್ದು, ರೆಕ್ಕೆಯ ಮೇಲೂ ಕಣ್ಣುಗಳಲ್ಲಿಯೂ ಮುತ್ತುಗಳ ಹೊಂದಿಕೆಯಿದ್ದು—ಅವು ಬಣ್ಣಬಣ್ಣದ್ದಿದ್ದವು ಅವಳು ಒಂದು ದಿನ ಅದನ್ನು ಧರಿಸಿದಳು ಅದು ಮೊದಲಿಂದಲೂ ತನ್ನಲ್ಲಿತ್ತೆಂದೂ ಅದನ್ನು ಧರಿಸುತ್ತಿದ್ದಿಲ್ಲವಾಗಿತ್ತೆಂದೂ ಅವಳು ತಿಳಿಸಿದಳು

“ಒಂದು ದಿವಸ ನನ್ನ ತಾಯಿಯ ಒಲುಮೆಗೆ ಪಾತ್ರನಾದ ಆ ಹುಡುಗನು ಹುಲ್ಲು ಕತ್ತರಿಸುವಾಗ ತನ್ನ ಕೈಯನ್ನು ಕತ್ತರಿಸಿಕೊಂಡು ಗಾಯಮಾಡಿಕೊಂಡನು ಮೊದಲೇ ಬಾಲಸಂಗೋಪನದ ಉಳಿದ ಕಾರ್ಯನಿರ್ವಾಹಕರಿಂದ ಅವಹೇಳನೆಗೆ ಪಾತ್ರನಾಗಿದ್ದ ಆ ಹುಡುಗನನ್ನು ಸುಮ್ಮನಿರಿಸಲು ಯಾರೂ ಬರಲಿಲ್ಲ ಆದರೆ ನನ್ನ ತಾಯಿಯು—ಆ ಮಗುವನ್ನು ಎತ್ತಿ ಯಾರಿಲ್ಲದ ಸ್ಥಳಕ್ಕೆ ಕರೆದೊಯ್ದು—ಗಾಯವನ್ನು ತೊಳೆದು ಔಷಧ ಹಚ್ಚಿ ಹುಡುಗನನ್ನು ಸಮಾಧಾನಿಸಲು ತನ್ನ ‘ಬೆಳ್ಳಿಯ ಪಾತರಗಿತ್ತಿ’ಯನ್ನವನಿಗೆ ತೋರಿಸಿ ‘ಇದೋ ನೋಡು, ಎಷ್ಟು ಅಂದವಾಗಿರುವ ಪಾತರಗಿತ್ತಿ! ನಿನಗಾಗಿ ತಂದಿದ್ದೇನೆ ಇದನ್ನು ನಿನಗೇ ಕೊಡುವೆ ಇದನ್ನು ನಿನ್ನಿಂದ ಯಾರೂ ಒಯ್ಯಲಾರರು! ಎಂದು ಅವನ ಕೈಗಿತ್ತು ಅವನನ್ನು ಸಂತುಷ್ಟಗೊಳಿಸಿದಳು’

“ಆ ಹುಡುಗನು ಅಂತಹ ವಸ್ತು ನೋಡಿರಲಿಲ್ಲ. ಅವನಿಗೆ ಎಲ್ಲಿಲ್ಲದ ಸಂತೋಷವಾಯಿತು. ಅವನು ಅದನ್ನು ಅತ್ತ ತಿರುವಿ—ಇತ್ತ ತಿರುವಿ ನೋಡುತ್ತಾ ತನ್ನ ನೋವನ್ನೂ ಮರೆತ. ಪ್ರತಿದಿನ ರಾತ್ರಿ ನನ್ನ ತಾಯಿಯು ಆ “ಬೆಳ್ಳಿಯ ಪಾತರಗಿತ್ತಿ'ಯನ್ನವನಿಗೆ ತೋರಿಸುವುದೂ ಅವನು ಅದನ್ನು ತನ್ನ ಕೈಯ್ಯಲ್ಲಿಟ್ಟು ಆಡಿ ನಿದ್ರಿಸುವುದೂ ಪರಿಪಾಠವಾಯಿತು ಇದು ಭೋಜನ ಗೃಹದ ಶಾಸಿಕೆಗೆ (ಅಧಿಕಾರಿಣಿಗೆ) ತಿಳಿಯಬಾರದೆಂದೂ ಉಳಿದ ಹುಡುಗರಿಗೆ ಯಾರಿಗೂ ತಿಳಿಸಬಾರದೆಂದೂ ಅವಳು ಆ ಮಗುವಿಗೆ ಹೇಳಿದ್ದಳು ಆದರೆ ಹುಡುಗ ಬುದ್ಧಿಯ ಆ ಬಾಲಕನಿಗೇನು ತಿಳಿಯಬೇಕು ಹುಡುಗನು ಕೆಲದಿನ ಯಾರಿಗೂ ಹೇಳಲಿಲ್ಲ. ಆದರೆ ತಾನಾಗಿಯೇ ಮುಂದಿನ ವಾರದಲ್ಲಿ ಎಲ್ಲ ಹುಡುಗರಲ್ಲಿಯೂ ಅವನು ತನ್ನ ಕಡೆಗಿದ್ದ ಆ ‘ಬೆಳ್ಳಿಯ ಪಾತರಗಿತ್ತಿ” ವಿಷಯ ತಿಳಿಸಿದ್ದ ನನ್ನ ತಾಯಿಯನ್ನು ಕರೆಯಿಸಿ ವಿಚಾರಣೆ ನಡೆಸಿದರು ಇದಕ್ಕೆ ಶಿಕ್ಷೆಯಾಗಿ “ಬಹಿರಂಗ ಮಾನದಂಡನೆ,,

‘ಈ ಹಿಂದೆ ಎಷ್ಟೋ ಮಾನ ದಂಡನೆ ನೋಡಿದ್ದ ಆದರೆ ಇಂದು ನಾನು ಎಲ್ಲರಿಗಿಂತ ಹಿಂದೆ ನಿಂತಿದ್ದೆ. ನಾನು ನೋಡಲಾರದವನಾಗಿದ್ದೇ ಆದರೆ ನಿಯಮದಂತೆ ನನ್ನ ಮುಂದೆಯೇ ಅವಳಿಗೆ ಶಿಕ್ಷೆ ನಡೆಯಬೇಕಾಗಿತ್ತು, ಹೊಟ್ಟೆಯ ಪಾಡು .. ಸಮಾಜದ ನಿಯಮ! ನಾನವರ ಕೈಗೊಂಬೆಯಾಗಿದ್ದೆ —ನನ್ನ ತಾಯಿ ನನ್ನ ಪರಿಸ್ಥಿತಿಯನ್ನರಿತಿದ್ದಳು ಅವಳು ಹಸನ್ಮುಖಿಯಾಗಿಯೇ ಇದ್ದಳು. ನನಗೆ ಕರುಳು ಕತ್ತರಿಸುವ ವೇದನೆಯಾಗಿತ್ತು ಸನ್ನಿವೇಶ ನನ್ನ ತಾಯಿಯನ್ನು ಹಿಂಗೈ ಕಟ್ಟಿ ಎಲ್ಲರ ಮುಂದೆ ನಿಲ್ಲಿಸಿದ್ದರು. ಅವಳಿಗೆ ೬೬ ವರ್ಷ ದಾಟಿ ಹೋಗಿತ್ತು. ಶರೀರದಲ್ಲಿ ನಿತ್ರಾಣಳಾಗಿದ್ದಳು. ಎಲ್ಲರೂ “ಇವಳನ್ನು ಹೊಡೆಯಿರಿ, ಬಹಿಷ್ಕಾರ ಮಾಡಿರಿ,, ಎಂದು ಕೂಗಿ ಅವಳನ್ನು ಕೆಸರಿ ತುಳಿಯಬೇಕಾಗಿತ್ತು. ನಾನೂ ಹಾಗೆ ಮಾಡಲೇ ಬೇಕಾಗಿತ್ತು, ಹೆತ್ತ ತಾಯನ್ನು. ನಿಯಮೋಲ್ಲಂಘನೆ ಮಾಡಿದರೆ ನನಗೂ ಶಿಕ್ಷೆ. ಪ್ರತಿಯೊಬ್ಬರೂ ಅವಳನ್ನು ದೂಡಿದರು. ಅವಳು ಬಿದ್ದಳು ಕೆಲವರು ಕೈ ಮುಷ್ಟಿಯಿಂದ ಹೊಡೆದರು. ನನ್ನನ್ನೂ ದುರಗುಟ್ಟಿ ನೋಡಿ ಒತ್ತಾಯಿಸಿದರು ನಾನು ತಾಯಿಯ ಮುಂದೆ ವೈರಿಯಾಗಿ ಅವಳನ್ನು ತುಳಿಯುವ ವೇಳೆ ಬಂತು ನಾನು ಮುಂದೆ ನಿಂತಿದ್ದೆ ಅವಳೊಮ್ಮೆ ನನ್ನನ್ನು ನೋಡಿದಳು. ನಾನು ಬೆವತಿದ್ದೆ.

Tel ‘BLUEYAGAR’. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone. 374

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜು ಎದುರುಗಡೆ)ಮಂಗಳೂರು ಮಾಲಕ ಕೆ.ಕೆ ಆರ್.ಶೇಟ್

ನನ್ನ ಮೋರೆ ಬೆಳಗಿಕೊಂಡಿತ್ತು — ಅವಳು ಮಲಗಿದ್ದಲ್ಲಿಯೇ ಕರ್ತವ್ಯ ಮಾಡೆಂದು ತಿಳಿಸಿದಳು.— ಅವಳ ಅನುಮತಿಯಂತೆ ಮುನ್ನುಗ್ಗಿದೆ— ಕರ್ತವ್ಯ ಪರಿಪಾಲನೆಯಾಗಿತ್ತು.—ಆ ಬೆಳ್ಳಿಯ ಪಾತರಗಿತ್ತಿಯನ್ನವರು ಅವಳಿಂದ ಅಪಹರಿಸಿಬಿಟ್ಟಿದ್ದರು. ಅಂತೂ ಅವಳ ಜೀವವೊಂದನ್ನು ಬಿಟ್ಟಿದ್ದರು.

"ನನ್ನ ತಾಯಿಯನ್ನು ಅವರು ಮುಕ್ತಗೊಳಿಸಿದೊಡನೆ ಅವಳು ಎದ್ದು ಆ ಹುಡುಗನನ್ನರಸಿ ಹೊರಟಳು. ಅವನ ಸರಿಗೆಯ ಹುಡುಗರಿಂದ ಬಹಿಷ್ಕರಿಸಲ್ಪಟ್ಟುದೊಡತದಿಂದ ಮೈಯೆಲ್ಲಾ ತುಮುಲಗಿದ್ದ ಆ ಮಗುವನ್ನೆತ್ತಿ ಕಣ್ಣೀರಿಟ್ಟಳು.— ನನ್ನ ತಾಯಿ ಆ ಮಗುವನ್ನು ಎತ್ತಿಕೊಂಡು ತನ್ನ ಗುಡಿಸಲಿಗೆ ಹೊರಟಳು. ಇದಿಲ್ಲ ನನಗೆ ಹೇಗೆ ತಿಳಿಯಿತೆಂದು ನೀವು ಚಕಿತಗೊಳ್ಳಬಹುದು.—ನನ್ನ ಹೆಂಡತಿಯು ರಾತ್ರಿಯ ಅಡಿಗೆ ಕೆಲಸ ಮುಗಿಸಿ ಏನೋ ನೆಪ ಹೇಳಿ ಅವಕಾಶವೊದಗಿಸಿಕೊಂಡು, ಬಾಲವಾಡಿಯತ್ತ ತೆರಳಿದ್ದಳು. ಅವಳು ನನ್ನ ತಾಯಿಯನ್ನು ಅನುಸರಿಸಿ - ನಡೆದ ವಿಷಯ ತಿಳಿಸಿದ್ದಳು.

"ನನ್ನ ತಾಯಿ ಆ ಮಗುವನ್ನು ಕರೆದೊಯ್ದು "ಮಗೂ, ನಾನೇನೆಂದು ತಿಳಿಸಲಿ. ನಾನೀಗ ನನ್ನ ಮಗನಿಗೂ ಭಾರವಾಗಿದ್ದೇನೆ. ಇದೆಲ್ಲ ನಾನು ಸಹಿಸಿದ್ದು ಅವನು ಜೀವಿಸಲೇ ಬೇಕಾಗಿದೆ. ಅದು ಅವನ ದೋಷವಲ್ಲ ಸಮಾಜ. ಈ ಸಮಾಜ! ಈ ಅಧಿಕಾರದ ದೋಷ.— ಕಾಲಮಾನದ ವೈಪರೀತ್ಯ. ಇರಲಿ ಬಾಪ್ಪಾ. ನಾವು ಹೋಗೋಣ, ಬೇರೆಲ್ಲಿಯಾದರೂ ಹೋಗೋಣ.'

ಆ ಮಗುವಿನ ಮೈಯೆಲ್ಲ ಬಾತುಕೊಂಡಿತ್ತು. ಅವನರವನು ಇನ್ನೂ 'ಬೆಳ್ಳಿಯ ಪಾತರಗಿತ್ತಿ'ಯನ್ನು ಮರೆತಿದ್ದಿಲ್ಲ.—ಅವನೆಂದ ಎಲ್ಲಿದೆಯಮ್ಮಾ ಆ 'ಬೆಳ್ಳಿಯ ಪಾತರಗಿತ್ತಿ" ನನಗೆ ಕೊಡಮ್ಮಾ ಎರಡು ಹಟಹಿಡಿದ.

"ನನ್ನೊಟ್ಟಿಗೆ ಬಾ. ಆ ನದಿಯ ದಂಡೆಯಲ್ಲಿ ಅನೇಕ ಪಾತರಗಿತ್ತಿಗಳಿವೆ. ಬಣ್ಣ ಬಣ್ಣದವು. ಸಜೀವವಾಗಿ ಹಾರಾಡಿ– ಸ್ವತಂತ್ರವಾಗಿ ನದಿಯ ನೀರು ಕುಡಿಯುತ್ತಲಿರುತ್ತವೆ.' ನನ್ನ ತಾಯಿಯು ಮಗುವನ್ನು ಎತ್ತಿಕೊಂಡು ಮಬ್ಬುಗತ್ತಲೆಯಲ್ಲಿಯೇ ನಡಿಯುತ್ತ ಹೊರಟಳು. ನನ್ನ ತಾಯಿಯ ಕುತ್ತಿಗೆಯನ್ನಪ್ಪಿ ಹುಡುಗ ಕುಳಿತಿದ್ದ. ನನ್ನ ತಾಯಿಯು ನೀರಿನಲ್ಲಿಳಿದಳು. ಮೊಣಕಾಲು....ಎದೆಯ ವರೆಗೆ.... ಬಾಯಿಯವರೆಗೆ.... ಮುಂದೆ.... ಮುಂದೆ ನಡಿಯುವುದಕ್ಕೂ ನನ್ನ ತಾಯಿಯೂ ಆ ಮಗುವೂ... ಪಾತರಗಿತ್ತಿಯನ್ನು ನೋಡಲು ಹೊರಟರು...ಅದೇನೋ ಸಣ್ಣ ಕೂಗು...ಮಗುವಿನದು ಆ ರಾತ್ರಿ ಅದೂ ಕತ್ತಲೆಯ ರಾತ್ರಿಯಲ್ಲಿ ಯಾರು ಕೇಳುವವರು! ಮರುದಿನ ಊರಿನ ಹೊರಗೆ ಮೂರು ಮೈಲಿನಾಚೆಗೆ ನನ್ನ ತಾಯಿಯದೂ, ಆ ಮಗುವಿನದೂ ಶವ ದೊರೆತಾಗ – ನಾನಾಗಲಿ ನನ್ನ ಹೆಂಡತಿ ಯಾಗಲಿ ವೇದನೆಗೊಳ್ಳಲಿಲ್ಲ.

ಪಾಕಿಸ್ತಾನದ ಹೊಸ ಗತ್ತುಗಾರಿಕೆ

(೧ನೇ ಪುಟದಿಂದ)

ಭಾರತದ ದೃಢನಿಲುವು

ಭಾರತದ ಈ ಧೋರಣೆಯಿಂದ ಅಮೆರಿಕೆಯು ಭಯಭೀತವಾಗುವುದು ಸಹಜ. ಅಮೆರಿಕೆಯಿಂದ ಅದು ಹೆಚ್ಚಿನ ಪ್ರಯೋಜನಗಳಿಸುತ್ತಿದೆಯೆಂಬುದೂ ನಿಜ. ಆದರೆ ಇಷ್ಟರಿಂದಲೇ ಅಮೆರಿಕೆಯು ಭಾರತಕ್ಕೆ ನೀಡುವ ವಿದೇಶೀ ಸಹಾಯದ ಮೊತ್ತದಲ್ಲಿ ನೂರಕ್ಕೆ ಇಪ್ಪತ್ತೈದರಷ್ಟು ಕಡಿತಮಾಡಿತು. ನಾಲ್ಕನೆಯ ಬೃಹತ್ ಉಕ್ಕಿನ ಕಾರಖಾನೆಯೆನಿಸುವ ಬುಕಾರೊ ಯೋಜನೆಗೆ ನೀಡಲಿರುವ ಸಹಾಯದ ಬಗ್ಗೆಯೂ ಸಂದೇಹ ವ್ಯಕ್ತಪಡಿಸಿತು. ಆದರೆ, ಅಮೆರಿಕನ್ ಸಹಾಯವು ದೊರೆಯಲಿ, ದೊರೆಯದಿರಲಿ, ಈ ಯೋಜನೆಯನ್ನು ಖಂಡಿತಕ್ಕೂ ಕೈಬಿಡುವುದಿಲ್ಲವೆಂದು ಭಾರತ ಉದ್ದಿಮೆಯ ಮಂತ್ರಿ ಸುಬ್ರಹ್ಮಣ್ಯಂ ಖಡಾ ಖಂಡಿತವಾಗಿ ಹೇಳಿದ್ದಾರೆ. ಈ ಪರಿಸ್ಥಿತಿಯನ್ನು ಅನುಲಕ್ಷಿಸಿಯೋ ಎಂಬಂತೆ, ಈಗ, ಪಾಕಿಸ್ತಾನಕ್ಕೆ ಅಮೆರಿಕೆಯು ವಿಮಾನಗಳನ್ನು ಒದಗಿಸುವುದಿಲ್ಲವೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ.

ಪಾಕ್ ನಾಯಕರ ಭ್ರಮೆ

ಭಾರತದ ವಿರುದ್ಧ ಶೀತಯುದ್ಧವನ್ನು ಕೈಬಿಡಲು ಪಾಕ್ ನಾಯಕರು ಸಿದ್ಧರಿಲ್ಲ. ಆದುದರಿಂದ ಅವರು ಹೊಸತೊಂದು ಹಂಚಿಕೆಯನ್ನು ಹೂಡಿದ್ದಾರೆ. ಪಾಕಿಸ್ತಾನವೂ ನ್ಯಾಟೋ, ಒಡಂಬಡಿಕೆಯಲ್ಲಿ ಸೇರಿದ ಒಂದು ರಾಷ್ಟ್ರ. ಒಂದು ಲೈಸನ್ಸಿಗನುಸಾರವಾಗಿ, ನ್ಯಾಟೋ ಸೇನೆಗಾಗಿ ಇಟೆಲಿಯಲ್ಲಿ ವಿಶೇಷ ರೀತಿಯ ಜೆಟ್ ಯುದ್ಧ ವಿಮಾನಗಳು ನಿರ್ಮಾಣವಾಗುತ್ತಿವೆ. ಆಜಾದ ಕಾಶ್ಮೀರದ ವಾಯು ಸೇನೆಗೆಂದು 'ಇಂತಹ ವಿಮಾನಗಳನ್ನು ಕೊಂಡುಕೊಂಡು ತನ್ನ ಸೈನಿಕ ಶಕ್ತಿಯನ್ನು ಹೆಚ್ಚಿಸುವ ಹವಣಿಕೆಯದರದು. ಈ ಬಗ್ಗೆ ಆವಶ್ಯಕ ಮಾತುಕತೆಯನ್ನು ಅದು ಮೊದಲುಗೊಳಿಸಿದೆ. ಈ ಹೊಸ ತಂತ್ರವೇನೇ ಇದ್ದರೂ ಕಾಶ್ಮೀರದ ಮೇಲೆ ತನಗಿರುವ ಅಧಿಕಾರವನ್ನು ಬಿಟ್ಟುಕೊಡಲು ಭಾರತವೆಂದಿಗೂ ಸಿದ್ಧವಿರುವುದಿಲ್ಲ. ಆಜಾದ ಕಾಶ್ಮೀರದಲ್ಲಿ ಇದುವರೆಗೆ ವಾಯು ಸೇನೆ ಎಂಬುದಿರುವುದಿಲ್ಲ. ಅಲ್ಲೀಗ ಇಂತಹ ಒಂದು ಸೇನೆ ರಚಿಸುವ ಪಾಕ್ ನಾಯಕರ ಇರಾದೆಯೇನೆಂಬುದು ವಿವೇಕಿಗಳೆಲ್ಲರಿಗೂ ಮನವರಿಕೆಯಾಗುತ್ತದೆ; ಆದರೆ, ಇಷ್ಟರಿಂದಲೇ ಅವರ ಕನಸು ನನಸಾಗುವುದೆಂಬುದು ಶುದ್ಧ ವಿಭ್ರಮೆ ಮಾತ್ರ.

ಆಂದೋಲನದ ಯೋಚನೆ

'ಅಖಿಲ ಜಮ್ಮೂ ಮತ್ತು ಕಾಶ್ಮೀರ'ವೆಂಬ ದೊಡ್ಡ ಹೆಸರನ್ನಿಟ್ಟುಕೊಂಡಿರುವ ರಾವಲ್ಪಿಂಡಿಯ ಮುಸ್ಲಿಂ ಸಮ್ಮೇಳನದಲ್ಲಿ ಅಧ್ಯಕ್ಷ ಚೌಧರಿ ಗುಲಾಂ ಅಬ್ಬಾಸರು ಭಾರತವನ್ನು ಹೆದರಿಸುವ ಪ್ರಯತ್ನ ಮಾಡಿದರು. ಕಾಶ್ಮೀರದಲ್ಲಿರುವ 'ಯುದ್ಧ ವಿರಾಮ ರೇಖೆ'ಯನ್ನು ದಾಟುವ ಆಂದೋಲನವೊಂದನ್ನು ಶೀಘ್ರದಲ್ಲಿಯೇ ಘೋಷಿಸುತ್ತೇನೆಂದಿವರು ಆರ್ಭಟಿಸಿದರು. ಕಾಶ್ಮೀರ ವಿವಾದದ ಕುರಿತು ಭದ್ರತಾ ಸಮಿತಿಯು ವಿಫಲಗೊಂಡುದರಿಂದ ಈ ಆಂದೋಲನವನ್ನು ಪುನಃ ತೊಡಗಿಸುವುದು ಉಚಿತ; ೧೯೫೮ರಲ್ಲಿಯೇ ಪಾಕ್ ಸರಕಾರವು ಇದನ್ನು ಸಮ್ಮತಿಸುತಿದ್ದರೆ, ಇತಿಹಾಸದ ರೂಪವೇ ಬದಲಾಗುತ್ತಿತ್ತು" ಎಂದು ಈ ಬಾರಿ ಪಾಕಿಸ್ತಾನ ಸರಕಾರವು ಇದನ್ನು ತಡೆಯಲಾರದೆಂಬ ಆಶೆಯನ್ನು ಇವರು ವ್ಯಕ್ತಪಡಿಸಿದರು. ೧೯೫೮ರಲ್ಲಿ ಆಂದೋಲನದಲ್ಲಿ ಭಾಗವಹಿಸಿದವರನ್ನು ಪಾಕ್ ಸರಕಾರವು ಬಂಧಿಸಿತ್ತು.

ಏಕತೆಯೇ ಶಸ್ತ್ರ

ಹೀಗೆ ಒಂದಲ್ಲ ಹತ್ತು ವಿಧಗಳಿಂದ ಪಾಕಿಸ್ತಾನವು ಭಾರತವನ್ನು ಬಗ್ಗುಬಡೆಯಲು ಹವಣಿಸುತ್ತಿದೆ. ಇದಕ್ಕೆ ಕೆಲವು ವಿದೇಶೀಯರೂ ಒತ್ತಾಸೆ ನೀಡುತಿದ್ದಾರೆ. ಇದರ ದುರ್ಲಾಭ ಪಡೆಯ ಬಯಸುವ ಪಾಕ್ ನಾಯಕರು ಧರ್ಮವನ್ನು ಮಾರುತ್ತಿರುವರೆಂದು ಅವಶ್ಯ ತಿಳಿದುಕೊಳ್ಳಬೇಕು. ದೇಶದ ಸಮಗ್ರತೆಯುಳಿಸುವುದು ಕೇವಲ ಸರಕಾರದ ಕರ್ತವ್ಯವಲ್ಲ. ಅದು ಇಡಿಯ ದೇಶದ ನಾಗರಿಕರ ಪರಮ ಕರ್ತವ್ಯ. ರಾಷ್ಟ್ರೀಯ ಭಾವನೆಯೇ ನಮ್ಮ ಶಸ್ತ್ರ; ಏಕತೆಯೇ ಅಸ್ತ್ರ. ಶತ್ರುಗಳ ಉಪಟಳದಿಂದ ರಾಷ್ಟ್ರವನ್ನು ಪಾರುಗೊಳಿಸುವಲ್ಲಿ ಭಾರತವು ಎಂದಿಗೂ ಹಿಂದುಳಿಯದು; ನಮ್ಮ ರಾಜಕೀಯ ಭಿನ್ನಾಭಿಪ್ರಾಯಗಳೇನೇ ಇದ್ದರೂ ಸಮಗ್ರ ದೇಶದ ಪ್ರಶ್ನೆ ಬಂದಿರುವಾಗ ನಾವೆಲ್ಲರೂ ಒಂದೇ ಎಂಬ ಭಾವನೆ ಈಗಾಗಲೇ ನಮ್ಮಲ್ಲಿ ಮೂಡಿ ಬಂದಿದೆ, ಇದನ್ನು ಬೆಳೆಸುತ್ತ ಬರುವುದು ಅತ್ಯವಶ್ಯ.

ಮಧ್ಯ ಪ್ರದೇಶದ ಉಪಚುನಾವಣೆಯಲ್ಲಿ ಗೆದ್ದ ಡಾ| ಕೈಲಾಸನಾಥ ಕಟ್ಜು.

ಉಳಿತಾಯಗಾರರ ಆಪ್ತ ಗೆಳೆಯ

ಪಿಗ್ಮಿ....... ಪಿಗ್ಮಿ ಸಂಗ್ರಾಹಕ
ನಿಮ್ಮಲ್ಲಿಗೆ ಬರುವರು;
ನಿಮ್ಮ ಉಳಿತಾಯ ಯೋಜನೆಯನ್ನು
ಕಾರ್ಯರೂಪಕ್ಕೆ ತರಲು ಸಹಕರಿಸುವರು.

ಪಿಗ್ಮಿ....... ಜನಪ್ರಿಯ ದಿನವಹಿ
ಉಳಿತಾಯ ಯೋಜನೆ;
ಸರ್ವರಿಗೂ ಅನುಕೂಲವಾದುದು.

ಪಿಗ್ಮಿ ...... ದಿನವಹಿ
25 ನ. ಪೈಸೆಗಳು
7 ವರುಷಗಳಲ್ಲಿ
700 ರೂಪಾಯಿಗಳಾಗಿ
ವೃದ್ಧಿಗೊಳ್ಳುವುವು.

ಸಿಂಡಿಕೇಟ್ ಬ್ಯಾಂಕ್



ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.
ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ,
ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

Edited Printed & Published by K. H. Shetty, at the Navayuga Press, Udipi, S. India.

...ನ್ಮು ಯಾವತ್ತೂ
...ದ್ರಣ ಕೆಲಸಗಳಿಗೆ
...ಮಾಡಿ ವಿಚಾರಿಸಿ.
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೩೮ | ಉಡುಪಿ 31—5—1962 ಗುರುವಾರ | Vol. 41 No. 38

ಚೀನ—ಭಾರತ ವಿವಾದದಲ್ಲಿ

ಚೀನ ರಾಯಭಾರಿ ಕಛೇರಿಯ ದುರ್ನೀತಿ

ವಿಶ್ವಬಾಂಧವ್ಯವನ್ನು ಹೆಚ್ಚಿಸುವ ಸದುದ್ದೇಶದಿಂದ ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳ ನಡುವೆ ಸೌಹಾರ್ದಮಯ ಸಂಬಂಧವನ್ನು ಇಟ್ಟುಕೊಳ್ಳುವುದು ಇಂದಿನ ಕಾಲದಲ್ಲಿ ಸರ್ವಸಾಮಾನ್ಯವಾಗಿದೆ. ಇದರಿಂದಾಗಿಯೇ ಹೆಚ್ಚಿನ ಎಲ್ಲಾ ರಾಷ್ಟ್ರಗಳೂ ಇತರ ದೇಶಗಳೊಡನೆ ರಾಯಭಾರಿ ಸಂಬಂಧವನ್ನು ಇಟ್ಟುಕೊಂಡಿವೆ ಎರಡು ಸರಕಾರಗಳ ನಡುವಣ ವಿಚಾರ ವಿನಿಮಯ, ಸುದ್ದಿಗಳ ಪ್ರಸಾರ ಹಾಗೂ ಸಂಬಂಧ ರಕ್ಷಣೆ ಮೊದಲಾದುವುಗಳು ಈ ರಾಯಭಾರಿ ಕಚೇರಿಗಳ ಮೂಲಕವೇ ನಡೆಯುತ್ತಿರುತ್ತವೆ. ಕೆಲವೊಂದು ರಾಯಭಾರಿ ಕಛೇರಿಗಳು ತಮ್ಮ ರಾಷ್ಟ್ರದ ಬಗ್ಗೆ ಮೈತ್ರಿಯ ಮನೋಭಾವನೆಯನ್ನು ಹೆಚ್ಚಿಸುವುದಕ್ಕಾಗಿ ಪತ್ರಿಕೆಗಳನ್ನು ಹೊರಡಿಸುವುದೂ ಉಂಟು. ಇಂತಹ ಪತ್ರಿಕೆಗಳು ಹೆಚ್ಚಾಗಿ ಏಕಪಕ್ಷೀಯ ಅಭಿಪ್ರಾಯಗಳನ್ನು ಮನ್ನಿಸುವುದು ಅಸಾಧ್ಯವಾಗಿರುತ್ತದೆ. ಇವುಗಳಲ್ಲಿ ಎರಡೂ ಸರಕಾರಗಳಿಗೆ ಒಪ್ಪಿತವಿರುವ ಮತ್ತು ಉಭಯ ರಾಷ್ಟ್ರಗಳ ಪ್ರಜೆಗಳ ನಡುವೆ ಮೈತ್ರಿಯು ಬಲಪಡುವಂತಹ ಲೇಖನಗಳೇ ಸಾಮಾನ್ಯವಾಗಿ ಪ್ರಕಟಗೊಳ್ಳಬೇಕಾಗುತ್ತದೆ. ಇದಕ್ಕೆ ತಪ್ಪಿದರೆ, ಏಕಪಕ್ಷೀಯ ಅಭಿಪ್ರಾಯವನ್ನೇ ಎತ್ತಿಹಿಡಿದರೆ, ದೇಶ–ದೇಶಗಳ ನಡುವೆ ತಿಕ್ಕಾಟ ಇದೆಯೆಂಬುದು ಜಗಜ್ಜಾಹೀರಾಗುವುದು ಮಾತ್ರವಲ್ಲ, ಆ ತಿಕ್ಕಾಟವು ಮತ್ತಷ್ಟು ಉಲ್ಬಣಾವಸ್ಥೆಗೇರುವ ಪ್ರಸಂಗವು ಬರುವುದನ್ನು ತಡೆಗಟ್ಟುವಂತಿಲ್ಲ.

ಚೀನ ಟು-ಡೇ

ಇಂತಹ ಅನಪೇಕ್ಷಣೀಯ ಹಾಗೂ ಕಹಿಯಾದ ಪ್ರಸಂಗವೊಂದು ಇತ್ತೀಚೆಗೆ ಭಾರತದ ರಾಜಧಾನಿಯಲ್ಲಿ ಸಂಭವಿಸಿತು. ಚೀನಿಯ ರಾಯಭಾರಿ ಕಛೇರಿಯು "ಚೀನಾ ಟು—ಡೇ" ಎಂಬ ಒಂದು ಪತ್ರಿಕೆಯನ್ನು ನವದೆಹಲಿಯಿಂದ ಹೊರಡಿಸುತ್ತದೆ. ಇದರಲ್ಲಿ ಆಕ್ಷೇಪಕಾರಕವೆನಿಸಿದ ಲೇಖನವೊಂದು ಮೇ ೫ನೆಯ ದಿನಾಂಕದ ಸಂಚಿಕೆಯಲ್ಲಿ ಪ್ರಕಟವಾಯಿತು. ಈ ಪ್ರಕಟಣೆಯು ಭಾರತ ಸರಕಾರಕ್ಕೆ ಭಾರತೀಯರಿಗೆ ಅಪಮಾನಕಾರಕವಿತ್ತು. ಲೋಕಸಭೆಯ ಕೆಲವು ಸದಸ್ಯರು ಚೀನದ ಏಕಪಕ್ಷೀಯವಾದ ಮತ್ತು ಭಾರತಕ್ಕೆ ಅಪಮಾನಕರವಾದ ಈ ಲೇಖನದ ಪ್ರಕಟಣೆಯ ಬಗ್ಗೆ ಆಕ್ಷೇಪವೆತ್ತಿದರು; ಮಾತ್ರವಲ್ಲ ಆ ಸಂಚಿಕೆಯ ಎಲ್ಲ ಪ್ರತಿಗಳಿಗೂ ಮುಟ್ಟುಗೋಲು ಹಾಕಬೇಕೆಂದು ಕೆಲವರೂ, ಪತ್ರಿಕೆಯ ಪ್ರಕಟಣೆಯನ್ನೇ ನಿಲ್ಲಿಸಲು ಆಜ್ಞೆ ನೀಡಬೇಕೆಂದು ಮತ್ತೆ ಕೆಲವರೂ ಹೇಳಿದರು. ಇದಕ್ಕೂ ಮುಂದುವರಿದು ಒಬ್ಬಿಬ್ಬ ಸದಸ್ಯರು ಇಂತಹ 'ಅಧಿಕಪ್ರಸಂಗ'ತನಕ್ಕೆ ಪ್ರತಿಯಾಗಿ ಭಾರತ ಸರಕಾರವು ಚೀನದೊಡನಿರುವ ರಾಯಭಾರಿ ಸಂಬಂಧವನ್ನು ಕಡಿದುಕೊಳ್ಳಬೇಕು ಎಂದೂ ವ್ಯಕ್ತಪಡಿಸಿದರು.

ಕುರುಡು ಸಮರ್ಥನೆ

ಮೇಲೆ ಪ್ರಕಟಗೊಂಡ ಸದಸ್ಯರ ಅಭಿಪ್ರಾಯಗಳೆಲ್ಲವೂ ಸರಿಯೆಂದು ಹೇಳುವುದು ಕಷ್ಟವಾದರೂ 'ಚೀನಾ-ಟು-ಡೇ' ಪತ್ರಿಕೆಯಲ್ಲಿ ಪ್ರಕಟಗೊಂಡ ಆ ಲೇಖನವು ಇವರ ಮನಸ್ಸನ್ನು ಉದ್ರೇಕಿಸಿದೆಯೆಂಬುದು ಖಂಡಿತ. ಅದು ಉದ್ರೇಕಕಾರಕವೂ ಆಗಿತ್ತು ಎಂಬುದೂ ನಿಜ. ಇಂತಹ ಅಪಪ್ರಚಾರದ ಕಾರ್ಯಕ್ಕೆ, ಅಪಮಾನಕಾರಕವಾದ ಲೇಖನವನ್ನು ಮುದ್ರಿಸಿ, ಉಭಯ ದೇಶಗಳ ನಡುವೆ ಈಗಾಗಲೇ ಬಿದ್ದಿರುವ ಬಿರುಕನ್ನು ಮತ್ತಷ್ಟು ಹಿರಿದುಗೊಳಿಸುವುದಕ್ಕಾಗಿಯೇ ಈ ಪತ್ರಿಕೆಯು ಸಾಧನವಾಗುವುದು ಖಂಡಿತಕ್ಕೂ ಖಂಡನೀಯ. ತನ್ನ ದೇಶದ ಕುರುಡು ನಿಲುವನ್ನು ಸಮರ್ಥಿಸುವ ಹೆಸರಿನಲ್ಲಿ ಭಾರತದ ನೀತಿಯನ್ನು ಭಾರತದಲ್ಲಿಯೇ ಹೊರಡುವ ಈ ಪತ್ರಿಕೆಯ ಮೂಲಕ ದೂರುವುದೆಂದರೆ, ಅದು ಮೈತ್ರಿಯುತ ರಾಯಭಾರಿ ಸಂಬಂಧವಲ್ಲ; ಭಾರತದಲ್ಲಿದ್ದುಕೊಂಡು ಭಾರತೀಯರನ್ನು ಭಾರತದ ವಿರುದ್ಧ ಎತ್ತಿಕಟ್ಟುವ ಸಾಹಸದ ಕಾರ್ಯದ ಪ್ರಚಾರಕೇಂದ್ರವೆಂದು ಹೇಳಲೇಬೇಕು.

ಡಾರ್ಜಲಿಂಗಿನ ಸಮೀಪದಲ್ಲಿರುವ ಕ್ರೋರಸ್ತದ ಕೆಳಗಿರುವ ಭೂತಿಯಾ ಬಸ್ತಿಮಠ.

ಸಾಹಸಪೂರ್ಣ ಪ್ರಸ್ತಾವನೆ

'ಚೀನ ಟು-ಡೇ'ಯ ಮೇ ೫ನೆ ದಿನಾಂಕದ ಸಂಚಿಕೆಯಲ್ಲಿ ಸೀಮಾ ವಿವಾದದ ಬಗ್ಗೆ ಭಾರತ-ಚೀನಾ ಅಧಿಕಾರಿಗಳ ವರದಿಯ ಸಂಕ್ಷಿಪ್ತ ರೂಪ"ವು ಪ್ರಕಟವಾಗಿತ್ತು. ಈ ಸಾರಾಂಶಕ್ಕೆ ಪ್ರಸ್ತಾವನೆಯೂ ಇದ್ದು, 'ವರದಿಯ ಸತ್ಯತೆ ಪರಾಗಳಿಂದ, ಚೀನ ಸರಕಾರವು ವಹಿಸಿದ ನೀತಿಯು ನ್ಯಾಯೋಚಿತವಿದೆ ಎಂಬುದು ಖಚಿತವಾಗುವುದು. ಸೌಹಾರ್ದ ವಾತಾವರಣದಲ್ಲಿ ಪ್ರಶ್ನೆಯನ್ನು ಬಿಡಿಸಲು ಭಾರತ ಸರಕಾರವು ನಿರಾಕರಿಸುತ್ತಿರುವುದು ಮತ್ತು ಚೀನವು ಆಕ್ರಮಣ ಮಾಡಿದೆಯೆಂದು ವಾದಿಸುತ್ತಿರುವುದು ಸರ್ವಥಾ ಅನುಚಿತ. ಚೀನವು ಯಾವಾಗಲೂ ತನ್ನ ಪ್ರಕಟಿತ ನಕ್ಷೆಗಳಲ್ಲಿ ಸಾಂಪ್ರದಾಯಿಕ ಸೀಮಾ ರೇಖೆಯನ್ನೇ ಬಳಸುತ್ತಿದೆ; ಆದರೆ, ಭಾರತದ ನಕ್ಷೆಗಳಲ್ಲಿನ ಸಾಂಪ್ರದಾಯಿಕ ಸೀಮಾ ರೇಖೆಯು ಅನಿಶ್ಚಿತ ಮತ್ತು ಅಪ್ರಾಮಾಣಿಕವಿರುತ್ತದೆ' ಎಂದು ಭ್ರಾಂತಾದ ಅಭಿಪ್ರಾಯಗಳನ್ನು ಮುಂದೆ ತಂದಿದೆ. ಇಷ್ಟು ಮಾತ್ರವಲ್ಲದೆ ಈ ಪತ್ರಿಕೆಯು ಚೀನೀಯ ಟಿಪ್ಪಣಿಗಳನ್ನು ಯಾವ ಪ್ರಸ್ತಾವನೆಯೂ ಇಲ್ಲದೆ ಇದ್ದಕ್ಕಿದ್ದಂತೆ ಪ್ರಕಟಿಸುತ್ತ ಬರುತ್ತಿದೆ.

(೧೨ನೇ ಪುಟ ನೋಡಿರಿ)

ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ ?
ಫರ್ನಿಚರುಗಳಲ್ಲೆಲ್ಲ 'ಹೀರಾ' ತಿಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ ?
ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಓರಣಕ್ಕಾಗಿ— ತಾಳಿಕೆ ಬಾಳಿಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ದೇಶ ವಿಖ್ಯಾತವಾದ 'ಹೀರಾ' ಉಕ್ಕಿನ ಫರ್ನಿಚರುಗಳನ್ನೇ ಉಪಯೋಗಿಸಿರಿ. ವಿಚಾರಿಸಿರಿ, ಯಾ, ಶೋ ರೂಮನ್ನು ಸಂದರ್ಶಿಸಿರಿ.

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಮರೀಚಿಕೆ ಕೈಗೆ ಎಟಕಲಿಲ್ಲ

ಶ್ರೀ ಕೂಡ್ಲು ತಿಮ್ಮಪ್ಪ ಗಟ್ಟಿ.

“ಪೂರ್ಣಿಮಾ,”

ಅವಳ ಕೈತುಂಬಾ ಮಾವಿನ ಹಣ್ಣುಗಳಿದ್ದುವು. ರಾಜಣ್ಣ ಕರೆದುದನ್ನು ಕೇಳಿ ಬೆರಗಾಗಿ ಪೂರ್ಣಿಮಾ ಅತ್ತ ತಿರುಗಿದಳು. ಸ್ವಲ್ಪ ದೂರ, ಮರದ ಮರೆಯ ಬಂಡೆಯ ಮೇಲೆ ಒರಗಿಕೊಂಡು ಏನೋ ಪುಸ್ತಕವನ್ನೋದುತ್ತಿದ್ದ ರಾಜಣ್ಣ ಹತ್ತಿರದಲ್ಲೇ ಬಳೆಗಳ ಸದ್ದು ಕೇಳಿ ಅತ್ತ ನೋಡಿದಾಗ ಮಾವಿನ ಹಣ್ಣುಗಳನ್ನು ಹೆಕ್ಕುತ್ತಲಿದ್ದ ಪೂರ್ಣಿಮಾ ಕಾಣಿಸಿದಳು.

ಆತ ಈತನಕ ಹಾಗೆ ಹೆಸರೆತ್ತಿ ಕರೆದಿರಲಿಲ್ಲ. ಆದ್ದರಿಂದ ಅವಳು ನಾಚಿಕೊಂಡಳು. ಆಗ ರಾಜಣ್ಣ,

“ನನಗೊಂದು ಕೊಡಬಾರದೆ?” ಎಂದ. ಅವಳು ತುಂಬಾ ನಾಚಿಕೊಂಡಳು. ಆದರೂ ಸುಧಾರಿಸಿಕೊಂಡು ಪ್ರಯತ್ನಪೂರ್ವಕವಾಗಿ ಅವನ ಕಡೆ ನೋಡಿ ‘ಬೇಕೇ’ ಎಂದು ಕೇಳಿದಳು.

“ಹೂಂ” ಎಂದು ನಸುನಕ್ಕು ತಲೆಯಲ್ಲಾಡಿಸಿದ ರಾಜಣ್ಣ. ಪೂರ್ಣಿಮಾ ಕೈಲಿದ್ದುದನ್ನೆಲ್ಲಾ ತಂದು ಅವನ ಮುಂದೆ ಹಿಡಿದು “ಹುಂ ಬೇಕಾದ್ದು ತೆಕ್ಕೊಳ್ಳಿ” ಎಂದಳು. ರಾಜಣ್ಣ ಅವಳನ್ನು ಅಪಾದ ಮಸ್ತಕ ದಿಟ್ಟಿಸಿದ. ಹಣ್ಣುಗಳನ್ನು ನೀಡಿ ನಿಂತ ಅವಳ ಭಂಗಿ ಅತ್ಯಂತ ಮನೋಹರವಾಗಿತ್ತು. ಜಾಜಿಯಂತೆ ನೀಳವಾದ ಅವಳ ಕೋಮಲ ಮುಖದಲ್ಲಿ ಅವೆರಡು ಕಣ್ಣುಗಳು ಬಹಳ ಮೋಹಕವಾಗಿದ್ದುವು. ಅವಳ ತುಟಿಗಳಲ್ಲಿ ಎಂದೂ ಮಾಸದ ಮುಗುಳ್ನಗು ನೀಳವಾದ ಜಡೆಯು ಬಲ ಭುಜದ ಮೇಲಿಂದ ಹಾದು ತುಂಬುತ್ತಲಿರುವ ಎದೆಯ ಮೇಲಿಂದ ಸ್ವದಿಲೆಯ ಮೊಗ್ಗುಗಳಂತಿರುವ ಮೊಲೆಗಳ ಮಧ್ಯದಿಂದ ಕೆಳಗಿಳಿದು ಕೃಶವಾದ ನಡುವಿನಲ್ಲಿ ಆಡುತ್ತಿತ್ತು.

ಹಣ್ಣುಗಳನ್ನು ಇಸಕೊಳ್ಳಲು ತಡೆ ಮಾಡಿದುದನ್ನು ನೋಡಿ ಅವಳು ಸುಮ್ಮನೆ ನಕ್ಕಳು. ಅವನು ತನ್ನನ್ನು ಹಾಗೆ ನೋಡುತ್ತಿದ್ದುದನ್ನು ಗಮನಿಸಿ ಸ್ವಲ್ಪ ಸಂಕೋಚಗೊಂಡಳು. ಅಷ್ಟರಲ್ಲಿ ರಾಜಣ್ಣನೂ ನಗುತ್ತಾ ಅವಳ ಬೊಗಸೆಯಿಂದ ಒಂದು ಹಣ್ಣನ್ನು ಆರಿಸಿಕೊಂಡ.

‘ಒಂದು ಸಾಕೆ? ಇವೆಲ್ಲಾ ನಿಮಗಿರಲಿ” ಅವಳೆಂದಳು.

‘ಬೇಡ. ಹಾಗಾದರೆ ನಿನಗೆ?’

‘ಓ, ನನಗೇನು ಮರದ ಬುಡದಲ್ಲಿ ಇನ್ನೂ ಇದೆ’ ಎಂದು ಹಣ್ಣುಗಳನ್ನು ಅವನ ಬಳಿ ಇರಿಸಿದಳು. ರಾಜಣ್ಣ ಅದೇ ಕೈಯನ್ನು ಹಿಡಕೊಂಡು,

‘ಬೇಡ, ಬೇಡ ನನಗಿದೊಂದೇ ಸಾಕು’ ಎಂದ. ಅವಳು ಕೈಕೊಸರಿ ಬಿಡಿಸಿಕೊಂಡು.

“ನಿಮಗೆ ಸಾಕಾದರೆ ನನಗೆ ಬೇಕು” ಎನ್ನುತ್ತಾ ಮರದ ಬುಡಕ್ಕೆ ಓಡಿ ಹೋದಳು. ಅಲ್ಲಿಂದ ಪುನಃ ಕೈತುಂಬಾ ಹಣ್ಣುಗಳನ್ನು ಆರಿಸಿಕೊಂಡು ತಂದಳು. ಇಷ್ಟರ ವರೆಗೂ ಅವಳನ್ನೇ ನಿರೀಕ್ಷಿಸುತ್ತಿದ್ದ ರಾಜಣ್ಣ,

“ಪೂರ್ಣಿಮಾ, ನಿನಗೆ ಹಾಡಲು ಬರುತ್ತದೆಯೇ’ ಎಂದು ಕೇಳಿದ. ಈ ಪ್ರಶ್ನೆಯನ್ನು ಕೇಳಿ ಪುನಃ ಅವಳು ಸಂಕೋಚಪಟ್ಟಳು.

‘ಏನು, ಹೇಳು, ಬರುವುದಿಲ್ಲವೆ?” ಎಂದ ರಾಜಣ್ಣ.

“ಇಲ್ಲ” ಎಂದಳವಳು, ಅವಳು ಹೇಳಿದ್ದು ಸುಳ್ಳೆಂದು ಅವಳ ಮುಖವೇ ಹೇಳುತ್ತಿತ್ತು.

“ಸುಳ್ಳು!’ ಎಂದ ರಾಜಣ್ಣ.

‘ನಿಮಗೇನು ಗೊತ್ತು?”

“ನನ್ನ ಅಕ್ಕ ಹೇಳಿದಳು.”

“ಅವರು ಹೇಳಿರಲಿಕ್ಕೇ ಇಲ್ಲ.”

“ಆದಿರಲಿ. ನೀನು ಹಾಡುತ್ತಿ ಅಂತ ನನಗೊತ್ತು. ಒಂದು ಹಾಡು ಹಾಡುತ್ತಿಯಾ” ಎಂದ ರಾಜಣ್ಣ. ಪೂರ್ಣಿಮಾ ಅತ್ತಿತ್ತ ನೋಡಿ.

“ಇಲ್ಲಿ....” ಎಂದು ವಿಸ್ಮಯ ಸೂಚಿಸಿದಳು.

“ಏನು, ಇಲ್ಲಿ ಯಾರಿದ್ದಾರೆ. ನಮ್ಮ ಮನೆಯೂ ದೂರ ಅವರೇನೂ ಕೇಳಿ ಓಡಿ ಬರುವಂತಿಲ್ಲ. ಆ ಕಾಡಿಗೋ ಈ ದನಕರುಗಳಿಗೋ ಕೇಳಿಸಿದರೂ ತೊಂದರೆಯಿಲ್ಲ. ಇರಲಿ....ಹಾಡು’ ಎಂದು ರಾಜಣ್ಣ.

“ಈ ದಿನ ಬೇಡ....ನಾಳೆ....”

“ನಾಳೆ ನೀನೆಲ್ಲಿ ಹಾಗೆ ಸಿಗುತ್ತಿ?”

“ನಾಳೆ ನೀವೂ ಇಲ್ಲಿದ್ದರೆ ನಾನೂ ಬರುವೆ ಬೇಕಾದರೆ” ಅವಳ ಬೇಕಾದರೆ ಎಂಬುದನ್ನು ಕೇಳಿ ರಾಜಣ್ಣ ನಕ್ಕ.

‘ಏನು ನಗುತ್ತೀರಿ?,,

‘ಏನಿಲ್ಲ ನಾಳೆ ಖಂಡಿತ ಬರುತ್ತಿಯೊ,

“ಖಂಡಿತ!,,

“ನನಗೆ ನಂಬಿಕೆಯಿಲ್ಲ. ಭಾಷೆ ಹಾಕಿ ಹೇಳುತ್ತೀಯಾ,, ಎಂದ ಆತ ಸುಮ್ಮನೆ ಅವಳು ಬಳಿಗೆ ಬರಲೆಂದು. ಅವಳು ಸ್ವಲ್ಪ ಯೋಚಿಸಿ “ಹುಂ,, ಎಂದು ಹಾಡುತ್ತಾ ಹತ್ತಿರ ಬಂದು “ಎಲ್ಲಿ ಕೈ ನೀಡಿ,, ಎಂದಳು,

ರಾಜಣ್ಣ ಹಸ್ತವನ್ನೊಡ್ಡಿದ. ಅವಳು ನೀಡಿದ ಕೈಯನ್ನೇ ಹಿಡಿದೆಳೆದ. ಅವಳು ಕಾಲುತಪ್ಪಿ, ಜಾರಿ ಅವನ ಮಡಿಲಿಗೆ ಬಿದ್ದಳು. ರಾಜಣ್ಣ ಅವಳನ್ನು ಕೈಗಳಿಂದ ಬಳಸಿ, “ಖಂಡಿತ ಬರುವೆಯಾ,, ಎಂದ. ಅವಳು ಅವನ ಕೈಗಳಿಂದ ಬಿಡಿಸಿಕೊಂಡು ಸಿಟ್ಟಿನಿಂದ ದೂರ ಹೋಗಿ ನಿಂತಳು.

“ನೀವು ಹೀಗೆ ಮಾಡಿದರೆ ಖಂಡಿತ ಬರಲಾರೆ, ಎಂದು ಕ್ರೋಧದಿಂದ ಹೊರಟು ಬಿಟ್ಟಳು.

“ಪೂರ್ಣಿಮಾ... ಪೂರ್ಣಿಮಾ....,, ಎಂದು ಆತಂಕಗೊಂಡು ರಾಜಣ್ಣ ಅವಳ ಹಿಂದೆ ಓಡಿಬರುತ್ತಾ ಹೇಳಿದ.

“ಇಲ್ಲ ಪೂರ್ಣಿಮಾ, ಇನ್ನು ಹಾಗೆ ಮಾಡುವುದಿಲ್ಲ,, ಅವಳು ತಿರುಗಿ ನೋಡಲೇ ಇಲ್ಲ. ಸುಮ್ಮನೆ ಅಲ್ಲೇ ನಿಂತಳು.

“ಸಿಟ್ಟೇ ಪೂರ್ಣಿಮಾ, ತಪ್ಪಾಯಿತು. ಇನ್ನು ಹಾಗೆ...,, ಅಷ್ಟರಲ್ಲಿ ಅವಳು ತಿರುಗಿ ನೋಡಿ ನಸುನಕ್ಕಳು. ಅವಳ ಕಣ್ಣಿನಲ್ಲಿ, ಯಾಕೋ, ಕಣ್ಣೀರ ಮಂಜು. ರಾಜಣ್ಣ ಕೇಳಿದ

“ಹಾಗಾದರೆ ಖಂಡಿತ ನಾಳೆ ಬರುತ್ತಿಯಾ,,

“ಬರುತ್ತೇನೆ....ನೀವು ಮಾತ್ರ ಹಾಗೆ ಮಾಡಬಾರದು,,

“ಇಲ್ಲ ಪೂರ್ಣಿಮಾ ಖಂಡಿತ,,

“ಎಲ್ಲಿ ನಿಮ್ಮ ಕೈ....,, ರಾಜಣ್ಣ ಕೈ ನೀಡಿದ. ಅವಳು ಅವನ ಕೈಯನ್ನೊಮ್ಮೆ ಮುಟ್ಟಿ ಓಡಿಹೋದಳು ನಗುತ್ತಾ.

ಬೇಸಗೆ ರಜೆಯಲ್ಲಿ ರಾಜಣ್ಣ ಅವನ ಭಾವನ ಮನೆಗೆ ಬಂದಿದ್ದ. ಮಲೆನಾಡೆಂದರೆ ಅವನಿಗೆ ಬಹಳ ಮೆಚ್ಚು. ಅಲ್ಲಿನ ವಿವಿಧ ಗಿಡ ಮರಗಳು, ಹೂ ಬಳ್ಳಿಗಳು; ಬಣ್ಣ ಬಣ್ಣದ ಹಕ್ಕಿಗಳು ಅವುಗಳ ತೆರತೆರನ ಸಂಗೀತ ಇವುಗಳನ್ನೆಲ್ಲಾ ಕಂಡು ಕೇಳಿ ಆನಂದಿಸಲೆಂದೇ ಆತ ಈ ಮಲೆನಾಡಿಗೆ ಬರುತಿದ್ದ. ಭಾವನಿಗೂ ಹಾಗೆ, ತನ್ನ ಫಾರೆಸ್ಟರ್ ಉದ್ಯೋಗದಲ್ಲಿ ಆಗಾಗ ವರ್ಗಾ ವರ್ಗಿ ಇರುತ್ತಿತ್ತು. ರಾಜಣ್ಣನಿಗೆ ಹೊಸ ಹೊಸ ಊರು ನೋಡುವ ಸಂದರ್ಭ. ಇದರೊಂದಿಗೆ ಅಕ್ಕರೆಯ ಅಕ್ಕನ ಆದರೋಪಚಾರ.

ರಾಜಣ್ಣ ಅಧ್ಯಾಪಕನಾಗಿ ವರ್ಷ ಒಂದಾಗಿತ್ತಷ್ಟೆ. ಪದವೀಧರನಾದ ಮೇಲೆ ಉದ್ಯೋಗಕ್ಕಾಗಿ ಹಲವಾರು ಅರ್ಜಿಗಳನ್ನು ಹಾಕಿದ ಮೇಲೆ ತತ್ಕಾಲಕ್ಕೆ ಬೇರೆ ಕೆಲಸ ಸಿಗುವ ತನಕ ಇರಲೆಂದ. ಊರ ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿ ಸೇರಿದ.

ಈ ಬಾರಿ ಅವನ ಭಾವ ಸಂಪಿಗೆಹಳ್ಳಿಗೆ ವರ್ಗವಾದೊಡನೆ ‘ಬಹಳ ಸುಂದರವಾದ ಸ್ಥಳ ರಜೆಯಲ್ಲಿ ಬಾ,, ಎಂದು ಬರೆದಿದ್ದರು.

ನಿಜವಾಗಿಯೂ ಸಂಪಿಗೆಹಳ್ಳಿ ಚೆಲುವಾದ ಊರು. ಇಕ್ಕಡೆಯಿಂದಲೂ ಕಾಡಿನಿಂದ ದಟ್ಟವಾಗಿ ಮುತ್ತಿಕೊಂಡ ಬಯಲು. ಅಲ್ಲಲ್ಲಿ ದೂರ ದೂರ ಕೆಲವೇ ಮನೆಗಳು, ದನಕರುಗಳಿಗೆ ಮೇಯಲು ವಿಶಾಲವಾದ ಮೈದಾನು. ಒಂದೆಡೆ ಸಾಲುಬೆಟ್ಟ. ಇವಿಷ್ಟನ್ನು ಬಿಟ್ಟರೆ ಸದಾ ಮಂಜು ಮುಸುಕಿದಂತೆ ತೋರುವ ಮೈಲು-ಮೈಲುದ್ದಕ್ಕೆ ಹಬ್ಬಿದ ಕಾಡು, ಎಲ್ಲೆಲ್ಲೂ ಕಾಡು. ದೂರ ದೂರದ ನಗರಗಳನ್ನು ಜೋಡಿಸುವ ಹೆದ್ದಾರಿ ಬಯಲಿನ ಬದಿಯಿಂದ ಹಾದುಹೋಗುತ್ತಿತ್ತು. ಇದರಲ್ಲಿ ಓಡುವ ವಾಹನಗಳ ಸದ್ದು ಮಾತ್ರ ನಗರದ ನೆನಪನ್ನು ತರುತ್ತಿತ್ತು.

ಸಂಪತ್ತಿನಿಂದ ತುಂಬಿದ ನಾಡು. ಊಟ ತಿಂಡಿಗಳಿಗೆ ಕೊರತೆಯಿಲ್ಲ. ಹಾಲು ಮೊಸರು ಬೇಕಾದಷ್ಟು. ಹಣ್ಣು ಹಂಪಲು ಉಂಡು ತಣಿವಷ್ಟು. ಶಾಂತಿ ಮತ್ತು ಸೃಷ್ಟಿಯ ಸೊಬಗು ವ್ಯಮನಗಳ ಮರೆತು ಹೋಗುವಷ್ಟು.

ರಾಜಣ್ಣನ ಭಾವನ ಮನೆಗೆ ಹತ್ತಿರವೇ ಪೂರ್ಣಿಮೆಯ ಮನೆ. ಅವಳ ತಂದೆ ತಾಯಿಗಳು ಸ್ವಲ್ಪ ಅನುಕೂಲಸ್ಥರು. ಹತ್ತಿರ ಶಾಲೆಯಿಲ್ಲದುದರಿಂದ ಹನ್ನೆರಡು ಮೈಲು ದೂರದ ಅವಳ ಮಾವನ ಮನೆಯಲ್ಲಿ ಉಳಕೊಂಡು ಅಲ್ಲಿ ಶಾಲೆಗೆ ಹೋಗುತ್ತಿದ್ದಳು. ಅವಳೂ ಇದೀಗ ಪಿಂಬತ್ತನೇ ಈಯತ್ತೆ ಮುಗಿಸಿಕೊಂಡು ರಜೆಯಲ್ಲಿ ಮನೆಗೆ ಬಂದಿದ್ದಳು.

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

O

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ ‘ನವಯುಗ’ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಪರಿಪೂರ್ಣ ಬೇಂಕಿಂಗ್ ಸೇವೆಗೆ

— ಕೊರ್ಪೊರೇಶನ್ ಬೇಂಕ್ —

78 ಶಾಖೆಗಳು | ದೇಶದಾದ್ಯಂತ ಏಜನ್ಸಿಗಳು

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ವೈಜ್ಞಾನಿಕ ಸಂಶೋಧನೆ

ಅಂತರಿಕ್ಷ ಮಾನವನ ಮುಷ್ಟಿಯೊಳಗೆ

ಹದಿನೆಂಟು ದೇಶಗಳ ವೈಜ್ಞಾನಿಕರು ಅಂತರಿಕ್ಷ ಸಂಶೋಧನಾ ಕ್ಷೇತ್ರದಲ್ಲಿ ಉದ್ಭವಿಸಿದ ಹೊಸ ಘಟನೆಗಳನ್ನು ಮತ್ತು ಮುಂದಕ್ಕೆ ಆಗಲಿರುವ ವಿಶೇಷತೆಯನ್ನು ವಾಶಿಂಗಟನ್ ನಗರದಲ್ಲಿ ಇತ್ತೀಚೆಗೆ ಪರಾಮರ್ಶೆ ನಡೆಸಿದರು ಹತ್ತು ದಿನಗಳ ವರೆಗೆ ನಡೆದಿದ್ದ ಈ ವಿಚಾರಗೋಷ್ಠಿಯನ್ನು ಅಂತರಿಕ್ಷ ಸಂಶೋಧನೆಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಸಮಿತಿಯು ಸಂಯೋಜಿಸಿತ್ತು ಅಮೆರಿಕೆಯ ಜಾನ್ ಗ್ಲೆನ್ ಮತ್ತು ರಶ್ಯದ ತಿತೋವರು ಈ ನೊದಲು ಪೃಥ್ವಿಯ ಸುತ್ತು ಅಂತರಿಕ್ಷದಲ್ಲಿ ಯಾತ್ರೆಮಾಡಿದ ಮಹನೀಯರಿದ್ದು, ಇವರು ಈ ಗೋಷ್ಠಿಯಲ್ಲಿ ತಮ್ಮ ಕಂಡುಕೊಂಡ ಅನುಭವಗಳನ್ನು ವಿವರಿಸಿದರು



ಕರ್ನೆಲ ಜಾನ್ ಗ್ಲೆನ್‌ರವರು ತಮ್ಮ ಅಂತರಿಕ್ಷ ಯಾತ್ರಾನುಭವಗಳನ್ನು ವಿವರಿಸುತ್ತ ಅದಕ್ಕೆ ಸಂಬಂಧಿಸಿದ ಚಿತ್ರ ಮತ್ತು ವಿವರಗಳನ್ನು ಕೂಡಿಕೊಂಡು ೨೮ ಪುಟಗಳ ಒಂದು ಪುಸ್ತಿಕೆಯನ್ನೂ ಪ್ರತಿನಿಧಿಗಳಿಗೆ ಹಂಚಿದರು. ಇವರ ಇನ್ನೊಂದು ಪುಸ್ತಕವು ೨೦೪ ಪುಟಗಳದ್ದಿದ್ದು, ಅದರ ಹೆಸರು "ಅಮೆರಿಕೆಯ ಪ್ರಥಮ ಅಂತರಿಕ್ಷ ಹಾರಾಟ ಮತ್ತು ಅದರ ಪರಿಣಾಮ" ಎಂದಾಗಿತ್ತು.

ಅಮೆರಿಕನ್ ಗಗನಯಾತ್ರಿ ಜಾನ್ ಗ್ಲೆನ್ನರು ಮಾತನಾಡುತ್ತ "ಮಾನವನ ಅಂತರಿಕ್ಷಯಾನಗಳ ಶಕ್ತಿಯು ಈಗಿನಂತೆ ಸೀಮಿತವಾಗಿ ಉಳಿಯದೆ ವಿಸ್ತಾರವಾಗುವ ದಿನ ಬಂದೇ ಬರುವುದು. ಈ ದಿಸೆಯಲ್ಲಿ ನಾವು ಅವಶ್ಯ ಪ್ರಗತಿಯನ್ನು ಸಾಧಿಸುವೆವು. ಅಂತರಿಕ್ಷದಲ್ಲಿ ಇಚ್ಛಾನುಸಾರ ಕಾರ್ಯವೆಸಗುವ ದಿನ ಅತಿಸಮೀಪಿಸಿದೆ. ಮಾನವನು ತನ್ನ ಬುದ್ಧಿವಂತಿಕೆಯ ಉಪಯೋಗವನ್ನು ಮಾಡುವುದನ್ನಿದು ಹೊಂದಿಕೊಂಡಿದೆ" ಎಂದರು.

"ಅಂತರಿಕ್ಷಯಾತ್ರೆಯ ಕಾಲದಲ್ಲಿ, ಮಾನವನು ಬಹು ಹೊತ್ತಿನವರೆಗೆ ಭಾರಹೀನವಾಗುವ ಸ್ಥಿತಿಯಲ್ಲಿರುವನೆಂಬುದು ನನಗೆ ಕಂಡು ಬಂದ ಮುಖ್ಯ ವಿಚಾರ ಭೂಮಿಗೆ ನಾಲ್ಕು, ಆರು ಮತ್ತು ಏಳನೆಯ ಬಾರಿ ಸುತ್ತು ವರಿದಾಗ, ನನ್ನ ಹಸಿವೆಯು ನಿಂತು ಹೋದಂತೆ ಭಾಸವಾಯಿತು. ಮೊದ ಮೊದಲಿಗೆ ನಿದ್ರೆಯೂ ನನಗೆ ಬರುತ್ತಿರಲಿಲ್ಲ, ಎಂದು ರಶ್ಯನ್ ಗಗನಯಾತ್ರಿ ತಿತೋವರವರು ತಮ್ಮ ಅನುಭವಗಳನ್ನು ವಿಶದಪಡಿಸಿದರು

ಅಮೆರಿಕನ್ ವೈಜ್ಞಾನಿಕರಿಗೆ ಚಂದ್ರನಲ್ಲಿ ರೇಡಿಯೋ ಧ್ವನಿ ಪ್ರವಹಿಸುತ್ತದೆಂದು ತಿಳಿದ ಸಂಗತಿಯನ್ನು ಪ್ರತಿನಿಧಿ ಡಾ ರಿಚರ್ಡ್ ಡಬ್ಲ್ಯು ಪೋರ್ಟರರು ಬಹಿರಂಗಪಡಿಸಿದರು ಇದರಿಂದಾಗಿ ಮುಂದೆ ಚಂದ್ರ ಸಂಬಂಧಿ ಪ್ರಯೋಗ—ಸಂಶೋಧನೆಗಳು ನಡೆಯುವಾಗ, ಈ ರೇಡಿಯೋ ಧ್ವನಿಯು ಆತಂಕವಾಗಿ ಪರಿಣಮಿಸುವ ಸಂಭವವು ಒಹಳವಿದೆಯೆಂದು ಇವರು ಹೇಳುತ್ತಾರೆ ಇವರ ಕಥನದಂತೆ ಚಂದ್ರನಿಂದ ಹೊರಡುವ ರೇಡಿಯೋ ಕಿರಣಗಳ ಕುರಿತು ತಿಳುವಳಿಕೆಯು ವಿಶಿಷ್ಟ ಉಪಕರಣಗಳಿಂದ ಸುಸಜ್ಜಿತವಾದ ರಾಕೇಟಿನಿಂದ ದೊರೆಯಿತು ಸೂರ್ಯ ಮತ್ತು ಬಾಹ್ಯಾಂತರಿಕ್ಷದಿಂದ ಚಂದ್ರನ ಮೇಲೆ ನಿರಂತರವಾಗಿ ಬ್ರಹ್ಮಾಂಡ ಕಿರಣಗಳು ಬೀಳುತ್ತಿರುವುದೇ ಚಂದ್ರನಲ್ಲಿಯೂ ಈ ಕಿರಣಗಳು ಹೊರಡುವುದಕ್ಕೆ ಕಾರಣವೆಂದು ವಿಜ್ಞಾನಿಗಳು ಹೇಳುತ್ತಾರೆ.

೧೯೬೨ರಲ್ಲಿ ಒಹಳ ಎತ್ತರಕ್ಕೆ ಹಾರಬಲ್ಲ ೨೫೦ ಆಕಾಶ ಬುಟ್ಟಿಗಳನ್ನು ಅಮೆರಿಕೆಯು ಹಾರಿಸಿತ್ತು ಇವುಗಳಲ್ಲಿ ವಾಯುಮಂಡಳದ ಮೇಲ್ಭಾಗದ ಪರಿಶೀಲನೆಗೆ ಅವಶ್ಯಕ ಉಪಕರಣಗಳು ಇಡಲ್ಪಟ್ಟಿದ್ದುವು ಮೇಲಿನ ವಾತಾವರಣವನ್ನು ಸಂಶೋಧಿಸಲು ಮತ್ತು ಉಪಗ್ರಹಗಳಲ್ಲಿ ಇಡಬೇಕಾಗುವ ಉಪಕರಣಗಳ ಶೋಧ ನಡೆಸಲು ೪೪೧ ರಾಕೇಟುಗಳನ್ನೂ ಅಮೆರಿಕೆಯು ಹಿಂದಿನ ವರ್ಷ ಹಾರಿಸಿದೆ ಭೂಭೌತ ಮಾಪನ ಕಾರ್ಯಕ್ಕಾಗಿ ೪ ಉಪಗ್ರಹಗಳನ್ನೂ ೩ ಮಾನವಯುಕ್ತ ಅಂತರಿಕ್ಷಯಾನವನ್ನೂ ಅಂತರಿಕ್ಷ ಪರಿಶೀಲನೆಗಾಗಿ ೩ ಅಂತರಿಕ್ಷ ವಾಹನಗಳನ್ನೂ ಅಮೆರಿಕೆಯು ಹಾರಿಸಿದ

ಈ ವಿಚಾರ ಗೋಷ್ಠಿಯಲ್ಲಿ ಭಾರತವೂ ಭಾಗ ವಹಿಸಿತ್ತು. ೪ ಜನ ಭಾರತೀಯ ಪ್ರತಿನಿಧಿ ಮಂಡಳದ ನಾಯಕರು ಡಾ|| ವಿಕ್ರಮ ಸಾರಾಭಾಯಿಯವರಾಗಿದ್ದರು ಡಾ| ಸಾರಾಭಾಯಿಯವರು ಭಾರತೀಯ ಅಂತರಿಕ್ಷ ಅನುಸಂಧಾನ ಸಮಿತಿಯ ಪ್ರಧಾನರಾಗಿದ್ದಾರೆ ಪರಿಸ್ಥಿತಿಯನ್ನು ತಿಳಿಯುವ ಮತ್ತು ಭಾರತದ ಕಾರ್ಯಕ್ರಮಗಳು ಯಾವ ದಿಸೆಯಲ್ಲಿ ಮುಂದುವರಿಯಬೇಕೆಂಬುದನ್ನು ವಿಚಾರಿಸುವ ಸದವಕಾಶವಿದು ಎಂದವರು ಗೋಷ್ಠಿಯ ಬಗ್ಗೆ ಆಡಿದರು

ಅಮೆರಿಕೆಯ ಅಂತರಿಕ್ಷ ಕಾರ್ಯಕ್ರಮ ಸಂಬಂಧಿ ಇತಿಮಿತಿಯನ್ನು ತಿಳಿದುಕೊಂಡು, ಭಾರತವು ಅಮೆರಿಕಾ ವಿಜ್ಞಾನ ಕಾರ್ಯಕ್ರಮದಲ್ಲಿ ಅಪರ ರಾಷ್ಟ್ರೀಯ ಉಡ್ಡಯನ ಮತ್ತು ಅಂತರಿಕ್ಷ ಪ್ರಶಾಸನದ ಯಾವ ಯಾವ ವಿಷಯಗಳಲ್ಲಿ ಸಹಯೋಗ ನೀಡಬಲ್ಲದು ಎಂಬ ಕುರಿತು ಅಮೆರಿಕನ್ ವಿಜ್ಞಾನಿಗಳೊಡನೆ ವಿಚಾರ ವಿಮರ್ಶೆ ಮಾಡುವ ಅವಕಾಶವಿದು

ಭಾರತ-ಅಮೆರಿಕೆಗಳ ನಡುವೆ ಈಗಾಗಲೇ ಸಹಯೋಗ ಪ್ರಾರಂಭವಾಗಿದೆ ಉತ್ತರ ಪ್ರದೇಶದ ನೈನಿತಾಲದಲ್ಲಿರುವ ವೇಧಶಾಲೆಯ ಪರ್ಯವೇಕ್ಷಣ ನಿರೀಕ್ಷಣಾ ಕೇಂದ್ರವೇ ಒಂದುದಾಹರಣೆ. ನಿದರ್ಶನ ಈ ಕೇಂದ್ರವು ಅಮೆರಿಕೆಯ ಸ್ಮಿಥ್ ಸೋನಿಯನ್ ಇನ್ಸ್ಟಿಟ್ಯೂಶನ್‌ನೊಂದಿಗೆ ಸಹಕರಿಸುತ್ತದೆ ಅಹಮದಾಬಾದದ ಭೌತಿಕ ಅನುಸಂಧಾನ ಪ್ರಯೋಗ ಶಾಲೆಯ ಸಂಕೇತ ಗ್ರಾಹಕ ಕೇಂದ್ರವು ಈ ಸಹಯೋಗಕ್ಕೆ ಎರಡನೆಯ ದೃಷ್ಟಾಂತ.

ಅಹಮದಾಬಾದದ ಈ ಕೇಂದ್ರವು ಸುತ್ತ ತಿರುಗುತ್ತಿರುವ ಗಾಡಿಯ ರೂಪದಲ್ಲಿದೆ ಈ ಗಾಡಿಯು ಅಮೆರಿಕೆಯ ಅಂತರಿಕ್ಷ ಪ್ರಶಾಸನದೊಡನೆ ಕೂಡಿದೆ ಕಳೆದ ವರ್ಷ ನವಂಬರದಲ್ಲಿ ಅದು ಗಾಮಾಕಿರಣ ಸಂಬಂಧಿ ಅಮೆರಿಕನ್ ಉಪಗ್ರಹದಿಂದ ಸಂಕೇತ ಗ್ರಹಣ ಮಾಡುವ ಕೆಲಸವನ್ನು ಪ್ರಾರಂಭಿಸಿದೆ ಭಾರತೀಯ ವೈಜ್ಞಾನಿಕರಿಗೆ ಮತ್ತು ತಂತ್ರಜ್ಞರಿಗೆ ಸಂಕೇತ ಗ್ರಹಣ ಮಾಡುವ ಯಂತ್ರಗಳನ್ನು ನಡೆಸುವಲ್ಲಿ ಪ್ರಶಿಕ್ಷಣ ನೀಡುವಲ್ಲಿ ಈ ಕೇಂದ್ರವು ಸಹಾಯಕವಾಗಿದೆ ಇಲ್ಲಿ ಅಯನ ಮಂಡಲ ಸಂಬಂಧಿ ಅನುಸಂಧಾನಕ್ಕಾಗಿ ಪ್ರಯುಕ್ತವಾದ ಅನ್ಯ ವೈಜ್ಞಾನಿಕ ಉಪಗ್ರಹಗಳಿಂದಲೂ ಕೆಲವು ಸಂಕೇತಗಳನ್ನು ಗ್ರಹಿಸುವುದು ಸಾಧ್ಯವೆನಿಸಿದೆ

ವೇಧಶಾಲೆಗಳ ಪ್ರಧಾನ ನಿರ್ದೇಶಕರಾದ ಡಾ ಕೆ ಆರ್ ಕೃಷ್ಣರಾವ್ ಮತ್ತು ಅಹಮದಾಬಾದದ ಭೌತಿಕ ವಿಜ್ಞಾನ ಪ್ರಯೋಗಶಾಲೆಯ ನಿರ್ದೇಶಕರಾದ ಡಾ| ಕೆ ಆರ್ ರಾಮನಾಥನ್ ಇವರು ಭಾರತದ ಪ್ರತಿನಿಧಿ ಮಂಡಳದ ಇತರ ಇಬ್ಬರು ಸದಸ್ಯರು ಇವರಿಬ್ಬರೂ ಅಮೆರಿಕೆಯ ಹವಮಾನ ಕಾರ್ಯಾಲಯಕ್ಕೆ ತೆರಳಿದರು ಅಲ್ಲಿ ಟಾಯಿರೋಸ್ ಉಪಗ್ರಹದಿಂದ ದೊರಕಿದ ಸಂಕೇತಗಳ ವಿಶ್ಲೇಷಣೆಯನ್ನು ಮಾಡಲಾಗುತ್ತದೆ. ಇವರಿಬ್ಬರೂ ಹಿಂದೂ ಮಹಾಸಾಗರದ ಸಂಶೋಧನೆಗೆ ಸಂಬಂಧಿಸಿದ ಯೋಜನೆ ಮತ್ತು ಬೊಂಬಾಯಿಯಲ್ಲಿ ಸ್ಥಾಪಿತವಾಗಲಿರುವ ಅಂತಾರಾಷ್ಟ್ರೀಯ ಹವಾಮಾನ ಕೇಂದ್ರದ ವಿಚಾರದಲ್ಲಿ ವಿಚಾರ ವಿಮರ್ಶೆ ನಡೆಸಿದರು.

ಪ್ರತಿನಿಧಿ ಮಂಡಳದ ನಾಲ್ಕನೆಯ ಸದಸ್ಯರು ರಾಷ್ಟ್ರೀಯ ಭೌತಿಕ ಪ್ರಯೋಗ ಶಾಲೆಯ ಸಹಾಯಕ ನಿರ್ದೇಶಕರಾದ ಪ್ರೊ. ಎ. ಪಿ ಮಿತ್ರ ಅವರು ಇವರು ಕೇಪ್ ಕೆನೆವೆರಲ್‌ನಲ್ಲಿನ ಅಮೆರಿಕೆಯ ಅಂತರಿಕ್ಷಯಾನಗಳನ್ನು ಹಾರಿಸುವ ನಿಲ್ದಾಣವನ್ನು ಕಾಣಲು ಹೋಗಿದ್ದರು

ಭೂಮಧ್ಯ ರೇಖೆಯ ಉತ್ತರ ಭಾಗದಲ್ಲಿನ ಅಧ್ಯಯನ ನಡೆಸುವಲ್ಲಿ ಭಾರತವು ಆಸಕ್ತಿ ವಹಿಸುತ್ತಿದೆ ಭಾರತೀಯ ಭೂಭಾಗದ ಹವಾಮಾನದ ಮೇಲೆ ಹಿಂದೂ ಮಹಾಸಾಗರ ಸಂಬಂಧಿ ಸಂಶೋಧನೆಯಿಂದ ಪ್ರಕಾಶ ಬೀಳಬಹುದಾದುದರಿಂದ ಭಾರತವು ಇದು ಸಂಬಂಧದ ರಾಕೆಟ್ ಕಾರ್ಯಕ್ರಮವನ್ನು ಪ್ರಾರಂಭಿಸಲು ಅಭಿರುಚಿ ತೋರಿಸುತ್ತಿದೆ



ಅಮೆರಿಕೆಯ ದ್ವಿತೀಯ ಗಗನಯಾತ್ರಿ ಅಸ್ಟ್ರೊನಟ್ ಗ್ರಿಸಂರವರ ಆಕಾಶಯಾನ

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು.
ಪ್ರತಿಯೊಬ್ಬ ಠೇವಣಾತಿದಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ಶೀಘ್ರವಾಗಿ ವೃದ್ಧಿಹೊಂದುವುದು
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ — ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Lstd 1931.
Phone No 240
— ಮಂಗಳೂರು— 3

ನವದೆಹಲಿಯಲ್ಲಿ

ಉಪನಾಯಕನ ಆಯ್ಕೆಗೆ ಪುರಸ್ಕಾರ

ಶಿಕ್ಷಣ ಸಂಸ್ಥೆಯ ಪ್ರಯೋಗಶಾಲೆಯಲ್ಲಿ ವಿದ್ಯಾರ್ಥಿಗಳು ಸಂಶೋಧನಾಮಗ್ನನಾಗಿರುವುದನ್ನಿಲ್ಲಿ ಕಾಣಬಹುದು.

ಪ್ರಧಾನ ಮಂತ್ರಿ ನೆಹರು ಕಾಶ್ಮೀರದಲ್ಲಿ ವಿಶ್ರಾಂತಿ ಪಡೆದಿರುವ ಅವಧಿಯಲ್ಲಿ ರಾಜಧಾನಿ ದಿಲ್ಲಿಯು ತೀರ ಸಪ್ಪೆಯೆಂದಂತೆ ಭಾಸವಾಗುತ್ತದೆ. ಇವರು ರಾಜಧಾನಿಯಿಂದ ಹೊರಗಿರುವಾಗ ಮಂತ್ರಿಮಂಡಳವು ಯಾವುದೇ ಪ್ರಮುಖ ನಿರ್ಧಾರವನ್ನು ಕೈಗೊಳ್ಳುವುದಿಲ್ಲ. ಯಾವುದೇ ಮಂತ್ರಿಗೆ ತನ್ನ ಶಾಖೆಗೆ ಸಂಬಂಧಿಸಿದ ವಿಚಾರದಲ್ಲಿ ಒಂದು ನಿರ್ಧಾರಕ್ಕೆ ಬರುವುದು ಅತ್ಯಂತಾವಶ್ಯಕವೆನಿಸಿದರೆ, ತತ್‌ಕ್ಷಣ ಪ್ರಧಾನಿಯವರಿಗೆ ತಿಳಿಸಿ, ಅವರ ಅನುಮತಿಯನ್ನು ತರಿಸಿಕೊಳ್ಳುವ ಪರಿಪಾಠವಿದೆ. ಮಂತ್ರಿಮಂಡಳಿ ಮಾತ್ರವಲ್ಲ, ಕಾಂಗ್ರೆಸ್ ಪಕ್ಷವಾದರೂ ನೆಹರೂ ಇಲ್ಲವೆಂದಾದರೆ, ನಿಷ್ಕ್ರಿಯವೆನಿಸುತ್ತದೆ. ಪಕ್ಷದ ಯಾವುದೇ ವಿಚಾರವಿರಲಿ, ಅದಕ್ಕೆ ನೆಹರುರವರ ಅಭಿಪ್ರಾಯದ ಮುದ್ರೆ ಬೀಳದೆ ಕೊನೆಗೊಳ್ಳುವಂತಿಲ್ಲ. ಕಾಂಗ್ರೆಸ್ ಅಧ್ಯಕ್ಷರು ಇಲ್ಲದೆ ಇರುವಾಗ, ನೆಹರುಗಳಿಗೆ ಪೀಡೆಯೂ ಹೆಚ್ಚು. ಇವೆಲ್ಲವನ್ನೂ ಆಳವಾಗಿ ಕಂಡುಕೊಂಡ ಪಾರ್ಲಿಮೆಂಟಿನ ಕೆಲವು ಸದಸ್ಯರು ಉಪನಾಯಕನೊಬ್ಬ ಬೇಕೆನ್ನುತ್ತಾರೆ.

ಹಿಂದಿನ ವರ್ಷ ಉಪನಾಯಕನ ಆಯ್ಕೆಯ ಪ್ರಶ್ನೆ ಬಂದಾಗ ಹಲವಾರು ಭಿನ್ನಾಭಿಪ್ರಾಯಗಳು ಎದ್ದುವು. ಪಕ್ಷದ ಉಪನಾಯಕನೆಂದು ಚುನಾಯಿತನಾದವನು ಸರಕಾರದ ಉಪನಾಯಕನೂ ಆಗುವನೆಂಬುದೂ ಆಗತ್ಯತೆಯ ಪರಿಸ್ಥಿತಿಯಲ್ಲಿ ಆತನೇ ಪ್ರಧಾನ ಮಂತ್ರಿಯ ಅಧಿಕಾರವನ್ನು ಪಡೆಯುವನೆಂಬುದೂ ಈ ಭಿನ್ನಾಭಿಪ್ರಾಯಗಳು ಏಳುವುದಕ್ಕೆ ಕಾರಣ. ಕೆಲವು ಪ್ರಮುಖ ವ್ಯಕ್ತಿಗಳು ಈ ಹುದ್ದೆಗೆ ತಾವೇ ಆಯ್ಕೆಗೊಳ್ಳಬೇಕು ಎಂದು ತಮ್ಮ ತಮ್ಮೊಳಗೆ ಹೋರಾಡಲು ಸೊಂಟ ಕಟ್ಟಿದರು; ಉಪನಾಯಕನನ್ನು ಆಯ್ಕೆ ಮಾಡುವಾಗ ಪಾರ್ಲಿಮೆಂಟರಿ ಪಕ್ಷದ ಹೊರಗಿನವರನ್ನೂ ಕಡೆಗಣಿಸಲಾಗುವುದಿಲ್ಲವೆಂದು ನೆಹರು ತುಸು ಉದಾರ ನೀತಿಯನ್ನು ತಳೆದರು. ಕೆಲವು ಸಮಯದ ವರೆಗೆ ಈ ಭಿನ್ನಮತವನ್ನು ಯುಕ್ತಿಯಿಂದ ಬಗೆಹರಿಸಿಕೊಂಡರೆ, ಮತ್ತೆ ಆಯ್ಕೆಯನ್ನೇ ಮುಂದೂಡಬೇಕಾಗಿ ಬಂತು.

ಉಪನಾಯಕನ ಆಯ್ಕೆಯ ಸಂಬಂಧದಲ್ಲಿ ಹಲವಾರು ಸಲಹೆಗಳು ಬಂದಿವೆ. ಕ್ಯಾಬಿನೆಟ್ ಮಂತ್ರಿ ಮಟ್ಟದ ಕೆಳಗಿನ ಇಬ್ಬರು ಉಪನಾಯಕರೂ ಇರಬಹುದೆಂದು ನೆಹರು ಹೇಳಿದ್ದರು. ಈ ಪಟ್ಟವೆಂಬುದು ನಾಯಕ ಪಟ್ಟವನ್ನು ಪಡೆಯುವ ಪೂರ್ವ ಭಾವಿ ಹುದ್ದೆಯೂ ಅಲ್ಲವೆಂಬುದನ್ನು ಅವರು ಸ್ಪಷ್ಟಪಡಿಸಿದ್ದರು. ಪ್ರತಿಯೊಬ್ಬರೂ ನೆಹರುರವರ ಮಾತಿಗೆ ಮನ್ನಣೆಯಿತ್ತು ಎದ್ದುಬಂದ ಕಹಿಯನ್ನು ದೂರಮಾಡಲು ಒಪ್ಪಿದರಾದರೂ ಮುಂದಕ್ಕೆ ನಾಯಕನಾಗಲಾರನೆಂದಾದರೆ, ಉಪನಾಯಕನ ಆಯ್ಕೆಯಾದರೂ ಯಾಕೆ ಎಂಬ ಪ್ರಶ್ನೆ ಹೆಚ್ಚಿನವರ ತಲೆ ತಿನ್ನತೊಡಗಿತು. ಮಂತ್ರಿಮಂಡಳಿಯ ಸಭೆಯ ಅಧ್ಯಕ್ಷಸ್ಥಾನವನ್ನು ನಾಯಕನ ಅನುಪಸ್ಥಿತಿಯಲ್ಲಿ ವಹಿಸುವುದಷ್ಟೇ ಅವನ ಕೆಲಸವೆಂದಾದರೆ, ಪ್ರತಿ ಸಭೆಗೂ ಯಾರಾದರೊಬ್ಬರನ್ನು ಅದಕ್ಕೆ ಆರಿಸಿಕೊಂಡರಾಯಿತು ಎಂಬ ವಿಚಾರ ಅವರದು.

ಮಂತ್ರಿ ಮಟ್ಟಕ್ಕೆ ಹೊರತಾದವನೊಬ್ಬನನ್ನು ಉಪನಾಯಕನನ್ನಾಗಿ ಆರಿಸಬೇಕೆಂಬ ವಿಚಾರ ಇತ್ತೀಚೆಗೆ ಬಂತು. ಆದರೆ, ಹೆಚ್ಚಿನ ಕಾಂಗ್ರೆಸಿಗರು ಇದರಲ್ಲಿ ಉತ್ಸಾಹ ತೋರಿಸಲಿಲ್ಲ. ಇದರಿಂದ ಸಮಸ್ಯೆ ಬಗೆಹರಿಯದೆ ಪ್ರಧಾನಿಯವರಿಗೊಬ್ಬ ಸಹಾಯಕನಿರುವನೆಂಬುದಷ್ಟೇ ಸಮಾಧಾನವೆಂದಿವರ ಅಭಿಪ್ರಾಯ. ಈ ನಡುವೆ ಕೆಲವು ಪ್ರಭಾವೀ ನಾಯಕರೂ ಹೆಚ್ಚಿನ ಸದಸ್ಯರೂ ಭೂಷಣ ಪ್ರಾಯನಾಗಿರದ ಉಪ ಪ್ರಧಾನಿಯೆನಿಸಬಲ್ಲ ಉಪ ನಾಯಕನನ್ನು ಆರಿಸಿಕೊಳ್ಳಲು ಈಗ ಸಮಯ ಪರಿಪಕ್ವವಾಗಿದೆ ಎನ್ನುತ್ತಾರೆ. ಪಂಡಿತ ನೆಹರುರವರ ಮೇಲೆ ಸದಸ್ಯರ ವಿಶ್ವಾಸವನ್ನು ಪ್ರಶ್ನಿಸುವಂತಿಲ್ಲ; ಅವರು ತಮ್ಮ ನಾಯಕನಾಗಿಯೇ ಉಳಿಯಬೇಕೆಂದೂ ಬಯಸುತ್ತಾರೆ. ಆದರೂ ಉಪ ಪ್ರಧಾನಿಯೊಬ್ಬನು ಬೇಕು ಎಂಬುದವರ ಅಂಬೋಣ. ಇದು ನನಸಾಗುವುದು ಸಾಧ್ಯವೆ. ಕೇವಲ ಕೆಲವೇ ಮಂದಿ ಕಾಂಗ್ರೆಸಿಗರು ಈ ಪ್ರಶ್ನೆ ಇತ್ಯರ್ಥವಾಗುವುದೆಂದು ಆಶಾವಾದಿಯಾಗಿದ್ದಾರೆ.

ಕಾಂಗ್ರೆಸ್ಸು ಅಧ್ಯಕ್ಷ ಪದ

ಅಂತೆಯೇ ಕಾಂಗ್ರೆಸ್ ಅಧ್ಯಕ್ಷ ಪದವಿಯ ಸ್ಥಾನ ಮಾನಗಳೂ ಅನಿರ್ಧಾರಿತವಿವೆ. ಈ ಹುದ್ದೆಗೆ ಹಲವಾರು ಹೆಸರುಗಳು ಮುಂದೆ ಬಂದು ಹಿಂದೆ ಸರಿದುವು. ಎಲ್ಲದರಂತೆ ಈ ಸಂಬಂಧದಲ್ಲಿಯೂ ಕೊನೆಯ ಮಾತು ಹೊರಡಬೇಕು ನೆಹರು ಮುಖದಿಂದ. ಕಾಂಗ್ರೆಸ್ಸಿನ ಅಧ್ಯಕ್ಷಪಟ್ಟ ಮತ್ತು ಕೇಂದ್ರ ಸರಕಾರದ ನಾಯಕತ್ವ ಎರಡಕ್ಕೂ ಸಂಬಂಧವಿಲ್ಲವೆನ್ನುವಂತಿಲ್ಲ. ಪಕ್ಷದ ಸದಸ್ಯರ ಮಿತಿಮೀರಿದ ಸಹಕಾರವನ್ನೂ ಬೆಂಬಲವನ್ನೂ ಗಳಿಸಿದವನೇ ಮುಂದೆ ಪ್ರಧಾನಮಂತ್ರಿ ಯಾಗುವುದು ಸಾಧ್ಯ.

ಪ್ರಧಾನಿಗಳು ಪ್ರತಿದಿನವೂ ಮುಂಜಾನೆ ತಾನು ಆಫೀಸಿಗೆ ಹೋಗುವುದಕ್ಕೆ ಮೊದಲು ಇಡಿಯ ಭಾರತದ ಸಂದರ್ಶಕರನ್ನು ಪೂರ್ವಸೂಚನೆಯಿಲ್ಲದೇನೇ ತಮ್ಮ ಮನೆಯಲ್ಲಿ ಭೆಟ್ಟಿ ಮಾಡುತ್ತಾರೆ. ಕೇವಲ ದರ್ಶನಮಾಡುವವರು ಕೆಲವರಾದರೆ, ಏನಾದರೂ ಮನವಿ, ದೂರುಗಳನ್ನು ತರುವವರೂ ಇವರಲ್ಲಿದ್ದಾರೆ. ಇವನ್ನು ಪ್ರಧಾನಿಯವರು ಸಂಬಂಧಿತ ಅಧಿಕಾರಿಗಳಿಗೆ ರವಾನಿಸುತ್ತಾರೆ. ಈ ಪದ್ಧತಿಗೆ ನೆಹರು ಅಸ್ವಸ್ಥರಾದಾಗ ತಡೆಬಿದ್ದಿತು.

ರಾಷ್ಟ್ರಪತಿಗಳ ಮಾದರಿ

ವಾರದ ಎರಡು ದಿನಗಳಲ್ಲಿ ಸಾರ್ವಜನಿಕರಿಗೆ ರಾಷ್ಟ್ರಪತಿ ಭವನವನ್ನು ತೆರೆದಿಡುವ ಡಾ. ರಾಧಾಕೃಷ್ಣನ್ನರ ವಿಚಾರಕ್ಕೆ ಸರ್ವತ್ರ ಮಾನ್ಯತೆ ದೊರೆತಿದೆ. ಸ್ವಾತಂತ್ರ್ಯ ಪೂರ್ವಕಾಲದಲ್ಲಿ ವೈಸರಾಯಿಗಳು ಜೀವನದ ನಾನಾ ರಂಗಗಳಲ್ಲಿ ಹೆಸರಾದವರನ್ನು ಕರೆದು ವಿಚಾರ ಮಾಡುತ್ತಿದ್ದರು. ಇದರಿಂದ ದೇಶದ ವಿವಿಧ ಸಮಸ್ಯೆಗಳನ್ನು ಅರಿತುಕೊಳ್ಳುವುದು ಅವರಿಗೆ ಸಾಧ್ಯವೆನಿಸುತ್ತಿತ್ತು. ಜವಾಬ್ದಾರಿಯುತ ಸರಕಾರ ದೇಶದಲ್ಲಿಲ್ಲದ ಆ ಕಾಲದಲ್ಲಿ ಪ್ರಾಯಃ ಈ ಕ್ರಮ ಬೇಕೆನಿಸುತ್ತಿರಬೇಕು. ಸ್ವಾತಂತ್ರ್ಯೋತ್ತರಕಾಲವನ್ನೂ ಸಾಕಷ್ಟು ಅಧ್ಯಯನ ಮಾಡಿದ ಮಹನೀಯರನೇಕರು ಇಂತಹ ಹಳೆಯ ಕ್ರಮ ಬೇಕೆನ್ನುವವರು ಇದ್ದಾರೆ. ಡಾ|| ರಾಧಾಕೃಷ್ಣನ್ ಹಾಕಿಕೊಟ್ಟ ಈ ಮಾದರಿಯು ವ್ಯಕ್ತಿಗತ ಸುಖದುಃಖ ಮತ್ತು ದೂರುಗಳನ್ನು ತೋಡಿಕೊಳ್ಳುವುದರಲ್ಲಿಯೇ ತೃಪ್ತವಾಗುವುದೋ ಅಥವಾ ದೇಶವನ್ನು ಎದುರಿಸುವ ದ್ವಂದ್ವ ಪರಿಸ್ಥಿತಿಯ ಮೇಲೆ ಸಾಮಾನ್ಯ ನಾಗರಿಕನ ಅಭಿಪ್ರಾಯವೇನೆಂಬುದನ್ನು ವಿಶದ ಪಡಿಸುವ ಪರಿಪಾಠಕ್ಕೆ ಬರುವುದೋ ಕಾದು ನೋಡಬೇಕಾಗಿದೆ.

ರಾಷ್ಟ್ರಪತಿಯವರು ಹಾಕಿಕೊಟ್ಟ ಈ ಪರಿಪಾಠವು ರಾಜ್ಯಪಾಲರಿಗೊಂದು ಮಾ

(೯ನೇ ಪುಟ ನೋಡಿರಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ
ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ.

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ|
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಕಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾ ತರದ ಸಿದಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್

ಫ್ರೆಂಚ ಉಕ್ಕಿನ ಮನುಷ್ಯ

ಜಾನ್ ಆಫ್ ಆರ್ಕ್—ಚಾರ್ಲ್ಸ್ ಡಿಗಾಲೆ

ಫ್ರಾನ್ಸಿನ ಉಕ್ಕಿನ ಮನುಷ್ಯ ರಾಷ್ಟ್ರಪತಿ ಚಾರ್ಲ್ಸ್ ಡಿಗಾಲೆಯವರ ನೀತಿಯ ಕಾರಣದಿಂದ ಮರಳಿ ಅಲ್ಲಿ ರಾಜಕೀಯ ಸಂಕಷ್ಟವು ಎದ್ದುನಿಂತಿದೆ. ಯುರೋಪಿನ ದೇಶಗಳ ಸಂಘಟನೆಯ ವಿಷಯದಲ್ಲಿ ಅವರು ವ್ಯಕ್ತಪಡಿಸಿದ ವಿಚಾರಗಳು ಫ್ರಾನ್ಸಿನ ಸರಕಾರದ ಐದು ಮಂತ್ರಿಗಳಿಗೆ ಸರಿ ಕಾಣಲಿಲ್ಲ, ಅವರೆಲ್ಲರೂ ರಾಜಿನಾಮೆಯಿತ್ತು ಸಂಪುಟದಿಂದ ಹೊರಬಿದ್ದರು ಈ ಪ್ರಶ್ನೆಯನ್ನು ಮುಂದಿಟ್ಟು, ಸದ್ಯದ ಸರಕಾರವನ್ನು ಪದಚ್ಯುತಗೊಳಿಸುವ ಪ್ರಯತ್ನಗಳೂ ನಡೆಯುತ್ತಿವೆ; ಆದರೂ ಉಕ್ಕಿನ ಮನುಷ್ಯ ಡಿಗಾಲೆಯವರ ನೀತಿಯು ಅಚಲವಾಗಿ ನಿಲ್ಲುವುದು ಖಂಡಿತವೆಂದು ಹೇಳಬಹುದು.

'ಡೈಲಿ ನ್ಯೂಸ್' ಎಂಬ ಬ್ರಿಟನ್ನಿನ ಪತ್ರಿಕೆಯು ಒಂದು ವಿಶಿಷ್ಟ ಸುದ್ಧಿಯನ್ನು ಕೆಲವು ದಿನಗಳಿಗೆ ಮೊದಲ ಪ್ರಕಟಿಸಿದೆ. "ಅಲ್ಜೀರಿಯಾದ ಗುಪ್ತಸೈನಿಕ ಸಂಸ್ಥೆಯ ೨೦ ಜನ ಸದಸ್ಯರು ಫ್ರಾನ್ಸಿಗೆ ಬಂದಿದ್ದಾರೆ, ೭೦ ವರ್ಷದ ಡಿಗಾಲೆಯವರನ್ನು ಕೊಲ್ಲುವುದು ಇಲ್ಲವೇ ಅವರ ಕೊಲೆಯ ಪ್ರಯತ್ನದಲ್ಲಿ ತಾವಾದರೂ ಸಾಯುವುದು ಅವರ ಉದ್ದೇಶ" ಎಂಬುದೇ ಇದರ ಸಾರಾಂಶ.

ಈ ಭೀಕರ ವರ್ತಮಾನದಿಂದ ಡಿಗಾಲೆ ವಿಚಲಿತರಾಗಲಿಲ್ಲ. ಕಳೆದ ವರ್ಷ ಕೂಡ ತನ್ನ ಹತ್ಯೆಗಾಗಿ ನಡೆದ ಪ್ರಯತ್ನಗಳ ಸುದ್ದಿಯನ್ನು ಕೇಳಿ, ಅವರು ನಗೆಗಡಲನ್ನು ಎಬ್ಬಿಸಿದ್ದರು. ಹಿಂದಿನ ವರ್ಷದ ಎಪ್ರಿಲ್‌ನಲ್ಲಿ ತನ್ನ ವಿರುದ್ಧ ಹೂಡಲಾದ ಸೇನಾಧಿಕಾರಿಗಳ ವಿದ್ರೋಹವನ್ನೂ ಅವರು ಬಹಳ ಶಾಂತಿಯಿಂದ ಅಡಗಿಸಿದರು. ಹೀಗೆ ಎಲ್ಲ ವಿಧದ ವಿರೋಧ, ಸಂದೇಹಗಳು ಇದ್ದರೂ ಫ್ರಾನ್ಸು ಅರಾಜಕತೆಯ ಗರ್ತಕ್ಕೆ ಪತಿತವಾಗದಂತೆ ಎಚ್ಚರಿಕೆ ವಹಿಸುತಿದ್ದಾರೆ, ಚಾರ್ಲ್ಸ್ ಡಿಗಾಲೆಯವರು.

೧೮೯೦ರ ನವಂಬರ ೨೨ರಂದು ಫ್ರಾನ್ಸಿನ ಲಿಲೆಯೆಂಬಲ್ಲಿ ಜನಿಸಿದ ಚಾರ್ಲ್ಸ್ ಡಿಗಾಲೆಯವರು ಫ್ರಾನ್ಸಿನ ಸೈನಿಕ ಅಕಾಡೆಮಿಯ ಸರ್ವಶ್ರೇಷ್ಠ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದರು. ಮೊದಲನೆಯ ಲೋಕಯುದ್ಧಾವಧಿಯಲ್ಲಿವರು ಜರ್ಮನಿಯಲ್ಲಿ ಮೂರು ವರ್ಷಗಳ ಕಾಲ ಕೈದಿಯಾಗಿದ್ದರು ಕಾರಾಗೃಹದಿಂದ ಐದು ಭಾರಿ ಪಾರಾಗಲು ಪ್ರಯತ್ನ ಮಾಡಿದ ಇವರು ಅಸಫಲರಾದರು, ೧೯೧೮ರಲ್ಲಿ ಬಿಡುಗಡೆಗೊಂಡಾಗ, ಪೋಲೇಂಡಿಗೆ ಹೋಗಬೇಕಾಯಿತು. ೧೯೩೭ರಲ್ಲಿ ಇವರು ವಿತ್ರರಾಷ್ಟ್ರಗಳ ಸಂಯುಕ್ತ ಹೈಕಮಾಂಡಿನೊಡನೆ ಸಂಬದ್ಧರಿದ್ದರು

ದ್ವಿತೀಯ ಯುದ್ಧಕ್ಕೆ ಮೊದಲು ಇವರು ಯುದ್ಧನೀತಿಯ ಬಗ್ಗೆ ಹಲವು ಪುಸ್ತಕಗಳನ್ನು ಬರೆದರು. ಇವೆಲ್ಲವೂ ಜರ್ಮನಿಯಲ್ಲಿ ವಿಶೇಷವಾಗಿ ಪ್ರಚಾರವಾಯಿತು ಮಹಾಯುದ್ಧ ಪ್ರಾರಂಭವಾದ ನಂತರ ಅವರು ಪದವಿಯಿಂದ ಪದವಿಗೇರುತ್ತ ಬ್ರಿಗೇಡಿಯರ್ ಜನರಲ್ ಮತ್ತು ಸಂರಕ್ಷಣಾ ವಿಭಾಗದ ಪ್ರಧಾನರಾದರು. ಆಗ ಅವರು ಫ್ರಾನ್ಸ್ ಮತ್ತು ಆಫ್ರಿಕಾಗಳಲ್ಲಿ ಬ್ರಿಟನ್-ಫ್ರಾನ್ಸುಗಳ ಸಂಯುಕ್ತ ಸೇನೆಯ ಹಲವು ಯೋಜನೆಗಳನ್ನು ತಯಾರಿಸಿದರು.

೧೯೪೦ರ ಜೂನ್ ೧೮ರಂದು ಯುದ್ಧ ವಿರಾಮವಾದ ನಂತರ ಡಿಗಾಲೆಯವರು ಲಂಡನ್ನಿನಿಂದ ತಮ್ಮ ಮೊತ್ತಮೊದಲ ವಿನಂತಿಯನ್ನು ಪ್ರಸಾರ ಮಾಡಿದರು ಆ ಮೇಲೆ ೪ ವರ್ಷಗಳ ವರೆಗೆ ಸ್ವತಂತ್ರ ಫ್ರಾನ್ಸಿನ ಪ್ರಧಾನರಾದರು. ತ್ರಿ ಮಹಾರಾಷ್ಟ್ರಗಳ ಸಾಲಿನಲ್ಲಿ ಇಂದು ಫ್ರಾನ್ಸ್ ನಿಂತಿರುವುದಕ್ಕೆ ಇವರ ಪ್ರಯತ್ನ ಪರಿಶ್ರಮಗಳೇ ಕಾರಣ. ೧೯೪೪ರ ಆಗಸ್ಟ ೨೫ರಂದು ಡಿಗಾಲೆಯವರು ಫ್ರಾನ್ಸಿನ ಜನತಂತ್ರದ ತಾತ್ಕಾಲಿಕ ಸರಕಾರದ ವೈಧಾನಿಕ ಅಧ್ಯಕ್ಷರಾದರು ಆದರೆ, ಬೇರೆ ಬೇರೆ ರಾಜಕೀಯ ಪಕ್ಷಗಳ ಮತಭೇದಗಳ ಪರಿಣಾಮವಾಗಿ ಕೆಲವೇ ತಿಂಗಳುಗಳಲ್ಲಿ ಅವರು ರಾಜಿನಾಮೆ ಕೊಡಬೇಕಾಯಿತು.

ಸಕ್ರಿಯ ರಾಜಕೀಯದಿಂದ ಬೇರೆಯಾದರೂ ಅವರು ಸುಮ್ಮನುಳಿಯಲಿಲ್ಲ ೧೯೪೭ರ ಎಪ್ರಿಲ್‌ರಲ್ಲಿ ಆರ್ ಪಿ ಎಫ್. ಎಂಬ ರಾಜಕೀಯ ಪಕ್ಷದ ರಚನೆಗೆ ಬುಡಗಟ್ಟು ಹಾಕಿದರು ಆದರೆ, ಇದರಲ್ಲಿ ಅವರು ಹೆಚ್ಚಿನ ಸಾಫಲ್ಯ ಪಡೆಯಲಿಲ್ಲ. ೧೯೫೮ರ ವರೆಗಿನ ಸಮಯವನ್ನು ಅವರು ತಮ್ಮ ಜೀವನದ ಸಂಸ್ಮರಣೆಗಳನ್ನು ಬರೆಯುವುದರಲ್ಲಿಯೇ ಕಳೆದರು.

೧೯೫೮ರಲ್ಲಿ ಆಗಿನ ರಾಷ್ಟ್ರಪತಿ ರೆನೆಕೋಟಿ ಮತ್ತು ಅಧಿಕಾಂಶ ಫ್ರೆಂಚ ನಾಗರಿಕರ ಆಗ್ರಹದ ಮೇಲೆ ಡಿಗಾಲೆಯವರು ಮರಳಿ ಫ್ರೆಂಚ ಪ್ರಧಾನ ಮಂತ್ರಿಯಾಗಿ ದೇಶದ ಆಡಳಿತ ಸೂತ್ರವನ್ನು ತನ್ನ ಕೈಗಳಿಗೆ ತಂದುಕೊಂಡರು. ಆ ಕಾಲದ ಫ್ರೆಂಚ ರಾಜಕಾರಣವು ತೀರ ಅಸ್ಥಿರವಿತ್ತು ಮಂತ್ರಿಮಂಡಳವು ರಚನೆಗೊಂಡ ದಿನವೇ ಅದು ಉರುಳಿ ಹೋಗುತ್ತಿದ್ದುದೂ ಇತ್ತು. ಇದನ್ನೇ ವಿನೋದವಾಗಿ ಹೀಗೆ ಹೇಳುವುದೂ ಇತ್ತು 'ಒಬ್ಬ ಮಂತ್ರಿಮಂಡಳದ ಸದಸ್ಯನು ತನ್ನ ಕಕ್ಷೆಯಲ್ಲಿ ಕೆಲಸ ಮಾಡುತ್ತಿದ್ದಂತೆ ಕೆಲವು ತಾಸು ಮಲಗಿಬಿಟ್ಟ. ಅವನು ಎದ್ದಾಗ, ಕಾರ್ಯದರ್ಶಿಯು 'ಸ್ವಾಮಿ, ಮಲಗಿದ ಹೊತ್ತಿನಲ್ಲಿ ತಾವು ಎರಡು ಬಾರಿ ಫ್ರಾನ್ಸಿನ ಪ್ರಧಾನಿಗಳಾಗಿ ಆಯ್ಕೆಗೊಂಡು ಪದಚ್ಯುತರಾದಿರಿ ಎಂದನಂತೆ!'

ತನಗೆ ದೊರೆತ ಹೊಸ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಡಿಗಾಲೆಯವರು ವಿಶೇಷಜ್ಞರನ್ನೂ ರಾಷ್ಟ್ರಪ್ರೇಮಿಗಳನ್ನೂ ಕೂಡಿಸಿ ಒಂದು ಸಂವಿಧಾನವನ್ನು ರಚಿಸಿದರು ಇದರಿಂದ ಅಲ್ಲಿ ಅರಾಜಕತೆ ಮತ್ತು ಅಸ್ಥಿರತೆಗಳು ಕೊನೆಗೊಂಡುವು. ಹೊಸ ಸಂವಿಧಾನದ ಬಗ್ಗೆ ಜನಮತ ಸಂಗ್ರಹ ಮಾಡಲಾಯಿತು, ಶೇಕಡಾ ೮೦ರಷ್ಟು ಮತ ಗಳಿಸಿ ಈ ಸಂವಿಧಾನವು ೭-೧೦-೫೮ರಿಂದ ವ್ಯವಹಾರಕ್ಕೆ ಬಂದಿತು.

ನಿಡುಮೂಗರಾಗಿರುವವರಲ್ಲಿ ಆತ್ಮವಿಶ್ವಾಸವು ತುಂಬ ಯಾವುದೇ ವಿರೋಧವನ್ನೂ ಅವರು ಗಣಿಸುವುದಿಲ್ಲ; ತಮ್ಮ ಪಥದಿಂದವರು ವಿಚಲಿತರಾಗುವುದಿಲ್ಲ ಎಂದು ಶರೀರ ಶಾಸ್ತ್ರಜ್ಞರ ಅಭಿಪ್ರಾಯ ನಿಡುಮೂಗರಾದ ಡಿಗಾಲೆಯವರು ತಮ್ಮ ಹಿಂದೆ ನಡೆಯುವುದು ಫ್ರಾನ್ಸಿಗೆ ಗೌರವವೆಂದು ಜನತೆ ತಿಳಿಯುತ್ತದೆ ಎಂದು ನಂಬಿದ್ದಾರೆ ಏಕೆಂದರೆ, ಈ ನಾಯಕ ತನ್ನ ಪ್ರಾಣವನ್ನು ಅಂಗೈಯಲ್ಲಿಟ್ಟು ಕೊಂಡೇ ದೇಶ ರಕ್ಷಣೆಯ ಕಾರ್ಯದಲ್ಲಿ ತತ್ಪರರಾಗುತ್ತಾರೆ

ತನ್ನ ಅಪಾರ ಆತ್ಮವಿಶ್ವಾಸ ಮತ್ತು ಆಳವಾದ ದೇಶ ಪ್ರೇಮಗಳಿಂದಾಗಿ ಡಿಗಾಲೆಯವರು ಫ್ರಾನ್ಸಿನ ಸದ್ಯದ ರಾಜಕೀಯದ ಮೇಲೆ ತನ್ನ ಹೊರತು ಫ್ರಾನ್ಸು ಮತ್ತು ಅದರ ಭವಿಷ್ಯತ್ತಿನ ಅಭಿಲಾಷೆಯೆಲ್ಲವೂ ನಿಷ್ಫಲವೆಂಬ ವಿಶ್ವಾಸವನ್ನು ಹುಟ್ಟಿಸಿದ್ದಾರೆ ಇಂದಿನ ರಾಜಕೀಯ ನಾಯಕರಾದ ಡಿಗಾಲೆಯವರು ಆ ಈ ದಳದ ಆಧಿಪತ್ಯದಲ್ಲಿ ವಿಶ್ವಾಸವಿಡುವುದಿಲ್ಲ. ಬೇರೆ ಬೇರೆ ಪಕ್ಷಗಳ ಹಿಡಿತಕ್ಕೆ ಸಿಕ್ಕಿಬೀಳದೆ ಕೇವಲ ಫ್ರಾನ್ಸಿನ ಉನ್ನತಿಯನ್ನೇ ಬಯಸುವ ಸರಕಾರ ಫ್ರಾನ್ಸಿನಲ್ಲಿ ಬೇಕಾಗಿದೆಯೆಂದು ಹೇಳುತ್ತಾರೆ, ಅವರು

ಆದುದರಿಂದಲೇ ಚರ್ಚಿಲರು ಡಿಗಾಲೆಯವರ ಕುರಿತು ಹೀಗೆ ಹೇಳಿದ್ದಾರೆ: ತಮ್ಮ ದುರ್ವ್ಯವಹಾರಗಳಲ್ಲಿಯೂ ಅವರು ಫ್ರಾನ್ಸಿನ ಐಶ್ವರ್ಯ, ಗೌರವ ಮತ್ತು ಅಧಿಕಾರಗಳ ಪ್ರತೀಕವೆಂದು ತೋರುತಿದ್ದರು ಡಿಗಾಲೆಯವರು ತನ್ನನ್ನು 'ಜಾನ್ ಆಫ್ ಆರ್ಕ್'ನ ಆಧುನಿಕ ಪ್ರತಿನಿಧಿಯೆಂದು ತಿಳಿಯುತ್ತಾರೆಂದು ಕೆಲವರು ನನ್ನೊಡನೆ ಹೇಳಿದರು. ಇದು ವಿನೋದವಾಗಿ ಹೇಳಿದ್ದ ಮಾತು. ಆದರೆ, ನನಗಿದರಲ್ಲಿ ಯಾವುದೇ ವಿನೋದವಡಗಿದೆಯೆಂದು ತೋರುವುದಿಲ್ಲ."



ಸಮುದ್ರದಲ್ಲಿ ತಳವೂರಿದ ಅಮೇರಿಕೆಯ ಆಕಾಶಯಾನದ ತುದಿ

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ. ೭೦ ನ ಪೈಸೆ
(ಶ್ರೀ ಕೆ. ಕೆ ಶೆಟ್ಟಿ, ಎಂ ಎಲ್. ಸಿ ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ. ೯೦ ನ ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ ಅವರಿಂದ ಅನುವಾದಿತ) ಕಾರವಾರ

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೧	೩೧-೫-'೬೨	೩೮

ಪಾಕ್ ಪುಡಾರಿತನ

ಮೇ ೨೧ರಂದು ಭದ್ರತಾ ಸಮಿತಿಯ ಸಭೆಯನ್ನು ಸೇರಿಸಿ ಅದರಲ್ಲಿ ಕಾಶ್ಮೀರದ ಸಂಬಂಧದಲ್ಲಿ ಒಂದು ಗೊತ್ತುವಳಿಯನ್ನು ಸ್ವೀಕರಿಸುವಂತೆ ಮಾಡಬೇಕೆಂದೂ ಹಿಮಾಲಯದಷ್ಟು ಪ್ರಯತ್ನ—ಪೇಚಾಟಗಳನ್ನು ಕೈಗೊಂಡ ಪಾಕಿಸ್ತಾನ ಕೊನೆಗೂ ತನ್ನ ಮೂಗಿಗೆ ಎರವಾಗಬೇಕಾಯಿತು. ಪಾಕಿಸ್ತಾನದ ಈ ಕೇಳಿಕೆಯನ್ನು ಭಾರತವು ವಿರೋಧಿಸಿ, ಜೂನ್ ಪೂರ್ವಾರ್ಧದ ವರೆಗೆ ಸಭೆಯನ್ನು ಮುಂದುವರಿಸಬೇಕೆಂದು ಕೇಳಿಕೊಂಡಿತ್ತು. ಈ ದಿನವು ಮುಂದುವರಿಯುವ ವಿಷಯದಲ್ಲಿ ಬೇಕೆಂಬಷ್ಟು ಸಂದಿಗ್ಧತೆಯು ತೋರಿ ಬಂದು ಜೂನ್ ೧೧ರಂದು ಸಭೆ ಸೇರುವುದೆಂದು ಸಾಮೂನ್ಯವಾಗಿ ಈಗ ನಿರ್ಧಾರವಾಗಿದೆ. ಇದನ್ನು ಭಾರತವು ವಿರೋಧಿಸುವುದಿಲ್ಲವೆಂದು ತಿಳಿಯುತ್ತದೆ. ದಿನದಲ್ಲಿ ಉಂಟಾದ ಈ ಪರಿವರ್ತನೆಯಿಂದ ಪಾಕಿಸ್ತಾನವು ತನ್ನ ಮಾನಕ್ಕೆ ಭಂಗ ತಂದುಕೊಂಡಿದೆಯೆಂದು ಹೇಳಬಹುದು. ಮೇ ೨೧ನೆ ದಿನಾಂಕವನ್ನೇ ಅದು ಬಲವಾಗಿ ಹಿಡಿದುಕೊಳ್ಳಲು ಕಾರಣವಿಲ್ಲದಿಲ್ಲ. ಆದರೆ, ಈ ಕಾರಣವು ಕೇವಲ ರಾಜಕೀಯ ಪ್ರತಿಷ್ಠೆಗೆ ಸಂಬಂಧಿಸಿದುದು. ಕಾಶ್ಮೀರದ ಕುರಿತಾದ ತಿರುಬೊಬ್ಬೆಯನ್ನು ಹಾಕುತ್ತಿರುವ ಅದು ಕಾಶ್ಮೀರವೇ ತನ್ನ ಜೀವನ—ಮರಣವೆಂಬ ನಾಟಕವನ್ನು ಅಭಿನಯಿಸುವಲ್ಲಿ ಈ ತಂತ್ರವೂ ಒಂದು ದೃಶ್ಯ ಮಾತ್ರವಾಗಿತ್ತು. ಅದರ ಅಭಿನಯವನ್ನು ಕಾಣುವ ಕುತೂಹಲವು ಭದ್ರತಾ ಸಮಿತಿಯ ಸದಸ್ಯ ರಾಷ್ಟ್ರಗಳಿಗೆ ಉದಿಸಲಿಲ್ಲ; ಇದು ಪಾಕಿಸ್ತಾನದ ದುರದೃಷ್ಟ.

ಮುಂದಾದರೂ ಸೇರಲಿರುವ ಸಭೆಯಲ್ಲಿ ಪಾಕಿಸ್ತಾನವು ತನ್ನ ಬೇಳೆಯನ್ನು ಬೇಯಿಸುವ ತೀವ್ರ ಹವಣಿಕೆಯಲ್ಲಿ ಈಗಾಗಲೇ ತೊಡಗಿದೆ. ಭದ್ರತಾ ಸಮಿತಿಯ ಶಾಶ್ವತ ಸದಸ್ಯ ರಾಷ್ಟ್ರಗಳಾದ ಚಿಲಿ, ಘಾನಾ, ಆಯರ್ಲೆಂಡ್ ವೆನೆಜೂಲಾ ಮತ್ತು ಸಂಯುಕ್ತ ಅರಬರಾಷ್ಟ್ರಗಳ ಮೂಲಕ ಒಂದು ಗೊತ್ತುವಳಿಯನ್ನು ಮುಂದೆ ತರಲು ಅದು ಭಗೀರಥ ಪ್ರಯತ್ನ ನಡೆಸುತ್ತಿದೆ. ಕಾಶ್ಮೀರದ ವಿಷಯದಲ್ಲಿ ಸಂ. ಅ. ರಾಷ್ಟ್ರವು ಮೊದಲಿನಿಂದಲೂ ಭಾರತಕ್ಕೆ ಅನುಕೂಲವಾಗಿತ್ತು. ಘಾನವಾದರೂ ವಿರೋಧಿಯೊಗಿರಲಿಲ್ಲ. ಇವುಗಳ ಮನಸ್ಸನ್ನು ಒಲಿಸಿ ತ್ರಯಸ್ಥರ ಮಧ್ಯಸ್ಥಿಕೆಗೆ ಕಾಶ್ಮೀರವನ್ನು ಬಿಟ್ಟುಕೊಡುವಂತಹ ಗೊತ್ತುವಳಿಯೊಂದನ್ನು ಮಂಡಿಸುವ ಉಪಾಯವನ್ನು ಜಫರುಲ್ಲಾ ಖಾನರು ಸಾಧಿಸುವಂತಿದೆ. ಈ ಗೊತ್ತುವಳಿಯು ಮುಂದೆ ಬಂದಿತೆಂದರೆ, ಪಾಶ್ಚಾತ್ಯರು ಅದನ್ನು ಬೆಂಬಲಿಸುವುದೂ ಅಷ್ಟೇ ಸತ್ಯ; ಏಕೆಂದರೆ ಅವರು ಪಾಕಿಸ್ತಾನವನ್ನು ಹುರಿದುಂಬಿಸುತ್ತಿರುವುದರಲ್ಲೇ ತಮ್ಮ ಲಾಭವಿದೆಯೆಂಬುದನ್ನು ಬಲ್ಲರು. ಇಂತಹ ಗೊತ್ತುವಳಿಯಿಂದ ಕಾಶ್ಮೀರದ ಪ್ರಶ್ನೆ ಬಗೆಹರಿಯುವುದೆಂಬ ವಿಶ್ವಾಸ ಪಾಕಿಸ್ತಾನಕ್ಕಿಲ್ಲವಾದರೂ, ತಾನು ಆ ಬಗ್ಗೆ ಮುಂದಿಟ್ಟ ವಾದವು ನಿಷ್ಪ್ರಯೋಜಕವಲ್ಲವೆಂಬುದನ್ನು ಪ್ರದರ್ಶಿಸದೆ ಹೋದರೆ, ಅದರ ಘನತೆಗೀಗ ಕುಂದು ಬರುವಂತಾಗಿದೆ.

ಭಾರತವು ಈ ಸಂಬಂಧದಲ್ಲಿ ತನ್ನ ನಿಲುಮೆಯೇನೆಂಬುದನ್ನು ಈ ಹಿಂದೆಯೇ ಒಂದಲ್ಲ ಹಲವು ಬಾರಿ ಪ್ರಕಟ ಪಡಿಸಿದೆ. ತ್ರಯಸ್ಥರ ಮಧ್ಯಸ್ಥಿಕೆಗೆ ಒಪ್ಪಿಸುವುದೆಂದರೆ, ತನ್ನ ಸಾರ್ವಭೌಮಾಧಿಕಾರದ ಮೇಲೆಯೇ ಪ್ರಶ್ನಾರ್ಥಕ ಚಿಹ್ನೆ ಬರೆದಂತೆ ಎಂದು ಅದು ಭಾವಿಸುತ್ತದೆ. ಈ ವಿಚಾರದಲ್ಲಿ ಪಾಕಿಸ್ತಾನದೊಡನೆ ನೇರ ಮಾತುಕತೆ ನಡೆಸಲು ಭಾರತವು ಸದಾ ಸಿದ್ಧವಿದೆ. ೧೯೫೫ರಲ್ಲಿಯೇ ಪಾಕ್ ಅಧ್ಯಕ್ಷರಿಗೆ ಪ್ರಧಾನಿ ನೆಹರು ಈ ಬಗ್ಗೆ ಆಮಂತ್ರಣವಿತ್ತಿದ್ದರು; ಕೆಲವು ತಿಂಗಳು ಮೊದಲು ಇದನ್ನೇ ಪುನರುಚ್ಚರಿಸಿದ್ದಾರೆ. ಆದರೆ, ಪಾಕ್ ಶಾಸಕರಿಗೆ ಪ್ರಶ್ನೆಯ ಇತ್ಯರ್ಥವು ಪ್ರಯೋಜನಕರವಿಲ್ಲ; ಲಾಭಪ್ರದವೆನಿಸಿಲ್ಲ. ಆದುದರಿಂದಲೇ ಅವರು ಈ ಬಗ್ಗೆ ಉತ್ಸಾಹವನ್ನೂ ತಳೆದಿಲ್ಲ. ಕಾಶ್ಮೀರದ ತಂಟೆಯನ್ನು ಹದಿನಾಲ್ಕು ವರ್ಷಗಳ ಮೊದಲು ಮಾಡಿದ ಗೊತ್ತುವಳಿಯ ಒಂದಂಶದಂತೆ ಬಿಡಿಸಿದರೆ ಮಾತ್ರ ತಮಗೆ ಲಾಭವಾದೀತು ಎಂದು ಅದು ಬಯಸಿ ಮತ್ತೂ ಮತ್ತೂ ಅದನ್ನೇ ಕೆದಕುತ್ತ ಇರುವುದು ಅಸಹ್ಯವೆನಿಸಿದೆ. ಅಂದಿನ ಕಾಶ್ಮೀರಕ್ಕೂ ಇಂದಿನ ಕಾಶ್ಮೀರಕ್ಕೂ ಅಜಗಜಾಂತರವಿದೆ. ಭಾರತದೊಡನೆ ತಮ್ಮ ಸೇರ್ಪಡೆಯನ್ನು ಕಾಶ್ಮೀರಿಗಳು ಆಗಾಗಲೇ ದೃಢಪಡಿಸಿದ್ದಾರೆ. ಭಾರತೀಯ ಸಂವಿಧಾನದಲ್ಲಿ ಕಾಶ್ಮೀರ ರಾಜ್ಯದ ಸಂಬಂಧದಲ್ಲಿ ಕೆಲವೊಂದು ವಿಶೇಷ ನಿಯಮಗಳಿವೆ. ಅಲ್ಲಿಂದ ನಾಮಕರಣಹೊಂದಿದ ಸದಸ್ಯರು ಪಾರ್ಲಿಮೆಂಟಿನಲ್ಲಿದ್ದಾರೆ. ಈ ನಾಮಕರಣದ ಬದಲು, ಸಾರ್ವತ್ರಿಕ ಚುನಾವಣೆಗಳ ಮೂಲಕವೇ ಪ್ರತಿನಿಧಿಗಳನ್ನು ಆಯ್ದುಕೊಳ್ಳುವ ಅಭಿಲಾಷೆಯೊಗ ಅಲ್ಲಿನವರಲ್ಲಿ ಹುಟ್ಟಿದೆ. ಮುಂದಿನ ಸಾರ್ವತ್ರಿಕ ಚುನಾವಣೆಗಳೊಳಗೆ ಈ ಕಾರ್ಯವೂ ಪೂರ್ಣವಾಗುವ ನಿರೀಕ್ಷೆಯಿದೆ.

ಪಾಕಿಸ್ತಾನವು ಆಕ್ರಮಣ ಮಾಡಿದ ರಾಷ್ಟ್ರವಾಗಿದೆ. ಭದ್ರತಾ ಸಮಿತಿಯ ಗೊತ್ತುವಳಿಯನ್ನು ಉಲ್ಲಂಘಿಸಿ ಕಳೆದ ಹದಿನಾಲ್ಕು ವರ್ಷಗಳಿಂದಲೂ ಅಲ್ಲಿ ತನ್ನ ಸೇನೆಯನ್ನು ಇರಿಸಿದ ರಾಷ್ಟ್ರವಾಗಿದೆ. ಹಾಗಿರುವಾಗ, ಅದಕ್ಕೆ ಭದ್ರತಾ ಸಮಿತಿಯ ಗೊತ್ತುವಳಿಯ ಎರಡನೆಯ ಅಂಶದಂತೆ ಚುನಾವಣೆ ನಡೆಸುವಂತೆ ಕೇಳಿಕೊಳ್ಳುವ ಹಕ್ಕು ಹದಿನಾಲ್ಕು ವರ್ಷಗಳಿಗೆ ಮೊದಲೂ ಇರಲಿಲ್ಲ; ಇಂದಿಗೂ ಇರುವುದಿಲ್ಲ. ಭಾರತದ ಸಾರ್ವಭೌಮಾಧಿಕಾರಕ್ಕೆ ಒಳಪಟ್ಟ ಜಮ್ಮು-ಕಾಶ್ಮೀರಗಳ ಕುರಿತು ಮಧ್ಯಸ್ಥರನ್ನು ಒಳನುಗ್ಗಲು ಬಿಡಲಾರೆವು ಎಂಬ ಭಾರತದ ನಿಲುಮೆಯು ಸ್ಪಷ್ಟವಾಗಿದೆ. ಪಾಕ್ ಕುತಂತ್ರವು ಜಗತ್ತಿಗೇನೇ ಜಾಹೀರಾಗಿದೆ ಆದರೆ, ತಮ್ಮ ಸ್ವಾರ್ಥಸಾಧನೆಯ ಉದ್ದೇಶದಿಂದ ಪಾಶ್ಚಾತ್ಯ ರಾಷ್ಟ್ರಗಳು ಅದಕ್ಕೆ ಪ್ರೋತ್ಸಾಹ ಕೊಡುತ್ತಿವೆಯಾದರೂ ಭಾರತದ ಸತ್ಯಪರತೆಯನ್ನು ಸಂಪೂರ್ಣವಾಗಿ ಅಲ್ಲಗಳೆಯುವ ದುಸ್ಸಾಹಸ ತೋರಿಸುತ್ತಿಲ್ಲವೆಂಬುದಷ್ಟೇ ಸಮಾಧಾನ. ನೆರೆಯ ರಾಷ್ಟ್ರದೊಡನೆ ಸ್ನೇಹ ಪರತೆಯಿಂದಿರಬೇಕೆಂದು ಉದ್ದುದ್ದ ಭಾಷಣ ಬಿಗಿಯುವ ಪಾಕ್ ಸತ್ತಾರೂಢರು ತಮ್ಮ ಕೇಳಿಕೆಯು ಅನ್ಯಾಯದ್ದೆಂದು ತಿಳಿತಿಳಿದೂ ಭಾರತದೊಡನೆ ಕದನ ಕರೆಯುತ್ತಾರೆ. ಅವರ ಇಂತಹ ದುಷ್ಪ್ರವೃತ್ತಿಯು ನಿಲ್ಲದೆ ಆ ದೇಶದ ಏಳಿಗೆಯಾಗುವಂತಿಲ್ಲವೆಂಬುದಕ್ಕೆ ಇದು ವರೆಗಿನ ಅದರ ಇತಿಹಾಸವೇ ಸಾಕ್ಷಿ ಹೇಳುತ್ತದೆ.

ಜಗತ್ಪರ್ಯಟನ

ಜವಾಹರಲಾಲ

ನೆಹರು ದೆಹಲಿಯಲ್ಲಿ ಇಲ್ಲವೆಂದಾದರೆ ಅಲ್ಲಿನ ಚಟುವಟಿಕೆಗಳು ಅರ್ಧಕ್ಕರ್ಧದಷ್ಟು ಕಡಿಮೆಯಾಗುತ್ತವೆ. ಏಕೆಂದರೆ, ನೆಹರುವೇ ಅಲ್ಲಿ ಸುದ್ದಿಗೆ ಮೂಲ ವ್ಯಕ್ತಿ. ಹತ್ತು ದಿನಗಳ ವರೆಗೆ ವಿಶ್ರಾಂತಿ ಪಡೆಯಲು ಕಾಶ್ಮೀರದ ಕೊಳ್ಳಗಳತ್ತ ತೆರಳಿದ ನೆಹರು ಮತ್ತೂ ಮೂರು ದಿನ ಅಲ್ಲಿಯೇ ಉಳಿದರು. ಇದರಿಂದಾಗಿ ಲೋಕಸಭೆಯಲ್ಲಿ ವಿದೇಶ ಖಾತೆಯ ರಾಜ್ಯ ಮಂತ್ರಿ ಲಕ್ಷ್ಮೀ ಮೆನನ್ನರು ತಬ್ಬಿಬ್ಬಾಗಬೇಕಾಯಿತು. ವಾಶಿಂಗಟನ್ನದಲ್ಲಿಯ ರಾಯಭಾರಿ ಬಿ. ಕೆ. ನೆಹರುರವರ ಟೆಲಿವಿಜನ್ ಸಂದರ್ಶನದ ಬಗ್ಗೆ ನಿಲುವಳಿ ಸೂಚನೆಯು ಬಂದಾಗ, ಅದನ್ನು ಪ್ರಧಾನಿಗಳ ಅನುಪಸ್ಥಿತಿಯಲ್ಲಿ ಮಂಡಿಸುವುದು ತರವಲ್ಲವೆಂದು ಅವರಿಂದಾಗಿ ಲೋಕಸಭೆಯ ಅಧ್ಯಕ್ಷ ಸರದಾರ ಹುಕುಂ ಸಿಂಗರು ಸರಕಾರಕ್ಕೆ ಛೀಮಾರಿ ಹಾಕಿದರು.

ಕೃಷ್ಣಮಾಚಾರಿ

ಕೇಂದ್ರ ಸಚಿವ ಸುಬ್ರಹ್ಮಣ್ಯಂ ಮದ್ರಾಸದ ಸಂಚಾರ ಕಾರ್ಯಕ್ರಮ ಕೈಗೊಂಡಾಗಲೇ ಟಿ. ಟಿ. ಕೆ. ಯವರು ಕೇಂದ್ರ ಸಚಿವ ಸಂಪುಟಕ್ಕೆ ಸೇರುವಂತೆ ಮನ ವೊಲಿಸುವರೆಂಬುದು ಐವತ್ತು ನಯೆ ಪೈಸೆಯಷ್ಟು ಸಿದ್ಧವಾಗಿತ್ತು. ಈ ಸಂಬಂಧದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಅವರು ಟಿ. ಟಿ. ಕೆ. ಯವರು ಸಂಪುಟ ಸೇರುವುದಕ್ಕೆ ತನ್ನಿಂದಾದ ಪ್ರಯತ್ನ ಮಾಡುವುದಾಗಿಯೂ ಹೇಳಿದ್ದರು. ನವದೆಹಲಿಯ ರಾಜಕೀಯ ಚಲನವಲನಗಳಿಂದ ಖಾತಾರಹಿತ ಮಂತ್ರಿಯಾಗಿ ಟಿ. ಟಿ. ಕೆ. ಸೇರಿಕೊಳ್ಳುವುದು ನೂರಕ್ಕೆ ತೊಂಬತ್ತರಷ್ಟು ಸಿದ್ಧವಾಗಿದೆ. ಚಾಣಾಕ್ಷ ಮತಿಗಳ ಬುದ್ಧಿವಂತಿಕೆಯ ಉಪಯೋಗವಾಗಬೇಕೆಂಬುದರಿಂದ ಕೃಷ್ಣಮಾಚಾರಿಯವರ ಮೆದುಳಿನ ಪ್ರಯೋಜನ ಭಾರತ ಸರಕಾರಕ್ಕೆ ಲಭಿಸಿದರೆ, ಯಾರೂ ಅದನ್ನು ಅಲ್ಲವೆನ್ನುವುದಿಲ್ಲ.

ಎಸ್. ಆರ್. ಕಂಠಿ

ಎಲ್ಲರಿಗಿಂತ ಹೆಚ್ಚಾಗಿ ಉಪದೇಶ ಕೊಡುವ ಅಧಿಕಾರ ಮತ್ತು ಅವಕಾಶ ಶಿಕ್ಷಕರಿಗಿದೆ. ಅವರು ಬಯಸಿದರೆ, ಸುವರ್ಣ ರಾಜ್ಯವನ್ನೂ ಕಟ್ಟ ಬಹುದು; ಕ್ರಾಂತಿಯ ಕಹಳೆಯನ್ನೂ ಊದ ಬಹುದು; ಬಂಗಾರದಂತಹ ನಾಡನ್ನು ಮಸಣವನ್ನಾಗಿಯೂ ಮಾರ್ಪಡಿಸಬಹುದು. ಇಂತಹ ಅನುಪಮ ಶಕ್ತಿವಂತರಿಗೂ ಉಪದೇಶ ನೀಡುವ ಶಕ್ತಿ ಪ್ರಜಾಪ್ರಭುತ್ವದ ಮಂತ್ರಿ ಮಹೋದಯರಿಗೆ ಬಂದಿದೆ. ಮಂತ್ರಿಗಳಂತೆಯೇ ಎಲ್ಲರೂ ಅವರಿಗೆ ಉಪದೇಶಿಸುವ ಹವ್ಯಾಸಕ್ಕೆ ಹೊರಟಿದ್ದಾರೆ. ಪ್ರಜಾಸತ್ತಾತ್ಮಕ ವ್ಯಕ್ತಿತ್ವವನ್ನೂ ವಿಶಾಲ ಹಾಗೂ ಪಂಥಾತೀತ ದೃಷ್ಟಿಕೋನವನ್ನೂ ತರುಣ ಪೀಳಿಗೆಯಲ್ಲಿ ಬೆಳೆಸಬೇಕೆಂದು ಕರ್ನಾಟಕದ ಮುಖ್ಯ ಮಂತ್ರಿ ಕಂಠಿಯವರು ಶಿಕ್ಷಕರಿಗೆ ಹೇಳಿದ್ದಾರೆ. ರಾಜಕೀಯ ಪುಡಾರಿಗಳು ಪ್ರಜಾಸತ್ತೆಯ ಹೆಸರಿನಲ್ಲಿ ಅದಕ್ಕೇನೆ ಕಲಂಕ ತಂದು ಜಾತ್ಯತೀತತೆಯ ಹೆಸರಿನಲ್ಲಿ ಜಾತೀಯ ವಾದವನ್ನೆ ಪುರಸ್ಕರಿಸುತ್ತ ಬಂದು ಮಾಡುವ ಅನ್ಯಾಯ ನಿಲ್ಲದೆ ಉಪದೇಶ ಸಾರ್ಥಕವಾಗಲಾರದು.

ಡಾ। ನಾಗಪ್ಪ ಆಳ್ವ

ಡಾ। ನಾಗಪ್ಪ ಆಳ್ವರು ರಾಜ್ಯದ ಆರೋಗ್ಯ ಮಂತ್ರಿಯಾದರು; ನಿಜಲಿಂಗಪ್ಪನವರ ಸಂಪುಟದಲ್ಲಿಯೂ ಅವರು ಮುಂದುವರಿಯುವುದು ಖಂಡಿತ. ಕಳೆದ ವರ್ಷ ರಾಜ್ಯದಲ್ಲಿ ವೈದ್ಯರ ಅಭಾವ ನಿವಾರಣೆಗೆಂದು ೩॥ ವರ್ಷದ ಎಲ್. ಎಂ. ಪಿ. ಶಾಲೆಗಳನ್ನು ಅಂದಿನ ಸರಕಾರ ಮೆಡಿಕಲ್ ಕೌನ್ಸಿಲಿನ ವಿರೋಧವನ್ನೂ ಕಡೆಗಣಿಸಿ ತೆರೆದು ಅಂ

ಹೊಸ ನಾಯಕರು

ಕರ್ನಾಟಕದ ಮುಖ್ಯ ಮಂತ್ರಿ ಶಿವಪ್ಪ ರುದ್ರಪ್ಪ ಕಂಠಿಯವರು ತಮ್ಮ ನಾಯಕತ್ವವನ್ನು ನಿಜಲಿಂಗಪ್ಪನವರ ಪರವಾಗಿ ಬಿಟ್ಟುಕೊಡಲು ಕೇಂದ್ರದ ವರಿಷ್ಠರಿಂದ ಅನುಮತಿ ಪಡೆದುಕೊಂಡರು. ಜೂನ್ ಎರಡನೆಯ ವಾರದಲ್ಲಿ ಸಿದ್ದವ್ವನ ಹಳ್ಳಿ ನಿಜಲಿಂಗಪ್ಪನವರು ಪಕ್ಷದ ನಾಯಕತ್ವವನ್ನು ವಹಿಸಿ, ರಾಜ್ಯದ ಮುಖ್ಯ ಮಂತ್ರಿಯಾಗಿ ಮರಳಿ ಬರುವರೆಂಬುದು ಈಗ ಖಂಡಿತವಾಗಿದೆ. ಕಂಠಿಯವರು ವಿಶಾಲ ತಳಹದಿಯ ಮಂತ್ರಿ ಮಂಡಳ ರಚಿಸುವ ಚಿಂತನೆಯಲ್ಲೇ ಒಂದು ತಿಂಗಳ ಕಾಲ ಹೊರಳಾಡಿ, ತನ್ನಿಂದದು ಅಸಾಧ್ಯವೆಂದು ಮನಗಂಡು ಕೈಬಿಟ್ಟರು. ಅದೇ ಕಾಲಕ್ಕೆ ಸರಿಯಾಗಿ ಎ. ಜಿ. ಆರ್. ಸಮಿತಿಯ ವರದಿಯೂ ಪ್ರಕಟಗೊಂಡು ರಾಜ್ಯದ ಸಂಪುಟವು ತೀರ ಚಿಕ್ಕದಿರಬೇಕೆಂದು ಸಾರಿತು. ಆ ಚಾರಕ್ಕೂ ಆಯ್ತು; ಸುಖಕ್ಕೂ ಆಯ್ತು ಎನ್ನುವಂತೆ ಕಂಠಿಯವರು ಸುಮ್ಮನುಳಿದರು. ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿ ಚುನಾಯಿತರಾದಾಗ, ಸಂಪುಟವು ವಿಸ್ತಾರವಾಗುವುದು ಖಂಡಿತ. ಭಿನ್ನಾಭಿಪ್ರಾಯದ ಗುಂಪಿನವರಿಗೆ ಪ್ರಾತಿನಿಧ್ಯವನ್ನು ನೀಡುವರೇ, ನೀಡಿದರೂ ಆ ಪ್ರಾತಿನಿಧ್ಯವನ್ನು ಸ್ವೀಕರಿಸಲು ಜತ್ತಿ ಗುಂಪಿನವರು ಸಿದ್ಧರಿರುವರೇ ಎಲ್ಲವೂ ಅನಿರ್ಣೀತ. ಹಾಗಿದ್ದರೂ ಭಿನ್ನಮತೀಯರನ್ನು ಕೂಡಿಸಿಕೊಳ್ಳಲು ನಿಜಲಿಂಗಪ್ಪನವರು ಮೊದಲಿಗೂ ವಿರೋಧವಿರಲಿಲ್ಲ. ಕಂಠಿಯವರಂತೆ ಇವರೂ ಪಕ್ಷದ ಸದಸ್ಯರ ಕೈಗೊಂಬೆಯಾಗಿಯೇ ಉಳಿಯುವರೇ ಅಥವಾ ಸ್ವತಂತ್ರ ಪ್ರವೃತ್ತಿಯನ್ನು ಪ್ರದರ್ಶಿಸುವರೇ ನೋಡಬೇಕು ತಾನೇ. ಅದೇನೇ ಇರಲಿ, ನಿಜಲಿಂಗಪ್ಪನವರ ನಾಯಕತನ ಈ ಬಾರಿ ಬಾಳುವ ನಿರೀಕ್ಷೆಯಿದೆ; ತನ್ನ ಸಚಿವ ಸಂಪುಟವನ್ನು ಆರಿಸುವಾಗ, ಈ ಸಂಬಂಧದಲ್ಲಿ ಎ. ಜಿ. ಆರ್. ಸಮಿತಿಯು ಮಾಡಿದ್ದ ಸಿಫಾರಸುಗಳನ್ನು ಸಂಪೂರ್ಣ ಕಡೆಗಣಿಸದೆ ನಡೆಯುತ್ತಾರೆ ಎಂದು ಕನ್ನಡಿಗರು ನಂಬುತ್ತಾರೆ.

ಅಲ್ಲಲ್ಲಿಯ ಸುದ್ದಿಸಾರ

ಕುಟುಂಬ-ಯೋಜನಾ ಸಲಹಾ ಕೇಂದ್ರ ಉದ್ಘಾಟನೆ— ಭಾರತ ಕುಟುಂಬ ಯೋಜನಾ ಸಂಘದ ದ. ಕ. ಜಿಲ್ಲಾ ಮಣಿಪಾಲ ಕೇಂದ್ರದ ಆಶ್ರಯದಲ್ಲಿ ಏರ್ಪಡಿಸಲಾದ ಕುಟುಂಬ ಯೋಜನಾ ಸಲಹಾ ಕೇಂದ್ರದ ಉದ್ಘಾಟನೆಯು ತಾ. 23-5-62ರಂದು ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾ ಭವನದಲ್ಲಿ ಮೈಸೂರು ಸರಕಾರದ ಗೃಹ ಸಚಿವ ಶ್ರೀ ಆರ್. ಎಂ. ಪಾಟೀಲರಿಂದ ಶ್ರೀ ಎಂ. ಮಧ್ವರಾಜ್, ಎಂ. ಎಲ್. ಎ., ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ದ. ಕ. ಜಿಲ್ಲಾ ಕುಟುಂಬ ಯೋಜನಾ ಶಾಖೆಯ ಅಧ್ಯಕ್ಷ ಡಾ. ಟಿ. ಎಂ. ಎ. ಪೈಯವರು ಐದು ವರ್ಷಗಳಲ್ಲಿ ಜಿಲ್ಲೆಯ 30 ಕೇಂದ್ರಗಳಲ್ಲಿ ಆಗಿರುವ ಕಾರ್ಯ ಪ್ರಗತಿಯನ್ನು ವಿವರಿಸಿ ಈ ಕೇಂದ್ರಗಳಲ್ಲಿ ಮುಖ್ಯ ಕ್ಲಿನಿಕ್ ಮಣಿಪಾಲದಲ್ಲಿ ಇರುವುದೆಂದರು. ಕುಟುಂಬ ನಿಯಂತ್ರಣವನ್ನಷ್ಟೇ ಅಲ್ಲದೆ ಮಕ್ಕಳಾಗದವರನ್ನು ಪರೀಕ್ಷಿಸಿ ಸಂತತಿಯಾಗುವಂತೆಯೂ ಯುಕ್ತಿ ಸಲಾಗುವುದೆಂದರು. ಮಂತ್ರಿ ಪಾಟೀಲರು ಮಾತನಾಡುತ್ತಾ ಕುಟುಂಬ ಯೋಜನೆಯ ಕುರಿತು ತಕ್ಕ ಪ್ರಚಾರ ಕಾರ್ಯ ನಡೆಯುವುದು ಆವಶ್ಯಕವೆಂದೂ ಜನರು ಹಿಂದಿನ ಕಟ್ಟುಪಾಡುಗಳಿಗೆ ಕಟ್ಟು ಬಿದ್ದಿರಬಾರದೆಂದೂ ಕುಟುಂಬ ಯೋಜನೆಯಿಂದ ಆರೋಗ್ಯ ಸಂಪತ್ತು ಪ್ರಗತಿಸುವುದೆಂದೂ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಪ್ರಚಾರ ಅಗತ್ಯವೆಂದೂ ಹೇಳಿ ತಜ್ಞರು ಈ ಕೇಂದ್ರದಲ್ಲಿ ಉತ್ತಮ ಸೇವೆ ಸಲ್ಲಿಸುವಂತಾಗಲೆಂದರು. ಅಧ್ಯಕ್ಷ ಶ್ರೀ ಮಧ್ವರಾಜರು ಸಂತತಿ ನಿಯಂತ್ರಣ ಮಾಡದಿದ್ದರೆ ನಮ್ಮ ಯೋಜನೆಗಳು ಸಫಲವಾಗಲಿಕ್ಕಿಲ್ಲವೆಂದೂ ಆದುದರಿಂದ ಈ ಕೇಂದ್ರಗಳಲ್ಲಿ ಸಲಹೆ ಪಡೆದವರು ಗ್ರಾಮ ಗ್ರಾಮಗಳಲ್ಲಿಯೂ ಇದರ ಪ್ರಚಾರ ಮಾಡಬೇಕೆಂದೂ ಹೇಳಿದರು. ಟಿ. ರಮೇಶ ಪೈಗಳು ವಂದನೆಗಳನ್ನರ್ಪಿಸಿದರು.

ಜವಾಹರಲಾಲ್ ಧರ್ಮಾರ್ಥ ರಾತ್ರಿ ಶಾಲೆ— ಯು 1950ನೇ ಇಸವಿಯಲ್ಲಿ ಶ್ರೀ ಯಮ್. ಯಸ್. ರಾವ್, ಅವರಿಂದ ಸ್ಥಾಪಿಸಲ್ಪಟ್ಟು ಅದೇ ವರ್ಷದಲ್ಲಿಯೇ ಸಂಪೂರ್ಣ ಹೈಸ್ಕೂಲೆಂದು ಮುಂಬಾಯಿ ಸರಕಾರದಿಂದ ಮಾನ್ಯತೆಯನ್ನು ಪಡೆದುಕೊಂಡು, ಮುಂಬಾಯಿ ಕನ್ನಡಿಗರಿಗೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿ, ಅವರ ಪ್ರೀತಿಗೆ ಪಾತ್ರವಾಗಿ ದಿನದಿಂದ ದಿನಕ್ಕೆ ಉನ್ನತದ ಮೆಟ್ಟಲನ್ನೇರಿದ ವಿಷಯವು ಎಲ್ಲರಿಗೂ ತಿಳಿದ ಸಂಗತಿ. ಅಲ್ಲದೆ ಈ ವರ್ಷವು ಕೂಡಾ ಈ ಶಾಲೆಯು ರಾತ್ರಿ ಶಾಲೆಗಳಲ್ಲಿ ಅತೀ ದೊಡ್ಡದು ಮತ್ತು ಶ್ರೇಷ್ಠವಾದ ಶಾಲೆಯೆಂಬ ಬಿರುದನ್ನು ಮಹಾರಾಷ್ಟ್ರ ಸರಕಾರದಿಂದ ಪಡಕೊಂಡಿದೆ ಎಂದು ತಿಳಿಸುವರೇ ತುಂಬಾ ಸಂತೋಷ ಪಡುತ್ತೇವೆ.

ಶಾಲೆಯು ಈಗ ಸೆಕೆಕಾಲದ ರಜೆಯಲ್ಲಿದ್ದು ಇದೇ ಬರುವ ಜೂನ್ ತಿಂಗಳ ತಾರೀಕು 11ಕ್ಕೆ ತೆರೆಯಲಾಗುವುದು. ಪ್ರತಿ ವರ್ಷ ಎಷ್ಟೋ ವಿದ್ಯಾರ್ಥಿಗಳು ಪ್ರವೇಶ ಸಿಗದೆ ಹಿಂದೆ ಹೋಗುವ ಸಂದರ್ಭವು ಬಂದಿತ್ತು. ಈ ವರ್ಷವೂ ಕೂಡಾ ಬರೀ ಕೆಲವು ಸೀಟುಗಳು 5ನೇ ತರಗತಿಯಿಂದ 10ನೇ ತರಗತಿಯವರೆಗೆ ಖಾಲಿ ಇರುವುದು. ಸೇರಲಿಚ್ಛಿಸುವ ವಿದ್ಯಾರ್ಥಿಗಳು ತನ್ನ ಸರ್ಟಿಫಿಕೇಟು ಕಾಂಟರ್ ಸೈನ್ ಮಾಡಿಸಿ ಜೂನ್ ಹನ್ನೊಂದನೇ ತಾರೀಕಿಗೆ ಪ್ರಿನ್ಸಿಪಾಲರನ್ನು ಈ ಕೆಳಗಿನ ವಿಳಾಸದಲ್ಲಿ ಕಾಣತಕ್ಕದ್ದು.

ಗೌ। ಪ್ರಿನ್ಸಿಪಾಲ್, ದಿ ಜವಾಹರಲಾಲ್ ಫ್ರೀ ನೈಟ್ ಹೈಸ್ಕೂಲ್ ಬೋರ್ಡ್ ಹರ್ರಿಸ್ ಮಂಗರಿ ಸ್ಕೂಲ್ ಪ್ರಿಮಿಸಸ್, 283 ಕಾರ್ನಕ್ ರೋಡು, ಬೊಂಬಾಯಿ, 1.

ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾ ಸಭೆಯು— ತಾ. 27-5-62ರಂದು ಮಂಗಳೂರಲ್ಲಿ ಸಿಂಡಿಕೇಟ್ ಬ್ಯಾಂಕಿನ ಮಾಳಿಗೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪೈಯವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ ಕಾಂಗ್ರೆಸ್ಸಿಗರು ಭಿನ್ನ ಭಾವವನ್ನು ಮರೆತು ಪರಸ್ಪರ ಸಹಕಾರದಿಂದ ವರ್ತಿಸಿ ಕಾಂಗ್ರೆಸ್ಸನ್ನು ಬಲಪಡಿಸಬೇಕೆಂದೂ ಕಾಂಗ್ರೆಸ್ಸಿನಲ್ಲಿ ವ್ಯಕ್ತಿಪೂಜೆಯು ಸಲ್ಲದೆಂದೂ ಜಿಲ್ಲೆಯಲ್ಲಿ ಒಬ್ಬರ ಮುಖಂಡತ್ವ ಬೆಳೆಯಲು ಪ್ರಯತ್ನಿಸುವುದಕ್ಕಿಂತ ಯೋಗ್ಯರಾದ ಹಲವು ಮುಖಂಡರು ತಲೆಯೆತ್ತುವಂತೆ ಅನುಕೂಲ ಕಲ್ಪಿಸಬೇಕೆಂದೂ ಅಧಿಕಾರದಲ್ಲಿರುವವರು ಪಕ್ಷದೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಳ್ಳಬೇಕೆಂದೂ ಹೇಳಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಾದ ನಿರ್ಧಾರಗಳನ್ನು ವಿವರಿಸಿದರು. ಉಪಾಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ ಯವರು ಮಾತನಾಡುತ್ತಾ ಒಬ್ಬರ ಮೇಲೆ ಇನ್ನೊಬ್ಬರು ಅನುಮಾನ ಪಡದೆ ಕಾಂಗ್ರೆಸ್ಸಿನ ಹಿತದೃಷ್ಟಿಯಿಂದ ಸ್ಪಷ್ಟ ಧೋರಣೆಯಿಂದ ವರ್ತಿಸುವುದು ವಿಹಿತವೆಂದೂ ಅಲ್ಪ ಸ್ವಲ್ಪ ದೋಷಗಳು ಯಾರಿಂದಲೇ ಆಗಿರಲಿ, ಅವನ್ನೇ ಪರ್ಯಾಲೋಚಿಸಿ, ಗತ ಪುರಾಣದಲ್ಲಿ ಕಾಲ ಕಳೆಯದೆ ಮುಂದೆ ಕಾಂಗ್ರೆಸ್ಸನ್ನು ಬಲಪಡಿಸುವ ಕುರಿತು ಯೋಗ್ಯ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದೂ ಕೇಳಿಕೊಂಡರಲ್ಲದೆ ಶ್ರೀ ಟಿ. ಎ. ಪೈಯವರು ಕಾಂಗ್ರೆಸ್ ಭವನ ನಿರ್ಮಾಣ ನಿಧಿಗೆ ರೂ 5,001 ಸಹಾಯ ಕೊಡಲು ವಾಗ್ದಾನ ಮಾಡಿರುವುದು ಸ್ತುತ್ಯವೆಂದೂ ಅಸೌಖ್ಯದಿಂದ ನರಳುತ್ತಿರುವ ಶ್ರೀ ಎಫ್. ಎಚ್. ಒಡೆಯರ್ ಮತ್ತು ಕಾಂಚನ್‌ರಿಗೆ ರೂ 500ರಂತೆ ಸಹಾಯ ನೀಡಲು ಎಲ್ಲರೂ ಸಹಾಯ ಮಾಡಬೇಕೆಂದರು. ಶ್ರೀ ಬಿ. ನಾರಾಯಣ ನಾಯ್ಕರು 1960–61ರ ಲೆಕ್ಕ ಪತ್ರಗಳನ್ನು ಸಭೆಯ ಮುಂದಿಟ್ಟರು. ಶ್ರೀ ರಮಾನಾಥರು ಕಾಂಗ್ರೆಸ್ ಸಮಿತಿಗಳ ಕಾರ್ಯಕಲಾಪಗಳ ವರದಿಯನ್ನು ಓದಿದರು. ನಗರ ಸಭಾ ಚುನಾವಣೆಗಳಲ್ಲಿ ಭಾಗವಹಿಸುವ ಕುರಿತು ಸಮಿತಿಗಳನ್ನು ರಚಿಸಿ ಅವುಗಳ ಅಭಿಪ್ರಾಯ ಕೇಳಬೇಕೆಂದಾಯಿತಲ್ಲದೆ ಹೊಸ ಮತದಾರರಪಟ್ಟಿ ಆಗುವ ತನಕ ಚುನಾವಣೆ ಮುಂದರಿಸಲು ಕೇಳಿಕೊಳ್ಳಬೇಕೆಂದಾಯಿತು. ಇದೇ ಜೂನ್ ಅಂತ್ಯದೊಳಗೆ ಕಾಂಗ್ರೆಸ್ ಸದಸ್ಯರನ್ನು ಉತ್ಸಾಹದಿಂದ ಸೇರಿಸಬೇಕೆಂದಾಯಿತು. ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಕಟ್ಟಡ ನಿರ್ಮಿಸುವುದು ಅಗತ್ಯವೆಂದು ಅದರ ಮುಂದಿನ ಕಾರ್ಯಕ್ಕಾಗಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಮತ್ತು ಶ್ರೀ ಬಿ. ನಾರಾಯಣ ನಾಯ್ಕರವರಿಗೆ ಅಧಿಕಾರವೀಯಲಾಯಿತು. ಸುವ್ಯವಸ್ಥಿತ ರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಖಾಸಗೀ ಬಸ್ಸ್ ಸಾರಿಗೆಯು ನಡೆಯುತ್ತಿರುವುದರಿಂದ ಸರಕಾರವು ನಮ್ಮ ಜಿಲ್ಲೆಯ ಬಸ್ ಸಾರಿಗೆಯನ್ನು ಕೊನೆಯದಾಗಿ ರಾಷ್ಟ್ರೀಕರಿಸಬೇಕೆನ್ನುವ ಹಾಗೆ ರಾಷ್ಟ್ರೀಕರಿಸುವಾಗ ಖಾಸಗೀ ಕಂಪೆನಿಗಳಿಗೆ ಯೋಗ್ಯ ಪರಿಹಾರ ಕೊಡಬೇಕೆನ್ನುವ, ಕೆಲಸಗಾರರಿಗೆ ಸವಲತ್ತುಗಳನ್ನು ಒದಗಿಸಿ ಕೊಡಬೇಕೆನ್ನುವ, ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಲೆಕ್ಚರರುಗಳ ಹಾಗೂ ಉಪಾಧ್ಯಾಯರಿಗೆ ಮದ್ರಾಸಿನಲ್ಲಿ ದೊರೆಯುವಂತೆಯೇ ಪದವೀ ಪರೀಕ್ಷೆಗಳಿಗೆ ಖಾಸಗಿಯಾಗಿ ಕುಳಿತುಕೊಳ್ಳಲು ಅನುಮತಿ ನೀಡಬೇಕೆನ್ನುವ, ಶಾಲಾ ಮಕ್ಕಳಿಗೆ ಧರ್ಮಾರ್ಥ ಶಿಕ್ಷಣ ಕೊಡಲು ಸರ್ಕಾರ ನಿರ್ಧರಿಸಿರುವ ಹೆತ್ತವರ ಆದಾಯ ಮಿತಿಯನ್ನು ರೂ 2,400ಕ್ಕೆ ಏರಿಸಬೇಕೆನ್ನುವ ಜಿಲ್ಲೆಯ ಕಾಲೇಜುಗಳಲ್ಲಿ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸಲು ಅವಕಾಶ ಕಲ್ಪಿಸಬೇಕೆನ್ನುವ ಮೊದಲಾದ ನಿರ್ಣಯಗಳು ಅಂಗೀಕೃತವಾದುವು.

ಅಂಗೀಕಾರ— ಮಂಗಳೂರಿನ ಏರೋಡ್ರೋಮ್‌ ಭಾರತೀ ಏರಿಯೋ ಟ್ರಿಪ್ಸ್ ... ಈ ವರ್ಷವೇ ನಾಯರ್ ಏರಿಯೋ ... ಸ್ವಾಗಿ ಪರಿವರ್ತಿಸುವದೆ ತಾ. 17-5-62ರಂದು ಅಂಗೀಕಾರ ದೊರಕಿರುವುದಾಗಿ ತಿಳಿಸಬರುತ್ತದೆ.

ಕಡ್ಡಾಯ ಶಿಕ್ಷಣ ಪ್ರಚಾರ— ಉದ್ಘಾಟನಾ ಸಮಾರಂಭವು ತಾ. 27-5-62ರಂದು ಸಂಜೆ ಮಂಗಳೂರು ಗಣಪತಿ ಹೈಸ್ಕೂಲಿನ ಶಾರದಾ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರಿಂದ ಸರಕಾರಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಆರ್. ಉಮಾಶಂಕರರ ಅಧ್ಯಕ್ಷತೆಯಲ್ಲಿ ನೆರವೇರಿತು.

ನೋಟೀಸು

ತಾ. 13-5-1962ರಲ್ಲು ಜರಗಿದ ನೈಮಿತ್ತಿಕ ವಿಶೇಷ ಮಹಾಸಭೆಯಲ್ಲಿ ಸಂಘದ ಉದ್ದೇಶಗಳಲ್ಲಿ ಈ ಕೆಳಗಿನ ತಿದ್ದುಪಡಿಗಳನ್ನು ಮಾಡಬೇಕೆಂದು ನಿರ್ಣಯಿಸಿಯದೆ. ಸದರಿ ಠರಾವಿನ ವಿಷಯ ಇನ್ನೊಂದು ನೈಮಿತ್ತಿಕ ವಿಶೇಷ ಮಹಾಸಭೆ ಕರೆದು ಅಭಿಪ್ರಾಯ ಪಡೆಯಬೇಕಾದುದರಿಂದ ಸದರಿ ಸಭೆಯನ್ನು ತಾ. 17-6-'62ರಲ್ಲು ಸಾಯಂ 4 ಘಂಟೆಗೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿಸುವದಾಗಿ ನಿಶ್ಚಯಿಸಿಯದೆ.

ಸಭೆಗೆ ಸಂಘದ ಎಲ್ಲಾ ತರಗತಿಯ ಮೆಂಬರರು ಬರಬೇಕಾಗಿ ಕಾರ್ಯನಿರ್ವಾಹಕ ಸಮಿತಿಯು ಅಪೇಕ್ಷಿಸುತ್ತದೆ.

ಕೆ. ಸುಂದರರಾಮ ಶೆಟ್ಟಿ,
ಸಂಘದ ಕಾರ್ಯದರ್ಶಿ.

ತಾ. 17-5-1962.

ಸಂಘದ ಉದ್ದೇಶಗಳು

1. ಈಗ ಇರುವ ಪ್ರಧಾನ ಉದ್ದೇಶ (a)ಯನ್ನು ಲೋಪಪಡಿಸಿ ಈ ಕೆಳಗಿನವನ್ನು ಸೇರಿಸಬೇಕು

(a) ಬಂಟರ ಯಾನೆ ನಾಡವರ ಜಾತಿಯ ಮತ್ತು ಸಂಘದ ಆಡಳಿತೆ ಸಮಿತಿಯು ಆಗಿಂದಾಗ್ಗೆ ನಿರ್ಧರಿಸಬಹುದಾದ ಇತರ ಜಾತಿಯ ವಿದ್ಯಾರ್ಥಿಗಳ ಉಪಯೋಗದ ಬಗ್ಗೆ ಮಂಗಳೂರು ನಗರದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲಿಕ್ಕೆ ಮತ್ತು ಅದರ ವ್ಯವಸ್ಥೆ ಮಾಡಲಿಕ್ಕೆ

2. ಈಗ ಇರುವ ಪ್ರಧಾನ ಉದ್ದೇಶ (b)ಯನ್ನು ಲೋಪ ಪಡಿಸಿ ಈ ಕೆಳಗಿನವನ್ನು ಸೇರಿಸಬೇಕು.

(b) ನಿಧಿಯು ಸಾಕಷ್ಟು ಇರುವ ಸಂದರ್ಭದಲ್ಲಿ ಮೇಲಿನ (a) ಉಪನಿಬಂಧನೆಯಲ್ಲಿ ಉಲ್ಲೇಖಿಸಲ್ಪಟ್ಟ ವಿದ್ಯಾರ್ಥಿಗಳ ಉಪನಿವಾಸಗಳನ್ನು ಸಂಘದ ಆಡಳಿತೆ ಸಮಿತಿಯು ನಿರ್ಧರಿಸಿರುವ ಆಯಾ ಕಡೆಗಳಲ್ಲಿ ಮತ್ತು ಆಯಾ ಕಾಲಗಳಲ್ಲಿ ಸ್ಥಾಪಿಸಲಿಕ್ಕೆ ಮತ್ತು ವ್ಯವಸ್ಥೆ ಮಾಡಲಿಕ್ಕೆ.

3. ಈಗ ಇರುವ (c) ಪ್ರಧಾನ ಉದ್ದೇಶವನ್ನು ಲೋಪಪಡಿಸಿ ಈ ಕೆಳಗಿನ (c) ಮತ್ತು (d) ಪ್ರಧಾನ ಉದ್ದೇಶಗಳನ್ನು ಸೇರಿಸಬೇಕು.

(c) ಮಂಗಳೂರು ನಗರದಲ್ಲಿ ಬಂಟರ ಯಾನೆ ನಾಡವರ ಮತ್ತು ಉಪನಿಬಂಧನೆ (a) ಪ್ರಕಾರ ಪ್ರವೇಶಿಸಲ್ಪಟ್ಟವರ ಪ್ರಯೋಜನಾರ್ಥವಾಗಿ ಒಂದು ಗ್ರಂಥ ಭಂಡಾರ ಮತ್ತು ಅಥವಾ ಒಂದು ವಾಚನಾಲಯವನ್ನು ಸ್ಥಾಪಿಸಲಿಕ್ಕೆ ಮತ್ತು ವ್ಯವಸ್ಥೆ ಮಾಡಲಿಕ್ಕೆ

(d) ಸಂಘದ ಧ್ಯೇಯಗಳನ್ನು ಕಾರ್ಯಗತಗೊಳಿಸಲು ಆವಶ್ಯವಿರುವ ಕಟ್ಟಡ ಅಥವಾ ಕಟ್ಟಡಗಳನ್ನು ನಿರ್ಮಿಸಲಿಕ್ಕೆ.

ಔಪಸರ್ಗಿಕ ಉದ್ದೇಶಗಳು

4. 2 (a) ಔಪಸರ್ಗಿಕ ಉದ್ದೇಶದಲ್ಲಿ "ಸದರಿ ಜಾತಿಯವರಲ್ಲಿ" ಎಂಬುದನ್ನು ಲೋಪಪಡಿಸಬೇಕು.

5. 2 (b) ಔಪಸರ್ಗಿಕ ಉದ್ದೇಶದಲ್ಲಿ "ಸದರಿ ಜಾತಿಯವರಲ್ಲಿ" ಎಂಬುದನ್ನು ಲೋಪಪಡಿಸಿ ಈ ಕೆಳಗಿನವನ್ನು ಸೇರಿಸಬೇಕು

"ಆ ಜಾತಿಯಲ್ಲಿ ಅಥವಾ ಆಗಿಂದಾಗ್ಗೆ ಆಡಳಿತೆ ಸಮಿತಿಯು ನಿರ್ಧರಿಸಬಹುದಾದ ಇತರ ಜಾತಿಗಳಲ್ಲಿ".

6. 2 (c) ಔಪಸರ್ಗಿಕ ಉದ್ದೇಶದಲ್ಲಿ "ಸದರಿ ಜಾತಿಯ" ಎಂಬುದನ್ನು ಲೋಪಪಡಿಸಬೇಕು.

7. 2 (d) ಔಪಸರ್ಗಿಕ ಉದ್ದೇಶದಲ್ಲಿ "ಸದರಿ ಜಾತಿಯವರಲ್ಲಿ" ಎಂಬುದನ್ನು ಲೋಪಪಡಿಸಬೇಕು.

ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿತು. ಇಂದಿನ ಸರಕಾರಕ್ಕೆ ಈ ಮೆಡಿಕಲ್ ಸ್ಕೂಲುಗಳು ಮನಸ್ಸಿಗೆ ಬರುತ್ತಿಲ್ಲವಾದುದರಿಂದ ಅದನ್ನು ಮುಚ್ಚಿಬಿಡಬೇಕೆಂದು ಹವಣಿಸಿದೆ. ಮೆಡಿಕಲ್ ಸ್ಕೂಲುಗಳನ್ನು ಮುಚ್ಚುವುದಕ್ಕೆ ಯಾರ ಅಭ್ಯಂತರವೂ ಇಲ್ಲ; ಆದರೆ ಹುಚ್ಚು ಸರಕಾರವನ್ನು ನಂಬಿ ಅವುಗಳಲ್ಲಿ ಸೇರಿದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಎಲ್ಲರಿಗೂ ಕಳಕಳಿ. ಹಾಗೆಯೇ ಹಿಂದಿನ ಸರಕಾರದ ನಿರ್ಣಯಗಳನ್ನು ಇಂದಿನ ಅದೇ ಪಕ್ಷದ ಸರಕಾರವು ಅಲ್ಲಗಳೆಯುವುದು ಯಾವ ಗಳಿಗೆಯಲ್ಲೂ ಸರಕಾರ ಬದಲಾಯಿಸುವ ಅಧಿಕಾರವಿರುವ ಪ್ರಜಾಸತ್ತೆಯಲ್ಲಿ ಬಹಳ ಉತ್ತಮ ಸಂಪ್ರದಾಯವೆನ್ನಲಿಕ್ಕಿಲ್ಲ.

ಎಂ. ಜಿ. ಎಮ್. ಕಾಲೇಜ್ ಪರೀಕ್ಷಾ ಫಲಿತಾಂಶ—

ಈ ವರ್ಷ ನಡೆದ ವಿವಿಧ ಯುನಿವರ್ಸಿಟಿ ಪರೀಕ್ಷೆಗಳ ಫಲಿತಾಂಶ ಈ ಕೆಳಗಿನಂತಿದೆ.

(A) ಪ್ರಿ ಯುನಿವರ್ಸಿಟಿ:
ಜುಮ್ಲಾ ತೇರ್ಗಡೆ—52%
ಭಾಗ ೧—57%
ಭಾಗ ೨—97%
ಭಾಗ ೩—ಎಮ್. ಪಿ. ಸಿ —61%
ಎಚ್. ಇ. ಎಲ್.—33%
ಬಿ. ಸಿ. ಸಿ.— 57%
ಎಚ್. ಇ. ಸಿ —85%
ಭಾಗ ೪—96%

(B) I ಬಿ. ಎ.:
ಭಾಗ ೧—71·4%
ಭಾಗ ೨—100%
ಭಾಗ ೩—92·9%
ಭಾಗ ೪—92·9%

(C) I ಬಿ. ಎಸ್ಸಿ.:
ಭಾಗ ೧—75·5%
ಭಾಗ ೨—96%
ಭಾಗ ೩—88%
ಭಾಗ ೪—100%

(D) I ಬಿ. ಕೋಮ್:
ಭಾಗ ೧—100%
ಭಾಗ ೨—100%
ಭಾಗ ೩—73%

(E) ಫೈನಲ್ ಬಿ. ಕೋಮ್:
ಜುಮ್ಲಾ ತೇರ್ಗಡೆ—69%
ಕ್ಲಾಸ್ II — 8
ಕ್ಲಾಸ್ III 33

ವಿಜ್ಞಾನ ಮತ್ತು ಆರೋಗ್ಯ

ಪೋಲಿಯೋ ರೋಗ ದೂರ ಸರಿಯುತ್ತಿದೆ

ಪೋಲಿಯೋ ವಿರುದ್ಧದ ಹೋರಾಟದಲ್ಲಿ ಈಗಾಗಲೆ ಸಾಕಷ್ಟು ಯಶಸ್ಸು ದೊರೆತಿರುವುದರಿಂದ ಅಮೆರಿಕದಿಂದಲೂ ಇತರ ರಾಷ್ಟ್ರಗಳಿಂದಲೂ "ಪೋಲಿಯೋ ಮೂಲೋತ್ಪಾಟನೆಯ ಕಾರ್ಯವನ್ನು ಪ್ರಮುಖ ಆರೋಗ್ಯ ವ್ಯವಸ್ಥೆಯ ಕಾರ್ಯಕ್ರಮಗಳಲ್ಲೊಂದನ್ನಾಗಿ ಕೈಗೊಳ್ಳಬೇಕು" ಎಂಬುದಾಗಿ ಅಮೆರಿಕದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಡಾ| ಮೈಕೇಲ್ ಜೆ. ವೆಗಗ್ ಅವರು ತಿಳಿಸುತ್ತಾರೆ.

ಪೋಲಿಯೋ ರಂಗದಲ್ಲಿಯ ಈ ಯಶಸ್ಸಿಗೆ ಬಹುವಾಗಿ ಪಿಟ್ಸ್‌ಬರ್ಗ್ ವಿಶ್ವವಿದ್ಯಾನಿಲಯದ ಡಾ| ಜೋನಾಸ್ ಈ ಸಾಲ್ಕ್ ಅವರು ಕಂಡು ಹಿಡಿದ ಪೋಲಿಯೋ ವ್ಯಾಕ್ಸೀನಿನ ಬಹು ವ್ಯಾಪಕವಾದ ಉಪಯೋಗವೇ ಕಾರಣ. ಈಗ ತಿನ್ನುವ ಔಷಧವೊಂದನ್ನು ಸಿನ್ಸಿನಾಟಿ ವಿಶ್ವವಿದ್ಯಾನಿಲಯದ ಡಾ| ಆಲ್ಬರ್ಟ್ ಬಿ. ಸಬೀನ್ ಅವರು ಕಂಡು ಹಿಡಿದಿದ್ದಾರೆ. ೧೯೬೨ರಲ್ಲಿ ಈ ತಿನ್ನುವ ವ್ಯಾಕ್ಸೀನನ್ನು ಹೆಚ್ಚು ಹೆಚ್ಚಾಗಿ ಬಳಕೆಗೆ ತರುವ ಮೂಲಕ ಜನಗಳಿಗೆ ಮತ್ತಷ್ಟು ರಕ್ಷಣೆಯನ್ನು ಒದಗಿಸಲು ಸಾಧ್ಯವಾಗುವುದು.

ಸ್ವಲ್ಪ ಕಾಲದಿಂದ ಪ್ರಪಂಚದ ನಾನಾ ಭಾಗಗಳಲ್ಲಿ ಉಪಯೋಗಿಸಲ್ಪಡುತ್ತಿರುವ ಸಾಲ್ಕ್ ವ್ಯಾಕ್ಸೀನ್ ಮೆಸಾಚ್ಯುಸೆಟ್ಸ್ ಸಂಸ್ಥಾನದ ಕೇಂಬ್ರಿಡ್ಜಿನಲ್ಲಿರುವ ಹಾರ್ವರ್ಡ್ ಮೆಡಿಕಲ್ ಸ್ಕೂಲಿನ ಡಾ| ಜನ್ ಎಫ್. ಎಂಡರ್ಸ್ ಹಾಗೂ ಅವರ ಇಬ್ಬರು ಸಹಕಾರಿಗಳಾದ ಥಾಮಸ್ ವೆಲ್ಲರ್ ಹಾಗೂ ಫ್ರೆಡರಿಕ್ ರಾಬಿನ್ಸ್ ಇವರುಗಳ ಮೂಲಭೂತ ಸಂಶೋಧನೆಗಳ ಫಲವಾಗಿ ಸಾಧ್ಯವಾಯಿತು. ನರಗಳಲ್ಲದ ಟಿಷ್ಯುಗಳಲ್ಲೂ ಪೋಲಿಯೋ ವೈರಸ್ಸನ್ನು ಬೆಳೆಯಬಹುದೆಂಬ ಅವರ ಶೋಧನೆ ಮಹತ್ತರವಾದುದು. ಅದುವರೆಗೆ ಪ್ರಾಣಿಗಳ ನರಗಳನ್ನು ಉಪಯೋಗಿಸಿ ವೈರಸ್ಸನ್ನು ಬೆಳೆಸಲು ಸಾಧ್ಯವಾಗಿತ್ತು ಆದರೆ ಇಂತಹ ವೈರಸ್ಸು ಮಾನವನ ಬಳಕೆಗೆ ಸೂಕ್ತವಾದುವಲ್ಲ.

ನೀರು, ಹಾಲು, ಆಹಾರಾದಿಗಳ ಮೂಲಕ ಮಾನವ ದೇಹವನ್ನು ಪ್ರವೇಶಿಸಿದ ವೈರಸ್ಸುಗಳು ಕರುಳನ್ನು ಸೇರಿ ರಕ್ತದ ಮೂಲಕ ನರಗಳ ಕೇಂದ್ರವನ್ನೂ ಮೆದುಳಿನ ಕೆಳಭಾಗವನ್ನೂ ತಲುಪಿ ನರಗಳ ಮೇಲಿನ ಹತೋಟಿಯನ್ನು ಹಾಳು ಮಾಡುತ್ತವೆ ಎಂಬುದನ್ನು ಈ ವಿಜ್ಞಾನಿಗಳು ಕಂಡುಹಿಡಿದರು. ದೃಷ್ಟಿಗೆ ಅಗೋಚರವಾದ ಈ ವೈರಸ್ಸುಗಳನ್ನು ೧೦೦,೦೦೦ ಪಟ್ಟು ದೊಡ್ಡದು ಮಾಡಿ ತೋರಿಸುವ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಮೂಲಕ ನೋಡಿ ಛಾಯಾಗ್ರಹಣ ಮಾಡಲು ವಿಜ್ಞಾನಿಗಳಿಗೆ ಸಾಧ್ಯವಾಯಿತು.

ಡಾ| ಎಂಡರ್ಸ್ ಹಾಗೂ ಅವರ ಸಹಕಾರಿಗಳು ಕಂಡುಹಿಡಿದ ಅಂಶಗಳ ಆಧಾರದ ಮೇಲೆ ಡಾ| ಜೋನಾಸ್ ಈ ಸಾಲ್ಕ್ ಅವರು ತಮ್ಮ ಆಂಟಿಪೋಲಿಯೋ ವ್ಯಾಕ್ಸೀನನ್ನು ಸಿದ್ಧಪಡಿಸಿದರು.

ಜ್ಞಾತವಾದ ಮೂರು ಬಗೆಯ ಪೋಲಿಯೋಗಳಿಗೂ ಮೂರು ಬಗೆಯ ಪೋಲಿಯೋ ವೈರಸ್ಸುಗಳಿಂದ ಕೂಡಿದ ಸಾಲ್ಕ್ ವಾಕ್ಸೀನನ್ನು ಬಳಸಲಾಗುವುದು. ಎಲ್ಲಾ ವೈರಸ್ಸುಗಳನ್ನೂ ಫಾರ್ಮಲ್ ಡಿಹೈಡ್ ಕೊಲ್ಲುವುದು. ಮಾನವ ಶರೀರಕ್ಕೆ ಇಂಜೆಕ್ಷನ್ನುಗಳನ್ನು ಕೊಟ್ಟಾಗ, ಶರೀರದಲ್ಲಿ ಪೋಲಿಯೋ ವಿರೋಧಕ ಆಂಟಿಬಾಡಿಗಳ ಸೃಷ್ಟಿಯಾಗುವುದು. ರಕ್ತದಲ್ಲಿರುವ ಸೂಕ್ಷ್ಮವಾದ ಈ ಪ್ರೋಟೀನ್ ಕಣಗಳು ರಕ್ತದಲ್ಲಿದ್ದು ಪೋಲಿಯೋ ವೈರಸ್ಸುಗಳ ಕಾರ್ಯವನ್ನು ಸ್ಥಗಿತಪಡಿಸುವುವು.

ವಿಶಾಲವಾದ ಪ್ರಮಾಣದಲ್ಲಿ ಸಾಲ್ಕ್ ವ್ಯಾಕ್ಸೀನಿನ ಪ್ರಯೋಗ ಪರೀಕ್ಷೆ ನಡೆದದ್ದು ೧೯೫೪ರಲ್ಲಿ, ೧೮,೩೦,೦೦೦ ಮಂದಿ ಅಮೆರಿಕದ ಶಾಲಾ ಮಕ್ಕಳ ಮೇಲೆ ಈ ಮದ್ದನ್ನು ಯಶಸ್ವಿಯಾಗಿ ಉಪಯೋಗಿಸಲಾಯಿತು. ಸಾಲ್ಕ್‌ವ್ಯಾಕ್ಸೀನು ಸುರಕ್ಷಿತವಾದ ಮದ್ದೆಂದು ೧೯೫೫ರಲ್ಲಿ ಸಾರಲಾಯಿತು. ಅನಂತರ ಅದರ ತಯಾರಿಕೆಗೆ ಐದು ಸಂಸ್ಥೆಗಳಿಗೆ ಲೈಸೆನ್ಸ್ ಕೊಡಲಾಯಿತು. ಕೆನಡ, ಡೆನ್ಮಾರ್ಕ್, ಜರ್ಮನ್ ಫೆಡರಲ್ ರಿಪಬ್ಲಿಕ್, ಗ್ರೇಟ್ ಬ್ರಿಟನ್ ಹಾಗೂ ದಕ್ಷಿಣ ಆಫ್ರಿಕಗಳಲ್ಲಿ ಕೋಟ್ಯಾಂತರ ಮಂದಿಗೆ ವ್ಯಾಕ್ಸೀನು ಹಾಕಲಾಯಿತು

೧೯೫೨ರಲ್ಲಿ ೫೭,೮೭೯ ಪೋಲಿಯೋ ಕೇಸುಗಳು ಅಮೆರಿಕದಲ್ಲಿ ಸಂಭವಿಸಿದವು ಆದರೆ ಸಾಲ್ಕ್ ವ್ಯಾಕ್ಸೀನಿನ ಬಿರುದು ಪ್ರಚಾರದ ಫಲವಾಗಿ ಪೋಲಿಯೋ ಸಂಭವಗಳ ಸಂಖ್ಯೆ ೩,೧೯೦ಕ್ಕೆ ಇಳಿಯಿತು.

೧೯೫೭ರಲ್ಲಿ ಡಾ| ಆಲ್ಬರ್ಟ್ ಬಿ. ಸಬೀನ್ ಅವರು ತಿನ್ನಬಹುದಾದ ವ್ಯಾಕ್ಸೀನ್ ಒಂದನ್ನು ಕಂಡು ಹಿಡಿದರು. ೧೯೬೧ರ ಆಗಸ್ಟ್ ತಿಂಗಳಲ್ಲಿ ಇವರ ತಯಾರಿಕೆಗೆ ಅಮೆರಿಕದ ಸರಕಾರ ಲೈಸನ್ಸ್ ನೀಡಿತು ಮೂರು ವಿಧವಾದ ಪೋಲಿಯೋಗಳ ಒಂದನೆ ಮಾದರಿಯ ವಿರುದ್ಧ ಇದು ರಕ್ಷಣೆಯನ್ನು ನೀಡುತ್ತದೆ. ಅಮೆರಿಕದ ಪೋಲಿಯೋ ಸಂಭವಗಳಲ್ಲಿ ಶೇಕಡ ೬೦ರಿಂದ ೭೦ರಷ್ಟು ಈ ಮಾದರಿಯವೇ.

೧೯೬೧ರ ಕೊನೆಯಲ್ಲಿ ಎರಡನೆ ಮಾದರಿಯ ರಚನೆಗೆ ಲೈಸನ್ಸ್ ಕೊಡಲಾಯಿತು. ಮೂರನೆಯ ಮಾದರಿಯದಕ್ಕೆ ೧೯೬೨ರಲ್ಲಿ ಲೈಸನ್ಸ್ ಕೊಡಲಾಗುವುದೆಂಬ ನಿರೀಕ್ಷೆಯಿದೆ. "ಸ್ಯಾಬಿನ್ ಲೈವ್" ವ್ಯಾಕ್ಸೀನ್ ಮಾದರಿ I, II ಮತ್ತು III ಎಂಬುದಾಗಿ ಇವುಗಳನ್ನು ಕರೆಯಲಾಗುತ್ತದೆ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ]

ಕೊಡಗು ಮತ್ತು ಕೊಡವರು — ಲೇಖಕರು ಶ್ರೀ ಬಿ. ಡಿ. ಗಣಪತಿ ಪುಸ್ತಕ ದೊರೆಯುವ ಸ್ಥಳ: ಮೆಸರ್ಸ್ 'ಕೊಡಗು' ಕಂಪೆನಿ, ಮಡಿಕೇರಿ. ಪುಟಗಳು: ೪೦೩. ಬೆಲೆ: ರೂ. ೫= ೦೦.

ಕನ್ನಡ ಭಾಷಾ ಪ್ರದೇಶವು ಏಕ ಆಧಿಪತ್ಯಕ್ಕೆ ಸೇರುವುದಕ್ಕೆ ಮೊದಲು ಬಹುಕಾಲ ತನ್ನ ಭಿನ್ನತೆಯನ್ನು ಸರ್ವ ದೃಷ್ಟಿಯಿಂದಲೂ ಉಳಿಸಿಕೊಂಡಿರುವ ಕೊಡಗು ವಿಶಿಷ್ಟ ಸಂಪ್ರದಾಯ ನಂಬುಗೆಗಳ ಜನರಿಂದ ಕೂಡಿದೆ. ಗುಡ್ಡಕಾಡುಗಳ ಈ ನಾಡಿನ ಜನರು ಸ್ವಭಾವತಃ ವೀರರು; ಅವರ ಪ್ರತಿ ಸಂಪ್ರದಾಯ—ಸಂಸ್ಕಾರಗಳಲ್ಲೂ ವೀರ್ಯ ಗುಣದ ಪರಿಚಯ ನಮಗಾಗುತ್ತದೆ. ಮೂಲತಃ ದ್ರಾವಿಡ ಭಾಷೆಯೊಂದನ್ನು ಆಡುತ್ತಿರುವ ಕೊಡಗರು ದ್ರಾವಿಡ ಜನಾಂಗಕ್ಕೆ ಸೇರಿದವರೆನ್ನಬಹುದಾದರೂ ಈ ಸಂಬಂಧದಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳಿದ್ದು ಇನ್ನೂ ಸಂಶೋಧನೆಗಳು ನಡೆಯದ ಇದಮಿತ್ಥಂ ಎನ್ನುವಂತಿಲ್ಲ. ಜನಸಂಖ್ಯೆಯಲ್ಲಿ ಅಲ್ಪರೆನಿಸಿದ ಇವರು ಅನಾದಿಕಾಲದಿಂದಲೂ ವಿಶಾಲ ದೃಷ್ಟಿಯವರು; ದೇಶಪ್ರೇಮಿಗಳು, ಜಾತ್ಯಾತೀತ ಮನೋಭಾವನೆಯವರು, ಎಲ್ಲ ಪ್ರಕಾರದ ಸಂಸ್ಕೃತಿಯಿಂದಲೂ ಪ್ರಭಾವಿತರಾದವರು ನಮ್ಮ ನಾಡಿನ ಒಂದು ಜನಾಂಗವಾದ ಇವರ ಜೀವನ ವೈಶಿಷ್ಟ್ಯ, ಸಂಪ್ರದಾಯ, ನಡೆದುಬಂದ, ಬರುತ್ತಿರುವ ದಾರಿಗಳನ್ನು ಕುರಿತಾದ ಪುಸ್ತಕವೇ "ಕೊಡಗು ಮತ್ತು ಕೊಡವರು."

ಕೊಡಗರ ಜೀವನಕ್ರಮ, ಅವರ ಕುಟುಂಬಪದ್ಧತಿ, ಗ್ರಾಮರಚನೆ, ಸಂಸ್ಕಾರ ಪದ್ಧತಿಗಳ ಪರಿಚಯವನ್ನು ವಿವರವಾಗಿ ನಿದರ್ಶನಸಹಿತವಾಗಿ ಮಾಡಿಕೊಟ್ಟು ಮುಂದೆ, ಕೊಡಗಿನ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನಲೆಗಳನ್ನೂ ಕರ್ನಾಟಕ ರಾಜ್ಯದಲ್ಲಿ ಕೊಡಗಿನ ಸ್ಥಾನಮಾನಗಳನ್ನೂ ಲೇಖಕರು ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ವಿವಿಧ ಸಂಸ್ಕಾರಗಳ ವೇಳೆ ಹಾಡುವ ಕೊಡವರ ಹಾಡುಗಳನ್ನೂ ಗಾದೆಗಳನ್ನೂ ಇಲ್ಲಿ ಸಂಗ್ರಹಿಸಿದ್ದಾರೆ. ಒಂದು ಜನಾಂಗದ ಸಂಪ್ರದಾಯವನ್ನು ಇನ್ನೊಂದು ಜನಾಂಗದವರು ತಿಳಿದು ಗೌರವಿಸಿ ಪರಸ್ಪರ ಪ್ರೇಮಭಾವನೆಯಿಂದಿರಬೇಕಾದ ಇಂದಿನ ದಿನಗಳಲ್ಲಿ ಈ ಪುಸ್ತಕದ ಪ್ರಕಟಣೆಯು ಸ್ವಾಗತಾರ್ಹವಿರುವುದು. ಲೇಖಕರು ಬಹು ಶ್ರಮವಹಿಸಿ ತಯಾರಿಸಿದ ಈ ಪುಸ್ತಕವು ನಿಜವಾಗಿಯೂ ಉಪಯುಕ್ತವೂ ಅಮೂಲ್ಯವೂ ಸಂಗ್ರಾಹ್ಯವೂ ಇರುತ್ತದೆ ತಾವು ಗ್ರಂಥ ರಚನೆಗೆ ಉಪಯೋಗಿಸಿಕೊಂಡ ಆಧಾರ ಗ್ರಂಥಗಳ ಮತ್ತು ಅವುಗಳ ರಚಯಿತರ ಹೆಸರುಗಳನ್ನೂ ಕೊಟ್ಟಿರುವಂತೆ ಕೊಡಗಿನ ಒಂದು ನಕ್ಷೆಯನ್ನೂ ಅದರೊಡನೆ ಒದಗಿಸಬಹುದಿತ್ತು. ಇಂತಹ ಅಮೋಘ, ಬಹು ಪರಿಶ್ರಮದಿಂದ ತಯಾರಿಸಿದ ಗ್ರಂಥಕ್ಕೆ ಸಂಬಂಧಿಸಿದ ಕೆಲವೊಂದು ಚಿತ್ರಗಳೂ ಇರುತಿದ್ದರೆ ಮೌಲ್ಯ ಮತ್ತಷ್ಟು ಹೆಚ್ಚುತಿತ್ತು. ನಮ್ಮ ನಾಡಿನ ಉಳಿದ ಜನಾಂಗಗಳ ಕುರಿತಾಗಿಯೂ ಇಂತಹ ಅಭ್ಯಾಸಪೂರ್ಣ ಪುಸ್ತಕಗಳು ಹೊರಡುವುದಕ್ಕೆ ಶ್ರೀ ಗಣಪತಿಯವರು ಮಾರ್ಗದರ್ಶನಮಾಡಿದ್ದಾರೆ; ಅವರ ಶ್ರಮ ಸ್ತುತ್ಯವಾದುದು.

ಯಕ್ಷಗಾನ ಶ್ರೀವಿಷ್ಣು ಲೀಲೆ— ಲೇಖಕರು ಮತ್ತು ಪ್ರಕಾಶಕರು: ಶ್ರೀ ಡಿ. ವಿ. ಹೊಳ್ಳ, ವಿದ್ವಾನ್, ಕುಂದಾಪುರ, ಪುಟಗಳು: ೩೫. ಬೆಲೆ. ರೂ. ೦=೩೫.

ಮೂರ್ತಿತ್ರಯರಲ್ಲೊಬ್ಬನಾದ ವಿಷ್ಣು ದಶಾವತಾರವೆತ್ತಿದನೆಂಬ ಪ್ರತೀತಿಯನ್ನು ಜನ ಹಿಂದಿನಿಂದಲೂ ನಂಬಿಕೊಂಡು ಬಂದಿದ್ದಾರೆ ಆತನ ಒಂದೊಂದು ಅವತಾರವನ್ನು ಹಲವಾರು ದಿನಗಳ ವರೆಗೆ ಅಭಿನಯಿಸಬಹುದಾದರೂ ಈ ಎಲ್ಲವನ್ನು ಒಂದೇ ರಾತ್ರಿಯೊಳಗೆ ಅಭಿನಯಿಸುವಂತೆ ಸಂಕ್ಷಿಪ್ತವಾಗಿ ಶ್ರೀಹೊಳ್ಳರು ಯಕ್ಷಗಾನ ರೂಪದಲ್ಲಿ ಬರೆದಿದ್ದಾರೆ. ರಸಭಾವಕ್ಕೆಯೋಗ್ಯವಾದ ಯಕ್ಷಗಾನ ಛಂದಸ್ಸುಗಳ ಬಳಕೆ, ಶಬ್ದಗಳ ಪ್ರಯೋಗಗಳು ಹೆಚ್ಚಿನೆಡೆ ಇದ್ದು ಭಾವವ್ಯಂಜಕವಿರುತ್ತವೆ. ಯಕ್ಷಗಾನ ಪ್ರಿಯರು ಇದರ ಯುಕ್ತಾಯುಕ್ತತೆಯನ್ನು ರಂಗಭೂಮಿಯಲ್ಲೋ ತಾಳಮದ್ದಲೆಯಲ್ಲೋ ಕಂಡರಿಯಬೇಕು.

ಗೋರಾ

ಉದಯೋನ್ಮುಖ ಲೇಖಕ ಶ್ರೀ. ಪಿ ಎನ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ, ಎಂ. ಬಿ, ಬಿ.ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ನೈಜ ಘಟನೆಗಳ ಆಧಾರದ ಮೇಲೆ ನೇಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ 2=00

ರೂ. ೨=೨೫ ನ. ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ಚಂದಾಹಣ ಬಾಕಿ ಇರುವವರು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್.

ಸ್ವಾತಂತ್ರ್ಯೋತ್ತರದಲ್ಲಿ

ಮೈದಾನಿನ ಕಾಲ್ಚೆಂಡು — ಶಿಕ್ಷಣ ಕ್ಷೇತ್ರ

ಕರ್ನಾಟಕ ರಾಜ್ಯದ ವಿದ್ಯಾಭ್ಯಾಸ ಪರಿಷತ್ತು ಬೆಂಗಳೂರಿನಲ್ಲಿ ಸೇರಿ ರಾಜ್ಯದ ಶಿಕ್ಷಣ ಸಮಸ್ಯೆಗಳ ಕುರಿತು ವಿಚಾರ ವಿನಿಮಯ ಮಾಡಿತು. ಶಿಕ್ಷಣದ ಅಭಿವೃದ್ಧಿಯ ದೃಷ್ಟಿಯಲ್ಲಿ ಇಂತಹ ಪರಿಷತ್ತುಗಳು ಕಾರ್ಯ ಪ್ರವೃತ್ತವಾಗದಿದ್ದರೆ. ಬರೀ ಗುಲ್ಲು; ನಿದ್ದೆಗೇಡು ಮಾತ್ರ.

ಶಿಕ್ಷಣದ ಬಗ್ಗೆ ಅರಿವಿದ್ದವರೂ ಇಲ್ಲದವರೂ ಅಧಿಕಾರಿಗಳೂ ಅನಧಿಕಾರಿಗಳೂ ಎಲ್ಲರಿಗೂ ವಿಮರ್ಶೆಮಾಡುವ ಸ್ವಾತಂತ್ರ್ಯ ಅವಕಾಶಗಳು ದೊರೆತಿವೆ. ಇದಕ್ಕೆ ಕಾರಣೀ ಭೂತರು ಯಾರು ಎಂದು ಪ್ರಶ್ನಿಸುವಾಗ ರಾಜ್ಯದ ಸರಕಾರವನ್ನೇ ಬೊಟ್ಟು ಮಾಡಿ ತೋರಿಸ ಬೇಕಾಗುತ್ತದೆ. ಶಿಕ್ಷಣವನ್ನು ತನ್ನ ಅಂಗೈಯ ಚೆಂಡಿನಂತೆ ಭಾವಿಸಿ, ಅದನ್ನು ತನ್ನ ಆಟಕೆಯನ್ನಾಗಿ ಸರಕಾರ ಉಪಯೋಗಿಸುತ್ತದೆ ಶಿಕ್ಷಣ ವ್ಯವಸ್ಥೆಯ ಪುನರ್ಘಟನೆಯ ಹೆಸರಿನಲ್ಲಿ ಸರಕಾರ ಹೊಂಡ ತೋಣಕಿ, ರಾಡಿಯೆಬ್ಬಿಸಿ, ಈ ಕ್ಷೇತ್ರವನ್ನು ಮತ್ತಷ್ಟು ಕಲುಷಿತಗೊಳಿಸಿದೆ. ವಿದ್ಯಾಭ್ಯಾಸದ ಇಲಾಖೆಯಲ್ಲಿಂದು ಸ್ಥಿರತೆಯಿಲ್ಲ, ವ್ಯಾವಹಾರಿಕತೆಯಿಲ್ಲ, ಗೊತ್ತುಗುರಿಗಳಂತೂ ಮೊದಲೇ ಇಲ್ಲ. ಇದರಿಂದಾಗಿ ನಮ್ಮ ಎಳೆಯ ಜನಾಂಗಕ್ಕೆ ದೊರೆಯುವ ಶಿಕ್ಷಣದಲ್ಲಿಯೂ ಸತ್ವವಿಲ್ಲ, ಅಧ್ಯಾಪಕರಲ್ಲಿಯೂ ಅಸಂತೋಷ; ವಿದ್ಯಾರ್ಥಿಗಳಲ್ಲಿಯೂ ಅನಾಸಕ್ತಿ; ಪಾಲಕರಲ್ಲಿ ಜಿಗುಪ್ಸೆ.

ಇಂತಹ ವಾತಾವರಣವು ಪವಿತ್ರವೆನಿಸುವ ಸರಸ್ವತೀ ಮಂದಿರದಲ್ಲಿ ತಲೆದೋರಿದರೆ, ನಮ್ಮನ್ನು ಯಾರು ಕಾಪಾಡಬೇಕು? ಈ ಅವ್ಯವಸ್ಥಾರೂಪದ ಅಪವಿತ್ರತೆ ಇಂದೇ ಪ್ರಾರಂಭವಾಯಿತೆನ್ನುವಂತಿಲ್ಲ, ಅದು ಸ್ವಾತಂತ್ರ್ಯಪೂರ್ವದ ಕೊನೆಯ ದಿನಗಳಲ್ಲಿ ತೊಡಗಿತ್ತು. ಆದರೂ ದೇಶ ಸ್ವತಂತ್ರಗೊಂಡ ಬಳಿಕವಾದರೂ ನಮ್ಮ ಕ್ಷೇತ್ರವು ಸುವ್ಯವಸ್ಥಿತಗೊಳ್ಳಬೇಕಿತ್ತು; ಆದರೆ, ಅದು ಹಾಗಾಗಲಿಲ್ಲ. ನಮ್ಮ ಕೈಗೆ ಅಧಿಕಾರ ಬಂದ ನಂತರ ಶಿಕ್ಷಣ ಕ್ಷೇತ್ರವು ಆಟದ ಮೈದಾನಿನ ಕಾಲ್ಚೆಂಡಿನಂತಾಯ್ತು. ದಿನದಿಂದ ದಿನಕ್ಕೆ ಹೊಸ ಹೊಸ ತಾಕಲಾಟಗಳು ತೊಡಕುಗಳು ಉದ್ಭವವಾಗತೊಡಗಿದುವು.

ಭಾಷಾ ಮಾಧ್ಯಮದ ಗೊಂದಲ ಸಮಾಧಾನಗೊಂಡಿಲ್ಲ. ಒಂದು ತರಗತಿಯಲ್ಲಿ ಎಷ್ಟು ಮಕ್ಕಳಿರಬೇಕು ಎಂಬುದರ ಬಗ್ಗೆ ಕಟ್ಟುನಿಟ್ಟಾದ ನಿಯಮಗಳನ್ನು ಅನುಸರಿಸುತ್ತಿಲ್ಲ. ಪಾಠಗಳನ್ನು ಆಯಾ ಪಾಠದಲ್ಲಿ ವಿಶೇಷ ಅಧ್ಯಯನ ನಡೆಸಿದವನೇ ಕಲಿಸಬೇಕೆಂಬ ಆದರ್ಶತೆಯೂ ಉಳಿದಿಲ್ಲ. ನೀಡುವ ಶಿಕ್ಷಣದ ಮಟ್ಟವಾದರೂ ಉನ್ನತವಿದೆಯೆನ್ನುವಂತಿಲ್ಲ. ಅಧ್ಯಾಪಕರ ಸುಖ ದುಃಖಗಳ ಕಡೆಗೆ ಉಪದೇಶಪರ ಸಾಂತ್ವನೆಗಳನ್ನುಳಿದರೆ, ಮತ್ತಾವುದೇ ಉಪಯುಕ್ತ ವಿಧಾಯಕ ಕಾರ್ಯನಡೆಯುತ್ತಿಲ್ಲ. ಪಠ್ಯಪುಸ್ತಕಗಳ ರಾಷ್ಟ್ರೀಕರಣದ ಹೆಸರಿನಲ್ಲಿ ನಿಜವಾದ ಯೋಗ್ಯತಾವಂತ ಬರೆಹಗಾರರಿಗೆ ಪ್ರಕಾಶಂಗೆ ಅಪಚಾರವಾಗುತ್ತಿದೆ. ಶಾಲೆಗಳಿಗೆ ಕಟ್ಟಡಗಳಿಲ್ಲ ಉಪಕರಣಗಳಿಲ್ಲ ಅಧ್ಯಾಪಕರು ಕೂಡ ಇಲ್ಲ ಇಂತಹ ಪರಿಸ್ಥಿತಿಯಲ್ಲಿಂದು ಶಾಲೆ ಎಂದರೆ, ಮಕ್ಕಳು ಬಂದು ಸೇರುವ ಆಟದ ಬಯಲು; ಶಿಕ್ಷಣದ ವಿಭಾಗವೆಂದರೆ, ಆದರ ಕೇಂದ್ರ ಒಬ್ಬ ಮಹನೀಯರು ಹೇಳುವಂತೆ 'ನಮ್ಮ ಶಿಕ್ಷಣಕ್ಷೇತ್ರವು ಇದೇ ಮಾದರಿಯಲ್ಲಿ ಮುಂದುವರಿದರೆ, ನಮ್ಮ ಮುಂದಿನ ಜನಾಂಗವು ನಿರುಪಯುಕ್ತ ಅಪ್ರಬುದ್ಧ ಗಾಂಪರ ಗುಂಪು ಮಾತ್ರವಾದೀತು.'

ಆದುದರಿಂದ, ಇನ್ನೆಲ್ಲ ಅನಾಹುತಗಳಿಗೆ ಕಾರಣವೆನಿಸಿದ ಸರಕಾರದಿಂದ ಪ್ರತ್ಯೇಕಿತವಾದ ಶಿಕ್ಷಣ ಮಂಡಳವು ರಚಿತವಾಗಿ, ಆದರ ಕೈಗಳಿಗೆ ಶಿಕ್ಷಣಕ್ಷೇತ್ರವನ್ನು ನೀಡಬೇಕೆಂಬ ಸಲಹೆ ಇದೆ ಆಗ ರಾಜಕಾರಣದ ಪ್ರಭಾವವು ಶಿಕ್ಷಣದಿಂದ ದೂರವುಳಿದು, ಸ್ಥಿರತೆಯನ್ನು ಕಾಪಾಡಿಕೊಂಡು ಬರುವುದು ಸಾಧ್ಯವಾದೀತು; ಸರಕಾರಗಳು ಇಂದು ಬರುತ್ತವೆ; ನಾಳೆ ಉರುಳುತ್ತವೆ; ಆದರೆ, ಶಿಕ್ಷಣ ವಿಭಾಗದ ಕೆಲಸ ಹಾಗಲ್ಲ; ಅದು ಅಚ್ಚಳಿಯದೆ ಉಳಿಯಬಲ್ಲುದು, ಶಿಕ್ಷಣ ಉಳಿದರೆ ಮಾತ್ರ ದೇಶ ಉಳಿಯಬಲ್ಲುದು.

ಉಪನಾಯಕನ ಆಯ್ಕೆಗೆ ಪುರಸ್ಕಾರ

(೪ನೇ ಪುಟದಿಂದ)

ಗದರ್ಶಕವಿದೆ. ದೇಶದ ಸಾಮಾನ್ಯ ನಾಗರಿಕನೊಬ್ಬನು ಎದುರಿಸಬೇಕಾಗಿ

ಶಿಕ್ಷಣದ ಸೌಲಭ್ಯವನ್ನು ವಿಸ್ತರಿಸಿದ್ದೇವೆಂದು ಸರಕಾರ ಜಂಭ ಕೊಚ್ಚಿಕೊಂಡರೆ ಪ್ರಯೋಜನವಿಲ್ಲ ಈ ಸೌಲಭ್ಯದಿಂದ ಮಕ್ಕಳು ಪಡೆಯುವ ಶಿಕ್ಷಣವು ಪರಿಣಾಮಕಾರಿಯಾಗಿರುವಂತೆ ಸಾಕಷ್ಟು ಅಧ್ಯಾಪಕರ ನೇಮಕದ ಸೌಲಭ್ಯವೂ ಇರಬೇಕು. ಆದರೆ, ಈ ಕಡೆಗೆ ಸರಕಾರ ಗಮನ ಹರಿಸಿದೆಯೆ? ಅಧ್ಯಾಪಕರೇ ಇಲ್ಲದ ಶಾಲೆಗಳೂ ಇರುವಾಗ ಇದೇನೂ ವಿಶೇಷವಲ್ಲ! ಶಿಕ್ಷಣ ಪರಿಷತ್ತು ಯಾವ ಮಹಾಕಾರ್ಯವನ್ನೂ ಸಾಧಿಸುವಂತಿಲ್ಲವಾದರೂ ಅಲ್ಲಿ ಬಂದಿದ್ದ ಮಹನೀಯರನೇಕರ ಸಲಹೆಗಳು ಮನನೀಯವಾಗಿದ್ದುವು; ಆದರೆ, ವಿದ್ಯಾ ಖಾತೆಯನ್ನೂ ತಮ್ಮ ವಶದಲ್ಲಿ ಇಟ್ಟುಕೊಂಡಿರುವ ಮುಖ್ಯಮಂತ್ರಿಕಂಠೀರವರು ಇವುಗಳ ಬಗ್ಗೆ ಏನನ್ನೂ ಹೇಳದೆ, ಸರಕಾರ ಹಾಗೆ ಮಾಡಿದೆ; ಹೀಗೆ ಮಾಡಲು ಯೋಜಿಸುತ್ತಿದೆ ಎಂದು ಮುಂತಾಗಿ ಪ್ರಚಾರ ಮಾಡಿದರು. ಪಾಪ, ಭರತನಿಗೆ ಸರಕಾರದ ನೀತಿಯನ್ನು ನಿರೂಪಿಸುವಲ್ಲಿ ಅಧಿಕಾರ ಎಲ್ಲಿಂದ ಬರಬೇಕು? ಇಂದೋ ನಾಳೆಯೋ ತನ್ನ ಖುರ್ಚಿ ಬಿಟ್ಟು ತೆರಳುವವರ ಬಾಯಿಯಿಂದ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವುದೂ ತಪ್ಪಾಗುತ್ತದೆ!

ಬರುವ ಸಮಸ್ಯೆಗಳು ವಸ್ತುತಃ ರಾಜ್ಯಸರಕಾರದ ಕಕ್ಷೆಯೊಳಗೆ ಒರುವಂಥವುದು ಇಲ್ಲವೇ ಸ್ಥಳೀಯ ಅಧಿಕಾರಿಗಳಿಗೆ ಸಂಬಂಧಪಟ್ಟದ್ದು. ರಾಷ್ಟ್ರಪತಿಯವರು ಕೇಂದ್ರ ಸರಕಾರಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ನೋಡಿಕೊಳ್ಳುವುದಾದರೆ, ರಾಜ್ಯದ ವ್ಯವಹಾರಗಳು ರಾಜ್ಯಪಾಲರಿಗೆ ಸೇರಿದುವು. ಅವರು ತಮ್ಮ ರಾಜ್ಯದ ಗಡಿಯೊಳಗಿನ ವಿಚಾರಗಳ ಬಗ್ಗೆ ನಿಗಾ ವಹಿಸಬಲ್ಲರು. ಆದರೆ, ಇಂತಹ ಯೋಜನೆಗಳ ಯಶಸ್ವಿತೆಯು ಪ್ರಧಾನ ಅಥವಾ ಮುಖ್ಯ ಮಂತ್ರಿಯವರನ್ನೇ ಹೊಂದಿಕೊಂಡಿದೆ. ನಾಗರಿಕರು ತಂದಿತ್ತ ದೂರಿನ ಕಡೆಗೆ ವಿಚಾರ ಮಾಡಬೇಕಾದವರು ಅವರು ತಾನೆ? ತಮ್ಮ ಕೂಗನ್ನು ಕೇಳಿಯೂ ಕೇಳಿಸದಂತೆ ಮಾಡಿದರು ಎಂಬಂತಹ ಅಪವಾದವಾದರೂ ಸರಕಾರಕ್ಕೆ ತಟ್ಟಬಾರದಲ್ಲ!

ಜಮ್ಮು ಮತ್ತು ಕಾಶ್ಮೀರದ ಪ್ರಧಾನ ಮಂತ್ರಿ ಬಕ್ಷಿ ಗುಲಾಮು ಮಹಮ್ಮದರು ಪ್ರತಿ ಶನಿವಾರ ಮುಂಜಾನೆ ನೂರಾರು ನಾಗರಿಕರನ್ನು ಭೆಟ್ಟಿಯಾಗುತ್ತಾರೆ. ಆ ಸಮಯದಲ್ಲಿ ಎಲ್ಲ ಅಧಿಕಾರಿಗಳು ಅವರ ಬಳಿ ಉಪಸ್ಥಿತರಿರುತ್ತಾರೆ. ಹೆಚ್ಚಿನ ದೂರುಗಳ ಬಗ್ಗೆ ಅಲ್ಲಿಯೇ ನಿರ್ಧಾರವನ್ನೂ ತೆಗೆದುಕೊಳ್ಳುತ್ತಾರೆ. ಇದರಿಂದಾಗಿಯೇ ಬಕ್ಷಿ ಗುಲಾಂ ಮಹಮ್ಮದರು ಕಾಶ್ಮೀರದ ಮನೆ ಮಾತಾಗಿಬಿಟ್ಟಿದ್ದಾರೆ.

ಇವರ ಮಾದರಿಯನ್ನು ಉಳಿದವರೂ ಅನುಸರಿಸಿದರೆ, ಸಾಮಾನ್ಯ ಜನತೆಯ ಕೂಗು ತುಸುವಾದರೂ ಕೇಳೀತು.

ಅಮೃತ ಬಿಂದು

ತಮ್ಮ ಮೆಚ್ಚಿನ ಪ್ರಾಣಿಗಳಿಗಿಂತ ದೊಡ್ಡ ಗೆಳೆಯರಾರೂ ಇಲ್ಲ; ಏಕೆಂದರೆ ಅವು ನಮ್ಮನ್ನು ಪ್ರಶ್ನಿಸುವದಿಲ್ಲ; ಟೀಕಿಸುವದಿಲ್ಲ.

o o o

ಪ್ರಾಣಿಗಳು ತಮ್ಮ ಗಂಭೀರತೆ, ಮೇಲ್ಮೆಗಳನ್ನು ಹೊರಗೆ ತೋರಿಸಿಕೊಳ್ಳುತ್ತವೆ ಮನುಷ್ಯನು ತನ್ನ ಗಂಭೀರತೆ, ಮೇಲ್ಮೆಗಳನ್ನು ಒಳಗೆ ತೋರಿಸಬೇಕು

o o o

ಪ್ರಾಣಿಗಳು ಹೊಟ್ಟೆ ತುಂಬಿಸುತ್ತವೆ; ಮನುಷ್ಯ ಊಟ ಮಾಡುತ್ತಾನೆ ಆದರ ಬುದ್ಧಿಶಾಲಿಗಳಿಗೆ ಮಾತ್ರ ಹೇಗೆ ನಾತ್ತು ಎಷ್ಟು ಊಟ ಮಾಡಬೇಕೆಂದು ತಿಳಿದಿರುತ್ತದೆ.

o o o

ಸಾಕು ಮತ್ತು ಬೇಕು ಎಂಬ ಎರಡು ಶಬ್ದಗಳಲ್ಲಿ ಎಲ್ಲಾ ತತ್ವಜ್ಞಾನ ಹಾಗೂ ಧರ್ಮ ಅಡಗಿದೆ.

o o o

ಸುಂದರ ಮುಖದಿಂದ ಹೊರಡುವ ವಾದವನ್ನು ಎದುರಿಸಿ ಗೆಲ್ಲುವದು ಪ್ರಯಾಸ.



ನಾಟ್ನ ಔದ್ಯಮಿಕ ಕ್ಷೇತ್ರದ ಒಂದು ನೋಟ.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಸತ್ಯಪ್ರೇಮಿ ಮಹಾಜ್ಞಾನಿ

ಮಹಾರುದ್ರ ವಿಜೇತ ನಾಭಾಗ

ಶ್ರೀ ಎಂ. ಬಿ. ಶಂಕರರಾವ್, ಐ. ಎ. ಎಸ್. (ನಿವೃತ್ತ)

ನಾಭಾಗನು ವೈವಸ್ವತ ಮನುವಿನ ವಂಶಸ್ಥನು. ಚಿಕ್ಕ ವಯಸ್ಸಿನಲ್ಲಿಯೇ ಗುರುಕುಲವನ್ನು ಸೇರಿ ವಿದ್ಯಾಭ್ಯಾಸವನ್ನು ಮುಂದುವರಿಸಿದನು. ವಿದ್ಯೆಯು ಸಂಪೂರ್ಣತೆಯಾಗುವ ತನಕ ಮನೆಯನ್ನು ಮರೆತುಬಿಟ್ಟನು. ಈ ನಡುವೆ ಸ್ವಾರ್ಥಪರರಾದ ಆತನ ಸಹೋದರರು ಕುಟುಂಬದ ಯಾಪತ್ತು ಸ್ಥಿರಚರ ಸೊತ್ತುಗಳನ್ನು ನಾಭಾಗನನ್ನು ಬಿಟ್ಟು ತಂತಮ್ಮೊಳಗೆ ಹಂಚಿಕೊಂಡರು. ಮಧ್ಯ ಪ್ರಾಯದಲ್ಲಿ ನಾಭಾಗನು ತನ್ನ ಮನೆಗೆ ಹಿಂದಿರುಗಿ ಸಹೋದರರಲ್ಲಿ ತನ್ನ ಹಕ್ಕಿನ ಪಾಲನ್ನು ಕೇಳಿದಾಗ ಸನ್ಯಾಸವನ್ನು ವಹಿಸಿದ್ದ ಮುದಿ ತಂದೆಯ ಕಡೆಗೆ ಬೆರಳು ಕಾಣಿಸಿದರು. ನಾಭಾಗನು ಸಿಟ್ಟುಗೊಳ್ಳದೆ ತಂದೆಯ ಬಳಿ ಸಾರಿ ತನ್ನ ಪಾಲನ್ನು ದಯಪಾಲಿಸೆಂದು ದೀನತೆಯಿಂದ ಬೇಡಿಕೊಂಡನು. ಆಗ ಸಮಾಧಾನಿಯಾದ ಆತನ ತಂದೆಯು ನಾಭಾಗನ ಮೈತಟ್ಟಿ "ಮಗನೇ, ಬೇಸರಗೊಳ್ಳದಿರು; ಅಂಗೀರಸ ಋಷಿಯು ಒಂದು ಮಹಾಯಾಗವನ್ನು ಕೈಗೊಂಡಿರುವನು. ಈ ದಿನ ಯಾಗದ ಆರನೆಯ ದಿನವು. ಯಾಗ ಸಂಪೂರ್ಣತೆಯಾಗದೆ ಋಷಿಯು ವ್ಯಸನದಲ್ಲಿರುವನು. ಮುಖ್ಯವಾದ ಎರಡು ಸೂಕ್ತಗಳನ್ನು ಮುನಿಯು ಮರೆತಿರುವನು. ನೀನು ಅಲ್ಲಿ ತ್ವರ್ಯ ಹೋಗಿ ಆ ಸೂಕ್ತಗಳನ್ನು ಉಚ್ಚರಿಸು. ಋಷಿಪುಂಗವನು ನಿನಗೆ ಧಾರಾಳವಾಗಿ ಬಹುಮಾನಗಳನ್ನು ಕೊಡುವನು,, ಎಂದನು. ನಾಭಾಗನು ಪಿತನಿಗೆ ಸಾಷ್ಟಾಂಗ ನಮಸ್ಕರಿಸಿ ಅಂಗೀರಸನಿದ್ದಲ್ಲಿ ಹೋಗಿ ಮುನಿಯು ಮರೆತ ಸೂಕ್ತಗಳನ್ನು ಉಚ್ಚರಿಸಿದಾಗ ಮುನಿಗೆ ಸಂತೋಷವಾಗಿ ಮುನಿಯು ಯಾಗವು ಸಂಪೂರ್ಣಗೊಂಡಾಗ, ಯಾಗ ಮುಗಿದು ಉಳಿದ ಎಲ್ಲಾ ವಿವಿಧ ಧನಕನಕ ವಸ್ತುಗಳ ರಾಶಿಯನ್ನು ನಾಭಾಗನಿಗೆ ದಾನವಿತ್ತನು. ಸಿಕ್ಕಿದ ವಸ್ತುಗಳಿಗೆ ನಾಭಾಗನು ಕೈ ತಾಗಿಸಿದಾಗ ಒಬ್ಬ ಕರಾಳ ವ್ಯಕ್ತಿಯು ಅಲ್ಲಿ ಹಠಾತ್ತಾಗಿ ಬಂದು ನಾಭಾಗನನ್ನು ಹಿಡಿದು ತಡೆಗಟ್ಟಿ, ಆ ಯಾವತ್ತು ವಸ್ತುಗಳು ತನ್ನ ಪಾಲಿನವು ಎಂದು ಗರ್ಜಿಸಿದನು. ಆಗ ನಾಭಾಗನು ಅವು ಅಂಗೀರಸ ಮುನಿಯು ತನಗೆ ದಾನವಾಗಿ ಕೊಟ್ಟ ವಸ್ತುಗಳೆಂದು ಉತ್ತರ ಕೊಟ್ಟಾಗ ಆ ಕರಾಳ ವ್ಯಕ್ತಿಯು ಸಿಟ್ಟುಗೊಂಡು ಎಲೇ ನಾಭಾಗನೇ—ನಿನ್ನ ಮಾತಿಗೆ ಬೆಲೆಯಿಲ್ಲ ಮುನಿಯ ಮಾತುಗಳನ್ನು ಎಂದಿಗೂ ನಂಬದಿರು. ಈ ಯಜ್ಞದ ಎಲ್ಲಾ ಶೇಷವು ನನ್ನ ಪಾಲಿಗೆ ಸೇರಿರುವುದು. ನಿನಗೆ ಈ ವಿಚಾರದಲ್ಲಿ ಸಂಶಯವಿದ್ದರೆ ಸತ್ಯಶಾಲಿಯಾದ ನಿನ್ನ ಪಿತನಲ್ಲಿ ದೂರುಕೊಡು ಆತನು ನಿನಗೆ ಸಮರ್ಪಕವಾದ ಉತ್ತರವನ್ನು ಕೊಡದೆ ಇರನು,, ಎಂದನು.

ಅನಂತರ ಕ್ಷಮೆಯ ಮೂರ್ತಿ ಸ್ವರೂಪನಾದ ನಾಭಾಗನು ತನ್ನ ತಂದೆಯ ಬಳಿ ಸಾರಿ ಆದ ಸಂಗತಿಗಳನ್ನು ಕೂಲಂಕಷವಾಗಿ ಅರುಹಿದನು. ಆಗ ತಂದೆಯು ಮಗನ ಕೈಹಿಡಿದು ಮಗನೇ, ಆ ವ್ಯಕ್ತಿಯು ಹೇಳಿದ ಸಂಗತಿಯು ನಿಜವು. ಯಜ್ಞವು ಮುಗಿದು ಉಳಿದ ಯಾವತ್ತೂ ವಸ್ತುಗಳೂ ರುದ್ರಾರ್ಪಣವೆಂದು ಯಜ್ಞದ ಮೊದಲೇ ಅಂಗೀರಸರು ಹೇಳಿದ್ದು ನಿಜವು. ನಿನಗೆ ಆ ವಸ್ತುಗಳಲ್ಲಿ ಯಾವ ವಿಧದ ಹಕ್ಕೂ ಇಲ್ಲ, ಒಡನೆಯೆ ನಾಭಾಗನು ಆ ಕರಾಳ ವ್ಯಕ್ತಿಯಿದ್ದೆಡೆಗೆ ಬಂದು ಕೈ ಮುಗಿದು ಆತನಲ್ಲಿ ಕ್ಷಮೆಯನ್ನು ಬೇಡಿದನು. ತನ್ನ ತಪ್ಪನ್ನು ಒಪ್ಪಿಕೊಂಡು ಯಾಗದ ಶೇಷವಸ್ತುಗಳಲ್ಲಿ ತನಗೆ ಯಾವ ಹಕ್ಕೂ ಇರುವುದಿಲ್ಲ ವೆಂದನು.

ಕರಾಳ ವ್ಯಕ್ತಿಯು ಸತ್ಯಪ್ರೇಮಿಯಾದ ಮಹಾ ರುದ್ರನಾಗಿದ್ದನು ನಾಭಾಗನಿಗೆ ತನ್ನ ಸತ್ಯದ ಬಲದಿಂದ ಪರಮಾತ್ಮ ಪರಮ ಶಿವನ ದರ್ಶನವು ಲಭಿಸಿತು. ಮಹಾರುದ್ರನು ಸಂತೋಷದಿಂದ ನಾಭಾಗನನ್ನು ಆಶೀರ್ವದಿಸಿ ಹೀಗೆಂದನು. ನಿನ್ನ ಪಿತನು ಧರ್ಮಾವಲಂಬಿಯು; ನೀನು ಸತ್ಯಪ್ರೇಮಿಯು ....ಇಂದಿನಿಂದ ನೀನು ಸಂಪೂರ್ಣ ಬ್ರಹ್ಮಜ್ಞಾನಿಯಾಗುವೆ. ಯಾಗದ ಯಾವತ್ತು ಶೇಷ ವಸ್ತುಗಳನ್ನು ನಿನಗೆ ಈಗಲೇ ದಾನಮಾಡಿರುವೆನು. ಈ ವಸ್ತುಗಳನ್ನು ಪಡೆದು ಸುಖದಿಂದ ಬಾಳು. ಅರೆಗಳಿಗೆಯೊಳಗೆ ರುದ್ರನು ಅದೃಶ್ಯನಾದನು.

ಸತ್ಯಮೇವ ಜಯತೇ ನಾನೃತಮ್.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕವಲುದಾರಿ—ಕೆಂಪು ದೀಪ

ದರಿದ್ರರು ಸಿರಿವಂತರಾಗುತ್ತಿದ್ದಾರೆ!

ಸುದಾಸ

ಇದೋ ಇಲ್ಲಿದೆ ನಿಮಗೊಂದು ಸಂತೋಷದ ಸುದ್ದಿ! ಕೇಳಿ ಹೊಟ್ಟೆಗೆ ಹಾಲೆರೆದುಕೊಳ್ಳಿ. ಬದಾಮ್ ಖೀರು ಕುಡಿದಷ್ಟು ತೃಪ್ತಿಪಟ್ಟುಕೊಳ್ಳಿ.

ಕೇಂದ್ರ ಸರಕಾರದ ಅರ್ಥ ಮಂತ್ರಿಗಳ ಮುತ್ತಿನಂತಹ ಮಾತು. ಮಾತು ಕೇಳಿ ಆನಂದ ಸಾಗರದಲ್ಲಿ ಮುಳುಗಬೇಕೆನ್ನುವಷ್ಟು ಮನಸ್ಸು ಹರ್ಷದಿಂದ ಅರಳಿದೆ. ಅವರು ಅನ್ನುತ್ತಾರೆ; ಮಧ್ಯಮ ವರ್ಗದವರು ದಿನದಿಂದ ದಿನಕ್ಕೆ ಶ್ರೀಮಂತರಾಗುತ್ತ ಇದ್ದಾರೆ.

ಯಾರು ಈ ಮಧ್ಯಮ ವರ್ಗದವರು? ಯಾರು? ನಾವು—ನೀವೆ? ಮಾಸಿಕ ವೇತನ ಎಂದು ಸಿಕ್ಕೀತು, ಅಂಗಡಿಯ ಲೆಕ್ಕಾಚಾರ ಎಲ್ಲಿಯ ವರೆಗೆ ಮುಟ್ಟಿದೆ ಎಂದು ತಿಂಗಳಿಡೀ ತಲೆಬಿಸಿ ಮಾಡಿಕೊಳ್ಳುತ್ತಿರುವ ಮಡಿಬಟ್ಟೆ ತೊಟ್ಟವರೆ?

ಅಲ್ಲ. ಅವರ ಮಾತಿನಂತೆ ನಾವು ಯಾವ ಎಣಿಕೆಯಲ್ಲೂ ಬರುವದಿಲ್ಲ. (ಲೆಕ್ಕದಿಂದ ಹೊರಗೆ ನಾವು!) ಬಹುಶಃ ಅವರ ಅಳತೆಯ ಮಾನದಂಡ ಈ ರೀತಿಯಿದೆ. ಸಹಸ್ರಾಧಿಪತಿಗಳು, ಲಕ್ಷಾಧಿಪತಿಗಳು, ಕೋಟ್ಯಾಧಿಪತಿಗಳು:- ಈ ಮೂರು ವರ್ಗವನ್ನು ಅವರು ಸೃಷ್ಟಿಸಿರುವರೇ? ಮಾತು ಸಹಜ. ಲಕ್ಷಾಧೀಶರುಗಳು ಮಧ್ಯಮ ವರ್ಗದವರು. ಶ್ರೀಮಂತರಾಗುತ್ತ ಇದ್ದಾರೆ ದಿನ ದಿನಕ್ಕೆ. ಅಂದರೆ ಕೋಟ್ಯಧೀಶರಾಗುತ್ತಿದ್ದಾರೆ. ಅದಕ್ಕೆ ವಿರುದ್ಧವಾಗಿ ಶ್ರೀಮಂತರ ಸ್ಥಿತಿ ಉತ್ತಮವಾಗಿಲ್ಲವಂತೆ. ಅವರು ಮಿಲಿಯಾಧಿಪತಿಗಳಾಗಿಲ್ಲವೆಂದೇ?

ಬಹುಶಃ ಶ್ರೀಮಂತರೆಲ್ಲ ತಮ್ಮ ವಿಲಾಸೋಪಕರಣಗಳನ್ನು ಬದಿಗೆ ಸರಿಸಿರಬೇಕು. ಎರಡು ಹೊತ್ತಿನ ರೊಟ್ಟಿಗಾಗಿ ಚಡಪಡಿಸುತ್ತಿರಬೇಕು. ಹೊಸ ಬಟ್ಟೆಬರೆಗಳಿಗಾಗಿ ಕೆಲವು ತಿಂಗಳುಗಳನ್ನೇ ಎದುರು ನೋಡುತ್ತಿರಬೇಕು. ವಾಸಿಸಲು ಸ್ಥಳ ಸಿಗದೆ ತಾಪತ್ರಯಪಡುತ್ತಿರಬೇಕು. ಇನ್ನೂ ಎಷ್ಟೋ ದಾರುಣ ಸಂಕಟಗಳನ್ನು ಅನುಭವಿಸುತ್ತಿರಬೇಕು. ಮಧ್ಯಮ ವರ್ಗದವರು ಮೋಟಾರು ಕಾರಿನಲ್ಲಿ ಸವಾರಿ ಮಾಡುತ್ತಿದ್ದಾರೆ. ವಿಶಾಲ ಬಂಗಲೆಗಳಲ್ಲಿ ವಾಸಿಸುತ್ತಿದ್ದಾರೆ. ಕೆಲಸಕ್ಕೆ ಆಳುಕಾಳುಗಳು ಅವರಿಗಿದ್ದಾರೆ. ಆರಾಮದ ಜೀವನ ಸಾಗಿಸುತ್ತಿದ್ದಾರೆ. ಕಾಲೊತ್ತಲು ಸುಂದರ ಯುವತಿಯರು—ವಿದೇಶಿ ವಿಸ್ಕಿ ಕುಡಿಯಲು—(ಪಾನ ಪ್ರತಿಬಂಧದ ಕಾನೂನು ಇದ್ದರೂ ಶ್ರೀಮಂತಿಕೆಯಿದ್ದಲ್ಲಿ ಹೆಣ್ಣು ಮತ್ತು ಸುರೆ ಇಲ್ಲದಿದ್ದರೆ ಹಲವು ಶ್ರೀಮಂತರ ಶ್ರೀಮಂತಿಕೆಗೆ ಅಗೌರವ) ಸುಗ್ರಾಸ ಭೋಜನ— ಬೆಲೆಬಾಳುವ ಸುಪ್ಪತ್ತಿಗೆಯಲ್ಲಿ ಶಯನ.

ಅರ್ಥಿಕ ಮುಗ್ಗಟ್ಟನ್ನು ಬಗೆಹರಿಸುವ ದಾರಿಗಾಣದೆ ಬಳಲುತ್ತಿರುವ ಮಧ್ಯಮ ವರ್ಗದವರೇ, ಈಗಲಾದರೂ ತೃಪ್ತಿಯಾಯಿತೇ? ಈಗಲಾದರೂ ಹೊಟ್ಟೆ ತುಂಬಿತೇ? ಇನ್ನಾದರೂ ಚೆನ್ನಾಗಿ ನಿದ್ದೆ ಬರಬಹುದೇ?

ಇನ್ನು ಮಹಾರಾಣಿ ಗಾಯತ್ರಿ ದೇವಿಯವರ ಮಾತನ್ನು ಸ್ವಲ್ಪ ಕೇಳಿ. ಅರ್ಥ ಮಂತ್ರಿಗಳು ಅಂದಿರುವ ಮಾತಿಗೆ ಇದೂ ಸಾಕ್ಷಿಯಂತಿದೆ. ಸಂಸ್ಥಾನಾಧೀಶರುಗಳಿಗೆ ಸೌಲಭ್ಯಗಳನ್ನು ಒದಗಿಸುವರೆ ಸರಕಾರವಿತ್ತ ಆಶ್ವಾಸನೆ ಪೊಳ್ಳಾಗಿದೆ, ಎಂದು, ಮಹಾ ರಾಣಿಯವರನ್ನುತ್ತಾರೆ. ವಿದ್ಯುತ್ತಿನ ಬಿಲ್ಲಿನ ಹಣ, ನೀರಿನ ಬಿಲ್ಲು (ಇದೇ ಲಕ್ಷಗಟ್ಟಲೆ ರೂಪಾಯಿಗಳ ಮೊತ್ತ) ಸರಕಾರವೇ ತುಂಬಿಸಬೇಕು. ಈ ಮಾತನ್ನು ಹಲವರು ವಿರೋಧಿಸಿದರೂ, ಸಮರ್ಥಿಸಿದವರೂ ಇದ್ದಾರೆ ಕೆಲವು ಮಂದಿ. ನಿಶ್ಶಕ್ತ ಸರಕಾರ ಆಶ್ವಾಸನೆಗಳನ್ನೇಕೆ ಕೊಡಬೇಕಿತ್ತು ಎಂದು ಅವರೆನ್ನುತ್ತಾರೆ. ನಿಶ್ಶಕ್ತ ಸರಕಾರ!

ಸರಕಾರ ಮತ್ತು ಜನತೆ. ಭಾರತ ಮತ್ತು ಪ್ರಜಾಪ್ರಭುತ್ವ, ನಾವು ಮತ್ತು ನಮ್ಮ ಪ್ರತಿನಿಧಿಗಳು.

ತುಂಬು ವಿಡಂಬನೆಯ ದಾರಿಯನ್ನೆ ಈ 'ಭಾರತ ಪ್ರೇಮಿ'ಗಳು ತುಳಿಯುತ್ತಿರುವದು ಭಾರತಕ್ಕೆ ಭೂಷಣವಾಗಿದೆಯಲ್ಲವೆ? ಇವರು ನಮ್ಮ ಪ್ರತಿನಿಧಿಗಳಾಗಿ ಆರಿಸಲ್ಪಟ್ಟವರು. ನಮ್ಮ ಸೌಲಭ್ಯಗಳಿಗಾಗಿ ಹೋರಾಡುವವರು, ವಿಕಸಿತ ಭಾರತದ ಶಿಲ್ಪಿಗಳು ಸಮಾಜವಾದವನ್ನು ರೂಢಿಗೆ ತರುವ ದಿವ್ಯ ವ್ಯಕ್ತಿಗಳು. ಒಪ್ಪೊತ್ತಿನ ಅಶನವುಂಡು ಗುಡಿಸಲಲ್ಲಿ ಜೀವಿಸುತ್ತಿರಬೇಕು. ಈ ಸೇವಾಕಾಂಕ್ಷಿಗಳು ದಿನದ ಇಪ್ಪತ್ತನಾಲ್ಕು ತಾಸು ಜನರ ಹಿತಚಿಂತನೆಯಲ್ಲೇ ಕಾಲ ಕಳೆಯುತ್ತಿದ್ದಾರೋ ಏನೋ?

ಹೇಗಿದೆ ನಮ್ಮ ಭವ್ಯ ಭಾರತದರ್ಶನ? ಮಹಾತ್ಮಾ ಗಾಂಧಿಯವರು ಕಂಡ ಕನಸು ನೆನಸಾಗಿದೆಯೆಂದು ಅನಿಸುವದಿಲ್ಲ ನಿಮಗೆ? ರಾಮರಾಜ್ಯ ಬಂದಿದೆ (ಮುರಾರ ಜಿಯವರ ದೃಷ್ಟಿಕೋನದಲ್ಲಿ) ಭಾರತದಲ್ಲಿ ಬಡತನ ಅಳಿದಿದೆ. ಬಡವರು ದಿನದಿಂದ ದಿನಕ್ಕೆ ಶ್ರೀಮಂತರಾಗುತ್ತಿದ್ದಾರೆ. (ಶ್ರೀಮಂತರು ಬಡವರಾಗುತ್ತಿದ್ದಾರೆ?) ಜಯ ಭಾರತ! ಜಯ ರಾಮರಾಜ್ಯ!

ಕನ್ನಡ ಪುಸ್ತಕಗಳಿಗೆ—
ಮತ್ತು
ಕಥೆ ಕಾದಂಬರಿ ಇತ್ಯಾದಿ ಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.
ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು, (ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ) ಮಂಗಳೂರು. ಮಾಲಿಕ: ಕೆ. ಕೆ. ಆರ್. ಶೇಟ್

ಮರೀಚಿಕೆ ಕೈಗೆ ಎಟುಕಲಿಲ್ಲ

(೨ನೇ ಪುಟದಿಂದ)

ಅವಳ ಮನೆಯವರಿಗೂ ರಾಜಣ್ಣನ ಭಾವನ ಮನೆಯವರಿಗೂ ಬಹಳ ಪ್ರೀತಿ.

ಅವಳ ತಾಯಿ ಮತ್ತು ರಾಜಣ್ಣನ ಅಕ್ಕನಿಗೆ ಬಹಳ ಅನ್ಯೋನ್ಯ, ಸಲಿಗೆ. ಚಿಕ್ಕ ಮಕ್ಕಳಿಗಂತೂ ಆ ಎರಡು ಮನೆಗಳೂ ಒಂದೇ ಎಂಬಷ್ಟು ಬಳಕೆ ಅಕ್ಕರೆ. ದೊಡ್ಡವರೂ ಹಾಗೆಯೇ.

ಪೂರ್ಣಿಮಾ ಹೆಚ್ಚಾಗಿ ರಾಜಣ್ಣನ ಭಾವನ ಮನೆಗೆ ಬರುತ್ತಿದಳು. ಅವರ ಇಬ್ಬರು ಚಿಕ್ಕ ಮಕ್ಕಳು ರವಿ ಮತ್ತು ಲೀಲಾ ಅಂದರೆ ಅವಳಿಗೆ ಎಲ್ಲಿಲ್ಲದ ಪ್ರೇಮ.

ಈ ಸಂದರ್ಭದಲ್ಲಿ ರಾಜಣ್ಣ ಬಂದ. ಅತ ಪಟ್ಟಣದವನಾದರೂ ಈ ಮಲೆನಾಡಿನ ಮಧ್ಯದಲ್ಲಿ ಅರಳಿದ ಹೂ ಅವನನ್ನು ಮೋಹಿಸಿತು. ಈ ಕಾಡೂರಿನಲ್ಲಿ ಇಂತಹ ಸುಂದರ ಪುಷ್ಪವೂ ಇದೆಯೇ ಎಂದು ಅವನು ಅಚ್ಚರಿಗೊಂಡ: ಈ ಎಲೆಯ ಮರೆಯ ವಸಂತದ ಮೊಗ್ಗು ಅವನನ್ನು ತಂಗಾಳಿಯ ದಾರದಲ್ಲಿ ಬಂಧಿಸಿತು.

ಒಂದೆರಡು ದಿನ ಹೀಗೇ ದೂರ ದೂರ ಅಲ್ಪ ಸ್ವಲ್ಪ, ಅರೆಬರೆ ಮಾತುಕತೆಗಳು ಅವರೊಳಗೆ ನಡೆದುವು. ಶಾಲೆ-ಪರೀಕ್ಷೆ-ಊರು-ತಂದೆ ತಾಯಿ ಹೀಗೆ. ಪೂರ್ಣಿಮಾಳಿಗೂ ಅವನನ್ನು ಕಂಡರೆ ಏನೋ ನಾಚುಗೆ, ಸಂಕೋಚ ಒಳಗೊಳಗೇ ಸ್ನೇಹಾಕಾಂಕ್ಷೆ. ಇದಕ್ಕೆ ರಾಜಣ್ಣನ ನೋಟವೂ ಕಾರಣವಿರಬೇಕು.

ಅವನ ಅಕ್ಕನಿಂದ ರಾಜಣ್ಣ ಉಪಾಧ್ಯಾಯನೆಂದು ತಿಳಿದ ಮೇಲೆ ಈ ಸ್ನೇಹಾಭಿಲಾಷೆಯಲ್ಲಿ ಸ್ವಲ್ಪ ಗೌರವ—ಭಕ್ತಿಯೂ ಬೆರೆತು ಹೋಯಿತು. ವಿದ್ಯಾರ್ಥಿಗೂ ಉಪಾಧ್ಯಾಯನಿಗೂ ಯಾವಾಗಲೂ ಹೀಗೆ, ಏನೋ ಒಂದು ಅಂತರ, ಯಾವುದೋ ಒಂದು ಬಾಂಧವ್ಯ. ಆದರೂ ಪೂರ್ಣಿಮಾಳಿಗೆ ಅವನಲ್ಲಿ ಒಂದು ತರದ ಪ್ರೇಮ.

ಈ ಬಾರಿ ಮಲೆನಾಡಿಗೆ ಬಂದ ರಾಜಣ್ಣನಿಗೆ ಮಲೆನಾಡಿನ ಸೌಂದರ್ಯದ ಕಡೆಗೆ ಗಮನವೇ ಇಲ್ಲ. ಅವನ ತಲೆ ತುಂಬಾ ಪೂರ್ಣಿಮಾ ತುಂಬಿಕೊಂಡಳು. ಅವಳ ದರ್ಶನ, ಸಲ್ಲಾಪ ಮಾತ್ರವೇ ಅವನಿಗೆ ಪ್ರಿಯವಾಯಿತು.

ಅವಳ ಹಾಡು ಕೇಳಿದ ಮೇಲಂತೂ ಈ ಕೋಗಿಲೆಯ ಗಾನಕ್ಕಾಗಿ ಅತನ ಬಯಕೆ ಬಲಿಯಿತು. ಅವಳ ಸನಿಹದಲ್ಲಿ ಅತನ ಮನಸ್ಸು ದೂರದೂರ ವನಶ್ರೇಣಿಗಳಲ್ಲಿ ಅಲೆದಾಡುತ್ತಿತ್ತು. ಗಿರಿಶೃಂಗಗಳಿಗೆ ವಿಹಾರಿಯಾಗುತ್ತಿತ್ತು. ಅವಳ ಮೃದು ನುಡಿಗಳಲ್ಲಿ ಅತ ತೃಪ್ತಿ—ಶಾಂತಿಗಳ ಸಮ್ಮಿಲನವನ್ನು ಕಂಡ.

ಅವಳಾರೊ, ಅವನಾರೊ; ಅವಳನ್ನು ಪ್ರೇಮಿಸಿ ಬಾಳ ಗೆಳತಿಯನ್ನಾಗಿ ಆರಿಸಿಕೊಳ್ಳುವುದಂತೂ ಒಂದು ಪ್ರಳಯಕ್ಕೇ ಕಾರಣವಾಗಬಹುದು. ಕಂಡು ಕೇಳದ ಮಲೆನಾಡಿನ ಮೂಲೆಗೆ ಹೋಗಿ ಯಾವುದೋ ಒಂದು ಕಾಡು ಹೆಣ್ಣನ್ನು ಕಟ್ಟಿಕೊಂಡ, ಕ್ಷಣಿಕ ವ್ಯಾಮೋಹದ ಹುಚ್ಚ ಎಂದು ಈ ಲೋಕ ಜರೆಯದಿದ್ದೀತೆ? ಅತ ಜೀವನದುದ್ದಕ್ಕೂ ಕಹಿಯನ್ನೇ ಉಣ್ಣುವಂತೆ ಮಾಡದಿದ್ದೀತೆ? ಹಾಗಿದ್ದು ಈ ನಿರ್ಮಲ ಪುಷ್ಪಕ್ಕೆ ಕಲಂಕವುಂಟಾಗಬಾರದೆಂಬ ಪ್ರಜ್ಞೆಯೂ ಅವನಿಗಿದೆ.

ಅವಳನ್ನು ಪ್ರೇಮಿಸದಿರಲೂ ಅವನಿಂದ ಸಾಧ್ಯವಿಲ್ಲ. ಅಪವಿತ್ರವಲ್ಲದ ತಪ್ಪೆಂದು ಕರೆಯಬಾರದ ಒಂದು ಪ್ರೇಮ ನಮ್ಮದಾಗಿರಲೆಂದು ಅವನಾಶಯ.

ಆದರೂ ಅವಳು ಕೆಲವೊಮ್ಮೆ ಅವನ ಹೃದಯವನ್ನು ಕಲಕಿ ಬಿಡುತ್ತಿದ್ದಳು. ಅವಳು ಮುಗುಳ್ನಗುತ್ತಾ ಬಳಿಯ ಬಂಡೆಯಲ್ಲಿ ಕುಳಿತು ಲಲ್ಲೆಗರೆಯುವ ನುಡಿಗಳನ್ನು ನುಡಿಯುತ್ತಿದ್ದರೆ ಆ ಗುಲಾಬಿ ತುಟಿಗಳಿಗೆ ಮುತ್ತಿಡೋಣವೆನಿಸಿಸಿದರೆ, ಮತ್ತೊಮ್ಮೆ, ಅವಳ ಹೂ ದೇಹವನ್ನೆತ್ತಿ ಮಡಿಲಲ್ಲಿ ಕುಳ್ಳಿರಿಸಿಕೊಳ್ಳೋಣವೆನಿಸುವುದು. ಕೂಡಲೇ ಇವೆಲ್ಲಾ ತಪ್ಪೆಂದು ಅವನಿಗನಿಸುವುದು. ಕೆಲವೊಮ್ಮೆ ಮೈಮರೆತು ಅವಳ ತೋಳು ಹಿಡಿದರೂ "ಹಾಗೆ ಮಾಡಬೇಡಿ" ಎಂದವಳೇ ಹೇಳುವಳು. ಗಲ್ಲ ಚಿವುಟಿದರೆ' ಹೀಗೇಕೆ ಮಾಡುತ್ತೀರಿ ಸುಮ್ಮನೆ" ಎನ್ನುವ ಅವಳ ಮುಗ್ಧ ಪ್ರಶ್ನೆ ಕೇಳಿ ಅವನಿಗೆ ಪಶ್ಚಾತ್ತಾಪವೂ ಆಗುವುದು. "ಇದೂ ಒಳ್ಳೆಯದೇ" ಎಂದು ಸುಮ್ಮನಾಗುವನು.

ಹೀಗೆ ಹತ್ತಿರದಲ್ಲೂ ಹತ್ತಿರ ಬರಲಾರದೆ ದಿನಗಳು ಕಳೆದು ಹೋದುವು. ಅದಕ್ಕಿಂತ ಹತ್ತಿರ ರಾಜಣ್ಣ—ಪೂರ್ಣಿಮಾ ಬರಲೇ ಇಲ್ಲ. ಆದರೆ ಅವರಿಬ್ಬರ ಬಾಂಧವ್ಯ ಆಕಸ್ಮಿಕವಾಗಿದ್ದರೂ ಬಲವಾಗಿತ್ತು. ಪೂರ್ಣಿಮಾ ಅವನನ್ನೂ ಹೃದಯ ತುಂಬಾ ಪ್ರೀತಿಸುತ್ತಿದ್ದಳು. ಅವನಿಗೇನಾದರೂ ನೋವಾದರೆ ಅವಳ ಕಣ್ಣಂಚಿನಲ್ಲಿ ನೀರಿರುತ್ತಿತ್ತು. ಅವನನ್ನು ಸಂತಸದಿಂದಿರಿಸಲು ಅವಳು ಹಾಡುತ್ತಿದ್ದಳು. ಏನು ಬೇಕಾದರೂ ಮಾಡಲು ಸಿದ್ಧವಾಗಿದ್ದಳು. ಮೈಮುಟ್ಟಿದರೆ ಮಾತ್ರ 'ಬೇಡ....ಬೇಡ' ಎಂಬ ಧ್ವನಿ. ಇವೆರಡು ಶಬ್ದಗಳು ಒಂದಿಷ್ಟು ಮುಂದರಿದ ರಾಜಣ್ಣನನ್ನು ಒಂದಷ್ಟು ಹಿಂದೆ ತಳ್ಳುವುವು.

ಅವನು ಕೆಲವೊಮ್ಮೆ ನಟನೆಗಾಗಿ ಜೋಲು ಮೋರೆ ಹಾಕಿ ಕುಳಿತರೆ ಅವಳೆದೆಯ ತವಕ ಬೇಗುದಿ ಹೇಳತೀರದು. ಅವನನ್ನು ನಗುವಂತೆ ಮಾಡಿದ ಹೊರತು ಅವಳಿಗೆ ತೃಪ್ತಿಯಿಲ್ಲ. ಅವಳು ಬರೇ ಮಲೆನಾಡಿನ ಮುಗುದೆಯಲ್ಲ. ಮಾತಿನಲ್ಲೂ ಜಾಣೆ. ಹೃದಯವನ್ನು ಮಿಡಿಯುವ ಮಧುರ ಸ್ವರ. ಅವಳ ಧ್ವನಿಯನ್ನು ಕೇಳಿದ ಮೇಲೆ ಎಲ್ಲಾ ಯೋಚನೆಗಳೂ ಕೊನೆಗೊಂಡು ಅವನ ಮನ ಪ್ರಫುಲ್ಲಿತವಾಗುತ್ತಿತ್ತು. ಅವಳ ಸಂಗ ಪವಿತ್ರ ಮಧುರಸ್ವಪ್ನವಾಗುತ್ತಿತ್ತು.

ಆದರೆ ಮನಸ್ಸಿನ ರಾಜ್ಯ ಬೇರೆ; ಜೀವನದ ಗತಿ ಬೇರೆ. ರಾಜಣ್ಣ ಊರಿಗೆ ಹಿಂತಿರುಗಬೇಕಾದ ದಿನ ಹತ್ತಿರ ಬಂತು. ಅವನಿಗೆ ಎಳ್ಳಷ್ಟೂ ಮನಸ್ಸಿಲ್ಲದಿದ್ದರೂ ಹೋಗಬೇಕಾದ ಅಗತ್ಯ ಅದಕ್ಕಿಂತ ಬಲವಾಗಿತ್ತು.

ಈ ವಾರ್ತೆ ತಿಳಿದ ಮೇಲೆ ಪೂರ್ಣಿಮಾ ಬಹಳ ನೊಂದುಕೊಂಡಳು. ರಾಜಣ್ಣ ಹೊರಡುವ ಮೊದಲ ದಿನ ಆ ಮೋಹಿನಿ ತೋಟದ ಹಾಸು ಬಂಡೆಯ ಬಳಿ ಅವನನ್ನು ಭೇಟಿಯಾದಾಗ ಅವರಿಬ್ಬರ ಗಂಟಲಿಂದ ಮಾತುಗಳೇ ಹೊರಡಲಿಲ್ಲ. ಕಡೆಗೆ ಕಣ್ಣು ತುಂಬಾ ನೀರಿನೊಡನೆ ಆಕೆ ಅವನನ್ನು ಬೀಳ್ಕೊಂಡಳು.

ರಾಜಣ್ಣ ಊರಿಗೆ ಬಂದ- ಮನಸ್ಸು—ಹೃದಯವನ್ನು ಸಂಪಿಗೆ ಹಳ್ಳಿಯಲ್ಲಿ ಬಿಟ್ಟು ಅಲ್ಲಿ ಪೂರ್ಣಿಮೆಯನ್ನು ಕಂಡ ಮೇಲೆ ಈ ಊರು ಅಮಾವಾಸ್ಯೆಯಾಗಿತ್ತು ಅವನಿಗೆ ಸ್ವಲ್ಪವೂ ಶಾಂತಿಯಿಲ್ಲ. ಮನಸ್ಸು ಮಲೆನಾಡಿನಲ್ಲಿ ಹೃದಯ ಪೂರ್ಣಿಮೆಯ ಬಳಿ ಹಾರಿಯಲು ಯತ್ನಿಸಿದಷ್ಟೂ ಮರೆಯಲಾರದ ಮತ್ತೂ ಅಲ್ಲಿಗೆ ಮನವು ಓಡುವುದು.

ಹೀಗೆ ತಿಂಗಳೊಂದು ಪೂರ್ಣಿಮೆಯ ನೆನಪಿನ ಮುಷ್ಟಿಯಲ್ಲಿ, ಗತಜೀವನ ದೃಶ್ಯಗಳ ಕನವರಿಕೆಯಲ್ಲಿ ಕಳೆದುಹೋಯಿತು. ಒಂದು ಪತ್ರವನ್ನಾದರೂ ಬರೆಯೋಣವೆಂದು ರಾಜಣ್ಣ ಬಯಸಿದ. ಆದರೆ ವಿಳಾಸವಿರಲಿಲ್ಲ. ಹೇಗೋ ಅವಳ ಶಾಲೆಯ ಊರಿನ ಹೆಸರಿನ ಮೇಲಿಂದ ಪತ್ರ ಬರೆದ. ತಲುಪುವುದೋ ಇಲ್ಲವೋ ಎಂಬ ಅನುಮಾನದಿಂದ.

ಪತ್ರ ತಲುಪಿತು. ಉತ್ತರವೂ ಬಂತು. "ಅಣ್ಣನಿಗೆ ನಲ್ಮೆಯ ನಮಸ್ಕಾರಗಳು," ಎಂದು. "ವಿಶೇಷವೇನೂ ಇಲ್ಲ...", ಶಾಲೆಯ ಜೀವನದ ಕುರಿತು ಒಂದೆರಡು ವಾಕ್ಯ. ರಾಜಣ್ಣನ ಅಕ್ಕ-ಭಾವನವರನ್ನು ಕುರಿತು ಒಂದೆರಡು ವಾಕ್ಯ. ಕೊನೆಗೆ... "...ನೀವು ಹೋದ ಮೇಲೆ ನನಗೆ ಯಾವಾಗಲೂ ನಿಮ್ಮದೇ ನೆನಪು", ಅಂತ ಒಂದು ವಾಕ್ಯ.

ಹೀಗೆ ಒಂದೆರಡು ಪತ್ರಗಳು ಅತ್ತಿತ್ತ ಓಡಾಡಿದುವು. ಕೊನೆಗೊಂದು ದಿನ: "ಅಣ್ಣಾ, ನೀವಿನ್ನು ಪತ್ರ ಬರೆಯಬೇಡಿ. ಇಲ್ಲಿ ಗೆಳತಿಯರೆಲ್ಲಾ ನನ್ನನ್ನು ಗೇಲಿಮಾಡುತ್ತಾರೆ. ಈ ವಿಚಾರ ಉಪಾಧ್ಯಾಯರಿಗೆ ತಿಳಿದರೆ ಅವರೂ ಒಂದು ಥರಾ ಮಾಡುತ್ತಾರೆ", ಎಂದೆಲ್ಲಾ ಪತ್ರ ಬಂತು.

ಆ ನಂತರವೂ, ರಾಜಣ್ಣ, ಹಲವು ದಿನಗಳ ಮೇಲೆ ಒಂದು ಚಿಕ್ಕ ಪತ್ರ ಬರೆ

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,

ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು. ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಾರ್ಮೋನಿಯಮ್ ಕಲಿಯುವವರಿಗೆ

ಅತ್ಯುತ್ತಮ ಸಂಗೀತ ಪುಸ್ತಕ—

ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.

ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ದ. ಬೇರಾವ 'ಪ್ರೇಮವೂ, ಬಯಕೆಯೂ ಸರಿಯಲ್ಲವಾದುದರಿಂದ ಸೋದರಿಯೆಂಬ ಭಾವವನ್ನೇ ತುಂಬಿಕೊಂಡು ಬರೆದ. ಹು ನದ ಭಾವನೆಗಳನ್ನೆಲ್ಲಾ ತಪ್ಪೆಂದು ದೂರಮಾಡಿ ತಂಗಿಯೆಂದು ಕರೆಯಲು ಅವನ ಹೃದಯ ಅಣಿಯಾಗುತ್ತಿತ್ತು.

ಆದರೆ: "ದಯಮಾಡಿ ನೀವು ಬರೆಯಬಾರದು. ನನ್ನ ಮೇಲೆ ನಿಮಗೆ ಪ್ರೀತಿ ಇರುವುದಾದರೆ ಬರೀಬೇಡಿ...,, ಎಂದು ಪೂರ್ಣಿಮಾ ಬರೆದಳು.

ತಾನು ದೂರಾಗಿ ಹೋದ ಮೇಲೆ ತನ್ನ ಮೇಲಿನ ಪ್ರೇಮವೂ ಶಿಥಿಲವಾಯಿತೇನೋ ಎಂದು ರಾಜಣ್ಣನೆನಿಸಿದ. ಆದರೂ ಅವಳೇ ಬರೆದಿದ್ದಳು "ನನಗೆ ನಿಮ್ಮದೇ ನೆನಪು,, ಅಂತ. ಆದರೂ ಪೂರ್ಣಿಮಾಳ ಕೊನೆಯ ಪತ್ರ ಅವನಿಗೊಂದು ನೋವಿನ ಬರೆಯಾಯಿತು. ಅವಳ ನೆನಪಿನೊಂದಿಗೆ ಈ ನೋವು—ಸಮಸ್ಯೆ ಉಳಿಯಿತು. ಅವಳಿಂದ ಮನವನ್ನು ಹಿಂದೆಳೆದಷ್ಟೂ ಅದು ಮುಂದೆ ಮುಂದೆ ಹೋಯಿತು. ತತ್ವವನ್ನು ತಿಳಿಸಿ ಹಿಡಿದಿರಿಸಿದರೂ ಹಿಡಿತಕ್ಕೆ ಸಿಕ್ಕದೆ ನೆಗೆದೋಡುತ್ತಿತ್ತು. ರಾಜಣ್ಣನಿಗೆ ದಿನವೂ ಅದೇ ನೆನಪು. ಹಿಂದೆ ಅವಳೊಂದಿಗೆ ಕಳೆದ ದಿನಗಳ ಸ್ಮರಣೆ-ಕಲ್ಪನೆ-ಕನಸು!

ಹೀಗೆ ವರ್ಷವೊಂದು ಕಳೆಯಿತು. ಬೇಸಗೆಯ ರಜೆ ಮತ್ತೆ ಬಂತು. ಎಂದು ಬಂದೀತೋ ಎಂಬ ಕಾತರ ರಾಜಣ್ಣನಿಗೆ. ಮರೆಯಲು ತೊಡಗಿದ್ದ ಮನಕ್ಕೆ ಬೇಸಗೆಯ ರಜೆ—ಸಂಪಿಗೆಹಳ್ಳಿ—ಪೂರ್ಣಿಮಾ ....ಈ ನೆನಪು ಬಲವಾಗಿ ಅಂಟಿತು.

ರಜೆ ಸಿಕ್ಕಿದೊಡನೆ ಸಂಪಿಗೆ ಹಳ್ಳಿಗೆ ಪಯಣ ಬೆಳಸಿದ. ಅಲ್ಲಿಂದ ಭಾವನಿಗೆ ವರ್ಗವಾಗದಿದ್ದುದೂ ದೈವಯೋಗವೆಂದಾತ ಎಣಿಸಿದ. ಅಕ್ಕನ ಮನೆಗೆ ಬಂದರೂ ಮನಸ್ಸು ಪೂರ್ಣಿಮಾಳ ಧ್ಯಾನ ಮಾಡುತ್ತಿತ್ತು. ಯಾವಾಗ ಕಂಡೇನೋ ಎಂಬ ತವಕ. ಅಕ್ಕನೊಡನೆ ಕೇಳಲು ಸಂಕೋಚ. ರಾಜಣ್ಣನ ಅಕ್ಕ ನಗುತ್ತಾ ಹೇಳಿದಳು:

"ಪೂರ್ಣಿಮಾ—ನೀನು ಕಳೆದ ಬಾರಿ ಬಂದಾಗ ಕಂಡೆಯಲ್ಲಾ ಆ ಹುಡುಗಿ, ಅದಕ್ಕೇನು ಮಂತ್ರ ಮಾಡಿಬಿಟ್ಟೆ ರಾಜಣ್ಣ ನೀನು. ನಿನ್ನನ್ನು ತುಂಬಾ ಹಚ್ಚಿಕೊಂಡಿದ್ದಳು ನೋಡು ಅವಳು; ಕೆಲವು ದಿನ ಅನ್ನ ಆಹಾರ ಕೂಡಾ ಸರಿಯಾಗಿ ತೆಕ್ಕೊಳಲಿಲ್ಲವಂತೆ.'

ರಾಜಣ್ಣ ಒಮ್ಮೆ ಮನದಲ್ಲಿ ಸ್ವಲ್ಪ ಅಳುಕಿದ. ಹೇಗೂ ಅವಳ ಕುರಿತು ತಿಳಿಯಲು ಸಂದರ್ಭ ಸಿಕ್ಕಿದಂತಾಯಿತು. ಆತ ನಗುವಿನಿಂದ ಭಾವನೆಯನ್ನು ಮರೆಸುತ್ತಾ "ಈಗ ಪೂರ್ಣಿಮಾ ಎಲ್ಲಿ?' ಎಂದು ಕೇಳಿದ. ಅವನೆದೆಯಲ್ಲಿ ಆತುರ ನರ್ತಿಸುತ್ತಿತ್ತು.

"ಅವಳು ಮದುವೆಯಾಗಿ ಕಳೆದ ತಿಂಗಳಷ್ಟೇ ಗಂಡನ ಮನೆಗೆ ಹೊರಟು ಹೋದಳು. ಚಿನ್ನದಂಥಾ ಹುಡುಗಿ ಪೂರ್ಣಿಮಾ ಮಗುವಿನಂಥಾ ಮನಸ್ಸು'.

ಚೀನ ರಾಯಭಾರಿ ಕಛೇರಿಯ ದುರ್ನೀತಿ

(೧ನೇ ಪುಟದಿಂದ)

(೧ನೇ ಪುಟದಿಂದ)

ಸದಸ್ಯರ ಬೇಡಿಕೆ

ಭಾರತ ಸರಕಾರವು ತನ್ನ ವಿರುದ್ಧ ತನ್ನ ಜನತೆಯನ್ನು ಎತ್ತಿಕಟ್ಟಿ, ತನ್ನ ಜನತೆಯ ಮನಸ್ಸಿನಲ್ಲಿ ತನ್ನ ಸರಕಾರವು ತಪ್ಪುದಾರಿ ತುಳಿಯುತ್ತಿದೆ ಎಂಬ ದುರ್ಭಾವನೆಯ ಬೀಜವನ್ನು ಬಿತ್ತುವ ಮತ್ತದು ಮೊಳೆತು ಬಲಿಯುವಂತೆ ಮಾಡುವ ಚೀನೀಯ ರಾಯಭಾರಿ ಕಛೇರಿಯ ಈ ಕೃತ್ಯವನ್ನು ಬಹಿಷ್ಕರಿಸಲೇಬೇಕು. ಇದಕ್ಕಾಗಿಯೇ ಆ ಸಂಚಿಕೆಯ ಎಲ್ಲ ಪ್ರತಿಗಳನ್ನೂ ಜಪ್ತಮಾಡಿತು. ಆದರೆ, ಅದರ ಮುಂದಿನ ಸಂಚಿಕೆಗಳು ಮಾತ್ರ ಇನ್ನೂ ಪ್ರಕಟವಾಗುತ್ತ ನಡೆದಿವೆ ಇವಕ್ಕೆ ತಡೆ ಹಾಕುವುದು ಅವಶ್ಯವೆಂದು ನಮ್ಮ ಸರಕಾರ ತಿಳಿಯಲಿಲ್ಲ. ಟೀಕೆ ಟಿಪ್ಪಣಿಗಳಿಲ್ಲದೇನೇ ತನ್ನ ಸರಕಾರದ ಟಿಪ್ಪಣಿಗಳನ್ನು ಈ ಪತ್ರಿಕೆಯು ಪ್ರಕಾಶಪಡಿಸಿದರೂ ಪತ್ರಿಕೆಯನ್ನು ನಿಷೇಧಿಸಬೇಕೆಂದು ವಿರೋಧಿ ಪಕ್ಷದ ಸದಸ್ಯರು ಸೂಚಿಸಿದರು. ಹಾಗೆಯೇ ಒಬ್ಬರು ಪ್ರಕಟಣೆಗೆ ಮೊದಲು ಪರಿಶೀಲನೆ ನಡೆಸಬೇಕೆಂದು ಹೇಳಿದರು. ಆದರೆ, ಇವುಗಳನ್ನು ಸ್ವೀಕರಿಸಲು ಭಾರತ ಸರಕಾರವಿನ್ನೂ ಸಿದ್ಧವಿಲ್ಲ.

ನಮ್ಮ ದುರವಸ್ಥೆ

ಪೇಕಿಂಗಿನಲ್ಲಿ ಭಾರತೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ನಡೆಸಲು ಚೀನೀ ಸರಕಾರ ಅನುಮತಿಯಿಯಲಿಲ್ಲ. ರಾಜಧಾನಿಯಿಂದ ೨೦ ಕಿಲೋ ಮೀಟರುಗಳಿಗಿಂತ ದೂರ ಹೋಗಲು ಪೇಕಿಂಗಿನಲ್ಲಿನ ಭಾರತೀಯರಿಗೆ ಅಧಿಕಾರವಿಲ್ಲ. ಇದು ಏನನ್ನು ಸೂಚಿಸುತ್ತದೆ? ಪೇಕಿಂಗಿನಲ್ಲಿ ಭಾರತದ ರಾಯಭಾರಿ ಕಛೇರಿಯಿದ್ದೂ ಅದರ ಕಾರ್ಯಭಾರವು ಬಹಳಷ್ಟು ಪ್ರಯಾಸದಿಂದ ನಡೆಯುತ್ತದೆ ಎಂಬುದನ್ನು! ತೋರಿಕೆಯ ಮಟ್ಟಿಗೆ ಟಿಬೇಟಿನಲ್ಲಿಯೂ ನಮ್ಮ ರಾಯಭಾರಿ ಕಛೇರಿಯಿದೆ; ಅಲ್ಲಿನ ಪರಿಸ್ಥಿತಿಯಾದರೂ ಪೇಕಿಂಗಿಗಿಂತ ಉತ್ತಮವಿರುವುದಿಲ್ಲ, ಇದನ್ನು ವಿದೇಶ ವ್ಯವಹಾರ ಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನ್ನರೇ ಒಪ್ಪಿಕೊಂಡಿದ್ದಾರೆ. ಪರ್ವತ ಪ್ರಸವದಂತೆ ನಮ್ಮ ಕಛೇರಿ ಅಲ್ಲಿ ಒದ್ದಾಡುತ್ತಿದೆ. ಭಾರತದಲ್ಲಿರುವ ಚೀನೀಯರು ಪಡುತ್ತಿರುವ ಸುಖ ಪಡೆಯುತ್ತಿರುವ ಸೌಲಭ್ಯಗಳ ತಿಲಾಂಶದಷ್ಟಾದರೂ ಅಲ್ಲಿನ ಭಾರತೀಯರು ಪ್ರಾಪ್ತಮಾಡಿಕೊಳ್ಳುತ್ತಿಲ್ಲವೆಂಬುದು ನಮಗೆ ಲಾಂಛನಾಸ್ಪದವಿರುವುದು.

ಅಮೆರಿಕೆಯ ಅಂತರಿಕ ವ್ಯವಹಾರಗಳ ಕಾರ್ಯದರ್ಶಿ ಶ್ರೀ ಸ್ಟುವರ್ಟ್ ಉಡ್ವಲ್.

ಸರಕಾರ ನಿದ್ರಿಸುತ್ತಿದೆಯೆ?

ಅಡೆತಡೆಗಳಿದ್ದರೂ ವ್ಯವಹಾರ—ವಿನಿಮಯದ ದೃಷ್ಟಿಯಿಂದ ರಾಯಭಾರಿ ಸಂಬಂಧವಿರಿಸಿಕೊಳ್ಳುವುದು ಅವಶ್ಯವೆಂದು ಶ್ರೀಮತಿ ಮೆನನ್ನರ ಅಂಬೋಣ. ಇದನ್ನು ಒಪ್ಪಿಕೊಳ್ಳಬಹುದಾದರೂ ತನ್ನ ಮೇಲೆ ಮಾಡುವ ದೋಷಾರೋಪಣೆ ಮತ್ತು ಅಪಪ್ರಚಾರಗಳನ್ನು ವಿರೋಧೀ ಪಕ್ಷದವರು ಗಮನಕ್ಕೆ ತರುವುದಕ್ಕೆ ಮೊದಲೇ ಸರಕಾರವು ನೋಡಿಕೊಳ್ಳಬೇಕಿತ್ತು. ಇಡಿಯ ರಾಷ್ಟ್ರಕ್ಕೆ ಅಪಮಾನಕರವಾದ ಇಂತಹ ಪ್ರಕಟಣೆಯನ್ನು ಪ್ರತಿಭಟಿಸಿ, ತನ್ನ ಪ್ರತಿಸ್ಪರ್ಧಿಗೆ ತನ್ನ ನೀತಿಯನ್ನು ವಿಶದೀಕರಿಸುವುದು ಅದರ ಕರ್ತವ್ಯವಿತ್ತು. ಚೀನೀಯ ಆಕ್ರಮಣದ ಪ್ರಶ್ನೆಯನ್ನು ಪಾರ್ಲಿಮೆಂಟಿನಲ್ಲಿ ಮುಂದೆ ತಂದವರೇ ವಿರೋಧೀ ಪಕ್ಷದ ಸದಸ್ಯರೆಂದ ಮೇಲೆ, ನಮ್ಮ ಸರಕಾರದ ಗಮನವು ಇತ್ತಕಡೆ ಹರಿಯ ಬೇಕಾದಷ್ಟು ಹರಿದಿಲ್ಲವೆಂದು ಖಂಡಿತ ಹೇಳಬಹುದು. ವಿವಾದಗಳು ದಿನದಿಂದ ದಿನಕ್ಕೆ ಬಿರುಸಿನಿಂದ ಹೆಚ್ಚುತ್ತ ಪರಿಸ್ಥಿತಿಯು ಪ್ರಕೋಪಕ್ಕೇರುತ್ತ ಹೋಗುತ್ತಿರುವ ಈ ನಮ್ಮ ವಿಷನ್ನ ಪರಿಸ್ಥಿತಿಯಲ್ಲಿ ಸರಕಾರವು ತೀವ್ರ ಆಸಕ್ತಿ ತಾಳಬೇಕು; ಈ ಸಂಬಂಧದ ಮುನ್ನಡೆ-ಹಿನ್ನಡೆಗಳನ್ನು ಕಣ್ಣಿನಲ್ಲಿ ಎಣ್ಣೆ ಹಾಕಿ ಕಾಣುತ್ತಿರಬೇಕು, ಉಚಿತ ಪ್ರತಿಕ್ರಿಯೆ ವ್ಯಕ್ತಪಡಿಸಬೇಕು. ತನ್ಮೂಲಕ ತಮ್ಮ ಸರಕಾರವು ನಿದ್ರಿಸುತ್ತಿಲ್ಲ ಎಂಬುದು ಪ್ರಜಾ ಜನರಿಗೆ ಮನವರಿಕೆಯಾಗಬೇಕು.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೋ, ಉಡುಪಿ.

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"
● ಪಿಗ್ಮಿ
● ಕ್ಯುಮುಲೇಟಿವ್
● ಇನ್ವೆಸ್ಟರ್ಸ್ ಏಜನ್ಸಿ
● ಲಕ್ಷ್ಮೀ ಮತ್ತು ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟುಗಳು
● ಭದ್ರತಾ ಕೋಶಗಳು
● ವಿದ್ಯಾರ್ಥಿಗಳಿಗೆ ಮತ್ತು ಧರ್ಮಸಂಘ-ಸಂಸ್ಥೆಗಳಿಗೆ ವಿಶಿಷ್ಟ ಸೌಕರ್ಯಗಳು.
● ಇನ್ನಿತರ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು.
ಒಟ್ಟು ಶಾಖೆಗಳು: 159
ಠೇವಣಾತಿಗಳು ರೂ. 24 ಕೋಟಿಗೂ ಮಿಕ್ಕಿವೆ
ಒಟ್ಟು ವ್ಯವಹಾರ ಸಂಪತ್ತು ರೂ. 30 ಕೋಟಿಗೂ ಹೆಚ್ಚು
ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ, ಉಡುಪಿ.
ಸ್ಥಾಪನೆ: ೧೯೨೫.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

Edited Printed & Published by K. H. Shetty, at the Navayuga Press, Udipi, S. India.